ವೀರ ಜ್ಞಾನೋದಯ ಗ್ರಂಥಮಾಲಾದ ಪುಷ್ಪ - ೧೨೪

ನನ್ನ ಧಾರ್ಮಿಕ ಜೀವನದ ನೆನಪುಗಳು

ಲೇಖಕಿ

ಚಾರಿತ್ರ ಚಕ್ರವರ್ತಿ ಆಚಾರ್ಯ ಶ್ರೀ ಶಾಂತಿಸಾಗರಜೀ ಮಹಾರಾಜರ ಪ್ರಥಮ ಪಟ್ಟ ಶಿಷ್ಯ ಆಚಾರ್ಯ ಶ್ರೀ ವೀರಸಾಗರಜೀ ಮಹಾರಾಜರ ಸುಶಿಷ್ಯ ರಾಷ್ಟ್ರಗೌರವ, ಯುಗ ಪ್ರವರ್ತಿಕೆ ಆರ್ಯಿಕಾ ಶಿರೋಮಣಿ

ಗಣಿನೀಪ್ರಮುಖ ಶ್ರೀ ಜ್ಞಾನಮತಿ ಮಾತಾಜಿ

ಭಗವಾನ್ ಮಹಾವೀರ ಜನ್ಮಭೂಮಿ ಕುಂಡಲಪುರದಲ್ಲಿ ಕುಂಡಲಪುರ ಮಹೋತ್ಸವ 2004
ಪೂಜ್ಯ ಗಣಿನೀಪ್ರಮುಖ ಶ್ರೀ ಜ್ಞಾನಮತೀ ಮಾತಾಜಿಯವರ 71ನೇಯ ಜನ್ಮದಿವಸದ
ಶುಭ ಸಂದರ್ಭದಲ್ಲಿ ಪ್ರಕಾಶಗೊಂಡಿದೆ

ಅನುವಾದಕರು

ಡಾ. ಎನ್. ಸುರೇಶ್‌ಕುಮಾರ್
ಉಪನ್ಯಾಸಕರು
ಜೈನಶಾಸ್ತ್ರ ಪ್ರಾಕೃತ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಡಾ. ಬಿ. ಜೆ. ಜ್ವಾಲಾಸುರೇಶ್
ಮಾನಸಗಂಗೋತ್ರಿ
ಮೈಸೂರು

ಪ್ರಕಾಶಕರು

ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನ ಜಂಬೂದ್ವೀಪ - ಹಸ್ತಿನಾಪುರ (ಮೇರಠ) ಉ. ಪ್ರ.

ಕನ್ನಡ ಅನುವಾದ	ಶರದ್ ಪೂರ್ಣಿಮಾ	ಬೆಲೆ
550 ಪ್ರತಿ	4 ಅಕ್ಟೋಬರ್ 2009	

ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದಿಂದ ಸಂಚಾಲಿತ

ವೀರ ಜ್ಞಾನೋದಯ ಗ್ರಂಥಮಾಲೆ

ಈ ಗ್ರಂಥಮಾಲೆಯಲ್ಲಿ ದಿಗಂಬರ ಜೈನ ಆರ್ಷಮಾರ್ಗದ ರಕ್ಷಣೆ ಮಾಡುವಂತಹ ಹಿಂದಿ, ಸಂಸ್ಕೃತ, ಕನ್ನಡ, ಆಂಗ್ಲ, ಗುಜರಾತ್, ಮರಾಠಿ ಮುಂತಾದ ಭಾಷೆಗಳಲ್ಲಿ ನ್ಯಾಯ ಸಿದ್ಧಾಂತ, ಆಧ್ಯಾತ್ಮ, ಭೂಗೋಳ, ಖಗೋಳ, ವ್ಯಾಕರಣ ಮುಂತಾದ ವಿಷಯಗಳನ್ನು ಲಘು ಹಾಗೂ ಬೃಹತ್ ಗ್ರಂಥಗಳಲ್ಲಿ ಮೂಲವನ್ನು ಅನುವಾದ ಸಹಿತವಾಗಿ ಪ್ರಕಾಶನಗೊಳಿಸಲಾಗಿದೆ. ನಿರಂತರವಾಗಿ ಲೋಕೋಪಯೋಗಿಯಾದ ಧಾರ್ಮಿಕ ಲಘು ಪುಸ್ತಕಗಳು ಪ್ರಕಟಗೊಳ್ಳುತ್ತಿವೆ.

ಸಂಸ್ಥಾಪಕ ಹಾಗೂ ಪ್ರೇರಣಾ ವ್ಯಕ್ತಿ

ಪರಮಪೂಜ್ಯ ಗಣಿನೀಪ್ರಮುಖ ಆರ್ಯಿಕಾಶಿರೋಮಣಿ - ಶ್ರೀ ಜ್ಞಾನಮತಿ ಮಾತಾಜಿ

ಮಾರ್ಗದರ್ಶನಾ

ಪ್ರಜ್ಞಾಶ್ರಮಣಿ ಆರ್ಯಿಕೆ ಶ್ರೀ ಚಂದನಮತೀ ಮಾತಾಜಿ

ನಿರ್ದೇಶನ

ಧರ್ಮ ದಿವಾಕರ ಪೀಠಾಧೀಶ ಕ್ಷುಲ್ಲಕ ರತ್ನ ಶ್ರೀ ಮೋತಿಸಾಗರ ಜೀ ಮಹಾರಾಜರು

ಸಂಪಾದಕ

ಕರ್ಮಯೋಗಿ ಬ್ರ. ರವೀಂದ್ರಕುಮಾರ್ ಜೈನ (ಸರ್ವಾಧಿಕಾರವು ಪ್ರಕಾಶಕರದು)

ಪ್ರಥಮ ಸಂಸ್ಕರಣೆ 1990 ಪ್ರತಿ 1100

ದ್ವಿತೀಯ ಸಂಸ್ಕರಣೆ 2004 ಪ್ರತಿ 1100

ತೃತೀಯ ಕನ್ನಡ ಅನುವಾದ 2009 ಪ್ರತಿ 550

ಕಂಪೋಜಿಂಗ್ - ಜ್ಞಾನಮತಿ ನೆಟ್‌ವರ್ಕ್

ಜಂಬೂದ್ವೀಪ - ಹಸ್ತಿನಾಪುರ (ಮೇರಠ) ಉ. ಪ್ರ.

ಸಂಪಾದಕೀಯ

ಕರ್ಮಯೋಗಿ ಬ್ರ. ರವೀಂದ್ರಕುಮಾರ ಜೈನ

ಜೈನಧರ್ಮದ 24ನೇ ತೀರ್ಥಂಕರರಾದ ಭಗವಾನ ಮಹಾವೀರ ಸ್ವಾಮಿಯವರು ೨೬೦೨ ವರ್ಷ ಪೂರ್ವದಲ್ಲಿ ಬಿಹಾರ ಪ್ರಾಂತದ ಕುಂಡಲಪುರ ನಗರದಲ್ಲಿ ಜನ್ಮ ತಳೆದು ೨೬೩೦ ವರ್ಷದ ಹಿಂದೆ ಬಿಹಾರ ಪ್ರಾಂತ್ಯದ ಪಾವಾಪುರಿಯಲ್ಲಿ ಮೋಕ್ಷವನ್ನು ಪಡೆದರು. ಭಗವಾನ ಮಹಾವೀರರ ಮೋಕ್ಷವಾದ ನಂತರ ಅನೇಕ ಆಚಾರ್ಯರಾದರು. ದೊಡ್ಡ ದೊಡ್ಡ ಗ್ರಂಥಗಳನ್ನೂ ರಚಿಸಿದ್ದಾರೆ ಆದರೆ ಒಬ್ಬ ಆರ್ಯಿಕೆ ರಚಿಸಿರುವ ಗ್ರಂಥಗಳು ನಮಗೆ ಇಲ್ಲಿಯವರೆಗೂ ಯಾವುದು ದೊರೆತಿರಲಿಲ್ಲ.

20ನೇ ಶತಮಾನದ ಮೊದಲ ಬಾಲಬ್ರಹ್ಮಚಾರಿಣಿಯಾಗಿ ಪೂಜ್ಯ ಗಣಿನೀಪ್ರಮುಖ ಜ್ಞಾನಮತಿಯಾಗಿದ್ದಾರೆ. ಇವರೇ ಮೊಟ್ಟಮೊದಲು ಗ್ರಂಥಲೇಖನವನ್ನು ಪ್ರಾರಂಭಿಸಿದವರು. ಮಕ್ಕಳಿಗಾಗಿ ಬಾಲವಿಕಾಸ, ಯುವಜನತೆಗಾಗಿ ಕಥಾ ಸಾಹಿತ್ಯ, ಮಹಿಳೆಯರಿಗಾಗಿ ನಾರೀಆಲೋಕ, ವಿದ್ವಾಂಸರಿಗಾಗಿ ಅಷ್ಟಸಹಸ್ರೀ ಮುಂತಾದ ಗ್ರಂಥಗಳನ್ನು ಬರೆದು ಸಾಹಿತ್ಯ ಜಗತ್ತಿನಲ್ಲಿ ಒಬ್ಬ ಕೀರ್ತಿವಂತ ಸಾಧ್ವೀ ಲೇಖಿಕರಾಗಿದ್ದಾರೆ.

ಇದು ಸಾಹಿತ್ಯದ ಎಲ್ಲ ಪ್ರಕಾರದ ರಚನೆಗಳ ಜೊತೆ ಇನ್ನೊಂದು ಮಹತ್ವಪೂರ್ಣ ರಚನೆಯಾಗಿರುವುದು. ಅವರ ನನ್ನ ನೆನಪುಗಳ ಆತ್ಮಕಥನ. ಶಾಸ್ತ್ರಗಳನ್ನು ಆಧಾರವಾಗಿ ಶಾಸ್ತ್ರ ಗ್ರಂಥಗಳನ್ನು ರಚಿಸುವುದಕ್ಕಿಂತಲೂ ತನ್ನ ಜೀವನದ ಘಟನೆಗಳನ್ನು ಮನಸ್ಸಿಗೆ ತಂದುಕೊಂಡು ನಮ್ಮ ಮುಂದೆ ಪ್ರಸ್ತುತ ಪಡಿಸುವ ಕೆಲಸ ಅತ್ಯಂತ ಮಹತ್ವಪೂರ್ಣವಾದುದು.

ಮೊದಲು ನಮ್ಮೆಲ್ಲರ ಆಗ್ರಹದಿಂದ ಮಾತಾಜಿ ತಮ್ಮ ಪ್ರಾರಂಭಿಕ ಜೀವನದಿಂದ ದೀಕ್ಷೆಯ ವರೆಗಿನ ಘಟನೆಗಳ ಒಂದು ಚಿಕ್ಕ ಪುಸ್ತಕವನ್ನು ಬರೆದಿದ್ದರು. ಅದು 1974ರಲ್ಲಿ ಪ್ರಕಟಗೊಂಡು ಅದನ್ನು ಓದಿದ ಹಲವಾರು ಜನ ತಮ್ಮ ಜೀವನದಲ್ಲೂ ವೈರಾಗ್ಯ ಭಾವವನ್ನು ಧರಿಸಿ ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ. ಅಚ್ಚು ಹಾಕಿಸಿದ ಪ್ರತಿಗಳೆಲ್ಲವು ಮುಗಿದುಹೋಗಿ ಮತ್ತೆ ಆ ಪುಸ್ತಕಕ್ಕೆ ಬೇಡಿಕೆ ಬರತೊಡಗಿದ ಮೇಲೆ ಎರಡನೆಯ ಬಾರಿಗೆ ಮತ್ತೆ ಅಚ್ಚುಹಾಕಿಸಬೇಕಾಯಿತು. ಆಗ ಇನ್ನು ಮುಂದಿನ ಅವರ ಜೀವನದ ಸಾಧನೆಯನ್ನು ಸೇರಿಸಬೇಕೆಂದು ಕೇಳಿಕೊಂಡಾಗ ಅವರು ಅಮೂಲ್ಯ ಗ್ರಂಥ ರಚನೆಯಲ್ಲಿ ತೊಡಗಿದ್ದರಿಂದ ನಮ್ಮ ಮನವಿಯನ್ನು ಸ್ವೀಕರಿಸಲಿಲ್ಲ. ಆಗ ನಾವು ಮಾತಾಜಿ ನಿಮ್ಮ ಜೀವನ ಚರಿತ್ರೆಯನ್ನು ಓದಿಯೆ ಎಷ್ಟೊಂದು ಜನ ತಮ್ಮ ಜೀವನವನ್ನು ಉತ್ತಮ ರೀತಿಯಲ್ಲಿ ಬದಲಾಯಿಸಿಕೊಂಡಿರುವ ಉದಾಹರಣೆಗಳನ್ನು ನೋಡಿರಿ ಎಂದು ತೋರಿಸಿದಾಗ ಅವರಿಗೆ ಸಂತೋಷವಾಯಿತು. ನಾವು ಆಗಾಗ ಒತ್ತಾಯ

ಮಾಡುತ್ತಲೇ ಇದ್ದೆವು. ಮುಂದಿನ 14 ವರ್ಷಗಳ ನೆನಪನ್ನು ಸೇರಿಸಬೇಕೆಂದು, ಅಲ್ಲದೆ ಹಿಂದಿನ ಪುಸ್ತಕವನ್ನು ಓದಿದ ಪಾಠಕಗಣದ ಕಡೆಯಿಂದಲೂ ಇದಕ್ಕಾಗಿ ಒತ್ತಾಯ ಬರತೊಡಗಿತು. ಅವರ ಸಾಧನೆಯನ್ನು ಅರಿತಿದ್ದ ಅವರೆಲ್ಲರಿಗೂ ಅದು ಬೇಕಾಗಿತ್ತು. ಆಗ ಅವರು ಷಟ್‌ಖಂಡಾಗಮದ ಸಂಸ್ಕೃತ ಟೀಕೆಯ ರಚನೆಯಲ್ಲಿ ಮಗ್ನರಾಗಿದ್ದರು. ಆದರೂ ನಮ್ಮ ಒತ್ತಾಯವನ್ನು ಹೇಗೋ ಸ್ವೀಕರಿಸಿದರು. ಆದರೂ ಸಿದ್ಧಾಂತ ಗ್ರಂಥಗಳನ್ನು ಬರೆಯುವುದರಲ್ಲಿ ಸಿಗುವ ಶಾಂತಿ, ಇನ್ನಾವ ಗ್ರಂಥದ ರಚನೆಯಲ್ಲೂ ಸಿಗಲಾರದು ಅವರ ಜೀವನದ ಒಂದೊಂದು ನಿಮಿಷವು ಅಮೂಲ್ಯವಾದುದು. ಕುಂಡಲಪುರಕ್ಕೆ ಮಾತಾಜಿಯವರ ದರ್ಶನಕ್ಕಾಗಿ ಬಂದಿದ್ದ ಮಹಾನ್ ವಿದ್ವಾಂಸರಾದ ಶ್ರೀ ನರೇಂದ್ರ ಪ್ರಕಾಶ ಜೈನರು ಅನುನಯದಿಂದ ತಮ್ಮ 14 ವರ್ಷಗಳ ನೆನಪನ್ನು ಸೇರಿಸಬೇಕೆಂದು ಪ್ರಾರ್ಥಿಸುತ್ತಾ ಮಾತಾಜಿ ನನ್ನ ನೆನಪುಗಳ ದ್ವಿತೀಯ ಆವೃತ್ತಿಗೆ ತಮ್ಮ ಉಳಿದ ವರ್ಷಗಳ ನೆನಪು ಬೇಕೇ ಬೇಕು ಎಂದಾಗ ಕೊನೆಗೆ ಸಂಕ್ಷಿಪ್ತವಾಗಿ ಬರೆದುಕೊಡಲು ಸಮ್ಮತಿಸಿದರು. ಈ ಎಲ್ಲ ಕಾರ್ಯಗಳ ವಿವರವನ್ನು ನಾವು ಸಮ್ಯಗ್‌ಜ್ಞಾನ ಪತ್ರಿಕೆಯಲ್ಲಿ ಆಗಿಂದಾಗ್ಗೆ ಕೊಟ್ಟಿದ್ದೆವು. ಅದು ಮಾತಾಜಿಯ ಲೇಖನಿಯಿಂದ ನಮಗೆ ಮತ್ತೆ ದೊರಕಿತು.

ಭಗವಾನ್ ಮಹಾವೀರರ ಕುಂಡಲಪುರದ ಮಹೋತ್ಸವದ ವೇಳೆಗೆ ಅದೂ ಶರದ್ ಪೂರ್ಣಿಮೆಯ ಮಾತಾಜಿಯ 71ನೆಯ ಜನ್ಮ ಜಯಂತಿಯ ಶುಭ ಸಮಯದಲ್ಲಿ ಈ ಗ್ರಂಥವು ಪ್ರಕಾಶನಗೊಂಡು ಓದುಗರ ಕೈ ಸೇರಿದ್ದು ನನಗೆ ಬಹಳ ಸಂತೋಷವಾಯಿತು. ಓದುಗರು ಇದನ್ನು ಓದಿ ತಮ್ಮ ಜೀವನದಲ್ಲಿ ಒಳ್ಳೆಯ ಶಿಕ್ಷಣವನ್ನು ಪಡೆದು ಅವರ ಜೀವನವನ್ನು ಸಾರ್ಥಕಗೊಳಿಸಲಿ ಎಂಬುದೇ ನಮ್ಮ ಮಹದಾಸೆ.

ಭಗವಾನ್ ಮಹಾವೀರ ಜನ್ಮಭೂಮಿ — ಆಗಸ್ಟ್ ೨೦೦೪
ನಂದ್ಯಾವರ್ತಮಹಲ್
ಕುಂಡಲಪುರ (ನಾಲಂದ), ಬಿಹಾರ್

ಅನುವಾದಕರ ಅನಿಸಿಕೆ

ಶ್ರೀ ಜ್ಞಾನಮತಿಮಾತಾಜಿಯವರ 75ನೇ ಜನ್ಮಜಯಂತಿಯ ಸಂದರ್ಭದಲ್ಲಿ ಸ್ಮರಣ ಸಂಚಿಕೆಗೆ ಒಂದು ಲೇಖನ ಬರೆಯಲು ಆಹ್ವಾನ ಸಿಕ್ಕಿತು ಅದಕ್ಕಾಗಿ ಇವರ ಬಗ್ಗೆ ಇರುವ ಪುಸ್ತಕಗಳನ್ನು ಅವಲೋಕಿಸಿದಾಗಲೇ ವ್ಯಕ್ತಿತ್ವದ ಹಿರಿಮೆಯ ಅರಿವಾಗತೊಡಗಿತು. ಇದಕ್ಕಿಂತ ಬಹಳ ಹಿಂದೆಯೇ 1964 ರಲ್ಲಿ ಇವರು ನನ್ನ ಹುಟ್ಟೂರಾದ ಬೆಳ್ಳೂರಿಗೆ ಬಂದಿದ್ದಾಗಲೇ ನನ್ನ ಅಕ್ಕ ಶ್ರೀಮತಿ ಧರಣಮ್ಮನೂ ತನ್ನ ಚಿಕ್ಕ ವಯಸ್ಸಿನಲ್ಲಿಯೇ ನಿಯಮವನ್ನು ತೆಗೆದುಕೊಂಡು ಇಂದೂ ಪಾಲಿಸುತ್ತಾ ಬರುತ್ತಿದ್ದಾರೆ. ಹಾಗೇ ನನ್ನ ತಾಯಿ ಶ್ರೀಮತಿ ಸಮಂಗಲಮ್ಮನವರು ಸಮ್ಮೇದ ಶಿಖರದ ಯಾತ್ರೆ ಹೋಗಿದ್ದಾಗ ಹಸ್ತಿನಾಪುರವನ್ನು ಸಂದರ್ಶಿಸಿ ಬಂದವರು ಅಲ್ಲಿ ತಮಗೆ ಮಾತಾಜಿ ತೋರಿಸಿದ ವಾತ್ಸಲ್ಯವನ್ನು ಯಾವಾಗಲು ಹೇಳುತ್ತಿದ್ದರು. ಇವುಗಳನ್ನು ಕೇಳಿಯೇ ನನಗೂ ಮಾತಾಜಿಯನ್ನು ನೋಡುವ ಭಾಗ್ಯವಿದೆಯ ಎಂದು ಕೊಳ್ಳುತ್ತಿದ್ದೆ.

ನನ್ನ ಪುಣ್ಯೋದಯ ದಿಂದ ಶಿಖರಜಿಗೆ ಯಾತ್ರೆ ಹೋಗುವ ಅವಕಾಶ ಸಿಕ್ಕಿತು. 30.10.2008 ರಂದು ನಾವು ಹಸ್ತಿನಾಪುರ ತಲುಪಿದೆವು. ಬೆಳಿಗ್ಗೆ ದೇವರ ದರ್ಶನ ಆದಮೇಲೆ ಗೊತ್ತಾಯಿತು ಮಾತಾಜಿ ಇಲ್ಲಿ ಇಲ್ಲ. ಹತ್ತಿರದ ಊರಿನಲ್ಲಿ ಇದ್ದಾರೆ-ಎಂದು ಹಸ್ತಿನಾಪುರ ನೋಡಿದಮೇಲೆ ಮಾತಾಜಿಯ ದರ್ಶನ ವಿಲ್ಲದೆ ಊರಿಗೆ ಹೊರಡುವುದೇ ಅವರು ಇರುವಲ್ಲಿಗೆ ಬಂದಿದ್ದ 58 ಜನ ಯಾತ್ರಿಗಳೂ ಹೊರಟೆವು ಆಗ ಸಂಜೆ 3 1/2 - 4 ಗಂಟೆ, 5 ಗಂಟೆಗೆ ಮಾತಾಜಿ ಬೇರೆಲ್ಲೋ ಹೊರಡುವ ಕಾರ್ಯಕ್ರಮ ನಿಶ್ಚಯವಾಗಿತ್ತು, ನಾವು ಹೋದ ಮೇಲೆ ಎಲ್ಲರನ್ನು ಕೂರಿಸಿ ರತ್ನತ್ರಯ ಕುಶಲೋಪರಿ ವಿಚಾರಿಸಿದರು ಎಲ್ಲರು ನಮಸ್ಕರಿಸಿದರು. ಅವರು ತಮ್ಮ ಊರಿಗೆ ಬಂದಿದ್ದನ್ನು ನೆನಪು ಮಾಡಿದರು. ಮಾತಾಜಿಗೆ ಎಲ್ಲವು ಚೆನ್ನಾಗಿ ನೆನಪಿತ್ತು. ನಾವು ಇಲ್ಲಿಗೆ ಬರುವ ಮೊದಲೆ ವಿಷಯವನ್ನು ಮೈಸೂರಿನಲ್ಲಿರುವ ನನ್ನವರಿಗೆ ತಿಳಿಸಿದ್ದೆ. ಅವರು ಮತ್ತೆ ಜ್ಞಾಪಿಸಿದರು. ನೀನು ಮಾತಾಜಿಯವರಲ್ಲಿ ಪರಿಚಯ ಹೇಳು ಅವರಿಗೆ ಧರ್ಮದ ಕೆಲಸ ಮಾಡಿದವರ ಬಗ್ಗೆ ವಿಶೇಷ ಪ್ರೀತಿ ಇದೆ ಎಂದು ಎಲ್ಲರು ನಾ ಮುಂದು ತಾ ಮುಂದು ಎಂದು ನಮಸ್ಕರಿಸುವುದರಲ್ಲಿ ನಾನು ಹಿಂದೆಯೇ ಉಳಿದೆ ಕೊನೆಗೆ ನಮ್ಮವರ ಪ್ರೇರಣೆಯಿಂದ ಮೆಲ್ಲಗೆ ನನ್ನ ಪರಿಚಯ ಹೇಳಿಕೊಂಡೆ ಧವಲಗ್ರಂಥದ ಅನುವಾದ ಎನ್ನುತ್ತಿದ್ದಂತೆ ಮಾತಾಜಿಯವರ ಕಿವಿ ಚುರುಕಾಯಿತು. ಹಾ ಬಹಳ ಒಳ್ಳೆಯ ವಿಷಯ ಏನು ಓದಿದ್ದೀಯ ಎಂದೆಲ್ಲ ವಿಚಾರಿಸಿ. ಈಗ ನನ್ನದೊಂದು ಪುಸ್ತಕವನ್ನು ಕನ್ನಡಕ್ಕೆ ಭಾಷಾಂತರಿಸು ಎಂದು ಹತ್ತಿರ ಇದ್ದವರಿಗೆ ಇವರ ವಿಳಾಸ ತೆಗೆದುಕೊಳ್ಳಿ, ಹಾಗೇ ಮೋತಿ ಸಾಗರರಿಗೆ 'ಮೇರಿ ಸ್ಮೃತಿಯಾ' ಎಂಬ ಪುಸ್ತಕವನ್ನು ಕೊಡಲು ಹೇಳಿ ಎಂದು ಹೇಳಿದರು ಮತ್ತೆ ನನಗೆ ಪುಸ್ತಕವನ್ನು ಅನುವಾದ ಮಾಡು ನಿನ್ನನ್ನು ಹಸ್ತಿನಾಪುರಕ್ಕೆ ಕರೆಸುತ್ತೇನೆ ಎಂದರು. ಅಲ್ಲಿಂದ ಹಸ್ತಿನಾಪುರಕ್ಕೆ ಬರುತ್ತಲೇ ಮೋತಿಸಾಗರರನ್ನು ದರ್ಶನ ಮಾಡಿ ಅವರಿಂದ ಪುಸ್ತಕವನ್ನು ಪಡೆದೆನು.

ಯಾತ್ರೆಯಿಂದ ನಾವು ನವೆಂಬರ್ 16 ರಂದು ಮೈಸೂರಿಗೆ ಹಿಂದಿರುಗಿದೆವು. ಯಾತ್ರೆಯ ಸಮಯದಲ್ಲೇ ಸಾಕಷ್ಟು ಓದಿದ್ದೆ. ಕೊನೆಗೆ ಜನವರಿ 14 ಸಂಕ್ರಾಂತಿಯ ದಿನ ಬರೆಯಲು ಕುಳಿತು ಬರೆಯುವಾಗ ಮಾತಾಜಿಯೆ ನನ್ನ ಎದುರಿಗೆ ಹೇಳುತ್ತಿದ್ದಾರೇನೊ ಎಂದು ಭಾಸವಾಗತೊಡಗಿತು. ಇದೊಂದು ಅಮೂಲ್ಯ ಗ್ರಂಥ. ಇವರ ಜೀವನ ಚರಿತ್ರೆಯೇ ಓದುಗರಿಗೆ ಪ್ರೇರಣಾಶಕ್ತಿಯ ಮಂತ್ರದಂಡದಂತೆ ತೋರತೊಡಗಿತು. ಮೊದಲ ಪುಟದ ವಾಕ್ಯವೇ ನನ್ನನ್ನು ಆಕರ್ಷಿಸಿತು "ಆತ್ಮನಲ್ಲಿ ಆನಂತ ಶಕ್ತಿ ಇದೆ. ಇದನ್ನು ಪ್ರಕಟಗೊಳಿಸುವ ಪುರುಷಾರ್ಥ ಎಲ್ಲರಲ್ಲೂ ಉಂಟಾಗಬೇಕಾದರೆ ಮಾತಾಜಿಯವರ ಜೀವನ ಚರಿತ್ರೆಯೇ ಒಂದು ಚಿಂತಾಮಣಿ ಎನ್ನಿಸಿತು. ಬರೆಯುವಾಗ ನಿದ್ರೆಯಾಗಲಿ ಬೆನ್ನು ನೋವಾಗಲಿ ಒಂದು ದಿನವೂ ಕಾಣಲಿಲ್ಲ. ಒಂದು ವಿಷಯವನ್ನು ವಿಶ್ವಾಸ ಪೂರ್ಣವಾಗಿ ಹೇಳಬಲ್ಲೆ ಇಂದು ಅವರಿಂದಲೇ ರಚಿತವಾದ ಕನ್ನಡದ ದ್ವಾದಶಾನುಪ್ರೇಕ್ಷೆ ಹೇಗೆ ಕರ್ನಾಟಕದ ಮನೆ ಮನೆಯಲ್ಲೂ ಧ್ವನಿಸುತ್ತಿದೆಯೋ ಹಾಗೇ ಕನ್ನಡದವರು ಇದನ್ನು ಖಂಡಿತ ಸ್ವಾಗತಿಸುತ್ತಾರೆ. ನನ್ನ ತಿಳುವಳಿಕೆಗೆ ಬಂದಂತೆ ವಿಷಯ ವ್ಯಕ್ತಪಡಿಸಲು ಪ್ರಯತ್ನಿಸಿದ್ದೇನೆ ಅದನ್ನು ಓದುಗರೇ ವಿಮರ್ಶೆ ಮಾಡಲಿ. ಅನುವಾದದ ನಂತರ ಹಸ್ತಿನಾಪುರಕ್ಕೆ ದೂರವಾಣಿಯ ಮೂಲಕ ಮಾತಾಡಿದಾಗ ಡಿ.ಟಿಪಿ. ಮಾಡಿ ಕಳುಹಿಸಲು ಅಲ್ಲಿಂದ ಆದೇಶ ಬಂದಿತು. ನಾನು ಅಲ್ಲಿಂದ ಪುಸ್ತಕವನ್ನು ಪಡೆಯುವಾಗ ಸಂಘದ ಶಿಷ್ಯರು ಅಕ್ಟೋಬರ್‌ನಲ್ಲಿ ಮಾತಾಜಿಯವರ ಜನ್ಮಜಯಂತಿಯ ವರೆಗೂ ಪೂರ್ಣಗೊಳಿಸಿ ಎಂದು ಹೇಳಿದ್ದ ಮಾತು ದಿನ ನೆನಪಿನಲ್ಲಿತ್ತು. ಇದನ್ನು ತಿದ್ದಿ ಸಂಸ್ಕರಿಸಿದ ಶ್ರೇಯಸ್ಸು ಎನ್. ಸುರೇಶಕುಮಾರರವರದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗದಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ. ಅವರು ತಮ್ಮೆಲ್ಲ ಕೆಲಸವನ್ನು ಬದಿಗೊತ್ತಿ ಜನ್ಮ ಜಯಂತಿಯ ಒಳಗೆ ದೆಹಲಿಗೆ ತಲುಪಿಸಬೇಕೆಂಬ ಇಚ್ಛೆಯಿಂದ ನನ್ನ ಕರಡು ಭಾಷಾಂತರವನ್ನು ತಿದ್ದಿ ಓದುಗರ ಸಮ್ಮುಖಕ್ಕೆ ಒದಗಿಸಿದ್ದಾರೆ. ಅವರಿಗೆ ನಾನು ಋಣಿಯಾಗಿದ್ದೇನೆ. ಅಂದವಾಗಿ ಡಿ.ಟಿ.ಪಿ. ಮುದ್ರಣವನ್ನು ಮಾಡಿಕೊಟ್ಟಿರುವ ಶ್ರೀಮತಿ ಸುಮತಿ ಎಂ. ಪಿ. ಇವರಿಗೆ ನನ್ನ ಆತ್ಮೀಯ ಕೃತಜ್ಞತೆಗಳು.ವಮಾತಾಜಿಯವರಿಂದ ಆಶೀರ್ವಾದವನ್ನು ಬೇಡುತ್ತಾ ನನ್ನ ಒಂದೆರಡು ಮಾತುಗಳನ್ನು ವ್ಯಕ್ತಗೊಳಿಸಿದ್ದೇನೆ.

4-10-2009

ಬಿ. ಜೆ. ಜ್ವಾಲಾಸುರೇಶ್
ಮಾನಸಗಂಗೋತ್ರಿ
ಮೈಸೂರು - 6.

ಅನುವಾದದ ಪರಿಷ್ಕರಣೆ

ರಾಷ್ಟ್ರಗೌರವ ಗಣಿನೀ ಪ್ರಮುಖ ಪರಮಪೂಜ್ಯ ಶ್ರೀ ಜ್ಞಾನಮತಿ ಮಾತಾಜಿ ಅವರದು ಅದ್ಭುತ ವ್ಯಕ್ತಿತ್ವ. 75 ಸಂವತ್ಸರಗಳನ್ನು ಕಂಡಿರುವ ಅವರ ಚೇತನವು ಬಾಲ್ಯದಲ್ಲಿಯೇ ಜ್ಞಾನ ಪರಿಸರದ ಕಡೆಗೆ ಹೆಜ್ಜೆಯಿರಿಸಿದ್ದು ಸೋಜಿಗದ ವಿಚಾರ. ಪೂರ್ವಭವದ ಸಂಸ್ಕಾರವೇ ಈ ಭವಕ್ಕೂ ಮುಂದುವರಿದು ಬಂದಿತ್ತೆಂದರೆ ಅತಿಶಯವಾಗದು. ಇದನ್ನು ಸ್ಥಿರಗೊಳಿಸಿ ಬೆಳೆಸುವಲ್ಲಿ ಅವರ ತಾಯಿ ರತ್ನಮತಿ ಮಾತಾಜಿ ಅವರ ಪಾತ್ರವೂ ಅಪೂರ್ವವೆಂದೇ ಹೇಳಬೇಕು. ತಾಯಿಯವರಿಗೆ ಬಳುವಳಿಯಾಗಿ ಬಂದಿದ್ದ 'ಪದ್ಮನಂದೀ ಪಂಚವಿಂಶತಿಕಾ' ಎಂಬ ಗ್ರಂಥವು ಮಾತಾಜಿಯವರ ಬಾಲ್ಯದಲ್ಲಿಯೇ ಬದುಕನ್ನು ಪರಿವರ್ತಿಸಿತು. ಇದರ ಪ್ರಭಾವದಿಂದ ವೈವಾಹಿಕ ಬದುಕನ್ನೇ ತಿರಸ್ಕರಿಸಿ ಬಾಲಿಕಾ ಬ್ರಹ್ಮಚರ್ಯ ದಾರಣೆ ಮಾಡಿ ತಂದೆಯ ಅಡೆತಡೆಯನ್ನು ಲೆಕ್ಕಿಸದೆ ಆ. ಶ್ರೀ ದೇಶಭೂಷಣ ಮಹಾರಾಜರ ಮುನಿ ಸಂಘವನ್ನು ಸೇರಿ ಸಂಯಮ ಜೀವನಕ್ಕೆ ಪದಾರ್ಪಣೆ ಮಾಡಿದರು. ಮುನಿಸಂಘದಲ್ಲಿ ಸ್ವಾಧ್ಯಾಯಗಳ ಮೂಲಕಸಂಸ್ಕೃತ ಭಾಷಾ ವ್ಯಾಕರಣ, ಛಂದಸ್ಸುಗಳನ್ನು ಗಂಭೀರವಾಗಿ ಅಧ್ಯಯನ ಮಾಡಿದರು.

ಇದು ಆರಂಭಿಕ ಪೀಠಿಕಾ ಅಧ್ಯಯನವಾದರೆ, ಮುಂದೆ ಆರ್ಯಿಕೆಯಾಗಿ ಅವರು ತತ್ತ್ವಾರ್ಥಸೂಕ್ತ, ಸರ್ವಾಥ ಸಿದ್ಧಿ, ಗೊಮ್ಮಟಸಾರ, ತಿಲೋಯ ಪಣತ್ತಿ, ತ್ರಿಲೋಕಸಾರ, ಅಷ್ಟಸಹಸ್ರೀ, ತತ್ತ್ವಾರ್ಥ ರಾಜದೀಪಿಕಾ, ಮೂಲಾಚಾರ, ಅನಗಾರಧರ್ಮ ಮೃತ, ಪರೀಕ್ಷಾಮುಖ, ಪ್ರಮೇಯ ಕಮಲಮಾರ್ತಾಂಡ, ಅಷ್ಟಪಾಹುಡ, ಸಮಯಸಾರ, ಪ್ರವಚನಸಾರ, ಪಂಚಾಸ್ತಿಕಾಯಾಸಾರ ಈ ಎಲ್ಲ ಧರ್ಮಗ್ರಂಥಗಳ ನಿರಂತರ ಸ್ವಾಧ್ಯಾಯ, ಚಿಂತನ ಮನನ ಮಾಡಿರುವುದಲ್ಲದೇ ಮೇಲೆ ವ್ಯಾಖ್ಯಾನಗಳನ್ನು ಮಾಡಿರುತ್ತಾರೆ. ಇವುಗಳನ್ನು ನೋಡಿದಾಗ ಮಾತಾಜಿಯವರು ಸಮ್ಯಗ್‌ಜ್ಞಾನ ಪ್ರಪಂಚದ ಎಲ್ಲ ಕೃತಿಗಳಾ ಜ್ಞಾನಸಾರವನ್ನು ಗ್ರಹಣೆಮಾಡಿ ಅಪಾರವೂ ಅಪೂರ್ವವೂ ಆದ ಸಾಹಿತ್ಯ ರಚಿಸಲು ವಾಚಕರ ಮುಂದಿರಿಸಿದ್ದಾರೆ. ಇವೆಲ್ಲಕ್ಕೂ ಕಳಸಪ್ರಾಯ ಎಂಬಂತೆ 'ಘಟ್ ಖಂಡಾಗಮ' ಎಂಬ ಜೈನಕರ್ಮ ಸಿದ್ಧಾಂತದ ಮಹಾನ್ ಗ್ರಂಥವಿದೆ ಈ ಷಟ್ಖಂಡಾಗಮಕ್ಕೆ ಒಂದು ಲಕ್ಷಗ್ರಂಥ ಪ್ರಮಾಣದ 'ಧವಲಾ' ಎಂಬ ವ್ಯಾಖ್ಯೆಯನ್ನು ಕ್ರಿ. ಶ. 8 ನೆಯ ಶತಮಾನದಲ್ಲಿ ಆ. ವೀರಸೇನಸ್ವಾಮಿಯವರು ಬರೆದಿದ್ದರು. ಈ ವ್ಯಾಖ್ಯಾನವನ್ನು ಮಾತಾಜಿಯವರು ಸೂಕ್ಷ್ಮವಾಗಿ ಅಧ್ಯಯನ ನಡೆಸಿದ ಬಳಿಕವೇ 'ಸಿದ್ಧಾಂತ ಚಿಂತಾಮಣಿ' ಎಂಬ ಸಂಸ್ಕೃತ ವ್ಯಾಖ್ಯಾನ ಬರೆದರು. ಇದರಲ್ಲಿ ಸಂಸ್ಕೃತಭಾಷಾ ಪ್ರಭುತ್ವ, ಪಾಂಡಿತ್ಯತರ್ಕಬದ್ಧತೆ, ಎಷ್ಟು ಅಗಾಧವಾದುದು ಎಂಬುದರ ಅರಿವು ನಮಗಾಗುತ್ತದೆ ಜೈನ ಪರಂಪರೆಯ ಅಕ್ಷಣ್ಣಶ್ರುತಜ್ಞಾನವಾಹಿನಿಯನ್ನು ಚಿರಂತನಗೊಳಿಸಿರುವ ಇವರು ಜ್ಞಾನಮತಿ ಮಾತ್ರವಲ್ಲ 'ಸಮ್ಯಗ್ ಜ್ಞಾನಮತಿ' ಅಥವಾ ಕಲಿಯುಗದಲ್ಲಿ ಅವರಿಸಿದ 'ಶ್ರುತದೇವಿ' ಯೇ ಆಗಿದ್ದಾರೆ.

ಇವರ ಸಾಧನೆ ಶ್ರುತಜ್ಞಾನಧ್ಯಯನ ಸಾಹಿತ್ಯ ನಿರ್ಮಾಣಮಾತ್ರವಾಗಿರದೆ, ಸಂಘದ ಆಚಾರ್ಯರಿಗೂ ಇತರರಿಗೂ ಆಗಾಗ್ಗೆ ಸೂಕ್ತಸಲಹೆಗಳನ್ನು ನೀಡುತ್ತಿದ್ದಾರು. ಸಂಘದ ಸಂರಕ್ಷಣೆ, ಪೋಷಣೆ ಮಾಡುತ್ತಾ ಸ್ವತಃ ಆರ್ಯಿಕೆ ಆಗಿ ಗಣನೀ ಪ್ರಮುಖರಾದರು. ಇವರಿಗೆ ಜೈನಧರ್ಮದ ಚಿರಂತನತೆಯ ಬಗ್ಗೆಅಪೂರ್ವಕಾಳಜಿ, ಅದಕ್ಕಾಗಿ ಅವರು ಯಾವುದೇ ರೀತಿಯ ಅಡ್ಡಿ ಆತಂಕಗಳು ಬಂದರೂ ಅವುಗಳನ್ನು

ಉಪೇಕ್ಷಿಸಿ ಗುರಿಸಾಧಿಸುತ್ತಿದ್ದರು. ಇದಕ್ಕೆ ಅವರು ಸಂಚಾಲನೆ ಮಾಡಿಸಿರುವ ಜಂಬೂದ್ವೀಪ ಜ್ಞಾನಜ್ಯೋತಿಯ ಶ್ರೀ ವಿಹಾರ, ಹಸ್ತಿನಾಪುರದಲ್ಲಿ ಜಂಬೂದ್ವೀಪ-ಮೇರು ನಿರ್ಮಾಣಗಳೇ ಸಾಕ್ಷಿಭೂತವಾಗಿವೆ. ಇವುಗಳಲ್ಲದೆ, ಇವರು ಮಾಡಿರುವ ಯಾವುದೇ ವಿಹಾರಕ್ಷೇತ್ರವಿರಲಿ ಅಲ್ಲಲ್ಲಿ ವಿಶಿಷ್ಟ ಆರಾಧನೆಗಳನ್ನು ಆಯೋಜಿಸಿ ಜನರಲ್ಲಿ ಜೈನಧರ್ಮ ಉರ್ಜಿತವಾಗಿರುವಂತೆ ಮಾಡುತ್ತಿದ್ದರು ರಾಷ್ಟ್ರೀಯ ವಿಚಾರ ಸಂಕಿರಣ, ಅಂತಾರಾಷ್ಟ್ರೀಯ ಸಮ್ಮೇಳನಗಳನ್ನೂ ನೆರವೇರಿಸಿ ಜೈನಗಣಿತ, ತ್ರಿಲೋಕವಿಜ್ಞಾನ, ಭಂ ವೃಷಭದೇವರು ಜೈನಧರ್ಮದ ಸಂಸ್ಥಾಪಕರು, ಜೈನಧರ್ಮದ ಪ್ರಾಚೀನತೆ, ಇತಿಹಾಸಕಾರರ ಸಮ್ಮೇಳನ, ಮುಂತಾದ ಉನ್ನತಮಟ್ಟಾದ ವೈಚಾರಿಕ ಸಮ್ಮೇಳನಗಳನ್ನು ಆಯೋಜಿಸುವಂತೆ ಮಾಡಿ ಜೈನಧರ್ಮ ಉಜ್ಜಲಗೊಳಿಸುವಂತಹ ಅಪೂರ್ವವಾದ ಮಹಾನ್ ಕಾರ್ಯವನ್ನು ನಿರಂತರ ಮಾಡಿದ್ದಾರೆ.

ಈ ಮುಂತಾದ ಕಾರ್ಯಗಳಲ್ಲಿ ಸದಾ ಮಗ್ನರಿದ್ದ ಮಾತಾಜಿಯವರು ತನ್ನ ಜೀವನದ ಘಟನಾವಳಿಗಳನ್ನು ತಾನೇ ಬರೆಯುವಂತಹ ಮುಜುಗರ ಬೇಸರ, ಉದಾಸೀನತೆಗಳನ್ನುಂಟು ಮಾಡುವ ಕೆಲಸವೇ ಆಗಿದ್ದರೂ ತನ್ನ ಸಂಘದ ಶಿಷ್ಯರ ಅಪಾರವಾದ ಒತ್ತಾಯಕ್ಕೆ ಕಟ್ಟುಬಿದ್ದು ಬರೆದು ಸಂಗ್ರಹಿಸಿರುವ 'ನನ್ನ ಧಾರ್ಮಿಕ ಜೀವನದ ನೆನಪು' ಎಂಬ ಈ ಕೃತಿಯನ್ನು ಸಮಾಜದ ಎಲ್ಲರೂ ಆತ್ಮೀಯವಾಗಿ ಬರಮಾಡಿಕೊಂಡು ಅದರ ಸಾರಗ್ರಹಣೆ ಮಾಡುತ್ತಾರೆ, ಉನ್ನತ ಜೀವನದ ಮೌಲ್ಯಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಜೀವನದಲ್ಲಿ ಅಭ್ಯುದಯವನ್ನು ನಿಶ್ಚಯವಾಗಿ ಹೊಂದುವಂತಾಗಲಿ ಎಂಬುದು ನಮ್ಮ ಆಶಯ.

ಡಾ|| ಎನ್. ಸುರೇಶ್ ಕುಮಾರ್

ಪ್ರಸ್ತಾವನೆ

ಪೂಜ್ಯ ಗಣಿನೀಪ್ರಮುಖ ಜ್ಞಾನಮತೀ ಮಾತಾಜಿಯವರು ರಚಿಸಿರುವ "ನನ್ನ ನೆನಪು" ಎಂಬ ಗ್ರಂಥದ ಪ್ರಸ್ತಾವನೆ ಬರೆಯವುದಕ್ಕೆ ನನಗೆ ಬಹಳ ಆನಂದವಾಗುತ್ತಿದೆ. ಈ ಮುನ್ನುಡಿ ಬರೆಯಲು ಮತ್ತೊಂದು ಕಾರಣವೆಂದರೆ ನನ್ನ ಒತ್ತಾಯದಿಂದಲೇ ಅವರು ತಮ್ಮ ಆತ್ಮಚರಿತ್ರೆಯನ್ನು ಬರೆಯಲು ಮನಸ್ಸು ಮಾಡಿ ಈ ಹೊತ್ತು ಗ್ರಂಥರೂಪದಲ್ಲಿ ಹೊರತರಲು ಸಾಧ್ಯವಾಗುತ್ತಿದೆ. ಮೊದಲಿಗೆ ಅವರು ತಮ್ಮ ಜೀವನದ ಇಪ್ಪತ್ತೈದು ವರ್ಷಗಳ ನೆನಪುಗಳನ್ನ ಬರೆದಿದ್ದರು. ಈಗಲಾದರೂ ಐವತ್ತೈದು ವರ್ಷಗಳ ಎಲ್ಲ ಇತಿವೃತ್ತವನ್ನು ಬರೆದು ಆತ್ಮಚರಿತೆ ಸಾಹಿತ್ಯದಲ್ಲಿ ಒಂದು ಹೊಸ ಅಧ್ಯಾಯವನ್ನು ಬರೆದಿದ್ದಾರೆ. ಮಹಾಕವಿ ಬನಾರಸೀದಾಸರು ಕೂಡ ತಮ್ಮ ಜೀವನದ ಐವತ್ತೈದು ವರ್ಷಗಳ ಜೀವನ ವೃತ್ತಾಂತವನ್ನು "ಅರ್ಧಕಥಾನಕ" ಎಂಬ ಹೆಸರಿನಿಂದಲೇ ಪ್ರಕಟಿಸಿದ್ದರು. ಅದೇ ರೀತಿಯಲ್ಲಿ ಮಾತಾಜಿಯವರು ತಮ್ಮ ಐವತ್ತೈದು ವರ್ಷಗಳ ಜೀವನವೃತ್ತಾಂತವನ್ನು ಗದ್ಯರೂಪದಲ್ಲಿ ಬಹಳ ಕಾಳಜಿಯಿಂದ ಬರೆದು ನೀಡಿದರು. ತಮ್ಮ ಜೀವನದ ನೆನಪುಗಳನ್ನು ಆತ್ಮಚರಿತೆಯ ರೂಪದಲ್ಲಿ ಬರೆದು ನೀಡುವುದು ಸುಲಭದ ಕಾರ್ಯವೇನಲ್ಲ. ಜೀವನದ ಮೂವತ್ತು ನಲವತ್ತು ವರ್ಷಗಳಾದರೂ ಹೇಗೋ ಕಳೆದುಹೋಗುತ್ತದೆ. ಆದರೆ ಅದರ ನಂತರದ ಜೀವನದಲ್ಲಿ ಹಿಂದಿನ ಘಟನೆಗಳ ಕಡೆಗೆ ದೃಷ್ಟಿ ಬೀರಿದಾಗ ನಾಲ್ಕಾರು ಘಟನೆಗಳು ಬಿಟ್ಟು ಹೋಗಬಹುದು ಅಥವಾ ಅದಕ್ಕೆ ತಕ್ಕದಾದ ವಿವರಗಳು ದೊರಕದೆ ಹೋಗಬಹುದು. ಅದಕ್ಕಾಗಿ ಆತ್ಮಚರಿತೆಯನ್ನು ಬರೆಯುವ ಪರಂಪರೆಇದ್ದರೂ ಪ್ರಾಚೀನಕಾಲದಲ್ಲಿ ದೊರೆಯುವ ಆತ್ಮಚರಿತೆಗಳು ಬೆರಳೆಣಿಕೆಯವು. ಸಂಸ್ಕೃತ ಸಾಹಿತ್ಯದಲ್ಲಿ ಬಾಣಭಟ್ಟನ 'ಹರ್ಷಚರಿತವು' ಆತ್ಮಚರಿತೆಯ ದೃಷ್ಟಿಯಿಂದ ಉಲ್ಲೇಖಿಸಬಹುದಾಗಿದೆ. ಅದರಲ್ಲಿ ಇತಿಹಾಸ, ಸಾಹಿತ್ಯ, ಜೀವನಗಾಥೆಗಳನ್ನು ಒಳಗೊಂಡಿದೆ. ಅಂತಹ ಸಮೀಕರಣವು ಬೇರೆ ಜೀವನಚರಿತೆಗಳಲ್ಲಿ ಕಂಡುಬರುವುದು. ಮಧ್ಯಯುಗದ ಮುಸ್ಲಿಂ ಶಾಸಕರಲ್ಲಿ ಆತ್ಮಚರಿತೆ ಬರೆಯುವ ಉತ್ತಮ ಪರಂಪರೆ ಇತ್ತು. ಈ ನಿಟ್ಟಿನಲ್ಲಿ ಬಾದಶಹ ಜಹಂಗೀರನ "ಜಹಂಗೀರನಾಮ'ವು ಉಲ್ಲೇಖನೀಯವಾಗಿದೆ.

ಜೈನ ಆಚಾರ್ಯರು ಹಾಗೂ ವಿದ್ವಾಂಸರು ತಮ್ಮ ಕೃತಿಗಳ ಅಂತರದಲ್ಲಿ ತಮ್ಮ ಹಾಗೂ ತತ್ಕಾಲಿಕ ರಾಜ, ಸಮಾಜ, ನಗರ, ಮುಂತಾದವುಗಳ ಪರಿಚಯ ನೀಡುವ ಪರಂಪರೆ ಇಟ್ಟುಕೊಂಡಿದ್ದರು. ಆದರೆ ಅವರು ಅದಕ್ಕೆ ಆತ್ಮಚರಿತೆ' ಎಂಬ ಹೆಸರನ್ನು ನೀಡದೆ ಇದ್ದರೂ ಅದು ಅದರ ಒಂದು ಭಾಗ ಎಂದು ಹೇಳಬಹುದು. ಆಚಾರ್ಯ ಸಮಂತ ಭದ್ರರು "ವಾದಾರ್ಥೀ ವಿಚರಾಮ್ಯಹಂ ನರಪತೇ ಶಾರ್ದೂಲ ವಿಕ್ರೀಡಿತಂ" ಎಂಬ ಪದ್ಯದಲ್ಲಿ ತಮ್ಮ ವಿದ್ವತ್ತೆಯನ್ನು ಶಾಸ್ತ್ರಾರ್ಥ ಕುಶಲತೆಯನ್ನು ಹಾಗೂ ನಿರ್ಭೀಕತೆಯನ್ನು ಪರಿಚಯಿಸಿದ್ದಾರೆ. ಇದು ಕೂಡ ಅವರ ಆತ್ಮಕಥನದ ಅಂಶ ಮಾತ್ರವಾಗಿದೆ. ಹದಿನೈದನೆ ಶತಮಾನದ ನಂತರದ ಅಪಭ್ರಂಶ ಸಂಸ್ಕೃತ, ಹಿಂದಿ ಭಾಷೆಗಳ ಎಷ್ಟೋ ಜೈನಕವಿಗಳು ತಮ್ಮ ಕೃತಿಗಳ ಕೊನೆಯಲ್ಲಿ ದೀರ್ಘವಾದ ಪ್ರಶಸ್ತಿಗಳನ್ನು ಬರೆಯಲಾರಂಭಿಸಿದರು. ಪ್ರಶಸ್ತಿಗಳಿಂದ ಕವಿಯ ಜೀವನ, ತಾಯಿತಂದೆ, ರಚನೆಗಳು, ಗ್ರಾಮ, ನಗರ, ರಾಜ, ವ್ಯಾಪಾರ ಮುಂತಾದವುಗಳನ್ನು ಕುರಿತು ಹೆಚ್ಚಿನ ಮಾಹಿತಿಗಳು

ದೊರೆಯುತ್ತವೆ. ಅವು ಒಂದು ಕಿರುಪರಿಚಯವಿದ್ದಂತೆ ಇರುತ್ತದೆ. ಆದರೆ ಇಂತಹ ಪ್ರಶಸ್ತಿಗಳಲ್ಲಿ ಕವಿಗಳು ತಮ್ಮ ಮಧುರ ಹಾಗೂ ಕಹಿನೆನಪುಗಳು ಇಲ್ಲದೇ ಹೋಗಿದ್ದುದು ಆ ಪ್ರಶಸ್ತಿಗಳು ಆತ್ಮಚರಿತ್ರೆಯ ವರ್ಗಕ್ಕೆ ಸೇರುವುದಿಲ್ಲ. ಭಟ್ಟಾರಕ ಯುಗದಲ್ಲಿ ಇಂತಹ ಪ್ರಶಸ್ತಿಗಳನ್ನು ಬರೆಯುವ ಉತ್ತಮ ಪರಂಪರೆ ಇತ್ತು. ಭಟ್ಟಾರಕರು ತಮ್ಮ ಗ್ರಂಥಗಳ ಕೊನೆಯಲ್ಲಿ ತಮ್ಮ ಪೂರ್ವದ ಭಟ್ಟಾರಕರನ್ನು ಒಳಗೊಂಡಂತೆ ತಮ್ಮ ಪರಿಚಯವನ್ನು ಬರೆಯುವ ರೂಢಿಯನ್ನು ಬೆಳೆಸಿದರು. ಅದನ್ನು ಅನುಸರಿಸಿ, ಅವರ ನಂತರದ ಕವಿಗಳಲ್ಲಿ ಮಹಾಕವಿ ದೌಲತರಾಮ್ ಕಾಸಲಿವಾಲ, ಪಂ. ಜಯಚಂದಛಾವಡ ಪಂ ಸದಾಸುಖಕಾಸಲಿವಾಲ, ಪಂ ಭಕ್ತಾವರರಾಮಸಾಹ, ಮುಂತಾದ ಹಿಂದಿ ಭಾಷಾ ವಿದ್ವಾಂಸರು ತಮ್ಮ ಕೃತಿಗಳಲ್ಲಿ ವಿಸ್ತಾರವಾದ ಪ್ರಶಸ್ತಿಗಳನ್ನು ಬರೆದಿದ್ದಾರೆ. ಆದರೆ ಅವುಗಳಲ್ಲಿ ಕವಿಗಳು ತಮ್ಮ ಸಾಮಾನ್ಯ ಪರಿಚಯವನ್ನಲ್ಲದೆ ನೈಜ ಪರಿಚಯವನ್ನು ನೀಡಲು ಶಕ್ತರಾಗಿರಲಿಲ್ಲ. ಅಪಭ್ರಂಶದ ಮಹಾಕವಿ ರಇಧೂ ಅವರು ತಮ್ಮ ಗ್ರಂಥಗಳಲ್ಲಿ ವಿಸ್ತಾರವಾದ ಪ್ರಶಸ್ತಿಗಳನ್ನು ಬರೆದಿದ್ದಾರೆ. ಆದರೆ ಅವರದು ಕೂಡ ಆತ್ಮಕಥನದ ಶ್ರೇಣಿಗೆ ಸೇರುವುದಿಲ್ಲ.

ಆತ್ಮಕಥನದ ದೃಷ್ಟಿಯಿಂದ ಮಹಾಕವಿ ಬನಾರಸೀದಾಸರ 'ಅರ್ಧಕಥಾನಕ' ಒಂದು ಸರಾಗವಾದ ಶುದ್ಧ ಚರಿತ್ರೆಯಾಗಿದೆ. ಇದರಲ್ಲಿ ಯಾರನ್ನು ಹೊಗಳಿಯೂ ಇಲ್ಲ. ನಿಂದೆಯನ್ನು ಮಾಡಿಲ್ಲ ಇದೊಂದು ಕವಿ ಹಾಗೂ ಅಸಫಲನಾದ ವ್ಯಾಪಾರಿಯೊಬ್ಬನ ಆತ್ಮಕಥನವಾಗಿದೆ. ಸತ್ಯಸಂಗತಿಯನ್ನು ಯಥಾವತ್ತಾಗಿ ಚಿತ್ರಿಸಿದ್ದಾರೆ. ಇದುವರೆಗೆ ದೊರೆತಿರುವ ಆತ್ಮಕಥನಗಳಲ್ಲಿ ಇದನ್ನು ಸರ್ವೋತ್ತಮವೆಂದೇ ಪರಿಗಣಿಸಲಾಗಿದೆ. ಇದಾದ ನಂತರ ನಮಗೆ ದೊರೆಯುವ ಆತ್ಮಕಥನಗಳಲ್ಲಿ ಭಟ್ಟಾರಕ ಕ್ಷೇಮಕೀರ್ತಿಯವರ ಆತ್ಮಚರಿತೆಯು ಒಂದು. ಇದನ್ನು ಅರ್ಧಕಥಾನಕವೆಂದು ಹೇಳಲಾಗದಿದ್ದರೂ ಭಟ್ಟಾರಕರು ತಮ್ಮ 60 ವರ್ಷದ ಜೀವನ ವೃತ್ತಾಂತವನ್ನು ಚಿತ್ರಿಸಿದ್ದಾರೆ. ಭಟ್ಟಾರಕರು ತಮ್ಮ ಜನ್ಮ, ಶಿಕ್ಷಣ ಸಾಧು ಜೀವನ ವಿಹಾರ, ತಮ್ಮ ಸಾಧನೆಯನ್ನು ಒಂದೊಂದು ವರ್ಷದ ಚಿತ್ರಣವನ್ನು ತೆರೆದಿಟ್ಟಿದ್ದಾರೆ. ಈ ಕೃತಿ ಹಿಂದಿಯ ಗದ್ಯದಲ್ಲಿದ್ದರೂ ಇದರ ಮೇಲೆ ಗುಜರಾತಿಯ ಛಾಯೆ ಇದೆ. ಆತ್ಮಚರಿತೆಗಳಲ್ಲಿ ದೊರೆತಿರುವುದು ಇದೊಂದೆ. ಆದರೆ ಇದು ಪ್ರಕಾಶನಗೊಂಡಿಲ್ಲ. ಇದರ ಹಸ್ತಪ್ರತಿಯು ಉದಯಪುರದ ಸಂಭವನಾಥ ದಿಗಂಬರ ಮಂದಿರದಲ್ಲಿದೆ.

ಈಗ ಮಹಾನ್ ವ್ಯಕ್ತಿಗಳಾದ ಕವಿ ರವೀಂದ್ರ, ಮಹಾತ್ಮಗಾಂಧಿ, ಡಾ. ರಾಜೇಂದ್ರ ಪ್ರಸಾದ್ ಹಾಗೂ ಪಂಡಿತ್ ಜವಾಹರಲಾಲ ನೆಹರುರವರ ಆತ್ಮಕಥನದಿಂದ, ಕಥಾಕಥನ ಬರೆಯುವ ಪದ್ಧತಿ ಜಾಗೃತವಾಗಿದೆ. ಹಾಗೇ ದಿನಚರಿ ಬರೆಯುವ ಪರಿಪಾಠಿಯಲ್ಲಿದೆ. ಸ್ವರ್ಗೀಯ ಗಣೇಶಪ್ರಸಾದ್‌ಜೀ ವರ್ಣೀಯವರ ನನ್ನ ಜೀವನಗಾಥೆ ಒಂದು ಉತ್ತಮವಾದ ಆತ್ಮಕಥನವಾಗಿದೆ. ಎರಡು ಭಾಗಗಳಲ್ಲಿ ಪ್ರಕಾಶನಗೊಂಡಿರುವ ಇದು ಅತ್ಯಂತ ಪ್ರಶಂಸನೀಯ ಆಗಿದೆ.

ವರ್ಣೀಜಿಯವರ "ನನ್ನ ಜೀವನಗಾಥೆ"ಯ ನಂತರ ನಮಗೆ ಇನ್ನಾವುದೇ ಸಂತರ, ಸಮಾಜಸೇವಕರ ಆತ್ಮಚರಿತ್ರೆ ದೊರಕಿಲ್ಲ. ಆತ್ಮಚರಿತ್ರೆ ಬರೆಯುವುದು ಸುಲಭದ ಕೆಲಸವಲ್ಲ. ಏಕೆಂದರೆ ಜೀವನದಲ್ಲಿ ಬರುವ ಸಿಹಿ, ಕಹಿ ಘಟನೆಗಳನ್ನು ಚಿತ್ರಿಸುವುದು ಒಂದು ಸಾಹಸದ ಕೆಲಸವೇ ಸರಿ. ಇದು ಎಲ್ಲಾ ಲೇಖಕರಿಗೂ ವಿದ್ವಾಂಸರಿಗೂ, ರಾಜಕೀಯ ನೇತಾರರಿಗೂ ಸಾಧ್ಯವಿಲ್ಲ.

ನನಗೆ 1983ರಲ್ಲಿ ಪೂಜ್ಯ ಆರ್ಯಿಕಾ ರತ್ನಮತಿ ಮಾತಾಜಿಯವರ ಅಭಿನಂದನ ಗ್ರಂಥದ ಸಂಪಾದನೆಯ ಸಂದರ್ಭದಲ್ಲಿ ಹಸ್ತಿನಾಪುರಕ್ಕೆ ಹೋಗುವ ಅವಕಾಶ ದೊರೆಯಿತು. ಅದೇ ವೇಳೆಗೆ ಪೂಜ್ಯ ಆರ್ಯಿಕಾ ಜ್ಞಾನಮತಿ ಮಾತಾಜಿಯವರ ಮುಂದೆ ಇಟ್ಟಿದ್ದ 'ನನ್ನ ನೆನಪುಗಳು' ಹಸ್ತಪ್ರತಿಯನ್ನು ನೋಡಿದೆನು. ಅಲ್ಲಲ್ಲಿ ಅದನ್ನು

ಓದಿದೆನು. ನನಗೆ ಅದು ಪ್ರಿಯವಾಯಿತು. ಪಂಡಿತ ಬಾಬುರಾವ್ ಜಾಮಾದಾರ ಬ್ರ. ಮೋತೀಚಂದ್, ಪಂ. ಬ್ರ. ರವೀಂದ್ರಕುಮಾರ್ ಮತ್ತು ಬ್ರ. ಮಾಧುರಿ ಇವರೆಲ್ಲರ ವಿಶೇಷ ಒತ್ತಾಯದಿಂದ ಪೂಜ್ಯ ಮಾತಾಜಿಯವರು ಆರ್ಯಿಕಾ ರತ್ನಮತಿ ಮಾತಾಜಿ ಅಭಿನಂದನ ಗ್ರಂಥದಲ್ಲಿ ತಮ್ಮ ಜೀವನದ ನೆನಪುಗಳನ್ನು ಕುರಿತು ಬರೆದಿದ್ದರು. ಈ ಲೇಖನವನ್ನು ಆ ಗ್ರಂಥದಲ್ಲಿ ಸೇರಿಸದೆ ಪ್ರತ್ಯೇಕವಾಗಿಯೇ ಪ್ರಕಟಿಸಲು ನಿವೇದಿಸಿದೆ ಮತ್ತು ಸಮಾಜಕ್ಕೆ ಯುವ ಓದುಗರಿಗೆ ಇದರಿಂದ ಪ್ರಯೋಜನವಾಗುತ್ತದೆ ಎಂದು ಹೇಳಿದೆ. ಮೊದಮೊದಲು ಮಾತಾಜಿಯವರು ಇದು ಆತ್ಮಪ್ರಶಂಸೆಯಾಗುತ್ತದೆ ಎಂದು ತಿಳಿಯಬಹುದು ಎಂದರು. ಆದರೆ ನಾನು ಇದು ತಮ್ಮ ಜೀವನದ ಮಧುರ ಮತ್ತು ಕಹಿ ಘಟನೆಗಳ ಸ್ಮೃತಿಯಾಗಿದೆ. ಇದು ಸಮಾಜದ ನಡವಳಿಕೆಯ ಮೇಲೆ ಬೆಳಕು ಬೀರುವಂತಾಗುವುದು ಎಂದ ಮೇಲೆ ಒಪ್ಪಿಕೊಂಡರು. ಇದರ ನಂತರ ನನ್ನ ನೆನಪುಗಳು ಎಂಬ ಕಿರುಹೊತ್ತಿಗೆಯು ಪ್ರಥಮಖಂಡದ ರೂಪದಲ್ಲಿ 1984ರಲ್ಲಿ ಶರದ್‌ಪೂರ್ಣಿಮೆಯಂದು ಪ್ರಕಟಗೊಂಡಿತು. ಯಾರೇ ಆಗಲಿ ಮಾತಾಜಿಯವರ ನೆನಪುಗಳ ಸಂಗ್ರಹವನ್ನು ಓದಿದ್ದೇ ಆದರೆ ಪ್ರಸನ್ನಚಿತ್ತರಾಗುತ್ತಾರೆ. ಏಕೆಂದರೆ ಎಲ್ಲರಿಗೂ ಅವರ ಬರವಣಿಗೆಯ ಶೈಲಿ ಹಾಗೂ ಘಟನೆಗಳ ವಿವರಣೆ ಎರಡೂ ಆಕರ್ಷಿಸುತ್ತವೆ. ಇದರ ನಂತರ ನಾನು ಮಾತಾಜಿಯವರಿಗೆ ತನ್ನ ಹಿಂದಿನ ಜೀವನದ ಘಟನೆಯನ್ನು ಬರೆಯಲು ಮತ್ತೆ ಒತ್ತಾಯಿಸಿದೆ. ಹಾಗಾಗಿ ಇದನ್ನು ಬರೆಯಲು ಬಹಳ ಸಂತೋಷವಾಗುತ್ತದೆ. ಮಾತಾಜಿಯವರು ತಮ್ಮ ಜೀವನದ ಘಟನೆಗಳನ್ನು ಬರೆದು ಒಂದು ಗೌರವಪೂರ್ವಕವಾದ ಯಶಸ್ವಿ ಕಾರ್ಯವನ್ನು ಮಾಡಿಕೊಟ್ಟರು.

ಜ್ಞಾನಮತೀ ಮಾತಾಜೀಯವರು ಜೈನ ಜಗತ್ತಿಗೆ ಅಷ್ಟೇ ಅಲ್ಲ ದೇಶದಲ್ಲೇ ಒಬ್ಬ ಅತ್ಯಂತ ಮೇಧಾವಿಯಾದ ವಿದುಷಿಯಾಗಿದ್ದಾರೆ. ಇವರೊಬ್ಬ ಆರ್ಯಿಕಾರತ್ನರಾಗಿದ್ದಾರೆ. ಈ ಜ್ಞಾನದ ಶಿಖರವನ್ನು ಹತ್ತಲು ಅವರು ಮಾಡಿರುವ ತಪಸ್ಸೆಷ್ಟು? ಮಾತಾಜಿಯವರಿಗೆ ನಾಲ್ಕು ಅನುಯೋಗದ ಆಳವಾದ ಜ್ಞಾನವಿದೆ. 20ನೆಯ ಶತಮಾನದ ವಿದುಷಿ ಆರ್ಯಿಕೆಯರಲ್ಲಿಯೇ ಅತ್ಯಂತ ಉನ್ನತ ಸ್ಥಾನ ಇವರದ್ದಾಗಿದೆ. ಇವರು ಪ್ರವಚನ ಮಾಡುವುದರಲ್ಲೇ ಆಗಲಿ ಲೇಖನ ಬರೆಯುವುದರಲ್ಲೇ ಆಗಲಿ ಸಿದ್ಧಹಸ್ತರಾಗಿದ್ದಾರೆ. ಇವರಿಂದ ರಚಿತವಾಗಿರುವ ಪುಸ್ತಕಗಳ ಸಂಖ್ಯೆ ನೂರಾರು. ಇದು ಎಲ್ಲರಿಗೂ ಉಪಯುಕ್ತ ಗ್ರಂಥಗಳೇ ಆಗಿವೆ. ಮಕ್ಕಳಿಗಾಗಿ ಬಾಲವಿಕಾಸ ಕಥೆಗಳು, ಪೂಜೆ ಹಾಗೂ ಸಿದ್ಧಾಂತ ಮುಂತಾಗಿ ಹಲವಾರು ಪುಸ್ತಕಗಳನ್ನು ರಚಿಸಿದ್ದಾರೆ. ಇವರ ವಿದ್ವತ್ತನ್ನು ನೋಡುವ ಅರಿಯುವ ಹಲವಾರು ಸಂದರ್ಭಗಳು ನನಗೆ ದೊರಕಿವೆ. ಇವರ ಲೇಖನಿಯಿಂದ ಅಷ್ಟ ಸಹಸ್ರೀಯಂತಹ ಕಷ್ಟಸಾಧ್ಯವಾದ ಅದೂ ನ್ಯಾಯಕ್ಕೆ ಸಂಬಂಧಿಸಿದ ಕೃತಿಯ ಹಿಂದಿಯ ಅನುವಾದವು ರಚನೆಯಾಗಿದೆ.

ಇವರ ಇಂದ್ರಧ್ವಜ ವಿಧಾನವಂತೂ ಇಡೀ ಸಮಾಜಕ್ಕೆ ಮಾದರಿಯಾಗಿದೆ. ಪ್ರತಿವರ್ಷವೂ ಐವತ್ತು ಸ್ಥಾನಗಳಲ್ಲಾದರೂ ಇದನ್ನು ಸಾಮೂಹಿಕವಾಗಿ ಆಚರಿಸಲ್ಪಡುತ್ತಿದೆ. ಇದರ ನಂತರ ಕಲ್ಪಧ್ರುಮ ಆರಾಧನೆಯ ರಚನೆಯನ್ನು ಮಾಡಿದ್ದಾರೆ. ಒಂದು ಸಲ ಈ ಆರಾಧನೆಯಲ್ಲಿ ಕುಳಿತುಕೊಳ್ಳುವ ಸೌಭಾಗ್ಯ ನನಗೂ ದೊರಕಿತು. ಇವರು ಯುವಕ ಯುವತಿಯರಿಗಾಗಿಯೆ ಕಥೆಗಳ ರಚನೆಯನ್ನು ಮಾಡಿದ್ದಾರೆ. ಈ ಕಥೆಗಳ ಮುಖಾಂತರವೇ, ಸದಾಚಾರ ಭಾವನೆಯನ್ನು, ತಮ್ಮ ಲೇಖನದ ಮೂಲಕವೇ ವ್ಯಕ್ತಪಡಿಸಿದ್ದಾರೆ. ಇವರು ಸಾಧ್ವಿ ಜೀವನದ ಎಲ್ಲ ಕಠಿಣ ನಿಯಮಗಳನ್ನು ಪಾಲಿಸುತ್ತಾ ಬಂದಿದ್ದಾರೆ. ಲೇಖನ ಶಕ್ತಿಯಿಂದಲೇ ಅವರ ಸುತ್ತಮುತ್ತ ಯಾವಾಗಲೂ ಭಕ್ತರು ತುಂಬಿರುವುದು. ಪ್ರತಿದಿನ ಪ್ರವಚನ ಮಾಡುತ್ತಾರೆ. ಅದರ ನಂತರ ಯಾವಾಗಲು ಬರೆಯುತ್ತಲೇ ಇರುತ್ತಾರೆ. ಇದು ವಿದ್ವಾಂಸರಿಗೆ ಒಂದು ಪ್ರೇರಣೆಯ ಚಿಲುಮೆಯಾಗಿದೆ.

ಪೂಜ್ಯ ಮಾತಾಜೀ ಅವರೇ "ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥೆ"ಯ ಹುಟ್ಟಿಗೆ ಕಾರಣವಾದರು. ಇವರ ಪ್ರೇರಣೆಯಿಂದಲೇ ಹಸ್ತಿನಾಪುರದಲ್ಲಿ ಸುಮೇರು ಪರ್ವತ ಹಾಗೂ "ಜಂಬೂದ್ವೀಪ" ಮುಂತಾದ ವರ್ಣನೆಗಳೇ ಮೂರ್ತರೂಪವನ್ನು ಪಡೆದುದು. ಒಂದು ಮಹೋನ್ನತಿ ಆಗಿದೆ. ಹಸ್ತಿನಾಪುರ ಒಂದು ತೀರ್ಥಕ್ಷೇತ್ರ ಆಗಿದ್ದುದು. ಜಂಬೂದ್ವೀಪದ ನಿರ್ಮಾಣದ ನಂತರ ಅದರ ಮಹೋನ್ನತಿ ಇನ್ನೂ ಹೆಚ್ಚಿದೆ. ಇದು ಮುಂದಿನ ನೂರಾರು ಸಾವಿರಾರು ವರ್ಷಗಳವರೆಗೆ ಒಂದು ದರ್ಶನೀಯ ಸ್ಥಾನವನ್ನು ಪಡೆಯುತ್ತದೆ. ಈ ಮಹಾನ್ ಯೋಜನೆಯ ಹಿಂದೆ ಮಾತಾಜೀಯ ಅಭೂತಪೂರ್ವ ಚಿಂತನೆ ಹಾಗೂ ಆಶೀರ್ವಾದಗಳ ಸಂಗಮವಿದೆ.

ಮಾತಾಜಿಯವರ ನೆನಪಿನಶಕ್ತಿ ಅದ್ಭುತವಾದುದು. ಅವರು ತಮ್ಮ ಬಾಲ್ಯದ ನೆನಪುಗಳ ಘಟನೆಯನ್ನು ಯಾವ ರೀತಿ ಬರೆದಿದ್ದಾರೋ ಅದು ಅವರ ಸ್ಮರಣಶಕ್ತಿಗೆ ಉತ್ಕೃಷ್ಟ ಉದಾಹರಣೆ. ವೈರಾಗ್ಯವನ್ನು ಕೈಗೊಳ್ಳುವುದರ ಜೊತೆಗೆ ನೋಟ್‌ಬುಕ್ ಒಂದನ್ನು ಇಟ್ಟುಕೊಂಡಿರಬಹುದು ಎನ್ನಿಸುತ್ತದೆ. ಆದರೆ ನನಗೆ ದೊರೆತ ಮಾಹಿತಿಯಂತೆ ಈ ಎಲ್ಲ ಸ್ಮೃತಿಗಳನ್ನು ಮಾತಾಜಿಯವರು ತಮ್ಮ ನೆನಪಿನ ಆಧಾರದಿಂದಲೇ ಬರೆದಿದ್ದಾರೆ. 1982ರ ನಂತರ ಅವರು ನೋಟ್‌ಬುಕನ್ನು ಇಟ್ಟುಕೊಳ್ಳಲಾರಂಭಿಸಿದರು. ಆಗ ನನಗೆ ಬಹಳ ಆಶ್ಚರ್ಯವಾಯಿತು. ಬಾಲ್ಯದ ಇಪ್ಪತ್ತೈದು ವರ್ಷಗಳವರೆಗೆ ಜೀವನದ ಘಟನೆಯ ರೂಪದಲ್ಲಿ ತಾಯಿತಂದೆ, ಸೋದರ ಸೋದರಿಯರ ಕುರಿತಾಗಿ, ಹೊಸದಾಗಿ ಒಬ್ಬ ಸೋದರಿ ಬಂದಾಗ, ನೆರೆಹೊರೆಯವರ ಬಗ್ಗೆ ಮಾಡುವ ಚಿಂತೆ, ಪೂಜೆ ಪುನಸ್ಕಾರಗಳ ಬಗ್ಗೆ ಮುನಿಗಳ ಬಗ್ಗೆ ಬರುವ ವಿವಾದಗಳ ನೆನಪನ್ನು ಆಧರಿಸಿ ಬರೆದಿರುವ ವಿಷಯಗಳೆಲ್ಲವು ಯಾವುದೇ ಆತ್ಮಚರಿತ್ರೆಗಿಂತ ಕಡಿಮೆಯಾದುದು ಅಲ್ಲ. ಮಾತಾಜಿಯವರು ತಮ್ಮ ನೆನಪಿನ ವರ್ಣನೆಯಲ್ಲಿ ಅವರ ಜೀವನವನ್ನ ಧಾರೆ ಎರೆದಿದ್ದಾರೆ. ಅದು ಪ್ರತಿಯೊಬ್ಬ ಓದುಗನ ಹೃದಯವನ್ನು ನಾಟುತ್ತದೆ. ಓದುಗರ ಜೀವನದಲ್ಲಿ ಸಂವೇದನಾ ಶೀಲತೆಯನ್ನು ಉಂಟುಮಾಡಿ ಭೌತಿಕತೆಯ ಆಕರ್ಷಣೆಯನ್ನು ಕಡಿಮೆ ಮಾಡುತ್ತದೆ.

'ನನ್ನ ನೆನಪು'ಗಳು ಎಂಬ ತಮ್ಮ ಜೀವನ ಚರಿತ್ರೆಯನ್ನು ಮಾತಾಜೀ ಏಳು ಭಾಗಗಳಾಗಿ ಮಾಡಿ, ಅದನ್ನು 108 ಅಧ್ಯಾಯಗಳಾಗಿ ಭಾಗ ಮಾಡಿದ್ದಾರೆ. ತಮ್ಮ ಜೀವನ ವೃತ್ತಾಂತದ ನೆನಪುಗಳನ್ನು ಕೃತಿಯಲ್ಲಿ ಇಳಿಸಲು ಮಾತಾಜಿ ತಮ್ಮ ಎಷ್ಟು ಸಮಯವನ್ನು ವ್ಯಯ ಮಾಡಿದ್ದಾರೋ ಲೆಕ್ಕವಿಲ್ಲ. 1983ರಲ್ಲಿ ತಮ್ಮ 'ನನ್ನ ನೆನಪು'ಗಳು ಮೊದಲ ಸಂಚಿಕೆಯನ್ನು ಹೊರತಂದರು. ಉಳಿದ ಘಟನೆಗಳನ್ನು ಬರೆಯಲು ನಾವು ಒತ್ತಾಯಿಸುತ್ತಲೇ ಇದ್ದೆವು. ಆದರೆ 1985ರಲ್ಲಿ ಅತ್ಯಂತ ಭಯಂಕರವಾದ ವ್ಯಾಧಿಗೆ ತುತ್ತಾದ ಮಾತಾಜಿಯವರು ಬರೆಯುವುದು ಇರಲಿ ಮಾತನಾಡಲೂ ಶಕ್ತರಾಗಿರಲಿಲ್ಲ. ಇಂತಹ ದುರವಸ್ಥೆಯಲ್ಲಿ ನನಗೆ ಅವರನ್ನು ದರ್ಶನ ಮಾಡುವ ಅವಕಾಶ ಒದಗಿತು. ಅವರು ಕೈ ಎತ್ತಿ ಧರ್ಮವೃದ್ಧಿರಸ್ತು ಎಂದು ಹೇಳಲು ಶಕ್ತಿ ಇಲ್ಲದವರಾಗಿದ್ದರು. ಸ್ವಲ್ಪ ಎಚ್ಚೆತ್ತುಕೊಳ್ಳುತ್ತಲೇ ಅದೆಷ್ಟು ಬೇಗ 'ನನ್ನ ನೆನಪು'ಗಳ ಸಂಚಿಕೆಗೆ ತಮ್ಮೆಲ್ಲ ನೆನಪನ್ನು ಸೇರಿಸಿದರು ಎಂದರೆ ಅವರ ಆತ್ಮಸ್ಥೈರ್ಯ ಅದ್ಭುತವಾದುದು.

ಮೊದಲನೆಯ ಖಂಡ

ಇದೊಂದು ಮಾರ್ಮಿಕವಾದ ಭಾಗ. ಇದರಲ್ಲಿ ಹನ್ನೊಂದು ಅಧ್ಯಾಯಗಳಿವೆ. ಇದರಲ್ಲಿ ಮಾತಾಜಿಯವರು ತಮ್ಮ 7,8 ನೇ ವರ್ಷದಿಂದ ತಮ್ಮ ನೆನಪನ್ನು ಕೃತಿಗಿಳಿಸಿದ್ದಾರೆ. ಬಾಲ್ಯಕಾಲ, ತಂದೆ, ತಾಯಿ, ವ್ಯಾಪಾರ, ಪರಿವಾರ, ತಮ್ಮ-ತಂಗಿಯರು, ಅಕ್ಕ-ಪಕ್ಕದವರು, ಊರಿನವರ ಸ್ವಭಾವ, ವೈರಾಗ್ಯದತ್ತ

ತಮ್ಮ ಒಲವು, ಸಂಘದ ಸೇವೆ, ಕ್ಷುಲ್ಲಕ ದೀಕ್ಷೆ ಹಾಗೂ ಜೀವನ. ಆರ್ಯಿಕಾ ದೀಕ್ಷೆ ತೆಗೆದುಕೊಳ್ಳಲು ಅವರು ಪಟ್ಟ ಪ್ರಯತ್ನ 22ನೇಯ ವರ್ಷಕ್ಕೆ ಆರ್ಯಿಕಾ ದೀಕ್ಷೆಯನ್ನು ತೆಗೆದುಕೊಂಡ ಅವರು ಜಯಪುರದಲ್ಲಿ ಮೊದಲ ಚಾತುರ್ಮಾಸ, ಗ್ರಂಥಗಳ ಅಧ್ಯಯನದ ಒಂದು ಜೀವಂತ ಸುಂದರ ವರ್ಣನೆ ಅದಾಗಿದೆ.

ಎರಡನೇಯ ಖಂಡ

ಇದರಲ್ಲಿ ಹದಿನೆಂಟು ಅಧ್ಯಾಯಗಳಿವೆ. ಇದರಲ್ಲಿ ಮಾತಾಜಿಯ ಗುರುಗಳಾದ ಆಚಾರ್ಯ ಶಿವಸಾಗರರ ಸಾನ್ನಿಧ್ಯದಲ್ಲಿ ಗಿರಿನಾರ ಯಾತ್ರೆಯ ವರ್ಣನೆ ಇದೆ. ಆಚಾರ್ಯರ ಸಂಘದಲ್ಲಿ 5 ಜನ ಮುನಿಗಳು, 9 ಜನ ಆರ್ಯಿಕೆಯರು. ಒಬ್ಬ ಕ್ಷುಲ್ಲಕರು ನಾಲ್ಕು ಜನ ಕ್ಷುಲ್ಲಕಿಯರು, 9 ಜನ ಬ್ರಹ್ಮಚಾರಿಣಿಯರು. ಇವರೆಲ್ಲರ ಹೊಣೆಹೊತ್ತ ಸಂಘಪತಿ ಸೇಠ ಹೀರಾಲಾಲರು. ಸಂಘವು ಅಜಮೇರ ಬ್ಯಾವರ, ಸೋನಾಗಢ, ಆಬೂಗಢ, ತಾರಂಗ, ಸಿದ್ಧಕ್ಷೇತ್ರಗಳ ಮುಖಾಂತರ ಗಿರಿನಾರ ತಲುಪುವಾಗ ಮಾತಾಜಿಯವರು ಸಹಿಸಬೇಕಾದ ತೊಂದರೆಗಳ ವಿವರಗಳ, ವರ್ಣನೆಗಳು ಇವೆ. ಗಿರಿನಾರ ಕ್ಷೇತ್ರದ ವಂದನೆಯ ಜೊತೆಯಲ್ಲಿಯೇ ಮಾತಾಜಿಯವರು ಭ. ನೇಮಿನಾಥರ ಆಚಾರ್ಯ ಧರಸೇನ ಹಾಗೂ ಆಚಾರ್ಯ ಕುಂದಕುಂದರ ಮೂಲಕ ಗಿರಿನಾರ ಯಾತ್ರೆಯ ಇತಿಹಾಸದ ಮೇಲೆಯೇ ಬೆಳಕು ಬೀರಿದ್ದಾರೆ. ಇದರ ನಂತರ ಬ್ಯಾವರ, ಅಜಮೇರ, ಸೀಕರದಲ್ಲಿ ಚಾತುರ್ಮಾಸ, ಶ್ರೀ ಜ್ಞಾನಸಾಗರ ಮಹಾರಾಜರ ಮುನಿದೀಕ್ಷೆ. ಲಾಡ್ನೂವಿನ ಕಡೆ ವಿಹಾರ, ಅಜಮೇರದಲ್ಲಿ ತಂದೆ ತಾಯಿಗಳ ಮೊದಲ ಸಲ ಮಾತಾಜೀ ಅವರ ದರ್ಶನ, ತಾಯಿ ತಂದೆಗಳ ಮನದಲ್ಲಿ ಅಂತರ್ದ್ವಂದ್ವ ವೈಯಾವೃತ್ತಿ. ಮಾತಾಜೀ ಅವರಿಂದ ನಾಲ್ಕೈದು ದಿನ ಬೇರೆಯಾಗಿ ವಿಹಾರ ಮಾಡಿದ ವಿವರವಾದ ವರ್ಣನೆ ಮಾಡಿದ್ದಾರೆ. ಇದರಲ್ಲಿ ಮಾತಾಜಿಯವರು ತಮ್ಮ ನಾಲ್ಕು ವರ್ಷದ ಆರ್ಯಿಕಾ ಜೀವನದ ನೆನಪುಗಳನ್ನು ಬರೆದಿದ್ದಾರೆ.

ಮೂರನೆಯ ಖಂಡ

ಈ ಅಧ್ಯಾಯದಲ್ಲಿ 15 ಅಧ್ಯಾಯಗಳಿವೆ. ಮಾತಾಜೀಯವರು ಆಚಾರ್ಯರ ಅನುಮತಿಯನ್ನು ಪಡೆದು ಸ್ವತಂತ್ರ ಸಂಘವನ್ನು ಕಟ್ಟಿ ಸಮ್ಮೇದ ಶಿಖರದ ಯಾತ್ರೆಯನ್ನು ಮಾಡಿದ್ದು, ಜೊತೆಯಲ್ಲಿಯೇ ನಾಲ್ಕು ಜನಸಾಧ್ವಿ ಗಳು ಇದ್ದುದು, ಪದ್ಮಪುರದ ದರ್ಶನ, ಮಹಾವೀರ ಕ್ಷೇತ್ರದ ದರ್ಶನ, ದಾದಿ ಬಾಬಾಗಳ ರೋಚಕ ಪ್ರಸಂಗ. ಮಥುರಾ ಕ್ಷೇತ್ರದ ದರ್ಶನ, ಕ್ಷೇತ್ರ ಪರಿಚಯ, ಆಗ್ರಾದಲ್ಲಿ ಸಾರ್ವಜನಿಕ ಪ್ರವಚನ ಕೊಟ್ಟಿದ್ದು. ಎತ್ಮಾದಪುರದ ವಿಹಾರ, ಚಳಿಗಾಲದ ಪರೀಷಹ, ಫಿರೋಜಾಬಾದ್, ಶಿಕೋಹಾಬಾದ್. ಕನೌಜ. ಮೈನಾಪುರ, ಕಾನಪುರ ಪ್ರವೇಶ, ಅಯೋಧ್ಯೆ ಗೆ ಬಂದ ರೋಮಾಂಚನಕಾರಿ ನೆನಪುಗಳು, ಟಿಕೈತನಗರದ ದರ್ಶನ, ಲಖನೌ, ವಾರಣಾಸೀ ಕ್ಷೇತ್ರದ ದರ್ಶನ. ಆರಾ ನಗರಕ್ಕೆ ಬಂದು ಆಚಾರ್ಯ ವಿಮಲಸಾಗರ ಮಹಾರಾಜರ ದರ್ಶನ, ಆರಾದಿಂದ ವಿಹಾರ ಮಾಡುತ್ತಾ ಹಲವಾರು ಕ್ಷೇತ್ರದ ದರ್ಶನ ಮಾಡುತ್ತಾ ಶಿಖರಜೀಗೆ ಪ್ರವೇಶ ಮಾಡಿದ್ದು ಜ್ಯೇಷ್ಠ ಕೃಷ್ಣ ಸಪ್ತಮಿಯ ದಿನ ಶಿಖರದ ವಂದನೆ ಮಾಡುವ ಸೌಭಾಗ್ಯ ಶಿಖರದ ಅಮೂಲಾಗ್ರ ಪರಿಚಯ, ಚಾತುರ್ಮಾಸದ ವಿವರವಾದ ನೆನಪು.

ಪುನಃ ಶಿಖರಜೀಯ ಸಂದರ್ಶನ ಭಾಗ್ಯ, ಹಿಂದಿನ ಅನುಭವ, ಪಿಂಡಶುದ್ಧಿಯ ಅರ್ಥ. ಸರಾರ್ ಬಸ್ತಿಗಳಲ್ಲಿ ಮಾತಾಜಿಯ ವಿಹಾರ, ಉಡಿಸ್ಸಾದಲ್ಲಿ ವಿಹಾರ ಖಂಡಗಿರಿ ಕ್ಷೇತ್ರದ ವಂದನೆ. ಆಂಧ್ರಪ್ರದೇಶದಲ್ಲಿ ವಿಹಾರ, ಭಾಷೆಯ ಗೊಂದಲ, ಹೈದರಬಾದಿನಲ್ಲಿ ಸಂಘಕ್ಕೆ ಭವ್ಯ ಸ್ವಾಗತ. ಅನಾರೋಗ್ಯ, ಶಾಂತಿ ಹಾಗೂ

ಧರ್ಮಪ್ರಭಾವನೆ. ಚಾತುರ್ಮಾಸದಲ್ಲಿ 56 ವಿಧಾನಗಳ ಆಯೋಜನೆ, ಮಂದಿರಗಳಲ್ಲಿ ಶಿಖರಗಳನ್ನು ನಿರ್ಮಿಸಲು ಪ್ರೇರಣೆ. ರಥಯಾತ್ರೆಯ ಆಯೋಜನೆ ಅಲ್ಲಿಂದ ಶ್ರವಣಬೆಳಗೊಳದ ಕಡೆ ಪ್ರಯಾಣ. ಮಾರ್ಗದಲ್ಲಿ ಉಂಟಾದ ತೊಂದರೆಗಳು ಶ್ರವಣಬೆಳಗೊಳದಲ್ಲಿ ಭಟ್ಟಾರಕರಿಂದ ಭವ್ಯವಾದ ಸ್ವಾಗತ ಭಗವಾನ್ ಬಾಹುಬಲಿಯ ದರ್ಶನ, ಆರ್ಯಿಕಾ ದೀಕ್ಷಾ, ಭಗವಾನ್ ಬಾಹುಬಲಿಯ ಶ್ರೀಚರಣಗಳಲ್ಲಿ ಹದಿನೈದು ದಿನ ಬಾಹುಬಲಿಯ ಸ್ತೋತ್ರದ ರಚನೆ, ಹಿಂದಿಯಲ್ಲಿ ಬಾಹುಬಲಿ ಕಾವ್ಯ, ಕನ್ನಡದಲ್ಲಿ ಸ್ತುತಿ ಮತ್ತು ಹನ್ನೆರಡು ಭಾವನೆಗಳ ರಚನೆ, ಬಾಹುಬಲಿಕ್ಷೇತ್ರದಿಂದ ಮುಂದಿನ ಪ್ರಯಾಣ.

1965ರಲ್ಲಿ ಮೈಸೂರಿನಲ್ಲಿ ಆಚಾರ್ಯ ವಿಮಲ ಸಾಗರರ ದರ್ಶನ ಲಾಭ, ಆಚಾರ್ಯರ ಜೊತೆ ಮತ್ತೆ ಶ್ರವಣ ಬೆಳಗೊಳಕ್ಕೆ ಆಗಮನ, ಮೂರ್ತಿಗೆ ಲಘು ಅಭಿಷೇಕ, ಅತೀವ ಸಂತೋಷ, ಮೂಡಬಿದ್ರೆಗೆ ಯಾತ್ರೆ, ಅಕೃತ್ರಿಮ ಚೈತ್ಯಾಲಯಗಳ ದರ್ಶನ, ಹೊಂಬುಜ, ಧರ್ಮಸ್ಥಳ ಸಹಸ್ರಫಣಿ ಪಾರ್ಶ್ವನಾಥರ ಕಡೆ ವಿಹಾರ ಹಾಗೂ ದರ್ಶನ, ಸೋಲಾಪುರದಲ್ಲಿ ಚಾತುರ್ಮಾಸ. ಆಚಾರ್ಯ ಶ್ರೀ ವಿಮಲಸಾಗರರ ಆಗಮನ, ಬ್ರಹ್ಮಚಾರಿ ಸುಮತಿಬಾಯಿಯವರ ಸಾಧುಭಕ್ತಿ, ಧರ್ಮಪ್ರಭಾವನೆ, ಉಪದೇಶದ ಗಾಳಿ, ಕುಂಥಲಗಿರಿಯ ದರ್ಶನ, ಧಾರಾಶಿವ, ತೇರಪುರ, ಪೈಠಣ ಕಚನೇರ, ಔರಂಗಾಬಾದ್‌ನಲ್ಲಿ ವಿಹಾರ, ಆಚಾರ್ಯ ಮಹಾವೀರ ಕೀರ್ತಿಯವರ ಸಂಘದ ದರ್ಶನ, ಎಲ್ಲೋರ ಗುಹೆಗಳ ದರ್ಶನ, ನಾಂದಗಾಂವ, ಗಜಪಂಥ ಕ್ಷೇತ್ರದ ದರ್ಶನ, ಮಾಂಗೀತುಂಗೀಕ್ಷೇತ್ರದ ದರ್ಶನ, ಭಾವನ್ ಗಜಕ್ಷೇತ್ರ. ಚೂಲಗಿರಿ ಕ್ಷೇತ್ರದ ದರ್ಶನ, ಪಾವಾಗಿರಿ ಕ್ಷೇತ್ರದರ್ಶನ ಸನಾವರದ ಕಡೆಗೆ ವಿಹಾರ. ಸಿದ್ಧವರ ಕೂಟದ ಕ್ಷೇತ್ರ ದರ್ಶನ ಇಂದೂರಿನ ಕಡೆಗೆ ಪ್ರಯಾಣ, ಮಧ್ಯಲೋಕದ ರಚನೆಗೆ ಆಲೋಚನೆ ಸನಾವದದ ಕಡೆಗೆ ಮತ್ತೆ ಪ್ರಯಾಣ ಅಲ್ಲೇ ಚಾತುರ್ಮಾಸದ ಸ್ಥಾಪನೆ, ಮುಕ್ತಾಗಿರಿಯ ಕಡೆಗೆ ಪ್ರಯಾಣ.

1967ರಲ್ಲಿ ರಾಜಸ್ಥಾನ ಪ್ರವೇಶ. ಕರಾವಲಿಯಲ್ಲಿ ಆಚಾರ್ಯ ಶಿವಸಾಗರ ಮಹಾರಾಜರ ಸಂಘದ ದರ್ಶನ ಈ ರೀತಿ ಈ ಖಂಡದಲ್ಲಿ 1963ರಿಂದ 1967ರ ವರೆಗೆ ಸುಮಾರು ಐದು ವರ್ಷಗಳ ಆರ್ಯಿಕಾ ಜೀವನದ ವಿಸ್ತೃತ ವಿವರಣೆಯನ್ನು ಮಾಡಿದ್ದಾರೆ. ಮಾತಾಜಿಯವರು, ಸಮ್ಮೇದ ಶಿಖರದಿಂದ ಪ್ರಾರಂಭಿಸಿ, ದಕ್ಷಿಣ ಭಾರತದಲ್ಲಿ ತಮ್ಮ ವಿಹಾರದಲ್ಲಿ ಅದ್ಭುತವಾದ ಧಾರ್ಮಿಕ ಕ್ರಾಂತಿಯನ್ನು ಮಾಡಿ ರಾಜಸ್ಥಾನದ ಕಡೆಗೆ ಪ್ರಯಾಣ ಬೆಳೆಸಿದರು. ಅವರು ತಮ್ಮ ಸಂಘದ ಜೊತೆ ವಿಹಾರ ಮಾಡುತ್ತಿದ್ದರು. ಅವರು ತಮ್ಮ ವ್ಯಕ್ತಿತ್ವ ಮತ್ತು ಕೃತಿತ್ವದ ಬಗ್ಗೆ ಆತ್ಮವಿಶ್ವಾಸವನ್ನು ತಾಳಿದ್ದರು. ಆಚಾರ್ಯ ಶಿವಸಾಗರ ಮಹಾರಾಜರು, ಆಚಾರ್ಯ ವೀರ ಕೀರ್ತಿಗಳು ಹಾಗು ಆಚಾರ್ಯ ವಿಮಲಸಾಗರ ಮಹಾರಾಜರ ವ್ಯಕ್ತಿತ್ವದಲ್ಲಿರುವ ಕರ್ತೃತ್ವದ ಪರಿಚಯ ಅವರಲ್ಲಿ ಆಯಿತು. ಎಲ್ಲ ಕಡೆಯಲ್ಲಿಯು ಕೂಡ ಅವರನ್ನು ಅತ್ಯಂತ ಗೌರವದಿಂದ ಜನ ಕಾಣುತ್ತಿದ್ದರು. ಈ ಖಂಡದಲ್ಲಿ 16 ಅಧ್ಯಾಯಗಳಿವೆ.

ಚತುರ್ಥಖಂಡ

ಈ ಖಂಡದಲ್ಲಿ ಹತ್ತು ಅಧ್ಯಾಯಗಳಿವೆ ಹಾಗೂ ಮಾತಾಜೀಯವರ 6 ವರ್ಷಗಳ ಆರ್ಯಿಕಾಜೀವನದ ಹಲವಾರು ನೆನಪುಗಳ ಉಲ್ಲೇಖವಿದೆ. ಮಾತಾಜೀಯವರ ಸೈದ್ಧಾಂತಿಕ ಜ್ಞಾನ ಮುನಿಸಂಘದ ಮೇಲೆ ಒಳ್ಳೆಯ ಪ್ರಭಾವ ಬೀರತೊಡಗಿತು ಹಾಗೂ ಅವಶ್ಯಕತೆ ಇದ್ದ ಕಡೆ ಅವರ ವಿಚಾರಗಳನ್ನು ಗೌರವಿಸುತ್ತಲೂ ಇದ್ದರು.

ಅವರು 1968ನೆಯ ಇಸವಿಯಲ್ಲಿ ಪ್ರತಾಪಗಢ (ರಾಜಸ್ಥಾನ)ದಲ್ಲಿ ಚಾತುರ್ಮಾಸಕ್ಕೆ ತಂಗಿದ್ದರು. ಜಯಪುರದಲ್ಲಿ ಅವರು ಜೈನ ಜ್ಯೋತಿರ್ಲೋಕದ ಶಿಬಿರದ ಆಯೋಜನೆಯನ್ನು ಮಾಡಿದ್ದರು. ಶಾಂತಿವೀರನಗರದಲ್ಲಿ ಆಚಾರ್ಯ ಶಿವಸಾಗರರ ಆಕಸ್ಮಿಕ ಮರಣದಿಂದ ಜೈನಸಮಾಜದಲ್ಲಿ ಚಿಂತೆ ಕವಿಯಿತು. ಅದರ ನಂತರ ಮುನಿ ಧರ್ಮಸಾಗರರೇ ಸಮರ್ಥ ಮತ್ತು ಪ್ರಭಾವಿ ವ್ಯಕ್ತಿಗಳಾಗಿದ್ದರಿಂದ ಅವರನ್ನೆ ಆಚಾರ್ಯ ಪದವಿಯನ್ನು ಸ್ವೀಕರಿಸುವಂತೆ ಮಾಡಲಾಯಿತು. ಈ ಸಮಯದಲ್ಲಿಯೇ ಮಾತಾಜೀಯವರ ತಂಗಿ ಅಭಯಮತೀಗೆ ಆರ್ಯಿಕಾ ದೀಕ್ಷೆಯನ್ನು ಕೊಡಲಾಯಿತು. ಅವರಿಗೆ 1964ರಲ್ಲಿ ಮಾತಾಜೀಯವರೇ ಕ್ಷುಲ್ಲಕ ದೀಕ್ಷೆ ಕೊಟ್ಟಿದ್ದರು.

ಮಹಾವೀರಜೀಯಲ್ಲಿ ಆಚಾರ್ಯ ಧರ್ಮಸಾಗರ ಹಾಗು ಆಚಾರ್ಯ ವಿಮಲಸಾಗರರ ಸಂಘವು ಒಟ್ಟಾಗಿ ಸೇರಿತು. ಅಂದು 75 ಪಿಂಛಿಧಾರಿಗಳ ಸಂಘವಾಗಿ ಚತುರ್ಥಕಾಲದ ದೃಶ್ಯವನ್ನು ಕಂಡಂತಾಯಿತು. 1971ರಲ್ಲಿ ಟೊಂಕ (ರಾಜಸ್ಥಾನ)ದಲ್ಲಿ ಪಂಚ ಕಲ್ಯಾಣವನ್ನು ಆಯೋಜಿಸಲಾಗಿತ್ತು. ಇದರಲ್ಲಿ ಮಾತಾಜಿಯವರದೇ ಮುಖ್ಯ ನಿರ್ವಹಣೆಯಾಗಿತ್ತು. ನನಗೂ ಕೂಡ ಇಲ್ಲಿ ಏರ್ಪಡಿಸಲಾಗಿದ್ದ ಗೋಷ್ಠಿಯಲ್ಲಿ ಭಾಗವಹಿಸುವ ಅವಕಾಶ ದೊರೆತಿತ್ತು. ಆಚಾರ್ಯ ಮಹಾವೀರ ಕೀರ್ತಿಗಳ ಸಮಾಧಿ ಮರಣವು ಕೂಡ ಈ ಸಮಯದಲ್ಲಿಯೇ ಆಯಿತು. ದಿಲ್ಲಿಯಲ್ಲಿ ಚಾತುರ್ಮಾಸ ಆಚರಿಸುವ ಸಮಯದಲ್ಲಿ ಮಾತಾಜಿಯವರೇ ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನ ಹಾಗೂ ವೀರಜ್ಞಾನೋದಯ ಗ್ರಂಥಮಾಲೆಯ ಸ್ಥಾಪನೆಯನ್ನು ಹಾಗೂ ಸಮ್ಯಗ್ಜ್ಞಾನ ಪತ್ರಿಕೆಯನ್ನು ಪ್ರಾರಂಭ ಮಾಡಿದರು. ಆಗಲೇ ಅವರು ಹ್ಯಾಂಡ್‌ಪಂಪ್‌ನ ಜಲ ಶುದ್ಧಿಯ ಬಗ್ಗೆ ವಿಚಾರ ಮಾಡಿ ಹ್ಯಾಂಡ್‌ಪಂಪ್ ನೀರು ಶುದ್ಧವಾಗಿರುವುದರಿಂದ ಸಾಧುಗಳು ಗ್ರಹಣ ಮಾಡಬಹುದೆಂಬ ಅಭಿಪ್ರಾಯಕ್ಕೆ ಬಂದರು. 1973ರಲ್ಲಿ ಮಾತಾಜೀ ನಜಫಗಢ ದಿಲ್ಲಿಯಲ್ಲಿ ಚಾತುರ್ಮಾಸವನ್ನು ಮಾಡಿದರು. ಇದೇ ಸಮಯದಲ್ಲಿ ಭ. ಮಹಾವೀರರ 2500ನೇ ನಿರ್ವಾಣ ಮಹೋತ್ಸವದ ತಯಾರಿಗಳು ಆಗತೊಡಗಿದವು. ಆಚಾರ್ಯ ದೇಶಭೂಷಣರು ಮತ್ತು ಮುನಿ ವಿದ್ಯಾನಂದರು ದೆಹಲಿಗೆ ಬಂದಾಗಿತ್ತು. ಈ ಎಲ್ಲವನ್ನು ಅವರು ಉಲ್ಲೇಖಿಸಿದ್ದಾರೆ. ಅವರ ವ್ಯಕ್ತಿತ್ವವು ದಿನದಿಂದ ದಿನಕ್ಕೆ ಬೆಳೆಯತೊಡಗಿತು. ಅವರ ಸೈದ್ಧಾಂತಿಕ ಜ್ಞಾನವನ್ನಂತು ಎಲ್ಲ ಕಡೆ ಪ್ರಶಂಸಿಸತೊಡಗಿದರು.

ಐದನೆಯ ಖಂಡ

ಈ ಖಂಡದಲ್ಲಿ ಹದಿನಾಲ್ಕು ಅಧ್ಯಾಯಗಳಿವೆ. 1974ರಿಂದ 1986ರ ವರೆಗಿನ ಅವರ ನೆನಪನ್ನು ಉಲ್ಲೇಖಿಸಿದ್ದಾರೆ. ಇದರಲ್ಲಂತು ಅವರ 12-13 ವರ್ಷಗಳ ಸಾಧನೆಯ ಉಲ್ಲೇಖವಿದೆ. ಅಷ್ಟೇ ಅಲ್ಲ ಇತಿಹಾಸದಲ್ಲಿಯು ಈ 13 ವರ್ಷಗಳ ಸಾಧನೆಯು ಅತಿ ಮಹತ್ವವನ್ನು ಪಡೆದಿದೆ. ಆ ಸಮಯದಲ್ಲಿಯೇ ಮಾತಾಜಿಯವರು ಹಸ್ತಿನಾಪುರದಲ್ಲಿ ಜಂಬೂದ್ವೀಪಕ್ಕಾಗಿ ಜಾಗವನ್ನು ಆಯ್ಕೆ ಮಾಡಿ ಕೆಲಸ ಪ್ರಾರಂಭಿಸಲಾಯಿತು. ಇದೇ ವರ್ಷ ಅಕ್ಟೋಬರ್ 27 ರಂದು "ಅಷ್ಟಸಹಸ್ರೀ" ಗ್ರಂಥದ ಬಿಡುಗಡೆಯಾಯಿತು. ಈ ಗ್ರಂಥವು ಎಲ್ಲ ಆಚಾರ್ಯ ಹಾಗೂ ವಿದ್ವಾಂಸರಿಂದ ಪ್ರಶಂಸಿಲ್ಪಟ್ಟಿತು. 13-11-74 ರಲ್ಲಿ ಜರುಗಿದ ಭ. ಮಹಾವೀರರ 2500ನೇ ನಿರ್ವಾಣ ಮಹೋತ್ಸವದ ವಿಷಯವನ್ನು ತಮ್ಮ ನೆನಪಿನ ಸಂಚಿಕೆಯಲ್ಲಿ ಉಲ್ಲೇಖಿಸಿದ್ದಾರೆ. ಮಾತಾಜಿಯವರಿಗೆ ಆರ್ಯಿಕಾರತ್ನ ಪದವಿಯನ್ನು ಮುನಿ ವಿದ್ಯಾನಂದರಿಗೆ ಉಪಾಧ್ಯಾಯ ಪದವಿಯ ವಿಷಯವನ್ನು ಬರೆದಿದ್ದಾರೆ.

ಈ ಸಮಯದಲ್ಲಿಯೇ ಮಾತಾಜೀಯವರು 'ಇಂದ್ರಧ್ವಜ' ವಿಧಾನವನ್ನು ಸರಳಭಾಷೆಯಲ್ಲಿ ಛಂದೋಬದ್ಧವಾಗಿ ರಚಿಸಿ, ಎಲ್ಲರು ಪ್ರಶಂಸಿಸುವಂತಹ ಕಾರ್ಯ ಮಾಡಿದರು. ಈ ವಿಧಾನವನ್ನು ಸಮಾಜವು ತಕ್ಷಣ ಶ್ರದ್ಧಾಭಕ್ತಿಯಿಂದ ಸ್ವೀಕರಿಸಿ ಮಾತಾಜಿಯವರ ಕೀರ್ತಿ ಹರಡುವಂತೆ ಮಾಡಿತ್ತು. 1981ರ ಫೆಬ್ರವರಿ 21ನೇ ತಾರೀಕು ಭ ಬಾಹುಬಲಿಯ ಮಹಾಮಸ್ತಕಾಭಿಷೇಕ ಸಹಸ್ರಾಬ್ದಿ ಮಹೋತ್ಸವದ ಸಮಯದಲ್ಲಿ ಇಡೀ ಜೈನ ಸಮಾಜವೇ ಲಕ್ಷಾಂತರ ಸಂಖ್ಯೆಯಲ್ಲಿ ಶ್ರವಣಬೆಳಗೊಳದಲ್ಲಿ ನೆರೆದಿದ್ದು ಸಾಮಾಜಿಕ ಇತಿಹಾಸದಲ್ಲಿಯೇ ಒಂದು ಮೈಲಿಗಲ್ಲು. ಈ ಸಂದರ್ಭದಲ್ಲಿಯೇ ಪ್ರಧಾನ ಮಂತ್ರಿ ಇಂದಿರಾಗಾಂಧಿಯವರಿಂದ ವಿಮಾನದ ಮೂಲಕ ಪುಷ್ಪವೃಷ್ಟಿ ಮಾಡಿದ್ದನ್ನು ಲಕ್ಷಾಂತರ ಮಂದಿ ವೀಕ್ಷಿಸಿ ಸ್ವಾಮಿಯ ಚರಣಗಳಲ್ಲಿ ತಮ್ಮ ಶ್ರದ್ಧೆ ವ್ಯಕ್ತಪಡಿಸಿದ್ದನ್ನು ಸ್ಮರಣಿಕೆಯಲ್ಲಿ ಉಲ್ಲೇಖಿಸಿದ್ದಾರೆ.

ಇದಕ್ಕಿಂತ ಮೊದಲು 29 ಡಿಸೆಂಬರ್ 1980ರಲ್ಲಿ ಜನ ಮಂಗಳ ಕಲಶವನ್ನು ಶ್ರೀಮತಿ ಇಂದಿರಾಗಾಂಧಿಯವರು ಉದ್ಘಾಟಿಸಿದ್ದರು. ಇದರ ಉದ್ಘಾಟನೆಯ ಭಾಷಣದಲ್ಲಿ ಮಾತಾಜಿಯವರು ತಮ್ಮ ಮೂರು ನಿಮಿಷದ ಪ್ರವಚನದಲ್ಲಿ ಯಾವ ಪ್ರಕಾರ ಗುಳಿಕಾಯಜ್ಜಿಯ ರೂಪದಲ್ಲಿ ಭ. ಬಾಹುಬಲಿಗೆ ಅಭಿಷೇಕ ಮಾಡಿ ಧರ್ಮ ಪ್ರಭಾವನೆ ಮಾಡಿದಂತೆ ಇಂದು ಗುಳಿಕಾಯಜ್ಜಿಯಂತೆ ಇಂದಿರಾಗಾಂಧಿಯವರು ಮಂಗಳ ಕಳಸದ ಉದ್ಘಾಟನೆ ಮಾಡಿದ್ದಾರೆ ಎಂದರು. ಅಂದಿನ ಮಸ್ತಕಾಭಿಷೇಕದಲ್ಲಿ ದಿಗಂಬರ ಜೈನಮುನಿಗಳು ಆರ್ಯಿಕೆಯರು, ಕ್ಷುಲ್ಲಕ, ಕ್ಷುಲ್ಲಿಕೆಯರು ಹೀಗೆ ಒಟ್ಟು 151 ಮುನಿವರ್ಗವು ಇದ್ದಿತು. ಈ ಸಂದರ್ಭದಲ್ಲಿ ಸಾಧುಗಳ ಸಮ್ಮೇಳನ ನಡೆದ ಸಂದರ್ಭದಲ್ಲಿ 'ಜೈನಮುನಿ ಪರಿಷದ್' ಎಂಬ ಹೆಸರಿನಲ್ಲಿ ಪರಿಷದ್ ಕೂಡ ಸ್ಥಾಪನೆಯಾಯಿತು. ಇದರ ಸುಂದರ ವರ್ಣನೆಯು ದೊರಕುತ್ತದೆ.

ಮಾತಾಜಿಯವರು ಜಂಬೂದ್ವೀಪದ ನಿರ್ಮಾಣದಲ್ಲಿ ತಮ್ಮ ಪೂರ್ಣ ಗಮನವನ್ನು ತೊಡಗಿಸಿದ್ದರು. ಜಂಬೂದ್ವೀಪದಲ್ಲಿ ಆರು ಕುಲಾಚಲ ನಾಲ್ಕು ಗಜದಂತ ಹದಿನಾರು ವಕ್ಷಾರ, 34 ವಿಜಯಾರ್ಧ, ಜಂಬೂವೃಕ್ಷ ಶಾಲ್ಮಲೀ ವೃಕ್ಷ, ಗಂಗಾ-ಸಿಂಧು ಮೊದಲಾದ ನದಿಗಳು 300 ತೋರಣದ್ವಾರ ಮುಂತಾದವುಗಳನ್ನು ಎಲ್ಲೆಲ್ಲಿ ಹೇಗೆ ಮಾಡಬೇಕೆಂಬುದನ್ನು ಮಾತಾಜಿಯವರು ಪೂರ್ಣ ಗಮನಕೊಟ್ಟು ಸಿದ್ಧಪಡಿಸಿದರು. ಮಾತಾಜಿಯವರು ಜಂಬೂದ್ವೀಪದ ಸ್ಥಳದಲ್ಲೇ ಚಾತುರ್ಮಾಸವನ್ನು 1981ರಲ್ಲಿ ಕೈಗೊಂಡರು. ಅದರಿಂದ ಈ ಸ್ಥಳವೇ ಸಮಾಜದ ಪ್ರಮುಖ ಶ್ರೇಷ್ಠಿವರ್ಗದ ಹಾಗೂ ವಿದ್ವಾಂಸರ ಕೇಂದ್ರವಾಗತೊಡಗಿತು. "ಜಂಬೂದ್ವೀಪ ಜ್ಞಾನಜ್ಯೋತಿ" ಹೆಸರಿನಲ್ಲಿ ಒಂದು ಮಾದರಿ ತಯಾರಿಸಿ ಇಡೀ ದೇಶದಲ್ಲಿಯೇ ಇದರ ಮೆರವಣಿಗೆಯನ್ನು ಮಾಡಿಸಲಾಯಿತು. ಇದರ ತೀರ್ಮಾನವನ್ನು ಕೂಡ ಇದೇ ಚಾತುರ್ಮಾಸದಲ್ಲಿ ಕೈಕೊಳ್ಳಲಾಯಿತು. ಇದಕ್ಕಾಗಿಯೇ ಜಂಬೂದ್ವೀಪದ ವಿಚಾರ ಸಂಕಿರಣವನ್ನು ಆಯೋಜಿಸಲಾಯಿತು. ಇದರಿಂದ ವಿದ್ವಾಂಸರ ಅಭಿಪ್ರಾಯವನ್ನು ತಿಳಿಯಬೇಕಾಗಿತ್ತು. ಈ ವಿಚಾರ ಸಂಕಿರಣದಲ್ಲಿ ಒಂದೇ ವೇದಿಕೆಯಲ್ಲಿ ಶ್ರೀಮಂತರು, ಧೀಮಂತರು, ನವಯುವಕರನ್ನು ಸೇರುವಂತೆ ಮಾಡಿದ ಮಾತಾಜಿಯವರ ಪ್ರೇರಣೆ ಇತಿಹಾಸದಲ್ಲಿಯೇ ಒಂದು ಮೈಲಿಗಲ್ಲಾಯಿತು.

ಜಂಬೂದ್ವೀಪ ಜ್ಞಾನಜ್ಯೋತಿಯ ಸಂಚಲನಕ್ಕಾಗಿ ಒಂದು ಸಮಿತಿಯ ರಚನೆಯಾಯಿತು. ಕೊನೆಗೆ ಜಂಬುದ್ವೀಪ ಜ್ಞಾನಜ್ಯೋತಿಯ ರಥವನ್ನು ನಿರ್ಮಾಣ ಮಾಡಿಸಲಾಯಿತು. ಇದರ ಉದ್ಘಾಟನೆಯನ್ನು ಪ್ರಧಾನಮಂತ್ರಿ ಇಂದಿರಗಾಂಧಿಯವರು ದೆಹಲಿಯ (ಲಾಲಕಿಲಾ) ಮೈದಾನದಲ್ಲಿ ಆಯೋಜಿಸಿದ್ದ ವಿಶಾಲ ಸಭೆಯಲ್ಲಿ ಮಾಡಿದರು. ವೇದಿಕೆಯನ್ನು ಏರುವ ಮುನ್ನ ಇಂದಿರಾಗಾಂಧಿಯವರು ಈ ರಥ ಸಂಚಾಲನದ ಉದ್ದೇಶ ಇದರಿಂದ ಸಾಮಾಜಿಕ ನಡವಳಿಕೆಗೆ ಆಗುವ ಪ್ರತಿಕ್ರಿಯೆಯ ಬಗ್ಗೆ ವಿಚಾರ ಮಾಡಿ ಇದರಿಂದ

ಸಂತೃಪ್ತರಾಗಿ ವೇದಿಕೆಯನ್ನು ಏರಿದರು. ಈ ಆಯೋಜನೆಗಾಗಿ ಜೈನ ಸಮಾಜಕ್ಕೆ ಅಭಾರಿಯನ್ನು ವ್ಯಕ್ತಪಡಿಸಿ ವಿಧಿವತ್ತಾಗಿ ಪೂಜಿಸಿ ಆರತಿ ಎತ್ತಿ ಪುಷ್ಪಾಂಜಲಿಯನ್ನು ಅರ್ಪಿಸಿ ರಥದ ಚಾಲನೆಗೆ ಅನುವು ಮಾಡಿಕೊಟ್ಟರು. ಈ ಘಟನೆಯನ್ನು ಮಾತಾಜಿ ಚೆನ್ನಾಗಿ ವರ್ಣಿಸಿದ್ದಾರೆ.

ಜಂಬೂದ್ವೀಪ ಜ್ಞಾನಜ್ಯೋತಿಯ ರಥ ಇಡೀ ದೇಶದಲ್ಲಿಯೇ ಸಂಚರಿಸಿತು. ದೆಹಲಿಯಲ್ಲಿ ರಥ ಸಂಚರಿಸಿದ ಕಡೆಯಲ್ಲೆಲ್ಲ ಒಂದು ಉತ್ಸವವಾಗಿಯೇ ಮಾರ್ಪಟ್ಟಿತು. ಎಲ್ಲ ಆಚಾರ್ಯರು ರಥ ಸಂಚಾಲನೆಗೆ ಮಂಗಳ ಆಶೀರ್ವಾದ ಮಾಡಿದರು. ಈ ಜ್ಞಾನಜ್ಯೋತಿ ರಥದ ಪ್ರವರ್ತನೆಯಿಂದ ಜ್ಞಾನಮತೀ ಮಾತಾಜೀ ಇಡೀ ದೇಶದ ಗಮನವನ್ನು ತಮ್ಮ ಕಡೆಗೆ ಸೆಳೆದಿದ್ದರು. ಇದೊಂದು ಅವರ ಜೀವನದ ಮಹಾನ್ ಸಾಧನೆ. ಮಾತಾಜೀಯವರು ತಮ್ಮ ಎಲ್ಲ ಜ್ಞಾನವನ್ನು ಧಾರೆ ಎರೆದು ತಮ್ಮ ತಪಸ್ಸಿನ ಶಕ್ತಿಯಿಂದಲೇ ಇಡೀ ದೇಶದಲ್ಲಿಯೇ ಆಧ್ಯಾತ್ಮಿಕ ವಾತಾವರಣವನ್ನುಂಟು ಮಾಡಿದ್ದರು. ರಥದ ಸಂಚಾಲನೆಯಿಂದ ಜೈನರು ಮತ್ತು ಅಜೈನರಾದಿಯಾಗಿ ಜೈನ ಭೂಗೋಲವನ್ನು ತಿಳಿಯುವಂತಹ ಅವಕಾಶ ದೊರೆಯಿತು. ಇದರಿಂದ ಬಂದ ಆದಾಯದಿಂದಲೇ ಹಸ್ತಿನಾಪುರದಲ್ಲಿ ಜಂಬೂದ್ವೀಪದ ನಿರ್ಮಾಣವು ಕಾರ್ಯರೂಪ ಪಡೆಯಿತು.

ಜಂಬೂದ್ವೀಪ ಜ್ಞಾನಜ್ಯೋತಿಯ ರಥ ಸಂಚಾಲನೆಯ ಉತ್ತಮ ಪ್ರತಿಕ್ರಿಯೆಯಿಂದಾಗಿ ಇತ್ತ ಕಡೇ ಜಂಬೂದ್ವೀಪ ನಿರ್ಮಾಣ ಕೂಡ ಪೂರ್ಣತೆಯು ಅತ್ಯಂತ ಭರದಿಂದ ಸಾಗ ತೊಡಗಿತು. ಇದಕ್ಕಾಗಿಯೇ ಮಾತಾಜಿಯವರು. ಆಚಾರ್ಯ ಹಾಗು ಮುನಿಸಂಘಗಳನ್ನು ಜಂಬೂದ್ವೀಪಕ್ಕೆ ಆಹ್ವಾನಿಸಿ ಶುಭಾಶೀರ್ವಾದ ಪಡೆಯಲು, ಪ್ರಾರ್ಥಿಸಲು ರವೀಂದ್ರ ಕುಮಾರರವರ ಜೊತೆ ಒಂದು ಶಿಷ್ಯರ ಮಂಡಲಿಯ ಆಲೋಚನೆಯನ್ನು ಮಾಡಿದರು. ಆಚಾರ್ಯ ಧರ್ಮಸಾಗರ ಮಹಾರಾಜರು ಆಶೀರ್ವಾದಿಸುತ್ತಾ ಜ್ಞಾನಮತಿ ಬಹಳ ಪುರುಷಾರ್ಥ ಮಾಡಿದ್ದಾರೆ. ಎಷ್ಟೊಂದು ಅಗಾಧ ಕೆಲಸವನ್ನು ದಿಟ್ಟವಾಗಿ ಮಾಡುತ್ತಿದ್ದಾರೆ ಎಂದು ಹೊಗಳಿದರು. ಜಂಬೂದ್ವೀಪದ ನಿರ್ಮಾಣ ಕೆಲಸ ನಡೆಯುತ್ತಿದ್ದಂತೆ ಜ್ಞಾನಜ್ಯೋತಿಯು ನಿರ್ವಿಘ್ನವಾಗಿ ಸಂಚರಿಸುತ್ತಿತ್ತು. ಮೂರು ವರ್ಷಗಳವರೆಗೆ ಇಡೀ ದೇಶದಲ್ಲಿ ಜಂಬೂದ್ವೀಪ ಜ್ಞಾನಜ್ಯೋತಿ ಸಂಚರಿಸುತ್ತಿತ್ತು. ಇದರಿಂದಾಗಿ ಧರ್ಮ ಸಹಿಷ್ಣುತೆ, ಸೌಹಾರ್ದ ಹಾಗೂ ಅಹಿಂಸೆಯ ಪ್ರಚಾರವಾಗಿದ್ದು ಅಜರಾಮರ.

ಈ ಸಮಯದಲ್ಲೇ ಮಾತಾಜೀ ನಿಯಮಸಾರ ಗ್ರಂಥಕ್ಕೆ ಸಂಸ್ಕೃತ ಟೀಕೆಯನ್ನು ಬರೆದು ಒಂದು ಹೊಸ ಲಬ್ಧಿಯನ್ನು ಪಡೆದಿದ್ದರು. ಅವರು ರತ್ನಮತಿ ಮಾತಾಜೀಯವರ ಶಾಂತಿಪೂರ್ವಕ ಸಮಾಧಿ ಮರಣದ ವಿಸ್ತೃತ ವಿವರಣೆಯನ್ನು ಮಾತಾಜಿ ವ್ಯಕ್ತಪಡಿಸಿದ್ದಾರೆ. ಜಂಬೂದ್ವೀಪ ಪ್ರತಿಷ್ಠಾಪನಾ ಮಹೋತ್ಸವದ ಆಯೋಜನೆ ಆಗುತ್ತಿದ್ದಂತೆ ಜಂಬೂದ್ವೀಪದಲ್ಲಿ ಲಕ್ಷಾಂತರ ಸ್ತ್ರೀಪುರುಷರು ಸೇರಿ ಮಾತಾಜಿಗೆ ವಿನಯಾಂಜಲಿ ಅರ್ಪಿಸಿದರು. ತಮ್ಮ ನೆನಪಿನ ಸರಣಿಯಲ್ಲಿ ಇದನ್ನು ವಿಸ್ತಾರವಾಗಿ ವರ್ಣಿಸಿ ಐತಿಹಾಸಿಕ ಸ್ವರೂಪವನ್ನು ಕೊಟ್ಟಿದ್ದಾರೆ.

ಇದರ ಐತಿಹಾಸಿಕ ಪಂಚಕಲ್ಯಾಣದ ನಂತರ ಮಾತಾಜಿಯವರು ತೀವ್ರ ಅಸ್ವಸ್ಥರಾದರು. ಇದರಿಂದ ಇಡೀ ಸಮಾಜವೇ ಚಿಂತೆಗೊಳಗಾಯಿತು. ಮಾತಾಜಿಯವರು ತಮ್ಮ ಅಸ್ವಸ್ಥತೆಯನ್ನು ರೋಮಾಂಚಕಾರಿಯಾಗಿ ವರ್ಣಿಸಿದ್ದಾರೆ. ಅತ್ಯಂತ ಅಸ್ವಸ್ಥತೆಯಲ್ಲಿಯೂ ಅವರು ತಮ್ಮ ಚರ್ಯೆಯ ಪಾಲನೆಮಾಡಿದ್ದನ್ನು ವೈದ್ಯರು ಮಾತಾಜೀಯವರಿಗೆ ದಿನದಲ್ಲಿ ಮೂರು ನಾಲ್ಕು ಸಲ ಔಷಧಿ ಸೇವನೆ ಮಾಡಲು ಹೇಳಿದಾಗ ಅವರು ಕೊಟ್ಟ ಉತ್ತರ ಉಲ್ಲೇಖನೀಯವಾಗಿದೆ. ದಿಗಂಬರ ಸಂಪ್ರದಾಯದಲ್ಲಿ ಚರ್ಯೆ ಕಠಿಣವಾದುದು. ನಾವು ಸಮಾಧಿಯಿಂದ ಮರಣ ಹೊಂದಲು ಬಯಸುತ್ತೇವೆಯೇ ಹೊರತು ಆಗಾಗ್ಗೆ ಔಷಧಿಯನ್ನು ತೆಗೆದುಕೊಂಡು ನಮ್ಮ ನಿಯಮಗಳಿಗೆ ಚ್ಯುತಿ ತರುವುದನ್ನು ಬಯಸುವುದಿಲ್ಲ. ಈ ಸಂಯಮದ ಪಾಲನೆ ನಮಗೆ ಮತ್ತೆ ಮತ್ತೆ ಸಿಗುವುದಿಲ್ಲ. ಈ ಶರೀರವಾದರೋ ಸಂಸಾರದಲ್ಲಿ ಅನೇಕ ಬಾರಿ ಮತ್ತೆ ಮತ್ತೆ ಸಿಕ್ಕಿದೆ.

ಆರನೆಯ ಖಂಡ

ಈ ಖಂಡದಲ್ಲಿ ಹದಿನಾಲ್ಕು ಅಧ್ಯಾಯಗಳಿವೆ. ಈ ಖಂಡದಲ್ಲಿ ಜುಲೈ 1986ರಿಂದ ಮಾರ್ಚ್ 1990ರವರೆಗಿನ ನೆನಪುಗಳ ಮೂರ್ತರೂಪ ಕೊಟ್ಟಿದ್ದಾರೆ. 14ನೇ ಅಧ್ಯಾಯದಿಂದ ನೂರರವರೆಗೆ ಏಳು ಅಧ್ಯಾಯಗಳಲ್ಲಿ ವಿಂಗಡಿಸಿದ್ದಾರೆ. ಮಾರ್ಚ್ 1987ರಲ್ಲಿ ಆಚಾರ್ಯಶ್ರೀ ವಿಮಲಸಾಗರರು ತಮ್ಮ ದೊಡ್ಡ ಸಂಘದೊಡನೆ ಜಂಬೂದ್ವೀಪದ ಹಸ್ತಿನಾಪುರಕ್ಕೆ ಬಂದರು. ಬ್ರಹ್ಮಚಾರಿ ಮೋತಿಚಂದ್ರರ ಕ್ಷುಲ್ಲಕದೀಕ್ಷಾ, ಪಂಚಕಲ್ಯಾಣ ಪ್ರತಿಷ್ಠೆ, ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದ ಸ್ಥಾಯೀವ್ಯವಸ್ಥೆ, ಜಂಬೂದ್ವೀಪದಲ್ಲಿ ಮೊದಲನೆ ಬಾರಿ ಕಲ್ಪದ್ರುಮ ವಿಧಾನದ ಆಯೋಜನೆ, ಸಮಯಸಾರಗ್ರಂಥದ ಅನುವಾದದ ಕಾರ್ಯ, ವೀರನಿರ್ವಾಣ ಸಂವತ್ಸರದ ಮಹತ್ವ, ಜಂಬೂದ್ವೀಪ ಸ್ಥಳದಲ್ಲಿ ಸರ್ವಪ್ರಥಮ ಸರ್ವತೋಭದ್ರ ವಿಧಾನದ ಆಯೋಜನೆ. ಆಚಾರ್ಯ ಕುಂಥು ಸಾಗರರರು ತಮ್ಮ ಸಂಘದೊಡನೆ ಜಂಬೂದ್ವೀಪಕ್ಕೆ ಆಗಮಿಸಿದುದು, ಸಮಯಸಾರದ ವಾಚನದ ಕಾರ್ಯಕ್ರಮ. ಬ್ರಹ್ಮಚಾರಿ ಮಾಧುರಿಯ ಆರ್ಯಿಕಾದೀಕ್ಷಾ, ಬ್ರಹ್ಮಚಾರಿ ಶ್ಯಾಮಾಬಾಯಿಯ ಕ್ಷುಲ್ಲಿಕದೀಕ್ಷೆ, ಮಾತಾಜಿಯವರು ಸಂಘ ಸಹಿತ ಬಡೋತ್, ಮೋತಿನಗರ, ಮೇರಠ ಮುಂತಾದ ಕಡೆ ವಿಹಾರ ಆರಾಧನಾದಿಗಳಿಂದ ಧರ್ಮ ಪ್ರಭಾವನೆ, ಮಾತಾಜಿಯವರು ಹಸ್ತಿನಾಪುರಕ್ಕೆ ಆಗಮನ, ಜಂಬೂದ್ವೀಪ ಮಹಾಮಹೋತ್ಸವ ಹಾಗು ಪಂಚಕಲ್ಯಾಣದ ಪ್ರತಿಷ್ಠೆಯ ತಯಾರಿಗಳು. ಈ ಮಹೋತ್ಸವದ ಸಂದರ್ಭದಲ್ಲಿಯೇ ಸಮಯಸಾರ, ಅಷ್ಟಸಹಸ್ರೀ, ಆಚಾರ್ಯ ಶ್ರೀ ವೀರಸಾಗರಸ್ಮೃತಿ ಗ್ರಂಥದ ಪ್ರಕಾಶನ ಮುಂತಾದ ಹಲವಾರು ಗ್ರಂಥಗಳು ಉತ್ತಮವಾಗಿ ಲಿಪಿಬದ್ಧವಾದವು.

ಏಳನೆಯ ಖಂಡ

ಈ ಖಂಡದಲ್ಲಿ ಎಂಟು ಅಧ್ಯಾಯಗಳಿವೆ. ಇದರಲ್ಲಿ 1991ರಿಂದ ಹಿಡಿದು 2004ರ ವರೆಗಿನ ಮಹತ್ವಪೂರ್ಣ ಕಾರ್ಯವನ್ನು ಸಂಕ್ಷಿಪ್ತವಾಗಿ ವರ್ಣಿಸಿದ್ದಾರೆ. ಅಯೋಧ್ಯೆಯ ಕಡೆಗೆ ವಿಹಾರ, ಅಲ್ಲಿಯೇ ಎರಡು ಹೊಸ ಮಂದಿರಗಳ ನಿರ್ಮಾಣ, ಮಹಾಮಸ್ತಕಾಭಿಷೇಕ ಮುಂತಾದ ಹಲವಾರು ಕಾರ್ಯಗಳು. ಮಾಂಗೀತುಂಗಿಯ ಕಡೆ ವಿಹಾರ ದಿಲ್ಲಿಯಲ್ಲಿ ಹಲವಾರು ರಾಷ್ಟ್ರೀಯ - ಅಂತರಾಷ್ಟ್ರೀಯ ಕಾರ್ಯಕ್ರಮ, ಪ್ರಯಾಗ, ಇಲಾಹಾಬಾದ್‌ನಲ್ಲಿ ತಪಸ್ಥಳ ತೀರ್ಥ"ದ ನಿರ್ಮಾಣ, ಭ ಮಹಾವೀರರ ಜನ್ಮಭೂಮಿ ಕುಂಡಲಪುರದ ವಿಕಾಸ ಮುಂತಾದ ಹಲವಾರು ವಿಷಯಗಳನ್ನು ಮಾರ್ಮಿಕವಾಗಿ ವಿವರಿಸಿದ್ದಾರೆ.

ಸಾಹಸಮಯ ರಚನೆ

ಮಾತಾಜೀಯವರು ತಮ್ಮ ನೆನಪುಗಳಲ್ಲಿ ತಮ್ಮ ಜೀವನದ ನಲವತ್ತು ವರ್ಷಗಳ ಘಟನೆಯಲ್ಲದೆ ತಮ್ಮ ಜೀವನದಲ್ಲಿ ಸಾಧಿಸಿದ ಮಹತ್ವದ ಸಾಹಸದ ಘಟನೆಗಳನ್ನು ಉಲ್ಲೇಖಿಸಿದ್ದಾರೆ. ಯಾವುದೇ ತಮ್ಮ ಕಾರ್ಯಗಳನ್ನು ಹೆಚ್ಚುಗಾರಿಕೆ ಮಾಡಿ ಉಲ್ಲೇಖಿಸಿಲ್ಲ. ವಾಸ್ತವ ಅಂಶ ಮಾತ್ರ ಪ್ರಕಟಿಸಿದ್ದಾರೆ. ತಮಗೆ ಒದಗಿದ ವಿರೋಧ ಮತ್ತು ಪ್ರಶಂಸೆಗಳನ್ನು ಉಲ್ಲೇಖಿಸಿದ್ದಾರೆ. ಇದರಿಂದ ಅವರ ನೆನಪುಗಳೇ ಒಂದು ಐತಿಹಾಸಿಕ ಘಟನೆಯಾಗಿದೆ. ಇದರಲ್ಲಿ ಕಳೆದ 50 ವರ್ಷಗಳಲ್ಲಿ ಮುನಿಗಳ ಆಚಾರ ಮತ್ತು ಚರ್ಯೆಗಳ ಸ್ಪಷ್ಟ ಉಲ್ಲೇಖ ದೊರೆಯುತ್ತದೆ. ಅವರು ನಡೆಸಿದ ಸಾಮಾಜಿಕ ಉತ್ಸವಗಳು, ಪಂಚಕಲ್ಯಾಣಗಳು,

ಆರಾಧನೆಗಳು ಹಾಗೇ ಮುನಿ, ಆರ್ಯಿಕೆಯರ ದೀಕ್ಷಾ ಸಮಾರಂಭಗಳು, ಸಮಾಧಿ ಮರಣಗಳಲ್ಲದೆ ಶ್ರೇಷ್ಠಿಗಳು ಮತ್ತು ಸಮಾಜದ ಮುಖಂಡರುಗಳ ನಡವಳಿಕೆಯ ಸ್ಪಷ್ಟ ಉಲ್ಲೇಖಗಳು ಸಿಗುತ್ತದೆ. ಈ ಗ್ರಂಥ ನಮ್ಮ ಸಾಮಾಜಿಕ ಇತಿಹಾಸದ ಒಂದು ಅಮೂಲ್ಯ ನಿಧಿಯಾಗಿದೆ. ಆದ್ದರಿಂದಲೇ ಈ 'ನನ್ನ ನೆನಪುಗಳು' ಗ್ರಂಥ ಕೇವಲ ಮಾತಾಜಿಯವರ ಜೀವನ ಚರಿತ್ರೆಯಲ್ಲದೆ ಇಡೀ ಸಂಪೂರ್ಣ ಸಮಾಜ ದರ್ಶನ ಗ್ರಂಥವಾಗಿದೆ. ಇದನ್ನು ಬರೆದು ಮಾತಾಜಿ ಇತಿಹಾಸದ ಜಗತ್ತಿನಲ್ಲಿ ಕೀರ್ತಿವಂತರಾಗಿದ್ದಾರೆ.

"ನನ್ನ ನೆನಪುಗಳ" ಭಾಷೆ, ಶೈಲಿ, ಹೇಳುವ ಧಾಟಿ ಮೂರು ಬಹಳ ಉನ್ನತವಾಗಿದೆ. ನನ್ನ ನೆನಪುಗಳ ಗ್ರಂಥ ಇಡೀ ಸಮಾಜಕ್ಕೆ ಬಹಳ ಉಪಯುಕ್ತವಾಗಿ ಓದುಗರು ಇದರಿಂದ ಪ್ರಯೋಜನ ಪಡೆದೇ ಪಡೆಯುತ್ತಾರೆ ಎಂಬುದು ನನ್ನ ದೃಢ ವಿಶ್ವಾಸ.

ಸನ್.1990

(ಸ್ವರ್ಗೀಯ ಡಾ. ಕಸ್ತೂರಚಂದ ಜೈನ ಕಾಸಲೀವಾಲ)
೮೭೭, ಅಮೃತಕಳಸ
ಬರಕತನಗರ, ಕಿಸಾನ್ ಮಾರ್ಗ
ಜಯಪುರ (ರಾಜಸ್ಥಾನ್)

ಹೇಗೆ ಬರೆಯಲಿ ನನ್ನ ನೆನಪುಗಳನ್ನು

ಲೇಖಕಿ - ಆರ್ಯಿಕೆ ಚಂದನಮತಿ

ಯಾರೇ ಲೇಖಕರಿಗಾಗಲಿ ಒಂದು ಮೌಲಿಕ ಗ್ರಂಥವನ್ನ ರಚಿಸುವುದಕ್ಕಿಂತ, ಅನುವಾದ ಕಾರ್ಯವನ್ನು ಮಾಡುವುದಕ್ಕಿಂತ 'ಯಾರೇ ಮಹಾಪುರುಷರ ಜೀವನ ಚರಿತ್ರೆಯನ್ನು ತಮ್ಮ ಲೇಖನಿಯಿಂದ ಗ್ರಂಥ ರಚಿಸುವುದಕ್ಕಿಂತ, ಕಷ್ಟದ ಕೆಲಸವೆಂದರೆ, ತಮ್ಮ ನೆನಪುಗಳನ್ನು ಕೃತಿಯ ರೂಪದಲ್ಲಿ ರಚಿಸುವುದಾಗಿದೆ.

1990ರಲ್ಲಿ ಪಂಡಿತ ಶ್ರೀ ಬಾಬುಲಾಲ ಜಮಾದಾರರು ಪೂಜ್ಯ ಆರ್ಯಿಕಾರತ್ನ ಶ್ರೀ ಜ್ಞಾನಮತೀ ಮಾತಾಜೀಗೆ ಕೈಮುಗಿದು ತಾವು ತಮ್ಮ ಜೀವನದ ಅಮೂಲ್ಯ ಅನುಭವಗಳನ್ನು ಬರೆದುಕೊಡಿ. ತಮ್ಮ ಜೀವನದ ಪ್ರತಿಯೊಂದು ನಿಮಿಷವು ಒಂದು ವಿಶೇಷ ಪ್ರೇರಣೆಯನ್ನು ಕೂಡುವಂತಹುದು. ತಮ್ಮ ಜೀವನದ ಈ ಅನುಭವಗಳು ಎಷ್ಟೋ ಭವ್ಯ ಜೀವಗಳಿಗೆ ಮೋಕ್ಷ ಮಾರ್ಗವನ್ನುತೋರಿಸಬಲ್ಲವು ಎಂದು ನಿವೇದಿಸಿದ್ದರು. ಆಗಾಗ್ಗೆ ಡಾ. ಕಸ್ತೂರ್‌ಚಂದ ಕಾಸಲೀವಾಲರು ಕೂಡ ಈ ವಿಷಯವನ್ನು ಬರೆಯಲು ಒತ್ತಾಯಿಸುತ್ತಲೇ ಇದ್ದರು.

ನಮ್ಮಗಳ ಹಾಗೂ ಎಲ್ಲರ ಆಗ್ರಹಕ್ಕೆ ಮನ್ನಣೆ ಕೊಟ್ಟು ಮಾತಾಜಿಯವರು ತಮ್ಮ ಬಾಲ್ಯದಿಂದ ಆರ್ಯಿಕಾ ಜೀವನದವರೆಗೆ 'ನನ್ನ ಸ್ಮೃತಿ' ಎಂಬ ಒಂದು ಸಣ್ಣ ಕೃತಿಯ ರಚನೆಯನ್ನು ಮಾಡಿದ್ದರು. ಅದು 1984ರಲ್ಲಿ ಪ್ರಕಾಶಿತವಾಯಿತು. ಈ ಕೃತಿ ಓದಿದ ಎಷ್ಟೋ ಜನ ಹುಡುಗಿಯರಿಗೆ ಮನೆಯನ್ನು ಬಿಟ್ಟು ಆತ್ಮಧ್ಯಾನದ ಕಡೆ ಪ್ರೇರಣೆಯಾಗಿರಬಹುದು. ಈ ಪುಸ್ತಕ ಓದಿದ ಹಲವಾರು ಜನರು ಮಾತಾಜೀಯವರ ಇಡೀ ಜೀವನವನ್ನು ತಿಳಿಯುವ ಉತ್ಸುಕತೆಯನ್ನು ವ್ಯಕ್ತಪಡಿಸಿದ್ದಾರೆ. ಇದರ ರಚನೆಗಾಗಿ ನಾವು ಮಾತಾಜಿಯವರ ಹಿಂದೆ ಬೀಳಬೇಕಾಯಿತು. ಮೊದಲು ಮಾತಾಜೀಯವರು ಇದನ್ನು ಮುಂದುವರಿಸಲು ತಾನು ಶಕ್ತಳಲ್ಲ. ಏಕೆಂದರೆ ಅವರ ಮುಂದೆ ಇನ್ನೂ ಅಮೂಲ್ಯಗ್ರಂಥ ರಚನೆ ಮಾಡುವ ಯೋಜನೆಗಳು ಇದ್ದವು. ಏಕೆಂದರೆ ಅವರ ದೇಹಾರೋಗ್ಯ ಕೂಡ ಚೆನ್ನಾಗಿರಲಿಲ್ಲ. ಅವರ ದೇಹ ಸ್ವಸ್ಥತೆಯನ್ನು ಕಾಣುತ್ತಲೇ ಅಮೂಲ್ಯ ಗ್ರಂಥದ ರಚನೆಗೆ ತೊಡಗಬೇಕಾಗಿತ್ತು. ಆದ್ದರಿಂದ ಈ 'ನನ್ನ ಸ್ಮೃತಿ' ಪುಸ್ತಕದ ಕಡೆ ಗಮನಹರಿಸಲು ಮಾತಾಜಿಯವರಿಗೆ ವ್ಯವಧಾನವಿರಲಿಲ್ಲ. ಆದರೆ ನಾನು ಯಾವಾಗಲೂ ಈ ಗ್ರಂಥದ ರಚನೆಯಾಗಬೇಕೆಂದು ಒತ್ತಾಯಿಸುತ್ತಲೇ ಇದ್ದೆ. ಇದಕ್ಕಾಗಿ ಮಾತಾಜೀ ನನ್ನ ಬಗ್ಗೆ ಸಿಟ್ಟಾಗಿದ್ದರು. ಅವರು ನನಗೆ ಹೇಳುತ್ತಿದ್ದರು. ನನ್ನ ಆರೋಗ್ಯ ಸರಿಹೋಗುತ್ತಲೇ ನಾನು ಮಾಡಬೇಕಾದ ಹಲವಾರು ಕಾರ್ಯಗಳ ಬಗ್ಗೆ ಕಾರ್ಯಸೂಚಿಯನ್ನು ಮಾಡಿಕೊಂಡಿದ್ದೇನೆ. ಪೂಜಾವಿಧಿ ಮುಂತಾದ ರಚನಾ ಕಾರ್ಯಗಳು ನನಗೆ ಅತೀವ ಆನಂದವನ್ನು ತರುತ್ತವೆ. ಅಂತಹದರಲ್ಲಿ ನನ್ನ ನೆನಪುಗಳನ್ನು ಸಂಕಲನಗೊಳಿಸುವುದು ಅಷ್ಟೊಂದು ಅವಶ್ಯಕತೆ ಇದೆಯೇ ಎಂದು ನನ್ನನ್ನು ಪ್ರಶ್ನಿಸುತ್ತಿದ್ದರು.

ಆದರೂ ನಾನು ಧೈರ್ಯವಹಿಸಿ ನಿಮ್ಮಿಂದ ಜ್ಞಾನವನ್ನು ತಿಳಿದ ನಾನು ನೀವು ಅಂದುಕೊಂಡಿರುವ ಗ್ರಂಥದ ರಚನೆಯ ಕಾರ್ಯದಲ್ಲಿ ನಿಮ್ಮ ಆಶೀರ್ವಾದದಿಂದ ನನ್ನ ಯೋಗ್ಯತೆಗೆ ತಕ್ಕಂತೆ ಕಾರ್ಯಮಾಡಲು ಸಿದ್ಧನಿದ್ದೇನೆ. ಆದರೆ ನಿಮ್ಮ ನೆನಪುಗಳ ಗ್ರಂಥವನ್ನು ಮಾಡಲು ನಿಮ್ಮಿಂದ ಮಾತ್ರ ತಾನೇ ಸಾಧ್ಯ ಅದು ಬೇರೆಯವರಿಂದ ಹೇಗೆ ಸಾಧ್ಯವೆಂದು ನಿವೇದಿಸಿಕೊಂಡೆ.

ಹಲವಾರು ಬಾರಿ ಈ ಕೆಲಸದ ಬಗ್ಗೆ ಅವರಲ್ಲಿ ನಿವೇದಿಸುತ್ತಲೇ ಬರುತ್ತಿದ್ದರಿಂದ ಒಮ್ಮೆ ಮನಸ್ಸು ಮಾಡಿ ಇಚ್ಛೆ ಇಲ್ಲದೆಯೇ ಕೆಲಸ ಮಾಡಲು ಪ್ರಾರಂಭಿಸಿದರು. ಬರವಣಿಗೆ ಪ್ರಾರಂಭ ಮಾಡಿದ ಮೇಲೂ ಕೆಲವು ಬಾರಿ ಇಷ್ಟವಿಲ್ಲದೆ ನಿಲ್ಲಿಸಿಯು ಬಿಡುತ್ತಿದ್ದರು. ಮತ್ತು ಆಗಾಗ್ಗೆ ನನ್ನ ಹತ್ತಿರ ಹೇಳುತ್ತಿದ್ದರು. ನೋಡು ಚಂದನಮತಿ ಈ ಕೆಲಸವನ್ನು ನನ್ನ ಮನಸ್ಸು ಒಪ್ಪುತ್ತಿಲ್ಲ. ಏಕೆಂದರೆ ಕೆಲವು ನೆನಪುಗಳನ್ನು ಬರೆಯುವಾಗ ಆ ನೆನಪುಗಳು ನನಗೆ ಇಂದು ನಡೆದಂತೆ ಭಾಸವಾಗ ತೊಡಗುತ್ತವೆ. ಇದರಿಂದ ಆತ್ಮದಲ್ಲಿ ಹಲವಾರು ವಿಕಲ್ಪಗಳು ಏಳುತ್ತವೆ. ಎರಡನೆಯದಾಗಿ ನನ್ನ ಜೀವನದ ನೆನಪುಗಳನ್ನು ಬರೆಯಲು ನನಗೆ ಸಂಕೋಚವೂ ಆಗುತ್ತದೆ. ಆದ್ದರಿಂದ ಈ ಕೆಲಸ ನನಗೆ ನೀರಸವೆನಿಸುತ್ತಿದೆ. ಆದ್ದರಿಂದ ಈ ಬರವಣಿಗೆಯನ್ನು ಮುಂದುವರಿಸಲು ಒತ್ತಾಯ ಮಾಡಬೇಡ ಎಂದರು. ನನ್ನ ಗುರುಗಳೇ ತಮ್ಮ ಮನದಳಲನ್ನು ಹೀಗೆ ಹೇಳಿದಾಗ ನಾನು ಮಾತಾಜೀ ನಿಮ್ಮ ಜೀವನದ ಎಲ್ಲ ಆಗುಹೋಗುಗಳ ಪೂರ್ಣ ಪರಿಚಯ ಪ್ರಕಟವಾಗಲೇಬೇಕೆಂಬುದು ನನ್ನ ಮಹದಾಶೆಯಾಗಿತ್ತು. ಇದನ್ನು ಓದುವ ಪ್ರತಿಯೊಬ್ಬರಿಗೂ ತಮ್ಮ ಜೀವನದ ಅನುಭವಗಳು ಅವರ ಜೀವನಕ್ಕೆ ಪ್ರೇರಣೆಯಾಗುತ್ತದೆ ಎಂಬುದಂತು ನಿಜವಾಗಿರುವುದರಿಂದ ತಾವು ಸಂಕೋಚಪಡುವ ಅವಶ್ಯಕತೆಯಂತು ಇಲ್ಲ ಎಂದೆ. ಅದಕ್ಕೆ ದನಿಗೂಡಿಸಿದವರು ಕ್ಷುಲ್ಲಕ ಶ್ರೀ ಮೋತಿಸಾಗರರು ಮತ್ತು ಬ್ರ. ರವೀಂದ್ರನಾಥರು ಅವರು ಹೇಳತೊಡಗಿದರು 'ಮಾತಾಜೀ ತಾವು ಆದಷ್ಟು ಬೇಗ ನಿಮ್ಮ ನೆನಪುಗಳನ್ನು ಬರೆದುಕೊಟ್ಟರೆ ಅದನ್ನು ಕಾಯುತ್ತಿರುವ ಓದುಗರಿಗೆ ತಲುಪಿಸುವಂತಹ ಕೆಲಸ ನಮ್ಮದು' ಎಂದು. ಅಂದಿನ ಈ ಮಾತುಗಳು ಅವರಿಗೆ ತಮ್ಮ ಬಗ್ಗೆ ಇದ್ದ ಸಂಕೋಚ ಭಾವನೆಯನ್ನು ಹೋಗಲಾಡಿಸಿತು. ಅಲ್ಲದೆ ಜಯಪುರದಿಂದ ಕಾಸಲೀವಾಲರ ಮಗ ಕೂಡ ಬಂದಾಗಲೆಲ್ಲ ಮಾತಾಜೀ ತಮ್ಮ ಜೀವನದ ಮುಂದಿನ ನೆನಪುಗಳನ್ನು ನಾವು ಯಾವಾಗ ಓದುವುದು ಎಂದು ಕೇಳುತ್ತಲೇ ಇದ್ದರು.

ಮಾತಾಜೀಗೆ ಕೊನೆಗೆ ನನ್ನ ನೆನಪುಗಳನ್ನುತಿಳಿಯಲು ಇವರೆಲ್ಲ ಕಾಯುತ್ತಿರುವಾಗ ತಪ್ಪಿಸಿಕೊಳ್ಳಲಾರೆ ಎಂಬ ಭಾವಧಾರೆ. ಬರೆಯಲು ಮತ್ತೆ ಪ್ರಾರಂಭಿಸಿದರು. ಅದರಲ್ಲಿ ಅವರಿಗೆ ಅಷ್ಟೊಂದು ಮನಸ್ಸಿಲ್ಲ ಎಂಬುದು ನಮಗೂ ತಿಳಿಯುತ್ತಿತ್ತು. ಏಕೆಂದರೆ ನಾವು ಅವರೊಡನೆ 30 ವರ್ಷಗಳಿಂದ ಒಡನಾಡಿಗಳಾಗಿ ಅವರ ಜೀವನದಲ್ಲಿ ನಡೆದ ಹಲವಾರು ಸಿಹಿ-ಕಹಿ ಅನುಭವ ನಮಗೂ ಆಗಿತ್ತು. ಅದನ್ನು ಇಲ್ಲಿ ಉಲ್ಲೇಖಿಸಿಲ್ಲ ಏಕೆಂದರೆ ಅವರ ಅದ್ಭುತ ಕೆಲಸಗಳಲ್ಲಿ ಎಲ್ಲಿ ಆತ್ಮ ಪ್ರಶಂಸೆ ಆಗಿಬಿಡುತ್ತದೆ ಎಂಬ ಭಯವು ಅವರನ್ನು ಕಾಡಿಸುತ್ತಿದ್ದಿರಬಹುದು. ಅವರು ಏನನ್ನು ಬರೆದುಕೊಡುತ್ತಿದ್ದರೂ ಅದು ನಮಗೆ ಆನಂದ. ಉಪಕಾರ ಮಾಡಿದಂತೆ ಆಗಿದೆ. ಈ ನನ್ನ ಸ್ಮೃತಿಗಳನ್ನು ಓದಿದವರಿಗೆ ನಿಜವಾಗಿಯು ಭವ್ಯಜೀವಿಗಳನ್ನು ಧಾರ್ಮಿಕ ಪಥದತ್ತ ಒಯ್ಯಲು ಅದು ಪ್ರೇರಕ ಎಂಬುದು ನಿಶ್ಚಿತವಾಗಿದೆ.

ಇದರ ರಚನೆಯಲ್ಲಿ ತೊಡಗಿರುವಾಗ ಮಾತಾಜಿ ಆಗಾಗ್ಗೆ ಹೇಳುತ್ತಲೇ ಇದ್ದರು. ಈ ನೆನಪುಗಳನ್ನು ಬರೆಯುವಾಗ ಆಗುತ್ತಿರುವ ಅನ್ಯಮನಸ್ಕತೆಯು ನನಗೆ ಇನ್ನಾವುದೇ ಗ್ರಂಥ ರಚನೆಯಲ್ಲಿ ಆಗಿರಲಿಲ್ಲ. ಬೇರೆ ಗ್ರಂಥಗಳ ರಚನೆಯ ಸಮಯದಲ್ಲಿ ಅತೀವ ಆನಂದವಾಗುತ್ತಿತ್ತು. ನಾನು ಆಗ ಅಂದುಕೊಳ್ಳುತ್ತಿದ್ದೆ.

ಮಾತಾಜೀಯಿಂದ ಒಮ್ಮೆ ಈ ಗ್ರಂಥಪೂರ್ಣವಾಗಿ ನಮಗೆ ಸಿಗಲಿ ಅನಂತರ ಈ ಗ್ರಂಥವನ್ನು ಓದಿದ ಮೇಲೆ ಓದುಗರಿಗೆ ಸಿಗುವ ಪ್ರೇರಣೆಯನ್ನು ತಿಳಿದ ಮೇಲಾದರೂ ಮಾತಾಜೀಯವರ ಅನ್ಯಮನಸ್ಕತೆಯು ಖಂಡಿತ ಪ್ರಸನ್ನತೆಯನ್ನು ತಂದುಕೊಡಬಲ್ಲದು ಎಂಬುದು ನನ್ನ ದೃಢನಂಬಿಕೆಯಾಗಿತ್ತು. ತೋಟಗಾರ ಹೇಗೆ ಬೀಜ ಬಿತ್ತಿ, ಅದು ಅವನ ಕಣ್ಣಮುಂದೆಯೆ ಹೆಮ್ಮರವಾಗಿ ಬೆಳೆದು ನಿಂತಾಗ ಅವನಿಗೆ ಆಗುವ ಆನಂದಕ್ಕೆ ಸಮಾನವಾಗಿ ಇವರಿಗೆ ಆನಂದ ತಂದುಕೊಡಬಹುದೋ ಅದರಂತೆ ಈ "ನನ್ನ ಸ್ಮೃತಿ" ಕೃತಿಯು ಯಾವುದೇ ಮನುಷ್ಯರನ್ನಾಗಲಿ ತ್ಯಾಗದ ಉನ್ನತ ಶಿಖರಕ್ಕೆ ಕೊಂಡೊಯ್ಯಲು ಪ್ರೇರಣೆಯಾಗಿ ಇದು ಮಾತಾಜಿಯ ಗಮನಕ್ಕೆ ಬಂದ ಕ್ಷಣ ಅವರ ಅಂತರಂಗ ಪುಳಕಿತವಾಗುವುದರಲ್ಲಿ ಸಂದೇಹವಿಲ್ಲ.

ಪ್ರಿಯ ಓದುಗರೇ ಈ ಪುಸ್ತಕದಲ್ಲಿ ಪೂಜ್ಯ ಮಾತಾಜಿಯವರು ಮೊದಲು ಬರೆದಿದ್ದ 1990ರವರೆಗಿನ ನೆನಪುಗಳ ಸುವಿಸ್ತಾರವಾದ ನೆನಪುಗಳ ಜೊತೆಗೆ ನಮ್ಮ ಒತ್ತಾಯದಿಂದ ಉಳಿದ ಹದಿನಾಲ್ಕು ವರ್ಷಗಳ (ನೆನಪನ್ನು) ಕಾರ್ಯಕಲಾಪಗಳ ವಿವರಣೆಯನ್ನು ಸಂಕ್ಷಿಪ್ತ ರೂಪದಿಂದ ಸೇರಿಸಿದ್ದಾರೆ. ಪಾಠಕಗಣವು ಪ್ರಕಾಶಿತವಾಗುತ್ತಿರುವ ಸಮ್ಯಜ್ಞಾನ ಹಾಗೂ ವಿವಿಧ ಸ್ಮರಣ ಸಂಚಿಕೆಗಳಿಂದ ಮಾತಾಜಿಯವರ ಬಗ್ಗೆ ತಿಳಿಯುತ್ತಲೇ ಇದೆ. ಪೂಜ್ಯ ಮಾತಾಜಿಯವರು ಈಗ "ಸಿದ್ಧಾಂತ ಚಿಂತಾಮಣಿ" ಎಂಬ ಸಂಸ್ಕೃತ ಟೀಕೆಯನ್ನು ಬರೆಯುವುದರಲ್ಲಿ ತಲ್ಲೀನರಾಗಿದ್ದಾರೆ. ಅದರ 13ನೇ ಪುಸ್ತಕದ ಕೆಲಸ ನಡೆಯುತ್ತಿದೆ. ಇಂತಹ ಮಹತ್ವಪೂರ್ಣ ಕೆಲಸದ ನಡುವೆಯೂ ನಮ್ಮ ಪ್ರಾರ್ಥನೆಗೆ (ಬೇಡಿಕೆಗೆ) ಬೆಲೆ ಕೊಟ್ಟಿರುವುದು ಒಂದು ವಿಶೇಷತೆಯಾಗಿದೆ. ಓದುಗರಾದ ನೀವೆಲ್ಲರು "ನನ್ನ ನೆನಪುಗಳು" ಪುಸ್ತಕದಿಂದ ಧರ್ಮಪ್ರಭಾವನೆಯನ್ನು ಹೊಂದಿ ಸಮ್ಯಕ ಕಾರ್ಯಗಳಲ್ಲಿ ತೊಡಗಿಕೊಂಡು ನಿಮ್ಮ ಜೀವನ ಉನ್ನತಿಯನ್ನು ಹೊಂದಲಿ ಎಂಬುದೇ ನನ್ನ ಮಹದಾಸೆಯಾಗಿದೆ.

20 ಮೇ 2004

ಭಗವಾನ ಮಹಾವೀರ ಜನ್ಮಭೂಮಿ
ಕುಂಡಲಪುರ (ನಾಲಂದ) ನಂದ್ಯಾವರ್ತಮಹಲ್

ಪೂಜ್ಯ ಮಾತಾಜಿ ಅವರ ನೆನಪಿನ ಬಗ್ಗೆ

ನನ್ನ ನೆನಪುಗಳು

ಪೀಠಾಧೀಶ ಕ್ಷುಲ್ಲಕ ಮೋತಿಸಾಗರ

ಸಂಸಾರದಲ್ಲಿ ಜನ್ಮ ತಳೆಯುವ ಜೀವಗಳು ಮರಣವನ್ನು ಹೊಂದುತ್ತವೆ. ಆದರೆ ಜನ್ಮತಳೆದ ಜೀವಗಳು ತಮ್ಮ ಮನುಷ್ಯ ಪರ್ಯಾಯವನ್ನು ತಪ, ತ್ಯಾಗ ಹಾಗೂ ಸಂಯಮವನ್ನು ಧಾರಣೆ ಮಾಡಿಕೊಂಡು, ಪರೋಪಕಾರದಲ್ಲಿ ಜೀವನವನ್ನು ಕಳೆಯುವುದೇಸಾರವಾಗಿದೆ. ಪೂಜ್ಯ ಮಾತಾಜೀಯವರು ಮಹಾನ್ ಆತ್ಮಗಳಲ್ಲಿ ಒಬ್ಬರಾಗಿದ್ದಾರೆ. ಇವರ ಇಡೀ ಜೀವನವನ್ನು ಪರೋಪಕಾರದಲ್ಲೆ ತೊಡಗಿಸಿಕೊಂಡಿದ್ದಾರೆ.

ಚೆನ್ನಾಗಿ ಊಟ ಮಾಡಿದ ಆಹಾರ ಅರಗಬೇಕಾದರೆ ಅದನ್ನು ಅಗಿಯಬೇಕು. ಪಶುಗಳು ಆಹಾರವನ್ನು ಮೆಲುಕು ಹಾಕುತ್ತಾ ಚೆನ್ನಾಗಿ ಜೀರ್ಣಮಾಡಿಕೊಳ್ಳುವಂತೆ ಮಾತಾಜಿಯವರು ಮೊದಲು ನ್ಯಾಯದರ್ಶನದ ಅಧ್ಯಯನವೆಂಬ ಶುಷ್ಕವಾದ ಹುಲ್ಲನ್ನು ತಿಂದು ಅಷ್ಟ ಸಹಸ್ರೀ ಮೊದಲಾದ ಮಹಾನ್ ಗ್ರಂಥಗಳ ರಚನೆಯಲ್ಲಿ ಮೆಲುಕುಹಾಕಿ ನಮಗೆ ಈಗ "ನನ್ನ ನೆನಪುಗಳು" ಎಂಬ ಮಧುರವಾದ ಅಮೃತವನ್ನು ಕೊಟ್ಟಿದ್ದಾರೆ. ಭವ್ಯ ಜನರು ಈ ಧರ್ಮಾಮೃತವನ್ನು ಕುಡಿದು ಆತ್ಮ ಸಂತೃಪ್ತಿಯನ್ನು ಪ್ರಾಪ್ತಮಾಡಿಕೊಳ್ಳಲಿ.

ದೀಕ್ಷೆ ತೆಗೆದುಕೊಳ್ಳುತ್ತಲೇ ಅಧ್ಯಯನದಲ್ಲಿ ತಲ್ಲೀನರಾದರು. ಎರಡು-ಮೂರು ವರ್ಷಗಳ ನಂತರ ಆರ್ಯಿಕೆ ಜಿನಮತಿಯವರಿಗೆ ಅಧ್ಯಯನ ಮಾಡಿಸುತ್ತಾ ತಾವು ಬಹಳಷ್ಟು ಗ್ರಂಥಗಳ ಅಧ್ಯಯನ ಮಾಡಿದ್ದಾರೆ. ಜೊತೆಗೆ ಲೇಖನ ಕಾರ್ಯಗಳನ್ನು ಪ್ರಾರಂಭಿಸಿದರು. 1965ರಲ್ಲಿ ಶ್ರವಣಬೆಳಗೊಳದ ಚಾತುರ್ಮಾಸದ ಕಾಲದಲ್ಲಿ ಕನ್ನಡದಲ್ಲಿಯ 12 ಭಾವನೆಗಳ ಬಗ್ಗೆ ರಚಿತವಾದ ದ್ವಾದಶಾನುಪ್ರೇಕ್ಷ ಎಂಬ ಕನ್ನಡ ಭಾಷಾ ರಚನೆಯು ಇಂದಿಗೂ ಕರ್ನಾಟಕದ ಮನೆ ಮನೆಯಲ್ಲೂ ಬಾಯಿಪಾಠಮಾಡಿ ದಿನವೂ ಹೇಳುತ್ತಾರೆ.

ನನ್ನ ನೆನಪುಗಳು ಅವರ 5, 6 ವರ್ಷದ ಬಾಲ್ಯದಿಂದ ಪ್ರಾರಂಭವಾಗಿದೆ. ಪೂಜ್ಯ ಮಾತಾಜಿಯವರು ಬಾಲ್ಯದಿಂದ 18ನೆಯ ವಯಸ್ಸಿನವರೆಗೂ ಮನೆಯಲ್ಲಿಯೇ ಕಳೆದಿದ್ದಾರೆ. ಆ ಸಮಯದಲ್ಲಿ ನಡೆದಿರುವ ಘಟನೆಗಳು ತುಂಬ ರೋಚಕ, ಹಾಗೆ ಪ್ರಭಾವಶಾಲಿ ಹಾಗೂ ಅನುಕರಣೀಯವಾಗಿದೆ. ಗೃಹತ್ಯಾಗ ಮಾಡಿ, ಸಪ್ತಮ ವ್ರತಧಾರಿಯಾಗಿ ಕೇವಲ 6 ತಿಂಗಳು ಮಾತ್ರ ಕಳೆದರೂ ಈ 6 ತಿಂಗಳಲ್ಲಿ ಅನುಭವಿಸಿದ ಕಷ್ಟಗಳನ್ನು ಸ್ವತಃ ಸ್ವಯಂ ಸಹಿಸಬೇಕಷ್ಟೇ. ಅವರು ಮೈನಾಳ ಅವಸ್ಥೆಯಲ್ಲಿ ಪಟ್ಟಿರುವ ಕಷ್ಟ ಅಷ್ಟಿಷ್ಟಲ್ಲ. ದೀಕ್ಷೆ ತೆಗೆದುಕೊಳ್ಳಲು ಸಮಾಜದ ವಿರೋಧವನ್ನೂ ಸಹಿಸುತ್ತಾ ಮೂರು ವರ್ಷಗಳನ್ನು ಕಳೆದಿದ್ದಾರೆ. ದೀಕ್ಷೆಯನ್ನು ತಡೆಯಲು ಸಮಾಜವು ಮಾಡಿದ್ದ ವಿರೋಧಗಳನ್ನು ಚೆನ್ನಾಗಿ ಚಿತ್ರಿಸಿದ್ದಾರೆ.

1953ರಲ್ಲಿ ಮಹಾವೀರಜೀ ಕ್ಷೇತ್ರದಲ್ಲಿ ಆಚಾರ್ಯರತ್ನ ಶ್ರೀ ದೇಶಭೂಷಣ ಮಹಾರಾಜರಿಂದ ಯಾವುದೇ ಪ್ರಚಾರ ಮಾಡದೆ ಕ್ಷುಲ್ಲಿಕಾ ದೀಕ್ಷೆಯನ್ನು ಪಡೆದರು. ಮೂರು ವರ್ಷಗಳವರೆಗೆ ದೀಕ್ಷಾ ಗುರುಗಳ ಬಳಿಯಲ್ಲೇ ಕಳೆದಿದ್ದಾರೆ. ಆನಂತರ ಆಚಾರ್ಯ ಶ್ರೀ ಶಾಂತಿಸಾಗರರ ಸಲ್ಲೇಖನವನ್ನು ನೋಡುವ ಮತ್ತು

ಅವರಿಂದಲೇ ಆರ್ಯಿಕಾ ದೀಕ್ಷೆಯನ್ನು ಪಡೆಯಬೇಕೆಂಬ ಇಚ್ಛೆಯಿಂದ ಕ್ಷುಲ್ಲಿಕಾ ವಿಶಾಲಮತಿಯ ಜೊತೆ ಕುಂಥಲಗಿರಿಗೆ ಪ್ರಯಾಣ ಬೆಳೆಸಿದರು. ಅಲ್ಲೆ ಹತ್ತಿರದ "ಮ್ಹಾ ಸವಡ" ದಲ್ಲಿ ಚಾತುರ್ಮಾಸ ಮಾಡುತ್ತಾ ಶಿಷ್ಯ ವೃಂದವನ್ನು ಬೆಳೆಸತೊಡಗಿದರು.

ಚಾರಿತ್ರ ಚಕ್ರವರ್ತಿ ಶ್ರೀ ಶಾಂತಿಸಾಗರರ ಸಲ್ಲೇಖನವಾದ ಮೇಲೆ ಅವರ ಆಜ್ಞೆಯಂತೆ ವೀರಸಾಗರರ ಬಳಿಗೆ ಬಂದು 1956ರಲ್ಲಿ ಮಾಧೋರಪುರದಲ್ಲಿ ಆರ್ಯಿಕ ದೀಕ್ಷೆಯನ್ನು ಪಡೆದರು. ಆರ್ಯಿಕ ದೀಕ್ಷೆ ಪಡೆದ ನಂತರ ಸುಮಾರು 10 ವರ್ಷಗಳವರೆಗೆ ಶಿಷ್ಯವೃಂದಕ್ಕೆ ಚೆನ್ನಾಗಿ ಓದಿಸುತ್ತಾ ತಾವು ಸ್ವತಃ ಅಧ್ಯಯನ ಮಾಡುತ್ತಾ 1965ರಲ್ಲಿ ಭಗವಾನ ಬಾಹುಬಲಿಯ ಕ್ಷೇತ್ರದಿಂದ ಅವರ ಲೇಖನ ವೃತ್ತಿ ಪ್ರಾರಂಭವಾಯಿತು. 1970ರವರೆಗೆ ಚಿಕ್ಕ ಚಿಕ್ಕ ಪುಸ್ತಕಗಳು ಪ್ರಕಟವಾಗುತ್ತಿತ್ತು.

ಇಲ್ಲಿಯವರೆಗೆ ಜ್ಞಾನದ ಭೋಜನವನ್ನು ಮಾಡುತ್ತಿದ್ದ ಮಾತಾಜಿ ನಂತರ ಅವುಗಳನ್ನು ಚೆನ್ನಾಗಿ ಅರಗಿಸಿಕೊಂಡು ಮನಸ್ಸು ಚಿಂತನದ ಮೆಲುಕು ಹಾಕುತ್ತಾ ತಮ್ಮ ಜ್ಞಾನ ಶಕ್ತಿಯಿಂದ ಅಷ್ಟ ಸಹಸ್ರೀ ಮೂಲಾಚಾರ, ನಿಯಮಸಾರ, ಸಮಯಸಾರ ಮೊದಲಾದ ಗ್ರಂಥಗಳಿಗೆ ಟೀಕೆಯನ್ನು ಬರೆದಿದ್ದಾರೆ ಹಾಗೂ ಹಲವಾರು ಜನೋಪಯೋಗಿ ಆರಾಧನೆಗಳನ್ನೂ ಪೂರ್ವಗ್ರಂಥಗಳ ಸಹಾಯದಿಂದ ಸಿದ್ಧಪಡಿಸಿ ಜನಗಳ ಉಪಯೋಗಕ್ಕೆ ಕೊಟ್ಟಿದ್ದಾರೆ. ಪ್ರತಿ ತಿಂಗಳು ಪ್ರಕಟವಾಗುತ್ತಿರುವ ಸಮಗ್ಜಾನ ಪತ್ರಿಕೆ ಇವರದೆ ಕೊಡುಗೆ. ಅವರ ಪ್ರೇರಣೆ, ಆಶೀರ್ವಾದದಿಂದಲೇ ಅದ್ಭುತವಾದ ಜಂಬೂದ್ವೀಪದ ರಚನೆ ಸಿದ್ಧವಾದದ್ದು. ಅವರಿಂದ ನಡೆದಿರುವ ಎಲ್ಲ ಕಾರ್ಯಗಳ ವಿವರ ಇದರಲ್ಲಿ ಇದೆ. ಬಹಳಷ್ಟು ವಿವರಣೆಯನ್ನು ಕೊಡಲು ಹೋಗಲಿ ಅವರಿಗೆ ಆತ್ಮ ಪ್ರಶಂಸೆಯಾಗುವ ಅಳಕು ಹಾಗೆ ಕಟು ಅನುಭವದಿಂದಲೂ ಯಾರಿಗೂ ನೋವಾಗಬಾರದೆಂಬ ಚಿಂತೆ. ಅವರ ಈ ಅನುಭವ ಪ್ರತಿಯೊಬ್ಬ ವ್ಯಕ್ತಿಗೂ ಲಾಭದಾಯಕವಾಗಲಿ ಎಂಬ ಆಶಯ ಹೊಂದಿದ್ದೇವೆ. ನೆನಪುಗಳನ್ನು ಬರೆಯುವ ಕೆಲಸ ಕಠಿಣವಾದರೂ ನಮ್ಮೆಲ್ಲರ ಆಗ್ರಹದಿಂದಾಗಿ ಇದನ್ನು ಮಾತಾಜಿ ಕೈಗೆತ್ತಿಕೊಂಡರು. ನೆನಪುಗಳನ್ನು ಬರೆಯುವ ಕೆಲಸ ಕಠಿಣವಾದರೂ ನಮ್ಮೆಲ್ಲರ ಆಗ್ರಹದಿಂದಾಗಿ ಇದನ್ನು ಮಾತಾಜಿ ಕೈಗೆತ್ತಿಕೊಂಡರು. ಎಷ್ಟೆಲ್ಲ ಅಡತಡೆಯನ್ನು ಮನಸ್ಸಿಗೆ ತಂದುಕೊಳ್ಳದೆ ಕೆಲಸ ಮುಗಿಸಿದ್ದಾರೆ. ಈ ಗ್ರಂಥ ಓದುಗರಿಗೆ ಪ್ರೇರಣೆಯಾಗುತ್ತದೆ ಎಂಬುದೇ ನನ್ನ ಅಭಿಲಾಷೆ.

ಪರಮಪೂಜ್ಯ ರಾಷ್ಟ್ರಗೌರವ ಗಣಿನೀಪ್ರಮುಖ

ಶ್ರೀ ಜ್ಞಾನಮತೀ ಮಾತಾಜಿಯ ಪರಿಚಯ

ಪ್ರಜ್ಞಾಶ್ರಮಣೀ ಆರ್ಯಿಕ ಚಂದನಮತಿ

ಜೈನಶಾಸನದ ಸದ್ಯ ಆಕಾಶದಲ್ಲಿ ಮಿನುಗುತ್ತಿರುವ ನಕ್ಷತ್ರಗಳ ನಡುವೆ ಬೆಳಕನ್ನು ಕೊಡುವ ಸೂರ್ಯನಂತೆ ಮಾತಾಜಿಯವರು ತಮ್ಮ ಪ್ರಕರವಾದ ಜ್ಞಾನದ ಕಿರಣಗಳನ್ನು ಬೀರುತ್ತಿದ್ದಾರೆ. ಅವರ ವ್ಯಕ್ತಿತ್ವ ಹಾಗೂ ಕೃತಿತ್ವದ ಬಗ್ಗೆ ಲೇಖನಿಯಿಂದ ಉಲ್ಲೇಖಿಸಬೇಕಾಗಿದೆ. ಅವರ 50 ವರ್ಷದ ಬದುಕಿನ ಬಗ್ಗೆ ನನ್ನ ವಿನಮ್ರ ವಿನಯಾಂಜಲಿಯನ್ನು ಸಲ್ಲಿಸಲು ಇಲ್ಲಿ ಪ್ರಯತ್ನಿಸಿದ್ದೇನೆ.

1) ಜನ್ಮ ವೈರಾಗ್ಯ ಮತ್ತು ದೀಕ್ಷೆ : 22-10.1934ರಲ್ಲಿ ಶರದ ಪೂರ್ಣಿಮೆಯ ದಿನ ಟಿಕೈತನಗರದಲ್ಲಿ ಶ್ರೇಷ್ಠಿ ಛೋಟೇಲಾಲ ಮತ್ತು ಮೋಹಿನಿದೇವಿಯವರಿಗೆ ಪ್ರಥಮ ಸಂತಾನವಾಗಿ ಜನಿಸಿದ ಕನ್ಯಾರತ್ನವೇ ಮೈನಾ. ಮನೆಯವರೆಲ್ಲರ ಅಕ್ಕರೆಯ ಕೂಸಾಗಿದ್ದ ಇವರು ತಾಯಿಗೆ ಅವರ ತವರುಮನೆಯಿಂದ ದೊರೆತಿದ್ದ "ಪದ್ಮನಂದಿಪಂಚವಿಂಶತಿ"ಯ ಗ್ರಂಥದ ನಿಯಮಿತ ಸ್ವಾಧ್ಯಾಯದಿಂದ ಹಾಗೇ ಪೂರ್ವಜನ್ಮದಿಂದ ಬಂದ ದೃಢನಿರ್ಧಾರಗಳಿಂದ ಕೇವಲ 18 ವರ್ಷಗಳಿಗೆ ವೈರಾಗ್ಯದಿಂದ ಶರದಪೂರ್ಣಿಮೆಯ ದಿನವೇ ಗೃಹತ್ಯಾಗ ಮಾಡಿ ಬಂದು ಶ್ರೀದೇಶಭೂಷಣ ಮಹಾರಾಜರಿಂದ 1952ರಲ್ಲಿ ಆಜನ್ಮ ಬ್ರಹ್ಮಚರ್ಯದ ಸಪ್ತಮ ಪ್ರತಿಮೆಯ ವ್ರತವನ್ನು ಕೈಗೊಂಡರು.

ಜಿನೇಶ್ವರ ದೀಕ್ಷೆಯನ್ನು ತೆಗೆದುಕೊಳ್ಳಲೇಬೇಕೆಂದು ಪ್ರತಿ ಉಸಿರಿನಲ್ಲೂ ತುಂಬಿಕೊಂಡಿದ್ದ ಬ್ರ. ಮೈನಾ 1953ರಲ್ಲಿ ಆಚಾರ್ಯ ದೇಶಭೂಷಣರಿಂದ ಮಹಾವೀರಜೀಯಲ್ಲಿ ಕ್ಷುಲ್ಲಕಾ ವೀರಮತಿಯಾದರು. 1955ರಲ್ಲಿ ಆಚಾರ್ಯ ಶಾಂತಿ ಸಾಗರರ ಸಮಾಧಿಯವರೆಗೂ ಒಂದು ತಿಂಗಳು ಅವರ ಸಾನಿಧ್ಯದಲ್ಲಿದ್ದು, ಅವರ ಅನುಜ್ಞೆಯಂತೆ ಅವರ ಶಿಷ್ಯರಾದ ವೀರಸಾಗರರಿಂದ 1956ರಲ್ಲಿ ಆರ್ಯಿಕೆಯ ದೀಕ್ಷೆಯನ್ನು ಪಡೆದು "ಆರ್ಯಿಕ ಜ್ಞಾನಮತಿ"ಯಾದರು.

2) ಅಧ್ಯಯನ ಮತ್ತು ಅಧ್ಯಾಪನ : ಜ್ಞಾನಪಿಪಾಸು ಜ್ಞಾನಮತಿಯವರ ರೋಮರೋಮಗಳಲ್ಲೂ ಜ್ಞಾನದಾಹ ತುಂಬಿದೆ. ದೀಕ್ಷ ಪಡೆಯುತ್ತಲೇ ಸ್ವಾಧ್ಯಾಯ ಮನನ ಚಿಂತನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಜ್ಞಾನ ಪಡೆಯಲು ಆಸರೆಯಾಗಿದ್ದೂ, ಸಂಘದ ಸದಸ್ಯರುಗಳಿಗೆ ಜೈನಾಗಮದ ತಳಸ್ಪರ್ಶಿ ಅಧ್ಯಯನ ಮಾಡಿಸಿದ್ದು, ಕಾತಂತ್ರ ರೂಪಮಾಲವೆಂಬ ಬೀಜದಿಂದ ಮಾತಾಜಿಯವರ ಜ್ಞಾನಾಸಾಧನೆಯ ವೃಕ್ಷ ಹುಲುಸಾಗಿ ಬೆಳೆದು ನಿಂತಿತು. ಅದರಿಂದ ಬೆಳೆದ ಹೂ, ಹಣ್ಣು, ಎಲೆಗಳಿಂದ ಇಡೀ ಪ್ರಪಂಚವನ್ನೇ ತೃಪ್ತಿಗೊಳಿಸಿದ್ದಾರೆ. ಗೊಮ್ಮಟಸಾರ, ಪರೀಕ್ಷಾಮುಖ, ನ್ಯಾಯದೀಪಿಕಾ, ಪ್ರಮೇಯ ಕಮಲಮಾರ್ತಂಡ, ಅಷ್ಟಸಹಸ್ರೀ, ತತ್ವಾರ್ಥ ರಾಜವಾರ್ತಿಕ, ಸರ್ವಾರ್ಥಸಿದ್ಧಿ, ಅನಗಾರಧರ್ಮಾಮೃತ, ಮೂಲಾಚಾರ, ತ್ರಿಲೋಕಸಾರ, ಮೊದಲದ ಅನೇಕ ಗ್ರಂಥಗಳನ್ನು ತಮ್ಮ ಸಂಘದ ಶಿಷ್ಯರುಗಳಿಗೂ, ಸಾಧುಗಳಿಗೂ ಓದಿಸಿ,

ತಮ್ಮ ಜ್ಞಾನವನ್ನು ಹೆಚ್ಚಿಸಿಕೊಂಡಿದ್ದಾರೆ. ಹಿಂದಿ ಸಂಸ್ಕೃತ, ಪ್ರಾಕೃತ, ಕನ್ನಡ, ಮರಾಠಿ ಮೊದಲಾದ ಭಾಷೆಗಳಲ್ಲಿಯೂ ಅವರಿಗೂ ಹಿಡಿತವಿದೆ.

3) ಸಂಸ್ಕೃತ ಭಾಷೆಯಿಂದಲೆ ಬರವಣಿಗೆ ಪ್ರಾರಂಭ : ಭಗವಾನ ಮಹಾವೀರರ ನಂತರ 2500 ವರ್ಷಗಳ ಇತಿಹಾಸದಲ್ಲಿ ಜೈನ ಸಾಧ್ವಿಯರಿಂದ ಶಾಸ್ತ್ರಗಳ ಬಗ್ಗೆ ಲೇಖನವನ್ನು ಬರೆದಿರುವ ಉದಾಹರಣೆಗಳೇ ಇಲ್ಲವೆನ್ನಬೇಕು. ಇದರಿಂದ ಇತಿಹಾಸವೇ ಜಾಗೃತವಾಯಿತೆನ್ನಬೇಕು. ಕ್ಷುಲ್ಲಕ ವೀರಮತಿ 1954ರಲ್ಲಿ ಸಹಸ್ರನಾಮದ 1008 ಮಂತ್ರಗಳನ್ನು ಬರೆದು ತನ್ನ ಲೇಖನಗಳನ್ನು ಪ್ರಾರಂಭಿಸಿದರು. ಈ ಮಂತ್ರ ಸರಸ್ವತಿಯು ವರದಹಸ್ತವು ಪೂಜ್ಯ ಮಾತಾಜಿಯವರನ್ನು ಬರವಣಿಗೆಯ ಉತ್ತುಂಗಕ್ಕೆ ಏರಿಸಿದೆ. 1969-70ರಲ್ಲಿ ನ್ಯಾಯದ ಸರ್ವೋಚ್ಚ ಗ್ರಂಥ "ಅಷ್ಟಸಹಸ್ರೀ"ಯ ಹಿಂದಿ ಅನುವಾದವು ಅವರ ಅದ್ವಿತೀಯ ವಿದ್ವತ್ತನ್ನು ಪ್ರಪಂಚಕ್ಕೆ ಪರಿಚಯಿಸಿದೆ. ಎಷ್ಟೊಂದು ಗ್ರಂಥಗಳಿಗೆ ಸಂಸ್ಕೃತ ಟೀಕೆ, ಹಿಂದಿಯ ಅನುವಾದ, ಸಂಸ್ಕೃತ ಹಾಗೂ ಹಿಂದಿಯಲ್ಲಿ ಅನೇಕ ಮೌಲಿಕ ಗ್ರಂಥಗಳ ರಚನೆಯು 250ಕ್ಕೂ ಹೆಚ್ಚಾಗಿದೆ. ಪೂಜ್ಯ ಮಾತಾಜಿಯವರಿಂದ ಸಮಯಸಾರ, ನಿಯಮಸಾರ ಮುಂತಾದವುಗಳಿಗೆ ಹಿಂದಿ, ಸಂಸ್ಕೃತ ಟೀಕೆ, ಜೈನಭಾರತಿ, ಜ್ಞಾನಾಮೃತ, ಕಾತಂತ್ರ ವ್ಯಾಕರಣ, ತ್ರಿಲೋಕಭಾಸ್ಕರ, ಪ್ರವಚನ ನಿರ್ದೇಶಕ ಮುಂತಾದ ಸ್ವಾಧ್ಯಾಯ ಗ್ರಂಥ, ಪ್ರತಿಜ್ಞಾ ಸಂಸ್ಕಾರ, ಭಕ್ತಿ, ಆದಿಬ್ರಹ್ಮ, ಹಿಟ್ಟಿನ ಕೋಳಿ "ಜೀವನದಾನ ಮೊದಲಾದ ಉಪನ್ಯಾಸ ದ್ರವ್ಯ ಸಂಗ್ರಹ, ರತ್ನಕರಂಡಕ ಶ್ರಾವಕಾಚಾರ ಮೊದಲಾದವುಗಳ ಹಿಂದಿ ಪದ್ಯಾನುವಾದ ಹಾಗೂ ಅರ್ಥ, ಬಾಲವಿಕಾಸ, ಬಾಲಭಾರತಿ, ನಾರೀ ಅಲೋಕ ಮುಂತಾದವುಗಳು ಜೈನ ವಾಙ್ಮಯದ ವಿವಿಧ ಆಯಾಮಗಳನ್ನು ರಚಿಸಿದ್ದಾರೆ.

ಆಧ್ಯಾತ್ಮ, ವ್ಯಾಕರಣ, ನ್ಯಾಯ ಸಿದ್ಧಾಂತ, ಬಾಲ ಸಾಹಿತ್ಯ, ಉಪನ್ಯಾಸ ಹೀಗೆ ನಾಲ್ಕು ಅನುಯೋಗವಲ್ಲದೆ ವಿಫುಲವಾದ ಭಕ್ತಿ ಸಾಹಿತ್ಯವು ರಚನೆಯಾಗಿದೆ. ಇಂದ್ರ ಧ್ವಜ, ಕಲ್ಪದ್ರುಮ, ಸರ್ವತೋಭದ್ರ, ತ್ರಿಲೋಕ, ಸಿದ್ಧಚಕ್ರ, ವಿಶ್ವಶಾಂತಿ ಮಹಾವೀರ ಆರಾಧನೆಗಳನ್ನು ರಚಿಸಿ ದೇಶದ ಮೂಲೆ ಮೂಲೆಗಳಲ್ಲೂ ಆಚರಿಸಲ್ಪಡುತ್ತಿದೆ. ಇಂತಹ ಪ್ರತಿಭಾನ್ವಿತ ಸರಸ್ವತಿ ಮಾತೆಗೆ ನಮೋ ನಮಃ.

4) ವರ್ತಮಾನದಲ್ಲಿ ಪೂಜ್ಯ ಮಾತಾಜಿಯವರು ಜೈನಶಾಸನದ ಸರ್ವ ಪ್ರಥಮ ಸಿದ್ಧಾಂತ ಗ್ರಂಥ "ಷಟ್‌ಖಂಡಾಗಮ"ದ ಸೂತ್ರಗಳ ಸಂಸ್ಕೃತ ಟೀಕೆ "ಸಿದ್ಧಾಂತ ಚಿಂತಾಮಣಿ"ಯ ಬರವಣಿಗೆಯಲ್ಲಿ ಮಗ್ನರಾಗಿದ್ದಾರೆ. 12 ಪುಸ್ತಕಗಳ ಟೀಕೆ ಮುಗಿದಿದೆ. ಅದರಲ್ಲಿ ಮೊದಲನೆಯ ಪುಸ್ತಕದ ಹಿಂದಿ ಅನುವಾದ ಸಹ ಪ್ರಕಟಗೊಂಡಿದೆ. ಈಗ 13ನೆಯ ಪುಸ್ತಕದ ಟೀಕೆ ಬರೆಯುತ್ತಿದ್ದಾರೆ. ಇಂದಿಗೆ 1000 ವರ್ಷಗಳ ಹಿಂದೆ ಆಚಾರ್ಯ ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ಹೇಗೆ ಆರು ಖಂಡಗಳಲ್ಲಿರುವ ದ್ವಾದಶಾಂಗ ರೂಪಿ ಜಿನವಾಣಿಯನ್ನೂ ಪೂರ್ಣ ಅಂತರ್ಗತಮಾಡಿಕೊಂಡು ಅದರ ಸಾರರೂಪವಾದ ದ್ರವ್ಯ ಸಂಗ್ರಹ, ಗೊಮ್ಮಟಸಾರ, ಲಬ್ಧಸಾರ ಮುಂತಾದ ಗ್ರಂಥಗಳ ರೂಪದಲ್ಲಿ ಪ್ರಕಟಗೊಳಿಸಿದ್ದರು. ಹಾಗೆ ಈ 20ನೆಯ ಶತಮಾನದಲ್ಲಿ ಮಾತೇ ಜ್ಞಾನಮತಿಯು ಸಮಸ್ತ ಉಪಲಬ್ಧ ಜೈನಾಗಮವನ್ನೆಲ್ಲ ಗಹನ ಅಧ್ಯಯನ, ಮನನ, ಚಿಂತನೆ ಮಾಡಿ ಈ "ಸಿದ್ಧಾಂತ ಚಿಂತಾಮಣಿ" ಎಂಬ ಸಂಸ್ಕೃತ ಟೀಕೆಯನ್ನು ಬರೆದು 'ಸಿದ್ಧಾಂತ ಚಕ್ರೇಶ್ವರಿ' ಎಂಬ ಪದವಿಯನ್ನು ಸಾಕಾರಗೊಳಿಸಿದ್ದಾರೆ. 1000 ವರ್ಷಗಳ ಹಿಂದೆ ಆಚಾರ್ಯ ಶ್ರೀ ವೀರಸೇನಚಾರ್ಯರು ರಚಿಸಿದ ಧವಲಾಟೀಕೆಯ ನಂತರ ಆ ಮಹಾನ್ ಗ್ರಂಥಕ್ಕೆ ಸರಳವಾದ ಟೀಕೆಯನ್ನು ಮೊದಲ ಬಾರಿಗೆ ರಚಿಸಿದ್ದಾರೆ.

5) ಶಿಕ್ಷಣ-ಪ್ರಶಿಕ್ಷಣ ಶಿಬಿರ : ಜೈನ ಸಿದ್ಧಾಂತದ ಮರ್ಮವನ್ನು ವಿದ್ವತ್ ವರ್ಗವು ತಿಳಿಯಬಲ್ಲದು. ಇದೇ ಭಾವನೆಯಿಂದ ಎಷ್ಟೋ ಶಿಕ್ಷಣ ಪ್ರಶಿಕ್ಷಣ ಶಿಬಿರಗಳ ಆಯೋಜನೆಯು ಪೂಜ್ಯ ಮಾತಾಜಿಯವರ

ಪ್ರೇರಣೆಯಿಂದ ನಡೆದಿದೆ. 1969ರ ಜಯಪುರದ ಚಾತುರ್ಮಾಸದಲ್ಲಿ. ಜೈನ "ಜ್ಯೋತಿರ್ಲೋಕ" ಎಂಬ ಪ್ರಶಿಕ್ಷಣ ಶಿಬಿರವನ್ನು ಆಯೋಜಿಸಲಾಗಿತ್ತು. ಇದರಲ್ಲಿ ಮಾತಾಜಿಯವರು "ಜೈನ ಭೂಗೋಳ ಹಾಗೂ ಖಗೋಳ"ದ ಮೇಲೆ ವಿದ್ವಾಂಸರಿಗೆ ವಿಶೇಷ ಜ್ಞಾನವನ್ನು ಉಂಟುಮಾಡಿದರು. 1978ರಲ್ಲಿ ಹಸ್ತಿನಾಪುರದಲ್ಲಿ ಪಂ. ಮಕ್ಖನಲಾಲಜೀ ಶಾಸ್ತ್ರಿ, ಪಂ. ಮೋತಿಚಂದಜೀ ಕೋಠಾರಿ, ಡಾ. ಲಾಲಬಹದ್ದೂರ್ ಶಾಸ್ತ್ರಿ ಮೊದಲದ ಜೈನ ಸಮಾಜದ " 100 ಜನ ಪ್ರೌಢ ವಿದ್ವಾಂಸರು ಭಾಗವಹಿಸಿದ್ದ ಪ್ರಶಿಕ್ಷಣ ಶಿಬಿರದಲ್ಲಿ ಮಾತಾಜೀಯವರು ಯಥೇಚ್ಛವಾದ ಮಾರ್ಗದರ್ಶನ ಮಾಡಿದ್ದರು. ಈ ಪರಂಪರೆ ಇಂದು ನಡೆದುಬರುತ್ತಿದೆ.

6) ರಾಷ್ಟ್ರೀಯ - ಅಂತರಾಷ್ಟ್ರೀಯ ಸೆಮಿನಾರ್ : 1985ರಲ್ಲಿ ಹಸ್ತಿನಾಪುರದಲ್ಲಿ "ಜೈನ ಗಣಿತ ಹಾಗೂ ತ್ರಿಲೋಕ ವಿಜ್ಞಾನ" ಎಂಬ ವಿಷಯದ ಮೇಲೆ ಅಂತರಾಷ್ಟ್ರೀಯ ವಿಚಾರ ಸಂಕಿರಣವು ನಡೆಯಿತು. ಹೀಗೆ ಸಂಗೋಷ್ಠಿಗಳು ನಡೆಯುತ್ತಲೆ ಇರುತ್ತವೆ. 1997ರಲ್ಲಿ ಕುಲಪತಿಗಳ ರಾಷ್ಟ್ರೀಯ ಸಮ್ಮೇಳನದ ಭವ್ಯ ಆಯೋಜನೆಯಲ್ಲಿ ದೇಶದ ವಿವಿಧ ವಿಶ್ವವಿದ್ಯಾನಿಲಯದ ಕುಲಪತಿಗಳನ್ನು ಆಹ್ವಾನಿಸಿ ವೃಷಭದೇವರನ್ನು ಭಾರತೀಯ ಸಂಸ್ಕೃತಿ ಹಾಗೂ ಜೈನಧರ್ಮದ ವರ್ತಮಾನಯುಗದ ಪ್ರಣೇತಪುರುಷನ ರೂಪದಲ್ಲಿ ತಿಳಿಸುವ ಪ್ರಯತ್ನ ಮಾಡಲಾಗಿತ್ತು. 11.6.2000ದಲ್ಲಿ "ಜೈನಧರ್ಮದ ಪ್ರಾಚೀನತೆ" ಎಂಬ ವಿಷಯದ ಮೇಲೆ ಇತಿಹಾಸಕಾರರ ಒಂದು ಸಮ್ಮೇಳನವನ್ನು ಆಯೋಜಿಸಿ ಪಠ್ಯ ಪುಸ್ತಕಗಳಲ್ಲಿ ಸರಿಯಾದ ಮಾಹಿತಿಯನ್ನು ಪ್ರಕಟಿಸಲು ಆಯೋಗದ ಗಮನಕ್ಕೆ ತರಲಾಯಿತು. ಹೀಗೆ ಹಲವಾರು ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳುತ್ತಾ, ಸಾಹಿತ್ಯಿಕ ಗ್ರಂಥ ಪ್ರಕಾಶನವನ್ನು ಹೊರತರುತ್ತಿದ್ದಾರೆ.

7) ವಿಶ್ವವಿದ್ಯಾನಿಲಯದಿಂದ ಗೌರವ ಪದವಿ: ಲೌಕಿಕ ಗಾಗಿ ಕೇವಲ ಮೂರನೆಯ ತರಗತಿಯವರೆಗೆ ಓದಿರುವ ಮಾತಾಜೀ ಅಧ್ಯಯನ, ಅಧ್ಯಾಪನದಿಂದ ಉನ್ನತ ಮಟ್ಟದ ಕೃತಿಗಳನ್ನು ಹೊರತಂದಿರುವುದನ್ನು ಗಮನಿಸಿದ ಅವಧ ವಿಶ್ವವಿದ್ಯಾನಿಲಯವು 5.2.1995ರಲ್ಲಿ ಡಿ.ಲಿಟ್. ಪದವಿಯನ್ನು ಮಾತಾಜೀಯವರಿಗೆ ಪ್ರಧಾನಮಾಡಿದೆ.

8) 1992ರಲ್ಲಿ ಪೂಜ್ಯ ಮಾತಾಜೀಯವರ ದೃಷ್ಟಿ ಪಠ್ಯಪುಸ್ತಕದಲ್ಲಿ ಜೈನ ಸಂಬಂಧದ ವಿಷಯದತ್ತ ಬಿದ್ದಿತು. ಭ. ಮಹಾವೀರರೇ ಜೈನಧರ್ಮದ ಸಂಸ್ಥಾಪಕರೆಂಬ ವಿಷಯವನ್ನು ಸರಿಪಡಿಸಬೇಕೆಂದು ಪ್ರಧಾನಮಂತ್ರಿ, ಮಾನವ ಸಂಸಾಧನ ವಿಕಾಸ ಮಂತ್ರಿಯವರೆನ್ನೆಲ್ಲ ಸಂಪರ್ಕಿಸಿ ಪುನಃ ಸಂಶೋಧನೆಗೆ ಒಳಪಡುವಂತೆ ಮಾಡಿದ್ದಾರೆ.

9) ತೀರ್ಥಕ್ಷೇತ್ರಗಳ ಅಭಿವೃದ್ಧಿ : ತೀರ್ಥಂಕರರ ಕಲ್ಯಾಣ ಸ್ಥಳಗಳು ಜನ್ಮಸ್ಥಳಗಳ ಅಭಿವೃದ್ಧಿಯಾಗಬೇಕೆಂದು ಯಾವಾಗಲು ಅವರ ಮನದಲ್ಲಿ ಯೋಚನೆ ಇರುತ್ತಲೇ ಇತ್ತು. ಈ ಸ್ಥಳಗಳೇ ನಮ್ಮ ಮಹಾನ್ ಸಂಸ್ಕೃತಿಯ ಪ್ರತೀಕ. ಇವುಗಳ ಸಂರಕ್ಷಣೆ ಸಂವರ್ಧನೆ ಅತ್ಯಂತ ಅವಶ್ಯಕವೆಂಬ ಪ್ರೇರಣೆಯನ್ನು ಜನರಿಗೆ ಮನದಟ್ಟುಮಾಡಿ, ಮೊತ್ತ ಮೊದಲು ಶಾಂತಿನಾಥ, ಕುಂಥುನಾಥ ಅರಹನಾಥರ ಜನ್ಮಭೂಮಿ ಹಸ್ತಿನಾಪುರದಲ್ಲಿ ಜೈನ ಭೂಗೋಳದ ಅದ್ವಿತೀಯ ರಚನೆಯಾದ "ಜಂಬೂದ್ವೀಪ" ಇಂದು ವಿಶ್ವದ ಜನರ ಮನಃಪಟಲದಲ್ಲಿ ಅಂಕಿತವಾಗಿದೆ. ಉತ್ತರ ಪ್ರದೇಶ ಸರ್ಕಾರದ ಪರ್ಯಟನ ವಿಭಾಗವು ಜಂಬೂದ್ವೀಪದಿಂದ ಹಸ್ತಿನಾಪುರವನ್ನು ಗುರುತಿಸುವಂತಾಗಿದೆ ಎಂದು ಹೇಳುತ್ತಾ ಇದೊಂದು ಮಾನವ ನಿರ್ಮಿತ ಸ್ವರ್ಗವೆಂದು ಹೊಗಳಿದೆ. (A man made heaven of unparallel superlatives and Natural Wonders) 1993 ರಿಂದ 1995ರವರೆಗೆ ಅಯೋಧ್ಯೆಯಲ್ಲಿ ಸಮವಸರಣ ಮಂದಿರ ಮತ್ತು "ತ್ರಿಕಾಲ ಚೌಬೀಸ ಮಂದಿರ"ದ

ನಿರ್ಮಾಣ ಮಾಡಿ ಇಡೀ ವಿಶ್ವದಲ್ಲಿ ಇದರ ಪ್ರಚಾರ, ಕಲೂಜದಲ್ಲಿ ನವದೇವತೆಯ ಮಂದಿರದ ನಿರ್ಮಾಣಕ್ಕೆ ಪ್ರೇರಣೆ ಸನಾವದದಲ್ಲಿ ಣಮೋಕಾರಧಾಮ, ಪ್ರೀತಿವಿಹಾರ ದೆಹಲಿಯಲ್ಲಿ ಕಮಲಮಂದಿರ, ಮಾಂಗೀತುಂಗಿಯಲ್ಲಿ ಸಹಸ್ರಕೂಟ ಕಮಲಮಂದಿರ ಅಹಿಚ್ಛತ್ರಪುರದಲ್ಲಿ 11 ಶಿಖರವುಳ್ಳ ತೀಸಚೌಬೀಸಮಂದಿರ ಮತ್ತು ಪ್ರಯಾಗದಲ್ಲಿ "ತೀರ್ಥಂಕರ ವೃಷಭದೇವ ತಪಸ್ಥಳ"ದ ಭವ್ಯ ನಿರ್ಮಾಣವು ಇವರ ಪ್ರೇರಣೆಯಿಂದಲೇ ಆಗಿದೆ.

2003ರಲ್ಲಿ ಕುಂಡಲಪುರದಲ್ಲಿ ಮಹಾವೀರರ ಕೀರ್ತಿಸ್ತಂಭ, ಮಹಾವೀರ ಮಂದಿರ, ನವಗ್ರಹಶಾಂತಿ ಜಿನಮಂದಿರ ತ್ರಿಕಾಲ ಚೌಬೀಸ ಮಂದಿರ, ನಂದ್ಯಾವರ್ತಮಹಲ್ ಸಹಿತವಾಗಿ ಮಹಾವೀರರ ಖಡ್ಗಾಸನದ ಪ್ರತಿಮೆಯನ್ನು ಸ್ಥಾಪಿಸಿ, 7.2.2003 ರಿಂದ 12.2.2003ರವರೆಗೆ ಭವ್ಯವಾದ ಪಂಚಕಲ್ಯಾಣ ಪ್ರತಿಷ್ಠೆ ಹಾಗೂ ಮಹಾಕುಂಭ ಮಸ್ತಕಾಭಿಷೇಕ ಕಾರ್ಯಗಳು ನಡೆದಿವೆ.

10) ವಿಶ್ವದಲ್ಲೇ ಅದ್ವಿತೀಯವಾದ 108 ಅಡಿ ಮೂರ್ತಿಯ ನಿರ್ಮಾಣಕ್ಕೆ ಪ್ರೇರಣೆ : ವಿಶ್ವದಲ್ಲೇ ಅಪ್ರತಿಮ ಮೂರ್ತಿಯಾಗಿ 108 ಅಡಿ ಎತ್ತರದ ಭಗವಾನ ಋಷಭ ದೇವರ ವಿಗ್ರಹದ ನಿರ್ಮಾಣವು ಮಾಂಗೀತುಂಗಿಯ ಪರ್ವತದಲ್ಲಿ ಮಾತಾಜೀಯವರ ಪ್ರೇರಣೆಯಿಂದ ಆಗುತ್ತಿದೆ. ಇದು ಯುಗ ಯುಗದವರೆಗೂ ಜಿನಶಾಸನದ ಮಹಿಮೆಯನ್ನು ಸಾರುತ್ತದೆ.

11) ಶಿರಡಿಯಲ್ಲಿ ಜ್ಞಾನತೀರ್ಥ : ಮಹಾರಾಷ್ಟ್ರದ ಶಿರಡಿಯಲ್ಲಿ ಕಾರ್ಯಕರ್ತರಿಂದ "ಜ್ಞಾನತೀರ್ಥ" ವೆಂಬ ಜೈನ ಸಂಸ್ಕೃತಿ ಕೇಂದ್ರವು ನಿರ್ಮಾಣವಾಗುತ್ತಿದೆ. ಇಲ್ಲಿಯ ನವಗ್ರಹ ಶಾಂತಿ ಮಂದಿರದ ವಿಶೇಷ ನಿರ್ಮಾಣವು ಮಾತಾಜಿಯ ನಿರ್ದೇಶಾನುಸಾರ ನಡೆಯುತ್ತಿದೆ.

12) ಧರ್ಮಪ್ರಭಾವನೆಯ ವಿವಿಧ ಆಯಾಮ : ದೆಹಲಿಯಲ್ಲಿ ಮಾತಾಜೀಯವರ ಪ್ರೇರಣೆಯಿಂದಾಗಿ ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನ ಸಂಸ್ಥೆಯು 1972ರಲ್ಲಿ ಸ್ಥಾಪನೆಯಾಗಿದೆ. ಸಂಸ್ಥಾನದಲ್ಲಿರುವ ವೀರ ಜ್ಞಾನೋದಯ ಗ್ರಂಥಮಾಲೆಯ ಮೂಲಕ ಹಲವಾರು ಗ್ರಂಥಗಳು ಪ್ರಕಾಶನಗೊಂಡಿವೆ. ನಾಲ್ಕು ಅನುಯೋಗಗಳನ್ನು ಒಳಗೊಂಡಿರುವ ಸಮಗ್ಜ್ಞಾನ ಮಾಸಿಕ ಪತ್ರಿಕೆಯ ಪ್ರಕಾಶನ, ಣಮೋಕಾರ ಮಹಾಮಂತ್ರದ ಬ್ಯಾಂಕ್ ಮುಂತಾದ ಹಲವಾರು ಕಾರ್ಯಗಳಿಂದ ಜಿನಶಾಸನದ ಕೀರ್ತಿಯನ್ನು ನಿರಂತರವಾಗಿ ಹರಡುತ್ತಲೆ ಇದ್ದಾರೆ.

ಪೂಜ್ಯ ಮಾತಾಜಿಯವರ ಪ್ರೇರಣೆಯಿಂದಲೇ 1982ರಲ್ಲಿ ಪ್ರಧಾನಮಂತ್ರಿ ಇಂದಿರಾಗಾಂಧಿಯವರು "ಜಂಬೂದ್ವೀಪ ಜ್ಞಾನಜ್ಯೋತಿ" ಯನ್ನು ಉದ್ಘಾಟಿಸಿದರು. ಈ ಜ್ಞಾನಜ್ಯೋತಿಯು ನಿರಂತರವಾಗಿ ಮೂರು ವರ್ಷಗಳವರೆಗೂ ಭಾರತದ ಮೂಲೆ ಮೂಲೆಯಲ್ಲಿ ಜೈನಧರ್ಮದ ಸಿದ್ಧಾಂತ, ತತ್ತ್ವಗಳನ್ನು ಸಾರಿತು. ಅಂತ್ಯದಲ್ಲಿ ಪಿ.ಎನ್. ನರಸಿಂಹರಾವ್‌ರವರಿಂದ ಹಸ್ತಿನಾಪುರದಲ್ಲಿ ಶಾಶ್ವತವಾಗಿ ಸ್ಥಾಪಿಸಲ್ಪಟ್ಟಿದೆ. 1998ರಲ್ಲಿ ಪ್ರಧಾನ ಮಂತ್ರಿಯವರಾದ ಅಟಲ ಬಿಹಾರ ವಾಜಪೇಯಿಯವರಿಂದ "ಭಗವಾನ ವೃಷಭದೇವ ಸಮವಸರಣ ಶ್ರೀವಿಹಾರ"ವು ರಾಜಧಾನಿಯಿಂದ ಹೊರಟು ಸಮಸ್ತ ಪ್ರಾಂತ್ಯಗಳಲ್ಲಿ ಸಂಚಾರಮಾಡಿ 22.10.2002ರಲ್ಲಿ ತಪಸ್ಥಳವಾದ ಪ್ರಯಾಗದಲ್ಲಿ ನಿರ್ಮಿತವಾಗಿರುವ ಕೇವಲ ಜ್ಞಾನ, ಕಲ್ಯಾಣಕ ಮಂದಿರದಲ್ಲಿ ಸ್ಥಾಪಿತವಾಗಿ ಯುಗ-ಯುಗದವರೆಗೂ ಭ ವೃಷಭ ದೇವರ ನಿಜವಾದ ಸಮವಸರಣವನ್ನೇ ನೆನಪಿಗೆ ತರುವಂಥದ್ದಾಗಿದೆ.

ದೆಹಲಿಯಲ್ಲಿ ಚೌಬೀಸ "ಕಲ್ಪದ್ರುಮ ಮಹಾಮಂಡಲ ವಿಧಾನ"ದಂತಹ ಹಲವಾರು ಆರಾಧನೆಗಳನ್ನು ಮಾಡಿಸಿ ಜನಗಳಿಗೆ ಜೈನಧರ್ಮದ ಮಹತ್ವದ ಅರಿವು ಮಾಡಿಕೊಡುತ್ತಲೇ ಇದ್ದಾರೆ. ಆಸ್ಥಾ ಚಾನೆಲ್ ಮೂಲಕ

ಜೈನ ತತ್ವ ತೀರ್ಥಂಕರರ ಜೀವನ ದರ್ಶನ ಹಾಗೂ ಹಲವಾರು ಜೈನ ತತ್ತ್ವ ವಿಷಯಗಳನ್ನು ಲಕ್ಷಾಂತರ ಮಂದಿಗೆ ತಲುಪಿಸುತ್ತಿದ್ದಾರೆ. ಇವರ ಪ್ರೇರಣೆಯಿಂದಲೇ ಅಖಿಲ ಭಾರತ ವಾರ್ಷಿಯ ದಿಗಂಬರ ಜೈನ ವೃಂದವು ಪ್ರಾರಂಭವಾಗಿ ಇಂದಿಗೂ ತನ್ನ ಕಾರ್ಯಗಳನ್ನು ನಿರ್ವಹಿಸುತ್ತಿದೆ. ಇವರು 50 ವರ್ಷಗಳಲ್ಲಿ ಮಾಡಿರುವ ಸಾಧನೆಯನ್ನು ಬೇರೆ ಯಾರೇ ಆಗಲಿ ಮಾಡಲು ಸಾಧ್ಯವಿಲ್ಲ.

13) ಅಡಚಣೆಗಳನ್ನು ಜಯಿಸಿದ್ದು : ಮಾತಾಜಿಯವರು ಪ್ರತಿ ಕೆಲಸವನ್ನು ಆಗಮಾನುಕೂಲವಾಗಿಯೇ ಮಾಡುತ್ತಿದ್ದರು. ಇದರಲ್ಲಿ ಬರುವ ಎಲ್ಲಾ ವಿಘ್ನಗಳನ್ನು ಬಹಳ ಶಾಂತಿಯಿಂದ ಸಹಿಸಿಕೊಂಡು ಕೆಲಸವನ್ನು ಪೂರ್ಣಗೊಳಿಸುವುದೇ ಇವರ ವೈಶಿಷ್ಟ್ಯವಾಗಿದೆ. ಯಾವುದೇ ಸಂಸ್ಥೆಯಲ್ಲಾಗಲಿ, ತೀರ್ಥದಲ್ಲಾಗಲಿ, ಚಂದಾಶೇಖರಣೆಯ ಕೆಲಸದಲ್ಲಿ ಸಂಘವನ್ನು ಭಾಗಿಯಾಗಲು ಅವಕಾಶಕೊಟ್ಟಿಲ್ಲ. ತಮ್ಮ 50 ವರ್ಷದ ಅನುಭವದಲ್ಲಿ ಎಲ್ಲೂ ಈ ನಿಯಮವನ್ನು ಅವರು ಮೀರಿಲ್ಲ. ಇದೇ ಕಾರಣವಿರಬೇಕು ಇವರನ್ನು ವಿಹಾರ ಮಾಡಿಸುವುದೇ ತಮ್ಮ ಭಾಗ್ಯವೆಂದು ಸಂಘಪತಿಗಳು ತಿಳಿಯುತ್ತಿದ್ದರು.

14) ಅಮೃತಮಯ ವರ್ಷ : ಅವರು ತಮ್ಮ 50 ವರ್ಷಗಳ ತ್ಯಾಗಮಯ ಜೀವನವನ್ನೂ ಕಳೆದಿದ್ದರು. 18 ವರ್ಷದ ವಯಸ್ಸಿನಲ್ಲಿ ಅದೂ ತಮ್ಮ ಜನ್ಮದಿನದಂದೇ ಗೃಹತ್ಯಾಗ ಮಾಡಿದ್ದರು. 21.10.2002ರಂದು ಶರದ್‌ಪೂರ್ಣಿಮೆಯಂದು ಪ್ರಯಾಗದಲ್ಲಿ ಸುವರ್ಣ ಶರದ ಪೂರ್ಣಿಮೆಯನ್ನಾಗಿ ಆಚರಿಸಲಾಯಿತು.

ಶತಮಾನಗಳಿಂದ ಉಪೇಕ್ಷಿತವಾಗಿದ್ದ ಭ ಮಹಾವೀರರ ಜನ್ಮಭೂಮಿ - ಕುಂಡಲಪುರದಲ್ಲಿಯ 2003ರಲ್ಲಿ ಚಾತುರ್ಮಾಸ ಕೈಗೊಂಡು "ಕುಂಡಲಪುರ ಮಹೋತ್ಸವ" ಆಚರಿಸಿದ್ದ ಐತಿಹಾಸಿಕ ದಾಖಲೆಯು ಆಗಿ ಮಾತಾಜೀಯವರು ಭವ್ಯ ವ್ಯಕ್ತಿತ್ವಕ್ಕೆ ಕೈಗನ್ನಡಿಯಾಗಿದೆ. ಅದೇ ವರ್ಷ 3.9.2003 ರಿಂದ 8.9.2003ರವರೆಗೆ ಮುನಿಸುವ್ರತರ ಜಿನಬಿಂಬ ಪಂಚ ಕಲ್ಯಾಣ ಪ್ರತಿಷ್ಠೆ, 11.12.2003 ರಲ್ಲಿ ಪಾರ್ಶ್ವನಾಥ "ಜನ್ಮಕಲ್ಯಾಣ ತೃತೀಯ ಸಹಸ್ರಾಬ್ಧಿ ಮಹೋತ್ಸವ"ವನ್ನು ಆಚರಿಸಲು ಪ್ರೇರಣೆ ಕೊಟ್ಟರು. ಇಂತಹ ಚತುರ್ಮುಖಿ ಪ್ರತಿಭೆಯ ಗಣಿ ಪೂಜ್ಯ ಮಾತಾಜಿಯ ಚರಣಗಳಲ್ಲಿ ನನ್ನ ವಿನಯಾಂಜಲಿ, ಭಗವಂತರಲ್ಲಿ ಇಂತಹ ಪವಿತ್ರ ತ್ಯಾಗಮಯಿಯ ಜೀವನದ ಅಮೃತ ಮಹೋತ್ಸವವನ್ನು ಆಚರಿಸುವಂತಾಗಲಿ, ಹಾಗೇ ಮಾತಾಜಿ ಅವರಿಂದ ಇನ್ನೂ ಹೊಸ ಹೊಸ ಸಾಹಿತ್ಯ ಸೃಷ್ಟಿಯಾಗಲಿ ಎಂಬುದೇ ನಮ್ಮ ಮಹದಾಸೆ.

ಸಂಸ್ಥಾನದ ಪರಿಚಯ

ಕರ್ಮಯೋಗಿ ಬ್ರ. ರವೀಂದ್ರಕುಮಾರ ಜೈನ

ಹಸ್ತಿನಾಪುರ : ಹಸ್ತಿನಾಪುರದಲ್ಲಿ ಇಂದು ರಾಷ್ಟ್ರೀಯ ಮಟ್ಟದ ಕೆಲಸಗಳು ನಡೆಯುತ್ತಿವೆ. ಇದೊಂದು ಐತಿಹಾಸಿಕ ಮತ್ತು ಪೌರಾಣಿಕ ಸ್ಥಳ. ಭ. ಆದಿನಾಥರಿಗೆ ಆಹಾರವಾದ ಸ್ಥಳ ಕೌರವ-ಪಾಂಡವರ ರಾಜಧಾನಿ, ದರ್ಶನ ಪ್ರತಿಮೆಯಲ್ಲಿ ಪ್ರಸಿದ್ಧಿ ಪಡೆದಿರುವ ಮನೋವತಿಯ ಕಥೆಯನ್ನು ಒಳಗೊಂಡಿರುವ ಸ್ಥಳ. ಹೀಗೆ ಹಲವಾರು ಪೌರಾಣಿಕ ಕಥೆಗಳು ಇದರಲ್ಲಿವೆ.

ಸಂಸ್ಥಾನ ಸ್ಥಾಪನೆ : 1972ರಲ್ಲಿ ಮಾತಾಜಿಯ ಪ್ರೇರಣೆಯಿಂದ ಸ್ಥಾಪನೆಯಾಯಿತು. ಪ್ರತಿ ಮೂರು ವರ್ಷಕ್ಕೊಮ್ಮೆ ಕಾರ್ಯಕಾರಿಣಿಯ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗುತ್ತದೆ. ಪ್ರಥಮ ಕಾರ್ಯಾಧ್ಯಕ್ಷರು ದೆಹಲಿಯ ಡಾ. ಕೈಲಾಸಚಂದ್ ಜೈನರು ಈಗ ಪ್ರಸ್ತುತ ಬ್ರ. ಶ್ರೀ ರವೀಂದ್ರಕುಮಾರ ಜೈನರು ಅಧ್ಯಕ್ಷರಾಗಿಯು, ದೆಹಲಿಯ ಕರೋಲ್‌ಬಾಗಿನ ಶ್ರೀ ಕೈಲಾಸಚಂದ್ರ ಜೈನರು ಮಹಾಮಂತ್ರಿಯಾಗಿಯೂ, ಮೇರಠಿನ ಮನೋಜಕುಮಾರ ಜೈನ ಕೋಶಾಧ್ಯಕ್ಷರಾಗಿದ್ದಾರೆ.

ನಿರ್ಮಾಣ : 1975ರಲ್ಲಿ ಜಂಬೂದ್ವೀಪದ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಇಂದು ಜಂಬೂದ್ವೀಪದ ನಿರ್ಮಾಣದ ಜೊತೆಗೆ ಯಾತ್ರಿಗಳಿಗೆ, ಶೋಧಾರ್ಥಿಗಳಿಗೆ, ಪ್ರವಾಸಿಗರಿಗಾಗಿ ಸುಮಾರು 250 ಕೊಠಡಿಗಳ ವ್ಯವಸ್ಥೆಯಿದೆ. ತೀನಮೂರ್ತಿ ಮಂದಿರದ ನಿರ್ಮಾಣವಾಗಿದೆ. ಭಗವಾನ ಮಹಾವೀರರ ಕಮಲ ಮಂದಿರ, ಸಾಧುಗಳಿಗಾಗಿ ರತ್ನತ್ರಯ ಮಂದಿರ, ಕಾರ್ಯಾಲಯ, ನೀರಿನ ವ್ಯವಸ್ಥೆ ಎಲ್ಲಾ ಸುವ್ಯವಸ್ಥಿತವಾಗಿದೆ. ಇದಲ್ಲದೆ ಭ. ವಾಸುಪಪೂಜ್ಯ, ಶಾಂತಿನಾಥ, ಧ್ಯಾನ ಮಂದಿರ ಹ್ರೀಂ ಮಂದಿರ, ಸಹಸ್ರಕೂಟ ಮಂದಿರ ಇಪ್ಪತ್ತು ತೀರ್ಥಂಕರ ಮಂದಿರ, ವೃಷಭದೇವ ಮಂದಿರ ಕೈಲಾಸಪರ್ವತದ ನಿರ್ಮಾಣಗಳಿಂದ ಆಕರ್ಷಣೆಯ ಕೇಂದ್ರವಾಗಿದೆ.

ಶೈಕ್ಷಣಿಕ ಕಾರ್ಯಗಳು : ನಿರ್ಮಾಣ ಕಾರ್ಯಗಳಲ್ಲದೆ ಶಿಕ್ಷಣ ಮತ್ತು ಧರ್ಮಪ್ರಚಾರದ ಕಾರ್ಯಗಳು ನಡೆಯುತ್ತಿವೆ. ಶಿಕ್ಷಣ, ಪ್ರಶಿಕ್ಷಣ ಶಿಬಿರ, ಸೆಮಿನಾರ್ ಅಂತರಾಷ್ಟ್ರೀಯ ಸೆಮಿನಾರ್ ಕುಲಪತಿಗಳ ಸಮ್ಮೇಳನ, ಭಗವಾನ ವೃಷಭ ದೇವರ ಅಂತರಾಷ್ಟ್ರೀಯ ನಿರ್ವಾಣ ಮಹೋತ್ಸವಗಳು ಅದ್ಧೂರಿಯಾಗಿ ನಡೆದಿವೆ.

ಸಮ್ಯಗ್‌ಜ್ಞಾನ ಮಾಸಿಕ ಪತ್ರಿಕೆಯ ಪ್ರಕಾಶನ : 1974ರಲ್ಲಿ ಜ್ಞಾನಮತಿ ಮಾತಾಜೀಯವರ ಪ್ರೇರಣೆಯಿಂದ ನಾಲ್ಕು ಅನುಯೋಗಗಳ ವಿಷಯಗಳನ್ನೊಳಗೊಂಡಂತಹ ಧರ್ಮ ಪ್ರಭಾವಕ ಮಾಸಿಕ ಪತ್ರಿಕೆಯ ಪ್ರಾರಂಭವಾಯಿತು. 1974ರ ಜುಲೈ ತಿಂಗಳಲ್ಲಿ ಧರ್ಮಸಾಗರರ ಕರ ಕಮಲದಿಂದ ಉದ್ಘಾಟಿಸಲ್ಪಟ್ಟ ಪತ್ರಿಕೆ ಇಂದಿಗೂ ಅದೇ ಮಟ್ಟವನ್ನು ಕಾಯ್ದುಕೊಂಡ ರಾಷ್ಟ್ರದ ಎಲ್ಲಾ ರಾಜ್ಯಗಳಲ್ಲೂ ಸದಸ್ಯತ್ವವನ್ನು ಹೊಂದಿದೆ.

ವೀರ ಜ್ಞಾನೋದಯ ಗ್ರಂಥಮಾಲೆ : 1974ರಲ್ಲೇ ಈ ಗ್ರಂಥಮಾಲೆಯು ಪ್ರಾರಂಭವಾಯಿತು. ಮೊದಲನೆಯದಾಗಿ ಮಾತಾಜಿಯವರಿಂದ ರಚಿತವಾದ 'ಅಷ್ಟಸಹಸ್ರೀ' ಗ್ರಂಥವು ಪ್ರಕಾಶನಗೊಂಡಿತು. ಅದರಿಂದ ಈಚೆಗೆ ಮಾತಾಜಿ ಅವರಿಂದ ರಚಿತವಾಗಿರುವ ಸುಮಾರು 200 ಗ್ರಂಥಗಳು ಪ್ರಕಾಶನಕಂಡಿವೆ.

ಜಂಬೂದ್ವೀಪ ಪುಸ್ತಕಾಲಯ : ಜಂಬೂದ್ವೀಪ ಪುಸ್ತಕಾಲಯವು ವಿಶ್ವವಿದ್ಯಾನಿಲಯದ ಪುಸ್ತಕಾಲಯಕ್ಕೆ ಸಮನಾಗಿಯೂ ರಚಿತಗೊಂಡಿದೆ.

ಪಂಚಕಲ್ಯಾಣದ ಪ್ರತಿಷ್ಠೆಗಳು : ಮೊದಲನೆಯದಾಗಿ 1975ರಲ್ಲಿ ಆಚಾರ್ಯ ಧರ್ಮಸಾಗರರು ಮತ್ತು ವಿದ್ಯಾನಂದರರ ಸಾನಿಧ್ಯದಲ್ಲಿ ಒಂದು ಚಿಕ್ಕ ಗರ್ಭಗುಡಿಯಲ್ಲಿ 9 1/2 ಅಡಿ ಎತ್ತರದ ಮಹಾವೀರ ತೀರ್ಥಂಕರರ ಪ್ರತಿಮೆಯ ಸ್ಥಾಪನೆ, ಪಂಚಕಲ್ಯಾಣಗಳು ವಿಧಿವತ್ತಾಗಿ ನಡೆದು ಹಸ್ತಿನಾಪುರದ ಜಂಬೂದ್ವೀಪ ಸ್ಥಳ ನಿರ್ಮಾಣವಾಗತೊಡಗಿತು.

ಎರಡನೆಯ ಪಂಚಕಲ್ಯಾಣ : 29.4.1979ರಲ್ಲಿ 108 ಅಡಿ ಎತ್ತರದ ಸುಮೇರು ಪರ್ವತದ ಮೇಲೆ 16 ಜಿನಬಿಂಬಗಳು ಪಂಚಕಲ್ಯಾಣ ಸಹಿತ ಪ್ರತಿಷ್ಠಾಪನೆ ಹೊಂದಿತು.

ಮೂರನೆಯ ಪಂಚಕಲ್ಯಾಣ : 27.04.1975ರಿಂದ 3.5.1975ರವರೆಗೆ ಜಂಬೂ ದ್ವೀಪ ಸ್ಥಳದಲ್ಲಿರುವ ಎಲ್ಲ ಜಿನ ಬಿಂಬಗಳಿಗೆ ಪಂಚಕಲ್ಯಾಣವನ್ನು ಮಾಡಿಸಲಾಯಿತು.

ನಾಲ್ಕನೆಯ ಪಂಚಕಲ್ಯಾಣ : 4.6.1982ರಂದು ದೆಹಲಿಯಿಂದ ವಿಹಾರ ಹೊರಟ ಜ್ಞಾನಜ್ಯೋತಿ ರಥವು ಸತತ ಮೂರು ವರ್ಷಗಳವರೆಗೆ ದೇಶದಲ್ಲೆಲ್ಲಾ ಸಂಚರಿಸಿತು. 6.3.1987ರಲ್ಲಿ ಆಚಾರ್ಯ ವಿಮಲ ಸಾಗರರ ಸಾನಿಧ್ಯದಲ್ಲಿ ಭಗವಾನ ಪಾರ್ಶ್ವನಾಥರ, ನೇಮಿನಾಥರ ಎರಡು ವಿಶಾಲ ಪದ್ಮಾಸನ ಪ್ರತಿಮೆಗಳ ಪಂಚ ಕಲ್ಯಾಣ ನಡೆಯಿತು. ಜ್ಞಾನ ಜ್ಯೋತಿಯನ್ನು ಇಲ್ಲಿ ಶಾಶ್ವತವಾಗಿ 28.4.1985ರಲ್ಲಿ ಸ್ಥಾಪಿಸಲಾಗಿದೆ.

ಜಂಬೂದ್ವೀಪದಲ್ಲಿ ನಡೆದಿರುವ ದೀಕ್ಷಾ ಮಹೋತ್ಸವಗಳು : ಗಣಿನಿ ಆರ್ಯಿಕಾರತ್ನ ಶ್ರೀ ಜ್ಞಾನಮತೀ ಮಾತಾಜೀಯವರು ತಮ್ಮ ಶಿಷ್ಯ-ಶಿಷ್ಯೆಯರಿಗೆ ಇಲ್ಲಿಯೇ ದೀಕ್ಷಾ ಮಹೋತ್ಸವವನ್ನು ಏರ್ಪಡಿಸಿದ್ದಾರೆ. 8.3.1987ರಲ್ಲಿ ವಿಮಲಸಾಗರರಿಂದ ಮೋತಿಚಂದ್ರನಿಗೆ ದೀಕ್ಷೆಯನ್ನು ಕೊಡಿಸಿದರು. ಅದು ಬಹಳ ಪ್ರಭಾವಪೂರ್ಣವಾಗಿ ನಡೆಯಿತು. ಅದೇ ವರ್ಷ 13.08.1979ರಲ್ಲಿ ಜ್ಞಾನಮತಿಯವರಿಂದ ಮಾಧುರಿ ದೀಕ್ಷ ಪಡೆದು ಆರ್ಯಿಕೆ ಚಂದನಮತಿಯಾದರು.

ಪ್ರಥಮ ಜಂಬೂದ್ವೀಪ ಮಹೋತ್ಸವ : 3.5.1990 ರಿಂದ 7.5.1990ರವರೆಗೆ ಮಧ್ಯಮ ಲೋಕದ 458 ಜಿನಬಿಂಬಗಳ ಪಂಚಕಲ್ಯಾಣ ಮಹೋತ್ಸವ ನಡೆಯಿತು. ಇದೇ ಸಂದರ್ಭದಲ್ಲಿ ಜಂಬೂದ್ವೀಪದ ಪಂಚವರ್ಷಿಯದ ಮೊದಲ ಮಹೋತ್ಸವ ನಡೆಯಿತು.

1995ರಲ್ಲಿ ದ್ವಿತೀಯ ಜಂಬೂದ್ವೀಪ ಮಹೋತ್ಸವ : ಎರಡನೆಯ ಜಂಬೂದ್ವೀಪ ಮಹೋತ್ಸವವನ್ನು 4.10.1995 ರಿಂದ 8.10.1995ರವರೆಗೆ ನಡೆಸಲಾಯಿತು. ಇದೇ ಸಮಯದಲ್ಲಿ ಭಗವಾನ ವಾಸುಪೂಜ್ಯ ಮತ್ತು ಶಾಂತಿನಾಥ ಮಂದಿರಗಳ ಮೇಲೆ ಕಳಸ ಸ್ಥಾಪನೆಯು ನಡೆಯಿತು.

2000ದಲ್ಲಿ ಮೂರನೆಯ ಮಹೋತ್ಸವ : 16.4.2000 ದಿಂದ 23.04.2000ದವರೆಗೆ ತೃತೀಯ ಜಂಬೂದ್ವೀಪ ಮಹೋತ್ಸವದ ಜೊತೆ ತ್ರಿಮೂರ್ತಿ ಮಂದಿರಕ್ಕೆ ಕಳಸಾರೋಹಣ ಸಮಾರಂಭ ನಡೆಯಿತು. ಭ ವೃಷಭದೇವರ ಕೀರ್ತಿ ಸ್ತಂಭದ ಶಿಲಾನ್ಯಾಸ ಮಾಡಿದರು. ಇದು ಈಗ ಪೂರ್ಣಗೊಂಡಿದೆ.

ಇದರ ನಂತರ 2002ರಲ್ಲಿ ಸಹಸ್ರಕೂಟ ಮಂದಿರದ ಪಂಚಕಲ್ಯಾಣ ಹಾಗೂ ಮೇ 2003ರಲ್ಲಿ ಭ. ವೃಷಭದೇವ ಮಂದಿರ ಹಾಗೂ 20 ತೀರ್ಥಂಕರರ ಮಂದಿರದ ಪಂಚಕಲ್ಯಾಣದ ಪ್ರತಿಷ್ಠೆ, ಪೀಠಾಧೀಶ ಕ್ಷುಲ್ಲಕ ರತ್ನ ಶ್ರೀ ಮೋತಿಸಾಗರರ ಸಾನಿಧ್ಯದಲ್ಲಿ ನಡೆಯಿತು. ಈ ಮಂದಿರಗಳನ್ನು ದರ್ಶನ ಮಾಡಿದ ಭವ್ಯ ಜನರು ಪೂರ್ಣ್ಯೋಪಾರ್ಜನೆ ಮಾಡುತ್ತಿದ್ದಾರೆ.

ಣಮೋಕಾರ ಮಹಾಮಂತ್ರದ ಬ್ಯಾಂಕಿನ ಸ್ಥಾಪನೆ : ಈ ಸಂಸ್ಥಾನದ ವತಿಯಿಂದ ಮಾತಾಜಿಯವರ ಪ್ರೇರಣೆಯಿಂದಾಗಿ 1995 ಅಕ್ಟೋಬರ್ 8 ರಂದು ಣಮೋಕಾರ ಮಂತ್ರದ ಬ್ಯಾಂಕ್ ಸ್ಥಾಪನೆಯಾಯಿತು. ಮಾತಾಜಿಯವರ ವಿಹಾರ ಹೋದೆಡೆಯಲ್ಲೆಲ್ಲಾ ಬ್ಯಾಂಕಿನ ಶಾಖೆ ತೆರೆದಿದ್ದಾರೆ. ಜನಗಳಿಂದ ಬರೆದ ಕೋಟ್ಯಾಂತರ ಮಂತ್ರಗಳು ದಾಖಲೆಯಾಗಿದೆ.

1997 ರಿಂದ 1998ರಲ್ಲಿ ಜೈನ ತ್ರಿಲೋಕಶೋಧ ಸಂಸ್ಥಾನದ ರಜತ ಜಯಂತಿಯನ್ನು ಆಚರಿಸಲಾಯಿತು. 24 ಕಲ್ಪದ್ರುಮ ಆರಾಧನೆ ಮತ್ತು ಭ. ವೃಷಭದೇವರ ಸಿದ್ಧಾಂತಗಳನ್ನು ಪ್ರಚಾರ ಪ್ರಸಾರ ಮಾಡಲಾಯಿತು. ಅದೇ ವರ್ಷ ವೃಷಭದೇವರ ರಾಷ್ಟ್ರೀಯ ಸಮ್ಮೇಳನವು ಜರುಗಿತು.

ಭಗವಾನ ವೃಷಭದೇವರ ಸಮವಸರಣ ಶ್ರೀವಿಹಾರ : 9.4.1998ರಂದು ಶ್ರೀ ಅಟಲ ಬಿಹಾರಿ ವಾಜಪೇಯಿಯವರು ಭ. ವೃಷಭದೇವರ ಬೋಧನೆ ಮತ್ತು ಜೈನ ಧರ್ಮದ ಪ್ರಚಾರ ಮಾಡುವ ಸಲುವಾಗಿ ಏರ್ಪಡಿಸಿದ್ದ ವಿಹಾರದ ಉದ್ಘಾಟನೆಯನ್ನು ಮಾಡಿದರು. ಇದು ವಿವಿಧ ಕಡೆಗಳಲ್ಲಿ ಸಂಚಾರ ಮಾಡಿ 19.10.2002ರಲ್ಲಿ ಪ್ರಯಾಗದಲ್ಲಿ ವಿಹಾರವು ಶಾಶ್ವತವಾಗಿ ಸ್ಥಾಪನೆಗೊಂಡಿದೆ. 2000ದಲ್ಲಿ ವೃಷಭ ದೇವರ ನಿರ್ವಾಣೋತ್ಸವ ನೆರವೇರಿತು. ಮಹಾವೀರರ 2600ನೇ ವರ್ಷದ ನಿರ್ವಾಣೋತ್ಸವವು ದೆಹಲಿಯಲ್ಲಿ ವೈಭವಪೂರ್ಣವಾಗಿ ನಡೆಯಿತು. ವಿಶ್ವಶಾಂತಿಗಾಗಿ ಭ. ಮಹಾವೀರರ ಆರಾಧನೆಯನ್ನು ಕೈಗೊಳ್ಳಲಾಗಿತ್ತು.

ಭ. ಮಹಾವೀರರ ಜ್ಯೋತಿ : ಕುಂಡಲಪುರದಲ್ಲಿ ನಂದ್ಯಾವರ್ತ ಮಹಲ್, ನವಗ್ರಹ ಮಂದಿರ, ತ್ರಿಕಾಲ ತೀರ್ಥಂಕರ ಮಂದಿರ, ಮಹಾವೀರ ತೀರ್ಥಂಕರರ, ವೃಷಭ ತೀರ್ಥಂಕರರ ಮಂದಿರದ ರಚನೆಯೂ ಆಗಿದೆ.

ಭ. ಪಾರ್ಶ್ವನಾಥರ ತೃತೀಯ ಸಹಸ್ರಾಬ್ದಿ ಮಹೋತ್ಸವ : ಪೂಜ್ಯ ಮಾತಾಜಿಯವರ ಪ್ರೇರಣೆಯಿಂದ ಪಾರ್ಶ್ವನಾಥರ ಜನ್ಮಭೂಮಿ ವಾರಣಾಸಿಯಿಂದ ಜನವರಿ 2005ರಲ್ಲಿ ಮಹೋತ್ಸವವನ್ನು ಆಚರಿಸಲು ನಿರ್ಧರಿಸಲಾಯಿತು. ಸಂಸ್ಥೆಯ ವತಿಯಿಂದ ಭ. ಪಾರ್ಶ್ವನಾಥರ ತೃತೀಯ ಸಹಸ್ರಾಬ್ದಿ ಮಹೋತ್ಸವವು ನಡೆಯಿತು.

ಈ ಪ್ರಕಾರವಾಗಿ ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದ ವತಿಯಿಂದ ಚತುರ್ಮುಖಿ ಯೋಜನೆಗಳು ಸಮಾಜವನ್ನು ಅತ್ಯಂತ ಸಮರ್ಪಕವಾಗಿ ಮುನ್ನಡೆಸಲಿ ಎಂದು ಆಶಿಸುತ್ತೇನೆ.

ವೀರ ಜ್ಞಾನೋದಯ ಗ್ರಂಥಮಾಲೆಯ ಸಹಯೋಗಿಗಳು

ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದಲ್ಲಿ "ವೀರ ಜ್ಞಾನೋದಯ ಗ್ರಂಥಮಾಲೆ"ಯು 1974ರಲ್ಲಿ ಸ್ಥಾಪನೆಯಾಯಿತು. ಅಲ್ಲಿಂದ ಇಲ್ಲಿಯವರೆಗೂ ಲಕ್ಷಾಂತರ ಗ್ರಂಥಗಳು ಪ್ರಕಾಶನಗೊಂಡಿವೆ. ಓದುಗರಿಗೆ ಕಡಿಮೆ ಬೆಲೆಯಲ್ಲಿ ಪುಸ್ತಕಗಳು ದೊರೆಯಬೇಕೆಂಬ ದೃಷ್ಟಿಯಿಂದ ಒಂದು ಸಂರಕ್ಷಕ ಯೋಜನೆಯನ್ನು 1990ರಲ್ಲಿ ಪ್ರಾರಂಭಿಸಲಾಯಿತು. ಈ ಯೋಜನೆಯಲ್ಲಿ ಕೆಳಕಂಡ ಮಹಾನುಭಾವರು ಅಂದಿನಿಂದಲೂ ಸಹಕಾರ ಕೊಡುತ್ತಾ ಬಂದಿದ್ದಾರೆ.

ಮೂಲ ಸಂರಕ್ಷಕರು

೧. ಪ್ರೇಮಚಂದ ಜೈನ್ ಮತ್ತು ಅವರ ಧರ್ಮಪತ್ನಿ ಶ್ರೀಮತಿ ನಿರ್ಮಲ ಜೈನ್, ಅವರ ಪುತ್ರ ಪ್ರದೀಪಕುಮಾರ ಜೈನ್, ಖಾರಿ ಬಾವಲಿ, ದೆಹಲಿ - ೬.
೨. ಶ್ರೀ ದಿಗ್ವಿಜಯ ಸಿಂಹ ಜೈನ ಅವರ ಧರ್ಮಪತ್ನಿ ಶ್ರೀಮತಿ ಸುಮನ್ ಜೈನ್ - ಇಂದೋರ.
೩. ಶ್ರೀ ಮಹಾವೀರ ಪ್ರಸಾದ್ ಜೈನ್, ಸಂಘಪತಿ, 11, ಸೌತ್, ಎಕ್ಸ್‌ಟೆನ್ಷನ್, ನವದೆಹಲಿ.
೪. ಶ್ರೀ ಮಹಿಪಾಲ್ ಜೈನ್, ಸೂರಜಮಲ್ ವಿಹಾರ, ದೆಹಲಿ.
೫. ಸ್ರೀ ಸುನೀಲ ಜೈನ್, ಧರ್ಮಪತ್ನಿ ಶ್ರೀಮತಿ ಮೋಹಿನಿ, ಪ್ರೀತಿ ವಿಹಾರ, ದೆಹಲಿ.
೬. ಶ್ರೀ ದೇವೆಂದ್ರಕುಮಾರ್ ಜೈನ್, ಗುಡಗಾಂವ.

ಪರಮ ಸಂರಕ್ಷಣ

೧. ಶ್ರೀ ಮಾಂಗೀಲಾಲ್ ಬಾಬೂಲಾಲ್ ಪಹಾಢ ಹೈದರಾಬಾದ್.
೨. ಡಾ. ಪ್ರಕಾಶ ಚಂದ ಜೈನ್, 792, ವಿವೇಕಾನಂದಪುರಿ, ಸಿವಿಲ್ ರಸ್ತೆ, ಸೀತಾಪುರ, ಉ. ಪ್ರ.
೩. ಶ್ರೀ ಸುಮತ ಪ್ರಕಾಶ ಜೈನ್, ಗಜ್ಜಂಕಟರಾ ಶಾಹದರಾ, ದೆಹಲಿ.
೪. ಶ್ರೀ ಸುನಿಲ್‌ಕುಮಾರ್ ಜೈನ್, ದ್ವಾರಾ-ಸುನೀಲ್, ಟೈಕ್ಸಟೈಲ್ಸ್ ಸರಧನ (ಮೇರಠ), ಉ. ಪ್ರ.
೫. ಶ್ರೀ ಪ್ರಕಾಶಚಂದ್ ಅಮೋಲಕ ಚಂದ್ ಜೈನ್, ಸರಾಫ, ಸನಾವದ್ (ಮ. ಪ್ರ.)
೬. ಶ್ರೀ ಪ್ರದ್ಯುಮ್ನಕುಮಾರ್ ಜವೇರಿ ರೋಕಡಿಯಾಲೇನ, ಬೋರೀವಲಿ (ವೆಸ್ಟ್), ಮುಂಬೈ.
೭. ಶ್ರೀ ಕಾಂತೀಪ್ರಸಾದ ಜೈನರ ಪತ್ನಿ ಶ್ರೀಮತಿ ಊರ್ಮಿಳಾದೇವಿ, ವೃಷಭವಿಹಾರ, ದೆಹಲಿ.
೮. ಶ್ರೀ ವಿಮಲ ಪ್ರಸಾದ್ ಜೈನರ ಪತ್ನಿ ಶ್ರೀಮತಿ ಉಷಾ ಜೈನ್, ವೃಷಭ ವಿಹಾರ, ದೆಹಲಿ.
೯. ಶ್ರೀ ಆನಂದ ಪ್ರಕಾಶ ಜೈನ್ (ಸೌರಮವಾಲೇ), ಗಾಂಧಿನಗರ, ದೆಹಲಿ.
೧೦. ಶ್ರೀ ರಾಜಕುಮಾರ ಜೈನರ ಧರ್ಮಪತ್ನಿ ಶ್ರೀಮತಿ ಸರಿತ ಜೈನ್, ಕಿದವನಗರ, ಕಾನಪುರ.
೧೧. ಶ್ರೀ ಕೈಲಾಸಚಂದ್ ಜೈನರ ಧರ್ಮಪತ್ನಿ ಶ್ರೀಮತಿ ಕೈಲಾಸವತಿ, ತೋಪಖಾನಾ ಬಾಝೂರ, ಮೇರಠ.

೧೨. ಶ್ರೀ ಭಾನೇಂದ್ರಕುಮಾರ್ ಜೈನ್, ದ್ವಾರಾ, ಶ್ರೀ ವಿದ್ಯಾ ಜೈನ್, ಭಗತಸಿಂಹಮಾರ್ಗ, ಜಯಪುರ.
೧೩. ಶ್ರೀ ಪ್ರದೀಪಕುಮಾರ್ ಶಾಂತಿಲಾಲ ಬಿಲಾಲ್ ಅನೂಪನಗರ, ಇಂದೋರ, ದೆಹಲಿ.

ಸಂರಕ್ಷಕರು

೧. ಶ್ರೀಮತಿ ಆದರ್ಶ ಜೈನ, ಅನಂತವೀರ್ಯ ಜೈನರ ಮಗ ಮನೋಜಕುಮಾರ್ ಜೈನ್, ಮೇರಠ.
೨. ಶ್ರೀಮತಿ ರಾಜೂಬಾಯಿ, ಮಾತೇಶ್ವರಿ, ಶ್ರೀ ಶಿಖರ ಚಂದ್‌ರ ಸಹೋದರ ದೇವೇಂದ್ರಕುಮಾರ್ ಲಖಮಿಚಂದ್ ಜೈನ್, ಸನಾವದ್ (ಮ.ಪ್ರ.).
೩. ಶ್ರೀಮತಿ ಜಿಮನಲಾಲ್ ಚುನ್ನಿಲಾಲ ಚಲ್ಸೆಚುನ್ನಿಲಾಲ ದೋಶಿ ರೀಕಾ ಸ್ಟ್ರೀಟ್, ಮುಂಬೈ.
೪. ಶ್ರೀಮತಿ ಅರುಣಾಬೆಹನ್ ಮುನ್ನುಬಾಯಿ, ಕೋಟಡಿಯಾ ಸಿ.ಪಿ. ಟ್ಯೆಂಕ ರೋಡ್, ಮುಂಬೈ.
೫. ಶ್ರೀಮತಿ ತಾರಾ ಬೆನ್, ಚುನ್ನಿಲಾಲ್ ದೋಶಿ, ಪ್ರಾಂಚ್‌ಬ್ರಿಜ, ಮುಂಬೈ.
೬. ಶ್ರೀ ರತಿಲಾಲ ಚುನ್ನಿಲಾಲ ದೋಶಿ, ಮುಂಬೈ.
೭. ಶ್ರೀಮತಿ ಮಧುರಬಾಯಿ ಖುಳಾಸಚಂದ ಜೈನ್ ಪರವಾಗಿ ಶ್ರೀ ರತನ್‌ಚಂದ್ ಖುಶಾಲಗಾಂಧಿಯವರ ಸುಪುತ್ರ ಶ್ರೀ ಧನ್ಯಕುಮಾರ್, ಅಶೋಕಕುಮಾರ್, ಶಿರೀಶ ಧರ್ಮರಾಜ ಗಾಂಧಿ, ಫಲಟನ (ಮಹಾರಾಷ್ಟ್ರ)
೮. ಶ್ರೀ ಕಾಂತಿಲಾಲ ಖುಶಾಲಚಂದ್ ಘಡೇ, ಅಕಲೂಜ (ಸೋಲಾಪುರ) ಮಹಾರಾಷ್ಟ್ರ.
೯. ಶ್ರೀ ಅನಂತಲಾಲ ಮಾಣಿಕಲಾಲ ಗಾಂಧಿ, ಅಕಲೂಜ, ಸೋಲಾಪುರ, ಮಹಾರಾಷ್ಟ್ರ.
೧೦. ಶ್ರೀ ಹೀರಾಲಾಲ ಮಾಣಿಕಲಾಲ ಗಾಂಧಿ, ಅಕಲೂಜ, ಸೋಲಾಪುರ, ಮಹಾರಾಷ್ಟ್ರ.
೧೧. ಸ್ರೀ ಜಯಕುಮಾರ್ ಖುಶಾಲಚಂದ್ ಗಾಂಧಿ, ಅಕಲೂಜ, ಸೋಲಾಪುರ, ಮಹಾರಾಷ್ಟ್ರ.
೧೨. ಶ್ರೀಮತಿ ಬದಾಮಿ ದೇವಿ ಮಾತೇಶ್ವರೀ ಶ್ರೀ ಪದಮ ಕುಮಾರ ಜೈನ್, ಗಂಗವಾಲ್ ಕಾನಾಪುರ (ಉ. ಪ್ರ.)
೧೩. ಶ್ರೀಮತಿ ಕಮಲಾದೇವಿ ಧರ್ಮಪತ್ನಿ ಸ್ವರ್ಗೀಯ ಶ್ರೀ ಮಹೇಂದ್ರ ಕುಮಾರ್, ಘಂಟೇವಾಲ್ ಹಲವಾಯಿ, ದರಿಯಾಗಂಜ, ನವದೆಹಲಿ.
೧೪. ಶ್ರೀಮತಿ ಉಷಾದೇವಿ ಧರ್ಮಪತ್ನಿ ಶ್ರೀ ಶ್ರವಣಕುಮಾರ್ ಜೈನ್, ಚಾವಡಿ ಬಾಜಾರ, ದೆಹಲಿ.
೧೫. ಶ್ರೀ ಮುಕೇಶಕುಮಾರ್ ಜೈನ್, ಕಟರಾ ಶಾಹನಾಯಿ, ಚಾಂದನೀ ಚೌಕ, ದೆಹಲಿ.
೧೬. ಶ್ರೀ ಹುಕಮೀಚಂದ್ ಮಾಂಗೀಲಾಲ ಶಾಹ, ಧನಮಂಡೀ, ಉದಯಪುರ, ರಾಜಾಸ್ಥಾನ್.
೧೭. ಶ್ರೀ ಕಿರಣ ಚಂದ್ ಜೈನ, ಕಟರಾ ದೂಲಿಯಾನ, ಚಾಂದಿನಿ ಚೌಕ, ದೆಹಲಿ.
೧೮. ಶ್ರೀಮತಿ ವಿಮಲದೇವಿ ಧರ್ಮಪತ್ನಿ ಶ್ರೀ ಮಹಾವೀರ ಪ್ರಸಾದ್ ಜೈನ್, ಇಂಜೀ, ವಿವೇಕವಿಹಾರ, ದೆಹಲಿ.
೧೯. ಶ್ರೀಮತಿ ಉಷಾದೇವಿ ಧರ್ಮಪತ್ನಿ ಶ್ರೀ ಅಶೋಕಕುಮಾರ್ ಜೈನ, (ಖೇಕಡಾ ನಿವಾಸಿ), ಬಹರಾಇಚ, ಉ.ಪ್ರ.
೨೦. ಶ್ರೀಮತಿ ಲೀಲಾವತಿ ಧರ್ಮಪತ್ನಿ, ಶ್ರೀ ಹರೀಶಚಂದ್ ಜೈನ್, ಶೇಕರಪುರ, ದೆಹಲಿ.
೨೧. ಶ್ರೀ ರತಿಲಾಲ ಕೇವಲಚಂದ್, ಗಾಂಧಿಯ ಪುಣ್ಯ ಸ್ಮೃತಿಯಲ್ಲಿ ಪಾಪುಪುರಿ, ಪರಿವಾರ ಸೂರತ್ (ಗುಜಾ).

೨೨. ಶ್ರೀ ದುಲೀಚಂದ ಜೈನ್ ಬಾಹುಬಲೀ ಏಂಕಲೇನ, ದೆಹಲಿ.

೨೩. ಶ್ರೀ ಸದಾಸುಖಜೈನ ಪಾಂಡ್ಯ ಧರ್ಮಪತ್ನಿ ಶ್ರೀಮತಿ ಭಂವರೀದೇವಿಯವರ ಸ್ಮಾರಕ ಇಂದರಚಂದ್ ಸುಮೇರಮಲ ಜೈನ್, ಪಾಂಡ್ಯ ಶಿಲಾಂಗ್, ಮೇಘಾಲಯ.

೨೪. ಶ್ರೀಮತಿ ತನಸುಖರಾಯ ಸೇಠ್ ಧರ್ಮಪತ್ನಿ ಶ್ರೀಮತಿ ಭಂವರಿದೇವಿಯವರ ಸ್ಮಾರಕ ಇಂದರಚಂದ್ ಸುಮೇರಮಲ್ ಜೈನ್, ಪಾಂಡ್ಯ, ಶಿಲಾಂಗ, ಮೇಘಾಲಯ.

೨೫. ಶ್ರೀ ಕಸ್ತೂರ್‌ಚಂದ್ ಜೈನರ ಧರ್ಮಪತ್ನಿ ಶ್ರೀಮತಿ ಧಾಪೂಬಾಯಿ ರಾಮಗಂಜ, ಮಂಡೀ (ರಾಜಾಸ್ಥಾನ್).

೨೬. ಶ್ರೀ ಮಿಟ್ಟೂನಲಾಲ, ಚಂದ್ರಭಾನ ಜೈನ, ಕವಿನಗರ್, ಗಾಜಿಯಾಬಾದ್, (ಉತ್ತರ ಪ್ರದೇಶ)

೨೭. ಶ್ರೀ ಸುರೇಶಚಂದ್ ಜೈನರ ಧರ್ಮಪತ್ನಿ ಶ್ರೀಮತಿ ಶಕುಂತಲಾದೇವಿ, ಖಿಡಾ ಖಿಡಾ ಮೋಹಲ್ಲಕಾ, ಹೆಹರಾಡೂನ್.

೨೮. ಶ್ರೀ ದೇವೇಂದ್ರ ಕುಮಾರ್, ಗುಣವಂತಕುಮಾರ್ ಟೋಂಗ್ಯಾ, ಭಡನಗರ (ಮ. ಪ್ರ.)

೨೯. ಶ್ರೀ ದಿಗಂಬರ ಜೈನ್ ಸಮಾಜ ತಹಸೀಲ, ಫತೇಹಪುರ, ಖಾರಾಬಂಕಿ, ಉ. ಪ್ರ.

೩೦. ಶ್ರೀ ಇಂದಿರಾಚಂದ್ ಕೈಲಾಸಚಂದ್ ಚೌಧರೀ, ಸನಾರದ್ (ಮ. ಪ್ರ.)

೩೧. ಶ್ರೀ ಪ್ರಕಾಶಚಂದ್ ಅಮೋಲಕಚಂದ್ ಜೈನ್, ಸರಾಫ, ಸನಾವದ್ (ಮ. ಪ್ರ.)

೩೨. ಸ್ವ. ಶ್ರೀ ವಿಮಲಚಂದ ಜೈನ್, ರಖಿಚಂದ್ ಸಾ. ಸನಾರದ (ಮ. ಪ್ರ.)

೩೩. ಶ್ರೀ ಮುನ್ನಾಲಾಲ್ ರಾಮಲಾಲ್ ಜೈನ್, ಡೂಂಗರಾವಾಲ, ಭಾವಪುರ ಮಂದಸೌರ (ಮ. ಪ್ರ.)

೩೪. ಶ್ರೀ ಅಜಾದ್‌ಕುಮಾರ್ ಜೈನಶಾಹ (ಸನಾವನವರು) ಇಂದೋರ್ (ಮ. ಪ್ರ.)

೩೫. ಶ್ರೀ ರಾಕೇಶ್‌ಚಂದ್ ಜೈನರ ಧರ್ಮಪತ್ನಿ ಶ್ರೀಮತಿ ಸುಷ್ಮಾ ಜೈನ್, ಮವಾನಾ (ಮೇರಠ) (ಉ. ಪ್ರ.)

೩೬. ಶ್ರೀ ರಮೇಶಚಂದ ಜೈನರ ಧರ್ಮಪತ್ನಿ ಶ್ರೀಮತಿ ಕುಸುಮ ಜೈನ್, ಕಿಶನಪುರ, ಖಾಗಪತ್ ರೋಡ್, ಮೇರಠ.

೩೭. ಶ್ರೀ ಪದಮಪ್ರಸಾದ್‌ರವರ ಧರ್ಮಪತ್ನಿ ಶ್ರೀಮತಿ ಕಿರಣ ಜೈನ್, ಅಡ್ವೀಕೇಟ್, ಮೇರಠ (ಉ. ಪ್ರ.)

೩೮. ಶ್ರೀಮತಿ ಕ್ಷಮಾದೇವಿ ಜೈನ್, ಮಧುಬನ, ದೆಹಲಿ.

೩೯. ಶ್ರೀಮತಿ ವಿಮಲಾದೇವಿ ಧರ್ಮಪತ್ನಿ ಶ್ರೀ ಜಿನೇಂದ್ರ ಪ್ರಸಾದ್ ಜೈನ್, ಠೇಕಾದಾರ, ಡೋಡರಮಲ್ ರಸ್ತೆ, ನವದೆಹಲಿ.

೪೦. ಶ್ರೀ ರಾಜೇಂದ್ರ ಕುಮಾರ್ ಜೈನ್‌ರ ಧರ್ಮಪತ್ನಿ ಶ್ರೀಮತಿ ಕಮಲಾ ದೇವಿ ಜೈನ್, ಡೋಡರಕಾ ಠಾಣೇ (ಮಹಾರಾಷ್ಟ್ರ)

೪೧. ಶ್ರೀ ಅಜಿತಪ್ರಸಾದ್ ಜೈನ್, ಬಬ್ಬೇಜಿ, ಶ್ರೀ ರಾಜಕುಮಾರ, ಶ್ರವಣಕುಮಾರ್ ಜೈನ್, ಲಖನೌ.

೪೨. ಶ್ರೀ ಪ್ರಭಾಚಂದ್ ಗೋದಾ, ೪೫ ಭಗತವಾಟಿಕಾ ಸಿವಿಲ್ ಲೈನ್ ಜಯಪುರ - 6 (ರಾಜಸ್ಥಾನ್)

೪೩. ಶ್ರೀ ಗೋಪಿಚಂದ್ ವಿವಿನ ಕುಮಾರ ಜೈನ್, ಸರಧನ ಟೆಂಟ್‌ಹೌಸ್, ಗಂಜಮಂಡೀ ಸರಧನ.

೪೪. ಶ್ರೀ ವೀರಚಂದ ಜೈನರ ಧರ್ಮಪತ್ನಿ ಶ್ರೀಮತಿ ರತನ ಸುಂದರೀ ದೇವಿ ಚೂಡೀವಾಲೀಗಲಿ, ಚೌಕ ಬಾಜಾರ್, ಲಖನೌ.

೪೫. ಡಾ. ಸುಭಾಷಚಂದ ಜೈನ್, ರಾತಾನಾಡಾ ಕ್ಲಿನಿಕ್, ರಾತಾನಾಡಾ, ಜೋಧಪುರ (ರಾಜಸ್ಥಾನ್).

೪೬. ಶ್ರೀ ಪ್ರಮೋದಕುಮಾರ್ ಜೈನ್ (ಮುಜಫ್ಫರ್ ನಗರ), ೩೫, ಎಚ್.ಡಿ. ರೋಡ್, ನ್ಯೂ ಮಾರ್ಕೆಟ್, ಥರಪಕನಾ ರಾಂಚಿ, (ಬಿಹಾರ).

೪೭. ಶ್ರೀ ವಿಜೇಂದ್ರ ಕುಮಾರ ಜೈನ್ ಕೆ. 1/20 ಮಾಡಲ್ ಡೌನ್ III ದೆಹಲಿ.

೪೮. ಶ್ರೀ ಕೈಲಾಸ ಚಂದ ಜೈನ ೪೫, ಭಗತ ವಾಟಿಕಾ, ಸಿವಿಲ್ ಲಾಯಿನ್, ಜಯಪುರ (ರಾಜಾಸ್ಥಾನ್).

೪೯. ಶ್ರೀ ಸುಭಾಷಚಂದ ಜೈನ್ ಶ್ರೀ ದಿ. ಜೈನ ಪಾರ್ಶ್ವನಾಥ ಚೈತ್ಯಾಲಯ, ೪೦೫, ಡಾ. ಮುಖರ್ಜಿನಗರ, ದೆಹಲಿ.

೫೦. ಶ್ರೀ ಸುಭಾಷ್‌ಚಂದ್ ಜೈನ, ಸರಾಫ, ಟಿಕೈತನಗರ (ಖಾರಾಬಂಕಿ), ಉ. ಪ್ರ.

೫೧. ಶ್ರೀ ಚಂದ್ರಸೇನ ಜೈನರವರಿಂದ, ಸುಮೇರಚಂದ, ಚಂದ್ರಸೇನ ಜೈನ ಸಬ್ಜೀಮಂಡೀ, ನಹಟೌರ (ಬಿಜಸೌರ).

೫೨. ಶ್ರೀ ಚ. ಈ. ಸುಧೀರ ಕುಮಾರ್ ಜೈನ್, ನಂದಕಿಶೋರ ಜೈನ್, ಶಾರದಾ ನಹರ ಖಂಡ, ಶಾಹಜಹಾನ್‌ಪುರ.

೫೩. ಶ್ರೀ ಸುಕುಮಾಲಚಂದ ಜೈನ್, ಮೋತೀ ಟ್ರೈನಿಂಗ್ ಕಂಪನಿ ಟಿ.ಆರ್. ಪುಕನ ರಸ್ತೆ, ಫ್ಯಾನ್ಸಿ ಬಾಜಾರ್, ಗೌಹಾಟಿ.

೫೪. ಶ್ರೀ ಅನಿಲಕುಮಾರ್ ಸೇಠಿ, ೧೩/೪೪೨೯, ಪಹಾಡಿ ಧೀರಜ, ದೆಹಲಿ 110006.

೫೫. ಶ್ರೀ ಚಂದ್ರ ಮೋಹನ ಬಂಸಲಾ, ೧೧ ಪೂಸಾ ರಸ್ತೆ, ಕರೋಲಬಾಗ್, ನವದೆಹಲಿ - ೫.

೫೬. ಶ್ರೀ ಗಿರಿಧರ ಪ್ರಸಾದ್ ಆಮೋದ, ಪ್ರಸಾದ್ ಜೈನ, ಜೈನ ವಸ್ತ್ರಾಲಯ, ಕಾಲೀ ಮಾರ್ಕೆಟ್ ಸಿವಾನ (ಬಿಹಾರ).

೫೭. ಶ್ರೀ ಸತೀಶಚಂದ್ ಜೈನ್, ೩೧, ಸಿವಿಲ್ ಲೈನ್, ಮನೆ ನಂ.೧೦, ಸೆಕ್ಟರ್-೨, ಟೈಪ್-೫, ಝಾಂಸಿ.

೫೮. ಶ್ರೀ ಸ್ವರೂಪಚಂದ್, ಕಾಸಲೀವಾಲ, ನಯಾಬಜಾರ್, ಅಜಮೇರ (ರಾಜಸ್ಥಾನ್).

೫೯. ಶ್ರೀ ಹುಲಾಸಚಂದ್ ಸೇಠಿ, ಅಯೋಧ್ಯಾ ಶುಗರ್ ಮಿಲ್ಸ್, ರಾಜಕಾ ಸಹಸಪುರ, ಬಿಲಾರಿ (ಉ. ಪ್ರ.)

೬೦. ಶ್ರೀ ನರೇಂದ್ರಕುಮಾರ್ ಜೈನ್‌ರ ಪತ್ನಿ ಶ್ರೀಮತಿ ಕಿರಣದೇವಿ ಜೈನ್, ಸಿವಿಲ್ ಲೈನ್ (ಉ. ಪ್ರ.)

೬೧. ಶ್ರೀ ಪ್ರವೀಣಕುಮಾರ್ ಜೈನರ ಧರ್ಮಪತ್ನಿ ಸ್ರೀಮತಿ, ಸಂತೋಷ ಜೈನ್, ಖಾರಾಬಂಕಿ (ಉ. ಪ್ರ.)

೬೨. ಶ್ರೀ ಸೂರಜ್‌ಮಲ್‌ರ ಪುತ್ರ ಶ್ರೀ ವಿನೀತಕುಮಾರ್ ಜೈನ್ ಮೊಹಲ್ಲಾ, ಗಂಜಕಟರಾ ಪೂರಣಟರಾ ಪೂರಣ ಜಾಟ, ಜೈನ್‌ವಿಲಾ, ಮುರಾದಬಾದ್ (ಉ. ಪ್ರ.).

೬೩. ಸ್ವ ಶ್ರೀ ಶಿಖರಚಂದ ಜೈನ್ "ಟಿಂಬರ್ ಕಮೀಶನ್ ಏಜೆಂಟ್" ಶಂಕರಗಂಜ್, ಹಾ. ಫುಢ.

೬೪. ಶ್ರೀಮತಿ ರಾಜೇಶ್ವರಿ ಜೈನ್, ಮಾತೇಶ್ವರೀ ಶ್ರೀ ರಾಕೇಶ ಜೈನ್, ೩೧, ಸಿವಿಲ್ ಲೈನ್, ಸೀತಾಪುರ.

೬೬. ಶ್ರೀ ರಾಜಕುಮಾರ್ ಜೈನ್, ಮೈಸರ್ಸ್ ರವಿದತ್ತ ಪ್ರೇಮಚಂದ್ ಜೈನ್, ಖಾರದಾನೇವಾಲೇ, ಶ್ಯಾಮಗಂಜ್, ಬರೇಲಿ.

೬೬. ಶ್ರೀ ಬಲವೀರ ಜೈನರಾದ ಜಾನಕೀ ಎಕ್ಸ್‌ಟೆನ್ಷನ್ ರಿಫಾಇನರೀ ಗಾಂಧೀಗಂಜಿ, ಶಾಹಜಹಾನ್‌ಪುರ.

೬೭. ಶ್ರೀ ಪನ್ನಾಲಾಲ ಸೇಠಿ, ಡೀಮಾಪುರ (ನಾಗಾಲ್ಯಾಂಡ್).

೬೮. ಶ್ರೀ ವೀರೇಂದ್ರಕುಮಾರ್ ಜೈನ್, ಈದ್‌ಗಾಹ ಕಾಲೋನಿ, ಆಗ್ರಾ (ಉ. ಪ್ರ.)

೬೯. ಶ್ರೀ ಪೋಖಿಪಾಲ್ ಜೈನರಿಂದ ನಾವೆಲ್ಟೀ ಮೆಟಲ್ ಇಂಡಿಯಾ ಮಾನಸಿಂಹ ಗೇಟ್ ಆಲೀಗಡ್ (ಉ. ಪ್ರ.).

೭೦. ಶ್ರೀ ವಿಜಯಕುಮಾರ್ ಜೈನ್ ಶ್ರೀಮತಿ ರಶ್ಮಿ ಜೈನ್, ದರಿಯಾಗಂಜ್, ನವದೆಹಲಿ.

೭೧. ಶ್ರೀ ಪ್ರಮೋದಕುಮಾರ್ ಜೈನರ ಪತ್ನಿ ಶ್ರೀಮತಿ ವಿಮಲದೇವಿ, ಶಾಹಜಹಾಂಪುರ (ಉ. ಪ್ರ.)

೭೨. ಶ್ರೀ ಕೈಲಾಸಚಂದ್ ಜೈನ್, ಇಂಜಿನಿಯರ್‌ರ ಸ್ವರ್ಗೀಯ ಪತ್ನಿ ಕೈಲಾಸವತೀ ಜೈನ್, ತೋಪಖಾನಾ ಬಾಜಾರ್ ಮೇರಠ.

೭೩. ಬಾವು ಸಾಹೇಬ ನಾಂದ್ರೇಕರ ಮುಲುಂಡ ವೆಸ್ಟ್ ಮುಂಬೈ.

೭೪. ಶ್ರೀ ಭಾಗಚಂದ್ ಮನೀಷಕುಮಾರ್ ತೋಡಿಯಾರಾದ ಕಿರಣ ಏಜೆಂಟ್ ಪ್ಲೊ. ಬುರಹಾನಪುರ (ಮ. ಪ್ರ.)

೭೫. ಶ್ರೀ ಕೈಲಾಸಚಂದ್ ರಾಜಕುಮಾರ್ ಜೈನ್ ರಾವಂಕಾ, ಪೋ. ಬಿಸವಾಂ, ನೀತಾಪುರ (ಉ. ಪ್ರ.)

೭೬. ಶ್ರೀಮತಿ ವಿದ್ಯಾವತಿ ಜೈನ್ ರಾಜೌರೀ ಗಾರ್ಡನ್, ನವದೆಹಲಿ.

೭೭. ಶ್ರೀ ಆನಂದ ಪ್ರಕಾಶ ಜೈನ್, ಹಾಗೇ ಸುಪುತ್ರ ಶ್ರೀ ಮದನ್‌ಕುಮಾರ, ಪ್ರದೀಪಕುಮಾರ್ ಮತ್ತು ಪ್ರವೀಣ ಕುಮಾರ್ ಜೈನ್, ಧರ್ಮಪುರ ಗಾಂಧಿನಗರ, ದೆಹಲಿ.

೭೮. ಶ್ರೀಮತಿ ಅರುಣ ಜೈನ್ ಧರ್ಮಪತ್ನಿ ಪ್ರವೀಣ ಕುಮಾರ್‌ಜೈನ, ಪ್ರೀತಮ್‌ಪುರಂ, ದೆಹಲಿ.

೭೯. ಮಹೇಂದ್ರಕುಮಾರರವರ ಪತ್ನಿ ಶ್ರೀಮತಿ ಪುಷ್ಪಾದೇವಿ ಎಕ್ಸಲೇವ, ದೆಹಲಿ.

೮೦. ಶ್ರೀ ಬಾಬುಲಾಲ ತೋತಾರಾಮ್ ಜೈನ್, ಬುಸಾವಲ (ಮಹಾರಾಷ್ಟ್ರ).

೮೧. ಡಾ. ಅನುಪಮ ಜೈನ್, ಸುದಾಮಾನಗರ, ಇಂದೋರ (ಮ. ಪ್ರ.)

೮೨. ಶ್ರೀ ವಿನಯಕುಮಾರ್ ಜೈನ ಜ್ಯುವೆಲರ್ಸ್, ದರಿಬಾ ಕಲಾಂ, ದೆಹಲಿ.

೮೩. ಸ್ವ ಶ್ರೀ ಆನಂದ ಪ್ರಕಾಶ್ ಜೈನ್, ಶಾಂತಿಪ್ರಿಯ ಜಂಬೂದ್ವೀಪ - ಹಸ್ತಿನಾಪುರ (ಮೇರಠ), ಉ. ಪ್ರ.

೮೪. ಶ್ರೀಮತಿ ರಾಜುಲಬಾಯಿ ಧರ್ಮಪತ್ನಿ ನೇಮಿಚಂದ್ರ ಜೈನ್ ಲೋಹಾಡೆ, ಪೋ. ಕೋಪರಗಾಂವ (ಮಹಾರಾಷ್ಟ್ರ).

೮೫. ಶ್ರೀ ದನ್ನಾಲಾಲಗೋಧಾ, ಮಹ್ಲಾರಗಂಜಿ, ಇಂದೋರ (ಮ. ಪ್ರ.)

೮೬. ಶ್ರೀ ಸುನಿಲ್‌ಕುಮಾರ್ ಮನೋಜಕುಮಾರ್ ಜೈನ್, ರಿಘಲಮಿಲ್ ಕಾಲೋನಿ, ದೆಹಲಿ.

೮೭. ಶ್ರೀಮತಿ ಆಶಾ ಜೈನ್ ಧರ್ಮಪತ್ನಿ ಶ್ರೀ ರಾಜೇಶಕುಮಾರ್ ಜೈನ್ ಬರುಆ, ಸಾಗರ, (ಉ. ಪ್ರ.).

೮೮. ಶ್ರೀ ಪಾರಸಮಲ್ ಡೊಂಗರಮಲ್ ಜೀ ಪಾಟನೀ ಪೋ. ಮಡತಾಸಿಟಿ, ನಾಗೌರ (ರಾಜಸ್ಥಾನ).

೮೯. ಶ್ರೀ ಅನಿಲ ಕುಮಾರ್ ಜೈನ (ಗುಡಗಾಂವನಾಲೇ) ಪ್ರಿಯದರ್ಶಿನಿ ವಿಹಾರ, ದೆಹಲಿ - ೯೨.

೯೦. ಶ್ರೀಮತಿ ಕೃಷ್ಣಾಬಾಯಿ ನೇಮಿನಾಥ ಜೈನ, ವಿ. ವಾಲೇ, ಹೈದರಾಬಾದ್ (ಆಂಧ್ರಪ್ರದೇಶ).

೯೧. ಶ್ರೀ ಪ್ರಭಾತ ಚಂದಗೋದಾರವರ ಪತ್ನಿ ಶ್ರೀಮತಿ ಮಂಜುಲತಾ, ನಯಬಾಜಾರ, ಅಜಮೇರ (ರಾಜಾಸ್ಥಾನ್).

೯೨. ಶ್ರೀ ಪ್ರಮೋದಕುಮಾರ್ ಜೈನ್, ಪಾರಸ ಪ್ರಿಂಟರ್ಸ್, ಶಾಹದರಾ - ದೆಹಲಿ.

೯೩. ಶ್ರೀ ಚಾಂದಮಲ್ ಅನಿಲ ಕುಮಾರ ಸರಾವಗೀ, ಕಿಶನಗಂಜ (ಬಿಹಾರ).

೯೪. ಅಪ್ಪೋಲೋರವರ ಪುತ್ರಿ ಕುಮಾರಿ ಅದಿತಿ ಜೈನ್, ಸೌಗಾನಿ ಇಂದೋರ.

೯೫. ಶ್ರೀಮತಿ ಮಂಜುಲತಾ ಧರ್ಮಪತ್ನಿ ಪ್ರಭಾಚಂದ್ ಗೋದಾ, ನಯಬಾಜಾರ್, ಅಜಮೇರ.

ವಿಷಯಾನುಕ್ರಮಣಿಕೆ

ಪುಟ ಸಂಖ್ಯೆ

ಪ್ರಥಮ ಖಂಡ **1 - 70**

೧. ವೈರಾಗ್ಯದ ಅಂಕುರ, ಧಾರ್ಮಿಕ ನಾಟಕದ ಪ್ರಭಾವ, ಮಿಥ್ಯಾತ್ವದ ತ್ಯಾಗ, ಕ್ಷಯೋಪಶಮ, ಪದ್ಮನಂದಿ ಪಂಚವಿಂಶತಿಕಾದ ಸ್ವಾಧ್ಯಾಯ, ಶುಭ ಶಕುನ.

೨. ವೈರಾಗ್ಯ ಭಾವನೆಯ ಪ್ರಕಟ ತಂದೆಯವರ ಹೃದಯ ವೈಶಾಲ್ಯತೆ, ಸರಳತೆ, ಮೈನಾ ಮನೆ ಬಿಡುವ ನಿರ್ಧಾರ.

೩. ಹೊರಗಡೆ ಮೈನಾಳ ವೈರಾಗ್ಯದ ಚರ್ಚೆ, ಮಾವನ ಹತ್ತಿರ ಮಾತುಕತೆ, ಸೇಠ ಪನ್ನಾಲಾಲರೊಡನೆ ಚರ್ಚೆ, ಮಹಿಳೆಯರಿಂದ ಪೂಜಾ ಪರಂಪರೆಯ ಪ್ರಾರಂಭ, ಮೈನಾಳಿಗೆ ಅದ್ಭುತ ಕನಸು.

೪. ಮೈನಾಳಿಗೆ ಆಚಾರ್ಯ ದೇಶಭೂಷಣರ ದರ್ಶನ, ಆಚಾರ್ಯರೊಡನೆ ವೈರಾಗ್ಯದ ಚರ್ಚೆ, ಸಹಸ್ರನಾಮದ ಸ್ವಾಧ್ಯಾಯ, ಆಚಾರ್ಯರ ಕೇಶಲೋಚ, ಮೈನಾಳು ಮನೆ ಬಿಡುವ ಸಾಹಸ.

೫. ಆಚಾರ್ಯ ಶಾಂತಿಸಾಗರರ ಸಂಘವನ್ನು ದರ್ಶನ ಮಾಡುವ ಆಸೆ. ಮಂತ್ರಿತ ಜಲದ ಪ್ರಭಾವ, ಗೃಹ ಬಂಧನದಿಂದ ಬಿಡುಗಡೆ ಹೊಂದುವ ಸಾಹಸ.

೬. ಮೈನಾಳಿಂದ ಗೃಹತ್ಯಾಗ

೭. ಮೈನಾಳ ಕೇಶಲೋಚ, ಶ್ರಾವಕರಿಂದ ವಿರೋಧ ತಾಯಿಯೊಡನೆ ವೈರಾಗ್ಯದ ಚರ್ಚೆ. ತಾಯಿಂದ ಆಚಾರ್ಯರಿಗೆ ಪತ್ರ ತಮ್ಮ-ತಂಗಿಯರ ರೋದನ.

೮. ಮಹಾವೀರಜೀಗೆ ಆಚಾರ್ಯರ ಆಗಮನ, ಮೈನಾಳಿಗೆ ಕ್ಷುಲ್ಲಕ ದೀಕ್ಷೆ, ತಾಯಿ ಮಗಳನ್ನು ಕ್ಷುಲ್ಲಿಕೆಯ ರೂಪದಲ್ಲಿ ನೋಡಿದ್ದು, ಮೊದಲ ಚಾತುರ್ಮಾಸ 1953ರಲ್ಲಿ ಟಿಕೈತನಗರದಲ್ಲಿ ತಾಯಿಯ ಮಮತೆ, ಅಜ್ಜಿ ಹಣ ಕೊಡಲು ಬಂದಿದ್ದು.

೯. ಆಚಾರ್ಯರ ಸಂಘದೊಡನೆ ಮರಳಿ ಮಹಾವೀರಜೀ ಕ್ಷೇತ್ರದ ದರ್ಶನ. ನಿವಾಈಯಲ್ಲಿ ಶ್ರಾವಕರಿಂದ ಪರೀಕ್ಷೆ. 1954 ರಲ್ಲಿ ಜಯಪುರದಲ್ಲಿ ಚಾತುರ್ಮಾಸ 100 ಚೌಕಗಳ ಚರ್ಚೆ.

೧೦. ವ್ಯಾಕರಣದ ಅಧ್ಯಯನ, ಚಾರಿತ್ರ ಚಕ್ರವರ್ತಿ ಆಚಾರ್ಯ ಶಾಂತಿಸಾಗರರನ್ನು ದರ್ಶನಕ್ಕಾಗಿ ಹೋಗಿದ್ದು ಮುಂಬೈನಲ್ಲಿ ಶ್ರೀ ನೇಮಿಸಾಗರರ ದರ್ಶನ.

೧೧. ಆಚಾರ್ಯ ಶ್ರೀ ಶಾಂತಿಸಾಗರರ ಪ್ರಥಮ ದರ್ಶನ, ಆಚಾರ್ಯ ಶ್ರೀ ಪಾಯಸಾಗರಜೀ ದರ್ಶನ.

೧೨. ಆಚಾರ್ಯ ಶಾಂತಿಸಾಗರರು ಸಲ್ಲೇಖನ ತೆಗೆದುಕೊಳ್ಳುವ ನಿರ್ಧಾರ ಮ್ಹಸವಾಡದಲ್ಲಿ ಕ್ಷುಲ್ಲಕ ವಿಶಾಲಮತಿಯ ಜೊತೆ ವೀರಮತಿಯವರ 1955ರ ಚಾತುರ್ಮಾಸ, ಕುಂಥಳಗಿರಿಯಲ್ಲಿ ಆಚಾರ್ಯರ ದರ್ಶನ, ಕು. ಪ್ರಭಾವತಿಯವರ ಬ್ರಹ್ಮಚರ್ಯ.

೧೩. ಕುಂಥಳಗಿರಿಯಿಂದ ಆಚಾರ್ಯರು ತಮ್ಮ ಪಟ್ಟವನ್ನು ಶಿಷ್ಯ ವೀರಸಾಗರರಿಗೆ ಕಳುಹಿಸಿದ್ದು, ಆಚಾರ್ಯರ ಸಲ್ಲೇಖನ ಕ್ಷುಲ್ಲಿಕೆ ವೀರಮತಿಯವರು ತಮ್ಮೊಡನೆ ಇಬ್ಬರು ಶಿಷ್ಯರೊಡನೆ ವೀರಸಾಗರ ಸಂಘವಿದ್ದ ಜಯಪುರಕ್ಕೆ ಆಗಮನ.

೧೪. ಆಚಾರ್ಯರಿಂದ ಅನುಶಾಸನ : ಪಂ. ಇಂದ್ರಲಾಲಜಿ ಶಾಸ್ತ್ರಿ ಮುಂತಾದವರಿಂದ ಸಹಕಾರ.

೧೫. ಕ್ಷುಲ್ಲಿಕೆ ವೀರಮತಿಯವರ ಆರ್ಯಿಕ ದೀಕ್ಷೆ, ಆಚಾರ್ಯ ವೀರಸಾಗರರ ಗುರುಭಕ್ತಿ, ಕು. ಪ್ರಭಾವತಿ ಬ್ರ. ಸೋನುಬಾಯಿಗೆ ಗುರುಗಳ ಆದೇಶ.

೧೬. ಆಚಾರ್ಯ ಶ್ರೀಯವರಿಂದ ಶಿಕ್ಷಾ ಗ್ರಹಣ ಗಂಧೋದಕ ತಲೆಯ ಮೇಲೆ ಏಕೆ ಹಾಕಿಕೊಳ್ಳಬೇಕು ಮಾತಾಜೀಯವರಿಂದ ಜ್ಞಾನಾರ್ಣವದ ಟೀಕೆಯು ಪ್ರಾರಂಭ ಕು. ಸ್ನೇಹಲತ ಸಂಘದಲ್ಲಿ ಬ್ರ. ಸೋನುಬಾಯಿಯ ದೀಕ್ಷೆ.

ಸಂಘದಿಂದ ಹೊರಡುವಾಗ ಗುರುವಿನಿಂದ ಶಿಕ್ಷಣ, ಸಂಘದಲ್ಲಿ ಜಿನ ಚೈತ್ಯಾಲಯ ಇಡಲು ಗುರುವಿನ ಆದೇಶ, ಆಚಾರ್ಯರ ಅನಾರೋಗ್ಯ ಕೇಳಿ ಮರಳಿ ಸಂಘಕ್ಕೆ ಆಗಮದ ಅನುಸಾರ ದೇವವಂದನೆಯ ವಿಧಿ, ಆರ್ಯಿಕೆಯ 28 ಮೂಲಗುಣ ಬ್ರ. ವಿದ್ಯುತ್‌ಲತೆಗೆ ಅಭ್ಯಾಸ.

೧೭. ಸ್ತ್ರೀಯರು ಸಾಧುಗಳಿಗೆ ಆಹಾರ ಕೂಡಬೇಕೆ ಬಾರದೆ ಪಂ. ಶಿವರಾಮಜಿಯವರೊಡನೆ ಚರ್ಚೆ.

೧೯. ಕ್ಷುಲ್ಲಕ ಚಿದಾನಂದಸಾಗರ ಮತ್ತು ಕ್ಷುಲ್ಲಕ ಸನ್ಮತಿ ಸಾಗರರ ಮುನಿದೀಕ್ಷೆ ಬ್ರ. ಭಂವರೀಬಾಯಿಯವರ ದೀಕ್ಷೆ ಆಚಾರ್ಯ ವೀರಸಾಗರರ ಸಮಾಧಿ ಮರಣ.

ದ್ವಿತೀಯ ಖಂಡ **71 - 146**

೨೦. ಗಿರಿನಾರ್ ಯಾತ್ರೆ, ಮದ್ಯ ಅಜಮೇರಿಗೆ ಆಗಮನ, ಬ್ಯಾವರದಲ್ಲಿ ಬ್ರಹ್ಮಚಾರಿಗಳ ಸಮಾಧಿ, ಆರ್ಯಿಕೆ ಸುಮತೀಮತಿಯವರ ಸರಳತೆ.

೨೧. ಗಿರಿನಾರ್ ಮಾರ್ಗದಲ್ಲಿ ಧರ್ಮ ಪ್ರಭಾವನೆ, ದಿಗಂಬರ ಮುನಿಗಳ ಚರ್ಚೆ, ಸೋನಗಡದಲ್ಲಿದ್ದ ಸಂಘಕ್ಕೆ ಪ್ರವೇಶ, ಪಗಡಂದೇಯಲ್ಲಿ ನಡೆದ ಒಂದು ಅನುಭವ ದಿಗಂಬರ ಮುನಿಗಳ ಬಗ್ಗೆ ಜೈನೇತರರ ಭಾವನೆ.

೨೨. ತಾರಂಗ ಸಿದ್ಧಕ್ಷೇತ್ರದ ದರ್ಶನ, ಕ್ಷೇತ್ರ ಪರಿಚಯ, ಗಿರಿನಾರ ಸಿದ್ಧಕ್ಷೇತ್ರದ ದರ್ಶನ, ದೀಕ್ಷೆಗಳು, ಭ ನೇಮಿನಾಥರ ಕ್ಷೇತ್ರ ಪರಿಚಯ.

೨೩. ಶ್ರೀಧರಸೇನಾಚಾರ್ಯ, ಶ್ರೀ ಕುಂದ ಕುಂದದೇವರ ಪರ್ವತವಂದನೆ. ಗಿರಿನಾರ ಕ್ಷೇತ್ರದ ಪರಿಚಯ.

೨೪. ಶತ್ರುಂಜಯ ಕ್ಷೇತ್ರದ ದರ್ಶನ, ಕ್ಷೇತ್ರ ಪರಿಚಯ

೨೫. ಯಾತ್ರೆಯಿಂದ ಹಿಂದಿರುಗುವ ಮುನಿಗಳ ನಿರ್ಣಯ.

೨೬. ಅಂತರಾಯದಿಂದ ವಿಹಾರದಲ್ಲಿ ಶರೀರದ ನಿಶ್ಯಕ್ತತೆ ಮಾರ್ಗದರ್ಶನದಲ್ಲಿ ಬ್ರಹ್ಮಚಾರಿಗಳ ಭಕ್ತಿ. ನವಧಾ ಭಕ್ತಿಯಿಂದ ಆಹಾರ ಕೊಡುವುದೇ ನಿತ್ಯಪೂಜೆ, ಬ್ಯಾವರಕ್ಕೆ ಆಗಮನ.

೨೭ ಬ್ಯಾವರದಲ್ಲಿ ಅಧ್ಯಯನ ಪ್ರಾರಂಭ, ಆರ್ಯಿಕೆ ಚಂದ್ರಮತಿಯವರ ಧರ್ಮಪ್ರೇಮ, ಕು. ಮನೋವತಿಯ ಮನೋಭಾವ, ಕೈಲಾಶಚಂದ, ಸುಭಾಷ ಚಂದರಿಗೆ ಸಂಘದ ದರ್ಶನ ಲಾಭ ಕೈಲಾಸ ಚಂದ್ರರೊಡನೆ ಚರ್ಚೆ.

೨೮. ಸಹೋದರಿ ಶ್ರೀಮತಿಯನ್ನು ಮನೆಯಿಂದ ಕರೆತರುವ ಸಾಹಸ, ಕೈಲಾಸ ಮತ್ತು ಸುಭಾಷಚಂದ್ರರ ಚರ್ಚೆ.

೨೯. ಬ್ಯಾವರದಲ್ಲಿ ಸಾಯಂಕಾಲದ ಪ್ರತಿಕ್ರಮಣ ಹಿಂದಿನ ರಾತ್ರಿಯ ಪ್ರತಿಕ್ರಮಣದ ಪ್ರಮಾಣ ಸಾಧುಗಳ 28 ಮೂಲಗುಣ.

೩೦. ಜಯಪುರಕ್ಕೆ ಸಂಘದ ಆಗಮನ, ಗುರುಚರಣಗಳ ಸ್ಥಾಪನೆ, ಮತಭೇದದ ಚರ್ಚೆ, ಆರ್ಷಪರಂಪರೆ, ಐಲಕ ಜ್ಞಾನಭೂಷಣರಿಗೆ ಮುನಿದೀಕ್ಷೆ. ಖಾನಿಯದಲ್ಲಿ ಗುರುಗಳ ಚರಣ ಪಾದುಕೆಗಳ ಸ್ಥಾಪನೆ. ಜ್ಞಾನಸಾಗರರಿಗೆ ಮುನಿ ದೀಕ್ಷೆ ಅಜಮೇರಿನ ಚಾತುರ್ಮಾಸ ಆಚಾರ್ಯ ಶಿವಸಾಗರರ ವಾತ್ಸಲ್ಯ.

೩೧. ಸಂಘಕ್ಕೆ ತಂದೆ ತಾಯಿಗಳ ಆಗಮನ, ಜ್ಞಾನಮತಿಯವರ ಸ್ವಾದ್ಯಾಯ ಕ್ರಮ, ಮಂತ್ರಿತ ಯಂತ್ರದ ಪ್ರಭಾವ ತಾಯಿಯವರ ಸಂಗ್ರಹಣೆ ಕಾಯಿಲೆ ಸಂಘದಲ್ಲಿರಲು ಪ್ರಕಾಶ ಚಂದನ ಪ್ರಯತ್ನ, ತಾಯಿಯ ಬಗ್ಗೆ ಭಕ್ತಿ.

೩೨. ಅಜಮೇರದಲ್ಲಿ ವೃಷಭ ಸಾಗರರ ಕ್ಷುಲ್ಲಕ ದೀಕ್ಷೆ ಬ್ರ. ಹುಲಸೀಬಾಯಿಯವರ ಕ್ಷುಲ್ಲಕ ದೀಕ್ಷೆ ಆರ್ಯಿಕ ಜ್ಞಾನಮತಿಯವರ ಅಸ್ವಸ್ಥತೆಯನ್ನು ಕಂಡ ಮುನಿಗಳ ಸೌಹಾರ್ದತೆ.

೩೩. ಲಾಡೂನಕಡೇ ಸಂಘದ ವಿಹಾರ ಮನೆಯ ಕಡೆಗೆ ಪ್ರಕಾಶ್‌ಚಂದ್, ಪಂಚಕಲ್ಯಾಣ ಪ್ರತಿಷ್ಠೆ ಶೂದ್ರರು ಸಮವಸರಣಕ್ಕೆ ಹೋಗುವುದಿಲ್ಲ.

೩೪. ಸುಜಾನಗಡದಲ್ಲಿ ಚಾತುರ್ಮಾಸ, ಸಾಮಾಯಿಕದ ಸಮಯ ಮುನಿಗಳ ದೀಕ್ಷೆ, ಸೀಕರದಲ್ಲಿ ಸಂಘದ ಆಗಮನ, ಆರ್ಯಿಕ ಜ್ಞಾನಮತಿ ದೂಜೋದಹಳ್ಳಿಗೆ ಹೋಗಿ ಹಿಂದಿರುಗಿದ್ದು, ಆರ್ಯಿಕೆಯರು ಸಂಘದಲ್ಲಿ ಇರಬಾರದೆಂಬ ಸಮಸ್ಯೆ.

೩೫. ಫತೇಹಪುರದಲ್ಲಿ ಸಂಘದಿಂದ ಧರ್ಮ ಪ್ರಭಾವನೆ, ಪಂಥವಾದದ ಚರ್ಚೆ, ಮುನಿಗಳ ಹಾಸ್ಯದ ದುಷ್ಪರಿಣಾಮ ಸೀಕರಕ್ಕೆ ಸಂಘದ ಆಗಮನ ಬ್ರ. ಮೂಲಾ ಶಂಕರ ದೇಶಾಯಿಗಳೊಡನೆ ಶಾಸ್ತ್ರದ ಚರ್ಚೆ.

೩೬. ಸೀಕರದಲ್ಲಿ ಸಂಘದ ಚಾತುರ್ಮಾಸ ಜಾತಿ ಸಂಕರದ ದೋಷ ಕೈಲಾಸ ಚಂದನ ಸಂಘದ ದರ್ಶನ ಬ್ರ. ರಾಜಮಲ್ ಅಂಗೂರಿಬಾಯಿ ಮೊದಲಾದವರಿದೆ ದೀಕ್ಷೆ ಶ್ರೀಮತಿಯು ಆರ್ಯಿಕ ಜ್ಞಾನಮತಿಯನ್ನು ದರ್ಶನ ಮಾಡಲು ಬಂದಿದ್ದು, ಪ್ರಮೇಯ ಕಮಲ ಮಾರ್ತಾಂಡ ಗ್ರಂಥದ ಅಧ್ಯಯನ ಅಕಸ್ಮಾತ್ತಾಗಿ ಮಾತಾಜೀಯವರ ದೂಜೋದ ವಿಹಾರ, ಆಚಾರ್ಯ ಸಂಘದ ಆಗಮನ ಸಂಘ ಲಾಡನೂ ತಲುಪಿದ್ದು.

೩೭. ಮನೋವತಿಯ ಮನೋರಥ ಫಲಿಸಿದ್ದು ತಾಯಿ ಮೋಹಿನಿಯವರ ವ್ರತೀ ಜೀವನ ಆರಂಭ ಜ್ಞಾನಮತಿಯವರ ವಿಹಾರದ ಚರ್ಚೆ ಮನೋವತಿ ಸಂಘದಲ್ಲಿದ್ದರು. ಮುನಿ ಶ್ರೀ ಅಜಿತಸಾಗರರಿಗೆ ಸಂಘದಲ್ಲಿರಲು ಪ್ರೇರಣೆ ಮಾತಾಜಿಯವರ ಸಂಘ ತ್ಯಾಗ.

ತೃತೀಯ ಖಂಡ **147 - 286**

೩೮. ಶ್ರೀ ಸಮ್ಮೇದ ಶಿಖರದ ಯಾತ್ರೆ, ದಾದಿಗಳೇ ಬಾಬಗಳೇ, ಮಹಾವೀರಜೀಯ ದರ್ಶನ, ಮಥುರಾ ದರ್ಶನ, ಪ್ರಕಾಶಚಂದನ ಆಗಮನ.

೩೯. ಆಗ್ರಾದಲ್ಲಿ ಆರ್ಯಿಕಾ ಸಂಘ ಶಾಸ್ತ್ರೋಕ್ತವಾಗಿ ಶಿಷ್ಯರ ಪೋಷಣೆ ಏತ್ಮಾದಪುರ ದಲ್ಲಿ ಆರ್ಯಿಕೆಯರ ನೀರಿಯ ಚರ್ಚೆ, ಫಿರೋಜಬಾದಿಗೆ ಆರ್ಯಿಕೆಯರ ಸಂಘ ತಲುಪಿತು. ಅಜಿತ ಸಾಗರರು ಸಂಘಕ್ಕೆ ಹಿಂದಿರುಗಿದರು.

೪೦. ರತ್ನಪುರಿ ಅಯೋಧ್ಯ ಕ್ಷೇತ್ರದ ದರ್ಶನ, ಆರ್ಯಿಕಾ ಸಂಘ ಟಿಕೈತನಗರ ತಲುಪಿದ್ದು ತಂದೆಯವರು ಸಂಘದ ಸಮಾಚಾರ ತಿಳಿದಿದ್ದು ಆಹಾರದ ಸಮಯ.

೪೧. ಬನಾರಸ್ಸಿನಲ್ಲಿ ಬ್ರಾಹ್ಮಣರೊಡನೆ ಚರ್ಚೆ, ಕ್ಷೇತ್ರ ದರ್ಶನ ಆರಾದಲ್ಲಿ ಆರ್ಯಿಕೆಯರ ಸಂಘ ಪಟ್ನಾ, ರಾಜಗೃಹ, ಪಾತಾಪುರಿ ಗುಣಾವಾ, ಕುಂಡಲಪುರ, ಚಂಪಾಪುರಿ ಕ್ಷೇತ್ರ ದರ್ಶನ ಬೈಜನಾಥ ಧಾಮದಾರ ಗಿರಡೀಹ ತಲುಪಿದ್ದು.

೪೨. ಸಮ್ಮೇದಶಿಖರ ವಂದನೆ, ಭಗವಾನ ಶಾಂತಿನಾಥರ ನಿರ್ವಾಣ ದಿವಸ ಸಮ್ಮೇದ ಶಿಖರ ತೀರ್ಥಪರಿಚಯ, ಶಿಖರ ವಂದನೆಗೋಸ್ಕರ ಮಂತ್ರಿ ಗಿರಿರಾಜರ ಭಕ್ತಿ, ವಸ್ತ್ರಗಳ ಶುದ್ಧಿ, ಸಂಘದ ವ್ರತಿಕರ ಗುರುಭಕ್ತಿ, ಈಸರಿಯಲ್ಲಿ ಧರ್ಮೋಪದೇಶ.

೪೩. ಕಲಕತ್ತೆಯಲ್ಲಿ ಚಾತುರ್ಮಾಸ ಶಾಸ್ತ್ರೋಕ್ತವಾಗಿ ರಾತ್ರಿಯಲ್ಲಿ ವರ್ಷಾಯೋಗ ಸ್ಥಾಪನೆ. ಉಪದೇಶದಲ್ಲಿ ಏನನ್ನು ಹೇಳಬೇಕು, ಶಾಸನ ದೇವದೇವಿಯರ ಪ್ರಮಾಣ, ಆರ್ಯಿಕಾ ಸಂಘದಲ್ಲಿ ಚೈತ್ಯಾಲಯದ ಅವಶ್ಯಕತೆ; ಹಾಲಿನಿಂದ ಶಾಂತಿಧಾರೆ, ನೈವೇದ್ಯದ ವ್ಯಾಖ್ಯಾನ ಕಾನಜೀ ತಂಡದ ಚರ್ಚೆ, ಬ್ರ. ಚಮೇಲಿಬಾಯಿಯವರ ಸ್ವಾಧ್ಯಾಯ ಪ್ರೇಮ ಸಾಧುಗಳ ದೋಷವನ್ನು ಪ್ರಕಟಿಸುವ ಪಾಪ, ದಶ-ಲಕ್ಷ್ಮಣ ಪರ್ವದ ಪ್ರಭಾವನೆ ಅಲ್ಪ ಪ್ರಭಾವನೆಯಲ್ಲಿ ಸಂತೋಷ, ಧರ್ಮದಲ್ಲಿ ಶಾಂತಿ ಇದೆಯಾ, ಶಾಂತಿಯಲ್ಲಿ ಧರ್ಮ ಇದೆಯೋ. ತಾಯಿ ಮೋಹಿನಿಯ ಶ್ರದ್ಧೆ ತಂದೆಯವರಿಗೆ ಸಂಘ ದರ್ಶನದ ಪ್ರೇರಣೆ.

೪೪. ಕಲಕತ್ತೆಯ ಮಂದಿರದಲ್ಲಿ ಉಪದೇಶ ಸಾಮಾನ್ಯ ಜನತೆಯ ಮೇಲೆ ಆಹಾರ ಚರ್ಯೆಯ ಪ್ರಭಾವ, ಐಲಕ ಸಿದ್ಧಸಾಗರರ ದುರಾಗ್ರಹ ಆರ್ಯಿಕೆಯರಿಗೆ ಪಾಲಕರಿಂದ ನಮಸ್ಕಾರ : ಸಿದ್ಧ ಚಕ್ರ ಆರಾಧನೆಯಿಂದ ಪ್ರಭಾವನೆ. ಜಿನಪ್ರತಿಮೆಯ ಚರಣ ಸ್ಪರ್ಶದ ಚರ್ಚೆ ಕಲಕತ್ತೆಯಿಂದ ವಿಹಾರ, ಕು. ಸುಶೀಲಳಿಗೆ ಸಂಸ್ಕಾರ, ಬ್ರಹ್ಮಚಾರಿ ಪ್ಯಾರೇಲಾಲರ ಭಕ್ತಿ, ಬೀಸ ಪಂಥದ ಚರ್ಚೆ, ಮದನಲಾಲರ ಮನೆಯಲ್ಲಿ ವಿಶ್ರಾಂತಿ.

೪೫. ಪುನಃ ಸಮ್ಮೇದ ಶಿಖರದ ಯಾತ್ರೆ ನಂದೀಶ್ವರ ಪಂಚಕಲ್ಯಾಣದಲ್ಲಿ ಸ್ವಯಂ ದೀಕ್ಷೆಯ ವಿರೋಧ ತಾಯಿ ಮೋಹಿನಿಯೊಡನೆ ಪರ್ವತದ ದರ್ಶನ ತಂದೆಯ ಪಾಪ ಪ್ರಜ್ಞೆ ಕು. ಮನೋವತಿಯ ಕೇಶಲೋಚ ನೋಡಿ ತಂದೆಯವರ ವಿಕ್ಷಿಪ್ತತೆ. ಕುಮುದಿನಿಗೋಸ್ಕರ ಮಾತಾಜಿಯವರ ಪ್ರಯತ್ನ ಬ್ರ. ಸುರೇಶಚಂದ್‌ರಿಗೆ ಮಾತಾಜಿಯ ಆಶ್ರಯ. ವಂಶದ ಶುದ್ಧಿ ಆಹಾರದ ಶುದ್ಧಿಯ ಬಗ್ಗೆ ಉಪದೇಶ, ಸಮ್ಮೇದ ಶಿಖರದಿಂದ ವಿಹಾರ.

೪೬. ಪುರುಲಿಯಾದ ಅನುಭವ ಸರಾಕ ಬಸ್ತಿಯಲ್ಲಿ ಮಾತಾಜಿಯ ವಿಹಾರ. ಉಡಿಸ್ಸಾದಿಂದ ಬಿಹಾರದಲ್ಲಿ ದುರ್ಘಟನೆ ಕಳೆದಿದ್ದು, ಖಂಡಗಿರಿ, ಉದಯಗಿರಿ ಕ್ಷೇತ್ರ ವಂದನೆ. ಆಂಧ್ರಪ್ರದೇಶದಲ್ಲಿ ವಿಹಾರ ತೆಲಗು ಭಾಷೆಯ ತಮಾಷೆ, ಹೈದರಬಾದಿಗೆ ಪ್ರವೇಶ ಮಾತಾಜಿಯವರ ಅಸ್ವಸ್ಥತೆ ಹೈದರಾಬಾದಿನಲ್ಲೇ ಚಾತುರ್ಮಾಸ ಮನೋವತಿಯ ದೀಕ್ಷೆ ಜಪದ ಪ್ರಭಾವ ಬ್ರ. ಸುರೇಶರ ಏಳನೇ ವ್ರತ ಶಾಂತಿ ವಿಧಾನದಲ್ಲಿ ಶ್ರದ್ಧೆ ಭಾದ್ರಪದದಲ್ಲಿ ಧರ್ಮ ಪ್ರಭಾವನೆ ರಥಯಾತ್ರೆ ಶ್ರವಣ ಬೆಳಗೊಳಕ್ಕೆ ಯಾತ್ರೆ.

೪೭. ಶ್ರವಣ ಬೆಳಗೊಳದ ಕಡೆಗೆ ನರಸಿಂಹ ಮಂದಿರದಲ್ಲಿ ರಾತ್ರಿ ಕಳೆದಿದ್ದು ಭಟ್ಟಾರಕರಿಂದ ಸ್ವಾಗತ ಬಾಹುಬಲಿಯ ದರ್ಶನ ಕನ್ನಡ ಭಾಷೆ ಕಲಿಕೆ ಆರ್ಯಿಕೆಯರ ಅನಾರೋಗ್ಯ, ವೈಯಾವೃತ್ತಿ ವೈದ್ಯರ ಆಗಮನ, ಭಗವಾನ ಬಾಹುಬಲಿಯ ಚರಣಗಳಲ್ಲಿ ಸಂಸ್ಕೃತ ಸ್ತುತಿಯ ರಚನೆ ಕನ್ನಡದಲ್ಲಿ ದ್ವಾದಶಾನುಪ್ರೇಕ್ಷೆ ವಿಮಲಸಾಗರರ ದರ್ಶನ, ಬಾಹುಬಲಿಗೆ ಲಘು ಅಭಿಷೇಕ.

೪೮. ಮೂಡಬಿದರೆಯ ಯಾತ್ರೆ ಮಾತಾಜಿಗೆ ಮಧ್ಯಮಲೋಕದ ಅಕೃತ್ರಿಮ ಚೈತ್ಯಾಲಯಗಳ ಪರೋಕ್ಷ ದರ್ಶನ, ಕಾರ್ಕಳ, ಹೊಂಬುಜ, ಧರ್ಮಸ್ಥಳ ಕ್ಷೇತ್ರದ ದರ್ಶನ ಸಹಸ್ರಫಣಿ ಪಾರ್ಶ್ವನಾಥರ ದರ್ಶನ.

೪೯. ಸೋಲಾಪುರದಲ್ಲಿ ಚಾತುರ್ಮಾಸ ಸ್ವಾಧ್ಯಾಯದ ವಿಶೇಷ ಪ್ರಶಿಕ್ಷಣ ಶಿಬಿರ, ಸಮ್ಮೇದ ಶಿಖರದ ಮಾದರಿಯ ಮೆರವಣಿಗೆ ಆಚಾರ್ಯ ವಿಮಲಸಾಗರರ ಜನ್ಮ ಜಯಂತಿಯ ಸಮಾರಂಭ, ಮಾತಾಜಿಯ ಜನ್ಮ ಜಯಂತಿ, ಅಕೃತ್ರಿಮ ಚೈತ್ಯಾಲಯದ ದರ್ಶನ, ಸೋಲಾಪುರದ ದರ್ಶನ, ಉಷಾ ವಂದನೆಯ ರಚನೆ, ಭಕ್ತಿ ಸುಮನಾವಲಿ ಪ್ರಕಾಶನ, ಆಚಾರ್ಯ ವಿಮಲಸಾಗರರ ವಾತ್ಸಲ್ಯ ಕುಂಭೋಜದ ಶ್ರೀ ಸಮಂತ ಭದ್ರ ಮುನಿ ಮಹಾರಾಜರ ವಾತ್ಸಲ್ಯ ಬಾಸಂತೀಬಾಯಿಯೊಡನೆ ರಾಜೂಬಾಯಿ ಚರ್ಚೆ, ಜೈನ ಕಾಲೇಜಿನಲ್ಲಿ ಸಸ್ಯಶಾಸ್ತ್ರದ ವಿರೋಧ, ಮಾತಾಜೀಯ ಸಂಘ ಸೋಲಾಪುರದಿಂದ ವಿಹಾರ ಕು. ಶೀಲಳಿಗೆ ವ್ರತೋಪದೇಶ.

೫೦. ಕುಂಥಳಗಿರಿ ಕ್ಷೇತ್ರದ ದರ್ಶನ ಕ್ಷುಲ್ಲಕ ಅಜಿತಮತಿ ಅಮ್ಮ ಬ್ರ. ಸುಮತೀಬಾಯಿ ಧಾರಗುಹೆಗಳು ತೇರ, ಪೈಠಣ ಕಚನೇರ ಕ್ಷೇತ್ರದ ದರ್ಶನ, ಔರಂಗಬಾದ್‌ಗೆ ಪ್ರವೇಶ, ಬ್ರ. ಗುಲಾಭಚಂದರ ಭಕ್ತಿ ಆಚಾರ್ಯ ಶ್ರೀ ಮಹಾವೀರ ಕೀರ್ತಿಜೀಯವರ ದರ್ಶನ, ಕಸಾಬ ಖೇಡದಲ್ಲಿ ಮಾತಾಜಿಯ ಅಸ್ವಸ್ಥತೆ ಮಧ್ಯಮಲೋಕದ ರಚನೆಯ ಚರ್ಚೆ ಎಲ್ಲರ ದರ್ಶನ, ನಾಂದಗಾಂವ, ಗಜಪಂಥಾ ಕ್ಷೇತ್ರ ದರ್ಶನ, ಮಾಂಗೀತುಂಗಿ ಕ್ಷೇತ್ರ ದರ್ಶನ, ಸೀತಾಜೀಚರಣ, ರಾಮಚಂದ್ರರ ಮೂರ್ತಿ, ಮಧ್ಯಮ ಲೋಕ ರಚನೆಗೆ ಪ್ರೇರಣೆ.

೫೧. ಬಾವನ ಗಜ ಕ್ಷೇತ್ರದ ದರ್ಶನ, ಬಾಗಿಲು ತೆರೆದುಕೊಂಡೆ ಧರ್ಮಶಾಲೆಯಲ್ಲಿ ವಿಶ್ರಾಂತಿ. ಭಾವನಗಜ ಕ್ಷೇತ್ರದ ಪರಿಚಯ, ವೃಷಭ ಜಯಂತಿ ಮಹೋತ್ಸವ ಬರೆದ ವಿಷಯದ ಪ್ರಮಾಣತೆ, ಪಾವಾಗಿರಿ ಕ್ಷೇತ್ರ ದರ್ಶನ ಸನಾವದಗೆ ಆಗಮನ, ಮಧ್ಯಲೋಕ ಚೈತ್ಯಾಲಯದ, ರೂಪರೇಖೆ ಸಿದ್ಧವರ ಕೂಟದ ದರ್ಶನ, ಪರಿಚಯ, ಸೋನಾಗಡ ಸಾಹಿತ್ಯದ ಬಹಿಷ್ಕಾರ ಇಂದೌರಿನಲ್ಲಿ ಶಿಕ್ಷಣ ಶಿಬಿರಿ ಚಾತುರ್ಮಾಸಕ್ಕಾಗಿ ಸನಾವದಗೆ.

೫೨. ಸನಾವದಗೆ ಆಗಮನ ಆಲಾಪ ಪದ್ಧತಿ, ಭಕ್ತಿ ಪಲ್ಲವೀ ಪುಸ್ತಕ ಪ್ರಕಾಶನ ಮಧ್ಯಮ ಲೋಕ ರಚನೆಯ ನಿರ್ಮಾಣದಲ್ಲಿ ವಿಘ್ನ ಮುಕ್ತಾಗಿರಿ ತೀರ್ಥಕ್ಷೇತ್ರದ ದರ್ಶನ, ಪರಿಚಯ ಆಚಾರ್ಯ ಶಿವಸಾಗರರ ದರ್ಶನಕ್ಕಾಗಿ ವಿಹಾರ ಶಿಷ್ಯರಿಗೆ ಲಾಭ ಆಚಾರ್ಯರಿಂದ ದಾನ ಪ್ರೇರಣೆ. ಐದು ವರ್ಷದ ಯಾತ್ರೆಯ ಉಪಸಂಹಾರ.

೫೩. ಮಾತಾಜಿಯವರು ಸಂಘ ಸಹಿತವಾಗಿ ಆಚಾರ್ಯರ ಸಂಘದಲ್ಲಿ, ಸಲೂಂಬರದಲ್ಲಿ ದೀಕ್ಷೆಗಳು ಮಾತಾಜಿಯವರಿಂದ ಅಧ್ಯಾಪನ ಕಾರ್ಯ, ಶಿಕ್ಷಣ ಶಿಬಿರದಲ್ಲಿ ವಿಷ್ಣು, ಕೇಶರಿಯ ಯಾತ್ರೆಯ ಬಾನೆ ಬಾಂಸವಾಡದಲ್ಲಿ ಆಚಾರ್ಯರ ಸಂಘ ಪ್ರತಾಪಗಢದಲ್ಲಿ ವರ್ಷಾಯೋಗ ತಂದೆ ತಾಯಿಗಳಿಂದ ಇಬ್ಬರು ಪುತ್ರಿಯರ ಸಾಧ್ವಿ ದರ್ಶನ ಶಿಷ್ಯರುಗಳ ಪರಿಚಯ, ಶಿವಸಾಗರರ ಉದಾರತೆ ರವೀಂದ್ರನ ವ್ರತಧಾರಣೆ ಕು. ಕಾಮಿನಿಗೋಸ್ಕರ ಪ್ರಯತ್ನ, ಸಾಧುಗಳ ಸಮಾಧಿ ಮರಣ ಅಧ್ಯಯನ ಅಧ್ಯಾಪನ.

೫೪. ಮಹಾವೀರಜಿ ಕಡೆಗೆ ವಿಹಾರ ಭವಾನಿಮಂಡಿಯಲ್ಲಿ ಬ್ರ. ಚಾಂದಮಲ್ಲಜೀಯವರ ಸಮಾಧಿ ಮರಣ. ಮಾತಾಜಿಯವರ ಶಿಷ್ಯ ಗ್ರಹಣೆಯಲ್ಲಿ ಶಾಸ್ತ್ರ ನೀತಿ ಚಮತ್ಕಾರಜಿಯವರ ದರ್ಶನ ಮುನಿ ಶ್ರೀ ಸುಬುದ್ಧಿಸಾಗರರ ಡೋಲಿ ವಿಹಾರ.

೫೫. ಮಹಾವೀರಜೀ ಕ್ಷೇತ್ರ ದರ್ಶನ ಪಂಚಕಲ್ಯಾಣದ ಧ್ವಜಾರೋಹಣೆ, ಆಚಾರ್ಯ ಶ್ರೀ ಶಿವಸಾಗರರ ಸಮಾಧಿ ಮರಣ ಧರ್ಮಸಾಗರರ ಸಂಘ ಆಚಾರ್ಯ ಪಟ್ಟದ ಚರ್ಚೆ, ಪಂಚ ಕಲ್ಯಾಣದ ಪ್ರತಿಷ್ಠೆ ತಂದೆ ತಾಯಿಯರ ಆಗಮನ, ತಾಯಿ ಆಸೆ ಫಲಿಸಿತು. ತಂದೆ ಛೋಟೆಲಾಲರ ಅಂತಿಮ ದರ್ಶನ ಕ್ಷುಲ್ಲಕ ವಿಶಾಲಮತಿಯೊಡನೆ ಮಾತಾಜಿಯ ಮಿಲನ. ಮಾತಾಜಿಯಿಂದ ಜೈನೇಂದ್ರ ಪ್ರಕಿಯೆಯ ಅಧ್ಯಯನ ವಿಮಲಸಾಗರರ ಸಂಘ ಮಹಾವೀರಜಿಗೆ ಆಗಮಿಸಿತು. ನೂತನ ಆಚಾರ್ಯರಾದ ದರ್ಮಸಾಗರರ ಸಂಘವು ಮಹಾವೀರಜಿಯಿಂದ ಜಯಪುರಕ್ಕೆ ವಿಹರಿಸಿತು. ಸಂಘ ವಿಚ್ಛೇದ, ಜಯಪುರದಲ್ಲಿ ವರ್ಷಾಯೋಗ ಸ್ಥಾಪನೆ, ಸಾಂವತ್ಸರಿಕೆಯ ಪ್ರತಿಕ್ರಮಣ, ಯುಗ ಪ್ರತಿಕ್ರಮಣ, ವರ್ಷಾಯೋಗ ಸ್ಥಾಪನೆಯ ಕಾಲ. ಜಯಪುರಕ್ಕೆ ಪ್ರಕಾಶಚಂದನ ಆಗಮನ. ಮಾತಾಜಿ ಮಾಧುರಿಯರ ಅಧ್ಯಯನ, ಅಷ್ಟ ಸಹಸ್ರಿಯ ಅನುವಾದ. ಜೈನ ಜ್ಯೋತಿರ್ಲೋಕ ಶಿಬಿರ, ದಶಲಕ್ಷಣ ಪರ್ವ ಶಾಂತಿಬಾಯಿಯ ದೀಕ್ಷೆ, ಉಪವಾಸದಲ್ಲಿಯು ಬಾಯಿ ಮುಕ್ಕಳಿಸಬಹುದು. ಬ್ರಾಹ್ಮಣ ವೈದ್ಯನಿಗೆ ಭಕ್ತಾಮರ ಸ್ತೋತ್ರದಲ್ಲಿ ಶ್ರದ್ಧೆ.

೫೬. ಜಯಪುರದಿಂದ ಸಂಘದ ವಿಹಾರ, ಸಾಂಗನೇರನಲ್ಲಿ ಮಾತಾಜಿಯ ಅಸ್ವಸ್ಥತೆ ಛೋಟೆಲಾಲರ ಸಮಾಧಿ ಮರಣದ ವಿಷಯ ನಿವಾಯಿಯಲ್ಲಿ ಧರ್ಮ ಪ್ರಭಾವನೆ ಮಾತಾಜಿಯ ಅಧ್ಯಾಪನ ಕಾರ್ಯ ಟೊಂಕದಲ್ಲೆ ಸಂಘ ಸಹಿತ ಚಾತುರ್ಮಾಸ, ಮಾತೆ ಮೋಹಿನಿಯಿಂದ ಸಂಘದರ್ಶನ, ಒಂದು ತಿಂಗಳು ಉಪವಾಸ ಮಾಡಿದ ಆರ್ಯಿಕೆಗೆ ಪಾರಣೆ ತಾಯಿ ಮೋಹಿನಿಯಿಂದ ಏಳನೆಯ ಪ್ರತಿಮೆಯ ಗ್ರಹಣೆ.

೫೭. ಟೋಡಾರಾಯಸಿಂಹ ಗ್ರಾಮಕ್ಕೆ ಸಂಘದ ಆಗಮನ : ಅಷ್ಟ ಸಹಸ್ರೀ ಗ್ರಂಥದ ಅನುವಾದ ಪೂರ್ಣಗೊಂಡಿತು. ಆಚಾರ್ಯ ಶ್ರೀ ಧರ್ಮಸಾಗರರ ಜಯಂತಿ

ಸಮಾರಂಭ, ಟೋಂಕದಲ್ಲಿ ಪಂಚಕಲ್ಯಾಣ ಪ್ರತಿಷ್ಠೆಗೆ ಸಂಘದ ಆಗಮನ 2½ ಅಡಿ ಎತ್ತರದ ಸುಮೇರು ಪರ್ವತದ ಪ್ರತಿಷ್ಠೆ.

೫೮. ಸಂಘದಲ್ಲಿ ರವೀಂದ್ರ ಕುಮಾರನ ಶಾಸ್ತ್ರಿ ಕೋರ್ಸಿನ ಅಧ್ಯಯನ ಸೋಲಾಪುರದ ಪರೀಕ್ಷಾಲಯದಲ್ಲಿ ಪರೀಕ್ಷೆಗಳು ಮಾಲಪುರಕ್ಕೆ ಸಂಘದ ಆಗಮನ. ಸಮಯಸಾರದ ಸ್ವಾಧ್ಯಾಯ. ಅಜಮೇರದಲ್ಲಿ ಸಂಘದ ಚಾತುರ್ಮಾಸ, ಭಾಗಚಂದ ಜೀ ಸೋನಿ ಮತ್ತು ಸಂ. ಹುಕುಮಚಂದ್ ಬಾರಿಲ್ಲಾರು ಮಾತಾಜಿಯೊಡನೆ ಪ್ರಾಗಭಾವದ ಚರ್ಚೆ. ಅಜಿಮೇರದಲ್ಲಿ ಆರ್ಯಿಕೆಯರ ಸಮಾಧಿ ಮರಣ, ಜೈನ ಜ್ಯೋತಿರ್ಲೋಕದ ಉಪದೇಶ. ಜಂಬೂದ್ವೀಪದ ರಚನೆಯ ಚರ್ಚೆ. ಅಷ್ಟ ಸಹಸ್ರೀ ಪ್ರಕಾಶನಕ್ಕೆ ಪ್ರೇರಣೆ ತಾಯಿ ಮನೆಯಿಂದ ಸಂಘಕ್ಕೆ ಬಂದಿದ್ದು. ಮಾಧುರಿ ಬ್ರಹ್ಮಚರ್ಯವ್ರತ ತೆಗೆದುಕೊಂಡಿದ್ದು ತಾಯಿ ಮೋಹಿನಿ ಆರ್ಯಿಕ ರತ್ನಮತಿ ಆಗಿದ್ದು, ಸೇಠಸಾಹೇಬರ ನಿರಭಿಮಾನತೆ, ಪ್ರಥಮ ಕೇಶಲೋಚ, ರವೀಂದ್ರ ಮನೆಗೆ ಹಿಂದಿರುಗಿದ್ದು.

೫೯. ಅಜಮೇರದಿಂದ ವಿಹಾರ, ಮಾತಾಜೀಯ ಪ್ರಥಮ ಶಿಷ್ಯನ ವಿಯೋಗ ಬ್ಯಾವರದಲ್ಲಿ ಧರ್ಮ ಪ್ರಭಾವನೆ ರತ್ನಮತಿ ಮಾತಾಜಿಯ ಚರ್ಯೆ ಜಂಬೂದ್ವೀಪದ ರಚನೆಯ ಮಾದರಿ, ಅಷ್ಟ ಸಹಸ್ರೀ ಪ್ರಕಾಶನದ ಯೋಜನೆ ರವೀಂದ್ರಕುಮಾರನ ಹೊಸ ಅಂಗಡಿಯ ಉತ್ಸಾಹ ಜಂಬೂದ್ವೀಪ ನಿರ್ಮಾಣಕ್ಕಾಗಿ ನಿರ್ಣಯ ಮುನಿಸ್ರುತ ಸಾಗರರ ದರ್ಶನ ಮಾಧುರಿಯ ಶುದ್ಧ ಜಲದ ನಿಯಮ. ಗೊಮ್ಮಟಸಾರ, ತ್ರಿಲೋಕ ಸಾರದ ಅನುವಾದಕ್ಕೆ ಪ್ರೇರಣೆ.

೬೦. ದೆಹಲಿಯ ಕಡೆ ಮಾತಾಜಿಯ ವಿಹಾರ. ವಿಹಾರದ ಜವಾಬ್ದಾರಿ ಗುಡಗಾವಾಗಮನ ದೆಹಲಿಯ ಪಹಾಡಿಧೀರಜನಲ್ಲಿ ವರ್ಷಾಯೋಗ ಸ್ಥಾಪನೆ. ಮಾತಾಜಿಯವರ ಅಸ್ಪಷ್ಟತೆ ಗುರುಗಳ ಆಶೀರ್ವಾದ ಜಂಬೂದ್ವೀಪ ಯೋಜನೆ. ದಶ ಲಕ್ಷಣ ಆರ್ಯಿಕ ದೀಕ್ಷೆ, ರತ್ನಮತಿ ಮಾತಾಜಿಯ ಉತ್ಸಾಹ, ಕರೋಲಬಾಗನ ಕೈಲಾಸ್‌ಚಂದ್.

೬೧. ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನ - ಮಂದಿರದಲ್ಲಿ ಆರಾಧನೆ. ನಜಫಗಡದಲ್ಲಿ ಅಷ್ಟ ಸಹಸ್ರೀಯ ಪ್ರಕಾಶನಕ್ಕೆ ವಿಘ್ನ ದೆಹಲಿಗೆ ವಿದ್ಯಾನಂದರ ಆಗಮನ. ನಿರ್ವಾಣೋತ್ಸವಕ್ಕೆ ತಯಾರಿ ತ್ರಿಲೋಕದ ಪ್ರತೀಕ, ಜೈನರ ನಾಲ್ಕು ಪಂಗಡಗಳು ಯಾವುವು?

೬೨. ಮಾತಾಜಿಯವರಿಂದ ದೆಹಲಿಯ ಗಾಂಧಿನಗರದಲ್ಲಿ ಧರ್ಮಪ್ರಭಾವನೆ ಟಿಕೈತನಗರ ಮತ್ತು ದೆಹಲಿಯಲ್ಲಿ ಪಂಚಕಲ್ಯಾಣ ಪ್ರತಿಷ್ಠೆ ಹ್ಯಾಂಡ್ ಪಂಪಿನ ನೀರು ಶುದ್ಧವೇ? ಸಮ್ಯಗ್ಜ್ಞಾನದ ರೂಪರೇಖೆ ಜಂಬೂದ್ವೀಪದ ಮಾದರಿಯನ್ನು ದೇಶದಲ್ಲಿ ಸುತ್ತಾಡಿಸಬೇಕೆಂಬ ಭಾವನೆ. ಗ್ರಂಥಗಳ ಮುಖಪುಟದ ಚಿತ್ರದ ರಚನೆಯಲ್ಲಿ ತಲ್ಲೀನತೆ.

೬೩. ಹಸ್ತಿನಾಪುರ ಕ್ಷೇತ್ರದ ದರ್ಶನ, ಹಸ್ತಿನಾಪುರದಲ್ಲಿ ಜಂಬೂದ್ವೀಪದ ರೂಪರೇಖೆ ದೆಹಲಿಗೆ ಶೀಘ್ರ ಗಮನ. ಮರಳಿ ಹಸ್ತಿನಾಪುರದ ಕಡೆಗೆ ಜಂಬೂದ್ವೀಪಕ್ಕಾಗಿ ಸ್ಥಳದ ಆಯ್ಕೆ ಒಂದೇ ದಿನದಲ್ಲಿ ಜಂಬೂದ್ವೀಪ ಆರಾಧನೆಯ ರಚನೆ. ಸುದರ್ಶನ ಮೇರುವಿಗೆ ಶಿಲಾನ್ಯಾಸ. ದೆಹಲಿಯ ಕಡೆಗೆ ಮಾತಾಜೀಯ ವಿಹಾರ.

೬೪. ಸಮ್ಯಗ್ಜ್ಞಾನ ಪತ್ರಿಕೆಯ ಬಿಡುಗಡೆ. ದರಿಯಾ ಗಂಜಿಯಲ್ಲಿ ಆಚಾರ್ಯರ ಸಂಘ ಸಂಗೀತದ ಆಯೋಜನೆ. ಭ. ಮಹಾವೀರರ ಪ್ರತಿಮೆ ಹಸ್ತಿನಾಪುರಕ್ಕೆ ಆಗಮನ. ಜಂಬೂದ್ವೀಪ ಕ್ಯಾಲೆಂಡರ್, ಗ್ರಂಥದ ಪ್ರಕಾಶನ.

೬೫. ಮಹಾವೀರರ 2500ನೇ ವರ್ಷದ ನಿರ್ವಾಣೋತ್ಸವ ದೊಡ್ಡ ಸಾರ್ವಜನಿಕ ಸಭೆ, ವಿಶ್ವಧರ್ಮ ಸಮ್ಮೇಳನ ಧರಿಯಾಗಂಜಿನಲ್ಲಿ ದೀಕ್ಷಾ ಸಮಾರಂಭ ಸ್ತ್ರೀಯರಿಂದ ಜಿನಾಭಿಷೇಕ, ಉಪಾಧ್ಯಾಯ, ಆರ್ಯಿಕಾ ರತ್ನ ಮುಂತಾದ ಪದವಿಗಳ ಪ್ರದಾನ 25 ದಿಗಂಬರ ಮುನಿಗಳು ಸಂಘಕ್ಕೆ ಕು. ಮಾಧುರಿಯ ಆಗಮನ. ಆರ್ಯಿಕ ಚಂದ್ರಮತಿ ಮಾತಾಜಿಯವರ ಜನ್ಮಶತಾಬ್ದೀ ಸಮಾರಂಭ.

೬೬. ಹಸ್ತಿನಾಪುರಕ್ಕೆ ಆಚಾರ್ಯ ಸಂಘ ಹಾಗೂ ಮಾತಾಜಿಯ ಸಂಘದ ಆಗಮನ, ಜಂಬೂದ್ವೀಪದಲ್ಲಿ ಭ. ಮಹಾವೀರರ ಪ್ರತಿಮೆಯ ಪ್ರತಿಷ್ಠೆ. ಪಂಚಕಲ್ಯಾಣ ಪ್ರತಿಷ್ಠೆ, ಅಂಕನ್ಯಾಸ ವಿಧಿ, ಪಂಚಾಮೃತ ಅಭಿಷೇಕ ಸಂಘಸ್ಥ ಸಾಧುಗಣ - ಆರ್ಯಿಕೆಯರು, ಜಂಬೂದ್ವೀಪದ ಮಾದರಿ.

೬೯. ಜಂಬೂದ್ವೀಪದಲ್ಲಿ ಗಣಧರ ವಲಯದ ಆರಾಧನೆ ಶ್ರೀ ವೃಷಭ ಸಾಗರ ಮುನಿಗಳ ಸಲ್ಲೇಖನ ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದ ಮೀಟಿಂಗ್‌ನಲ್ಲಿ ಪಂಥ'ವಾದದ ನಿಯಮ, ಸಲ್ಲೇಖನ ನಿರತ ಸಾಧುವಿನ ದರ್ಶನಕ್ಕಾಗಿ ಮಾತಾಜಿಯವರು ಮುಜಪ್ಪರ ನಗರಕ್ಕೆ ಗಮನ. ಧರ್ಮಸಾಗರರಿಂದ ದೀಕ್ಷೆಗಳು ಹಸ್ತಿನಾಪುರದಲ್ಲಿ ಸಿದ್ಧ ಚಕ್ರ ಆರಾಧನೆಯ ವಿಧಾನ. 1975ರಲ್ಲಿ ಹಸ್ತಿನಾಪುರದಲ್ಲಿ ಮಾತಾಜಿಯವರ ಚಾತುರ್ಮಾಸ.

೭೦. 1976ರಲ್ಲಿ ಖತೌಲಿಯಲ್ಲಿ ಮಾತಾಜಿಯವರ ಚಾತುರ್ಮಾಸ, ಇಂದ್ರ ಧ್ವಜ ಆರಾಧನೆಯ ರಚನೆ ಅಲ್ಲೇ ದಶಲಕ್ಷಣ ಪರ್ವ.

೭೧. ಫಲಟನದಲ್ಲಿ ಮಹತ್ವಪೂರ್ಣ ಸಮ್ಮೇಳನ ಧೃತಗತಿಯಲ್ಲಿ ಸುಮೇರು ಪರ್ವತದ ರಚನೆ, 1977ರ ಚಾತುರ್ಮಾಸ, ಅಯೋಧ್ಯೆಯಲ್ಲಿ 1978ರ ಚಾತುರ್ಮಾಸದಲ್ಲಿ ಪ್ರಶಿಕ್ಷಣ ಶಿಬಿರ ಚಾತುರ್ಮಾಸದ ನಂತರ ದೆಹಲಿಗೆ ಆಗಮನ.

೭೨. ಸುದರ್ಶನ ಮೇರು ಪರ್ವತದ ಘೋಷಣೆ ಆರ್ಯಿಕೆ ಸಂಘವು ಜಂಬೂ ದ್ವೀಪಕ್ಕೆ ಆಗಮಿಸಿದ್ದು ಹಸ್ತಿನಾಪುರದಲ್ಲಿ 1979ರಲ್ಲಿ ಸುದರ್ಶನ ಮೇರುವಿನಲ್ಲಿ ಜಿನಬಿಂಬ ಪ್ರತಿಷ್ಠೆ. ಜಂಬೂದ್ವೀಪಕ್ಕೆ ಆಚಾರ್ಯ ಶ್ರೇಯಾಂಸಸಾಗರಜೀ ಮಹಾರಾಜರ

ಆಗಮನ. ಸ್ತ್ರೀಯರಿಂದ ಜಿನಾಭಿಷೇಕ, ಪ್ರಯಾಣ, ಜಂಬೂ ದ್ವೀಪದ ದೃಶ್ಯಗಳು. ಸಿದ್ಧ ಪ್ರತಿಮೆಗಳು ಹಾಗೂ ಜಿನಪ್ರತಿಮೆಗಳು.

೭೩. 1979ರ ಚಾತುರ್ಮಾಸ ದೆಹಲಿಯ ಮೋರಿಗೇಟ್‌ನಲ್ಲಿ ಇಂದ್ರ ಧ್ವಜ ಆರಾಧನೆ ಶಿಕ್ಷಣ ಪ್ರಶಿಕ್ಷಣ ಶಿಬಿರ ದರಿಯಾಗಂಜ ಇಂದ್ರ ಧ್ವಜ ಆರಾಧನೆ, ಗ್ರೀನ್ ಪಾರ್ಕ್‌ನಲ್ಲಿ ಧರ್ಮ ಪ್ರಭಾವನೆ, ಶ್ರೀವಕರ ಸಲ್ಲೇಖನ ಹಸ್ತಿನಾಪುರದಲ್ಲಿ ಜಂಬೂದ್ವೀಪದ ಶಿಲಾನ್ಯಾಸ.

೭೪ ದೆಹಲಿಯ ರಾಜಾಬಾಜಾರಿನಲ್ಲಿ ಇಂದ್ರ ಧ್ವಜ ಆರಾಧನೆ ಹಸ್ತಿನಾಪುರದಲ್ಲಿ ಜಂಬೂ ದ್ವೀಪದ ನಿರ್ಮಾಣ ಕಾರ್ಯ. 16 ದಿನಗಳ ಶಾಂತಿ ವಿಧಾನ, ಶಿಕ್ಷಣ ಶಿಬಿರ, ಆರ್ಯಿಕ ರತ್ನಮತಿಯವರ ಅಸ್ವಸ್ಥತೆ ದೆಹಲಿಯ ಕೂಚಾಸೇಠನಲ್ಲಿ ವರ್ಷಾಯೋಗದ ಸ್ಥಾಪನೆ ಜನಮಂಗಲ ಕಳಶದ ರಥದ ವಿಹಾರ. ಪನ್ನಾಲಾಲ ಸೇಠಿಯವರಿಂದ ಇಂದ್ರ ಧ್ವಜ ಆರಾಧನೆ ಮಂಗಳ ಕಳಸದ ಉದ್ಘಾಟನೆ.

೭೫. ಜನ್ಮದಿವಸದ ಸಮಾರಂಭ, ಸಮಯಸಾರವಾಚನದ ಶಿಬಿರ, ಸಮಯ ಸಾರದಲ್ಲಿ ವಿಶೇಷ ಜ್ಞಾತವ್ಯ, ಶ್ರವಣಬೆಳಗೊಳದಲ್ಲಿ ಮಹಾಮಸ್ತಕಾಭಿಷೇಕ, ದೆಹಲಿಯಲ್ಲಿ ಗಜರಥ ಮಹೋತ್ಸವ.

೭೬. ದೆಹಲಿಗೆ ಮಾತಾಜಿಯವರ ವಿಹಾರ ಹಸ್ತಿನಾಪುರದಲ್ಲಿ ಪ್ರತಿಷ್ಠಾಪನೆಯ ದಿವಸ ಹಾಗೂ ಶಿಲಾನ್ಯಾಸ ಜಂಬೂದ್ವೀಪದ ಮಾದರಿಯ ಭ್ರಮಣಗೋಸ್ಕರ ವಿಚಾರ ಜ್ಞಾನಜ್ಯೋತಿಯ ರಥದ ವಿಹಾರದ ರೂಪರೇಖೆ ಜಂಬೂದ್ವೀಪದ ಸೆಮಿನಾರ್ ಹಸ್ತಿನಾಪುರದಲ್ಲಿ ಸೆಮಿನಾರ್‌ನಲ್ಲಿ ಸಂಶಯ, ಸಮಾಧಾನ ಆರ್ಯಿಕ ರತ್ನಮತಿಯವರ ಅಭಿನಂದನ ಗ್ರಂಥದ ರೂಪರೇಖೆ, ಮಹಾಮೂದಾಬಾದ್‌ನಲ್ಲಿ ಇಂದ್ರ ಧ್ವಜ ವಿಧಾನ.

೭೭. ದೆಹಲಿಗೆ ಮಾತಾಜಿಯ ಆಗಮನ, ಆಚಾರ್ಯ ಧರ್ಮಸಾಗರರ ಅಭಿನಂದನ ಗ್ರಂಥ'ದ ವಿಮೋಚನ, ಜ್ಞಾನಜ್ಯೋತಿ ವಿಹಾರಕ್ಕೆ ಸಿದ್ಧತೆಗಳು, ಇಂದಿರಾಗಾಂಧಿಯವರಿಂದ ಜ್ಞಾನಜ್ಯೋತಿಯ ರಥದ ಉದ್ಘಾಟನೆ ಮೆರವಣಿಗೆ, ಪಹಾಡಗಂಜನಲ್ಲಿ ಇಂದ್ರ ಧ್ವಜ ಆರಾಧನೆ, ಶಾಹದಾರಾದಲ್ಲಿ ಒಟ್ಟಿಗೆ ಎರಡು ವಿಧಾನಗಳು, ಭೋಗಲದ ಮಂದಿರದ ಶಿಲಾನ್ಯಾಸ ಜಂಬೂದ್ವೀಪ ಜ್ಞಾನ ಜ್ಯೋತಿ ಸೆಮಿನಾರ್ ಅತಿಥಿ ಭವನದಲ್ಲಿ ಉಳಿದ ದಿನಗಳ ಸೆಮಿನಾರ್, ಜನ್ಮದಿನದ ಸಮಾರಂಭ.

೭೮. ಹಸ್ತಿನಾಪುರಕ್ಕೆ ಮಾತಾಜಿಯ ಆಗಮನ, ಜಂಬೂದ್ವೀಪದ ಜ್ಞಾನಜ್ಯೋತಿಯ ವಿಹಾರ, ಟಿಕೈತ ನಗರದಲ್ಲಿ ರತ್ನಮತಿ ಬಾಲ ವಿದ್ಯಾಮಂದಿರ ಜಂಬೂದ್ವೀಪದ ನಿಬಂಧ ಸ್ಪರ್ಧೆ, ಬೊಂಬಾಯಿಯಲ್ಲಿ ಜ್ಞಾನಜ್ಯೋತಿ ಡೈನಿಂಗ್ ಹಾಲಿನ ಉದ್ಘಾಟನೆ, ಪ್ರಶಿಕ್ಷಣ ಶಿಬಿರ ಒಂದೇ ಸಲ ಎರಡು ಸಿದ್ಧ ಚಕ್ರ ವಿಧಾನಗಳು, ಮಾತಾಜಿಯಿಂದ 108 ಸಲ ಮೇರು ವಂದನೆ, ಭಾರತದಲ್ಲಿ ಜ್ಞಾನಜ್ಯೋತಿಯ ಪ್ರವರ್ತನೆ, ಆಚಾರ್ಯರ ಸಂಘ ಹಸ್ತಿನಾಪುರಕ್ಕೆ ಬರಲು ಪ್ರಾರ್ಥನೆ.

೭೯. ಆರ್ಯಿಕ ರತ್ನಮತಿಯವರಿಗೆ ಅಭಿನಂದನ ಗ್ರಂಥ ಸಮರ್ಪಣೆ : ಆರ್ಯಿಕ ರತ್ನಮತಿಯ ಜೀವನ ಪರಿಚಯ, ಜ್ಞಾನಜ್ಯೋತಿಯ ವಿಹಾರ ಸನಾವದಿನಲ್ಲಿ ಜ್ಞಾನಜ್ಯೋತಿ ಪ್ರಯೋಜಿತ ಕಾರ್ಯಕ್ರಮ.

೮೦. ಹಸ್ತಿನಾಪುರದಲ್ಲಿ ಭ ಆದಿನಾಥರ ಪ್ರತಿಮೆ, ನಿರ್ಮಾಣ ಕಾರ್ಯದಲ್ಲಿ ತಡೆ, ಪಂ. ಬಾಬುಲಾಲ ಜಮಾದಾರರ ಸ್ವರ್ಗವಾಸದ ನಂತರ ಮಾತಾಜಿಯವರ ವೈರಾಗ್ಯದ ಉಪದೇಶ, ಅಸ್ಸಾಂನಲ್ಲಿ ಜ್ಞಾನಜ್ಯೋತಿಯ ಪ್ರಭಾವನೆ.

೮೧. ಟಿಕೈತನಗರದಲ್ಲಿ ಜ್ಞಾನಜ್ಯೋತಿಯ ಸ್ವಾಗತ, ಮಾತಾಜಿಯವರಿಂದ ನಿಯಮಸಾರದ ಸಂಸ್ಕೃತ ಟೀಕೆ ಪೂರ್ಣಗೊಂಡಿತು. ಲಖನೌನಲ್ಲಿ ಜ್ಞಾನ ಜ್ಯೋತಿ.

೮೨. ಆರ್ಯಿಕ ರತ್ನಮತಿಯವರ ಸಲ್ಲೇಖನ, ಸೇವೆ ಮಾಡಿಸಿಕೊಂಡು ಶರೀರದಿಂದ ಕೆಲಸ ಮಾಡಿಸಬೇಕು, ರತ್ನಮತಿ ಮಾತಾಜಿಯವರ ದೀಕ್ಷಿತ ಜೀವನ, ಅವರ ಸಮಾಧಿಯಲ್ಲಿ ಜ್ಞಾನಮತಿಯವರ ಉತ್ಸಾಹ.

೮೩. ಜಂಬೂದ್ವೀಪದಲ್ಲಿ ಒಂದು ವರ್ಷದವರೆಗೆ ಆರಾಧನೆ, ಹಸ್ತಿನಾಪುರಕ್ಕೆ ಮುಖ್ಯಮಂತ್ರಿಗಳ ಆಗಮನ, ಶಾಂತಿಮಂತ್ರದ ಜಾಪ್ಯ, ಜಂಬೂದ್ವೀಪದ ಜಿನಬಿಂಬದ ಪ್ರತಿಷ್ಠಾಪನೆಯ ಮಹೋತ್ಸವ, ಮುನಿಸಂಘದ ಆಗಮನ ಅಂತರರಾಷ್ಟ್ರೀಯ ಜಿನಬಿಂಬ, ಪ್ರತಿಷ್ಠಾಪನ ಮಹೋತ್ಸವ, ಮುನಿಸಂಘದ ಆಗಮನ, ಅಂತರಾಷ್ಟ್ರೀಯ ಸೆಮಿನಾರ್, ಅಖಿಂಡ ಜ್ಞಾನಜ್ಯೋತಿಯ ಸ್ಥಾಪನೆ, ಜ್ಞಾನಜ್ಯೋತಿಗೆ ಇಂದ್ರರಿಂದ ಅಭಿಷೇಕ, ಗ್ರಂಥ ವಿಮೋಚನೆಯ ಕಾರ್ಯಕ್ರಮ ಜ್ಞಾನಮತಿಯವರಿಗೆ ಗಣಿನೀಪದವಿ ಜಂಬೂದ್ವೀಪದಲ್ಲಿ ಜಿನಬಿಂಬ ವಿರಾಜಮಾನ ಪ್ರತಿಷ್ಠೆಯ ಸಮಾಪನ, ಮಂಗಳ ಆಶೀರ್ವಾದ ಪ್ರತಿಷ್ಠೆಯಲ್ಲಿ ವಿಶೇಷ ಸಹಯೋಗ.

೮೪. ತ್ರಿಮೂರ್ತಿ ಸ್ಥಾಪನೆ, ಇಂದ್ರ ಧ್ವಜ ಆರಾಧನೆ, ಹಸ್ತಿನಾಪುರದಲ್ಲಿ ಚಾತುರ್ಮಾಸ, ಮಾತಾಜಿಯಿಂದ ಜಂಬೂದ್ವೀಪದ ಆರಾಧನೆಯ ರಚನೆ, ಮಾತಾಜಿಯ ಅಸ್ವಸ್ಥತೆ, ಇಂದ್ರಧ್ವಜ ಮಂಡಲದ ವಿಧಾನ, ಅಮರಚಂದ ಜೈನರಿಂದ ಯುವ ಪರಿಷದ್‌ನ ಅಧ್ಯಕ್ಷರ ಆಯ್ಕೆ ಟಿಕೈತನಗರದಲ್ಲಿ ಇಂದ್ರ ಧ್ವಜ ಆರಾಧನೆ.

೮೫. ಪುನಃ ಲೇಖನ ಕಾರ್ಯದ ಪ್ರಾರಂಭ ಪಂ. ಶ್ರೀ ಫೂಲಚಂದ ಜೀ ಸಿದ್ಧಾಂತಶಾಸ್ತ್ರಿಯವರಿಂದ ಸ್ವಾಧ್ಯಾಯ, ಶಾಂತಿ ವಿಧಾನ, ಜ್ಯೋತಿಷಾಚಾರ್ಯರ ವಾಕ್ಯ, ತ್ರಿಮೂರ್ತಿ ಮಂದಿರದಲ್ಲಿ ಕ್ಷೇತ್ರಪಾಲನ ಸ್ಥಾಪನೆ, ಮೃತ್ಯುಂಜಯ ವಿಧಾನ.

೮೬. ಹಸ್ತಿನಾಪುರಕ್ಕೆ ಆರ್ಯಿಕ ಅಭಯಮತಿಯವರ ಆಗಮನ, ಜಂಬೂದ್ವೀಪ ಆರಾಧನೆ ಪೂರ್ಣ, ಶ್ವೇತಾಂಬರ ಸಾಧು-ಸಾಧ್ವಿಯರ ಸದ್ಭಾವನೆ, ಆರಾಧನೆ, ಶಿಬಿರ, ಜಂಬೂದ್ವೀಪದ ಜಿನ ಪ್ರತಿಮೆಗಳು.

೮೭. ಕಲ್ಪಧ್ರುಮ ಆರಾಧನೆಯ ರಚನೆ, ಜಂಬೂದ್ವೀಪದ ಸಮಾರಂಭ, ಸಿದ್ಧಿ ಮತ್ತು ಸಿದ್ಧ ಶಬ್ದದ ಮಹತ್ವ.

೮೮. ಮೋತಿ ಚಂದ್ರನಿಂದ ದೀಕ್ಷೆಗಾಗಿ ಪ್ರಾರ್ಥನೆ, ಆಚಾರ್ಯ ಶ್ರೀ ವಿಮಲ ಸಾಗರರಿಂದ ದೀಕ್ಷೆಗಾಗಿ ಮುಹೂರ್ತ, ಇಂದ್ರ ಧ್ವಜ ಆರಾಧನೆ, ಮೋತಿ ಚಂದ್ರನಿಗೆ ತಂದೆಯ ವಿಯೋಗ, ಕಮಲಮಂದಿರದ ಶಿಲಾನ್ಯಾಸ, ಮೋತಿಚಂದ್ರನ ಬುಂದೇಲಖಂಡ, ಬದ್ರೀನಾಥ, ಯಾತ್ರೆಗಳು ಮತ್ತು ಸಮ್ಮಾನ.

೮೯. ಜಂಬೂದ್ವೀಪ ಸ್ಥಳದಲ್ಲಿ ಪಂಚಕಲ್ಯಾಣದ ಪ್ರತಿಷ್ಠೆಯ ನಿರ್ಣಯ, ಮೋತಿಚಂದನ ಶ್ರವಣ ಬೆಳಗೊಳದ ಯಾತ್ರೆ, ಮಾತಾಜೀಯಿಂದ ಸರ್ವತೋಭದ್ರ ಮತ್ತು ತೀನಲೋಕ ಆರಾಧನೆಯ ರಚನೆ ಪೂರ್ಣಗೊಂಡಿತು. ತ್ರಿಮೂರ್ತಿ ಮಂದಿರದಲ್ಲಿ ಎರಡು ವೇದಿಗಳ ನಿರ್ಮಾಣ ಮೋತಿಚಂದ್ರನಿಗೆ ಸನ್ಮಾನಗಳು, ಆಚಾರ್ಯ ವಿಮಲ ಸಾಗರರ ಆಗಮನ, ತ್ರಿಲೋಕಮಂಡಲ ಆರಾಧನೆ.

೯೦. ಮಂಗಳ ಮಹೋತ್ಸವ ಪ್ರಾರಂಭ, ಶ್ರೀ ಮಾಧವರಾವ್ ಸಿಂಧಿಯಾರವರ ಆಗಮನ, ಶುಭಸಂಕಲ್ಪ ದೀಕ್ಷಾರ್ಥಿಗೆ ಸಮ್ಮಾನ, ಮಾರ್ಚ್ 8 ರಂದು ಮೋತಿಚಂದ್ರರ ದೀಕ್ಷೆ. ಪಂಚಕಲ್ಯಾಣ, ಸುಮೇರು ಪರ್ವತದ ಮೇಲೆ ಕಳಶಾರೋಹಣೆ, ಯುಗ ಪ್ರತಿಕ್ರಮಣದ ಮಹಾನ್‌ಕಾರ್ಯ, ಅನಾವೃತಯಕ್ಷ ಹಾಗೂ ಕ್ಷೇತ್ರಪಾಲರ ಸ್ಥಾಪನೆ. ಆಚಾರ್ಯರ ಸಂಘದ ಮಂಗಳ ವಿಹಾರ.

೯೧. ರವೀಂದ್ರ ಕುಮಾರನಿಂದ ವ್ರತಗ್ರಹಣೆ, ಆಚಾರ್ಯ ಧರ್ಮಸಾಗರರ ಸಮಾಧಿಮರಣ, ಒಂದು ಸಂಕ್ಷಿಪ್ತಪರಿಚಯ, ಚತುರ್ಥ ಪಟ್ಟಾಧೀಶರಾಗಿ ಅಜಿತಸಾಗರರು. ಆಚಾರ್ಯ ಶ್ರೀ ದೇಶಭೂಷಣರ ಸಮಾಧಿ, ಅಹಮದಾಬಾದಿನಲ್ಲಿ ಶಿಕ್ಷಣ ಶಿಬಿರ.

೯೨. ಹಸ್ತಿನಾಪುರದಲ್ಲಿ ಮಾತಾಜಿಯವರ ಚಾತುರ್ಮಾಸ, ನನ್ನ ನೆನಪುಗಳ ಬರವಣಿಗೆ, ಸಂಸ್ಥಾನದ ಭವಿಷ್ಯದ ವ್ಯವಸ್ಥೆ, ಜನಗಳ ಹೇಳಿಕೆ, ಪೀಠಾದೀಶರ ಅವಶ್ಯಕತೆ. ಶಾಸ್ತ್ರಶುದ್ಧ ವ್ಯಾಪಕ ದೃಷ್ಟಿಕೋಣ ಕಾರ್ಯಕರ್ತ್ಯಾಚಿ ನಿವಡಕರಣ್ಯಾಚೆ, ಚಾತುರ್ಯ ಒಂದು ಪ್ರಶಸ್ತಿ ವಿಕಲ್ಪ. ಇಂದ್ರಧ್ವಜ ಆರಾಧನೆ. ಮಾತಾಜಿಯವರ ಜನ್ಮಜಯಂತಿ, ಮಹಾವೀರ ಮಂದಿರದಿಂದ ಜಿನಪ್ರತಿಮೆಗಳನ್ನು ತ್ರಿಮೂರ್ತಿ ಮಂದಿರಕ್ಕೆ ಸ್ಥಳಾಂತರ ಜಂಬೂದ್ವೀಪ ಸ್ಥಾಪನೆ ಭಿಂಡರನಲ್ಲಿ ಜಂಬೂದ್ವೀಪ ಆರಾಧನೆ.

೯೩. ಜಂಬೂದ್ವೀಪದಲ್ಲಿ ಮೊದಲಬಾರಿಗೆ ಕಲ್ಪಧ್ರುಮ ಆರಾಧನೆಯ ಮಹೋತ್ಸವ. ಆರಾಧನೆಯ ರಚನೆಯ ಸಮಯದಲ್ಲಿ ಸ್ವಾಧ್ಯಾಯ ಮತ್ತು ಧ್ಯಾನ. ಸಾಮಾಯಿಕ ವಿಧಿಯಲ್ಲಿ ಯೋಗಾಸನ. ಭಿಂಡರದಲ್ಲಿ ಕಲ್ಪದ್ರುಮ, ಆಕ್ಷಯ ತೃತೀಯ ಜಾತ್ರೆ.

೯೪. ಆಚಾರ್ಯಕಲ್ಪ ಶ್ರೀ ಶ್ರುತಸಾಗರರ ಸಮಾಧಿ, ಮುನಿ ಶ್ರೀ ದರ್ಶನಸಾಗರರು ಹಸ್ತಿನಾಪುರಕ್ಕೆ ಆಗಮಿಸಿದರು. ಕಾನಜೀ ಪಂಥದ ಚರ್ಚೆ, ವ್ರತೀ ವ್ರತಗಳನ್ನು ಬಿಟ್ಟಿದ್ದು.

೯೫. ಮಾತಾಜಿಯಿಂದ ಸಮಯಸಾರದ ಅನುವಾದ ಪ್ರಾರಂಭ. ಇಂದ್ರಧ್ವಜ ಆರಾಧನೆಯ ರಚನೆ, ವರದಕ್ಷಿಣೆಯ ನಾಟಕ ಧಾರ್ಮಿಕ ನಾಟಕದ ವ್ಯವಸ್ಥೆ ಹೇಗೆ ? ಬಡೌತ ಮೊದಲಾದ ಕಡೆ ಕಲ್ಪದ್ರುಮ ಆರಾಧನೆ. ಹಸ್ತಿನಾಪುರದಲ್ಲಿ ಕಲ್ಪದ್ರುಮ ಆರಾಧನೆ. ಶರತ್ ಪೂರ್ಣಿಮೆಯ ದೀಪಾವಳಿಯ ಪೂಜೆ. ನವವರ್ಷದ ಅಭಿನಂದನೆ. ಜೈನರ ನೂತನವರ್ಷ ಎಂದು. ಹಸ್ತಿನಾಪುರದಲ್ಲಿ ಸರ್ವತೋಭದ್ರವಿಧಾನ. ಹಸ್ತಿನಾಪುರದಲ್ಲಿ ಆಚಾರ್ಯ ಸುಮತಿಸಾಗರರು ಜಂಬೂದ್ವೀಪದಲ್ಲಿ ಆರ್ಯಿಕೆ ಅಭಯ ಮತಿ ಸಮಯಸಾರದ ಸ್ವಾಧ್ಯಾಯ - ಅನುವಾದಕಾರ್ಯ, ಸಮಯಸಾರದ ಅನುವಾದ ಪೂರ್ಣ. ಕುಂದಕುಂದಮಣಿಮಾಲ, ಚತ್ತಾರಿ ಮಂಗಲಂ, ಪಂಚಕಲ್ಯಾಣದ ತಿಥಿಗಳು.

೯೬. ಜಂಜೂದ್ವೀಪದಲ್ಲಿ ತ್ರಿಲೋಕ ಆರಾಧನೆ. ಜಂಬೂದ್ವೀಪ ಆರಾಧನೆ. ಮಾಧುರಿಯಿಂದ ದೀಕ್ಷೆಗಾಗಿ ಪ್ರಾರ್ಥನೆ. ಮಾಧುರಿಗೆ ಸನ್ಮಾನ ಆರಾಧನೆ ಮುಂತಾದ ಕಾರ್ಯ, ಮಾಧುರಿ ಚಂದನಮತಿ ಆದರು.

13.9.1969 ರ ಕಾರ್ಯಕ್ರಮ, ಮಾತಾಜಿಯವರ ಅನುಭವ ಬ್ರ. ಮಾಧುರಿಯವರ ಸಂಕ್ಷಿಪ್ತ ಪರಿಚಯ, ಅದ್ಭುತವಾದ ಕನಸು ಆರ್ಯಿಕೆಯವರಿಂದ ಆರ್ಯಿಕೆಯರ ದೀಕ್ಷೆಯ ಪ್ರಮಾಣ, ದಶಲಕ್ಷಣ ಪರ್ವ ಬ್ರ. ಶ್ಯಾಮಾಬಾಯಿಯ ಕ್ಷುಲ್ಲಿಕಾದೀಕ್ಷೆ. ಆಚಾರ್ಯ ವೀರಸಾಗರಜೀ ಗುರುದೇವರ ಶಿಕ್ಷೆ. ಪ್ರತಿಷ್ಠಾ ಚಾರ್ಯರ ಸಂಗೋಷ್ಠಿ, ಜಂಬೂದ್ವೀಪ ಮಹಾಮಹೋತ್ಸವದ ಘೋಷಣೆ, ವರ್ಷಾಯೋಗ ಸಮಾಪನ್ನ.

೯೭. ಗಣಿನೀ ಆರ್ಯಿಕ ಜ್ಞಾನಮತೀ ಮಾತಾಜಿಯ ಸಂಘದ ವಿಹಾರ, ಸರಧನದಿಂದ ಬಡೌತಗೆ ಮಂಗಳ ಪ್ರವೇಶ ಅಷ್ಟ ಸಹಸ್ರೀ ಅಧ್ಯಾಪನ, ಬಡೌತದಲ್ಲಿ ಆಚಾರ್ಯ ಸಮತಿ ಸಾಗರರು. ಗಣಿನಿಜ್ಞಾನಮತಿ ಮಾತಾಜಿಯವರ ಕೇಶಲೋಚ ಸರಾಯದಲ್ಲಿ.

೯೮. ಮೋದಿನಗರದಲ್ಲಿ ಇಂದ್ರಧ್ವಜ ಆರಾಧನೆ. ಆರ್ಯಿಕ ರತ್ನಮತಿಯವರ ಪುಣ್ಯತಿಥಿ, ರಥಯಾತ್ರೆ ಮಹೋತ್ಸವ ಮೇರಠನ ಕಮಲ ಮಂದಿರದಲ್ಲಿ ಕಲ್ಪದ್ರುಮ ಆರಾಧನೆ. ಜಿನ ಚೈತ್ಯಾಲಯದ ಸ್ಥಾಪನೆ. ಣಮೋಕಾರ ಮಂತ್ರ ಸಮ್ಮೇಳನದಲ್ಲಿ ಉಪದೇಶ, ಈ ಶತಾಬ್ದಿಯಲ್ಲಿ ದಿಗಂಬರ ಚೈನಾಚಾರ್ಯರ ಸಂಘ ಮವಾನದಿಂದ ಆರ್ಯಿಕೆಯರ ಸಂಘ ಹಸ್ತಿನಾಪುರಕ್ಕೆ ಬಂದಿದ್ದು.

೯೯. ಜಂಬೂದ್ವೀಪ ಮಹೋತ್ಸವದ ತಯಾರಿ, ಮಹಾಮಹೋತ್ಸವದ ಮೀಟಿಂಗ್. 'ಹ್ರೀಂ' ಮೂರ್ತಿ ಹಾಗೂ ೪೫೮ ಚೈತ್ಯಾಲಯಗಳಿಗೆ ಜಿನಬಿಂಬಗಳಿಗಾಗಿ ಆರ್ಡರ, ಮಾತಾಜಿಯವರ ಅಸ್ವಸ್ಥತೆ. ಆಚಾರ್ಯ ಅಜಿತಸಾಗರರ ಅಸ್ವಸ್ಥತೆ, ಭಾವಿ ಆಚಾರ್ಯಪಟ್ಟದ ಚರ್ಚೆ, ಮಾತಾಜೀಯವರಿಂದ ವ್ರತ ಸಾಧನೆ, ರಸ ಪರಿತ್ಯಾಗ ಮುಂತಾದವುಗಳ ಅನುಭವ, ಮೇಯರ್ ಸಭಾ ಸದಸ್ಯರಿಗೆ ಉಪದೇಶ ಮೃತ್ಯುಂಜಯ ಆರಾಧನೆ.

೧೦೦. ಸಮಯಸಾಗರದ ಪೂರ್ವಾರ್ಧ, ಅಷ್ಟಸಹಸ್ರೀ, ಆತ್ಮಾನುಶಾಸನ, ಆಚಾರ್ಯ ವೀರಸಾಗರ ಸ್ಮೃತಿಗ್ರಂಥ, ನನ್ನ ನೆನಪುಗಳು ಮುಂತಾದ ಗ್ರಂಥಗಳ ಪ್ರಕಾಶನ ಅಷ್ಟ ಮೂಲಗುಣಗಳ ಪ್ರದರ್ಶನ. ಜಂಬೂದ್ವೀಪ ಸ್ಥಳದಲ್ಲಿ ಕಮಲ ಮಂದಿರ, ಅನ್ಯ ನಿರ್ಮಾಣದ ಕೆಲಸ ಜಂಬೂದ್ವೀಪ ಮಹಾಮಹೋತ್ಸವ ಐದನೆಯ ಪ್ರತಿಷ್ಠೆ. ಮಾತಾಜಿಯ ಸಂಘದ ವ್ಯವಸ್ಥೆ. ಮಂತ್ರಗೋಪನೀಯ. ಇಂದ್ರಧ್ವಜವಿಧಾನದ ಧಜಾರೋಹಣೆ. ಆರ್ಯಿಕೆ ದೀಕ್ಷಾದಿವಸ ಮಾತಾಜಿಯವರ ಪುಣ್ಯಯೋಗ.

ಏಳನೆಯ ಖಂಡ **615 - 675**

೧೦೧. 14 ವರ್ಷಗಳ ದೀರ್ಘವಾದ ಅಂತರಾಳ, ಆಚಾರ್ಯ ಪರಂಪರೆಯ ವಿವಾದ ವಿವಾದದ ಪರಿಹಾರ ಮುನಿಚರ್ಯಾ ಗ್ರಂಥ ಲೇಖನದ ಅವಶ್ಯಕತೆ ಏಕೆ ಉಂಟಾಯಿತು? ಸಾಮಾಯಿಕ ದಂಡಕ ಹಾಗೂ ಥೋಸ್ಸಾಮಿಸ್ತವ, ಭಕ್ತಿಗಳ ಹಾಗೂ ಪ್ರತಿಕ್ರಮಣ ಸೂತ್ರದ ಕರ್ತ. ಲಘು ಭಕ್ತಿ ಆಹಾರ ಪ್ರತ್ಯಾಖ್ಯಾನಗಳನ್ನು ಯಾವಾಗ ಮಾಡಬೇಕು. ದೈವಸಿಕ ಪ್ರತಿಕ್ರಮಣ ಕ್ರಿಯಾಕಲಾಪ, ಪ್ರತಿಕ್ರಮಣ ಗ್ರಂಥತ್ರಯಿ. ಅಷ್ಟಮಿಯ ಪ್ರತಿಕ್ರಮಣ. ಪಾಕ್ಷಿಕ ಪ್ರತಿಕ್ರಮಣ, ವಿಚಾರಣೀಯ ಪಾಠ ಪರಿವರ್ತನೆ, ಪದ್ಯಾನುವಾದ ಗಣಧರ ವಲಯ ಮಂತ್ರ, ಪಾಠಾಂತರ ಹಾಗೂ ಪಾಠ ಯತಿಕ್ರಿಯಾ ಮಂಜರೀ.

೧೦೨ ಧ್ಯಾನದಲ್ಲಿ ಭಗವಾನ ವೃಷಭದೇವರ ದರ್ಶನ. ಅಯೋಧ್ಯಾ ತೀರ್ಥಕ್ಷೇತ್ರ ಕಮಿಟಿಗೆ ಹೊಸ ಆಯ್ಕೆ ರಾಜಧಾನಿ ಲಖನೌಗೆ ಪ್ರವಾಸ. ಜನ್ಮ ಭೂಮಿ ಟಿಕೈತನಗರದಲ್ಲಿ ಚಾತುರ್ಮಾಸ ವಿಶ್ವವಿದ್ಯಾನಿಲಯದ ಡಿ.ಲಿಟ್. ಪದವಿ ಪ್ರದಾನ, ಕುಲಪತಿಗಳ ಉಪಾಯ ಫಲಿಸಿದ್ದು.

೧೦೩. ಮಾಂಗಿತುಂಗಿಸಿದ್ಧಕ್ಷೇತ್ರ ಪರ್ವತೀಯ ಯಾತ್ರೆ, ಸಂಘಪತಿಗಳ ವಿನಮ್ರತೆ, ನವನಿರ್ಮಾಣಕ್ಕೆ ಪ್ರೇರಣೆ, ಭಗವಾನ ವೃಷಭದೇವರ 108 ಅಡಿ ಉತ್ತುಂಗ ಪ್ರತಿಮೆಯ ನಿರ್ಮಾಣಕ್ಕೆ ಪ್ರೇರಣೆ, 24 ಕಲ್ಪದ್ರುವ ಆರಾಧನೆಗಳು, ದೆಹಲಿಯಲ್ಲಿ ಬಳಗ ಏರ್ಪಾಟಾಗಿದ್ದು, ಒಟ್ಟಿಗೆ 24 ಸಮವಸರಣವನ್ನು

ತೋರಿಸಿದ್ದು ಸಾಹೂ ಅಶೋಕರ ಉತ್ಕಟ ಭಾವನೆ, ರಮೇಶಚಂದ್ ಜೈನರ ಆತ್ಮೀಯ ಭಾವನೆ. ಪ್ರಮುಖ ಚಕ್ರವರ್ತಿ ಭರತ ಸಮ್ರಾಟ ಪದವಿಯಲ್ಲಿ ರಾಜುಕುಮಾರ ಜೈನ. ಮೀರ ಬಿಲ್ಡರ್ಸ್ ದೆಹಲಿ, ಸಮವಸರಣ ಪ್ರವರ್ತನೆಯ ಜೊತೆಗೆ ವೃಷಭದೇವ ಜನ್ಮ ಜಯಂತಿಯ ವರ್ಷದ ಸಮಾಪನ. ಕುಲಪತಿ ಸಮ್ಮೇಳನದ ಮಾಧ್ಯಮದಿಂದ ಭಗವಾನ ವೃಷಭದೇವರ ಅಸ್ತಿತ್ವ ಎದುರಿಗೆ ಬಂದಿತು. ಷಟ್‌ಖಂಡಾಗಮ ಸಿದ್ಧಾಂತದ ಚಿಂತಾಮಣಿ ಟೀಕೆಯ ಪ್ರಥಮ ಭಾಗದ ಬಿಡುಗಡೆ ಆರು ಖಂಡದ ಹೆಸರು, ವರ್ತಮಾನದಲ್ಲಿ ಮುದ್ರಿತ ಪಂಚಖಂಡದಲ್ಲಿ ವಿಭಾಜಿತ ಸೂತ್ರದ ಸಂಖ್ಯೆ. ಸಿದ್ಧಾಂತ ಚಿಂತಾಮಣಿ ಟೀಕೆ. ಷಟ್ ಖಂಡಾಗಮದ ಟೀಕೆಗಳು, ಜೀವಸ್ಥಾನದ ವಿಷಯದಲ್ಲಿ ಉಪಸಂಹಾರ ಪ್ರಥಮ ಖಂಡದ ಲೇಖನದಲ್ಲಿ ಪ್ರಾರಂಭ ಹಾಗೂ ಸಮಾಪನದ ತಿಥಿಗಳು, ದ್ವಿತೀಯ ಖಂಡದ ಟೀಕೆ ಪ್ರಾರಂಭ, ಮೇರಠ - ಕಮಲನಗರದಲ್ಲಿ ಪಂಚಕಲ್ಯಾಣ.

೧೦೪. ಭಗವಾನ ವೃಷಭದೇವರ ಅಂತರಾಷ್ಟ್ರೀಯ ನಿರ್ವಾಣ ಮಹೋತ್ಸವ ಜಿನೇಂದ್ರ ಭಕ್ತಿಯಲ್ಲಿ ಕಾರ್ಯದ ಸಫಲತೆ, ಜಂಬೂದ್ವೀಪ ಮಹೋತ್ಸವ 2000, 15 ವರ್ಷಗಳ ನಂತರ ತ್ರಿಮೂರ್ತಿ ಮಂದಿರದ ಶಿಖರ ನಿರ್ಮಾಣ. ಇತಿಹಾಸಕಾರರ ಸಮ್ಮೇಳನ, ದೆಹಲಿಯ ಕಮಲ ಮಂದಿರದಲ್ಲಿ ಹೊಸ ಶತಮಾನದ ಚಾತುರ್ಮಾಸ. ದೆಹಲಿಯಲ್ಲಿ ಕೈಲಾಸಪರ್ವತದ ಮಾನಸ ಸರೋವರದ ಯಾತ್ರೆಯ ಪ್ರೇರಣೆ ಒಂದೇ ಪೆಂಡಾಲಿನಲ್ಲಿ ಒಟ್ಟಿಗೆ 48 ಭಕ್ತಾಮರ ಆರಾಧನೆಗಳು, ಪ್ರಯಾಗ ತೀರ್ಥದ ನಿರ್ಮಾಣ.

೧೦೫. ಭಗವಾನ ಮಹಾವೀರರ 2600 ನೇ ಜನ್ಮಕಲ್ಯಾಣ, ವಿಧಾನದ 26 ಮಂಡಲ ವಿಧಾನದ ಆಯೋಜನೆ, ಪಂಡಿತ ಶ್ರೀ ಶಿವಚರಣಲಾಲ ಜೈನರನ್ನು ವಿಶೇಷ ಪುರಸ್ಕಾರದಿಂದ ಪುರಸ್ಕೃತ ಗೊಳಿಸಲಾಯಿತು. ಭ-ಮಹಾವೀರರ ದೀಕ್ಷಾ ಕಲ್ಯಾಣ ಕಾರ್ಯಕರ್ತರಿಗೆ ಬಂದು ಪ್ರೇರಣೆ, ಭಗವಾನ ಮಹಾವೀರ ಜನ್ಮಭೂಮಿ ಕುಂಡಲಪುರದ ಭಾವನೆ ಜಾಗೃತ, ಭಕ್ತರಾದ ಕಮಲಚಂದ ಜೈನರ ಗುರುಭಕ್ತಿ, ಕುಂಡಲಪುರದ ಅಭಿವೃದ್ಧಿಗಾಗಿ ಸಂಘದ ಮಂಗಳ ವಿಹಾರ. ನ್ಯಾಯಾಧೀಶ ಸಮ್ಮೇಳನದ ಒಂದು ಉಪಲಬ್ಧ, ಪ್ರಯಾಣದಿಂದ ಕುಂಡಲಪುರದ ಕಡೆಗೆ ವಿಹಾರ ಹಾಗೂ ಜನ್ಮಭೂಮಿ ತೀರ್ಥದಲ್ಲಿ ಮಂಗಳ ಪ್ರವೇಶ.

೧೦೬. ಕುಂಡಲಪುರ ವಿಕಾಸದ ಪ್ರಾರಂಭಿಕಚರಣ, ಪಂಚಕಲ್ಯಾಣದ ಪ್ರತಿಷ್ಠೆ ಹಾಗೂ ಮಹಾಕುಂಭ ಮಸ್ತಕಾಭಿಷೇಕ, ಪಂಚಕಲ್ಯಾಣದ ಪ್ರತಿಷ್ಠೆಯಲ್ಲಿ ಸೂರಿಮಂತ್ರ, ಸಮ್ಮೇದ ಶಿಖರದ ಯಾತ್ರೆ, ಸಮ್ಮೇದ ಶಿಖರದಲ್ಲಿ ಶ್ರಾವಕ-ಮಹಾ ಸಮ್ಮೇಳನ, ವೃಷಭ ಜಯಂತಿಯ ದಿನ ವೃಷಭ ದೇವ ಮಂದಿರದ ಶಿಲಾನ್ಯಾಸ ಕುಂಡಪುರದಲ್ಲಿ ಮಹಾವೀರ ಜಯಂತಿಯ ಕ್ರಮ ಪುನಃ ಪ್ರಾರಂಭ.

೧೦೭. ಭಗವಾನ ಮಹಾವೀರ ಜ್ಯೋತಿ ರಥದ ಪ್ರವರ್ತನ ಜನ್ಮಭೂಮಿಯಿಂದ, ರಾಷ್ಟ್ರಪತಿ ಅಬ್ದುಲ ಕಲಾಮ್‌ರಿಗೂ ಹಿಡಿಸಿತು ನವ ಗ್ರಹಶಾಂತಿ ಮಂದಿರದ ಪ್ರತಿಮೆಗಳ ಪಂಚಕಲ್ಯಾಣ. ಕುಂಡಲ ಪುರದ ಇತಿಹಾಸದಲ್ಲೇ ಮೊದಲ ಚಾತುರ್ಮಾಸ. ಸ್ಥಾಪನೆಯಲ್ಲಿ ಮಂಗಳ ಕಳಸದ ಸ್ಥಾಪನೆ ಯಾವಾಗ ಪ್ರಾರಂಭವಾಯಿತು. ಮಹಾರಾಷ್ಟ್ರ ಭಕ್ತಮಂಡಲದ ಸಮರ್ಪಣ ಭಾವ, ಕುಂಡಲಪುರ ಮಹೋತ್ಸದಲ್ಲಿ ಪರ್ಯಟನ ವಿಭಾಗ ವಿಹಾರ ಸರಕಾರದ ಸಂಯುಕ್ತ ತತ್ತ್ವಾವಧಾನ, ಭ ವೃಷಭದೇವರ ನೇಶನಲ್ ಅವಾರ್ಡ್‌ರಿಂದ ಧನಂಜಯ ಜೈನರನ್ನು ಸನ್ಮಾನಿಸಿದ್ದು, ತೀರ್ಥಂಕರ ಜನಮಭೂಮಿ ಅಭಿವೃದ್ಧಿ ಸಮಿತಿಯ ಘೋಷಣೆ. 20ನೇ ಶತಮಾನದ ಮೊದಲ ಆಚಾರ್ಯರು ಯಾರು? ಮುನಿ ಮತ್ತು ತ್ಯಾಗಿಗಳ ಚಾತುರ್ಮಾಸ ನವಗ್ರಹ ಶಾಂತಿ ಮಂದಿರದಲ್ಲಿ ಜಿನ ಬಿಂಬ ಮಂದಿರದಲ್ಲಿ ಜಿನ ಬಿಂಬಗಳ ಸ್ಥಾಪನೆ, ಕಲಾತ್ಮಕ ಶಿಖರಗಳ ಮೇಲೆ ಕಳಸಾರೋಹ ಭಗವಾನ ಪಾರ್ಶ್ವನಾಥರ ತೃತೀಯ ಸಹಸ್ರಾಬ್ದಿ ಮಹೋತ್ಸವದ ಘೋಷಣೆ ಜನ್ಮ ಭೂಮಿಯಲ್ಲಿ ದ್ವಿತೀಯ ಜನಮ ಜಯಂತಿಯ ಮಹೋತ್ಸವ ಕುಂಡಲಪುರದಲ್ಲೇ ಎರಡನೇ ಚಾತುರ್ಮಾಸ. ತೀರ್ಥ ತ್ರಿವೇಣಿಯ ಅಪೂರ್ವ ಸಂಗಮ, ಕುಂಡಲಪುರ ಅಭಿನಂದನ ಗ್ರಂಥದ ಪ್ರಕಾಶನ. ಕುಂಡಲಪುರ ಪುರಸ್ಕಾರದ ಪ್ರಾರಂಭೀಕರಣ, 64 ಋದ್ಧಿಗಳ ಆರಾಧನೆ.

ಆಗಮದ ಕನ್ನಡಿಯಲ್ಲಿ ಕುಂಡಲಪುರ.

೧೦೮. ಜೈನಶಬ್ದಕೋಶ ಒಂದು ವಿಶೇಷ ಕೊಡುಗೆ

ಪ್ರಥಮ ಖಂಡ

ಪ್ರಥಮಖಂಡ

೧

ನನ್ನ ಸ್ಮೃತಿಗಳು

ವೈರಾಗ್ಯದ ಅಂಕುರ

ಆಗಿನ್ನು ನನಗೆ ಏಳು-ಎಂಟು ವರ್ಷ ವಯಸ್ಸು. ಸಾಯಂಕಾಲದ ಸಮಯದಲ್ಲಿ ನನ್ನ ಓರಗೆಯ ವಯಸ್ಸಿನ ಹುಡುಗಿಯರು ಆಟವಾಡಲು ಮನೆಯ ಅಂಗಳಕ್ಕೆ ಬರುತ್ತಿದ್ದರು. ನನಗೂ ಆಗ ಆಟವಾಡುವ ಮನಸ್ಸು. ಅಮ್ಮನನ್ನು ಆಡಲು ಅನುಮತಿ ಕೇಳಿದರೆ ಆಗ ಅವರು ಕುಣಿದು ಕುಪ್ಪಳಿಸಿ ಏನು ಮಾಡಬೇಕಾಗಿದೆ. ಆ ಕೆಲಸ ಮುಗಿಸು, ಈ ಕೆಲಸ ಮುಗಿಸು ಎಲ್ಲ ಕೆಲಸ ಮಾಡಿ ಮಂದಿರಕ್ಕೆ ಹೋಗೋಣ. ಆರತಿ ಮಾಡೋಣ ಶಾಸ್ತ್ರ ಕೇಳೋಣ ಅನ್ನುತ್ತಿದ್ದರು.

ನನಗೆ ಕೆಲವು ಸಲ ಬೇಸರವೂ ಆಗುತ್ತಿತ್ತು. ಕೆಲವು ಸಲ ಖುಷಿಯೂ ಆಗುತ್ತಿತ್ತು. ಸಾಯಂಕಾಲ ಆಟ ಆಡಲು ಹೋಗುತ್ತಿರಲಿಲ್ಲ. ಅಮ್ಮನ ಕೆಲಸವಾದ ಮೇಲೆ ದೇವಸ್ಥಾನಕ್ಕೆ ಹೋಗುತ್ತಿದ್ದೆವು. ಆರತಿ ಆದ ಮೇಲೆ ಶಾಸ್ತ್ರ ಕೇಳಲು ಕುಳಿತುಕೊಳ್ಳುತ್ತಿದ್ದೆವು. ಆ ಸಮಯದಲ್ಲಿ ಕೆಲವು ಪಂಡಿತರು ಶಾಸ್ತ್ರವನ್ನು ಓದುತ್ತಿದ್ದರು. ಇಲ್ಲಿ ಹಿರಿಯರು ಓದುತ್ತಿದ್ದರು. ನಾನು ವಯಸ್ಸಾದ ಹೆಂಗಸರ ಮಧ್ಯೆಯೇ ಕುಳಿತುಕೊಳ್ಳುತ್ತಿದ್ದೆ. ಕೆಲವು ವೇಳೆ ನನ್ನ ಓರಗೆಯ ಹುಡುಗಿಯರ ಮಧ್ಯವೇ ಕುಳಿತುಕೊಳ್ಳುತ್ತಿದ್ದೆ. ಆದರೆ ಹುಡುಗಿಯರು ತಮ್ಮ ತಮ್ಮಲ್ಲಿಯೇ ಮಾತಿಗೆ ತೊಡಗುತ್ತಿದ್ದರು. ಆದ್ದರಿಂದ ನಾನು ಹುಡುಗಿಯರ ಜೊತೆ ಕುಳಿತುಕೊಳ್ಳುತ್ತಿರಲಿಲ್ಲ.

ಶಾಸ್ತ್ರವನ್ನು ಕೇಳುವಾಗ ಆಗಾಗ್ಗೆ ವಿಶೇಷವಾದ ಮನಸ್ಸಿಗೆ ನಾಟುವಂತಹ ಅಮೃತನುಡಿಗಳು ಸಿಗುತ್ತಿದ್ದವು ಇಂತಹ ಒಂದು ಅಮೃತನುಡಿ ಎಂದರೆ 'ಆತ್ಮನಲ್ಲಿಅನಂತ ಶಕ್ತಿ' ಇದೆ ಎಂಬುದು.

ನಾನು ಯೋಚಿಸುತ್ತಿದ್ದೆ. ಆತ್ಮನಲ್ಲಿ ಅನಂತ ಶಕ್ತಿ ಇರುವುದೇ ಆದರೆ ನಾನೇಕೆ ನನ್ನಲ್ಲಿ ಆ ಶಕ್ತಿಯನ್ನ ಪ್ರಕಟಗೊಳಿಸಿಕೊಳ್ಳಬಾರದು. ಈ ಪರುಷಾರ್ಥಕ್ಕೋಸ್ಕರ ಏನೆಲ್ಲವನ್ನಾದರೂ ನಾನು ಏಕೆ ಮಾಡಬಾರದು.

ನಾನು ಬೆಳಿಗ್ಗೆ ಸ್ವಾಧ್ಯಾಯ ಮಾಡಿಯೇ ನೀರನ್ನು ಕುಡಿಯುತ್ತಿದ್ದೆ. ಅದೇ 'ಪದ್ಮನಂದಿ ಪಂಚವಿಂಶಂತಿಕಾ' ಇದನ್ನು ತೆರೆದು ವಿಧಿವತ್ತಾಗಿ ಮಂಗಳಾಚರಣ ಓದಿ, ಸಂಸ್ಕೃತ ಶ್ಲೋಕಗಳನ್ನು ಓದಿ ಅದರ ಕೆಳಗೆ ಹಿಂದಿಯಲ್ಲಿ ಕೊಟ್ಟಿರುವ ವಿವರಣೆಯನ್ನು ಓದುತ್ತಿದ್ದೆ. ಕೆಲವು ಸಲ ಎರಡು ಶ್ಲೋಕಗಳ ಅರ್ಥವನ್ನು ಓದುತ್ತಿದ್ದೆ. ಇದು ಒಂದು ನಿಯಮವಾಗಿತ್ತು ನನಗೆ. ಹಾಗೇ ಅಮ್ಮ ಸಹ ಸ್ವಾಧ್ಯಾಯ ಮಾಡುತ್ತಿದ್ದರು. ಇವರಿಂದಲೇ ನಾನು ಸ್ವಾಧ್ಯಾಯವನ್ನು ಅಭ್ಯಾಸ ಮಾಡಿಕೊಂಡೆ ಈ ಗ್ರಂಥದಿಂದಲೇ ಜ್ಞಾನ ಮತ್ತು ವೈರಾಗ್ಯ ನನ್ನಲ್ಲಿ ಪ್ರಸ್ಫುಟಿತವಾಗಲು ಕಾರಣವಾಯಿತು. ನಂತರ ನನ್ನ ಜೊತೆಯವರೊಡನೆ ಆಡಲು ಹೋಗುವ ಮನಸ್ಸಾಗುತ್ತಿದ್ದರೂ ಅಮ್ಮ

ಕಳುಹಿಸುತ್ತಿರಲಿಲ್ಲ. ಈ ದರ್ಶನ ಕಥೆಯನ್ನು ಓದು, ಈ ಚಾರಿತ್ರ್ಯದ ಕಥೆಯನ್ನು ಓದು ಎಂದು ನನ್ನನ್ನು ಓದುವುದಕ್ಕೆ ತೊಡಗಿಸುತ್ತಿದ್ದರು. ಓದಲು ಕುಳಿತಾಗ ನನಗೆ ತನ್ನಿಂದ ತಾನೇ ಅದರಲ್ಲಿ ಅಭಿರುಚಿ ಹುಟ್ಟತೊಡಗಿತು. ಅದು ಎಲ್ಲಿಯವರೆಗೆಂದರೆ ಆ ಕಥೆಗಳನ್ನು ನೂರಾರು ಬಾರಿ ಓದಿದ್ದೇನೆ. ಅದರಲ್ಲಿ ಬರುವ ಶೀಲಕಥೆಗಳು ನನ್ನಲ್ಲಿ ಎಷ್ಟು ಪ್ರಭಾವ ಬೀರಿದವೆಂದರೆ ನಾನೇ ಅದೆಲ್ಲವನ್ನು ಆಚರಣೆಯಲ್ಲಿ ಅಳವಡಿಸಿಕೊಳ್ಳುವ ಮಟ್ಟಕ್ಕೆ ನನ್ನಲ್ಲಿ ಪ್ರಭಾವ ಬೀರಿತು. ನಾನೇ ಒಂದು ದಿನ ಬಸದಿಗೆ ಹೋಗಿ ಭಗವಂತನ ಮುಂದೆ ಭಗವಂತನೇ ನನಗೆ ಯಾವ ದಿಗಂಬರ ಮುನಿಗಳೂ ದರ್ಶನಕ್ಕೆ ಸಿಗುತ್ತಿಲ್ಲ. ಇದಕ್ಕಾಗಿ ತಮ್ಮ ಮುಂದೆಯೇ ನನ್ನ ಮನದಿಚ್ಛೆಯಂತೆ ನಾನು ಶೀಲವ್ರತವನ್ನು ನನ್ನ ಆಜನ್ಮಪೂರ್ತಿ ಆಚರಿಸುವ ದೃಢ ನಿಶ್ಚಯವನ್ನು ತೆಗೆದುಕೊಂಡೆ.

ದರ್ಶನ ಕಥೆಗಳನ್ನು ಓದಿದ ಪರಿಣಾಮವಾಗಿ ನಾನು ಪ್ರತಿದಿನ ದರ್ಶನ ಮಾಡುವ ನಿಯಮವನ್ನು ಮಾಡಿಕೊಂಡೆ. ಒಂದು ದಿನ ನನ್ನ ತಂಗಿ ಶಾಂತಿದೇವಿಗೂ ಮತ್ತು ನನ್ನ ಒಂದಿಬ್ಬರು ಗೆಳತಿಯರಿಗೆ 'ಶೀಲವ್ರತ'ವನ್ನು ಕೊಟ್ಟುಬಿಟ್ಟಿದ್ದೆ.

ಧಾರ್ಮಿಕ ನಾಟಕದ ಪ್ರಭಾವ

ನಾನು ಚಿಕ್ಕವಯಸ್ಸಿನಲ್ಲಿಯೇ ಒಂದು ಸಲ ಪಾಠಶಾಲೆಯಲ್ಲಿ ಹುಡುಗರಿಂದ ಅಭಿನಯಿಸಲ್ಪಟ್ಟ 'ಅಕಲಂಕ ನಿಷ್ಕಲಂಕ' ನಾಟಕವನ್ನು ನೋಡಿದೆ. ಇದರಲ್ಲಿ ಅಕಲಂಕ ಮತ್ತು ಅವನ ತಂದೆಯ ನಡುವೆ ನಡೆದ ಸಂವಾದದಲ್ಲಿ ಒಂದು ಮಾತು ಬರುತ್ತದೆ. 'ಪ್ರಕ್ಷಾಲನಾದ್ಯ ಪಂಕಸ್ಯ ದೂರಾದಸ್ಪರ್ಶನಂವರಂ' ಕೆಸರಿನಲ್ಲಿ ಕಾಲು ಇಟ್ಟಾದ ಮೇಲೆ ತೊಳೆದುಕೊಳ್ಳುವುದಕ್ಕಿಂತ ಕೆಸರಿನಲ್ಲಿ ಕಾಲು ಇಡದೆ ಇರುವುದು ಲೇಸು. ಮದುವೆಯಾದ ಮೇಲೆ ಪುನಃ ದೀಕ್ಷೆ ತೆಗೆದುಕೊಳ್ಳುವುದಕ್ಕಿಂತ ವಿವಾಹವಾಗದೆ ಇರುವುದು ಉತ್ತಮವಲ್ಲವೇ. ಈ ಸಾಲು ನನ್ನ ಹೃದಯಾಂತರಾಳಕ್ಕೆ ಇಳಿಯಿತು. ಅದೇ ಕ್ಷಣದಿಂದ ನಾನು ಯಾವಾಗಲೂ ಈ ಸಾಲುಗಳ ಬಗ್ಗೆಯೇ ಯೋಚಿಸುತ್ತಿದ್ದೆ.

ಮಿಥ್ಯಾತ್ವದ ತ್ಯಾಗ

ನನಗೆ ಪೂರ್ವಜನ್ಮದ ಸಂಸ್ಕಾರದಿಂದಲೇ ಇರಬೇಕು ನನಗೆ ಮನೆಯಲ್ಲಿ ಹಬ್ಬಗಳಲ್ಲಿ ಮಿಥ್ಯಾತ್ವದ ಪೂಜೆಯ ಆಚರಣೆಯ ಬಗ್ಗೆ ಬಹಳ ವಿರೋಧವಿತ್ತು. ಪದ್ಮನಂದಿಪಂಚವಿಂಶತಿ ಹಾಗೂ ಛಹಡಾಲ ಗ್ರಂಥವನ್ನು ಓದಿದ್ದರಿಂದ ಮಿಥ್ಯಾತ್ವ ಮತ್ತು ಸಮ್ಯಕ್ತ್ವದ ಲಕ್ಷಣಗಳು ಸರಿಯಾಗಿ ಮನದಟ್ಟಾಗಿತ್ತು. ಕುದೇವ, ಕುಗುರು, ಕುಶಾಸ್ತ್ರಗಳನ್ನು ಪೂಜಿಸುವುದೇ ಮಿಥ್ಯಾತ್ವವೆಂದು. ಇವೆಲ್ಲವು ಈ ಅನಂತ ಸಂಸಾರದ ಸುತ್ತಾಟಕ್ಕೆ ಕಾರಣವಾಗಿದೆ. ಹಾಗೇ ನಿಜವಾದ ದೇವ, ಗುರು, ಶಾಸ್ತ್ರಗಳ ಬಗ್ಗೆ ನಂಬಿಕೆಯನ್ನು ಇಡುವುದೇ ಸಮ್ಯಗ್‌ದರ್ಶನವಾಗಿದೆ. ಇದೇ ನಮ್ಮ ಸಂಸಾರದ ಭ್ರಮಣೆಯನ್ನು ತಡೆಯುವವು ಎಂಬ ನಂಬಿಕೆ ಹುಟ್ಟಿತ್ತು.

ಒಂದು ಘಟನೆ ನೆನಪಿಗೆ ಬರುತ್ತಿದೆ. ಸುಮಾರು 16 ವರ್ಷದ ಯುವಕನಿಗೆ ಅಮ್ಮ (ಸಿಡುಬು) ಬಂದಿತ್ತು. ಅವರ ತಾಯಿ ಯಾರದೋ ಹೇಳಿಕೆ ಕೇಳಿ ಬೇವಿನಮರವನ್ನು ಪೂಜಿಸಿ ಅಮ್ಮ ವಾಸಿಯಾಗಲೀ ಎಂದು ಹೇಳಿ ಶೀತಲಮಾತೆಯ ಪೂಜೆಗಾಗಿ ಮಾಲಿಗೆ ಪೂಜಾಸಾಮಗ್ರಿಗಳನ್ನು ಕೊಟ್ಟಿದ್ದರು. ಇದೇ ಸಮಯದಲ್ಲಿ ನಮ್ಮ ಮನೆಯಲ್ಲಿ ನನ್ನ ತಮ್ಮಂದಿರಾದ ಪ್ರಕಾಶಚಂದ್ ಮತ್ತು ಸುಭಾಷ್‌ಚಂದ್ರರಿಗೂ ಜೋರಾಗಿ ಅಮ್ಮ ಬಂದಿತ್ತು.

ನಮಗೂ ಅಕ್ಕಪಕ್ಕದವರು ಮನೆಯಬೀದಿಯವರು, ಅತ್ತೆ, ಎಲ್ಲರೂ ಅಮ್ಮನಿಗೆ ಶೀತಲಮಾತೆಯ ಪೂಜೆಗೆ ಸಾಮಾನುಗಳನ್ನು ಕೊಡು ನೀನು ಮಾಡಬೇಡ ಮಾಲಿಗೆ ಮಾಡಲು ಹೇಳು. ಅದರಿಂದ ಈ ಭಯಂಕರವಾದ ಸಿಡುಬು ಮಾರಿಯು ದೂರಾಗುತ್ತದೆ ಎಂದು ಹೇಳಿದರು. ಇಲ್ಲದಿದ್ದರೆ ಅನಿಷ್ಟವಾಗುತ್ತದೆ ನೋಡು ಎಂದರು.

ಆದರೆ ಅಮ್ಮ ನನ್ನ ಮಾತಿನ ಮೇಲೆ ನಂಬಿಕೆ ಇಟ್ಟು ಇದಾವುದನ್ನು ಮಾಡಲಿಲ್ಲ. ಮಿಥ್ಯಾತ್ವದ ಈ ಯಾವ ಕೆಲಸವನ್ನು ಮಾಡಲಿಲ್ಲ. ನಾನು ಪ್ರತಿದಿನ ಮಂದಿರಕ್ಕೆ ಹೋಗಿ ಶೀತಲನಾಥರ ಪೂಜೆ ಮಾಡಿ ಪ್ರಸಾದವನ್ನು ತಂದು ತಮ್ಮಂದಿರ ಇಡೀ ಶರೀರಕ್ಕೆ ಲೇಪನ ಮಾಡುತ್ತಿದ್ದೆ. ಅಮ್ಮನನ್ನು ವಿಚಲರನ್ನಾಗಿ ಮಾಡಲು ಎಲ್ಲರೂ ಬಹಳಷ್ಟು ಹೇಳಿದರು ಏನೂ ಪ್ರಯೋಜನವಾಗಲಿಲ್ಲ. ಆದರೆ ಇಬ್ಬರು ಸಹೋದರರಿಗೆ ಸಿಡುಬು ಜಾಸ್ತಿಯಾಗಿ ಅದರ ಸ್ಥಿತಿ ವಿಷಮಿಸಿತು. ಇವರು ಉಳಿಯುತ್ತಾರೋ ಇಲ್ಲವೋ ಎನ್ನುವಂತಾಯಿತು. ಆಗ ಒಬ್ಬ ಹೆಂಗಸು ಹೇಳಿದರು ನಿಮ್ಮ ಮೈನಾ ಇವರಿಬ್ಬರನ್ನು ಸಾಯಿಸೇಬಿಡುತ್ತಾಳೆ. ಅಯ್ಯ ಧರ್ಮವೇ ಮಕ್ಕಳು ಸಾಯುತ್ತಿದ್ದರೂ. ನೀವು ಧರ್ಮ ಧರ್ಮ ಎಂದುಕೊಂಡು ಕುಳಿತಿದ್ದೀರ ಎಂದಳು.

ನನಗೂ ಈ ಮಾತುಗಳನ್ನು ಕೇಳಿ ಗಾಬರಿಯಾಯಿತು. ಬೆಳಗ್ಗೆ ದೇವಸ್ಥಾನಕ್ಕೆ ಹೋಗಿ ದೇವರಮುಂದೆ ಹೇ ಭಗವಂತ ಇದರಲ್ಲಿ ನನ್ನ ಗೌರವ ಮತ್ತು ಧರ್ಮ ಎರಡರ ಮರ್ಯಾದೆಯು ನಿನ್ನ ಕೈಗಳಲ್ಲಿ ಇದೆ. ಇವರಿಬ್ಬರು ಈ ಸಿಡುಬಿನಿಂದಲೇ ಸತ್ತರೆ ಇಡೀ ಹಳ್ಳಿಯೇ ಏಕೆ ಸುತ್ತಮುತ್ತಲಿನ ಹಳ್ಳಿಯವರು ಕೂಡ ಶೀತಲಮಾತೆಯ ಪೂಜೆಯನ್ನು ಹೀಗೆ ಮುಂದುವರಿಸಿಕೊಂಡೇ ಹೋಗುವುದು ದಿಟವಾಗುತ್ತದೆ. ಆದರೆ ಸಮ್ಯಕ್ತ್ವವನ್ನು ಭಕ್ತಿಯನ್ನು ಯಾರೂ ತಿಳಿಯುತ್ತಿಲ್ಲವಲ್ಲ ಎಂದು ರೋದನಗೈದೆ.

ಹೀಗೆ ಯೋಚಿಸುತ್ತಾ ಭಗವಂತನ ಪೂಜೆ ಅಭಿಷೇಕದ ನಂತರ ಗಂಧೋದಕವನ್ನು ತಂದು ತಮ್ಮಂದಿರಿಗೆ ಹಚ್ಚಿ ಅವರ ಸೇವೆಯಲ್ಲಿ ತೊಡಗಿದೆ. ಕೆಲವು ದಿನಗಳ ಬಳಿಕ ಅವರಿಗೆ ಸಿಡುಬು ಕಡಿಮೆಯಾಗತೊಡಗಿತು. ಕೊನೆಗೆ ಅವರಿಬ್ಬರು ಅದರಿಂದ ಹುಷಾರಾದರು. ಆದರೆ ಪಕ್ಕದ ಮನೆಯವರು ಅಮ್ಮನನ್ನು ಪೂಜಿಸಿ ಮಿಥ್ಯಾತ್ವದ ಆಚರಣೆ ಮಾಡಿದವರ ಮಗ ಸತ್ತೇ ಹೋದ. ಈ ಪ್ರತ್ಯಕ್ಷ ಘಟನೆಯಿಂದ ಹಲವರ ಮನಸ್ಸಿನಲ್ಲಿ ಧರ್ಮದ ಬಗ್ಗೆ ನಂಬಿಕೆ ಹುಟ್ಟತೊಡಗಿತು. ಹಾಗೆಯೆ ನನ್ನ ಬಗ್ಗೆಯು ಪ್ರಶಂಸೆಯ ಮಾತುಗಳೂ ಕೇಳಿ ಬರತೊಡಗಿತು.

ನಮ್ಮ ಪ್ರಾಂತ್ಯದಲ್ಲಿ ವೈಷ್ಣವ ಸಂಪ್ರದಾಯದ ಕೆಲವು ಆಚರಣೆಗಳನ್ನು ಜೈನ ಸಂಪ್ರದಾಯದವರು ಕೂಡ ಆಚರಿಸುತ್ತಿದ್ದರು. ಮನೆ-ಮನೆಗಳಲ್ಲಿ 'ಕರುವಚೌತ'ದ ಹಬ್ಬದ ಆಚರಣೆ ನಡೆಯುತ್ತಿತ್ತು. ಮನೆಯಲ್ಲಿ ಗೌರಿಯ ಬಿಂಬವನ್ನು ಮಾಡಿಸಿ ಹೂ, ಕುಂಕುಮ ಎಲ್ಲ ಇಟ್ಟು ಪೂಜೆ ಮಾಡಿ ನೇವೇದ್ಯ ಮಾಡಿ ಅತ್ತೆ ನಾದಿನಿಯರಿಗೆ ಬಾಗಿನವನ್ನು ಕೊಡುತ್ತಿದ್ದರು.

ಈ ಹಬ್ಬವನ್ನು ನಾನು ಮಿಥ್ಯಾತ್ವ ಎಂದು ಹೇಳಿ ಅಮ್ಮನನ್ನು ಮಾಡದಂತೆ ತಡೆದೆ. ಇದಕ್ಕಾಗಿ ಯಾವಾಗಲೂ ದೀದಿ ಹೇಳುತ್ತಿರುತ್ತಾರೆ.

ಈ ಹಬ್ಬವನ್ನು ಗಂಡ ಮಕ್ಕಳ ಶ್ರೇಯಸ್ಸಿಗೋಸ್ಕರ ಮಾಡುವುದು. ಬಿಡಬಾರದು ಎಂದು ಆಗ ನಾನು ನನ್ನ ಬುದ್ಧಿಗೆ ಅನುಸಾರ ಅವರಿಗೆ ಸಮ್ಯಕ್ತ್ವದ ಉಪದೇಶ ಹೇಳಿ ಮಿಥ್ಯಾತ್ವದಿಂದಾಗುವ ದೋಷಗಳ ಬಗ್ಗೆಯೂ ಹೇಳುತ್ತಿದ್ದೆ.

ಒಮ್ಮೆ ಟಿಕೈತ ನಗರಕ್ಕೆ ಪಂಡಿತ ಮನೋಹರ ಶಾಸ್ತ್ರಿಗಳು ಬಂದಿದ್ದರು. ಅವರೊಬ್ಬ ವಿದ್ವಾಂಸರು ಆಗಿದ್ದರು. ಅಮ್ಮ ಅವರನ್ನು ಮನೆಗೆ ಆಹ್ವಾನಿಸಿದ್ದರು ಮತ್ತು ತಮ್ಮ ಸಂಶಯವನ್ನು ಹೇಳಿಕೊಂಡಿದ್ದರು. ಪಂಡಿತರೇ ಈ ಎಲ್ಲ ಹಬ್ಬಗಳನ್ನು ಆಚರಿಸುವುದು ಮುತ್ತೈದೆಯರಿಗೆ ಬಾಗಿನ ಕೊಡುವುದು ಮಿಥ್ಯಾತ್ವವೇ ತಿಳಿಸಿ. ಅದಕ್ಕೆ ಅವರು

ಗೌರಿಯನ್ನು ಮಾಡಿ ಪೂಜಿಸುವುದು ಮಿಥ್ಯಾತ್ವ ಅದನ್ನು ಬಿಟ್ಟುಬಿಡುವುದು, ಆದರೆ ಹಬ್ಬ ಮಾಡುವುದು. ಅತ್ತೆಗೆ ಬಾಗಿನ ಕೊಡುವುದು ಅವುಗಳು ಮಿಥ್ಯಾತ್ವವಲ್ಲ. ಆಚರಣೆ ಮಾಡು ಅದೇನೂ ದೋಷವಲ್ಲ ಎಂದು ಹೇಳಿದರು.

ನನಗೆ ಬಹಳ ಆಶ್ಚರ್ಯವಾಯಿತು ನಾನು ಹೇಳಿದೆ. ಪಂಡಿತರೇ 'ಕರುವಾಚೌತ' ಮುಂತಾದ ಹಬ್ಬಗಳಿಗೆ ಜೈನಧರ್ಮದಲ್ಲಿ ಸಂಬಂಧವೇನು? ಆದ್ದರಿಂದ ಈ ಹಬ್ಬಗಳನ್ನು ಆಚರಿಸುವುದಾಗಲಿ, ಹಬ್ಬದಡಿಗೆ ಮಾಡುವುದು ಇವೆಲ್ಲ ಮಿಥ್ಯಾತ್ವವೇ ಅಲ್ಲವೇ. ಇದಕ್ಕಾಗಿ ಬಾಗಿನ ಕೊಡುವುದು ಮಿಥ್ಯಾತ್ವವೇ ಬಾಗಿನ ಕೊಡಬೇಕೆಂಬ ಇಷ್ಟವಿದ್ದರೆ ಬೇರೆ ಯಾವುದಾದರೂ ಉದ್ದೇಶದಿಂದ ಕೊಡಲಿ ಆದರೆ ಆ ದಿನವೇ ಎಂದಿಗೂ ಬಾಗಿನ ಕೊಡಬಾರದು.

ಪಂಡಿತರು ಇಡೀ ಮಾತನ್ನು ಕೇಳಿದ ನಂತರ ಏನನ್ನೂ ಮಾತನಾಡದೆ ಸುಮ್ಮನಾದರು. ಮತ್ತೆ ಹೇಳಿದರು. ಈ ಕನ್ಯೆ ಯಾವುದೋ ದೇವತೆ ಇರಬೇಕು. ಬಹಳ ಬುದ್ಧಿವಂತೆ, ಈ ಮಾತು ಬಹಳ ದಿನಗಳವರೆಗೆ ನನ್ನ ಕಿವಿಗಳಲ್ಲಿ ಗುಂಯ್‌ಗುಡುತ್ತಿತ್ತು.

ಭಗವಂತನೇ ಈ ಇಡೀ ಪ್ರಾಂತ್ಯದಲ್ಲಲ್ಲ. ಇಡೀ ಜೈನ ಸಮಾಜದಿಂದಲೇ ಮಿಥ್ಯಾತ್ವವನ್ನು ದೂರ ಓಡಿಸು. ಅಂತಹ ಶಕ್ತಿಯನ್ನು ನನಗೆ ಯಾವಾಗ ಕೊಡುತ್ತೀ ಅಯ್ಯಾ ಈ ಮಿಥ್ಯಾತ್ವ ಎನ್ನುವುದು ಒಂದು ದುಷ್ಟ ಶತ್ರುವಾಗಿದೆಯಲ್ಲ. ಇದನ್ನು ದೂರ ಓಡಿಸುವಂತಹ ಪುರುಷಾರ್ಥ ಎಲ್ಲರು ಕೈಕೊಳ್ಳುವಂತಾಗಬೇಕು. ಜನರು ಛಹಢಾಲದಂತಹ ಧಾರ್ಮಿಕ ಗ್ರಂಥಗಳ ಸ್ವಾಧ್ಯಾಯ ಮಾಡಿಯು ಸಹ ಅವರಲ್ಲಿ ಮಿಥ್ಯಾತ್ವವನ್ನು ದೂರ ಮಾಡುವಂತಹ ದೃಢತೆಯಾಗಲಿ ಸಮ್ಯಗ್ದೃಷ್ಟಿಯಲ್ಲಿ ಏಕೆ ಉಂಟಾಗುತ್ತಿಲ್ಲ.

ಕ್ಷಯೋಪಶಮ

'ಛಹಢಾಲ' ದ ಅಧ್ಯಾಯವು ಧಾರ್ಮಿಕ ಪಾಠಶಾಲೆಯಲ್ಲಿ ನಡೆಯುತ್ತಿತ್ತು. ಆಗ ನನಗೆ ಸುಮಾರು ಒಂಭತ್ತು. ಹತ್ತು ವರ್ಷಗಳು ಇರಬೇಕು ಮನೆಯಲ್ಲಿ ನಾನೇ ಹಿರಿಯವಳಾದ್ದರಿಂದ ಅಮ್ಮನಿಗೆ ಎಲ್ಲ ಕೆಲಸಗಳಲ್ಲೂ ನಾನೇ ಸಹಾಯ ಮಾಡಬೇಕಾಗಿತ್ತು. ಪರೀಕ್ಷೆ ದಿನಗಳು ಹತ್ತಿರವಾಗುತ್ತಿತ್ತು. ಪಂಡಿತ ಜಮುನಾ ಪ್ರಸಾದರು ನಮಗೆಲ್ಲ ಪರೀಕ್ಷೆಗೆ ಓದಲೇಬೇಕೆಂಬ ನಿಬಂಧನೆಯನ್ನು ಹೇರಿದ್ದರು. ಎಲ್ಲ ವಿದ್ಯಾರ್ಥಿಗಳು ಬೆಳಗ್ಗೆ ಸಮಯಕ್ಕೆ ಸರಿಯಾಗಿ ಬರಬೇಕು. ರಾತ್ರಿ ಸಹ ಒಂದು ಗಂಟೆ ಕ್ಲಾಸ್ ನಡೆಯುತ್ತದೆ ಎಂದು ನಾನು ಈ ವಿಷಯವನ್ನು ಅಮ್ಮನಿಗೆ ತಿಳಿಸಿದಾಗ ಅಮ್ಮ ಕ್ಲಾಸಿಗೆ ಬಂದು ಹೇಳಿದರು. ಮೈನಾಗೆ ಮನೆಯಲ್ಲಿ ಕೆಲಸ ಜಾಸ್ತಿ ಇರುವುದರಿಂದ ಬೆಳಗ್ಗೆ ಎರಡು ಗಂಟೆ ಬರುವುದು ತಡವಾಗುತ್ತದೆ ರಾತ್ರಿಯಂತೂ ಬರುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು.

ನನಗೂ ಮನೆಯ ಕೆಲಸ ಮುಗಿಸಿ ಹೋಗಲು ಎರಡು ಘಂಟೆ ತಡವಾಗುತ್ತಲೇ ಇತ್ತು. ರಾತ್ರಿ ಛಹಡಾಲದ ಜೊತೆಗೆ ನಿಬಂಧರತ್ನಮಾಲ ಮುಂತಾದ ಪುಸ್ತಕಗಳನ್ನು ಓದುತ್ತಿದ್ದೆ.

ಒಂದು ದಿನ ಎಲ್ಲ ಹುಡುಗಿಯರು ಪಾಠವನ್ನು ಒಪ್ಪಿಸಲು ನಿಂತಿದ್ದರು. ಕೆಲವು ಹುಡುಗಿಯರು ಪಾಠವನ್ನು ಒಪ್ಪಿಸುವಾಗ ಕೆಲವು ಸಾಲುಗಳನ್ನು ಮರೆತು ಬಿಡುತ್ತಿದ್ದರು. ಅದಕ್ಕೆ ಪಂಡಿತರು ನಾನು ಪ್ರತಿದಿನ ಹೇಳುತ್ತಿರುತ್ತೇನೆ, ಚೆನ್ನಾಗಿ ಅಭ್ಯಾಸ ಮಾಡಿಕೊಂಡು ಬರಬೇಕೆಂದು ಯಾರು ಮನೆಯಲ್ಲಿ ಪಾಠವನ್ನು ಅಭ್ಯಾಸ ಮಾಡಿಲ್ಲ ಕೈ ಎತ್ತಿ ಎಂದರು. ಕೆಲವು ಹುಡಿಗಿಯರ ಜತೆ ನಾನೂ ಕೈ ಎತ್ತಿದೆ. ಪಂಡಿತರಿಗೆ ಆಶ್ಚರ್ಯವಾಯಿತು. ನೀನು ಎಲ್ಲ ಪಾಠವನ್ನು ಚೆನ್ನಾಗಿ ಕಲಿತಿದ್ದಿಯಲ್ಲ. ನೀನೇಕೆ ಕೈ ಎತ್ತಿದೆ ಎಂದು ಕೇಳಿದರು. ಅದಕ್ಕೆ ನಾನು ಹೇಳಿದೆ. ನಾನು

ಮನೆಯಲ್ಲಿ ಅಭ್ಯಾಸ ಮಾಡಿಲ್ಲ. ಅದಕ್ಕೆ ಪಂಡಿತರು ಮತ್ತೂ ಆಶ್ಚರ್ಯಪಡುತ್ತಾ ಮತ್ತೆ ನೀನು ಪಾಠವನ್ನು ಎಲ್ಲಿ ಅಭ್ಯಾಸ ಮಾಡುತ್ತೀಯ. ಈಗ ಮನೆಯಿಂದಲೇ ಬರುತ್ತಿದ್ದೀಯಲ್ಲ ಎಂದು ಕೇಳಿದರು. ಅದಕ್ಕೆ ನಾನು ಹೇಳಿದೆ. ನಾನು ಇಲ್ಲಿ ನಿಂತಿರುವ ಹುಡುಗಿಯರು ಪಾಠ ಹೇಳುವುದನ್ನೆ ಕೇಳಿ ನಾನು ಪಾಠವನ್ನು ಕಲಿತೆ. ಅದಕ್ಕೆ ಪಂಡಿತರು ಹೀಗೆ ನೀನು ಕಲಿತೆಯಾದರೆ ಹಿಂದಿನ ಪಾಠಗಳನ್ನು ಹೇಗೆ ನೆನಪಿನಲ್ಲಿ ಇಟ್ಟುಕೊಂಡಿದ್ದೀಯ ಎಂದು ಹೇಳಿ ಹಿಂದಿನ ಪಾಠಗಳ ಬಗ್ಗೆ ಒಂದೆರಡು ಪ್ರಶ್ನೆಗಳನ್ನು ಕೇಳಿದರು. ನಾನು ಎಲ್ಲ ಪ್ರಶ್ನೆಗಳಿಗೆ ಶ್ಲೋಕಗಳ ಸಹಿತ ಅರ್ಥ ವಿವರಣೆಯನ್ನು ಕೊಟ್ಟೆ. ಇದರಿಂದ ಪ್ರಭಾವಿತರಾದ ಅವರು ಇವಳ ಕ್ಷಯೋಪಶಮವು ಬಹಳ ಒಳ್ಳೆಯದೇ ಇದೆ ಎಂದರು.

ಛಹಡಾಲ ಆದಿಯಾಗಿ ಎಲ್ಲ ಗ್ರಂಥಗಳ ಪರೀಕ್ಷೆಯಲ್ಲಿಯು ನನಗೆ ಒಳ್ಳೆಯ ನಂಬರ್ ಬಂದು ಪುರಸ್ಕಾರ ದೊರೆಯಿತು. ಇದರ ನಂತರ ನಾವು ಎಲ್ಲ ಹುಡುಗಿಯರು ಸೇರಿ ಮುಂದೆ ಬರಬೇಕು ಎಂದು ಪ್ರಯತ್ನಪಟ್ಟೆವು. ಮನೆಯಲ್ಲಿ ತಂದೆ ತಾಯಿಗಳು ಒಪ್ಪದ ಕಾರಣ ವಿದ್ಯಾಭ್ಯಾಸ ಕೂಡ ಅಲ್ಲಿಗೆ ನಿಂತಿತು.

ನಾನು ಮನೆಯಲ್ಲೇ ಕುಳಿತು, ಅನೇಕ ಪಾಠಗಳನ್ನು ಅಭ್ಯಾಸ ಮಾಡುತ್ತಿದ್ದೆ. ಸೀತಾಜಿಯ ಹನ್ನೆರಡು ತಿಂಗಳು, ರಾಜುಲನ ಹನ್ನೆರಡು ತಿಂಗಳು, ಹನ್ನೆರಡು ಭಾವನೆಗಳು, ವೈರಾಗ್ಯ ಭಾವನೆ, ಅನೇಕ ಸ್ತುತಿಗಳು, ಜ್ಞಾನಪಚ್ಚೀಸಿ ಮುಂತಾದ ಜಿನವಾಣಿಯ ಸಂಗ್ರಹಗಳನ್ನು ಅಭ್ಯಾಸ ಮಾಡುತ್ತಿದ್ದೆ. ಆದರೆ ನನಗಾದರೋ ಬೆಳಗ್ಗೆ ಎದ್ದರೆ ತಮ್ಮ ತಂಗಿಯರ ಊಟ ತಿಂಡಿ ತಿನ್ನಿಸುವುದು, ಮಲಗಿಸುವುದರಲ್ಲೇ ನನ್ನ ಸಮಯವೆಲ್ಲ ಕಳೆದು ಹೋಗುತ್ತಿತ್ತು ಅಲ್ಲದೆ ಈ ಕೆಲಸಗಳನ್ನು ಕೆಲಸದವರಿಗೆ ಒಪ್ಪಿಸುವುದು ನನಗೆ ಇಷ್ಟವಿರಲಿಲ್ಲ. ಇವೆಲ್ಲ ನನಗೆ ಇಷ್ಟದ ಕೆಲಸವೇ ಆಗಿತ್ತು. ಆದರೆ ಅಮ್ಮನಿಗೆ ಕೆಲಸದಲ್ಲಿ ಸಹಾಯ ಮಾಡುವುದರಲ್ಲಿ ನನ್ನ ಎಲ್ಲ ಸಮಯವು ಕಳೆಯುತ್ತಿತ್ತು.

ಆದರೆ ನನಗೆ ಧರ್ಮಗ್ರಂಥಗಳ ಅಧ್ಯಯನವು ಅತ್ಯಂತ ಇಷ್ಟವಾದ ಕೆಲಸವಾಗಿದ್ದರಿಂದ ಧಾರ್ಮಿಕ ಗ್ರಂಥಗಳನ್ನು ಒಂದು ಎತ್ತರದ ಸ್ಥಳದಲ್ಲಿ ಇಟ್ಟು ಕೆಲಸ ಮಾಡುತ್ತಲೇ ಅವುಗಳನ್ನು ಓದುತ್ತಾ ಕಂಠಪಾಠ ಮಾಡುತ್ತಿದ್ದೆ. ರಾತ್ರಿ ಮಲಗುವ ಮುನ್ನ ಕಲಿತಿದ್ದನ್ನೇ ನೆನಪು ಮಾಡಿಕೊಳ್ಳುತ್ತಿದ್ದೆ. ಇದರಿಂದಾಗಿಯೇ ನನಗೆ ಹೃದಯದಲ್ಲಿ ವೈರಾಗ್ಯದ ಭಾವನೆ ಬೆಳೆಯತೊಡಗಿತು. ಸೀತಾಜೀಯ ಹನ್ನೆರಡು ಭಾವನೆಗಳಲ್ಲಿನ ಒಂದು ಸಾಲಂತು ನನಗೆ ಬಹಳ ಹಿಡಿಸಿತ್ತು. ಅದನ್ನ ಯಾವಾಗಲು ಗುಣಗುಣಿಸುತ್ತಿದ್ದೆ.

ಪರವಶ ಭೋಗಿ ಭಾರೀ ವೇದನಾ, ಸ್ವವಶ ಸಹೀ ನಹೀಂ ರಂಚ ।
ಶಾಶ್ವತ ಸುಖ ಜಾಸೋ ಪಾವತೀ, ಲೇಈ ಕರಮ ನೇ ವಂಚ ॥

ನಾನು ಪರವಶತೆಯಲ್ಲಿ ಅರ್ಥಾತ್ ಕರ್ಮಕ್ಕೆ ಅಧೀನಳಾಗಿ ಬಹಳ ಕಷ್ಟವನ್ನು ಸಹಿಸಿದೆ. ಆದರೆ ಸ್ವವಶಕ್ಕೆ ಸ್ವಾಧೀನಳಾಗಿ ಅಂದರೆ ನನ್ನ ಇಚ್ಛೆಯಿಂದ ತೃಣಮಾತ್ರವು ದುಃಖವನ್ನು ಸಹಿಸಿಲ್ಲ. ಒಂದು ವೇಳೆ ನಾನು ಸ್ವಂತ ಇಚ್ಛೆಯಿಂದ ಧರ್ಮವನ್ನು ಅನುಷ್ಠಾನದಲ್ಲಿ ತಂದಿದ್ದೇ ಆದರೆ ತಪಶ್ಚರ್ಯೆಯಲ್ಲಿ ಸ್ವಲ್ಪ ದುಃಖವನ್ನು ಸಹಿಸಿದ್ದರೆ ಶಾಶ್ವತ, ಅವಿನಾಶಿ ಸುಖವನ್ನು ಪಡೆಯುತ್ತಿದ್ದೆ. ಆದರೆ ಕರ್ಮ ನನ್ನನ್ನು ಬಿಡಲಿಲ್ಲ.

ವೈರಾಗ್ಯದ ಭಾವನೆಯ ಆ ಸಾಲುಗಳು ನನಗೆ ಬಹಳ ಹಿಡಿಸಿತು.

ಸುಖ ಹೋತ ಸಂಸಾರವಿಷೆ ತೋ ತೀರ್ಥಂಕರ ಕ್ಯೋಂ ತ್ಯಾಗೇ ।
ಕಾಹೇ ಕೋ ಶಿವಸಾಧನ ಕರತೇ, ಸಂಜಮ ಸೋ ಅನುರಾಗೇ ॥

ಒಂದು ವೇಳೆ ಸಂಸಾರದಲ್ಲಿ ನಿಜವಾದ ಸುಖವೇ ಇರುವುದಾಗಿದ್ದರೆ, ತೀರ್ಥಂಕರರಂತಹ ಮಹಾಪುರುಷರು ಸಂಸಾರವನ್ನು ಏಕೆ ಬಿಡುತ್ತಿದ್ದರು. ಏಕೆ ಕಾಡಿಗೆ ಹೋಗಿ ತಪ್ಪಸನ್ನು ಮಾಡುತ್ತಿದ್ದರು. ಅಲ್ಲದೆ ಸಂಯಮದಿಂದ ಮೋಕ್ಷದ ಸಾಧನೆಯಲ್ಲಿ ತೊಡಗುತ್ತಿದ್ದರು.

ಯಾವಾಗಲಾದರು ಎತ್ತಿನಗಾಡಿಯಲ್ಲಿ ಹೆಚ್ಚು ಭಾರವನ್ನು ಹೊರೆಸಿರುವುದರಲ್ಲಾಗಲಿ, ಕುದುರೆಯ ಟಾಂಗ ಗಾಡಿಯಲ್ಲಿ ಕುಳಿತುಕೊಳ್ಳುವ ಪ್ರಸಂಗ ಬಂದಾಗ ಕುದುರೆಯ ಗಾಡಿಯವನು ಚಾಟಿಯಿಂದ ಕುದುರೆಗೆ ಹೊಡೆದಿದ್ದು ಕಂಡರೆ ನನ್ನ ರೋಮ-ರೋಮವು ನಿಮಿರುತ್ತಿತ್ತು. ಆಗ ಯೋಚಿಸುತ್ತಿದ್ದೆ. ಈ ಅನಾಥ ಪ್ರಾಣಿಗಳನ್ನು ರಕ್ಷಿಸುವ ರಕ್ಷಕ ಯಾರು ? ಅಯ್ಯಾ ನೋಡು ಬಡಪಾಯಿ ಎಷ್ಟೊಂದು ಕಷ್ಟಗಳನ್ನು ಅನುಭವಿಸುತ್ತಿದೆ. ಏಟುತಿಂದು, ಭಾರಹೊತ್ತು, ಹೊತ್ತಿಗೆ ಸರಿಯಾಗಿ ನೀರು ಮೇವುಗಳಿಲ್ಲದೆ ಬಳಲುತ್ತವೆಯಲ್ಲ.

ಮನೆಯೊಳಗೆ ನಾಯಿ ಏನಾದರು ನುಗ್ಗಿಬಿಟ್ಟರೆ ಕೆಲಸದವರು ಹೊಡೆದು ಹೊರಗೆ ಓಡಿಸುತ್ತಿದ್ದರು. ಅಂತಹ ಸಮಯಗಳಲ್ಲಿ ನನಗೆ ಜೀವ ತುಂಬಿ ಬರುತ್ತಿತ್ತು. ಬಹಳ ಸಂಕಟವಾಗುತ್ತಿತ್ತು, ನಾಯಿ ಏನಾದರೂ ಬಂದಿದ್ದು ನಾನು ನೋಡಿದ್ದೆ ಆದರೆ ರೊಟ್ಟಿ ಹಿಡಿದುಕೊಂಡು ಅವೇ ಮನೆಯ ಹೊರಗೆ ಬರುವಂತೆ ಮಾಡುತ್ತಿದ್ದೆ. ಪ್ರಾಣಿಗಳ ಈ ನಾನಾ ತರದ ಹಿಂಸೆಯನ್ನು ನೋಡಿದ ಮನ ತನ್ನಿಂದ ತಾನೇ ವೈರಾಗ್ಯದ ಕಡೆ ಹೊರಳುತ್ತಿತ್ತು.

ಮನೆಯಲ್ಲಿ ಚಿಕ್ಕ ಮಕ್ಕಳಿಗೇನಾದರೂ ನೆಗಡಿ, ಕೆಮ್ಮು ಆದರೆ ಯಾವುದಾದರೂ ಚಿಕ್ಕ ಪುಟ್ಟ ಕಷ್ಟ ಬಂದರು ಯೋಚಿಸುತ್ತಿದ್ದೆ. ಈ ಶರೀರಕ್ಕೆ ಅನೇಕ, ರೋಗ, ಶೋಕ, ವ್ಯಾಧಿ ಉಂಟಾಗುತ್ತಲೇ ಇರುತ್ತದೆ. ಭಗವಂತನೇ ಈ ಎಲ್ಲ ಕಷ್ಟಗಳಿಂದ ಈ ದೇಹಕ್ಕೆ ಮುಕ್ತಿ ಯಾವತ್ತು? ಎಂದು ರೋದಿಸುತ್ತಿದ್ದೆ.ಮತ್ತು ಬಿಡುಗಡೆಯ ಮಾರ್ಗ ಹುಡುಕುತ್ತಿದ್ದೆ.

ಪದ್ಮನಂದೀ ಪಂಚವಿಂಶಂತಿಕಾ

ನನ್ನ ತಾಯಿಗೆ ವರದಕ್ಷಿಣೆಯಾಗಿ ಅವರ ತಂದೆ "ಪದ್ಮನಂದೀಪಂಚವಿಶಂತಿ" ಎಂಬ ಗ್ರಂಥವನ್ನು ಕೊಟ್ಟಿದ್ದರು. ಅಮ್ಮ ಯಾವಾಗಲು ಆ ಗ್ರಂಥವನ್ನೆ ಸ್ವಾಧ್ಯಾಯ ಮಾಡುತ್ತಿದ್ದರು. ಎಷ್ಟು ಬಾರಿ ಓದಿದ್ದರೋ ಅವರಿಗೆ ನೆನಪಿಲ್ಲ. ಒಂದು ಸಲ ಓದು ಮುಗಿಸಿದ ನಂತರ ಮತ್ತೆ ಮೊದಲಿಂದ ಪ್ರಾರಂಭಿಸುತ್ತಿದ್ದರು. ಅವರು ಹೇಳುತ್ತಿದ್ದರು ನಾನು ಗ್ರಂಥವನ್ನು ಸ್ವಾಧ್ಯಾಯ ಮಾಡಿದ ಮೇಲೆ ಆಜನ್ಮ ಶೀಲವ್ರತವನ್ನು ಅಷ್ಟಮಿ ಮತ್ತು ಚತುರ್ದಶಿಗಳಲ್ಲಿ ಬ್ರಹ್ಮಚರ್ಯ ವ್ರತವನ್ನು ತೆಗೆದುಕೊಂಡೆ ಎಂದು.

ಅವರ ಪ್ರೇರಣೆಯಿಂದಲೇ ನಾನು ಈ ಗ್ರಂಥವನ್ನು ಸ್ವಾಧ್ಯಾಯ ಮಾಡತೊಡಗಿದೆ. ನನಗಂತು ಅತಿಶಯವಾಗಿ ಪ್ರಿಯವೆನಿಸಿದ ಈ ಗ್ರಂಥದ ಹಲವಾರು ಶ್ಲೋಕಗಳು ಕಂಠಪಾಠವಾಗಿತ್ತು. ಎರಡು ವರ್ಷಗಳಲ್ಲಿ ಈ ಗ್ರಂಥವನ್ನು ಹಲವಾರು ಬಾರಿ ಓದಿ ಮುಗಿಸಿದೆ.

ಈ ಗ್ರಂಥದ ಶರೀರಾಷ್ಟಕ ಅಧಿಕಾರದ ಅಧ್ಯಯನದಿಂದ ನನಗೆ ಶರೀರದ ಸ್ವರೂಪದ ಜ್ಞಾನವಾದ್ದರಿಂದ ನನ್ನಲ್ಲಿ ವೈರಾಗ್ಯ ಜಾಸ್ತಿಯಾಯಿತು. ಹಾಗೇ ಬ್ರಹ್ಮಚರ್ಯಾಷ್ಟಕ ಓದಿದ ನಂತರ ನನ್ನಲ್ಲಿ ಉದಯಿಸಿದ ಭಾವನೆ ಎಂದರೆ ಹೇ ಭಗವಂತನೇ ಈ ಜನ್ಮದಲ್ಲಂತು ನಾನು ಬ್ರಹ್ಮಚರ್ಯವನ್ನು ಕೈಕೊಂಡಿದ್ದೇನೆ. ಜೊತೆಗೆ ತಪಸ್ಸನ್ನು ಆಚರಿಸಿ ನಾನು ಲೋಕಾಂತಿಕ ದೇವನಾಗಬೇಕು. ಪೂರ್ಣ ಬ್ರಹ್ಮಚರ್ಯವನ್ನು ಆಚರಿಸಿದ್ದೇ ಆದರೆ ಮುಂದಿನ ಭವಗಳಲ್ಲಿ ಸಂಸಾರದ ಭ್ರಮಣೆಯಿಂದ ಮುಕ್ತಿ ಹೊಂದಬಹುದು.

ನನಗೆ ಆಗಾಗ್ಗೆ ರಾತ್ರಿಯ ವೇಳೆಯಲ್ಲಿ ಎಚ್ಚರವಾದಾಗಲೆಲ್ಲ ಯೋಚಿಸುತ್ತಿದ್ದೆ, ಹೇಗೆ ನಾನು ವಿವಾಹಬಂಧನದಲ್ಲಿ ಸಿಕ್ಕಿಹಾಕಿಕೊಳ್ಳದೆ, ಲೋಕಾಂತಿಕ ದೇವನ ಸ್ಥಾನವನ್ನು ಪಡೆಯಲು ಪುರುಷಾರ್ಥ ಮಾಡಬೇಕು ಎಂದು. ಆದರೆ ವಯಸ್ಸಿನಲ್ಲಿ ಚಿಕ್ಕವಳಾದ್ದರಿಂದ ಮನೆಯಲ್ಲಿ ಈ ವಿಷಯ ತೆಗೆಯಲು ಧೈರ್ಯ ಸಾಲುತ್ತಿರಲಿಲ್ಲ.

ಒಂದು ದಿನ ರಾತ್ರಿ ಸ್ವಾಧ್ಯಾಯ ಮಾಡುವಾಗ ಕಿವಿಗೆ ಬಿತ್ತು. ದಕ್ಷಿಣದಲ್ಲಿ ಮುನಿಗಳು ತಪಶ್ಚರ್ಯೆ ಮಾಡುತ್ತಿದ್ದಾರೆ ಎಂದು. ನನಗೆ ಅವರನ್ನು ಹೇಗೆ ದರ್ಶನ ಮಾಡುವುದು ಎಂಬುವ ಯೋಚನೆ ಬಂತು. ನಾನು ಈ ವಿಷಯವನ್ನು ನನ್ನ ಗೆಳತಿಯಲ್ಲಿ ಹೇಳಿದ್ದೆ. ಅವಳು ಮನೆಯಿಂದ ದೂರಹೋಗಬೇಕೆಂದು ಬಯಸಿದ್ದಳು. ಹೀಗೆ ನಾವಿಬ್ಬರು ಆಗಾಗ್ಗೆ ಮಾತಾಡಿಕೊಂಡು ಒಂದು ದಿನ ಇಬ್ಬರು ದಕ್ಷಿಣದ ಕಡೆಗೆ ಹೊರಡೋಣ ಎಂದು ತೀರ್ಮಾನಿಸಿಯೇ ಬಿಟ್ಟೆವು. ಆದರೆ ಮಾರನೆಯ ದಿನ ಬಂದು ನನ್ನ ಗೆಳತಿ ಹೇಳಿದಳು. ನನಗೆ ಧೈರ್ಯವಾಗುತ್ತಿಲ್ಲ. ನಾವೇನಾದರೂ ಊರುಬಿಟ್ಟು ಹೊರಟೆವೆಂದರೆ ಮನೆಯವರು ತಕ್ಷಣ ಹುಡುಕಿಸುತ್ತಾರೆ. ಆಗ ಸಿಕ್ಕಿ ಹಾಕಿಕೊಂಡರೆ ನಮ್ಮ ಸ್ಥಿತಿಯನ್ನು ನೀನೇ ಯೋಚಿಸು ಎಂದಳು.

ನಾನು ಸುಮ್ಮನಾಗಲೇಬೇಕಾಯಿತು. ಆದರೂ ಮನದಲ್ಲಿ ಯಾವಾಗ ಮುನಿಗಳ ದರ್ಶನ ಮಾಡಿ ಅವರ ತ್ಯಾಗ ಮಾರ್ಗವನ್ನು ನಾನು ಅನುಸರಿಸುವುದು ಯಾವಾಗ ಎಂಬ ತವಕವನ್ನು ಮಾತ್ರ ಅದುಮಿಡಲಾರದಾದೆ. ಕಾಲ ಕಳೆಯುತ್ತಿತ್ತು, ನಾನು ಮನೆಯನ್ನು ಯಾವಾಗ ಬಿಡುವುದು ಎಂದು ಯೋಚಿಸುತ್ತಿದ್ದಂತೆ ಮನೆಯವರು ಹೇಗೆ ಕಟ್ಟಿ ಹಾಕುವುದು ಎಂದು ಯೋಚಿಸುತ್ತಿದ್ದರು. ಅಜ್ಜಿ ಅಮ್ಮನ ಹತ್ತಿರ ಯಾವಾಗಲೂ ಮೈನಾ ದೊಡ್ಡವಳಾಗುತ್ತಿದ್ದಾಳೆ. ಗಂಡು ಹುಡುಕಿ ಎಂದು ಹೇಳುತ್ತಲೇ ಇದ್ದರು. ಅಮ್ಮ ಅಪ್ಪ ಮನೆಗೆ ಬರುತ್ತಿದ್ದಂತೆ ಇದೇ ವಿಷಯ ಶುರು ಮಾಡುತ್ತಿದ್ದರು. ಇದರಿಂದ ಇದೇ ವಿಷಯಕ್ಕೆ ಅವರಿಬ್ಬರ ನಡುವೆ ಮಾತಿನ ಚಕಮಕಿ ನಡೆಯುತ್ತಿತ್ತು. ಮದುವೆ ಮಾತುಕತೆ ನಡೆಯುವಾಗ ಗಂಡಾಗಲಿ ಹೆಣ್ಣಾಗಲಿ ಆ ಜಾಗದಿಂದ ಎದ್ದು ನಡೆಯುತ್ತಿದ್ದರು. ನಾನು ಜಾಗಬಿಟ್ಟು ಬೇರೆ ಹೋಗುತ್ತಿದ್ದರೂ ಅವರು ನನ್ನ ಮದುವೆಯ ಬಗ್ಗೆ ನಡೆಸುತ್ತಿದ್ದ ಚಿಂತೆ ನನಗೆ ಗೊತ್ತೇ ಇತ್ತು.

೨

ವೈರಾಗ್ಯ ಭಾವದ ಪ್ರಕಟಣೆ

ಒಂದು ರಾತ್ರಿ ನನ್ನ ಹತ್ತಿರ ಅಮ್ಮ ಏನನ್ನೋ ಕೇಳಲು ಬಂದರು. ಅದೇ ಅವಕಾಶ ಸರಿ ಎಂದು, ನಾನು, ನಾನಂತು ಈ ಸಂಸಾರದಲ್ಲಿ ಖಂಡಿತ ಸಿಕ್ಕಿಹಾಕಿಕೊಳ್ಳುವುದಿಲ್ಲ. ನಾನು ಮನೆಯನ್ನು ಬಿಟ್ಟು ಹೋಗುತ್ತೇನೆ. ನನ್ನ ಆತ್ಮ ಕಲ್ಯಾಣ ಮಾಡಿಕೊಳ್ಳಬೇಕು. ದುರ್ಲಭವಾದ ಈ ಜನ್ಮವನ್ನು ವ್ಯರ್ಥ ಮಾಡಿಕೊಳ್ಳಲಾರೆ ಎಂದೆ ಆಗ ಅಮ್ಮ ಏನೋ ಧರ್ಮದ ಚರ್ಚೆ ಮಾಡುವವಳಿದ್ದರು ಈ ಮಾತು ಕೇಳಿ ವಿಶೇಷ ಲಕ್ಷ್ಯ ವಹಿಸಲಿಲ್ಲ. ನೋಡು ಜನ ಏನು ಅನ್ನುತ್ತಾರೆ ಹುಡುಗಿ ವಯಸ್ಸಿಗೆ ಬಂದಿದ್ದಾಳೆ ಮದುವೆ ಮಾಡದೆ ಇದ್ದರೆ, ನೀನು ಬ್ರಹ್ಮಚರ್ಯ ತೆಗೋತೀನಿ ಎಂದೆಲ್ಲ ಹೇಳಬೇಡ ಎಂದರು.

ನಾನು ಆಗಾಗ್ಗೆ ಈ ಮಾತು ಹೇಳುತ್ತಲೇ ಇದ್ದುದರಿಂದ ಅಮ್ಮ ಬೇಗ ಮದುವೆ ಮಾಡೇ ಬಿಡಬೇಕು ಎಂದು ಯೋಚಿಸುತ್ತಿದ್ದರು. ಒಂದು ದಿನ ನನಗೆ 'ಜಂಬೂಚರಿತೆ'ಯ ಪುಸ್ತಕ ಸಿಕ್ಕಿತು. ರಾತ್ರಿ ತುಂಬ ಹೊತ್ತಾಗಿತ್ತು. ನಾನು ಓದುತ್ತಲೇ ಕುಳಿತಿದ್ದದ್ದನ್ನು ನೋಡಿ ಅಪ್ಪ ಅಮ್ಮ ಹೊತ್ತಾಯಿತು ಹೋಗು ನಾಳೆ ಓದಿದರಾಯಿತು

ಎಂದರು. ಆದರೆ ನಾನು ಕೇಳಿಸದವಳಂತೆ ರಾತ್ರಿ ಒಂದು ಘಂಟೆಯವರೆಗೆ ಅದನ್ನು ಓದಿ ಮುಗಿಸಿದೆ. ಇದರಿಂದ ನನಗೆ ಬಹಳಷ್ಟು ಕಲಿತಂತಾಯಿತು. ಷಟ್‌ಕಾಲ ಪರಿವರ್ತನೆಯು ಬಹಳ ರೋಮಾಂಚನಕಾರಿಯಾಗಿತ್ತು. ಆರು ಕಾಲಗಳಲ್ಲಿ ಮನುಷ್ಯ ಹೇಗೆ ಪರಿವರ್ತನೆಯನ್ನು ಹೊಂದುತ್ತಾನೆ, ಅವನಿಗೆ ಉಂಟಾಗುವ ದುರ್ದೆಶೆ, ಪ್ರಳಯ ಕಾಲದಲ್ಲಿ ಅಗ್ನಿಯ ಮಳೆ, ಪ್ರಾಣಿಗಳು ಹೇಗೆ ಸುಟ್ಟು ಹೋಗುತ್ತವೆ. ಇವನ್ನೆಲ್ಲ ಓದಿ ನನ್ನ ಹೃದಯ ನಡುಗತೊಡಗಿತು. ನಾನು ಯೋಚಿಸ ತೊಡಗಿದೆ. ನಾನು ಆರನೇ ಕಾಲದವರೆಗೆ ಸುತ್ತಾಡದೆ ನನ್ನ ಭವವನ್ನು ಬೇಗ ಮುಕ್ತಿಯ ಕಡೆ ಕೊಂಡೊಯ್ಯಬೇಕು ಎನ್ನುವ ನಿರ್ಧಾರ ದೃಢವಾಯಿತು.

ಜಂಬೂಕುಮಾರನ ಆಜನ್ಮ ಬ್ರಹ್ಮಚರ್ಯ ನನ್ನಲ್ಲಿ ಪ್ರಭಾವವನ್ನು ಬೀರಿತು. ಅವರ ಪೂರ್ವಜನ್ಮದ 'ಅಸಿಧಾರಾ' ಎಂಬ ವ್ರತವನ್ನು ಮತ್ತೆ ಮತ್ತೆ ಓದಿದೆ. ಯಾವಾಗ ಅಮ್ಮ-ಅಪ್ಪ ಮೋಹದಿಂದ ನನಗೆ ಮದುವೆ ಬಗ್ಗೆ ಹೇಳುವಾಗಲೆಲ್ಲ ನಾನು ಜಂಬೂ ಸ್ವಾಮಿಯ ಕಥೆಯನ್ನು ಹೇಳತೊಡಗಿದೆ. ಕೇಳುವಾಗ ಅವರಿಗೂ ನನ್ನ ಮಾತು ಹಿಡಿಸುತ್ತಿತ್ತು. ಆದರೆ ಹೊರಗಡೆಯ ಜನರ ಮಾತನ್ನು ಕೇಳಿದಾಗ ಮತ್ತೆ ಮೋಹ ಸಿಟ್ಟು ಅಶಾಂತಿ, ಬಂದು ಬಿಡುತ್ತಿತ್ತು.

ತಂದೆಯ ಹೃದಯ ವೈಶಾಲ್ಯತೆ

ನನಗೆ ನನ್ನ ತಂದೆ ಬೈದಿದ್ದಾಗಲಿ ಹೊಡೆದಿದ್ದಾಗಲಿ ನೆನಪೇ ಇಲ್ಲ. ಚಿಕ್ಕವಳಿದ್ದಾಗ ಏನಾದರು ತಪ್ಪು ಮಾಡಿದಾಗ ಅಮ್ಮ ಹೊಡೆದರೆ ಆಗ, ಅಪ್ಪ ಅಮ್ಮನ ಮೇಲೆ ಸಿಟ್ಟಾಗುತ್ತಿದ್ದರು. ಆಗ ಅಮ್ಮನಿಗೆ ಹೇಳುತ್ತಿದ್ದರು. ನೋಡು ಇವಳು ಹುಡುಗಿ ನಮ್ಮ ಮನೆಯಲ್ಲಿ ಎಷ್ಟು ವರ್ಷ ಇರುತ್ತಾಳೆ. ಇರುವಷ್ಟು ಕಾಲ ಯಾಕೆ ಹೊಡೆಯುವುದು, ಬಯ್ಯುವುದು ಎಂದು.

ದೇವಸ್ಥಾನದ ಹತ್ತಿರ ಅಥವಾ ಮೈದಾನದ ಹತ್ತಿರವೂ ನಾಲ್ಕಾರು ಜನ ಸೇರಿದ ಕಡೆ ನಾನು ಹೋಗುತ್ತಿದ್ದರೆ ಜನ ಛೋಟೆಲಾಲ್ ನೋಡು ನಿನ್ನ ಒಂದು ಲಕ್ಷ ರೂಪಾಯಿಯ ಚೆಕ್ ಎನ್ನುತ್ತಿದ್ದರು. ಇದನ್ನು ಕೇಳಿದ ತಕ್ಷಣ ನನ್ನ ತಂದೆಗೆ ಸಿಟ್ಟು ಬರುತ್ತಿತ್ತು. ಈ ರೀತಿ ಮಾತುಗಳನ್ನು ನನಗೆ ಕೇಳುವುದಕ್ಕೆ ಇಷ್ಟವಿಲ್ಲ. ಹುಡುಗಿಯರು ತಮ್ಮ ತಮ್ಮ ಭಾಗ್ಯವನ್ನು ತಾವೇ ಪಡೆದು ಬಂದಿರುತ್ತಾರೆ. ನಮಗೆ ಅವರಿಂದ ಖರ್ಚು ಎನ್ನುವುದು ನನಗೆ ಹಿಡಿಸುವುದಿಲ್ಲ ಎನ್ನುತ್ತಿದ್ದರು. ಯಾರಾದರೂ ಹಾಸ್ಯ ಮಾಡುತ್ತಾ ನಿನಗೆ ಐದು ಹೆಣ್ಣು ಇದೆ ಎಂದರೆ ಅಪ್ಪನಿಗೆ ಬಹಳ ಬೇಸರವಾಗುತ್ತಿತ್ತು. ಅವರು ನನ್ನ ಹೆಣ್ಣು ಮಕ್ಕಳನ್ನು ಏಕೆ ನೀವು ಲೆಕ್ಕ ಹಾಕುತ್ತೀರ ಅವರವರ ಭಾಗ್ಯ ಅವರವರು ಪಡೆದುಕೊಂಡೆ ಬಂದಿರುತ್ತಾರೆ ಬಿಡಿ ಎನ್ನುತ್ತಿದ್ದರು. ಮನೆಯಲ್ಲಾರೂ ಅವರು ಎಂದೂ ಗಂಡು, ಹೆಣ್ಣು ಎಂದು ಭೇದ ಮಾಡುತ್ತಿರಲಿಲ್ಲ. ತಿಂದುಣ್ಣುವುದರಲ್ಲೂ ಯಾವಾಗಲೂ ಭೇದ ಮಾಡುತ್ತಿರಲಿಲ್ಲ. ಅಲ್ಲದೆ ಹೇಳುತ್ತಿದ್ದರು. ಹೆಣ್ಣು ಮಕ್ಕಳಿಗೆ ಜಾಸ್ತಿ ಪ್ರೀತಿ ತೋರಬೇಕು ಏಕೆಂದರೆ ಅವರು ನಮ್ಮ ಮನೆಯಲ್ಲಿ ಜಾಸ್ತಿ ದಿನ ಇರುವುದಿಲ್ಲ ಎಂದು.

ಯಾರಾದರು ಭೇದ ಭಾವ ಮಾಡುತ್ತಿರುವುದು ಗೊತ್ತಾದರೆ ಅಪ್ಪ ಅವರ ಬಗ್ಗೆ ಬೇಸರ ಪಡುತ್ತಿದ್ದರು. ಮತ್ತೆ ಯಾರಾದರು ಛೋಟೆಲಾಲನಿಗೆ ಐದು ಜನ ಹೆಣ್ಣು ಮಕ್ಕಳು ಎಂದರೂ ಸಿಟ್ಟಾಗುತ್ತಿದ್ದರು. ಯಾಕೆ ನನ್ನ ಹೆಣ್ಣುಮಕ್ಕಳಿಗೆ ನೀವೇನಾದರು ವರದಕ್ಷಿಣೆ ಕೊಡಿ ಎನ್ನುತ್ತಿದ್ದೀನಾ ಎಂದು ಇದನ್ನು ಕೇಳಿದ ಪಂಡಿತರು ಹೇಳುತ್ತಿದ್ದರು. ಛೋಟೆಲಾಲ ಎಂಬುದು ನಿನ್ನ ಹೆಸರಾದರು ನಿನ್ನ ಮನಸ್ಸು ದೊಡ್ಡದಾಗಿದೆ ಆದ್ದರಿಂದ ನೀನು ಬಢೇಲಾಲನೇ ಎನ್ನುತ್ತಿದ್ದರು. ಈ ವಿಷಯವನ್ನು ನನ್ನ ಕೈಯಲ್ಲಿ ಹೇಳಿಕೊಂಡು ನಗುತ್ತಿದ್ದರು. ಮತ್ತೆ

ಅಂಗಡಿಯಲ್ಲಿ ನಡೆದಿದ್ದುದನ್ನೆಲ್ಲ ನನ್ನ ಕೈಯಲ್ಲಿ ಹೇಳಿಕೊಂಡು ಸಲಹೆಗಳನ್ನು ಕೇಳುತ್ತಿದ್ದರು. ಅವರು ಮಾಡಿದ್ದನ್ನೆಲ್ಲ ನಾನು ಒಳ್ಳೆಯದೇ ಎಂದು ಹೇಳುತ್ತಿದ್ದೆ. ಅವರ ದಿನಚರಿಯಂತು ದೇವಸ್ಥಾನ ಅಂಗಡಿ, ರಾತ್ರಿ ಕುಳಿತುಕೊಂಡು ಆ ಅಂಗಡಿಯ ವಿಷಯವನ್ನೆಲ್ಲ ಹೇಳುತ್ತಿದ್ದರು. ದೇವರ ದರ್ಶನವನ್ನು ಮಾತ್ರ ಎಂದೂ ಬಿಡುತ್ತಿರಲಿಲ್ಲ.

ಒಂದು ಸಲ ಮಹಾವೀರ ಜಯಂತಿಯಲ್ಲಿ ನನ್ನ ಒತ್ತಾಯದಿಂದಲೇ ಇಂದ್ರನ ಪದವಿಯನ್ನು ಪಡೆದುಕೊಂಡರು ಆ ವರ್ಷ ಆನೆಯನ್ನು ಕರೆಸಿದ್ದರು. ಇಂದ್ರ, ಇಂದ್ರಾಣಿ ಆನೆಯ ಮೇಲೆ ಸ್ವಾಮಿಯನ್ನು ಮೆರವಣಿಗೆಯಲ್ಲಿ ಅಭಿಷೇಕದ ಸ್ಥಳಕ್ಕೆ ತಂದರು. ಆದರೆ ಸ್ವಾಮಿಗೆ ಅಭಿಷೇಕ ಮಾಡುವ ಸಂಬಂಧ ಇಂದ್ರ ಮಾಡಬೇಕೋ ಇಂದ್ರಾಣಿ ಮಾಡಬೇಕೋ ಎನ್ನುವ ಚರ್ಚೆ ಆಗತೊಡಗಿತು. ಒಬ್ಬ ಪಂಡಿತರು ಇಂದ್ರಾಣಿ ಭಗವಂತನ ಅಭಿಷೇಕ ಮಾಡುವುದನ್ನು ನಿಷೇಧಿಸುತ್ತಾ ಇದ್ದರು. ಒಂದು ಉಪಾಯ ಮಾಡಿದರು. ಉಪಾಯ ಮಾಡುತ್ತಿದ್ದವರು ಹೇಳಿದರು, ನೋಡು ಭಗವಂತನ ಜನ್ಮವಾದ ನಂತರ ಮೊದಲು ಮಗುವನ್ನು ಎತ್ತಿಕೊಂಡು ಪ್ರಸೂತಿ ಗೃಹದಿಂದ ತಂದು ಇಂದ್ರನ ಕೈಯಲ್ಲಿ ಕೊಟ್ಟವಳು ಇಂದ್ರಾಣಿ ತಾನೇ. ಆದ್ದರಿಂದ ಅವಳೇ ಭಗವಂತನನ್ನು ಮೊದಲು ಸ್ಪರ್ಶಿಸಿರುವುದು. ಅಂತಹದರಲ್ಲಿ ಅಭಿಷೇಕ ಏಕೆ ಮಾಡಬಾರದು. ಎರಡನೆಯದು ಭಗವಂತರ ಜನ್ಮಕ್ಕೆ ಕಾರಣ ಸ್ತ್ರೀಯೇ, ಅವರೇನು ಆಕಾಶದಿಂದ ಬರಲಿಲ್ಲವಲ್ಲ.

ಈ ಚರ್ಚೆಯನ್ನು ನಾನು ಬಹಳ ಆಸಕ್ತಿಯಿಂದ ಕೇಳುತ್ತಿದ್ದೆ. ಏಕೆಂದರೆ ನನಗೆ ತಾಯಿಯೇ ಜನ್ಮಾಭಿಷೇಕ ಮಾಡಲಿ ಎಂದು ಮನದಾಶೆ. ಕೊನೆಗೆ ಸೇರಿದ್ದವರೆಲ್ಲ ಇಂದ್ರ ಇಂದ್ರಾಣಿ ಇಬ್ಬರು ಮಾಡಲಿ ಎಂಬ ತೀರ್ಮಾನಕ್ಕೆ ಬಂದರು. ಇದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಇದನ್ನು ಕಂಡು ಒಬ್ಬ ಪಂಡಿತರು ಹೇಳುತ್ತಿದ್ದರು. ಛೋಟೆಲಾಲ್ ನಿಮ್ಮ ತಂದೆ ನಿನಗೆ ಛೋಟೆಲಾಲ್ ಎಂದು ಏಕೆ ಹೆಸರಿಟ್ಟರು. ನೀನಂತು ಭಡೇಲಾಲ್ ಆಗಿದ್ದೀಯ ಎಂದು. ಆಗ ನಮ್ಮ ತಂದೆ ಸಂಕೋಚದಿಂದಲೇ ಹೇಳಿದರು ನಮ್ಮ ತಂದೆ ಯೋಚಿಸೇ ಇಟ್ಟಿದ್ದಾರೆ. ನಾನು ದೊಡ್ಡವನಲ್ಲ ಚಿಕ್ಕವನೇ.

ನಾನು ಕ್ಷುಲ್ಲಕ ದೀಕ್ಷೆ ಪಡೆದ ಮೇಲೆ ಮೊದಲನೆಯ ಬಾರಿ ಟಿಕೈತ ನಗರದಲ್ಲಿ ಚಾತುರ್ಮಾಸಕ್ಕೆ ನಿಂತಾಗ ತಂದೆಯವರು ಆಚಾರ್ಯ ದೇಶಭೂಷಣ ಮಹಾರಾಜರ ಹತ್ತಿರ ಕುಳಿತಿದ್ದಾಗ ಆಚಾರ್ಯರು ಹೇಳುತ್ತಿದ್ದರು. ಲಾಲ್ ಛೋಟೆಲಾಲ್ ನೀನು ಚಿಕ್ಕವನಲ್ಲ ದೊಡ್ಡವನು. ನೀನು ಇಂತಹ ಅನುಪಮ ಕನ್ಯಾರತ್ನಕ್ಕೆ ಜನ್ಮ ನೀಡಿದ್ದೀಯ. ಇವಳಿಂದ ಇಡೀ ಭಾರತದೇಶದಲ್ಲಿಯೇ ಧರ್ಮ ಪ್ರಭಾವನೆ ಆಗುತ್ತದೆ ಎಂದು. ಆಚಾರ್ಯರ ಈ ಭವಿಷ್ಯ ನುಡಿಗಳನ್ನು ಕೇಳಿದಾಗ ತಂದೆ ಗದ್ಗದಿತರಾಗುತ್ತಿದ್ದರು.

ತ್ಯಾಗದ ದೃಢತೆ

ಒಂದು ದಿನ ಗೊಲ್ಲರವಳು ತುಪ್ಪದ ಮಡಕೆ ತಂದು ಕೊಟ್ಟು ಹೋದಳು. ಆ ದಿನವೇ ತುಪ್ಪ ಸೋಸಿಕೊಳ್ಳಲು ಆಗಲಿಲ್ಲ. ಮಾರನೇ ದಿನ ತುಪ್ಪ ಸೋಸೋಣ ಎಂದು ಒಲೆಯ ಮೇಲೆ ಪಾತ್ರೆ ಇಟ್ಟು ಅದರ ಮೇಲಿನ ಬಟ್ಟೆ ತೆಗೆದು ನೋಡುತ್ತೇನೆ. ಅದರ ಭರ್ತಿ ಇರುವೆಗಳು ಸತ್ತಿದ್ದವು. ನಾನು ಪಾತ್ರೆಯನ್ನು ಹಾಗೇ ಇಟ್ಟು ಅಮ್ಮನಿಗೆ ವಿಷಯ ತಿಳಿಸಿದೆ. ಗೊಲ್ಲರವಳು ಪಾತ್ರೆ ವಾಪಸ್ಸು ತೆಗೆದುಕೊಳ್ಳಲು ಬಂದಾಗ ಪಾತ್ರೆ ಹಾಗೇ ಇದ್ದುದ್ದನ್ನು ಕಂಡು ಅವಳು ಕೇಳಿದಾಗ ವಿಷಯ ಹೇಳಿದೆ. ಅವಳು ಅಯ್ಯಾ ರಾಣೇ ನಾನೇ ನಿನಗೆ ಬಿಸಿ ಮಾಡಿ ಸೋಸಿಕೊಟ್ಟು ಹೋಗಬೇಕಾಗಿತ್ತು. ಹೀಗೆ ಮಾಡದಿದ್ದರೆ ನಾನು ತುಪ್ಪ ಮಾರಲು ಆಗುತ್ತದೆಯೇ ಎಂದಳು. ಈ ಮಾತು ಕೇಳಿ

ನನಗೆ ಗೊತ್ತಾಯಿತು. ಪೇಟೆಯಿಂದ ತರುವ ತುಪ್ಪದ ಸ್ಥಿತಿ ಹೀಗೆ ಎಂದು ತಿಳಿದು ಆ ದಿನದಿಂದ ಪೇಟೆಯ ತುಪ್ಪವನ್ನು ತ್ಯಾಗ ಮಾಡಿದೆ. ಅಲ್ಲಿಯವರೆಗೂ ಜೈನರ ಮನೆಗಳಲ್ಲಿ ಬೆಣ್ಣೆ ತೆಗೆದು ತುಪ್ಪ ಮಾಡಿಕೊಳ್ಳುತ್ತಿರಲಿಲ್ಲ. ತುಪ್ಪ ಇಲ್ಲದೆ ಮಕ್ಕಿಗೆ ಏನು ಮಾಡುವುದು ಎಂದು ತಾಯಿಯ ಯೋಚನೆ. ಆದರೆ ನಾನು ಮನೆಯಲ್ಲಿ ಸುತಾರಾಂ ಈ ತುಪ್ಪ ಬಳಸುವುದನ್ನು ತಡೆದೆ. ಕೊನೆಗೆ ಅಮ್ಮನು ಒಪ್ಪಿಕೊಳ್ಳಲೇಬೇಕಾಯಿತು. ತುಪ್ಪದ ಬದಲು ರೊಟ್ಟಿಯನ್ನು ಹಾಲಿನಲ್ಲಿ ನೆನಸಿ ಕೊಡತೊಡಗಿದರು. ಈ ನನ್ನ ಧೃಢತೆಯಿಂದ ಅಮ್ಮನಿಗೆ ಅನ್ನಿಸತೊಡಗಿತು. ಈ ಹುಡುಗಿ ಖಂಡಿತ ಮದುವೆ ಮಾಡಿಕೊಳ್ಳುವುದಿಲ್ಲ ಎಂದು.

೩

ವೈರಾಗ್ಯದ ಬಹಿರಂಗ

ಒಂದು ದಿನ ವಡವೆಗಳ ನಮೂನೆಗಳನ್ನು ಹಿಡಿದುಕೊಂಡು ಕಾರಕೂನರು ಬಂದು ಹೇಳಿದರು. ಲಾಲರು ಹೇಳಿದ್ದಾರೆ ಮೈನಾಳಿಗೆ ತೋರಿಸಿ ಅವಳು ಇಷ್ಟಪಡುವ ಡಿಸೈನ್ ಕೇಳಿಕೊಂಡು ಬಾ ಎಂದು ಅದಕ್ಕೆ ನಾನು ಹೇಳಿದೆ ಶಾಂತಿಗೆ ತೋರಿಸಿಕೊಂಡು ಹೋಗು ಎಂದೆ. ಅದನ್ನು ಕೇಳಿದ ಅಮ್ಮ ಊರಿನಲ್ಲಿ ಎಲ್ಲರೂ ಮೈನಾ ಮದುವೇನೇ ಆಗುವುದಿಲ್ಲವಂತೆ ಬ್ರಹ್ಮಚರ್ಯವನ್ನು ತೆಗೆದುಕೊಳ್ಳುತ್ತಾಳಂತೆ ಎಂದೆಲ್ಲ ಮಾತನಾಡುತ್ತಿದ್ದಾರೆ ಎಂದು ತಂದೆ ಬಂದ ಮೇಲೆ ನನಗೆ ಸಮಾಧಾನ ಮಾಡತೊಡಗಿದರು. ನಾನು ಅವರಿಗೆ ಮತ್ತೆ ಧಾರ್ಮಿಕತೆ ಅರಿವು ಮೂಡಿಸತೊಡಗಿದೆ. ಆಗ ಅವರು ಸುಮ್ಮನಾಗಿಬಿಟ್ಟರು. ಮಾರನೆಯ ದಿನ ಅವರು ಮಹಮೂದಾಬಾದ್‌ಗೆ ಹೊರಟರು. ಮಹೀಪಾಲದಾಸ್ ಮಾವನನ್ನು ಕರೆತಂದರು. ಮೊದಲು ಅವರು ನನಗೆ ತಿಳುವಳಿಕೆ ಹೇಳಲು ತೊಡಗಿದರು. ನಂತರ ನನ್ನನ್ನೆ ಪ್ರಶ್ನಿಸತೊಡಗಿದರು. ನಿನಗೆ ವೈರಾಗ್ಯ ಹೇಗೆ ಬಂದಿತು ? ಇನ್ನೂ ನೆನ್ನೆ ಮೊನ್ನೆ ಕಣ್ಣು ಬಿಟ್ಟಿದ್ದೀಯ, ನಾನು ಹೇಳಿದ ನನಗೆ ಪದ್ಮನಂದಿಪಂಚವಿಂಶತಿಕಾ ಓದಿ ವೈರಾಗ್ಯ ಉಂಟಾಯಿತು ನೀವೆ ಓದಿ ಅದು ಎಷ್ಟು ಒಳ್ಳೆಯ ಗ್ರಂಥ.

ದುಃಖಂ ಕಿಂಚಿತ್ ಸುಖಂ ಕಿಂಚಿತ್ ಚಿತ್ತಂ ಭಾತಿ ಜಡಾತ್ಮನಃ ।
ಸಂಸಾರೇ ತು ಪುನರ್‌ನಿತ್ಯಂ, ಸರ್ವೆ ದುಃಖಂ ವಿವೇಕಿನಃ ॥

ಸಂಸಾರದಲ್ಲಿ ಸುಖವು ಇರುತ್ತದೆ. ದುಃಖವು ಇರುತ್ತದೆ ಎಂದು ಮೂಢಾತ್ಮರಿಗೆ ಅನ್ನಿಸುತ್ತದೆ. ಆದರೆ ವಿವೇಕಶೀಲರಿಗಾದರೋ ಸಂಸಾರದಲ್ಲಿ ಯಾವಾಗಲು ದುಃಖವೇ ಕಂಡುಬರುತ್ತಿದೆ. ಮುಂತಾದ ಹಲವಾರು ಶ್ಲೋಕಗಳನ್ನು ಅವರಿಗೆ ತಿಳಿಸಿದೆ.

ಮಾಮನಿಗಂತೂ ಸಿಟ್ಟು ನೆತ್ತಿಗೇರಿತು. ಯದ್ವಾತದ್ವಾ ಬಯ್ಯತೊಡಗಿದರು. ನಾನು ಸುಮ್ಮನಾಗಿಬಿಟ್ಟೆ. ಸ್ವಲ್ಪ ಹೊತ್ತಾದ ಮೇಲೆ ಅವರೇ ಸಮಾಧಾನ ಪಡಿಸುತ್ತಾ ಹೇಳಿದರು, ನೋಡು ಮಗಳೇ ಜೈನಶಾಸ್ತ್ರದ ಪ್ರಕಾರ ಕುಮಾರಿಯರು ದೀಕ್ಷೆ ತೆಗೆದುಕೊಳ್ಳುವುದಿಲ್ಲ ಎಂದರು. ಆಗ ನಾನು ಕೇಳಿದೆ. ಮತ್ತೆ ಬ್ರಾಹ್ಮೀ ಸುಂದರೀ. ಅನಂತಮತೀ ಮತ್ತು ಚಂದನೆಯರು ಹೇಗೆ ತೆಗೆದುಕೊಂಡರು. ಆಗ ಅವರೆಂದರು ಅವರೆಲ್ಲ ನಪುಂಸಕರು.

ಅವರ ಆ ಮಾತುಗಳು ಇಂದಿಗೂ ನನ್ನ ಮನಸ್ಸಿನಲ್ಲಿ ನಿಂತುಬಿಟ್ಟಿದೆ. ನನಗೆ ಒಂದು ಕ್ಷಣ ಆಶ್ಚರ್ಯವಾಯಿತು. ಏಕೆಂದರೆ ಸರಳ ಸ್ವಭಾವಳಾದ ನಾನು ಮನುಷ್ಯರ ಮಾಯಾ ಪ್ರಪಂಚ ಕುಟಿಲತೆಯ

ವ್ಯವಹಾರ ನೋಡಿ ದಂಗಾದೆ. ಪುನಃ ಯೋಚಿಸಿ ಹೇಳಿದೆ. ಮಾಮ, ನಪುಂಸಕರಾಗಿದ್ದರೆ ಶಾಸ್ತ್ರಗಳಲ್ಲಿ ಅವರನ್ನು ಕನ್ಯೆಯರೆಂದು ಏಕೆ ಕರೆದಿದ್ದಾರೆ. ಹೀಗೆ ಮಾತುಕತೆ ನಡೆದ ಮೆಲೆ ಮಾಮ ಹೇಳಿದರು. ನೋಡು ಮಗಳೇ ನಿನ್ನ ದೇಹ ಸೂಕ್ಷ್ಮವಾಗಿದೆ. ನೀನು ದೀಕ್ಷೆ ತೆಗೆದುಕೊಳ್ಳಲಾರೆ ದೀಕ್ಷೆ ಅಂದರೆ ಒಂದು ನಲವತ್ತು ವರ್ಷವಾದರು ಆಗಲಿ ಎಂದರು ಅದಕ್ಕೆ ಸಾವು ಯಾವತ್ತು ಬರುತ್ತೇ ಎಂದು ಯಾರಿಗೂ ಗೊತ್ತಿಲ್ಲವಲ್ಲ. ಈ ಶರೀರವನ್ನು ತಪಿಸುವುದರಲ್ಲೇ ನಿಜವಾದ ಆನಂದವಿದೆ. ಅವರು ತಿಳಿಸಿ ಹೇಳಿದರು, ಬೈದರು, ಹೀಯಾಳಿಸಿದರು. ಆದರೆ ನಾನು ಮಾತ್ರ ಜಗ್ಗಲಿಲ್ಲ. ಆಗ ಸಿಟ್ಟೆಲ್ಲವನ್ನು ಅಕ್ಕನ ಮೇಲೆ ತಿರುಗಿಸಿದರು. ನೀನೇ ಅವಳಿಗೆ ದರ್ಶನಕಥೆ, ಶೀಲಕಥೆ ಮುಂತಾದವನ್ನೆ ಓದಿಸಿ ಅವಳ ಮನಸ್ಸನ್ನು ಅತ್ತ ಕಡೆ ಹೋಗುವಂತೆ ಮಾಡಿದ್ದೀಯ. ಈಗ ನೋಡು ಪರಿಣಾಮವನ್ನು ನೀನೇ ಅನುಭವಿಸು ಎಂದು ಹೇಳಿ ಅವರು ಮಾರನೆಯ ದಿನ ಮಹಮೂದಾಬಾದಿಗೆ ಹೊರಟುಹೋದರು. ತಂದೆಯ ಮನಸ್ಸು ವಿಕ್ಷಿಪ್ತಗೊಂಡಿತು. ಅವರು ಸಮಯ ಸಿಕ್ಕಾಗಲೆಲ್ಲ ನನ್ನ ಮನಸ್ಸು ತಿರುಗಿಸಲು ಪ್ರಯತ್ನಿಸುತ್ತಲೇ ಇದ್ದರು. ನಾನು ಧಾರ್ಮಿಕ ಸಮಂಜಸತೆಯನ್ನು ಸಮರ್ಥಿಸುತ್ತಲೇ ಇದ್ದೆ.

ನೋಡಿ ಅಪ್ಪ ನಾವು ಆ ಅನಂತ ಸಂಸಾರದಲ್ಲಿ ಎಷ್ಟು ಜನ್ಮ ಎತ್ತಿದ್ದೇವೆಯೋ ಆಗೆಲ್ಲ ತಂದೆ-ತಾಯಿ ಯಾರ್ಯಾರೋ. ಈ ಸಂಬಂಧ ಎಲ್ಲ ಸುಳ್ಳು, ಅನಂತಮತಿ, ಜಂಬೂಸ್ವಾಮಿಯರ ಚಾರಿತ್ರದ ಬಗ್ಗೆ ಹೇಳುತ್ತಿದ್ದೆ. ಕೇಳಿದಾಗ ಶಾಂತವಾದಂತೆ ಕಂಡುಬರುತ್ತಿದ್ದರು. ದೊಡ್ಡಪ್ಪ ಬಾಬೂಮಲ್‌ರಲ್ಲಿ ತಮ್ಮ ಅಂತರಂಗದ ನೋವನ್ನು ಹೇಳಿಕೊಳ್ಳುತ್ತಿದ್ದರು. ಅವರು ಏನು ಹೋಗುವುದಿಲ್ಲ ಸುಮ್ಮನಿರು ಜೋರು ಮಾಡಿ ಮದುವೆ ಮಾಡಿ ಬಿಡೋಣ ಈಗ ಏನಾದರು ಹೇಳಿಕೊಳ್ಳುತ್ತಿರಲಿ. ಈಗಲೇ ಅವಳು ಏನು ತಿಳಿದುಕೊಂಡಿದ್ದಾಳೆ, ಇನ್ನು ಹಾಲುಗಲ್ಲಿನ ಕೂಸು. ಇವಳು ಬ್ರಹ್ಮಚರ್ಯ ವ್ರತ ತೆಗೆದುಕೊಳ್ಳುತ್ತಾಳೆ ಎಂದರೆ ಜನ ನಮ್ಮ ಬಗ್ಗೆ ಏನು ತಿಳಿದುಕೊಳ್ಳುತ್ತಾರೆ.

ನಮ್ಮ ತಂದೆಯವರ ಪುಣ್ಯ, ಅಣ್ಣ ತಮ್ಮಂದಿರು ಇಬ್ಬರು. ಮನೆಯ ವ್ಯವಹಾರದಲ್ಲಿ ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದರು. ಆದರೆ ನನ್ನ ವಿಷಯದಲ್ಲಿ ನನ್ನ ಮನಸ್ಸಿಗೆ ವಿರುದ್ಧವಾದುದ್ದನ್ನು ಹೇಳತೊಡಗಿದರು.

ಅಕ್ಕಪಕ್ಕದ ಜನರೆಲ್ಲ ಮಾತಾಡತೊಡಗಿದರು. ಈ ಪ್ರಾಂತ್ಯದಲ್ಲಿ ನೂರಾರು ವರ್ಷಗಳಿಂದ ಯಾವ ಹುಡುಗಿಯು ಮನೆಬಿಟ್ಟು ಬ್ರಹ್ಮಚರ್ಯೆಯನ್ನು ತೆಗೆದುಕೊಂಡಿಲ್ಲ ಎಂದು ಅದಕ್ಕೆ ಕೆಲವರು ನೂರಾರು ಏಕೆ ಸಾವಿರಾರು ವರ್ಷದಿಂದಲೂ ಯಾರು ತೆಗೆದುಕೊಂಡಿಲ್ಲ ಎಂದು ಈ ಹುಡುಗಿ ವ್ರತ ತೆಗೆದುಕೊಳ್ಳಲು ಸಾಧ್ಯವಿಲ್ಲ. ಇಂತಹ ಮಾತುಗಳು ತಂದೆಯವರನ್ನು ಧೃತಿಗೆಡಿಸುತ್ತಿದ್ದವು. ಇದರಿಂದಾಗಿ ನನ್ನನ್ನು ಮನೆಯಲ್ಲಿಯೇ ತಡೆಯುತ್ತಿದ್ದರು. ಒಂದು ಸಲ ಊರಿನ ಸನ್ಯಾನ್ಯ ಧರ್ಮಾತ್ಮರಾದ ಪನ್ನಾಲಾಲರಿಗೆ ಹೇಳುತ್ತಿದ್ದರು. ಬನ್ನಿ ನಮ್ಮ ಹುಡುಗಿಗೆ ಸ್ವಲ್ಪ ಹೇಳಿ ಬ್ರಹ್ಮಚರ್ಯ ತೆಗೊತೀನಿ ಅನ್ನುವುದನ್ನು ತಡೆಯಿರಿ ಎಂದು. ಅವರು ಬಂದು ಪ್ರೀತಿಯಿಂದ ಮಗಳೇ ನಿನ್ನ ಶರೀರ ತುಂಬ ಸೂಕ್ಷ್ಮವಾದುದು ಒಂದು ಉಪವಾಸ ಮಾಡುವುದು ಕೂಡ ನಿನಗೆ ಕಷ್ಟ, ಅಂತಹದರಲ್ಲಿ ನೀನು ಏನು ಯೋಚಿಸುತ್ತಿದ್ದೀಯ ಇವತ್ತಿನ ಪ್ರಪಂಚ ಬಹಳ ಕೆಟ್ಟದ್ದು. ಆದ್ದರಿಂದ ಮನೆಯಲ್ಲಿಯೇ ಇದ್ದು ವ್ರತವನ್ನು ಆಚರಿಸು ಎಂದರು.

ದೊಡ್ಡವರಿಗೆ ಎದುರುತ್ತರ ಕೊಟ್ಟು ಅಭ್ಯಾಸ ಇಲ್ಲದಿದ್ದರು ಧೈರ್ಯ ಮಾಡಿ ಹೇಳಿದೆ. ಬಾಬುಜೀ ಈ ಸಂಸಾರದಲ್ಲಿ ಮನುಷ್ಯ ಜನ್ಮವನ್ನು ಪಡೆಯುವುದು ಬಹಳ ಕಷ್ಟ. ಇಂತಹುದರಲ್ಲಿ ಮನುಷ್ಯ ಜನ್ಮ ಪಡೆದುಕೊಂಡೆ ಸಂಯಮವನ್ನು ಪಾಲನೆ ಮಾಡಬೇಕು. ಅದು ವೈರಾಗ್ಯ ಭಾವನೆಯಲ್ಲಿ ಇದೆ.

ಪೋಷತ ತೋ ದುಃಖ ದೋಷ ಕರೇ ಅತಿ ಸೋಷತ ಸುಖ ಉಪಜಾ
ದುರ್ಜನ ದೇಹ ಸ್ವಭಾವ ಬರಾಬರ, ಮುತಖ ಪ್ರೀತಿ ಬಢಾವೇ

ರಾಚನ ಜೋಗ ಸರೂಪನ ಯಾಕೋ ವಿರಚನ ಜೋಗ ಸಹೀ ಗೈ
ಯಹ ತನ ಪಾಯ ಮಹಾತಪ ಕೀಜೆ, ಯಾಮೇ ಸಾರ ಯಹೀ ಹೈ

ನೋಡು ಈ ಶರೀರಕ್ಕೆ ಲಾಲನೆ ಪಾಲನೆ ಮಾಡಿದಷ್ಟು ದುಃಖ ಮತ್ತು ಪಾಪವೇ ಉಂಟಾಗುತ್ತದೆ. ಆದರೆ ನಾವು ಶರೀರವನ್ನು ಒಣಗಿಸಿದರೆ ಪರಲೋಕದಲ್ಲಿ ಅನೇಕ ಸುಖವನ್ನು ಹೊಂದುತ್ತದೆ. ಇದು ಆಶೆಪಡುವುದಕ್ಕೆ ಯೋಗ್ಯವಲ್ಲ. ಇದರ ಬಗ್ಗೆ ವಿರಕ್ತಿ ಹೊಂದುವುದೇ ಒಳ್ಳೆಯದು. ಈ ಶರೀರವನ್ನು ಪಡೆದಿರುವುದು ತಪವನ್ನು ಮಾಡುವುದಕ್ಕೆ ಇದೇ ಮನುಷ್ಯ ಜೀವನದ ಸಾರ್ಥಕತೆ. ಅದಕ್ಕೆ ಅವರು ನಿನ್ನ ಶರೀರ ಇನ್ನೂ ಸದೃಢವಾಗಲಿ ಆಗ ವ್ರತಗಳನ್ನು ಕೈಕೊಳ್ಳು. ಈಗ ನಿನ್ನ ಶರೀರ ಬಹಳ ಕೃಶವಾಗಿದೆ ಎಂದರು. ಅಷ್ಟರಲ್ಲಿ ಅಮ್ಮ ಇವಳು ದೇವಸ್ಥಾನದಿಂದ ಬರುತ್ತಲೇ ಹಾಲನ್ನು ಕೈಗೆ ಕೊಟ್ಟರೆ ಸರಿ. ಇಲ್ಲ ಎಂದರೆ ತಲೆಸುತ್ತಿ ಬೀಳುತ್ತಾಳೆ. ಇನ್ನು ಇವಳು ಉಪವಾಸ ಮಾಡಿದಂತೆ ಎಂದರು. ಅದಕ್ಕೆ ನಾನು ಎಲ್ಲ ನಿಧಾನವಾಗಿ ಅಭ್ಯಾಸವಾಗುತ್ತದೆ ನಂತರ ತನ್ನಿಂದ ತಾನೇ ಸಹನಾಶಕ್ತಿ ಬರುತ್ತದೆ. ಎಷ್ಟು ಉಪವಾಸ ಮಾಡಬೇಕೊ ಅಷ್ಟು ಮಾಡೇ ತೀರುತ್ತೇನೆ. ದಿನಕ್ಕೆ ಒಮ್ಮೆ ತಿಂದರು ಸಾಕು ದೇಹಕ್ಕೆ ನೋಡು ಅನಂತಮತಿ ಎಷ್ಟೆಲ್ಲ ಕಷ್ಟಗಳನ್ನು ಸಹಿಸಿಯು ಕೂಡ ಆತ್ಮ ಕಲ್ಯಾಣವನ್ನು ಮಾಡಿಕೊಂಡು, ಸ್ತ್ರೀಪರ್ಯಾಯದಿಂದ ಬಿಡುಗಡೆ ಹೊಂದಿ ದೇವನಾಗಲಿಲ್ಲವೇ.

ಹೀಗೆ ಎಷ್ಟು ಹೊತ್ತಿನವರೆಗೆ ಚರ್ಚೆ ನಡೆಯಿತು. ಆದರೆ ನನ್ನ ದೃಢತೆಯನ್ನು ನೋಡಿ ಅವರು ಹೊರಟುನಿಂತು, ನನ್ನ ತಂದೆಯ ಜೊತೆ ಹೇಳಿದರು. ಇವಳಿಗೆ ಯಾರಾದರು ತಿಳಿಯ ಹೇಳಲು ಬಂದರೆ ಅವರಿಗೆ ಇವಳೇ ತಿಳುವಳಿಕೆ ಹೇಳಿ ಬಿಡುತ್ತಾಳೆ ಎಂದರು. ಕೆಲವು ದಿನಗಳ ನಂತರ ತಂದೆಯವರು, ಮಂದಿರದ ಹತ್ತಿರವೇ ಇದ್ದ ಧರ್ಮಾತ್ಮರಾದ ಬಾಬುಲಾಲರನ್ನು ಕರೆತಂದರು. ಅವರು ತಿಳುವಳಿಕೆ ಹೇಳ ತೊಡಗಿದರು. ನೋಡು ಮಗಳೇ ಈ ದಿನಗಳಲ್ಲಿ ಬ್ರಹ್ಮಚಾರಿಗಳಿಗೆ ಮತ್ತು ತ್ಯಾಗಿಗಳಿಗೆ ಬೆಲೆ ಇಲ್ಲ. ಅವರೆಲ್ಲ ಹೊಟ್ಟೆ ಹೊರೆಯಲು ಮನೆಬಿಟ್ಟು ಬರುತ್ತಾರೆ. ಸಮಾಜದಲ್ಲಿ ಅವರನ್ನು ಹೇಗೆ ನಡೆಸಿಕೊಳ್ಳುತ್ತಿದ್ದಾರೆ ಎಂಬುದನ್ನು ನಾವೇ ನೋಡುತ್ತಿದ್ದೇವಲ್ಲ ಎಂದರು.

ಅದಕ್ಕೆ ನಾನು ಯಾರು ಆತ್ಮಕಲ್ಯಾಣ ಮಾಡಿಕೊಳ್ಳಬೇಕೆಂದು ಬಯಸುತ್ತಾರೋ ಅವರು ಸಮಾಜದಿಂದ ಆಗುವ ಮಾನ-ಸಮ್ಮಾನದ ಬಗ್ಗೆ ಗಮನಕೊಡುವುದಿಲ್ಲ. ನನ್ನ ಪುಣ್ಯ ಚೆನ್ನಾಗಿದ್ದರೆ, ಯಶಕೀರ್ತಿಯ ಕರ್ಮ ಉದಯಕ್ಕೆ ಬಂದರೆ ಜನ ಗೌರವ ಕೊಡುತ್ತಾರೆ. ಇಲ್ಲ ಎಂದರೆ ಅಪಮಾನ ಮಾಡಲಿ ಬಿಡಿ. ತ್ಯಾಗಿಗಳ ಕರ್ತವ್ಯ ಎಂದರೆ ತಮ್ಮ ಚಾರಿತ್ರ್ಯವನ್ನು ಶುದ್ಧವಾಗಿಟ್ಟುಕೊಳ್ಳುವುದು ಇಲ್ಲ ಅಪಮಾನವಾಗುವಂತಹ ಸಮಯ ಬಂದರೆ ಇನ್ನೇನು ಮಾಡುವುದು. ಶಾಸ್ತ್ರ ಪುರಾಣದಲ್ಲೇ ಎಂತೆಂತಹ ಮುನಿಗಳನ್ನು ಹುರಿದು ಮುಕ್ಕಿದ ಕಥೆಗಳಿವೆಯಲ್ಲ.

ಅಭಿನಂದನ ಮುನಿ ಆದಿ ಪಂಚ ಸೌ: ಧಾನೀ ಪೆಲಜು ಮಾರೇ
ತೋ ಭೀ ಶ್ರೀಮುನಿ ಸಮತಾಧಾರೀ, ಪೂರಬ್‌ಕರ್ಮ ವಿಚಾರೇ.

ಈ ರೀತಿ ನಾನು ಹಲವಾರು ಉದಾಹರಣೆಗಳನ್ನು ಕೊಟ್ಟು ಸಮರ್ಥಿಸತೊಡಗಿದೆ. ಇದನ್ನು ನೋಡಿ ಅವರಿಗೆ ಆಶ್ಚರ್ಯವಾಗತೊಡಗಿತು. ಅವರು ಎದ್ದು ಹೊರಡುವಾಗ ತಂದೆಯ ಹತ್ತಿರ ಹೇಳಿದರು. ಛೋಟೆಲಾಲ ನಿನ್ನ ಮಗಳು ಹೆಸರಿಗೆ ತಕ್ಕಂತೆ ವಿದುಷಿಯೇ. ಅವಳ ಮಾತು ಕೇಳುತ್ತಿದ್ದರೆ ನಮಗೂ ಸಂಸಾರದಲ್ಲಿ ವಿರಕ್ತಿ ಬರುತ್ತಿದೆ ಎಂದರು. ಆನಂತರ ಯಾರನ್ನು ಕರೆದರು ಅವರು ಅವಳು ತನ್ನ ನಿರ್ಧಾರದಲ್ಲಿ ಅಚಲಳಾಗಿದ್ದಾಳೆ. ಅವಳನ್ನು ಸಮಜಾಯಿಸುವುದು ಸಾಧ್ಯವಿಲ್ಲ ಎನ್ನತೊಡಗಿದರು.

ಪೂಜೆಯ ಬಗ್ಗೆ ಪ್ರೀತಿ

ನನಗೆ ಪೂಜೆ ಮಾಡುವುದೆಂದರೆ ಇನ್ನಿಲ್ಲದ ಆಶೆ. ಅಲ್ಲಿಯವರೆಗೆ ಮಹಿಳೆಯರು ದೇವಸ್ಥಾನದಲ್ಲಿ ಸಂಕೋಚದಿಂದ ಪೂಜೆ ಮುಗಿಸಿ ಬರುತ್ತಿದ್ದರು. ನಾನು ಸುಖಾಸನದಲ್ಲಿ ಕುಳಿತು ಪೂಜೆ ಮಾಡಲಾರಂಭಿಸಿದೆ. ನನ್ನ ತಾಯಿಯು ಜೊತೆಗೂಡತೊಡಗಿದಳು. ಆರಾಮವಾಗಿ ಪೂಜೆ ಮಾಡಿ ಚೌಕದಲ್ಲೇ ಸ್ವಾಧ್ಯಾಯ ಮಾಡತೊಡಗುತ್ತಿದ್ದೆ. ಅದನ್ನು ಕಂಡ ಕೆಲವು ಹೆಂಗಸರು ಕೇಳುವಂತೆಯೇ ಹೇಳತೊಡಗಿದರು.

ಧರ್ಮಾತ್ಮಳಾಗಿದ್ದು ಆಯಿತು. ಈಗ ಪೂಜಾರಿಣಿಯು ಆಗುತ್ತಿದ್ದಾಳೆ ಎಂದು. ನನಗೆ ಒಳ್ಳೆ ಕೆಲಸ ಮಾಡುತ್ತಿದ್ದೇನೆ ಎಂಬ ಭಾವನೆ ಇದ್ದುದ್ದರಿಂದ ಅವರ ಹಾಸ್ಯ ಯಾವುದು ನನಗೆ ಏನು ಅನ್ನಿಸುತ್ತಿರಲಿಲ್ಲ. ಆದರೆ ಇಲ್ಲಿಯವರೆಗೆ ದೇವಸ್ಥಾನದಲ್ಲಿ ನಿರ್ಭಯವಾಗಿ ಕುಳಿತು ಪೂಜೆ, ಸ್ವಾಧ್ಯಾಯ ಮಾಡಲು ಅಂಜುತ್ತಿದ್ದ ಹೆಂಗಸರು ನಿಧಾನವಾಗಿ ನನ್ನಿಂದ ಧೈರ್ಯ ಬಂದವರಂತೆ ಎಲ್ಲರು ನನ್ನನ್ನು ಅನುಸರಿಸತೊಡಗಿದರು.

ಇಂದು ಕೂಡ ಟಿಕ್ಕೆತ ನಗರದಲ್ಲಿ ನಲವತ್ತು ಮನೆಗಳಿವೆ. ಗಂಡಸರು ಹೆಂಗಸರೆಲ್ಲ ಮಡಿಬಟ್ಟೆ ಧರಿಸಿ, ಭಗವಂತನಿಗೆ ಪಂಚಾಮೃತ ಅಭಿಷೇಕ ಪೂಜೆಗಳನ್ನು ಶ್ರದ್ಧೆಯಿಂದ ಮಾಡುತ್ತಾ ಬಂದಿದ್ದಾರೆ. ಇಂದ್ರಧ್ವಜ ಆರಾಧನೆಯಲ್ಲಿ ಐವತ್ತು ಜೋಡಿಗಳು ಕುಳಿತು ಪೂಜೆ ಮಾಡಿದ ಸುದ್ದಿ ಕೇಳಿದ್ದೇನೆ. ಹಾಗೆ ಋಷಿಮಂಡಲ ವಿಧಾನ ಪೂಜೆ ವಿಧಾನಗಳ ಬಗ್ಗೆಯು ತಿಳಿದು ಪೂಜೆಯನ್ನು ಮಾಡತೊಡಗಿದ್ದಾರೆ. ನಮ್ಮೂರಿನ ಕೆಲವು ಹೆಂಗಳೆಯರು ಎಷ್ಟು ಎಚ್ಚೆತ್ತಿದ್ದಾರೆ ಎಂದರೆ ಅಷ್ಟಮಿ ಚತುರ್ದಶಿಯಂದು ಮಧ್ಯಾಹ್ನದ ಹೊತ್ತು ಎಲ್ಲ ಸೇರಿಕೊಂಡು ಸ್ವಾಧ್ಯಾಯ, ಚರ್ಚೆಗಳಲ್ಲಿ ಪಾಲುಗೊಳ್ಳತೊಡಗಿದರು. ಈ ಕಾರ್ಯಕ್ರಮ ಬಹಳ ದಿನ ನಡೆಸಿದರು. ಜನಗಳಲ್ಲಿ ತಿಳಿಯುವ ಜಾಗ್ರತೆ ಉಂಟಾಗಿದ್ದುದನ್ನು ಕೇಳಿ ಮನಸ್ಸಿಗೆ ಹಿತ ಅನ್ನಿಸಿತು.

ನಮ್ಮ ತಾಯಿ 1971ರಲ್ಲಿ ದೀಕ್ಷೆ ತೆಗೆದುಕೊಂಡರು. ಅದಕ್ಕಿಂತ ಮೊದಲು ಅವರು ಹೆಂಗಸರಿಗೆಲ್ಲ ತತ್ತ್ವಾರ್ಥಸೂತ್ರ, ಭಕ್ತಾಮರ ಸಹಸ್ರನಾಮ ಮುಂತಾದ ಪಾಠಗಳನ್ನು ಹೇಳಿಕೊಡುತ್ತಿದ್ದರು. ರಾತ್ರಿ ಹೊತ್ತು, ಶಾಸ್ತ್ರಗಳನ್ನು ಓದಿಸುತ್ತಿದ್ದರು. ಇದು ಇವರ ದಿನಚರಿಯಾಗಿತ್ತು. ಇದರಿಂದ ಮಹಿಳೆಯರು ಬಹಳ ಪ್ರಭಾವಿತರಾಗಿದ್ದರು. ಆದರೆ ಅವರ ದೀಕ್ಷೆಯ ನಂತರ ಇದೆಲ್ಲಕ್ಕು ಹಿನ್ನಡೆಯಾಯಿತು.

ಯಾವುದೇ ಹೊಸ ಕೆಲಸ ಮಾಡಲು ಹೋದಾಗ ಜನರಿಂದ ಹಾಸ್ಯಕ್ಕೆ ಒಳಗಾಗುತ್ತಿದ್ದುದ್ದು. ಇಲ್ಲ ಅವಮಾನವನ್ನು ಸಹಿಸುತ್ತಿದ್ದುದ್ದು. ಇಲ್ಲ ಬೈಗುಳವನ್ನು ಕೇಳುತ್ತಿದ್ದುದ್ದು. ಆದರೆ ಇದೆಲ್ಲವನ್ನು ನಾನು ಲೆಕ್ಕಿಸದೆ. ನನ್ನ ನಿರ್ಧಾರದಲ್ಲಿ ದೃಢವಾಗಿರುತ್ತಿದ್ದೆ. ಇದೇ ದೃಢತೆ ಇಂದಿಗೂ ನನ್ನ ಮನೋಬಲವನ್ನು ಹೆಚ್ಚಿಸಿದೆ. ಯಾವುದೇ ಶುಭಕೆಲಸವನ್ನು ನಾನು ಪ್ರಾರಂಭ ಮಾಡಿದಾಗಲೂ ಬಿಡದ ಛಲ ನನಗೆ ಹಿಂದಿನ ಜನ್ಮದ ಪುಣ್ಯ ವಿಶೇಷವಿರಬೇಕು. ಯಾರಾದರು ಒಳ್ಳೆ ಕೆಲಸ ಪ್ರಾರಂಭ ಮಾಡಿ ನಿಂದನೆಯನ್ನು ಕೇಳಿ ಬಿಟ್ಟುಬಿಟ್ಟರೆ ಅದನ್ನು ಕೇಳಿ ನನಗೆ ಬಹಳ ಕರುಣೆ ಉಂಟಾಗುತ್ತದೆ. ಒಳ್ಳೆ ಕೆಲಸ ಮಾಡುವಾಗ ವಿರೋಧ ಬಂದೇ ಬರುತ್ತದೆ. ಆದರೆ ಅದನ್ನು ಮಧ್ಯ ಬಿಡಬಾರದು. ಚಿಕ್ಕ ಪುಟ್ಟ ವಿಘ್ನಗಳಿಗೆ ಜನ ಏಕೆ ಹಿಂಜರಿಯುತ್ತಾರೋ ಗೊತ್ತಿಲ್ಲ. ಇದೆಲ್ಲ ನನಗೆ ಚಿಕ್ಕಂದಿನಲ್ಲಿ ಆದ ಅನುಭವಗಳು.

ನನ್ನ ಅನುಭವದಂತೆ ಯಾರ ಮನೋಬಲ ಗಟ್ಟಿ ಇರುತ್ತದೆಯೋ ಅವರು ತಮ್ಮ ಕೆಲಸದಲ್ಲಿ ಸಫಲತೆಯನ್ನು ಪಡೆದೇ ಪಡೆಯುತ್ತಾರೆ. ಎಷ್ಟೇ ನಿಧಾನವಾದರು, ಕೆಲಸ ಸಾಧಿಸಿಯೇ ಸಾಧಿಸುತ್ತಾರೆ. ಯಾರ ಹೃದಯದಲ್ಲಿ ಜಿನೇಂದ್ರ ದೇವನ ಬಗ್ಗೆ ಭಕ್ತಿ ಇದೆಯೋ ಆಗಮದಂತೆ ನಡೆದುಕೊಳ್ಳುತ್ತಾರೋ, ಅವರು ಜನಗಳ ಮಾತಿಗೆ ಹೆದರುವ ಅವಶ್ಯಕತೆ ಇಲ್ಲ.

ಅದ್ಭುತವಾದ ಕನಸು

ಒಂದು ದಿನ ರಾತ್ರಿಯ ಕೊನೆಯ ಜಾವದಲ್ಲಿ ಒಂದು ಕನಸನ್ನು ಕಂಡೆ. ನಾನು ಬಿಳಿ ಸೀರೆ ಉಟ್ಟುಕೊಂಡು ಪೂಜೆಯ ಸಾಮಾನುಗಳನ್ನು ಹಿಡಿದುಕೊಂಡು ದೇವಸ್ಥಾನದ ಕಡೆಗೆ ಹೋಗುತ್ತಿದ್ದೆ. ಆಕಾಶದಲ್ಲಿ ಹುಣ್ಣಿಮೆಯ ಪೂರ್ಣಚಂದ್ರ ನನ್ನ ಜೊತೆ ಜೊತೆಯೇ ಬರುತ್ತಿದ್ದ. ನನ್ನ ಮೇಲೆ ಸುತ್ತಮುತ್ತ ಬೆಳದಿಂಗಳು ಬೀಳುತ್ತಿತ್ತು. ಆದರೆ ಬೇರೆ ಕಡೆ ಬೆಳದಿಂಗಳೇ ಇಲ್ಲ. ಈ ದೃಶ್ಯ ನೋಡಿ ಅಕ್ಕಪಕ್ಕದವರು ಮುಖದ ಮೇಲೆ ಬೆರಳಿಟ್ಟುಕೊಂಡು ನನ್ನನ್ನು ನೋಡಿ ಹೊಗಳುತ್ತಿರುವಂತೆ ಕಂಡೆ.

ನನಗೆ ಈ ಅದ್ಭುತ ಕನಸನ್ನು ಕಂಡು ಬಹಳ ಸಂತೋಷವಾಯಿತು. ನನ್ನ ಇಷ್ಟದಂತೆ ಆಗುತ್ತದೆ ಎಂದು. ಬೆಳಗ್ಗೆ ಸ್ನಾನ ಪೂಜೆ ಎಲ್ಲ ಆದ ಮೇಲೆ ಈ ಕನಸಿನ ವಿಚಾರವನ್ನು ನನ್ನ ತಮ್ಮ ಕೈಲಾಸಚಂದ್ರನಿಗೆ ಹೇಳಿದೆ. ಅವನು ತಕ್ಷಣ ಅಕ್ಕ ನಿನ್ನ ಇಷ್ಟ ಬೇಗ ನೆರವೇರುತ್ತದೆ ನೋಡುತ್ತಿರು ಎಂದ. ಸಂಜೆ ತಂದೆ ಕೆಲಸ ಮುಗಿದ ಮೇಲೆ ಮಹಡಿಗೆ ಬಂದು ಕುಳಿತಾಗ ಅವರಿಗೂ ನನ್ನ ಕನಸನ್ನು ಹೇಳಿದಾಗ ಅವರು ಜೋರಾಗಿ ನಗತೊಡಗಿದರು. ಮಗಳೇ ನೀನು ಮನೆಬಿಟ್ಟು ಹಾರಿಹೋಗಲು ನನ್ನನ್ನು ಮರುಳು ಮಾಡುತ್ತಿದ್ದೀಯ. ನನ್ನ ಕನಸನ್ನು ಎಲ್ಲರು ತಮಾಷೆ ಮಾಡಿದರು. ನನ್ನ ಕನಸಿನಿಂದ ತಂದೆ ತಾಯಿಗೆ ಇವಳು ಬೇಗ ಮನೆಯನ್ನು ತ್ಯಜಿಸುತ್ತಾಳೆಂದು ಅನ್ನಿಸತೊಡಗಿತು. ಹಾಗೇ ಮಗಳು ಎಲ್ಲರ ಹೊಗಳಿಕೆಗೆ ಪಾತ್ರಳಾಗುತ್ತಾಳೆಂದು ತಿಳಿದರು.

೪

ಆಚಾರ್ಯ ದೇಶಭೂಷಣರ ದರ್ಶನ

ಈ ನನ್ನ ವೈರಾಗ್ಯದ ಚರ್ಚೆ ನಡೆಯುತ್ತಿದ್ದಾಗಲೇ ತಂದೆ ಒಂದು ದಿನ ಬಂದು ಹೇಳಿದರು. ಲಖನೌನಲ್ಲಿ ಒಬ್ಬ ದಿಗಂಬರ ಮುನಿಗಳು ಬಂದಿದ್ದಾರಂತೆ. ಬಹಳ ಪ್ರಭಾವಶಾಲಿಗಳಂತೆ ಎಂದು.

ನನಗೆ ಅವರನ್ನು ದರ್ಶನ ಮಾಡುವ ತವಕ. ಆದರೆ ನನ್ನ ತಂದೆ ಕರೆದುಕೊಂಡು ಹೋಗಲು ಒಪ್ಪಲಿಲ್ಲ. ಅವರು ಅಲ್ಲಿ ನಿಲ್ಲಲಿಲ್ಲವಂತೆ ಅಂದರು. ನನ್ನ ವೈರಾಗ್ಯದ ವಿಷಯ ಹೇಗೆ ಆಚಾರ್ಯರಿಗೆ ಗೊತ್ತಾಯಿತು. ಟಿಕೈತ ನಗರದ ಒಬ್ಬ ಚಿಕ್ಕಹುಡುಗಿ ದೀಕ್ಷೆ ತೆಗೆದುಕೊಳ್ಳುತ್ತೇನೆ ಅನ್ನುವ ವಿಷಯವನ್ನು ಕೇಳಿ ಅವರು ಚಿಕ್ಕ ವಯಸ್ಸಿನಲ್ಲಿ ದೀಕ್ಷೆ ತೆಗೆದುಕೊಳ್ಳುತ್ತೇನೆ ಎನ್ನುವುದು ಸುಲಭದ ವಿಷಯವಲ್ಲ. ಇಂತಹ ಸ್ಮಶಾನ ವೈರಾಗ್ಯವನ್ನು ನಾನು ಬಹಳಷ್ಟು ನೋಡಿದ್ದೇನೆ ಎಂದರಂತೆ.

ಮಹಾರಾಜರು ಹೇಳಿದ ಮಾತು ಹೇಗೋ ನನ್ನ ಕಿವಿಗೂ ಬಿತ್ತು. ಆದರೂ ನನ್ನ ನಿರ್ಧಾರ ಬದಲಾಗಲಿಲ್ಲ. ಇನ್ನೂ ಗಟ್ಟಿಯಾಗತೊಡಗಿತು. ಕೆಲವು ದಿನಗಳ ನಂತರ ಸಂಘ ಟಿಕೈತ ನಗರಕ್ಕೆ ಬಂದಿತು. ನನ್ನ ಮನದಾಸೆ ಫಲಿಸಿತು. ನನ್ನ ಜೀವನದಲ್ಲಿ ಮೊದಲ ಬಾರಿ ದಿಗಂಬರ ಮುನಿಯನ್ನು ನೋಡಿ ಮನದುಂಬಿತು. ಕಣ್ಣುಗಳು ಸಾರ್ಥಕತೆಯನ್ನು ಪಡೆಯಿತು. ಧನ್ಯಳಾದೆ ಎನ್ನಿಸಿತು. ಮಧ್ಯಾಹ್ನದ ಸಮಯದಲ್ಲಿ ನನ್ನ ತಾಯಿ ನನ್ನನ್ನು

ಕರೆದುಕೊಂಡು ಮಹಾರಾಜರ ಹತ್ತಿರ ಹೋಗಿ ಹೇಳಿದರು. ಮಹಾರಾಜರೇ ಇವಳು ಬ್ರಹ್ಮಚರ್ಯ ವ್ರತ ತೆಗೆದುಕೊಳ್ಳುತ್ತೇನೆ ಎನ್ನುತ್ತಿದ್ದಾಳೆ. ನಮಗೂ ಇಷ್ಟವಿಲ್ಲ ನೀವಾದರು ಇವಳಿಗೆ ತಿಳುವಿಕೆ ಹೇಳಿ ಎಂದರು. ಅಲ್ಲಿಯವರೆಗೆ ನನಗೂ ಬೇರೆಯವರ ಮುಂದೆ ಮಾತಾಡಲು ಬಹಳ ಸಂಕೋಚ ಇತ್ತು. ಆದರೂ ಧೈರ್ಯ ತಂದುಕೊಂಡು ಹೇಳಿದೆ. ಮಹಾರಾಜರೇ ನನಗೆ ಆತ್ಮಕಲ್ಯಾಣ ಮಾಡಿಕೊಳ್ಳುವ ಅಧಿಕಾರ ಇದೆಯೋ ಇಲ್ಲವೋ ಹೇಳಿ ಎಂದೆ? ಮಹಾರಾಜರು ಹೇಳಿದರು. ಜೈನಧರ್ಮದಲ್ಲಿ ಆತ್ಮಕಲ್ಯಾಣ ಮಾಡಿಕೊಳ್ಳುವ ಅಧಿಕಾರ ಎಲ್ಲರಿಗೂ ಇದೆ. ನೀನಾದರೂ ಮನುಷ್ಯಳು. ಇಲ್ಲಿ ಪಶು ಪಕ್ಷಿಗಳಿಗೂ ಅಧಿಕಾರ ಇದೆ. ನನ್ನ ಮನಸ್ಸು ಅರಳಿತು. ಪುನಃ ಅಮ್ಮ ಹೇಳಿದರು. ಮಹಾರಾಜರೇ ಕುಮಾರಿಯಾದ ಇವಳು ಹೇಗೆ ದೀಕ್ಷೆ ತೆಗೆದುಕೊಳ್ಳಲು ಸಾಧ್ಯ.

ನಾನು ತಕ್ಷಣ ಮಧ್ಯೆ ಮಾತಾಡಿದೆ. ಮಹಾರಾಜರೇ, ಬ್ರಾಹ್ಮಿ-ಸುಂದರಿ, ಚಂದನಬಾಲೆ ಎಲ್ಲರು ಕುಮಾರಿಯರೇ ಅಥವ ನಪುಂಸಕರೇ. ಮಹಾರಾಜರು ನಕ್ಕು ಹೇಳಿದರು. ಅವರೆಲ್ಲರು ಕನ್ಯೆಯರೇ ನಪುಂಸಕರಿಗೆ ಜೈನ ಧರ್ಮದಲ್ಲಿ ದೀಕ್ಷೆ ತೆಗೆದುಕೊಳ್ಳುವ ಅಧಿಕಾರ ಇಲ್ಲ. ನನಗೆ ನೆಮ್ಮದಿಯಾಯಿತು. ಬಲಬಂದಂತಾಯಿತು. ಪುನಃ ಅಮ್ಮ ಇನ್ನೊಂದು ದಿನ ಮಧ್ಯಾಹ್ನ ಮಹಾರಾಜರ ಹತ್ತಿರ ಕರೆದುಕೊಂಡು ಹೋಗಿ ಮಹಾರಾಜರೇ ಇವಳ ಕೈಯನ್ನು ನೋಡಿ ಹೇಳಿ ಇವಳ ಅದೃಷ್ಟದಲ್ಲಿ ಮದುವೆ ಇದೆಯೋ ಇಲ್ಲವೋ ಹೇಳಿ. ಮಹಾರಾಜಜೀ ಕೈಯನ್ನು ನೋಡಿ ಬಹಳ ಪ್ರಸನ್ನರಾಗಿ ಹೇಳಿದರು. ಇವಳ ಕೈಯಲ್ಲಿ ರಾಜಯೋಗವಿದೆ. ಇವಳು ಬೇಗ ಮನೆಯನ್ನು ಬಿಡುತ್ತಾಳೆ. ಇವಳ ಮರಣ ಸನ್ಯಾಸದಲ್ಲಿಯೇ ಮನೆಯಲ್ಲಿಲ್ಲ. ನನ್ನ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು. ಮಹಾರಾಜರ ಮಾತಿನಿಂದ ಅಮ್ಮನಿಗೂ ಶಾಂತಿ ದೊರಕಿತು. ಆದಾಗ್ಯೂ ಅಮ್ಮ ಜ್ಯೋತಿಷದ ಬಗ್ಗೆ ಸಿಡುಕುತ್ತಿದ್ದರು. ನನಗೂ ನಂಬಿಕೆ ಇರಲಿಲ್ಲ. ಆದರೂ ಮುನಿಗಳು ಹೇಳಿದ ಮೇಲೆ ಅವರಿಗೆ ವಿಶ್ವಾಸ ಹುಟ್ಟಿತು. ಆಚಾರ್ಯರು ನನ್ನನ್ನು ಕೇಳಿದರು. ನಿನಗೆ ವೈರಾಗ್ಯ ಹೇಗೆ ಬಂದಿತು? ಆಗ ನಾನೆಂದೆ. ಮಹಾರಾಜರೇ "ಪದ್ಮನಂದಿ ಪಂಚವಿಂಶತಿ" ಗ್ರಂಥದ ಸ್ವಾಧ್ಯಾಯದಿಂದಲೇ ನನಗೆ ವೈರಾಗ್ಯ ಬಂದಿತು.

ಅದರಲ್ಲಿ ಬರೆದಿದೆ

ಇಂದ್ರತ್ವಂ ಚ ನಿಗೋದತಾಂ ಚ ಬಹುಧಾ ಮಧ್ಯೇ ತಥಾ ಯೋನಯಃ ।
ಸಂಸಾರೇ ಭ್ರಮತಾ ಚಿರಂ ಯದಖಿಲಾಪ್ತಾ ಮಯಾನಂತಶಃ ॥
ತನ್ನಾಪೂರ್ವಮಿಹಾಸ್ತಿ ಕಿಂಚಿದಪಿ ಮೇ ಹಿತ್ವಾ ವಿಕಲ್ಪಾವಲಿಂ ।
ಸಮ್ಯಗ್ದರ್ಶನ ಬೋಧವೃತ್ತ ಪದವೀಂ ತಾಂ ದೇವ ಪೂರ್ಣಂ ಕುರು ॥

ಹೇ ದೇವ ನಾನು ಅನಂತ ಕಾಲದಿಂದ ಸಂಸಾರದಲ್ಲಿ ಪರಿಭ್ರಮಣೆ ಮಾಡುತ್ತಾ ಹಲವಾರು ಸಲ ಉನ್ನತ ಇಂದ್ರ ಪದವಿಯನ್ನು ಪಡೆದಿದ್ದೇನೆ. ಹಾಗೇ ಕೆಳಗಿನ ನಿಗೋದವನ್ನು ಹಲವಾರು ಸಲ ಪಡೆದಿದ್ದೇನೆ. ಇದರ ಮಧ್ಯೆ ಅನಂತ ಭವಗಳನ್ನು ಎಲ್ಲರು ಪಡೆದಿದ್ದಾರೆ. ಇದರಲ್ಲಿ ಮುಕ್ತಿಯನ್ನು ಪಡೆಯುವವರಿಗೆ ಸಮ್ಯಗ್ದರ್ಶನ ಸಮ್ಯಜ್ಞಾನ ಮತ್ತು ಸಮ್ಯಕ್‌ಚಾರಿತ್ರರೂಪದ ಪರಿಣಾಮದ ಮುಂದೆ ಯಾವುದೇ ಅಪೂರ್ವ ವಸ್ತು ಇಲ್ಲ. ಆದ್ದರಿಂದ ರತ್ನತ್ರಯ ಸ್ವರೂಪ ಯಾವುದೇ ಪದವಿಯನ್ನು ನಾನು ಇಲ್ಲಿಯವರೆಗೆ ಪಡೆದಿಲ್ಲ. ಆದ್ದರಿಂದ ಭಗವಂತನೇ ಆ ಅಪೂರ್ವ ಪದವಿಯನ್ನು ಪಡೆಯುವಂತೆ ಮಾಡು. ಆದ್ದರಿಂದ ಮಹಾರಾಜರೇ ನನಗೆ ಇಂತಹ ರತ್ನತ್ರಯ ಪದವಿಯನ್ನು ಪಡೆಯಬೇಕೆಂಬ ಆಸೆ. ಈ ಗ್ರಂಥದ 'ಅನಿತ್ಯ ಪಂಚಾಶತ್' ಮತ್ತು 'ಏಕತ್ವ ಸಪ್ತತಿ' ಯ ಅಧಿಕಾರಗಳು ನನಗೆ ಬಹಳ ಹಿಡಿಸಿವೆ.

ಬಹಿರ್ವಿಷಯಸಂಬಂದಃ ಸರ್ವಃ ಸರ್ವಸ್ಯ ಸರ್ವದಾ ।
ಅತಸ್ತದ್ ಭಿನ್ನ ಚೈತನ್ಯ ಬೋಧಯೋಗೌ ತು ದುರ್ಲಭೌ ॥[೧]
ಮೋಹೋದಯ ವಿಷಾಕ್ರಾಂತಮಪಿ ಸ್ವರ್ಗಸುಖಂ ಚಲಂ ।
ಕಾ ಕಥಾಪರಸೌಖ್ಯಾನಾಮಲಂ ಭವಸುಖೇನ ಮೇ ॥[೨]

ಈ ರೀತಿ ಹಲವಾರು ಶ್ಲೋಕಗಳನ್ನು ಹೇಳಿದ ಮೇಲೆ ಮಹಾರಾಜರು ಹೇಳಿದರು. ನಿನ್ನ ಮನಸ್ಸು ನಿಜಕ್ಕೂ ವಿರಕ್ತಿಯನ್ನು ಹೊಂದಿದೆ. ಈಗ ಪುರುಷಾರ್ಥವನ್ನು ಮಾಡು ಎಂದರು. ಹೀಗೆ ಮಹಾರಾಜರನ್ನು ದರ್ಶನ ಮಾಡುತ್ತಾ ಉಪದೇಶ ಕೇಳುತ್ತಾ ಆಹಾರ ಕೊಡುತ್ತಾ ಹಲವಾರು ದಿನಗಳನ್ನು ಕಳೆದೆನು.

ಸಹಸ್ರನಾಮ ಸ್ತೋತ್ರ

ಒಂದು ದಿನ ಬಹಳಷ್ಟು ಹುಡುಗಿಯರು ಆಚಾರ್ಯರ ಹತ್ತಿರ "ಜಿನವಾಣಿ" ಪುಸ್ತಕವನ್ನು ಹಿಡಿದು ಕುಳಿತು ಕೇಳಿದರು. ಮಹಾರಾಜರೇ ಈ ಸಹಸ್ರನಾಮವನ್ನು ಹೇಳಿಕೊಡಿ. ಆ ಹುಡುಗಿಯರಲ್ಲಿ ನಾನೂ ಇದ್ದೆ. ಮಹಾರಾಜರು ಹೇಳಿಕೊಡಲು ಪ್ರಾರಂಭಿಸಿದರು. ಇಡೀ ಸ್ತೋತ್ರವನ್ನು ದಿಗಂಬರ ಮುನಿಗಳ ಮುಖದಿಂದ ಪೂರ್ಣ ಕೇಳಿದ ನನಗೆ ಅನಂತಮತಿಗೆ ಸಿಕ್ಕ ಸೌಭಾಗ್ಯದಷ್ಟೆ ಸಂತೋಷವಾಯಿತು.

ಮಹಾರಾಜರು ಹೇಳಿದರು ಎಲ್ಲರು ಚೆನ್ನಾಗಿ ಅಭ್ಯಾಸ ಮಾಡಿಕೊಂಡು ಬನ್ನಿ ಎಲ್ಲರನ್ನು ನಾನು ಬೇರೆ ಬೇರೆಯಾಗಿ ಕೇಳುತ್ತೇನೆ ಎಂದರು. ನನಗೆ ಮನೆಯಲ್ಲಿ ಓದಲು ಪುರುಸೊತ್ತೇ ಸಿಗಲಿಲ್ಲ ಆದರೂ ಹುಡುಗಿಯರ ಜೊತೆ 'ಜಿನವಾಣಿ' ಹಿಡಿದುಕೊಂಡು ಬಂದೆ. ಎಲ್ಲರು ಕ್ರಮ ಕ್ರಮವಾಗಿ ಹೇಳತೊಡಗಿದರು. ಆಚಾರ್ಯರು ಎಲ್ಲರದನ್ನು ಕೇಳುತ್ತಾ ಬಂದರು. ಕೊನೆಗೆ ನನ್ನ ಸರದಿ ಬಂದಾಗ ಮಹಾರಾಜರು ಪ್ರೇಮದಿಂದ ಕೇಳತೊಡಗಿದರು. ನಾನು ಪೂರ್ಣ ಸ್ತೋತ್ರವನ್ನು ಹೇಳಿದ ಮೇಲೆ ಅವರು ಪ್ರಸನ್ನರಾಗಿ ಹೇಳಿದರು. ನೀನು ಬಹಳ ಶುದ್ಧವಾಗಿ ಹೇಳಿದ್ದೀಯ ನೀನು ಪ್ರತಿದಿನ ಇದನ್ನು ಪಠಣ ಮಾಡು ಇದರಿಂದ ನಿನ್ನ ಮನೋರಥಗಳೆಲ್ಲ ಈಡೇರುವವು ಎಂದರು.

ನನಗೆ ಇದೊಂದು ವರದಾನವೇ ಆಯಿತು. ಭಕ್ತಿಯಿಂದ ಪಠಣ ಮಾಡಲು ಪ್ರಾರಂಭಿಸಿದೆ. ಮತ್ತೆ ಮಹಾರಾಜರಲ್ಲಿ ಪ್ರಾರ್ಥಿಸಿದೆ. ನನಗೆ ಇನ್ನೂ ಪಾಠಗಳನ್ನು ಹೇಳಿಕೊಡಿ. ಆದರೆ ಅವರು ಸ್ವಲ್ಪ ತಡೆದರು. ಏಕೆಂದರೆ ನನ್ನ ವೈರಾಗ್ಯದ ಭಾವ ಅವರಿಗೆ ಗೊತ್ತಿತ್ತು. ಮತ್ತು ಸಮಾಜದ ವಿರೋಧದ ಅರಿವು ಅವರಿಗೆ ಇತ್ತು.

ಕೇಶಲೋಚನದ ಪ್ರಥಮ ದರ್ಶನ

ಒಂದು ದಿನ ಆಚಾರ್ಯರ ಕೇಶಲೋಚನವಿತ್ತು. ಮಂದಿರದ ಹೊರಗೆ ಒಂದು ದೊಡ್ಡ ಚಪ್ಪರ ಹಾಕಿದ್ದರು. ಅದೇ ಪೆಂಡಾಲನಲ್ಲಿ ಹಲವಾರು ಬಾರಿ ಸರ್ಕಸ್, ನಾಟಕ ಪ್ರದರ್ಶನವು ನಡೆಯುತ್ತಿತ್ತು. ಅದೇ ಸ್ಥಾನದಲ್ಲಿ

---

೧. **ಈ ಎಲ್ಲಾ ಬಾಹ್ಯ ವಿಷಯಗಳ ಸಂಬಂಧವು ಯಾವಾಗಲು ಜೀವಿಗಳೊಡನೆ ನಡೆಯುತ್ತಲೆ ಇರುತ್ತವೆ. ಅವುಗಳಿಂದ ಭಿನ್ನ ಚೈತನ್ಯ ಮತ್ತು ಜ್ಞಾನ ಈ ಎರಡನ್ನು ಪಡೆಯುವುದು ದುರ್ಲಭ.**

೨. **ಮೋಹವೆಂಬ ವಿಷದಿಂದ ಮಿಶ್ರಿತವಾದ ಸ್ವರ್ಗಸುಖವು ನಶ್ವರವಾದುದು. ಇನ್ನು ತುಚ್ಛವಾದ ಸುಖಗಳ ಬಗ್ಗೆ ಏನು ಹೇಳಲಿ. ಅದರಿಂದ ಸಂಸಾರದಲ್ಲಿ ಸುಖವೆಂಬುದೇ ಇಲ್ಲ.**

(ಏಕತ್ವಭಾವನ ದಶಕ)

ವೈರಾಗ್ಯ ಪರವಶತೆಯ ಕೇಶಲೋಚನ ಸಮಾರಂಭ ಏರ್ಪಾಡಾಗಿತ್ತು. ಅಜ್ಜಿಯರು ಕೂಡ ಈ ಸಮಾರಂಭ ವೀಕ್ಷಿಸಲು ಸೇರಿದ್ದರು. ನಾನು ಹೆಂಗಸರ ಸಾಲಿನಲ್ಲಿ ಮುಂದೆ ಕುಳಿತು ನೋಡುತ್ತಿದ್ದೆ. ಇದನ್ನು ನೋಡುತ್ತಿದ್ದ ಹಲವಾರು ಜನರು ಖೇದಸೂಚಕ ಶಬ್ದಗಳನ್ನು ಹೇಳತೊಡಗಿದರು. ಅಯ್ಯಾ ನೋಡು ಮಹಾರಾಜರು ಹುಲ್ಲು ಕೀಳುವಂತೆ ಗಡ್ಡ ಮೀಸೆಗಳನ್ನು ಕಿತ್ತುಹಾಕುತ್ತಿದ್ದಾರೆ. ಕೆಲವರು ಹೇಳುತ್ತಿದ್ದರು. ಜೈನಸಾಧುವಿನ ಚರ್ಯೆಯಲ್ಲಿ ಎಷ್ಟು ನಿರ್ಲಿಪ್ತತೆ ಇದೆ ಎಂದು. ಆಗ ನನ್ನ ಮನಸ್ಸಿನಲ್ಲಿಯು ವೈರಾಗ್ಯಪರತೆ ಉಕ್ಕಿ ಹರಿಯತೊಡಗಿತು, ನನ್ನ ಜೀವನದಲ್ಲಿ ಈ ಕ್ಷಣವು ಯಾವಾಗ ಬರುತ್ತದೋ ಎಂದು. ಮುನಿಗಳು ಕೇಶಲೋಚನವಾದ ನಂತರ ಒಳ್ಳೆಯ ಉಪದೇಶವನ್ನು ಕೊಟ್ಟರು. ಅದನ್ನು ಕೇಳಿದ ಶ್ರೋತೃಗಣ ಹರ್ಷದಿಂದ ಪುಳಕಿತರಾಗಿ ತಮ್ಮ ತಮ್ಮ ಮನೆಗೆ ಹೋದರು.

ಈ ದೃಶ್ಯ ನೋಡಿ ಐವತ್ತೊಂದು[೧] ವರ್ಷಗಳಾಗಿದ್ದರೂ, ನಾನು ಕೇಶಲೋಚ ಮಾಡಿಕೊಳ್ಳುವಾಗಲು, ಆ ದಿನ ನನಗೆ ಉಂಟಾದ ಭಾವನೆಯೇ ಇಂದೂ ಉಂಟಾಗುತ್ತದೆ. ಅಲ್ಲದೆ ಬೇರೆಯವರ ಕೇಶಲೋಚನ ಮಾಡುವಾಗಲು ಅದೇ ಭಾವನೆ ಬರುತ್ತದೆ. ಆದರೆ ಈಗಿನ ದಿನಗಳಲ್ಲಿ ಪ್ರದರ್ಶನವು ಆಗುತ್ತಿದೆ. ವಿರೋಧವು ಕಂಡುಬರುತ್ತಿದೆ. "ಉಪಾಸಕಾಧ್ಯಯನ" ದಲ್ಲಿ ಒಂದು ಸಾಲು ಬರುತ್ತದೆ. ಹೇ ಆತ್ಮವೇ ನೀನು ಕುತೂಹಲ ಬುದ್ಧಿಯಿಂದಲೇ ಸಿದ್ಧಿಧಾಮವನ್ನು ಸ್ಪರ್ಶಮಾಡಿಲ್ಲ.

ಮನೆಯನ್ನು ತ್ಯಜಿಸುವ ತಯಾರಿ

ಒಂದು ದಿನ ಸಮಯ ಸಾಧಿಸಿ ಮಹಾರಾಜರಲ್ಲಿ ಹೇಳಿದೆ. ಸ್ವಾಮಿಗಳೇ ತಾವು ಇಲ್ಲಿಂದ ವಿಹಾರ ಮಾಡುವಾಗ ನಾನು ನಿಮ್ಮ ಜೊತೆ ಬರಬೇಕೆಂದಿದ್ದೇನೆ. ಆದರೆ, ಸಾಮಾಜಿಕ ಪರಿಸ್ಥಿತಿಯಲ್ಲಿ ಇದೊಂದು ಸುಲಭ ಸಾಧ್ಯವಿರಲಿಲ್ಲ. ಆದರೆ ನನ್ನ ಧೈರ್ಯ ಜಾಸ್ತಿಯಾಗತೊಡಗಿತು. ಹಾಗೇ ಮಹಾರಾಜರು ಹೊರಡುವ ಸಮಯ ಹತ್ತಿರವಾಗತೊಡಗಿತು. ಹಾಗೇ ಸಂಘದಲ್ಲಿ ಸುಮತಿ ಸಾಗರರೆಂಬ ಕ್ಷುಲ್ಲಕರು[೨] ಇದ್ದರು. ಅವರು ಸಮಾಜದಲ್ಲಿ ಜನಗಳ ಒಳಗೊಳಗೇ ಪ್ರಚೋದಿಸುತ್ತಿದ್ದರು. ಈ ಹುಡುಗಿಯನ್ನು ಯಾವುದಾದರು ಆಶ್ರಮದಲ್ಲಿ ಬಿಟ್ಟು ಬನ್ನಿ. ಈ ಚಿಕ್ಕ ವಯಸ್ಸಿನವಳನ್ನು ಅದೂ ಸಂಘದಲ್ಲಿ ಒಬ್ಬರೂ ಹೆಂಗಸರಿಲ್ಲ, ಆರ್ಯಿಕೆಯರು ಇಲ್ಲ. ಅಂತಹ ಕಡೆ ಹೇಗೆ ಕಳುಹಿಸುವುದು ಎಂದು. ಆದರೆ ಇದಕ್ಕಿಂತ ಮೊದಲು ನನ್ನ ಹತ್ತಿರ ಹೇಳುತ್ತಿದ್ದರು. ನೋಡು ಮಗಳೇ, ನೀನು ಆಶ್ರಮಕ್ಕೆ ಎಂದು ಹೋಗಬೇಡ.

ಹೀಗೆ ಹಲವಾರು ನೀತಿಯನ್ನು ಹೇಳಿ ನನ್ನ ಉತ್ಸಾಹವನ್ನು ಜಾಸ್ತಿಗೊಳಿಸುತ್ತಿದ್ದರು. ಮತ್ತು ನನ್ನ ವೈರಾಗ್ಯದ ದೃಢತೆಯನ್ನು ಹೊಗಳುತ್ತಿದ್ದರು. ಆದರೆ ಈ ರೀತಿ ಕೂಟ ನೀತಿಯನ್ನು ಏಕೆ ಮಾಡುತ್ತಿದ್ದರು. ಸಮಾಜವನ್ನು ಹುರಿದುಂಬಿಸುತ್ತಿದ್ದರು. ಏನಾದರು ಇರಲಿ ನನಗಂತು ಆಶ್ಚರ್ಯವಾಗುತ್ತಿತ್ತು. ತಂದೆ ತಾಯಿ ಎಷ್ಟೇ ವಿರೋಧಿಸುತ್ತಿದ್ದರೂ ನಾನಂತೂ ಮನೆ ತ್ಯಜಿಸಲು ನಿರ್ಧರಿಸಿದ್ದೆ. ತಂದೆ ತಾಯಿ ಕೆಲವೊಮ್ಮೆ ಕಳುಹಿಸಲು ಸಮ್ಮತಿಸುತ್ತಿದ್ದರು. ಸಮಾಜದ ಜನರು, ಕ್ಷುಲ್ಲಕಜೀ ಒಂದು ರೀತಿ ವಿರೋಧವನ್ನು ತೋರಿಸುತ್ತಿದ್ದರು.

ಬೆಳಗ್ಗೆ ಮಹಾರಾಜರು ತ್ರಿಲೋಕಪುರಕ್ಕೆ ಹೊರಡುವುದೆಂದು ನಿಶ್ಚಯವಾಗಿತ್ತು. ನನ್ನ ಚಿಕ್ಕಪ್ಪ ಬಾಲಚಂದ್ರ ಮುಂತಾದವರು ಸೇರಿಕೊಂಡು ಒಂದು ನಿರ್ಧಾರ ಕೈಕೊಂಡಿದ್ದರು. ನಾಳೆ ಮಹಾರಾಜರು ಹೊರಡುವ ವೇಳೆಯಲ್ಲಿ ಮೈನಾಳನ್ನು ದೇವಸ್ಥಾನದ ಹತ್ತಿರ ಬರದಂತೆ ಮನೆಯಲ್ಲೇ ತಡೆಯಬೇಕೆಂದು ಇದನ್ನು ತಿಳಿದ ನಾನು ಭಕ್ತಿಯಿಂದ

---

೧. **1990** ರಲ್ಲಿ ಇದನ್ನು ಬರೆಯಲಾಗಿದೆ.

೨. ಕಾನಪುರದವರೇ. ಆಚಾರ್ಯರಿಂದ ದೀಕ್ಷಿತರಾದ ವಯೋವೃದ್ಧರು ಆಗಿದ್ದರು.

ರಾತ್ರಿ ಮನೆಯಲ್ಲೇ ಪಂಚನಮಸ್ಕಾರ ಮಂತ್ರ ಜಪಿಸುತ್ತಾ ಕುಳಿತೆ. ರಾತ್ರಿ 10.30 ಆಗಿತ್ತು ಜನರೆಲ್ಲ ತಮ್ಮ ತಮ್ಮ ಮನೆಗೆ ತೆರಳಿದ್ದರು. ಅಮ್ಮನನ್ನು ಒಪ್ಪಿಸಿ, ನಾನು ಮುನಿಗಳ ದರ್ಶನ ಮಾಡಲು ಒಬ್ಬಳೇ ಹೊರಟೆ. ಕೆಲವು ಶ್ರಾವಕರು ಮುನಿಗಳ ಹತ್ತಿರವೇ ಮಲಗಿದ್ದರು. ಅವರಲ್ಲಿ ಒಬ್ಬರು ತಕ್ಷಣ ನನ್ನನ್ನು ಮುನಿಗಳ ದರ್ಶನಕ್ಕೆ ಒಳಗೆ ಕರೆದೊಯ್ದರು. ನಾನು ಮುನಿಗಳಲ್ಲಿ ನಡೆಯುತ್ತಿರುವ ಎಲ್ಲಾ ವಿದ್ಯಾಮಾನವನ್ನು ಒಂದೇ ಉಸುರಿಗೆ ಹೇಳಿದೆ. ಮುನಿಗಳು ಧೈರ್ಯ ತುಂಬುವಂತೆ ನನ್ನ ಮಸ್ತಕದ ಮೇಲೆ ಪಿಂಜಿಯಿಂದ ಆಶೀರ್ವಾದ ಮಾಡಿದರು. ಆಗ ನನ್ನ ಮನ ಶಾಂತವಾಯಿತು. ಇದಕ್ಕೆ ಮೊದಲಿನ ದಿನವೇ ನಾನು ಚಿಕ್ಕಪ್ಪ, ಮಾಮ ಮೊದಲಾದವರ ವಿರೋಧವನ್ನು ತಿಳಿಸಿದ್ದೆ. ಅದಕ್ಕೆ ಮುನಿಗಳು ಅವರು ಮಾಡುವ ತಡೆಯನ್ನು ಅವರು ಮಾಡುತ್ತಿರಲಿ ನೀನು ಮಾಡುವ ಪ್ರಯತ್ನ ನೀನು ಮಾಡುತ್ತಿರು ಎಂದಿದ್ದರು. ಅವರೇನಾದರು ಮಾಡಲಿ ನಿನ್ನ ಉತ್ಸಾಹ ಬಿಡಬೇಡ. ನೋಡು ಅರ್ಜುನ ತನ್ನ ಗುರಿ ಸಾಧಿಸುವವರೆಗೂ ಹೇಗೆ ಅವನಿಗೆ ತನ್ನ ಲಕ್ಷ್ಯ ಮಾತ್ರ ಕಾಣುತ್ತಿತ್ತೊ ಹಾಗೇ ನಿನಗೆ ನಿನ್ನ ಲಕ್ಷ್ಯ ಮಾತ್ರ ನಿನ್ನ ಕಣ್ಣಮುಂದೆ ಇರಬೇಕು. ಅಂದರೆ ಗೃಹತ್ಯಾಗ ಮಂತ್ರ ನಿನ್ನ ಗುರಿಯಾಗಿರಬೇಕು.

ಮಹಾರಾಜರ ಈ ಹಿತನುಡಿಗಳು ನನ್ನ ಹೃದಯದಲ್ಲಿ ಧೈರ್ಯ ತುಂಬಿತು. ಇದರಿಂದ ಧೃಡಳಾಗಿದ್ದ ನಾನು ಮನೆಗೆ ಬಂದು ಮಲಗಿದೆ. ಬೆಳಗ್ಗೆ ಬೇಗ ಎದ್ದು ನನ್ನ ಪ್ರಾತಃವಿಧಿಗಳನ್ನು ಮುಗಿಸಿ, ಮಹಾರಾಜರ ವಿಹಾರ ಹೊರಡುವ ಸ್ಥಳಕ್ಕೆ ಬಂದೆ. ಮಹಾರಾಜರು ಮಂದಿರದ ದರ್ಶನ ಮಾಡಿದ ಮೇಲೆ ಆರತಿ ಆಯಿತು. ಜನಗಳ ಜಯಘೋಷದೊಂದಿಗೆ ಊರನ್ನು ಬಿಟ್ಟು ಹೊರಟರು. ಊರ ಹೊರಗಿನವರೆಗೂ ಮಹಿಳೆಯರ ಜೊತೆ, ಅಮ್ಮನ ಜೊತೆ ನಾನು ಹೋಗಿದ್ದೆ. ಆಗ ಹಿರಿಯರು ಜನಗಳಿಗೂ ಮಹಿಳೆಯರಿಗೆ ಹಿಂತಿರುಗಲು ಅನುಮತಿಯನ್ನು ಕೇಳಿದರು. ಮಹಾರಾಜರು ನಿಂತರು. ಎಲ್ಲರು ನಮಸ್ಕರಿಸಿ ಹಿಂದಿರುಗಿದರು. ಆದರೆ ನಾನು ಮಹಾರಾಜರ ಜೊತೆಯೇ ಮುಂದೆ ಮುಂದೆ ನಡೆಯತೊಡಗಿದೆ. ಜನ ಹೋಯ್ ಎನ್ನತೊಡಗಿದರು. ನನ್ನ ಚಿಕ್ಕಪ್ಪ ಮಾವ ನನ್ನನ್ನು ಹಿಂದಿರುಗುವಂತೆ ಹೇಳತೊಡಗಿದರು. ನಾನು ಯಾರ ಮಾತನ್ನೂ ಕೇಳಲಿಲ್ಲ. ಮಾವ ವಾಪಸ್ಸು ಹಿಂದಿರುಗು ಮಗಳೇ ನಿನ್ನನ್ನು ಚಾತುರ್ಮಾಸಕ್ಕೆ ಮುನಿಗಳ ಹತ್ತಿರ ಕಳುಹಿಸುತ್ತೇನೆ ಎಂದು ಸಂತೈಸ ತೊಡಗಿದರು. ಈ ಕಡೇ ಟಿಕೈತ ನಗರದ ಜನರು ಚಾತುರ್ಮಾಸಕ್ಕೆ ಮುನಿಗಳನ್ನು ಉಳಿಸಿಕೊಳ್ಳಲು ಶತಪ್ರಯತ್ನ ಮಾಡುತ್ತಿದ್ದರು. ನಿಲ್ಲುವ ಸಂಭವವೂ ಇತ್ತು. ಆದರೂ ನನಗೆ ಮನೆಗೆ ಹಿಂದಿರುಗುವ ಮನಸ್ಸು ಇರಲಿಲ್ಲ. ನನಗೆ ಕರುಣೆ ತೋರಿಸುವವರು ಯಾರು ಇರಲಿಲ್ಲ. ಅಮ್ಮ ಮೊದಲೇ ಅಳುತ್ತಿದ್ದಳು. ಈ ಎಲ್ಲ ತೊಳಲಾಟವನ್ನು ನೋಡಿದ ಮಹಾರಾಜರು ತಮ್ಮ ಹೆಜ್ಜೆಯನ್ನು ಮುಂದಿಡ ತೊಡಗಿದರು. ನಾನಂತೂ ಅವರನ್ನು ಚಾತಕ ಪಕ್ಷಿಯಂತೆ ನೋಡತೊಡಗಿದೆ. ಮನದಲ್ಲಿ ಹೇ ದೇವ ನನ್ನ ಮೇಲೆ ದಯತೋರಿ ರಕ್ಷಣೆ ಕೊಡು ನನ್ನನ್ನು ಮತ್ತೆ ಮನೆಗೆ ಹೋಗುವಂತೆ ಮಾಡಬೇಡ ಎಂದು ಪ್ರಾರ್ಥಿಸತೊಡಗಿದೆ.

ಆದರೆ ನನ್ನ ಕಾಲಲಬ್ಬಿ ಇನ್ನೂ ಬಂದಿರಲಿಲ್ಲವಾಗಿ ನಾನು ಮುಂದುವರಿಯಲು ಪ್ರಯತ್ನಪಟ್ಟರೂ ಹೋಗಲಾಗಲಿಲ್ಲ. ಮಾಮ ನನ್ನ ಕೈಹಿಡಿದು ಬಲವಂತದಿಂದಲೇ ವಾಪಸ್ಸು ಕರೆದು ಬಿಟ್ಟರು. ಆಗ ನನ್ನ ಸ್ತ್ರೀ ಪರ್ಯಾಯದ ಬಗ್ಗೆ ನನಗೇ ಜಿಗುಪ್ಸೆಯಾಗತೊಡಗಿತು. ಗಂಡಸಾಗಿದ್ದರೆ ಇವತ್ತು ಯಾರ ಹಂಗೂ ಇಲ್ಲದಂತೆ ಮನೆಬಿಡಬಹುದಿತ್ತು. ನನ್ನ ಪುರುಷಾರ್ಥದಿಂದ ಸ್ತ್ರೀ ಪರ್ಯಾಯದಿಂದ ನಿವೃತ್ತಳಾಗಲೇ ಬೇಕು ಎಂದು ಮನ ಹೇಳ ತೊಡಗಿತು. ಅಳುತ್ತಲೇ ವಾಪಸ್ಸು ಬಂದೆ. ಅಮ್ಮನಿಗೆ ಅತ್ತ ದರಿ ಇತ್ತ ಪುಲಿ ಎಂಬಂತಾಯಿತು. ಕಳುಹಿಸಿದರೂ ದುಃಖ, ಕಳುಹಿಸದಿದ್ದರೂ ಅವಳಿಗೆ ದುಃಖವೇ.

೫೫

ಸಮಯ ಎಂತಹ ದಿವ್ಯೌಷಧವೆಂದರೆ ಎಂತಹ ಗಾಯವನ್ನೇ ಆದರೂ ನಿಧಾನವಾಗಿ ಹೋಗಲಾಡಿಸುತ್ತದೆ. ಆದರೆ ನನ್ನ ಲೆಕ್ಕದಲ್ಲಿ ಅದು ತಪ್ಪಾಯಿತು. ದಿನ ಕಳೆದಂತೆ ನನ್ನ ಆಕುಲತೆ, ಚಿಂತೆ ಜಾಸ್ತಿಯಾಗತೊಡಗಿತು. ಊರಿನ ಈ ವಿಷಮ ವಾತಾವರಣವನ್ನು ಅರಿತ ಆಚಾರ್ಯರು ನಮ್ಮ ಊರಿನ ಚಾತುರ್ಮಾಸದ ವಿಷಯವನ್ನು ಬಿಟ್ಟು ಬಾರಾಬಂಕೀಯಲ್ಲಿ ಚಾತುರ್ಮಾಸ ಕೈಕೊಳ್ಳುವ ವಿಷಯ ತಿಳಿಯಿತು.

ನಾನು ಮನೆಯ ಕೆಲಸಗಳನ್ನು ಮಾಡಿಕೊಂಡು ಓದುವುದರಲ್ಲಿ ಇನ್ನೂ ಜಾಸ್ತಿ ತೊಡಗಿದೆನು. ತಾಯಿ ಮತ್ತೆ ಗರ್ಭವತಿಯಾಗಿದ್ದರು. ಬಹುಶಃ 9ನೆಯ ತಿಂಗಳು ಅವರಿಗೆ ಕುಳಿತುಕೊಳ್ಳುವುದು ನಿಂತುಕೊಳ್ಳುವುದು ಕಷ್ಟವಾಗಿತ್ತು. ವಿರಕ್ತಳಾಗಿದ್ದರು ಅವರ ಸೇವೆ, ಮನೆಯ ಕೆಲಸಗಳಲ್ಲಿ ತಮ್ಮ ತಂಗಿಯರನ್ನು ನೋಡಿಕೊಳ್ಳುವುದು ಕರ್ತವ್ಯವೆಂದು ಭಾವಿಸತೊಡಗಿದೆ.

ಆಚಾರ್ಯರ ಸಂಘವನ್ನು ಸಂದರ್ಶಿಸುವ ಆಶೆ

ಅಪ್ಪ ಪ್ರತಿದಿನ ಸಂಜೆ ಚಾವಡಿಯಲ್ಲಿ ಕುಳಿತು ತಮಾಷೆ ಮಾಡುತ್ತಿದ್ದರು. ಒಂದು ದಿನ ಹೇಳಿದರು. ನೋಡು ಮಗಳೇ ಸಮ್ಮೇದ ಶಿಖರಕ್ಕೆ ಒಂದು ದೊಡ್ಡ ಸಂಘ ಬಂದಿದೆ ಅಂತೇ ಬಹಳಷ್ಟು ಆರ್ಯಿಕೆಯರು ಇದ್ದಾರೆಂದು ಜನಗಳು ಹೇಳುತ್ತಿದಾರೆ. ಆದ್ದರಿಂದ ಮಗಳೇ ನಿನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ ಚಿಂತೆ ಮಾಡಬೇಡ ಎಂದು ಹೇಳಿದರು. ನಾನು ಆ ದಿನದಿಂದ ಅವರಿಗೆ ಪೀಡಿಸತೊಡಗಿದೆ ನನ್ನನ್ನು ಶಿಖರ ಜೀಗೆ ಕರೆದುಕೊಂಡು ಹೋಗಿ ದರ್ಶನ ಮಾಡಿಸು ಎಂದು ಅಪ್ಪ ಇವತ್ತು ನಾಳೆ ಎಂದು ತಳ್ಳ ತೊಡಗಿದರು. ನಾನು ಬೇಚಾರು ಮಾಡಿಕೊಂಡರೆ ಆಗಾಗ್ಗೆ ಸಮಾಧಾನ ಮಾಡುತ್ತಿದ್ದರು. ನನಗಂತೂ ಒಂದು ದಿನ ಅಲ್ಲ ಒಂದೊಂದು ಕ್ಷಣ ಕಳೆಯುವುದು ಕಠಿಣ ಎನ್ನಿಸತೊಡಗಿತು. ಇದು ನನ್ನ ಪರಾಧೀನತೆಯೋ ಕರ್ಮವೋ ತಿಳಿಯದೆ ಮನದಲ್ಲೇ ತೊಳಲಾಡ ತೊಡಗಿದೆ.

ಒಂದು ದಿನ ತಂದೆಯವರು ಪಾಠಶಾಲೆಯ ಪಂಡಿತರನ್ನು ಕರೆದುಕೊಂಡು ಬಂದು ಹೇಳಿದರು ಮಗಳೇ ಇವರಿಂದ ಅಭ್ಯಾಸ ಮಾಡು ನಿನ್ನ ಮನಸ್ಸು ಸರಿಹೋಗುತ್ತದೆ ಎಂದರು. ಒಂದೆರಡು ದಿನ ಅವರಿಂದ ಹೇಳಿಸಿಕೊಂಡೆ. ಛಹಢಾಲದ ಮುಂದಿನ ಪುಸ್ತಕ ಓದಬೇಕೆಂದಿದ್ದೆ. ಆದರೆ ಅವರು ರತ್ನಕರಂಡಕ ಶ್ರಾವಕಾಚಾರ "ಸಿದ್ಧಾಂತ ಪ್ರವೇಶಿಕ" ದ್ರವ್ಯ ಸಂಗ್ರಹ. ಧನಂಜಯ ನಾಮಮಾಲಾ ಮುಂತಾದವುಗಳನ್ನು ಓದಲು ಹೇಳಿದರು. ಆದರೆ ನನಗೆ ಅವರ ಹತ್ತಿರ ಹೇಳಿಸಿಕೊಳ್ಳಲು ಸಮಯವೂ ಸಿಗುತ್ತಿರಲಿಲ್ಲ ಅಲ್ಲದೆ ಆಚಾರ್ಯರು ಹೇಳುತ್ತಿದ್ದ ಮಾತುಗಳು ನೆನಪಿಗೆ ಬರತೊಡಗಿತು. ಇಂದಿನ ಕಾಲ ಬಹಳ ಕೆಟ್ಟದ್ದು. ಬೇರೆಯವರ ಮುಂದೆ ಕುಳಿತು ಕಲಿಯುವ ಬದಲು ನೀನು ಸ್ವಯಂ ಅಧ್ಯಯನ ಮಾಡಿ ಕಲಿ ಎಂದು ನಿನ್ನ ವಯಸ್ಸು ಚಿಕ್ಕದು ಬೇರೆಯವರು ನಿನ್ನ ಬಗ್ಗೆ ಬೆರಳು ತೋರುವಂತೆ ಮಾಡಿಕೊಳ್ಳಬೇಡ ಎಂದು.

ಹೀಗಾಗಿ ನಾನು ಪಂಡಿತರಿಂದ ಹೇಳಿಸಿಕೊಳ್ಳದೆ ನಾನೇ ರತ್ನಕರಂಡಕ ಶ್ರಾವಕಾಚಾರ ಬಾಯಿಪಾಠ ಮಾಡತೊಡಗಿದೆ. ಚಿಕ್ಕ ಪುಟ್ಟ ಮಕ್ಕಳನ್ನು ಸಂಭಾಳಿಸಿಕೊಂಡು ದಿನಕ್ಕೆ 4-5 ಶ್ಲೋಕಗಳನ್ನಾದರೂ ಬಾಯಿಪಾಠ ಮಾಡುತ್ತಿದ್ದೆ ಮತ್ತು ತಂಗಿ ಶಾಂತಿಗೂ ಅಥವ ತಮ್ಮ ಕೈಲಾಸನಿಗೆ ಒಪ್ಪಿಸುತ್ತಿದ್ದೆ. ನಾನು ಆ ದಿನ ಬೆಳಗ್ಗೆ ಎದ್ದು

ಸಾಮಾಯಿಕ ಮಾಡಿ ಪೂಜೆ ಮಾಡಿ, ನಾನೇ ಮಡೀ ಅಡಿಗೆ ಮಾಡಿ ಊಟ ಮಾಡಿದ ಮೇಲೆ ಮತ್ತೇ ಸಮ್ಮೇದ ಶಿಖರಕ್ಕೆ ಹೋಗುವ ವಿಷಯವನ್ನು ಎತ್ತಿದೆ.

ಶ್ರದ್ಧೆಯಿಂದ ಮಂತ್ರಿಸಿದ ಜಲದ ಪ್ರಭಾವ

ಒಂದು ದಿನ ಅಮ್ಮ ಒದ್ದಾಡತೊಡಗಿದರು. ನಾನು ಬೇಗ ಹೋಗಿ ಜಿನವಾಣಿಯನ್ನು ತಂದು ವೈರಾಗ್ಯ ಶತಕವನ್ನು ಓದತೊಡಗಿದೆ. ದಾದಿ ಬಂದವಳು ಅವರ ಸ್ಥಿತಿ ನೋಡಿ ಕೊಠಡಿಗೆ ಕರೆದುಕೊಂಡು ಹೋಗಿ ಪರದೆ ಹಾಕಿ ಪಕ್ಕದ ಮನೆಯ ದಾದಿಯನ್ನು ಕರೆಸಿಕೊಂಡಳು. ಅಮ್ಮ ಹೆರಿಗೆ ನೋವಿನಿಂದ ನರಳಾಡತೊಡಗಿದ್ದರು.

ನಾನು ಎದ್ದು ಮಡಿ ಬಟ್ಟೆ ಉಟ್ಟುಕೊಂಡು ಒಂದು ಚೊಂಬಿನಲ್ಲಿ ಸೋಸಿದ ಶುದ್ಧ ನೀರನ್ನು ತೆಗೆದುಕೊಂಡು "ಜಿನ ಸಹಸ್ರ ನಾಮಸ್ತೋತ್ರ"ವನ್ನು ಹಿಡಿದು ಮಂತ್ರಿಸತೊಡಗಿದೆ. ಆ ಚೊಂಬನ್ನು ಹಿಡಿದುಕೊಂಡು ದಾದಿಯನ್ನು ಹೇಗೆ ಪುಸಲಾಯಿಸಿ ಅಮ್ಮನ ಹತ್ತಿರ ಹೋಗಿ ಆ ನೀರನ್ನು ಕುಡಿಸಿದೆ. ದಾದಿಯ ಗಲಾಟೆಯನ್ನು ಕೇಳಲಾರದೆ ಬೇಗ ರೂಮಿನಿಂದ ಹೊರಗೆ ಬಂದೆ. ದಾದಿ ಸ್ವಲ್ಪ ಹೊತ್ತಿಗೆ ಕೂಗಿದಳು. ನಿನಗೊಬ್ಬಳು ತಂಗಿ ಬಂದಳು ಎಂದಳು. ಗಂಟೆ ಬಾರಿಸು ನಾನು ಗಂಟೆ ಹೊಡೆದು ಅಂಗಡಿಗೆ ಕನ್ಯಾರತ್ನ ಹುಟ್ಟಿದ ಸಮಾಚಾರವನ್ನು ಹೇಳಿ ಕಳುಹಿಸಿದೆ. ಅಲ್ಲಿ ಯಾರೋ ಹೇಳಿದರಂತೆ ಆರನೆಯ ಮಗಳು ಹುಟ್ಟಿದ್ದಾಳೆ. ಚೆನ್ನಾಗಿ ಸಂಪಾದನೆ ಮಾಡು ಅವರಿಗೆಲ್ಲ ಲಕ್ಷ ಲಕ್ಷ ಇಡಬೇಕಲ್ಲ ಎಂದರಂತೆ. ಆದರೆ ತಂದೆಯವರು ಮನಸ್ಸನ್ನು ಕೆಡಿಸಿಕೊಳ್ಳುತ್ತಿರಲಿಲ್ಲ.

ಸ್ವಲ್ಪ ಹೊತ್ತಾದ ಮೇಲೆ ಆಚೆ ಬಂದ ದಾದಿ ಹೇಳತೊಡಗಿದಳು. ಈ ಹುಡುಗಿ ಆ ಚೊಂಬಿನಲ್ಲಿ ಏನು ಕುಡಿಸಿದಳೋ ತಿಳಿಯದು ಹೆರಿಗೆ ತಕ್ಷಣ ಆಗಿಹೋಯಿತು. ನಮಗಂತೂ ಈ ದಿನ ಹೆರಿಗೆ ಆಗುವ ಲಕ್ಷಣವೇ ಕಾಣುತ್ತಿರಲಿಲ್ಲ. ಡಾಕ್ಟರನ್ನು ಕರೆಸಲೇಬೇಕೆಂದುಕೊಂಡಿದ್ದೆವು. ಆಗ ಅಜ್ಜಿ ಕೇಳಿದರು ನೀನು ಏನು ಕುಡಿಸಿದೆ. ಅದಕ್ಕೆ ನಾನು ಸಹಸ್ರನಾಮವನ್ನು ಜಪಿಸಿ ನೀರುಕುಡಿಸಿದೆ ಎಂದೆ.

ನನ್ನ ಎಲ್ಲರು ಅಪ್ಪಿಕೊಂಡರು. ಭಕ್ತಿಯಿಂದ ಸ್ತೋತ್ರವನ್ನು ಜಪಿಸಿದ ಜಲದಲ್ಲಿ ಅಪಾರವಾದ ಶಕ್ತಿ ಇರುತ್ತದೆ ಎಂಬುದನ್ನು ಹೆರಿಗೆ ನೋವು ಕಡಿಮೆ ಆಗಿ ಮಗು ಜನಿಸಿದ್ದನ್ನು ಕಂಡು ಆಗ ನನಗೆ ಇನ್ನೂ ಖುಷಿ ಆಯಿತು. ಇವರಿಂದಾದರೂ ಅಮ್ಮ ನನ್ನನ್ನು ಆಚಾರ್ಯರ ದರ್ಶನಕ್ಕೆ ಕಳುಹಿಸುತ್ತಾಳೆಂದು ಮೊದಲು ಏನು ಹೇಳಿದರು ಅಮ್ಮ ಒಪ್ಪಿರಲಿಲ್ಲ. ಅಮ್ಮ ನನ್ನ ಈ ಪ್ರಸವ ಒಂದು ಕಳಿಯಲಿ ಆಮೇಲೆ ಹೋಗಿ ದರ್ಶನ ಮಾಡಿಕೊಂಡು ಬರುವಿ ಎಂದಿದ್ದರು. ನಾನು ಹೆರಿಗೆ ಆಗುವುದನ್ನೆ ಕಾಯುತ್ತಿದ್ದೆ. ನನ್ನ ಕಾತುರತೆ ಹೆಚ್ಚುತ್ತಿತ್ತು. ಆದರೆ ಅಜ್ಜಿಗೆ ವಯಸ್ಸಾಗಿತ್ತು. ಚಿಕ್ಕತಮ್ಮ ಎರಡುವರ್ಷದವನು ಅವನು ನನ್ನನ್ನೆ ಹಚ್ಚಿಕೊಂಡಿದ್ದ. ಈಗ ತಾಯಿಯ ಹತ್ತಿರವೂ ಹೋಗುವಂತಿಲ್ಲ. ಮಲಗುವಾಗಲೂ ನನ್ನ ಬಟ್ಟೆಯನ್ನು ಬಿಡುತ್ತಿರಲಿಲ್ಲ. ಅಕ್ಕ ನನ್ನನ್ನು ಬಿಟ್ಟು ಹೋಗಬೇಡ ಎನ್ನುತ್ತಿದ್ದ.

ನಾನು ಬಾರಾಬಂಕಿಗೆ ಕಳುಹಿಸು ಎಂದಾಗ ಅಮ್ಮ ನನ್ನ ಮೈಲಿಗೆ ಕಳಿಯಲಿ ಮಗಳೇ ನೋಡು ರವೀಂದ್ರನನ್ನು ಹೇಗೆ ಸಂಭಾಳಿಸುವುದು ಎಂದಾಗ ನಾನು ಸುಮ್ಮನೆ ಆಗಲೇ ಬೇಕಾಗುತ್ತಿತ್ತು. ಮನಸ್ಸು ವೈರಾಗ್ಯದ ಕಡೇ ಎಳೆಯುತ್ತಿದ್ದರು ಅಮ್ಮನ ಅಸಹಾಯಕತೆ, ಮಗುವಿನ ಮಮತೆ, ತಂದೆಯ ದೀನತೆ ಈ ಎಲ್ಲವೂ ನನ್ನನ್ನು ಸಂಸಾರದಲ್ಲಿ ಕಟ್ಟಿ ಹಾಕತೊಡಗಿತು. ಆಗ ಯೋಚಿಸತೊಡಗಿದೆ. ಈ ಸಂಸಾರದ ಬಂಧನವೇ ಈ ಎಲ್ಲ ಪ್ರೇಮಮಯಿ ಜೀವಿಗಳನ್ನು ತೊರೆಯಲು ಕಷ್ಟವಾಗುತ್ತಿದೆಯಲ್ಲ ಎಂದು ಯೋಚಿಸುತ್ತಿದ್ದೆ. ಹೇ ಜಿನೇಂದ್ರ ಭಗವಂತನೇ ಈ ಮೋಹಪಾಶವನ್ನು ಬಿಟ್ಟು ಮನೆಯಿಂದ ಹೊರಡುವ ದಯೆಯನ್ನು ಬೇಗ ಕರುಣಿಸಪ್ಪ ಎಂದು.

ಅಮ್ಮನ ಮೈಲಿಗೆ ಕಳೆಯಿತು. ಮಗುವಿನ ನಾಮಕರಣವನ್ನು ನನ್ನ ಇಷ್ಟದಂತೆ 'ಮಾಲತಿ' ಎಂದು ಕರೆದು ಹೊಸಬಟ್ಟೆ ತೊಡಿಸಿ, ನನ್ನ ಕೆಲಸ ಮುಗಿಸಿದೆ. ಅಪ್ಪ ಕಳುಹಿಸಲು ಸಮ್ಮತಿಸಲಿಲ್ಲ. ಕೈಬಿಡದ ಕೈಲಾಸನನ್ನು ಸಹ ಜೊತೆಯಲ್ಲಿಯೇ ಕರೆದುಕೊಂಡು ಹೋಗಲು ನಾನು ಸಿದ್ಧ ಇದ್ದರೂ ತಂದೆ ನನ್ನನ್ನು ಮನೆಯಿಂದ ಆಚೆ ಕಳುಹಿಸಲು ಸಿದ್ಧರಿರಲಿಲ್ಲ. ಆ ಸಮಯದಲ್ಲಿ ವಯಸ್ಸಿಗೆ ಬಂದ ಹೆಣ್ಣು ಹುಡುಗಿ ಒಬ್ಬಳೇ ಎಲ್ಲೂ ಓಡಾಡುವಂತೆ ಇರಲಿಲ್ಲ. ಅಪ್ಪನಿಗೆ ಗೊತ್ತಿತ್ತು. ಒಮ್ಮೆ ಮನೆಯಿಂದ ಬಿಟ್ಟರೆ ಇವಳು ಮತ್ತೆ ಬರುವಳೋ ಇಲ್ಲವೋ ಎಂದು. ನನ್ನ ಮನಸ್ಸು ಆಚಾರ್ಯರನ್ನು ನೋಡಲು ತವಕಿಸುತ್ತಿತ್ತು. ಒಮ್ಮೆ ತಂದೆಯವರು ಯಾವುದೋ ಕಾರ್ಯ ನಿಮಿತ್ತ ತ್ರಿಲೋಕಪುರಕ್ಕೆ ಹೋಗಿದ್ದರು. ಈ ಸಂದರ್ಭ ನೋಡಿಕೊಂಡು ಅಮ್ಮನನ್ನು ಕಳುಹಿಸಲು ಒತ್ತಾಯಿಸ ತೊಡಗಿದೆ. ಅಮ್ಮ ಇಕ್ಕಟ್ಟಿಗೆ ಸಿಕ್ಕಿದ್ದಳು. ನನ್ನ ಆಸೆಯನ್ನು ತಡೆಯಲಾರಳು ಅಪ್ಪನ ಹೆದರಿಕೆಯು ಒಂದು ಕಡೆ. ನೋಡು ಮಗಳೇ ಅಪ್ಪ ಊರಿಗೆ ಬರುವಷ್ಟರಲ್ಲಿ ನೀನು ಅಲ್ಲಿಗೆ ಹೋಗಿ ಬಂದು ಬಿಡಬೇಕು ಇಲ್ಲದಿದ್ದರೆ ನಿಮ್ಮ ಅಪ್ಪ ನಾನು ಬಾಣಂತಿಯಾದರೂ ಬಿಡುವುದಿಲ್ಲ ನೋಡು ಎಂದರು. ಏಕೆಂದರೆ ಮೊದಲಿ ನಿಂದಲೂ ನನ್ನ ಸ್ವಭಾವ ಗೊತ್ತಿದ್ದ ತಂದೆಗೆ ನನ್ನ ಬಗ್ಗೆ ಭಯ ಇದ್ದುದ್ದರಿಂದ, ತಾಯಿಗೂ ಯಾವಾಗಲೂ ಹೇಳುತ್ತಿದ್ದರು. ಆ ಹುಡುಗಿಗೆ ಆಡಲು ಬಿಡದೆ ನೀನೆ ಶೀಲಕಥೆ, ಧರ್ಮಕಥೆ ಎಂದು ಆ ಹುಡುಗಿಯ ಮನದಲ್ಲಿ ವೈರಾಗ್ಯ ಉಂಟು ಮಾಡಿರುವವಳು ನೀನೇ ಎಂದು ಆಕ್ಷೇಪಿಸುತ್ತಲೇ ಇರುತ್ತಿದ್ದರು.

ಅಲ್ಲದೆ ತಂದೆಯ ವ್ಯವಹಾರದ ಹಣಕಾಸಿನ ತಿಜೋರಿಯ ಕೈಗಳು ನನ್ನ ಹತ್ತಿರವೇ ಇರುತ್ತಿತ್ತು. ಅಂಗಡಿಯಿಂದ ಬಂದಾಗ ವ್ಯಾಪಾರದ ಹಣವನ್ನೆಲ್ಲ ಎಣಿಸಿ ಲೆಕ್ಕ ಬರೆದು ಇಡುತ್ತಿದ್ದವಳು. ನಾನೇ ಒಂದು ರೀತಿಯಲ್ಲಿ ನಾನು ಅಪ್ಪನಿಗೆ ಮಗನ ಸಮಾನವಾಗಿದ್ದೆ. ಮನೆಯ ಎಲ್ಲ ಆಗುಹೋಗುಗಳಲ್ಲೂ ನನ್ನ ಪಾತ್ರವಿರುತ್ತಿತ್ತು. ಹಾಗಾಗಿ ನಾನು ಮನೆಯನ್ನು ಬಿಡಿಸಿಕೊಂಡು ಹೋಗುವುದು ಬಹಳ ಕಷ್ಟವಿತ್ತು. ಬೇರೆಯವರು ಹೇಳುತ್ತಿದ್ದರು. ಮೈನಾ ಒಂದು ರೀತಿ ಮನೆಗೆ ಆಧಾರಸ್ತಂಭ ಎಂದು.

೬

ಮನೆಯಿಂದ ಪ್ರಸ್ಥಾನ

ಹೀಗೆ ದಿನಗಳು ಕಳೆಯುತ್ತಾ ಇತ್ತು. ನನ್ನ ತಮ್ಮ ಕೈಲಾಸನಿಗೆ 5-6 ವರ್ಷ ಆಗಿತ್ತು. ಅವನಿಗೆ ಸಮಯ ಸಿಕ್ಕಾಗಲೆಲ್ಲ ಹೇಳತೊಡಗಿದೆ. ನೋಡಪ್ಪ ನಾನು ಇಲ್ಲದಾಗ ನೀನು ನಾನು ಮಾಡುವ ಎಲ್ಲ ಕೆಲಸಗಳನ್ನು ನೀನು ಮಾಡಬೇಕೆಂದು. ಆ ಚಿಕ್ಕ ಹುಡುಗ ಒಂದು ರೀತಿ ವಚನವನ್ನು ಕೊಟ್ಟಿದ್ದ. ನೀನು ಹೇಳಿದ ಎಲ್ಲ ಕೆಲಸ ಮಾಡುತ್ತೇನೆ ಎಂದು ಹೇಳಿದ್ದ. ನನಗೆ ಒಂದು ರೀತಿ ಈ ವಚನದ ನೆನೆಪು ಬಂದು ನನ್ನ ತಮ್ಮನಿಗೆ ಹೇಳಿದೆ. ನೀನು ನನಗೆ ಒಂದು ಉಪಕಾರ ಮಾಡಬೇಕಲ್ಲ. ಅವನಿಗೂ ಕಕ್ಕಾಬಿಕ್ಕಿ ಏನೆಂದು ಕೇಳಿದ, ನೋಡು ನಾನು ಒಬ್ಬಳೇ ಮನೆ ಬಿಟ್ಟು ಹೋಗಲಾರೆ ನೀನು ನನ್ನ ಜೊತೆ ಭಾರಾಬಂಕಿಗೆ ಬಾ. ಅವನು ಮೊದಮೊದಲು ಹಿಂಜರಿದ. ಅವನಿಗೆ ಮಾತುಕೊಟ್ಟದ್ದನ್ನು ನೆನಪಿಸಿ ಮಾಡಲೇಬೇಕೆಂದು ಒತ್ತಾಯ ಮಾಡಿದ್ದರಿಂದ ನನ್ನ ಜೊತೆಯಲ್ಲಿ ಬರಲು ಸಮ್ಮತಿಸಿದ.

ಇಡೀ ರಾತ್ರಿ ಪಂಚ ನಮಸ್ಕಾರವನ್ನು ಜಪಮಾಡುತ್ತಿದ್ದ. ಬೆಳಗ್ಗೆ ನಾಲ್ಕು ಗಂಟೆಗೆ ಎದ್ದೆ. ಏಳುವಾಗ ನನ್ನನ್ನ ಅಪ್ಪಿ ಮಲಗಿದ್ದ ರವೀಂದ್ರನ ಕೈಗಳನ್ನು ಮೆತ್ತಗೆ ಬಿಡಿಸಿಕೊಂಡು ಅವನಿಗೆ ಪ್ರೇಮದಿಂದ ಮುತ್ತು

ಕೊಟ್ಟು ಎದ್ದು ಸ್ನಾನಾದಿ ಮುಗಿಸಿ ಮಂದಿರಕ್ಕೆ ಹೋಗಿ ಪಾರ್ಶ್ವನಾಥ ತೀರ್ಥಂಕರರ ಮುಂದೆ ನಿಂತು ಪ್ರಾರ್ಥಿಸತೊಡಗಿದೆ. ಭಗವಂತನೇ ಹೇಗಾದರೂ ಈ ಮೋಹಪಾಶವನ್ನು ಬಿಡುವಂತಹ ಶಕ್ತಿಕೊಡು ಭಗವಂತ ಎಂದು. ಮನೆಗೆ ಬಂದು ತಾಯಿಗೆ ಹೇಳಿ ಹೊರಟೆ. ಅಮ್ಮನಿಗೆ ಒಳಗೊಳಗೇ ಭಯವಿದ್ದರು ಮಗಳೇ ಈ ದಿನವೇ ದರ್ಶನ ಮಾಡಿಕೊಂಡು ಸಂಜೆಯ ಗಾಡಿಗೆ ಬಂದು ಬಿಡು ಎಂದರು. ನಾನು ಅವರಿಗೆ ಸಮಾಧಾನ ಮಾಡುತ್ತಾ ನೋಡು ನಾನು ಉಳಿದುಕೊಳ್ಳಲು ಯಾವ ಬಟ್ಟೆಗಳನ್ನೂ ತೆಗೆದುಕೊಂಡಿಲ್ಲ ಎಂದು ಇದಕ್ಕಿಂತ ಮೊದಲೇ ಅಪ್ಪ ಅಮ್ಮ ಎಷ್ಟೊಂದು ಬಾರಿ ಹೇಳಿದ್ದರು ನೀನು ಹೋದರೆ ಜನ ನಮ್ಮ ಬಗ್ಗೆ ಏನ ತಿಳಿಯುವುದಿಲ್ಲ ಎಂದು.

ಆಚಾರ್ಯರು ನನಗೆ ರತ್ನಕರಂಡಕ ಶ್ರಾವಕಚಾರವನ್ನು ಓದಲು ಕೊಟ್ಟು ಹೇಳಿದ್ದರು. ನೀನು ಪೂರ್ತಿಓದಿದ ಮೇಲೆ ನಾನು ನಿನಗೆ ಪರೀಕ್ಷೆ ಕೊಡುತ್ತೇನೆ ಎಂದಿದ್ದರು. ನಾನು ಹಾಗೆ ಅದೇ ಕಾರಣವನ್ನು ಹೇಳಿ ಮನೆಯಿಂದ ಹೊರಟ್ಟಿದ್ದೆ. ಕೈಲಾಸ ಕೂಡ ನನ್ನ ಹತ್ತಿರ ಇದ್ದ. ಇಬ್ಬರು ಬಸ್ಸಿನಲ್ಲಿ ಕುಳಿತು ಬಾರಾಬಂಕಿಗೆ ಬಂದೆವು. ಅಮ್ಮ ಹೊರಡುವಾಗ ಹೇಳಿದ್ದರು ನಿಮ್ಮ ತಂದೆಯ ಸೋದರತ್ತೆಯ ಮೊಮ್ಮಕ್ಕಳು ಒಳ್ಳೆಯ ಜನ ಸಜ್ಜನರು ಅಲ್ಲೇ ಅವರ ಮನೆ ಇದೆ. ನಿಮ್ಮ ತಂದೆಯು ಹೋದರೆ ಅವರ ಮನೆಯಲ್ಲೇ ಉಳಿಯುತ್ತಾರೆ ನೀವು ಅಲ್ಲಿಗೆ ಹೋಗಿ ಎಂದರು.

ಗೃಹ ಬಂಧನದಿಂದ ಬಿಡುಗಡೆ

ಇದಕ್ಕಿಂತ ಮೊದಲು ನಾನು ಬಾರಾಬಂಕಿಯನ್ನು ನೋಡೇ ಇರಲಿಲ್ಲ. ಬಸ್ಸು ಇಳಿಯುತ್ತಿದ್ದಂತೆ ದೇವಸ್ಥಾನದ ರಸ್ತೆಯನ್ನು ಕೇಳಿಕೊಂಡು, ದೇವಸ್ಥಾನಕ್ಕೆ ಹೋಗಿ ಅಲ್ಲಿ ಆಚಾರ್ಯರನ್ನು ದರ್ಶನ ಮಾಡಿದಾಗ ಆದ ಆನಂದವನ್ನು ಜನ್ಮಪೂರ್ತಿ ಮರೆಯಲಾರೆ, ನನಗೆ ನಿಧಿಯೇ ಸಿಕ್ಕಿದಂತೆ ಆಯಿತು. ಮಹಾರಾಜರು ನನ್ನನ್ನ ಕಂಡು ಪ್ರೀತಿಯಿಂದ ಆಶೀರ್ವಾದ ಮಾಡಿ ಹೇಳಿದರು. ಮೈನಾ ನೀನು ಬಂದುಬಿಟ್ಟೆಯಾ ? ಹೌದು ಮಹಾರಾಜರೇ ನಾನು ಬಂದೆ ಎಂದೆ. ನಾನು ಅಲ್ಲೇ ಕುಳಿತೆ. ಸ್ವಲ್ಪ ಹೊತ್ತಾದ ಮೇಲೆ ಆಚಾರ್ಯರಲ್ಲಿ ನಿವೇದಿಸಿಕೊಂಡೆ ಮಹಾರಾಜರೇ ನಾನು ರತ್ನ ಕರಂಡಕ ಶ್ರಾವಕಚಾರದ 150 ಶ್ಲೋಕಗಳನ್ನು ಬಾಯಿಪಾಠ ಮಾಡಿದ್ದೇನೆ. ಈಗ ನೀವು ಅವುಗಳನ್ನ ಪರೀಕ್ಷಿಸಬಹುದೆಂದೇ. ಅದಕ್ಕೆ ಮಹಾರಾಜರು ಆ ಶ್ಲೋಕಗಳ ಅರ್ಥವನ್ನ ಹೇಳಬಲ್ಲೆಯಾ, ಅದಕ್ಕೆ ನಾನು ಹೌದು ಮಹಾರಾಜರೇ ನೀವು ಎಲ್ಲಿಂದ ಬೇಕಾದರು ಕೇಳಿ. ಮಹಾರಾಜರಿಗೆ ಸಂತೋಷವಾಯಿತು. ಒಳ್ಳೆಯದು ಪರೀಕ್ಷಿಸುತ್ತೇನೆ. ಪುನಃ ಅವರು ತಮ್ಮ ಬರೆಯುವ ಕೆಲಸದಲ್ಲಿ ನಿರತರಾದರು, ಆಹಾರದ ಸಮಯವಾಯಿತು. ನಂತರ ನಾನು ಅಮ್ಮ ಹೇಳಿದ್ದ ಕಪೂರ ಚಂದ್ರರ ಮನೆಗೆ ಹೋಗಬೇಕೆಂದಿದ್ದೆ. ಅಷ್ಟರಲ್ಲಿ ನನ್ನ ಕಿವಿಗೆ ಬಿದ್ದ ಶಬ್ದವೆಂದರೆ ಟಿಕೈತ ನಗರದಿಂದ ಬಂದಿದ್ದಾಳೆ ಮೈನಾ ಎಂದು, ದೀಕ್ಷೆ ತೆಗೆದುಕೊಳ್ಳ ಬಯಸುತ್ತಿದ್ದಾಳೆ ಎಂದು ಮಾತನಾಡಿಕೊಂಡಿದ್ದು ಅಷ್ಟರಲ್ಲಿ ಕಪೂರ ಚಂದ್ರರ ಪತ್ನಿಯೇ ಬಂದು ನನ್ನ ಕೈಹಿಡಿದು ನಡೆ ಮನೆಗೆ ಊಟಕ್ಕೆ ಹೋಗೋಣವೆಂದು ಕರೆದುಕೊಂಡು ಹೋದರು. ಅವರ ಮನೆಯಲ್ಲಿ ಶುದ್ಧ ಆಹಾರ ಸೇವಿಸಿ ಕೊಠಡಿಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ನನಗೆ ತಮ್ಮನು ಅಕ್ಕನಡೆ ಹೋಗೋಣ ಬಸ್ಸಿನ ವೇಳೆಯಾಯಿತು ಎನ್ನತೊಡಗಿದ. ಅದಕ್ಕೆ ನಾನು ರತ್ನಕರಂಡಕ ಶ್ರಾವಕಚಾರದ ಪರೀಕ್ಷೆ ಕೊಡಲಿಲ್ಲ ಆದ್ದರಿಂದ ನಾನು ಇವತ್ತು ಇಲ್ಲಿಯೇ ಇರುತ್ತೇನೆ ಎಂದೆ. ಕೈಲಾಸ ಸಾಕಷ್ಟು ಒತ್ತಾಯ ಮಾಡಿ ಕೊನೆಗೆ ಅಳತೊಡಗಿದ. ಅವನಿಗೆ ಸಮಾಧಾನ ಮಾಡುವುದರಲ್ಲಿ ಸಾಕಾಯಿತು. ಮುನಿಗಳ ಸಾಮಾಯಿಕದ ನಂತರ ಮತ್ತೇ ಬಂದು ಭೇಟಿಯಾದೆ. ಕೊನೆಗೆ ಕಷ್ಟದಲ್ಲಿ ಕೈಲಾಸನನ್ನು ಸಮಾಧಾನ ಪಡಿಸಿ ಅವನನ್ನು ವಾಪಸ್ಸು ಕಳುಹಿಸಿದೆ.

ಬೈಯಾ ಒಂದೆರಡು ದಿನ ಬಿಟ್ಟುಕೊಂಡು ಬಾ ನಾನು ಮುನಿಗಳಿಗೆ ಆಹಾರ ಕೊಡಬೇಕು. ಅವರ ಉಪದೇಶ ಕೇಳಬೇಕು ಎಂದು ಅವನನ್ನು ಸಾಮಾಧಾನಿಸಿ ಕಳುಹಿಸಿದೆ. ಕೈಲಾಸನು ವಾಪಸ್ಸು ಕರೆದುಕೊಂಡು ಹೋಗಲು ಸಾಕಷ್ಟು ಪ್ರಯತ್ನ ಪಟ್ಟ, ಕೊನೆಗೆ ನಿರಾಶೆಯಿಂದ ಒಬ್ಬನೇ ಹೊರಟ. ಅವನು ಒಬ್ಬನೇ ಬಂದಿದ್ದನ್ನು ನೋಡಿ ಅಮ್ಮ ಅಳತೊಡಗಿದಳು. ಊರಿನಿಂದ ಬಂದ ತಂದೆ ಮನೆ ತಣ್ಣಗಿರುವುದನ್ನು ನೋಡಿ ಮೈನಾ, ಮೈನಾ ಎಂದು ಕೂಗಿದರಂತೆ. ಅಮ್ಮ ಅಳುತ್ತಾ ವಿಷಯ ತಿಳಿಸಿದಾಗ ತಮಗೂ ದುಃಖವಾದರೂ ಸಾವರಿಸಿಕೊಂಡು ಹೋಗಲಿ ಬಿಡಿ ಅಲ್ಲೇ ಅತ್ತೆ ಮನೆ ಇದೆಯಲ್ಲ ಅಲ್ಲಿ ಒಂದೆರಡು ದಿನ ಇರಲಿ ನಾನೇ ಹೋಗಿ ಕರೆದುಕೊಂಡು ಬರುತ್ತೇನೆ ಬಿಡು ಎಂದರಂತೆ.

ಮತ್ತೇ ಒಂದೆರಡು ದಿನ ಬಿಟ್ಟುಕೊಂಡೇ ಕೈಲಾಸ ಕರೆದುಕೊಂಡು ಹೋಗಲು ಬಂದ. ಕೈಲಾಸ ನಾನು ನಿಯಮವನ್ನು ತೆಗೆದುಕೊಂಡಿದ್ದೇನೆ ದಶಲಕ್ಷಣ ಪರ್ವದವರೆಗೆ ಇಲ್ಲೇ ಇರೋಣ ಎಂದು. ಆದ್ದರಿಂದ ಯೋಚನೆಮಾಡಬೇಡ ಹೋಗು ನಂತರ ಬರುತ್ತೇನೆ. ಇಲ್ಲಾದರೂ ಕಪೂರಚಂದರ ಪತ್ನಿ ಮಹಡಿಯ ಒಂದು ರೂಮ್‌ನ್ನು ನನಗೆ ಬಿಟ್ಟು ಕೊಟ್ಟು ನನಗೆ ಎಲ್ಲ ಅನುಕೂಲವನ್ನು ಮಾಡಿಕೊಟ್ಟಿದ್ದಾರೆ. ರಾತ್ರಿ ಹೊತ್ತು ನನ್ನ ಹತ್ತಿರವೇ ಮಲಗುತ್ತಿದ್ದರು. ನಾನು ಬೆಳಗ್ಗೆ ಎದ್ದು ಸಾಮಾಯಿಕ ಮಾಡಿ ಸ್ನಾನಾದಿ ಮುಗಿಸಿ ಮಂದಿರಕ್ಕೆ ಹೋಗಿ ಪೂಜೆ ಮುಗಿಸಿ ಮಹಾರಾಜರ ಉಪದೇಶ ಕೇಳುತ್ತಿದ್ದೆ.

ಯಾರ ಮನೆಯಲ್ಲಿ ಆಹಾರ ಮಾಡುತ್ತಿದ್ದರೂ ಅವರ ಮನೆಗೆ ಹೋಗಿ ಅಡಿಗೆ ಮಾಡುವುದರಲ್ಲಿ ಸಹಾಯಮಾಡಿ ಮುನಿಗಳಿಗೆ ಆಹಾರ ಕೊಟ್ಟು ಅಲ್ಲೇ ಊಟ ಮಾಡಿ ಮಧ್ಯಾಹ್ನ ಸಾಮಾಯಿಕ ಮಾಡಿ ನಂತರ ಗುರುಗಳ ಉಪದೇಶ ಕೇಳಲು ಹೆಂಗಸರ ಮಧ್ಯೆ ಕುಳಿತುಕೊಳ್ಳುತ್ತಿದ್ದೆ ಗುರುಗಳು ವಿಶೇಷವಾಗಿ ನನ್ನನ್ನೆ ಜಾಸ್ತಿ ಮಾತು ಆಡಿಸುತ್ತಿರಲಿಲ್ಲ. ಆದರೆ ನಾನೇ ಸಮಯನೋಡಿಕೊಂಡು ಮಹಾರಾಜರೇ ಯಾವಾಗ ರತ್ನಕರಂಡಕದ ಪರೀಕ್ಷೆ ಕೊಡುತ್ತೀರ ಎಂದು ಕೇಳುತ್ತಾ ಇನ್ನಾವುದಾದರೂ ಪುಸ್ತಕ ಓದಲು ಕೊಡಿ ಎಂದು ಕೇಳಿದೆ.

ಒಂದು ದಿನ ಮಹಾರಾಜರು ಒಂದೆರಡು ಪ್ರಶ್ನೆಗಳನ್ನು ಕೇಳಿದರು. ನಾನು ಸರಿಯಾದ ಉತ್ತರವನ್ನು ಕೊಟ್ಟಿದ್ದನ್ನು ಕೇಳಿ ಅವರು ಪ್ರಸನ್ನರಾದರು. ಮೈನಾ ನಿನ್ನ ಕ್ಷಯೋಪಶಮ ಬಹಳ ಒಳ್ಳೆಯದು ಇದೆ ನಿನಗೆ ಪರೀಕ್ಷೆ ಕೊಡುವುದಕ್ಕಿಂತ ಮೊದಲೇ ಉತ್ತೀರ್ಣಳಾಗಿದ್ದೀಯ ಎಂದರು. ಮಹಾರಾಜರ ಅಣತಿಯಂತೆ "ಧನಂಜಯನಾಮಮಾಲಾ" ವನ್ನು ಕಂಠಪಾಠ ಮಾಡುತ್ತಿದ್ದೆ ದಿನಗಳು ಕಳೆಯುತ್ತಿದ್ದವು. ನಾನು ಇಲ್ಲೇ ದೀಕ್ಷೆ ತೆಗೆದುಕೊಂಡು ಬಿಡಬೇಕು ಮನೆಗೆ ಹಿಂತಿರುಗಬಾರದು ಎಂದು ಧೃಡಮಾಡಿಕೊಳ್ಳತೊಡಗಿದೆ.

ಇದೇ ಸಮಯದಲ್ಲಿ ಒಬ್ಬ ಸೇಠ್ ಬಾರಾಬಂಕಿಯಲ್ಲಿ ಋಷಿಮಂಡಲ ವಿಧಾನವನ್ನು ಮಾಡಿಸಿದರು. ನಾನು ಗುರುಗಳ ಅನುಮತಿ ಪಡೆದು ವಿಧಾನದ ಜಪವನ್ನು ಮಾಡತೊಡಗಿದೆ. ಏಕೆಂದರೆ ಈ ಕಾರಣದಿಂದ ಇನ್ನು ಒಂದು ಹತ್ತುದಿನವಾದರೂ ಗುರುಗಳ ಹತ್ತಿರ ಇರಬಹುದಲ್ಲ ಎಂದು. ಅಲ್ಲಿ ಶ್ಯಾಮಬಾಯಿ, ತಾರಾಬಾಯಿ, ರಾಜೇಂದ್ರ ಪ್ರಸಾದ್ ಮತ್ತು ಮಹಾವೀರ ಪ್ರಸಾದ್‌ರವರ ಪತ್ನಿಯರು ದೇವಸ್ಥಾನದಲ್ಲಿ ನನ್ನ ಧಾರ್ಮಿಕ ಚರ್ಚೆಯನ್ನೆಲ್ಲಾ ಕೇಳುತ್ತಿದ್ದವರು. ಈ ಚಿಕ್ಕವಯಸ್ಸಿನಲ್ಲಿ ಎಂತಹ ವೈರಾಗ್ಯವೆಂದು ಮಾತಾಡಿಕೊಳ್ಳುತ್ತಿದ್ದರು. ಈ ಹುಡುಗಿಯ ಹಾಗೆ ಕುಮಾರಿಯಾಗಿದ್ದರೆ ಗೃಹದ ಬಂಧನ ಇರದೆ ಹೋಗಿದ್ದರೆ ನಿಜವಾಗಿಯು ಮಹಾರಾಜರ ಹತ್ತಿರ ದೀಕ್ಷೆಯನ್ನು ತೆಗೆದುಕೊಂಡು ಬಿಡಬಹುದಾಗಿತ್ತು ಎಂದು ಹೇಳಿಕೊಳ್ಳುತ್ತಿದ್ದರು. ಇದನ್ನು ಕೇಳಿ ನಾನು ಯೋಚಿಸತೊಡಗಿದೆ. ನನಗೂ ಯಾವುದೇ ಬಂಧನವಿಲ್ಲ ನಾನು ಪೂರ್ಣಸ್ವತಂತ್ರಳೇ . ಅಮ್ಮ ಅಪ್ಪನ ಮೋಹ,

ಲೋಕದ ಮರ್ಯಾದೆ ನನ್ನನ್ನು ಹಿಮ್ಮೆಟ್ಟಿಸುತ್ತಿದೆ. ಅಮ್ಮ ಒಳ್ಳೆ ತಿಳುವಳಿಕೆ ಇರುವವಳೇ ನಾನು ಈಗ ಮನಸ್ಸು ಗಟ್ಟಿಮಾಡಿ ಮನೆಗೆ ಮತ್ತೆ ಹಿಂತಿರುಗುವದೇ ಬೇಡ ಎಂದು ಮನಸ್ಸು ಗಟ್ಟಿಮಾಡಿಕೊಂಡೆ. ಮಹಾರಾಜರು ನಾಲ್ಕು ಮಹಿಳೆಯರನ್ನು ತಮಾಷೆಗಾಗಿ ಲೌಕಾಂತಿಕದೇವರು ಎಂದು ಕರೆಯುತ್ತಿದ್ದರು. ಹೀಗೆ ಭಾದ್ರಪದಮಾಸ ಕಳೆದು ಆಶ್ವೀಜ ಬರತೊಡಗಿತು.

೭

ಆಶ್ವೀಜಮಾಸದ ಚರ್ತುದಶಿಯಂದು ಆಚಾರ್ಯ ದೇಶಭೂಷಣರ ಕೇಶಲೋಚನವಿತ್ತು. ಅದಕ್ಕಾಗಿ ಹೊರಗೆ ಪೆಂಡಾಲ ಹಾಕಲಾಗಿತ್ತು. ಇದಕ್ಕಾಗಿ ತ್ರಿಲೋಕಪುರ, ಟಿಕೈತ ನಗರ, ದರಿಯಾಬಾದ್, ಸುಮೇರಗಂಜೆ, ಬಹರಾರಚ ಮುಂತಾದ ಊರುಗಳಿಂದ ಹಾಗೂ ಲಖನೌ, ಕಾನಪುರ ನಗರಗಳಿಂದಲೂ ಬಹಳಷ್ಟು ಜನ ಬಂದಿದ್ದರು. ಇದಕ್ಕೆ ಮೊದಲು ಕೈಲಾಸ ಹಲವಾರು ಬಾರಿ ನನ್ನನ್ನು ಊರಿಗೆ ಕರೆದುಕೊಂಡು ಹೋಗಲು ಬಂದಿದ್ದವನು. ದಶಲಕ್ಷಣ ಮುಗಿದ ಮೇಲೆ ಬಂದೇ ಬರುತ್ತೀನಿ ಎಂದು ಹೇಳಿ ಕಳುಹಿಸಿದ್ದೆ. ಮತ್ತೇ ಅವನು ಬಂದ ನಾನು ಚಾತುರ್ಮಾಸ ಮುಗಿದಮೇಲೆ ಬರುತ್ತೇನೆ ಎಂದೆ. ಆದರೆ (ಚಾತುರ್ಮಾಸ) ಕೇಶಲೋಚ ನೋಡಿಕೊಂಡು ನನ್ನನ್ನು ಕರೆದುಕೊಂಡು ಹೋಗಲು ಅಪ್ಪ ಅಮ್ಮನೇ ಊರಿಂದ ಬಂದರು, ನಾನು ಸಮಯನೋಡಿ ಅಪ್ಪ ಅಮ್ಮನ ಹತ್ತಿರ ಹೇಳಿದೆ ಬನ್ನಿ ಆಚಾರ್ಯರ ಹತ್ತಿರ ನನಗೆ ದೀಕ್ಷೆ ಕೊಡಿಸಿ ಎಂದೆ. ಆಗ ಅವರಿಗೆ ಅರ್ಥವಾಗ ತೊಡಗಿತು. ಅವರ ಜೊತೆ ಆಚಾರ್ಯರ ಹತ್ತಿರ ಹೋದೆ. ನಮಸ್ಕಾರ ಮಾಡಿದ ಮೇಲೆ ಅವರು ಮುನಿಗಳಿಗೆ ಹೇಳತೊಡಗಿದರು. ಸ್ವಾಮಿ ಅವಳಿಗೆ ತಿಳುವಳಿಕೆ ಹೇಳಿ ಈಗ ಮನೆಗೆ ಕಳುಹಿಸಿ. ಅವಳು ಇನ್ನೂ ಕಲಿತಮೇಲೆ ದೀಕ್ಷೆ ಕೊಡೋಣ ಎಂದು ಹೇಳಿ. ನಾನು ತಕ್ಷಣ ಹೇಳಿದೆ, ಪೂಜ್ಯ ಗುರುಗಳೇ ಈ ಸಂಸಾರವನ್ನು ಪಾರುಮಾಡುವಂತಹ ದೀಕ್ಷೆಯನ್ನು ನನಗೆ ದಯಪಾಲಿಸಿ. ಅದಕ್ಕೆ ಆಚಾರ್ಯರು ನೀನು ಇನ್ನು ಅಷ್ಟ ಮೂಲಗುಣವನ್ನೆ ತೆಗೆದುಕೊಂಡಿಲ್ಲ ಗುರು ಸಾಕ್ಷಿಯಾಗಿ ವ್ರತ ಗ್ರಹಣೆ ಮಾಡಿಲ್ಲ. ನಿನಗೆ ಏಕದಂ ಹೇಗೆ ದೀಕ್ಷೆ ಕೊಡಲು ಬರುತ್ತದೆ ಎಂದರು.

ಇಷ್ಟರಲ್ಲೇ ಅಪ್ಪ ಅಮ್ಮ ಮನೆಗೆ ಹಿಂತಿರುಗಲು ಒತ್ತಾಯ ಮಾಡತೊಡಗಿದರು. ನಾನು ಅಲ್ಲೇ ಆಚಾರ್ಯರ ಮುಂದೆಯೇ ನನ್ನ ಕೇಶಲೋಚ ಮಾಡಿಕೊಳ್ಳತೊಡಗಿದೆ. ಇದನ್ನು ನೋಡಿದ ಅಪ್ಪ ಹುಚ್ಚರಂತೆ ಹೊರಗೆ ಹೋದವರು ಎರಡುದಿನಗಳವರೆಗೆ ಪತ್ತೆಯೇ ಇಲ್ಲ. ಅಮ್ಮ ಚಿಕ್ಕ ತಂಗಿ ಮಾಲತಿಯನ್ನು ಕಂಕುಳಿನಲ್ಲಿ ಇಟ್ಟುಕೊಂಡು ಬಂದಿದ್ದಳು. ಅವರು ಅಲ್ಲೇ ಮೂರ್ಛೆ ಹೋದರು. ಅವರಿಗೆ ಬಹಳ ಹೊತ್ತಿನವರೆಗೆ ಎಚ್ಚರವೇ ಬರಲಿಲ್ಲ. ಹೆಂಗಸರು ಉಪಚಾರ ಮಾಡತೊಡಗಿದರು. ಆಚಾರ್ಯರಿಗೂ ನನ್ನ ಸಾಹಸ ನೋಡಿ ಆಶ್ಚರ್ಯವಾಗತೊಡಗಿತು. ಅಷ್ಟರಲ್ಲಿ ಕೇಶಲೋಚ ನೋಡಲು ಬಂದ ಜನ ಇಲ್ಲಿ ಸೇರತೊಡಗಿದರು. ಕೆಲವರು ಹೊಗಳುತ್ತಿದ್ದರು, ಕೆಲವರು ಗೊಂದಲವನ್ನು ಉಂಟುಮಾಡತೊಡಗಿದರು. ತಡೆಯಿರಿ, ತಡೆಯಿರಿ ಈ ಹುಡುಗಿ ಇನ್ನು ಚಿಕ್ಕವಳು. ಕೆಲವರು ಪೋಲಿಸರನ್ನು ಕರೆಯಿರಿ ಈ ಹುಡುಗಿಯನ್ನು ಕರೆದುಕೊಂಡು ಹೋಗಲಿ. ಈ ಗೊಂದಲವನ್ನು ನೋಡಿದ ಆಚಾರ್ಯರು ತಮ್ಮ ಬಲಗೈ ಎತ್ತಿ ಶಾಂತವಾಗಿರುಂತೆ ಸನ್ನೆ ಮಾಡಿದರು ಜನರು ಆ ಹುಡುಗಿಯನ್ನು ತಡೆಯಿರಿ ಎಂದು ಕೂಗತೊಡಗಿದರು. ಆದರೆ ಯಾರಿಗೂ ನನ್ನ ಕೈ ಹಿಡಿದು ತಡೆಯುವ ಧೈರ್ಯ ಬರಲಿಲ್ಲ. ಅಷ್ಟರಲ್ಲಿ ಅಲ್ಲಿಯೇ ಇದ್ದ ನನ್ನ ಮಾವ ಬಂದು ಕೈ ಹಿಡಿದು ತಡೆದು ಹೇಳಿದರು. ಇವಳು ನನ್ನ ಅಕ್ಕ ಮೋಹಿನಿಯ

ಮಗಳು ಇವಳನ್ನು ತಡೆಯುವ ಹಕ್ಕು ನನಗಿದೆ ಎಂದರು. ಕೆಲವರು ಪೋಲಿಸ್‌ನನ್ನು ಕರೆಯಲು ಹೊರಟವರನ್ನೂ ಧರ್ಮಾತ್ಮರು ತಡೆದರು ನಮ್ಮ ಹುಡುಗಿಯನ್ನು ಪೋಲಿಸರಿಗೆ ಒಪ್ಪಿಸುವುದೆಂದರೆ ಏನು ಅರ್ಥ ? ಕೆಲವು ಸುಧಾರಕರು ಹೇಳತೊಡಗಿದರು ಈ ಹುಡುಗಿಗೇನಾದರು ಆಚಾರ್ಯರು ದೀಕ್ಷೆ ಕೊಟ್ಟರೆ ಪೋಲೀಸರಿಂದ ಆಕ್ರಮಣ ಮಾಡಿಸಿಯೇ ಮಾಡಿಸುತ್ತೇವೆ.

ಕೆಲವು ವಯಸ್ಸಾದವರು ಎರಡು ತಿಂಗಳಿಂದ ನನ್ನ ನಡವಳಿಕೆಯನ್ನೂ ಗಮನಿಸುತ್ತಿದ್ದರು ಅವರನ್ನು ತಡೆದರು. ಅಷ್ಟರಲ್ಲಿ ಆಚಾರ್ಯರು ಪೆಂಡಾಲಿಗೆ ಬಂದರು. ಕೇಶಲೋಚ ಪ್ರಾರಂಭವಾಯಿತು. ಜನ ಎಲ್ಲ ಅತ್ತ ಕಡೆ ಹೊರಟರು. ನಾನು ಉಳಿದ ಕೇಶದಲೋಚನವನ್ನು ಪ್ರಾರಂಭ ಮಾಡಿದೆ. ಪುನಃ ಅಮ್ಮ ಬಾಬುರಾಮರು ಬಂದು ನನ್ನನ್ನು ತಡೆದರು. ನಾನು ಅಲ್ಲಿಂದ ಎದ್ದು ಮಂದಿರಕ್ಕೆ ಹೋದೆ ಭಗವಂತರ ಮುಂದೆ ನಿಂತು ನಿಯಮವನ್ನು ಕೈಕೊಂಡೆ. ನನಗೆ ಎಲ್ಲಿಯವರೆಗೆ ವ್ರತ ಸಿಗುವುದಿಲ್ಲವೋ ಅಲ್ಲಿಯವರೆಗೆ ಅನ್ನ ಪಾನಾದಿಗಳನ್ನು ಮನೆಗೆ ಹಿಂತಿರಗುವುದನ್ನು ತ್ಯಾಗಮಾಡಿದ್ದೇನೆ. ಈ ನಿಯಮವನ್ನು ಕೈಕೊಂಡು ನನ್ನ ಉಪಸರ್ಗವು ದೂರವಾಗುವವರೆಗೂ ಈ ಜಾಗವನ್ನು ಬಿಟ್ಟು ಕದಲುವುದಿಲ್ಲವೆಂದು ಅಲ್ಲೇ ಕುಳಿತೆ.

ಆಚಾರ್ಯರ ಕೇಶಲೋಚ, ಪ್ರವಚನ ಮುಗಿದು ಜನಗಳೆಲ್ಲ ತಮ್ಮ ತಮ್ಮ ಊರಿಗೆ ಹಿಂದಿರುಗಿದರು. ರಾತ್ರಿ 9:10 ಗಂಟೆ ಇರಬೇಕು ಅಮ್ಮ ಅಲ್ಲಿಂದ ಎಬ್ಬಿಸಲು ಹಲವಾರು ಆಶ್ವಾಸನೆ ಕೊಟ್ಟು ನಾವು ತಂಗಿದ್ದ ಜಾಗಕ್ಕೆ ನನ್ನನ್ನು ಕರೆದುಕೊಂಡು ಬಂದಳು. ಇಡೀ ರಾತ್ರಿ ನನ್ನ ಅವರ ಜೊತೆ ಬರೇ ಚರ್ಚೆ ನಡೆಯಿತು ಅಮ್ಮನೂ ವೈರಾಗ್ಯ ಪರವಶಳಾಗಿದ್ದರು. ಮೈನಾ ನೋಡು ನಿನ್ನ ತಂದೆ ಶೋಕದಿಂದ ಹುಚ್ಚರಾಗಿ ಎಲ್ಲಿ ಹೋದರೋ ಗೊತ್ತಿಲ್ಲ. ಅಮ್ಮ ಈ ಮೋಹ ಕರ್ಮವೇ ಹಾಗೇ ಈ ಜೀವ ಈ ಸಂಸಾರದಲ್ಲೇ ಸುತ್ತುತ್ತಾ ಇದೆ. ಮೋಹದಿಂದ ಹೊರಬರಲು ಆಗುತ್ತಿಲ್ಲ. ಆದರೆ ನನಗೆ ನನ್ನ ಲಕ್ಷ್ಯಮುಖ್ಯ ನನಗೆ ಬೇರೆಯವರ ಬಗ್ಗೆ ಗಮನ ಹರಿಸಲಾರೆ.

ಮಗಳೇ ನೀನು ಒಂದು ಬಾರಿ ಮನೆಗೆ ಬಾ. ನಿನಗೆ ಬಲವಂತದಿಂದ ಮದುವೆ ಮಾಡುವುದಿಲ್ಲ. ನೀನೇ ಬೇರೆ ರೂಮ್‌ನಲ್ಲಿ ಇರು. ಅಲ್ಲೇ ಧರ್ಮಧ್ಯಾನ ಮಾಡಿಕೊಂಡು ಇರು. ಸ್ವಲ್ಪ ದಿನ ಕಳೆಯಲಿ ನಿನ್ನನ್ನು ಸಂಘದ ಜೊತೆ ಕಳುಹಿಸುತ್ತೇವೆ. ಎಂದರು ಅದಕ್ಕೆ ನಾನು ಈ ಜೀವನದ ಬಗ್ಗೆ ನನಗೆ ಭರವಸೆ ಇಲ್ಲ. ನಾಳೆ ಮಾಡುವದನ್ನು ಇಂದು ಮಾಡುವೆ ಇಂದು ಮಾಡುವುದನ್ನು ಈಗಲೇ ಮಾಡುತ್ತೇನೆ. ಮನೆ ಗಿನೆ ಎಂದು ಎಲ್ಲಿಗೂ ಬರುವುದಿಲ್ಲ ನಾನು ದೇವರ ಮುಂದೆ ಪ್ರತಿಜ್ಞೆ ಮಾಡಿ ಬಿಟ್ಟಿದ್ದೇನೆ ಎಂದೆ.

ಅಮ್ಮ ಅತ್ತಳು ಸಂತೈಸಿದಳು. ಆದರೆ ನಾನು ನೋಡು ಈ ಜೀವ ಸಂಸಾರದಲ್ಲಿ ಭ್ರಮಣೆ ಮಾಡುತ್ತಾ ಎಷ್ಟು ಜೀವಗಳ ಜೊತೆ ಸಂಬಂಧವನ್ನು ಹೊಂದಿತ್ತೋ ಎಷ್ಟು ಜನ ತಾಯಂದಿರನ್ನು ಹೊಂದಿತ್ತೋ ಎಷ್ಟು ಜನಗಳನ್ನು ಬಿಟ್ಟು ಬಂದಿದೆಯೋ ನನಗೆ ಯಾರ ಜೊತೆಯು ಸಂಬಂಧವಿಲ್ಲ ಅಮ್ಮ. ಈಗ ಮಗ ಸತ್ತು ಹೋದರೆ ಅಮ್ಮ ಹೇಗೆ ಅತ್ತು ಅತ್ತು ಸುಮ್ಮನಾಗುತ್ತಾಳೋ ಹಾಗೇ ನಾನು ಎಲ್ಲ ಸಂಬಂಧವನ್ನು ಕಳೆದುಕೊಂಡಿದ್ದೇನೆ ಎಂದೆ.

ರವೀಂದ್ರ ಎರಡು ಎರಡೂವರೆ ವರ್ಷದವನು ಕೇಶಲೋಚದ ಸಮಯದಲ್ಲಿ ನಿಂತು ಅಳುತ್ತಿದ್ದವನು. ಅಕ್ಕ ಮನೆಗೆ ನಡಿ ಮನೆಗೆ ನಡಿ ಎಂದು ಅಳತೊಡಗಿದ. ಅಮ್ಮ ತಮ್ಮ ತಂಗಿಯರನ್ನು ನೆನಪಿಸತೊಡಗಿದಳು. ನಾನು ಏನೂ ಕೇಳದವಳಂತೆ ಕುಳಿತೆ. ಆಗ ಅಮ್ಮಾ ಅಂದರು. ಮಗಳೇ ಆಚಾರ್ಯರು ಹೇಳಿದರು. ನಾನು ಮೈನಾಳಿಗೆ ಏನು ವ್ರತ ಕೊಡುವುದಿಲ್ಲ. ಅವಳು ಮನೆಗೆ ಹೋಗಲಿ, ಇನ್ನು ಕೆಲವು ದಿನ ಬ್ರಹ್ಮಚರ್ಯ

ವ್ರತವನ್ನು ಆಚರಿಸಲಿ ತಂದೆ ತಾಯಿ, ಸಮಾಜದವರು ಒಪ್ಪಿಗೆ ಕೊಟ್ಟ ಮೇಲೇಯೇ ದೀಕ್ಷೆ ಕೊಡುವುದು ಎಂದರು ಎಂದು ಹೇಳಿದರು. ಆಗ ನಾನು ನೀನು ನನ್ನ ಅಮ್ಮನೇ ಆದರೆ ನನಗೊಂದು ಉಪಕಾರಮಾಡು. ನಾನು ಜೀವನ ಪೂರ್ತಿ ಮರೆಯಲಾರೆ, ಅಮ್ಮ ಏನದು ಎಂದರು. ಆಚಾರ್ಯರ ಹತ್ತಿರ ನನಗೆ ದೀಕ್ಷೆ ತೆಗೆದುಕೊಳ್ಳಲು ಅನುಮತಿ ಕೊಡು ಈ ಮಾತು ಕೇಳಿ ಅಮ್ಮ ನಡುಗಿಬಿಟ್ಟರು. ನಿಮ್ಮ ತಂದೆ ಸಮಾಧಾನವಾದ ಮೇಲೆ ಮನೆಗೆ ಬಂದಮೇಲೆ ನನ್ನ ಮನೆಯಲ್ಲಿ ಇರಲು ಬಿಡುತ್ತಾರೆಯೇ ಅಮ್ಮ ಧರ್ಮದ ರಕ್ಷಣೆಗಾಗಿ ಅಪ್ಪನ ಎಷ್ಟೊಂದು ಕಠಿಣ ವ್ಯವಹಾರವನ್ನು ಸಹಿಸಿದ್ದೀಯ. ನನ್ನ ಕಾರಣದಿಂದ ಇದನ್ನೂ ಸಹಿಸಿಬಿಡು ಇದರಿಂದ ನನ್ನ ಉದ್ಧಾರವು ಆಗುತ್ತದೆ. ಅಮ್ಮ ಬಹಳ ಹೊತ್ತಿನ ತನಕ ಯೋಚಿಸುತ್ತಿದ್ದಳು. ರಾತ್ರಿ ಎಲ್ಲ ಇದೇ ಚರ್ಚೆ ನಡೆದು ಅಮ್ಮನು ಮೆತ್ತಗಾಗಿಬಿಟ್ಟಿದ್ದಳು. ನಾನು ತಕ್ಷಣ ಒಂದು ಕಾಗದ ಪೆನ್ಸಿಲ್ ತಂದು ಬರೆಯಲು ಹೇಳಿದೆ. ಅವಳು ನನ್ನ ಮಾತನ್ನು ಬರೆದುಕೊಳ್ಳತೊಡಗಿದಳು ಅಷ್ಟು ಹೊತ್ತಿಗೆ ಬೆಳಗಿನ ಜಾವ ಆಗತೊಡಗಿತು. ನಾನು ಹೇಳಿದಂತೆ ವಿಧಿ ಇಲ್ಲದೆ ಬರೆಯತೊಡಗಿದಳು ಕಣ್ಣಿನಲ್ಲಿ ನೀರು ಕೈಗಳು ನಡುಗುತ್ತಿದ್ದವು.

ಪೂಜ್ಯ ಮಹಾರಾಜರೇ ನನ್ನ ಪುತ್ರಿ ಮೈನಾ ಯಾವ ವ್ರತ ತೆಗೆದುಕೊಳ್ಳ ಬಯಸುತ್ತಾಳೋ ಅದನ್ನು ದಯಪಾಲಿಸಿ ಇದಕ್ಕೆ ನನ್ನ ಪೂರ್ಣ ಒಪ್ಪಿಗೆ ಇದೆ. ಅವಳು ವ್ರತವನ್ನು ಧೃಢವಾಗಿ ನಡೆಸಬಲ್ಲಳು. ಪತ್ರ ಬರೆದ ಮೇಲೆ ಅಮ್ಮ ಹೇಳತೊಡಗಿದಳು. ಮಗಳೇ ಇಂದು ನಾನು ನಿನ್ನನ್ನು ಸಂಸಾರದಿಂದ ಬಿಟ್ಟು ಕೊಡುತ್ತಿದ್ದೇನೆ ಹಾಗೇ ನೀನು ಒಂದು ದಿನ ನನ್ನನ್ನು ಈ ಬಂಧನದಿಂದ ಮುಕ್ತಳಾಗುವಂತೆ ಮಾಡು ಎಂದರು. ನಾನಂತೂ ಸಂತೋಷದಿಂದ ವಚನಕೊಟ್ಟೆ. ಅಮ್ಮ ಖಂಡಿತ ನಾನು ನಿನಗೆ ದೀಕ್ಷೆ ತೆಗೆದುಕೊಳ್ಳಲು ಸಹಾಯ ಮಾಡುತ್ತೇನೆ. ಅಮ್ಮನಿಗೆ ಚೆನ್ನಾಗಿ ಮನದಟ್ಟಾಗಿತ್ತು. ಮೈನಾ ಖಂಡಿತಾ ಮನೆಗೆ ಬರುವವಳಲ್ಲ. ಒಂದು ವೇಳೆ ಕರೆದುಕೊಂಡು ಹೋದರೆ ಅವಳು ಅನ್ನ ನೀರು ಬಿಟ್ಟು ದೇವರ ಮುಂದೆ ಕುಳಿತುಬಿಡುತ್ತಾಳೆ. ಅವಳಿಗೆ ವ್ರತ ತೆಗೆದುಕೊಳ್ಳಲು ಅನುಮತಿ ಕೊಡುವುದೇ ಲೇಸು. ಜನಗಳ ಮಾತಿಗೆ ಅಂಜುವುದು ಬೇಡ, ಮೋಹದ ಪಕ್ಷ ವಹಿಸುವುದಕ್ಕಿಂತ ವೈರಾಗ್ಯದ ಪಕ್ಷವನ್ನು ವಹಿಸುವುದು ಮೇಲು ಎಂದು ಭಾವಿಸಿರಬೇಕು.

ಅಮ್ಮ ಪತ್ರ ಬರೆದು ಸ್ನಾನ ಸಾಮಾಯಿಕ ಎಲ್ಲ ಆದ ಮೇಲೆ ನನ್ನ ಜೊತೆ ಮಹಾರಾಜರ ಹತ್ತಿರ ಬಂದಳು. ಇನ್ನೂ ಮಬ್ಬು ಕತ್ತಲು ಇತ್ತು. ಆಚಾರ್ಯರ ಸಾಮಾಯಿಕ ಮುಗಿದಿತ್ತು. ಸ್ವಾಮಿಗಳಿಗೆ ನಮಸ್ಕರಿಸಿ ಸ್ವಾಮಿಗಳ ಕೈಯಲ್ಲಿ ಆ ಪತ್ರವನ್ನು ಇರಿಸಿ ಹೇಳಿದರು ಸ್ವಾಮಿಗಳೇ ಈ ಪತ್ರದ ವಿಷಯವನ್ನು ಗೋಪ್ಯವಾಗಿಡಿ. ಈ ವಿಷಯ ಯಾರಿಗೂ ತಿಳಿಯುವುದು ಬೇಡ. ಈ ವಿಷಯದಲ್ಲಿ ತಮ್ಮ ಬಗ್ಗೆ ನನಗೆ ಬಹಳ ವಿಶ್ವಾಸವಿದೆ ಎಂದರು.

ಮಹಾರಾಜರು ಪತ್ರವನ್ನು ನೋಡಿ ಪ್ರಸನ್ನರಾಗಿ ಅಮ್ಮನ ಕಡೆ ನೋಡಿದಾಗ ಅವಳು ಸೆರಗಿನಿಂದ ಕಣ್ಣೊರೆಸಿಕೊಳ್ಳುತ್ತಿದ್ದಳು.

ಮಹಾರಾಜರೇ ಇವಳ ದೃಢತೆಯ ಬಗ್ಗೆ ನನಗೆ ಚೆನ್ನಾಗಿ ಗೊತ್ತು. ಚಿಕ್ಕಂದಿನಿಂದಲೂ ಇವಳು ವ್ರತಗಳ ಪಾಲನೆಯಲ್ಲಿ ಬಹಳ ನಿಷ್ಠಳು. ಇದರ ಬಗ್ಗೆ ನನಗೆ ಪೂರ್ಣವಿಶ್ವಾಸವಿದೆ. ಸಮಾಜದ ವಿರೋಧದ ಕಡೇ ಗಮನ ಕೊಡುವ ಅಗತ್ಯವಿಲ್ಲ ಎಂದರು. ಆದಾಗ್ಯೂ ಅಮ್ಮನ ಕಣ್ಣಿನಲ್ಲಿ ಮೋಹದ ಕಣ್ಣೀರು ತುಂಬಿದ್ದರೂ ನಿರ್ಮೋಹಿಯಾಗಿ ನಿಂತಿದ್ದಳು. ಇಷ್ಟು ಹೇಳಿದ ಅಮ್ಮ ಅಲ್ಲಿಂದ ದೇವಸ್ಥಾನಕ್ಕೆ ಹೊರಟು ಹೋದಳು. ಅಲ್ಲಿ ದೇವರ ಪೂಜೆ ನೋಡುವುದರಲ್ಲಿ ತನ್ಮಯಳಾದಳು. ಅಷ್ಟರಲ್ಲಿ ನನಗೆ ಪೂರ್ಣ ಸಹಕಾರ ಕೊಡುತ್ತಿದ್ದ ಒಬ್ಬ ಹೆಂಗಸು ಬಂದಳು. ಅವರಿಗೆ ಮಹರಾಜರು ಹೇಳಿದರು. ಮೈನಾಳನ್ನು ಕರೆದುಕೊಂಡು ಹೋಗಿ ಸ್ನಾನಮಾಡಿಸಿ ಹೊಸ ಸೀರೆ ಉಡಿಸಿ ಕರೆದುಕೊಂಡು ಬಾ ಎಂದರು. ಒಂದೆರಡು ನಿಮಿಷದಲ್ಲೇ ನಾನು ಸಿದ್ಧವಾಗಿ ಕೈಯಲ್ಲಿ

ಶ್ರೀಫಲ ಹಿಡಿದು ಮಹರಾಜರ ಮುಂದೆ ಬಂದೆ. ಅಷ್ಟರಲ್ಲಿ ನನ್ನ ಚಿಕ್ಕಮಾಮ ಭಗವಾನ್‌ದಾಸರು ಅಲ್ಲಿಗೆ ಬಂದರು ಅವರ ಮುಂದೆಯೇ ಮಹಾರಾಜರು ನನ್ನ ಅಜೀವಪರ್ಯಂತ ಬ್ರಹ್ಮಚರ್ಯ ವ್ರತವನ್ನು ಮತ್ತು ಸಪ್ತಮ ಪ್ರತಿಮೆಯ ವ್ರತವನ್ನು ಕೊಟ್ಟರು. ನಾನು ಅದೇ ಕ್ಷಣ ಮನೆಯನ್ನು ತ್ಯಜಿಸಿದೆ. ಮಾಮನಿಗೆ ಅಲ್ಲಿ ಏನು ನಡೆಯುತ್ತಿದೆ ಎಂದು ಗೊತ್ತಾಗುತ್ತಲೇ ಇಲ್ಲ. ಅವರಿಗೆ ಗೊತ್ತಾಗುತ್ತಲೆ ಅಳುತ್ತಾ ಅಕ್ಕನ ಬಳಿಗೆ ಹೋದರು. ಅಮ್ಮನು ಪೂಜೆ ಮುಗಿಸಿಕೊಂಡು ಬಂದರು. ನೋಡು ಮೈನಾ ವ್ರತ ತೆಗೆದುಕೊಂಡು ಮನೆಯನ್ನು ತ್ಯಜಿಸಿಯೇ ಬಿಟ್ಟಳು ಎಂದರು. ಅಮ್ಮನಲ್ಲಿ ವೈರಾಗ್ಯ ಮತ್ತು ತತ್ತ್ವಜ್ಞಾನದ ಅಂಕುರವಾಗಿತ್ತು. ಆದರೆ ಅವಳಿಗೆ ಗಂಡನ ಉಳಿದ ಮಕ್ಕಳ ಜವಾಬ್ದಾರಿಯಿಂದ ನಿವೃತ್ತಳಾಗಲು ಆಗುತ್ತಿರಲಿಲ್ಲ. ಅದಕ್ಕೆ ಕಾಲಲಬ್ಧಿಯ ಪರಾಧೀನತೆ ಎನ್ನಬೇಕು. ತಮ್ಮನ ಮಾತುಕೇಳಿ ಅವರು ಇವತ್ತೇ ಅವಳ ಜನ್ಮದಿನ ಪುನಃ ಅವಳಿಗೆ ಈ ಆಶ್ವೀಜ ಶುದ್ಧ ಹುಣ್ಣಿಮೆಯಂದು ಅವಳ ಪುನರ್ಜನ್ಮವಾಗಿದೆ ಎಂದರು. ನನ್ನ ವ್ರತದ ವಿಷಯ ಬರೆ ಬಾರಾಬಂಕಿಯಲ್ಲಿ ಅಲ್ಲದೆ ಅಕ್ಕ ಪಕ್ಕದ ಊರುಗಳಿಗೂ ತಿಳಿಯಿತು. ಅಮ್ಮನಿಗೆ ಮನೆಯ ಜವಾಬ್ದಾರಿ ಎಳೆಯುತ್ತಿದ್ದುದ್ದರಿಂದ ನನಗೆ ಎರಡು ಬಿಳಿ ಸೀರೆಯನ್ನು ಪೂಜಾಸಾಮಗ್ರಿಯನ್ನು ಸ್ವಲ್ಪ ಹಣವನ್ನು ಕೊಟ್ಟು ಊರಿಗೆ ಹೊರಟಳು.

ಅಪ್ಪ ಎಲ್ಲೋ ಕಾಡಿನಲ್ಲಿ ಅಳುತ್ತಾ ಕುಳಿತಿದ್ದವರನ್ನು ಬಾಬುಮಲ್ ಚಿಕ್ಕಪ್ಪ ಕರೆದುಕೊಂಡು ನನ್ನ ಹತ್ತಿರ ಬಂದರು. ಸ್ವಲ್ಪ ಶಾಂತವಾಗಿದ್ದರು ನನಗೆ ಇನ್ನು ಸಮಾಧಾನ ಮಾಡುತ್ತಾ ಮಗಳೇ ನೀನು ಜೀವನ ಪೂರ್ತಿ ಬ್ರಹ್ಮಚರ್ಯವನ್ನ ಪಾಲನೆ ಮಾಡು ಈಗ ಟಿಕೈತನಗರಕ್ಕೆ ನಡೆ ಮಂದಿರದಲ್ಲೇ ಇರುವಂತೆ ನಿನ್ನ ಓದು ಬರಹಕ್ಕೆ ನಾನೇ ವ್ಯವಸ್ಥೆ ಮಾಡುತ್ತೇನೆ ನಿನ್ನ ಆಹಾರದ ವಿಷಯವು ನಿನ್ನ ಇಷ್ಟದಂತೆ ಆಗಲಿ ಎಂದರು. ಅದಕ್ಕೆ ನಾನು ನನ್ನ ಮೇಲಿನ ಮೋಹವನ್ನು ಬಿಡಿರಿ. ನಾನು ದೀಕ್ಷೆ ತೆಗೆದುಕೊಳ್ಳುವವರೆಗೂ ನಾನು ಊರಿಗೆ ಬರುವುದಿಲ್ಲ ಎಂದು ಅಂದುದಕ್ಕೆ ಅಪ್ಪನಿಗೆ ಸಿಟ್ಟು ಬಂದಿತು. ನಾನು ಇನ್ನು ಯಾವತ್ತು ನಿನ್ನನ್ನು ಭೇಟಿಯಾಗುವುದಿಲ್ಲ ಎಂದರು. ನಾನು ಸಪ್ತಮ ವ್ರತಧಾರಿಯಾಗಿ ಆಚಾರ್ಯರ ಮುಂದೆ ಕುಳಿತಿದ್ದ ಹತ್ತಿರದಲ್ಲೇ ನನ್ನ ತಮ್ಮ ತಂಗಿಯರಾದ ಶಾಂತಿದೇವಿ, ಕೈಲಾಸಚಂದ್ರ , ಶ್ರೀಮತಿ, ಮನೋವತಿ. ಪ್ರಕಾಶಚಂದ್ರ, ಸುಭಾಷಚಂದ್ರ, ಕುಮುದಿನಿ ನಿಂತಿದ್ದರು. ರವೀಂದ್ರ ನನ್ನ ಸೆರಗು ಹಿಡಿದು ಅಕ್ಕ ಮನೆಗೆ ನಡಿ ಮನೆಗೆ ನಡಿ ನಿನಗೆ ಏನಾಗಿದೆ ಎಂದು ಅಳತೊಡಗಿದ. ಈ ಕರುಣಾಮಯಿ ದೃಶ್ಯವನ್ನು ನೋಡುತ್ತಿದ್ದ ಬಾರಾಬಂಕಿಯ ಜನಗಳ ಕಣ್ಣಲ್ಲೂ ನೀರು. ಆದರೆ ನನ್ನ ಕಣ್ಣು ಒಣಗಿತ್ತು. ನಾನು ಈ ಸಂಸಾರದಲ್ಲಿ ಎಷ್ಟೊಂದು ಅಣ್ಣ ತಮ್ಮಂದಿರನ್ನು ಬಿಟ್ಟು ಬಂದಿದ್ದೇನೋ ಈ ಮೋಹಕ್ಕೆ ತಲೆಬಾಗಿಸಲೇ ಬಾರದೆಂಬ ನನ್ನ ದೃಢನಿರ್ಧಾರವನ್ನು ಕಂಡು ಆಚಾರ್ಯರು ಅಂದುಕೊಂಡರು. ಇದೊಂದು ಭವ್ಯಜೀವ ಇವಳು ದೀಕ್ಷೆಗೆ ಖಂಡಿತ ಅರ್ಹಜೀವ ಎಂದುಕೊಂಡರು.

ನನಗೆ ದೀಕ್ಷೆ ತೆಗೆದುಕೊಳ್ಳಲು ಅನುವು ಮಾಡಿದ ಅಮ್ಮನ ಮೇಲೆ ನನಗೆ ಗೌರವ ಮೂಡಿತು. ಎಷ್ಟೋ ದಿನದ ನನ್ನ ಇಚ್ಛೆ ಹೀಗೆ ತಕ್ಷಣ ನೆರವೇರಿದ್ದು ನನಗೆ ಅತ್ಯಂತ ಸಂತೋಷವನ್ನು ಕೊಟ್ಟಿತು. ನನಗೆ ಆತ್ಮಕಲ್ಯಾಣಕ್ಕೆ ದಾರಿಮಾಡಿದ ಅಮ್ಮನಿಗೆ ನಾನು ಅವಳನ್ನು ಆತ್ಮಕಲ್ಯಾಣಕ್ಕೆ ಖಂಡಿತಾ ತರಲೇಬೇಕೆಂಬ ನಿರ್ಧಾರ ಕೈಕೊಂಡೆ. ಇದು ನಡೆದಿದ್ದು 1952ರಲ್ಲಿ.

ನನ್ನ ಬ್ರಹ್ಮಚರ್ಯ ಜೀವನ ಪ್ರಾರಂಭವಾಯಿತು. ದಿನಪೂರ್ತಿ ಮಂದಿರದಲ್ಲೇ ಇರುತ್ತಿದ್ದೆ ಸ್ವಾಧ್ಯಾಯ ಮಾಡುತ್ತಾ ಅಮರಕೋಶದ 20-20 ಶ್ಲೋಕಗಳನ್ನು ಕಂಠಸ್ಥ ಮಾಡುತ್ತಿದ್ದೆ. ಮೂರು ಕಾಲಗಳಲ್ಲೂ ಸಾಮಾಯಿಕ ಮಾಡುತ್ತಾ, ಆಚಾರ್ಯರ ದರ್ಶನ ಮಾಡುತ್ತಾ ಉಪದೇಶ ಕೇಳುತ್ತಾ ದಿನವೆಲ್ಲ ಅಲ್ಲೇ ಕಳೆದು ರಾತ್ರಿಯ ವೇಳೆ ಅತ್ತೆಯ ಮನೆಗೆ ಬರುತ್ತಿದ್ದೆ. ಕಪೂರ ಚಂದ್ರ ಪತ್ನಿಯು ಧರ್ಮಪಾರಾಯಣೆ ನನ್ನ ಹತ್ತಿರವೇ ಮಲಗುತ್ತಿದ್ದರು.

ನನಗೆ ಎಲ್ಲ ರೀತಿಯ ಅನುಕೂಲತೆಗಳನ್ನು ಒದಗಿಸುತ್ತಿದ್ದರು. ಅದೇ ಸಮಯಕ್ಕೆ ಲಖನೌನ ಒಬ್ಬ ಮಹಿಳೆ ತನ್ನ ವಯಸ್ಸಿಗೆ ಬಂದ ಮಗ ಮೃತಪಟ್ಟಿದರಿಂದ ಜೀವನದಲ್ಲಿ ವಿರಕ್ತಳಾಗಿ ಗಂಡ ವಿರೋಧಿಸಿದರೂ ಲೆಕ್ಕಿಸದೆ ಮಹಾರಾಜರ ಶರಣಿಗೆ ಬಂದು ಸಪ್ತಮ ವ್ರತವನ್ನೂ ಕೈಕೊಂಡರು. ಅವರು ನಾನು ಜೊತೆಯಾಗಿ ಇರತೊಡಗಿದೆವು.

ಇದಕ್ಕೂ ಮೊದಲು ಬಾರಾಬಂಕಿಯ ಶ್ಯಾಮಬಾಯ್ ತಾರಾಬಾಯಿ ಮೋಹನಲಾಲರ ಪತ್ನಿ ಮತ್ತೊಬ್ಬ ಹೆಂಗಸು ಇವರೆಲ್ಲ ನನ್ನ ಹತ್ತಿರ ಬರುತ್ತಿದ್ದರು. ನನ್ನ ನಡವಳಿಕೆಯನ್ನು ಯಾವಾಗಲೂ ಹೊಗಳುತ್ತಿದ್ದರು. ಆಚಾರ್ಯರು ಈ ನಾಲ್ವರನ್ನೇ ಲೋಕಾಂತಿಕದೇವರು ಎಂದು ಕರೆಯುತ್ತಿದ್ದರು. ಇವರ ಗಂಡಂದಿರು ಕೂಡ ನನಗೆ ಎಲ್ಲದರಲ್ಲೂ ನೆರವು ಕೊಡುತ್ತಿದ್ದರು. ನಾನು ಚತುರ್ದಶಿಯಂದು ಕೇಶಲೋಚ ಮಾಡಿಕೊಳ್ಳಲಾರಂಭಿಸಿದ್ದನ್ನು ಮಹಮೂದ್ ನಗರದಿಂದ ಬಂದಿದ್ದ ಮಹೀಪಾಲ್ ಮಾಮ ನೋಡಿದವರೇ ಮೋಹದಿಂದ ತಡೆದು ಆವಾಂತರ ಎಬ್ಬಿಸಿದರು. ಪೋಲೀಸ್ ಕರೆದುಕೊಂಡು ಬಂದು ನಿಲ್ಲಿಸುವವರೆಗೂ ಹೋಯಿತು. ಆವೇಶದಿಂದ ಮಹಾವೀರ್ ಪ್ರಸಾದ್, ಮೋಹನಲಾಲ್, ರಾಜೇಂದ್ರ ಪ್ರಸಾದ್‌ರ ಹತ್ತಿರ ಜಗಳವು ಆಡಿದರು. ಸಂಜೆಯವರೆಗೂ ಅವರಿಗೆ ಏನು ಉಪಾಯ ಹೊಳೆಯಲಿಲ್ಲವಾಗಿ ನಾನು ಹಠದಿಂದ ಮಂದಿರದಲ್ಲೇ ಕುಳಿತಿದ್ದು ನೋಡಿ ತಿಳುವಳಿಕೆ ಹೇಳಲು ಬಂದವರು ಏನೂ ಪರಿಣಾಮ ಬೀರದಿದ್ದನ್ನು ನೋಡಿ ಅಕ್ಕನನ್ನ ಯದ್ವಾ - ತದ್ವಾ ಬೈದುಕೊಂಡು ಮನೆಗೆ ವಾಪಸ್ಸು ಹೋದರು.

೮

ಚಾತುರ್ಮಾಸ ಮುಗಿದ ನಂತರ ಆಚಾರ್ಯರು ಬಾರಾಬಂಕಿಯಿಂದ ವಿಹಾರ ಮುಂದುವರಿಸಿ ಡಾಲಿಗಂಜಿನಲ್ಲಿ ತಂಗಿದ್ದರು. ಅಲ್ಲಿಂದ ಶ್ರೀ ಮಹಾವೀರಜೀಗೆ ಯಾತ್ರೆ ಹೋಗುವ ಯೋಚನೆ ಇತ್ತು. ಈ ವ್ಯವಸ್ಥೆಯಲ್ಲಿ ಮುಂದಾಳತ್ವವನ್ನು ಶ್ರೀ ಮಂದರದಾಸಜೀ ಚಾರಬಾಗ ಮತ್ತು ಶ್ರೀ ಜುಗ್ಗಾಮಲ್ ವಹಿಸಿದ್ದರು. ಫಾಲ್ಗುಣ ಮಾಸದ ಅಷ್ಟಾಹ್ನಿಕದ ದಿನದಂದು ದೀಕ್ಷೆಗಾಗಿ ಪ್ರಾರ್ಥಿಸುತ್ತಲೇ ಇದ್ದೆ. ಮಹಾವೀರಜೀಯಲ್ಲೇ ದೀಕ್ಷೆ ತೆಗೆದುಕೊಳ್ಳಬೇಕೆಂದು ನಿಯಮ ಮಾಡಿಕೊಂಡೆ. ಆಚಾರ್ಯರು ಯೋಚನೆ ಮಾಡತೊಡಗಿದರು. ಇವಳ ಮನೆಯವರಿಗೆ ತಿಳಿಸಿದರೆ ಪುನಃ ಬಂದು ಅತ್ತು ಕರೆದು ದೀಕ್ಷೆಗೆ ಅಡ್ಡಿ ಒಡ್ಡುತ್ತಾರೆ. ಆದರೆ ಈ ಕನ್ಯೆಯೂ ವೈರಾಗ್ಯ ಭಾವನೆ, ಕಷ್ಟ ಸಹಿಷ್ಣುತೆ, ಭಯಂಕರ ಮಾಘಮಾಸದ ಚಳಿಯಲ್ಲಿಯು ಒಂದೇ ಸೀರೆಯಲ್ಲಿಹೊದಿಯಲು ಹಾಸಲು ಸಹ ಬಳಸದೇ ಹುಲ್ಲಿನ ಮೇಲೆ ಒಂದೇ ಮಗ್ಗುಲಲ್ಲಿ ಮಲಗವುದು. ದಿನದಲ್ಲಿ ಒಂದೇ ಊಟ, ಮುಂತಾದ ಆಚರಣೆಯಿಂದ ಕ್ಷುಲ್ಲಕ ಆಚರಣೆಯನ್ನು ಆಚರಿಸುತ್ತಿದ್ದಾಳೆ. ಇದರಿಂದ ಅವರು ಜುಗ್ಗಾಮಲ್ಲರ ಹತ್ತಿರ ಚರ್ಚೆಮಾಡಿ ಮನೆಯವರಿಗೆ ತಿಳಿಸದೆ ದೀಕ್ಷೆ ಕೊಡಲು ನಿರ್ಧರಿಸಿದರು. ಅಲ್ಲಿಯೇ ದೀಕ್ಷೆ ನೀಡಲು ವ್ಯವಸ್ಥೆ ಚೆನ್ನಾಗಿ ನಡೆಯಿತು.

ಆಚಾರ್ಯರು ಚೈತ್ರ ಕೃಷ್ಣ ಏಕಾದಶಿಯಂದು ಬೆಳಗ್ಗೆ 10 ಗಂಟೆಗೆ ಮೂಹೂರ್ತವನ್ನು ನಿಶ್ಚಯಿಸಿದ್ದರು. ನಾನು ಮಹಾವೀರ ತೀರ್ಥಂಕರನ ಆರಾಧನೆ ಪೂಜೆ ಮಾಡಿದೆ. ಸೌಭಾಗ್ಯವತಿಯರು ನನಗೆ ಮಂಗಳ ಸ್ನಾನ ಮಾಡಿಸಿ ದೀಕ್ಷಾ ಸ್ಥಳಕ್ಕೆ ಕರೆತಂದರು. ಶ್ರೀಫಲ ಹಿಡಿದು ದೀಕ್ಷೆಗಾಗಿ ಪ್ರಾರ್ಥಿಸಿದೆ. ಆಚಾರ್ಯರು ಮನ್ನಿಸಿ ಅಕ್ಕಿಯಲ್ಲಿ ಬರೆದ ಸ್ವಸ್ತಿಕದ ಮೇಲೆ ಕುಳಿತುಕೊಳ್ಳಲು ಆದೇಶಿಸಿದರು. ತಮ್ಮ ಕೈಗಳಿಂದಲೇ ಕ್ಷುಲ್ಲಿಕ ದೀಕ್ಷೆಯ ವಿಧಿಗಳನ್ನು ನೆರವೇರಿಸಿ ನನಗೆ ವೀರಮತಿ ಎಂದು ಹೆಸರು ಕೊಟ್ಟರು. ದೀಕ್ಷೆಯ ನಂತರ ಉಪದೇಶ ಕೊಡುತ್ತಾ

ಹೇಳಿದರು. ನಾನು ನೋಡಿದಂದಿನಿಂದಲೂ ಈಕೆಯ ವೀರತೆಯನ್ನು ಗಮನಿಸಿದ್ದೇನೆ ಇಂತಹ ವೀರತೆ ಕಂಡು ಬರುವುದು ಬಹಳ ದುರ್ಲಭ ಅದಕ್ಕಾಗಿ ಇವಳ ಗುಣ ನೋಡಿಯೇ ವೀರಮತಿ ಎಂದು ಕರೆದಿದ್ದೇನೆ ಎಂದರು.

ನಾನು ಗುರುಗಳಿಗೆ ಮತೆ ಮತ್ತೆ ನಮಸ್ಕರಿಸಿದೆ. ನನ್ನ ಜೀವನದ ಮಹಾನ್ ಉದ್ದೇಶ ನೆರವೇರಿದ ಸಂತೋಷವನ್ನು ವ್ಯಕ್ತಪಡಿಸಲು ಶಬ್ದಗಳೇ ಇರಲಿಲ್ಲ. ದೀಕ್ಷೆಯ ನಂತರ ಗುರುಗಳ ಅನುಜ್ಞೆಯಂತೆ ಭಗವಾನ್ ರ ದರ್ಶನಕ್ಕೆ ತೆರಳಿದೆ. ಭಗವಂತರೇ ನಿಮ್ಮ ಮೂರ್ತಿಯ ಚಮತ್ಕಾರವನ್ನು ಬರೇ ಕೇಳಿದ್ದೆ ಆದರೆ ಇದು ಪ್ರತ್ಯಕ್ಷ ಅನುಭವಕ್ಕೆ ಬಂದಿದೆ. ಹೇ ಭಗವಂತ ಇದು ನಿಜಕ್ಕೂ ಅತಿಶಯವಾದ ಕ್ಷೇತ್ರವೇ. ನನ್ನ ಅಭಿಲಾಷೆಯಂತೆ ಇಲ್ಲೇ ದೀಕ್ಷೆ ದೊರೆತಿದ್ದು, ಎಂದು ಮನಸಾರೆ ಭಗವಂತನನ್ನು ಸ್ತುತಿಸಿ ನನ್ನ ಸ್ಥಾನಕ್ಕೆ ಬಂದೆ. ನನಗಿಂತ ಮೊದಲು ಕ್ಷುಲ್ಲಿಕಾ ದೀಕ್ಷೆ ಪಡೆದಿದ್ದ 'ಬ್ರಾಹ್ಮೀಮತೀ' ಯು ಕೂಡ ನನ್ನ ಜೊತೆಯೇ ಇರಲು ಬಂದರು. ಇದರಿಂದ ಅವಶ್ಯಕ ಕ್ರಿಯೆಗಳನ್ನು ಒಟ್ಟಾಗಿ ಮಾಡುತ್ತಾ ಧಾರ್ಮಿಕ ಚರ್ಚೆ ಮಾಡುತ್ತಾ ದಿನಗಳು ಅರ್ಥಪೂರ್ಣವಾಗಿ ಕಳೆಯತೊಡಗಿತು.

ಎಂಟು ಹತ್ತು ದಿನಗಳಾದ ಮೇಲೆ ಅಮ್ಮ ಯಾತ್ರೆ ಮಾಡುತ್ತಾ ಬಂದವಳಿಗೆ ವಿಷಯ ತಿಳಿದು ಹರ್ಷ ವಿಷಾದಗಳು ಒಟ್ಟಿಗೆ ಉಂಟಾದವು. ಅವರು ಬಂದು ನಮಸ್ಕರಿಸಿ "ಮಾತಾಜಿ ಇಚ್ಛಾಮಿ" ಎಂದದ್ದು ನೋಡಿ ನಾನು ನಿರ್ವಿಕಾರವಾಗಿ ಸದ್ಧರ್ಮವೃದ್ಧಿರಸ್ತು ಎಂದೇ ಅವರು ನಮಗೆ ದೀಕ್ಷೆಯ ಸಮಾಚಾರವನ್ನು ಏಕೆ ತಿಳಿಸಲಿಲ್ಲ ಎಂದರು. ನಾನು ಏನನ್ನು ಮಾತಾಡಲಿಲ್ಲ. ಅಮ್ಮ ಆಚಾರ್ಯರಲ್ಲಿಗೆ ಹೋಗಿ ನಮಸ್ಕರಿಸಿ ಇದೇ ಪ್ರಶ್ನೆ ಕೇಳಿದರು. ಅದಕ್ಕೆ ಆಚಾರ್ಯರು ನೀವು ಮೋಹಪರವಶರಾಗಿ ಎಲ್ಲಿ ದೀಕ್ಷೆಗೆ ಅಡ್ಡಿಯಾಗಬಹುದೆಂದು ತಿಳಿಸಲಿಲ್ಲ. ಅವಳ ಭಾವನೆ ದೃಢತೆ ನೋಡಿ ದೀಕ್ಷೆ ಕೊಡುವುದು ಉಚಿತ ಎಂದು ನಾವು ತೀರ್ಮಾನಿಸಿದೆವು ಎಂದರು ಮತ್ತು ಅಮ್ಮನ್ನು ಹಲವಾರು ರೀತಿ ಯಿಂದ ಸಮಾಧಾನ ಮಾಡಿದರು. ಶಾಂತಗೊಂಡ ಅಮ್ಮ ಅಲ್ಲೇ ಎರಡು ದಿನ ತಂಗಿದ್ದು ನನ್ನ ದಿನಚರಿಯನ್ನು ಗಮನಿಸುತ್ತಿದ್ದಳು. ಅವಳಿಗೂ ಅನ್ನಿಸತೊಡಗಿತು. ಭಗವಂತನೇ ನಾನು ಯಾವಾಗ ಈ ಸಂಸಾರದ ಬಂಧನದಿಂದ ಪಾರು ಆಗುವುದೆಂದು. ಎರಡು ದಿನ ಆಹಾರವನ್ನು ಕೊಟ್ಟು ತನ್ನ ಯಾತ್ರೆ ಪೂರ್ಣಗೊಳಿಸಿ ಊರಿಗೆ ತಲುಪಿ ಮನೆಯವರಿಗೆ ವಿಷಯ ತಿಳಿಸಿರಬೇಕು, ಅವರಿಗೂ ಆಘಾತವಾದರೂ ಅದು ನಿಶ್ಚಿತವೆಂದು ತಿಳಿದಿದ್ದರಿಂದ ಯಾರೂ ಬರುವ ಸಾಹಸ ಮಾಡದೆ ಮನಸ್ಸು ಗಟ್ಟಿ ಮಾಡಿಕೊಳ್ಳತೊಡಗಿದರು.

ಮಹಾವೀರಜೀಗೆ ಚೈತ್ರಮಾಸದಲ್ಲಿ ಆಚಾರ್ಯಕಲ್ಪ ಶ್ರೀ ವೀರಸಾಗರರ ದೊಡ್ಡ ಸಂಘ ಆಗಮಿಸಿತು. ಅವರ ದರ್ಶನದಿಂದ ನಾನು ಪುಳಕಿತಳಾದೆ. ಆಹಾರದ ಸಮಯದಲ್ಲಿ ಎಲ್ಲ ಮುನಿ, ಆರ್ಯಿಕೆಯರು ಕ್ಷುಲ್ಲಿಕೆಯರು ಅನುಸರಿಸುವ ವಿಧಿ ನೋಡಿ ಮನಕ್ಕೆ ಅತ್ಯಂತ ಆಹ್ಲಾದವೆನಿಸತೊಡಗಿತು. ನಾನು ಸಮಯ ದೊರೆತಾಗಲೆಲ್ಲ ಸಂಶಯವನ್ನು ನಿವಾರಿಸಿಕೊಳ್ಳುತ್ತಿದ್ದೆ. ಪೆಂಡಾಲಿನಲ್ಲಿ ಒಂದೇ ವೇದಿಕೆಯಿಂದ ದೇಶಭೂಷಣರು, ವೀರಸಾಗರರು ಆರ್ಯಿಕೆಯರಿಗೆ ಉಪದೇಶ ಕೊಡುತ್ತಿದ್ದರು. ಇದೊಂದು ಅದ್ಭುತ ಸಂಗತಿಯಾಗಿತ್ತು. ಶ್ರಾವಕರು ಕೂಡ ಹರ್ಷಚಿತ್ತರಾಗಿ ಮಧುರಕ್ಷಣಗಳನ್ನು ವೀಕ್ಷಿಸುತ್ತಿದ್ದರು. ಚೈತ್ರ ಶುಕ್ಲ ಹದಿನೈದರಂದು ಮಹಾವೀರಜೀಯಲ್ಲಿ ದೊಡ್ಡ ಜಾತ್ರೆಯನ್ನು ಮರಳಿ ನೋಡಿದರು. ಆಚಾರ್ಯ ದೇಶಭೂಷಣರು ವಾಪಸ್ಸು ಲಖನೌಗೆ ಹೊರಟರು. ಸಂಘದಲ್ಲಿ ಕ್ಷುಲ್ಲಿಕೆ ಬ್ರಾಹ್ಮಿಮತೀಯವರು ಕೂಡ ಇದ್ದರು.

ಆಚಾರ್ಯರು ದಿನಕ್ಕೆ 30 ಮೈಲು ದೂರವನ್ನು ನಡೆದು ಬಿಡುತ್ತಿದ್ದರು. ನಾನು ಸಾಹಸ ಮಾಡಿ ನಡೆಯಲು ಪ್ರಯತ್ನ ಪಟ್ಟರೂ ಕೆಲವೊಮ್ಮೆ ದಾರಿಯಲ್ಲೇ ಮೂರ್ಛೆಹೋಗುತ್ತಿದ್ದೆ. ನಾನು ವಾಹನವೇರಬಾರದೆಂದು ಪ್ರಯತ್ನ ಪಟ್ಟರೂ ಆರೋಗ್ಯದ ಕಾರಣದಿಂದ ಆಚಾರ್ಯರು ವಾಹನದಲ್ಲೇ ಪ್ರಯಾಣಿಸುವಂತೆ ಅಣತಿ ಇತ್ತರು. ಸಂಘ ಲಖನೌ ತಲುಪಿತು. ಟಿಕೈತ ನಗರದ ಜನರು 1953 ರ ಚಾತುರ್ಮಾಸವನ್ನು ಆಚಾರ್ಯರು ತಮ್ಮ ಊರಿನಲ್ಲಿಯೇ

ಮಾಡಲು ಪ್ರಾರ್ಥಿಸಿ ಸೋತಿದ್ದರು. ಆ ವರ್ಷ ಆಚಾರ್ಯರು ಬಾರಾಬಂಕಿಯಲ್ಲಿ ಚಾತುರ್ಮಾಸ ಮಾಡಿದ್ದರು. ಅಲ್ಲಿಗೆ ಹತ್ತಿರದಲ್ಲೇ ಇದ್ದ ಟಿಕೈತನಗರದ ಶ್ರಾವಕರು ತಮ್ಮ ಊರಿಗೆ ಬರಲು ಪ್ರಾರ್ಥಿಸಿದಾಗ ಆಚಾರ್ಯರು ಆಶ್ವಾಸನೆಯನ್ನು ಕೊಡಲಿಲ್ಲ. ನಿರಾಕರಿಸಲೂ ಇಲ್ಲ.

ಸಂಘ ಟಿಕೈತನಗರದ ಹತ್ತಿರದ ದರಿಯಾಬಾದ್‌ನಲ್ಲಿ ತಂಗಿತ್ತು. ಆದರೆ ಆಚಾರ್ಯರಿಗೆ ಟಿಕೈತಗರಕ್ಕೆ ಹೋಗಲು ಮನಸ್ಸಿರಲಿಲ್ಲ. ಏಕೆಂದರೆ ಅಲ್ಲಿ ಮಾವ, ಚಿಕ್ಕಪ್ಪ, ಮತ್ತು ತಂದೆಯು ವಿರೋಧಿಸಬಹುದೆಂಬ ಕಾರಣಕ್ಕಾಗಿಯೇ ಹೋಗುವುದನ್ನು ಮುಂದೂಡುತ್ತಿದ್ದರು. ಟಿಕೈತನಗರದ ಜನರು ತಂದೆಯವರಿಗೆ ಹೇಳಿದರು ನೀವು ಹೋಗಿ ಆಚಾರ್ಯರನ್ನು ನಿಲ್ಲಲು ಪ್ರಾರ್ಥಿಸಿ ಎಂದು ಹೇಳಿದ ಮೇಲೆ ಒಬ್ಬರೇ ಆಚಾರ್ಯರಲ್ಲಿ ಹೋಗಿ ವಿನಂತಿಸಿದರು. ಮೋಹದ ವಶದಿಂದ ನನ್ನಿಂದ ಕಟುಶಬ್ದ ಹೊರಬಿದ್ದಿದೆ. ಅದಕ್ಕಾಗಿ ಕ್ಷಮೆಯಾಚಿಸುತ್ತೇನೆ. ತಾವು ನಮ್ಮಲ್ಲಿ ನಿಲ್ಲಬೇಕೆಂದು ಮತ್ತೆ ಮತ್ತೆ ಕೇಳಿಕೊಂಡಿದ್ದು ಆಚಾರ್ಯರಿಗೆ ಸಮಾಧಾನವನ್ನು ತಂದಿತ್ತು. ಬರಲು ಸಮ್ಮತಿ ಕೊಟ್ಟರು. ಈ ವಿಷಯವನ್ನು ತಂದೆಯವರೇ ಬಂದು ನನ್ನ ಹತ್ತಿರ ತಿಳಿಸಿದರು. ಮಾತಾಜಿ ತಾವು ಕೂಡ ಆಚಾರ್ಯರಿಗೆ ಚಾತುರ್ಮಾಸಕ್ಕೆ ಊರಿಗೆ ಬರಲು ಕೇಳಿಕೊಳ್ಳಿ ಎಂದು. ಇದೇ ಸಮಯಕ್ಕೆ ಊರಿನವರೆಲ್ಲ ಬಂದು ಆಚಾರ್ಯರಲ್ಲಿ ವಿನಂತಿ ಮಾಡಿಕೊಳ್ಳಲಾಗಿ ಆಚಾರ್ಯರು ಬರಲು ಸಮ್ಮತಿಸಿದರು. ಆಷಾಢ ಶುಕ್ಲ ಚತುರ್ದಶಿಯಂದು ಟಿಕೈತನಗರದಲ್ಲಿ ಚಾತುರ್ಮಾಸದ ಸ್ಥಾಪನೆಯಾಯಿತು. ಇಡೀ ಊರಿನಲ್ಲೆ ಒಂದು ಧಾರ್ಮಿಕ ವಾತಾವರಣ ನಿರ್ಮಾಣವಾಯಿತು. ನನಗೆ ಇದು ಮೊದಲ ಚಾತುರ್ಮಸವಾಗಿತ್ತು. ನಾನು ಹೆಚ್ಚಾಗಿ ಮೌನವಾಗಿ ಇರಲು ಬಯಸುತ್ತಿದ್ದೆ. ಆಚಾರ್ಯರು ಶ್ರಾವಕಚಾರದ 20, 25 ಶ್ಲೋಕಗಳನ್ನು ಓದಿ ಅದನ್ನು ಸ್ವತಃ ನಾನು ಅಭ್ಯಾಸಮಾಡಿ ಹೇಳಲು ಆದೇಶಿಸಿದ್ದರಿಂದ ನಾನು ಏನು ಹೇಳಲಾರದಾಗಿದ್ದೆ.

ಒಮ್ಮೆ ಆಚಾರ್ಯರು ನನಗೆ ಹಿಂದೀ - ಇಂಗ್ಲೀಷ್ ಎಂಬ ಪುಸ್ತಕಕೊಟ್ಟು ಹೇಳಿದರು. ನೀನು ಇದನ್ನು ಅಭ್ಯಾಸ ಮಾಡಿ ಇಂಗ್ಲೀಷ್ ಭಾಷೆಯನ್ನು ಕಲಿ ಎಂದು ನಾನು ಒಂದು ವಾರ ಅಭ್ಯಾಸಮಾಡಿ ಚಿಕ್ಕ ಚಿಕ್ಕ ಇಂಗ್ಲೀಷ್ ವಾಕ್ಯ ಮಾಡುವುದನ್ನು ಕಲಿತೆ. ಒಂದು ದಿನ ಆಚಾರ್ಯರು ನನ್ನ ಕಲಿಕೆಯನ್ನು ನೋಡಿ ಪ್ರಸನ್ನತೆಯನ್ನು ವ್ಯಕ್ತಗೊಳಿಸಿದರು. ಇಷ್ಟರಲ್ಲಿ ಟಿಕೈತನಗರದ ವಯೋವೃದ್ಧ, ಧರ್ಮನಿಷ್ಠರು ನನ್ನ ಇಂಗ್ಲೀಷ್ ಕಲಿಕೆಯನ್ನು ಗಮನಿಸಿ ನೀನು ಇಂಗ್ಲೀಷ್ ಕಲಿಯುವುದಕ್ಕಿಂತ ಸಂಸ್ಕೃತವನ್ನು ಕಲಿತು ಗೊಮ್ಮಟ್ಟಸಾರ ಮುಂತಾದ ಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡು ಎಂದರು.

ಈ ಮಾತನ್ನು ಕೇಳಿ ನನ್ನ ಇಂಗ್ಲೀಷ ಕಲಿಕೆಯ ಮೋಹ ಅಲ್ಲಿಗೆ ಮುಗಿಯಿತು. ಈ ಚಾತುರ್ಮಾಸದಲ್ಲಿ ನಾನು ಭಗವತೀ ಆರಾಧನೆ ಪರಮಾತ್ಮ ಪ್ರಕಾಶವನ್ನ ಹಲವಾರು ಸಲ ಸ್ವಾಧ್ಯಾಯ ಮಾಡಿದೆ. ಗೊಮ್ಮಟಸಾರ ಜೀವಕಾಂಡದ ಸುಮಾರು 700 ಗಾಹೆಗಳನ್ನು ಕಂಠಪಾಠಮಾಡಿದ್ದೆ. ಮತ್ತು ಅಮರಕೋಶವನ್ನು ಕಂಠಸ್ಥ ಮಾಡಿದ್ದೆ. ಆಚಾರ್ಯರ ಆಜ್ಞೆಯಂತೆ ಸಿದ್ಧಾಂತಕೌಮುದಿ ವ್ಯಾಕರಣವನ್ನು ಸಂಘದಲ್ಲೇ ಇದ್ದ ತ್ರಿಪಾಠೀ ಪಂಡಿತರಿಂದ ಸ್ವಲ್ಪ ಕಲಿತೆ. ಆದರೆ ಮುಂದಿನದನ್ನು ಓದಿ ತಿಳಿದುಕೊಳ್ಳಲಾಗಲಿಲ್ಲ. 1953 ನೇ ಇಸವಿಯಲ್ಲಿ ದಕ್ಷಿಣದಿಂದ 'ವಿಶಾಲಮತಿ' ಎಂಬ ಕ್ಷುಲಿಕೆಯರು ನಮ್ಮ ಸಂಘಕ್ಕೆ ಬಂದರು. ಅವರ ವಾತ್ಸಲ್ಯದಿಂದ ನನಗೆ ಬಹಳ ಸಂತೋಷವಾಯಿತು. ಇದಕ್ಕೂ ಮೊದಲು ಬ್ರಾಹ್ಮಿಮತಿಯವರಿಗೆ ಇಡೀ ನಾಲ್ಕು ತಿಂಗಳು ಮಲೇರಿಯಾ ಜ್ವರದಿಂದ ಬಳಲುತ್ತಿದ್ದದ್ದು ಅವರಿಗೆ ಪರಚರ್ಯೆ ಮಾಡುವುದರಲ್ಲೇ ಎಲ್ಲ ಸಮಯ ಕಳೆಯುತ್ತಿತ್ತು.

ನಾನು ಹೆಚ್ಚು ಸಮಯ ಓದುವುದರಲ್ಲೇ ಕಳೆಯುತ್ತಿದ್ದುದ್ದರಿಂದ ಕಣ್ಣು ಮತ್ತು ತಲೆಯಲ್ಲಿ ನೋವು ಪ್ರಾರಂಭವಾಯಿತು. ಬ್ರಾಹ್ಮಿಮತೀಜೀ ಅಮ್ಮನಿಗೆ ಈ ವಿಷಯ ತಿಳಿಸಿ ನಿಮ್ಮ ಎದೆ ಹಾಲಿನಲ್ಲಿ ಹತ್ತಿಯನ್ನು

ನೆನಸಿ ಕಣ್ಣು ಮೇಲೆ ಹಾಕಿ ಎಂದು ಹೇಳಿದ್ದರಿಂದ ಅಮ್ಮ 9, 10 ಗಂಟೆಗೆ ಬಂದು ನಾನು ಮಲಗಿದ ಮೇಲೆ ಈ ಚಿಕಿತ್ಸೆ ಮಾಡಿ ಹೋಗುತ್ತಿದ್ದರು. ಅಪ್ಪ ಆಗ ಈಗ ಬಂದು ನನ್ನ ಹತ್ತಿರ ಕುಳಿತುಕೊಳ್ಳುತ್ತಿದ್ದರು. ಅವರಿಗೆ ನನ್ನ ಹತ್ತಿರ ಮಾತನಾಡುವ ಮನಸ್ಸು ಆದರೆ ನಾನೇ ಏನನ್ನು ಮಾತನಾಡುತ್ತಿರಲಿಲ್ಲ. ಅವರಿಗೆ ನನ್ನ ಚರ್ಯೆಯನ್ನು ನೋಡಿ ಸಮಾಧಾನವೆನ್ನಿಸ ತೊಡಗಿತು. ಒಂದು ಸಲ ಅಜ್ಜಿ ಬಂದಿದ್ದರು. ಕೈಯಲ್ಲಿ 30, 35 ಬೆಳ್ಳಿಯ ಹಣವನ್ನು ಕೊಟ್ಟು ಸಮಯ ಬಂದಾಗ ಉಪಯೋಗಿಸಿಕೊಳ್ಳಲು ಹೇಳಿದರು. ಅದಕ್ಕೆ ನಾನು ಉಡುವ ಸೀರೆ ದುಪಟ್ಟಾ ಬಿಟ್ಟು ಬೇರೆಯದರ ಅವಶ್ಯಕತೆ ನನಗಿಲ್ಲ. ಊಟ ಶ್ರಾವಕರಲ್ಲಿ ಆಗುವುದರಿಂದ ಬೇರೆಯದರ ಅವಶ್ಯಕತೆ ನನಗಿಲ್ಲ. ನಾನು ಹಣವನ್ನು ತೆಗೆದುಕೊಳ್ಳದೆ ಇದ್ದುದ್ದರಿಂದ ನೊಂದ ಅವರು ಯಾವುದಾದರು ಗ್ರಂಥಬೇಕಾ ಎಂದು ಕೇಳಿದರು. ಗ್ರಂಥಗಳನ್ನು ಆಚಾರ್ಯರೇ ಒದಗಿಸುವುದರಿಂದ ನನಗೆ ಹಣದ ಅವಶ್ಯಕತೆ ಇಲ್ಲ. ಆದ್ದರಿಂದ ಆ ಹಣವನ್ನು ಮಂದಿರಕ್ಕೆ ಕೊಡು ಎಂದೆ. ಇದರಿಂದ ಬಡಪಾಯಿ ನೊಂದು ಕೊಂಡು ಹೋದರು. ಅವರು ಹೆಂಗಸರ ಹತ್ತಿರ ತಮ್ಮ ಅಳಲನ್ನು ತೋಡಿಕೊಳ್ಳತೊಡಗಿದರು. ಈ ಚಿಕ್ಕ ವಯಸ್ಸಿನಲ್ಲಿ ಉಟ್ಟು ತೊಟ್ಟು ಓಡಾಡುವ ವಯಸ್ಸಿನಲ್ಲಿ ಎಲ್ಲವನ್ನು ತ್ಯಜಿಸಿದ್ದಾಳಲ್ಲ ಎಂದು. ಆಗ ನಾನು ಯೋಚಿಸುತ್ತಿದ್ದೆ ಮೋಹಕರ್ಮದ ವಶದಿಂದಾಗಿ ಜೀವಿಗಳು ಕೇವಲ ತಿಂದು ಉಂಡು ವಿಷಯ ಸುಖವನ್ನೆ ಸುಖವೆಂದು ಭಾವಿಸುತ್ತಾರಲ್ಲ. ಆದರೆ ನನಗೆ ಅನುಪಮ ನಿಧಿ ಅನುಪಮ ಸುಖ. ಆಧ್ಯಾತ್ಮಿಕ ಸುಖ ಸಿಕ್ಕಿದೆಯಲ್ಲ. ಅನಾದಿಕಾಲದಿಂದ ಈ ಜೀವ ಸಂಸಾರದಲ್ಲಿ ಎಷ್ಟು ತಿಂದು ಉಂಡು ಸುಖಪಟ್ಟಿದೆಯೋ ಆದರೆ ಶಾಶ್ವತ ಸುಖದ ಅನುಭವವನ್ನು ಅದು ಪಡೆದಿಲ್ಲ. ಅದನ್ನು ಪಡೆಯುವ ಮಾರ್ಗವನ್ನು ಅನುಸರಿಸಿಲ್ಲ. ಆದ್ದರಿಂದ ಈಗ ಈ ಮಾರ್ಗದಲ್ಲಿ ನಡೆಯುವ ಸುಕೃತ ಸಿಕ್ಕಿದೆಯಲ್ಲಾ ಎಂದು ಯೋಚಿಸುತ್ತಲೇ ಟಿಕೈತನಗರದ ಚಾತುರ್ಮಾಸ ಮುಗಿಯಿತು.

೯

ಟಕೈತ ನಗರದಿಂದ ಚಾತುರ್ಮಾಸ ಮುಗಿಸಿ ಆಚಾರ್ಯರ ವಿಹಾರ ಬಾರಾಬಂಕಿ, ಲಖನೌ ಮೂಲಕ ಮತ್ತೇ ಮಹಾವೀರಜೀಗೆ ಬಂದಿತು. ಮಹಾವೀರರ ಸಾತಿಶಯಮೂರ್ತಿಯ ದರ್ಶನ ಮಾಡಿದೆವು. ಕ್ಷುಲ್ಲಿಕೆ ವಿಶಾಲಮತಿ ಮಾತಾಜೀಕೂಡ ನಮ್ಮ ಜೊತೆಯಲ್ಲಿ ಇದ್ದರು. ಜಯಪುರದ ಪ್ರಮುಖ ವ್ಯಕ್ತಿಗಳ ಆಗ್ರಹದಿಂದ ನಮ್ಮ ವಿಹಾರ ಜಯಪುರವನ್ನು ತಲುಪಿತು. ಅಲ್ಲಿ ಭಟ್ಟಾರಕರ ದರ್ಶನಮಾಡಿದೆವು. ಅಲ್ಲಿಯ ಜೈನ ಸಮಾಜ ಆಚಾರ್ಯರಿಗೆ ಭವ್ಯ ಸ್ವಾಗತವನ್ನು ಮಾಡಿದರು ಅವರ ದರ್ಶನದಿಂದ ಧನ್ಯತಾ ಭಾವವನ್ನು ಹೊಂದಿದರು. ಇಲ್ಲಿ ನಮಗೆ ಪಂಡಿತ ಇಂದ್ರಲಾಲರ ಪರಿಚಯವಾಯಿತು.

ಆಚಾರ್ಯರು ಛೋಟಿ ದೀವಾನಜೀಯ ಮಂದಿರದಲ್ಲಿ ತಂಗಿದ್ದರು ಮತ್ತು ಅದರ ಹತ್ತಿರವೇ ಇದ್ದ ಪಾಟೋದಿ ಮಂದಿರದಲ್ಲಿ ನಾವಿಬ್ಬರು ಕ್ಷುಲ್ಲಿಕೆಯರು ತಂಗಿದ್ದೆವು. ಇಲ್ಲಿಯ ಜನರಿಗೆ ಧರ್ಮಪ್ರಭಾವನೆ ಆಯಿತು. ಕೆಲವು ದಿನಗಳ ನಂತರ ವಿಹಾರ ನಿವಾ ಗ್ರಾಮದ ಕಡೆ ಹೊರಟಿತು. ಇಲ್ಲಿಯ ನಿವಾಸಿಗಳಾದ ಹೀರಾಲಾಲಜೀ ಪಾಟನೀ ಮುಂತಾದ ಒಳ್ಳೆ ಧರ್ಮಾತ್ಮ ಶ್ರಾವಕರಿದ್ದರು. ಪಂಡಿತ ರಾಜಕುಮಾರ್ ಶಾಸ್ತ್ರಿಗಳು ಕೂಡ ಆಚಾರ್ಯರ ಭಕ್ತಿಯಲ್ಲಿ ತತ್ಪರರಾಗಿದ್ದರು.

ನಾನು ಮತ್ತು ವಿಶಾಲಮತಿ ಮಂದಿರದ ಹತ್ತಿರದ ಧರ್ಮಶಾಲೆಯಲ್ಲಿ ತಂಗಿದ್ದೆವು. ಬಿಸಿಲಿನ ದಿನ ನಮ್ಮ ಹತ್ತಿರ ಚಂದ್ರಾವತಿ ಎಂಬ ಬ್ರಹ್ಮಚಾರಿಣಿ ಮಹಿಳೆ ಇದ್ದರು. ಒಂದು ದಿನ ಸುಮಾರು 2 ಗಂಟೆ ಸಮಯದಲ್ಲಿ

ಒಬ್ಬ ಹುಡುಗನ ಹತ್ತಿರ ಹಣಕೊಟ್ಟು ಖರ್ಜೂರ ತರಲು ಹೇಳಿದ್ದಾಳೆ. ಹುಡುಗ ಆಚೆ ಹೋಗುವಾಗ ಒಬ್ಬ ಶ್ರಾವಕರು ಏತಕ್ಕೆ ಹೋಗುತ್ತಿದ್ದೀಯ ಎಂದು ಕೇಳಿದ್ದಾರೆ. ಅದಕ್ಕೆ ಅವನು ಮಾತಾಜಿ ಹಣಕೊಟ್ಟು ಖರ್ಜೂರ ತರಲು ಹೇಳಿದ್ದಾರೆ ಎಂದಿದ್ದಾನೆ ಇದನ್ನು ಕೇಳಿದ ಶ್ರಾವಕರು ಧರ್ಮಶಾಲೆಗೆ ಬಂದು ಕುಳಿತರು. ನಾಲ್ಕು ಗಂಟೆ ಆದರೂ ಎದ್ದು ಹೋಗಲಿಲ್ಲ. ವಿಶಾಲಮತಿಗೆ ಅವರು ಹಾಗೆ ಸುಮ್ಮನೆ ಕುಳಿತಿದ್ದು ನೋಡಿ ಮನಸ್ಸಿಗೆ ಸರಿ ಎನ್ನಿಸಲಿಲ್ಲ. ನನ್ನ ಹತ್ತಿರ ವಿಶಾಲಮತಿ ಹೇಳಿದರು ಅವರು ಸುಮ್ಮನೆ ಬಂದು ಕುಳಿತುಕೊಳ್ಳುವುದು ಸರಿ ಅಲ್ಲ ಎಂದು ಅದಕ್ಕೆ ನಾನು ಹೋಗಲಿ ಬಿಡು ಕೇಳುವುದು ಬೇಡ ಎಂದೆ ಅಷ್ಟರಲ್ಲಿ ಹುಡುಗ ಪೊಟ್ಟಣ ಹಿಡಿದುಕೊಂಡು ಒಳ ಬಂದು ಬ್ರಹ್ಮಚಾರಿಣಿಯನ್ನ ಹುಡುಕಿ ಅದನ್ನುಕೊಟ್ಟ ಅದಕ್ಕೆ ಅವರು ಅವನನ್ನು ಎಷ್ಟೊತ್ತಿನಿಂದ ಬಾಯಾರಿಕೆಯಿಂದ ಒದ್ದಾಡುತ್ತಿದ್ದೆ ಏಕೆ ತಡಮಾಡಿದೆ ಎಂದು ಗದರಿದ್ದನ್ನು ಆ ಶ್ರಾವಕರು ನೋಡಿ ಅನಂತರ ನನ್ನ ಹತ್ತಿರ ಬಂದು ಬ್ರಹ್ಮಚಾರಿಣಿಯವರನ್ನು ಮಾತಾಜಿ ಎಂದು ಏಕೆ ಕರೆಯುತ್ತಾರೆ ಎಂದರು. ವಿಷಯ ಗೊತ್ತಿಲ್ಲದ ನಾನು ಹೆಂಗಸರನ್ನು ದೊಡ್ಡವರನ್ನು ಕರೆದರೆ ತಪ್ಪಿಲ್ಲ ಎಂದೆ. ಅದಕ್ಕೆ ಅವರು ನಡೆದ ಘಟನೆ ಹೇಳಿ ಹುಡುಗ ಮಾತಾಜೀಗೆ ಹಣ್ಣು ಎಂದಾಗ ಬೇರೆ ಶ್ರಾವಕರು ಕೇಳಿಸಿಕೊಂಡು ಜನಗಳಿಗೆ ಹೇಳಿದ್ದರೆ ನಿಮ್ಮ ಬಗ್ಗೆ ಜನ ತಪ್ಪು ತಿಳಿಯುವ ಪ್ರಸಂಗ ಬರುತ್ತಿತ್ತು. ಅದಕ್ಕಾಗಿ ಪರೀಕ್ಷಿಸೋಣ ಎಂದು ನಾನೇ ಕಾದು ಕುಳಿತೆ ಎಂದು ಕಾರಣವನ್ನ ಹೇಳಿದಾಗ ನನ್ನ ಎದೆ ಧಸಕ್ಕೆಂದಿತು. ವಿಶಾಲಮತಿಗೂ ಆಘಾತವಾಯಿತು. ಬ್ರಹ್ಮಚಾರಿಣಿ ಮತ್ತು ಹುಡುಗನ ಪ್ರಸಂಗದಿಂದ ನಮ್ಮಿಬ್ಬರ ಹೆಸರಿಗೂ ಕಳಂಕ ಬರುವುದನ್ನು ತಪ್ಪಿಸಿದ ಶ್ರಾವಕರ ಬಗ್ಗೆ ಬಹಳ ಗೌರವ ಉಂಟಾಯಿತು. ನೀವು ಬಹಳ ಒಳ್ಳೆಯಕೆಲಸ ಮಾಡಿದಿರೆಂದು ಅವರಿಗೆ ಬಾರಿ ಬಾರಿ ಹೇಳಿದೆವು. ಅವರು ನಂತರ 'ಇಚ್ಛಾಮಿ' ಹೇಳಿ ಮನೆಗೆ ತೆರಳಿದರು. ಸಾಯಂಕಾಲ ಈ ಘಟನೆಯನ್ನು ಆಚಾರ್ಯರಿಗೆ ತಿಳಿಸಿ ಅಂದಿನಿಂದ ಬ್ರಹ್ಮಚಾರಿಣಿಯರಿಗೆ ಮಾತಾಜೀ ಅನ್ನದೇ ಬಾಯಿಜೀ ಎಂದು ಕರೆಯಬೇಕೆಂಬ ಶಿಕ್ಷಣವನ್ನು ಜಾರಿಗೆ ತಂದೆವು. ಸಾಧುಗಳಿಗೆ ತಗಲುತ್ತಿದ್ದ ಕಲಂಕವನ್ನು ತಪ್ಪಿಸಿದ ಗುರುಭಕ್ತ ಶ್ರಾವಕನನ್ನು ಮನದಲ್ಲೇ ಹರಸಿದೆವು.

ಇಲ್ಲಿಂದ ವಿಹಾರ 'ಟೊಂಕ' ತಲುಪಿತು. ಅಲ್ಲಿ ಭೂಮಿಯಿಂದ 24 ತೀರ್ಥಂಕರರ ಪ್ರತಿಮೆಗಳನ್ನು ಹೊರತೆಗೆದಿದ್ದರು ಊರ ಹೊರಗಿನ ಮನೆಯಲ್ಲಿ ಇಡಲಾಗಿತ್ತು. ಅವುಗಳ ದರ್ಶನದಿಂದ ಮನಸ್ಸು ಹರ್ಷಗೊಂಡಿತು. ಈ ಪ್ರಾಂತ್ಯದಲ್ಲಿ ಹೆಂಗಸರು ತಲೆಯಮೇಲೆ ಮಣ್ಣಿನ ಕೊಡಗಳಲ್ಲಿ ನೀರನ್ನು ತರುವ ದೃಶ್ಯ ಕಂಡುಬಂದಾಗ ಅಲ್ಲಿಯವರೆಗೆ ಹೆಂಗಸರನ್ನು ವಿವಾಹ ಇಲ್ಲ ಮಂದಿರಕ್ಕೆ ಹೋಗುವುದನ್ನು ಮಾತ್ರ ನೋಡಿದ್ದ ನನಗೆ ಇದು ಆಶ್ಚರ್ಯವಾಯಿತು. ಮುನಿ ಆರ್ಯಿಕಯರಿಗೆ ಆಹಾರ ಸಿದ್ಧತೆಗೆ ಸ್ವತಃ ಹೆಂಗಸರೇ ಕೆಲಸ ಮಾಡುತ್ತಿದ್ದರು. ಹೀಗೆ ಎಲ್ಲ ಕಡೆಯಲ್ಲಿಯು ಮುನಿಗಳ ಪ್ರಭಾವ ಬೀರಿತು. ಜನಗಳು ಭಕ್ತಿಯಿಂದ ಜಯಪುರದಲ್ಲೇ ಚಾತುರ್ಮಾಸಕ್ಕೆ ಉಳಿಸಿಕೊಂಡರು. ಆಹಾರದ ಸಮಯದಲ್ಲಿ ನೂರಾರು ಜನ ಚೌಕಗಳನ್ನು ಮಾಡುತ್ತಿದ್ದರು. 1954 ರ ಚಾತುರ್ಮಾಸದಲ್ಲಿ ಜನಗಳ ಭಕ್ತಿಯನ್ನು ನೋಡಿ ಧನ್ಯ ಎನಿಸುತ್ತಿತ್ತು.

ಒಂದು ದಿನ ಮಂದಿರದಲ್ಲಿಮೀಟಿಂಗ್ ನಡೆಯುತ್ತಿತ್ತು. ತ್ಯಾಗಿಗಳು ಇರುವುದೇ ನಾಲ್ಕೈದು ಜನ ಆದರೆ ದಿನಾ ನೂರಾರು ಜನ ಚೌಕಮಾಡಿಕೊಂಡು ದಿನಾ ಆಹ್ವಾನಿಸಲು ನಿಂತಿರುತ್ತಾರೆ. ಆದರೆ ಪುಣ್ಯ ಲಾಭ ನಾಲ್ವರಿಗೆ ಮಾತ್ರ ಉಳಿದವರಿಗೆ ಸುಮ್ಮನೆ ಖರ್ಚು, ಕಡಿಮೆ ಎಂದರೆ ಒಂದು ರೂ. ಖರ್ಚಾಗುತ್ತಿದೆ. ಅಂದರೆ ದಿನಕ್ಕೆ ನೂರು, ಆ ಹಣವನ್ನೆಲ್ಲ ಸೇರಿಸಿ ಬೇರೆ ಕಾರ್ಯಕ್ಕೆ ಬಳಸಬಹುದು ಆದ್ದರಿಂದ ದಿನಕ್ಕೆ ನಾಲ್ಕೆ ಮನೆಯಲ್ಲಿ ಮಾಡಿದರೆ ಸಾಕು ಎನ್ನುವ ತೀರ್ಮಾನವನ್ನು ಜನ ವ್ಯಕ್ತ ಪಡಿಸತೊಡಗಿದರು. ಚರ್ಚೆಯಲ್ಲಿ ಭಾಗವಹಿಸಿದವರು ಪಂಡಿತಜನರೇ. ಅದರಲ್ಲಿ ಒಬ್ಬ ಪಂಡಿತರು ಹೇಳಿದರು ನಾವು ಶುದ್ಧಆಹಾರ ತಯಾರಿಸಿ. ನವದಾ ಭಕ್ತಿಯಿಂದ

ಮುನಿಗಳನ್ನು ಆಹಾರಕ್ಕೆ ತಡೆಯಲು ನಿಲ್ಲಿಸುವುದರಿಂದಲೇ ನಮಗೆ ಆಹಾರ ದಾನದ ಪುಣ್ಯ ಲಭಿಸುತ್ತದೆ ಇದನ್ನು ಖರ್ಚು ಎಂದು ಭಾವಿಸುವುದು ತಪ್ಪು ಎಂದು ತಿಳಿಯಪಡಿಸಿದರು. ಇದನ್ನು ಕೇಳಿದ ಸುಧಾರಕ ವಿಚಾರವಾದಿಗಳು ಉತ್ತರ ಹೇಳಲಾರದೆ ಸುಮ್ಮನಾಗ ಬೇಕಾಯಿತು. ಈ ಎಲ್ಲ ವಿಷಯನಮಗೆ ನಂತರ ತಿಳಿಯಿತು. ಈ ಚಾತುರ್ಮಾಸದಲ್ಲಿ ಊರಿನ ಪ್ರಮುಖ ಭಕ್ತ ಶ್ರಾವಕರೆಂದರೆ ವಿರಧೀಚಂದ ಗಂಗವಾಲ, ಗುಲಾಬ ಚಂದ್ ಸೇಠಿ, ರಾಮಚಂದ್ರ ಕೋಠಾರಿ, ಹರಿಶ್ಚಂದ್ರ ಅಗ್ರವಾಲ್‌ರು ವಿದ್ವಾಂಸರಾದ ಪಂಡಿತ ಇಂದ್ರಲಾಲ ಜೀ ಶಾಸ್ತ್ರಿ, ಪಂಡಿತ ಕನ್ಹೈಯಾ, ಪಂಡಿತ ಸೀಮಂಧಿರಜೀ ಮುಂತಾದವರು. ಆಹಾರ ದಾನ ಮತ್ತು ಉಪದೇಶಾಮೃತದ ಎರಡರ ಲಾಭವನ್ನೂ ಪಡೆದರು.

೧೦

ಚಾತುರ್ಮಾಸ ಕೈಕೊಳ್ಳುತ್ತಲೇ ಸಂಸ್ಕೃತ ವ್ಯಾಕರಣ ಮತ್ತು ಸಿದ್ಧಾಂತಗ್ರಂಥಗಳ ಅಧ್ಯಯನ ಮಾಡಬೇಕೆಂಬ ನನ್ನ ಅಭೀಪ್ಸೆ ಕೈಗೂಡದೆ ಇದ್ದದ್ದರಿಂದ ನನ್ನ ಖಿನ್ನತೆಯು ಹೆಚ್ಚಾಗತೊಡಗಿತು. ದುಃಖಿತಳಾಗಿ ಭಗವಂತನೇ ಯಾವಾಗ ನನಗೆ ಓದುವ ಸಾಮರ್ಥ್ಯವನ್ನು ಕರುಣಿಸುತ್ತೀಯ ನನ್ನ ಜ್ಞಾನಚಕ್ಷುವನ್ನು ಹೇಗೆ ಬೆಳಗಿಸಿಕೊಳ್ಳಲಿ ಎಂದು ಬೇಡಿಕೊಳ್ಳುತ್ತಿದ್ದೆ. ನನ್ನ ಮನದಾಸೆಯನ್ನು ಅರಿತಿದ್ದ ವಿಶಾಲಮತಿ ಆಚಾರ್ಯರ ಹತ್ತಿರ ಹೋಗಿ ವೀರಮತಿಗೆ ಅಧ್ಯಯನಕ್ಕಾಗಿ ವ್ಯವಸ್ಥೆಯನ್ನು ಕಲ್ಪಿಸಿರಿ ಎಂದು ವಿನಂತಿಸಿದರು. ಅದಕ್ಕೆ ಮಹಾರಾಜರು ಅವಳದು ಇನ್ನೂ ಚಿಕ್ಕ ವಯಸ್ಸು ಯಾವುದೇ ಪಂಡಿತರಿಂದ ಹೇಳಿಸುವ ವ್ಯವಸ್ಥೆಯಿಂದ ಕಲಂಕ ಬರಬಹುದೆಂಬ ಮುಂದಾಲೋಚನೆಯಿಂದ ಸುಮ್ಮನಾಗಿದ್ದೇನೆ. ಅದಕ್ಕಾಗಿ ಅವಳೇ ಸ್ವಾಧ್ಯಾಯದಿಂದ ಜ್ಞಾನವನ್ನು ಪಡೆಯಲು ಪ್ರಯತ್ನಿಸುವುದು ಸಮಂಜಸ ಎಂದರು.

ಒಮ್ಮೆ ನಾನೇ ಗುರುಗಳಲ್ಲಿ ವಿನಂತಿಸಿದೆ. ಪೂಜ್ಯರೇ 'ಸರ್ವಾರ್ಥಸಿದ್ಧಿ' ಯನ್ನು ಸ್ವಾಧ್ಯಾಯ ಮಾಡುವಾಗ ಸಂಸ್ಕೃತ ವಾಕ್ಯಗಳ ಅರ್ಥವನ್ನು ಕೆಲವು ವೇಳೆ ಅರ್ಥ ಮಾಡಿಕೊಳ್ಳಲಾಗುತ್ತಿಲ್ಲ. ಆದ್ದರಿಂದ ತಾವೇ ಒಂದು ಸಲ ಅಧ್ಯಯನವನ್ನು ಮಾಡಿಸಿ ಎಂದೆ. ಅದಕ್ಕೆ ಅವರು ನೀನೆ ಸ್ವತಃ ಓದಿ ಅರ್ಥಮಾಡಿಕೊಳ್ಳಲು ನಿನಗೆ ಸಂಸ್ಕೃತದ ವ್ಯಾಕರಣವನ್ನು ಕಲಿಯುವುದು ಅವಶ್ಯಕವಾಗಿದೆ ಎಂದರು. ನಾನೇ ಸ್ವತಃ ವ್ಯಾಕರಣದ ಅಭ್ಯಾಸ ಮಾಡಬೇಕಾಗಿತ್ತು. ಆದರೆ ವಿಶಾಲಮತಿಯು ಆಚಾರ್ಯರಲ್ಲಿ ಅನುನಯದಿಂದ ವಿನಂತಿಸುತ್ತಲೇ ಇದ್ದುದ್ದರಿಂದ ಕೊನೆಗೆ ಆಚಾರ್ಯರು ಸ್ಥಾನೀಯ ಪಂಡಿತರಾದ ಇಂದ್ರಲಾಲಜೀ ಶಾಸ್ತ್ರಿಯವರಿಗೆ ಹೇಳಿದರು ನೀವು ನನ್ನ ಶಿಷ್ಯೆ ವೀರಮತಿಗೆ ಸಂಸ್ಕೃತ ವ್ಯಾಕರಣವನ್ನು ಹೇಳಿಕೊಡಬೇಕು.

ಪಂಡಿತರು ಆಚಾರ್ಯರ ಆಜ್ಞೆಯನ್ನು ಶಿರಸಾವಹಿಸಿ ನನಗೆ ವಿಶಾಲಮತಿಗೆ ಇಬ್ಬರಿಗೂ ಪಾಠ ಮಾಡುತ್ತಿದ್ದರು. ದಿನಕ್ಕೆ ಎರಡು ಮೂರು ಸೂತ್ರಗಳನ್ನು ಹೇಳಿ ಚೆನ್ನಾಗಿ ಮನದಟ್ಟು ಮಾಡಿಸುತ್ತಿದ್ದರು. ಅವರು ಹೇಳಿಕೊಡುತ್ತಲೇ ನಾನು ಸೂತ್ರ ವೃತ್ತಿ, ಅರ್ಥವನ್ನು ತಿಳಿದುಕೊಂಡು ಅವರಿಗೆ ಮತ್ತೆ ಕೇಳಲು ಹೇಳುತ್ತಿದ್ದೆ. ಅದಕ್ಕೆ ಅವರು ಚೆನ್ನಾಗಿ ಅಭ್ಯಾಸ ಮಾಡಿ ನಾಳೆ ಹೇಳಿ ಎನ್ನುತ್ತಿದ್ದರು. ಅದಕ್ಕೆ ನಾನು ಇವತ್ತಿನ ಪಾಠವನ್ನು ಈಗಲೇ ಒಪ್ಪಿಸುತ್ತೇನೆ ನಂತರ ಇನ್ನೂ ನಾಲ್ಕಾರು ಸೂತ್ರವನ್ನು ಇಂದೇ ಹೇಳಿಕೊಡಿ ಎಂದು ಕೇಳಿದರೆ, ಸಂಸ್ಕೃತ ವ್ಯಾಕರಣ ಬೇಗ ಒಲಿಯುವುದಿಲ್ಲ. ಇದು ಕಬ್ಬಿಣದ ಕಡಲೆ ಅವಸರ ಮಾಡಬಾರದು ಎನ್ನುತ್ತಿದ್ದರು.

ಹೀಗೆ ಒಂದೆರಡು ದಿನ ಕಲಿತ ನಂತರ ಇದೇ ನಿಧಾನಗತಿ ನನಗೆ ಬೇಸರ ತರಿಸುತ್ತಿತ್ತು. ಇದನ್ನು ತಿಳಿದ ವಿಶಾಲಮತಿ ಆಚಾರ್ಯರಿಗೆ ತಿಳಿಸಲಾಗಿ ಮತ್ತೊಬ್ಬ ಪಂಡಿತರನ್ನು ಗೊತ್ತು ಮಾಡಿದರು. ಅವರು ಕೂಡ ಇದೇ ಗತಿಯಲ್ಲಿ ಹೇಳತೊಡಗಿದರು. ಇದರಿಂದಾಗಿ ಪಂಡಿತರುಗಳೇ ಸೇರಿ ವಿಚಾರ ಮಾಡತೊಡಗಿದರು. ಇವರಂತು ವ್ಯಾಕರಣದ ಜ್ಞಾನದಾಹಿಯಾಗಿದ್ದಾರೆ. ಇವರಿಗೆ ಯಾರಾದರೂ ಬ್ರಾಹ್ಮಣ ಅತಿ ಪ್ರೌಢ ವಿದ್ವಾಂಸರನ್ನು ಕರೆಸಿ ದಿನಕ್ಕೆ ಐವತ್ತು ಸೂತ್ರಗಳನ್ನು ಅರ್ಥೈಸುವಂತಹವರನ್ನು ಕರೆಸಬೇಕೆಂದು ವಿಚಾರ ಮಾಡತೊಡಗಿದರು.

ಆ ಸಮಯದಲ್ಲಿ ಜೈನ ಕಾಲೇಜಿನಲ್ಲಿ, ಕಾತಂತ್ರ ವ್ಯಾಕರಣವನ್ನು ಹೇಳಿಕೊಡುತ್ತಿದ್ದ ದಾಮೋದರ ಶಾಸ್ತ್ರಿಗಳು ಇದ್ದರು. ಅವರನ್ನು ಕರೆಸಿ ಆಚಾರ್ಯರ ಮುಂದೆ ಪರಿಚಯವನ್ನು ಮಾಡಿಕೊಡಲಾಯಿತು. ಮಹಾರಾಜರೇ ಇವರು ವ್ಯಾಕರಣದ ಪಂಡಿತರು ಇವರಿಗೆ ಎಲ್ಲ ಸೂತ್ರಗಳು ಕಂಠಸ್ಥ. ಹಗಲು ರಾತ್ರಿ ಇವರು ವ್ಯಾಕರಣವನ್ನು ಪಾಠ ಮಾಡಬಲ್ಲರು ಎಂದರು. ಆಗ ಅಲ್ಲಿಗೆ ಆಚಾರ್ಯರು ನನ್ನನ್ನು ಕರೆಸಿ ವಿನೋದದಿಂದ ಹೇಳಿದರು : ನೋಡು ವೀರಮತಿ ಈ ವ್ಯಾಕರಣ ಪಂಡಿತರು ನಿನಗೆ ವ್ಯಾಕರಣವನ್ನು ಓದಿಸುತ್ತಾರೆ. "ಕಾತಂತ್ರ ರೂಪಮಾಲ" ಎಂಬುದು ಕಾಲೇಜಿನಲ್ಲಿ ಎರಡು ವರ್ಷದ ಕೋರ್ಸ್‌ನ ಪಠ್ಯ ಆದರೆ ಅದನ್ನೂ ನೀನು ಈ ಎರಡು ತಿಂಗಳಿನಲ್ಲಿಯೇ ಅಭ್ಯಾಸ ಮಾಡಬೇಕು ಎಂದರು. ನನಗೆ ಖುಷಿಯಾಯಿತು. ಮಹರಾಜರೇ ತಮ್ಮ ಆಜ್ಞೆ ನಾನು ಹಾಗೇ ಮಾಡುತ್ತೇನೆ. ಎರಡು ತಿಂಗಳಿಗೆ ಒಂದು ದಿನವೆಂದಾಗಲೇ ನಾನು ಪೂರ್ತಿ ಮಾಡುತ್ತೇನೆ ಎಂದೆ. ಆದರೆ ಪಂಡಿತರು, ಪೂಜ್ಯ ಮಹಾಸ್ವಾಮಿಗಳೇ ನಾನು ದಿನಕ್ಕೆ ಒಂದು ಗಂಟೆ ಮಾತ್ರ ಹೇಳಬಲ್ಲೆ ನನಗೆ ಜಾಸ್ತಿ ಸಮಯ ಸಿಗಲಾರದು ಎಂದರು.

ವಿಶಾಲಮತಿ ಹೇಳಿದರು ಪಂಡಿತರೇ ತಾವು ನಾಳೆಯಿಂದಲೇ ಪಾಠವನ್ನು ಪ್ರಾರಂಭಿಸಿರಿ. ನನಗೂ ವ್ಯಾಕರಣದ ಬಗ್ಗೆ ಆಸಕ್ತಿ ಇದೆ. ನಾನು ಕಲಿಯುತ್ತೇನೆ ಎಂದರು. ಮಾರನೇಯ ದಿನದಿಂದಲೇ ಪಾಠ ಪ್ರಾರಂಭವಾಯಿತು. ಪಂಡಿತರು ಸೂತ್ರ ಹೇಳಿ ಅರ್ಥಹೇಳಿ, ಸಂಧಿ ರೂಪಸಿದ್ಧಿ ಮುಂತಾದವುಗಳನ್ನೆಲ್ಲ ಹೇಳುತ್ತಿದ್ದರು. ಮಾರನೇಯ ದಿನ ಮುಂದಿನ ಪಾಠ ಶುರುಮಾಡುವ ವೇಳೆಗೆ ನಾನು ವಿಧಿವತ್ತಾಗಿ ಸೂತ್ರೋಚ್ಚಾರಣೆ ಮಾಡಿ ಹಿಂದಿನದ್ದನ್ನು ಒಪ್ಪಿಸುತ್ತಿದ್ದೆ. ವಿಶಾಲಮತಿಯು ಆಶ್ಚರ್ಯಗೊಳ್ಳುತ್ತಿದ್ದರು. ಅಮ್ಮ ನೀನೆಲ್ಲೋ ಹಿಂದಿನ ಜನ್ಮದಲ್ಲಿಯೇ ಎಲ್ಲವನ್ನು ಕಲಿತುಬಿಟ್ಟಿದ್ದೀಯೆ ಆದ್ದರಿಂದಲೇ ಒಮ್ಮೆ ಕೇಳಿದರೆ ಸಾಕು ನಿನಗೆ ಎಲ್ಲವು ನೆನಪಿಗೆ ಬಂದು ಬಿಡುತ್ತದೆ. ಎಂದರು.

ನನಗೂ ಹಾಗೇ ಅನ್ನಿಸುತ್ತಿತ್ತು. ಒಂದೇಸಲ ಓದಿದರೂ ಸಾಕು. ಸರಾಗವಾಗಿ ನೆನಪಿಗೆ ಬಂದು ಬಿಡುತ್ತಿದೆಯಲ್ಲ. ಯಾರು ನೋಡಿದರು ವ್ಯಾಕರಣ ಕಬ್ಬಿಣದ ಕಡಲೆ ಎಂದು ಏಕೆ ಕರೆಯುತ್ತಾರೆ ಎಂದು ಅನ್ನಿಸುತ್ತಿತ್ತು. ಆಗ ನನಗೆ ಬಹಳ ಕಷ್ಟದಿಂದೊಂದು ಎರಡು ಕಾತಂತ್ರ ವ್ಯಾಕರಣದ ಮೂಲ ಪ್ರತಿ ಸಿಕ್ಕಿತು. ಇದರ ಸರಳತೆ ಹಾಗೂ ಜೈನಾಚಾರ್ಯರ ಕೃತಿ ಎಂಬ ಕಾರಣದಿಂದ ಬಹಳ ಪ್ರೇಮವು ಇತ್ತು. ನನ್ನ ಆಶೆಯಂತೆ, ಕ್ಷುಲ್ಲಿಕ ವಿಶಾಲಮತಿಯ ಪ್ರೇರಣೆ ಹಾಗೂ ಆಚಾರ್ಯರ ಆಜ್ಞೆಯಂತೆ ಖಂಡಾದ ಸರದಾರಮಲ್ಲಜೀ ವೀರಪ್ರೆಸ್‌ನಲ್ಲಿ ಈ ವ್ಯಾಕರಣದ ಮರುಮುದ್ರಣವನ್ನು ಮಾಡಿಸಿದ್ದರು. ಪಂಡಿತ ಭಂವರಲಾಲರು ವೀರಪ್ರೆಸ್‌ನಲ್ಲಿ ಯಾವಾಗಲೂ ಇರುತ್ತಿದ್ದರು. ಮತ್ತು ನಡವಳಿಕೆಯನ್ನು ಗಮನಿಸುತ್ತಲೇ ಇರುತ್ತಿದ್ದರು. ವಿಶಾಲಮತಿಯ ಜೊತೆ ಆಗಾಗ್ಗೆ ಧಾರ್ಮಿಕ ಚರ್ಚೆಯನ್ನು ಮಾಡುತ್ತಿದ್ದರು.

ನನಗೆ ಆ ದಿನಗಳಲ್ಲಿ ಆಹಾರದಲ್ಲಿ ಹೆಚ್ಚು ಅಂತರಾಯವಾಗುತ್ತಿತ್ತು. ಇದರ ಪರಿಣಾಮ ಶರೀರ ಬುದ್ಧಿ ಕಣ್ಣು ಬಲಹೀನವಾಗುತ್ತಿದ್ದವು. ನನ್ನ ಅವಶ್ಯಕ ಕ್ರಿಯೆಗಳನ್ನು ಮಾಡಿ ಸ್ವಾಧ್ಯಾಯದಲ್ಲಿ ಹೆಚ್ಚು ಸಮಯ

ಕಳೆಯುತ್ತಿದ್ದೆ. ಅದರಿಂದಾಗಿ ವ್ಯಾಕರಣದ ನಿಯಮಗಳನ್ನು ಕಂಠಪಾಠ ಮಾಡಲು ಆಗುತ್ತಿರಲಿಲ್ಲ. ಆದರೂ ರಾತ್ರಿ ಕನಸಿನಲ್ಲಿಯೇ ವ್ಯಾಕರಣದ ರೂಪಗಳನ್ನು ಸಿದ್ಧಗೊಳಿಸುತ್ತಿದ್ದೆ. ಯಾವ ವ್ಯಾಕರಣ ರೂಪಗಳನ್ನು ಸಿದ್ಧಗೊಳಿಸುತ್ತಿದ್ದೆನೋ ಅವನ್ನು ಬೆಳಗ್ಗೆ ಎದ್ದು ವ್ಯಾಕರಣವನ್ನು ನೋಡಲಾಗಿ ಅವು ಸರಿಯಾಗಿರುತ್ತಿದ್ದವು. ನಾನು ಬೆಳಗ್ಗಿನ ಹೊತ್ತು ಕಂಠಪಾಠ ಮಾಡಲಾಗದಿದ್ದರೂ ರಾತ್ರಿ ಸ್ವಪ್ನಾವಸ್ಥೆಯಲ್ಲಿ ಆ ಕೆಲಸ ಆಗುತ್ತಿತ್ತು. ಇದಕ್ಕೇ ಇರಬೇಕು ಸಂಸ್ಕಾರ ಎಂದು ಕರೆಯುವುದು. ಜನರು ಯಾವುದನ್ನು ಮಾಡಲೇಬೇಕು ಎಂದು ದೃಢನಿರ್ಧಾರ ಕೈಕೊಂಡಿರುತ್ತಾರೋ ಅವರ ಮನಸ್ಸಿನಲ್ಲಿ ಅದೇ ವಿಷಯ ರಾತ್ರಿಯು ಕೂಡ ಚಿಂತಿಸಲ್ಪಡುತ್ತಿರುತ್ತದೆ. ವಿಶಾಲಮತಿ ಆಗಾಗ್ಗೆ ಮಹಾರಾಜರ ಹತ್ತಿರ ಈ ವಿಷಯವನ್ನು ಹೇಳುತ್ತಿದ್ದರು. ಮಹಾರಾಜರೇ ವೀರಮತಿ ಅಮ್ಮ ದಿನದಲ್ಲಿ ಒಮ್ಮೆ ಓದಿದರೆ ಸಾಕು. ರಾತ್ರಿ ಕನಸಿನಲ್ಲಿ ಅದೇ ಗಟ್ಟಿ ಮಾಡಿಕೊಂಡು ಬಿಡುತ್ತಾರೆ ನಾಳೆ ಇರುವ ಹಾಗೇ ಒಪ್ಪಿಸಿ ಬಿಡುತ್ತಾರೆ. ಅಲ್ಲೇ ಕುಳಿತಿದ್ದ ಕನ್ಯೆಯಲಾಲರು ಅದನ್ನು ಕೇಳಿ ಹೇಳುತ್ತಿದ್ದರಂತೆ ಇವರು ನಿಜವಾಗಿಯು ಪೂರ್ವಜನ್ಮದಲ್ಲಿಯೇ ಎಲ್ಲವನ್ನು ಕಲಿತುಬಿಟ್ಟಿದ್ದಾರೆ. ಆದ್ದರಿಂದ ಕಂಠಸ್ಥ ಮಾಡದೆ ಇದ್ದರು ಸೂತ್ರಗಳು ಕಂಠಸ್ಥವಾಗಿರುತ್ತದೆ.

ಪಂಡಿತ ಇಂದ್ರಲಾಲರು ಪ್ರತಿದಿನ ಬಂದು ದರ್ಶನ ಮಾಡಿ ವ್ಯಾಕರಣದ ಪ್ರಗತಿಯನ್ನು ಕಂಡು ಉದ್ಗರಿಸಿದರು "ಯೇ ಮಾತಾಜಿ ವ್ಯುತ್ಪನ್ನಮತೀ" ಎಂದು.

ಕ್ಷುಲ್ಲಿಕಾ ವಿಶಾಲಮತೀಯ ಹತ್ತಿರವು ಹೇಳಿದರು ನೀವು ಇವರನ್ನು ವ್ಯುತ್ಪನ್ನಮತೀ ಎಂದೇ ಕರೆಯಿರಿ. ಅದು ಸಾರ್ಥಕವಾದ ಹೆಸರು ಎಂದು ವಿಶಾಲಮತೀಯು ನನ್ನನ್ನು ಹಾಗೇ ಕರೆಯತೊಡಗಿದರು. ಅನಂತರ ಎರಡು ತಿಂಗಳಿಗೆ ಒಂದು ದಿನ ಬಾಕಿ ಇದ್ದಂತೆ ನಾನು ವ್ಯಾಕರಣದ ಎಲ್ಲ ಸೂತ್ರಗಳನ್ನು ಮುಗಿಸಿದ್ದೆ. ನನ್ನನ್ನೂ ವಿಶಾಲಮತಿ ಆಚಾರ್ಯರಲ್ಲಿಗೆ ಕರೆದೊಯ್ದರು. ಆಚಾರ್ಯದೇವರು ಹೇಳಿದರು, ನೀನು ಕಲಿತಿರುವಷ್ಟು ವ್ಯಾಕರಣದಿಂದ ಯಾವ ಗ್ರಂಥವನ್ನಾದರೂ ನೀನೆ ಅರ್ಥಮಾಡಿಕೊಳ್ಳಬಲ್ಲೆ. ನಿನಗೆ ಬೇರೆಯವರು ಕಲಿಸಬೇಕಾದ ಅವಶ್ಯಕತೆ ಇಲ್ಲ ಎಂದರು.

ಇದರ ನಂತರ ದಾಮೋದರಶಾಸ್ತ್ರಿಗಳನ್ನು ಕರೆಸಿ ಅವರಿಗೆ ಯಥೋಚಿತ ಪುರಸ್ಕಾರಗಳನ್ನು ಕೊಡಿಸಿ, ಪಂಡಿತರೇ ತಮ್ಮ ಕಾರ್ಯ ಪೂರ್ಣಗೊಂಡಿತು ಎಂದರು. ಅದಕ್ಕೆ ಅವರು ಖಿನ್ನರಾಗಿ ಗುರುದೇವ ನಾನು ಇನ್ನು ಸ್ವಲ್ಪ ಅವರಿಗೆ ಹೇಳಿ ಅವರ ಸೇವೆಯನ್ನು ಮಾಡಬಯಸುತ್ತೇನೆ ಎಂದರು. ಅದಕ್ಕೆ ಆಚಾರ್ಯರು ಯೋಚಿಸೋಣ ಎಂದರು.

ವ್ಯಾಕರಣ ಕಲಿಯುವ ನನ್ನ ಅಭೀಷ್ಟೇ ಸಿದ್ಧಿಸಿತು. ಇದು ಕೇವಲ ಆಚಾರ್ಯರ ಕೃಪೆಯಿಂದ ಎಂದು ನನ್ನ ಮನವರಿಕೆ. ಇಷ್ಟರಲ್ಲಿ ಚಾರಿತ್ರ ಚಕ್ರವರ್ತಿ ಆಚಾರ್ಯ ಶ್ರೀ ಶಾಂತಿಸಾಗರರು ಸಲ್ಲೇಖನ ಕೈಗೊಳ್ಳುವರೆಂಬ ಸುದ್ದಿಯನ್ನು ತಿಳಿಯಲಾಗಿ ನನಗೆ ಅವರ ದರ್ಶನ ಮಾಡಬೇಕೆಂಬ ಅಭಿಲಾಷೆಯಿಂದ ಚಾತುರ್ಮಾಸದ ನಂತರ ದಕ್ಷಿಣದ ಕಡೇ ಹೊರಡಬೇಕೆಂದು ಮನಸ್ಸಾಯಿತು.

ದೇಶಭೂಷಣರಿಂದ ಶಾಂತಿಸಾಗರರ ಪ್ರಶಂಸೆಯನ್ನು ಕೇಳುತ್ತಲೇ ಇರುತ್ತಿದ್ದೆ. ಕ್ಷುಲ್ಲಿಕಾ ವಿಶಾಲಮತೀ ಕೂಡ ಅವರ ಕಠಿಣ ತಪಶ್ಚರ್ಯದ ಬಗ್ಗೆ ಬಹಳ ವಿಷಯಗಳನ್ನು ಹೇಳಿದ್ದರು. ಇದನ್ನು ಕೇಳಿದ ನಾನು ಶಾಂತಿಸಾಗರರ ದರ್ಶನವಾಗುವವರೆಗೆ ಉಪ್ಪನ್ನು ತ್ಯಾಗ ಮಾಡಿದೆ ಆ ಸಮಯದಲ್ಲಿ ಆಚಾರ್ಯರ ಹತ್ತಿರವು ಹೆಚ್ಚು ಮಾತನಾಡುತ್ತಿರಲಿಲ್ಲ. ಆದ್ದರಿಂದ ಅವರಲ್ಲಿಯು ಏನನ್ನು ಹೇಳಿಕೊಳ್ಳಲು ಆಗುತ್ತಿರಲಿಲ್ಲ. ಆದರೆ

ವಿಶಾಲಮತೀಗೆ ದರ್ಶನ ಮಾಡಬೇಕೆಂಬ ಮನದಳಲನ್ನು ವ್ಯಕ್ತಪಡಿಸುತ್ತಲೇ ಇದ್ದೆ. ಇದರಿಂದಾಗಿ ಅವರು ಆಚಾರ್ಯರಲ್ಲಿ ಈ ವಿಷಯವನ್ನು ನಿವೇದಿಸಿದರು. ಮಹಾರಾಜರೇ ವೀರಮತಿಯು ಶಾಂತಿಸಾಗರರ ದರ್ಶನವಾಗುವವರೆಗೂ ಉಪ್ಪನ್ನು ತ್ಯಾಗಮಾಡಿದ್ದಾರೆ. ಈಗಾಗಲೇ ಅವರು ಸಲ್ಲೇಖನ ತೆಗೆದುಕೊಂಡಿದ್ದಾರೆ. ಈಗ ಅವರ ದರ್ಶನವಾಗದೆ ಇದ್ದರೆ ಅವರು ಜೀವನಪರ್ಯಂತ ಉಪ್ಪನ್ನು ಬಳಸುವಂತಿಲ್ಲ ಎಂದರು . ಅದಕ್ಕೆ ಆಚಾರ್ಯರು ಚಾತುರ್ಮಾಸ ಮುಗಿಯುತ್ತಲೇ ಅವರನ್ನು ಕರೆದುಕೊಂಡು ಹೋಗಿ ದರ್ಶನ ಮಾಡಿಸಿ ಮತ್ತೆ ಕರೆದುಕೊಂಡು ಬನ್ನಿ ಎಂದರು.

ವಿಶಾಲಮತಿ ಈ ಮಾತಿಗೆ ಒಪ್ಪಿಕೊಂಡರು. ಚಾತುರ್ಮಾಸ ಕಳೆಯುತ್ತಿದ್ದಂತೆ ನಾವಿಬ್ಬರು ದಕ್ಷಿಣದ ಕಡೆಗೆ ಪ್ರಯಾಣವನ್ನು ಬೆಳೆಸಿದೆವು. ಚಾತುರ್ಮಾಸದಲ್ಲಿ ಸರದಾರಮಲ್ಲಜೀಯವರ ತಾಯಿ ಕ್ಷುಲ್ಲಿಕಾ ದೀಕ್ಷೆಯನ್ನು ಪಡೆದಿದ್ದರು. ಆಚಾರ್ಯರು ಇವರಿಗೆ "ಕ್ಷುಲ್ಲಿಕಾ-ವೃಷಭಸೇನಾ" ಎಂದು ಹೆಸರಿಸಿದ್ದರು. ಲಖನೌನಲ್ಲಿ ಬ್ರಹ್ಮಚಾರಿಣಿಯಾಗಿದ್ದ ಒಬ್ಬ ಮಹಿಳೆ ಕೂಡ ಕ್ಷುಲ್ಲಿಕಾ ದೀಕ್ಷೆಯನ್ನು ಪಡೆದಿದ್ದರು. ಬಾರಾಬಂಕಿಯ ಚಂದ್ರಮತೀ ಬ್ರಹ್ಮಚಾರಿಣೀ ಈ ಮೂವರು ನಮ್ಮ ಜೊತೆಯಲ್ಲಿಯೇ ಇರುತ್ತಿದ್ದರು. ಇವರು ಕೂಡ ದಕ್ಷಿಣದ ಕಡೆ ಬರುವ ಆಶೆಯನ್ನು ವ್ಯಕ್ತಪಡಿಸದರು. ಆದರೆ ವಿಶಾಲಮತಿ ಅವರನ್ನೆಲ್ಲ ಸಂಘದಲ್ಲೇ ಇರಲು ಹೇಳಿ ನನ್ನನ್ನು ಜಯಪುರದಿಂದ ಬಾಂಬೆಗೆ ಕರೆತಂದರು.

ಇಲ್ಲಿ ತಪಸ್ವೀ ನೇಮಿಸಾಗರರ ದರ್ಶನವಾಗಿ ಮನಸ್ಸಿಗೆ ಆನಂದವಾಯಿತು. ಬಾಂಬೆಯಲ್ಲಿ ಆ ಸಮಯದಲ್ಲಿ ತೇರು ನಡೆಯುವುದು ನಿಂತುಹೋಗಿತ್ತು. ಏಕೆಂದರೆ ನಗ್ನಮುನಿಗಳು ರಥಯಾತ್ರೆಯಲ್ಲಿ ಪಾಲ್ಗೊಳ್ಳುವುದು ಬೇಡ ಎಂದು. ಈ ವಿಷಯಕ್ಕೆ ನೇಮಿಸಾಗರರು ಸತ್ಯಾಗ್ರಹ ಕೈಗೊಂಡಿದ್ದರು. ಅದರಿಂದಾಗಿಯೇ ರಥಯಾತ್ರೆಯು ನಿಂತಿತು. ಸರ್ಕಾರದ ಈ ಆಜ್ಞೆಯನ್ನು ರದ್ದು ಪಡಿಸಲು ಸಮಾಜದ ಪ್ರಮುಖರು ಹೋರಾಟ ನಡೆಸುತ್ತಿದ್ದರು. ವಿಶಾಲಮತಿಜೀಗೂ ಕೂಡ ಇಲ್ಲಿ ಧರ್ಮಪ್ರಭಾವನೆ ಮಾಡಬೇಕೆಂಬ ಇಚ್ಛೆ ಉಂಟಾಗಿದ್ದರಿಂದ ನಾವಿಬ್ಬರು ಅಲ್ಲೇ ಆ ದಿನ ತಂಗಿದೆವು.

ನಾನು ಆಚಾರ್ಯದೇಶ ಭೂಷಣರ ಬಾಯಿಯಿಂದ ಹಲವಾರು ಬಾರಿ ಈ ವಿಚಾರವನ್ನು ಕೇಳಿದ್ದೆ. 1931 ರಲ್ಲಿ ಯಾವಾಗ ಚಾರಿತ್ರ ಚಕ್ರವರ್ತಿ ಆಚಾರ್ಯ ಶಾಂತಿಸಾಗರರ ಸಂಘ ದೆಹಲಿಯಲ್ಲಿ ಚಾತುರ್ಮಾಸಕ್ಕೆ ತಂಗಿದ್ದ ಸಮಯದಲ್ಲಿ ನಗ್ನ ಮುನಿಗಳ ಸಂಚಾರಕ್ಕೆ ಎಲ್ಲಕಡೆಯು ವಿರೋಧವು ಕಂಡುಬರುತ್ತಿತ್ತು. ರಾಜಮಾರ್ಗಗಳಲ್ಲಿ ಮುನಿಗಳ ಸಂಚಾರವು ಸುಲಭವಾಗಿರಲಿಲ್ಲ. ಇದನ್ನು ತಿಳಿದ ಆಚಾರ್ಯದೇವರು ತಮ್ಮ ಸಂಘದ ಮುನಿಗಳಾದ ವೀರಸಾಗರರು, ನೇಮಿಸಾಗರರು, ಚಂದ್ರಸಾಗರರಿಗೆ ನಿರ್ಬಂಧಿತ ಸ್ಥಳಗಳಲ್ಲಿಯೇ ಸಂಚರಿಸಲು ಆದೇಶಿಸುತ್ತಿದ್ದರು. ಮತ್ತು ತಾವು ಸ್ವತಃ ಸಿಂಹ ವೃತ್ತಿಯಿಂದ ವಿಹಾರ ಮಾಡುತ್ತಿದ್ದರು. ಅಲ್ಲದೆ ಚಾಂದನಿಚೌಕ ಮುಂತಾದ ಪ್ರಮುಖ ಸ್ಥಳಗಳಲ್ಲಿ ನಿಂತು ಫೋಟೋ ತೆಗೆಸಿಕೊಳ್ಳುತ್ತಿದ್ದರು. ಇದರಿಂದಾಗಿಯೇ ನಗ್ನ ಮುನಿಗಳ ಸಂಚಾರಕ್ಕೆ ನಿರ್ಬಂಧವು ಸಡಿಲಾಗತೊಡಗಿತು. ಈ ಪರಂಪರೆಯನ್ನು ಸ್ಥಾಯಿಗೊಳಿಸಿ ಭವಿಷ್ಯದಲ್ಲಿ ನಗ್ನ ಮುನಿಗಳ ಸಂಚಾರವನ್ನು ಎಲ್ಲಿಯೂ ನಿರ್ಬಂಧಿಸದಂತೆ ಮಾಡುವ ಕಾರ್ಯವಾಗಬೇಕಾಗಿತ್ತು. ನಿಜಾಮರ ರಾಜ್ಯ ಹೈದಾರಾಬಾದ್‌ನಲ್ಲಿ ಆಚಾರ್ಯ ದೇಶಭೂಷಣ ಮಹಾರಾಜರು ನಗ್ನ ಮುನಿಗಳ ವಿಹಾರವನ್ನು ನಿರ್ಬಂಧಿಸಿದ ಜಾಗದಲ್ಲೇ ಧ್ಯಾನದಲ್ಲಿ ಕುಳಿತು ಮಾರ್ಗವನ್ನು ಪ್ರಶಸ್ತಗೊಳ್ಳಿಸಿದ್ದರು. ಇವೆಲ್ಲವು ನಮಗೆ ನೆನಪಾದವು. ಕ್ಷುಲ್ಲಿಕಾ ವಿಶಾಲಮತೀ ಹೇಳಿದ ಅನೇಕ ಸಂಗತಿಗಳು ಜ್ಞಾಪಕಕ್ಕೆ ಬಂದಿತು. ಆಗಮದ ಚಿಹ್ನೆ ಒಳ್ಳೆಯದಿದೆ. ವಾಸ್ತವವಾಗಿ ನೋಡಿದರೆ ನಗ್ನ ಮುನಿ ನಗ್ನರಲ್ಲ (ದಿಕ್-ದಿಶಾ ಮತ್ತು ಅಂಬರ-ವಸ್ತ್ರ) ಅಥವಾ ಶಿಲಾರೂಪಿ ವಸ್ತ್ರಾಭರಣವುಳ್ಳವರು. ಏಕೆಂದರೆ ಹೇಡಿಗಳಿಗೆ

ವಸ್ತ್ರವನ್ನು ತ್ಯಜಿಸುವ ಧೈರ್ಯವಿಲ್ಲ. ಮಹಾನ್ ಧೀರ ಪುರುಷರಿಗೆ ಮಾತ್ರ ವಸ್ತ್ರ ತ್ಯಜಿಸುವಂತಹ ಸ್ಥೈರ್ಯ ಇರುವುದು.

ಕವಿ ಭೂಧರ ದಾಸಜೀ ಒಳ್ಳೆ ಮಾತುಗಳನ್ನು ಆಡಿದ್ದಾರೆ :

"ಅಂತರ ವಿಷಯವಾಸನಾ ಬರತೇ ಬಾಹರಲೋಕ ಲಾಜ ಭಯ ಭಾರೀ
ಯಾತೇಂ ಪರಮ ದಿಗಂಬರ ಮುದ್ರಾಧರೀ ನಹೀಂ ಸಕೇ ದೀನ ಸಂಸಾರಿ
ಐಸೀ ದುರ್ಧರ ನಗ್ನ ಪರೀಷಹ ಜೀತೇ ಸಾಧು ಶೀಲವ್ರತಧಾರೀ
ನಿರ್ವಿಕಾರ ಬಾಲಕ ವತ್ ನಿರ್ಭಯ ತಿನಕೇ ಪಾಯನ ಧೋಕ ಹಮಾರೀ"

ಈ ನಗ್ನ ಮುದ್ರೆ ಬ್ರಹ್ಮಚರ್ಯದ ಒರೆಗಲ್ಲು ಮತ್ತು ಅಪರಿಗ್ರಹದ ಚರಮಸೀಮೆಯಾಗಿದೆ. ನಗ್ನರೂಪ ನಿಜಕ್ಕೂ ಪ್ರಕೃತಿದತ್ತವಾದ ವರದಾನ, ಚಳಿ, ಬಿಸಿಲು, ಸೊಳ್ಳೆ, ನೊಣಗಳಿಂದ ರಕ್ಷಣೆಗಾಗಿ ಅಥವಾ ವಿಕಾರಗಳನ್ನು ಮುಚ್ಚುವುದಕ್ಕಾಗಿ. ನಾಚಿಕೆಗೋಸ್ಕರ ವಸ್ತ್ರವನ್ನು ಧಾರಣೆ ಮಾಡುತ್ತೇವೆ. ಇವೆಲ್ಲವುಗಳನ್ನು ಜಯಿಸಿದವರಿಗೆ ಬಟ್ಟೆಯ ಅವಶ್ಯಕತೆ ಏಕೆ ? ಇದರ ಅರ್ಥ ಎಲ್ಲಿಯವರೆಗೆ ಶರೀರದ ಮೇಲೆ ಅನಾಸಕ್ತಿ ಹುಟ್ಟುವುದಿಲ್ಲವೋ ಅಲ್ಲಿಯವರೆಗೆ ನಿರತಿಚಾರದ ಬ್ರಹ್ಮಚರ್ಯ ವ್ರತವೂ ಸಾಧ್ಯವಿಲ್ಲ. ನಿರ್ವಿಕಲ್ಪ ಧರ್ಮ ಶುಕ್ಲಧ್ಯಾನವು ಆಗಲಾರದು. ಮುಕ್ತಿಯು ದೊರೆಯಲಾರದು. ಆದ್ದರಿಂದ ಮೋಕ್ಷ ಪಡೆಯಲು ದಿಗಂಬರ ಮುನಿಯ ಮುದ್ರೆ ಅವಶ್ಯಕ. ಅದಾಗ್ಯೂ ಈ ದುಷಮಕಾಲದಲ್ಲಿ ಮೋಕ್ಷ ಆಗಲಾರದು. ಆದರೂ ಪಂಚಮಕಾಲದ ಕೊನೆಯವರೆಗೂ ಮೋಕ್ಷ ಮಾರ್ಗ ಇರುತ್ತದೆ. ಎಲ್ಲಿಯವರೆಗೆ ಮುನಿ ಆರ್ಯಿಕಾ ಶ್ರಾವಕ ಶ್ರಾವಕಿಯ ಚತುಸ್ಸಂಗ ಇರುತ್ತದೆ. ಅಲ್ಲಿಯವರೆಗೆ ಅಂದರೆ ಪಂಚಮಕಾಲದಲ್ಲಿ ಯಾವಾಗ ಸಂಘವು ಇಲ್ಲವಾಗುತ್ತದೆಯೋ ಆಗ ಧರ್ಮವು ನಾಶವಾಗುತ್ತದೆ.

ಎಲ್ಲಿಯವರೆಗೆ ರಾಜನಿರುತ್ತಾನೋ, ಅಗ್ನಿ ಇರುತ್ತದೋ ಅಲ್ಲಿಯವರೆಗೆ ಮುನಿಗಳು ವಿಹಾರ ಮಾಡುತ್ತಲೇ ಇರುತ್ತಾರೆ.

ಬೊಂಬಾಯಿಯಲ್ಲಿ ನಗ್ನ ಮುನಿಗಳ ವಿಹಾರಕ್ಕೆ ಎಲ್ಲಿಯು ನಿರ್ಬಂಧವಿರಲಿಲ್ಲ. ಆದರೆ ಜನರಿಗೆ ನಗ್ನ ಮುನಿಗಳು ಮೆರವಣಿಗೆಯಲ್ಲಿ ಹೋಗುವುದು ಬೇಡ ಎನ್ನುವ ಭಾವನೆಯಿದ್ದುದರಿಂದ ನೇಮಿಸಾಗರರು ರಥಯಾತ್ರೆಯನ್ನೂ ನಿಲ್ಲಿಸಿದ್ದರು. ಅವರಿಗೆ ರಥಯಾತ್ರೆಯ ಮೆರವಣಿಗೆಯಲ್ಲಿಹೋಗಲೇಬೇಕೆಂಬ ಹಠವೇನೂ ಇರಲಿಲ್ಲ. ಅವರಿಗೆ ನಗ್ನ ಮುನಿಗಳು ಎಲ್ಲಿಯಾದರೂ ಹೋಗಲು ನಿರ್ಬಂಧವಿರಬಾರದು ಎನ್ನುವ ಭಾವನೆ ಮಾತ್ರ ಇತ್ತು. ಅವರಿಗೆ ತಡೆಯುವುದು, ನಿರ್ಬಂಧಿಸುವುದು ಇಂತಹವುಗಳನ್ನು ಹೋಗಲಾಡಿಸಬೇಕೆಂಬುದೇ ಅಭಿಲಾಷೆಯಾಗಿತ್ತು. ಇದಕ್ಕೆ ಇತಿಹಾಸದಲ್ಲಿಯು ಸಾಕ್ಷಿ ದೊರೆಯುತ್ತದೆ. ಸುಕೌಶಲ ರಾಜನ ತಂದೆ ರಾಜ ಸಿದ್ಧಾರ್ಥ ಮಹಾಮುನಿ ಆದರು. ರಾಣಿ ಆದೇಶ ಹೊರಡಿಸಿದ್ದಳು, ನನ್ನ ರಾಜಧಾನಿಯಲ್ಲಿ ಯಾವ ನಗ್ನ ಮುನಿಯು ಸಂಚರಿಸಬಾರದು. ಆಗ ಮಹಾಮುನಿ ಸಿದ್ಧಾರ್ಥರು ಆ ಬಂಧನವನ್ನು ಮುರಿಯುವುದಕ್ಕಾಗಿಯೇ ಆ ನಗರಕ್ಕೆ ಬಂದರು[೧]. ಹೀಗೆ ಉದಾಹರಣೆಗಳನ್ನು ಕೊಟ್ಟು ವಿಶಾಲಮತೀಯು ಅಲ್ಲಿಯ ಶ್ರಾವಕರುಗಳಿಗೆ ಕರ್ತವ್ಯಪಾಲನೆಯನ್ನು ತಿಳಿಸಿದರು.

ನಾನು ನೋಡಿದಂತೆ ಮುನಿ ನೇಮಿಸಾಗರರು ಬಹಳ ಸರಳ ಪ್ರಕೃತಿಯ ಸಾಧುಗಳಾಗಿದ್ದರು. ಅವರ ತಪಶ್ಚರ್ಯ ಕಠಿಣವಾಗಿತ್ತು ಶರೀರ ಕೃಶವಾಗಿದ್ದರೂ ಮನೋಬಲ ದೃಢವಾಗಿತ್ತು ನನಗೆ ಇಂದಿಗೂ ನೆನಪಿದೆ

---

೧. **ಆರಾಧನಾ ಕಥಾಕೋಶ ಕಥೆ ಸಂಖ್ಯೆ. ೫೮**

ಅವರ ಒಂದು ವಿಶೇಷ ಗುಣ. ಅವರು ಯಾವಾಗಲೂ ಕೈಯಲ್ಲಿ ಮಾಲೆ ಹಿಡಿದು ಜಪ ಮಾಡುತ್ತಲೇ ಇರುತ್ತಿದ್ದರು. ಯಾರಾದರೂ ಮಾತನಾಡಲು ಬಂದರೆ ಆಗ ಜಪ ಮಾಡುತ್ತಿದ್ದ ಮಣಿಯನ್ನು ಕೈಯಲ್ಲೇ ಗುರುತಿಗೆ ಹಿಡಿದುಕೊಂಡು ಮಾತಾಡಿದ ನಂತರ ಮತ್ತೇ ಜಪವನ್ನು ಮುಂದುವರಿಸುತ್ತಿದ್ದರು. ನನಗೆ ಆಶ್ಚರ್ಯವೆನಿಸಿ, ಯೋಚಿಸತೊಡಗಿದೆ. ನಂತರ ಮಹಾನ್ ಸಾಧುಗಳು ಉತ್ಕೃಷ್ಟವಾದ ತಪಶ್ಚರ್ಯವನ್ನು ಕೈಕೊಳ್ಳುತ್ತಾರೆ. ತಮ್ಮ ಜೀವನದ ಅತಿ ಹೆಚ್ಚು ಕಾಲವನ್ನು ಶಾಂತಿಸಾಗರರ ಹತ್ತಿರ ಕಳೆದಂತಹ ಇವರು ಜಪಮಾಡುವಾಗ ಏಕೆ ಮಧ್ಯೆ-ಮಧ್ಯೆ ಮಾತಾಡುತ್ತಾರೆಂದು. ನನ್ನ ಈ ಅನಿಸಿಕೆಯನ್ನು ವಿಶಾಲಮತಿಯಲ್ಲಿ ಹೇಳಿಕೊಂಡೆ. ಅವರ ಚರ್ಯೆಯು ಕೂಡ ಈ ರೀತಿ ಇದ್ದುದ್ದರಿಂದ ಅವರು ಹಲವು ರೀತಿ ಸಮಾಧಾನ ಹೇಳಿದರೂ ನನಗೆ ತೃಪ್ತಿ ಆಗಲಿಲ್ಲ. ಕೊನೆಗೆ ಈ ವಿಷಯವನ್ನು ಆಚಾರ್ಯರಲ್ಲಿಯೇ ಪ್ರಸ್ತಾಪಿಸಿದೆವು. ಅದಕ್ಕೆ ಅವರು ಸರಳವಾಗಿ ಸಾಮಾಯಿಕದಲ್ಲಿ ಮಾಡಲಾಗುವ ಜಪವನ್ನು ಮೌನವಾಗಿಯೇ ಮಾಡುತ್ತೇನೆ. ಸ್ವಾಧ್ಯಾಯದ ಸಮಯದಲ್ಲಿ ಅದರಲ್ಲಿ ಲಕ್ಷ್ಯವಿಡುತ್ತೇನೆ. ಆದರೆ ನನ್ನ ಪ್ರತಿಯೊಂದು ಸೆಕೆಂಡಿನಲ್ಲೂ ಸಿದ್ಧ ಪರಮೇಷ್ಟಿಯನ್ನು ನೆನೆಯುತ್ತಲೇ ಇರುತ್ತೇನೆ. ಇದಕ್ಕೆ ಲೆಕ್ಕವಿಡುವುದಿಲ್ಲ. ಒಂದೊಂದು ಸಲವು 108 ಮಾಡುತ್ತೇನೆ. ಅದಕ್ಕಾಗಿ ಬೆರಳಿನಲ್ಲಿ ಗುರುತಿಗೆ ಹಿಡಿಯುತ್ತೇನೆ ಎಂದಾಗ ಸಮಾಧಾನವಾಯಿತು. ಈ ಚರ್ಯೆಯನ್ನು ನಾನು ದೇಶಭೂಷಣರಲ್ಲೂ ಕಂಡಿದ್ದೆ. ಅವರ ಮನಸ್ಸು ಸಹ ಧ್ಯಾನ, ಸಾಮಾಯಿಕ, ಲೇಖನದ ಸಮಯವಲ್ಲದೆ ಬೇರೆ ಸಮಯದಲ್ಲಿ ಯಾವಾಗಲೂ ಜಪಮಾಲೆಯಿಂದ ಜಪಮಾಡುತ್ತಲೇ ಇರುತ್ತಿದ್ದರು. ಯಾರೋ ಒಂದು ದಿನ ಕೇಳಿದ್ದಕ್ಕೆ ಅವರು ಹೀಗೆ ಹೇಳಿದ್ದರು. ನಾನು ಮಹಾಮಂತ್ರವನ್ನು ಜಪಿಸುತ್ತಿದ್ದೇನೆ. ಆದ್ದರಿಂದ ನನಗೆ ಅನ್ನಿಸಿತು. ಸಾಧುಗಳು ಪ್ರತಿಯೊಂದು ಕ್ಷಣವನ್ನು ಸಹ ಮಹಾಮಂತ್ರವನ್ನು ಜಪಿಸುವುದರಲ್ಲೇ ಕಳೆಯುತ್ತಾರೆಂದು.

ಕಾಲಾಂತರದಲ್ಲಿ ಅಂದರೆ 1957 ರಲ್ಲಿ ಮಹಾವೀರಕೀರ್ತಿ ಆಚಾರ್ಯರು 'ಖಾನಿಯಾ' ದಲ್ಲಿ ಚಾತುರ್ಮಾಸವನ್ನು ವೀರಸಾಗರರ ಸಾನ್ನಿಧ್ಯದಲ್ಲಿ ಆಚರಿಸಿದರು. ಆ ದಿನಗಳಲ್ಲಿ ನನಗೆ ಹೆಚ್ಚಾಗಿ ಅಂತರಾಯ ಉಂಟಾಗುತ್ತಿತ್ತು. ಆಗ ಗುರುದೇವರು ಹೇಳಿದರು. ಜ್ಞಾನಮತೀ ನೀನು ಆಹಾರಕ್ಕೆ ಹೊರಡುವಾಗಲು ಶ್ರಾವಕರು ನವಧಾ ಭಕ್ತಿ ಹೇಳುವಾಗಲು ಆಹಾರ ಮಾಡುವಾಗಲು ಮಹಾಮಂತ್ರವನ್ನು ಧ್ಯಾನಿಸುತ್ತಿರು ಎಂದಿದ್ದರು. ಅದಕ್ಕೆ ನಾನು ಆಹಾರಕ್ಕೆ ಹೋಗುವಾಗ ನವಧಾಭಕ್ತಿಯ ಸಮಯದಲ್ಲೂ ಸರಿ ಆದರೆ ಆಹಾರ ತೆಗೆದುಕೊಳ್ಳುವಾಗ ಹೇಗೆ ಜಪಮಾಡುವುದು ಎಂದೆ.

ಆದರೆ ಇವರ ಪ್ರೇರಣೆಯಿಂದಲೇ ನಿಧಾನವಾಗಿ ಅದನ್ನೂ ಅಭ್ಯಾಸ ಮಾಡಿಕೊಳ್ಳ ತೊಡಗಿದೆ. ಆಹಾರ ತೆಗೆದುಕೊಳ್ಳುವಾಗಲೂ ಮನದಲ್ಲಿ ಜಪಿಸತೊಡಗಿದೆ. ಮಹಾವೀರ ಕೀರ್ತಿಗಳ ಮಾತುಗಳೇ ಯಾವಾಗಲೂ ಕಿವಿಯಲ್ಲಿ ಮೊಳಗುತ್ತಿದ್ದವು. ಎದ್ದಾಗ ಕುಳಿತಾಗ ತಿನ್ನುವಾಗ ಕಣ್ಣಿಗೆ ನಿದ್ದೆ ಹತ್ತುವವರೆಗೂ ನಮ್ಮ ಜೀವನದ ಪ್ರತಿಕ್ಷಣವು ಮಹಾಮಂತ್ರದ ಜಾಪ್ಯ ಅವರಲ್ಲಿ ಹಾಸು ಹೊಕ್ಕಾಗಿತ್ತು. ಈ ಪ್ರಸಂಗದಲ್ಲಿ ನನಗೆ ಮುನಿಶ್ರೀ ನೇಮಿಸಾಗರರ ಸಮಾಧಾನ ಮತ್ತು ಅವರ ಕೈಯ ಮಾಲೆಯೇ ನೆನಪಿಗೆ ಬರುತ್ತಿತ್ತು. ಇಂದಿಗೂ ಅವರ ಆ ಮುದ್ರೆಯೇ ನನ್ನ ಕಣ್ಣಮುಂದೆ ಬರುತ್ತದೆ.

ಇವರ ಈ ಜಪದ ಮಹಿಮೆಯಿಂದಲೇ ಇರಬೇಕು ಸರಕಾರವು ವಿರೋಧವನ್ನು ಹಿಂದೆ ಪಡೆಯಿತು. ಮುನಿಶ್ರೀಯವರು ರಥಯಾತ್ರೆಯ ಜೊತೆ ಬೊಂಬಾಯಿನಗರದಲ್ಲಿ ಪರ್ಯಟನೆ ಮಾಡಬಹುದೆಂದು. ಎರಡು ದಿನಗಳ ನಂತರ ಸ್ವೀಕೃತಿ ಪತ್ರವು ದೊರೆತಿತು. ಶ್ರಾವಕರು ಬಹಳ ಉತ್ಸಾಹದಿಂದ ರಥಯಾತ್ರೆಯ ಮಹೋತ್ಸವವನ್ನು ಏರ್ಪಾಡು ಮಾಡಿದರು. ಜೈನಧರ್ಮದ ಪ್ರಚಾರವೂ ಆಯಿತು. ಮುನಿಶ್ರೀ ವಜ್ರಕುಮಾರರು ರಾಣೆ ಉರ್ವಿಲಾರವರ

ಜೈನ ರಥ ಮಹೋತ್ಸವವನ್ನು ನಡೆಸಿ ಧರ್ಮ ಪ್ರಭಾವನೆಯನ್ನು ಹೆಚ್ಚಿಸಿ ಒಂದು ಇತಿಹಾಸ ನಿರ್ಮಿಸಿದ್ದು ನೆನಪಿಗೆ ಬಂದಿತು. ನಾನು 1954 ರಲ್ಲಿ ಈ ರಥಯಾತ್ರೆಯನ್ನು ನೋಡಿ ಪುಳಕಿತಳಾದೆ. ಅಂತರಂಗದಲ್ಲಿ ಮುನಿಗಳ ದೃಢನಿರ್ಧಾರ ಬಗ್ಗೆ ಶ್ರದ್ಧೆ ಭಕ್ತಿಗಳು ತುಂಬಿದವು. ಅಲ್ಲದೆ ಗುರುದೇವರ ಮುಖದಿಂದ ಶಾಂತಿಸಾಗರರ ಜೀವನದಲ್ಲಿ ನಡೆದ ಪ್ರತ್ಯಕ್ಷ ಅನುಭವಗಳನ್ನು ಕೇಳಿ ಮತ್ತಷ್ಟು ಶಾಂತಿಸಾಗರರನ್ನು ನೋಡುವ ತವಕ ಹೆಚ್ಚಾಯಿತು. ಅಲ್ಲಿಂದ ಹೊರಟು ನಾವಿಬ್ಬರು ಪೂನಾನಗರದ ಸಮೀಪದ ಬಾಹ್ಲಾ ಎಂಬ ಹಳ್ಳಿಗೆ ಬಂದೆವು. ಅಲ್ಲಿ ಆಚಾರ್ಯರ ಒಂದು ಚಾತುರ್ಮಾಸ ನಡೆದಿತ್ತು. ಅಲ್ಲಿಯ ಶ್ರಾವಕರು ಶಾಂತಿಸಾಗರರ ಚಾರಿತ್ರದ ಬಗ್ಗೆ ಅತೀವ ಭಕ್ತಿಯನ್ನು ತೋರಿಸಿ ಅಂತಹ ಮುನಿಗಳ ವಿಯೋಗದ ವಿಷಯವು ಅವರೆಲ್ಲರಿಗೂ ದುಃಖವನ್ನು ತಂದಿತ್ತು.

ಆಚಾರ್ಯರು ತಮ್ಮ ಸಲ್ಲೇಖನದ ಸಮಯದಲ್ಲಿ ಪ್ರಿಯ ಶಿಷ್ಯರನ್ನು ಕೂಡ ದೂರಕ್ಕೆ ಸಂಚಾರಮಾಡಲು ಆದೇಶಿಸಿದ್ದರು. ಆದ್ದರಿಂದ ಅವರಿಗೆ ಇಚ್ಛೆ ಇಲ್ಲದಿದ್ದರು ಆಣತಿಯನ್ನು ಶಿರಸಾ ವಹಿಸಿದ್ದರು. ಈ ವಿಷಯವನ್ನು ಒಬ್ಬ ವೃದ್ಧ ಮಹಿಳೆ ಹೇಳಿದರು.

ಮುನಿಗಳು ಮಂದಿರದಲ್ಲಿ ಧ್ಯಾನ ಅಧ್ಯಯನ ಸಾಮಾಯಿಕದಲ್ಲಿ ತೊಡಗುತ್ತಿದ್ದರು. ಆ ಮೊಹಲ್ಲೆ ಮಕ್ಕಳು ಅವರ ಹತ್ತಿರ ಬಂದು ಕುಳಿತುಕೊಳ್ಳುತ್ತಿದ್ದರು. ಅವರು ಕೂಡ ಮಕ್ಕಳ ಜೊತೆ ಸರಳವಾಗಿ ಮಾತಾಡುತ್ತಿದ್ದರು. ಆದರೆ ಒಂದು ದಿನ ಉಪಾಧ್ಯಾಯ ಪಂಡಿತರು ನನ್ನ ಹತ್ತಿರ ಬಂದು ದೂರು ಕೊಟ್ಟರು. ನೀವು ಆ ಮಕ್ಕಳನ್ನ ಅವರ ಹತ್ತಿರ ಬರಲು ಬಿಡಬೆಡಿ ನೋಡಿ ಸಾಮಾಯಿಕದ ಸಮಯದಲ್ಲಿ ಅವರ ಕಣ್ಣುಗಳು ತುಂಬಿ ಬಂದಿದ್ದವು. ಅದನ್ನು ಒಬ್ಬ ನಾಲ್ಕು ವರ್ಷದ ಮಗು ಒರೆಸಲು ಪ್ರಯತ್ನಿಸಿದ ವಿಷಯವನ್ನು ತಿಳಿಸಿದರು. ಆ ಮುಗ್ಧ ಹುಡುಗ ಸ್ವಾಮಿ ನೀವು ಏತಕ್ಕೆ ಅಳುತ್ತಿದ್ದೀರಿ. ನಿಮಗೆ ಏನು ಬೇಕಾದರೂ ನಮ್ಮ ಅಮ್ಮ ಕೊಡುತ್ತಾಳೆ ಎಂದು ಸ್ವಾಂತನ ಹೇಳುತ್ತಿದ್ದಾರೆ ಎಂದರು.

ಇದನ್ನು ಪಂಡಿತರು ಪುರೋಹಿತರು ಎಲ್ಲರು ಗಮನಿಸಿದ್ದರು. ವಿಷಯ ತಿಳಿದ ನಾನೇ ಸ್ವಾಮಿಯವರ ಹತ್ತಿರಹೋಗಿ ಕಾರಣ ತಿಳಿಸಲು ಪ್ರಾರ್ಥಿಸಿದೆ. ಅದಕ್ಕೆ ಅವರು ಶಾಂತಿಸಾಗರ ಸಲ್ಲೇಖನ ಸುದ್ದಿಯಿಂದ ವಿಚಲಿತರಾಗಿ ತಮ್ಮನ್ನು ತಾವು ಸಂತೈಸಿಕೊಳ್ಳಲಾರದೆ ಅಸಹಾಯಕತೆಯನ್ನು ವ್ಯಕ್ತ ಪಡಿಸಿದರು. ಇದನ್ನು ಕೇಳಿದ ನನಗೂ ಖೇದವಾಯಿತು. ಎಲ್ಲವನ್ನು ತಿಳಿದ ಮುನಿಗಳೇ ಹೀಗೆ ವರ್ತಿಸಿದರೆ ಅಲ್ಪರ ಪಾಡೇನು ? ಈ ಘಟನೆಯಿಂದ ವಿಶಾಲಮತಿಯು ದುಃಖಿತರಾದರು. ನೋಡು ವೀರಮತಿ ಅಮ್ಮ ಈ ಜೀವ ಅನೇಕ ಯೋನಿಯಲ್ಲಿ ಜನಿಸಿ ಹಲವಾರು ಜೀವಗಳನ್ನು ತಂದೆ ತಾಯಿ, ಬಂಧು ಬಳಗವನ್ನು ಹೊಂದಿ ಬಿಡುಗಡೆಯನ್ನೂ ಹೊಂದಿದೆ. ಹೀಗೆ ಮುನಿಗಳು ಮೋಹಪರವಶರಾದರೆ ಸ್ತ್ರೀ ಪರ್ಯಾಯವನ್ನು ಹೊಂದಬೇಕಾಗುತ್ತದೆ. ಪಂಚಮಕಾಲದಂತಹ ನಿಕೃಷ್ಟ ಕಾಲದಲ್ಲೇ ಮತ್ತೆ ಜನ್ಮ ತಳೆಯುತ್ತದೆ. ಯೋಚಿಸಿದಾಗ ನನಗೂ ಅನ್ನಿಸಿತು. ಇದು ಒಂದು ರೀತಿ ಸತ್ಯವಾಗಿದೆ. ಧರ್ಮಪ್ರೇಮವು ಗುರುಗಳ ವಿಯೋಗದಿಂದ ಅಂತ್ಯವಾಗಲಾರದು ವಾಸ್ತವದಲ್ಲಿ ಸಂಸಾರಿಜೀವ ಗುರುಗಳ ಸಾನಿಧ್ಯವನ್ನು ಬಯಸುತ್ತದೆ. ಇಲ್ಲದಿದ್ದರೆ ಸ್ವಚ್ಛಂದತೆಯೇ ಅತಿ ಪ್ರೀತಿ ಎನ್ನಿಸುತ್ತದೆ. ಈ ಗುರುಭಕ್ತಿಯ ಉದಾಹರಣೆ ಒಬ್ಬಂಟಿ ಸಾಧುಗಳಿಗೆ ಸರಿ ಎನ್ನಿಸುತ್ತದೆ.

ಆಚಾರ್ಯ ವೀರಸಾಗರ ಮಹಾರಾಜರು ಸಲ್ಲೇಖನ ತೆಗೆದುಕೊಂಡಾಗ ಮನಸ್ಸು ಎಷ್ಟೇ ಗಟ್ಟಿ ಮಾಡಿಕೊಂಡರೂ ನನ್ನ ಕಣ್ಣುಗಳು ತುಂಬಿ ಬಂದವು. ಆಗ ಅವರಿಗಾದ ಅನುಭವವೇ ನನಗೂ ಆಯಿತು. ಅಯ್ಯಾ ಈ ವೀತರಾಗಿ ಗುರುವಿನ ಉಪದೇಶ ಲಬ್ಧಿಯು ಅಂತ್ಯವಾಗುತ್ತಿದೆಯಲ್ಲ, ಎಂದು. ನಾನು ಶ್ರವಣ ಬೆಳಗೊಳಕ್ಕೆ ವಿಹಾರ ಮಾಡಿದಾಗಲು ಒಂದು ವರ್ಷ ಇದ್ದು ಹೊರಡುವಾಗಲು ಓ ಈ ಮಹಿಮಾಮಯೀ

ವಿಶಾಲಕಾಯದ ಮೂರ್ತಿಯ ದರ್ಶನದಿಂದ ದೂರವಾಗುತ್ತಿದ್ದೇವಲ್ಲ, ಎನಿಸುತ್ತಿತ್ತು. ನೇಮಿಸಾಗರರು ಮಹಾನ್ ತಪಸ್ವಿಗಳು ಅವರು ಯಾವಾಗಲೂ ಒಂದು ಆಹಾರ ಉಪವಾಸ, ಆಹಾರದಲ್ಲಿಯು ಎಲ್ಲ ರಸಗಳನ್ನ ತ್ಯಾಗ ಮಾಡಿದ್ದರು. ಶಾಂತ ಪ್ರಕೃತಿಯವರು ಅವರು ಬಾಂಬೆಯಲ್ಲಿ ಆಚಾರ್ಯರ ಸ್ಮರಣೆಯನ್ನು ಚಿರಸ್ಥಾಯಿ ಮಾಡಲು "ತೀನಮೂರ್ತಿ ಪೋದನಪುರ" ಎಂಬ ಪಾವನ ತೀರ್ಥವನ್ನು ಮಾಡಿಸಿದರು. ಈ ಮಹಾನ್ ಕಾರ್ಯವನ್ನು ಮಾಡಿಸಲು ಅವರು ತಮ್ಮ ಆಯಸ್ಸಿನ ಮೂವತ್ತು ವರ್ಷಗಳನ್ನು ಮುಡುಪಿಟ್ಟರು. ಅವರ ಸಹನಶೀಲತೆ ಮತ್ತು ಗುರುಭಕ್ತಿ ಬಹಳ ವಿಶೇಷದ್ದು. 1971 ರಲ್ಲಿ ಸಲ್ಲೇಖನದಿಂದ ಶರೀರವನ್ನು ತ್ಯಾಗ ಮಾಡಿ ಗುರುವಿನ ಸಾನ್ನಿಧ್ಯವನ್ನು ಹೊಂದಲು ಸ್ವರ್ಗಕ್ಕೆ ಹೋಗಿದ್ದಾರೆ ಎಂಬುದು ನನ್ನ ದೃಢನಂಬಿಕೆ.

ಇಲ್ಲಿಂದ ವಿಶಾಲಮತಿಗೆ ನಾನು ಈಗ ನಾವು ಬೇಗನೆ ಚಾರಿತ್ರ ಚಕ್ರವರ್ತಿ ಆಚಾರ್ಯರನ್ನು ದರ್ಶನ ಮಾಡುವ ಸಲುವಾಗಿ ಅವರನ್ನು ಅರಸುತ್ತಾ 'ನೀರ' ಎಂಬ ಹಳ್ಳಿಗೆ ಹೊರಟೆವು.

೧೧

ಆ ಸಮಯದಲ್ಲಿ ಆಚಾರ್ಯರು 'ನೀರಾ' ಎಂಬ ಹಳ್ಳಿಯಲ್ಲಿ ವಿರಾಜಮಾನರಾಗಿದ್ದರು. ಅವರನ್ನು ದರ್ಶನ ಮಾಡಿ ಸಿದ್ಧ ಭಕ್ತಿ, ಶ್ರುತಭಕ್ತಿ, ಆಚಾರ್ಯಭಕ್ತಿಯನ್ನು ಓದಿ ವಿಧಿವತ್ತಾಗಿ ವಂದಿಸಿದೆ. ಆಚಾರ್ಯರು ಆಶೀರ್ವದಿಸಿದರು. ಕ್ಷುಲ್ಲಿಕಾ ವಿಶಾಲಮತಿಯ ರತ್ನತ್ರಯದ ಕುಶಲವನ್ನು ವಿಚಾರಿಸಿದರು. ಮಹಾರಾಜರು ಆಸನದಲ್ಲಿ ಕುಳಿತು ಬ್ರಹ್ಮಚಾರಿ ಜಿನದಾಸರಿಂದ ಶಾಸ್ತ್ರವನ್ನು ಕೇಳುತ್ತಿದ್ದರು. ನನ್ನ ಕಣ್ಣುಗಳಲ್ಲಿ ಅವರನ್ನು ಕಂಡು ಆನಂದಬಾಷ್ಪ ತುಂಬಿದವು. ಅವರು ವಿಶಾಲಮತಿಯಲ್ಲಿ ನನ್ನ ಪರಿಚಯವನ್ನು ಕೇಳಿದರು. ಅವರು ನನ್ನ ಎಲ್ಲ ವೃತ್ತಾಂತವನ್ನು ಹೇಳಿದರು. ನನ್ನ ವಯಸ್ಸು ಆಗ ಹತ್ತೊಂಬತ್ತು, ಇಪ್ಪತ್ತು ಇರಬೇಕು. ಆಚಾರ್ಯರು ತಮ್ಮ ಸ್ವಾಧ್ಯಾಯ ಆದಮೇಲೆ ನನಗೆ ಸ್ವಲ್ಪ ನೀತಿಯನ್ನು ಹೇಳಿದರು. ನಿನ್ನ ವಯಸ್ಸು ಚಿಕ್ಕದು, ನೀನು ಮೂವತ್ತು ವರ್ಷಗಳು ಆಗುವವರೆಗಾದರೂ ಯಾರ ಜೊತೆಯಲ್ಲಾದರೂ ಇರಬೇಕು. ಒಂಟಿಯಾಗಿ ಎಂದೂ ಇರಬೇಡ. ಚೆನ್ನಾಗಿ ಧಾರ್ಮಿಕ ಅಧ್ಯಯನ ಮಾಡು. ಅನಗಾರ ಧರ್ಮಮೃತ ಮತ್ತು ಭಗವತೀ ಆರಾಧನೆ ಸಮಯಸಾರವನ್ನು ಓದಲೇಬೇಕು.. ನಾನು ಭಗವತೀ ಆರಾಧನೆಯನ್ನು 36 ಸಲ ಓದಿದ್ದೇನೆ ಎಂದರು. ಹೀಗೆ ನನ್ನ ಮುಂದಿನ ಭವಿಷ್ಯದಲ್ಲಿ ಇರಬೇಕಾದ ಶಿಕ್ಷಣವನ್ನು ತಿಳಿಸಿದಾಗ ಜೀವವನ್ನು ತ್ಯಜಿಸುತ್ತಿರುವ ಮಹಾನ್ ಮುನಿಯಿಂದ ನನಗೆ ಇಂತಹ ಉಪದೇಶ ಸಿಗುತ್ತಿರುವುದು ನನ್ನ ಪೂರ್ವಕೃತಪುಣ್ಯವೇ ಇರಬೇಕು ಎನ್ನಿಸಿತು. ನಾನು ದೀಕ್ಷೆಯ ನಂತರ ಮೋಟಾರಿನಲ್ಲಿ ಪ್ರಯಾಣ ಮಾಡಬಾರದೆಂದು ನಿರ್ಧಾರ ಮಾಡಿದ್ದೆ ಆದರೆ ಆ ವ್ರತವನ್ನು ಅನುಸರಿಸಿದ್ದರೆ ನನಗೆ ಆಚಾರ್ಯರ ದರ್ಶನ ಸಿಗುತ್ತಿರಲಿಲ್ಲ.

ಮಾರನೆ ದಿನ ಆಚಾರ್ಯರ ದರ್ಶನಕ್ಕೆ ಬಂದು ಕುಳಿತೆ. ಆಚಾರ್ಯರು ಬ್ರಹ್ಮಚಾರಿಗಳಿಂದ ಓದಿಸಿ ಸ್ವಾಧ್ಯಾಯ ಮಾಡುತ್ತಿದ್ದರು. ಮಧ್ಯೆ ಮಧ್ಯೆ ಚರ್ಚೆಯು ಆಗುತ್ತಿತ್ತು. ಅನಂತರ ಆಹಾರಕ್ಕೆ ಹೊರಟರು. ಅವರ ಆಹಾರದ ನಂತರ ನನ್ನ ಆಹಾರವಾದ ಮೇಲೆ ಅವರ ಸಾಮಾಯಿಕ ಕ್ರಿಯೆಗಳ ನಂತರ ನಾನು ಮತ್ತೆ ಬಂದು ಅಲ್ಲೇ ಕುಳಿತಿದ್ದ ಆ ಸಮಯದಲ್ಲಿ ಕೆಲವು ಧರ್ಮಾತ್ಮ ಶ್ರಾವಕರು ಆಚಾರ್ಯರ ಮುಂದೆ ಬಂದು ವಿಷಯವನ್ನು ಇಟ್ಟರು. ಪೂಜ್ಯ ಗುರುದೇವರೇ, ಜಂಬೂಸ್ವಾಮಿಗಳ ವಿಷಯದಿಂದ ಸಮಾಜ ಚಿಂತಿಸುವಂತಾಗಿದೆ ಎಂದರು. ಅದಕ್ಕೆ ಆಚಾರ್ಯರು ಗಂಭೀರ ಮುದ್ರೆಯಿಂದ ಹೇಳಿದರು. ಅವನು ನಮ್ಮಲ್ಲಿಗೆ ಬಂದರೆ ತಿಳುವಳಿಕೆ ಹೇಳಿ

ಪ್ರಾಯಶ್ಚಿತ್ತ ಕೊಟ್ಟು ಸುಧಾರಿಸಬಹುದು. ಇವರು ದಿಗಂಬರ ಮುದ್ರೆ ಹೊತ್ತು ತಮ್ಮ ಈ ನಡವಳಿಕೆಯಿಂದ ಇಡೀ ಮುನಿವೃಂದಕ್ಕೆ ಕಳಂಕಿತರು. ವೃತ್ತ ಪತ್ರಿಕೆಯಲ್ಲಿ ವಿಷಯ ಬಂದರೆ ನಿರ್ದೋಷಿ ಮುನಿಗಳ ಬೆಲೆಯು ಕಳೆದು ಹೋಗುತ್ತದೆಯಲ್ಲ ಎಂದು. ಇದು ಕೇಳಿ ಶ್ರಾವಕರು ಚಿಂತಿತರಾಗಿ ಹೊರನಡೆದರು.

ಆದರೆ ನನ್ನ ಮನದಲ್ಲಿ ಆಚಾರ್ಯರ ನುಡಿಗಳೇ ಪ್ರತಿಧ್ವನಿಸುತ್ತಿರುತ್ತದೆ. ಉಪಗೂಹನ ಅಂಗವನ್ನು ಎಷ್ಟು ಸರಳವಾಗಿ ತಿಳಿಸಿದರಲ್ಲ ಎಂದು. ಇಂದಿನ ತಿಳುವಳಿಕಸ್ಥರು ಈ ಮಾತುಗಳ ಬಗ್ಗೆ ಗಮನಕೊಡಬೇಕು. ಸಮಾಜದ ಹಿರಿಯರು ಯುವ ಪೀಳಿಗೆಯನ್ನು ಮಕಾರತ್ರಯವನ್ನು ಅಳವಡಿಸಲುಪ್ರಯತ್ನಿಸಬೇಕು. ಆದರೆ ಅವರಿಗೆ ಇಡೀ ಸಾಧುಗಳ ಚಾರಿತ್ರದ ಮತ್ತು ಧರ್ಮದ ಚಿಂತೆ ಆವರಿಸಿದೆ. ಪತ್ರಿಕೆಗಳಲ್ಲಿ 99% ಭಾಗ ಮುನಿಗಳ ನಿಂದೆಯನ್ನು ಮುದ್ರಿಸಿ ಮೋಕ್ಷಮಾರ್ಗಿಗಳು ಸುಧಾರಿಸಬೇಕೆಂದು ಡಂಗೂರ ಹೊಡೆಯುತ್ತಿರುವ ಇಂತಹ ಜನ ಮೋಕ್ಷಮಾರ್ಗವನ್ನು ಹೇಗೆ ಅನುಸರಿಸುತ್ತಾರೆ.

ಹೀಗೆ ಶಿಕ್ಷಾಪ್ರದವಾದ ಅಮೃತವಾಣಿಯನ್ನು ಕೇಳುತ್ತಾ ಮೂರುದಿನಗಳನ್ನು ಅವರ ಸಾನಿಧ್ಯದಲ್ಲಿ ಕಳೆದು ನಾವಿಬ್ಬರು ಅವರ ಆಶೀರ್ವಾದ ಪಡೆದು ಅಲ್ಲಿಂದ ಹೊರೆಟೆವು. ಅಲ್ಲಿಂದ ಕೊಲ್ಹಾಪುರ, ಬೆಳಾಗಂ, ಮುಂತಾದ ಕಡೆ ಸುತ್ತಾಡಿ ಮತ್ತೆ ಜಯಪುರಕ್ಕೆ ಬಂದೆವು. ಅಲ್ಲಿ ಚಾಕಸೂ ಹಳ್ಳಿಯಲ್ಲಿ ಆಚಾರ್ಯ ವೀರಸಾಗರರು ಸಮಾಧಿಯಾದ ವಿಷಯ ತಿಳಿಯಿತು. ವಿಷಯ ಕೇಳುತ್ತಲೇ ಗುಲಾಬಚಂದರು ನಮ್ಮಿಬ್ಬರನ್ನು ಅಲ್ಲಿಗೆ ಕರೆದುಕೊಂಡು ಹೋದರು. ಅಲ್ಲಿ ನೋಡಿದರೆ ಆಚಾರ್ಯರು ಆಸನದಲ್ಲಿ ವಿರಾಜಮಾನರಾಗಿದ್ದಾರೆ. ಸ್ವಾಧ್ಯಾಯ ನಡೆಯುತ್ತಿದೆ. ಆಗ ಗೊತ್ತಾಯಿತು ನಮಗೆ ತಿಳಿದ ಸುದ್ದಿ ಸುಳ್ಳೆಂದು ನಾವಿಬ್ಬರು ಜ್ವರದಿಂದ ನರಳುತ್ತಿದ್ದರೂ ಆಚಾರ್ಯರ ದರ್ಶನದಿಂದ ನಮಗೆ ಬಹಳ ಆನಂದವಾಯಿತು.

ಸ್ವಾಧ್ಯಾಯ ನಡೆಯುವಾಗಲೇ ಕ್ಷುಲ್ಲಕ ಚಿದಾನಂದ ಸಾಗರರು ಅನೇಕ ಸಂಶಯಗಳನ್ನು ವ್ಯಕ್ತಪಡಿಸುತ್ತಿದ್ದರು. ಆಚಾರ್ಯರು ನಿಧಾನವಾದ ಧ್ವನಿಯಲ್ಲಿ ಸಮಾಧಾನ ಹೇಳುತ್ತಿದ್ದರು. ಅವರ ಮಾತುಗಳನ್ನು ಕೇಳುತ್ತಿದ್ದ ವಿಶಾಲಮತಿಯೂ ಕೂಡ ಹಲವಾರು ಸಂಶಯಗಳಿಗೆ ಸಮಾಧಾನವನ್ನು ಪಡೆದರು. ಒಂದು ದಿನ ಆಹಾರದ ಸಮಯದಲ್ಲಿ ಆ ಕ್ಷುಲ್ಲಕರನ್ನು ಮತ್ತು ನನ್ನನ್ನು ಒಂದೇ ಚೌಕದಲ್ಲಿ ತಡೆದರು. ಆದರೆ ಅವರು ನಿಂತಿದ್ದವರು ಮತ್ತೆ ಹೊರಬಂದರು ನನ್ನ ಆಹಾರವಾಯಿತು. ಆದರೆ ಅವರು ಹೊರಬಂದ ಕಾರಣ ತಿಳಿದು ವಿಶಾಲಮತಿಗೆ ಬೇಜಾರಾಯಿತು. ಏಕೆಂದರೆ ಮೋಟಾರುಗಾಡಿಯಲ್ಲಿ ಸಂಚರಿಸುವ ತ್ಯಾಗಿಗಳ ಜೊತೆ ಆಹಾರ ತೆಗೆದುಕೊಳ್ಳುವುದಿಲ್ಲ ಎಂಬುದು ಅವರ ನಿಯಮವಾಗಿತ್ತು ಎಂದು ನನಗೆ ಬೇಜಾರಾಗಲಿಲ್ಲ. ಕಠಿಣ ನಿಯಮ ನಡೆಸುವವರ ಬಗ್ಗೆ ಅಭಿಮಾನ ಹೆಚ್ಚಾಯಿತು. ಆಚಾರ್ಯರ ಅನುಮತಿ ಪಡೆದು ಅಲ್ಲಿಂದ ಬಂದೆವು. ಬಹುಶಃ ಆಚಾರ್ಯರು ಜೋಬನೇರದಲ್ಲಿ ಇದ್ದರೆಂದು ನೆನಪು ಅಲ್ಲಿಗೆ ಹೋಗಿ ಅವರಿಂದ ಆಶೀರ್ವಾದ ಪಡೆದು ನಮ್ಮ ಪ್ರಯಾಣದ ವಿವರವನ್ನೆಲ್ಲ ನೀಡಿ ಅಲ್ಲಿಂದ ಗುಜರಾತ್ ಪ್ರಾಂತ್ಯದ ಕಡೆಗೆ ಹೊರೆಟೆವು.

ಅಲ್ಲೇ ನಮಗೆ ಸುದ್ದಿ ತಿಳಿಯಿತು. ಆಚಾರ್ಯರು ಸಲ್ಲೇಖನವನ್ನು ಗ್ರಹಣ ಮಾಡುವರೆಂದು. ಇದರಿಂದ ನಾವಿಬ್ಬರು ಮಾತಾಡಿಕೊಂಡೆವು ನಾವು ಈ ಸಲದ ಚಾತುರ್ಮಾಸವನ್ನು ಸೋಲಾಪುರದ ಹತ್ತಿರದಲ್ಲೇ ಮಾಡೋಣ. ಏಕೆಂದರೆ ಇದರಿಂದ ಆಚಾರ್ಯರ ಅಂತಿಮ ದರ್ಶನವನ್ನು ಮಾಡಬಹುದೆಂದು. ಹೀಗೆ ನಿರ್ಣಯಿಸಿ 'ಫಾಲ್ಟನ್'ಗೆ ಬಂದೆವು. ಅಲ್ಲಿ ಶ್ರುತಪಂಚಮಿಯ ಮಹೋತ್ಸವವನ್ನು ನೋಡಿದೆವು. ಅಚಾರ್ಯರು ಷಟ್ಖಂಡಾಗಮ ಸೂತ್ರಗಳನ್ನು ತಾಮ್ರ ಪತ್ರದಲ್ಲಿ ಬರೆಯಿಸಿ ಆ ಗ್ರಂಥವನ್ನು ಸರಸ್ವತಿ ಭವನದಲ್ಲಿ ವಿರಾಜಮಾನಗೊಳಿಸಿದ್ದದರು. ಅಲ್ಲಿ ಶ್ರುತ

ಪೂಜೆಯ ದಿನ ಹೆಂಗಸರು ತಟ್ಟೆಗಳಲ್ಲಿ 25-25 ಮಾವಿನ ಹಣ್ಣುಗಳನ್ನು ಇಟ್ಟುಕೊಂಡು ಬಂದಿದ್ದರು. ಆ ಅವಕಾಶದಲ್ಲಿ ನನಗೆ 10 ನಿಮಿಷ ಮಾತಾಡುವ ಅವಕಾಶ ದೊರಕಿತು. ನನ್ನ ಪ್ರವಚನ ಕೇಳಿ ಜನ ಪ್ರಭಾವಿತರಾಗಿ ಚಾರ್ತುಮಾಸಕ್ಕೆ ನನ್ನನ್ನು ಅಲ್ಲಿಯೇ ನಿಲ್ಲಲು ಆಗ್ರಹಿಸಿದರು. ಇಲ್ಲಿಯ ಮಾಣಿಕಚಂದ್ರ್ ವೀರಚಂದ್ರ್ ಗಾಂಧೀ ಯ ಮನೆಯ ಚೈತ್ಯಾಲಯ ಬಹಳ ಚೆನ್ನಾಗಿತ್ತು. ಇಲ್ಲಿಯ ಶ್ರಾವಕರು, ಭಕ್ತಿಭಾವದಿಂದಿದ್ದರು.

ಇಲ್ಲಿ ಆಚಾರ್ಯ ಪಾಯಸಾಗರ ಮಹಾರಾಜರು ಸೋಲಾಪುರದಲ್ಲಿ ಇರುವ ವಿಚಾರ ತಿಳಿಯಿತು. ಅವರ ದರ್ಶನ ಮಾಡುವ ಸಲುವಾಗಿ ಸೋಲಾಪುರಕ್ಕೆ ವಿಶಾಲಮತಿಯ ಜೊತೆ ಬಂದೆ. ಆಚಾರ್ಯರನ್ನು ದರ್ಶನ ಮಾಡಿ ಆಶೀರ್ವಾದ ಪಡೆದೆವು. ಅವರ ಪ್ರವಚನದಲ್ಲಿ ರೋಚಕ, ಹಾಸ್ಯರಸವನ್ನು ಆಧ್ಯಾತ್ಮಿಕದೊಡನೆ ಸೇರಿಸಿದ್ದರು. ಕೇಳಿ ಬಹಳ ಆನಂದವಾಗುತ್ತಿತ್ತು. ಆಚಾರ್ಯರು ಉಪದೇಶ ಕೊಡುತ್ತಾ ಹೇಳುತ್ತಿದ್ದರು ನೋಡಿ ಹೆಂಗಸರು ರೊಟ್ಟಿಯನ್ನು ಎಷ್ಟು ಕುಶಲತೆಯಿಂದ ಮಾಡುತ್ತಾರೆಂದರೆ ತವದ ಮೇಲೆ ಎರಡು ಕಡೆಯು (ಮಸಿಯಾಗದಂತೆ ಆದರೆ ಸರಿಯಾಗಿ ಬೇಯಿಸಿ ಉಬ್ಬಿಸಿ) ಉಲ್ಟ ಪಲ್ಟ ಮಾಡಿ ಆದರೆ ಅದು ಕಪ್ಪಾಗದಂತೆ ಉಬ್ಬಿಸಿ ಅದಕ್ಕೆ ತುಪ್ಪಹಾಕಿ ನಿಮ್ಮ ತಟ್ಟೆಗೆ ಹಾಕಿದಾಗ ಸ್ವಾದಿಷ್ಟ ರೊಟ್ಟಿ ಎಷ್ಟು ನಿಮ್ಮ ಆರೋಗ್ಯಕ್ಕೂ ರುಚಿಗೂ ಚೆನ್ನಾಗಿರುತ್ತದೆ. ಹಾಗೆಯೇ ಮೊದಲು ನಿಮ್ಮ ಶರೀರ ಸಹಿತ ಆತ್ಮನನ್ನು ಬಾಹ್ಯ ಅಭ್ಯಂತರ ತಪದಿಂದ ಬೇಯಿಸಿ ಪುನಃ ಉಪಸರ್ಗವೆಂಬ ಪರೀಷಹವೆಂಬ ಅಗ್ನಿಯಲ್ಲಿ ಹಾಕಿ ಅದನ್ನು ರೊಟ್ಟಿಯನ್ನು ಭಾಗಮಾಡುವಂತೆ ಶರೀರ ಬೇರೆ ಆತ್ಮ ಬೇರೆ ಎಂದು ತಿಳಿಯಿರಿ ಎಂದು ಉಪಮಾದಿಂದ ಮನದಟ್ಟು ಮಾಡುತ್ತಿದ್ದರು. ಇದು ಆಬಾಲವೃದ್ಧರಿಗೂ ಅರ್ಥವಾಗುತ್ತಿತ್ತು. ಒಮ್ಮೆ ಹೇಳುತ್ತಿದ್ದರು ನೋಡಿ ಯಾವುದಾದರು ಮೂರ್ತಿ ಚಮತ್ಕಾರಿಯಾಗಿದ್ದು ಭಿನ್ನವಾದರೂ ನಮಗೆ ಪೂಜ್ಯವೇ ಆಗುತ್ತದೆ. ಹಾಗೇಯೆ ಪ್ರಭಾವಶಾಲಿಗಳಾದ ಮುನಿಗಳು ಒಂದು ವೇಳೆ ವ್ರತದಲ್ಲಿಅತಿಚಾರ ಉಂಟಾದರೂ ಅವರು ಪ್ರಭಾವಶಾಲಿಗಳೇ ಆಗಿರುತ್ತಾರೆ. ಉಪದೇಶಕನಿಂದ ಜನತೆಗೆ ವಿಶೇಷ ಲಾಭವಾಗುತ್ತಲೇ ಇರುತ್ತದೆ. ಮುನಿಗಳ ಇಂತಹ ಉಪದೇಶ ಕೇಳಿ ಮನಸ್ಸು ಪ್ರಸನ್ನವಾಗುತ್ತಿತ್ತು. ಮಹಾರಾಜರು ಹೇಳುತ್ತಿದ್ದರು ನಾನು ಅಸ್ವಸ್ಥನಾಗಿರುವಾಗ ಪ್ರತಿಕ್ಷಣದಲ್ಲಿಯು ಮಂತ್ರದ ಆಸರೆಯನ್ನು ಪಡೆಯುತ್ತೇನೆ. ಓಂ ಸಿದ್ಧೋಹಂ ಸಿದ್ಧಾಯ ನಮಃ ಪರಮಹಂಸಾಯ ನಮಃ ಚಿಚ್ಛೈತನ್ಯ ಜ್ಯೋತಿಃ ಸ್ವರೂಪಾಯ ನಮಃ ಓಂ ಪರಮ ಜ್ಯೋತಿಃ ಸ್ವರೂಪಾಯ ನಮಃ ಮುಂತಾದ ಮಂತ್ರಗಳನ್ನು ಸದಾ ಜಪಿಸುತ್ತಿರುವುದರಿಂದ ಎಲ್ಲಾ ಬಾಧೆಗಳಿಂದಲೂ ಮುಕ್ತಿಯನ್ನು ಪಡೆಯಲು ಸಾಧ್ಯವೆಂಬುದನ್ನು ನಿರೂಪಿಸಿದ್ದರು. ಇದೇ ಆಸರೆಯಿಂದ ನಾನು ಕೂಡ ಸ್ವಾಸ್ಥ್ಯವನ್ನು ಪಡೆದೆ. ಪಾಯಾಸಾಗರರ ಹೃದಯದಲ್ಲಿ ಚಾರಿತ್ರ ಚಕ್ರವರ್ತಿ ಶಾಂತಿಸಾಗರರ ಮೇಲೆ ಅತೀವವಾದ ಭಕ್ತಿ. ಶ್ರಾವಕಿಯರು ಅವರಿಗೆ ಪೂಜೆ ಮಾಡುವಾಗ ಅವರು ಆಚಾರ್ಯರಿಗೆ ಪೂಜೆ ಮಾಡಿಸಿ ಆನಂದ ಪಡುತ್ತಿದ್ದರು. ಪಾಯಸಾಗರರು ಆಚಾರ್ಯ ದೇಶಭೂಷಣರ ಗುರುಗಳ ಗುರುಗಳು. ಅಂದರೆ ಜಯಕೀರ್ತಿ ಮಹರಾಜರು ಇವರಿಂದ ದೀಕ್ಷೆ ಪಡೆದವರು. ಜಯಕೀರ್ತಿ ಮಹಾರಾಜರಿಂದ ದೇಶಭೂಷಣರು ದೀಕ್ಷೆ ಪಡೆದಿದ್ದು ಕ್ಷುಲ್ಲಿಕಾ ವಿಶಾಲಮತಿಯವರು ಪಾಯಸಾಗರರಿಂದಲೇ ದೀಕ್ಷಿತರಾದವರು.

೧೨

ಆಚಾರ್ಯ ಚಕ್ರವರ್ತಿ ಆಚಾರ್ಯ ದೇವರು ಬಾರಾಮತಿಯಲ್ಲಿ ತಂಗಿದ್ದರು. ಅಲ್ಲಿಂದ ಕುಂಥಲಗಿರಿಗೆ ವಿಹಾರ ಹೋಗುವುದು ನಿಶ್ಚಿತವಾಗಿತ್ತು. ಅಲ್ಲಿ ಯಮ ಸಲ್ಲೇಖನ ತೆಗೆದುಕೊಳ್ಳುತ್ತಾರೆಂದು ನಿರ್ಣಯವಾಗಿತ್ತು.

ಅಂದರೆ ಅದು ಅವರ ಅಂತಿಮ ವಿಹಾರವಾಗಿತ್ತು. ಇದೇ ಸಂದರ್ಭದಲ್ಲಿ ನಾನು ವಿಶಾಲಮತಿ ಅಮ್ಮ ಇಲ್ಲಿಗೆ ಬಂದಿದ್ದೆವು. ಕ್ಷುಲ್ಲಿಕೆ ಅಜಿತಮತೀ ಮತ್ತು ಜಿನಮತಿ ಮಾತಾಜಿಯವರು ಅಲ್ಲೇ ಇದ್ದರು. ಆಚಾರ್ಯರ ದರ್ಶನದಿಂದ ಗದ್ಗದಿತಳಾದೆ. ಆಚಾರ್ಯರು ನಮ್ಮನ್ನು ಉತ್ತರದ ಅಮ್ಮ, ಅಯೋಧ್ಯೆಯ ಅಮ್ಮ ಎಂದು ಕರೆದಿದ್ದನ್ನು ಕೇಳಿ ಅಮೃತವಾಣಿಯನ್ನು ಕೇಳಿದಂತೆ ಆಯಿತು. ನಾವೆಲ್ಲರು ಆಚಾರ್ಯರ ಮುಂದೆಯೆ ಕುಳಿತ್ತಿದ್ದೆವು. ಅವರ ಮುಖದಿಂದ ಹೊರಟ ಪ್ರತಿಯೊಂದು ಶಬ್ದವು ನಮಗೆ ಅಮೂಲ್ಯವಾಗಿತ್ತು. ನನಗೆ ಆಚಾರ್ಯರಿಂದಲೇ ಆರ್ಯಿಕೆ ದೀಕ್ಷೆಯನ್ನು ತೆಗೆದುಕೊಳ್ಳಬೇಕೆಂಬ ಇಚ್ಛೆ. ಈ ಆಶೆಯನ್ನು ವಿಶಾಲಮತಿ ಮಾತಾಜಿಯ ಹತ್ತಿರ ಯಾವಾಗಲು ಹೇಳುತ್ತಲೇ ಇದ್ದೆ. ಅವರಾದರೂ ಸ್ವಲ್ಪ ದಿನ ತಡೆ ಇಬ್ಬರು ಒಟ್ಟಾಗಿ ತೆಗೆದುಕೊಳ್ಳೋಣ ಎನ್ನುತ್ತಲೇ ಇದ್ದರು. ಒಂದು ದಿನ ರಾತ್ರಿ ನಾನು ಕನಸಿನಲ್ಲಿ ಹೊಗೆ ಇಲ್ಲದ ಅಗ್ನಿಯನ್ನು ಕಂಡೆ. ಮತ್ತು ಸಾಮಾಯಿಕದಲ್ಲಿಯು ಕೂಡ ನನಗೆ ದೀಕ್ಷೆ ತೆಗೆದುಕೊಳ್ಳಬೇಕೆಂಬ ಭಾವ ತೀವ್ರವಾಗತೊಡಗಿತು. ಬೆಳಗ್ಗೆ ವಿಶಾಲಮತಿಯಲ್ಲಿ ಕನಸಿನ ವಿಷಯ ತಿಳಿಸಿದೆ. ಅದನ್ನು ಕೇಳಿದ ಅವರು ನಿನ್ನ ವೈರಾಗ್ಯ ಪಕ್ವವಾಗಿದೆ ಇನ್ನು ತಡೆಯುವುದು ಸರಿ ಅಲ್ಲ. ಬಾರಾಮತಿಗೆ ಹೋಗಿ ಆಚಾರ್ಯರಲ್ಲಿ ವಿನಂತಿಸಿಕೊಳ್ಳೋಣ ಎಂದು ಒಪ್ಪಿಗೆ ಸೂಚಿಸಿದರು.

ಆಚಾರ್ಯರಲ್ಲಿ ನಾನು ದೀಕ್ಷೆಯ ಬಗ್ಗೆ ಪ್ರಾರ್ಥಿಸಿದಾಗ ಅವರು ಮೃದು ಸ್ವರದಲ್ಲಿ ಹೇಳಿದರು. ನಾನು ದೀಕ್ಷೆಯನ್ನು ನೀಡುವುದಿಲ್ಲವೆಂದು ನಿಯಮ ಕೈಕೊಂಡಿದ್ದೇನೆ ಆದ್ದರಿಂದ ನೀನು ನನ್ನ ಶಿಷ್ಯರಾದ ನೇಮಿಸಾಗರರು ಅಥವಾ ವರ್ಧಮಾನ ಸಾಗರರಲ್ಲಿ ದೀಕ್ಷೆಯನ್ನು ಪಡೆ. ನಾನು ಅವರಿಗೆ ಹೇಳಿ ಕಳುಹಿಸುತ್ತೇನೆ. ನಿನ್ನ ಶರೀರದ ಆರೋಗ್ಯಕ್ಕೆ ವಾತಾವರಣ ಸರಿಹೋಗುವ ಜಾಗದಲ್ಲಿ ವೀರಸಾಗರರು ಇದ್ದಾರೆ. ಅವರ ಸಂಘದಲ್ಲಿ ವಯೋವೃದ್ಧರಾದ ಆರ್ಯಿಕೆಯರು ಇದ್ದಾರೆ. ನೀನು ಅಲ್ಲಿಹೋಗಿ ದೀಕ್ಷೆ ತೆಗೆದುಕೊಳ್ಳುವುದು ಒಳ್ಳೆಯದು. ಏಕೆಂದರೆ ಈ ಕಡೆ ಆರ್ಯಿಕೆಯರು ಯಾರೂ ಇಲ್ಲ.

ಆಚಾರ್ಯರ ಮೃದುವಾಣಿ ಕೇಳುತ್ತಿದ್ದಂತೆ ನನಗೆ ಈಗಲೇ ದೀಕ್ಷೆ ತೆಗೆದುಕೊಳ್ಳೋಣ ಎನ್ನುವಷ್ಟು ಮನಸ್ಸಾಯಿತು. ಮನಸ್ಸನ್ನು ಹೇಗೋ ತಹಬದಿಗೆ ತೆಗೆದುಕೊಂಡು ಈ ಪ್ರಾಂತ್ಯದಲ್ಲಿಯೇ ಚಾತುರ್ಮಾಸ ಕೈಕೊಂಡು ಆಚಾರ್ಯರ ಸಲ್ಲೇಖನ ಮಹೋತ್ಸವವನ್ನು ನೋಡಿದ ಮೇಲೆಯೇ ದೀಕ್ಷೆ ತೆಗೆದುಕೊಳ್ಳುವ ನಿರ್ಧಾರ ಮಾಡಿದೆ.

ಒಂದು ದಿನ ಆಚಾರ್ಯರು ಮೋಟಾರು ಗಾಡಿಯಲ್ಲಿ ಓಡಾಡುವ ಕ್ಷುಲ್ಲಕ-ಕ್ಷುಲ್ಲಿಕೆಯರ ಬಗ್ಗೆ ಅನಾದರ ವ್ಯಕ್ತಗೊಳಿಸಿದಾಗ ವಿಶಾಲಮತಿಯು ಆಚಾರ್ಯರೇ ವೀರಮತಿಯು ಯಾವತ್ತೂ ಮೋಟಾರಿನಲ್ಲಿ ಕುಳಿತುಕೊಳ್ಳಲು ಬಯಸುವುದಿಲ್ಲ. ಆದರೆ ದೇಶಭೂಷಣರು ದಿನದಲ್ಲಿ ಇಪ್ಪತ್ತು ಕಿಲೋಮೀಟರ್ ಸಂಚಾರ ಮಾಡುತ್ತಾರೆ. ಅವರ ಗತಿಯನ್ನು ಇವರು ಅನುಸರಿಸಲಾಗುತ್ತಿರಲಿಲ್ಲ. ಅದಕ್ಕಾಗಿ ಆಚಾರ್ಯರೇ ಒತ್ತಾಯದಿಂದ ವಾಹನದಲ್ಲಿ ಓಡಾಡಲು ಆದೇಶಿಸಿದರು. ಎಂದು ಹೇಳಿದರು. ಆ ಮಾತನ್ನು ಕೇಳಿದ ನಾನು ಆ ಕ್ಷಣವೇ ಚಾತುರ್ಮಾಸ ಮುಗಿದ ನಂತರ ಬಾಹುಬಲಿಯ ಯಾತ್ರೆ ಕೈಕೊಂಡು ಅಲ್ಲಿ ತಲುಪುವವರೆಗೆಮಾತ್ರ ಮೋಟಾರಿನಲ್ಲಿ ಕುಳಿತುಕೊಳ್ಳುತ್ತೇನೆ. ನಂತರ ಜೀವನಪರ್ಯಂತ ಮೋಟಾರಿನಲ್ಲಿ ಕುಳಿತುಕೊಳ್ಳುವುದಿಲ್ಲ ಎಂದು ನಿಯಮ ಮಾಡಿಕೊಂಡೆ. ಇದನ್ನು ತಿಳಿದ ಆಚಾರ್ಯರು ಮನಸಾರೆ ನನ್ನನ್ನು ಹರಸಿದರು. ಇವಳೊಬ್ಬಳು ನಿಕಟ ಭವ್ಯಜೀವಿ ಪರಿಣಾಮ ಬಹಳ ಶುದ್ಧವಿದೆ ಎಂದರು. ನಮಗೆ ಬಹಳಷ್ಟು ಶಿಕ್ಷಣವನ್ನು ನೀಡಿದರು. ನಾವು ವಿಹಾರ ಹೊರಡುವಾಗ ಜೀನೇಂದ್ರದೇವನ ರಥವು ಹೊರಟಿತು. ರಥವನ್ನು ಮಲ್ಲಿಗೆ ಜಾಜಿ ಹೂಗಳಿಂದ ಅಲಂಕರಿಸಿದ್ದರು. ಪುಟ್ಟ ಹುಡುಗಿಯರು ಕೈಯಲ್ಲಿ ಚಾಮರ ಹಿಡಿದಿದ್ದರು. ಭಕ್ತರ ಹಿಂಡೆ ನೆರೆದಿತ್ತು. ಅಕ್ಕ ಪಕ್ಕದ ಹಳ್ಳಿಯ ಗಂಡಸರು

ಹೆಂಗಸರು ಆಚಾರ್ಯರ ಸಲ್ಲೇಖನ ಮಹೋತ್ಸವ ವೀಕ್ಷಿಸಲು ಸೇರಿದ್ದರು. ಈ ಮಹೋತ್ಸವದ ಮುಂದಾಳತ್ವವನ್ನು ಚಂದೂಲಾಲ್‌ಜಿ ಸರಾಫರವರು ವಹಿಸಿದ್ದರು. ರಥಯಾತ್ರೆಯಲ್ಲಿ ಆಚಾರ್ಯರು ಭಾಗವಹಿಸದ್ದರು. ಈ ಮೆರವಣಿಗೆ ಚಂದೂಲಾಲರ ತೋಟವನ್ನು ತಲುಪಿ ಅಲ್ಲಿ ಸಭೆಯನ್ನು ನಡೆಸಿದರು. ಗುರುಗಳ ರಜಕಣವನ್ನು ಜನರು ಭಕ್ತಿಯಿಂದ ಕಣ್ಣಿಗೆ ಒತ್ತಿ ಕೊಳ್ಳುತ್ತಿದ್ದರು. ಆಚಾರ್ಯರು ತಮ್ಮ ಕಡೆಯ ಗಳಿಗೆಯನ್ನು ಕುಂಥಳಗಿರಿಯಲ್ಲಿ ಕಳೆದರು. ನಾವಿಬ್ಬರು ಮ್ಹಾಸವಡೆಯಲ್ಲಿ ನಿಂತಿದ್ದೆವು. ಮತ್ತು ಆಚಾರ್ಯರ ಅಂತಿಮಕ್ಷಣ ನೋಡಲು ಕುಂಥಳಗಿರಿಗೆ ಹೋಗಲು ಅನುಕೂಲವು ಆಗಿತ್ತು.

ಅಲ್ಲಿಯ ಚಾತುರ್ಮಾಸವು ಬಹಳ ಚೆನ್ನಾಗಿತ್ತು. ನಾನು ಪ್ರತಿದಿನ ಹುಡುಗಿಯರಿಗೆ ಕಾತಂತ್ರ ವ್ಯಾಕರಣವನ್ನು, ದ್ರವ್ಯಸಂಗ್ರಹ ಮುಂತಾದವುಗಳನ್ನು ಹೇಳಿಕೊಡುತ್ತಿದ್ದೆ. ಮಧ್ಯಾಹ್ನದ ಮೇಲೆ ವಿಶಾಲಮತಿಯವರು ಉಪದೇಶ ಕೊಡುತ್ತಿದ್ದರು. ನನ್ನ ದೀಕ್ಷೆ ತೆಗೆದುಕೊಳ್ಳುವ ಆತುರವನ್ನು ತಿಳಿದಿದ್ದ ವಿಶಾಲಮತಿಯು ಆರ್ಯಿಕೆ ಚೆರ್ಯೆಯನ್ನು ಈಗಿನಿಂದಲೇ ಅಭ್ಯಾಸಮಾಡು ಎನ್ನುತ್ತಿದ್ದರು. ನಾನು ಹಾಗೇ ಮಾಡಲು ಪ್ರಾರಂಭಿಸಿದೆ. ಇದರಿಂದ ಅವರು ನನಗೆ ವಂದನೆ ಮಾಡತೊಡಗಿದರು. ನಾನು ಇದನ್ನು ವಿರೋಧಿಸಿದೆ. ನನ್ನ ಹತ್ತಿರ ಪ್ರಭಾವತಿ ಎನ್ನುವ ಹುಡುಗಿ ಪಾಠ ಹೇಳಿಸಿಕೊಳ್ಳಲು ಬರುತ್ತಿದ್ದಳು. ಅವಳು ನಾನು ವಿವಾಹ ಮಾಡಿಕೊಳ್ಳುವುದಿಲ್ಲ ಎಂದಳು. ನಾನು ಏಕಾಂತದಲ್ಲಿ ಕರೆದು ಕೇಳಲು ಅವಳಿಗೆ ದೀಕ್ಷೆ ತೆಗೆದುಕೊಳ್ಳುವ ಉದ್ದೇಶದಿಂದಲ್ಲ. ಸ್ವತಂತ್ರವಾಗಿರಬೇಕೆಂಬ ಇಚ್ಛೆಯಿಂದ ಎಂದು ತಿಳಿಯಿತು. ಅದೇ ಊರಿನ ಕೇವಲಚಂದ್ರರ ಮಗಳು ಕಂಕುಬಾಯಿಕೂಡ ಬ್ರಹ್ಮಚರ್ಯ ವ್ರತವನ್ನು ಗ್ರಹಿಸಿದ್ದಳು. ಅವಳು ಆಯುರ್ವೇದವನ್ನು ಓದುತ್ತಿದ್ದಳು. ಅವಳ ಉದ್ದೇಶ ಕೂಡ ದೀಕ್ಷೆ ತೆಗೆದುಕೊಳ್ಳುವುದು ಆಗಿರಲಿಲ್ಲ. ಈ ಭಾವನೆಯ ಇನ್ನೂ ಕೆಲವು ಹುಡುಗಿಯರು ಇದ್ದರು. ನಾನು ಮದುವೆ ವಿರೋಧಿಸುತ್ತಿದ್ದ ಪ್ರಭಾವತಿಯನ್ನು ನಮ್ಮ ಜೊತೆ ಬರಲು ಮನ ಒಲಿಸಿದೆ. ಆ ಚಾತುರ್ಮಾಸದಲ್ಲಿ ಅಧಿಕಭಾದ್ರಪದ ಬಂದಿತ್ತು. ಭಾದ್ರಪದದ ಒಂದು ದಿನ ರಾತ್ರಿ ಕನಸಿನಲ್ಲಿ ಮಾನಸ್ತಂಭ ಉರುಳಿದ್ದನ್ನು ಕಂಡೆ. ಇದನ್ನು ವಿಶಾಲಮತಿಯಲ್ಲಿ ಹೇಳಿದಾಗ, ಅವರೂ ಕನಸಿನಲ್ಲಿ ಸೂರ್ಯ ಮುಳುಗುವುದನ್ನು ಕಂಡಿದ್ದರು. ಇಬ್ಬರ ಕನಸಿನ ಅರ್ಥ ಆಚಾರ್ಯರ ಅಂತ್ಯವನ್ನು ಸೂಚಿಸುತ್ತಿತ್ತು. ನಾವು ಆ ಸುದ್ದಿಗಾಗಿ ಕಾಯುತ್ತಿದ್ದಂತೆ ಸುದ್ದಿ ತಿಳಿಯಲಾಗಿ ಕುಂಥಲಗಿರಿಗೆ ಹೊರಡಲು ನಿಶ್ಚಯಿಸಿದೆವು. ಪ್ರಭಾವತಿಗೆ ಮತ್ತೆ ಬರುತ್ತೇವೆ ಎಂದು ಹೇಳಿ ಹೊರಟೆವು. ನಮ್ಮ ಜೊತೆ ವ್ರತಿಕ ಮಹಿಳೆ ಪೂಲಬಾಯಿ ಮತ್ತು ಸೌಭಾಗ್ಯವತಿ ಸೋನುಬಾಯಿ ಕೂಡ ಜೊತೆಯಲ್ಲಿ ಹೊರಟರು.

೧೩

ಕುಂಥಳಗಿರಿಗೆ ಬಂದು ಕ್ಷುಲ್ಲಿಕ ಅಜಿತಮತಿ, ಜಿನಮತಿಯ ಜೊತೆಯಲ್ಲಿ ನಿಂತೆವು. ಆಚಾರ್ಯರನ್ನು ದರ್ಶನ ಮಾಡಲು ಪ್ರತಿದಿನ ಲಕ್ಷಾಂತರ ಜನರು ಬರುತ್ತಿದ್ದರು. ಈ ಜನಸಂದಣಿಯನ್ನು ನೋಡಿದರು. ಆ ಕ್ಷಣವನ್ನು ನೋಡದೆ ಹೋಗಲು ಮನಸ್ಸು ಒಪ್ಪಲಿಲ್ಲ. ಅಲ್ಲಿಯೇ ನಿಂತೆವು. ಬೆಳಗ್ಗೆ ಮಧ್ಯಾಹ್ನ ಕುಂಥಳಗಿರಿಯ ಬೆಟ್ಟವನ್ನು ಹತ್ತಿ ಆಚಾರ್ಯರ ದರ್ಶನ ಮಾಡುತ್ತಿದ್ದೆವು. ಯಾವುದಾದರೂ ಮಂದಿರದಲ್ಲಿ ಕುಳಿತು ಧಾರ್ಮಿಕವನ್ನು ಅಭ್ಯಾಸ ಮಾಡುತ್ತಿದ್ದೆವು. ದೇವಸ್ಥಾನದಲ್ಲಿ ಪ್ರತಿದಿನ ನಡೆಯುತ್ತಿದ್ದ ಪಂಚಾಮೃತ ಅಭಿಷೇಕವನ್ನು ಕುಳಿತಂತೆ ನೋಡುತ್ತಿದ್ದರು. ದೇವಸ್ಥಾನದಲ್ಲಿ ಸ್ಥಾಪಿಸಿದ್ದ 4.5 ಅಡಿ ಎತ್ತರದ ಭಗವನ್ ದೇಶಭೂಷಣರ ಪ್ರತಿಮೆಗಳಿಗೂ

ಪಂಚಾಮೃತ ಅಭಿಷೇಕ ನಡೆಯುತ್ತಿತ್ತು. ಪ್ರತಿದಿನ ಅಸಂಖ್ಯಾತ ಜನರು ಬಂದು ಹೋಗುತ್ತಿದ್ದರು. ಅಲ್ಲಿಗೆ ಪಿಹಿತಾಸ್ರವ ಮುನಿಗಳು ಬಂದಿದ್ದರು. ಎಂಟು ಹತ್ತು ಕ್ಷುಲ್ಲಕರು ಇದ್ದರು. ಹತ್ತು ಹನ್ನೆರಡು ಕ್ಷುಲ್ಲಿಕೆಯರು ಇದ್ದರು. ಕೊಲ್ಹಾಪುರದ ಲಕ್ಷ್ಮಿ ಸೇನಾಭಟ್ಟಾರಕರಾದಿಯಾಗಿ ಹಲವು ಭಟ್ಟಾರಕರು ಸೇರಿದ್ದರು. ಸಾಧು ಸಾಧ್ವಿಯರು ಯಾವಾಗಲು ಮಂದಿರದಲ್ಲೇ ಇರುತ್ತಿದ್ದರು. ಆಚಾರ್ಯರು ಅಭಿಷೇಕವನ್ನು ಭಕ್ತಿಯಿಂದ ವೀಕ್ಷಿಸುತ್ತಿದ್ದರು. ಕಬ್ಬಿನರಸ, ಹಾಲು ಚಂದನವನ್ನು ಕೊಡಗಳಲ್ಲಿ ತುಂಬಿರುತ್ತಿದ್ದವು. ಕಾಶ್ಮೀರದ ಚಂದನದಿಂದ ಲೇಪದ ಚಂದನದಿಂದ ಅಭಿಷೇಕ ಮಾಡಿದ ಜಿನ ಪ್ರತಿಮೆಗಳ ಸೊಬಗು ನೋಡಲು ಬಹಳ ಆಕರ್ಷಣೀಯವಾಗಿ ಕಾಣುತ್ತಿತ್ತು. ಇದನ್ನು ಹರ್ಷದಿಂದ ಆಚಾರ್ಯರು ನೋಡುತ್ತಿದ್ದರು. ಇಂದಿಗೂ ನನಗೆ ಆ ದೃಶ್ಯ ಕಣ್ಣ ಮುಂದೆ ಬರುತ್ತಿರುತ್ತದೆ. ಆಚಾರ್ಯರು ಬಿಸಿನೀರನ್ನು ಮಾತ್ರ ತೆಗೆದು ಕೊಳ್ಳುತ್ತಿದ್ದವರು ಜಲವನ್ನು ಕೂಡ ತ್ಯಾಗ ಮಾಡಿದರು. ಅಲ್ಲೇ ಅವರ ಪ್ರಿಯಶಿಷ್ಯರಾದ ಭರಮಪ್ಪನಿಗೆ ಕ್ಷುಲ್ಲಕ ದೀಕ್ಷೆಯನ್ನು ಕೊಡಲಾಯಿತು. ಇದರ ವಿಧಿಗಳನ್ನು ಸುಮತಿ ಸಾಗರರು ನಡೆಸಿದರು. ದೀಕ್ಷಿತ ಮುನಿಗಳಿಗೆ ಸಿದ್ಧಸಾಗರರೆಂದು ಕರೆದರು. ಇವರು ಆಚಾರ್ಯರರ ಒಳ್ಳೆಯ ಸೇವೆಯನ್ನು ಮಾಡಿದ್ದರು. ಇವರಿಗೆ ಆಚಾರ್ಯರು ಹೇಳಿದರು ನೀನು ಒಳ್ಳೆಯ ಗುರುಸೇವೆಯನ್ನು ಮಾಡಿದ್ದೀಯ ಭೀಮನಂತೆ ಶಕ್ತಿಶಾಲಿಯಾಗಿರು ಎಂದು ಹರಸಿದರು. ಇವರಿಗೆ ಅಕ್ಷರ ಜ್ಞಾನ ಇರಲಿಲ್ಲ. ದೀಕ್ಷಿತರಾದ ನಂತರ ಓದು ಬರಹ ಕಲಿತು ಸ್ವಾಧ್ಯಾಯ ಮಾಡಲಾರಾಂಭಿಸಿದರು. ಇವರು ಮುಂದೆ ನಮಗೆ 1963 ರಲ್ಲಿ ಮತ್ತೆ ಸಿಕ್ಕಾಗ ಐಲಕರಾಗಿದ್ದರು.

ಒಂದು ದಿನ ಸಂಘಪತಿ ಗೇಂದನಮಲಜೀ, ಚಂದೂಲಾಲಜೀ ಸರಾಫ, ಭಟ್ಟಾರಕ ಲಕ್ಷ್ಮಿಸೇನಜೀ, ಬ್ರಹ್ಮಚಾರಿ ಸೂರಜಿಮಲ್ಲಜೀ ಮುಂತಾದ ಎಲ್ಲರೂ ಸೇರಿ ಪರಾಮರ್ಶಿಸಿದ ನಂತರ ಆಚಾರ್ಯರು ತಮ್ಮ ಶಿಷ್ಯ ವೀರಸಾಗರರನ್ನು ಆಚಾರ್ಯಪದವಿಗೆ ಘೋಷಿಸಿದರು. ಈ ವಿಷಯವನ್ನು ಪತ್ರ ಬರೆಸಿ, ಸೂರಜಮಲ್ಲರ ಹತ್ತಿರ ಕಳುಹಿಸಿ, ಕುಂಥಲಗಿರಿಯಲ್ಲಿ ಈ ವಿಷಯವನ್ನು ಘೋಷಿಸಲಾಯಿತು.

ಇಂದಿನಿಂದ ಆಚಾರ್ಯರ ಆಜ್ಞೆಯಂತೆ ಎಲ್ಲ ಮುನಿಗಳು ಆರ್ಯಿಕೆ ಮತ್ತು ಶ್ರಾವಕ, ಶ್ರಾವಿಕೆಯರು ಮುನಿಶ್ರೀ ವೀರಸಾಗರರನ್ನು ತಮ್ಮ ಆಚಾರ್ಯರೆಂದು ಸ್ವೀಕರಿಸಬೇಕು. ಇದು ಆಚಾರ್ಯರ ಆದೇಶವಾಗಿದೆ.

ಸಮಾಜಕ್ಕೆ ಒಂದು ಪತ್ರ

ಕುಂಥಲಗಿರಿ 24-08-55

ಸ್ವಸ್ತಿ ಶ್ರೀ ಸಕಲ ದಿಗಂಬರ ಜೈನ ಪಂಚಾಯತ ಜಯಪುರ ಧರ್ಮಸ್ನೇಹಪೂರ್ವಕ ಅಭಿವಂದನೆ ಹಾಗೂ ಇಂದಿನ ಬೆಳಗ್ಗೆ ಚಾರಿತ್ರ ಚಕ್ರವರ್ತಿ ೧೦೮ ಪರಮಪೂಜ್ಯ ಶ್ರೀ ಶಾಂತಿಸಾಗರ ಮುನೀ ಮಹರಾಜರು ಸಹಸ್ರಾರು ಶ್ರಾವಕ ಶ್ರಾವಕಿಯರ ಉಪಸ್ಥಿತಿಯಲ್ಲಿ ಶ್ರೀ 108ಮುನಿರಾಜ ವೀರಸಾಗರಜಿಯವರಿಗೆ ಆಚಾರ್ಯ ಪದವಿಯನ್ನು ಪ್ರದಾನ ಮಾಡುವುದಾಗಿ ಘೋಷಣೆ ಮಾಡಿದ್ದಾರೆ. ಆದ್ದರಿಂದ ಆಚಾರ್ಯ ಪದವಿ ಪ್ರದಾನದ ಘೋಷಣಾಪತ್ರವನ್ನು ಕಳುಹಿಸಿಕೊಡಲಾಗಿದೆ. ಅದನ್ನು ಚತುರ್ವಿಧ ಸಂಘದವರು ಒಟ್ಟಾಗಿ ಸ್ವೀಕರಿಸಬೇಕು. ಆಚಾರ್ಯರ ಈ

ಅನುಜ್ಞೆಯನ್ನು ಇಡೀ ಸಮಾಜವು ಗೌರವಿಸಿ ಇಂದಿನಿಂದ ವೀರಸಾಗರರನ್ನು ಆಚಾರ್ಯ ಪದದಲ್ಲಿ ಗೌರವಿಸಬೇಕೆಂದು ಅನುಜ್ಞೆಯನ್ನು ಹೊರಡಿಸಲಾಗಿದೆ.

ಗೇಂದನಮಲ್ ಬೊಂಬಾಯಿ
ಲಿ. ಚಂದೂಲಾಲ ಜ್ಯೋತಿಚಂದ್ರ
ಬಾರಾಮತಿ

ಆಚಾರ್ಯ ಪದವಿ ಪ್ರಧಾನ ಸಮಾರಂಭವನ್ನು ಭಾದ್ರಪದ ಕೃಷ್ಣ ಸಪ್ತಮಿ ಗುರುವಾರವೆಂದು ನಿಶ್ಚಯಿಸಿ ವಿಶಾಲ ಪ್ರಾಂಗಣದಲ್ಲಿ ನೆರೆದಿದ್ದ ಸಹಸ್ರಾರು ಶ್ರಾವಕ ಶ್ರಾವಕಿಯರ ಮಧ್ಯೆ ಶ್ರೀ ವೀರಸಾಗರಜೀ ಮಹಾರಾಜರು ಗುರುದೇವರು ಕೊಟ್ಟ ಆಚಾರ್ಯ ಪದವಿಯನ್ನು ಸ್ವೀಕರಿಸಿದರು. ಅಂದು ಪಂಡಿತ ಇಂದ್ರಲಾಲ ಶಾಸ್ತ್ರೀಜೀಯವರು ಗುರುದೇವರಿಂದ ಕಳುಹಿಸಿದ ಭಿನ್ನವತ್ತಳೆಯನ್ನು ಓದಿದರು.

ಸ್ವಸ್ತಿಶ್ರೀ ಚಾರಿತ್ರ ಚಕ್ರವರ್ತಿ ೧೦೮ ಆಚಾರ್ಯ ಶ್ರೀ ಶಾಂತಿಸಾಗರರ ಅಜ್ಞಾನುಸಾರ ಈ ಆಚಾರ್ಯ ಪದವಿಯ ಪತ್ರವನ್ನು ಬರೆಸಲಾಗಿದೆ.

ನಾವು ಪ್ರಥಮ ಭಾದ್ರಪದ ಕೃಷ್ಣಪಕ್ಷ (ಅಮಾವಾಸ್ಯೆ) ಹನ್ನೊಂದನೆಯ ಗುರುವಾರ ತಾ. 24-08-55ರಂದು ಸಲ್ಲೇಖನವನ್ನು ಸ್ವೀಕರಿಸಿದ್ದೇವೆ. ಆದ್ದರಿಂದ ದಿಗಂಬರ ಜೈನಧರ್ಮ ಮತ್ತು ಶ್ರೀ ಕುಂದಕುಂದಾಚಾರ್ಯ ಪರಂಪರಾಗತ ದಿಗಂಬರ ಜೈನ ಆಮ್ನಾಯದ ನಿರ್ದೋಷ ಹಾಗೂ ಅಖಂಡತೆಯ ಸಂರಕ್ಷಣ ಹಾಗೂ ಸಂವರ್ಧನಕ್ಕೋಸ್ಕರ ನಿರ್ಗ್ರಂಥ ಶ್ರೀ ವೀರಸಾಗರಜೀ ಮುನಿರಾಜರನ್ನು ಆಶೀರ್ವಾದಪೂರ್ವಕವಾಗಿ ಇಂದು ಪ್ರಥಮ ಭಾದ್ರಪದ ಶುಕ್ಲ ಸಪ್ತಮಿಯ ವಿಕ್ರಮ ಸಂವತ್ ಎರಡುಸಾವಿರದ ಹನ್ನೆರಡು ಬುಧವಾರದ ದಿನ ತ್ರಿಯೋಗ ಶುದ್ಧಿಪೂರ್ವಕವಾಗಿ ಸಂತೋಷದಿಂದ ಪ್ರದಾನ ಮಾಡುತ್ತೇವೆ.

ಆಚಾರ್ಯ ಮಹಾರಾಜರು ಪೂಜ್ಯ ಶ್ರೀ ವೀರಸಾಗರಜೀ ಮಹರಾಜರಿಗೆ ಈ ಆದೇಶವನ್ನು ಕೊಟ್ಟರು. ಈ ಪದವಿಯನ್ನು ದಿಗಂಬರ ಜೈನಧರ್ಮ ಹಾಗೂ ಚತುರ್ವಿಧ ಸಂಘವನ್ನು ಸಂರಕ್ಷಣೆ ಹಾಗೂ ಸಂವರ್ಧನೆ ಮಾಡಬೇಕೆನ್ನುವುದು ಮಹಾರಾಜರ ಆಜ್ಞೆಯಾಗಿದೆ. ಆಚಾರ್ಯರು ತಮಗೆ ಶುಭಾಶೀರ್ವಾದಗಳನ್ನು ಕಳುಹಿಸಿದ್ದಾರೆ.

ಇತಿ ವರ್ಧತಾಮ್ ಜಿನಶಾಸವಮ್

ಲೇಖಕರು	ಗೇಂದನಮಲ್ ಬೊಂಬಾಯಿ	ತ್ರಿಬಾರ ನಮೋಸ್ತು
ಲೇಖಕರು	ಚಂದೂಲಾಲ್ ಜ್ಯೋತಿಚಂದ್	ಬಾರಾಮತಿತ್ರಿಕರಣ ನಮೋಸ್ತು

ಆಚಾರ್ಯರ ಈ ಪದವಿ ಪ್ರಧಾನವಾದ ಪತ್ರವನ್ನು ಓದುತ್ತಲೇ ಶಿವಸಾಗರ ಮುನಿಗಳು ಎದ್ದು ಪೂಜ್ಯ ಆಚಾರ್ಯ ಶಾಂತಿಸಾಗರರಿಂದ ಕಳುಹಿಸಲ್ಪಟ್ಟಿದ್ದ ಪಿಂಛಿ ಹಾಗೂ ಕಮಂಡಲವನ್ನು ಪೂಜ್ಯ ವೀರಸಾಗರ ಮುನಿಗಳ ಕರಕಮಲಗಳಿಗೆ ಒಪ್ಪಿಸಿದರು. ಇಡೀ ಸಭೆಯು ವೀರಸಾಗರ ಮುನಿಗಳ ಜಯಕಾರವನ್ನು ಮಾಡಿತು. ಇದಕ್ಕಿಂತ ಮೊದಲು ಎಂದೂ ಯಾರೂ ತಮ್ಮನ್ನು ಆಚಾರ್ಯರೆಂದು ಸಂಬೋಧಿಸಲು ಅವರು ಒಪ್ಪಿರಲಿಲ್ಲ. 1955 ಸೆಪ್ಟೆಂಬರ್ 18ರಂದು ದ್ವಿತೀಯ ಭಾದ್ರಪದ ಶುದ್ಧ ರವಿವಾರದಂದು ಪ್ರಾತಃಕಾಲ 6 ಗಂಟೆ ನಲವತ್ತು ನಿಮಿಷಕ್ಕೆ ಆಚಾರ್ಯರು ಓಂ ಸಿದ್ಧಾಯ ನಮಃ ಎಂದು ಮಂತ್ರ ಉಚ್ಚಾರಿಸುತ್ತಲೇ ತಮ್ಮ ನಶ್ವರ ಶರೀರವನ್ನು ತ್ಯಜಿಸಿದರು. ಇದಕ್ಕೆ ಮೊದಲು ಭಗವಂತರ ಅಭಿಷೇಕವನ್ನು ನೋಡಿ ಪಾದಗಳಿಗೆ ತಲೆಬಾಗಿ ವಂದಿಸಿದ್ದರು. ಕೊಠಡಿಯ

ಬಾಗಿಲಿಗೆ ನಾನು ಮತ್ತು ವಿಶಾಲಮತಿ ಆಚಾರ್ಯರ ಮಂತ್ರೋಚ್ಚಾರಣೆಯ ಧ್ವನಿಯನ್ನು ಕಿವಿಗೊಟ್ಟು ಕೇಳುತ್ತಿದ್ದೆವು. ಶರೀರ ತ್ಯಜಿಸಿದ ಒಂದು ಗಂಟೆಯ ನಂತರ ಪಾರ್ಥಿವ ಶರೀರವನ್ನು ಹೊರಗಡೆ ತಂದು ಮಲಗಿಸಲಾಯಿತು. ಪದ್ಮಾಸನದಲ್ಲಿ ಕುಳಿತಿದ್ದ ಭಂಗಿಯು ನೋಡಿದವರಿಗೆ ಸಜೀವವಾಗಿಯೇ ಕಂಡು ಬರುತ್ತಿತ್ತು. ಅಲ್ಲಿಂದ ಮುನಿವರ್ಗದವರೆಲ್ಲ ಸೇರಿ ಸಿದ್ಧಶ್ರುತ, ಯೋಗ ಮತ್ತು ಆಚಾರ್ಯ ಭಕ್ತಿಯನ್ನು ಹೇಳಿ ಅಂತಿಮ ನಮನ ಸಲ್ಲಿಸಿದೆವು. ನಂತರ ಪಾಲಕಿಯಲ್ಲಿ ಅಂತಿಮ ಯಾತ್ರೆ ಹೊರಟಿತು. ಮಧ್ಯಾಹ್ನ ಪರ್ವತದ ಮೇಲೆ ಭಟ್ಟಾರಕ ಲಕ್ಷ್ಮಸೇನರು ನಿಷಧ್ಯಸ್ಥಾನವನ್ನು ಮಾಡಿಸಿದ್ದರು. ಅಲ್ಲಿ ಆಚಾರ್ಯರಿಗೆ ಪಂಚಾಮೃತ ಅಭಿಷೇಕ ಮುಂತಾದ ವಿಧಿಗಳನ್ನು ಸೋಲಾಪುರದ ಮಹಿಳೆಯು ವಹಿಸಿಕೊಂಡಿದ್ದರು. ಅವರು ಸಪರಿವಾರ ಬಂದು ವಿಧಿವತ್ತಾಗಿ ಅಭಿಷೇಕ ಮಾಡಿ, ಕೊಬ್ಬರಿ, ಚಂದನ, ತುಪ್ಪಗಳಿಂದ ನಶ್ವರ ಶರೀರವನ್ನು ಅಗ್ನಿಗೆ ಸಮರ್ಪಿಸಿದರು. ಶರೀರಕ್ಕೆ ವಿಧಿ ವಿಧಾನ ನಡೆಯುವಾಗಲೂ ಸರ್ಪರಾಜ ಬಂದಿದ್ದ. ಅಗ್ನಿಗೆ ಸಮರ್ಪಿಸಿದ ನಂತರ ಚಿತೆಗೆ ಪ್ರದಕ್ಷಿಣೆ ಬಂದಿದ್ದನ್ನು ಹಲವಾರು ಜನ ವೀಕ್ಷಿಸಿದರು.

ಮುನಿಗಳ ನಶ್ವರ ಶರೀರಕ್ಕೆ ಮಾಡಬೇಕಾದ ವಿಧಿವಿಧಾನಗಳನ್ನು ಆಚಾರಸಾರ, ಮೂಲಾಚಾರ ಅನಗಾರ ಧರ್ಮಾಮೃತ ಮುಂತಾದ ಗ್ರಂಥಗಳಲ್ಲಿ ಹೇಳಲಾಗಿದೆ. ಧವಲ ಗ್ರಂಥಗಳಲ್ಲಿ ಅಚೇತನ ಶರೀರಕ್ಕೆ ದ್ರವ್ಯ ಮಂಗಲವೆಂದು ಹೇಳಲಾಗಿದೆ.

ಅನಂತರ ಇಲ್ಲಿಯೇ ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಲಾಗಿತ್ತು. ಪ್ರಮುಖ ಸಾಧು, ಸಾಧ್ವೀ ಮತ್ತು ವಿದ್ವಾಂಸರು, ಶ್ರಾವಕರು, ಶೋಕಪೂರ್ಣ ಹೃದಯದಿಂದ ಆಚಾರ್ಯರಿಗೆ ತಮ್ಮ ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ನಂತರ ನಾವಿಬ್ಬರು ಆಚಾರ್ಯರ ಗುಣಗಳನ್ನು ಹೃದಯದಲ್ಲಿ ಚಿಂತಿಸುತ್ತಾ ಕುಂಥಲ ಗಿರಿಯಿಂದ ಮ್ಹಾಸವಾಡಕ್ಕೆ ಬಂದೆವು.

ವೈರಾಗ್ಯಪರಳಾದ ನಾನು ಅಕ್ಕಿಯ ಅನ್ನದ ಹೊರತಾಗಿ ಬಾಕಿ ಎಲ್ಲವನ್ನೂ ತ್ಯಜಿಸಿರುವುದಾಗಿ ವಿಶಾಲಮತಿಯೊಡನೆ ಹೇಳಿದೆ. ಮತ್ತು ನನ್ನ ಅಧ್ಯಯನದಲ್ಲಿ ತಲ್ಲೀನಳಾದೆ. ವಿಶಾಲಮತಿಜೀಯವರು ಚಾತುರ್ಮಾಸ ಮುಗಿಯುತ್ತಿದ್ದಂತೆ ವೀರಸಾಗರರಿಂದ ದೀಕ್ಷೆ ಕೊಡಿಸುವ ತಯಾರಿಯಲ್ಲಿ ತೊಡಗಿದ್ದರು.

ವಿಶಾಲಮತಿಯು ನನಗೆ ದಕ್ಷಿಣಕ್ಕೆ ಹೋಗಿ ಬಾಹುಬಲಿಯ ದರ್ಶನವನ್ನು ಮೊದಲೇ ಪಡೆದುಕೊಂಡು ಬರುವುದು ಉಚಿತವೆಂದು ತಿಳಿಸಿದರು. ಕುಮಾರಿ ಪ್ರಭಾವತಿಯ ವೈರಾಗ್ಯ ಭಾವನೆಯನ್ನು ಗಮನಿಸಿದ ವಿಶಾಲಮತಿಜೀಯವರು ಹೇಳಿದರು ನಿನಗೆ ನಿಜವಾಗಿ ವೈರಾಗ್ಯ ಭಾವನೆ ಬಂದಿದ್ದರೆ ನಿಮ್ಮ ಮನೆಯಲ್ಲಿಯೇ

---

೧. **ಅಥ ಪಂಚತ್ವ ಪ್ರಾಪ್ತ ಋಷ್ಯಾದೀನಾಂ ಕಾಯೇ ನಿಷೇಧಿಕಾಯಾಂ ಚ ಕ್ರಿಯಾ ವಿಶೇಷ ನಿರ್ಣಯ ಮಾರ್ಯಾಯುಗ್ಮೇನ ವಿಧತ್ತೇ:**

ವಪುಷಿಋಷೇಃ ಸ್ತೌತು ಋಷೀಂ ನಿಷೇಧಿಕಾಯಾಂ ಚ ಸಿದ್ಧ ಶಾಂತ್ಯಂತಃ ।
ಸಿದ್ಧಾಂತಿನಃ ಶ್ರುತಾದೀನ್ ವೃತ್ತಾದೀನುತರವ್ರತಿನಃ ॥ ೭೨ ॥
ದ್ವಿಯುಜಃ ಶ್ರುತವೃತ್ತಾದೀನ್ ಗಣಿನೋಂತಗುರೂನ್ ಶ್ರುತಾದಿಕಾನಪಿ ತಾನ್ ।
ಸಮಯವಿದೋಪಿ ಯಮಾದೀಂಸ್ತನುಕ್ಲಿಶೋ ದ್ವಯಮುಖಾನಪಿ ದ್ವಿಯುಜಃ ॥ ೭೩ ॥

ಅನ. ಧರ್ಮಾಮೃತ ಅಧ್ಯಾಯ - ೯

೨. **ನೋ ಆಗಮ ಮಂಗಲದ್ರವ್ಯ ಮೂರು ಪ್ರಕಾರ. ಭಾವಿ - ವರ್ತಮಾನ - ಅತೀತಶರೀರ ಎಂದು. ಅತೀತ ಶರೀರವೂ ಚ್ಯುತ, ಚ್ಯಾವಿತ, ತ್ಯಕ್ತ ಎಂದು ಮೂರುವಿಧ. ಪ್ರಾಯೋಪಗಮನ ಸನ್ಯಾಸ ಮರಣದಿಂದ ಶರೀರ ತ್ಯಾಗ ಮಾಡಿರುವ, ಇಂಗಿನೀ ಮರಣ ಸನ್ಯಾಸ ವಿಧಿಯಿಂದ ಶರೀರತ್ಯಾಗ ಮಾಡಿರುವ, ಭಕ್ತ ಪ್ರತ್ಯಾಖ್ಯಾನ ವಿಧಿಯಿಂದ ತ್ಯಜಿಸಿದ ಶರೀರ. ಅಂದರೆ ಸಮಾಧಿ ಮರಣದಿಂದ ತ್ಯಾಗ ಮಾಡಿದ ಶರೀರ ನೋ ಆಗಮ ದ್ರವ್ಯಮಂಗಲದಲ್ಲಿ ಸೇರಿಸಲಾಗಿದೆ. ಧವಲಾ : ಪು. ೧. ಪುಟ. 22-24.**

ಕೇಶವನ್ನು ಕತ್ತರಿಸಿಕೊಂಡು ಶ್ವೇತ ಸೀರೆಯನ್ನು ಧರಿಸಿ ಭಗವಂತನ ಆಶ್ರಯಕ್ಕೆ ಬಂದು ಕುಳಿತುಕೋ ಎಂದರು. ಏಕೆಂದರೆ ಮನೆಯಲ್ಲಿ ಅವಳ ಅಜ್ಜಿ ಮತ್ತು ಅತ್ತೆ ಇದ್ದರು. ಸಹೋದರ ಪೂನಾದಲ್ಲಿ ಇದ್ದು, ತಂದೆ ಮತ್ತು ತಾಯಿ ಚಿಕ್ಕಂದಿನಲ್ಲೇ ಸ್ವರ್ಗಸ್ಥರಾಗಿದ್ದರು.

ಆ ಪ್ರಭಾವತಿಯಾದರೋ ದೀಪಾವಳಿಯ ಹಿಂದಿನ ರಾತ್ರಿ ಅಂದರೆ ಚತುರ್ದಶಿಯ ಹಿಂದಿನ ದಿನ ತನ್ನ ಕೂದಲನ್ನೆಲ್ಲ ಕತ್ತರಿಸಿಕೊಂಡು ಸ್ನಾನ ಮಾಡಿ ಬಿಳಿ ಸೀರೆಯನ್ನು ಧರಿಸಿ ಮಂದಿರಕ್ಕೆ ಬಂದು ಜಿನಪ್ರತಿಮೆಯ ಮುಂದೆ ಕುಳಿತಿದ್ದಳು. ಅವಳ ಈ ನಿರ್ಧಾರ ನೋಡಿ ಅಜ್ಜಿ ಗಲಾಟೆ ಪ್ರಾರಂಭ ಮಾಡಿದ್ದರು. ಆದರೆ ಪ್ರಭಾವತಿಯೇ ಅವರನ್ನು ಸಮಾಧಾನಿಸಿದಳು. ಕೊನೆಗೆ ಅವರೇ ಪ್ರಭಾವತಿಯನ್ನು ಕರೆತಂದು ಈ ಕನ್ಯೆಯನ್ನು ನಿಮ್ಮ ಮಡಿಲಿಗೆ ಹಾಕುತ್ತಿದ್ದೇನೆ. ಅವಳನ್ನು ಒಳ್ಳೆಯ ಮಾರ್ಗದಲ್ಲಿ ನಡೆಸುವುದು ನಿಮ್ಮ ಜವಾಬ್ದಾರಿ ಎಂದರು. ಅದಕ್ಕೆ ವಿಶಾಲಮತಿ ಇವಳು ನಿಮ್ಮ ಹತ್ತರವೇ ಕಲಿಯಲಿ. ನೀವೇ ಇವಳಿಗೆ ಹತ್ತನೆಯ ಪ್ರತಿಮೆಯ ವ್ರತ ಕೊಡಿ ಎಂದರು. ಅದಕ್ಕೆ ನಾನು ನೀವೇ ದೊಡ್ಡವರು ನೀವೇ ವ್ರತ ಕೊಡಿ ಎಂದೆ. ಕೊನೆಗೆ ಅವರ ವಿಶೇಷ ಪ್ರೇರಣೆಯಿಂದ ನಾನೇ ಕುಮಾರಿ ಪ್ರಭಾವತಿಗೆ ಹತ್ತನೆಯ ಪ್ರತಿಮೆಯ ವ್ರತವನ್ನು ಕೊಟ್ಟೆ. ಇದೇ ಸಮಯದಲ್ಲಿ ಸೌಭಾಗ್ಯವತಿ ಸೋನುಬಾಯಿ ಚಾತುರ್ಮಾಸದಲ್ಲಿ ರಾತ್ರಿಯ ವೇಳೆ ನನ್ನ ಹತ್ತಿರವೇ ಮಲಗುತ್ತಿದ್ದರು. ಅವರ ಪತಿಯ ಅನುಮತಿ ಪಡೆದು ಳನೆಯ ಪ್ರತಿಮೆಯ ವ್ರತವನ್ನು ವಿಶಾಲಮತಿಯ ಅನುಜ್ಞೆ ಪಡೆದು ನಾನೇ ಕೊಟ್ಟೆ.

ಅದೇ ದಿನ ಚತುರ್ದಶಿಯ ಹಿಂದಿನ ರಾತ್ರಿಯೇ ನಾನು ವರ್ಷಾಯೋಗವನ್ನು ಮುಗಿಸಿದ್ದೆ. ಆದ್ದರಿಂದ ಅಷ್ಟಾಹ್ನೀಕದ ನಂತರ ಅಲ್ಲಿಂದ ಹೊರಟು ಬಾಂಬೆಗೆ ಹೊರಟೆ. ಅಕಲೂಜದ ಮಿಯಾಚಂದ್ ಘಡಕುಲೇಯವರು ಬಹಳ ಆಗ್ರಹ ಮಾಡಿದರು. ಅಮ್ಮ ಒಂದು ತಿಂಗಳು ನಿಲ್ಲಿರಿ. ನಿಮಗೆ ಶ್ರವಣಬೆಳಗೊಳದ ಯಾತ್ರೆ ಮಾಡಿಸುತ್ತೇನೆ. ಆದರೆ ನನಗೆ ಚಾತುರ್ಮಾಸ ಮುಗಿದ ಮೇಲೆ ಒಂದೊಂದು ದಿನ ಕಳೆಯುವುದು ಕಷ್ಟವಾಗಿತ್ತು. ಅವಸರದಿಂದ ಅವರ ಪ್ರಾರ್ಥನೆಯನ್ನು ತಳ್ಳಿಹಾಕಿದೆ. ಕ್ಷುಲ್ಲಕ ವಿಶಾಲಮತಿಜೀಯವರನ್ನು ಬಿಟ್ಟು ಹೊರಡಲು ನನ್ನ ಅಂತಃಕರಣದಲ್ಲಿ ದುಃಖಉಂಟಾಯಿತು. ನನಗೆ ದೀಕ್ಷೆ ತೆಗೆದು ಕೊಂಡಾಗಿನಿಂದ ವಾತ್ಸಲ್ಯ ತೋರಿಸಿದ ಅವರಿಂದ ಅನುಮತಿ ಪಡೆದು ಹೊರಟು ಬಾಂಬೆಗೆ ಬಂದೆ. ಪರಮಪೂಜ್ಯ ತಪಸ್ವೀ ಮುನಿಶ್ರೀ ನೇಮಿಸಾಗರ ಮಹಾರಾಜರನ್ನು ದರ್ಶನ ಮಾಡಿ ಅಲ್ಲಿಂದ ಜಯಪುರಕ್ಕೆ ಬಂದೆ. ನನ್ನ ಜೊತೆ ಸೋನುಬಾಯಿ ಮತ್ತು ಕುಮಾರಿ ಪ್ರಭಾವತಿ ಇದ್ದರು. ಇಲ್ಲಿ ಆಚಾರ್ಯ ವೀರಸಾಗರರನ್ನು ದರ್ಶನ ಮಾಡಿ ಅವರಲ್ಲಿ ಆರ್ಯಿಕಾ ದೀಕ್ಷೆಯನ್ನು ಬೇಡಿದೆ. ಅದಕ್ಕೆ ಆಚಾರ್ಯರು ಸ್ವಲ್ಪತಾಳು ನಮ್ಮ ಸಂಘದಲ್ಲಿ ಸ್ವಲ್ಪಕಾಲ ಇರು, ಇಲ್ಲಿಯವರ ಸ್ವಭಾವವನ್ನು ನೀನು ಅರ್ಥಮಾಡಿಕೋ. ನಿನ್ನಸ್ವಭಾವವನ್ನು ಇವರು ಅರ್ಥಮಾಡಿಕೊಳ್ಳಲಿ. ಅನಂತರ ದೀಕ್ಷಾ ಸಮಾರಂಭ ಇಟ್ಟುಕೊಳ್ಳೋಣ ಎಂದರು. ಇದನ್ನು ಕೇಳಿದ ನಾನು ಅಲ್ಲೇ ಆರ್ಯಿಕೆಯರ ಜೊತೆ ಪಾಟೋದಿ ಮಂದಿರದ ಒಂದು ಕೊಠಡಿಯಲ್ಲಿ ತಂಗಿದೆ.

೧೪

ಎರಡನೇ ದಿನ ಸಂಘದಲ್ಲಿ ಒಬ್ಬ ವೃದ್ಧ ಆರ್ಯಿಕೆಯವರು ನನ್ನ ಕೇಳಿದರು. ವೀರಮತಿ ನೀನು ಪ್ರತಿಕ್ರಮಣವನ್ನು ಮಾಡುತ್ತೀಯಾ? ಅದಕ್ಕೆ ನಾನು ಹೌದು ಮಾತಾಜಿ ಎರಡು ಸಮಯದಲ್ಲೂ ಮಾಡುತ್ತೇನೆ. ಆ ಸಮಯದಲ್ಲಿ ಸಂಘದಲ್ಲಿ ಬೆಳಗ್ಗಿನ ಸಮಯದಲ್ಲಿ ಮಾತ್ರ ಪ್ರತಿಕ್ರಮಣ ನಡೆಯುತ್ತಿತ್ತು. ಸಂಜೆಯಲ್ಲಿ ಇರಲಿಲ್ಲ. ಅದಕ್ಕೆ ಅವರು ನಾಳೆ ಏಳು ಗಂಟೆಗೆ ನನ್ನ ಹತ್ತಿರ ಬಂದು ಪ್ರತಿಕ್ರಮಣವನ್ನು ಹೇಳು ಎಂದರು.

ನಾನು ಬೆಳಗ್ಗೆ ಹೋಗಿ ಅವರಲ್ಲಿ ಪ್ರತಿಕ್ರಮಣವನ್ನು ಹೇಳಿದೆ. ಕೇಳಿದ ಅವರು ಬಹಳ ಪ್ರಸನ್ನರಾಗಿ ಆಶ್ಚರ್ಯ ಪಡತೊಡಗಿದರು. ಪುನಃ ಮೂರುದಿನಗಳ ನಂತರ ಅವರಲ್ಲಿ ಮಹಾರಾಜರು ಕೇಳಿದರು : ಕ್ಷುಲ್ಲಿಕಾ ವೀರಮತಿಯ ಚರ್ಯೆ ಹೇಗಿದೆ. ಅವರು ಸಂಘಕ್ಕೆ ಹೊಂದಿಕೊಂಡಿದ್ದಾರೋ ಇಲ್ಲವೋ ? ಅದಕ್ಕೆ ಮಾತಾಜಿಯವರು ಹೇಳಿದರು ಮಹಾರಾಜರೇ ಅವರಿಗೆ ಒಳ್ಳೆಯ ಜ್ಞಾನವಿದೆ. ಪ್ರತಿಕ್ರಮಣ, ಎಲ್ಲ ಭಕ್ತಿಗಳು ಅವರಿಗೂ ಕಂಠಪಾಠವಾಗಿದೆ. ಉಚ್ಚಾರಣೆ ಶುದ್ಧವಿದೆ. ಒಳ್ಳೆ ವಿನಯಶಾಲಿ. ಆದರೆ... ಆಚಾರ್ಯರು ಹೇಳಿದರು. ಆದರೆ ಏನು ಮಾತಾಜೀ ಹೇಳಿದರು ಅವರು ಕ್ಷುಲ್ಲಿಕೆಯ ಚರ್ಯೆಯನ್ನು ಈಗಾಗಲೇ ತ್ಯಜಿಸಿದ್ದಾರೆ. ಆರ್ಯಿಕೆಯರಂತೆ. ಕರಪಾತ್ರದಲ್ಲಿಯೇ ಆಹಾರ ತೆಗೆದುಕೊಳ್ಳತ್ತಾರೆ. ಆಹಾರದಲ್ಲಿ ಅಕ್ಕಿ ಪದಾರ್ಥ ಬಿಟ್ಟು ಬೇರೆಲ್ಲವನ್ನು ತ್ಯಾಗ ಮಾಡಿದ್ದಾರೆ. ಹೀಗೆ ತಾನೇ ಈ ಚರ್ಯೆಯನ್ನು ಅನುಸರಿಸುವುದು. ಮನಸ್ಸೇಚ್ಛೆಯನ್ನು ತೋರಿಸುತ್ತದೆ. ನಾನು ಹತ್ತಿರದಲ್ಲೇ ಕುಳಿತಿದ್ದವಳು ಮನದಲ್ಲೇ ಯೋಚಿಸತೊಡಗಿದೆ. ಭಗವಂತನೇ ಈಗ ಏನಾಗಬಹುದು ಒಳ್ಳೆ ಚರ್ಯೆಗಳನ್ನು ತಪ್ಪು ಅನ್ನುವ ರೀತಿಯಲ್ಲಿ ಹೇಳುತ್ತಿದ್ದಾರಲ್ಲ ಎಂದು. ಅಷ್ಟರಲ್ಲಿ ಆಚಾರ್ಯರು, ಬಹಳ ವಾತ್ಸಲ್ಯದಿಂದಲೇ ಹೇಳಿದರು. ಸಹೋದರಿ ಕ್ಷುಲ್ಲಿಕೆಯರು ಬಟ್ಟಲಿನಲ್ಲೇ ಆಹಾರ ತೆಗೆದುಕೊಳ್ಳಬೇಕು. ಮೇಲ್ಹೊದಿಕೆಯನ್ನು ಅವಶ್ಯವಾಗಿ ಉಪಯೋಗಿಸಬೇಕು ಎಂದರು.

ನಾನು ಕೈಗಳನ್ನು ಮುಗಿದು ವಿನಯದಿಂದ ಹೇಳಿದೆ. ಮಹಾರಾಜರೇ ಕೆಲವು ದಿನಗಳ ಮೊದಲೇ ನಾನು ಕ್ಷುಲ್ಲಿಕೆ ವಿಶಾಲಮತಿಯ ಹತ್ತಿರ ಆರ್ಯಿಕೆ ದೀಕ್ಷೆ ತೆಗೆದುಕೊಳ್ಳಲೇಬೇಕೆಂಬ ಭಾವನೆಯನ್ನು ವ್ಯಕ್ತಗೊಳಿಸಿದಾಗ ಅವರು ಇದರ ಸಲುವಾಗಿ ಚಾರಿತ್ರ ಚಕ್ರವರ್ತಿಗಳ ಹತ್ತಿರ ಪ್ರಾರ್ಥಿಸಿದರು. ಅದಕ್ಕೆ ಆಚಾರ್ಯರು ನೀನು ನೇಮಿಸಾಗರ ಅಥವಾ ವರ್ಧಮಾನಸಾಗರರು ಅಥವಾ ವೀರಸಾಗರರ ಹತ್ತಿರ ದೀಕ್ಷೆ ತೆಗೆದುಕೋ, ನಾನು ದೀಕ್ಷೆ ಕೊಡುವುದನ್ನು ತ್ಯಾಗಮಾಡಿದ್ದೇನೆ ಎಂದರು. ನಾನು ಅವರ ಸಲ್ಲೇಖನ ನೋಡುವ ಉತ್ಸಾಹದಿಂದ ಆ ಕಡೆಗೆ ಹೋದೆ. ಆದರೆ ಆರ್ಯಿಕಾ ದೀಕ್ಷೆ ತೆಗೆದುಕೊಳ್ಳಲೇ ಬೇಕೆಂಬ ಉತ್ಕಟತೆಯನ್ನು ನಾನು ತಾಳಲಾರದೆ ಇದ್ದಾಗ ವಿಶಾಲಮತಿಯು ನೀನು ಕರಪಾತ್ರದಲ್ಲೇ ಆಹಾರ ತೆಗೆದುಕೊಳ್ಳಲು ಹೇಳಿದರು. ಏಕೆಂದರೆ ವಸುನಂದಿ ಶ್ರಾವಕಾಚಾರ ಮತ್ತು ಚಾರಿತ್ರಸಾರದಲ್ಲಿ ಕ್ಷುಲ್ಲಿಕೆಯರು ಕರಪಾತ್ರೆದಲ್ಲಿ ಆಹಾರ ತೆಗೆದುಕೊಳ್ಳುವ ವಿಧಾನವನ್ನು ಹೇಳಿದ್ದಾರೆ. ಆದ್ದರಿಂದ ನಾನು ನನ್ನ ಗುರುಗಳಾದ ದೇಶಭೂಷಣರಿಂದ ಕೊಡಿಸಲ್ಪಟ್ಟ ಪಾತ್ರೆಯನ್ನು ತ್ಯಾಗ ಮಾಡಿ ಕರಪಾತ್ರೆಯಲ್ಲೆ ಆಹಾರ ತೆಗೆದುಕೊಳ್ಳತೊಡಗಿದೆ. ಅವರ ಸಲಹೆಯಂತೆ ದುಪಟ್ಟವನ್ನು ಬಿಟ್ಟೆ ಎಂದೆ. ಇದನ್ನು ಕೇಳಿದ ಅಲ್ಲೇ ಕುಳಿತಿದ್ದ ಒಂದಿಬ್ಬರು ಆರ್ಯಿಕೆಯರು ನಗತೊಡಗಿದರು. ಆದರೆ ಆಚಾರ್ಯರು ಗಂಭೀರ ಧ್ವನಿಯಲ್ಲಿಹೇಳಿದರು. ನೀನು ಮತ್ತೇ ಬಟ್ಟಲಿನಲ್ಲೇ ಆಹಾರ ತೆಗೆದುಕೊಳ್ಳಬೇಕು ಹಾಗೇ ದುಪ್ಪಟ್ಟವನ್ನು ಉಪಯೋಗಿಸಬೇಕು. ನಂತರವೇ ನಿನಗೆ ಆರ್ಯಿಕೆಯ ದೀಕ್ಷೆ ಸಿಗುವುದು ಎಂದರು. ಮಹರಾಜರು ಹೆಚ್ಚು ಮಾತಾನಾಡುತ್ತಿರಲಿಲ್ಲ. ಆರ್ಯಿಕೆಯರೇ ಹೇಳಿದರು ಮಹಾರಾಜ್‌ಜೀ ಇವರು ಅನ್ನವನ್ನು ಬಿಟ್ಟುಬಿಟ್ಟಿದ್ದಾರೆ. ಇದನ್ನು ಪಾಲಿಸುವುದು ಸಂಘದಲ್ಲಿ ಕಷ್ಟವಾಗುತ್ತದೆ. ಅದಕ್ಕೆ ಆಚಾರ್ಯರು ಕೇಳಿದರು. ಬಾಯಿ ನೀನು ಅನ್ನವನ್ನು ಏಕೆ ತ್ಯಾಗಮಾಡಿದ್ದೀಯ? ಅದಕ್ಕೆ ನಾನು ಉತ್ತರ ಹೇಳಲೇ ಬೇಕಾಯಿತು. ಕುಂಥಳಗಿರಿಯಲ್ಲಿ ಆಚಾರ್ಯರ ಸಲ್ಲೇಖನದ ನಂತರ ತ್ಯಾಗ ಭಾವನೆಯಿಂದ ಅನ್ನವನ್ನು ತ್ಯಜಿಸಿದ್ದೇನೆ ಆಚಾರ್ಯರು ಕೇಳಿದರು ಎಲ್ಲಿಯವರಗೆ . ಅದಕ್ಕೆ ನಾನು ಹೇಳಿದೆ, ಎರಡು ವರ್ಷಗಳವರೆಗೆ, ಇದನ್ನು ಕೇಳಿದ ಆಚಾರ್ಯರು ತುಸು ಕೋಪದಿಂದಲೇ ಹೇಳಿದರು ನಿನ್ನ ಈ ತ್ಯಾಗಗಳು ತಪ್ಪುಗಳು , ಇಷ್ಟು ದೊಡ್ಡ ಸಂಘವನ್ನು ನೋಡಿಕೊಳ್ಳುತ್ತಿರುವ ಶ್ರಾವಕರು ನಿನಗಾಗಿ ಹಣ್ಣು ಹಾಲಿನ ವ್ಯವಸ್ಥೆಯನ್ನು ಮಾಡುವುದು ಹೇಗೆ ಸಾಧ್ಯ. ನೀನು ಅಲ್ಪ ಹಣ್ಣು ಹಾಲಿನಿಂದ ಶರೀರ ಮತ್ತು ಸಂಯಮವನ್ನು ಹೇಗೆ ಕಾಪಾಡಿಕೊಳ್ಳುತ್ತಿಯ ಅನ್ನ ತ್ಯಾಗ ಮಾಡುವುದು ನನಗೆ ಇಷ್ಟವಾಗುವುದಿಲ್ಲ. ಇದು ಶ್ರಾವಕರಿಗೆ ಒಂದು ರೀತಿಯ

ತೊಂದರೆ ಕೊಟ್ಟಂತೆ ಆಗುವುದು. ನೋಡು ಗೋಧಿ ಮತ್ತು ಹಾಲನ್ನು ಸಾಧುಗಳು, ತ್ಯಾಗ ಮಾಡಬಾರದು. ಪ್ರತಿಯೊಬ್ಬ ಶ್ರಾವಕನಿಗೆ ಆಹಾರ ಕೊಡಲು ಕಷ್ಟ ಆಗಬಾರದು. ನೀನು ಮನಸ್ಸಿಗೆ ಬಂದಂತೆ ತ್ಯಾಗ ಮಾಡಬಾರದು. ನಿನ್ನ ತ್ಯಾಗವನ್ನು ಬಿಡಬೇಕು.

ನಾನು ಸುಮ್ಮನೆ ಇದ್ದು ಅಲ್ಲಿಂದ ನನ್ನ ಜಾಗಕ್ಕೆ ಬಂದೆ. ಇಡೀ ಸಂಘದಲ್ಲಿ ನನ್ನ ವಿಚಾರವನ್ನು ಎಲ್ಲರು ಮಾತಾಡಿಕೊಳ್ಳತೊಡಗಿದರು. ಬ್ರಹ್ಮಚಾರಿ ಸೂರಜಮಲ್ಲರು ನನ್ನ ಹತ್ತಿರ ಬಂದು ಸಮಾಧಾನಗೊಳಿಸ ತೊಡಗಿದರು. ಮಾತಾಜಿ ನಿಮ್ಮ ವಯಸ್ಸು ಇನ್ನು ಚಿಕ್ಕದು ಆಚಾರ್ಯರು ಹೇಳಿದಂತೆ, ಅವರ ಆಜ್ಞೆಯಂತೆ ನಡೆಯಿರಿ. ಆಗಲೇ ತಮಗೆ ಆರ್ಯಿಕೆಯ ದೀಕ್ಷೆ ಸಿಗುವುದು. ಗುರುಗಳ ಆಜ್ಞೆಯಂತೆ ಮಾಡಿಕೊಂಡ ತ್ಯಾಗವನ್ನು ಬಿಡುವುದರಿಂದ ದೋಷ ಉಂಟಾಗುವುದಿಲ್ಲ. ಇದಕ್ಕೆ ಗುರುಗಳೇ ಹೊಣೆಯಾಗುತ್ತಾರೆ. ಒಂದು ವೇಳೆ ಗುರುಗಳು ಅಗ್ನಿಯಲ್ಲಿ ಧುಮುಕು ಎಂದರೂ ಧುಮುಕಬೇಕು, ಇದಕ್ಕೆ ಗುರುಭಕ್ತಿ ಎನ್ನುವುದು. ಹೀಗೆ ಎಲ್ಲರು ತಿಳುವಳಿಕೆ ಹೇಳತೊಡಗಿದರು. ಆದರೆ ನಾನು ಕತ್ತು ಎತ್ತಲಾರದಾದೆ. ಅದೇ ಸಮಯಕ್ಕೆ ಜಯಪುರದ ಒಂದು ಮಂದಿರದಲ್ಲಿ ವಜ್ರಕೀರ್ತಿ ಮಹರಾಜರು ತಮ್ಮ ಸಂಘದೊಡನೆನೇ ಬಂದಿದ್ದರು. ಅವರು ಉಜ್ಜಂತಗಿರಿ ಯಾತ್ರೆಗೆ ಹೊರಡುವವರಿದ್ದರು. ಅವರು ಹೇಳಿದರು, ನೀನು ನನ್ನ ಜೊತೆ ಹೊರಡು ನಾನು ನಿನಗೆ ಆರ್ಯಿಕೆಯ ದೀಕ್ಷೆಯನ್ನು ಕೊಡುತ್ತೇನೆ ಎಂದರು. ನಾನು ಇವರ ಚರ್ಯೆಯನ್ನು ಬಾರೀಕದಲ್ಲಿ ನೋಡಿದ್ದೆ. ಇವರು ಶ್ರಾವಕರು ಧರಿಸುವ ಜನಿವಾರದ ಬಗ್ಗೆಯು ಏನೂ ಹೇಳುತ್ತಿರಲಿಲ್ಲ. ಅದು ನನಗೆ ಚುಚ್ಚುತ್ತಿತ್ತು. ನಾನು ಅವರಿಗೆ ಏನು ಹೇಳದೆ ವಿಚಾರ ಮಾಡುತ್ತೇನೆ ಎಂದು ಹೇಳಿಬಂದೆ.

ಸಂಘದಲ್ಲಿ ನಾನು ನಿಯಮವನ್ನು ಬಿಡುವ ವಿಷಯದಲ್ಲಿ ಊಹಾಪೋಹಗಳು ಉಂಟಾಗತೊಡಗಿತು. ಒಬ್ಬ ಆರ್ಯಿಕೆ ಆಚಾರ್ಯರಲ್ಲಿ ಹೇಳಿದರು. ಮಹಾರಾಜಜೀ ವೀರಮತಿಯ ಹತ್ತಿರ ಕುಮಾರಿ ಪ್ರಭಾವತಿ ಮತ್ತು ಸೌಭಾಗ್ಯವತಿ ಸೋನುಬಾಯಿ ಇಬ್ಬರು ಶಿಷ್ಯರುಗಳಿದ್ದಾರೆ. ಅವರಿಗೆ ಇವರೇ ಶಿಕ್ಷಣ ಕೊಡುತ್ತಿದ್ದಾರೆ. ಇದು ತಪ್ಪು ಅವರ ಶಿಷ್ಯರನ್ನು ಸಂಘದಲ್ಲಿ ದೊಡ್ಡ ಮಾತಾಜೀಯ ಹತ್ತಿರ ಬಿಡಲು ಹೇಳಿ ಎಂದರು. ಇನ್ನೊಬ್ಬ ಆರ್ಯಿಕೆಯು ಹೇಳಿದರು. ಇವರೇ ಬ್ರಹ್ಮಚಾರಿ ಪ್ರಭಾವತಿಗೆ ಹತ್ತನೆಯ ಪ್ರತಿಮೆಯ ವ್ರತವನ್ನು ಕೊಟ್ಟಿದ್ದಾರೆ. ಇದು ಮಾನ್ಯವಲ್ಲ ಅವರಿಗೆ ಆಚಾರ್ಯರಿಂದ ಮತ್ತೆ ಸಪ್ತಮ ವ್ರತವನ್ನು ಕೊಡಿಸಬೇಕು. ಹೀಗೆ ಕೆಲವರು ನನ್ನ ಎಲ್ಲ ವರ್ತನೆಯನ್ನು ತಪ್ಪೆಂದೇ ಭಾವಿಸತೊಡಗಿದರು. ಒಬ್ಬ ಆರ್ಯಿಕೆಯಂತು ನನ್ನನ್ನು ಅವಮಾನಿಸಿದರು ಆಗ ನಾನು ನಿರುಪಾಯಳಾಗಿ ಅಳತೊಡಗಿದೆ. ಆಗ ಕರುಣಾಮಯಿಯಾದ ಒಬ್ಬ ಮುನಿಗಳು ಸಮಾಧಾನ ಪಡಿಸತೊಡಗಿದರು. ಮಾತಾಜೀ ನಿನ್ನ ಧೈರ್ಯ ಹೊಗಳಬೇಕು. ನಿನಗೆ ಕಣ್ಣೀರು ಬರಬಾರದು ನಿನ್ನ ಸ್ಥಾನದಲ್ಲಿ ಬೇರೆ ಯಾರು ಇದ್ದರೂ ಗೊಂದಲವೇ ಆಗುತ್ತಿತ್ತು. ಆದರೆ ನೀನು ಸಹನಶೀಲಳಾಗಿದ್ದೀಯ. ಅದಕ್ಕೆ ನಾನು ಮಹಾರಾಜರೇ ನಾನು ಮನೆಯನ್ನು ಬಿಟ್ಟು ಬರುವಾಗ ಎದುರಿಸಿದ್ದ ಸಮಸ್ಯೆಯ ಮುಂದೆ ಇದು ಏನೂ ಅಲ್ಲ. ನನಗೆ ಈಗ ಆರ್ಯಿಕೆಯ ದೀಕ್ಷೆಯನ್ನು ಪಡೆಯಬೇಕೆಂಬುದೇ ನನ್ನ ಲಕ್ಷ್ಯವಾಗಿದೆ. ಯಾರು ಏನಾದರೂ ಮಾತಾಡಲಿ ಇದರ ಬಗ್ಗೆ ನಾನು ತಲೆಕೆಡೆಸಿಕೊಳ್ಳುವುದಿಲ್ಲ. ಆದರೆ ಈಗ ನನ್ನ ಮುಂದಿರುವ ಪ್ರಶ್ನೆ ತ್ಯಾಗ ಮಾಡಿರುವುದನ್ನು ಹೇಗೆ ಮತ್ತೇ ಸ್ವೀಕರಿಸಲಿ ಎನ್ನುವ ಬಗ್ಗೆ ಚಿಂತೆ ಮಾಡುತ್ತಿದ್ದೇನೆ ನನಗೆ ಬುದ್ಧಿಯೇ ಓಡುತ್ತಿಲ್ಲ.

ನನ್ನ ಹಾಗೇ ಆ ಮುನಿಗಳು ಸಹ ತ್ಯಾಗ ಮಾಡಿದ್ದನ್ನು ಸ್ವೀಕರಿಸಬಾರದು ಎನ್ನುವ ಪಕ್ಷದವರೇ ಆಗಿದ್ದರು. ಆದರೆ ಅವರು ಸಹ ಏನೂ ಮಾಡದವರಾಗಿದ್ದರು. ನಾನು ದೇಶಭೂಷಣರ ಜೊತೆ ಚಾತುರ್ಮಾಸ ಮಾಡಿದಾಗ ಜಯಪುರದ ಸೇಠ ರಾಮಚಂದ್ರ ಕೋಠಾರಿಯವರ ನನಗೆ ಮೊದಲೇ ಪರಿಚಯವಿತ್ತು. ಹಾಗೇ ಪಂಡಿತ ಇಂದ್ರಲಾಲ

ಶಾಸ್ತ್ರಿಯವರು ಪರಿಚಯವಿದ್ದರು. ಇವರಿಬ್ಬರು ಕೂಡ ನನಗೆ ಆಚಾರ್ಯರ ಮಾತಿನಂತೆ ನಡೆಯುವಂತೆಯೇ ಹೇಳತೊಡಗಿದರು. ಮಾತಾಜೀ ಇಷ್ಟು ದೊಡ್ಡ ಆಚಾರ್ಯರು ಹೇಳಿದಂತೆ ನೀವು ಮಾಡುವುದೇ ಒಳ್ಳೆಯದು ಎಂದು ಹೇಳಿ ಹಾಗೇ ಆಚಾರ್ಯರಲ್ಲಿ ವಿನಂತಿಸಿಕೊಳ್ಳತೊಡಗಿದರು. ಮಹಾರಾಜರೇ ವೀರಮತಿ ಬಹಳ ತೀಕ್ಷ್ಣಮತಿ. ಆಗಮ ವಿಷಯವನ್ನು ಆಳವಾಗಿ ಅಭ್ಯಾಸ ಮಾಡಿದ್ದಾರೆ. ಅವರ ಚಾರಿತ್ರವು ಬಹಳ ಶುದ್ಧವಿದೆ ತಾವು ದೀಕ್ಷೆ ದಯಪಾಲಿಸಿದರೆ ತಮ್ಮ ಸಂಘಕ್ಕೆ ಒಂದು ಭೂಷಣವಾದ ರತ್ನ ದೊರಕಿದಂತೆ ಆಗುತ್ತದೆ.

ಒಂದು ದಿನ ಆಚಾರ್ಯರು ಹೇಳಿದರು. ದೇಶ ಭೂಷಣರ ಶಿಷ್ಯಳಾಗಿರುವುದರಿಂದ ಅವರ ಅನುಮತಿ ಇಲ್ಲದೆ ನಾನು ಹೇಗೆ ದೀಕ್ಷೆ ಕೊಡಲು ಬರುತ್ತದೆ ಎಂದು. ಅದಕ್ಕೆ ನಾನು ಮಹರಾಜರೇ ಅವರು ಅನೇಕ ಸಲ ಹೇಳಿದ್ದರು. ವೀರಸಾಗರರ ಸಂಘದಲ್ಲೇ ಇದ್ದು ವ್ರತವನ್ನು ಸ್ವೀಕರಿಸಲು. ಏಕೆಂದರೆ ಇಲ್ಲಿ ಆರ್ಯಿಕೆಯರು ಇದ್ದಾರೆ. ಆಚಾರ್ಯರೇ ಈ ಅನುಮತಿಯನ್ನು ದಯಪಾಲಿಸಿದ್ದಾರೆ. ಅವರ ಆಜ್ಞೆಯಂತೆ ನಾನು ಇಲ್ಲಿಗೆ ಬಂದಿದ್ದೇನೆ. ಅಂತೂ ಕೊನೆಗೆ ನಾನು ದೇಶಭೂಷಣರಿಂದ ಅನುಮತಿಯನ್ನು ಪಡೆಯಲು ಪತ್ರವನ್ನು ಕಳುಹಿಸಬೇಕಾಯಿತು. ಇದರ ಮಧ್ಯೆ ಒಬ್ಬ ಮಾತಾಜೀ ನನ್ನ ಶಿಷ್ಯರ ಬಗ್ಗೆ ಲಘುವಾಗಿ ಮಾತಾಡತೊಡಗಿದರು. ಅವರಿಬ್ಬರನ್ನು ಯಾರ ಮನೆಯಿಂದ ಓಡಿಸಿಕೊಂಡು ಬಂದಿದ್ದಾರೋ ಅವರ ಪರಿಚಯ ಗೊತ್ತಿಲ್ಲದೆ ಸಂಘದಲ್ಲಿ ಇರಲು ಅವಕಾಶ ಕೊಡುವುದು ಸರಿ ಅಲ್ಲವೆಂದು. ಸೇಠ ರಾಮಚಂದ್ರರಿಂದ ಸೋನುಬಾಯಿಯವರ ಪತಿ ಲಾಲಚಂದ್ರರನ್ನು ಮತ್ತು ಮ್ಯಾಸವಾಡದ ಪ್ರಮುಖರಾದ ಸೇಠ ಕೇವಲ ಚಂದ್ರರಲ್ಲಿ ಬರೆಸಿದರು. ಅವರಿಬ್ಬರಿಂದಲೂ ಸಮಾಧಾನಕರವಾದ ಪತ್ರ ಬಂದಿದ್ದರಿಂದ ಆಚಾರ್ಯರಾದಿಯಾಗಿ ಎಲ್ಲರು ಸಮಾಧಾನಗೊಂಡರು ಆಚಾರ್ಯರಿಗೆ ಇಬ್ಬರ ಬಗ್ಗೆಯೂ ಮೊದಲ್ ಸಂಶಯವಿರಲಿಲ್ಲ.

ಆದರೂ ಆಚಾರ್ಯರು ತಮ್ಮ ನಿರ್ಧಾರದಲ್ಲಿ ಸಡಿಲತೆ ತೋರಲಿಲ್ಲ. ನೋಡು ಬಾಯಿಜೀ ನೀನು ನಿನ್ನ ಗುರುಗಳಿಂದ ಕೊಡಿಸಲ್ಪಟ್ಟ ಬಟ್ಟಲನ್ನು ವಿಶಾಲಮತಿಯ ಮಾತಿನಿಂದ ತ್ಯಾಗಮಾಡಿದ್ದೀಯ. ಆದರೆ ಅದನ್ನು ನಿನ್ನ ಬಳಿಯೇ ಇಟ್ಟುಕೊಳ್ಳಬೇಕು. ಆಹಾರಕ್ಕೆ ಹೋಗುವ ಶ್ರಾವಕರ ಮನೆಯ ಬಟ್ಟಲಲ್ಲಿಯೇ ಆಹಾರ ಸ್ವೀಕರಿಸಿ ಅಲ್ಲಿಯೇ ಬಿಟ್ಟು ಬಾ ಮೇಲೊದಿಕೆಯನ್ನು ಆಹಾರದ ಸಮಯದಲ್ಲಿ ಧರಿಸಿರಬೇಕು. ಇವು ಆರ್ಯಿಕೆ ಮತ್ತು ಕ್ಷುಲ್ಲಿಕೆಯರನ್ನು ಗುರುತಿಸುವ ಚಿಹ್ನೆಯಾಗಿದೆ. ನೀನು ಅಕ್ಕಿ ತ್ಯಾಗ ಮಾಡಿದ್ದೇನೆ ಎಂದು ಪ್ರಕಟಿಸಿ ಬಿಟ್ಟಿದ್ದೀಯ ಅದರ ಗಂಜಿ ತೆಗೆದುಕೊಳ್ಳುತ್ತೀಯಲ್ಲ. ಹೋಗಲಿ ಬಿಡು ಅಕ್ಕಿ ತೆಗೆದುಕೊಳ್ಳದಿದ್ದರೂ ಪರವಾಗಿಲ್ಲ ಎಂದರು ಹಾಗೂ ಒಂದು ಉದಾಹರಣೆಯನ್ನು ಹೇಳಿದರು. ಒಮ್ಮೆ ಒಬ್ಬ ಸಜ್ಜನರು ಬಂದರು. ಅವರು ಒಳ್ಳೆ ಸಜ್ಜನರಾಗಿದ್ದರು. ಸ್ವಾಧ್ಯಾಯ ಪ್ರೇಮಿ ವಿದ್ವಾಂಸರು ಆಗಿದ್ದರು. ಅವರು ನನ್ನಲ್ಲಿ ಏಳನೇ ಪ್ರತಿಮೆಯನ್ನೂ ತೆಗೆದುಕೊಳ್ಳಬೇಕೆಂದು ಬಯಸುತ್ತಿದ್ದರು. ದಿನವನ್ನು ಗೊತ್ತು ಮಾಡಲಾಯಿತು. ಆದರೆ ಅವರು ಬಂದು ನನ್ನ ಹತ್ತಿರ ಕೇಳಿಕೊಂಡರು, ಮಹಾರಾಜಜೀ ಅವರಿಂದ ವ್ರತ ತೆಗೆದುಕೊಳ್ಳುವ ಮೊದಲು ನಿಮ್ಮ ಹತ್ತಿರ ಏಕಾಂತದಲ್ಲಿ ಮಾತನಾಡಬೇಕೆಂದರು. ನನಗೆ ಅವರು ಏನು ಕೇಳಬಹುದು ಎಂದು ತಿಳಿಯಿತು. ನಾನು ಕೇಳಿದೆ ಪಂಡಿತರೇ ತಾವು ನನ್ನನ್ನು ಗುರು ಮಾಡಬಯಸುತ್ತೀರೋ ಅಥವಾ ನಮ್ಮ ಗುರುಗಳಾಗ ಬಯಸುತ್ತೀರೋ ? ಪಂಡಿತರಿಗೆ ನನ್ನ ಪ್ರಶ್ನೆಯ ಇಂಗಿತ ಅರ್ಥವಾಗಿ ಬೇರೆ ಯಾವುದೇ ನಿರ್ಬಂಧ ನಡೆಯುವುದಿಲ್ಲವೆಂದು ತಿಳಿದು ನನ್ನ ಹತ್ತಿರ ವ್ರತವನ್ನು ತೆಗೆದುಕೊಳ್ಳಲಿಲ್ಲ.

ನನಗೂ ಇಂತಹ ಶಿಷ್ಯರು ಬೇಕಾಗಿಲ್ಲ. ಆ ಪಂಡಿತರು ಪಂಥವಾದಿಗಳ ನಿಬಂಧನೆಗಾಗಿ ಬಂದಿದ್ದರು. ಅವರು ನಮ್ಮ ಅಮ್ನಾಯದಂದೆ ನಡೆಯದೆ ತೇರಪಂಥಿಯವರ ಸಂಪ್ರದಾಯದಂತೆ ನಡೆಯಲು

ಬಯಸುವವರಾಗಿದ್ದರು ಎಂಬುದು ಅವರ ಮಾತಿನಿಂದ ಸ್ಪಷ್ಟವಾಗಿತ್ತು. ಆ ಶಿಷ್ಯ ಅಲ್ಲೆ ಈ ಗುರು ಇಲ್ಲೆ ಆಯಿತು. ಇದೆಲ್ಲವನ್ನು ಕೇಳಿಯೂ ನಾನು ಸುಮ್ಮನೆ ಇದ್ದೆ. ಮತ್ತೆ ದೇವರ ಮುಂದೆ ಕುಳಿತು ಯೋಚಿಸತೊಡಗಿದೆ. ದೇವರೇ ಈಗ ನಾನೇನು ಮಾಡಲಿ. ಇಷ್ಟು ದೊಡ್ಡ ಸಂಘದ ಆಚಾರ್ಯರಿಂದ ವ್ರತ ತೆಗೆದುಕೊಳ್ಳುವುದು ಗೌರವದ ವಿಷಯವೇ ಆದರೆಅವರ ನಿಬಂಧನೆಯು ಕಷ್ಟವಿತ್ತು. ಭಗವಂತನ ಪ್ರತಿಮೆಯನ್ನು ನೋಡುತ್ತಾ ಈಗೇನು ಮಾಡುವುದು ನೀವೆ ಮಾರ್ಗವನ್ನು ತೋರಿಸಿ. ನನ್ನ ಮನಸ್ಸಿಗೂ ಸಮಾಧಾನವಾಗುವಂತಹ, ಆಗಮದ ರಕ್ಷಣೆಯು ಆಗುವಂತಹ ಮಾರ್ಗ ಯಾವುದೆಂದು. ಕೊನೆಗೆ ನನ್ನ ಅಂತರಾತ್ಮ ಒಪ್ಪಿಕೊಳ್ಳತೊಡಗಿತು ಗುರುಗಳು ಹೇಳಿದಂತೆ ನಡೆಯುವುದೆಂದು ಹತ್ತು ಹದಿನೈದು ದಿನದಿಂದ ನಡೆದ ಜಿಜ್ಞಾಸೆಯಿಂದ ಒಂದು ತೀರ್ಮಾನಕ್ಕೆ ಬಂದು ಗುಣದೋಷವೆನಿಸಿದ್ದರೂ ಎಲ್ಲವನ್ನು ಗುರುಗಳ ಮೇಲೆ ಹಾಕಿ ಗುರುವಿಗೆ ಶರಣೆಂದೆ.

ಹೀಗೆ ನಿರ್ಧಾರ ಕೈಕೊಂಡು ಸ್ವಾಧ್ಯಾಯಕ್ಕಾಗಿ ಕುಳಿತಿದ್ದೆ. ಅಷ್ಟರಲ್ಲಿ ಇಂದ್ರಲಾಲ ಶಾಸ್ತ್ರಿಯವರು ಅಲ್ಲಿಗೆ ಬಂದರು. ಅವರಲ್ಲಿಯೂ ವಿಷಯ ಪ್ರಸ್ತಾಪಿಸುತ್ತಾ ಹೇಳಿದೆ ಸ್ವಯಂ ಕೈಕೊಂಡ ನಿರ್ಧಾರಗಳನ್ನು ಗುರುವಿನ ಆಜ್ಞೆಯಂತೆ ಬಿಡಬೇಕಾದುದಕ್ಕೆ ಪ್ರಮಾಣವನ್ನು ತೋರಿಸಿ ಎಂದೆ. ಪಂಡಿತರು ಭಗವತೀ ಆರಾಧನೆಯ ಟೀಕೆಯಲ್ಲಿ ಬಂದಿರುವ ಅಸತ್ಯಮೃಷಾ ಭಾಷೆಯ ಪ್ರಕರಣವನ್ನು ತೆಗೆದು ತೋರಿಸುತ್ತಾ ಹೇಳಿದರು. ಪಚ್ಚಕ್ಖಾಣೇ ನಾಮ ಕೇನಚಿ ದ್ ಗುರುಮನನುಜ್ಞಾಪ್ಯ ಇದಂ ಕ್ಷೀರಾದಿಕಂ ಇಯಂತಂ ಕಾಲಂ ಮಯಾ ಪತ್ಯಾಖ್ಯಾನಂ ಇತ್ಯುಕ್ತಂ ಕಾರ್ಯಾಂತರ ಮುದ್ದಿಶ್ಯ ತತ್ಕುರ್ವಿತ್ಯುದಿತಂ ಗುರುಣಾ ಪ್ರತ್ಯಾಖ್ಯಾನಾವಧಿ ಕಾಲೋ ನ ಪೂರ್ಣ ಇತಿ ನೈ ಕಾಂತತಃ ಸತ್ಯತಾ ಗುರುವಚನಾತ್ಪ್ರವೃತ್ತೋ ನ ದೋಷಾಯೇತಿ ಮೃಷೈಕಾಂತಃ ॥

ಪ್ರತ್ಯಾಖ್ಯಾನ ಎಂಬ ಹೆಸರಿನ ಅನುಭಯ ಭಾಷೆಯ ಲಕ್ಷಣವನ್ನು ಹೇಳುತ್ತಾ ಹೇಳುತ್ತಾರೆ. ಯಾರೇ ಆಗಲಿ ಗುರುವಿನ ಆಜ್ಞೆಯಿಲ್ಲದೆ ಹಾಲು, ಮುಂತಾದ ವಸ್ತುಗಳಲ್ಲಿ ಕೆಲವು ದಿನಗಳವರೆಗೆ ತ್ಯಾಗ ಮಾಡುವುದನ್ನು ಪ್ರತ್ಯಾಖ್ಯಾನ ಎನ್ನಲಾಗುತ್ತದೆ. ಆದರೆ ಅನ್ಯ ಕಾರ್ಯ ನಿಮಿತ್ತ ಗುರುಗಳು ಮತ್ತೆ ಗ್ರಹಣ ಮಾಡು ಎಂದು ಹೇಳಬಹುದು. ಆಗ ತ್ಯಾಗ ಮಾಡಿದ್ದ ಅವಧಿ ಮುಗಿಯದೆ ಇದ್ದರು ಆ ಮಾತು ಏಕಾಂತದ ಸತ್ಯ ವಲ್ಲ. ಶಿಷ್ಯರು ಗುರುಗಳ ಆಜ್ಞೆಯಿಂದ ತ್ಯಾಗ ಮಾಡಿದ್ದ ವಸ್ತುಗಳನ್ನು ಪರಿಗ್ರಹಿಸುವ ಪ್ರಸಂಗಗಳು ಇವೆ. ಆದ್ದರಿಂದ ಇದು ದೋಷವಲ್ಲವಾದ್ದರಿಂದ ಏಕಾಂತ ಸುಳ್ಳು ಅಲ್ಲವಾಗುತ್ತದೆ.

ಇಲ್ಲಿಯವರೆಗೆ ಅನುಭಯ ಭಾಷೆಯ ಪ್ರತ್ಯಾಖ್ಯಾನಿ ಲಕ್ಷಣದಿಂದ ತಿಳಿಯುವುದು ಏನೆಂದರೆ ಕೈಗೊಂಡ ತ್ಯಾಗದ ಅವಧಿ ಪೂರ್ಣಗೊಳ್ಳುವ ಮೊದಲೇ ಗುರುವಿನ ಆಜ್ಞೆಯಿಲ್ಲದೆ ಶಿಷ್ಯ ತ್ಯಾಗಮಾಡಿದ್ದ ವಸ್ತುವನ್ನು ತೆಗೆದುಕೊಳ್ಳಬಹುದು. ಅದು ದೋಷವಲ್ಲ. ಇದನ್ನು ತಿಳಿದ ಮೇಲೆ ನನ್ನ ಮನಸ್ಸು ಹಗುರವಾಯಿತು. ನಾನೇ ಗುರಗಳ ಹತ್ತಿರ ಹೋಗಿ ಆಜ್ಞೆಯನ್ನು ಪಾಲಿಸುವುದಾಗಿ ಹೇಳಿದೆ. ಆಚಾರ್ಯರ ಆಜ್ಞೆಯಂತೆ ಒಬ್ಬ ಆರ್ಯಿಕೆಯು ನನಗೆ ಹೊಸದಾದ ಒಂದು ದುಪಟ್ಟಾವನ್ನು ಹೇಳಿ ಕೊಡಿಸಿದರು. ನಾನು ಅದನ್ನು ಒಗೆದು ಒಣ ಹಾಕಿದೆ.

ಮಾರನೆಯ ದಿನ ಅದನ್ನು ಹೊದೆದುಕೊಂಡೇ ಆಹಾರಕ್ಕೆ ಹೊರಟೆ. ರಾಮಚಂದ್ರ ಸೇಠಿಯವರು ನನಗೆ ಒಂದು ಬಟ್ಟಲು ಕೊಡಿಸಿದರು. ಅದರಲ್ಲೇ ಅಕ್ಕಿಯ ಅನ್ನವನ್ನು ಆಹಾರದಲ್ಲಿ ಸ್ವೀಕರಿಸಿದೆ. ಬಟ್ಟಲನ್ನು ಅಲ್ಲೇ ಬಿಟ್ಟುಬಂದೆ ನಂತರ ಗುರುಗಳಿಗೆ ಎಲ್ಲ ಘಟನೆಯನ್ನು ಅರುಹಿದೆ.

ಆಚಾರ್ಯರು ರಾಮಚಂದ್ರರಲ್ಲಿ ವಿಚಾರಿಸಿದರಂತೆ ರಾಮಚಂದ್ರರೇ ಇವರು ಹೇಗೆ ಆಹಾರ ತೆಗೆದುಕೊಳ್ಳಲು ಒಪ್ಪಿಕೊಂಡರು ಎಂದು ಅದಕ್ಕೆ ಅವರು ಹೌದು ಮಹರಾಜರೇ ಇಂತಹ ಪಾತ್ರ ದೊರಕುವುದು ಬಹಳ ಕಷ್ಟ

ಆದರೂ ವ್ರತ ಹಿಡಿಯಲು ಬೇರೆಯವರಿಗೆ ಪ್ರೇರಣೆಯನ್ನು ಕೊಡುತ್ತೀರ ಆದರೆ ಇವರಾಗಿಯು ನಮ್ಮಲ್ಲಿ ದೀಕ್ಷೆ ತೆಗೆದುಕೊಳ್ಳಲು ಕೇಳುತ್ತಿದ್ದರು. ನೀವೇ ಮುಂದೆ ಹಾಕುತ್ತೀದ್ದೀರಿ ಎಂದರಂತೆ. ಇದನ್ನು ಕೇಳಿದ ಆಚಾರ್ಯರು ಮುಗಳ್ನಕ್ಕರು. ಅವರ ಪ್ರಸನ್ನತೆಯನ್ನು ಕಂಡು ನನಗೆ ಕೃತಕೃತ್ಯಳಾದ ಅನುಭವವಾಯಿತು. ದೀಕ್ಷೆ ಸನಿಹದಲ್ಲೇ ಇದೆ ಎನ್ನುವ ಭರವಸೆ ಉಂಟಾಗತೊಡಗಿತು. ಆದರೆ ಆಚಾರ್ಯರ ಬಯಕೆಯಂತೆ ನಾನು ಇನ್ನು ಆರು ತಿಂಗಳು ಸಂಘದಲ್ಲೇ ಇರಬೇಕಾಗಿ ಬಂತು. ಗುರುಗಳ ಮಾತಿನಂತೆ ಸಂಘದ ಎಲ್ಲ ಕೆಲಸಗಳನ್ನು ಯಥಾಕ್ರಮ ಮಾಡಿಕೊಳ್ಳುತ್ತಿದೆ. ಆದರೂ ದೀಕ್ಷೆ ತೆಗೆದು ಕೊಳ್ಳಬೇಕೆಂಬ ಮನದ ದುಗುಡ ಹೆಚ್ಚಾಗುತ್ತಲೇ ಇತ್ತು. ನಾನು ಯೋಚಿಸತೊಡಗಿದೆ. ಅಯ್ಯಾ, ನಾನು ಅವಸರದಿಂದ ಕ್ಷುಲ್ಲಿಕೆ ವಿಶಾಲಮತಿಜೀಯನ್ನು ಬಿಟ್ಟು ಬಂದೆ. ಶ್ರವಣಬೆಳಗೊಳಕ್ಕೆ ಹೋಗುವುದನ್ನು ಬಿಟ್ಟುಬಂದೆ. ಇಲ್ಲಿ ಈಗ ಡಿಸಂಬರ್ ಕಳೆಯಿತು. 1956 ಜನವರಿ ಫೆಬ್ರವರಿ ಕಳೆದು ಹೋಗುತ್ತಿದೆಯಲ್ಲ.

ಉತಾವಲ ಸೋ ಬಾವಲಾ, ಋತು ಆಯೇ ಫಲ ಹೋಯ, ಈ ಸೂಕ್ತಿಯಂತೆ ಯಾವಾಗ ಯೋಗ ಬರುತ್ತದೋ ಆಗಲೇ ದೀಕ್ಷೆ ಸಿಗುವುದು. ಆಚಾರ್ಯರು ಸಂಘ ಸಹಿತವಾಗಿ ಜಯಪುರದಿಂದ ವಿಹಾರ ಮಾಡಿದರು. ಸಂಘ ಮಾದೋರಾಜಪುರಕ್ಕೆ ಬಂದಿತು.

೧೫

ಆಚಾರ್ಯರಲ್ಲಿ ನಾನು ಮತ್ತೆ ದೀಕ್ಷೆಗಾಗಿ ಪ್ರಾರ್ಥಿಸಿದೆ ಹೇ ಗುರುದೇವರೇ ನನಗೆ ಮಹಾವೀರ ಜಯಂತಿ ದಿನವಾದರೂ ಆರ್ಯಿಕೆ ದೀಕ್ಷೆಯನ್ನು ಕೊಡಿರಿ. ಮಹರಾಜರು ಸಾಧುಗಳ ಜೊತೆ ಪರಾಮರ್ಶಿಸಿದರು. ಸಾಧುಗಳೆಲ್ಲರು ದೀಕ್ಷೆ ಕೊಡಿಸಲು ಸಿದ್ಧರಿದ್ದರಿಂದ ಮಹರಾಜರು ಭ್ರ. ಸೂರಜಮಲ್ಲರಿಗೆ ದೀಕ್ಷೆಗಾಗಿ ಮುಹೂರ್ತವನ್ನು ನೋಡಿ ವೈಶಾಖಿವದೀ ದ್ವಿತೀಯದಲ್ಲಿ ಉತ್ತಮ ಮೂಹೂರ್ತವಿದೆ ಎಂದು ಹೇಳಿದರು. ಆಚಾರ್ಯರು ದೀಕ್ಷೆಕೊಡುವ ಘೋಷಣೆಯನ್ನು ಮಾಡಿದರು. ಸಮಾಜದಲ್ಲಿ ಸಂತೋಷದ ಅಲೆಎದ್ದಿತು. ಆರ್ಯಿಕೆಯರು ತುಂಬ ಪ್ರೀತಿಯಿಂದಲೇ ಪ್ರಾರಂಭಿಕ ಉತ್ಸವಗಳನ್ನು ಮಾಡಿದರು.

ಆಚಾರ್ಯರು ಪ್ರಭಾವತಿಗೆ ಹೇಳಿದರು. ನೀನು ಹತ್ತನೆಯ ಪ್ರತಿಮೆಯವಳಾದರೂ. ಆಹಾರವನ್ನು ಕೊಡಬಹುದು, ಪೂಜೆ ಮಾಡಬಹುದು, ಆದ್ದರಿಂದ ನೀನು ಇಚ್ಛಾನುಸಾರ ದಾನ-ಪೂಜೆಯನ್ನು ಮಾಡು ಮತ್ತೆ ನಿನಗೆ ಜೀವನದಲ್ಲಿ ದಾನ ಪೂಜೆ ಮಾಡುವ ಅವಕಾಶ ಸಿಕ್ಕಲಾರದು ಎಂದರು.

ಅದಾಗ್ಯೂ ಪ್ರಭಾವತಿಯ ಜೀವನದಲ್ಲಿ ಪ್ರತಿಯೊಂದು ವಿಷಯದಲ್ಲೂ ಉಪೇಕ್ಷಿತ ಭಾವನೆಯೇ ಕಂಡು ಬರುತ್ತಿತ್ತು. ಯಾರೋ ಅವಳನ್ನು ಕೇಳಿದರು ನೀನು ಏತಕ್ಕೆ ದೀಕ್ಷೆಯನ್ನು ತೆಗೆದುಕೊಂಡೆ ಎಂದು ಅದಕ್ಕೆ ಅವಳು ಅಮ್ಮ ಹೇಳಿದಂತೆಯೇ ನಾನು ಮಾಡುತ್ತೇನೆ ಎಂದಳು.

ಆರ್ಯಿಕೆ ವೀರಮತಿಜೀ ಮತ್ತು ಸುಮತಿ ಮಾತಾಜೀಯವರ ಪ್ರೇರಣೆಯಂತೆ ಅವಳು ಬೇರೆ ಬ್ರಹ್ಮಚಾರಿಣೀಯವರ ಜೊತೆ ಸೇರಿ ಪೂಜಾದ್ರವ್ಯಗಳನ್ನು ತೆಗೆದುಕೊಂಡು ಹೋಗಿ ಭಗವಂತರಿಗೆ ಪೂಜೆ ಮಾಡುತ್ತಿದ್ದಳು. ಯಾರು ಕಮಂಡಲವನ್ನು ತೆಗೆದುಕೊಂಡು ಹೋಗಿ ಆಹಾರದ ವ್ಯವಸ್ಥೆ ಮಾಡುತ್ತಾರೋ ಅಲ್ಲಿ ಹೋಗಿ ಸಾಧು ಸಾಧ್ವಿಯವರಿಗೆ ಆಹಾರವನ್ನು ಕೊಡುತ್ತಿದ್ದಳು. ಒಂದು ದಿನ ವೀರಸಾಗರರಿಗೂ ಆಹಾರ ದಾನ ಮಾಡಿದಳು.

ದೀಕ್ಷೆ ವಿಧಿಗಳು ಮಧ್ಯಾಹ್ನವೆಂದು ನಿಶ್ಚಿತವಾಗಿತ್ತು. ಅದಕ್ಕೆ ಮೊದಲೇ ನಮ್ಮಿಬ್ಬರನ್ನೂ ಕರೆದು ಪ್ರಮುಖ ಆರ್ಯಿಕೆಯರ ಸಮಕ್ಷಮದಲ್ಲಿ ಹಲವಾರು ನಿಯಮಾವಳಿಯನ್ನು ತಿಳಿಸಿದರು. ಆಚಾರ್ಯರು ನನಗೆ ಹೇಳಿದರು. ನೋಡು ಬಾಯಿಜೀ[೧] ನಿನಗೆ ದೀಕ್ಷೆ ಆದ ನಂತರ ನಿನ್ನದೆ ಸಂಘ ಮಾಡಿಕೊಂಡು ಇರಬೇಕು. ಬೇರೆ ಇರಲು ನೀನು ಚಿಂತೆಮಾಡಬೇಕಾಗಿಲ್ಲ. ಸಂಘದಲ್ಲಿ ಅಶಾಂತಿಗೊಳ್ಳುವುದಕ್ಕಿಂತ ಬೇರೆ ಇರುವುದು ಒಳ್ಳೆಯದು ಎಂದರು. ನಾನು ತಮ್ಮ ಆಜ್ಞೆಯನ್ನು ಶಿರಸಾವಹಿಸುತ್ತೇನೆ ಎಂದು ಗುರು ಆಜ್ಞೆಯನ್ನು ವಿನಯದಿಂದ ಸ್ವೀಕರಿಸಿದೆ. ಮತ್ತೆ ಪ್ರಭಾವತಿಯಲ್ಲಿ ಹೇಳಿದರು. ನೀನು ಜೀವನ ಪೂರ್ತಿ ಅವಳ ಜೊತೆಯಲ್ಲಿಯೇ ಇರಬೇಕು ಅವಳ ಕಾರಣದಿಂದಲೇನಿನಗೂ ಉಪಕಾರವಾಗಿದೆ. ಅವಳ ಜೊತೆಯನ್ನು ನೀನು ಎಂದಿಗೂ ಬಿಡಬೇಡ ಎಂದರು. ಪ್ರಭಾವತಿ ಕೂಡ ಮೌನವಾಗಿ ತಲೆ ಬಗ್ಗಿಸಿ ತನ್ನ ಸಮ್ಮತಿಯನ್ನು ಸೂಚಿಸಿದಳು. ಮತ್ತೇ ಸುಮತಿಮತೀ ಮಾತಾಜಿಯವರು ಹೇಳಿದರು. ನೋಡು ದೀಕ್ಷೆ ಆದನಂತರ ನೀನು ಕಡಿಮೆ ಎಂದರೂ ಐದು ವರ್ಷಗಳ ಕಾಲ ಸಂಘದಲ್ಲಿ ಇರಬೇಕು. ಸಂಘ ಮಾಡಿಕೊಂಡು ಇಷ್ಟು ಬೇಗ ಬೇರೆ ಇರುವುದು ಬೇಡ ಎಂದರು. ನಾನು ತಮ್ಮ ಆಜ್ಞೆಯಂತೆ ಆಗಲಿ ಎಂದೆ. ನನಗೂ ಸಂಘದಲ್ಲೇ ಇರುವ ಮನಸ್ಸಿತ್ತು. ಕೆಲವು ವೇಳೆ ಆರ್ಯಿಕೆಯರಲ್ಲೂ ದ್ವೇಷ ಅಸೂಯೆಗಳು ಕಂಡುಬರುತ್ತದ್ದವು. ತಹಬಂದಿಗೆ ತಂದುಕೊಂಡು ವಾತ್ಸಲ್ಯವನ್ನೂ ತೋರಿಸುತ್ತಿದ್ದರು. ಆದ್ದರಿಂದ ಸ್ವತಂತ್ರಳಾಗಿ ಸಂಚರಿಸುವ ಇಚ್ಛೆ ಏನೂ ಇರಲಿಲ್ಲ.

ಸುವಾಸಿನಿಯರು ಪ್ರಭಾವತಿಗೆ ಅಭ್ಯಂಗಲೇಪನವನ್ನು ಮಾಡಿ ಮಂಗಳ ಸ್ನಾನ ಮಾಡಿಸಿ ಬಳೆ ಸೀರೆಯನ್ನು ಉಡಿಸಿ ಪೆಂಡಾಲಿನ ಸಭಾಂಗಣಕ್ಕೆ ಕರೆದುತಂದರು. ದೀಕ್ಷೆಗಾಗಿ ಮಂಗಳ ವೇದಿಕೆ ಸಿದ್ಧವಾಗಿತ್ತು. ನಾವಿಬ್ಬರು ಶ್ರೀಫಲ ಹಿಡಿದು ಆಚಾರ್ಯರಲ್ಲಿ ದೀಕ್ಷೆಗಾಗಿ ಪ್ರಾರ್ಥಿಸಿದೆವು. ಪ್ರಭಾವತಿಯಿಂದ ಜಿನ ಪ್ರತಿಮೆಗೆ ಪಂಚಾಮೃತ ಅಭಿಷೇಕವನ್ನು ಮಾಡಿಸಲಾಯಿತು.

ಮೊದಲು ನನಗೆ ಕೇಶಲೋಚ ಪ್ರಾರಂಭವಾಯಿತು. ಅದಕ್ಕೆ ಒಂದು ತಿಂಗಳು ಮೊದಲೇ ನಾನು ಕೇಶಲೋಚ ಮಾಡಿಕೊಂಡಿದ್ದರಿಂದ ಇಬ್ಬರು ಮೂವರು ಆರ್ಯಿಕೆಯರ ಸಹಾಯದಿಂದ ನನ್ನ ಕೇಶ ಲೋಚ ಬೇಗನೇ ಮುಗಿಯಿತು. ಅನಂತರ ಆಚಾರ್ಯರು ದೀಕ್ಷಾ ಸಂಸ್ಕಾರವನ್ನು ಪ್ರಾರಂಭಿಸಿರು. ನನ್ನ ಮಸ್ತಕದ ಮೇಲೆ ಮುನಿದೀಕ್ಷೆ ವಿಧಿಯ ಸಂಸ್ಕಾರವನ್ನು ಮಾಡಿದರು. ಪ್ರಭಾವತಿಯ ತಲೆಯಮೇಲೆ ಕ್ಷುಲ್ಲಿಕೆ ದೀಕ್ಷೆಯ ವಿಧಿಗಳನ್ನು ಮಾಡಲಾಯಿತು. ಪುನಃ ಸಂಯಮದ ಉಪಕರಣಗಳಾದ ಪಿಂಛಿ ಶೌಚದ ಉಪಕರಣವಾದ ಕಮಂಡಲ ಮತ್ತು ಜ್ಞಾನದ ಉಪಕರಣಗಳಾದ ಶಾಸ್ತ್ರವನ್ನು ಕೊಡಲಾಯಿತು. ನನಗೆ ಜ್ಞಾನಮತಿ ಎಂದು ಪ್ರಭಾವತಿಗೆ 'ಜಿನಮತಿ' ಎಂದು ಘೋಷಣೆ ಮಾಡಿದರು.

ಇಷ್ಟರಲ್ಲಿ ಒಂದು ಚಮತ್ಕಾರವಾಯಿತು. ಒಂದು ದಷ್ಟ ಪುಷ್ಟವಾದ ಎತ್ತು ಓಡುತ್ತಾ ಸಭೆಯ ಮಧ್ಯದಲ್ಲೇ ಬಂದಿತು. ಸಭೆ ಅಲ್ಲೋಲ ಕಲ್ಲೋಲಗೊಂಡಿತು. ಅದು ಮಧ್ಯ ಬಿಟ್ಟಿದ್ದ ದಾರಿಯಿಂದಲೇ ಬಂದು ವೇದಿಕೆಯ ಹತ್ತಿರ ನಿಂತುಬಿಟ್ಟಿತು. ಕತ್ತಿನಿಂದ ನಮಸ್ಕರಿಸುವಂತೆ ತಲೆ ಬಗ್ಗಿಸಿತು. ಬಹಳ ಹೊತ್ತಿನವರೆಗೆ ಹಾಗೇ ನಿಂತಿತು. ಆಚಾರ್ಯರು ಪಿಂಛಿಯಿಂದ ಆಶೀರ್ವಾದ ಮಾಡಿದರು. ಅದು ಶಾಂತವಾಗಿ ಒಂದೇ ಸಮನೆ ನೋಡತೊಡಗಿತು. ಸಭೆಯಲ್ಲಿ ಕೋಲಾಹಲವು ಶಾಂತವಾಯಿತು. ಆಚಾರ್ಯರು ಹೇಳಿದರು ಹೆದರಬೇಡಿ ಇದು ಯಾವುದೋ ಭವ್ಯಜೀವ. ದೀಕ್ಷೆಯನ್ನು ನೋಡಲು ಬಂದಿದೆ ಎಂದರು. ದೀಕ್ಷಾ ಸಮಾರಂಭದ ನಂತರ ಅದು ಬಂದ ದಾರಿಯಲ್ಲಿಯೇ ಶಾಂತವಾಗಿ ಹಿಂದಿರುಗಿತು. ಜನ ಲಡ್ಡು ತಿನ್ನಿಸಿದರು.

---

೧. ಇಲ್ಲಿ ಬಾಯಿಜೀ ಎನ್ನುವ ಸಂಭೋದನ ಮಗಳೇ ಎನ್ನುವುದಕ್ಕೆ ಉಪಯೋಗಿಸಿದ್ದಾರೆ.

ಆಚಾರ್ಯರು ದೀಕ್ಷೆ ಕೊಡುತ್ತಾ ಹೇಳಿದರು. ಇಂದಿನಿಂದ 28 ಮೂಲಗುಣಗಳನ್ನು ಪಾಲಿಸಬೇಕು. ಐದು ಮಹಾವ್ರತ, ಐದು ಸಮಿತಿ, ಐದು ಇಂದ್ರಿಯ ನಿರೋಧ ಆರು ಅವಶ್ಯಕ ಮತ್ತು ಕೇಶಲೋಚ ಉಳಿದ ಏಳು ಗುಣಗಳು ಸೇರಿ ಇಪ್ಪತ್ತೆಂಟು ಮೂಲಗುಣಗಳು ನಗ್ನತ್ವ ಮತ್ತು ನಿಂತು ಆಹಾರ ತೆಗೆದುಕೊಳ್ಳುವ ಬದಲಿಗೆ ಸ್ತ್ರೀಯರಿಗೆ ಎರಡು ಸೀರೆ ಮತ್ತು ಕುಳಿತು ಕರಪಾತ್ರದಲ್ಲಿ ಆಹಾರ ತೆಗೆದುಕೊಳ್ಳುವುದನ್ನು ಶಾಸ್ತ್ರದಲ್ಲಿ ಹೇಳಿದೆ.

ಹಾಗೂ ಜಿನಮತಿಗೆ ತಿಳುವಳಿಕೆ ಹೇಳುತ್ತಾ ಇಂದಿನಿಂದ ನೀನು ಹನ್ನೊಂದು ಪ್ರತಿಮೆಗಳ ವ್ರತವನ್ನು ಪಾಲಿಸಬೇಕು. ಎರಡು ದುಪಟ್ಟಾಗಳು ಮತ್ತು ಊಟಮಾಡಲು ಬಟ್ಟಲನ್ನು ಬಳಸುವುದರನ್ನು ಬಿಟ್ಟರೆ ಉಳಿದೆಲ್ಲ ವ್ರತಗಳು ಆರ್ಯಿಕೆ ದೀಕ್ಷೆಗೆ ಸಮನಾಗಿಯೇ ಇದೆ. ನಂತರ ಆಚಾರ್ಯರ ಮಂಗಳ ಪ್ರವಚನವಾಯಿತು. ಸಭೆಯ ವಿಸರ್ಜನೆಯ ನಂತರ ಆರ್ಯಿಕೆಯರ ಜೊತೆಯಲ್ಲಿಯೇ ನಿವಾಸಕ್ಕೆ ಬಂದೆನು. ವ್ರತ ತೆಗೆದುಕೊಳ್ಳುವ ಮೊದಲು ಬೊಗಸೆಯಲ್ಲಿ ಇರುವ ಎಲೆ, ಅಡಿಕೆ, ತೆಂಗಿನಕಾಯಿಯನ್ನು ಯಾರಾದರು ದಂಪತಿ ಶ್ರಾವಕರಿಗೆ ಕೊಡಿಸಲಾಗುತ್ತದೆ. ಅವರು ತಂದೆ ತಾಯಿಗೆ ಸಮಾನವೆಂದು ಭಾವಿಸಲಾಗುತ್ತದೆ ಹಾಗೇ ನನ್ನ ಕೈಗಳಿಂದ ಕುಚಾಮನದ ಸೇಠ ಗಂಭೀರಮಲ್ಲ ಪಾಂಡ್ಯರಿಗೂ ಪ್ರಭಾವತಿಯ ಕೈಗಳಿಂದ ಒಬ್ಬ ಸೇಠಿಗೂ ಕೊಡಿಸಲಾಯಿತು.

ಬಹಳಷ್ಟು ಪರಿಶ್ರಮ ಪಟ್ಟು ಸ್ತ್ರೀ ಪರ್ಯಾಯದಲ್ಲೇ ಉತ್ತಮ ಸ್ಥಾನವಾದ ಆರ್ಯಿಕೆಯ ಪಟ್ಟವನ್ನು ಪಡೆದ ನನ್ನ ಜೀವನ ಸಾರ್ಥಕತೆಯನ್ನು ಪಡೆಯಿತು. ಆ ದಿನ ಭ ಪಾರ್ಶ್ವನಾಥರ ಗರ್ಭಕಲ್ಯಾಣದ ದಿನ. ಆ ದಿನ ನನಗೆ ಅತ್ಯಂತ ಮಹತ್ವದ ದಿನವಾಯಿತು. ಸಂಘದಲ್ಲಿ ಎಲ್ಲರ ಆಚರಣೆಯು ಅತ್ಯಂತ ನಿಯಮಬದ್ಧವಾಗಿತ್ತು. ಚಿನ್ನದ ಮೂಸೆಯಲ್ಲಿಟ್ಟು ಚಿನ್ನವನ್ನು ಪರಿಶುದ್ಧಗೊಳಿಸುವಂತೆ ನಡೆವಳಿಕೆ ಎಂಬ ಮೂಸೆಯಲ್ಲಿ ನಮ್ಮನ್ನು ಪರಿಷ್ಕರಿಸುತ್ತಿದ್ದರು.

ನನ್ನ ಧೈರ್ಯ ಮತ್ತು ಸಹನಶೀಲ ಗುಣ ಎಲ್ಲ ಸಾಧುಗಳನ್ನು ಪ್ರಭಾವಿತಗೊಳಿಸಿತು. ಅದೇ ಸಮಯದಲ್ಲಿ ಸಂಘದ ವಾಸುಮತೀ ಮುಂತಾದ ಆರ್ಯಿಕೆಯರು ನನ್ನ ಹತ್ತಿರವೇ ಅರ್ಥಸಹಿತವಾದ ಶ್ಲೋಕಗಳನ್ನು ಹೇಳಿಸಿ ಕೊಳ್ಳತೊಡಗಿದರು. ಕ್ಷುಲ್ಲಿಕ ಜಿನಮತಿಗೆ ಗೊಮ್ಮಟ್ಟಸಾರ, ಪರೀಕ್ಷಾಮುಖ, ಹಾಗೇ ಕಾತಂತ್ರ ವ್ಯಾಕರಣದ ಪಾಠಗಳನ್ನು ಹೇಳತೊಡಗಿದೆ. ಸಾಯಂಕಾಲ ನಾಲ್ಕುಗಂಟೆಗೆ ಆಚಾರ್ಯರು ಪಾಠ ಹೇಳುತ್ತಿದ್ದರು. ಪ್ರಾಯಶಃ ಆ ಸಮಯದಲ್ಲಿ ಪಂಚಾಧ್ಯಾಯೀ ಗ್ರಂಥವನ್ನು ಕುರಿತು ಹೇಳುತ್ತಿದ್ದರು. ಆಗ ಸಂಘದ ಎಲ್ಲ ಸಾಧು ಸಾಧ್ವಿಯರು ಭಾಗವಹಿಸುತ್ತಿದ್ದರು. ಸೂಕ್ಷ್ಮವಾದ ಚರ್ಚೆಯಿಂದ ಬಹಳ ಆನಂದವಾಗುತ್ತಿತ್ತು. ನಂತರ ಆಚಾರ್ಯರು ಎಲ್ಲ ಶಿಷ್ಯರಿಗೂ ಶಿಕ್ಷಾಸ್ಪದವಾದ ಮಾತುಗಳನ್ನೂ ಹೇಳುತ್ತಾ ಮನೋರಂಜಕವಾದ ಚುಟುಕಗಳನ್ನು ಹೇಳುತ್ತಿದ್ದರು. ಒಂದು ಸಲ ಒಬ್ಬ ಆರ್ಯಿಕೆ ತಮ್ಮ ವಿಷಯವನ್ನು ಹೇಳಿದರು. ಇನ್ನೊಬ್ಬ ಮಾತಾಜೀ ತಮ್ಮ ಶರೀರದ ಕಷ್ಟವನ್ನು ಹೇಳಿದರು. ಆಗ ಮಹಾರಾಜರು ನನಗೆ ಯಾವ ರೋಗವು ಇಲ್ಲ. ಆದರೆ ಎರಡು ದೊಡ್ಡ ಪಿಡುಗು ಇದೆ. ಒಂದು ನಿದ್ರೆ, ಇನ್ನೊಂದು ಹಸಿವು, ಇದನ್ನು ಕೇಳಿ ಎಲ್ಲರೂ ನಕ್ಕರು. ಹೌದು ಇದು ಪಿಡುಗೇ ಇದನ್ನು ಜಯಿಸುವುದಕ್ಕಾಗಿಯೇ ಜೀನೇಶ್ವರ ದೀಕ್ಷೆಯನ್ನು ತೆಗೆದುಕೊಳ್ಳಲಾಗುತ್ತದೆ.

ಆಚಾರ್ಯರು ಯಾವಾಗಲು ತಮ್ಮ ಭಾಷಣದಲ್ಲಿ ಹೇಳುತ್ತಿದ್ದರು. ಸಹೋದರರೇ ಸೂಜಿಯ ಕೆಲಸವನ್ನು ಮಾಡಿ ಆದರೆ ಕತ್ತರಿಯ ಕೆಲಸ ಬೇಡ ಸೂಜಿಯಾದರೋ ಹರಿದಿರುವ ಬಟ್ಟೆಗಳನ್ನು ಜೋಡಿಸುತ್ತದೆ. ಆದರೆ ಕತ್ತರಿ ಯಾವಾಗಲೂ ಕತ್ತರಿಸುತ್ತಲೇ ಇರುತ್ತದೆ.

ಚತುರ್ದಶಿಯಂದು ಪ್ರತಿಕ್ರಮಣವಾದ ನಂತರ ಆಚಾರ್ಯರ ಕಣ್ಣುಗಳು ತುಂಬಿ ಬರುತ್ತಿತ್ತು. ಸಹೋದರರೇ ನಿಮಗೆಲ್ಲರಿಗೂ ಪ್ರಾಯಶ್ಚಿತ್ತವನ್ನು ಕೊಟ್ಟು, ನಿಮ್ಮ ಮನಸ್ಸನ್ನು ಶುದ್ಧಗೊಳಿಸುತ್ತೇನೆ. ಆದರೆ ನನ್ನ ಗುರುಗಳ

ವಿಯೋಗದಿಂದ ನಾನು ಯಾರ ಹತ್ತಿರ ಪ್ರಾಯಶ್ಚಿತ್ತ ತೆಗೆದುಕೊಳ್ಳಲಿ ಎನ್ನುತ್ತಿದ್ದರು. ಇವರ ಗುರುಭಕ್ತಿ ಅಚಲವಾದುದು. ಅವರು ಯಾವಾಗಲೂ ಹೇಳುತ್ತಿದ್ದರು. ಆ ಶಾಂತಿಸಾಗರರು ಈ ಯುಗದ 25 ನೇ ತೀರ್ಥಂಕರು ಇದ್ದ ಹಾಗೇ ಒಂದು ವೇಳೆ ಅವರು ಇಲ್ಲದಿದ್ದರೆ ನಮಗೆಲ್ಲ ಮೋಕ್ಷ ಮಾರ್ಗವನ್ನು ತೋರಿಸುತ್ತಿದ್ದವರು ಯಾರು? ಹಾಗೇ ಅವರ ಮಾತುಗಳು ನೆನಪಿಗೆ ಬರುತ್ತದೆ. ತೀರ್ಥಗಳಲ್ಲಿ ಯಾರು ಸಮ್ಮೇದ ಶಿಖರವನ್ನು ದರ್ಶನ ಮಾಡಿಲ್ಲವೋ ಹಾಗೇ ಮೂರ್ತಿಗಳಲ್ಲಿ ಸೌಮ್ಯ ವಿಶಾಲಕಾಯ ಗೊಮ್ಮಟನನ್ನು ದರ್ಶನ ಮಾಡಿಲ್ಲವೋ. ಅಂತೆಯೇ ಆಚಾರ್ಯರಲ್ಲಿ ಶಾಂತಿಸಾಗರರನ್ನು ದರ್ಶನ ಮಾಡಿಲ್ಲವೋ ಅವರ ಜೀವನ ವ್ಯರ್ಥ ಎನ್ನುತ್ತಿದ್ದರು. ಆಗ ನನಗೆ ಅನ್ನಿಸುತ್ತಿತ್ತು, ಸಮ್ಮೇದ ಶಿಖರದ ದರ್ಶನವಾಗಿದೆ ಶಾಂತಿ ಸಾಗರರ ದರ್ಶನವಾಯಿತು, ಇನ್ನಾವಾಗ ಬಾಹುಬಲಿಯ ದರ್ಶನವಾಗುತ್ತದೋ ನೋಡೋಣ ಎಂದುಕೊಳ್ಳತ್ತಿದ್ದೆ. ಇಂದಿಗೂ ನನಗೆ ನೆನಪಿರುವ ವಿಷಯವೆಂದರೇ ಆವೇಶದಿಂದಾಗಲಿ, ವಿಶೇಷ ವಿರಕ್ತಿಯಿಂದಾಗಲೀ ತೆಗೆದುಕೊಂಡ ವ್ರತಗಳಿಂದ ಶರೀರ ಮತ್ತು ಆತ್ಮಕ್ಕೆ ಬರೇಹಾನಿಯೇ ಆಗುತ್ತದೆ. ತ್ಯಾಗವು ಚಿಕ್ಕದೇ ಇರಲಿ, ದೊಡ್ಡದೇ ಇರಲಿ ಗುರು ಸಾಕ್ಷಿಯಾಗಿಯೇ ವ್ರತವನ್ನು ಸ್ವೀಕರಿಸಬೇಕು. ನಾನು ಹಿಂದೆ ಮಾಡಿದ್ದ ವ್ರತಗಳು ಸರಿಯಲ್ಲ ಎಂಬ ಭಾವನೆ ಆಗುತ್ತಿತ್ತು. ನನ್ನ ಸತತ ಉಪದೇಶವು ಇದೇ ಆಗಿತ್ತು. ಏಕೆಂದರೆ ಅನುಭವದಿಂದ ಉಂಟಾಗುವ ಜ್ಞಾನವೇ ನಿಜವಾದ ಜ್ಞಾನ. ಈ ನನ್ನ ಎಲ್ಲ ತಪ್ಪುಗಳನ್ನು ಸರಿಪಡಿಸಿದ ಗುರುಗಳ ವಾತ್ಸಲ್ಯದ ಬಗ್ಗೆ ಸಂತೋಷವೆನಿಸುತ್ತಿತ್ತು.

೧೬

ಯೋಗ ಲಭಿಸಿತು. ಈ ದೊಡ್ಡ ಸಂಘ 'ಖಾನಿಯಾ' ದಲ್ಲಿ ನೆಲಸಿತ್ತು. ಸಂಘದಲ್ಲಿದ್ದ ವಯೋವೃದ್ಧ ಧರ್ಮವತೀ ಮಾತಾಜೀಯವರು, ನನ್ನನ್ನು ಅತ್ಯಂತ ವಾತ್ಸಲ್ಯದಿಂದ ನೋಡಿಕೊಳ್ಳುತ್ತಿದ್ದರು. ಆರ್ಯಿಕೆ ವಿಮಲಮತೀ ಮಾತಾಜೀಯವರು ಹಲವಾರು ವರ್ಷದ ನಂತರ ಮುನಿಗಳ ದರ್ಶನಕ್ಕಾಗಿ ಬಂದವರು ಇದೇ ಮಂದಿರದಲ್ಲಿ ತಂಗಿದ್ದರು. ಆಚಾರ್ಯರು ಮತ್ತು ಎಲ್ಲಾ ಮುನಿಗಳು ಕ್ಷುಲ್ಲಕರು "ಬಡೀನಶಿಯಾ" ದಲ್ಲಿ ತಂಗಿದ್ದರು. ಆರ್ಯಿಕೆಯರು ಚಿಕ್ಕ ನಶಿಯಾದ ಮಂದಿರದಲ್ಲಿಯ ಮುಂದಿನ ಧರ್ಮಶಾಲೆಯಲ್ಲಿ ತಂಗಿದ್ದರು. ಧರ್ಮವತೀ ಮತ್ತು ಒಬ್ಬ ಕ್ಷುಲ್ಲಿಕೆ ಜ್ಞಾನಮತೀ ಬ್ರಹ್ಮಚಾರಿ ಮದೀಮತಿಯರು ಮಂದಿರದ ಹೊರಗೆ ಒಂದು ಚಿಕ್ಕ ಕೊಠಡಿಯಲ್ಲಿ ತಂಗಿದ್ದರು. ಆರ್ಯಿಕೆ ಪಾರ್ಶ್ವಮತೀ ಆರ್ಯಿಕೆ ವಿಮಲಮತೀ ಮತ್ತು ನಾನು ಮಂದಿರದ ಅಂಗಳದಲ್ಲಿಯೇ ಇದ್ದೆವು. ನನ್ನ ಜೊತೆ ಕ್ಷುಲ್ಲಿಕೆ ಜಿನಮತಿ ಮತ್ತು ಬ್ರಹ್ಮಚಾರಿ ಸೋನುಬಾಯಿ ಇದ್ದರು ನಾವೆಲ್ಲರೂ ನಮ್ಮೊಳಗೆ ಒಳ್ಳೆಯ ಧಾರ್ಮಿಕ ಚರ್ಚೆಯನ್ನು ಮಾಡುತ್ತಿದ್ದೆವು.

ಒಂದು ಸಲ ಲಾಲರಾಮರು ಆಚಾರ್ಯರನ್ನು ದರ್ಶನ ಮಾಡುವ ಸಲುವಾಗಿ ಬಂದವರು ನನ್ನನ್ನು ನೋಡಿ ಸಂತೋಷಗೊಂಡರು. ಅಲ್ಲಿದ್ದವರಲ್ಲಿ ನಾನೇ ಕಿರಿಯವಳು ಅಲ್ಲದೆ ನನ್ನ ಬುದ್ಧಿ ಮತ್ತು ವ್ಯಾಕರಣದ ಜ್ಞಾನವನ್ನು ನೋಡಿ ಅವರಿಗೆ ತುಂಬ ಖುಷಿ ಇತ್ತು ಇದರಿಂದಾಗಿ ಅವರು ಮಾತಾಜೀ ನಾನು ನಿಮಗೆ ಸ್ವಾಧ್ಯಾಯದ ಸೇವೆ ಸಲ್ಲಿಸಬೇಕೆಂದಿದ್ದೇನೆ ಎಂದರು. ಅವರು ಸುಮಾರು ನಲವತ್ತು ಗ್ರಂಥಗಳನ್ನು ಹಿಂದಿಗೆ ಅನುವಾದಿಸಿದ್ದರು. ಇವರ ಒಬ್ಬ ಸಹೋದರ ಶಾಂತಿಸಾಗರರ ಹತ್ತಿರ ಮುನಿ ದೀಕ್ಷೆ ತೆಗೆದುಕೊಂಡು ಸುಧರ್ಮಸಾಗರರು ಆಗಿದ್ದರು. ಇನ್ನೊಬ್ಬರು ಪಂಡಿತ ಮಕ್ಖನಲಾಲರು. ಇವರು ಇಷ್ಟು ದೊಡ್ಡ ಸಂಘದಲ್ಲಿ ಮುನಿಗಳಿಗೆ ಸಂಸ್ಕೃತದ ಅಧ್ಯಯನ ಮಾಡಿಸುತ್ತಿದ್ದರು. ನಾನು ಆಚಾರ್ಯರಲ್ಲಿ ಕೇಳುತ್ತೇನೆ ಎಂದೆ. ಆಚಾರ್ಯರಲ್ಲಿ ಹೋಗಿ ನಿವೇದಿಸಿಕೊಂಡಾಗ

ಅವರು ನಿನ್ನದು ಅಧ್ಯಯನ ಮಾಡುವ ವಯಸ್ಸೇ ನಿನಗೇನೇನು ಬೇಕು ಎಲ್ಲವನ್ನು ಅವರಿಂದ ಹೇಳಿಸಿಕೋ ಎಂದರು. ಪಂಡಿತರು ಇವರಿಗೆ ವ್ಯಾಕರಣದ ಜ್ಞಾನ ಚೆನ್ನಾಗಿರುವುದರಿಂದ ಕಾವ್ಯಗ್ರಂಥದ ಅಭ್ಯಾಸ ಮಾಡಲಿ ಎಂದು ಚಂದ್ರಪ್ರಭ ತೀರ್ಥಂಕರ ಚರಿತ್ರೆಯನ್ನು ಅಧ್ಯಯನಕ್ಕಾಗಿ ಆರಿಸಿದರು.

ಅಧ್ಯಯನ ಪ್ರಾರಂಭವಾಯಿತು. ಖಂಡಾನ್ವಯ, ದಂಡಾನ್ವಯ ದ ಪ್ರಕ್ರಿಯೆಗಳನ್ನು ಹೇಳತೊಡಗಿದರು. ಆದರೆ ಒಂದೆರಡು ದಿನಗಳಲ್ಲಿ ಅವರು ಅಸ್ವಸ್ಥರಾದರು, ವೃದ್ಧರು ಆಗಿದ್ದರಿಂದ ಅವರಿಗೆ ಬರಲು ಆಗುತ್ತಿರಲಿಲ್ಲ.

ಅವರು ನನ್ನಲ್ಲಿ ಕೇಳುತ್ತಿದ್ದರು. ಮಾತಾಜೀ ಈ ಕಾನಜೀ ಪಂಥವು ಸಾಂಖ್ಯಮತದಂತೆ ಏಕಂತವಾದವನ್ನು ಮಂಡಿಸುತ್ತದೆ. ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ಎಂದು. ನಾನೆಂದೆ ಜನರು ನಿಶ್ಚಯ ಏಕಾಂತ ದುರಾಗ್ರಹವನ್ನು ಹಿಡಿದುಕೊಳ್ಳುತ್ತಾರೆ. ವಾಸ್ತವವಾಗಿ ಆತ್ಮನನ್ನೆ ಕರ್ಮಗಳ, ಕರ್ತೃವೆಂದು ಒಪ್ಪದೆ ಇರುವ ಸಾಂಖ್ಯಾಮತದಂತೆ ಇವರು ಭಾವಿಸುತ್ತಾರೆ. ಲಾಲರಾಮರು ಹೇಳಿದರು ತಾವು ಇದನ್ನು ಖಂಡನೆ ಮಾಡಬೇಕು ಎಂದರು. ಹೌದು, ಆಗಮಕ್ಕೆ ವಿರುದ್ಧವಾದ ಸಿದ್ಧಾಂತವನ್ನು ಖಂಡನೆ ಮಾಡಲೇ ಬೇಕು ಎಂದೇ ನನಗೆ ನ್ಯಾಯ ಗ್ರಂಥಗಳನ್ನು ಓದುವುದರಲ್ಲಿ ವಿಶೇಷ ಆಸಕ್ತಿ ಇದ್ದುದ್ದರಿಂದ ಜಿನಮತಿಗೆ ಪರೀಕ್ಷಾಮುಖ, ಮತ್ತು ನ್ಯಾಯದೀಪಿಕೆಯನ್ನು ಹೇಳಿಕೊಡುತ್ತಿದ್ದೆ. ಪಂಡಿತ ಖೂಬಚಂದ್ರ ಶಾಸ್ತ್ರಿಜೀ ಪ್ರತಿವರ್ಷ ಚಾತುರ್ಮಾಸದಲ್ಲಿ ಸಂಘಕ್ಕೆ ಬಂದು ಆಹಾರದಾನ ಮಾಡುತ್ತಿದ್ದರು ಮತ್ತು ಒಂದು ಗಂಟೆ ಯಾವುದಾದರೂ ವಿಶೇಷ ಗ್ರಂಥವನ್ನು ಓದಿ ಹೇಳುತ್ತಿದ್ದರು. ಆ ವರ್ಷ ನನಗೂ ವೀರಮತಿಗೂ ಪ್ರಮೇಯ ಕಮಲ ಮಾರ್ತಾಂಡ ಗ್ರಂಥವನ್ನು ಅಧ್ಯಯನ ಮಾಡಿಸುತ್ತಿದ್ದರು. ಆದರೆ ಅವರ ಕೆಮ್ಮು ಜಾಸ್ತಿಯಾಗಿದ್ದರಿಂದ ಅಧ್ಯಯನ ಮುಂದುವರಿಯಲಿಲ್ಲ. ಅವರ ಧರ್ಮಪ್ರೇಮ, ಗುರುಭಕ್ತಿ ಆಗಮದಲ್ಲಿ ಇಟ್ಟಿದ್ದ ನಿಷ್ಠೆ ಇಂದಿನ ವಿದ್ವಾಂಸರಿಗೆ ಅನುಕರಣೀಯವಾಗಿತ್ತು. ನಾನು ಓದದೆ ಇದ್ದರು ಜಿನಮತಿಗೆ ಪ್ರಮೇಯ ಕಮಲ ಮಾರ್ತಂಡವನ್ನು ಪಾಠ ಮಾಡಿದೆ. ಒಮ್ಮೆ ಆಹಾರದಲ್ಲಿ ನವಧಾ ಭಕ್ತಿಯನ್ನು ಸರಿಯಾಗಿ ಮಾಡದ ಕಾರಣ ಮಾತಾಜೀ ಚೌಕದಿಂದಲೇ ಹಿಂದಿರುಗಿ ಬಂದರು. ಆಹಾರದ ನಂತರ ಈ ವಿಷಯ ಆಚಾರ್ಯರಲ್ಲಿ ಚರ್ಚಿತವಾಯಿತು ಪಂಡಿತ ಖೂಬಚಂದ್ರರು ಆಹಾರಕ್ಕೆ ಆಹ್ವಾನಿಸುವಾಗ ಪ್ರದಕ್ಷಿಣೆಯನ್ನು ಮಾಡಲಿಲ್ಲವಾಗಿ ವಾಪಸ್ಸು ಬಂದೆ ಎಂದು ಹೇಳಿದರು. ಆಚಾರ್ಯರು ನಿನ್ನ ನಡವಳಿಕೆ ಸರಿಯಾಗಿದೆ ಎಂದರು ಪಂಡಿತರಲ್ಲಿ ಈ ವಿಷಯ ಪ್ರಸ್ಥಾಪಿಸುತ್ತಾ ಆಚಾರ್ಯರು ಹೇಳಿದರು. ಪಂಡಿತರೇ ಆರ್ಯಿಕೆಯರನ್ನು ಆಹಾರಕ್ಕೆ ಆಹ್ವಾನಿಸುವಾಗ ಅಷ್ಟದ್ರವ್ಯಗಳಿಂದ ಪೂಜಿಸಿ ನವಧಾ ಭಕ್ತಿಯಿಂದ ನೀವು ಪ್ರದಕ್ಷಣೆ ಮಾಡುವುದರಲ್ಲಿ ಯಾವ ದೋಷವಿದೆ ಎಂದರು. ಪಂಡಿತರು ನಿಜವಾಗಿಯು ನವಧಾಭಕ್ತಿಗೆ ಆರ್ಯಿಕೆಯರು ಪಾತ್ರರೇ ಅವರಿಗೆ ಪ್ರದಕ್ಷಿಣೆ ಮಾಡಬೇಕು ಎಂದರು. ಹಾಗೇ ಇನ್ನೊಂದು ದಿನ ಆಹಾರಕ್ಕೆ ಆಹ್ವಾನಿಸುವಾಗ ನವಧಾ ಭಕ್ತಿಯನ್ನು ಮಾಡಿ ಗಂಧೋದಕವನ್ನು ತಲೆಯ ಮೇಲೆ ಹಾಕಿಕೊಳ್ಳಲಿಲ್ಲ. ಆ ವಿಷಯ ಕೂಡ ಆಚಾರ್ಯರ ಗಮನಕ್ಕೆ ಬಂದಿತು. ಪಂಡಿತರು ಹೇಳಿದರು, ಗಂಧೋದಕವನ್ನು ಹಾಕಿಕೊಳ್ಳುವಾಗ ಹೇಳುವ ಶ್ಲೋಕವನ್ನು ಹೇಳಿದರು.

ನಿರ್ಮಲಂ ನಿರ್ಮಲೀಕರಣಂ ಪವಿತ್ರಂ ಪಾಪನಾಶನಂ
ಜಿನಗಂಧೋದಕಂ ವಂದೇ ಅಷ್ಟಕರ್ಮವಿನಾಶನಂ ॥

ಇದರಲ್ಲಿ ಜಿನಗಂಧೋದಕವನ್ನು ವಂದನೆ ಮಾಡುವುದಕ್ಕಾಗಿಯೇ ಹೇಳಿ ತಲೆಯ ಮೇಲೆ ಹಾಕಿಕೊಳ್ಳುತ್ತೇವೆ. ಅಷ್ಟರಲ್ಲಿ ಆಹಾರ ಮುಗಿಸಿ ನಾನು ಅಲ್ಲೇ ಹೋಗಿ ಕುಳಿತುಕೊಂಡೆ. ನಾನು 'ಪದ್ಮ ನಂದಿ ಪಂಚ ವಿಂಶತಿಕಾ' ದ ಪ್ರಕರಣವನ್ನು ಓದಿ ತೋರಿಸಿದೆ. ಅದರಿಂದ ಪ್ರಭಾವಿತರಾದ ಅವರು ಎಲ್ಲ ಮುನಿ, ಆರ್ಯಿಕೆಯರ ಚರಣ ಪ್ರಕ್ಷಾಲನದ ನಂತರ ಗಂಧೋದಕವನ್ನು ಭಕ್ತಿಯಿಂದ ಕಣ್ಣು ಮತ್ತು ತಲೆಗೆ ಹಾಕಿಕೊಳ್ಳಲು ತೊಡಗಿದರು. ಇಂತಹ ಹಲವಾರು ಬದಲಾವಣೆಗಳು ಉಂಟಾಗತೊಡಗಿತು. ಆ ದಿನಗಳಲ್ಲಿ ನಾನು ಜ್ಞಾನಾರ್ಣವ ಗ್ರಂಥವನ್ನು ಸ್ವಾಧ್ಯಾಯ ಮಾಡುತ್ತಿದ್ದೆ. ಅದರಲ್ಲಿ ಹನ್ನೆರಡು ಭಾವನೆಗಳ ವರ್ಣನೆ ಇದೆ. ಅದು ನನಗೆ ಬಹಳ ಹಿಡಿಸಿತ್ತು. ನಾನು ಅದಕ್ಕೆ ಸಂಸ್ಕೃತ ಟೀಕೆಯನ್ನು ಬರೆದ ನಂತರ ಧೈರ್ಯ ಮಾಡಿ ಪಂಡಿತರಿಗೆ ತೋರಿಸಿ ಹೇಳಿದೆ. ನನ್ನ ಸಂಸ್ಕೃತ ಟೀಕೆಯ ಶೈಲಿ ಮತ್ತು ವ್ಯಾಕರಣ ಸರಿಯಾಗಿದೆಯಾ ನೋಡಿ ಹೇಳಿ ಎಂದೆ. ಪಂಡಿತರು ಅದನ್ನು ಓದಿ ನಾನು ಬರೆದಿರುವುದನ್ನು ತೆಗೆದುಕೊಂಡು ಹೋಗಿ ಆಚಾರ್ಯರ ಮುಂದೆ ಓದಿಸಿ ತೋರಿಸಿ ಹೇಳಿದರು. ಮಹಾರಾಜರೇ ಜ್ಞಾನಮತೀಯ ಸಂಸ್ಕೃತ ಜ್ಞಾನ ಉತ್ತಮವಿದೆ. ಬರೆದಿರುವ ಶೈಲಿ ಕೂಡ ಸರಳ ಸುಬೋಧವಿದೆ. ಇವರು ನಿಜವಾಗಿಯು ಮಹಾನ್ ವಿದುಷಿಯಾಗುತ್ತಾರೆ, ವಾಕ್ಯ ರಚನೆಯಲ್ಲಂತು ಆಗಮದ ಪರಂಪರೆಯಂತೆಯೇ ಇದೆ. ಇದನ್ನು ಕೇಳಿದ ಆಚಾರ್ಯರು ಸಂತಸಗೊಂಡರು. ಆದರೆ ಏನಾಯಿತೋ ಮುಂದೆ ನನಗೆ ಬರೆಯಲು ಆಗಲೇ ಇಲ್ಲ. ಇವತ್ತಿಗೂ ಆ ಐದು ಭಾವನೆಗಳ ಟೀಕೆಯ ಕಾಪಿಯನ್ನು ಎಲ್ಲಿಟ್ಟಿದ್ದೆನೋ ಗೊತ್ತಿಲ್ಲ. ಇದು 1956ನೆಯ ಇಸವಿಯ ಮಾತು.

1959ನೇ ಇಸವಿಯಲ್ಲಿ ಅಜಮೀರದಲ್ಲಿ ಆಚಾರ್ಯ ವೀರಸಾಗರರ ಜೊತೆ, ಚಾತುರ್ಮಾಸ ಮಾಡುವಾಗ ವೀರಸಾಗರರ ಒಂದು ಚಿಕ್ಕ ಸ್ತುತಿಯನ್ನು ಉಪಜಾತಿ ಛಂದಸ್ಸಿನಲ್ಲಿ ರಚಿಸಿದೆ. ಆ ನಂತರ ಶ್ರವಣ ಬೆಳಗೊಳದಲ್ಲಿ ಬಾಹುಬಲಿಯ ಸ್ತುತಿಯನ್ನು ವಸಂತ ತಿಲಕ ಛಂದಸ್ಸಿನಲ್ಲಿ ರಚಿಸಿದೆ. ನಂತರ ಅನೇಕ ಸ್ತುತಿಗಳನ್ನು ರಚಿಸಿದ್ದೆ. ಯಾವುದೇ ಟೀಕಾ ಗ್ರಂಥವನ್ನು ರಚಿಸಲು ಆಗಿರಲಿಲ್ಲ. 1978ರಲ್ಲಿ ನಿಯಮಸಾರ ಗ್ರಂಥಕ್ಕೆ ಸಂಸ್ಕೃತ ಟೀಕೆಯನ್ನು ಪ್ರಾರಂಭಿಸಿದೆ. 73 ಗಾಹೆಗಳ ಟೀಕೆಯನ್ನು ಅದೇ ವರ್ಷ ಮಾಡಿ ಮುಗಿಸಿದೆ. ಅನಂತರ ಪಂಚ ಕಲ್ಯಾಣ ಪ್ರತಿಷ್ಠೆಯ ನಂತರ ಚಿಕ್ಕ ಚಿಕ್ಕ ಪುಸ್ತಕಗಳ ಲೇಖನ ಕಾರ್ಯವನ್ನು ಪ್ರಾರಂಭಿಸಿದ್ದರಿಂದ 1984ರ ಪ್ರಶಿಕ್ಷಣ ಶಿಬಿರದಲ್ಲಿ ಪಂಡಿತ ತಿಲಕ ಶ್ರೀ ಮಕ್ಖನಲಾಲರನ್ನು ನೋಡಿದ್ದೆ.

1956ರಲ್ಲಿ ಜಯಪುರದಲ್ಲಿ ಚಾತುರ್ಮಾಸ ಮಾಡುವ ಸಮಯದಲ್ಲಿ ಶ್ರಾವಿಕೂ ಆಶ್ರಮದ ಸಂಚಾಲಕಿ ಬ್ರಹ್ಮಚಾರಿಣಿ ಸುಮತಿಬಾಯಿಯವರು ಬಂದಿದ್ದರು. ಅವರು ಆಚಾರ್ಯರ ಜೊತೆ ಕುಳಿತುಕೊಂಡು ಷಟ್ಖಂಡಾಗಮದ ಬಗ್ಗೆ ಚೆನ್ನಾಗಿ ಚರ್ಚೆ ಮಾಡುತ್ತಿದ್ದರು. ಅವರ ಜೊತೆ ಕುಮಾರಿ ವಿದ್ಯುತ್‌ಲತಶಾಹ ಮತ್ತು ಕುಮಾರಿ ಸ್ನೇಹಲತದೋಶಿಯು ಕೂಡ ಇದ್ದರು. ಸ್ನೇಹಲತ ನನ್ನ ಹತ್ತಿರ ಇದ್ದ ಬ್ರಹ್ಮಚಾರಿ ಸೋನುಬಾಯಿಯ ಮಗಳು. ಸೋನುಬಾಯಿಯು ಅಮ್ಮ "ಸ್ನೇಹಲತ ಮದುವೆ ಆಗಲು ಬಯಸುತ್ತಿಲ್ಲ. ಆದ್ದರಿಂದ ಅವಳು ಸಂಘದಲ್ಲಿಯೇ ಇರಲಿ. ನೀವು ಸಂಘದಲ್ಲಿ ಇರಲು ಪ್ರೇರಣೆ ಕೊಡಿ. ಜಿನಮತಿಯಂತೇ ಇವಳಿಗೂ ಅಧ್ಯಯನ ಮಾಡಿಸಿ.

---

೧. **ಕಿಂ ತೇ ಗೃಹಾಃ ಕಿಮಿಹ ತೇ ಗೃಹಿಣೋ ನು ಯೇಷಾಮಂತರ್ಮನಸ್ಸು ಮುನಯೋ ನ ಹಿ ಸಂಚರಂತಿ ।**
ಸಾಕ್ಷಾದಥ ಸ್ಮೃತಿವಶಾಚ್ಚರಣೋದಕೇನ ನಿತ್ಯಾಪವಿತ್ರಿತಂ ಧರಾಗ್ರಶಿರಃ ಪ್ರದೇಶಾಃ ॥ 97 ॥
ಮುನಿಗಳ ಕಾಲಿನ ನೀರಿನ ಸ್ಪರ್ಶದಿಂದಲೇ ಮನೆಯು ಪವಿತ್ರವಾಗುತ್ತದೆ. ಅವರ ಮಸ್ತಕವು ಪವಿತ್ರವಾಗುತ್ತದೆ. ಯಾರ ಮನೆಗೆ ಮುನಿಗಳ ಪ್ರವೇಶವಾಗುವುದಿಲ್ಲವೋ, ಯಾವ ಗೃಹಸ್ಥನ ಮನಸ್ಸಿಗೆ ಮುನಿಗಳ ಪ್ರವೇಶವಾಗುವುದಿಲ್ಲವೋ, ಅವರ ಮನೆ, ಮನಗಳೆರಡು ನಿಷ್ಪ್ರಯೋಜನ. ಇದಕ್ಕಾಗಿಯೇ ಗೃಹಸ್ಥರು ಉತ್ತಮವಾದ ದಾನವನ್ನು ಕೊಡಬೇಕು. ಗುರುಗಳ ಆಗಮನದಿಂದ ಮನೆ ಪವಿತ್ರವಾಗುತ್ತದೆ.

ಆಶ್ರಮದಲ್ಲಿ ಬಹಳಷ್ಟು ಹುಡುಗಿಯರು ಇದ್ದಾರೆ. ಅವರೆಲ್ಲರ ವಿಚಾರ ಆಚಾರ ಬೇರೆ ಬೇರೆಯಾಗಿದೆ. ಆದರೆ ಇಲ್ಲಿ ತಮ್ಮ ಹತ್ತಿರ ಇದ್ದರೆ ಅವಳಿಗೆ ಒಳ್ಳೆಯ ತಿಳುವಳಿಕೆ ಬರುತ್ತದೆ. ನನಗೂ ಕೂಡ ಅವಳು ಇಲ್ಲೇ ಇರಲಿ ಎಂದು ಆಸೆ. ಅವಳ ಬದುಕು ಉಜ್ವಲವಾಗಲಿ ಎಂದು ನಾನು ಯಾವಾಗಲೂ ಯೋಚಿಸುತ್ತಿರುತ್ತೇನೆ" ಎಂದಳು.

ನಾನು ಅವಳನ್ನು ಸಂಘದಲ್ಲೇ ಇರಲು ಹೇಳಿದೆ. ಅವಳು ಒಪ್ಪಿದಳು. ಆದರೆ ಸುಮತಿಬಾಯಿಯು ಇದಕ್ಕೆ ಒಪ್ಪಿಕೊಳ್ಳಲಿಲ್ಲ. ಅವಳು ಆಶ್ರಮದಲ್ಲಿ ಓದುತ್ತಿದ್ದಾಳೆ, ಅಲ್ಲೇ ಓದಲಿ, ಇಲ್ಲಿ ಬಿಡಲು ನಾನು ಒಪ್ಪಲಾರೆ ಎಂದರು. ಸ್ನೇಹಳಿಗೆ ನನ್ನಲ್ಲೇ ಇರಲು ಮನಸ್ಸು. ಆದರೆ ಸುಮತಿಬಾಯಿಯ ಮಾತು ಕೇಳಿ ಗೊಂದಲದಲ್ಲಿ ಬಿದ್ದಳು. ಸುಮತಿಬಾಯಿಯು ಆಚಾರ್ಯರಲ್ಲಿಯೇ ವಿಷಯ ಪ್ರಸ್ತಾಪಿಸಿ ಮಹಾರಾಜಜೀ ಸ್ನೇಹಳನ್ನು ನಾನು ಕರೆದುಕೊಂಡು ಹೋಗಬೇಕು. ಜ್ಞಾನಮತೀಜೀ ಅವಳನ್ನು ತಮ್ಮ ಹತ್ತಿರ ಇಟ್ಟುಕೊಳ್ಳಲು ಬಯಸುತ್ತಿದ್ದಾರೆ. ಅವರಿಗೆ ನೀವು ತಿಳುವಳಿಕೆ ಹೇಳಿ ಎಂದು ವಿನಂತಿಸಿದಳು. ಅದಕ್ಕೆ ಆಚಾರ್ಯರು ನನಗೆ ಬ್ರಹ್ಮಚಾರಿ ಸುಮತಿಬಾಯಿ ಸ್ನೇಹಳನ್ನು ಇಲ್ಲಿ ಬಿಟ್ಟಿರಲು ಸಿದ್ಧಳಿಲ್ಲ. ಆದ್ದರಿಂದ ಅವಳನ್ನು ಕಳುಹಿಸಿಕೊಡು ಎಂದರು. ಆದರೆ ಸೋನುಬಾಯಿ ಅವಳನ್ನು ಇಲ್ಲೇ ಇಟ್ಟುಕೊಳ್ಳಿ ಎಂದು ಒತ್ತಾಯ ಮಾಡುತ್ತಿದ್ದರು. ನಾನು ಇರಲಿ ಎಂದು ಹೇಳಿದರೂ ಆಚಾರ್ಯರು ಒಪ್ಪಲಿಲ್ಲ. ಈ ವಿಷಯವಾಗಿ ನನಗೂ ಬಹಳ ಖೇದವಾಯಿತು. ಸ್ನೇಹಲತ ಬಹಳ ತೀಕ್ಷ್ಣಮತಿಯಾಗಿದ್ದಳು. ಗೊಮ್ಮಟಸಾರದ ಜೀವಕಾಂಡವನ್ನು ಓದಲು ಪ್ರಾರಂಭಿಸಿದ್ದಳು. ನೂರು ಗಾಥೆಯವರೆಗೂ ಓದಿ ಮುಗಿಸಿದ್ದಳು. ಒಂದೂವರೆ ತಿಂಗಳು ಕಳೆದಿತ್ತು. ಅವಳ ತಂದೆ ಲಾಲಚಂದ್ರದೋಷಿಯವರು ಬಂದಿದ್ದರು. ಅವರಿಗೆ ಸುಮತಿಬಾಯಿಯು ಪತ್ರ ಬರೆದು ಅವಳನ್ನು ಖಾಸಿಯ ಜಯಪುರದಿಂದ ಕರೆದು ತರಲು ಆಗ್ರಹ ಪಡಿಸಿದ್ದರು. ಇದರಿಂದ ಹುಡುಗಿಗೆ ಮನಸ್ಸು ಇರದಿದ್ದರೂ ತಂದೆಯ ಜೊತೆ ಕಳುಹಿಸಲು ಏರ್ಪಾಟಾಯಿತು. ಬ್ರ. ಸೋನುಬಾಯಿ ತನ್ನ ಗಂಡನ ಹತ್ತಿರ ದೀಕ್ಷೆ ತೆಗೆದುಕೊಳ್ಳಲು ಅನುಮತಿಯನ್ನು ಬೇಡಿದರು.

ಅವರಾದರೂ ಸರಳ ಭಾವದಿಂದ ಆರ್ಚಾಯರ ಹತ್ತಿರ ಬಂದು ನಿವೇದಿಸಿದರು. ಮಹಾರಾಜರೇ ಅವಳು ದೀಕ್ಷೆ ತೆಗೆದುಕೊಳ್ಳಲು ಬಯಸುತ್ತಿದ್ದಾಳೆ. ಅದಕ್ಕೆ ನನ್ನದೇನೂ ತೊಂದರೆ ಇಲ್ಲ. ಅವಳ ಯೋಗ್ಯತೆಯನ್ನು ನೋಡಿ ತಾವು ದೀಕ್ಷೆ ಕೊಡಬಹುದು ಎಂದು ತನ್ನ ಒಪ್ಪಿಗೆಯನ್ನು ನೀಡಿದರು. ಸೋನುಬಾಯಿ ವ್ರತ ನಿಯಮಗಳನ್ನು ಪಾಲಿಸುವುದರಲ್ಲಿ ಬಹಳ ಗಟ್ಟಿ. ಜ್ಞಾನ ಅಲ್ಪವಾಗಿದ್ದರೂ ಶ್ರದ್ಧೆ ಅಚಲವಾಗಿತ್ತು. ವೈರಾಗ್ಯವು ಮೂಡಿತ್ತು. ಇದರಿಂದಾಗಿ ಆಚಾರ್ಯರು ದೀಕ್ಷೆಗಾಗಿ ಮುಹೂರ್ತವನ್ನು ನೋಡಿಸಿದ್ದರು. ಅದರಲ್ಲಿ ದೀಕ್ಷೆ ನಡೆಯಲಿಲ್ಲ. ಚಾತುರ್ಮಾಸ ಸುಗಮವಾಗಿ ಕಳೆಯಿತು. ನಂತರ ಆಚಾರ್ಯರು ಜಯಪುರದ ನಗರಕ್ಕೆ ಬಂದರು. "ಲೂಣ್ಯ"ದ ಮಂದಿರದಲ್ಲಿ ಎಲ್ಲ ಮುನಿವರ್ಗದವರು ವಿರಾಜಮಾನರಾಗಿದ್ದರು. ಆರ್ಯಿಕೆಯರು 'ಗೋಧಾ'ದ ಮಂದಿರದಲ್ಲಿ ತಂಗಿದ್ದೆವು. ಕೆಲವು ದಿನಗಳ ನಂತರ ಸಂಘ ಖಜಾಂಚಿಯ ನಶಿಯಾಗೆ ಬಂದಿತು. ಅಲ್ಲಿ ಬ್ರಹ್ಮಚಾರಿ ಸೋನುಬಾಯಿಗೆ ದೀಕ್ಷೆ ಆಯಿತು. ಅವರಿಗೆ ಪದ್ಮಾವತಿ ಎಂದು ಹೆಸರಿಟ್ಟರು. ಇಲ್ಲಿ ಅಷ್ಟಾಹ್ನಿಕ ಪರ್ವದಲ್ಲಿ ಸಿದ್ಧಚಕ್ರ ಆರಾಧನೆಯನ್ನು ತುಂಬ ಜನ ಹೆಂಗಸರು ಗಂಡಸರೂ ಸೇರಿ ವಿಜೃಂಭಣೆಯಿಂದ ಮಾಡಿದರು.

೧೭

ಆಚಾರ್ಯರು ಒಂದು ದಿನ ಆಜ್ಞೆಯನ್ನು ಕೊಟ್ಟರು. ಚಾತುರ್ಮಾಸಕ್ಕೆ ಮೊದಲೇ ನೀವೆಲ್ಲರು ಎರಡು ಗುಂಪುಗಳಾಗಿ ಹತ್ತಿರದ ಊರುಗಳಲ್ಲಿ ವಿಹರಿಸಿ ಎಂದು. ಗುರುಗಳ ಆಜ್ಞೆಯಂತೆ ಆರ್ಯಿಕೆ ವೀರಮತಿಯು ಸಂಘದಲ್ಲಿದ್ದ ಆರ್ಯಿಕೆಯರ ಜೊತೆ ಯಾವುದೋ ಊರಿಗೆ ಹೋಗಲು ತೀರ್ಮಾನಿಸಿದ್ದರು. ನನಗೆ

ಮನಸ್ಸಿಲ್ಲದಿದ್ದರೂ ಗುರುಗಳ ಆಜ್ಞೆಯಂತೆ ಜಯಪುರದಿಂದ ಬಗರೂಗೆ ಹೋಗಲು ತೀರ್ಮಾನಿಸಿದ್ದೆ. ಕೆಲವು ದಿನಗಳ ಮೊದಲು ಸನ್ಮತಿ ಸಾಗರರು ಗುರುಗಳಿಂದ ಅನುಮತಿಯನ್ನು ಪಡೆಯದೆ ಹೋಗಿದ್ದರಿಂದ ಆಚಾರ್ಯರು ನನ್ನ ಹತ್ತಿರ ಹೇಳುತ್ತಲೇ ಇದ್ದರು. ಜ್ಞಾನಮತಿ ನೀನು ಕ್ಷುಲ್ಲಕ ಸನ್ಮತಿ ಸಾಗರರನ್ನು ಮತ್ತೆ ಸಂಘಕ್ಕೆ ಕರೆದುಕೊಂಡು ಬಾ ಎಂದು.

ನಾನು ವಿಹಾರಕ್ಕೆ ಹೊರಡುವಾಗ ಆಚಾರ್ಯರಲ್ಲಿ ಅನುಮತಿಯನ್ನು ಪಡೆಯಲು ಹೋದಾಗ ಹೇಳಿದರು. ಬಾಯಿ ನಿನಗೆ ಹೇಳುವುದೇನೂ ಇಲ್ಲ. ಆದರೂ ಒಂದು ಮಾತು ಹೇಳುತ್ತೇನೆ. ನೀನು ಯಾವಾಗಲೂ ನಿನ್ನ ಹೆಸರಿನ ಮೇಲೆ ಗಮನವನ್ನು ಇಟ್ಟಿರು ಎಂದರು. ಈ ಮಾತನ್ನು ಕೇಳಿದ ಬ್ರಹ್ಮಚಾರಿ ಶ್ರೀಲಾಲರು ಕೇಳಿದರು. 'ಮಹಾರಾಜರೇ ತಾವು ವೃದ್ಧ ಆರ್ಯಿಕೆಯರು ವಿಹಾರ ಹೋಗುವಾಗಲೇ ಅನೇಕ ತಿಳುವಳಿಕೆಯನ್ನು ಹೇಳಿ ಕಳುಹಿಸಿದಿರಿ. ಆದರೆ ಇವರಿಗೆ ಮಾತ್ರ ಒಂದೇ ಮಾತು ಹೇಳಿದಿರಲ್ಲ. ಅದೂ ಹೊಸದಾಗಿ ದೀಕ್ಷೆ ಪಡೆದವರಿಗೆ' ಎಂದರು. ಅದಕ್ಕೆ ಆಚಾರ್ಯರು ಬಾಯಿಜೀಗೆ ಕೇವಲ ಎರಡೇ ಶಬ್ದಗಳ ಶಿಕ್ಷಣವೇ ಬೇಕಾದಷ್ಟು ಆಯಿತು ಎಂದರು. ಗುರುಗಳ ಎರಡು ಶಬ್ದಗಳ ಮಾತಿನಲ್ಲೇ ನಾನು ಅಮೂಲ್ಯ ಶಿಕ್ಷಣವನ್ನು ಹೃದಯದಲ್ಲಿ ಧಾರಣೆ ಮಾಡಿದೆ. ಗುರುಗಳಿಗೆ ನಮಸ್ಕರಿಸುತ್ತಾ ಆಶೀರ್ವಾದವನ್ನು ಪಡೆದು ಕ್ಷುಲ್ಲಿಕೆಯರಾದ ಜಿನಮತಿ ಮತ್ತು ಪದ್ಮಾವತಿಯ ಜೊತೆ 'ಬಗರೂ'ವಿನ ಕಡೆ ವಿಹಾರ ಹೊರಟೆ. ಆಗ ನಮ್ಮ ಜೊತೆ ದಕ್ಷಿಣದ ಒಬ್ಬ ಬ್ರಹ್ಮಚಾರಿಣೀ ಚತುರಬಾಯಿಯವರು ಜಿನೇಂದ್ರ ದೇವರ ಬಿಂಬವನ್ನು ತೆಗೆದುಕೊಂಡು ನಮ್ಮ ಜೊತೆ ಹೊರಟರು. ಆಚಾರ್ಯರು ಹೇಳಿದರು 'ಜ್ಞಾನಮತೀ ಈ ದಿನಗಳಲ್ಲಿ ತೇರಪಂಥ ಮತ್ತು ಬೀಸಪಂಥಗಳು ಆಚರಣೆಯಲ್ಲಿವೆ. ಆದ್ದರಿಂದ ನಿನ್ನ ಜೊತೆ ಬ್ರಹ್ಮಚಾರಿಣಿಯು ಜಿನಬಿಂಬವನ್ನು ತಂದಿರುವುದರಿಂದ ನೀನು ಅಭಿಷೇಕ ಪೂಜೆಗಳನ್ನು ಮಾಡಿಸಿ ನೋಡು. ಏಕೆಂದರೆ ಪುರೋಹಿತರು ಶ್ರಾವಕ ಸ್ತ್ರೀಯಿಂದ ಅಭಿಷೇಕ ಮಾಡುವುದನ್ನು ಒಪ್ಪುವುದಿಲ್ಲ. ಇದರಿಂದಾಗಿ ನಮ್ಮಿಂದ ವಿಸಂವಾದವು ಆಗುವುದು ಬೇಡ ಇದು ಸದಾ ನಿನ್ನ ಗಮನದಲ್ಲಿರಲಿ.

ಬಗರೂ ಊರಿನಲ್ಲಿ ನಮಗೆ ಒಳ್ಳೆಯ ಸ್ವಾಗತ ದೊರಕಿತು. ಕ್ಷುಲ್ಲಕ ಸನ್ಮತಿ ಸಾಗರರು ಸಮಾಜದ ಹಲವಾರು ಸ್ತ್ರೀಪುರುಷರೊಡಗೂಡಿ 'ನಶಿಯಾ'ದ ಪ್ರಾಂಗಣದಲ್ಲಿ ಸ್ವಾಗತಿಸಲು ಬಂದಿದ್ದರು. ಅಲ್ಲಿಂದ ನಾವು ಊರಿನ ಜಿನಮಂದಿರದ ಮುಂದಿನ ಧರ್ಮಶಾಲೆಯಲ್ಲಿ ತಂಗಿದೆವು. ಇಲ್ಲಿ ನಿಯಮಿತವಾಗಿ ಉಪದೇಶ ಸಾಗತೊಡಗಿತು. ನನ್ನ ಸ್ವಾಧ್ಯಾಯದ ಸಮಯದಲ್ಲಿ ಕ್ಷುಲ್ಲಕರು ಸಹ ಬಂದು ಕುಳಿತುಕೊಳ್ಳುತ್ತಿದ್ದರು. ನಾನು ಸಮಯ ನೋಡಿಕೊಂಡು ಒಬ್ಬಂಟಿಗರಾಗಿ ಇರದೆ ಸಂಘಕ್ಕೆ ಬರುವಂತೆ ತಿಳುವಳಿಕೆ ಹೇಳತೊಡಗಿದೆ. ಅವರು ಒಪ್ಪಿಕೊಂಡರು. ಆಗ ಆಚಾರ್ಯರ ಆದೇಶವನ್ನು ಹೇಳಿದಾಗ ಅವರು ಮಾತಾಜಿ ನೀವೇ ನನ್ನನ್ನು ವಾಪಸ್ಸು ಕರೆದುಕೊಂಡು ಆರ್ಚಾಯರ ಸಾನಿಧ್ಯವನ್ನು ದೊರಕಿಸಿ ಕೊಡಿ ಎಂದರು. ಒಂದು ದಿನ ಮುನಿಗಳಾದ ಶಿವಸಾಗರರು ಕ್ಷುಲ್ಲಕ ಚಿದಾನಂದ ಸಾಗರರೊಡಗೂಡಿ ಬಗರೂ ಗ್ರಾಮಕ್ಕೆ ಬಂದರು. ಅವರು ಬಂದಿದ್ದರಿಂದ ಅಲ್ಲಿ ಚೆನ್ನಾಗಿ ಧರ್ಮ ಪ್ರಭಾವನೆ ಆಯಿತು. ಇಲ್ಲಿಂದ ಹತ್ತಿರದ ಝೂಗ ಗ್ರಾಮಕ್ಕೆ ಹೋಗಿ, ಧರ್ಮಪ್ರಭಾವನೆಯನ್ನು ಮಾಡಿ ಮೋಜಮಾಬಾದಿಗೆ ಹೋದೆ. ಶ್ರೀ ಶಿವಸಾಗರರು ಇಬ್ಬರು ಕ್ಷುಲ್ಲಕರು ಕೂಡ ಅಲ್ಲಿಗೆ ಬಂದರು. ಬೇಸಿಗೆಯ ದಿನಗಳಾಗಿದ್ದರಿಂದ ಜಿನಮಂದಿರದ ನೆಲಮಾಳಿಗೆಯ ತಂಪಿನಲ್ಲಿ ಕುಳಿತು ದೇವರ ಧ್ಯಾನ ಮಾಡುವುದರಲ್ಲಿ ಅತೀವ ಆನಂದ ದೊರಕುತ್ತಿತ್ತು.

ಇಲ್ಲಿಯ ಜನ ಒಳ್ಳೆಯ ಧರ್ಮಲಾಭವನ್ನು ಪಡೆದರು. ಇಲ್ಲಿಯ ಹೆಂಗಸರು ಸಹ ಸ್ವಾಧ್ಯಾಯ ಮತ್ತು

ಧರ್ಮಪ್ರೇಮಿಗಳಾಗಿದ್ದರು. ಈ ದಿನಗಳಲ್ಲಿ ನನ್ನಲ್ಲಿ ಅಧ್ಯಯನ ಮಾಡಲು ನೆನವಾದಿಂದ ಒಬ್ಬ ಬ್ರಹ್ಮಚಾರಿ ಬಂದಿದ್ದರು. ಚಿಕ್ಕ ವಯಸ್ಸಿನಲ್ಲೇ ವೈರಾಗ್ಯ ಪರರಾದ ಅವರು ದೀಕ್ಷೆ ಪಡೆಯುವ ಇಚ್ಛೆ ಉಳ್ಳವರಾಗಿದ್ದರು. ಕ್ಷಯೋಪಶಮ ಮಂದವಾಗಿತ್ತು[೧]. ಇಲ್ಲಿಂದ ಶಿವಸಾಗರರ ಜೊತೆಗೂಡೇ ಚೋರು ಎಂಬ ಗ್ರಾಮಕ್ಕೆ ವಿಹಾರ ಹೊರಟೆವು. ಅಲ್ಲಿಗೆ ಬ್ರಹ್ಮಚಾರಿ ಲಾಢಮಲ್ಲರ ಪತ್ರವು ಆಚಾರ್ಯರ ಆರೋಗ್ಯದ ಬಗ್ಗೆ ವಿಷಯವನ್ನು ಹೊತ್ತು ತಂದಿತು. ಅವರು ಸಲ್ಲೇಖನದ ವಿಚಾರವನ್ನು ಮಾಡುತ್ತಿದ್ದಾರೆಂಬ ವಿಷಯ ಕೇಳಿ ಆತಂಕವಾಯಿತು. ಶಿವಸಾಗರರು ಅಲ್ಲಿಗೆ ವಿಹಾರಮಾಡುವ ನಿರ್ಧಾರ ಮಾಡಿ ಅವರು ಕ್ಷುಲ್ಲಕರೊಡಗೂಡಿ ಜಯಪುರದ ಕಡೆಗೆ ಹೊರಟರು. ನಾನು ಕ್ಷುಲ್ಲಕಿಯರೊಡಗೂಡಿ ಬೇರೆ ಮಾರ್ಗವಾಗಿ ಹೊರಟೆ. ಎರಡು ಮೂರು ದಿನಗಳಲ್ಲಿ ಎಲ್ಲ ಸಾಧು ಸಾಧ್ವಿಯರೆಲ್ಲ ಆರ್ಚಾಯರ ಸಾನಿಧ್ಯವನ್ನು ಸೇರಿದೆವು. ಅವರು ಆರೋಗ್ಯವಾಗಿರುವುದು ನೋಡಿ ನೆಮ್ಮದಿ ಯಾಯಿತು. ಆಚಾರ್ಯರು ಇಷ್ಟು ಆತುರದಲ್ಲಿ ಏಕೆ ಬಂದಿರಿ ಎಂದರು. ಅದಕ್ಕೆ ನಾವು ನಿಮ್ಮ ಆಜ್ಞೆಯಂತೆ ನಾಲ್ಕಾರು ಊರುಗಳಲ್ಲಿ ವಿಹಾರ ಮಾಡಿದ್ದೇವೆ. ಈಗ ನಿಮ್ಮ ಸಾನಿಧ್ಯದಲ್ಲಿಯೇ ಇದ್ದು ನಿಮ್ಮ ಜೀವನದ ಅನುಭವದ ಲಾಭವನ್ನು ಪಡೆಯಬೇಕು. ಎರಡು ದಿನಗಳಲ್ಲಿ ವೀರಮತಿ ಮಾತಾಜೀಯವರು ತಮ್ಮ ಸಂಘದೊಡನೆ ಬಂದು ಸೇರಿದರು. ನಾವೆಲ್ಲರೂ ಮತ್ತೆ ಗುರುಚರಣಗಳಲ್ಲಿ ಒಂದಾದೆವು. ಇಲ್ಲಿ ಮತ್ತೆ ಧರ್ಮವೇ ಮೂರ್ತಿವೆತ್ತಂತೆ ಭಾಸವಾಯಿತು.

ಒಂದು ದಿನ ಸನ್ಮತಿ ಸಾಗರರು ಮಾತಾಜಿ ನಿಮ್ಮಿಂದ ಪ್ರತಿಕ್ರಮಣದ ಅರ್ಥವನ್ನು ತಿಳಿಯಬೇಕಾಗಿದೆ ಎಂದರು. ನಾನು ಆಚಾರ್ಯರಿಂದ ಆಜ್ಞೆಯನ್ನು ಪಡೆದು ಕ್ಷುಲ್ಲಕ ಸನ್ಮತಿ ಸಾಗರರು, ಚಿದಾನಂದ ಸಾಗರರು ಕ್ಷುಲ್ಲಿಕ ಚಂದ್ರಮತಿ, ಜಿನಮತಿ, ಪದ್ಮಾವತಿ ಎಲ್ಲರಿಗೂ ಪ್ರತಿಕ್ರಮಣ ಗ್ರಂಥದ ಆಧಾರದಿಂದ ಅರ್ಥವನ್ನು ಹೇಳತೊಡಗಿದೆ. ವಯೋವೃದ್ಧರಾದ ಆರ್ಯಿಕೆಯವರಿಗೆ ಹಿಡಿಸತೊಡಗಿತು. ನಾನು ಎಲ್ಲರಿಗೂ ದೇವವಂದನೆಯ ವಿಧಿಯನ್ನು ಹೇಳತೊಡಗಿದೆ. ಅಲ್ಲಿಯವರೆಗೆ ಸಾಧು ಸಂತರಲ್ಲಿ ದೇವವಂದನೆಯು ಪ್ರಚಲಿತದಲ್ಲಿ ಇರಲಿಲ್ಲ. ಇದರಲ್ಲಿ ಈರ್ಯಾಪಥಶುದ್ಧಿಯನ್ನು ಮಾಡಿಕೊಂಡು ವಿಧಿವತ್ತಾಗಿ ಸಾಮಾಯಿಕವನ್ನು ಸ್ವೀಕರಿಸಿ ಕೃತಿಕರ್ಮ ಪೂರ್ವಕವಾಗಿ ಚೈತ್ಯಭಕ್ತಿ ಮತ್ತು ಪಂಚಗುರುಭಕ್ತಿಯನ್ನು ಮಾಡಲಾಗುತ್ತದೆ. ಕ್ಷುಲ್ಲಕ ಚಿದಾನಂದ ಸಾಗರರು ಈ ವಿಧಿಯನ್ನು ಬಹಳ ಪರೀಕ್ಷಿಸಿ ಹೇಳತೊಡಗಿದರು. ಮಾತಾಜೀ ಶ್ವೇತಾಂಬರ ಸಂಪ್ರದಾಯದಲ್ಲಿ ಸಾಧು ಸಾಧ್ವಿಯರು ಹೀಗೆ ಕೃತಿಕರ್ಮ ಮುಂತಾದವುಗಳಲ್ಲಿ ಆಸಕ್ತಿ ತೋರಿಸುತ್ತಾರೆ ಆದಾಗ್ಯೂ ನಮಗೂ ಅವರಿಗೂ ಕ್ರಿಯೆಗಳಲ್ಲಿ ಬಹಳ ಅಂತರವಿದ್ದರೂ ಮೂರು ಬಾರಿ ಸಾಮಾಯಿಕ ಮಾಡುವುದು ಒಂದೇ ರೀತಿ ಇದೆ ಅಲ್ಲವೇ ಎಂದರು.

ಈ ರೀತಿಯ ವಿಧಿಗಳನ್ನು ಆಚರಿಸುವುದರಲಿ ಸಾಧುಗಳಿಗೆ ಉತ್ಸಾಹ ಉಂಟಾಗ ತೊಡಗಿತು. ಆ ದಿನಗಳಲ್ಲಿ ಸುಮಾರುಸಂಜೆ ಐದು ಗಂಟೆಯ ಸಮಯದಲ್ಲಿ ಶಿವಕುಮಾರ ಮುನಿ ಮಹಾರಾಜರು ಎಲ್ಲಾ ಆರ್ಯಿಕೆ ಕ್ಷುಲ್ಲಕ ಮತ್ತು ಕ್ಷುಲ್ಲಿಕೆಯರನ್ನು ಕೂರಿಸಿಕೊಂಡು ಚರ್ಚೆ ಮಾಡುತ್ತಿದ್ದರು. ಅದರಲ್ಲಿ ಮಾರ್ಗಣಸ್ಥಾನದ ಉತ್ತರ ಭೇದಗಳನ್ನು ಗುಣಸ್ಥಾನಗಳನ್ನು ಮತ್ತು ಮಾರ್ಗಣಸ್ಥಾನಗಳನ್ನು ಸಂಬಂಧಿಸಿ ಹೇಳಿದಾಗ ಬಹಳ ಆನಂದವೆನಿಸುತಿತ್ತು ಬೇಸಗೆಯ ಬಿಸಿಲಿನಲ್ಲಿ ದಿನವು ಎಷ್ಟು ದೀರ್ಘವೆನಿಸುತ್ತಿತ್ತು. ಆದರೂ ಧಾರ್ಮಿಕ ಚರ್ಚೆಯ ಅಮೃತ ಪಾನದಿಂದ ವಿಶೇಷ ತೃಪ್ತಿಯ ಅನುಭವವಾಗುತ್ತಿತ್ತು. ಎಲ್ಲಕ್ಕಿಂತ ವಿಶೇಷ ಲಾಭವೆಂದರೆ ಆಚಾರ್ಯ

---

೧. ಮುಂದೆ ಇವರು ಮುನಿದೀಕ್ಷೆ ಪಡೆದು ಭವ್ಯಸಾಗರರಾದರು. ಇವರ ಸಲ್ಲೇಖನವು ಆಯಿತು.

ದೇವರ ಸಾನಿಧ್ಯದಲ್ಲಿ ಪ್ರತಿದಿನ ಒಂದು ಗಂಟೆಯ ಸ್ವಾಧ್ಯಾಯದ ಲಾಭವಾಗುತ್ತಿತ್ತು. ಆ ಸಮಯದಲ್ಲಿ ಆಚಾರ್ಯರೇ ಶಾಸ್ತ್ರವನ್ನು ಓದಿ ಅರ್ಥ ಹೇಳುತ್ತಿದ್ದರು. ಅದನ್ನು ಕೇಳುವುದೇ ಒಂದು ಮಹಾನ್ ಭಾಗ್ಯವಾಗಿತ್ತು. ಯಾವಾಗಲೂ ಆಚಾರ್ಯರ ಮುಖಾರವಿಂದಗಳಿಂದ ಸೂಕ್ತಿರತ್ನಗಳ ಲಾಭವು ಸಿಗುತ್ತಲೇ ಇತ್ತು.

ನಾನು ಯಾವಾಗಲೂ ಆಚಾರ್ಯರ ಮುಂದೆ ನನ್ನ ಶಂಕೆಗಳ ಸಮಾಧಾನವನ್ನು ಪಡೆದುಕೊಳ್ಳುತ್ತಿದ್ದೆ. ಆ ಸಮಾಧಾನವು ನನಗೆ ಇಂದಿಗೂ ದೀಪಸ್ತಂಭದಂತೆ ತೋರುತ್ತಿದೆ. ಒಮ್ಮೆ ಆರ್ಯಿಕೆ ಸಿದ್ಧಮತಿ ಆಚಾರ್ಯರಲ್ಲಿ ಹೇಳಿದರು ನಮಗೆ 26 ಮೂಲಗಳು ಏಕೆಂದರೆ ನಮ್ಮ ಹತ್ತಿರ ವಸ್ತ್ರವಿದೆ ಮತ್ತು ನಾವು ಕುಳಿತು ಆಹಾರ ತೆಗೆದುಕೊಳ್ಳುತ್ತೇವೆ. ನನಗೂ ಈ ವಿಷಯದಲ್ಲಿ ಸಂಶಯವಿತ್ತು ಇದನ್ನು ಆಚಾರ್ಯರಲ್ಲಿ ಪ್ರಸ್ತಾಪಿಸಿದೆ. ಗುರುಗಳೇ ನಮಗೆ ಎಷ್ಟು ಮೂಲಗುಣಗಳು. ಅದಕ್ಕೆ ಆಚಾರ್ಯರು ಹೇಳಿದರು. ನಿಮಗೂ 28 ಮೂಲಗುಣಗಳೇ ದೀಕ್ಷೆ ಕೊಡುವ ಸಮಯದಲ್ಲೇ ಈ ಎಲ್ಲ ಸಂಸ್ಕಾರವನ್ನು ನಿಮ್ಮ ತಲೆಯ ಮೇಲೆ ಮಾಡಿರುತ್ತೇವಲ್ಲ. ಹೆಂಗಸರಿಗೆ ಸೀರೆ ಇರುವುದೇ ಮೂಲಗುಣ. ಅವರಿಗೆ ಸೀರೆ ಬಿಡಲು ಸಾಧ್ಯವಿಲ್ಲ. ಅವರಿಗೆ ಎರಡೇ ಸೀರೆ ಹೇಳಿರುವುದು. ಒಂದು ವೇಳೆ ಅವರು ಮೂರು ಸೀರೆ ಇಟ್ಟುಕೊಂಡಿದ್ದೇ ಆದರೆ ಮೂಲಗುಣಕ್ಕೆ ಧಕ್ಕೆ ಬರುತ್ತದೆ. ಹೆಂಗಸರಿಗೆ ಕರಪಾತ್ರದಲ್ಲೇ ಆಹಾರ ತೆಗೆದುಕೊಳ್ಳಲು ಆಗಮದಲ್ಲಿ ಹೇಳಿದೆ. ಆದ್ದರಿಂದ ನಿಮಗೂ ಇಪ್ಪತ್ತೆಂಟು ಮೂಲಗುಣಗಳೇ ಇವೆ. ಇನ್ನೊಂದು ವಿಷಯವೆಂದರೆ ಪ್ರಾಯಶ್ಚಿತ್ತ ಗ್ರಂಥದಲ್ಲಿ ಆರ್ಯಿಕೆಯರಿಗೂ ಮುನಿಗಳಿಗೂ ಸಮಾನವಾಗಿ ಪ್ರಾಯಶ್ಚಿತ್ತವನ್ನು ಕ್ಷುಲ್ಲಕರಿಗೆ ಅರ್ಧದಷ್ಟು ಮಾತ್ರ ವಿಧಿಸಲು ಹೇಳಿದೆ. ಮೂರನೆಯ ಮಾತೆಂದರೆ ಶಾಸ್ತ್ರದಲ್ಲಿ ಮುನಿಗಳಿಗೆ ಸಮಾನವಾಗಿಯೇ ಆರ್ಯಿಕೆಯರಿಗೂ ಪೂಜೆ, ಗೌರವವನ್ನು ಸಲ್ಲಿಸಬೇಕೆಂದಿದೆ.

ಆಚಾರ್ಯರಿಂದ ದೊರೆತ ಸಮಾಧಾನದಿಂದ ನನಗೆ ತೃಪ್ತಿಯಾಯಿತು. ಒಮ್ಮೆ ಉದ್ದಿಷ್ಠ ದೋಷದ ಬಗ್ಗೆ ಆಚಾರ್ಯರಲ್ಲಿ ಜಿಜ್ಞಾಸೆಯನ್ನು ವ್ಯಕ್ತಗೊಳಿಸಿದಾಗ ಹೇಳಿದರು. ಒಂದು ವೇಳೆ ಸಾಧುಗಳು ಆಹಾರ ತೆಗೆದುಕೊಳ್ಳುವುದಕ್ಕಾಗಿ ಕೃತ, ಕಾರಿತ, ಅನುಮೋದನೆಯನ್ನು ಮಾಡಿದರೆ ಆಗ ದೋಷ ಸಾಧುಗಳಿಗೆ ಬರುತ್ತದೆ. ಆದರೆ ಶ್ರಾವಕ ತನ್ನ ನಿಮಿತ್ತದಿಂದಲೇ ಶುದ್ಧ ಆಹಾರ ತಯಾರಿಸಿದರೆ ಆಗ ದೋಷವಾಗುವುದಿಲ್ಲ. ಈಗ ಚಾತುರ್ಮಾಸ ಕಾಲದಲ್ಲಿ ಶ್ರಾವಕನಾದವನು ಆರೋಗ್ಯದ ದೃಷ್ಟಿಯಿಂದ ಬಿಸಿನೀರನ್ನೇ ಕುಡಿಯುತ್ತಾರೆ. ಹಾಗೇ ಮುನಿಗಳಿಗೂ ಶುದ್ಧ ಆಹಾರ ಮಾಡಬೇಕೆಂದು ಭಾವನೆ ಅವರಲ್ಲಿ ಇರಬೇಕು ಶಾಂತಿಸಾಗರರ ಇಡೀ ಮುನಿಗಳ ಸಮೂಹವು ನಿರ್ದೋಷವಾದ ಚರ್ಯೆಯ ಆಚರಣೆಯನ್ನು ಸರ್ವಥಾ ನಡೆಯಿಸಿಕೊಂಡು ಹೋಗಬೇಕು. ನಾವೇ ಸಂಶಯಪಡಬಾರದು ಬೇರೆಯವರು ವ್ಯಕ್ತಪಡಿಸಿದ್ದೇ ಆದರೆ ನಾವು ಆಗಮದ ಪ್ರಮಾಣದಿಂದ ತೃಪ್ತಿ ಪಡಿಸಬೇಕು.

ಒಮ್ಮೆ ನನಗೆ ರಾತ್ರಿಯಲ್ಲಿ ಸಂಶಯ ಕಾಡತೊಡಗಿತು. ಬೆಳಿಗ್ಗೆ ಆದಮೇಲೆ ಆಚಾರ್ಯರಲ್ಲಿ ಪ್ರಾಯಶ್ಚಿತ್ತವನ್ನು ಬೇಡುತ್ತಾ ಭವಿಷ್ಯದಲ್ಲಿ ಉಂಟಾಗಬಹುದಾದ ಶಂಕೆಗೂ ಸಮಾಧಾನ ಕೇಳಿದೆ. ಅದಕ್ಕೆ ಆಚಾರ್ಯರು ಹೇಳಿದರು. ರಾತ್ರಿಯ ವೇಳೆ ಶಂಕೆ ಉಂಟಾದರೆ ಹತ್ತಿರದಲ್ಲೇ ಇರುವ ಶ್ರಾವಿಕೆ ಅಥವಾ ಬ್ರಹ್ಮಚಾರಿಣಿಯವರನ್ನು ಜೊತೆಯಲ್ಲಿ ಕರೆದುಕೊಂಡು ದೀಪದ ಬೆಳಕಿನಲ್ಲಿ ನಡೆಯಬೇಕು ಅಥವಾ ಯಾರು ಸಿಗಲಿಲ್ಲೆಂದರೆ ನೀವೆ ಕೈಯಲ್ಲಿ ಲಾಟೀನು ಹಿಡಿದುಕೊಂಡು ರಸ್ತೆಯಲ್ಲಿ ಹೋಗಬಹುದು. ಏಕೆಂದರೆ ಕತ್ತಲಲ್ಲಿ ನಡೆದರೆ ಈರ್ಯಾಪಥಿಕವು ಆಗಲಾರದು ಮತ್ತೆ ಬೀಳುವ ಸಂಭವವು ಇರುತ್ತದೆ. ಹಾಗೇ ಕೆಮ್ಮು ಕಫ ಹೆಚ್ಚಾಗಿದ್ದರೆ ಮರದ ಬಟ್ಟಲಲ್ಲಿ ಬೂದಿ ಹಾಕಿಸಿ ಹತ್ತಿರದಲ್ಲೇ ಇಟ್ಟುಕೊಂಡಿರಬೇಕು.

ಹೀಗೆ ಹಲವಾರು ಸಮಯೋಚಿತ ಸಮಸ್ಯೆಗಳಿಗೆ ಸಮಾಧಾನವನ್ನು ಕೊಡುತ್ತಿದ್ದರು. ಅದೇ ಸಮಾಧಾನವನ್ನು

ನಮ್ಮ ಆಚರಣೆಯಲ್ಲಿ ಇಂದಿಗೂ ಕೂಡ ನಾನು ಅನುಸರಿಸುತ್ತಿದ್ದೇನೆ. ಅವರು ಹೇಳುತ್ತಿದ್ದ ಸೂಕ್ತಿಗಳಲ್ಲಿ ಕೆಲವನ್ನು ಸದಾ ನೆನಪಿನಲ್ಲಿ ಇಟ್ಟುಕೊಂಡಿದ್ದೇನೆ.

೧. ಸೂಜಿಯ ಕೆಲಸ ಮಾಡಿ ಕತ್ತರಿಯ ಕೆಲಸವನ್ನಲ್ಲ.

೨. ಗುರು ಹೇಳಿದಂತೆ ಮಾಡು ಆದರೆ ಅವರು ಮಾಡಿದಂತೆ ಅಲ್ಲ. ಗುರುಗಳು ಅನ್ನತ್ಯಾಗ ಮಾಡಿದ್ದಾರೆ ಎಂದರೆ ಅವರ ಪ್ರಕೃತಿಗೆ ಆಗದೆ ಇರಬಹುದು. ಆದರೆ ಗುರುಗಳನ್ನು ನೋಡಿ ನೀವು ಅನ್ನ ಬಿಟ್ಟು ಬಿಟ್ಟರೆ ನಿಮ್ಮ ಅವಸ್ಥೆಏನಾಗಬಹುದು. ಆದ್ದರಿಂದಲೇ ಅವರು ಹೇಳಿದಂತೆ ಮಾತ್ರ ಮಾಡು ಎಂದಿರುವುದು.

೩. ಗಂಟನ್ನು ಕಟ್ಟಿ ಇಡಬೇಡಿ.

ಇವರ ಶಿಕ್ಷಾಪ್ರದವಾದ ಸೂಕ್ತಿಯಿಂದಲೇ ಇವರಲ್ಲಿ ಇಷ್ಟು ದೊಡ್ಡ ಸಂಘವಿತ್ತು ಎಂದರೆ ತಪ್ಪಾಗಲಾರದು. ಇವರ ಪಟ್ಟಾಧೀನ ದ್ವಿತೀಯ ಆಚಾರ್ಯರಾದ ಶಿವಸಾಗರರ ಸಂಘವು ದೊಡ್ಡದಾಗಿತ್ತು. ಅದಕ್ಕೂ ಇವರದೇ ಕೊಡುಗೆ ಆಗಿತ್ತು. ಇವತ್ತಿಗೂ ಇವರ ಮತ್ತೊಬ್ಬ ಶಿಷ್ಯರಾದ ಆಚಾರ್ಯ ಧರ್ಮಸಾಗರರ[೧] ಸಂಘವು ಕೂಡ ದೊಡ್ಡದಾಗಿದೆ. ಇಲ್ಲಿಗೆ ಗ್ರೀಷ್ಮಕಾಲದಲ್ಲಿ ಸೋಲಾಪುರದಿಂದ ಕುಮಾರಿ ವಿದ್ಯುಲ್ಲತಶಾಹ ಬಂದಳು. ಅವಳು ನನಗೆ ಒಂದು ತಿಂಗಳಿನಲ್ಲಿ ಅರ್ಥಮಾಡಿಕೊಳ್ಳಬಹುದಾದ ಚಿಕ್ಕ ಚಿಕ್ಕ ಗ್ರಂಥಗಳನ್ನು ಪಾಠ ಮಾಡಿರಿ ಎಂದು ಆಗ್ರಹಿಸಿದಳು. ಅದಕ್ಕಾಗಿ 'ಅಲಾಪ ಪದ್ಧತಿ' ಮತ್ತು ಏಕೀಭಾವ ಸ್ತೋತ್ರದ ಅರ್ಥವನ್ನು ಹೇಳಿಕೊಡಲು ನಿರ್ಧರಿಸಿದರೆ, ಪಾಠ ಹೇಳುವಾಗ ಮುನಿ, ಆರ್ಯಿಕೆ, ಕ್ಷುಲ್ಲಕ, ಕ್ಷುಲ್ಲಿಕೆ ಎಲ್ಲರೂ ಇರುತ್ತಿದ್ದುದರಿಂದ ಎಲ್ಲರಿಗೂ ಆಲಾಪ ಪದ್ಧತಿಯ 'ನಯ'ಗಳ ಚರ್ಚೆಯಲ್ಲಿ ಭಾಗವಹಿಸುತ್ತಿದ್ದರು. ಏಕೀಭಾವ ಸ್ತೋತ್ರದಲ್ಲಿಯ ಭಕ್ತಿಯ ಧಾರೆ ಹರಿಯುತ್ತಿತ್ತು. ಕ್ಷುಲ್ಲಿಕ ಚಂದ್ರಮತಿಯು ಗೃಹಸ್ಥಾಶ್ರಮದ ಪುತ್ರಿಯಾದ ವಿದ್ಯುಲ್ಲತಳನ್ನು ತ್ಯಾಗಮಾರ್ಗದಲ್ಲಿ ಹೆಚ್ಚು ಆಕರ್ಷಿಸುತ್ತಿದ್ದರು. ಹೀಗೆ ಆಚಾರ್ಯರ ನೆರಳಿನಲ್ಲಿ ಅಭಿಕ್ಷ್ಣ ಜ್ಞಾನೋಪಯೋಗ ನಡೆಯುತ್ತಿತ್ತು. ಆ ಸಮಯದಲ್ಲಿಯೇ ಮಹಾವೀರ ಕೀರ್ತಿಗಳ ಚತುರ್ವಿಧ ಸಂಘವು ಆಚಾರ್ಯರ ದರ್ಶನಾರ್ಥ ಬಂದಿತು. ಅವರು ಆಚಾರ್ಯರ ದರ್ಶನದಿಂದ ಪುನೀತರಾಗಿದ್ದಾರೆ. ಅವರ ಸಂಘದ ದರ್ಶನದಿಂದ ನಾನು ಆನಂದಿತಳಾದೆ. ಆಚಾರ್ಯರಿಂದ ದೀಕ್ಷಿತರಾಗಿದ್ದ ಆಚಾರ್ಯರಿಂದಲೇ ಕ್ಷುಲ್ಲಕ ದೀಕ್ಷೆಯನ್ನು ಪಡೆದವರಾಗಿದ್ದರಿಂದ ಅವರ ಅಂತಿಮ ಸಮಯದಲ್ಲಿ ಇದ್ದು ಸೇವೆ ಮಾಡಲು ಬಂದಿದ್ದ ಅವರ ಗುರುಭಕ್ತಿ ನೋಡಿ ಗದ್ಗದಿತಳಾದೆ.

೧೮

ಈ ಚಾತುರ್ಮಾಸದಲ್ಲಿ ಕ್ಷುಲ್ಲಿಕೆ ಚಂದ್ರಮತಿಯ ಆರೋಗ್ಯ ಹದಗೆಟ್ಟಿದ್ದರಿಂದ ನಾನು ಸ್ವಯಂ ವೈಯಾವೃತ್ತಿಯಲ್ಲಿ ಆಚಾರ್ಯರು ಹೇಳುತ್ತಿದ್ದ ರೀತಿಯಲ್ಲಿಯೇ ನಿರತಳಾಗಿದ್ದೆ. ಇಲ್ಲಿಗೆ ರಾಂಬಿಯಿಂದ ವಿದ್ವಾನ್ ಪಂಡಿತ ಶಿವರಾಮಜೀ ಆಚಾರ್ಯರ ದರ್ಶನಾರ್ಥ ಬಂದಿದ್ದವರು. ಆ ಸಮಯದಲ್ಲಿ ಅವರ ವಿರುದ್ಧವೇ ಜಯಪುರದಲ್ಲಿ ಒಂದು ಮೀಟಿಂಗ್ ಆಗಿತ್ತು ಕಾರಣವೇನೆಂದರೆ ಇವರು ಕೆಲವು ತಿಂಗಳ ಮೊದಲು ಬಾಂಬೆಯಲ್ಲಿ ಶಾಸ್ತ್ರವನ್ನು ಓದಿ ಹೇಳುತ್ತಾ ಮಹಿಳೆಯರು ಆಹಾರ ನೀಡಬಾರದು ಎಂದಿದ್ದರು. ಇದರಿಂದಾಗಿ ನೇಮಿಸಾಗರರು

---

೧. **ಈ ಪ್ರಕರಣ ಬರೆದಾಗ ಆ ಪರಂಪರೆಯ ಆಚಾರ್ಯರು ಧರ್ಮಸಾಗರರಾಗಿದ್ದರು.**

ಉಪವಾಸವನ್ನು ಕೈಗೊಂಡಿದ್ದರು. ಏಕೆಂದರೆ ಈ ಹೇಳಿಕೆ ಆಗಮಕ್ಕೆ ವಿರೋಧವಾಗಿತ್ತು. ಇಡೀ ಸಮಾಜದಲ್ಲಿ ವಿರೋಧದ ಅಲೆ ಎದ್ದಿತು. ಎಲ್ಲ ಕಡೆಯಿಂದಲೂ ಈ ವಿಷಯಕ್ಕೆ ಸಂಬಂಧ ಪಟ್ಟಂತೆ ಆಗಮದ ಪ್ರಮಾಣವನ್ನು ಕೇಳತೊಡಗಿದರು. ಇಲ್ಲಿ ಆಚಾರ್ಯ ವೀರಸಾಗರರ ಸಂಘಕ್ಕೂ ಕೂಡತಾರನ್ನು ಕಳುಹಿಸಿದ್ದರು. ಇದಕ್ಕಾಗಿ ಆಚಾರ್ಯರು ಅನೇಕ ಪ್ರಮಾಣವನ್ನು ಕಳುಹಿಸಿದ್ದರು. ಹಾಗೂ ತಪಸ್ವೀ ಮುನಿಶ್ರೀ ನೇಮಿಸಾಗರರಿಗೆ ಉಪವಾಸವನ್ನು ನಿಲ್ಲಿಸಲು ಸೂಚನೆಯನ್ನು ಕಳುಹಿಸಿದ್ದರು. ಹೀಗೆ ಆಗಮ ವಿರುದ್ಧ ಹೇಳಿಕೆ ಕೊಟ್ಟಿದ್ದರಿಂದ ಇವರ ವಿರುದ್ಧ ಜೈನರಲ್ಲಿಯೂ ಕ್ಷೋಭೆ ಉಂಟಾಗಿತ್ತು. ಬೆಳಿಗ್ಗೆ ಯಾವಾಗ ಈ ವಿಷಯ ಆಚಾರ್ಯರಿಗೆ ತಿಳಿಯಿತೊ ಅವರು ತಕ್ಷಣ ಶ್ರಾವಕರನ್ನು ಕರೆಸಿ ಆದೇಶ ಕೊಟ್ಟರು. ಗುರುಗಳ ದರ್ಶನಕ್ಕೆ ಶತ್ರು ಬಂದರು ಸಹ ನಾವು ಆದರಿಸಬೇಕು. ಆದ್ದರಿಂದ ಅವಮಾನಿಸಲು ಯೋಚಿಸ ಬೇಡಿ ಎಂದರು. ಈ ಮಾತನ್ನು ಕೇಳಿ ಎಲ್ಲರೂ ಶಾಂತರಾಗಲೇ ಬೇಕಾಯಿತು. ಇದನ್ನು ಕಂಡ ಪಂಡಿತರು ಗದ್ಗದಿತರಾಗಿ ಆಚಾರ್ಯರ ಚರಣಗಳಿಗೆ ಎರಗಿದರು. ಅವರಿಗೆ ಶುಭಾಶೀರ್ವಾದಗಳನ್ನು ನೀಡಿದರು.

ಅನಂತರ ಚರ್ಚೆ ಪ್ರಾರಂಭವಾಯಿತು. ಆಚಾರ್ಯರಿಂದ ಅನುಮತಿಯನ್ನು ಪಡೆದು ಯಾರೋ ಅವರನ್ನು ಪ್ರಶ್ನಿಸಿದರು. ಪಂಡಿತರೇ ಯಾವ ಆಧಾರದಿಂದ ನೀವು ಸ್ತ್ರೀಯರು ಆಹಾರ ಕೊಡಬಾರದೆಂದು ಹೇಳಿದಿರಿ. ನಾನು ಪ್ರಥಮಾನುಯೋಗದ ಉದಾಹರಣೆಗಳನ್ನು ಪ್ರಮಾಣವೆಂದ ಮನ್ನಿಸುವುದಿಲ್ಲ. ನನಗೆ ವಿಧಾನ ವಾಕ್ಯಗಳನ್ನು ತೋರಿಸಿರಿ ಎಂದರು. ಆ ಸಮಯದಲ್ಲೇ ನಾನು ಮತ್ತು ಜಿನಮತಿಯು ಮೂಲಾಚಾರವನ್ನು ಓದುತ್ತಿದ್ದೆವು. ಇದರ ಚರ್ಚೆಗೋಸ್ಕರವೇ ವಿಧಾನ ವಾಕ್ಯಗಳನ್ನು ಹುಡುಕಿ ಇಟ್ಟುಕೊಂಡಿದ್ದೆವು. ಆಗ ಆಚಾರ್ಯರು ಅವರಿಗೆ ಮೂಲಾಚಾರ, ಆಚಾರಸಾರ ಮೊದಲಾದ ಗ್ರಂಥಗಳಿಂದ ಸರಿಯಾದ ಪ್ರಮಾಣವನ್ನು ತೋರಿಸಿದರು. ದಾಯಕದೋಷದಲ್ಲಿ ಮಹಿಳೆಯರ ಬಗ್ಗೆ ಸ್ಪಷ್ಟೀಕರಣವನ್ನು ಕೊಡಲಾಗಿದೆ.

ಸೂದೀ ಸುಂಡೀ ರೋಗೀ ಮದಯಣಪುಂಸಯ ಪಿಸಾಯಣಗ್ಗೋ ಯ
ಉಚ್ಚಾರ ಪಂಡಿದವಂತ ರುಹಿರವೇಸೀ ಸಮಣೀ ಅಂಗಮಕ್ಖೀಯಾ ॥೪೯॥

ಸೂತಿಃ ಯಾ ಬಾಲಂ ಪ್ರಸಾದಯತಿ ವೈಶ್ಯದಾಸೀ ಶ್ರಮಣಿಕಾರ್ಯಿಕಾ ಅಥವಾ ಪಂಚಶ್ರಮಣಿಕಾ ರಕ್ತಪಟಿಕಾದಯಃ. ಅಂಗಮ್ರಕ್ಷಿಕಾ ಅಂಗಾಭ್ಯಂಗನಕಾರಿಣೀ. ತಥಾ

ಅತಿಬಾಲಾ ಅತಿಬುಡ್ಢಾ, ಘಾಸತ್ತೀ ಗಬ್ಭಿಣೀ ಯ ಅಂಧಲಿಯಾ ।
ಅಂತರಿದಾ ವಾ ಣಿಸಣ್ಣಾ ಉಚ್ಚಟ್ಠಾ ಆಹವ ಣೀಚಟ್ಠಾ ॥೫೦॥

ಅತೀವಜರಾಗ್ರಸ್ತಾ ಭಕ್ಷಯಂತೀ ಅಂತರಿತಾ ಕುಡ್ಯಾದಿಭಿರ್ವ್ಯವಹಿತಾ ಆಸೀನೋಪವಿಷ್ಟಾ. ಉಚ್ಚಸ್ಥಾ ಉನ್ನತ ಪ್ರದೇಶಸ್ಥಿತಾ. ನೀಚಸ್ಥಾ ನಿಮ್ನ ಪ್ರದೇಶಸ್ಥಿತಾ ಏವಂ ಪುರುಷೋಂ ವಾ ವನಿತಾ ಚ ಯದಿ ದದಾತಿ ತದಾ ನ ಗ್ರಾಹ್ಯಂ ಭೋಜನಾದಿಕಮಿತಿ.

ಇವು ಮೂಲಾಚಾರದ ಗಾಥೆಗಳು. ಶ್ರೀ ಕುಂದಕುಂದರಿಂದ ರಚಿಸಲ್ಪಟ್ಟವು. ಹಾಗೂ ಟೀಕಾಕಾರ ಸಿದ್ಧಾಂತ ಚಕ್ರವರ್ತಿ ಶ್ರೀ ವಸುನಂದಿ ಆಚಾರ್ಯರಿಂದ ಟೀಕಾ ರಚಿಸಲ್ಪಟ್ಟಿದೆ. ಮೂಲಗಾಥೆಯಲ್ಲಿ ಮಹಿಳೆಯರ ಬಗ್ಗೆಯೇ ಹೇಳಲಾಗಿದೆ. ಮೈಲಿಗೆಯವಳು, ವೈಶ್ಯ, ದಾಸಿ, ಆರ್ಯಿಕಾ, ಕೆಂಪು ಬಟ್ಟೆ ಧರಿಸಿದ ಸನ್ಯಾಸಿನಿ, ಎಣ್ಣೆಯಿಂದ ಮಸಾಜು ಮಾಡುವವಳು, ಚಿಕ್ಕವಳು, ಅತಿ ವಯಸ್ಸಾದವಳು, ತಿನ್ನುತ್ತಿರುವಾಗ, ಐದು ತಿಂಗಳ ಗರ್ಭಿಣಿ, ಕುರುಡಿ, ಮೂಗಿ, ಗೋಡೆ ಸಂದಿಯಲ್ಲಿ ಅವಿತುಕೊಂಡಿರುವವಳು, ಎತ್ತರದ ಸ್ಥಾನದಲ್ಲಿ ನಿಂತು ಅಥವಾ ಕೆಳಗಿನ ಸ್ಥಾನದಲ್ಲಿ ನಿಂತುಕೊಂಡಿರುವ ಸ್ತ್ರೀಯರಿಂದ ಮುನಿಗಳು ಆಹಾರ ತೆಗೆದುಕೊಂಡರೆ ದಾಯಕ ದೋಷವು

ಉಂಟಾಗುತ್ತದೆ. ಈ ಸೂತ್ರದಂತೆ ಎಲ್ಲ ನಿಶ್ಚಳವಾಗಿದೆ ಇದರ ಹೊರತಾದ ಸ್ತ್ರೀಯರ ಕೈಗಳಿಂದ ಮುನಿಗಳು ಆಹಾರ ತೆಗೆದುಕೊಳ್ಳಬಹುದು. ಇದರಿಂದ ಯಾವುದೇ ದೋಷವಿಲ್ಲ. ಇದಕ್ಕಿಂತ ಪ್ರಮಾಣವಾದ ವಾಕ್ಯ ಬೇರೇನು ಬೇಕು. ಮೂಲಾಚಾರದ ಹೇಳಿಕೆಯೇ ಸತ್ಯವಾಗಿದೆಯಲ್ಲ. ಈ ಬಗ್ಗೆ ಬಹಳ ಹೊತ್ತಿನವರೆಗೆ ಚರ್ಚೆ ನಡೆಯಿತು. ಜಯಪುರದಿಂದ ಪಂಡಿತ ಇಂದ್ರಲಾಲಜೀ ಶಾಸ್ತ್ರಿ ಮುಂತಾದವರು ಬಂದಿದ್ದರು. ಅವರೆಲ್ಲರು ಕೂಡ ಆಚಾರ್ಯರ ಮುಂದೆ ಮೌನವಾಗಿದ್ದರು. ಇಷ್ಟೆಲ್ಲ ಪ್ರಮಾಣಗಳನ್ನು ತೋರಿಸಿದ ನಂತರವೂ ಕೂಡ ಪಂಡಿತರು ಈ ಎಲ್ಲ ಪ್ರಮಾಣಗಳು ಸಾಧ್ಯತೆಯನ್ನು ತೋರಿಸುತ್ತಿವೆ. ಇವು ಸಿದ್ಧವಾಗಿಲ್ಲ ಎಂದರು. ಅಂದರೆ ಅವರ ದುರಾಗ್ರಹ ಪೀಡಿತ ಹಠವಾದವನ್ನು ಮುಂದಿಟ್ಟರು. ಆದರೂ ಎಲ್ಲ ಸಾಧು ಸಾಧ್ವಿಯರೂ ಹಸನ್ಮುಖರಾಗಿಯೇ ಅವರೊಡನೆ ಮಾತು ಮುಂದುವರಿಸುತ್ತಿದ್ದರು. ಯಾರು ಸಿಟ್ಟನ್ನು ತೋರಿಸಲಿಲ್ಲ. ಪಂಡಿತರನ್ನು ಗೌರವಿಸಿ ಕಳುಹಿಸಿದ ಮೇಲೆ ನಮಗೆಲ್ಲರಿಗೂ ಆಶ್ಚರ್ಯವಾಗತೊಡಗಿತು. ಪಂಡಿತರಾಗಿಯೂ ಹಠವಾದಿಗಳಾಗಿದ್ದಾರಲ್ಲ. ನಿಜ ಹೇಳಬೇಕೆಂದರೆ ಮಿಥ್ಯಾತ್ವದ ಉದಯವಾಗಿದ್ದರೆ ಸತ್ಯದ ಸಂಗತಿಯು ಅಸತ್ಯದಂತೆ ತೋರುತ್ತದೆ. ಗೊಮ್ಮಟಸಾರ ಗ್ರಂಥದಲ್ಲಿ ಉಲ್ಲೇಖವಾಗಿರುವ ವಾಕ್ಯ ನೆನಪಿಗೆ ಬರುತ್ತದೆ "ಮಹುರಂ ಖು ರಸಂ ಅಹಾ ಜರಿದಾ" ಪಿತ್ತರಸದಿಂದ ಬಳಲುವ ಮನುಷ್ಯನಿಗೆ ಸಿಹಿಯಾದ ಹಾಲು ಕೂಡ ಕಹಿ ಎನ್ನಿಸುವಂತೆ, ಇಲ್ಲಿ ಹಾಲು ಮತ್ತು ಮನುಷ್ಯನಲ್ಲಿ ತಪ್ಪಿಲ್ಲ. ಅವನನ್ನು ಪೀಡಿಸುತ್ತಿರುವ ಜ್ವರ ಅದಕ್ಕೆ ಕಾರಣ.

ಹೀಗೆ ಹಲವಾರು ಪ್ರಸಂಗಗಳಿಂದ ನನಗೆ ಆಚಾರ್ಯರ ಚರಣ ಸಾನ್ನಿಧ್ಯದಲ್ಲಿ ನವದೀಕ್ಷಿತ ಮುನಿಗಳ ಬಗ್ಗೆ ಆಗಮದಲ್ಲಿ ಉಲ್ಲೇಖವಾಗಿರುವ ತಳಸ್ಪರ್ಶಿ ರಹಸ್ಯಗಳ ಜ್ಞಾನ ದೊರೆಯತೊಡಗಿತು. ಗುರುಗಳಾದ ಆಚಾರ್ಯ ಶ್ರೀ ವೀರಸಾಗರರು ದಿನಕಳೆದಂತೆ ದುರ್ಬಲರಾಗತೊಡಗಿದರು. ಆ ಸಮಯದಲ್ಲಿ ಸಂಘದಲ್ಲಿ ಕ್ಷುಲ್ಲಕರಾಗಿದ್ದ ಚಿದಾನಂದ ಸಾಗರರು ಒಳ್ಳೆ ಪ್ರತಿಭಾವಂತ ಸಾಧುವಾಗಿದ್ದರು. ಆದ್ದರಿಂದ ನಮಗೆಲ್ಲರಿಗೂ ಅವರಿಗೆ ಗುರುಗಳಿಂದಲೇ ದೀಕ್ಷೆ ಕೊಡಿಸಬೇಕೆಂಬ ಇಚ್ಛೆ ಜಾಸ್ತಿಯಾಗತೊಡಗಿತು. ಕ್ಷುಲ್ಲಕರೇ ತಾವು ಮುನಿ ದೀಕ್ಷೆ ತೆಗೆದುಕೊಳ್ಳುವ ಉತ್ತಮಪಾತ್ರರಾಗಿದ್ದು ಏಕೆ ತಡಮಾಡಿ ಕೊಳ್ಳುತ್ತಿದ್ದೀರ ಎಂದು ಕೇಳಿದೆವು. ಅವರ ಪೂರ್ವಾಶ್ರಮದ ಪತ್ನಿಯು ಕೂಡ ಸಂಘಕ್ಕೆ ದರ್ಶನಾರ್ಥಿಯಾಗಿ ಬಂದಿದ್ದರು. ಅವರು ಕೂಡ ಹೇಳಿದರು. ಮಹಾರಾಜಜೀ ನಾನು ತಮಗೆ ದೀಕ್ಷೆ ತೆಗೆದುಕೊಳ್ಳಲು ಸಮ್ಮತಿಸಿದರೂ ತಾವು ಏಕೆ ಮುನಿದೀಕ್ಷೆಯನ್ನು ತೆಗೆದುಕೊಳ್ಳುತ್ತಿಲ್ಲ? ನಿಮಗೆ ಇನ್ನು ಚಾದರ ಮತ್ತು ಲಂಗೋಟಿಯ ಮೋಹ ಹೋಗಿಲ್ಲವೇ ಎಂದು ಹೇಳಿದ್ದನ್ನು ಕೇಳಿಯೂ ಮುಗುಳುನಕ್ಕು ಸುಮ್ಮನಾದರು. ಆಚಾರ್ಯ ವೀರಸಾಗರರು ಕೂಡ ಮುನಿದೀಕ್ಷೆ ತೆಗೆದುಕೊಳ್ಳಲು ಪ್ರೇರೇಪಿಸಿದರು.

೧೯

ಆರ್ಯಿಕೆ ಇಂದುಮತಿ ಮಾತಾಜಿಯವರು ಗುರುದೇವರ ಸಮಾಧಿ ನೋಡುವ ಸಲುವಾಗಿ ಸಂಘಕ್ಕೆ ಬಂದಿದ್ದರು. ಇವರ ಜೊತೆ ಬ್ರಹ್ಮಚಾರಿಣೀ ಭಂವರೀ ಬಾಯಿ ಕೂಡ ಇದ್ದರು. ಆಕೆ ಕರ್ಮಪ್ರಕೃತಿಯ ಚರ್ಚೆಯಲ್ಲಿ ಬಹಳ ನಿಷ್ಣಾತಳಾಗಿದ್ದಳು. ಇವಳಿಗೂ ಕೂಡ ನಾನು ಸದಾ ಹೇಳುತ್ತಿದ್ದೆ. ಇಷ್ಟೆಲ್ಲ ತಿಳಿದವಳಾದ ನೀನೇಕೆ ಆರ್ಯಿಕೆ ದೀಕ್ಷೆ ತೆಗೆದುಕೊಳ್ಳಲು ಬಯಸುತ್ತಿಲ್ಲ ಎಂದು. ಅವಳು ನಗುತ್ತಾ ತಳ್ಳಿಹಾಕುತ್ತಾ ಯಾವಾಗ ಇಂದುಮತಿ ಮಾತಾಜಿ ಆಜ್ಞೆ ಕೊಡುತ್ತಾರೋ ಆಗಲೇ ನಾನು ದೀಕ್ಷೆ ತೆಗೆದುಕೊಳ್ಳುತ್ತೇನೆ ಎಂದಳು. ಅದೇ ಸಮಯದಲ್ಲಿ ಆಚಾರ್ಯರ ಸಾನ್ನಿಧ್ಯದಲ್ಲಿ ಅವಳಿಗೆ ಅನುಮತಿಯು ದೊರೆಯುತ್ತಿದ್ದಂತೆ ಆಚಾರ್ಯರ ಪಾದಕಮಲಗಳಿಗೆ

ತೆಂಗಿನ ಕಾಯಿ ಹಿಡಿದು ಪ್ರಾರ್ಥನೆಯನ್ನು ಮಾಡಿಕೊಂಡಳು. ತಕ್ಷಣವೇ ಆಚಾರ್ಯರು ದೀಕ್ಷೆಗಾಗಿ ಮುಹೂರ್ತವನ್ನು ನೋಡಿಸಿಯೇ ಬಿಟ್ಟರು. ಭಾದ್ರಪದ ಮಾಸದ ಷಷ್ಮಿಯಂದು ಮಹೂರ್ತ ನಿಶ್ಚಯವಾಯಿತು. ಬ್ರ. ಭಂವರೀಬಾಯಿಯು ಮಂಡಲದ ವಿಧಾನದ ಆಯೋಜನೆಯನ್ನು ಮಾಡಿದರು. ಇಷ್ಟರಲ್ಲಿ ಒಂದು ದಿನ ಪ್ರಾತಃ ಕಾಲ ಎಲ್ಲ ಮುನಿ, ಆರ್ಯಿಕೆಯರು ಆಚಾರ್ಯರ ಸಾನ್ನಿಧ್ಯದಲ್ಲಿ ಪ್ರತಿಕ್ರಮಣ ಮಾಡಿದ ನಂತರ ಕ್ಷುಲ್ಲಕ ಚಿದಾನಂದ ಸಾಗರರಿಗೆ ಮುನಿದೀಕ್ಷೆ ತೆಗೆದುಕೊಳ್ಳಲು ಪ್ರೇರಣೆ ಮಾಡುತ್ತಿದ್ದೆವು. ಅಷ್ಟರಲ್ಲಿ ಕ್ಷುಲ್ಲಕ ಸನ್ಮತಿ ಸಾಗರರು ಎದ್ದು ಆಚಾರ್ಯರ ಸಾನ್ನಿಧ್ಯಕ್ಕೆ ಹೋಗಿ ಎಲ್ಲರೂ ಚಿದಾನಂದ ಸಾಗರರಿಗೆ ಪ್ರೇರಣೆ ಕೊಡುತ್ತಿದ್ದಂತೆ ಅವರಿಗೆ ಇನ್ನೂ ಮನಸ್ಸು ಬಂದಿಲ್ಲ. ಆದರೆ ಗುರುದೇವ ನನಗೆ ತಾವು ದೀಕ್ಷೆಯನ್ನು ದಯಪಾಲಿಸಬೇಕು ಎಂದು ಪ್ರಾರ್ಥಿಸಿದರು. ಇದನ್ನು ಕೇಳಿದ ಕ್ಷುಲ್ಲಕ ಚಿದಾನಂದಜೀ ಎದ್ದು ಬಂದು ಆಚಾರ್ಯರಲ್ಲಿ ಪ್ರಾರ್ಥಿಸಿದರು. ಗುರುದೇವರೇ ನನಗೂ ಮುನಿದೀಕ್ಷೆಯನ್ನು ದಯಪಾಲಿಸಿದರು.

ಇದನ್ನು ಕೇಳಿದ ಎಲ್ಲರ ಮೊಗಗಳಲ್ಲಿ ಹರ್ಷ ಮೂಡಿತು. ಬ್ರ. ಸೂರಜಮಲ್ಲರಲ್ಲಿ ಚಿದಾನಂದಜೀ ಪ್ರಾರ್ಥಿಸಿದರು. ಬಾಬಾಜೀ ಬ್ರ. ಭಂವರೀ ಬಾಯಿಯ ದೀಕ್ಷೆಗಿಂತ ಮೊದಲೇ ನಮ್ಮ ದೀಕ್ಷೆ ಆಗುವಂತೆ ಬೇಗ ಒಂದು ಮುಹೂರ್ತವನ್ನು ನೋಡಿ ಎಂದರು. ಬಾಬಾಜೀ ಪಂಚಾಂಗವನ್ನು ನೋಡಿ ಹೇಳಿದರು. ಭಾದ್ರಪದ ಮಾಸದ ೩ನೆಯ ದಿನವೇ ಮುನಿ ದೀಕ್ಷೆಗೆ ಒಳ್ಳೆಯ ಮುಹೂರ್ತವಿದೆ ಎಂದರು. ಒಳ್ಳೆ ಸಂತೋಷದ ವಾತಾವರಣದಲ್ಲಿ ಅವರಿಗಿಂತ ಮೊದಲೇ ಇವರಿಬ್ಬರಿಗೂ ಮುನಿದೀಕ್ಷೆ ಆಯಿತು. ಚಿದಾನಂದ ಸಾಗರರಿಗೆ ಮುನಿಶ್ರುತ ಸಾಗರರೆಂದು. ಸನ್ಮತೀ ಸಾಗರರಿಗೆ ಅದೇ ಹೆಸರನ್ನು ಇಡಲಾಯಿತು. ಅದಾದ ಮೂರು ದಿನಗಳ ನಂತರ ಭಂವರೀ ಬಾಯಿಗೆ ಆರ್ಯಿಕೆಯ ದೀಕ್ಷೆ ಆಯಿತು. ಅವರಿಗೆ "ಸುಪಾರ್ಶ್ವಮತಿ" ಎಂದು ಹೆಸರಿಟ್ಟರು. ಇದು ಆಚಾರ್ಯರಿಂದ ಕೊಡಲ್ಪಟ್ಟ ಅಂತಿಮ ದೀಕ್ಷಾ ವಿಧಿಯಾಯಿತು.

ಈ ಧಾರ್ಮಿಕ ವಾತಾವರಣದಲ್ಲಿ ಒಂದು ದಿನವೆಲ್ಲ ಧ್ಯಾನ ಅಧ್ಯಯನದಲ್ಲೇ ಕಳೆಯುತ್ತಿತ್ತು. ರಾತ್ರಿ ಕನಸಿನಲ್ಲಿ ನನಗೆ ವ್ಯಾಕರಣದ ಅನೇಕ ಸೂತ್ರಗಳು ನೆನಪಿಗೆ ಬರುತ್ತಿದ್ದವು. ನಾನು ಬೆಳಿಗ್ಗೆ ಆಚಾರ್ಯರ ಹತ್ತಿರ ರಾತ್ರಿ ಕನಸಿಗೆ ಬರುತ್ತಿದ್ದ ವ್ಯಾಕರಣದ ಸೂತ್ರಗಳನ್ನು ಹೇಳುತ್ತಿದ್ದರೆ ಅವರು ಜೈನೇಂದ್ರ ವ್ಯಾಕರಣದಲ್ಲಿ ಇದ್ದ ಅದೇ ಸೂತ್ರಗಳನ್ನು ತೋರಿಸಿ ಹೇಳುತ್ತಿದ್ದರು. ಜ್ಞಾನಮತೀ ನೀನು ಪೂರ್ವ ಜನ್ಮದಲ್ಲಿ ಖಂಡಿತ ವ್ಯಾಕರಣವನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದೀಯ ಅದರಿಂದಲೇ ನಿನಗೆ ಸೂತ್ರಗಳು ಕನಸಿನಲ್ಲಿಯೂ ಬರುತ್ತವೆ ಎನ್ನುತ್ತಿದ್ದರು. ನನಗೆ ವ್ಯಾಕರಣ ಸೂತ್ರಗಳ ಜೊತೆ ದಿನದಲ್ಲಿ ಓದಿದ ವಿಷಯಗಳು ಸಹ ಕನಸಿನಲ್ಲಿ ಚೆನ್ನಾಗಿ ಮನನವಾಗುತ್ತಿದ್ದವು.

ಭಾದ್ರಪದದ ನಂತರ ಆಚಾರ್ಯರು ಇನ್ನೂ ನಿಶ್ಯಕ್ತರಾಗತೊಡಗಿದರು. ಆಗ ನಮಗೆ ಅನ್ನಿಸುತ್ತಿತ್ತು. ಈ ಚಾತುರ್ಮಾಸದ ಒಳಗೆ ಆಚಾರ್ಯರ ಸಮಾಧಿ ಆಗೇ ಬಿಡಬಹುದೆಂದು. ಹಾಗೇ ಗುರುವಿಯೋಗದ ದುಃಖವು ನಮ್ಮನ್ನು ಬಾಧಿಸುತ್ತಿತ್ತು. ಶ್ರಾವಕರು ಸಲ್ಲೇಖನವನ್ನು ಘೋಷಣೆ ಮಾಡಬೇಕೆಂದಿದ್ದರು. ಇದರಿಂದಾಗಿ ಸುತ್ತಮುತ್ತಲಿನ ಜನರು ಬಂದು ಅಂತಿಮ ದರ್ಶನ ಪಡೆಯಬಹುದೆಂದು ಆಶಿಸಿದ್ದರು. ಆದರೆ ಆಚಾರ್ಯರು ಘೋಷಣೆ ಮಾಡುವುದಕ್ಕೆ ಸಮ್ಮತಿಸಲಿಲ್ಲ. ಅವರ ಅನುಮತಿ ಇಲ್ಲದೆ ಜನರಿಗೆ ತಿಳಿಸುವಂತಿರಲಿಲ್ಲ. ಆಚಾರ್ಯರು ನಿಧಾನವಾಗಿ ಎಲ್ಲ ರಸಗಳನ್ನು ತ್ಯಾಗ ಮಾಡುತ್ತಾ ಬಂದು ಕೊನೆಗೆ ಆಹಾರದಲ್ಲಿ ಸ್ವಲ್ಪವೇ ಗೋಧಿಯ ಚೂರಮಾ - ಮಜ್ಜಿಗೆ ಮಾತ್ರ ತೆಗೆದುಕೊಳ್ಳುತ್ತಿದ್ದರು.

ಆಶ್ವೀಜ ಚತುರ್ದಶಿಯ ದಿನ ಮಧ್ಯಾಹ್ನ ಪಾಕ್ಷಿಕ ಪ್ರತಿಕ್ರಮಣವಾಗುತ್ತಿತ್ತು. ಆಚಾರ್ಯರು ಸ್ವಯಂ

ಪುಸ್ತಕ ಹಿಡಿದು ಓದುತ್ತಿದ್ದರು. ಪ್ರತಿಕ್ರಮಣ ಪೂರ್ತಿಯಾದ ನಂತರ ಎಲ್ಲರೂ ಕ್ರಮವಾಗಿ ತಮ್ಮ ದೋಷಗಳನ್ನು ನಿವೇದಿಸುತ್ತಾ ಪ್ರಾಯಶ್ಚಿತ್ತವನ್ನು ಬೇಡುತ್ತಿದ್ದರು. ಮಹಾರಾಜರು ಎಲ್ಲರಿಗೂ ಪ್ರಾಯಶ್ಚಿತ್ತವನ್ನು ಕೊಟ್ಟರು. ಅದು ಅವರ ಮುಖಾರವಿಂದಗಳಿಂದ ಹೊರಟ ಅಂತಿಮ ಪ್ರಾಯಶ್ಚಿತ್ತವಾಗಿತ್ತು. ಮಾರನೆಯ ದಿನ ಆಶ್ವೀಜ ಕೃಷ್ಣ ಅಮಾವಾಸ್ಯೆಯ ದಿನ ಆಚಾರ್ಯರು ಚರ್ಯೆಗಾಗಿ ಹೊರಡಲು ಬಯಸಲಿಲ್ಲ. ಉಪವಾಸವನ್ನು ಮಾಡಲು ಬಯಸಿದರು. ಆಗ ಸಂಘದ ಪ್ರಮುಖ ಬ್ರಹ್ಮಚಾರಿಗಳಾದ ಸೂರಜಮಲ್ಲರು ಬ್ರ. ಚಾಂದಮಲಜೀ ಗುರುಗಳ ಹತ್ತಿರ ನಿವೇದಿಸಿದರು. ಮಹಾರಾಜರೇ ಸಂಘದಲ್ಲಿ ಬಹಳಷ್ಟು ಸಾಧು ಸಾಧ್ವಿಯರು ನೆನ್ನೆಯ ದಿನ ಚತುರ್ದಶಿಯಾದ್ದರಿಂದ ಉಪವಾಸ ಮಾಡಿದ್ದಾರೆ. ಈ ದಿನ ನೀವು ಆಹಾರಕ್ಕೆ ಹೊರಡದೆ ಇದ್ದರೆ ಅವರು ಹೊರಡುವುದಿಲ್ಲ. ಇದನ್ನು ಕೇಳಿದ ಆಚಾರ್ಯರು ಕರುಣೆಯಿಂದ ಆಹಾರಕ್ಕಾಗಿ ಹೊರಟರು. ಹತ್ತಿರದ ಚೌಕದಲ್ಲಿಯೇ ಅವರನ್ನು ತಡೆಯಲಾಯಿತು. ಶ್ರಾವಕರು ನವಧಾ ಭಕ್ತಿ ಮಾಡಿದರು. ಆಚಾರ್ಯರು ಆಹಾರಕ್ಕಾಗಿ ನಿಂತರು. ಒಂದು ಬೊಗಸೆ ನೀರನ್ನು ತೆಗೆದುಕೊಂಡು ಕುಳಿತು ಬಿಟ್ಟರು. ಪ್ರಾತ್ಯಾಖ್ಯಾನ ಪ್ರತಿಷ್ಠಾಪಿಸಿ ಚತುರಾಹಾರವನ್ನು ತ್ಯಾಗ ಮಾಡಿ ತಮ್ಮ ಬಿಡಾರಕ್ಕೆ ಬಂದರು. ಅವರನ್ನು ಮಲಗಿಸಿದರು. ಆದರೆ ಇದ್ದಕ್ಕಿದ್ದಂತೆ ಎದ್ದು ಧ್ಯಾನಮುದ್ರೆಯಲ್ಲಿ ಕುಳಿತರು. ಇವರಿಗೆ ಹತ್ತಿರದಲ್ಲೇ ಬ್ರಹ್ಮಚಾರಿ ಸೂರಜಮಲ್ಲಜೀ ಇದ್ದರು. ಮತ್ತು ಖೂಬಚಂದ್ರ ಶಾಸ್ತ್ರಿಯವರು ಇದ್ದರು. ಇವರಿಬ್ಬರು ನೋಡುತ್ತಿದ್ದಂತೆ ಆಚಾರ್ಯರು ಕಣ್ಣುಮುಚ್ಚತೊಡಗಿದರೋ ಆಗ ಅವರು ಜೋರಾಗಿ ಣಮೋಕಾರ ಮಂತ್ರ ಹೇಳತೊಡಗಿದರು.

ಎಲ್ಲರೂ ಆಹಾರಕ್ಕೆ ಹೋಗಿದ್ದರು. ಕೆಲವರು ಬೇಗ ಆಹಾರ ಮುಗಿಸಿಕೊಂಡು ಬಂದಿದ್ದರು. ಕೆಲವರು ಆಹಾರವನ್ನು ಮಾಡುತ್ತಿದ್ದರು. ನಾನು ಬೇಗನೆ ಆಹಾರ ಮುಗಿಸಿ ಬಂದು ನೋಡಿದಾಗ್ಗೆ ಆಚಾರ್ಯದೇವರು ಧ್ಯಾನದಲ್ಲಿ ಮಗ್ನರಾಗಿದ್ದರು. ಉಸಿರು ನಿಧಾನವಾಗಿ ಬಿಡುತ್ತಿದ್ದರು. ಎಲ್ಲ ಸಾಧುಗಳು ಬಂದು ಸೇರಿದರು. ಒಂದೇ ಸಲ ಆಚಾರ್ಯರು ಸ್ವರ್ಗವನ್ನು ಸೇರಿ ಬಿಟ್ಟಿದ್ದರು. ಇದನ್ನು ತಿಳಿದ ಎಲ್ಲರೂ ಶೋಕದಿಂದ ವ್ಯಾಕುಲರಾದರು. ಕೊನೆಗೆ ಸಂಸಾರದ ಸ್ಥಿತಿಯ ವಿಚಾರ ಮಾಡಿ ಧೈರ್ಯ ತಂದುಕೊಂಡರು. ಆಚಾರ್ಯ ಶ್ರೀ ಮಹಾವೀರಕೀರ್ತಿಗಳು ಹತ್ತಿರ ಕುಳಿತು ರತ್ನತ್ರಯಮಯ ಶರೀರಕ್ಕೆ ನಾವೆಲ್ಲರೂ ಸಮಾಧಿ ಮರಣದ ಕ್ರಿಯೆಗಳನ್ನು ಮಾಡಿದೆವು. ಈ ಕಡೆ ಜಯಪುರದ ಜನಗಳಿಗೆ ವಿಷಯ ತಿಳಿಯುತ್ತಲೇ ಶ್ರಾವಕರು ಧಾವಿಸಿ ಬರತೊಡಗಿದರು. ಸಾಮಾಯಿಕವಾದ ನಂತರ ಮಧ್ಯಾಹ್ನ ಮೂರು ನಾಲ್ಕು ಗಂಟೆಗೆ ಮಂದಿರದ ಮುಂದಿನ ಪ್ರಾಂಗಣದಲ್ಲಿ ಆಚಾರ್ಯರ ಪಾರ್ಥಿವ ಶರೀರವನ್ನು ತಂದು ಮಲಗಿಸಲಾಯಿತು. ಅಂತಿಮ ಸಂಸ್ಕಾರವನ್ನು ಬ್ರಹ್ಮಚಾರಿ ಸೂರಜಮಲ್ಲರು ವಿಧಿವತ್ತಾಗಿ ಮಾಡಿದರು. ಅವರ ನಿಷದ್ಯಸ್ಥಾನಕ್ಕೆ ಮುನಿವರ್ಗದವರೆಲ್ಲ ಹೋಗಿ ವಂದಿಸಿದೆವು.

ಆಚಾರ್ಯ ಶ್ರೀ ಮಹಾವೀರಕೀರ್ತಿ ಮಹಾರಾಜರು ಪ್ರತಿದಿನ ಎಲ್ಲ ಮುನಿವರ್ಗದವರೊಡನೆ ಆಚಾರ್ಯರ ನಿಷದ್ಯ ಸ್ಥಾನಕ್ಕೆ ಹೋಗಿ ವಂದಿಸುತ್ತಿದ್ದರು. ಅದೆಷ್ಟು ಬಾರಿ ಎದ್ದು ನಿಂತು ವಂದಿಸುತ್ತಿದ್ದರು ಎಂದರೆ ಅವರ ಗುರುಭಕ್ತಿ ಇಂದಿನ ಮುನಿವರ್ಗಕ್ಕೆ ಒಂದು ಅನುಕರಣೀಯವಾದುದು. ಅವರು ವೀರಸಾಗರರಿಗಿಂತ ಮೊದಲೇ ಆಚಾರ್ಯ ಪದವಿಯನ್ನು ಪಡೆದಿದ್ದರು. ಅವರಿಗೇ ಮೊದಲು ಭಕ್ತಿಪಾಠವನ್ನು ಹೇಳಿ ನಮೋಸ್ತು ಮಾಡುತ್ತಿದ್ದರು. ಅವರ ಗುರುಭಕ್ತಿಯನ್ನು ನೋಡಿದ ನಮ್ಮ ಹೃದಯಗಳು ಗುರುಭಕ್ತಿಯಿಂದ ಆಪ್ಲಾವಿತವಾಗುತ್ತಿತ್ತು. ನಾನು ಯೋಚಿಸುತ್ತಿದ್ದೆ ವಾಸ್ತವದಲ್ಲಿ

ಗುರುಭಕ್ತಿಃ ಸತೀಮುಕ್ತ್ಯೈ ಕ್ಷುದ್ರಂ ಕಿಂ ವಾ ನ ಸಾಧಯೇ ತ್ ॥
ತ್ರಿಲೋಕೀಮೂಲ್ಯ ರತ್ನೇನ ದುರ್ಲಭಃ ಕಿಂ ತುಷೋತ್ಕರಃ ॥

ಆಚಾರ್ಯರ ಸಮಾಧಿಯ ನಂತರ ಆಚಾರ್ಯರ ಪ್ರಥಮ ಶಿಷ್ಯರಾದ ಮುನಿಶ್ರೀ ಶಿವಸಾಗರರಿಗೆ ಆಚಾರ್ಯ ಪದವಿಯನ್ನು ಕೊಡಲು ನಿರ್ಧರಿಸಲಾಯಿತು. ಚತುರ್ವಿಧ ಸಂಘದ ಪ್ರಾರ್ಥನೆಯಿಂದಾಗಿ ಈ ಗುರುತರವಾದ ಹೊಣೆಯನ್ನು ಹೊರಲು ತಮ್ಮ ಅನುಮತಿಯನ್ನು ಕೊಟ್ಟರು. ಮುಹೂರ್ತವನ್ನು ನಿರ್ಣಯಿಸಲಾಯಿತು. ಕಾರ್ತಿಕ ಶುಕ್ಲ ಏಕಾದಶಿಯ ಮಂಗಲ ಮುಹೂರ್ತದಲ್ಲಿ ಅಪಾರ ಜನಸಮುದಾಯದ ಮಧ್ಯೆ ಶಿವಸಾಗರರನ್ನು ವೀರಸಾಗರರ ಆಚಾರ್ಯ ಪಟ್ಟವನ್ನು ವಿಧಿವತ್ತಾಗಿ ನೆರವೇರಿಸಿ ಚತುರ್ವಿಧ ಸಂಘದ ಪ್ರಧಾನ ಆಚಾರ್ಯರಾಗಿ ಸ್ವೀಕರಿಸಲಾಯಿತು.

ಸಾಧುವರ್ಗದವರಾದ ನಾವೆಲ್ಲರೂ ನಮ್ಮ ಹೊಸ ಆಚಾರ್ಯರ ಚರಣಗಳಿಗೆ ಸಿದ್ಧ, ಶ್ರುತ ಆಚಾರ್ಯ ಭಕ್ತಿಯನ್ನು ಹೇಳಿ ನಮೋಸ್ತು ಮಾಡಿದೆವು. ನಮಗೆಲ್ಲರಿಗೂ ಆಚಾರ್ಯ ಶಿವಸಾಗರರು ಆಶೀರ್ವದಿಸುತ್ತಾ ಹೇಳಿದರು.

'ತಾವೆಲ್ಲರೂ ನನಗೆ ಆಚಾರ್ಯ ಪದವಿಯನ್ನು ಕೊಟ್ಟು ಗೌರವಿಸಿದ್ದೀರ. ಆದರೆ ನನ್ನಲ್ಲಿ ಆ ಯೋಗ್ಯತೆ ಇದೆಯೋ ಇಲ್ಲವೋ ತಿಳಿಯದು. ಅನುಭವದ ಜ್ಞಾನ ಕಡಿಮೆಯೇ. ಇಲ್ಲಿಯವರೆಗೆ ನಾನು ಸಂಘದಲ್ಲಿ ಸ್ವಾಧ್ಯಾಯದಲ್ಲೇ ನಿರತನಾಗಿರುತ್ತಿದ್ದೆ. ಆದರೆ ಈಗ ಆಚಾರ್ಯ ಪದವಿಯ ಹಿರಿಮೆಯನ್ನು ಕಾಪಾಡ ಬೇಕಾಗಿದೆ. ಗುರುತರವಾದ ಜವಾಬ್ದಾರಿಯನ್ನು ನಿರ್ವಹಿಸುವ ಕ್ಷಮತೆಯನ್ನು ಹೆಚ್ಚಿಸುವುದು ನಿಮ್ಮೆಲ್ಲರ ಹೊಣೆಗಾರಿಕೆಯೂ ಆಗಿದೆ' ಎಂದರು.

ಮೃದುವಾದ ವಾಣಿಯನ್ನು ಕೇಳಿದ ಎಲ್ಲರೂ ಪ್ರಸನ್ನಚಿತ್ತರಾದರು. ಮಹಾರಾಜರೇ ಪದವಿ ಬಂದ ನಂತರ ನಿರ್ವಹಣೆಯ ಯೋಗ್ಯತೆಯು ತನ್ನಿಂದ ತಾನೇ ಉಂಟಾಗುತ್ತದೆ ಎಂಬ ಅಭಿಲಾಷೆಯನ್ನು ಒಕ್ಕೊರಲಿನಿಂದ ಹೇಳಿದೆವು. ನಂತರ ನಮ್ಮೊಳಗೆ ನಾವು ತೀರ್ಮಾನಿಸಿದೆವು. ಆದಾಗ್ಯೂ ಇವರದು ಸ್ವಲ್ಪ ಉಗ್ರಸ್ವಭಾವವಾಗಿತ್ತು. ಇವರ ಆಜ್ಞೆಗಳನ್ನು ಅನೂಚಾನವಾಗಿ ಪಾಲಿಸುತ್ತಾ ಅವರ ಆಚಾರ್ಯ ಪದವಿಯನ್ನು ಶೋಭಾಯಮಾನ ಗೊಳಿಸುವುದು ಎಲ್ಲರ ಕೈಯಲ್ಲೂ ಇದೆ ಎಂದು ಜ್ಞಾಪಿಸಿಕೊಂಡೆವು. ಅವರ ಆಜ್ಞೆಗಳನ್ನು ಪಾಲಿಸಿ, ಗೌರವಿಸಿ ಸ್ಥಾನಕ್ಕೆ ಬೆಲೆ ಕೊಡುವುದು. ಇದು ನಮ್ಮೆಲ್ಲರ ಕರ್ತವ್ಯವಾಗಿದೆ.

□

ದ್ವಿತೀಯ ಖಂಡ

ದ್ವಿತೀಯ ಖಂಡ

೨೦

ಗಿರಿನಾರ್ ಯಾತ್ರೆ

ಭ. ನೇಮಿನಾಥರ ನಿರ್ವಾಣ ಭೂಮಿಗೆ ವಂದನೆ ಮಾಡಬೇಕೆಂಬ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿತ್ತು. ನೂತನ ಆಚಾರ್ಯರಾದ ಶಿವಸಾಗರರು ಮುನಿಗಳು ಮತ್ತು ಆರ್ಯಿಕೆಯರ ಮಧ್ಯೆ ವಿಷಯವನ್ನು ಪ್ರಸ್ತಾಪಿಸಿದರು. ಗುರುಗಳ ವಿಯೋಗವನ್ನು ಮರೆಯುವುದಕ್ಕಾಗಿ ನಾವೆಲ್ಲರೂ ಸಿದ್ಧಕ್ಷೇತ್ರವನ್ನು ಸಂದರ್ಶಿಸೋಣ ಎಂದರು. ಈ ವಿಷಯವನ್ನು ಕೇಳುತ್ತಲೇ ಎಲ್ಲರಿಗೂ ಸಿದ್ಧಕ್ಷೇತ್ರವನ್ನು ಸಂದರ್ಶಿಸುವ ಆಸೆ ಮೂಡಿತು. ಹೋಗುವ ತಯಾರಿ ಬಗ್ಗೆ ವಿಚಾರ ವಿಮರ್ಶೆ ಮಾಡಿ ಯಾತ್ರೆ ಕರೆದುಕೊಂಡು ಹೋಗುವ ಜವಾಬ್ದಾರಿಯನ್ನು ನಿವಾಈ ಯ ಹೀರಾಲಾಲ್ ಸೇಠರವರು ಹರ್ಷದಿಂದಲೇ ವಹಿಸಿಕೊಂಡರು. ಮಹಾರಾಜರೇ ತಮ್ಮನ್ನು ಚತುರ್ವಿಧ ಸಂಘಸಮೇತವಾಗಿ ಯಾತ್ರೆ ಮಾಡಿಸಬೇಕೆಂಬ ನಮ್ಮ ಸಂಕಲ್ಪಕ್ಕೆ ತಾವು ಅನುಮತಿಯನ್ನು ಕೊಡಬೇಕೆಂದು ಪ್ರಾರ್ಥಿಸಿದರು.

ಆಚಾರ್ಯರು ಸಮ್ಮತಿಸಿದ ಮೇಲೆ ಸೇಠ ಹೀರಾಲಾಲರಿಗೆ ಸಂಘಪತಿಯ ಸ್ಥಾನವನ್ನು ವಹಿಸಿ 1957ರಲ್ಲಿ ಹೊರಡುವ ಸಿದ್ಧತೆ ನಡೆಯಿತು. ಶುಭ ಮುಹೂರ್ತದಲ್ಲಿ ಆಚಾರ್ಯರು ತಮ್ಮ ವಿಶಾಲಸಂಘದೊಡನೆ ಗಿರಿನಾರಕ್ಕೆ ಯಾತ್ರೆ ಹೊರಟಿರು. ದರ್ಶನದ ಸಲುವಾಗಿ ಗುಜರಾತಿನತ್ತ ಯಾತ್ರೆ ಹೊರಟಿತು. ಸಂಘದಲ್ಲಿ ಆಚಾರ್ಯರ ಜೊತೆ ಐದು ಜನ ಮುನಿಗಳು ಇದ್ದರು. ಮುನಿಶ್ರೀ ಧರ್ಮಸಾಗರಜೀ, ಪದ್ಮಸಾಗರಜೀ, ಜಯಸಾಗರಜೀ, ಸನ್ಮತಿಸಾಗರಜೀ, ಶ್ರುತಸಾಗರಜೀ ಮತ್ತು ಆರ್ಯಿಕೆಯರಲ್ಲಿ ವೀರಮತೀಜೀ, ಧರ್ಮಮತೀ ಜೀ, ಸುಮತಿಮತೀ, ಪಾರ್ಶ್ವಮತೀಜೀ, ಶ್ರೀಪಾರ್ಶ್ವಮತೀಜೀ, ಸಿದ್ಧಮತೀಜೀ, ಶಾಂತಿಮತೀಜೀ, ವಾಸುಮತೀಜೀ ಮತ್ತು ಜ್ಞಾನಮತೀಜೀ, ಕ್ಷುಲ್ಲಕ ಸುಮತೀ ಸಾಗರರನ್ನು ಜನರು ಮದನಭಟ್ಟ ಎಂದು ಕರೆಯುತ್ತಿದ್ದರು. ಅವರ ಜೊತೆ ನಾಲ್ಕು ಜನ ಕ್ಷುಲ್ಲಕಿಯರು ಜ್ಞಾನಮತೀಜೀ, ಚಂದ್ರಮತೀಜೀ, ಜಿನಮತೀಜೀ, ಪದ್ಮಾವತೀಜೀ ಯವರು ಇದ್ದರು. ಬ್ರಹ್ಮಚಾರಿಗಳಾದ ಸೂರಜಮಲಜೀ, ರಾಜಮಲಜೀ, ಲಾಡ್‌ಮಲಜೀ, ಕಚೋಡಮಲಜೀ, ಈ ನಾಲ್ವರು ಪ್ರಮುಖರ ಜೊತೆ ಬ್ರಹ್ಮಚಾರಿ ಸುಗನಚಂದ, ಘಾಸೀರಾಮ, ಗಣೇಶಲಾಲ, ಕಪೂರ ಚಂದ ಚಿರಂಜಿವಲಾಲಜೀ ಕೂಡ ಇದ್ದರು.

ಸೇಠ ಹೀರಾಲಾಲ ಜೈನರ ಪತ್ನಿ ಸೌಭಾಗ್ಯವತಿ ರತನಬಾಯಿ ನಿಜಕ್ಕೂ ಅನುಪಮ ರತ್ನವೇ ಆಗಿದ್ದರು. ಇವರಲ್ಲಿ ಉದಾರತೆ ಸಹಿಷ್ಣುತೆ ಅಪಾರವಾಗಿತ್ತು. ಎಲ್ಲರಲ್ಲೂ ಹೊಂದಿಕೊಳ್ಳುವಂತಹ, ದಯಾವಂತಳಾದ ಇವರ ಜೊತೆ ಸಜ್ಜನಬಾಯಿ ಮೊದಲಾದ ಇಬ್ಬರು ಮೂವರು ಬಾಯಿಜೀ ಇದ್ದರು.

ಸಂಘದಲ್ಲಿ ಚೌಕ ಮಾಡಲು ಸ್ವತಃ ಹೀರಾಲಾಲರ ಜೊತೆಯಲ್ಲಿ ಬ್ರಹ್ಮಚಾರಿ ಸೋನುಬಾಯಿ, ಹೀರಾಬಾಯಿ, ಗಟ್ಟುಬಾಯಿ, ಮುಕನೀಬಾಯಿ, ಗುಲಾಬಬಾಯಿ, ಸುಕ್ಕೀಬಾಯಿ ಮುಂತಾದವರು ಸ್ಥಾಯಿ ಚೌಕ ಮಾಡುವವರಿದ್ದರು. ಮಧ್ಯೆ ಮಧ್ಯೆ ಬೇರೆ ಶ್ರಾವಕರು ಕೂಡ ತಮ್ಮ ಅನುಕೂಲಾನುಸಾರವಾಗಿ ಬಂದು ಹೋಗುತ್ತಿದ್ದರು.

ಅಜಮೀರ

ಸಂಘದ ವಿಹಾರವು ಅಜಮೀರದ ಕಡೆ ಹೊರಟಿತ್ತು. ಸಂಘಕ್ಕೆ ಭಾಗಚಂದ್ ಸೇಠಜೀ ಬಂದಿದ್ದರು. ಅವರು ಇಡೀ ಸಂಘವೇ ನಮ್ಮಲ್ಲಿರುವ ದೊಡ್ಡದಾದ ಸೋನೀಜೀಯ ನಶಿಯಾದಲ್ಲೇ ತಂಗಬಹುದೆಂದು ಆಶಿಸುತ್ತಿದ್ದರು. ಆದರೆ ಸಂಘದ ಮುನಿ ಮತ್ತು ಆರ್ಯಿಕೆಯರು ವಿಚಾರ ಮಾಡಿ ಸಂಘದ ಮುನಿಗಳು ಚಿಕ್ಕನಶಿಯಾದಲ್ಲೂ ಆರ್ಯಿಕೆಯರು ಬಾಬಾಜೀಯವರ ನಶಿಯಾದಲ್ಲೂ ತಂಗಲು ನಿರ್ಧರಿಸಿದರು. ಈ ವಿಷಯದಲ್ಲೇ ಒಂದು ದೊಡ್ಡ ಜಿಜ್ಞಾಸೆಯೇ ಉಂಟಾಯಿತು. 5-6 ದಿನಗಳ ವರೆಗೆ ಊಹಾಪೋಹಗಳು ಉಂಟಾಗಿ ಕೊನೆಗೆ ಸೇಠರ ಅನುನಯ ಮತ್ತು ಗುರುಭಕ್ತಿಯಿಂದ ಅವರು ತಮ್ಮ ಇಚ್ಛೆಯಂತೆಯೇ ಆಚಾರ್ಯ ಮತ್ತು ಮುನಿಗಣವನ್ನೂ ಸೇಠ ಸಾಹಬದ ನಶಿಯಾದಲ್ಲಿಯೂ ಆರ್ಯಿಕೆಯರನ್ನು ಅದರ ಎದುರುಗಡೆ ಇದ್ದ ಹವೇಲಿಯಲ್ಲಿಯೂ ಇರಬೇಕೆಂಬ ವಿಷಯದಲ್ಲಿ ಜಯಶಾಲಿಗಳಾದರು. ನಗರ ಪ್ರವೇಶದ ಸಮಯದಲ್ಲಿ ಇಡೀ ಅಜಮೀರದ ಜೈನ ಸಮುದಾಯವೇ ಸ್ವಾಗತಿಸಲು ಉತ್ಸಾಹದಿಂದ ಸಿದ್ಧತೆಯನ್ನು ಮಾಡಿಕೊಂಡಿದ್ದರು. ಸೇಠಸಾಹೆಬ್‌ರು ನಮ್ಮ ಜೊತೆ ನಡೆದುಕೊಂಡೇ ಬಂದು ನಗರದ ಮಂಗಳ ಪ್ರವೇಶವನ್ನು ಮಾಡಿಸಿದರು.

ಸಂಘದಲ್ಲಿ ಒಂದು ದಿನ ಕಳೆಯಿತು. ನನ್ನಿಂದ ಒಂದು ಪ್ರವಚನವಾಯಿತು. ನಂತರ ಮಧ್ಯಾಹ್ನ ಕೆಲವು ಶ್ರಾವಕರು ಬಂದು ಆಚಾರ್ಯರಲ್ಲಿ ವಿನಂತಿಸಿದರು. ಮಹರಾಜಜೀ ಆರ್ಯಿಕಾ ಜ್ಞಾನಮತಿಜೀಯವರಿಂದ ಇಲ್ಲಿಯ ಸಾರ್ವಜನಿಕ ಸಭೆಯಲ್ಲಿ ಒಂದು ಭಾಷಣವನ್ನು ತಾವು ಮಾಡಿಸಿಕೊಡಬೇಕು ಎಂದು ಪ್ರಾರ್ಥಿಸಿದರು. ಇದರ ಮುಖಂಡತ್ವವನ್ನು ಭಾಗಚಂದ್ರರೇ ವಹಿಸಿದ್ದರು. ಇವರ ಕೋರಿಕೆಯನ್ನು ಮನ್ನಿಸಿ ಮುಗುಳ್ನಗುತ್ತಾ ಸಮ್ಮತಿ ಸೂಚಿಸಿದರು ಹೆಮ್ಮೆಯ ಭಾವದಿಂದ. ಸೇಠ ಹೀರಾಲಾಲಜೀಗಂತೂ ಬಹಳ ಆನಂದವಾಯ್ತು. ಆದರೆ ಸಾಯಂಕಾಲ ತಮ್ಮ ತಮ್ಮಲ್ಲೇ ಚರ್ಚೆ ಮಾಡಿಕೊಳ್ಳುತ್ತಾ ಮುನಿವರ್ಗದವರು ಏನು ಸಂಘದಲ್ಲಿ ಜ್ಞಾನಮತೀಯನ್ನು ಬಿಟ್ಟು ಬೇರೆ ಸಾಧುವರ್ಗದವರು ಇಲ್ಲವೇ ಎಂದು ಮುನಿವರ್ಗದಲ್ಲೇ ಈರ್ಷ್ಯಾಭಾವನೆ ಉಂಟಾಗಿದ್ದು ಆಚಾರ್ಯರ ನೆಮ್ಮದಿಯನ್ನು ಕೆಡಿಸಿತು. ಕೊನೆಗೆ ಅವರು ನಮ್ಮ ಸಂಘದ ಯಾವ ಸಾಧುಗಳು ಸಾರ್ವಜನಿಕ ಸಭೆಯಲ್ಲಿ ಮಾತಾಡುವುದು ಬೇಡ ಎನ್ನುವ ತೀರ್ಮಾನಕ್ಕೆ ಬಂದರು. ಧರ್ಮಪ್ರಭಾವನೆ ಮಾಡಬೇಕೆಂದಿದ್ದ ಧಾರ್ಮಿಕ ಶ್ರಾವಕರಿಗೆ ಇದರಿಂದ ಬೇಸರವು ಆಯಿತು. ಜನಗಳಿಗೆ ನನ್ನ ಬಗ್ಗೆ ಇದ್ದ ಶ್ರದ್ಧೆಯನ್ನು ನೋಡಿ ನಾನು ಉಪದೇಶ ಮಾಡುವುದರಿಂದ ಸಂಘದಲ್ಲಿ ಅಸಮಾಧಾನ ಉಂಟಾಗುತ್ತದೆ ಎಂದರೆ ಅದರಿಂದ ಯಾರಿಗೆ ಸಮಾಧಾನವಾಗುತ್ತದೆ. ಮಾಡದಿರುವುದೇ ಲೇಸು ಎನ್ನಿಸಿತು. ನನ್ನ ಗುರಿ ಆತ್ಮಸಾಧನೆಯಾಗಿದ್ದರಿಂದ ಲೋಕಪ್ರಭಾವನೆಯಿಂದ ಪ್ರಯೋಜನವಿಲ್ಲ ಎಂದುಕೊಂಡೆ.

ನಾನು ವಿಹಾರ ಮಾಡುತ್ತಾ ಮಾಡುತ್ತಾ ಮಧ್ಯೆ ಮಧ್ಯೆ ಮರದ ನೆರಳಿನಲ್ಲಿ ವಿಶ್ರಮಿಸುತ್ತಿದ್ದೆ. ಆಗ ಜಿನಮತಿಯು ಶಿಷ್ಯರಿಗೆ ಗೊಮ್ಮಟಸಾರದ ಜೀವಕಾಂಡದ 6 ಗಾಥೆಗಳನ್ನು ಓದಿಸುತ್ತಿದ್ದರು. ಹೀಗೆ ಎರಡು ಮೂರು ಕಡೆ ವಿಶ್ರಮಿಸುತ್ತಾ ಗೊಮ್ಮಟಸಾರದ ಆರುಗಾಥೆ ಆತ್ಮಮೀಮಾಂಸೆಯ ಆರುಗಾಥೆ ಸಮಾಧಿಶತಕದ ಆರುಗಾಥೆ ಹೀಗೆ ದಿನಕ್ಕೆ ಹದಿನೆಂಟು ಗಾಥೆಗಳನ್ನು ಅಭ್ಯಾಸ ಮಾಡಿ ಜಿನಮತಿಗೆ ರಾತ್ರಿ ಒಪ್ಪಿಸಬೇಕಾಗಿತ್ತು. ಇವರು ಕಂಠಸ್ಥ ಮಾಡದೆ ಇದ್ದರೆ ಕೂತು ಬಾಯಿಪಾಠ ಮಾಡಿ ಹೇಳಿಯೇ ಮಲಗಬೇಕಾಗಿತ್ತು. ಆ ದಿನಗಳಲ್ಲಿ ಬೆಳಿಗ್ಗೆ ಸಂಜೆ ಎರಡು ಹೊತ್ತು ಪ್ರಯಾಣ ಇರುತ್ತಿತ್ತು. ದಿನಕ್ಕೆ ಹತ್ತು ಹದಿನೈದು ಮೈಲಿ ನಡೆಯಬೇಕಾಗಿತ್ತು. ನನಗೆ ನಡೆಯುತ್ತಾ ಹೊಟ್ಟೆಯಲ್ಲಿ ನೋವು ಪ್ರಾರಂಭವಾಗಿ ನಡಿಗೆ ನಿಧಾನವಾಗುತ್ತಿತ್ತು. ಎಲ್ಲರಿಂದ ಹಿಂದೆ ಉಳಿಯುತ್ತಿದ್ದೆ. ಆದರೆ ಪ್ರತಿದಿನ ನಿಶ್ಚಿತ ಸ್ಥಾನವನ್ನು ತಲುಪಲೇಬೇಕಾಗಿತ್ತು.

ಆ ಸಮಯದಲ್ಲಿ ನನ್ನ ಬಳಿ ಕ್ಷುಲ್ಲಿಕೆಯರಾದ ಪದ್ಮಾವತಿ, ಜಿನಮತೀ, ಚಂದ್ರಮತಿಯರು ಹಾಗೂ ಒಬ್ಬ ಬ್ರಹ್ಮಚಾರಿಣೀ ಮತ್ತು ಆರ್ಯಿಕೆ ವೀರಮತಿಯರೆಲ್ಲರ ವಾತ್ಸಲ್ಯದಲ್ಲಿ ಮೀಯುತ್ತಿದ್ದೆ.

ಬ್ಯಾವರ

ಅಜಮೀರಿನಿಂದ ವಿಹಾರ ಮಾಡುತ್ತಾ ಬ್ಯಾವರ ನಗರಕ್ಕೆ ಬಂದೆವು. ಅಲ್ಲಿ ಸೇಠ ಚಂಪಾಲಾಲರ ನಶಿಯಾದಲ್ಲಿ ಸಂಘ ತಂಗಿತ್ತು. 'ಐಲಕ ಪನ್ನಾಲಾಲ ಸರಸ್ವತಿ ಭವನ' ದಲ್ಲಿ ಆರ್ಯಿಕೆಯರು ತಂಗಿದ್ದೆವು. ರಸ್ತೆಯ ಕಡೆಗೆ ಇದ್ದ ಕೊಠಡಿಯಲ್ಲಿ ನಾನು ತಂಗಿದ್ದೆ. ರಾತ್ರಿ 10-11 ಗಂಟೆ ಇರಬಹುದು. ನನ್ನ ಕೊಠಡಿಗೆ ಹೊಂದಿಕೊಂಡೇ ಇದ್ದ ಪಕ್ಕದ ಕೊಠಡಿಯಿಂದ ಏನೋ ದಡಬಡ ಸದ್ದು ಕೇಳಿ ಬರುತ್ತಿತ್ತು. ಬ್ರ. ಗಣೇಶಲಾಲ ಬ್ರಹ್ಮಚಾರಿಣಿ ಗುಲಾಬಬಾಯಿ ಮುಂತಾದವರು ತಂಗಿದ್ದರು. ಅವರು ನಾಳೆ ಚೌಕ ಮಾಡುವ ಸಲುವಾಗಿ ಏನೋ ತಯಾರಿಯ ಕಾರಣದಿಂದ ತಡಬಡ ಸದ್ದು ಮಾಡುತ್ತಿದ್ದರು ಎನಿಸುತ್ತದೆ. ಇದರ ಕಾರಣದಿಂದ ನನಗೂ ಬಹಳ ಹೊತ್ತಿನವರೆಗೂ ನಿದ್ದೆಯೇ ಬರಲಿಲ್ಲ. ಬೆಳಗಿನ ಜಾವ ನಾಲ್ಕು ಗಂಟೆಗೆ ಕಣ್ಣು ಬಿಡುತ್ತಲೇ ಯಾರೋ ವೇದನೆಯಿಂದ ಅಳುತ್ತಿರುವ ಸದ್ದು ಕೇಳಿಸಿತು. ಹೊರಗಡೆ ಬಂದು ನೋಡಿದಾಗ ತಿಳಿಯಿತು. ಬ್ರ. ಗಣೇಶಲಾಲರು ಸ್ವರ್ಗಸ್ಥರಾದರೆಂದು. ಎಲ್ಲರಿಗೂ ಕೇಳಿ ಆಘಾತವಾಯಿತು. ಗುಲಾಬ ಬಾಯಿ ಹೇಳತೊಡಗಿದರು. ಬಾಬೂಜೀ ದಿನದಂತೆ 3½ ಗಂಟೆಗೆ ಎದ್ದರು. ನನ್ನ ಹತ್ತಿರ ಜಪದ ಸರ ಕೇಳಿದರು. ಕೇಳಿ ತೆಗೆದುಕೊಂಡು ತಮ್ಮ ಚಾಪೆಯ ಮೇಲೆ ಕುಳಿತು ಬಾಯಿಯಿಂದ ಮಂತ್ರ ಹೇಳತೊಡಗಿದರು. ಹತ್ತು ಹದಿನೈದು ನಿಮಿಷದಲ್ಲೇ ದಡಕ್ಕೆಂದು ವಾಲಿದರು. ನಾನು ಎಲ್ಲೋ ನಿದ್ದೆಯಿಂದ ವಾಲಿದ್ದಾರೆ ಎಂದುಕೊಂಡವಳು ಮೆಲ್ಲನೆ ಕೂಗಿದೆ. ಮಾತೇ ಆಡಲಿಲ್ಲ. ಚಾದರ ಎಳೆದರೆ ಸದ್ದೇ ಇಲ್ಲ. ಜೋರಾಗಿ ಜನರನ್ನು ಕೂಗಿದೆ. ಎಲ್ಲ ಬಂದು ನೋಡಲಾಗಿ ಪ್ರಾಣಪಕ್ಷಿ ಹಾರಿಹೋಗಿತ್ತು.

ಬ್ರ. ಗಣೇಶಲಾಲರು ಸಂಘದಲ್ಲೇ ಇದ್ದ ಸುಮತಿಮತೀ ಮಾತಾಜೀಯವರ ಅಣ್ಣ. ಇವರಿಗೆ ದತ್ತುಪುತ್ರನಾದ ಸನತ್‌ಕುಮಾರ್ ಎಂಬುವರು ಇದ್ದರು. ಇವರ ಪತ್ನಿ ಜಯಪುರದಲ್ಲಿ ಇದ್ದರು. ಎಲ್ಲರಿಗೂ ಸುದ್ದಿ ತಿಳಿಸಿ ಬಂದು ಅಂತ್ಯಕ್ರಿಯೆ ನಡೆದಿದ್ದು ಬ್ಯಾವರದಲ್ಲಿ ಒಂದು ವಿಶೇಷ ರೀತಿಯ ವೈರಾಗ್ಯ ಭಾವನೆಯ ವಾತಾವರಣ ಉಂಟಾಯಿತು. ಗಣೇಶಲಾಲರು ಆಚಾರ್ಯ ಶ್ರೀವೀರಸಾಗರರ ಹತ್ತಿರ ಕ್ಷುಲ್ಲಕ ದೀಕ್ಷೆ ತೆಗೆದುಕೊಳ್ಳಬೇಕೆಂದು ಶ್ರೀಫಲವನ್ನು ಇಟ್ಟು ಪ್ರಾರ್ಥಿಸಿ ಸುಮತಿಮತೀಯವರ ಪ್ರೇರಣೆಯಿಂದ ದೀಕ್ಷೆಯ ದಿನವನ್ನು ನಿಶ್ಚಯಿಸಿ ಎಲ್ಲ ಸಿದ್ಧತೆಯು ನಡೆದಿತ್ತು. ಆದರೆ ಇವರ ದತ್ತುಪುತ್ರ ಬಂದು ಯಾರು ಹೇಳಿದರು ಕೇಳದಂತೆ ತಂದೆಯನ್ನು ಬಲವಂತವಾಗಿ ಮನೆಗೆ ಕರೆದುಕೊಂಡು ಹೋಗಿ ರೂಮಿನಲ್ಲಿ ಕೂಡಿಹಾಕಿ ಬಿಟ್ಟ. ಗಣೇಶಲಾಲರಿಗೆ ವಯಸ್ಸು ಅರವತ್ತು ವರ್ಷವಾಗಿದ್ದರು ಆರೋಗ್ಯವಾಗಿದ್ದರು. ಮನೋಬಲ ಕೂಡ ಗಟ್ಟಿಯಾಗಿತ್ತು. ತ್ಯಾಗಮಯ ಜೀವನಕ್ಕೆ ಕಾಲಿಡಲು ಮಗ ಅವಕಾಶ ಕೊಡದೆ ದೀಕ್ಷೆಗೆ ಆಡ್ಡಿಯಾಗಿದ್ದ, ಪ್ರಬುದ್ಧ ಜನರು ಮಗನಿಗೆ ಬುದ್ಧಿ ಹೇಳಿದರು ಕೆಲವರು ಮಗ ಮಾಡಿದ್ದು ಸರಿ ಎಂದರು, ಕೆಲವರು ಮದ್ಯಸ್ಥಭಾವವನ್ನು ತಳೆದಿದ್ದರು. ಆಗ ನಾನು ಯೋಚಿಸತೊಡಗಿದೆ ಅಯ್ಯೋ ವಿಧಿಯೇ ಪುರುಷನಾಗಿಯು ವೃದ್ದರಾಗಿಯು ತ್ಯಾಗ ಜೀವನವನ್ನು ನಡೆಸಲು ಅವರಿಗೆ ಸಾಧ್ಯವಾಗಲಿಲ್ಲವಲ್ಲ ಆ ಕ್ಷಣದಲ್ಲಿ ನಾನು ದೀಕ್ಷೆ ತೆಗೆದುಕೊಳ್ಳಲು ಪಟ್ಟ ಪರಿಶ್ರಮ ಕಣ್ಣ ಮುಂದೆ ಸುಳಿದಾಡಿತು. ನಾನು ಪುರುಷಾರ್ಥದಿಂದ ದೀಕ್ಷೆ ಪಡೆದುಕೊಂಡು ಜೀವನವನ್ನು ಸಫಲ ಮಾಡಿಕೊಂಡೆ ಎಂಬ ಧನ್ಯತಾಭಾವ ಮನಸ್ಸಿಗೆ ಸಮಾಧಾನವೆನ್ನಿಸಿತು. ನನ್ನ ಈ ಸಾಧನೆಯಲ್ಲಿ ಯಾವ ಲೋಪವು ಬರದಂತೆ ಕಾಪಾಡಿಕೊಳ್ಳಬೇಕೆಂಬ ಸ್ಥೈರ್ಯ ಉಂಟಾಗತೊಡಗಿತು.

ಇವರ ಆಕಸ್ಮಿಕ ಮರಣ ಸಾಧು ಸಾಧ್ವಿಯರಲ್ಲಿ ಒಂದೇ ಭಾವನೆ ಉಂಟಾಗ ತೊಡಗಿತು. ದೀಕ್ಷಾವಿಧಿಯನ್ನು ತಪ್ಪಿಸಿಮಗ ಕೋಣೆಯಲ್ಲಿ ಬಂಧಿಸಿದ ಆದರೆ ಮೃತ್ಯುವಿನಿಂದ ಅವರನ್ನು ಹಿಡಿದಿಡಲು ಆಗಲಿಲ್ಲವಲ್ಲ ಎಂದು ಇದನ್ನು ನೋಡಿದ ನನಗೆ ಆತ್ಮಾನು ಶಾಸನದ ಸಾಲುಗಳು ನೆನಪಿಗೆ ಬಂದವು.

ಶರಣಮಶರಣಂ ವೋ ಬಂಧವೋ ಬಂಧಮೂಲಂ।
ಚಿರಪರಿಚಿತದಾರಾ ದ್ವಾರ ಮಾಪದ್ ಗೃಹಾಣಾಮ್॥
ವಿಪರಿಮೃಶತಃ ಪುತ್ರಾಃ ಶತ್ರವಃ ಸರ್ವಮೇತತ್।
ತ್ಯಜತ್ ಭಜತ ಧರ್ಮಂ ನಿರ್ಮಲಂ ಶರ್ಮಕಾಮಾಃ॥

ಯಾವುದು ನಮಗೆ ಶರಣೆಂದು ತಿಳಿಯುತ್ತೇವೆಯೋ ಅದು ಶರಣಲ್ಲ ಅಶರಣವೇ ಆಗಿದೆ. ಈ ಎಲ್ಲ ಬಂದು ಭಾಂದವರೆಲ್ಲ ಬಂಧನಕ್ಕೆ ಕಾರಣರೇ ಆಗಿದ್ದಾರೆ. ಚಿರಕಾಲದಿಂದ ಜೊತೆಯಲ್ಲಿರುವ ಹೆಂಡತಿಯು ಮನೆಯ ಅಪತ್ತಿಗೆ ಕಾರಣ ವಾಗಿದ್ದಾಳೆ. ಮಕ್ಕಳಾದರೋ ಶತ್ರುವೇ ಆಗಿದ್ದಾರೆ. ಆದ್ದರಿಂದ ಇವೆಲ್ಲವನ್ನು ತ್ಯಜಿಸಿ ಸುಖವನ್ನು ಬಯಸುವವರು ಧರ್ಮದ ಆಶ್ರಯವನ್ನು ಬಯಸಬೇಕು ಎಂದಿದ್ದಾರೆ.

ಜೀವನದಲ್ಲಿ ಗುರುವಿಗಿಂತ ದೊಡ್ಡವರಾದ ಬಂಧುಗಳು ಇಲ್ಲ. ಅವರೇ ನಿಜವಾದ ತಂದೆ ತಾಯಿಗಳೇ ನಿಜಕ್ಕೂ ಗುರುವೇ ನಮಗೆ ಎಲ್ಲವು ಎಂದು ಮನದಲ್ಲೇ ಯೋಚಿಸತೊಡಗಿದೆ. ಪಂಡಿತ ಸನತ್ ಕುಮಾರಜೀ ಬಂದು ಅಂತ್ಯಕ್ರಿಯೆಗಳನ್ನು ಮುಗಿಸಿ ಗುರುಗಳ ಹತ್ತಿರ ಬಂದು ಮನದಳಲನ್ನು ಹೇಳಿಕೊಳ್ಳತೊಡಗಿದರು. ಅಂದು ನಾನು ಗುರುಗಳ ಮಾತಿಗೆ ಮನ್ನಣೆ ಕೊಡಲಿಲ್ಲ ಇಂದು ತಂದೆಯವರು ಸ್ವರ್ಗವಾಸಿಗಳಾದರು. ಅದು ಅವರ ಇಚ್ಛೆಯಂತೆ ದೀಕ್ಷಾಕ್ರಿಯೆ ನಡೆದಿದ್ದಾದರೆ ಸಾಧುಗಳಿಗೆ ಸಿಗುವ ಸಲ್ಲೇಖನ ಮಹಾಮಂತ್ರ ಕೇಳುತ್ತಾ ದೇಹ ತ್ಯಾಗ ಮಾಡುವ ಸೌಭಾಗ್ಯ ಅವರಿಗೆ ಸಿಗುತ್ತಿತ್ತು. ಆದರೂ ಅವರು ಮಂತ್ರ ಜಪಿಸುತ್ತಲೇ ದೇಹತ್ಯಾಗ ಮಾಡಿದ್ದಾರೆ ಅವರ ಜೀವನದಲ್ಲಿ ಪೂಜೆ ದಾನ ಸ್ವಾದ್ಯಾಯಗಳನ್ನು ಮಾಡುತ್ತಲೇ ಜೀವನವನ್ನು ಸಾರ್ಥಕವಾಗಿಯೇ ಕಳೆದಿದ್ದಾರೆ.

ಈ ಘಟನೆಯಿಂದಾಗಿ ಆರ್ಯಿಕೆ ಸುಮತಿಮತೀಜೀಯವರಿಗೆ ಇನ್ನೂ ವೈರಾಗ್ಯ ಉಂಟಾಯಿತು. ಒಂದು ವಾರದ ಕೆಳಗೆ ವೀರಮತಿ ಮಾತಾಜೀ ಯಾವುದೋ ಶಾಸ್ತ್ರದ ವಿಷಯವಾಗಿ ನನ್ನ ಹತ್ತಿರ ಹೇಳುತ್ತಿದ್ದರು ನಮ್ಮ ಸಂಘದಲ್ಲಿ ಹಿರಿಯವರಾದ ಸುಮತಿಮತೀ ಮಾತಾಜೀಯವರ ಮಾತನ್ನು ನಾವು ಯಾವುದೇ ಕಾರಣಕ್ಕೂ ತಳ್ಳಿಹಾಕಬಾರದು. ಈ ವಿಷಯದಲ್ಲಿ ನಾವು ದೃಡವಾಗಿರಬೇಕೆಂದು ಸುಮತೀಮತಿಯವರ ಮನಸ್ಸಿನಲ್ಲಿ ಈ ಘಟನೆಯಿಂದಾಗಿ ಮೂರ್ನಾಲ್ಕು ದಿನದಿಂದ ಒಂದು ರೀತಿಯ ಆತಂಕ ಉಂಟಾಯಿತು. ಅವರು ನನ್ನಲ್ಲಿ ಸಹಜ ಭಾವದಿಂದ ಹೇಳಿದರು. ಜ್ಞಾನಮತೀಜೀ ನಾನು ನಿಮಗೆ ಒಂದೆರಡು ಮಾತುಗಳನ್ನು ಹೇಳಿರಬಹುದು ಹಾಗೇ ನಿಮ್ಮ ಮಾತುಗಳನ್ನು ನಾನು ತಳ್ಳಿಹಾಕಿರಬಹುದು ಇದಕ್ಕಾಗಿ ನನ್ನನು ಕ್ಷಮಿಸಿರಿ ಎಂದು ನಿಜವಾಗಿಯೂ ಈ ಜೀವನ ಕ್ಷಣ ಭುಂಗುರವಾದುದು ಈ ದಿನ ಮಲಗಿದವರು ಬೆಳಗ್ಗೆ ಏಳುತ್ತೇವೆಯೋ ಇಲ್ಲವೋ ನೋಡಿ ಹೇಗೆ ಗಣೇಶಜೀಯವರು ಹೊರಟೇಹೋದರು. ನಮ್ಮ ನಮ್ಮಲ್ಲಿ ಸಣ್ಣ ಸಣ್ಣ ಮಾತಿಗೂ ವಾದಿಸುವುದು ಬೇಡ ಪ್ರೇಮದಿಂದ ಇರುವುದನ್ನು ಅಭ್ಯಾಸಮಾಡಿಕೊಳ್ಳೋಣ ಎಂದರು. ಇವರ ಈ ಕ್ಷಮಾಯಾಚನೆಯನ್ನು ಕಂಡು ನಾನು ವಿನಮ್ರತೆಯಿಂದ ಕ್ಷಮೆಯಾಚಿಸಿದ್ದೆನು. ಮಾತಾಜೀ ನನ್ನ ಹುಡುಗುತನದಿಂದ ಮಾಡಿರುವ ಹಠವನ್ನು ಕ್ಷಮಿಸಿರಿ ತಾವು ದೊಡ್ಡವರು ನನ್ನ ಹತ್ತಿರ ತಾವು ಕ್ಷಮೆ ಕೇಳಬಾರದು ಎಂದೆ. ರಕ್ತಸಂಬಂಧ ಹೇಗೆ ಇರುತ್ತದೆ . ಬ್ರಹ್ಮಚಾರಿಯವರಿಗೆ ದೀಕ್ಷೆಯ ಮಹೂರ್ತ ಇಟ್ಟು ಸಹ ಅವರಿಗೆ ದೀಕ್ಷೆ ತೆಗೆದುಕೊಳ್ಳಲು ಆಗಲಿಲ್ಲ ಆದರೆ ಆಕಸ್ಮಾತ್ ಮರಣ ಉಂಟಾಗಿದ್ದು. ಇವರ ಮನಸ್ಸನ್ನು ಇನ್ನೂ ವೈರಾಗ್ಯದತ್ತ ಎಳೆದಿದೆ ಅದಕ್ಕಾಗಿ ಇವರು ವಿಶಾಲ ಹೃದಯದಿಂದ ಎಲ್ಲರನ್ನು ಕ್ಷಮೆ ಕೇಳಿದ್ದಾರಲ್ಲ ಎಂದು ಯೋಚಿಸತೊಡಗಿದೆ.

ಜಗತ್ಕಾಯ ಸ್ವಭಾವೌ ವಾ ಸಂವೇಗ ವೈರಾಗ್ಯಾರ್ಥಮ್।[೧]

---

೧. ತತ್ವಾರ್ಥಸೂತ್ರ ಅ. ೨ ಸೂತ್ರ - ೧೨

ಈ ಸಂಸಾರ ಮತ್ತು ಶರೀರದ ಸ್ವಭಾವವನ್ನು ವಿಚಾರ ಮಾಡುವುದರಿಂದ ಧರ್ಮದಲ್ಲಿ ಪ್ರೇಮ ಮತ್ತು ವೈರಾಗ್ಯವು ಹೆಚ್ಚಾಗುತ್ತದೆ.

೨೧

ಧರ್ಮ ಪ್ರಭಾವನೆಯ ಮಾರ್ಗದಲ್ಲಿ

ಈ ಘಟನೆಯಾದ ನಂತರ ಒಂದೆರಡು ದಿನಗಳ ನಂತರ ಸಂಘವು ಗುಜರಾತಿನ ಕಡೆಗೆ ಮಂಗಳವಿಹಾರವು ಹೊರಟಿತು. ಸಂಘದಲ್ಲಿ ಆರ್ಯಿಕೆ ಸುಮತೀಯವರು ವಯಸ್ಸಾದವರು. ಆರ್ಯಿಕೆ ಪಾರ್ಶ್ವಮತೀಜಿಯವರಿಗೆ ಆರೋಗ್ಯ ಸರಿಇರಲಿಲ್ಲ, ಆದ್ದರಿಂದ ಆಚಾರ್ಯರು ಒಂದು ಡೋಲಿಯ ವ್ಯವಸ್ಥೆ ಮಾಡಿಸಿದರು. ಇಬ್ಬರು ಸ್ವಲ್ಪ ಸ್ವಲ್ಪ ದೂರ ಅದರಲ್ಲಿ ಕುಳಿತುಕೊಂಡು ಪ್ರಯಾಣ ಮಾಡುತ್ತಿದ್ದರು. ಗುಜರಾತಿನಲ್ಲಿ ಎಲ್ಲ ಕಡೆಯಲ್ಲಿಯೂ ಒಳ್ಳೆಯ ಸ್ವಾಗತದೊರೆಯಿತು. ಕೆಲವು ಕಡೆ ದಿಗಂಬರ ಜೈನರ ಮನೆಯು ಇಲ್ಲದಿದ್ದರೂ. ಶ್ವೇತಾಂಬರ ಜೈನರು ಸಂಘವನ್ನು ಸ್ವಾಗತಿಸಿ ಆಹಾರದ ವ್ಯವಸ್ಥೆಯನ್ನು ಮಾಡಿದ್ದರು. ಸಂಘಪತೀ ಹೀರಾಲಾಲರು ನಿರಭಿಮಾನಿಗಳು ದಾರಿಯಲ್ಲಿ ಪ್ರಯಾಣ ಮಾಡುವಾಗ ಮಧ್ಯದಲ್ಲಿ ತಂಗುವ ಸಂಧರ್ಭ ಬಂದಾಗ ದಾರಿಯಲ್ಲೇ ಟೆಂಟುಗಳನ್ನು ಹಾಕಿಸಿ ಒಂದು ಚಿಕ್ಕ ಹಳ್ಳಿಯೋ ಎನ್ನುವಂತೆ ವ್ಯವಸ್ಥೆಮಾಡಿಸಿ ಆಹಾರದ ಸಮಯದಲ್ಲಿ ಕೈಯಲ್ಲಿ ಕೋಲನ್ನು ಹಿಡಿದು. ಪ್ರಾಣಿಗಳು ಆಕಸ್ಮಾತ್ ಬರದಂತೆ ಕಾವಲು ಕಾಯುತ್ತಿದ್ದರು ಈ ಸಮಯದಲ್ಲಿ ಮುನಿವರ್ಗವು ದಿನದ ಎರಡು ಹೊತ್ತು ಪ್ರಯಾಣ ಮಾಡಿ ದಿನಕ್ಕೆ ಒಮ್ಮೆ ಆಹಾರ ತೆಗೆದುಕೊಳ್ಳತ್ತಾರೆ. ಆಹಾರದಲ್ಲಿ ಅಂತರಾಯ ಬಂದರೆ. ಮುಂದೆ ಪ್ರಯಾಣ ಮಾಡಲು ಎಲ್ಲರಿಗೂ ತೊಂದರೆ ಆಗುತ್ತಿತ್ತು. ಅದಕ್ಕಾಗಿ ಆಹಾರವಾಗುವ ಸಂದರ್ಭದಲ್ಲಿ ಬಹಳ ಎಚ್ಚರಿಕೆ ವಹಿಸುತ್ತಿದ್ದರು. ಆಹಾರದ ಸಮಯದಲ್ಲಿ ಕೋತಿ ನಾಯಿಗಳನ್ನು ಕಾಯುವ ಕೆಲಸವನ್ನು ಸೇಠಜೀಯವರೇ ಎಚ್ಚರಿಕೆಯಿಂದ ಮಾಡುತ್ತಿದ್ದರು. ಅವರೆ ಪತ್ನಿ ರತನ ಬಾಯಿಯವರು ಎಲ್ಲ ಬ್ರಹ್ಮಚಾರಿಣಿಯರ ಜೊತೆಯಲ್ಲಿ ಚೌಕದ ಎಲ್ಲ ಕೆಲಸಗಳನ್ನು ತಮ್ಮ ಕೈಯಿಂದಲೇ ಮಾಡುತ್ತಿದ್ದರು. ಹಿಟ್ಟು ಬೀಸುವುದು, ನೀರುತುಂಬುವುದು ಕೊನೆಗೆ ಆಹಾರವಾದ ನಂತರ ಪಾತ್ರೆ ತೊಳೆಯುವ ಕೆಲಸವನ್ನು ಮಾಡುತ್ತಿದ್ದರು.

ನಗರಗಳಲ್ಲಿ ಈ ವಿಷಯ ಒಂದು ಚರ್ಚೆಯ ವಸ್ತುವಾಗಿತ್ತು. ಇಷ್ಟು ದೊಡ್ಡ ಸಂಘವನ್ನು ಗಿರಿನಾರ ಯಾತ್ರೆ ಮಾಡಿಸುತ್ತೇನೆ ಎಂದು ಸೇಠ ಒಬ್ಬರೇ ಹೊರಟಿದ್ದಾರಲ್ಲ ಅದು ಬ್ರಹ್ಮಚಾರಿ. ಬ್ರಹ್ಮಚಾರಿಣಿಯರನ್ನು ಕಟ್ಟಿಕೊಂಡು ಹೀಗೆಂದುಕೊಂಡೇ ಸಂಘ ತಂಗಿದ್ದ ಕಡೆ ಜನ ದರ್ಶನಕ್ಕೆ ಬಂದವರು. ಕೋಲುಹಿಡಿದು ಪ್ರಾಣಿಗಳನ್ನು ಕಾಯುತ್ತಿದ್ದ ಸೇಠ ಕಡೇ ಕೈತೋರಿಸುತ್ತಾ. ಈ ಸಂಘದ ಸಂಘಾಧಿಪತಿ ಯಾರು ಎಂದು ಕೇಳುತ್ತಿದ್ದರು ಸೇಠರೇ ನೀವೇ ಯಾಕೇ ಈ ಕೆಲಸ ಮಾಡುತ್ತಿದ್ದೀರ ಎಂದು ಕೇಳಲು ಹೋದರೆ ಅವರ ಸರಳತೆ ಮತ್ತು ಗುರುಭಕ್ತಿಯಿಂದ ಅವರೇ ಪ್ರಭಾವಿತರಾಗುತ್ತಿದ್ದರು ಮತ್ತು ಕೆಲವರು ಇವರ ಹೆಂಡತಿ ಎಲ್ಲಿ ಎಂದು ಕೇಳಿದರೆ ಅವರಾದರೋ. ಹಿಟ್ಟು ಬೀಸುತ್ತಲೋ ಪಾತ್ರೆ ತೊಳೆಯುತ್ತಲೋ ಇರುವುದು ನೋಡಿದರೆ ಅವರೇ ಆಶ್ಚರ್ಯಚಕಿತರಾಗಿ ಹೇಳುತ್ತಿದ್ದರು ದಿಗಂಬರ ಜೈನ ಸಾಧು ಸಾಧ್ವಿಯರಿಗೆ ತಮ್ಮ ಕೈಗಳಿಂದಲೆ ಆಹಾರ ತಯಾರಿಸಿ ಆಹಾರ ಕೊಡುವುದರಲ್ಲಿ ಆನಂದವು ಪುಣ್ಯವು ತನ್ನಿಂದ ತಾನೇ ಸಿಗುತ್ತದೆ ಎಂದು.

ಅಲ್ಲಿಯ ಜನರು ಮುನಿಗಳಿಗೆ ಮಾತಾಜಿಗೆ ಕೊಡುವ ಶುದ್ಧವಾದ ಆಹಾರ, ಚರ್ಯಾವಿಧಿಗಳನ್ನು ನೋಡಿ ಪ್ರತಿದಿನ ಆ ಸಮಯಕ್ಕೆ ಸರಿಯಾಗಿ ಸೇರುತ್ತಿದ್ದರು. ಮುನಿಗಳು ನಿಂತು ಪಾಣಿಪಾತ್ರೆಯಲ್ಲಿ ಆಹಾರ

ತೆಗೆದುಕೊಳ್ಳುವುದು ಚತುರ್ಥಕಾಲದ ಸ್ಮರಣೆಯಾಗಿ ಬಹಳ ಜನ ಪ್ರಭಾವಿತರಾಗುತ್ತಿದ್ದರು ಬೇರೆ ಗ್ರಂಥಗಳಲ್ಲಿಯು ಈ ವಿಷಯ ಉಲ್ಲೇಖಿತವಾಗಿದೆ.

ಏಕಾಕೀ ನಿಸ್ಪೃಹಃ ಶಾಂತಃ ಪಾಣೆ ಪಾತ್ರೋ ದಿಗಂಬರಃ I
ಕದಾ ಶಂಭೋ ಭವಿಷ್ಯಾಮಿ ಕರ್ಮ ನಿರ್ಮೂಲನಕ್ಷಮಃ II[1]

ಹೇ ಶಂಭು ಹೇ ಭಗವಾನ ಏಕಾಂಗಿಯಾಗಿ ವಿಚಾರಣೆ ಮಾಡುವವನಾದ ನಾನು ಇಚ್ಛೆ ಇಲ್ಲದವನಾದ ಶಾಂತನಾದ, ಪಾಣೆಪಾತ್ರೆಯಲ್ಲಿ ಆಹಾರ ತೆಗೆದು ಕೊಳ್ಳವವನಾದ, ದಿಗಂಬರ ಸಾಧುವಾದ ನಾನು ಎಲ್ಲ ಕರ್ಮಗಳನ್ನು ನಿರ್ಮೂಲನೆ ಮಾಡಲು ಯಾವಾಗ ಯೋಗ್ಯನಾಗುತ್ತಾನೆ. ದಿಗಂಬರ ಸಂಪ್ರಾದಾಯದಲ್ಲಿ ಹೇಳಲಾಗುತ್ತದೆ.[2]

ಪ್ರಾವೃಟ್ ಕಾಲೇ ಸವಿದ್ಯುತ್ ಪ್ರಪತಿತಸಲಿಲೇ ವೃಕ್ಷಮೂಲಾಧಿವಾಸಾಃ
ಹೇಮಂತೆ ರಾತ್ರಿಮಧ್ಯೇ ಪ್ರತಿವಿಗತಭಯಾಃ ಕಾಷ್ಮವತ್ಪಕ್ತ ದೇಹಾಃII
ಗ್ರೀಷ್ಮೇ ಸೂರ್ಯಾಂಶುತಪ್ತಾ ಗಿರಿಶಿಖಿರಗತಾಃ ಸ್ಥಾನಕೂಟಾಂತರ ಸ್ಥಾಃI
ತೇ ಮೇ ಧರ್ಮಂ ಪ್ರದಧ್ಯೂರ್ಮುನಿ ಗಣ ವೃಷಭಾಃ ಮೋಕ್ಷನಿಃ ಶ್ರೇಣೆ ಭೂತಾಃ II
ಗಿರಕಂದರ ದುರ್ಗೆಷು ಯೇ ವಸಂತಿ ದಿಗಂಬರಾಃ I
ಪಾಣೆ ಪಾತ್ರ ಪುಟಾಹಾರಾಸ್ತೇ ಯಾಂತಿ ಪರಮಾಂ ಗತಿಮ್II

ಯಾರು ಪರ್ವತಗಳ ಕಂದರಗಳಲ್ಲೂ ದುರ್ಗಮ ಪ್ರದೇಶಗಳಲ್ಲಿ ವಾಸಿಸುತ್ತಾರೋ ಪಾತ್ರೆಯಲ್ಲಿ ಆಹಾರ ಗ್ರಹಣ ಮಾಡುತ್ತಾರೋ ಅಂತಹ ದಿಗಂಬರ ಮುನಿಗಳು ಪರಮ ಸಿದ್ಧಗತಿಯನ್ನು ಪ್ರಾಪ್ತ ಮಾಡಿಕೊಳ್ಳತ್ತಾರೆ.

ಜೈನರು ಮತ್ತು ಅಜೈನ ಭಕ್ತಗಣವು ಸಂಘದ ದರ್ಶನ ಮಾಡಿ ಗುರುಗಳಿಂದ ಧರ್ಮಾಮೃತವಾದ ವಾಣಿಯನ್ನು ಕೇಳಿ ತಮ್ಮ ಜೀವನವನ್ನು ಸಫಲ ಮಾಡಿಕೊಂಡು ಧನ್ಯರಾದರು.

ಸೋನಗಢ

ಇದು ಯಾವುದೇ ತೀರ್ಥಕ್ಷೇತ್ರವಲ್ಲ ಆದರೆ ಕಾನಜೀ ಯವರ ಆಧ್ಯಾತ್ಮಿಕ ವಾತಾವರಣದಿಂದಾಗಿ ಇದು ತೀರ್ಥಕ್ಷೇತ್ರವೇ ಆಗಿದೆ. ಇದೊಂದು ಸ್ಥಾನಕ ವಾಸಿಗಳದೇ ಕ್ಷೇತ್ರವಾಗಿದೆ. ಕಾನಜೀಸ್ವಾಮಿ ಹದಿಮೂರನೇ ವರ್ಷದಲ್ಲಿಯೇ ಸ್ಥಾನಕವಾಸೀ ಸಾಧುಗಳಾದರು ಒಂದು ದಿನ ಅವರಿಗೆ ಓದಲು ಸಮಯಸಾರ ಗ್ರಂಥವು ದೊರೆಯಿತು. ಅದನ್ನು ಅಮೂಲಾಗ್ರವಾಗಿ ಅಭ್ಯಾಸ ಮಾಡಿ ನಿಶ್ಚಯ ಏಕಾಂತವಾದಿಗಳಾದರು ಅವರು ಸೋನಾಗಢಕ್ಕೆ ಬಂದು ಏಕಾಂತಸ್ಥಾನದಲ್ಲಿ ಚೈತ್ರಶುದ್ಧಿ ತ್ರಯೋದಶೀ 1991ರಲ್ಲಿ ಸ್ಥಾನಕವಾಸಿ ಸಾಧುವೇಶದ ಮುಖಪಟ್ಟಿಯನ್ನು ತೆಗೆದು ಹಾಕಿದರು ಮತ್ತು ದಿಗಂಬರ ಸಂಪ್ರಾದಯದ ಬಗ್ಗೆ ತನ್ನ ಶ್ರದ್ಧೆಯನ್ನು ಬಹಿರಂಗಪಡಿಸಿದರು ಇದರಿಂದಾಗಿ ಸ್ಥಾನಕವಾಸಿ ಸಂಪ್ರದಾಯದಲ್ಲಿ ಒಂದು ದೊಡ್ಡ ಬಿರುಗಾಳಿಯೇ ಎದ್ದಿತು.

ಸ್ವಲ್ಪ ಸಮಯದ ನಂತರ ರಾಮಜೀಬಾಯಿ ರಾಜಕೋಟ್‌ದಿಂದ ಇಲ್ಲಿಗೆ ಬಂದರು. ನಿಧಾನವಾಗಿ ಸ್ಥಾನಕ ಸಂಪ್ರದಾಯದಲ್ಲಿ ಇವರ ಬಗ್ಗೆ ವಿರೋಧ ಕಡಿಮೆ ಆಗತೊಡಗಿದಂತೆ ದಿಗಂಬರ ಸಂಪ್ರಾದಾಯದವರು ಇವರ

---

1. ಭರ್ತೃಹರಿ ಶತಕ
2. ಯೋಗಭಕ್ತಿ

ಭಕ್ತರಾಗ ತೊಡಗಿದರು. ಇವರು ತಮ್ಮ ಕಡೆಯ ಜೀವನದವರೆಗೂ ಶ್ವೇತಾಂಬರ ಲುಂಗಿ ಮತ್ತು ಚಾದರವನು ತ್ಯಜಿಸಲೇ ಇಲ್ಲ ಅವರು ದಿಗಂಬರರಾಗದೆ ಶ್ವೇತಾಂಬರರಾಗೇ ಉಳಿದರು. ಇವರು ದಿಗಂಬರ ಮುನಿಗಳನ್ನು ವಿರೋಧಿಸುತ್ತಾ ಒಂದು ಹೊಸದಾದ "ಕಾನಜೀ" ಪಂಥವನ್ನೆ ಸ್ಥಾಪಿಸಿದರು. ಇವರು ಸ್ವರ್ಗವಾಸವು ಜಸ್‌ಲೋಕ್ ಆಸ್ಪತ್ರೆಯಲ್ಲಿ ಆಯಿತು ಇದೇ ಸಂಪ್ರದಾಯವನ್ನು ಒಪ್ಪಿಕೊಂಡು ಜನಗಳು ಕೂಡ ಇಬ್ಭಾಗವಾಗಿ ಅವರಲ್ಲಿ ಒಂದು ಸಂಪ್ರಾದಾಯದವರು ಇವರನ್ನು ಭಾವಿ ಸೂರ್ಯಕೀರ್ತಿ ತೀರ್ಥಂಕರರೆಂದು ಹೇಳಿಕೊಂಡು ಅವರ ಮೂರ್ತಿಯನ್ನು ಮಾಡಿಸಿ ಮಂದಿರಗಳಲ್ಲಿ ಸ್ಥಾಪನೆ ಮಾಡಿದ್ದಾರೆ. ಈ ಸಂಪ್ರದಾಯ ವಾದಿಗಳೊಂದಿಗೆ ಹಲವು ಕಡೆ ದಿಗಂಬರ ಪಂಥದವರು ವಾದ ವಿವಾದಗಳನ್ನು ಮಾಡಿ ಕೋರ್ಟಿನ ಕಟ್ಟೆಯನ್ನು ಹತ್ತಿದರು.

ಸೋನಾಗಢದಲ್ಲಿ ಸೀಮಂಧರ ಸ್ವಾಮಿಯ ಮಂದಿರ, ಮಾನಸ್ತಂಭ, ಸಮವಶರಣಮಂದಿರ, ಶ್ರೀ ಕುಂದಕುಂದಕಹಾನ, ದಿಗಂಬರಜೈನ ಸರಸ್ವತಿಭವನ ಮುಂತಾದ ಅನೇಕ ಭವನವನ್ನು ಕಟ್ಟಿದ್ದಾರೆ ಇಲ್ಲಿ ಮಾನಸ್ತಂಭದಲ್ಲಿ ಮಧ್ಯೆ ಭಗವಂತರ ಪ್ರತಿಮೆಗಳ ಮೇಲೆ ಕಾನಜೀ ಸ್ವಾಮಿಯವರ ಮೂರ್ತಿಯನ್ನು ಇಡಿಸಿದ್ದಾರೆ ಇದು ಒಂದು ವಿವಾದದ ವಿಷಯವೇ ಆಗಿದೆ.

ಆಚಾರ್ಯ ಶಿವಸಾಗರರ ಸಂಘ ಇಲ್ಲಿಗೆ ಹೊರಟಿತ್ತು. ಅವರ ಸಂಘ ತಲುಪುವ ಮೂದಲೇ ಕಾನಜೀಬಾಯಿ, ಚಂಪಾಬೆಹನ್ ಶಾಂತಾಬೆನ್ ಮುಂತಾದ ಅನೇಕ ಜನರು ಅಲ್ಲಿಂದ ರಾಜಕೋಟಿಗೆ ಹೊರಟು ಹೋಗಿದ್ದರು ನಾವು ರಾಜಕೋಟ ತಲುಪುವ ಹೊತ್ತಿಗೆ ಅವರೆಲ್ಲ ಸೋನಾಗಢಕ್ಕೆ ಹೊರಟು ಹೋಗಿದ್ದರು.

ನಿಜವಾಗಿಯು ನಿಶ್ಚಯವಾದಿಯಾದ ತನ್ನನ್ನು ತಾನೇ ತೀರ್ಥಂಕರರೆಂದು ಭಾವಿಸಿದ್ದ ಕಾನಜೀ ಬೈಯಾ ದಿಗಂಬರ ಮುನಿಗಳ ದರ್ಶನವನ್ನು ಹೇಗೆ ಮಾಡುತ್ತಾರೆ. ನಾವಾದರೋ ಪಂಚಮಕಾಲದ ಹುಂಡಾವ ಸರ್ಪಿಣೀಯ ದೋಷವನ್ನು ವಿಚಾರ ಮಾಡುತ್ತಾ ನಮ್ಮ ಯಾತ್ರೆಯನ್ನು ಮುಂದುವರಿಸಿದೆವು

ಆಗ ನನಗೆ 1956ರಲ್ಲಿ ಚಾರಿತ್ರ ಚಕ್ರವರ್ತಿ ಆಚಾರ್ಯ ಶಾಂತಿಸಾಗರ ಪಟ್ಟಾಧೀಶ ಆಚಾರ್ಯವರ್ಯ. ಶ್ರೀ ವೀರಸಾಗರರು ತಮ್ಮ ದೊಡ್ಡ ಸಂಘದೊಡನೆ ಜಯಪುರದಲ್ಲಿ ಖಜಾಂಚೀಯ ನಶಿಯಾದಲ್ಲಿ ತಂಗಿದ್ದರು. ಆ ಸಮಯದಲ್ಲಿ ದಿಗಂಬರ ಸಂಪ್ರದಾಯದ ಮುನಿಗಳ ದೊಡ್ಡ ಸಂಘವೇ ಇದಾಗಿತ್ತು. ನಾನು ಆ ಸಂಘದಲ್ಲಿ ಇದ್ದೆ ಆ ಸಮಯದಲ್ಲೇ ಕಾನಜೀಬೈಯ ತನ್ನ ದೊಡ್ಡ ಪರಿವಾರದೊಂದಿಗೆ ಜಯಪುರಕ್ಕೆ ಬಂದಿದ್ದರು ಆ ಸಮಯದಲ್ಲಿ ಮುನಿಭಕ್ತರಲ್ಲೇ ಪ್ರಮುಖರಾದ ಖೂಬಚಂದ್ರಜೀ ಶಾಸ್ತ್ರಿ ಮುಂತಾದ ಹಲವು ವಿದ್ವಾಂಸರು ಇಂದೂರಿನಿಂದ ಅಲ್ಲಿಗೆ ಬಂದಿದ್ದರು. ಅಲ್ಲಿಯ ವಿದ್ವಾಂಸರಾದ ಇಂದ್ರಲಾಲಜೀ ಶಾಸ್ತ್ರಿಗಳು ಇದ್ದರು . ಈ ಎಲ್ಲರು ಆಚಾರ್ಯರ ಹತ್ತಿರ ಬಂದು ವಿಜ್ಞಾಪಿಸಿದರು. ನಾವೆಲ್ಲರು ಹೇಗಾದರು ಪ್ರಯತ್ನಪಟ್ಟು ಕಾನಜೀ ಬೈಯರನ್ನ ಕರೆತರುತ್ತೇವೆ ಎಂದು ಬಹಳ ಪ್ರಯತ್ನವನ್ನು ಪಟ್ಟರು. ಆದರೆ ಕಾನಜೀ ಸ್ವಾಮೀಜೀ ಬೈಯಾ ಎಲ್ಲ ಮಂದಿರಗಳನ್ನು ದರ್ಶನ ಮಾಡಿ ನಶಿಯಾದ ಮಂದಿರದ ದರ್ಶನಕ್ಕೆ ಬರಲೇ ಇಲ್ಲ ಈ ಘಟನೆಯಿಂದಾಗಿ ಜಯಪುರದ ಮುನಿಭಕ್ತ ಸಮಾಜಕ್ಕೆ ಬಹಳ ದೊಡ್ಡ ಕ್ಷೋಭೆಯಾಯಿತು.

ಕಾಲು ದಾರಿಯಲ್ಲಿ ಹೋದ ಪರಿಣಾಮ

ಒಂದು ದಿನ ಡಾಮರು ರಸ್ತೆಯಲ್ಲಿ ನಡೆಯುತ್ತಿದ್ದೆವು ಅಕ್ಕ ಪಕ್ಕದಲ್ಲಿ ದಟ್ಟವಾದ ಕಾಡಿತ್ತು ಕಾಡಿನಲ್ಲಿಯು ಕೂಡ ಕಾಲುದಾರಿಗಳು ಇದ್ದವು. ಕಾಲುದಾರಿಯಲ್ಲಿ ಹೋದರೆ ಕೆಲವು ಸಲ ದೂರ ಕಡಿಮೆ ಆಗುತ್ತಿತ್ತು. ಹೀಗಾಗಿ

ವೀರಮತಿ ಮಾತಾಜೀ ಕಾಲುದಾರಿಯಲ್ಲಿ ಹೋಗೋಣ ಎಂದು ನನಗೂ ಹೇಳಿದರು. ಆದರೆ ನನಗೆ ದೂರ ಆದರೂ ಸರಿ ರಾಜಮಾರ್ಗದಲ್ಲೇ ಹೋಗಬೇಕೆಂಬುದು ನನ್ನ ನಿಯಮವಾಗಿತ್ತು ಅಪವಾದ ಮಾರ್ಗದಲ್ಲೇ ನಡೆದಾಗ ಉಂಟಾಗುವ ಗೊಂದಲದಿಂದ ಪಾರಾಗುವುದು ಕಷ್ಟವೇ. ಆಗ ನನಗೆ ನೆನಪಾಯಿತು

ರಸ್ತಾ ಚಲನಾ ಸೀಧಾ ಚಾಹೇ ಫೇರ ಹೋ
ಭೋಜನ ಕರನಾ ಮಾ ಸೆ ಚಾಹೇ ಜಹರ ಹೋ॥

ಕಾಲುದಾರಿಯಿಂದ ಕಾಡಿನಲ್ಲಿ ಹೋಗಬೇಕೆಂಬುದನ್ನು ಕೇಳಿದರೂ ಜೊತೆಯಲ್ಲೇ ಹೋಗಬೇಕಾಯಿತು. ಏನೋ ದೈವಯೋಗದಿಂದ ಕಾಲುದಾರಿಯಿಂದ ಬೇಗನೇ ಮಾರ್ಗವನ್ನು ಕ್ರಮಿಸಿದೆವು. ಬಹಳ ಖುಷಿಯಾಯಿತು ಕೆಲವು ಮುನಿವರ್ಗದವರು ಕಾಲುದಾರಿಯಲ್ಲಿ ಬರಲೇ ಇಲ್ಲ. ಕೆಲವರು ಹಿಂದೆ ಉಳಿದಿದ್ದರು. ನಾವು ಎಲ್ಲರಿಗಿಂತ ಮುಂದೆ ಬಂದಿದ್ದೆವು. ಮಾತಾಜೀಯ ಸೂಚನೆಗೆ ಕೆಲವರು ಹೊಗಳಿದರು. ಕೆಲವರು ಏನೂ ಹೇಳಲಿಲ್ಲ. ನನ್ನ ಸೂಕ್ತಿಯು ಕೂಡ ಹಾಸ್ಯವಾಯಿತು. ಮತ್ತೆ ಮತ್ತೆ ಹೀಗೆ ಕಾಲುದಾರಿಯಲ್ಲಿ ಹೋಗುವುದು ಬೇಡ ಎಂದರೂ ಕೇಳದ ಅವರ ಜೊತೆ ನಾನು ಹೋಗಲೇ ಬೇಕಾಗುತ್ತಿತು. ಹೀಗೆ ನಾನು ಸಿದ್ದಮತೀಮಾತಾಜೀ ಬ್ರಹ್ಮಚಾರಿ ಕಚೋಡಮಲಜೀ ನಡೆಯುತ್ತಾ ನಡೆಯುತ್ತಾ ದುರ್ಗಮಮಾರ್ಗದಲ್ಲಿ ಮುಂದೆ ಬರೀ ಕಲ್ಲುಗಳು ರಸ್ತೆಯೇ ಕಾಣಲಿಲ್ಲ. ಎಷ್ಟು ನಡೆದರೂ ಮನುಷ್ಯರ ಸುಳಿವೆ ಇಲ್ಲ. ಯಾವ ವಾಹನದ ಸದ್ದುಇಲ್ಲ. ಕೊನೆಗೆ ಎಲ್ಲರಿಗೂ ಗಾಬರಿಯಾಗಿ ಎಲ್ಲರು ಒಂದೊಂದು ಕಲ್ಲುಗಳ ಮೇಲೆ ಕುಳಿತು ಮಹಾಮಂತ್ರವನ್ನು ಜಪಿಸತೊಡಗಿದೆವು. ಸ್ವಲ್ಪ ಹೊತ್ತಿಗೆ ಒಬ್ಬ ಕುರಿಮೇಯಿಸುವ ಹುಡುಗ ಕುರಿಗಳ ಜೊತೆ ಕಂಡುಬಂದ. ಅವನನ್ನು ಕಚೋಢಮಲ್ಲಜೀ ಕೇಳಿದರು. ಮುಂದೆ ಹೋಗುವ ಮಾರ್ಗವನ್ನು ಅವನು ರಸ್ತೆ ಇಲ್ಲಿಂದ ಬಹಳ ದೊರವಿದೆ ಎಂದ. ಆಗ ಬಾಬಾಜೀ ತಮ್ಮ ಅಂಟೀಯಲ್ಲಿ ಕೈ ಚಾಚಿದರು. ಅವರಲ್ಲಿ ಸ್ವಲ್ಪ ಹಣವಿತ್ತು. ಆ ಹುಡುಗನಿಗೆ ಈ ಹಣ ಕೊಟ್ಟು ನಮ್ಮನ್ನು ಮುಖ್ಯರಸ್ತೆಗೆ ತಲುಪಿಸೆಂದು ಕೇಳಿಕೊಂಡೆವು. ಅವನು ತನ್ನ ಕುರಿಗಳನ್ನು ಅಲ್ಲೇ ಬಿಟ್ಟು ನಮ್ಮನ್ನು ಕರೆದುಕೊಂಡು ಹೊರಟನು ಗುಡ್ಡಗಳನ್ನು ಹತ್ತಿ ಇಳಿದು. ಕೊನೆಗೆ ಮುಖ್ಯರಸ್ತೆಗೆ ಕರೆತಂದನು. ನಾವೆಲ್ಲರು ಪಂಚ ನಮಸ್ಕಾರಗಳನ್ನು ಹೇಳುತ್ತಲೇ ಒಟ್ಟಿನಲ್ಲಿ ರಸ್ತೆಗೆ ಬಂದೆವು. ನಮ್ಮನ್ನು ಪಾರುಮಾಡಿದ ಆ ಹುಡುಗನಿಗೆ ಎಲ್ಲರು ಆಶೀರ್ವಾದ ಮಾಡಿ ಕಳುಹಿಸಿದೆವು ಎಲ್ಲರ ಕಾಲುಗಳು ಪದ ಹೇಳ ತೊಡಗಿತು ರಸ್ತೆಯಿಂದ ನೋಡಿದರೆ ಯಾವ ಊರು ಕಾಣುತ್ತಿಲ್ಲ. ಸೂರ್ಯನು ಮುಳುಗ ತೊಡಗಿದ್ದಾನೆ ಏನು ಮಾಡುವುದು ತಿಳಿಯುತ್ತಿಲ್ಲ ರಸ್ತೆಯಲ್ಲಿ ನಡೆಯುತ್ತಲೇ ಇದ್ದೆವು ಎದುರಿನಿಂದ ಒಬ್ಬ ಸೈಕಲ್ಲಿನಲ್ಲಿ ಬರುತ್ತಿದ್ದ ಅವನನ್ನು ತಡೆದು ನಾವು ಈದಿನ ತಂಗಬೇಕಾಗಿದ್ದ ಊರು ಇಲ್ಲಿಂದ ಎಷ್ಟು ದೊರವಿದೆ ಎಂದು ಕೇಳಿದೆವು. ಅದಕ್ಕೆ ಅವನು ಅದು ಇಲ್ಲಿಂದ 6 - 7 ಮೈಲಿ ದೂರದಲ್ಲಿದೆ ಇದೇ ರಸ್ತೆಯಲ್ಲಿ ಹೋಗಬೇಕು ಎಂದನು ಅದಕ್ಕೆ ನಾನು ಇಲ್ಲಿ ಹತ್ತಿರದಲ್ಲಿ ಯಾವುದಾದರು ಹಳ್ಳಿ ಇದೆಯ ಎಂದು ಕೇಳಿದೆ ಅವನು ಯಾವುದೋ ಹಳ್ಳಿಯ ಹೆಸರು ಹೇಳಿದೆ. ಸೂರ್ಯ ಮುಳುಗುವ ಹೊತ್ತಿಗೆ ಅಲ್ಲಿ ಹೋಗಿ ತಲುಪಿದೆವು. ಹೇಗೋ ಇಳಿದುಕೊಳ್ಳಲು ಒಂದು ವರಾಂಡವು ಸಿಕ್ಕಿತು ಅಲ್ಲೆ ಕುಳಿತು. ಪ್ರತಿಕ್ರಮಣ ಸಾಮಾಯಿಕ ಮುಗಿಸಿದೆವು. ಬಾಬಾಜೀ ಕಮಂಡಲದೊಂದಿಗೆ ನೀರನ್ನು ಮತ್ತು ಒಣಹುಲ್ಲಿನ ವ್ಯವಸ್ಥೆ ಮಾಡಿಕೊಂಡು ಬಂದರು. ಹುಲ್ಲಿನಲ್ಲಿ ಮುಳ್ಳುಗಳು ಇದ್ದವು. ಹೇಗೋ ಹುಲ್ಲಿನ ಮೇಲೆ ಕುಳಿತು ವಿಶ್ರಾಂತಿ ತೆಗೆದುಕೊಂಡಿದ್ದರಿಂದ ಆಯಾಸ ದೂರವಾಯಿತು. ಬೆಳಗ್ಗೆ ಪ್ರತಿಕ್ರಮಣ ಸಾಮಾಯಿಕ ಮಾಡಿಕೊಂಡು ಆಚಾರ್ಯ ವೀರಸಾಗರರನ್ನು ನೆನೆಯುತ್ತಾ ಅಲ್ಲಿಂದ ಹೊರಟು ಬೆಳಗ್ಗೆ 9-10 ಗಂಟೆಗೆ ಸಂಘಕ್ಕೆ ಬಂದು ತಲುಪಿದೆವು ಎಲ್ಲರಿಗೂ ನಮ್ಮ ಬಗ್ಗೆ ಯೋಚನೆ ಆಗಿತ್ತು ನೋಡಿ ಸಮಾಧಾನದ ಉಸಿರೆಳೆದರು. ಆಚಾರ್ಯರು ಕುಶಲವನ್ನು ವಿಚಾರವನ್ನು ಕೇಳಿ ನಡೆದ ಪಾಡುಕೇಳಿ ಬಹಳ ಖೇದಗೊಂಡರು. ಮತ್ತೆ ಕಾಲುದಾರಿಯ ಲೋಭದ ವಿಷಯ

ಎಲ್ಲರಿಗೂ ಹಾಸ್ಯದ ಮಾತಾಯಿತು. ಇದರಿಂದಲೇ ಹೇಳುವುದು ಮೋಕ್ಷ ಮಾರ್ಗಕ್ಕೆ ಆಚಾರ್ಯರು ಹೇಳಿರುವ ಮಾರ್ಗದಲ್ಲೇ ನಡೆಯಬೇಕು. ಆಕಡೆ ಈ ಕಡೆ ಮಾರ್ಗದಲ್ಲಿ ನಡೆದರೆ ಹೀಗೆ ಸುತ್ತಾಡಬೇಕಾಗುತ್ತದೆ ಎನ್ನುವ ಅನುಭವವಾಯಿತು. ಹೀಗೆ ನಾವೆಲ್ಲರೂ ನಮ್ಮ ಆಯಾಸವನ್ನು ವಿನೋದವಾಗಿ ತೆಗೆದುಕೊಂಡು ಮುಗಿಸಿ ಭಗವಂತನ ಅಭಿಷೇಕ ನೋಡಿದೆವು. ಶುದ್ಧಿಮಾಡಿಕೊಂಡು ಎಲ್ಲರ ಜೊತೆಗೆ ಆಹಾರ ತೆಗೆದುಕೊಳ್ಳಲು ಎದ್ದೆವು.

ದಿಗಂಬರ ಮುನಿಗಳ ಬಗ್ಗೆ ಜನಗಳ ಭಾವನೆ

ಮಾರ್ಗದಲ್ಲಿ ಕೆಲವು ನೆನಪುಗಳೆಂದರೆ ಒಂದು ಸಲ ಒಂದು ಹಳ್ಳಿಯಲ್ಲಿ ಜನರು ದಿಗಂಬರ ಮುನಿಗಳನ್ನು ಊರಿನ ಒಳಗೆ ಬರಲು ಬಿಡಲಿಲ್ಲ. ಆದರೆ ಸಾಧ್ವಿಯರು ಬಂದು ತಂಗಲಿ ಎಂದು ಹೇಳಿದರು. ಈ ರೀತಿ ಹೇಳಿದ್ದರಿಂದ ಹೀರಾಲಾಲಜೀ ಮತ್ತು ಬ್ರಹ್ಮಚಾರಿ ಸೂರಜಮಲರು ಊರಹೊರಗೆ ನಿಲ್ಲಲು ವ್ಯವಸ್ಥೆ ಮಾಡಿದರು. ರಾತ್ರಿಯಲ್ಲಿ ಮೂರ್ನಾಕು ಸಜ್ಜನರು ಮುನಿಗಳನ್ನು ದರ್ಶನಮಾಡಲು ಬಂದಾಗ ಅವರಿಗೆ ಗೊತ್ತಾಯಿತು. ಈ ಸಾಧು ಜನರು ಮಹಾತ್ಮರೆಂದು ಆಗ ಅವರು ತಮ್ಮ ತಪ್ಪಿಗೆ ಪಶ್ಚಾತ್ತಾಪವನ್ನು ಪಟ್ಟು ಬ್ರಹ್ಮಚಾರಿಯ ಹತ್ತಿರ ರೋಧಿಸುತ್ತಾ ಮುನಿಗಳನ್ನು ದರ್ಶನಮಾಡಬೇಕೆಂದು ಕೇಳಿಕೊಂಡರು. ತಾವು ನಮ್ಮ ಅಪರಾಧವನ್ನು ಕ್ಷಮಿಸಬೇಕು. ಈ ಮಹಾತ್ಮರ ಪಾದಧೂಳಿನಿಂದ ನಮ್ಮ ಹಳ್ಳಿ ಪವಿತ್ರವಾಗಲೇ ಬೇಕು ನಾವು ಏನಾದರು ಮಾಡಿ ಅವರನ್ನು ಊರಿಗೆ ಕರೆದುಕೊಂಡು ಹೋಗಲೇಬೇಕು ಎಂದರು.

ಆದರೆ ಈ ರೀತಿ ಒತ್ತಾಯ ಮಾಡಿದರೂ ಆಚಾರ್ಯರು ಹಳ್ಳಿಗೆ ಹೋಗಲು ಸಮ್ಮತಿಸಲಿಲ್ಲ ಊರ ಹೊರಗಿನಿಂದಲೇ ಮುಂದೆ ಪ್ರಯಾಣ ಬೆಳೆಸಲು ತೀರ್ಮಾನಿಸಿದ್ದರು. ಹಳ್ಳಿಯವರು ಮೂರೇದಿನ ಕತ್ತಲೆ ಇರುವಾಗಲೇ ಬಂದು ಮತ್ತೆ ಕೇಳಿಕೊಂಡರು. ಆದರೆ ಸಂಘ ಮುಂದೆ ಹೊರಟೇಬಿಟ್ಟಿತು. ಕಣ್ಣೆನಲ್ಲಿ ನೀರು ತುಂಬಿಕೊಂಡು ಸ್ವಲ್ಪ ದೂರದವರೆಗೂ ನಮ್ಮೊಡನೆ ಬಂದರು ಗುರುಗಳು ಅವರಿಗೆ ಮಧುರ ಶಬ್ದಗಳಿಂದ ಉಪದೇಶಿಸಿದರು. ಅದನ್ನು ಕೇಳಿದ್ದೆ ಧನ್ಯರಾದೆವೆಂದು ತಮ್ಮ ತಪ್ಪಿಗೆ ಪಶ್ಚಾತ್ತಾಪ ಪಟ್ಟುಕೊಳ್ಳುತ್ತಾ ಮನೆಗೆ ಹೋದರು. ಇಲ್ಲಿಂದ ಸಂಘ ಆಬೂ ತಲುಪಿತು. ಅಲ್ಲಿ ಜೈನ ಮಂದಿರದ ದರ್ಶನಮಾಡಿದೆವು ಅಲ್ಲಿ ಶ್ವೇತಾಂಬರ ಮಂದಿರಗಳು ಕೆಲವಿದ್ದವು. ಅಲ್ಲಿ ಮಂದಿರದ ಕಲಾಕೃತಿಯನ್ನು ನೋಡಿ ಆಶ್ಚರ್ಯವಾಯಿತು. ಇದಕ್ಕಾಗಿ ಕೋಟ್ಯಾಂತರ ರೂಗಳನ್ನು ಖರ್ಚುಮಾಡಿದ್ದಾರೆ. ಈಗ ಇಂತಹ ಕಲಾತ್ಮಕತೆಯನ್ನು ಯೋಚಿಸಲು ಆಗುವುದಿಲ್ಲ.

೨೨

ಸಂಘ ವಿಹರಿಸುತ್ತಾ ತಾರಂಗವನ್ನು ತಲುಪಿತು. ಆದರೆ ಏನೋ ಕಾರಣದಿಂದ ಸಾಮಾನಿನ ಟ್ರಕ್ ಊರ ಹೊರಗೆ ನಿಂತುಬಿಟ್ಟಿತು. ಸಾಧುಗಳಾದರೂ ನಡೆಯುತ್ತಾ ತಾರಂಗ ಕ್ಷೇತ್ರವನ್ನು ತಲುಪಿದರು. ದೇವರ ದರ್ಶನಮಾಡಿ ಧರ್ಮಶಾಲೆಯಲ್ಲಿ ವಿಶ್ರಾಂತಿ ತೆಗೆದುಕೊಂಡೆವು. ಆದರೆ ಶ್ರಾವಕರಾರು ಬಂದಿಲ್ಲ ನಿಧಾನವಾಗಿ ಕೆಲವು ಬ್ರಹ್ಮಚಾರಿ, ಬ್ರಹ್ಮಚಾರಿಣಿಯರು ತಲೆಯ ಮೇಲೆ ಅವಶ್ಯ ಸಾಮಾನುಗಳನ್ನು ಹೊತ್ತುತಂದು ಧರ್ಮಶಾಲೆಯಲ್ಲಿ ಚೌಕಮಾಡಿದರು. ಮಧ್ಯಾನ್ನದ ಸಾಮಾಯಿಕದ ನಂತರ ಮೂರುಗಂಟೆಗೆ ಮುನಿವರ್ಗದವರು ಆಹಾರಕ್ಕೆ ಹೊರಡಬೇಕಾಯಿತು. ಒಬ್ಬರು ಇಬ್ಬರು ಮೂವರು ಮುನಿಗಳಿಗೆ ಆಹಾರವನ್ನು ನೀಡಿ ಆಹಾರದ ವ್ಯವಸ್ಥೆ

ಮುಗಿಯಿತು. ಎಲ್ಲರಿಗೂ ಸಿದ್ಧಕ್ಷೇತ್ರ ನೋಡಬೇಕೆಂಬ ಹುಮ್ಮಸ್ಸಿನಿಂದ ಯಾವುದು ಕಷ್ಟವೆನ್ನಿಸಲೇ ಇಲ್ಲ ಅಲ್ಲಿಯೇ ಚಿಕ್ಕ ಪರ್ವತವನ್ನು ಏರಿ ಸಿದ್ಧಭೂಮಿ ವಂದನೆಯನ್ನು ಮಾಡಿದೆವು.

ತಾರಂಗ ಸಿದ್ಧಕ್ಷೇತ್ರ

ವರದತ್ತೋಯ ವರಂಗೋ ಸಾಯರದತ್ತೋಯ ತಾರವರಣಯರೇ ।
ಆಹುಟ್ಟಯ ಕೋಡೀ ಒಣಿವ್ಯಾಣಗಯಾ ಣಮೋ ತೇಸಿಂ॥

ಈ ತಾರವರ ನಗರ ದಿಂದಲೇ ವರದತ್ತ ವರಾಂಗ, ಸಾಗರದತ್ತ ಮುಂತಾದ ಮೂರೂವರೆ ಕೋಟಿ ಮುನಿಗಳು ನಿರ್ವಾಣವನ್ನು ಹೊಂದಿದ್ದಾರೆ. ಅವರೆಲ್ಲರಿಗೂ ನನ್ನ ನಮನವನ್ನು ಸಲ್ಲಿಸಿದೆ. ಈ ನಗರವನ್ನು ತಾರಾನಗರ, ತಾರಾಪುರ, ತಾರಾಗಡ ಮತ್ತು ತಾರಂಗವೆಂದು ಕರೆಯುತ್ತಾರೆ.

ಭಟ್ಟಾರಕ ಜ್ಞಾನಸಾಗರರು, ದೇವೆಂದ್ರ ಕೀರ್ತಿಗಳು ಮತ್ತು ಸುಮತಿ ಸಾಗರರು ತಮ್ಮ ಸ್ತೋತ್ರಗಳಲ್ಲಿ ತಾರಂಗದ ಮೇಲೆ ಕೋಟಿಶಿಲೆಯ ಉಲ್ಲೇಖ ಮಾಡಿದ್ದಾರೆ. ಆದರೆ ಈಗ ಒಂದು ಬೆಟ್ಟವನ್ನು ಕೋಟಿಶಿಲೆ ಎಂದು ಕರೆಯುತ್ತಾರೆ. ಇದನ್ನು ಅಲ್ಲಿ ಯಾವುದನ್ನು ನಾರಾಯಣ ಎತ್ತಿದನು ಎಂದು ಹೇಳುತ್ತಾರೋ ಅದು ಕಳಿಂಗ ದೇಶದಲ್ಲಿ ಇದೆ ಎನ್ನುತ್ತಾರೆ.

ತಾರಂಗಾ ಪರ್ವತದ ಕೆಳಗೆ ವಸತಿ ಇದೆ. ಇದರಲ್ಲಿ ದಿಗಂಬರ ಜೈನ ಮಂದಿರಗಳು ಧರ್ಮಶಾಲೆ, ಕಾರ್ಯಾಲಯಗಳು ಇವೆ. ಧರ್ಮಶಾಲೆಯ ಹಿಂಭಾಗದಿಂದಕೋಟಿಶಿಲಾಪರ್ವತಕ್ಕೆ ಹೋಗುವ ಮಾರ್ಗಇದೆ. ಇಲ್ಲಿಂದ ಹೋಗಿ ಕೋಟಿಶಿಲೆಯ ಟೊಂಕಾವನ್ನು ದರ್ಶನಮಾಡಿ ಇಳಿಯುತ್ತಾ ಮತ್ತೆ ಕುಂಡದ ಮೇಲೆ ಇರುವ ಇನ್ನೊಂದು ಸಿದ್ಧಶಿಲೆಯ ಮೇಲೆ ಹತ್ತಿದೆವು. ಈ ಎರಡು ಪರ್ವತದ ಮೇಲೂ ಸುಮಾರು 900 ವರ್ಷ ಪ್ರಾಚೀನ ವಾದ ಪ್ರತಿಮೆಗಳು ಇವೆ. ಬೆಟ್ಟದ ಕೆಳಗೆ ಹದಿಮೂರು ದೇವಸ್ಥಾನಗಳು ಒಂದು ಮಾನಸ್ತಂಭವು ಇದೆ.

ಗಿರಿನಾರ ಯಾತ್ರೆಯ ಸಲುವಾಗಿ ಆಚಾರ್ಯರು ಎಲ್ಲರಿಗೂ ಯಾತ್ರೆ ಮಾಡುವಾಗಲೆಲ್ಲ ಓಂ ಹ್ರೀಂ ಶ್ರೀ ಅರಿಷ್ಟ ನೇಮಿನಾಥಾಯ ನಮಃ। ಒಂದು ಮಂತ್ರವನ್ನು ಜಪಿಸಲು ಹೇಳಿದ್ದರು. ನಾನು ಯಾತ್ರೆ ಮಾಡುತ್ತಾ 1¼ ಲಕ್ಷ ಮಂತ್ರವನ್ನು ಜಪಿಸಿದ್ದೆ. ಯಾತ್ರೆಯು ತೊಂದರೆ ಇಲ್ಲದಂತೆ ಆಗಬೇಕೆಂದು ಉಪ್ಪು ಹಾಗೂ ಇನ್ನೂ ಕೆಲವು ವಸ್ತುಗಳನ್ನು ತ್ಯಾಗಮಾಡಿದ್ದೆ. ಇವಲ್ಲದೆ ತ್ಯಾಗ ಮಾಡಲು ಮುನಿವರ್ಗದವರಿಗೆ ಇನ್ನೇನು ಇರುತ್ತದೆ.

ಪಾಲ್ಗುಣ ಮಾಸದ ಶುಕ್ಲಪಕ್ಷದ ಸಪ್ತಮಿಯಂದು ಮೊದಲು ದರ್ಶನವನ್ನು ಮಾಡಿದೆವು. ಮೆಟ್ಟಿಲುಗಳನ್ನು ಏರಿ ನೇಮಿನಾಥರ ಚರಣಗಳ ಹತ್ತಿರ ಕುಳಿತು ವಿಧಿವತ್ತಾಗಿ ಸಿದ್ಧ ಭಕ್ತಿ, ಚಾರಿತ್ರಭಕ್ತಿ ಶ್ರುತಭಕ್ತಿ ನಿರ್ವಾಣಭಕ್ತಿ ಮತ್ತು ಶಾಂತಿಭಕ್ತಿಗಳನ್ನು ಹೇಳಿ ಮತ್ತೆ ಮತ್ತೆ ಚರಣಗಳಿಗೆ ನಮಸ್ಕರಿಸಿ ಸಿದ್ದ ಪದವಿಯನ್ನು ಬೇಡುತ್ತಾ ಸಮಾಧಿ ಭಕ್ತಿಯನ್ನು ಹೇಳಿ ಬೆಟ್ಟವನ್ನು ಇಳಿದು ಆಹಾರವಾಗುವ ಹೊತ್ತಿಗೆ ಮೂರು ನಾಲ್ಕುಗಂಟೆ ಆಗಿತ್ತು ಎಲ್ಲರಿಗೂ ಆಗ ಆಯಾಸದ ಅನುಭವವಾಗತೊಡಗಿ ಮಾರನೆಯ ದಿನ ದರ್ಶನ ಮಾಡುವ ಸಾಹಸ ಯಾರಿಗೂ ಆಗಲಿಲ್ಲ.

ಆದರೆ ಎಲ್ಲರು ಮತ್ತೇ ಸಾಹಸದಿಂದಲೇ ಮೂರನೇ ದಿನವೂ ದರ್ಶನಕ್ಕೆ ಹೊರಟರು. ಎಲ್ಲರಿಗೂ ನಾಲ್ಕನೆ ಟೊಂಕವನ್ನು ಹತ್ತಲು ಧೈರ್ಯಸಾಕಾಗಲಿಲ್ಲ ಆದರೆ ನಾನು ಭಗವಂತನ ನಾಮ ಸ್ಮರಣೆ ಮಾಡುತ್ತಾ ಒಬ್ಬಳೇ ಹೊರಟೆ. ಕೊನೆಗೆ ಟೋಂಕ ಹತ್ತುವಾಗ ನಾನು ಆರ್ಯಿಕೆ ವೀರಮತಿ, ಸಿದ್ಧಮತಿ, ಕ್ಷುಲ್ಲಕ, ಆರ್ಯಿಕೆ

ಮಾತಾಜಿಯವರನ್ನು ಒಬ್ಬೊಬ್ಬರನ್ನಾಗಿ ಮೇಲೆ ಎಳೆದು ಕೊಂಡು ಅಂತೂ ಸಾಹಸದಿಂದ ದರ್ಶನ ಮಾಡಿ ಅಷ್ಟಾನ್ನಿಕ ಪರ್ವವನ್ನು ಅಲ್ಲೇ ಕಳೆದೆವು.

ದೀಕ್ಷೆ ನೆಡೆದಿದ್ದು

ತಾರಂಗದಿಂದ ಹೊರಡುತ್ತಲೇ ಆಚಾರ್ಯ ಶಿವಸಾಗರರು ನನ್ನ ಕೈಯಲ್ಲಿ ಹಲವಾರು ಸಲ ಹೇಳಿದ್ದರು. ಜ್ಞಾನಮತೀಜೀ ನಾನು ಗಿರಿನಾರ್ ಸಿದ್ಧಕ್ಷೇತ್ರದಲ್ಲಿ ಮೊಟ್ಟಮೊದಲು ಬಾಲಬ್ರಹ್ಮಚಾರಿಗಳಿಗೆ ದೀಕ್ಷೆ ಕೊಡಬೇಕೆಂದು ಬಯಸಿದ್ದೇನೆ. ಅದ್ದರಿಂದ ನೀನು ಬ್ರಹ್ಮಚಾರಿ ರಾಜಮಲಜೀ ಮತ್ತು ಕ್ಷುಲ್ಲಿಕೆ ಜಿನಮತೀಯರ ಮನಸ್ಸನ್ನು ಸಿದ್ಧಗೊಳಿಸು ಇವರಿಬ್ಬರಲ್ಲಿ ಒಬ್ಬರಾದರೂ ಸರಿ.

ನನಗೆ ರಾಜಮಲಜೀಯ ವಿನಯದ ಬಗ್ಗೆ ಗೊತ್ತಿತ್ತು. ಅನೇಕ ಸಲ ಪ್ರಯಾಣದಲ್ಲಿ ನಾನು ನಿಧಾನವಾಗಿ ನಡೆದರೂ ಅವರು ಸಹ ಕಮಂಡಲು ಹಿಡಿದು ಜೊತೆಗೆ ಬರುತ್ತಿದ್ದರು. ಗಿರಿನಾರ ಕ್ಷೇತ್ರದ ಯಾತ್ರೆಯ ಸಮಯದಲ್ಲಿ ಆಚಾರ್ಯ ಶ್ರೀಗಳು ಮಹಾವೀರಕೀರ್ತಿಜೀ ಯವರು ಬ್ರಹ್ಮಚಾರಿಜೀ ನೀವು ಮಾರ್ಗದಲ್ಲಿ ಜ್ಞಾನ ಮತೀಜೀಯವರ ಪ್ರಯಾಣದಲ್ಲಿ ಗಮನವಿಟ್ಟಿರಿ ಎಂದು ಹೇಳಿದ್ದರಿಂದ ಅಷ್ಟೇ ಕಾಳಜೀ ಇವರು ತೆಗೆದುಕೊಳ್ಳತ್ತಿದ್ದರು. ಇದರಿಂದಾಗಿಯೇ ಶಿವಸಾಗರಜೀಯವರು ಇವರ ಬಗ್ಗೆ ನನಗೆ ಹೇಳಿದರು. ಅವರ ಆಜ್ಞಾನುಸಾರ ನಾನು ಸಮಯಸಿಕ್ಕಾಗಲೆಲ್ಲ ಇವರಿಗೆ ದೀಕ್ಷೆಯ ಬಗ್ಗೆ ಹೇಳುತ್ತಲೇ ಇದ್ದೆ. ಬ್ರಹ್ಮಚಾರಿಜೀ ಕೂಡ ಹೇಳುತ್ತಲೇ ಇದ್ದರು. ಮಾತಾಜೀ ನನ್ನ ಗುರುಗಳಾದ ವೀರಸಾಗರರ ಕಾಲವಾಗಿ ಹೋಯಿತು. ಇನ್ನು ಯಾರ ಹತ್ತಿರ ದೀಕ್ಷೆ ತೆಗೆದುಕೊಂಡು ಗುರುಗಳೆಂದು ಕರೆಯಲಿ ಎಂದು ಜಿನಮತಿಗೆ ಕೇಶಲೋಚವೆಂದರೆ ಏನೋ ಮುಜುಗರ ಬ್ರಹ್ಮಚಾರಿ ರಾಜಮಲಜೀಗೆ ಆಚಾರ್ಯರು, ಶ್ರುತಸಾಗರಜೀ ಬೇರೆ ಆರ್ಯಿಕೆಯರು ಎಲ್ಲರು ಹೇಳಿದರು. ಅವರು ನಕ್ಕು ತಳ್ಳಿಹಾಕಿಬಿಡುತ್ತಿದ್ದರು ಹಾಗೇ ಜಿನಮತಿಗೆ ದೀಕ್ಷೆ ಎಂದು ಕೇಳಿದರೆ ಸಾಕು ಉದ್ವಿಗ್ನರಾಗುತ್ತಿದ್ದರು ಇದನ್ನೇ ನೋಡಿ ಹೇಳುವುದನ್ನು ನಿಲ್ಲಿಸಿದೆವು.

ಕ್ಷುಲ್ಲಿಕೆಯರಾದ ಚಂದ್ರಮತೀ ಮತ್ತು ಪದ್ಮಾವತಿಯರು ಆರ್ಯಿಕಾದೀಕ್ಷೆ ತೆಗೆದುಕೊಳ್ಳುವ ಆಸೆಯನ್ನು ವ್ಯಕ್ತಪಡಿಸಿದ್ದರಿಂದ ಅದಕ್ಕಾಗಿ ಮಹೂರ್ತವನ್ನು ಇಡಿಸಿ ಆಯಿತು. ಇದರಲ್ಲಿ ಒಬ್ಬ ಬ್ರಹ್ಮಚಾರಿಯು ಮುನಿದೀಕ್ಷೆ ತೆಗೆದುಕೂಳ್ಳಬಯಸಿದರು ಆದರೆ ಅವರ ನಡವಳಿಕೆಯನ್ನು ಪರೀಕ್ಷಿಸಲಾಗಿ ಅವರು ದೀಕ್ಷೆಗೊಳ್ಳಲು ಯೋಗ್ಯರಲ್ಲವೆನ್ನಿಸಿತು. ಏಕೆಂದರೆ ಅವರು ಕೆಲಸದವರ ಜೊತೆ ಕುಳಿತು ಸಂಗೀತ ಕೇಳುವುದರಲ್ಲಿ ತಲ್ಲೀನ ರಾಗಿರುತ್ತಿದ್ದರು. ಇದರಿಂದಾಗಿ ಇಬ್ಬರು ಕ್ಷುಲ್ಲಿಕೆಯರಿಗೆ ಆರ್ಯಿಕಾದೀಕ್ಷೆ ಕೊಡಲಾಯಿತು. ಹಾಗೂ ಬ್ರ ರೂಪಾಬಾಯಿ ಕ್ಷುಲ್ಲಿಕಾ ದೀಕ್ಷೆಯನ್ನು ಪಡೆದು ರಾಜುಲಮತೀಯಾದರು. ನಾನು ಗಿರಿನಾರ ಪರ್ವತವನ್ನು ವಂದಿಸುವ ಸಲುವಾಗಿ ಎರಡು ಮೂರು ರಾತ್ರಿ ಮೇಲಿನ ಮಂದಿರದಲ್ಲೆ ತಂಗಿದ್ದೆ.ನನ್ನ ಜೊತೆ ಕ್ಷುಲ್ಲಿಕೆ ಚಂದ್ರಮತೀ ಪದ್ಮಾವತೀ ಮೊದಲಾದವರು ಇದ್ದರು. ಆಹಾರವಾದ ನಂತರ ಸಾಮಾಯಿಕ ಮಾಡಿ ಮೇಲಿನ ಮಂದಿರದಲ್ಲಿ ವಿಶ್ರಾಂತಿ ಪಡೆದು ಪ್ರಾತಃಕಾಲ ಎದ್ದು ಪೂರ್ತಿ ವಂದನೆ ಮಾಡಿ ಕೆಳಗೆ ಬಂದಿದ್ದರಿಂದ ಆಯಾಸ ಕಡಿಮೆ ಆಗುತ್ತಿತ್ತು.

ಗಿರಿನಾರ ಕ್ಷೇತ್ರದ ದರ್ಶನದಲ್ಲಿ ಮೂರು ನೆನಪುಗಳು ಯಾವಾಗಲೂ ನೆನಪಿಗೆ ಬರುತ್ತಿರುತ್ತವೆ. 1) ನೇಮಿನಾಥರು ಪಶುಗಳ ಬಂಧನವನ್ನು ಬಿಡಿಸಿ ವೈರಾಗ್ಯವನ್ನು ತಾಳಿದ್ದು. 2) ಶ್ರೀ ಧರಸೇನಾಚಾರ್ಯರಿಂದ ಶ್ರುತರಚನೆಯು ಅವಿಚ್ಛಿನ್ನವಾಗಿ ಮುಂದುವರಿಯಲು ಭೂತಬಲಿ ಪುಷ್ಪದಂತ ಮುನಿಗಳಿಗೆ ಓದಿಸಿದ್ದು. 3) ಶ್ರೀ ಕುಂದ ಕುಂದದೇವರ ವಂದನೆಯಿಂದ ವಿವಾದ ಉಂಟಾದಾಗ ಅಂಬಿಕಾದೇವಿಯು ಮಾತಾಡಿದ್ದು.

ಭಗವಾನ್ ನೇಮಿನಾಥರು

ಭಗವಾನ್ ನೇಮಿನಾಥರು ರಾಜೀಮತೀಯವರನ್ನು ವಿವಾಹವಾಗಲು ಬಂದಿದ್ದರು. ಆ ಸಮಯದಲ್ಲಿ ದೊಡ್ಡ ದೊಡ್ಡ ಮಂಡಲೇಶ್ವರರು ರಾಜರ ಮಕ್ಕಳು ಜೊತೆಯವರೊಡನೆ ಚಿತ್ರಾ ಎಂಬ ಪಲ್ಲಕಿಯಲ್ಲಿ ಬರುವಾಗ ದಾರಿಯಲ್ಲಿ ಒಂದು ಕಡೆ ಹಸು ಇನ್ನೊಂದು ಕಡೇ ಕರುವನ್ನು ಕೂಡಿಹಾಕಿದ್ದನ್ನು ಅವುಗಳು ದೀನ ದೃಷ್ಟಿಯಿಂದ ಅರಚುತ್ತಿದ್ದುದ್ದನ್ನು ಕಂಡು ಅವುಗಳ ರಕ್ಷಕರನ್ನು ಕೇಳಲಾಗಿ ಏತಕ್ಕಾಗಿ ಅವುಗಳನ್ನು ತಡೆದಿದ್ದೀರ ಎಂದರೇ ಹೇ ದೇವ ತಮ್ಮ ವಿವಾಹ ಮಹೋತ್ಸವದಲ್ಲಿ ಅತಿಥಿಗಳನ್ನು ಸತ್ಕರಿಸಲು ಇವುಗಳನ್ನು ವಧೆ ಮಾಡಲು ತರಲಾಗಿದೆ ಎಂದನು. ಈ ಮಾತನ್ನು ಕೇಳುತ್ತಿದ್ದಂತೆ ಭ ನೇಮಿನಾಥರು ಚಿಂತಿಸಿದರು :- ಅಯ್ಯ ಕಾಡಿನಲ್ಲಿ ವಾಸಿಸುವ ಈ ಪ್ರಾಣಿಗಳು ಹುಲ್ಲನ್ನು ತಿಂದು ಯಾರಿಗೂ ತೊಂದರೆ ಕೊಡದ ಈ ಪ್ರಾಣಿಗಳನ್ನು ಜನರು ತಮ್ಮ ಭೋಗಕ್ಕಾಗಿ ತಂದು ಹಿಂಸಿಸುತ್ತಿದ್ದಾರಲ್ಲ ಆ ಜನರಿಗೆ ನನ್ನ ದಿಕ್ಕಾರ.

ಪುನಃ ಭಗವಾನರು ತಮ್ಮ ಅವಧಿಜ್ಞಾನದಿಂದ ಇದರ ರಹಸ್ಯವನ್ನು ತಿಳಿದು ತಕ್ಷಣವೇ ವಿರಕ್ತರಾಗಿ ಮದುವೆ ಮೆರವಣಿಗೆಯಿಂದ ಹಿಂದಿರುಗಿದರು. ಅದೇ ಸಮಯಕ್ಕೆ ಲೌಕಾಂತಿಕ ದೇವತೆಗಳು ಘಂಟೆ, ನಾದ ಮಾಡುತ್ತಾ ದೇವನ ತಪ ಕಲ್ಯಾಣ ಸಮೀಪಿಸಿತು ಎಂದು ತಿಳಿದು ಭಗವಂತನ ಸ್ತುತಿಮಾಡುತ್ತಾ ವೈರಾಗ್ಯವನ್ನು ಹೊಗಳತೊಡಗಿದರು. ನಂತರ ಸೌಧರ್ಮೇಂದ್ರ ತನ್ನ ಪರಿವಾರದವರೊಡನೆ ಬಂದು ಭಗವಂತನನ್ನು ದೇವಕುರು ಪಲ್ಲಕ್ಕಿಯ ಮೇಲೆ ಕೂರಿಸಿಕೊಂಡು ಸಹಸ್ರಾಮ್ರವನಕ್ಕೆ ಕರೆದುಕೊಂಡು ಹೋದನು. ಅಲ್ಲಿ ಭಗವಂತನು ಶ್ರಾವಣ ಶುಕ್ಲ ಷಷ್ಟೀಯ ದಿನ ಸಾಯಂಕಾಲ ಬಂದು ಸಾವಿರ ರಾಜರ ಜೊತೆ ಜಿನೇಶ್ವರೀ ದೀಕ್ಷೆಯನ್ನು ಪಡೆದರು. ದೀಕ್ಷೆ ಪಡೆಯುತ್ತಲೇ ಪ್ರಭುವಿಗೆ ಮನಃ ಪರ್ಯಾಯಜ್ಞಾನ ಪ್ರಕಟವಾಯಿತು.

ಹೇಗೆ ಸೂರ್ಯನು ಪಶ್ಚಿಮದ ಕಡೆಗೆ ಸರಿಯುತ್ತಾನೋ ಹಾಗೆ ರಾಜೀಮತಿಯು ಭಗವಂತನ ಹಿಂದೆಯೇ ತಪಶ್ಚರಣೆಗಾಗಿ ಹೊರಟಳು. ವಿವಾಹ ನಿಶ್ಚಯವಾಗಿದ್ದು ವಧು ವಿವಾಹವಾಗದಿದ್ದರೂ ಕುಲಕನ್ಯೆಗೆ ಬೇರೆಯ ಮಾರ್ಗವಿಲ್ಲ.

ಸಂಧ್ಯೇವ ಭಾನುಮಸ್ತಾದ್ರಾವನು ರಾಜೀಮತಿಶ್ಚ ತಮ್ ।
ಯಯೌ ವಾಚಾಪಿ ದತ್ತಾನಾಂ ನ್ಯಾಯೋಯಂ ಕುಲಯೋಷಿತಾಮ್[೧] ॥ ೧೭೨ ॥

ಆಚಾರ್ಯರು ಹೇಳುತ್ತಾರೆ - ಬೇರೆ ಮನುಷ್ಯರಾದರೆ ಜೀವನದಲ್ಲಿ ವಿರಕ್ತಿಯನ್ನು ಹೊಂದುವುದಿಲ್ಲ ಆದರೆ ಸಜ್ಜನರು ಬೇರೆಯವರ ದುಃಖವನ್ನು ನೋಡಿಯೇ ವಿರಕ್ತರಾಗಿ ಮಹಾವಿಭೂತಿಯ ತ್ಯಾಗವನ್ನು ಮಾಡುತ್ತಾರೆ. ಭಗವಂತನು ದೀಕ್ಷೆ ಆದಮೇಲೆ ಬಲಭದ್ರ, ಶ್ರೀ ಕೃಷ್ಣ ಮತ್ತು ಸೌಧರ್ಮ ಇಂದ್ರ ಮುಂತಾದ ದೇವತೆಗಳ ಸಮೂಹವು ಮತ್ತು ರಾಜಾದಿಗಳು ಬಂದು ಭಗವಂತನ ಸ್ತವನವನ್ನು ಸ್ತುತಿಯನ್ನು, ಮಾಡಿ ತಮ್ಮ ತಮ್ಮ ಸ್ಥಳಗಳಿಗೆ ಹಿಂದಿರುಗಿದರು.

ಭಗವಂತರು ದ್ವಾರಾವತಿಯನ್ನು ಪ್ರವೇಶಿಸಿದರು. ಅಲ್ಲಿಯ ರಾಜನಾದ ವರದತ್ತನು ನವಧಾಭಕ್ತಿಯಿಂದ ಸ್ವಾಮಿಯನ್ನು ತಡೆದು ಆಹಾರದಾನ ಮಾಡಿದನು. ಹರ್ಷಿತರಾದ ದೇವತೆಗಳು ಹನ್ನೆರಡು ಕೋಟಿ ವರಹಗಳನ್ನು ಸುಗಂಧಿತ ಹೂ ಮಳೆಗೆರೆದರು ಒಳ್ಳೆಯದನ್ನೇ ಮಾಡಿದ್ದೀಯ ಎಂದು ದುಂದುಭಿಯನ್ನು ಮೊಳಗಿಸಿದರು.

---

೧. **ಉತ್ತರ ಪುರಾಣ ಪರ್ವ - 71**

ಪಂಚಾಶ್ಚರ್ಯಗಳು ಉಂಟಾದವು ಭಗವಂತನು ತಪಸ್ಸು ಮಾಡುತ್ತ ಐವತ್ತುದಿನ ಕಳೆಯಲಾಗಿ ರೈವತಕ ಗಿರಿನಾರ ಪರ್ವತದ ಮೇಲೆ ಅದೇ ಕ್ಷಣ ಕುಬೇರ ನಿರ್ಮಿತ ಸಮವಶರಣ ಮಂಟಪದಲ್ಲಿ ಭಗವಂತನು ವಿರಾಜಮಾನ ರಾದರು. ಆ ಸಭೆಯಲ್ಲಿ ವರದತ್ತ ಮೊದಲಾದ ಹನ್ನೊಂದು ಮಂದಿ ಗಣಧರರು ಇದ್ದರು. ಹದಿನಾರು ಸಾವಿರ ಮಂದಿ ಮುನಿಗಳು ಇದ್ದರು ರಾಜೀಮತೀ ಮೂದಲಾದ ಹದಿನಾಲ್ಕು ಸಾವಿರ ಮಂದಿ ಆರ್ಯಿಕೆಯರು ಇದ್ದರು. ಒಂದು ಲಕ್ಷ ಶ್ರಾವಕ ಮೂರುಲಕ್ಷ ಶ್ರಾವಿಕೆಯರು ಇದ್ದರು. ಅಸಂಖ್ಯಾತ ದೇವ ದೇವತೆಯರು ತಿರ್ಯಂಚ ಪ್ರಾಣಿಗಳು ಉಪಸ್ಥಿತರಿದ್ದು ಉಪದೇಶವನ್ನು ಕೇಳುತ್ತಿದ್ದರು. ಆರುನೂರು ತೊಂಬತ್ತೊಂಬತ್ತು ವರ್ಷ ಒಂಬತ್ತು ತಿಂಗಳು ನಾಲ್ಕು ದಿನ ಸಮವಶರಣವು ವಿಹಾರಮಾಡಿತು. ಭ ನೇಮಿನಾಥರು ಇದೇ ಗಿರಿನಾರ ಪರ್ವತದ ಆಷಾಢ ಶುಕ್ಲ ಸಪ್ತಮಿಯದಿನ ರಾತ್ರಿ ಆಗುತ್ತಿದ್ದಂತೆ ಮೋಕ್ಷವನ್ನು ಪಡೆದರು. ಇದೇ ಕಾರಣದಿಂದ ಇಂದಿಗೂ ಈ ಬೆಟ್ಟವನ್ನು ಪೂಜಿಸುತ್ತಿದ್ದಾರೆ

ಹರಿವಂಶ ಪುರಾಣದಲ್ಲಿ ಹೇಳಿರುವಂತೆ ರಾಜಮತೀಯ ವಿವಾಹ ಮೆರವಣಿಗೆಯಿಂದ ನೇಮಿನಾಥರು ಹಿಂದಿರುಗಿದ್ದು ಕೇಳಿ ಪರಿಜನರೂಡನೆ ರೋಧಿಸತೊಡಗಿದಳು. ಐವತ್ತೈದನೆಯ ದಿನ ಭಗವಾನರಿಗೆ ಕೇವಲಜ್ಞಾನವಾಗಿ ಸಮವಶರಣ ಸಭೆಯಲ್ಲಿ ವರದತ್ತರು ದೀಕ್ಷೆಪಡೆದು ಪ್ರಥಮಗಣಧರರಾದರು, ಹಾಗೆಯೇ ರಾಜೀಮತೀ ಆರುಸಾವಿರ ರಾಣಿಯರೊಡನೆ ಆರ್ಯಿಕೆಯ ದೀಕ್ಷೆ ಪಡೆದು ಪ್ರಮುಖ ಗಣಿನೀ ಆದರು.

ಷಟ್‌ಸಹಸ್ರನೃಪಸ್ತ್ರೀಭ್ಯಃ ಸಹರಾಜೀಮತೀ ತದಾ ।[೧]
ಪ್ರವ್ರಜ್ಯಾಗ್ರೇಸರೇ ಜಾತಾ ಸಾರ್ಯಿಕಾಣಾಂ ಗಣಸ್ಯತು ॥ ೧೪೬ ॥

ಇಂದು ಯಾವುದು ನೇಮಿನಾಥರ ಮತ್ತು ರಾಜುಲ ಮತಿಯರ ಸಂವಾದ ಹೇಳುತ್ತಾರೆ ಅದು ದಿಗಂಬರ ಪರಂಪರೆಗೆ ವಿರುದ್ಧವಾದದು. ಏಕೆಂದರೆ ಭಗವಂತರಿಗೆ ವೈರಾಗ್ಯವಾಗುತ್ತಲೇ ದೇವತೆಗಳ ಸಮೂಹ ಸುತ್ತುವರಿಯಿತು. ಆ ಸಮಯದಲ್ಲಿ ರಾಜೀಮತೀ ಮತ್ತು ಭಗವಂತರ ನಡುವೆ ಮಾತುಕತೆ ನಡೆಯುವ ಸಂಭವವೇ ಇಲ್ಲ. ಮೋಹದ ವಶದಿಂದ ಪತಿಯಾಗಬೇಕಾದವರು ದೂರವಾದರೆ ದುಃಖ ಪಡುಬೇಕಾದುದು ಸಹಜವೇ ಆದರೆ ಮುಂದೆ ಅವರೇ ದೀಕ್ಷಿತರಾಗಿ ಪ್ರಮುಖ ಆರ್ಯಿಕೆ ಆದುದು ಆದರ್ಶವೇ. ನನಗೆ ಚಿಕ್ಕಂದಿನಿಂದಲು ರಾಜೀಮತೀಯ ವಿಲಾಪದ ಭಜನೆಗಳನ್ನು ಕೇಳಲು ಇಷ್ಟವಾಗುತ್ತಿರಲಿಲ್ಲ ಕ್ಷುಲ್ಲಿಕೆ ವಿಶಾಲಮತೀ ಕೂಡ ಅದೇ ರೀತಿ ಹೇಳಿದರು. ನಾವು ಈಗ ಅದೇ ರಾಜೀಮತಿಯ ಗುಹೆಗೆ ಹೋಗಿ ಅವರ ಚರಣಗಳಿಗೆ ವಂದಿಸಿ ಮನದಲ್ಲೇ ಯಾಚಿಸಿದೆವು ಹೇ ಮಾತ ನಿಮ್ಮಂತ ಕಠಿಣ ತಪಶ್ಚರ್ಯ ಮಾಡುವಂತಹ ಶಕ್ತಿಯನ್ನು ನಮಗೂ ಕೊಡು ಈ ಭವದಲ್ಲಿ ಸಮ್ಯಕ್ತ್ವದ ಪ್ರಭಾವದಿಂದ ಸ್ತ್ರೀ ಪರ್ಯಾಯವನ್ನು ಕಳೆದು ಎರಡು ಮೂರು ಭವಗಳಲ್ಲಿಯಾದರೂ ಮೋಕ್ಷ ಪಡೆಯುವಂತಾಗಲಿ ಈ ಜನ್ಮ ಮರಣದಿಂದ ಮುಕ್ತಿಯನ್ನು ಪಡೆಯುವುದೇ ನನ್ನ ಬಯಕೆ.

ಆ ದಿನಗಳಲ್ಲಿ ನನಗೆ ಬಹಳ ದೈರ್ಯ ಬಂದಿತ್ತು. ಅದರಿಂದ ಒಂದು ದಿನ ಗಿರಿನಾರ ಪರ್ವತದ ನಾಲ್ಕನೇಯ ಟೋಂಕದಲ್ಲಿ ರಾತ್ರಿ ಕಳೆಯುವ ನನ್ನ ಇಚ್ಛೆಯನ್ನು ಆಚಾರ್ಯರ ಮುಂದೆ ವ್ಯಕ್ತಗೊಳಿಸಿದೆ. ಆದರೆ ಆಚಾರ್ಯರು ಒಪ್ಪಲಿಲ್ಲ. ಅದೇ ಎಲ್ಲ ಸಾಧುವರ್ಗದವರು ಇದನ್ನು ವಿರೋಧಿಸಿದರು. ನನ್ನ ಆಸೆಯನ್ನು ಎಲ್ಲರು ಹಾಸ್ಯ ಮಾಡಿದರು. ಆಗ ಮನದಲ್ಲಿ ಯೋಚಿಸತೊಡಿಗಿದೆ. ಭಗವಾನ್ ಈ ಪರ್ವತದಲ್ಲಿ ಕುಳಿತು ಆತ್ಮಧ್ಯಾನ ಮಾಡುವ ಅವಕಾಶ ನನಗೆ ಎಂದು ದೊರೆಯುತ್ತದೆ ಅಂತಹ ಶಕ್ತಿಯನ್ನು ನನಗೆ ಬೇಗ ಕರುಣಿಸೆಂದು.

---

೧. ಹರಿವಂಶ ಪುರಾಣ ಸರ್ಗ ೫೭

ನಾನು ಚಿಕ್ಕಂದಿನಿಂದಲೇ ಪದ್ಮನಂದೀ ಪಂಚ ವಿಂಶತಿಕಾವನ್ನು ಓದುತ್ತಿದ್ದೆ. ಯತಿಭಾವನಾಷ್ಟಕದ ಒಂದು ಶ್ಲೋಕ ಯಾವಾಗಲು ನೆನಪಿಗೆ ಬರುತ್ತದೆ.

ಗ್ರೀಷ್ಮೇ ಭೂಧರಮಸ್ತಕಾಶ್ರಿತ ಶಿಲಾಂ ಮೂಲಂ ತರೋಃ ಪ್ರಾವೃಷಿ ।
ಪ್ರೋದ್ಭೂತೇ ಶಿಶಿರೇ ಚತುಷ್ಪಥಪದಂ ಪ್ರಾಪ್ತ್ಯಃ ಸ್ಥಿತಿಂ ಕುರ್ವತೇ ॥
ಯೇ ತೇಷಾಂ ಯಮಿನಾಂ ಯಥೋಕ್ತ ಪಸಾಂ ಧ್ಯಾನಪ್ರಶಾಂತಾತ್ಮನಾಂ ।
ಮಾರ್ಗೇ ಸಂಚರತಃ ಮಮ ಪ್ರಶಮಿನಃ ಕಾಲಃ ಸದಾ ಯಾಸ್ಯತಿ ॥

ಹೇ ಭಗವಂತನೇ ಬೇಸಿಗೆಯಲ್ಲಿ ಪರ್ವತದ ಶಿಖರಗಳ ಮೇಲೆ, ಮಳೆಗಾಲದಲ್ಲಿ ಮರಗಳ ಕೆಳಗೆ ಚಳಿಗಾಲದಲ್ಲಿ ಮೈದಾನದಲ್ಲೂ ಕುಳಿತು ಧ್ಯಾನವನ್ನು ಮಾಡುವಂತಹ ಆಗಮದಲ್ಲಿ ಹೇಳಿರುವ ಉತ್ಕೃಷ್ಟತಪದ ಧ್ಯಾನದಿಂದ ಆತ್ಮದಲ್ಲಿ ಆ ಶಾಂತಿಯು ಉಂಟಾಗುವಂತಹ ಮಹಾನ್ ಮುನಿಗಳ ಮಾರ್ಗದಲ್ಲಿ ನಡೆಯುವಂತಹ ಅವಕಾಶವು ನನ್ನಲ್ಲಿಯೂ ಉಂಟಾಗಲಿ.

೨೩

ಶ್ರೀ ಧರಸೇನಾಚಾರ್ಯ

ಆಚಾರ್ಯ ಪರಂಪರೆಯಲ್ಲಿ ಎಲ್ಲ ಅಂಗಗಳ ಮತ್ತು ಪೂರ್ವಗಳ ಏಕದೇಶ ಜ್ಞಾನವು ಆಚಾರ್ಯ ಶ್ರೀ ಧರಸೇನರಿಗೆ ಇತ್ತು. ಸೌರಾಷ್ಟ್ರ (ಗುಜರಾತ್ ಕಾಠಿಯವಾಡ) ದೇಶದ ಗಿರಿನಗರವೆಂಬ ನಗರದಲ್ಲಿ ಚಂದ್ರಗುಹೆಯಲ್ಲಿ ಧ್ಯಾನದ ಸಾಧನೆಯಲ್ಲಿ ತೊಡಗಿದ್ದ ಆಚಾರ್ಯರುಅಷ್ಟಾಂಗಗಳನ್ನು ತಿಳಿದಿದ್ದು ಇವರು ಪ್ರವಚನವತ್ಸಲತೆಯಿಂದ ತನ್ನ ನಂತರ ಆಗಮಜ್ಞಾನವು ನಷ್ಟವಾಗಬಾರದೆಂದು ಯೋಚಿಸಿದರು. ಆಗ ಅವರು ಐದು ವರ್ಷಕ್ಕೊಮ್ಮೆ ನಡೆಯುವ ಮುನಿಗಳ ಸಮ್ಮೇಳನವು ಮಹಿಮಾನಗರದಲ್ಲಿ ನಡೆಯುತ್ತಿರುವುದನ್ನು ತಿಳಿದು ಅಲ್ಲಿಯ ಆಚಾರ್ಯರಿಗೆ ಒಂದು ಲೇಖವನ್ನು ಕಳುಹಿಸಿದರು ಉಪದೇಶವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವಂತಹ ಶಾಸ್ತ್ರದ ಅರ್ಥವನ್ನು ಗ್ರಹಣೆ, ಧಾರಣ ಶಕ್ತಿಯುಳ್ಳ ಸಮರ್ಥರಾದ ವಿನಯಶಾಲಿ, ಚಾರಿತ್ರವಂತ ಜಾತಿ, ಕುಲ, ದೇಶದಿಂದ ಶುದ್ಧರಾದ ಎಲ್ಲ ಕಲೆಗಳನ್ನೂ ತಿಳಿದಿರುವಂತಹ ಇಬ್ಬರು ಶಿಷ್ಯರನ್ನು ಕಳುಹಿಸಬೇಕೆಂದು ವಿನಂತಿಸಿದ್ದರು. ಅಂತಹ ಇಬ್ಬರು ಮುನಿಗಳನ್ನು ಆಂಧ್ರ ಪ್ರದೇಶದ ವೇಣಾನದಿಯ ದಡದಿಂದ ಕಳುಹಿಸಲಾಯಿತು.

ಸಮಯಕ್ಕೆ ಸರಿಯಾಗಿ ಧರಸೇನಾಚಾರ್ಯರಲ್ಲಿಗೆ ತಲುಪಿದ ಮುನಿಗಳು ಗುರುಗಳಿಗೆ ಮೂರು ಪ್ರದಕ್ಷಿಣೆ ಬಂದು ಅವರ ಪಾದಗಳಿಗೆ ನಮಿಸಿದರು. ಆನಂತರ ಮೂರನೆದಿನ ತಾವು ಬಂದ ಉದ್ದೇಶವನ್ನು ನಿವೇದಿಸಿದರು ಗುರುಗಳು ಅವರಿಗೆ ಎರಡು ಸಿದ್ಧಿಮಂತ್ರವನ್ನು ಕೊಟ್ಟು. ಉಪವಾಸದಿಂದ ಈ ಮಂತ್ರಗಳನ್ನು ಸಿದ್ಧಿಸಿಕೊಂಡು ಬನ್ನಿರೆಂದರು. ಇಬ್ಬರು ಸಾಧನೆಯಿಂದ ವಿದ್ಯಾದೇವತೆಗಳನ್ನು ಪ್ರತ್ಯಕ್ಷಮಾಡಿಕೊಂಡರು ಆದರೆ ಒಬ್ಬ ದೇವತೆಗೆ ಉಬ್ಬುಹಲ್ಲು, ಇನ್ನೊಬ್ಬದೇವತೆಗೆ ಒಂದೇ ಕಣ್ಣು ಇತ್ತು. ಆಗ ಅವರಿಗೆ ಗೊತ್ತಾಯಿತು ದೇವತೆಗಳಲ್ಲಿ ವಿಕಲಾಂಗರು ಇರುವುದಿಲ್ಲ ಇದು ವ್ಯಾಕರಣ ದೋಷದಿಂದಾಗಿದೆ ಎಂದು ಶ್ಲೋಕಗಳನ್ನು ಪರೀಕ್ಷಿಸಿ ಅಧಿಕಾಕ್ಷರವನ್ನ ಹೀನಾಕ್ಷರವನ್ನು ಸರಿಪಡಿಸಿ ಸಿದ್ಧಿಮಾಡಲಾಗಿ ಸರ್ವಾಂಗ ಸುಂದರಿಯರಾದ ದೇವತೆಗಳು ಎದುರಿಗೆ ನಿಂತರು.

ಇಬ್ಬರು ಮುನಿಗಳು ಗುರುಗಳ ಹತ್ತಿರ ಬಂದು ನಡೆದ ವೃತ್ತಾಂತವನ್ನು ಅರುಹಿದರು. ಇದನ್ನು ಕಂಡ ಗುರುಗಳು ತೃಪ್ತಿಯಿಂದ ಸಮರ್ಥರೆಂದು ಹರ್ಷಿಸುತ್ತಾ ಶುಭಮಹೂರ್ತದಲ್ಲಿ ಶಾಸ್ತ್ರಾಭ್ಯಾಸವನ್ನು ಪ್ರಾರಂಭಿಸಿದರು. ಆಷಾಢ ಶುಕ್ಲ ಏಕಾದಶಿಯ ದಿನ ಗ್ರಂಥ ಅಭ್ಯಾಸ ಮುಗಿಯಿತು. ವಿನಯವಂತ ಶಿಷ್ಯರು ಗುರುಗಳ ಅಣತಿಯಂತೆ ಅಭ್ಯಾಸ ಮುಗಿಸಿದ್ದರು ಇದರಿಂದ ಸಂತಸಗೊಂಡ ಭೂತಜಾತಿಯ ವ್ಯಂತರದೇವತೆಗಳು ಬಂದು ಮುನಿಗಳನ್ನ ಪುಷ್ಪ ಬಲಿ, ಶಂಖ ತೂರ್ಯವೆಂಬ ವಾದ್ಯದಿಂದ ಪೂಜಿಸಿದರು ಒಬ್ಬ ಮುನಿಗಳಿಗೆ ಹಲ್ಲುಗಳು ಅಂಕುಡೊಂಕಾಗಿದ್ದವನ್ನು ಸರಿಯಾಗಿ ಜೋಡಣೆ ಮಾಡಿದರು. ಇದರಿಂದಾಗಿ ಆಚಾರ್ಯರು ಒಬ್ಬರಿಗೆ ಭೂತಬಲಿ ಎಂದು ಇನ್ನೊಬ್ಬರಿಗೆ ಪುಷ್ಪದಂತ ರೆಂದು ನಾಮಕರಣ ಮಾಡಿದರು.

ಉಪದೇಶ ಮುಗಿದ ನಂತರ ಅವರಿಬ್ಬರಿಗೂ ಅಲ್ಲಿಂದ ಮುಂದೆ ಪ್ರಯಾಣ ಮಾಡುವಂತೆ ಆದೇಶಿಸಿದರು. ಅವರಿಬ್ಬರು ಅಜ್ಞೆಯನ್ನು ಶಿರಸಾವಹಿಸಿ ಪ್ರಶ್ನೆಮಾಡದೆ ಗುಜರಾತಿನ ಅಂಕಲೇಶ್ವರಕ್ಕೆ ಬಂದು ಚಾತುರ್ಮಾಸ ವನ್ನು ಕೈಕೊಂಡರು. ಚಾತುರ್ಮಾಸದ ನಂತರ ಪುಷ್ಪದಂತರು ತನ್ನ ಸೋದರಳಿಯನಾದ ಜಿನಪಾಲಿತನನ್ನ ಕರೆದುಕೊಂಡು ಬನವಾಸಿ ದೇಶಕ್ಕೆ ಹೊರಟರು. ಭೂತಬಲಿಗಳು ತಮಿಳುನಾಡಿಗೆ ಹೊರಟರು. ಪುಷ್ಪದಂತರು ಜಿನ ಪಾಲಿತನಿಗೆ ದೀಕ್ಷೆಯನ್ನು ಕೊಟ್ಟು ಅವರ ಹತ್ತಿರ ತಾವು ರಚಿಸಿದ ಇಪ್ಪತ್ತು ಪ್ರರೂಪಣೆಗಳುಳ್ಳ ಸತ್ಪ್ರರೂಪಣೆಯ ಸೂತ್ರಗಳನ್ನು ಓದಿಸಿ ಅನುಮೋದನೆಗಾಗಿ ಭೂತಬಲಿಗಳ ಹತ್ತಿರ ಕಳುಹಿಸಿದರು. ಇದನ್ನು ಅವಲೋಕಿಸಿದ ಅವರು ಪುಷ್ಪದಂತರ ಅಲ್ಪಾಯಸ್ಸನ್ನು ಮನಗಂಡು ಭೂತಬಲಿಗಳು ದ್ರವ್ಯ ಪ್ರಮಾಣಾನುಗಮ ಮುಂತಾದವುಗಳನ್ನು ಬಳಸಿಕೊಂಡು ಗ್ರಂಥದ ರಚನೆಯನ್ನು ಪೂರ್ಣಗೊಳಿಸಿದರು. ಇವು ಆರುಖಂಡಗಳನ್ನು ಒಳಗೊಂಡಿರುವುದರಿಂದ ಷಟ್ಖಂಡಾಗಮ ಎಂಬ ಹೆಸರಿನಿಂದಲೂ ಕರ್ತೃಗಳು ಭೂತಬಲಿ ಪುಷ್ಪದಂತರೆಂದು ಖ್ಯಾತಿಯನ್ನು ಪಡೆಯಿತು. ಶ್ರೀ ಇಂದ್ರನಂದಿ ಆಚಾರ್ಯಕೃತ ಶ್ರುತಾವತಾರದಲ್ಲಿ ಈ ಪ್ರಕರಣವು ವಿಸ್ತಾರವಾಗಿ ಉಲ್ಲೇಖಿಗೊಂಡಿದೆ.

ದೇಶೇ ತತಃ ಸುರಾಷ್ಟ್ರೇ ಗಿರಿನಗರ ಪುರಾಂತಿಕೋರ್ಜಯಂತಗಿರೌ ।
ಚಂದ್ರಗುಹಾವಿನಿವಾಸೀ ಮಹಾತಪಾಃ ಪರಮಮುನಿಮುಖ್ಯಃ[೧] ॥ ೧೦೩ ॥

ಸೌರಾಷ್ಟ್ರದೇಶದ ಗಿರಿನಗರದ ಹತ್ತಿರವಿದ್ದ ಉಜ್ಜಯಂತಗಿರಿ ಪರ್ವತದಲ್ಲಿದ್ದ ಚಂದ್ರಗುಹೆಯಲ್ಲಿ ಇದ್ದಂತಹ ಮಹಾತಪಸ್ವೀ ಮುನಿಗಳಿಗೆ ತಮ್ಮ ಅಲ್ಪ ಆಯಸ್ಸಿನ ಅರಿವಾದ್ದರಿಂದ ತನ್ನ ನಂತರ ಶ್ರುತವು ವಿಚ್ಛೇದವಾಗ ಬಾರದೆಂದು ಚಿಂತಿಸಿ ಮಹಾಮಹಿಮಾ ನಗರದಲ್ಲಿ ನಡೆಯುತ್ತಿದ್ದ ಮುನಿಸಮ್ಮೇಳನಕ್ಕೆ ಒಬ್ಬ ಬ್ರಹ್ಮ ಚಾರಿಯ ಹತ್ತಿರ ಒಂದು ಲೇಖನವನ್ನು ಕಳುಹಿಸಿದರು.

ಮುಂದೆ ವಿದ್ಯೆಯನ್ನು ಸಿದ್ಧಿಮಾಡಿಕೊಂಡ ಬಗ್ಗೆ ಹೇಳುತ್ತಾ ಇಬ್ಬರು ಶಿಷ್ಯರು

ಶ್ರೀ ಮನ್ನೇಮಿ ಜಿನೇಶ್ವರ ಸಿದ್ಧಶಿಲಾಯಾಂ ವಿಧಾನತೇ ವಿದ್ಯಾ ।
ಸಂಸಾಧನಂ ವಿದಧತೋಸ್ತಯೋಶ್ಚ ಪುರತಃ ಸ್ಥಿತೇ ದೇವ್ಯೌ ॥

ಶ್ರೀಮಾನ್ ಭ. ನೇಮಿನಾಥರ ಸಿದ್ಧಶಿಲೆಯ ಮೇಲೆ ಕುಳಿತು ಸಾಧನೆಯಿಂದ ಇಬ್ಬರು ಶಿಷ್ಯರು ದೇವತೆಗಳನ್ನು ಸಿದ್ಧಿಸಿಕೊಂಡರು ಈ ಉಲ್ಲೇಖಗಳಿಂದ ಶ್ರೀಧರಸೇನಾಚಾರ್ಯರು ಗಿರಿನಾರಿನ ಚಂದ್ರಗುಹೆಯಲ್ಲಿ ಇದ್ದರು ಎಂಬುದು ಧೃಡಪಡುತ್ತದೆ.

---

೧. ಷಟ್‌ಖಂಡಾಗಮ ಗ್ರಂಥದಲ್ಲಿ ಆಚಾರ್ಯರಿಗೆ ಭಗವಾನ್ ಶಬ್ದ ಹೇಳಿದ್ದಾರೆ. ಧವಲಪುಸ್ತಕ ೧ ಪು. ೬೮ ರಿಂದ ೭೨.

ಇಲ್ಲಿಯೇ ಇವರು ಭೂತಬಲಿ ಪುಷ್ಪದಂತರಿಗೆ ಮಹಾಕರ್ಮಪ್ರಕೃತಿ ಪ್ರಾಭೃತವನ್ನು ಭೋದಿಸಿದ್ದರು ಇಬ್ಬರು ಶಿಷ್ಯರು ಸೇರಿ ಅದನ್ನೇ ಷಟ್ಖಂಡಾಗಮದ ರೂಪದಲ್ಲಿ ಲಿಪಿಬದ್ಧಗೊಳಿಸಿದರು. ಈ ಗ್ರಂಥಕ್ಕೆ ಶ್ರೀ ವೀರಸೇನರು ಬರೆದ ಟೀಕೆ 'ಧವಲಗ್ರಂಥ'ವೆಂದು ಇಂದಿಗೂ ಪ್ರಾಮುಖ್ಯತೆಯನ್ನು ಪಡೆದಿದೆ ಗ್ರಂಥ ಪೂರ್ಣಗೊಂಡ ದಿನ ಜೇಷ್ಠ ಶುಕ್ಲ ಪಂಚಮಿಯನ್ನು ಶ್ರುತಪಂಚಮಿ ಎಂದು ಶ್ರುತವನ್ನು ಪೂಜಿಸುತ್ತೇವೆ.

ಶ್ರೀ ಕುಂದಕಂದದೇವರ ಪರ್ವತವಂದನೆ

ವದಂತಿಯಂತೆ ಕುಂದಕುಂದರು ತಮ್ಮ ಸಂಘದೊಡನೆ ಪರ್ವತದ ವಂದನೆಗೆ ಹೋಗಿದ್ದರು. ಅಲ್ಲಿ ಮೊದಲೇ ಶ್ವೇತಾಂಬರ ಮುನಿಗಳು ಸಂಘ ಸಹಿತವಾಗಿ ಇದ್ದರು. ಅವರು ಪರ್ವತವನ್ನು ನಾವು ಮೊದಲು ವಂದನೆ ಮಾಡಬೇಕೆಂದು ಇವರು ನಾವು ವಂದನೆ ಮಾಡಬೇಕೆಂದೂ ವಾಗ್ವಾದಗಳು ನಡೆದು ಕೊನೆಗೆ ಅಂಬಿಕಾದೇವಿಯು ಯಾವ ಪಂಥವನ್ನು ಪ್ರಾಚೀನ ವೆಂದು ಹೇಳುತ್ತಾಳೋ ಅವರೇ ಮೊದಲು ವಂದನೆ ಮಾಡೋಣ ಎನ್ನುವ ತೀರ್ಮಾನಕ್ಕೆ ಬಂದರು. ಕುಂದಕುಂದರು ಅಂಬಿಕೆಯ ಪಾಷಾಣಮೂರ್ತಿಯ ಮಸ್ತಕದ ಮೇಲೆ ಪಿಂಛಿಯನ್ನು ಇಟ್ಟು ಕೇಳಿದರು ದೇವಿ ಸತ್ಯಪಂಥ ಯಾರದು? ದೇವಿಯು ನಿರ್ಗ್ರಂಥ ದಿಗಂಬರ ಪಂಥವೇ ಸತ್ಯ ಪಂಥವೆಂದು ಘೋಷಿಸಿತು.

ಇದು ಕೇವಲ ಕಲ್ಪನೆ ಅಲ್ಲ ಇದೊಂದು ಪ್ರತ್ಯಕ್ಷ ಘಟನೆ ಶ್ರೀ ವೃಂದಾವನ ಕವಿ ಹೇಳುತ್ತಾನೆ :

ಸಂಘ ಸಹಿತ ಶ್ರೀ ಕುಂದಕುಂದಗುರು
ವಂದನ ಹೇತು ಗಯೇ ಗಿರಿನಾರವಾದ ಪರ್ಯೋ ತಹಂ
ಸಂಶಯಮತಿಕೋ ಸಾಕ್ಷೀ ವದಿ ಅಂಬಿಕಾಕಾರll
ಸತ್ಯಪಂಥ ನಿರ್ಗಂಥ ದಿಗಂಬರ, ಕಹೀ ಸುರೀ [1]
ತಹಂ ಪ್ರಗಟ ಪುಕಾರ ಸೋ ಗುರುದೇವ ಬಸೋ
ಉರ ಮೇರೇ ವಿಧಾನ ಹರನ ಮಂಗಲ ಕರತಾರll

ಗುರ್ವಾವಲೀಯಲ್ಲಿ ಹೇಳುತ್ತಾರೆ

ಪದ್ಮನಂದಿಗುರುರ್ಜಾತೋ ಬಲಾತ್ಕಾರಗಣಾಗ್ರಣಿ
ಪಾಷಾಣಘಟಿತಾ ಯೇನ ವಾದಿತಾ ಶ್ರೀ ಸರಸ್ವತೀll
ಊರ್ಜ್ಜಯಂತ ಗಿರೌ ತೇನ ಗಚ್ಛಾಃ ಸಾರಸ್ವತೋsಭವತ್।

ಬಲಾತ್ಕಾರ ಗಣದ ಮುಖ್ಯಸ್ಥರಾದ ಪದ್ಮನಂದೀ ಗುರುಗಳು, ಊರ್ಜಯಂತ ಗಿರಿಯಲ್ಲಿ ಪಾಷಾಣ ನಿರ್ಮಿತ ಸರಸ್ವತಿಯ ಮೂರ್ತಿಯನ್ನು ಆಹ್ವಾನಿಸಿದ್ದರಿಂದ ಅದು ಮುಂದೆ ಸರಸ್ವತಿ ಗಚ್ಛವೆಂದು ಕರೆಯಲಾಯಿತು. ಅದ್ದರಿಂದ ಆ ಪದ್ಮನಂದೀ ಮುನೀಶ್ವರ ರಿಗೆ ನನ್ನ ನಮಸ್ಕಾರಗಳು. ಪಾಂಡವ ಪುರಾಣದಲ್ಲಿಯು ಹೇಳಿದೆ.

ಕುಂದಕುಂದಗಣೇ ಯೇನೋರ್ಜ್ಜಯಂತಗಿರಿಮಸ್ತಕೇ।
ಸೋವದಾತ್ ವಾದಿತಾ ಬ್ರಾಮ್ಹೀ ಪಾಷಾಣ ಘಟಿತಾ ಕಲೌll

ಯಾರು ಕಲಿಕಾಲದಲ್ಲಿ ಊರ್ಜ್ಜಂತಗಿರಿಯ ಮೇಲಿರುವ ಪಾಷಾಣದಿಂದ ನಿರ್ಮಿತ ಬ್ರಾಹ್ಮಿಮೂರ್ತಿಯನ್ನು

---

1. ದೇವಿ

ಆಹ್ವಾನಿಸಿದ್ದರು. ಮೂಲ ನಂದೀಸಂಘದ ಪಟ್ಟಾವಲೀಯಲ್ಲಿ ಶ್ರೀ ಕುಂದಕುಂದದೇವರ ಐದು ಹೆಸರುಗಳು ಪ್ರಸಿದ್ಧವಿದೆ.

ಆಚಾರ್ಯಃ ಕುಂದಕುಂದಾಖ್ಯೋ, ವಕ್ರಗ್ರೀವೋ ಮಹಾಮತಿಃ ।
ಏಲಾಚಾರ್ಯೋ ಗೃದ್ಧ್ರಪಿಚ್ಛಃ ಪದ್ಮನಂದೀತಿ ತನ್ನುತಿಃ ॥

ಕುಂದ ಕುಂದ, ವಕ್ರಗ್ರೀವ, ಏಲಾಚಾರ್ಯ, ಗೃದ್ಧ್ರಪಿಚ್ಛ ಮತ್ತು ಪದ್ಮನಂದಿ ಇವು ಐದು ಹೆಸರುಗಳುಳ್ಳ ಕುಂದಕುಂದಾಚಾರ್ಯರಿಗೆ ನನ್ನ ನಮಸ್ಕಾರಗಳು ಗಿರಿನಾರ ಕ್ಷೇತ್ರಕ್ಕೆ ಇದಕ್ಕಿಂತಲು ಹೆಚ್ಚಿನ ಪೂಜ್ಯತೆಯು ಏಳು ನೂರು ಎಪ್ಪತ್ತೆರಡು ಕೋಟಿ ಮಹಾಮುನಿಗಳು ನಿರ್ವಾಣ ಹೊಂದಿರುವುದರಿಂದ ಇನ್ನು ಅಧಿಕವಾಗಿದೆ.

ಗಿರಿನಾರ ಕ್ಷೇತ್ರದ ಪರಿಚಯ

ಣೇಮಿಸಾಮೀ ಪಜ್ಜುಣ್ಣೋ, ಸಂಬಕುಮಾರೋ ತಹೇವ ಅಣೇರುದ್ದೋ ।
ಬಾಹತ್ತರೀ ಕೋಡೀಓ, ಉಜ್ಜಂತೇ ಸತ್ತಸಯಾ ಸಿದ್ಧ ॥ ೫ ॥

ಭಗವಾನ್ ನೇಮಿನಾಥ, ಪ್ರದ್ಯುಮ್ನಕುಮಾರ, ಶಂಬುಕುಮಾರ ಅನಿರುದ್ಧಕುಮಾರ ಮುಂತಾದ ಎಪ್ಪತ್ತರೆಡು ಕೋಟಿ, ಏಳುನೂರು ಮುನಿಗಳು ಉರ್ಜ್ಜಂತ ಗಿರಿಯಿಂದ ನಿರ್ವಾಣವನ್ನು ಹೊಂದಿದ್ದಾರೆ ಇವರೆಲ್ಲರಿಗೂ ನನ್ನ ನಮಸ್ಕಾರಗಳು. ಶ್ರೀ ಪೂಜ್ಯಪಾದ ಸ್ವಾಮಿಗಳು ತಮ್ಮ ನಿರ್ವಾಣಭಕ್ತಿಯಲ್ಲಿ ಹೇಳಿದ್ದಾರೆ

ಯತ್ಪ್ರಾರ್ಥ್ಯತೆ ಶಿವಮಯಂ ವಿಬುಧೇಶ್ವರಾದ್ಯೈಃ
ಪಾಖಂಡಿಭಿಶ್ಚ ಪರಮಾರ್ಥಗವೇಷ ಶೀಲೈಃ
ನಷ್ಟಾಷ್ಟಕರ್ಮಸಮಯೇ ತದರಿಷ್ಟನೇಮಿಃ
ಸಂಪ್ರಾಪ್ತವಾನ್ ಕ್ಷಿತಿಧರೇ ಬೃಹದೂರ್ಜಯಂತೇ ॥ ೨೨ ॥

ಅರ್ಥಾತ್ ಯಾವ ಶಿವಮಯ ಸ್ಥಾನವು ಇಂದ್ರ ಮುಂತಾದವರಿಂದ ಪ್ರಾರ್ಥಿಸಲ್ಪಡುತ್ತದೆಯೋ ಪರಮಾರ್ಥದ ಹುಡುಕಾಟದಲ್ಲಿ ತೊಡಗಿರುವ ಪಾಖಂಡೀಸಾಧುಗಳು ಯಾವುದನ್ನು ಪಾರ್ಥನೆಮಾಡುತ್ತಾರೋ ಈ ಮೋಕ್ಷ ಪದವಿಯನ್ನು ಶ್ರೀನೇಮಿನಾಥ ಭಗವಂತನು ಈ ವಿಶಾಲ ಉರ್ಜ್ಜಂತ ಪರ್ವತದಲ್ಲಿ ಎಂಟು ಕರ್ಮಗಳನ್ನು ನಾಶಮಾಡಿದ್ದಾರೆ, ಈ ಉರ್ಜ್ಜಂತ ಗಿರಿ ಪರ್ವತದಲ್ಲಿಯೇ ೨೨ನೇಯ ತೀರ್ಥಂಕರರಾದ ಭ. ನೇಮಿನಾಥರ ದೀಕ್ಷೆ, ಕೇವಲಜ್ಞಾನ ಮತ್ತು ನಿರ್ವಾಣ ಮೂರು ಕಲ್ಯಾಣಗಳಾಗಿವೆ. ಇಲ್ಲಿ ಇಂದು ಸಹಸಾವನ ಅಥವಾ ಸಿರಸಾತನ ಎಂಬ ಹೆಸರಿನಿಂದ ಕರೆಯುವುದನ್ನು ಶಾಸ್ತ್ರಗಳಲ್ಲಿ ಸಹಕಾರವನ ಅಥವಾ ಸಹಸ್ರಾಮ್ರ ಎಂಬ ಹೆಸರಿನಿಂದ ವರ್ಣಿಸಲಾಗಿದೆ. ಭಗವಂತರು ಇಲ್ಲಿಯೇ ದೀಕ್ಷೆ ತೆಗೆದುಕೊಂಡಿದ್ದರು.

ಹರಿವಂಶ ಪುರಾಣದಲ್ಲಿರುವ ಉಲ್ಲೇಖ

ಊರ್ಜಯಂತಗಿರೌ ವಜ್ರೇಣಾಲಿಖ್ಯ ಪಾವಿನೀಮ್ ।
ಲೋಕೇ ಸಿದ್ಧಶಿಲಾಂ ಚಕ್ರೇ ಜಿನಲಕ್ಷಣಪಂಕ್ತಿಭಿಃ[1] ॥೧೪॥

---

1. ಹರಿವಂಶಪುರಾಣ, ಸರ್ಗ ೬೫

ಭ. ನೇಮಿನಾಥರು ಮುಕ್ತಿ ಪಡೆದ ಈ ಸ್ಥಾನವು ಅತ್ಯಂತ ಪವಿತ್ರ ಮತ್ತು ಲೋಕಪೂಜ್ಯವಾಗಿದೆ ಈ ಸ್ಥಾನವನ್ನು ಶಾಶ್ವತಗೊಳಿಸುವುದಕ್ಕಾಗಿ ಇಂದ್ರನು ತನ್ನ ವಜ್ರಾಯುಧದಿಂದ ಸಿದ್ಧಶಿಲೆಯನ್ನು ನಿರ್ಮಾಣ ಮಾಡಿ ಅದರಲ್ಲಿ ನೇಮಿನಾಥರ ಪಾದ ಚಿಹ್ನೆಯನ್ನು ಕೆತ್ತಿದ್ದಾನೆ.

ಆಚಾರ್ಯ ದಾಮನಂದಿಗಳು ಹೇಳಿದ್ದಾರೆ.

ಕುಲಿಶೇನ ಸಹಸ್ರಾಕ್ಷೋ ಲಕ್ಷಣ ಪಂಕ್ತಿಂ ಲಿಲೇಖ ತತ್ರೇಶಃ ।
ಭವ್ಯ ಹಿತಾಯ ಶಿಲಾಯಾಮದ್ಯಾಪಿ ಚ ಶೋಭತೇ ಪೂತಾ ॥೫॥

ಈ ಶಿಲೆಯ ಮೇಲೆ ಇಂದ್ರನು ತನ್ನ ವಜ್ರದಿಂದ ಚರಣ ಚಿಹ್ನೆಯನ್ನು ಕೆತ್ತಿದ್ದಾನೋ ಅದು ಇಂದಿಗೂ ಶಾಶ್ವತವಾಗಿದೆ. ಶಾಸನ ಚರ್ತುವಿಶಂತಿಕಾಯಲ್ಲಿ ಯತಿಪತಿ ಮದನ ಕೀರ್ತಿಗಳು ಗಿರಿನಾರ ಪರ್ವತದಲ್ಲಿ ಇಂದ್ರನಿಂದ ಸ್ಥಾಪಿಸಲ್ಪಟ್ಟ ದಿಗಂಬರ ಜಿನಮೂರ್ತಿಯ ಉಲ್ಲೇಖವಿದೆ

ಸೌರಾಷ್ಟ್ರೇ ಯದುವಂಶಭೂಷಣಮಣೇಃ ಶ್ರೀನೇಮಿನಾಥಸ್ಯ ಯಾ ।
ಮೂರ್ತಿರ್ಮುಕ್ತಿ ಪಥೋಪದೇಶನಪರಾ ಶಾಂತಾಮುಧಾಪೋಹನಾತ್ ॥
ವಸ್ತ್ರೈರಾಭರಣೈರ್ವಿನಾ ಗಿರಿವರೇ ದೇವೇಂದ್ರ ಸಂಸ್ಥಾಪಿತಾ।
ಚಿತ್ತಭ್ರಾಂತಿ ಮಪಾಕರೋತು ಜಗತೋ ದಿಗ್ವಾಸಸಾಂ ಶಾಸನಮ್॥ ೨೦ ॥

ಸೌರಾಷ್ಟ್ರ ದೇಶದ ಗಿರಿನಾರ ಪರ್ವತದಲ್ಲಿ ಯದುವಂಶಭೂಷಣರಾದ ಶ್ರೀನೇಮಿನಾಥ ತೀರ್ಥಂಕರರು ಆಯುಧ, ವಸ್ತ್ರ, ಮತ್ತು ಆಭರಣಗಳಿಂದ ರಹಿತರಾಗಿ ಭವ್ಯ, ಶಾಂತ ಮೋಕ್ಷಮಾರ್ಗದ ಉಪದೇಶ ಮಾಡುವ ಮೂರ್ತಿಇದೆಯೋ ಅದು ಇಂದ್ರನಿಂದ ಸ್ಥಾಪಿಸಲ್ಪಟ್ಟಿದೆ. ಪ್ರಪಂಚದಲ್ಲಿ ಎಲ್ಲರ ಮನಸ್ಸಿನ ಭ್ರಾಂತಿಯನ್ನು ದೂರಮಾಡಿ ಮತ್ತು ದಿಗಂಬರ ಶಾಸನವನ್ನು ಲೋಕದಲ್ಲಿ ಪ್ರಸಾರಮಾಡಲಿ.

ಈ ಪರ್ವತದ ಮೇಲೆ ಐದು ಕೂಟಗಳಿವೆ. ಸುಮಾರು ಎರಡು ಮೈಲಿ ಹತ್ತಿದ ಮೇಲೆ ದಿಗಂಬರ ಮಂದಿರ ಮತ್ತು ಧರ್ಮಶಾಲೆಗಿಂತ ಮೊದಲು ರಾಜಮತಿಯ ಗುಹೆ ಸಿಗುತ್ತದೆ. ಈ ಗುಹೆಗಿಂತ ಮುಂದೆ ದಿಗಂಬರ ಜೈನ ಧರ್ಮಶಾಲೆ ಇದೆ. ಹಾಗೇ ಸ್ವಲ್ಪ ಮುಂದೆ ಸಂಕೀರ್ಣದಲ್ಲಿ ಮೂರು ಮಂದಿರ ಮತ್ತು ಒಂದು ಛತ್ರಿ ಇದೆ.

ದಿಗಂಬರ ಮಂದಿರದಿಂದ ಸ್ವಲ್ಪ ಮುಂದೆ ನಡೆದರೆ ಗೋಮುಖಿಗಂಗೆ ಇದೆ. ಅಲ್ಲಿಯೇ ಕೆಲವು ಕುಂಡಗಳಿವೆ ಇಪ್ಪತ್ತನಾಲ್ಕು ತೀರ್ಥಂಕರರ ಚರಣ ಚಿಹ್ನೆಗಳು ಸಹ ಇದೆ. ಇದನ್ನು ಮೊದಲನೆಯ ಕೂಟವೆಂದು ಕರೆಯುತ್ತಾರೆ ಇದನ್ನು ಈಗ ಹಿಂದುಗಳು ಆಕ್ರಮಿಸಿದ್ದಾರೆ. ೨ನೇಯ ಕೂಟದಲ್ಲಿ ಅನಿರುದ್ದ ಕುಮಾರರ ಚರಣಚಿಹ್ನೆ ಇದೆ. ಮೂರನೇ ಕೂಟದಲ್ಲಿ ಶಂಬುಕುಮಾರರ ಚರಣಗಳಿವೆ. ನಾಲ್ಕನೆ ಕೂಟದಲ್ಲಿ ಪ್ರದ್ಯುಮ್ನ ಕುಮಾರರ ಚರಣಗಳಿವೆ. ಐದನೇ ಕೂಟದಲ್ಲಿಯೇ ಭ. ನೇಮಿನಾಥರ ಚರಣಗಳಿರುವುದು ಹಿಂದುಗಳು ಇವನ್ನೆ ದತ್ತಾತ್ರೇಯ ಚರಣಗಳೆಂದು ಹೇಳುತ್ತಿದ್ದಾರೆ.

ಬೆಟ್ಟದ ಬುಡದಲ್ಲಿಯೇ ದಿಗಂಬರ ಜೈನಧರ್ಮಶಾಲೆ ಅದರೂಳಗೆ ಜಿನಮಂದಿರ ಮತ್ತು ಮುಂದೆ ಒಂದು ಮಾನಸ್ತಂಭವು ಇದೆ.

ಇದೇ ರೀತಿ ಜೂನಾಗಡದಲ್ಲಿಯು ಸಹ ಮೇಲಿನ ಕೂಟದ ಹತ್ತಿರವೇ ಒಂದು ಧರ್ಮಶಾಲೆಇದೆ. ಇಲ್ಲಿ ವಿಹರಿಸಿ ನಮ್ಮ ಸಂಘವು ಮುಂದೆ ಹೊರಟಿತು ಮುಂದಿನ ಜಾಗ ತಲುಪುವಾಗ ರಾತ್ರಿ ಆಗಿತ್ತು. ಸಂಘದಲ್ಲಿದ್ದು ವಯಸ್ಸಾದ ಆರ್ಯಿಕೆಯರಾದ ಸುಮತಿಮತೀಜೀ, ಸಿದ್ಧಮತೀಜೀಯವರು ನನ್ನಲ್ಲಿ ಆಗಾಗ್ಗೆ ಹೇಳುತ್ತಿದ್ದರು

ಜ್ಞಾನಮತೀ ಇಂದು ರಾತ್ರಿ ಮೂರು ಗಂಟೆಗೆ ಎದ್ದು ನಮಗೆಲ್ಲರಿಗೂ ಪಾಠ ಹೇಳು ನಿನ್ನ ಪಾಠ ನಮಗೆ ಬಹಳ ಇಷ್ಟವಾಗುತ್ತದೆ ಎನ್ನುತ್ತಿದ್ದರು. ಆಗ ನಾನು ಮಾತಾಜೀ ನೀವು ಹೇಳಿದ ಸಮಯಕ್ಕೆ ನನಗೆ ಎಚ್ಚರವಾಗುತ್ತದೆ ನೀವು ಎದ್ದೇಳಿ ನಾನು ಪಾಠ ಮಾಡುತ್ತೇನೆ ಎಂದೆ.

ಪಾಠದಲ್ಲಿ ನಾನು ಸಹಸ್ರನಾಮ, ತತ್ಪಾರ್ಥ ಸೂತ್ರ, ಭಕ್ತಾಮರ ಸೋತ್ರ, ಕಲ್ಯಾಣಮಂದಿರ ಸ್ತೋತ್ರ, ವಿಷಾಪಹಾರಸ್ತೋತ್ರ, ಏಕೀಭಾವಸ್ತೋತ್ರ, ಭೂಪಾಲಚತುರ್ವಿಶಂತಿ ಸ್ತೋತ್ರ, ಸಿದ್ಧಭಕ್ತಿ, ಮೊದಲಾದ ದಶಭಕ್ತಿ, ಸುಪ್ರಭಾತ ಸ್ತೋತ್ರ ಮುಂತಾದವನ್ನೆಲ್ಲ ಕಂಠಪಾಠ ಮಾಡಿದ್ದೆ. ಮಾತಾಜೀಗಳು ಕೇಳಿದ ಪಾಠವನ್ನು ಹೇಳಿಕೊಡುತ್ತಿದ್ದೆ.

ಅಗಾಗ್ಗೆ ಆರ್ಯಿಕೆ ವೀರಮತೀ ಮಾತಾಜೀ ಸಮಾಧಿ ತಂತ್ರ, ಇಷ್ಟೋಪದೇಶ, ಗೊಮ್ಮಟಸಾರ, ಪರೀಕ್ಷಾಮುಖಸೂತ್ರ ಮುಂತಾದವುಗಳನ್ನು ಕೇಳಲು ಬಯಸುತ್ತಿದ್ದರು ನಾನು ಕೇಳಿದಾಗಲೆಲ್ಲ ಹೇಳುತ್ತಿದ್ದೆ.

ಪಾಠಹೇಳಿದಾಗ ಬಹಳ ಸಂತೋಷವಾಗುತ್ತಿತ್ತು ಪಾಠ ಹೇಳಿಕೂಡುವುದರಿಂದ ಪಾಠ ನನಗೂ ಚೆನ್ನಾಗಿ ಬಾಯಿ ಪಾಠವಾಗುತ್ತಿತ್ತು. ಕೇಳುವವರಿಗೆ ಸಂತೋಷವಾಗುತ್ತಿತ್ತು. ಇದೊಂದು ರೀತಿ ಸಂತೋಷದಾಯಕವಾದ ಗುರುಗಳ ವೈಯಾವೃತ್ತಿಯಾಗಿತ್ತು. ನಾವುಗಳು ವಿಹಾರದ ಸಮಯದಲ್ಲೂ ಪಾಠಗಳನ್ನು ಹೇಳಿ ಕೊಳ್ಳುತ್ತಾ ಹೋಗುತ್ತಿದ್ದುದು ವಿಹಾರದ ಅರಿವೇ ಆಗುತ್ತಿರಲಿಲ್ಲ.

೨೪

ಶತ್ರುಂಜಯಕ್ಷೇತ್ರದ ದರ್ಶನ

ಸಂಘವು ಅಲ್ಲಿಂದ ವಿಹಾರಮಾಡುತ್ತಾ ಶತ್ರುಂಜಯ ಸಿದ್ಧಕ್ಷೇತ್ರಕ್ಕೆ ಬಂದಿತು ಅಲ್ಲಿಯ ಪುಣ್ಯಭೂಮಿಯನ್ನು ಸಂದರ್ಶಿಸಿ ಬಹಳ ಆನಂದವಾಯಿತು. ಇಲ್ಲಿನ ಒಂದು ವಿಷಯ ಚೆನ್ನಾಗಿ ನೆನಪಿದೆ. ಒಂದು ದಿನ ಪರ್ವತ ಹತ್ತುತ್ತಾ ಇರುವಾಗ ನನ್ನ ಜೊತೆ ಕೆಲವರು ಆರ್ಯಿಕೆಯರು ಕ್ಷುಲ್ಲಿಕೆಯರು ಹಾಗೇ ಚೊತೆಚೊತೆಯಾಗಿ ಶ್ವೇತಾಂಬರ ಸಾಧ್ವಿಯರು ಬೆಟ್ಟ ಹತ್ತುತ್ತಾ ಇದ್ದರು. ಅವರಲ್ಲಿ ಇಬ್ಬರು ನನ್ನ ವಯಸ್ಸಿನವರೇ ಇದ್ದರು. ಅವರು ದೊಡ್ಡ ಬಾಟಲಿಗಳಲ್ಲಿ ನೀರನ್ನು ಹಿಡಿದು ಕೊಂಡು ಹತ್ತುತ್ತಾ ಇದ್ದರು. ಇದರಿಂದ ಅವರಿಗೆ ಚೆನ್ನಾಗಿ ಆಯಾಸವಾಗಿತ್ತು. ಇದರಿಂದಾಗಿ ಅವರು ಅಲ್ಲಲ್ಲೇ ನಿಂತು ನಿಂತು ಬೆಟ್ಟ ಹತ್ತುತ್ತಾ ಇದ್ದರು.

ಅವರಿಬ್ಬರು ನಿಧಾನವಾಗಿ ನನ್ನನ್ನು ಪರಿಚಯ ಮಾಡಿಕೊಳ್ಳುತ್ತಾ ನಮ್ಮ ಚರ್ಯೆಯನ್ನು ಕೇಳಿದರು ನಾನು ಎಲ್ಲವನ್ನು ಹೇಳಿ ನಾನು ಎರಡೆರಡು ಬಾಟಲಿ ಹಿಡಿದುಕೊಂಡು ಏಕೆ ಹತ್ತುತ್ತಾ ಇದ್ದೀರ ಬರೇ ಹತ್ತುವುದೇ ಆಯಾಸ ಇನ್ನು ಭಾರಬೇರೆ ಹೊತ್ತಿದ್ದೀರಲ್ಲ ಎಂದೆ ಅದಕ್ಕೆ ಅವರು ನಮಗೆ ಬಾಯರಿಕೆ ಆಗುತ್ತಲೇ ಇರುತ್ತದೆ ಆಗ ನೀರು ಕುಡಿಯುತ್ತಲೇ ಇರುತ್ತೇವೆ. ಅಲ್ಲದೆ ಬೆಟ್ಟದ ಮೇಲೆ ನೀರು ಎಲ್ಲಿ ಸಿಗುತ್ತದೆ. ಅದರಲ್ಲಿ ಚಿಕ್ಕವರು ಹೇಳಿದರು. ನನಗೆ ನಿಮ್ಮ ಚರ್ಯೆ ಬಹಳ ಹಿಡಿಸಿತು. ವಾಸ್ತವದಲ್ಲಿ ನಿಮ್ಮ ಚರ್ಯೆಯೇ ರಾಜಮಾರ್ಗ, ಮೋಕ್ಷ ಮಾರ್ಗವು ಅದೇ ಆಗಿದೆ. ನಮ್ಮದು ಅಪವಾದ ಮಾರ್ಗವಾಗಿದ್ದು ಇದರಲ್ಲಿ ಮೋಕ್ಷ ಹೇಗೆ ಸಿಗುತ್ತದೆ

ಯಾರಿಗೆ ಗೊತ್ತು ಎಂದರು. ಹಾಗೇ ಮಾತಾಡುತ್ತ ಬೆಟ್ಟದ ಮೇಲಕ್ಕೆ ಬಂದು ನೋಡಿದಾಗ ಎಲ್ಲವು ಶ್ವೇತಾಂಬರ ದೇವಾಲಯಗಳು ಅವುಗಳ ಮಧ್ಯೆ ಒಂದೇ ಬಂದು ದಿಗಂಬರ ಮಂದಿರವಿತ್ತು. ಅದು ಮೂವತ್ತರೆಡು ಹಲ್ಲುಗಳ ಮಧ್ಯೆ ಇರುವ ನಾಲಿಗೆಯಂತೇ ಭಾಸವಾಗ ತೊಡಗಿತು. ಎರಡು, ಮೂರು ದಿನ ಅವರ ಸಂಗಡವೇ ಅಲ್ಲಿ ಯಾತ್ರೆಯಲ್ಲಿ ದಿನ ಕಳೆದೆವು ಜೈತ್ರ ಶುದ್ಧ ಏಕಾದಶಿ ಪಾಡ್ಯದ ದಿನ ಮಹಾರಾಷ್ಟ್ರದಲ್ಲಿ "ಗುಡೀಪಾಢಾವಾ"ಎಂದು ಕರೆಯಲಾಗುತ್ತದೆ. ಇದು ವಿಕ್ರಮ ಸಂವತ್ಸರದ ಮೊದಲನೆಯ ದಿನ ಅಂದು ಅಲ್ಲಿದ್ದೆವು ಸಂಘದಲ್ಲಿದ್ದ ಎಲ್ಲ ಬ್ರಹ್ಮ ಚಾರಿಣಿಯರು ಪ್ರಾತಃಕಾಲದಲ್ಲಿ ಭಗವಂತರ ಮುಂದೆ ಖಿರಖೂಜದ ಹಣ್ಣಿಟ್ಟು ನಮಿಸಿದರು.

ಶತ್ರುಂಜಯ ಪರ್ವತದ ಪರಿಚಯ

ಶತ್ರುಂಜಯ ಪರ್ವತವು ಒಂದು ನಿರ್ವಾಣಕ್ಷೇತ್ರವಾಗಿದೆ ನಿರ್ವಾಣಕಾಂಡದಲ್ಲಿ ಇದರ ಉಲ್ಲೇಖ ಬಂದಿದೆ.

ಪಂಡುಸುಆ ತಿಣ್ಣೆಜಣಾ ದವಿಡಣರಿಂದಾಣ ಅಟ್ಟಕೋಡೀಓ ।
ಸತ್ತುಂಜಯ ಗಿರಿಸಿಹರೇ ಣಿವ್ವಾಣಗಯಾ ಣಮೋ ತೇಸಿಂ ॥

ಪಾಂಡು ಪುತ್ರರಾದ ಧರ್ಮರಾಯ, ಭೀಮ ಮತ್ತು ಅರ್ಜುನರು ಎಂಟು ಕೋಟಿ ದ್ರಾವಿಡ ರಾಜರೊಡನೆ ಈ ಪರ್ವತದಲ್ಲಿ ನಿರ್ವಾಣವನ್ನು ಹೊಂದಿದ್ದಾರೆ. ಅವರಿಗೆ ನನ್ನ ನಮಸ್ಕಾರಗಳು. ಪಾಲೀತಾನ ನಗರವು ಶತ್ರುಂಜಯ ಪರ್ವತದ ತಳದಿಂದ ಒಂದು ಮೈಲಿದೂರದಲ್ಲಿದೆ. ನಗರದ ಒಳಗೆ ಒಂದು ದಿಗಂಬರ ಜೈನಮಂದಿರವಿದೆ. ಇಲ್ಲಿಂದಲೂ ಬೆಟ್ಟಕ್ಕೆ ಹೋಗಲು ವಾಹನಗಳು ಸಿಗುತ್ತವೆ. ಪರ್ವತದಲ್ಲೂ ಬೆಟ್ಟಕ್ಕೆ ಹೋಗಲು ವಾಹನಗಳು ಸಿಗುತ್ತವೆ. ಪರ್ವತಹತ್ತಿ ಇಳಿಯಲು 4 ಮೈಲಿ ಆಗುತ್ತದೆ. ಮೆಟ್ಟಿಲುಗಳೂ ಇವೆ. ಈ ಪರ್ವತದ ತುಂಬೆಲ್ಲ ಮಂದಿರಗಳೇ ತುಂಬಿವೆ. ಶ್ವೇತಾಂಬರರದು ಸುಮಾರು 3500 ಮಂದಿರಗಳು ಇವೆ. ಇವುಗಳ ಮಧ್ಯೆ ಇರುವ ಒಂದೇ ದಿಗಂಬರ ಮಂದಿರ ಹಾರದ ಮಧ್ಯೆಇರುವ ರತ್ನದಂತೆ ಶೋಭಿಸುತ್ತಿದೆ. ಮೇಲೆ ಎರಡು ಕೂಟಗಳಿವೆ ಮೊದಲನೆಯ ಕೊಟ ಶ್ವೇತಾಂಬರರದಾಗಿದೆ. ಎರಡನೆಯ ಕೂಟದಲ್ಲಿ ಶ್ವೇತಾಂಬರ ಮಂದಿರದ ಒಳಗೆ ಒಂದು ಪ್ರಾಚೀನ ದಿಗಂಬರ ಮಂದಿರ ವಿದೆ ಅಲ್ಲಿ ಶಾಂತಿನಾಥ ಜಿನ ಭಗವಾನರ ಮೂರ್ತಿಯು ಇನ್ನೊಂದು ವೇದಿಯಲ್ಲಿ ಪಾಂಡವರಚರಣ ಚಿಹ್ನೆಗಳು ವಿರಾಜಮಾನವಾಗಿವೆ. ಶತ್ರುಂಜಯ ಬೆಟ್ಟ ಅಥವಾ ಪಾಲಿಟಾನ ನಗರ ಎರಡು ಒಂದೇ ಭೈರವ ಪುರ ಮೊಹಲ್ಲೆಯಲ್ಲಿಯೇ ದಿಗಂಬರ ಧರ್ಮಶಾಲೆಯು ಇದೆ.

ಶ್ವೇತಾಂಬರ ಪಂಗಡದಲ್ಲಿ ಶತ್ರುಂಜಯ ಪರ್ವತಕ್ಕೆ ಹೆಚ್ಚಿನ ಪೂಜ್ಯತೆಯನ್ನು ಕೊಟ್ಟಿದ್ದಾರೆ. ನಮಗೆ ಸಮ್ಮೇದ ಶಿಖರವಿದ್ದಂತೆ ಅವರಿಗೆ ಈ ಕ್ಷೇತ್ರ. ಆದ್ದರಿಂದ ಯಾವಾಗಲೂ ಇಲ್ಲಿ ಸಾಧು ಸಾಧ್ವಿಯರು ಇದ್ದೇ ಇರುತ್ತಾರೆ.

೨೫

ಯಾತ್ರೆಯಿಂದ ಹಿಂದಿರುವಾಗ ಉಂಟಾದ ಸಮಸ್ಯೆಗಳು

ಗುಜರಾತಿನ ಯಾತ್ರೆ ಪೂರ್ಣಗೊಂಡಿತ್ತು ಆದರೆ ಕೆಲವರು ಇಲ್ಲೇ ಚಾರ್ತುಮಾಸವನ್ನು ಮಾಡಲು ಬಯಸುತ್ತಿದ್ದರು. ಆದರೆ ಸಂಘಪತಿಯಾದ ಸೇಠ ಹೀರಾಲಾಲರು ಸಂಘವನ್ನು ರಾಜಸ್ಥಾನಕ್ಕೆ ಕರೆದೊಯ್ಯಲು

ಬಯಸಿದ್ದರು ಅಲ್ಲಿಯ ಬ್ಯಾವರ, ಅಜಮೇರ ಎಲ್ಲಾದರು ಚಾರ್ತುಮಾಸವನ್ನು ಮಾಡಿಸುವ ಆಯೋಜನೆ ಅವರದಾಗಿತ್ತು. ಆದರೆ ಧರ್ಮಸಾಗರರು ಸನ್ಮತೀಸಾಗರಿಗೆ ಮತ್ತೇ ರಾಜಸ್ಥಾನದ ಕಡೇಗೆ ಹಿಂದಿರುಗುವ ಮನಸ್ಸು ಇರಲಿಲ್ಲ, ಒಳಗೂಳಗೆ ಚರ್ಚೆ ನಡೆಯುತ್ತಿತ್ತು. ಎಳೆದಾಟ ಜೋರಾಗಿ ಇತ್ತು ನನ್ನ ಹತ್ತಿರ ಕೂಡ ವಿಚಾರ ವಿರ್ಮಶೆ ನಡೆಸಿದರು ಒಳಗೊಳಗೆ ಸಂಘಗಳಲ್ಲಿ ಕೆಲವರು ಬೇರೆಯಾಗುವ ಸೂಚನೆಗಳು ಕಂಡುಬರತೊಡಗಿತು. ಇದನ್ನು ನಾನು ಮತ್ತು ಬ್ರಹ್ಮಚಾರಿ ಸೂರಜಮಲ್ಲರು ತಡೆಯಬೇಕೆಂದು ಪ್ರಯತ್ನಿಸಿದರೂ ಫಲಕಾರಿಯಾಗದೆ ಕೊನೆಗೆ ಸನ್ಮತೀ ಸಾಗರರು ಶ್ರುತಸಾಗರರು ಬೇರೆಯಾಗುವುದೆಂದು ನಿಶ್ಚಿತವಾಯಿತು ಆದರೆ ಧರ್ಮಸಾಗರರು ಏನನ್ನೂ ಹೇಳದೆ ತಟಸ್ಥರಾಗಿದ್ದರು, ಕೊನೆಗೆ ಕೆಲವರು ಅವರೇ ತೀರ್ಮಾನ ಕೈಕೊಂಡರು. ಹೋಗಲಿ ಬಿಡಿ ಇದು ಸಂಘದಲ್ಲಿ ಸರ್ವೇ ಸಾಮಾನ್ಯವೆಂದರು. ಅಂತು ಕೂನೆಗೆ (ಧರ್ಮಸಾಗರರು) ಸನ್ಮತಿಸಾಗರರು ಮತ್ತು ಶ್ರುತಸಾಗರಜೀ ಸಂಘದಿಂದ ಬೇರೆಯಾಗುವ ನಿರ್ಧಾರ ಕೈಕೊಂಡು ಇನ್ನೆರಡು ದಿನಗಳಲ್ಲಿ ಬೇರೆ ಹೋಗುವ ನಿರ್ಧಾರವು ಆಯಿತು. ಆದರೆ ಶ್ರುತಸಾಗರದಲ್ಲಿ ನಾನು ವಿನಂತಿಸಿದೆ. ಮಹಾರಾಜಜೀ ತಾವು ಆಚಾರ್ಯರಿಗೆ ಬಲಗೈ ಇದ್ದಂತೆ. ತಾವು ಬೇರೆ ಹೋಗುವ ನಿರ್ಧಾರ ಮಾಡಬಾರದು. ಆದರೆ ಒಂದು ದಿನ ಮಂದಿರದ ವೇದಿಕೆಯಲ್ಲಿ ನನಗೆ ಹೇಳಿದರು ಮಾತಾಜೀ ನಾನು ನಿಮ್ಮನ್ನು ನನ್ನ ತಾಯಿ ಎಂದೇ ತಿಳಿದಿರುವೆ ನನಗೆ ನಿಮ್ಮ ಬಗ್ಗೆ ವಿಶೇಷ ಶ್ರದ್ಧೆ ಇದೆ. ಆದರೂ ನಾನು ನಿಮ್ಮಿಂದ ದೂರ ಹೋಗುತಿದ್ದೇನೆ ತಾವು ನನಗೆ ಜ್ಞಾನ ಮತ್ತು ಚಾರಿತ್ರ ವೃದ್ಧಿಯಾಗಲೆಂದು ಮಂತ್ರವನ್ನು ಹೇಳಿಕೂಡಿ ಎಂದರು.

ಮಹಾರಾಜಜೀಯ ಆಸೆಯಂತೇ ನಾನು ಒಂದು ಸರಸ್ವತಿಯ ಮಂತ್ರವನ್ನು ಮತ್ತು ಇನ್ನೊಂದು ಮಂತ್ರವನ್ನು ಕೊಟ್ಟೆ ಅವರು ಅದನ್ನು ಭಕ್ತಿಯಿಂದ ಕಣ್ಣಿಗೆ ಒತ್ತಿಕೊಂಡರು ಅವರೊಬ್ಬ ಭಾವನಾವ್ಯಕ್ತಿ ಮುಂದೆಯು ಕೂಡ ಅವರು ಸದ್ಭಾವನೆ ಮತ್ತು ವಾತ್ಸಲ್ಯವನ್ನು ಇಟ್ಟುಕೊಂಡಿದ್ದರು. ನಾನು ಅವರಿಗೆ ಮಹಾರಾಜಜೀ ತಾವು ಸಂಘದಿಂದ ಹೊರಟ್ಟಿದ್ದೀರ ಆದರೆ ತಾವು ಸಂಘಕ್ಕೆ ಮರಳಿ ಬರುವವರೆಗೆ ನಾನು ಉಪ್ಪನ್ನು ತ್ಯಾಗ ಮಾಡುತ್ತೇನೆ ಎಂದೆ. ಅದಕ್ಕೆ ಮಹಾರಾಜರು ನಾನು ವಾಪಸ್ಸು ಬರುವುದಕ್ಕಾಗಿ ಹೋಗುತ್ತಿಲ್ಲ ಎಂದರು ಅದಕ್ಕೆ ನಾನು ನನ್ನ ಜೀವನ ಪರ್ಯಂತವು ಉಪ್ಪಿನ ತ್ಯಾಗವಿರಲಿ ಬಿಡಿ ಎಂದು ಮಾತನ್ನು ಅಲ್ಲಿಗೆ ಮುಗಿಸಿದೆವು.

ಆ ದಿನಗಳಲ್ಲಿ ನನ್ನ ಹತ್ತಿರ ಆರ್ಯಿಕೆಯರಾದ ಚಂದ್ರಮತಿ, ಪದ್ಮಾವತಿ, ಕ್ಷುಲ್ಲಿಕೆಯಾರಾದ ಜಿನಮತಿ ಮತ್ತು ರಾಜುಲಮತಿ ಇರುತ್ತಿದ್ದರು. ನನ್ನ ಮನಸ್ಸಿನ ಭಾವನೆಗಳೆಲ್ಲವನ್ನು ಚಂದ್ರಮತಿ ಮತ್ತು ಜಿನಮತಿಯರು ತಿಳಿದಿದ್ದರು. ಆದರೂ ನಾನು ಮುನಿಗಳ ಹತ್ತಿರ ಆಂತರಿಕ ವಿಚಾರ ವಿಮರ್ಶೆ ಮಾಡಲು ಹೋಗುವಾಗ ಆರ್ಯಿಕೆ ಪದ್ಮಾವತಿ ಯಾವಾಗಲೂ ಇರುತ್ತಿದ್ದರು. ಇವರು ಸುಮಾರು ಹದಿನಾರು ವರ್ಷಗಳ ವರೆಗೆ ನನ್ನ ಜೊತೆ ಇದ್ದರು ಅಜಮೇರದಲ್ಲಿ 1971ರಲ್ಲಿ ಇವರ ಸಮಾಧಿ ಆಯಿತು. ಅವರ ಜೊತೆಯಲ್ಲಿ ಒಂದು ಸಣ್ಣ ಮಾತಿಗೂ ಕೂಡ ನಮ್ಮಿಬ್ಬರಲ್ಲಿ ಭಿನ್ನಾಭಿಪ್ರಾಯ ಬಂದಿರಲಿಲ್ಲ. ಸಂಘದಲ್ಲಿನ ಕೆಲವು ಶಿಷ್ಯರಿಗೆ ಆಂತರಿಕ ವಿಷಯಗಳನ್ನು ಹೊಟ್ಟೆಯಲ್ಲಿ ಇಟ್ಟುಕೊಳ್ಳಲು ಆಗುತ್ತಿರಲಿಲ್ಲ ಹಾಗೇ ಕೆಲವು ಮೂಢ ಶಿಷ್ಯರು ಅರ್ಥವನ್ನೇ ಅನರ್ಥಮಾಡಿ ಬಿಡುತ್ತಿದ್ದರು. ಈ ಗುಣ ಆರ್ಯಿಕ ಪದ್ಮಾವತಿಯಲ್ಲಿಯು ಇದ್ದಿತು ಆದರೆ ನನಗೆ ಯಾವಾಗಲು ನೆರಳಿನಂತೆ ಜೊತೆಯಲ್ಲಿ ಇರುತ್ತಿದ್ದವರು ಇಲ್ಲದಂತಾದಾಗ ಮನಸ್ಸಿಗೆ ಬಹಳ ಪಿಚ್ಚೆನ್ನೆಸಿತು. ಆದರೆ ಸಂಯೋಗದ ನಂತರ ವಿಯೋಗ ಇವೆಲ್ಲವು ಸ್ವಾಭಾವಿಕವಲ್ಲವೇ.

ಸಂಯುಕ್ತಾನಾಂ ವಿಯೋಗಶ್ಚ, ಭವಿತಾ ಹಿ ನಿಯೋಗತಃ ।

ಈ ಸೂಕ್ತಿಯನ್ನು ನೆನಪಿಸಿಕೊಂಡರೆ ಸಂತೋಷವಾಗುತ್ತದೆ. ಒಂದು ದಿನ ಪ್ರಾತಃಕಾಲ ಈ ಇಬ್ಬರು ಮುನಿಗಳು ಆಚಾರ್ಯರಿಗೆ ನಮಸ್ಕರಿಸಿ ಏನನ್ನೂ ಹೇಳದೆ ವಿಹಾರಕ್ಕೆ ಹೊರಟರು. ಎಲ್ಲರಿಗೂ ದುಃಖವಾದರೂ ಏನನ್ನೂ ಮಾಡುವಂತಿರಲಿಲ್ಲ. ಶ್ರುತಸಾಗರರು ಮತ್ತು ಸನ್ಮತಿಸಾಗರರ ಜೊತೆ ಬ್ರ. ರಾಜಮಲ್ಲರಿಗೆ ನಿಕಟ ಸಂಪರ್ಕವಿತ್ತು. ಆಗ ನಾನು ಬ್ರಹ್ಮಚಾರಿಜೀ ನೀವೊಮ್ಮೆ ತಡೆಯಲು ಪ್ರಯತ್ನಿಸಿ ಎಂದೆ. ಇದನ್ನು ಕೇಳುತ್ತಲೇ ಬ್ರಹ್ಮಚಾರಿಗಳು ವಾಪಸ್ಸು ಕರೆತರಲೇ ಬೇಕೆಂದು ಅವರನ್ನು ಹಿಂಬಾಲಿಸಿ ಓಡಿಹೋದರು. ಅವರು ಬರುತ್ತೀರುವುದನ್ನು ಕಂಡ ಮುನಿಗಳು ನಿಂತರು. ಇವರು ಅವರಿಬ್ಬರ ಕಾಲುಗಳಿಗೆ ನಮಸ್ಕರಿಸಿ ಜೋರಾಗಿ ಅಳಲು ಪ್ರಾರಂಭಿಸಿದರು ಇವರ ಈ ಪ್ರೀತಿಯನ್ನು ಕಂಡ ಅವರು ಅದನ್ನು ತಿರಸ್ಕರಿಸಿ ಮುಂದೆ ಹೋಗಲು ಆಗದೆ ಅಯ್ಯಾ ಸಂಘದಲ್ಲಿ ಇರುವ ಇಷ್ಟೊಂದು ವಾತ್ಸಲ್ಯ, ಪ್ರೀತಿಯನ್ನು ನಾನು ಬೇರೆಲ್ಲಿ ಪಡೆಯಲು ಸಾಧ್ಯ ಎಂದು ಯೋಚಿಸಿದವರು ಒಳ್ಳೆಯದು ನಡೆಯಿರಿ. ನಾವು ವಾಪಸ್ಸು ಬರುತ್ತೇವೆ ಎಂದರು.

ಈ ಕಡೆ ಅವರಿಬ್ಬರು ಸಂಘದಿಂದ ಹೊರಟ್ಟಿದ್ದು ಕಂಡು ಎಲ್ಲರ ಮನಸ್ಸು ಖಿನ್ನವಾಗಿತ್ತು. ನಾವೆಲ್ಲರು ಅವರು ಹೋಗುವ ಜಾಗ ತಲುಪಿರಬೇಕೆಂದು ತಿಳಿದೆವು. ಆಹಾರದ ಸಮಯವಾಗುತ್ತಿತ್ತು. ಆಗ ಬ್ರಹ್ಮಚಾರಿ ರಾಜಮಲ್ಲರ ಜೊತೆ ಸನ್ಮತಿ ಸಾಗರರು ಮತ್ತು ಶ್ರುತಸಾಗರರು ಹಿಂದಿರುಗಿದ್ದು ನೋಡಿ ಎಲ್ಲರ ಹರ್ಷಕ್ಕೆ ಪಾರವಿಲ್ಲದಂತೆ ಆಯಿತು. ಒಂದು ಕ್ಷಣದ ನಂತರ ಶ್ರುತಸಾಗರರು ಹೇಳಿದರು. 'ಮಾತಾಜೀ ತಮ್ಮ ಉಪ್ಪಿನ ತ್ಯಾಗವನ್ನು ಬಿಡಿರಿ. ಈಗ ನಾನೊಂದು ನಿಯಮವನ್ನು ತೆಗೆದುಕೊಳ್ಳುತ್ತಿದ್ದೇನೆ. ನಾನೆಂದೂ ಸಂಘವನ್ನು ಬಿಟ್ಟು ಹೋಗುವುದಿಲ್ಲವೆಂದು.

ಅವರ ಮಾತನ್ನು ಕೇಳಿ ನನಗೆ ಬಹಳ ಖುಷಿ ಆಯಿತು. ಎಲ್ಲರಿಗೂ ನಿರಾತಂಕವಾಗಿ ಆಹಾರವಾಯಿತು. ಆ ದಿನವೇ ಸಂಘ ಬಿಟ್ಟು ಹೋಗುವ ವಿಷಯವು ಸಮಾಪ್ತಿ ಆಯಿತು. ಆದರೆ ಎರಡು ಮೂರು ದಿನಗಳು ಕಳೆಯುತ್ತಿದ್ದಂತೆ ಸನ್ಮತಿಸಾಗರರು ಮತ್ತೆ ಹೊರಡುವ ಮಾತು ಎತ್ತಿದರು. ಇದನ್ನು ಕೇಳಿ ಎಲ್ಲರಿಗೂ ಆಶ್ಚರ್ಯವಾಯಿತು. ಅದಕ್ಕೆ ಅವರು ನಾನು ಅಹಮದಾಬಾದಿಗೆ ಹೋಗುವ ನಿಯಮವನ್ನು ತೆಗೆದುಕೊಂಡಿದ್ದೇನೆ. ಆದ್ದರಿಂದ ಹೊರಡಲೇ ಬೇಕು ಎಂದರು. ಆಗ ಶ್ರುತಸಾಗರರು ಹೇಳಿದರು. ನಾನು ಹೋಗುವುದಿಲ್ಲ ಎಂದರು. ಚರ್ಚೆ ಆರಂಭವಾಯಿತು. ಒಂದು ವೇಳೆ ತಾವು ಅಹಮದಾಬಾದಿಗೆ ಹೋಗಿ ಬಂದರೆ ತಮ್ಮ ನಿಯಮ ಪೂರ್ಣವಾದಂತೆ ಆಗುತ್ತದೆ ತಾನೇ, ಅದಕ್ಕೆ ಅವರು ಹೌದು ನಾನು ಮತ್ತೆ ಸಂಘಕ್ಕೆ ಬರುತ್ತೇನೆ. ಕೊನೆಗೆ ಎರಡು ಮೂರುದಿನ ಚರ್ಚೆಗಳಾದ ನಂತರ ಶ್ರುತಸಾಗರರು ಸನ್ಮತಿ ಸಾಗರರನ್ನು ಅಹಮದಾಬಾದಿಗೆ ಕರೆದುಕೊಂಡು ಹೋಗಿ ಬರುವುದೆಂದು ತೀರ್ಮಾನವಾಯಿತು.

ಈ ವಿಷಯಕ್ಕೆ ಬ್ರ. ರಾಜಮಲ್ಲಜೀಯವರೇ ತಯಾರಾದರು. ಆಚಾರ್ಯರ ಅನುಮತಿಯನ್ನು ಪಡೆದ ಅವರಿಬ್ಬರು ಅಹಮದಾಬಾದಿಗೆ ಹೊರಟರು. ಅವರನ್ನು ನಿರೀಕ್ಷಿಸುತ್ತಾ ಇಡೀ ಸಂಘವೇ ಆಬೂ ಮಂದಿರದಲ್ಲಿ ತಂಗಿತ್ತು. ಆ ಸಮಯದಲ್ಲಿ ಬಹಳ ಬಿಸಿಲಿತ್ತು. ಆದರೂ ಅವರು ಬೇಗ ಬೇಗ ನಡೆದು ಅಹಮದಾಬಾದ್ ತಲುಪಿ ಅಲ್ಲಿನ ಎಲ್ಲ ಜಿನಮಂದಿರಗಳನ್ನು ಸಂದರ್ಶಿಸಿ ಅಲ್ಲಿಂದ ಕಾಲ್ನಡಿಗೆಯಲ್ಲಿಯೇ ಮತ್ತೆ ಹಿಂದಿರುಗಿ ಸಂಘಕ್ಕೆ ಬಂದು ತಲುಪಿದರು. ಇವರ ಜೊತೆಯಲ್ಲಿಯೇ ಬ್ರ. ರಾಜಮಲ್ಲಜೀಯವರು ಯಾತ್ರೆ ಮಾಡಿ ಬಂದರು. ಇವರು ಮತ್ತೆ ಸಂಘಕ್ಕೆ ಬಂದಿದ್ದು, ನಿಧಿ ಸಿಕ್ಕಂತೆ ಆಯಿತು.

ಅವರಿಬ್ಬರ ಕಾಲುಗಳು ಸೋತಿದ್ದವು. ಕಾಲುಗಳಲ್ಲಿ ಬಪ್ಪಳೆ ಎದ್ದಿತ್ತು. ಅದರಿಂದ ಉರಿ ಜಾಸ್ತಿ ಆಗಿತ್ತು. ಶ್ರುತಸಾಗರರು ನನ್ನಲ್ಲಿ ತಮ್ಮ ನೋವನ್ನು ತೋಡಿಕೊಂಡರು. ಆಗ ನಾನು ಒದ್ದೆ ಮಣ್ಣಿನ ಲೇಪ ಮಾಡಿಸಿ

ಉಪಚರಿಸಿದೆ. ರಾತ್ರಿಯ ವೇಳೆಯಲ್ಲಿಯು ಬ್ರ. ರಾಜಮಲ್ಲಜೀ ಮಣ್ಣಿನ ಲೇಪನವನ್ನು ಅಂಗಾಲುಗಳಿಗೆ ಮಾಡುತ್ತಿದ್ದರು. ಒಣಗಿದಂತೆ ಮತ್ತೆ ತೆಗೆಯುತ್ತಿದ್ದರು. ಹೀಗೆ ಮಾಡುತ್ತಾ ಮಾಡುತ್ತಾ ಅವರ ಉಪಸರ್ಗವು ದೂರವಾಯಿತು.

೨೬

ವಿಹಾರದಲ್ಲಿ ಆದ ಅನುಭವ

ಅಲ್ಲಿಂದ ಹಿಂದಿರುಗುವ ಸಮಯದಲ್ಲಿ ನನಗೆ ಜಾಸ್ತಿ ಅಂತರಾಯವಾಗತೊಡಗಿತು. ಆಹಾರದಲ್ಲಿ ಇನ್ನು ರೊಟ್ಟಿ ತಿನ್ನುವಾಗಲೇ ಅಂತರಾಯವಾಗತೊಡಗಿತು. ಸ್ವಲ್ಪ ತಿಂದ ನಂತರ ಇಲ್ಲಿ ಮೊದಲು ನೀರು ತೆಗೆದುಕೊಳ್ಳುವಾಗಲೇ ಆಗತೊಡಗಿತು. ಸಿದ್ಧ ಭಕ್ತಿ ಆದ ನಂತರ ಆಹಾರ ತೆಗೆದುಕೊಳ್ಳಲು ನೀರು ತೆಗೆದುಕೊಳ್ಳುವಾಗಲೇ ಏನಾದರು ಸಿಕ್ಕಿಬಿಡುತ್ತಿತ್ತು. ನೀರನ್ನು ತೆಗೆದುಕೊಳ್ಳಲಾರದೆ ಮುಖ ಶುದ್ಧಿ ಮಾಡಬೇಕಾದ ಪರಿಸ್ಥಿತಿ ಜಾಸ್ತಿಯಾಗತೊಡಗಿತು. ಈ ಅಂತರಾಯ ವ್ಯವಸ್ಥೆ ದಿಗಂಬರ ಪಂಥದ ಆಚರಣೆಯಲ್ಲಿ ಕಟ್ಟು ನಿಟ್ಟಾಗಿ ತರುತ್ತಾರೆ. ಒಂದು ಕಡೆ ವೈಶಾಖ - ಜೇಷ್ಠದ ಬಿಸಿಲು ಇನ್ನೊಂದು ಕಡೇ ಎರಡು ಮೂರು ದಿನಕ್ಕೊಮ್ಮೆ ಅಂತರಾಯ ಜೊತೆಗೆ ಪ್ರತಿದಿನ 15-16 ಮೈಲಿಯ ಕಾಲ್ನಡಿಗೆ ನನ್ನ ಆರೋಗ್ಯ ಕೆಡತೊಡಗಿತು. ನಡೆಯುವಾಗ ನನಗೆ ಫರ್ಲಾಂಗಿಗೂ ಕುಳಿತುಕೊಳ್ಳ ಬೇಕಾಗುತ್ತಿತ್ತು. ಎದ್ದು ಹೇಗೋ ನಡೆಯುತ್ತಿದ್ದೆ. ಸೇರಬೇಕಾದ ಜಾಗವನ್ನು ನಿಧಾನವಾಗಿ ತಲುಪುತ್ತಿದ್ದೆ. ಕೆಲವು ವೇಳೆ ನಾನು ಸೇರುವ ವೇಳೆಗೆ ಎಲ್ಲರ ಆಹಾರವು ಮುಗಿದಿರುತ್ತಿತ್ತು. ಹನ್ನೆರಡು ಗಂಟೆಗೆ ತಲುಪಿ ಬಿಸಿಲಿಗೆ ಆಹಾರವು ಸೇರುತ್ತಿರಲಿಲ್ಲ. ಆ ಸಮಯದಲ್ಲಿ ನಾನು ಸಿಹಿಯನ್ನು ತ್ಯಾಗ ಮಾಡಿದೆ. ವಿಹಾರದಲ್ಲಿ ಮಧ್ಯೆ ಕೆಲವು ಸಮಯ ಹಾಲು ಮೊಸರು ತುಪ್ಪ ಕೂಡ ಸಿಗುತ್ತಿರಲಿಲ್ಲ ನಾನು ಕೆಲವು ಸಲ ನೀರಿನಲ್ಲಿ ರೊಟ್ಟಿಯನ್ನು ನೆನಸಿ ತೆಗೆದುಕೊಳ್ಳತ್ತಿದ್ದೆ. ಅಂತರಾಯಕರ್ಮದ ಉದಯದಿಂದ ಉಪಸರ್ಗವು ಜಾಸ್ತಿಯೇ ಆಗತೊಡಗಿತು.

ನನ್ನ ಶರೀರ ಬಲಹೀನವಾಗತೊಡಗಿತು. ಆದರೂ ನಾನು ಯಾವ ಮುನಿಗಳ ಹತ್ತಿರವಾಗಲೀ ಮಾತಾಜೀಯ ಹತ್ತಿರವಾಗಲೀ ಏನನ್ನು ಹೇಳಿಕೊಳ್ಳಲಿಲ್ಲ. ಮನದಲ್ಲೇ ಯೋಚಿಸತೊಡಗಿದೆ. ನಾನೇ ಸ್ವಯಂ ಬಯಸಿ ಬಯಸಿ ದೀಕ್ಷೆಯನ್ನು ತೆಗೆದುಕೊಂಡಿದ್ದೇನೆ. ಈ ಶರೀರವಾದರೋ ನಶ್ವರವಾದುದೇ ಇದಕ್ಕಾಗಿ ಏಕೆ ಚಿಂತೆ ಮಾಡಬೇಕು. ಎಷ್ಟು ಸಾಧ್ಯವೋ ಅಷ್ಟು ಕೆಲಸವನ್ನು ಮಾಡೋಣ ಎಂದು ನಿಶ್ಚಯಿಸಿದೆ.

ಆ ಸಮಯದಲ್ಲಿ ನನ್ನ ಪರಿಸ್ಥಿತಿಯನ್ನು ಅರಿಯದ ಕೆಲವು ಸಾಧ್ವಿಯರು ಬೆಳಗ್ಗೆಯಾಗಲಿ, ಸಂಜೆಯಾಗಲಿ ನಿಧಾನವಾಗಿ ತಲುಪುತ್ತಿದ್ದ ನನ್ನನ್ನು ಕೇಳುತ್ತಿದ್ದರು. ನೀನಾದರೂ ಸಂಘದಲ್ಲಿರುವವರಲ್ಲಿ ಚಿಕ್ಕವಳು ಆದರೂ ನಮ್ಮ ಸಮಯಕ್ಕೆ ಏಕೆ ನಡೆಯಲು ಆಗುವುದಿಲ್ಲ. ಆ ಮಾತನ್ನು ಕೇಳಿಯೂ ನಾನು ಉತ್ತರ ಕೊಡದೆ ನನ್ನಲ್ಲಿ ವೈರಾಗ್ಯವನ್ನು ಬೆಳೆಸಲು ಪ್ರಯತ್ನಿಸತೊಡಗಿದೆ. ನಾನು ಒಮ್ಮೆ ಯೋಚಿಸುತ್ತಿದ್ದೆ. ಆ ದಿನಗಳಲ್ಲಿ ಆಚಾರ್ಯರಲ್ಲಿ ಅಥವಾ ಆರ್ಯಿಕೆಯರಲ್ಲಿ ಸುಖ-ದುಃಖವನ್ನು ಹೇಳಿ ಕೊಂಡಿದ್ದರೆ ನನ್ನ ಶಾರೀರಿಕ ಕಷ್ಟ ಕಡಿಮೆಯಾಗುತ್ತಿತ್ತು. ಆದರೆ ನಾನೇ ಸಹನಶೀಲತೆ ಮತ್ತು ವೈರಾಗ್ಯವನ್ನು ಹೆಚ್ಚಿಸಿಕೊಳ್ಳುವ ಪುರುಷಾರ್ಥವನ್ನು ಮಾಡುತ್ತಾ ಇದ್ದೆ. ಯಾರಿಗೂ ನನ್ನ ಪರಿಸ್ಥಿತಿಯನ್ನು ಆಚಾರ್ಯರಿಗೆ ತಿಳಿಸು ಎಂದು ಕೂಡ ಹೇಳಲಿಲ್ಲ.

ಸಾಯಂಕಾಲದ ವೇಳೆ ನಾನು ಸಂಘ ತಲುಪಬೇಕಾದ ಸ್ಥಳವನ್ನು ತಲುಪದೇ ಕತ್ತಲು ಆಗಿಬಿಟ್ಟರೆ ರಸ್ತೆಯಲ್ಲಿಯೋ ಮರದ ಕೆಳಗೋ ಮೈದಾನದಲ್ಲಿಯೋ ರಾತ್ರಿ ಕಳೆಯುತ್ತಿದ್ದೆ. ಇಂತಹ ಸಮಯದಲ್ಲಿ ನನ್ನ ಜೊತೆ ಆರ್ಯಿಕೆ ಚಂದ್ರಮತಿ ಅಥವಾ ಆರ್ಯಿಕೆ ಪದ್ಮಾವತಿ ಇರುತ್ತಿದ್ದರು. ಕ್ಷುಲ್ಲಿಕೆ ಜಿನಮತಿ ಬೇಗ ನಡೆದು ಮುಂದೆ ಎಲ್ಲ ಆರ್ಯಿಕೆಯರ ಜೊತೆ ಸಾಗುತ್ತಿದ್ದಳು.

ಯಾವಾಗಾದರೂ ನಾನು ರಾತ್ರಿಯ ವೇಳೆ ಹಿಂದೆ ಉಳಿದರೆ ಆಗ ಸೇಠ್ ಹೀರಾಲಾಲ್ ಜೀ, ಬ್ರ. ಚಿರಂಜೀವಿಲಾಲ ಅಥವಾ ಧರ್ಮಚಂದ್ರರವರ ಕೈಯಲ್ಲಿ ಕಮಂಡಲಕ್ಕೆ ನೀರನ್ನು ಕಳುಹಿಸಿ ನಾನು ಎಲ್ಲಿದ್ದೇನೆ ಎನ್ನುವುದನ್ನು ತಿಳಿದುಕೊಳ್ಳುತ್ತಿದ್ದರು. ಕೆಲವು ಸಲ ಹಿಂದೆ ಉಳಿದಾಗ ಹಳ್ಳಿ ಸಿಕ್ಕಿದರೆ ವೀರಸಾಗರರ ಅಣತಿಯಂತೆ ಗೃಹಸ್ಥರ ಮನೆಯ ಜಗಲಿಯಲ್ಲಿ ಆಗ್ರಹ ಪಡಿಸಿದರೆ ಮನೆಯ ಒಳಗೆ ಮಲಗಿ ಬೆಳಗಾಗುತ್ತಿದ್ದಂತೆ ಸಂಘವಿರುವ ಕಡೆ ಹೊರಡುತ್ತಿದ್ದೆ.

ನನ್ನ ಕಾರಣದಿಂದ ಸಂಘದ ವಿಹಾರ ನಿಲ್ಲುವ ಹಾಗಿರಲಿಲ್ಲ. ಒಂದೆರಡು ಸಲ ಸಂಘಪತಿಯಾದ ಹೀರಾಲಾಲರು ಆಚಾರ್ಯರಲ್ಲಿ ನಿವೇದನೆಯನ್ನು ಮಾಡಿಕೊಂಡರು. ಮಹಾರಾಜಜೀ ಆರ್ಯಿಕೆ ಜ್ಞಾನಮತಿಗೆ ಪದೇ ಪದೇ ಅಂತರಾಯವಾಗುತ್ತಿರುವುದರಿಂದ ಅವರು ಬಹಳ ನಿಶ್ಯಕ್ತರಾಗಿದ್ದಾರೆ. ಆದ್ದರಿಂದ ಸಂಘ ಈ ದಿನ ಇಲ್ಲಿಯೇ ತಂಗುವುದು ಒಳ್ಳೆಯದೆಂದು ಅಥವಾ ಹೊರಡುವ ವೇಳೆಯನ್ನು ನಿಶ್ಚಿತಗೊಳಿಸಿದರೆ ಒಳ್ಳೆಯದಾಗುತ್ತದೆ. ಏಕೆಂದರೆ ಅವರಿಗೆ ಈ ದಿನವೂ ಅಂತರಾಯವಾಗಿದೆ. ಅದಕ್ಕೆ ಆಚಾರ್ಯರು ಸಹೋದರ ಈ ದಿನ ಇವರ ಕಾರಣದಿಂದ ನಿಂತರೆ ನಾಳೆ ಬೇರೆಯವರ ಕಾರಣದಿಂದ ನಿಲ್ಲಬೇಕಾಗುತ್ತದೆ. ಹೀಗೆ ನಿಲ್ಲುವುದು ಉಚಿತವಲ್ಲ ಹೀಗಾಗಿ ನಾನು ಬೆಳಗ್ಗೆ ಸಂಜೆ ಎರಡು ಹೊತ್ತು ನಡೆಯಬೇಕಾಗುತ್ತಿತ್ತು. ಬಿಸಿಲಿನ ಝಳಕ್ಕೆ ಕಾಲು ಎತ್ತಿ ಇಡಲು ಆಗದ್ದರಿಂದ ಆಗೆಲ್ಲ ನಾನು ಮನದಲ್ಲಿ ನರಕದ ದುಃಖವನ್ನು ತಿರ್ಯಂಚ ಪ್ರಾಣಿಗಳ ಕಷ್ಟವನ್ನು ವಿಚಾರ ಮಾಡುತ್ತಾ ನಡೆಯುತ್ತಿದ್ದೆ.

ಇಂದು ನಾನು ಈ ಕಷ್ಟಗಳನ್ನು ಸಹಿಸಲೇಬೇಕು. ಶೀತ, ಉಷ್ಣ, ಹಸಿವು, ಬಾಯಾರಿಕೆಯನ್ನು ಸಹಿಸಲೇ ಬೇಕು ಈ ಜನ್ಮದಲ್ಲಿ ಆಗದಿದ್ದರೆ ಮುಂದಿನ ಜನ್ಮದಲ್ಲಾದರೂ ಸಹಿಸಲೇಬೇಕು. ಈ ಪರಿಷಹಗಳನ್ನು ಜಯಿಸದಿದ್ದರೆ ಕರ್ಮ ನಿರ್ಜರೆ ಹೇಗಾಗುತ್ತದೆ. ಮುಕ್ತಿಯನ್ನು ಪಡೆಯುವುದಾದರೂ ಹೇಗೆ. ಒಂದು ದಿನ ಬೆಳಗ್ಗೆ ಹತ್ತು ಗಂಟೆಯಾದರೂ ನಾನು ಬಹಳ ಹಿಂದೆಯೇ ಉಳಿದಿದ್ದೆ. ಅಂತಹ ಸಂದರ್ಭದಲ್ಲಿ ನನ್ನ ಜೊತೆ ಜಿನಮತಿ ಇರುತ್ತಿದ್ದರು. ದಾರಿಯಲ್ಲಿ ನಾನು ಪಡುತ್ತಿದ್ದ ಅವಸ್ಥೆಯನ್ನು ನೋಡಿ ಅವರು ಅಳುತ್ತಿದ್ದರು. ಆದರೆ ಸಂಘ ಸೇರಿದಾಗ ಯಾರಿಗೂ ನನ್ನ ದಾರಿಯ ಅವಸ್ಥೆಯನ್ನು ಹೇಳುತ್ತಿರಲಿಲ್ಲ. ಅದು ಅವರ ಸಂಕೋಚವೋ, ಅಜ್ಞಾನವೋ ತಿಳಿಯುತ್ತಿರಲಿಲ್ಲ.

ಇದರ ಮಧ್ಯೆ ನಾನು ಹಿಂದೆ ಉಳಿದಾಗ ಹೀರಾಲಾಲರು ಸೈಕಲಿನಲ್ಲಿ ಒಂದು ಕಮಂಡಲುವಿಗೆ ನೀರನ್ನು ತುಂಬಿಸಿ ನನ್ನ ಜೊತೆಯೇ ನಡೆದುಕೊಂಡು ಬರುತ್ತಾ ಭಕ್ತಿ ಮತ್ತು ವಾತ್ಸಲ್ಯದಿಂದ ಹೇಳುತ್ತಿದ್ದರು. ಮಾತಾಜೀ ತಾವು ಸ್ಥಾನದಲ್ಲಿ ತಾಯಿಯ ಸ್ಥಾನದಲ್ಲಿದ್ದೀರಾ ಆದರೆ ವಯಸ್ಸಿನಲ್ಲಿ 'ನನ್ನ ಮಗಳಂತೀದ್ದೀರಾ ತಾವು ನನ್ನ ಹೆಗಲ ಮೇಲೆ ಕುಳಿತರೆ ನಾನು ಸಂಘಕ್ಕೆ ಬೇಗ ಕರೆದುಕೊಂಡು ಹೋಗುತ್ತೇನೆ ತಾವೇ ನಡೆಯುತ್ತಾ ಬಂದರೆ ತಲುಪುವುದು ನಿಧಾನವಾಗುತ್ತದೆ' ಎನ್ನುತ್ತಿದ್ದರು. ಅವರ ವಾತ್ಸಲ್ಯದ ಮನಸ್ಸನ್ನು ಕೇಳಿದ ನಾನು ನಗುತ್ತಾ ಸೇಠ್‌ಜೀ ತಾವು ಹೇಳಿದ ಮಾತು ನನ್ನ ಸ್ಥಾನಕ್ಕೆ ವಿರೋಧವಾದುದು ನಿಮ್ಮ ಭಕ್ತಿಯು ನಿಮಗೆ ಪುಣ್ಯ ಬಂಧವನ್ನು

ಉಂಟು ಮಾಡುತ್ತದೆ. ಈಗ ನೀವು ಸಂಘಕ್ಕೆ ಹೋಗಿ ಉಳಿದ ಮುನಿ ಆರ್ಯಿಕೆಯರ ಆಹಾರ ವ್ಯವಸ್ಥೆಯನ್ನು ಮಾಡಿರಿ ನಾನು ಹೇಗೋ ಏಳುತ್ತಾ ಬೀಳುತ್ತಾ ಬರುತ್ತೇನೆ ಎಂದು ಅವರನ್ನು ಕಳುಹಿಸಿದೆ.

ಒಂದು ದಿನವಂತೂ ನಾನು ಬೆಳಗ್ಗೆ ಎದ್ದು ಸಂಘ ತಲುಪಿದಾಗ 11.30 ಗಂಟೆಯಾಗಿತ್ತು. ಬಂದು ಕಾಲುಗಂಟೆ ವಿಶ್ರಾಂತಿ ತೆಗೆದುಕೊಂಡು ಸಾಮಾಯಿಕ ಮಾಡಿ ಆಹಾರಕ್ಕಾಗಿ ಹೊರಟೆ ಆಯಾಸದಿಂದ ಆಹಾರವು ಸರಿಯಾಗಿ ಸೇರಲಿಲ್ಲ. ಬಂದವಳೇ ಆಯಾಸದಿಂದ ನಿದ್ರೆ ಆವರಿಸಿತು. ಸಂಘ ಮುಂದೆ ಹೊರಟೇಬಿಟ್ಟಿತು. ಹೇಗೋ ನಾನು ಎದ್ದು ಅಲ್ಲಿಂದ ಹೊರಡಲೇ ಬೇಕಾಯಿತು. ಹೀಗೆ ಮಾರ್ಗದಲ್ಲಿ ನಾನು ಹಿಂದೆ ಉಳಿದಾಗಲೆಲ್ಲಾ ಬ್ರ. ರಾಜಮಲ್ಲಜೀ ನನ್ನ ಜೊತೆ ಇದ್ದು ನನ್ನ ನಿಶ್ಯಕ್ತಿ ನೋಡಿ ಕಮಂಡಲವನ್ನು ಸಹ ತಾವೇ ಹಿಡಿದುಕೊಳ್ಳುತ್ತಿದ್ದರು. ಮತ್ತು ಮುಂದೆ ಹೋಗಿ ಹೀರಾಲಾಲಜೀಗೆ ಸುದ್ದಿ ಮುಟ್ಟಿಸುತ್ತಿದ್ದರು. ಬ್ರ. ರಾಜಮಲ್ಲಜೀ ಗೆ ನನ್ನ ಸಹನಶೀಲತೆ ಮತ್ತು ಜ್ಞಾನಾರಾಧನೆಯಿಂದ ಪ್ರಭಾವಿತರಾಗಿದ್ದರು. ನನ್ನ ಬಗ್ಗೆ ಅವರಿಗೆ ಬಹಳ ಭಕ್ತಿ ನಾನು ಏನು ಹೇಳಿದರೂ ತಕ್ಷಣ ಮಾಡುತ್ತಿದ್ದರು. ಹಾಗೆಯೇ ಸಂಘದ ವ್ಯವಸ್ಥೆಯನ್ನು ಭಕ್ತಿಯಿಂದ ಮಾಡುತ್ತಿದ್ದರು.

ಮಾರ್ಗದಲ್ಲಿ ಬ್ರಹ್ಮಚಾರಿ ಮತ್ತು ಬ್ರಹ್ಮಚಾರಿಣಿಯರ ಭಕ್ತಿ

ರಸ್ತೆಯಲ್ಲಿ ಎಲ್ಲಾ ಬ್ರಹ್ಮಚಾರಿಗಳು, ಬ್ರಹ್ಮಚಾರಿಣಿಯರು ಶ್ರಾವಕ ಮತ್ತು ಶ್ರಾವಿಕೆಯರು ತಮ್ಮ ಕೈಯಿಂದಲೇ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದರು. ಮಹಿಳೆಯರು ಹಿಟ್ಟು ಬೀಸುವುದು, ನೀರು ತುಂಬುವುದು, ಆಹಾರದ ನಂತರ ಪಾತ್ರೆಗಳನ್ನು ತೊಳೆಯುತ್ತಿದ್ದರು. ಆಗ ಯಾವ ಕೆಲಸಗಾರರು ಸಂಘದಲ್ಲಿ ಇರುತ್ತಿರಲಿಲ್ಲ. ಕೆಲವು ಕಡೆ ನೀರನ್ನು ಮೈಲಿ ದೂರದಿಂದ ತರಬೇಕಾಗುತ್ತಿತ್ತು ಅದೂ ತಲೆಯ ಮೇಲೆ ಹಾಗೂ ಕಂಕುಳಲ್ಲಿ ಹೊತ್ತು ತರುತ್ತಿದ್ದರು ಚಳಿಗಾಲದಲ್ಲಿ ನೀರು ತರುವಾಗ ಕಾಲುಗಳೆಲ್ಲಾ ಮರಗಟ್ಟಿ ಹೋಗುತ್ತಿದ್ದವು. ಅವರು ಒಲೆಗಳ ಮುಂದೆ ಕಾಲನ್ನು ಕಾಯಿಸಿಕೊಳ್ಳುವುದನ್ನು ನಾವು ನೋಡುತ್ತಿದ್ದೆವು.

ಕೆಲವುಸಲ ಸೇಠ್ ಹೀರಾಲಾಲರೇ ನೀರನ್ನುತರಲು ಮುಂದೆ ಹೋಗುತ್ತಿದ್ದರು. ಇನ್ನು ಬ್ರಹ್ಮಚಾರಿಗಳು ಇನ್ನೇನು ಮಾಡಲಾಗುತ್ತದೆ. ಚಳಿಗಾಲದಲ್ಲಿ ಬಟ್ಟೆಗಳು ಸರಿಯಾಗಿ ಒಣಗುತ್ತಿರಲಿಲ್ಲ. ಅರ್ಧಂಬರ್ಧ ಒದ್ದೆಯನ್ನೇ ಉಟ್ಟು ಚೌಕ ಮಾಡುತ್ತಿದ್ದರು. ಚಳಿಗಾಲದಲ್ಲಂತೂ ಇದು ಬಹಳ ಕಷ್ಟದಾಯಕವಾಗುತ್ತಿತ್ತು.

ಒಂದು ದಿನ ಯಾವುದೋ ಪರ್ವತವಿತ್ತು ಭಗವಂತರಿಗೆ ಅಭಿಷೇಕದ ಸಮಯ ಇಬ್ಬರು ಮೂವರು ಬ್ರಹ್ಮಚಾರಿಣಿಯರು ನಿತ್ಯದಂತೆ ಬಂದು ಕಳಸದಿಂದ ಅಭಿಷೇಕ ಮಾಡಿ ಬೇಗ ಬೇಗ ಅರ್ಘ್ಯವೆತ್ತಿ ಓಡಿದರು. ಆಗ ಒಬ್ಬ ಮಾತಾಜೀ ಬಂದು ಹೇ ಬಾಯಿಜಿ ಪೂಜೆ ಸರಿಯಾಗಿ ಮಾಡಿ, ಕಳಸ, ಬಗ್ಗಿಸಿ ಅರ್ಘ್ಯವೆತ್ತಿ ಓಡುತ್ತಿದ್ದೀರಲ್ಲ ಎಂದರು. ಅದಕ್ಕೆ ಒಬ್ಬ ತಿಳುವಳಿಕೆಯುಳ್ಳ ಬ್ರಹ್ಮಚಾರಿಣಿ ಹೇಳಿದರು. ಮಾತಾಜೀ ಗುರುಗಳಿಗೆ ಆಹಾರ ನೀಡುವುದೆ ನಮಗೆ ಈಗ ದೊಡ್ಡ ಪೂಜೆಯಾಗಿದೆ. ಮುನಿಗಳು ಎರಡು ಹೊತ್ತು ನಡೆದು ಬರುತ್ತಿದ್ದಾರೆ. ಅವರಿಗೆ ಅಂತರಾಯವಿಲ್ಲದಂತೆ ಆಹಾರ ನೀಡುವುದೇ ನಮಗೆ ಪೂಜೆಯಾಗಿದೆ. ಇದಕ್ಕಿಂತಲೂ ದೊಡ್ಡ ಪೂಜೆ ಇನ್ನಾವುದು ಎಂದರು. ನಿಜವಾಗಿ ಆ ಬಾಯಿಜೀ ರಾತ್ರಿ ಮೂರುಗಂಟೆಗೆ ಎದ್ದು ಸ್ತೋತ್ರ ಪಾಠ ಸಾಮಾಯಿಕ ಮಾಡಿ ಕೆಲಸದಲ್ಲಿ ತೊಡಗಿಕೊಂಡಿದ್ದರು. ಒಬ್ಬೊಬ್ಬರು ಒಂದೊಂದು ಚೌಕದಲ್ಲಿ ಆಹಾರ ಕೊಟ್ಟು ಬ್ರಹ್ಮಚಾರಿಣಿಗಳಿಗೆ ಆಹಾರ ಆದ ಮೇಲೆ ಅವರು ಊಟ ಮಾಡುತ್ತಿದ್ದರು.

ಆ ಬಾಯಿಜೀಯ ಉತ್ತರ ಕೇಳಿ ನನಗೆ ಮಹಾಪುರಾಣದ ಪಂಕ್ತಿಗಳು ನೆನಪಿಗೆ ಬಂದಿತು. ಆರ್ಹಂತ ಭಗವಂತರ ಪೂಜೆಯಲ್ಲಿ ನಾಲ್ಕು ಭೇದಗಳಿವೆ. ಸದಾರ್ಚನ, (ನಿತ್ಯಮಹ) ಚತುರ್ಮುಖ, ಕಲ್ಪದ್ರಮ ಮತ್ತು ಅಷ್ಟಾಹ್ನಿಕ. ಪ್ರತಿದಿನ ತನ್ನ ಮನೆಯಿಂದ ಗಂಧ, ಅಕ್ಷತೆ ಪುಷ್ಪ ತೆಗೆದುಕೊಂಡು ಹೋಗಿ ಜಿನಮಂದಿರದಲ್ಲಿ ಜಿನೇಂದ್ರ ದೇವರಪೂಜೆ ಮಾಡುವುದು. ಸದಾರ್ಚನ, ನಿತ್ಯಮಹವೆಂದು ಕರೆಯುತ್ತಾರೆ. ಹಾಗೇ ಭಕ್ತಿಪೂರ್ವಕವಾಗಿ ಅರ್ಹಂತರ ಪ್ರತಿಮೆಯನ್ನು ಮಂದಿರವನ್ನು ಕಲ್ಪಿಸುವುದು ದಾನಪತ್ರವನ್ನು ಬರೆಸಿ ಹಳ್ಳಿ, ಗದ್ದೆ ಮುಂತಾದವನ್ನು ನಿತ್ಯಮಹವೆಂದು ಕರೆಯುತ್ತಾರೆ. ಅದಲ್ಲದೆ ತನ್ನ ಶಕ್ತಿಯಿಂದ ನಿತ್ಯ ಮಹಾಮುನಿಗಳಿಗೆ ಆಹಾರ ದಾನಾದಿಗಳನ್ನು ಮಾಡುವುದು ಸಹ ನಿತ್ಯಮಹವೆಂದು ಕರೆಯತ್ತಾರೆ. ಹಾಗೇ

ಯಾ ಚ ಪೂಜಾ ಮುನೀಂದ್ರಾಣಾಂ ನಿತ್ಯ ದಾನಾನು ಷಂಗಿಣೇ ।
ಸ ಚ ನಿತ್ಯಮಹೋಜ್ಞೇಯೋ ಯಥಾ ಶಕ್ತ್ಯುಪ ಕಲ್ಪಿತಃ ॥೨೯॥

ಆಚಾರ್ಯ ದೇಶಭೂಷಣರು ಹೇಳುತ್ತಿದ್ದರು. ಭಗವಂತರಿಗೆ ಪೂಜೆ ಮಾಡುವುದರಿಂದ ಪೂಜಾರಿಗೆ ಮಾತ್ರ ಲಾಭ ಭಗವಂತರಿಗೆ ಅಲ್ಲ, ಏಕೆಂದರೆ ಅವರಾದರೂ ಮೊದಲೇ ಕೃತಕೃತ್ಯ ಸಿದ್ಧರಾಗಿಹೋಗಿದ್ದಾರೆ. ಆದರೆ ಮುನಿಗಳಿಗೆ ಆಹಾರದಾನ ಮಾಡುವುದರಿಂದ ಇಬ್ಬರಿಗೂ ಲಾಭ ಮುನಿಗಳು ಶರೀರದಿಂದ ರತ್ನತ್ರಯ ಸಾಧನೆ ಮಾಡಿ ಮುಕ್ತಿಯನ್ನು ಪಡೆಯುತ್ತಾರೆ. ಅದು ಒಂದು ಉಪಕಾರವಾಯಿತು, ಇನ್ನು ಆಹಾರ ದಾನ ಮಾಡಿದವರಿಗಂತೂ ಪುಣ್ಯದಿಂದ ಮಹಾನ್ ಅಭ್ಯುದಯ. ಅದರಿಂದ ಮುಕ್ತಿ ಪ್ರಾಪ್ತವಾಗುತ್ತದೆ. ಇನ್ನೊಂದು ವಿಷಯವೇನೆಂದರೆ ಮುನಿಗಳಿಗೆ ಆಹಾರ ದಾನ ಕೊಡದೇ ಮುಕ್ತಿ ಪ್ರಾಪ್ತವಾಗಲಾರದು. ಮೂರನೆಯದು ಧರ್ಮದ ವಿಷಯ ಮುನಿಧರ್ಮ ಮತ್ತು ಶ್ರಾವಕ ಧರ್ಮ ಮುನಿಗಳು ಆಹಾರ ತೆಗೆದುಕೊಳ್ಳುತ್ತಾರೆ ಶ್ರಾವಕರು ಆಹಾರ ಕೊಡುತ್ತಾರೆ. ಶ್ರಾವಕರು ಸಪ್ತಮ ಪ್ರತಿಮಾಧಾರಿಗಳವರೆಗೆ ಆಹಾರ ಕೊಡುತ್ತಾರೆ. ಒಂದು ವೇಳೆ ಕೊಡದೇ ಇದ್ದರೆ ಅವರು ಮುನಿಗಳು ಆಗಲಾರರು. ಇತ್ತ ಶ್ರಾವಕರೂ ಆಗಲಾರರು. ಎರಡು ಪದವಿಗಳಿಂದಲೂ ಭ್ರಷ್ಟರಾಗಿ ಇತೋ ಭ್ರಷ್ಟ, ತತೋ ಭ್ರಷ್ಟರಾಗುತ್ತಾರೆ.

ಹೀಗೆ ಸಂಘದಲ್ಲಿ ಬ್ರಹ್ಮಚಾರಿಣಿಯರು ಆಹಾರದಾನದಲ್ಲಿ ತೋರಿಸುತ್ತಿದ್ದ ಭಕ್ತಿಯನ್ನು ನೋಡಿದಾಗ ನಾನು ಮನದಲ್ಲೇ ಅವರ ಗುಣಗಳನ್ನು ಪ್ರಶಂಸಿಸುತ್ತಾ ಅವರ ಬಗ್ಗೆ ವಾತ್ಸಲ್ಯ ಭಾವವನ್ನು ತಾಳುತ್ತಿದ್ದೆ.. ಕೆಲವು ಸಲ ಬ್ರ. ಸೂರಜಮಲ್ಲಜೀ, ಕಜೋಡ ಮಲ್ಲಜೀ, ರಾಜಮಲ್ಲಜೀ, ಮುಂತಾದವರು ಚೌಕಗಳಲ್ಲಿ ಭಕ್ತಿಯಿಂದ ಆಹಾರ ದಾನ ಮಾಡುತ್ತಿದ್ದರು. ಹೀಗೆ ಸಂಘದಲ್ಲಿದ್ದ ಬ್ರಹ್ಮಚಾರಿ, ಬ್ರಹ್ಮಚಾರಿಣಿಯರು ಸಂಘದ ವ್ಯವಸ್ಥೆಯಲ್ಲಿ ಭಕ್ತಿಭಾವವನ್ನು ತೋರುತ್ತಿದ್ದರು.

ಬ್ಯಾವರಕ್ಕೆ ಆಗಮನ

ಹೀಗೆ ನಿರ್ವಾಣ ಕ್ಷೇತ್ರದ ವಂದನೆಯನ್ನು ಮಾಡಿ ವಿಹಾರ ಮಾಡುತ್ತಾ ಸುಖವಾಗಿ ಬ್ಯಾವರಕ್ಕೆ ತಲುಪಿದೆವು. ಇಲ್ಲಿಯ ಜೈನ ಸಮಾಜವು ಸಂಘವನ್ನು ಚೆನ್ನಾಗಿ ಸ್ವಾಗತಿಸಿತು. ಆಚಾರ್ಯರು ಎಲ್ಲ ಮುನಿಗಳೊಂದಿಗೆ ಇಲ್ಲಿ ಚಂಪಾಲಾಲರ 'ನಶಿಯಾ' ದಲ್ಲಿ ತಂಗಿದ್ದರು, ಶ್ರೀ ಐಲಕ ಪನ್ನಾಲಾಲರ ಸರಸ್ವತಿ ಮಂದಿರದಲ್ಲಿ ಆರ್ಯಿಕೆಯರು ತಂಗಿದ್ದೆವು ಸಂಘದಲ್ಲಿ ಸ್ವಾಧ್ಯಾಯವು ಯಥಾವತ್ತಾಗಿ ನಡೆಯುತ್ತಿತ್ತು.

---

೧. ಆದಿಪುರಾಣ ಪರ್ವ ೯೮

೨೭

ಸ್ವಾಧ್ಯಾಯದ ಪ್ರಾರಂಭ

ಆಚಾರ್ಯರಿಂದ ಅನುಮತಿಯನ್ನು ಪಡೆದು ನಾವು ಬ್ಯಾವರದಲ್ಲಿ ಶ್ರುತ ಪಂಚಮಿಯ ಆಚರಣೆಯನ್ನು ಮಾಡಿ ಪ್ರಾತಃಕಾಲದಲ್ಲಿ ರಾಜವಾರ್ತಿಕದ ದ್ವಿತೀಯ ಅಧ್ಯಾಯದ ಸ್ವಾಧ್ಯಾಯವನ್ನು ಪ್ರಾರಂಭಿಸಿದೆ. ಮೊದಲನೆಯ ಚಾತುರ್ಮಾಸದಲ್ಲಿ ಮಹಾವೀರಕೀರ್ತಿಗಳ ಹತ್ತಿರ ರಾಜವಾರ್ತಿಕದ ಮೊದಲನೆಯ ಅಧ್ಯಾಯದ ವಾಚನವಾಗಿತ್ತು. ಆದ್ದರಿಂದ ಈಗ ಎರಡನೆಯ ಅಧ್ಯಾಯವನ್ನು ಪ್ರಾರಂಭಿಸಿದೆ.

ಈ ಸ್ವಾಧ್ಯಾಯದಲ್ಲಿ ಬ್ರ. ರಾಜಮಲ್ಲಜೀ ಮತ್ತು ಕ್ಷುಲ್ಲಿಕಾ ಜಿನಮತಿಯರು ಅಧ್ಯಯನ ಮಾಡುತ್ತಿದ್ದರು. ಎಲ್ಲರು ಕೇಳುವ ಉದ್ದೇಶದಿಂದ ಕುಳಿತುಕೊಳ್ಳುತ್ತಿದ್ದರು. ಮತ್ತು ನನ್ನ ಅಧ್ಯಯನ ಶೈಲಿಯನ್ನು ನೋಡಿ ಮೆಚ್ಚುತ್ತಿದ್ದರು. ಸರಸ್ವತಿ ಮಂದಿರದಲ್ಲಿ ಸ್ವಾಧ್ಯಾಯ ನಡೆಯುತ್ತಿತ್ತು. ಬೆಳಗ್ಗೆ ಎಂಟರಿಂದ ಒಂಬತ್ತು ಗಂಟೆಯವರೆಗೆ ತತ್ತ್ವಾರ್ಥ ರಾಜವಾರ್ತಿಕದ ಅಧ್ಯಯನ ನಡೆಯುತ್ತಿತ್ತು. ಅರ್ಧ ಗಂಟೆಯ ನಂತರ ಬ್ರ. ರಾಜಮಲ್ಲಜೀ ಅಥವಾ ಜಿನಮತಿಯರು ಗೊಮ್ಮಟಸಾರದ ಕರ್ಮಕಾಂಡವನ್ನು ಓದುತ್ತಿದ್ದು ೇವುಗಳ ಮೂರು-ನಾಲ್ಕು ಗಾಥೆಗಳನ್ನು ಬಾಯಿಪಾಠ ಮಾಡೇ ಮಲಗುತ್ತಿದ್ದೆ. ಬ್ಯಾವರದ ಜನರು ಚಾತುರ್ಮಾಸವು ಅಲ್ಲಿಯೇ ಮಾಡಲು ಬಯಸಿದರು. ಅಜಮೇರದಿಂದ ಭಾಗಚಂದ ಸೇಠರು ಚಾತುರ್ಮಾಸಕ್ಕೆ ನಿಲ್ಲಲು ಶ್ರೀಫಲ ತಂದು ಪ್ರಾರ್ಥಿಸಿದರು. ಆದರೆ ಬ್ಯಾವರದ ಚಂಪಾಲಾಲರ ಭಕ್ತಿಯನ್ನು ನೋಡಿದ ಆಚಾರ್ಯರು ಆ ವರ್ಷದ ಚಾತುರ್ಮಾಸಕ್ಕೆ ಅಲ್ಲಿಯೇ ನಿಲ್ಲಲು ಸಮ್ಮತಿಸಿದರು.

ಆರ್ಯಿಕೆ ಚಂದ್ರಮತಿಯ ಧರ್ಮಪ್ರೇಮ

ಆರ್ಯಿಕೆ ಚಂದ್ರಮತಿ ಮಾತಾಜೀ ನನ್ನ ಜ್ಞಾನದ ಬಗ್ಗೆ ಬಹಳ ಪ್ರಸನ್ನರಾಗಿದ್ದರು. ನನ್ನ ನಡವಳಿಕೆ, ಸರಳತೆಯ ಬಗ್ಗೆ ಬಹಳ ಮೆಚ್ಚುಗೆಯನ್ನು ವ್ಯಕ್ತ ಪಡಿಸುತ್ತಿದ್ದರು. ಒಮ್ಮೆ ಅವರು ನಿಮ್ಮ ತಂದೆ, ತಾಯಿಗಳು ನಿಮ್ಮನ್ನು ದರ್ಶನ ಮಾಡಲು ಏಕೆ ಬಂದಿಲ್ಲ ಎಂದು ಮತ್ತೆ ಮತ್ತೆ ಕೇಳುತ್ತಿದ್ದರು. ಅದಕ್ಕೆ ನಾನು ಅವರಿಗೆ ನಾನು ಎಲ್ಲಿದ್ದೇನೆ ಎಂದು ಗೊತ್ತಿಲ್ಲವೆಂದೆ ಚಂದ್ರಮತಿ ಮಾತಾಡುತ್ತಾ ನನ್ನ ವಿಳಾಸವನ್ನು ಕೇಳಿ ತಿಳಿದುಕೊಂಡು ನನಗೆ ಗೊತ್ತಿಲ್ಲದೆ ಮನೆಗೆ ಪತ್ರ ಬರೆದು ಹಾಕಿದ್ದರು. ಪತ್ರ ಟಿಕೈತ ನಗರಕ್ಕೆ ತಲುಪುತ್ತಲೆ ತಂದೆ ಪತ್ರ ಹಿಡಿದು ಕಣ್ಣೀರು ಹಾಕುತ್ತಾ ಮನೆಗೆ ಹೋಗಿ ಪತ್ರ ಓದಿದರು.

ಶ್ರೀಮಾನ್ ಛೋಟೇಲಾಲ ಸೇಠರಿಗೆ ಸದ್ಧರ್ಮ ವೃದ್ಧಿ ರಸ್ತು ಇಲ್ಲಿ ಬ್ಯಾವರದಲ್ಲಿ ಆಚಾರ್ಯ ಶಿವಸಾಗರ ಮಹಾರಾಜರು ದೊಡ್ಡ ಸಂಘದೊಡನೆ ಚಾತುರ್ಮಾಸವನ್ನು ಆಚರಿಸುತ್ತಿದ್ದಾರೆ. ಈ ಸಂಘದಲ್ಲಿಯೇ ತಮ್ಮ ಪುತ್ರಿ ಆರ್ಯಿಕೆ ಜ್ಞಾನಮತಿ ಮಾತಾಜೀಯವರು ವಿರಾಜಮಾನರಾಗಿದ್ದಾರೆ. ನನ್ನ ಹೆಸರು ಆರ್ಯಿಕೆ ಚಂದ್ರಮತಿ. ನಾನು ಸಂಘದಲ್ಲಿ ಅವರ ಜೊತೆಯಲ್ಲೆ ಅನೇಕ ದುರ್ಲಭ ಗ್ರಂಥಗಳ ಸ್ವಾಧ್ಯಾಯ ಮಾಡುತ್ತಿದ್ದೇನೆ ನಾನು ಈ ಪತ್ರವನ್ನು ಧರ್ಮ ಪ್ರೇಮದಿಂದ ಬರೆಯುತ್ತಿದ್ದೇನೆ. ತಾವು ಇಲ್ಲಿಬಂದು ತಮ್ಮ ಮಗಳ ದರ್ಶನವನ್ನು ಮಾಡಿ ಅವರ ಜ್ಞಾನ ಮತ್ತು ಚಾರಿತ್ರವನ್ನು ನೋಡಿ ತಾವು ಕೂಡ ಸಂತೋಷಿಸುವ ಸಲುವಾಗಿ ತಾವು ಇಲ್ಲಿಗೆ ದಯಮಾಡಿಸಬೇಕು. ತಮಗೆಲ್ಲರಿಗೂ ನನ್ನ ಆಶೀರ್ವಾದಗಳು. ಇಂತಹ ಕನ್ಯಾರತ್ನಕ್ಕೆ ಜನ್ಮ ನೀಡಿದ ನಿಮ್ಮ ಜೀವನವು ಸಫಲತೆಯನ್ನು ಪಡೆದಿದೆ. ಹೀಗೆ ಪತ್ರ ಬರೆದು ಹಾಕಿದ್ದರು.

ಪತ್ರ ನೋಡಿದ ಮನೆಯವರಿಗೆಲ್ಲರಿಗೂ ತಮ್ಮ ಪುತ್ರಿ ಮೈನಾಳೇ ಈಗ ಜ್ಞಾನಮತಿಯಾಗಿ ಈಗ ಶಿವಸಾಗರರ ದೊಡ್ಡ ಸಂಘದಲ್ಲಿ ಇದ್ದಾಳೆ ಎಂದು. ಆ ಸಮಯದಲ್ಲಿ ಪತ್ರಿಕೆಗಳಲ್ಲಿ ಸಾಧುಗಳ ಚಾತುರ್ಮಾಸದ ವಿವರಣೆ ಬರುತ್ತಿರಲಿಲ್ಲ. ಬಂದಿದ್ದರೂ ಜನ ಆ ವಿಷಯದ ಕಡೆ ಗಮನ ಕೊಡುತ್ತಿರಲಿಲ್ಲ. ಹೀಗಾಗಿ ಇಷ್ಟು ವರ್ಷ ನಾನು ಎಲ್ಲಿದ್ದೆ ಎಂಬುದು ಮನೆಯವರಿಗೆ ತಿಳಿದಿರಲಿಲ್ಲ. ಮಗಳ ಜ್ಞಾನ ಮತ್ತು ಚಾರಿತ್ರದ ವೃದ್ಧಿಯನ್ನು ಕೇಳಿದ ಅಮ್ಮನ ಮನಸ್ಸು ಸಂತೋಷದಿಂದ ಅರಳಿತು. ಅವರ ನೆನಪಿನಲ್ಲಿ ನನ್ನ ಹಳೆಯ ಮಾತುಗಳು ನೆನಪಿಗೆ ಬಂದಿರಬೇಕು ಅಮ್ಮನಿಗೆ ಮಮತೆಯ ಸೆಳತವನ್ನು ಹಿಡಿದಿಡಲಾಗಲಿಲ್ಲ. ಕಣ್ಣು ತುಂಬಿ ಬಂದಿತು. ನಾನು ಬೇಗನೆ ಹೋಗಿ ದರ್ಶನ ಮಾಡಬೇಕೆಂದು ಚಡಪಡಿಸ ತೊಡಗಿದರು.

ತಂದೆಗೆ ಬ್ಯಾವರಕ್ಕೆ ಹೊರಡಲು ಆಗ್ರಹ ಪಡಿಸತೊಡಗಿದರು. ಆದರೆ ತಂದೆಗೆ ತಕ್ಷಣ ಹೊರಡಲು ಹಿಂಜರಿಕೆ ಅದಕ್ಕೆ ಅವರು ಮೊದಲು ಕೈಲಾಸನನ್ನು ಕಳುಹಿಸೋಣ. ಅವನು ಅಲ್ಲಿಯ ಪರಿಸ್ಥಿತಿಯನ್ನು ನೋಡಿ ಬಂದು ಹೇಳಿದ ಮೇಲೆ ನಾವು ಹೋಗೋಣ ಎಂದು ಹೇಳಿದರು. ಅವರಿಗೂ ನನ್ನನ್ನು ನೋಡಬೇಕೆಂಬ ಆಸೆ ಗರಿಕೆದರಿತ್ತು.

ಮನೋವತಿಯ ಮನೋಭಾವ

ನಾನು ದರ್ಶನ ಕಥೆಗಳನ್ನು ಓದಿ ಪ್ರೀತಿಯಿಂದ ಒಬ್ಬ ಸಹೋದರಿಗೆ "ಮನೋವತಿ" ಎಂದು ಹೆಸರಿಟ್ಟಿದ್ದೆ. ಮನೋವತಿ ವರ್ಷಗಳಿಂದ ಮೈನಾದೀದೀಯನ್ನು ತೋರಿಸಿ ನಾನು ಅವಳ ಹತ್ತಿರ ಹೋಗಬೇಕೆಂದು ಕೇಳುತ್ತಿದ್ದಳಂತೆ. ಅವಳು ನನ್ನನ್ನು ಎಷ್ಟು ಹಚ್ಚಿಕೊಂಡಿದ್ದಳೆಂದರೆ ಊರಿಗೆ ಯಾರೇ ಮುನಿಗಳು ಬ್ರಹ್ಮಚಾರಿಗಳು ಅಥವಾ ಪಂಡಿತರು ಬಂದರು ಸಾಕು ಅವರ ಹತ್ತಿರ ಹೋಗಿ ಸಮಯ ನೋಡಿಕೊಂಡು ತನ್ನ ಕೈ ತೋರಿಸಿ, ನಿಮಗೆ ಕೈ ನೋಡಲು ಬರುತ್ತದೆಯೇ ನೋಡಿ ಹೇಳಿ ನಾನು ನಮ್ಮ ಅಕ್ಕನನ್ನು ಯಾವಾಗ ನೋಡುತ್ತೇನೆ. ನನ್ನ ಅದೃಷ್ಟದಲ್ಲಿ ದೀಕ್ಷೆ ಬರೆದಿದೆಯಾ ಇಲ್ಲವೋ ನೋಡಿ ಹೇಳಿ ಎಂದು ಕೇಳುತ್ತಿದ್ದಳಂತೆ. ಅಮ್ಮನಿಗೆ ಈ ವಿಷಯ ಗೊತ್ತಾಗಿ ಬೈಯುತ್ತಿದ್ದರಂತೆ. ಅವರಿಗೆ ಈ ರೀತಿ ಕೈ ತೋರಿಸುವುದುಇಷ್ಟವಾಗುತ್ತಿರಲಿಲ್ಲ.

ಅವಳಿಗೆ ಪತ್ರದ ಮೂಲಕ ನಾನು ಎಲ್ಲಿರುವುದೆಂದು ಗೊತ್ತಾಗುತ್ತಲೇ ಓಡಿ ಬಂದು ಪತ್ರ ಕಿತ್ತುಕೊಂಡಳಂತೆ ಅವಳು ಯೋಚಿಸಿರಬೇಕು, ಬಹುಶಃ ನನ್ನ ಪುಣ್ಯದ ಉದಯವಾಗಿರಬೇಕು. ಈಗ ನಾನು ಅಮ್ಮನ ಜೊತೆ ಖಂಡಿತಾ ಹೋಗಬಹುದೆಂದು ಲೆಕ್ಕಾಚಾರ ಹಾಕಿದ್ದಳು. ಆದರೆ ಅವಳ ಅಂತರಾಯ ಕರ್ಮ ಉದಯಕ್ಕೆ ಬಂದಿತ್ತು. ಬಹುಶಃ ಇವಳ ಕಾರಣದಿಂದಲೇ ತಂದೆ ಬ್ಯಾವರಕ್ಕೆ ಬರುವ ಕಾರ್ಯಕ್ರಮವನ್ನು ಒಪ್ಪಿಕೊಳ್ಳತ್ತಿರಲಿಲ್ಲ. ನಾನು ಹೊರಟರೆ ಅಮ್ಮನ ಜೊತೆ ಅವಳು ಹೊರಟೇ ಹೊರಡುತ್ತಾಳೆ. ಇನ್ನು ಅಲ್ಲಿ ಅಕ್ಕನನ್ನು ನೋಡಿದ ಅವಳು ಅಲ್ಲೇ ಇದ್ದರೂ ಆಯಿತು. ದೀಕ್ಷೆ ತೆಗೆದುಕೊಂಡರೂ ಆಯಿತು. ಹೀಗೆ ಮಕ್ಕಳ ವಿಯೋಗ ಅವರಿಗೆ ಭಯವನ್ನು ತಂದಿತು. ತಾಯಿ ಮೋಹಿನಿಯ ಹೃದಯವಂತೂ ಚಡಪಡಿಸ ತೊಡಗಿತು. ಅದರ ಜೊತೆ ಮನೋವತಿಯು ಹೋಗಲೇಬೇಕೆಂದು ಅಳತೊಡಗಿದಳು. ಆದರೆ ಏನು ಮಾಡುವುದು, ಅಮ್ಮ ಮಗಳು ಇಬ್ಬರು ತಮ್ಮ ಅಸಹಾಯಕತೆಯ ಬಗ್ಗೆ ಮರುಗತೊಡಗಿದರು. ಹಾಗೂ ಮಗಳಿಗೆ ಸಮಾಧಾನ ಮಾಡುತ್ತಿದ್ದರು. ಮಗಳೇ ಅಳಬೇಡ ಧೈರ್ಯ ತಂದುಕೋ ನಾನು ಒಂದಲ್ಲ ಒಂದು ದಿನ ನಿನಗೆ ಮಾತಾಜೀಯ ದರ್ಶನ ಮಾಡಿಸಿಯೇ ಮಾಡುತ್ತೇನೆ. ತಂದೆಯ ಮಾತಿನಂತೆ ಕೈಲಾಸಚಂದ್ರ ತನ್ನ ತಮ್ಮ ಸುಭಾಷಚಂದ್ರನನ್ನು ಕರೆದುಕೊಂಡು ಬ್ಯಾವರಕ್ಕೆ ಹೊರಟನು.

ಕೈಲಾಸ, ಸುಭಾಸರ ಸಂಘದ ದರ್ಶನ

ಸರಸ್ವತೀ ಭವನದ ತಾರಸಿಯ ಮೇಲೆ ನಾನು ತತ್ತ್ವಾರ್ಥ ರಾಜವಾರ್ತಿಕದ ಸ್ವಾಧ್ಯಾಯವನ್ನು ಮಾಡುತ್ತಿದ್ದೆ. ಹತ್ತಿರದಲ್ಲೇ ಆರ್ಯಿಕೆ ಸುಮತೀಮತೀ, ಸಿದ್ಧಮತೀ, ಚಂದ್ರಮತೀ, ಪದ್ಮಾವತೀ ಮಾತಾಜೀಯವರು ಕ್ಷುಲ್ಲಿಕೆ ಜಿನಮತಿಗೆ ಕುಳಿತು ತನ್ಮಯತೆಯಿಂದ ಅರ್ಥವನ್ನು ತಿಳಿದುಕೊಳ್ಳುತ್ತಿದ್ದರು. ಬ್ರ. ರಾಜಮಲ್ಲಜೀ ರಾಜವಾರ್ತಿಕದ ಸಾಲುಗಳ ಅರ್ಥವನ್ನು ನೋಡುತ್ತಿದ್ದರು. ಆ ಸಮಯದಲ್ಲಿ ಇಬ್ಬರು ಯಾತ್ರಿಕರು ಬಂದು ನಮಸ್ಕರಿಸಿ ಅಲ್ಲೇ ಕುಳಿತರು. ಅವರ ಕಣ್ಣುಗಳಲ್ಲಿ ನೀರು ಹರಿಯುತ್ತಿತ್ತು. ಮೊದಲು ಯಾರೂ ಗಮನ ಕೊಡಲಿಲ್ಲ ಆದರೆ ಬಿಕ್ಕಳಿಕೆಯ ಶಬ್ದ ಕೇಳಿ ಎಲ್ಲ ಅತ್ತ ತಿರುಗಿದರು. ಯಾರೋ ಅವರನ್ನು ಕೇಳಿದರು, ನೀವು ಯಾರು ಏತಕ್ಕೆ ಅಳುತ್ತೀದ್ದೀರಿ. ಆಗ ನಾನು ಕತ್ತು ಎತ್ತಿ ನೋಡಿ ಕೇಳಿದೆ, ತಾವು ಎಲ್ಲಿಂದ ಬರುತ್ತೀದ್ದೀರ. ಆಗ ದೊಡ್ಡ ತಮ್ಮ ಹೇಗೋ ಕಣ್ಣೀರು ತಡೆದುಕೊಂಡು ಟಿಕೈತನಗರದಿಂದ ಎಂದ. ಆಗ ನಾನು ನೀನು ಯಾರ ಮಗನಪ್ಪ ನಿನ್ನ ಹೆಸರೇನು ಎಂದು ಕೇಳಿದೆ. ಅದಕ್ಕೆ ಅವರು ಛೋಟೆಲಾಲರ ಮಗ ನನ್ನ ಹೆಸರು ಕೈಲಾಸ ಚಂದ್ರ ಎಂದರು. ಇಷ್ಟು ಹೇಳಿದ ಅವರು ಇನ್ನೂ ಜೋರಾಗಿ ಬಿಕ್ಕಲು ಪ್ರಾರಂಭಿಸಿದರು. ಆಗ ಒಳಗೆ ಬಂದು ಪಂಡಿತ ಪನ್ನಾಲಾಲರು ತಕ್ಷಣ ಅವರ ಕೈ ಹಿಡಿದು ಕಣ್ಣೀರೊರೆಸುತ್ತಾ ಹೇಳಿದರು. ಆಯ್ಯಾ ನೀವೇಕೆ ಅಳುತ್ತಿದ್ದೀರಿ ಎಂದವರಿಗೆ ಆಮೇಲೆ ಗೊತ್ತಾಯಿತು ಅವರಿಬ್ಬರು ಜ್ಞಾನಮತಿ ಮಾತಾಜೀಯವರ ಪೂರ್ವಾಶ್ರಮದ ಸಹೋದರರೆಂದು ಅಲ್ಲಿಯೇ ಇದ್ದ ಚಂದ್ರಮತೀ ಮಾತಾಜೀಯವರು ಅವರಿಬ್ಬರಿಗೂ ಸಾಂತ್ವನ ಹೇಳಿದರು. ನಿಮ್ಮ ಸಹೋದರಿ ಇಂದು ಶ್ರೇಷ್ಠ ಆರ್ಯಿಕೆಯಾಗಿದ್ದಾರೆ. ಅವರನ್ನು ನೋಡಿ ಖುಷಿ ಪಡಬೇಕೇ ಹೊರತು ಅಳಬಾರದು.

ಎಲ್ಲರೂ ಸಮಾಧಾನ ಮಾಡಿದ್ದರಿಂದ ಅವರು ಶಾಂತವಾದರು. ಅವರಿಗೆ ದುಃಖವಾಗಿದ್ದು ತಮ್ಮನ್ನು ಮಡಿಲಲ್ಲಿ ಆಡಿಸಿದ ಪ್ರೀತಿಯ ಅಕ್ಕನೇ ತಮ್ಮನ್ನು ಗುರುತಿಸುತ್ತಿಲ್ಲವೆಂದು ಪಂಡಿತ ಪನ್ನಾಲಾಲರು ಹೇಳತೊಡಗಿದರು. ಅರೇ ನೋಡಿ ವೈರಾಗ್ಯದ ಮಹಿಮೆಯನ್ನು ಮಾತಾಜೀ ಜ್ಞಾನಾಭ್ಯಾಸದಲ್ಲಿ ಎಷ್ಟು ಲೀನವಾಗಿದ್ದಾರೆಂದರೇ ತಮ್ಮ ಸಹೋದರರನ್ನು ಗುರುತಿಸುತ್ತಿಲ್ಲ. ಪಂಡಿತರು ಇಬ್ಬರು ಸಹೋದರರನ್ನು ತಮ್ಮ ಮನೆಗೆ ಕರದೊಯ್ದರು. ಇಬ್ಬರು ಸಹೋದರರಿಗೆ ಅದೇ ಆಶ್ಚರ್ಯ ಒಂದು ಕಡೆ, ದುಃಖ ಒಂದು ಕಡೆ ಮಾತಾಜೀ ನಮ್ಮನ್ನೆಲ್ಲಾ ಮರೆತೇ ಬಿಟ್ಟಿದ್ದಾರಲ್ಲ ಎಂದು.

ಅದಕ್ಕೆ ಪಂಡಿತರು ಹೇಳಿದರು, ತಮ್ಮಾ ದುಃಖಪಡಬೇಡ ಜ್ಞಾನಾರಾಧನೆಯೇ ಹಾಗೇ ಅವರ ಅಧ್ಯಯನವನ್ನು ನೋಡಿ ನಾನೇ ಸೋತಿದ್ದೇನೆ. ದಿನವೆಲ್ಲ ಅಧ್ಯಯನದಲ್ಲೇ ಕಳೆಯುತ್ತಾರೆ. ರಾತ್ರಿ ಹತ್ತು ಹನ್ನೊಂದು ಗಂಟೆ ಆದರೂ ಸರಸ್ವತಿ ಮಂದಿರದಲ್ಲೇ ಹಸ್ತ ಲಿಖಿತ ಶಾಸ್ತ್ರಗಳನ್ನು ಹುಡುಕಾಡುತ್ತಲೇ ಇರುತ್ತಾರೆ. ಬೆಳಗ್ಗೆ ನೋಡಿದರೆ ಐವತ್ತು ಅರವತ್ತು ಪುಸ್ತಕಗಳು ತೆರೆದಿರುತ್ತಿದ್ದವು. ಪ್ರತಿದಿನ ಹೀಗೆ ಸಂಶೋಧನೆಯಲ್ಲೇ ಅವರು ಕಳೆಯುತ್ತಾರೆ. ಅದಕ್ಕೆ ಕೈಲಾಸ ಕೇಳಿದ ಅವರೇಕೆ ಪುಸ್ತಕಗಳನ್ನು ತೆರೆದಿಡುತ್ತಾರೆ. ಅವರು ಗ್ರಂಥಗಳನ್ನು ಸುವ್ಯವಸ್ಥಿತವಾಗಿ ಅನುಗೊಳಿಸುತ್ತಿದ್ದಾರೆ ಎಂದು. ಪಂಡಿತರು ವಿವರಿಸಿದರು. ಮಾತಾಜೀ ತಮ್ಮ ಮಕ್ಕಳ ಮೇಲೆ ವಿಶೇಷ ಅನುಗ್ರಹವನ್ನು ತೋರಿಸುತ್ತಿದ್ದುದನ್ನು ನೆನಪಿಸಿಕೊಂಡರು.

ಕೈಲಾಸಚಂದ್ರನ ಚರ್ಚೆ

ಪಂಡಿತ ಪನ್ನಾಲಾಲರು ಅವರಿಗೆ ಸ್ನಾನ, ಮತ್ತು ಊಟದ ವ್ಯವಸ್ಥೆಯನ್ನು ಮಾಡಿದರು. ಅನಂತರ ಅವರಿಬ್ಬರು 'ನಶಿಯಾ' ಗೆ ಬಂದು ಪ್ರತಿಯೊಬ್ಬ ಮುನಿಗಳನ್ನು ಆರ್ಯಿಕೆಯರನ್ನು ದರ್ಶನ ಮಾಡಿ ಆಶೀರ್ವಾದ ಪಡೆದು

ಮಧ್ಯಾಹ್ನ ಸುಮಾರು ಒಂದು ಗಂಟೆಗೆ ನನ್ನ ಹತ್ತಿರ ಬಂದು ಕುಳಿತರು. ಪನ್ನಾಲಾಲರ ಜೊತೆ ನಡೆದ ಮಾತುಕತೆ ಹೇಳಿದರು. ನಾನು ಊರಿನಲ್ಲಿ ನಡೆದ ಧರ್ಮಕಾರ್ಯಗಳ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರು. ಆದರೆ ನಾನೇ ಮನೆಯ ಮಕ್ಕಳ ಮದುವೆಯ ಬಗ್ಗೆಯಾಗಲೀ ಬೇರೆ ವಿಷಯವಾಗಲೀ ಏನನ್ನು ಕೇಳಲಿಲ್ಲ. ಕೊನೆಗೆ ಕೈಲಾಸನೇ ಹೇಳಿದ, ಅಮ್ಮ ಮತ್ತು ಮನೋವತಿ ತಮ್ಮನ್ನು ನೋಡಬೇಕೆಂದು ಹಾತೊರೆಯುತ್ತಿದ್ದಾರೆ. ಅವಳಂತೂ ಮದುವೆಯನ್ನು ಮಾಡಿಕೊಳ್ಳಲು ಒಪ್ಪದೆ ನಿಮ್ಮ ಹತ್ತಿರ ಬಂದು ಇರುತ್ತೇನೆ ಎಂದು ಪರಿತಪಿಸುತ್ತಿದ್ದಾಳೆ ಎಂದನು. ಇದನ್ನು ಕೇಳುತ್ತಲೇ ಅದರ ಬಗ್ಗೆ ಇನ್ನು ಕೇಳಬೇಕೆನ್ನಿಸಿತು. ನಾನು ಅನುಮಾನದಿಂದಲೇ ಕೇಳಿದೆ ಹೀಗೇಕೆ? ಕೈಲಾಸ ಹೇಳಿದ ಗೊತ್ತಿಲ್ಲ ಸುಮಾರು ಎರಡು ವರ್ಷಗಳಾದವು. ಯಾವಾಗಲೂ ತಮ್ಮನ್ನು ನೋಡಬೇಕೆಂದು ಹಠ ಮಾಡುತ್ತಿರುತ್ತಾಳೆ. ನಾನು ಅವರ ಹತ್ತಿರವೇ ಇದ್ದು ದೀಕ್ಷೆ ತೆಗೆದುಕೊಳ್ಳುತ್ತೇನೆ ಎನ್ನುತ್ತಾಳೆ ಎಂದ. ಅದಕ್ಕೆ ನಾನು ಒಳ್ಳೆಯದಾಯಿತು ನೀವೇಕೆ ಅವಳನ್ನು ಕರೆತರಲಿಲ್ಲ? ಅದಕ್ಕೆ ಕೈಲಾಸನು ಮಾತಾಜೀ ತಂದೆಯವರ ಕಟ್ಟುನಿಟ್ಟು ತಮಗೆ ಗೊತ್ತಲ್ಲ ಎಂದನು.

೨೮

ಪುನಃ ಕೈಲಾಸನೇ ಹೇಳಿದ ಮಾತಾಜೀ ತಮ್ಮ ದೀಕ್ಷೆಯನಂತರ ಬಹಳ ಬೇಗನೇ ಶಾಂತಿದೀದಿಗೆ ಹದಿನಾರು ವರ್ಷಕ್ಕೆ ಮದುವೆ ಮಾಡಿದರು. ಮೋಹೋನಾದ ಸೇಠ ಗುಲಾಬಚಂದ್ರರ ಮಗ ರಾಜಕುಮಾರ ಜೊತೆ ಮಾಡಿದ್ದಾರೆ. ನನಗೂ ಹದಿನಾರು ವರ್ಷಕ್ಕೆಲ್ಲ ನಮ್ಮೂರಿನ ಶಾಂತಿಲಾಲರ ಮಗಳು ಚಂದಳ ಜೊತೆ ವಿವಾಹ ಮಾಡಿದ್ದಾರೆ. ನಾನು ಈಗವಿವಾಹಿತನಾಗಿ ವ್ಯಾಪಾರ ಮಾಡಿಕೊಂಡು ಇದ್ದೇನೆ. ತಮ್ಮ ದೀಕ್ಷೆಯ ನಂತರ ಮನೆಯ ವಾತಾವರಣವೇ ಬದಲಾಗಿದೆ. ಮನೆಯವರೆಲ್ಲರೂ ಪ್ರತಿನಿತ್ಯ ಮಂದಿರಕ್ಕೆ ಹೋಗಿ ಪೂಜೆಯನ್ನು ನೋಡಿಕೊಂಡು ಬರುತ್ತೇವೆ. ನಿಯಮಿತವಾಗಿ ಎಲ್ಲರೂ ಸ್ವಾಧ್ಯಾಯ ಮಾಡುತ್ತೇವೆ. ಚಿಕ್ಕ ತಮ್ಮ ತಂಗಿಯರಿಗೆ ಧಾರ್ಮಿಕ ಪಾಠಶಾಲೆಯಲ್ಲಿ ಧರ್ಮದ ಅಧ್ಯಯನ ಮಾಡಿಸುತ್ತಿದ್ದೇವೆ.

ಒಂದು ದಿನ ನನಗೆ ನಿಮ್ಮ ನೆನಪು ತುಂಬ ಕಾಡಿತು. ನಿಮ್ಮ ಹತ್ತಿರ ಹೋಗಿ ಇರಬೇಕೆಂದು ಬಹಳ ಆಸೆಯಾಯಿತು. ಮನೆಯಲ್ಲಿ ಯಾರಿಗೂ ಹೇಳದೆ ಸಾಹಸ ಮಾಡಿ ಜಾಣ್ಮೆಯಿಂದ ಟಿಕೈತನಗರದಿಂದ ದರಿಯಾಬಾದಿನ ಸ್ಟೇಷನ್‌ಗೆ ಬಂದೆ ಎಲ್ಲಿಗೊ ಟಿಕೇಟ್ ತೆಗೆದುಕೊಂಡು ಕುಳಿತೆ. ಮಾತಾಜೀ ದಕ್ಷಿಣದಲ್ಲೇ ಇದ್ದರು ಕಂಡು ಹಿಡಿಯಲೇಬೇಕೆಂದು ಯೋಚಿಸಿದೆ. ಆದರೆ ಮನೆಯಲ್ಲಿ ನನ್ನಬಗ್ಗೆ ಹುಡುಕಾಟ ಪ್ರಾರಂಭವಾಗಿತ್ತು. ನನ್ನ ಹೆಂಡತಿಗಂತೂ ತನ್ನ ಗಂಡ ಎಲ್ಲೋ ದೀಕ್ಷೆ ಪಡೆದು ಬಿಡುತ್ತಾರೋ ಎಂದು ಗಾಬರಿಯಾಗಿತ್ತು. ನನಗಾಗಿ ಎಲ್ಲಕಡೆ ಹುಡುಕಲು ಪ್ರಾರಂಭಿಸಿದರು. ನನ್ನ ಮಾಮ ಬೇಗನೇ ಧರಿಯಾ ಸ್ಟೇಷನ್‌ಗೆ ಬಂದು ರೈಲಿನಲ್ಲಿ ಹತ್ತಿ ಮುಂದಿನ ಸ್ಟೇಷನನಲ್ಲಿ ಇಳಿದು ಪ್ರತಿಯೊಂದು ಡಬ್ಬಿಯಲ್ಲೂ ಹುಡುಕಾಡುತ್ತಾ ಬಂದು ನಾನು ಇರುವ ಡಬ್ಬಿಗೂ ಬಂದು ಕಂಡು ಹಿಡಿದು ಸಮಾಧಾನ ಮಾಡಿ ಹಠ ಮಾಡಿ ನನ್ನನ್ನು ವಾಪಸ್ಸು ಕರೆದುಕೊಂಡು ಹೋದರು. ನನ್ನನ್ನು ಕಂಡು ತಂದೆಗೂ ಜೀವದಲ್ಲಿ ಜೀವ ಬಂತು. ನಂತರ ಕೈಲಾಸನ ತಂಗಿ ಶ್ರೀಮತಿಯ ವಿಷಯ ಹೇಳತೊಡಗಿದ.

1957 ರ ಮಾತು ಆಚಾರ್ಯ ಶ್ರೀ ಮಹಾವೀರ ಕೀರ್ತಿಗಳು ಆಚಾರ್ಯ ವೀರಸಾಗರರು ತಮ್ಮ ಸಂಘದೊಡನೆ ಜಯಪುರದಲ್ಲಿ ಇರುವ ವಿಚಾರವನ್ನು ತಿಳಿದು ಅವರು ಸಲ್ಲೇಖನದವರೆಗೂ ಅಲ್ಲಿಯೇ ಇರಲು

ನಿಶ್ಚಯಿಸಿದ್ದರು. ಜಯಪುರದ ಖಾನಿಯಾದ ಮೈದಾನದ ಚಪ್ಪರದಲ್ಲಿ ಸಲ್ಲೇಖನ ಮಹೋತ್ಸವವನ್ನು ಆಚರಿಸಲ್ಪಟ್ಟಿತು. ಮಹಾವೀರ ಕೀರ್ತಿಗಳು ಆಚಾರ್ಯರಿಂದಲೇ ಕ್ಷುಲ್ಲಕ ದೀಕ್ಷೆಯನ್ನು ಪಡೆದಿದ್ದರು. ಅದರಿಂದಾಗಿ ಅವರ ಅಂತಿಮಕಾಲದಲ್ಲಿ ವೈಯಾವೃತ್ತಿಯನ್ನು ಮಾಡುವ ಇಚ್ಛೆಯಿಂದ ಸಲ್ಲೇಖನಾ ಸಮಯಕ್ಕೆ ಸರಿಯಾಗಿ ಬಂದಿದ್ದರು. ಪೂಜ್ಯಶ್ರೀಯವರು ತಮ್ಮ ಸಂಘದೊಡನೆ ಸಮ್ಮೇದ ಶಿಖರದ ಯಾತ್ರೆ ಮುಗಿಸಿದ್ದರು. ಅವರು ಅಯೋಧ್ಯೆಗೆ ಬಂದಾಗ ಟಕ್ಕೈತನಗರದ ಶ್ರಾವಕರು ಬಹಳ ಒತ್ತಾಯ ಮಾಡಿದ್ದರಿಂದ ಸಂಘವು ಟಿಕ್ಕೈತನಗರಕ್ಕೆ ಹೊರಟಿತು. ಅಮ್ಮನು ಆಚಾರ್ಯರ ದರ್ಶನಮಾಡಿ ಶುದ್ಧ ಜಲದ ನಿಯಮ ತೆಗೆದುಕೊಂಡರು. ಸಂಘವು ಟಿಕ್ಕೈತನಗರಕ್ಕೆ ಬರುವವರೆಗೂ ಸಂಘದಲ್ಲೇ ಇದ್ದು ಆಹಾರ ದಾನ ಮಾಡುತ್ತಾ ಸಂಘದವರೇ ಆಗಿದ್ದರು.

ಸಂಘ ಟಿಕ್ಕೈತನಗರವನ್ನು ತಲುಪಿತು. ಅಮ್ಮನು ದಿನವೂ ಚೌಕಮಾಡುತ್ತಿದ್ದರು. ಒಂದೆರಡು ದಿನಗಳಿಂದ ಆಚಾರ್ಯರಿಗೆ ಆಹಾರವಾಗಲಿಲ್ಲ. ಅಮ್ಮನಿಗೆ ಬಹಳ ಚಿಂತೆಯಾಯಿತು. ಅದಾಗ್ಯೂ ಅವರು ಪ್ರತಿದಿನ ಆಹಾರವನ್ನು ಕೊಡುತ್ತಿದ್ದರು. ಅವರಿಗೆ ಆಚಾರ್ಯರು ಏನನ್ನೂ ಕುರಿತುಕೊಂಡು ಅದು ಸಿಗದೆ ಆಹಾರವನ್ನು ಗ್ರಹಣೆ ಮಾಡುತ್ತಿಲ್ಲ ಎಂದು ಗೊತ್ತಾಯಿತು. ಅದಕ್ಕೆ ತಾಯಿಯವರು ತಂದೆಗೆ ಒತ್ತಾಯ ಮಾಡತೊಡಗಿದರು. ನೀವು ಮಡಿ ಉಟ್ಟುಕೊಂಡು ಮುನಿಗಳನ್ನು ಆಹಾರಕ್ಕೆ ತಡೆಯಲು ನಿಂತುಕೊಳ್ಳಿ ಎಂದು.

ತಂದೆಯವರು ಕೆಲಸದ ನಿಮಿತ್ತ ಬೇರೆಯ ಊರಿಗೆ ಹೋದರು ಮನೆಯಿಂದಲೇ ಬುತ್ತಿ ತೆಗೆದುಕೊಂಡು ಹೋಗುತ್ತಿದ್ದರು. ಹೋಟೆಲ್ಲಿಗೆ ಹೋಗುತ್ತಿರಲಿಲ್ಲ. ಒಂದೆರಡು ದಿನ ತಂಗುವ ಸಮಯದಲ್ಲಿ ಅಕ್ಕಿಬೇಳೆ ತೆಗೆದುಕೊಂಡು ಹೋಗಿ ಅಡಿಗೆ ಮಾಡಿಕೊಳ್ಳುತ್ತಿದ್ದರು. ಶುದ್ಧಜಲದ ನಿಯಮ ತೆಗೆದುಕೊಂಡಿಲ್ಲದ ಕಾರಣ ಮೊದಲು ಅವರಿಗೆ ಆಹಾರ ಕೊಡಲು ಹಿಂದು ಮುಂದು ನೋಡಿದರು. ಆದರೆ ಆಚಾರ್ಯರ ಆ ಕಡೆ ಈ ಕಡೆ ನೋಡುತ್ತಿರುವುದನ್ನು ನೋಡುತ್ತಲೇ ಓಡಿಹೋಗಿ ಸ್ನಾನಮಾಡಿ ಮಡಿ ಉಟ್ಟು ಕಳಸ ತೆಂಗಿನಕಾಯಿ ಸಮೇತ ಬಂದು ಗುರುಗಳನ್ನು ತಡೆಯಲು ನಿಂತರು. ಅದೃಷ್ಟದಿಂದ ಆಚಾರ್ಯರ ನಿಯಮವೂ ಅದೇ ಆಗಿತ್ತು. ತಂದೆಯವರಂತೂ ಶುದ್ಧ ಜಲದ ನಿಯಮದ ಜೊತೆ ನವಧಾ ಭಕ್ತಿಯಿಂದ ಆಚಾರ್ಯರಿಗೆ ಆಹಾರ ದಾನವನ್ನು ಮಾಡಿದರು. ಆಗ ಅವರಿಗಾದ ಆನಂದವನ್ನು ವರ್ಣಿಸಲು ಅಸಾಧ್ಯವಾದುದು. ಆಹಾರವಾದ ನಂತರ ಗುರುಗಳಿಗೆ ಆರತಿ ಎತ್ತುವಾಗ ಅಮ್ಮನಿಗೆ ಕಣ್ಣುತುಂಬಿ ಬಂತು. ಆಚಾರ್ಯರಿಗೆ ಗೊತ್ತಾಯಿತು. ಇವರ ಮಗಳೇ ದೇಶಭೂಷಣರಿಂದ ಕ್ಷುಲ್ಲಿಕೆ ದೀಕ್ಷೆಯನ್ನು ವೀರಸಾಗರರಿಂದ ಆರ್ಯಿಕೆ ದೀಕ್ಷೆಯನ್ನು ಪಡೆದಿದ್ದಾರೆಂದು ಅವರ ನೆನಪು ಅಮ್ಮನಿಗೆ ಆಗಿದೆ ಎಂದು ತಿಳಿದು ತಂದೆ ತಾಯಿ ಇಬ್ಬರಿಗೂ ಅವರು ಸಮಾಧಾನ ಹೇಳುತ್ತಾ ಹೇಳಿದರು ನೋಡಿ ನಿಮ್ಮ ಮಗಳು ದೀಕ್ಷೆ ಪಡೆದು ನಿಮ್ಮ ಕುಲವನ್ನೇ ಉದ್ಧಾರ ಮಾಡಿದ್ದಾರೆ. ಆಗ ಅಲ್ಲೇ ಇದ್ದ ಬ್ರ. ಚಾಂದಮಲ್ಲಜೀಯು ಕೂಡ ಧರ್ಮವಾತ್ಸಲ್ಯದಿಂದ ಅಮ್ಮ ಅಪ್ಪನ ಪುಣ್ಯವನ್ನು ಹೊಗಳಿದ್ದಾರೆ. ಹೀಗೆ ಅಮ್ಮ ಸಂಘ ಟಿಕ್ಕೈತನಗರದಲ್ಲಿ ಇರುವವರೆಗೂ ಆಹಾರದಾನವನ್ನು ಕೊಟ್ಟು ಉಪದೇಶವನ್ನು ಕೇಳಿ ಆರ್ಯಿಕೆಯ ವೈಯಾವೃತ್ತಿಯ ಲಾಭವನ್ನು ಪಡೆದಿದ್ದಾರೆ.

ಸಹೋದರಿ ಶ್ರೀಮತಿಯನ್ನು ಹೊರಡಿಸುವ ಪ್ರಯತ್ನ

ಸಂಘ ಅಲ್ಲಿಂದ ದರಿಯಾಬಾದ್ ತಲುಪಿತು. ಆಗ ಟಿಕ್ಕೈತನಗರದ ಕೆಲವು ಶ್ರಾವಕ ಶ್ರಾವಕಿ ಹಾಗೇ ಹುಡುಗ, ಹುಡುಗಿಯರು ಸಹ ನಡೆಯುತ್ತಾ ಬಂದಿದ್ದರು. ಹೀಗೆ ಬಂದು ಒಬ್ಬ ಹುಡುಗಿ ಬರಿಗಾಲಿನಲ್ಲೆ ನಡೆಯುತ್ತಿದ್ದದ್ದನ್ನು ಗಮನಿಸಿದ ಅವರಿಗೆ ತಿಳಿಯಿತು ಆ ಹುಡುಗಿ ಛೋಟೇಲಾಲರ ಮಗಳು, ಆರ್ಯಿಕಾ ಜ್ಞಾನಮತಿಯ ಸಹೋದರಿ

ಶ್ರೀಮತಿ ಎಂದು. ಅವಳು ಮದುವೆ ಆಗಲು ಇಷ್ಟಪಡುತ್ತಿಲ್ಲ ಸಂಘದಲ್ಲೇ ಇರಬೇಕೆಂದು ಮನೆಯವರ ಕಣ್ಣು ತಪ್ಪಿಸಿ ಬಂದಿದ್ದಾಳೆಂದು ಗೊತ್ತಾಯಿತು. ಮನೆಯಲ್ಲಿ ವಿಷಯ ಗೊತ್ತಾಗುತ್ತಲೇ ಆತಂಕ ಉಂಟಾಗಿ ಚಿಕ್ಕಪ್ಪ 'ಒಂಟಿಕುದುರೆ ಗಾಡಿ ಮಾಡಿಕೊಂಡು ದರಿಯಾಬಾದ್‌ಗೆ ಬಂದೇಬಿಟ್ಟರು. ಅವರು ಬಂದು ಅವಳನ್ನು ಸಮಾಧಾನಪಡಿಸತೊಡಗಿದರು. ಅವಳು ಸಂಘ ಬಿಟ್ಟು ಮನೆಗೆ ಬರಲು ತಯಾರಿಲ್ಲ. ಆಗ ವಿಷಯ ಮಹಾರಾಜರವರೆಗೂ ಹೋಯಿತು. ಬ್ರ. ಚಾಂದಮಲಜೀ ಚಿಕ್ಕಪ್ಪನನ್ನು ಸಂತೈಸಿದರು. ಕೆಲವು ಆರ್ಯಿಕೆಯರು ಎಷ್ಟು ಹೇಳಿದರೂ ಕೇಳದೆ ಚಿಕ್ಕಪ್ಪ ಅಳುತ್ತಿರುವ ಶ್ರೀಮತಿಯನ್ನು ಬಲವಂತವಾಗಿಯೇ ಗಾಡಿಯಲ್ಲಿ ಕೂರಿಸಿಕೊಂಡು ಹೊರಟೇ ಹೋದರು. ಶ್ರೀಮತಿ ತನ್ನ ನಿಸ್ಸಹಾಯಕತೆಗೆ ಒಳಗೊಳಗೇ ಮರುಗಿದಳು. ಮನೆಗೆ ಹೋದ ಮೇಲೆ ಪೂಜೆ, ಸ್ವಾಧ್ಯಾಯದಲ್ಲಿ ಮನಸ್ಸನ್ನು ತೊಡಗಿಸಿಕೊಂಡು ನೋವನ್ನು ಮರೆಯ ತೊಡಗಿದಳು. ಮನೆಯ ಕೆಲಸ ತಮ್ಮಂದಿರನ್ನು ನೋಡಿಕೊಳ್ಳುವುದರಲ್ಲಿ ಎಲ್ಲವನ್ನು ಮರೆತಳು. ಹಾಗೇ ಅವಳ ವಿವಾಹವನ್ನು ಬಹರಾಇಚದ ಸೇಠ ಸುಖಾನಂದರ ಪುತ್ರ ಪ್ರೇಮಚಂದರ ಜೊತೆ ಮಾಡಲಾಯಿತು. (ಈಗ ಅವಳ ನಾಲ್ಕನೆಯ ಮಗಳು ಆಸ್ಥಾ ಈಗ ಬ್ರಹ್ಮಚರ್ಯವ್ರತ ತೆಗೆದುಕೊಂಡು ನನ್ನ ಹತ್ತಿರವೇ ಇದ್ದಾಳೆ) ಇದನ್ನೆಲ್ಲಾ ಕೇಳಿದ ನಾನು ಕೈಲಾಸಚಂದ್ರನನ್ನು ಸಮಾಧಾನಗೊಳಿಸತೊಡಗಿದೆ.

ಕೈಲಾಸಚಂದ ನೋಡು ಅನಾದಿಕಾಲದಿಂದಲೂ ಈ ಜೀವ ಎಷ್ಟೆಷ್ಟು ದುಃಖವನ್ನು ಅನುಭವಿಸಿದೆಯೋ ಯಾವ ಯಾವ ಪರ್ಯಾಯದಲ್ಲಿ ಸುತ್ತಿದೆ ಅಂತಹದರಲ್ಲಿ ಈ ಜೀವ ಸಂಸಾರವನ್ನು ತ್ಯಜಿಸಲು ಬಯಸಿದಾಗ ನೀವೇಕೆ ಮತ್ತೆ ಈ ದುಃಖ ರೂಪಿ ಸಂಸಾರದಲ್ಲಿ ತಳ್ಳಲು ಬಯಸುತ್ತೀದ್ದೀರಿ. ಕೈಲಾಸ ನೀನು ನನ್ನ ಮಾತು ಕೇಳು ನೀನು ಮನೋವತಿಯನ್ನು ಸಂಘಕ್ಕೆ ತಲುಪಿಸಿ ಬಾ ಇದು ನೀನು ಅವಳಿಗೆ ಮಾಡುವ ಉಪಕಾರ. ಹೀಗೆ ಬಹಳಷ್ಟು ಅವನಿಗೆ ತಿಳುವಳಿಕೆ ಹೇಳಿದರೂ ಅವನಾದರೋ ಏನು ಮಾಡಲು ಸಾಧ್ಯ ಕೊನೆಗೆ ಅವನು ಹೇಳಿದ. ನನ್ನ ಹತ್ತಿರ ಏನು ಆಗುತ್ತದೆ. ಯಾರು ನನ್ನ ಮಾತನ್ನು ಕೇಳುತ್ತಾರೆ ತಂದೆಯವರು ಈ ಕಾರಣದಿಂದಲೇ ನಿಮ್ಮನ್ನು ನೋಡಲು ಬಂದಿಲ್ಲ. ತಾಯಿಯವರನ್ನು ಬರಲು ಬಿಡುತ್ತಿಲ್ಲ ಆಗ ನಾನು ಮನದಲ್ಲೇ ಯೋಚಿಸತೊಡಗಿದೆ. ಅಬ್ಬ ನಾನೆಷ್ಟು ಪುಣ್ಯ ಮಾಡಿದ್ದೇನೆ ನಾನು ಪುರುಷಾರ್ಥಮಾಡಿ ಸಫಲತೆಯನ್ನು ಪಡೆದಿದ್ದೇನೆ. ಮನೆಯನ್ನು ಬಿಟ್ಟು ಬರುವ ಧೈರ್ಯ ಮಾಡಿದ್ದೇನೆ. ಇಂದು ನನ್ನ ಜೀವನ ಧನ್ಯತೆಯನ್ನು ಪಡೆಯಿತು. ನಾನು ಕ್ಷುಲ್ಲಿಕಾ ದೀಕ್ಷೆಯನ್ನು ಪಡೆದ ನಂತರ ಸ್ತ್ರೀ ಪರ್ಯಾಯದಲ್ಲೇ ಸರ್ವೋತ್ಕೃಷ್ಟ, ಸ್ಥಾನವಾದ ಆರ್ಯಿಕೆ ದೀಕ್ಷೆಯನ್ನು ಪಡೆದೆ. ಆಶ್ಚರ್ಯವೆಂದರೆ ಈ 'ಸಂಯಮ' ವೆಂಬ ನಿಧಿಯು ಎಲ್ಲರಿಗೂ ಸುಲಭದಲ್ಲಿ ಸಿಗುವುದಿಲ್ಲ ಪುಣ್ಯವಂತರಿಗೆ ಮಾತ್ರ ಸಿಗುವುದು.

ಕೈಲಾಸ ಚಂದ್ರನ ಹತ್ತಿರ ಮಾತಾಜಿ ಬೇಕಾದ ವಿಷಯವನ್ನು ತಿಳಿದ ನಂತರ ಪಂ. ಪನ್ನಾಲಾಲಜೀ ಸೋನಿ ಹಾಗೂ ಬ್ರ. ಶ್ರೀ ಲಾಲರು ಹೇಳತೊಡಗಿದರು. ಇದು ಯಾವುದೋ ಪೂರ್ವಜನ್ಮದ ಸಂಸ್ಕಾರವೇ ಆಗಿದೆ. ನಿಮ್ಮೆಲ್ಲ ತಮ್ಮತಂಗಿಯರಿಗೂ ಮನೆಬಿಟ್ಟು ಸಂಘವನ್ನು ಸೇರಲು ಹಾತೊರೆಯುತ್ತಿದ್ದಾರೆ.

ಇದಾದ ನಂತರ ಒಂದೆರಡು ದಿನ ಅಲ್ಲೇ ಇದ್ದರು. ನನ್ನ ಸ್ವಾಧ್ಯಾಯ ಮತ್ತು ಅಧ್ಯಯನವನ್ನು ಶ್ರದ್ಧೆಯಿಂದ ನೋಡುತ್ತ ಇರುತ್ತಿದ್ದರು. ಸರಸ್ವತಿ ಭವನದ ಮೇಲಿನ ಕೊಠಡಿಯಲ್ಲಿ ನನ್ನ ಹತ್ತಿರವೇ ಪ್ರಮುಖ ಆರ್ಯಿಕೆ ವೀರಮತಿ ಮಲಗುತ್ತಿದ್ದರು. ಹತ್ತಿರದಲ್ಲೆ ಆರ್ಯಿಕೆ ಚಂದ್ರಮತಿ, ಪದ್ಮಾವತಿ, ಜಿನಮತಿ, ಕ್ಷುಲ್ಲಿಕೆಯಾದ ರಾಜಮತೀ ಹಾಗೂ ನಾಲ್ಕು ಜನ ಸಾಧ್ವಿಯರು ಇರುತ್ತಿದ್ದರು. ಹತ್ತಿರದಲ್ಲಿ ಯಾವ ಬ್ರಹ್ಮಚಾರಿಣಿಯರು ಇರುತ್ತಿರಲಿಲ್ಲ. ಕೈಲಾಸಚಂದ್ರನಿಗೆ ಆರ್ಯಿಕೆಯರ ಹತ್ತಿರ ಮಾತಾಡಿ ತನ್ನ ಪರಿಚಯ ಮಾಡಿಕೊಂಡ ಸಂಘದ

ಎಲ್ಲರ ಚರ್ಯೆಯನ್ನು ಗಮನಿಸುತ್ತಾ ಇದ್ದನು. ಆಚಾರ್ಯರ ಉಪದೇಶ ಕೇಳುತ್ತಿದ್ದ. ನಂತರ ಮನೆಗೆ ವಾಪಸ್ಸು ಹೋದ. ಅಮ್ಮ ಇವನನ್ನು ನೋಡುತ್ತಲೇ ನನ್ನ ಎಲ್ಲ ವಿಷಯವನ್ನು ಕೇಳಿ ತಿಳಿದುಕೊಂಡಳು. ಅವಳಿಗೆ ಬಹಳ ಸಮಾಧಾನವಾಯಿತು. ಅಲ್ಲದೆ ನನ್ನ ಜೊತೆ ಆರ್ಯಿಕೆಯರು ಯಾವಾಗಲು ಇರುತ್ತಾರೆಂದು ಕೇಳಿ ಸಮಾಧಾನಗೊಂಡರು. ನನ್ನ ಜ್ಞಾನದ ಬಗ್ಗೆ ಖಂಡಿತ ಪನ್ನಾಲಾಲ ಸೋನಿಯವರು ಮತ್ತು ಬ್ರ. ಶ್ರೀಲಾಲಜೀ ಹೇಗೆ ಹೊಗಳಿದರು ಹಾಗೇ ಹೋಗಿ ಕೈಲಾಸ ವರದಿ ಒಪ್ಪಿಸಿದ್ದಾನೆ. ಅದನ್ನು ಕೇಳಿದ ಇಬ್ಬರಿಗೂ ಹರ್ಷ ಉಂಟಾಯಿತು. ಹಾಗೇ ತಾವು ಇನ್ನು ಮಾತಾಜೀಯನ್ನು ದರ್ಶನ ಮಾಡಿಲ್ಲವೆಂದು ದುಃಖವು ಆಯಿತು.

೨೯

ದೈವಸಿಕ ಪ್ರತಿಕ್ರಮಣ

ನಾನು ಕ್ಷುಲ್ಲಿಕೆ ಅವಸ್ಥೆಯಲ್ಲಿ ಇದ್ದಾಗ ಪ್ರತಿದಿನ ಎರಡು ಹೊತ್ತಿನಲ್ಲೂ ಪ್ರತಿಕ್ರಮಣ ಮಾಡುತ್ತಿದ್ದೆ. ನನ್ನ ಹತ್ತಿರ ಇರುತ್ತಿದ್ದ ಆರ್ಯಿಕೆ ಮತ್ತು ಕ್ಷುಲ್ಲಿಕೆಯರೂ ಮಾಡುತ್ತಿದ್ದರು. ಒಂದು ದಿನ ಆರ್ಯಿಕೆ ಚಂದ್ರಮತೀಜೀಯವರು ಹೇಳಿದರು. ಮಾತಾಜೀ ನಾವೆಲ್ಲರು ಸಂಜೆಯ ವೇಳೆ ಕುಳಿತು ದೈವಸಿಕ ಪ್ರತಿಕ್ರಮಣವನ್ನು ಒಟ್ಟಾಗಿ ಏಕೆ ಮಾಡುತ್ತಿಲ್ಲ. ನಾನು ಹೇಳಿದೆ ಸುಮ್ಮನೆ ಈ ಕಾರಣದಿಂದ ಅಶಾಂತಿ ಉಂಟಾಗುವುದು ಬೇಡ. ಕೆಲವರಿಗೆ ಇಷ್ಟವು ಆಗದೆ ಇರಬಹುದು. ಮೊದಲು ಸಂಘದಲ್ಲಿ ಪ್ರಾತಃಕಾಲ ಸಾಮಾಯಿಕದ ನಂತರ ಪ್ರತಿಕ್ರಮಣವಾಗುತ್ತಿತ್ತು. ಆದಾಗ್ಯೂ ಇದು ರಾತ್ರಿಯ ಪ್ರತಿಕ್ರಮಣ ಸಹ ಆಚಾರ್ಯರ ಹತ್ತಿರ ಸಂಘದ ಎಲ್ಲ ಮುನಿಗಳು ಆರ್ಯಿಕೆಯರು ಒಟ್ಟಾಗುತ್ತಿದ್ದರು. ಇದರಲ್ಲಿ " ದೈವಸಿಕ ರಾತ್ರಿಕ ಪ್ರತಿಕ್ರಮಣಕ್ರಿಯಾ" ಎಂದು ಕರೆಯುತ್ತಾರೆ. ಆದರೆ ಆ ದಿನಗಳಲ್ಲಿ ಸಾಯಂಕಾಲದಲ್ಲಿ ದೈವಸಿಕ ಪ್ರತಿಕ್ರಮಣ ಸಾಮೂಹಿಕವಾಗಿ ಸಂಘದಲ್ಲಿ ನಡೆಯುತ್ತಿರಲಿಲ್ಲ. ಆ ದಿನಗಳಲ್ಲಿ ದಕ್ಷಿಣದಲ್ಲಿ ಕೆಲವು ಸಾಧು - ಸಾಧ್ವಿಯರು ಸೇರಿಕೊಂಡು ಪ್ರಾತಃಕಾಲ ಸಾಮಾಯಿಕದ ನಂತರ ದಶಭಕ್ತಿಯ ಪಾಠ ಓದುತ್ತಿದ್ದರು. ಪುನಃ ಕಲ್ಯಾಣಾಲೋಚನವನ್ನು ಓದುತ್ತಿದ್ದರು. ಮಧ್ಯಾಹ್ನದಲ್ಲಿ ಸಾಮಾಯಿಕದ ನಂತರ ಎಲ್ಲರೂ ಸೇರಿ ಭಕ್ತಾಮರ ಸ್ತೋತ್ರ, ಸಹಸ್ರನಾಮ, ಮತ್ತು ತತ್ತ್ವಾರ್ಥಸೂತ್ರವನ್ನು ಪಠನೆ ಮಾಡುತ್ತಿದ್ದರು. ಇದಂತೂ ಕಿವಿಗಳಿಗೆ ಬಹಳ ಅಪ್ಯಾಯಮಾನವಾಗಿರುತ್ತಿತ್ತು. ದಿನದ ಎರಡು ಸಮಯದಲ್ಲಿಯು ಪ್ರತಿಕ್ರಮಣ ಮಾಡುವುದು ಅವಶ್ಯಕವಿದೆ. ಈ ಅಭಾವ ನನ್ನನ್ನು ಕುಟುಕುತ್ತಿತ್ತು. ಬಹಳ ಯೋಚನೆಮಾಡಿ ಧೈರ್ಯ ತಂದುಕೊಂಡು ಆರ್ಯಿಕೆ ವೀರಮತೀಜೀಯವರಲ್ಲಿ ವಿಚಾರ ವಿಮರ್ಶೆ ಮಾಡಿ ಸಾಯಂಕಾಲದಲ್ಲೇ ಒಟ್ಟಾಗಿ ಕುಳಿತು ದೈವಸಿಕ ಪ್ರತಿಕ್ರಮಣವನ್ನು ಮತ್ತೆ ಪ್ರಾರಂಭಿಸಿದೆವು. ಕೆಲವು ಆರ್ಯಿಕೆಯವರು ಇದನ್ನು ಹಾಸ್ಯ ಮಾಡಲು ತೊಡಗಿದರು. ದಿನವೆಲ್ಲ ಮಿಚ್ಛಾಮೇ ದುಕ್ಕಡಂ ಮಿಚ್ಛಾಮೇ ದುಕ್ಕಡಂ ಎಂದು ಢೂಂಡಿಯ ಸಾಧ್ವಿಯರ ರೀತಿಯಲ್ಲಿ ಬದಲಾಗುತ್ತಿದೆ ಎಂದು.

ನಾನು ಈ ಮಾತಿನ ಬಗ್ಗೆ ಗಮನಕೊಡಲಿಲ್ಲ. ಆದರೆ ಆರ್ಯಿಕೆ ಸುಮತೀಮತೀಜಿ ಆಚಾರ್ಯರ ಹತ್ತಿರ ಈ ದೂರನ್ನು ತೆಗೆದುಕೊಂಡು ಹೋದರು. ಇದೇ ದೊಡ್ಡದು ಆಗುವುದರಲ್ಲಿ ಇತ್ತು. ಆಗ ಪಂ. ಪನ್ನಾಲಾಲಜೀ ಈ ಕೆಲಸವನ್ನು ಸಮರ್ಥಿಸುತ್ತೀರ ಎಂದು ಕೇಳಿದೆ. ಇದಕ್ಕೆ ಮೊದಲೇ ಅವರು ಹಲವು ಸಲ ನನ್ನನ್ನು ಎರಡು ಹೊತ್ತು ಪ್ರತಿಕ್ರಮಣ ಮಾಡೋಣ ಎಂದು ಹೇಳಿದ್ದರು. ಆದರೆ ಈಗ ಮೌನವಾಗಿಬಿಟ್ಟರು. ಕೊನೆಗೆ ನಾನೇ

ಆಚಾರ್ಯರಲ್ಲಿಗೆ ಮೂಲಾಚಾರದ ಪ್ರಕರಣದ ಬಗ್ಗೆ ವಿವರಿಸುತ್ತಾ ಹೇಳಿದೆ. ನಾನು ಇದರ ಆಧಾರದ ಮೇಲೆಯೇ ಎರಡು ಸಮಯದಲ್ಲಿಯೂ ಪ್ರತಿಕ್ರಮಣವನ್ನು ಪ್ರಾರಂಭಿಸಿದ್ದೇವೆ ಎಂದೆ. ಇದಕ್ಕೆ ಮೊದಲು ಕೂಡ ಶ್ರುತಸಾಗರರು ಇದರಿಂದ ಪ್ರಭಾವಿತರಾಗಿದ್ದರು. ಅವರೆಂದರು ಮುನಿಗಳಲ್ಲಿ ಈ ಪರಂಪರೆಯು ಸಾಮೂಹಿಕ ರೂಪದಿಂದ ನಡೆಯಬೇಕೆಂದರು. ನನಗೆ ಆಚಾರ್ಯರ ಮನಸ್ಸು ಅರಿಯಬೇಕಾಗಿತ್ತು. ಮಹಾರಾಜಜೀ ದಯಮಾಡಿ ಎಲ್ಲ ಒಟ್ಟಾಗಿ ಸಾಯಂಕಾಲದಲ್ಲಿ ಆಚರಿಸಲು ಆಜ್ಞೆ ದಯಪಾಲಿಸಿರೆಂದು ವಿನಂತಿಸಿದೆ. ಅದಕ್ಕೆ ಅವರು ಯೋಚಿಸಿ ನಿರ್ಣಯಿಸುತ್ತೇವೆ ಎಂದರು.

ಪ್ರತಿಕ್ರಮಣವನ್ನು ಮುಂದುವರೆಸುವ ಉದ್ದೇಶದಿಂದ ಸುಮತಿಮತೀ ಮಾತಾಜೀಯವರಲ್ಲಿ ವಿನಂತಿಸಿದೆ. ನೀವೆಲ್ಲರೂ ಒಪ್ಪಿದರೆ ನಾನು ನಿಮ್ಮೊಡನೆ ಸೇರುತ್ತೇನೆ ಎಂದೆ. ಅವರಿಗೂ ಸಂತೋಷವಾಯಿತು. ನಾವು ಆರ್ಯಿಕೆಯರೆಲ್ಲ ಒಟ್ಟಾಗಿ ಪ್ರತಿಕ್ರಮಣ ಮಾಡಲು ಪ್ರಾರಂಭಿಸಿದೆವು. ಶ್ರುತಸಾಗರರ ಜೊತೆ ಆಚಾರ್ಯರು ವಿಚಾರ ವಿಮರ್ಶೆ ಮಾಡಿ ಆದೇಶಿಸಿದರು. ಸಾಯಂಕಾಲ 4 ರಿಂದ 5 ಗಂಟೆಯವರೆಗೆ ಸ್ವಾಧ್ಯಾಯ ನಡೆಯುತ್ತಿತ್ತು. ಪಂಡಿತ ಪನ್ನಾಲಾಲಜೀ ಸೋನಿಯವರು ಮೂಲಾಚಾರವನ್ನು ಓದುತ್ತಿದ್ದರು. ಎಲ್ಲ ಸಾಧುಗಳು ಕೇಳುತ್ತಿದ್ದರು.

ಈ ಸ್ವಾಧ್ಯಾಯವಾದ ಮೇಲೆ ಎಲ್ಲರಿಂದ ಸಾಮೂಹಿಕ ದೈವಸಿಕ ಪ್ರತಿಕ್ರಮಣ ಮಾಡಲ್ಪಡುತ್ತದೆ ಎಲ್ಲರು ಉಪಸ್ಥಿತರಿರ ಬೇಕೆಂದರು.

ಈ ಪದ್ಧತಿ ಮತ್ತೆ ಆಚರಣೆಗೆ ಬಂದಿದ್ದು ನನಗಂತೂ ಸಂತೋಷವಾಯಿತು. ಈ ಪದ್ಧತಿ ಇಂದೂ ಎಲ್ಲ ಸಂಘದಲ್ಲಿಯು ಆಚರಣೆಯಲ್ಲಿದೆ. ಪ್ರತಿಕ್ರಮಣದ ಜೊತೆ " ಚತ್ತಾರಿಮಂಗಲ, ಅಡ್ಢಾಯಿಜ್ಜದಿವದೋಸಮುದ್ದೇಸು" ಮುಂತಾದ ಸಾಮಾಯಿಕ ದಂಡಕ ಮತ್ತು ಕಾಯೋತ್ಸರ್ಗದ ನಂತರ "ಥೋಸ್ಸಾಮಿ" ಪಾಠವನ್ನು ಪ್ರಾರಂಭಿಸಿದೆವು. ಇಂದುಕೂಡ ದಂಡಕ ಮತ್ತು ಥೋಸ್ಸಾಮಿಯನ್ನು ಓದುವುದು ಆಚರಣೆಯಲ್ಲಿದೆ. ಮೊದಲು ಕಾಯೋತ್ಸರ್ಗ ಮಾಡುತ್ತಿದ್ದರು. ಪಾಠವನ್ನು ಮತ್ತೆ ಮತ್ತೆ ಓದುತ್ತಿರಲಿಲ್ಲ.

ಇದರ ನಂತರ ಅಷ್ಟಮಿಯ ದಿನ ಸಾಮೂಹಿಕ ರೂಪದಲ್ಲಿ ಅಷ್ಟಮಿಯ ಕ್ರಿಯೆಯನ್ನು ಪ್ರಾರಂಭಿಸಲು ನಾನು ಬಹಳ ಪ್ರಯತ್ನವನ್ನು ಮಾಡಿದೆ. ಆದರೆ ಸಫಲತೆ ಸಿಗಲಿಲ್ಲ. ಆಗ ಆರ್ಯಿಕೆಯರಲ್ಲಾದರೂ ಪ್ರಾರಂಭಿಸ ಬಯಸಿದೆ. ಕೆಲವು ಆರ್ಯಿಕೆಯರು ಬರುತ್ತಿರಲಿಲ್ಲ. ಆದರೆ ದೊಡ್ಡ ಮಾತಾಜಿಯರಾದ ವೀರಮತಿ, ಸುಮತಿಮತಿಯರು ಮಾತ್ರ ಕುಳಿತುಕೊಳ್ಳುತ್ತಿದ್ದರು.

ಕೆಲವು ದಿನಗಳು ಕಳೆದ ನಂತರ ಪಾಕ್ಷಿಕ ಪ್ರತಿಕ್ರಮಣದಲ್ಲಿ ಸಾಮಾಯಿಕ ದಂಡಕ ಮತ್ತು ಥೋಸ್ಸಾಮಿಯ ಪಾಠವನ್ನು ಪ್ರತಿಯೊಂದು ಕಾಯೋತ್ಸರ್ಗದ ಜೊತೆಯಲ್ಲಿಯೂ ಪ್ರಾರಂಭಿಸಬೇಕೆಂದು ಬಯಸಿದೆ. ಆದರೆ ಇದರಲ್ಲಿ ನನಗೆ ಸಫಲತೆ ಸಿಗಲಿಲ್ಲ. ಈ ಪಾಠವನ್ನು ನಾನು ಆಚಾರ್ಯ ಧರ್ಮಸಾಗರ ಮಹಾರಾಜರ ಸಾನಿಧ್ಯದಲ್ಲಿ ಚಾಕಸೂ (ಜಯಪುರ ಜಿಲ್ಲೆ ರಾಜಸ್ಥಾನ) ದಲ್ಲಿ 1969 ರಲ್ಲಿ ಪ್ರಾರಂಭಿಸಿದೆ. ಇದಕ್ಕೆ ಜಾಸ್ತಿ ಸಮಯವಾಗುತ್ತಿತ್ತು. ಆದರೂ ಸಾಧುಗಳು ಇದನ್ನು ಪ್ರಮಾದವಿಲ್ಲದೆ ಆಚರಣೆಗೆ ತರಬೇಕು ಆ ಸಾಧುಗಳಿಗೆ ಇದನ್ನು ಬಿಟ್ಟು ಬೇರೆ ಯಾವ ಕೆಲಸವಿದೆ ಎಂದು ನನ್ನ ಭಾವನೆ ಆಗಿತ್ತು.

(ಪಶ್ಚಿಮ) ರಾತ್ರಿಯಲ್ಲಿ ಪ್ರತಿಕ್ರಮಣ

ಆ ದಿನಗಳಲ್ಲಿ ಮತ್ತೊಂದು ರೂಢಿ ಎಂದರೆ ಕಳೆದ ರಾತ್ರಿಯಲ್ಲಿಅಪರರಾತ್ರಿಕ ಸ್ವಾಧ್ಯಾಯ ಮಾಡಿ ಮೊದಲ ಪ್ರತಿಕ್ರಮಣದ ನಂತರ ಸಾಮಾಯಿಕ ಮಾಡುತ್ತಿದ್ದರು. ಮೊದಲು ನಾನು ನೋಡಿದಾಗ ಬೆಳಗ್ಗೆ ಹೊತ್ತು ಪ್ರತಿಕ್ರಮಣ ಮಾಡಲು ಆರ್ಯಿಕೆಯರು ಆಚಾರ್ಯರ ಹತ್ತಿರ ಬರುತ್ತಿರಲಿಲ್ಲ. ತಮ್ಮ ತಮ್ಮ ಜಾಗದಲ್ಲೇ ಮಾಡುತ್ತಿದ್ದರು. ಆದರೆ ನನ್ನ ವಿಶೇಷ ಪ್ರೇರಣೆಯಿಂದಾಗಿ ವೀರಮತಿ ಮಾತಾಜೀ ಮೊದಲಾಗಿ ಒಟ್ಟಾಗಿ ಪ್ರತಿಕ್ರಮಣ ಮಾಡತೊಡಗಿದರು. ಮೂಲಾಚಾರವನ್ನು ಅಧ್ಯಯನ ಮಾಡುವಾಗ ನಾನು ಈ ಪಂಕ್ತಿಯನ್ನು ಓದಿದೆ.

"ಪಶ್ಚಿಮರಾತ್ರೌ ಪ್ರತಿಕ್ರಮಣೇ ಕ್ರಿಯಾಕರ್ಮಾಣಿ ಚತ್ವಾರಿ"[1]

ಹಿಂದಿನ ರಾತ್ರಿ ಪ್ರತಿಕ್ರಮಣ ಮಾಡುವುದರಿಂದ ಕೃತಿಕರ್ಮ (ವಿಧಿವತ್ತಾದ ಕಾಯೋತ್ಸರ್ಗ) ನಾಲ್ಕಾಗುತ್ತದೆ. ಅನಗಾರ ಧರ್ಮಾಮೃತದಲ್ಲಿಯು ಸಹ ಹೇಳಿದೆ.

ಸ್ವಾಧ್ಯಾಯೇ ದ್ವಾದಶೇಷ್ಟಾ ಷಟ್ ವಂದನೇ ಷ್ಟೋ ಪ್ರತಿಕ್ರಮೇ ।
ಕಾಯೋತ್ಸರ್ಗ ಯೋಗಭಕ್ತೌ, ದ್ವೌ ಚಾಹೋರಾತ್ರಗೋಚರಾಃ ॥[2]

ಸ್ವಾಧ್ಯಾಯದ ಹನ್ನೆರಡು, ವಂದನೆಯ ಆರು, ಪ್ರತಿಕ್ರಮಣದ ಎಂಟು ಮತ್ತು ಯೋಗಭಕ್ತಿಯ ಎರಡು ಹೀಗೆ ಅಹೋರಾತ್ರಿಗೆ ಸಂಬಂಧಿಸಿದ ಇಪ್ಪತ್ತೆಂಟು ಕಾಯೋತ್ಸರ್ಗವಾಗುತ್ತದೆ. ಮೂಲಾಚಾರದಲ್ಲಿಯು ಇದನ್ನು ಹೇಳಿದೆ. ಇಲ್ಲಿ ಈ ಇಪ್ಪತ್ತೆಂಟು ಕಾಯೋತ್ಸರ್ಗವನ್ನು ಇಪ್ಪತ್ತೆಂಟು ಕೃತಿಕರ್ಮವೆಂದು ಹೇಳಲಾಗಿದೆ.

ಆದ್ದರಿಂದಲೇ ಪ್ರತಿಕ್ರಮಣದ "ರಾತ್ರಿಕ ದೈವಸಿಕವನ್ನು ಎರಡು ಭಾಗ ಮಾಡಿ ಹಿಂದಿನ ರಾತ್ರಿ ಮಾಡುವ ಪ್ರತಿಕ್ರಮಣವನ್ನು ರಾತ್ರಿಕ ಮತ್ತು ದಿವಸಾಂತೇಭವಾ" ದೈವಸಿಕ ಪ್ರತಿಕ್ರಮಣ ವ್ಯಾಖ್ಯಾದ ಅನುಸಾರ ದಿನದ ಕೊನೆಯಲ್ಲಿ ಸಾಯಂಕಾಲದಲ್ಲಿ ಮಾಡುವ ಪ್ರತಿಕ್ರಮಣಕ್ಕೆ ದೈವಸಿಕ ಎಂಬ ಹೆಸರನ್ನು ಕೊಡಲಾಗಿದೆ. ಈ ವಿಷಯದಲ್ಲಿ ಪಂ. ಪನ್ನಾಲಾಲಜೀ ಸೋನಿಯವರು ಆಗಮ ಪ್ರಮಾಣಗಳಿಂದ ವಿಶೇಷವಾದ ಸಮರ್ಥನೆಯನ್ನು ಮಾಡಿಸಿದ್ದು ಎಲ್ಲರಿಗೂ ಸಂತೋಷವಾಯಿತು.

ಆರ್ಯಿಕೆಯರಲ್ಲಂತು ಹಿಂದಿನ ರಾತ್ರಿಯಲ್ಲಿ ಮೊದಲೇ ಪ್ರತಿಕ್ರಮಣ ಮಾಡಿ ಸಾಮಾಯಿಕ ಮಾಡುವ ರೂಢಿ ನಡೆದು ಬಂದಿತು. ಆದರೆ ಎಷ್ಟೇ ಪ್ರಯತ್ನಪಟ್ಟರೂ ಸಂಘದಲ್ಲಿ ಮುನಿಗಳಲ್ಲಿ ಸಾಮೂಹಿಕ ಪ್ರತಿಕ್ರಮಣವು ಆಚರಣೆಗೆ ಬರಲಿಲ್ಲ. ಆದರೆ ಎಲ್ಲರೂ ಬೆಳಗ್ಗೆಯ ಸಾಮಾಯಿಕದ ನಂತರ ಆಚಾರ್ಯರಲ್ಲಿಗೆ ಬಂದು ಪ್ರತಿಕ್ರಮಣವನ್ನು ಮಾಡುತ್ತಿದ್ದರು.

ಬ್ಯಾವರದ ಚಾತುರ್ಮಾಸದ ಚರ್ಯೆ

ಹಿಂದಿನ ರಾತ್ರಿ ಅಪರರಾತ್ರಿ ಸ್ವಾಧ್ಯಾಯಮಾಡಿ ನಾನು ರಾತ್ರಿಯ ಪ್ರತಿಕ್ರಮಣ ಮಾಡುತ್ತಿದ್ದೆ. ಅದರಲ್ಲಿ ಎಲ್ಲರೂ ಭಾಗವಹಿಸುತ್ತಿದ್ದರು. ಎಲ್ಲರೂ ವಿಧಿವತ್ತಾಗಿ ಸಾಮಾಯಿಕ ಮಾಡಿ ಗುರುವಂದನೆ ಮಾಡಿ ಕೆಲವರು ಮಾತಾಜೀಗಳು ಕೆಲವು ಸಾಧ್ವಿಯರ ಜೊತೆ ನಾಶಿಯಾದಿಂದ ಒಂದೂವರೆ ಮೈಲಿ ದೂರದಲ್ಲಿದ್ದ ದೀರ್ಘಶಂಕೆಗೆ

---

1. ಮೂಲಾಚಾರ ಗಾಥಾ ೬೦೨ರ ಟೀಕೆಯ ಅಂಶ.
2. ಅನಗಾರಧರ್ಮಾಮೃತ ಅ. ೮, ಪು. ೫೯೭.

ಹೋಗುತ್ತಿದ್ದರು. ಅಲ್ಲಿಂದ ಬಂದು ದೇವ ದರ್ಶನ ಮಾಡಿ ಸರಸ್ವತಿ ಮಂದಿರದ ಚೈತ್ಯಾಲಯದಲ್ಲಿ ಅಭಿಷೇಕ ನೋಡುತ್ತಿದ್ದರು.

ಚಂಪಾಲಾಲಜೀಯ ಪರಿವಾರದ ಕೆಲವು ಹೆಂಗಸರು, ಹುಡುಗಿಯರಿಗೆ ಉಮಾಸ್ವಾಮಿಯವರ ಶ್ರಾವಕಾಚಾರ, ಹೇಳುತ್ತಿದ್ದೆ. ಕೆಲವು ವಿದ್ಯಾರ್ಥಿಗಳು ತತ್ತ್ವಾರ್ಥ ಸೂತ್ರವನ್ನು ಅರ್ಥಸಹಿತ ಓದುತ್ತಿದ್ದರು. ಎಂಟುಗಂಟೆಯಿಂದ ಒಂಬತ್ತು ಗಂಟೆಯವರೆಗೆ ತತ್ತ್ವಾರ್ಥವಾರ್ತಿಕದ ಅಧ್ಯಯನ ಮಾಡುತ್ತಿದ್ದೆ. 9 ರಿಂದ 9¾ರವರೆಗೆ ಗೊಮ್ಮಟ ಸಾರದ ಕರ್ಮಕಾಂಡದ ಗ್ರಂಥವನ್ನು ಓದುತ್ತಿದ್ದೆ. ಅನಂತರ ಶುದ್ಧಿ ಮಾಡಿಕೊಂಡು ಮಂದಿರಕ್ಕೆ ಬರುತ್ತಿದ್ದೆ. ಆಚಾರ್ಯರಿಗೆ ವಂದನೆಯನ್ನು ಮಾಡಿ ನಂತರ ಎಲ್ಲರು ಆಹಾರಕ್ಕೆ ಹೊರಡುತ್ತಿದ್ದೆವು. ಆ ದೃಶ್ಯ ನೋಡಲು ಬಹಳ ಸುಂದರವಾಗಿ ಕಾಣುತ್ತಿತ್ತು. ಜನ ಈ ದೃಶ್ಯ ನೋಡುವುದಕ್ಕಾಗಿಯೇ ಸೇರುತ್ತಿದ್ದರು.

ಹೋ ನಾವೇನು ಚತುರ್ಥಕಾಲದ ದೃಶ್ಯವನ್ನು ನೋಡುತ್ತಿದ್ದೇವೆನೋ ಎಂದು ಉದ್ಗರಿಸುತ್ತಿದ್ದರು. ಇದರ ನಂತರ ಮಧ್ಯಾಹ್ನದ ಸಾಮಾಯಿಕ ಮಾಡಿ ನಾನು ಕ್ಷುಲ್ಲಿಕೆ ಜಿನಮತಿಗೆ ಮೂಲಾಚಾರ ಮುಂತಾದವನ್ನು ಪಾಠ ಮಾಡುತ್ತಿದ್ದೆ. ನಂತರ ಎರಡರಿಂದ ನಾಲ್ಕು ಗಂಟೆಯವರೆಗೂ ಏಳೆಂಟು ಹುಡುಗಿಯರಿಗೆ ಕಾತಂತ್ರ - ವ್ಯಾಕರಣ, ದ್ರವ್ಯ ಸಂಗ್ರಹ, ತತ್ತ್ವಾರ್ಥಸೂತ್ರ ಮೊದಲಾದವುಗಳನ್ನು ಅಧ್ಯಯನ ಮಾಡಿಸುತ್ತಿದ್ದೆ. ಸಂಘದಲ್ಲಿದ್ದ ಬ್ರಹ್ಮಚಾರಿಣಿಯರಾದ ಗಟ್ಟಬಾಯಿ, ಸೋನೂ ಬಾಯಿಯವರು ಬಂದು ತತ್ತ್ವಾರ್ಥಸೂತ್ರವನ್ನು ಅಧ್ಯಯನ ಮಾಡುತ್ತಿದ್ದರು.

ಸಾಯಂಕಾಲ ನಾಲ್ಕು ಗಂಟೆಯಿಂದ ಐದು ಗಂಟೆಯವರೆಗೆ ಆಚಾರ್ಯರ ಸಾನಿಧ್ಯದಲ್ಲಿ ಮೂಲಾಚಾರದ ಸ್ವಾಧ್ಯಾಯ ನಡೆಯುತ್ತಿತ್ತು. ಇದರಲ್ಲಿ ಎಲ್ಲ ಮುನಿಗಳು ಆರ್ಯಿಕೆಯರು ಉಪಸ್ಥಿತರಿರುತ್ತಿದ್ದರು. ಪಂಡಿತ ಪನ್ನಾಲಾಲರು ಚರಣಾನುಯೋಗದ ಒಳ್ಳೆ ವಿದ್ವಾಂಸರಾಗಿದ್ದರು. ಇವರು ಕ್ರಿಯಾಕಲಾಪ, ಅಭಿಷೇಕ ಪಾಠ ಮುಂತಾದ ಗ್ರಂಥಗಳ ಸಂಪಾದನೆಯನ್ನು ಮಾಡಿದ್ದರು. ಇದರಿಂದಲೇ ಆಚಾರ್ಯರು ಪಂಡಿತರನ್ನು ಸಾಯಂಕಾಲದಲ್ಲಿ ಸ್ವಾಧ್ಯಾಯದಲ್ಲಿ ಮೂಲಾಚಾರವನ್ನು ಓದಿಸಲು ಕೂರಿಸುತ್ತಿದ್ದರು.

ಸಾಯಂಕಾಲದ ಸಾಮಾಯಿಕದ ನಂತರ ನಾನಾ ಹಸ್ತ ಲಿಖಿತ ಗ್ರಂಥಗಳನ್ನು ನೋಡುತ್ತಿದ್ದ ಈ ಕೆಲಸದಲ್ಲಿ ರಾತ್ರಿ 11½ - 12 ಗಂಟೆಗಳಾಗುತ್ತಿತ್ತು. ಆಗ ಬಹಳ ಆಯಾಸಗೊಳ್ಳುತ್ತಿದ್ದೆ. ಇಡೀ ಚಾತುರ್ಮಾಸದಿಂದ ಹಿಡಿದು ಜೇಷ್ಠ ಶುದ್ಧ ಪಂಚಮಿಯಿಂದ ಮಾರ್ಗಶಿರದವರಗೆ ನನ್ನ ದಿನಚರಿ ಇದೇ ಆಗಿರುತ್ತಿತ್ತು. ಕೆಲವು ವೇಳೆ ಇದರಲ್ಲಿ ಬದಲಾವಣೆ ಆದರೂ ನನಗೆ ಅದೇ ಕೆಲಸದಿಂದ ಆತ್ಮ ಸಂತೋಷ ಸಿಗುತ್ತಿತ್ತು. ಇಂದು ಕೂಡ ನನಗೆ ಆಗ ಮಾಡಿದ ಕೆಲಸ ಮುದ ಕೊಡುತ್ತದೆ.

ಅಸ್ವಸ್ಥತೆ

ಬೇಸಿಗೆಯ ಕಾರಣದಿಂದ ಆಹಾರ ಮಾಡಿಕೊಂಡು ಬರುತ್ತಲೆ ದೀರ್ಘಶಂಕೆಯಿಂದ ಮತ್ತೆ ಹೋಗಿ ಬರುವುದರಿಂದ ಅರ್ಧ ಗಂಟೆ ಅದರಲ್ಲೇ ಕಳೆಯುತ್ತಿದ್ದರಿಂದ ನನಗೆ ನೆಮ್ಮದಿಯೇ ಹಾಳಾಗುತ್ತಿತ್ತು. ಆದರೂ ಮನಸ್ಸಿನಲ್ಲಿ ಒಂದಲ್ಲ ಒಂದರ ಬಗ್ಗೆ ಯೋಚಿಸುತ್ತಿದ್ದೆನೇ ಹೊರತು ಆರೋಗ್ಯದ ಬಗ್ಗೆ ಚಿಂತೆ ಮಾಡುತ್ತಿರಲಿಲ್ಲ. ಯಾವ ಔಷಧಿಯನ್ನು ತೆಗೆದುಕೊಳ್ಳುತ್ತಿರಲಿಲ್ಲ. ಶರೀರದ ಕಡೇ ಗಮನ ಕೊಡದೆ ಕೆಲಸಮಾಡುವುದು ನನ್ನ

ಉದ್ದೇಶವಾಗಿತ್ತು. ಹೀಗೆ ವೈರಾಗ್ಯ ಭಾವನೆಯ ಚಿಂತನೆ ಮಾಡುತ್ತಾ ನನ್ನ ಸಮಯ ಶುಭೋಪಯೋಗದಲ್ಲಿ ಕಳೆಯುತ್ತಿತ್ತು. ಯಾವಾಗ ರಾತ್ರಿಯಲ್ಲಿ ಲಾಟೀನಿನ ಬೆಳಕಿಗೆಪತಂಗಗಳು ಬರತೊಡಗಿದ್ದರಿಂದ ರಾತ್ರಿಯಲ್ಲಿ ಹಸ್ತಲಿಖಿತ ಗ್ರಂಥಗಳ ಅವಲೋಕನದ ಕೆಲಸವನ್ನು ನಿಲ್ಲಿಸಿದೆ. ಹೊರಗಡೆ ತಾರಸಿಯ ಮೇಲೆ ನಿಂತು ದೂರದ ಬೆಳಕಿನಿಂದಲೇ ಕರ್ಮಕಾಂಡದ ಮೂರು - ನಾಲ್ಕು ಗಾಥೆಗಳನ್ನು ಬಾಯಿ ಪಾಠ ಮಾಡುತ್ತಾಅನುಪ್ರೇಕ್ಷೆ ಹಾಗು ಆಮ್ನಾಯಗಳನ್ನು ಸ್ವಾಧ್ಯಾಯ ಮಾಡತೊಡಗಿದೆ.

ಆಮ್ನಾಯದ ಸ್ವಾಧ್ಯಾಯ

ದಶಲಕ್ಷಣ ಪರ್ವದಲ್ಲಿ ತತ್ತ್ವಾರ್ಥಸೂತ್ರದ ಅರ್ಥಸಹಿತವಾದ ವಾಚನ ಮಾಡಲು ಒಬ್ಬ ವಿದ್ವಾಂಸ ಶಾಸ್ತ್ರಿಗಳನ್ನು ಆಮಂತ್ರಿಸಿದ್ದರು. ಒಂಬತ್ತನೆಯ ಅಧ್ಯಾಯದ ಅರ್ಥವನ್ನು ಹೇಳುತ್ತಾ ಪಂಡಿತರು ಸ್ವಾಧ್ಯಾಯದ ಐದು ಭೇದಗಳನ್ನು ವರ್ಣನೆ ಮಾಡುತ್ತಿದ್ದರು.

ವಾಚನಾ ಪೃಚ್ಛನಾನುಪ್ರೇಕ್ಷಾಮ್ನಾಯ ಧರ್ಮೋಪದೇಶಾಃ ॥

ಸ್ವಾಧ್ಯಾಯವೆಂಬ ಹೆಸರಿನ ತಪದ ಐದು ಭೇದಗಳೆಂದರೆ ವಾಚಾನಾ, ಪೃಚ್ಛನಾ, ಅನುಪ್ರೇಕ್ಷಾ, ಆಮ್ನಾಯ ಮತ್ತು ಧರ್ಮೋಪದೇಶ.

೧. ಜಿನೇಂದ್ರದೇವನ ಮುಖಕಮಲದಿಂದ ಹೊರಟಿರುವ ಮತ್ತು ಗಣಧರ ಗುರುಗಳಿಂದ ಗ್ರಂಥಸ್ಥವಾದ ಗ್ರಂಥಗಳನ್ನು ಓದುವುದು ಮತ್ತು ಓದಿಸುವುದೇ ವಾಚನಾ.

೨. ಮನದಲ್ಲಿ ಉಂಟಾದ ಶಂಕೆಯನ್ನು ಅಥವಾ ವಿಶೇಷತೆಯನ್ನು ತಿಳಿಯುವ ಉದ್ದೇಶದಿಂದ ಗುರುಗಳಲ್ಲಿ ಪ್ರಶ್ನೆ ಮಾಡಿ ಸಮಾಧಾನ ಪಡೆಯುವುದೇ ಪೃಚ್ಛನಾ.

೩. ಓದಿದ್ದನ್ನು ಮತ್ತೆ ಮತ್ತೆ ಚಿಂತಿಸುವುದೇ ಅನುಪ್ರೇಕ್ಷಾ

೪. ಓದಿದ್ದನ್ನು ಬಾಯಿಪಾಠ ಮಾಡುವುದೇ ಆಮ್ನಾಯ

೫. ಧರ್ಮಕಥೆ ಮುಂತಾದವುಗಳನ್ನು ಕೇಳುವುದೇ (ಆಮ್ನಾಯ) ಧರ್ಮೋಪದೇಶ.

ಈ ಐದು ಪ್ರಾಕಾರದ ಸ್ವಾಧ್ಯಾಯದ ಅರ್ಥವನ್ನು ಹೇಳುತ್ತಾ ಪಂಡಿತರು ಆಮ್ನಾಯದ ಅರ್ಥ ಮಾಡುತ್ತಾ ಹೇಳಿದರು. ತೇರಹ ಪಂಥ ಮತ್ತು ಬೀಸ ಪಂಥಗಳಲ್ಲಿ ಎರಡು ಆಮ್ನಾಯ ಪ್ರಚಲಿತದಲ್ಲಿದೆ. ಆದರೆ ವಾಸ್ತವವಾಗಿ ವೀತರಾಗ ಪಂಥವೇ ಶುದ್ಧವಾದದು ಫಲ. ಪುಷ್ಪ ದೀಪ ಮುಂತಾದ ಸಚಿತ್ತ ವಸ್ತುಗಳಿಂದ ಪೂಜೆ ಮಾಡುವುದು ಸರಿ ಅಲ್ಲ ಎಂದರು. ಇವರು ಏನು ಶಬ್ದ ಹೇಳಿದ್ದರೂ ಮರೆತಿದ್ದೇನೆ ಆದರೆ ಅವುಗಳ ಭಾವ ನೆನಪಿದೆ. ಹೀಗೆ ವಿವೇಚನೆ ಮಾಡುತ್ತಾ ತುಂಬ ಮಾತಾಡಿಬಿಟ್ಟರು. ಆ ಸಮಯದಲ್ಲಿ ಆಚಾರ್ಯರು ನಮ್ಮೆಲ್ಲರ ಮುಖಗಳನ್ನು ನೋಡಿ ಮುಗುಳ್ನಕ್ಕರು. ಹೀಗೆ ಉಪದೇಶ ಮಾಡುತ್ತಲೇ ಇದ್ದರು. ಬಹುಶಃ ಶ್ರುತಸಾಗರರು ತಡೆದರು ಅನ್ನಿಸುತ್ತದೆ. ಪಂಡಿತರೇ ನೀವು ಆಮ್ನಾಯದ ಅರ್ಥವನ್ನು ತಪ್ಪಾಗಿ ಭಾವಿಸಿದ್ದೀರಿ ಇದು ಸ್ವಾಧ್ಯಾಯಕ್ಕೆ ಸಂಬಂಧಿಸಿದ್ದು ಆದರೆ ನೀವು ಪಂಥ ಭೇದವನ್ನು ಹೇಳುತ್ತಿದ್ದೀರಲ್ಲ ಎಂದರು. ಆಗ ಆಚಾರ್ಯರು ನನಗೂ ಮಾತಾಡಲು ಅವಕಾಶವನ್ನು ಕೊಟ್ಟರು ನಾನು ತತ್ತ್ವಾರ್ಥ ರಾಜವಾರ್ತಿಕದ ಆಧಾರದ ಮೇಲೆ ಆಮ್ನಾಯದ ಅರ್ಥವನ್ನು ಹೇಳಿದೆ. ನಿಜವಾಗಿ ಸಭೆಯಲ್ಲಿ ಪ್ರಬುದ್ಧ ಜನರು ಕುಳಿತಿದ್ದರು. ವಿದ್ವಾಂಸರು ಮುನಿಗಳು, ಆರ್ಯಿಕೆಯರು ಪಂಡಿತರು ಇದ್ದುದ್ದರಿಂದ ಪಂಡಿತರು ಮೌನವಾದರು. ಬ್ಯಾವರದಲ್ಲಿ ಪಂಡಿತ ಪನ್ನಾಲಾಲಜೀ ಸೋನೂಬಾಯಿಯವರು ಸಿದ್ಧಾಂತ, ನ್ಯಾಯ,

ವ್ಯಾಕರಣ ಮುಂತಾದ ಗ್ರಂಥಗಳ ತಲಸ್ಪರ್ಶಿ ವಿದ್ವಾಂಸರಾಗಿದ್ದರು. ಬರೆಯುವುದರಲ್ಲೂ ಸಿದ್ಧಹಸ್ತರು. ಆದರೆ ಖೇದದ ವಿಷಯವೆಂದರೆ ವಕ್ತೃತ್ವವು ಅವರಲ್ಲಿ ಇರಲಿಲ್ಲ. ಸಭೆಯಲ್ಲಿ ಐದು ನಿಮಿಷವು ಮಾತಾಡುವ ಧೈರ್ಯ ಮಾಡುತ್ತಿರಲಿಲ್ಲ. ಇದರಿಂದಾಗಿಯೇ ಬೇರೆ ಕಡೆಯಿಂದ ವಿದ್ವಾಂಸರನ್ನು ಕರೆಸಿದ್ದರು. ಬ್ಯಾವರದಲ್ಲಿ ಚಾತುರ್ಮಾಸ ಮುಗಿಯುವ ಮೊದಲೆ ಧರ್ಮಸಾಗರರು, ಪದ್ಮಸಾಗರರನ್ನು ಜೊತೆಯಲ್ಲಿ ಕರೆದುಕೊಂಡು 'ಕಾಲೂ' ಎಂಬ ಹಳ್ಳಿಗೆ ಹೊರಟರು.

೩೦

ಜಯಪುರದಲ್ಲಿ ಗುರುಚರಣದ ಸ್ಥಾಪನೆ

ಬ್ಯಾವರದ ಚಾತುರ್ಮಾಸದ ನಂತರ ಬ್ರಹ್ಮಚಾರಿ ಸೂರಜಮಲ್ಲಜೀಯವರು ನಿವೇದನೆ ಮಾಡಿದರು. ಮಹಾರಾಜಜೀ ಖಾನಿಯಾದಲ್ಲಿ ಆಚಾರ್ಯ ವೀರಸಾಗರಜೀ ಮಹಾರಾಜರ ನಿಷಧ್ಯ ಸ್ಥಾನದಲ್ಲಿ ಛತ್ರಿಯನ್ನು ನಿರ್ಮಿಸಲಾಗಿದೆ. ತಾವು ಸಂಘ ಸಮೇತ ಬಂದು ಗುರುಗಳ ಚರಣ ಪಾದುಕೆಗಳನ್ನು ಸ್ಥಾಪಿಸಬೇಕೆಂದು, ಗುರುಗಳು ಸಮ್ಮತಿಸಿ ತಮ್ಮ ಇಡೀ ಚತುರ್ವಿಧ ಸಂಘದೊಡನೆ ಜಯಪುರಕ್ಕೆ ಬಂದರು. 'ಖಾನಿಯಾ' ದಲ್ಲಿ ಒಳ್ಳೆಯ ಮೂಹೂರ್ತದಲ್ಲಿ ಚರಣಪಾದುಕೆಗಳನ್ನು ಸ್ಥಾಪಿಸಲಾಯಿತು. ಗುರುವರ್ಯರ ಗುಣಗಳನ್ನು ಗಾನ ಮಾಡುತ್ತಾ ಗುರುದೇವರ ನಿಷಧ್ಯದ ವಂದನೆಯ ಸಮಾರಂಭ ಜರುಗಿತು. ಇಷ್ಟರಲ್ಲಿ ಇಲ್ಲಿಗೆ ಕ್ಷುಲ್ಲಕ ಶ್ರೀ ಜ್ಞಾನಭೂಷಣರು ಬಂದರು. ಅವರು ಮೊದಲು ವೀರಸಾಗರರ ಸಂಘದಲ್ಲಿ ಪಂ. ಬೂರಾಮಲ್ಲಜೀ ಎಂಬ ಹೆಸರಿನ ಪ್ರಸಿದ್ಧ ವಿದ್ವಾಂಸರಾಗಿ ಬಹಳಷ್ಟು ದಿನ ಇದ್ದರು. ಸಂಘದ ಬ್ರಹ್ಮಚಾರಿಗಳು ಹಾಗೂ ಮುನಿಗಳುಆರ್ಯಿಕೆಯರು ಸಹ ಅವರಲ್ಲಿ ಅಧ್ಯಯನ ಮಾಡುತ್ತಿದ್ದರು. ಅನಂತರ ಯಾವುದೋ ವಿಷಯಕ್ಕೆ ಭಿನ್ನಾಭಿಪ್ರಾಯ ಬಂದು ಅವರು ಸಂಘದಿಂದ ಬೇರೆ ಆಗಿದ್ದರು.

ಮತಭೇದ

ಈ ವಿಷಯವನ್ನು ಸಂಘದ ಹಿರಿಯ ಮಾತಾಜೀಯವರಾದ ಸುಮತಿಮತೀ ಮಾತಾಜೀಯವರು ಹೇಳಿದರು. ಪಂಡಿತ ಬೂರಾಮಲ್ಲಜೀಯವರು ಒಂದು ರೀತಿಯ ಸುಧಾರಕ ವಿಚಾರಧಾರೆಯುಳ್ಳ ವಿದ್ವಾಂಸರಾಗಿದ್ದರು. ಜಾತಿವ್ಯವಸ್ಥೆ, ವರ್ಣ ವ್ಯವಸ್ಥೆಯನ್ನು ಒಪ್ಪುತ್ತಿರಲಿಲ್ಲ. ಅವರ ವಿಚಾರಧಾರೆ 'ತೇರಹ ಪಂಥ' ದ ವಿಚಾರಧಾರೆ ಯಾಗಿತ್ತು. ಎಲ್ಲಕ್ಕಿಂತ ಹೆಚ್ಚಿನ ವಿಷಯವೆಂದರೆ ಹಸಿರುತರಕಾರಿ ಮತ್ತು ಫಲಗಳ ಕಣ-ಕಣಗಳಲ್ಲೂ ಜೀವವಿರುತ್ತದೆ ಎಂಬುದನ್ನು ಪ್ರತಿಪಾದಿಸುತ್ತಾ ಈ ಕಾರಣದಿಂದಲೇ ದಾಳಿಂಬೆ, ಕಿತ್ತಲೆ ಹಣ್ಣಿನ ರಸವನ್ನು ಸಹ ಬಿಸಿ ಮಾಡಿಯೇ ತೆಗೆದುಕೊಳ್ಳುತ್ತಿದ್ದರು. ಈ ವಿಷಯವನ್ನು ಧೃಢವಾಗಿ ಪ್ರತಿಪಾದಿಸುತ್ತಿದ್ದರು. ಆಚಾರ್ಯ ವೀರಸಾಗರರಾರೋ ಶಾಂತಿ ಸಾಗರರ ಪರಮಭಕ್ತರು. ಅವರ ಪರಂಪರೆಯನ್ನು ಅನುಸರಿಸುತ್ತಿದ್ದರು. ಈ ಸುಧಾರಕ ವಿಚಾರಧಾರೆಯನ್ನು ಒಪ್ಪುತ್ತಿರಲಿಲ್ಲ. ಆದರೂ ಗೊತ್ತಿಲ್ಲದೆ ಸಾಧು ವರ್ಗದಲ್ಲಿ ಈ ವಿಚಾರಧಾರೆಗಳು ಪ್ರಭಾವ ಬೀರತೊಡಗಿದವು. ಹಿರಿಯ ಮಾತಾಜೀಯವರಾದ ವೀರಮತಿಯವರು ಸಹ ಸೇಬು, ಮಾವಿನ ಹಣ್ಣು, ಕಿತ್ತಲೆ ಮೊದಲಾದ ಹಣ್ಣುಗಳ ರಸವನ್ನು ಬಿಸಿಮಾಡಿಯೇ ತೆಗೆದುಕೊಳ್ಳತೊಡಗಿದರು. ಇದರಿಂದಾಗಿ ಸಂಘದಲ್ಲಿ ಸಂಘರ್ಷದ ವಾತಾವರಣ ಉಂಟಾಗ ತೊಡಗಿ ಅವರನ್ನು ಸಂಘದಿಂದ ಬೇರೆ ಮಾಡಬೇಕಾಗಿ ಬಂದಿತು.

ಇಲ್ಲಿಂದ ಬೇರೆ ಹೋದ ಅವರು ಕ್ಷುಲ್ಲಿಕ ದೀಕ್ಷೆಯನ್ನು ಪಡೆದವರು ಈಗ ಬಂದಿದ್ದರು. ಅವರು ಖಾನಿಯಾದಲ್ಲಿ ಮಾತಾಡುತ್ತಾ ಹೇಳಿದರು. ನನಗೆ ಈಗ ವಯಸ್ಸಾಗಿದೆ. ನಾನು ನನ್ನ ಸಮಾಧಿಯನ್ನು ಸಿದ್ಧಗೊಳಿಸಿಕೊಳ್ಳಬೇಕಾಗಿದೆ. ಆದ್ದರಿಂದ ನಾನು ಮುನಿದೀಕ್ಷೆಯನ್ನು ಪಡೆದು ಸಂಘದಲ್ಲೇ ಸಮಾಧಿಯನ್ನು ಪಡೆಯಲು ಅವಕಾಶ ಕೊಡಿ ಎಂದರು.

ಕೋರಿಕೆಯು ಚರ್ಚೆಯ ವಿಷಯವಾಯಿತು. ಆಚಾರ್ಯರು ಮುನಿಗಳ ಪಂಡಿತರ ಜೊತೆ ಸಮಾಲೋಚಿಸಿದರು. ಕ್ಷುಲ್ಲಕ ಜ್ಞಾನಭೂಷಣರು ಪ್ರೇಮಭಾವದಿಂದ ಪಂ. ರಾಜಮಲ್ಲಜೀಯವರೊಡನೆ ಅನೇಕ ಸಲ ನಿವೇದನೆಯನ್ನು ಮಾಡಿಕೊಂಡರು. ಸಂಘದ ನಿಯಮದಂತೆಯೇ ನನಗೆ ಮುನಿದೀಕ್ಷೆಯನ್ನು ಕೊಟ್ಟು ಸಂಘದಲ್ಲಿ ಆಶ್ರಯವನ್ನು ಕೊಡಲಿ ಎಂದು.

ಕೊನೆಗೆ ಮುನಿವರ್ಗದಲ್ಲಿ ಒಂದು ನಿರ್ಣಯಕ್ಕೆ ಬಂದರು. ಈ ಪಂಡಿತ ಮುನಿಗಳು ತಮ್ಮ ವಿಚಾರಧಾರೆಯನ್ನು ಬದಲಿಸಲಾರದವರು ತಮ್ಮ ಮಟ್ಟಿಗೆ ಮಾತ್ರ ಸೀಮಿತಗೊಳಿಸಿಕೊಂಡು ಸಂಘದಲ್ಲಿ ತಮ್ಮ ವಿಚಾರದ ಪ್ರಭಾವವನ್ನು ಬೀರಕೂಡದೆಂದು ಹೇಳಲಾಗಿ ಅವರು ಅದನ್ನು ಸ್ವೀಕರಿಸಲಾಗಿ ಅವರಿಗೆ ಜ್ಞಾನಸಾಗರರೆಂಬ ಹೆಸರಿನೊಡನೆ ಮುನಿದೀಕ್ಷೆಯನ್ನು ಕೊಡಲಾಯಿತು. ಸಂಘವು ಅಲ್ಲಿಂದ ವಿಹಾರ ಮಾಡುತ್ತಾ ಜಯಪುರಕ್ಕೆ ಬಂದಿತು. ಕೆಲವುದಿನಗಳು ಇಲ್ಲಿಯೇ ಇದ್ದರು.

ಆರ್ಷ ಪರಂಪರೆ

ಈ ಸಮಯದಲ್ಲಿ ಸಂಘದಲ್ಲಿ ಆರ್ಷ ಪರಂಪರೆಯು ರಕ್ಷಿತವಾಗಿದೆ ಎಂದರೆ ಅದರ ಗೌರವವು ಚಾರಿತ್ರ ಚಕ್ರವರ್ತಿ ಆಚಾರ್ಯ ಶಾಂತಿ ಸಾಗರರ ಪರಂಪರೆಯ ಎಲ್ಲ ಶಿಷ್ಯರು ಕೂಡ ಆರ್ಷ ಪರಂಪರೆಯನ್ನು ರಕ್ಷಿಸಿಕೊಂಡು ಬರುತ್ತಿದ್ದಾರೆ. ಇವರ ಪ್ರಥಮ ಪಟ್ಟಾದೀಶ ಶಿಷ್ಯರಾದ ಶ್ರೀ ವೀರಸಾಗರರ ಎಲ್ಲ ಶಿಷ್ಯರು ಕೂಡ ಕಟ್ಟಾ ಅನುಯಾಯಿಗಳಾಗಿದ್ದರು. ಇವರ ಎರಡನೆಯ ಶಿಷ್ಯರಾದ ಆಚಾರ್ಯ ಶ್ರೀ ಶಿವಸಾಗರರು ಕೂಡ ಆಗಮ ಪರಂಪರೆಯಲ್ಲಿ ನಂಬಿಕೆಯನ್ನು ಇಟ್ಟಿರುವವರಾಗಿದ್ದರು. ಈ ನಿಯಮಗಳನ್ನು ಅನುಷ್ಠಾನಕ್ಕೆ ತರಲಾಗದಿದ್ದವರು ಸಂಘದಿಂದ ಬೇರೆಯಾಗಿದ್ದರು. ಆಚಾರ್ಯ ಶಿವಸಾಗರರ ಪಟ್ಟಾಧೀಶ ಆಚಾರ್ಯ ಶ್ರೀ ಧರ್ಮಸಾಗರರು ದೆಹಲಿಗೆ ಬಂದು ನಿರ್ವಾಣ ಮಹೋತ್ಸವದ ಸಮಯದಲ್ಲಿ ಒಳ್ಳೆಯ ಧರ್ಮ ಪ್ರಭಾವನೆಯನ್ನು ಮಾಡಿದರು. ಉತ್ತರ ಪ್ರಾಂತದಲ್ಲಿ ಅನೇಕ ಸಂಘರ್ಷದ ಪ್ರಸಂಗದಲ್ಲಿಯು ಸಹ ಯಜ್ಞೋಪವೀತ, ಸಚ್ಚಾತೀಯತೆ, ಮತ್ತು ಬೀಸ ಪಂಥೀ ಆರ್ಷ ಪರಂಪರೆಯಲ್ಲಿ ಧೃಡವಾಗಿದ್ದವರು. ತಮ್ಮ ಸರಳತೆ, ನಿಸ್ಪೃಹತೆ, ಮತ್ತು ಚಾರಿತ್ರದಲ್ಲಿ ಧೃಡತೆಯಿಂದಾಗಿ ಮುನಿ ಭಕ್ತ ಸಮಾಜದಲ್ಲಿ ಹಾಗೇ ಸುಧಾರಕ ವರ್ಗದ ಜನರಲ್ಲಿಯು ತಮ್ಮ ಪ್ರಭಾವವನ್ನು ಬೀರಿದ್ದಾರೆ.

ಈ ಕಾರಣದಿಂದಾಗಿಯೇ ಇಂದಿನ ವಿಷಮ ಯುಗದಲ್ಲಿಯು ಸಹ ಈ ಮಹಾಮುನಿಗಳ ಆರ್ಯಿಕೆಯರ ಸಂಘಗಳಲ್ಲಿ ಆರ್ಷ ಪರಂಪರೆಯು ರಕ್ಷಿತವಾಗಿ ಚತುರ್ಮುಖೀ ಧರ್ಮಭಾವನೆಯು ಆಗುತ್ತಿರುವುದು.

ಇದರಿಂದ ಆದ ಅನುಭವವೆಂದರೆ ದೀಕ್ಷೆ ತೆಗೆದುಕೊಳ್ಳಲು ಬಂದ ವಿನಂತಿಗಳನ್ನು ಪರೀಕ್ಷಿಸಿ ಅವರ ಧೃಡತೆಯನ್ನು ಪರೀಕ್ಷಿಸಿದ ನಂತರವೇ ದೀಕ್ಷೆಯನ್ನು ಕೊಡಬೇಕೆಂದರು. ಅಲ್ಲದಿದ್ದರೆ ಅವಸರದಿಂದ ತೆಗೆದುಕೊಂಡ ಶಿಷ್ಯರಲ್ಲಿ ಸ್ವಚ್ಛಂದತೆ ಉಂಟಾಗುತ್ತದೆ. ಇದರಿಂದ ಆರ್ಷ ಪರಂಪರೆಗೆ ಹಾನಿ ಉಂಟಾಗುತ್ತದೆ. ಧರ್ಮಪ್ರಭಾವನೆ

ಆಗದೆ ಅಪಪ್ರಚಾರವಾಗುತ್ತದೆ. ಮೋಕ್ಷ ಮಾರ್ಗವನ್ನು ಚ್ಯುತಿ ಇಲ್ಲದಂತೆ ನಡೆಸಿಕೊಂಡು ಜೊತೆ ಜೊತೆಯಲ್ಲಿಯೇ ಆರ್ಷ ಪರಂಪರೆಯನ್ನು ರಕ್ಷಿಸುವ ದೃಷ್ಟಿಯಿಂದ ದೀಕ್ಷೆ ತೆಗದುಕೊಂಡು ಧರ್ಮವನ್ನು ಸರ್ವೋತೋಮುಖ ಉನ್ನತಿಯತ್ತ ಒಯ್ಯಬೇಕು. ಸಂಘವನ್ನು ಬೆಳಸಬೇಕು ಎನ್ನುವ ದೃಷ್ಟಿಯಿಂದ ಅಪಾತ್ರರಿಗೆ ದೀಕ್ಷೆಯನ್ನು ಕೊಡಬಾರದು. ಯಾರು ದುರಾಗ್ರಹಿಗಳೋ ಅವರಿಗೆ ಗುರುಗಳ ಬಗ್ಗೆ ಪೂರ್ಣ ಸಮರ್ಪಣಾ ಭಾವ ಇರುವುದಿಲ್ಲ. ಗುರುಪರಂಪರೆಯನ್ನು ಮುನ್ನೆಡೆಸುವುದರಲ್ಲಿ ದೃಢತೆ ಇರುವುದಿಲ್ಲ ಅಥವಾ ಚಾರಿತ್ರದಲ್ಲಿ ಶಿಥಿಲತೆ ಇರುತ್ತದೆ. ಇಂತಹ ಶಿಷ್ಯನು ಅಪಾತ್ರನು ಜೈನೇಶ್ವರಿ ದೀಕ್ಷೆಗೋಸ್ಕರ ಅಥವಾ ಆರ್ಯಿಕೆ, ಐಲಕ, ಕ್ಷುಲ್ಲಕ ಮತ್ತು ಕ್ಷುಲ್ಲಿಕೆಯ ದೀಕ್ಷೆಗೆ ಅವರು ಯೋಗ್ಯರಲ್ಲ. ಇವತ್ತು ಶಿಷ್ಯರ ಲೋಭದಲ್ಲಿ ಬಿದ್ದು ಪಾತ್ರತೆಯನ್ನು ವಿಚಾರ ಮಾಡದೇ ಬೇಗನೆ ದೀಕ್ಷೆಯನ್ನು ಕೊಟ್ಟುಕೊಂಡು ಅವರಿಂದ ಧರ್ಮದ ಅಪ್ರಭಾವನೆಯ ಪ್ರಸಂಗವನ್ನು ನೋಡುತ್ತಿದ್ದೇವೆ.

ಮಾನಸ್ತಂಭದ ಪ್ರತಿಷ್ಠೆ

ದೀವಾನಜೀ ನಶಿಯಾದಲ್ಲಿ ಒಬ್ಬ ಕ್ಷುಲ್ಲಿಕೆ ವೃಷಭಸೇನೆಯು ಬಹಳ ಸಾಹಸಮಾಡಿ ಜನರಿಂದ ಹಣವನ್ನು ಸಂಗ್ರಹಿಸಿ ಒಂದು ಮಾನಸ್ತಂಭವನ್ನು ಮಾಡಿಸಿದ್ದರು. ಅಲ್ಲಿಯ ಪ್ರಮುಖ ಹೆಂಗಸರಾದ ದೀವಾನಜೀ ಮತ್ತು ಕ್ಷುಲ್ಲಿಕೆ ಮಾತಾಜೀಯವರು ಆಚಾರ್ಯರ ಹತ್ತಿರ ಪ್ರಾರ್ಥಿಸಿದರು. ತಮ್ಮ ಸಾನಿಧ್ಯದಲ್ಲಿ ಮಾನಸ್ತಂಭದ ಪಂಚಕಲ್ಯಾಣವನ್ನು ನೆರವೇರಿಸಬೇಕೆಂದು ಬಯಸುತ್ತಿದ್ದೇವೆ ಆದ್ದರಿಂದ ತಾವು ನಶಿಯಾಕ್ಕೆ ಬಂದು ಈ ಮಹೋತ್ಸವ ನೆರವೇರಿಸಬೇಕು. ಪ್ರತಿಷ್ಠಾಚಾರ್ಯರಲ್ಲಿ ಬ್ರಹ್ಮಚಾರಿ ಸೂರಜಮಲ್ಲರನ್ನು ಪ್ರಾರ್ಥಿಸಿ ಒಪ್ಪಿಗೆ ಪಡೆದುಕೊಂಡರು. ಹಾಗೆಯೇ ಆಚಾರ್ಯರ ಸಮ್ಮತಿಯು ದೊರಕಿತು. ನಮ್ಮ ದೊಡ್ಡ ಸಂಘವು ಅಲ್ಲಿಗೆ ತೆರಳಿ ಆ ಮೂಹೂರ್ತದಲ್ಲಿಯೇ ಪ್ರತಿಷ್ಠೆ ನಡೆಯಿತು. ಮಹೋತ್ಸವವವು ಬಹಳ ವಿಜೃಂಭಣೆಯಿಂದ ನೆರವೇರಿತು. ಜಯಪುರದಲ್ಲಿ ಒಳ್ಳೆಯ ಧರ್ಮ ಪ್ರಭಾವನೆಯು ಉಂಟಾಯಿತು.

ಅಜಮೇರದತ್ತ ಪ್ರಯಾಣ

ಆಗಲೇ ಮುಂದಿನ ಚಾತುರ್ಮಾಸಕ್ಕಾಗಿ ಅಜಮೇರದ ಶ್ರಾವಕರು ಒಂದು ಕೋರಿಕೆಯನ್ನು ಇಟ್ಟರು. ಸೇಠ್ ಭಾಗಚಂದ ಸೋನಿಯವರು ಹಲವಾರು ಬಾರಿ ಬಂದು ನಿವೇದನೆಯನ್ನು ಮಾಡಿಕೊಂಡರು. ಈ ಕಡೆ ಜಯಪುರದ ಶ್ರಾವಕರು ಬಂದಿರುವ ಮುನಿಗಳನ್ನು ಕಳುಹಿಸಲು ಸಿದ್ಧರಿರಲಿಲ್ಲ. ಸಿಕ್ಕ ನಿಧಿಯನ್ನು ಬಿಡದವರಂತೆ. ಕೊನೆಗೆ ಅಳೆದು ಸುರಿದು ಆಚಾರ್ಯರು ಅಜಮೇರದಲ್ಲಿ ಚಾತುರ್ಮಾಸಕ್ಕೆ ಹೋಗಲು ಅನುಮತಿಯನ್ನು ಕೊಟ್ಟರು. ಸಮಯ ಬಹಳ ಕಡಿಮೆ ಇದ್ದುದ್ದರಿಂದ ವೃದ್ಧ ಆರ್ಯಿಕೆಯರಾದ ಸುಮತೀ ಬಾಯಿ ಮಾತಾಜೀಯವರು ಅಜಮೇರದ ಕಡೆಗೆ ಪ್ರಯಾಣ ಮಾಡಲು ಹಿಂಜರಿದರು. ಒಳ್ಳೆಯ ಸಂಘರ್ಷದ ವಾತಾವರಣ ಉಂಟಾಯಿತು. ಆಚಾರ್ಯರು ಅವರನ್ನು ಸಮಾಧಾನಗೊಳಿಸಲು ಪ್ರಯತ್ನಪಟ್ಟರು ಅವರಿಗೆ ಹಿಂಜರಿಕೆ ದೂರವಾಗಲಿಲ್ಲ. ಕೊನೆಗೆ ಮುನಿಗಳು ಮಾತ್ರ ಪ್ರಯಾಣ ಮಾಡುವುದು ಆರ್ಯಿಕೆಯರು ಅಲ್ಲೇ ಉಳಿದುಕೊಳ್ಳುವಂತೆ ನಿರ್ಣಯಿಸಲಾಯಿತು. ಈ ವಿಷಯ ಆರ್ಯಿಕೆ ವೀರಮತಿಗೆ ರುಚಿಸಲಿಲ್ಲ ಆದರೆ ಆರ್ಯಿಕೆ ಸುಮತೀಮತಿಯವರು ವಿಹಾರಕ್ಕೆ ಮನಸ್ಸು

ಮಾಡಲಿಲ್ಲವಾಗಿ ಆಚಾರ್ಯರು ನನ್ನನ್ನು ಕರೆದು ಹೇಳಿದರು. ಜ್ಞಾನಮತೀ ನೀನು ಆರ್ಯಿಕೆ ಸಂಘದೊಡನೆ ಅಜಮೇರದ ಕಡೆಗೆ ಪ್ರಯಾಣ ಬೆಳೆಸಲು ಬಯಸುತ್ತೇನೆ ಎಂದರು. ಮತ್ತು ನಾನಾ ರೀತಿಯ ಆಶ್ವಾಸನೆ ಕೊಟ್ಟು ನೀನು ಸಂಘದ ಜೊತೆ ಹೊರಡು ಎಂದರು. ನಾನು ಮೌನವಾಗಿ ಕೇಳುತ್ತಿದ್ದೆ ಇದರಿಂದ ಆರ್ಯಿಕೆಯರ ಸಂಘದಲ್ಲಿ ಅಶಾಂತಿ ಉಂಟಾಗುತ್ತದೆ, ಈ ಅಶಾಂತಿಯ ಭಯದಿಂದ ಆಚಾರ್ಯರಲ್ಲಿ ವಿನಂತಿಸಿದೆ ಮಹಾರಾಜಜೀ ಎಲ್ಲ ಆರ್ಯಿಕೆಯರು ಹೊರಟರೆ ನಾನು ಹೊರಡುತ್ತೇನೆ ಇದನ್ನು ಕೇಳಿ ಆಚಾರ್ಯರಿಗೆ ಬೇಜಾರಾಯಿತು. ಆದರೆ ಅಶಾಂತಿಯ ಭಯದಿಂದಾಗಿ ನಾನು ಆಚಾರ್ಯರ ಆಜ್ಞೆಯನ್ನು ಪಾಲಿಸಲಾರಳಾದೆ.

ಅನಂತರ ಸೂರಜಮಲ್ಲಜೀ ಮತ್ತು ಅಜಮೇರದ ಪ್ರಮುಖರ ಆಗ್ರಹದಿಂದಾಗಿ ಎಲ್ಲ ಆರ್ಯಿಕೆಯರು ಹೊರಟರು. ಆಚಾರ್ಯರು ಸಂಘ ಸಮೇತ ವಿಹಾರ ಹೊರಟೇಬಿಟ್ಟಿದ್ದರು. ಅವರು ತಮ್ಮ ಹಳ್ಳಿಯಲ್ಲಿ ತಂಗಿದ್ದರು. ಈ ಕಡೆ ಭಕ್ತರುಗಳ ಒತ್ತಾಯದಿಂದ ಆರ್ಯಿಕೆಯರು ಅಜಮೇರದ ಕಡೆಗೆ ವಿಹಾರ ಹೊರಟರು. ಮೂರನೇದಿನ ಎಲ್ಲರು ಸಂಘಕ್ಕೆ ಸೇರಿಕೊಂಡೆವು ಇದನ್ನು ಕಂಡು ಎಲ್ಲರಿಗೂ ತುಂಬ ಸಂತೋಷವಾಯಿತು. ಸಮಯ ಕಡಿಮೆಯಿದ್ದುದ್ದರಿಂದ ಸ್ವಲ್ಪ ಸಮಯದಲ್ಲೇ ಹೆಚ್ಚು ನಡೆಯಬೇಕಾಗಿ ಬಂತು ಅಲ್ಲದೇ ಮಾರ್ಗದಲ್ಲಿ ಮಳೆಯು ಆಗತೊಡಗಿತು. ಎಲ್ಲರೂ ನೆನೆಯಬೇಕಾಯಿತು. ಆದರೂ ಎಲ್ಲರೂ ಆಷಾಢಶುಕ್ಲ ತ್ರಯೋದಶಿಯಂದು ಕ್ಷೇಮವಾಗಿ ಅಜಮೇರವನ್ನು ತಲುಪಿದೆವು. ಅಲ್ಲಿ ಸಂಘವನ್ನು ಭವ್ಯವಾಗಿ ಸ್ವಾಗತಿಸಿದರು. ಇಲ್ಲಿ ಪಠಣ ಪಾಠಣಗಳು ಚೆನ್ನಾಗಿ ನಡೆಯುತ್ತಿದ್ದವು. ಎಲ್ಲ ಶ್ರಾವಕ ಶ್ರಾವಿಕೆಯರು ಸಂಘಕ್ಕೆ ಶ್ರದ್ಧೆ ತೋರಿಸುತ್ತಾ ಧರ್ಮಲಾಭವನ್ನು ಪಡೆಯತೊಡಗಿದರು.

೩೧

ಅಜಮೇರದಲ್ಲಿ ಸಂಘ ದರ್ಶನ

ತಂದೆ ಮತ್ತು ತಾಯಿಗಳು 1959 ರಲ್ಲಿ ಅಜಮೇರದಲ್ಲಿ ಆಚಾರ್ಯ ಶಿವಸಾಗರರ ಸಂಘವನ್ನು ದರ್ಶನ ಮಾಡಲು ಬಂದಿದ್ದರು. 1953 ರಲ್ಲಿ ಟಿಕೈತನಗರದಲ್ಲಿ ನನ್ನನ್ನು ನೋಡಿದ್ದು, ಈಗ ಪುನಃ ಏಳು ವರ್ಷಗಳ ನಂತರ ನನ್ನನ್ನು ನೋಡಲು ಬಂದಿದ್ದರು. ಛೋಟಧಡೆಯ ನಶಿಯಾದಲ್ಲಿ ಬಹುಶಃ ಬೆಳಗಿನ ಹೊತ್ತು ಆಚಾರ್ಯರ ಉಪದೇಶವಾಗುತ್ತಿತ್ತು. ಎಲ್ಲಾ ಮುನಿಗಳು ಆರ್ಯಿಕೆಯರು ಉಪಸ್ಥಿತರಿದ್ದರು. ಉಪದೇಶದ ನಂತರ ಆರ್ಯಿಕೆಯರ ಜೊತೆ ನಶಿಯಾದಿಂದ ಹೊರಟು ಬಾಬಾಜೀ ನಶಿಯಾದ ಹತ್ತಿರ ಹೋಗುತ್ತಿದ್ದೆವು. ನನ್ನನ್ನು ನೋಡಿದ ಮೋಹಿನಿಜೀ ತಕ್ಷಣ ನನ್ನನ್ನು ಹಿಡಿದುಕೊಂಡು ಅಳತೊಡಗಿದರು. ಜೊತೆಯಲ್ಲಿ ಬರುತ್ತಿದ್ದ ಎಲ್ಲರೂ ಆಶ್ಚರ್ಯದಿಂದ ನೋಡತೊಡಗಿದರು. ನನಗೂ ತಕ್ಷಣ ಏನೂ ತಿಳಿಯಲಿಲ್ಲ ಇವರ್ಯಾರು ಯಾತಕ್ಕೆ ಅಳುತ್ತಿದ್ದಾರೆಂದು. ಅಯ್ಯೋ ಇದೇನು ಎಂದು ನನ್ನ ಜೊತೆ ನಡೆಯುತ್ತಿದ್ದ ಸಿದ್ಧಮತೀಜೀ ಅವರಿಂದ ನನ್ನನ್ನು ಬಿಡಿಸಿದರು. ನಾನು ಕತ್ತೆತ್ತಿ ನೋಡಿದಾಗ ನನ್ನ ಎದುರಿಗೆ ತಂದೆ ಛೋಟೆಲಾಲರು ಸಹ ಅಳುತ್ತಾ ನಿಂತಿದ್ದಾರೆ. ಅವರು ಬಹಳ ದುರ್ಬಲರು ಆಗಿದ್ದರು ಆದರೂ ಗುರುತು ಹಿಡಿದೆ ಜೊತೆಯಲ್ಲಿ ನಡೆಯುತ್ತಿದ್ದ ಶ್ರಾವಕರು ಅವರ ಕೈ ಹಿಡಿದು ಕೇಳಿದರು ಸೇಠ್‌ಜೀ ತಾವು ಯಾರು, ಎಲ್ಲಿಂದ ಬರುತ್ತೀದ್ದೀರಿ. ಅಷ್ಟರಲ್ಲೇ ಚಂದ್ರಮತೀಮಾತಾಜೀಗೆ ಗೊತ್ತಾಯಿತು ಇವರು ಜ್ಞಾನಮತೀ ಮಾತಾಜೀಯ ತಂದೆ ತಾಯಿಯರೆಂದು ಟಿಕೈತ

ನಗರದಿಂದ ಬಂದಿದ್ದಾರೆಂದು. ಜೊತೆಯಲ್ಲಿಯೇ ಕರೆದುಕೊಂಡು ಹೋಗಿ ಉಳಿದುಕೊಳ್ಳಲು ಕೊಠಡಿಯ ವ್ಯವಸ್ಥೆ ಮಾಡಿಸಿದರು.

ಶ್ರಾವಕರಂತು ಬಹಳ ಪ್ರೀತಿಯಿಂದ ಅವರ ಕೈ ಹಿಡಿದು ನಶಿಯಾಕ್ಕೆ ಕರೆತಂದರು. ನನಗೆ ಚರ್ಯೆಯ ಸಮಯವಾದ್ದರಿಂದ ಶುದ್ಧಿ ಮಾಡಿಕೊಂಡು ಆಹಾರಕ್ಕೆ ಹೊರಟೆ. ಟಿಕೈತನಗರದಿಂದ ಬಂದಿದ್ದವರು ಮೊದಲು ಆಚಾರ್ಯರನ್ನು ದರ್ಶನ ಮಾಡಿ ನಂತರ ಮುನಿಗಳನ್ನು ದರ್ಶನ ಮಾಡಿ ಕೊನೆಗೆ ನನ್ನ ಹತ್ತಿರ ಬಂದರು. ಯೋಗಕ್ಷೇಮ ವಿಚಾರಿಸಿ ಆಯಿತು ನಾನು ಅವರನ್ನು ಧರ್ಮ ಕುಶಲತೆಯನ್ನು ವಿಚಾರಿಸಿ ತಕ್ಷಣ ಕೇಳಿದೆ ಮನೋವತಿಯನ್ನು ಏಕೆ ಕರೆತರಲಿಲ್ಲ. ಅಮ್ಮ ಹಿಡಿದ ಧ್ವನಿಯಲ್ಲಿ ಹೇಳಿದರು. ಇಲ್ಲ ನನಗೆ ಬಹಳ ಆಶ್ಚರ್ಯವಾಯಿತು ಇವರು ಎಷ್ಟು ನಿಷ್ಠುರರಪ್ಪ ಎರಡು ಮೂರು ವರ್ಷಗಳಿಂದ ನನಗೋಸ್ಕರವಾಗಿ ಅಳುತ್ತಿರುವ ಹುಡುಗಿಯನ್ನು ಮನೆಯಲ್ಲಿಯೇ ಬಿಟ್ಟು ಬಂದಿದ್ದಾರಲ್ಲ ಎಂದು. ನಾನೇನು ತಿಳಿದುಕೊಂಡೆ ಎಂದರೆ ನನ್ನನ್ನು ನೋಡಿದ ಮೇಲೆ ಅವಳು ವಾಪಾಸು ಬರಲಾರಳೆಂದು ಕರೆದುಕೊಂಡು ಬಂದಿಲ್ಲ ಎಂದುಕೊಂಡೆ. ಅಮ್ಮನ ಜೊತೆ ಶಾಂತಿದೇವಿ ಕೂಡ ಬಂದಿದ್ದರು ಚಿಕ್ಕ ಮಗ ಪ್ರಕಾಶಚಂದ್ರನು ಬಂದಿದ್ದ ಅವನೀಗ ಹದಿನೈದು ವರ್ಷದವನಾಗಿದ್ದ, ಅಮ್ಮನ ತೊಡೆಯ ಮೇಲೆ ಚಿಕ್ಕ ತಂಗಿ ಮಾಧುರಿ ಕುಳಿತಿದ್ದಳು. ಇವರೆಲ್ಲರೂ ಪ್ರತಿದಿನ ಆಹಾರ ದಾನ ಕೊಡುತ್ತಾ ಉಪದೇಶವನ್ನು ಕೇಳಿ ಆನಂದಗೊಳ್ಳುತ್ತಿದ್ದರು.

ಸ್ವಾಧ್ಯಾಯ

ಅಮ್ಮ ಮೋಹಿನಿಯಂತೂ ಆಹಾರ ತೆಗೆದುಕೊಳ್ಳುವಾಗ ಪ್ರೀತಿಯಿಂದ ನೋಡುತ್ತಿದ್ದಳು. ನಾನು ಭಾವಾಜೀಯ ನಶಿಯಾದ ಮಂದಿರದಲ್ಲಿ ಬೆಳಗ್ಗೆ ಏಳರಿಂದ ಎಂಟೂವರೆವರೆಗೆ ಪಂಚಾಧ್ಯಾಯೀ ಗ್ರಂಥವನ್ನು ಸ್ವಾಧ್ಯಾಯ ಮಾಡುತ್ತಿದ್ದೆ. ಇದರಲ್ಲಿ ಆರ್ಯಿಕೆ ಸುಮತೀಮತೀ ಮಾತಾಜೀ ಆದಿಯಾಗಿ ಎಲ್ಲರೂ ಭಾಗವಹಿಸುತ್ತಿದ್ದರು. ನಾನು ಸಂಸ್ಕೃತ ಶ್ಲೋಕವನ್ನು ಓದಿ ಅರ್ಥವನ್ನು ಹೇಳುತ್ತಿದ್ದೆ. ಇದರ ನಂತರ ಪಾತ್ರ ಕೇಸರಿ ಸ್ತೋತ್ರದ ಅರ್ಥವನ್ನು ಹೇಳುತ್ತಿದ್ದೆ. ಅದೇ ಸಮಯದಲ್ಲಿ ಮೋಹನಿಯವರು ಜಿನೇಂದ್ರದೇವನ ಪೂಜೆ ಮಾಡಿ ಬಂದು ಆರ್ಯಿಕೆಯರಿಗೆಲ್ಲ ಅರ್ಘ್ಯವನ್ನು ಎತ್ತಿ ಹತ್ತು ಹದಿನೈದು ನಿಮಿಷ ಕುಳಿತ್ತಿದ್ದು, ಚೌಕ ಮಾಡಲು ಹೋಗುತ್ತಿದ್ದರು. ಮಧ್ಯಾಹ್ನ ನನ್ನ ಹತ್ತಿರ ಅಲ್ಲಿಯ ಕನ್ಯಾಪಾಠ ಶಾಲೆಯ ಪ್ರಾಧ್ಯಾಪಿಕೆ ವಿದುಷಿ ವಿದ್ಯಾವತಿಬಾಯಿಯವರು ಸರ್ವಾರ್ಥ ಸಿದ್ಧಿಯ ಗ್ರಂಥವನ್ನು ಅಧ್ಯಯನ ಮಾಡುತ್ತಿದ್ದರು. ಆ ಸಮಯದಲ್ಲಿ ಮೋಹಿನಿಯವರು ಅಲ್ಲೆ ಕುಳಿತು ಸ್ವಾಧ್ಯಾಯದ ಲಾಭವನ್ನು ಪಡೆಯುತ್ತಿದ್ದರು. ಅಭ್ಯಾಸದ ಮಧ್ಯೆ ವಿದ್ಯಾವತಿ[1] ಮತ್ತು ನನ್ನ ನಡುವೆ ನಡೆಯುತ್ತಿದ್ದ ಜ್ಞಾನದ ಚರ್ಚೆಯನ್ನು ಕೇಳಿ ತಾಯಿ ಮೋಹಿನಿಯವರ ಹೃದಯ ತುಂಬಿ ಬರುತ್ತಿತ್ತು.

4-5 ಗಂಟೆಯ ವೇಳೆಯಲ್ಲಿ ನಗರದ ಕೆಲವು ಮಹಿಳೆಯರು, ಹುಡುಗಿಯರು, ನನ್ನ ಹತ್ತಿರ ತತ್ವ ದರ್ಶನದ ಅರ್ಥ ತಿಳಿಯಲು ಬರುತ್ತಿದ್ದರು. ಅನಂತರ ನಾನು ಸಾಧುಗಳ ಜೊತೆ ಸ್ವಾಧ್ಯಾಯಕ್ಕಾಗಿ ತೆರಳುತ್ತಿದ್ದೆ. ಸ್ವಾಧ್ಯಾಯದ ನಂತರ ಸಾಯಂಕಾಲದ ಪ್ರತಿಕ್ರಮಣದ ನಂತರವೇ ನಾನು ನಶಿಯಾಕ್ಕೆ ಎಲ್ಲ ಆರ್ಯಿಕೆಯರ ಜೊತೆ ಬರುತ್ತಿದ್ದೆವು ಹೀಗೆ ನನ್ನ ದಿನಚರಿಯನ್ನು ಗಮನಿಸುತ್ತಿದ್ದ ಅಮ್ಮನಿಗೆ ಬಹಳ ಸಂತೋಷವಾಯಿತು.

---

1. ಇವರು ಪಂಡಿತ ಲಾಲಬಹದ್ದೂರ ಶಾಸ್ತ್ರಿಯವರ ಸಹೋದರಿ ಆಗಿದ್ದರು.

ಮಂತ್ರಿತ ಜಲದ ಪ್ರಭಾವ

ಒಂದು ದಿನ ಸಹೋದರಿ ಶಾಂತಿಗೆ ಹೊಟ್ಟೆ ನೋವು ಪ್ರಾರಂಭವಾಯಿತು. ಜೊತೆಗೆ ಅತಿಸಾರವೂ ಉಂಟಾಯಿತು. ಇದನ್ನು ನೋಡಿದ ಅಮ್ಮ ನನ್ನ ಹತ್ತಿರ ಬಂದು ಹೇಳತೊಡಗಿದರು ಶಾಂತಿ 4-5 ತಿಂಗಳ ಗರ್ಭಿಣಿ ಅವಳ ಅತ್ತೆ ಮೊದಲು ಕಳುಹಿಸಲು ಒಪ್ಪಿರಲಿಲ್ಲ. ಅದಕ್ಕೆ ಅವಳು ನಿಮ್ಮನ್ನ ನೋಡಬೇಕೆಂಬ ಆಸೆಯಿಂದ ಬಂದಳು ಆಗ ನಾನು ಒಂದು ಬಟ್ಟಲಿನಲ್ಲಿ ಶುದ್ಧವಾದ ನೀರನ್ನು ತರಿಸಿ ಮಂತ್ರಿಸಿ ಶಾಂತಿಗೆ ಕುಡಿಸಿದೆ ಕುಡಿದ ಅವಳಿಗೆ ಆರಾಮವಾಯಿತು. ಈ ಸುದ್ದಿ ಹಿರಿಯ ಮಾತಾಜೀಯವರಾದ ಸುಮತೀಮತೀಗೆ ತಿಳಿಯಿತು. ಅವರೇ ಸ್ವತಃ ಹೊರಗೆ ಬಂದು ಶಾಂತಿಯನ್ನು ಸಂತೈಸಿದರು. ಅದೇ ಸಮಯಕ್ಕೆ ಭಾಗಚಂದ ಸೋನಿಯವರು ದರ್ಶನಾರ್ಥವಾಗಿ ಬಂದರು. ಆಗಾಗ್ಗೆ ಬಂದು ಅವರು ಆರ್ಯಿಕೆಯರ ಯೋಗಕ್ಷೇಮ ವಿಚಾರಿಸುತ್ತಿದ್ದರು. ಆರ್ಯಿಕೆ ಸುಮತಿಮತೀಮಾತಾಜೀ ಅವರಿಗೆಹೇಳಿದರು. ಸೇಠಜೀ ಶಾಂತಿಯನ್ನು ಯಾರಾದರು ಡಾಕ್ಟರ್ ಹತ್ತಿರ ತೋರಿಸಿ. ಸೇಠಾಣೀ ರತ್ನಪ್ರಭಾ ಕೂಡಜೊತೆಯಲ್ಲಿಯೇ ಇದ್ದರು ಅವರು ತಕ್ಷಣ ತಮ್ಮ ಕಾರಿನಲ್ಲೇ ಕರೆದುಕೊಂಡು ಹೋಗಿ ಡಾಕ್ಟರಿಗೆ ತೋರಿಸಿದರು. ಡಾಕ್ಟರು ಮಗು ಆರೋಗ್ಯವಾಗಿದೆ ಏನು ಯೋಚನೆ ಮಾಡಬೇಕಾಗಿಲ್ಲ ಎಂದರು ಶಾಂತಿ ನಗುತ್ತಾ ಬಂದವಳು ಹೇಳಿದಳು. ಮಾತಾಜೀ ನಿಮ್ಮ ಮಂತ್ರಿಸಿದ ನೀರಿನಿಂದಲೇ ನನ್ನ ಆರೋಗ್ಯ ಸರಿಯಾಯಿತೆಂದು. ಈಗ ನನಗೆ ಏನು ತೊಂದರೆ ಆಗಲಾರದು.

ಅದಕ್ಕೆನಾನು ಮಹಾಮಂತ್ರಕ್ಕೆ ಎಲ್ಲದ್ದಕ್ಕಿಂತ ಹೆಚ್ಚಿನ ಶಕ್ತಿ ಇದೆ. ಇದರಲ್ಲಿ ನನ್ನದೇನೂ ಇಲ್ಲ. ಇದೆಲ್ಲ ಮಂತ್ರದ್ದೇ ಪ್ರಭಾವ ನೀನು ಶ್ರದ್ಧೆಯಿಟ್ಟಿದ್ದರಿಂದ ಫಲವನ್ನು ಕಂಡೆ. ನಿನಗೆ ನನ್ನ ಉಪದೇಶವೆಂದರೆ ಸದಾಕಾಲ ಶ್ರದ್ಧೆಯಿಂದ ನೀನು ಧರ್ಮವನ್ನ ನಂಬು. ಮಹಾಮಂತ್ರವನ್ನು ಜಪಿಸುವುದರಿಂದ ಎಲ್ಲದರಿಂದ ಪಾರಾಗಬಹುದು.

ಸಂಘದಲ್ಲಿ ಪ್ರಮುಖ ಆರ್ಯಿಕೆಯರಾದ ವೀರಮತಿ ಮಾತಾಜೀಯವರು ನನ್ನ ಕೊಠಡಿಯಲ್ಲೇ ಇದ್ದರು. ಅವರು ರಾತ್ರಿ ಎರಡು ಎರಡೂವರೆಗೆಲ್ಲ ಎದ್ದು ಅಭ್ಯಾಸದಲ್ಲಿ ತೊಡಗುತ್ತಿದ್ದರು. ಆಗಾಗ್ಗೆ ತಾಯಿಯವರು ಅಲ್ಲೇ ಮಲಗುತ್ತಿದ್ದುದ್ದರಿಂದ ಇಂದಿನ ರಾತ್ರಿ ಅವರ ಉಪದೇಶ ಕೇಳಿದ ಅವರು ಬಹಳ ಹರ್ಷಿತರಾಗಿದ್ದರು.

ಆಮಶಂಕೆಯು ಪ್ರಕೋಪ

ನನಗೆ ಹೊಟ್ಟೆಯಲ್ಲಿ ತಳಮಳ ಶುರುವಾಯಿತು. ಆಹಾರ ತೆಗೆದುಕೊಳ್ಳುತ್ತಲೇ ಶೌಚಕ್ಕೆ ಹೋಗುವಂತೆ ಆಗುತ್ತಿತ್ತು, ಇದಂತೂ ದಿನಕ್ಕೆ ಹಲವಾರು ಬಾರಿ ಪುನರಾವರ್ತಿತವಾಯಿತು. ಅಮ್ಮನಿಗೆ ಗೊತ್ತಾಯಿತು. ಡಾಕ್ಟರರ ಹೇಳಿಕೆಯಂತೆ ಸಂಗ್ರಹಣೀ ರೋಗ ಕಾಣಿಸಿಕೊಂಡಿದೆ ಎಂದು. ಔಷಧಿ ತೆಗೆದುಕೊಳ್ಳುವುದಿಲ್ಲ. ಆಗ ಮೋಹಿನಿ ತಾಯಿಗೆ ಚಿಂತೆ ಪ್ರಾರಂಭವಾಯಿತು. ನನಗೆ ತಿಳುವಳಿಕೆ ಹೇಳತೊಡಗಿದರು ನೋಡಿ ಮಾತಾಜೀ ಈ ಶರೀರ ರತ್ನತ್ರಯದ ಸಾಧನ. ಆದ್ದರಿಂದ ಒಂದು ಬಾರಿ ಆಹಾರದಲ್ಲಿ ಶುದ್ಧ ಕಾಷ್ಠಾದಿ ಔಷಧಿಗಳನ್ನು ತೆಗೆದುಕೊಳ್ಳುವುದರಲ್ಲಿ ದೋಷವಿಲ್ಲ. ಕೊನೆಗೆ ನೀವೇ ಶ್ರಾವಕರಿಗೆ ಔಷಧ ದಾನ ಮಾಡಬೇಕೆಂದು ತಿಳಿಸುತ್ತೀರಾ ನಿಮಗೆ ಶರೀರದಮೇಲೆ ಮಮತೆ ಇರದಿದ್ದರೂ ಸಂಯಮದ ರಕ್ಷಣೆಗೋಸ್ಕರ ಔಷಧಿಯನ್ನು ತೆಗೆದುಕೊಳ್ಳಿರೆಂದರು.

ಆಗ ನಾನು ಕೇಳಿದರು ಕೇಳದವಳಂತೆ ಇದ್ದೆ. ಆದರೆ ಯಾವಾಗ ಆರೋಗ್ಯ ಹೆಚ್ಚು ಕೆಡತೊಡಗಿತೋ ಆಗ ಆಚಾರ್ಯ ಶಿವಸಾಗರರು, ಶ್ರುತಸಾಗರರು ಹೆಚ್ಚಿನ ತಿಳುವಳಿಕೆ ಹೇಳಿ ಶುದ್ಧ ಔಷಧವನ್ನು ತೆಗೆದುಕೊಳ್ಳುವಂತೆ ಮಾಡಿದರು. ಒಂದು ದಿನ ಆರ್ಯಿಕೆ ಚಂದ್ರಮತೀ ಯಾತ್ರೆಯಿಂದ ಹಿಂದಿರುಗುವಾಗ ಆದ ಅಸ್ವಸ್ಥತೆಯ ಬಗ್ಗೆ

ಹೇಳಿದ್ದಾರೆ. ಅಮ್ಮನು ಈ ಕಾರಣದಿಂದಲೇ ಹೊಟ್ಟೆಯ ಪಚನಕ್ರಿಯೆ ಬಲಹೀನವಾಗಿದೆ. ಇದರಿಂದಾಗಿಯೇ ಆಹಾರವು ಜೀರ್ಣವಾಗುತ್ತಿಲ್ಲ ಇದೇ ಸಂಗ್ರಹಣೀ ಎಂಬ ರೋಗವು ಬರಲು ಕಾರಣವಾಗಿದೆ ಎಂದು ತಿಳಿದು ಬಹಳ ಚಿಂತಿತರಾಗಿ ನನಗೆ ವಿಶ್ರಾಂತಿ ತೆಗೆದುಕೊಳ್ಳಲು ಹೇಳತೊಡಗಿದರು. ತಾಯಿಯ ಅಂತಃಕರಣ ನೋಡಿದಾಗ ನನಗೆ ನಗು ಬರುತ್ತಿತ್ತು. ಇಷ್ಟು ನಿಶ್ಯಕ್ತಿ ಇದ್ದರು ನಾನು ಮನೋಬಲದಿಂದ ಪಠನ - ಪಾಠನದಲ್ಲಿ ತಲ್ಲೀನಳಾಗುತ್ತಿದ್ದೆ. ತಾಯಿಗೂ ಕೂಡ ಸಮಾಧಾನ ಮಾಡುತ್ತಿದ್ದೆ. "ಜಿನವಚನಮೌಷಧಮಿದಂ" ಜಿನೇಂದ್ರ ಭಗವಂತರ ವಚನವೇ ಎಲ್ಲಕ್ಕಿಂತ ಉತ್ತಮ ಔಷಧವಾಗಿತ್ತು. ಶಾಸ್ತ್ರದ ಪಠನ ಪಾಠನದಿಂದಲೇ ಆರೋಗ್ಯ ಸುಧಾರಿಸುತ್ತಿತ್ತು. ಈ ನಶ್ವರವಾದ ಶರೀರದ ಬಗ್ಗೆ ಚಿಂತಿಸದೆ ಆತ್ಮನಿಧಿಯ ಬಗ್ಗೆ ಯೋಚಿಸಬೇಕಾಗಿತ್ತು.

ಶಿಷ್ಯೆಯರು

ಅಜಮೇರದ ಕೇಶರಗಂಜದ ಒಬ್ಬ ಶ್ರಾವಕ ಜೀವನಲಾಲರ ಪುತ್ರಿ ಅಂಗೂರಿಬಾಯಿ ಸಾಗಾರ ಧರ್ಮಾಮೃತ ಮುಂತಾದವನ್ನು ಓದಲು ನನ್ನ ಹತ್ತಿರ ಬರುತ್ತಿದ್ದಳು. ಅವಳ ಗಂಡ ಡಾಕುಗಳಿಂದ ಸತ್ತುಹೋಗಿದ್ದ ಇದರಿಂದಾಗಿ ವಿರಕ್ತ ಚಿತ್ತಳಾಗಿ ನನ್ನ ಹತ್ತಿರವೇ ಇರುತ್ತಿದ್ದಳು. ಅದೇ ಊರಿನ ಇನ್ನೊಬ್ಬ ಮಹಿಳೆಯಿಂದ ಹುಲಸಿಬಾಯಿ ಕೂಡ ಅಧ್ಯಯನ ಮಾಡುತ್ತಾ ವೈಯ್ಯಾವೃತ್ತಿ ಮಾಡುತ್ತಾ ನನ್ನ ಹತ್ತಿರವೇ ಇರುತ್ತಿದ್ದರು.

ಪ್ರಕಾಶನ ಪುರುಷಾರ್ಥ

ಮಾತೆ ಮೋಹಿನಿಯ ಎರಡನೇ ಮಗ ಪ್ರಕಾಶಚಂದ್ರ. ಅವನು ಜೊತೆಯಲ್ಲಿ ಬಂದಿದ್ದ. ನಾನು ಅವನನ್ನು ತುಂಬ ಪ್ರೀತಿಸುತ್ತಿದ್ದೆ. ಅವನಿಗೆ ಎಲ್ಲೋ ಅಲ್ಪ ಸ್ವಲ್ಪ ನೆನಪಿತ್ತು. ಈಗ 15 ವರ್ಷದ ಹುಡುಗನಾಗಿದ್ದ. ಅವನು ನನ್ನ ಹತ್ತಿರ ದ್ರವ್ಯ ಸಂಗ್ರಹದ ಗಾಥೆಗಳನ್ನು ಹೇಳಿಸಿಕೊಂಡು ಮತ್ತೆ ಶುದ್ಧವಾಗಿ ಅರ್ಥಸಹಿತ ಬಂದು ಒಪ್ಪಿಸುತ್ತಿದ್ದ. ಅವನ ತೀಕ್ಷ್ಣಬುದ್ಧಿಯನ್ನು ನೋಡಿದ ನನಗೆ ಅವನನ್ನು ಸ್ವಲ್ಪಕಾಲ ಸಂಘದಲ್ಲೇ ಇಟ್ಟುಕೊಂಡು ಧಾರ್ಮಿಕ ಅಧ್ಯಯನ ಮಾಡಿಸಬೇಕೆನಿಸಿತು.

ನಾನು ಅವನನ್ನು ಕೇಳಿದೆ ಅವನಿಗೂ ಆಶೆ ಇತ್ತು. ಆದರೆ ಅಮ್ಮನ ಭಯವಿತ್ತು. ಆದರೂ ಕೇಳಿದ ಅಮ್ಮ ನನ್ನನ್ನು ಇಲ್ಲಿಯೇ ಸ್ವಲ್ಪದಿನ ಇರಲು ಬಿಡು. ನಾನು ಧಾರ್ಮಿಕವನ್ನು ಕಲಿಯುತ್ತೇನೆ ಎಂದನು. ಆದರೆ ಅಮ್ಮನು ನಕ್ಕು ತಳ್ಳಿ ಹಾಕಿದಳು. ತಂದೆ ತಾಯಿಯನ್ನು ಬಹಳ ಹಚ್ಚಿಕೊಂಡಿರುವ ಹುಡುಗ ಹೇಗೆ ಬಿಟ್ಟಿರುತ್ತಾನೆಂದು ಕೆಲವು ದಿನಗಳ ಮೊದಲು ಅವನನ್ನು ಅಯೋಧ್ಯೆಯ ಗುರುಕುಲದಲ್ಲಿ ಬಿಟ್ಟಿದ್ದರು. ಆದರೆ ಹತ್ತು ಹದಿನೈದು ದಿನಗಳಲ್ಲೆ ಬಿಟ್ಟು ಓಡಿ ಬಂದಿದ್ದನು.

ಇವರು ಹೊರಡುವ ದಿನ ಬಂದಿತು. ಸಾಮಾನುಗಳನ್ನು ಪ್ಯಾಕ್ ಮಾಡಿಕೊಂಡಿದ್ದರು. ಬಸ್ಸಿನ ಸಮಯವು ಆಯಿತು. ತಂದೆ ಪ್ರಕಾಶಚಂದನನ್ನು ಕೂಗತೊಡಗಿದರು. ಆದರೆ ಅವನು ಎಲ್ಲೂ ಇಲ್ಲ. ಕೊನೆಗೆ ಆ ದಿನ ಅವರು ನಿಂತರು. ತಂದೆಗೆ ಹುಡುಕಿ ಹುಡುಕಿ ಸಾಕಾಯಿತು ಕೊನೆಗೆ ನಶಿಯಾದ ಹೊರಗೆ ತೋಟದಲ್ಲಿ ಒಂದು ಮರದ ಹಿಂದೆ ಅವಿತುಕೊಂಡು ಕುಳಿತಿದ್ದ. ಅವನಿಗೆ ಧೈರ್ಯಹೇಳಿ ಹೊರತಂದರು. ಇದನ್ನು ಗಮನಿಸಿದ ಬ್ರ. ಲಾಲಜೀಯವರು ತಂದೆಗೆ ಸಮಾಧಾನ ಮಾಡಿದರು. ನೀವು ಸ್ವಲ್ಪ ದಿನ ಇಲ್ಲಿ ಬಿಟ್ಟು ಹೋಗಿ ನಾವೆಲ್ಲ ಸ್ವಲ್ಪ ಧಾರ್ಮಿಕ ತಿಳುವಳಿಕೆಯನ್ನು ಹೇಳುತ್ತೇವೆ ಮತ್ತು ನಿಮಗೆ ಮಾತು ಕೊಡುತ್ತೇವೆ ಅವನಿಗೆ ಬ್ರಹ್ಮಚರ್ಯ ಮುಂತಾದ

ಯಾವ ವ್ರತವನ್ನು ನಾವು ಕೊಡುವುದಿಲ್ಲ. ನೀವು ಧೈರ್ಯವಾಗಿ ಹೋಗಿಬನ್ನಿ ನಾವು ನಿಮ್ಮ ಮಗನನ್ನು ಜೋಪಾನವಾಗಿ ವಾಪಸ್ಸು ಕಳುಹಿಸುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟರು. ತಂದೆಯವರಿಗೆ ಮನಸ್ಸಿಗೆ ಸಮಾಧಾನವಿಲ್ಲದಂತಾಯಿತು.

ಮೋಹಿನಿಯ ಮೋಹ

ತಾಯಿ ಮೋಹಿನಿಯಂತು ಕಿವಿಯ ಓಲೆಯನ್ನು ಬಿಚ್ಚಿ ಬ್ರ. ರಾಜಮಲ್ಲಜೀಯವರನ್ನು ಕರೆದು ನಿಧಾನವಾಗಿ ಬ್ರಹ್ಮಚಾರಿಜೀ ಇದನ್ನು ನಿಮ್ಮ ಹತ್ತಿರ ಇಟ್ಟುಕೊಳ್ಳಿ ಯಾರಿಗೂ ತಿಳಿಸುವುದು ಬೇಡ. ಇದನ್ನು ಮಾರಿ ಬಂದ ಹಣದಿಂದ ಅವನ ಊಟ ತಿಂಡಿಯ ವ್ಯವಸ್ಥೆಯನ್ನು ಮಾಡಿಸಿರಿ ಎಂದಿದ್ದಾರೆ. ನನ್ನ ಹತ್ತಿರವು ಸೂಚ್ಯವಾಗಿ ಈ ವಿಷಯ ತಿಳಿಸಿದರು. ಕೊನೆಗೆ ಅವನನ್ನು ಬಿಟ್ಟು ಹೊರಟರು.

ಇವರು ಊರಿಗೆ ಹೋಗುತ್ತಿದ್ದಂತೆ ಎಲ್ಲರು ಇವರನ್ನು ಸುತ್ತುವರಿದು ಇಲ್ಲಿಯ ಸಮಾಚಾರಗಳನ್ನು ವಿಚಾರಿಸ ತೊಡಗಿದರು. ಆಮೇಲೆ ಪ್ರಕಾಶಚಂದ್ರ ಇಲ್ಲದಿದ್ದನ್ನು ಗಮನಿಸಿ ಅವನೆಲ್ಲಿ ಎಂದು ಕೇಳಿದರು. ಆರ್ಯಿಕೆ ಜ್ಞಾನಮತೀ ಮಾತಾಜೀ ಹತ್ತಿರ ಚುಂಬಕ ಶಕ್ತಿ ಇದೆ. ನಾನು ಮನೋವತೀಯನ್ನು ಅಳುತ್ತಿದ್ದರೂ ಬಿಟ್ಟು ಹೋದೆ, ಆದರೆ ಮಾತಾಜೀ ಪ್ರಕಾಶನನ್ನು ತಡೆದುಬಿಟ್ಟರು. ಪ್ರಕಾಶನು ಸಂಘದಲ್ಲಿ ಇದ್ದು ಪಂಚಾಮೃತ ಅಭಿಷೇಕ ಪಾಠ, ಛಹಡಾಲಾ, ದ್ರವ್ಯಸಂಗ್ರಹ, ಕಾತಂತ್ರ ವ್ಯಾಕರಣದ ಕೆಲವು ಪುಟಗಳನ್ನು ಓದಿದನು. ನಾನು ಸಾಕಷ್ಟು ಅವನಿಗೆ ಓದಿಸಿದೆ. ಅವನು ಪಡೆದ ಶಿಕ್ಷಣ ಅಮೂಲ್ಯವಾದುದಾಗಿತ್ತು. ಅವನು ಅಂಗೂರಿಬಾಯಿಯಿಂದಲೂ ಕಲಿತನು. ಬ್ರ. ರಾಜಮಲ್ಲಜೀಯಿಂದಲೂ, ಶ್ರೀಲಾಲಜೀ ಯಿಂದಲೂ ಸಾಕಷ್ಟು ಕಲಿತನು.

ವಿಶೇಷ ಸಂಸ್ಮರಣೆ

ಒಂದು ಸಲ ಅವನು ಪೂಜೆಯ ದಿನಚರಿಯನ್ನು ಮಾಡಿದ್ದ. ಅದನ್ನು ನನ್ನ ಮುಂದೆ ಓದಿ ಅಷ್ಟದ್ರವ್ಯಗಳಿಂದ ಪೂಜೆ ಮಾಡಬೇಕೆಂದು ಬಯಸಿದ. ಆದರೆ ಅದನ್ನು ಬೈದು ತಡೆದೆ. ಆಗ ಅವನಿಗೆ ಅಳುಬಂದಿತು. ಬಾಬಾಜೀ ಶ್ರೀಲಾಲರು ಅವನನ್ನ ಸಮಾಧಾನ ಮಾಡಿಸಿ ಸುಮ್ಮನಾಗಿಸಿದರು. ಅಷ್ಟರಲ್ಲಿ ಅಲ್ಲಿಗೆ ಹೋದ ನಾನು ಹೇಳಿದೆ, ಬಾಬಾಜೀ ಅವನನ್ನು ಶಾಸ್ತ್ರಿಗಳನ್ನಾಗಿ ಮಾಡಿ ನನಗೆ ಅವನನ್ನು ಸಂಸ್ಕೃತದ ವಿದ್ವಾಂಸನನ್ನಾಗಿ ಮಾಡಬೇಕೆಂಬ ಆಸೆ ಇದೆ. ಆದ್ದರಿ ಂದ ಅವನನ್ನು ನಿಮ್ಮ ಬಳಿ ಇಟ್ಟುಕೊಳ್ಳಿ. ಈ ಪೂಜೆಯ ಡೈರಿ ಇಂದು ಇಲ್ಲಿ ಮಾಧುರಿಯ ಹತ್ತಿರ ಸುರಕ್ಷಿತವಾಗಿದೆ.

ಬಾಬಾಜೀ ಹೇಳಿದರು ಇವನಿಗೆ ಒಳ್ಳೆಯ ಜ್ಞಾನವಿದೆ ಒಂದು ವೇಳೆ ಮನಸ್ಸಿಟ್ಟು ಓದಿದ ಎಂದರೆ ಖಂಡಿತಾ ವಿದ್ವಾಂಸನಾಗುತ್ತಾನೆ. ನಿಜವಾಗಿಯೂ ಕೆಲವು ಗುಣಗಳು ಜನರಿಗೆ ಪಾರಂಪರಿಕವಾಗಿಯೇ ಬಂದಿರುತ್ತದೆ. ಮಧ್ಯದಲ್ಲಿ ಖೂಬಚಂದರು ಹೇಳಿದರು ನೋಡಿರಿ ಭ. ವೃಷಭದೇವರ ಸಮವಶರಣದಲ್ಲಿ ಇಡೀ ಅವರ ಕುಟುಂಬದವರೇ ಇದ್ದರು. ಭಗವಾನ್‌ರ ಮೂರನೇಯ ಪುತ್ರರೇ ವೃಷಭಸೇನರು ಭಗವಂತರ ಪ್ರಥಮ ಗಣಾಧರರಾಗಿದ್ದರು. ದೊಡ್ಡ ಮಗ ಭರತನೇ ಮೊದಲ ಶ್ರೋತೃವಾಗಿದ್ದರು. ಮತ್ತು ಅವರ ಮಗಳು ಬ್ರಾಹ್ಮೀಯೇ

---

1. ಈ ದಿನಚರಿಯು ಈಗಲೂ ಮಾಧುರಿಯ ಹತ್ತಿರ ಸುರಕ್ಷಿತವಾಗಿದೆ.

ಮುಖ್ಯ ಗಣನಿ ಆಗಿದ್ದಳು. ಈ ಗೌರವ ಅವರ ಕುಟುಂಬಕ್ಕೆ ಸೇರಬೇಕು. ಬೇರೆ ಯಾರಿಗೂ ಸಾಧ್ಯವಿಲ್ಲ ಭಗವಾನರು ನೋಡಿ ಪಕ್ಷಪಾತ ಮಾಡಿದ್ದಾರೆ. ಹಾಗೇ ಹೇಳಿ ನಕ್ಕರು. ಶ್ರೀಲಾಲಜೀ ಹೇಳಿದರು ಈ ಮಾತು ಮಹಾವೀರ ಸ್ವಾಮಿಯ ಸಮವಶರಣದಲ್ಲಿಯೂ ನೋಡುತ್ತೇವೆ ಮಹಾವೀರಸ್ವಾಮಿ ಬಾಲಬ್ರಹ್ಮಚಾರಿಗಳು. ಅವರ ಚಿಕ್ಕಪ್ಪ ಶ್ರೇಣಿಕ ಮಹಾರಾಜ ಸಭೆಯ ಮುಖ್ಯ ಶ್ರೋತೃವಾಗಿದ್ದರು ಇವರ ಚಿಕ್ಕಮ್ಮ ಚಂದನಾಜೀಯವರು ಆರ್ಯಿಕೆಯರಲ್ಲಿ ಪ್ರಮುಖ ಗಣನಿ ಆಗಿದ್ದರು. ಪುನಃ ಬಾಬಾಜೀ ಗಂಭೀರ ಸ್ವರದಲ್ಲಿ ಹೇಳಿದರು ತಮ್ಮ ಇದು ಪಕ್ಷಪಾತವಲ್ಲ ಇದೊಂದು ಯೋಗ್ಯತೆಯ ವಿಷಯವೇ ಆಗಿದೆ. ಅವರಿಬ್ಬರ ಸಂಭಾಷಣೆ ನೆನಪಿಗೆ ಬಂದಾಗಲೆಲ್ಲ ನನ್ನ ಮನಸ್ಸಿಗೆ ಹೊಳೆಯುತ್ತಿದ್ದುದೇನೆಂದರೆ ಪ್ರಕಾಶನು ಸಂಘದಲ್ಲೇ ಇರುವ ಧೈರ್ಯ ಮಾಡಲಿ ಎಂದು ಆದರೆ 6 ತಿಂಗಳ ನಂತರ ಅವನ ಅಣ್ಣ ಬಂದು ಬಲವಂತವಾಗಿ ಅವನನ್ನು ಊರಿಗೆ ಕರೆದುಕೊಂಡು ಹೋದನು. ಇಂದು ಅವನು ಗೃಹಸ್ಥನಾಗಿದ್ದಾನೆ ಆದರೆ ಅವನ ಮನೆಯಿಂದ 1961 ರಿಂದ ಕುಮಾರಿ ಮನೋವತಿಯು ನನ್ನ ಹತ್ತಿರ ಬಂದವಳು ಮತ್ತೇ ಮನೆಗೆ ಹಿಂದಿರುಗಲಿಲ್ಲ. ಅವರೇ ಇಂದು ಆರ್ಯಿಕೆ ಅಭಯಮತೀ ಎಂದು ಪ್ರಸಿದ್ಧರಾಗಿದ್ದಾರೆ. 1969-70 ರಲ್ಲಿ ರವೀಂದ್ರಕುಮಾರ ಮತ್ತು ಕುಮಾರಿ ಮಾಧುರಿಯವರು ಸಹ ಒಬ್ಬರಿಂದ ಒಬ್ಬರು ಬಂದು ಸಂಘವನ್ನು ಸೇರಿದರು. ಇಂದು ಅವರಿಬ್ಬರು ಬ್ರಹ್ಮಚರ್ಯ ವ್ರತವನ್ನು ಪಾಲಿಸುತ್ತಾ ಧರ್ಮಾರಾಧನೆಯಲ್ಲಿ ತೊಡಗಿದ್ದಾರೆ. 1971 ರಲ್ಲಿ ನಮ್ಮೆಲ್ಲರ ತಾಯಿಯಾಗಿದ್ದ ಮೋಹಿನಿಯವರು ಸ್ವತಃ ಅವರೇ ಬಂದು ಆಚಾರ್ಯ ಧರ್ಮಸಾಗರರಲ್ಲಿ ದೀಕ್ಷೆ ತೆಗೆದುಕೊಂಡು ಆರ್ಯಿಕೆ ರತ್ನಮತೀ ಎಂಬ ಹೆಸರಿನಲ್ಲಿ ಸಂಘದಲ್ಲಿ ಹದಿಮೂರು ವರ್ಷ ಇದ್ದರು.

ಆಚಾರ್ಯ ಕಲ್ಪ ಶ್ರೀ ಶ್ರೇಯಾಂಸಸಾಗರರು 1965 ರಲ್ಲಿ ತಮ್ಮ ತಾಯಿಯವರಾದ ಕ್ಷುಲ್ಲಿಕೆ ಅರಹಮತೀ ಮತ್ತು ಹೆಂಡತಿಯ ಜೊತೆ ಮಹಾವೀರಜೀಯರಲ್ಲಿ ಮುನಿ ದೀಕ್ಷೆಯನ್ನು ಪಡೆದರು. ಹಾಗೇ ತಾಯಿ ಮತ್ತು ಹೆಂಡತಿಯು ಕೂಡ ಆರ್ಯಿಕೆಯ ದೀಕ್ಷೆ ಪಡೆದರು. ಈಗ ಅವರು ಮಹಾರಾಷ್ಟ್ರ ಪ್ರಾಂತ್ಯದಲ್ಲಿ ವಿಹಾರ ಮಾಡುತ್ತಿದ್ದಾರೆ.

ಆಚಾರ್ಯ ವಿದ್ಯಾಸಾಗರರ ತಂದೆ ತಾಯಿ ಹಾಗೂ ಇಬ್ಬರು ಸಹೋದರರು ಮುನಿ ಮತ್ತು ಆರ್ಯಿಕೆಯರ ದೀಕ್ಷೆ ತೆಗೆದುಕೊಂಡಿದ್ದಾರೆ. ಈಗಂತೂ ಅನೇಕ ಸಾಧು ಸಾಧ್ವಿಯರ ಪರಿವಾರದ ಸದಸ್ಯರು ವಿರಕ್ತರಾಗಿ ಸಂಘದಲ್ಲಿ ಇದ್ದು ಸಂಯಮದ ಪಾಲನೆ ಮಾಡುತ್ತಿದ್ದಾರೆ. ವಾಸ್ತವಾಗಿ ಇದು ಅನಾದಿ ಪರಂಪರೆಯೇ ಆಗಿದೆ. ಮನೆಯಲ್ಲಿ ಯಾವುದೇ ಮಹಾಪುರುಷರಾಗಲೀ ಅಥವಾ ಮಹಿಳೆಯರಾಗಲೀ ದೀಕ್ಷೆ ತೆಗೆದುಕೊಂಡಿದ್ದೇ ಆದರೆ ಇದರ ಪ್ರಭಾವ ಮನೆಯ ಇತರ ಜನರ ಮೇಲೆಯೂ ಒಳ್ಳೆಯ ಸಂಸ್ಕಾರವನ್ನು ಬೀರುತ್ತದೆ. ಅವರ ಮೇಲಿನ ಮೋಹದಿಂದಾಗಿಯೇ ಅವರು ಸಂಘಕ್ಕೆ ಬರುತ್ತಾರೆ ಮತ್ತು ಒಳ್ಳೆಯ ಸಹವಾಸದ ಪ್ರಭಾವ ಅವರ ಮೇಲೆ ಹಾಗೆಯೇ ಆಗುತ್ತದೆ. ಅವರಲ್ಲಿ ದೀಕ್ಷೆ ತೆಗೆದುಕೊಳ್ಳುವ ಅವಕಾಶ ಉಂಟಾಗುತ್ತದೆ ಆದ್ದರಿಂದಲೇ ಆಚಾರ್ಯರು ಹೇಳಿದ್ದಾರೆ

ಶಾಸ್ತ್ರಾಭ್ಯಾಸೋ ಜಿನಪತಿನುತಿಃ ಸಂಗತಿಃ ಸರ್ವದಾರ್ಯೈಃ ॥

ಹೇ ಭಗವಾನ್ ನಾನು ಯಾವಾಗಲೂ ಶಾಸ್ತ್ರಾಭ್ಯಾಸದ ಅಭ್ಯಾಸ ಮಾಡುತ್ತಿರುತ್ತೇನೆ ಜಿನೇಂದ್ರ ಭಗವಂತರಿಗೆ ನಮಸ್ಕರಿಸುತ್ತಿರುತ್ತೇನೆ ನಾನು ಯಾವಾಗಲೂ ಆರ್ಯ, ಸಜ್ಜನ, ಸಾಧು ಜನಗಳ ಸಹವಾಸದಲ್ಲಿ ಇರುವಂತಾಗಲಿ, ಇತ್ಯಾದಿ.

೩೨

ಮುನಿಶ್ರೀ ವೃಷಭ ಸಾಗರಜೀ

ಬ್ರ. ಕಾಶ್ಮೀರ ಮಲ್ಲಜೀ ಅಜಮೇರಿಗೆ ಬಂದಿದ್ದರು. ಆಚಾರ್ಯರಲ್ಲಿ ಕ್ಷುಲ್ಲಕ ದೀಕ್ಷೆಯನ್ನು ಬೇಡುತ್ತಿದ್ದರು ಆಗ ನನಗೆ ಒಂದುಘಟನೆ ನೆನಪಿಗೆ ಬಂದಿತು. ಬ್ರ. ರೈನಾವಾಲಜೀ ಬಂದಿದ್ದರು ಆಚಾರ್ಯ ವೀರಸಾಗರರ ಹತ್ತಿರ ದೀಕ್ಷೆ ತೆಗೆದುಕೊಳ್ಳಲು ಬಯಸಿದರು. ಆದರೆ ಅವರ ಹೆಂಡತಿ ಮೊದಲೇ ಅವರಿಗೆ ಬಹಳಷ್ಟು ತಿಳಿಸಿದ್ದರು ಆದರೂ ಅವರು ಮನೆಗೆ ಬರಲು ಒಪ್ಪಲಿಲ್ಲ. ಆಗ ಅವರ ಹೆಂಡತಿಯು ಆಚಾರ್ಯರ ಮುಂದೆಯೇ ಅವರಿಗೆ ನೀವು ನೆಟ್ಟಗೆ ಮನೆಗೆ ನಡೆದರೆ ಸರಿ ಇಲ್ಲ ಎಂದರೆ ನಿಮ್ಮನ್ನು ಬಲವಂತವಾಗಿಯೇ ಕರೆದುಕೊಂಡು ಹೋಗುವೆನು ಎಂದರು. ಇದು ನೆನಪಿಗೆ ಬಂದು ಆಚಾರ್ಯರು ನಕ್ಕು ತಮ್ಮಾ ನಿಮ್ಮ ಹೆಂಡತಿ ಬಂದು ಬಲವಂತವಾಗಿ ಕರೆದುಕೊಂಡು ಹೋದರೆ ಏನು ಮಾಡುವುದು ಮೊದಲು ನಿಮ್ಮ ಹೆಂಡತಿಯ ಅನುಮತಿಯನ್ನು ತೆಗೆದುಕೊಳ್ಳಿ ಬಳಿಕ ಈ ಬಗ್ಗೆ ಯೋಚಿಸಿರಿ ಎಂದರು. ಬ್ರಹ್ಮಚಾರಿ ಹೇಳಿದರು ಮಹಾರಾಜರೇ ನನಗೆ ದೀಕ್ಷೆಯನ್ನು ಕೊಡಿರಿ ನನ್ನ ಹೆಂಡತಿಯ ಒಪ್ಪಿಗೆಗೆ ನಾನು ಎಲ್ಲಿಯವರೆಗೆ ಕಾಯಲಿ ಎಂದರು ಪುನಃ ಬ್ರಹ್ಮಚಾರಿಗಳು ನನ್ನ ಹತ್ತಿರ ಬಂದು ಹೇಳಿದರು ಮಾತಾಜೀ ನೀವು ಚಿಕ್ಕವಯಸ್ಸಿನಲ್ಲಿ ದೀಕ್ಷೆ ತೆಗೆದುಕೊಂಡು ಒಳ್ಳೆಯ ಪುರುಷಾರ್ಥ ಮಾಡಿದಿರಿ ನನಗೂ ಒಂದು ಒಳ್ಳೆಯ ಉಪಾಯವನ್ನು ಹೇಳಿರಿ ಆಚಾರ್ಯರಿಗೆ ದೀಕ್ಷೆ ಕೊಡಲು ಪ್ರೇರಣೆ ಮಾಡಿ ನನ್ನನ್ನು ಉದ್ಧಾರ ಮಾಡಿರಿ ಎಂದರು. ನಾನು ಸಹಜವಾಗಿಯೇ ಹೇಳಿದೆ, ಬ್ರಹ್ಮಚಾರಿಜೀ ನೀವು ಮನೆಗೆ ತಿಳಿಸದೇ ದೀಕ್ಷೆಯನ್ನು ತೆಗೆದುಕೊಂಡು ಬಿಡಿ ಆಗ ನಿಮಗೆ ಸಫಲತೆ ಸಿಗುತ್ತದೆ ಅಲ್ಲದೇ ನಿಮ್ಮ ಹೆಂಡತಿ ಜೋರು ಸ್ವಭಾವಕ್ಕೆ ಎಲ್ಲರೂ ಹೆದರುತ್ತಾರೆ. ಎಲ್ಲರೂ ಹೇಳುತ್ತಿದ್ದರು ಇವರ ಹೆಂಡತಿ ಇವರನ್ನು ಎತ್ತಿಕೊಂಡೇ ಹೋಗಿಬಿಡುತ್ತಾರೆಂದು ಏಕೆಂದರೆ ದೆಹಲಿಯ ಹೆಂಗಸರು ಬಹಳ ಗಡಸು ಸ್ವಭಾವದವರು. ಬ್ರಹ್ಮಚಾರಿ ನಗತೊಡಗಿದರು. ಮತ್ತು ಬೇಡತೊಡಗಿದರು ಮಾತಾಜೀ ಹೇಗಾದರೂ ಮಾಡಿ ನನಗೆ ದೀಕ್ಷೆ ಕೊಡಿಸಿರಿ ನಿಮ್ಮ ಉಪಕಾರವನ್ನು ನಾನು ಜೀವನ ಪೂರ್ತಿ ಮರೆಯುವುದಿಲ್ಲ ನಾನು ಮೊದಲು ಶ್ರುತಸಾಗರರಲ್ಲಿ ನಿವೇದಿಸಿದೆ ಪುನಃ ಆಚಾರ್ಯರಲ್ಲಿಯೂ ಪ್ರಸ್ತಾಪಿಸಿದೆ ಮಹಾರಾಜಜೀ ಇವರು ಭವ್ಯ ಜೀವಿ ಇವರ ವೈರಾಗ್ಯ ಧೃಡವಾಗಿದೆ ಇವರ ಮನೆಯವರಿಗೆ ತಿಳಿಸದೇ ದೀಕ್ಷೆ ಕೊಡಿ ಎಂದು ವಿನಂತಿಸಿದೆ. ಕೊನೆಗೆ ದೀಕ್ಷೆ ಕೊಡಲು ನಿರ್ಧರಿಸಿ ಮೂಹೂರ್ತವನ್ನು ನಿರ್ಧರಿಸಿ ಆಯಿತು. ಪ್ರಚಾರ ಮಾಡದೇ ದೀಕ್ಷೆಯನ್ನು ಕೊಟ್ಟು ಆಯಿತು ಅವರ ಮನೆಗೆ ಸೂಚನೆಯನ್ನು ಕಳುಹಿಸಿತ್ತು ಆದರೆ ಅವರ ಪತ್ನಿಗೆ ಸಮಯಕ್ಕೆ ಸರಿಯಾಗಿ ಬರಲು ಆಗಲಿಲ್ಲ ಬಡಪಾಯಿ ಬಂದ ಮೇಲೆ ತುಂಬಾ ಮಾತಾಡಿದರು. ಆಮೇಲೆ ಅತ್ತು ಸುಮ್ಮನಾದರು ಅವರಿಗೆ ಕ್ಷುಲ್ಲಕ ದೀಕ್ಷೆ ಆದ ಮೇಲೆ ವೃಷಭ ಸಾಗರರೆಂದು ಕರೆಯಲಾಯಿತು. ಆಮೇಲೆ ಅವರ ಹೆಂಡತಿ ಕ್ಷುಲ್ಲಕ ದೀಕ್ಷೆಯ ನಂತರ ಅವರು ಮುನಿ ದೀಕ್ಷೆಯಾಗಿ ಸಲ್ಲೇಖನ ತೆಗೆದುಕೊಳ್ಳುವವರೆಗೂ ಬಹಳ ಭಕ್ತಿಯಿಂದ ಆಹಾರ ದಾನ ಮಾಡುತ್ತಿದ್ದರು.

ಸಂಭವಮತೀಜೀ

ಒಂದು ದಿನ ಆಚಾರ್ಯರು ನನ್ನನ್ನು ಕರೆದು ಹೇಳಿದರು ಜ್ಞಾನಮತೀಜೀ ಈ ಹುಲಾಸೀಬಾಯಿ ಬ್ರಹ್ಮಚಾರಿಣಿ ಆಗಲು ಬಯಸುತ್ತಿದ್ದಾರೆ ಸಂಘದಲ್ಲೇ ಇರುತ್ತಾರಂತೆ ನಿಮ್ಮ ಹತ್ತಿರವೇ ಇಟ್ಟುಕೊಂಡು ಚೆನ್ನಾಗಿ ಓದಿಸಿ ಶಿಕ್ಷಣ ಕೊಟ್ಟು ಸಂರಕ್ಷಿಸಿ ಎಂದರು. ನಾನು ಆಚಾರ್ಯರ ಆಜ್ಞೆಯನ್ನು ಸ್ವೀಕರಿಸಿ ಅವರನ್ನು ಹತ್ತಿರವೇ ಇಟ್ಟುಕೊಂಡು

ತತ್ತ್ವಾರ್ಥ ಸೂತ್ರ ಮುಂತಾದುವುಗಳನ್ನು ಅಧ್ಯಯನ ಮಾಡಿಸುತ್ತಾ ಪ್ರತಿದಿನ ವೈರಾಗ್ಯದ ಉಪದೇಶವನ್ನು ಮಾಡುತ್ತಾ ದೀಕ್ಷೆಗೆ ಅವಳ ಮನಸ್ಸನ್ನು ಅನುವುಗೊಳಿಸತೊಡಗಿದೆ.

ಆಚಾರ್ಯರಿಗೆ ನನ್ನ ಮೇಲೆ ಒಂದು ರೀತಿಯ ವಾತ್ಸಲ್ಯ ಏಕೆಂದರೆ ಯಾರೇ ಹೆಂಗಸರಾಗಲೀ ಹುಡುಗಿಯರಾಗಲೀ ಅವರನ್ನು ಮೊದಲು ನನ್ನ ಹತ್ತಿರ ಕಳುಹಿಸುತ್ತಿದ್ದರು ಅವರಿಗೆ ನನ್ನ ದಕ್ಷತೆಯ ಬಗ್ಗೆ ವಿಶ್ವಾಸ. ಹುಡುಗಿಯರೇ ಆಗಲಿ ಯುವತಿಯರೇ ಆಗಲಿ ವೃದ್ಧರಾದಿಯಾಗಿ ಹುಡುಗರನ್ನು ಕಾಪಾಡಲು ಹೇಳುತ್ತಿದ್ದರು. ಅವರಿಗೆ ಅಧ್ಯಯನ ಮಾಡಿಸಿ ವೈರಾಗ್ಯದ ಶಿಕ್ಷಣವನ್ನು ಕೊಟ್ಟು ದೀಕ್ಷೆ ತೆಗೆದುಕೊಳ್ಳುವಂತೆ ಪ್ರೇರಣೆಯನ್ನು ಕೊಡಲಾಗುತ್ತಿತ್ತು. ಅವರು ಮತ್ತೆ ಲೌಕಿಕ ಬದುಕಿಗೆ ಬರಲು ಬಿಡುತ್ತಿರಲಿಲ್ಲ.

ಆಚಾರ್ಯರ ವಿಶ್ವಾಸವನ್ನು ಕಂಡು ಬೇರೆ ಆರ್ಯಿಕೆಯರಿಗೆ ಅಸೂಯೆಯಾಗುತ್ತಿತ್ತು. ಒಂದು ದಿನ ಹುಲಸೀಬಾಯಿ ನನ್ನ ಹತ್ತಿರ ಬಂದು ಮಾತಾಜೀ ನಾನು ಕ್ಷುಲ್ಲಿಕೆಯ ದೀಕ್ಷೆಯನ್ನು ತೆಗೆದುಕೊಳ್ಳ ಬಯಸುತ್ತೇನೆ ನನಗೆ ದೀಕ್ಷೆಯನ್ನು ಕೊಡಿಸಿ ನನ್ನನ್ನು ಉದ್ಧಾರ ಮಾಡಿಸಿ ಎಂದಳು. ನಾನು ಅವಳನ್ನು ಜೊತೆಯಲ್ಲಿ ಕರೆದುಕೊಂಡು ಆಚಾರ್ಯರಲ್ಲಿ ನಿವೇದಿಸಿದೆ ಅವರಿಗೆ ಸಂತೋಷವಾಯಿತು. ಆದರೂ ಸ್ವಲ್ಪ ಹೊತ್ತು ಯೋಚಿಸಿ ಹೇಳಿದರು ಜ್ಞಾನಮತೀಜೀ ನಿನ್ನ ಹತ್ತಿರ ಯಾವ ಬ್ರಹ್ಮಚಾರಿಣಿಯವರು ಇಲ್ಲ ನಿನ್ನ ಆರೋಗ್ಯ ದಿನದಿಂದ ದಿನಕ್ಕೆ ಸೂಕ್ಷ್ಮವೇ ಆಗುತ್ತಿದೆ ಆಹಾರ ಮತ್ತು ಔಷಧ ಹಾಗೂ ವೈಯ್ಯಾವೃತ್ತಿಗಾಗಿ ಒಬ್ಬ ಬ್ರಹ್ಮಚಾರಿಣಿ ಬೇಕೇ ಬೇಕು. ಆದ್ದರಿಂದ ಇವಳಿಗೆ ದೀಕ್ಷೆಯನ್ನು ಈಗಲೇ ಕೊಡುವುದು ಬೇಡ. ಒಂದೆರಡು ವರ್ಷಗಳು ಕಳೆಯಲಿ ಬಿಡು ಎಂದರು. ಅದಕ್ಕೆ ನಾನು ಮಹಾರಾಜಜೀ ಹೇಗೊ ಪ್ರೇರಣೆ ಕೊಟ್ಟು ಅವಳ ಮನಸ್ಸನ್ನು ದೀಕ್ಷೆಗಾಗಿ ಅನುವು ಮಾಡಿದ್ದೇನೆ ತಾವು ದೀಕ್ಷೆ ಕೊಡಿರಿ ಎಂದೆ. ಮಹಾರಾಜಜೀ ಬ್ರಹ್ಮಚಾರಿ ಸೂರಜಮಲ್ಲರನ್ನು ಕರೆಸಿ ಮೂಹೂರ್ತವನ್ನು ನೋಡಿಸಿ ಸಮಯದಲ್ಲಿಯೇ ದೀಕ್ಷೆ ಕೊಡಿಸಿಯಾಯಿತು. ಇವಳ ದೀಕ್ಷೆಯ ನಂತರದ ಹೆಸರು ಸಂಭವಮತೀ ಇವರು ನನ್ನ ಜೊತೆಗೆ ಬಂದರು ಸಾಯಂಕಾಲವಾಗಿತ್ತು. ಮಂದಿರವನ್ನು ದರ್ಶನ ಮಾಡಿಬಂದೆವು. ಆಮೇಲೆ ನನ್ನ ಕಣ್ಣುತಪ್ಪಿಸಿ ತನ್ನ ಪುಸ್ತಕ ಚಾಪೆ ತೆಗೆದುಕೊಂಡು ಹೋಗಿಬಿಟ್ಟಿದ್ದಳು. ಆಮೇಲೆ ನನಗೆ ಯಾರೋ ಹೇಳಿದರು ಸಂಭವಮತಿಜೀ ಮಂದಿರದಲ್ಲಿ ಆರ್ಯಿಕೆ ಸುಮತೀಮತೀಜೀಯ ಹತ್ತಿರ ಹೋದಳು. ನನಗೆ ತುಂಬಾ ಆಶ್ಚರ್ಯವಾದರೂ ಏನನ್ನು ಹೇಳಲಿಲ್ಲ. ಬೆಳಗ್ಗೆ ನನ್ನನ್ನು ದರ್ಶನ ಮಾಡಲು ಬಂದರು, ನಾನು ಏನನ್ನೂ ಕೇಳಲಿಲ್ಲ ಆದರೆ ಅವರೇ ಹೇಳಿದರು ನಾನು ಆರ್ಯಿಕೆ ವೀರಮತೀ ಮಾತಾಜೀಯವರ ಪ್ರೇರಣೆಯಿಂದ ಆರ್ಯಿಕೆ ಸುಮತೀಮತೀಯವರ ಹತ್ತಿರ ಹೋದೆ ನನಗೆ ನಿಮ್ಮ ಹತ್ತಿರ ಇರಬೇಕೆಂದು ಆಸೆ. ಅದಕ್ಕೆ ನಾನು ಸರಿ ನೀವು ಎಲ್ಲಾದರೂ ಇರಿ ಆದರೆ ಜ್ಞಾನ ಮತ್ತು ವೈರಾಗ್ಯವನ್ನು ಬೆಳೆಸಿಕೊಂಡು ಚಾರಿತ್ರ್ಯದ ಪಾಲನೆ ಮಾಡುತ್ತಾ ನಿಮ್ಮ ಆತ್ಮ ಕಲ್ಯಾಣವನ್ನು ಮಾಡಿಕೊಳ್ಳಿರಿ ಇದೇ ನನ್ನ ದೀಕ್ಷೆಯ ಉದ್ದೇಶ ಇದನ್ನು ಸಾರ್ಥಕಗೊಳಿಸಿ ವ್ಯರ್ಥ ಮಾಡಿಕೊಳ್ಳಬೇಡಿ ಇದೇ ನನ್ನ ಕೋರಿಕೆ ಎಂದೆ. ನನಗೆ ಯಾರೋ ಆರ್ಯಿಕೆ ಹೇಳಿದರು ತಾವು ಆಚಾರ್ಯರಲ್ಲಿ ಇದರ ಬಗ್ಗೆ ದೂರು ಹೇಳಿ ಎಂದು ಆದರೆ ನಾನು ಗಮನ ಕೊಡಲಿಲ್ಲ. ಆಚಾರ್ಯರು ಒಂದು ಬಾರಿ ನನ್ನ ಹತ್ತಿರ ಹೇಳಿದರು ಜ್ಞಾನಮತೀಜೀ ನಾನು ತಮ್ಮ ಹತ್ತಿರ ಜ್ಞಾನಾರಾಧನೆಗೋಸ್ಕರ ಇರಿಸಿಕೊಳ್ಳಲು ಹೇಳಿದೆ ಆದರೆ ಆಕೆಗೆ ಓದುವುದರಲ್ಲಿ ಆಸಕ್ತಿ ಇಲ್ಲ ಎಂದು ಕೊನೆಗೆ ಅವರ ಸಮಾಧಿ 1987 ರಲ್ಲಿ ಸೀಕರದಲ್ಲಿ ಆಚಾರ್ಯ ಧರ್ಮಸಾಗರರ ಸಂಘದಲ್ಲಿ ಆಯಿತು.

ಅಸ್ವಸ್ಥತೆ

ಜಯಪುರದಿಂದ ಅಜಮೇರಗೆ ಹೋಗುವ ಮಾರ್ಗದಲ್ಲಿ ಅನೇಕ ಸಲ ಶೌಚಕ್ಕೆ ಹೋಗಬೇಕಾಗಿ ಬರುತ್ತಿತ್ತು. ಇದರಿಂದ ವಿಪರೀತ ಸುಸ್ತಾಗ ತೊಡಗಿತು. ನನ್ನ ನಡಿಗೆ ಬಹಳ ನಿಧಾನವಾಗತೊಡಗಿತು. ವೃದ್ಧ ಬ್ರಹ್ಮಚಾರಿ ಶ್ರೀಲಾಲಜೀ ಕಾನ್ಯತೀರ್ಥರು ನನ್ನ ಜೊತೆಯ ಹಿಂದೆಯೇ ಬರತೊಡಗಿದರು. ನನ್ನ ಆರೋಗ್ಯದ ಬಗ್ಗೆ ಅವರಿಗೆ ಬಹಳ ಚಿಂತೆಯಾಗತೊಡಗಿತು. ಅಜಮೇರದ ಚಾತುರ್ಮಾಸದಲ್ಲಿ ಆರೋಗ್ಯ ಮತ್ತೆ ಕ್ಷೀಣವಾಗ ತೊಡಗಿದ್ದನ್ನು ಗಮನಿಸಿದ ಭ್ರ. ಶ್ರೀಲಾಲಜೀಯವರು ಆಚಾರ್ಯಶ್ರೀಯವರಿಗೆ ಹಾಗೂ ಶ್ರುತಸಾಗರರಿಗೂ ನನ್ನ ಕಾಯಿಲೆಯ ಬಗ್ಗೆ ತಿಳಿಸಿದರು. ಇಷ್ಟು ಚಿಕ್ಕವಯಸ್ಸಿನ ಜ್ಞಾನಮತೀಗೆ ಆರೋಗ್ಯ ಕ್ಷೀಣಿಸುತ್ತಿರುವುದರಿಂದ ಚಿಕಿತ್ಸೆಯ ಅಗತ್ಯವಿದೆ ಮಾಡಿಸಲೇಬೇಕೆಂದರು.

ದೀಕ್ಷೆ ತೆಗೆದುಕೊಂಡ ನಂತರ 1953 ರಿಂದ 1959 ರವರೆಗೆ ನಾನು ಬಹುಶಃ ಯಾವ ಔಷಧಿಯನ್ನು ತೆಗೆದುಕೊಂಡಿರಲಿಲ್ಲವಾಗಿ ನಾನು ಯಾವ ಔಷಧಿಯನ್ನು ತೆಗೆದುಕೊಳ್ಳುವುದಿಲ್ಲ. ಈ ಶರೀರವಾದರೋ ನಶ್ವರವಾದುದು ಎಂದೆ. ಆಗ ಶ್ರುತಸಾಗರರು ಕುತೂಹಲದಿಂದ ಒಂದು ಉಪಾಯ ಮಾಡಿದರು. ನಾನು ಸೇಠಜೀಯವರ ನಶಿಯಾದಲ್ಲಿ ಅಧ್ಯಾಪಿಕೆಯಾದ ವಿದ್ಯಾವತಿಯವರಿಗೆ ಸರ್ವಾರ್ಥಸಿದ್ಧಿಯನ್ನು ಪಾಠ ಮಾಡುತ್ತಿದ್ದೆ. ಮುನಿಗಳು ಬಂದು ಮುಂದೆ ನಿಂತರು. ನಾವು ಎದ್ದು ಅವರನ್ನು ಸ್ವಾಗತಿಸಿದೆವು. ಆಗ ಮುನಿಗಳು ಹೇಳಿದರು. ನಾನು ಏನನ್ನು ಯಾಚಿಸಲು ಬಂದಿದ್ದೇನೆ. ನನಗೆ ಆಶ್ಚರ್ಯವಾಗಿ ಕೇಳಿದೆ. ತಮಗೆ ಕೊಡಲು ನಮ್ಮ ಹತ್ತಿರ ಇರುವುದಾದರೂ ಏನು? ನಾನು ತಮ್ಮ ಹತ್ತಿರ ಇರುವುದನ್ನು ಬೇಡಲು ಬಂದಿದ್ದೇನೆ. ನೋಡಿ ಮಾತಾಜೀ ತಾವು ತ್ಯಾಗ ಮಾಡಿರುವ ಔಷಧಿಯ ತ್ಯಾಗವನ್ನು ನನಗೆ ಕೊಡಿರಿ ಆ ತ್ಯಾಗವನ್ನು ಸಮಾಪ್ತಿಗೊಳಿಸಿ . ನಾಳೆಯಿಂದ ಔಷಧಿಯನ್ನು ತೆಗೆದುಕೊಳ್ಳಬೇಕೆಂದರು. ನಿಮಗೆ ಇನ್ನು ಚಿಕ್ಕ ವಯಸ್ಸು ನಿಮ್ಮಿಂದ ಸಮಾಜಕ್ಕೆ ಬಹಳ ಉಪಕಾರವಾಗಬೇಕಾಗಿದೆ. ಅದಕ್ಕಾಗಿ ತಾವು ಈ ನಶ್ವರ ಶರೀರದ ರಕ್ಷಣೆಯನ್ನು ಮಾಡಿಕೊಳ್ಳಲೇ ಬೇಕೆಂದರು.

ಇದನ್ನು ಕೇಳಿದ ವಿದ್ಯಾವತಿಯವರು ನನಗೆ ಸಮಾಧಾನಗೊಳಿಸ ತೊಡಗಿದರು. ಹಾಗೇ ಮುನಿಶ್ರೀಯವರ ಆಗ್ರಹ ಹಾಗೂ ವಾತ್ಸಲ್ಯಕ್ಕೆ ನಾನು ಬಾಗಲೇ ಬೇಕಾಯಿತು. ನಾನು ಔಷಧಿ ತೆಗೆದುಕೊಳ್ಳಲು ಒಪ್ಪಿಕೊಂಡೆ. ಆಚಾರ್ಯರ ಆಜ್ಞಾನುಸಾರ ಸೇಠ ಭಾಗಚಂದ್ರಜೀ ಸೋನಿಯ ಅವರು ವೈದ್ಯ ಮತ್ತು ಡಾಕ್ಟರುಗಳನ್ನು ಕರೆತಂದರು. ಇವರುಗಳೆಲ್ಲ ಸೇರಿ ಪರಾಮರ್ಶಿಸಿ ಔಷಧಿ - ಉಪಚಾರವನ್ನು ಪ್ರಾರಂಭಿಸಿದರು. ನಾನು ಔಷಧಿಯ ಹೆಸರು ಕೇಳುತ್ತಿರಲಿಲ್ಲ. ಪಥ್ಯದ ಬಗ್ಗೆಯು ಚರ್ಚೆ ಮಾಡುತ್ತಿರಲಿಲ್ಲ, ಏನನ್ನೂ ಕೇಳುತ್ತಿರಲಿಲ್ಲ. ನನ್ನ ಆರೋಗ್ಯದ ಪೂರ್ಣ ಮೇಲ್ವಿಚಾರಣೆಯನ್ನು ಸುಮತಿಮತೀಗೆ ವಹಿಸಿದ್ದರು. ಅವರು ಹೇಳಿದಂತೆ ನಾನು ಕೇಳುತ್ತಿದ್ದೆ. ಅವರು ಹೇಳುತ್ತಿದ್ದರು ಜ್ಞಾನಮತೀ ಆಹಾರದಲ್ಲಿ ಚೂರ್ಣವನ್ನು ಕಳುಹಿಸುತ್ತಿರುತ್ತೇನೆ ಮಟ್ಟಾ ಕಳುಹಿಸುತ್ತೇನೆ ತಗೆದುಕೊಳ್ಳಬೇಕು ಎಂದು ಹೇಳುತ್ತಿದ್ದರು. ಸರಿ ಎಂದು ತೆಗೆದುಕೊಳ್ಳುತ್ತಿದ್ದೆ. ಆದರೆ ಸಾಧಾರಣ ಚೂರ್ಣದಿಂದ ಏನು ಪ್ರಯೋಜನವಾಗಲಿಲ್ಲ. ಆಗ ವೈದ್ಯ ಮತ್ತು ಡಾಕ್ಟರ ಇಬ್ಬರು ಮತ್ತೆ ಪರಾಮರ್ಶಿಸಿ ಸೇಠ ಸಾಹೇಬರು ಪರ್ಪಟೀಯ ಪ್ರಯೋಗವನ್ನು ಪ್ರಾರಂಭಿಸಿದರು. ಆ ಸಮಯದಲ್ಲಿ ಮಾತ್ರೆ ಮತ್ತು ಬಾಳೆಹಣ್ಣಿನ ರೊಟ್ಟಿಯನ್ನು ತೆಗೆದುಕೊಳ್ಳಬೇಕಾಗಿತ್ತು. ಆಗ ನಾನು ಒಂದು ತಿಂಗಳಿಗೆ ಅನ್ನವನ್ನು ತ್ಯಾಗ ಮಾಡಿದ್ದೆ.

ಒಂದು ದಿನ ವೈದ್ಯರು ಡಾಕ್ಟರುಗಳು ಮತ್ತು ಸೇಠಜೀ ಎಲ್ಲ ನನ್ನ ಹತ್ತಿರ ಚರ್ಚೆ ಮಾಡಿದರು. ಈ ಕಾಯಿಲೆ ಹೇಗೆ ಪ್ರಾರಂಭವಾಯಿತು. ಇದರ ಮೂಲ ಕಾರಣವೇನು ? ನಾನು ತಕ್ಷಣ ಹೇಳಿದೆ ಅಸಾತಾಕರ್ಮದ ಉದಯದಿಂದ ಆದರೆ ಅವರು ಬಾಹ್ಯ ಕಾರಣವನ್ನು ಹುಡುಕತೊಡಗಿದರು. ಆಗ ಅವರಿಗೆ ಮೂಲ

ತಿಳಿಯತೊಡಗಿತು. 1958 ರಲ್ಲಿ ಗಿರಿನಾರ ಯಾತ್ರೆಯಿಂದ ಹಿಂದಿರುಗುವ ಸಮಯದಲ್ಲಿ ಬೇಸಿಗೆಯ ಸಮಯ ಅದಲ್ಲದೆ ಹೆಚ್ಚಾಗಿ ಅಂತರಾಯವಾಗುತ್ತಿತ್ತು. ಕಷ್ಟದಲ್ಲಿ ತಿಂಗಳಿಗೆ 15 ದಿನ ಮಾತ್ರ ಆಹಾರವಾಗುತ್ತಿತ್ತು.

ಡಾಕ್ಟರುಗಳು ಮೂಲ ಹುಡುಕುತ್ತಿದ್ದಂತೆ ತಿಳಿದಿದ್ದು ಬೇಸಿಗೆಯ ದಿನದಲ್ಲಿ ಸಾಕಾಗುವಷ್ಟು ನೀರಿನ ಅಭಾವ. ಮೇಲೆ ದಿನಕ್ಕೆ ಕಾಲ್ನಡಿಗೆಯ ಅನುಭವ ಇದರಿಂದಾಗಿ ಜಠರ ಬಲಹೀನವಾಗಿದೆ. ಅದರಲ್ಲಿ ತೂತಾಗಿದೆ. ಇದರಿಂದಾಗಿ ಅನ್ನವು ಪಚನವಾಗುತ್ತಿಲ್ಲ. ಇದೇ ಕಾರಣದಿಂದ ಇವರಿಗೆ ಆಮಶಂಕೆ ಎನ್ನುವ ಕಾಯಿಲೆ ಉಂಟಾಗಿದೆ. ಈಗ ವಿಶ್ರಾಂತಿ ಮತ್ತು ಯಥೋಚಿತ ಔಷಧಿಯಿಂದ ಶರೀರವೆಂಬ ಗಾಡಿಯನ್ನು ಚಾಲನೆಗೊಳಿಸ ಬೇಕೆಂದರು.

ಈ ಎಲ್ಲ ಮಾತುಗಳನ್ನು ಕೇಳಿಯು ನನಗೆ ಏನು ಚಿಂತೆಯಾಗಲಿಲ್ಲ. ವೈರಾಗ್ಯ ಭಾವನೆಯಿಂದಾಗಿ ನಾನು ಬಾಹ್ಯ ಉಪಚಾರಕ್ಕೆ ಹೆಚ್ಚಿನ ಮಹತ್ವವನ್ನು ಕೊಡಲಿಲ್ಲ. ನನಗೆ ಸುಧಾರಣೆ ಕಂಡ ಮೇಲೆಯೇ ಸಂಘದ ವಿಹಾರವು ಹೊರಟಿತು. ನಾನು ಮತ್ತೇ ನಡೆಯಲಾರಂಭಿಸಿದೆ. ಆಗ ಡಾಕ್ಟರ ಸಲಹೆ ಇತ್ತರು. ಮಾತಾಜೀ ತಾವು ಎರಡುತಿಂಗಳವರೆಗೆ ಆದರೂ ವಿಶ್ರಾಂತಿ ತೆಗೆದುಕೊಳ್ಳಬೇಕು. ತಾವು ನಡೆಯಲು ಹೊರಟರೆ ಈ ಕಾಯಿಲೆ ತಮಗೆ ಜೀವನ ಪರ್ಯಂತ ತೊಂದರೆ ಕೊಡುತ್ತದೆ ಎಂದರು. ಆಗಿದ್ದು ಹಾಗೇ ನಾನು ಔಷಧಿಯನ್ನು ಉಪೇಕ್ಷಿಸಿಯೇ ಕಾಯಿಲೆ ನನ್ನನ್ನು ಬಿಡುತ್ತಿರಲಿಲ್ಲ. ಆಗಾಗ್ಗೆ ಸಲ್ಲೇಖನ ತೆಗೆದುಕೊಳ್ಳುವ ಸ್ಥಿತಿಗೂ ತಲುಪಿದ್ದೆ.

ಚಾತುರ್ಮಾಸ ಮುಗಿದ ನಂತರ ಸೇಠಜೀ ಬಡೀನಶಿಯಾದಲ್ಲಿ ತ್ರಿಲೋಕ ವಿಧಾನವನ್ನು ಮಾಡಿಸಿದರು. ಮಂಡಲದ ಮೇಲೆ ತೆಂಗಿನಕಾಯಿಯನ್ನು ಇಡಿಸಿದ್ದರು. ವಿಧಾನ ಪೂರ್ತಿ ಆದ ಮೇಲೆ ರಥಯಾತ್ರೆ ಹೊರಟಿತು. ಅದರಲ್ಲಿ ನಶಿಯಾದ ಬೆಳ್ಳಿಯ ಉಪಕರಣಗಳಿಂದ ರಥಯಾತ್ರೆಯು ಕಂಗೊಳಿಸ ತೊಡಗಿತು. ರಥಕ್ಕೆ ಜೋಡಿಸಿದ್ದ ಕೃತ್ರಿಮ ಕುದುರೆಗಳು ಬಹಳ ಸುಂದರವಾಗಿತ್ತು. ರಾಜಸ್ಥಾನದ ಅಲಂಕಾರದ ವಸ್ತುಗಳು ಬಹಳ ಪ್ರಸಿದ್ಧವಾದುದು.

೩೩

ಲಾಡನೂವಿನ ಕಡೆಗೆ ವಿಹಾರ

ಅಜಮೇರದಿಂದ ಹೊರಟ ಸಂಘದ ವಿಹಾರವು ಪುಷ್ಕರವನ್ನು ತಲುಪಿತು. ಇಲ್ಲಿ ನದಿ ಇದ್ದುದ್ದರಿಂದ ಚಳಿ ಬಹಳವಿತ್ತು. ಇಲ್ಲಿಂದ ವಿಹಾರ ಮಾಡುತ್ತಾ ಸಂಘವು ನಾಗೌರದ ಕಡೆಗೆ ಹೊರಟಿತು. ಮಾರ್ಗದಲ್ಲಿ ಐಲಕ ಆನಂದಸಾಗರರಿಗೆ ಚಳಿಯಿಂದಾಗಿ ನಿಮೋನಿಯ ಆಗಿ ಬಿಟ್ಟಿತು. ಅವರು ಮಢತಾರೋಡ ಹಳ್ಳಿಯಲ್ಲಿ ಹೆಚ್ಚು ಅಸ್ವಸ್ಥರಾದರು. ಸಂಘ ಸ್ವಲ್ಪ ದಿನ ಅಲ್ಲೇ ತಂಗಬೇಕಾಯಿತು. ಇನ್ನು ಐಲಕರಿಗೆ ಸನ್ನಿಪಾತವಾಯಿತು ಮತ್ತು ಸಮಾಧಿಯು ಆಯಿತು. ಇದೇ ಪುಷ್ಕರದಿಂದ ವಿಹಾರ ಹೊರಟ ಸಮಯದಲ್ಲಿ ಆರ್ಯಿಕೆ ಸುಮತಿಮತೀ ಮಾತಾಜೀಗೆ ಚಳಿ ಹಿಡಿಯಿತು. ಅವರು ಅಸ್ವಸ್ಥರಾದರು. ಕೆಮ್ಮು ಜಾಸ್ತಿಯಾಯಿತು. ನಿಧಾನವಾಗಿ ಸಂಘ ಮೆಢತಾರೋಡ , ನಾಗೌರ ಬೆಟ್ಟಗಳನ್ನು ಏರಿ ಲಾಡನೂ ತಲುಪಿದೆವು ಇಲ್ಲಿ ಪ್ರತಿಷ್ಠೆಯ ತಯಾರಿಗಳು ಜೋರಾಗಿ ನಡೆಯುತ್ತಿತ್ತು.

ಪ್ರಕಾಶನು ಹಿಂದಿರುಗಿ ಮನೆಯ ಕಡೆಗೆ

ಅಜಮೇರಿನ ಚಾತುರ್ಮಾಸದ ನಂತರ ಸಂಘವು ಲಾಡನೂ ಕಡೆಗೆ ತಿರುಗಿತು. ರಸ್ತೆಯಲ್ಲಿ ಮೆಢತಾರೋಡ,

ನಾಗೌರದಿಂದ ಸಂಘವು ಲಾಡನುಗೆ ಬಂದಿತು. ಅಲ್ಲಿ ಚಂದ್ರಸಾಗರ ಭವನವನ್ನು ಕಟ್ಟಿಸಿದರು. ಅದರಲ್ಲಿ ಭ. ಮಹಾವೀರಸ್ವಾಮಿಯ ಪದ್ಮಾಸನ ಮೂರ್ತಿಯನ್ನು ವಿರಾಜಮಾನಗೊಳಿಸಿದ್ದರು. ಹಾಗೂ ಆಚಾರ್ಯ ಶಾಂತಿಸಾಗರರು ವೀರಸಾಗರರು, ಮತ್ತು ಆಚಾರ್ಯ ಕಲ್ಪಚಂದ್ರಸಾಗರರ ಪ್ರತಿಮೆಯನ್ನು ವಿರಾಜಮಾನ ಗೊಳಿಸಿದ್ದರು. ಇದೇ ಸ್ಮಾರಕ ಭವನದಲ್ಲಿ ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವ ಮಾಡಿಸುವುದಕ್ಕೆ ಭಕ್ತ ಶ್ರಾವಕರು ಆಚಾರ್ಯ ಶಿವಸಾಗರರ ಸಂಘವನ್ನು ಸಂಘ ಸಹಿತ ಅಲ್ಲಿಗೆ ಕರೆತಂದಿದ್ದರು.

ಅಲ್ಲಿ ಆರ್ಯಿಕೆ ಸುಮತಿಮತೀ ಮಾತಾಜೀಯವರ ಆರೋಗ್ಯ ಕ್ಷೀಣಿಸಿದ್ದರಿಂದ ಅವರು ಸಲ್ಲೇಖನ ಸ್ವೀಕರಿಸಿದ್ದರು. ಒಂದು ದಿನ ರಾತ್ರಿ ಸುಮಾರು 3½ ಗೆ ಮಹಾಮಂತ್ರವನ್ನು ಕೇಳುತ್ತಲೇ ದೇಹತ್ಯಾಗವನ್ನು ಮಾಡಿದರು. ಅದೇ ದಿನ ಪ್ರಾತಃಕಾಲ ಕೈಲಾಸಚಂದ್ರನು ಅಲ್ಲಿಗೆ ಬಂದಿದ್ದನು. ಮಾತಾಜೀ ಅಂತ್ಯೇಷ್ಠಿಯಲ್ಲಿ ಭಾಗವಹಿಸಿದನು. ನನ್ನಲ್ಲಿ ಹೇಳಿದ ತಂದೆಯವರ ಆರೋಗ್ಯ ಹದಕೆಟ್ಟಿದೆ. ಆದ್ದರಿಂದ ಪ್ರಕಾಶನನ್ನು ಅವಶ್ಯವಾಗಿ ಕಳುಹಿಸಕೊಡಬೇಕು. ಅವನನ್ನು ಕರೆದುಕೊಂಡು ಹೋಗಲು ಬಂದಿದ್ದೇನೆ ಆದಾಗ್ಯೂ ನನಗೆ ಗೊತ್ತಾಯಿತು ಇದೊಂದು ನೆಪ ಮಾತ್ರವೆಂದು. ಇವರು ಇಲ್ಲಿಂದ ಮನೆಗೆ ಕರೆದುಕೊಂಡು ಹೋಗಿ ಸಂಸಾರ ಬಂಧನದಲ್ಲಿ ಸಿಲುಕಿಸುವುದಕ್ಕಾಗಿ ಎಂದು. ಆದ್ದರಿಂದ ನಾನು ಬಹಳಷ್ಟು ತಿಳಿಸಿ ಹೇಳಿದರೂ ಕೇಳದೆ ಕೊನೆಗೆ ಪ್ರಕಾಶಚಂದ್ರನನ್ನು ಅಳುತ್ತಿರುವಂತೆಯೇ ಮನೆಗೆ ಕರೆದುಕೊಂಡು ಹೋದ. ಪ್ರಕಾಶಚಂದ್ರನು ಮನೆಗೆ ಹೋಗುತ್ತಲೇ ಎಲ್ಲರಿಗೂ ಸಂತೋಷವಾಯಿತು. ಎಲ್ಲರಿಗೂ ಸಂಘದ ವಿಷಯವನ್ನು ಕೇಳಲು ಉತ್ಸುಕತೆ ತುಂಬಿತು. ಆದರೆ ತಂದೆಯವರು ಹೇಳಿದ್ದು ಮಾತಾಜೀಯ ದರ್ಶನ ಮಾಡಿಕೊಂಡು ಒಂದು ತಿಂಗಳು ಅಲ್ಲಿ ಇದ್ದುದು ತುಂಬ ಚೆನ್ನಾಗಿತ್ತು. ಆದರೆ ಯಾರೇ ಹೋದರು ಸಂಘದಲ್ಲಿ ಇಟ್ಟುಕೊಳ್ಳಲು ಪ್ರೇರೇಪಿಸುವ ಅವರ ಸ್ವಭಾವ ಹಿಡಿಸಲಿಲ್ಲವೆಂದರು.

ಇದಂತೂ ಅವರ ಸ್ವಭಾವವೇ ಆಗಿದೆ. ಅವರು ಮ್ಹಾಸವಾಡದ ಚಾತುರ್ಮಾಸದಲ್ಲಿ ಆರ್ಯಿಕೆ ಪದ್ಮಾವತೀ ಮತ್ತು ಜಿನಮತೀಯನ್ನು ಹೇಗೆ ಹೊರಡಿಸಿದರು. ಎಷ್ಟೊಂದು ಸಂಘರ್ಷ ಮಾಡಿ ಎಷ್ಟು ಸಾಧನೆ ಮಾಡಿ ಅವರಿಬ್ಬರಿಗೂ ದೀಕ್ಷೆಯನ್ನು ಕೊಡಿಸಿದ್ದಾಯಿತು. ಸಂಘದಲ್ಲಿ ನನಗೆ ಚಂದ್ರಮತಿ ಆರ್ಯಿಕೆಯವರೇ ಈ ವಿಷಯವನ್ನು ಹೇಳಿದ್ದರು. ಅವರು ಸೌಭಾಗ್ಯವತಿ ಸೋನುಬಾಯಿಯವರ ಮನೆಗೆ ಆಹಾರಕ್ಕೆ ಹೋದ ಸಮಯದಲ್ಲಿ ಅವರ ಗಂಡನಿಗೆ ಹೇಳುತ್ತಿದ್ದರು. ನಿಮ್ಮ ಧರ್ಮಪತ್ನಿಯನ್ನು ನಾವು ಕರೆದುಕೊಂಡು ಹೋಗಿ ಬಿಡುತ್ತೇವೆ ಎಂದು ಹೇಳುತ್ತಿದ್ದರು. ಅವರ ಮಕ್ಕಳು ಸೊಸೆಯಂದಿರು ದರ್ಶನಕ್ಕೆ ಬಂದಾಗಲೆಲ್ಲ ಅವರು ಹೇಳುತ್ತಿದ್ದುದ್ದು ನಿಮ್ಮ ತಾಯಿಯವರನ್ನು ನಾವು ಕರೆದುಕೊಂಡು ಹೋಗುವೆವು ಎಂದು.

ಮೊದಲು ಅವರು ಖುಷಿಯಿಂದ ಬಹಳ ಒಳ್ಳೆಯದು ಕರೆದುಕೊಂಡು ಹೋಗಿ ಅವರು ಜಗತ್ತಿಗೆ ಪೂಜ್ಯ ಮಾತಾಜೀ ಆಗಲಿ ಎನ್ನುತ್ತಿದ್ದರು. ಆದರೆ ಅವರನ್ನು ಕರೆದುಕೊಂಡು ಬಂದ ಮೇಲೆ ಅವರ ಗಂಡ ಲಾಲಚಂದ್ರರು ಎರಡು ಮೂರು ಕಡೆಯಿಂದಲೂ ಕರೆದುಕೊಂಡು ಹೋಗಲು ಬಯಸಿದರು. ಗಲಾಟೆಯನ್ನು ಮಾಡಿದರು. ಆದರೆ ಮಾತಾಜೀ ದೃಢವಾಗಿ ನಸುನಕ್ಕರು. ಹಾಗೆ ಸೋನುಬಾಯಿ ಕೂಡ ಗಟ್ಟಿಯಾಗಿ ನಿಂತರು. ಅವರೇ ಇಂದು ಆರ್ಯಿಕೆ ಪದ್ಮಾವತಿ ಆಗಿರುವುದು. ಕುಮಾರಿ ಪ್ರಭಾವತಿ ಹೊರಟಾಗಲು ಅವರ ಅಜ್ಜಿ ಬಹಳ ಮಾತಾಡಿದರು. ಮಾತಾಜೀ ಏನೂ ಬೇಸರಿಸಲಿಲ್ಲ ಅವರೇ ಇಂದು ಸಂಘದಲ್ಲಿ ಕ್ಷುಲ್ಲಿಕೆ ಜಿನಮತಿಯಾಗಿದ್ದಾರೆ. ಈಗ ಬ್ಯಾವರದ ಚಾತುರ್ಮಾಸದಲ್ಲಿಯು ಮಾತಾಜೀ ಒಬ್ಬ ಕನ್ಯೆಯನ್ನು ಮನೆ ಬಿಟ್ಟು ಬರಲು ಪ್ರೇರೇಪಿಸಿದರು. ಆದರೆ ಹೊರಡಲಿಲ್ಲ ಅದು ಬೇರೆ ವಿಷಯ. ಇದನ್ನು ಕೇಳಿ ತಂದೆಯವರು ನಕ್ಕು ಹೇಳಿದರು. ಎಲ್ಲರನ್ನು ತಿರುಗಿಸುವುದರಲ್ಲಿ ಇವರಿಗೆ ಮಜಾ ಸಿಗುತ್ತದೆ. ಈ ಮಾತುಗಳನ್ನು ನಾನು ಮೋಹಿನಿಯವರು ಲಾಡನುಗೆ ಪಂಚಕಲ್ಯಾಣಕ್ಕಾಗಿ ಬಂದ ಸಮಯದಲ್ಲಿ ಪ್ರಕಾಶಚಂದ್ರನಿಂದ ತಿಳಿದುಕೊಂಡೆ.

ಪಂಚಕಲ್ಯಾಣದ ಪ್ರತಿಷ್ಠೆ ಹಾಗೂ ಮುನಿಗಳ ಮೂರ್ತಿಯ ಪ್ರತಿಷ್ಠೆ

ಇಲ್ಲಿ ಪ್ರತಿಷ್ಠೆಯ ಸಮಯದಲ್ಲಿ ಚಂದ್ರಸಾಗರರ ಸ್ಮಾರಕದ ಭವನದಲ್ಲಿ ಭಗವಾನ್ ಮಹಾವೀರರ ವಿಶಾಲ ಮೂರ್ತಿಯನ್ನು ವಿರಾಜಮಾನಗೊಳಿಸಲಾಯಿತು. ಅದಕ್ಕಿಂತ ಕೆಳಗಿನ ವೇದಿಕೆಯಲ್ಲಿ ಆಚಾರ್ಯ ಶ್ರೀ ಶಾಂತಿಸಾಗರರು, ವೀರಸಾಗರರು ಮತ್ತು ಆಚಾರ್ಯಕಲ್ಪ ಶ್ರೀ ಚಂದ್ರಸಾಗರರ ತದ್ರೂಪ ಪ್ರತಿಮೆಗಳನ್ನು ವಿರಾಜಮಾನಗೊಳಿಸಿದ್ದರು. ಇಂದ್ರಪ್ರತಿಷ್ಠೆ ಆಗಿತ್ತು. ಪ್ರತಿಷ್ಠಾ ಮಂಟಪವನ್ನು ಸೇಠ ಗಜರಾಜಜೀ ಗಂಗಾವಾಲನ ಆಶ್ರಮದ ಹತ್ತಿರವೇ ಮಾಡಿಸಲಾಗಿತ್ತು. ಪ್ರತಿಷ್ಠೆಯ ಸಮಯದಲ್ಲಿ ಚರ್ಚೆ ಉಂಟಾಯಿತು. ಮುನಿಗಳ ಮೂರ್ತಿಗಳನ್ನು ಪ್ರತಿಷ್ಠೆ ಮಾಡಿಸುವುದು ಬೇಡ ಎಂದು. ಆಚಾರ್ಯರ ಅಜ್ಞೆಯಂತೆ ಪಂಡಿತ ಇಂದ್ರಲಾಲಜೀ ಮುಂತಾದವರು ಬಂದಿದ್ದವರು ಇವರೆಲ್ಲ ಆರ್ಷ ಪರಂಪರೆಯವರು ಇರಲೇಬೇಕೆಂಬ ಪಕ್ಷಪಾತವನ್ನು ವಹಿಸಿದರು.

ಆಚಾರ್ಯರು ನನ್ನಲ್ಲೂ ಹೇಳಿದರು. ಜ್ಞಾನಮತೀ ಮುನಿಗಳ ಮೂರ್ತಿ ಪ್ರತಿಷ್ಠೆಯ ಪ್ರಮಾಣವನ್ನು ಹುಡುಕಿ ತಿಳಿಸು ಎಂದರು. ನಾನು ಧವಲಾ, ಮೂಲಾಚಾರ ಮತ್ತು ವಸುನಂದಿ ಶ್ರಾವಕಾಚಾರದ ಪ್ರಮಾಣಗಳನ್ನು ಹುಡುಕಿಕೊಟ್ಟೆ. ಧವಲಗ್ರಂಥದ ಪ್ರಮಾಣವು ವಿದ್ವಾಂಸರಿಗೆ ತುಂಬ ಸಂತೋಷವನ್ನು ಉಂಟುಮಾಡಿತು. ಹಾಗೆ ಸಾಧು-ಸಾಧ್ವಿ ಮತ್ತು ವಿದ್ವಾಂಸರುಗಳು ಪ್ರಮಾಣವನ್ನು ಹುಡುಕಿದರು. ಇದರ ಮಧ್ಯೆ ಸೇಠ ಗಜರಾಜರು ಆಚಾರ್ಯರಲ್ಲಿಗೆ ಬಂದು ಅನೇಕ ಸಂಶಯಗಳಿಗೆ ಸಮಾಧಾನವನ್ನು ಪಡೆದರು. ಹಾಗೇ ಮಾತನಾಡುತ್ತಾ ಅವರು ಕೇಳಿದರು. ಸಮವಶರಣದಲ್ಲಿ ಕ್ಷುದ್ರ ಪಶುಗಳು ಸಹ ಭೇದಭಾವವಿಲ್ಲದೆ ಹೋಗಿ ಭಾಗವಹಿಸುತ್ತವೆ. ಆದರೆ ಇಂದು ಮಂದಿರಗಳಿಗೆ ಶೂದ್ರ ಜನಗಳಿಗೆ ಏಕೆ ನಿರ್ಬಂಧಿಸಬೇಕೆಂದರು. ಈ ವಿಷಯದ ಬಗ್ಗೆ ಆಚಾರ್ಯರ ಅನುಮತಿಯಂತೆ ತಿಲೋಯಪಣ್ಣತ್ತಿ ಮತ್ತು ಹರಿವಂಶ ಪುರಾಣ ಮುಂತಾದ ಅನೇಕ ಪ್ರಮಾಣವನ್ನು ಕೊಟ್ಟು ಇವುಗಳಲ್ಲಿ ಕೆಲವು ಉದಾಹರಣೆಗಳನ್ನು ನೋಡಿರಿ

ಸಂಯತಸ್ಯಗುಣಾನ್ ಬುದ್ಧ್ಯಾಧ್ಯಾಯಾರೋಪ್ಯಾಕೃತಿವತಿ ಅನಾಕೃತಿವತಿ ಚ ವಸ್ತುನಿ ಸ l
ವಿವಾಯಮಿತಿ ಸ್ಥಾಪಿತಾ ಮೂರ್ತಿಃ ಸ್ಥಾಪನಾ ಸಂಯತಃ[1]ll

ಆಕಾರವಾನ್ ಅಥವಾ ಅನಾಕಾರವಾನ್ ವಸ್ತುಗಳಲ್ಲಿ ಇದು ಅದೇ ಎಂದು ಮೂರ್ತಿಗಳಲ್ಲಿ ಸಂಯತ ಮುನಿಗಳ ಗುಣಗಳನ್ನು ಆರೋಪಣೆ ಮಾಡುವುದು ಈ ಪ್ರಕಾರದಿಂದ ಸ್ಥಾಪಿತ ಮೂರ್ತಿಗಳನ್ನು ಸ್ಥಾಪನಾ ಸಂಯತವೆಂದು ಹೇಳುತ್ತಾರೆ.

ಸಿದ್ಧಾಚಾರ್ಯಾದಿ ಪ್ರತಿಬಿಂಬಾನಾಂ ಚ ಸ್ತವನಂ[2] ll೨ll

ಸಿದ್ಧಾ, ಆಚಾರ್ಯ ಮುಂತಾದ ಪ್ರತಿಮೆಗಳನ್ನು ಸ್ತವನ ಮಾಡುವುದು ಈ ಪ್ರಮಾಣಗಳಿಂದ ಮುನಿಗಳ ಮೂರ್ತಿಗಳನ್ನು ಮಾಡುವ ವಿಷಯ ಸಿದ್ಧವಾಗುತ್ತದೆ.

ಸಮಸರಣದಲ್ಲಿ ವಿಧ್ಯಾದೃಷ್ಟಿಯ ನಿಷೇಧ

ಮಿಚ್ಛಾಣಟ್ಠೀ ಅಭವ್ವಾ ತೇಸುಮಸಣ್ಣೀ ಣ ಹೊಂತಿ ಕಇಆಇಂ l
ತಹಯ ಅಣಜ್ಜು ವಸಾಯಾ ಸಂದಿದ್ಧಾ ವಿವಿಹವಿವರೀದಾ[3] ll೩ll

---

1. ಮೂಲಾಚಾರಗಾಥೆ ೧ ಟೀಕೆಯಲ್ಲಿ
2. ಮೂಲಾಚಾರಗಾಥೆ ೫೭೭ ಟೀಕೆಯಲ್ಲಿ
3. ತಿಲೋಯಪಣ್ಣತ್ತಿ ಅ. ೪.

ಅಂದರೆ ಸಮವಸರಣದ ಕೋಷ್ಠದಲ್ಲಿ ಮಿಥ್ಯಾದೃಷ್ಟಿ, ಅಭವ್ಯಾದಿ ಜೀವಗಳು ಎಂದಿಗೂ ಪ್ರವೇಶಿಸುವುದಿಲ್ಲ ಹಾಗೂ ಅಲ್ಲಿ ಅಸಂಜ್ಞೀ ಜೀವಗಳು ಎಂದಿಗೂ ಪ್ರವೇಶಿಸುವುದಿಲ್ಲ ಹಾಗೂ ಅಲ್ಲಿ ಅನದ್ಯವಸಾಯದಿಂದ ಕೂಡಿದ, ಸಂದೇಹಯುಕ್ತ ಮತ್ತು ಹಲವಾರು ರೀತಿಯ ವಿಪರೀತಗಳಿಂದ ಕೂಡಿದ ಜೀವಗಳು ಇರುವುದಿಲ್ಲ.

ಪಾಪಶೀಲಾ ವಿಕರ್ಮಾಣಾಃ ಶೂದ್ರಾಃ ಪಾಖಂಡಪಂಡಕಾಃ
ವಿಕಲಾಂಗೇಂದ್ರಿಯೋದ್ ಭ್ರಾಂತಾಃ ಪರಿಯಂತಿ ಬಹಿಸ್ತತಃ[4] ॥೨೭೩॥

ಪಾಪಿ, ವಿರುದ್ಧಾ ಕಾರ್ಯ ಮಾಡುವವನು ಶೂದ್ರಾ, ಪಾಖಂಡಿ, ನಪುಂಸಕ, ವಿಕಲಾಂಗ, ವಿಕಲೇಂದ್ರಿಯ ಹಾಗೂ ಚಿತ್ತ ಭ್ರಾಂತರಾದ ಮನುಷ್ಯರು ಹೊರಗಡೆ ಪ್ರದಕ್ಷಿಣೆ ಹಾಕಬಹುದೇ ಹೊರತು ಒಳಗೆ ಪ್ರವೇಶ ಮಾಡಲಾರರು.

ಪ್ರತಿಷ್ಠೆಯ ನಂತರ ಒಂದೆರಡು ದಿನ ತಂಗಿದ್ದು ನಂತರ ಸುಜಾನಗಢದ ಶ್ರಾವಕರು ಆಗ್ರಹ ಮಾಡಿದ್ದರಿಂದ ಸಂಘವು ಅಲ್ಲಿಗೆ ವಿಹಾರ ಮಾಡಿ, ಸುಜಾನಗಢಕ್ಕೆ ಬಂದಿತು. ಇಲ್ಲಿಯ ಮುನಿಭಕ್ತ ಸಮಾಜಕ್ಕೆ ಒಳ್ಳೆಯ ಧರ್ಮಪ್ರಭಾವನೆ ಆಗುತ್ತಿತ್ತು. ಆದ್ದರಿಂದಲೇ ಸಂಘವು ಚಾತುರ್ಮಾಸಕ್ಕೆ ಅಲ್ಲಿಯೇ ನಿಂತಿತು.

೩೪

ಸುಜಾನಗಢದಲ್ಲಿ ಚಾತುರ್ಮಾಸ

1960 ರಲ್ಲಿ ಸುಜಾನಗಢದ ಚಾತುರ್ಮಾಸದಲ್ಲಿ ಒಳ್ಳೆಯ ಧರ್ಮಪ್ರಭಾವನೆ ಆಗುತ್ತಿತ್ತು. ಇಡೀ ನಗರದಲ್ಲಿ ಒಳ್ಳೆಯ ಧರ್ಮಪ್ರಭಾವನೆ ಆಗುತ್ತಿತ್ತು. ಇಲ್ಲಿ ಇಡೀ ನಗರದಲ್ಲಿ ಚೌಕವನ್ನು ಮಾಡುತ್ತಿದ್ದರು. ಇಲ್ಲಿ ಸಾಮಾಯಿಕಕ್ಕಾಗಿ ಬೆಳಗ್ಗೆಹೊತ್ತು 'ನಶಿಯಾ' ಕ್ಕೆ ಹೋಗುತ್ತಿದ್ದೆವು.

ಸಾಮಾಯಿಕದ ಸಮಯ

ಒಂದು ದಿನ ಒಬ್ಬ ಆರ್ಯಿಕೆ ಪ್ರಶ್ನೆ ಮಾಡಿದರು. ಸಾಮಾಯಿಕವನ್ನು ಹಿಂದಿನರಾತ್ರಿ ನಾಲ್ಕು ಗಂಟೆಗೆ ಮಾಡಬೇಕು. ಆದರೆ ತಾವು ಸೂರ್ಯೋದಯದ ಸಮಯದಲ್ಲಿ ಹೇಗೆ ಮಾಡುತ್ತೀರ ಎಂದು. ನಾನು ಹೇಳಿದೆ ಅನಗಾರ ಧರ್ಮಾಮೃತದಲ್ಲಿ ಬೆಳಗ್ಗೆಯೇ ಸಾಮಾಯಿಕವನ್ನು ಮಾಡುವ ವಿಧಾನವನ್ನು ಹೇಳಿದೆ ಎಂದೆ.

ಕ್ಷಮಂ ನಿಯಮ್ಯ ಕ್ಷಣಯೋಗ ನಿದ್ರಯಾ, ಲಾತಂ ನಿಶೀಥೆ ಘಟಿಕಾದ್ವಯಾಧಿಕೇ[5] ॥
ಸ್ವಾಧ್ಯಾಯ ಮತ್ಯಸ್ಯ ನಿಶಾದ್ವಿನಾಡಿಕಾ - ಶೇಷೇ ಪ್ರತಿಕ್ರಮ್ಯ ಚ ಯೋಗಮುತ್ಸೃಜೇತ ॥೭॥

ಅರ್ಧರಾತ್ರಿಯ ನಾಲ್ಕು ಗಂಟೆಯಲ್ಲಿ ನಿದ್ರೆಯ ಮೂಲಕ ಶ್ರಮವನ್ನು ಪರಿಹರಿಸಿಕೊಂಡು ಅರ್ಧರಾತ್ರಿಯ ಎರಡು ಗಂಟೆಯ ನಂತರ ಅಪರರಾತ್ರಿಯಲ್ಲಿ ಸ್ವಾಧ್ಯಾಯ ಪ್ರಾರಂಭಿಸಿ ಪುನಃ ಎರಡು ಗಂಟೆ ಉಳಿದಿರುವಾಗ

---

4. ಹರಿವಂಶ ಪುರಾಣ ಸರ್ಗ ೫೭. ಗಾಥಾಸಂಖ್ಯೆ. ೧೭೩.

5. ಅನಗಾರ ಧರ್ಮಾಮೃತ ಅ. ೬. ಶ್ಲೋ. ೭. ಪುಟ. ೬೪೬.

ಸ್ವಾಧ್ಯಾಯ ಮುಗಿಸಿ ರಾತ್ರಿ ಪ್ರತಿಕ್ರಮಣವನ್ನು ಮಾಡಿ ರಾತ್ರಿ ಯೋಗನಿಷ್ಠಾಪನ ಮಾಡಿ ಅನಂತರ ಪ್ರಭಾತ ದೇವವಂದನೆ (ಸಾಮಾಯಿಕ) ಮಾಡಿ ಆಗ ಸೂರ್ಯೋದಯವಾಗಿರುತ್ತದೆ.

ಪರಂಪರೆಯ ಬಗ್ಗೆಯೇ ಸಂದೇಹ ಆಯಿತು. ಆಗ ಪಂ. ಖೂಬಚಂದ್ರ ಶಾಸ್ತ್ರಿಗಳು ಬಂದರು. ಅವರ ಮುಂದೆ ಈ ವಿಷಯ ಇಟ್ಟೆ. ಪಂಡಿತರೇ ನೀವು ಅನಗಾರ ಧರ್ಮಾಮೃತದ ಹಿಂದಿಯ ಅನುವಾದ ಮಾಡಿದ್ದೀರ ನೋಡಿ ಹೇಳಿ ಸಾಮಾಯಿಕಕ್ಕೆ ಯಾವ ಸಮಯ ಸೂಕ್ತ ನೋಡಿ ಹೇಳಿ.

ಅವರು ಪ್ರಕರಣವನ್ನು ನೋಡಿ ಹೇಳಿದರು ಅನುವಾದ ಮಾಡಿ ಬರೆಯುವುದು ಬೇರೆ ವಿಷಯ ಆದರೆ ಅದನ್ನು ಪ್ರಯೋಗದಲ್ಲಿ ತರುವುದು ಬೇರೆ ನಿಜವಾಗಿಯು ತಾವು ಆಗಮದಲ್ಲಿರುವಂತೆಯೇ ಕ್ರಿಯೆಯಲ್ಲಿತರುತ್ತಿರುವುದು ಬಹಳ ಸಂತೋಷದ ವಿಷಯ ನಾನು ಮೂಲಾಚಾರವನ್ನು ಅವರಿಗೆ ತೋರಿಸಿದೆ.

ಸವಿತುರುದಯೆ ದೇವವಂದನಾಂ ಕೃತ್ವಾ ಘಟಿಕಾದ್ವಯೇऽ ತಿಕ್ರಾಂತೇ ಶ್ರುತಭಕ್ತಿ ಗುರುಭಕ್ತಿ ಪೂರ್ವಕಂ ಸ್ವಾಧ್ಯಾಯಂ ಗೃಹೀತ್ವಾ ವಾಚನಾ ಪೃಚ್ಛನಾನುಪ್ರೇಕ್ಷಾ ಪರಿವರ್ತನಾದಿಕಂ ಸಿದ್ಧಾಂತಾದೇರ್ವಿಧಾಯ ಘಟಿಕಾದ್ವಯಮ ಪ್ಯಾಪ್ತಮದ್ಯಾಹ್ನಾದರಾತ್ ಸ್ವಾಧ್ಯಾಯಂ ಶ್ರುತಭಕ್ತಿ ಪೂರ್ವಕ ಮುಪಸಂಹತ್ಯಾವಸಥೋ ದೂರತೋ ಮೂತ್ರಪುರೀಷಾದೀನ್ ಕೃತ್ವಾ ಪೂರ್ವಪರಕಾಯವಿಭಾಗಮವಲೋಕ್ಯ ಹಸ್ತಪಾದಾದಿ ಪ್ರಕ್ಷಾಲನಂ ವಿಧಾಯ ಕುಂಡಿಕಾಂ ಪಿಚ್ಛಿಕಾಂ ಗೃಹೀತ್ವಾ ಮಧ್ಯಾಹ್ನ ದೇವ ವಂದನಾಂ ಕೃತ್ವಾ ಪೂರ್ಣೋದರ ಬಾಲಕಾನ್ ಭಿಕ್ಷಾಹಾರಾನ್ ಕಾಕಾದಿಬಲೀನನ್ಯಾನಪಿ ಲಿಂಗಿನೋ ಭಿಕ್ಷಾ ವೇಲಾಯಂ ಜ್ಞಾತ್ವಾ ಪ್ರಶಾಂತೇ ಧೂಮಮುಶ್ಲಾದಿ ಶಬ್ದೇ ಗೋಚರಂ ಪ್ರವಿಶೇನ್ಮುನಿಃ ।[1]

ಸೂರ್ಯೋದಯವಾದನಂತರ ದೇವವಂದನೆ ಮಾಡಿ ಎರಡು ಗಂಟೆ ನಲವೆತ್ತಂಟು ನಿಮಿಷ ಕಳೆದ ನಂತರ ಶ್ರುತಭಕ್ತಿ, ಆಚಾರ್ಯ ಭಕ್ತಿಪೂರ್ವಕವಾಗಿ ಸ್ವಾಧ್ಯಾಯದಲ್ಲಿ ಸಿದ್ಧಾಂತ ಮೊದಲಾದ ಗ್ರಂಥಗಳ ವಾಚನಾ ಪುಚ್ಛನಾ ಮತ್ತು ಪರಿವರ್ತನ ಮುಂತಾದುವುಗಳನ್ನು ಮಾಡಿ ಮಧ್ಯಾಹ್ನದಲ್ಲಿ ಎರಡು ಗಂಟೆ ಮೊದಲೇ ಶ್ರುತಭಕ್ತಿ ಪೂರ್ವಕ ಸ್ವಾಧ್ಯಾಯ ಮುಗಿಸಿ ಪುನಃ ವಸತಿಯಿಂದ ದೂರ ಹೋಗಿ ಮಲ ಮೂತ್ರಗಳನ್ನು ವಿಸರ್ಜಿಸಿ ಪಿಂಛಿಯಿಂದ ಪರಿಮಾರ್ಜನ, ಪ್ರಕ್ಷಾಲನ ಮಾಡಿ ಮಧ್ಯಾಹ್ನದ ದೇವವಂದನೆಯ ನಂತರ ಸಾಮಾಯಿಕ ಮಾಡಿ ಭೋಜನದ ತಯಾರಿ ಆಗಿ ಶಾಂತತೆ ಉಂಟಾದ ಮೇಲೆ ಆಹಾರಕ್ಕಾಗಿ ಹೊರಡಬೇಕು. ಈ ಪ್ರಮಾಣದಲ್ಲಿ ತೋರಿದ ಮೇಲೆ ಪಂಡಿತರು ಆಚಾರ್ಯರಲ್ಲಿ ಈ ವಿಷಯವನ್ನು ತಿಳಿಸಿದರು. ಅದಕ್ಕೆ ಆಚಾರ್ಯರು ವಾಸ್ತವವಾಗಿ ಸಾಮಾಯಿಕದ ಸಮಯ ಇದೇ. ಪರಂಪರೆಯನ್ನು ಅನುಸರಿಸಬೇಕು ಜ್ಞಾನಮತಿಗೆ ಇಲ್ಲದ್ದನ್ನ ಹೇಳುವ ಹಾಗೇ ಇಲ್ಲ.

ಪುನಃ ಚರ್ಚೆ ಆದ ನಂತರ ನಿರ್ಣಯವಾಯಿತು, ಸೂರ್ಯೋದಯ ಮೂರು ಗಂಟೆ ಮೊದಲು ಅಥವಾ ಮೂರು ಗಂಟೆ ನಂತರವೂ ಸಹ ಸಾಮಾಯಿಕಕ್ಕೆ ಉತ್ಕೃಷ್ಟ ಕಾಲವಾಗಿರುವುದರಿಂದ ಸೂರ್ಯೋದಯಕ್ಕೆ ಮೊದಲೇ ಸಾಮಾಯಿಕ ಮಾಡುವುದು ದೋಷಾಸ್ಪದವಲ್ಲವೆಂದು. ಹೀಗೆ ಆಚಾರಸಾರ, ಅನಗಾರ ಧರ್ಮಾಮೃತ ಮೊದಲಾದುವುಗಳಲ್ಲಿ ಜಿನ ಮಂದಿರದಲ್ಲಿ ಅಥವಾ ತೀರ್ಥಸ್ಥಾನ ಮೊದಲಾದುವುಗಳಿಗೆ ಹೋಗಿ ಸಾಮಾಯಿಕ ಮಾಡುವ ವಿಧಾನಗಳಿವೆ. ತಾವು ವಸತಿಕಾ ಮೊದಲಾದ ಸ್ಥಾನಗಳಿಗೂ ಹೋಗಿ ಸಾಮಾಯಿಕ ಮಾಡಬಹುದು.

---

1. ಮೂಲಾಚಾರ ಗಾಥೆ ೩೧೮ರ ಟೀಕೆ

ದೀಕ್ಷಾ ಮಹೋತ್ಸವ

ಆರ್ಯಿಕೆ ಇಂದುಮತಿಯ ಹತ್ತಿರ ಶಾಂತಿಬಾಯಿ ಎಂಬ ಮಹಿಳೆ ಇದ್ದರು. ಇವರಿಗೆ ಆರ್ಯಿಕೆಯ ದೀಕ್ಷೆಯನ್ನು ಇದೇ ಸಂದರ್ಭದಲ್ಲಿ ವೃಷಭಸಾಗರರು ಮುನಿ ದೀಕ್ಷೆಗಾಗಿ ಪ್ರಾರ್ಥಿಸಿದರು. ನಾನು ಇವರಿಗೆ ಹಲವಾರು ಬಾರಿ ಮುನಿ ದೀಕ್ಷೆ ಪಡೆಯಲು ಪ್ರೇರಣೆ ಕೊಟ್ಟಿದ್ದೆ.

ಈ ಬಾರಿ ಅವರಿಗೆ ಮನಸ್ಸಾಗಿತ್ತು. ಒಪ್ಪಿಗೆಯು ದೊರಕಿತು. ತಯಾರಿಗಳು ನಡೆಯುತ್ತಿದ್ದಂತೆ ಮಹಾವೀರ ಕೀರ್ತಿಗಳ ಶಿಷ್ಯರಾದ ಕ್ಷುಲ್ಲಕ ಶೀತಲಸಾಗರರು ಕೂಡ ಮುನಿದೀಕ್ಷೆಗೆ ಸಿದ್ಧರಾಗಿದ್ದರು. ಇವರು ತೇರಹ ಪಂಥದ ಒತ್ತಾಯದಿಂದ ಸಂಘದಿಂದ ಕೆಲವು ದಿನ ಬೇರೆಯಾಗಿದ್ದರು. ಅಧ್ಯಯನಕ್ಕಾಗಿ ಸಂಘಕ್ಕೆ ಬಂದಿದ್ದರು. ಪಂಥದ ಆಗ್ರಹಕ್ಕೆ ಸೋಲದೆ ಮಧ್ಯಸ್ಥರಾಗಿ ಧರ್ಮಾರಾಧನೆಯಲ್ಲಿ ತೊಡಗಿದ್ದರು.

ಇದರಿಂದಾಗಿ ಹಲವರು ಇವರನ್ನು ಪಕ್ಷದಲ್ಲಿ ಇಟ್ಟುಕೊಳ್ಳಲು ಬಯಸುತ್ತಿರಲಿಲ್ಲ. ಇವರ ಚಿಕ್ಕವಯಸ್ಸು ಮತ್ತು ವಿದ್ಯಾಧ್ಯಯನದಲ್ಲಿದ್ದ ಉತ್ಕೃಷ್ಟ ಭಾವನೆಯನ್ನು ನೋಡಿ ಕೇವಲ ಪರೋಪಕಾರ ಭಾವನೆಯಿಂದ ಶ್ರುತಸಾಗರರಲ್ಲಿ ಅವರಿಗೆ ಸಂಘದಲ್ಲಿ ಆಶ್ರಯಕೊಟ್ಟು ವಾತ್ಸಲ್ಯವನ್ನು ತೋರಬೇಕೆಂದು ವಿನಂತಿಸಿದೆ. ನನ್ನ ಈ ವಿಶೇಷ ಪ್ರಯತ್ನದಿಂದಾಗಿ, ಮುನಿಗಳ ಪ್ರೇರಣೆಯಿಂದ ಆಚಾರ್ಯರು ಅವರಿಗೆ ದೀಕ್ಷೆಯನ್ನು ಕೊಟ್ಟರು, ಆಶ್ರಯವನ್ನು ಕೊಟ್ಟರು. ಒಂದೇಸಲ ಮೂರು ದೀಕ್ಷೆಗಳನ್ನು ಕೊಡಲು ನಿರ್ಣಯವಾಯಿತು. ದೀಕ್ಷೆಯ ಸಮಯದಲ್ಲಿ ಮಂಗಳ ಚೌಕದಲ್ಲಿ ದೀಕ್ಷಾರ್ಥಿಯರು ನಿಂತಿದ್ದರು. ಆಚಾರ್ಯರು ಪ್ರತಿಜ್ಞಾ ವಿಧಿ ಪ್ರಾರಂಭಿಸಿದರು.

ತಾವೆಲ್ಲರು ದೀಕ್ಷೆ ಪಡೆದ ನಂತರ ಆಚಾರ್ಯ ಶಾಂತಿಸಾಗರರ ಪರಂಪರೆಯಲ್ಲಿಯೇ ನಡೆಯಬೇಕು. ಇದನ್ನು ಕೇಳುತ್ತಿದ್ದಂತೆ ಕ್ಷುಲ್ಲಕ ಶೀತಲಸಾಗರರು ಮಂಗಳ ಚೌಕದಿಂದ ಕೆಳಗಿಳಿದು ಹೇಳಿದರು. ನಾನು ಈ ಪ್ರತಿಜ್ಞಾವಿಧಿಯನ್ನು ಅನುಸರಿಸಲು ಅಸಮರ್ಥನು.

ಈಗ ಮೂರು ಜನ ದೀಕ್ಷಾರ್ಥಿಗಳಲ್ಲಿ ಒಂದು ಖಾಲಿಯಾಯಿತು. ಇದರ ಮಧ್ಯೆ ನಾನು ಕ್ಷುಲ್ಲಕ ಭವ್ಯಸಾಗರರಿಗೆ ಮುನಿದೀಕ್ಷೆ ತೆಗೆದುಕೊಳ್ಳಲು ಸಿದ್ಧಗೊಳಿಸಿದೆ. ಅವರು ಕೂಡ ಸಿದ್ಧರಿದ್ದರು. ಆದರೆ ಆಚಾರ್ಯರು ಒಪ್ಪಿಕೊಂಡಿರಲಿಲ್ಲ. ಈಗ ಶ್ರುತಸಾಗರರ ಪ್ರೇರಣೆಯಿಂದ ಆಚಾರ್ಯರು ತಕ್ಷಣ ಒಪ್ಪಿಕೊಂಡರು. ಖಾಲಿಯಿದ್ದ ಜಾಗದಲ್ಲಿ ಇವರು ಬಂದು ಕುಳಿತು ಮೂವರು ದೀಕ್ಷಾರ್ಥಿಗೂ ಪ್ರತಿಜ್ಞಾವಿಧಿಯಂತೆ ಸಮಾರಂಭ ಮುಗಿಯಿತು.

ಕ್ಷುಲ್ಲಕ ಶೀತಲಸಾಗರರಿಗೆ ಮುನಿದೀಕ್ಷೆ ಕೊಡಲು ವಿರೋಧಿಸುತ್ತಿದ್ದವರಿಗೆ ಒಳ್ಳೆಯ ಅವಕಾಶ ದೊರೆತಂತೆ ಆಯಿತು. ಅವರು ಆಚಾರ್ಯರಿಗೆ ವಿರೋಧವಾಗಿಯೇ ಲೇಖನಗಳನ್ನು ಬರೆದರು. ಅದಕ್ಕೆ ಪ್ರತಿಯಾಗಿ ಶೀತಲಸಾಗರರೇ ಸಮರ್ಥನೆಯನ್ನು ಕೊಟ್ಟು ಜನರಿಗೆ ತಿಳಿಸಿದರು.

ನಿಜವಾಗಿಯು ನಾನು ತೇರಹ ಪಂಥದ ಸಂಸ್ಕಾರವನ್ನು ಕೈಕೊಂಡಿದ್ದರಿಂದ ಆಚಾರ್ಯರ ಪ್ರತಿಜ್ಞೆಯನ್ನು ಪಾಲಿಸಲು ಅಸಮರ್ಥನೆಂದು ತಿಳಿದು ನಾನಾಗಿಯೇ ದೀಕ್ಷೆಯನ್ನು ತೆಗೆದುಕೊಳ್ಳಲಿಲ್ಲ. ಇದರಲ್ಲಿ ಆಚಾರ್ಯರ ದೋಷವೇ ಇಲ್ಲವೆಂದೆ ಹೀಗೆ ಇಲ್ಲಿಯ ಚಾತುರ್ಮಾಸವನ್ನು ಪೂರ್ಣಗೊಳಿಸಿ, ನಮ್ಮ ವಿಹಾರ ಸೀಕರದ ಕಡೆ ನಡೆಯಿತು.

ಸೀಕರಕ್ಕೆ ಸಂಘದ ಆಗಮನ

ಸೀಕರದಲ್ಲಿ ಒಳ್ಳೆಯ ಧರ್ಮಪ್ರಭಾವನೆ ಆಗತೊಡಗಿತು. ಇಲ್ಲಿಂದ ಆಚಾರ್ಯರು ಬಿಹಾರದ ಫತೇಹಪುರದ ಕಡೆಗೆ ಹೋಗುವ ನಿರ್ಣಯ ಕೈಕೊಂಡಿದ್ದರು. ಅಲ್ಲಿಯ ಶ್ರಾವಕರು ಅಲ್ಲಿಗೆ ಆಗಮಿಸಲು ಕೇಳಿಕೊಳ್ಳುತ್ತಿದ್ದರು.

ಆದರೆ ಅಲ್ಲಿಂದ ಸಂಘಕ್ಕೆ ಒಂದು ಪತ್ರ ಬಂದಿತು. ಆಚಾರ್ಯರು ಇಲ್ಲಿಗೆ ಪ್ರಯಾಣಿಸುವುದು ಬೇಡ ಏಕೆಂದರೆ ಇಲ್ಲಿ ಶುದ್ಧ ಜಲದ ನಿಯಮದಿಂದ ಆಹಾರ ಕೊಡುವ ಶ್ರಾವಕರೇ ಇಲ್ಲ. ಮಹಾರಾಜರಿಗೆ ಈ ವಿಷಯ ತಿಳಿಯುತ್ತಿದ್ದಂತೆ ಚರ್ಚೆ ಪ್ರಾರಂಭವಾಯಿತು.

ಇಲ್ಲಿಗೆ ಅವಶ್ಯವಾಗಿ ಹೋಗಲೇ ಬೇಕು ಜನಗಳಲ್ಲಿ ಇರುವ ಭಯವನ್ನು ಹೋಗಲಾಡಿಸಬೇಕು ಎಂದು ನಿರ್ಣಯಿಸಿ ಆಚಾರ್ಯರು ಮುನಿಸಂಘದ ಜೊತೆ ಫತೇಹಪುರದ ಕಡೆ ಹೊರಟರು. ಆರ್ಯಿಕೆಯರು ಅಲ್ಲಿಯ ಹತ್ತಿರದ ಊರಿನ ಕಡೆ ವಿಹಾರ ಮಾಡಲು ಹೇಳಿದ್ದರು. ಕೆಲವರಿಗೆ ಮನಸ್ಸಿಲ್ಲದಿದ್ದರೂ ಆಚಾರ್ಯರ ಆಜ್ಞೆಯನ್ನು ಮೀರಲಾರದೆ ಸೀಕರದಿಂದ ದೂಜೋದ ಕಡೆಗೆ ವಿಹಾರ ಮಾಡಿದರು.

ದೂಜೋದಕ್ಕೆ ಹೋಗಿ ನಾನು ವಾಪಸ್ಸು ಬಂದೆ

ಹೋದ ಮಾರನೆಯ ದಿನವೇ ಸೀಕರದ ಒಬ್ಬ ಶ್ರಾವಕನು ಪತ್ರ ಹಿಡಿದುಕೊಂಡು ನನ್ನಲ್ಲಿ ಬಂದರು. ಅದರಲ್ಲಿ ಜ್ಞಾನಮತೀಜೀ ನಿಮ್ಮ ಜೊತೆಯ ಆರ್ಯಿಕೆಯ ಜೊತೆ ನೀವು ಹಿಂದಿರುಗುವ ಅವಶ್ಯಕತೆ ಇಲ್ಲನಾನು ನಿಮ್ಮನ್ನು ಕರೆಯುತ್ತಿದ್ದೇನೆ ಎಂದಿತ್ತು. ಆ ಕಾಗದವನ್ನು ಚಂದ್ರಮತೀಗೆ ತೋರಿಸಿದೆ. ಅವರಂತು ನನ್ನ ಇಷ್ಟ ನೆರವೇರಿತು ಎಂದು ಹರ್ಷಿಸಿದರು. ಪುನಃ ಪ್ರಾತಃಕಾಲ ಆರ್ಯಿಕೆ ವೀರಮತಿಯಲ್ಲಿ ನಿವೇದಿಸಿದೆ ನಾವು ವಾಪಸ್ಸು ಸೀಕರಕ್ಕೆ ಹೋಗುತ್ತಿದ್ದೇವೆ. ವಂದನೆ, ಪ್ರತಿವಂದನೆಯ ನಂತರ ಸೀಕರವನ್ನು ತಲುಪಿದೆವು. ಬಂದ ನಂತರ ಶ್ರುತಸಾಗರರಲ್ಲಿ ಆಂತರಿಕವಾಗಿ ಮಾತಾಡಿದೆವು ಆಚಾರ್ಯರು ಹೇಳಿದರು ಜ್ಞಾನಮತಿ ಮೊದಲೇ ಫತೇಹಪುರದ ಜನರು ಗಾಬರಿಯಾಗಿದ್ದಾರೆ. ನಾನು ಅಲ್ಲಿ ಹೋಗಿ ಸರಿಯಾದ ವ್ಯವಸ್ಥೆಯನ್ನು ಮಾಡಬೇಕು. ಸಂಘದ ವಿಹಾರ ಫತೇಹಪುರದ ಕಡೆಗೆ ಹೊರಟಿತು. ಅಲ್ಲಿಯ ಶ್ರಾವಕರು ಬಂದಿದ್ದರು. ಎರಡು ದಿನಗಳಲ್ಲಿ ಸಂಘವು ಲಕ್ಷ್ಮಣಗಢವೆಂಬ ಹಳ್ಳಿಯನ್ನು ತಲುಪಿತು. ಇದು ಸೀಕರ ಮತ್ತು ಫತೇಹಪುರದ ಮಧ್ಯದಲ್ಲಿದೆ.

ಜಟಿಲ ಸಮಸ್ಯೆ

ಸಂಘದಲ್ಲಿದ್ದ ಒಬ್ಬ ಮುನಿಗಳು ಆಹಾರದ ಸಮಯದಲ್ಲಿ ಹೇಳಿದರು. ಜ್ಞಾನಮತಿ ಮಾತಾಜೀ ಆರ್ಯಿಕೆಯರ ಸಮೇತ ಹಿಂತಿರುಗಿ ಹೋಗಬೇಕು. ಆಗ ನಾವು ಆಹಾರಕ್ಕೆ ಹೊರಡುತ್ತೇವೆ. ಅಲ್ಲದಿದ್ದರೆ ನಾವು ಬೇರೆ ಕಡೆಗೆ ವಿಹಾರ ಹೊರಡುತ್ತೇವೆ.

ನಮ್ಮ ಮುಂದೆ ಒಂದು ಜಟಿಲ ಸಮಸ್ಯೆ ನಿಂತಿತು. ನಾನು ಆಚಾರ್ಯರ ಹತ್ತಿರ ಹೋದಾಗ ಅವರು ಕೂಡ ಚಿಂತಿಸುತ್ತಾ ಇದ್ದರು. ಏನನ್ನು ಹೇಳಿಲಲ್ಲ ನಾನು ಸ್ವಲ್ಪ ಹೊತ್ತು ಕುಳಿತಿದ್ದು ವಾಪಸ್ಸು ಬಂದೆ. ಸತ್ಯಾಗ್ರಹ ಕುಳಿತಿದ್ದ ಮುನಿಯನ್ನು ಬಿಟ್ಟು ಎಲ್ಲ ಮುನಿಗಳು ಜಯಸಾಗರರಾದಿಯಾಗಿ ಎಲ್ಲರು ಹೇಳಿದರು. ಮಾತಾಜೀ ಏನೇ ಆಗಲಿ ನೀವು ವಾಪಸ್ಸು ಹೋಗಬೇಡಿ. ನಾನು ಈ ಸಮಸ್ಯೆಯನ್ನು ನಿವಾರಿಸುತ್ತೇವೆ ಎಂದರು.

ಆಚಾರ್ಯರಲ್ಲಿಗೆ ಚಂದ್ರಮತೀಜೀ ಹೋದಾಗ ಅವರು ಹೇಳಿದರು ಚಂದ್ರಮತೀಜೀ ನಾನು ಏನು ಮಾಡಲಿ ಇತ್ತ ದರಿ ಅತ್ತ ಪುಲಿಯಾಗಿದೆಯಲ್ಲ ಚಂದ್ರಮತಿ ಹೇಳಿದರಂತೆ ಮಹಾರಾಜಜೀ ತಾವು ಆಜ್ಞೆ ಕೊಟ್ಟರೆ ನಾವೆಲ್ಲ ವಾಪಸ್ಸು ಹೊರಡುತ್ತೇವೆ. ಅದಕ್ಕೆ ಮಹಾರಾಜರು ನಾನು ಹೇಗೆ ಹೇಳಲಿ ಎಂದರಂತೆ.

ಆ ಮುನಿಗಳು ಆ ದಿನ ಉಪವಾಸವನ್ನೇ ಕೈಕೊಂಡರು ಅದನ್ನು ಕೇಳಿದ ನನಗೆ ಬಹಳ ಚಿಂತೆ ಆಯಿತು. ನನ್ನ ಬುದ್ಧಿಗೆ ಏನೂ ಹೊಳೆಯಲಿಲ್ಲ. ಆ ಮುನಿಗಳು ಜಯಸಾಗರರಲ್ಲಿ ಹೇಳಿದರಂತೆ. ಇನ್ನು ಮುಂದೆ ಸಂಘದಲ್ಲಿ ಆರ್ಯಿಕೆಯರು ಮತ್ತು ಬ್ರಹ್ಮಚಾರಿಯಣಿಯರು ಇರಲೇ ಬಾರದೆಂದು ನನ್ನ ಇಷ್ಟವೆಂದು.

ಮುನಿ ಜಯಸಾಗರರು ಈ ಮಾತನ್ನು ನನಗೆ ಹೇಳಿದಾಗ ನನ್ನಲ್ಲೇ ಯೋಚಿಸಿ ನಾನೇ ಅಂದುಕೊಂಡೆ ಆಚಾರ್ಯರು ಹೇಳಿದರೆ ಸಂಘದಲ್ಲಿ ಆರ್ಯಿಕೆಯರು ಇರುವುದೇ ಬೇಡ ನಾವೆಲ್ಲ ವಾಪಸ್ಸು ಹೋಗೋಣ. ಆಗ ಒಬ್ಬ ಮಹಾನುಭಾವರು ಬಂದು ಹೇಳಿದರು. ಮಾತಾಜೀ ಅನರ್ಥವಾಯಿತು ನಾನು ಮುನಿಗಳಿಂದ ಆತಂಕಗೊಂಡಿದ್ದೇನೆ. ಉಪವಾಸ ಮಾಡಿ ತಮ್ಮನ್ನು ವಿಹಾರ ಮಾಡಿಸಬೇಕೆಂದಿದ್ದಾರಲ್ಲ ನನ್ನ ಮನದಲ್ಲಿ ಕಷಾಯ ಉಂಟಾಗಿದ್ದು ನಿಜ, ಆರ್ಯಿಕೆ ವೀರಮತಿಯವರು ನಮ್ಮ ಸಂಘದಿಂದ ಬೇರೆ ವಿಹಾರಮಾಡಲಿ ಎಂದು ತಾವು ನಮ್ಮ ಸಂಘದಲ್ಲೇ ಇರಬೇಕೆಂದು ಆದರೆ ಈಗ ಅದು ತಲೆಕೆಳಗಾಗಿದೆ. ಅವರಂತೂ ಸಂಘದಲ್ಲೆ ಯಾವ ಆರ್ಯಿಕೆಯರು ಇರುವುದು ಬೇಡ ಎನ್ನುತ್ತಿದ್ದಾರಲ್ಲ ಮಾತು ನಡೆಯುವುದು ಬೇಡ ಅವರೇ ವಿಹಾರ ಮಾಡಲಿ. ಸೂರಜಮಲ್ಲಜೀ ಹೇಳಿದರು. ಮಾತಾಜೀ ಆಚಾರ್ಯ ವೀರಸಾಗರರು ಆರ್ಯಿಕೆಯರಿಗೆ ಸಂಘದಲ್ಲಿ ರಕ್ಷಣೆಯನ್ನು ಕೊಟ್ಟಿದ್ದಾರೆ. ಈ ಪರಂಪರೆಯು ಎಂದಿಗೂ ಕೊನೆಯಾಗಬಾರದು. ಅನಂತರ ಎಲ್ಲರು ಹೇಗೆ ಹೇಗೋ ಅವರನ್ನು ಸಮಾಧಾನಿಸಿ ಆಹಾರಕ್ಕೆ ಹೊರಡಿಸಿದರು. ಆಹಾರದ ನಂತರ ಆ ಮುನಿಗಳು ನನ್ನನ್ನು ಕರೆದು ಹೇಳಿದರು :- ಮಾತಾಜೀ ನಾನು ನಿಮಗೆ ಕಷ್ಟಕೊಟ್ಟೆ ಅದಕ್ಕಾಗಿ ನನ್ನನು ಕ್ಷಮಿಸಿರಿ. ನನಗೆ ನಿಮ್ಮ ಬಗ್ಗೆ ಯಾವ ದುರ್ಭಾವನೆ ಇಲ್ಲ. ನನ್ನ ಇಷ್ಟ ಎಂದರೆ ಮುಂದೆ ಸಂಘದಲ್ಲಿ ಆರ್ಯಿಕೆಯರು ಇರಬಾರದೆಂದು. ಇದರ ಮಧ್ಯೆ ಯಾವುದೋ ಮಹಾನುಭಾವರು ನನ್ನ ಹತ್ತಿರ ನೀವು ಮನಸ್ಸು ಮಾಡಿ ಜ್ಞಾನಮತೀಜೀಯನ್ನು ಸಂಘದಿಂದ ದೂರಮಾಡಿ ಎಂದರು. ಆದರೆ ಈಗ ನಾನು ಇಂತಹ ವಿಷಯಗಳಲ್ಲಿ ಬೀಳುವುದಿಲ್ಲ. ಆಚಾರ್ಯರು ಹೇಗೆ ಹೇಳುತ್ತಾರೋ ಹಾಗೇ ಆಗಲಿ ಎಂದರು. ವಿಷಯ ಇಲ್ಲಿಗೆ ಮುಗಿದು ಸಂಘ ಮಾರನೇಯ ದಿನ ಫತೇಹಪುರಿಯನ್ನು ತಲುಪಿತು.

೩೫

ಫತೇಹಪುರದಲ್ಲಿ ಧರ್ಮಪ್ರಭಾವನೆ

ಅಲ್ಲಿ ಪ್ರತಿದಿನ ಚೌಕಗಳನ್ನು ಮಾಡುವ ಸಂಖ್ಯೆ ಜಾಸ್ತಿಯಾಯಿತು. ಜನರಲ್ಲಿ ಗುರುಭಕ್ತಿ ಜಾಸ್ತಿಯಾಗ ತೊಡಗಿತು. ಫಾಲ್ಗುಣ ಮಾಸ ಅಷ್ಟಾಹ್ನಿಕದಲ್ಲಿ ಸಿದ್ಧಚಕ್ರ ಆರಾಧನೆ ಮಾಡುವುದೆಂದು ನಿರ್ಣಯವಾಯಿತು. ಅಲ್ಲಿ ಎರಡು ಪಾರ್ಟಿ ಆಗಿತ್ತು. ಒಂದು ಬೀಸ ಪಂಥಿಯದು ಇನ್ನೊಂದು ತೇರಹ ಪಂಥಿಗಳದು. ಚರ್ಚೆ ಬೆಳೆಯಿತು. ಶ್ರುತಸಾಗರರ ಬಳಿಗೆ ಒಬ್ಬ ಮಹಾನುಭಾವರು ಬಂದರು. ಮಹಾರಾಜಜೀ ಅವರಿಗೆ ಜಯಧವಳದ ಪ್ರಮಾಣವನ್ನು ತೋರಿಸಿ ಹೇಳಿದರು.

ಣ್ಹವಣೋವಲೇವಣ ಸಂಮಜ್ಜಣ ಛುಹಾವಣಪುಲ್ಲಾರೋಹಣಧೂವದಹಣಾದಿವಾವಾರೇಹಿ
ಜೀವವಹಾವಿಣಾಭಾವೀಹಿ ವಿಣಾ ಪೂಜ ಕರಮಾಣುವವತ್ತೀದೋ ಚ್ ।

---

1. ಜಯಧವಲ ಪು. ೧ ಪ. ೧೦೦

ಅಭಿಷೇಕ ಮಾಡುವುದು, ಅವಲೇಪನ ಮಾಡುವುದು, ಸಂಮಾರ್ಜನ ಮಾಡುವುದು, ಚಂದನ ಹಚ್ಚುವುದು, ಹೂವಿಡುವುದು ಮತ್ತು ಧೂಪ ಹಚ್ಚುವುದು ಮುಂತಾದ ಕ್ರಿಯೆಗಳಲ್ಲಿ ಜೀವವಧೆಯ ಅವಿನಾಭಾವ ಸಂಬಂಧವಿಲ್ಲದೆ ಪೂಜೆ ಮಾಡಲಾಗುವುದಿಲ್ಲ[೧]. ಇದರ ನಂತರ ಮಹಾರಾಜರು ನನ್ನನ್ನು ಕರೆದು ಹೇಳಿದರು ಜ್ಞಾನಮತೀಜೀ ಇದಕ್ಕೆ ನೀವು ಎಷ್ಟು ಪ್ರಮಾಣವನ್ನು ತೋರಿಸಬಲ್ಲಿರಿ ಎಂದರು. ನಾನು 50 ಕ್ಕಿಂತ ಹೆಚ್ಚು ಪ್ರಮಾಣವನ್ನು ತೋರಿಸಬಲ್ಲೆ ಎಂದೆ.

ಗ್ರಂಥಗಳನ್ನು ತೆಗೆದೆ, ವಸುನಂದಿ ಶ್ರಾವಕಾಚಾರ ಉಮಾಸ್ವಾಮಿ ಶ್ರಾವಕಾಚಾರ ಶ್ರೀ ಪೂಜ್ಯ ಪಾದಕೃತ ಪಂಚಾಮೃತ ಅಭಿಷೇಕ ಮುಂತಾದವುಗಳು.

ಈ ಎಲ್ಲಕ್ಕಿಂತ ಮುಖ್ಯವಾದ ಪ್ರಮಾಣ ಜಯಧವಲದ್ದು. ಅಸ್ತು, ಸದಾಸುಖಿರ ಮೂಲಕ ಹಿಂದಿಯ ವಚನಿಕಾದಲ್ಲಿ ಬರೆದಿದೆ. ಹೀಗೆ ರತ್ನಕರಂಡಕ ಶ್ರಾವಕಚಾರದಲ್ಲಿಯು ಬರೆದಿದೆ. ಅದರಲ್ಲಿ ಬರೆದಿರುವುದೇನೆಂದರೆ ಎರಡು ಪಂಥಗಳನ್ನು ಆಗಮದಲ್ಲಿ ಪಡೆಯಿರಿ ಈಗ ಇಲ್ಲಿ ಜಿನಪೂಜನೆಯನ್ನು ಸಚಿತ್ತದ್ರವ್ಯದಿಂದಾಗಲಿ, ಅಚಿತ್ತದ್ರವ್ಯದಿಂದಾಗಲಿ ಆಗಮದಲ್ಲಿ ಹೇಳಿದೆ ಸಚಿತ್ತ ದೋಷಗಳಿಂದ ಭಯವಿದೆ. ಪ್ರಯತ್ನ ಶೀಲನಾದರೋ ಪ್ರಾಸುಕ ಜಲ, ಗಂಧ ಅಕ್ಷತ, ಕುಂಕುಮಾದಿಗಳಿಂದ ಸುಗಂಧ ದ್ರವ್ಯಗಳಲ್ಲಿ ಪುಷ್ಪಗಳನ್ನು ಸಂಕಲ್ಪಿಸಿ ಆ ಪುಷ್ಪಗಳಿಂದ ಪೂಜಿಸಿರಿ ಎಂದು. ಹಾಗೆಯೇ ಆಗಮದಲ್ಲಿ ಹೇಳಿರುವ ಚಿನ್ನದ ಹೂ ಬೆಳ್ಳಿಯ ಹೂ, ರತ್ನಖಚಿತ ಚಿನ್ನದ ಹೂ, ಹಾಗೇ ಲವಂಗ ಮುಂತಾದುವುಗಳಿಂದಲೂ ಅನೇಕ ಹೂಗಳಿಂದ ಪೂಜಿಸಬಹುದು. ಅದರ ಪ್ರಾಸುಕವೇ ಬಹು ಆರಂಭಾದಿಗಳಿಂದ ರಹಿತ ಪ್ರಮಾಣಿತ ನೈವೇದ್ಯಕಾದಿ ಪೂಜೆಯನ್ನು ಹೇಳಿದೆ. ಬಹುರಿ ರತ್ನದ ದೀಪಕ ಹಾಗೂ ಸುವರ್ಣಮಯ ದೀಪಗಳಿಂದ ಪೂಜಿಸಿರಿ ಎಂದಿದೆ. ಹಾಗೇ ಸಚಿತ್ತದ್ರವ್ಯಗಳು ಕೇಸರಿಬಣ್ಣದ ದೀಪಗಳನ್ನು ಸಂಕಲ್ಪದಿಂದ ಪೂಜಿಸಿರಿ ಹಾಗೇ ಚಂದನ ಅಗರಾದಿಗಳನ್ನು ಏರಿಸಿ ಎಂದಿದೆ. ಬಾದಾಮಿ ಜಯಫಲಗಳು ಶುದ್ಧ ಪ್ರಾಸುಕ ಫಲಗಳಿಂದ ಪೂಜಿಸಿರಿ. ಹೀಗೆ ಅಚಿತ್ತ ದ್ರವ್ಯಗಳಿಂದ ಪೂಜಿಸಿರಿ ಎಂದು ಹೇಳಿದೆ.

ಹೆಚ್ಚಾಗಿ ಸಚಿತ್ತ ದ್ರವ್ಯಗಳ ಪೂಜೆಯನ್ನು ಹೇಳಿದೆ ಜಲ, ಗಂಧ, ಅಕ್ಷತಾದಿ ಉಜ್ವಲ ದ್ರವ್ಯಗಳಿಂದ ಪೂಜೆಯನ್ನು ಮಾಡಿರಿ. ಅರ, ಮಲ್ಲಿಗೆ, ಸಂಪಿಗೆ, ಕಮ ಮುಂತಾದ ಸಚಿತ್ತ ಪುಷ್ಪಗಳಿಂದ ಪೂಜಿಸಿರಿ. ತುಪ್ಪದ ದೀಪ, ಕರ್ಪೂರದಿಂದ ಆರತಿಯನ್ನು ಎತ್ತಿರಿ. ಹಾಗೇ ಮಾವು, ಬಾಳೆ, ದಾಳಿಂಬೆ ಮೊದಲಾದ ಹಣ್ಣುಗಳಿಂದಲೂ ಪೂಜಿಸಿರಿ. ಧೂಪವನ್ನು ಹಚ್ಚಿರಿ ಹೀಗೆ ಸಚಿತ್ತ ದ್ರವ್ಯಗಳಿಂದಲೂ ಪೂಜಿಸಿರಿ. ಈ ಎರಡು ಪ್ರಕಾರವನ್ನು ಆಗಮದಲ್ಲಿ ಹೇಳಿದೆ. ಇದು ಸನಾತನ ಮಾರ್ಗವಾದರೆ ನಮ್ಮ ಭಾವನೆಯಂತೆ ಪುಣ್ಯ ಬಂಧವು ಆಗುತ್ತದೆ.[೧]

ಈ ಪ್ರಮಾಣವನ್ನು ತೋರಿಸಿ ಮುನಿಶ್ರೀ ಶ್ರುತಸಾಗರರು ಹೇಳಿದರು. ಒಂದು ಪಂಥದ ಪ್ರಮಾಣವನ್ನು ನಾವು ಕೊಡುತ್ತಿದ್ದೇವೆ. ಎರಡನೆಯದು ತೇರಹ ಪಂಥದ ಆಗಮ ಪ್ರಮಾಣವನ್ನು ನೀವು ಕೊಡಿರಿ. ಅದು ಪ್ರಾಚೀನ ಆಚಾರ್ಯರದು ಆಗಿರಬಹುದು ಅಥವಾ ಆಧುನಿಕ ಪಂಡಿತರದು ಆಗಿರಬಹುದು. ಇದಕ್ಕಾಗಿ ನಿಮಗೆ ಆರು ತಿಂಗಳ ಸಮಯವನ್ನು ಕೊಡುತ್ತೇವೆ. ಆಶ್ಚರ್ಯವೆಂದರೆ ಇಲ್ಲಿಯವರೆಗೆ ಯಾವ ಪ್ರಮಾಣವನ್ನು ತೆಗೆದುಕೊಂಡು ಬಂದಿಲ್ಲ. ಆಗ ನನ್ನ ಮತ್ತು ಶ್ರುತಸಾಗರರಿಂದ ತಿಳುವಳಿಕೆ ಹೇಳಿದ ಮೇಲೆ ಎರಡು ಪಂಥದವರು ಒಂದೇ ಮಂಡಲದಲ್ಲಿ ಒಂದೇ ವಿಧಾನ ಪೂಜೆ ಮಾಡಿದರು. ತೇರಹ ಪಂಥದವರು ನಿಂತುಕೊಂಡು ತಮ್ಮ ಸಾಮಾಗ್ರಿಗಳಿಂದ ಪೂಜೆ ಮಾಡುತ್ತಿದ್ದರು. ಬೀಸ ಪಂಥದವರು ಕುಳಿತುಕೊಂಡು ಫಲ ಪುಷ್ಪಗಳಿಂದ ಆಗಮದ ಆಮ್ನಾಯದಲ್ಲಿ

---

೧. ರತ್ನಕರಂಡಕ ಶ್ರಾವಕಾಚಾರ. ಪಂ. ಸದಾಸುಖಿಕೃತಭಾಷಾ ಪು. ೧೭೦.

ಹೇಳಿರುವಂತೆ ಪೂಜಿಸುತ್ತಿದ್ದರು. ಅಲ್ಲಿ ಈ ರೀತಿ ವಿಧಾನ ಮತ್ತು ವೇದಿ ಪ್ರತಿಷ್ಠೆಯು ಯಾವುದೇ ವಿಘ್ನವಿಲ್ಲದೇ ನಡೆಯಿತು.

ಹೋಲಿಯಲ್ಲಿ ದುರ್ಘಟನೆ

ಅಷ್ಟಾಹ್ನಿಕ ಪರ್ವದ ಹೋಲಿಹಬ್ಬಕ್ಕೆ ಎರಡು - ಮೂರು ದಿನ ಮೊದಲು ಕೆಲವು ಅಜ್ಞಾನಿಗಳು ಸೇರಿಕೊಂಡು ಒಬ್ಬ ಹುಡುಗನನ್ನು ಬೆತ್ತಲೆಗೊಳಿಸಿ ಕೈಯಲ್ಲಿ ಲೋಟ ಮತ್ತು ಪರಕೆಯನ್ನು ಕೊಟ್ಟು ಮುನಿಮಹಾರಾಜರಿಗೆ ಜಯಕಾರ ಹಾಕುತ್ತಾ ಡೋಲು ಬಾರಿಸುತ್ತಾ ಮೆರವಣಿಗೆ ಹೊರಟಿದ್ದರು. ಅದು ಮಂದಿರದ ಹತ್ತಿರದಿಂದಲೇ ಹಾದು ಹೋಯಿತು. ನಮಗೆ ಆಶ್ಚರ್ಯವೂ ದುಃಖವೂ ಆಯಿತು. ಕೆಲವು ದುಃಖಿತ ಶ್ರಾವಕರು ಈ ಮೂರ್ಖರನ್ನು ತಡೆಯಲು ಪ್ರಯತ್ನಿಸಿದರು. ಆದರೆ ಅವರು ಸರ್ವಥಾ ಮೂಢರಾಗಿದ್ದರು. ದಿಗಂಬರ ಮುನಿಗಳಿನ್ನು ಹಾಸ್ಯ ಮಾಡತೊಡಗಿದರು. ಅಷ್ಟೇ ಅಲ್ಲದೆ ರಾತ್ರಿ ಸಭೆ ಸೇರಿ ವಿಚಾರ ವಿಮರ್ಶೆ ಮಾಡಿ ಮಾರನೇಯ ದಿನ ಇಬ್ಬರು ಮೂವರು ಹುಡುಗರನ್ನು ಬೆತ್ತಲೆ ಮಾಡಿ ಆದರ ಜೊತೆ ಇಬ್ಬರು ಮೂವರು ಹೆಂಗಸರಿಗೆ ಬಿಳಿ ಸೀರೆ ಉಡಿಸಿ ಮೆರವಣಿಗೆ ಹೊರಡಿಸಬೇಕೆಂದು ತೀರ್ಮಾನಿಸಿದ್ದರು.

ಆಗ ಅಲ್ಲಿ ಆಕಸ್ಮಾತ್ ಆಗಿ ದುರ್ಘಟನೆ ನಡೆಯಿತು. ಮೇಲಿನ ಛಾವಣಿ ಕುಸಿದು ಬಹುಶಃ ಒಂದಿಬ್ಬರು ಸತ್ತು ಕೆಲವರಿಗೆ ಗಾಯಗಳಾದವು. ಬೆಳಗ್ಗೆ ಆಗುತ್ತಲೇ ಆ ಸಮುದಾಯದ ಕೆಲವರು ಬಂದು ಆಚಾರ್ಯರಲ್ಲಿ ಬಂದು ಕ್ಷಮೆ ಬೇಡಿದರು. ಆಗ ಸಮಾಧಾನ ಮಾಡಿ ಉಪದೇಶಿಸಿದೆ. ಜೈನ ಸಾಧುಗಳು ಯಾರಿಗೂ ಶಾಪವನ್ನು ಕೊಡುವುದಿಲ್ಲ. ಯಾರಿಗೂ ಕೆಟ್ಟದ್ದನ್ನು ಯೋಚಿಸುವುದಿಲ್ಲ. ಆದರೆ ನಿಂದೆ, ಅವಹೇಳನ, ಹಾಸ್ಯದಿಂದ ಅವರೇ ಸ್ವತಃ ಪಾಪವನ್ನು ಸಂಪಾದಿಸುತ್ತಾರೆ. ಹಾಗೇ ಅವರಲ್ಲಿ ಭಕ್ತಿ, ಸೇವೆ ಮಾಡಿದವರು ಪುಣ್ಯವನ್ನು ಸಂಪಾದಿಸುತ್ತಾರೆ ಎಂದೆ.

ನಿಜವಾಗಿಯೂ ದಿಗಂಬರ ಮುನಿಗಳ ಆರ್ಯಿಕೆಯರ, ಕ್ಷುಲ್ಲಕರ ವೇಷ ಧರಿಸಿ ನಾಟಕದಲ್ಲಿ ಆಟದಲ್ಲಿ ಹಾಸ್ಯಮಾಡಬಾರದು. ಇದರಿಂದ ಬಹಳ ನಷ್ಟವನ್ನು ಅನುಭವಿಸುತ್ತಾರೆ. ಈ ವಿಷಯದಲ್ಲಿ ಬ್ರಹ್ಮಗುಲಾಲನ ಕಥೆ ಪ್ರಸಿದ್ಧವಾಗಿದೆ. ಅವನು ವಿನೋದಕ್ಕಾಗಿ ಮುನಿಯ ವೇಷವನ್ನು ಧಾರಣೆ ಮಾಡಿದವನು ಕೊನೆಗೆ ಮುನಿಯೇ ಆದ. ಪುನಃ ಸಂಘವು ಸೀಕರಕ್ಕೆ ವಾಪಸ್ಸು ಬಂದಿತು.

ಶಾಸ್ತ್ರಾರ್ಥಕ್ಕೆ ಆಹ್ವಾನ

ಆಚಾರ್ಯರು ಸೀಕರದಿಂದ ರಾನೋಲಿಗೆ ಹೊರಟರು. ನಾನು ಮತ್ತು ನಾಲ್ಕಾರು ಆರ್ಯಿಕೆಯರಿಗೆ ಸೀಕರದಲ್ಲಿಯೇ ಕೆಲವು ದಿನ ತಂಗಲು ಹೇಳಿದ್ದರು. ಆಗ ಅಲ್ಲಿ ಪಂ. ಮೂಲಾ ಶಂಕರದೇಸಾಯಿಗಳು ತಂಗಿದ್ದರು. ಅವರು ನನ್ನ ಹತ್ತಿರ ಬಂದಿರಲಿಲ್ಲ. ಅವರು ಮಂದಿರದಲ್ಲಿ ಮುನಿಗಳಿಗೆ ವಿರೋಧವಾದ ಕೆಲವು ಮಾತುಗಳನ್ನು ಉಪದೇಶದಲ್ಲಿ ಹೇಳಿದ್ದರು. ಬೆಳಗ್ಗೆ ಕೆಲವು ಪ್ರಬುದ್ಧ ಶ್ರಾವಕರು ಬಂದು ಶಂಕೆಯನ್ನು ಮತ್ತು ಅದಕ್ಕಾಗಿ ಸಮಾಧಾನವನ್ನು ಬೇಡಿದರು. ಅವರ ಒಂದು ಶಂಕೆಯೆಂದರೆ ಮುನಿಗಳು ಹುಲ್ಲು ಮತ್ತು ಹಲಗೆಯ ಮೇಲೆ ಮಲಗದೆ ಭೂಮಿಶಯನ ಮಾಡುವುದೇ ಮೂಲಗುಣವೆಂದು ನಾನು ಮೂಲಾಚಾರವನ್ನು ತೋರಿಸಿ ಸಮಾಧಾನ ಮಾಡಿದೆ. ಮೂಲಾಚಾರದಲ್ಲಿ ಬರೆದಿದೆ :-

ತೃಣಮಯೇ ಕಾಷ್ಠಮಯೇ ಶಿಲಾಮಯೇ ಭೂಮಿಪ್ರದೇಶೇ ಚ
ಸಂಸ್ತರೇ ಗೃಹಸ್ಥಯೋಗ್ಯ ಪ್ರಚ್ಛಾದನ ವಿರಹಿತೇ ॥[೧]

ಸಂಸ್ತರದಲ್ಲಿ ನಾಲ್ಕು ಭೇದವಿದೆ : ತೃಣಮಯ, ಹುಲ್ಲಿನ, ಕಾಷ್ಟಮಯ ಹಲಗೆ, (ತಖತ) ಮುಂತಾದವು, ಶಿಲಾಮಯ ಕಲ್ಲಿನ ಬೆಟ್ಟದ ಮೇಲೆ, ಭೂಮಿಯ ಮೇಲೆ ಸಾಧುಗಳು ಮಲಗಬೇಕು. ನಂತರ ಸಂಥಾರ ವಾಸಯಾಮಂ ಸಂಸ್ತಾರ ಶ್ಚತುರ್ಧಾ ಭೂಮಿ ಶಿಲಾ ಫಲಕತೃಣ ಭೇದಾತ್ ಈ ಪ್ರಕಾರ ಅನಾಗಾರ ಧರ್ಮಾಮೃತ ಭಗವತೀ ಆರಾಧನ ಮುಂತಾದ ಗ್ರಂಥಗಳಲ್ಲಿ ನಮಗೆ ಅನೇಕ ಪ್ರಮಾಣಗಳು ಇವೆ.

ಇದೇ ರೀತಿ ಬೇರೆ ಶ್ರಾವಕರು ಕೂಡ ಪ್ರಶ್ನೆಗಳಿಗೆ ಉತ್ತರವನ್ನು ಪಡೆಯತ್ತಿದ್ದರು. ಒಂದು ದಿನ ಬ್ರ. ಮೂಲಾಶಂಕರಜೀ ನನ್ನ ಹತ್ತಿರ ಶಾಸ್ತ್ರಾರ್ಥವನ್ನು ಮಾಡಲು ಬಯಸಿದರು.

ಅದೇ ದಿನ ನಾನು ಒಬ್ಬ ಶ್ರಾವಕರ ಹತ್ತಿರ ರಾನೋಲಿಗೆ ಆಚಾರ್ಯರ ಹತ್ತಿರ ಶಾಸ್ತ್ರಾರ್ಥ ಮಾಡಲು ಅನುವುಕೋರಿ ಪತ್ರ ಕಳುಹಿಸಿದೆ. ಅವರ ಕೈಯಲ್ಲಿಆಚಾರ್ಯರು ಉತ್ತರ ಬರೆದು ಕಳುಹಿಸಿದರು. ಆರ್ಯಿಕಾ ಜ್ಞಾನಮತೀಜೀಯವರಿಗೆ ನಾನು ಪೂರ್ಣ ಅಧಿಕಾರವನ್ನು ಕೊಟ್ಟಿದ್ದೇನೆ ಅವರು ನಾಳೆಯಿಂದಲೇ ಅವರ ಜೊತೆ ಶಾಸ್ತ್ರಾರ್ಥವನ್ನು ಪ್ರಾರಂಭಿಸಲಿ. ಈ ಸೂಚನೆಯನ್ನು ತಿಳಿಯುತ್ತಿದ್ದಂತೆ ಬ್ರಹ್ಮಚಾರಿ ಮಹೋದಯರು ಅದೇ ರಾತ್ರಿ ಎಲ್ಲೋ ಹೊರಟೇ ಹೋದರು. ಅವರು ಎಲ್ಲಿ ಹೋದರು ಎಂಬುದು ಕೂಡ ತಿಳಿಯಲಿಲ್ಲ. ಕೆಲವು ದಿನಗಳ ನಂತರ ಆಚಾರ್ಯರ ಸಂಘವು ಚಾತುರ್ಮಾಸವನ್ನು ಸೀಕರದಲ್ಲೇ ಮಾಡಿಸಲು ಶ್ರಾವಕರು ಆಗ್ರಹ ಮಾಡಿದ್ದರಿಂದ ಅಲ್ಲೇ ನಿಂತರು.

೩೬

ಸೀಕರದಲ್ಲೇ ಸಂಘದ ಚಾತುರ್ಮಾಸ

ದಂಗದ ನಶಿಯಾದಲ್ಲಿಯೇ ಇಡೀ ಸಂಘವು ತಂಗಿತ್ತು. ಪೆಂಡಾಲಿನಲ್ಲಿ ಎಲ್ಲಮುನಿಗಳ ಅನಂತರ ಆಚಾರ್ಯರ ಉಪದೇಶ ನಡೆಯುತ್ತಿತ್ತು. ಒಮ್ಮೆ ಪಂ. ಬಾಬೂಲಾಲಜೀ ಇಲ್ಲಿಗೆ ಬಂದಿದ್ದರು. ಆಗ ಆಚಾರ್ಯರ ಹತ್ತಿರ ಒಂದು ವಿಷಯ ಚರ್ಚೆಗೆ ಬಂದಿತು. ಇವರು ಸುಧಾರಕ ವಿದ್ವಾಂಸರಾಗಿದ್ದಾರೆ ಎಂದು. ಆಗ ಆಚಾರ್ಯರು ನನ್ನನ್ನು ಕರೆದು ಹೇಳಿದರು. ಜ್ಞಾನಮತೀ ನೋಡು ಈ ವಿದ್ವಾಂಸರು ಜಾತಿ ವ್ಯವಸ್ಥೆಯನ್ನು ಮತ್ತು ಯಜ್ಞೋಪವೀತದ ಸಂಸ್ಕಾರವನ್ನು ಒಪ್ಪುತ್ತಿಲ್ಲ. ಇವರಿಗೆ ಯಥೋಚಿತವಾದ ಪ್ರಮಾಣವನ್ನು ಕೊಟ್ಟು ಮಧ್ಯಾಹ್ನದ ಉಪದೇಶವನ್ನು ನೀನೆ ಮಾಡು ಎಂದು ಹೇಳಿದರು.

ಮಧ್ಯಾಹ್ನದಲ್ಲಿ ಮೊದಲು ಪಂಡಿತರು ಮಾತಾಡಿದರು ನಂತರ ನನ್ನ ಉಪದೇಶವಾಯಿತು. ಕೊನೆಗೆ ಆಚಾರ್ಯರ ಉಪದೇಶವಾಯಿತು. ಆ ಮೇಲೆ ಪಂಡಿತರು ನನ್ನ ಹತ್ತಿರ ಸಹಾ - ವೀತರಾಗ ಸಮ್ಯಕ್ತ್ವದ ಬಗ್ಗೆ ನನ್ನಲ್ಲಿ ಚರ್ಚೆ ಮಾಡದರು. ನಾನು ಶ್ಲೋಕವಾರ್ತಿಕ ಮೊದಲಾದ ಗ್ರಂಥಗಳಿಂದ ಎರಡಕ್ಕೂ ಸ್ಪಷ್ಟೀಕರಣವನ್ನು ಕೊಟ್ಟೆ. ಇದರಿಂದ ಪಂಡಿತರಿಗೆ ಬಹಳ ಸಂತೋಷವಾಯಿತು. ಪುನಃ ಯಜ್ಞೋಪವೀತ ಮತ್ತು ಜಾತಿವ್ಯವಸ್ಥೆಯ ಬಗ್ಗೆ ಪ್ರಮಾಣವನ್ನು ತೋರಿಸಿದೆ. ತ್ರಿಲೋಕಸಾರದ ಒಂದು ಗಾಥೆ ಇದೆ. ಇದನ್ನು ಗುರುದೇವ ಆಚಾರ್ಯ ವೀರಸಾಗರರು ನನಗೆ ತೋರಿಸಿದ್ದರು.

---

೧. ಮೂಲಾಚಾರದ ಗಾಥಾ ೧೫೨ ಪು. ೨೪೮

ದುಬ್ಭಾವ ಅಸುಇ ಸೂದಕ ಪುಪ್ಫವ ಈ ಜಾಯಿ ಸಂಕರಾ ದೀಹಿಂ ।
ಕಯದಾಣಾವಿ ಕುವತ್ತೇ ಜೀವಾ ಕುಣರೇಸು ಜಾಯಂತೇ ॥೯೨॥

ದುರ್ಭಾವ, ಅಶುಚಿ, ಸೂತಕ ಪುಷ್ಪವತೀ ರಜಸ್ವಲ ಸ್ತ್ರೀ ಹಾಗೂ ಜಾತಿಸಂಕರ ಮುಂತಾದ ದೋಷಗಳಿಂದ ದೂಷಿತ ಪುರುಷ ಒಂದು ವೇಳೆ ದಾನ ಕೊಟ್ಟರೆ ಅಥವಾ ಕುಪಾತ್ರಗಳಿಗೆ ದಾನ ಕೊಟ್ಟರೆ ಇವರೆಲ್ಲರೂ ಕುಭೋಗ ಭೂಮಿಯಲ್ಲಿ ಜನ್ಮ ತಳೆಯುತ್ತಾರೆ. ಈ ಗಾಥೆಯಲ್ಲಿ ಯಾವ ಜಾತಿಸಂಕರ ಎಂಬ ಶಬ್ದ ಬಂದಿದೆಯೋ ಅದುಜಾತಿಯ ಅಸ್ತಿತ್ವವನ್ನು ಮತ್ತು ಭಿನ್ನತ್ವವನ್ನು ಸೂಚಿಸುತ್ತದೆ. ಅಲ್ಲದಿದ್ದರೆ ಜಾತಿ ಸಂಕರದ ದೋಷವಾದರೋ ಹೇಗೆ ಆಗುತ್ತದೆ. ಈ ಜಾತಿಗಳು ಗುಲಾಬಿಯ ಹೂ, ಮಾವಿನಹಣ್ಣು, ಅಕ್ಕಿ ಮುಂತಾದವುಗಳಿಗೆ ಸಮಾನವಾಗಿದೆ. ಹೇಗೆ ಈ ಹೂ ಹಣ್ಣು ಮತ್ತು ಧಾನ್ಯಗಳಲ್ಲಿ ಅನೇಕ ಜಾತಿಗಳು ಇವೆಯೋ ಹಾಗೇ ಪ್ರತ್ಯೇಕ ವರ್ಣದಲ್ಲಿಯು ಅನೇಕ ಜಾತಿಗಳು ಇವೆ. ಇವುಗಳೊಡನೆ ಸಂಬಂಧ ಉಂಟಾಗುವುದೇ ಸಂಕರದೋಷವಾಗಿದೆ. ಹೇಗೆಂದರೆ ಅಗ್ರವಾಲ, ಖಂಡೇಲವಾಲ, ಪದ್ಮಾವತೀಪುರವಾಲ ಮುಂತಾದ ಹಲವಾರು ಹೆಸರಿನ ಜಾತಿಗಳಿವೆ. ಆದರೂ ಈ ಜಾತಿಗಳು ಸಹ ಅನಾದಿಗಳಾಗಿವೆ. ಬಾಬುಲಾಲಜೀಯವರು ಆ ಸಮಯದಲ್ಲಿ ಪ್ರಭಾವಿತರಾಗಿದ್ದರು. ಮುಂದೆ 1974 ರಲ್ಲಿ ನನ್ನ ಪ್ರೇರಣೆಯಿಂದ ಪ್ರಾರಂಭವಾದ ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದಲ್ಲಿ ಇವರು ಒಬ್ಬ ಪ್ರಮುಖ ವ್ಯಕ್ತಿಗಳಾದರು. ನನ್ನ ಬಗ್ಗೆ ಇವರಿಗೆ ಅಗಾಧವಾದ ಶ್ರದ್ಧೆ ಇತ್ತು. ನನ್ನ ಆಜ್ಞೆಗಳನ್ನು ಪಾಲಿಸುತ್ತಾ ಶಿಬಿರಗಳ ಸಂಚಾಲನೆಯನ್ನು ಮತ್ತು ಜಂಬೂದ್ವೀಪ ಜ್ಞಾನಜ್ಯೋತಿಯನ್ನು ಕೆಲವು ತಿಂಗಳವರೆಗೆ ಬಹಳ ಚೆನ್ನಾಗಿ ನಡೆಸಿದರು.

ಕೈಲಾಸಚಂದ್ರನು ಮತ್ತೆ ಬಂದನು

ಮನೆಯಲ್ಲಿ ಪ್ರಾಯಶಃ ಆರ್ಯಿಕೆ ಜ್ಞಾನಮತೀಯ ಬಗ್ಗೆ ಚರ್ಚೆ ನಡೆಯುತ್ತಿತ್ತು. ಆಗ ತಂದೆಯ ಮನಸ್ಸಿನಲ್ಲಿ ಮೋಹ ಜಾಗ್ರತವಾಗಿ ನೋಡಬೇಕೆಂಬ ಉತ್ಕಟತೆ ಉಂಟಾದರು ಹೋದಸಲ ಆದ ಅನುಭವ ಅವರನ್ನು ತಡೆಯುತ್ತಿತ್ತು. ಮನೋವತಿಗೆ ಮದುವೆ ಮಾಡುವ ವಿಷಯ ತೆಗೆದರೆ ಅವಳು ಅಳುತ್ತಾ ನನಗೆ ಮದುವೆ ಬೇಡ ಮಾತಾಜೀ ಬಳಿಗೆ ಕಳುಹಿಸಿ ನಾನು ದೀಕ್ಷೆ ತೆಗೆದುಕೊಂಡು ಆತ್ಮಕಲ್ಯಾಣವನ್ನು ಮಾಡಿಕೊಳ್ಳಬೇಕೆಂದು ಹೇಳುತ್ತಿದ್ದರು. ಅಮ್ಮನ ಹೃದಯ ಕರಗುತ್ತಿತ್ತು. ಇನ್ನೊಂದು ಕಡೇ ಗಂಡನ ಹೆದರಿಕೆ ಅವರಿಗೆ ಏನು ಮಾಡಲು ತೋಚುತ್ತಿರಲಿಲ್ಲ.

1961 ರಲ್ಲಿ ನಾನು ಸೀಕರದಲ್ಲೆ ಆಚಾರ್ಯ ಶಿವಸಾಗರರ ಸಂಘದಲ್ಲೇ ಚಾತುರ್ಮಾಸ ಮಾಡುತ್ತಿದ್ದೆ. ವಿಷಯ ತಿಳಿದಿತ್ತು. ತಾಯಿಯವರು ತಂದೆಗೆ ದರ್ಶನ ಮಾಡಲು ಬರಲು ತುಂಬ ಆಗ್ರಹಪಡಿಸಿದರು. ಅವರು ಒಪ್ಪಿರಲಿಲ್ಲ. ಕೊನೆಗೆ ನಿರುಪರಾಯರಾಗಿ ಕೈಲಾಸಚಂದ್ರನಿಗೆ ಕೈಲಾಸ ನೀನು ನಿನ್ನ ಹೆಂಡತಿ ಚಂದಾಳನ್ನು ಕರೆದುಕೊಂಡು ಹೋಗಿ ಮಾತಾಜೀಯ ದರ್ಶನಮಾಡಿ ಬಾ ಈ ಎರಡು ವರ್ಷದಲ್ಲಿ ಅವರ ಆರೋಗ್ಯ ಹೇಗಿದೆ ಎಂಬುದನ್ನು ತಿಳಿದುಇಲ್ಲಿಯ ವಿಷಯ ಹೇಳಿ ಬಾ. ನನಗೆ ಅಲ್ಲಿಯ ವಿಷಯ ತಿಳಿಯಬೇಕೆಂಬ ತೀವ್ರತೆ ಹೆಚ್ಚಾಗುತ್ತಿದೆ ಎಂದರು.

ಇದನ್ನು ಕೇಳುತ್ತಲೇ ಕೈಲಾಸನು ಸಂತೋಷದಿಂದ ತಂದೆಯ ಅನುಮತಿಯನ್ನು ಪಡೆದು ಹೆಂಡತಿಯನ್ನು ಕರೆದುಕೊಂಡು ಬಂದ. ಆಚಾರ್ಯರ ದರ್ಶನ ಪಡೆದು ನನ್ನಲ್ಲೂ ಆಶೀರ್ವಾದವನ್ನು ಪಡೆದನು. ಚಂದಳ ಮಡಿಲಲ್ಲಿ ಹಸುಗೂಸಿತ್ತು. ಕೈಲಾಸ ಹೇಳಿದ ಮಾತಾಜೀ ಈ ಮಗುವಿಗೆ ಒಂದು ಹೆಸರಿಡಿ. ನಾನು ಮಗುವಿಗೆ ಜಂಬೂಕುಮಾರನೆಂದು ಹೆಸರಿಟ್ಟೆ.

ಕೈಲಾಸಚಂದ್ರ ಕೆಲವುದಿನ ಸಂಘದಲ್ಲಿದ್ದ. ಗುರುಗಳ ಉಪದೇಶ ಕೇಳುತ್ತಿದ್ದ, ಆಹಾರವಾಗುವಾಗ ನೋಡುತ್ತಿದ್ದ ನನ್ನ ದೈನಿಕ ಚರ್ಯೆಯನ್ನು ಬಹಳ ಸೂಕ್ಷ್ಮವಾಗಿ ಗಮನಿಸುತ್ತಿದ್ದ. ನನ್ನ ಆರೋಗ್ಯ ಕ್ಷೀಣಿಸಿತ್ತು. ಆದರೂ ನಾನು ಸತತ ಜ್ಞಾನಾಭ್ಯಾಸದಲ್ಲಿ ತೊಡಗಿಕೊಂಡಿರುತ್ತಿದ್ದೆ. ಆಗ ಬೆಳಗಿನ ಹೊತ್ತು ಸಂಘದಲ್ಲಿದ್ದ ಕೆಲವು ಆರ್ಯಿಕೆಯರಿಗೆ ಲಬ್ಧಿಸಾರ ಗ್ರಂಥವನ್ನು ಸ್ವಾಧ್ಯಾಯ ಮಾಡಿಸುತ್ತಿದ್ದೆ. ಅದರ ಸೂಕ್ಷ್ಮತೆಯ ಚರ್ಚೆ ಬಹಳ ಆಳವಾಗಿರುತ್ತಿತ್ತು. ಹಾಗೇ ಮಧ್ಯಾಹ್ನದಲ್ಲಿ ನನ್ನ ಪ್ರಿಯ ಶಿಷ್ಯೆ ಕ್ಷುಲ್ಲಿಕೆ ಜಿನಮತೀಗೆ ಪ್ರಮೇಯ ಕಮಲಮಾರ್ತಾಂಡವನ್ನು ಓದಿಸುತ್ತಿದ್ದೆ. ಅದೊಂದು ನ್ಯಾಯದ ಉಚ್ಚತರವಾದ ಗ್ರಂಥವಾಗಿದೆ.

ಮಧ್ಯಾಹ್ನದ ಹೊತ್ತು ಸಭೆಯಲ್ಲಿ ನನ್ನ ಉಪದೇಶವಿರುತ್ತಿತ್ತು ೪ ಗಂಟೆಗೆ ಒಬ್ಬ ಮಹಿಳೆ ನನ್ನ ಹತ್ತಿರ ಕಲಿಯಲು ಬರುತ್ತಿದ್ದರು (ಕೈಲಾಸಚಂದ್ರನನ್ನು) ಕೈಲಾಸಚಂದನಿಗೆ ಸೀಕರದಲ್ಲಿ ಬಹಳ ಸ್ನೇಹ ದೊರೆಯಿತು. ಪ್ರತಿದಿನ ಒಬ್ಬರಲ್ಲ ಒಬ್ಬರು ಅವನನ್ನು ಊಟ ತಿಂಡಿಗೆ ಪ್ರೀತಿಯಿಂದ ಕರೆದೊಯ್ಯುತ್ತಿದ್ದರು. ಟಿಕೈತ ನಗರಕ್ಕೆ ಹೊರಡಲು ಸಿದ್ಧರಾದರು. ಒಬ್ಬ ಮಹಿಳೆಯಂತು ಚಂದಳನ್ನು ತನ್ನ ಸೊಸೆಯಂತೆ ತಿಳಿದಿದ್ದಳು. ಅವಳು ಹೊರಡುವಾಗ ಅವಳಿಗೆ ಸೀರೆ ಮಗುವಿಗೆ ಹೊಸಬಟ್ಟೆಗಳನ್ನು ಉಡುಗೊರೆಯಾಗಿ ಕೊಡಲು ಬಂದರು ಆದರೆ ಅವಳು ಗಾಬರಿಯಾಗಿ ಇವೆಲ್ಲ ಉಡುಗೊರೆಗಳನ್ನು ತೆಗೆದುಕೊಳ್ಳಲು ಒಪ್ಪಲಿಲ್ಲ. ಇದನ್ನು ನಮ್ಮ ಮನೆಯವರು ಮನ್ನಿಸುವುದಿಲ್ಲ ನಯವಾಗಿ ತಿರಸ್ಕರಿಸಿದಳು. ಅಮ್ಮಾಜೀ ನಿಮ್ಮ ಆಶೀರ್ವಾದವೇ ನನಗೆ ಎಲ್ಲವು ಸಿಕ್ಕಂತೆ. ನಿಮ್ಮ ಪ್ರೀತಿಯಿಂದ ನನಗೆ ಬಹಳ ಸಂತೋಷವಾಗಿದೆ ಎಂದಳು. ಎಲ್ಲರ ಆಶೀರ್ವಾದ ಪಡೆದು ಅವರಿಬ್ಬರು ಊರಿಗೆ ಹೊರಟರು. ಮನೆಗೆ ತಲುಪುತ್ತಿದ್ದಂತೆ ಮನೋವತಿಯೇ ಮೊದಲು ಅಡ್ಡಗಟ್ಟಿ ಇಲ್ಲಿಯ ವಿಷಯವನ್ನು ಕೇಳಿ ತಿಳಿದು ನನ್ನನ್ನು ಏಕೆ ಮಾತಾಜೀಯವರ ಹತ್ತಿರ ಕರೆದುಕೊಂಡು ಹೋಗಲಿಲ್ಲವೆಂದು ಅಳತೊಡಗಿದಳು.

ದೀಕ್ಷಾ ಮಹೋತ್ಸವಕ್ಕೆ ಶ್ರೀಮತಿಯ ಆಗಮನ

ನನಗೆ ಹರ್ಷಕ್ಕೆ ಪಾರವೇ ಇರಲಿಲ್ಲ. ಏಕೆಂದರೆ ಅಂದು ನನ್ನ ಶಿಷ್ಯೆಯರು ದೀಕ್ಷೆ ತೆಗೆದುಕೊಳ್ಳುತ್ತಿದ್ದರು. ಬ್ರ. ರಾಜಮಲ್ಲಜೀ ಮುನಿದೀಕ್ಷೆ ತೆಗೆದುಕೊಳ್ಳುತ್ತಿದ್ದರು. ನಾನು ಬ್ರಹ್ಮಚಾರಿಗೆ ಬಹಳ ಸಲ ಪ್ರೇರಣೆ ಕೊಟ್ಟಿದ್ದೆ. ದೀಕ್ಷೆ ತೆಗೆದುಕೊಳ್ಳುವ ಮಹಿಳೆಯರಿಗೆ ಮಂಗಳ ಸ್ನಾನವಾಗುತ್ತಿತ್ತು. ನಾಲ್ಕು ಮಹಿಳೆಯರು ನಾಲ್ಕು ಕಡೆ ನಿಂತುಕೊಂಡು ಬಟ್ಟೆಯಿಂದ ಮರೆ ಮಾಡಿದ್ದರು. ಒಂದು ಕಡೆ ಬಟ್ಟೆ ಹಿಡಿದಿದ್ದ ಮಹಿಳೆ ತನ್ನ ಚಿಕ್ಕ ಮಕ್ಕಳನ್ನು ನೋಡುತ್ತಾ ಸೀರೆಯನ್ನು ಸ್ವಲ್ಪ ಜಾರಿಸಿದಳು ಅದನ್ನು ನೋಡಿ ನಾನು ಗದರಿದೆ. ಏನು ನಿನಗೆ ವಿವೇಕವಿಲ್ಲವೇ ಪರದೆಯನ್ನು ಸರಿಯಾಗಿ ಹಿಡಿದುಕೋ. ಆ ಕಡೆ ಏನು ನೋಡುತ್ತಿದ್ದೀಯ ಎಂದೆ. ಸ್ವಲ್ಪಹೊತ್ತಾದ ಮೇಲೆ ನೋಡುತ್ತೇನೆ ಆ ಹೆಂಗಸು ಅಳುತ್ತಿದ್ದಳು. ನಾನು ಅರೇ ಇಷ್ಟಕ್ಕೆ ನೀನು ಸಹಿಸದೆ ಅಳುತ್ತಿದ್ದೀಯ ನಾನೆಂದೆ . ಆಗ ಮಹಿಳೆ ಅಂದಳು ಇಲ್ಲ ಮಾತಾಜೀ ನೀವು ಅಂದಿದ್ದಕ್ಕೆ ನನಗೆ ಸಿಟ್ಟು ಬರುತ್ತಿಲ್ಲ. ನಾನು ಇಂದು ನಿಮ್ಮನ್ನು ಮೊದಲ ಬಾರಿ ನೋಡುತ್ತೀರುವುದರಿಂದ ಅಳು ಬಂತು ಎಂದಳು.

ಆಗ ನಾನು ಅವಳನ್ನು ತಲೆಯಿಂದ ಕಾಲಿನವರೆಗೆ ನೋಡಿದೆ ಆದರೂ ಗುರುತು ಸಿಗಲಿಲ್ಲ. ಪುನಃ ಕೇಳಿದೆ ನೀನು ಯಾರು ಎಲ್ಲಿಂದ ಬರುತ್ತೀದ್ದೀಯ ಆಗ ಅವಳು ನನ್ನ ಹೆಸರು ಶ್ರೀಮತಿ ಎಂದು. ಬಹರಾಇಚದಿಂದ ಬರುತ್ತಿದ್ದೇನೆ ನಾನು ಟಿಕೈತನಗರದ ಛೋಟೆಲಾಲಜೀಯವರ ಮಗಳೆಂದು ಆಗ ನನಗೆ ಬಹಳ ಆಶ್ಚರ್ಯವಾಯಿತು. ಅರೇ ನಾನು ಮನೆಬಿಟ್ಟು ಬರುವಾಗ ನೀನು 10-11 ವರ್ಷದವಳು ಈಗ ದೊಡ್ಡವಳಾಗಿದ್ದೀಯ ಮದುವೆಯು ಆಗಿದೆ ನಾನು ಹೇಗೆ ಕಂಡುಹಿಡಿಯಲಿ ಹೇಳು ಎಂದೆ. ಇಷ್ಟು ಹೇಳುತ್ತಲೇ ಅವಳು ಬಿಕ್ಕಿ ಬಿಕ್ಕಿ ಅಳಲು

ಪ್ರಾರಂಭಿಸಿದಳು ಹತ್ತಿರದಲ್ಲಿದ್ದ ಮಹಿಳೆ ಸಮಾಧಾನ ಪಡಿಸತೊಡಗಿದಳು. ಆಮೇಲೆ ಅವಳ ಪರಿಚಯ ಸಮಾಜಕ್ಕೆ ಆಯಿತು. ಅವರಿಗೆ ತಂಗಲು ಕೊಠಡಿಯ ವ್ಯವಸ್ಥೆ ಮಾಡಿದರು. ಅವಳ ಜೊತೆ ಗಂಡ ಪ್ರೇಮನಾಥ ಮತ್ತು ಚಿಕ್ಕ ಮಗು ಪ್ರದೀಪನು ಬಂದಿದ್ದನು. ಶ್ರೀಮತಿ ಅಂತೂ ಬಹಳ ಆಸಕ್ತಿಯಿಂದ ದೀಕ್ಷಾ ಸಮಾರಂಭವನ್ನು ವೀಕ್ಷಿಸುತ್ತಿದ್ದಳು. ಅವಳಿಗೆ ಇಂತಹ ಸಮಾರಂಭದಲ್ಲಿ ಭಾಗವಹಿಸಲು ಸಿಕ್ಕಿದ್ದು ತನ್ನ ಸೌಭಾಗ್ಯವೆಂದು ತಿಳಿದಳು. ಮೊದಲು ರಾಜಮಲ್ಲಜೀ ವಿಸ್ತಾರವಾಗಿ ಉಪದೇಶವನ್ನು ಕೊಟ್ಟರು. ಪ್ರಾರ್ಥನೆ ಆದನಂತರ ಮಹಾರಾಜರ ಆಜ್ಞೆಯಂತೆ ಎಲ್ಲ ದೀಕ್ಷಾರ್ಥಿಗಳು ಅಕ್ಕಿಯಿಂದ ರಚಿಸಿದ್ದ ಸ್ವಸ್ತಿಕದ ಮೇಲೆ ಹರಡಿದ್ದ ಹೊಸಬಟ್ಟೆಯ ಮೇಲೆ ಕ್ರಮವಾಗಿ ಬಂದು ಕುಳಿತರು. ಮಹಾರಾಜರು ಮಂತ್ರ ಓದುತ್ತಿದ್ದಂತೆ ಸಂಸ್ಕಾರ ಪ್ರಾರಂಭವಾಯಿತು. ನಾನು ವೇದಿಕೆಯ ಮೇಲೆ ಇದ್ದ ಕ್ಷುಲ್ಲಿಕೆ ಜಿನಮತಿ ಬ್ರ. ಅಂಗೂರಿಬಾಯಿ ಮೊದಲಾದವರಿಗೆ ಕೇಶಲೋಚ ದೀಕ್ಷಾ ಸಂಸ್ಕಾರ ನಡೆಸಿದೆ. ಆಚಾರ್ಯರು ದೀಕ್ಷೆ ಕೊಟ್ಟು ಶಾಸ್ತ್ರ ಪಿಂಛಿ, ಕಮಂಡಲು ಕೊಟ್ಟು ಅವರ ಹೊಸ ಹೆಸರುಗಳನ್ನು ಸಭೆಯಲ್ಲಿ ಘೋಷಿಸಿದರು. ಮುನಿಗಳಿಗೆ ಜಿತಸಾಗರರೆಂದು, ಜಿನಮತೀಗೆ ಅದೇ ಹೆಸರು. ಬ್ರಹ್ಮಚಾರಿಣಿಗೆ ಸಂಭವಮತೀ ಎಂದು ಕರೆದರು. ಬ್ರಹ್ಮಚಾರಿಣೀ ಅಂಗೂರೀಗೆ ಆರ್ಯಿಕೆ ದೀಕ್ಷೆಯಲ್ಲಿ ಆದಿಮತಿ ಎಂದು ಬ್ರ. ರತನೀಬಾಯಿಗೆ ಕ್ಷುಲ್ಲಿಕೆ ದೀಕ್ಷೆಯಾಗಿ ಶ್ರೇಯಾಂಸಮತೀ ಎಂದು ಇಟ್ಟರು.

ಪ್ರೇರಣೆಯ ಫಲ

ಗಿರಿನಾರ ಕ್ಷೇತ್ರದ ಯಾತ್ರೆ ಮಾಡುವಾಗಲೇ ಆಚಾರ್ಯರ ಆಜ್ಞೆ ಪಡೆದು ಬ್ರಹ್ಮಚಾರಿ ರಾಜಮಲ್ಲರಿಗೆ ಅನೇಕ ಸಲ ಮುನಿ ದೀಕ್ಷೆ ತೆಗೆದುಕೊಳ್ಳಲು ಪ್ರೇರಣೆ ಕೊಡುತ್ತಿದ್ದೆವು. ಆಚಾರ್ಯರು ಕೂಡ ಹೇಳುತ್ತಿದ್ದರು, ಎಲ್ಲ ಮುನಿಗಳು ಅದನ್ನೇ ಹೇಳುತ್ತಿದ್ದರು. ಸಂಘದಲ್ಲಿದ್ದ ಎಲ್ಲ ಬ್ರಹ್ಮಚಾರಿಗಳಿಗೂ ಬ್ರಹ್ಮಚಾರಿಣೀಯರಿಗೂ ಅವರ ಭಕ್ತಿ ಯೋಗ್ಯತೆ, ಜ್ಞಾನಾರಾಧನೆ ಗಮನಿಸಿ ಉಚಿತ ಸ್ಥಾನ ಕೊಡಲು ನಿರ್ಧರಿಸಿದ್ದರು. ಅದರಲ್ಲೂ ಬ್ರ. ರಾಜಮಲ್ಲಜೀಗೆ ನಾನು ಹೆಚ್ಚು ಪ್ರೇರಣೆ ಉಂಟುಮಾಡುತ್ತಿದ್ದೆ.

ಬ್ಯಾವರದಲ್ಲಿ ರಾಜವಾರ್ತಿಕದ ಅಧ್ಯಯನದ ಸಮಯದಲ್ಲಿ ಮಧ್ಯೆ ಮಧ್ಯೆ ನನ್ನ ಪ್ರಯತ್ನ ನಡೆದೇ ಇತ್ತು. ಅಜಮೇರ ಮತ್ತು ಸುಜಾನಗಢದಲ್ಲಿಯು ನಾನು ಅನೇಕ ಉಪಾಯಗಳನ್ನು ಮಾಡಿದೆ. ನನ್ನ ಪ್ರಯತ್ನವನ್ನು ನೋಡಿ ಶ್ರೀಲಾಲಜೀ ಆಗಾಗ್ಗೆ ಹಾಸ್ಯವನ್ನು ಮಾಡುತ್ತಿದ್ದರು. ಸೀಕರ ಚಾತುರ್ಮಾಸದಲ್ಲಿ ಬ್ರಹ್ಮಚಾರಿ ಚಾಂದಮಲ್ಲಜೀ ನಾಗೌರದವರು ಬಂದಿದ್ದರು. ಅವರು ಕೂಡ ನನಗೆ ಬಹಳ ಹತ್ತಿರದವರಾಗಿದ್ದರು. ಒಂದು ದಿನ ಮಾತಾಡುತ್ತಾ ನಾನು ಹೇಳಿದೆ. ಬಾಬಾಜೀ ತಾವು ಬ್ರಹ್ಮಚಾರಿ ರಾಜಮಲ್ಲಜೀಗೆ ಮುನಿಗಳಾಗಲು ಪ್ರೇರಣೆ ಕೊಡಿರೆಂದೆ. ಹೀಗೆ ಪ್ರೇರಣೆ ಮಾಡುತ್ತಲೇ ಇದ್ದ ಸಮಯದಲ್ಲಿ ಒಂದು ದಿನ ಎಂಟುಗಂಟೆಯ ಸಮಯದಲ್ಲಿ ಸಿದ್ಧಮತಿ ಮಾತಾಜೀ ಬಂದು ಹೇಳಿದರು. ಜ್ಞಾನಮತೀಜೀ ಬ್ರಹ್ಮಚಾರಿ ರಾಜಮಲ್ಲಜೀಯವರು ಇಂದು ದೀಕ್ಷೆಗಾಗಿ ತೆಂಗಿನಕಾಯಿಯನ್ನು ಅರ್ಪಿಸಿದರು. ಏಕೆ ನಿಮಗೆ ಗೊತ್ತಿಲ್ಲವೇ ಎಂದು ಕೇಳಿದರು. ನನಗೆ ಕೇಳುತ್ತಲೇ ಅವಾಕ್ ಆದೆ. ಆರೇ ನೀವು ಹೇಳುತ್ತಿರುವುದು ಸತ್ಯವೇ ಎಂದೇ, ಅಷ್ಟರಲ್ಲಿ ಬಂದ ಬ್ರ. ಶ್ರೀಲಾಲಜೀ ಕಾವ್ಯತೀರ್ಥರು ಹೇಳಿದರು. ಅರೇ ನೀವೇಕೆ ಇಷ್ಟು ಬೇಗೆ ಮಾತಾಜೀಗೆ ಈ ಸುದ್ದಿ ಹೇಳಿಬಿಟ್ಟಿರಿ ಎಂದು ಅದಕ್ಕೆ ನಾನು ಏತಕ್ಕೆ ಎಂದೆ. ಆಗ ಅವರು ಹೇಳಿದರು ಮಾತಾಜೀಗೆ ತಕ್ಷಣ ಸಂತೋಷದ ಸಮಾಚಾರ ಹೇಳಿಬಿಟ್ಟರೆ ಅವರ ಹೃದಯದ ಮೇಲೆ ಪರಿಣಾಮವಾಗಬಹುದು. ಆದ್ದರಿಂದ ನಾವೆಲ್ಲ ಒಂದೆರಡು ದಿನಗಳಾದ ಮೇಲೆ ಶಾಂತಿಯಿಂದ ಹೇಳೋಣ ಎಂದು ನಿರ್ಧರಿಸಿದ್ದೆವು. ನಾನು ನಕ್ಕು ಬಿಟ್ಟೆ, ನಂತರ ಬ್ರ. ರಾಜಮಲ್ಲಜೀಯವರೇ ಬಂದು ವಿನಯದಿಂದ ನಮಸ್ಕರಿಸಿ. ತಮ್ಮ ದೀಕ್ಷೆಯ ಭಾವನೆಯನ್ನು ತಿಳಿಸಿದರು. ಹಲವು ವರ್ಷಗಳ ನನ್ನ ಪ್ರೇರಣೆಯು

ಫಲದಾಯಕವಾದುದು ಸಂತೋಷಕ್ಕೆ ಪಾರವಿಲ್ಲದಂತಾಯಿತು. ಅವರೇ ಇಂದು ಮುನಿ ಅಜಿತಸಾಗರರಾದರು. ಆದರೂ ನನ್ನನ್ನು ತಾಯಿಯಂತೆಯೇ ನೋಡುತ್ತಿದ್ದರು.

ಹೀಗೆ ಇಂದು ದೀಕ್ಷೆ ತೆಗೆದುಕೊಂಡ ಪ್ರತಿಯೊಬ್ಬರನ್ನು ಎಷ್ಟು ಸಮಯದಿಂದ ಅವರ ಮನಸ್ಸನ್ನು ದೀಕ್ಷೆಗೆ ಅನುವುಗೊಳಿಸುತ್ತಾ ಬಂದಿದ್ದೆ. ಇಂದು ಸಿದ್ಧಿಸಿತ್ತು. ಫತೇಹಪುರದಿಂದ ಬಂದಿದ್ದ ರತನೀಬಾಯಿಯನ್ನು ದೀಕ್ಷೆಗೆ ಅನುವುಗೊಳಿಸುತ್ತೀರುವುದನ್ನು ತಿಳಿದೆ ಆಚಾರ್ಯರು ಹೇಳಿದ್ದರು. ಜ್ಞಾನಮತಿ ನಿನ್ನ ಹತ್ತಿರ ಯಾರು ಬ್ರಹ್ಮಚಾರಿಣಿಯರು ಇಲ್ಲ ಈಕೆ ಇನ್ನೊಂದೆರಡು ವರ್ಷ ನಿನ್ನಲ್ಲಿ ಸೇವೆ ಮಾಡುತ್ತಾ ಇರಲಿ ಬಿಡಿ ಆನಂತರ ದೀಕ್ಷೆ ಕೊಟ್ಟರಾಯಿತು. ಎಂದಿದ್ದರು ಆದರೆ ನನಗೆ ಸ್ವಾರ್ಥಕ್ಕಿಂತ ಎಲ್ಲರು ತಮ್ಮ - ತಮ್ಮ ಆತ್ಮಕಲ್ಯಾಣವನ್ನು ಬೇಗನೆ ಮಾಡಿಕೊಳ್ಳಲಿ ಎಂಬ ಬಯಕೆ. ಇದು ಫಲಿಸಿದ್ದು ಕಂಡು ಮನ ಹರ್ಷದಿಂದ ಕೂಡಿತು. ನಿಜವಾಗಿ ವಿಚಾರ ಮಾಡಿದಾಗ ಕಂಡು ಬರುವದೇನೆಂದರೆ ಅನಾದಿಕಾಲದಿಂದ ಕರ್ತೃತ್ವ ಬುದ್ಧಿಯ ಕಾರಣದಿಂದಲೇ ಇಂತಹ ಭಾವ ಬರುವುದೆಂಬುದು ಸತ್ಯ, ನನ್ನ ಪ್ರಯತ್ನ ಫಲಿಸಿತು.

ಪ್ರತಿಯೊಬ್ಬ ವ್ಯಕ್ತಿಗೂ ಪುಣ್ಯವು ಉದಯಕ್ಕೆ ಬರಬೇಕು. ಪ್ರೇರಕ ಶಕ್ತಿ ಗುರುವಾಗಿರಬಹುದು. ಪರಮ ಹಿತೈಷಿಯೇ ಆಗಿರಬಹುದು ಯಾರೇ ಆಗಿದ್ದರು ಅವರೆಲ್ಲ ನಿಮಿತ್ತ ಮಾತ್ರರಾಗಿರುತ್ತಾರೆ. ಒಂದು ವೇಳೆ ನಾವು ಪ್ರೇರಣೆಯಿಂದಲೇ ಜನರಿಗೆ ದೀಕ್ಷೆ ಕೊಡಿಸಬಹುದೆಂದರೆ ನಾವು ಯಾವುದೇ ಸಜ್ಜನರನ್ನು ಬಿಡದೆ ದೀಕ್ಷೆ ಕೊಡಿಸಿಬಿಡುತ್ತಿದ್ದೇವೇನೋ. ಆದ್ದರಿಂದ ಒಬ್ಬ ವ್ಯಕ್ತಿಯಾಗಲೀ, ಒಬ್ಬ ಪುರುಷನಾಗಲೀ ಅಥವಾ ಮಹಿಳೆಯಾಗಲೀ ಅವರ ಪುಣ್ಯೋದಯ, ಆಸನ್ನಭವ್ಯತಾ ನಿಕಟಸಂಸಾರ ಮುಂತಾದವುಗಳು ಬಹಳ ಬೇಕು. ಅದಕ್ಕೆ ಗುರುಗಳ ಪ್ರೇರಣೆಯು ಬಹಳ ಪ್ರಭಾವ ಬೀರುತ್ತದೆ. ಇದೇ ಕಾರಣದಿಂದಾಗಿಯೇ ಗುರುಜನರು ಬಾಹ್ಯ ನಿಮಿತ್ತವೆಂದು ಹೇಳಲಾಗುತ್ತದೆಯೇ ಹೊರತು ಅಂತರಂಗ ನಿಮಿತ್ತವಲ್ಲ.

ಆ ದೀಕ್ಷಾ ಸಮಾರಂಭವು ನನಗೆ ಬಹಳ ಸಂತೋಷವನ್ನು ಕೊಟ್ಟಿತ್ತು. ಇಂದು ಕೂಡ ಅದನ್ನು ನೆನಸಿಕೊಂಡರೆ ನನಗೆ ಮುದ ಕೊಡುತ್ತದೆ. ಆದರೂ ನಾನು ತತ್ತ್ವಜ್ಞಾನದ ಬಲದಿಂದ ನನ್ನ ಕರ್ತೃತ್ವ ಬುದ್ಧಿಯನ್ನು ದೂರ ಮಾಡುವುದಕ್ಕಾಗಿ ಪ್ರಯತ್ನಿಸುವುದೇ ನನ್ನ ಎಲ್ಲಕ್ಕಿಂತ ದೊಡ್ಡದಾದ ಪುರುಷಾರ್ಥ ಅಥವಾ ಪ್ರಯತ್ನವೆಂದು ತಿಳಿಯುತ್ತೇನೆ.

ಸೀರಕದಲ್ಲಂತು ಆಹಾರದ ಸಮಯವನ್ನು ನೋಡಲು ಆಹ್ಲಾದಕಾರಿಯಾಗಿತ್ತು. ಒಬ್ಬರ ಹಿಂದೆ ಒಬ್ಬರು ಸಾಧುಗಳು ಆಹಾರಕ್ಕೆ ಹೊರಡುತ್ತಿದ್ದರು. ನಂತರದಲ್ಲಿ ಆರ್ಯಿಕೆಯರು ಕ್ರಮವಾಗಿ ಹೊರಡುತ್ತಿದ್ದರು. ಈ ದೃಶ್ಯವಂತು ಚತುರ್ಥಕಾಲಕ್ಕೆ ಸಮಾನವಾಗಿ ಕಾಣುತ್ತಿತ್ತು.

ಶ್ರೀಮತಿಯು ತನ್ನ ಗಂಡನ ಜೊತೆ ಶುದ್ಧ ಜಲದ ನಿಯಮವನ್ನು ತೆಗೆದುಕೊಂಡು ಎಲ್ಲ ಸಾಧುಗಳಿಗೂ ಆಹಾರದಾನಮಾಡಿ ನಂತರ ತನ್ನ ಮನೆಗೆ ಹೋದಳು. ಟಿಕೈತನಗರದಲ್ಲಿ ಈ ಎಲ್ಲ ವಿಷಯವನ್ನು ಶ್ರೀಮತಿಯಿಂದ ಕೇಳಿದ ಚಿಕ್ಕ ತಂಗಿ ಮನೋವತಿಯು ಹೇಳಿದಳಂತೆ ಹೇ ಭಗವಾನ್ ಇಂತಹ ಮಾತಾಜೀಯ ದರ್ಶನ ಪಡೆಯುವ ಭಾಗ್ಯವು ನನಗೆ ಯಾವಾಗ ಬರುತ್ತದೆ. ನಾನು ಪೂರ್ವ ಜನ್ಮದಲ್ಲಿ ಯಾವ ಪಾಪ ಮಾಡಿದ್ದೇನೋ 4-5 ವರ್ಷದಿಂದ ದರ್ಶನಕ್ಕಾಗಿ ಕಾತುರಳಾಗಿದ್ದೇನೆ. ಆಗ ಮೋಹಿನಿ (ಅಮ್ಮ) ಕೂಡ ನೋಡಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದರು. ತಂದೆಯು ಮುಂದಿನ ಚಾತುರ್ಮಾಸಕ್ಕೆ ನೋಡೋಣ ಎಂದರಂತೆ.

ಪ್ರಮೇಯ ಕಮಲ ಮಾರ್ತಾಂಡದ ಅಧ್ಯಯನ

ನಾನು ಶ್ರೀ ಜಿನೇಂದ್ರದೇವನನ್ನು ಹೃದಯದಲ್ಲಿ ಧಾರಣೆ ಮಾಡಿ ಒಂಬತ್ತು ಸಲ ಮಹಾಮಂತ್ರವನ್ನು ಜಪಿಸಿ ಜಿನಮತಿಗೆ ಪ್ರಮೇಯ ಕಮಲ ಮಾರ್ತಾಂಡವನ್ನು ಓದಿಸಲು ಪ್ರಾರಂಭಿಸಿದೆ. ನನಗೆ ಆಶ್ಚರ್ಯವೆಂದರೆ ನಾನು ಓದಿದೆ ಈ ಗ್ರಂಥದ ಅರ್ಥವನ್ನು ಜಿನಮತಿ ಗೆ ಹೇಳತೊಡಗಿದೆ. ನನಗೆ ಗೂಢ ಗ್ರಂಥವು ಸರಳವೆಂದು ತೋರತೊಡಗಿತು. ಕೆಲವು ದಿನಗಳಲ್ಲಿ ಅವರಿಗೆ ಪಾಠ ಮಾಡುತ್ತಾ ನನಗೆ ಇನ್ನು ಸರಳವೆಂದು ತೋರಿದ್ದು ಆತ್ಮ ಸಂತೃಪ್ತಿಯನ್ನು ತಂದಿತ್ತು. ಚಾತುರ್ಮಾಸ ಮುಗಿದ ಮೇಲೆ ಮುಂದಿನ ವಿಹಾರದ ಬಗ್ಗೆ ಚರ್ಚೆ ನಡೆಯುತ್ತಿತ್ತು.

ಜಿನಮತಿಯ ಉಪವಾಸ

ಆರ್ಯಿಕೆ ಜಿನಮತಿಯು ಕಾರ್ತಿಕ ಶುಕ್ಲ ಅಷ್ಟಮಿಯಿಂದ ಪೂರ್ಣಿಮೆಯವರೆಗೆ ಎಂಟು ದಿನಗಳವರೆಗೆ ಉಪವಾಸ ಮಾಡಿದರು. ಮೂರು - ನಾಲ್ಕು ದಿನದ ಉಪವಾಸದಿಂದಲೇ ಅವಳ ಆರೋಗ್ಯ ಕ್ಷೀಣಿಸಿತು. ಆದರೂ ಬಹಳ ತಿಳುವಳಿಕೆ ಹೇಳಿದರೂ ಅವರು ಉಪವಾಸ ಬಿಡಲಿಲ್ಲ ಕೊನೆಯ ಎರಡು ದಿನ ಕಷ್ಟದಲ್ಲಿ ಕಳೆಯಿತು. ನನಗೆ ಸ್ವತಃ ಗಾಬರಿಯಾಯಿತು. ಇದರಲ್ಲೇ ಇವರೆಲ್ಲರೂ ಸಮಾಧಿಯನ್ನು ಪಡೆದು ಬಿಡುತ್ತಾರೇನೋ ಎನ್ನಿಸಿತು.

ಪಾರಣೆಯ ದಿನ ಬೇಡವೆಂದರು ಲಘುಶಂಕೆಗೋಸ್ಕರ ಹೊರಗಡೆ ಹೋದರು ರಜಸ್ವಲೆಯು ಆಗಿದ್ದರು. ಅದರ ಮೂರನೆಯ ದಿನ ಹೊರಗೆ ಹೋಗುವ ಸಮಯದಲ್ಲಿ ಬಿದ್ದು ಮೂರ್ಛಿತಳಾದರು. ನನಗೆ ನಿಜವಾಗಿಯೂ ಅವಳ ಕತೆ ಮುಗಿದೇ ಹೋಯಿತು ಎಂದು ಗಾಬರಿಯಾಯಿತು. ಆರ್ಯಿಕೆ ಚಂದ್ರಮತಿಜೀಯವರು ಅವರನ್ನು ಸಂತೈಸಿದರು. ಎಚ್ಚರ ಬಂದ ಮೇಲೆ ಶುದ್ಧಿ ಮಾಡಿಸಿ ಮಲಗಿಸಿಯೇ ಆಹಾರವನ್ನು ಕೊಡಲಾಯಿತು. ಹೇಗೋ ಸ್ವಲ್ಪ ಸ್ವಲ್ಪವೇ ಚೇತರಿಸಿಕೊಂಡರು. ಕೆಲವು ದಿನಗಳ ನಂತರ ಆರೋಗ್ಯ ಸುಧಾರಿಸಿತು. ಆದರೆ ಅವರ ಶರೀರವೇ ಶೂನ್ಯತೆಯನ್ನು ಹೊಂದಿತು.

ಆಕಸ್ಮಿಕವಾಗಿ ನನ್ನ ವಿಹಾರ

ನಾನು ಹಲವಾರು ವೈದ್ಯರ ಪರಾಮರ್ಶೆಯಿಂದ ಜಿನಮತಿಗೆ ಚಿಕಿತ್ಸೆಯನ್ನು ಕೊಡಿಸಿದೆ. ಸ್ವಲ್ಪ ಸುಧಾರಿಸಿದಳು. ಹದಿನೈದು ದಿನಗಳು ಕಳೆಯಿತು. ಅವರು ಮತ್ತೆ ಚತುರ್ದರ್ಶಿಯಂದು ಮತ್ತೆ ಉಪವಾಸ ವ್ರತವನ್ನು ತೆಗೆದುಕೊಳ್ಳಲು ಬಯಸಿದರು. ನಾನು ಆಚಾರ್ಯರಲ್ಲಿ ತಿಳಿಸಿದೆ. ಆಚಾರ್ಯರೇ ಅವರಿಗೆ ವ್ರತ ಕೊಡಬೇಡಿ ಅವರ ಆರೋಗ್ಯ ಇನ್ನು ಸುಧಾರಿಸಿಲ್ಲ. ಇದನ್ನು ಕೇಳುತ್ತಿದ್ದಂತೆ ಆಶ್ಚರ್ಯ ಅವರಿಗೆ ಏನು ಆವೇಶ ಬಂತೋ ಗೊತ್ತಿಲ್ಲ ಹೌದು - ಹೌದು ನೀನು ನನಗೆ ಅನುಶಾಸನ ಮಾಡಲು ಬಂದ್ದಿದ್ದೀಯಾ ನೀನು ಸಂಘದಿಂದಲೇ ಹೊರಡು ಎಂದರು. ನನಗೆ ಇದ್ದಕ್ಕಿದ್ದಂತೆ ಈ ಶಬ್ದ ಕೇಳಿ ದಿಗ್ಮೂಢಳಾದೆ. ಜಿನಮತಿ ಉಪವಾಸ ತೆಗೆದುಕೊಂಡಳು. ಆದರೆ ನನ್ನ ಕಿವಿಯಲ್ಲಿ ಆಚಾರ್ಯರ ಸಂಘದಿಂದಲೇ ಹೊರಡು ಎನ್ನುವ ಶಬ್ದವೇ ಗುಯ್‌ಗುಡತೊಡಗಿತು. ನಾನು ದೊಡ್ಡವರಿಗೆ ಎಂದೂ ಎದುರುತ್ತರ ಕೊಟ್ಟವಳೇ ಅಲ್ಲ. ಅಲ್ಲಿ ನಾನು ಏನು ಮಾತಾಡಲಿಲ್ಲ. ಆದರೆ ಅಲ್ಲಿಂದ ಬಂದು ಯೋಚಿಸತೊಡಗಿದೆ. ಒಂದು ಸಲ ಆಚಾರ್ಯ ಶ್ರೀ ವೀರಸಾಗರರ ಹತ್ತಿರ ಆರ್ಯಿಕೆ ಪದ್ಮಾವತಿ ಭಾದ್ರಪದ ಮಾಸದಲ್ಲಿ ಏಕಾಂತದ ಉಪವಾಸ ವ್ರತ ತೆಗೆದುಕೊಳ್ಳ ಬೇಕೆಂದು ಕೇಳಿದಾಗ ಆಚಾರ್ಯರು ತಕ್ಷಣವೇ ಕೇಳಿದರು. ಹೋಗು ನಿನ್ನ ಗುರು ಜ್ಞಾನಮತಿಯನ್ನು ಜೊತೆಯಲ್ಲಿ ಕರೆದುಕೊಂಡು ಬಂದ ಮೇಲೆ ವ್ರತ ಕೊಡುತ್ತೇನೆ ಎಂದರು. ನಾನು ಅವರ ಹತ್ತಿರ ಹೋದಾಗ ಆಚಾರ್ಯರು ಕೇಳಿದರು. ಇವರಿಗೆ ನಾನು ಏಕಾಂತದ ವ್ರತವನ್ನು ಕೊಡಲೇ?

ಏಕೆಂದರೆ ಇವರು ನಿಮ್ಮ ಹತ್ತಿರ ಇರುತ್ತಾರೆ ಇವರ ಆರೋಗ್ಯದ ಬಗ್ಗೆ ನಿಮಗೆ ಚೆನ್ನಾಗಿ ಗೊತ್ತಿರುತ್ತದೆ ಎಂದರು. ನಾನು ಮಹಾರಾಜಜೀ ಇವರು ಯಾವಾಗಲು ಉಪವಾಸ ಮಾಡುತ್ತಿರುತ್ತಾರೆ ಆದ್ದರಿಂದ ಕೊಡಿರಿ ಎಂದೆ. ಪುನಃ ಆಚಾರ್ಯರು ಹೇಳಿದರು. ನೋಡು ನಿನ್ನ ಹತ್ತಿರ ಇರುವವರಿಗೆ ವ್ರತ ಕೊಡಿಸಲು ನೀನು ಜೊತೆಯೇ ಬರಬೇಕು. ಏಕೆಂದರೆ ಕೆಲವರು ಭಾವಾವೇಶದಲ್ಲಿ ವ್ರತ ತೆಗೆದುಕೊಂಡು ಬಿಡುತ್ತಾರೆ ಅವರ ಸಾಮರ್ಥ್ಯ ಅವರ ಗುರುವಾದ ನಿನಗೆ ಚೆನ್ನಾಗಿ ಗೊತ್ತಿರುತ್ತದೆ. ಮತ್ತೇ ಪದ್ಮಾವತಿಗೆ ವ್ರತ ಕೊಟ್ಟು ನೋಡು ಬಾಯಿ, ನೀನು ವ್ರತ ತೆಗೆದುಕೊಳ್ಳುವಾಗಲೆಲ್ಲ ಇವರನ್ನು ಕರೆದುಕೊಂಡ ಬರಬೇಕೆಂದರು. ಈ ಮಾತು ನನಗೆ ನೆನಪಿಗೆ ಬಂದಿತು. ನಂತರ ಶ್ರುತಸಾಗರರ ಹತ್ತಿರ ತಲುಪಿ ಈ ಸಮಾಚಾರ ತಿಳಿಸಿದೆ. ಅವರಿಗಂತೂ ಇನ್ನೂ ಆಶ್ಚರ್ಯ ಅರೇ ಇದೇನು ಅವರ ಮಾತುಗಳಲ್ಲಿ ಇಂತಹ ಶಬ್ದವನ್ನು ಹೇಳಲು ಹೇಗೆ ಸಾಧ್ಯವೆಂದರು. ನಾನು ಮಹಾರಾಜರಲ್ಲಿ ಈಗಲೇ ಸಾಮಾಯಿಕವಾದ ನಂತರವೇ ವಿಹಾರ ಹೊರಡುತ್ತೇನೆ ಎಂದೆ.

ಮಹಾರಾಜರು ಮೌನರಾಗಿದ್ದರು. ನಾನು ಬಂದು ಎಲ್ಲ ಆರ್ಯಿಕೆಯರಲ್ಲಿ ವಿಷಯ ತಿಳಿಸಿದೆ. ನಾನು ಸಾಮಾಯಿಕದ ನಂತರ ವಿಹಾರ ಹೊರಡುತ್ತೇನೆ ಎಂದೆ. ಎಲ್ಲ ಆರ್ಯಿಕೆಯರು ಅದೇ ಕ್ಷಣ ತಮ್ಮ - ತಮ್ಮ ಶಾಸ್ತ್ರದ ಜೋಳಿಗೆಗಳನ್ನು ಎತ್ತಿಕೊಂಡರು. ಸಾಮಾಯಿಕವಾದ ನಂತರ ಎಲ್ಲರು ಒಟ್ಟಾಗಿ ಹೋಗಿ ಮುನಿ ಮಹಾರಾಜರಿಗೆ ಹಾಗೂ ಎಲ್ಲ ಮುನಿಗಳಿಗೂ ನಮೋಸ್ತು ವಂದಾಮಿ ಮಾಡಿ ಆಚಾರ್ಯರ ಹತ್ತಿರ ಹೋಗಿ ನಾನು ಇಲ್ಲಿಂದ ದೂಜೋದ ಕಡೆ ವಿಹಾರ ಹೊರಡುತ್ತಿದ್ದೇನೆ ಎಂದೆ. ಒಂದಿಬ್ಬರು ಶ್ರಾವಕರ ಜೊತೆ ವಿಹಾರ ಹೊರಟೆವು. ಅಲ್ಲಿಯ ಶ್ರಾವಕರು ಬಂದು ಸ್ವಾಗತಿಸಿದರು. ಕ್ಷಣದಲ್ಲಿಯೇ ನಮ್ಮೆಲ್ಲರಿಗೂ ವಸತಿ ವ್ಯವಸ್ಥೆಯು ಆಯಿತು. ನನ್ನ ಜೊತೆ ಪದ್ಮಾವತಿ, ಜಿನಮತಿ, ಆದಿಮತಿ ಕ್ಷುಲ್ಲಿಕೆ ಶ್ರೇಯಾಂಸಮತಿ ಇದ್ದರು. ಬ್ರಹ್ಮಚಾರಿಣಿಯರು ಯಾರು ಇರಲಿಲ್ಲ. ಅಲ್ಲಿ 5-6 ದಿನಗಳು ಧರ್ಮಾರಾಧನೆಯಲ್ಲಿ ಕಳೆದೆವು.

ಆಚಾರ್ಯರ ಸಂಘದ ಆಗಮನ

ಒಂದು ದಿನ ಆಚಾರ್ಯರು ಸಂಘ ಸಮೇತರಾಗಿ ಬರುತ್ತಿದ್ದಾರೆ ಎನ್ನುವ ಸುದ್ದಿ ಸಿಕ್ಕಿತು. ನನ್ನ ಸಂತೋಷಕ್ಕೆ ಪಾರವಿಲ್ಲದಂತಾಯಿತು. ಶ್ರಾವಕರನ್ನು ಕರೆದುಕೊಂಡು ಸೂಚನೆ ಕೊಟ್ಟರು. ಚಿಕ್ಕ ಹಳ್ಳಿಯಾದರೇನು ಬ್ಯಾಂಡ್ ಓಲಗದ ಸಮೇತರಾಗಿ ಆಚಾರ್ಯರು ಬರುವ ಒಂದು ಮೈಲಿ ದೂರದಿಂದಲೇ ಆಚಾರ್ಯರನ್ನು ಸ್ವಾಗತಿಸಿದರು ನಾನು ಸಂಘ ಸಮೇತ ಆಚಾರ್ಯರನ್ನು ಸ್ವಾಗತಿಸಿದೆ.

ಸಂಘ ಬಂದು ನೆಲಸಿದ ಮೇಲೆ ಕೆಲವು ದಿನಗಳವರೆಗೆ ಪ್ರಸನ್ನತೆಯ ವಾತಾವರಣವಿತ್ತು. ಆಚಾರ್ಯರು ನಗುತ್ತಾ ಹೇಳಿದರು. ಮಾತಾಜೀ ನಾವು ನಿಮಗಾಗಿ ಇಲ್ಲಿ ಬರಬೇಕಾಯಿತು. ಅದಕ್ಕೆ ನಾನು ಇದು ತಮ್ಮ ಬಹಳ ದೊಡ್ಡ ಕೃಪೆ ಎಂದೆ. ಒಂದು ದಿನ ಮಧ್ಯಾಹ್ನದಲ್ಲಿ ಶ್ರುತಸಾಗರರು ಹೇಳಿದರು. ಮಾತಾಜೀ ನೀವು ವಿಹಾರ ಹೊರಟ ನಂತರ ನನ್ನ ಮನಸ್ಸಿಗೆ ಬಹಳ ಖೇದವಾಯಿತು. ಅಜಿತಸಾಗರರಿಗೂ ಅಷ್ಟೇ ಖೇದವಾಗಿತ್ತು. ಅವರಂತೂ ಇದೇನಾಯಿತು ನನ್ನತಾಯಿಗೆ ಎಂತಹ ಅವಮಾನವಾಯಿತು ನಾನು ಹೇಗೆ ನೋಡುತ್ತಾ ಇರಲಿ ಎಂದು ಒಳಗೊಳಗೆ ನೊಂದವರು ಕೊನೆಗೆ ಏನಾದರಾಗಲಿ ಆಚಾರ್ಯರನ್ನು ಸಂಘ ಸಮೇತರಾಗಿ ದೂಜೋದ ಕಡೆಗೆ ತೆಗೆದುಕೊಂಡೇ ಹೋಗಬೇಕೆಂದು ನಾನು ಸಾಹಸ ಮಾಡಿ ಆಚಾರ್ಯರನ್ನು ರಾಜಿ ಮಾಡಿಸಿದೆವು. ಆಚಾರ್ಯರ ಮನದಲ್ಲಾದರೋ ನಿಮ್ಮ ಬಗ್ಗೆ ಯಾವುದೇ ಕಷಾಯವಿಲ್ಲ. ಆಕಸ್ಮಾತ್ ಆವೇಶದಿಂದ ಅವರ ಮುಖದಿಂದ ಇಂತಹ ಶಬ್ದ ಹೊರಟಿರಬೇಕು.

ನಿಜವಾಗಿ ನಡೆದಿದ್ದೇನೆಂದರೆ ಸೀಕರದ ಚಾತುರ್ಮಾಸದಲ್ಲಿ ಒಬ್ಬ ಮುನಿಗಳು ಜಾತಿ ವ್ಯವಸ್ಥೆಯನ್ನು ಮನ್ನಿಸದೆ ಆಗಾಗ್ಗೆ ಆಗಮ ವಿರುದ್ಧವಾದ ಮಾತುಗಳನ್ನು ಹೇಳುತ್ತಿದ್ದರು. ಈ ವಿಷಯವಾಗಿಯೇ ಸಂಘದಲ್ಲಿದ್ದ ಪ್ರಬುದ್ಧ ಮತ್ತು ವೃದ್ಧ ಆರ್ಯಿಕೆಯರಿಗೆ ಸಿಟ್ಟು ಬಂದಿತ್ತು. ಒಂದು ದಿನ ಆಹಾರದ ನಂತರ ಒಬ್ಬ ವೃದ್ಧ ಆರ್ಯಿಕೆಯರು ಬಂದು ಹೇಳಿದರು ಮಹಾರಾಜಜೀ ಈ ಮುನಿಗಳು ಸಜ್ಜಾತಿತ್ವದ ವಿರೋಧವಾಗಿ ಹೀಗೆ ಹೀಗೆ ಹೇಳಿದ್ದಾರೆ. ಅವರ ಮೇಲೆ ನೀವು ನಿಯಂತ್ರಣವನ್ನು ಇಡಬೇಕು ಎಂದು. ಅದಕ್ಕೆ ಮಹಾರಾಜರು ಮಾತಾಜೀ ಶಾಂತರಾಗಿರಿ ನಮ್ಮ ಜನರಿಗೆ ದೃಷ್ಟಿಯಲ್ಲಿ ಎಲ್ಲವು ಇದ್ದರೂ ಏನು ನಡೆಯುತ್ತಿದೆಯೋ ಅದನ್ನು ತಣ್ಣಗೆ ಮಾಡಬೇಕಾಗಿದೆ. ಬಿಸಿ - ಬಿಸಿ ತಿಂದರೆ ಬಾಯಿ ಸುಡುತ್ತದೆ. ಇದಾದನಂತರವು ಮಾತಾಜೀ ಇದೇ ವಿಷಯವನ್ನು ಹೇಳಿದ್ದಾರೆ. ಮಹಾರಾಜರು ಅವರನ್ನು ಜೋರಾಗಿ ಗದರುತ್ತಾ ಇದ್ದರೆ ಅದೇ ಸಮಯಕ್ಕೆ ಅಲ್ಲೇ ಇದ್ದ ಇನ್ನೊಬ್ಬ ಮಾತಾಜೀ ಮತ್ತಷ್ಟು ಸಿಟ್ಟು ಬರುವ ಹಾಗೆ ಮಾತಾಡಿದ್ದಾರೆ. ಮಹಾರಾಜರೇ ತಾವು ನನ್ನ ಮಾತಾಜೀಗೆ ಏನ್ನನ್ನೂ ಹೇಳಲು ಬಿಡುತ್ತಿಲ್ಲ ಅವರಾದರೋ ಆಗಮದಲ್ಲಿರುವಂತೆ ಹೇಳಿದ್ದಾರೆ ಎಂದಿದ್ದಾರೆ . ಆಗ ಮಹಾರಾಜರು ಸುಮ್ಮನೆ ಆಗಿಬಿಟ್ಟಿದ್ದಾರೆ ಮಾರನೇಯ ದಿನವೂ ಆ ವೃದ್ಧ ಮಾತಾಜೀಯ ಉದ್ವೇಗವನ್ನು ನೋಡಿ ನನಗೆ ಗದರುತ್ತಾ ಹೇಳಿದರು ಜ್ಞಾನಮತಿ ಪ್ರತಿದಿನ ಒಂದೇ ವಿಷಯ ಹೇಳುತ್ತಿರ ಬೇಡ ಎಂದು. ನನಗೆ ಆಶ್ಚರ್ಯವಾಯಿತು ಆದರೂ ಮೌನವಾಗಿ ಅಲ್ಲಿಂದ ಬಂದೆ ಏಕೆಂದರೆ ಆಗ ನಾನು ಏನನ್ನು ಮಾತೇ ಆಡಿರಲಿಲ್ಲ. ಪುನಃ ಮಾರನೇಯ ದಿನ ಆಹಾರವಾದ ನಂತರ ಮಹಾರಾಜರ ದರ್ಶನಕ್ಕಾಗಿ ಹೋದಾಗ ಹೇಳಿದರು ಜ್ಞಾನಮತೀಜೀ ನಾನು ನಿನ್ನೆ ನಿನಗೆ ಕಾರಣವಿಲ್ಲದೆ ಸಿಡುಕಿದೆ. ನೀನು ತಪ್ಪು ತಿಳಿಯಬೇಡ ಎಂದರು. ವಿಷಯವೇನೆಂದರೆ ಮನೆಯಲ್ಲಿ ತಾಯಿ ಯಾವಾಗ ಸೊಸೆಗೆ ಬೈಯ್ಯಲು ಆಗುವುದಿಲ್ಲವೋ ಆಗ ಮಗಳಿಗೆ ತಾನೇ ಬೈಯ್ಯಬೇಕು ಎಂದರು. ಆಗ ಆ ಸೊಸೆ ಆ ತಪ್ಪನ್ನು ಮಾಡಬಾರದು. ಇಷ್ಟು ಹೇಳಿ ಆಚಾರ್ಯರು ನಕ್ಕರು ನಾನು ನಕ್ಕು ದರ್ಶನ ಮಾಡಿಕೊಂಡು ಬಂದೆ.

ಹೀಗೆ ಆ ದಿನಗಳಲ್ಲಿ ಆಗಮ ವಿರೋಧವಾಗಿ ಮಾತಾಡುವ ಮುನಿಗಳ ಬಗ್ಗೆ ಸಂಘದಲ್ಲಿ ಹೀಗೆ ಚರ್ಚೆ ನಡೆಯುತ್ತಿತ್ತು. ಆದ್ದರಿಂದಲೇ ಸಂಘದಿಂದ ಬೇರೆ ಹೋಗಲು ಹೇಳಿದ್ದಾರೆ. ಅವರ ಮನದಲ್ಲಿದ್ದ ಕ್ಷೋಭೆ ಆವೇಶವಾಗಿ ನನ್ನ ಮೇಲೆ ಬಿದ್ದಿತು. ಸಂಘದಲ್ಲಿ ಯಾವುದೇ ಸಾಧು ಅಥವಾ ಆರ್ಯಿಕೆ ವಿಹಾರ ಹೊರಡಬೇಕಾದರೂ ತಮ್ಮ ತಮ್ಮಲ್ಲಿಯೇ ಸಾಧು ಸಾಧ್ವಿಯರು ಖಂಡಿತಾ ತಡೆಯುತ್ತಿದ್ದರು. ಆದರೆ ಆದಿನ ಒಂದು ಘಟನೆ ನಡೆಯಿತು. 11.30 ಯಿಂದ 12.30ಯವರೆಗೆ ಸಾಮಾಯಿಕ ಮಾಡಿ ಒಂದು ಗಂಟೆಗೆ ನಾನು ಹೊರಟೇ ಬಿಟ್ಟೆ. ಬಹಳಷ್ಟು ಜನರಿಗೆ ವಿಷಯವೇ ತಿಳಿದಿರಲಿಲ್ಲ.

ಇಲ್ಲಿ ಆಚಾರ್ಯರ ಸಂಘ ಸಮೇತ ಬಂದು ವಿಷಯ ತಿಳಿದು ಅವರ ವಾತ್ಸಲ್ಯ ಸಿಕ್ಕಿದ ಮೇಲೆ ಯೋಚಿಸತೊಡಗಿದೆ. ತಣ್ಣಗೆ ಮಾಡಿಕೊಂಡು ತಿನ್ನಿ ಬಿಸಿ ತಿಂದರೆ ಬಾಯಿ ಸುಟ್ಟುಹೋಗುತ್ತದೆ ಎನ್ನುವ ಆಚಾರ್ಯರ ಮಾತು ಎಷ್ಟು ಸುಂದರವಾಗಿದೆಯೆಂದು. ನಾನು ಆವೇಶದಿಂದ ತಕ್ಷಣ ಅಲ್ಲಿಂದ ವಿಹಾರ ಮಾಡಿದೆ ಒಂದು ದಿನ ನಿಂತು ಶಾಂತಿಯಿಂದ ವಿಚಾರ ಮಾಡಿದ್ದರೆ ಬಹುಶಃ ಅಲ್ಲೇ ಪರಿಸ್ಥಿತಿ ಶಾಂತವಾಗುತ್ತಿತ್ತು. ವಿಹಾರ ಮಾಡುವ ಪ್ರಸಂಗ ಬರುತ್ತಿರಲಿಲ್ಲ. ಸೀಕರದಿಂದ ಸಂಘದ ಜೊತೆ ಜ್ಞಾನಸಾಗರರು ಬಂದಿರಲಿಲ್ಲ ಅಲ್ಲೇ ನಿಂತವರು ಆಮೇಲೆ ಬೇರೆಯೇ ವಿಹಾರ ಮಾಡತೊಡಗಿದರು. ದೂಜೋರ ಸಣ್ಣ ಹಳ್ಳಿಯಾದರೂ ಇಡೀ ಸಂಘವನ್ನು ಭಕ್ತಿಯಿಂದ ನೋಡಿಕೊಂಡರು. ಖುಷಿಯಿಂದ ಆಹಾರ ಮಾಡುತ್ತಿದ್ದರು ಸ್ವಾಧ್ಯಾಯ ಮತ್ತು ಧರ್ಮ ಚರ್ಚೆ ನಡೆಯುತ್ತಿತ್ತು. ನಾನು ಯಾವಾಗಲೂ ಈ ಘಟನೆಯನ್ನು ಯೋಚಿಸುತ್ತಿರುತ್ತೇನೆ ಇಂದು ಯಾವ ಸಂಘಗಳು ಆರ್ಯಿಕೆಯರ ಮೇಲ್ವಿಚಾರಣೆಯಲ್ಲಿದೆಯೋ ಮತ್ತು ಸಂಘದ ಮರ್ಯಾದೆಯು ಉಳಿದುಕೊಂಡು ಬರುತ್ತದೆ.

ಯಾವ ಸಂಘದಲ್ಲಿ ಪ್ರತಿಯೊಬ್ಬ ಆರ್ಯಿಕೆಯರು ಚಿಕ್ಕ ಚಿಕ್ಕ ವಿಷಯಗಳನ್ನು ಆಚಾರ್ಯರವರೆಗೆ ತೆಗೆದುಕೊಂಡು ಹೋಗುತ್ತಾರೋ ಅಲ್ಲಿ ಶಾಂತಿ ಮತ್ತು ವ್ಯವಸ್ಥೆ ಎರಡು ಹಾಳಾಗುತ್ತದೆ. ಪ್ರಮುಖ ಆರ್ಯಿಕೆಯ ಪಾತ್ರ ಮಹತ್ವದ್ದು ಎಂಬುದು ಅರಿವಾಯಿತು. ಏಕೆಂದರೆ ಮಹಿಳೆಯೇ ಮಹಿಳೆಯ ಸಂರಕ್ಷಣೆ ಮತ್ತು ಸಂಪೋಷಣೆಯನ್ನು ಮಾಡಬಲ್ಲರು ಆಚಾರ್ಯರ ಸ್ಟೂಲರೂಪದಿಂದ ಮಾರ್ಗದರ್ಶನ ಮಾಡಬಲ್ಲರು ಇನ್ನೊಂದು ವಿಷಯವೇನೆಂದರೆ ಯಾವ ಆರ್ಯಿಕೆಯರಿಗೆ ಪ್ರಮುಖ ಆರ್ಯಿಕೆಯವರಲ್ಲಿ ಗುರು ಅಥವಾ ತಾಯಿಯ ಭಾವ ಇರುತ್ತದೋ ಹಾಗೂ ಆರೋಗ್ಯ ಸರಿ ಇಲ್ಲದೆ ಇರುವಾಗ ಒಬ್ಬರು ಇನ್ನೊಬ್ಬರಿಗೆ ವೈಯಾವೃತ್ತಿಯ ಸೌಹಾರ್ದವನ್ನು ಮಾಡಬೇಕು. ತಾಯಿ ಮಗಳನ್ನು ನೋಡಿಕೊಳ್ಳುವಂತೆ ನೋಡುತ್ತಾರೆ ಇಲ್ಲದಿದ್ದರೆ ಅನಾರೋಗ್ಯ ಅಥವಾ ಇನ್ನಾವುದೇ ತೊಂದರೆಯಲ್ಲು ಹಿರಿಯರನ್ನು ಉಪೇಕ್ಷಿಸಿದರೆ ನವದೀಕ್ಷಿತರ ಜೀವನಕ್ಕೆ ಅವರು ಅರ್ಹರಾಗಲಾರರು. ಅಲ್ಲಿಗೆ ಅವರ ಸಂಯಮಕ್ಕೆ ಹಾನಿಯಾಗುವ ಸಂಭವವನ್ನು ನೋಡುತ್ತೇವೆ. ಆದ್ದರಿಂದ ಆಚಾರ್ಯ ವೀರಸಾಗರರ ಆಜ್ಞಾನುಸಾರ ಆರ್ಯಿಕೆಯರೆಲ್ಲರೂ ಪ್ರಧಾನ ಆರ್ಯಿಕೆಯರ ಆಜ್ಞಾನುಸಾರವಾಗಿಯೇ ನಡೆಯಬೇಕಾಗಿತ್ತು.

ದೂಜೋದ ಒಂದು ಸಣ್ಣ ಹಳ್ಳಿಯ ಬಾವಿಯಲ್ಲಿ ನೀರು ಬಹಳ ಆಳದಲ್ಲಿತ್ತು. ನೀರಿನ ಅಭಾವ ನೋಡಿ ನಾವು ಅಲ್ಲಿಂದ ಹೊರಡಬೇಕೆಂದು ಆರ್ಯಿಕೆಯರು ಎರಡು ಗುಂಪಾಗಿ ಬೇರೆ ಬೇರೆ ಕಡೆ ವಿಹಾರ ಮಾಡಿ ಮಾಘ ಮಾಸದ ವೇಳೆಗೆ ಲಾಡನೂವನ್ನು ತಲುಪಬೇಕೆಂದು ಅಲ್ಲಿ ಮಾನಸ್ತಂಭದ ನಿರ್ಮಾಣ ಮುಗಿದಿತ್ತು. ಅದರ ಪಂಚಕಲ್ಯಾಣದ ಪ್ರತಿಷ್ಟೆಯನ್ನು ಪುಷ್ಪರಾಜ ಕೇಶರಿಚಂದ್ರರ ಪರಿವಾರ ಜನರು ಮಾಡಲು ಬಯಸಿದ್ದರು. ಅವರು ತಮ್ಮ ಪ್ರಾರ್ಥನೆ ಸಲ್ಲಿಸಿದ್ದರು. ಆಚಾರ್ಯರು ಸಮ್ಮತಿಯನ್ನು ಸೂಚಿಸಿದ್ದರು. ನಾನು ಆಚಾರ್ಯರ ಆಜ್ಞೆಯಂತೆ ಅವರ ಆಶೀರ್ವಾದವನ್ನು ಪಡೆದು ಮೂಢವಾಡದ ಕಡೆಗೆ ವಿಹಾರವನ್ನು ಬೆಳೆಸಿದೆ. ಆಚಾರ್ಯರಂತೂ ನನ್ನ ಬಗ್ಗೆ ಬಹಳ ವಾತ್ಸಲ್ಯವನ್ನು ತೋರಿಸುತ್ತಿದ್ದರು. ಒಮ್ಮೆ ಸೀಕರದಲ್ಲಿ ಬ್ರ. ರಾಜಮಲ್ಲಜೀ ಮುಂತಾದವರಿಗೆ ದೀಕ್ಷೆಯನ್ನು ಕೊಟ್ಟನಂತರ ಜಯಪುರದಿಂದ ರಾಮಚಂದ್ರ ಕೊಠಾರಿಯವರು ಬಂದಿದ್ದರು. ಆಚಾರ್ಯರು ಅವರಿಗೆ ಮನೆಯನ್ನು ತ್ಯಾಗ ಮಾಡಿ ದೀಕ್ಷೆ ತೆಗೆದುಕೊಳ್ಳಲು ಪ್ರೇರೇಪಿಸುತ್ತಿದ್ದರು. ಆಗ ಅಲ್ಲಿಗೆ ಹೋದ ನನಗೆ ತಕ್ಷಣ ಹೇಳಿದರು ಕೊಠಾರಿಜೀ ನನ್ನ ಒಂದು ಮಾತನ್ನು ನೀವು ಒಪ್ಪಿಕೊಳ್ಳಬೇಕು ಏನೆಂದರೆ ಒಂದು ತಿಂಗಳು ನೀವು ಜ್ಞಾನಮತಿಯ ಹತ್ತಿರ ಇರಬೇಕು ಸಾಕು ನೀವಾಗಿಯೇ ವೈರಾಗ್ಯವನ್ನು ಪಡೆಯುತ್ತೀರಾ ನಾನು ನಿಮ್ಮನ್ನು ಪ್ರೇರೆಪಿಸಬೇಕಾಗಿಲ್ಲ ಎಂದರು. ಸೇಠರು ನನ್ನ ಕಡೆ ನೋಡಿ ಖುಷಿ ಪಟ್ಟರು ಹಿಂದಿನ ನೆನಪಿನಿಂದ ನನ್ನನ್ನು ಹೊಗಳಲು ತೊಡಗಿದರು. ನಾನು ಏನೂ ಮಾತಾಡದೆ ತಲೆ ತಗ್ಗಿಸಿದೆ ನಂತರ ಹೇಳಿದೆ ಇಂದು ನನ್ನಲ್ಲಿ ಏನಾದರೂ ಜ್ಞಾನವಿದೆ ಎಂದಾದರೆ ಅದು ವೀರಸಾಗರ ಮಹಾರಾಜರ ಆಶೀರ್ವಚನದ ಫಲ.

ಮೂಡವಾಡದಲ್ಲಿ ನಾನು ಆರ್ಯಿಕೆ ಚಂದ್ರಮತೀಯರ ಜೊತೆ ಕೆಲವು ದಿನಗಳನ್ನು ಕಳೆದೆ ಜನರಲ್ಲಿ ಒಳ್ಳೆಯ ಭಕ್ತಿ ಇತ್ತು. ಇಲ್ಲಿಂದ ಕುಂಕನವಾನ ಹಳ್ಳಿಗೆ ವಿಹಾರ ಹೊರಟೆ ಯಾವಾಗ ಆಚಾರ್ಯರ ಸಂಘ ಲಾಡನೂ ತಲುಪಿತೋ ಆಗ ಔದಮಲ್ಲಜೀ ಮುಂತಾದವರು ಕೂಡ ನಮ್ಮಲ್ಲಿಗೆ ಬಂದರು. ನಾವು ಕೂಡ ಆ ಕಡೆಗೆ ವಿಹಾರ ಹೊರೆಟೆವು.

ಲಾಡನೂಗೆ ಆಗಮನ

ನಾವು ಲಾಡನೂಗೆ ಹತ್ತಿರ 5-6 ಮೈಲಿ ದೂರದಲ್ಲಿ ತಂಗಿದ್ದೆವು. ಆರ್ಯಿಕೆ ಆದಿಮತೀಗೆ ಸೊಂಟದಲ್ಲಿ ವಾಯುವಿನ ನೋವಿನಿಂದ ನಡೆಯಲು ಆಗುತ್ತಿರಲಿಲ್ಲ. ನಾವು ರಸ್ತೆಯಲ್ಲೇ ತಂಗಿದ್ದೆವು. ಅಲ್ಲಿ ಆಹಾರವಾದ

ನಂತರ ಡೋಲಿಯಲ್ಲಿ ಅವರನ್ನು ಕರೆದುಕೊಂಡು ಹೋದರು ಅಲ್ಲಿಗೆ ಆಕಸ್ಮಾತ್ ತಾಯಿ ಮೋಹಿನಿಯವರು ಬಂದರು.

ನನ್ನನ್ನು ಹುಡುಕುತ್ತಾ ಇಲ್ಲಿಗೆ ಬಂದರು. ನನ್ನನ್ನು ಕಂಡು ಪ್ರಸನ್ನರಾದರು ಅಲ್ಲಿ ಆಹಾರ ದಾನ ಮಾಡಿ ಊಟ ಮಾಡಿದರು. ನಾವು ವಿಹರಿಸುತ್ತಲೇ ಸಂಜೆಯ ಸಮಯಕ್ಕೆ ಲಾಡನೂ ತಲುಪಿದೆವು. 1962ರ ಫೆಬ್ರವರಿಯ ನಂತರ ಇಲ್ಲಿ ಮಾನಸ್ತಂಭದ ಜಿನಬಿಂಬಗಳು ಪಂಚಕಲ್ಯಾಣದ ಪ್ರತಿಷ್ಠೆಯು ಆಯಿತು. ನಾನು ಆದಿಮತೀಯು ಅನಾರೋಗ್ಯ ಉಲ್ಬಣಿಸಿದ್ದರಿಂದ ಪ್ರತಿಷ್ಠೆಯ ಸಮಯಕ್ಕಷ್ಟೇ ತಲುಪಿದೆವು. ಮಾತಾಜೀಯವರಿಗೆ ವೈಯ್ಯಾವೃತ್ತಿಯಲ್ಲಿ ನಿಧಾನವಾಯಿತು. ಏಕೆಂದರೆ ಸಂಘದಲ್ಲಿ ಪ್ರತಿಯೊಬ್ಬರ ಆರೋಗ್ಯದ ನಿರ್ವಹಣೆಯು ಸಂಘದಲ್ಲಿ ನಮಗೆ ಅತೀ ಮುಖ್ಯವಾಗಿತ್ತು. ನಿಜವಾಗಿಯೂ ವೈಯ್ಯಾವೃತ್ತಿಯು ಒಂದು ತಪಸ್ಸು ಇದ್ದಂತೆ. ವ್ಯವಹಾರಿಕವಾಗಿಯೂ ವೈಯ್ಯಾವೃತ್ತಿಯಿಂದ ನಮ್ಮೊಳಗೆ ಒಂದು ರೀತಿಯ ವಾತ್ಸಲ್ಯ ಧರ್ಮ ಪ್ರೇರಣೆ ಹೆಚ್ಚಾಗುತ್ತದೆ. ನಮ್ಮೊಳಗೆ ಸೌಹರ್ದತೆಯು ಬೆಳೆಯುವುದರಿಂದ ಶಾಂತಿ, ಧರ್ಮಾರಾಧನೆ ಜ್ಞಾನಾರಾಧನೆ ಮುಂತಾದ ಗುಣಗಳು ತನ್ನಿಂದ ತಾನೇ ಬೆಳೆಯುತ್ತದೆ. ಆದ್ದರಿಂದಲೇ ನನಗೆ ವೈಯ್ಯಾವೃತ್ತಿ ಮಾಡಲು ಮೊದಲಿನಿಂದಲೂ ಶ್ರದ್ಧೆಯಿದೆ. ಆದರೆ ನನ್ನ ಆರೋಗ್ಯವೇ ಸರಿಯಿಲ್ಲದ್ದರಿಂದ ವೈಯ್ಯಾವೃತ್ತಿ ಸಾಧ್ಯವಾಗುತ್ತಿರಲಿಲ್ಲ. ಆದೀಮತೀಯವರಿಗೆ ಶ್ರವಣಬೆಳಗೊಳದಲ್ಲಿ ಚೆನ್ನಾಗಿ ಸೇವೆ ಮಾಡಿದ್ದೇನೆ ಅವರು ಈಗಲೂ ಆಚಾರ್ಯ ಕಲ್ಪ ಶ್ರುತಸಾಗರಜೀಯವರ ಸಂಘದಲ್ಲಿದ್ದಾರೆ.

೩೭

ಮನೋವತಿಯ ಮನೋರಥ ಫಲಿಸಿತು

ಮನೋವತಿಗೆ ಅನಾರೋಗ್ಯವಾಗಿತ್ತು. ವೈದ್ಯರು ಉಪಚಾರ ಮಾಡಿದರೂ ಗುಣ ಕಂಡಿರಲಿಲ್ಲ. ತಾಯಿ ಮನೋವತಿಗೆ ಒಂದು ಸಲ ಲಕ್ನೋಗೆ ಬಂದಾಗ ದೇವಸ್ಥಾನದಲ್ಲಿ ಹಾಕಿದ್ದ ಪಂಚಕಲ್ಯಾಣದ ಪ್ರತಿಷ್ಠಾ ಆಹ್ವಾನ ಪ್ರತಿಕೆಯನ್ನು ನೋಡಿ ಅದರಿಂದ ಆಚಾರ್ಯ ಶಿವಸಾಗರರ ಸಂಘ ರಾಜಸ್ಥಾನದಲ್ಲಿದ್ದು ಅದರಲ್ಲಿ ಜ್ಞಾನಮತಿಯು ಇರುವರೆಂಬ ವಿಷಯ ತಿಳಿದು ಯೋಚಿಸತೊಡಗಿದರು.

ಮನೋವತಿಯು ಐದು ವರ್ಷಗಳಿಂದ ಮಾತಾಜೀಯನ್ನು ನೋಡಬೇಕೆಂದು ಚಡಪಡಿಸುತ್ತಿದ್ದಾಳೆ ಮಾನಸಿಕವಾಗಿ ನೊಂದಿರುವ ಅವಳಿಗೆ ಮಾತಾಜೀಯ ದರ್ಶನದಿಂದ ಗುಣಮುಖವಾಗಬಹುದು ಎಂದು ಯೋಚಿಸಿದರು ಆದರೆ ಯಜಮಾನರು ಕರೆದುಕೊಂಡು ಹೋಗಲು ಅನುಮತಿ ಕೊಡಲಾರರು. ಆದರೆ ಅವರಿಗೆ ದರ್ಶನ ಮಾಡಿಸುವುದೇ ಒಳ್ಳೆಯದು ಎಂದು ಯೋಚಿಸಿರಬೇಕು. ಜೊತೆಯಲ್ಲಿ ರವೀಂದ್ರನನ್ನು ಕರೆದುಕೊಂಡು ಏಕೆ ಹೋಗಬಾರದು ಎಂದು ನಿರ್ಧರಿಸಿ ಇಲ್ಲಿಯವರೆಗೆ ಒಂಟಿಯಾಗಿ ಪ್ರಯಾಣ ಮಾಡದ ಅಮ್ಮಾ ಧೈರ್ಯ ಮಾಡಿ ಒಂದಿಬ್ಬರನ್ನು ಹೋಗುವ ಮಾರ್ಗವನ್ನೆಲ್ಲಾ ವಿಚಾರಿಸಿ ಕೊನೆಗೆ ಮನೋವತಿಯನ್ನು, ರವೀಂದ್ರನನ್ನು ಕರೆದುಕೊಂಡು ಬಂದೇ ಬಿಟ್ಟರು. ಇಲ್ಲಿ ಬಂದು ಎಲ್ಲರ ದರ್ಶನವಾದ ಮೇಲೆ ಅವರಿಗೆ ಶಾಂತಿ ಸಿಕ್ಕಿತು ಅದರ ಜೊತೆಯಲ್ಲಿಯೇ ದಿಗಿಲು ಆಗತೊಡಗಿತು. ಆಗ ನನ್ನಲ್ಲಿ ನಾನು ನಿನ್ನ ತಂದೆ ತಾಯಿಯವರಿಗೆ ಹೇಳದೆ ಲಕ್ನೋದಿಂದ ಸೀದಾ ಇಲ್ಲಿಗೆ ಬಂದು ಬಿಟ್ಟಿದ್ದೇನೆ ಈಗ ಮನೆಯಲ್ಲಿ ಎಲ್ಲರು ಚಿಂತೆ ಮಾಡುತ್ತಿರಬಹುದು ಎಂದು. ಆಗ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ನಾನು ತಕ್ಷಣ ಬ್ರ. ಶ್ರೀಲಾಲರನ್ನು ಕರೆದು ವಿಷಯ ತಿಳಿಸಿ ಮನೆಯ ವಿಳಾಸ ಹೇಳಿ ಎಲ್ಲರೂ ಕುಶಲವಾಗಿ ಇಲ್ಲಿಗೆ ಪ್ರತಿಷ್ಠಾ ಮಹೋತ್ಸವ ನೋಡಲು ಬಂದಿದ್ದಾರೆ ಎಂದು

ತಾರು ಕಳುಹಿಸಲು ಹೇಳಿದೆ. ಅವರೆಲ್ಲಾ ಪಂಚಕಲ್ಯಾಣ ಪ್ರತಿಷ್ಠೆಯನ್ನು ನೋಡಿದರು ಆಹಾರದಾನದ ಲಾಭವನ್ನು ಪಡೆದರು. ಮನೋವತಿಯ ಸಂತೋಷಕ್ಕಂತೂ ಮಿತಿಯೇ ಇರಲಿಲ್ಲ. ಅವಳಿಗೆ ಎಲ್ಲವು ಸಿಕ್ಕಂತೆ ಆಗಿತ್ತು. ನನ್ನ ನೋಡಿದ ಅವಳು ಧನ್ಯತಾ ಭಾವವನ್ನು ಪಡೆದ್ದಿದ್ದಳು. ನನ್ನ ಹತ್ತಿರವಂತು ಅವಳು 4-5 ವರ್ಷಗಳಿಂದ ನನ್ನನ್ನು ನೋಡಲು ಪಟ್ಟ ಕಷ್ಟವನ್ನು ಹೇಳಿಕೊಂಡಳು. ನಾನು ಸಮಾಧಾನ ಪಡಿಸುತ್ತಾ ಮಗಳೆ ನೀನು ಈಗ ಸಂಘಕ್ಕೆ ಬಂದಾಯಿತಲ್ಲ ಚೆನ್ನಾಗಿ ಧಾರ್ಮಿಕವನ್ನು ಅಭ್ಯಾಸ ಮಾಡು ವ್ಯಾಕರಣವನ್ನು ಕಲಿ, ದೀಕ್ಷೆಯು ಸಿಗುತ್ತದೆ. ನಿಧಾನವಾಗಿ ಎಲ್ಲವು ಆಗುತ್ತದೆ ಎಂದೆ. ಆಗ ಸಂಘದಲ್ಲಿದ್ದ ವಯೋವೃದ್ಧ ಧರ್ಮಮತೀ ಮಾತಾಜೀಯವರಿಗೆ ನನ್ನ ಬಗ್ಗೆ ವಿಶೇಷ ವಾತ್ಸಲ್ಯ ಅವರು ಮನೋವತಿಯ ಜ್ಞಾನ ಮತ್ತು ವೈರಾಗ್ಯವನ್ನು ಬಹಳ ಹೊಗಳುತ್ತಿದ್ದರು ಅಲ್ಲದೇ ಆಗಾಗ್ಗೆ ಮೋಹಿನಿಯವರಲ್ಲೂ ಹೇಳತೊಡಗಿದರು. ಅಮ್ಮಾ ನೀವು ಪುಣ್ಯವಂತರಮ್ಮಾ ನಿಮ್ಮ ಗರ್ಭದಿಂದ ಇಂತಹ ಕನ್ಯಾರತ್ನಗಳು ಜನಿಸಿವೆ ಎನ್ನುತ್ತಿದ್ದರು. ಜ್ಞಾನಮತೀಯು ತನ್ನ ಜ್ಞಾನದಾಹದಿಂದ ಇಡೀ ಸಾಧು ವರ್ಗವನ್ನು ಪ್ರಭಾವಿತಗೊಳಿಸಿದ್ದಾರೆ. ತಾನು ನಿಶ್ಯಕ್ತಳಾಗಿದ್ದರೂ ಹಗಲು ರಾತ್ರಿ ಆರ್ಯಿಕೆಯರಿಗೆ ಪಾಠವನ್ನು ಮಾಡುತ್ತಾರೆ ಈ ಕನ್ಯೆ ಮನೋವತಿ ಭಾವವಾದರೂ ಎಷ್ಟು ಶುದ್ಧವಾಗಿದೆ ದೀಕ್ಷೆ ತೆಗೆದುಕೊಳ್ಳದೇ ಅವಳು ತತ್ತ್ವಾರ್ಥ ಸೂತ್ರದ ಅರ್ಥವೆಲ್ಲಾ ಗೊತ್ತಿದೆ ಒಳ್ಳೆಯ ಜ್ಞಾನವನ್ನು ಪಡೆದಿದ್ದಾಳೆ. ಕ್ಷಯೋಪಶಮವು ಬಹಳ ಒಳ್ಳೆಯದಿದೆ. ಅವಳು ಚೆನ್ನಾಗಿ ಕಲಿಯುತ್ತಾಳೆ. ಅವಳನ್ನು ಮನೆಗೆ ಕಳುಹಿಸಿಕೊಡುವುದಿಲ್ಲ ಸಂಘದಲ್ಲೇ ಇಟ್ಟುಕೊಳ್ಳುತ್ತೇವೆ ಎಂದರು ಈ ಮಾತನ್ನು ಕೇಳಿದ ಮನೋವತಿಗಂತೂ ಬಹಳ ಖುಷಿಯಾಯಿತು. ಒಂದು ದಿನ ನನ್ನ ಜೊತೆ ಬಂದವಳೇ ಆಚಾರ್ಯರಲ್ಲಿ ದೀಕ್ಷೆಯನ್ನು ಬೇಡುತ್ತಾ ತೆಂಗಿನಕಾಯಿಯನ್ನು ಇಟ್ಟೇ ಬಿಟ್ಟಳು.

ಇದನ್ನು ಕಂಡು ಮಹಾರಾಜರು ನೀನಿನ್ನು ಈಗ ಸಂಘಕ್ಕೆ ಬಂದಿದ್ದೀಯಾ ಸಂಘದಲ್ಲಿ ಸ್ವಲ್ಪ ದಿನ ಇರು ಕೆಲವು ದಿನಗಳು ಕಳೆದ ಮೇಲೆ ದೀಕ್ಷೆ ಕೊಡೋಣ ಎಂದರು. ಆಗ ಇದನ್ನು ತಿಳಿದ ತಾಯಿ ಬಹಳ ಗಾಬರಿಗೊಂಡರು ನಾನು ಒಂದು ವೇಳೆ ಇವಳನ್ನು ಬಿಟ್ಟು ಹೋದದ್ದೆ ಆದರೆ ನನ್ನ ಗಂಡ ಮನೆಯಲ್ಲಿ ಇರಲು ಬಿಡದೆ ನನಗೆ ತೊಂದರೆ ಕೊಡುತ್ತಾರೆ ಎಂದರು. ಆಗ ಮಾತಾಜೀಯವರು ಮನೋವತಿಗೆ ಸಮಾಧಾನ ಮಾಡಿ ಸುಮ್ಮನಿರಿಸಿದರು.

ವ್ರತೀ ಜೀವನದ ಪ್ರಾರಂಭ

ಒಂದು ದಿನ ನಾನು ಕೇಶ ಲೋಚನವನ್ನು ಮಾಡಿಕೊಂಡೆ ಇದನ್ನು ಮೊದಲಬಾರಿಗೆ ನೋಡಿದ ತಾಯಿಯ ಹೃದಯದಲ್ಲಿ ವೈರಾಗ್ಯವು ಮೊಳಕೆಯೊಡೆಯಿತು. ಕೇಶಲೋಚನದ ನಂತರ ಆಚಾರ್ಯರಲ್ಲಿಗೆ ಬಂದ ಅವರು ಎರಡು ಪ್ರತಿಮೆಯ ವ್ರತ ತೆಗೆದುಕೊಳ್ಳಲು ಪ್ರಾರ್ಥಿಸಿದರು. ಆಗ ನಾನು ನಮ್ಮ ಊರಿನಲ್ಲಿ ಶುದ್ಧವಾದ ತುಪ್ಪ ಸಿಗುವುದಿಲ್ಲ ಒಣಗಿದ ರೊಟ್ಟಿಯನ್ನು ಹೇಗೆ ತಿನ್ನುತ್ತೀರಾ ನಿಮ್ಮ ಆರೋಗ್ಯ ಬಹಳ ಸೂಕ್ಷ್ಮವಾಗಿದೆಯಲ್ಲ ಎಂದೆ ಅದಕ್ಕೆ ಅವರು ಏನೂ ಆಗುವುದಿಲ್ಲ ನಾನು ಪಾಲಿಸಬಲ್ಲೆ ಎಂದರು. ಆಚಾರ್ಯರು ಅವರಿಗೆ ಐದು ಅಣು ವ್ರತ 3 ಗುಣವ್ರತ 4 ಶಿಕ್ಷಾ ವ್ರತ ಕೊಟ್ಟು ಎರಡು ಪ್ರತಿಮೆಗಳ ವ್ರತವನ್ನು ಕೊಟ್ಟು ನಡೆಸುವ ವಿಧಿಯನ್ನು ಬೋಧಿಸಿದರು. ಅದರಂತೆ ಅವರು ಸ್ವಯಂ ಶುದ್ಧ ಭೋಜನ, ಸಾಮಾಯಿಕ, ಸ್ವಾಧ್ಯಾಯ ಪ್ರವಚನಗಳನ್ನು ನಿಯಮ ಬದ್ಧವಾಗಿ ಮಾಡತೊಡಗಿದರು. ಅವರ ವ್ರತಿಕ ಜೀವನ ಪ್ರಾರಂಭವಾಯಿತು. ಬಹುಶಃ ಅವರು ಯೋಚಿಸುತ್ತಿರಬಹುದು ಭಗವಂತ ನಾನು ಯಾವಾಗ ಗಂಡ, ಮನೆ, ಮಠ ಬಂಧನವನ್ನು ಬಿಟ್ಟು ಕೇಶಲೋಚನ ಮಾಡಿಕೊಳ್ಳುವ ಸೌಭಾಗ್ಯ ದೊರೆಯುವುದೆಂದು. ಇದೇ ಸಮಯಕ್ಕೆ ಮನೋವತಿಯು ಸಹಾ ಬ್ರಹ್ಮಚರ್ಯ ವ್ರತಕ್ಕಾಗಿ ಪ್ರಾರ್ಥಿಸಿದಳು. ಆದರೆ ಅಮ್ಮ ಈಗಲೇ ನಿನಗೆ ವ್ರತ ಕೊಡಿಸಲಾರೆ ಎಂದರು. ಅಮ್ಮನ ಅನುಮತಿ ಇಲ್ಲದೇ ಇದ್ದುದ್ದರಿಂದ ಮಹಾರಾಜರು ತಳ್ಳಿ ಹಾಕಿದರು. ಇಲ್ಲಿ ಆದಿಮತೀ ಮಾತಾಜೀಯವರಿಗೆ ಸೊಂಟದ

ನೋವು ವಿಪರೀತವಾಗಿ ಏಳುವುದು ಅಲ್ಲದೇ ಕುಳಿತುಕೊಳ್ಳುವುದು ಸಹ ಆಗುತ್ತಿರಲಿಲ್ಲ ನಾನು ಸ್ವತಃ ಇವರ ವೈಯ್ಯಾವೃತ್ತಿ ಮಾಡುತ್ತಿದ್ದೆ. ಎಲ್ಲರೂ ಸಹ ಸೇವೆ ಮಾಡುತ್ತಿದ್ದರು ಪಂಚಕಲ್ಯಾಣದ ವಿಧಿಗಳು ಪ್ರಾರಂಭವಾಗಿದ್ದವು ನಾನು ಪೆಂಡಾಲದ ಕಡೆ ಜಾಸ್ತಿ ಹೋಗಲು ಆಗುತ್ತಿರಲಿಲ್ಲ. ಏಕೆಂದರ ವೈಯ್ಯಾವೃತ್ತಿಯೇ ಅದಕ್ಕಿಂತ ದೊಡ್ಡ ಧರ್ಮವೆಂದು ತಿಳಿದಿದ್ದೆ. ಈ ಸಮಯದಲ್ಲಿ ತಾಯಿ ಮೋಹಿನಿ ಕೂಡ ವೈಯ್ಯಾವೃತ್ತಿಯಲ್ಲಿ ಜೊತೆಗೆ ಇರುತ್ತಿದ್ದರು. ಆಗ ನನ್ನ ಹತ್ತಿರ ಯಾವ ಬ್ರಹ್ಮಚಾರಿಣಿಯು ಇರದಿದ್ದ ಕಾರಣ ನಾನೇ ಎಲ್ಲಾ ಕೆಲಸಗಳನ್ನು ವೈಯ್ಯಾ ವೃತ್ತಿಯನ್ನು ಮಾಡುತ್ತಿದ್ದೆ. ಒಂದು ದಿನ ಸಿದ್ಧಮತೀಯವರು ತಾಯಿಯ ಹತ್ತಿರ ಹೇಳಿದರಂತೆ ನಿಮ್ಮ ಮಗಳು ಕ್ಷುಲ್ಲಿಕೆಯ ದೀಕ್ಷೆಯನ್ನು ಪಡೆದು ಸಂಘಕ್ಕೆ ಬಂದಾಗಲೇ ವೀರಸಾಗರರು ಹೇಳಿದ್ದರು ಬ್ರಹ್ಮಚಾರಿಣಿಯರು ಸ್ವಲ್ಪ ದಿನ ಸಂಘದಲ್ಲಿದ್ದು ಆಹಾರ ದಾನ, ವೈಯ್ಯಾವೃತ್ತಿ, ಶಾಸ್ತ್ರ ಧ್ಯಾನದ ಅಭ್ಯಾಸ ಮಾಡಲಿ ಅನಂತರ ದೀಕ್ಷೆಯನ್ನು ಕೊಡೋಣ ಎಂದರು. ಆದರೆ ಅವರೆಲ್ಲರಿಗೂ ಜ್ಞಾನಮತೀ ಪ್ರೇರೇಪಿಸಿ ಬೇಗನೆ ದೀಕ್ಷೆಯನ್ನು ಕೊಡಿಸಿಬಿಡುತ್ತಿದ್ದರು. (ಆದರೆ) ನಾವೆಲ್ಲ ಬ್ರಹ್ಮಚಾರಿಣಿಯರಾಗಿ ಎಷ್ಟು ವರ್ಷ ಆಹಾರ ದಾನ, ಸ್ವಾಧ್ಯಾಯದ ಅಭ್ಯಾಸ ಮಾಡಿದ ಮೇಲೆ ದೀಕ್ಷೆ ತೆಗೆದುಕೊಂಡಿದ್ದು. ಈಗ ನೋಡಿ ಅಂಗೂರಿಬಾಯಿಗೆ ಅಭ್ಯಾಸವಿಲ್ಲ. ದೀಕ್ಷೆ ತೆಗೆದುಕೊಳ್ಳುತ್ತಿದ್ದಂತೆ ಖಾಯಿಲೆ ಬಿದ್ದಿದ್ದಾಳೆ ಎಂದರಂತೆ. ನಾನು ಏಕಾಂತದಲ್ಲಿರುವಾಗ ಅಮ್ಮ ಮೋಹಿನಿ ಈ ಮಾತುಗಳನ್ನು ಬಂದು ನನ್ನ ಮುಂದೆ ಅರುಹಿದರು. ನಾನು ಯೋಚಿಸಿ ಹೇಳಿದೆ ಅವರೆಲ್ಲ ಮನೆ ತ್ಯಾಗ ಮಾಡಿ ಬಂದವರು ದೀಕ್ಷೆ ತೆಗೆದುಕೊಂಡು ಆತ್ಮಕಲ್ಯಾಣವನ್ನು ಮಾಡಿಕೊಳ್ಳಲಿ, ನಮ್ಮ ಅನುಕೂಲಕ್ಕೆ ಅವರನ್ನು ಬ್ರಹ್ಮಚಾರಿಣಿಯ ವೇಷದಲ್ಲೇ ಏಕೆ ಇಡಬೇಕು. ನನಗೆ ಅದೃಷ್ಟದ ಮೇಲೆ ನಂಬಿಕೆ. ಅವರು ಆರ್ಯಿಕೆಯರಾದ ಮೇಲೂ ನನ್ನ ಸೇವೆ ಮಾಡಬಹುದಲ್ಲವೇ ಸೇವೆಯನ್ನು ಗೃಹಸ್ಥರೂ ಮಾಡಬಹುದು. ಅದೇ ನನಗೆ ಸೇವೆ ಮಾಡಿಸಿಕೊಳ್ಳುವ ಅದೃಷ್ಟವಿರದಿದ್ದರೆ ಅವರು ಬ್ರಹ್ಮಚಾರಿಣಿಯರ ವೇಷದಲ್ಲಿದ್ದರೆ ಪ್ರಯೋಜನವಿಲ್ಲ. ಈ ಉತ್ತರದಿಂದ ನನ್ನ ನಿಸ್ಪೃಹತೆಯನ್ನು ಕಂಡ ಮೋಹಿನಿ ಸುಮ್ಮನಾದರು.

ಯಾತ್ರೆಗೆ ಹೊರಡುವ ಚರ್ಚೆ

ಒಂದು ದಿನ ಶಿಷ್ಯ ಜಿನಮತಿಯ ಜೊತೆ ನಾನು ಮಾತನಾಡುತ್ತಿದ್ದುದ್ದನ್ನು ಮೋಹಿನಿಯು ಕೇಳಿಸಿಕೊಂಡರು. ಜಿನಮತಿಯು ನನ್ನನ್ನು ಶಿಖರ್ಜಿ ಯಾತ್ರೆಗೆ ಹೊರಡಲು ಹೇಳುತ್ತಿದ್ದರು. ಹಾಗೆ ಹಲವು ಬಾರಿ ಬ್ರ. ಸುಗನ್ ಚಂದರು ಕೂಡ ಹೇಳಿದ್ದರು. ನಾನು ನಿಮಗೆ ಶಿಖರ್ಜಿ ಯಾತ್ರೆಯನ್ನು ಮಾಡಿಸುತ್ತೇನೆ ಮತ್ತು ನಿವಾರ ವಾಸಿಯಾದ ಹೀರಾಲಾಲರು ಕೂಡ ಹಲವಾರು ಬಾರಿ ಹೇಳಿದ್ದರು ಮಾತಾಜೀ ನಿಮಗೆ ಅನುಕೂಲವಾಗುವಂತೆಯೇ ವ್ಯವಸ್ಥೆ ಮಾಡುತ್ತೇನೆ ಯಾತ್ರೆಗೆ ಹೊರಡಿ ಎಂದು. ಆಗಲೇ ಬೇಸಿಗೆ ಬಂದಿದ್ದರಿಂದ ಚಾತುರ್ಮಾಸದ ನಂತರ ಹೊರಡುವುದೆಂದು ನಿಶ್ಚಿತವಾಯಿತು. ಶಿಖರ್ಜಿಯ ವಂದನೆ ಆಗುವವರೆಗೆ ಅಕ್ಕಿಯನ್ನು ತ್ಯಾಗ ಮಾಡಿದೆ. ಆಹಾರದಲ್ಲಿ ಬರೇ ಗೋಧಿಯ ಅನ್ನವನ್ನು ಮಾತ್ರ ತೆಗೆದುಕೊಳ್ಳುತ್ತಿದ್ದೆ. ಶರೀರ ಮೊದಲೇ ಕೃಶವಾಗಿತ್ತು ಇದರ ಮೇಲೆ ನಿಯಮ ಇದನ್ನು ಕಂಡ ತಾಯಿಯವರು ಗಾಬರಿಯಾದರು.

ಮೋಹಿನಿಯವರು ಸಂಘಕ್ಕೆ ಬಂದು ಒಂದು ತಿಂಗಳಾಗ ತೊಡಗಿದ್ದರಿಂದ ಮನೆಗೆ ಹೊರಡುವ ತಯಾರಿ ನಡೆಸಿದ್ದರು. ಅಷ್ಟರಲ್ಲೇ ಮನೆಯಿಂದ ತಾರು ಬಂದಿತ್ತು. ಚಿಕ್ಕಪ್ಪನವರು ಸ್ವರ್ಗವಾಸವಾದರೆಂದು ಅಮ್ಮ ಬ್ರ. ಸುಗನ್‌ಚಂದರ ಜೊತೆ ಹೊರಡಲು ಸಿದ್ಧವಾದರು.

ಮನೋವತಿಯು ಸಂಘದಲ್ಲೇ ಉಳಿದಳು ಮನೋವತಿ ಹಠ ಹಿಡಿದಳು. ಏನಾದರೂ ಆಗಲಿ ನಾನು ಮನೆಗೆ ಹೋಗುವುದಿಲ್ಲ ನನಗೆ ಎಷ್ಟು ಕಷ್ಟದಿಂದ ಮಾತಾಜೀಯ ದರ್ಶನವಾಗಿದೆ. ನಾನು ಇವರನ್ನು ಬಿಟ್ಟು

ಹೋಗಲಾರೆ ಎಂದು. ಆಗ ಬ್ರ. ಶ್ರೀಲಾಲಜೀ ತಾಯಿ ಮೋಹಿನಿಯವರಿಗೆ ಹೇಗೇಗೋ ಸಮಾಧಾನ ಮಾಡಿ ಒಪ್ಪಿಸಿದರು. ಕು. ಮನೋವತಿಗೆ ಒಂದು ವರ್ಷದ ಅವಧಿಗೆ ಬ್ರಹ್ಮಚರ್ಯ ವ್ರತವನ್ನು ಆಚಾರ್ಯರು ಕೊಟ್ಟರು. ಆದ್ದರಿಂದ ಒಂದು ವರ್ಷದವರೆಗೆ ಸಂಘದಲ್ಲಿ ಇರಲು ಮೋಹಿನಿಯವರನ್ನು ಒಪ್ಪಿಸಿ ಅವರನ್ನು ಮನೆಗೆ ಕಳುಹಿಸಿದ್ದಾಯಿತು.

ಮೋಹಿನಿಯ ಹತ್ತಿರ 2 ವರ್ಷದ ಚಿಕ್ಕ ಮಗಳು ತ್ರಿಶಲ ಮತ್ತು ರವೀಂದ್ರಕುಮಾರನನ್ನು ಕರೆದುಕೊಂಡು ಬ್ರಹ್ಮಚಾರಿಯ ಜೊತೆ ಊರಿಗೆ ಹೊರಟರು. ಊರು ತಲುಪುತ್ತಿದ್ದಂತೆ ಎಲ್ಲ ಮಕ್ಕಳು ಮುತ್ತಿಕೊಂಡರು ನಮ್ಮನ್ನೆಲ್ಲ ಬಿಟ್ಟು ಮಾತಾಜೀಯವರ ಹತ್ತಿರ ಏಕೆ ಹೋದೆ ಅಲ್ಲದೆ ನಮಗೆಲ್ಲ ಮಾತಾಜೀಯ ದರ್ಶನವನ್ನು ಯಾವತ್ತು ಮಾಡಿಸುತ್ತೀಯ ಎಂದು ಕೇಳತೊಡಗಿದರು. ಅಷ್ಟರಲ್ಲಿ ತಂದೆಯವರು ಮನೋವತೀಯನ್ನು ಕಾಣದೆ ಬಹಳ ಸಿಟ್ಟಾದರು. ಅರೇ ನನ್ನ ಮಗಳು ಮನೋವತಿ ಎಲ್ಲಿ ಏನು ನೀನು ಅವಳನ್ನು ಜ್ಞಾನಮತಿಯ ಹತ್ತಿರ ಬಿಟ್ಟು ಬಂದಿದ್ದೀಯಾ ಎಂದರು. ಅದಕ್ಕೆ ಅಮ್ಮ ಶಾಂತಿಯಿಂದ ಐದು ವರ್ಷದಿಂದ ಮಾತಾಜೀಯನ್ನು ನೋಡಬೇಕೆಂದು ಅತ್ತು - ಅತ್ತು ಖಾಯಿಲೆ ಬಿದ್ದಿದ್ದಳು. ನಾನು ಹೃದಯವನ್ನು ಎಷ್ಟು ಅಂತ ಕಲ್ಲು ಮಾಡಿಕೊಳ್ಳಲಿ ಸಂಘದಲ್ಲಿದ್ದ ಎಲ್ಲಾ ಆರ್ಯಿಕೆಯರು ಬಹಳಷ್ಟು ಸಮಾಧಾನ ಮಾಡಿ ಒಂದು ವರ್ಷಕ್ಕಾಗಿ ಉಳಿಸಿಕೊಂಡಿದ್ದಾರೆ. ನೀವು ಸಂಘಕ್ಕೆ ಹೋಗಿ ಸಾಧು - ಸಾಧ್ವಿಯರು ಹಾಗೇ ಜ್ಞಾನಮತಿಯ ದರ್ಶನವನ್ನು ಮಾಡಿ ಪ್ರಕಾಶನನ್ನು ಕರತಂದಂತೆ ಇವಳನ್ನು ವಾಪಸ್ಸು ಕರೆತನ್ನಿ ಎಂದರು.

ವಾತಾವರಣ ಶಾಂತವಾಯಿತು. ಪುನಃ ಸಂಘದಲ್ಲಿ ನಡೆದೆ ಸಮಾಚಾರ ಕೇಳತೊಡಗಿದರು. ಅಮ್ಮ ಎರಡು ಪ್ರತಿಮೆಯ ವ್ರತ ತೆಗೆದುಕೊಂಡಿರುವುದು ಕೇಳಿ ಎಲ್ಲರಿಗೂ ದುಃಖವಾಯಿತು. ತಂದೆ ಯೋಚಿಸಿದರು ಇವಳು ಒಂದಲ್ಲ ಒಂದು ದಿನ ದೀಕ್ಷೆ ತೆಗೆದುಕೊಳ್ಳುವವಳೇ ಆದ್ದರಿಂದ ಇವಳನ್ನು ಸಂಘಕ್ಕೆ ಕಳುಹಿಲೇ ಬಾರದು. ಹಾಗೇ ಮಗ ಕೈಲಾಸ ಸೊಸೆ ಚಂದಳು ಯೋಚಿಸತೊಡಗಿದರು. ಅಮ್ಮನು ನಮ್ಮನ್ನು ಬಿಟ್ಟು ದೀಕ್ಷೆ ತೆಗೆದುಕೊಳ್ಳುವರೇ ಎಂದು ಎಲ್ಲರಿಗೂ ಇದೇ ಆತಂಕ ಕಾಡತೊಡಗಿತು. ತಾಯಿ ಸಮಾಧಾನಗೊಳಿಸಿದರು. ನೋಡಿರಿ ನಾನು ಕೇವಲ ಎರಡನೆಯ ಪ್ರತಿಮೆಯನ್ನ ತೆಗೆದುಕೊಂಡಿದ್ದೇನೆ ಆರನೆಯ ಪ್ರತಿಮೆಯವರೆಗೂ ಗೃಹಸ್ಥ ಆಶ್ರಮದಲ್ಲಿ ಇರಲು ತೊಂದರೆ ಇಲ್ಲ ಎಂದರು.

ಶೋಧದ ಚತುರತೆ

ಈಗ ಅಮ್ಮ ಬಾವಿಯ ನೀರನ್ನು ಮಾತ್ರ ಕುಡಿಯುತ್ತಿದ್ದರು. ಹೊರಗಡೆಯ ತುಪ್ಪವನ್ನು ತಿನ್ನುತ್ತಿರಲಿಲ್ಲ ಕೈಯಿಂದ ಬೀಸಿದ ಹಿಟ್ಟು ಮುಗಿದಿದ್ದರೆ ಬರೇ ಖಿಚಡಿ ಮಾಡಿಕೊಂಡು ತಿನ್ನುತ್ತಿದ್ದರು. ಇವರ ಈ ವ್ರತ ಪಾಲನೆಯಿಂದಾಗಿ ತಂದೆ ಆಗಾಗ್ಗೆ ಸಿಡುಕ ತೊಡಗಿದರು. ಏನೆಲ್ಲಾ ವಿಘ್ನ ಬಂದರೂ ಅವರು ಸಹಿಸುತ್ತಿದ್ದರು ಪ್ರತಿಯೊಂದನ್ನು ಶೋಧಿಸಿಯೇ ಮಾಡುತ್ತಿದ್ದರು ಸ್ವಾಧ್ಯಾಯವನ್ನು ಚೆನ್ನಾಗಿ ಮಾಡುತ್ತಿದ್ದರು. ಎಲ್ಲಾ ವಿಷಯಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳುತ್ತಿದ್ದರು. ಇವರಂತೆ ಎಲ್ಲ ಹುಡುಗ ಹುಡುಗಿಯರು ಇವರ ಆಜ್ಞೆಯಂತೆ ಶುದ್ಧವಾದ ಹಾಲು ನೀರನ್ನು ಬಳಸತೊಡಗಿದರು.

ಆದರೆ ನಮ್ಮ ಮನೆಯಲ್ಲಿ ಯಾರಿಗೂ ಬಾವಿಯ ನೀರು ಸೇದಿ ಗೊತ್ತಿರಲಿಲ್ಲ. ಈ ಎಲ್ಲಾ ಕೆಲಸಗಳನ್ನು ಕೆಲಸದವರೇ ಮಾಡುತ್ತಿದ್ದರು ಈಗ ಈ ಕೆಲಸ ಮನೆ ಮಕ್ಕಳು ಮಾಡುತ್ತಿದ್ದುದ್ದನ್ನು ನೋಡಿ ತಂದೆಗೆ ಸಹಿಸಲಾಗಲಿಲ್ಲ. ಬಾವಿಗೆ ಹ್ಯಾಂಡ್ ಪಂಪ್ ಹಾಕಿಸಿದರು ಮತ್ತು ಅಮ್ಮನಿಗೆ ಕುಡಿಯಲು ಅಡಿಗೆಗೆ ಬಳಸಲು ಹೇಳಿದರು. ಅಮ್ಮ ಈ ವಿಷಯವನ್ನು ನನಗೆ ಬರೆದು ಕೇಳಿದರು ನಾನು ಬೇಡವೆಂದು ಹೇಳಿದೆ ತಂದೆಯವರು ಎಷ್ಟು ಹೇಳಿದರೂ ಅಮ್ಮ ಹ್ಯಾಂಡ್ ಪಂಪಿನ ನೀರನ್ನು ಬಳಸದೇ ಇದ್ದುದ್ದರಿಂದ ಅವರಿಗೆ ಸಿಟ್ಟು ಬಂತು ಆ ಸಮಯದಲ್ಲಿ ನಮ್ಮಲ್ಲಿನ

ಯಾವ ವ್ಯತಿಕರು ಹ್ಯಾಂಡ್‌ಪಂಪಿನ ನೀರನ್ನು ಬಳಸುತ್ತಿರಲಿಲ್ಲ. ಆದರೆ ಈಗ ಏಳನೇ ಪ್ರತಿಮಾಧಾರಿಗಳು ಸಹ ಬಳಸುತ್ತಾರೆ ನನ್ನ ತಾಯಿಯಂತೂ ಬಹಳ ಶ್ರದ್ಧೆಯಿಂದ ವ್ರತ ಪಾಲಿಸುತ್ತಿದ್ದರು.

ಸಂಘದಲ್ಲಿ ಇರಲು ಪ್ರೇರಣೆ

ಒಮ್ಮೆ ಅಜಿತಸಾಗರರು ಯಾವುದೋ ಚಿಕ್ಕ ವಿಷಯಕ್ಕೆ ಸಂಘದಿಂದ ಬೇರೆ ಹೋಗುವ ನಿರ್ಧಾರ ಮಾಡಿದರು. ನಾನು ಅವರಿಗೆ ಸಂಘದಲ್ಲಿಯೇ ಇರಬೇಕೆಂದು ಬಹಳಷ್ಟು ಕೇಳಿಕೊಂಡೆ ಯಾಕೆಂದರೆ ನಾನು ಸಮ್ಮೇದಗಿರಿಯ ಯಾತ್ರೆ ಮಾಡುವ ನಿರ್ಧಾರ ಮಾಡಿ ಆಗಿತ್ತು. ಇನ್ನು ಅಲ್ಲಿಂದ ಬರಲು ಎಷ್ಟು ವರ್ಷ ಆಗುತ್ತದೆಯೋ ಅಲ್ಲಿಯವರೆಗೆ ತಾವು ಸಂಘದಲ್ಲಿದ್ದು ಧರ್ಮಾರಾಧನೆಯನ್ನು ಮಾಡುತ್ತಾ ಸಂಘದ ಗೌರವವನ್ನು ಕಾಪಾಡಬೇಕೆಂದು ಸಂಘದಲ್ಲಿ ಸಾಧು ಸಾಧ್ವಿಯರಿಗೆ ಅಧ್ಯಯನ ಮಾಡಿಸುತ್ತಾ ಆರ್ಷ ಪರಂಪರೆಯನ್ನು ರಕ್ಷಿಸುವ ಮಹಾನ್ ಕಾರ್ಯವಿದೆ ಮೂಲಾಚಾರದಲ್ಲಿ ಬರೆದಿದ್ದಾರೆ.

ತವಸುತ್ತ ಸತ್ತ ಏಗತ್ತ ಭಾವ ಸಂಘ ಡಣಧಿದಿಸಮಗ್ಗೋ ಯ ।
ಪವಿ ಆಆಗಮಬಲಿಓ ಏಯವಿಹಾರಿ ಅಣುಣ್ಣಾದೋ ॥

ತಪ, ಸೂತ್ರ ಸತ್ವ ಏಕತ್ವ ಭಾವ ಸಂಹನನ ಮತ್ತು ಧೈರ್ಯ ಈ ಎಲ್ಲದರಲ್ಲೂ ಪರಿಪೂರ್ಣವಾದ ದೀಕ್ಷೆ ಮತ್ತು ಆಗಮದಲ್ಲಿ ಬಲಿಷ್ಠನೂ ಮುನಿ ಏಕಲ ವಿಹಾರಿ ಎಂದು ಸ್ವೀಕರಿಸಲ್ಪಟ್ಟಿದೆ.

ಸ್ವಚ್ಛಂದಗದಾಗ ದೀಸಯಣಣಿ ಸಯಣಾದಾಣ ಭಿಕ್ಖವೋಸರಣೇ ।
ಸಚ್ಛಂದ ಜಂಪರೋಚಿ ಯ ಮಾ ಮೇ ಸತ್ತೂವಿ ಏಗಾಗೀ ॥

ಗಮನ, ಆಗಮನ ಮಲಗುವುದು ಕುಳಿತುಕೊಳ್ಳುವುದು ಯಾವುದೇ ವಸ್ತುಗಳನ್ನು ಗ್ರಹಿಸುವುದು ಆಹಾರ ತೆಗೆದುಕೊಳ್ಳುವುದು ಮತ್ತು ಮಲ ಮೂತ್ರಾದಿಗಳನ್ನು ವಿಸರ್ಜಿಸುವುದು ಈ ಕಾರ್ಯಗಳಲ್ಲಿ ಯಾರೂ ಸ್ವಚ್ಛಂದ ಪ್ರವೃತ್ತಿಯನ್ನು ಅನುಸರಿಸುತ್ತಾರೋ ಅಥವಾ ಮಾತಾನಾಡುವುದರಲ್ಲಿ ಸ್ವಚ್ಛಂದವಾಗಿ ಮಾತನಾಡಿದರೂ ಸಹ ಸ್ವಚ್ಛಂದನೆಂದು ಪರಿಗಣಿಸುತ್ತಾರೆ. ನಮ್ಮ ಶತ್ರು ಕೂಡಾ ಏಕವಿಹಾರೀ ಆಗಬಾರದು.

ಗುರು ಪರಿವಾದೋ ಸುದವುಚ್ಛೇದೋ ತಿತ್ಥಸ್ಸ ಮಂಲಣಾ ಜಡದಾ
ಬಿಂಭಲಕುಸೀಲ ಪಾಸತ್ಥದಾ ಯ ಉಸ್ಸಾರ ಕಪ್ಪಮ್ಹಿ ॥

ಸ್ವೇಚ್ಛಾಚಾರದ ಪ್ರವೃತ್ತಿಯಲ್ಲಿ ಗುರುವಿನ ನಿಂದೆ, ಶ್ರುತದ ವಿನಾಶ, ತೀರ್ಥದಲ್ಲಿ ಮಲಿನತೆ, ಮೂಢತೆ, ಅಕುಲತೆ, ಕುಟಿಲತೆ ಮತ್ತು ಪಾರ್ಶ್ವಸ್ಥತಾ ಇವೆಲ್ಲವು ದೋಷಗಳೇ.

ಕಂಟಯ ಖಿಣ್ಣುಯಪಡಿಣಿಯ ಸಾಣಗೋಣಾದಿ ಸಪ್ಪಮೆಚ್ಛೇಹೀಂ ।
ಪಾವಂಇ ಆದವಿವತ್ತೋ ವಿಸೇಣ ವ ವಿಸೂಇಯಾ ಚೇವ ॥

ಮುಳ್ಳುಗಳು, ವಿರೋಧಿ ಜನರು ನಾಯಿಗಳು ಗೋವು ಹಾಗೂ ಹಾವು ಮತ್ತು ಮ್ಲೇಚ್ಛ ಜನರಿಂದ ಅಥವಾ ವಿಷದಿಂದ ಮತ್ತು ಅಜೀರ್ಣ ಮುಂತಾದ ರೋಗಗಳಿಂದ ತಮಗೆ ತಾವೇ ವಿಪ್ಪತನ್ನು ತಂದುಕೊಳ್ಳುತ್ತಾರೆ.

ಗಾರವಿಓ ಗಿದ್ಧೀಓ ಮಾಯಿಲ್ಲೋ ಅಲಸಲುದ್ದಣಿದ್ಧಮ್ಮೋ
ಗಚ್ಛೀವಿ ಸಂವಸಂತೋ ಣೆಚ್ಛಂಇ ಸಂಘಾಡಯಂ ಮಂದೋ ॥

ಯಾರು ಗಾರವದಿಂದ ಇದ್ದು ಆಹಾರದಲ್ಲಿ ಲಂಪಟನಾಗಿದ್ದಾನೋ, ಮಾಯಾಚಾರಿಯಾಗಿದ್ದಾನೋ,

ಸೋಮಾರಿಯೋ, ಲೋಭಿಯೋ ಮತ್ತು ಧರ್ಮವಿಲ್ಲದವನು ಅಥವಾ ಶಿಥಿಲ ಮುನಿಯು ಸಂಘದಲ್ಲಿದ್ದರೂ. ಸಹ ಸಾಧು ಸಮೂಹದ ಒಡನಾಟ ಬಯಸುವುದಿಲ್ಲ.

ಅಣಾ ಅಣವತ್ಥಾವಿ ಯ ಮಿಚ್ಛತ್ತಾರಾಹಣಾದಣಾಸೋ ಯ।
ಸಂಜಮವಿರಾಹಣಾ ವಿ ಯ ಏದೇ ದು ಣಿಕಾಇಯಾ ಠಾಣಾ ॥

ಒಂಟಿಯಾಗಿ ಇರುವವನಿಗೆ ಆಜ್ಞೆಯನ್ನು ಉಲ್ಲಂಘನೆ ಮಾಡುವಿಕೆ, ಅನವಸ್ಥ, ಮಿಥ್ಯಾತ್ವದ ಸೇವನೆ, ಆತ್ಮ ನಾಶ ಮತ್ತು ಸಂಯಮದ ವಿರಾಧನೆ ಈ ಐದನ್ನು ಪಾಪಸ್ಥಾನವೆಂದು ಪರಿಗಣಿಸಲಾಗಿದೆ.

ಅಜಿತಸಾಗರ ಮಹಾರಾಜರು ಬ್ರ. ರಾಜಮಲ್ಲರಾಗಿ ಚಿಕ್ಕವಯಸ್ಸಿನಿಂದಲೇ ಸಂಘದಲ್ಲಿ ಇದ್ದರು. ಆಚಾರ್ಯ ಶಿರೋಮಣಿ ಶ್ರೀ ವೀರಸಾಗರಜೀ ಮಹಾರಾಜರು ಗುರುಗಳಾಗಿದ್ದಾರೆ. ಅವರ ಸಂರಕ್ಷಣೆಯಲ್ಲಿ ಬಹಳಷ್ಟು ಅನುಭವವನ್ನು ಪಡೆದುಕೊಂಡಿದ್ದಾರೆ. ಒಳ್ಳೆಯ ಶಾಸ್ತ್ರ ಜ್ಞಾನವು ಇದೆ ಮತ್ತು ಈಗ ಆಚಾರ್ಯ ಶಿವಸಾಗರರೇ ಮುನಿ ದೀಕ್ಷೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಸಂಘ ಪರಂಪರೆಯ ನಿರ್ವಹಣೆಯಲ್ಲಿ ಕುಶಲರಾಗಿದ್ದಾರೆ. ಆದ್ದರಿಂದಲೇ ನಾನು ಹೇಳಿದೆ ಮಹಾರಾಜಜೀ ತಾವು ಸಂಘದಿಂದ ಬೇರೆಯಾದರೆ ಮೂಲಾಚಾರದಲ್ಲಿ ಹೇಳಿರುವ ಯಾವುದೇ ದೋಷಗಳು ಆಗಲಾರದು ಆದರೆ ಪುನಃ ಆಜ್ಞಾಲೋಪ, ಅನವಸ್ಥಾ, ಮಿಥ್ಯಾತ್ವವಿರಾಧನ, ಆತ್ಮನಾಶ, ಮತ್ತು ಸಂಯಮ ವಿರಾಧನ ಈ ಐದು ದೋಷಗಳಲ್ಲಿ "ಅನವಸ್ಥಾ" ದೋಷ ಆಗೇ ಆಗುತ್ತದೆ. ಇದರಿಂದ ಬೇರೆ ಮುನಿಗಳು ಕೂಡ ತಮ್ಮನ್ನು ನೋಡಿ ಏಕಲ ವಿಹಾರಿಯಾಗುತ್ತಾರೆ. ಆದರೆ ಇಲ್ಲಿಯವರೆಗೆ ವೀರಸಾಗರರ, ಶಿವಸಾಗರರ ಸಂಘದ ಯಾವ ಮುನಿಯೂ ಏಕಲ ವಿಹಾರಿಗಳು ಆಗಿಲ್ಲ.

ಸಂಘದಲ್ಲಿದ್ದ ಬೇರೆ ಮುನಿಗಳು ಅಜಿತಸಾಗರರನ್ನು ತಡೆಯುವ ಕೆಲಸವನ್ನು ಮಾಡತೊಡಗಿದರು. ಹಲವಾರು ಬಾರಿ ಶ್ರುತಸಾಗರರು ಮತ್ತು ಜಯಸಾಗರರು ನನ್ನಲ್ಲಿ ಹೇಳಿದರು ಮಾತಾಜೀ ನಾವೆಲ್ಲ ಸಾಹಸ ಮಾಡಿ ಆಯಿತು. ಈಗ ನೀವೇ ಸಾಹಸ ಮಾಡಿ ಅವರನ್ನು ತಡೆಯಬೇಕು ಎಂದರು. ನಾನು ಹೊರಡುವುದು ನಿಶ್ಚಿತವಾದ ಮೇಲೂ ಅಜಿತಸಾಗರರನ್ನು ಅನುನಯ ವಿನಯದಿಂದ ಸಂಘದಲ್ಲಿ ಇರಲು ಪ್ರಾರ್ಥಿಸಿದೆ. ಏಕೆಂದರೆ ಅವರ ಮೇಲೆ ಅಧಿಕಾರ ನಡೆಸುವುದು ಸಾಧ್ಯವಿರಲಿಲ್ಲ. ಆದ್ದರಿಂದ ವಿನಯದಿಂದಲೇ ಪ್ರಯತ್ನಿಸಿದೆ. ಮುನಿಯ ಸ್ಥಾನವು ಆರ್ಯಿಕೆಯ ಸ್ಥಾನಕ್ಕಿಂತ ಹಿರಿದಾದುದು ಶಿಷ್ಯರೇ ಆಗಲೀ ಮಗನೇ ಆಗಲಿ ದೀಕ್ಷೆ ತೆಗೆದುಕೊಂಡ ಮೇಲೆ ದೊಡ್ಡ ಮಾತಾಜೀಯೇ ಆಗಿದ್ದರೂ "ನಮೋಸ್ತು" ಹೇಳಬೇಕೆಂದು ನಾನು ಬಹಳ ವಿನಯದಿಂದಲೇ ನಮೋಸ್ತು ಹೇಳುತ್ತಿದ್ದೆ. ಅವರು ಯಾರ ಮಾತನ್ನು ಕೇಳದೇ ಹೋಗುವ ನಿರ್ಧಾರವನ್ನು ಬದಲಾಯಿಸಲಿಲ್ಲ ಕೊನೆಗೆ ನಾನು ಮಹಾರಾಜರೇ ತಾವು ಸಂಘದಿಂದ ಬೇರೆಯೇ ಆದರೆ ತಾವು ಹಿಂದಿರುಗಿ ಬರುವವರೆಗೆ ನನ್ನ ಆರೋಗ್ಯಕ್ಕಾಗಿ ತೆಗೆದುಕೊಳ್ಳುವ ಔಷಧಿಯನ್ನು ನಾನು ತ್ಯಾಗ ಮಾಡುತ್ತೇನೆ ಏಕೆಂದರೆ ಸಾಧುಗಳ ಹತ್ತಿರ ಇವಲ್ಲದೆ ಇನ್ನೇನು ಇರುತ್ತದೆ ಎಂದೆ. ಅದಕ್ಕೆ ಅವರು ನಕ್ಕು ನಾನು ಹೋಗುತ್ತಿರುವುದು ಮತ್ತೆ ಬರುವುದಕ್ಕೆ ಅಲ್ಲ ಎಂದರು. ಆಗ ನಾನು ಮಹಾರಾಜರೇ ನನಗೂ ಜೀವನ ಪೂರ್ತಿ ನನ್ನ ಮಜ್ಜಿಗೆಯ ತ್ಯಾಗವಾಗಲಿ ಬಿಡಿ ಎಂದೇ. ಮಾತು ಆಡಿ ಆಗಿತ್ತು ನನ್ನ ಯಾತ್ರೆಯು ನಿರ್ಣಯವಾಗಿತ್ತು.

□

ತೃತೀಯ ಖಂಡ

ತೃತೀಯ ಖಂಡ

೩೮

ಸಮ್ಮೇದ ಶಿಖರಕ್ಕೆ ಯಾತ್ರೆ

ಸಾನಂದ ಲಾಡನುನಿಂದ ಚಾತುರ್ಮಾಸ ಮುಗಿದ ನಂತರ ಸಂಘದ ವಿಹಾರ ನಿಶ್ಚಿತವಾಯಿತು. ನಾನು ಆಚಾರ್ಯ ಶಿವಸಾಗರರಲ್ಲಿ ಕೇಳಿದೆ. ಆದರೆ ಆಚಾರ್ಯರು ಎದ್ದು ನಿಂತರು ನಡಿ ನಾನು ನಿನ್ನ ಜೊತೆ ಬರುತ್ತೇನೆ ಎಂದರು. ನಾನು ಸುಮ್ಮನಾದೆ. ಸಂಘವು ವಿಹಾರ ಮಾಡುತ್ತಾ 'ನಾವಾ' ಗೆ ಬಂದಿತು. ನಾನು ಶ್ರುತಸಾಗರರಲ್ಲಿ ಮತ್ತೆ ನಿವೇದಿಸಿದೆ. ಮಹಾರಾಜರೇ ನನಗೆ ಹೇಗಾದರು ಆಚಾರ್ಯರಿಂದ ಯಾತ್ರೆಗೆ ಅನುಮತಿಯನ್ನು ಕೊಡಿಸಿರಿ ಎಂದೆ. ಅವರು ಆಚಾರ್ಯರಲ್ಲಿ ವಿನಂತಿಸಿಕೊಂಡರು ಮತ್ತೊಮ್ಮೆ ಪ್ರಾರ್ಥಿಸಿದೆ ಮತ್ತೆ ನನಗೆ ಆಚಾರ್ಯರಿಂದ ಅನುಮತಿ ದೊರೆಯಿತು. ಯಾತ್ರೆಗಾಗಿ ಹೊರಡುವ ಸಮಯದಲ್ಲಿ ಆಶೀರ್ವಾದ ತೆಗೆದುಕೊಳ್ಳಲು ಅವರ ಚರಣಗಳನ್ನು ಸ್ಪರ್ಶಿಸಿದಾಗ ನನಗೂ ಕಣ್ಣು ತುಂಬಾ ನೀರು ಆಚಾರ್ಯರಿಗೂ ಕಣ್ಣು ತುಂಬಿ ಬಂದಿದ್ದ ದೃಶ್ಯ ನೋಡಲು ರೋಮಾಂಚಕಾರಿಯಾಗಿತ್ತು. ಅಲ್ಲೇ ಇದ್ದ ವಯೋವೃದ್ಧ ಮಾಂಗೀಲಾಲ ಪಾಂಡ್ಯರು ಆಚಾರ್ಯರ ಕಣ್ಣುಗಳಲ್ಲಿ ನೀರನ್ನು ನೋಡಿ ಮಹಾರಾಜರೇ ತಾವು ಈ ರೀತಿ ಭಾವುಕರಾಗಬಾರದು ಎಂದರು. ಅದಕ್ಕೆ ಮಹಾರಾಜರು ಬೈಯಾ ನಿನಗೆ ಮಗಳನ್ನು ಕಳುಹಿಸಿ ಕೊಡುವಾಗ ಏನನ್ನಿಸುತ್ತದೆ. ಇದೇ ನಮ್ಮ ಪರಿವಾರ ನನಗೆ ಕಳುಹಿಸಲು ಹೃದಯ ಹಿಂಡುತ್ತಿದೆ ಎಂದರು. ಆಚಾರ್ಯರ ಮಂಗಳ ಆಶೀರ್ವಾದ ಪಡೆದೆ ನಂತರ ನಾವೆಲ್ಲರು ಶ್ರುತಸಾಗರರು ಮತ್ತು ಅಜಿತಸಾಗರರನ್ನು ವಂದಿಸಲು ಹೋದೆವು. ಅವರು ಖಿನ್ನ ಮನಸ್ಕರಾಗಿಯೇ ಬೀಳ್ಕೊಟ್ಟರು. ನಂತರ ಎಲ್ಲಾ, ಆರ್ಯಿಕೆಯರಲ್ಲೂ ವಂದನೆ ಪ್ರತಿವಂದನೆ ಆದ ಮೇಲೆ 'ನಾವಾ' ದ ಜಿನಮಂದಿರದ ದರ್ಶನ ಮಾಡಿ ಅಲ್ಲಿಂದ ಪುಲೇರಾದ ಕಡೆ ವಿಹಾರ ಹೊರೆಟೆವು. ಲಾಡನುವಿನ ನಾವಾದ ಅನೇಕ ಶ್ರಾವಕ ಶ್ರಾವಿಕೆಯರು ಸ್ವಲ್ಪ ದೂರ ಜೊತೆಗೆ ಬಂದರು.

ಪುಲೇರಾದಿಂದ ಜಯಪುರಕ್ಕೆ ಬಂದೆವು. ನನ್ನ ಜೊತೆ ಆರ್ಯಿಕೆ ಜಿನಮತೀ, ಆದೀಮತೀ, ಕ್ಷುಲ್ಲಿಕೆ ಶ್ರೇಯಾಂಸಮತೀ ಇದ್ದರು. ಚಂದ್ರಮತೀ ಆರ್ಯಿಕೆ ನಿಶ್ಯಕ್ತರಾಗಿದ್ದರಿಂದ ಸಂಘದಲ್ಲೇ ಇದ್ದರು. ಬ್ರ. ಸುಗನ ಚಂದರು ಪ್ರಮುಖರಾಗಿದ್ದರು. ಇವರ ಜೊತೆ ಅವರ ಸಹೋದರ ಬ್ರ. ಗಲ್ಕೂಬಾಯಿ, ಬ್ರ. ಮೂಲೀಬಾಯಿ, ಕು. ಮನೋವತಿಯ ಜೊತೆ ಒಬ್ಬ ಬ್ರ. ಭಂವರೀಬಾಯಿ ಇದ್ದರು. ಜಯಪುರದಲ್ಲಿ ಸರದಾರಮಲ್ ಶ್ರಾವಕರು ಜೊತೆಗೂಡಿದರು. ಸೇಠ ರಾಮಚಂದ್ರಜೀಯವರ ಪ್ರೇರಣೆಯಿಂದ ಬಂದಿದ್ದರು.

ದಾದಿ ಬಾಬಾ ಆದರು

ಅತಿಶಯಕ್ಷೇತ್ರ ಮಹಾವೀರಜೀಯಲ್ಲಿ ಒಂದು ಘಟನೆ ನಡೆಯಿತು. ದಾರಿಯಲ್ಲಿ ನಡೆಯುತ್ತಿರುವಾಗ ನಾವು ನಾಲ್ವರು ನಡೆಯುತ್ತಿದ್ದೆವು. ಆಗ ಗೂಜಾನೀಯ ಮಹಿಳೆ ಕೇಳತೊಡಗಿದಳು (ನೀವು ದಾದಿಗಳು ಬಾಬಾ

ಆಗಿದ್ದೀರಾ) ಬಾಬಾಗಳೇ ದಾದಿಗಳಾಗಿದ್ದೀರ ಈ ಪ್ರಶ್ನೆಯನ್ನು ಕೇಳಿದ ಜಿನಮತಿ ಆದೀಮತಿ ಜೋರಾಗಿ ನಕ್ಕರು. ಆ ಮಹಿಳೆಯರಿಗೆ ನಮ್ಮನ್ನು ನೋಡಿ ಹಾಗೇ ಅನ್ನಿಸಿದೆ ತಲೆಯಲ್ಲಿ ಕೂದಲಿಲ್ಲ. ಬಿಳಿ ಸೀರೆಯನ್ನು ಧರಿಸಿರುವ ನಾವುಗಳು ಅವರಿಗೆ ಹಾಗೇ ಕಾಣಿಸಿದ್ದೇವೆ. ಒಂದು ಸಾಯಂಕಾಲ ಸೂರ್ಯ ಮುಳುಗ ತೊಡಗಿದೆ. ಆದೀಮತಿ ನಿಧಾನವಾಗಿ ನಡೆಯುತ್ತಿದ್ದರು. ಅವರ ಜೊತೆ ನಾನು ಹಿಂದೆ ಬಿದ್ದಿದ್ದೆ. ಉಳಿದ ಮೂವರು ಜೊತೆಗೆ ಬ್ರ. ಸರದಾರಮಲ್ಲರು ಮುಂದಿದ್ದರು. ರಾತ್ರಿ ತಂಗಬೇಕಾದ ಹಳ್ಳಿಯನ್ನು ಅವರು ತಲುಪಿದ್ದರು. ನಾವು ಹತ್ತಿರದ ಹಳ್ಳಿಯನ್ನು ತಲುಪಿ ಈ ಊರಿನ ಹೆಸರೇನು ಎಂದು ಕೇಳಿದೆ ಅದರ ಹೆಸರು ಏನೋ ಹೇಳಿದರು. ಪುನಃ ನಾನು ಸೇರಬೇಕಾದ ಊರು ಇನ್ನೂ ಒಂದು ಮೈಲಿ ಮುಂದೆ ಇತ್ತು. ಆಗ ಅಲ್ಲಿಗೆ ನಾವು ತಲುಪುವುದು ಸಾಧ್ಯವಿರಲಿಲ್ಲ. ಅದೇ ಹಳ್ಳಿಯ ಒಂದು ಛಾವಣಿಯ ಕೆಳಗೆ ಕುಳಿತೆವು. ಹಳ್ಳಿಯ ಕೆಲವರು ಬಂದರು. ನಾನು ಹೇಳಿದೆ ಇಂದಿನ ರಾತ್ರಿ ಇಲ್ಲಿ ತಂಗಿದ್ದು ನಾಳೆ ಬೆಳಗ್ಗೆ ಇಲ್ಲಿಂದ ಹೋಗುತ್ತೇವೆ ಎಂದೆ. ಅಲ್ಲಿಯ ಪ್ರತಿಷ್ಠಿತ ವ್ಯಕ್ತಿಯು ನಿವೇದನೆ ಮಾಡಿಕೊಂಡರು. ಮನೆಯಲ್ಲಿ ಪ್ರತ್ಯೇಕ ಕೊಠಡಿ ಇದೆ. ಅಲ್ಲಿ ವಿಶ್ರಮಿಸಿರಿ ಎಂದು ಅದನ್ನು ಸಗಣಿಯಿಂದ ಸಾರಿಸಿ ಶುದ್ಧ ಮಾಡಿ ಅನುವು ಮಾಡಿದರು. ಇದರ ನಂತರ ಮನೆಯ ಹೆಂಗಸರು ಸಂಶಯಾಸ್ಪದ ದೃಷ್ಟಿಯಿಂದ ನೋಡತೊಡಗಿದರು. ಕೊನೆಗೆ ಕೇಳಿಯೇಬಿಟ್ಟರು. ನೀವು ದಾದಿಯರೇ ಅಥವಾ ಬಾಬಾಗಳೇ ಎಂದು ನಾವು ಪ್ರತಿಕ್ರಮಣ ಮಾಡುತ್ತಿದ್ದೆವು. ಒಂದು ಸಲ ತಿಳಿಸಿದೆವು. ಮತ್ತೆ ಮತ್ತೆ ಅದನ್ನೇ ಕೇಳಲಾಗಿ ತಲೆ ಚಿಟ್ಟಾಗಿ ಸುಮ್ಮನಾದೆವು. ಅವರು ತಮ್ಮ ತಮ್ಮಲ್ಲೇ ಗುಸುಗುಟ್ಟತೊಡಗಿದರು. ಇವರೆಲ್ಲರೂ ಮೋಸಗಾರರೇ ಹೀಗೆ ವೇಷ ಧರಿಸಿಕೊಂಡು ಸುತ್ತಾಡುತ್ತಿರುತ್ತಾರೆ. ಆ ಹೆಂಗಸು ಗಂಡನಿಗೆ ಹೇಳಿದಳು. ಅವರನ್ನು ಮನೆಯಿಂದ ಕಳುಹಿಸಿ ಗಂಡ ಹೆಂಡತಿ ಇಬ್ಬರಿಗೂ ಜಗಳವಾಗ ತೊಡಗಿತು. ಗಂಡ ಹೇಳಿದ ಇವರುಗಳು ಸಾಧ್ವಿಯರು ನಾನು ಮಹಾವೀರಜೀಯಲ್ಲಿ ಬಹಳ ಸಲ ನೋಡಿದ್ದೇನೆ. ಆದರೆ ಹೆಂಗಸು ಇಲ್ಲಿ ಇವರು ಕಳ್ಳ ಪುರುಷರು. ಆಗ ನಾನು ಯೋಚಿಸಿ ಹೇಳಿದೆ ನಾವಿಬ್ಬರು ಮನೆಯ ಎದುರಿಗೆ ಇರುವ ಬಯಲಿನಲ್ಲೇ ರಾತ್ರಿ ಕಳೆಯುತ್ತೇವೆ ಬಿಡಿ. ಗಂಡಸು ಗಾಬರಿಯಾಗಿ ಹೇಳಿದ ಬೇಡ ಆ ರೀತಿ ಮಾಡಬೇಡಿ. ಮೈದಾನದಲ್ಲಿ ಚಳಿ ಆಗುತ್ತದೆ. ಯಾರೋ ಹೇಳಿದರು ಒಂದು ಕಂಬಳಿ ಕೊಡಿ ಅದಕ್ಕೆ ನಾವು ಹುಲ್ಲಿನ ಮೇಲೆಯೇ ಮಲಗುವುದು. ಈ ಸೀರೆಯಲ್ಲಿಯೇ ಚಳಿಯಲ್ಲಿಯು ಇರಬಲ್ಲೆವು ಎಂದೆ. ಆದರೆ ಕೆಲವರು ಹೊರಗೆ ಹೋಗಲು ಬಿಡಲಿಲ್ಲ. ನಾನು ಕೊಠಡಿಯ ಚಿಲಕವನ್ನು ಒಳಗಿಂದ ಹಾಕಿಕೊಂಡೆ. ನಾವಿಬ್ಬರು ಸಾಮಾಯಿಕಕ್ಕೆ ಕುಳಿತೆವು. ಅಷ್ಟರಲ್ಲಿ ಸರದಾರಮಲ್ಲರು ಗಲಾಟೆ ಮಾಡುತ್ತಾ ಬಂದರು ಮಾತಾಜೀ ಎಲ್ಲಿದ್ದೀರಿ ಎಲ್ಲಿದ್ದೀರಿ ಎಂದು ಆಗ ಹೆಂಗಸರು ಕೇಳತೊಡಗಿದರು. ಅವರೇನು ನಿಮ್ಮ ತಾಯಿಯೇ? ಸರದಾರಮಲ್ಲರು ಅವರಿಗೆ ವಿವರಿಸತೊಡಗಿದರು. ಇವರು ಸಾಧ್ವಿಯರು ಜಗತ್ತಿನ ತಾಯಿ ಅವರು ಪುನಃ ವಿಚಾರಿಸಿ ತಿಳಿದುಕೊಳ್ಳತೊಡಗಿದರು. ಅವರು ಕೇಶವನ್ನು ಕೈಗಳಿಂದಲೇ ತೆಗೆದುಕೊಳ್ಳುತ್ತಾರೆ. ಅವರು ಹೆಂಗಸರು ಎಂತೆಂತಹ ಕೋಟ್ಯಾಧಿಪತಿಗಳೇ ಅವರನ್ನು ಪೂಜಿಸುತ್ತಾರೆ ಗೊತ್ತೇ. ಇವರು ನೆಲದ ಮೇಲೆ ಹುಲ್ಲಿನ ಹಾಸಿನ ಮೇಲೆಯೇ ಮಲಗುವುದು. ಎಂತಹ ಚಳಿಯಲ್ಲಿಯು ಅವರು ಹೆದರುವುದಿಲ್ಲ. ಏನೋ ಧರ್ಮಶಾಲೆ ಮನೆ ಸಿಕ್ಕಿದರೆ ಸರಿ ಇಲ್ಲ ಎಂದರೆ ಮೈದಾನದಲ್ಲಿಯೇ ಮಲಗುತ್ತಾರೆ. ಅದನ್ನು ಕೇಳಿದ ಹೆಂಗಸರು ಬಹಳ ಪ್ರಭಾವಿತರಾದರು. ಅವರ ದಾದಿ ಬಾಬಾರ ಭ್ರಮೆ ದೂರವಾಯಿತು. ಅವರಿಗೆಲ್ಲ ಪಶ್ಚಾತ್ತಾಪವಾಗ ತೊಡಗಿತು. ರಾತ್ರಿ ಕೊಠಡಿಯ ಒಳಗೆ ಯಾರನ್ನು ಬರಲು ಬಿಡಲಿಲ್ಲ. ಏಕೆಂದರೆ ನನಗೂ ಆಯಾಸವಾಗಿತ್ತು. ವಿಶ್ರಾಂತಿ ಬೇಕಾಗಿತ್ತು. ಬೆಳಗ್ಗೆ ಎದ್ದು ಅವರಿಗೆಲ್ಲ ಸ್ವಲ್ಪ ಧರ್ಮೋಪದೇಶ ಮಾಡಿ ಪ್ರಯಾಣ ಮುಂದುವರಿಸಿದೆವು. ಆದರೆ ಗೂಜರಾನಿ ಹೆಂಗಸರು ಬಾಬಾಗಳೇ ದಾದಿ ಆಗಿದ್ದೀರಿ ಎನ್ನುವ ಪ್ರಶ್ನೆ ಇಂದು ನೆನಪಿಗೆ ಬಂದರೆ ಯೋಚಿಸುತ್ತೇನೆ.

ನೋಡಿ ಈಗಿನ ಪ್ರಪಂಚದಲ್ಲಿ ವೇಷ ಬದಲಿಸಿಕೊಂಡು ಮೋಸ ಮಾಡುವವರೇ ಹೆಚ್ಚಾಗಿರುವುದರಿಂದ ಆ ಮುಗ್ಧ ಮಹಿಳೆಯರು ತಕ್ಷಣ ಈ ಅಪರಿಚಿತ ವೇಷ ನೋಡಿ ಹೆದರಿರುವುದು ಸಹಜವೇ. ಆದರೆ ನಿಜ ಗೊತ್ತಾದ ಮೇಲೆ ಎಷ್ಟು ಭಕ್ತಿಯನ್ನು ತೋರಿಸಿದರು. ಕೆಲವು ಹೆಂಗಸರು ಕೆಲವು ಗಂಡಸರು ಬೆಳಗ್ಗೆ ಹಾಲನ್ನಾದರೂ ತೆಗೆದುಕೊಳ್ಳಲು ಆಗ್ರಹ ಪಡಿಸಿದರು. ಆಗ ಸರದಾರಮಲ್ಲರು ಸಮಾಧಾನ ಮಾಡಿದರು.

ಈ ಮಾತಾಜೀಗಳು 10 ಗಂಟೆಯ ಮೇಲೆ ಚೌಕಗಳಲ್ಲಿಯೇ ಕರಪಾತ್ರದಲ್ಲಿಯೇ ಹಾಲು, ರೊಟ್ಟಿ, ದಾಲ್, ಅನ್ನ ಎಲ್ಲವನ್ನು ತೆಗೆದುಕೊಳ್ಳುವುದೆಂದು. ಆಹಾರವನ್ನು ಒಂದೇ ಸಲ ತೆಗೆದುಕೊಳ್ಳುವುದು. ಮತ್ತೆ ಮತ್ತೆ ಏನನ್ನು ತಗೆದುಕೊಳ್ಳುವುದಿಲ್ಲ ಇದನ್ನು ಕೇಳಿದ ಎಲ್ಲರಿಗೂ ಆಶ್ಚರ್ಯ. ಇಂದು ನಮ್ಮ ಹಳ್ಳಿಗೆ ಯಾವುದೋ ನಿಧಿಯೇ ಬಂದಂತಾಯಿತು. ನಾವು ಧನ್ಯರಾದೆವು ಎಂದರು. ನಾನು ಇಳಿದುಕೊಂಡಿದ್ದ ಮನೆಯ ವ್ಯಕ್ತಿ ಬಂದವನು ನನ್ನ ಮನೆ ಮಂದಿರವಾಯಿತು. ನಮ್ಮ ಜನ್ಮ ಸಫಲವಾಯಿತು ಇಂದಿನಿಂದ ನನ್ನ ಮನೆಯಲ್ಲಿ ಯಾವುದಕ್ಕೂ ಕೊರತೆ ಆಗುವುದಿಲ್ಲ ಎಂದನು. ಹೀಗೆ ವಿಹಾರ ಮಾಡುತ್ತಾ ಪದ್ಮಪುರಿಗೆ ಬಂದು ಪದ್ಮಪ್ರಭುಸ್ವಾಮಿಯ ದರ್ಶನ ಮಾಡಿ ಮುಂದೆ ಮಹಾವೀರಜೀಗೆ ಬಂದೆವು.

ಕ್ಷೇತ್ರಗಳ ದರ್ಶನ

ಭ. ಮಹಾವೀರ ಸ್ವಾಮಿಯ ಅತಿಶಯ ಮೂರ್ತಿಯ ದರ್ಶನ ಮಾಡಿದೆವು ಇಲ್ಲಿ ಬ್ರ. ಶ್ರೀಲಾಲಜೀ ಒಳ್ಳೆಯ ವ್ಯವಸ್ಥೆ ಮಾಡಿದ್ದರು. ಪುನಃ ಶಾಂತಿವೀರ ನಗರದ ಮಂದಿರದ ಆಶ್ರಮಮಂದಿರಗಳ ದರ್ಶನ ಮಾಡಿ ಅಲ್ಲಿಂದ ವಿಹರಿಸುತ್ತಾ ಕೆಲವು ದಿನಗಳ ನಂತರ ಮಥುರಾವನ್ನು ತಲುಪಿದೆವು. ಅಲ್ಲಿ ಜಂಬೂಸ್ವಾಮಿಯ ಚರಣಗಳನ್ನು ವಂದಿಸಿದೆವು. ಇಲ್ಲಿ ಎರಡು ಮೂರುದಿನ ತಂಗುವ ಯೋಚನೆ ಇತ್ತು. ಅಲ್ಲಿಗೆ ಹೀರಾಲಾಲಜೀ ಬಂದರು. ಇವರು ಲಾಡೂನೂನಲ್ಲೇ ಅನೇಕ ಸಲ ಹೇಳಿದ್ದರು. ಮಾತಾಜೀ ತಮ್ಮ ಶಿಬರ್ಜಿ ಯಾತ್ರೆಯ ಜವಾಬ್ದಾರಿ ನನ್ನದು. ಬ್ರಹ್ಮಚಾರಿ ಸುಗುಣಚಂದ್ರರು ತಮ್ಮ ಜೊತೆಯೇ ಇರುತ್ತಾರೆ ಎಂದು.

ಈ ಮಾತಿನ ಅರ್ಥ ಎಂದರೇ ಚೌಕದ ವ್ಯವಸ್ಥೆಯನ್ನು ಬ್ರ. ಸುಗನಚಂದರು ಮಾಡುತ್ತಾರೆ ಅವರಿಗೆ ಹಣಕಾಸಿನ ವ್ಯವಸ್ಥೆಯನ್ನು ಶಿಖರ್ಜಿ ತಲುಪುವವರೆಗೂ ಇವರು ಮಾಡುತ್ತಾರೆ ಎಂದು ತಿಳಿದಿದ್ದೆ. ನಾನು ಸಾಧ್ವಿಯಾಗಿ ಈ ಪ್ರಾಪಂಚಿಕ ವಿಷಯಗಳು ಬೇಡವೆಂದು ತಿಳಿದಿದ್ದೆ. ಆದ್ದರಿಂದ ವ್ಯವಸ್ಥೆಯ ಬಗ್ಗೆ ವಿಚಾರಿಸಿಯೇ ಇರಲಿಲ್ಲ. ಆದರೆ ಇಲ್ಲಿಗೆ ಬಂದ ಮೇಲೆ ಬ್ರಹ್ಮಚಾರಿ ಮತ್ತು ಹೀರಾಲಾಲರ ನಡುವೆ ನಡೆದ ಮಾತುಕತೆ ಬ್ರಹ್ಮಚಾರಿ ಬಂದು ಹೇಳಿದರು. ಮಾತಾಜೀ ಇಲ್ಲಿಯವರೆಗೂ ಹೀರಾಲಾಲರು ಹೇಳಿದ್ದು, ಶಿಖರ್ಜಿ ತಲುಪಿಸುವವರೆಗೂ ನನ್ನ ಖರ್ಚು ಎಂದು ಹೇಳಿದರು. ಇಂದು ನಾನು ಏನು ಮಾಡಲಾರೆ ಎನ್ನುತ್ತಿದ್ದಾರೆ ಎಂದರು.

ಆಗ ನಾನು ಏನು ಬ್ರಹ್ಮಚಾರಿ ಚಿಕ್ಕ ವಿಷಯ ಹೇಳಿದರೆ ನನಗೆ ಆಶ್ಚರ್ಯವಾಗ ತೊಡಗಿತು. ತಪ್ಪಾಯಿತು ಈಗ ಸುಧಾರಿಸಿಕೊಂಡು ಹೋಗಬೇಕು. ನಾನು ಯೋಚಿಸಿದೆ ಈಗ ಅವರನ್ನು ಪುನಃ ಏನು ಕೇಳುವುದು ನನಗೆ ನನ್ನ ಭಾಗ್ಯದ ಮೇಲೆ ನಂಬಿಕೆ. ನಾನು ದೀಕ್ಷೆ ತೆಗೆದುಕೊಳ್ಳುವಾಗ ಯಾರನ್ನು ಅವಲಂಬಿಸಿರಲಿಲ್ಲವಲ್ಲ. ಈಗ ಮತ್ತೇ ಆಹಾರದ ವ್ಯವಸ್ಥೆಗಾಗಿ ನಾನು ಯಾರನ್ನು ಏಕೆ ಕೇಳಬೇಕು.

ಹೀರಾಲಾಲರು ನನ್ನ ಹತ್ತಿರ ಏನನ್ನು ಹೇಳಲಿಲ್ಲ. ನಾನು ಹೋಗುತ್ತೇನೆ ಎಂದರು. ನಾನು ಸಂತೋಷದಿಂದ ಆಶೀರ್ವಾದ ಕೊಟ್ಟೆ ಅವರು ಹೊರಟು ಹೋದರು. ನಂತರ ದೇವಸ್ಥಾನಕ್ಕೆ ಬ್ರ. ಸುಗನಚಂದರು ಬ್ರಹ್ಮಚಾರಿಣಿ

ಮನೋವತಿಯನ್ನು ಕರೆದು ಕೇಳಿದೆ ನೀವು ಶಿಖರ್ಜಿಯಾತ್ರೆಯ ಬಗ್ಗೆ ಯೋಚಿಸುತ್ತಿದ್ದೀರ ನಾನು ಯಾತ್ರೆಯನ್ನು ಸ್ಥಗಿತಗೊಳಿಸಿದ್ದೇನೆ. ನಿಧಾನವಾಗಿ ಇಲ್ಲಿಯ ಕೆಲವು ಊರುಗಳ ಯಾತ್ರೆಯಲ್ಲಿಯೇ ಯಾತ್ರೆ ಮುಗಿಸೋಣ ಎಂದೆ. ಆದರೆ ಬ್ರಹ್ಮಚಾರಿಜೀ ಮಾತಾಜೀ ನಾವು ನಿಮಗೆ ಯಾತ್ರೆ ಮಾಡಿಸುತ್ತೇವೆ ಎಂದರು. ನಾವಿಬ್ಬರು ಚೌಕದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತೇವೆ ಇನ್ನೇನು ಬೇಕು ಎಂದರು. ತಾವು ನಮಗೆ ಅನುಮತಿಯನ್ನು ಕೊಡಬೇಕು. ಇಲ್ಲಿಯವರೆಗೆ ಹೇಳಿ ಮುಂದಿನ ಹಳ್ಳಿಯವರೆಗೆ ಎತ್ತಿನ ಗಾಡಿಯ ವ್ಯವಸ್ಥೆಯನ್ನು ಮಾಡಿಸುತ್ತೇವೆ ಎಂದರು.

ನಾನು ಹೇಳಿದೆ ನೀವಿಬ್ಬರು ಮೊದಲು ಒಂದು ನಿಯಮವನ್ನು ತೆಗೆದುಕೊಳ್ಳಬೇಕು. ಶಿಖರ್ಜಿ ತಲುಪುವವರೆಗೂ ಯಾವ ಶ್ರಾವಕನ ಹತ್ತಿರವು ಹಣವನ್ನು ಕೇಳಬಾರದು ಅವರು ದೇವನೆ ಆಗಿದ್ದರು. ಹಣವನ್ನು ತೆಗೆದುಕೊಳ್ಳುವುದಿಲ್ಲ. ಅದು ನಮ್ಮ ನಿಯಮವೆಂದು ಹೇಳಿ ಯಾರ ಹತ್ತಿರವು ಏನನ್ನು ತೆಗೆದುಕೊಳ್ಳಬಾರದು ಎಂದೆ. ತಕ್ಷಣವೇ ಇಬ್ಬರು ಸಂತೋಷದಿಂದಲೇ ಈ ನಿಯಮವನ್ನು ಕೈಕೊಂಡರು. ಆಗ ನಮಗೂ ನೆಮ್ಮದಿ ಆಯಿತು. ನನ್ನ ಅಭಿಪ್ರಾಯವೇನೆಂದರೆ ಯಾರೇ ಸಾಧ್ವಿಗಳಾಗಲಿ ಯಾತ್ರೆ ಮಾಡಬೇಕೆಂದು ಶ್ರಾವಕರಿಂದ ಹಣ ಬೇಡುವುದಾಗಲಿ ಅದಕ್ಕಾಗಿ ಸಂಘದ ಬ್ರಹ್ಮಚಾರಿಗಳು ಯಾಚನೆ ಮಾಡುವುದು ನನಗಂತೂ ಸುತರಾಂ ಇಷ್ಟವಿಲ್ಲ. ಯಾತ್ರೆ ಮಾಡದಿದ್ದರು ಬೇಡ. ಇದರ ನಂತರ ಮನೋವತಿ ನನ್ನಿಂದ ಅನುಮತಿ ಪಡೆದು ಮನೆಗೆ ಒಂದು ಪ್ರಕಾಶಚಂದ್ರನನ್ನು ಬರಲು ಹೇಳಲು ಪತ್ರ ಬರೆದು ಹಾಕಿದಳು.

ಮಥುರಾ ಕ್ಷೇತ್ರ

ಮಥುರಾ ಒಂದು ಪವಿತ್ರ ಕ್ಷೇತ್ರವೆಂದು ಮನ್ನಿಸಲಾಗಿದೆ.

ಮಹುರಾಯೇ ಅಹಿಚ್ಛತ್ತೇ, ವೀರಂ ಪಾಸಂ ತಹೇವ ವಂದಾಮಿ ।
ಜಂಬೂ ಮುಣಿಂದ ವಂದೇ, ಣಿವ್ವಾಣಂ ಪತ್ತೋವಿ ಜಂಬೂವಣಗಹಣೇ ॥

ಮಥುರಾದ ಭ. ಮಹಾವೀರ ಮತ್ತು ಅಹಿಚ್ಛತ್ರ ಪುರದ ಭಗವಾನ್ ಪಾರ್ಶ್ವನಾಥರ ವಂದನೆ ಮಾಡುತ್ತೇನೆ ಹಾಗೂ ಜಂಬೂವನದಲ್ಲಿ ನಿರ್ವಾಣವನ್ನು ಪಡೆದ ಜಂಬೂ ಮುನಿರಾಜರಿಗೂ ವಂದಿಸುತ್ತೇನೆ. ಮಥುರಾ ಶೂರಸೇನ ಜನಪದದ ರಾಜಧಾನಿಯಾಗಿತ್ತು. ಶೂರಸೇನ ಜನಪದದಲ್ಲಿ ಮಹಾವೀರ ಭಗವಾನ್‌ರ ಸಮವಶರಣ ಬಂದಿತ್ತು. ಅವರ ಅನೇಕ ಉಪದೇಶಗಳನ್ನು ಕೇಳಿದ ನಗರ ಸೇಠಿ ಜಿನದತ್ತನ ಪುತ್ರ ಅರ್ಹದ್ದಾಸ, ಮಥುರಾದ ನರೇಶ ಉದಿತೋದಯ, ಅನೇಕ ಮಂತ್ರಿ, ರಾಜ್ಯಾಧಿಕಾರಿಗಳು, ಮತ್ತು ಅನೇಕ ನಾಗರಿಕರು ಭಗವಾನ್ ಮಹಾವೀರರ ಧರ್ಮಾನುಯಾಯಿ ಆದರು.[೧]

ಅನುಬದ್ಧ ಕೇವಲಿಗಳಲ್ಲಿ ಶ್ರೀ ಗೌತಮ ಸ್ವಾಮಿಗಳು ಮೋಕ್ಷಕ್ಕೆ ಹೋದ ದಿನವೇ 'ಸುಧರ್ಮಾಚಾರ್ಯ' ರಿಗೆ ಕೇವಲ ಜ್ಞಾನವಾಯಿತು. ಇವರು ಮುಕ್ತಿ ಹೊಂದಿದ ದಿನವೇ ಶ್ರೀ ಜಂಬೂಸ್ವಾಮಿಗಳು ಕೇವಲ ಜ್ಞಾನವನ್ನು ಪಡೆದರು. ಜಂಬೂಸ್ವಾಮಿಗಳು ಮಥುರೆಯ ಜಂಬೂವನದಿಂದಲೇ ಮೋಕ್ಷಕ್ಕೆ ಹೋದರು. ಪ್ರಾಚೀನ ಕಾಲದಲ್ಲಿ ಮಥುರೆಯಲ್ಲಿ 84 ವನವಿತ್ತು. ಅದರಲ್ಲಿ 12 ದೊಡ್ಡವಿದ್ದವು. 72 ಚಿಕ್ಕವು ಇದ್ದವು. ಇವು ಮಥುರೆಯಲ್ಲಿ ದೂರ ದೂರಕ್ಕೆ ಹರಡಿತ್ತು. ಕೆಲವು ವನಗಳ ಹೆಸರಿನಲ್ಲೇ ಈ ಹತ್ತು ನಗರಗಳು ಇವೆ. ವೃಂದಾವನ ವಿಧಿವನ,

---

೧. **ಪ್ರಜದ ಸಾಂಸ್ಕೃತಿಕ ಇತಿಹಾಸ : ಶ್ರೀ ಪ್ರಭುದಯಾಲವಿತ್ತಲ ಪು.** ೩೪೫.

ಮಹಾವನ, ಮಧುವನ, ತಾಲವನ ಮೊದಲಾಗಿ ಆದರೆ ಬಹಳಷ್ಟು ವನಗಳು ಹೊಲ ಗದ್ದೆಗಳಾಗಿವೆ. ಅಲ್ಲೇ ಹಳ್ಳಿ ನಗರಗಳು ಆಗಿವೆ. ಚೌರಾಸಿವನದಲ್ಲಿದ್ದ ನೇರಳೆ ವೃಕ್ಷಗಳು ಬಹಳಷ್ಟಿತ್ತು. ಅಲ್ಲಿಯೇ ಜಂಬೂಸ್ವಾಮಿ ನಿರ್ವಾಣ ಪಡೆದರು[೧]. ಇಲ್ಲಿ ಚೌರಾಸಿ ಎನ್ನುವ ಪ್ರಾಚೀನ ಸ್ಥಳದಲ್ಲಿ ಒಂದು ಮಂದಿರವಿದೆ. ಈ ಮಂದಿರದಲ್ಲಿ ಒಂಬತ್ತು ವೇದಿಗಳಿವೆ ಮತ್ತು ಒಂದು ಚರಣಯುಗಲವಿದೆ. ಒಟ್ಟು 68 ಪ್ರತಿಮೆಗಳಿವೆ. ಇವುಗಳಲ್ಲಿ 20 ಪಾಷಾಣ ಪ್ರತಿಮೆಗಳಿವೆ. ಚೌರಾಸಿಯ ಈ ಮಂದಿರ ದೆಹಲಿ - ಮಥುರಾದ ಹೆದ್ದಾರಿ ಅಥವಾ ಮಥುರಾ ಗೋವರ್ಧನ ರಸ್ತೆಯ ಹತ್ತಿರದಲ್ಲೇ ಇದೆ. ನಾವು ಇಲ್ಲಿ ಧರ್ಮಶಾಲೆಯಲ್ಲಿ ತಂಗಿದ್ದೆವು.

ಮಥುರಾನಗರದಲ್ಲಿ ನಾಲ್ಕು ದಿಗಂಬರ ಜೈನಮಂದಿರ ಮತ್ತು ಒಂದು ಚೈತ್ಯಾಲಯವು ಇದೆ. ಇಲ್ಲಿಂದ ನಾಲ್ಕು ಮೈಲಿ ದೂರದಲ್ಲಿರುವ ವೃಂದಾವನದಲ್ಲಿಯು ಒಂದು ಜೈನ ಮಂದಿರವಿದೆ. ಇದು ಹಿಂದುಗಳ ಪ್ರಸಿದ್ಧ ತೀರ್ಥ ನಾರಾಯಣ ಶ್ರೀ ಕೃಷ್ಣನ ಲೀಲಾಭೂಮಿಯಾಗಿತ್ತು.

ಇಲ್ಲಿ 4-5 ದಿನವಿದ್ದು ನಾನು ಜಂಬೂಸ್ವಾಮಿಯ ಚರಣಗಳಿಗೆ ವಂದಿಸಿ ನನಗೆ ಮೊದಲಿನಿಂದಲೂ ಜಂಬೂಸ್ವಾಮಿಯ ಬಗ್ಗೆ ಬಹಳ ಪ್ರೇಮವಿತ್ತು. ಹೀಗೆ ಇನ್ನೂ ಹೆಚ್ಚಾಯಿತು. ನನಗೆ ನೆನಪಿರುವಂತೆ ಒಂದು ದಿನ ರಾತ್ರಿ ದೀಪದ ಬೆಳಕಿನಲ್ಲಿ ಜಂಬೂಸ್ವಾಮಿ ಚರಿತವನ್ನು ಮಂದಿರದಿಂದ ತಂದು ಓದುತ್ತಿದ್ದೆ. ಅದರ ವಿಷಯ ಎಷ್ಟು ಚೆನ್ನಾಗಿತ್ತು ಎಂದರೆ ಓದುತ್ತಾ ನಿಲ್ಲಿಸಲೇ ಮನಸ್ಸು ಬರಲಿಲ್ಲ. ತಂದೆ, ಆಗಾಗ್ಗೆ ಎದ್ದು ನೋಡಿದವರು ಹೇಳಿದರು, ಮಲಗಿ ಕೊಳ್ಳು ಮಗಳೇ ರಾತ್ರಿ ಬಹಳವಾಯಿತು. ನಾಳೆ ಓದುವೆಯಂತೆ ಎಂದು ಹೇಳುತ್ತಲೇ ಇದ್ದರು. ಅಮ್ಮನು ಎದ್ದವರು ಮಲಗಲು ಹೇಳಿದರು. ಹಾ. ಹಾ. ಮಲಗುತ್ತೇನೆ ಈಗ ಮಲಗುತ್ತೇನೆ ಎಂದವಳು ರಾತ್ರಿ 1, 2 ಗಂಟೆಗೆ ಪೂರ್ತಿ ಓದಿಯೇ ಮಲಗಿದೆ. ಇದರಲ್ಲಿ ಜಂಬೂಸ್ವಾಮಿಯ ವೈರಾಗ್ಯದ ವರ್ಣನೆ ಬಹಳ ಸುಂದರವಾಗಿತ್ತು. ದೀಕ್ಷೆ ತೆಗೆದುಕೊಳ್ಳಲು ಉತ್ಸುಕನಾದ ಜಂಬೂಸ್ವಾಮಿಗೆ ತಂದೆ, ತಾಯಿಗಳು ಬಲವಂತ ಮಾಡಿ ಸಂಜೆಯೆ ನಾಲ್ಕು ಕನ್ಯೆಯರೊಡನೆ ವಿವಾಹ ಮಾಡಿದರು. ಏಕೆಂದರೆ ಜಂಬೂಸ್ವಾಮಿ ನಾಳೆಯ ದಿನ ಬೆಳಗ್ಗೆ ದೀಕ್ಷೆ ತೆಗೆದುಕೊಳ್ಳಲು ನಿಶ್ಚಯಿಸಿದ್ದರು. ಅವರೇನು ತಿಳಿದ್ದಿದ್ದರೆಂದರೆ ವಿವಾಹವಾದ ಮೇಲೆ ರಾತ್ರಿಯೆಲ್ಲ ಕನ್ಯೆಯರು ತಮ್ಮ ಮೋಹ ಪಾಶದಲ್ಲಿ ಅವರನ್ನು ಬಂಧಿಸುತ್ತಾರೆ ಎಂದು ತಿಳಿದ್ದಿದ್ದರು. ಆದರೆ ವಿವಾಹವಾದ ನಂತರ ಪತ್ನಿಯರ ಜೊತೆ ಜಂಬೂಸ್ವಾಮಿ ಇಡೀ ರಾತ್ರಿ ರಾಗ - ವಿರಾಗದ ಚರ್ಚೆಯನ್ನು ಮಾಡುತ್ತಾ ಕಳೆದಿದ್ದು ರೋಮಾಂಚನಕಾರಿಯಾಗಿತ್ತು. ಕೊನೆಗೆ ರಾಗದ ಮೇಲೆ ವಿರಾಗವೇ ವಿಜಯ ಪಡೆದು ಜಂಬೂಸ್ವಾಮಿಯ ಜೊತೆ ತಂದೆ - ತಾಯಿ, ಹೆಂಡತಿಯರ ಜೊತೆ ಐದು ನೂರು ಚೋರರು ಕೂಡ ದೀಕ್ಷೆ ತೆಗೆದುಕೊಂಡರು.

ನನಗೆ ಚರಿತ್ರೆಯನ್ನು ಓದಿದ್ದು, ಅಗ್ನಿಯನ್ನು ಉದ್ದೀಪನೆಗೊಳಿಸಲು ಗಾಳಿ ಬೀಸಿದಂತೆ ಆಯಿತು. ಮೊದಲೇ ಪದ್ಮನಂದಿ ಪಂಚವಿಶಂತಿಕಾದಿಂದ ನನ್ನ ಹೃದಯದಲ್ಲಿ ವೈರಾಗ್ಯ ಅಂಕುರ ಪುಟಿದೆದ್ದಿತ್ತು. ಇದನ್ನು ಓದಿದ ನಂತರ ವೈರಾಗ್ಯ ಮತ್ತಷ್ಟು ಹೆಚ್ಚಿತ್ತು. ಇಲ್ಲಿ ಅದೇ ಜಂಬೂಸ್ವಾಮಿಯನ್ನು ಪ್ರಾರ್ಥಿಸಿದೆ. ಭಗವಾನ್ ನನಗೆ ಶಿಖರ್ಜಿಯಾತ್ರೆ ಮಾಡುವ ಇಷ್ಟದಿಂದ ಹೊರಟಿದ್ದೀನಿ. ರಾತ್ರಿಯಲ್ಲಿ ನನ್ನ ಆರೋಗ್ಯದಲ್ಲಿ ವ್ಯತ್ಯಾಸವಾಗದೆ ಇರಲಿ ಎಂದು ಭಕ್ತಿಯಿಂದ ತಮ್ಮಲ್ಲಿ ಪ್ರಾರ್ಥಿಸುತ್ತೇನೆ ಎಂದೆ.

ಅಲ್ಲಿಂದ ಹೊರಟ ಮೇಲೆ ಸಮ್ಮೇದ ಶಿಖರ ತಲುಪುವವರೆಗೆ ನನ್ನ ಆರೋಗ್ಯ ಒಂದೇ ಸಮವಿತ್ತು. ನಡಿಗೆ ಜಾಸ್ತಿಯಾದಾಗ ತೊಂದರೆ ಕೊಡುತ್ತಿದ್ದ ಸಂಗ್ರಹಿಣೀ ಕೂಡ ಕಾಣಿಸಲಿಲ್ಲ. ನಾವು ಏನು ತೊಂದರೆ ಇಲ್ಲದೆ

---

೧. ಭಾರತದ ದಿಗಂಬರ ಜೈನತೀರ್ಥ ಭಾಗ ೧. ಪುಟ ೩೬.

ಸಮ್ಮೇದ ಶಿಖರಕ್ಕೆ ಬಂದೆವು. ಇದರಿಂದಾಗಿ ಮಥುರಾ ತೀರ್ಥ ಮತ್ತು ಜಂಬೂಸ್ವಾಮಿಯ ಬಗ್ಗೆ ನನ್ನ ಶ್ರದ್ಧೆ ಇನ್ನೂ ಜಾಸ್ತಿ ಆಯಿತು. ಇದೇ ಶ್ರದ್ಧೆಯಿಂದಲೇ ನಾನು ಸ್ತುತಿ ರಚಿಸುವಾಗ ಜಂಬೂಸ್ವಾಮಿಯ ಸ್ತುತಿಯನ್ನು ಸಂಸ್ಕೃತದಲ್ಲಿಯೇ ರಚಿಸಿದೆ. ಅದು ಮುದ್ರಿತವಾಗಿದೆ. ಸಮ್ಯಗ್ ಜ್ಞಾನದಲ್ಲಿ ಇವರ ಚರಿತ್ರೆಯು ಸಂಸ್ಕೃತದಲ್ಲಿ ಮುದ್ರಿತವಾಯಿತು.

ಪ್ರಕಾಶಚಂದ್ರನು ಮಥುರಾಗೆ ಬಂದನು

ಕಾಗದ ಊರಿಗೆ ತಲುಪುತ್ತಿದ್ದಂತೆ ತಂದೆ ಮೊದಲು ಓದಿ ನಂತರ ಮನೆಯವರಿಗೆಲ್ಲ ಓದಿ ತಿಳಿಸಿದರು. ಅದರಲ್ಲಿ ವಿಸ್ತಾರವಾಗಿ ಬರೆಯಲಾಗಿತ್ತು. ಪೂಜ್ಯ ಆರ್ಯಿಕೆ ಜ್ಞಾನಮತಿ ಮಾತಾಜೀಯವರ ಸಂಘವು ಸಮ್ಮೇದ ಶಿಖರಕ್ಕೆ ಹೊರಟಿದೆ. ಸಂಘದಲ್ಲಿ ಆರ್ಯಿಕೆರಾದ ಪದ್ಮಾವತೀ, ಜಿನಮತಿ, ಆದೀಮತೀಜೀ ಕ್ಷುಲ್ಲಿಕೆಯರಾದ ಶ್ರೇಯಾಂಸಮತೀಯರು ನಾಲ್ಕು ಸಾಧ್ವಿಯರು ಇದ್ದಾರೆ. ಬ್ರ. ಸುಗನಚಂದ್ರರು ವ್ಯವಸ್ಥೆ ಸಾರಥ್ಯ ವಹಿಸಿದ್ದಾರೆ. ಅವರ ತಂಗಿಯಾದ ಬ್ರಹ್ಮಚಾರಿಣಿಯವರು ಇದ್ದಾರೆ. ಒಂದು ಚೌಕದ ವ್ಯವಸ್ಥೆಯನ್ನು ಸುಗನಚಂದಜೀಯವರು ಒಂದು ಚೌಕದ ಜವಾಬ್ದಾರಿ ನನ್ನದಾಗಿದೆ. ನಾವೆಲ್ಲರು ನಾಳೆ ಮಥುರಾವನ್ನು ತಲುಪುತ್ತೇವೆ. ಸಂಘ ಇಲ್ಲಿಂದ ಆಗರಾ ಫಿರೋಜಾಬಾದ್, ಮೈನಾಪುರ, ಕನೌಜ್, ಕಾನಪುರ, ಲಖನೌ ಮೂಲಕ ಅಯೋಧ್ಯೆಯನ್ನು ತಲುಪಬೇಕು. ಟಿಕೈತನಗರದ ಹತ್ತಿರವೇ ಹೋಗಬೇಕಾಗಿದೆ. ನನಗೆ ಸಂಘ ಊರಿಗೂ ಬರಬೇಕೆಂಬ ಆಶೆ ಇದೆ. ಹಾಗೇ ಯಾತ್ರೆಗೆ ಪ್ರಕಾಶಚಂದನನ್ನು ತಾವು ಕಳಿಹಿಸಿದರೆ ಬಹಳ ಸಹಾಯವಾಗುತ್ತದೆ. ಮಾತಾಜೀ ಸಂಘದ ಎಲ್ಲಾ ಬ್ರಹ್ಮಚಾರಿ - ಬ್ರಹ್ಮಚಾರಿಣಿಯರಿಗೂ ಒಂದು ನಿಯಮವನ್ನು ಕೊಟ್ಟಿದ್ದಾರೆ. ಏನೆಂದರೆ ಶಿಖರ್ಜಿಗೆ ತಲುಪುವವರೆಗೂ ರಸ್ತೆಯಲ್ಲಿ ಯಾವ ಶ್ರಾವಕರ ಹತ್ತಿರವು ಹಣದ ಅಥವಾ ಯಾವುದೇ ವಸ್ತುವನ್ನು ತೆಗೆದುಕೊಳ್ಳಬಾರದು. ಯಾರಾದರು ಕೊಡಬೇಕೆಂದು ಬಯಸುವವರನ್ನು ಸಂಘದಲ್ಲಿದ್ದು ಒಂದೆರಡು ದಿನ ಸ್ವಯಂ ಕೆಲಸ ಮಾಡಲು ಹೇಳಿದ್ದಾರೆ. ನಾವು ಏನನ್ನು ತೆಗೆದುಕೊಳ್ಳುತ್ತಿಲ್ಲ ಎತ್ತಿನಗಾಡಿಯ ಸಹಾಯವನ್ನು ತೆಗೆದುಕೊಳ್ಳುತ್ತಿಲ್ಲ. ಆದ್ದರಿಂದ ಈ ಎಲ್ಲ ವ್ಯವಸ್ಥೆಯನ್ನು ನಿರ್ವಹಿಸಲು ನನಗೆ ಪ್ರಕಾಶನ ಅವಶ್ಯಕತೆಯು ಇದೆ. ಜೊತೆಗೆ ಪ್ರಕಾಶನನ್ನು ಕಳುಹಿಸಬೇಕೆಂದು ತಾರು ಕೂಡ ಬಂದಿತು. ಪತ್ರ ತಾರು ಎಲ್ಲವನ್ನು ನೋಡಿದ ತಾಯಿಗೆ ಪ್ರಕಾಶನನ್ನು ಕಳುಹಿಸಿದರೆ ಏನಾದರು ಸಹಾಯವಾಗಬಹುದೆಂದು ಏನಾದರು ಮಾಡಿ ಕಳುಹಿಸಲು ಪ್ರಯತ್ನಿಸಬೇಕು ಎಂದು ಯೋಚಿಸಿದರು.

ಆದರೆ ಇದಕ್ಕೆ ವಿಪರೀತವಾಗಿ ತಂದೆಯವರು ಬಹಳ ಸಂತೋಷದಿಂದ ಹೇಳಿದರು. ನೋಡು ಏನಾದರೂ ತಿಂಡಿ - ಗಿಂಡಿ ಮಾಡು ಪ್ರಕಾಶನನ್ನು ಬೇಗನೆ ಕಳುಹಿಸೋಣ. ಮಗಳು ಮನೋವತಿಗೆ ರಸ್ತೆಯಲ್ಲಿ ಬಹಳ ತೊಂದರೆ ಆಗುತ್ತಿದೆ. ತಾಯಿಯ ಹೃದಯ ತುಂಬಿ ಬಂದಿತು. ತಕ್ಷಣ ಪ್ರಕಾಶನನ್ನು ಕರೆದು ಎಲ್ಲ ಹೇಳಿ ಹೋಗಿ ಮನೋವತಿಗೆ ಸಹಾಯ ಮಾಡು. ಅಲ್ಲಿಯ ವ್ಯವಸ್ಥೆ ಸರಿಯಾದ ಮೇಲೆ ನೀನು ಬಾ ಎಂದರು. ಹಾಗೇ ಹಣದ ವ್ಯವಸ್ಥೆಯನ್ನು ಮಾಡಿ ಹೋಗುತ್ತಾ ನಮ್ಮ ಗದ್ದೆಯ ಒಂದು ಪಲ್ಲ ಅಕ್ಕಿಯನ್ನು ತೆಗೆದುಕೊಂಡು ಹೋಗು ಎಂದರು. ಪ್ರಕಾಶಚಂದ ಮಥುರಕ್ಕೆ ಬಂದು ಈ ಎಲ್ಲಾ ಮಾತನ್ನು ಹೇಳಿದ್ದು. ಕೇಳಿ ಖುಷಿಯಾಯಿತು. ಇಲ್ಲಿ ಇವನು ಮನೋವತಿಗೆ ಚೌಕ ಮಾಡಲು ಸಹಾಯ ಮಾಡುತ್ತಾ ನನ್ನ ಜೊತೆಯು ಕಾಲ್ನಡಿಗೆಯಲ್ಲಿ ವಿಹಾರ ಮಾಡತೊಡಗಿದ.

೩೯

ಆಗರಾ

ಮಥುರಾದಿಂದ ಹೊರಟು ವಿಹಾರವು ಆಗರಾವನ್ನು ತಲುಪಿತ್ತು. ಅಲ್ಲಿಂದ ಛೀಪಿಟೋಲಾದ ಜನರ ಆಗ್ರಹದಿಂದ ಛೀಪೀಟೋಲದಲ್ಲೇ ನಿಂತೆವು ಅಲ್ಲೇ 2-3 ದಿನ ಇದ್ದು ಮಂದಿರಗಳ ದರ್ಶನ ಮಾಡಿದೆವು. ಪೇಟೆ ಬೀದಿಯಲ್ಲಿ ಪೆಂಡಾಲ ಹಾಕಿಸಿ ಒಬ್ಬ ಮಾತಾಜೀಯ ಕೇಶಲೋಚನ ಕೂಡ ಆಯಿತು. ಇಲ್ಲಿ ಜೈನರು, ಜೈನೇತರರು ಕೂಡ ಬಹಳ ಪ್ರಭಾವಿತರಾದರು. ಉಪದೇಶ ಕೇಳಿದ ಆಗ್ರಾದ ಬೇರೆ ಬೇರೆ ಜಾಗಗಳ ಜನರು ಬಂದು ಆಗ್ರಹ ಮಾಡತೊಡಗಿದರು. ಮಾತಾಜೀ ತಾವು ಒಂದು ತಿಂಗಳಾದರೂ ಇಲ್ಲಿತಂಗಬೇಕೆಂದು, ಆದರೆ ನನ್ನ ಉದ್ದೇಶ ಯಾತ್ರೆಯ ಕಡೆಗೆ ಇದ್ದುದ್ದರಿಂದ ಎಲ್ಲಿಯೂ ನಿಲ್ಲುವ ವಿಚಾರ ಮಾಡಲಿಲ್ಲ.

ಒಂದು ದಿನ ಆಗ್ರಾದಲ್ಲಿ ಒಬ್ಬ ವಿದ್ವಾಂಸರು ಹೇಳಿದರು. ಮಾತಾಜೀ ಯಾವಾಗ ಸಾಧು - ಸಾಧ್ವಿಯರು ಮನೆಯನ್ನು ಬಿಟ್ಟು ಬಂದು ದೀಕ್ಷೆ ತೆಗೆದುಕೊಂಡ ಮೇಲೆ ಪುನಃ ಸಂಘದಲ್ಲಿ ಏಕೆ ಒಟ್ಟಾಗುತ್ತಾರೆ. ಅರೇ ಮನೆ ಬಿಟ್ಟು ಬಂದವರು ಇಲ್ಲಿ ಸೇರಿದ್ದಾರೆ ಅಷ್ಟೇ ಇದರಲ್ಲಿ ಬುದ್ಧಿವಂತಿಕೆ ಏನಿದೆ ಎಂದರು. ನಾನೆಂದೆ ಪಂಡಿತರೇ ಸಂಘವನ್ನು ಕಟ್ಟಿದೆ. ಮೋಕ್ಷ ಮಾರ್ಗಕ್ಕೆ ಹೇಗೆ ಹೋಗುವುದು. ನೋಡಿ ಸಂಘದಲ್ಲಿ ಶಿಷ್ಯರನ್ನು ಸೇರಿಸಲು ಮತ್ತು ಅವರ ಮೇಲೆ ಅನುಗ್ರಹವನ್ನು ಮಾಡುವುದಕ್ಕಾಗಿಯೇ ಶ್ರೀ ಕುಂದಕುಂದರು ಹೇಳಿದ್ದಾರೆ.

ದಂಸಣಣಾ ಣುವದೇಸೋ ಸಿಸ್ಸಗ್ಗಹಣಂ ಚ ಪೋಸಣಂ ತೇಸಿಂ ।
ಚರಿಯಾ ಹಿ ಸರಾಗಾಣಂ ಜಿಣಿಂದ ಪೂಜೋ ವದೇಸೋ ಯ ॥೨೪೮॥

ಸಮ್ಯಗ್ದರ್ಶನ ಮತ್ತು ಸಮ್ಯಗ್‌ಜ್ಞಾನದ ಉಪದೇಶ ಕೊಡುವುದು ಶಿಷ್ಯರನ್ನು ಒಟ್ಟು ಸೇರಿಸುವುದು ಅವರ ಪೋಷಣೆ ಮಾಡುವುದು ಹಾಗೂ ಜೀನೇಂದ್ರ ದೇವರ ಪೂಜೆಯ ಉಪದೇಶ ಕೊಡುವುದು. ಇವೆಲ್ಲವು ಸರಾಗ ಚಾರಿತ್ರದ ಮನುಷ್ಯನ ಚರ್ಯೆ ಆಗಿದೆ. ಟೀಕಾಕಾರರು ಹೇಳುತ್ತಾರೆ.

ರತ್ನತ್ರಯಾರಾಧನಾಶಿಕ್ಷಾಶೀಲಾನಾಂ ಶಿಷ್ಯಾಣಾಂ ಗ್ರಹಣಂ ಸ್ವೀಕಾರ ಸ್ತೇಷಾಮೇವಂ ಪೋಷಣಮಶನಪಾನಾದಿ ಚಿಂತಾ ।

ರತ್ನತ್ರಯ ಆರಾಧನಾದ ಶಿಕ್ಷಣವನ್ನು ಗ್ರಹಿಸುವಂತಹ ಶಿಷ್ಯರನ್ನು ಸಂಘದಲ್ಲಿ ಇಟ್ಟುಕೊಂಡು ಅವರ ಆಹಾರ ಮುಂತಾದ ಚಿಂತನೆ ಮಾಡುವುದು. ಈ ಎಲ್ಲ ಕರ್ತವ್ಯಗಳು ಆಚಾರ್ಯರದಾಗಿದೆ. ಈ ಪ್ರವಚನಸಾರದ ಪ್ರಮಾಣವನ್ನು ಕೇಳಿ ಅವರು ಸಂತೋಷಗೊಂಡರು. ಇನ್ನು ಹಲವಾರು ಶಂಕೆಗಳನ್ನು ಕೇಳಿ ಅದಕ್ಕೆಲ್ಲ ಆಗಮ ಪ್ರಮಾಣ ಸಹಿತವಾದ ಸಾಕ್ಷ್ಯಗಳನ್ನು ಕೊಟ್ಟೆ.

ಈ ಗಾಥೆಯು ನನಗೆ ಕ್ಷುಲ್ಲಿಕೆ ಅವಸ್ಥೆಯಿಂದಲೂ ನನಗೆ ನೆನಪಿದೆ. ನಾನು ಯಾವಾಗ ಪ್ರವಚನ ಸಾರದ ಸ್ವಾಧ್ಯಾಯ ಮಾಡಿದ್ದೆ. ಈ ಗಾಥೆ ರೈನವಾಲದಲ್ಲಿ ಆಚಾರ್ಯ ವೀರಸಾಗರರ ಸಮಯದಲ್ಲಿ ಚರ್ಚೆಗೆ ಬಂದಾಗ ನನ್ನ ಹೃದಯ ಪಟಲದಲ್ಲಿ ಅಂಕಿತವಾಗಿತ್ತು. ವಿಷಯ ಏಕೆ ಬಂತು ಎಂದರೆ ಒಂದು ದಿನ ಮಧ್ಯಾಹ್ನ ಸಂಘದಲ್ಲಿದ್ದ ಸಾಧು ಸಾಧ್ವಿಯರ ನಡುವೆ ಚರ್ಚೆ ನಡೆಯುತ್ತಿತ್ತು. ಮುನಿಗಳು ಶ್ರಾವಕರಿಗೆ ಭಗವಂತನ ಪೂಜೆಯ ಸಾಮಾಗ್ರಿಗಳನ್ನು

---

1. ಪ್ರವಚನ ಸಾರ ಗಾಥಾ ೨೪೮

ತಯಾರುಮಾಡುವುದರಲ್ಲೂ ಪೂಜೆ ಮಾಡುವುದರಲ್ಲೂ ಆರಂಭವಾಗುತ್ತದೆ. ಈ ವಿಷಯವನ್ನು ಕ್ಷುಲ್ಲಕ ಚಿದಾನಂದ ಸಾಗರಜೀ ಇನ್ನು ಆಳವಾಗಿ ಎಳೆಯುತ್ತಿದ್ದರು. ಇವರು ದೀಕ್ಷೆಗಿಂತ ಮೊದಲು ಸುಧಾರಕ ವಿಚಾರ ಉಳ್ಳವರಾಗಿದ್ದರಿಂದ ಇನ್ನೂ ಆ ಸ್ವಭಾವ ಹೋಗಿರಲಿಲ್ಲ. ಆಗ ಸಂಘದಲ್ಲಿದ್ದ ಪಾರ್ಶ್ವಮತೀ ಮಾತಾಜೀ ಆಚಾರ್ಯ ಕಲ್ಪಚಂದ್ರಸಾಗರರ ಶಿಷ್ಯೆ ಹೇಳಿದರು ನನ್ನ ಗುರುಗಳಾದ ಚಂದ್ರಸಾಗರರು ಯಾವಾಗಲೂ ಕೈಯಲ್ಲಿ "ಭಾವಸಂಗ್ರಹ" ದ ಗ್ರಂಥವನ್ನು ಹಿಡಿದೇ ಇರುತ್ತಿದ್ದರು. ಮತ್ತು ಶ್ರಾವಕರಿಗೆ ದಾನ ಪೂಜೆಯ ಬಗ್ಗೆ ವಿಶೇಷ ಉಪದೇಶವನ್ನು ಕೊಡುತ್ತಿದ್ದರು. ಆದರೆ ಸರಿಯಾದ ಪ್ರಮಾಣವನ್ನು ಕೊಡಲಾಗದೇ ದುಃಖಿಯಾದರು ಮಾತು ಬೆಳೆದರೂ ಯಾವುದೇ ತೀರ್ಮಾನಕ್ಕೆ ಬರಲಿಲ್ಲ. ಆಕಸ್ಮಾತ್ ನನ್ನ ತಲೆಗೆ ಈ ಗಾಥೆ ನೆನಪಿಗೆ ಬಂದಿತು. ಪ್ರವಚನಸಾರವನ್ನು ತಂದು ತೋರಿಸಿದೆ, ಆಗ ಎಲ್ಲಾ ಸಾಧುಗಳು ಆಶ್ಚರ್ಯ ಚಕಿತರಾಗಿ ಹೇಳಿದರು ಅರೇ ನಾವುಗಳು ಪ್ರವಚನಸಾರದ ಸ್ವಾಧ್ಯಾಯ ಮಾಡಿದ್ದರೂ ಈ ಗಾಥೆಯ ಬಗ್ಗೆ ಗಮನವನ್ನೇ ಕೊಟ್ಟಿಲ್ಲವಲ್ಲ. ಇದಂತೂ ಬಹಳ ಮಹತ್ವಪೂರ್ಣ ಗಾಥೆಯಾಗಿದೆಯಲ್ಲ ಇದರಲ್ಲಿ ಸ್ಪಷ್ಟವಾಗಿಯೇ ಬರೆದಿದೆಯಲ್ಲ ಸರಾಗ ಚರ್ಯೆಯುಳ್ಳ ಶುಭೋಪಯೋಗಿ ಮುನಿಗಳು ದಾನ ಮತ್ತು ಪೂಜೆಯ ಉಪದೇಶ ಕೊಡಬೇಕು ಇದರಲ್ಲಿ ಯಾವುದೇ ತೊಂದರೆ ಇಲ್ಲ. ಪುನಃ ಕ್ಷುಲ್ಲಕ ಚಿದಾನಂದ ಸಾಗರರು ವೀರಸಾಗರರ ಹತ್ತಿರ ಹೋಗಿ ಪ್ರಶ್ನೋತ್ತರದ ವಿಷಯ ಹೇಳಿ ಆಚಾರ್ಯರಿಗೆ ಈ ಗಾಥೆಯನ್ನು ತೋರಿಸಿ ಹೇಳಿದರು. ಇದರಲ್ಲಿ ನಿಮ್ಮ ಅಭಿಪ್ರಾಯವೇನು ? ಅದಕ್ಕೆ ಮಹಾರಾಜರು ಆಗಮದಲ್ಲಿ ಬರೆದಿರುವುದಕ್ಕಿಂತ ಹೆಚ್ಚು ನಾವೇನು ಹೇಳಬಲ್ಲೆವು ? ಚಂದ್ರಸಾಗರರದು ಏನೂ ತಪ್ಪಿಲ್ಲ ಅವರು ಆಗಮದಲ್ಲಿರುವಂತೆಯೇ ಉಪದೇಶ ಮಾಡುತ್ತಿದ್ದರು. ಆಚಾರ್ಯರಿಂದ ಈ ಮಾತನ್ನು ಕೇಳಿದ ಪಾರ್ಶ್ವಮತೀಯವರಿಗೆ ಬಹಳ ಸಂತೋಷವಾಯಿತು. ಅವರೆಂದರು ಜ್ಞಾನಮತೀಜಿ ನೀನು ಸಂಶಯಗಳಿಗೆ ಶಾಸ್ತ್ರ ಪ್ರಮಾಣಗಳನ್ನು ಖಂಡಿತಾ ತೋರಿಸುತ್ತಿರು. ನೋಡು ನಮಗೆ ಆಗಮ ಪ್ರಮಾಣಗಳನ್ನು ತೋರಿಸುವಷ್ಟು ಜ್ಞಾನವಿಲ್ಲ. ನಮಗೆ ಗುರುವಚನವೇ ಶಾಸ್ತ್ರವೆಂದು ಗೌರವಿಸುತ್ತೇವೆ. ಅವರ ಮಾತುಗಳು ನನಗೆ ಇಂದೂ ಅಪ್ಯಾಯಮಾನ ಮುನಿಚಂದ್ರ ಸಾಗರರ ವಚನವೇ ಶಾಸ್ತ್ರ ನಿಜವಾಗಿಯೂ ಮಹಾಮುನಿಗಳಾದ ಅವರು ಶಾಸ್ತ್ರದಲ್ಲಿರುವಂತೆ ಉಪದೇಶಿಸುತ್ತಿದ್ದರು. ಸಿಂಹವೃತ್ತಿಯ ಸಾಧುಗಳಾಗಿದ್ದರು. ಆಗ ಸುಧಾರಕ ವಿದ್ವಾನ ಮತ್ತು ಶ್ರಾವಕರು ಕೂಡ ಹೆದರುತ್ತಿದ್ದರು.

ಏತ್ಮಾದ ಪುರ

ಅಲ್ಲಿಂದ ವಿಹರಿಸುತ್ತಾ ಏತ್ಮಾದಪುರವನ್ನು ತಲುಪಿದೆವು. ಬೆಳಿಗ್ಗೆ ನವೆಂಬರ ಡಿಸೆಂಬರ್ ಕಾಲ ಚಳಿ, ಇಬ್ಬನಿಯು ಬೀಳುತ್ತಿತ್ತು. ದಾರಿಯಲ್ಲೆಲ್ಲಾ ಮಳೆ ಇಂತಹ ಚಳಿಯಲ್ಲಿಯೂ ಒದ್ದೆ ಬಟ್ಟೆಯಲ್ಲಿಯೇ ಏಳು ಎಂಟು ಮೈಲಿ ನಡೆದು ಏತ್ಮಾದ ಪುರದ ಮಂದಿರವನ್ನು ತಲುಪಿದೆವು. ಶ್ರಾವಕರು ಒಳ್ಳೆಯ ಭಕ್ತರನ್ನು ತೋರಿಸಿದರು. ನಮ್ಮ ಸಂಘದವರು ಮೊದಲೇ ತಲುಪಿದರು ನಮ್ಮ ಬಟ್ಟೆ ಒಣಗಲು ಹಾಕಿದ್ದರು ಆಹಾರಕ್ಕೂ ಒದ್ದೆ ಬಟ್ಟೆಯಲ್ಲಿಯೇ ಹೋಗಬೇಕಾಯಿತು. ಇದನ್ನು ನೋಡುತ್ತಿದ್ದ ದರ್ಶನಾರ್ಥಿಗಳು ಮಾತಾಜೀ ಒದ್ದೆ ಬಟ್ಟೆಯನ್ನು ಬದಲಾಯಿಸಿ ಬೇರೆ ಹೊಸ ಸೀರೆ ಧರಿಸಿ ಈ ಥಂಡಿಯಲ್ಲಿ ಆರೋಗ್ಯ ಹಾಳಾಗಬಹುದೆಂದರು. ಅದಕ್ಕೆ ನಾನು ಹೊಸ ಸೀರೆಯನ್ನು ನೆನೆಸಿಯೇ ಉಡಬೇಕು. ಅದರಲ್ಲೂ ಕೋರಾ ಬಟ್ಟೆಯೇ ಆಗಬೇಕೆಂದೆ, ಅಲ್ಲಿದ್ದ ಮಹಿಳೆ ಹೇಳತೊಡಗಿದರು ಇಂತಹ ಸಂದರ್ಭಕ್ಕಾಗಿ ಮೂರನೆಯ ಸೀರೆ ಇಟ್ಟು ಕೊಳ್ಳಬೇಕೆಂದು ಅದಕ್ಕೆ ನಾನು ಶಾಸ್ತ್ರದಲ್ಲಿ ಆರ್ಯಿಕೆಯರಿಗೆ ಎರಡೇ ಸೀರೆ ಹೇಳಿರುವುದೆಂದು ಮೂರನೆಯ ಸೀರೆ ಇಟ್ಟುಕೊಳ್ಳುವಂತೆ ಇಲ್ಲ.

ವಸ್ತ್ರಯುಗ್ಮಂ ಸುಬೀಭತ್ಸಲಿಂಗ ಪ್ರಚ್ಛಾದನಾಯ ಚ ।
ಆರ್ಯಾಣಾಂ ಸಂಕಲ್ಪೇನ ತೃತೀಯೇ ಮೂಲಮಿಷ್ಯತೇ ॥

ಆರ್ಯಿಕೆಯರು ಶರೀರದ ರಕ್ಷಣೆಗಾಗಿ ಎರಡೇ ಸೀರೆಯನ್ನು ಗ್ರಹಿಸಬೇಕು ಮೂರನೆಯ ಸೀರೆಯನ್ನು ಗ್ರಹಣೆ ಮಾಡಿದರೆ ಪ್ರಾಯಶ್ಚಿತ್ತಕ್ಕೆ ಭಾಗಿಯಾಗುತ್ತಾರೆ ಹೀಗಾಗಿ ಎರಡಕ್ಕಿಂತ ಹೆಚ್ಚು ಗ್ರಾಹ್ಯವಲ್ಲ ಯಾವಾಗಲೂ ವಿಶೇಷವಾಗಿ ಹುಷಾರಿಲ್ಲದ ಸಮಯದಲ್ಲಿ ಯಾರಾದರೂ ಸಂಘದಲ್ಲಿರುವ ಬ್ರಹ್ಮಚಾರಿಣಿಯರ ಹತ್ತಿರವಿರುವ ಹೊಸ ಒಗೆದಿರುವ ಸೀರೆಯಿದ್ದರೆ ಬದಲಾಯಿಸಬಹುದು. ಆದರೆ ಅದೇನೂ ಉತ್ತಮ ಮಾರ್ಗವಲ್ಲ. ನಮಗಂತೂ ಕೆಲವು ದಿನಗಳವರೆಗೆ ತುಂತುರು ಮಳೆ, ಇಬ್ಬನಿ ಇವುಗಳಿಂದ ಚಳಿಯಲ್ಲೇ ಇರಬೇಕಾಗಿ ಬರುತ್ತಿತ್ತು. ಹೇಗೋ ಫಿರೋಜಾಬಾದ್ ತಲುಪಿದೆವು ಆದರೆ ಯಾರೂ ಕಾಯಿಲೆ ಬೀಳಲಿಲ್ಲ. ಆಗ ನನಗೆ ಇಪ್ಪತ್ತೈಂಟು ವರ್ಷಗಳು ಇದೇ ಚಳಿಯಲ್ಲಿಯೇ ಅಯೋಧ್ಯೆಯನ್ನು ತಲುಪಿದೆವು.

ಕೆಲವು ವರ್ಷಗಳಿಂದ ನನಗೆ ಸ್ವಲ್ಪ ಗಾಳಿ ತಾಗಿದರು ನೆಗಡಿ, ಸೀನು, ಕೆಮ್ಮು ಮುಂತಾಗಿ ಶುರುವಾಗುತ್ತಿತ್ತು. 1970ರಲ್ಲಿ ಹಿಡಿದ ನೆಗಡಿ ಸುಮಾರು ಮೂರುವರ್ಷ ಸತಾಯಿಸಿತು. ಕೆಲವು ದಿನಗಳವರೆಗೂ ಯೋಚಿಸುತ್ತಿದ್ದೆ. ಶಕ್ತಿ, ಸಂಹಹನ, ದೇಶ, ಕಾಲ ಮತ್ತು ವಾತಾವರಣದ ಭಾವಗಳಿಂದ ಪರಿವರ್ತನೆಯು ಆಗುತ್ತದೆ ಮತ್ತು ಕರ್ಮ ನಿರ್ಜರೆಯಲ್ಲಿ ಅಂತರವು ಉಂಟಾಗುತ್ತದೆ. ಈಗ ನಾನು ಏನಾದರು ಚಳಿಯನ್ನು ಸಹಿಸಲು ಪ್ರಯತ್ನಿಸಿದರೆ ನನ್ನ ಶರೀರವೇ ಸೆಡೆದುಕೊಂಡು ಏನಾದರೂ ವಿಪರೀತವಾಗೇ ಆಗಿ ಅಸಮಾಧಿಯಾಗುತ್ತಿತ್ತು. ಆ ಸಮಯದಲ್ಲಿಯೂ ಶಕ್ತಿಯಿದ್ದುದ್ದರಿಂದಲೇ ಸಹನ ಶೀಲತೆ ಇತ್ತು. ಇವತ್ತು ಎಷ್ಟು ಯೋಚಿಸಿದರೂ ಶರೀರವು ಸ್ಪಂದಿಸುತ್ತದೆ. ಆದ್ದರಿಂದಲೇ ಹೇಳುತ್ತೇನೆ.

ಸಮಯ ಏವ ಕರೋತಿ ಬಲಾಬಲಂ

ಫಿರೋಜಾಬಾದ್

ಇನ್ನೊಂದು ದಿನದಲ್ಲಿ ಫಿರೋಜಾಬಾದ್ ತಲುಪಬೇಕಾಗಿತ್ತು. ಮಾರ್ಗದಲ್ಲಿ ಸೇಠ್ ಛದಾಮೀಲಾಲಜೀ ಒಂದಿಬ್ಬರು ಮಹಾನುಭಾವರೊಂದಿಗೆ ಬಂದರು. ರಸ್ತೆಯಲ್ಲಿ ಕಾರು ನಿಲ್ಲಿಸಿ ಇಳಿದು ವಿನಯದಿಂದ ಬಂದು ದರ್ಶನ ಮಾಡಿದರು. ನಾನು ಹೆಸರು ಕೇಳಿದೆ, ಹೇಳಿದ ಅವರು ತಾವು ಯಾರ ಸಂಘದವರೆಂದರು. ಅದಕ್ಕೆ ನಾನು ಆಚಾರ್ಯ ವೀರಸಾಗರರ ಶಿಷ್ಯೆ ಈಗ ಶಿವಸಾಗರರ ಸಂಘದಿಂದ ಯಾತ್ರೆಗೆ ಹೋಗುತ್ತಿದ್ದೇನೆ ಎಂದೆ. ನಡೆಯುತ್ತಾ ಹಿಂದೆ ಬಿದ್ದ ಅವರು ತಮ್ಮ ತಮ್ಮಲ್ಲಿ ಏನೋ ಚರ್ಚೆ ಮಾಡಿಕೊಳ್ಳತೊಡಗಿದರು. ಆಮೇಲೆ ಮುಂದೆ ಬಂದು ಮತ್ತೇ ನಮಸ್ಕರಿಸಿ ವಾಪಸ್ಸು ಹೋದರು. ಆಗ್ರಾ ಜನರ ಸೂಚನೆಯಂತೆ ಫಿರೋಜಾಬಾದಿನ ಒಂದಿಬ್ಬರು ಶ್ರಾವಕರು ಬಂದರು. ಅವರು ನಮಸ್ಕರಿಸಿ ಎಲ್ಲ ವಿಷಯ ಹೇಳಿದರು. ನಗರದಲ್ಲಿ ಬಾಹುಬಲಿಯ ಮಂದಿರದಲ್ಲಿ ತಮಗೋಸ್ಕರ ಇಳಿದುಕೊಳ್ಳುವ ವ್ಯವಸ್ಥೆ ಆಗಿದೆ ಎಂದರು. ಮಾತಾಡುತ್ತಾ ಒಬ್ಬ ಮಾತಾಜಿ ಛದಾಮೀಲಾಲ ಸೇಠರು ಬಂದಿದ್ದ ವಿಷಯ ಹೇಳಿದರು. ಆಗ ಬಂದಿದ್ದ ಒಬ್ಬ ಶ್ರಾವಕರು ಹೇಳಿದರು ಮಾತಾಜಿ ತಮ್ಮ ಗುರು ಪರಂಪರೆಯನ್ನು ಕೇಳಿ ಅವರು ಬೆಚ್ಚಿರಬೇಕು. ನಿಮ್ಮಲ್ಲಿ ಶುದ್ಧ ಜಲದ ವ್ರತ ಇಲ್ಲದವರು, ಅಂತರ್‌ಜಾತಿಯವರಲ್ಲಿ ತಾವು ಆಹಾರ ತೆಗೆದುಕೊಳ್ಳುವುದಿಲ್ಲ ಎಂಬುದನ್ನು ತಿಳಿದು ಅವರು ಇಲ್ಲಿ ಮಂದಿರದಲ್ಲಿ ವ್ಯವಸ್ಥೆ ಮಾಡಿಲ್ಲ ಎನ್ನಿಸುತ್ತದೆ. ಅವರೊಬ್ಬ ಸುಧಾರಕರಾಗಲು ಹೊರಟಿದ್ದಾರೆ ತಮ್ಮ ಮಗನಿಗೆ ಅಂತರ್ಜಾತಿಯ ವಿವಾಹ ಮಾಡಿದ್ದಾರೆ. ಇವರು ಪಲ್ಲೀವಾಲರು ಮತ್ತು ಅಗ್ರವಾಲರ ಪುತ್ರಿಯ ಜೊತೆ ತಮ್ಮ ಪುತ್ರನ ವಿವಾಹ ಮಾಡಿದ್ದಾರೆ.

ಈ ಮಾತು ಕೇಳಿದಾಗ ನನಗೆ 1953 ರ ಮಾತು ನೆನಪಿಗೆ ಬಂದಿತು. ಯಾವಾಗ ಆಚಾರ್ಯ ದೇಶಭೂಷಣರು ಇಲ್ಲಿಗೆ ಬಂದಿದ್ದರು. ಆಗ ಈ ಸೇಠಜೀಯವರು ಬಹಳ ಉತ್ಸಾಹದಿಂದ ಸ್ವಾಗತ ಮಾಡಿದ್ದರು. ಜೊತೆಗೆ ಕಾಲ್ನಡಿಗೆಯಲ್ಲಿಯೇ ಬಂದಿದ್ದರು. ಆಗ ಜನರು ಹೇಳುತ್ತಿದ್ದರು. ಬಹುಶಃ ಈ ಸಮಯದಲ್ಲಿ ಅಂತರ್ಜಾತಿಯ ಸಂಬಂಧ ಆಗಿರಲಿಲ್ಲ ಎನ್ನಿಸುತ್ತದೆ. ಮಾರನೇಯ ದಿನ ಫಿರೋಜಾಬಾದ್ ತಲುಪಿದೆವು. ಇಲ್ಲಿ 4-5 ದಿನಗಳು ತಂಗಿದ್ದೆವು. ಇಲ್ಲಿ ಛದಾಮೀಲಾಲಜೀಯವರ ವಿಶಾಲವಾದ ಜಿನಮಂದಿರವನ್ನು ದರ್ಶನ ಮಾಡಿದೆವು. ಇಲ್ಲಿ ಪ್ರತಿದಿನ ನನ್ನ ಉಪದೇಶ ನಡೆಯಿತು. ಇಲ್ಲಿಂದ ವಿಹಾರ ಹೊರಟು ಭಯಂಕರ ಚಳಿಯನ್ನು ಲೆಕ್ಕಿಸದೆ ನಾವು ಶಿಕೋಹಾಬಾದ್, ಕನೌಜ್, ಮೈನಾಪುರಿ ಮೂಲಕ ಕಾನಪುರವನ್ನು ತಲುಪಿದೆವು.

ಸಂಘ ಫಿರೋಜಾಬಾದಿನವರೆಗೂ ಬಂದಿತ್ತು. ಹಾಗೇ ಮುನಿಶ್ರೀ ಅಜಿತಸಾಗರು ಸಂಘದಿಂದ ಬೇರೆಯಾಗಿ ಜಯಪುರದ ಒಂದು ಮಂದಿರದಲ್ಲಿದ್ದಾರೆ ಎಂದು ಗೊತ್ತಾಯಿತು. ಕೇಳಿದ ನನಗೆ ಬಹಳ ದುಃಖವಾಯಿತು. ನಾನು ವಚನ ಕೊಟ್ಟಂತೆ ನಾನು ಮಜ್ಜಿಗೆಯನ್ನು (ಔಷಧಿ) ತ್ಯಾಗ ಮಾಡಿದೆ. ಸಂಘ ಇಲ್ಲಿಂದ ಕಾನಪುರಕ್ಕೆ ಬಂದಿತು. ಆ ದಿನಗಳಲ್ಲಿ ಹೊಟ್ಟೆಯ ತಳಮಳಕ್ಕೆ ಮಜ್ಜಿಗೆಯೇ ಔಷಧವಾಗಿತ್ತು. ನನ್ನ ಆರೋಗ್ಯ ಕ್ಷೀಣಿಸುವುದನ್ನು ನೋಡಿದ ಸಂಘದಲ್ಲಿದ್ದ ಸಾಧ್ವಿಯರಿಗೆ, ಬ್ರಹ್ಮಚಾರಿಣಿ, ಬ್ರಹ್ಮಚಾರಿಗಳಿಗೆ ಚಿಂತೆ ಆಗತೊಡಗಿತು. ಆದಿಮತಿಯವರು ನನಗೆ ಮಜ್ಜಿಗೆ ತೆಗದುಕೊಳ್ಳಲು ಆಗ್ರಹ ಪಡಿಸಿದರು. ನಾನು ಯಾವಾಗ ಒಪ್ಪಲಿಲ್ಲವೋ ಅವರು ಅನ್ನವನ್ನೇ ತ್ಯಾಗ ಮಾಡಿ ಹೇಳಿದರು. ಮಾತಾಜೀ ನಿಮ್ಮ ಆರೋಗ್ಯಕ್ಕೆ ಅವಶ್ಯವಾಗಿರುವ ಮಜ್ಜಿಗೆ ತ್ಯಾಗ ಮಾಡಿದ್ದೀರಿ. ಎಲ್ಲಿಯವರೆಗೆ ತಾವು ಮಜ್ಜಿಗೆ ತೆಗೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ನಾನು ಅನ್ನವನ್ನು ತೆಗೆದುಕೊಳ್ಳುವುದಿಲ್ಲ. ಬ್ರ. ಸುಗನಚಂದ ಮತ್ತು ಪ್ರಕಾಶಚಂದರಿಗೆ ಈ ತ್ಯಾಗದ ವಿಷಯ ತಿಳಿಯುತ್ತಲೇ ನನ್ನ ಹತ್ತಿರ ಬಂದು ಅನುನಯ ವಿನಯ ತೋರಿಸತೊಡಗಿದರು. ಆಗ ನಾನೆಂದೆ ಮುನಿಶ್ರೀ ಅಜಿತಸಾಗರರು ಆಚಾರ್ಯ ಸಂಘಕ್ಕೆ ಹಿಂದಿರುಗುವವರೆಗೆ ನಾನು ಮಜ್ಜಿಗೆ ತೆಗೆದುಕೊಳ್ಳುವುದಿಲ್ಲ.

ಅವರಿಬ್ಬರು ಜಯಪುರಕ್ಕೆ ಹೋಗಿ ಪಂ. ಇಂದ್ರಲಾಲಜೀ ಶಾಸ್ತ್ರಿಯವರಿಗೂ ಶ್ರೇಷ್ಠಿ ರಾಮಚಂದ್ರಜೀ ಕೋಠಾರಿಯವರಿಗೆ ಪತ್ರ ಕೊಟ್ಟರು. ಸೇಠ ಹೀರಾಲಾಲಜೀಯವರಿಗೂ ಸಹ ನಿವಾಯಿ ಹಳ್ಳಿಗೂ ಪತ್ರ ಹಾಕಲಾಯಿತು. ಪತ್ರದಿಂದ ವಿಷಯ ತಿಳಿದ ಇವರುಗಳು ಬ್ರ. ಶ್ರೀಲಾಡಮಲ್ಲಜೀ ಯವರನ್ನು ಜೊತೆಯಲ್ಲಿ ಕರೆದುಕೊಂಡು ಮುನಿಗಳ ಹತ್ತಿರ ಹೋಗಿ ಈ ಎಲ್ಲಾ ಸಮಾಚಾರವನ್ನು ತಿಳಿಸಿದರು. ಅದನ್ನು ಕೇಳುತ್ತಿದ್ದಂತೆ ಅವರು ಎದ್ದು ನಿಂತು ನಡೆಯಿರಿ ಈಗಲೇ ನಾನು ಆಚಾರ್ಯರ ಸಂಘಕ್ಕೆ ಹೊರಡುತ್ತೇನೆ. ನಾನು ಆರ್ಯಿಕೆ ಜ್ಞಾನಮತಿಯ ಆಗ್ರಹವನ್ನು ತಳ್ಳಿ ಹಾಕಲಾರೆ. ಅವರು ನನ್ನ ತಾಯಿ ಇಷ್ಟು ಹೇಳಿದವರೇ ಸಂಘಕ್ಕೆ ಹೊರಟೇ ಬಿಟ್ಟರು. ಸಂಘ ತಲುಪಿದ ಮೇಲೆ ಆ ಕಡೆಯಿಂದ ಪಂಡಿತ ಇಂದ್ರಲಾಲ ಶಾಸ್ತ್ರಿಯವರ ಪತ್ರ ಬಂದಿತು.

ಪೂಜ್ಯ ಮಾತಾಜೀಯವರೇ ತಾವು ಈಗ ನಿಮ್ಮ ನಿಯಮ ಪೂರ್ತಿಯಾದ್ದರಿಂದ ಆಹಾರದಲ್ಲಿ ಮಜ್ಜಿಗೆ ತೆಗೆದುಕೊಳ್ಳಲು ಪ್ರಾರಂಭಿಸಿ. ತಮ್ಮ ಸಾಹಸದಿಂದ ಮುನಿಶ್ರೀ ಅಜಿತಸಾಗರರು ಆಚಾರ್ಯರ ಸಂಘವನ್ನು ತಲುಪಿದ್ದಾರೆ. ನಮಗೆಲ್ಲ ಸಂತೋಷವಾಗಿದೆ. ಏಕೆಂದರೆ ನೀವು ಸಂಘದಲ್ಲಿರುವ ಎಲ್ಲಾ ಮುನಿಗಳು ಮತ್ತು ಆರ್ಯಿಕೆಯರ ಹಿತವನ್ನು ಎಷ್ಟೊಂದು ಬಯಸುತ್ತೀರ ಎಂದು. ನಾನು ಪೂಜ್ಯ ಅಜಿತಸಾಗರರ ಮಹಾನತೆಯ ಬಗ್ಗೆ ಯೋಚಿಸಿದೆ. ಮುನಿಗಳಾಗಿಯು ನನ್ನ ಮಾತಿಗೆ ಬೆಲೆ ಕೊಟ್ಟರಲ್ಲಾ ಎಂದು, ಪತ್ರ ಓದಿ ನನಗೂ ಸಂತೋಷವಾಯಿತು. ಮಾರನೆಯ ದಿನ ನನ್ನ ನಿಯಮವನ್ನು ಪೂರ್ಣಗೊಳಿಸಿ ಆಹಾರದಲ್ಲಿ ಮಜ್ಜಿಗೆ ತೆಗೆದುಕೊಂಡೆ. ಹಾಗೆ ಆದಿಮತಿಯವರು ಆಹಾರದಲ್ಲಿ ಅನ್ನವನ್ನು ಗ್ರಹಣ ಮಾಡಿದರು. ಸಂಘದಲ್ಲಿದ್ದ

ಎಲ್ಲರಿಗೂ ಸಂತೋಷವಾಯಿತು. ಅಲ್ಲಿಂದ ಮುಂದೆ ಸಂಘ ಲಖನೌ ತಲುಪಿತು. ನನಗೆ ಹೀಗೆ ಬರೆಯಲು ಅತೀವ ಸಂತೋಷವೆನ್ನಿಸುತ್ತಿದೆ. ನಾನು 1962 ರಲ್ಲಿ ಆಚಾರ್ಯ ಸಂಘಕ್ಕೆ ಸೇರಿದ ನಂತರ ಶಿವಸಾಗರರು ಬದುಕಿರುವವರೆಗೂ ಅಂದರೆ 1969 ರವರೆಗೂ ಮುನಿ ಶ್ರೀ ಅಜಿತಸಾಗರರು ಸಂಘದಲ್ಲೇ ಇದ್ದರು. ನಂತರ ಅವರ ಸಮಾಧಿ ಆದನಂತರ ಶ್ರುತಸಾಗರರ ಜೊತೆ ಜಯಪುರದಲ್ಲಿ ಬೇರೆ ಆದರು. ಹೀಗೆ ಗಿರಿನಾರ ಕ್ಷೇತ್ರದ ಯಾತ್ರೆಯಲ್ಲಿ ಶ್ರುತಸಾಗರರ ಸಂಘದಿಂದ ಬೇರೆ ಹೊರಟ್ಟಿದ್ದರು. ಅವರು ಬರುವವರೆಗೂ ಉಪ್ಪನ್ನು ತ್ಯಾಗ ಮಾಡಿದ್ದನ್ನು ತಿಳಿದ ಅವರು ಸಂಘದಿಂದ ಬೇರೆಯಾದ 2 ಗಂಟೆಯ ಒಳಗಾಗಿ ಮತ್ತೆ ಬಂದವರು ಹೇಳಿದರು. ಮಾತಾಜೀ ತಮ್ಮ ಉಪ್ಪಿನ ತ್ಯಾಗ ಪೂರ್ತಿಯಾಯಿತಲ್ಲ. ನಿಯಮವನ್ನು ವಾಪಸ್ಸು ತೆಗೆದುಕೊಳ್ಳಿ ಎಂದು. ಆಚಾರ್ಯ ಸಂಘದಿಂದ ಎಂದಿಗೂ ಬೇರೆ ಆಗುವುದಿಲ್ಲ ಎಂದಿದ್ದರು.

ಶ್ರುತಸಾಗರರು ಆಚಾರ್ಯ ಶಿವಸಾಗರರ ಸಮಾಧಿಯಾದ ನಂತರವೇ 1969 ರಲ್ಲಿ ಮುನಿ ಅಜಿತಸಾಗರರು ಮುಂತಾದ ಮುನಿ ಆರ್ಯಿಕೆರೊಡನೆ ಸಂಘದಿಂದ ಬೇರೆಯಾದರು. ಆ ದಿನಗಳಲ್ಲಿ ನನ್ನ ಸಂಘದಲ್ಲಿ ಮುನಿ ಆರ್ಯಿಕೆಯರೊಡನೆ ಎಂತಹ ವಾತ್ಸಲ್ಯದ ಭಾವವಿತ್ತು. ಸಾಧು - ಸಾಧ್ವಿಯರು ನನ್ನ ಮಾತನ್ನು ಒಪ್ಪಿಕೊಳ್ಳುತ್ತಿದ್ದರು. ಆಚಾರ್ಯ ಶಿವಸಾಗರರು ಕೂಡ ನನ್ನನ್ನು ಎಷ್ಟೊಂದು ಗೌರವಿಸುತ್ತಿದ್ದರು. ಇವೆಲ್ಲ ನೆನಪಿಗೆ ಬಂದಾಗ ಮನಸ್ಸು ಪುಲಕಿತಗೊಳ್ಳುತ್ತದೆ. ಇದೆಲ್ಲ ನನ್ನ ಪೂರ್ವ ಪುಣ್ಯ. ಆಗಮದಂತೆಯೇ ಚರ್ಯೆ ನಡೆಸುವುದು ಪರಾಮರ್ಶೆ ಹಾಗೂ ಮಾರ್ಗದರ್ಶನವೇ ಕಾರಣವೆಂದು ತಿಳಿದಿದ್ದೇನೆ. ನನಗೆ ಹೇಗೆ ಸಂಘವನ್ನು ಒಂದೇ ಸೂತ್ರದಲ್ಲಿ ಹಿಡಿದಿಡಬೇಕೆಂಬ ಭಾವನೆ ಇತ್ತೋ ಅದು ಆಚಾರ್ಯ ವೀರಸಾಗರರ ಉಪದೇಶದ್ದೇ ಪ್ರಭಾವ. ಗುರುದೇವರು ಯಾವಾಗಲೂ ಹೇಳುತ್ತಿದ್ದುದ್ದು "ಸೂಜಿಯ ಕೆಲಸ ಮಾಡು ಕತ್ತರಿಯ ಕೆಲಸ ಮಾಡಬೇಡ" ಎಂದು. ಸೂಜಿ ಎಲ್ಲವನ್ನು ಹೊಲೆದು ಜೋಡಿಸುತ್ತದೆ. ಆದರೆ ಕತ್ತರಿ ಬೇರೆ ಮಾಡುತ್ತದೆ. ಸಂಘದಲ್ಲಿ ಸಾಧು - ಸಾಧ್ವಿಯರನ್ನು ಒಟ್ಟುಗೂಡಿಸಬೇಕು. ಸಂಘದಲ್ಲಿ ಒಗ್ಗಟ್ಟಾಗಿ ಇರಬೇಕು ಬೇರೆಯಾಗಲು ಬಿಡಬಾರದು.

ಹೀಗೆ ಮೂಲಾಚಾರದ ಗಾಹೆಗಳನ್ನು ಓದುವುದರಿಂದಲೂ, ಶ್ರೀ ಕುಂದಕುಂದರ ಗಾಥೆಗಳನ್ನು ಮನದಲ್ಲಿ ಯಾವಾಗಲೂ ಸುತ್ತುತ್ತಾ ಇರುತ್ತಿತ್ತು. ಈಗಲೂ ಸುತ್ತುತ್ತಿದೆ. ವಿಶೇಷವಾಗಿ ಈ ಸಾಲಂತು ನೆನಪಿಗೆ ಬರುತ್ತಲೇ ಇರುತ್ತದೆ.

"**ಮಾ ಭೋದು ಮೇ ಸತ್ತು ವಿಗಾಗೀ**" ಅರ್ಥಾತ್ ನನ್ನ ಶತ್ರು ಮುನಿಗಳು ಸಹ ಒಬ್ಬಂಟಿಗರಾಗುವುದು ಬೇಡ. ವಿಹರಿಸುತ್ತಾ ಲಖನೌಗೆ ಬಂದೆವು ಇಲ್ಲಿ ಡಾಲೀಗಂಜದಲ್ಲಿ ತಂಗಿದ್ದೆವು. ಲಖನೌ ಜನತೆ ನನ್ನ ಉಪದೇಶಗಳನ್ನು ಕೇಳಿ ಬಹಳ ಪ್ರಸನ್ನರಾದರು. ಇಲ್ಲಿಂದ ವಿಹರಿಸಿ ನೌರಾಹೀಯ ದರ್ಶನ ಮಾಡಿ ಪುನಃ ಅಯೋಧ್ಯೆಗೆ ತಲುಪಿದೆವು.

೪೦

ರತನಪುರಿ

ರತ್ನಪುರಿಯು ಒಂದು ತೀರ್ಥ ಕ್ಷೇತ್ರವಾಗಿದೆ. ಇಲ್ಲಿ ನೌರಾಹೀ ಎಂಬ ಹೆಸರಿನ ಚಿಕ್ಕ ಹಳ್ಳಿ ಇದೆ. ರಾಮಚಂದ್ರ ವನವಾಸಕ್ಕೆ ಹೋಗುವಾಗ ಅಯೋಧ್ಯೆಯಿಂದ ಜನರೆಲ್ಲ ಇಲ್ಲಿಯವರೆಗೂ ಹಿಂಬಾಲಿಸುತ್ತಾ ಬಂದಿದ್ದರೆಂದು

ಮತ್ತು ಬಹಳ ಅಳುತ್ತಿದ್ದರೆಂದು ಈ ಊರಿನ ಹೆಸರು 'ರೋನಾಯಿ' ಎಂದಾಯಿತು ಎಂದು. ಇಲ್ಲಿ ಸರಯೂ ನದಿಯ ದಡದಲ್ಲಿಯೇ ಎರಡು ದಿಗಂಬರ ಜೈನಮಂದಿರಗಳು ಇವೆ. ಜೈನ ಧರ್ಮಶಾಲೆಯು ಸಹ ಇದೆ. ಇದು 15ನೇ ತೀರ್ಥಂಕರರಾದ ಧರ್ಮನಾಥರ ಜನ್ಮ ಭೂಮಿ. ನನ್ನ ಬಾಲ್ಯದಲ್ಲಿ ಭ. ಧರ್ಮನಾಥರ ಜಿನಪ್ರತಿಮೆಯ ಅನಾವರಣ ಸಮಾರಂಭದಲ್ಲಿ ವೇದಿಕೆಯ ಪರದೆಯನ್ನು ತೆಗೆದಿದ್ದೆ. ನನ್ನ ತಂದೆ ಚಿಕ್ಕ ಹುಡುಗಿಯಾದ ನನ್ನ ಕೈಯಿಂದ ಈ ಮಂಗಲ ಕೆಲಸವನ್ನು ಮಾಡಿಸಿದ್ದರು. ಅವರ ಜನ್ಮ ಸ್ಥಳವನ್ನು ದರ್ಶನ ಮಾಡಿ ಭಕ್ತಿಯನ್ನು ಹೇಳಿ ಜನ್ಮ ಕಲ್ಯಾಣದ ವಂದನೆ ಮಾಡಿ ಅಯೋಧ್ಯೆಗೆ ಬಂದೆ.

ಅಯೋಧ್ಯೆ

ಜೈನ ಮಾನ್ಯತೆಗೆ ಅನುಸಾರ ಇದೊಂದು ಶಾಶ್ವತ ನಗರ. ಇಲ್ಲಿ ಭ. ಋಷಭದೇವರ ಗರ್ಭ ಮತ್ತು ಜನ್ಮ ಎರಡು ಕಲ್ಯಾಣಗಳು ಆಗಿತ್ತು. ಅಜಿತನಾಥರು, ಅಭಿನಂದನನಾಥರು ಸುಮತಿನಾಥರು ಮತ್ತು ಅನಂತನಾಥರ ಗರ್ಭ, ಜನ್ಮ, ತಪ ಮತ್ತು ಜ್ಞಾನ ಈ ನಾಲ್ಕು - ನಾಲ್ಕು ಕಲ್ಯಾಣವಾದ ಭೂಮಿ. ಮಹಾರಾಜ ನಾಭಿರಾಜನ ಮಹಾರಾಣಿ ಮರುದೇವಿಯ ಗರ್ಭದಲ್ಲಿ ತೀರ್ಥಂಕರ ಆದಿನಾಥರು ಜನ್ಮ ಪಡೆಯುವರಿದ್ದರಿಂದ ಕರ್ಮಭೂಮಿಯ ಮೊದಲಲ್ಲಿ ಅನೇಕ ದೇವತೆಗಳು ಬಂದು ಸ್ವತಃ ಈ ಅಯೋಧ್ಯೆಯನ್ನು ನಿರ್ಮಾಣವನ್ನು ಮಾಡಿದ್ದಾರೆ.

ಈಗ ಇಲ್ಲಿ ಎರಡು ಜೈನಮಂದಿರಗಳು ಮತ್ತು ಐದು ಕೂಟಗಳು ಇವೆ. 1962-1963 ರಲ್ಲಿ ಒಂದೇ ಮಂದಿರವಿತ್ತು. ಅಲ್ಲಿ ಆಚಾರ್ಯ ದೇಶಭೂಷಣರ ಪ್ರೇರಣೆಯಿಂದ ಕಟರಾ ಮಂದಿರದಲ್ಲಿ ಒಂದು ಕಡೆ ಭ. ಆದಿನಾಥ, ಭರತ, ಬಾಹುಬಲಿಗಳ ಮೂರು ಖಡ್ಗಾಸನ ಪ್ರತಿಮೆಗಳನ್ನು ಸ್ಥಾಪಿಸಿದ್ದಾರೆ. ಈಗ ರಾಯಗಂಜ್ ಮೊಹಲ್ಲೆಯ ವಿಶಾಲ ಪ್ರಾಂಗಣದಲ್ಲಿ ಭ. ಆದಿನಾಥರ 28 ಅಡಿ ಎತ್ತರದ ಖಡ್ಗಾಸನ ಜಿನ ಪ್ರತಿಮೆಯನ್ನು ಉಸುಕಿನಲ್ಲಿ ಮಲಗಿಸಿದ್ದರು. ಇದರ ಪ್ರತಿಷ್ಠೆ 1965 ರಲ್ಲಿ ಆಯಿತು. ಈ ಮಂದಿರಗಳ ಕೂಟಗಳ ದರ್ಶನ ಮಾಡಿ ಪುನಃ ಮಲಗಿಸಿದ್ದ ಜಿನ ಪ್ರತಿಮೆಯ ಹತ್ತಿರ ಬಂದು ಯೋಚಿಸತೊಡಗಿದೆ. ಈ ವಿಶಾಲಕಾಯ ಜಿನ ಪ್ರತಿಮೆಯನ್ನು ನಿಲ್ಲಿಸಿ ಪ್ರತಿಷ್ಠೆ ಮಾಡಿದ ಮೇಲೆ ಅಯೋಧ್ಯೆ ಪುನಃ ಮಹಾನ್ ತೀರ್ಥವಾಗಬಹುದು. ತೀರ್ಥ ಮೊದಲೆ ಮಹಾನ್ ಆಗಿದೆ. ಆದರೆ ಇದಕ್ಕೆಲ್ಲ ಆಚಾರ್ಯ ದೇಶಭೂಷಣರು ವಿಕಾಸಕ್ಕಾಗಿ ಎಷ್ಟೆಲ್ಲ ಪರಿಶ್ರಮ ಪಟ್ಟಿದ್ದಾರೆ. ಅವರನ್ನು ಯಾವ ಶಬ್ದಗಳಿಂದ ಸ್ತುತಿ ಮಾಡಲಿ. ಅವರಾದರೋ ಮಹಾನ್ ಗುರುಗಳು ಹೀಗೆ ಭಾವಿಸುತ್ತಾ ಪ್ರಸನ್ನಳಾಗಿ ಅಲ್ಲಿಂದ ವಿಹಾರ ಹೊರೆಟೆವು. ಇಲ್ಲಿ ಹನುಮಾನ್‌ಜಢಿ ಬಹಳ ಪ್ರಸಿದ್ಧವಾಗಿದೆ. ರಾಮಚಂದ್ರರ ಮಂದಿರಗಳು ಬಹಳವಿದೆ. ಅಯೋಧ್ಯೆಯನ್ನು ರಾಮನ ಜನ್ಮ ಭೂಮಿ ಎಂದು ತಿಳಿದಿದ್ದಾರೆ. ಏಕೆಂದರೆ ಪ್ರಾಚೀನ ಅಯೋಧ್ಯೆಯು 13 ಯೋಜನವಿತ್ತು. ಅಂದರೆ 93 ಮೈಲಿ ಪ್ರಮಾಣ ಹಾಗೇ ಲೆಕ್ಕ ಹಾಕಿದರೆ ಟಿಕೈತನಗರ, ಬಾರಾಬಂಕಿಯು ಇದರ ವ್ಯಾಪ್ತಿಗೆ ಬರುತ್ತದೆ. ಆದರೆ ಈಗ ಅವೆಲ್ಲ ಬೇರೆ ಬೇರೆಯಾಗಿವೆ.

ಟಿಕೈತನಗರಕ್ಕೆ ಆಗಮನ

ನಮ್ಮ ಸಂಘವನ್ನು ಆಹ್ವಾನಿಸಲು ಟಿಕೈತನಗರದ ಜನರು ಬಂದು ಪ್ರಾರ್ಥಿಸಿದರು. ಆ ಸಮಯದಲ್ಲಿ ಸಮ್ಮೇದ ಶಿಖರ ಯಾತ್ರೆ ಹೋಗುವ ಮಾರ್ಗದರ್ಶಿಗಳ ಪ್ರತೀ ಎಲ್ಲೋ ಕಳೆದು ಹೋಗಿತ್ತು. ನನಗೆ ಹೋಗುವ ಮಾರ್ಗ ಎಲ್ಲವು ನೆನಪಿನಲ್ಲೂ ಬರುತ್ತಿರಲಿಲ್ಲ. ಹಾಗಾಗಿ ಅವರ ಪ್ರಾರ್ಥನೆಯನ್ನು ಮನ್ನಿಸಿ ಟಿಕೈತನಗರಕ್ಕೆ

ಹೋದೆವು. ತಂದೆ ತಾಯಿಗಳಿಬ್ಬರಿಗೂ ತುಂಬ ಸಂತೋಷವಾಯಿತು. ಆರ್ಯಿಕೆ ಆದ ಮೇಲೆ 10 ವರ್ಷಗಳ ನಂತರ ಹುಟ್ಟೂರಿಗೆ ಬಂದಿದ್ದೆ. 5-6 ದಿನ ಅಲ್ಲಿದ್ದೆವು. ಒಳ್ಳೆಯ ಪ್ರಭಾವನೆಯು ಆಯಿತು. ಜೈನೇತರರು ಕೂಡ ನನ್ನ ದರ್ಶನಕ್ಕೆ ಬಂದವರು ತಮ್ಮ ಊರೇ ಧನ್ಯವಾಯಿತೆಂದು ಭಾವಿಸಿದರು. ಇಲ್ಲಿ ಮನೋವತಿ ಮತ್ತು ಪ್ರಕಾಶ ಇಬ್ಬರು ಮನೆಯಲ್ಲೇ ತಂಗಿದ್ದರು. ದಿನ ಚೌಕ ಮಾಡುತ್ತಿದ್ದರು. ಆಗ ತಂದೆಯವರ ಮೋಹ ಜಾಗೃತವಾಗಿ ಅಲ್ಲಿಂದ ಮುಂದಕ್ಕೆ ಮನೋವತಿ ಮತ್ತು ಪ್ರಕಾಶ ಇಬ್ಬರನ್ನು ಕಳುಹಿಸಲು ಒಪ್ಪಲಿಲ್ಲ.

ಅದಕ್ಕೆ ನಾನು ಮಧ್ಯದಲ್ಲಿ ಯಾತ್ರೆಯನ್ನು ಏತಕ್ಕೆ ತಡೆಯುತ್ತೀರಿ ಇದರಿಂದ ಯಾವ ಪುಣ್ಯ ಸಿಗುತ್ತದೆ ಯಾತ್ರೆ ಮಾಡಲು ಬಿಡಿರಿ ಎಂದೆ. ಒಂದು ದಿನ ತಂದೆ ಇಬ್ಬರನ್ನು ಕೂರಿಸಿಕೊಂಡು ದಾರಿಯಲ್ಲಿ ನಡೆದ ಅನುಭವಗಳನ್ನು ಕೇಳುತ್ತಿದ್ದರು. ಆಗ ಪ್ರಕಾಶನು ರಸ್ತೆಯಲ್ಲಿ ಪ್ರತಿದಿನ ಮಾತಾಜೀ ಎರಡು ಹೊತ್ತು ದಿನಕ್ಕೆ 13 ರಿಂದ 15 ಮೈಲಿ ನಡೆಯುತ್ತಿದ್ದರು ನಾನು ಭಗವಂತರ ಪೆಟ್ಟಿಗೆ ಮತ್ತು ಕಮಂಡಲು ಹಿಡಿದುಕೊಂಡು ಅವರ ಜೊತೆಯೇ ನಡೆಯುತ್ತಿದ್ದೆ. ಬಾಬಾಜೀ ಮಧ್ಯಾಹ್ನ 3,4 ಗಂಟೆಗೆ ಎತ್ತಿನಗಾಡಿಯಲ್ಲಿ ಎಲ್ಲಾ ಸಾಮಾನುಗಳನ್ನು ಹಾಕಿಕೊಂಡು ಬರುತ್ತಿದ್ದರು. ರಾತ್ರಿ ಅವರು ತಲುಪುವ ವೇಳೆಗೆ 10-11 ಗಂಟೆ ಆಗಿರುತ್ತಿತ್ತು. ಮಾತಾಜೀ ತಂಗುವ ಜಾಗಕ್ಕೆ ಬರಲು ಒಂದು ಹುಲ್ಲಿನ ಕಂತೆಯಿಂದ ಹುಲ್ಲನ್ನು ತಂದು ಹರಡುತ್ತಿದ್ದರು. ಅದನ್ನು ಕೇಳಿದ ತಂದೆಯವರು ಭಯಂಕರ ಮಾಘ ಮತ್ತು ಪುಷ್ಯಮಾಸದ ಚಳಿಯ ರಾತ್ರಿ 10-11 ಗಂಟೆಯವರಿಗೆ ಮಾತಾಜೀಗಳು ಹೇಗೆ ಕುಳಿತಿರುತ್ತಿದ್ದರು ? ಅದಕ್ಕೆ ಪ್ರಕಾಶ ಮಾತಾಜೀಯರು ಎಲ್ಲಿ ತಂಗುತ್ತಾರೆ ಅಲ್ಲಿ ಸ್ಕೂಲು ಗ್ರಾಮ ಪಂಚಾಯಿತಿಗಳ ಸ್ಥಾನವನ್ನು ಹುಡುಕಿ ಜನಗಳ ಹತ್ತಿರ ಮಾತಾಡಿ ಮಾತಾಜೀಗಳನ್ನು ಅಲ್ಲಿ ನಿಲ್ಲಿಸಿ, ಬಾವಿ ನೋಡಿ ನೀರನ್ನು ಬಿಸಿಮಾಡಿ ಕಮಂಡಲುಗಳಿಗೆ ತುಂಬಿಸಿ ಹಳ್ಳಿಯಲ್ಲಿ ಬತ್ತದ ಹುಲ್ಲನ್ನು ಹುಡುಕಿ ತಂದು ಹಾಸುತ್ತಿದ್ದೆವು. ಹುಲ್ಲು ಸಿಗದಿದ್ದರೆ ಒಂದೇ ಮೂಟೆ ಹುಲ್ಲನ್ನು ತಂದು ಎಲ್ಲರಿಗೂ ಸ್ವಲ್ಪ - ಸ್ವಲ್ಪ ಹಾಕುತ್ತಿದ್ದೆವು. ಕೆಲವು ಕಡೆ ಸಿಗದಿದ್ದರೆ ಜೋಳದ ಕಡ್ಡಿಯನ್ನು ಕಬ್ಬಿನ ಎಲೆಯನ್ನು ತರುತ್ತಿದ್ದೇವು ಅದರ ಮೇಲೆ ಮಾತಾಜೀಗಳು ಕುಳಿತು ಸಾಮಾಯಿಕ ಜಪ ಸ್ವಾಧ್ಯಾಯ ಮಾಡುತ್ತಿದ್ದರು. ಅಮ್ಮ ಕೇಳಿದರು ಕಬ್ಬಿನ ಎಲೆಗಳು ಹರಿತವಾಗಿರುತ್ತವೆ ಮೈಯಲ್ಲಿ ಗಾಯವಾಗುವ ಭಯವಿರುತ್ತದೆ ಅಲ್ಲವೇ. ಅದರ ಮೇಲೆ ಮಾತಾಜೀ ಅಲುಗಾಡದೆ ಕುಳಿತಿರುತ್ತಿದ್ದರು ಬಾಬಾರ ಗಾಡಿ ನಿಧಾನವಾಗಿ ಬಂದಾಗ ಇದರ ಮೇಲೆಯೆ ನಿಧಾನವಾಗಿ ಮಲಗುತ್ತಿದ್ದರು. ಆ ಕಡೆ ಈ ಕಡೆ ಹೊರಳಾಡಿದರೆ ಗಾಯವಾಗುತ್ತಿತ್ತು. ಅಯ್ಯೋ ರಸ್ತೆಯಲ್ಲಿ ಮಾತಾಜೀಗಳಿಗೆ ಎಷ್ಟು ಕಷ್ಟವೆಂದರೆ ತಾಯಿ, ಯಾವ ಮಾತಾಜೀ ಕೂಡ ಇದನ್ನು ಕಷ್ಟವೆಂದು ಪರಿಗಣಿಸುತ್ತಿರಲಿಲ್ಲ. ಅಲ್ಲದೇ ದೊಡ್ಡ ಮಾತಾಜೀಯವರಂತೂ ಹೇ ಭಗವಾನ್ ಇಂತಹ ಚಳಿಯಲ್ಲೂ ಬಯಲಿನಲ್ಲಿಯು ರಾತ್ರಿ ಕಳೆಯುವಂತಹ ಸ್ಥೈರ್ಯವನ್ನು ಯಾವಾಗ ಕೊಡುತ್ತೀಯಪ್ಪ ಎನ್ನುತ್ತಿದ್ದರು. ಎಲ್ಲರೂ ಉತ್ಸುಕತೆಯಿಂದ ಮುಂದೆ ಏನಾಯಿತು ಹೇಳು ಎನ್ನತೊಡಗಿದರು. ಎಲ್ಲರಿಗೂ ಕೇಳುವ ಉತ್ಸಾಹ.

ಬಾಬಾ 2-3 ಗಂಟೆಗೆ ಎದ್ದು ಎಲ್ಲವನ್ನು ಮತ್ತೇ ತೆಗೆಯತೊಡಗುತ್ತಿದ್ದರು. ಎಲ್ಲ ಮಾತಜೀಗಳು ಹುಲ್ಲನ್ನು ಕೊಟ್ಟ ಪ್ರತಿಕ್ರಮಣ, ಸಾಮಾಯಿಕ, ಮುಂತಾದುವುಗಳಲ್ಲಿ ತೊಡಗುತ್ತಿದ್ದರು. ಬಾಬಾ ಇವೆಲ್ಲವನ್ನು ಗಾಡಿಗೆ ತುಂಬಿಕೊಂಡು 4 ಗಂಟೆಗೆಲ್ಲ ಎತ್ತಿನಗಾಡಿಯನ್ನು ಮುಂದಕ್ಕೆ ತೆಗೆದುಕೊಂಡು ಹೋಗುತ್ತಿದ್ದರು. ಮಧ್ಯೆಯೇ ತಂದೆ ಹೇಳಿದರು ಇಷ್ಟು ಬೇಗನೆ ಏಕೆ ಬೆಳಗಾಗಲು 7-7½ ಆಗುತ್ತಿರಲಿಲ್ಲವೇ 6 ಗಂಟೆಯವರೆಗೂ ಹುಲ್ಲಿನ ಮೇಲೆ ಮಲಗಿರಬಹುದಲ್ಲ. ಅದಕ್ಕೆ ಪ್ರಕಾಶ ಇಷ್ಟು ಬೇಗ ಎದ್ದು ಹೊರಡದಿದ್ದರೆ ಮಾತಾಜೀಗಳಿಗೆ ಚೌಕ ಮಾಡಲು ತಡವಾಗುತ್ತಿತ್ತಲ್ಲ ಏಕೆಂದೆರ ಮಾತಾಜೀ ಬೆಳಗ್ಗೆ ಎದ್ದು ಸುಮಾರು 1 ರಿಂದ 10 ಮೈಲಿಯವರೆಗೆ

ನಡೆಯುತ್ತಿದ್ದರು ಬಾಬಾ 4 ಗಂಟೆಗೆ ಹೊರಟವರು 7-8 ಗಂಟೆ ಜಾಗ ತಲುಪಿ ಸಾಮಾನು ಇಳಿಸಿ ಅಡಿಗೆ ಮಾಡುವ ಜಾಗ ನೋಡಿ ನೀರು ತಂದು ಅಡುಗೆ ಮಾಡುವ ವೇಳೆಗೆ 9 ಗಂಟೆಗೆ ಮಾತಾಜೀಗಳು ತಲುಪುತ್ತಿದ್ದರು. 11 ಗಂಟೆಗೆ ಆಹಾರವಾಗಿ ಮಾತಾಜೀಗಳು ಸಾಮಾಯಿಕ ಮುಗಿಸಿ ಪ್ರಯಾಣ ಮುಂದುವರಿಸುತ್ತಿದ್ದರು.

ಒಂದು ದಿನ ಅಮ್ಮನೇ ಬಂದು ಇವೆಲ್ಲವನ್ನು ಹೇಳಿ ಪ್ರಕಾಶ ನಿಜ ಹೇಳುತ್ತಿದ್ದಾನಾ ಅಲ್ಲವೇ ಎಂದರು. ನಾನು ಸುಮ್ಮನೆ ನಕ್ಕೆ ಅವರೇ ಪುನಃ ನಿಮಗೆ ಆಮಶಂಕೆಯ ತೊಂದರೆ ಇತ್ತಲ್ಲ. ಈಗ ಮಾರ್ಗದಲ್ಲಿ ತಮ್ಮ ಆರೋಗ್ಯ ಹೇಗಿದೆ ಎಂದರು. ನಾನು ಹೇಳಿದೆ ಮಥುರಾವರೆಗೆ ಬರುವವರೆಗೆ ಮಾರ್ಗದಲ್ಲಿ ಬಹಳವಾಗಿ ಅತಿಸಾರವಿತ್ತು. ಆದರೆ ಮಥುರೆಗೆ ಬಂದ ಮೇಲೆ ನಾನು ಜಪ ಮಾಡಲು ಪ್ರಾರಂಭಿಸಿದೆ. ರಸ್ತೆಯಲ್ಲಿಯು ಮಂತ್ರ ಜಪಿಸುತ್ತಲೇ ಇರುತ್ತೇನೆ. ಈ ಮಂತ್ರದ ಪ್ರಭಾವದಿಂದಲೇ ನನಗೆ ಈಗ ರಸ್ತೆಯಲ್ಲಿ ಯಾವುದೇ ವಿಶೇಷ ತೊಂದರೆ ಆಗುತ್ತಿಲ್ಲ. ಸಂಘದ ಎಲ್ಲ ಮಾತಾಜೀಯವರು ಯಾವಾಗಲು ಪ್ರಸನ್ನವಾಗೇ ಇರುತ್ತಿದ್ದರು. ಅಲ್ಲದೇ ರಸ್ತೆಯಲ್ಲಿ ನಡೆಯುವಾಗಲೆಲ್ಲ ನಮ್ಮನಮ್ಮಲ್ಲಿ ಕರ್ಮ ಪ್ರಕೃತಿಯ ಬಗ್ಗೆ ಚರ್ಚೆ ಮಾಡುತ್ತಾ ಸಾಗುತ್ತಿದ್ದೆವು. ಜೊತೆಯಲ್ಲಿ ಬರುತ್ತಿದ್ದ ಶ್ರಾವಕರಿಗೂ ಇದರಿಂದ ಬಹಳ ಲಾಭವಾಗುತ್ತಿತ್ತು. ರಸ್ತೆಯಲ್ಲಿ ಜೈನರಿರುವ ಊರು ಸಿಕ್ಕಿದರೆ ಒಂದು ದಿನ ಅಲ್ಲಿಯೇ ತಂಗಿದ್ದು ಶ್ರಾವಕರಿಗೆ ಉಪದೇಶ ಮಾಡಿ ಮುಂದೆ ಹೋಗುತ್ತಿದ್ದೆವು. ಉಪದೇಶ ಕೇಳಿದ ಜನ 3,4 ದಿನವಾದರೂ ತಂಗಲು ಆಗ್ರಹ ಮಾಡುತ್ತಿದ್ದರು. ಕೆಲವು ಕಡೆ ಶ್ರಾವಕರು ಕಾಲು ಹಿಡಿದು ಕುಳಿತುಕೊಂಡು ಬಿಡುತ್ತಿದ್ದರು. ಆದರೆ ನಾನು ಈ ಯಾತ್ರೆಯ ಕಾರಣದಿಂದಾಗಿ ಪ್ರಾರ್ಥನೆಯನ್ನು ಕೇಳಿದರು ಕೇಳದಂತೆ ಮುಂದೆ ಹೊರಡುತ್ತಿದ್ದೆವು.

ಆ ಮಾತುಗಳನ್ನು ಕೇಳಿದ ಅಮ್ಮ ಹೇಳತೊಡಗಿದರು. ಅಮ್ಮಾ ದೀಕ್ಷೆ ತೆಗೆದುಕೊಂಡು ಕಾಲ್ನಡಿಗೆಯಿಂದ ರಸ್ತೆಯಲ್ಲಿ ಕಷ್ಟಗಳನ್ನು ಅನುಭವಿಸುವುದು ಬಹಳ ಕಠಿಣವೆಂದು. ಮನೋವತಿ ಹೇಳಿದಳು. ಪ್ರಾತಃ ಕಾಲ ಪ್ರತಿದಿನ ಗಾಡಿ ಯಾವಾಗಲೂ ಸೇರುವ ಜಾಗವನ್ನು 7-8 ಗಂಟೆಗೆ ತಲುಪುತ್ತಿತ್ತು. ಆಗ ನಾವು ಗಾಡಿಯಿಂದ ಸಾಮಾನುಗಳನ್ನು ಇಳಿಸಿಕೊಂಡು ಬಟ್ಟೆ ಒಣಗಿ ಹಾಕಿ, ಕೆಲವು ವೇಳೆ ಚಳಿಯಲ್ಲೇ ಒದ್ದೆ ಬಟ್ಟೆಯಲ್ಲೇ ಅಡಿಗೆ ಮಾಡಬೇಕಾಗುತ್ತಿತ್ತು. ಮನೋವತಿಯು ಸಂಘದ ಸೇವೆ, ಕುಶಲತೆ ಮತ್ತು ಯೋಗ್ಯತೆಯನ್ನು ನೋಡಿದ ತಂದೆಯವರಿಗೆ ಬಹಳ ಸಂತೋಷವಾಯಿತು. ಅವರು ಕೇಳಿದರು ಮಗಳೇ ನೀವೆಲ್ಲ ಎಷ್ಟು ಹೊತ್ತಿಗೆ ಊಟ ಮಾಡುತ್ತಿದ್ದೀರಿ. ಊಟ ಸಾಮಾನ್ಯವಾಗಿ 12-1 ಗಂಟೆ ಆಗುತ್ತಿತ್ತು. ಅದಕ್ಕೆ ಪ್ರಕಾಶನು ಚೌಕೆಯಲ್ಲಿ ಆಹಾರವು ತಣ್ಣಗೆ ಒಣಗಿದ್ದರೂ ಹೊಟ್ಟೆ ಹಸಿದ್ದಿದ್ದರಿಂದ ತುಂಬ ಚೆನ್ನಾಗಿಯೇ ರುಚಿಸುತ್ತಿತ್ತು. ಮನೆಯಲ್ಲಿ ಅಂತಹ ರೊಟ್ಟಿಯನ್ನು ಕೈಯಲ್ಲೂ ಮುಟ್ಟುತ್ತಿರಲಿಲ್ಲ. ಆದರೆ ದಾರಿಯಲ್ಲಿ ಅದನ್ನೇ ಪ್ರೀತಿಯಿಂದ ತಿನ್ನುತ್ತಿದ್ದ.

ಮತ್ತೇ ಸಂಜೆಗೆ ಏನು ತಿನ್ನುತ್ತಿದ್ದೀರಿ. ಸಂಜೆಯ ವೇಳೆ ಮಾತಾಜೀಯ ಜೊತೆ ನಡೆಯುತ್ತಿದ್ದುದ್ದರಿಂದ ಬಾಯಾರಿಕೆ ಆದರೆ ಬರೀ ಕಮಂಡಲುವಿನ ನೀರನ್ನು ಕುಡಿಯುತ್ತಿದ್ದೆವು. ಅದಕ್ಕೆ ತಂದೆಯವರು ಮನೆಯಲ್ಲಿ ದಿನಕ್ಕೆ 4-5 ಸಲ ತಿನ್ನುವ ನೀನು ರಸ್ತೆಯಲ್ಲಿ ಅದೂ ದಿನಕ್ಕೆ ಒಂದೇ ಸಲ, ಆದ್ದರಿಂದ ನೀನು ಹೋಗುವುದು ಬೇಡ ನೀವು ಬಹಳ ನಿಶ್ಯಕ್ತನಾಗುತ್ತೀಯ ಎಂದರು.

ಟಿಕೈತನಗರದಲ್ಲಿದ್ದಾಗ ಒಬ್ಬ ಹುಡುಗಿ ಬರುತ್ತಿದ್ದಳು. ಅವಳ ಮಡಿಲಿನಲ್ಲಿ ಒಂದು ಚಿಕ್ಕ ಹೆಣ್ಣು ಮಗು ಇರುತ್ತಿತ್ತು. ಆ ಹುಡುಗಿ ಅಲ್ಲೇ ನಿಂತುಕೊಂಡು ಒಂದೇ ಸಮನೆ ನನ್ನನ್ನೇ ನೋಡುತ್ತಿದ್ದಳು ಒಂದು ಸಲ ನಾನೇ ಕೇಳಿದೆ ನೀನು ಯಾರ ಮಗಳು ? ಅವಳು ಅಳುತ್ತಾ ನಾನು ಛೋಟೆಲಾಲರ ಮಗಳು ನನಗೆ ಆಶ್ಚರ್ಯದಿಂದ ನೋಡುತ್ತಾ ನಿನ್ನ ಹೆಸರೇನು ಎಂದೆ. ಅವಳು ಕುಮುದಿನಿ ಎಂದಳು. ಅದಕ್ಕೆ ನಾನು ಅಳುವುದು ಏತಕ್ಕೆ ನಾನು

ನಿನ್ನನ್ನು ಬಿಟ್ಟು ಹೋಗುವಾಗ 2 1/2-3 ವರ್ಷವಿರಬೇಕು. ಈಗ ನಾನು ಹೇಗೆ ಗುರುತಿಸಲಿ ಹೇಳು. ಇದರ ನಂತರ ಅವಳಿಗೆ ಸ್ವಲ್ಪ ಶಿಕ್ಷಣವನ್ನು ಕೊಟ್ಟು ಸಮಾಧಾನ ಮಾಡಿ ಕಳುಹಿಸಿದೆ. ಕುಮುದಿನಿ ಮನೆಗೆ ಹೋದವಳೇ ಅಮ್ಮನಿಗೆ ನನ್ನನ್ನು ಮಾತಾಜೀಯ ಜೊತೆ ಶಿಖಿರ್ಜಿಗೆ ಕಳುಹಿಸು ಎಂದು ಕುಳಿತಳು. ಅದಕ್ಕೆ ಅಮ್ಮ ನಿಮ್ಮ ಅಪ್ಪ ಮನೋವತಿ ಮತ್ತು ಪ್ರಕಾಶರಿಗೆ ಬೇಡ ಎನ್ನುತ್ತಿದ್ದಾರೆ ಇನ್ನು ನಿನ್ನನ್ನು ಹೇಗೆ ಕಳುಹಿಸಲಿ ಎಂದರು. ಬಡಪಾಯಿ ಕುಮುದಿನಿ ಅಳುತ್ತಲೇ ಇದ್ದಳು.

ಸಂಘ ಅಲ್ಲಿಂದ ಹೊರಟು, ಕ್ರಮವಾಗಿ ಫೌಜಾಬಾದ್, ಚೌನಾಪುರ, ಮಾರ್ಗವಾಗಿ ಆರಾ ತಲುಪಿತು. ಕುಮುದಿನಿಯು ನನ್ನ ಹತ್ತಿರ ಬರಲು ಬಹಳ ಸಾಹಸ ಮಾಡಿದಳು. ಕೋಪ ಮಾಡಿಕೊಂಡಳು ಕೊನೆಗೆ ಅತ್ತು - ಅತ್ತು ಸುಮ್ಮನಾದಳು. ಅವಳು ಇನ್ನೇನು ಮಾಡಲು ಸಾಧ್ಯವಿತ್ತು. ಈಗ ಹಲವಾರು ವರ್ಷಗಳಿಂದ ಅವಳ ಮಗಳು ಕು. ಬೀನಾ ನನ್ನ ಹತ್ತಿರವೇ ಇದ್ದಾಳೆ. ಧರ್ಮಾರಾಧನೆ ಸಂಘದ ಸೇವೆ ಮಾಡುತ್ತಿದ್ದಾಳೆ.

ನಾನು ವಿಹರಿಸುತ್ತಾ ಒಂದು ಹಳ್ಳಿಗೆ ಬಂದೆವು. ಬಹಳ ದೊಡ್ಡ ಜಾಗವೇ ಬ್ರ. ಸುಗನಚಂದರು ಎದುರಿಗೆ ಬಂದು ಸ್ವಾಗತಿಸಿದರು. ಒಳಗೆ ಕರೆದುಕೊಂಡು ಹೋದರು. ಹೊರಗಡೆ ಬಿಸಿಲಿದ್ದದ್ದರಿಂದ ಒಂದು ಛಾವಣಿಯ ಕೆಳಗೆ ಕುಳಿತೆವು. ಚೌಕ ಪ್ರಾರಂಭಿಸಿದ್ದರು. ಭಗವಂತರಿಗೆ ಅಭಿಷೇಕವಾಯಿತು. 11 ಗಂಟೆ ಆಯಿತು. ಕಮಂಡಲುವಿಗೆ ನೀರನ್ನು ತುಂಬಿಸಿದರು. ನಾವೆಲ್ಲ ಶುದ್ಧಿ ಮಾಡಿಕೊಂಡು ಬಟ್ಟೆ ಬದಲಾಯಿಸಿ ಆಯಿತು. ಅದೇ ಸಮಯಕ್ಕೆ ಛಾವಣಿಯ ಹತ್ತಿರದಲ್ಲೇ ಒಬ್ಬ ಹೆಂಗಸು ಮಕ್ಕಳಿಗೋಸ್ಕರ ಬಂದಳು. ನಾನು ಅವಳನ್ನು ಕೇಳಿದೆ ನೀವು ಯಾರು ಎಂದು ಅದಕ್ಕೆ ಆ ಮಹಿಳೆ ಹಳೆಯ ಕೊಠಡಿಯ ಕಡೆ ಕೈ ತೋರಿಸುತ್ತಾ ನಾವು ಹರಿಜನರು ಇಲ್ಲಿಯೇ ಇದ್ದೇವೆ ಎಂದಳು. ಆಗ ನಾನು ಇಲ್ಲಿ ಸುತ್ತಮುತ್ತಲು ಇರುವ ಜನರು ಯಾರು ಎಂದೇ? ಇಲ್ಲಿ ಇರುವವರೆಲ್ಲ ಹರಿಜನರೇ ಎಂದಳು ನಾನು ಒಂದೆರಡು ನಿಮಿಷ ಯೋಚಿಸಿದವಳೆ ಕೈಯಲ್ಲಿ ಕಮಂಡಲು ಹಿಡಿದು ಅಲ್ಲಿಂದ ಹೊರಟೆ ರಸ್ತೆಯ ಬಳಿಗೆ ಬಂದು ಮುಂದು ಮುಂದು ಹೊರಟೆ ಬಿಟ್ಟೆ. ನನ್ನ ಶಿಷ್ಯರು ನನ್ನನ್ನೇ ಅನುಸರಿಸಿದರು. ಪ್ರಕಾಶಚಂದ್ರ ತಕ್ಷಣ ಮೂರ್ತಿಗಳನ್ನು ಪೆಟ್ಟಿಗೆಯಲ್ಲಿ ಇಟ್ಟು ತೆಗೆದುಕೊಂಡು ಓಡೋಡಿ ನನ್ನ ಹತ್ತಿರ ಬಂದ. ಅವರಿಗೆಲ್ಲ ಗೊತ್ತಾಯಿತು ಬರೇ ಮಾಂಸಾಹಾರಿ ಜನರೇ ಇರುವ ಜಾಗದಲ್ಲಿ ಮಾತಾಜೀ ನಿಂತು ಕೊಳ್ಳದೆ ಹೊರಟರು ಎಂದು. ಹಿಂದಿನ ದಿನ ಆಹಾರವಾದ ಮೇಲೆ ಹತ್ತು ಮೈಲಿಯವರೆಗೆ ನಡೆದು ಬಂದಿದ್ದೆವು. ಆಹಾರವು ಇಲ್ಲದೆ ಎಲ್ಲರಿಗೂ ಸುಸ್ತಾಗಿತ್ತು. ಆದರೂ ಎಲ್ಲರೂ ಮಹಾಮಂತ್ರವನ್ನು ಜಪಿಸುತ್ತಾ ಮುಂದುವರಿಯುತ್ತಲೇ ಇದ್ದೆವು. ಪ್ರಕಾಶಚಂದ್ರ ಏನನ್ನೊ ಕೇಳಬೇಕೆಂದು ತವಕ ಪಡುತ್ತಿದ್ದ. ಆದರೆ ಕೇಳಲು ಧೈರ್ಯಸಾಕಾಗದೆ ಸುಮ್ಮನೆ ಆಗುತ್ತಿದ್ದ. ಆ ಕಡೆ ಬ್ರ. ಸುಗನಚಂದ ಮೊದಲಾದವರು ಕಿಂಕರ್ತವ್ಯ ಮೂಢರಾಗಿ ಏನನ್ನು ಯೋಚಿಸಲಾರದಾಗಿದ್ದರು. 12 ಗಂಟೆ ಆದಮೇಲೆ ನಾವು ರಸ್ತೆಯ ಬದಿಯಲ್ಲಿಯೇ ಕುಳಿತು ಸಾಮಾಯಿಕ ಮಾಡಿದೆವು. ಮುಕ್ಕಾಲು ಗಂಟೆ ಆದ ಮೇಲೆ ಮತ್ತೇ ನಡೆಯತೊಡಗಿದೆವು.

ಮಾರ್ಗದಲ್ಲಿ ಪ್ರಕಾಶನು ನಿಧಾನವಾಗಿ ಕೇಳಿದ ಮಾತಾಜೀ ಒಂದು ವೇಳೆ ಬೆಳಗ್ಗೆ ಆಹಾರ ತೆಗೆದು ಕೊಳ್ಳದೇ ಹೋದರೆ ಸಾಮಾಯಿಕ ಆದ ಮೇಲೆ ಆಹಾರ ತೆಗೆದುಕೊಳ್ಳಬಹುದಲ್ಲ ಎಂದ. ಅದಕ್ಕೆ ನಾನು ತೆಗೆದುಕೊಳ್ಳಬಹುದೆಂದೆ. ಇಷ್ಟು ಕೇಳಿದ್ದೆ ತಡ ಅವನು ಹಿಂದೆ ತಿರುಗಿ ಒಂದು ಆಟೋ ಹಿಡಿದು ಅವನ ಹತ್ತಿರ ವಿನಯದಿಂದ ಇಂದು ನನ್ನ ಗುರುಗಳಿಗೆ ಆಹಾರವಾಗಿಲ್ಲ. ಅವರೆಲ್ಲ ದಣಿದಿದ್ದಾರೆ ನನ್ನನ್ನು ಬೇಗ ಹಳ್ಳಿಗೆ ತಲುಪಿಸಿ ಎಂದ. ಅವನು ಬೇಗ ತಲುಪಿಸಿದ. ಅಲ್ಲಿ ತಲುಪಿದವನೇ ಮನೋವತಿ ಮತ್ತು ಸರದಾರಮಲ್ಲರನ್ನು ಜೊತೆಗೆ ಕರೆದುಕೊಂಡು ಸ್ವಲ್ಪವೇ ಸಾಮಾನು ತೆಗೆದುಕೊಂಡು ಬೇರೆ ಆಟೋನೋ ಅಥವಾ ಬಸ್ಸಿನಲ್ಲೋ 8

ಮೈಲಿ ದೂರ ಮುಂದೆ ಬೇರೆ ಹಳ್ಳಿಯನ್ನು ತಲುಪಿದರು. ಅಲ್ಲಿಂದ ಬ್ರ. ಸುಗನಚಂದರು ಸಹ ಉಳಿದ ಸಾಮಾನುಗಳನ್ನು ತುಂಬಿಕೊಂಡು ಹೊರಟರು. ಅಲ್ಲಿ ಒಂದು ಮಂದಿರದ ಹತ್ತಿರ ಬಂದು ಒಂದು ಸ್ಥಾನದಲ್ಲಿ ಬೇಗ ಬೇಗ ಚೌಕವನ್ನು ಮಾಡಿಸಿದ್ದು. ಎಲ್ಲರ ಬಟ್ಟೆಯನ್ನು ಒಣಗಿ ಹಾಕಲಾಗಿತ್ತು. ಕಮಂಡಲುಗಳಿಗೆ ನೀರನ್ನು ಬಿಸಿ ಮಾಡಲಾಗಿತ್ತು. ನಾವೆಲ್ಲ ಅಲ್ಲಿ ಸೇರಿ ವಿಶ್ರಾಂತಿ ತೆಗೆದುಕೊಳ್ಳಬೇಕೆನ್ನಿಸುತ್ತಿತ್ತು. ಶರೀರ ಆಯಾಸಗೊಂಡಿತ್ತು. ಆದರೆ ಪ್ರಕಾಶ ಗಂಟೆ ತೋರಿಸಿದ, 3½ ತೋರಿಸುತ್ತಿತ್ತು. ಮಾತಾಜೀ ಬೇಗ ಶುದ್ಧಿ ಮಾಡಿಕೊಳ್ಳಿ ನಾವೆಲ್ಲ ಎದ್ದು ಶುದ್ಧಿ ಮಾಡಿಕೊಂಡು, ಸೀರೆಗಳನ್ನು ಬದಲಾಯಿಸಿದೆವು. ಭಗವಂತರ ದರ್ಶನ ಮಾಡಿ ಆಹಾರಕ್ಕೆ ಎದ್ದೆವು. 3¾ ಆಯಿತು. ಚಳಿಗಾಲವಾದ್ದರಿಂದ 5½ ಗೆಲ್ಲ ಸೂರ್ಯಾಸ್ತವಾಗುತ್ತಿತ್ತು. ಹಾಗಾಗಿ ಚೌಕದಲ್ಲಿ ಎಲ್ಲರಿಗೂ ಬೇಗ ಬೇಗನೆ ಆಹಾರ ನೀಡ ತೊಡಗಿದರು. ಆಹಾರದಲ್ಲಿ ಬಿಸಿನೀರು, ಖಿಚಿಡಿ, ತೊವ್ವೆ ಮಾಡಿದ್ದರು. ನನಗೆ ಬರೇ ಗೋಧಿಯ ನಿಯಮವಿದ್ದರಿಂದ ಎಲ್ಲರು ಸ್ವಲ್ಪ ಸ್ವಲ್ಪವೇ ಆಹಾರ ತೆಗೆದುಕೊಂಡು ಹೊಟ್ಟೆ ಪೂರ್ತಿ ನೀರನ್ನು ಕುಡಿದು ಅಂದಿನ ಆಹಾರವನ್ನು ಮುಗಿಸಿದೆವು. ನಂತರ ಬ್ರಹ್ಮಚಾರಿಗಳು ಬೇಗ ಬೇಗನೆ ಊಟ ಮಾಡುತ್ತಿದ್ದಂತೆ ಕತ್ತಲೆ ಆಗೇ ಬಿಟ್ಟಿತು.

ಆ ದಿನ ಆಹಾರ ಸ್ವಲ್ಪ ತೆಗೆದುಕೊಂಡರು ಬಹಳ ತೃಪ್ತಿಯನ್ನು ತಂದಿತ್ತು. ಸಾಯಂಕಾಲವಾದ ಮೇಲೆ ಮಾತಾಜೀ ಚೆನ್ನಾಗಿ ನಕ್ಕರು. ಆದರೆ ಕಾಲುಗಳು ಹೆಚ್ಚೆ ಇಡಲು ಸಾಧ್ಯವಿಲ್ಲದಂತೆ ಆಗಿತ್ತು. ಬ್ರಹ್ಮಚಾರಿಣಿ ಕೈಗಳನ್ನು ಜೋಡಿಸಿ ಹೇಳಿದರು. ಮಾತಾಜೀ ನಾಳೆ ಆಹಾರವಾದ ಮೇಲೆಯೇ ಪ್ರಯಾಣ ಮುಂದುವರಿಸೋಣ. ನನಗೂ ಆಯಾಸವಾಗಿತ್ತು. ಹಾಗೇ ಎಲ್ಲರು ಆಯಾಸಗೊಂಡಿದ್ದರಿಂದ ಸರಿ ಎಂದೆ. ರಾತ್ರಿ ಸಾಮಾಯಿಕವಾದ ಮೇಲೆ ಎಲ್ಲ ಆರ್ಯಿಕೆಯರು ಮಲಗಿದರು. ಎಲ್ಲರಿಗೂ ಆಯಾಸ ಕಡಿಮೆಯಾಯಿತು. ಬೆಳಗ್ಗೆ ಎದ್ದ ಮೇಲೆ ಪ್ರಕಾಶ ಹೇಳುತ್ತಾನೆ. ಗಡಿಯಾರವನ್ನು ½ಗಂಟೆ ಹಿಂದಕ್ಕೆ ಇಟ್ಟಿದ್ದೆ. ನಾನು ಸಮಯಕ್ಕೆ ಬಹಳ ಬೆಲೆ ಕೊಡುತ್ತಿದ್ದರಿಂದ. ಆದರೂ ಸೂರ್ಯಾಸ್ತಕ್ಕೆ ಮೂರು ಗಂಟೆ ಮೊದಲೇ ಆಹಾರ ತೆಗೆದುಕೊಳ್ಳಬೇಕು ಅದಕ್ಕೇನು ವಿರೋಧವಾಗಿರಲಿಲ್ಲ. ಮೂಲಾಚಾರದಲ್ಲಿ ಬರೆದಿದೆ.

ಉದಯತ್ಥಮಣೇ ಕಾಲೇ ಣಾಲೀತಿಯವಜ್ಜಿಯಮ್ಹೀ ಮಜ್ಝಮ್ಹಿ ।
ಎಕ್ಕಮ್ಹಿ ದುಅ ತಿಏ ವಾ ಮುಹುತ್ತ ಕಾಲೇಯ ಭತ್ತಂ ತು ॥೫೫॥

ಸೂರ್ಯ ಉದಯಿಸಿದ ಮೇಲೆ ಮತ್ತು ಸೂರ್ಯಾಸ್ತವಾಗುವ ಮೊದಲು ಮೂರು ಗಂಟೆಗೆ ಆಹಾರ ತೆಗೆದುಕೊಳ್ಳಬೇಕು. ಇದರಲ್ಲಿ ಒಂದು ಮೂಹೂರ್ತ ಎರಡು ಮೂಹೂರ್ತ ಅಥವಾ ಮೂರು ಮುಹೂರ್ತ ಪರ್ಯಂತ ಯಾರು ಆಹಾರ ಗ್ರಹಣೆ ಮಾಡುತ್ತಾರೋ ಇದು ಒಂದು ಭಕ್ತ ಎಂಬ ಮೂಲಗುಣವಾಗಿದೆ.

ಒಂದು ಘಳಿಗೆ 24 ನಿಮಿಷಕ್ಕೆ ಆಗುತ್ತದೆ. ಆದ್ದರಿಂದ ಒಂದು ಸೂರ್ಯಾಸ್ತ 1 ಗಂಟೆ 12 ನಿಮಿಷ ಮೊದಲೇ ಆಹಾರವಾಗಬೇಕು. ಹಾಗೇ ಆಗಿತ್ತು.

ಈ ವಿಹಾರದ ಮೊದಲು ನಾನು ಆಹಾರದ ಬಗ್ಗೆಯಾಗಲೀ ಚೌಕದ ಬಗ್ಗೆಯಾಗಲೀ ಏನು ಹೇಳುವುದು ದೋಷವೆಂದು ತಿಳಿಯುತ್ತಿದ್ದೆ. ಉತ್ಕೃಷ್ಟವಾದ ಚರ್ಯೆಯನ್ನು ಪಾಲಿಸುತ್ತಿದ್ದೆ. ಆದ್ದರಿಂದ ಯಾರಿಗೂ ಏನು ಹೇಳುತ್ತಿರಲಿಲ್ಲ ಆದರೆ ಈಗ ಬ್ರ. ಸುಗನಚಂದರಿಗೆ ಹೇಳಿದ್ದರೆ ಇದು ಮಾಂಸಾಹಾರಿಗಳ ಸ್ಥಳ ಇಲ್ಲಿ ವ್ಯವಸ್ಥೆ ಮಾಡದೇ ಮುಂದೆ ಮಾಡಿರಿ ಎಂದು ಹೇಳಿದ್ದರೆ ಬಹುಶ ಅವರು ಆ ಹಳ್ಳಿಯಲ್ಲಿ ಬೇರೆಯೇ ಸ್ಥಾನದಲ್ಲಿ ಚೌಕದ ವ್ಯವಸ್ಥೆ ಮಾಡುತ್ತಿದ್ದರು. ಹಾಗೇ ನಾನು ಇಂತಹ ವೀರಚರ್ಯೆಗಳನ್ನು ನಡೆಸಿಕೊಂಡು ಬರುತ್ತಿದ್ದೆ. ಈಗ

ಯೋಚಿಸಿದರೆ ನನಗೆ ಆಶ್ಚರ್ಯವಾಗುತ್ತದೆ. ಈ ರೀತಿಯ ಹಲವಾರು ಘಟನೆಗಳು 1963-1967ರವರೆಗೆ ಹಲವಾರು ಉಂಟಾಗಿದ್ದವು.

೪೧

ಬನಾರಸ ತಲುಪುವ 2-3 ದಿನ ಮೊದಲು ನಾವು ಒಂದು ಹಳ್ಳಿಯ ಹೊರಗೆ ಬಂದು ಸ್ಕೂಲಿನಲ್ಲಿ ತಂಗಿದ್ದೆವು ಬೆಳಗ್ಗೆ ಹೊರಗಡೆ ಒಂದು ಛಾವಣಿಯ ಕೆಳಗೆ ಕುಳಿತು ಕೈಯಲ್ಲಿ "ಪ್ರಥಮಗುಚ್ಛಕ" ವೆಂಬ ಪುಸ್ತಕವನ್ನು ಹಿಡಿದುಕೊಂಡು ಓದುತ್ತಿದ್ದೆ. ಅದರಲ್ಲಿ "ಸಮಯಸಾರ ಕಲಶ" ದ ಶ್ಲೋಕ ಅಚ್ಚಾಗಿತ್ತು. ಕಳಸಕಾವ್ಯವನ್ನು ಸ್ವಾಧ್ಯಾಯ ಮಾಡುತ್ತಿದ್ದೆ. ಎದುರಿಗೆ ಒಬ್ಬ ವಿದ್ವಾಂಸರು ಬಂದರು. ಸ್ನಾನ ಮಾಡಿ ಧೋತಿ ದುಪ್ಪಟ್ಟ ಹೊದ್ದು ತಿಲಕ ಧರಿಸಿದ್ದರು. ಹೆಗಲಲ್ಲಿ ಜನಿವಾರ, ಕಾಲುಗಳಲ್ಲಿ ಮೆಟ್ಟು ಇತ್ತು. ನನ್ನ ಎದುರಿಗೆ ಬಂದವರೇ ನಮಸ್ಕಾರ ಮಾಡಿ ಕೇಳಿದರು. ತಾವು ಇದನ್ನು ಓದುತ್ತಿದ್ದೀರಲ್ಲ, ಇದರಲ್ಲಿಏನಾದರೂ ಅರ್ಥವಾಯಿತೋ ಇಲ್ಲವೋ ನಾನು ಸಂಸ್ಕೃತದಲ್ಲಿಯೇ ಉತ್ತರ ಕೊಟ್ಟೆ "ಅಥ ಕಿಂ ಕಿಂಚಿತ್-ಕಿಂಚಿತ್ ಅವಬುದ್ಧ್ಯತೇ" ಹೌದು ಸ್ವಲ್ಪ ಸ್ವಲ್ಪವೇ ಅರ್ಥವಾಗುತ್ತಿದೆ. ಆ ಬ್ರಾಹ್ಮಣ ವಿದ್ವಾಂಸರು ಆಶ್ಚರ್ಯ ಚಕಿತರಾಗಿ ಪುನಃ ಸಂಸ್ಕೃತದಲ್ಲಿಯೇ ಮಾತಾಡತೊಡಗಿದರು. ನಾನು ಜೈನ ಸಾಧು - ಸಾಧ್ವಿಯರು ಸಂಸ್ಕೃತದಲ್ಲಿ ನಿರಕ್ಷರಿಗಳೆಂದು ತಿಳಿದಿದ್ದೆ. ಆದರೆ ಇಂದು ವಿಪರೀತವನ್ನು ನೋಡಿದೆನಲ್ಲ.

ತಾವು ಸಂಸ್ಕೃತದ ವ್ಯಾಕರಣ ಕಲಿತಿದ್ದೀರ ಎಂದರು ? ಅದಕ್ಕೆ ನಾನು ಸಂಸ್ಕೃತದಲ್ಲಿಯೇ ಹೌದು ಜಿನೇಂದ್ರ ವ್ಯಾಕರಣ ಕಾತಂತ್ರ ರೂಪಮಾಲಾ ಮುಂತಾದ ವ್ಯಾಕರಣವನ್ನು ಕಲಿತಿದ್ದೇನೆ ಮತ್ತು ಕಲಿಸುತ್ತಿದ್ದೇನೆ. ಮತ್ತೇ ಅವರಿಗೆ ಹೇಳಿದೆ ದಿಗಂಬರ ಜೈನಾಚಾರ್ಯರಾದ ಮಹಾವೀರ ಕೀರ್ತಿ ಮಹಾರಾಜರು ಇಂಗ್ಲೀಷ, ಸಂಸ್ಕೃತ, ಪ್ರಾಕೃತ ಕನ್ನಡ ತಮಿಳು ಮೊದಲಾದ ಭಾಷೆಗಳನ್ನೆಲ್ಲ ತಿಳಿದಿದ್ದರು. ಅವರು ಸಂಸ್ಕೃತದಲ್ಲಿ ನಿರರ್ಗಳವಾಗಿ ಮಾತಾಡುತ್ತಿದ್ದರು. ಸಿದ್ಧಾಂತ, ನ್ಯಾಯ, ವ್ಯಾಕರಣ, ಆಯುರ್ವೇದ, ಜ್ಯೋತಿಷ್ಯ, ಮಂತ್ರ, ತಂತ್ರ ಎಲ್ಲದರಲ್ಲೂ ಪರಿಣಿತರು.

ಆಗ ಬ್ರಾಹ್ಮಣ ಮಹೋದಯ 10 ನಿಮಿಷ ನನ್ನ ಹತ್ತಿರವೇ ಕುಳಿತಿದ್ದು ನನ್ನ ಹತ್ತಿರ ಹೇಳಿದ. ತಾವು ಏನು ಓದಿದ್ದೀರಿ ತಿಳಿಸಿ ಎಂದರು ನಾನು ಸಮಯಸಾರದ ಕೆಲವು ಕಾವ್ಯಗಳನ್ನು ಓದಿ ಹೇಳಿದೆ, ಅದರ ಅರ್ಥವನ್ನು ಸಂಸ್ಕೃತದಲ್ಲಿಯೇ ತಿಳಿಸಿದೆ. ಒಂದು ರೀತಿ ಸಂಸ್ಕೃತದ ಪ್ರವಚನವೇ ಆದಂತೆ ಆಯಿತು. ಆ ವಿದ್ವಾನ ನನ್ನನ್ನು ಬಹಳಷ್ಟು ಹೊಗಳುತ್ತಾ ಹೇಳಿದರು ಇದು ನಾನು ಬ್ರಾಹ್ಮಣ ವರ್ಗದವರ ಗೀರ್ವಾಣ ಭಾಷೆ ಎಂದು ತಿಳಿದಿದ್ದೆ. ಆ ಗರ್ವವನ್ನು ಬಿಟ್ಟು ನಿಮ್ಮ ಚರಣ ಕಮಲಗಳಿಗೆ ನತಮಸ್ತಕನಾಗುತ್ತೇನೆ. ಇಂದು ನಿಮ್ಮಿಂದ ಕೇಳಿದ ಆಧ್ಯಾತ್ಮದ ಉಪದೇಶ 5-6 ನಿಮಿಷದ್ದಾದರೂ ನಾನು ಎಂದಿಗೂ ಮರೆಯಲಾರೆ ಎಂದರು.

ಅನಂತರ ನನ್ನ ಸಂಕ್ಷಿಪ್ತ ಪರಿಚಯವನ್ನು ಬ್ರ. ಸುಗನಚಂದ ಮತ್ತು ಪ್ರಕಾಶಚಂದರಿಂದ ಕೇಳಿ ತಿಳಿದುಕೊಂಡರು. ಅವರಿಬ್ಬರು ಈಗ ನೀವು ಮಾತಾಜೀಯವರ ಆಹಾರ ಚರ್ಯೆಯನ್ನು ನೋಡಬೇಕೆಂದು ತಿಳಿಸಿದ್ದಾರೆ. ಆಹಾರ ವಿಧಿಯನ್ನು ನೋಡಿದ ಅವರು ಗದ್ಗದಿತರಾಗಿ ಪ್ರಾರ್ಥಿಸಿದರು. ತಾವು ಇಲ್ಲಿನ ಗುರುಕುಲದಲ್ಲಿ ನನ್ನ ವಿದ್ಯಾರ್ಥಿಗಳಿಗೆ ಸ್ವಲ್ಪ ಧರ್ಮದ ಉಪದೇಶ ಮಾಡಿಯೇ ವಿಹಾರ ಮಾಡಬೇಕೆಂದರು. ಹಾಗಾಗಿ ನಾನು ಅವರಿಗೆ ಉಪದೇಶ ಕೊಟ್ಟೆ ಮುಂದೆ ಪ್ರಯಾಣ ಬೆಳೆಸಿದೆವು. ಆ ವಿದ್ವಾಂಸರು ನಮ್ಮನ್ನು ಕಳುಹಿಸಲು ಸ್ವಲ್ಪ

ದೂರ ನಡೆದು ಬಂದರು. ಅವರು ನಿಂತುಕೊಂಡು ಮಾತಾಡುತ್ತಿದ್ದ ಜಾಗದಲ್ಲೆಲ್ಲಾ ಅವರ ಶಿಷ್ಯರು ಬಂದು ಕಾಲಿಗೆರಗಿ ನಮಸ್ಕರಿಸುತ್ತಿದ್ದುದ್ದನ್ನು ಗಮನಿಸಿದೆ. ಚರಣ ಸ್ಪರ್ಶಿಸುವ ಈ ಗುರುಪರಂಪರೆ ಇಂದಿನ ಸ್ಕೂಲು ಕಾಲೇಜಿನ ಮಕ್ಕಳಲ್ಲಿ ಎಲ್ಲಿ ಸಿಗುತ್ತದೆ. ಅದೊಂದು ಶುದ್ಧ ಗುರುಪರಂಪರೆಯ ಶಾಲೆಯಾಗಿತ್ತು.

ವಿಹಾರ ಮಾಡುತ್ತಾ ಆ ವಿದ್ವಾಂಸರು ಕೇಳಿದರು. ನಾವು ನಿಮ್ಮಲ್ಲಿ ಚರಣಗಳನ್ನು ಸ್ಪರ್ಶಿಸಲು ಅನುಮತಿ ಕೊಡಿರಿ ಅನುಮತಿ ಕೊಡುತ್ತಲೇ ಎಲ್ಲರು ಬಂದು ಚರಣ ಸ್ಪರ್ಶಿಸಿ ನಮಸ್ಕರಿಸಿದರು. ಆ ವಿದ್ವಾಂಸರಂತು ಸಾಷ್ಟಾಂಗ ನಮಸ್ಕರಿಸಿ ಸಂಸ್ಕೃತದಲ್ಲಿಯೇ ಸ್ತುತಿ ಮಾಡಿ ಮತ್ತೆ ಮತ್ತೆ ಚರಣ ಸ್ಪರ್ಶಿಸಿ ಬೀಳ್ಕೊಟ್ಟರು. ಅವರ ಹೆಸರು ಶಾಲೆಯ ಹೆಸರು ವಿಳಾಸವನ್ನು ನನ್ನ ದೈನಿಕ ಡೈರಿಯಲ್ಲಿ ಗುರುತು ಹಾಕಿಕೊಂಡಿದ್ದೆ. ಆದರೆ ಆ ಡೈರಿ ನಮ್ಮ ವಿಹಾರದ ಸಮಯದಲ್ಲಿ ಎಲ್ಲೋ ಹೋಗಿದೆ. ಇಂದು ನೆನಪಿಗೆ ಬರುತ್ತಿಲ್ಲ.

ಈ ವಿದ್ವಾಂಸರ ಹತ್ತಿರ ಮಾತನಾಡಿದ ಮೇಲೆ ನನಗೆ 'ಪಾತ್ರ ಕೇಸರಿ' ಆಚಾರ್ಯರ ಘಟನೆ ನೆನಪಿಗೆ ಬಂದಿತು. ಏಕೆಂದರೆ ಯಾರು ಜೈನಮುನಿಗಳ ಬಾಯಿಯಿಂದ 'ಆಪ್ತ ಮೀಮಾಂಸಾದ' ಸ್ತೋತ್ರಗಳನ್ನು ಕೇಳಿ ಏಕಪಾಠಿಯಾದ್ದರಿಂದ ಅರ್ಥವನ್ನು ಗ್ರಹಿಸಿ ಹೃದಯಸ್ಥ ಮಾಡಿಕೊಂಡು ಜೈನಧರ್ಮ ಸ್ವೀಕರಿಸಿದ್ದನ್ನು ನೆನಪಿಸಿಕೊಂಡರು.

ಆ ವಿದ್ವಾಂಸ ಮತ್ತೆ ಮತ್ತೆ ನನ್ನಲ್ಲಿ ಹೇಳುತ್ತಿದ್ದ ಇಂದಿನಿಂದ ನನಗೆ ಜೈನಧರ್ಮ ಮತ್ತು ಜೈನಸಾಧುಗಳ ಬಗ್ಗೆ ಇದ್ದ ದ್ವೇಷ ಹೋಯಿತು. ಈಗ ನಾನು ಖಂಡಿತಾ ಜೈನಧರ್ಮದ ಗ್ರಂಥಗಳನ್ನು ಓದುತ್ತೇನೆ. ಆಗ ನಾನು ಅವರಿಗೆ ಆತ್ಮಾನುಶಾಸನ ಮತ್ತು ಪುರುಷಾರ್ಥಸಿದ್ಧ್ಯುಪಾಯವನ್ನು ಓದಲು ಪ್ರೇರಣೆಯನ್ನು ಕೊಟ್ಟಿದ್ದೆ. ಅದರ ನಂತರ ಅವರು ಕಲ್ಕತ್ತೆಯಲ್ಲಿ ನನ್ನನ್ನು ನೋಡಲು ಬಂದಿದ್ದರು. ಹೀಗೆ ಮಾರ್ಗದಲ್ಲಿ ಹಲವು ಕಡೆ ಸ್ಕೂಲಿನಲ್ಲಿ ವಿದ್ವಾಂಸರ ಹತ್ತಿರ ಸಂಸ್ಕೃತ ಭಾಷೆಯಲ್ಲಿ ಮಾತನಾಡುವ ಮತ್ತು ವಿದ್ಯಾರ್ಥಿಗಳಿಗೆ ಉಪದೇಶ ಕೊಡುವ ಸಂದರ್ಭಗಳು ಬರುತ್ತಿದ್ದವು.

ಆಗ ನಾನು ಯೋಚಿಸಿದೆ ಬನಾರಸಿನ ಸುತ್ತ - ಮುತ್ತ ಸಂಸ್ಕೃತದ ಅಧ್ಯಯನ ಚೆನ್ನಾಗಿ ನಡೆಯುತ್ತಿದೆ. ನನ್ನ ಮನಸ್ಸಿನಲ್ಲಿ ಒಂದು ಆಶೆ ಇತ್ತು. ಸುಮಾರು 100 ಹುಡುಗರು 100 ಹುಡುಗಿಯರನ್ನು ಮನೆ, ಮನೆಯಿಂದ ಕರೆತಂದು ಬ್ರಹ್ಮಚರ್ಯ ವ್ರತವನ್ನು ಕೊಟ್ಟು ಸಂಸ್ಕೃತ ವ್ಯಾಕರಣ, ಮತ್ತು ಜೈನ ಸಿದ್ಧಾಂತಗಳು ನ್ಯಾಯ ಗ್ರಂಥಗಳ ಆಳವಾದ ಅಧ್ಯಯನವನ್ನು ಮಾಡಿಸಬೇಕು. ಈ ಭಾವನೆ ಈಗ ಜಾಗೃತವಾಯಿತು.

1968ರಲ್ಲಿ ಪ್ರತಾಪಗಢದಲ್ಲಿ ಚಾತುರ್ಮಾಸ ಮಾಡುವಾಗ ನಾನು ಆರ್ಯಿಕೆ ವಿಶುದ್ಧಮತೀಯ ಜೊತೆ ಚರ್ಚೆಮಾಡುತ್ತಾ ನನ್ನ ಭಾವನೆಗಳನ್ನು ಹೇಳಿದೆ. ಆಗ ಅವರು ಒತ್ತುಕೊಟ್ಟು ಹೇಳಿದರು. ಮಾತಾಜೀ ಒಂದು ವೇಳೆ ತಾವು ಬುಂದೇಲಖಂಡದಲ್ಲಿ ವಿಹಾರ ಮಾಡಿದರೆ ನಾನು ದೃಢವಾಗಿ ಹೇಳುತ್ತೇನೆ ತಮಗೆ ನೂರು ಜನ ಹುಡುಗಿಯರು ಸಿಗಬಹುದು. ಆಯಿತು ನಾನು ಉತ್ತರಪ್ರದೇಶಕ್ಕೆ ಬಂದು ಜಂಬೂದ್ವೀಪದ ನಿರ್ಮಾಣ ಕಾರ್ಯದಲ್ಲಿ ಮಾರ್ಗದರ್ಶನ ಮಾಡಬೇಕಾಗಿ ಬಂದಿತು. ಈಗ ಅಲ್ಲಿ ಸುಮಾರು 50 ಜನ ಬ್ರಹ್ಮಚಾರಿಗಳು ಸುಮಾರು 100 ಜನ ಬ್ರಹ್ಮಚಾರಿಣಿಯರು ಮನೆಯಿಂದ ಬಂದು ಮೋಕ್ಷ ಮಾರ್ಗವನ್ನು ಕಂಡುಕೊಳ್ಳುತ್ತಿದ್ದಾರೆ. ಅಧ್ಯಯನವು ಚೆನ್ನಾಗಿ ನಡೆಯುತ್ತಿದೆ. ಇಲ್ಲಿ ವಿದ್ಯಾರ್ಥಿವರ್ಗಕ್ಕಾಗಿ ನಾನು 1973 ರಲ್ಲಿ ನನ್ನ 'ಕಾತಂತ್ರ ರೂಪಮಾಲ' ದ ಅನುವಾದಿತ ಗ್ರಂಥ 1987 ರ ಪ್ರತಿಷ್ಠೆಯಲ್ಲಿ ಮುದ್ರಿತವಾಗಿ ಎಲ್ಲರಿಗೂ ದೊರೆಯಿತು.

ಬನಾರಸ್ ಕ್ಷೇತ್ರದ ದರ್ಶನ

ಬನಾರಸ್ಸಿನ ಕೆಲವು ಶ್ರಾವಕರು ಎದುರುಗೊಳ್ಳಲು ಬಂದಿದ್ದರು. ನಾನು ಸಂಘ ಸಹಿತ ಮೈದಾಗಿನ ಧರ್ಮಶಾಲೆಯಲ್ಲಿ ಇಳಿದುಕೊಂಡೆವು. ಅಲ್ಲಿಂದ ಮಂದಿರಗಳನ್ನು ದರ್ಶನ ಮಾಡಲು ಹೊರೆಟೆವು. ಇಲ್ಲಿ ನಾಲ್ಕು ತೀರ್ಥಂಕರರ ಜನ್ಮವಾಗಿದೆ. ಸುಪಾರ್ಶ್ವನಾಥ, ಪಾರ್ಶ್ವನಾಥ, ಚಂದ್ರಪ್ರಭ ಮತ್ತು ಶ್ರೇಯಾಂಸನಾಥ.

ಭದೈ ನೀ ಘಾಟ

ಭದೈನೀ ಘಾಟ ಮಂದಿರವನ್ನು ದರ್ಶನ ಮಾಡಲು ಹೋದೆವು. ಇಲ್ಲಿ ಸ್ಯಾದ್ವಾದ ಮಹಾವಿದ್ಯಾಲಯ ಎಂಬ ಒಂದು ಸಂಸ್ಥೆ ಇದೆ. ಈ ಭವನದ ಮೇಲೆ ಭ. ಸುಪಾರ್ಶ್ವನಾಥರ ಮಂದಿರವಿದೆ. ಇದು ಗಂಗಾನದಿಯ ದಡದಲ್ಲಿದೆ, ಸುಂದರವಾಗಿದೆ. ವೇದಿಯ ಮೇಲೆ ಸುಪಾರ್ಶ್ವನಾಥರ ಪ್ರತಿಮೆ ಇದೆ. ಇನ್ನು ಕೆಲವು ಪ್ರತಿಮೆಗಳು ಇವೆ. ಗರ್ಭಗೃಹದ ದ್ವಾರದಲ್ಲಿ ಎಡ - ಬಲದ ಕಡೆ ಮಾತಂಗ ಯಕ್ಷ -ಮಾನವೀ (ಕಾಳಿ) ಯಕ್ಷಿಯರಿದ್ದಾರೆ. ಇಲ್ಲಿ ದರ್ಶನವಾಯಿತು. ಎದುರಿಗೆ ಸ್ಯಾದ್ವಾದ ಮಹಾವಿದ್ಯಾಲಯದ ಪ್ರಧಾನ ಪಂಡಿತರಾದ ಕೈಲಾಸಚಂದ ಸಿದ್ಧಾಂತ ಶಾಸ್ತ್ರಿಗಳು ಸಿಕ್ಕಿ ವಿದ್ಯಾಲಯದ ಒಳಗೆ ಕರೆದುಕೊಂಡು ಹೋಗಿ ಎಲ್ಲವನ್ನು ತೋರಿಸಿದರು. ಸಂಸ್ಕೃತದಲ್ಲಿಯೇ ವಾರ್ತಾಲಾಪ ಮಾಡುತ್ತಾ ಸಂತಸಗೊಂಡರು. ಒಂದು ಗಂಟೆ ಸುತ್ತಾಡಿದ ನಂತರ ಹೇಳಿದರು. ಮಾತಾಜೀ ನನಗೆ ದಿಗಂಬರಚೈನ ಮುನಿಗಳಾಗಲಿ - ಆರ್ಯಿಕೆಯ ಬಗ್ಗೆಯಾಗಲಿ ಆಸಕ್ತಿ ಇರಲಿಲ್ಲ. ಆದರೆ ಇಂದು ನಿಮ್ಮ ಜೊತೆ ಮಾತಾಡಿದ ಮೇಲೆ ನಿಮ್ಮ ನಡವಳಿಕೆ, ಜ್ಞಾನವನ್ನು ನೋಡಿದ ಮೇಲೆ ನಾನು ಬಹಳ ಪ್ರಭಾವಿತನಾಗಿದ್ದೇನೆ. ನನಗೆ ಬಹಳ ಸಂತೋಷವಾಗುತ್ತಿದೆ. ಇಂದು ಕೂಡ ತಮ್ಮಂತಹ ಆರ್ಯಿಕೆಯರು ಇದ್ದಾರಲ್ಲ, ನಾನು ತಿಳಿದಂತೆ ತಾವಾಗಲಿ, ತಮ್ಮ ಸಂಘದವರಾಗಲಿ ಯಾರಿಂದಲೂ ದಾನವನ್ನು ಸ್ವೀಕರಿಸಿಲ್ಲ. ಇಂತಹ ವ್ಯವಸ್ಥೆ ಬಹಳ ಚೆನ್ನಾಗಿದೆ ಎಂದರು.

ಭೇಲಪುರ

ಇಲ್ಲಿಂದ ಭೇಲಪುರಕ್ಕೆ ಹೊರಟೆವು. ಇಲ್ಲಿಯ ಎರಡು ಮಂದಿರ, ಧರ್ಮಶಾಲೆ ಇದೆ. ಇಲ್ಲಿ ವೇದಿಕೆಯಲ್ಲಿ ದಿಗಂಬರ ಮತ್ತು ಶ್ವೇತಾಂಬರ ಎರಡು ಸಂಪ್ರದಾಯದ ಪ್ರತಿಮೆಗಳು ಇವೆ. ಪಕ್ಕದಲ್ಲಿರುವ ಮಂದಿರದಲ್ಲಿ ಮೂಲಸ್ವಾಮಿ ಪಾರ್ಶ್ವನಾಥ ಸ್ವಾಮಿ ದಿಗಂಬರರಿಗೆ ಸೇರಿದೆ.

ಸಿಂಹ ಪುರಿ

ಇದು ಬನಾರಸ್ಸಿನಿಂದ 6 ಕಿಲೋಮೀಟರ್ ದೂರದಲ್ಲಿದೆ. ಇದು ದಿಗಂಬರ ಜೈನ ಮಂದಿರ ಇಲ್ಲಿ ಶ್ರೇಯಾಂಸ ತೀರ್ಥಂಕರರ ನಾಲ್ಕು ಕಲ್ಯಾಣಗಳು ಆಗಿವೆ. ಜೈನಮಂದಿರದ ಹತ್ತಿರದಲ್ಲಿಯೇ ಒಂದು ಸ್ತೂಪವಿದೆ. ಇದರ ಎತ್ತರ 103 ಅಡಿ. ಮಧ್ಯದ ವ್ಯಾಸ 93 ಅಡಿ ಸ್ತೂಪದ ಎದುರಿಗೆ ಸಿಂಹದ ದ್ವಾರ ಮಾಡಿದ್ದಾರೆ. ಇದರ ಎರಡು ಸ್ತಂಭಗಳ ಮೇಲೆ ಸಿಂಹಗಳನ್ನು ನಾಲ್ಕು ಕಡೆ ನಿರ್ಮಾಣ ಮಾಡಿದ್ದಾರೆ. ಸಿಂಹಗಳ ಕೆಳಗೆ ಧರ್ಮಚಕ್ರವಿದೆ.

ಭಾರತ ಸರ್ಕಾರವು ಈ ಸ್ತಂಭದ ಸಿಂಹತ್ರಯವನ್ನು ರಾಜಚಿಹ್ನೆಯಾಗಿ ಪರಿಗಣಿಸಿದೆ. ಮತ್ತು ಧರ್ಮಚಕ್ರವನ್ನು ರಾಷ್ಟ್ರಧ್ವಜದಲ್ಲಿ ಮುದ್ರಿಸಿದ್ದಾರೆ. ಆಡಳಿತದಲ್ಲಿ ಧರ್ಮಚಕ್ರಕ್ಕೆ ಮಾನ್ಯತೆ ಕೊಟ್ಟಿದ್ದರಿಂದ ಜನಸಾಮಾನ್ಯರಿಗೆ ಇದರ ಕಡೆ ವಿಶೇಷ ಗಮನ ಉಂಟಾಯಿತು.

ಚಂದ್ರಪುರಿ

ಈ ಕ್ಷೇತ್ರ ಬನಾರಸ್ಸಿನಿಂದ ಮುಂದೆ ಗಂಗಾನದಿಯ ದಡದಲ್ಲಿಯೇ ಇದೆ. ಇದು 8 ನೇಯ ತೀರ್ಥಂಕರರಾದ ಚಂದ್ರಪ್ರಭರ ಜನ್ಮಸ್ಥಳ. ಇದೇ ಸ್ಥಾನದಲ್ಲಿ ಭ. ಗರ್ಭ, ಜನ್ಮ, ತಪ ಮತ್ತು ಜ್ಞಾನ ಈ ನಾಲ್ಕು ಕಲ್ಯಾಣಗಳಾಗಿವೆ. ನಾವು ದರ್ಶನಕ್ಕೆ ಹೋದ ದಿನ ಅಲ್ಲಿ ಚಿಕ್ಕ ಜಾತ್ರೆ ಅಂದರೆ ಭಗವಂತರ ಗರ್ಭಕಲ್ಯಾಣ, ಅಲ್ಲಿಗೆ ಕೈಲಾಸಚಂದರು ಬಂದಿದ್ದರು. ಮತ್ತೊಮ್ಮೆ ಅವರ ಹತ್ತಿರ ಸ್ವಲ್ಪ ಚರ್ಚೆಯಾಯಿತು. ಇಲ್ಲಿ ಚೈತ್ರ ಕೃಷ್ಣ ಪಂಚಮಿಯ ದಿನ ವಾರ್ಷಿಕ ಜಾತ್ರೆ ನಡೆಯುತ್ತದೆ.

ಇಲ್ಲಿ ಬನಾರಸ್ಸಿನ ಒಂದು ಸ್ಥಾನದಲ್ಲಿ ನಾನು "ಶಿವಪಿಂಡಿ" ಯನ್ನು ನೋಡಿದೆ. ಅದು "ಶತತುಂಡಾಗಿತು" ಮತ್ತು ಸರಪಳಿಯಿಂದ ಬಂಧಿಸಲಾಗಿತ್ತು. ಆ ಜಾಗದ ನೆನಪಿಲ್ಲ ಆ ಶಿವಪಿಂಡಿಯ ನೆನಪು ಬರುತ್ತಿದ್ದಂತೆ ಈ ಪದ್ಯ ನೆನಪಿಗೆ ಬರದೆ ಇರುವುದಿಲ್ಲ.

ಶಿವಕೋಟಿ ನ ಹಠ ಥಾ ಕಿಯಾ ಸಾಮಂತ ಭದ್ರ ಸೋಂ
ಶಿವಪಿಂಡ ಕೋ ವಂದನ ಕರೋ ಶಂಕೋ ಅಭದ್ರ ಸೋಂ
ಉಸವಕ್ತ ಸ್ವಯಂಭೂ ರಚಾ ಗುರು ಭಾವಭದ್ರ ಸೋಂ
ಜಿನಚಂದ್ರ ಕೀ ಪ್ರತಿಮಾ ತಹಾಂ ಪ್ರಗಟೀ ಸುಭದ್ರ ಸೋಂ

ಆರಾ

ಲಾಡನೂ ಇಂದ ಸಮ್ಮೇದ ಶಿಖರವು ಸುಮಾರು 1200 ಮೈಲಿ ಇತ್ತು. ಅದರ ಮಾರ್ಗಸೂಚಿ ಸಿಕ್ಕಿತು. ಅದನ್ನು ಬ್ರಹ್ಮಚಾರಿ ನನಗೆ ಕೊಟ್ಟರು. ಅದರ ಆಧಾರದ ಮೇಲೆ ಪ್ರಯಾಣವನ್ನು ಯೋಜಿಸತೊಡಗಿದೆ. ತಿಂಗಳಿಗೆ 300 ಮೈಲಿಯಂತೆ ನಡೆದರೆ 6 ತಿಂಗಳಿಗೆ ಸಮ್ಮೇದ ಶಿಖರವನ್ನು ತಲುಪಬಹುದು. ಹೀಗೆ ಯೋಚಿಸಿದ ನಾವು ಟಿಕೈತನಗರದಲ್ಲಿ ಹೆಚ್ಚು ವಿಶ್ರಾಂತಿ ಪಡೆಯಲಿಲ್ಲ. ಅಲ್ಲಿಂದ ಹೊರಟು ದರಿಯಾಬಾದ್, ಮುಂದೆ ಫೌಜಾಬಾದನಿಂದ ಮುಂದೆ ಆರಾ ತಲುಪಿದೆವು. ಆರಾದಲ್ಲಿ ಬ್ರ. ಚಂದಾಬಾಯಿ ತುಂಬ ವಾತ್ಸಲ್ಯಪೂರ್ಣ ಮಹಿಳೆ. ಇವರಂತು ಬಹಳ ಆದರದಿಂದ ಸಂಘವನ್ನು ಸ್ವಾಗತಿಸಿದರು. ಆಶ್ರಮದಲ್ಲಿ ತಂಗಿದ್ದೆವು. ಅಲ್ಲಿಗೆ ವಿಮಲಸಾಗರರು ಬರುತ್ತಿದ್ದಾರೆ ಎಂಬ ಸುದ್ದಿ ಕೇಳಿದೆ ಆಗ ಚಂದಬಾಯಿಯ ಆಗ್ರಹದಿಂದ ಕೆಲವು ದಿನ ತಂಗಲೇಬೇಕಾಯಿತು.

ಆಚಾರ್ಯ ವಿಮಲಸಾಗರರು ಬಂದರು. ಎರಡು ಸಂಘಗಳ ಸಮ್ಮೇಳನ ಬಹಳ ಪ್ರಭಾವಪೂರ್ಣವಾಗಿತ್ತು. ಬ್ರ. ಚಂದಾಬಾಯಿ ನನ್ನ ಹತ್ತಿರವೇ ಗಂಟೆಗಟ್ಟಲೆ ಕುಳಿತಿರುತ್ತಿದ್ದರು. ಗೊಮ್ಮಟಸಾರ ಮುಂತಾದ ಅನೇಕ ಪ್ರಕಾರದ ಸೈದ್ಧಾಂತಿಕ ವಿಷಯಗಳ ಬಗ್ಗೆಯು ಚರ್ಚೆ ಮಾಡುತ್ತಿದ್ದರು. ನಾನು ಜಿನಮತಿಯ ಜೊತೆ ಸಂಸ್ಕೃತದಲ್ಲಿ ಮಾತನಾಡುವುದನ್ನು ಕೇಳಿ ಅವರು ಬಹಳ ಸಂತೋಷ ಪಡುತ್ತಿದ್ದರು. ನಾನು ನ್ಯಾಯದ ಬಗ್ಗೆ ಚರ್ಚೆ ಮಾಡುತ್ತಿದ್ದೆ. ಆಗಾಗ್ಗೆ ಉತ್ತಮ ಗ್ರಂಥಗಳ ಬಗ್ಗೆ ಚರ್ಚೆ ಕೇಳಿ ಅವರಿಗೆ ಏನಾದರು ಆಗಲಿ ಚರ್ಚೆಯನ್ನು ಶ್ರದ್ಧೆಯಿಂದ ಕೇಳುತ್ತಿದ್ದರು. ಸಮ್ಮೇದ ಶಿಖರದ ವಂದನೆ ಆದ ಮೇಲೆ ಮಾತಾಜೀ ತಾವು ಆರಾದಲ್ಲಿಯೇ ಚಾತುರ್ಮಾಸ ಮಾಡಬೇಕು. ನಿಮ್ಮ ತತ್ತ್ವ ಚರ್ಚೆಯಿಂದ ನಮ್ಮ ಜನರಿಗೆ ಬಹಳ ಲಾಭಾವಾಗುತ್ತದೆ ಎನ್ನುತ್ತಿದ್ದರು.

ತಂದೆಯ ಪ್ರಯತ್ನ

ಆ ಕಡೆ ತಂದೆ ಕೈಲಾಸನಿಗೆ ಹೇಳಿದರು. ಕೈಲಾಸ ನೀನು ಆರಾಗೆ ತಂತಿ ಕೊಡು ನಿನ್ನ ತಂದೆಗೆ ಬಹಳ ಹುಷಾರಿಲ್ಲ ಆದ್ದರಿಂದ ಪ್ರಕಾಶ ನೀನು ಬೇಗನೆ ಹೊರಟು ಬಾ ಎಂದು. ಅವರ ಆಜ್ಞೆಯಂತೆ ಕೈಲಾಸ ತಂತೀ ಕೊಟ್ಟ. ಆರಾಕ್ಕೆ ತಂತೀ ತಲುಪಿತು. ಆ ಸಮಯದಲ್ಲಿ ವಿಮಲಸಾಗರರ ಸಂಘ ಬಂದಿತ್ತು. ಪ್ರಕಾಶಚಂದ ಗಾಬರಿಯಾಗಿ ಅಲ್ಲಿಗೆ ಬಂದು ಹೇಳಿದ ನನ್ನ ತಂದೆಯವರಿಗೆ ಆರೋಗ್ಯ ಸರಿ ಇಲ್ಲವೆಂದು ತಾರು ಬಂದಿದೆ. ಅದಕ್ಕೆ ಅವರು ಪ್ರಕಾಶ ಚಿಂತೆ ಮಾಡಬೇಡ. ನಿಮ್ಮ ತಂದೆ ಆರೋಗ್ಯವಾಗಿದ್ದಾರೆ. ಅಂಗಡಿಯಲ್ಲಿ ಕುಳಿತು ಬಟ್ಟೆ ಹರಿಯುತ್ತಿರುತ್ತಾರೆ. ಗ್ರಾಹಕರು ಸುತ್ತು ಕೊಂಡಿರುತ್ತಾರೆ ಎಂದರು. ಪ್ರಕಾಶನು ಶಾಂತನಾದನು ಅವನಿಗೆ ಅಂಜಿಕೆ ಇತ್ತು. ಆಗ ಎಲ್ಲರೂ ಸಮಾಧಾನ ಮಾಡಿದ ಮೇಲೆ ಧೈರ್ಯ ಬಂದಿತು.

ಆಚಾರ್ಯ ವಿಮಲಸಾಗರರು ಬಹಳ ವಾತ್ಸಲ್ಯಮಯಿ. ಇಲ್ಲಿ ಶರಬದೀಜೀ ಅವರು ಮೊದಲು ಇಲ್ಲಿ ಅಧ್ಯಾಪಕಿಯಾಗಿದ್ದರು. ಈಗ ಅವರು ವಿಜಯಮತೀ ಆರ್ಯಿಕೆ ಆಗಿದ್ದಾರೆ. ಬ್ಯಾವರದ ಚಾತುರ್ಮಾಸದಲ್ಲಿ ನನ್ನ ಹತ್ತಿರಬಂದುಕೆಲದಿನ ಇದ್ದರು. ಆ ಸಮಯದಲ್ಲಿ ಪಠನ - ಪಾಠನ ಮತ್ತು ಕರ್ಮಕಾಂಡದ ಚರ್ಚೆ ಸಂಸ್ಕೃತದಲ್ಲಿ ನಡೆಯುತ್ತಿತ್ತು. ಇದನ್ನು ನೋಡಿ ಪ್ರಭಾವಿತರಾದ ಅವರು ಮಾತಾಜೀ ಆರಾದಿಂದ ಬಿಡುಗಡೆ ಹೊಂದಿ ನಿಮ್ಮ ಹತ್ತಿರ ಬಂದು, ಅಷ್ಟ ಸಹಸ್ರಿ ಮುಂತಾದ ನ್ಯಾಯಗ್ರಂಥದ ಉನ್ನತ ಅಧ್ಯಯನ ಮಾಡಿ, ಒಳ್ಳೆಯ ಜ್ಞಾನವನ್ನು ಪಡೆಯಬೇಕೆಂದು ಬಯಸಿದ್ದೇನೆ. ಆದರೆ ಯೋಗಾಯೋಗದಿಂದ ಆಚಾರ್ಯ ವಿಮಲಸಾಗರರ ದರ್ಶನವಾಗಿ ಅವರಲ್ಲಿ ಆರ್ಯಿಕೆ ದೀಕ್ಷೆಯನ್ನು ಪಡೆದಿದ್ದು ಆಯಿತು. ಆದ್ದರಿಂದ ಸಂಘದಲ್ಲಿಯೇ ಇದ್ದರು. ಹಿಂದಿನ ನೆನಪು ಬಂದು ನಕ್ಕು ಹೇಳಿದರು. ಮಾತಾಜೀ ನಿಮ್ಮ ಹತ್ತಿರ ಬರುವ ಯೋಗ ನನಗಿಲ್ಲ ಅಷ್ಟ ಸಹಸ್ರಿಯ ಅಧ್ಯಯನದ ಯೋಗವು ಇಲ್ಲ ಎಂದರು.

ಪಟನಾ

ಮಥುರಾ ವಾತಾವರಣದಿಂದ ನಮ್ಮ ವಿಹಾರವು ಪಟನಾ ಕಡೆಗೆ ಹೊರಟಿತು. ಮಹಾವೀರಜಯಂತಿಯ ಸಮಯ ಹತ್ತಿರವಾಗುತ್ತಿತ್ತು. ಮಹಾವೀರ ಜಯಂತಿಯ ಸಮಯ ಹತ್ತಿರವಾಗುತ್ತಿತ್ತು. ಸಾಹಿತ್ಯ ರತ್ನ ಪ್ರಕಾಶಚಂದರು ಮಹಾವೀರ ಜಯಂತಿಯ ಕಾರ್ಯಕ್ರಮವನ್ನು ಒಂದು ದೊಡ್ಡ ಹಾಲಿನಲ್ಲಿ ಆಯೋಜಿಸಿದ್ದರು. ಅಲ್ಲಿ ವಿಶೇಷ ರೂಪದಲ್ಲಿ ನನ್ನ ಪ್ರವಚನ ಮಾಡಿಸಿದರು. ಜನರಿಗೆ ಬಹಳ ಸಂತೋಷವಾಯಿತು. ಆ ಜನರು ನಮ್ಮನ್ನು ಒಂದೆರಡು ದಿನ ಉಳಿಸಿಕೊಳ್ಳಲು ಆಗ್ರಹ ಪಡಿಸಿದರು. ಆದರೆ ಸಮಯದ ಅಭಾವದಿಂದ ನಿಲ್ಲಲು ಆಗಲಿಲ್ಲ. ಅಲ್ಲಿಂದ ಗುಲಜಾರಬಾಗಿಗೆ ಹೋಗಿ ಸೇಠ ಸುದರ್ಶನಜೀಯವರು ನಿರ್ವಾಣ ಭೂಮಿಗೆ ವಂದಿಸಿ, ಅವರ ಚರಣಗಳಿಗೆ ನಮಸ್ಕರಿಸಿದೆವು. ಪಟನಾದಲ್ಲಿ ಪಟನಾದ ಸಾಹಿತ್ಯ ರತ್ನ ಪ್ರಕಾಶಚಂದ ಜೈನ ಮತ್ತು ಸಂಘದ ಪ್ರಕಾಶಚಂದ ಜೈನ ಈ ಇಬ್ಬರ ಒಂದು ಚಿಕ್ಕ ಮಾತಿನಲ್ಲಿ ಸಿಕ್ಕಿಕೊಂಡು ನನಗೆ ದಿಕ್ಕು ತೋರದಂತೆ ಆಯಿತು. ಆಗಿದ್ದೇನೆಂದರೆ ಪಟನಾ ಪ್ರಕಾಶಚಂದರು ಸ್ವಲ್ಪ ಸಾಮಾನನ್ನು ತಂದಿದ್ದರು. ಅದಕ್ಕೆ ಹಣವನ್ನು ತೆಗೆದುಕೊಳ್ಳಲು ಒಪ್ಪಲಿಲ್ಲ. ಅದಕ್ಕೆ ಸಂಘದ ಪ್ರಕಾಶಚಂದ ತೆಗೆದುಕೊಳ್ಳಲೇಬೇಕೆಂದು ಹೇಳಿದ್ದಾನೆ ಸಾಹಿತ್ಯರತ್ನರು ಏನು ನೀವು ಮಾತಾಜೀಯನ್ನು ಕೊಂಡುಕೊಂಡು ಬಿಟ್ಟಿದ್ದೀರಾ. ನಮ್ಮ ಸಾಮಾನುಗಳನ್ನು ಏತಕ್ಕೆ ತೆಗೆದುಕೊಳ್ಳುವುದಿಲ್ಲ ಎಂದಿದ್ದಾರೆ.

ಅದಕ್ಕೆ ಪ್ರಕಾಶನು ನಾವು ಯಾರ ಹತ್ತಿರವು ಹಣವನ್ನು ತೆಗೆದುಕೊಳ್ಳುವುದಿಲ್ಲವೆಂದು ನಿಯಮ ತೆಗದುಕೊಂಡಿದ್ದೇವೆ. ಅದಕ್ಕಾಗಿ ನಿಮಗೆ ಗುರುಭಕ್ತಿ ಇದ್ದರೆ ನಮ್ಮ ಜೊತೆ ಕೆಲವು ದಿನ ಬನ್ನಿರೆಂದು ಹೇಳಿದ್ದಾನೆ. ಕೊನೆಗೆ ಇಲ್ಲಿಂದ ಹೇಮಂತನೆಂಬ ನವಯುವಕ ಜೊತೆಯಲ್ಲಿ ಬಂದು ಶಿಖರ್ಜಿಯವರೆಗೂ ಜೊತೆಯಲ್ಲಿಇದ್ದ.

ರಾಜಗೃಹ

ನಾವು ಸಂಘ ಸಹಿತವಾಗಿ ರಾಜಗೃಹಕ್ಕೆ ಬಂದೆವು. ಇಲ್ಲಿಯ ಐದು ಬೆಟ್ಟಗಳನ್ನು ವಂದಿಸಿ ಬಹಳ ಆಯಾಸಗೊಂಡೆವು. ಇದೇ ರಾಜಗೃಹದಲ್ಲಿ ಭಗವಾನ್ ಮುನಿಸು ವ್ರತನಾಥರ ಗರ್ಭ ಜನ್ಮ, ತಪ ಮತ್ತು ಜ್ಞಾನದ ನಾಲ್ಕು ಕಲ್ಯಾಣಗಳು ನಡೆದಿವೆ. ಇದೊಂದು ಸಿದ್ಧಕ್ಷೇತ್ರವು ಆಗಿದೆ. ಇಲ್ಲಿಯ ಜೀವಂಧರ ಸ್ವಾಮಿ ಧರ್ಮರುಚಿ, ಶ್ವೇತಸಂದೀಪ, ಪ್ರೀತಂಕರ ಮೊದಲಾದ ಅನೇಕ ಮುನಿಗಳು ಮೋಕ್ಷವನ್ನು ಪಡೆದಿದ್ದಾರೆ. ವಿಶೇಷವಾಗಿ ಭ. ಮಹಾವೀರರ ಮೊದಲ ಉಪದೇಶವನ್ನು ಮಾಡಿದ್ದು ಇಲ್ಲಿಯೇ ಷಟ್ ಖಂಡಾಗಮ ಗ್ರಂಥದ ಗಾಥೆಗಳಲ್ಲಿ

ವಾಸಸ್ಸ ಪಢಮಮಾಸೇ ಪಢಮೇ ಪಕ್ಖಹ್ಮಿ ಸಾವಣೇ ಬಹುಲೇ ।
ಪಾಡಿವದ ಪುವ್ವದಿವಸೇ ತಿತ್ಥು ಪ್ಪತ್ತೀ ಹು ಅಭಿಜಿಮ್ಹಿ ॥ 56 ॥
ಸಾವಣ ಬಹುಲ ಪಡಿವದೇ ರುದ್ದಮುಹುತ್ತೇ ಸುಹೋದ ಏ ರವಿಣೋ ।
ಅಭಿಜಿಸ್ಸ ಪಢಮ ಜೋಏ ಏತ್ಥ ಜುಗಾಈ ಮಣೇಯವ್ವೋ[೧] ॥ 57 ॥

ವರ್ಷದ ಪ್ರಥಮ ತಿಂಗಳು ಅರ್ಥಾತ್ ಶ್ರಾವಣ ಮಾಸದ ಪ್ರಥಮ ಪಕ್ಷ ಕೃಷ್ಣಪಕ್ಷದಲ್ಲಿ ಪ್ರತಿಪದದ ದಿನ ಪ್ರಾತಃ ಕಾಲದ ಸಮಯದಲ್ಲಿ ಆಕಾಶದಲ್ಲಿ ಅಭಿಜಿತ್ ನಕ್ಷತ್ರದ ಉದಯವಾಗಿರುವಾಗ ಧರ್ಮತೀರ್ಥವು ಉತ್ಪತ್ತಿಯಾಯಿತು ॥ ೫೬ ॥

ಶ್ರಾವಣ ಕೃಷ್ಣ ಪ್ರತಿಪದೆಯ ದಿನ ರುದ್ರ ಮುಹೂರ್ತದಲ್ಲಿ ಸೂರ್ಯನ ಶುಭ ಉದಯವಾದ ಮೇಲೆ ಅಭಿಜಿತ್ ನಕ್ಷತ್ರದ ಪ್ರಥಮ ಯೋಗದಲ್ಲಿ ಯಾವಾಗ ಯುಗದ ಆರಂಭವಾಯಿತೋ ಆಗಲೇ ತೀರ್ಥದ ಉತ್ಪತ್ತೀ ಎಂದು ತಿಳಿಯಬೇಕು ॥೫೭॥

ದೇವ ಮತ್ತು ವಿದ್ಯಾಧರರ ಮನವನ್ನು ಮೋಹಿತಗೊಳಿಸುವ ಮತ್ತು ಸಾರ್ಥಕ ಹೆಸರುಳ್ಳ ಪಂಚಶೈಲ ನಗರದಲ್ಲಿ ಪರ್ವತಗಳ ಮೇಲೆ ಶ್ರೇಷ್ಠ ವಿಪುಲಾಚಾಲ ಪರ್ವತದ ಮೇಲೆ ಶ್ರೀ ವೀರಜಿನೇಂದ್ರ ಶಾಸ್ತ್ರಗಳನ್ನು ರಚಿಸಿದ್ದಾರೆ[೨].

ಅಂದರೆ ಶ್ರಾವಣ ಕೃಷ್ಣ ಮೊದಲನೆಯ ದಿನ ವಿಪುಲಾಚಲ ಪರ್ವತದ ಮೇಲೆ ಭಗವಾನ್ ಮಹಾವೀರನ ದಿವ್ಯ ಧ್ವನಿಯು ಹೊರಟಿತು. ವೈಶಾಖ ಶುಕ್ಲ ದಶಮಿಯಂದು ಭಗವಾನರಿಗೆ ಕೇವಲ ಜ್ಞಾನವಾಗುತ್ತಲೇ ಸಮವಶರಣದ ರಚನೆಯಾಯಿತು. ಆದರೆ ಗಣಧರರ ಅಭಾವದಿಂದಾಗಿ ದಿವ್ಯ ಧ್ವನಿ ಹೊರಡಲಿಲ್ಲ. ಅದೇ ದಿನ ಇಂದ್ರನಿಂದ ಗೌತಮಸ್ವಾಮಿಯನ್ನು ಉಪಸ್ಥಿತಗೊಳಿಸಲಾಯಿತು. ಗೌತಮರು ದೀಕ್ಷೆ ಪಡೆದು ಮನಃ ಪರ್ಯಾಯ ಜ್ಞಾನವನ್ನು ಪಡೆದ ಮೇಲೆ ಗಣಧರರಾಗಿ ಭಗವಂತರ ದಿವ್ಯ ಧ್ವನಿಯನ್ನು ಅರ್ಥೈಸಿದರು.

---

೧. ಷಟ್ಖಂಡಾಗಮ ಭಾಗ -೧ ಪುಸ್ತಕ - ೧, ಪುಟ ೬೩, ೬೪.

೨. ತಿಲೋಯಪಣ್ಣತ್ತಿ ೧-೬೫.

ಇಲ್ಲಿಯ ರಾಜ ಶ್ರೇಣಿಕ ಮತ್ತು ರಾಣಿ ಚೇಲನಿಯ ಭಕ್ತಿ ಇತಿಹಾಸ ಪ್ರಸಿದ್ಧವಾದುದು. ಈಗ ಇಲ್ಲಿ ದಿಗಂಬರ ಜೈನ ಧರ್ಮಶಾಲೆ ಮತ್ತು ಎರಡು ದಿಗಂಬರ ಜೈನಮಂದಿರಗಳು ಇವೆ. ಅಲ್ಲದೆ ಆಚಾರ್ಯ ಶ್ರೀ ವಿಮಲಸಾಗರರ ಮತ್ತು ಮಹಾವೀರ ಕೀರ್ತಿ ಗುರುದೇವರ ಸ್ಮರಣೆಗಾಗಿ ಇಲ್ಲಿ ಒಂದು ವಿಶಾಲವಾದ ಸರಸ್ವತಿ ಭವನವನ್ನು ನಿರ್ಮಾಣ ಮಾಡಲಾಗಿದೆ. ಸಾಹೂಜೀಯವರು 1986 ರಲ್ಲಿ ಪರ್ವತದ ಮೇಲೆ ಚತುರ್ಮುಖ ಪ್ರತಿಮೆಯನ್ನು ಸ್ಥಾಪಿಸಿದ್ದಾರೆ. ಇಲ್ಲಿ ಉಪಾಧ್ಯಾಯ ಸ್ಥಾನಕ ವಾಸಿ ಅಮರಮುನಿಗಳು ಒಳ್ಳೆಯ "ವೀರಾಯತನ" ವನ್ನು ಮಾಡಿಸಿದ್ದಾರೆ. ಇದು 1963ರಲ್ಲಿ ಇರಲಿಲ್ಲ.

ಇಲ್ಲಿ ಅನೇಕ ಝರಿಗಳು ಕುಂಡಗಳು ಇವೆ. ಎಲ್ಲದ್ದಕ್ಕಿಂತ ಲೋಕಪ್ರಿಯವಾದುದು ಸಪ್ತಧಾರ ಮತ್ತು ಬ್ರಹ್ಮಕುಂಡ ಝರಿಗಳು ಇಲ್ಲಿ ಯಾವಾಗಲೂ ಬಿಸಿನೀರು. ಇರುವುದರಿಂದ ಯಾತ್ರಿಗಳು ಸ್ನಾನಮಾಡಿ ಆನಂದ ಪಡೆಯುತ್ತಾರೆ.

ಇಲ್ಲಿಗೆ ಬ್ರಹ್ಮಚಾರಿಣಿ ಚಂದಾಬಾಯಿ ಬಂದಿದ್ದರು. ನನ್ನ ಹತ್ತಿರ ಹಲವಾರು ಚರ್ಚೆಗಳನ್ನು ಮಾಡುತ್ತಿದ್ದರು. ಅದರಲ್ಲಿ ಪ್ರಮುಖವಾದ ಚರ್ಚೆ ಎಂದರೆ ಭ-ಮಹಾವೀರರ ಪಾದಮೂಲಕ್ಕೆ ಬಂದು ದೀಕ್ಷೆ ಪಡೆದು ಇವರ ಶಿಷ್ಯತ್ವವನ್ನು ಸ್ವೀಕರಿಸಿ ಅವರು ಗೌತಮಗಣಧರರಾದರು. ಇದಕ್ಕೂ ಮೊದಲೇ ಮಸ್ಕರೀಪೂರಣವೆಂದ ವಿಶೇಷಜ್ಞಾನವನ್ನು ಪಡೆದಿದ್ದ ಮುನಿಗಳು ಅಲ್ಲಿದ್ದರು. ಆದರೆ ಅವರು ಭ. ಮಹಾವೀರರ ಶಿಷ್ಯರಾಗದ ಕಾರಣ ಗಣಧರರಾಗಲಿಲ್ಲ. ಇದರಿಂದ ಬರಬಹುದಾದ ನಿಷ್ಕರ್ಷೆ ಏನೆಂದರೆ ಗುರುಶಿಷ್ಯರ ಸಂಬಂಧಕ್ಕೆ ಬಹಳ ಮಹತ್ವವಿದೆ. ಆಗ ನನಗೆ 1955ರ ಮ್ಹಸವಡದ ಘಟನೆ ನೆನಪಿಗೆ ಬಂದಿತು. ಕು. ಪ್ರಭಾವತಿಗೆ 10ನೇಯ ಪ್ರತಿಮೆಯವ್ರತ ಕೊಡುವ ಸಂದರ್ಭದಲ್ಲಿ ಕ್ಷುಲ್ಲಕ ವಿಶಾಲಮತಿಯವರು ತಿಳಿದೋ-ತಿಳಿಯದೆಯೋ ನನ್ನಿಂದ ವ್ರತಕೊಡಿಸಿದರು. ಏಕೆಂದರೆ ಪ್ರಭಾವತಿ ಮುಂದೆ ನನ್ನ ಜೊತೆಯೆ ಇದ್ದು ಗುರು-ಶಿಷ್ಯರಲ್ಲಿ ವಾತ್ಸಲ್ಯ ಬೆಳೆಯಲೆಂದು ತಾವು ವ್ರತಕೊಡಲಿಲ್ಲ.

ಮಾತಾಜೀ ತಾವು ಸಮ್ಮೇದ ಶಿಖರದ ವಂದನೆ ಮಾಡಿ ವಾಪಸ್ಸು "ಆರಾ"ಗೆ ಬಂದು ಚಾತುರ್ಮಾಸ ಮಾಡಿ ಎಂದು ಬ್ರ. ಚಂದಾಬಾಯಿ ಬಹಳ ಆಗ್ರಹಪಡಿಸುತ್ತೇನೆಂದು ಆಶ್ವಾಸನೆಯನ್ನು ಕೊಡಿರಿ. ಅದಕ್ಕಾಗಿಯೇ ನಾನು ಇಲ್ಲಿಗೆ ಬಂದಿದ್ದೇನೆ ಎಂದರು. ಆದರೆ ನಾನು ಈಗಲೇ ಮಾತು ಕೊಡಲಾರೆ. ತೀರ್ಥರಾಜನ ವಂದನೆ ಆದ ಮೇಲೆ ಯೋಚಿಸುತ್ತೇನೆ ಎಂದೆ. ಎರಡು ಮೂರು ದಿನ ಇಲ್ಲಿದ್ದು ನಂತರ ನಾವು ಪಾವಾಪುರಿಗೆ ಬಂದೆವು.

ಪಾವಾಪುರಿ

ಪಾವಾಪುರಿ ಮಹಾವೀರರ ಸಿದ್ಧಕ್ಷೇತ್ರವೆಂದು ಪ್ರಸಿದ್ಧಿಯಾಗಿದೆ. ಸಂಸ್ಕೃತದ ನಿರ್ವಾಣ ಭಕ್ತಿಯಲ್ಲಿ ಶ್ರೀಪೂಜ್ಯ ಪಾದ ಸ್ವಾಮಿಗಳು ಹೇಳಿದ್ದಾರೆ.

ಪಾವಾ ಪುರಸ್ಯ ಬಹಿರುನ್ನತ ಭೂಮಿದೇಶೆ, ಪದ್ಮೋತ್ಪಲಾಕುಲವತಾಂ ಸರಸಾಂ ಹಿ ಮಧ್ಯೇ ।
ಶ್ರೀ ವರ್ಧಮಾನ ಜಿನದೇವ ಇತಿ ಪ್ರತೀತೇ ನಿರ್ವಾಣ ಮಾಪ ಭಗವಾನ್ ಪ್ರವಿಧೂತ ಪಾಪಾಂ ॥೨೪॥

ಪಾವಾಪುರದ ಹೊರಗೆ ಉನ್ನತ ಭೂಮಿ ಪ್ರದೇಶದ ಮೇಲೆ ಕಮಲಗಳಿಂದ ಸುಶೋಭಿತ ಕೆರೆಯ ಮಧ್ಯ ಕರ್ಮಗಳಿಂದ ರಹಿತನಾದ ಭ ವರ್ಧಮಾನರು ನಿರ್ವಾಣವನ್ನು ಪಡೆದರು. ಇಲ್ಲಿ ಜಲಮಂದಿರದ ದರ್ಶನದಿಂದ ಮನಕ್ಕೆ ಬಹಳ ಆನಂದವಾಯಿತು. ನನಗೆ ಸಾಕ್ಷಾತ ಭಗವಂತರೇ ಸಿಕ್ಕಿದಂತೆ ಆಯಿತು.

ಸರೋವರದ ಮಧ್ಯೆ ಅಮೃತಶಿಲೆಯಿಂದ ನಿರ್ಮಿತವಾದ ಜೈನಮಂದಿರವಿದೆ. ಅಲ್ಲಿಗೆ ತಲುಪಲು ಸುಮಾರು ೬೦೦ ಅಡಿ ಉದ್ದದ ಸೇತುವೆ ಮಾಡಿದ್ದಾರೆ. ಅದರಲ್ಲಿ ಹೋದರೆ ಒಂದು ಚಿಕ್ಕ ಮಂದಿರದಲ್ಲಿ ಮಹಾವೀರ ಸ್ವಾಮಿಯ ಚರಣಗಳು ವಿರಾಜಮಾನವಾಗಿದೆ. ಇಲ್ಲಿ ನಿರ್ವಾಣದ ದಿನ ಲಾಡು ಅರ್ಪಿಸಲು ಲಕ್ಷಾಂತರ ಜನರು ಸೇರುತ್ತಾರೆ. ಕಾರ್ತಿಕ ಕೃಷ್ಣ ಅಮಾವಾಸ್ಯೆಯ ನಿರ್ವಾಣದ ಸಮಯದ ಹಿಂದಿನ ರಾತ್ರಿಯೇ ಇಲ್ಲಿ ಜಾತ್ರೆ ನಡೆದಿರುತ್ತದೆ. ಜಲಮಂದಿರದ ಹತ್ತಿರವೇ ದಿಗಂಬರ ಜೈನಮಂದಿರವಿದೆ. ಅದಕ್ಕೆ ತಗುಲಿದಂತೆ ಧರ್ಮಶಾಲೆ ಇದೆ.

ಪಾವಾಪುರಿ ಅಥವ ಪಾವಾ

ಈಗ ಪುರಾತತ್ತ್ವದ ಅನ್ವೇಷಣೆ ಮಾಡುತ್ತಿರುವ ಕೆಲವು ವಿದ್ವಾಂಸರು ಪಾವಾಪುರಿಯನ್ನು ಬಿಟ್ಟು ಇನ್ನೊಂದು ಪಾವಾವನ್ನ ಭಗವಂತರ ನಿರ್ವಾಣ ಸ್ಥಳವೆಂದು ಹೇಳುತ್ತಿದ್ದಾರೆ. ಆದರೆ ನನಗೆ ಈ ಅನ್ವೇಷಕರ ಮಾತಿನಲ್ಲಿ ವಿಶ್ವಾಸವಾಗಲಿ ಪ್ರೇಮವಾಗಲಿ ಇಲ್ಲ. ಆದ್ದರಿಂದ ಈ ಪಾವಾಪುರಿಯನ್ನು ನಿರ್ವಾಣ ಸ್ಥಳವೆಂದು ತಿಳಿಯುವುದರಲ್ಲೆ ನನಗೆ ಪ್ರೇಮ. ಇಲ್ಲಿ ಭಗವಂತರನ್ನು ವಂದಿಸಿ ಮುಂದೆ ವಿಹಾರ ಹೊರಟೆವು.

ಗುಣಾವ

ಇದು ಬಿಹಾರದ ನವಾದ ಜಿಲ್ಲೆಯಲ್ಲಿದೆ. ಇದು ಗೌತಮ ಸ್ವಾಮಿಗಳ ನಿರ್ವಾಣ ಸ್ಥಳ. ಆದ್ದರಿಂದ ಇದು ಒಂದು ಸಿದ್ಧ ಕ್ಷೇತ್ರವಾಗಿದೆ. ಪಾವಾಪುರಿಯಂತೆ ಇಲ್ಲಿಯು ಸರೋವರದ ಮದ್ಯೆ ಜಿನಮಂದಿರವನ್ನು ಮಾಡಿದ್ದಾರೆ. ಈ ಮಂದಿರದ ವೇದಿಕೆಯ ಮೇಲೆ ಚರಣಗಳು ಇವೆ. ಧರ್ಮಶಾಲೆಯ ಮಧ್ಯದಲ್ಲೇ ಒಂದು ದಿಗಂಬರ ಜೈನ ಮಂದಿರವಿದೆ. ಇಲ್ಲಿ ದರ್ಶನ ಮಾಡಿದ ನಂತರ ಮುಂದೆ ಹೊರಟೆವು.

ಕುಂಡಲಪುರ

ಭ. ಮಹಾವೀರರ ಜನ್ಮಭೂಮಿ ಕುಂಡಲಪುರ. ಇಲ್ಲಿ ದರ್ಶನ ಮಾಡಿದೆವು. ಕೆಲವರು ವೈಶಾಲಿ ರಾಜ ಚೇಟಕನ ರಾಜಧಾನಿಯನ್ನ ಭ. ಮಹಾವೀರರ ಜನ್ಮಭೂಮಿ ಎಂದು ಹೇಳುತ್ತಾರೆ. ಅದು ತಪ್ಪು. ಪಂ. ಸುಮೇರು ಚಂದ್ ದಿವಾಕರರು ಒಂದು ಸಲ ಹೇಳಿದ್ದರು. ತೀರ್ಥಂಕರರಂತಹ ಮಹಾಪುರುಷರು ತಾತನ ಮನೆಯಲ್ಲಿ ಜನ್ಮ ತಳೆಯುವುದು ಅಸಂಭವವೆಂದು ಅವರ ತಂದೆ ಒಂದು ಸ್ವತಂತ್ರ ದೇಶದ ರಾಜನಾಗಿದ್ದರು. ಅನ್ವೇಷಕ ವಿದ್ವಾಂಸರ ಮಾತೆಲ್ಲ ದಿ. ಜೈನಗ್ರಂಥಗಳಿಗೆ ಅನುಸಾರವಾಗಿ ಇಲ್ಲವೆ ಇಲ್ಲ.

ಚಂಪಾಪುರಿ

ಚಂಪಾಪುರಿ ಅತ್ಯಂತ ಪ್ರಾಚೀನ ತೀರ್ಥಕ್ಷೇತ್ರವಾಗಿದೆ. ಇಲ್ಲಿ ಹನ್ನೆರಡನೆ ತೀರ್ಥಂಕರರಾದ ವಾಸುಪೂಜ್ಯ ಭಗವಾನರ ಗರ್ಭ, ಜನ್ಮ, ತಪ, ಜ್ಞಾನ ಮತ್ತು ನಿರ್ವಾಣದ ಕಲ್ಯಾಣಗಳಾಗಿವೆ. ಇದೇ ಕ್ಷೇತ್ರದಲ್ಲಿ ತೀರ್ಥಂಕರ 5 ಕಲ್ಯಾಣಗಳು ಆಗಿವೆ. ಪೂಜ್ಯಪಾದರು ಹೇಳಿದ್ದಾರೆ.

ಚಂಪಾಪುರೇ ಚ ವಸುಪೂಜ್ಯಸುತಃ ಸುಧಾಮಾನ್ ।
ಸಿದ್ಧಿ ಪರಾಮುಪಗತೋ ಗತರಾಗ ಬಂಧಃ ॥

ವಸುಪೂಜ್ಯ ರಾಜನ ಮಗ ಭ. ವಾಸುಪೂಜ್ಯರು ರಾಗ ದ್ವೇಷ ರೂಪವಾದ ಬಂಧನವನ್ನು ನಾಶಮಾಡಿ ಚಂಪಾಪುರದಿಂದ ನಿರ್ವಾಣ ಪಡೆದಿದ್ದಾರೆ. ಇಲ್ಲಿ ಮೊದಲು ನಾವು ಬಾಗಲಪುರದ ಒಂದು ಧರ್ಮಶಾಲೆಯಲ್ಲಿ ತಂಗಿದ್ದೆವು. ಉಪದೇಶವಾಯಿತು. ಶ್ರಾವಕರು ಆಹಾರ ದಾನದ ಲಾಭವನ್ನ ಪಡೆದರು. ಇಲ್ಲಿ ಸೀಕರದ ಒಬ್ಬ ಪರಿಚಿತ ಶ್ರಾವಕರು ಇದ್ದರು. ಇಲ್ಲಿಂದ ಚಂಪಾಪುರದ ದರ್ಶನಕ್ಕೆ ಹೋದೆವು. ಇಲ್ಲಿ 2-3 ದಿನ ಇದ್ದೆವು. ಇಲ್ಲಿ 50 ಅಡಿಯ ಎರಡು ಎತ್ತರದ ಮೀನಾರಗಳಿವೆ. ಇಲ್ಲಿಂದಲೇ ಮಂದಾರಗಿರಿ ಪರ್ವತವನ್ನು ಹತ್ತಿ ಭಗವಾನರ ನಿರ್ವಾಣಸ್ಥಳದ ವಂದನೆಯನ್ನು ಮಾಡಿದೆವು. ಇದೊಂದು ಚಿಕ್ಕ ಬೆಟ್ಟ. ಹತ್ತಲು ಆಯಾಸವಾಗಲಿಲ್ಲ. ಇಲ್ಲಿ 94 ಮುನಿಗಳೊಂದಿಗೆ ವಾಸುಪೂಜ್ಯರು ಮೋಕ್ಷಕ್ಕೆ ಹೋಗಿದ್ದು ಪ್ರಾಚೀನ ಕಾಲದಲ್ಲಿ ಅಂಗದೇಶದ ರಾಜಧಾನಿ ಚಂಪಾಪುರ ೪೮ ಕೋಸ (16 ಮೈಲಿ) ವಿತ್ತು. ಆದ್ದರಿಂದಲೇ ಮಂದಾರಗಿರಿಯು ಅದೇ ನಗರದ ಉದ್ಯಾನದಲ್ಲೇ ಇತ್ತೆಂದು ತಿಳಿಯಬೇಕು. ಈ ಕ್ಷೇತ್ರವನ್ನು ದರ್ಶನ ಮಾಡುವುದರಿಂದ ಅಶುಭ ಕರ್ಮಗಳು ನಷ್ಟವಾಗುತ್ತವೆ. ನಿರ್ವಾಣ ಕ್ಷೇತ್ರದ ವಂದನೆಯಿಂದ ಕರ್ಮಗಳ ನಿರ್ಜರೆ ಮಾಡಿಕೊಳ್ಳುವುದು ಸಾಧ್ಯವಿದೆ ಎಂಬುದು ದೃಢವಾದ ನಂಬಿಕೆ.

ಬೈಜನಾಥದಿಂದ ಗಿರಡೀಹ

ವಿಹಾರ ಮಾಡುತ್ತಾ (ವೈದ) ಬೈಜನಾಥವನ್ನು ತಲುಪಿದೆವು ಇದನ್ನು ದೇವಘರ ಎಂದು ಕರೆಯುತ್ತಾರೆ. ಜನರು ಹೇಳಿದರು ಇಲ್ಲಿಂದ ಗಿರಿಡೀಹಗೆ ಹೋಗಲು ಎರಡು ಮಾರ್ಗಗಳು. ಒಂದು 75 ಮೈಲಿ ಇನ್ನೊಂದು ಕಾಡಿನ ಮಾರ್ಗವಾಗಿ ಹೋದರೆ 35 ಮೈಲಿ. ಅಳೆದುಸುರಿದು ಕೊನೆಗೆ ಹತ್ತಿರದ ಮಾರ್ಗದಿಂದಲೇ ಹೋಗುವುದೆಂದು ನಿಶ್ಚಯವಾಯಿತು. ಬ್ರ. ಸುಗನಚಂದರು ಗಾಡಿಯ ವ್ಯವಸ್ಥೆಯನ್ನು ಮಾಡಿ ಹೆಚ್ಚಿನ ಸಾಮಾನು ಹಾಗೂ ವೃದ್ಧ ಬ್ರಹ್ಮಚಾರಿಣಿಯರನ್ನು ಸೀದ ಗಿರಡೀಹಕ್ಕೆ ಕಳುಹಿಸಿಕೊಟ್ಟು ತಾವು ಎರಡು ಮೂರು ದಿನಗಳಿಗೆ ಆಗುವಷ್ಟು ಸ್ವಲ್ಪವೇ ಸಾಮಾನು ಒಂದೆರಡು ಪಾತ್ರೆಗಳನ್ನು ಮಾತ್ರ ಹಿಡಿದುಕೊಂಡು ನಾಲ್ಕು ಜನ ಮಾತಾಜಿ ಮನೋವತಿ ಮತ್ತು ಸುಗನಚಂದರು ರಸ್ತೆಯನ್ನು ಕೇಳಿ ತಿಳಿದು ಅಲ್ಲಿಂದ ನಾವೆಲ್ಲ ಹೊರಟೆವು. ಕಾಡಿನಲ್ಲಿ ಮಧ್ಯೆ ಮಧ್ಯೆ ನಡೆದ ಕಾಲಿನಜಾಡು, ಹಾಗೇ ಎತ್ತಿನಗಾಡಿಯ ರಸ್ತೆ ಕಂಡು ಬರುತ್ತಿತ್ತು. ಇದೊಂದು ರೀತಿ ಕಾಡಿನ ಮಧ್ಯೆ ನಡೆಯುವುದು ಖುಷಿ ಕೊಡುತ್ತಿತ್ತು. 8-10 ಮೈಲಿ ನಡೆದ ಮೇಲೆ ನೀರಿನ ವ್ಯವಸ್ಥೆ ನೋಡಿ ಅಲ್ಲೇ ಚೌಕದ ವ್ಯವಸ್ಥೆಯನ್ನು ಮಾಡಿದರು ಮನೋವತಿ ಸುಗನ ಚಂದರು ಸೇರಿ ಆಹಾರ ಮಾಡಿ ಐದು ಜನ ಆರ್ಯಿಕಯರಿಗೆ ಆಹಾರ ಕೊಟ್ಟು ನಂತರ ಅವರಿಬ್ಬರು ಊಟ ಮಾಡಿ ಮತ್ತೆ ನಮ್ಮ ಜೊತೆ ನಡೆಯುತ್ತಿದ್ದರು.

ಹೀಗೆ ದೀರ್ಘವಾದ ಪ್ರಯಾಣವನ್ನು ಮೂರುದಿನಗಳಲ್ಲೇ ಮುಗಿಸಿ ಸುಖವಾಗಿ ಗಿರಡಿಹವನ್ನು ತಲುಪಿದೆವು ಇಲ್ಲಿಯ ಜನ ಒಳ್ಳೆಯ ವ್ಯವಸ್ಥೆಯನ್ನು ಮಾಡಿದ್ದರು. ಬೆಳಗ್ಗೆ ಹೊತ್ತು ನನ್ನ ಉಪದೇಶವನ್ನು ಕೇಳಿ ಬಹಳ ಆಗ್ರಹ ಮಾಡತೊಡಗಿದರು. ಇಲ್ಲಿ ಒಂದು ವಾರವಾದರೂ ಇರಬೆಕೆಂದು ಆದರೆ ನಾವು ಸಮ್ಮೇದ ಶಿಖರ ತಲುಪಲು ಆತುರಗೊಂಡಿದ್ದೆವು. ನಮ್ಮ ಆಕುಲತೆ ಎಷ್ಟಿತ್ತೆಂದರೆ ರೆಕ್ಕೆ ಇದ್ದರೆ ಹಾರಿಕೊಂಡು ತಲುಪಿಬಿಡಬೇಕೆಂದುಕೊಂಡಿದ್ದೆವು. ಇಲ್ಲಿಂದ ಮಧ್ಯಾಹ್ನವೇ ವಿಹಾರ ಮಾಡಿ ಸರಿಯಾದ ಸಮಯಕ್ಕೆ ಸಮ್ಮೇದ ಶಿಖರವನ್ನು ತಲುಪಿದೆವು.

೪೨

ಸಮ್ಮೇದ ಶಿಖರದ ವಂದನೆ

ಇಲ್ಲಿ ಜೇಷ್ಠ ಕೃಷ್ಣ ಸಪ್ತಮಿಯಂದು ಬೆಳಗ್ಗೆ ಆಹಾರವಾದ ನಂತರ ಬೆಟ್ಟವನ್ನು ಹತ್ತಲು ನಿರ್ಣಯ ಮಾಡಿದೆವು. ಹಾಗೇ ಆಹಾರವಾದ ಮೇಲೆ ದೇವರ ದರ್ಶನ ಮಾಡಿ ನಾವು ಐವರು ಮತ್ತು ಬ್ರಹ್ಮಚಾರಿ - ಬ್ರಹ್ಮಚಾರಿಣಿಯರು ಎಲ್ಲಾ ಸೇರಿ ಹತ್ತ ತೊಡಗಿದೆವು. ಸೀತಾನದಿಯವರೆಗೂ ಬರುವವರೆಗೆ 12 ಗಂಟೆಯಾಯಿತು. ಅಲ್ಲೇ ಕುಳಿತು ಸಾಮಾಯಿಕ ಮಾಡಿ ಪುನಃ ಹತ್ತಲು ಪ್ರಾರಂಭಿಸಿದೆವು. ಣಮೋಕಾರ ಮಂತ್ರ ಮತ್ತು ಸಿದ್ಧಚಕ್ರ ಜಪ ಮಾಡುತ್ತಿದ್ದೆವು.

ಭ. ಕುಂಥುನಾಥರ ಕೂಟದ ದರ್ಶನ ಮಾಡಿದೆವು. ಎಲ್ಲರ ಕಣ್ಣುಗಳಲ್ಲೂ ಆನಂದ ಬಾಷ್ಪ ಹರಿಯ ತೊಡಗಿತು. ನಮಗೆ ನಮ್ಮ ಜೀವನ ಅಲ್ಪವೇ ಇದೆ. ಆದರೆ ನಾವು ನಿಶ್ಚಿತವಾಗಿ ಭವ್ಯ ಎನಿಸಿತು. ಮೊದಲು ಒಂದು ಸಲ ಚಿಕ್ಕ ವಯಸ್ಸಿನಲ್ಲಿ ಅಪ್ಪ ಅಮ್ಮನ ಜೊತೆ ಬಂದಿದ್ದೆ. ಎರಡನೆಯ ಸಲ ಕ್ಷುಲ್ಲಕಿಯಾದ ಮೇಲೆ.

ಕ್ಷುಲ್ಲಿಕ ವಿಶಾಲಮತಿಯ ಜೊತೆ ಇದು ಮೂರನೆಯ ದರ್ಶನವಾಗಿತ್ತು. ಆದರೆ ಜೊತೆಯಲ್ಲಿ ಬಂದಿದ್ದ ಪದ್ಮಾವತಿ, ಆದಿಮತಿ ಕ್ಷುಲ್ಲಿಕಾ ಶ್ರೇಯಾಂಸಮತೀಯರಿಗೆ ಮೊದಲ ದರ್ಶನವಾಗಿತ್ತು. ಆರ್ಯಿಕೆ ಜಿನಮತೀಯು ದರ್ಶನ ಮಾಡಿರಲಿಲ್ಲ. ಅವರದೇ ಯಾವಾಗಲು ತಗಾದೆ ಇತ್ತು. ಅಮ್ಮ ನನಗೆ ಶಿಖರ್ಜಿಯ ದರ್ಶನ ಮಾಡಿಸಿ ಇದರಿಂದ ನಾನು ಭವ್ಯಳೇ ಎಂದು ನಿಶ್ಚಿತವಾಗತ್ತದೆ ಎಂದು ಇದು ಅವರ ಭವ್ಯತ್ವದ ನಿರ್ಣಯವಾದ್ದರಿಂದ ಅವರನ್ನು ಹಿಡಿಯುವವರೇ ಇರಲಿಲ್ಲ. ನಾವೆಲ್ಲರು ಕತ್ತಲಾಗುವವರೆಗೂ ಚಂದ್ರ ಪ್ರಭುತೀರ್ಥಂಕರರ ಕೂಟದವರೆಗೂ ದರ್ಶನ ಮಾಡಿ ಆನಂತರ ಕುಂಥುನಾಥರ ಟೊಂಕದ ಹತ್ತಿರವೇ ಇದ್ದ ಹಳೆಯ ಧರ್ಮಶಾಲೆಯಲ್ಲಿಯೇ ತಂಗಿದೆವು. ಪುನಃ ಬೆಳಗ್ಗೆ ಎದ್ದು ವಂದನೆ ಮಾಡಿ. ಭ. ಪಾರ್ಶ್ವನಾಥರ ಕೂಟ ತಲುಪಿದ್ದು ಅಲ್ಲಿಯೇ ಸಾಮಾಯಿಕವನ್ನು ಮಾಡಿದೆವು. ಮನೋವತಿಯ ಇಷ್ಟದಂತೆ ಅವಳಿಗೆ ಅಲ್ಲಿಯೇ 7ನೇ ಪ್ರತಿಮೆಯ ವ್ರತವನ್ನು ಕೊಟ್ಟೆ.

ನಾನು ಕೆಲವು ವರ್ಷಗಳಿಂದಲೇ ಅಕ್ಕಿಯನ್ನು ತ್ಯಾಗಮಾಡಿದ್ದೆ. ಬರೇ ಗೋಧಿಯನ್ನು ಮಾತ್ರ ಆಹಾರದಲ್ಲಿ ತೆಗೆದುಕೊಳ್ಳುತ್ತಿದ್ದೆ. ಬ್ರ. ಬಾಬಾಜೀ ಶುದ್ಧ ಜಲತಂದು ಚರಣಗಳಿಗೆ ಅಭಿಷೇಕ ಮಾಡಿದರು. ಅರ್ಘ್ಯವನ್ನು ಎತ್ತಿ ಒಂದು ಡಬ್ಬದಲ್ಲಿ ಖೀರನ್ನು ತಂದಿದ್ದವರು ದೊನ್ನೆಗೆ ಹಾಕಿ ಚರಣಗಳಿಗೆ ನೈವೇದ್ಯವನ್ನು ಅರ್ಪಿಸಿದರು. ಹೀಗೆ ಒಂದು ದಿನದಲ್ಲಿ ಅರ್ಧ, ಇನ್ನೊಂದು ದಿನದಲ್ಲಿ ಅರ್ಧ ದರ್ಶನವನ್ನು ಮುಗಿಸಿ ಮಧ್ಯಾಹ್ನ ಮೂರುಗಂಟೆಗೆ ಪರ್ವತದಿಂದ ಇಳಿದು ನಂತರ ಆಹಾರ ಸ್ವೀಕರಿಸಿದೆವು.

ಹೀಗೆ ಎರಡು ದಿನಗಳಲ್ಲಿ ಒಂದು ದರ್ಶನವನ್ನು ಹಾಗೆ ಬೆಳಗ್ಗೆ 6 ಗಂಟೆಯಿಂದ 3 ಗಂಟೆಯವರೆಗೆ ದರ್ಶನ ಮಾಡಿಕೊಂಡು ಇಳಿಯುತ್ತಿದ್ದೆವು. ನನ್ನ ಜೊತೆ ಇದ್ದು ಆರ್ಯಿಕೆ ಪದ್ಮಾವತಿ ಬೆಳಿಗ್ಗೆ ಬೆಳಕಾದ ಮೇಲೆ ದರ್ಶನಕ್ಕೆ ಹೊರಟು 10 ಗಂಟೆಗೆಲ್ಲ ದರ್ಶನ ಮಾಡಿಕೊಂಡು ಇಳಿದುಬಿಡುತ್ತಿದ್ದರು. ಅದಕ್ಕೆ ನಾನು ಕೇಳಿದೆ. ನೀವು ಕೂಟಗಳನ್ನು ದರ್ಶನ ಮಾಡಿಕೊಂಡು ಇಷ್ಟು ಬೇಗ ಹೇಗೆ ಇಳಿಯುತ್ತೀರ. ಅದಕ್ಕೆ ಅವರು ಅಮ್ಮ ನಾನು ಬೇಗ ಬೇಗ ಹತ್ತಿ ಪ್ರತಿಯೊಂದು ಕೂಟದ ಹತ್ತಿರ ಕಾರ್ಯೋತ್ಸರ್ಗ ಮಾಡಿ ಪಂಚಾಂಗ ನಮಸ್ಕಾರ ಮಾಡಿಯೇ ಬರುತ್ತೇನೆ. ಅವರ ಶಕ್ತಿ ನೋಡಿ ನನಗೆ ಬಹಳ ಆಶ್ಚರ್ಯವಾಯಿತು.

ಶಿಖರ್ಜಿಯ ದರ್ಶನವಾದ ಮೇಲೆ ಸರದಾರಮಲಜೈನ ಜಯಪುರದವರು. ಬ್ರ. ಸುಗನಚಂದ, ಅವರ ಸಹೋದರಿ ಭಂವರೀಬಾಯಿ ಮತ್ತು ಮನೋವತಿ ಇವರುಗಳೇ ಸಂಘದಲ್ಲಿ ಎರಡು ಚೌಕಗಳನ್ನು ಮಾಡುತ್ತಿದ್ದರು. ನಾವು ನಿರಾಕುಶಲತೆಯಿಂದ ಇಲ್ಲಿ ಧರ್ಮಾರಾಧನೆ ಮಾಡುತ್ತಿದ್ದೆವು.

ಭಗವಾನ ಶಾಂತಿನಾಥರ ನಿರ್ವಾಣ ದಿವಸ

ಇಲ್ಲಿ ಧರ್ಮಕೀರ್ತಿ ಮುನಿಗಳು ತಂಗಿದ್ದರು. ಆಗ ಸನಾವದದಿಂದ ಎರಡು ಬಸ್ಸುಗಳಲ್ಲಿ ಯಾತ್ರಿಕರು ಬಂದಿದ್ದರು. ಅವರೆಲ್ಲ ಅಲ್ಲೇ ತಂಗಿದ್ದರು. ಜೇಷ್ಠ ಕೃಷ್ಣ ಚತುರ್ದಶಿಯ ದಿನ ಭ. ಶಾಂತಿನಾಥರ ಮೋಕ್ಷ ಕಲ್ಯಾಣವಿತ್ತು. ಮುನಿಶ್ರೀಗಳ ಆದೇಶದಂತೆ ಅವರೆಲ್ಲ ವೈಭವದಿಂದ ಶಾಂತಿನಾಥ ಕೂಟದಲ್ಲಿ ನಿರ್ವಾಣದ ಲಾಡುಗಳನ್ನು ಇರಿಸಿದರು. ಆ. ಸಮಯದಲ್ಲಿ ನನಗೆ ಅವರಿಂದ ಪರಿಚಯ ಇರಲಿಲ್ಲ. ಆದರೆ ಅದೇ ಯಾತ್ರಿಗಳ ಜೊತೆ ಮೋತಿಚಂದ್ರರು ಇದ್ದರಂತೆ. ಅವರು ಹೇಳುತ್ತಾ ಇರುತ್ತಿದ್ದರು. ಮಾತಾಜಿ ನಾನು ಯಾತ್ರಿಗಳಲ್ಲಿಯೇ ಇದ್ದೆ. ಆದರೆ ನಿಮ್ಮನ್ನು ನೋಡಿದ ನೆನಪಿಲ್ಲ ಎಂದು ನಿಜ ಅಂದರೆ ನಾನು ಯಾತ್ರಿಗಳ ಜೊತೆ ಅಷ್ಟಾಗಿ ಮಾತನಾಡುತ್ತಿರಲಿಲ್ಲ. ನನ್ನ ಸಮಯವೆಲ್ಲ ನನ್ನ ಕೆಲಸಗಳಲ್ಲೇ ಕಳೆಯುತ್ತಿತ್ತು.

ನಾನು ಪರ್ವತ ದರ್ಶನಕ್ಕೆ ಹೋಗಿರುತ್ತಿದ್ದೆ. ಇಲ್ಲಿ ಬೀಸಪಂಥಿ ಮಂದಿರಕ್ಕೆ ಇಲ್ಲಿ ತೇರಹ ಪಂಥಾ ಮಂದಿರಕ್ಕೆ ಹಾಗೇ ಬಾಹುಬಲಿಯ ದರ್ಶನಕ್ಕೆ ಹೋಗಿ ಅಲ್ಲೇ ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದೆ. ಸಮ್ಮೇದ ಶಿಖರ್ಜಿಗೆ ನಾವಾದಿಂದ ಹೊರಡುತ್ತಲೇ ಎಲ್ಲರು ಒಂದು ಮಂತ್ರವನ್ನು ಜಪಿಸಲು ಪ್ರಾರಂಭಿಸಿದ್ದೆವು. ಮಾರ್ಗದಲ್ಲಿ ಹಗಲು ರಾತ್ರಿ ಅವಕಾಶ ಸಿಕ್ಕಿದಾಗಲೆಲ್ಲ ಅದೇ ಮಂತ್ರವನ್ನು ಜಪಿಸುತ್ತಿದ್ದೆವು. ಇಡೀ ಸಂಘದಲ್ಲಿ ಈ ಮಂತ್ರವನ್ನು ಶ್ರದ್ಧೆಯಿಂದಲೇ ಜಪಿಸುತ್ತಿದ್ದೆವು. ನನಗೆ ಅದೇ ಮಂತ್ರದ ಪ್ರಭಾವದಿಂದಲೇ. ನಿಶ್ಯಕ್ತಳಾದ ನಾನು ಆರು ತಿಂಗಳಿಂದಲೂ ಯಾವುದೇ ತೊಂದರೆ ಇಲ್ಲದೆ 1200 ಮೈಲಿ ನಡೆದುಕೊಂಡು ಬಂದು ಇಲ್ಲಿ ದರ್ಶನ ಮಾಡಿದೆ. ಆ ಮಂತ್ರವೇ

"ಓಂ ಹ್ರೀಂ ಅರ್ಹಂ ಶ್ರೀ ಅನಂತಾನಂತ ಪರಮ ಸಿದ್ಧೇಭ್ಯೋ ನಮೋ ನಮಃ ।"

ರಸ್ತೆಯಲ್ಲಿ ಭಯಂಕರ ಚಳಿಯನ್ನು ಸಹಿಸಿದೆವು. ಪಾವಾಪುರಿಯಲ್ಲಿ ವಿಪರೀತ ಧಗೆಯನ್ನು ಸಹಿಸಿದೆವು. ಕೆಲವು ಸಹ ಹೆಚ್ಚಾಗಿ ನಡೆಯಬೇಕಾಗುತ್ತಿತ್ತು. ಕೆಲವು ಸಲ ಅಂತರಾಯಗಳು ಜಾಸ್ತಿ ಆಗುತ್ತಿತ್ತು. ಇವೆಲ್ಲವು ಸಮ್ಮೇದಗಿರಿಯ ದರ್ಶನದಿಂದ. ಆ ಎಲ್ಲ ಪರೀಷಹಗಳು ಹೂವಿನಂತೆ ಹಗುರವಾಗಿ ಕಂಡವು. ಇವೆಲ್ಲವು ಪುಣ್ಯದ ಫಲವೆಂದು ತಿಳಿದೆವು. ಒಂದೊಂದು ಕೂಟಗಳು ದರ್ಶನದಿಂದ ಸಿಗುವ ಪುಣ್ಯ ಅಪಾರ. ಭವ್ಯಜೀವಿಗಳಿಗೆ ಮಾತ್ರ ಹೆಚ್ಚೆಂದರೆ 40 ಭವಗಳನ್ನು ತೆಗೆದುಕೊಳ್ಳುತ್ತದೆ. ಇದಕ್ಕಿಂತ ಹೆಚ್ಚಿಲ್ಲ. ದರ್ಶನ ಮಾಡಿದವರಿಗೆ ನರಕಗತಿ ಮತ್ತು ತಿಯಂಚಗತಿಗಳು ಕಳೆದುಹೋಗುತ್ತವೆ.

ಸಮ್ಮೇದ ಶಿಖರ್ಜಿ ತೀರ್ಥದ ಪರಿಚಯ

ಇರುವ ನಂಬಿಕೆ ಎಂದರೆ ಸಮ್ಮೇದಶಿಖರ ಮತ್ತು ಅಯೋಧ್ಯೆ ಈ ಎರಡು ತೀರ್ಥಗಳು ಅನಾದಿ ನಿಧನ ಮತ್ತು ಶಾಶ್ವತವಾದವು. ಅಯೋಧ್ಯೆಯಲ್ಲಿ ಎಲ್ಲಾ ತೀರ್ಥಂಕರರು ಅಯೋಧ್ಯೆಯಲ್ಲಿ ಜನ್ಮ ತಳೆದಿದ್ದಾರೆ. ಸಮ್ಮೇದ ಶಿಖರದಲ್ಲಿ ನಿರ್ವಾಣವನ್ನು ಪಡೆದಿದ್ದಾರೆ. ಆದರೆ ಈ ಹುಂಡಾವಸರ್ಪಿಣೀಯ ದೋಷದಿಂದ ಈಗ

ಐದುಮಂದಿ ತೀರ್ಥಂಕರರು ಮಾತ್ರ ಅಲ್ಲಿ ಜನ್ಮ ತಳೆದಿದ್ದಾರೆ. ಉಳಿದವರ ಜನ್ಮ ಬೇರೆ ಬೇರೆ ನಗರಗಳಲ್ಲಿ ಆಗಿದೆ. ಹಾಗೇ ಮೋಕ್ಷವನ್ನು ವೃಷಭನಾಥರು ಕೈಲಾಸ ಪರ್ವದಲ್ಲಿಯು, ವಾಸುಪೂಜ್ಯರು ಚಂಪಾಪುರಿಯಲ್ಲೂ, ನೇಮಿನಾಥರು ಊರ್ಜಯಂತ ಹಾಗೂ ಮಹಾವೀರರು ಪಾವಾಪುರಿಯಲ್ಲಿಯು ಪಡೆದಿದ್ದಾರೆ. ಉಳಿದ ೨೦ ತೀರ್ಥಂಕರರು ಸಮ್ಮೇದ ಶಿಖರದಲ್ಲಿಯೇ ಮೋಕ್ಷವನ್ನು ಪಡೆದಿದ್ದಾರೆ.

ಬೀಸಂ ತು ಜಿಣವರಿಂದಾ ಅಮರಸುರ ವಂದಿದಾ ದುದಕಿಲೇಸಾ
ಸಮ್ಮೇದೆ ಗಿರಿಸಿಹರೇ ಣಿವ್ವಾಣಗಯಂ ಣಮೋ ತೇಸಿಂ ll೨ll

ತಿಲೋಯ ಪಣ್ಣತ್ತಿಯಲ್ಲಿ ಪ್ರತಿಯೊಬ್ಬ ತೀರ್ಥಂಕರರ ಜೊತೆ ಮುಕ್ತಿ ಹೊಂದಿದವರ ಸಂಖ್ಯೆಯನ್ನು ಕೊಡಲಾಗಿದೆ. ಇಪ್ಪತ್ತು ತೀರ್ಥಂಕರರಲ್ಲದೆ ಅಸಂಖ್ಯಾತ ಮುನಿಗಳು ಇಲ್ಲಿ ಕರ್ಮವನ್ನು ನಾಶ ಮಾಡಿ ಮುಕ್ತಿಯನ್ನು ಪಡೆದಿದ್ದಾರೆ. ಸಮ್ಮೇದಶಿಖರದ ವಿಧಾನದಲ್ಲಿ ಪ್ರತಿಯೊಂದು ಕೂಟಕ್ಕೆ ಅರ್ಘ್ಯ ಕೊಡುವಾಗ ಸಂಖ್ಯೆಯನ್ನು ಕೊಡಲಾಗಿದೆ. ಮತ್ತು ಯಾವ ಯಾವ ಕೂಟಗಳು ದರ್ಶನದಿಂದ ಎಷ್ಟೆಷ್ಟು ಉಪವಾಸದ ಫಲ ಸಿಗುತ್ತದೆ ಎಂಬುದನ್ನು ತಿಳಿಸಿದೆ.

ಸಮ್ಮೇದ ಶಿಖರದ ಮಧುಬನದಲ್ಲಿ ಬೀಸಪಂಥೀ ತೇರಹಪಂಥೀ ಹಾಗೂ ಶ್ವೇತಾಂಬರರೆಂಬ ಮೂರು ಕೋಠಿಗಳು ಇವೆ. ಬೀಸಪಂಥಿಯ ಕೋಠಿ ಬಹಳ ಹಳೆಯದು ಸುಮಾರು 400 ವರ್ಷಗಳಾಗಿವೆ. ಅದರ ನಂತರ 250 ವರ್ಷಗಳ ನಂತರ ಶ್ವೇತಾಂಬರ ಕೋಠಿಯು ಆಗಿದೆ. ಈಗ ಸುಮಾರು 100 ವರ್ಷಗಳ ನಂತರದಲ್ಲಿ ತೇರಹ ಪಂಥೀಗಳ ಕೋಠಿ ಆಗಿದೆ.

ಗಿರಿರಾಜನ ಭಕ್ತಿ

ಸಮ್ಮೇದ ಶಿಖರದ ಮಹಾತ್ಮೆ ಮತ್ತು ದರ್ಶನದಿಂದ ಆಗುವ ಪುಣ್ಯದ ಲಾಭವನ್ನು ನಾನು ತಿಳಿದಂತೆ ಶ್ರದ್ಧಾನ ಮಾಡಿದಂತೆ. ಸೋಲಾಪುರದಲ್ಲಿ ಸಂಸ್ಕೃತ ಸ್ತೋತ್ರ ಮತ್ತು ಹಿಂದಿ ಸ್ತೋತ್ರದಲ್ಲಿ ಸೇರಿಸಿದ್ದೇನೆ. ಅದರಲ್ಲಿ ಕೆಲವು ಪಂಕ್ತಿಗಳನ್ನು ನೋಡಿರಿ.

ಸಿದ್ಧಾನ್ ಸರ್ವಾನ್ ನಮಸ್ಕೃತ್ಯ ಸಿದ್ಧಾಸ್ಥಾನಂ ಜಿನೇಶಿನಾಂ l
ಪೂಜ್ಯಂ ಸಮ್ಮೇದಶೈಲೇಂದ್ರಂ, ಭಕ್ತ್ಯಾ ಸಂಸ್ತೋಮಿ ಸಿದ್ಧಯೇ ll

ಒಂದು ಕೂಟದ ವಂದನೆಯಲ್ಲಿ

ಕೂಟೇ ಸಿದ್ಧವರಾಭಿಖ್ಯೇಽಜಿತ ನಾಥಃ ಶಿವಂ ಯಯೌ l
ಸಹಸ್ರ ಮುನಿಭಿಃ ಸಾರ್ಧಂ ವಂದೇ ಭಕ್ತ್ಯಾ ಶಿವಾಪ್ತಯೇ ll3ll

ಸ್ಕಂದಛಂದ

ತತ್ಕೂಟೇ ಚೈಕಾರ್ಬುದ - ಚತುರ ಶೀತಿ ಕೋಟಿ ಪಂಚಚತ್ವಾರಿಂಶತ್ l
ಲಕ್ಷ ಪ್ರಮಿತಾ ಮುನಯೋ, ದಗ್ಧ್ವಾ ಕರ್ಮಾಣಿ ಮುಕ್ತಿ ಮಾಪುರ್ಯೋಗಾತ್ ll4ll

ಅನುಷ್ಟುಪ್

ಮನಸಾ ವಪುಷಾ ವಾಚಾ ಸಂತತಂ ಭಕ್ತಿ ಭಾವತಃ l
ತಾನ್ ಸುಸಿದ್ಧಾನ್ ನಮಸ್ಯಾಮಿ, ಸ್ವಕರ್ಮಮಲಹಾನಯೇ ll5ll

ಪುನಃ ಕೊನೆಯಲ್ಲಿ ;

ಕುರುತೆ ವಂದನಾಂ ಭಕ್ತ್ಯಾ ವಾರಮೇಕಂ ಜನೋಸ್ಯಯಃ।
ತಿರ್ಯಗ್ನರಕಗತ್ಯೋಶ್ಚ ಗಮನಂ ತಸ್ಯ ನೋ ಭವೇತ್ ॥73॥
ತಥಾ ಚೈಕೋನಪಂಚಾಶತ್ ಭವಸ್ಯಾಭ್ಯಂತರೇ ಸಹಿ।
ನಿಯಮಾಲ್ಲಪ್ಸ್ಯತೇ ಮುಕ್ತಿಮೇತದುಕ್ತಂ ಜಿನೇಶ್ವರೀ ॥74॥

ಇದರ ಹಿಂದಿ ಅನುವಾದ :

ಸಿದ್ಧೋ ಕರೋ ಕರ ನಮುಸ್ಕಾರ, ಸಮ್ಮೆದಗಿರೀಂದ್ರ ಸ್ತವನ ಕರೂಂ।
ಸಿದ್ಧ ಭೂಮಿ ಕೆ ವಂದನ ಸೆ, ಕಟು ಕರ್ಮಕಾಷ್ಠ ಕೋ ದಹನ ಕರೂಂ ॥೧॥
ಕೂಟ ಸಿದ್ಧವರ ಸೆ ಶ್ರೀ ಅಜಿತಪ್ರಭು ಸಹಸ್ರ ಮುನಿಯೋಂ ಕಾ ಸಾಥ।
ಭವ ಸಮುದ್ರ ಸೆ ಪಾರ ಹುಏ ಹೈ. ವಂದನ ಕರೂಂ ನಮಾಕರ ಮಾಥ ॥೩॥
ಮುನಿಗಣ ಏಕ ಅರಬ ಚೌರಾಸಿ, ಕೋಟಿ ತಥಾ ಪೈಂತಾಲಿಸ ಲಕ್ಷ।
ಇಸೀ ಕೂಟ ಪರ ಕರ್ಮನಾಶಾ ಕರ್ ಮೋಕ್ಷ ಗಯೇ ವಂದೂಂ ಮೈ ನಿತ ॥೪॥

ನಾನು ಪುನಃ 1987ರಲ್ಲಿ ಸಮ್ಮೇದ ಶಿಖರ ವಿಧಾನದ ಪೂಜನ ಮಾಡಿದೆ. ಅದರಲ್ಲಿ ಕೂಟಗಳ ಅರ್ಘ್ಯದ ಜೊತೆ ವಂದನೆ ಮಾಡುವುದರಿಂದ ಆಗುವ ಉಪವಾಸದ ಸಂಖ್ಯೆಗಳನ್ನು ಕೊಡಲಾಗಿದೆ. ಹಾಗೇ

ಶ್ರೀ ಅಜಿತನಾಥ ಜಿನ ಕೂಟ ಸಿದ್ಧವರ ಸ ನಿರ್ವಾಣ ಪಧಾರೆ ಹೈಂ ।
ಉನ ಸಂಘು ಹಜಾರ ಮಹಾಮುನಿಗಣ, ಹನ ಮೃತ್ಯು ಮೋಕ್ಷ ಸಿಧಾರೆ ಹೈಂ
ಇಸಸೆ ಹೀ ಏಕ ಅರಬ ಅಸ್ಸೀ ಕೋಟಿ ಅರು ಚೌವನ ಲಾಖ ಮುನಿ ॥
ನಿರ್ವಾಣ ಗಯ ಸಬಕೋ ಪೂಜೂಂ ಮೈ ಪಾಉಂ ನಿಜ ಚೈತನ್ಯ ಮಣೇ ॥
ದೋಹಾ
ಭಾವಸಹಿತ ಇಸ ಟೋಂಕ ಕೀ, ಕರೂಂ ವಂದನಾ ಆಜ ।
ಬತ್ತೀಸ ಕೋಟಿ ಉಪವಾಸ ಫಲ, ಅನುಕ್ರಮ ಸೆ ನಿಜ ರಾಜ್ಯ ॥
ಓಂ ಹ್ರೀಂ ಸಿದ್ಧವರ ಕೂಟಾತ್ ಸಿದ್ಧಪದಪ್ರಾಪ್ತ ಸರ್ವಮುನಿ ಸಹಿತ ಅಜಿತ ಜಿನೇಂದ್ರಾಯ ಅರ್ಘ್ಯಂ ।

ಈ ಪ್ರಕಾರ ಮಥುರಾದಲ್ಲಿ ಶ್ರೀ ಜಂಬೂಸ್ವಾಮಿಗಳ ಚರಣವಂದನೆ ಮಾಡಿ ನಾನು ಮುಂದುವರಿಯುತ್ತಾ ನಿರ್ವಿಘ್ನವಾಗಿ ಯಾತ್ರೆಯನ್ನು ಮುಗಿಸಿದೆ. ಇದರ ಕಾರಣದಿಂದಲೇ ನನಗೆ ಜಂಬೂಸ್ವಾಮಿಗಳ ಬಗ್ಗೆ ಭಕ್ತಿ ಭಾವನೆಯು ಬೆಳೆಯಿತು. ಆದ್ದರಿಂದ ಶ್ರವಣ ಬೆಳಗೊಳದಲ್ಲಿ ಸರ್ವಪ್ರಥಮ ಬಾಹುಬಲಿಯ ಸ್ತೋತ್ರ ಸಂಸ್ಕೃತ ಮತ್ತು ಚರಿತೆಯನ್ನು ಹಿಂದಿ ಪದ್ಯದಲ್ಲಿ ರಚಿಸಿದ ನಂತರ ಶ್ರೀ ಜಂಬೂಸ್ವಾಮಿಯ ಸ್ತುತಿಯನ್ನು ರಚಿಸಿದೆ. ಅದರ ಪ್ರಥಮ ಶ್ಲೋಕದಲ್ಲಿ

ವಿಹಿತ ವಿಮಲ ಸಮ್ಯಕ್ ಖಡ್ಗಧಾರಾವ್ರತಃ ಪ್ರಾಕ್ ।
ಭವ ಇಹ ನ ಹಿ ಕಾಂತಾಸಕ್ತ ಚೇತಾ ನಿಕಾಮಃ ॥
ಇಹ ಭರತಧಾರಾಯಾ ಮಂತಿಮಃ ಕೇವಲೀ ತಮ್।
ತ್ರಿಭುವನನುತ ಜಂಬೂಸ್ವಾಮಿನಂ ಸ್ತೌಮಿ ಭಕ್ತ್ಯಾ ॥೧॥

ಬೀಸಪಂಥೀ ಕೋಠಿಯಲ್ಲಿ ಮೂರು ಸುತ್ತುವರಿದ ಪ್ರದೇಶವಿದೆ. ಒಂದು ಧರ್ಮಶಾಲೆಯಲ್ಲಿ 166 ಕೊಠಡಿಗಳಿವೆ. ಇದರ ಮುಖ್ಯ ಮಂದಿರದಲ್ಲಿ ಎಂಟು.

ಶಿಖರಬಂಧ ಜಿನಾಲಯಗಳಿವೆ. ತೇರಹಪಂಥ ಕೋಠಿಯಲ್ಲಿ ಐದು ಸುತ್ತುವರಿದ ಪ್ರದೇಶ ಮತ್ತು ಐದು ಧರ್ಮಶಾಲೆಗಳಿವೆ. ಹಾಗೂ ಹನ್ನೆರಡು ಜಿನಾಲಯಗಳಿವೆ ಮತ್ತು ಸಹಸ್ರಕೂಟ ಜಿನಾಲಯಗಿಳವೆ. ಇದು 1975ರಲ್ಲಿ ಬರೆದ "ಭಾರತದ ದಿಗಂಬರ ಜೈನ ತೀರ್ಥ' ಪುಸ್ತಕದಲ್ಲಿ ಬರೆದಿದ್ದು. ಅದರ ನಂತರ ಬಹಳಷ್ಟು ರಚನೆ ಆಗಿದೆ.

ಆ ಸಮಯದಲ್ಲೇ ನಂದೀಶ್ವರ ದ್ವೀಪದ ರಚನೆ ಆಗುತ್ತಿತ್ತು. ಸಮವಶರಣ ಮಂದಿರ ನಂತರದಲ್ಲಿ ಆಗಿದ್ದು. ಈಗ ಅಲ್ಲಿ ಸುಪಾರ್ಶ್ವಮತೀಯವರಿಂದ ನಾನೂರ ಐವತ್ತೆಂಟು ಜಿನಮಂದಿರಗಳ ನಿರ್ಮಾಣ ಮಾಡಿಸಲಾಗುತ್ತಿದೆ. ಇದು ಮಧ್ಯಮಲೋಕ ಸಂಸ್ಥಾನವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಕಲ್ಯಾಣಸಾಗರರೆಂಬ ಮುನಿಗಳಿಂದ ಅಲ್ಲಿ 'ಕಲ್ಯಾಣನಿಕೇತನ" ಎಂಬ ಹೆಸರಿನಿಂದ ಒಂದು ಸಂಸ್ಥೆ ತೆರೆಯಲಾಗಿದೆ. ಅದರಲ್ಲಿ ಹಲವಾರು ನಿರ್ಮಾಣಗಳು ಆಗುತ್ತಿವೆ.

ವಸ್ತ್ರಗಳ ಶೋಧ

ಇಲ್ಲಿಯ ಹವಾಮಾನ ನನ್ನ ಆರೋಗ್ಯಕ್ಕೆ ಬಹಳ ಅನುಕೂಲವಾಗಿತ್ತು. ಆದ್ದರಿಂದಲೇ ರಸ್ತೆಯ ಎಲ್ಲಾ ಆಯಾಸವು ಮಾಯವಾಯಿತು. ಈಸರೀಯ ಉದಾಸೀನ ಆಶ್ರಮದ ಬ್ರಹ್ಮಚಾರಿಗಳು ಆಹಾರ ಕೊಡಲು ಬರುತ್ತಿದ್ದರು. ಒಂದು ಸಲ ಬ್ರಹ್ಮಚಾರಿಗಳು ಬಂದವರೆ ಕಾಲು ತೊಳೆದು ಚೌಕದ ಬಳಿಗೆ ಬಂದರು. ನಾನು ಸಂಕೇತದಿಂದ ಅಲ್ಲೇ ತಡೆದೆ. ಬ್ರ. ಸುಗನಚಂದರು ಕೇಳಿದರು ನೀವು ಶುದ್ಧ ವಸ್ತ್ರವನ್ನು ಎಲ್ಲಿ ಬದಲಾಯಿಸಿದಿರಿ? ಅದಕ್ಕೆ ಅವರು ನಾನು "ಈಸರಿ"ಯಲ್ಲಿಯೇ ಬೆಳಗ್ಗೆ ಸ್ನಾನಮಾಡಿ ಶುದ್ಧವಸ್ತ್ರಧರಿಸಿ, ಪೂಜೆಮಾಡಿ, ಅಲ್ಲಿಂದ ಸೀದ ಇಲ್ಲಿಗೆ ಬರುತ್ತಿದ್ದೇನೆ ಎಂದರು. ಅದಕ್ಕೆ ಬ್ರಹ್ಮಚಾರಿಣಿ ಕೇಳಿದರು. ಏನು ನಡೆದುಕೊಂಡು ಬಂದಿರ? ಅದಕ್ಕೆ ಅವರು ಇಲ್ಲ, ನಾನು ಬಸ್ಸಿನಲ್ಲಿ ಬಂದಿದ್ದೇನೆ! ಆಗ ಸುಗನಚಂದ್ರರು ಈಗ ನಿಮ್ಮ ವಸ್ತ್ರಶುದ್ಧ ಹೇಗಾಯಿತು. ಬಸ್ಸಿನಲ್ಲಿ ಎಲ್ಲರನ್ನು ಮುಟ್ಟಿಸಿಕೊಂಡಿದ್ದಿರಲ್ಲ, ಅದಕ್ಕೆ ಅವರು ಬೆಳಗ್ಗೆ ಎದ್ದು ಮಡಿ ಬಟ್ಟೆ ಉಟ್ಟಮೇಲೆ ಮತ್ತೆ ಮತ್ತೆ ಬದಲಿಸುವ ಅವಶ್ಯಕತೆ ಏನು? ಅಂದರು.

ಕಡೆಗೆ ಅವರನ್ನು ಆಹಾರ ಕೊಡಲು ಸಮ್ಮತಿಸಲಿಲ್ಲ. ಇದರಿಂದ ದುಃಖಿತರಾದ ಅವರು ಗೊಂದಲಕ್ಕೆ ಬಿದ್ದರು. ಆಹಾರವಾದ ನಂತರ ಅವರು ನನ್ನ ಹತ್ತಿರ ಬಂದು ಶುದ್ಧತೆಯ ಬಗ್ಗೆ ಚರ್ಚೆ ಮಾಡತೊಡಗಿದರು. ಅವರಿಗೆ ಸಮಾಧಾನ ಮಾಡುತ್ತಾ, ನಮ್ಮ ಆಚಾರ್ಯ ಪರಂಪರೆಯಲ್ಲಿ ವಸ್ತ್ರದ ಶೋಧ ಹೇಗಿದೆ ಎಂದರೆ, ಧೋತಿ, ದುಪ್ಪಟವನ್ನು ಒಗೆದು ಹಗ್ಗದ ಮೇಲೆ ಒಣಗಿ ಹಾಕಬೇಕು. ಆ ಹಗ್ಗದ ಮೇಲೆ ಬೇರೆ ಬಟ್ಟೆ ಇರಬಾರದು. ಸ್ನಾನಮಾಡಿ ಬಂದು ಏಕಾಂತದಲ್ಲಿ ಒಣಗಿರುವ ಬಟ್ಟೆಯನ್ನು ಧರಿಸಬೇಕು. ನಗ್ನವಾಗಿ ತೆಗೆದುಕೊಳ್ಳಬೇಕು. ಇಲ್ಲ ಒದ್ದೆ ಬಟ್ಟೆಯನ್ನು ಉಟ್ಟು ಈ ಬಟ್ಟೆ ತೆಗೆದುಕೊಳ್ಳಬೇಕು. ಈ ಬಟ್ಟೆಯನ್ನು ಉಟ್ಟುಕೊಂಡು ಚೌಕಕ್ಕೆ ಬಂದು ಆಹಾರ ಕೊಡಬೇಕು. ಹೊರಗಿನಿಂದ ಬಂದವರ ಬಟ್ಟೆಯನ್ನು ನಾವು ಸ್ಪರ್ಶಿಸಬಾರದು. ಇದು ಆಚಾರ್ಯ ಶಾಂತಿಸಾಗರರಿಂದ ಹಿಡಿದು ಇಂದಿನವರೆಗೂ ಇದೇ ಪದ್ಧತಿಯನ್ನು ನಡೆಸಿಕೊಂಡು ಬರುತ್ತಿದ್ದೇವೆ. ಆದರೆ ಈಗ ಒಣಗಿದ ಬಟ್ಟೆಯನ್ನು ಕೋಲಿನಿಂದ ತೆಗೆಯುವುದು ಶುದ್ಧಿ ಎನ್ನುತ್ತಾರೆ. ಕೆಲವರು ಕೈಯಿಂದಲೇ ತೆಗೆದು ಡಬ್ಬ ಅಥವಾ ಪ್ಲಾಸ್ಟಿಕ್ ಚೀಲಗಳಲ್ಲಿ ಇಟ್ಟುಕೊಂಡು ಬೇರೆ ಜಾಗದಿಂದ ತಂದು ಮಡಿ ಎಂದು ಧರಿಸಿ ಆಹಾರ ಕೊಡುತ್ತಾರೆ. ಈ ರೀತಿ ಕೂಡುವ ಆಹಾರವನ್ನು ಕೆಲವರು ಗ್ರಹಿಸುತ್ತಾರೆ. ಆದರೆ ನಾವುಗಳು ತೆಗೆದುಕೊಳ್ಳುವುದಿಲ್ಲ.

ಹೀಗೆ ಮಡಿಯ ಬಗ್ಗೆ ಕೇಳಿ ತಿಳಿದ ಬ್ರಹ್ಮಚಾರಿ ಮಾರನೆಯ ದಿನದಿಂದ ಮಧುವನಕ್ಕೆ ಬಂದು ಬೆಳಗ್ಗೆಯೇ ಮಡಿ ಹಾಕಿ ನಂತರ ಅದನ್ನು ಧರಿಸಿ ಯಾರನ್ನೂ ಮುಟ್ಟದೆ ಬಂದು ಆಹಾರ ಕೊಡತೊಡಗಿದರು. ಇದರಿಂದ ಅವರಿಗೂ ಸಂತೋಷವಾಯಿತು.

ಸಂಘದ ವ್ರತಿಕರ ವೈಯಾವೃತ್ತಿ

ಯಾತ್ರೆಯಲ್ಲಿ ಬ್ರಹ್ಮಚಾರಿಗಳೆಲ್ಲ ಎತ್ತಿನಗಾಡಿಯಲ್ಲೇ ಪ್ರಯಾಣಿಸುತ್ತಿದ್ದರು. ಅವರು ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ತಲುಪುವ ವೇಳೆಗೆ 7-8 ಗಂಟೆಗೆ ತಗಲುತ್ತಿತ್ತು. ಆನಂತರ ಬಟ್ಟೆ ಒಣಗಿಸಿ ಚೌಕದಲ್ಲಂತು, ಒದ್ದೆ ಬಟ್ಟೆಯಲ್ಲೆ ಇರುತ್ತಿದ್ದರು. ಅವರು ಊಟ ಮಾಡುವ ವೇಳೆಗೆ 12 ರಿಂದ 1 ಗಂಟೆ ಆಗುತ್ತಿತ್ತು. ಅದೂ ತಣ್ಣಗಾಗಿ ಒಣಗಿ ಹೋಗಿರುತ್ತಿತ್ತು. ಮನೋವತಿ ಮತ್ತು ಪ್ರಕಾಶರಂತು ಹೊಟ್ಟೆತುಂಬ ತಿನ್ನುತ್ತಿರಲಿಲ್ಲ. ಊಟ ಆಗುತ್ತಿದ್ದಂತೆ ಬೇಗ ಪಾತ್ರೆ ತೊಳೆಯುವುದು ಸಾಮಾನು ಕಟ್ಟುವುದರಲ್ಲೇ ಅವರಿಗೆ 3-4 ಗಂಟೆ ಆಗಿರುತ್ತಿತ್ತು. ಇನ್ನು ಗಾಡಿ ಕಟ್ಟಿ, ಸೇರಬೇಕಾದ ಜಾಗ ಸೇರುವ ವೇಳೆಗೆ 11-12 ಗಂಟೆಯೇ ಆಗಿರುತ್ತಿತ್ತು. ಪುನಃ 3 ಗಂಟೆಗೆ ಎದ್ದು ಹುಲ್ಲು ಹಾಸಿಗೆ, ಸಾಮಾನು ಹೇರಿಕೊಂಡು ಮುಂದಿನ ಜಾಗಕ್ಕೆ ಹೊರಡಬೇಕಾಗುತ್ತಿತ್ತು. ಆ ಜಾಗಕ್ಕೆ ಬೆಳಗ್ಗೆ 7 ರಿಂದ 8 ಗಂಟೆಗೆ ತಲುಪುತ್ತಿದ್ದರು. ಯಾತ್ರೆ ಪೂರ್ತಿ ಅವರಿಗೆ ಇದೇ ದಿನಚರಿಯಾಗಿತ್ತು. ಆ ಸಮಯದಲ್ಲಿ ಜಾತ್ರೆಯ ಗುರಿ ಇದ್ದುದ್ದರಿಂದ ಆರೋಗ್ಯವನ್ನು ಲೆಕ್ಕಿಸದೆ ಈ ಕಷ್ಟವನ್ನು ಎದುರಿಸುತ್ತಿದ್ದೆವು. ಆ ಪರಿಸ್ಥಿತಿ ಈಗ ಖಂಡಿತ ಸಾಧ್ಯವಿಲ್ಲ. ಈ ಐದುಗಂಟೆಗೆ ಕೋಟೆಯಲ್ಲಿ ಹುಲ್ಲನ್ನು ಹರಡಿ ಕುಳಿತರೆ ಬೆಳಗ್ಗೆ 9 ಗಂಟೆಯವರೆಗೂ ಏಳುವ ಹಾಗಿಲ್ಲ.

ಅಷ್ಟೇ ಅಲ್ಲದೆ ಅವರಿಗೆ ಸಂಘದಲ್ಲಿ ಬೇರೆ ಕೆಲಸಗಾರರು ಇಲ್ಲದ್ದರಿಂದ ಚೌಕಕ್ಕೆ ನೀರು ತರುವುದು, ಪಾತ್ರ ತೊಳೆಯುವುದು, ಸಾಮಾನುಕಟ್ಟುವುದು. ಗಾಡಿಗೆ ಏರಿಸುವುದು, ಇಳಿಸುವುದೇ ಇಂತಹ ಎಲ್ಲ ಕಷ್ಟದ ಕೆಲಸಗಳನ್ನು ಬೇಸರವಿಲ್ಲದಂತೆ. ಶಾಂತಿಯಿಂದಲೇ ಮಾಡುತ್ತಿದ್ದರು. ಇವರುಗಳಂತು ಯಾತ್ರೆಯಲ್ಲಿ ಭಕ್ತಿಯಿಂದ ವೈಯಾವೃತ್ತಿ ಮತ್ತು ಗುರುಸೇವೆಯನ್ನು ಮಾಡಿ ಮಹಾನ್ ಪುಣ್ಯಬಂಧ ಮಾಡಿಕೊಂಡರು ಎಂಬುದರಲ್ಲಿ ಸಂದೇಹವೇ ಇಲ್ಲ.

ಬ್ರಹ್ಮಚಾರಿ ಹೇಳುತ್ತಿದ್ದರು. ಕಾನಪುರದಲ್ಲಿ ಒಬ್ಬ ಗಾಡಿವಾಲ ಸಿಕ್ಕಿದ ಅವನು ಬ್ರಾಹ್ಮಣ. ನನ್ನ ತಟ್ಟೆಯಲ್ಲೇ ಊಟ ಮಾಡುತ್ತಿದ್ದ. ಅದೂ ದಿನದಲ್ಲಿ ಒಮ್ಮೆಯೇ ಊಟ ಮಾಡುತ್ತಿದ್ದ. ಅವನು ಬೀಡಿ ಸಿಗರೇಟ್ ಸೇದುತ್ತಿರಲಿಲ್ಲ. ಎಲೆ ತಿನ್ನುತ್ತಿರಲಿಲ್ಲ. ರಾತ್ರಿ ಭೋಜನ ಮಾಡುತ್ತಿರಲಿಲ್ಲ. ಅವನು ಬಹಳ ಸಾತ್ವಿಕ ಅವನಿಗೆ ನನ್ನ ಬಗ್ಗೆ ಬಹಳ ಭಕ್ತಿ. ಪ್ರತಿದಿನ ನಮಸ್ಕಾರ ಮಾಡಿಯೇ ಊಟ ಮಾಡುತ್ತಿದ್ದ. ಅವನಿಗೆ ಆರ್ಯಿಕೆಯರ ಸೀರೆಗಳನ್ನು ಒಗೆಯಲು ಬಯಸುತ್ತಿದ್ದ. ಆದರೆ ಅವನಿಗೆ ಅನುಮತಿ ಕೊಟ್ಟಿರಲಿಲ್ಲ. ಬ್ರಹ್ಮಚಾರಿಣಿಯರೇ ಎಲ್ಲವನ್ನು ಒಗೆದು ಹಾಕಿಬಿಡುತ್ತಿದ್ದರು. ಅವನು ಹೇಳುತ್ತಿದ್ದ ನನಗೂ ಮಾತಾಜಿಯವರ ಏನಾದರು ಸೇವೆ ಮಾಡುವ ಅವಕಾಶ ಕೊಡಿ. ನಾನು ಬಟ್ಟೆಯನ್ನಾದರೂ ಒಗೆಯುತ್ತೇನೆ ಎನ್ನುತ್ತಿದ್ದರು. ಇದರಿಂದಲಾದರು ನನಗೆ ಸ್ವಲ್ಪ ಪುಣ್ಯ ಬರಲಿ ಎಂದು ಬಾಬಾಜಿ ಅದಕ್ಕೆ ನಾನು ಏನು ಮಾಡಲಿ ಬಾಯಿಜೀಗಳು ಒಗೆದೆಬಿಡುತ್ತಾರಲ್ಲ ಎಂದು ಬ್ರ. ಹೇಳುತ್ತಿದ್ದರು ಅವನ ಎತ್ತಿನಗಾಡಿ ದೊಡ್ಡದಾಗಿತ್ತು ಎತ್ತುಗಳು ಬಲಿಷ್ಠವಾಗಿದ್ದರಿಂದ ಎರಡು ಗಾಡಿಯ ಸಾಮಾನು ಒಂದೇ ಗಾಡಿ ಸಾಗಿಸುತ್ತಿದೆ ಎಂದು. ಆ ಗಾಡಿಯವರು ಶಿಖರ್ಜಿಯವರೆಗೂ ಬಂದವನು ಆಮೇಲೆ ಅಪ್ಪಣೆ ಪಡೆದು ಹಿಂದಿರುಗಿದನು.

ಈಸರೀಯಲ್ಲಿ ಧರ್ಮೋಪದೇಶ

ನಂತರ ನಾನು ಕೆಲವು ದಿನಗಳವರೆಗೆ ಈಸರಿಗೆ ಬಂದೆ. ಇಲ್ಲಿ ಬ್ರ. ಸುರೇಂದ್ರ ಕುಮಾರ್‌ರವರು ಮುಮುಕ್ಷು ಆಶ್ರಮದಲ್ಲಿ ಒಂದು ದಿನ ನನ್ನ ಪ್ರವಚನ ಇಡಿಸಿದ್ದರು. ಅಲ್ಲಿ ಹೋದಾಗ ಮುಂದೆ ಪ್ರವಚನ ಸಾರವನ್ನು ಇಟ್ಟಿದ್ದರು. ನಾನು ಪ್ರವಚನಸಾರದ ಗಾಥೆಗಳನ್ನು ಮತ್ತು ಅಮೃತ ಚಂದ್ರಸೂರಿಗಳ ಟೀಕೆಯ ಅರ್ಥವನ್ನು ಚೆನ್ನಾಗಿ ಹೇಳಿದೆ. ನ್ಯಾಯದ ಸಾಲುಗಳು ಬಂದಾಗ ನ್ಯಾಯದ ಶೈಲಿಯಲ್ಲಿಯೇ ತಿಳಿಸಿದೆ. ಆಗ ಸುರೇಂದ್ರಜೀಯವರು ಹೇಳಿದರು. ಮಾತಾಜೀ ತಮ್ಮ ಸಂಸ್ಕೃತ ವ್ಯಾಕರಣ ಬಹಳ ಬಹಳ ಪ್ರೌಢವಾಗಿದೆ. ನ್ಯಾಯ ಮತ್ತು ಸಿದ್ಧಾಂತ ಈ ಮೂರು ವಿಷಯಗಳಲ್ಲಿಯು ಒಳ್ಳೆಯ ಅಧಿಕಾರವಿದೆ. ನಮಗೆ ಪ್ರವಚನಸಾರದ ಪಾಠವನ್ನು ಮಾಡಿರಿ. ಈ ರೀತಿ ಕೆಲವು ದಿನ ಸ್ವಾಧ್ಯಾಯ ನಡೆಯಿತು. ನಾನು ಬೀಸಪಂಥೀ ಮಂದಿರಲ್ಲಿ ತಂಗಿದ್ದೆ. ಈಗ ಆ ಜನರು ಆಗ್ರಹ ಪಡಿಸತೊಡಗಿದರು. ತಾವು ಸಂಘಸಹಿತ ಈಸರೀಯಲ್ಲಿಯೇ ಚಾತುರ್ಮಾಸ ಮಾಡಿ. ಈ ಕಡೆ 'ಗಯಾದಿಂದ ಚಂಪಾಲಾಲ ಸೇಠರು ಬಂದು 'ಗಯಾ'ನಲ್ಲಿಯ ಚಾತುರ್ಮಾಸಕ್ಕೆ ಬರಲು ಪ್ರಾರ್ಥಿಸಿದರು.

ರಾಂಚಿ, ಗಿರಿಡೀಹ ಮತ್ತು ಬಾಗಲಪುರದ ಜನರು ಕೂಡ ಚಾತುರ್ಮಾಸಕ್ಕೆ ಬರಲು ಆಗ್ರಹಪಡಿಸತೊಡಗಿದರು. 'ಆರಾ'ದಿಂದ ಬ್ರ. ಚಂದಾಬಾಯಿಯಿಂದ ಕೂಡ ಸಮಾಚಾರ ಬಂದಿತು. 'ಗಯಾ'ದ ಬ್ರ. ಪತಾಸೀಬಾಯಿಗಳು ಆಗ್ರಹ ಮಾಡುತ್ತಿದ್ದರು. ಈ ಎಲ್ಲರ ಜೊತೆಗೆ ಕಲಕತ್ತೆಯಿಂದ ಶ್ರಾವಕರು ಮತ್ತು ಬ್ರಹ್ಮಚಾರೀ ಚಾಂದ ಮಲ್ಲಜೀಯವರಿಂದ 3,4 ದಿನಗಳಿಗೊಮ್ಮೆ ಪತ್ರ ಬರತೊಡಗಿತು. ನಾನು ಎಲ್ಲಿಗೆ ಹೋಗುವುದು ಎಂದು ಯೋಚಿಸಲಾರದಾದೆ. ಎಲ್ಲಿ ಚಾತುರ್ಮಾಸ ಮಾಡುವುದು ?

ನನಗೆ ಸಮ್ಮೇದಶಿಖರದಲ್ಲೇ ಇರಬೇಕೆಂಬ ಆಸೆ ಇತ್ತು. ಆದರೆ ಜನರು ಸೊಳ್ಳೆಯ ಭಯವನ್ನು ಹುಟ್ಟಿಸಿದ್ದರು. ಕೊನೆಗೆ ಸಂಘದಿಂದ ಮುನಿಶ್ರೀ ಶ್ರುತಸಾಗರರಿಂದ ಬರೆಯಲ್ಪಟ್ಟ ಒಂದು ಪತ್ರ ಬಂದಿತು. ಮಹಾರಾಜರು ನಿಮಗೆ ಆದೇಶಿಸಿರುವುದು ಏನೆಂದರೆ ತಾವು ಸಮ್ಮೇದ ಶಿಖರಕ್ಕಾಗಿ 1200 ಮೈಲಿ ಪ್ರಯಾಣವನ್ನು ಮಾಡಿದ್ದೀರ ಹಾಗೇ 300 ಮೈಲಿ ಪ್ರಯಾಣ ಮಾಡಿ ಕಲಕತ್ತೆಯಲ್ಲಿ 5 ತಿಂಗಳು ಇದ್ದು ವಿಶ್ರಾಂತಿಯ ಜೊತೆಗೆ ಧರ್ಮ ಪ್ರಭಾವನೆಯನ್ನು ಮಾಡಿರೆಂದು ತಿಳಿಸಿದ್ದರು. ಈ ಸಲ ಅಧಿಕ ಬಂದಿದ್ದರಿಂದ ಚಾತುರ್ಮಾಸ 5 ತಿಂಗಳಾಗಿತ್ತು. ಪತ್ರವನ್ನು ಓದಿದ ಮೇಲೆ ಮುನಿಶ್ರೀಗಳ ಆಣತಿಯಂತೆ ಕಲಕತ್ತೆಗೆ ಹೊರಡಲು ನಿಶ್ಚಯಿಸಿ ತಮ್ಮೊಳಗೆ ವಿಚಾರ ವಿನಿಮಯ ಮಾಡಿಕೊಂಡೆವು. ಯಾರಿಗೆ ಮತ್ತೆ ನಡೆಯಲು ಮನಸ್ಸಿರಲಿಲ್ಲ. ಆದರೂ ತೀರ್ಮಾನವನ್ನೆಲ್ಲ ನನ್ನ ಮೇಲೆ ಬಿಟ್ಟರು. ಅಮ್ಮ ತಾವು ಹೇಗೆ ನಿರ್ಣಯಿಸುತ್ತೀರ ಹಾಗೇ. ನಾವು ನಡೆಯುತ್ತೇವೆ. ಈ ಕಡೆ ಕಲಕತ್ತೆಯಿಂದ ಅಮರಚಂದ ಬೆಟ್ಟ ಮೊದಲಾದ ಸ್ಥಳಗಳಿಂದಲೂ ಶ್ರಾವಕರು ಬರುವವರಿದ್ದರು. ಕೊನೆಗೆ ಯೋಚಿಸಿ ಕಲಕತ್ತೆಗೆ ಹೋಗುವ ನಿರ್ಣಯವನ್ನ ತೆಗೆದುಕೊಂಡೆವು.

ನಾವು ಈಸರೀ ಯಿಂದ ನಿಮಿಯಘಾಟನಿಂದಲೇ ಪರ್ವತವನ್ನು ಹತ್ತಿ, ವಂದಿಸಿ, ಜಲಮಂದಿರದಲ್ಲೇ ಮಲಗಿ ವಾಪಸ್ಸು ಮಧುವನಕ್ಕೆ ಇಳಿದುಬಂದೆವು. ತಾವು ತಲುಪುತ್ತಲೇ ಕಲಕತ್ತೆಯ ಶ್ರಾವಕರು ಬಂದು ಪ್ರಾರ್ಥಿಸಿದರು. ನಾವು ಆಹಾರವಾಗುತ್ತಿದ್ದಂತೆ ವಿಹಾರ ಹೊರಟೆವು. ಆ ದಿನ ಆಷಾಢ ಶುಕ್ಲ ಚೌತಿ. ಚಾತುರ್ಮಾಸ ಸ್ಥಾಪನೆಗೆ ಕೇವಲ 10 ದಿನಗಳು ಮಾತ್ರ ಇತ್ತು. ಆಚಾರ್ಯರು ನಮಗೆ (ಆಷಾಢ ಶುದ್ಧ) ಶ್ರಾವಣದ ಚೌತಿಯವರೆಗೆ ತಲುಪಿದರು ಸಾಕು ಎಂದು ತಿಳಿಸಿದ್ದರು. ವಿಶೇಷ ಪ್ರಸಂಗಗಳಲ್ಲಿ ಶ್ರಾವಣದ ವದೀ ಚೌತಿಯವರೆಗೂ

ವರ್ಷಾಯೋಗದ ಸ್ಥಾಪನೆ ಮಾಡಲು ಶಾಸ್ತ್ರಗಳಲ್ಲಿ ವಿಧಾನವಿದೆ. ಆದ್ದರಿಂದ ನಾವು ಸಾಹಸಮಾಡಿ ವಿಹಾರ ಹೊರಟೆವು. ಎಲ್ಲಾ ವ್ಯವಸ್ಥೆಯನ್ನು ಸುಗನಚಂದ ಮತ್ತು ಮನೋವತಿಯರೇ ನಿರ್ವಹಿಸಿದರು. ಆದರೆ ಕಲಕತ್ತದ ಶ್ರಾವಕರು ಕೂಡ ಮಧ್ಯೆ ಮಧ್ಯೆ ಬಂದು ಇಳಿದುಕೊಳ್ಳುವ ಜಾಗಗಳ ವ್ಯವಸ್ಥೆಯನ್ನು ಮಾಡುತ್ತಿದ್ದರು.

೪೩

ಕಲಕತ್ತಾದಲ್ಲಿ ಚಾತುರ್ಮಾಸ

ಆಶಾಢ ಶುಕ್ಲ ಚೌತಿಯಿಂದ ಚತುರ್ದಶಿಯವರೆಗೆ ನನ್ನ ಹತ್ತಿರ 11 ದಿನಗಳು ಇದ್ದವು. ಚೌತಿಯ ಮಧ್ಯಾಹ್ನ ವಿಹಾರ ಹೊರಟು ಸುಮಾರು 10 ಮೈಲಿ ನಡೆದೆವು. ಹೀಗೆ ಕ್ರಮವಾಗಿ 9 ದಿನ ಇಪ್ಪತ್ತಿಪ್ಪತ್ತು ಮೈಲಿ ನಡೆದು. ಕೊನೆಯ ದಿನ 10 ಮೈಲಿ ನಡೆದರು 200 ಮೈಲಿಗಳನ್ನು ಕ್ರಮಿಸಬಹುದಾಗಿತ್ತು. ಈ ಲೆಕ್ಕಾಚಾರದಲ್ಲಿ ನಡೆಯಬೇಕೆಂದು ತೀರ್ಮಾನಿಸಿದೆವು. ಆಹಾರ, ಸಾಮಾಯಿಕದ ಹೊರತಾಗಿ ಉಳಿದೆಲ್ಲ ಸಮಯವನ್ನು ನಡೆಯುವುದರಲ್ಲಿ ತೊಡಗಿಕೊಂಡೆವು. ಮಧ್ಯ 5-10 ನಿಮಿಷ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದೆವು. ಕಾಲುಗಳು ಸೋತಿದ್ದವು. ರಕ್ತವು ಬರತೊಡಗಿದರೂ ಲೆಕ್ಕಿಸದೆ ಅದಕ್ಕೆ ಒದ್ದೆ ಮಣ್ಣಿನ ಲೇಪ ಮಾಡಿಕೊಂಡು ಒಂದೆರಡು ಕ್ಷಣ ನಿಲ್ಲುತ್ತಿದ್ದೆವು ಮತ್ತೆ ನಡೆಯುತ್ತಿದ್ದೆವು.

ಹೀಗೆ ವಿಹರಿಸುತ್ತಾ 3, 4 ದಿನ ಕಳೆಯಿತು. ಒಂದು ದಿನ ಆಹಾರದಲ್ಲಿ ಒಂದೆರಡು ತುತ್ತು ತೆಗೆದುಕೊಳ್ಳುತ್ತಲೇ ಅಂತರಾಯವಾಯಿತು. ಉಪವಾಸದಲ್ಲೇ ನಾನು ನಿಶ್ಚಯಿಸಿಕೊಂಡ ದೂರವನ್ನು ಕ್ರಮಸಿದೆ. ಆದರೆ ಅದರ ಜೊತೆ ಆಮಶಂಕೆ ಮತ್ತೇ ಕಾಣಿಸಿಕೊಂಡು ದಿನಕ್ಕೆ ಮೂರು ನಾಲ್ಕು ಸಲ ಶೌಚಕ್ಕೆ ಹೋಗಬೇಕಾಗುತ್ತಿತ್ತು. ಆದರೂ ನನ್ನ ದೇಹ ನಡೆಯುವುದರಲ್ಲಿ ಹಿಂದೆ ಬೀಳಲಿಲ್ಲ. ಆದಾಗ್ಯೂ ಆರೋಗ್ಯವಂತ ಸಾಧು ಸಾಧ್ವಿಯರು ಇಷ್ಟುದೂರವನ್ನು ನಡೆದರು. ಲಾಡನೂನಲ್ಲಿ ನನ್ನ 'ಸಂಗ್ರಹಿಣಿ'ಯಿಂದಾಗಿ ಯಾತ್ರೆ ಮಾಡಲಾಗುವುದಿಲ್ಲ ಎಂದು ತಿಳಿದಿದ್ದೆ. ಆದರೆ 6 ತಿಂಗಳು ಸಮ್ಮೇದ ಶಿಖರ ತಲುಪುವವರೆಗೂ ಅದು ಕಂಡುಬಂದಿರಲಿಲ್ಲ. ಹಾಗೇ ನನ್ನ ಮನೋಬಲದಿಂದಲೇ 200 ಮೈಲಿ ನಡೆದು 11 ದಿನಕ್ಕೆ ಸರಿಯಾಗಿ ಆಷಾಢ ಶುಕ್ಲ ಚತುರ್ದಶಿಯಂದು ಕಲಕತ್ತೆ ತಲುಪಿಯೇ ಬಿಟ್ಟೆವು.

ಮಳೆಯ ಬಿಂದು

ಕಲಕತ್ತ ತಲುಪಲು ಸ್ವಲ್ಪ ದೂರವಿರುವಾಗಲೇ ಸ್ತ್ರೀ ಪುರುಷರೆಲ್ಲರು ಸ್ವಾಗತಿಸಲು ಬರತೊಡಗಿದರು. ಅವರು ಹೇಳಿದರು. ಕಲಕತ್ತೆಯಲ್ಲಿ ಬಹಳ ಮಳೆ ಬರುತ್ತಿದೆ. ಆದರೆ ಇಲ್ಲಿ ಎರಡು ಫರ್ಲಾಂಗಿನಲ್ಲಿ ಮಳೆಯೇ ಇಲ್ಲ, ಹತ್ತಿರ ಹೋಗುತ್ತಲೇ ಬ್ಯಾಂಡ್ ಭಜಂತ್ರಿಗಳ ಮೆರವಣಿಗೆಯೊಂದಿಗೆ ನನ್ನನ್ನು ದೇವಸ್ಥಾನದವರೆಗೂ ಕರೆದುಕೊಂಡು ಹೋಗಿ ಬೆಲಗಳೀಯವರೆಗೆ ತಲುಪುವಲ್ಲಿ 12 ಗಂಟೆಗಳಾಯಿತು. ಮೆರವಣಿಗೆಯೇ ಸಭೆಯಾಗಿ ನನ್ನ ಮಂಗಲ ಆಶೀರ್ವಾದ ಪೂರ್ಣ ಪ್ರವಚನವಾಯಿತು. ಆಗ ಜನರಿಗೆ ಖುಷಿ ಅಂದರೆ ಖುಷಿ. ಅವರ ಉತ್ಸಾಹ, ಭಕ್ತಿ ನೋಡುವುದಕ್ಕೆ ಆನಂದವಾಗುತ್ತಿತ್ತು. ಆ ದಿನ ನಮಗೆಲ್ಲ ಉಪವಾಸವಿತ್ತು.

ವರ್ಷಾಯೋಗ ಸ್ಥಾಪನೆ

ಮಧ್ಯಾಹ್ನದ ಸಾಮಾಯಿಕವಾಗುತ್ತಲೇ ಒಬ್ಬ ಶ್ರಾವಕರನ್ನು ಕರೆದು ತಾವು ಜಯಪುರದಲ್ಲಿರುವ ರಾಮಚಂದ್ರ ಕೊಠಾರಿಯವರಿಗೆ ಫೋನ್ ಮಾಡಿ, ನಾವು ಇಲ್ಲಿ ಬೇಲಗಛೀಯಕ್ಕೆ ಬಂದಿದ್ದೇವೆ ಎಂದು ತಿಳಿಸಿ. ಆಚಾರ್ಯ ಶಿವಸಾಗರದಿಂದ ಚಾತುರ್ಮಾಸ ಸ್ಥಾಪನೆಗೆ ಅನುಮತಿಯನ್ನು ತಿಳಿಸಲು ಕೇಳಿ ಎಂದೆ.

ತಕ್ಷಣವೇ ಜಯಪುರಕ್ಕೆ ವಿಷಯ ತಿಳಿಸಲಾಗಿ ರಾಮಚಂದ್ರ ಜೀ ಆಚಾರ್ಯರಲ್ಲಿಗೆ ಹೋಗಿ ವಿಷಯ ತಿಳಿಸಿದಾಗ ಎಲ್ಲಾ ಸಾಧುಗಳಿಗೂ ಆಶ್ಚರ್ಯಕ್ಕೆ ಪಾರವೇ ಇಲ್ಲ. ಆಚಾರ್ಯರಂತು ಈ ಸಮಾಚಾರ ನಿಜವಿರಲಾರದು. ಏಕೆಂದರೆ ಜ್ಞಾನಮತಿ ದಿನಕ್ಕೆ ೩೦ ಮೈಲಿ ನಡೆಯಲಾರರು ಎಂದರಂತೆ ಆದರೆ ರಾಮಚಂದ್ರರು ಇಲ್ಲ ಮಹಾರಾಜಜೀ ವಿಶ್ವಸ್ಥ ಸೇಠ್ ಅಮರಚಂದ ಪಹಾಡಿಯ ಫೋನ್ ಮಾಡಿರುವುದು ಆದ್ದರಿಂದ ತಾವು ಆಶೀರ್ವಾದವನ್ನು ಕಳುಹಿಸಬೇಕು ಎಂದರಂತೆ. ಪುನಃ ಕೊಠಾರಿಯವರು ಫೋನ್ ಮಾಡಿ, ನನಗೆ ಆಶೀರ್ವಾದವನ್ನೂ ಮತ್ತು ಚಾತುರ್ಮಾಸ ಸ್ಥಾಪನೆಗೆ ಸ್ವೀಕೃತಿಯ ಸಮಾಚಾರವನ್ನು ತಿಳಿಸಿದ್ದು ಕೇಳಿ ಖುಷಿ ಆಯಿತು.

ರಾತ್ರಿಗೆ ಸಾಮಾಯಿಕ ಆಗುತ್ತಿದ್ದಂತೆ ಕಲಕತ್ತೆಯ ಪ್ರತಿಷ್ಠಿತ ಜನರೆಲ್ಲ ಬಂದಿದ್ದರು. ನಥಮಲಜೀ, ಮದನಲಾಲ್, ಪಾಂಡ್ಯ ಅಮರಚಂದ್, ಪಹಾಡಿಯಾ, ಸೀತಾರಾಮ ಪಾಟಲೇ, ಚಾಂದಮಲ್ ಬಢಚಾತ್ಯಾ ಸುಗನಚಂದ ಲುಹಾಡಿಯಾ ಕಿಶನಲಾಲ ಕಾಲ, ಪಾರಸಮಲ ಬಲೂಂದಾ ಹರಬಚಂದ ಪಾಡ್ಯ, ನಾಗರಮಲ್ ಅಗ್ರವಾಲ ಜೈನ ಮುಂತಾದವರೆಲ್ಲ ಬಂದು ಶ್ರೀಫಲ ಇಟ್ಟು ಚಾತುರ್ಮಾಸಕ್ಕೆ ಪ್ರಾರ್ಥನೆ ಮಾಡಿದರು. ನಾನು ರಾತ್ರಿಯಲ್ಲಿ ಮೌನ ತ್ಯಾಗ ಮಾಡಿ ವರ್ಷಾಯೋಗದ ಬಗ್ಗೆ ಸ್ವಲ್ಪ ಉಪದೇಶವನ್ನು ಕೊಟ್ಟು ಸ್ವೀಕೃತಿ ನೀಡಿದೆ. ಶ್ರಾವಕರು ಹರ್ಷದಿಂದ ಜಯ ಜಯಕಾರ ಗೈದರು.

ನಾವೆಲ್ಲರು ವಿಧಿವತ್ತಾಗಿ ಭಕ್ತಿ ಪಾಠವನ್ನು ಮಾಡಿ ವರ್ಷಾಯೋಗದ ಸ್ಥಾಪನೆ ಮಾಡಿ, ಸುಮಾರು 11 ಗಂಟೆಗೆ ಸಮಭೆಯು ವಿಸರ್ಜಿಸಲ್ಪಟ್ಟಿತು. ನಾವೆಲ್ಲ ವಿಶ್ರಾಂತಿಗೆ ಶರಣಾದೆವು. ಬೆಳಗ್ಗೆ ಎದ್ದು ನೋಡಿದರೆ ಬೆಲಗಛೀಯದಲ್ಲಿ ಜಾತ್ರೆಯಂತೆ ಜನ ಸೇರಿದರು. ಬೆಳಗ್ಗೆ 8 ಗಂಟೆಗೆ ನನ್ನ ಪ್ರವಚನವಿತ್ತು. ಹತ್ತುಗಂಟೆಗೆ ಆಹಾರಕ್ಕೆ ಹೊರಟೆವು. 8, 10 ಕಡೇ ಚೌಕಗಳನ್ನು ಮಾಡಿಕೊಂಡು ನೂರಾರು ಜನ ಆಹಾರ ಕೊಡಲು ಕಾಯುತ್ತಿದ್ದರು. ಅಂದು ನಮಗೆಲ್ಲ ನಿರಾತಂಕವಾಗಿ ಆಹಾರವಾಯಿತು. ಎಲ್ಲರಿಗೂ ಖುಷಿ. ಅದೇ ದಿನ ಸಂಜೆ ಸುಗನಚಂದ್ ಲುಹಾಡಿಯಾ, ಮುಂತಾದ ಶ್ರಾವಕ, ಶ್ರಾವಕಿಯರು ಹಾರಮೋನಿಯಂ ತಬಲೇ ಮುಂತಾದವುಗಳನ್ನು ನುಡಿಸುತ್ತಾ ಭಕ್ತಿವಿಭೋರರಾಗಿ ನನ್ನ ಆರತಿ ಮಾಡಿದರು.

ರಾತ್ರಿಯಲ್ಲಿ ವರ್ಷಾಯೋಗ ಸ್ಥಾಪನೆಯ ಚರ್ಚೆ

ವರ್ಷಾಯೋಗ ಸ್ಥಾಪನೆಯ ನಂತರ ತೇರಹಪಂಥೀ ಮತ್ತು ಸುಧಾರಕ ಜನಗಳಲ್ಲಿ ಚರ್ಚೆ ನಡೆಯತೊಡಗಿತು. ರಾತ್ರಿಯಲ್ಲಿ ವರ್ಷಾಯೋಗ ಸ್ಥಾಪನೆ ಮಾಡಿದ್ದು ಸರಿಯೇ ಎಂದು.

---

೧. ತತಶ್ಚತುರ್ದಶೀಪೂರ್ವರಾತ್ರೆ ಸಿದ್ಧಮುನಿಸ್ತುತೀ, ಚತುರ್ದಿಕ್ಷು ಪರೀತ್ಯಾಚೈತ್ಯಭಕ್ತಿರ್ಗುರು ಸ್ತುತಿಂ ॥೬೬॥
ಶಾಂತಿ ಭಕ್ತಿಂ ಚ ಕುರ್ವಾಣೈ ವರ್ಷಾಯೋಗತು ಗೃಹ್ಯತಾಮ್ ಊರ್ಜಕೃಷ್ಣಾ ಚತುರ್ದಶ್ಯಾಂ
ಪಶ್ಚಾತ್ ರಾತ್ರೌ ಚ ಮುಚ್ಯತಾಮ್ ॥೬೭॥
ಆಷಾಢ ಶುಕ್ಲ ಚತುರ್ದಶೀ ರಾತ್ರೆ ಪ್ರಥಮ ಪ್ರಹರೋದ್ಘೇಶ (ಅನಾಗಧರ್ಮಾಮೃತ)

ನನ್ನ ಹತ್ತಿರ ಇದರ ಬಗ್ಗೆ ಚರ್ಚೆಗೆ ಬರುವ ಮೊದಲೇ ಬೆಲಗಛೀಯದ ಒಬ್ಬ ಬ್ರಹ್ಮಚಾರಿ ಪ್ಯಾರೇಲಾಲರು (ಭಗತಜೀ) ಎಲ್ಲರಿಗೂ ಶಾಂತಿ ಸಮಾಧಾನ ಮಾಡಿದ್ದರು. ಅವರೇ ಹೇಳಿ ಕಳುಹಿಸಿದ್ದರು. ಜ್ಞಾನಮತಿಯರು ಆಗಮ ಸಮ್ಮತಿ ಇಲ್ಲದೆ ಕೈಕೊಳ್ಳಲಾರರು. ಶಾಸ್ತ್ರದಲ್ಲಿ ಮುನಿಗಳು ಮತ್ತು ಆರ್ಯಕೆಯರು ರಾತ್ರಿಯಲ್ಲಿ ವರ್ಷಾಯೋಗ ಸ್ಥಾಪಿಸುವ ವಿಧಿ ಇದೆ ಎಂದು ಜನರು ಶಾಂತರಾದರು. ಜನರಿಗೆ ಬಹಳ ಆಶ್ಚರ್ಯ, ಈ ಭಗತಜೀ ಸ್ವಯಂ ತೇರಹ ಪಂಥೀ ಸುಧಾರಕರು. ಇವರೇ ಸಮಾಧಾನ ಮಾಡಿ ಶಾಂತಿಗೊಳಿಸಿದ್ದಾರೆಂದರೆ ಆಶ್ಚರ್ಯವೇ ಆಶ್ಚರ್ಯ ಅನಂತರ ನನಗೆ ಗೊತ್ತಾಯಿತು. ಬ್ರಹ್ಮಚಾರಿ ಭಗತಜೀ ಮತ್ತು ಬ್ರಹ್ಮಚಾರಿಣೀ ಚಮೇಲಿ ಬಾಯಿ ಇವರಿಬ್ಬರು ಆಗಮದ ಶ್ರದ್ಧಾಳುಗಳು ನನ್ನ ಬಗ್ಗೆ ಅಸೀಮವಾದ ಶ್ರದ್ಧೆ. ಇದರಿಂದಾಗಿಯೇ ಅವರು ಚರ್ಚೆಯನ್ನು ಉಪಶಮನಗೊಳಿಸಿದರು.

ಉಪದೇಶದಲ್ಲಿ ಸ್ಪಷ್ಟೀಕರಣ

ರವಿವಾರ ಮಧ್ಯಾಹ್ನದಲ್ಲಿ ವಿಶೇಷವಾಗಿ ಜನ ಸೇರಿದ್ದರು ಉಪದೇಶವು ವಿಶೇಷವಾಗೇ ಇತ್ತು. ಮೊದಲು ಪ್ರಾರಂಭದಲ್ಲಿ ಪಂ. ಬಾಬುಲಾಲ್ ಜೀ ಮಂಗಳ ಆಚರಣೆ ಮಾಡಿದರು. ಇವರು ಒಳ್ಳೆಯ ವಾಗ್ಮಿಗಳೇ ನನ್ನನ್ನು ಹೊಗಳಿದ ಮೇಲೆ ಭಾಷಣದಲ್ಲಿ ನಾನು ಪೂಜ್ಯ ಮಾತಾಜೀಯವರಲ್ಲಿ ನಿವೇದಿಸುವುದೇನೆಂದರೆ ತಾವು ತಮ್ಮ ಉಪದೇಶದಲ್ಲಿ ತತ್ವಗಳ ವಿಷಯವನ್ನು ಪ್ರಸ್ತಾಪಿಸಿರಿ. ಕ್ರಿಯಾ ಕಾಂಡದ ವಿಷಯಗಳನ್ನು ತೆಗೆದುಕೊಳ್ಳುವುದು ಬೇಡ. ಏಕೆಂದರೆ ಇಲ್ಲಿ ಹಲವಾರು ವಿಚಾರಧಾರೆಯವರು ಇದ್ದಾರೆ.

ನಾನು ನನ್ನ ಉಪದೇಶದಲ್ಲಿ ಹೇಳಿದೆ. ಪಂ. ಬಾಬೂಲಾಲರು ಪರೀಕ್ಷಿಸುವುದು ಬೇಡವೆಂದು ನಿವೇದಿಸಿದ್ದಾರೆ. ಏಕೆಂದರೆ ನಾನು ಶಾಸ್ತ್ರದ ಆಧಾರದಿಂದಲೇ ಕ್ರಿಯಾ ಮತ್ತು ತತ್ವಗಳೆರಡನ್ನು ಪ್ರತಿಪಾದಿಸುತ್ತೇನೆ. ನಾನು ಚರ್ಯೆಯ ವಿಷಯವನ್ನು ಬಿಟ್ಟು ಹೇಗೆ ತತ್ವದ ಪ್ರತಿಪಾದನೆಯನ್ನು ಮಾಡಲಿ, ಈ ಏಕಾಂತವು ನನ್ನಿಂದ ಸಾಧ್ಯವಿಲ್ಲ. ಯಾರಿಗೆ ಯಾವ ವಿಷಯದಲ್ಲಿ ಸಂಶಯವು ಉಂಟಾಗುತ್ತದೋ, ಆ ವಿಷಯದ ಬಗ್ಗೆ ಆಗಮದ ಪ್ರಮಾಣವನ್ನು ನೋಡಬಹುದು ಆದರೆ ಪಂಡಿತರು ಸಭೆಯಲ್ಲಿ ನನಗೆ ಸ್ಪಷ್ಟೀಕರಣವನ್ನು ಕೊಟ್ಟು ಬಿಟ್ಟಿದ್ದಾರೆ. ನಾನು ನನ್ನ ಗುರುಗಳು ಮತ್ತು ಆಗಮ ಗ್ರಂಥಗಳಲ್ಲದೇ ಬೇರೆ ಯಾರ ಬಂಧನದಲ್ಲಿಯೂ ನನ್ನನ್ನು ಬಂಧಿಸಿಕೊಳ್ಳಲಾರೆ ಎಂದೆ.

ಈ ನನ್ನ ಮಾತುಗಳನ್ನು ಬಹಳಷ್ಟು ಜನರು ಚಪ್ಪಾಳೆ ತಟ್ಟುವುದರೊಂದಿಗೆ ಸ್ವಾಗತಿಸಿದರು. ಆದಾಗ್ಯೂ ನಾನು ಇಲ್ಲಿಯವರೆಗೆ ನನ್ನ 35 ವರ್ಷ ದೀಕ್ಷಿತ ಜೀವನದಲ್ಲಿ ಸಭೆಯಲ್ಲಿ ಯಾವಾಗಲೂ ಬೀಸ ಪಂಥದ ಪ್ರತಿಪಾದನೆ ಮಾಡಿರಲಿಲ್ಲ. ಆದರೂ ಇವರ ನಿರ್ಬಂಧ ನನಗೆ ನನ್ನ ಹತ್ತಿರ ಬಂದ ಬೇರೆ ಬೇರೆ ಅಲ್ಲದೆ ತೇರಹ ಬೀಸ ಪಂಥದ ಚರ್ಚೆ ತಂದಾಗಲೂ ನಾನು ಶಾಸ್ತ್ರಗಳ ಒಂದಲ್ಲಹಲವಾರು ಪ್ರಮಾಣಗಳನ್ನು ಕೊಟ್ಟಿದ್ದೇನೆ. ಆಯಿತು, ಇದರ ನಂತರ ಆ ವಿದ್ವಾಂಸರು ಹಲವಾರು ಸಲ ಭಾಷಣ ಕೊಟ್ಟಿದ್ದಾರೆ. ನನಗೆ ಮಡಿ ಉಟ್ಟು ಆಹ್ವಾನಿಸಿ ಆಹಾರ ಕೊಟ್ಟಿದ್ದಾರೆ ಬರುತ್ತಲೇ ಭಕ್ತಿ ನಮಸ್ಕಾರ ಮಾಡಿದ್ದಾರೆ. ಆದರೆ ಇನ್ನಾವಗಲೂ ಇಂತಹ ಮಾತುಗಳನ್ನು ಹೇಳಲಿಲ್ಲ.

ಶಾಸನ ದೇವ - ದೇವತೆಗಳ ಪ್ರಮಾಣ

ಇದೇ ಊರಿನಲ್ಲಿ ನಂದಾಲಾಲ ಎಂಬ ಜೈನ ಶ್ರಾವಕರು ಇದ್ದರು. ಇವರ ಮನೆಯಲ್ಲಿ ಚೌಕ ಮಾಡುತ್ತಾ ಆಹಾರವನ್ನು ನೀಡುತ್ತಿದ್ದರು ಇವರಂತೂ ಬಹಳ ಭಕ್ತಿವಂತರಾಗಿದ್ದರು. ಇವರ ಸಹೋದರ ಛೋಟೇಲಾಲರು ಕೂಡ ಪ್ರಸಿದ್ಧರಾದ ಸುಧಾರಕರಾಗಿದ್ದರು. ಅವರು ಅಲ್ಲಿಯೇ ವಾಸಿಸುತ್ತಿದ್ದರು. ಪ್ರತಿದಿನ ನನ್ನ ಬಳಿ ಬಂದು ನಮಸ್ಕರಿಸುತ್ತಿದ್ದರು. ಮತ್ತು ಏನಾದರೂ ವಿಷಯವನ್ನು ಚರ್ಚಿಸುತ್ತಿದ್ದರು. ಒಮ್ಮೆ ಖಂಡಗಿರಿ ಉದಯಗಿರಿಯ ಫೋಟೋ ತಂದು ತೋರಿಸಿ ಹೇಳತೊಡಗಿದರು. ನೋಡಿರಿ, ಮಾತಾಜಿ ಈ ಶಾಸನ ದೇವ ದೇವತೆಗಳು ನಾಲ್ಕೂನೂರು ವರ್ಷ ಪುರಾತನವಾದವು ಈ ಗುಹೆ ಶಿಲಾ ಲೇಖದಿಂದ ತಿಳಿಯುತ್ತದೆ. ಈ ಶಾಸನ ದೇವ - ದೇವತೆಗಳು ಚತುರ್ಥ ಕಾಲದವರು. ಇವರನ್ನು ಜೈನ ಧರ್ಮದಲ್ಲಿ ಮಾನ್ಯ ಮಾಡುತ್ತಾರೆ ತಾವು ಉದಯಗಿರಿ ಮತ್ತು ಖಂಡಗಿರಿಯನ್ನು ಅವಶ್ಯವಾಗಿ ದರ್ಶನ ಮಾಡಿರಿ ಎಂದರು.

ಶ್ರೀಮಾನ್ ಛೋಟೆಲಾಲರು ಕಟ್ಟಾ ತೇರಹ ಪಂಥಿಗಳು ಆದರೂ ಶಾಸನ ದೇವ - ದೇವತೆಗಳನ್ನು ಸಮರ್ಥಿಸುತ್ತಾರೆ. ಇದನ್ನು ನೋಡಿದ ಅಲ್ಲೇ ಕುಳಿತಿದ್ದ ಬೀಸ ಪಂಥೀ ಶ್ರಾವಕ ನಗುತ್ತಿದ್ದರು. ಇವರು ಹೋದ ನಂತರ ಕೆಲವರು ಜೋರಾಗಿ ನಕ್ಕು ಹೇಳಿದರು ಮಾತಾಜೀ ನೋಡಿರಿ, ಇವರೂ ಬೆಲ್ಲ ತಿನ್ನುತ್ತಾರೆ ಆದರೆ ಪಾಕವನ್ನು ವಿರೋಧಿಸುತ್ತಾರೆ. ನಿಜವಾಗಿಯೂ ಇವರು ತೇರಹ ಪಂಥಿಗಳು ಶಾಸನ - ದೇವ -ದೇವತೆಗಳನ್ನು ವಿರೋಧಿಸುತ್ತಾರೆ. ಆದರೆ ಈ ಮನೋಭಾವ ಬಹುಶಃ ತಾವು ಬಂದ ದಿನವೇ ಶಾಸನ ದೇವ ದೇವತೆಗಳ ಫೋಟೋಗಳನ್ನು ತೋರಿಸಿರಬೇಕು ಮತ್ತು ಸಮರ್ಥನೆಯನ್ನು ಮಾಡಿಕೊಂಡಿರಬೇಕು. ಹೀಗೆ ಯಾರೇ ಆಗಲಿ ತೇರಹ, ಬೀಸ ಪಂಥದವರು ಚರ್ಚೆಗೆ ಬಂದರೆ ನಾನು ಅವರಿಗೆ ಪೂಜಾ ಪಂಥದಿಂದ ವಿರಚಿತ ಪಂಚಾಮೃತ ಅಭಿಷೇಕ ಮುಂತಾದ ಪ್ರಮಾಣಗಳನ್ನು ಕೊಡುತ್ತಿದ್ದೆ.

ಸಂಘಸ್ಥ ಚೈತ್ಯಾಲಯ

ಆಚಾರ್ಯ ಶ್ರೀ ವೀರಸಾಗರರು ನನಗೆ 1956 ರಲ್ಲಿ ಜಯಪುರದ ಒಂದು ಹಳ್ಳಿ ಬಗರುನಲ್ಲಿ ವಿಹರಿಸುತ್ತಿದ್ದಾಗ ನನಗೆ ತಿಳಿಸಿದ್ದರು. ನೋಡು, ಜ್ಞಾನಮತಿ ನೀನು ವಿಹಾರ ಮಾಡುವಾಗ ಜಿನ ಪ್ರತಿಮೆಯನ್ನು ಸಂಘದಲ್ಲಿ ಇಟ್ಟು ಕೊಂಡಿರಿ ಯಾರಾದರೂ ಸಂಘದ ಬ್ರಹ್ಮಚಾರಿಣಿಯರು ಪ್ರತಿಮೆಗಳಿಗೆ ಅಭಿಷೇಕ ಮಾಡಿ, ಹೂವು ಹಣ್ಣುಗಳಿಂದ ಪೂಜಿಸಲಿ. ಈಗಿನ ಕಾಲದಲ್ಲಿ ತೇರಹ ಮತ್ತು ಬೀಸಹ ಪಂಥಗಳು ಇರುವುದರಿಂದ ಸಂಘಸ್ಥದ ಚೈತ್ಯಾಲಯದಲ್ಲಿ ಬಾಯಿಗಳು ಅಭಿಷೇಕ ಮಾಡುತ್ತಿದ್ದಾರೆ. ಇದರಿಂದ ಮಂದಿರಗಳ ಪರಂಪರೆಗಳಿಗೆ ಏನೂ ತೊಂದರೆಯಾಗುವುದಿಲ್ಲ. ಜೈನ ಸಮಾಜದಲ್ಲಿಯೂ ಅಶಾಂತಿ ಉಂಟಾಗುವುದಿಲ್ಲ ಇವರ ಅಜ್ಞಾನುಸಾರವಾಗಿಯೇ ನಮ್ಮ ಸಮ್ಮೇದಶಿಖರದ ವಿಹಾರದಲ್ಲಿ ಆಚಾರ್ಯ ಶಿವಸಾಗರರ ಆಜ್ಞೆಯಿಂದ ಸಂಘದಲ್ಲಿ ಒಂದು ಚಿಕ್ಕ ಮಹಾವೀರ ಸ್ವಾಮಿಯನ್ನು ಇಟ್ಟುಕೊಂಡಿದ್ದೆವು.

ಇನ್ನೊಂದು ವಿಷಯವೇನೆಂದರೆ ಒಮ್ಮೊಮ್ಮೆ ವಿಹಾರದಲ್ಲಿ 25 - 50 ಮೈಲಿಯವರೆಗೆ ಜೈನ ಮಂದಿರಗಳೇ ಇರುತ್ತಿರಲಿಲ್ಲ. ದೇವ ದರ್ಶನವಿಲ್ಲದೆ ನಾವು ಹೇಗೆ ಆಹಾರವನ್ನು ತೆಗೆದುಕೊಳ್ಳುವುದು ಬೇರೆಯವರು ಹೇಳಬಹುದು ಮುನಿ ಆರ್ಯಿಕೆ ಮುಂತಾದ ಸಾಧುಗಳಿಗೆ ಜಿನ ಪ್ರತಿಮೆಗಳ ಅವಶ್ಯಕತೆ ಇಲ್ಲವೆಂದು. ದರ್ಶನವಿಲ್ಲದೆ ಆಹಾರ ತೆಗೆದುಕೊಳ್ಳಬಹುದೆಂದು ಈ ಮಾನ್ಯತೆಯು ನಮ್ಮ ಗುರು ಪರಂಪರೆಗೆ ವಿರುದ್ಧವಾದುದು. ನನ್ನ ಗುರುಗಳೆಲ್ಲರೂ ಪುಂಗವ ಜಿನ ಪ್ರತಿಮೆಯ ದರ್ಶನ ಮಾಡಿಯೇ ಆಹಾರಕ್ಕೆ ಹೊರಡುತ್ತಿದ್ದರು. ಇಂದು ಇದನ್ನೇ ಪಾಲಿಸುತ್ತಿದ್ದರು.

ನಿಜವಾಗಿಯೂ ಈ ಸಾಧುಗಳು ಇಷ್ಟು ಎತ್ತರದ ಉಪಶಮ - ಕ್ಷಪಕ ಶ್ರೇಣಿಯಲ್ಲಿ ಹತ್ತುವರಲ್ಲ ಮತ್ತು ಇಂದು ಜಿನ ಕಲ್ಪಿ ಮುನಿಗಳೇ ಇಲ್ಲ. ಇಂದು ಸಾಧುಗಳು ಸ್ಥವಿರ ಕಲ್ಪಿಗಳಾಗಿದ್ದಾರೆ. ಇವರುಗಳು ಚರ್ಯಾ ಸಂಘದಲ್ಲಿ ಮಾನ್ಯವಾಗಿದೆ. ಮತ್ತು ಸಂಘದಲ್ಲಿ ಬ್ರಹ್ಮಚಾರಿ - ಬ್ರಹ್ಮಚಾರಿಣಿ ಶ್ರಾವಕ -ಶ್ರಾವಿಕೆಯರು ಇರುತ್ತಾರೆ. ಇವರೆಲ್ಲಾ ಜಿನ ಪ್ರತಿಮೆಗಳನ್ನು ಇಟ್ಟುಕೊಂಡಿರುತ್ತಾರೆ. ಏತಕ್ಕೆಂದರೆ ಜಿನ ಪ್ರತಿಮೆಯ ದರ್ಶನವಿಲ್ಲದೆ ಊಟ ಮಾಡುವುದಿಲ್ಲ. ಪ್ರತಿಮಾಧಾರಿ ಶ್ರಾವಕನಂತೂ ಜಿನ ಪೂಜೆಯನ್ನು ಅವಶ್ಯಕವಾಗಿ ಮಾಡುತ್ತಾನೆ. ಇದಲ್ಲದೆ ಆಚಾರ ಸಾರ, ಅನಗಾರ ಧರ್ಮಾಮೃತ ಮುಂತಾದ ಯತಿ ಗ್ರಂಥಗಳಲ್ಲಿಯೂ ಮುನಿಗಳಿಗೆ ದೇವ ದರ್ಶನದ ಈ ವಿಧಾನವು ಕಂಡುಬರುತ್ತದೆ.

ಶ್ರುತದೃಷ್ಟ್ಯಾನಿ ಸ್ತುತ್ಯಂ ಪಶ್ಯನ್ ಗತ್ವಾ ಜಿನಾಲಯಮ್
ಕೃತ ದ್ರವ್ಯಾದಿ ಶುದ್ಧೀಸ್ತಂ ಪ್ರವಿಶ್ಯ ನಿಸಹೀ ಗಿರಾ ॥
ಚೈತ್ಯಾ ಲೋಕೋದ್ಯದಾನಂದಗಲದ್ಬಾಷ್ಪ ಸ್ಮಿರಾನತಃ
ಪರೀತ್ಯ ದರ್ಶನ ಸ್ತೋತ್ರಂ ವಂದನಾ ಮುದ್ರಯಾ ಪಠನ್ ॥

ಶ್ರುತಜ್ಞಾನರೂಪಿ ಚಕ್ಷುವಿನಿಂದ ತನ್ನ ಆತ್ಮನಲ್ಲಿ ಚೈತನ್ಯ ರೂಪ ಭಗವಾನ್ ಆತ್ಮನನ್ನು ನೋಡುತ್ತಲೇ ಜಿನಾಲಯಕ್ಕೆ ಹೋಗಿ ದ್ರವ್ಯಾದಿಗಳ ಶುದ್ಧಿಯಿಂದ ಶುದ್ಧನಾಗಿ "ನಿಸಹೀ-ನಿಸಹೀ ನಿಸಹೀ ಎಂದು ಉಚ್ಚಾರ ಮಾಡುತ್ತಾ ಮಂದಿರದೊಳಗೆ ಪ್ರವೇಶಿಸಿ ಜಿನ ಪ್ರತಿಮೆಗಳ ಮುಖ ಚಂದ್ರವನ್ನು ಅವಲೋಕನ ಮಾಡಿ ಅತ್ಯಂತ ಪ್ರಸನ್ನರಾಗಿ ಭಗವಂತನನ್ನು ಮೂರು ಬಾರಿ ನಮಸ್ಕಾರ ಮಾಡಬೇಕು. ಪುನಃ ಚೈತ್ಯಾಲಯವನ್ನು ಮೂರು ಪ್ರದಕ್ಷಿಣೆ ಮಾಡಬೇಕು ಹೀಗೆ ಚಾರಿತ್ರ ಸಾರದಲ್ಲಿ ಬರೆದಿದೆ.

ಆತ್ಮಾಧೀನಃ ಸನ್ ಚೈತ್ಯಾದೀನ ಪ್ರತಿವಂದನಾರ್ಥ ಗತ್ವಾ ದೌತ ಪಾದಾ
ಸ್ತ್ರಿ ಪ್ರದಕ್ಷಿಣೇ ಕೃತ್ಯ ಈರ್ಯಾಪಥ - ಕಾಯೋತ್ಸರ್ಗ ಕೃತ್ವಾ ॥

ಆತ್ಮಾದೀನನಾಗಿ ಜಿನ ಪ್ರತಿಮೆಗೆ ವಂದನೆ ಕೈಕಾಲು ತೊಳೆದು ಪ್ರದಕ್ಷಿಣೆ ಮಾಡಿ ಈರ್ಯಾ ಪಥ ಶುದ್ಧಿ ಕಾಯೋತ್ಸರ್ಗ ಮುಂತಾದವನ್ನು ಮಾಡುತ್ತಾರೆ. ಈ ರೀತಿ ದೇವ ವಂದನೆ ಅರ್ಥಾತ್ ತ್ರಿಕಾಲ ಸಾಮಾಯಿಕವಾಗಿದೆ. ಹೇಗೆ ಮುನಿಗಳಿಗೆ ಸಾಮಾಯಿಕ ಕ್ರಿಯೆಗಳನ್ನು ಮಂದಿರದಲ್ಲಿ ಭಗವಂತನ ಹತ್ತಿರ ಮಾಡುವ ವಿಧಾನ ಹೇಳಿದೆಯೋ ಹಾಗೆಯೇ ಒಂದು ವೇಳೆ ಸಾಮಾಯಿಕವನ್ನು ಮಂದಿರದಲ್ಲಿ ಮಾಡಿದ್ದರೂ ಸಹ ದೇವ ದರ್ಶನವನ್ನು ತ್ರಿಕಾಲದಲ್ಲಿಯೂ ಅಥವಾ ನಿತ್ಯ ಒಂದು ಸಲವಾದರೂ ಅನಿವಾರ್ಯವಾಗಿದೆ. ಇನ್ನೊಂದು ಮಾತೆಂದರೆ ಯಾವುದೇ ಶಾಸ್ತ್ರದಲ್ಲಾದರೂ ಮುನಿ ಅಥವಾ ಆರ್ಯಿಕೆ ಆದ ಮೇಲೆ ದೇವ ದರ್ಶನ ಮಾಡದೇ ಇರುವುದು ಅಥವಾ ಇವರಿಗೆ ದೇವ ದರ್ಶನದ ಅವಶ್ಯಕತೆ ಇಲ್ಲವೆಂಬ ಹೇಳಿಕೆ ಕಂಡು ಬರುವುದಿಲ್ಲ. ಆದ್ದರಿಂದ ಇಂದು ಯಾವುದೇ ಸಾಧು - ಸಾಧ್ವಿಯರು ಒಟ್ಟಗಿರಲಿ ಅಥವಾ ಇಬ್ಬರು ಮೂವರು ಇದ್ದರೂ ದೇವ ದರ್ಶನವಿಲ್ಲದೆ ಆಹಾರ ತೆಗೆದುಕೊಳ್ಳುತ್ತಿದ್ದಾರೆ. ಅದು ತಪ್ಪು ಕೆಲವರು ಅವಶ್ಯಕವಾಗಿದ್ದರೂ ಮಂದಿರಕ್ಕೆ ಹೋಗದೆ ದೇವ ದರ್ಶನವಿಲ್ಲದೆ ಆಹಾರ ತೆಗೆದುಕೊಳ್ಳುತ್ತಿದ್ದಾರೆ. ಇದು ಕೂಡ ನಮ್ಮ ಗುರು ಪರಂಪರೆಗೆ ವಿರೋಧವಾದುದು. ಯಾಕೆಂದರೆ ಆಹಾರವನ್ನು ಮಾಡುವ ಶ್ರಾವಕ - ಶ್ರಾವಿಕೆಯರು ಆಹಾರದ ವ್ಯವಸ್ಥೆಯ ಜೊತೆಗೆ ದೇವ ದರ್ಶನದ ವ್ಯವಸ್ಥೆಯನ್ನು ಮಾಡಬೇಕು. ನಾನಂತೂ ಇಂದಿನವರೆಗೂ ಸಂಘದಲ್ಲಿ ಪರಂಪರೆಯಂತೆ ನಡೆದಿದ್ದೇನೆ. ಸಂಘದ ಯಾವುದೇ ಸಾಧ್ವಿಯವರಿಗೆ ಆರೋಗ್ಯ ಸರಿಯಿಲ್ಲದ್ದಿದ್ದರೂ ದೇವ ದರ್ಶನ ಮಾಡಿಸಿಯೇ ಆಹಾರವನ್ನು ಮಾಡಿಸಿದ್ದೇವೆ. ದೀಕ್ಷೆ ತೆಗೆದುಕೊಂಡಂದಿನಿಂದ ಇಂದಿನವರೆಗೂ ದೇವ ದರ್ಶನವಿಲ್ಲದೆ ಆಹಾರ ತೆಗೆದು ಕೊಂಡಿಲ್ಲ. ಇಲ್ಲಿ

ಕಲಕತ್ತೆಯಲ್ಲಿ ಸಂಘದಲ್ಲಿ ಬ್ರಹ್ಮಚಾರಿಣಿಯರಾದ ಭಂವರೀ ಬಾಯಿ ಮತ್ತು ಕುಮಾರಿ ಮನೋವತಿಯಿದ್ದರು. ಅವರೇ ಬೇಲಗಛೀಯದ ಒಂದು ಹಾಲಿನಲ್ಲಿ ವೇದಿಕೆ ಮಾಡಿ ಅಲ್ಲಿ ಮಹಾವೀರಸ್ವಾಮಿಯ ಬಿಂಬವನ್ನುಸ್ಥಾಪಿಸಿ ಅವರುಗಳೇ ಅಭಿಷೇಕ ಪೂಜೆ ಮಾಡುತ್ತಿದ್ದರು.

ಇಲ್ಲಿಗೆ ಪ್ರವಾಸ ಬಂದವರಲ್ಲಿ ಅನೇಕ ಜನ ಶ್ರಾವಕರು ನಾಗೌರನಾಗಲಿ, ಡೆಹ, ಸುಜಾನುಗಢ, ಲಾಡನೂ ಮುಂತಾದ ಕಡೆಯವರು ಇದ್ದರು. ಹೆಚ್ಚಾಗಿ ಬೀಸ ಪಂಥದವರೇ ಇದ್ದರು. ಯಾರು ಆಚಾರ್ಯ ಶ್ರೀ ವೀರಸಾಗರರು ಮತ್ತು ಆಚಾರ್ಯಕಲ್ಪ ಚಂದ್ರಸಾಗರರ ಶಿಷ್ಯರಿದ್ದರು. ಅವರಿಗಂತು ಒಳ್ಳೆಯ ಸುವರ್ಣ ಅವಕಾಶ ಸಿಕ್ಕಿತ್ತು. ಇಲ್ಲಿಕಲಕತ್ತೆಯ ಮಂದಿರಗಳಲ್ಲಿ ಪೂರ್ತಿ ವಿಧಿಯಂತೆ ಪೂಜೆ ನಡೆಯುತ್ತಿರಲಿಲ್ಲ. ಯಾರೋ ಒಬ್ಬ ಮಹಾನ್ ಪುರುಷ ಸಪತ್ನಿಕನಾಗಿ ಬಂದು ಚೈತ್ಯಾಲಯದಲ್ಲಿ ಅಭಿಷೇಕ ಪೂಜೆಯನ್ನು ಮಾಡ ತೊಡಗಿದರು.

ಹಾಲಿನಿಂದ ಶಾಂತಿಧಾರೆ

(ಕೊನೆಯ) ದೊಡ್ಡ ಶಾಂತಿಧಾರೆಯನ್ನು ನಾಗೌರನಿಂದ ಆಚಾರ್ಯ ಮಹಾವೀರ ಕೀರ್ತಿಗಳು ಪ್ರಾರಂಭಿಸಿದ್ದರು. ಅದು ಅಚ್ಚಾಗಿತ್ತು ಅದು ದಕ್ಷಿಣದಲ್ಲಿ ಅಚ್ಚಾಗಿ ನನ್ನ ಹತ್ತಿರ ಇತ್ತು. ಶ್ರಾವಕರು ಭಕ್ತಿಯಿಂದ ದೊಡ್ಡ ಶಾಂತಿಧಾರೆಯನ್ನು ಹಾಲಿನಿಂದ ಪ್ರಾರಂಭಿಸಿದರು. ಶ್ಯಾಮ ಬಜಾರಿನ ಒಬ್ಬ ಭಕ್ತಿಯುಳ್ಳ ಶ್ರಾವಕನು ಪ್ರತಿದಿನ ಚೌಕಕ್ಕಾಗಿ ಶುದ್ಧ ಹಾಲನ್ನು ತರುತ್ತಿದ್ದನು. ಅವನೇ ಸುಮಾರು 5 ಲೀ. ಹಾಲನ್ನು ಶಾಂತಿ ಧಾರೆಗೆ ತರುತ್ತಿದ್ದನು. ಹಾಲಿನಿಂದಲೇ ಐದು ತಿಂಗಳು ಶಾಂತಿಧಾರೆ ಮಾಡಿದರು. ನಾನು ನಗರಕ್ಕೆ ಬಂದು ಒಂದು ತಿಂಗಳು ಹೋದಾಗಲೂ ಒಂದಿಬ್ಬರು ಹಾಲಿನಿಂದ ಶಾಂತಿಧಾರೆ ಮಾಡಿದರು.

ನೈವೇದ್ಯ ಇಡುವುದು

ಒಮ್ಮೆ ಮನೋವತಿಯು ಭಗವಂತನಿಗೆ ನೈವೇದ್ಯವನ್ನು ಇಟ್ಟನಂತರವೇ ಊಟ ಮಾಡುವುದೆಂದು ನಿಯಮ ತೆಗೆದುಕೊಂಡಿದ್ದಳು. ಆದ್ದರಿಂದ ಅವಳು ಪ್ರತಿದಿನ ರೋಟಿ, ದಾಲ್, ಅನ್ನವನ್ನು ಚಿಕ್ಕ ತಟ್ಟೆಯಲ್ಲಿ ತಂದು ಚೈತ್ಯಾಲಯದ ದೇವರಿಗೆ ಇಡುತ್ತಿದ್ದಳು. ಹಾಗೆಯೇ ನನ್ನ ಆಜ್ಞೆಯಂತೆ ಇಟ್ಟ ತಕ್ಷಣ ನೈವೇದ್ಯವನ್ನು ಮಾಲಿಗೆ ಕೊಡಿಸುತ್ತಿದ್ದೆ. ಇವೆಲ್ಲಾ ವಿಷಯ ಅಚ್ಚಾಗಲಿಲ್ಲ ಅಲ್ಲೇ ಮುಚ್ಚಿ ಹೋಯಿತು. ಆದರೆ 8, 10 ದಿನಗಳಾದ ಮೇಲೆ ಸೇಠ ಅಮರಚಂದ್ರ ಪಹಾಡಿಯಾ ಮುಂತಾದ ನಾಲ್ಕಾರು ಮಹಾನುಭಾವರು ಬಂದರು. ಮಾತಾಜೀ ನಾವು ಒಂದು ಸಮಸ್ಯೆಯನ್ನು ತೆಗೆದು ಕೊಂಡು ಬಂದಿದ್ದೇವೆ ಎಂದರು ನಗರದಲ್ಲಿ ಮಾತಾಜೀಯವರು ಚೈತ್ಯಾಲಯದ ಭಗವಂತರಿಗೆ ನೈವೇದ್ಯವನ್ನು ಅರ್ಪಿಸುತ್ತಿದ್ದಾರೆಂದು. ಈ ಚರ್ಚೆ ಶಾಂತಿ ಪ್ರಸಾದರವರೆಗೆ ತಲುಪಿದೆ ಅವರು ನನಗೆ ದೂರವಾಣಿಯ ಮೂಲಕ ಕೇಳಿದರು ನಾನು ಇದು ಸಂಭವವಲ್ಲ ಆದರೂ ವಿಷಯ ತಿಳಿಯಲು ಬಂದಿದ್ದೇನೆ ಎಂದರು.

ನಾನು ತುಸು ನಕ್ಕು ಹೇಳಿದೆ. ಸಹೋದರರೇ ನೀವು ಭಗವಂತರನ್ನು ಅಷ್ಟದ್ರವ್ಯಗಳಿಂದ ಪೂಜಿಸುವುದಿಲ್ಲವೇ ಇದರಲ್ಲಿ ನೈವೇದ್ಯವನ್ನು ಹೇಳುವುದಿಲ್ಲವೇ ಎಂದೇ. ಅದಕ್ಕೆ ಒಬ್ಬರು ಇನ್ನೊಬ್ಬರ ಮುಖವನ್ನು ನೋಡುತ್ತಾ ನಾವು ಒಣಗಿದ ಅಂದರೆ ಲಾಡು ಮುಂತಾದವುಗಳನ್ನು ಇಡುತ್ತೇವೆ. ರೊಟ್ಟಿ ಅನ್ನ ದಾಲ್ ಅಲ್ಲ ಎಂದರು. ಅದಕ್ಕೆ ನಾನು ಶಾಸ್ತ್ರಗಳಲ್ಲಿ ಎಲ್ಲ ಭೋಜ್ಯ ಖಾದ್ಯಗಳನ್ನು ನೈವೇದ್ಯದಲ್ಲಿ ಹೇಳಿದ ಜೊತೆಗೆ ವಸುನಂದಿ ಶ್ರಾವಕಾಚಾರದಲ್ಲಿ ಹೇಳಿರುವುದೇನೆಂದರೆ,

ದಹೀದುದ್ದುಸಪ್ಪಿಮಿಸ್ಸೇಹಿಂ ಕಲಮಭತ್ತೇಹಿಂ ಬಹುಪ್ಪಯಾರೆಹೀಂ ।
ತೇವಟ್ಠಿ ವಿಂಜಣೇಹಿಂ ಯ ಬಹುವಿಹ ಪಕ್ಕಣ್ಣ ಭೇಏಹಿಂ ॥೪೪॥
ರುಪ್ಪಯ ಸುವಣ್ಣ ಕಂಸಾಣ ಥಾಲಿಣಿ ಹಿವಏಹಿಂ ವಿವಿಹ ಭಕ್ಖೇಹಿಂ ।
ಪುಜ್ಜಂ ವಿತ್ಥಾರಿಜ್ಜೋ ಭತ್ತೀಏ ಜಿಣಿಂದ ಪಯಪುರ ಓ ॥೪೫॥

ಹಾಲು ಮೊಸರು ತುಪ್ಪಗಳಿಂದ ನಾನಾ ರೀತಿಯ ಅಕ್ಕಿಯಿಂದ ಅನ್ನ 63 ಪ್ರಕಾರದ ವ್ಯಂಜನಗಳಿಂದ ನಾನಾ ರೀತಿಯ ಪಕ್ವಾನ್ನಗಳಿಂದ ಮತ್ತು ವಿವಿಧ ಭಕ್ಷ್ಯ ಪದಾರ್ಥಗಳಿಂದ ಭಕ್ತಿ ಪೂರ್ವಕ ಜಿನೇಂದ್ರ ಚರಣಗಳ ಮುಂದೆ ನೈವೇದ್ಯವನ್ನು ಬೆಳ್ಳಿ, ಚಿನ್ನ ಕಂಚು ಮುಂತಾದ ತಟ್ಟೆಗಳಲ್ಲಿಟ್ಟು ಪೂಜೆ ಮಾಡಿರಿ.

ಇದರ ನಂತರ ಸಿದ್ಧರ ಪೂಜೆಯ ಪಂಕ್ತಿಯ ಅರ್ಥವನ್ನು ಕೇಳಿ ಕ್ಷೀರಾನ್ನಸಾಜ್ಯ ವಟಕೈ : ರಸಪೂರ್ಣ ಗರ್ಭೈ : ಇದರ ಅರ್ಥವೆಂದರೆ ಕ್ಷೀರ ತುಪ್ಪಗಳಿಂದ (ನೆನೆದಿರುವ) ತುಂಬಿರುವ ಬಟ್ಟಲಿನಲ್ಲಿಡಿ. ಇನ್ನೊಂದು ಮಾತೆಂದರೆ ಇಲ್ಲಿರುವ ತೇರಾ ಪಂಥಿಗಳು ಅವರು ಸದಾಸುಖಜೀಯವರ ಟೀಕಾ ರತ್ನಕರಂಡ ಶ್ರಾವಕಾಚಾರ ತಂದು ನೋಡಿರಿ ಅದರಲ್ಲಿ ತೇರಾ ಮತ್ತು ಬೀಸ ಎರಡು ಪಂಥಗಳಿಗೂ ಆಗಮ ಸಮ್ಮತವಾದುದೆಂದರೆ ಕೆಲವರು ರೊಟ್ಟಿ ಇಟ್ಟರು. ಕೆಲವರು ಬಾಸುಂದಿ ಇಟ್ಟರು. ಕೆಲವರು ತಮಗೆ ಪ್ರಿಯವಾದ ಚರುವನ್ನು ಇಟ್ಟರು. ಹಲವರು ನಾನಾ ಪ್ರಕಾರದ ಹಸಿರು ಫಲಗಳನ್ನು ಇಟ್ಟರು. ಕೆಲವರು ನೀರನ್ನೂ ಕೆಲವರು ದಾಲ್ ಅನ್ನ ಮುಂತಾದ ವ್ಯಂಜನಗಳನ್ನು ಇಟ್ಟರು. ಹೀಗೆ ನಾನಾ ಪ್ರಕಾರದ ನೈವೇದ್ಯವನ್ನೂ ಇಟ್ಟರು.

ಈಗ ಇಲ್ಲಿ ಪೂಜೆಯಲ್ಲಿ ಸಚಿತ್ತ ದ್ರವ್ಯಗಳನ್ನು ಇಡಬಹುದು ಹಾಗೆ ಅಚಿತ್ತ ದ್ರವ್ಯಗಳನ್ನು ಇಡಲು ಆಗಮದಲ್ಲಿ ಹೇಳಿದೆ.[೧] ಹೀಗೆ ಹೇಳಿ ತಮಗೆಲ್ಲ ಸದಾಸುಖಜೀಯವರ ರತ್ನಕರಂಡಕ ಶ್ರಾವಕಾಚಾರ ಮನ್ನಿಸುತ್ತೀರಲ್ಲವೇ ಎಂದೆ. ಆದ್ದರಿಂದ ನೈವೇದ್ಯವನ್ನು ಇಡುವ ಪದ್ಧತಿಯನ್ನು ಭೋಗ ಇಡುವುದೆಂದು ಎಂದಿಗೂ ಕರೆಯಬಾರದು. ಹೀಗೆ ಒಂದು ಮಾತು ಈ ವಿಷಯವನ್ನು ತಿಳಿಸುವುದಕ್ಕಾಗಿಯೇ ಆಚಾರ್ಯ ಕಲ್ಪಚಂದ್ರಸಾಗರರು ನೈವೇದ್ಯ ಇಡುವುದರ ಕಡೆಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಬ್ಯಾವರದಲ್ಲಿ 1958ರ ಚಾತುರ್ಮಾಸದಲ್ಲಿ ಪಂಡಿತ ಪನ್ನಾಲಾಲಜೀ ಸೋನಿಯವರು ಸಂಘದ ಚೈತ್ಯಾಲಯದಲ್ಲಿ ಸರಸ್ವತಿ ಭವನದಲ್ಲಿ ತಿಂಗಳು ಪೂರ್ತಿ ನೈವೇದ್ಯವನ್ನು ಇಡುತ್ತಿದ್ದರು. ಇಂದು ಕೂಡ ದಕ್ಷಿಣದಲ್ಲಿ ಭಗವಂತರ ಮುಂದೆ ನೈವೇದ್ಯವನ್ನು ಇಡುತ್ತಾರೆ. ಅದನ್ನು ಭೋಗವೆಂದು ಕರೆಯುವುದಿಲ್ಲ, ವೈದೀಕ ಸಂಪ್ರದಾಯದಲ್ಲೂ ಭಗವಂತರ ಮುಂದೆ ಭೋಗವನ್ನು ಇಡುವಾಗ ತಟ್ಟೆಗೆ ಮೇಲಿನಿಂದ ಬಟ್ಟೆ ಮುಚ್ಚುತ್ತಾರೆ. ಅಂದರೆ ಭಗವಂತನು ತಿನ್ನುತ್ತಾರೆ ಎಂದು ಅಲ್ಲ. ಇಲ್ಲಿ ದಿಗಂಬರ ಜೈನ ಆಮ್ನಾಯದಲ್ಲಿ ನೈವೇದ್ಯದ ಮಂತ್ರ ಇದೆ.

"ಓಂ ಹ್ರೀಂ ದೇವಶಾಸ್ತ್ರಗುರುಭ್ಯೋ ಕ್ಷುಧಾರೋಗ ವಿನಾಶನಾಯ ನೈವೇದ್ಯಂ ನಿರ್ವಾಪಾಮಿತಿ ಸ್ವಾಹಾ "

ನಮ್ಮ ಕ್ಷುಧಾ ರೋಗನಿವಾರಣೆಗಾಗಿ ನೈವೇದ್ಯವನ್ನು ಇಡಲಾಗುತ್ತದೆಯೇ ಹೊರತು ಭಗವಂತರಿಗೆ ತಿನ್ನಿಸುವುದಕ್ಕಾಗಿ ಅಲ್ಲ ಹೀಗೆ ಸಮಾಧಾನ ಮಾಡಿದೆ. ಹೀಗೆ ಅವರು ರತ್ನ ಕರಂಡ ಶ್ರಾವಕಾಚಾರದ ಸದಾ ಸುಖಜೀಯವರ ಟೀಕೆಯನ್ನು ತೆಗೆದು ಕೊಂಡು ಹೋಗಿ ಆ ಸಾಲುಗಳನ್ನು ಸಾಹೂಜೀಯವರಿಗೆ ತೋರಿಸಿ ಬಂದಿರಬೇಕು.

---

೧. **ಶ್ರೀರತ್ನಕರಂಡಕ ಶ್ರವಕಾಚಾರ + ಹಿಂದಿ, ಭಾಷಾಕಾರ ಪಂ ಸದಾಸುಖಜೀ. ಪುಟ 169, 170**

ಕಾನಜೀ ಪಂಥದ ಚರ್ಚೆ

ಸೀಕರದವರಾದ ಮದನಲಾಲರ ಜೊತೆ ಇಬ್ಬರು ಮೂವರು ಒಟ್ಟಾಗಿ ಒಮ್ಮೆ ನಿಶ್ಚಯ ಏಕಾಂತದ ಚರ್ಚೆ ತೆಗೆದುಕೊಂಡು ಬಂದರು. ಅವರ ವಿಶೇಷವಾದ ಪ್ರಶ್ನೆಯಿಂದರೆ ಕರ್ಮಗಳ ಉದಯವು ಜೀವವನ್ನು ಏನೂ ಮಾಡಲು ಸಾಧ್ಯವಿಲ್ಲವೆಂದು.

ಸೋ ಸವ್ವಣ್ಹಾಣದರಿಸೀ ಕಮ್ಮರಯೇಣ ಣಿಯೇಣವಚ್ಛಣ್ಣೋ ।
ಸಂಸಾರ ಸಮಾವಣ್ಣೋ ಣವಿ ಜಾಣದಿ ಸವ್ವದೋ ಸವ್ವಂ ॥

ಇಲ್ಲಿ ಆತ್ಮ ಸರ್ವಜ್ಞಾನಿ, ಸರ್ವಜ್ಞ ಮತ್ತು ಸರ್ವದರ್ಶಿಯಾಗಿದ್ದಾರೆ. ಆದರೂ ಸಹ ತಮ್ಮ ಮೂಲಕ ಸಂಚಿತಗೊಳ್ಳಲ್ಪಡುವ ಕರ್ಮರೂಪಿ ರಜದಿಂದ ತುಂಬಿದ್ದಾರೆ. ಮುಚ್ಚಲ್ಪಟ್ಟಿದ್ದಾರೆ ಆದ್ದರಿಂದ ಸಂಸಾರಿಯಾಗಿದ್ದಾರೆ. ಈ ಕಾರಣದಿಂದಲೇ ಎಲ್ಲ ರೀತಿಯ ಸರ್ವಲೋಕ ಅಲೋಕವನ್ನು ತಿಳಿಯಲಾರದವರಾಗಿದ್ದಾರೆ. ಹೀಗೆ ಸಮಯ ಸಾರದ ಪಂಕ್ತಿಗಳನ್ನು ತೋರಿಸಿದರು. ಅವರು ಇದೇ ವಿಷಯಕ್ಕೆ ತಿಕ್ಕಾಟ ಮಾಡುತ್ತಿದ್ದರು. ಆಗ ನಾನು ಹೇಳಿದೆ ಸಹೋದರರೇ ತಾವು ಕರ್ಮಗಳ ಉದಯದಿಂದ ಮನುಷ್ಯರಾಗಿದ್ದೀರಾ ಒಂದು ವೇಳೆ ಕರ್ಮೋದಯವನ್ನು ಏನೂ ಮಾಡಲಾಗದಿದ್ದರೆ ಮೈದಾನಕ್ಕೆ ಬನ್ನಿರಿ. ಮುನಿಗಳಾಗಿ ಘೋರ ತಪಶ್ಚರ್ಯದಿಂದ ಮೋಕ್ಷವನ್ನು ಪಡೆಯಿರಿ. ಜನ್ಮ - ಮರಣಗಳ ಚಕ್ರಧಾರ ಬಿಡುಗಡೆಯನ್ನು ಪಡೆಯಿರಿ. ಈ ಸಂಸಾರದಲ್ಲಿ ಏಕೆ ಭ್ರಮಣೆಯನ್ನು ಮಾಡುತ್ತೀದ್ದೀರಾ ಎಂದೆ. ಹೀಗಾಗಿ ಇಂತಹ ಚರ್ಚೆಗಳನ್ನು ಭಗತಜೀಯವರೇ ಹೊರಗೆಯೇ ತಡೆದು ಬಿಡುತ್ತಿದ್ದರು. ಸಹೋದರರೇ ನಿಮ್ಮ ಚರ್ಚೆಗಳನ್ನು ನನ್ನಲ್ಲಿಯೇ ಬಗೆಹರಿಸಿಕೊಳ್ಳಿರಿ, ಸುಮ್ಮನೇ ಮಾತಾಜೀಯವರ ಸ್ವಾಧ್ಯಾಯದ ಸಮಯದಲ್ಲಿ ಏಕೆ ವಿಘ್ನವನ್ನು ತರುತ್ತೀರಾ ಎನ್ನುತ್ತಿದ್ದರು.

ಬ್ರ. ಚಮೇಲಿಬಾಯಿಯವರ ಭಕ್ತಿ ಮತ್ತು ಸ್ವಾಧ್ಯಾಯ

ಇಲ್ಲಿ ಬ್ರ. ಚಮೇಲಿಬಾಯಿಯವರು ಚೌಕ ಮಾಡುತ್ತಿದ್ದರು. ನಾನು ಅನೇಕರು ಚೌಕ ಮಾಡುತ್ತಿದ್ದುದ್ದರಿಂದ ವೃತ್ತ ಪರಿಸುಖ್ಯಾನವನ್ನು ತೆಗೆದುಕೊಂಡು ಆಹಾರಕ್ಕೆ ಹೊರಡುತ್ತಿದ್ದೆ. ಆಹಾರಕ್ಕೆ ತಡೆಯುವವರಲ್ಲಿ ಬಹಳ ಆಕುಲತೆ ಇರುತ್ತಿತ್ತು. ಒಂದು ವೇಳೆ ಅವರ ಚೌಕದಲ್ಲೇ ನಿಂತರೇ ಅವರ ಕಣ್ಣುಗಳಲ್ಲಿ ಸಂತೋಷಕ್ಕೆ ಕಣ್ಣೀರು ಹರಿಯುತ್ತಿತ್ತು. ಅವರ ಭಕ್ತಿಯ ಆವೇಶಿತರಾಗಿ ನವಧಾಭಕ್ತಿಯಿಂದ ಆಹಾರ ಕೊಡುತ್ತಿದ್ದರು. ಅವರ ಭಕ್ತಿ ನೋಡುತ್ತಲೇ ತಿಳಿಯುತ್ತಿತ್ತು. ಅವರು ಮಧ್ಯಾಹ್ನ ನನ್ನ ಹತ್ತಿರ ಸ್ವಾಧ್ಯಾಯಕ್ಕೆ ಬರುತ್ತಿದ್ದರು. ಇವರುಗಳು ನನ್ನ ಹತ್ತಿರ ಸಮಾಧಿ ಶತಕವನ್ನೂ ಹೇಳಿಸಿಕೊಳ್ಳಲು ಪ್ರಾರಂಭಿಸಿದರು. ನಾನು ಟೀಕೆಯ ಆಧಾರದಿಂದಲೇ ಅವರಿಗೆ ತಿಳಿಸುತ್ತಿದ್ದೆ. ಅವರು ಬಹಳ ಗದ್ಗದಿತರಾಗುತ್ತಿದ್ದರು. ಪುನಃ ಪಂಚ ಸಂಗ್ರಹ ಗ್ರಂಥದ ಸ್ವಾಧ್ಯಾಯ ಮಾಡುತ್ತಿದ್ದರು. ಎಲ್ಲಾ ಆರ್ಯಿಕೆಯರು ಕುಳಿತಿರುತ್ತಿದ್ದರು. ಒಳ್ಳೆಯ ಚರ್ಚೆ ಆಗುತ್ತಿತ್ತು. ಕರ್ಮ ಪ್ರಕೃತಿಯ ಚರ್ಚೆಗಳಲ್ಲಂತು ಬಹಳ ಆನಂದ ಸಿಗುತ್ತಿತ್ತು.

ಒಂದು ದಿನ ನಾನು ಕೇಳಿದೆ ಬ್ರಹ್ಮಚಾರಿಣಿ ನೀವು ಸಮ್ಯದೃಷ್ಟಿಗಳಾಗಿದ್ದರೂ, ಜಿನೇಂದ್ರ ಭಗವಂತರ ಅಭಿಷೇಕವನ್ನು ಏಕೆ ಮಾಡುವುದಿಲ್ಲವೆಂದು. ಅದಕ್ಕೆ ಅವರು ಮಾತಾಜೀ ನಾನು ಒಂದೆರಡು ಸಲ ಮಾಡಿದೆ. ಆದರೆ ಜನಗಳ ಚರ್ಚೆಯ ಭಯದಿಂದ ಮಾಡುತ್ತಿಲ್ಲ ಇಲ್ಲ ಸಂಪ್ರದಾಯ ಬೇಧ ಅಥವಾ ಪಂಥ, ಪಕ್ಷ ಇವುಗಳ ಕಾರಣದಿಂದ ಆದರೂ ನಿಮ್ಮ ಸಂಘದಲ್ಲಿ ಇರುವ ಚೈತ್ಯಾಲಯದಲ್ಲಿ ಒಂದೆರಡು ಸಲವಾದರು ಅಭಿಷೇಕವನ್ನು ಮಾಡುತ್ತೇನೆ.

ಅವರು ಹೇಳಿದಂತೆ ಒಂದು ದಿನ ಬಂದು ಅಭಿಷೇಕ ಮಾಡಿದರು. ಆಗ ಮಿಸ್ರೀಲಾಲ ಪಟನೀ ಮತ್ತು ಅವರ ಹೆಂಡತಿ ಸೂಂಠಿಬಾಯಿ ಮೊದಲಾದ ಶ್ರಾವಕ ಶ್ರಾವಕಿಯರು ಇದ್ದರು. ಒಬ್ಬ ಮಹಾನುಭಾವರು ಹೇಳಿದರು ಮಾತಾಜೀ ತಾವು ಮೊದಲು ಹೇಳಿದ್ದರೆ ಅಭಿಷೇಕ ಮಾಡುತ್ತಾ ಇರುವಾಗ ಫೋಟೋ ತೆಗೆಯಬಹುದಾಗಿತ್ತು ಎಂದು. ಅದಕ್ಕೆ ನಾನು ಇದೇನು ಪ್ರಚಾರ ಮಾಡಬೇಕಾಗಿಲ್ಲ. ಆದ್ದರಿಂದ ಫೋಟೋ ತೆಗೆಯುವ ಅವಶ್ಯಕತೆ ಇಲ್ಲ ಎಂದೆ. ಇದರ ನಂತರ ಅನೇಕ ಸಲ ಅಭಿಷೇಕ ಮಾಡಿದಾಗ ಹೇಳುತ್ತಿದ್ದರು ಮಾತಾಜೀ ನನಗೆ ಶಾಸ್ತ್ರದ ಬಗ್ಗೆ ಪೂರ್ಣ ಶ್ರದ್ಧೆ ಇದೆ ಆದರೆ ಈ ಪಂಥ ಭೇದಗಳ ಕಾರಣದಿಂದ ಹೆದರುತ್ತೇನೆ ಎಂದು. ಇವರು ಸುಮಾರು ನಾಲ್ಕು ತಿಂಗಳು ಸ್ವಾಧ್ಯಾಯದಲ್ಲಿ ಭಾಗವಹಿಸಿದರು. ಚೆನ್ನಾಗಿ ಆಹಾರ ಕೊಟ್ಟರು ಚೆನ್ನಾಗಿ ವಾತ್ಸಲ್ಯ ತೋರಿಸುತ್ತಿದ್ದರು. ನಾನು ಆಗಾಗ ಪರಾಮರ್ಶದ ಯಾವುದಾದರೂ ನಿರ್ಣಯ ತೆಗೆದುಕೊಳ್ಳುವಾಗ ಇವರನ್ನು ಕೇಳುತ್ತಿದ್ದೆ. ಅವರ ಸಲಹೆ ನನಗೆ ಬಹಳ ಹಿಡಿಸುತ್ತಿತ್ತು.

ಬ್ರ. ಪ್ಯಾರೇಲಾಲರ ವಾತ್ಸಲ್ಯ

ಬ್ರ. ಪ್ಯಾರೇಲಾಲರಿಗೆ ನಾನು ಪ್ರತಿದಿನ ಬೆಳಗ್ಗೆ ನನ್ನ ಉಪದೇಶವಾದ ಮೇಲೆ 15 ನಿಮಿಷಗಳ ಕಾಲ ಮಾತಾಡಲು ಅವಕಾಶ ಕೊಡುತ್ತಿದ್ದೆ ಅವರು ಸಹ ಚೆನ್ನಾಗಿ ಮಾತಾಡುತ್ತಿದ್ದರು. ಪ್ರಾರಂಭದಿಂದಲೂ ಅವರ ಭಕ್ತಿ ಮತ್ತು ವಾತ್ಸಲ್ಯವನ್ನು ನನ್ನ ಬಗ್ಗೆ ಇಟ್ಟುಕೊಂಡಿದ್ದರು. ಇವರು ಪ್ರತಿದಿನ ನನ್ನ ಅನುಶಾಸನವನ್ನು ಪಾಲಿಸುತ್ತಿದ್ದರು. ಅವರು ಹೇಳುತ್ತಿದ್ದರು ನಿಮ್ಮ ಸಂಘದಲ್ಲಿರುವ ಯಾವುದೇ ಸಾಧ್ವಿಗಳಾಗಲೀ, ಬ್ರಹ್ಮಚಾರಿಣಿಯರಾಗಲಿ ಏನನ್ನು ಯಾರಿಂದಲೂ ಕೇಳಿದ್ದನ್ನೇ ನೋಡಿಲ್ಲ. ಬೆಳಗ್ಗೆಯಿಂದ ಸಂಜೆಯವರೆಗೂ, ಇಲ್ಲ ಮಲಗುವವರೆಗೂ, ಸ್ವಾಧ್ಯಾಯ, ಅಧ್ಯಯನದಲ್ಲಿಯೇ ತೊಡಗಿಕೊಂಡಿರುತ್ತಾರೆ. ಯಾವುದೇ ಪ್ರಾಪಂಚಿಕ ಕಲಹ ಅಶಾಂತಿಯು ಕಂಡುಬಂದಿಲ್ಲ. ನಿಮ್ಮ ಅನುಶಾಸನವೇ ಇಷ್ಟು ಚೆನ್ನಾಗಿ ಇರುವಾಗ ನಿಮ್ಮ ಗುರುಗಳ ಅನುಶಾಸನ ಇನ್ನೆಷ್ಟು ಚೆನ್ನಾಗಿದ್ದಿರಬಹುದು ಎನ್ನುವ ಬಗ್ಗೆ ಅನುಮಾನವೇ ಇಲ್ಲ ಎಂಬುದಾಗಿ. ಹೀಗೆ ಒಂದು ದಿನ ಉಪದೇಶ ಕೊಡುತ್ತಾ ನನ್ನನ್ನು ಪ್ರಶಂಸಿಸುತ್ತಾ, ಇನ್ನೊಬ್ಬ ಮುನಿಗಳನ್ನು ನಿಂದಿಸತೊಡಗಿದರು. ನಾನು ತಕ್ಷಣ ಅವರನ್ನು ಮಧ್ಯದಲ್ಲಿಯೇ ತಡೆದು ಇದರಲ್ಲಿ ಮುನಿಗಳ ದೋಷ ಇಲ್ಲ. ನಿಮ್ಮ ಹೇಳಿಕೆಯಲ್ಲಿ ಅಥವಾ ಅನುಮಾನ ತಪ್ಪಿದೆ ಎಂದೇ ಮಾರನೇದಿನ ಸಂಕೋಚದಿಂದ ಉಪದೇಶಕ್ಕೆ ಬರಲೇ ಇಲ್ಲ. ಆಮೇಲೆ ನಾನೇ ಮಧ್ಯಾಹ್ನ ಕರೆಸಿಕೊಂಡು ನೋಡಿ ಬ್ರಹ್ಮಚಾರಿಜೀ ನಾನು ಯುವುದೇ ಮುನಿಗಳ ನಿಂದೆಯನ್ನು ಕೇಳಲಾರೆ, ಅದು ಸತ್ಯವಿರಲಾರದು ನೋಡಿ ಪದ್ಮಪುರಾಣದಲ್ಲಿ ಈ ಸಾಲುಗಳನ್ನು ಬರೆದಿದೆ.

ದೃಷ್ಟಃ ಸತ್ಯೋಪಿ ದೋಷೋ ನ ವಾಚ್ಯೋ ಜಿನಮತಾಶ್ರಿತಾ ।
ಉಚ್ಚಮಾನೋಪಿ ಚಾನ್ಯೇನ ವಾರ್ಯ ಸರ್ವಪ್ರಯತ್ನತಃ ॥೨೩೨॥

ಬ್ರುವಾಣೋ ಲೋಕವಿದ್ವೇಷ ಕಾರಣಂ ಶಾಸನಾ ಶ್ರಿತಂ ।
ಪ್ರತಿ ಪದ್ಯ ಚಿರಂ ದುಃಖಿಂ ಸಂಸಾರಮವಗಾಹತೇ ॥೨೩೩॥

ಸಮ್ಯಗ್ದರ್ಶನ ರತ್ನಸ್ಯ ಗುಣೋತ್ಯಂತಮಯಂ ಮಹಾನ್ ।
ಯದ್ದೋಷಸ್ಯ ಕೃತಸ್ಯಾಪಿ ಪ್ರಯತ್ನಾದುಪ ಗೂಹನಮ್ ॥೨೩೪॥

ಅಜ್ಞಾನಾಮ್ಮತ್ಸರಾದ್ವಾಪಿ ದೋಷಂ ವಿತಥಮೇವ ತು ।
ಪ್ರಕಾಶಯಂಜನೋತ್ಯಂತಂ ಜಿನಮಾರ್ಗಾತ್ ಬಹಿಃ ಸ್ಥಿತಃ ॥೨೩೫॥

ಒಂದು ವೇಳೆ ದೋಷವನ್ನು ನೋಡಿದರೂ ಜಿನಮತಾವಲಾಂಬಿಗಳು ಏನನ್ನೂ ಹೇಳಬಾರದು. ಮತ್ತು ಬೇರೆಯವರು ಹೇಳುವುದನ್ನು ಎಲ್ಲ ರೀತಿಯಿಂದಲೂ ತಡೆಯಬೇಕು. ಪುನಃ ಲೋಕದಲ್ಲಿ ವಿದ್ವೇಷವನ್ನು ಹರಡುವವರು ಜೈನ ಶಾಸನ ಸಂಬಂಧಿ ದೋಷಗಳನ್ನು ಯಾರು ವ್ಯಕ್ತ ಮಾಡುತ್ತಾರೋ ಅವರು ದುಃಖಿತರಾಗಿ ಚಿರಕಾಲದವರೆಗೂ ಸಂಸಾರದಲ್ಲಿ ಸುತ್ತಾಡುತ್ತಾ ಇರುತ್ತಾರೆ. ಬೇರೆಯವರಿಂದ ಮಾಡಲ್ಪಟ್ಟ ದೋಷಗಳನ್ನು ಸಹ ಪ್ರಯತ್ನ ಪೂರ್ವಕವಾಗಿ ಮುಚ್ಚಿಡುವುದು ಸಮ್ಯಗ್ದರ್ಶನ ರೂಪವಾದ ಬಹಳ ಒಳ್ಳೆಯ ಗುಣವಾಗಿದೆ. ಅಜ್ಞಾನ ಅಥವಾ ಮತ್ಸರ ಭಾವದಿಂದ ಯಾರು ಬೇರೆಯವರ ದೋಷವನ್ನು ಪ್ರಕಾಶಗೊಳಿಸುತ್ತಾರೆಯೋ ಆ ಮನುಷ್ಯ ಜಿನ ಮಾರ್ಗದಿಂದ ಖಂಡಿತಾ ಹೊರಗೆ ಇರುತ್ತಾರೆ.

ಇದನ್ನು ಕೇಳಿದ ಅವರು ತಕ್ಷಣ ಅಲ್ಲೇ ಕ್ಷಮೆ ಕೇಳಿದರು ಪುನಃ ಇನ್ನೆಂದೂ ನನ್ನ ಮುಂದೆ ಯಾರನ್ನೂ ನಿಂದೆ ಮಾಡಲಿಲ್ಲ. ಹಾಗೆಯೇ ನನ್ನ ಚರ್ಯೆ ಮೊದಲಾದವುಗಳ ಬಗ್ಗೆ ಚರ್ಚೆಯಾಗಲೀ, ಅದಕ್ಕೋಸ್ಕರ ತೇರಹ ಪಂಥಿಗಳು ಕಟ್ಟಾ ಜನಗಳ ಜೊತೆಯು ಸಹ ಚೆನ್ನಾಗಿ ಸಮಾಧಾನ ನೀಡುತ್ತಿದ್ದರು. ಮುಂದೆ ಪ್ರಸಂಗ ಬಂದಾಗ ಅವರ ಉಲ್ಲೇಖ ಮಾಡುತ್ತೇನೆ. ಒಂದು ದಿನ ಗದ್ಗದಿತರಾಗಿ ಶ್ರಾವಕರ ಮುಂದೆ ಹೀಗೆ ಹೇಳುತ್ತಾ ಇದ್ದರು. ನಾನು ಮಾತಾಜೀಗೆ 100 ಅಂಕಗಳನ್ನು ಕೊಟ್ಟರೆ ಬೇರೆ ಸಾಧುಗಳಿಗೆ 10 ಅಂಕಗಳನ್ನು ಕೊಡುತ್ತೇನೆ, ಶ್ರಾವಕರು ಇದನ್ನು ಪ್ರಚಾರ ಮಾಡುವವರಿದ್ದರು. ಆದರೆ ನಾನೇ ಇದನ್ನು ತಡೆದೆ. ಮೊದಲನೆಯ ಮಾತೆಂದರೆ ನನಗೆ ಯಾವುದೇ ಮುನಿಯೊಂದಿಗೆ ಹೋಲಿಸುವುದು ಏಕೆ? ನನ್ನನ್ನು ಎತ್ತರಕ್ಕೆ ಏರಿಸಿ, ಇನ್ನೊಬ್ಬರನ್ನು ಕಡಿಮೆ ಅನ್ನುವುದು. ಎರಡನೆಯದೆಂದರೆ ನನ್ನ ಚರ್ಯೆ ನಿರ್ದೋಷವಾಗಿದೆ. ಅದು ನನಗೆ ಹಿತ ಇದರ ಪ್ರಚಾರದ ಅಗತ್ಯವಿಲ್ಲ.

ದಶಲಕ್ಷಣ ಪರ್ವ

ಈ ದಶಲಕ್ಷಣ ಪರ್ವದಲ್ಲಿ ನಾನು ಪಂಡಿತ ಶ್ರೀ ವರ್ಧಮಾನ ಶಾಸ್ತ್ರಿ ಸೋಲಾಪುರದವರನ್ನು ಕರೆಯಿಸಲು ಹೇಳಿದ್ದೆ. ಆದ್ದರಿಂದ ದಶಲಕ್ಷಣಕ್ಕೆ ಪಂಡಿತರು ಬಂದರು. ಇಲ್ಲಿ (ದಶಲಕ್ಷಣ) "ದಶಲಕ್ಷಣ ವಿಧಾನ" ದ ಆಯೋಜನೆಯನ್ನು ಮಾಡಲಾಗಿತ್ತು. ಶ್ರಾವಕ ಗಣ ಇಂದ್ರ ಇಂದ್ರಾಣಿಯವರಾಗಿ ಹಾರ ಕೀರಿಟಗಳನ್ನು ಧರಿಸಿ ಠಾಕು -ಠೀಕಾಗಿ ಸಂಘದ ಚೈತ್ಯಾಲಯದಲ್ಲಿ ಪೂಜೆ ಮಾಡುತ್ತಿದ್ದರು. ಬೇರೊಬ್ಬ ವಿದ್ವಾಂಸರು ಬಂದಿದ್ದರು ಅವರು ನಗರದಲ್ಲಿ ಪ್ರವಚನ ಮಾಡುತ್ತಿದ್ದರು. ಅವರು ಶಾಸ್ತ್ರಿಗಳ ಗದ್ದಿಗೆಯ ಮೇಲೆ ಕುಳಿತು ಹೇಳತೊಡಗಿದರು. ನೋಡಿ ಬೆಲಗಳಿಯಾದಲ್ಲಿ ಭಗವಂತರಿಗೆ ಹೂವಿನ ಮುಕುಟ ಹಾರಗಳನ್ನು ಹಾಕಿ ಪೂಜೆ ಮಾಡುತ್ತಿದ್ದಾರೆಂದು. ಅದೇ ಸಮಯದಲ್ಲಿ ಅಲ್ಲಿದ್ದ ಅಮರಚಂದ ಪಹಾಡಿಯಾ ಅವರನ್ನು ತಡೆದು ಶಾಸ್ತ್ರಿಗಳೇ ಆ ಪೀಠದಲ್ಲಿ ಕುಳಿತು ತಾವು ಸುಳ್ಳು ಏಕೆ ಹೇಳುತ್ತಿದ್ದೀರಿ ಅಲ್ಲಿ ಜನರು ಸ್ವತಃ ಹೂವಿನ ಹಾರ ಕೀರಿಟಗಳನ್ನು ಧರಿಸಿದ್ದಾರೆಯೇ ಹೊರತು ದೇವರಿಗೆ ಏನೂ ಹಾಕಿಲ್ಲ. ತಾವು ನೋಡದೆ ಏಕೆ ಈ ರೀತಿ ಹೇಳುತ್ತಿದ್ದೀರಾ ಎಂದರು.

ನನಗೆ ಅನಂತರ ಆ ವಿದ್ವಾನ್‌ರ ಆ ಮಾತನ್ನು ಕೇಳಿದ ಮೇಲೆ ನನಗೆ ಬಹಳ ಆಶ್ಚರ್ಯವಾಯಿತು. ನೋಡುವುದರಲ್ಲೂ ಮತ್ತು ಕೇಳುವುದರಲ್ಲೂ ಎಷ್ಟು ವ್ಯತ್ಯಾಸವಾಗುತ್ತದೆ ಎಂದು. ಇಲ್ಲಿ ದಶಲಕ್ಷಣಕ್ಕಾಗಿ ದೊಡ್ಡದಾಗಿ ಪೆಂಡಾಲ್ ಹಾಕಲಾಗಿತ್ತು. ಕೊನೆಯ ದಿನ ಕ್ಷಮಾವಾಣಿಯ ದಿನ ಸಾಹು ಶಾಂತಿಪ್ರಸಾದರ ಜೊತೆ ಶ್ವೇತಾಂಬರರ ಪ್ರಸಿದ್ಧ ಮಹಾನುಭಾವ ದೂಗಢಜೀಯವರು ಬಂದಿದ್ದರು. ಸಾಹೂ ಪ್ರಸಾದರು ಇದಕ್ಕಿಂತ ಮೊದಲು ಎರಡು ಮೂರು ಸಲ ಬಂದಿದ್ದರು. ಆ ದಿನ ಆ ಸಾಧುಗಳು ಉಚ್ಚ ಗೋತ್ರ ನೀಚ ಗೋತ್ರದ ಚರ್ಚೆಗೆ ಇಳಿದರು. ಆ ವ್ಯಕ್ತಿಗಳು ಜನ್ಮದಿಂದ ಮಹಾನ್ ಆಗುವುದಿಲ್ಲ ಅವರ ಕಾರ್ಯಗಳಿಂದ ಎಂದು

ಪ್ರತಿಪಾದಿಸುತ್ತಿದ್ದರು. ಅಲ್ಲದೇ ಸಭೆಯಲ್ಲಿ ನನ್ನ ಸ್ಥಾನದ ಬಗ್ಗೆಯೂ ಸಾಕಷ್ಟು ಚರ್ಚೆಗಳು ನಡೆದಿತ್ತು. ನಾನು ಹೇಳಿದೆ ಪಿಂಡ ಅರ್ಥಾತ್ ಶರೀರದ ಸಂಬಂಧವಾದುದು ತಾಯಿ ತಂದೆಗಳ ರಜೋವೀರ್ಯದಿಂದ ಆಗುತ್ತದೆ. ಆದ್ದರಿಂದ ಅದು ಹೇಗಿರುತ್ತದೋ ಅದರಂತೆ ಉಚ್ಚ ಮತ್ತು ನೀಚ ಗೋತ್ರವೆಂದು ಹೇಳುತ್ತಾರೆ. ಪಿಂಡವನ್ನು ಇನ್ನು ಹೇಗೆ ಸುಧಾರಿಸಲು ಸಾಧ್ಯವೆಂದೆ.

ಸಂಸ್ಕಾರ ಶತೇನಾಪಿ ನಾಜಾತಿ ರ್ದ್ವಿಜತಾಂ ವ್ರಜೇತ್ ॥ ನೂರಾರು ಸಂಸ್ಕಾರ ಮಾಡಿದರೂ ಸಹ ಅಜಾತಿ - ವಿಜಾತಿ ಬ್ರಾಹ್ಮಣತನವು ದೊರೆಯಲಾರದು ಇದು ಉಪಾಸಾಕಾಧ್ಯಯನದ ಪಂಕ್ತಿಯಾಗಿದೆ. ಇಲ್ಲಿ ಪೆಂಡಾಲಿನಲ್ಲಿ ದೊಡ್ಡದಾಗಿ ಕ್ಷಮಾ ವಾಣಿಯನ್ನು ಆಚರಿಸುತ್ತಾರೆ.

ಅಲ್ಪ ಪ್ರಭಾವನೆಯಿಂದ ಸಂತೋಷ

ಒಂದು ಸಲ ಒಬ್ಬ ಪ್ರಬುದ್ಧ ಶ್ರಾವಕರು ಹೇಳಿದರು. ಮಾತಾಜೀ ಒಂದು ವೇಳೆ ತಾವು ಜಾತಿ ಗೀತಿಯ ಬಗ್ಗೆ ಏನೂ ಹೇಳದೆ, ವರ್ಣ ವ್ಯವಸ್ಥೆ ಎಲ್ಲಾ ಹೇಳಿದ ಎಲ್ಲಾ ಜನರ ಜೊತೆ ರೊಟ್ಟಿ - ಬೇಟಿ ಸಂಬಂಧ ಮಾಡಬಹುದು. ಇದೇ ಜೈನ ಧರ್ಮದ ಉದಾರತೆಯೆಂದು ಹೇಳಿದೆಯಾದರೆ ನೋಡಿ ತಮ್ಮ ಸಭೆಗೆ ಮುಂದಿನವಾರದಿಂದ 25,000 ಜನ ಬರುತ್ತಾರೆ ಆಮೇಲೆ ಬೇರೆ ಪೆಂಡಾಲೇ ಹಾಕಬೇಕಾಗುತ್ತದೆ ಎಂದು. ಅದಕ್ಕೆ ನಾನು ಸಹೋದರ ನಾನು ದೀಕ್ಷೆಯನ್ನು ನನ್ನ ಆತ್ಮ ಕಲ್ಯಾಣಕ್ಕಾಗಿ ತೆಗೆದುಕೊಂಡಿರುವುದು ಆಗಮಕ್ಕೆ ವಿರುದ್ಧವಾಗಿ ಜನಗಳನ್ನು ಸೇರಿಸಿ ಪ್ರಭಾವನೆ ಮಾಡುವುದು ನನ್ನ ಗುರಿಯಲ್ಲ ಎಂದೆ. ಆಗಮದಂತೆ ನಡೆಯುವ, ನನ್ನ ಮಾತಿನಂತೆ ಎಷ್ಟು ಜನರು ಲಾಭ ಪಡೆಯುತ್ತಾರೋ ಅಷ್ಟೇ ಸಂತೋಷ ನನಗೆ ಸಾಕು ಎಂದೆ. ಲೋಕ ಪ್ರಭಾವನೆಗಾಗಿ ನಾನು ದೀಕ್ಷೆಯನ್ನು ತೆಗೆದುಕೊಂಡಿಲ್ಲ ಆಗಮವನ್ನು ಸುರಕ್ಷಿತಗೊಳಿಸಿ ಪ್ರಾಚೀನ ಸಂಸ್ಕೃತಿಯನ್ನು ರಕ್ಷಿಸುವ ಸಲುವಾಗಿ ಎಷ್ಟು ಧರ್ಮ ಪ್ರಭಾವನೆ ಆಗುತ್ತದೆಯೋ ಅದೇ ನನಗೆ ಹರ್ಷ. ಧರ್ಮದ ಎಲ್ಲೆಯನ್ನು ದಾಟಿ ಪ್ರಭಾವನೆಯನ್ನು ಮಾಡುವುದು ಜಿನ ಧರ್ಮದ ಪ್ರಭಾವನೆ ಆಗಲಾರದು. ನಿಜವಾದದ್ದು ಪ್ರಭಾವನೆ ಆಗಬೇಕೇ ಹೊರತು ಅದರಿಂದ ನನಗೆ ಲಾಭವಾಗಬೇಕಿಲ್ಲ ಆದರೆ ನಾವು ನೋಡುತ್ತಿರುವುದು ಕೆಲವು ಸಾಧು ವರ್ಗದವರು ಬ್ರಹ್ಮಚಾರಿಣಿ ಬ್ರಹ್ಮಚಾರಿಗಳು ಪ್ರಾಚೀನ ಧರ್ಮದ ಮರ್ಯಾದೆ ಬಿಟ್ಟು ಜಾತಿ ಪಂಥೀಯ ಲೋಪ ಮುಂತಾದುವುಗಳ ಉಪದೇಶ ಮಾಡುತ್ತಾ ನಿಜದ ಪ್ರಭಾವನೆಯಲ್ಲಿ ತೊಡಗಿದ್ದಾರೆ. ನಿಜವಾಗಿಯೂ ಈ ಪ್ರಭಾವನೆ ಅವರನ್ನು ಮೋಕ್ಷ ಮಾರ್ಗದಿಂದ ದೂರಕ್ಕೆ ಕರೆದೊಯ್ಯುತ್ತದೆ.

ಧರ್ಮದಲ್ಲಿ ಶಾಂತಿ ಇದೆಯೋ ಇಲ್ಲ ಶಾಂತಿಯಲ್ಲಿ ಧರ್ಮವೋ ?

ಸಣ್ಣ ಸಣ್ಣದಕ್ಕೂ ಈ ದಿನಗಳಲ್ಲಿ ಜನರು ಹೇಳುತ್ತಿರುತ್ತಾರೆ ಶಾಂತಿಯಲ್ಲಿ ಧರ್ಮವಿದೆಯೆಂದು ನನಗೆ ಆಶ್ಚರ್ಯವಾಗುತ್ತದೆ ಇವರು ಮಾತನಾಡದೇ ಇರಲಾರರೇನೋ ಎಂದು ಕಲ್ಕತ್ತೆಯಲ್ಲಿ ಒಬ್ಬ ಮಹಾನುಭಾವ ಹೇಳಿದರು ಮಾತಾಜೀ ಶಾಂತಿಯಲ್ಲೇ ಧರ್ಮವಿದೆಯೆಂದು ಆಗ ನಾನೆಂದೆ ಈಗ ಹೇಳಿ ಪಾತ್ರೆಗೆ ಆಧಾರವಾಗಿ ತುಪ್ಪವಿದೆಯೋ ಅಥವಾ ತುಪ್ಪಕ್ಕೆ ಆಧಾರವಾಗಿ ಪಾತ್ರೆ ಇದೆಯೋ "ಪಾತ್ರಾಧಾರೇ ಘೃತಂ, ಘೃತಾಧಾರೇ ಪಾತ್ರಂವಾ॥ ಅವರು ಹೇಳಿದರು ಪಾತ್ರೆಯ ಆಧಾರದಲ್ಲಿಯೇ ತುಪ್ಪವಿದೆ. ಆಗ ನಾನೆಂದೆ ನೋಡಿರಿ ಇದೇ ಪ್ರಕಾರ ಧರ್ಮೇ ಶಾಂತಿಃ ನಚ ಶಾಂತೌ ಧರ್ಮಃ. ಧರ್ಮದಲ್ಲಿ ಶಾಂತಿ ಇದೆಯೇ ಹೊರತು ಶಾಂತಿಯಲ್ಲಿ ಧರ್ಮವಿಲ್ಲ. ಈಗ ಯಾರಾದರೂ ಮನೆಯನ್ನು ಬೇರೆ ಯಾರಾದರೂ ವಶಪಡಿಸಿಕೊಂಡರೆ ಆಗ ಅವನು ಹೇಳುತ್ತಾನಾ ಶಾಂತಿಯಲ್ಲಿ

ಧರ್ಮವಿದೆ ಎಂದು ? ಇಲ್ಲಾಗಲೇ ನ್ಯಾಯಲಯಕ್ಕೆ ಶರಣಾಗಿ ಧರ್ಮದಲ್ಲಿ ಶಾಂತಿ ಇದೆ ಎಂದು ತಿಳಿಯುತ್ತಾನೆ. ಹಾಗೆಯೇ ಸಹೋದರರೇ ಒಂದು ವೇಳೆ ಮಂದಿರದ ಜಾಗವನ್ನು ಯಾರಾದರೂ ಅಪಹರಿಸಿದರೆ ಆಗ ಜನರು ಶಾಂತಿಯಲ್ಲಿ ಧರ್ಮವಿದೆ ಎಂದು ಯೋಚಿಸುತ್ತಾರಾ ಆದರೆ ಸ್ವಂತ ಮನೆಯಲ್ಲಿ ಒಂದು ಅಡಿಜಾಗಕ್ಕೂ ಸಹೋದರರು ಜಗಳವಾಡುತ್ತಾರೆ. ನೀವೇ ನೋಡಿಲ್ಲವೆ ಅದಕ್ಕಾಗಿ ಕೋರ್ಟಿನ ಮೆಟ್ಟಿಲು ಹತ್ತುವುದನ್ನು ನೋಡಿರಿ ಶಾಸ್ತ್ರದಲ್ಲಿಯು ಹಲವಾರು ಉದಾಹರಣೆಗಳು ಕಂಡು ಬರುತ್ತದೆ. ಯಾವ ಸಮಯದಲ್ಲಿ ರಾವಣನು ಕೈಲಾಸ ಪರ್ವತವನ್ನು ಎತ್ತಿ ಸಮುದ್ರದಲ್ಲಿ ಎಸೆಯಬೇಕೆಂದಿದ್ದನೋ ಆಗ ಬಾಲಿಮುನಿಯು ಪರ್ವತವು ಕಂಪನವಾಗುತ್ತಲೇ ಅವಧಿ ಜ್ಞಾನದಿಂದ ತಿಳಿದುಕೊಂಡನು ಅವನು ಮಹಾಮುನಿ ಭಾವಲಿಂಗಿ ಮಹಾಸಾಧು ಎಂದು. ಆದರೂ ಸಹ ಅವರು ಶಾಂತಿಯಲ್ಲಿ ಧರ್ಮವೆಂದು ತಿಳಿಯದೆ ಧರ್ಮದಲ್ಲಿಯೇ ಶಾಂತಿ ಎಂದು ತಿಳಿದರು. ಆದ್ದರಿಂದಲೇ ಈ ಪರ್ವತದಲ್ಲಿ ಭರತ ಚಕ್ರವರ್ತಿಯಿಂದ ಮಾಡಿಸಿರುವ ರತ್ನಗಳ ಜಿನಾಲಯವು ನಷ್ಟವಾಗುತ್ತದೆ ಮತ್ತು ಅಸಂಖ್ಯಾತ ಪ್ರಾಣಿಗಳ ಸಂಹಾರವಾಗುತ್ತದೆ ಎಂದು ಯೋಚಿಸಿ ತನ್ನ ಕಾಲಿನ ಉಂಗುಷ್ಮದಿಂದ ಪರ್ವತವನ್ನು ಮೆಟ್ಟಿ ಹಿಡಿದರು. ಇದರಿಂದ ಕೈಲಾಸಪರ್ವತ ತಡೆಯಲ್ಪಟ್ಟಿತು. ಅದರ ಕೆಳಗೆ ರಾವಣನು ಒತ್ತಲ್ಪಟ್ಟ, ಅಳತೊಡಗಿದ ಇದಕ್ಕೆ ಮೊದಲು ಅವನ ಹೆಸರು ದಶಾನನ ಎಂದಿತ್ತು. ನಂತರದಲ್ಲಿ ರೌತಿ ಇತಿ ರಾವಣಃ ಅಳುತ್ತಿದ್ದುದ್ದರಿಂದ ರಾವಣ ಎಂದು ಹೆಸರಾಯಿತು. ಆಗ ಅವನ ಹೆಂಡತಿಯು ಕ್ಷಮೆಯನ್ನು ಯಾಚಿಸಿದಳು. ರಾವಣನ ಗರ್ವವು ಚೂರಾಯಿತು. ಮುನಿಗಳು ಬಂದರು ಹಾಗೂ ಜಿನಪ್ರತಿಮೆಗಳನ್ನು ಚೆನ್ನಾಗಿ ಭಕ್ತಿ ಮಾಡಿದ್ದರಿಂದ ಧರಣೀಂದ್ರರ ಮೂಲಕ "ಅಮೋಘ ಶಕ್ತಿ" ಎಂಬ ಹೆಸರಿನ ವಿದ್ಯೆಯು ದೊರೆಯಿತು. ಈ ಕತೆ ಪದ್ಮ ಪುರಾಣದಲ್ಲಿ ವಿಸ್ತಾರವಾಗಿದೆ.

ಹಾಗೇ ಸಮಂತಭದ್ರ ಸ್ವಾಮಿಗಳು ಯಾವಾಗ ಶಿವಕೋಟಿರಾಜನು ಮಹಾದೇವನ ಲಿಂಗಕ್ಕೆ ನಮಸ್ಕಾರ ಮಾಡುವುದಕ್ಕಾಗಿ ಭಾದ್ಯನಾದನೋ ಆಗ ಅವರು ಶಾಂತಿಯಲ್ಲಿ ಧರ್ಮವೆಂದು ತಿಳಿಯದೆ ಧರ್ಮದಲ್ಲಿ ಶಾಂತಿ ಎಂದು ತಿಳಿದರು. ಮತ್ತು ಸ್ವಯಂಭೂ ಸ್ತೋತ್ರವನ್ನು ರಚಿಸಿ ಜಿನೇಂದ್ರರ ಭಕ್ತಿ ಮಾಡಿ ಶಿವಲಿಂಗದಿಂದ ಚಂದ್ರಪ್ರಭ ಮೂರ್ತಿ ಪ್ರಕಟವಾಗುವಂತೆ ಮಾಡಿದರು.

ಶ್ರೀ ಅಕಲಂಕರು ಸಹ ಧರ್ಮದಲ್ಲಿ ಶಾಂತಿ ಇದೆ ಎಂದು ತಿಳಿದು ಬೌದ್ಧರ ಜೊತೆ 6 ತಿಂಗಳವರೆಗೆ ಶಾಸ್ತ್ರಾರ್ಥ ಮಾಡಿದರು ಹಾಗೇ ಶ್ರೀ ರಾಮಚಂದ್ರರು ಶಾಂತಿಯಲ್ಲಿ ಧರ್ಮವಿದೆ ಎಂದು ತಿಳಿದಿದ್ದರೆ ರಾವಣನ ಹತ್ತಿರ ಏಕೆ ಯುದ್ಧ ಮಾಡುತ್ತಿದ್ದರು ಆದರೆ ಅವರು ಧರ್ಮದಲ್ಲಿ ಶಾಂತಿ ಎಂದು ತಿಳಿದು ಯುದ್ಧ ಮಾಡಿಯೇ ಸೀತೆಯನ್ನೂ ಪಡೆದರು.

ರಾಣಿ ಚೇಲನಿಯು ಶ್ರೇಣಿಕ ರಾಜನನ್ನು ಒಳ್ಳೆಯಧರ್ಮದಲ್ಲಿ ತರಲು ಅನೇಕ ಉಪಾಯಗಳನ್ನು ಮಾಡಿ ಧರ್ಮದಲ್ಲಿಯೇ ಶಾಂತಿ ಎಂದು ತಿಳಿದಳು ಅದರ ಫಲವೇ ಮುಂದಿನ ಉತ್ಸರ್ಪಿಣಿ ಕಾಲದಲ್ಲಿ ರಾಜಾ ಶ್ರೇಣಿಕ ಮಹಾಪದ್ಮ ಎಂಬ ಹೆಸರಿನ ತೀರ್ಥಂಕರರಾಗುತ್ತಾರೆ. ರಾಣಿ ಉರ್ವಿಳ ಒಂದು ವೇಳೆ ಶಾಂತಿಯಲ್ಲಿ ಧರ್ಮವೆಂದು ತಿಳಿದಿದ್ದರೆ ಬೌದ್ಧ ಸಂಪ್ರದಾಯದ ಬುದ್ಧದಾಸೀಯ ರಥವನ್ನೂ ಮೊದಲು ಹೊಗಲು ಬಿಡದೆ ಸತ್ಯಾಗ್ರಹ ಮಾಡಿ ಜೈನ ರಥವೇ ಮೊದಲು ಹೋಗಬೇಕೆಂದು ಯಾಕೆ ಹಠ ಹಿಡಿಯುತ್ತಿದ್ದಳು ಮತ್ತು ಅಕಲಂಕರು (ವಾದ) ಶಾಸ್ತ್ರದ ವಾದ ಮಾಡುವ ಪ್ರಸಂಗ ಏಕೆ ಬರುತ್ತಿತ್ತು. ಆದ್ದರಿಂದ ಶಾಂತಿಯಲ್ಲಿಯೇ ಧರ್ಮವಿದೆ ಎಂಬ ಏಕಾಂತವಾದವನ್ನು ಮಾಡಬೇಡಿ. ಎಲ್ಲಿಯವರೆಗೆ ಶಾಂತಿಯಲ್ಲಿ ಧರ್ಮವೆಂದು ತಿಳಿದು ಧರ್ಮದ ಹಾನಿ, ತಮ್ಮ ಹಣದ ಹಾನಿ, ಜನಗಳಿಗೆ ಹಾನಿ ಆಗುತ್ತಿರಲಿಲ್ಲ ಎಲ್ಲಿಯವರೆಗೆ ಶಾಂತಿಯಲ್ಲಿ ಧರ್ಮವೆಂದು ತಿಳಿಯುತ್ತೀಯೋ ಆಗ ಧರ್ಮ, ಧರ್ಮಾಯತನದ ಹಾನಿ ಆಗುತ್ತಲೇ ಇರುತ್ತದೆ. ಆಗ ಅದರ ರಕ್ಷಣೆಯ ಉಪಾಯ ಮಾಡಿರಿ.

ವಿಷ್ಣುಕುಮಾರ ಮಹಾಮುನಿ ಏಳುನೂರು ಮುನಿಗಳನ್ನು ರಕ್ಷಿಸುವುದಕ್ಕಾಗಿ ತನ್ನ ಮುನಿವೇಷವನ್ನು ಬಿಟ್ಟು ವಾಮನನಾಗಿ ಬಲಿಯನ್ನೂ ಗೆದ್ದು. ಧರ್ಮಾತ್ಮರನ್ನು ರಕ್ಷಿಸಿದ ಕೀರ್ತಿ ಅವರದಾಯಿತು. ಈ ಉದಾಹರಣೆಯನ್ನು ವಾತ್ಸಲ್ಯ ಅಂಗದಲ್ಲಿ ಒಳ್ಳೆಯ ಗೌರವದಿಂದ ಇದನ್ನು ಆಚಾರ್ಯರು ಹೇಳುತ್ತಿದ್ದರು. ಈ ಶಿಕ್ಷಾಪ್ರದ ನೀತಿಗಳಿಂದ ಆ ಜನರು ಆ ಮಾತನ್ನು ಒಪ್ಪಿಕೊಂಡರು. ಅಲ್ಲದೆ ಅನೇಕ ಬಾರಿ ಈ ವಾಕ್ಯವನ್ನು ಪುನರುಚ್ಚರಿಸಿದರು. ಧರ್ಮದಲ್ಲಿ ಶಾಂತಿ ಇದೆಯೇ ಹೊರತು ಶಾಂತಿಯಲ್ಲಿ ಧರ್ಮವಿಲ್ಲ.

ತಾಯಿ ಮೋಹಿನಿಯ ಶ್ರದ್ಧೆ

ನಾನು ಕಲಕತ್ತೆಯಲ್ಲಿ ಚಾತುರ್ಮಾಸ ಮಾಡುತ್ತಿರುವಾಗ ತಂದೆಯವರು ಅನುಮತಿಯನ್ನು ಪಡೆದ ಕೈಲಾಸಚಂದ್ರನು ಒಬ್ಬನೇ ದಶಲಕ್ಷಣ ಪರ್ವದಲ್ಲಿ ನನ್ನ ಹತ್ತಿರ ಬಂದಿದ್ದ 11-12 ದಿನ ಇದ್ದ. ನನ್ನ ಉಪದೇಶದ ಲಾಭವನ್ನು ಪಡೆದ ಹಾಗೇ ಊರಿಗೆ ಹೋಗುವಾಗ ಉದಾಸೀನ ಮನದಿಂದ ನನ್ನ ಹತ್ತಿರ ಕುಳಿತು ಹೇಳಿದ. ಮಾತಾಜೀ ಈಗ ವ್ಯಾಪಾರವು ಇಳಿಮುಖವಾಗಿದೆ. ತಂದೆಯವರ ಆರೋಗ್ಯವು ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ ಅವರಿಂದ ಅಂಗಡಿಯ ಕೆಲಸವು ಆಗುತ್ತಿಲ್ಲ. ಸಂಸಾರ ದೊಡ್ಡದು ಎಂದು. ಇದನ್ನು ಕೇಳಿದ ನಾನು ಶಿಕ್ಷಾಪ್ರದ ಮಾತನ್ನು ಹೇಳಿದೆ; ಕೈಲಾಸ ಎಲ್ಲಕ್ಕಿಂತ ಮೊದಲು ಪಂಚ ಅಣುವ್ರತವನ್ನು ತೆಗೆದುಕೊ. ಪಂಚ ಅಣುವ್ರತದಲ್ಲಿ ಪರಿಗ್ರಹ ಪರಿಮಾಣವ್ರತವನ್ನು ನಿಯಮದಿಂದ ಪಾಲಿಸುವವನಿಗೆ ಹಣವು ವೃದ್ಧಿಯಾಗುತ್ತದೆ. ನಿತ್ಯವು ದೇವ ಪೂಜೆ ಮಾಡುವುದನ್ನು ನಿಯಮವಾಗಿ ಮಾಡು ಎಂದೆ.

ಕೈಲಾಸನು ನನ್ನ ಆಜ್ಞೆಯನ್ನು ತಲೆಯಲ್ಲಿ ಹೊತ್ತು ವಿಧಿವತ್ತಾಗಿ ಪಂಚ ಅಣುವ್ರತವನ್ನು ಗ್ರಹಿಸಿ, ಹಾಗೇ ದೇವ ಪೂಜೆಯ ನಿಯಮವನ್ನು ತೆಗೆದುಕೊಂಡು ನನಗೆ ಯಾವುದಾದರೂ ಯಂತ್ರವನ್ನು ಕೊಡಿ ಎಂದು ಪ್ರಾರ್ಥಿಸಿದ ಆಗ ಸಂಘದ ಚೈತ್ಯಾಲಯದಲ್ಲಿ ಒಂದು ಯಂತ್ರವಿತ್ತು ಅದನ್ನು ಅವನಿಗೆ ಕೊಟ್ಟು ಹೇಳಿದೆ. ನೋಡು ಇದನ್ನು ಮನೆಯ ಮೂರನೆಯ ಅಂತಸ್ತಿನಲ್ಲಿರುವ ಚಿಕ್ಕ ಕೊಠಡಿಯಲ್ಲಿ ಸ್ಥಾಪಿಸು. ಪ್ರತಿದಿನ ಇದಕ್ಕೆ ಅಭಿಷೇಕ ಅರ್ಘ್ಯವನ್ನು ಮಾಡು ಸಂಜೆಯಲ್ಲಿ ಆರತಿ ಮಾಡಬೇಕೆಂದೆ.

ಕೈಲಾಸನು ಬಹಳ ಭಕ್ತಿಯಿಂದ ಕಣ್ಣಿಗೆ ಒತ್ತಿಕೊಂಡು ಯಂತ್ರವನ್ನು ಮನೆಗೆ ತೆಗೆದುಕೊಂಡು ಹೋದ. ಹೋದವನೆ ಮನೆಯವರಿಗೆಲ್ಲ ಕಲ್ಕತ್ತೆಯ ಎಲ್ಲ ಸಮಾಚಾರಗಳನ್ನು ಹೇಳಿ, ನನ್ನ ಉಪದೇಶದಲ್ಲಿ ಹೇಳಿರುವ ವಿಶೇಷಗಳನ್ನೆಲ್ಲ ಹೇಳಿ, ಕಲಕತ್ತೆಯ ಶ್ರಾವಕರು ತೋರುತ್ತಿದ್ದ ಗುರುಭಕ್ತಿ ವಾತ್ಸಲ್ಯ ಮುಂತಾಗಿ ಏನೆಲ್ಲವನ್ನೂ ಹೇಳಿದ. ಅಲ್ಲಿ ದಶಲಕ್ಷಣ ಪರ್ವದಲ್ಲಿ ಪಂಡಿತ ವರ್ಧಮಾನ ಶಾಸ್ತ್ರಿಗಳ ಮೂಲಕ ದಶಲಕ್ಷಣ ವಿಧಾನವನ್ನು ಮಾಡಿಸಲಾಯಿತು. ಬೇಲಗಛೀಯದಲ್ಲಿ ಬಹಳ ದೊಡ್ಡ ಪೆಂಡಾಲ ಹಾಕಲಾಗಿತ್ತು ಕ್ಷಮಾವಳಿಯ ದಿನ ದೊಡ್ಡ ಪ್ರೋಗ್ರಾಂ ಇತ್ತು ಅದಕ್ಕೆ ಶ್ವೇತಾಂಬರ ಸಮಾಜದ ಪ್ರಸಿದ್ಧ ದೂಗಢಜೀ ಮತ್ತು ದಿಗಂಬರ ಜೈನ ಸಮಾಜದ ಪ್ರಮುಖ ಶ್ರೀಮಾನ್ ಶಾಂತಿ ಪ್ರಸಾದರು ಬಂದಿದ್ದರು. ತಂದೆಗೆ ಹೇಳಿದೆ. ತಾವು ಇಲ್ಲಿ ಮೋಹದ ಹುಚ್ಚಿನಲ್ಲಿ ಇದ್ದೀರ ಯಾವಾಗಲೂ ಚಿಂತೆ ಮತ್ತು ದುಃಖದಲ್ಲೇ ಇದ್ದೀರ ಅಲ್ಲಿಹೋಗಿ ನೋಡಿ ನಿಮ್ಮ ಮಗಳ ವಿಶೇಷತೆಯನ್ನು ನೋಡಿ ನೀವು ಅಳುವುದನ್ನೇ ಮರೆತು ಬಿಡುತ್ತೀರ.

ಮಾತಾಜೀಯ ಉಪದೇಶ ಕೇಳಲು ಅಲ್ಲಿ ಜನರು ಹೇಗೆ ಸೇರುತ್ತಾರೆ ನೋಡಿ ಅದನ್ನು ನೋಡಿದರೆ ನಿಮಗೆ ತಿಳಿಯುತ್ತದೆ ಅಲ್ಲಿಯ ಜನ ಮಾತಾಜೀಯನ್ನು ವಿದ್ಯುತ್ತಿನ ಗಣಿ ಅದ್ಭುತ ನಿಧಿಯ ರೂಪದಲ್ಲಿ ನೋಡುತ್ತಾರೆ. ಭಕ್ತ ಜನರಲ್ಲಿ ಪ್ರಸಿದ್ಧ ಚಂದಮಲಜೀ ಬಡಚಾತ್ಯಾ, ಅಮರಚಂದಜೀ ಪಾಹಡಿಯಾ,

ಕಿಶನಲಾಲಜೀ ಕಾಲಾ, ಸೀತಾರಾಮ ಪಾಟನೀ, ಮುಂತಾದವರು ತನು, ಮನ, ಧನದಿಂದ ಸಪತ್ನಿಕ, ಸಪರಿವಾರವಾಗಿ ಬಂದು ಮಾತಾಜೀಗೆ ಭಕ್ತಿಯನ್ನು ತೋರಿಸುತ್ತಿದ್ದಾರೆ. ಬೇಲಗಛೀಯದಲ್ಲೂ ಪ್ರತಿದಿನ ಅನೇಕ ಚೌಕಗಳನ್ನು ಮಾಡುತ್ತಿದ್ದಾರೆ. ಬ್ರ. ಪ್ಯಾರೇಲಾಲ ಜೀ ಭಗತ ಮತ್ತು ಬ್ರಹ್ಮಚಾರಿಣೀ ಚಮೇಲಿಬಾಯಿ ಪ್ರಮುಖರು ಇವರಂತು ಬಹಳ ಭಕ್ತರಾಗಿದ್ದಾರೆ.

ಇಲ್ಲಿ ಕೈಲಾಸನು ಶುದ್ಧಜಲದ ನಿಯಮವನ್ನು ತೆಗೆದುಕೊಂಡು ಆಹಾರವನ್ನು ಕೊಡಲು ಪ್ರಾರಂಭಿಸಿದ್ದನು. ಅನಂತರ ತನ್ನ ಅಣುವ್ರತ ಮತ್ತು ದೇವ ಪೂಜೆಯ ನಿಯಮವನ್ನು ಹೇಳಿ ನನ್ನಿಂದ ಕೊಟ್ಟಿದ್ದ ಯಂತ್ರವನ್ನು ಅಮ್ಮನಿಗೆ ಕೊಟ್ಟಿದ್ದಾನೆ ನಾನು ಹೇಳಿದಂತೆಯೇ ಉಪಾಸನ ವಿಧಿಯನ್ನು ಹೇಳಿದ್ದಾನೆ. ಅಮ್ಮನಿಗೆ ಆ ಯಂತ್ರವನ್ನು ನೋಡುತ್ತಲೇ ಯಾವುದೋ ನಿಧಿ ಸಿಕ್ಕಂತೆ ಆಗಿದೆ. ಅದೊಂದು ಪಾರಸ ಮಣಿಯಂತೆ ತೋರುತ್ತಿತ್ತು ಅವರಿಗೆ ಬಹಳ ಭಕ್ತಿಯಿಂದ ನಾನು ಹೇಳಿದಂತೆ ಮೂರನೇ ಮಹಡಿಯಲ್ಲಿ ಅದನ್ನು (ಸ್ಥಾಪಿಸಿ) ಸಿಂಹಾಸನದಲ್ಲಿ ವಿರಾಜಮಾನಗೊಳಿಸಿ ಸ್ವಯಂ ದೇವ ಪೂಜೆ ಮಾಡಿ ವಿಧಿವತ್ತಾಗಿ ಆಹ್ವಾನ ಪೂಜೆ ಮಾಡಿ ಅರ್ಘ್ಯ ಕೊಡುತ್ತಿದ್ದರು. ಸಂಜೆಯಲ್ಲಂತೂ ಎಲ್ಲರೂ ಕುಳಿತು ಆರತಿ ಮಾಡುತ್ತಿದ್ದರು.

ಆ ಮನೆಯಲ್ಲಂತೂ ಪೂಜೆ ಫಲಿಸಿದ ದಿನದಿಂದ ದಿನಕ್ಕೆ ಮೋಹಿನಿಯರ ಮಕ್ಕಳ ವ್ಯಾಪಾರ ಹೆಚ್ಚಾಗ ತೊಡಗಿತು ಹಣ ಕೂಡಿದಂತೆ ಧರ್ಮವನ್ನು ಬೆಳೆಸಿಕೊಂಡರು. ಇವತ್ತು ಅವರ ಮೂರು ಮಕ್ಕಳು ಗೃಹಸ್ಥರಾಗಿದ್ದಾರೆ. ಪ್ರತಿದಿನ ಅವರೆಲ್ಲರೂ ದೇವ ಪೂಜೆ ಮಾಡುತ್ತಾರೆ. ಯಥಾಶಕ್ತಿ ದಾನವನ್ನು ಮಾಡುತ್ತಾರೆ ಸ್ವಾಧ್ಯಾಯ ಮತ್ತು ಸಾಧು ಸಂಘದ ಸೇವೆಯನ್ನು ಮಾಡುತ್ತಿದ್ದರು. ಇದೆಲ್ಲವು ಯಂತ್ರವನ್ನು ಭಕ್ತಿಯಿಂದ ಆರಾಧನೆ ಮಾಡಿದ ಫಲ ನಾನು ನೋಡಿದಂತೆ ಈಗಲೂ ಕೂಡ ಈ ಯಂತ್ರವನ್ನು ಯಾರೂ ಅಣು ವ್ರತದ ನಿಯಮದಿಂದ ತೆಗೆದುಕೊಂಡು ಪೂಜೆ ಮಾಡುತ್ತಾರೋ ಅವರು ನಿಶ್ಚತವಾಗಿ ಧನದ ಸಮೃದ್ಧಿಯನ್ನು ಪಡೆದು ಪರಿವಾರದವರೆಲ್ಲಾ ಕೀರ್ತಿಯನ್ನು ಪಡೆಯುತ್ತಾರೆ.

೪೪

ನಗರದ ದೊಡ್ಡ ಮಂದಿರದಲ್ಲಿ ಉಪದೇಶ ಮತ್ತು ಆಹಾರ ಚರ್ಯೆ

ಆಶ್ವೀಜದಲ್ಲಿ ವಿಶೇಷವಾಗಿ ಆಗ್ರಹ ಮಾಡಿದ್ದರಿಂದ ನಾನು ಕೆಲವು ದಿನಗಳು ನಗರಕ್ಕೆ ಹೋಗಿ ದೊಡ್ಡ ಬಸದಿಯಲ್ಲಿ ತಂಗಿದ್ದೆ. ಇಲ್ಲಿಯ ಬಹಳಷ್ಟು ಶ್ರಾವಕರು ತಮ್ಮ ತಮ್ಮ ಮನೆಯಲ್ಲೇ ಚೌಕಗಳನ್ನು ಮಾಡಿ ಆಹಾರ ದಾನ ಮಾಡತೊಡಗಿದರು. ಇದರಿಂದ ತಮ್ಮ ಮನೆಯು ಪವಿತ್ರವಾಗುತ್ತದೆ ಎಂದು ಭಾವಿಸಿದರು. ಇಲ್ಲಿ ಪ್ರತಿದಿನ 20-25 ಚೌಕಿಗಳು ನಡೆಯುತ್ತಿತ್ತು ನಾವು ಆರ್ಯಿಕೆಯರು ಇದ್ದಿದ್ದು ಐದು ಜನ ಹೀಗಾಗಿ ನಾನು ವೃತ್ತಿ ಪರಿಸಂಖ್ಯಾನ ತೆಗೆದುಕೊಂಡು ಆಹಾರಕ್ಕೆ ಹೊರಡುತ್ತಿದ್ದ ಎಲ್ಲಾ ಚೌಕಗಳಿಗೂ ಎರಡು ಮೂರು ಬಾರಿ ಸುತ್ತಾಟವಾಗುತ್ತಿತ್ತು. ನನ್ನ ಹಿಂದೆ ಮುಂದೆ ನೂರಾರು ಶ್ರಾವಕರು ಇರುತ್ತಿದ್ದರು ಮನೆಗಳ ಮುಂದೆ ಹತ್ತಿಪ್ಪತ್ತು ಜನ ಆಹಾರಕ್ಕೆ ತಡೆಯಲು ನಿಂತಿರುತ್ತಿದ್ದರು. ನಾಲ್ಕು ಕಡೆಯಿಂದ ಹೇ ಮಾತಾಜೀ ನಮೋಸ್ತು ನಮೋಸ್ತು, ನಮೋಸ್ತು. ಅತ್ರ ತಿಷ್ಯ, ತಿಷ್ಯ ಎಂಬ ಜೋರಾದ ಧ್ವನಿಯಿಂದ ಆಕಾಶದಲ್ಲೆಲ್ಲಾ ಪ್ರತಿಧ್ವನಿಸುತ್ತಿತ್ತು. ಆ ಸಮಯದಲ್ಲಿ ಜೈನೇತರರು ಕೂಡ ಸಾವಿರಾರು ಸಂಖ್ಯೆಯಲ್ಲಿ ಈ ದೃಶ್ಯ ನೋಡಲು ನೆರೆಯುತ್ತಿದ್ದರು. ಕೆಲವರು ಆಹಾರದ ಚರ್ಯೆ ನೋಡಲು ಏನು ಆಹಾರ ತೆಗೆದುಕೊಳ್ಳುತ್ತಾರೆ ಹಾಗೇ ಕೈಯಲ್ಲೇ ತೆಗೆದುಕೊಳ್ಳುವುದನ್ನು

ನೋಡಲು ಅವರಿಗೆ ಆಶ್ಚರ್ಯದ ಜೊತೆಗೆ ಬಹಳ ಭಕ್ತಿ ವ್ಯಕ್ತ ಮಾಡುತ್ತಾ, ಜೈನ ಸಾಧುಗಳನ್ನು ಪ್ರಶಂಸಿಸುತ್ತಿದ್ದರು ನೋಡಿರಿ ಇವರು ನಿಜವಾದ ಸಾಧುಗಳು ದಿನದ ಇಪ್ಪತ್ತಾನಾಲ್ಕು ಗಂಟೆಗಳಿಗೆ ಅವರು ಒಮ್ಮೆ ಎಂತಹ ಕಠೋರ ನಿಯಮಗಳನ್ನು ಪಾಲಿಸುತ್ತಾ ಕೈಗಳಿಂದಲೇ ಊಟ ಮಾಡುತ್ತಾರೆ ಇಂತಹ ಸಾಧುಗಳು ಧನ್ಯ ಎನ್ನುತ್ತಿದ್ದರು.

ಐಲಕರ ದುರಾಗ್ರಹ

ಇಲ್ಲಿ ನಗರದ ಮಂದಿರದಲ್ಲಿ ಬೆಳಗ್ಗೆ ಮತ್ತು ಮಧ್ಯಾಹ್ನ ಎರಡು ಹೊತ್ತು ನನ್ನ ಉಪದೇಶವಾಗುತ್ತಿತ್ತು. ಸಾಕಷ್ಟು ಜನರು ಸೇರುತ್ತಿದ್ದರು. ಪ್ರವಚನಕ್ಕೆ ಅಲ್ಲೇ ತಂಗಿದ್ದ ಐಲಕ ಸಿದ್ಧ ಸಾಗರರು ಬಂದು ಕುಳಿತುಕೊಳ್ಳುತ್ತಿದ್ದರು. ಅವರಿಗೂ ನನಗೆ ಸಮಾನವಾಗಿಯೇ ಆಸನವನ್ನು ಇಡುತ್ತಿದ್ದರು ಅಲ್ಲಿಯ ಸುಧಾರಕ ಜನರ ಸಹವಾಸದಿಂದ ಒಂದು ದಿನ ಆ ಜನರ ಹೇಳಿಕೆಯಂತೆ ಅಷ್ಟ ಪಾಹುಡವನ್ನು ತಂದು ಅದರ ಶ್ಲೋಕವನ್ನು ತೋರಿಸುತ್ತಾ ಹೇಳಿದರು.

ಮಾತಾಜೀ ತಾವು ಆದರದಿಂದ ಐಲಕರಿಗೆ ನಮಸ್ಕಾರ ಮಾಡಬೇಕು. ನಾನು ಯೋಚಿಸಿದೆ ನನ್ನ ಗುರು ಪರಂಪರೆಯಲ್ಲಿ ಐಲಕ ಮತ್ತು ಕ್ಷುಲ್ಲಕರು (ಒಂದೇ ಸಮ) ಇಬ್ಬರು ಮಾತಾಜೀ ಸ್ಥಾನಕ್ಕಿಂತ ಕೆಳಗಿನವರು ಅವರು ಮಾತಾಜೀಗೆ ನಮಸ್ಕರಿಸಬೇಕು ಆದರೆ ಇಲ್ಲಿ ಇದು ಅದಲು ಬದಲಾಗಿದೆ. ಆದರೆ ನನಗೆ ನಮಸ್ಕರಿಸಲು ಏಕೆ ದುರಾಗ್ರಹ ಪಡುತ್ತಿದ್ದಾರೆಂದು. ಕೊನೆಗೆ ಈ ದುರಾಗ್ರಹ ಹೆಚ್ಚಾಗತೊಡಗಿತು ಅದರ ಜೊತೆಗೆ ನಾಲ್ಕು ಐದು ಮಹಾನುಭಾವರು ಜೋರಾಗಿಯೇ ಮಾತಾಡತೊಡಗಿದರು. ಆಗ ನಾನು ಉಪದೇಶದ ನಂತರ ಶಾಸ್ತ್ರವನ್ನು ತೋರಿಸಿ ಬಹಳ ಪ್ರೀತಿಯಿಂದಲೇ ಸಮಾಧಾನ ಮಾಡಿದೆ. ನೋಡಿರಿ ಆರ್ಯಿಕೆಯರ ಚರ್ಯೆಯು ಮುನಿಗಳಿಗೆ ಸಮಾನವಾದುದು ಮೂಲಾಚಾರದಲ್ಲಿ ಹೇಳಿದೆ.

ಏಸೋ ಅಜ್ಜಾಣಂ ಪಿಯ ಸಾಮಾಚಾರೋ ಜಹಕಹಿ ಓ ಪುವ್ವಂ ॥
ಸವ್ವಮ್ಮಿ ಅಹೋರತ್ತೆ ವಿಭಾಸಿದವ್ವೋ ಜಹಜೋಗ್ಗಂ ॥೬೩॥

ಹೇಗೆ ಮುನಿಗಳಿಗೆ ಮೂಲ ಗುಣ ಮತ್ತು ವಿಧಿಯನ್ನು ಹೇಳಿದೆಯೋ ಈ ಎಲ್ಲವೂ ಅಹೋ ರಾತ್ರಿಯಲ್ಲಿ ಆರ್ಯಿಕೆಯರಿಗೂ ಸಹಾ ಇದೆ ಆದ್ದರಿಂದ ಉಪಚಾರಗಳಿಂದ ಮಹಾವ್ರತಿಗಳೆಂದು ಪರಿಗಣಿಸಲಾಗಿದೆ. ಎಲ್ಲಾ ಕಡೆಯ ಪ್ರಥಮಾನುಯೋಗದಲ್ಲಿ ಇವರನ್ನೇ ಮಹಾವ್ರತಿ ಮತ್ತು ಸಂಯತಿಕಾ ಎಂದು ಹೇಳಿದೆ. ಆಚಾರಸಾರದಲ್ಲಿಯೂ ಹೇಳಿದೆ.

ದೇಶವ್ರತಾನ್ಯಿತ್ಯೈ ಸ್ತಾ ಸಾಮಾರೋಪ್ಯಂತೇ ಬುದ್ಯೈ ಸ್ತತಃ ।
ಮಹಾವ್ರತಾನಿ ಸಜ್ಜಾತಿಜ್ಞಪ್ತ್ಯರ್ಥಮುಪ ಚಾರತಃ ॥

ಇತರರಿಗೆ ಉಪಚಾರದಿಂದ ಮಹಾವ್ರತವಿದೆ ಆದರೆ ಐಲಕರಿಗೆ ಉಪಚಾರದಿಂದ ಮಹಾವ್ರತವಿಲ್ಲ. ಸಾಗಾರ ಧರ್ಮಾಮೃತದಲ್ಲಿ ಹೇಳಿದೆ

ಕೌಪೀನೇ ಸಂಮುರ್ಚ್ಛತ್ಯಾತ್ ನಾರ್ಹತ್ಯಾರ್ಯೋ ಮಹಾವ್ರತಂ ।
ಅಪಿ ಭಕ್ತಾಮಮೂರ್ಚ್ಛತ್ಯಾತ್ ಸಾಽಕೇ ಪ್ಯಾರ್ಯಿಕಾರ್ಹತಿ ॥೫೯॥

ಆಶ್ಚರ್ಯವೆಂದರೆ ಈ ಐಲಕರು ಲಂಗೋಟಿಯ ಮಮತ್ವದ ಪರಿಣಾಮವಾಗಿಯೇ ಉಪಚಾರದಿಂದ ಮಹಾವ್ರತಿ ಆಗಲಾರರು. ಆದರೆ ಆರ್ಯಿಕೆಯರು ಸೀರೆಯನ್ನು ಧಾರಣೆ ಮಾಡಿದರೂ ಸಹ ಮಮತ್ವ ಪರಿಣಾಮ ರಹಿತರಾಗಿರುವುದರಿಂದ ಉಪಚಾರದಿಂದ ಮಹಾವ್ರತಿಗಳೆಂದು ಕರೆಯಲ್ಪಡುತ್ತಾರೆ. ಅರ್ಥಾತ್ ಐಲಕರು

ಲಂಗೋಟಿಯನ್ನು ತ್ಯಾಗ ಮಾಡಬಹುದು ಮುನಿಗಳಾಗಬಹುದು ಆದರೆ ಮಮತ್ವದ ಪರಿಣಾಮದಿಂದ ಲಂಗೋಟಿಯನ್ನು ಧಾರಣೆ ಮಾಡಿದ್ದಾರೆ. ಆದ್ದರಿಂದ ಅವರು ಉತ್ಕೃಷ್ಟ ಶ್ರಾವಕರೇ. ಆದರೆ ಆರ್ಯಿಕೆಯರು ಸೀರೆಯನ್ನು ತ್ಯಾಗ ಮಾಡಲು ಸಮರ್ಥರಲ್ಲ. ಇನ್ನೊಂದು ಮಾತೆಂದರೆ ಇಂದು ಯಾವ ಶಿವಸಾಗರರು, ಮಹಾವೀರ ಕೀರ್ತಿಗಳು, ಆಚಾರ್ಯ ದೇಶ ಭೂಷಣರೇ ಮೊದಲಾದವರು ಈ ವಿಷಯದಲ್ಲಿ ಸಮಾಧಾನವನ್ನು ಹೊಂದಿದ್ದಾರೆ. ಆದರೆ ಈ ಜನಗಳು ಕೇಳಲು ಸಿದ್ದರೇ ಇಲ್ಲ ಅವರು ಏನೇ ಇದ್ದರು ಸಾಕು ನೀವು ಐಲಕರಿಗೆ ನಮಸ್ಕಾರ ಮಾಡಿ ಇಂತಹ ದುರಾಗ್ರಹವನ್ನು ಹಿಡಿದುಕೊಂಡು ಬಿಟ್ಟಿದ್ದರು ನಾನು ಪಾಹುಡ ಗ್ರಂಥದ ಈ ಶ್ಲೋಕದ ಅರ್ಥವನ್ನು ಹೇಳಿದೆ.

ಎಕ್ಕಂ ಜಿಣಸ್ಸ ರೂವಂ ವೀಯಂ ಉಕ್ಕಿಸ್ಸಸಾವಯಾಣಂತು।
ಅವರಟ್ಠಿಯಾಣ ತಇಯಂ ಚಉತ್ಥಂ ಪುಣ ಲಿಂಗದಂಸಣಂ ಣತ್ಥಿ ॥೧೮॥

ಒಂದು ಜಿನಮುದ್ರೆ ನಗ್ನ ದಿಗಂಬರ ರೂಪ, ಇನ್ನೊಂದು ಉತ್ಕೃಷ್ಟ ಶ್ರಾವಕರದು, ಮೂರನೆಯದು ಆರ್ಯಿಕೆಯರದು. ಈ ಪ್ರಕಾರ ಜಿನ ಶಾಸನದಲ್ಲಿ ಮೂರೇ ಲಿಂಗಗಳನ್ನು ಹೇಳಿದೆ ನಾಲ್ಕನೆಯ ಲಿಂಗ ಜಿನ ಶಾಸನದಲ್ಲಿ ಇಲ್ಲವೇ ಇಲ್ಲ. ಇದರಲ್ಲಿ ಪೂಜ್ಯತೆಯ ಕ್ರಮವೇ ಇಲ್ಲ ಜೈನ ಆಮ್ನಾಯದಲ್ಲಿ ಮೂರೇ ಲಿಂಗಗಳು ಪೂಜ್ಯವು ನಾಲ್ಕನೆಯದು ಹೇಳಿಯೇ ಇಲ್ಲ. ಎರಡನೆಯ ಮಾತೆಂದರೆ "ಸಾಮಾನ್ಯ ಶಾಸ್ತ್ರತೋ ನೂನಂ ವಿಶೇಷೋ ಬಲವಾನ್ ಭವೇತ್" ಇದರ ನೀತಿಯೇನೆಂದರೆ ಸಾಮಾನ್ಯ ಶಾಸ್ತ್ರಕ್ಕಿಂತಲೂ ವಿಶೇಷ ಶಾಸ್ತ್ರದ ಕಥನವು ಬಲವಾದುದು. ಹಾಗೆಯೇ ಇಲ್ಲಿ ಪಾಹುಡದ ಗಾಥೆ ಸಾಮಾನ್ಯವಾದುದು ಮತ್ತು ಸಾಗರಧರ್ಮಾಮೃತದ ಶ್ಲೋಕ ವಿಶೇಷವಾದುದು ಇತ್ಯಾದಿ. ಕೊನೆಗೆ ಈ ಚರ್ಚೆಯನ್ನು ಮತ್ತೆ ಮತ್ತೆ ಜನರು ತರಲು ಪ್ರಾರಂಭಿಸಿ ಸಭೆಯಲ್ಲಿ ಕೋಲಾಹಲ ಮಾಡಲು ತೊಡಗಿದರು. ಆಗ ರೂಮರಮಲ್ಲ ಬಗಾಡಾ ಮುಂತಾದ ಮಹಾನುಭಾವರು ಅವರನ್ನು ಕೆಳಗಡೆಯೇ ತಡೆದು ಹೇಳಿದರು ನೀವು ಮಾತಾಜೀಯವರು ತೋರಿಸಿರುವ ಪ್ರಮಾಣಗಳನ್ನು ಒಪ್ಪಿಕೊಳ್ಳಲು ಸಿದ್ಧರಿದ್ದೀರೋ ಇಲ್ಲವೋ ಒಂದು ವೇಳೆ ಇಲ್ಲದಿದ್ದರೆ ಈ ಪ್ರಶ್ನೆಯನ್ನು ಮತ್ತೆ ಮತ್ತೆ ಎತ್ತುವ ಅವಶ್ಯಕತೆ ಇಲ್ಲ. ಒಂದು ವೇಳೆ ಪ್ರಮಾಣವನ್ನು ಮನ್ನಿಸುವುದಾದರೆ ಅವರು ಅನೇಕ ಪ್ರಮಾಣಗಳನ್ನು ತೋರಿಸಿದ್ದಾರೆ ಆದ್ದರಿಂದ ಈಗ ಪ್ರತಿದಿನ ವ್ಯರ್ಥವಾದ ಆಲಾಪವನ್ನು ಮಾಡುವ ಅವಶ್ಯಕತೆ ಇಲ್ಲ. ಈ ರೀತಿ ಕಠಿಣವಾಗಿ ಹೇಳಿದ ಮೇಲೆ ಆ ಜನರು ಶಾಂತರಾದರು.

ಸಿದ್ಧ ಚಕ್ರ ವಿಧಾನ

ಇಲ್ಲಿ ಅಷ್ಟಾಹ್ನಿಕ ಪರ್ವದಲ್ಲಿ ಅನೇಕ ಜನ ಶ್ರಾವಕರು 'ಅಹಿಂಸಾ ಭವನದಲ್ಲಿ' ಸಿದ್ಧ ಚಕ್ರ ವಿಧಾನವನ್ನು ಮಾಡಲು ಆಯೋಜನೆ ಮಾಡಿದ್ದರು. ಸಮ್ಮೇದ ಶಿಖರದಲ್ಲಿ ಬೀಸ ಪಂಥಿ ಮಂದಿರದಲ್ಲಿ ಒಂದು ಧಾತುವಿನ ಜಿನ ಪ್ರತಿಮೆಯನ್ನು ನನ್ನ ಆಜ್ಞೆಯಂತೆ ತಂದಿದ್ದರು ಬ್ರ. ಸೂರಜಮಲ್ಲರನ್ನು ಕರೆಸಲಾಗಿತ್ತು ವಿಧಾನವನ್ನು ಒಳ್ಳೆಯ ಸಮಾರಂಭದಲ್ಲಿ ಪ್ರಾರಂಭಿಸಲಾಯಿತು. ಇದರಲ್ಲಿ ನಾಗರಮಲ್ಲರು ಪ್ರಮುಖ ಇಂದ್ರರಾಗಿದ್ದರು. ಕಾರ್ತೀಕ ಶುಕ್ಲ ಚತುರ್ದಶಿಯ ದಿನ ನಾವೆಲ್ಲ ಚಾತುರ್ಮಾಸಿಕ ಪ್ರತಿಕ್ರಮಣ ಮಾಡಿ ಹೊಸ ಪಿಂಛಿಯನ್ನು ಬದಲಾಯಿಸಿದೆವು. ಸೇಠ್ ಭಾಗ್‌ಚಂದ್ ಸೋನಿಯು ಸಹ ಈ ಸಂದರ್ಭದಲ್ಲಿ ಬಂದಿದ್ದರು ಅವರು ಮುನಿ ಆರ್ಯಿಕೆಯರ ಚರ್ಯೆಯ ಮೇಲೆ ಬೆಳಕು ಬೀರಿದರು ಮತ್ತು ವಿಶೇಷವಾಗಿ ನನ್ನ ಜ್ಞಾನವನ್ನು ಪ್ರಶಂಸಿಸಿದರು. ಆಗ ನಾನು ಯೋಚಿಸದೆ ಇದು ನಿಜವಾಗಿ ನನ್ನ ಪ್ರಶಂಸೆ ಅಲ್ಲ ಆಗಮ ಜ್ಞಾನದ ಪ್ರಶಂಸೆಯಾಗಿದೆ ಎಂದು ಈ

ವಿಧಾನವನ್ನು ವಿಡಿಯೋ ಸಹ ತೆಗೆಯಲಾಯಿತು. ವಿಧಾನದ ಸಂಪನ್ನದಲ್ಲಿ ಒಂದು ಸಾವಿರದ ಎಂಟು ಚಿಕ್ಕ ಚಿಕ್ಕ ಮಣ್ಣಿನ ಕಲಶಗಳನ್ನು ಮಾಡಿ ಸಿದ್ದರು ಇದರ ಮೇಲೆ ತೆಂಗಿನ ಕಾಯಿ ಇಟ್ಟು ಶೃಂಗರಿಸಿ ಆ ಕಲಶಗಳಿಂದಲೇ ಬೇಲಗಳೀಯದಲ್ಲಿ ಮಾಡಿಸಿದ್ದ ಪಾಂಡುಕ ಶಿಲೆಯ ಮೇಲೆ ಶ್ರೀಜಿಯವರ ಪ್ರತಿಮೆಯ ಮೇಲೆ ಅಭಿಷೇಕ ಮಾಡಲಾಯಿತು. ಬಹಳಷ್ಟು ಧರ್ಮ ಪ್ರಭಾವನೆ ಆಯಿತು ಈ ಅಭಿಷೇಕದ ವಿಡಿಯೋಚಿತ್ರ ಬಹಳ ಚೆನ್ನಾಗಿ ಬಂದಿತ್ತು. ಭಕ್ತ ಜನರ ಒತ್ತಾಯದಿಂದ ಇಲ್ಲಿ ಸುಮಾರು ಒಂದು ತಿಂಗಳವರೆಗೆ ತಂಗಿದ್ದೆ. ಈ ಮಧ್ಯೆ ಇನ್ನೊಂದು ಚರ್ಚೆ ಉಂಟಾಯಿತು.

ಜಿನ ಪ್ರತಿಮೆಗಳ ಚರಣವನ್ನು ಸ್ಪರ್ಶಿಸುವ ಚರ್ಚೆ

ಇಲ್ಲಿ ಪ್ರತಿದಿನ ಬೇಲಗಳೀಯದಲ್ಲಿಯೂ, ಇಲ್ಲಿಯ ಸಂಘದಲ್ಲಿದ್ದ ಚೈತ್ಯಾಲಯದಲ್ಲಿ ನಾನು ಆಹಾರಕ್ಕೆ ಹೊರಡುವಾಗ ಶುದ್ಧ ವಸ್ತ್ರಗಳನ್ನೂ ಧರಿಸಿ ಭಗವಂತನ ಚರಣಗಳನ್ನು ಸ್ಪರ್ಶಿಸುತ್ತಿದ್ದೆ. ಇಲ್ಲಿಯವರೆಗೂ ಇದಕ್ಕೆ ಯಾವುದೇ ವಿರೋಧವಿರಲಿಲ್ಲ. ನಗರದಲ್ಲಿ ಕೆಲವು ದಿನಗಳಾದ ಮೇಲೆ ಕೆಲವರಲ್ಲಿ ಚರ್ಚೆ ಉಂಟಾಗಿದೆ ಮದನಲಾಲಜೀ ಪಾಡವಾ ಅವರು ಕಮಿಟಿಯ ಮಂತ್ರಿಗಳು. ಅವರು ಒಂದು ಹಾಳೆಯಲ್ಲಿ ಬರೆದು ಮಂದಿರದ ನೋಟಿಸ ಬೋರ್ಡ ಮೇಲೆ ಹಾಕಿಸಿದ್ದರು. ಅದರಲ್ಲಿ ನಾನು ಪೂಜ್ಯಮಾತಾಜೀಯವರಲ್ಲಿ ನಿವೇದಿಸುವುದು ಏನೆಂದರೆ ತಾವು ಶ್ರೀಜೀಯವರ ಪ್ರತಿಮೆಯ ಚರಣಗಳನ್ನು ಸ್ಪರ್ಶಿಸಬಾರದು ಏಕೆಂದರೆ ಇಲ್ಲಿಯ ಸಮಾಜದಲ್ಲಿ ಅಶಾಂತಿ ಉಂಟಾಗುತ್ತದೆ ಎಂಬ ವಾಕ್ಯಗಳು ಅಲ್ಲಿದ್ದವು. ಆಗ ಗುರುಭಕ್ತ ಜನರು ನನ್ನಲ್ಲಿಗೆ ಬಂದು ಹೇಳಿದರು ಮಾತಾಜೀ ಈ ವಿಷಯದ ಬಗ್ಗೆ ತಮ್ಮ ಅಭಿಪ್ರಾಯವೇನು ? ಎಲ್ಲಿಯವರೆಗೆ ಅವರು ನೋಟಿಸನ್ನ ಬೋರ್ಡಿನಿಂದ ತೆಗೆಯುವುದಿಲ್ಲವೋ ಅಲ್ಲಿಯವರೆಗೆ ತಾವು ಹೇಗೆ ವಿಹಾರವನ್ನು ಮಾಡುತ್ತೀರಾ ? ನಾನು ಶಾಂತಿಯಿಂದಲೇ ಉತ್ತರಿಸಿದೆ. ಅವರು ಹೀಗೆ ಬರೆಯುವ ಬದಲು ನನಗೆ ವೈಯಕ್ತಿಕವಾಗಿ ನಿವೇದನೆ ಮಾಡಿಕೊಳ್ಳಬಹುದಿತ್ತು. ಮಾರನೆಯ ದಿನ ಯಥಾ ಸಮಯಕ್ಕೆ ಮಂದಿರವನ್ನು ತಲುಪಿದೆ. ಇಬ್ಬರು ಮೂವರು ವಿರೋಧಿ ಶ್ರಾವಕರು ಬಂದಿದ್ದರು ಅವರು ಅಲ್ಲೇ ನಿಂತು ನೋಡುತ್ತಲೇ ಇದ್ದರು ನಾನು ಜಿನಪ್ರತಿಮೆಯ ಚರಣಗಳನ್ನು ಸ್ಪರ್ಶಿಸಿ ಭಕ್ತಿಯಿಂದ ಹಣೆಗೆ ಒತ್ತಿಕೊಂಡು ಆಹಾರಕ್ಕಾಗಿ ಎದ್ದೆ. ಆಶ್ಚರ್ಯ ಯಾವ ವಿಷಯಕ್ಕೆ ವಿರೋಧ ಮಾಡುತ್ತಿದ್ದರೋ ಅವರೆಲ್ಲಾ ಆಹಾರವಾದ ಮೇಲೆ ನನ್ನ ಮುಂದೆಯೇ ಬ್ಯಾಂಡ್ ಬಜಂತ್ರಿ ಬಾರಿಸುತ್ತಾ ಮೆರವಣಿಗೆಯಲ್ಲಿ ಕುಣಿಯುತ್ತಾ ಭಕ್ತಿಯಿಂದ ಆವೇಶದಲ್ಲಿ ನಡೆಯುತ್ತಿದ್ದಾರೆ. ಜನರು ಮದನ್‌ಲಾಲರಲ್ಲಿ ಹೇಳಿದರು. ತಾವು ನೋಟಿಸನ್ನು ಹರಿದು ಮಾತಾಜೀಯವರಲ್ಲಿ ಕ್ಷಮೆಯನ್ನು ಕೇಳಬೇಕು ಇದರ ನಂತರವೇ ಮಾತಾಜೀಯವರ ವಿಹಾರವಾಗುವುದು ಅಲ್ಲಿಯವರೆಗೂ ಮಾತಾಜೀಯವರು ಇಲ್ಲೇ ಇರುತ್ತಾರೆ. ಕೆಲವು ದಿನಗಳ ನಂತರ ಕೆಲವರು ಬೇಲಗಳೀಯದ ಭಗತಜೀಯ ಹತ್ತಿರ ಹೋಗಿ ಈ ಸಮಸ್ಯೆಯನ್ನು ಹೇಳಿದ್ದಾರೆ. ಅವರು ಒಳ್ಳೆಯ ರೀತಿಯಲ್ಲೇ ಜನರನ್ನು ಪ್ರಶ್ನಿಸಿದ್ದಾರೆ ತಾವು ಆರ್ಯಿಕೆಯವರನ್ನು ತಮಗಿಂತ ದೊಡ್ಡವರು ಹಾಗೂ ಪೂಜ್ಯರೆಂದು ತಿಳಿದ್ದಿದ್ದೀರಾ ಅದಕ್ಕೆ ಜನರು ಹೌದೆಂದರು. ಅವರ ಚರಣಗಳನ್ನು ತೊಳೆದು ಗಂಧೋದಕವನ್ನು ತಲೆಯ ಮೇಲೆ ಹಾಕಿಕೊಳ್ಳುತ್ತೀರೋ ಇಲ್ಲವೋ ಹೌದು ಹಾಕಿಕೊಳ್ಳುತ್ತೇವೆ ಪುನಃ ಒಂದು ವೇಳೆ ನೀವು ಭಗವಂತನನ್ನು ಸ್ಪರ್ಶಿಸುತ್ತೀರಿ ಎಂದ ಮೇಲೆ ಮಾತಾಜೀಯವರು ಸ್ಪರ್ಶಿಸಿದರೆ ಏನು ಅನರ್ಥವಾಗುತ್ತದೆ ಅರೇ ಭಾಯಿ ಸಾಮಾನ್ಯ ಮಹಿಳೆಯರಿಗೂ ಮತ್ತು ಆರ್ಯಿಕೆಯರಲ್ಲಿ ತಾವು ಅಂತರವನ್ನು ಮಾನ್ಯ ಮಾಡುತ್ತೀರಲ್ಲವೇ ಈ ಸಮಾಧಾನದಿಂದ ಜನರು ಪ್ರಸನ್ನರಾದರು ಪುನಃ ಸೇಠ್ ಮದನಲಾಲಜೀಯವರು ಬೋರ್ಡಿನಿಂದ ಪ್ರಕಟಣೆಯನ್ನು ತೆಗೆದು ಹಾಕಿದರು

ಜನಗಳ ಜಗ್ಗಾಟ ಅಂತ್ಯಗೊಂಡು ಶಾಂತಿಯ ವಾತಾವರಣ ಉಂಟಾಯಿತು. ಇದಕ್ಕೆ ಮೊದಲು ನವಯುವಕರು ಬಂದು ಭಜನೆಯನ್ನು ಗುಣಗುಣಿಸುತ್ತಿದ್ದರು.

ಧರ್ಮವೀರ ತೈಯಾರ ರಹೋ ನಿತ ಅಪನ ಶೀಶ್ ಕಟಾನೆಕೋ ।
ಆನ ಕೆ ಆಗೇ ಜಾನ ನಹೀ ಕುಛ್ ದಿಕ್‌ಲಾದೇ ಜಮಾನೆಕೋ ॥

ಕೊನೆಗೆ ಅಲ್ಲಿಯೂ ಯಾವ ವಿಷಯವೂ ಆಗದೇ ಬಹಳ ಚಿಕ್ಕ ಮಾತಾಗಿತ್ತು ಸಮಾಪ್ತಿಯಾಯಿತು ಇದರ ನಂತರ ನಾನು ಬೇಲಗಛೀಯಾಗೆ ವಾಪಾಸು ಬಂದೆ. ಇದಕ್ಕೆ ಮೊದಲು ಅಮರಚಂದ್ ಪಹಾಡಿಯಾ ಮುಂತಾದ ಶ್ರಾವಕರು ಹೇಳುತ್ತಿದ್ದರು ನೀವು ಮಾತಾಜೀಯವರನ್ನು ನಗರಧಾರಾ ಬೇಲಗಛೀಯಾಗೆ ವಿಹಾರ ಮಾಡಿಸಿರಿ ಎಂದು ಅದಕ್ಕೆ ಜನಗಳೇ ಉತ್ತರ ಕೊಟ್ಟರು ಭಾಯೀ ನಾವು ಆರ್ಯಿಕ ಸಂಘ ವ್ಯವಸ್ಥೆಯ ಕಮಿಟಿಯ ವ್ಯವಸ್ಥಾಪಕರ ಹಿಂದೆ ನಡೆಯುವವರೇ ಹೊರತು ಮುಂದೆ ಅಲ್ಲ. ಈ ಶಬ್ದಗಳು ನನಗೆ ಇಂದೂ ನೆನಪಿಗೆ ಬರುತ್ತಿರುತ್ತದೆ. ಹೀಗೆ ದೆಹಲಿಯ ಲಾಲ ಪನ್ನಲಾಲ ತೇಜ್ ಪ್ರೆಸ್ ನವರು ಕೂಡ ಹಲವಾರು ಬಾರಿ ಹೇಳಿದರು ಯಾವಾಗಲೂ ಕುದುರೆಯ ಹಿಂದೆ ಹೋಗಬಾರದು ಗುರುಗಳ ಮುಂದೆ ಹೋಗಬಾರದು ನಿಜವಾಗಿಯೂ ಯಾರು ಈ ನೀತಿಯನ್ನು ಅಳವಡಿಸಿಕೊಳ್ಳುತ್ತಾರೋ ಅವರು ಗುರುಭಕ್ತರಾಗುತ್ತಾರೆ, ಗುರು ದ್ರೋಹಿಗಳು ಎಂದಿಗೂ ಆಗುವುದಿಲ್ಲ.

ವಿಹಾರ ಸ್ಥಗಿತ

ನಾನು ಇಲ್ಲಿಗೆ ಬಂದ ಮೇಲೆ ಇಲ್ಲಿಂದ ಹೊರಡುವ ದಿನವನ್ನು ಘೋಷಿಸಿದೆ. ಆಗ ಕೆಲವು ಮಹಾನುಭಾವರು ಬಂದು ಅನುನಯ ವಿನಯದಿಂದ ಮಾತಾಜೀ 10-15 ದಿನಗಳ ನಂತರ ವಿಹಾರ ಮಾಡಿರಿ ಎಂದು. ನಾನು ನನ್ನ ನಿರ್ಣಯವನ್ನು ಬದಲಾಯಿಸಲಿಲ್ಲ. ಆಗ ಕೆಲವರು ಒಂದು ಉಪಾಯ ಮಾಡಿದರು ಯಾವಾಗ ಮಾರ್ಗಶಿರ ಶುದ್ಧ ಪಂಚಮಿಯಂದು ವಿಹಾರ ಹೊರಡಬೇಕಾಗಿತ್ತು ಚೌತಿಯ ರಾತ್ರಿಯಲ್ಲಿ ಆರೇಳು ನವ ಯುವಕರು ಬಂದರು ಅವರುಗಳಲ್ಲಿ ಪಾರಸ್ ಮಲ್ ಬಡಜಾತ್ಯ ಪ್ರಮುಖರಾಗಿದ್ದರು. ಇವರು ರಾತ್ರಿಯಲ್ಲಿಯೇ ಚೈತ್ಯಾಲಯದಲ್ಲಿ ಗುಂಪಾಗಿ ಕುಳಿತು ಭಜನೆ ಹಾಡತೊಡಗಿದರು.

"ಕೇಶರಿಯಾ ಚಾವಾಲ ರಂಗವಾದೋ ಜ್ಞಾನಮತೀ ಮಾತಾಜೀ ಕೇ ವಿಹಾರ ರುಕವಾ ದೋ"

ಈ ಜನಗಳ ಅಭಿಪ್ರಾಯವೇನೆಂದರೆ ನಾವೆಲ್ಲಾ ಸಂಘದಲ್ಲಿದ್ದ ಪ್ರತಿಮೆಗೆ ಪ್ರಾತಃ ಕಾಲ ಮಂಡಲದಲ್ಲಿ ವಿರಾಜಮಾನಗೊಳಿಸಿ ಪೂಜೆ ಮಾಡಲು ತೊಡಗೋಣ ಆಗ ಮಾತಾಜೀ ಹೇಗೆ ವಿಹಾರ ಮಾಡುತ್ತಾರೆ ಮತ್ತು ಅವರಿಗೆ ಹೇಗೆ ಗೊತ್ತಾಗುತ್ತದೆ. ಆದರೆ ನನಗೆ ಇನಿತು ಸಡಿಲವಾಗಲಿಲ್ಲ. ನಾನು ತೀರ್ಮಾನ ಮಾಡಿಕೊಂಡಿದ್ದು ಆಹಾರವಾದ ಮೇಲೆ ಮಧ್ಯಾಹ್ನ ಹೊರಡುವುದೆಂದು. ಆದರೆ ಇಡೀ ರಾತ್ರಿ ಎಲ್ಲಾ ಭಜನೆ ಮಾಡುತ್ತಲೇ ಇದ್ದರು ಅವರಲ್ಲಿ ಭಕ್ತಿ ಭಾವನೆ ಚಿಮ್ಮುತ್ತಿತ್ತು. ನಾನು ಕೇಳುತ್ತಲೇ ಇದ್ದೆ 1-2 ಗಂಟೆಯ ನಂತರ ವಿಚಾರ ಬಂದಿತು. ಹಲವಾರು ಬಾರಿ ಆಚಾರ್ಯ ಶಿವಸಾಗರರು ವಿಹಾರ ಘೋಷಣೆ ಮಾಡಿದ ಮೇಲೆ ನಿಲ್ಲಬೇಕಾಗುತ್ತಿತ್ತು. ಆಗ ಅವರು ಅವಶ್ಯವಾಗಿ ಘೋಷಣೆ ಮಾಡಿದ ಸಮಯಕ್ಕೆ ಸರಿಯಾಗಿ ಒಂದೆರಡು ಮೈಲಿ ವಿಹಾರ ಮಾಡಿ ಬರುತ್ತಿದ್ದರು. ಇಂತಹ ಉದಾಹರಣೆ ಇದ್ದುದ್ದರಿಂದ ಬೆಳಿಗ್ಗೆ ಸಾಮಾಯಿಕವಾದ ಮೇಲೆ ಬೇರೆ ಮಾತಾಜೀಗಳ ಜೊತೆ ಪರಾಮರ್ಶೆ ಮಾಡಿದೆ ಅದಕ್ಕೆ ಎಲ್ಲರೂ ಅಮ್ಮ ನೀವೇ ಹೇಗೆ ನಿರ್ಣಯ ಕೈಗೊಳ್ಳುತ್ತೀರಾ ಹಾಗೆಯೇ ಪುನಃ ನಾನು ಬ್ರ. ಚಮೇಲಿ ಬಾಯಿಯವರನ್ನು ಕರೆದು ಏಕಾಂತದಲ್ಲಿ ಹೇಳಿದೆ ಅವರುಗಳು ಹೇಳಿದರು : ಮಾತಾಜೀ ಮೊದಲೇ

ನೀವು ಮಹಾವ್ರತಿಗಳು ನೀವು ಹೇಳಿದ ಮಾತಿನ ಮೇಲೆ ನಿಮಗೆ ಲಕ್ಷ್ಯವಿರುತ್ತದೆ. ಆದ್ದರಿಂದ ತಾವು ಸರಿಯಾದ ಸಮಯಕ್ಕೆ ವಿಹಾರ ಮಾಡಿರಿ. ಆಮೇಲೆ ಆ ಜನರು ಸ್ವಲ್ಪ ದೂರದಿಂದ ನಿಮ್ಮನ್ನು ವಾಪಾಸು ಕರೆತರುತ್ತಾರೆ.

ನಾನು ಮಧ್ಯಾಹ್ನ ಮೂರು ಗಂಟೆಗೆ ವಿಹಾರ ಹೊರಟೆ ಬಹಳಷ್ಟು ಜನ ಸುಮಾರು ಒಂದು ಮೈಲಿಯವರೆಗೆ ಬಂದ ಮೇಲೆ ಪುನಃ ಶ್ರೀಫಲವನ್ನು ಇಟ್ಟು ಪ್ರಾರ್ಥಿಸತೊಡಗಿದರು ಮಾತಾಜೀ ನಮಗೆ ಇನ್ನು 10-15 ದಿನಗಳ ಸಮಯವನ್ನು ಕೊಟ್ಟು ಪುನಃ ಬೇಲಗಛೀಯಾಕ್ಕೆ ವಿಹಾರ ಮಾಡಿರೆಂದು. ನಾವು ಸುಲಭವಾಗಿ ವಾಪಾಸು ಬಂದೆವು. ಆಗ ಪಾರಸ್‌ಮಲ್ ಮೊದಲಾದ ಯುವಕರ ಖುಷಿಗೆ ಮಿತಿಯೇ ಇರಲಿಲ್ಲ. ಇದಕ್ಕೆ ಮೊದಲೇ ಕೆಲವು ಯುವಕರು ಬಂದು ಪ್ರಾರ್ಥನೆ ಮಾಡಿದ್ದರು ಮಾತಾಜೀ ಬೆಳಗ್ಗೆ ಎಂಟು ಗಂಟೆಗೆ ತಮ್ಮ ಉಪದೇಶ ಇರುತ್ತದೆ ಅದಕ್ಕೂ ಮೊದಲು 7 ರಿಂದ 8 ಗಂಟೆಯವರೆಗೆ ನಮಗೆ ಪ್ರಶ್ನೋತ್ತರಕ್ಕೆ ಸಮಯ ಕೊಡಿರಿ ನಾವು ಕೆಲವು ವಿಷಯಗಳನ್ನು ಚರ್ಚೆ ಮಾಡಿ ತಿಳಿದುಕೊಳ್ಳುತ್ತೇವೆ. ಆಗ ಯಾವ ವಯಸ್ಸಾದವರು ಬಂದಿರುವುದಿಲ್ಲ. ಅವರೆಲ್ಲ ಪೂಜೆಯಲ್ಲಿ ಇರುತ್ತಾರೆ ನಾನು ಯುವಕರಿಗೆ ಈ ಅವಕಾಶ ಕೊಡಲಿಲ್ಲ ಈಗ ಅವರು ಭಕ್ತಿಯಿಂದ ನನ್ನ ವಿಹಾರವನ್ನು ಸ್ಥಗಿತಗೊಳಿಸಿ ಸಂತೋಷ ಪಟ್ಟಿದ್ದರು ಹಾಗೇ ಮುಂದೆ ಬಂದು ಏನಾದರೂ ಧರ್ಮ ಲಾಭವನ್ನು ಪಡೆಯಲಿ. ಇದರಿಂದ ಅವರ ತಂದೆ ತಾಯಿಗಳಿಗೆ ಸಂತೋಷವಾಗುತ್ತದೆ.

ಕುಮಾರಿ ಸುಶೀಲಾಳಿಗೆ ಸಂಸ್ಕಾರ

ನಾನು ಕಲ್ಕತ್ತಾದಲ್ಲಿ ಇದ್ದಾಗ ಮುನಿಶ್ರೀ ಶ್ರುತಸಾಗರರ ಗೃಹಸ್ಥಾಶ್ರಮದ ಧರ್ಮಪತ್ನಿ ಬಸಂತೀಬಾಯಿ ಅವರ ಮಗ ಮಾಣಿಕ್‌ಚಂದ, ಸೊಸೆ ಸೂರಜಬಾಯಿ ಎಲ್ಲರೂ ಬರುತ್ತಿದ್ದರು. ಮಗಳು ಸುಶೀಲಾಳ ಬಗ್ಗೆ ಅವರು ಒಂದು ಸಲ ಖಾನಿಯಾದಲ್ಲಿ ಶ್ರುತಸಾಗರರು ಹೆಂಡತಿ ಬಸಂತೀ ಬಾಯಿಗೆ ಹೇಳಿದ್ದರು. ನನ್ನ ಮಗಳು ಸುಶೀಲಾಳನ್ನು ಜ್ಞಾನಮತಿ ಮಡಿಲಿಗೆ ಹಾಕಿರಿ. ನನಗೆ ಈ ಮಾತು ನೆನಪಿತ್ತು ಆದರೆ ಆ ಹುಡುಗಿ ಒಂದೆರಡು ಬಾರಿ ಬಂದವಳು ಮತ್ತೆ ಬರಲೇ ಇಲ್ಲ. ನಾನು ನಗರದಲ್ಲಿ ಒಂದು ತಿಂಗಳು ಇದ್ದಾಗ ಮನೋವತಿ ತೀರ್ಥಯಾತ್ರೆಗೆ ಹೋಗಿದ್ದಳು ಆ ಸಮಯದಲ್ಲಿ ಬಸಂತೀಬಾಯಿ ಮತ್ತು ಸುಶೀಲಾ ನನ್ನ ಹತ್ತಿರವೇ ಬಂದು ಮಲಗುತ್ತಿದ್ದರು. ಆಗ ನನಗೆ ಸುಶೀಲಾಳಿಗೆ ತಿಳುವಳಿಕೆ ಹೇಳಿ ಶಿಕ್ಷಣ ಕೊಟ್ಟು ಧರ್ಮದ ಗುಟುಕನ್ನು ಕುಡಿಸಲು ಒಳ್ಳೆಯ ಅವಕಾಶ ಸಿಕ್ಕಿತು. ನಾನು ಅವಳಿಗೆ ಅನೇಕ ವೈರಾಗ್ಯ ಪರವಾದ ಶಿಕ್ಷಣವನ್ನು ಕೊಟ್ಟೆ. ನಾನು ಹೇಳುತ್ತಿದ್ದೆ. ನೋಡು ಸುಶೀಲಾ ಅನಾದಿಕಾಲೀನವಾದ ಈ ಸಂಸಾರದಲ್ಲಿ ಬಹಳ ಕಷ್ಟದಿಂದ ಮನುಷ್ಯ ಪರ್ಯಾಯ ದೊರೆತಿದೆ ಇದನ್ನು ವಿಷಯ ಸುಖಗಳಲ್ಲಿ ಮುಳುಗಿಸುವುದು ಚಿಂತಾಮಣಿ ರತ್ನವನ್ನು ಎಸೆದಿದ್ದಕ್ಕೆ ಸಮಾನವೆಂದು

ಇತಶ್ಚಿಂತಾಮಣಿರ್ದಿವ್ಯಃ ಇತಃ ಪಿಣ್ಯಾಕಖಿಂಡಕಂ ।
ಧ್ಯಾನೇನ ಚೇದುಭೇ ಲಭ್ಯೇ ಕ್ವಾಂದ್ರಿಯಂತಾಂ ವಿವೇಕಿನಃ ॥

ಒಂದು ಕೈಯಲ್ಲಿ ಚಿಂತಾಮಣಿ ರತ್ನ ಇನ್ನೊಂದರಲ್ಲಿ ಗಾಜಿನ ತುಂಡು ಅವೆರಡನ್ನೂ ಬೆರೆಸಿದರೂ ತಿಳುವಳಿಕೆಯುಳ್ಳವನು ಯಾವುದನ್ನು ಆರಿಸುತ್ತಾನೆ ಹೇಳು ಇದರ ಪ್ರಭಾವ ಅವಳ ಮೇಲಾಗ ತೊಡಗಿತು. ನನಗೆ ಖುಷಿಯಾಯಿತು ಆಗ ಅವಳು ನಗರದಿಂದ ಬೇಲಗಛೀಯಾಕ್ಕೆ ಬರುವಾಗ ನನ್ನ ಜೊತೆ ಬಂದಳು.

---

1. **1988** ಇಸವಿಯಲ್ಲಿ ಕಲ್ಪ ಮುನಿಶ್ರೀ ಶ್ರುತಸಾಗರರ ಸ್ವರ್ಗವಾಸವಾಯಿತು. ಈಗ ಇದು ನನ್ನ ಶಿಷ್ಯೆ ಆರ್ಯಿಕ ಆದೀಮತಿಯ ಹತ್ತಿರವಿದೆ.

ಅವಳು ನನ್ನನ್ನು ಬಿಟ್ಟು ಇರಲು ಬಯಸಲಿಲ್ಲ. ನಾನು ಇವೆಲ್ಲವನ್ನು ಅವಳ ತಾಯಿಯ ಮುಂದೆಯೇ ಹೇಳಿದ್ದೆ. ಅವಳ ತಾಯಿಗೆ ಸಹಮತವಿತ್ತು. ಆದರೆ ಅವಳ ಅಣ್ಣ ಮಾಣಿಕಚಂದ್, ಹೀರಾಲಾಲ್, ಮತ್ತು ಪದ್ಮಚಂದರು ವಿರೋಧಿಸತೊಡಗಿದರು. ಆದರೂ ನಾನು ಅಲ್ಲಿಂದ ವಿಹಾರದಲ್ಲಿ 'ಖಿನಸುರಾ' ಎಂಬ ಹಳ್ಳಿಗೆ ಬಂದಾಗ ಅದು ಕಲಕತ್ತೆಯಿಂದ ಸುಮಾರು 20 ಮೈಲಿ ದೂರದಲ್ಲಿತ್ತು. ಅಲ್ಲಿಗೆ ಬಂದಾಗ ಅವರ ತಾಯಿಯ ಅನುಮತಿ ಪಡೆದು ಅವಳಿಗೆ ಬ್ರಹ್ಮಚರ್ಯ ವ್ರತವನ್ನು ಕೊಟ್ಟು ಇದಾದ ನಾಲ್ಕು ವರ್ಷಗಳ ನಂತರ ಅವಳು ನನ್ನ ಹತ್ತಿರ ಬಂದಳು. ನನ್ನ ಹತ್ತಿರ ಸುಮಾರು ಒಂಬತ್ತು ವರ್ಷ ಇದ್ದಳು. ಆಚಾರ್ಯ ಧರ್ಮಸಾಗರರಿಂದ ದೆಹಲಿಯಲ್ಲಿ ನಾನು ಆರ್ಯಿಕಾ ದೀಕ್ಷೆಯನ್ನು ಕೊಟ್ಟು 'ಶ್ರುತಮತಿ' ಎಂದು ಹೆಸರು ಇಟ್ಟೆ. ಈಗ ಅವಳು ಅವಳ ತಂದೆ ಆಚಾರ್ಯ ಕಲ್ಪಶ್ರುತ ಸಾಗರರ ಸಂಘದಲ್ಲಿದ್ದಾರೆ. ತಾಯಿ ಬಸಂತೀಬಾಯಿ ಸಹ ಸಪ್ತಮ ಪ್ರತಿಮಾಧಾರೀಣಿ ಬ್ರಹ್ಮಚಾರಿಣಿ. ಅವರು ಮೊದಲು ನಮ್ಮ ಸಂಘದಲ್ಲಿದ್ದವರು ಈಗ ಮಹಾರಾಜರ ಸಂಘದಲ್ಲಿದ್ದಾರೆ.

ಬ್ರ. ಪ್ಯಾರೇಲಾಲರ ಭಕ್ತಿ ಮತ್ತು ಚರ್ಚೆಗಳು

ಬೇಲಗಛೀಯಾದಲ್ಲಿ ಬ್ರ. ಪ್ಯಾರೇಲಾಲಜೀ ಬಂದು ಕುಳಿತುಕೊಳ್ಳುತ್ತಿದ್ದರು. ಆಗ ಗೊಮ್ಮಟ ಸಾರ, ಕರ್ಮಕಾಂಡ, ಪಂಚಸಂಗ್ರಹ ಮತ್ತು ಧವಳಗ್ರಂಥಗಳ ಚರ್ಚೆ ನಡೆಯುತ್ತಿತ್ತು. ಒಂದು ಸಲ ಶ್ರಾವಕರು ಆತ್ಮಧ್ಯಾನ ಮಾಡಬೇಕೆಂದು ಚರ್ಚೆ ಉಂಟಾಯಿತು. ನಾನು ಹೇಳಿದೆ ಶ್ರೀ ಗೌತಮ ಸ್ವಾಮಿಯವರೇ ನವದೇವತೆಗಳನ್ನು ವಂದಿಸಿ ಭಕ್ತಿಯನ್ನು ಪ್ರಧಾನಗೊಳಿಸಿದ್ದಾರೆ. ಶ್ರಾವಕ - ಪ್ರತಿಕ್ರಮಣ ಮತ್ತು ಯತಿ ಪ್ರತಿಕ್ರಮಣ ಶ್ರೀ ಗೌತಮ ಸ್ವಾಮಿಯವರು ಮಾಡಿರುವುದು ಪ್ರಸಿದ್ಧವಾಗಿದೆ. ಶ್ರಾವಕ ಪ್ರತಿಕ್ರಮಣದಲ್ಲಿ ಸಾಮಾಯಿಕದ ಲಕ್ಷಣ[1] ಹೀಗಿದೆ.

ಜಿಣವಯಣ ಧಮ್ಮ ಚೇದಿಯ ಪರಮೆಟ್ಠಿ ಜಿಣಾಲಯಾಣ ಣಿ ಚ್ಚಂ ಪಿ ।
ಜೋ ವಂದಣಂ ತಿಯಾಲಂ ಕೀರೀ ಸಾಮಾಯಿಯಂ ತಂ ಖು ॥

ಜಿನ ವಚನ ಜಿನಧರ್ಮ ಜಿನಪ್ರತಿಮ ಅರ್ಹಂತ, ಸಿದ್ಧ ಆಚಾರ್ಯ ಉಪಾಧ್ಯಾಯ ಮತ್ತು ಸಾಧು ಈ ಐವರು ಪರಮೇಷ್ಟಿ ಮತ್ತು ಜಿನಾಲಯ ಈ ನವದೇವತೆಗಳು ತ್ರಿಕಾಲದಲ್ಲಿ ಇವರುಗಳ ವಂದನೆ ಮಾಡುವುದೇ ಸಾಮಾಯಿಕ ಈ ಪ್ರಸಂಗವು ಅವರಿಗೆ ಬಹಳ ಹಿಡಿಸಿತು. ಒಂದು ಸಲ ಇದೇ ಚರ್ಚೆ ನಡೆಯುತ್ತಿತ್ತು.

ವೀತರಾಗ ಚಾರಿತ್ರ ಸಾಕ್ಷಾತ ಮೋಕ್ಷಕ್ಕೆ ಕಾರಣವಾಗಿದೆ. ನಾನು ಹೇಳಿದೆ ಇತಂಹ ಏಕಾಂತ ಇಲ್ಲ. ವೀತರಾಗ ಚಾರಿತ್ರ ಅರ್ಥಾತ್ ಯಥಾ ಖ್ಯಾತ ಚಾರಿತ್ರವನ್ನು ಪ್ರಾಪ್ತಿ ಮಾಡಿಕೊಂಡರೂ ಜೀವ ಅರ್ಧ ಪುದ್ಗಲ ಪರಾವರ್ತವದ ವರೆಗೆ ಸಂಸಾರದಲ್ಲಿ ಸುತ್ತುತ್ತದೆ. ಭಗತಜೀ ನನ್ನ ಕಡೆ ನೋಡಿ ಕೇಳಿದರು. ಹೀಗೇಕೆ ? ನಾನು "ಕಸಾಯ ಪಾಹುಡ" ಗ್ರಂಥದ ಸಾಲುಗಳನ್ನು ತೋರಿಸಿದೆ.

ಖಳ ಅಟ್ಠಣ್ಹ ತಸೇಸು ಆಗದೋಸಂಜಮಾಸಂಜಮಂ ಸಂಜಮಂ ಚ ಬಹುಸೋ ಗದೋ ।
ಚತ್ತಾರಿವಾರೇ ಕಸಾಪಿ ಉಪಸಾಮಿತ್ತಾ ತದೋ ಏಇಂದಿಏಸು ಗದೋ ।
ಅಸಂಖೆಜ್ಜಾಣಿ ವಸ್ಸಾಣಿ ಅಚ್ಛಿದೋ

---

೧. **ಕಸಾಯ ಪಾಹುಡಸುತ್ತ ಪುಟ - ೪೦೮**

ಶಂಕಾ

ಎಂಟು ಮಧ್ಯಮ ಕಷಾಯಗಳ ಜಘನ್ಯ ಪ್ರದೇಶ ಯಾರಿಗೆ ಆಗುತ್ತದೆ.

ಸಮಾಧಾನ

ಯಾವ ಜೀವ ಏಕೇಂದ್ರಿಯಗಳ ಯೋಗ್ಯ ಜಘನ್ಯ ಸತ್ಕರ್ಮಗಳ ಜೊತೆ ತ್ರಸಗಳಲ್ಲಿ ಬಂದಿದೆ. ಅಲ್ಲಿ ಸಂಯಮಾ ಸಂಯಮ ಮತ್ತು ಸಂಯಮವನ್ನು ಬಹಳ ಸಲ ಪ್ರಾಪ್ತವಾಗಿದೆ. ನಾಲ್ಕು ಸಲ ಕಷಾಯಗಳನ್ನು ಉಪಶಮ ಮಾಡಿ (ಹನ್ನೊಂದನೆಯ ಗುಣಸ್ಥಾನಕ್ಕೆ ತಲುಪಿ ಪುನಃ ಕೆಳಗೆ ಇಳಿಯುತ್ತದೆ) ಅದರ ನಂತರ ಏಕೇಂದ್ರಿಯಕ್ಕೆ ಹೋಗುತ್ತದೆ. ಅಲ್ಲಿ ಎಷ್ಟು ಕಾಲದಲ್ಲಿ ಉಪಶಾಮಕ ಕಾಲದಲ್ಲಿ ಬಂಧಿತವಾಗಿ ಸಮಯ ಪ್ರಬದ್ಧ ಕಳೆಯುತ್ತದೆಯೋ ಅಷ್ಟೇ ಅಸಂಖ್ಯಾತ ವರ್ಷಗಳ ವರೆಗೆ ಏಕೇಂದ್ರಿಯದಲ್ಲಿದ್ದು, ಅದರ ನಂತರ ತ್ರಸಗಳಲ್ಲಿ ಬಂದು ಮತ್ತು ಸರ್ವಲಘು ಕಾಲದಲ್ಲಿ ಸಂಯಮವನ್ನು ಪಡೆದು ಪುನಃ ಕಷಾಯಗಳ ಕ್ಷಪಣಕ್ಕಾಗಿ ತೊಡಗುತ್ತದೆ. ಇಂತಹ ಜೀವಗಳು ಅಧಃ ಪ್ರವೃತ್ತಕರಣದಿಂದ ಚರಮ ಸಂಯಮದಲ್ಲಿ ಎಂಟು ಮಧ್ಯಮ ಕಷಾಯಗಳ ಜಘನ್ಯ ಪ್ರದೇಶ ಸಂಕ್ರಮಣವಾಗುತ್ತದೆ.[೧]

ಈ ಉದ್ಧರಣದಿಂದ ತಿಳಿದು ಬರುವುದೇನೆಂದರೆ ಸಮ್ಯಕ್ತ್ವ ಸಹಿತ ಸಂಯಮಾಸಂಯಮ ಮತ್ತು ಸಂಯಮವನ್ನು ಬಹಳ ಸಲ ಪ್ರಾಪ್ತಿ ಮಾಡಿಕೊಂಡಿದೆ ಹಾಗೂ ಉಪಶಮ ಶ್ರೇಣಿಯಲ್ಲಿ ನಾಲ್ಕುಬಾರಿ ಹತ್ತಿ ಅಲ್ಲಿಯ ವೀತರಾಗೀ ಶುದ್ಧೋಪಯೋಗಿ - ಯಥಾಖ್ಯಾತ ಚಾರಿತ್ರವುಳ್ಳವುಗಳಾಗಬಹುದು ಮತ್ತೆ ಬಿದ್ದು ಕದಾಚಿತ್ ಏಕೇಂದ್ರಿಯಗಳಲ್ಲಿ ಹೋಗಿ ಅಸಂಖ್ಯಾತ ವರ್ಷಗಳವರೆಗೆ ಪುನಃ ಭ್ರಮಣೆ ಮಾಡಬಹುದು.

ಸೋನಗಢದ ಚರ್ಚೆಗಳು

ಸೋನಾಗಢದ ವಿಚಾರಧಾರೆಯುಳ್ಳವರು ಮುನಿ - ಆರ್ಯಿಕೆಯರನ್ನು ದ್ರವ್ಯಲಿಂಗೀ ಎಂದು ಕರೆಯುತ್ತಾರೆ ಮತ್ತು ಇಂದಿನ ದಿನಗಳಲ್ಲಿ ಪಂಚಮಕಾಲದಲ್ಲಿ ಮುನಿಯ ಚರ್ಯೆಯ ನಿರ್ವಹಣೆ ಸಾಧ್ಯವಿಲ್ಲ. ನಾನು ಅವರಿಗೆ ಶ್ರೀ ಕುಂದುಕುಂದರ ಗಾಥೆಗಳನ್ನು ತೋರಿಸಿದೆ.

ಭರಹೇ ದುಸ್ಸಮಕಾಲೇ ಧಮ್ಮ ಝಾಣಂ ಹವೇಇ ಸಾಹುಸ್ಸ।
ತಂ ಅಪ್ಪಸ ಹಾವಠಿದೇ ಣಹು ಮಣ್ಣಇ ಸೋವಿ ಅಣ್ಣಾಣೇ ॥ 76 ॥

ಈ ಭರತಕ್ಷೇತ್ರದ ದುಃಷಮ ಕಾಲದಲ್ಲಿ ಮುನಿಗಳಿಗೆ ಆತ್ಮ-ಸ್ವಭಾವದಲ್ಲಿ ನಿಲ್ಲಿಸಿದರೆ ಧರ್ಮಧ್ಯಾನವಾಗುತ್ತದೆ. ಹೀಗೆ ತಿಳಿಯದವನೇ ಅಜ್ಞಾನಿ, ಇದೊಂದು ಉದಾಹರಣೆಗಾಗಿ ಹೇಳಿದೆ. ಈ ರೀತಿಯ ಬಹಳಷ್ಟು ಚರ್ಚೆಗಳು ಅಲ್ಲಿ ನಡೆದವು. ಒಮ್ಮೆ ನಾನು ಬ್ರ. ಶ್ರೀ ಭಗತಜೀಯವರನ್ನು ಕೇಳಿದೆ. ಮುನಿಶ್ರೀ ಶ್ರುತಸಾಗರಜೀ ತಮ್ಮ ಬಗ್ಗೆ ಬಹಳ ಹೇಳಿದ್ದಾರೆ. ಜಯಧವಲದ ಪುಟ 100 ರಲ್ಲಿ ಹಾಲು ಮೊಸರಿನಲ್ಲಿ ಜಿನ ಪ್ರತಿಮೆಗಳ ಅಭಿಷೇಕ, ದೀಪ, ಧೂಪದಿಂದ ಪೂಜೆ, ಚಂದನ ಪುಷ್ಪಗಳನ್ನು ಏರಿಸುವುದು ಇತ್ಯಾದಿ ವಿಧಾನಗಳಿವೆ. ಇವುಗಳ ಆಧಾರದಿಂದ ಬೀಸಪಂಥದವರಿಗೆ ಮಾನ್ಯತೆಯನ್ನು ಕೊಟ್ಟಿದ್ದೀರಾ. ಅವರೆಂದರು ಹೌದು ಮಾತಾಜೀ ನನಗೆ ಆ ಸಾಲುಗಳ ಮೇಲೆ ಶ್ರದ್ಧೆಪೂರ್ಣ ರೂಪದಲ್ಲಿದೆ ಆದರೆ ಇಂದಿನ ದಿನಗಳಲ್ಲಿ ಜನರು ಅತಿರೇಕವನ್ನೇ ನೋಡುತ್ತೇವೆ. ಆದ್ದರಿಂದ ನಾನು ಇವರ ಪ್ರಚಾರ - ಪ್ರಸಾರ ಮಾಡಿಲ್ಲದಿದ್ದರೆ ಇದೇ ಕಾರಣದಿಂದ ಬೀಸ ಪಂಥದ ಮುನಿಗಳನ್ನು ಆಚಾರ್ಯ

ಶ್ರೀ ವೀರಸಾಗರ ಮೊದಲಾದವರನ್ನು ಮತ್ತು ತಮ್ಮ ಪ್ರಮಾಣವನ್ನು ಮನ್ನಿಸುತ್ತೇನೆ ಮತ್ತು ನಿಜವಾದ ಸಾಧುಗಳನ್ನು ಕೋಠಿಯಲ್ಲಿ ಗುಣಿಸುತ್ತೇನೆ.

ಈ ಎಲ್ಲಾ ವಾತಾವರಣದಲ್ಲಿ ದಿನ ನಾನು ಚಾತುರ್ಮಾಸ ಹಾಗೂ ಮಾರ್ಗಶಿರದ ಸಮಯದಲ್ಲಿ ಒಳ್ಳೆಯ ಧರ್ಮಧ್ಯಾನದಲ್ಲಿ ಕಳೆದೆ. ಇಲ್ಲಿ ಒಬ್ಬ ಬ್ರ. ಚಿಂತಾಮಣಿಬಾಯಿ ಇದ್ದರು. ಅವರ ವಿಧಾನದ ಮಂಡಲವು ಬಹಳ ಚೆನ್ನಾಗಿತ್ತು. ಬೇಲಗಛೀಯಾದಲ್ಲಿ ಒಂದು ವಿಧಾನವು ಆಗಿತ್ತು. ಪಾಟನಾದ ಮಿಶ್ರಿಲಾಲಜೀ ಮತ್ತು ಅವರ ಧರ್ಮಪತ್ನಿ ಸೂಂಠಿಬಾಯಿ ಹೆಚ್ಚುಬೇಲಗಛೀಯಾದಲ್ಲಿ ಇರುತ್ತಿದ್ದರು. ಸೇಠ್‌ಸುಗಮಚಂದ ಲೋಹಾಡಿಯಾರವರ ಧರ್ಮಪತ್ನಿ ಮೋಹಿನಿಬಾಯಿ ಅನೇಕ ದಿನ ನನ್ನ ಹತ್ತಿರವೇ ಇದ್ದರು. ಇದರ ನಂತರ ನನ್ನ ವಿಹಾರದ ಒಳ್ಳೆಯ ಕಾರ್ಯಕ್ರಮ ತಯಾರಾಯಿತು ಮತ್ತು ಸುಖಕರವಾಗಿ ಸಂತೋಷದ ವಾತಾವರಣದಲ್ಲಿಯೇ ಸಂಘ ಸಹಿತವಾಗಿ ವಿಹಾರ ಮಾಡಿದೆ ಹೊರಡುವಾಗ ಸಭೆಯಲ್ಲಿ ವಿನಯಾಂಜಲಿಯನ್ನು ಸಮರ್ಪಿತ ಮಾಡುವಾಗ ಅನೇಕರು ತಮ್ಮ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದರು. ಶ್ರೀ ಚಾಂದಮಲ್‌ಜೀ ಬಡಜಾತ್ಯಾರು ಮಾತಾಜೀಯವರ ಪ್ರತಿಯೊಂದು ಚರ್ಚೆಯಿಂದಲೂ ಸಂಘದ ಅನು ಶಾಸನದ ವ್ಯವಸ್ಥೆಯಿಂದಲೂ ನನಗೆ ಪುನಃ ಆಚಾರ್ಯ ಕಲ್ಪಚಂದ್ರಸಾಗರ ಮಹಾರಾಜರ ಸ್ಮರಣೆಯನ್ನು ತರುತ್ತದೆ. ವಿಹಾರದ ನಂತರ ನಾನು ಜನರ ಹೇಳಿಕೆಯನ್ನು ಕೇಳಿದ್ದೇನೆಂದರೆ ಒಂದು ವೇಳೆ ಮಾತಾಜೀ ಇಷ್ಟು ವಿದುಷಿಯಾಗಿರದಿದ್ದರೆ ಆಗಮದಲ್ಲಿ ಇಷ್ಟು ದೃಢ ಕಠೋರವಾಗಿ ಇಲ್ಲದೇ ಇದ್ದಿದ್ದರೆ ಇಲ್ಲಿಯ ಜನರು ಅವರನ್ನು ಅರೆದು ಕುಡಿದು ಬಿಡುತ್ತಿದ್ದರು. ಆದ್ದರಿಂದ ಮಾತಾಜೀ ತನ್ನ ಚರ್ಯೆಯಿಂದಲೇ ಇಲ್ಲಿ ವಿಜಯದ ಪತಾಕೆಯನ್ನು ಹಾರಿಸುತ್ತಾ ಹೋದರು ಎಂದು.

ಯಾರೋ ಹೇಳಿದರು ಮಾತಾಜೀಯವರ ಉಪದೇಶದಲ್ಲಿ, ಕತೆ ಹೇಳಿಕೆಯಲ್ಲಿ ಮನೋರಂಜನೆಯಿಲ್ಲದ ಸಿದ್ಧಾಂತ, ಆಧ್ಯಾತ್ಮ, ವೈರಾಗ್ಯ ಮತ್ತು ಭಕ್ತಿ ಮಾರ್ಗದ ವಿಷಯವೇ ಅಧಿಕವಾಗಿತ್ತು. ನಾನು ಯೋಚಿಸುತ್ತಿದ್ದ "ಮುಂಡೇ ಮುಂಡೇ ಮತಿರ್ಭಿನ್ನಾ" ಎಂಬ ಸೂಕ್ತಿಯೇ ಇದೆ. ಯಾವುದೇ ಸಾಧುಗಳಾಗಲಿ ಸಾಧ್ವಿಗಳಾಗಲೀ ಒಂದು ವೇಳೆ ತಮ್ಮ ಮಾರ್ಗದಲ್ಲಿ ದೃಢವಾಗಿದ್ದರೆ ಆಗಮಕ್ಕೆ ಅನುಸಾರ ನಡೆದುಕೊಳ್ಳುವವರಿಗೆ ಯಾವಾಗಲೂ ವಿಜಯ ದೊರೆಯುತ್ತದೆ. ಇದರಲ್ಲಿ ನನ್ನ ವಿಜಯವೇನು ಹೆಚ್ಚು? ಇದೊಂದು ಜನಗಳ ವಿಶೇಷತೆಯಾಗಿದೆ. ತಮ್ಮ ತಮ್ಮ ಗುಣಗಳಿಗೆ ಅನುಗುಣವಾಗಿ ಗುರುಗಳ ಗುಣಗಳನ್ನು ಗ್ರಹಣೆ ಮಾಡಿಕೊಳ್ಳುತ್ತಾರೆ.

ಮದನಲಾಲ ಜೀ ಪಾಂಡ್ಯರ ಮನೆಯಲ್ಲಿ ವಿಶ್ರಾಂತಿ

ವಿಹಾರಕ್ಕಿಂತ ಮೊದಲು ಮದನಲಾಲ ಪಾಂಡ್ಯ ನಗರದಲ್ಲಿ ಆಕ್ಷೇಪಣೆಯನ್ನು ಪ್ರಕಟಿಸಿದ್ದರಲ್ಲ ಅವರು ಬಂದಿದ್ದರು. ಅವರೇ ಹೇಳಿದರು ವಿಹಾರ ಮಾಡುವ ಮಾರ್ಗದಲ್ಲೇ ನನ್ನ ಮನೆ ಬರುತ್ತದೆ ಆದ್ದರಿಂದ ತಾವು ಮೊದಲು ಅಲ್ಲೇ ತಂಗಿ ಮಾರನೇಯ ದಿನ ಮಧ್ಯಾಹ್ನದಲ್ಲಿ ವಿಹಾರ ಮಾಡಬಹುದು. ಈ ವಿಷಯವು ಭಕ್ತ ಜನರಲ್ಲಿ ಚರ್ಚಿತವಾಗಿ ಕೆಲವರು ಆಕ್ಷೇಪ ಎತ್ತಿದವರಲ್ಲಿ ನಿಲ್ಲುವುದು ಬೇಡ ಎಂದರು. ಕೆಲವರು ಅಲ್ಲಿ ತಂಗುವುದರಿಂದ ಅವರು ಪ್ರಭಾವಿತರಾಗಿ ಗುರುಭಕ್ತರಾಗಿ ವಿಶೇಷ ಲಾಭ ಪಡೆಯಬಹುದೆಂದರು. ಇವರೆಲ್ಲಾ ಮಾತುಗಳನ್ನು ಕೇಳಿದ ನಾನು ಕೊನೆಗೆ ಹೇಳಿದೆ. ಅವರಲ್ಲೇ ತಂಗೋಣ ನನಗೆ ನಿಂದಕರು - ವಂದಕರು ಇಬ್ಬರು ಸಮಾನರೇ.

ಅರಿಮಿತ್ರ ಮಹಲ ಮಸಾನ ಕಂಚನ, ಕಾಂಚ ನಿಂದನ ಧುತಿಕರಣ ।
ಅರ್ಘಾವತಾರಣ ಅಸಿ ಪ್ರಹರಣ, ಮೆಂ ಸದಾ ಸಮತಾ ಧರನ ॥

ಇವರಲ್ಲಿ ನಾವು ದೋಷವನ್ನಾಗಲಿ ಗುಣವನ್ನಾಗಲಿ ನೋಡಬಾರದು ವಿಹಾರದ ನಂತರ ರಾತ್ರಿ ಅವರ ಕೋಠಿಯಲ್ಲಿಯೇ ಆಯಿತು. ಬೆಳಗ್ಗೆ ಚಳಿ ಬಹಳವಿದ್ದುದ್ದರಿಂದ ಮಧ್ಯಾಹ್ನದಲ್ಲಿ ವಿಹಾರ ಹೊರಟೆವು. ಅಲ್ಲಿಗೂ ಎಂಟು ಗಂಟೆಗೆ ಶ್ರಾವಕ ಶ್ರಾವಕಿಯರು ಬಂದರು. ಉಪದೇಶವಾಯಿತು ನಾನು ಮದನಲಾಲರಿಗೆ ಹೇಳಿದೆ ಮದನಲಾಲ್ಜೀ ಯಜ್ಞೋಪವೀತವನ್ನು ಧರಿಸಿ ಜೈನರಾಗಿರಿ. ಅವರು ಯಜ್ಞೋಪವೀತವನ್ನು ಗ್ರಹಣೆ ಮಾಡಿದರು. ಎಲ್ಲರಿಗೂ ಸಂತೋಷವಾಯಿತು. ಅನಂತರ ಚೌಕದಲ್ಲೇ ಆಹಾರವಾಯಿತು. ಮದನಲಾಲಜೀ ಆರ್ಯಿಕೆ ಚರ್ಯೆಯ ಫಿಲಂ ಮಾಡಿಸಿದರು.

ಇಲ್ಲಿಂದ ವಿಹಾರ ಮಾಡುತ್ತಾ "ಚಿನಪುರ" ಕ್ಕೆ ಬಂದೆವು. ಇಲ್ಲಿಯು ಶ್ರಾವಕರ ಜಾತ್ರೆಯು ನೆರೆದಿತ್ತು. ಇಲ್ಲಿಯ ಜನ ಶಾಂತಿ ವಿಧಾನವನ್ನು ಮಾಡಿಸಿದರು. ಮತ್ತು ಆಗುಂತಕ ಭಕ್ತರಿಗಾಗಿ ಭೋಜನದ ವ್ಯವಸ್ಥೆಯನ್ನು ಮಾಡಿದ್ದರು. ಇದರ ನಂತರ ಸಮ್ಮೇದ ಶಿಖರದ ಕಡೆಗೆ ವಿಹಾರ ಹೊರಟಿತು.

ವಿಹಾರದ ಸಮಯದಲ್ಲಿ ಬ್ರ. ಭಗತಜೀ ಮತ್ತು ಬ್ರ. ಚಮೇಲಬಾಯಿಯವರ ಕಣ್ಣುಗಳಲ್ಲಿ ನೀರು ಇತ್ತು. ನಿಷ್ಕಾವಂತ ಜನರು ಹೀಗೆ ಅಳುತ್ತಿದ್ದರು. ವಿಶೇಷವಾಗಿ ಮಹಿಳೆಯರು ಹತ್ತಿರದಲ್ಲಿದ್ದು ಸೇವೆ ಮಾಡಿದವರು. ನನ್ನ ಹತ್ತಿರ ಅಭ್ಯಾಸ ಮಾಡಿದ ಹುಡುಗಿಯರು ಎಲ್ಲರ ಕಣ್ಣಲ್ಲೂ ನೀರು. ಆದರೆ ಸಾಧುಗಳ ಜೀವನದಲ್ಲಿ ಅನಾಸಕ್ತಿಯೇ ಪ್ರಧಾನವಾದದು. ನಾವು ಮನೆ ಬಿಡುವಾಗ, ತಂದೆ ತಾಯಿ, ಅಕ್ಕ - ತಂಗಿ, ಅಣ್ಣ - ತಮ್ಮಂದಿರ ಕಣ್ಣೀರಿಗೆ ಸೋಲದವರು ಭಕ್ತರ ಕಣ್ಣೀರಿಗೆ ಸೋಲಲಾಗುವುದೇ ಎಲ್ಲರಿಗೂ ಆಶೀರ್ವದಿಸಿ ಹೀಗೆ ಗುರುಭಕ್ತಿಯನ್ನು ಬೆಳೆಸಿಕೊಳ್ಳುತ್ತಿರಿ. ಇದೇ ಈ ಸಂಸಾರದಿಂದ ದಾಟುವ ಉಪಾಯವಾಗಿದೆ.

೪೫

ಪುನಃ ಸಮ್ಮೇದ ಶಿಖರದ ಕಡೆಗೆ

ಪುನಃ ಸಮ್ಮೇದ ಶಿಖರದ ಕಡೆಗೆ ಯಾತ್ರೆ ಹೊರಟಿದ್ದರಿಂದ ನಮ್ಮವರಿಗೆಲ್ಲ ಬಹಳ ಉತ್ಸಾಹವಾಗಿತ್ತು ಪುನಃ ತೀರ್ಥರಾಜರ ವಂದನೆ ಮಾಡುವ ಸೌಭಾಗ್ಯ ಸಿಕ್ಕಿದ್ದರಿಂದ ವಿಹಾರದ ವ್ಯವಸ್ಥೆಯಲ್ಲಿ ಚಾಂದಮಲ್‌ಜೀ ಬಡಾಜಾತ್ಯರ ಧರ್ಮಪತ್ನಿ ಭಂವರೀ ಬಾಯಿಯವರು ಒಂದು ಚೌಕವಿತ್ತು ಮತ್ತು ಪುಷ್ಯರಾಜಜೀ ಅಗರವಾಲ್ ಜೈನರ ಧರ್ಮಪತ್ನಿಯವರ ಒಂದು ಚೌಕವಿತ್ತು. ಈ ಮಹಿಳೆಯರು ಆಹಾರ ಮಾಡಿ, ವೈಯಾವೃತ್ತಿ ಮಾಡುತ್ತಾ ಧರ್ಮಚರ್ಚೆ ಮಾಡುತ್ತಾ ಸಂತೋಷ ಪಡುತ್ತಿದ್ದರು. ಇವರ ಜೊತೆ ಹಲವಾರು ಮಹಿಳೆಯರಿದ್ದರು. ಈ ಮಧ್ಯೆ ಹಿಂದೂ ಮುಸ್ಲಿಂ ದಂಗೆ ಎದ್ದಿತು. ಆಗ ಎಲ್ಲರ ಮನೆಯಿಂದ ದೂರವಾಣಿಗಳು ಬರಲು ಪ್ರಾರಂಭವಾಯಿತು ಅದಕ್ಕೆ ಇಲ್ಲಿಂದ ಹೆಂಗಸರು ನಮ್ಮ ಚಿಂತೆಯನ್ನು ಮಾಡಬೇಡಿ ನಿಮ್ಮ ಚಿಂತೆಯನ್ನು ಮಾಡಿರಿ ನಾವಿಲ್ಲಿ ಅತ್ಯಂತ ಸುರಕ್ಷಿತವಾಗಿದ್ದೇವೆ. ಇಲ್ಲಿ ದೇವ, ಶಾಸ್ತ್ರ ಮತ್ತು ಗುರುಗಳ ಸಾನಿಧ್ಯದಲ್ಲಿ ಅವರ ಆಶ್ರಯದಲ್ಲಿ ಇದ್ದೇವೆ. ಇವನ್ನು ಕೇಳಿದ ಅವರು ಕಲ್ಕತ್ತೆಯಲ್ಲಿ ನಕ್ಕರೆ, ಈ ಪ್ರಬುದ್ಧ ಮಹಿಳೆಯರು ಇಲ್ಲಿ ನಗುತ್ತಿದ್ದರು. ಹೀಗೆ ಸುಖದ ವಾತಾವರಣದಲ್ಲಿ ನಾವು ಧನಬಾದ್, ಕತ್ರಾಸ್, ಖರಖರೀಯ ಮೂಲಕ ಈಸರಿ ಇಲ್ಲಿಂದ ಸಮ್ಮೇದ ಶಿಖರ - ಮಧುವನಕ್ಕೆ ಬಂದೆವು. ಇಲ್ಲಿಗೆ ಬಂದ ಮೇಲೆ ಕಲ್ಕತ್ತೆಯ ಮಹಿಳೆಯರು ದರ್ಶನ ಮಾಡಿ ಅವರು ಹಿಂದಿರುಗಿದರು. ಕೆಲವರು ಇಲ್ಲಿ ಆಹಾರ ದಾನ ಮಾಡುವುದಕ್ಕಾಗಿಯೇ ಬಂದಿದ್ದರು.

ನಂದೀಶ್ವರ ಪ್ರತಿಷ್ಠಾ ಸಮಾರಂಭ

1964 ನೆ ಫೆಬ್ರವರಿಯಲ್ಲಿ ಸಮ್ಮೇದ ಶಿಖರದಲ್ಲಿ ನಂದೀಶ್ವರ ದ್ವೀಪದ ಪಂಚಕಲ್ಯಾಣದ ಪ್ರತಿಷ್ಠೆ ಇತ್ತು. ಆದ್ದರಿಂದ ಜನರ ಆಗ್ರಹದಿಂದ ಇಲ್ಲಿಯೇ ನಿಲ್ಲಬೇಕಾಯಿತು. ನಾಗೌರದಿಂದ ಬ್ರ. ಚಾಂದಮಲ್ಲಜೀ ಗುರೂಜೀಯವರು ಬಂದಿದ್ದರು. ಇಲ್ಲಿಯ ಗಿರಿರಾಜರ ವಂದನೆ, ಉಪದೇಶ ಮತ್ತು ಚರ್ಚೆಗಳಾಗುತ್ತಿದ್ದವು. ಪಂಡಿತ ಸಮೇರಚಂದ ದಿವಾಕರರು ಸಹ ಇಲ್ಲಿಯೇ ತಂಗಿದ್ದರು ಈ ಕಡೆ ಐಲಕ ಸಿದ್ಧ ಸಾಗರರು ಸಹ ಇಲ್ಲಿಗೆ ಬಂದಿದ್ದರು. ಸಭೆಯಲ್ಲಿ ನನಗಿಂತ ಎತ್ತರದ ಸ್ಥಾನದಲ್ಲಿಯೇ ಕುಳಿತುಕೊಳ್ಳುತ್ತಿದ್ದರು. ನಾನು ಆ ಕಡೆ ಲಕ್ಷ್ಯವೇ ಕೊಡಲಿಲ್ಲ.

ನಾನು ಯೋಚಿಸಿದೆ ಕೆಳಗಿನ ಆಸನದಲ್ಲಿ ಕುಳಿತುಕೊಳ್ಳುವುದರಿಂದ ನನಗೇನೂ ನಷ್ಟವಿಲ್ಲವಲ್ಲ. ನಾನೇನು ಇವರಿಗಿಂತ ಚಿಕ್ಕವಳಾಗುವುದಿಲ್ಲವಲ್ಲ ನನ್ನ ಅಂತಸ್ತು ಇದ್ದೇ ಇರುತ್ತದೆ. ಕೆಲವು ಶ್ರಾವಕರು ನಿಜವಾಗಿಯೂ ಇದರಿಂದ ಉತ್ತೇಜಿತರಾದರು ಆಗ ನಾನೇ ಅವರನ್ನು ಶಾಂತಗೊಳಿಸಬೇಕಾಯಿತು. ಐಲಕರಿಗೆ ಮುನಿ ಭಕ್ತ ಜನರಿಗೆ ಆದರದ ಭಾವ ಇರಲಿಲ್ಲ ಈ ಕಾರಣದಿಂದ ತನ್ನ ಬುದ್ಧಿಯಿಂದ ಕೆಲಸ ಮಾಡದೇ ಪ್ರಾಯಶಃ ಜನರಿಗೆ ಬುದ್ಧಿ ಕಲಿಸಲು ಬಂದಿದ್ದರು.

ಈ ಕಡೆ ಬ್ರ. ಕು. ಮನೋವತಿ ಆರ್ಯಿಕೆ ದೀಕ್ಷೆಯನ್ನು ಬೇಡುತ್ತಿದ್ದಳು. ಬ್ರ. ಭಗತಜೀ ಕಲಕತ್ತೆಯಿಂದ ಬಂದಿದ್ದರು ಅವರೂ ಕೂಡ ಹೇಳುತ್ತಿದ್ದರು. ಮಾತಾಜೀಯವರಿಗೆ ದೀಕ್ಷೆಯನ್ನು ಕೊಡಿರಿ ಎಂದು ಆದರೆ ನಾನು ಆಚಾರ್ಯ ಶಿವಸಾಗರರ ಆಜ್ಞೆಯಿಲ್ಲದೇ ನಾನು ಅನುಮತಿ ಕೊಡುವ ಹಾಗಿರಲಿಲ್ಲ. ಮನೋವತಿಯ ಪತ್ರ ನೋಡಿ ತಂದೆ - ತಾಯಿಗಳು ಸಹ ಬಂದಿದ್ದರು. ತೀರ್ಥರಾಜ ದರ್ಶನ ಪ್ರತಿಷ್ಠೆ ಮಹೋತ್ಸವ, ಸಂಘದ ದರ್ಶನ ಲಾಭ ಈ ಮೂರು ಲಾಭವೂ ಸಿಕ್ಕಿತು. ಆದ್ದರಿಂದ ಅವರು ಸಮ್ಮೇದ ಶಿಖರಕ್ಕೆ ಬಂದಿದ್ದರು ನನ್ನ ದರ್ಶನವಾಯಿತು. ತಾಯಿ ನನ್ನನ್ನು ನೋಡಲು ಬಂದಾಗ ಯಾವಾಗಲೂ ಕಲಕತ್ತೆಯ ಶ್ರಾವಕ ಶ್ರಾವಿಕೆಯರು ನನ್ನನ್ನು ಸುತ್ತುವರೆದು ಇರುತ್ತಿದ್ದರು. ಒಂದಲ್ಲಾ ಒಂದು ತತ್ವ ಚರ್ಚೆ ಅದರ ಪ್ರಶ್ನೋತ್ತರ ನಡೆಯುತ್ತಿತ್ತು. ಪ್ರತಿಷ್ಠೆಯ ಸಮಯದಲ್ಲಿ ಪೆಂಡಾಲಿನಲ್ಲಿ ನನ್ನ ಉಪದೇಶವಿರುತ್ತಿತ್ತು. ಇಷ್ಟು ದೊಡ್ಡ ಸಭೆಯಲ್ಲಿ ನನ್ನ ಉಪದೇಶ ಕೇಳಿದ ತಂದೆಗೆ ಬಹಳ ಸಂತೋಷವಾಯಿತು. ಆಗ ನಾನು ಜನರಿಗೆ ಹೇಳುತ್ತಿದ್ದೆ ನೋಡಿರಿ ಸಂಸಾರದಲ್ಲಿ ಧರ್ಮ ಒಂದೇ ಶರಣು. ಆದ್ದರಿಂದ ಮೋಹವನ್ನು ಬಿಟ್ಟು ಧರ್ಮಕ್ಕೆ ಶರಣಾಗಿರಿ.

ಸ್ವಯಂ ದೀಕ್ಷೆಯ ನಿಷೇಧ

ಅಲ್ಲಿ ತಪೋಕಲ್ಯಾಣದ ಸಮಯದಲ್ಲಿ ಒಬ್ಬ ವ್ಯಕ್ತಿ ಇದ್ದಕ್ಕಿದ್ದಂತೆ ಬಟ್ಟೆ ಬಿಚ್ಚಿ ನಗ್ನರಾದರು. ಅದೇ ಸಮಯಕ್ಕೆ ಬಂದು ಪಿಂಛಿ ಮತ್ತು ಕಮಂಡಲ ತಂದು ಕೊಟ್ಟರು ಕೆಲವು ಶ್ರಾವಕರು ಅವರಿಗೆ ಜಯ ಜಯಕಾರ ಹೇಳ ತೊಡಗಿದರು ಆಗ ಅಲ್ಲಿಯೇ ಮುನಿಧರ್ಮ ಕೀರ್ತಿಗಳು ಕುಳಿತಿದ್ದರು. ನಾನು ನನ್ನ ಸಂಘ ಸಹಿತನಾಗಿ ಕುಳಿತಿದ್ದೆ. ಮಹರಾಜರು ಈ ದೀಕ್ಷೆಯನ್ನು ಅಮಾನ್ಯವೆಂದು ಆಗಮದ ವಿರುದ್ಧವಾದುದು ಎಂದರು. ನಾನು ಹೇಳಿದೆ ಇವರು ಮುನಿಗಳಾಗಲೇ ಬೇಕೆಂದಿದ್ದರೆ ಧರ್ಮಕೀರ್ತಿಗಳಿಂದ ದೀಕ್ಷೆ ತೆಗೆದುಕೊಳ್ಳಲಿ ಇಲ್ಲದಿದ್ದರೆ ಈ ಸಮಾಜ ಇವರನ್ನು ಮುನಿಗಳೆಂದು ಮಾನ್ಯ ಮಾಡುವಂತಿಲ್ಲ. ಈಗ ಇವರು ಬಟ್ಟೆ ಧರಿಸಬೇಕು. ಕಲಕತ್ತೆಯ ಕಡೆಯಿಂದ ಬಂದಿದ್ದ ಕೆಲವು ಪ್ರಬುದ್ಧ ಯುವಕರು ನನ್ನ ಮಾತಿಗೆ ಒಪ್ಪಿಗೆಯಿತ್ತರು ಆದರೆ ಹೀಗೆ ಮಾಡುವವರಾರು

ಇದರಲ್ಲಿ ಸಡಿಲತೆಯನ್ನು ಕಂಡು ನಾನು ಬ್ರ. ಚಾಂದಮಲ್ಲಜೀ ಮುಂತಾದ ಕೆಲವರನ್ನು ಕರೆದು ಹೇಳಿದೆನು ಸ್ವಯಂ ದೀಕ್ಷಿತರಾದವರಿಗೆ ಮಾನ್ಯತೆಯನ್ನು ಕೊಡುವುದು ಸರಿಯಲ್ಲವೆಂದು.

ಅಲ್ಲಿ ಪಂಡಿತ ಸುಮೇರಚಂದ್ರಜೀ ದಿವಾಕರರು ಇದ್ದರು ಅವರು ತಪೋಕಲ್ಯಾಣದ ನಂತರ ಎಲ್ಲ ವಿಷಯಗಳನ್ನು ತಿಳಿದುಕೊಂಡು ಪುನಃ ಮಹಾರಾಜರ ಹತ್ತಿರ ನನ್ನ ಹತ್ತಿರ ಪರಾಮರ್ಶೆ ಮಾಡಿ ನಗ್ನನಾದ ವ್ಯಕ್ತಿಯನ್ನು ಏಕಾಂತವಾಗಿ ಕರೆದುಕೊಂಡು ತಿಳುವಳಿಕೆ ಹೇಳಿದರು. ಆಗ ಆ ಬಡಪಾಯಿ ತನ್ನನ್ನು ಅಪಾತ್ರನೆಂದು ತಿಳಿದು ಬಟ್ಟೆ ಧರಿಸಿ ತನ್ನ ಮನೆಗೆ ಹೋದರು. ಆಗ ಸಮಾಜದಲ್ಲಿ ಶಾಂತಿ ಉಂಟಾಯಿತು.

ತಂದೆ ತಾಯಿ ಮೋಹದಿಂದ ದುಃಖಿತರಾಗಿದ್ದನ್ನು ಬ್ರ. ಚಾಂದಮಲ್ಲಜೀ ಗುರೂಜೀ ಹಾಗೂ ಬ್ರ. ಪ್ಯಾರೇಲಾಲ ಭಗತಜೀ ಇವರೆಲ್ಲಾ ಬಂದು ಸಮಾಧಾನ ಮಾಡಿ ಹೇಳಿದರು. ಭಲೇ ಎಂತಹ ತಂದೆ ತಾಯಿಗಳು ನೀವು ನಿಮ್ಮ ಪುತ್ರಿ ಎಂತಹ ಚಾರಿತ್ರಪದ, ಜ್ಞಾನಪದವನ್ನು ಪ್ರತಿಷ್ಠೆಯನ್ನೂ ಪಡೆದಿದ್ದಾರೆ ಇದನ್ನು ನೋಡಿದ ನಿಮಗೆ ಅತಿಶಯವಾದ ಆನಂದವಾಗುತ್ತಿರಬೇಕು ಆದ್ದರಿಂದ ತಾವು ಶೋಕಪಡುವುದನ್ನು ಬಿಟ್ಟು ಅವರ ತ್ಯಾಗವನ್ನು ಹೊಗಳಬೇಕು. ಈ ಮಾತುಗಳನ್ನು ಕೇಳಿ ಪ್ರಭಾವಿತರಾದ ತಂದೆ ತಾಯಿಗಳು ಪ್ರತಿಷ್ಠೆಯ ನಂತರವೂ ಕೆಲವು ದಿನಗಳವರೆಗೆ ಇರಲು ಒಪ್ಪಿದರು. ಕುಮಾರಿ ಮನೋವತಿ ಪ್ರತಿಷ್ಠೆಯ ಸಮಯದಲ್ಲೇ ದೀಕ್ಷೆ ತೆಗೆದುಕೊಳ್ಳಲು ಬಯಸಿದಳು ಆದರೆ ಬಹುಶಃ ಅದಕ್ಕೆ ಕಾಲಲಬ್ಧಿ ಬಂದಿರಲಿಲ್ಲ. ಆದ್ದರಿಂದಲೇ ಅವಳಿಗೆ ಆಗ ದೀಕ್ಷೆ ಸಿಗಲಿಲ್ಲ.

ನನ್ನ ಜೊತೆ ವಂದನೆಯ ಖುಷಿ

ತಾಯಿ ಮೋಹಿನಿಯು ಒಂದು ದಿನ ನನ್ನ ಜೊತೆಯೇ ಇಡೀ ಪರ್ವತವನ್ನ ಕಾಲ್ನಡಿಗೆಯಲ್ಲಿಯೇ ವಂದನೆ ಮಾಡಿದರು. ಆ ಸಮಯದಲ್ಲಿ ಅವರು ಬಹಳ ಆನಂದಿತರಾಗಿದ್ದರು. ಇದು ಅವರ ಜೀವನದಲ್ಲಿಯೇ ಬಹಳ ಮಹತ್ವ ಪೂರ್ಣವೆಂದು ತಿಳಿದ್ದಿದ್ದರು. ಇದು ಅವರ ಮಗಳ ಆರ್ಯಿಕೆಯ ಜೀವನದ ಬಗ್ಗೆ ಒಂದು ಅಪ್ರತಿಮ ಶ್ರದ್ಧೆಯ ಪ್ರತೀಕವಾಗಿತ್ತು. ಅವರು ಪ್ರತಿದಿನ ಚೌಕವನ್ನು ಮಾಡುತ್ತಿದ್ದರು. ಯಾರಾದರೂ ಒಬ್ಬರು ಮಾತಾಜೀ ಅಲ್ಲಿಗೆ ಹೋಗುತ್ತಿದ್ದರು. ನಾನೇ ಅಲ್ಲಿಗೆ ಪ್ರತಿದಿನ ಹೋಗುವ ಸಂಭವವಿರಲಿಲ್ಲ. ಆಗ ತಂದೆಯವರು ನನಗೆ ಆಹಾರ ಕೊಡುವುದಕ್ಕೆ ಅಕ್ಕ - ಪಕ್ಕದ ಚೌಕಗಳಿಗೆ ಬರುತ್ತಿದ್ದರು. ಆಹಾರ ಕೊಟ್ಟ ಖುಷಿ ಪಡುತ್ತಿದ್ದರು. ಒಂದು ದಿನ ಜೌಕದಲ್ಲಿ ಬೇರೊಂದು ವಸ್ತುವನ್ನು ತೆಗೆದುಕೊಳ್ಳಲು ಆಗ್ರಹಪಡಿಸಿದರು. ನಾನು ಕೈಗಳನ್ನು ಮುಚ್ಚಿಕೊಂಡೆ ಆಗ ಅವರು ಮಾತಾಜೀ ಒಂದೇ ಒಂದು ತುತ್ತು ತೆಗೆದುಕೊಳ್ಳಿ ನಾನು ಹೊರಟು ಹೋಗುತ್ತೇನೆ ಇಲ್ಲ ಎನ್ನಬೇಡಿ ಒಂದು ತುತ್ತು ತೆಗೆದುಕೊಳ್ಳಿ ಇವರ ಒತ್ತಾಯ ನೋಡಿ ಜನರಿಗೆ ಮಾತಾಜೀಯ ತಂದೆ ಎಂದು ಗೊತ್ತಾಗಿ (ನಕ್ಕರು) ಮುಸಿಮುಸಿ ನಕ್ಕರು.

ತಂದೆಯ ಪಾಪ ಬೀರುತಾ

ಒಂದು ದಿನ ಅವರ ಚೌಕಕ್ಕೆ ಯಾರೋ ಹೆಂಗಸು ಬಂದು ಕಿತ್ತಳೆ ಹಣ್ಣನ್ನು ಕೊಟ್ಟು ಆಹಾರದಲ್ಲಿ ಕೊಡಲು ಹೇಳಿದ್ದಾರೆ. ಕಿತ್ತಳೆ ಹಣ್ಣು ಸೇಬು ಎಲ್ಲವನ್ನು ಬಿಡಿಸಿ ಮೋಹಿನಿಯವರು ಮೊದಲೇ ಇಟ್ಟಿದ್ದರು. ಆಹಾರವಾದ ಮೇಲೆ ಆ ಕಿತ್ತಳೆ ಹಣ್ಣು ಹಾಗೇ ಉಳಿಯಿತು. ಅದನ್ನು ತಂದೆಗೆ ಊಟದಲ್ಲಿ ಬಡಿಸಿದಾಗ ಅವರು ಆ ಹೆಂಗಸು ಕೊಟ್ಟಿರುವ ಹಣ್ಣು ಅದು ನಿರ್ಮಾಲ್ಯಕ್ಕೆ ಸಮ ನನಗೆ ಬೇಡ ಎಂದರು. ಅಮ್ಮ ಮಕ್ಕಳಿಗೆ ಕೊಡಲು ಹೋದಾಗಲೂ

ತಡೆದು ನೀನು ಕೂಡ ತಿನ್ನಬಾರದು ಎಂದು ತಡೆದರು. ಆ ವಿಷಯವನ್ನು ಅಮ್ಮ ಮಧ್ಯಾಹ್ನ ಬಂದಾಗ ಹೇಳಿ ಹೀಗೆ ಆಗುವುದನ್ನು ನಾವು ಏನು ಮಾಡಬೇಕೆಂದು ಕೇಳಿದರು ಅದಕ್ಕೆ ನಾನು ನಕ್ಕು ಅದನ್ನು ಪ್ರಸಾದವೆಂದು ತಿಳಿದು ತಿನ್ನಬೇಕೆಂದು ಹೇಳಿದೆ. ಈ ಉತ್ತರ ತಂದೆಗೆ ಸರಿ ಹೋಗಲಿಲ್ಲ ಆಗ ನಾನು ಒಳ್ಳೆಯದು ಬೇರೆ ಜನರಿಗೆ ಪ್ರಸಾದವೆಂದು ಹಂಚಿಬಿಡಿ ಎಂದೆ. ಆಗ ಅವರು ಖುಷಿಯಿಂದ ಹೇಳಿದರು ಸರಿ ನಾಳೆಯಿಂದ ನೀನು ಯಾರಿಂದಲೂ ಹಣ್ಣನ್ನು ತೆಗೆದುಕೊಳ್ಳಬೇಡ ಎಂದರು. ನೋಡು ಯಾರಾದರೂ ಆಹಾರಕ್ಕಾಗಿ ಹಣ್ಣು ಕೊಟ್ಟರೆ ಮತ್ತು ಒಂದು ವೇಳೆ ನಮ್ಮ ಊಟದ ಸಮಯದಲ್ಲಿ ಬಂದರೂ ಆಗ ಮಹಾಪಾಪವಾಗುತ್ತದೆ. ನಾನೆಂದೆ ಒಂದು ವೇಳೆ ಸಾಧುಗಳಿಗೆ ಅದನ್ನು ಕೊಡದೆ ತಾವೇ ತಿಂದರೆ ಪಾಪ ಬರುತ್ತದೆ. ಹಾಗೇ ಒಂದು ವೇಳೆ ಉಳಿದಿದ್ದನ್ನು ತಿಂದರೆ ಪ್ರಸಾದವೆಂದು ತಿಂದರೆ ಪಾಪ ಬರುವುದಿಲ್ಲ ಬೇಡ ನಿನಗೆ ಇಷ್ಟವಿಲ್ಲ ಎಂದರೆ ಬೇರೆಯವರಿಗೆ ಪ್ರಸಾದವೆಂದು ಹಂಚು. ಇದು ತಂದೆ ಛೋಟೆಲಾಲರ ನಿಃಸ್ಪೃಹತೆ ಮತ್ತು ಪಾಪ ಭೀರುತೆಯ ಕಾರಣದಿಂದ ಇಂದು ಕೂಡ ಅವರ ಸಂತಾನದ ಮೇಲೆ ಅದೇ ಸಂಸ್ಕಾರ ಬಿದ್ದಿದೆ.

ಮೋಹದಿಂದ ವಿಕ್ಷಿಪ್ತತೆ

ಒಂದು ದಿನ ಕು. ಮನೋವತಿಯ ವಿಶೇಷವಾದ ಒತ್ತಾಯದಿಂದ ಅವಳಿಗೆ ಕೇಶಲೋಚನ ಮಾಡ ತೊಡಗಿದೆ. ಅವಳಿಗೆ ದೀಕ್ಷೆ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಅದರ ಅನುಭವವನ್ನು ಅಭ್ಯಾಸ ಮಾಡುವ ತವಕ, ಹೀಗಾಗಿ ಕೇಶಲೋಚನ ಮಾಡುತ್ತಿದ್ದೆ. ನಾನೇನು ಯೋಚಿಸಿದೆ ತಂದೆ ತಾಯಿಗಳು ಅಲ್ಲೇ ಇದ್ದರಲ್ಲ ಅವರನ್ನು ಕರೆಸಿ, ಅವರು ನೋಡಲಿ ಎಂದು ಹೀಗೆ ಯೋಚಿಸದ ನಾನು ಅವರನ್ನು ಅಲ್ಲಿಗೆ ಕರೆಸಿದೆ. ಆದರೆ ತಂದೆ ಅಲ್ಲಿಗೆ ಬಂದು ಮನೋವತಿಯ ಕೇಶಲೋಚನ ನೋಡಿದವರೇ ಗಾಬರಿಯಾಗಿ ಗಲಾಟೆ ಮಾಡತೊಡಗಿದರು. ಅಲ್ಲಿಂದ ಓಡಿಹೋಗಿ ತಾಯಿಗೆ ಅದೇ ನೋಡು ಹೋಗು ಮಾತಾಜೀ ಮನೋವತಿಯ ಕೇಶವನ್ನು ಕಿತ್ತು ಹಾಕುತ್ತಿದ್ದಾರೆ ಬೇಗ ಹೋಗಿ ಅದನ್ನ ತಪ್ಪಿಸು ಎಂದು. ಅಮ್ಮ ಹೀಗೆ ಹೇಳಿದರು.

ಮಾತಾಜೀ ನೀವು ಇದೇನು ಮಾಡುತ್ತೀದ್ದೀರಿ. ಇವಳ ತಂದೆಯವರು ಇದನ್ನು ನೋಡಿ ಹುಚ್ಚರಂತೆ ಅಳುತ್ತಿದ್ದಾರೆ. ಅವರ ಮುಂದೆ ತಾವು ಲೋಚ ಮಾಡದೆ ನಂತರ ಮಾಡಬಹುದಾಗಿತ್ತು. ಅದಕ್ಕೆ ನಾನು ನಗುತ್ತಾ ಅಯ್ಯೋ, ಕೇಶಲೋಚನ ನೋಡಿ ಏತಕ್ಕೆ ಗಾಬರಿಯಾಗಬೇಕು. ನಾನು ಯಾವಾಗಲು ಕೇಶಲೋಚ ಮಾಡಿಕೊಳ್ಳುತ್ತೀನಲ್ಲ ಎಂದೆ. ಅಷ್ಟರಲ್ಲಿ ತಂದೆ ಅಲ್ಲಿಗೆ ಬಂದು ಅರೇ ಅರೇ ಬಿಟ್ಟು ಬಿಡಿ ಮಾತಾಜೀ ನನ್ನ ಮಗಳನ್ನು ಅವಳ ಕೂದಲನ್ನು ಎಳೆದು ಕೀಳಬೇಡಿ ನೋಡಿ ಅವಳ ತಲೆ ಎಲ್ಲ ಕೆಂಪಾಗಿದೆ. ಆದರೆ ನಾನು ಅವರ ಮಾತಿನ ಕಡೆ ಗಮನ ಕೊಡದೇ ನಗುತ್ತಾ ಕೆಲಸ ಮುಂದುವರಿಸಿದೆ. ಮನೋವತಿಯು ನಗುತ್ತಾ ಅವರಿಗೆ ಸಾಂತ್ವನ ಹೇಳಿದಳು. ಅಪ್ಪ ನನಗೆ ಕಷ್ಟವಾಗುತ್ತಿಲ್ಲ ನೋಡಿ ನಾನು ನಗುತ್ತಿಲ್ಲವೇ. ನೀವೇಕೆ ದುಃಖಿಗಳಾಗಿ ಅಳುತ್ತಿದ್ದೀರಿ ನಾನು ಸಾಂತ್ವನ ಹೇಳಿದೆ ಕೇಶಲೋಚನವಾದ ಮೇಲೆ ಮನೋವತಿ ಹೇಳಿದಳು, ನಾನೇ ಸ್ವತಃ ಒತ್ತಾಯ ಮಾಡಿದೆ ನಾನು ಒಂದು ವರ್ಷದಿಂದಲೂ ಒತ್ತಾಯ ಮಾಡುತ್ತಿದ್ದೆ. ನನ್ನ ಅದೃಷ್ಟದಿಂದ ತೀರ್ಥರಾಜದಲ್ಲಿ ಅವಕಾಶ ಸಿಕ್ಕತು. ಈಗ ನನಗೆ ಒಂದು ದಿನ ಆರ್ಯಿಕೆ ದೀಕ್ಷೆ ತೆಗೆದುಕೊಳ್ಳಬಹುದೆಂಬ ವಿಶ್ವಾಸ ಬಂದಿದೆ ಎಂದಳು.

ತಂದೆಯವರು ಅವಳನ್ನು ತಮ್ಮ ಕೊಠಡಿಗೆ ಕರೆದುಕೊಂಡು ಬಹಳಷ್ಟು ಸಮಾಧಾನ ಪಡಿಸಿದ್ದಾರೆ. ಮಗಳೇ ನೀನು ಈಗ ಇಲ್ಲಿರುವುದು ಬೇಡ ಸ್ವಲ್ಪ ದಿನ ಮನೆಗೆ ನಡಿ ನೀನು ಯಾವಾಗ ಕೇಳುತ್ತೀಯಾ ಆಗ ನಾನೇ ಕೈಲಾಸನ ಜೊತೆ ಕಳುಹಿಸುತ್ತೇನೆ. ಆದರೆ ಸಂಘ ಶ್ರವಣಬೆಳಗೊಳಕ್ಕೆ ಹೋಗಬೇಕೆಂದು ನಿರ್ಣಯ ಆಗಿದ್ದರಿಂದ ಅವಳು ಮನೆಗೆ ಹೋಗಲು ಒಪ್ಪದೆ ತಂದೆಯನ್ನು ಒಪ್ಪಿಸತೊಡಗಿದಳು.

ಮಾತಾಜೀಯವರು ಈಗ ಕಲಕತ್ತಾದ ಚಾತುರ್ಮಾಸದಲ್ಲಿ ಮುನಿ ಶ್ರುತಸಾಗರರ 18 ವರ್ಷದ ಮಗಳು ಸುಶೀಲಾಳನ್ನು ಮನೆ ಬಿಟ್ಟು ಬರಲು ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ತಿಂಗಳುಗಟ್ಟಲೇ ಸುಶೀಲ ಮತ್ತು ಅವರ ತಾಯಿಗೆ ತಿಳುವಳಿಕೆ ಹೇಳಿದ್ದಾರೆ. ಯಾವಾಗ ಸುಶೀಲಳಲ್ಲಿ ದೃಢತೆ ಬಂತೋ ಆಗ ಅವರ ತಾಯಿಗೆ ತಿಳುವಳಿಕೆ ಹೇಳಿ ಮಾತಾಜೀ ಅವಳಿಗೆ ಬ್ರಹ್ಮಚರ್ಯ ವ್ರತ ಕೊಟ್ಟರು. ಆಗ ಅವಳ ಅಣ್ಣಂದಿರು ಅವಳನ್ನು ಬಿಡದೆ ಕರೆದುಕೊಂಡು ಹೋದರು ಆದರೆ ಅವಳು ಒಂದು ದಿನ ಸಂಘಕ್ಕೆ ಬಂದೇ ಬರುತ್ತಾಳೆ. ಸುಶೀಲಳ ಅಣ್ಣ ಮಾತಾಜೀಯ ಪರಮ ಭಕ್ತ. ಈಗ ಅವರು ಮಾತಾಜೀಯ ಬಗ್ಗೆ ಸಿಟ್ಟಾಗಿದ್ದಾನೆ ಆದರೆ ಮಾತಾಜೀಯ ಹೃದಯದಲ್ಲಿ ಎಂತಹ ಪರೋಪಕಾರದ ಭಾವನೆ ಇದೆ ಅದನ್ನು ವರ್ಣಿಸಲು ಸಾಧ್ಯವಿಲ್ಲ. ಹೀಗೆ ಹಲವಾರು ರೀತಿ ಸಮಾಧಾನ ಮಾಡಿದ ಮೇಲೆ ತಂದೆ ನಿರುಪಾಯರಾಗ ಬೇಕಾಯಿತು.

ಕುಮುದಿನಿಗೋಸ್ಕರ ಪ್ರಯತ್ನ

ಒಂದು ದಿನ ನನಗೆ ಕುಮುದಿನಿ ಕೂಡ ನನ್ನನ್ನು ನೋಡಬೇಕೆಂದು ಬಹಳ ಹಠ ಮಾಡುತ್ತಿದ್ದಾಳೆ ಆದರೆ ಅವಳು ಎಲ್ಲಿ ಬಂದು ಸಂಘದಲ್ಲೇ ಇರುತ್ತೀನಿ ಎಂದು ಬಿಡುತ್ತಾಳೋ ಎನ್ನುವ ಭಯದಿಂದ ಅವಳನ್ನು ಕರೆತಂದಿಲ್ಲ ಎಂದು ಗೊತ್ತಾಯಿತು. ನಾನು ತಂದೆ ಛೋಟೆಲಾಲರಿಗೆ ಬಹಳ ತಿಳುವಳಿಕೆ ಹೇಳಿದೆ. ಅದಕ್ಕೆ ಅವರು ನಗುತ್ತಾ ಹೇಳಿದರು. ಮಾತಾಜೀ ಈಗ ನಾನು ನಿಮ್ಮ ಹತ್ತಿರ ನನ್ನ ಯಾವ ಹೆಣ್ಣು ಮಕ್ಕಳನ್ನು ದರ್ಶನಕ್ಕೆ ಕಳುಹಿಸುವುದಿಲ್ಲ. ನೋಡಿ ಈ ದಿನ ನೀವು ಮನೋವತಿಯನ್ನು ಹೇಗೆ ಕೂದಲೆಲ್ಲಾ ಕಿತ್ತು ತಲೆ ಎಲ್ಲಾ ಕೆಂಪು ಮಾಡಿದ್ದೀರ ನೀವು ಬಹಳ ನಿಷ್ಠೂರಿ ಆಗಿದ್ದೀರ ಎಂದರು. ನಾವು ಏನು ಮಾಡಲು ಸಾಧ್ಯ ಅವಳ ಭಾಗ್ಯದಲ್ಲಿ ಏನು ಬರೆದಿದೆಯೋ ಹಾಗೇ ಆಗುವುದು ಯಾರೂ ಏನು ಮಾಡಲು ಸಾಧ್ಯವಿಲ್ಲ. ಮುಂದೆ ಸ್ವಲ್ಪ ದಿನಗಳಲ್ಲೇ ಕುಮುದಿನಿಯ ವಿವಾಹ ಕಾನಪುರದ ಪ್ರಕಾಶಚಂದ ಜೈನರ ಜೊತೆ ಆಯಿತೆಂದು ಗೊತ್ತಾಯಿತು.

ಒಂದು ದಿನ ಕಲಕತ್ತೆಯ ಸುಗನ ಚಂದ ಲುಹಾಡಿಯರು 18 ವರ್ಷದ ಒಬ್ಬ ಯುವಕ ಬ್ರ. ಸುರೇಶಚಂದನನ್ನು ಕರೆದುಕೊಂಡು ಬಂದು ಒಪ್ಪಿಸಿದರು. ಬ್ರ. ಮಹಾವೀರ ಪ್ರಸಾದರು ಜೊತೆಯಲ್ಲಿಯೇ ಇದ್ದರು. ಇನ್ನೊಬ್ಬರು ವೃಂದಾವನಜೀ ಬುಂದೇಲ, ಖಂಡೀಯದ ಬ್ರಹ್ಮಚಾರಿಯು ಇದ್ದರು. ಬ್ರ. ಭಂವರೀ ಬಾಯಿ, ಬ್ರ. ಕು. ಮನೋವತಿ, ಹೀಗೆ ಸಂಘದಲ್ಲಿ ಒಂದಿಬ್ಬರು ಮಹಿಳೆಯರು ಇದ್ದರು.

ಸುರೇಶಚಂದ ಜೈನ

ಸುರೇಶಚಂದ ಜೈನನನ್ನು ಕೂರಿಸಿಕೊಂಡು ಅವನ ಕಥೆಯನ್ನೆಲ್ಲಾ ಕೇಳಿದ ಮೇಲೆ ನನಗೆ ದುಃಖವಾಯಿತು. ಅವರು ಉದಯಪುರದ ಒಬ್ಬ ಸೇಠನ ಏಕಮಾತ್ರ ಮಗ. ವೈರಾಗ್ಯದಿಂದ ಮನೆ ಬಿಟ್ಟು ಹೊರ ಬಂದವನು. ಅನ್ಯಮತದ ಸಾಧುಗಳ ಹತ್ತಿರ ಕೆಲವು ದಿನ ಇದ್ದ. ನಂತರ ಶ್ವೇತಾಂಬರ ಸಾಧುಗಳ ಹತ್ತಿರ ಬಂದ ಹೀಗೆ ಯೋಗ್ಯ ಗುರುಗಳು ಸಿಗದೆ ಸುತ್ತಾಡುತ್ತಿದ್ದ ನಾನು ವಾತ್ಸಲ್ಯದಿಂದ ಸಂಘದಲ್ಲಿ ಇಟ್ಟುಕೊಂಡೆ. ಸಂಘದಲ್ಲಿ ದೈನಿಕ ಚರ್ಯೆಮಾಡುತ್ತಾ ಛಹಡಾಲ ಮುಂತಾದ ಗ್ರಂಥಗಳ ಪಾಠ ಪ್ರಾರಂಭಿಸಿದ ಮುಂದಿನ ಚಾತುರ್ಮಾಸದಲ್ಲಿ ಅವರನ್ನು ಆಚಾರ್ಯರ ಸಂಘಕ್ಕೆ ಕಳುಹಿಸಿದೆ. ಅಲ್ಲಿ ಕ್ಷುಲ್ಲಕರಾಗಿ ನಂತರ ಮುನಿಗಳೆಂದರು ಮುನಿ ಅವಸ್ಥೆಯಲ್ಲೇ ನನ್ನ ಹತ್ತಿರ ಬಹಳ ದಿನಗಳವರೆಗೆ ಇದ್ದು ಅಧ್ಯಯನ ಮಾಡಿದರು ಈಗ ಒಂದೆರಡು ಸಾಧುಗಳ ಜೊತೆ ವಿಹಾರವೂ ಮಾಡುತ್ತಿದ್ದರು ಅವರ ಈಗಿನ ಹೆಸರು ಸಂಭವ ಸಾಗರರು.

ವಂಶದ ಶುದ್ಧಿ ಊಟ ತಿಂಡಿಯ ಶುದ್ಧಿ

ಒಂದು ದಿನ ಶಿಖರ್ಜಿಯಲ್ಲಿ ಬಾಹುಬಲಿ ಸ್ವಾಮಿಗೆ 108 ಕಳಶಗಳಿಂದ ಮಹಾಭಿಷೇಕವನ್ನು ಮಾಡಿಸಲಾಯಿತು. ಅಲ್ಲಿ ವಿಶಾಲ ಸಭೆಯಲ್ಲಿ ನಾನು ಉಪದೇಶ ಮಾಡುತ್ತಾ ಹೇಳಿದೆ ಪಿಂಡ ಶುದ್ಧಿಗೆ ಎರಡು ಅರ್ಥವಿದೆ ವಂಶದ ಶುದ್ಧಿ ಇನ್ನೊಂದು ಊಟ ತಿಂಡಿಯ ಶುದ್ಧಿ. ಯಾರಿಗೆ ವಂಶ ಶುದ್ಧಿಯಿಲ್ಲವೋ ಅವರು ಮೋಕ್ಷದಲ್ಲಿ ನಡೆಯಲಾರರು ಭಗವಂತನ ಪೂಜೆ ಆಹಾರ ದಾನ ಮತ್ತು ದಿಗಂಬರ ದೀಕ್ಷೆ ಹಾಗೂ ರಾಜನಾಗುವ ಅಧಿಕಾರ ವಂಶ ಶುದ್ಧಿಯಿದ್ದವರಿಗೆ ಮಾತ್ರ ಇರುತ್ತದೆ. ಆಹಾರ ಶುದ್ಧಿಯಿಲ್ಲದಿದ್ದರೆ ಸುಧಾರಿಸಿಕೊಂಡು ಹೋಗಬಹುದು ಆದರೆ ವಂಶ ಶುದ್ಧಿಯಿಲ್ಲದೆ ಇದ್ದರೆ ಸುಧಾರಿಸಲು ಸಾಧ್ಯವಿಲ್ಲ. ಈ ಉಪದೇಶ ಕೇಳುತ್ತಲೇ ಪ. ಸುಮೇರ ಚಂದ ದಿವಾಕರ ಮತ್ತು ತೀರ್ಥಕ್ಷೇತ್ರ ಕಮಿಟಿಯ ತತ್ಕಾಲದ ಮಹಾಮಂತ್ರಿ ಚಂದೂಲಾಲಜೀ ಸರಾಫ ಕುಣೆದಾಡತೊಡಗಿ ಗದ್ಗದಿತರಾಗಿ ಹೇಳತೊಡಗಿದರು. ಈಗ ನಮಗೆ ಅನ್ನಿಸುತ್ತಿದೆ ಆಚಾರ್ಯ ಶಾಂತಿಸಾಗರರ ಪರಂಪರೆಯನ್ನು ಲಕ್ಷಣ್ಣವಾಗಿ ಇಡುವಂತಹ ಸಾಧುಗಳು ಇದ್ದಾರೆ. ಆಚಾರ್ಯಕಲ್ಪ ಚಂದ್ರಸಾಗರರಂತೆ ನಿರ್ಭೀಕರಾಗಿ ಮಾತನಾಡುವವರು ಇದ್ದಾರೆ. ಹೀಗೆ ಹೇಳಿ ನನ್ನನ್ನು ಚೆನ್ನಾಗಿ ಹೊಗಳಿದರು ಹಾಗೆಯೇ ಅನೇಕ ಮುನಿ ಭಕ್ತರು ಹೊಗಳತೊಡಗಿದರು. ಆಗ ನನಗೇನು ಇದು ವಿಶೇಷ ಎನಿಸಲಿಲ್ಲ ಆದರೆ ಇಂದು ಅನ್ನಿಸುತ್ತಿದೆ ವಂಶ ಶುದ್ಧಿ ಎಂದರೆ ಸಜಾತಿಯಷ್ಟೆ ಸಮರ್ಥನೆಯನ್ನು ಮಾಡುವಂತಹ ಸಮರ್ಥರು ದಿಗಂಬರ ಸಮಾಜದಲ್ಲಿ ಕಡಿಮೆಯಾಗುತ್ತಿದ್ದಾರೆ. ಅಲ್ಲದೆ ದಿಗಂಬರ ಸಮಾಜದಲ್ಲಿ ವಿಧವಾ ವಿವಾಹ ಮತ್ತು ಅಂತರ್‌ಜಾತಿಯ ವಿವಾಹದ ಸಮರ್ಥಕರೇ ಜಾಸ್ತಿಯಾಗುತ್ತಿದ್ದಾರೆ.

ಸಮ್ಮೇದ ಶಿಖರದಿಂದ ವಿಹಾರ

ನಾನು ಶ್ರವಣ ಬೆಳಗೊಳಕ್ಕೆ ಹೋಗುವ ಇಚ್ಛೆಯನ್ನು ವ್ಯಕ್ತ ಪಡಿಸಿದ್ದರಿಂದ ಬ್ರ. ಚಾಂದಮಲ್ಲಜೀಯವರು ಹೈದಾರಬಾದಿನಿಂದ ಬೇಗ ತಲುಪುವ ಮಾರ್ಗವನ್ನು ಹೇಳಿದರು. ಇವುಗಳ ಅನುಸಾರ ನಾನು ಚೈತ್ರಮಾಸದಲ್ಲಿ ಸಮ್ಮೇದ ಶಿಖರದಿಂದ ಪುರುಲಿಯಾ ಕಡೆ ವಿಹಾರ ಹೊರಟೆ ಆ ಸಮಯದಲ್ಲಿಯೂ ಈ ನಾಲ್ಕು ಜನ ಸಾಧ್ವಿಯರು ಇಬ್ಬರು ಬ್ರಹ್ಮಚಾರಿಣಿಗಳು ಇದ್ದರು. ಬ್ರಹ್ಮಚಾರಿಗಳಾದ ಸುರೇಶಚಂದ ಮತ್ತು ಇನ್ನೊಂದಿಬ್ಬರು ಹುಡುಗರು ಇದ್ದರು.

೪೬

ಪುರಲಿಯಾದ ಅನುಭವ

ಸಮ್ಮೇದ ಶಿಖರದಿಂದ ಗುರುವಾರ ಪುಷ್ಯ ನಕ್ಷತ್ರದಲ್ಲಿ ಅಭಿಜ್ಞ ಯೋಗದ ಸಮಯ ಆಹಾರವಾಗುತ್ತಿದ್ದಂತೆ ಹನ್ನೆರಡು ಗಂಟೆಗೆ ವಿಹಾರ ಹೊರೆಟೆವು. ಗುರೂಜೀ ಚಾಂದಮಲ್ಲಜೀಯವರೇ ಮೂಹೂರ್ತ ಇಟ್ಟಿದ್ದರು. ನನಗೆ ಈ ಮೂಹೂರ್ತದ ಬಗ್ಗೆ ಅಷ್ಟಾಗಿ ಗೊತ್ತಿಲ್ಲ ಅಲ್ಲಿಂದ ಹೊರಟು ಪುರುಲಿಯಾಗೆ ಬಂದೆವು. ಇಲ್ಲಿ ಹಿಂದೂ ಮುಸ್ಲಿಂ ದಂಗೆಯಿಂದಾಗಿ ನಾನು ಅಲ್ಲಿ ಇಪ್ಪತ್ತೈದು ದಿನಗಳು ಇರಬೇಕಾಯಿತು. ಆದರೂ ಸಾಹಸ ಮಾಡಿ ಶ್ರಾವಕರು ಹೇಳಿದ್ದು ಕೇಳದೆ ನಾನು ಚೈತ್ರ ಶುದ್ಧಿ ಏಕಾದಶಿಯಂದು ಇಲ್ಲಿಂದ ವಿಹಾರ ಮಾಡಿ ದಾರಿಯಲ್ಲಿ ಬಲರಾಮಪುರಕ್ಕೆ ಬಂದೆವು. ಅಲ್ಲಿಗೆ ಪುರಲಿಯಾ ಜನರೇ ಬಂದು ಸಂಘದಲ್ಲಿದ್ದ ಜಿನಪ್ರತಿಮೆಯನ್ನು ಚಿಕ್ಕ

ಪಾಲಿಕೆಯಲ್ಲಿಟ್ಟು ಮೆರವಣಿಗೆ ಮಾಡಿ ಮಹಾವೀರ ಜಯಂತಿಯನ್ನು ಚೆನ್ನಾಗಿಯೇ ಮಾಡಿದರು. ಇದರಿಂದಾಗಿ ಜೈನೇತರರಲ್ಲಿ ಒಳ್ಳೆಯ ಭಾವನೆ ಉಂಟಾಯಿತು ಅವರಿಗೆ ನನ್ನ ಉಪದೇಶದ ಅವಕಾಶ ಸಿಕ್ಕಿತು. ಪುರಲಿಯಾಕ್ಕೆ ಬಂದ ಮೇಲೆ ಬ್ರ. ಮಹಾವೀರ ಪ್ರಸಾದರು ಸಂಜೆ 4 ಗಂಟೆಗೆ ಹಾಲು ತರಲು ಒಬ್ಬ ಶ್ರಾವಕನಿಗೆ ಹೇಳಿದರು ಅವನು ನನ್ನ ಹಸು ಬೆಳಗ್ಗೆಯ ಹೊತ್ತು ಮಾತ್ರ ಹಾಲು ಕೊಡುತ್ತದೆ ಎಂದ. ಬ್ರಹ್ಮಚಾರಿ ಹೇಳಿದರು ನಡಿ ಇಂದು ನೋಡೋಣ ಅಲ್ಲಿ ಹೋಗಿ ಹಸುವಿನ ಹತ್ತಿರ ಕರೆಯಲು ಕುಳಿತುಕೊಳ್ಳುತ್ತಲೇ ಹಸು ಹಾಲು ಕೊಟ್ಟಿತು. ಶ್ರಾವಕರಿಗಂತೂ ಬಹಳ ಖುಷಿಯಾಯಿತು. ಹೀಗೆ ಆ ಶ್ರಾವಕ ಅವನ ಹೆಸರು ಉಮ್ಮೇದಮಲ್ ಪ್ರತಿದಿನ ಸಂಜೆ 4 ಗಂಟೆಗೆ ಹಾಲು ಕರೆದು ತಂದು ಸಂಘಕ್ಕೆ ಕೊಡುತ್ತಿದ್ದ. ಅವಳು ಮೊಸರು ಮಾಡಿ, ಆಹಾರದಲ್ಲಿ ಮಜ್ಜಿಗೆ ಮಾಡಿ ಕೊಡುತ್ತಿದ್ದರು. ನಾವು ಅಲ್ಲಿಂದ ಪ್ರಯಾಣ ಮಾಡಿದ ಸಂಜೆ ಅವನು ಹಾಲು ಕರೆಯಲು ಹೋದರೆ ಮೊದಲಿನಂತೆ ಹಾಲು ಕೊಡಲೇ ಇಲ್ಲ. ಶ್ರಾವಕನಿಗೆ ಬಹಳ ಆಶ್ಚರ್ಯವಾಗಿ ಮತ್ತೆ ಮತ್ತೆ ಅದನ್ನೇ ಹೇಳುತ್ತಿದ್ದ ಈ ಹಸು ಕೇವಲ ಮಾತಾಜೀಯ ಆರೋಗ್ಯಕ್ಕಾಗಿ ಮಜ್ಜಿಗೆ ಗೋಸ್ಕರ ಹಾಲು ಕೊಡುತ್ತಿತ್ತು. ಈಗ ಕೊಡುತ್ತಲೇ ಇಲ್ಲ ನೋಡಿ ಈ ಶ್ರಾವಕನಂತೂ ಬಲರಾಮ ಪುರಕ್ಕೆ ಬಂದು ಸುಮಾರು ಜನರ ಮುಂದೆ ಈ ಘಟನೆಯನ್ನು ಹೇಳುತ್ತಿದ್ದನು ಜನರಂತೂ ಮಾತಾಜೀಯಲ್ಲಿ ದೊಡ್ಡ ಚಮತ್ಕಾರವಿದೆ ಎನ್ನುತ್ತಿದ್ದರು. ನಾನು ಯೋಚಿಸ ತೊಡಗಿದೆ ಭಲಾ ನನ್ನಂತಹ ಸಾಮಾನ್ಯ ಆರ್ಯಿಕೆಯರಲ್ಲಿ ಎಂತಹ ಚಮತ್ಕಾರ ಇರುತ್ತದೆ. ಒಂದು ವೇಳೆ ಏನಾದರೂ ಇದ್ದರೆ ಅದು ನನ್ನ ತ್ಯಾಗ ಮತ್ತು ಸಂಯಮದ ಚಮತ್ಕಾರವೇ ಹೊರತು ನನ್ನದಲ್ಲ.

ಸರಾಕ ಬಸ್ತಿಯಲ್ಲಿ ವಿಹಾರ

ಸಮ್ಮೇದ ಶಿಖರದಲ್ಲಿ ಸಾಹೂ ಶಾಂತಿ ಪ್ರಸಾದಜೀಯವರು ಅನೇಕ ಸಲ ಹೇಳಿದ್ದರು. ಸರಾಕಜಾತಿಯವರ ಸ್ಥಾನಗಳಲ್ಲಿ ಸಾಧುಗಳು ವಿಹಾರ ಮಾಡಿ ಅವರ ಉದ್ಧಾರ ಮಾಡಬೇಕೆಂದು. ಹೀಗೆ ಯೋಚನೆ ಬಂದಿದ್ದೆ, ನಾನು ಸಂಘದ ಆರ್ಯಿಕೆಯರನ್ನು ಅಲ್ಲೇ ಬಿಟ್ಟು ಕು. ಮನೋವತಿ ಬ್ರ. ಮಹಾವೀರ ಪ್ರಸಾದರನ್ನು ಜೊತೆಗೆ ಕರೆದುಕೊಂಡು ಜೊತೆಗೆ ಪದ್ಮಾವತಿ ಆರ್ಯಿಕೆಯನ್ನು ಮಾತ್ರ ಕರೆದುಕೊಂಡು ಇಲ್ಲಿಂದ ಸರಾಕ ಬಸ್ತಿಗೆ ಹೊರಟೆ. ಅಲ್ಲಿ ಚಿಕ್ಕ - ಚಿಕ್ಕ ಹಳ್ಳಿಗಳಲ್ಲಿ ಗದ್ದೆ ಮತ್ತು ಕಾಡುಗಳೇ ಇದ್ದವು. ರಸ್ತೆ ತಿಳಿದಿದ್ದ ಒಬ್ಬ ಮನುಷ್ಯನು ನಮ್ಮ ಜೊತೆ ಇದ್ದ. 5-6 ದಿನಗಳಲ್ಲಿ 10-12 ಹಳ್ಳಿಗಳನ್ನು ಸುತ್ತಿದೆವು. ಉಪದೇಶ ಕೊಟ್ಟೆವು ಆ ಜನರ ಮಾತುಗಳನ್ನು ಕೇಳಿದೆವು ಚರ್ಚಿಸಿದೆವು. ಅವರ ಜೀವನ ಚರ್ಯೆಗಳನ್ನು ನೋಡಿದೆವು. ಅಲ್ಲಿ ಅನಕ್ಷರಸ್ಥರೇ ಜಾಸ್ತಿ ಇದ್ದಾರೆ. ಮಹಿಳೆಯರು ಪಾಪದವರು ಮುಸುಕಿನ ಒಳಗೆ ಇರುತ್ತಾರೆ. ಹೊರಗೆ ಬರುವುದಕ್ಕೆ ಅವರಿಗೆ ಸಂಕೋಚ ಈಗ ಅಲ್ಲಿ ಪಾಠಶಾಲೆಗಳು ಪ್ರಾರಂಭವಾಗಿವೆ. ಜೈನ ಮಂದಿರಗಳು ಆಗಿರುವುದರಿಂದ ಜನರು ಪ್ರಬುದ್ಧರಾಗುತ್ತಿದ್ದಾರೆ. ಅಲ್ಲಿಯ ಒಬ್ಬ ವಯಸ್ಸಾದವರು ಹೇಳಿದರು ನಾವು ಈ ಸುಧಾರವಾದಿಗಳಿಗೆ ಬಹಳ ಹೆದರುತ್ತೇವೆ. ನಾನು ಕೇಳಿದೆ ಏತಕ್ಕಾಗಿ ಅದಕ್ಕೆ ಅವರು 50 ವರ್ಷಗಳ ಹಿಂದೆ ಇಲ್ಲಿಗೆ ಶೀತಲಪ್ರಸಾದ ಎಂಬ ಬ್ರಹ್ಮಚಾರಿ ಬಂದಿದ್ದರು ಅವರು ಬಾಲವಿಧವೆಯನ್ನು ಕಂಡು ಮತ್ತೆ ವಿವಾಹ ಮಾಡಿಸುವ ಪದ್ಧತಿಯನ್ನು ತಂದರು. ಇದರಿಂದ ನಮ್ಮಲ್ಲಿ ಎರಡು ಪಾರ್ಟಿಗಳಾಗಿವೆ ಒಂದು ಸಾದಾ ಪಾರ್ಟಿ ಇನ್ನೊಂದು ಕಾಲಾ ಪಾರ್ಟಿ. ಈ ಎರಡು ಪಾರ್ಟಿಗಳೂ ಒಟ್ಟಾಗಿ ಊಟ ತಿಂಡಿಯನ್ನು ಮಾಡುವುದಿಲ್ಲ ಈಗ ಕತ್ರಾಸ್‌ನಲ್ಲಿ ನಮ್ಮೆಲ್ಲರನ್ನೂ ಕರೆಸಿ ಅಲ್ಲಿನ ಶ್ರೀಮಂತ ಜನರ ಒತ್ತಾಯದಿಂದ ಎರಡೂ ಪಾರ್ಟಿಗಳನ್ನು ಒಟ್ಟಾಗಿ ಕೂರಿಸಿ ಊಟ ಮಾಡಿಸಿದರು. ಒಂದು ಪಾರ್ಟಿಯವರ ಜೊತೆ ಇನ್ನೊಂದು ಪಾರ್ಟಿಯವರು ಮದುವೆ ಮುಂತಾದ ಶುಭ ಸಮಾರಂಭಗಳನ್ನು ಮಾಡಲು

ಪ್ರೋತ್ಸಾಹಿತಗೊಳಿಸುತ್ತಿದ್ದಾರೆ. ಕೆಲವು ಯುವಕರು ಈ ನೀತಿಯಿಂದ ಪ್ರಭಾವಿತರಾಗಿದ್ದಾರೆ ಆದರೆ ನಾವು ಶುದ್ಧಧಾರೆಯುಳ್ಳವರಲ್ಲಿ ಜಾತಿಯಿಂದ ಚ್ಯುತರಾದ ಅಶುದ್ಧಧಾರೆಯುಳ್ಳ ಹೆಣ್ಣುಗಳನ್ನು ಮಾಡಿಕೊಳ್ಳಲು ಇಷ್ಟ ಪಡುವುದಿಲ್ಲ ಅವರ ಭೋಜನಕ್ಕೂ ಕುಳಿತುಕೊಳ್ಳಲು ಬಯಸುವುದಿಲ್ಲ. ನಾವು ಬರುತ್ತಿರುವ ಸುದ್ದಿ ತಿಳಿಯುತ್ತಲೇ ಕೆಲವರು ಶಹನಾಯಿ ಮುಂತಾದ ವಾದ್ಯಗಳನ್ನು ನುಡಿಸುತ್ತಾ ಸ್ವಾಗತಿಸಲು ಮೈಲಿ ದೂರದಿಂದ ಬಂದಿದ್ದರು. ಆ ಗದ್ದೆಯ ಮಾರ್ಗದಲ್ಲಿ ಆ ಜನಗಳ ಮಧ್ಯೆ ನಾವಿಬ್ಬರೇ ಸಾಧ್ವಿಗಳು ವಾದ್ಯಗಳ ಶಬ್ದದ ಜೊತೆ ನೋಡಲು ಮನೋಹರವಾಗಿ ಕಾಣುತ್ತಿತ್ತು. ಇಂದು ಅದು ನೆನಪಿಗೆ ಬರುತ್ತದೆ.

ಆ ಗದ್ದೆಗಳಲ್ಲಿ ಇದ್ದ ಫಸಲುಗಳು ಆ ಹಳೆಯ ಮರಗಳನ್ನು ಕಂಡು ಮನೋವತಿ ಚೆನ್ನಾಗಿ ನಗುತ್ತಾ ಹೇಳುತ್ತಿದ್ದಳು ಮಾತಾಜೀ ಈ ಕಾಡಿನ ಮಾರ್ಗದಲ್ಲಿ ವಾದ್ಯಗಳನ್ನು ನುಡಿಸುತ್ತಿದ್ದಾರಲ್ಲ ಇಲ್ಲಿ ಯಾರು ನೋಡುತ್ತಾರೆ ಅದಕ್ಕೆ ಜನಗಳು ಬಹೆನ್‌ಜೀ ಇದು ನಮ್ಮ ಭಕ್ತಿ ಈ ಕಾಡಿನಲ್ಲಿ ಇಂತಹ ಮಹಾನ್ ಸಾಧ್ವಿಯನ್ನು ಮೊದಲ ಬಾರಿ ಸ್ವಾಗತಿಸುತ್ತಿದ್ದೇವೆ ನಮಗಾಗುತ್ತಿರುವ ಹರ್ಷದ ಅನುಭವವನ್ನು ನಾವು ಹೇಳಿಕೊಳ್ಳಲು ಆಗುತ್ತಿಲ್ಲ ಎಂದು. ಹೀಗೆ ಸರಾಕ ಬಸ್ತಿಗಳಲ್ಲಿ ಒಂದು ವಾರ ಪ್ರಯಾಣ ಮಾಡಿ ಅನುಭವ ಪಡೆದ ನಂತರ ಕಟಕ್ ಕಡೆ ವಿಹಾರ ಹೊರಟೆವು.

ಉಡಿಸಾದ ಕಡೇ ವಿಹಾರ

ಸುಮಾರು ಮೂನ್ನೂರು ಮೈಲಿಗಳವರೆಗೆ ಯಾವುದೇ ಜೈನರ ಮನೆಗಳೇ ಇಲ್ಲ. ಒಂದು ದಿನ ಮಾರ್ಗದಲ್ಲಿ ಒಬ್ಬ ಮಹಾತ್ಮರ ಮಠದಲ್ಲಿ ತಂಗಿದ್ದೆವು. ಆ ಮಠ ಬಹಳ ದೊಡ್ಡದಾಗಿಯೇ ಇತ್ತು. ವರಾಂಡದಲ್ಲಿ ಆಹಾರವಾಯಿತು ಮಹಾತ್ಮ ಬಾಬಾಜೀ ಬಹಳ ಭಕ್ತಿವಂತರೇ ಅವರು ಎರಡು ಮೂರು ದಿನ ಅಲ್ಲೇ ತಂಗಲು ನಿವೇದನೆ ಮಾಡಿದರು. ಆದರೆ ನಾವು ಹೇಗೆ ಅಲ್ಲಿ ನಿಲ್ಲುವುದು ಪ್ರತಿದಿನ ಆಹಾರವಾಗುತ್ತಿದ್ದಂತೆಯೇ ಹೊರಡುತ್ತಿದ್ದೆವು ಎರಡು-ಎರಡೂವರೆ ಮೈಲಿ ಹೋದ ಮೇಲೆ ಸಾಮಾಯಿಕ ಮಾಡುತ್ತಿದ್ದೆವು ಆದರೆ ಆ ದಿನ ಇದ್ದಕ್ಕಿದ್ದಂತೆ ನನ್ನ ಬಾಯಿಂದ ಇವತ್ತು ಸಾಮಾಯಿಕವಾದ ಮೇಲೆ ಹೋರಡೋಣ ಎಂದೆ ಸಾಮಾಯಿಕ ಆಯಿತು ಆದರೆ ಆ ದಿನ ಚತುರ್ದಶಿಯಾದ್ದರಿಂದ ಪುಸ್ತಕ ತೆಗೆದುಕೊಂಡು ಬಾ ಪಾಕ್ಷಿಕ ಪ್ರತಿಕ್ರಮಣ ಮಾಡಿಯೇ ವಿಹಾರ ಮಾಡೋಣ ಎಂದೆ ಪ್ರತಿಕ್ರಮಣ ಪ್ರಾರಂಭವಾಯಿತು ಅರ್ಧ ಆಗಿತ್ತು ಜೋರಾಗಿ ಬಿರುಗಾಳಿ ಎದ್ದಿತ್ತು ಎಲ್ಲೋ ಪ್ರಳಯವಾಗುತ್ತದೆಯೋ ಎನಿಸಿತು ಬಹಳ ಹೊತ್ತಿನವರೆಗೂ ಹಾಗೇ ಇತ್ತು ಅದು ನಿಂತ ಮೇಲೆ ಬ್ರ. ಮಹಾವೀರ ಪ್ರಸಾದರು ಬಂದು ಹೇಳಿದರು ಮಾತಾಜೀ ಇವತ್ತು ವಿಹಾರ ಮಾಡಿದರೆ ಏನಾಗಿಬಿಡುತ್ತಿತ್ತೋ ಎಂದು. ಇಡೀ ರಸ್ತೆಯಲ್ಲೆಲ್ಲಾ ದೊಡ್ಡ ದೊಡ್ಡ ಮರಗಳೆಲ್ಲಾ ಧರೆಗೆ ಉರುಳಿದ್ದವು ವಾಹನಗಳು ಓಡಾಡಲು ಸಾಧ್ಯವಿಲ್ಲದಂತೆ ಸಂಜೆ ದೀರ್ಘಶಂಕೆಗೋಸ್ಕರ ಹೊರಗಡೆ ಹೋದವಳು ರಸ್ತೆಯಲ್ಲಿ ನೋಡುತ್ತೇನೆ ಇಡೀ ರಸ್ತೆಯೆಲ್ಲಾ ಮರಗಳು ಮುರಿದು ಬಿದ್ದಿವೆ ಈ ದೃಶ್ಯ ನೋಡಿದ ಮಾತಾಜೀಗಳು ಉದ್ಗಾರ ತೆಗೆದರು ಈ ದಿನ ವಿಹಾರ ಹೊರಟ್ಟಿದ್ದರೆ ನಮ್ಮ ಗತಿ ಏನಾಗುತ್ತಿತ್ತೋ. ಹಾಗೆಯೇ ಮುಂದುವರಿಸಿದರು ಮಾತಾಜೀಯವರ ಮಾತುಗಳಲ್ಲಿ ಎಂತಹ ಮಹಾನ್ ಶಕ್ತಿ ಇದೆ ಅವರ ಬಾಯಿಯಲ್ಲಿ ಹೇಗೆ ಇದ್ದಕ್ಕಿದ್ದಂತೆ ವಿಹಾರ ಈಗ ಬೇಡ ಸಾಮಾಯಿಕ ಆದ ಮೇಲೆ ಎಂದು ಹೇಳಿದರು ಪುನಃ ಪ್ರತಿಕ್ರಮಣ ಆಗಲಿ ಎಂದರು ಆಗ ನಾನೆಂದೆ ದುರ್ಘಟನೆ ಮುಂದಕ್ಕೆ ಹೋಗುತ್ತಿತ್ತೋ ಅಥವಾ ಆಗದೆಯು ಇರುತ್ತಿತ್ತು. ಆದ್ದರಿಂದಲೇ ನನ್ನ ಮನಸ್ಸಿಗೆ ಈಗ ಹೋಗುವುದ ಬೇಡ ಎಂದು ನಿಂತೆ ವಿಷಯ ಏನೆಂದರೆ ಪುಣ್ಯದ ಉದಯವಿರುವವರೆಗೆ ಎಲ್ಲರು ಚೆನ್ನಾಗಿಯೇ ಇರುತ್ತಾರೆ. ಆದ್ದರಿಂದ ನಾವು

ಯಾವಾಗಲೂ ಪುಣ್ಯದ ಸಂಚಯ ಮಾಡಿಕೊಳ್ಳುತ್ತಲೇ ಇರಬೇಕು. ಸಾಯಂಕಾಲದಿಂದಲೇ ಜನರು ರಸ್ತೆಯ ಮರಗಳನ್ನು ತೆಗೆಯುವ ಕಾರ್ಯ ಶುರುಮಾಡಿದರು. ನಾವೆಲ್ಲ ರಾತ್ರಿ ಅಲ್ಲೇ ವಿಶ್ರಾಂತಿ ಪಡೆದು ಪುನಃ ಬೆಳಗ್ಗೆ ಅಲ್ಲಿಂದ ಹೊರಟೆವು ದಾರಿಯಲ್ಲಿ ಮರ ತೆಗೆಯುವ ಕೆಲಸ ನೋಡಿಕೊಂಡೇ ಸೇರ ಬೇಕಾದ ಜಾಗವನ್ನು ತಲುಪಿದೆವು.

ನಮಗೆ ಹತ್ತಿರದಲ್ಲೇ ಒಂದು ನದಿ ಸಿಕ್ಕಿತು. ಅದರ ಹೆಸರು ವೈತರಣಿ ಮಹಾಭಾರತದಲ್ಲಿ ವೈತರಣಿ ನದಿಯನ್ನು ಕಳಿಂಗ ದೇಶದ ಉತ್ತರ ಪೂರ್ವದ ಸೀಮೆಯೆಂದು ಹೇಳಿದೆ. ಇಲ್ಲಿಂದ ಮುಂದೆ ಹೋಗುತ್ತಾ ಇರುವಾಗ ಜನಗಳು ತಮ್ಮೊಳಗೆ ಮಾತನಾಡುತ್ತಾ ಇದ್ದರು. ನೋಡು ಈ ಮಹಾತ್ಮ ಎಷ್ಟು ಸರಳ ಸ್ವಾನುಭವಿ ಇವರಿಗೆ ಹೆಂಡತಿ ಮಕ್ಕಳು ಇದ್ದಾರೆ. ದೊಡ್ಡ ದೊಡ್ಡ ವಿಶಾಲವಾದ ಜಮೀನಿದೆ ಇಟ್ಟಿಗೆಗಳ ಭಟ್ಟಿ ಇದೆ ಆದರೂ ಕಾವಿಬಟ್ಟೆ ಉಟ್ಟು ಮಹಂತ ಎಂದು ಕರೆಸಿಕೊಳ್ಳುತ್ತಿದ್ದಾರಲ್ಲ. ಇದು ಪಂಚಮ ಕಾಲದ್ದೇ ವಿಡಂಬನೆ ಮೋಕ್ಷ ಇದರಿಂದ ದೂರವೇ ಸರಿ. ನಾನು ಯೋಚಿಸತೊಡಗಿದೆ ಭಗವಂತ ನನ್ನ ಎಷ್ಟು ಜನ್ಮದ ಪುಣ್ಯದ ಫಲವಾಗಿ ನಾನು ಜೈನ ಧರ್ಮದಲ್ಲಿ ಹುಟ್ಟಿದ್ದೇನೆ ಮತ್ತು ಚಿಕ್ಕಂದಿನಿಂದಲೇ ನನಗೆ ಸಮೀಚೀನ ಶಾಸ್ತ್ರಗಳ ಸ್ವಾಧ್ಯಾಯದ ಲಾಭದ ಹಾಗೆ ದಿಗಂಬರ ಗುರುಗಳು ಸಿಕ್ಕಿದ್ದರಿಂದ ನಾನು ರತ್ನತ್ರಯ ಸ್ವರೂಪೀ ಮಾರ್ಗದಲ್ಲೇ ನಡೆಯುತ್ತಿದ್ದೇನೆ ಹೀಗೆ ಯೋಚಿಸುತ್ತಾ ಯೋಚಿಸುತ್ತಾ ನಾವು ಕಟಕಕ್ಕೆ ಹತ್ತಿರ ಬಂದು ಬಿಟ್ಟೆವು. ಅಲ್ಲಿಗೆ ಪುಷ್ಪರಾಜ ಜೈನ ತಮ್ಮ ಪರಿವಾರದೊಂದಿಗೆ ಬಂದು ಬಹಳ ಭಕ್ತಿಯಿಂದ ಬಂದು ಕರೆದೊಯ್ದರು. ಅಲ್ಲಿ ಧರ್ಮಶಾಲೆಯಲ್ಲಿ ಇಳಿದುಕೊಂಡಿದ್ದೆವು ಮಂದಿರಗಳ ದರ್ಶನವು ಆಯಿತು ಕಟಕ ಅಥವಾ ಖಂಡಗಿರಿ - ಉದಯಗಿರಿಯಲ್ಲಿ ಚಾತುರ್ಮಾಸ ಮಾಡುವ ಮನಸ್ಸಾಗಿತ್ತು. ಬೇಸಿಗೆ ಪ್ರಾರಂಭವಾಗುತ್ತಿತ್ತು ಬಿಸಿಲು ತಗಲುತ್ತಿದ್ದರೂ ನಾನು ಏನೂ ಹೇಳದೆ ತೀರ್ಥವಂದನೆ ಮಾಡಲು ಹೊರಟೆ.

ಖಂಡಗಿರಿ ಮತ್ತು ಉದಯಗಿರಿ ವಂದನೆ

ಖಂಡಗಿರಿ, ಉದಯಗಿರಿ ತಲುಪಿ ತೀರ್ಥರಾಜರ ವಂದನೆ ಆಯಿತು ಕಲಕತ್ತಾದ ಶ್ರೇಷ್ಠಿ ಛೋಟೇಲಾಲರು ಈ ಗುಹೆಗಳ ಯಕ್ಷ ಯಕ್ಷಿಯರ ಫೋಟೋ ತೋರಿಸಿದ್ದರು ಈಗ ನೆನಪಿಗೆ ಬಂದಿತು ಅನೇಕ ಗುಹೆಗಳನ್ನು ನೋಡಿದೆವು ಗುಹೆಗಳ ಗೋಡೆಗಳ ಮೇಲೆ ಕೆತ್ತಿರುವ ಸುಮಾರು 2 ಸಾವಿರದ ನಾನೂರು ವರ್ಷಗಳ ಹಿಂದಿನ ಜಿನಪ್ರತಿಮೆಗಳು ಮತ್ತು ಶಾಸನದ ದೇವ - ದೇವತೆಗಳನ್ನು ನೋಡಿದೆವು ಅನೇಕ ಶಾಸನಗಳನ್ನು ನೋಡಿದೆವು ಆದರೆ ನನಗೆ ಶಾಸನ ಓದಲು ಸಾಧ್ಯವಿರಲಿಲ್ಲ.

ಇತಿಹಾಸದಲ್ಲಿ ರಾಜ ಖಾರವೇಲನ ಸುಂದರವಾದ ವರ್ಣನೆ ಇದೆ ಹಾಥೀ ಗುಹೆಯಲ್ಲಿ ರಾಜನ ರಾಜ್ಯಾಭಿಷೇಕದ ವರ್ಣನೆ ಇದೆ ಶಾಸನವು ನಮೋಕಾರ ಮಂತ್ರದಿಂದ ಪ್ರಾರಂಭವಾಗಿದೆ. ಖಾರವೇಲನ ಪಟ್ಟದ ರಾಣಿಯಿಂದ ನಿರ್ಮಿತವಾದ ಮಂಚ್‌ಪುರಿ ಗುಹೆಯ ಲೇಖನದಲ್ಲಿ ಖಾರವೇಲನ ವಿವರವು ಸಿಗುತ್ತದೆ. ಅರ್ಹಂತರನ್ನು ಪ್ರಸನ್ನಗೊಳಿಸುವುದಕ್ಕಾಗಿ ಈ ಗುಹೆಗಳನ್ನು ಶ್ರಮಣರಿಗೆ ಸಮರ್ಪಿತಗೊಳಿಸಲಾಗಿದೆ ಕುಮಾರಿ ಪರ್ವತದಲ್ಲಿ ಅರ್ಹಂತ ಅಥವಾ ಜೈನ ಸಾಧುಗಳ ವಿಶ್ರಾಂತಿಗಾಗಿಯೇ ಗುಹೆಗಳ ನಿರ್ಮಾಣವನ್ನು ಮಾಡಲಾಗಿದೆ.[೧] ಶಾಸನಗಳಲ್ಲಿ ಖಾರವೇಲನ ಹದಿಮೂರು ವರ್ಷಗಳ ಆಡಳಿತವನ್ನು ಹದಿನಾಲ್ಕು ಸಾಲುಗಳಲ್ಲಿ ಹೇಳಲಾಗಿದೆ. ಆಗ ನನಗೆ ಜೀವನದಲ್ಲಿ ಬಹುಶಃ ಇಂತಹ ಗುಹೆಗಳಲ್ಲಿ ವಾಸಿಸುವ ಧ್ಯಾನಮಾಡುವ ಅವಕಾಶ ನನಗೆ ಸಿಗಲಾರದು. ಆದರೆ ಮುಂದಿನ ಭವದಲ್ಲಾದರೂ ದಿಗಂಬರ ಮುನಿಗಳಾಗಿ ಇಂತಹ ಗುಹೆಗಳಲ್ಲಿ ಕಂದಕಗಳಲ್ಲಿ ಪರ್ವತ

---

೧. ಭಾರತದ ದಿಗಂಬರ ಜೈನತೀರ್ಥ ಭಾಗ ೨. ಪುಟ ೧೯೭.

ಶಿಖರಗಳ ಮೇಲೆ ಕುಳಿತು ಧ್ಯಾನ ಮಾಡುವ ಅವಕಾಶ ಸಿಗಲಿ ಎಂದು ಮನದಲ್ಲೇ ಯೋಚಿಸಿದೆ. ಕುಮಾರಿ ಪರ್ವತವು ಪ್ರಸಿದ್ಧವಾಗಿದೆ ಭಗವಾನ ಮಹಾವೀರರ ಸಮವಸರಣವು ಇಲ್ಲಿಗೆ ಬಂದಿತ್ತು. ಎಂದು ಖಂಡಗಿರಿ ಪರ್ವತದಲ್ಲಿ ಚಿಕ್ಕದು ದೊಡ್ಡದು ಸೇರಿ ಸುಮಾರು 15 ಗುಹೆಗಳಿವೆ ಉದಯಗಿರ ಪರ್ವತದಲ್ಲಿ ಒಟ್ಟು 18 ಗುಹೆಗಳನ್ನು ನಿರ್ಮಿಸಿದ್ದಾರೆ. ಒರಿಸ್ಸಾದಲ್ಲಿ ಉಡಿಸ್ಸಾ ಭಾಷೆಯನ್ನು ಆಡುತ್ತಾರೆ. ಇಲ್ಲಿ ಗುಹೆಗಳನ್ನೂ ನೋಡಿ ಪ್ರಾಚೀನ ಸಂಸ್ಕೃತಿಯನ್ನು ಜೀವಂತ ನೋಡಿದಂತೆ ಆಯಿತು.

ಇಲ್ಲಿ ಜೋರಾದ ಬಿಸಿಲು ಇತ್ತು. ಆಲ್ಲದೆ ಇಲ್ಲಿ ಜೈನರ ಮನೆಗಳು ಜಾಸ್ತಿ ಇರಲಿಲ್ಲ. ಪುಷ್ಪರಾಜ ನಿಹಾಲಚಂದ ಅಗ್ರವಾಲಿ ಜೈನರ ಪರಿವಾರವೇ ಪ್ರಮುಖವಾದುದು. ಆದರೆ ಅವರು ಸಹ ಹೆಚ್ಚಾಗಿ ಕಲಕತ್ತೆಯಲ್ಲಿಯೇ ಇರುತ್ತಿದ್ದರು. ಆದ್ದರಿಂದನಾನು ಸ್ವಲ್ಪ ನಡೆದು ಹೈದಾರಬಾದಿಗೆ ಹೋಗಿ ಚಾತುರ್ಮಾಸ ಮಾಡುವುದೇ ಒಳ್ಳೆಯದು ಎಂದು ಯೋಚಿಸಿದೆ. ಯಾಕೆಂದರೆ ಅಲ್ಲಿಂದ ಶ್ರವಣಬೆಳಗೊಳ ಸುಮಾರು 400-450 ಮೈಲಿ ದೂರವಾಗುತ್ತದೆ. ಚಾತುರ್ಮಾಸ ಮುಗಿಯುತ್ತಿದ್ದಂತೆ ಶ್ರವಣಬೆಳಗೊಳಕ್ಕೆ ಹೋಗೋಣ ಎಂದು ಯೋಚಿಸುತ್ತಾ ಅಲ್ಲಿಂದ ವಿಹಾರ ಹೊರಟೆವು. ಹೈದ್ರಾಬಾದ ತಲುಪುವವರೆಗೆ ಸಂಘದ ನಿರ್ವಹಣೆಯನ್ನು ಪುಷ್ಪರಾಜ ಮತ್ತು ಫತೇಹ ಚಂದ ಜೈನ ಮೊದಲಾದ ಭಕ್ತ ಜನರು ವಹಿಸಿಕೊಂಡು ಕಾರ್ಯನಿರ್ವಹಣೆಗೆ ಬ್ರ. ಮಹಾವೀರ ಪ್ರಸಾದ್ ಜೈನ ಮತ್ತು ಮನೋವತಿಯರು ಇದ್ದರು.

ಆಂಧ್ರ ಪ್ರದೇಶದಲ್ಲಿ ವಿಹಾರ

ನಮಗೆ ಮಾರ್ಗದಲ್ಲಿ ಅನಕಾಪಲ್ಲೀ, ವಿಶಾಖಪಟ್ಟಣಂ ಮೊದಲಾದ ನಗರಗಳು ಸಿಕ್ಕವು. ಕಲಕತ್ತೆಯಲ್ಲಿದ್ದ ದೊಡ್ಡ ದೊಡ್ಡ ಸೇಠಗಳು ಈ ನಗರದಲ್ಲಿದ್ದ ತಮ್ಮ ಕಾರಕೂನರಿಗೆ ದೂರವಾಣಿಯ ಮೂಲಕ ವಿಷಯ ತಿಳಿಸಿದ್ದರಿಂದ ಅವರುಗಳು ಬಂದು ಸ್ವಾಗತಿಸುತ್ತಿದ್ದರು. ಆದರೆ ಇಲ್ಲಿ ಜೈನರು ಇಲ್ಲದ್ದರಿಂದ ನಮಗೆ ಬಹಳ ತೊಂದರೆ ಆಗತೊಡಗಿತು. ಇಲ್ಲಿ ಮೀನು ಮಾಂಸ ತಿನ್ನುವ ಜನರೇ ಜಾಸ್ತಿ ಸಿಗತೊಡಗಿದರು. ತಾಳೆಯ ದೊಡ್ಡ - ದೊಡ್ಡ ಮರಗಳಿಗೆ ಯಾವಾಗಲೂ ಮಡಕೆಗಳನ್ನು ನೇತಾಡಿಸುತ್ತಿದ್ದರು. ದಾರಿಯಲ್ಲಿನ ಈ ದೃಶ್ಯಗಳು ನಮಗೆ ಹೆದರಿಕೆ ಉಂಟುಮಾಡುತ್ತಿತ್ತು. ದಾರಿಯಲ್ಲಿ ಹೋಗುವಾಗ ಮಹಿಳೆಯರಾಗಲಿ ಪುರುಷರಾಗಲಿ ಎದುರಿಗೆ ಬಂದು ಮುಷ್ಕಿ ಹಿಡಿದುಕೊಂಡು ನಮ್ಮನ್ನು ಕೇಳುತ್ತಿದ್ದರು.

"ಯಾ ಊರು ರಂಡೇ ಯಾ ಊರು ರಂಡೇ" ಇದನ್ನೆಲ್ಲಾ ನೋಡಿದ ಜಿನಮತಿ ಬಹಳ ಹೆದರಿದಳು. ನಮಗೂ ಅವರು ಏನು ಹೇಳುತ್ತಿದ್ದಾರೆಂದು ಅರ್ಥವಾಗುತ್ತಿರಲಿಲ್ಲ. ಕೊನೆಗೆ ಕೈಯಲ್ಲೇ ಸನ್ನೆ ಮಾಡುತ್ತಾ ಮುಂದೆ ಹೋಗುತ್ತಿದ್ದೆವು. ಕೆಲವು ವೇಳೆ ಈ ಪ್ರಸಂಗವನ್ನು ನೋಡಿ ಜಿನಮತಿ ನಗುತ್ತಿದ್ದಳು (ಆ ಶಬ್ದಗಳು ನಮಗೆ) ಅಮ್ಮ ಅವರು ನಮಗೆ ಏನು ಕೇಳುತ್ತಾರೆ ಬಹುಶಃ ನನಗೇನೋ ಬೈಯುತ್ತಿದ್ದಾರೆ ಎನ್ನಿಸುತ್ತಿದೆ ಎಂದಳು.

ಒಂದೆರಡು ದಿನಗಳ ನಂತರ ಒಂದು ಸ್ಕೂಲಿನಲ್ಲಿ ನಿಂತುಕೊಂಡೆವು. ಅಲ್ಲಿಗೆ ಬಂದಿದ್ದ ಸಜ್ಜನರಲ್ಲಿ ನಾನು ಕೇಳಿದೆ ಯಾ ಊರು ರಂಡೆ ಎಂಬುದರ ಅರ್ಥವೇನು ಎಂದು ಆಗ ಆ ದುಭಾಷಿ ಹೇಳಿದ ಅದಕ್ಕೆ ಆ ಜನರು ನಿಮ್ಮನ್ನು ಹೇ ಮಹಾನುಭಾವರೇ ನೀವು ಯಾವ ಊರಿನವರೆಂದು ಕೇಳಿದ್ದಾರೆ ಎಂದು. ಅವರು ನಿಮ್ಮನ್ನು ಗೌರವದಿಂದಲೇ ಕೇಳಿದ್ದಾರೆ ಇಲ್ಲಿ "ರಂಡೇ' ಎನ್ನುವ ಅರ್ಥ 'ಮಹಾನುಭಾವ' ಎಂದು. ನಮಗೆ ಬೈಗುಳ ಎನ್ನಿಸಿತ್ತು. ಹೀಗೆ ದಕ್ಷಿಣದಲ್ಲಿ ಚಿಕ್ಕ ಹುಡುಗರಿಗೆ "ಗುಂಡ" ಎನ್ನುತ್ತಾರೆ. ಆದರೆ ಅದರ ಅರ್ಥ ನಮ್ಮಲ್ಲಿ 'ಬದಮಾಶ್' ಎಂದು ಒಂದೊಂದು ಕಡೆಯ ಭಾಷೆಯು ಕೂಡ ಖುಷಿಯಾಗಿರುತ್ತದೆ.

ಸ್ಕೂಲ್‌ಗಳಲ್ಲಿ ಇಳಿದುಕೊಂಡ ಸಂದರ್ಭದಲ್ಲಿ ಇಲ್ಲಿಯ ಮಕ್ಕಳಿಗೆ ನಮ್ಮ ಉಡುಪು ವಿಚಿತ್ರ ಎನ್ನಿಸುತ್ತಿತ್ತು. ಅವರುಗಳು ತಮ್ಮಲ್ಲೇ ರಾ, ರಾ, ರಾ ಅಂದರೆ ಬನ್ನಿರಿ ಬನ್ನಿರಿ ಬನ್ನಿರಿ. ಹೀಗೆ ಕರೆದು ಎಲ್ಲ ಮಕ್ಕಳನ್ನು ಒಟ್ಟಿಗೆ ಸೇರಿಸುತ್ತಿದ್ದರು. ನಮಗೂ ಅಲ್ಲಿಯ ಸೆಖೆಗೆ ಸಾಕಾಗುತ್ತಿತ್ತು. ಆಗ ಬ್ರಹ್ಮಚಾರಿಗಳು ಅವರನ್ನು ದೂರ ಕಳಿಸಿದರೆ ಪೋ ಪೋ ಪೋ ಎನ್ನುತ್ತಿದ್ದಾರೆ. ಅಂದರೆ ಹೋಗಿ ಹೋಗಿ ಹೋಗಿ ಎಂದು ಅವರ ಭಾಷೆ ತೆಲುಗು.

ಇಲ್ಲಿ ವಿಜಯವಾಡವು ಒಂದು ದೊಡ್ಡ ನಗರವೇ ಆದರೆ ಇಲ್ಲೂ ಜೈನರು ಇಲ್ಲದೆ ಇದ್ದುದ್ದರಿಂದ ನಮಗೆ ಬಹಳ ತೊಂದರೆ ಆಯಿತು. ಒಂದು ಸಲ ಧರ್ಮಶಾಲೆಯಲ್ಲಿ ವರಾಂಡದಲ್ಲಿ ಚೌಕ ಮಾಡಿದ್ದರು. ನಾವು 9-10 ಮೈಲಿ ನಡೆದುಕೊಂಡು ಅಲ್ಲಿಗೆ ತಲುಪಿದೆವು. ಆಹಾರಕ್ಕೆ ಚೌಕದಲ್ಲಿ ಬಂದು ಕುಳಿತಿದ್ದೆವು ನವಧಾ ಭಕ್ತಿ ಹೇಳಿದ ಮೇಲೆ ಇನ್ನೇನು ಆಹಾರ ತೆಗೆದುಕೊಳ್ಳಬೇಕು ಅಷ್ಟರಲ್ಲಿ ಜೋರಾಗಿ ಗಾಳಿ ಬೀಸಿ ಮೇಲಿನ ಚಪ್ಪರವೇ ಕೆಳಗೆ ಬಿತ್ತು. ಅಂತರಾಯವಾದ್ದರಿಂದ ಆಹಾರ ಬಿಟ್ಟು ಎದ್ದೆವು. ಬ್ರಹ್ಮಚಾರಿಗಳು ಗಾಬರಿಯಾದರು ಏನಾಗಿ ಹೋಯಿತು ಇಷ್ಟೊಂದು ಬೇಸಿಗೆಯಲ್ಲಿ ಅದೂ ಅಂತರಾಯ, ಹೊಟ್ಟೆಗೆ ನೀರುಕೂಡ ಹೋಗಲಿಲ್ಲ. ಇನ್ನು 24 ಗಂಟೆಗಳು ಹೇಗೆ ಕಳೆಯಬೇಕು ಎಂದು.

ಅದೇ ಮಧ್ಯಾಹ್ನ ಆ ಧರ್ಮಶಾಲೆಯಲ್ಲಿ ಮದುವೆಯ ಮೆರವಣಿಗೆಗೆ ಜನ ಸೇರಿದರು. ಇದನ್ನು ನೋಡಿ ನಾವು ಅಲ್ಲಿಂದ ಹೊರಟೆವು ಶರೀರ ಆರೋಗ್ಯದ ಕಡೆ ಸ್ವಲ್ಪವು ಗಮನ ಕೊಡಲಿಲ್ಲ. ನಾನು ನನ್ನ ಶರೀರದ ಕಡೆ ಗಮನ ಕೊಡದೆ ವಿಹಾರವೇನೋ ಮಾಡಿದೆವು ಆದರೆ ಅದರ ಪರಿಣಾಮ ಮುಂದೆ ಬಹಳ ದುಃಖ ಕೊಟ್ಟಿತು. ಅಲ್ಲಲ್ಲಿ ಶ್ವೇತಾಂಬರರು ಸಿಗುತ್ತಿದ್ದರು. ಬಹಳ ಭಕ್ತಿಯನ್ನು ತೋರಿಸುತ್ತಿದ್ದರು. ಆದರೆ ನಾನು ಹೈದ್ರಾಬಾದ್ ತಲುಪಬೇಕಾಗಿತ್ತು. ನನಗೆ ಚಾತುರ್ಮಾಸಕ್ಕೆ ನಿಲ್ಲಲು ಎಲ್ಲೂ ಸರಿಹೋಗಲೇ ಇಲ್ಲ. ಬರೀ ನಡೆಯುವುದೇ ಆಗುತ್ತಿತ್ತು.

ಇಲ್ಲಿ ಬರೇ ಮಾಂಸಹಾರಿಗಳೇ ಜಾಸ್ತಿ. ಎಲ್ಲಾದರೂ ಸ್ಕೂಲಿನಲ್ಲಿ ತಂಗಿದರೂ, ಅಲ್ಲಿಯ ಮಾಸ್ಟರುಗಳು ಕೋಳಿಯನ್ನು ಸಾಕಿರುತ್ತಿದ್ದರು. ಮೊಟ್ಟೆ - ಮಾಂಸ ತಿನ್ನುವವರೇ ಸಿಕ್ಕುತ್ತಿದ್ದರು. ಹಾಗಾಗಿ ಸ್ಕೂಲಿನಲ್ಲಿ ನಿಲ್ಲಲು ಮನಸ್ಸಾಗುತ್ತಿರಲಿಲ್ಲ. ಕೊನೆಗೆ ಶಿವಮಂದಿರ, ಹನುಮಾನ ಮಂದಿರಗಳಲ್ಲಿ ನಿಲ್ಲುವುದ ಸೂಕ್ತ ಎನ್ನಿಸಿತು. ಅಲ್ಲಿ ಶುದ್ಧತೆ ಮತ್ತು ಸ್ವಚ್ಛತೆ ಇದ್ದಿತ್ತು. ಅನಕಾಪಲ್ಲೀಯನ್ನು ತಲುಪಿದೆವು. ಇಲ್ಲಿ ಒಂದು ಜೈನ ಪರಿವಾರ ಇತ್ತು. ಆದೂ ಕಲಕತ್ತೆಯ ವ್ಯಾಪಾರಿ ಸೇಠರ ಕಾರಕೂನರದು. ಅಲ್ಲಿ ನಮಗೆ ಶಾಂತಿ ಸಿಕ್ಕಿತು. ಆ ಶ್ರಾವಕರು ನಮಗೆ ಒಬ್ಬ ದುಭಾಷಿಯನ್ನು ನೌಕರನಾಗಿ ಕೊಟ್ಟರು. ಅವನಿಗೆ ತೆಲಗು ಮತ್ತು ಹಿಂದಿ ಗೊತ್ತಿತ್ತು. ಇವನು ಭಕ್ತಿವಂತನು ಆಗಿದ್ದನು. ಭಾಷೆ ಗೊತ್ತಿದ್ದರಿಂದ ನಮಗೆ ಮನೋರಂಜನೆಗೊಳಿಸುತ್ತಿದ್ದ.

ಒಂದು ದಿನ ರಾತ್ರಿ ನಾವು ಹೊರಗೆ ಮೈದಾನದಲ್ಲೇ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದೆವು ಹತ್ತಿರದಲ್ಲೇ ನಾಯಿ ತುಂಬ ಬೊಗಳುತ್ತಿತ್ತು. ಆಗ ಆ ನೌಕರ ಹೋಗಿ ಆಳಿಗೆ ಹೇಳಿದ ನಿನ್ನ ನಾಯಿಯನ್ನು ಕೋಣೆಯಲ್ಲಿ ಕಟ್ಟಿಹಾಕು. ನಮ್ಮ ಗುರುಗಳಿಗೆ ನಿದ್ದೆ ಮಾಡಲು ತೊಂದರೆ ಆಗುತ್ತದೆ ಎಂದ. ಅವನ ಅಭಿಪ್ರಾಯ ಕೋಣೆಯಲ್ಲಿ ಕಟ್ಟಿಹಾಕು ಎಂದಾದರೂ ನಮ್ಮವರಿಗೆ ಈ ಮಾತು ವಿನೋದವಾಗಿ ಕಂಡು ಬಂದಿದ್ದರಿಂದ ಚೆನ್ನಾಗಿ ನಗತೊಡಗಿದರು. ಒಂದು ದಿನ ಕೆಲವು ಸಜ್ಜನರು ನಮ್ಮನ್ನು ಗುರುಗಳೆಂದು ತಿಳಿದು ತೆಲಗಿನಲ್ಲಿ ನಿವೇದಿಸತೊಡಗಿದರು. ನಾನು ಅವರೇನು ಕೇಳುತ್ತಿದ್ದಾರೆ ಎಂದು ನೌಕರನಲ್ಲಿ ಕೇಳಿದ್ದಕ್ಕೆ ಅವನು ಅವರ ಮಗಳನ್ನು ಸ್ಕೂಲಿಗೆ ಸೇರಿಸಲು ಬಂದಿದ್ದಾರೆ. ಆದರೆ ಸೀಟು ಸಿಕ್ಕಲ್ಲವಂತೆ ಆದ್ದರಿಂದ ತಾವು ಸೀಟು ಸಿಗುವಂತೆ ಆಶೀರ್ವಾದ ಮಾಡಿ ಎಂದು.

ಆಗ ನಾನು ಅವರಿಗೆ ಓಂ ನಮಃ ಮಂತ್ರವನ್ನು ಜಪಿಸಿ ನಿಮ್ಮ ಮಗಳನ್ನು ಸ್ಕೂಲಿಗೆ ಕರೆದುಕೊಂಡು ಹೋಗಿ ಸೀಟು ಸಿಗುತ್ತದೆ ಎಂದೆ ಹಾಗೇ ಆಯಿತಂತೆ. ನಾವು ಮುಂದಿನ ಊರಿಗೆ ಹೋದ ಮೇಲೆ ಅಲ್ಲಿಗೆ ಬಂದು ಆ ವ್ಯಕ್ತಿ ತಿಳಿಸಿ, ನಮಸ್ಕಾರ ಮಾಡಿ ಖುಷಿಯಿಂದ ಹೋದರು.

ಹೋದ ಜಾಗದಲ್ಲೆಲ್ಲಾ ಹಿಂದಿಯಲ್ಲಿ ಅಹಿಂಸೆಯ ಉಪದೇಶವನ್ನು ಮಾಡಿದೆವು. ಮೃಗಸೇನ ಧೀವರ, ಖದಿರಸಾರ, ಭೀಲ, ಹೀಗೆ ಕೋಳಿಯ ಕಥೆ ಇವುಗಳನ್ನು ದ್ವಿಭಾಷಿ ತೆಲುಗಿಗೆ ಭಾಷಾಂತರಿಸಿ ಹೇಳುತ್ತಿದ್ದ ಇದರಿಂದಲೇ ಎಷ್ಟೊಂದು ಜನ ಪರಿವರ್ತಿತರಾಗಿ ಮಾಂಸಾಹಾರವನ್ನು ತ್ಯಾಗ ಮಾಡಿದ್ದು ನೋಡಿ ನನಗೆ ಸಂತೋಷವಾಯಿತು. ನಮ್ಮ ಜೊತೆಗಿದ್ದ ಆ ದ್ವಿಭಾಷಿಯು ಒಂದು ದಿನ ಹೇಳಿದ ಮಾತಾಜೀ ನಾನು ದಿನ ಕೋಳಿಯ ಮಾಂಸವನ್ನು ಮಾಡಿಸುತ್ತಿದ್ದೆ. ಅನಕಾನಪಲ್ಲೀಯಲ್ಲಿ ತಮ್ಮ ಉಪದೇಶ ಕೇಳಿದ ನಂತರ ನಾನು ಮಾಂಸಾಹಾರವನ್ನು ತ್ಯಾಗ ಮಾಡಿದ್ದೇನೆ. ಮನೆಗೆ ಹೋಗಿ ಮಾಂಸ ಮಾಡಿದ್ದ ಪಾತ್ರೆಯನ್ನು ಮಾಂಸದ ಸಮೇತ ಆಚೆಗೆ ಎಸೆದಿದ್ದೇನೆ ಹಾಗೆ ನನ್ನ ತಾಯಿ ಮತ್ತು ಹೆಂಡತಿಗೂ ಮಾಂಸಾಹಾರ ತ್ಯಾಗ ಮಾಡಿಸಿದ್ದೇನೆ. ಹಾಗೇ ಬೇರೆಯವರಿಗೆ ಮಾಂಸಾಹಾರ ಬಿಡಿಸಲು ಬಹಳ ಪ್ರಯತ್ನ ಮಾಡುತ್ತಿದ್ದೇನೆ. ದಾರಿಯಲ್ಲಿ ಎಷ್ಟೊಂದು ಜನ ಕೇಳುತ್ತಿದ್ದರು ನಿಮಗೆ ಕೆಲಸ ಏನು ಎಂದು ಅದಕ್ಕೆ ನಾನು ನಮ್ಮ ಕೆಲಸವೇ ಅಹಿಂಸಾಧರ್ಮವನ್ನು ಪ್ರಚಾರ ಮಾಡುವುದು. ಜನರು ಖುಷಿಯಿಂದಲೂ, ಕುತೂಹಲದಿಂದಲೂ ಉಪದೇಶ ಕೇಳುತ್ತಿದ್ದರು. ನಮ್ಮ ಕೈಯಲ್ಲಿ ಇದ್ದ ಪಿಂಛಿಯನ್ನು ನೋಡಿ ಎಲ್ಲ ಕಡೆಯ ಜನಗಳು ಕೇಳುತ್ತಿದ್ದರು. ಇದೇನು ಇದನ್ನು ಏಕೆ ಇಟ್ಟುಕೊಂಡಿದ್ದೀರ ಇದು ಚೆನ್ನಾಗಿದೆ. ನಮಗೆ ಕೊಡುತ್ತೀರಾ ಎಂದೆಲ್ಲ ಕೇಳುತ್ತಿದ್ದರು. ಆಗ ನಾನು ಪಿಂಛಿಯ ಗುಣಗಳನ್ನು ಹೇಳುತ್ತಾ ಇದು ಜೈನ ದಿಗಂಬರ ಸಾಧು -ಸಾಧ್ವಿಯರ ಚಿಹ್ನೆ ಸಂಯಮದ, ಜೀವದಯೆಯ ಉಪಕರಣ ಹೀಗೆಲ್ಲ ಅವರಿಗೆ ತಿಳುವಳಿಕೆ ಹೇಳಿದೆ. ಒಮ್ಮೊಮ್ಮೆ ಆಶೀರ್ವಾದ ಮಾಡಿ ಒಂದೊಂದು ಗರಿಯನ್ನು ಅವರಿಗೆ ಕೊಟ್ಟೆ.

ರೆಕ್ಕೆ ಎಲ್ಲರಿಗೂ ಕೊಡಲು ಹೋದರೆ ಪಿಂಛಿಯೇ ಖಾಲಿ ಆಗಿರುತ್ತಿತ್ತು. ಆದ್ದರಿಂದ ಪ್ರಬುದ್ಧ ಮಹಾನುಭಾವರಿಗೆ ಮಾತ್ರ ಕೊಡುತ್ತಿದ್ದೆ. ಹೀಗೆ ಪ್ರಯಾಣ ಮಾಡುತ್ತಾ ವಿಶಾಖಪಟ್ಟಣ ಮೊದಲಾದವುಗಳ ಮೂಲಕ ಹೈದ್ರಾಬಾದಿಗೆ ಹತ್ತಿರ ಬರತೊಡಗಿದೆವು. ಈ ವಿಷಯವನ್ನು ಕಲಕತ್ತದವರಿಂದ ತಿಳಿದುಕೊಂಡ ಹಲವಾರು ಜನ ನಾವು ಇರುವ ಜಾಗಕ್ಕೆ ಬರತೊಡಗಿದರು. ಮತ್ತು ಹೈದರಾಬಾದನ್ನು ಯಾವ ದಿನ ಪ್ರವೇಶ ಮಾಡುತ್ತೀವಿ ಎನ್ನುವುದನ್ನು ತಿಳಿದುಕೊಳ್ಳಲು ಬಯಸಿದ್ದರು. ಆದರೆ ನಾವು ಬಹಳಷ್ಟು ಬಳಲಿದ್ದೆವು. ಬೇಸಿಗೆಯ ಕಾಲ, ಅಂತರಾಯಗಳ ಪರೀಷಹ, ಮತ್ತು ದೀರ್ಘಪ್ರಯಾಣದಿಂದ ಶರೀರ ದಣಿದಿತ್ತು. ಕೊನೆಗೆ ಅಳೆದು ಸುರಿದು ಹೈದರಾಬಾದನ್ನು ಆಷಾಢದ ಆಷ್ಟಾಹ್ನಿಕದ ವೇಳೆಗೆ ತಲುಪಬೇಕೆಂದು ನಿಶ್ಚಯ ಮಾಡಲಾಯಿತು. ಅಲ್ಲಿಯ ಜನರಿಗೆ ಬಹಳ ಉತ್ಸಾಹವಿತ್ತು. ಏಕೆಂದರೆ ಇಲ್ಲಿಯವರೆಗೆ ಅಲ್ಲಿಗೆ ಜೈನಮುನಿಗಳಾಗಲಿ, ಆರ್ಯಿಕೆಯರಾಗಲಿ ಬಂದೇ ಇರಲಿಲ್ಲ. ಇದೇ ಮೊದಲ ಸಲ, ಇದಕ್ಕೆ ಹಲವಾರು ವರ್ಷದ ಮೊದಲು ಆಚಾರ್ಯ ಶ್ರೀ ದೇಶಭೂಷಣರು ವಿಹಾರ ಮಾಡಿದ್ದರು. ಆದರೆ ಯಾರು ಚಾತುರ್ಮಾಸಕ್ಕೆ ನಿಂತಿರಲಿಲ್ಲ. ಈಗ ಆ ಅವಕಾಶ ಬಂದಿದ್ದರಿಂದ ಅವರೆಲ್ಲ ಉತ್ಕಂಠಿತರಾಗಿದ್ದರು.

ನಗರವನ್ನು ಪ್ರವೇಶ ಮಾಡಲು ಇನ್ನು ಒಂದು ಮೈಲಿ ಇರುವಾಗಲೇ ಬ್ಯಾಂಡು -ಭಜಂತ್ರಿಗಳನ್ನು ತೆಗೆದುಕೊಂಡು ಮೆರವಣಿಗೆಯಲ್ಲಿ ಬಂದರು. ನಾನು ಮೆರವಣಿಗೆಯಲ್ಲಿ ನಡೆಯುತ್ತಿದ್ದರು ನಿಶ್ಯಕ್ತಳಾಗಿದ್ದರಿಂದ ಎಲ್ಲಿ ನೆಲದ ಮೇಲೆ ಬಿದ್ದು ಬಿಡುತ್ತೀನೋ ಎಂದು ಭಯವಾಗುತ್ತಿತ್ತು. ಆದರೂ ಮನೋಬಲದಿಂದ ನಡೆಯುತ್ತಿದ್ದೆ. 4-5 ದಿನ ಮೊದಲಿನಿಂದ ರಕ್ತ ಭೇದಿ ಆಗುತ್ತಿತ್ತು. ಯಾರಿಗೂ ಹೇಳಿರಲಿಲ್ಲ. ಹಿಂದಿನ ದಿನ ಹೇಳಿದ್ದೆ ಆಗ ಪಾಪ

ನನ್ನ ಶಿಷ್ಯರಾದರೂ ಏನು ಮಾಡುತ್ತಾರೆ. ಮೆರವಣಿಗೆಯಲ್ಲಿ ಹೇಗೂ ಕೇಶರಬಾಗ್ ದಿಗಂಬರ ಜೈನಮಂದಿರವನ್ನು ತಲುಪಿದೆನೋ ಮೆರವಣಿಗೆ ಮುಗಿಯುತ್ತಿದ್ದಂತೆ ನಾನು ಕುಸಿದೆ, ಅನಂತರ ನಾನು ಕುಳಿತುಕೊಳ್ಳಲು ಸುಮಾರು 20-25 ದಿನಗಳಾಯಿತು.

ನನ್ನ (ಅನಾರೋಗ್ಯ) ಅಸ್ವಸ್ಥತೆ

ಆಷಾಢ ಮಾಸದ ಬಿಸಿಲಿನಲ್ಲಿ ಒಂದು ತಿಂಗಳಲ್ಲಿ 350 ಮೈಲಿ ದೂರ ಕ್ರಮಿಸಿದ್ದರಿಂದಲೂ ಬಿಸಿಲಿನ ತಾಪದಿಂದ ಹಿಂದಿನ ಸಂಗ್ರಹಣೀ ರೋಗಕ್ಕೆ ಶರೀರ ತುತ್ತಾಗಿತ್ತು. ಆಹಾರದಲ್ಲಿ ಸ್ವಲ್ಪ ನೀರು ಅಥವಾ ಹಣ್ಣಿನ ರಸ ತೆಗೆದುಕೊಂಡರು ಸಹ ವಾಂತಿಯಾಗಿ ಬಿಡುತ್ತಿತ್ತು. ಒಂದು ದಿನ ಅಂತೂ ರಕ್ತದ ಭೇದಿ ಆಗಿದ್ದರಿಂದ ಶರೀರ ಎಷ್ಟು ನಾಜುಕಾಗಿತ್ತು ಎಂದರೆ ಸಂಘದವರೇ ಏಕೆ ಅಲ್ಲಿಯ ಶ್ರಾವಕರೇ ತಕ್ಷಣ ಗಾಬರಿಯಾಗಿ ಬಿಟ್ಟರು. ತಕ್ಷಣ ಡಾಕ್ಟರ ಮತ್ತು ವೈದ್ಯರನ್ನು ಕರೆಸಿದರು. ಅವರಿಗೆ ನನ್ನ ಚರ್ಯೆಯನ್ನು ತಿಳಿಸಲಾಯಿತು. 24 ಗಂಟೆಯಲ್ಲಿ ಒಮ್ಮೆ ಮಾತ್ರ ಕರಪಾತ್ರೆಯಲ್ಲಿ ಆಹಾರ, ಅದೇ ಸಮಯದಲ್ಲಿ ಔಷಧಿ ನೀರು ಅದೂ ಆಯುರ್ವೇದ ಶುದ್ಧವಾದ ಚೂರ್ಣವಾಗಬೇಕೆಂಬ ನಿಯಮವನ್ನು ಕೇಳಿ ಡಾಕ್ಟರ ಹೇಳಿದ.

ಇವರನ್ನು ಬದುಕಿಸುವುದು ಬಹಳ ಕಷ್ಟವೆಂದರು. ವೈದ್ಯರು ಹಾಗೇ ಹೇಳಿದರು. ಆ ಸಮಯದಲ್ಲಿ ಆರ್ಯಿಕೆ ಜಿನಮತಿ ತಕ್ಷಣ ಬುದ್ಧಿ ಓಡಿಸಿ ಕಲಕತ್ತೆಗೆ ಪೂರ್ಣ ವಿವರಗಳನ್ನು ತಿಳಿಸಿದರು. ಅಲ್ಲಿಂದ ತಕ್ಷಣ ವೈದ್ಯರಾಜ ಕೇಶವದೇವನನ್ನು ಕಳುಹಿಸಿದರು.

ಈ ಅಸ್ವಸ್ಥತೆಯಲ್ಲಿಯೇ ನಾನು ಮಲಗಿಯೇ ವರ್ಷಾಯೋಗದ ಸ್ಥಾಪನೆ ಮಾಡಿಸಿಕೊಂಡಿದ್ದೆ. ನನ್ನ ಚಿಂತಾಜನಕ ಸ್ಥಿತಿಯನ್ನು ನೋಡಿ ಜನರ ಉತ್ಸಾಹವೆಲ್ಲಾ ಉಡುಗಿ ಹೋಗಿತ್ತು. ಒಂದು ದಿನ ರಾತ್ರಿ ಕೆಲವರು ಮಂದಿರದ ಹೊರಗೆ ಕುಳಿತು ಚರ್ಚೆಮಾಡುತ್ತಿದ್ದರು. ಎಚ್ಚರವಾಗಿದ್ದ ನನ್ನ ಕಿವಿಗೆ ಮಾತು ಕೇಳುತ್ತಿತ್ತು. ಒಬ್ಬ ಕೇಳಿದ - ಇದೇನಾಯಿತು ಇನ್ನೊಬ್ಬ ಹೇಳಿದ - ಸಮಾಧಿ ಆಗಿ ಹೋದರೆ, ಏನು ಮಾಡುವುದು ಮೂರನೆಯವನು ಹೇಳಿದ - ತಮ್ಮ ನೋಡು ಮಾತಾಜೀಗೆ ಎಷ್ಟು ಚಿಕ್ಕ ವಯಸ್ಸು ಕಲಕತ್ತೆಯಲ್ಲಿ ಸಾವಿರಾರು ಜನರು ಇವರ ಭಾಷಣವನ್ನು ಕೇಳಿ ಲಾಭ ಪಡೆದಿದ್ದಾರೆ. ಇವರಂತೆ ಉಪದೇಶವನ್ನು ಕೊಡುವವರು. ದೇಶಭೂಷಣರನ್ನು ಬಿಟ್ಟರೆ ಬೇರೆ ಯಾರೂ ಇಲ್ಲ. ಅಲ್ಲದೆ ಆರ್ಯಿಕೆಯರಲ್ಲಿ ಇವರೇ ಮೊದಲು ಇಂತಹ ಉಪದೇಶ ಕೊಡುವವರು ಒಬ್ಬ ಹೇಳಿದ ಇವರ ಜೊತೆ ಇರುವ ಎಲ್ಲಾ ಸಾಧ್ವಿಗಳು ಇವರ ಶಿಷ್ಯರೇ ಒಂದು ವೇಳೆ ಇವರಿಗೇನಾದರು ಆಯಿತು ಎಂದರೆ ಅವರುಗಳ ಪಾಡೇನು ಕೆಲವರು ಹೇಳ ತೊಡಗಿದರು ಅಯ್ಯಾ ತಮ್ಮ ಅವರೇನಾದರೂ ಇಲ್ಲಿ ಸಮಾಧಿಯಾದರೆಂದರೆ ನಮಗೂ ಮತ್ತು ಹೈದರಾಬಾದಗೂ ಕೆಟ್ಟ ಹೆಸರು ಬರುತ್ತದೆ. ಹೀಗೆ ಪಾಪ ಶ್ರಾವಕರು ಕಿಂಕರ್ತವ್ಯ ಮೂಢರಾಗಿ ಮಾತಾಡಿಕೊಳ್ಳ ತೊಡಗಿದರು. ಅಷ್ಟರಲ್ಲಿ ಕಲಕತ್ತೆಯಿಂದ ವೈದ್ಯರಾಜರು ಬಂದರು.

ಅವರು ಆಹಾರದ ಸಮಯದಲ್ಲೇ ಶುದ್ಧವಾದ ಔಷಧಿ, ಕಷಾಯ, ಚೂರ್ಣ ಮುಂತಾದವುಗಳನ್ನು ಕೊಡಲಾರಂಭಿಸಿದರು. ಹೀಗೆ ನನ್ನ ಪರಿಚರ್ಯೆಯಲ್ಲಿ ಆರ್ಯಿಕೆ ಜಿನಮತಿಯವರು ಬಹಳ ಎಚ್ಚರ ವಹಿಸುತ್ತಿದ್ದರು. ಅವರೇ ಸ್ವತಃ ಚೌಕದಲ್ಲಿ ಬಂದು ಆಹಾರ ಕೊಡಿಸುತ್ತಿದ್ದರು. ಆದರೆ ವಾಂತಿ ಮತ್ತು ಭೇದಿಯಲ್ಲಿ ನಿಯಂತ್ರಣವೇ ಬರಲಿಲ್ಲ. ಸುಮಾರು ಐದು ದಿನಗಳವರೆಗೆ ವೈದ್ಯರು ತಮ್ಮ ಚಿಕಿತ್ಸೆ ನಡೆಸಿದರು. ನನಗೆ ಪ್ರತಿಕ್ಷಣವೂ ಪಂಚನಮಸ್ಕಾರವನ್ನು ಕೇಳಬೇಕೆಂದು ಬಯಸುತ್ತಿದ್ದೆ. ಆದರೆ ಉಪಚಾರದಿಂದ ಏನು ಸಫಲತೆ ಕಂಡುಬರುತ್ತಿಲ್ಲ ವೈದ್ಯರು ಹೇಳಿದರು. ಮಾತಾಜೀಯವರು ಸಂಗ್ರಹಿಣಿ ರೋಗದಿಂದ ತತ್ತರಿಸಿ ಹೋಗಿದ್ದಾರೆ. ಅಲ್ಲದೇ ಅಷ್ಟೊಂದು

ದೂರ ಪ್ರಯಾಣ ಮಾಡಿದ್ದಾರೆ. ಇವರು ಕರುಳು ನಿರುಪಯೋಗಿಯಾಗಿದೆ. ಹೊಟ್ಟೆಯಲ್ಲಿ ನೀರೆಲ್ಲ ಒಣಗಿ ಹೋಗಿದೆ. ಈಗ ಇವರನ್ನು ಹೇಗೆ ಉಳಿಸುವುದು.

ಅವರೇ ಏನು ಮಾಡುವುದೆಂದು ತೋಚದೆ ಅಳತೊಡಗಿದರು. ಆಮೇಲೆ ನನ್ನ ಹತ್ತಿರ ಬಂದು ನಿಧಾನವಾಗಿ ಹೇಳ ತೊಡಗಿದರು ಮಾತಾಜೀ ನನ್ನ ಬುದ್ಧಿಗೆ ಏನು ಹೊಳೆಯುತ್ತಿಲ್ಲ. ನೀವೇ ಏನಾದರು ಉಪಾಯ ಹೇಳಿರಿ ನಾನು ಯೋಚಿಸಿ (ಹೇಗೆ) ನಿಧಾನವಾಗಿ ಹೇಳಿದೆ ವೈದ್ಯಜೀ ಮಜ್ಜಿಗೆ ನಿಲ್ಲಿಸಿ ಎರಡು - ಮೂರು ದಿನ ಹಾಲನ್ನು ಉಪಯೋಗಿಸಿ ನೋಡೋಣ ಎಂದೆ. ಮಾರನೇ ದಿನ ವೈದ್ಯರು ಆಹಾರದಲ್ಲಿ ಮಜ್ಜಿಗೆ ನಿಲ್ಲಿಸಿ ಸ್ವಲ್ಪ ಹಾಲು ಕುಡಿಸಿದರು. ಅದರಲ್ಲಿ ಏಲಕ್ಕಿ ಮುಂತಾದವುಗಳನ್ನು ಹಾಕಿದರು. ದೈವಯೋಗದಿಂದ ಆ ದಿನ ವಾಂತಿ ಆಗಲಿಲ್ಲ. ವೈದ್ಯರಿಗೆ ಸಂತೋಷವಾಯಿತು. ಆಮೇಲೆ ನಿಧಾನವಾಗಿ ಔಷಧಿ ತನ್ನ ಕೆಲಸ ಮಾಡತೊಡಗಿತು.

ಆ ಸಮಯದಲ್ಲಿ ನನಗೆ ನೀರು ಕೊಡದೆ ಹುಲ್ಲಿನ ನೀರಿನಲ್ಲೆ ಕೆಲವು ವಸ್ತುಗಳನ್ನು ಹಾಕಿ ಬಿಸಿಮಾಡಿಸಿ ಬೇರೆ ರೀತಿಯಿಂದ ಅದನ್ನು ಆಹಾರದಲ್ಲಿ ಕೊಡತೊಡಗಿದರು. ಹಾಲಿಗೂ ಸ್ವಲ್ಪ ಏಲಕ್ಕಿ ಮುಂತಾದವುಗಳನ್ನು ಹಾಕಿಸಿ ಬಿಸಿಮಾಡಿಸಿ ಕೊಡಲಾರಂಭಿಸಿದರು. ಔಷಧಿಯ ಪುಡಿಗಳು, ಕಷಾಯ, ಚೂರ್ಣ ಇವುಗಳನ್ನು ನಿಯಮಿತವಾಗಿ ಕೊಡಲಾರಂಭಿಸಿದರು ದಾಳಿಂಬೆಯ ರಸವನ್ನು ಹಿಟ್ಟಲ್ಲಿ ಬೆರಸಿ ದ್ರವರೂಪದಲ್ಲಿ ಕೊಡುತ್ತಿದ್ದರು. ಹೀಗೆ ಎಲ್ಲ ಔಷಧಯುಕ್ತ ದ್ರವ ಪದಾರ್ಥಗಳೇ ಆಹಾರವಾಯಿತು.

ನಿಧಾನವಾಗಿ ಆರೋಗ್ಯ ಸುಧಾರಿಸತೊಡಗಿತು. ಎಲ್ಲರಿಗೂ ಜೀವದಲ್ಲಿ ಜೀವ ಬಂದಂತಾಯಿತು. ವೈದ್ಯರು ಕೂಡ ನನ್ನ ಆಶೀರ್ವಾದ ತೆಗೆದುಕೊಂಡು ಕಲ್ಕತ್ತೆಗೆ ಹೋದರು.

ಇಲ್ಲಿ ಸಂಘದಲ್ಲಿ ಬ್ರಹ್ಮಚಾರಿಣಿಯರದು ಒಂದು ಚೌಕ ಮತ್ತು ಶ್ರಾವಕರದು ಒಂದು ಚೌಕವಿತ್ತು. ನಿಧಾನವಾಗಿ ಹಲವಾರು ಶ್ರಾವಕಿಯರು ಶುದ್ಧಜಲದ ನಿಯಮ ತೆಗೆದುಕೊಂಡು ಆಹಾರ ಕೊಡಲಾರಂಭಿಸಿದರು.

ಮನೋವತಿಯ ಮನೋಭಾವನೆ ಫಲಿಸಿತು

ಈ ಕಡೆ ಯಾರೋ ಶ್ರಾವಕರು ಹೈದರಬಾದಿನಿಂದ ಟೆಕ್ಕೆತನಗರಕ್ಕೆ ಪತ್ರ ಹಾಕಿದ್ದಾರೆ. ಆರ್ಯಿಕೆ ಜ್ಞಾನಮತಿಯರಿಗೆ ತುಂಬ ಖಾಯಿಲೆ ಎಂದು. ತಂದೆ ತಾಯಿ ದುಃಖಿತರಾಗಿ, ಕೈಲಾಸಚಂದ್ರನನ್ನು ಕಳುಹಿಸಿದರು. ಆರೋಗ್ಯವನ್ನು ವಿಚಾರಿಸಲು ಅವನು ಬಂದಾಗ ನಾನು ಹುಲ್ಲಿನ ಹಾಸಿಗೆಯ ಮೇಲೆ ಮಲಗಿದ್ದೆ. ಮಗ್ಗಲು ಬದಲಾಯಿಸಲು ಆಗುತ್ತಿರಲಿಲ್ಲ. ಒಂದೆರಡು ದಿನಗಳಲ್ಲಿ ಸ್ವಲ್ಪ ನನ್ನ ಆರೋಗ್ಯ ಸುಧಾರಿಸಿತ್ತು. ಒಂದು ದಿನ ಮಧ್ಯಾಹ್ನ ಮನೋವತಿ ಕೈಲಾಸನ ಹತ್ತಿರ ಕುಳಿತು ಅಳುತ್ತಿದ್ದಳು. ಅಣ್ಣ ನನಗೆ ದೀಕ್ಷೆ ಕೊಡಿಸಿರಿ. ಈಗ ಎಂಟು ದಿನ ಮೊದಲು ಮಾತಾಜೀಗೆ ಎಲ್ಲ ಡಾಕ್ಟರ - ವೈದ್ಯರೆಲ್ಲ ಅವರು ಉಳಿಯುವುದೇ ಇಲ್ಲವೆಂದು ಹೇಳಿದ್ದರು. ಒಂದು ವೇಳೆ ಮಾತಾಜೀಗೆ ಏನಾದರೂ ಆಗಿಬಿಟ್ಟರೆ ನಾನೇನು ಮಾಡಲಿ ಎಂದು. ಕೈಲಾಸ ಸಾಕಷ್ಟು ಸಮಾಧಾನ ಮಾಡಿದ, ಆದರೂ ಅವಳಿಗೆ ಸಮಾಧಾನ ಆಗಲಿಲ್ಲ. ನನ್ನ ಹತ್ತಿರ ಬಂದು ಅಳತೊಡಗಿದಳು. ನನ್ನ ಅದೃಷ್ಟದಲ್ಲಿ ದೀಕ್ಷೆಇದೆಯೋ ಇಲ್ಲವೋ ಇನ್ನು ಎಷ್ಟು ವರ್ಷಗಳು ನಾನು ಒದ್ದಾಡಬೇಕು. ಎಂದು ಹೇಳಿದವಳೇ ನನಗೆ ದೀಕ್ಷೆ ದೊರೆಯುವವರೆಗೂ ಆರು ರಸಗಳನ್ನು ತ್ಯಾಗ ಮಾಡಿದಳು. ಎರಡು ದಿನಗಳವರೆಗೂ ನೀರಸವಾದ ಊಟ ಮಾಡಿದಳು. ಆಗ ಕೈಲಾಸ ನನ್ನ ಹತ್ತಿರ ಬಂದು ಹೇಳಿದ ಮಾತಾಜೀ ಇವಳನ್ನೂ ಹೇಗೆ ಸಮಾಧಾನ ಮಾಡುವುದು ಎಂದ ನಾನು ನಿಧಾನವಾಗಿ ಹೇಳಿದೆ.

ಕೈಲಾಸ ನಾನು ನೋಡಿದಂತೆ ಸಂಘದಲ್ಲಿ ಇರುವವರಿಗೆಲ್ಲರಿಗೂ ದೀಕ್ಷೆ ತೆಗೆದುಕೊಳ್ಳುವ ಮನಸ್ಸು ಇರುವುದಿಲ್ಲ. ನಾವೇ ಎಷ್ಟೆಷ್ಟು ಪ್ರೇರಣೆ ಕೊಟ್ಟು ದೀಕ್ಷೆ ತೆಗೆದುಕೊಳ್ಳುವಂತೆ ಮಾಡುತ್ತೇವೆ. ಆದರೆ ಇವಳಿಗೆ ಕರ್ಮದ ಉದಯದಿಂದ ಬಡಪಾಯಿ ದೀಕ್ಷೆಗಾಗಿ ಅತ್ತು - ಅತ್ತು ಕಣ್ಣೀರೆಲ್ಲಾ ಬತ್ತಿ ಹೋಗಿದೆ. ನನಗೂ ಅವಳನ್ನು ನೋಡಿ ಕರುಣೆ ಉಕ್ಕಿ ಬರುತ್ತಿದೆ. ನನಗೆ ದೀಕ್ಷೆ ತೆಗೆದುಕೊಳ್ಳಲೇ ಬೇಕೆಂಬ ಭಾವನೆ ಬರುತ್ತಿದ್ದಂತೆ 6 ತಿಂಗಳಲ್ಲೇ ಸಾಹಸ ಮಾಡಿ ತೆಗೆದುಕೊಂಡು ಬಿಟ್ಟೆ. ಆದರೆ ಇವಳು 6-7 ವರ್ಷಗಳಿಂದ ಪ್ರಯತ್ನಿಸುತ್ತಿದ್ದಾಳೆ. ಇವಳಿಗೆ ಒಳ್ಳೆಯ ಜ್ಞಾನವಿದೆ. ವೈರಾಗ್ಯ ಚೆನ್ನಾಗಿದೆ ಶರೀರ ಕೃಶವಾಗಿದ್ದರು ಚಾರಿತ್ರದಲ್ಲಿ ಬಹಳ ದೃಢವಾಗಿದ್ದಾಳೆ. ನನಗೆ ಇವೆಲ್ಲ ತಿಳಿದಿದೆ, ನೀನು ಅವಳಿಗೆ ಒಳ್ಳೆಯ ಅಣ್ಣನಾಗು.

ಇದನ್ನು ಕೇಳಿ ಕೈಲಾಸನ ಹೃದಯ ಕರಗಿತು. ಅವನೆಂದ ಮಾತಾಜೀ ನೀವು ಆಜ್ಞೆ ಕೊಟ್ಟಂತೆ ಮಾಡಲು ನಾನು ಸಿದ್ಧನಿದ್ದೇನೆ. ಅವಳ ರಸತ್ಯಾಗವನ್ನು ಪೂರ್ಣಗೊಳಿಸೇ ಮನೆಗೆ ಹೋಗುತ್ತೇನೆ. ಆಗ ನಾನು ನೀನು ಇಂದೇ ಪಪೌರಾಜೀಗೆ ಹೋಗಿ ಆಚಾರ್ಯ ಶಿವಸಾಗರರಲ್ಲಿ ದೀಕ್ಷೆ ಕೊಡಲು ಅನುಮತಿಯನ್ನು ಪಡೆದು ಬಾ. ಅವಳಿಗೆ ನನ್ನಿಂದಲೇ ದೀಕ್ಷೆ ಪಡೆಯಬೇಕೆಂಬ ಆಸೆ ಎಂದರು.

ನನ್ನ ಆಜ್ಞೆಯನ್ನು ಪಡೆದು ಕೈಲಾಸ ವಾಪಸ್ಸು ಬಂದ ಸುದ್ದಿ ತಿಳಿದ ಮನೋವತಿ ಖುಷಿಗೆ ಪಾರವೇ ಇರಲಿಲ್ಲ. ನಾನು ಶ್ರಾವಣ ಶುಕ್ಲ ಸಪ್ತಮಿಯಂದು ಭ ಪಾರ್ಶ್ವನಾಥರ ಮೋಕ್ಷ ಕಲ್ಯಾಣದಂದು ದೀಕ್ಷೆ ಕೊಡುವುದೆಂದು ಮೂಹೂರ್ತವನ್ನು ಇಡಿಸಿದೆ. ಹೈದರಾಬಾದಿನ ಜನರಿಗಂತೂ ದೀಕ್ಷೆಯನ್ನು ನೋಡುವಂತಹ ಸದವಕಾಶ ಒದಗಿ ಬಂದಿತ್ತು. ಭಕ್ತರು ಸಮಾರಂಭವನ್ನು ಚೆನ್ನಾಗಿ ಆಯೋಜಿಸಿದ್ದರು. ಸಮಾರಂಭಕ್ಕೆ ಮೂರು ದಿನಗಳಿದ್ದವು. ಕೈಲಾಸಚಂದರ ತೆರೆದ ಜೀಪಿನಲ್ಲಿ ಮನೋವತಿಯ ಶೋಭಯಾತ್ರೆಯನ್ನು ಹೊರಡಿಸಿದ್ದರು. ಮನೋವತಿಯನ್ನು ರಾತ್ರಿ 1-2 ಗಂಟೆಯವರೆಗೂ ಇಡೀ ನಗರದಲ್ಲಿಯೇ ಸುತ್ತಾಡಿಸಿದರು. ದಾರಿಯಲ್ಲಂತೂ ಜನರು ಶ್ರೀಗಂಧದ ಹಾರ, ನೋಟಿನ ಹಾರ, ಹೂವಿನ ಮಾಲೆಗಳಿಂದ ಅವಳನ್ನು ಸನ್ಮಾನಿಸಿದರು.

ಜಾಪ್ಯ ಮಂತ್ರದ ಪ್ರಭಾವ

ಶ್ರಾವಣ ಶುಕ್ಲ ಸಪ್ತಮಿಯ ದಿನ ಬೆಳಗ್ಗೆಯೇ ಧಾರಾಕಾರ ಮಳೆ ಬರತೊಡಗಿತು. ದೀಕ್ಷಾ ಸಮಾರಂಭಕ್ಕಾಗಿ ಮೈದಾನದಲ್ಲಿ ವೇದಿಕೆ ಸಿದ್ಧಗೊಳಿಸಲಾಗಿತ್ತು. ಆದರೆ ಮಳೆಯಿಂದಾಗಿ ಜನ ಹೇಗೆ ವೀಕ್ಷಿಸುತ್ತಾರೆ ಎಂದು ಕೈಲಾಸಚಂದ ನನ್ನ ಮುಂದೆ ಸಮಸ್ಯೆಯನ್ನು ಇಟ್ಟ. ಅದಕ್ಕೆ ನಾನು ಅವನಿಗೆ ಒಂದು ಚಿಕ್ಕ ಮಂತ್ರವನ್ನು ಕೊಟ್ಟೆ ಇದನ್ನು ಒಂದು ಗಂಟೆ ಶ್ರದ್ಧೆಯಿಂದ ಜಪಮಾಡು ದೀಕ್ಷಾ ಸಮಾರಂಭ ಪ್ರಭಾವನೆಯಿಂದಲೇ ಆಗುತ್ತದೆ ಎಂದೆ.

ದೀಕ್ಷೆಯ ಸಮಯಕ್ಕೆ ಸರಿಯಾಗಿ ದಿಗಂಬರ, ಶ್ವೇತಾಂಬರ, ಹಾಗೆಯೇ ಜೈನೇತರರ ಬಹಳ ಜನರು ಸೇರಿದ್ದರು. ದೀಕ್ಷಾ ಮೂಹೂರ್ತದ ಒಂದು ಗಂಟೆ ಮೊದಲೇ ಮಳೆ ನಿಂತು ಹೋಯಿತು. ಇನ್ನೊಂದು ಆಶ್ಚರ್ಯವೆಂದರೆ ನನ್ನ ಕುಳಿತುಕೊಳ್ಳಲು ಆಗದಷ್ಟು ನಿಶ್ಯಕ್ತಿ ಇದ್ದುದು ಆ ಸಮಯಕ್ಕೆ ಎಲ್ಲಿಂದ ಸ್ಫೂರ್ತಿಬಂದಿತೊ ನಾನೇ ವಿಧಿವತ್ತಾಗಿ ದೀಕ್ಷಾ ಕ್ರಿಯೆಗಳನ್ನು ಸುಮಾರು ಒಂದು ಗಂಟೆಯವರೆಗೂ ನನ್ನ ಕೈಗಳಿಂದಲೇ ಮಾಡಿದೆ. ನವದೀಕ್ಷಿತ ಕ್ಷುಲ್ಲಕರ ಹೆಸರು "ಅಭಯಮತಿ" ಎಂದು ಘೋಷಿಸಿದೆ. ಅನಂತರ ಐದು ನಿಮಿಷ ಜನತೆಗೆ ಆರ್ಶೀವಾದವನ್ನು ಕೊಟ್ಟೆ. ದೀಕ್ಷಾ ವಿಧಿಯು ಮುಗಿದು ಗಂಟೆಯು ಕಳೆಯಲಿಲ್ಲ. ಮತ್ತೆ ಧಾರಾಕಾರವಾಗಿ ಮಳೆ ಪ್ರಾರಂಭವಾಯಿತು ಜನರೆಲ್ಲಾ ಉದ್ಗಾರ ತೆಗೆದರು. ಇದು ಮಾತಾಜೀಯವರ ಅತಿಶಯವೇ ಸರಿ. ಆಗ ನಾನೆಂದೆ

ನನ್ನಲ್ಲಿ ಯಾವುದೇ ಅತಿಶಯವಿಲ್ಲ ಅತಿಶಯವಾದರೂ ಧರ್ಮದಲ್ಲಿದೆ. ನಿಜವಾಗಿಯು ಧರ್ಮದ ಪ್ರಸಾದದಲ್ಲಿಯೇ ಸರ್ವಅಮಂಗಳವು ದೂರವಾಗುತ್ತದೆ ಇನ್ನೇನು ಧರ್ಮದಿಂದಲೇ ಮೋಕ್ಷವು ಪ್ರಾಪ್ತಿಯಾಗುವುದರಿಂದ ನೀವೆಲ್ಲರು ಧರ್ಮದಲ್ಲಿ ಶ್ರದ್ಧೆಯನ್ನು ಇಡಿರಿ ಎಂದೆ.

ಮಾರನೆಯ ದಿನ ಕೈಲಾಸಚಂದ್ರನು ಕಣ್ಣು ತುಂಬಿಕೊಂಡು ಕ್ಷುಲ್ಲಿಕೆ ಅಭಯಮತಿಗೆ ಆಹಾರ ಕೊಟ್ಟು ಆಹಾರದಲ್ಲಿ ಹಾಲು ತುಪ್ಪ ಮುಂತಾದ ರಸಗಳನ್ನು ಕೊಟ್ಟು ಸಂತೃಪ್ತನಾದ. ಈಗ ಈ ವಿಚಾರವನ್ನು ತಂದೆ ತಾಯಿಗಳಿಗೆ ಹೇಳುವ ತವಕದಿಂದ ನನ್ನ ಆಜ್ಞೆ ಪಡೆದು ಶ್ರವಣಬೆಳಗೊಳಕ್ಕೆ ಹೋಗಿ ಬಾಹುಬಲಿಯ ದರ್ಶನ ಪಡೆದು ಊರಿಗೆ ಹೋದ. ಹೋಗುತ್ತಲೇ ನನ್ನ ಆರೋಗ್ಯದ ಸಮಾಚಾರ ಕೇಳಿ ತಂದೆ ತಾಯಿ ಸಮಾಧಾನಗೊಂಡರು. ಆದರೆ ಮನೋವತಿಯ ದೀಕ್ಷೆಯ ಸುದ್ದಿ ಕೇಳಿ ಅವರಿಗೆ ಖೇದವಾಯಿತು. ತಾಯಿಯಂತೂ ನಾನೇನೂ ಪಾಪ ಕರ್ಮ ಮಾಡಿದ್ದೇನೋ ಇಬ್ಬರು ಮಕ್ಕಳ ದೀಕ್ಷಾ ಸಮಾರಂಭ ನೋಡುವ ಭಾಗ್ಯ ನನಗಿಲ್ಲವಲ್ಲ ಎಂದು ಪರಿತಪಿಸಿದರು ತಂದೆ ಬಹಳವೇ ದುಃಖಿತರಾದರು. ಆ ಸಮಯದಲ್ಲಿ ತಕ್ಷಣ ರೈಲು ಹತ್ತಿ ಬಂದು ಇಳಿದು ಬಿಡುವ ಅನುಕೂಲತೆ ಏನೂ ಇರಲಿಲ್ಲ.

ಬ್ರ. ಸುರೇಶನ ವ್ರತ ಮತ್ತು ದೀಕ್ಷೆ

ಬ್ರ. ಸುರೇಶ ಚಂದ್ರನಿಗೆ ಅವನ ಇಚ್ಛೆಯಂತೆ ಏಳನೆಯ ಪ್ರತಿಮೆಯ ವ್ರತವನ್ನು ಕೊಟ್ಟೆ. ಮುಂದೆ ಆಚಾರ್ಯ ಶಿವಸಾಗರರ ಸಂಘಕ್ಕೆ ಕಳುಹಿಸಿ ಕ್ಷುಲ್ಲಕ ದೀಕ್ಷೆಯನ್ನು ಕೊಡಿಸಿದೆ. ಅವರೇ ಇಂದು 'ಸಂಭವಸಾಗರ' ರೆಂಬ ಹೆಸರಿನಿಂದ ಪ್ರಸಿದ್ಧರಾಗಿದ್ದಾರೆ. ಮುನಿಗಳಾದ ಮೇಲೂ ನನ್ನ ಹತ್ತಿರ ಬಹಳ ದಿನವಿದ್ದು ಅಭ್ಯಾಸ ಮಾಡಿದರು. ಬ್ರಹ್ಮಚಾರಿ ಪದವಿಯಿಂದ ಮುನಿ ದೀಕ್ಷೆಗೆ ತಲುಪಿದ ಅವರಿಗೆ ನಾನು ಶ್ರದ್ಧೆಯಿಂದ ನಮೋಸ್ತುಗಳನ್ನು ಹೇಳುತ್ತಿದ್ದೆ. ನನ್ನ ಆರೋಗ್ಯ ಮತ್ತಷ್ಟು ಸುಧಾರಿಸತೊಡಗಿತು ಜೀಲುಬಾಯಿ, ರಾಜೂ ಬಾಯಿ, ಮಾಂಗೀಲಾಲ ಪಹುಡೆ, ನಂದಲಾಲ ತಾರಾಚಂದ್, ಅಭಯಚಂದ್ರ ಇವರುಗಳು ಭಕ್ತ ಜನರಲ್ಲಿ ಪ್ರಮುಖರಾದವರು. ಇವರಲ್ಲೂ ಪ್ರಮುಖರಾದವರು ಜಯಚಂದ ಪಹಾಡಿಯಾ ಇವರ ತಾಯಿ ಏಳನೆಯ ಪ್ರತಿಮೆಯನ್ನು ತೆಗೆದುಕೊಂಡಿದ್ದರು ಇವರ ಅಣ್ಣ ಪೂನಮಚಂದ ಆಚಾರ್ಯ ಕಲ್ಪಚಂದ್ರ ಸಾಗರರ ಭಕ್ತರಾಗಿದ್ದರು.

ಇವರು ನಾಂದಗಾಂವ್‌ನಲ್ಲಿ ಇದ್ದರು ಇಲ್ಲಿಗೂ ಹೋಗಿ ಬಂದು ಮಾತಾಡುತ್ತಿದ್ದರು. ಹಾಗೇ ವಾರ್‌ಗಲ್‌ನಲ್ಲಿ ಸೇಠಿ ಸುವಾಲಾಲರು ಹೆಂಡತಿಯೊಡನೆ ಬಹಳ ದಿನಗಳವರೆಗೆ ಇಲ್ಲೇ ಇದ್ದರು. ಅವರಿಗೆ ದೀಕ್ಷೆಯ ಸಮಯದಲ್ಲಿ ಮನೋವತಿಗೆ ತಂದೆ ತಾಯಿಗಳಾಗುವ ಸೌಭಾಗ್ಯವೂ ಸಿಕ್ಕಿತು ಆಗ ಅವರು 2 ನೆಯ ಪ್ರತಿಮೆಯವ್ರತ ಪಡೆದು ಜೀವನ ಪರ್ಯಂತ ಪಾಲಿಸಿದರು.

ಮಾತಾಜೀ ಪೂರ್ಣ ಗುಣಮುಖರಾದರು

ಶ್ರೀಮಾನ್ ಜಯಚಂದ್ರರವರು ಒಬ್ಬ ಹಸನ್ಮುಖ ವ್ಯಕ್ತಿ ನನ್ನ ಆರೋಗ್ಯ ಸುಧಾರಿಸಿದ್ದನ್ನು ನೋಡಿ ಒಂದು ವೇಳೆ ನೀವು ದಿನ ದೀಕ್ಷೆ ಕೊಡುತ್ತಿದ್ದರೆ ತಾವು ಪೂರ್ಣಗುಣವಾಗಿ ಬಿಡುತ್ತೀರಾ ಎಂದರು ಅಲ್ಲಿಯ ಜನರು ಅದನ್ನು ಹಿಡಿದು ಕೊಂಡು ಬಿಟ್ಟಿದ್ದರು. ದಿನಾ ಅದನ್ನೇ ಹೇಳುತ್ತಿದ್ದರು.

1967 ರಲ್ಲಿ ನಾನು ಔರಾಂಗಬಾದ್‌ನಲ್ಲಿ ಅಸ್ವಸ್ಥಳಾಗಿದ್ದಾಗ ಇದೇ ಜಯಚಂದ್ರ ಲೂಹಾಡಿಯಾ ಬಂದವರೇ ಯಾರಿಗಾದರೂ ದೀಕ್ಷೆ ಕೊಟ್ಟಿದ್ದೀರಾ ನೀವು ಹುಶಾರಾಗಿ ಬಿಟ್ಟಿದ್ದೀರಲ್ಲಾ ಎಂದರು. ಹಾಗೇ 1985 ರಲ್ಲಿ

ಹಸ್ತಿನಾಪುರದಲ್ಲಿ ಅಸ್ವಸ್ಥಳಾಗಿದ್ದ ಸಮಯದಲ್ಲಿ ದರ್ಶನಕ್ಕಾಗಿ ಬಂದಿದ್ದರು. ಆದರೆ ಈಗ ಅವರು ಕಾನಜೀ ಪಂಥದ ವಿಚಾರಧಾರೆಗಳಿಗೆ ಮಾರುಹೋಗಿ ಮುನಿಭಕ್ತ ಜನಗಳ ಹತ್ತಿರ ವೈಚಾರಿಕ ಸಂಘರ್ಷಗಳಿಗೆ ಎಡೆ ಮಾಡಿಕೊಡುತ್ತಿದ್ದಾರೆ. ವ್ಯಕ್ತಿಗತ ವಾತ್ಸಲ್ಯಮಯಿಯಾದ ಇವರನ್ನು 1979 ಮತ್ತು 1985 ರ ಪ್ರತಿಷ್ಠೆಯಲ್ಲಿ ಕರೆಸಿದ್ದೆ. ಆದರೆ ಇಲ್ಲಿ ವೇದಿಕೆಯ ಮೇಲೆ ವೈಚಾರಿಕ ಸಂಘರ್ಷಕ್ಕೆ ಇಳಿದಿದ್ದಾರೆಂದು ಅವರಿಗೆ ಸನ್ಮಾನಿಸಲಾಗಲಿಲ್ಲ ಇದು ನನಗೆ ಬೇಜಾರಾಗಿದೆ.

ಶಾಂತಿ ವಿಧಾನದಲ್ಲಿ ಶ್ರದ್ಧೆ

ನನಗೆ ಶಾಂತಿ ವಿಧಾನದಲ್ಲಿ ಮೊದಲಿನಿಂದಲೂ ಶ್ರದ್ಧೆ. ಇಲ್ಲಿ ಶ್ರಾವಣ ಶುಕ್ಲ ಪಕ್ಷದ ಹದಿನಾರನೆಯ ದಿನ ನಾನು ಕು. ಮನೋವತಿಯ ಕೈಯಲ್ಲಿ ವಿಧಾನವನ್ನು ಪ್ರಾರಂಭ ಮಾಡಿಸಿದೆ. ಪ್ರತಿದಿನ ಹೊಸ ಮಂಡಲವನ್ನು ರಚಿಸಿಯೇ ವಿಧಾನ ಮಾಡಲಾಗುತ್ತಿತ್ತು. ಇಲ್ಲಿಯ ರೂಮರಮಲ್ಲನೆಂಬ ಯುವಕ ರಂಗೋಲಿಯಿಂದ ಸುಂದರ ಮಂಡಲಗಳನ್ನು ಬರೆಯುತ್ತಿದ್ದ. ಮನೋವತಿಯಾದರೂ ಏಳನೆಯ ದಿನವೇ ದೀಕ್ಷೆ ತೆಗೆದುಕೊಂಡಿದ್ದರಿಂದ ಉಳಿದವರೆಲ್ಲಾ ಸೇರಿ 16 ನೇಯ ದಿನದವರೆಗೂ ವಿಧಾನಗಳನ್ನು ಮಾಡಿ ಮುಗಿಸಿದಳು. ಅಷ್ಟರಲ್ಲಿ ನನ್ನ ಆರೋಗ್ಯವೂ ಬಹಳ ಸುಧಾರಿಸಿತ್ತು. ಇದನ್ನು ನೋಡಿದ ಜನರಿಗೆ ವಿಧಾನವನ್ನು ಮಾಡುವುದರಿಂದ ಬಹಳ ಲಾಭವಾಗುತ್ತದೆ ಎನ್ನುವ ವಿಶ್ವಾಸ ಧೃಡವಾಯಿತು.

ಭಾದ್ರಪದ ಪರ್ವದಲ್ಲಿ ಧರ್ಮ ಪ್ರಭಾವನೆ

ದಶಲಕ್ಷಣ ಪರ್ವದಲ್ಲಿ ನಾನು ಪಂ. ವರ್ಧಮಾನಶಾಸ್ತ್ರಿಗಳನ್ನು ಕರೆಸಲು ಪ್ರೇರಣೆ ಕೊಟ್ಟೆ. ಅವರು ಎರಡು ಹೊತ್ತು ಪ್ರವಚನ ಮಾಡುತ್ತಿದ್ದರು. ಇಲ್ಲಿ ಜನಗಳ ಮನೆ ಹತ್ತಿರದಲ್ಲಿ ಇರಲಿಲ್ಲ. ಒಂದು, ಎರಡು ಮೈಲಿ ದೂರದಿಂದಲೇ ಬರುತ್ತಿದ್ದರು. ಅಲ್ಲದೆ ಎಲ್ಲರು ಒಂದೇ ಸಮಯಕ್ಕೆ ಬರಲು ಆಗುತ್ತಿರಲಿಲ್ಲ. ಹೀಗಾಗಿ ಎರಡು ಹೊತ್ತು ಪ್ರವಚನ ಇದ್ದುದ್ದರಿಂದ ಎಲ್ಲರು ಧರ್ಮಲಾಭವನ್ನು ಹೊಂದುವಂತೆ ಆಯಿತು.

ವಿಧಾನದ ಹೆಚ್ಚುಗಾರಿಕೆ

ಒಂದು ದಿನ ಜೀಊ ಬಾಯಿಯವರು ತಾವು ಮಾಡುತ್ತಿದ್ದ ಭಾನುವಾರ ವ್ರತದ ಉದ್ಯಾಪನೆಯನ್ನು ಮಾಡಿಸಲು ಕೇಳಿಕೊಂಡರು. ನಾನು ಆರ್ಯಿಕೆ ಜಿನಮತಿಗೆ ಭಾನುವಾರದ ವ್ರತದ ಉದ್ಯಾಪನೆ ಮಾಡಿಸಲು ಹೇಳಿದೆ. ಅಂದು ಸಂಸ್ಕೃತದಲ್ಲೇ ಮಾಡಿಸಲಾಯಿತು. ಇದರ ನಂತರ ಒಬ್ಬೊಬ್ಬರೆ ಹೆಂಗಸರು, ಗಂಡಸರುಗಳು, ಉದ್ಯಾಪನೆಗೋಸ್ಕರ, ಪುಣ್ಯ ಸಂಚಯಕ್ಕೋಸ್ಕರ, ಶಾಂತಿಗೋಸ್ಕರ ಒಂದಲ್ಲ ಒಂದು ವಿಧಾನವನ್ನು ಮಾಡಲು ಪ್ರಾರಂಭಿಸಿದರು. ಎರಡು ಸಲ ಇಲ್ಲಿ 'ತ್ರಿಲೋಕಮಂಡಲ ವಿಧಾನ' ವನ್ನು ಮಾಡಲಾಯಿತು. ಒಂದು ಸಲವಂತೂ ಬಹಳ ವಿಜೃಂಭಣೆಯಿಂದ ಮಾಡಿಸಿ ಜನರಲ್ಲಿ ಒಳ್ಳೆಯ ಧರ್ಮಪ್ರಭಾವನೆ ಆಯಿತು. ಆಶ್ವೀಜ ಶುಕ್ಲ ಪಕ್ಷದಲ್ಲಿ 16 ದಿನದ ಶಾಂತಿವಿಧಾನವನ್ನು ಒಬ್ಬ ಶ್ರಾವಕರು ಬಹಳ ಶ್ರದ್ಧೆಯಿಂದ ಮಾಡಿದರು. ಹದಿನಾರು ದಿನವು ಕೂಡ ಪ್ರತ್ಯೇಕ ಪ್ರತ್ಯೇಕ ಫಲಗಳನ್ನು ಉಪಯೋಗಿಸಿದ್ದರು. ಒಂದು ದಿನವಂತೂ ಅಡಿಕೆಕಾಯಿಗಳನ್ನು ಇಟ್ಟಿದ್ದು ನೋಡಲು ಬಹಳ ಚೆನ್ನಾಗಿ ಕಾಣಿಸುತ್ತಿತ್ತು. ನನಗಂತೂ ಇದು ಬಹಳ ಹೊಸದಾಗಿ ಕಾಣಿಸಿತು.

ಕಾರ್ತಿಕದ ಅಷ್ಟಾಹ್ನಿಕದಲ್ಲಿ ನಂದಗಾಂವ್‌ನಲ್ಲಿ ಪೂನಮಚಂದ ಲುಹಾಡಿಯಾರವರು, ಸಿದ್ಧಚಕ್ರದ ವಿಧಾನವನ್ನು ಬಹಳ ಚೆನ್ನಾಗಿ ನಡೆಸಿದರು. ಇಲ್ಲಿ ಒಟ್ಟು 54 ವಿಧಾನಗಳಾಗಿದ್ದವು. ನನಗೆ ನೆನಪಿದ್ದಂತೆ ಚಾತುರ್ಮಾಸದಲ್ಲಿ ಇಷ್ಟೊಂದು ವಿಧಾನಗಳು ಆಗಿರಲಿಲ್ಲ. ಈ ವಿಧಾನಗಳು ನಡೆಯುವಾಗ ಇಬ್ಬರು ಶ್ರಾವಕರು ಕುಳಿತುಕೊಂಡು ಮಾತಾಡುತ್ತಿದ್ದರು. ಈ ವಿಧಾನಗಳಿಗೆಲ್ಲ ಎಷ್ಟು ಖರ್ಚಾಗಬಹುದು.

ಈ ವಿಧಾನವನ್ನು ಮಾಡಲು ನಾವೇನೂ ಪ್ರೇರಣೆ ಕೊಟ್ಟಿಲ್ಲ. ಆದರೆ ಹೆಂಗಸರುಗಳೇ ತಮಗೆ ಬೇಕಾದ ವಿಧಾನಗಳನ್ನು ಮಾಡಿಸುತ್ತಿದ್ದಾರೆ. ಒಂದು ವಿಧಾನವನ್ನಂತು ಗಂಡಸರೇ (ಪ್ರೇಮ) ಸಂತೋಷದಿಂದ ಸಂಸಾರ ಸಮೇತರಾಗಿ ಮಾಡಿದರು. ಇದರಲ್ಲಿ ವಿಧಾನಕ್ಕೆ ಬೇಕಾದ ಸಾಮಾಗ್ರಿಗಳನ್ನು ಜನರೇ ತರುತ್ತಿದ್ದರು. ಮಂಡಲ ಬರೆಯುವುದು ಮುಂತಾದವುಗಳನ್ನು ಝೂಮರಮಲ್ಲ ಮುಂತಾದ ಹುಡುಗರು ಮಾಡಿಕೊಡುತ್ತಿದ್ದರು. ವಿಧಾನದ ವಿಧಿ ವಿಧಾನಗಳನ್ನು ಆರ್ಯಿಕೆಯರಾದ ಜಿನಮತಿ, ಆದಿಮತೀ ಮೊದಲಾದವರು ಮಾಡಿಸುತ್ತಿದ್ದರು ಹೀಗಾಗಿ ವಿಶೇಷವಾದ ಖರ್ಚುಗಳೇನೂ ಜನರಿಗೆ ಆಗುತ್ತಿರಲಿಲ್ಲ. ಹೀಗಾಗಿ ಈ ಇಬ್ಬರು ಜಿಪುಣರ ಮಾತುಗಳನ್ನು ಕೇಳಿದ ಹೆಂಗಸರು ನಗತೊಡಗಿದರು. ಇವರಂತೂ ಯಾವುದೇ ವಿಧಾನಗಳನ್ನು ಮಾಡಲಿಲ್ಲ ಏನು ಉಳಿಸಿ ಚಿನ್ನದ ಮನೆ ಕಟ್ಟುತ್ತಾರೆ. ನಾವು ನಮ್ಮ ನಮ್ಮ ಸುಖ, ಶಾಂತಿ, ಮತ್ತು ಸಮೃದ್ಧಿಗೋಸ್ಕರ ಮಾಡಿಸುತ್ತಿದ್ದೇವೆ. ಇದರಲ್ಲಿ ಇವರನ್ನು ಯಾರು ಕೈ ತೂರಿಸಲು ಹೇಳಿದ್ದು. ಹೇಳುತ್ತಿದ್ದ ನನ್ನ ಹತ್ತಿರವಂತೂ ಯಾವ ವಿಧಾನವನ್ನು ಏಕೆ ಮಾಡುತ್ತೀರಾ, ಬೇಡ ಎನ್ನುವ ಪ್ರಸ್ತಾಪಗಳು ಬಂದೇ ಇರಲಿಲ್ಲ. ಹಾಗೂ ಒಬ್ಬ ತಿಳುವಳಿಕೆಯಿದ್ದ ಹೆಂಗಸೇ ಬಂದು ಹೇಳಿದರು. ಮಾತಾಜೀ ಈ ಜಿಪುಣ ಮಹಿಳೆಯರಿಗೆ ತಿಳುವಳಿಕೆ ಹೇಳಿ ಯಾವುದಾದರೂ ಒಂದು ಚಿಕ್ಕ ವಿಧಾನವನ್ನಾದರೂ ಮಾಡಿಸಿ ಎಂದರು. ಸರಿ ಎಂದು ನಾನು ಒಂದು ದಿನ ಅವರಿಗೆ ಹೇಳಿದೆ. ನೀವು ಒಂದು ನವಗ್ರಹ ಆರಾಧನೆಯನ್ನು ಮಾಡಿಸಿರಿ. ಮನೆಯಲ್ಲಿ ಶಾಂತಿ ನೆಲಸುತ್ತದೆ ಒಳ್ಳೆಯದು ಆಗುತ್ತದೆ ಎಂದೆ. ತಕ್ಷಣ ಅವರು ಸಂತೋಷದಿಂದ ಸಾಮಾನುಗಳನ್ನು 9 ವಿಧದ ಫಲಗಳನ್ನು ಇಟ್ಟು ನವಗ್ರಹ ಆರಾಧನೆಯನ್ನು ಮಾಡಿಯೇ ಬಿಟ್ಟರು. ಇದನ್ನು ನೋಡಿದ ಆ ಹೆಂಗಸಿಗಂತು ಬಹಳ ಆನಂದವಾಯಿತು. ಹೀಗೆ 1964 ರ ಚಾತುರ್ಮಾಸದಲ್ಲಿ 56 ವಿಧಾನಗಳು ನಡೆದವು. ಇಂದ್ರಧ್ವಜ ಆರಾಧನೆ ಮಾಡಬೇಕೆಂಬ ಸಂಕಲ್ಪವಿದ್ದರು ಅದರ ಸಂಸ್ಕೃತ ಹಸ್ತಪ್ರತಿ ದೊರೆಯದ ಕಾರಣ ಈ ವಿಧಾನವನ್ನು ಮಾಡಲಾಗಲಿಲ್ಲ. ಇದನ್ನು ನಾನು ಯಾವಾಗ 1976 ರಲ್ಲಿ ಹಿಂದಿಯಲ್ಲಿ ಮಾಡಿದೆನೋ ಆಗ ಇಡೀ ಭಾರತವರ್ಷದಲ್ಲಿ ಸುಮಾರು 1000 ಕಡೆ ಆಗಿದೆ.

ಮಂದಿರದ ಮೇಲೆ ಶಿಬಿರದ ನಿರ್ಮಾಣ

ಒಮ್ಮೆ ನಾನು ಶ್ರಾವಕರನ್ನು ಕೇಳಿದೆ ಇಲ್ಲಿ ಐದು ದೇವಸ್ಥಾನಗಳಿವೆ ಆದರೆ ಯಾವುದರ ಮೇಲೆಯೂ ಶಿಖರಗಳೇ ಇಲ್ಲವಲ್ಲವೆಂದೆ. ಅದಕ್ಕೆ ಯಾರೋ ಹೇಳಿದರು ಇಲ್ಲಿ ಮುಸ್ಲಿಮರ ಆಡಳಿತ ಇದ್ದುದ್ದರಿಂದ ಅವರು ಮಸೀದಿಯನ್ನು ಬಿಟ್ಟು ಬೇರೆ ಯಾವುದರಲ್ಲೂ ಶಿಖರ ಇರಬಾರದೆಂಬ ವಿರೋಧ ಇದ್ದುದ್ದರಿಂದ ನಮ್ಮ ಮಂದಿರಗಳಲ್ಲಿ ಶಿಖರವಿಲ್ಲ ಎಂದರು. ಅದಕ್ಕೆ ನಾನು ಈಗ ಭಾರತ ಸ್ವಾತಂತ್ರ ಆಗಿರುವುದರಿಂದ ಯಾವುದೇ ನಿರ್ಬಂಧವಿಲ್ಲವಲ್ಲ ಎಂದೇ, ಅದಕ್ಕೆ ಅವರು ಆಯಿತು. ಮಾತಾಜೀ ಈಗ ತಾವು ಪ್ರೇರಣೆಯನ್ನು ಕೊಡಿ ಎಂದರು. ಹಾಗೇ ನಾನು ಶಿಖರದ ಬಗ್ಗೆ ಜನಗಳಲ್ಲಿ ಹೇಳುತ್ತಲೇ ಇದ್ದೆ. ಜಯಚಂದ್ರ ಲುಹಾಡಿಯಾರವರಿಗೂ ಜನಗಳು ಪ್ರೋತ್ಸಾಹ ಕೊಡುತ್ತಲೇ ಇದ್ದುದ್ದರಿಂದ ಅವರು ಮಾತಾಜೀ ಆಜ್ಞೆ ಕೊಟ್ಟ ಕೂಡಲೆ ಶಿಖರದ ಕೆಲಸ ಪ್ರಾರಂಭಿಸೋಣ ಎಂದರು.

ಜನರು ಬಂದು ನನ್ನ ಹತ್ತಿರ ವಿನಯದಿಂದ ಜಯಚಂದ್ರರವರಿಗೆ ನೀವು ಹೇಳಿ ಎನ್ನ ತೊಡಗಿದರು. ನಾನು ಗಮನಹರಿಸಲಿಲ್ಲ ಆದರೂ ಯೋಚಿಸಿದೆ ನಾನೇನು ಆಜ್ಞೆ ಕೊಡುವುದು. ಹೇಳಿಯಂತೂ ಆಗಿದೆ. ಶಿಖರವನ್ನು ಅವರೇ ಮಾಡಿಸಬೇಕು ಆದರೆ ಜನಗಳು ಈ ಬಗ್ಗೆ ಜಾಸ್ತಿ ಒತ್ತಾಯ ಮಾಡತೊಡಗಿದರು. ಒಂದು ದಿನ ಜಯಚಂದ್ರರು ದರ್ಶನಕ್ಕಾಗಿ ಬಂದಾಗ ನಾನು ಹೇಳಿದೆ. ಜಯಚಂದ್ರರೇ ಮಂದಿರಕ್ಕೆ ಶಿಖರ ಹಾಕಿಸುತ್ತೀರಲ್ಲವೇ ಎಂದೆ ಅದಕ್ಕೆ ಅವರು ನೀವು ಆಜ್ಞೆ ಕೊಡುತ್ತಲೇ ಕೆಲಸ ಪ್ರಾರಂಭಿಸುತ್ತೇವೆ ಎಂದರು.

ನಾನು ಮೂಹೂರ್ತ ಇಡಿಸಿಕೊಟ್ಟೆ. ಜಯಚಂದ್ರರು ಕೇಶರಭಾಗ ಮಂದಿರದ ಮೇಲೆ ಶಿಖರದ ಕೆಲಸ ಪ್ರಾರಂಭಿಸಿದರು. ಇಲ್ಲಿಯ ಜನಗಳು ಕಲ್ಕತ್ತೆಯ ಜನರಂತೆ ಸತ್ಯಾಗ್ರಹ ಮಾಡಿ ಚಾತುರ್ಮಾಸದ ನಂತರವೂ ನನ್ನನ್ನು ಶಿಖರದ ಕೆಲಸವಾಗಿ ಜಿನಪ್ರತಿಮೆಯ ಪ್ರತಿಷ್ಠಾಪನೆಯಾಗುವವರೆಗೂ ಹೊರಡಲು ಬಿಡಲಿಲ್ಲ. ಮಾರ್ಗಶಿರ ಮಾಸದಲ್ಲಿ ಪ್ರತಿಷ್ಠಾಪನೆ ನಿಶ್ಚಯವಾಯಿತು. ನನ್ನ ಪ್ರೇರಣೆಯಿಂದಲೇ ಬ್ರ. ಸೂರಜಮಲ್ಲರನ್ನು ಕರೆಸಿಕೊಂಡರು. ಇವರ ಮೂಲಕ ಶಿಖರದಲ್ಲಿ ವೇದಿ ಶುದ್ಧ ಮತ್ತು ಭಗವಂತನನ್ನು ವಿರಾಜಮಾನಗೊಳಿಸುವ ಕೆಲಸ ಆಯಿತು.

ಗೃಹ ಚೈತ್ಯಾಲಯ

ಇಲ್ಲಿ ದೇವಸ್ಥಾನದಿಂದ ಮನೆಗಳು ದೂರದಲ್ಲಿದ್ದರಿಂದ ಶ್ರಾವಕರಿಗೆ ಪ್ರತಿದಿನ ದೇವದರ್ಶನಕ್ಕೆ ಬರುವುದು ದುಸ್ತರವಾಗಿತ್ತು. ಆಗ ನನ್ನ ಪ್ರೇರಣೆಯಿಂದ ನಂದಲಾಲರು ತಮ್ಮ ಮನೆಯಲ್ಲಿಯೇ ಚಿಕ್ಕದಾದ ಚೈತ್ಯಾಲಯವನ್ನು ಕಟ್ಟಿಸಿದರು. ಇದಕ್ಕೆ (ವೇದ) ಪೀಠ ಶುದ್ಧಿ ಮತ್ತು ಜಿನ ಪ್ರತಿಮೆಯ ಸ್ಥಾಪನೆಯ ಕೆಲಸವನ್ನು ಬ್ರಹ್ಮಚಾರಿಯೇ ನಿಂತು ಮಾಡಿಸಿದರು.

ಕೇಶಲೋಚ ಮತ್ತು ಧರ್ಮ ಪ್ರಭಾವನೆ

ಇಲ್ಲಿಯ ಶ್ರಾವಕರು ನಮ್ಮೆಲ್ಲರ ಕೇಶಲೋಚನ ಸಮಾರಂಭವನ್ನು ತೆರೆದ ಮೈದಾನದಲ್ಲಿ ದೊಡ್ಡ ಪೆಂಡಾಲ ಹಾಕಿ ಸಾವಿರಾರು, ಜೈನರು, ಜೈನೇತರರು ಕೂಡ ನೋಡಿ ಪ್ರಭಾವಿತರಾಗುವಂತೆ ಏರ್ಪಡಿಸಿದ್ದರು. ನನ್ನ ಪ್ರವಚನಕ್ಕಂತು ಆಬಾಲ ವೃದ್ಧರು ಬರುತ್ತಿದ್ದರು.

ನನ್ನ ಸಾನಿಧ್ಯಕ್ಕೆ ಶ್ವೇತಾಂಬರ ಸಂಪ್ರದಾಯದ ಸಾಧು - ಸಾಧ್ವಿಯರು, ಯತಿಗಳು ಬರುತ್ತಿದ್ದರು. ಒಮ್ಮೆ ಆನಂದಜೀ ಕಲ್ಯಾಣಜೀ ಪೇಢಿಯವರ ಪ್ರಮುಖರಾದ ಕಸ್ತೂರಿಬಾಯಿಯವರು ಸ್ವಯಂ ದರ್ಶನಕ್ಕಾಗಿ ಬಂದಿದ್ದರು. ಸಾಕಷ್ಟು ವಿಷಯಗಳನ್ನು ಚರ್ಚಿಸಿದೆವು. ನಂತರ ಅವರು ಹೇಳಿದರು ನಾನೊಂದು ನಿಯಮ ಮಾಡಿದ್ದೇನೆ ಯಾರಿಗೆ ಗಂಡು ಮಕ್ಕಳು ಇಲ್ಲವೋ ಅವರು ದತ್ತುಪುತ್ರನನ್ನು ತೆಗೆದುಕೊಳ್ಳುವುದಿಲ್ಲ ಅದಕ್ಕೆ ಪ್ರತಿಯಾಗಿ ಅವರ ಇಡೀ ಸಂಪತ್ತನ್ನು ಸಂಸ್ಥೆಗೆ ಬರೆದುಬಿಡುತ್ತಾರೆ. ಆದ್ದರಿಂದ ನಮ್ಮ ಸಂಘ ಬಹಳ ಸದೃಢವಾಗಿದೆ. ಈ ಹಣದಿಂದ ನಾವು ಅನೇಕ ತೀರ್ಥಕ್ಷೇತ್ರಗಳ ಉದ್ಧಾರ ಮತ್ತು ಬೇರೆ ಒಳ್ಳೆ ಕೆಲಸಗಳನ್ನು ಮಾಡುತ್ತಿದ್ದೇವೆ. ಇವರ ಮಾತು ನನಗೂ ಬಹಳ ಹಿಡಿಸಿತು.

ಇವತ್ತು ನಾನು ಯೋಚಿಸುತ್ತೀನಿ ದಿಗಂಬರ ಜೈನ ಸಮಾಜದಲ್ಲಿ ದೊಡ್ಡ - ದೊಡ್ಡ ಲಕ್ಷಾಧಿಪತಿಗಳು ಇದ್ದಾರೆ. ಮಕ್ಕಳ್ಳಿಲ್ಲದಿದ್ದರೆ ದತ್ತು ಪುತ್ರನನ್ನು ತೆಗೆದುಕೊಳ್ಳುತ್ತಾರೆ. ಅವರು ತಂದೆ, ತಾಯಿಗಳಿಗೆ ಏನು ಸುಖ ಕೊಡುತ್ತಾರೋ ಅಂತಹ ಮಕ್ಕಳು ದುರ್ವ್ಯಸನಿಗಳಾಗಿದ್ದಾರೆ. ತಮ್ಮ ದುಡಿಮೆಯ ಸಂಪತ್ತು ಹಾಳಾಗುತ್ತಿರುವುದನ್ನು

ನೋಡಿದಾಗಲಾದರೂ ಅವರು ಯೋಚಿಸಬೇಕು ಮತ್ತು ತಂದೆ - ತಾಯಿಗಳು ತಾವು ದುಡಿದ ಹಣ ಎಷ್ಟು ಸಾಧ್ಯವೋ ಅಷ್ಟು ದಾನ ಧರ್ಮಗಳಲ್ಲಿ ತೊಡಗಿಸುವುದು ತಮ್ಮ ಕರ್ತವ್ಯವೆಂದು ತಿಳಿಯಬೇಕು.

ಅವರ ದಾನ ಮುಂದಿನ ಭವದಲ್ಲಿ ಅಸಂಖ್ಯಾತಪಟ್ಟಾಗುತ್ತದೆ. ಆದರೆ ಮಕ್ಕಳಿಗಾಗಿ ಸಂಪತ್ತನ್ನು ಸಂಗ್ರಹಿಸಿಡುತ್ತಾರೆ. ಒಂದು ನೀತಿಯು ಇದೆ.

ಯದಿ ಪುತ್ರಃ ಸುಪುತ್ರಃ ಸ್ಯಾತ್ ಸಂಪದಾ ಕಿಂ ಪ್ರಯೋಜನಮ್ ।
ಯದಿ ಪುತ್ರಃ ಕುಪುತ್ರಃ ಸ್ಯಾತ್ ಸಂಪದಾ ಕಿಂ ಪ್ರಯೋಜನಮ್ ॥

ಒಳ್ಳೆಯ ಮಗನಾದರೇ ತಾನೇ ಸಂಪಾದಿಸಿ ತಿನ್ನುತ್ತಾನೆ, ಒಂದು ವೇಳೆ ಕೆಟ್ಟ ಮಕ್ಕಳಾದರೆ ಕೆಟ್ಟ ಸಹವಾಸದಲ್ಲಿ ಬಿದ್ದು ದುರ್ಗತಿಗಳಿಗೆ ಹೋಗುತ್ತಾರೆ. ಇಡೀ ವಂಶವನ್ನೇ ಹಾಳು ಮಾಡುತ್ತಾರೆ. ನಾವು ನಮ್ಮ ಸಮಾಜದಲ್ಲಿ ದತ್ತು ಪುತ್ರರ ಪರಂಪರೆಯನ್ನು ತಡೆಯಲು ಸಾಧ್ಯವಾಗದಿದ್ದರೂ, ತಮ್ಮದೇ ಪರಿವಾರದ ಮಗುವನ್ನು ದತ್ತು ತೆಗೆದುಕೊಳ್ಳಲಿ ಅಥವಾ ಯಾರೂ ಇಲ್ಲ ಎಂದರೆ ಹೆಂಡತಿಯ ಕಡೆಯವರನ್ನು ತೆಗೆದು ಕೊಳ್ಳಲಿ. ಇಲ್ಲ ನಮ್ಮ ಜಾತಿಯ ಮಕ್ಕಳನ್ನು ತೆಗೆದುಕೊಳ್ಳಲಿ. ನಮ್ಮ ಕುಲ ಜಾತಿಯ ಸಂಸ್ಕಾರ ಉಳಿಸಲಿ. ಅಂತರ್ಜಾತಿಯ ಮಿಲನವನ್ನು ತಡೆಯಬೇಕು.

ಈ ದಿನಗಳಲ್ಲಿ ಜಾತಿ, ಕುಲ ಗೊತ್ತಿಲ್ಲದ ಮಕ್ಕಳನ್ನು ದತ್ತು ತೆಗೆದುಕೊಳ್ಳುತ್ತಾರೆ ಇಂತಹ ಮಕ್ಕಳು ವ್ಯಭಿಚಾರಿಣಿಯರ ಸಂತಾನವು ಆಗಿರಬಹುದು. ಇವರಲ್ಲಿ ಪವಿತ್ರತೆ, ಸಚ್ಚಾರಿತ್ರಗಳಿದ್ದಲ್ಲಿ ಮಕ್ಕಳನ್ನು ಅನಾಥರಾಗಿ ಬಿಡುತ್ತಿರಲಿಲ್ಲ. ಅಂತಹ ಮಕ್ಕಳನ್ನು ದತ್ತು ತೆಗೆದುಕೊಂಡು ನಾವು ಕುಲದ ಪರಂಪರೆಯನ್ನು ಧರ್ಮ ಪರಂಪರೆಯನ್ನು ಹೇಗೆ ರಕ್ಷಿಸಿಕೊಂಡು ಬರಲು ಸಾಧ್ಯ.

ದೆಹಲಿಯಲ್ಲಿ ಒಬ್ಬ ಪ್ರಬುದ್ಧ ಮಹಿಳೆ ಇಂತಹ ಮಕ್ಕಳನ್ನು ಸಾಕುತ್ತಿದ್ದಾರೆ. ಒಳ್ಳೆ - ಒಳ್ಳೆ ಜೈನ ಮನೆಗಳಿಗೆ ದತ್ತು ಕೊಡುತ್ತಿದ್ದಾರೆ. ಇದನ್ನು ನೋಡಿದಾಗ ನನಗೆ ಬಹಳ ದುಃಖವಾಯಿತು. ಭಗವಂತನೇ ಸಚ್ಚಾತಿತ್ವವನ್ನು ಹೇಗೆ ರಕ್ಷಣೆ ಮಾಡಿಕೊಳ್ಳುವುದೆಂದು.

ರಥಯಾತ್ರೆ

ಹೈದರಬಾದಿಗೆ ದರ್ಶನ ಮಾಡಿ, ಆಹಾರ ಕೊಡಲು ಕಟಕನಿಂದ ಘತೇಹಚಂದ ಮತ್ತು ಅವರ ಹೆಂಡತಿ ಬಂದಿದ್ದರು. ಸುಮಾರು ಒಂದು ತಿಂಗಳು ಇದ್ದರು. ಚೆನ್ನಾಗಿ ಭಕ್ತಿ ತೋರಿಸಿದರು. ಇವರು ಕೇಶರಬಾಗದಲ್ಲಿಯೇ ಚೌಕ ಮಾಡುತ್ತಿದ್ದರು. ಬೆಳಗ್ಗೆ ಭಗವಂತನ ಪೂಜೆ ಮುಗಿಸಿ ಚೌಕಕ್ಕೆ ಹೋಗುತ್ತಿದ್ದರು ಚೌಕದಲ್ಲಿ ಆಹಾರ ಸಿದ್ಧಪಡಿಸುವಲ್ಲಿಯಾ ರಸ ತೆಗೆಯುವುದು ಹಣ್ಣುಗಳನ್ನು ಹಚ್ಚುವುದು ಮುಂತಾದ ಕೆಲಸಗಳನ್ನು ಬಹಳ ಎಚ್ಚರಿಕೆಯಿಂದ ಮಾಡುತ್ತಿದ್ದರು. ಜನರು ಇವರ ಚೌಕವನ್ನು ನೋಡುವುದಕ್ಕಾಗಿಯೇ ಕೌತುಕದಿಂದ ಸೇರುತ್ತಿದ್ದರು. ಇಲ್ಲಿಯ ಯಾವ ಪುರುಷರು ಶುದ್ಧ ಜಲದ ನಿಯಮವನ್ನು ತೆಗೆದುಕೊಂಡಿರಲಿಲ್ಲ ಅಂತಹವರಿಗೆ ಇವರು ಮಾಡುವ ಚೌಕವನ್ನು ನೋಡಿ ಆಶ್ಚರ್ಯ ಪಡುತ್ತಿದ್ದರು.

ಒಂದು ದಿನ ಮಧ್ಯಾಹ್ನದಲ್ಲಿ ಘತೇಹಚಂದರು ನನ್ನಲ್ಲಿ ಕೇಳಿದರು. ಮಾತಾಜೀ ನನಗೆ ಏನನ್ನಾದರು ಹೇಳಿ ತಾವು ಏನನ್ನು ಹೇಳಿದರೂ ನಾವು ಮಾಡುತ್ತೇವೆ ಎಂದರು. ಆಗ ನಾನು ಯೋಚಿಸಿದವಳೇ ಇಲ್ಲಿ ಮುಸಲ್ಮಾನರ ಆಡಳಿತದಿಂದಾಗಿ ರಥಯಾತ್ರೆಯು ನಡೆದಿಲ್ಲ ಈಗಲೂ ಜನರಿಗೆ ಹೊರಡಿಸಲು ಧೈರ್ಯ ಸಾಲದಾಗಿದೆ. ಆದ್ದರಿಂದ

ತಾವು ರಥಯಾತ್ರೆ ಹೊರಡಿಸಬೇಕು ಎಂದೆ ಅವರು ಮೂರು ನಾಲ್ಕು ದಿನಗಳ ಒಂದು ವಿಧಾನವನ್ನು ಮಾಡಿಸಿ ಸಮಾಜದ ಜನಗಳ ಜೊತೆ ವಿಚಾರ ವಿಮರ್ಶೆಯನ್ನು ಮಾಡಿ ರಥಯಾತ್ರೆಯ ಕಾರ್ಯಕ್ರಮವನ್ನು ಸಿದ್ಧಗೊಳಿಸಿದರು. ಅಲ್ಲಿ ರಥ ಇರಲಿಲ್ಲ ಆದರೂ ತೆರೆದ ಜೀಪಿನಲ್ಲಿಯೇ ರಥದಂತೆ ಮಾಡಿ ಅದರಲ್ಲಿ ಗಂಧಕುಟಿಯನ್ನು ಇಟ್ಟು ಭಗವಂತನ ಪ್ರತಿಮೆಯನ್ನು ಇಡಿಸಿ ಬ್ಯಾಂಡು ಭಜಂತ್ರಿಗಳಿಂದ ಮೆರವಣಿಗೆಯನ್ನು ಪಟ್ಟಣದ ಮಾರ್ಗಗಳಲ್ಲಿ ರಥಯಾತ್ರೆಯನ್ನು ಹೊರಡಿಸಿದರು. ರಥದ ಸಮಯದಲ್ಲಿ ಜಾತ್ರೆ - ಗಿತ್ರೆ ಏನೂ ಆಗದಿದ್ದರೂ ಚಿಕ್ಕ ರೂಪದಲ್ಲಿಯೇ ರಥಯಾತ್ರೆಯು ಆಗಿದ್ದು ಅದು ಮೊದಲ ಸಲ ಜೈನರಲ್ಲಿ ಒಳ್ಳೆಯ ಉತ್ಸಾಹವನ್ನು ಮತ್ತು ಜೈನೇತರರಲ್ಲಿ ಧರ್ಮ ಪ್ರಭಾವನೆಯನ್ನು ಉಂಟುಮಾಡಿತು.

ನಾನೆಂದುಕೊಂಡೆ ಯಾವುದೇ ಹೊಸ ವ್ಯವಸ್ಥೆಯನ್ನು ಜಾರಿಗೆ ತರುವಾಗ ಬಹಳ ತೊಂದರೆಗಳು ಎದುರಾಗುತ್ತವೆ ಜನಗಳನ್ನು ಒಪ್ಪಿಸುವುದು ಕಷ್ಟವೇ ಆದರೆ ಸಫಲತೆಯು ಸಿಕ್ಕಿತು ಎಂದಾಗ ಬಹಳ ಖುಷಿ ಪಡುತ್ತಾರೆ. ಆಮೇಲೆ ಹೇಳುತ್ತಾರೆ ಈ ಕೆಲಸ ಯಾವಾಗಲೂ ಮಾಡೋಣವೆಂದು.

ಜೀವು ಬಾಯಿಯ ಭಕ್ತಿ

ನಾನಾಚಂದರ ಧರ್ಮಪತ್ನಿ ಜೀವುಬಾಯಿ ಒಬ್ಬ ಧಾರ್ಮಿಕ ಮಹಿಳೆ ಚಾತುರ್ಮಾಸದಲ್ಲಿ ಬಹಳಷ್ಟು ದಿನ ಕೇಶರಭಾಗನಲ್ಲಿ ಚೌಕ ಮಾಡಿ ಆಹಾರ ಕೊಡುತ್ತಿದ್ದರು. ಮಧ್ಯಾಹ್ನ ನಾನು ತುಂಬಾ ಅಸ್ವಸ್ಥಳಾಗಿದ್ದಾಗ ನನಗೆ ಹತ್ತಿರ ಕುಳಿತು ಸ್ವಾಧ್ಯಾಯ ಮಾಡಿಸುತ್ತಿದ್ದರು. ಇವರು ವಿಶೇಷ ಭಕ್ತಿಯನ್ನು ತೋರಿಸುತ್ತಿದ್ದರು. ಇವರ ಮಗ ಅಮೆರಿಕಾಕ್ಕೆ ಹೋಗುವವನಿದ್ದ ಹಾಗಾಗಿ ಒಮ್ಮೆ ಇವರು ಮಾತಾಜೀ ನನ್ನ ಮಗನಿಗೆ ಧರ್ಮವನ್ನು ಉಳಿಸುವಂತಹ ಉಪದೇಶ ನೀಡಬೇಕೆಂದು ಕೇಳಿಕೊಂಡರು. ನಾನು ಅರುಣಕುಮಾರನನ್ನು ಏಕಾಂತದಲ್ಲಿ ಕರೆದು ಕೆಲವು ವ್ರತಗಳನ್ನು ತಿಳುವಳಿಕೆ ಹೇಳಿದ್ದರಿಂದ ಕೆಲವು ನಿಯಮಗಳನ್ನು ಗ್ರಹಣ ಮಾಡಿದ ಮತ್ತು ಅಲ್ಲಿಗೆ ಹೋದ ಮೇಲೆ ಪತ್ರವನ್ನು ಬರೆದ. ನಾನು ನನ್ನ ಕೈಯಿಂದಲೇ ಅಡುಗೆ ಮಾಡಿ ಊಟ ಮಾಡುತ್ತಿದ್ದೇನೆ ಸ್ವಲ್ಪ ಕಾಲವಾದ ಮೇಲೆ ಬಂದು ಸೋಲಾಪುರದ ಸ್ವಜಾತಿಯ ಕನ್ಯೆಯನ್ನೇ ಮದುವೆಯಾದ. ತನ್ನ ಸಾತ್ವಿಕ ಪ್ರವೃತ್ತಿಯಿಂದ ತಂದೆ ತಾಯಿಗಳಿಗೂ ಪ್ರಿಯನಾದ ನನಗೂ ಬಹಳ ಸಂತೋಷವಾಯಿತು. ಹೀಗೆ ನವಯುವಕರು ಸಮಾಜಕ್ಕೆ ಮಾದರಿಯಾಗಬೇಕು.

ಯಾತ್ರೆಗೆ ವಿಘ್ನ

ನಾನು ಇಲ್ಲಿಗೆ ಬರುತ್ತಲೇ ಅಸ್ವಸ್ಥಳಾದೆ. ಮಧ್ಯದಲ್ಲಿ ಒಂದು ಸಲ ಆರ್ಯಿಕೆ ಆದಿಮತಿಗೆ ಹುಷಾರಿಲ್ಲದಂತೆ ಆಯಿತು. ನಾವಿಬ್ಬರು ಹುಷಾರಾದೆವು. ಆದರೆ ಜಿನಮತಿ ಹಲವಾರು ಬಾರಿ ಹೇಳತೊಡಗಿದರು ಅಮ್ಮ ನಾವು ಶ್ರವಣಬೆಳಗೊಳಕ್ಕೆ ಹೋಗದಿದ್ದರೆ ಆಗುವುದಿಲ್ಲವೇ ಬಾಹುಬಲಿಯ ದರ್ಶನ ಮಾಡದೇ ಇದ್ದರೆ ನಮ್ಮ ಜೀವನ ನಿಷ್ಫಲವಾಗಿ ಬಿಡುತ್ತದೆಯೇ ಎಂದು. ಅವರ ಮಾತುಗಳನ್ನು ಕೇಳಿದ ನನಗೆ ಬಹಳ ದುಃಖವಾಯಿತು.

ನಾನು ಎಂದುಕೊಂಡ ಯಾತ್ರೆ ಮಾಡುವುದಕ್ಕೆ ಇದು ಒಂದು ರೀತಿಯ ವಿಘ್ನವೇ ಸರಿ ನನಗೆ ಶಿಷ್ಯರ ಬಗ್ಗೆ ಒಂದು ರೀತಿಯ ಮೋಹವೇ ಅವರನ್ನು ಸಂಭಾಳಿಸಿಕೊಂಡೇ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕಾಗಿತ್ತು ಅವರುಗಳನ್ನು ಬಿಟ್ಟು ನಾನು ಯಾತ್ರೆ ಮಾಡುವುದನ್ನು ಯೋಚಿಸುತ್ತಿರಲಿಲ್ಲ. ಆದರೂ ಶಾಂತ ಭಾವದಿಂದ ಒಂದು ಜಪ ಮಾಡಲು ಪ್ರಾರಂಭಿಸಿದೆ ಓಂ ಶ್ರೀಂ ಶ್ರೀ ಬಾಹುಬಲಿ ಸ್ವಾಮಿನೇ ನಮಃ ನಾನು ಯಾರಲ್ಲೂ ಏನನ್ನೂ ಹೇಳಲಿಲ್ಲ ಒಂದು ದಿನ ಮಂದಿರದ ಶಾಸ್ತ್ರ ಭಂಡಾರದಲ್ಲಿ ಆರ್ಯಿಕೆ ಜಿನಮತಿಗೆ "ಬಾಹುಬಲಿ

ಅಭಿಷೇಕ" ಎಂಬ ಸ್ಮರಣ ಸಂಚಿಕೆ ದೊರೆಯಿತು ಅದರ ಜೊತೆ ಹರಿದು ಹೋದ ಒಂದೆರಡು ಪುಸ್ತಕದ ಹಾಳೆಗಳು ದೊರೆಯಿತು. ಅದರಲ್ಲಿ ದಕ್ಷಿಣಕ್ಕೆ ಯಾತ್ರೆಯನ್ನು ಗುರುವಾರ ಪುಷ್ಯ ನಕ್ಷತ್ರ ಮತ್ತು ಅಭಿಜಿತ್ ಯೋಗದಲ್ಲಿ ಹೊರಟರೆ ಅದು ಮೃತ್ಯು ಯೋಗವಾಗುತ್ತದೆ ಎಂಬ ವಿಷಯವಿತ್ತು. ನನಗೆ ಮೂಹೂರ್ತ ಜ್ಞಾನದ ಬಗ್ಗೆ ಅಷ್ಟಾಗಿ ಗೊತ್ತಿರಲಿಲ್ಲ ಬ್ರ. ಚಾಂದಮಲ್ಲಜೀ ಈ ಮೂರರ ಬಗ್ಗೆ ಒಳ್ಳೆಯ ತಿಳುವಳಿಕೆ ಹೇಳಿ ನನ್ನ ವಿಹಾರವನ್ನು ಶಿಖರಜೀಯಿಂದ ದಕ್ಷಿಣದ ಕಡೆಗೆ ಮಾಡಿಸಿದ್ದರು. ಅಂತೂ ಆಗುವುದನ್ನು ತಳ್ಳಿಹಾಕಲು ಸಾಧ್ಯವಿಲ್ಲ. ಆದ್ದರಿಂದ ಮುಹೂರ್ತದ್ದು ಏನೂ ದೋಷವಿಲ್ಲ ನಾನು ಸಮ್ಮೇದ ಶಿಖರಕ್ಕೆ ಯಾತ್ರೆ ಹೊರಡುವಾಗಲೂ ಯಾವುದೇ ಮುಹೂರ್ತ ನೋಡಿರಲಿಲ್ಲ. ಆದರೂ ಏನೂ ತೊಂದರೆ ಆಗಿರಲಿಲ್ಲವಲ್ಲ ಜಿನಮತಿ ಬಾಹುಬಲಿಯ ಸ್ಮರಣ ಸಂಚಿಕೆಯನ್ನು ಓದಿದ ಮೇಲೆ ಮಹತ್ವಪೂರ್ಣವಾದವುಗಳನ್ನು ಕೆಂಪು ಶಾಯಿಯಿಂದ ಗುರುತಿಸಿ ನನಗೆ ಹೇಳತೊಡಗಿದರು ಅಮ್ಮ ಏನಾದರೂ ಆಗಲಿ ಬ್ರ. ಬಾಹುಬಲಿಯ ದರ್ಶನವನ್ನು ಮಾಡಿಯೇ ಮಾಡೋಣ ಎಂದಾಗ ನನಗೆ ಶಾಂತಿ ಹರ್ಷ ಉಂಟಾಯಿತು. ಯಾತ್ರೆಗೆ ಇದ್ದ ವಿಘ್ನ ದೂರವಾಯಿತು ನಾನು ಯಾತ್ರೆಯ ರೂಪರೇಷೆಗಳನ್ನು ಸಿದ್ಧಗೊಳಿಸಿದೆ ಶ್ರಾವಕರು ಆಸ್ಥೆಯಿಂದ ವ್ಯವಸ್ಥೆಯಲ್ಲಿ ಪಾಲ್ಗೊಂಡರು.

ರಾಜೂಬಾಯಿಯ ವಿವೇಕ

ಇಲ್ಲಿ ರಾಜೂಬಾಯಿಯೆಂಬ 30-35 ವರ್ಷ ವಯಸ್ಸಿನ ಮಹಿಳೆಯು ಪತಿವಿಯೋಗವಾಗಿ ಇಬ್ಬರು ಮಕ್ಕಳೊಂದಿಗೆ ದುಃಖಿತಳಾಗಿದ್ದಳು. ಆ ಮಹಿಳೆಯನ್ನು ನಾನು ಕರೆದು ಇಲ್ಲಿಗೆ ಬಂದು ಆಹಾರ ದಾನ ಕೊಡು ಉಪದೇಶ ಕೇಳು ಧರ್ಮ ಕಾರ್ಯಗಳಲ್ಲಿ ತೊಡಗಿಕೋ ಅಳುವುದರಿಂದ ಏನೂ ಆಗುವುದಿಲ್ಲ. ಅತ್ತು ಕರೆದು ಮಾಡುವುದರಿಂದ ಅಸಾತಕರ್ಮ ಬಂಧಿತವಾಗಿ ಮುಂದೆ ಪುನಃ ಇಷ್ಟ ವಿಯೋಗ ಅನಿಷ್ಠ ಸಂಯೋಗ ಉಂಟಾಗಿ ಮತ್ತೇ ದುಃಖ ಪಡಬೇಕಾಗುತ್ತದೆ ಎಂದೆ. ನನ್ನ ಮಾತಿಗೆ ತಲೆಬಾಗಿ ಸಂಘದ ಕೆಲಸಗಳಲ್ಲಿ ತೊಡಗಿಕೊಂಡಿದ್ದು ಶ್ರವಣಬೆಳಗೊಳಕ್ಕೂ ಬರಲು ತಯಾರಾಗಿದ್ದಳು. ಆದರೆ ಅವಳ ತಾಯಿ ಮಾತಾಜೀ ವಿಧವೆ ಮಗಳನ್ನು 6 ತಿಂಗಳವರೆಗೆ ದೂರ ಕಳುಹಿಸಿದರೆ ಜನರು ಆಡಿಕೊಳ್ಳುತ್ತಾರೆ ಎಂದು ಭಯಪಟ್ಟರು. ಅದಕ್ಕೆ ನಾನು ಇದು ಒಳ್ಳೆಯ ನಡವಳಿಕೆ ಅಲ್ಲ. ಇದನ್ನು ಬಿಡಿರಿ ವಿಧವೆ ಆದ ಮಹಿಳೆ ದಾನ, ಪೂಜೆ, ಗುರುಗಳ ಸೇವೆ ಮಾಡಬಾರದು ಎಂದು ಎಲ್ಲೂ ಇಲ್ಲ. ತೀರ್ಥಯಾತ್ರೆ ಕೆಟ್ಟದ್ದಲ್ಲ ಎಂದು ತಿಳುವಳಿಕೆ ಹೇಳಿದೆ ಮೇಲೆ ಅವಳ ತಾಯಿ, ಸಹೋದರ ನಂದಲಾಲ ಎಲ್ಲರೂ ನನ್ನ ಉಪದೇಶ ಕೇಳಿ ಆಚ್ಛೆಯನ್ನು ಮನ್ನಿಸಿ ರಾಜುಬಾಯಿಯನ್ನು ನನ್ನ ಜೊತೆ ಕಳುಹಿಸಿಕೊಟ್ಟರು. ಈ ಪ್ರಕಾರ 1964 ನೇಯ ಚಾತುರ್ಮಾಸದಲ್ಲಿ ನನ್ನ ತೀವ್ರ ಅಸ್ವಸ್ಥತೆ ಕು. ಮನೋವತಿಯ ದೀಕ್ಷೆ, 54 ವಿಧಾನಗಳು ಮಂದಿರಕ್ಕೆ ಶಿಖರದ ನಿರ್ಮಾಣ ಮುಂತಾದ ಕಾರ್ಯಗಳು ನಡೆದವು.

೪೭

ಶ್ರವಣಬೆಳಗೊಳದ ಕಡೆ ಯಾತ್ರೆ

ನನ್ನ ಜೊತೆ ಮೂರು ಜನ ಆರ್ಯಿಕೆಯರು ಇಬ್ಬರು ಕ್ಷುಲ್ಲಿಕೆಯರು ಮತ್ತು ಒಬ್ಬ ಬ್ರಹ್ಮಚಾರಿಣಿ ಇದ್ದರು. ಭಂವರಿಬಾಯಿಗೆ ವಯಸ್ಸಾದ್ದರಿಂದ ಯಾತ್ರೆಯ ಪೂರ್ಣ ಜವಾಬ್ದಾರಿಯನ್ನು ಶ್ರಾವಕರೇ ವಹಿಸಿದ್ದರು.

ಮಾಂಗೀಲಾಲರು ಯಜಮಾನಿಕೆ ವಹಿಸಿದ್ದರು. ಯಾತ್ರೆಯಲ್ಲಿ ಅವರದೇ ಬಹಳಷ್ಟು ಸಹಯೋಗವಿತ್ತು. ಅಲ್ಲಿಂದಲೇ ಮಂಗಲಸೇನ ಜೈನರವರು ಜೊತೆಯಲ್ಲಿ ಒಪ್ಪಿದ್ದರು. 7-8 ಜನ ಹೆಂಗಸರಲ್ಲಿ ರಾಜುಬಾಯಿಯವರು ಇದ್ದರು. ಮಾರ್ಗಶಿರ, ಅಂದರೆ ನವೆಂಬರ 1964 ರಲ್ಲಿ ಭ. ಬಾಹುಬಲಿಯ ದರ್ಶನಕ್ಕೆ ವಿಹಾರ ಹೊರೆಟೆವು. ಮಾರ್ಗದಲ್ಲಿ ಆದಿಮತಿಯ ಆರೋಗ್ಯ ವಿಷಮಿಸಿದ್ದರಿಂದ ಅಲ್ಲಲ್ಲೆ ನಿಲ್ಲಬೇಕಾಯಿತು. ಕೊನೆಗೆ ಅವರನ್ನು ಡೋಲಿಯಲ್ಲಿ ವಿಹಾರ ಮಾಡಿಸಲಾಯಿತು. ಅಲ್ಲದೆ ನಮಗೆ ದಾರಿಯಲ್ಲಿ ಜೈನರ ಮನೆಗಳೇ ಸಿಗಲಿಲ್ಲ.

1957-58 ರಲ್ಲಿ ಆಚಾರ್ಯ ಶಿವಸಾಗರರ ವಿಶಾಲ ಸಂಘ ಗಿರಿನಾರ ಯಾತ್ರೆ ಮಾಡುವಾಗ ನಾನು ಆ ಸಂಘದಲ್ಲಿ ಇದ್ದೆ. ಆಗ ವಯೋವೃದ್ಧರಾಗಿದ್ದ ಸುಮತೀಜೀ ಮಾತಾಜೀಗೆ ಡೋಲಿಯ ವ್ಯವಸ್ಥೆ ಮಾಡಿದ್ದರಿಂದ ಅಸ್ವಸ್ಥ ತ್ಯಾಗಿಗಳಿಗೆ ಡೋಲಿಯ ವ್ಯವಸ್ಥೆಗೆ ಅನುಮತಿ ಇದ್ದುದ್ದರಿಂದ ನಾನು ಆ ವ್ಯವಸ್ಥೆ ಮಾಡಿಸಿದೆ. ನಾವು ಇಂದೂಪುರ, ಅನಂತಪುರ ಮಾರ್ಗವಾಗಿ ಅರಸೀಕೆರೆವರೆಗೆ ತಲುಪಿದೆವು. ರಸ್ತೆಯಲ್ಲಿ ನನಗೆ ಆಗಾಗ್ಗೆ ಅಂತರಾಯದಿಂದಲೂ ನಿಲ್ಲಲು ಅನುಕೂಲವಿಲ್ಲದ್ದರಿಂದಲೂ, ಹೆಚ್ಚು ನಡೆಯಬೇಕಾದ್ದರಿಂದಲೂ ಶಾರೀರಿಕವಾಗಿ ಬಹಳ ಕಷ್ಟಗಳನ್ನು ಅನುಭವಿಸಬೇಕಾಯಿತು.

ಮಾಘಮಾಸದ ಚಳಿಯಲ್ಲಿ ತೆರೆದ ಮೈದಾನದಲ್ಲಿ

ಒಮ್ಮೆ ನಾವು ಎಷ್ಟು ಮೈಲಿ ಆಗಬಹುದೆಂದು ಕೊಂಡು ಹೊರಟ್ಟಿದ್ದೇವೋ ಅದಕ್ಕಿಂತಲೂ ದೂರವಾಗಿ ಬಿಡುತ್ತಿತ್ತು. ಅಂದರೆ ನಾವು ಮೊದಲೇ ಊರಿನ ಪ್ರಮುಖರನ್ನು ಕೇಳಿಕೊಂಡು ಎಲ್ಲೆಲ್ಲಿ ತಂಗಬಹುದೆಂದು ಕಾರ್ಯಕ್ರಮ ಮಾಡಿಕೊಂಡೇ ಹೊರಡುತ್ತಿದ್ದೆವು. ಹಾಗೇ ಅವರು 7-8 ಮೈಲಿ ಎಂದಿದ್ದಾರೆ. ಆದರೆ ಆ ಹಳ್ಳಿ 10-12 ಮೈಲಿ ನಡೆದರೂ ನಾವು ಅಲ್ಲಿಗೆ ತಲುಪುತ್ತಿರಲಿಲ್ಲ. ಇನ್ನೇನು ಸೂರ್ಯ ಮುಳುಗೇ ಬಿಟ್ಟ ಇನ್ನೇನು ಮಾಡುವುದು ರಸ್ತೆ ಬಿಟ್ಟು ಬದಿಯಲ್ಲಿಯೇ ಇದ್ದ ಗದ್ದೆಗೆ ಹೋಗಿ ಕುಳಿತೆವು. ಅಲ್ಲಿ ಹುಲ್ಲಿನ ಕಂತೆಗಳನ್ನು ಎತ್ತರಕ್ಕೆ ಪೇರಿಸಿದ್ದರು. ಈ ಕಡೆಯಿಂದ ಸಾಮಾಯಿಕದ ಸಮಯವಾದ್ದರಿಂದ ಶ್ರಾವಕರ ಮೆಟೊಡೊರ್ ರಸ್ತೆಯಲ್ಲಿ ಹಾರ್ನ್ ಮಾಡುತ್ತಾ ಮುಂದೆ ಹೊರಟೆ ಹೋಯಿತು. ಗದ್ದೆಯಲ್ಲಿ ಕುಳಿತಿದ್ದ ನಮ್ಮನ್ನು ಕತ್ತಲೆಯಲ್ಲಿ ಅವರಾದರೂ ಹೇಗೆ ಗುರುತಿಸುತ್ತಾರೆ. ನನ್ನ ಜೊತೆ 15-16 ವರ್ಷದ ಹುಡುಗ ಕಮಂಡಲು ಹಿಡಿದುಕೊಂಡು ಬರುತ್ತಿದ್ದವನು ಮೆಟಡೋರ್‌ನ ಹಾರ್ನ್ ಕೇಳಿ ಅವನು ರಸ್ತೆಗೆ ಬರುವಷ್ಟರಲ್ಲಿ ಅದು ಮುಂದೆ ಹೋಗಿರುತ್ತಿತ್ತು ಸುಮಾರು 9-10 ಗಂಟೆಯವರೆಗೂ ಆ ಕಡೆಯಿಂದ ಈ ಕಡೆಗೆ ಸುತ್ತಾಡಿದರು ನಮ್ಮನ್ನು ಅವರು ಗುರುತು ಹಿಡಿಯಲಾರದೆ ಚಿಂತೆಗೆ ಒಳಗಾದರು.

ನಿಜವಾಗಿಯೂ ನಾವು ರಸ್ತೆಯಿಂದ ಸ್ವಲ್ಪ ದೂರದಲ್ಲೇ ಇದ್ದೆವು ಕೊನೆಗೆ ಮಾಘಮಾಸದ ಚಳಿಯಲ್ಲಿ ನಾವು ರಾತ್ರಿ ಗದ್ದೆಯಲ್ಲಿ ಮಲಗಬೇಕಾಯಿತು. ನಿಶ್ಯಕ್ತ ಆರ್ಯಿಕೆಯರಿಗೆ ಬತ್ತದ ಹುಲ್ಲನ್ನು ಹಾಸಿ ಮಲಗಿಸಲಾಯಿತು. ಇಡೀ ರಾತ್ರಿ ಮಹಾಮಂತ್ರವನ್ನು ಜಪಿಸುತ್ತಾ ಕಾಲಕಳೆದೆವು. ಆ ನಿರ್ಜನ ಪ್ರದೇಶದಲ್ಲೂ ನನಗೆ ಭಯ ಆಗಲಿಲ್ಲ, ದುಃಖವೂ ಆಗಲಿಲ್ಲ. ಏಕಾಂಗಿಯಾಗಿ ಆತ್ಮಧ್ಯಾನ ಮಾಡುವ ಅವಕಾಶ ಯಾವಾಗ ದೊರೆಯುತ್ತದೆ. ಹಾಗೇ ಅಂದುಕೊಂಡೆ ಹೇ ಭಗವಂತ ನನಗೆ ಬೆಟ್ಟ, ಗುಡ್ಡ, ಗುಹೆ, ಕಂದರ, ಕಾಡುಗಳಲ್ಲಿ ಏಕಾಂಗಿಯಾಗಿ ಆತ್ಮಧ್ಯಾನ ಮಾಡುವ ಅವಕಾಶ ದೊರೆಯಿತು ಎಂದುಕೊಂಡೆ. ಬೆಳಗ್ಗೆ ಆಗುತ್ತಿದ್ದಂತೆ ಸಾಮಾಯಿಕ ಮಾಡಿ, ರಸ್ತೆಗೆ ಬಂದು ಮುಂದೆ ನಡೆಯತೊಡಗಿದೆವು. ಬಡಪಾಯಿ ಮಂಗಲಸೇನರು ಹುಡುಕುತ್ತಾ ಬರುತ್ತಿದ್ದರು. ನಮ್ಮನ್ನು ನೋಡುತ್ತಲೇ ನಮಸ್ಕರಿಸಿ ಗಾಬರಿಯಿಂದ ಕೇಳಿದರು. ಮಾತಾಜೀ ನೀವು ರಾತ್ರಿಯಲ್ಲಿ ಎಲ್ಲಿದ್ದೀರಿ.

ರೂಮ್ ಇಲ್ಲದೆ ಹುಲ್ಲು ಇಲ್ಲದೆ ಹೇಗೆ ಮಲಗಿದಿರಿ ಎಂದು. ನಾನು ನಗುತ್ತಾ ಎಲ್ಲಾ ವಿಷಯ ತಿಳಿಸಿದೆ. ಅವರುಗಳು ಮಾತಾಜೀ ಸಿಟ್ಟಾಗಿರಬಹುದು, ಸಿಡುಕಬಹುದು ಎಂದು ಎಣಿಸಿದ್ದವರಿಗೆ ನನ್ನ ಮಾತು ಕೇಳಿ ಜೀವದಲ್ಲಿ ಜೀವ ಬಂತು. ಮುಂದೆ ನಡೆದು ಚೌಕದ ವ್ಯವಸ್ಥೆ ಮಾಡಿದರು ಹೀಗೆ ಹಲವಾರು ಸಲ ರಾತ್ರಿಯ ವೇಳೆ ಮಲಗುವ ಸಮಯದಲ್ಲಿ ತೊಂದರೆಗಳು ಬಂದವು. ಆದರೆ ಭಗವಂತನ ಕೃಪೆಯಿಂದ ಯಾವ ತೊಂದರೆಯು ಆಗಲಿಲ್ಲ. ಇನ್ನೊಂದು ರೋಮಾಂಚಕಾರಿ ಘಟನೆ ಮರೆಯಲಾಗದು.

ಒಮ್ಮೆ ನಾವು ಯಾವ ಊರಿನಲ್ಲಿ ನಿಲ್ಲಬೇಕಾಗಿತ್ತು. ಆ ಹಳ್ಳಿಯ ರಸ್ತೆಯ ಬದಿಯಲ್ಲಿ ಹುಲ್ಲನ್ನು ಹಾಕಿ ಮುಂದೆ ಹೋಗಿದ್ದರು. ನಾವು ಬಂದು ನೋಡಿದಾಗ ಇಳಿದುಕೊಳ್ಳುವ ಜಾಗ ಊರಿನ ಒಳಗೆ ಇತ್ತು. ಹೊರಗೆ ರಸ್ತೆಯ ಹತ್ತಿರವೇ ಒಂದು (ಮಂದಿರ) ನರಸಿಂಹ ಮಂದಿರವಿತ್ತು. ನಾನು ಈಗ ರಾತ್ರಿ ಆಗುತ್ತಿದೆ ಇನ್ನು ಊರ ಒಳಗೆ ಹೋಗಿ ಮತ್ತೆ ಬರುವುದಕ್ಕಿಂತ ಈ ಮಂದಿರದಲ್ಲೇ ನಿಂತು ಬಿಡೋಣ ಎಂದು ಯೋಚಿಸಿದೆವು. ಹೇಗೂ ಡೋಲಿಯವರು ನಾಲ್ಕು ಜನರಿದ್ದಾರಲ್ಲ ಎಂದು. ನಾವು ಮಂದಿರದಲ್ಲಿ ನಿಂತ ಮೇಲೆ ಡೋಲಿಯವರು ಊರೊಳಗೆ ಹೋದರು. ನಾವು 6 ಜನ ಅಲ್ಲಿ ಉಳಿದೆವು. ಅರ್ಧರಾತ್ರಿಯಾಯಿತು ನಾವು ಬಾಗಿಲು ತೆಗೆದುಕೊಂಡೆ ಮಲಗಿದ್ದೆವು. ಇದ್ದಕ್ಕಿದ್ದಂತೆ ಚಪ್ಪಲಿಯ ಸದ್ದು ಬರತೊಡಗಿತು ಮೆಟ್ಟಿಲು ಹತ್ತಿ ಒಬ್ಬ ಒಳಗೆ ನುಗ್ಗಿದ. ನಾನು ತಕ್ಷಣ ಪಕ್ಕಕ್ಕೆ ಸರಿದುಕೊಂಡೆ. ಒಳಗೆ ಬಂದವನೆ ಅವನು ಪೀಠದ ಪರದೆಯ ಒಳಗೆ ಹೋಗಿ ಕುಳಿತು ಏನೋ ಮಾಡುತ್ತಿದ್ದ. ಎರಡು ಮೂರು ಸಲ ಹೊರಗೆ ಬಂದ ಆದರೆ ನಮ್ಮನ್ನು ಏನು ಕೇಳಲಿಲ್ಲಅವನಿಗೆ ಅಲ್ಲಿ ಜನರು ಇರುವುದು ಅರಿವಾಗಲಿಲ್ಲ. ಸುಮಾರು 4 ಗಂಟೆಯ ಹೊತ್ತಿಗೆ ಹೊರಗೆ ಹೋದ. ಒಳಗೆ ಬಂದವನೆ ಪೀಠದ ಒಳಗೆ ನುಗ್ಗಿದ. ಬಡ ಬಡಾಯಿಸ ತೊಡಗಿದ. ನಮಗೆಲ್ಲ ಶಕ್ತಿಯೇ ಉಡುಗಿ ಹೋಯಿತು. ನಾನು ಗಾಬರಿಯಿಂದ ಎಲ್ಲರನ್ನು ಎಬ್ಬಿಸಿ, ಎಲ್ಲರು ಕುಳಿತುಕೊಂಡು ಜಪಮಾಡಲು ಹೇಳಿದೆ. ಇದೊಂದು ಉಪಸರ್ಗವೇ ಎಂದು ತಿಳಿದು ಜಪಮಾಡಲು ಪ್ರಾರಂಭಿಸಿದರು. ನಾನು ಮಹಾಮಂತ್ರ ಜಪಿಸತೊಡಗಿದೆ. ಅದರ ನಂತರ ಡೋಲಿವಾಲರು ಬಂದರು. ಬೆಳಗಾದ ಮೇಲೆ ನಾನು ಈ ಸುದ್ದಿಯನ್ನು ಹೇಳಿದಾಗ ದರ್ಶನಕ್ಕೆ ಬಂದಿದ್ದ ಜನರಿಗೆ ಆಶ್ಚರ್ಯ ಹಾಗೂ ಅವರು ಯಾರೋ ಕುಡುಕ ಇರಬೇಕೆಂದು ಭಾವಿಸಿದರು. ಯಾರಾದರೂ ಆಗಿರಲಿ ನಮ್ಮನ್ನು ಏನು ಕೇಳದೆ ಹೋದನಲ್ಲ, ನಮ್ಮೆಲ್ಲರ ಪುಣ್ಯದ ಉದಯದಿಂದ. ಕುಡುಕನಾದರೂ ನಮಗೇನೂ ಕಷ್ಟಕೊಡಲಿಲ್ಲವಲ್ಲ. ಇದೆಲ್ಲ ನಮ್ಮ ಮಹಾಮಂತ್ರದ ಪ್ರಭಾವವೇ ಎಂದುಕೊಂಡೆ.

ದೂರದಿಂದಲೇ ಭ. ಬಾಹುಬಲಿಯ ದರ್ಶನ

ಶ್ರವಣಬೆಳಗೊಳ ತಲುಪುವ ಮೊದಲೆ ಭ. ಬಾಹುಬಲಿಯ ಮುಖ ಕಾಣಿಸತೊಡಗಿತು. ಹೃದಯದಲ್ಲಿ ಹರ್ಷದ ಅಲೆ ಏಳತೊಡಗಿತು. ಈ ಮಂಗಳ ಕ್ಷಣಕ್ಕೋಸ್ಕರ ಸಮ್ಮೇದಗಿರಿಯಿಂದ ಹೊರಟು ಹೈದರಬಾದಿನಲ್ಲಿ ಕಾಯಿಲೆ ಬಿದ್ದು ಮಾರ್ಗದಲ್ಲಿ ಬಿಸಿಲು, ಚಳಿ ಎಲ್ಲವನ್ನು ಸಹಿಸಿ ಬಂದು ಭಗವಂತನ ಪ್ರತ್ಯಕ್ಷ ದರ್ಶನ ಮಾಡಿದೆವು. ನಾವು ಶ್ರವಣಬೆಳಗೊಳಕ್ಕೆ ಮಂಗಲ ಪ್ರವೇಶ ಮಾಡಿದೆವು.

ಭಟ್ಟಾರಕರಿಂದ ಸ್ವಾಗತ

ಇಲ್ಲಿಯ ವಯೋವೃದ್ಧ ಭಟ್ಟಾರಕ ಶ್ರೀ ಚಾರುಕೀರ್ತಿಗಳು ಅನೇಕ ಭಕ್ತರೊಡನೆ ಸ್ವಲ್ಪ ದೂರವೇ ಬಂದಿದ್ದರು. ಮಠದ ಪಂಡಿತರ ಕೈಯಲ್ಲಿರುವ ತಟ್ಟೆಯಲ್ಲಿ ಅರ್ಘ್ಯಪುಷ್ಪ, ಶ್ರೀಫಲ ಕನ್ನಡಿಯ ಜೊತೆಗೆ ಮಂಗಳ ಕಳಸವು

ಇತ್ತು. ಭಟ್ಟಾರಕರು ಶ್ರೀಫಲವನ್ನು ಇಟ್ಟು ವಿಧಿವತ್ತಾಗಿ ವಂದಾಮಿ ಹೇಳಿ, ರತ್ನತ್ರಯ ಕುಶಲಕ್ಷೇಮವನ್ನು ವಿಚಾರಿಸಿದರು. ನಾನು ಅವರಿಗೆ "ಸಮಾಧಿ ರಸ್ತು" ಆಶೀರ್ವಾದ ಮಾಡಿ ತುಂಬ ವಾತ್ಸಲ್ಯದಿಂದಲೇ ರತ್ನತ್ರಯ ಕುಶಲ ವಿಚಾರಿಸಿದೆ. ಇದರ ನಂತರ ನಿಂತು ನಿಂತು ಬಾಹುಬಲಿಗೆ ನಮಸ್ಕರಿಸಿದೆ. ಮನ ತಣಿಯಲಿಲ್ಲ ಊರೊಳಗೆ ಬಂದ ಮೊದಲು ಭಂಡಾರ ಬಸದಿಗೆ ಹೋಗಿ 24 ತೀರ್ಥಂಕರರಿಗೆ ವಂದಿಸಿ ಅನಂತರ ಮಠದ ಬಸದಿಗೆ ಹೋಗಿ ದರ್ಶನಮಾಡಿ, ಭಟ್ಟಾರಕರ ಜೊತೆಯಲ್ಲಿಯೇ ಮಠದ ಹತ್ತಿರವೇ ಇದ್ದ ಧರ್ಮಶಾಲೆಗೆ ಹೋದೆವು. ಅಲ್ಲೇ ನಮಗೆ ಇಳಿದುಕೊಳ್ಳಲು ವ್ಯವಸ್ಥೆ ಮಾಡಲಾಗಿತ್ತು. ವಯೋವೃದ್ಧ ಭಟ್ಟಾರಕರ ವಿನಯ ವಾತ್ಸಲ್ಯವನ್ನು ನೋಡಿ ಮನಸ್ಸಿಗೆ ತುಂಬ ಸಂತೋಷವಾಯಿತು. ಅಂದು ಫಾಲ್ಗುಣ ಮಾಸದ ಚತುರ್ಥಿಯ ದಿನ ಇಂದಿಗೂ ನೆನೆಪಿದೆ.

ಭ. ಬಾಹುಬಲಿಯ ಸಾಕ್ಷತ್ ದರ್ಶನ

ರಾತ್ರಿ ವಿಶ್ರಾಂತಿ ಪಡೆದ ನಾವು ಬೆಳಗ್ಗೆ ಆಗುತ್ತಲೇ ದೊಡ್ಡ ಬೆಟ್ಟವನ್ನು ಹತ್ತಿದೆವು. ಭ. ಬಾಹುಬಲಿಯ ದರ್ಶನ ಮಾಡುತ್ತಲೇ ನಮ್ಮ ಆಯಾಸವೆಲ್ಲಾ ದೂರವಾಯಿತು. ಸ್ವಾಮಿಯ ಮುಖ ನೋಡಿದಾಗ ಆದ ಆನಂದವನ್ನು ವರ್ಣಿಸಲು ಶಬ್ದಗಳಿಂದ ಸಾಧ್ಯವೇ ಇಲ್ಲ. ಕಣ್ಣಿನಿಂದ ಆನಂದಬಾಷ್ಪ ಹರಿಯತೊಡಗಿತು. ಈ ಪ್ರತಿಮೆಯನ್ನು ನೋಡಿದ ಸಾಮಾನ್ಯ ಜನರೇ ಮುಗ್ಧರಾಗುತ್ತಾರೆ. ಇನ್ನೂ ನಾವುಗಳು ಅಸ್ವಸ್ಥತೆಯಿಂದ, ನಿಶ್ಯಕ್ತಿಯಿಂದ, ಅಷ್ಟು ದೂರದಿಂದ ನಡೆದು ಬಂದು ಸ್ವಾಮಿಯ ದರ್ಶನ ಮಾಡಿದಾಗ ಆದ ಅನುಭವ, ಖುಷಿ, ಹೇಗೆಂದು ಹೇಳುವುದು ಮಧ್ಯಾಹ್ನವೇ ಮತ್ತೆ ಚಿಕ್ಕ ಬೆಟ್ಟವನ್ನು ಹತ್ತಿ ಅಲ್ಲಿಯ ಮಂದಿರಗಳನ್ನು ದರ್ಶನ ಮಾಡಿದೆವು.

ಕನ್ನಡ ಭಾಷೆಯ ಜ್ಞಾನ

ಶ್ರವಣಬೆಳಗೊಳಕ್ಕೆ ಬರುವ ಮೊದಲು ತುಮಕೂರಿನಲ್ಲಿ ಒಂದು ಮಧ್ಯಾಹ್ನ ಒಂದು ಕನ್ನಡ ಪುಸ್ತಕವನ್ನು ಕೇಳಿಪಡೆದೆ. ಇದರಲ್ಲಿ ಅ -ಆ ಮೊದಲಾದ ಸ್ವರ, ವ್ಯಂಜನ, ಕಾಗುಣಿತ ಎಲ್ಲ ಇತ್ತು. ಈ ಪುಸ್ತಕದ ಆಧಾರದಿಂದ ನಾನು ಜಿನಮತಿ ಮೊದಲಾದವರಿಗೆ ಕನ್ನಡ ಕಲಿಸತೊಡಗಿದೆ. ನನ್ನ ಹತ್ತಿರ ಒಂದು "ತ್ರಿಭಾಷಾ ಶಿಕ್ಷಕ" ಎಂಬ ಪುಸ್ತಕದ ಸಹಾಯದಿಂದ ವಾಕ್ಯ ರಚನೆ ಮಾಡಲು ಪ್ರಾರಂಭಿಸಿದೆವು. ಜನರು ಮಾತಾಡುವುದನ್ನು ಕೇಳಿದ ತಕ್ಷಣ ಭಾಷೆ ಕಲಿಯಲು ಆಗುವುದಿಲ್ಲ. ನಾವು ಅಕ್ಷರ ಜ್ಞಾನದಿಂದ ಓದುವುದರಿಂದ ಮಾತ್ರ ಸಾಧ್ಯ.

ಕೆಲವು ದಿನಗಳವರೆಗ ಕೆಳಗಿನ ಮಂದಿರಗಳನ್ನು ದರ್ಶನ ಮಾಡಿದೆವು. ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ಗೊಮ್ಮಟಸಾರ, ಜೀವಕಾಂಡ ಗ್ರಂಥಗಳ ರಚನೆ ಮಾಡಿದ ಗುಹೆಗಳನ್ನು ದರ್ಶನ ಮಾಡಿದೆವು. ಹಾಗೇ ಜಿನನಾಥಪುರಕ್ಕೆ ಹೋಗಿ ಮಂದಿರಗಳ ದರ್ಶನ ಮಾಡಿದೆವು. ಇಲ್ಲಿಯ ಮಂದಿರಗಳಲ್ಲಿ ನಂದೀಶ್ವರ ದ್ವೀಪದ 51 ಪ್ರತಿಮೆಗಳ ದರ್ಶನ ಮಾಡಿದೆವು. ಈ ಕಡೇ ಧಾತುವಿನ ಸ್ತೂಪದಲ್ಲಿ ನಾಲ್ಕು ಕಡೆಗೂ 13-13 ಜಿನ ಪ್ರತಿಮೆಗಳನ್ನು ಇಟ್ಟಿರುತ್ತಾರೆ. ಇದನ್ನೆ ನಂದೀಶ್ವರ ದರ್ಶನವೆಂದು ಕರೆಯುತ್ತಾರೆ.

ಇಲ್ಲಿಯ ಧರ್ಮಶಾಲೆಯಲ್ಲಿ ಮ್ಯಾನೇಜರ ರತ್ನರಾಜು ಎನ್ನುವವರಿಗೆ ಹಿಂದಿ ಭಾಷೆ ತಿಳಿದಿತ್ತು. ಮಧ್ಯಾಹ್ನದ ಹೊತ್ತಿನಲ್ಲಿ ನಾವು ಅಲ್ಲಿಯ ಜನರ, ಭಟ್ಟಾರಕರ ಮಾತುಗಳನ್ನು ತಿಳಿದುಕೊಳ್ಳುತ್ತಿದ್ದೆವು. ಇವರ ಮಾಧ್ಯಮದಿಂದಲೇ ನಾವು ಅಲ್ಲಿಯವರ ಮಾತುಗಳನ್ನು ತಿಳಿದುಕೊಳ್ಳುತ್ತಿದ್ದೆವು. ಭಟ್ಟಾರಕರಂತು ಬಹಳ ಸರಳ

ಸ್ವಭಾವಿಗಳು. ಅವರೇ ಬಂದು ನಮ್ಮ ಆಹಾರದ ವ್ಯವಸ್ಥೆಯ ಬಗ್ಗೆ ಕೇಳಿ ತಿಳಿದುಕೊಳ್ಳುತ್ತಿದ್ದರು.ನಾನಂತೂ ಅವರಿಗೆ ಬಹಳ ಗೌರವ ಕೊಡುತ್ತಿದ್ದೆ.

ಆರ್ಯಿಕೆಯರ ಅಸ್ವಸ್ಥತೆ

ಕೆಲವು ದಿನಗಳಲ್ಲಿ ಆರ್ಯಿಕೆ ಆದಿಮತಿ ಮತ್ತು ಕ್ಷಲ್ಲಿಕೆ ಅಭಯಮತಿಯರು ಅಸ್ವಸ್ಥರಾದರು. ಆದಿಮತಿಯವರ ಪ್ರಕೃತಿಯನ್ನು ಸರಿಪಡಿಸುವುದು ಕಷ್ಟವೇ ಆಯಿತು. ಅಕ್ಕ ಪಕ್ಕದ ವೈದ್ಯರು ಬಂದು ಉಪಚಾರ ಮಾಡತೊಡಗಿದರು. ಹೈದರಬಾದಿನಿಂದ ಬಂದಿದ್ದ ಬಾಯಿಜೀಯವರೆಲ್ಲ ಹೊರಟು ಹೋಗಿದ್ದರು. ಇಲ್ಲಿಯವರಾದ ಕನಕಮ್ಮ ಮತ್ತು ಲಲಿತಮ್ಮನವರು ಶುದ್ಧ ಜಲದ ನಿಯಮ ತೆಗೆದುಕೊಂಡು ಆಹಾರ ಮಾಡತೊಡಗಿದರು. ಆದರೆ ಇಬ್ಬರು ಮಾತಾಜೀಗಳಿಗೆ ಹುಷಾರಿಲ್ಲದ್ದರಿಂದ ಹೈದರಾಬಾದಿನಿಂದ ಜೀವು ಬಾಯಿಯನ್ನು ಕರೆಸಿದೆ. ಅವರು ಇಲ್ಲಿ ಚೌಕ ಮಾಡಿ, ಆಹಾರ ಔಷಧ, ಉಪಚಾರದ ಜವಾಬ್ದಾರಿಯನ್ನು ವಹಿಸಿಕೊಂಡರು. ಹಾಗೇ ಹುಷಾರಿಲ್ಲದ ಮಾತಾಜೀಗಳಿಗೆ ಆಹಾರವನ್ನು ಕೊಡುವಾಗ ಉಪಯೋಗಿಸುವ ವಸ್ತುಗಳು ತಯಾರಿಸುವ ವಿಧಾನಗಳನ್ನು ಕಲಿಸಿದರು. ಇಲ್ಲಿಯ ಮಹಿಳೆಯರಿಗೆ ಅಕ್ಕಿಯ ರೊಟ್ಟಿ ಮತ್ತು ದಾಲ ಮಾಡಲು ಗೊತ್ತು. ಗೋಧಿಯ ರೊಟ್ಟಿ ಮಾಡಲು ಗೊತ್ತಿಲ್ಲ. ಹುಷಾರಿಲ್ಲದ ಮಾತಾಜೀಗಳಿಗೆ ಗೋಧಿಯ ರೊಟ್ಟಿ ಮತ್ತು ದಾಲನ್ನು ಕೊಡುತ್ತಿದ್ದುದ್ದರಿಂದ ವಾಯುಪ್ರಕೋಪಕ್ಕೆ ಮುಟ್ಟಿತು. ವಿಶೇಷವಾಗಿ ಆದಿಮತಿಯವರು ಅಸ್ವಸ್ಥರಾಗಿದ್ದರು. ಕೆಲವು ದಿನ ನಂತರವೂ ಜೀವೂಬಾಯಿ ಊರಿಗೆ ಹೋರಟು ನಿಂತರು. ಗೃಹಸ್ಥಳಾದ ಅವಳು ಇನ್ನೆಷ್ಟು ದಿನ ನಿಂತಾರು.

ಪರಿಚರ್ಯೆ

ನಾನು ಹಗಲು ರಾತ್ರಿ ವೈಯಾವೃತ್ತಿ ಮಾಡತೊಡಗಿದೆ. ನನ್ನ ಜೊತೆ ಆರ್ಯಿಕೆ ಪದ್ಮಾವತಿ, ಜಿನಮತಿಯರು ಚೆನ್ನಾಗಿ ವೈಯಾವೃತ್ತಿ ಮಾಡತೊಡಗಿದರು. ಅವರ ಶಾರೀರಿಕ ಸೇವೆಗಳನ್ನು ಜಿನಮತಿಯು ಹೆಚ್ಚಾಗಿ ಮಾಡುತ್ತಿದ್ದರು. ನಾನು ಪಾಠ ಹೇಳುವುದು, ಶಾಸ್ತ್ರ ಓದಿ ಹೇಳುವಂತಹ ಕೆಲಸಗಳನ್ನು ಮಾಡುತ್ತಿದ್ದೆ. ಇಲ್ಲಿಗೆ ಯಾವಾಗಲೂ ಯಾತ್ರಿಗಳು ಬಸ್ಸಿನಲ್ಲಿ, ಬರುತ್ತಲೇ ಇರುತ್ತಾರೆ. ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನಗಳ ಕಡೆಯಿಂದ ಬಂದ ಜನ ನೋಡಲು ಬಂದವರು ಆಶ್ಚರ್ಯಚಕಿತರಾಗುತ್ತಿದ್ದರು. ಮಾತಾಜೀ ರಾತ್ರಿ ಇಡೀ ಎಚ್ಚರವಾಗಿ ಅವರ ಹತ್ತಿರ ಕುಳಿತು ಏಕೀಭಾವ ಸ್ತೋತ್ರ, ಸಮಾಧಿ ಶತಕ, ಮುಂತಾದವುಗಳನ್ನು ಓದಿ ಅವುಗಳ ಅರ್ಥವನ್ನು ತಿಳಿಸುತ್ತಾ ಅವರಿಗೆ ಒಳ್ಳೆಯ ಜ್ಞಾನಾಮೃತವನ್ನು ಕುಡಿಸುತ್ತಿದ್ದಾರಲ್ಲ ಎನ್ನುತ್ತಿದ್ದರು.

ಕೆಲವರಂತೂ ಇಂತಹ ಸೇವೆ, ವೈಯ್ಯಾವೃತ್ತಿ ಮಾಡುವುದನ್ನು ನಾವು ಎಲ್ಲೂ ನೋಡಿಲ್ಲ ಇಡೀ ರಾತ್ರಿ ಒಂದು ನಿಮಿಷವು ಮಲಗದೆ ಇವರಿಗೆ ಪಾಠಗಳನ್ನು ಹೇಳುತ್ತಲೇ ಇರುತ್ತಾರಲ್ಲ. ಹೀಗಾದರೆ ಸ್ವಯಂ ಇವರೇ ಕಾಯಿಲೆ ಬೀಳುತ್ತಾರೆ ಎನ್ನುತ್ತಿದ್ದರು. ಭಟ್ಟಾರಕರೂ ಆಶ್ಚರ್ಯಪಡುತ್ತಾ ಹೇಳುತ್ತಿದ್ದರು. ನಿಜವಾಗಿಯೂ ನಾನು ನನ್ನ ಜೀವನದಲ್ಲಿ ಇಷ್ಟು ಸೇವೆ ಮಾಡುವ ಸಾಧು - ಸಾಧ್ವಿಯರನ್ನು ಈವರೆಗೆ ಕಂಡೇ ಇಲ್ಲ ಎನ್ನುತ್ತಿದ್ದರು. ಇವರನ್ನು ಬಿಟ್ಟು ನನಗೆ ಯಾವತ್ತು ಮಂದಿರಕ್ಕೆ ಹೋಗಲು ಆಗುತ್ತಿರಲಿಲ್ಲ. ಅವರ ಸೇವಾ ಶುಶ್ರೂಷೆಯಲ್ಲಿ ಸಂತೋಷ ಸಿಗುತ್ತಿತ್ತು. ಸಂಘದಲ್ಲಿದ್ದ ಚೈತ್ಯಾಲಯದ ಜಿನಪ್ರತಿಮೆಯ ದರ್ಶನ ಮಾತ್ರ ಮಾಡುತ್ತಿದ್ದೆ. ಇದಕ್ಕೆ

ಅನಗಾರ ಧರ್ಮಾಮೃತದಲ್ಲಿ ಕಾರಣ ಸಿಗುತ್ತದೆ. ತ್ಯಾಗ ಮತ್ತು ತಪವನ್ನು ಶಕ್ತಿಗೆ ಅನುಸಾರ ಮಾಡಬೇಕು. ಆದರೆ ವೈಯಾವೃತ್ತಿಯನ್ನೂ ಇರುವ ಶಕ್ತಿಯನ್ನೆಲ್ಲಾ ಉಪಯೋಗಿಸಬೇಕು. ಇದರಿಂದಾಗಿಯೇ ನಾನು ನನ್ನ ಶಕ್ತಿಯನ್ನೆಲ್ಲಾ ವೈಯಾವೃತ್ತಿಗಾಗಿ ಉಪಯೋಗಿಸುತ್ತಿದ್ದೆ. ನನ್ನ ಶಿಷ್ಯ ಆರ್ಯಿಕೆಯರು ವೈಯಾವೃತ್ತಿಯಲ್ಲಿ ತೊಡಗಿಕೊಳ್ಳುತ್ತಿದ್ದರು. ಅಸ್ವಸ್ಥತೆಯಲ್ಲಿ ಒಂದು ಕ್ಷಣವು ಉಪೇಕ್ಷೆ ಮಾಡಬಾರದು.

ಕಲಕತ್ತೆಯಿಂದ ವೈದ್ಯರಾಜರ ಆಗಮನ

ಕೊನೆಗೆ ನಾನು ಧೈರ್ಯ ಮಾಡಿ ಕಲಕತ್ತೆಯಿಂದ ವೈದ್ಯರನ್ನು ಕರೆಸಿದೆ. ಕೇಶವದೇವ ವೈದ್ಯರು ಬಂದು 7 ದಿನಗಳು ಇಲ್ಲಿದ್ದು ಚಿಕಿತ್ಸೆಯನ್ನು ಮಾಡಿದರು. ಸ್ವಲ್ಪ ಚೇತರಿಕೆ ಕಂಡು ಬರತೊಡಗಿತು. ಅವರು ಚಿಕಿತ್ಸಾ ವಿಧಾನವನ್ನು ಹೇಗೆ ಮುಂದುವರಿಸಬೇಕೆಂದು ಹೇಳಿ ಹಿಂದಿರುಗಿದರು. ಅದರಂತೆ ಔಷಧ ಉಪಚಾರ ನಡೆಯುತ್ತಿದ್ದವು. ಆದಿಮತಿಯರು ಬಹಳ ನಿಶ್ಯಕ್ತರಾಗ ತೊಡಗಿದರು. ಆಸನದಲ್ಲಿ ಕೂರಿಸಿಕೊಂಡೇ ಚೌಕಕ್ಕೆ ಕರೆದುಕೊಂಡು ಹೋಗಿ ಆಹಾರ ಮಾಡಿಸಬೇಕಾಯಿತು.

ಅಸಾತ ಕರ್ಮದ ಉದಯದಿಂದ ಔಷಧಿಗಳು ಕೆಲಸ ಮಾಡಲಾರದಾದವು. ಇಲ್ಲಿಯ ಮಹಿಳೆಯರು ಬಂದು ಕೆಲವು ಕನ್ನಡ ಪಾಠಗಳನ್ನು ಹೇಳುತ್ತಿದ್ದರು. ಇದಂತು ನನಗೆ ಕೇಳುವುದಕ್ಕೆ ಬಹಳ ಹಿತವಾಗುತ್ತಿತ್ತು. ಕೆಲವರು ಬಂದು ಭಕ್ತಾಮರ, ಕಲ್ಯಾಣಮಂದಿರ ಸ್ತ್ರೋತ್ರಗಳನ್ನು ಓದುತ್ತಿದ್ದರು. ಅವರ ಉಚ್ಚಾರಣೆ ಶುದ್ಧವಾಗಿಯೂ ಮಧುರವಾಗಿಯೂ ಇರುತ್ತಿತ್ತು. ಕೆಲವೊಮ್ಮೆ, ಅವರು ಬಾಹುಬಲಿ ಸ್ವಾಮಿಯ ಭಜನೆ, ಸ್ತ್ರೋತ್ರಗಳನ್ನೂ ಹೇಳುತ್ತಿದ್ದರು. ಅದಂತೂ ಬಹಳ ಚೆನ್ನಾಗಿರುತ್ತಿತ್ತು. ನಿಧಾನವಾಗಿ ಆಹಾರದಾನ, ಪರಿಚರ್ಯೆಗಳಲ್ಲಿ ತೊಡಗಿಕೊಳ್ಳುತ್ತಿದ್ದೆವು. ಇಬ್ಬರು ಹುಶಾರಿಲ್ಲದ ಮಾತಾಜೀಗಳಿಗೆ ಆಹಾರ ದಾನ ಮಾಡಿಸಿ ನಂತರ 11 ಗಂಟೆಯ ಹೊತ್ತಿಗೆ ನಾನು ಆಹಾರಕ್ಕೆ ಹೊರಡುತ್ತಿದ್ದೆ. ನನ್ನ ಜೊತೆಗಿದ್ದ ಆರ್ಯಿಕೆಯರು ಸಹ ನನಗೆ ಅನುಕೂಲವಾಗಿದ್ದರು. ಹೀಗಾಗಿ ಯಾರಿಗೂ ವೈಯಾವೃತ್ತಿಯಲ್ಲಿ ಪ್ರಮಾದವಾಗುತ್ತಿರಲಿಲ್ಲ.

ಒಂದು ದಿನ ನಾವು ವಿಚಾರ ವಿಮರ್ಶೆ ಮಾಡಿ ಒಬ್ಬ ಶ್ರಾವಕರ ಮನೆಯಿಂದ ಆದಿಮತಿಯವರ ಮನೆಯವರಿಗೆ ಅವರ ಆರೋಗ್ಯ ಕ್ಷೀಣಿಸಿರುವ ಸುದ್ದಿಯನ್ನು ತಿಳಿಸಿದೆವು. ನನಗೆ ಹುಷಾರಿಲ್ಲದ ಅವರಿಗೆ ಯಾರಾದರೂ ಪರಿಚಿತ ವ್ಯಕ್ತಿಗಳಾಲೀ, ಮನೆಯವರಾಗಲಿ ಬಂದರೆ ಅವರಿಗೆ ಹಿತವೆನ್ನಿಸುತ್ತದೆ. ಆತ್ಮೀಯತೆಯಿಂದ ವೈಯ್ಯಾವೃತ್ತಿ ಮಾಡುವುದರಿಂದ ಪ್ರಕೃತಿ ಸುಧಾರಿಸಬಹುದೆಂದುಕೊಂಡೆ. ಆದರೆ ಅವರ ಸ್ಥಿತಿ ನೋಡಿದರೆ ಅವರು ಉಳಿಯುವಂತೆ ಕಾಣಿಸುತ್ತಿರಲಿಲ್ಲ. ಅವರ ಮನೆಯವರಿಗೆ ಸುದ್ದಿ ಕೊಡದೆ ಇದ್ದರೆ ಅವರು ಆಮೇಲೆ ಬೇರೆ ಏನು ಭಾವಿಸಬಾರದೆಂದು ತಿಳಿಸಿದ್ದಾಯಿತು. ಕೊನೆಗೆ ಒಂದು ವಾರವಾದ ಮೇಲೆ ಅಲ್ಲಿಂದ ಉತ್ತರ ಬಂದಿತು.

ಅವರಿಗೆ ನೀವೆ, ಚೆನ್ನಾಗಿ ಸಮಾಧಿ ಮಾಡಿ ಬಿಡಿ ನಾವು ಯಾರೂ ಬರುವುದಿಲ್ಲ ಎನ್ನುವ ಸಂದೇಶ ನಮಗೆ ತಲುಪಿತು. ಈ ಪತ್ರದ ವಿಷಯವನ್ನು ನಾವು ಅವರಿಗೆ ತಿಳಿಸಲಿಲ್ಲ ಆದರೆ ಈ ಪತ್ರದ ವಿಷಯ ತಿಳಿದ ಜನರೇ ಆಶ್ಚರ್ಯಪಟ್ಟರು. ಮುಂದೆ ಅವರ ಆರೋಗ್ಯ ಸುಧಾರಿಸಿತು. ಒಂದು ವರ್ಷವಾದ ಮೇಲೆ ಅವರ ತಾಯಿ ಬಂದರು.

ಈ ಧರ್ಮಶಾಲೆ ವಿಶಾಲವಾಗಿದ್ದರಿಂದ ಯಾತ್ರಿಕರು ಇಳಿದುಕೊಳ್ಳಲು ಇಲ್ಲಿಗೆ ಬರುತ್ತಿದ್ದುದರಿಂದ ಇವರ ಆರೈಕೆಗೆ ಕೊಂಚ ಅಡಚಣೆ ಆಗುತ್ತಿದ್ದರಿಂದ ಭಟ್ಟಾರಕರು ಇನ್ನೊಂದು ಚಿಕ್ಕ ಧರ್ಮಶಾಲೆಗೆ ನಮ್ಮ ವಾಸ್ತವ್ಯವನ್ನು

ಬದಲಾಯಿಸಿದರು. ಆಗ ಎರಡೇ ಧರ್ಮಶಾಲೆಗಳು ಇದ್ದುದು. ಇವರುಗಳ ಆರೋಗ್ಯ ಸ್ವಲ್ಪ ಸುಧಾರಿಸಿದ ಮೇಲೆ ಜನರು ಇವರಿಗೆ ಸ್ವಲ್ಪ ಸ್ಥಳ ಬದಲಾವಣೆ ಮಾಡೋಣ ಎನ್ನುವ ಸಲಹೆ ಕೊಟ್ಟರು. ಹತ್ತಿರದಲ್ಲಿಯೇ ಇದ್ದ ಬೆಳ್ಳೂರಿಗೆ ವಿಹಾರ ಹೊರೆಟೆವು. ಇವರಿಬ್ಬರನ್ನು ಡೋಲಿಯಲ್ಲೇ ಕರೆದುಕೊಂಡು ಹೋಗಲಾಯಿತು. ಅಲ್ಲಿ ಒಳ್ಳೆಯ ಧರ್ಮಪ್ರಭಾವನೆ ಆಯಿತು. ಒಬ್ಬ ಅಧ್ಯಾಪಿಕೆಯು ಬಂದು ಹಿಂದಿಯಿಂದ ಕನ್ನಡಕ್ಕೆ ಉಪದೇಶವನ್ನು ಅನುವಾದ ಮಾಡಿ ಹೇಳುತ್ತಿದ್ದರು ತುಂಬ ಸಂತೋಷವಾಗುತ್ತಿತ್ತು. ಅಲ್ಲಿ ಹೋದ ಮೇಲೆಯು ಅವರ ಆರೋಗ್ಯ ಸುಧಾರಿಸಲಿಲ್ಲ. ಇಲ್ಲಿ ಒಂದು ತಿಂಗಳು ಇದ್ದು ಪುನಃ ಬಾಹುಬಲಿಯ ದರ್ಶನ, ವಂದನೆ, ಮಾಡುವ ಉದ್ದೇಶದಿಂದ ಜನಗಳ ಆಗ್ರಹದಿಂದ ಮರಳಿ ಶ್ರವಣಬೆಳಗೊಳಕ್ಕೆ ಬಂದೆವು. ಇಲ್ಲಿಯ ಜನ ಶ್ರೀಫಲವಿಟ್ಟು ಚಾತುರ್ಮಾಸಕ್ಕೆ ಇಲ್ಲಿಯೇ ಉಳಿಯುವಂತೆ ಪ್ರಾರ್ಥಿಸಿದ್ದರಿಂದ ನಾವು ಇಲ್ಲೇ ನಿಲ್ಲಲು ಸಮ್ಮತಿಸಿದೆವು ಜನರಿಗೆ ಬಹಳ ಖುಷಿಯಾಯಿತು.

ಜಲವಾಯುವಿನ ಕಾರಣ

ಒಮ್ಮೆ ಅಜಮೇರನ ಭಾಗಚಂದ್‌ಜೀ ಸೋನಿ, ಅವರ ಧರ್ಮಪತ್ನಿ ರತ್ನಪ್ರಭಾ, ಇಂದೂರಿನ ಶ್ರೀ ರಾಜಕುಮಾರ್ ಸಿಂಹ, ಕಾಸಲೀವಾಲರು ಕ್ಷೇತ್ರ ಕಮಿಟಿ ಮೀಟಿಂಗ್‌ಗೋಸ್ಕರ ಬಂದಿದ್ದರು. ನಮ್ಮ ಕೊಠಡಿಯ ಹತ್ತಿರವೇ ಮೂರುದಿವಸ ಇದ್ದರು. ಅವರು ಬರುತ್ತಲೇ ನಮ್ಮ ಸಂಘದ ಕುಶಲತೆ ಇಲ್ಲಿಯ ವ್ಯವಸ್ಥೆಯ ಬಗ್ಗೆ ತಿಳಿದುಕೊಂಡರು. 1956 ರಲ್ಲಿ ಅಜಮೇರದಲ್ಲಿ ಶಿವಸಾಗರರ ಸಂಘದಲ್ಲಿನ ಚಾತುರ್ಮಾಸದಲ್ಲಿ ನನಗೆ ಚೆನ್ನಾಗಿ ಪರಿಚಯವಾಗಿದ್ದರು. ಅವರ ಭಕ್ತಿ ಮತ್ತು ವ್ಯವಸ್ಥೆಯ ಬಗ್ಗೆ ವಿಚಾರಿಸಿದ್ದು ನೋಡಿದಾಗ ಅಲ್ಲಿಯ ಮ್ಯಾನೇಜರ ರಮೇಶಚಂದರಿಗೆ ಗಾಬರಿಯಾಗಿ ಅವರಿಗೆ ಅನ್ನಿಸಿರಬೇಕು. ಮಾತಾಜೀಯವರು ಇಲ್ಲಿಯ ಕೊರತೆಯ ಬಗ್ಗೆ ಹೇಳಿದ್ದಾರೆ. ಅವರು ಏನೆಂದುಕೊಂಡರೋ ಎಂದು ರಮೇಶಚಂದ ನನ್ನ ಹತ್ತಿರ ಬಂದು ಹೇಳಿಕೊಳ್ಳತೊಡಗಿದರು. ಅದಕ್ಕೆ ನಾನು ನಾವು ಸಾಧು - ಸಾಧ್ವಿಯರು ಜನರ ಬಗ್ಗೆ ಯಾವ ದೂರನ್ನೂ ಹೇಳುವುದಿಲ್ಲವೆಂದೆ, ಭಾರತದ ಜೈನ ಸಮಾಜದ ದೊಡ್ಡ ದೊಡ್ಡ ಶ್ರೀಮಂತರೇ ನಿಮ್ಮ ಬಗ್ಗೆ ಪೂಜ್ಯ ಭಾವನೆಯನ್ನು ಇಟ್ಟುಕೊಂಡಿರುವುದನ್ನು ನೋಡಿದೆ. ನನಗೆ ಆ ದಿನದಿಂದಲೇ ತಮ್ಮನ್ನು ಕಂಡರೆ ವಿಶೇಷವಾದ ಭಕ್ತಿ ಉಂಟಾಯಿತು. ಮೊದಲು ನಾನು ಒಬ್ಬ ಸಾಧಾರಣ ಮಾತಾಜೀ ಎಂದು ತಿಳಿದಿದ್ದವನಿಗೆ ಅವರೆಲ್ಲ ನಿಮ್ಮನ್ನು ಹೊಗಳುವುದನ್ನು ಕಂಡು ನಿಮ್ಮಲ್ಲಿರುವ ವಿಶೇಷತೆಯ ಅರಿವಾಯಿತು.

ಆದರೆ ಜನಗಳ ಮನೋಭಾವನೆ ನೋಡಿ. ದೊಡ್ಡ ದೊಡ್ಡ ಜನಗಳು ಭಕ್ತಿ, ಪ್ರಶಂಸೆ ಮಾಡಿದರೆ ಅವರು ವಿಶೇಷ ವ್ಯಕ್ತಿಗಳಾಗಿ ಕಾಣಿಸುತ್ತಾರೆ. ಇದು ಆಶ್ಚರ್ಯದ ಮಾತು. ಸಾಧುಗಳು ತಮ್ಮ ನಿರ್ದೋಷವಾದ ಆಚರಣೆಯಿಂದ ದೊಡ್ಡವರಾಗುತ್ತಾರೆ. ಇದನ್ನು ತಿಳಿಯದ ಜನರು ದೊಡ್ಡ ಜನರು ಆದರ ಕೊಡುವವರನ್ನು ದೊಡ್ಡವರೆಂದು ತಿಳಿಯುವುದು ಇವರಲ್ಲಿ ವಿಶೇಷತೆ ಇದೆ ಎಂದು ಲೆಕ್ಕ ಹಾಕುವುದು ಇದು ಸರ್ವಥಾ ಏಕಾಂತವಲ್ಲ ಆದರೂ ಹೀಗೆ ಆಗುತ್ತದೆ. ಮಹತ್ವವು ಅಲ್ಲದೆ ಇನ್ನೇನು ಭಗವಂತರ ಮಹತ್ತ್ವವು ಇಂದ್ರನು ಭಕ್ತಿಯನ್ನು ತೋರಿಸಿದ್ದರಿಂದ ಪ್ರಕಟವಾಯಿತು. ನಾನಾದರೂ ಒಬ್ಬ ಸಾಮಾನ್ಯ ಸಾಧ್ವಿಯೇ ನನ್ನದು ಅಲ್ಪ ಬುದ್ಧಿಯೇ, ಸ್ವಲ್ಪ ಸಂಯಮವನ್ನು ಧಾರಣೆ ಮಾಡಿದ್ದೇನೆ ಅಷ್ಟೇ. ಶ್ರೀಮಂತರು ನಮಸ್ಕರಿಸಿದ್ದರಿಂದ ನಾನು ವಿಶೇಷ ವ್ಯಕ್ತಿ ಆಗುವುದಿಲ್ಲ.

ಸೇಠಾಣೇ ನನ್ನ ಹತ್ತಿರ ಕುಳಿತು ಕಾಯಿಲೆಯ ವಿವರವನ್ನು ಕೇಳಿ, ಸ್ಥಿತಿಯನ್ನು ನೋಡಿ ಹೇಳಿದರು ಇವರಿಗೆ ಇಲ್ಲಿ ನೀರು, ಹವಾಗುಣ ಸರಿಹೋಗುತ್ತಿಲ್ಲ. ಆದ್ದರಿಂದ ಇಲ್ಲಿಯ ಹವಾಗುಣ ಬದಲಾಯಿಸಿದರೆ ಇವರ ಆರೋಗ್ಯ ಖಂಡಿತಾ ಸುಧಾರಿಸುತ್ತದೆ ಎಂದರು. ನಾನು ಈ ಸಲಹೆ ಬಗ್ಗೆ ನಾನು ವಿಶೇಷವಾದ ಗಮನವನ್ನು ಕೊಡಲಿಲ್ಲ ವಿಶ್ವಾಸವು ಮಾಡಲಿಲ್ಲ. ಆಕೆ ತನ್ನ ಎರಡು ಮೂರು ಅನುಭವಗಳನ್ನು ಹೇಳಿದಾಗಲೂ ನಾನು ಕರ್ಮ ಉದಯ ಜೀವದ ಜೊತೆಯಲ್ಲಿಯೇ ಇರುತ್ತದೆ. ದಕ್ಷಿಣವಾದರೇನು, ಹವಾಗುಣವೇನು ಪ್ರಭಾವ ಬೀರುತ್ತದೆ ಎಂದೇ ಯೋಚಿಸಿದೆ.

ಕೊನೆಗೆ ನಾವು ಇಲ್ಲಿಂದ ಸೋಲಾಪುರಕ್ಕೆ ಬಂದಾಗ ಇಬ್ಬರಿಗೂ ಆರೋಗ್ಯ ಸುಧಾರಿಸತೊಡಗಿತು. ಹಾಗೇ ಮಧ್ಯಪ್ರದೇಶದ ಸನಾವದಕ್ಕೆ ಬಂದ ಮೇಲಂತು ಅವರಿಗೆ ಔಷಧವೇ ಬೇಕಾಗಲಿಲ್ಲ ಆರೋಗ್ಯವಂತರಾಗಿ ಬಿಟ್ಟರು. ಆಗ ನನಗೆ ಎರಡು ವರ್ಷಗಳಾದ ಮೇಲೆ ಹವಾಗುಣದ ಪ್ರಭಾವ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಎಂಬ ಅಂಶ ಮನದಟ್ಟಾಯಿತು. ಅಲ್ಲದೆ ಸಿದ್ಧಾಂತ ವಿಚಾರವು ಮನಸ್ಸಿಗೆ ಬಂದಿತು. ಹೇಗೆ ರತಿಯ ನೋಕರ್ಮ ಮಗನಾಗಿದ್ದಾನೆ. ಹಾಸ್ಯದ ನೋಕರ್ಮ ವಿದೂಷಕನಾಗಿದ್ದಾನೆ ನಿದ್ದೆಯ ನೋಕರ್ಮ ಎಮ್ಮೆಯ ಹಾಲಾಗಿದೆ ಎಂದು ಗೊಮ್ಮಟಸಾರದ ಕರ್ಮಕಾಂಡದಲ್ಲಿ ಬರೆದಿದ್ದಾರೆ. ಹೀಗೆಯೆ ಇವರಿಬ್ಬರ ಕಾಯಿಲೆಯ ನೋಕರ್ಮ ದಕ್ಷಿಣ ಪ್ರದೇಶದ ಹವಾಗುಣವಾಗಿತ್ತು. ಇದರಲ್ಲಿ ಯಾವುದೇ ಸಂದೇಹವಿಲ್ಲ ಆದರೆ ಇಲ್ಲಿ ನನ್ನ ಆರೋಗ್ಯ ಚೆನ್ನಾಗಿತ್ತು. ಅಂದರೆ ಇಲ್ಲಿಯ ಹವಾಗುಣ ನನ್ನ ಆರೋಗ್ಯಕ್ಕೆ ಅನುಕೂಲವಾಗಿತ್ತು.

ಶ್ರವಣಬೆಳಗೊಳಕ್ಕೆ ಬಂದ ಮೇಲೆ ನಿಧಾನವಾಗಿ ಇವರ ಆರೋಗ್ಯದಲ್ಲಿ ಸುಧಾರಣೆ ಕಂಡಿತು. ಹೆಂಗಸರು ಆಹಾರ ಮತ್ತು ವೈಯಾವೃತ್ತಿಯನ್ನು ನೋಡಿಕೊಳ್ಳುತ್ತಿದ್ದರು ಆಗ ನನ್ನ ತಲೆಗೆ ಒಂದು ವಿಶೇಷವಾದ ಯೋಚನೆ ಬಂತು. ಅದು ಕ್ರಿಯಾರೂಪಕ್ಕೆ ತರುವ ಆಲೋಚನೆ ಮಾಡಿ ಜಿನಮತಿಯ ಜೊತೆ ವಿಚಾರ ವಿನಿಮಯ ಮಾಡಿದೆ. ನಾನು ಹದಿನೈದು ದಿನಗಳು ಭ ಬಾಹುಬಲಿಯ ಚರಣ ಸಾನಿಧ್ಯದಲ್ಲಿಯೇ ಇರುತ್ತೇನೆ. ನೀವೆಲ್ಲರೂ ಇಲ್ಲಿ ಶಾಂತಿಯಿಂದ ಇರಬೇಕೆಂದು ಹೇಳಿ ಆರ್ಯಿಕೆ ಜಿನಮತಿಯು ಎಲ್ಲರನ್ನು ನೋಡಿಕೊಳ್ಳಬೇಕೆಂದು ಹೇಳಿದೆ. ಒಬ್ಬ ಹೆಂಗಸಿಗೆ ಆದಿಮತಿಯ ಜವಾಬ್ದಾರಿಯನ್ನು ವಹಿಸಿದೆ. ಇನ್ನೊಬ್ಬರಿಗೆ ಕ್ಷುಲ್ಲಿಕೆ ಅಭಯಮತಿಯ ಜವಾಬ್ದಾರಿಯನ್ನು ವಹಿಸಿ, ಭಟ್ಟಾರಕ ಚಾರುಕೀರ್ತಿಗಳಲ್ಲಿ ಮೇಲೆ ಇರುವ ವ್ಯವಸ್ಥೆ ಮಾಡಲು ವಿನಂತಿಸಿದೆ.

ಭಗವಾನ್ ಬಾಹುಬಲಿಯ ಶ್ರೀ ಚರಣಗಳಲ್ಲಿ ಇರುವ ಸುಯೋಗ

ನಾನು ಎಲ್ಲೂ ಒಬ್ಬಳೇ ಹೋಗುತ್ತಿರಲಿಲ್ಲ. ಪದ್ಮಾವತಿಯೊಡನೆ ದೊಡ್ಡ ಬೆಟ್ಟ ಹತ್ತಿ, ಸ್ವಾಮಿಯ ಮುಂದೆ ಕುಳಿತು ಧ್ಯಾನ ಮಾಡಿ, ಪಾಠ ಓದಿ, ಚಿಂತನೆ ಮಾಡುತ್ತಿದ್ದೆ. ಸ್ತೋತ್ರಗಳನ್ನು ಓದುವಾಗ ಬಿಟ್ಟು ಬಾಕಿ ಸಮಯದಲ್ಲಿ ಮೌನವನ್ನು ಧಾರಣೆ ಮಾಡುತ್ತಿದ್ದೆ. ದಿನದ 10 ಗಂಟೆಗೆ ಆಹಾರಕ್ಕಾಗಿ ಕೆಳಗಿಳಿದು ಬರುತ್ತಿದ್ದವಳು ಶುದ್ಧಿ ಮಾಡಿಕೊಂಡು ಆಹಾರ ಗ್ರಹಣ ಮಾಡುತ್ತಿದ್ದಂತೆ ಮತ್ತೆ ಬೆಟ್ಟ ಏರುತ್ತಿದ್ದೆ. ಕೆಳಗಿಳಿದಾಗ ಯಾವ ಶಿಷ್ಯರ ಸುಖ ದುಃಖಗಳನ್ನು ವಿಚಾರಿಸುತ್ತಿರಲಿಲ್ಲ. ಯಾರಲ್ಲೂ ಮಾತಾಡುತ್ತಿರಲಿಲ್ಲ, ಸಂಘದ ಪ್ರತಿ ಯೋಚಿಸದೇ ನಿರಾಕುಲತೆಯನ್ನು ಹೊಂದಿದ್ದೆ. ಭಟ್ಟಾರಕರು ರಾತ್ರಿಯ ವೇಳೆ ನನ್ನ ಜೊತೆ ಇರಲು ಒಬ್ಬ ಹುಡುಗನನ್ನು ಗೊತ್ತು ಮಾಡಿದರು. ಹೋಗುವಾಗಲೇ ಕಮಂಡಲುವಿಗೆ ನೀರಿನ ವ್ಯವಸ್ಥೆ ಆಗಿರುತ್ತಿತ್ತು.

ನಾನು ರಾತ್ರಿ ಸ್ವಲ್ಪ ಹೊತ್ತು ಮಾತ್ರ ಮಲಗಿರುತ್ತಿದ್ದೆ. ಎರಡು ಮೂರು ಗಂಟೆಗೆ ಎದ್ದು ಭಗವಾನರ ಮೂರ್ತಿಯನ್ನು ಚಂದ್ರನ ಬೆಳದಿಂಗಳಲ್ಲಿ ನೋಡುತ್ತಾ ಇದ್ದವಳು ಹಾಗೇ ಕಣ್ಣು ಮುಚ್ಚಿ ಧ್ಯಾನ ಮಾಡುತ್ತಿದ್ದೆ.

ಒಂದು ದಿನ ರಾತ್ರಿ ಒಂದೆರಡು ಗಂಟೆ ಧ್ಯಾನದಲ್ಲಿಯೇ ಇದ್ದೆ. ತಕ್ಷಣ ನನಗೆ ಒಂದು ಅಲೌಕಿಕ ಕ್ಷೇತ್ರದ ದರ್ಶನವಾಗತೊಡಗಿತು. ಸುಮೇರು ಪರ್ವತದಿಂದ ಹಿಡಿದು ಜಂಬೂದ್ವೀಪದ ಹಿಮಾವಾನ್ ಪರ್ವತಗಳು ಅನೇಕ ಚೈತ್ಯಾಲಯದ ದರ್ಶನವಾಗತೊಡಗಿತು ನನಗೆ ಎಲ್ಲೋಪೂರ್ವ ಜನ್ಮದಲ್ಲಿ ನಾನು ಈ ಅಕೃತಿಮ ಚೈತ್ಯಾಲಯಗಳ ದರ್ಶನ ಮಾಡಿರಬೇಕು ನಾನು ಗಂಟೆಗಳವರೆಗೆ ಜಿನಮೂರ್ತಿಗಳ ವಂದನೆಯನ್ನು ಮಾಡುತ್ತಲೇ ಇದ್ದೆ. ಆಗ ನನಗೆ ಒಂದು ದಿವ್ಯ ಪ್ರಕಾಶ ಕಾಣತೊಡಗಿತು. ಈಗಲೂ ನನಗೆ ಆ ದಿನವನ್ನು ಆ ಧ್ಯಾನವನ್ನು ನೆನಸಿಕೊಂಡರೆ ಆ ಪ್ರಕಾಶವೇ ಸ್ಮೃತಿಪಟಲದಲ್ಲಿ ಬರುತ್ತದೆ.

ಧ್ಯಾನದ ನಂತರ ಬಾಹುಬಲಿಯ ಮೂರ್ತಿಯನ್ನೇ ಒಂದೇ ಸಮನೆ ನೋಡತೊಡಗಿದೆ. ಮತ್ತೇ ಮತ್ತೇ ಶ್ರೀಚರಣಗಳಿಗೆ ನಮಸ್ಕರಿಸಿದೆ ಆಗ ಆದ ಆನಂದವನ್ನು ಹರ್ಷಾತಿರೇಕವನ್ನು ವರ್ಣಿಸಲು ನನಗೆ ಶಬ್ದಗಳೇ ಸಾಲದು. ನಾನು ಯಾವಾಗಲೂ ಈ ದೇವಸ್ಥಾನವನ್ನು ನೆನಸಿಕೊಳ್ಳುತ್ತಲೇ ಇರುತ್ತೇನೆ. ಸುಮಾರು 9 1/2 ಗೆ ಪರ್ವತದಿಂದ ಇಳಿದು, ನನ್ನ ಕೊಠಡಿಗೆ ಹೋಗಿ ನನ್ನ ಗಂಟಿನಿಂದ ತ್ರಿಲೋಕಸಾರ ಗ್ರಂಥವನ್ನು ತೆಗೆದು ಅಲ್ಲಿ ಮಧ್ಯಮ ಲೋಕದ ಅಕೃತಿಮ ಚೈತ್ಯಾಲಯಗಳನ್ನು ಲೆಕ್ಕ ಹಾಕಿ ನೋಡಿದೆ. ನಾನು ಧ್ಯಾನದಲ್ಲಿ ಕಂಡಷ್ಟು 458 ಚೈತ್ಯಾಲಯಗಳ ಸಂಖ್ಯೆ ಸರಿಯಾಗಿದೆ. ನನ್ನ ಹರ್ಷಕ್ಕೆ ಪಾರವೇ ಇಲ್ಲದಂತಾಯಿತು.

ಗ್ರಂಥದಲ್ಲಿ ಕಂಡ ಚೈತ್ಯಾಲಯಗಳ ರಚನೆ, ಸಂಖ್ಯೆಯನ್ನೆ ನಾನು ಅಲ್ಲಿ ಕಂಡಿದ್ದು ಇದೇನು ಕಪೋಲಕಲ್ಪನೆ ಅಲ್ಲ. ನನಗಂತು ನಾನು ಪೂರ್ವಜನ್ಮದಲ್ಲಿ ನಿಜವಾಗಿಯು ಅವುಗಳನ್ನು ನೋಡೆ ಇದ್ದೀನಿ ಎಂಬುದರಲ್ಲಿ ಸಂದೇಹವಿಲ್ಲ. ನಾನು ತ್ರಿಲೋಕಸಾರ ತೆಗೆದು ನೋಡಿ ಸಂತೋಷಗೊಂಡಿದ್ದನ್ನು ಗಮನಿಸಿದ ಜಿನಮತಿಯು ಅಮ್ಮ ಏನು ನೋಡುತ್ತಿದ್ದೀರಾ ಎಂದು ಕೇಳಿದರು. ಆಗ ನಾನೇನು ಹೇಳದೆ ಮುಗಳ್ನಕ್ಕು ಗ್ರಂಥವನ್ನು ತೆಗೆದುಕೊಂಡು ಮೇಲಕ್ಕೆ ನಡೆದೆ ಅಲ್ಲಿ ಇರುವವರೆಗೂ ಇದನ್ನು ಕುರಿತು ಧ್ಯಾನ ಮಾಡುತ್ತಿದ್ದೆ. ಅದರ ವಿಸ್ತಾರವನ್ನು ಮನದಲ್ಲಿ ಮಾಡಿಕೊಳ್ಳುತ್ತಿದ್ದೆ.

ಎರಡನೇಯ ಫಲ

ಪರ್ವತದಲ್ಲಿ ಇರುವ ಸಮಯದಲ್ಲೇ ಸಂಸ್ಕೃತದ ವಸಂತ ತಿಲಕ ಛಂದದಲ್ಲಿ ಬಾಹುಬಲಿಯ ಸ್ತೋತ್ರವನ್ನು ಬರೆಯಲು ಪ್ರಾರಂಭಿಸಿದೆ. ಅದು ಸುಂದರ, ಸರಸ, ಹಾಗೂ ಮಧುರವಾಗಿ ರಚನೆಗೊಂಡಿತು. ಇದೆಲ್ಲಾ ಭಗವಾನ್ ಬಾಹುಬಲಿಯ ಬಗ್ಗೆ ನಾನು ಇಟ್ಟಿದ್ದ ಭಕ್ತಿಯಿಂಲೇ ಕೇಳುವ ವಿದ್ವಾಂಸರು ಆನಂದಮಗ್ನರಾಗುತ್ತಾರೆ. ಬಾಹುಬಲಿಯ ಮುಂದೆಯೇ ಮೊದಲು ಓದಿದೆ. ಅಂತರಂಗದ ಭಾವನೆಗಳಿಂದ ಹೊರಟ ಶಬ್ದಗಳು ವರ್ಣಗಳಿಂದ ಜೋಡಿಸಿ ಓದಿದಾಗ ನನಗೆ ರೋಮಾಂಚನವಾಯಿತು. ಅದರ ಪ್ರಥಮ ಶ್ಲೋಕ

ಸಿದ್ಧಿಪ್ರದಂ ಮುನಿಗಣೇಂದ್ರ ಶತೇಂದ್ರವಂದ್ಯಂ ಕಲ್ಪದ್ರುಮಂ ಶುಭಕರಂ, ಧೃತಿಕೀರ್ತಿ ಸದ್ಮ ।
ಪಾಪಾಪಹಂ ಭವಭೃತಾಂ ಭವವಾರ್ಧಿಪೋತ, ಮಾನಮ್ಯ ಪಾದಯುಗಲಂ ಪುರುದೇವ ಸೂನೋಃ ॥೧॥

ಸಪ್ತರ್ದ್ಧಿಶಾಲಿಗಣಿನಾಂ ಸ್ತುತಿಗೋಚರಸ್ಯ, ಯುದ್ಧತ್ರಯೇ ವಿಜಿತ ವಿಕ್ರಮ ಚಕ್ರಪಸ್ಯ ।
ಧ್ಯಾನೈಕಲೀನತನುನಿಶ್ಚಲವತ್ಸರಸ್ಯ, ತಸ್ಯ ಪ್ರಭೋ ರಹಮಪಿ ಸ್ತವನಂ ವಿಧಾಸ್ಯೇ ॥೨॥ ಯುಗ್ಮಂ

ಇದನ್ನು 51ಶ್ಲೋಕದಲ್ಲಿ ರಚಿಸಲಾಗಿದೆ. ನನ್ನ ಶಿಷ್ಯೆಯರೊಡನೆ ಮಾತಾಡಿದೆ ಮೊದಲು ಧ್ಯಾನದಲ್ಲಿ ಕಂಡ 452 ಚೈತ್ಯಾಲಯಗಳ ದರ್ಶನ ಮಾಡಿಸಿದೆ ಅವುಗಳ ವಿಸ್ತಾರ ಹೇಳಿದೆ.

ವೀರ ನಿರ್ವಾಣ 2491 ನೇ ಸಂವತ್ಸು ಆಶ್ವೀಜ ಮಾಸ ಅಂದರೆ 1965 ನೇ ಇಸವಿ ಸೆಪ್ಟಂಬರ - ಅಕ್ಟೋಬರ ತಿಂಗಳಿನ ವಿಷಯ. ಶ್ರವಣಬೆಳಗೊಳದಲ್ಲಿ ಚಾತುರ್ಮಾಸದಲ್ಲಿ ಜಂಬೂದ್ವೀಪದ ರಚನೆಯ ಜೊತೆಗೆ ನನ್ನ ಸಾಹಿತ್ಯ ರಚನೆಯು ಪ್ರಾರಂಭವಾಗಿ ಇವು ಸದಾಕಾಲ ನನ್ನ ಜೊತೆಗೆ ಇದ್ದವು. ಇಲ್ಲಿಂದಲೇ ನಾನು ಹಸ್ತಿನಾಪುರದ ಜಂಬೂದ್ವೀಪದ ರೂಪರೇಷಗಳನ್ನು ಪ್ರಾರಂಭಿಸಿದೆ. ಹಾಗೇ 150 ಗ್ರಂಥಗಳನ್ನು ಬರೆದಿದ್ದೇನೆ ಅದರಲ್ಲಿ 100 ಮುದ್ರಿತವಾಗಿವೆ. ಇವೆಲ್ಲಕ್ಕೂ ಶ್ರೀಕಾರ ಹಾಕಿದ್ದೇ ಶ್ರವಣಬೆಳಗೊಳದ ಬಾಹುಬಲಿಯ ಸಾನಿಧ್ಯ. ಹಾಗೇ ನನ್ನ ಹರಕು ಮುರಕು ಕನ್ನಡದಲ್ಲಿ ನನ್ನ ಈ ಚೈತ್ಯಾಲಯಗಳ ಒಂದೆರಡು ಸಲ ಸಂಕ್ಷೇಪವಾಗಿ ದರ್ಶನ ಮಾಡಿಸಿದ್ದೆ.

ಹಿಂದಿಯಲ್ಲಿ ಬಾಹುಬಲಿಯ ಚರಿತೆ

ಇದರ ನಂತರ ನಮ್ಮ ಬಿಡಾರದಲ್ಲಿ ಆಶ್ವೀಜ ಮಾಸದಲ್ಲಿ ಬಾಹುಬಲಿಯ ಚರಿತೆಯನ್ನು ಹಿಂದಿಯಲ್ಲಿ ಬರೆದೆ. ಇದು ಚೌಬೋಲ ಛಂದಸ್ಸಿನಲ್ಲಿದೆ. ಇದರಲ್ಲಿ 108 ಪದ್ಯಗಳಿವೆ, ಕೊನೆಯ ದೋಹೆಯಲ್ಲಿ 3 ಪದ್ಯ ಸೇರಿ, 111 ಮಣಿಗಳ ಒಂದು ಮಾಲೆ ಮಾಡಿ ಭಗವಂತನ ಚರಣಗಳಲ್ಲಿ ಇರಿಸಿದೆ. ಈ ಮಾಲೆಯಿಂದ ಭವ್ಯಜನರು ಭಗವಂತನ ಜಪ ಮಾಡುತ್ತಾರೆ. ಇದು ಮುಂದೆ ಬಾಹುಬಲಿಯ ಸಹಸ್ರಾಬ್ದಿ ಮಹೋತ್ಸವದಲ್ಲಿ ರೆಕಾರ್ಡ ಆಗುತ್ತದೆ ಎಂದು ಗೊತ್ತಿರಲಿಲ್ಲ ಜನಗಳ ಮನಸ್ಸನ್ನೂ ಆಹ್ಲಾದಗೊಳಿಸ ತೊಡಗಿತು. ದೆಹಲಿಯ ಆಕಾಶವಾಣಿ ನಿಲಯದಿಂದ ಏಳು ವಾರಗಳವರೆಗೆ ಇದರ ಪದ್ಯಗಳು ಪ್ರಸಾರವಾದವು. ಮೋತಿಚಂದರು ಬಹಳ ಶ್ರಮವಹಿಸಿ ಇದರ ಚರಿತೆಯನ್ನು 1980 ರಲ್ಲಿ 90 ನಿಮಿಷಗಳ ಸಂಗೀತದ ಟೇಪರೆರ್ಕಾಂಡಿಗ್ ಕ್ಯಾಸೆಟ್ ಮಾಡಿಸಿದರು.. ಇಂದಿಗೂ ಕ್ಯಾಸೇಟ್ ಕೇಳಿದಾಗ 1965 ರ ಸ್ಮೃತಿಯು ನೆನಪಿಗೆ ಬರುತ್ತದೆ.

ಶ್ರವಣಬೆಳಗೊಳದಲ್ಲಿ ಇರುವಾಗಲೇ ಆಚಾರ್ಯ ಶ್ರೀ ವೀರಸಾಗರಜೀಯವರನ್ನು ಕುರಿತು ಒಂದು ಲಘು ಸ್ತುತಿಯನ್ನು ರಚಿಸಿದೆ. ಆಚಾರ್ಯ ಶಿವಸಾಗರಜೀಯವರನ್ನು ಕುರಿತು ಸ್ತುತಿಯನ್ನು ಬರೆದು ಸಂಘದಲ್ಲಿದ್ದ ಆರ್ಯಿಕೆ ವಿಶುದ್ಧಮತೀಗಳಿಗೆ ಕಳುಹಿಸಿದೆ. ಇದನ್ನು ಆಚಾರ್ಯರ ಮುಂದೆ ಓದಿ ನನ್ನ ವಂದನೆಗಳನ್ನು ತಿಳಿಸಬೇಕೆಂದು ವಿನಂತಿಸಿದೆ ಮಥುರಾದಿಂದ ಯಾತ್ರೆ ಹೊರಡುವ ಸಮಯದಲ್ಲಿ ನನ್ನ ಮನಸ್ಸಿನಲ್ಲಿದ್ದ ಭಾವನೆಯು ಸಫಲತೆಯನ್ನು ಹೊಂದಿತ್ತು. ನಿರ್ವಿಘ್ನವಾಗಿ ಸಮ್ಮೇದ ಶಿಖರ ಪರ್ವತದ ವಂದನೆಯನ್ನು ಮುಗಿಸಿದೆ, ಆಗಿನಿಂದಲೇ ನನಗೆ ಕೇವಲಿ ಭಗವಾನರಾದ ಜಂಬೂಸ್ವಾಮಿಗಳ ಬಗ್ಗೆ ಅತೀವವಾದ ಭಕ್ತಿ. ಆದ್ದರಿಂದಲೇ ಅವರನ್ನು ಕುರಿತು 8 ಶ್ಲೋಕಗಳಿಂದ ಸ್ತುತಿಯನ್ನು ರಚಿಸಿದೆ. ಸಾಂಗತ್ಯರಾಗದಲ್ಲಿ ಭರತೇಶ ವೈಭವ, ಮತ್ತು ನಿರಂಜನ ಸ್ತುತಿಯು ಪ್ರಸಿದ್ಧವಾಗಿದೆ. ಇದೇ ಸಾಂಗತ್ಯರಾಗದಲ್ಲಿ ಸಂಸ್ಕೃತದಲ್ಲಿ ಭಗವಾನ್ ಮಹಾವೀರಸ್ವಾಮಿಗಳ ಒಂದು ಲಘು ಸ್ತುತಿಯನ್ನು ರಚಿಸಿದೆ.

ಸಾಂಗತ್ಯ ರಾಗ

ಮನಸಿಜಮರ್ದಕ ಮುನಿಮನೋಹರ್ಷಕ ವೀರ ಮಹಾವೀರ ಧೀರ ।
ಮೃತ್ಯುಂಜಯ ಹಂಸನಾಥ ನಮೋಸ್ತು ತೇ ಕರ್ಮ ವಿದ್ಧ್ವಂಸಕ ಶೂರ ॥ 1 ॥

ಜಿನೇಂದ್ರ ದೇವನಲ್ಲಿ ಭಕ್ತಿ ಇಡುವುದರಿಂದ ಶಾಂತಿ ದೊರೆಯುತ್ತದೆ. ಅಮಂಗಲವು ದೂರವಾಗುತ್ತದೆ. ಆತ್ಮವನ್ನು ಪವಿತ್ರಗೊಳಿಸಿಕೊಂಡು ಭಕ್ತನು ಒಂದಲ್ಲ ಒಂದು ದಿನ ತನ್ನ ಆತ್ಮನನ್ನೂ ಪರಮಾತ್ಮನನ್ನಾಗಿ ಮಾಡಿಕೊಳ್ಳಬಹುದು ಎಂಬುದರಲ್ಲಿ ನನಗೆ ಶ್ರದ್ಧೆ ಇದೆ. ಆದ್ದರಿಂದ ಇಂದು ಘೋರವಾದ ತಪಶ್ಚರಣವು

ಸಾಧ್ಯವಿಲ್ಲದ್ದರಿಂದ ಜಿನಭಕ್ತಿಯಲ್ಲಾದರೂ ತೊಡಗಿಕೊಳ್ಳಬೇಕು. ಆತ್ಮ ಶುದ್ಧಿಗಾಗಿ ಭಕ್ತಿ ಮಾರ್ಗದಲ್ಲಿ ಎಷ್ಟು ಸಾಧ್ಯವೋ ಅಷ್ಟು ತೊಡಗಿಕೊಳ್ಳಬೇಕು.

ಕನ್ನಡದಲ್ಲಿ ಹದಿನಾರು ಭಾವನೆಗಳ ಸ್ತುತಿ

ಇದರ ನಂತರ ನಾನು ಕನ್ನಡದಲ್ಲಿ ಅನುವಾದವಾಗಿದ್ದ ಆದಿಪುರಾಣ ಮತ್ತು ಉತ್ತರಪುರಾಣ ಗ್ರಂಥಗಳನ್ನು ಸ್ವಾಧ್ಯಾಯ ಮಾಡುತ್ತಿದ್ದೆ. ಅದೇನೋ ಕನ್ನಡ ಭಾಷೆಯ ಬಗ್ಗೆ ನನಗೆ ವಿಶೇಷವಾದ ಪ್ರೇಮವಿದ್ದುದರಿಂದ ಕನ್ನಡದಲ್ಲಿಯೇ ಬಾಹುಬಲಿಯ ಸ್ತುತಿಯನ್ನು ಮಾಡಿದೆ. ಅದು ಅಚ್ಚಾಯಿತು. ಪುನಃ ಭದ್ರಬಾಹುಸ್ವಾಮಿಯ ಒಂದು ಸ್ತುತಿ ರಚಿಸಿದೆ. ಇದಾದ ನಂತರ ಹದಿನಾರು ಭಾವನೆಗಳನ್ನು ಕುರಿತಂತೆ ರಚನೆ ಮಾಡಿದೆ.

ಅರಸರ ವೈಭವ ಸುರರ ವಿಮಾನವು ಧನಯೌವನ ಸಂಪದವೆಲ್ಲ ॥

ಇದು ಅಚ್ಚಾಗಿ ಇಂದು ದಕ್ಷಿಣದ ಎಲ್ಲರ ಮನೆಯಲ್ಲೂ ಬಾಯಿ ಪಾಠವಾಗಿದೆ. ನಾನು ಕರ್ನಾಟಕದಲ್ಲಿ ಇದ್ದಾಗ ನಾನು ಹೋದ ಕಡೆಯಲ್ಲಿ ಮಹಿಳೆಯರು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಇದನ್ನು ಕೇಳಿ ಆನಂದವಾಗುತ್ತಿತ್ತು. ನಾನು ಮೊದಲ ದಿನ ಓದುತ್ತಿದ್ದ ಸ್ತುತಿ ಭಾವನೆ ಈಗ ನೆನಪಿದ್ದರೂ ಹಾಡು ಕಂಠಸ್ಥವಾಗಿಲ್ಲ.

ಆಚಾರ್ಯ ವಿದ್ಯಾನಂದ ಮುನಿಗಳಿಗೆ ಈ ಸ್ತುತಿಯನ್ನು ತೋರಿಸಿದಾಗ ಅವರಿಗೆ ಬಹಳ ಪ್ರಿಯವಾಯಿತು. ಅವರನ್ನು ದಕ್ಷಿಣದವರು ಕರೆಯುತ್ತಲೇ ಇರುತ್ತಾರೆ. ಅವರು ದಕ್ಷಿಣದಲ್ಲಿ ತುಂಬ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಅದರ ನಂತರ ಆಚಾರ್ಯ ವಿಮಲಸಾಗರರು ಶ್ರವಣಬೆಳಗೊಳಕ್ಕೆ ಬಂದ ಸಮಯದಲ್ಲಿ ಅವರ ಮೇಲೊಂದು ಸ್ತುತಿಯನ್ನು ರಚಿಸಿದೆ. ಅದನ್ನು ಅಚ್ಚು ಮಾಡಿ ಜನರಿಗೆ ಹಂಚಿದ್ದರು.

ನಾನು ಬೆಟ್ಟದ ಮೇಲೆ ಹೋಗಿ, ಧ್ಯಾನ ಅಥವಾ ಸ್ತೋತ್ರ ಪಠಿಸುತ್ತಾ ಇರುತ್ತಿದ್ದಾಗ, ಅಲ್ಲಿ ಬರುವ ಯಾತ್ರಿ ಸಮೂಹಕ್ಕೆ ವ್ಯವಸ್ಥಾಪಕರ ಪ್ರಾರ್ಥನೆಯಿಂದ ಉಪದೇಶ ಹೇಳಬೇಕಾಗುತ್ತಿತ್ತು. ಅನ್ಯ ಭಾಷೆಯವರಿಗೆ ಪಂಡಿತರೇ ಕನ್ನಡದಲ್ಲಿ ತಿಳಿಸಿ ಹೇಳುತ್ತಿದ್ದರು. ಹಾಗೆ ವಿದೇಶಿಯರು ಅಲ್ಲಿಯ ಮಹತ್ವ, ನಗ್ನಮೂರ್ತಿಯ ಮಹತ್ವ. ಭಗವಾನ ಬಾಹುಬಲಿಯ ಜೀವನ ಚರಿತ್ರೆ ಮೊದಲಾದವುಗಳನ್ನು ಹೇಳಿದಾಗ ಅಲ್ಲಿ ಇಂಗ್ಲೀಷ್ ತಿಳಿದವರು ಅವರಿಗೆ ಆಂಗ್ಲಭಾಷೆಯಲ್ಲಿ ಹೇಳಿದಾಗ ಆ ಜನರು ಬಾಹುಬಲಿಗೆ ನತಮಸ್ತಕರಾಗುತ್ತಿದ್ದರು. ಇಲ್ಲಿದ್ದ ಒಂದು ವರ್ಷವು ನನಗೆ ಇದೇ ಅನುಭವವಾಯಿತು. ವಿದೇಶಿಯರಲ್ಲಿ ನಗ್ನ ಮೂರ್ತಿಯನ್ನು ನೋಡಲು ಬಂದವರು ಹೆಂಗಸರಾಗಲಿ, ಗಂಡಸರಾಗಲಿ, ಕೌತುಕದಿಂದ ನೋಡುತ್ತಿದ್ದವರು ವಿಸ್ಮಿತರಾಗುತ್ತಿದ್ದರು. ಆದರೆ ನಮ್ಮ ಭಾರತದೇಶದ ಜೈನೇತರ ಜನರು ದರ್ಶನಕ್ಕೆ ಬಂದವರು ಅವರ ಹೆಂಗಸರನ್ನು ನೋಡಲು ಬಿಡುತ್ತಿರಲಿಲ್ಲ. ಲಜ್ಜೆಯಿಂದ ನಗುತ್ತಾ ಹೊರನಡೆಯುತ್ತಿದ್ದರು. ಅಲ್ಲಿ ಕುಳಿತಿದ್ದ ನಾನು ಯೋಚಿಸುತ್ತಿದ್ದೆ. ನಿಜವಾಗಿಯೂ ವಿದೇಶಿಯರಲ್ಲಿ ಸಭ್ಯತೆ ಇದೆ ಅವರು ನಗದೆ ಕೌತುಕದಿಂದ ನೋಡುತ್ತಾರೆ. ಮತ್ತು ಭಗವಂತನು ಏತಕ್ಕೆ ನಗ್ನವಾಗಿದ್ದಾನೆಂದು ತಿಳಿಯಲು ಬಯಸುತ್ತಾರೆ. ಅವರ ಹೃದಯದಲ್ಲಿ ಭಾರತೀಯ ಸಂಸ್ಕೃತಿಯ ಬಗ್ಗೆ ಜಿಜ್ಞಾಸೆ ಇದೆ. ಇದಕ್ಕೆ ವಿರೋಧವಾಗಿ ಭಾರತದವರೇ ಆದ ಜನರು ಮೂರ್ತಿಯನ್ನು ನೋಡಿ ನಾಚಿಕೆಯಿಂದ ನಗುತ್ತಾರೆಯೇ ಹೊರತು ಮೂರ್ತಿ ನಗ್ನವಾಗಿರುವುದು ಏನಾದರೂ ವಿಶೇಷತೆ ಇದೆಯೇ ಇಲ್ಲವೇ ಎಂದು ತಿಳಿಯುವುದಿಲ್ಲ.

ಹೀಗಾಗಿ ನಾನು ಉಪದೇಶದಲ್ಲಿ ಬಾಹುಬಲಿ ಸ್ವಾಮಿಯು ಎಲ್ಲಪರಿಗ್ರಹವನ್ನು ತ್ಯಾಗಮಾಡಿ ಬ್ರಹ್ಮಚರ್ಯೆಯನ್ನು ಪಾಲಿಸುವ ಅವರು ಬಾಲಕನಂತೆ. ನಿರ್ವಿಕಾರರು ಅಲ್ಲದೆ ಜನ್ಮತಃ ಬಾಲಕನನ್ನು

ನೋಡುವಂತೆ ಪ್ರಾಕೃತಿಕ ರೂಪನ್ನು ಧಾರಣೆ ಮಾಡಿದ್ದಾರೆ. ಇದು ಪೂರ್ಣ ನಿರಾಕುಲರು ಅವರು ಪೂರ್ಣವಾಗಿ ಆತ್ಮನ ಆನಂದದಲ್ಲಿ ಮಗ್ನರಾಗಿದ್ದಾರೆ. ಹೀಗೆ ಉಪದೇಶ ಕೇಳಿದ, ನಾಚಿಕೆಯಿಂದ ಮುಖ ಮುಚ್ಚಿಕೊಂಡ ಮಹಿಳೆಯರು ಪ್ರಭಾವಿತರಾಗಿ ಭಕ್ತಿಯಿಂದ ಕೈ ಮುಗಿಯ ತೊಡಗಿದರು.

1966ರ ಫೆಬ್ರವರಿಯಲ್ಲಿ ಮಹಾಮಸ್ತಕಾಭಿಷೇಕ ಆಗಬೇಕಾಗಿತ್ತು. ಆದರೆ ನೀರಿನ ಕೊರತೆಯಿಂದಾಗಿ ಆ ವರ್ಷದಿಂದ ಮುಂದೂಡಲಾಯಿತು. ಆದ್ದರಿಂದ ಮಳೆ ಬರುವಾಗ ಮೋಡದಿಂದ ಸುರಿವ ನೀರಿನ ಅಭಿಷೇಕ ನೋಡಿಯೇ ಸಂತೋಷಪಟ್ಟೆ. ನನಗೆ ಅನ್ನಿಸಿತು, ಮಹಾಮಸ್ತಕಾಭಿಷೇಕ ನೋಡುವ ಭಾಗ್ಯ ನನಗಿಲ್ಲವೆಂದು. ಇಲ್ಲಿಂದ ವಿಹಾರ ಹೊರಡಲು ಯೋಚಿಸಿದೆವು. ಆರ್ಯಿಕೆ ಜಿನಮತಿಯಂತೂ ವಿಹಾರ ಹೊರಡಲು ಆಕುಲರಾಗಿದ್ದರು. ಸರಿಯಾಗಿ ವಿಶುದ್ಧಮತಿಯವರಿಂದ ಆಚಾರ್ಯ ಶಿವಸಾಗರ, ಮತ್ತು ಶ್ರುತಸಾಗರರು ಮಾತಾಜೀಯವರು ಹೇಗಿದ್ದಾರೋ ಹಾಗೆಯೇ ಹೊರಡಬೇಕೆಂಬ ನಿರೂಪ ಬಂದಿತು. ನಾನು ಸಂಘದಿಂದ ಸುಗನಚಂದ್ರರನ್ನು ಕರೆಸಿಕೊಂಡೆ ಅವರು ಇಬ್ಬರು ಬ್ರಹ್ಮಚಾರಿಣಿಯರನ್ನು ಕರೆದುಕೊಂಡು ಬಂದರು.

ಆಚಾರ್ಯ ವಿಮಲಸಾಗರರ ದರ್ಶನ

ಆಚಾರ್ಯರು ಮೂಡಬಿದ್ರೆಯಿಂದ ಮೈಸೂರಿಗೆ ಬರುತ್ತಿದ್ದಾರೆ ಎಂಬ ಸಮಾಚಾರವು ತಿಳಿಯಿತು. ಅಲ್ಲದೆ ಮೈಸೂರಿನ ಪ್ರಮುಖರಾದ ಶ್ರೀಪಾಲಯ್ಯ ಮೊದಲಾದವರು ಮೈಸೂರಿಗೆ ಬರಲು ಪ್ರಾರ್ಥಿಸಿದ್ದರು. ಆದರೆ ಪ್ರಯಾಣ ಮಾಡುವ ಮೊದಲು ವಿಚಾರ ಮಾಡಿದೆ. ಅನಾರೋಗ್ಯದ ಮಾತಾಜೀಗಳನ್ನು ಕರೆದುಕೊಂಡು ಹೋಗುವಂತಿಲ್ಲ ಬಿಟ್ಟು ಹೋಗಲು ಮನಸ್ಸಿಲ್ಲ. ಕೊನಗೆ ಧೃಡ ನಿರ್ಧಾರ ಮಾಡಿ ಇಬ್ಬರು ಮಾತಾಜೀಗಳನ್ನು ಮಾತ್ರ ಕರೆದುಕೊಂಡು ಮೈಸೂರಿಗೆ ಹೊರಟು 3-4 ದಿನದಲ್ಲಿ ಮೈಸೂರು ಮುಟ್ಟಿದೆ. ಅಷ್ಟರಲ್ಲಿ ಆಚಾರ್ಯರ ಸಂಘ ಬಂದಿತ್ತು. ನಾನು 1963 ರಲ್ಲಿ ಆರಂಭದಲ್ಲಿ ಆಚಾರ್ಯರನ್ನು ದರ್ಶನ ಮಾಡಿದ್ದು ಪುನಃ 1966ರ ಫೆಬ್ರವರಿಯಲ್ಲಿ. ದಕ್ಷಿಣದಲ್ಲೇ ಆಚಾರ್ಯರ ವಾತ್ಸಲ್ಯ ಆಪ್ಯಾಯಮಾನವಾಗಿತ್ತು. ಸಂಘದಲ್ಲಿ ಯಾರಿಗೂ ಕನ್ನಡ ಬರುತ್ತಿರಲಿಲ್ಲ. ಹೀಗಾಗಿ ಆಚಾರ್ಯರ ಉಪದೇಶಕ್ಕಿಂತ ಮೊದಲು ನಾನು ಹರಕು ಮುರಕು ಕನ್ನಡದಲ್ಲಿಯೇ ಉಪದೇಶ ಕೊಡುತ್ತಿದ್ದೆ. ನಂತರ ಆಚಾರ್ಯರು ಮಾಡುತ್ತಿದ್ದರು. ಕನ್ನಡ ಭಾಷೆಯಲ್ಲಿ ಅರ್ಥಮಾಡಿಕೊಂಡು ಜನ ಆನಂದ ಪಡುತ್ತಿದ್ದರು.

ಶ್ರವಣಬೆಳಗೊಳಕ್ಕೆ ಬಂದ ಜನರು ದರ್ಶನ ಮಾಡಿ ಉಪದೇಶ ಕೇಳಿದಂತಹ ಜನ ಇಂತಹ ನಿಧಿ ನಮ್ಮ ಪ್ರಾಂತ್ಯದಲ್ಲಿ ಒಂದು ವರ್ಷವಿದ್ದರೆ ನಾವು ಉಪದೇಶದಿಂದ ಲಾಭ ಪಡೆಯಬಹುದಲ್ಲ ಎಂದುಕೊಳ್ಳತೊಡಗಿದರು ಅದಕ್ಕೆ ನಾನು ನಾನೇನು ನಿಧಿಯಲ್ಲ. ನನ್ನಲ್ಲಿಏನು ವಿಶೇಷತೆ ಇಲ್ಲ. ಮಹಾನಿಧಿಯಾದ ಬಾಹುಬಲಿಯು ಇಡೀ ವಿಶ್ವದ ನಿಧಿಯಾಗಿದ್ದಾರೆ. ಇವರನ್ನು ದರ್ಶನಮಾಡಲು ಇಲ್ಲಿಗೆ ಎಲ್ಲಾ ಸಾಧು - ಸಾಧ್ವಿಗಳು ಬಂದೇ ಬರುತ್ತಾರೆ.

ಇದರ ನಂತರ ಇಲ್ಲಿಯ ಜನರು ಪ್ರಾರ್ಥಿಸತೊಡಗಿದರು ಮಾತಾಜೀ ಇಲ್ಲಿ ಬಂದು ತಿಂಗಳಾದರೂ ಇದ್ದು ನಮಗೆ ಧರ್ಮಲಾಭವನ್ನು ದಯಪಾಲಿಸಬೇಕೆಂದು. ಆದರೆ ನಮ್ಮೆಲ್ಲರ ಮನಸ್ಸು ವಿಹಾರಿಸಲು ತವಕಿಸುತ್ತಿದ್ದರಿಂದ ಇವರ ಮಾತು ಕೇಳಲಾಗಲಿಲ್ಲ. ನಕ್ಕು ಅವರಿಗೆ ಸಂತೈಸಿ 4-5 ದಿನಗಳ ನಂತರ ಆಚಾರ್ಯ ಸಂಘದೊಡನೆ ನಾವು ಹೊರಟೆವು. ನಾನು ಕನ್ನಡ ಸ್ವಲ್ಪ ಕಲಿತಿದ್ದರಿಂದ ಆಚಾರ್ಯರ ಉಪದೇಶವನ್ನು ಕನ್ನಡದಲ್ಲಿ ತಿಳಿಸುತ್ತಿದ್ದರಿಂದ ಅವರಿಗೆಲ್ಲಾ ಚೆನ್ನಾಗಿ ಅರ್ಥವಾಗುತ್ತಿತ್ತು.

ಹಾಸ್ಯದಲ್ಲಿನ ಹಾಸ್ಯದ ಘಟನೆ

ಮೈಸೂರಿನಿಂದ ಬಂದು ಜೈನೇತರ ಮಠದ ಹತ್ತಿರವೇ ತೆರೆದ ಮೈದಾನದಲ್ಲಿಯೇ ಸಂಘ ನಿಂತಿತು. ಹತ್ತಿರದಲ್ಲಿಯೇ ಚೌಕದ ಏರ್ಪಾಡಾಯಿತು. ಆಹಾರದ ನಂತರ ಸಮಾಯಿಕವಾದ ಮೇಲೆ ನಾನು ಶೌಚಕ್ಕಾಗಿ ಸ್ವಲ್ಪ ಕಾಡಿನ ಕಡೆ ಹೊರಟೆ ನನ್ನ ಜೊತೆ ಒಬ್ಬ ಆರ್ಯಿಕೆಯರು ಇದ್ದರು. ಆ ಕಡೆ ನೋಡಿದಾಗ ಕೆಲವು ಹಳ್ಳಿಜನರು ತಮ್ಮ ತಮ್ಮಲ್ಲಿಯೇ ಕನ್ನಡದಲ್ಲಿ ಮಾತನಾಡುತ್ತಿದ್ದರು. ನೋಡು ಒಬ್ಬ ಹುಚ್ಚ ಪೂರ್ತಿ ಬೆತ್ತಲೆಯಾಗಿ ಸುತ್ತಾಡುತ್ತಿದ್ದಾನೆ ಎಂದು ನನಗೆ ಕನ್ನಡ ಅರ್ಥವಾದ್ದರಿಂದ ಅವರಿಗೆ ತಿಳುವಳಿಕೆ ಹೇಳಿದೆ. ಅವರು ನಡಿ ನಡಿ ಹತ್ತಿರದಲ್ಲೇ ಬೆತ್ತಲೆ ಜನಗಳ ಸಂಘ ಇದೆಯಂತೆ ಈ ಹುಚ್ಚನನ್ನು ಅಲ್ಲಿಗೆ ಸೇರಿಸಿ ಬಿಡೋಣ ಎಂದರು. ನನಗೆ ಅವರು ದಿಗಂಬರ ಮುನಿಗಳ ಬಗ್ಗೆ ಆಡಿದ ಅವಹೇಳನಕಾರಿಯಾದ ಮಾತುಗಳನ್ನು ಸಹಿಸಲು ಆಗಲಿಲ್ಲ. ನನ್ನ ಜಾಗಕ್ಕೆ ಬಂದು ಕುಳಿತವಳು ಅಲ್ಲಿಯ ಪ್ರಮುಖ ಜನರನ್ನು ಕರೆಯಿಸಿ ಆ ಹಳ್ಳಿಯವರನ್ನೆಲ್ಲಾ ಕರೆಯಿರಿ ನಾನು ಉಪದೇಶ ಮಾಡಬೇಕೆಂದೆ. ಉಪದೇಶ ಕೇಳಬೇಕೆಂಬ ಆಶೆಯಿಂದ ಆ ವ್ಯಕ್ತಿ ಬಹಳಷ್ಟು ಜನಗಳನ್ನು ಒಟ್ಟುಗೂಡಿಸಿದ. ನಾನು ಉದ್ದೇಶಿಸಿದ ದಿಗಂಬರ ಜೈನ ಸಾಧುಗಳು ಎಲ್ಲಾ ಪರಿಗ್ರಹಗಳನ್ನು ತ್ಯಜಿಸಿ ಸಾಧುಗಳಾಗಿರುತ್ತಾರೆ. ಆದ್ದರಿಂದಲೇ ಅವರು ಲಂಗೋಟಿಯನ್ನು ಇಟ್ಟುಕೊಂಡಿರುವುದಿಲ್ಲ ಏಕೆಂದರೆ ಅದನ್ನು ಒಗೆಯಬೇಕು, ಒಣಗಿಸಬೇಕು ಹರಿದುಹೋದರೆ ಯಾರನ್ನಾದರೂ ಬೇಡಬೇಕು ಹಾಗೆಯೇ ಅವರು ಬ್ರಹ್ಮಚರ್ಯೆಯನ್ನು ಪಾಲಿಸುತ್ತಾರೆ. ನೋಡಿ ಮಕ್ಕಳು ಮಡಿಲಿನಿಂದ ಇಳಿದು ಆ ಕಡೆ ಈ ಕಡೆ ಆಟವಾಡುವಾಗ ಆ ಬಾಲಕನನ್ನು ನೋಡಿ ಯಾರಾದರೂ ವಿಕಾರಗೊಳ್ಳುತ್ತಾರೆಯೋ ಆ ಬಾಲಕನಲ್ಲಿ ವಿಕಾರವಿಲ್ಲ. ಅವನು ನಿರ್ವಿಕಾರ ಹಾಗೆಯೇ ಈ ಸಾಧುಗಳು "ನಿರ್ವಿಕಾರ ಬಾಲಕವತ್ ನಿರ್ಭಯ ತಿಲಕೇ ಪಾಯನ ಧೋಕಾ ಹಮಾರಿ" (ನಿರ್ವಿಕಾರಂ) ನಿರ್ವಿಕಾರರು ಇವರು ದಿಕ್ಕುಗಳನ್ನೇ ತಮ್ಮ ವಸ್ತ್ರಗಳಾನ್ನಾಗಿ ಮಾಡಿಕೊಂಡಿದ್ದಾರೆ ಶೀಲವೇ ಭೂಷಣರಾಗಿದ್ದಾರೆ. ಮೂರು ಲೋಕಗಳಲ್ಲೂ ಪೂಜ್ಯರು ಜೊತೆಗೆ ಒಂದು ಕತೆಯನ್ನು ಹೇಳಿದೆ.

ಒಂದು ಸಲ ದಿಗಂಬರ ಮುನಿಗಳ ಸಂಘ ಸಮ್ಮೇದ ಶಿಖರದ ಕಡೆಗೆ ಯಾತ್ರೆ ಹೋಗುತ್ತಿತ್ತು ಹಳ್ಳಿಗೆ ಹಳ್ಳಿಯ ಜನವೇ ನಗತೊಡಗಿದರು. ಆದರೆ ಒಬ್ಬ ಕುಂಬಕಾರನು ಅವರನ್ನು ದೇವತೆಗಳೆಂದು ಚಕ್ರವರ್ತಿಗಳಿಂದ ಪೂಜಿತರೆಂದು ತಿಳಿದು ನಗಲಿಲ್ಲ. ಇದಾದ ಕೆಲವು ದಿನಗಳಾದ ಮೇಲೆ ಯಾರೋ ಒಬ್ಬರು ಅಪರಾಧ ಮಾಡಿದ್ದರಿಂದ ರಾಜನು ಇಡೀ ಹಳ್ಳಿಗೆ ಬೆಂಕಿ ಹಾಕಿಸಿಬಿಟ್ಟ ಎಲ್ಲರು ಸತ್ತು ಚಿಕ್ಕ ಚಿಕ್ಕ ಕೀಟಗಳಾಗಿ ಬಿಟ್ಟರು ಆದರೆ ಆ ದಿನ ಕುಂಬಾರ ಬೇರೆ ಊರಿಗೆ ಹೋಗಿದ್ದರಿಂದ ಅವನು ಉಳಿದುಕೊಂಡ. ಕಾಲಾಂತರದಲ್ಲಿ ಸತ್ತು ಒಬ್ಬ ವ್ಯಾಪಾರಿಯಾದ ಉಳಿದವರೆಲ್ಲಾ ಸತ್ತುಹೋದವರು ಕಪ್ಪೆಚಿಪ್ಪುಗಳಾಗಿ ಹುಟ್ಟಿದ್ದರು. ವ್ಯಾಪಾರಿ ಅವುಗಳನ್ನು ಕೊಂಡುಕೊಂಡ. ಈ ಕಥೆ ಹೇಳಿ ನಾನು ತಿಳುವಳಿಕೆ ನೀಡಿದೆ ಈ ನಗ್ನ ಮುನಿಗಳು ಜಗತ್ ಪೂಜ್ಯರು ಹುಚ್ಚರಲ್ಲ. ಆದ್ದರಿಂದ ನೀವು ಹುಚ್ಚರನ್ನು ಅವರೊಡನೆ ಸೇರಿಸೋಣ ಎನ್ನುತ್ತಿದ್ದೀರಲ್ಲ ಅದೆಲ್ಲ ತಪ್ಪು ಎಂದು ಹೇಳಿದೆ. ನನ್ನ ಉಪದೇಶ ಕೇಳಿದ ಅವರೆಲ್ಲಾ ಪಶ್ಚಾತ್ತಾಪದಿಂದ ಕ್ಷಮಾಯಾಚನೆ ಮಾಡತೊಡಗಿದರು. ಆಮೇಲೆ ಎಲ್ಲರೂ ಗುರುಗಳ ದರ್ಶನ ಮಾಡಿ ತಮ್ಮ ಜನ್ಮವನ್ನು ಸಫಲಗೊಳಿಸಿದರು. ಹೀಗೆ ವಿಹಾರ ಮಾಡುತ್ತಾ ನಾವು ಶ್ರವಣಬೆಳಗೊಳ ತಲುಪಿದೆವು. ಭಟ್ಟಾರಕರು ಶ್ರೀಫಲ ಇಟ್ಟು ಸ್ವಾಗತಿಸಿದರು. ಆದಿಮತೀ ಮತ್ತು ಅಭಯಮತೀಯವರು ಬಂದು ಆಚಾರ್ಯರ ದರ್ಶನ ಮಾಡಿದರು. ಒಳ್ಳೆಯ ಧಾರ್ಮಿಕ ಪ್ರಭಾವನೆ ಉಂಟಾಯಿತು.

ಭಗವಾನ್ ಬಾಹುಬಲಿಗೆ ಚಿಕ್ಕ ಅಭಿಷೇಕ

ನಾನು ಭಗವಂತನಿಗೆ ಲಿಫ್ಟ್ ಮೂಲಕವಾದರೂ ಅಭಿಷೇಕ ಮಾಡಿಸಬೇಕೆಂದು ಆಚಾರ್ಯರಲ್ಲಿ ವಿನಂತಿಸಿದೆ. ಆಚಾರ್ಯರು ಈ ವಿಷಯದ ಬಗ್ಗೆ ಪರೀಕ್ಷಿಸಿದರು ನಾನು ಭಟ್ಟಾರಕರಿಗೆ ಹೇಳಿದೆ. ಆದರೆ ಮೈಸೂರು ಸರಕಾರದ ಸ್ವೀಕೃತಿ ಸಿಗಬೇಕು ಮತ್ತು ಅನುಮತಿ ಇಲ್ಲದೇ ಅಭಿಷೇಕ ಮಾಡುವುದು ಕಷ್ಟವೆಂದರು. ಆದ್ದರಿಂದ ಭಟ್ಟಾರಕರು ಗೊಂದಲದಲ್ಲಿ ಬಿದ್ದರು. ಈ ಕಡೆ ನನ್ನ ಭಾವನೆ ಮತ್ತು ಆಚಾರ್ಯರ ಪ್ರೇರಣೆಯಿಂದ ಮೈಸೂರಿನ ಕೆಲವು ಜನರು ವಿಚಾರ ಮಾಡಿದರು. ಪ್ರಚಾರ ಮಾಡದೇ ಚಿಕ್ಕದಾದ ಒಂದು ಕಾರ್ಯಕ್ರಮವನ್ನು ಹಾಕಿಕೊಂಡರು. ಸುತ್ತಮುತ್ತಲಿನ ಜನರು ಸೇರಿದರು. ಆಚಾರ್ಯರ ಮತ್ತು ನಮ್ಮ ಸಂಘದ ಜನರು ಮೇಲೆ ಹತ್ತಿದೆವು ಇಬ್ಬರು ಮೂವರು ಪುರೋಹಿತರು ಲಿಫ್ಟ್ ಮೂಲಕ ಕೊಡಗಳಲ್ಲಿಅಭಿಷೇಕದ ವಸ್ತುಗಳನ್ನು ತೆಗೆದುಕೊಂಡು ಅಭಿಷೇಕ ಮಾಡಿದರು. ಆಗ ಆದ ಆನಂದದ ಅನುಭವ ವಿವರಿಸಲಾರೆ. ನಾನು ಮೊದಲು ಅಭಿಷೇಕದ ಇಚ್ಛೆ ವ್ಯಕ್ತ ಪಡಿಸಿದಾಗ ಎದುರಾದ ಸಮಸ್ಯೆಗಳನ್ನು ನೋಡುತ್ತಿದ್ದ ಜಿನಮತಿ ಮತ್ತು ಆದಿಮತಿಯರು ತಮ್ಮ ತಮ್ಮಲ್ಲಿಯೇ ಮಾತನಾಡಿಕೊಳ್ಳುತ್ತಿದ್ದರು. ಅಮ್ಮನಿಗೆ ಏನಾದರೂ ಮಾಡುತ್ತಿರಬೇಕು ಇಲ್ಲ ಮಾಡಿಸುತ್ತಿರಬೇಕು ಇಲ್ಲದಿದ್ದರೆ ಅವರಿಗೆ ನೆಮ್ಮದಿಯೇ ಇರುವುದಿಲ್ಲ ಎಂದು. ಈಗ ಅಭಿಷೇಕ ನೋಡಬೇಕೆಂದು ವಿಷಯ ತೆಗೆದಿದ್ದಾರೆ ಇದೆಲ್ಲಾ ಬೇಡ ಎನ್ನಬೇಕು. ಆಮೇಲೆ ನನ್ನ ಹತ್ತಿರ ಬಂದು ಹೇಳತೊಡಗಿದರು. ಅಮ್ಮ ನಾವು ಕ್ಷೇಮವಾಗಿ ಇಲ್ಲಿಂದ ಹೊರಟು ಬಿಡೋಣ ಈಗ ಅಭಿಷೇಕ ನೋಡಬೇಕೆಂಬ ವಿಷಯವನ್ನು ತೆಗೆಯಬೇಡಿರಿ ಎಂದರು. ನನಗೆ ಏನಾದರೂ ಮನದಲ್ಲಿ ವಿಷಯ ಬಂದರೆ ಆಗೇ ಆಗುತ್ತದೆ ಎಂದು ಖಚಿತವಿತ್ತು. ಆದ್ದರಿಂದ ಅವರಿಬ್ಬರ ಮಾತನ್ನು ಕೇಳಿಯೂ ಕೇಳದಂತೆ ಇದ್ದೆ. ಆದರೂ ಮನದಲ್ಲಿ ಇವರು ನನ್ನ ಯೋಚನೆಗಳಿಗೆ ಸಹಕಾರ ಕೊಡಬೇಕು ಅಥವಾ ಕುಳಿತುಕೊಂಡು ಮಹಾಮಂತ್ರದ ಜಪವನ್ನಾದರೂ ಮಾಡಬೇಕು ಅದನ್ನು ಬಿಟ್ಟು ಇದನ್ನು ವಿರೋಧಿಸುತ್ತಿದ್ದಾರಲ್ಲ ಎಂದುಕೊಂಡೆ.

ಕೊನೆಗೆ ಅಭಿಷೇಕದ ಸಮಯದಲ್ಲಿ ಇವರಿಬ್ಬರೂ ಸ್ವಾಮಿಯನ್ನು ಒಂದೇ ಸಮನೆ ನೋಡುತ್ತಾ ಚರಣ ಸಾನಿಧ್ಯದಲ್ಲಿ ನಿಂತು ಬಿಟ್ಟರು. ಅಭಿಷೇಕ ಮಾಡಿ ಗದ್ಗದಿತರಾಗಿದ್ದು ಅವರನ್ನು ನೋಡಿದಾಗಲೇ ಗೊತ್ತಾಯಿತು ನನಗೂ ಆನಂದವಾಯಿತು ಹಾಗೆಯೇ ಇಡೀ ಸಾಧು ಸಮೂಹವೇ ಆನಂದಗೊಂಡಿತು. ಚರಣಗಳಿಗೆ ಪಂಚಾಮೃತಾಭಿಷೇಕ, ಶಾಂತಿಧಾರೆ ಆಯಿತು. ಎಲ್ಲರೂ ಪ್ರಸಾದವನ್ನು ಕಣ್ಣುಗಳಿಗೆ ಒತ್ತಿಕೊಂಡು ನಮ್ಮ ಜೀವನವನ್ನು ಪವಿತ್ರ ಮಾಡಿಕೊಂಡೆವು. ನಂತರ ಹಾಸನ, ಮೈಸೂರಿನ ಜನರೆಲ್ಲಾ ಬಂದರು ನನ್ನ ಮತ್ತು ಆಚಾರ್ಯರ ಉಪದೇಶವಾಯಿತು. ನಾನು ಕನ್ನಡದಲ್ಲಿಯೇ ಉಪದೇಶ ಮಾಡಿದೆ. ನಂತರ ಎಲ್ಲರೂ ಬೆಟ್ಟದಿಂದ ಇಳಿದೆವು. ಇಳಿಯುತ್ತಾ ಯೋಚಿಸಿದೆ ಕೆಲಸ ಚಿಕ್ಕದಾದರೂ ಆಗಲಿ ಎಲ್ಲರೂ ವಿರೋಧವಾಗಿ ಅಷ್ಟೇ ಅಲ್ಲ ನನ್ನ ಶಿಷ್ಯರು ಇದಕ್ಕೆ ಅನುಕೂಲವಾಗಿಲ್ಲದೇ ಸಹಕರಿಸಿದ್ದಾರೆ ಒಂಟಿತನದ ಅನುಭವವಾಗುತ್ತದೆ. ಆದರೂ ಒಂದು ಧೃಡಸಂಕಲ್ಪ ಮಾಡಿದಾಗ ಅದರ ಶಿಸ್ತಿನಿಂದಲೇ ಕಾರ್ಯವು ಸಫಲಗೊಳ್ಳುತ್ತದೆ ಮತ್ತು ಕಾರ್ಯಸಫಲತೆಗೆ ಎಲ್ಲರೂ ಭಾಗಿಯಾಗಿದ್ದಾರೆಂದು ಆಗುತ್ತಾರೆ. ಈ ರೀತಿಯ ಪ್ರಸಂಗ ನನ್ನ ಜೀವನದಲ್ಲಿ ಸಾಕಷ್ಟು ಬಂದಿದೆ. ಏನೋ ಎಲ್ಲಾ ಕೆಲಸದಲ್ಲೂ ನಾನು ನನ್ನ ಧೃಡಸಂಕಲ್ಪದಿಂದ ಸಫಲತೆಯನ್ನು ಪಡೆದಿದ್ದೇನೆ. ಇದರಿಂದಾಗಿಯೇ ನಾನು ಯಾವಾಗಲೂ ನನ್ನ ಶಿಷ್ಯರಿಗಾಗಲೀ, ಶ್ರಾವಕ ಶ್ರಾವಕಿಯರಿಗಾಗಲೀ ಶಿಕ್ಷಣ ಕೊಡುವಾಗ ಹೇಳುತ್ತಿರುತ್ತೇನೆ ನೋಡಿ ನೀವು ಯಾವುದೇ ಕೆಲಸ ಮಾಡಬೇಕೆಂದಿದ್ದರೆ ಮೊದಲು ನೀವು ಮಾಡುವ ಕೆಲಸ ಆಗಮಕ್ಕೆ ವಿರೋಧವಾಗಿದೆಯೇ ಎಂದು ಯೋಚಿಸಿ ಅದು ಆಗಮಕ್ಕೆ ಅನುಸಾರವಾಗಿಯೇ ಇದೆಯೆಂದಾದರೆ ತಾವು ಧೃಡಸಂಕಲ್ಪವನ್ನು ಕೈಗೊಳ್ಳಿರಿ. ಬೇರೆ ಜನರು ವಿರೋಧ ಮಾಡಿದರು ಎಂದು ಗಮನ ಕೊಡಬೇಡಿ ವಿರೋಧ

ಮಾಡುವುದಕ್ಕೆ ಹಲವಾರು ಕಾರಣಗಳಿರುತ್ತವೆ. ಕೆಲವರು ಹೊಟ್ಟೆ ಕಿಚ್ಚಿನಿಂದ, ಕೆಲವರಿಗೆ ಅಸಹಿಷ್ಣುತೆಯಿಂದ ವಿರೋಧ ಮಾಡುತ್ತಾರೆ ಕೆಲವರು ಏನಾಗಿ ಬಿಡುತ್ತದೇಯೋ ಎನ್ನುವ ಭಯದಿಂದಲೇ ವಿರೋಧಿಸುತ್ತಾರೆ. ಅಡೆತಡೆಯನ್ನು ತಂದೊಡ್ಡಲು ಪ್ರಯತ್ನಿಸುತ್ತಾರೆ ಎಂದೆ.

ಶ್ರೇಯಾಂಸಿ ಬಹು ವಿಘ್ನಾನಿ ಭವಂತಿ ಮಹತಾಮಪಿ

ಈ ನೀತಿ ವಾಕ್ಯವನ್ನು ಜ್ಞಾಪಿಸಿಕೊಳ್ಳುತ್ತಾ ಚಿಕ್ಕ ಚಿಕ್ಕ ವಿರೋಧಗಳನ್ನು ಗಣನೆಗೆ ತೆಗೆದುಕೊಳ್ಳದೇ ಧರ್ಮದ ಕಾರ್ಯಗಳಿಂದ ಹಿಂದೆ ಸರಿಯಬೇಡಿರಿ. ಶ್ರವಣಬೆಳಗೊಳದಲ್ಲಿ ಸುಮಾರು ಒಂದು ವರ್ಷ ತಂಗಿದ್ದು ಅಲ್ಲಿಂದ ಹೊರೆಟೆವು. ಸುಮಾರು ಒಂದು ವರ್ಷದಿಂದಲೂ ತನು ಮನ ಧನಗಳಿಂದ ಸೇವೆ ಮಾಡಿದ ಲಲಿತಮ್ಮ ಮತ್ತು ಕನಕಮ್ಮರಂತೂ ಹೃದಯ ತುಂಬಿ ಅತ್ತರು. ಇಲ್ಲಿಂದ ನನಗೆ ಮೂಡಬಿದ್ರೆ, ಹುಂಚ ಮೊದಲಾದ ತೀರ್ಥಕ್ಷೇತ್ರಗಳನ್ನು ಸಂದರ್ಶಿಸುವ ಇಚ್ಛೆಯಿತ್ತು ಈ ಮಾರ್ಗವಾಗಿ ಹೋಗಲು ಬೆಟ್ಟ ಗುಡ್ಡಗಳನ್ನು ಹತ್ತಿ ಇಳಿಯಬೇಕಾದ್ದರಿಂದ ಆಚಾರ್ಯ ವಿಮಲಸಾಗರರಲ್ಲಿ ಪರಾಮರ್ಶಿಸಿ ಆರ್ಯಿಕೆ ಆದಿಮತಿ ಮತ್ತು ಕ್ಷುಲ್ಲಿಕೆ ಅಭಯಮತಿಯನ್ನು ಆಚಾರ್ಯ ಸಂಘದ ಜೊತೆಯಲ್ಲಿ ಹುಬ್ಬಳ್ಳಿಗೆ ಕಳುಹಿಸುವ ನಿಶ್ಚಯ ಮಾಡಿದೆ ಇವರಿಬ್ಬರೂ ದೀಕ್ಷೆಗೆ ಮೊದಲೇ ಈ ಕ್ಷೇತ್ರಗಳನ್ನು ಸಂದರ್ಶಿಸಿದ್ದರು. ಆದರೆ ಈಗ ಅನಾರೋಗ್ಯದ ನಿಮಿತ್ತ ಹುಬ್ಬಳ್ಳಿಗೆ ನೇರವಾಗಿ ಕಳುಹಿಸುವ ನಿರ್ಣಯ ಕೈಗೊಂಡೆ. ಆಚಾರ್ಯರು ಕೂಡ ತಮ್ಮ ಸಂಘದೊಡನೆ ಕರೆದೊಯ್ಯಲು ಸಮ್ಮತಿಸಿದರು. ನಾವೆಲ್ಲರೂ ಒಟ್ಟಿಗೆ ಅಲ್ಲಿಂದ ಹೊರಟೆವು.

ನಾವು ಹೊರಟ ದಿನ ಫಾಲ್ಗುಣ ಮಾಸದ ಚತುರ್ಥಿ ನನಗೆ ತಕ್ಷಣ ನೆನಪಾಯಿತು. ನಾವು ಬಂದು ಸರಿಯಾಗಿ ಒಂದು ವರ್ಷಾ ಯೋಗ ನೋಡಿ ಬಾಹುಬಲಿ ದೀಕ್ಷೆ ತೆಗೆದುಕೊಂಡು ಒಂದು ವರ್ಷ ಪ್ರತಿಮಾಯೋಗದಲ್ಲಿ ನಿಂತಂತೆ ನಾವು ಮೂರ್ತಿಯ ದರ್ಶನದಲ್ಲಿ ಒಂದು ವರ್ಷ ಕಳೆದೆವು. 1981 ರ ಫೆಬ್ರುವರಿಯಲ್ಲಿಭಗವಾನ್ ಬಾಹುಬಲಿಯ ಮೊದಲ ಮಹಾಮಸ್ತಕಾಭಿಷೇಕ ಸಹ ಇದೇ ತಿಥಿಯಲ್ಲಿ ಆದದ್ದು ನನಗೆ ಚೆನ್ನಾಗಿ ನೆನಪಿದೆ.

೪೮

ಮೂಡಬಿದರೆ

ಶ್ರವಣಬೆಳಗೊಳದಿಂದ ಹೋಗುವ ಸಮಯದಲ್ಲಿ ಮೂರ್ತಿಯನ್ನು ಒಂದೇ ಸಮ ನೋಡಿ ಕಣ್ಣುಗಳಲ್ಲಿ ತುಂಬಿಕೊಂಡೆ. ಬಿಟ್ಟು ಹೊರಡುವಾಗ ದುಃಖವಾಯಿತು. ಕೊನೆಗೆ ಹೃದಯದಲ್ಲಿ ಮೂರ್ತಿಯನ್ನು ಸ್ಥಾಪಿಸಿಕೊಂಡು ಭಕ್ತಿಯಿಂದ ಸಂಘದೊಡನೆ ಹೊರಟೆ.

ಹಾಸನ ಮಾರ್ಗವಾಗಿ ಬಂದು ಅಲ್ಲಿಯ ಮಂದಿರಗಳ ದರ್ಶನ ಮಾಡಿ ಇಲ್ಲಿಯ ಕಲಾಕೃತಿಗಳನ್ನು ಅವಲೋಕಿಸುತ್ತಾ ಮಾರ್ಗದಲ್ಲಿ ಬಂದ ಬೆಟ್ಟಗಳನ್ನೂ ನೋಡುತ್ತಾ ಮಹಾಮಂತ್ರ ಜಪಿಸುತ್ತಾ ನಿಧಾನವಾಗಿ ಸುಮಾರು 15 ದಿನಗಳಲ್ಲಿ ಮೂಡಬಿದರೆ ಕ್ಷೇತ್ರವನ್ನು ತಲುಪಿದೆವು. ಇಲ್ಲಿಯ ಭಟ್ಟಾರಕರು ಕಳಸ ಕನ್ನಡಿಯೊಡನೆ ಬಂದು ಸ್ವಾಗತಿಸಿದರು. ಇಲ್ಲಿ ತಟ್ಟೆಯಲ್ಲಿ ಕನ್ನಡಿಯನ್ನು ನೋಡಿದಾಗ ದಕ್ಷಿಣದಲ್ಲಿ ಅಷ್ಟಮಂಗಲ ದ್ರವ್ಯದಲ್ಲಿ ಇದು ಒಂದು ಎಂದು ಮನಗಂಡೆ. ಒಂದೊಂದು ಪ್ರದೇಶದಲ್ಲಿ ಒಂದೊಂದು ಪದ್ಧತಿ ಆಚರಣೆಯಲ್ಲಿದೆ.

ಕಲಕತ್ತೆಯಲ್ಲಿ ಮಂಗಳ ಕಳಸದೊಂದಿಗೆ ಮಂಗಳಾರತಿ ಎತ್ತುವ ಪದ್ಧತಿ. ಸಾಧುಗಳು ವಿಹಾರ ಹೊರಟಾಗ ಪ್ರತಿ ಮನೆಯ ಮುಂದೆಯೂ ಜನಗಳು ಬಾಗಿಲಲ್ಲಿ ಆರತಿ ಎತ್ತುತ್ತಾರೆ. ಇಂದೋರ್‌ನಲ್ಲಿ ರಸ್ತೆಯಲ್ಲಿಯೇ ಯಾರೇ ಶ್ರಾವಕನಾಗಲೀ ಮನೆ ಮುಂದೆ ತಟ್ಟೆ ಇಟ್ಟು ಹಾಲಿನಿಂದ ಗುರುಗಳ ಪಾದ ತೊಳೆಯುತ್ತಾರೆ. ನಂತರ ಮಂಗಳಾರತಿ ಎತ್ತುತ್ತಾರೆ. ದೆಹಲಿಯಲ್ಲಿಯ ರಸ್ತೆಯಲ್ಲಿ ಹೊರಡುತ್ತಲೇ ಮಂಗಳಾರತಿ ಎತ್ತುತ್ತಾರೆ. ಮೂಡಬಿದರೆಯಲ್ಲಿ 2-3 ದಿನಗಳು ಇದ್ದು ಎಲ್ಲಾ ದೇವಸ್ಥಾನ ಬಸದಿಗಳ ದರ್ಶನ ಮಾಡಿದೆವು ಪುರಾತನ ಕಲಾಕೃತಿಯನ್ನು ನೋಡಿದೆವು. ಮನಕ್ಕೆ ಬಹಳ ಆನಂದವಾಯಿತು.

ಗುವಾಹಟಿಯ ದಿವ್ಯ ಪ್ರತಿಮೆಗಳ ದರ್ಶನ

ಶ್ರೀ ಚಾಂದಮಲ್‌ಜೀ ಪಾಂಡ್ಯ ಕುಟುಂಬ ಸಮೇತರಾಗಿ ದಕ್ಷಿಣದ ಯಾತ್ರೆ ಮಾಡಲು ಬಂದಿದ್ದರು. ಇವರ ಜೊತೆ ಬ್ರಹ್ಮಚಾರಿ ಸೂರಜಮಲ್ಲರು ಇದ್ದರು. ಇವರುಗಳನ್ನು ಬಹಳ ದಿನಗಳ ನಂತರ ನೋಡಿ ಖುಷಿಯಾಯಿತು ನಂತರ ಮಧ್ಯಾಹ್ನ ಇವರೆಲ್ಲಾ ಸಿದ್ಧಾಂತ ದರ್ಶನದ ವ್ಯವಸ್ಥೆ ಮಾಡಿದ್ದರು. ಅತ್ಯಂತ ಪ್ರಾಚೀನವಾದ ಅಮೂಲ್ಯ ಪ್ರತಿಮೆಗಳನ್ನು ತೆಗೆದು ತೋರಿಸಿದರು. ನೋಡಿದ ನಮಗೆಲ್ಲರಿಗೂ ಅಪೂರ್ವವಾದ ಭಾವ ಜಾಗೃತವಾಯಿತು. ಚಾಂದ್‌ಮಲ್ಲರು ಮೂರ್ತಿಯ ದರ್ಶನದ ಬಗ್ಗೆ ಉಪದೇಶಿಸಲು ಕೇಳಿಕೊಂಡರು. ಅದಕ್ಕೆ ನಾನು ನೀವೆಲ್ಲರೂ ಕೃತ್ರಿಮ ಜಿನಪ್ರತಿಮೆಗಳ ದರ್ಶನ ಮಾಡಿದಿರಿ ಇದರ ನಂತರ ನಿಮಗೆ ಈಗಲೇ ಅಕೃತ್ರಿಮ ಜಿನಮಂದಿರಗಳ ದರ್ಶನ ಮಾಡಿಸುತ್ತೇನೆ ಎಂದೆ. ಎಲ್ಲರೂ ಸುಖಾಸೀನದಲ್ಲಿ ಕಣ್ಣು ಮುಚ್ಚಿ ಕುಳಿತುಕೊಳ್ಳಿರಿ ನಾನು ಎಲ್ಲೆಲ್ಲಿ ಕರೆದುಕೊಂಡು ಹೋಗುತ್ತೇನೋ ಅಲ್ಲೆಲ್ಲಾ ದರ್ಶನ ಮಾಡಿರಿ ಎಂದೆ ಎಲ್ಲರಿಗೂ ಖುಷಿಯಾಯಿತು. ನಾನು ಹೇಳಿದಂತೆ ದೃಢವಾಗಿ ಕುಳಿತು ಕಣ್ಣು ಮುಚ್ಚಿದರು. ನಾನು ಹೇಳಲು ಪ್ರಾರಂಭಿಸಿದೆ.

ಅಕೃತ್ರಿಮ ಚೈತ್ಯಾಲಯಗಳ ಅಪೂರ್ವ ದರ್ಶನ

ಮಧ್ಯಲೋಕದಲ್ಲಿ ಅಸಂಖ್ಯಾತ ದ್ವೀಪ ಸಮುದ್ರಗಳಲ್ಲಿ ಮೊದಲಿನದು ಜಂಬೂದ್ವೀಪವಾಗಿದೆ. ಇದು ಒಂದು ಲಕ್ಷ ಯೋಜನಾ ವಿಸ್ತೃತವಾಗಿ ತಟ್ಟೆಯಾಕಾರದಲ್ಲಿ ಇದೆ. ಇದರ ಮಧ್ಯದಲ್ಲಿ ಸುದರ್ಶನ ಮೇರು ಪರ್ವತವಿದೆ. ಇದು ಕೆಳಗೆ ಹತ್ತು ಸಾವಿರ ಯೋಜನೆಗಳ ವೃತ್ತಾಕಾರವಾಗಿದೆ. ಒಂದು ಲಕ್ಷದ ನಲವತ್ತು ಯೋಜನ ಎತ್ತರವಿದೆ. ಇದರ ಕೆಳಗೆ ಭದ್ರಸಾಲವೆಂಬ ವನವಿದೆ. ಈ ವನದ ನಾಲ್ಕು ಕಡೆಗೆ ಜಿನಮಂದಿರಗಳಿವೆ. ನೀವು ಮೊದಲು ಪೂರ್ವದಿಕ್ಕಿನ ಮಂದಿರವನ್ನು ಪ್ರವೇಶಮಾಡಿ. ಅಲ್ಲಿ ವಿರಾಜಮಾನನಾಗಿರುವ 108 ಜಿನಪ್ರತಿಮೆಗಳನ್ನು ನಮಸ್ಕರಿಸಿ. ನೋಡಿ ನಿಮಗೆ ಈಗ ಮಂದಿರದಲ್ಲಿರುವ ಪ್ರತಿಮೆಗಳು ಕಾಣುತ್ತಿವೆ. ಕೈಗಳನ್ನು ಮುಗಿದು ನಮಸ್ಕರಿಸಿ ಈಗ ನೀವು ದಕ್ಷಿಣದ ಕಡೆಗೆ ಬನ್ನಿರಿ ಮನಸ್ಸಿನಿಂದ 2 ನಿಮಿಷದಲ್ಲಿ ತಲುಪುತ್ತೀರಾ ಮಂದಿರದ ಒಳಗೆ ಪ್ರವೇಶಿಸಿ ಭಗವಂತನ ದರ್ಶನ ಮಾಡಿರಿ ನೋಡಿ ದರ್ಶನವಾಗುತ್ತಿದೆ. ನಮಸ್ಕರಿಸಿ ಹೊರಗೆ ಬಂದು ಪಶ್ಚಿಮ ದಿಕ್ಕಿನ ಮಂದಿರಗಳ ಕಡೆ ನಡೆಯಿರಿ ಅಲ್ಲಿಗೆ ಒಳಗೆ ಪ್ರವೇಶ ಮಾಡಿರಿ ಈಗ ಪ್ರತಿಮೆಗಳ ದರ್ಶನವಾಗುತ್ತಿದೆ ಕೈಗಳನ್ನು ಮುಗಿದು ನಮಸ್ಕರಿಸಿ ಹೊರಗೆ ಬನ್ನಿ ಉತ್ತರ ದಿಕ್ಕಿಗೆ ತಲುಪಿ ಜಿನಮಂದಿರಗಳ ಒಳಗೆ ಪ್ರವೇಶ ಮಾಡಿ ಈಗ ಜಿನ ಪ್ರತಿಮೆಗಳನ್ನು ಒಂದು ಕ್ಷಣ ನೋಡಿ ಕಾಣಿಸುತ್ತಿದೆ ಅಲ್ಲವೇ ನಮಸ್ಕರಿಸಿ. ಈಗ ಮನಸ್ಸಿನಿಂದಲೇ ಇದ್ದಕ್ಕಿದ್ದಂತೆ ಅರವತ್ತೆರಡೂವರೆ ಸಾವಿರ ಯೋಜನಾ ಮೇಲೆ ಬಂದಿದ್ದೀರಾ. ಪೂರ್ವ

ದಿಕ್ಕಿನ ಮಂದಿರದ ದರ್ಶನ ಮಾಡಿ, ದಕ್ಷಿಣ ದಿಕ್ಕಿನ ಮಂದಿರಗಳನ್ನು ಪ್ರವೇಶಿಸಿ ದರ್ಶನ ಮಾಡಿ ನಂತರ ಪಶ್ಚಿಮ ದಿಕ್ಕಿನ ಮಂದಿರಗಳನ್ನು ಪ್ರವೇಶ ಮಾಡಿ ಭಗವಂತರನ್ನು ಕೈ ಜೋಡಿಸಿ ವಂದಿಸಿ. ನಂತರ ಉತ್ತರ ದಿಕ್ಕಿನ ಮಂದಿರಗಳ ಒಳಗೆ ಬನ್ನಿರಿ ಭಗವಂತರಿಗೆ ವಂದಿಸಿ ಇದನ್ನು ಸೌಮನಸ ವನವೆಂದು ಕರೆಯುತ್ತಾರೆ.

ಇಲ್ಲಿಂದ 36 ಸಾವಿರ ಯೋಜನ ಎತ್ತರಕ್ಕೆ ಬರುತ್ತೀರ. ಈಗ ನಾವುಗಳು ಪಾಂಡುಕ ವನಕ್ಕೆ ಬಂದಿದ್ದೇವೆ ಇಲ್ಲಿ ಪೂರ್ವದಿಕ್ಕಿನ ಮಂದಿರಗಳ ದರ್ಶನ ಮಾಡುತ್ತಿದ್ದೀರಿ. ಪ್ರತಿಮೆಗಳು ಕಾಣಿಸುತ್ತಿವೆ. ಈಗ ದಕ್ಷಿಣ ದಿಕ್ಕಿನ ಮಂದಿರಗಳಿಗೆ ನಡೆಯಿರಿ ಜಿನ ಭಗವಂತರ ಮುಖ ಕಮಲಗಳ ದರ್ಶನ ಮಾಡಿ ವಂದಿಸಿ. ಪಶ್ಚಿಮ ದಿಕ್ಕಿನ ಮಂದಿರಗಳಿಗೆ ಬಂದಾಯಿತು. ಪ್ರತಿಮೆಗಳು ಕಾಣುತ್ತಿವೆ ನಮಸ್ಕರಿಸಿ ಬನ್ನಿರಿ. ಉತ್ತರ ದಿಕ್ಕಿನ ಮಂದಿರಗಳ ಒಳಗೆ ನಡೆಯಿರಿ ಭಗವಂತರ ಚರಣಗಳಿಗೆ ವಂದಿಸಿ ಈಗ ಸುದರ್ಶನ ಮೇರು ಪರ್ವತದ ಹದಿನಾರು ಚೈತ್ಯಾಲಯಗಳ ದರ್ಶನವಾಯಿತು.

ಈಗ ಈಶಾನ್ಯ ದಿಕ್ಕಿನಲ್ಲಿ ಪಾಂಡುಕ ಶಿಲೆಯಿದೆ. ಇದು ಅರ್ಧ ಚಂದ್ರಾಕಾರವಾಗಿದೆ ಇದರ ಮೇಲೆ ಭರತ ಕ್ಷೇತ್ರದ ಜನ್ಮದಾತ ತೀರ್ಥಂಕರರ ಶಿಶುವಿನ ಅಭಿಷೇಕವಾಗುತ್ತಿದೆ. 1008 ಕಳಸಗಳಿಂದ ಇಂದ್ರಾದಿ ದೇವತೆಗಳ ಸಮೂಹ ಸೇರಿ ಅಭಿಷೇಕ ಮಾಡುತ್ತಾರೆ ಚಾರಣ ಋದ್ಧಿದಾರಿ ಮುನಿಗಳು ಆಕಾಶದಲ್ಲೇ ನಿಂತು ಅಭಿಷೇಕ ನೋಡುತ್ತಿದ್ದಾರೆ. ನಾನು ಅಭಿಷೇಕ ಮಾಡುತ್ತಿದ್ದೇನೆ. ನೀವೆಲ್ಲರೂ ಮನಸ್ಸಿನಿಂದಲೇ ಭಗವಂತನಿಗೆ ಅಭಿಷೇಕ ಮಾಡಿರಿ, ಈಗ ಆಗ್ನೇಯ ದಿಕ್ಕಿನಲ್ಲಿ ಪಾಂಡುಕ ಬಲಾ ಶಿಲೆಯು ಕಾಣುತ್ತಿದೆ. ಇಲ್ಲಿ ಪಶ್ಚಿಮ ವಿದೇಹದ ತೀರ್ಥಂಕರರ ಅಭಿಷೇಕವಾಗುತ್ತದೆ. ಈ ಶಿಲೆಯು ದೇವತೆಗಳಿಂದ ಪೂಜಿತವಾಗಿದೆ. ಮುನಿಗಣವು ವಂದಿಸುತ್ತಿದೆ. ನೀವೆಲ್ಲರೂ ಈ ಶಿಲೆಗೆ ವಂದಿಸಿರಿ. ಈಗ ನೈರುತ್ಯ ದಿಕ್ಕಿಗೆ ಬನ್ನಿರಿ ಇಲ್ಲಿ 'ರಕ್ತಾ' ಎಂಬ ಹೆಸರಿನ ಶಿಲೆ ಇದೆ ಇದು ಕೆಂಪು ಬಣ್ಣದ್ದು, ಅರ್ಧಚಂದ್ರಾಕಾರವೂ ಆಗಿದೆ. ಇಲ್ಲಿಯ ಐರಾವತ ಕ್ಷೇತ್ರದ ತೀರ್ಥಂಕರ ಬಾಲಕನ ಸ್ನಾನವಾಗುತ್ತಿದೆ, ಕೈ ಮುಗಿದು ನಮಸ್ಕರಿಸಿ. ಈಗ ವಾಯುವ್ಯ ದಿಕ್ಕಿನ "ರಕ್ತ ಕಂಬಳ" ಶಿಲೆಯ ಕಡೆಗೆ ನಡೆಯಿರಿ, ನಮಸ್ಕರಿಸಿ. ಇಲ್ಲಿ ಪೂರ್ವ ವಿದೇಹದ ತೀರ್ಥಂಕರರ ಅಭಿಷೇಕವಾಗುತ್ತಿದೆ. ಇದನ್ನು ಭಕ್ತಿಯಿಂದ ನಮಸ್ಕರಿಸಿ.

ಈಗ ನೀವು ಭೂಭಾಗದಿಂದ 99,000 ಯೋಜನ ಮೇಲೆ ಪಾಂಡುಕವನದಲ್ಲಿ ನಿಂತಿದ್ದೀರಿ. ಇದು ಮೂರು ಲೋಕದಲ್ಲಿಯೇ ಎತ್ತರವಾದ ಪರ್ವತವಾಗಿದೆ. ಈ ಪರ್ವತಕ್ಕೆ ಮತ್ತೆ-ಮತ್ತೆ ನಮಸ್ಕರಿಸುತ್ತಾ ಈಗ ನಿಧಾನವಾಗಿ ನಮ್ಮ ಮನಸ್ಸಿನಿಂದ ಒಂದೇ ಕ್ಷಣಕ್ಕೆ ಕೆಳಗೆ ಬನ್ನಿರಿ.

ಸುದರ್ಶನ ಮೇರುವಿನ ಈಶಾನ್ಯ ದಿಕ್ಕಿನಲ್ಲಿ ಮಾಲ್ಯವಾನ ಎಂಬ ಹೆಸರಿನ ಗಜದಂತ ಪರ್ವತವಿದೆ. ಇಲ್ಲಿಯೂ ಸುಮೇರು ಪರ್ವತದಂತೆ ಒಂದು ಅಕೃತ್ರಿಮ ಜಿನಮಂದಿರವಿದೆ. ಅದರೊಳಗೆ ನಡೆಯಿರಿ. ಅಲ್ಲಿಯು 108 ಜಿನಪ್ರತಿಮೆಗಳು ವಿರಾಜಮಾನವಾಗಿವೆ. ಇದರ ಸೌಮ್ಯವಾದ ಪ್ರಕಾಶ ಅಲೌಕಿಕವಾದದ್ದು. ಕೈ ಮುಗಿದು ನಮಸ್ಕರಿಸಿ ನಂತರ ಪೂರ್ವ ದಿಕ್ಕಿಗೆ ಬನ್ನಿರಿ ಆಗ್ನೇಯ ವಿದಿಶಾದಲ್ಲಿ ಮಹಾ ಸೌಮನಸ ಗಜದಂತ ಪರ್ವತ ಇದೆ. ಈ ಮಂದಿರದ ವಂದನೆ ಮಾಡಿರಿ. ಮುಂದೆ ನಡೆಯಿರಿ ನೈರುತ್ಯ ವಿದಿಶಾದಲ್ಲಿ ವಿದ್ಯುತ್ಪ್ರಭ ಗಜದಂತ ಪರ್ವತವಿದೆ. ಆ ಮಂದಿರದೊಳಗೆ ಪ್ರವೇಶಿಸಿ, ಪ್ರತಿಮೆಗಳಿಗೆ ನಮಸ್ಕರಿಸಿ. ಇನ್ನು ಮುಂದೆ ವಾಯವ್ಯ ಕಡೆ ಇರುವ ಗಂಧಮಾದನ ಗಜದಂತ ಪರ್ವತದ ಮಂದಿರದೊಳಗೆ ಹೋಗಿ ನಮಸ್ಕರಿಸಿ. ಈ ನಾಲ್ಕು ಗಜದಂತ ಪರ್ವತಗಳು ಜಂಬೂದ್ವೀಪದಲ್ಲಿವೆ.

ಈಗ ತಾವು ಸುದರ್ಶನ ಮೇರುವಿನ ಉತ್ತರದಲ್ಲಿ ಉತ್ತರ ಕುರುಭೋಗ ಭೂಮಿಗೆ ಸ್ವಲ್ಪ ಹೊತ್ತು ಬನ್ನಿರಿ. ಇಲ್ಲಿ ಒಂದು ದೊಡ್ಡ ನೇರಳೆಯ ಮರವಿದೆ. ಇದು ಪೃಥ್ವಿಕಾಯಿಕವಾಗಿದ್ದು ರತ್ನಗಳಿಂದ ನಿರ್ಮಿಸಿ

ಅನಾದಿನಿಧನವಾಗಿದೆ. ಇದರಲ್ಲಿ ಜಾಮೂನು ಫಲಗಳು ನೇತಾಡುತ್ತಿವೆ. ಇದರ ಉತ್ತರದ ಶಾಖೆಗಳ ಮೇಲೆ ಬಹಳ ದೊಡ್ಡ ಮಂದಿರವಿದೆ. ಅದರಲ್ಲಿ 108 ಜಿನಪ್ರತಿಮೆಗಳು ವಿರಾಜಮಾನವಾಗಿವೆ. ದರ್ಶನ ಮಾಡಿ ಮುಂದೆ ನಡೆಯಿರಿ. ಅಲ್ಲಿಂದ ಹೊರಗೆ ಬಂದು ಸುದರ್ಶನ ಮೇರುವಿನ ದಕ್ಷಿಣದಲ್ಲಿರುವ ದೇವಕುರುಭೋಗ ಭೂಮಿಗೆ ಬನ್ನಿರಿ. ಇಲ್ಲಿ ಶಾಲ್ಮಲೀ ವೃಕ್ಷವಿದೆ. ಇದರಲ್ಲಿ ಏಳು - ಏಳು ಎಲೆಗಳಿವೆ, ಹಣ್ಣು -ಹೂಗಳು ಇವೆ. ಈ ಹೂಗಳಿಂದಲೇ ಬೂರುಗ / ಹತ್ತಿಯಿಂದ ದಾರ ತೆಗೆಯುತ್ತಾರೆ. ಇದು ರತ್ನಮಯಿ ಪೃಥ್ವಿಕಾಯಕವಾಗಿದೆ. ಇದರ ದಕ್ಷಿಣ ದಿಕ್ಕಿನ ಶಾಖೆಯಲ್ಲಿ ಒಂದು ಮಂದಿರವಿದೆ ಇದರಲ್ಲಿ ಪ್ರವೇಶಿಸಿ ಭಗವಂತನ ದರ್ಶನವಾಗುತ್ತದೆ. ಎಲ್ಲರು ನಮಸ್ಕರಿಸಿ ಎಂದರು.

ಹೀಗೆ ಜಂಬೂದ್ವೀಪದಲ್ಲಿ ಹದಿನಾರು ವಕ್ಷಾರ ಪರ್ವತಗಳಿವೆ. 34 ವಿಜಯಾರ್ಧ ಪರ್ವತಗಳಿವೆ. ಆರು ಕುಲಾಚಲಗಳಿವೆ. ಇವೆಲ್ಲ ಸೇರಿ ಅಕೃತ್ರಿಮ ಜಿನಮಂದಿರಗಳು 78 ಆದುವು. ಈ ಜಂಬೂದ್ವೀಪವನ್ನು ಸುತ್ತಲೂ ಲವಣ ಸಮುದ್ರವು ಸುತ್ತುವರಿದಿದೆ. ಇದರ ನಂತರ ಧಾತಕೀಖಂಡ ದ್ವೀಪವಿದೆ. ಇದರ ದಕ್ಷಿಣ, ಉತ್ತರದ ಕಡೆ ಒಂದೊಂದು ಇಷ್ವಾಕಾರ ಪರ್ವತವಿರುವುದರಿಂದ ಧಾತಕೀಖಂಡದ ಪೂರ್ವಧಾತಕೀ ಮತ್ತು ಪಶ್ಚಿಮ ಧಾತಕೀ ಎಂಬ ಎರಡು ಶಿಖೆಗಳಿವೆ. ಪೂರ್ವ ಧಾತಕೀಯ ಮಧ್ಯದಲ್ಲಿ ವಿಜಯ ಎಂಬ ಹೆಸರಿನ ಮೇರುಪರ್ವತವಿದೆ. ಇಲ್ಲಿಯ ಜಂಬೂದ್ವೀಪದಂತೆ 78 ಜಿನ ಮಂದಿರಗಳಿವೆ. ಹೀಗೆ ಪಶ್ಚಿಮ ಧಾತಕೀಯಲ್ಲಿ "ಅಚಲ" ಎಂಬ ಮೇರುಪರ್ವತವಿದೆ. ಇಲ್ಲಿಯೂ ಸಹ 78 ಜಿನಮಂದಿರಗಳಿವೆ. ಹೀಗೆ ಧಾತಕೀ ಖಂಡ ದ್ವೀಪದಲ್ಲಿ (ಇಷ್ವಾಕಾರ ನಿ+ 78+78 - 158) ಒಟ್ಟು 158 ಮಂದಿರಗಳಿವೆ.

ಈ ಧಾತಕೀ ಖಂಡದ್ವೀಪವನ್ನು ಕಾಲೋದಧಿ ಪರ್ವತವು ಸುತ್ತುವರಿದಿದೆ. ಇದರ ನಂತರ ಪುಷ್ಕರ ವರ ದ್ವೀಪವಿದೆ. ಇದರ ಮಧ್ಯದಲ್ಲಿ ಬಳೆಯಾಕಾರದ ಮಾನುಷೋತ್ತರ ಪರ್ವತವಿದೆ. ಇದಕ್ಕಿಂತ ಮುಂದೆ ಮಾನವ ಹೋಗಲಾರ ಪುಷ್ಕರಾರ್ಧಈ ಕಡೆ ಸಹ

ಪೂರ್ವದಲ್ಲಿ ಮಂದರಮೇರು ಮತ್ತು ಪಶ್ಚಿಮದಲ್ಲಿ ವಿಧ್ಯುನ್ಮಾಲೀ ಮೇರುವಿದೆ. ಈ ದ್ವೀಪದ ಎರಡು ಕಡೆಯಿಂದಲೂ 158 ಜಿನಮಂದಿರಗಳು ಇವೆ.

ಪುನಃ ಮಾನುಷೋತ್ತರಕ್ಕೆ ಬನ್ನಿರಿ. ಇಲ್ಲಿ ಪೂರ್ವ, ದಕ್ಷಿಣ ಪಶ್ಚಿಮ ಮತ್ತು ಉತ್ತರದಲ್ಲಿ ಒಂದೊಂದು ಜಿನಮಂದಿರಗಳಿವೆ. ಈಗ ನಿಮಗೆ ಆಕಾಶಗಾಮಿನಿ ವಿದ್ಯೆಇದ್ದವರು ಚಾರಣಋದ್ಧಿ ಇದ್ದವರೂ ಮುಂದಕ್ಕೆ ಹೋಗಲು ಸಾಧ್ಯವಿಲ್ಲ. ಆದ್ದರಿಂದ ಬುದ್ಧಿಯಿಂದಲೇ ನಡೆಯಿರಿ ಇದು ಎಂಟನೆಯ ನಂದೀಶ್ವರ. ಇಲ್ಲಿ ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರದಲ್ಲಿ ನಾಲ್ಕು ಕಡೆಯು 13, 13 ಜಿನಮಂದಿರಗಳಿವೆ. ಈ ಎಲ್ಲವುದಕ್ಕೂ ಕೈಜೋಡಿಸಿ ನಮಸ್ಕಾರ ಮಾಡಿರಿ. ಪುನಃ ಮುಂದಕ್ಕೆ 11ನೆ ಯ ಕುಂಡಲವರ ದ್ವೀಪದಲ್ಲಿ ಬಳೆಯಾಕಾರದ ಕುಂಡಲ ಪರ್ವತದ ನಾಲ್ಕು ಕಡೆಗಳಲ್ಲಿ ಜಿನಮಂದಿರಗಳಿಗೆ ವಂದಿಸಿರಿ. ಇದಕ್ಕಿಂತ ಮುಂದೆ 13 ನೇಯ ರುಚಕವರ ದ್ವೀಪವು ಬಳೆಯಾಕಾರದ ರುಚಕವರ ಪರ್ವತದ ಮೇಲೆ ನಾಲ್ಕು ದಿಕ್ಕುಗಳಲ್ಲೂ ನಾಲ್ಕು ಜಿನಮಂದಿರಗಳಿವೆ. ಇಲ್ಲಿ ವಿರಾಜಮಾನವಾಗಿರುವ ಪ್ರತಿಮೆಗಳಿಗೆ ಕೈ ಜೋಡಿಸಿ.

ಈ ಪ್ರಕಾರ ಮಧ್ಯಮ ಲೋಕದಲ್ಲಿ 58+158+158+4+52+8+8= 458 ಅಕೃತ್ರಿಮ ಜಿನಮಂದಿರಗಳಿವೆ. ಎಲ್ಲದರಲ್ಲೂ 108-108 ಜಿನಪ್ರತಿಮೆಗಳಿವೆ. ಈ ಎಲ್ಲವುಗಳಿಗೆ ಮನ, ವಚನ ಕಾಯಗಳಿಂದ ಸರಿಯಾಗಿ ವಂದಿಸಿ. ಈಗ ನೀವೆಲ್ಲರೂ ಕಣ್ಣುಗಳನ್ನು ತೆರೆದು ಮುಂದೆ ವಿರಾಜಿಮಾನವಾಗಿರುವ ರತ್ನಗಳ ಜಿನಪ್ರತಿಮೆಗಳನ್ನು ವಂದಿಸಿರಿ.

ಹೀಗೆ ಮಧ್ಯಮಲೋಕದ ಚೈತ್ಯಾಲಯಗಳನ್ನು ವಂದನೆ ಮಾಡಿಸಿ ನನ್ನ ಉಪದೇಶವನ್ನು ಪೂರ್ಣಗೊಳಿಸಿದೆ. ಅಲ್ಲಿದ್ದವರೆಲ್ಲಾ ಆನಂದದಿಂದ ಜಯ ಜಯಕಾರ ಮಾಡತೊಡಗಿದರು. ಅಕೃತ್ರಿಮ ಜಿನಮಂದಿರಗಳಿಗೆ ಜಯ, ಜಿನಪ್ರತಿಮೆಗಳಿಗೆ ಜಯ, ಆಚಾರ್ಯ ವೀರಸಾಗರರಿಗೆ ಜಯ, ಆರ್ಯಿಕೆ ಜ್ಞಾನಮತಿ ಮಾತಾಜೀಗೆ ಜಯ, ಇದಾದ ಮೇಲೆ ಶ್ರೀಮಾನ್ ಸೇಠ್ ಚಾಂದಮಲ್ ಪಾಂಡ್ಯರವರು ಮಾತಾಜೀ ಇದರ ರಚನೆಯನ್ನು ನಾವು ಭೂಮಿಯ ಮೇಲೆ ಅವಶ್ಯವಾಗಿ ಮಾಡಲೇಬೇಕು. ಹೀಗೆ ಒಳ್ಳೆಯ ಮಾತುಗಳನ್ನು ಆಡುತ್ತಲೇ ಎಲ್ಲರು ಧರ್ಮಸ್ಥಳಕ್ಕೆ ಬಂದೆವು. ಎರಡು ಮೂರು ದಿನ ಅಲ್ಲಿ ಇದ್ದು ವಿಹಾರದ ನಂತರ ಮುಂದೆ ಹೊರಟೆವು. ಅಲ್ಲಿಂದ ಮುಂದಿನ ನಮ್ಮ ಪ್ರಯಾಣಕ್ಕೆ ಶ್ರಾವಕರು ಸಹಕರಿಸಿದರು.

ದಕ್ಷಿಣದ ಬೇರೆ ತೀರ್ಥಗಳು

ಕಾರ್ಕಳದಲ್ಲಿ ಭಗವಾನ್ ಬಾಹುಬಲಿಯ ದರ್ಶನ ಮಾಡಿದೆವು ಈ ಮೂರ್ತಿಗೆ ಏನೇನೋ ಅಂಟಿಕೊಂಡಿತ್ತು ಇದನ್ನು ನೋಡಿ ಮನಸ್ಸಿಗೆ ಬೇಸರವಾಯಿತು. ಈ ವಿಷಯವಾಗಿ ಜೈನ ಸಮಾಜ ಗಮನ ಕೊಡಬೇಕು ಎಂದುಕೊಂಡೆ. ಅಲ್ಲಿಂದ ವೇಣೂರಿಗೆ ಬಂದು ಬಾಹುಬಲಿಯ ದರ್ಶನ ಮಾಡಿದೆ.

ಇಲ್ಲಿಂದ ಕುಂದ ಕುಂದಾದ್ರಿ ಪರ್ವತವನ್ನು ದರ್ಶನ ಮಾಡುವ ಸಲುವಾಗಿ ಬೆಟ್ಟದ ತಳದಲ್ಲಿ ತಂಗಿದ್ದೆವು. ಕುಂದ ಕುಂದಾದ್ರಿ ಒಂದು ಚಿಕ್ಕ ಪರ್ವತ ಅದನ್ನು ಹತ್ತಿ ಮೇಲೆ ಬಂದೆ. ಅಲ್ಲೊಂದು ಚಿಕ್ಕ ಮಂದಿರ ಅದರಲ್ಲಿ ಕುಂದ ಕುಂದ ದೇವರ ಚರಣಗಳಿವೆ. ಅದಕ್ಕೆ ವಂದಿಸಿದೆ. ಕುಂದ ಕುಂದರು ಈ ಮಂದಿರದಲ್ಲಿಯೇ ಕುಳಿತು ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಇಂತಹ ಜಾಗವನ್ನು ನೋಡಿ ನನಗೆ ಈ ಮೈದಾನದಲ್ಲಿ ಹೇಗೆ ಕುಳಿತು ಗ್ರಂಥಗಳನ್ನು ಬರೆಯಲು ಸಾಧ್ಯ ಇಲ್ಲಿ ಬಿರುಗಾಳಿ, ಮಳೆ ಬಂದು ತಾಡಪತ್ರ ಹಾರಿಹೋಗಬಹುದು, ಹರಿದು ಹೋಗಬಹುದು ಆದ್ದರಿಂದ ಇವರು ಗ್ರಂಥಗಳನ್ನು ಮಂದಿರದಲ್ಲಿ ಗುಹೆಯಲ್ಲೋ ಕುಳಿತುಕೊಂಡು ಬರೆದಿರಬೇಕು ಎಂದುಕೊಂಡೆ ಇಲ್ಲಿ ಕುಂದ ಕುಂದಾಚಾರ್ಯರನ್ನು ಸ್ಮರಣೆ ಮಾಡುತ್ತಾ ಒಂದೆರಡು ದಿನವಿದ್ದು ಮುಂದೆ ಹೊರಟೆ.

ಹೊಂಬುಜ

ನಾವು ಹೋಗುವ ಮಾರ್ಗದಲ್ಲಿ ಭಟ್ಟಾರಕ ದೇವೇಂದ್ರ ಕೀರ್ತಿಗಳು ಮೊದಲೇ ವ್ಯವಸ್ಥೆಯನ್ನು ಮಾಡಿಸಿದ್ದರು ಹೊಂಬುಜ ಪ್ರವೇಶಿಸುತ್ತಲೇ ಬಂದು ಭಕ್ತಿಯಿಂದ ಸ್ವಾಗತ ಮಾಡಿದರು. ಅಲ್ಲಿ ತಂಗಿದ್ದು ದೇವರ ದರ್ಶನ, ಆಹಾರವಾಯಿತು. ಇಲ್ಲಿ ಎರಡು ಮೂರು ದಿನಗಳು ತಂಗಿದ್ದೆವು. ಒಂದು ದಿನ ಭಟ್ಟಾರಕರು ಒಂದು ಸಭೆಯನ್ನು ಏರ್ಪಡಿಸಿ ಅಲ್ಲಿ ಮಕ್ಕಳಿಂದಲೇ ಒಂದು ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಅದರಲ್ಲಿ ಕೆಲವು ಹುಡುಗರು ಕನ್ನಡದಲ್ಲಿಯೂ ಮರಾಠಿಯಲ್ಲೂ ಹಿಂದಿಯಲ್ಲೂ ಕೆಲವರು ಇಂಗ್ಲೀಷಿನಲ್ಲೂ ಮಾತಾಡಿದ್ದು ಬಹಳ ಚೆನ್ನಾಗಿತ್ತು. ಇದಾದ ನಂತರ ನಾನು ಆಶೀರ್ವಾದ ಪ್ರವಚನದಲ್ಲಿ ಹಿಂದಿ, ಕನ್ನಡ, ಮರಾಠಿ, ಮತ್ತು ಸಂಸ್ಕೃತದಲ್ಲಿ ಮಾತಾಡಿದೆ. ಭಟ್ಟಾರಕರು ಇದಾದ ನಂತರ ನನ್ನ ಮುಂದೆ ಮೂರು ಹುಡುಗರನ್ನು ನಿಲ್ಲಿಸಿದರು. ಹೇಳಿದರು, ನೋಡಿ ಇವರುಗಳನ್ನು ಮುಂದೆ ಶ್ರವಣಬೆಳಗೊಳ, ಮೂಡಬಿದರೆ ಮತ್ತು ಹೊಂಬುಜ ತೀರ್ಥಕ್ಷೇತ್ರಗಳಿಗೆ ಭಟ್ಟಾರಕರನ್ನಾಗಿ ಮಾಡಬೇಕೆಂದು ನಿರ್ಧರಿಸಲಾಗಿದೆ ನೀವು ಅವರಿಗೆ ಆಶೀರ್ವದಿಸಿ ಎಂದರು. ಅವರ ಬುದ್ಧಿ, ತೀಕ್ಷ್ಣತೆಯನ್ನು ನೋಡುತ್ತಾ ಕೆಲವು ಪ್ರಶ್ನೆಗಳನ್ನು ಕೇಳಿದೆ. ಅವರೆಲ್ಲಾ ಸರಿಯಾಗಿ ಉತ್ತರ ಕೊಟ್ಟರು. ಸಂತೋಷವಾಯಿತು ಇವರುಗಳೇ ಮುಂದೆ ಭಟ್ಟಾರಕರಾದರು.

ಧರ್ಮಸ್ಥಳದ ಕ್ಷೇತ್ರ ದರ್ಶನ

ಕರ್ನಾಟಕದಲ್ಲಿ ಧರ್ಮಸ್ಥಳವೆಂಬುದು ಒಂದು ಪ್ರಸಿದ್ಧ ಸ್ಥಳ. ಇದು ಯಾವುದೇ ತೀರ್ಥಕ್ಷೇತ್ರವಲ್ಲ. ಆದರೆ ಇಲ್ಲಿ ವೀರೇಂದ್ರ ಹೆಗ್ಗಡೆಯವರು 1982 ರಲ್ಲಿ ಒಂದು ವಿಶಾಲಕಾಯದ 40 ಅಡಿಯ ಭಗವಾನ್ ಬಾಹುಬಲಿಯ ಪ್ರತಿಮೆಯನ್ನು ಮಾಡಿಸಿ ಪ್ರತಿಷ್ಠಾಪಿಸಿದರು. ಈಗ ಅದು ತೀರ್ಥಕ್ಷೇತ್ರವಾಗಿದೆ. 1966 ರಲ್ಲಿ ಸಂಘದೊಡನೆ ಹೋಗಿದ್ದಾಗ ಆ ಶ್ರೀಮಂದಿರದಲ್ಲಿ ತಂಗಿದ್ದೆವು ಆಗ ವೀರೇಂದ್ರ ಹೆಗ್ಗಡೆಯವರ ತಾಯಿ ನನ್ನ ಹತ್ತಿರ ಬಂದಿದ್ದರು. ನಾನು ಅವರ ಹತ್ತಿರ ಅಲ್ಪ ಸ್ವಲ್ಪ ಕನ್ನಡದಲ್ಲಿ ಮಾತಾಡಿದೆ. ಆಗ ಅವರು ತಮ್ಮ ಗೃಹ ಚೈತ್ಯಾಲಯಕ್ಕೆ ಎಲ್ಲರನ್ನೂ ಕರೆದುಕೊಂಡು ಹೋಗಿ ದರ್ಶನ ಮಾಡಿಸಿದರು. ಅಲ್ಲಿ ಸಹಸ್ರದಳ ಒಂದು ಬೆಳ್ಳಿಯ ಕಮಲವಿತ್ತು. ಅದರ ಮೇಲೆ ಚಂದ್ರಪ್ರಭ ಸ್ವಾಮಿಯನ್ನು ವಿರಾಜಮಾನಗೊಳಿಸಿದ್ದರು. ಬಹಳ ಚೆನ್ನಾಗಿ ಕಂಡಿತು ಹೆಗ್ಗಡೆಯವರ ತಾಯಿಯ ಗುರುಭಕ್ತಿ ಮತ್ತು ಧರ್ಮ ಪ್ರಭಾವನೆ ಬಹಳ ಚೆನ್ನಾಗಿದೆ. ಇಲ್ಲಿ ಇನ್ನೊಂದು ಪ್ರಸಿದ್ಧವಾದ ಮಂಜುನಾಥ ಸ್ವಾಮಿಯ ಮಂದಿರವಿದೆ ಇಲ್ಲಿ ಜಾತಿ ಭೇದವಿಲ್ಲದೆ ಎಲ್ಲರೂ ಪೂಜೆ ಮಾಡಿಸಲು ಬರುತ್ತಾರೆ. ಇಲ್ಲಿ ದೇವಸ್ಥಾನಕ್ಕೆ ಅಪಾರವಾದ ಆದಾಯವಿದೆ. ಇಲ್ಲಿಯ ಧರ್ಮಾಧಿಕಾರಿಗಳು ಎಲ್ಲಾ ಯಾತ್ರಿಕರನ್ನು ಸಮಾನವಾಗಿ ಸನ್ಮಾನಿಸುತ್ತಾರೆ. ಇಲ್ಲಿ ಯಾರೇ ಬರಲಿ ಎಷ್ಟೇ ಜನರು ಬಂದರೂ ಉಚಿತವಾದ ಊಟವನ್ನು ಆತ್ಮೀಯವಾಗಿ ಉಣಬಡಿಸುತ್ತಾರೆ. ಇಲ್ಲಿ ಅನ್ನಪೂರ್ಣ ಎಂಬ ಹೆಸರಿನ ಭೋಜನ ಶಾಲೆಯಲ್ಲಿ ಒಮ್ಮೆಗೇ ಮೂರುಸಾವಿರ ಜನ ಕುಳಿತು ಊಟ ಮಾಡುತ್ತಾರೆ. ಹಾಗೆಯೇ ಇನ್ನೊಂದು ಯೋಚನೆ ಬಂದಿತು ಹುಂಡಾವಸರ್ಪಿಣಿ ಕಾಲದೋಷದಿಂದಾಗಿ ಅನ್ಯ ಧರ್ಮದ ಪ್ರಭಾವವು ಜಾಸ್ತಿಯಾಗಿ ಆಕರ್ಷಣೆ ಮತ್ತು ಮಹತ್ವವನ್ನು ಉಳಿಸಿಕೊಂಡಿದೆ. ಆದರೆ ಇಲ್ಲಿ ಜೈನಧರ್ಮದ ಚಮತ್ಕಾರವಿದೆ. ಆದ್ದರಿಂದಲೇ ಪ್ರಭಾವಶೀಲ ಕ್ಷೇತ್ರವಾಗಿದೆ. ಹೀಗೆ ಸರ್ವಧರ್ಮ ಸಹಿಷ್ಣುತೆ ಇದ್ದರೆ ಎಷ್ಟು ಚೆನ್ನಾಗಿ ಇರುತ್ತದೆ. ಇದೇ ಭಾವನೆಯೊಂದಿಗೆ ಒಂದೆರಡು ದಿನ ಅಲ್ಲಿ ತಂಗಿದ್ದು ಮುಂದೆ ಹೊರಟೆವು.

ಸಹಸ್ರ ಫಣಿ ಪಾರ್ಶ್ವನಾಥ

ವಿಹಾರ ಮಾಡುತ್ತಾ ನಾವು ಬಿಜಾಪುರಕ್ಕೆ ಬಂದೆವು. ಹತ್ತಿರದ ಬಾಬಾನಗರಕ್ಕೆ ಬಂದೆವು ಇಲ್ಲಿ ಪ್ರಾಚೀನವಾದ ಅತಿಶಯ ಸಹಸ್ರಫಣಿ ಪಾರ್ಶ್ವನಾಥ ಮೂರ್ತಿಯ ದರ್ಶನ ಮಾಡಿ ಬಹಳ ಸಂತೋಷವಾಯಿತು.

ಮಳೆಯ ತೊಂದರೆ

ಇಲ್ಲಿ ಒಂದು ಚಿಕ್ಕ ಹಳ್ಳಿಯಲ್ಲಿ ತಂಗಿದ್ದೆವು. ಇಲ್ಲಿ ಜೈನರ ಮನೆಗಳು ಇರಲಿಲ್ಲ. ತುಂಬ ಮಳೆ ಬಂದಿತು. ಬಾವಿ ಸ್ವಲ್ಪ ದೂರದಲ್ಲಿತ್ತು. ಅಲ್ಲಿ ಕಪ್ಪು ಮಣ್ಣು ತುಂಬಾ ಅಂಟು ಬೇರೆ. ಒದ್ದೆ ಬೇರೆಯಾಗಿದ್ದರಿಂದ ಕಾಲು ಇಟ್ಟರೆ ಸಾಕು ಜಾರುತ್ತಿತ್ತು. ಬ್ರ. ಸುಗನ ಚಂದರು ಮುಂತಾದವರು ನೀರು ತರಲು ಹೋಗುವಾಗ ಅವರಿಗೆ ರಸ್ತೆಯಲ್ಲಿ ಓಡಾಡುವುದು ತುಂಬಾ ಕಷ್ಟವಾಗುತ್ತಿತ್ತು. ಆದರೂ ನನ್ನ ಹತ್ತಿರ ಏನೂ ಹೇಳದೆ ಬ್ರ. ಜೀ ಸಂಘಕ್ಕೆ ಪತ್ರ ಬರೆದಿದ್ದಾರೆ. ಸಂಘದಲ್ಲಿ ಪತ್ರವನ್ನು ಓದಿದ ಅಜಿತಸಾಗರರು ಮಾತಾಜೀಗೆ ಕಷ್ಟವಾಗುತ್ತಿರುವುದನ್ನು ಕಂಡು ಚಿಂತಿತರಾದರು ಅಯ್ಯಾ ನಾವು ನನ್ನ ಅಮ್ಮನಿಗೆ ಏನೂ ಮಾಡಲಾಗುತ್ತಿಲ್ಲವಲ್ಲ ಎಂದು ವ್ಯಥಿತರಾದರು. ಹಾಗೇ ಅಲ್ಲೇ ಕುಳಿತಿದ್ದ ಮುನಿಗಳು ಕಾರಣವೇನೆಂದು ಕೇಳಿದಾಗ ಬ್ರ. ಸುಗನಚಂದರು ಪತ್ರದ ವಿಚಾರವನ್ನು

ತಿಳಿಸಿ ತನ್ನ ದುಃಖವನ್ನು ತೋಡಿಕೊಂಡರು. ನನಗೆ ಈ ವಿಷಯ ಗೊತ್ತಾದಾಗ ಬಹಳ ಆಶ್ಚರ್ಯವಾಯಿತು ಇಲ್ಲಿಂದ ನಾವು ವಿಹಾರ ಮಾಡುತ್ತಾ ಸೋಲಾಪುರಕ್ಕೆ ಬಂದೆವು.

೪೯

ಸೋಲಾಪುರದಲ್ಲಿ ಚಾತುರ್ಮಾಸ

ಇಲ್ಲಿಗೆ ಆಗಮಿಸಿದಾಗ ಪ್ರಮುಖ ಶ್ರೇಷ್ಠಿ ವರ್ಗದವರಾದ ಬ್ರ. ಸುಮತೀ ಬಾಯಿ ಮೊದಲಾದವರು ಬಂದು ಸ್ವಾಗತಿಸಿದರು. ಮೊದಲು ಶ್ರಾವಿಕ ಆಶ್ರಮದಲ್ಲಿರುವ ಮಂದಿರದ ದರ್ಶನ ಮಾಡಿದೆವು. ಸುಮತೀ ಬಾಯಿಯವರ ವಿಶೇಷವಾದ ಒತ್ತಾಯದಿಂದ ನಮ್ಮ ಸಂಘ ಅಲ್ಲಿಯೇ ನಿಂತಿತು. ಒಂದೆರಡು ದಿನ ವಿಶ್ರಾಂತಿ ತೆಗೆದುಕೊಂಡು ಅಲ್ಲಿಂದ ಹೊರಡುವ ವಿಚಾರವಿತ್ತು. ಆದರೆ ಸುಮತೀ ಬಾಯಿಯು ನಮ್ಮ ವಿಹಾರವನ್ನು ರದ್ದು ಪಡಿಸಿದರು. ಆದ್ದರಿಂದ ಅಲ್ಲೇ ಉಳಿದೆವು ಇಲ್ಲಿ ಆಶ್ರಮದಲ್ಲಿ ಬೆಳಗ್ಗೆ ಆಧ್ಯಾತ್ಮ ಗ್ರಂಥಗಳಿಂದ ಸಮಯಸಾರದ ಸ್ವಾಧ್ಯಾಯ ಮತ್ತು ಮಧ್ಯಾಹ್ನ ಉಪದೇಶ ನಡೆಯುತ್ತಿತ್ತು. ಇಲ್ಲಿಗೆ ವಿಮಲ ಸಾಗರರ ಸಂಘವು ಆಗಮಿಸಿತ್ತು. ನಗರದ ಜನರು ಮತ್ತು ಆಶ್ರಮದ ಮಹಿಳೆಯರು ಹೋಗಿ ಸಂಘವನ್ನು ಸ್ವಾಗತಿಸಿ ಕರೆದು ತಂದರು. ಒಂದೆರಡು ದಿನ ಇದ್ದು ಸಂಘವು ಕುಂಥಲಗಿರಿಯ ಕಡೆಗೆ ಹೊರಟಿತು. ವಿಹಾರ ಹೊರಡುವಾಗ ನಾನು ಆಚಾರ್ಯರಲ್ಲಿ ವಿನಂತಿಸಿದೆ ಮಹಾರಾಜಜೀ ತಾವು ಇಲ್ಲಿಯೇ ಚಾತುರ್ಮಾಸವನ್ನು ಕೈಗೊಳ್ಳಿರಿ ಎಂದೆ. ಅದಕ್ಕೆ ಮಹಾರಾಜರು ನೋಡೋಣ ಇಲ್ಲಿಯವರ ಭಾವ ಭಕ್ತಿಯನ್ನು ನೋಡಿ ನಿರ್ಧರಿಸೋಣ ಎಂದರು. ನಾನು ಇಲ್ಲಿಯ ಪ್ರತಿಷ್ಠಿತ ಜನರನ್ನು ಆಗ್ರಹ ಪೂರ್ವಕವಾಗಿಯೇ ಕುಂಥಲಗಿರಿಗೆ ಕಳುಹಿಸಿದೆ. ಅವರೆಲ್ಲಾ ಹೋಗಿ ಪ್ರಾರ್ಥಿಸಿದ ಮೇಲೆ ಆಚಾರ್ಯರು ಬರಲು ಸ್ವೀಕೃತಿ ಕೊಟ್ಟರು. ಇದರಿಂದ ನಗರದಲ್ಲಿ ಸಡಗರದ ವಾತಾವರಣ ಉಂಟಾಯಿತು.

ಮೊದಲು ಔರಾಂಗಾಬಾದಿಗೆ ವಿಹಾರ ಮಾಡಬೇಕೆಂದು ವಿಚಾರ ಮಾಡಿದ್ದೆ. ಆದರೆ ನಾನು ಕನಸಿನಲ್ಲೂ ನೆನೆಸಿರಲಿಲ್ಲ ವೈಶಾಖ ಮಾಸದ 7-8 ತಿಂಗಳು ಇಲ್ಲೇ ಇರುತ್ತೇವೆಂದು. ಸುಮತೀಬಾಯಿಯವರ ಅತ್ಯಧಿಕವಾದ ಒತ್ತಾಯ, ಹಾಗೆಯೇ ಸಂಘದ ಎಲ್ಲಾ ಆರ್ಯಿಕೆಯರು ಅಲ್ಲೇ ತಂಗುವ ಅಭಿಪ್ರಾಯ ವ್ಯಕ್ತ ಪಡಿಸಿದ್ದರಿಂದ ನನಗೂ ಅಲ್ಲೇ ಇರುವ ಮನಸ್ಸಾಗಿ ಇರಲು ಒಪ್ಪಿಕೊಂಡೆ. ಇಲ್ಲಿಯ ಜನರಿಗಂತೂ ಈ ವರ್ಷ ಎರಡು ಸಂಘಗಳ ಯೋಗ ದೊರೆಯಿತು. ಆಚಾರ್ಯರ ಸಂಘ ಮತ್ತೆ ಆಗಮಿಸಿ ನಗರದಲ್ಲಿ ತಂಗಿತ್ತು. ನಾವು ಅದೇ ಆಶ್ರಮದಲ್ಲಿಯೇ ಇದ್ದೆವು.

ಸ್ವಾಧ್ಯಾಯದ ವಿಶೇಷತೆ

ಬೆಳಗ್ಗೆ ನಾನು ಲಬ್ಧಿಸಾರ ಸ್ವಾಧ್ಯಾಯ ಮಾಡುತ್ತಿದ್ದೆ. ಆಗ ಬ್ರ. ಸುಮತೀ ಬಾಯಿ ವಿದ್ಯುಲ್ಲತಾ ಕುಳಿತು ಕೊಳ್ಳುತ್ತಿದ್ದರು. ಸುಮತೀ ಬಾಯಿಯಂತೂ ಅತ್ಯಂತ ಆಸಕ್ತಿಯಿಂದ ಚರ್ಚೆಯಲ್ಲಿ ಭಾಗವಹಿಸುತ್ತಿದ್ದಳು. ಎಂಟು ಗಂಟೆಗೆ ಸಮಯಸಾರ ಅಥವಾ ಪರಮಾತ್ಮ ಪ್ರಕಾಶದ ಪ್ರವಚನ ನಡೆಯುತ್ತಿತ್ತು. ಇಬ್ಬರು ಬ್ರಹ್ಮಚಾರಿಣಿಯರು ಕುಳಿತು ಕೇಳುತ್ತಿದ್ದರು. ಕೇಳಿದ್ದೆಲ್ಲವನ್ನೂ ಸುಮತೀಬಾಯಿ ಬಾಯಿಪಾಠ ಮಾಡಿ ಒಪ್ಪಿಸುತ್ತಿದ್ದಳು. ಮಾತಾಜೀ ನೀವು ಆರ್ಯಿಕೆ ಜಿನಮತಿಯವರಿಗೆ ಚೆನ್ನಾಗಿ ಓದಿಸಿ ಬುದ್ಧಿವಂತರನ್ನಾಗಿ ಮಾಡಿಬಿಟ್ಟಿದ್ದೀರಾ ನೀವು ತುಂಬ ಚೆನ್ನಾಗಿ ಪಾಠ ಮಾಡುತ್ತೀರ ಎಂದ ಅವರ ಮಾತು ಕೇಳಿ ಅವರ ಗುಣಗ್ರಾಹಿತನವನ್ನು ನೋಡಿ ವಾತ್ಸಲ್ಯ ತುಂಬಿ

ಬಂದಿತು. ಒಂದು ದೊಡ್ಡ ಆಶ್ರಮದ ಸಂಚಾಲಿಕೆಯಾಗಿ ಇಷ್ಟು ಗುರುಭಕ್ತಿ ಮತ್ತು ಒಳ್ಳೆಯದನ್ನು ಸ್ವೀಕರಿಸುವಂತಹ ಮನಸ್ಸು ನೋಡಿ ಅವರ ದೊಡ್ಡತನದ ಸೂಚಕ ಎಂದುಕೊಂಡು ಈಗಲೂ ಅವರ ಧರ್ಮಪ್ರೇಮ ನೆನಪಾಗುತ್ತಿರುತ್ತದೆ. ಮಧ್ಯಾಹ್ನದಲ್ಲಿ ತ್ರಿಲೋಕಸಾರ ಶ್ಲೋಕ ವಾರ್ತಿಕದ ಸ್ವಾಧ್ಯಾಯ ನಂತರ ಉಪದೇಶ ಆಮೇಲೆ ಚರ್ಚೆ ಹೀಗೆ ದಿನಕ್ಕೆ ಹಲವಾರು ಬಾರಿ ಚರ್ಚೆಗಳು ಆಗುತ್ತಿದ್ದವು.

ಚಾತುರ್ಮಾಸದ ಸ್ಥಾಪನೆ

ಆಷಾಢ ಶುಕ್ಲ ಚತುರ್ದಶಿಯಂದು ನಗರದಲ್ಲಿ ರಾತ್ರಿ ಆಚಾರ್ಯ ಸಂಘ ಸಮೇತವಾಗಿ ಆಶ್ರಮದಲ್ಲಿ ಭಕ್ತರ ಸಮ್ಮುಖದಲ್ಲಿ ಚಾತುರ್ಮಾಸ ಸ್ಥಾಪನೆಯಾಯಿತು. ಸೋಲಾಪುರದಲ್ಲಿ ಮಳೆ ಚೆನ್ನಾಗಿ ಆಗುತ್ತಿತ್ತು. ಚಾತುರ್ಮಾಸದಲ್ಲಿ ಒಳ್ಳೆಯ ಸ್ವಾಧ್ಯಾಯ, ಉಪದೇಶ - ಅಧ್ಯಯನಗಳು ಚೆನ್ನಾಗಿ ನಡೆಯತೊಡಗಿದವು.

ಪ್ರಶಿಕ್ಷಣ ಶಿಬಿರ

ಈ ಆಶ್ರಮದಲ್ಲಿ 60 ಜನ ಅಧ್ಯಾಪಕರಿದ್ದರು ಇವರಲ್ಲಿ ಸುಮಾರು 40 ಜೈನ ಮಹಿಳೆಯರಿದ್ದರು. ಅವರಿಗೆಲ್ಲ ಧರ್ಮವನ್ನು ಓದಲು ಪ್ರೇರೇಪಿಸಿದೆ. ಕೊನೆಗೆ ಎಲ್ಲರು ನೀವೇ ನಮಗೆ ಅಧ್ಯಯನವನ್ನು ಮಾಡಿಸಿರಿ ಎಂದು ಕೇಳಿಕೊಂಡರು. ನಾನು ಅಧ್ಯಾಪಕಿಯರಿಗೆಲ್ಲಾ ದ್ರವ್ಯ ಸಂಗ್ರಹವನ್ನು ಅಧ್ಯಯನ ಮಾಡಿಸಬೇಕೆಂದು ತೀರ್ಮಾನಿಸಿದೆ. ಆರ್ಯಿಕೆ ಜಿನಮತಿಯು ಅಧ್ಯಯನ ಮಾಡಿಸಿದರು. ಮಧ್ಯಾಹ್ನದ ವೇಳೆ ಹೆಂಗಸರು ಸಹ ದ್ರವ್ಯಸಂಗ್ರಹದ ಶಿಕ್ಷಣವನ್ನು ಪಡೆಯುತ್ತಿದ್ದರು. ಇದಾದ ನಂತರ ನಾನು ಹೆಂಗಸರಿಗೆ ಸಂಸ್ಕೃತದ ಸಾಮಾಯಿಕವನ್ನು ವಿಧಿವತ್ತಾಗಿ ಕಲಿಸಿದೆ. ಈ ತರಗತಿಗಳಿಗೆ ಹೆಂಗಸರು ಬಿಸಿಲಿರಲಿ, ಮಳೆ ಇರಲಿ ನಗರದಿಂದ ಓಡಿ ಬರುತ್ತಿದ್ದರು. ಇಲ್ಲಿ ಮಾಂಟೆಸರಿಯಲ್ಲಿ ಕಲಿಯುತ್ತಿದ್ದ ಮಕ್ಕಳು ತಮ್ಮ ತಾಯಂದಿರನ್ನು ಕಂಡು ಜೋರಾಗಿ ಮರಾಠಿಯಲ್ಲಿ ಹೇಳುತ್ತಿದ್ದರು. ಮಾಝಿ ಮಮ್ಮಿ ಶಿಖಾಯಲಾ ಆಲೀ, ನನ್ನ ಅಮ್ಮ ಓದಲು ಬರುತ್ತಾರೆ. ಆಗ ಮಕ್ಕಳಿಗೆ ಬಹಳ ಖುಷಿ ಆಗುತ್ತಿತ್ತು. ಇಲ್ಲಿಯ ಮಹಿಳೆಯರಿಗೆ ಕಲಿಯಲು ಸಂಕೋಚ ಕಂಡುಬರುತ್ತಿರಲಿಲ್ಲ.

ಸಮ್ಮೇದ ಶಿಖರದ ಮಾದರಿಯ ಮೆರವಣಿಗೆ

ದಿಗಂಬರ ಮತ್ತು ಶ್ವೇತಾಂಬರರಲ್ಲಿ ಸಮ್ಮೇದ ಶಿಖರ ಪರ್ವತದ ಅಧಿಕಾರದ ಬಗ್ಗೆ ಜಗಳವಾಗುತ್ತಿತ್ತು. ಒಮ್ಮೆ ತೀರ್ಮಾನ ಏಕಪಕ್ಷೀಯವಾಗಿದ್ದರಿಂದ ದಿಗಂಬರರು ನ್ಯಾಯಾಲಯದಲ್ಲಿ ಹೋರಾಡಬೇಕಾಯಿತು. ಆಗ ನ್ಯಾಯ ದಿಗಂಬರರ ಪರವಾಗಿ ಅವರಿಗೆ ಸ್ವಲ್ಪ ಅಧಿಕಾರ ಸಿಕ್ಕಿತು. ಜನರಿಗೆ ತುಂಬ ಸಂತೋಷವಾಯಿತು. ಇಲ್ಲಿ ಸೋಲಾಪುರದಲ್ಲಿ ಮೋತಿಚಂದ ರೇವಚಂದ ಗಾಂಧಿಯವರು ಸಮ್ಮೇದ ಶಿಖರದ ಒಂದು ಮಾದರಿ ಮಾಡಿಸಿ ಮನೆಯಲ್ಲಿ ಇಟ್ಟಿದ್ದರು. ನನ್ನ ಪ್ರೇರಣೆಯಿಂದ ಶ್ರವಣ ಸಪ್ತಮಿಯಂದು ಭ. ಪಾರ್ಶ್ವನಾಥರ ಮೋಕ್ಷ ಕಲ್ಯಾಣದ ದಿನ ಈ ಮಾದರಿಯನ್ನು ತೆರೆದ ಜೀಪಿನಲ್ಲಿ ಇಟ್ಟು ಮೆರವಣಿಗೆ ಹೊರಡಿಸಲಾಯಿತು. ಅದರಲ್ಲಿ ಒಂದು ಚಿಕ್ಕ ಜಿನಪ್ರತಿಮೆಯನ್ನು ಇಡಿಸಲಾಗಿತ್ತು. ಆಚಾರ್ಯರ ಸಂಘ ಮತ್ತು ನಮ್ಮ ಸಂಘದವರು ಮೆರವಣಿಗೆಯಲ್ಲಿ ಭಾಗವಹಿಸಿದೆವು. ತೀರ್ಥರಾಜ ಸಮ್ಮೇದಗಿರಿ, ಮತ್ತು ಭಗವಾನ ಪಾರ್ಶ್ವನಾಥರ ಜಯಕಾರ ಧ್ವನಿಯು ಆಕಾಶದಲ್ಲೆಲ್ಲಾ ಪ್ರತಿಧ್ವನಿಸತೊಡಗಿತು. ಜನರ ಧಾರ್ಮಿಕ ಭಾವನೆ ಉತ್ಸಾಹ ನೋಡಿ ಮನಸ್ಸು ತುಂಬಿ ಬಂದಿತು.

ಜನ್ಮ ಜಯಂತಿ ಸಮಾರಂಭ

ನಾನು ಆಶ್ವೀಜ ಕೃಷ್ಣ ಪಕ್ಷ ಸಪ್ತಮಿಯಂದು ಆಚಾರ್ಯ ಶ್ರೀ ವಿಮಲ ಸಾಗರರ ಜನ್ಮ ಜಯಂತಿಯನ್ನು ಆಚರಿಸಲು ಶ್ರಾವಕರಿಗೆ ಪ್ರೇರಣೆ ಕೊಟ್ಟೆ. ಇದರಿಂದ ಪ್ರೇರಿತರಾದ ಶ್ರಾವಕರು ರಥಯಾತ್ರೆಯನ್ನು ಆಯೋಜಿಸಿದರು. ಎರಡು ಸಂಘದವರು ಮೆರವಣಿಗೆಯಲ್ಲಿ ಭಾಗವಹಿಸಿದೆವು. ಆಚಾರ್ಯರು ಭಾಗವಹಿಸಿದರು. ಹೀಗೆ ಜನ್ಮ ಜಯಂತಿ ಚೆನ್ನಾಗಿ ಆಯಿತು ಮಹಿಳೆಯರು ರಂಗೋಲಿಯಿಂದ ಆಚಾರ್ಯರ ಚಿತ್ರವನ್ನು ಬರೆದಿದ್ದರು. ಕೆಲವರು ಸಕ್ಕರೆ ಅಚ್ಚಿನಿಂದ ಸಮ್ಮೇದ ಶಿಖರದ ಪ್ರತಿರೂಪವನ್ನು ರಚಿಸಿ ಬಣ್ಣ ತುಂಬಿ ಮೆರವಣಿಗೆಗೆ ರಂಗು ತಂದಿದ್ದರು. ಎಲ್ಲರೂ ವಿಮಲಸಾಗರರು ಶತಾಯುಷಿಯಾಗಲಿ ಎಂದು ಪ್ರಾರ್ಥಿಸಿದರು.

ಶರದ ಪೂರ್ಣಿಮೆ

ಶರದ ಪೂರ್ಣಿಮೆ ಹತ್ತಿರವಾಗುತ್ತಿತ್ತು. ಬ್ರ. ಸುಮತೀ ಬಾಯಿ ನನ್ನ ಜನ್ಮ ಜಯಂತಿಯನ್ನು ಆಚರಿಸಬೇಕೆಂದು ಬಯಸುತ್ತಿದ್ದರು. ನಾನು ಇಲ್ಲಿಯವರೆಗೂ ನನ್ನ ಜಯಂತಿಯನ್ನು ಆಚರಿಸಿಕೊಂಡಿರಲಿಲ್ಲ. ನಾನು ಬೇಡವೆಂದು ವಿರೋಧಿಸಿದೆ. ಅವರು ಹೋಗಿ ಆಚಾರ್ಯ ವಿಮಲಸಾಗರರಲ್ಲಿ ಚರ್ಚೆಮಾಡಿದ್ದಾರೆ. ಮಹಾರಾಜರು ಒಳ್ಳೆಯದು ಜಯಂತಿಯನ್ನು ಆಚರಿಸಿ, ಅವರು ವಿರೋಧಿಸಲಿ ನಾನೇ ಬರುತ್ತೇನೆ ಎಂದರು.

ಬ್ರ. ಸುಮತೀ ಬಾಯಿಯವರ ಉತ್ಸಾಹ ಗರಿಗೆದರಿತು. ಚೆನ್ನಾಗಿ ಪ್ರಚಾರ ಮಾಡಿಕಾರ್ಯ ನಿರೂಪಿಸಿದ್ದರು. ಆದಿನ ಆಚಾರ್ಯರು ಸಂಘ ಸಮೇತ ಬಂದು ಸಭೆಯಲ್ಲಿ ವಿರಾಜಮಾನರಾದರು. ನಾನು ವಿಧಿಯಿಲ್ಲದೆ ಸಭೆಯಲ್ಲಿ ಬಂದು ಕುಳಿತುಕೊಳ್ಳಬೇಕಾಯಿತು. ಎಲ್ಲರೂ ಒಳ್ಳೆಯ ಉದ್ಗಾರ ಮಾಡಿದರು. ಜಿನಮತಿಯಂತೂ ತನ್ನ ಅನುಭವಗಳನ್ನು ಹೇಳಿಕೊಳ್ಳುತ್ತಾ ಅಮ್ಮನು ನನಗೆ ಜ್ಞಾನರೂಪವಾದ ಅಮೃತವನ್ನು ಕುಡಿಸಿದ್ದಾರೆ ಎಂದು ಹೇಳುತ್ತಾ ಅತ್ತೇಬಿಟ್ಟರು.

ಬ್ರ. ಸುಮತೀ ಬಾಯಿಯವರು ನನ್ನ ಜ್ಞಾನ ಮತ್ತು ಚಾರಿತ್ರ್ಯವನ್ನು ಹೊಗಳಿದರು. ಕೊನೆಗೆ ನಾನು ನನ್ನ ಅಲ್ಪತೆಯನ್ನು ಪ್ರಕಟಿಸುತ್ತಾ ಹೇಳಿದೆ. ನನಗೆ ಈ ಶರದ್ ಪೂರ್ಣಿಮೆಯು ತ್ಯಾಗದ ದಿನವಾಗಿದೆ. ಇದೇ ದಿನ ನಾನು ನನ್ನ 18ರ ವಯಸ್ಸಿನಲ್ಲಿ ಪೂರ್ಣ ಬ್ರಹ್ಮಚರ್ಯ ವ್ರತವನ್ನು ಸ್ವೀಕರಿಸಿದೆ. ದೇಶಭೂಷಣರ ಸಾನಿಧ್ಯಕ್ಕೆ ಗೃಹತ್ಯಾಗ ಮಾಡಿಬಂದೆ. ಆದ್ದರಿಂದ ನನ್ನ ಜೀವನದಲ್ಲಿ ಈ ದಿನ ಬಹಳ ಮಹತ್ವಪೂರ್ಣವಾಗಿದೆ ಎಂದೆ. ನಂತರ ಆಚಾರ್ಯರ ಚರಣಗಳಿಗೆ ವಂದಿಸಿ ಉಪಸ್ಥಿತರಿದ್ದ ಜನಸಮೂಹಕ್ಕೆ ಆರ್ಶೀವಾದ ಕೊಟ್ಟೆ. ಈ ರೀತಿ ಶ್ರಾವಿಕಾಶ್ರಮದಲ್ಲಿ ಒಳ್ಳೆ ಉತ್ಸಾಹದಲ್ಲಿ ಜನ್ಮ ಜಯಂತಿಯನ್ನು ಆಚರಿಸಿದರು. ಆದರೆ ಮುಂದೆ ಕೆಲವು ವರ್ಷಗಳವರೆಗೂ ಜನ್ಮ ಜಯಂತಿಯನ್ನು ಆಚರಿಸಲು ಬಿಡಲಿಲ್ಲ. ಆದರೆ ದೆಹಲಿಯಲ್ಲಿ 1980ರಲ್ಲಿ ವಿರೋಧಿಸಿದರೂ ಬಿಡದೆ ಆಚರಿಸಿದರು.

ಉಭಯ ಸಂಘದಲ್ಲಿ ಆಹಾರದಾನ

ಬ್ರ. ಸುಮತೀಬಾಯಿ ಒಂಭತ್ತು ಗಂಟೆಗೆ ನಗರಕ್ಕೆ ಹೋಗಿ ಆಚಾರ್ಯರಿಗೆ ಆಹಾರ ದಾನ ಮಾಡಿ ಬೇರೆ ಸಾಧುಗಳಿಗೂ ಆಹಾರ ಕೊಟ್ಟು, ಅಲ್ಲಿಂದ ಗಾಡಿಯಲ್ಲಿ ಬೇಗ ಬಂದು ವಸ್ತ್ರ ಬದಲಾಯಿಸಿ ಮಾತಾಜೀಗಳಿಗೂ ಆಹಾರ ಕೊಡುತ್ತಿದ್ದರು. ನಾವುಗಳು ಹತ್ತು ಗಂಟೆಗೆ ಆಹಾರಕ್ಕೆ ಹೊರಡುತ್ತಿದ್ದೆವು. ಆಚಾರ್ಯರು ಒಂಭತ್ತು ಗಂಟೆಗೆ ಹೊರಡುತ್ತಿದ್ದುದ್ದರಿಂದ ದಿನದಲ್ಲಿ ಎರಡು ಸಂಘಗಳಿಗೂ ಆಹಾರ ದಾನ ಮಾಡುತ್ತಿದ್ದರು.

ಇವರದು ವಿಶೇಷವಾದ ಭಕ್ತಿ. ಪ್ರತಿದಿನ ರಾತ್ರಿಯ ವೇಳೆ ನನ್ನ ಹತ್ತಿರ ಕುಳಿತು ಕಾಲು ಒತ್ತುವುದು ಮಾಲೀಶ್ ಮಾಡುವುದು ಮುಂತಾದ ವೈಯಾವೃತ್ತಿಯನ್ನು ಕೈಗೊಳ್ಳುತ್ತಿದ್ದರು. ಆಗ ಆಶ್ರಮದ ಹುಡುಗಿಯರು ಬಂದು ತಮಗೆ ಸೇವೆ ಮಾಡಲು ಬಿಡಬೇಕೆಂದು ಕೇಳಿಕೊಳ್ಳುತ್ತಿದ್ದರು. ಅವರಿಗೆ ತಾವೇ ಸೇವೆ ಮಾಡುವುದು ಬಹಳ ಖುಷಿ. ಆಗ ಹುಡುಗಿಯರಿಗೆ ಆಶ್ಚರ್ಯವಾಗುತ್ತಿತ್ತು. ಮತ್ತು ಸೇವೆ ಮಾಡಲು ಹಾತೊರೆಯುತ್ತಿದ್ದರು ಅವರಲ್ಲೆ ಹೇಳಿ ಕೊಳ್ಳುತ್ತಿದ್ದರು ನೋಡು ಗುರುಗಳಿಗೆ ವೈಯಾವೃತ್ತಿ ಮಾಡುವುದು ಒಳ್ಳೆಯ ಸುಯೋಗ ಆದರೆ ನೋಡು ಬುವಾಜಿ ತಾವೇ ಮಾತಾಜೀಯವರ ಸೇವೆ ಮಾಡಬೇಕೆನ್ನುತ್ತಾರೆ. ಇಲ್ಲಿ ಅಭಯಮತಿಯ ಸಿಡುಕು ಅತಿಯಾಗತೊಡಗಿತು. ಆ ಸಮಯದಲ್ಲಿ ಸುಮತೀಬಾಯಿ ಪ್ರತಿಯೊಬ್ಬರ ಪರಿಚಯವನ್ನು ಮಾಡುತ್ತಾ ಮಾಡಿಸುತ್ತಾ ಇರುತ್ತಿದ್ದರು. ಇವರಿಗೆ ಸಾಧು ಸಾಧ್ವಿಯರ ಬಗ್ಗೆ ಬಹಳ ವಾತ್ಸಲ್ಯವಿತ್ತು.

ದಿವ್ಯ ಅಕೃತ್ರಿಮ ಚೈತ್ಯಾಲಯಗಳ ದರ್ಶನ

ಚಾತುರ್ಮಾಸದ ಬೇಸಿಗೆಯ ದಿನಗಳಲ್ಲಿಯೇ ಬ್ರ. ಸುಮತೀಬಾಯಿ ಪ್ರೇರಣೆಯಿಂದ ನಾನು ಮಧ್ಯಾಹ್ನದ ಉಪದೇಶದಲ್ಲಿ ಎಲ್ಲರಿಗೂ ಅಕೃತ್ರಿಮ ಚೈತ್ಯಾಲಯಗಳ ದರ್ಶನ ಮಾಡಿಸಿದ್ದಾಗಿ ಹೇಳಿ ಎಲ್ಲರಿಗೂ ಸುಖಾಸನದಲ್ಲಿ ಕಣ್ಣು ಮುಚ್ಚಿ ಕುಳಿತುಕೊಳ್ಳಲು ಹೇಳಿ ಜಂಬೂದ್ವೀಪದಿಂದ, ಸುಮೇರು ಪರ್ವತದವರೆಗೆ ಹಿಡಿದು 458 ಚೈತ್ಯಾಲಯಗಳನ್ನು ದರ್ಶನ ಮಾಡಿಸುತ್ತೇನೆ ಎಂದೆ. ನಾನು ದರ್ಶನ ಮಾಡಿಸಲು ಪ್ರಾರಂಭಿಸಿದೆ. ತಾವೆಲ್ಲರೂ ಮೊದಲು ಸುದರ್ಶನ ಪರ್ವತವನ್ನು ನೋಡಿರಿ ಇದರಲ್ಲಿ ಮೂರು ಭಾಗಗಳಿವೆ. ಅವುಗಳಲ್ಲಿ ನಂದನವನ, ಸೌಮನಸವನ, ಪಾಂಡಸಕವನಗಳಿವೆ. ಭೂಮಿಯ ಮೇಲೆ ಭದ್ರಸಾಲ ವನವಿದೆ. ಈ ನಾಲ್ಕುವನಗಳಲ್ಲಿಯೂ ನಾಲ್ಕು ದಿಕ್ಕುಗಳಿಗೂ ಒಂದೊಂದು ಅಕೃತ್ರಿಮ ಜಿನಮಂದಿರಗಳಿವೆ. ಈ ಎಲ್ಲದರಲ್ಲೂ 108-108 ಆಕೃತ್ರಿಮ ಜಿನಪ್ರತಿಮೆಗಳಿವೆ. ಈ ಪ್ರತಿಮೆಗಳು 500 ಧನುಸ್ಸು ಎತ್ತರವಿದೆ. ಪದ್ಮಾಸನದಲ್ಲಿ ವಿರಾಜಮಾನವಾಗಿವೆ. ನಾಸಾಗ್ರ ದೃಷ್ಟಿ ಮತ್ತು ಮಂದಸ್ಮಿತ ಮುಖವಿದೆ. ಪ್ರತಿಯೊಂದು ಮಂದಿರಕ್ಕೆ ಕ್ರಮವಾಗಿ ಕರೆದುಕೊಂಡು ವಂದನೆ ಮಾಡಿಸಿದೆ. ನಂತರ ಕ್ರಮ ಕ್ರಮವಾಗಿ ಗಜದಂತ ಮೊದಲಾದ ಮಂದಿರಗಳ ದರ್ಶನ ಮಾಡಿಸಿದೆ. ಮೊದಲು ಹೇಗೆ ಮೂಡಬಿದರೆಯಲ್ಲಿ ಸಿದ್ಧಾಂತ ದರ್ಶನವಾದ ಮೇಲೆ ಜನಗಳಿಗೆ ದರ್ಶನ ಮಾಡಿಸಿದ್ದೆನೋ ಹಾಗೇ ಸುಮಾರು ಒಂದೂವರೆ ಗಂಟೆ ಧಾರಾಪ್ರವಾಹವಾಗಿ ಹೇಳುತ್ತಾ ಹೇಳುತ್ತಾ ದರ್ಶನ ಮಾಡಿಸಿದೆ. ಬ್ರ. ಸುಮತೀ ಬಾಯಿ, ವಿದ್ಯುಲ್ಲತಾ ಬಾಯಿ ಮೊದಲಾದವರು ಸಭೆಯಲ್ಲಿ ಕಣ್ಣು ಮುಚ್ಚಿಕೊಂಡು ಭಾವದಿಂದ ದರ್ಶನ ಮಾಡಿದರು. ಕಣ್ಣು ತೆರೆದ ನಂತರ ಎಲ್ಲರ ಕಣ್ಣುಗಳಲ್ಲಿ ಆನಂದಬಾಷ್ಪ ಎಲ್ಲರೂ ಗದ್ಗದಿತ ಸ್ವರದಿಂದ ಜಯಕಾರ ಮಾಡಿದರು. ಅನಂತರ ಬ್ರ. ಸುಮತೀಬಾಯಿ ಹೇಳಿದರು ಮಾತಾಜೀ ಈ ರಚನೆಯನ್ನು ಮಾಡಿಸಲೇ ಬೇಕು. ಈ ದಿನ ಹೇಗೆ ಎಲ್ಲೆಲ್ಲೂ ಸಮವಸರಣ ಮಾಡಿಸಿದ್ದಾರೆ ಹಾಗೇಯೇ ನಂದೀಶ್ವರ ದ್ವೀಪದ ರಚನೆಯು ಇದೆ. ಹಾಗೆಯೇ ಮಧ್ಯಲೋಕದ ರಚನೆಯನ್ನೂ ಮಾಡಿಸಬೇಕು.

ಬ್ರ. ಸುಮತೀಬಾಯಿಗೆ ಮಧ್ಯಲೋಕದ ರಚನೆಯನ್ನೂ ಇಲ್ಲಿಯೇ ಮಾಡಿಸಬೇಕೆಂಬ ತೀವ್ರತೆ ಹೆಚ್ಚಾಗತೊಡಗಿತು. ಮಾತಾಜೀ ಇಲ್ಲಿ ಆಶ್ರಮಕ್ಕೆ ತಗಲಿದಂತಿರುವ ಒಂದು ಜಾಗವನ್ನು ನಾನು ಕೊಂಡು ಕೊಂಡಿದ್ದೇನೆ. ಖಾಲಿ ಜಾಗವಿದೆ ನೋಡಿ ಆಶ್ರಮದ ಮಂದಿರದಲ್ಲಿ ಕುಳಿತುಕೊಂಡೇ ನೋಡಬಹುದು. ಅದರಲ್ಲೇ ನಾವು ಮಾಡಿಸಬಹುದು. ತಾವು ಇಲ್ಲೇ ಇದ್ದು ನಕ್ಷೆ ತಯಾರಿಸಿ ನಾನು ಕೆಲಸ ಮಾಡಿಸುತ್ತೇನೆ. ತಾವು ಹಣಕ್ಕಾಗಿ ಯಾರನ್ನು ಕೇಳಬೇಕಾಗಿಲ್ಲ. ತಾವು ಇಲ್ಲಿದ್ದೂ ಹೇಗೆ ಮಾಡಿಸಬೇಕೆಂಬ ಸಲಹೆ ಕೊಟ್ಟರೆ ಸಾಕು. ಇವರ ಮಾತುಗಳನ್ನು

ಕೇಳಿದವಳು ನಕ್ಕು ಸುಮ್ಮನಾದೆ. ಸಮ್ಮತಿಯೇನು ಕೊಡಲಿಲ್ಲ. ಆದರೆ ಅವರು ಇದನ್ನು ಹೇಳುತ್ತಲೆ ಇದ್ದರು. ಒಮ್ಮೆ ಒಬ್ಬ ಇಂಜಿನಿಯರನ್ನು ಕರೆದುಕೊಂಡು ಬಂದು ನನ್ನ ಹತ್ತಿರ ಮಾತಾಡಲು ಹೇಳಿದರು. ನಾನು ಮಧ್ಯಲೋಕದ ಜಂಬೂದ್ವೀಪದಿಂದ ಹಿಡಿದು ರುಚಕವರ ದ್ವೀಪದ ತನಕ ಅಕೃತ್ರಿಮ ಚೈತ್ಯಾಲಯದ ವರೆಗೂ ವರ್ಣನೆ ಮಾಡಿದೆ. ಇದನ್ನು ಕೇಳಿದ ಅವರು ಮಾತಾಜೀ ತಾವು ಆರ್ಕಿಟೆಕ್ಚರನ್ನು ಕೇಳಿ ನಕ್ಷೆ ತಯಾರಿಸಬೇಕೆಂದು ಹೇಳಿದರು.

ಆರ್ಕಿಟೆಕ್ಚರ್ ಬಂದರು. ನಮ್ಮ ಶಾಸ್ತ್ರದ ಆಧಾರದಿಂದಲೇ ಅವರಿಗೆ ವಿಸ್ತಾರವಾಗಿ ಹೇಳಿದೆ. ಅವರಿಗೆ ಕೇಳಿ ತಲೆಸುತ್ತ ತೊಡಗಿತು ನಂತರ ಹೇಳಿದರು. ಮಾತಾಜೀ ತಾವು ಈ ರಚನೆಯನ್ನು ಎಷ್ಟು ಅಡಿ ಜಮೀನಿನಲ್ಲಿ ಮಾಡಬೇಕೆಂದಿದ್ದೀರಿ ಯಾವ, ಯಾವ ದ್ವೀಪಗಳು ಎಷ್ಟೆಷ್ಟು ಅಡಿ ಎತ್ತರ ವಿಸ್ತಾರವಿರಬೇಕು ಇವುಗಳನ್ನು ಹೇಳಿ ಎಂದರು.

ನಾನು ಹೇಳಿದೆ ನಾನು ಕಡಿಮೆ ಎಂದರೆ 1000 * 1000 ಅಡಿಯಲ್ಲಿ ರಚನೆ ಮಾಡಬೇಕು. ಇದರಲ್ಲಿ ಮಧ್ಯಲೋಕದ ಹನ್ನೆರಡು ದ್ವೀಪಗಳನ್ನೂ ಭಾಗಮಾಡಬೇಕು ಎಂದೆ. ಮೊದಲು ಗೋಲಾಕಾರದ ಜಂಬೂದ್ವೀಪಕ್ಕೆ ನೂರು ಅಡಿ ತೆಗೆದುಕೊಳ್ಳಬೇಕು. ಪುನಃ ಅದಕ್ಕೆ ಸುತ್ತುವರಿದ ಲವಣ ಸಮುದ್ರಕ್ಕೆ 25 ಅಡಿ ತೆಗೆದುಕೊಳ್ಳಬೇಕು. ಅದರ ನಂತರ ಸುತ್ತುವರಿದ ಧಾತಕೀ ಖಂಡಕ್ಕೆ ನೂರು ಅಡಿ ತೆಗೆದುಕೊಳ್ಳಬೇಕು. ಇದನ್ನು ಸುತ್ತುವರಿದಿರುವ ಕಾಲೋದಧಿ ಸಮುದ್ರವನ್ನು 50 ಅಡಿಗಳಷ್ಟು ಮಾಡಿ ಇದರ ನಂತರ ಪುಷ್ಕರಾ ದ್ವೀಪಕ್ಕೆ ನೂರು ಅಡಿ ತೆಗೆದುಕೊಳ್ಳಬೇಕು. ಬಳೆಯಾಕಾರದ ಮಾನುಷೋತ್ತರ ಪರ್ವತಗಳು 5 ಅಡಿ ಎತ್ತರವಿರಬೇಕು. ಅನಂತರ ಪುಷ್ಕರಾರ್ಧಕೋಸ್ಕರ 10 ಅಡಿ ತೆಗೆದುಕೊಳ್ಳಿ. ನಂತರ ಪುಷ್ಕರ ಸಮುದ್ರದಿಂದ ಹಿಡಿದು 7 ನೇ ದ್ವೀಪ ಸಮುದ್ರಕ್ಕೊಸ್ಕರ ಎರಡು-ಎರಡು ಅಡಿ ಜಾಗ ಬಿಡಿರಿ. ಇದರ ಮಧ್ಯ ಇರುವ ಐದನೇಯ ಕ್ಷೀರ ಸಮುದ್ರಕ್ಕೆ ಹತ್ತು ಅಡಿ ತೆಗೆದುಕೊಳ್ಳಬೇಕು.

ನಂದೀಶ್ವರ ದ್ವೀಪಕ್ಕೆ 100 ಅಡಿಗಳು ಬೇಕು. ಪುನಃ ಒಂದೊಂದು ಅಡಿಯ ಅಂತರದಲ್ಲಿ 12 ನೇಯ ಕುಂಡಲವರ ದ್ವೀಪಕ್ಕೆ 15 ಅಡಿಕೊಟ್ಟು ಇದರ ಮಧ್ಯ ಗೋಲಾಕಾರವಾಗಿ 5 ಅಡಿಯ ಕುಂಡಲ ಪರ್ವತ ತೆಗೆದುಕೊಳ್ಳಿ. ಹೀಗೆ ಒಂದೊಂದು ಅಡಿಯ 11 ಸಮುದ್ರ 12 ದ್ವೀಪ 12 ಸಮುದ್ರ ತೆಗೆದು 15 ಅಡಿಯ ರುಚಕರ ದ್ವೀಪ.

ಇದರ ಮಧ್ಯೆ ಬಳೆಯಾಕಾರದ 5 ಅಡಿ ಎತ್ತರದ ರುಚಕರ ಪರ್ವತ ಮಾಡಿ ಪುನಃ ಒಂದೆರಡು ದ್ವೀಪ ಸಮುದ್ರಕೋಸ್ಕರ ಒಂದೊಂದು ಅಡಿ ಜಾಗ ಬಿಟ್ಟು ಕೊನೆಯದಾದ ಸ್ವಯಂಭೂರಮಣ ಸಮುದ್ರವನ್ನು ಹದಿನೈದು ಅಡಿಯುದ್ದ ಮಾಡಬೇಕು. ಹೀಗೆ ಜಂಬೂದ್ವೀಪದ ಹೊರಗೆ ಪ್ರತ್ಯೇಕ ದ್ವೀಪ ಸಮುದ್ರ ಬಂದು ಇನ್ನೊಂದನ್ನು ಸುತ್ತುವರಿದಿದೆ. ಪುನಃ ಜಂಬೂದ್ವೀಪದ ಪ್ರಮಾಣ ಅದರ ಮಧ್ಯೆ ಇರುವ ಸುದರ್ಶನ ಮೇರುವಿನ ಪ್ರಮಾಣ ಹಿಮವನ ಮುಂತಾದ ಪರ್ವತಗಳ ಪ್ರಮಾಣ ಮತ್ತು ಭರತ ಕ್ಷೇತ್ರ ಮುಂತಾದ ಕ್ಷೇತ್ರಗಳ ಅಳತೆ ಹೇಳಿದೆ. ಹಾಗೆಯೇ ಜಂಬೂ ದ್ವೀಪದ ಒಳಗೆ ಇರುವ 14 ನದಿಗಳ ಪ್ರಮಾಣ, ವಿದೇಹ ಕ್ಷೇತ್ರದಲ್ಲಿರುವ 16 ವಕ್ಷಾರಗಳ ಪ್ರಮಾಣ, 12 ವಿಭಂಗ ನದಿಗಳು ಮತ್ತು 32 ದೇಶಗಳ ಪ್ರಮಾಣ ಅವುಗಳಲ್ಲಿ ಹರಿಯುವ ಗಂಗಾ, ಸಿಂಧು ಹಾಗೆಯೇ ರಕ್ತಾ ರಕ್ತೋದಾ ಮುಂತಾದ 64 ನದಿಗಳ ಪ್ರಮಾಣ ಎತ್ತರ ಅಡಿ ಮತ್ತು ಇಂಚುಗಳಲ್ಲಿ ನಿರ್ಧರಿಸಿದೆ. 34 ವಿಜಯಾರ್ಧ ಪರ್ವತಗಳ ಪ್ರಮಾಣವನ್ನು ನಿಶ್ಚಿತಗೊಳಿಸಿ ಎರಡು ವೃಷಭಾಚಲ ಮತ್ತು ನಾಲ್ಕು ನಾಭಿಗಿರಿಯ ಪ್ರಮಾಣ ನಿಶ್ಚಿತಗೊಳಿಸಿ ಹೀಗೆ ಜಂಬೂದ್ವೀಪದ ಕ್ಷೇತ್ರ ಪರ್ವತಗಳ ಧಾತಕೀ ಖಂಡಪುಷ್ಕರಾರ್ಧ, ನಂದೀಶ್ವರ

ದ್ವೀಪದ ಪರ್ವತ ಮುಂತಾದವುಗಳ ಎಳತೆ ನಿರ್ಧರಿಸಿ ಬರೆದೆ. ಹೀಗೆ ನನ್ನ ಯೋಚನೆ 13 ದ್ವೀಪಗಳನ್ನು ರಚಿಸಿ 458 ಚೈತ್ಯಾಲಯವನ್ನು ಚಿಂತನೆಯಲ್ಲಿಯೇ ದರ್ಶನ ಮಾಡಿಸಿದೆ.

ಜಂಬೂದ್ವೀಪ

ಸುಮತೀಬಾಯಿಗೆ ಮತ್ತು ಆರ್ಕಿಟೆಕ್ಟರಿಗೆ ಇದು ಬಹಳ ದೊಡ್ಡ ಯೋಜನೆಯಾಗಿ ಕಂಡಿತು. ಕೊನೆಗೆ ಸುಮತೀ ಬಾಯಿ ಮಾತಾಜೀ ತಾವು ಜಂಬೂದ್ವೀಪಕ್ಕೆ ಮಾತ್ರ ನಕ್ಷೆ ತಯಾರಿಸಿ ನಮ್ಮಿಂದ ಇಷ್ಟನ್ನು ಮಾತ್ರ ಮಾಡಲು ಸಾಧ್ಯವಾಗಬಹುದು ಎನ್ನತೊಡಗಿದರು. ರಚನೆ ಮಾಡುವುದಾದರೆ ಪೂರ್ತಿಯಾಗಿ ಆಗಬೇಕು. ಬರೇ ಜಂಬೂದ್ವೀಪ ಸರಿಯಲ್ಲ ಸುಮತೀಬಾಯಿಯ ಜೊತೆಗೆ ಹಲವಾರು ಮಹಾನುಭಾವರು ಸೇರಿಕೊಂಡು ಮಾತಾಜೀ ಕುಂಥಲಗಿರಿ ಸಿದ್ಧಕ್ಷೇತ್ರದ ಮೇಲೆ ಜಂಬೂ ದ್ವೀಪವನ್ನು ಮಾಡಲು ಅನುಮತಿ ಕೊಡಿ ಎಂದು ಕೇಳತೊಡಗಿದರು.

ನಾನು ಅನುಮತಿ ಕೊಡಲಿಲ್ಲ ಮತ್ತು ಅಲ್ಲಿ ಇರಲು ಸಾಧ್ಯವಾಗಲಿಲ್ಲ. ನನಗೆ ಅಲ್ಲಿ ಪ್ರಿಯವಾಗಿತ್ತು. ಇದು ಹೀಗಾಗುತ್ತದೆ ಅನ್ನಿಸಿರಲಿಲ್ಲ. ನಾವು ಎಲ್ಲ ಕಡೆಯೂ ಸುತ್ತಾಡುತ್ತಾ ನಮಗೆ ಸಲ್ಲೇಖನ ಅನುಕೂಲವಾದ ಪ್ರದೇಶಗಳನ್ನು ಆರಿಸಿಕೊಳ್ಳುತ್ತೇವೆ. ಈ ದೃಷ್ಟಿಯಿಂದ ಈ ಪ್ರಾಂತ್ಯ ನಮಗೆ ಚೆನ್ನಾಗಿತ್ತು. ಧರ್ಮ ಧ್ಯಾನಕ್ಕೂ ಅನುಕೂಲವಾಗಿತ್ತು. ಭಕ್ತರು ಅನುಕೂಲವಾಗಿದ್ದರು. ಪಂಥ ಹವಾಗುಣ ಎಲ್ಲವೂ ಅನುಕೂಲವಾಗಿತ್ತು. ಆದರೂ ಸಹ ಶಿಷ್ಯೆ ಆರ್ಯಿಕೆ ಜಿನಮತಿ ಶ್ರವಣಬೆಳಗೊಳದಿಂದ ವಿಹಾರ ಮಾಡುವ ಮಾತು ತೆಗೆದಾಗ ಆ ಸಮಯದಲ್ಲಿ ನನಗೆ ಮಾನಸಿಕ ಅಶಾಂತಿ ಉಂಟಾಯಿತು. ಇದು ನಾನು ಶಿಷ್ಯೆಯರ ಮೇಲಿಟ್ಟಿರುವ ಮೋಹದಿಂದಲೇ ಇರಬೇಕು. ಇದಲ್ಲದೆ ಈ ಪಂಚಮ ಕಾಲದಲ್ಲಿ ಸಾಧುಗಳು ಒಬ್ಬಂಟಿಗರಾಗಿ ವಿಹಾರ ಮಾಡಬಾರದು. ಇದು ಆಚಾರ್ಯ ಕುಂದ ಕುಂದರ ಆಜ್ಞೆಯಾಗಿದೆ. ಅವರು ಮಾ ಭೋದು ಮೇ ಸತ್ರೂವಿ ಏಗಾಗೀ । ನನ್ನ ಶತ್ರುಗಳು ಸಹಾ ಒಬ್ಬಂಟಿಗಳಾಗಿರಬಾರದು ಆದ್ದರಿಂದ ನಾನು ಇವರನ್ನು ಸಂಘದಲ್ಲಿ ಬಿಡಬೇಕಾಗಿತ್ತು. ಇವರ ಜೊತೆ ಆಚಾರ್ಯ ಸಂಘದ ಜೊತೆ ನನಗೆ ಬಹಳ ಅನುರಾಗ, ನಮ್ಮದು ಎನ್ನುವ ಭಾವನೆ ನಾನು ಆಚಾರ್ಯರ ಸಂಘದಲ್ಲಿಯೇ ಇರಬಯಸುತ್ತೇನೆ. ಹೀಗೆ ಹಲವಾರು ಕಾರಣಗಳಿಂದ ನಾನು ಬ್ರ. ಸುಮತೀಬಾಯಿಯ ಮಾತನ್ನು ಕೇಳಲಿಲ್ಲ ಕೇಳಿದರೂ ಕೇಳದಂತೆ ಇದ್ದೆ. ಕೊನೆಗೆ ಅಲ್ಲಿಂದ ಹೊರಡುವ ನಿರ್ಧಾರ ಕೈಗೊಂಡೆ ಕೊನೆಗೆ ಹಸ್ತಿನಾಪುರದಲ್ಲೇ ಜಂಬೂದ್ವೀಪ ಆಗುವ ಯೋಗ ಇದ್ದುದ್ದರಿಂದ ಇಲ್ಲಿ ಇರಲು ಹೇಗೆ ಸಾಧ್ಯ.

ಎಲ್ಲ ಕಡೆ ಉಪದೇಶ

ಬ್ರ. ಸುಮತೀಬಾಯಿ, ವಿದ್ಯುಲ್ಲತಾಜೀ ಎಲ್ಲಕಡೆ ಉಪದೇಶವನ್ನು ಇಡಿಸಿದರು. ಒಮ್ಮೆ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಒಮ್ಮೆ ಜೈನ ಬೋರ್ಡಿಂಗ್‌ನ ನವ ಯುವಕರಿಗೆ ಒಂದು ಸಲ ಆಶ್ರಮದಲ್ಲಿರುವ ವಿದ್ಯಾರ್ಥಿಗಳಿಗೆ ಇನ್ನೊಮ್ಮೆ ಗುರುಕುಲದಲ್ಲಿರುವ ಚಿಕ್ಕ ಚಿಕ್ಕ ಮಕ್ಕಳಿಗೋಸ್ಕರ ಉಪದೇಶ. ಒಮ್ಮೊಮ್ಮೆ ಸಾರ್ವಜನಿಕ ಸಭೆಗಳಲ್ಲಿ ಉಪದೇಶ ಕೊಡುತ್ತಿದ್ದೆ. ನನ್ನ ಉಪದೇಶದ ಮೊದಲು ಅದರ ಅನಂತರ ಬ್ರ. ವಿದ್ಯುಲ್ಲತೆ ಗುರುಭಕ್ತಿಯ ಬಗ್ಗೆ ಚೆನ್ನಾಗಿ ಹೇಳುತ್ತಿದ್ದರು. ಅಲ್ಲದೇ ಆಚಾರ್ಯ ಶಿವಸಾಗರರ ಸಂಘಕ್ಕೆ ಬಂದು ನನ್ನ ಹತ್ತಿರವೇ ಇದ್ದು ಅಧ್ಯಯನ ಮುಗಿಸಿದ್ದರು. ಇವರ ಮಾಮಿ ಮಾಣಿಕಬಾಯಿ ಎಂದರೆ ಚಂದ್ರಮತಿ ಮಾತಾಜೀ ಸಂಘದಲ್ಲಿ ನನ್ನ ಹತ್ತಿರವೇ ಇರುತ್ತಿದ್ದರು. ಆದ್ದರಿಂದ ನನ್ನ ಬಗ್ಗೆ ಇವರಿಗೆ ವಿಶೇಷವಾದ ಪ್ರೀತಿ ಇತ್ತು.

ಪಂಡಿತ ವರ್ಧಮಾನ ಶಾಸ್ತ್ರಿಗಳಂತೆ ನನ್ನ ಉಪದೇಶಕ್ಕಿಂತ ಮೊದಲು ಮಂಗಳಾಚರಣೆಯಲ್ಲಿ ಮಾತಾಡುತ್ತಾ ನನ್ನನ್ನು ಹೊಗಳುತ್ತಾ ಹೊಗಳುತ್ತಾ ಭಾವುಕರಾಗಿ ಬಿಡುತ್ತಿದ್ದರು. ನಾವುಗಳು ಶಾಸ್ತ್ರಿಗಳು, ವಿದ್ಯಾ ವಾಚಸ್ಪತಿ ಎನ್ನುವ ಬಿರುದು ತೆಗೆದುಕೊಂಡಿದ್ದರು. ರಾಜವಾರ್ತಿಕ, ಶ್ಲೋಕ ವಾರ್ತಿಕ, ಮುಂತಾದ ಗ್ರಂಥಗಳಲ್ಲಿ ಎಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳಲು ಮಾತಾಜೀಯ ಹತ್ತಿರವೇ ಹೋಗುತ್ತೇವೆ. ಯಾರಿಗೆ ಯಾವ ಸಂಶಯ ಬಂದರೂ ಮಾತಾಜೀಯವರು ಶಾಸ್ತ್ರದ ಪ್ರಮಾಣ ತೋರಿಸಿ ಸಮಾಧಾನ ಮಾಡಿ ಬಿಡುತ್ತಾರೆ. ಹೀಗೆ ಹೊಗಳುತ್ತಾ ನನಗೆ ಮಾತಾಜೀಯ ಸಾನಿಧ್ಯಕ್ಕೆ ಬಂದರೆ ತಾಯಿಯ ಹತ್ತಿರ ಬಂದ ಅನುಭವವಾಗುತ್ತದೆ ಎಂದರು.

ಪಂಡಿತರಿಗೆ ಆರ್ಷ ಪರಂಪರೆಯಲ್ಲಿ ಶ್ರದ್ಧೆ ಇತ್ತು ಇದರಿಂದಾಗಿ 1975 ರಲ್ಲಿ ಹಸ್ತಿನಾಪುರದಲ್ಲಿ ಪ್ರತಿಷ್ಠಾ ಮಹೋತ್ಸವಕ್ಕೆ ನನ್ನ ಪ್ರೇರಣೆ ಮಾತಿಗೆ ಗೌರವ ಕೊಟ್ಟು ಸೇಠ್ ಸುಕುಮಾರಚಂದ ಸೇಠಿಯವರು ಇವರನ್ನ ಪ್ರತಿಷ್ಠಾಚಾರ್ಯರನ್ನಾಗಿ ಮಾಡಿದ್ದರು. ಜಂಬೂದ್ವೀಪದಲ್ಲಿರುವ ಭಗವಾನ್ ಮಹಾವೀರಜೀಯ ಒಂಭತ್ತು ಅಡಿ ಮೂರ್ತಿಯ ಸ್ಥಾಪನೆಯನ್ನು ಇವರೇ ಮಾಡಿಸಿದ್ದು. ಇವರ ಪತ್ನಿ ಆಹಾರ ಕೊಡುವುದಕ್ಕಾಗಿಯೇ ಒಂದುಮೈಲಿ ನಡೆದುಕೊಂಡು ಬರುತ್ತಿದ್ದರು. ನನ್ನ ಬಗ್ಗೆ ಈಕೆಗೂ ಬಹಳ ಭಕ್ತಿ. ಇವರು ನನ್ನ ಪ್ರೇರಣೆಯಿಂದಲೇ ಆಚಾರ್ಯರಿಂದ 2 ನೇಯ ಪ್ರತಿಮೆಯ ವ್ರತ ತೆಗೆದುಕೊಂಡರು ಇವರೊಬ್ಬ ಗುರುಭಕ್ತಿ ಮಹಿಳಾರತ್ನ.

ಉಷಾವಂದನೆ

ತ್ರೈಲೋಕ್ಯ ವಂದನೆ, ಸಮ್ಮೇದ ಶಿಖರ ವಂದನೆ ಮೊದಲಾದ ಸ್ತುತಿಗಳನ್ನು ಸಂಸ್ಕೃತದಲ್ಲಿ ರಚಿಸಿ ನಂತರ ಭಕ್ತರ ಕೋರಿಕೆ ಮೇರೆಗೆ ಹಿಂದಿಯಲ್ಲಿಯೂ ರಚನೆ ಮಾಡಿದೆ. ಇಲ್ಲಿ ಬಾಲಕಿಯರು ಮರಾಠಿಯ ಸುಪ್ರಭಾತ ಸ್ತೋತ್ರ ಹೇಳುತ್ತಾರೆ. ಕನ್ನಡದ ಸುಪ್ರಭಾತ ಸ್ತೋತ್ರವನ್ನು ನಾನು ಕ್ಷುಲ್ಲಿಕೆಯಾಗಿದ್ದಾಗಲೇ ಹೇಳುತ್ತಿದ್ದೆ. "ಏಳು ಭವ್ಯ ಬೆಳಗಾಯಿತು. ಶತಕುಲ ಧ್ಯಾನವೆಲ್ಲವ ಬಿಟ್ಟು ಏಳು." ನಾನು ಚಿಕ್ಕವಳಾಗಿದ್ದಾಗ ನಮ್ಮ ಅಮ್ಮ ಒಂದು ಹಿಂದಿಯ ಸುಪ್ರಭಾತ ಹೇಳುತ್ತಿದ್ದರು.

ಉಠ ಭೋರೆ ಭಯೋ ಜಿನವರ ಕೋ ತುಮ್ ಕಾಹೇ ಸಯಾನೆ ಸೋವತ ಹೋ

ಇದರಿಂದಾಗಿ ನನ್ನ ಮನಸ್ಸಿನಲ್ಲಿ ಸುಂದರವಾದ ಒಂದು ಆಶೆಯುಂಟಾಯಿತು. ಉತ್ತರ ಪ್ರದೇಶ ಪ್ರಾಂತ್ಯಗಳಲ್ಲಿ ಬೆಳಗಿನ ಹೊತ್ತು ಎಲ್ಲರೂ ಸುಪ್ರಭಾತ ಹೇಳುವ ಪರಂಪರೆ ಸರಿಯಾಗಿ ಇರಲಿಲ್ಲ. ಆದ್ದರಿಂದ ನಾನು ನಿರ್ವಾಣ ಕಾಂಡವನ್ನು ತೆಗೆದುಕೊಂಡು ಇದರ ಮೂಲದಿಂದಲೇ ಸುಪ್ರಭಾತವನ್ನು ರಚಿಸಿ ಅದಕ್ಕೆ 'ಉಷಾವಂದನೆ' ಯೆಂದು ಹೆಸರಿಟ್ಟೆ. ಏಕೆಂದರೆ ಸೂರ್ಯ ಉದಯಿಸುವ ಮುನ್ನ ನಾವು ಉಷಾವಂದನೆ ಮಾಡಬೇಕು. ಅದು ಬಹಳ ಸುಂದರವಾಗಿಯೇ ಬಂದಿತು.

ಉಠೋ ಭವ್ಯ । ಖಿಲ ರಹೀ ಹೈ ಉಷಾ, ತೀರ್ಥವಂದನ ಸ್ತವನ ಕರೋ॥
ಆರ್ತ ರೌದ್ರ ದುರ್ಧ್ಯಾನ ಛೋಡಕರ । ಶ್ರೀ ಜಿನವರ ಕಾ ಧ್ಯಾನ ಕರೋ ।
ಅಷ್ಟಾಪದ ಸೇ ವೃಷಭದೇವ ಜಿನ, ವಾಸು ಪೂಜ್ಯ ಚಂಪಾಪುರಿ ಸೇ ।
ಊರ್ಜಯಂತ ಸೆ ಶ್ರೀ ನೇಮೀಶ್ವರ । ಮುಕ್ತಿ ಗಯೇ ವಂದೋ ರುಚಿ ಸೇ ।

---

೧. ಜಿನಸ್ತವಮಾಲಾ, ಭಕ್ತಿಸುಮನಾವಲೀ.

ಈಗಲೂ ಸೋಲಾಪುರದ ಆಶ್ರಮದಲ್ಲಿ ಇದೇ ವಂದನೆಯನ್ನು ಬೆಳಿಗ್ಗೆ ಹೇಳುತ್ತಾರೆ. 1972 ರಲ್ಲಿ ದೆಹಲಿಯಲ್ಲಿ ಬ್ರ. ಮೋತಿಚಂದರು ಇದನ್ನು ರೆಕಾರ್ಡ್ ಮಾಡಿಸಿದ್ದಾರೆ. ಇದು ಮನೆ - ಮನೆಯಲ್ಲಿ ಮೊಳಗುತ್ತಿದೆ. ಆಗಾಗ್ಗೆ ನನಗೆ ಈ ಮಧುರ ಧ್ವನಿ ಕೇಳುತ್ತಿರುತ್ತದೆ ದೆಹಲಿಯ ಒಬ್ಬ ಮಹಾನುಭಾವ ಹೇಳುತ್ತಿರುತ್ತಾರೆ. ಮಾತಾಜೀ ನಮ್ಮ ಮನೆಯಲ್ಲಿ ಉಷಾವಂದನೆ ದಿನಾ ಕೇಳುತ್ತೇವೆ. ಇದು ನನಗೆ ಬಹಳ ಪ್ರಿಯವಾಗಿದೆ. ಸೋಲಾಪುರದಲ್ಲಿದ್ದಾಗ "ಚಂದ್ರಪ್ರಭರ' ಸಂಸ್ಕೃತ ಸ್ತುತಿಯನ್ನು ರಚಿಸಿದ್ದೆ. ಸುಮತೀಬಾಯಿಯು ಮಾತಾಜೀ ಸಮಂತ ಭದ್ರ ಸ್ವಾಮಿಯವರ ನ್ಯಾಯದ ಮೇಲೆ ಸ್ತುತಿಯನ್ನು ರಚಿಸಿ ನಿಮಗೆ ನ್ಯಾಯ ವಿಶೇಷದ ಮೇಲೆ ವಿಶೇಷ ಜ್ಞಾನವಿದೆಯಲ್ಲ ಎಂದು ಹೇಳುತ್ತಿದ್ದರು.

ಸಾಕು ನನಗಿನ್ನೇನು ಚಂದ್ರಪ್ರಭ ಸ್ತುತಿಯಲ್ಲಿ ಸೃಷ್ಟಿ ಕರ್ತೃತ್ವ ಖಂಡನೆ, ಸಾಂಖ್ಯಮತ ಖಂಡನೆ ಮುಂತಾದ ವಿಷಯಗಳನ್ನು ತೆಗೆದುಕೊಂಡೆ.

ಶಿಖರಿಣೀ ಛಂದಸ್ಸು

ಶರೀರೀ ಪ್ರತ್ಯೇಕಂ ಭವತಿ ಭುವಿ ವೇಧಾ ಸ್ವಕೃತಿತಃ ।
ವಿಧತ್ತೇ ನಾನಾ ಭೂಪ ವನಜಲ ವಹ್ನಿ ದ್ರುಮತನುಂ ॥
ತ್ರಸೋ ಭೂತ್ವಾ -ಭೂತ್ವಾ ಕಥಮಪಿ ವಿಧಾಯಾತ್ರು ಕುಶಲಂ ।
ಸ್ವಯಂ ಸ್ವಸ್ಮಿನ್ನಾಸ್ತೇ ಭವತಿ ಕೃತಕೃತ್ಯಃ ಶಿವಮಯಃ ॥ ೧೮ ॥

ಪಥ್ಯಾ ಛಂದಸ್ಸು

ವಿಚಿತ್ರ ಭುವನತ್ರಯಂ ಯದಿ ಕದಾಚಿದೀಶಃ ಸೃಜೇತ್ ।
ಜಗದಿ ಸಕಲಂ ಶುಭಂ ನಿಖಿಲದೋಷ ಶ್ಯೂನಂ ನ ಕಿಂ ॥
ನಿಗೋದ ನರಕಾದಿದುರ್ಗತಿ ಕೃತಿಶ್ಚ ದುಷ್ಪ್ರಾಯ ಚೇತ್ ।
ಕಥಂ ಪುನರಧರ್ಮಿಣಾಂ ವಿಹಿತ ಸೃಷ್ಟಿರ ನ್ಯಾಯಿನೀ ॥ ೧೯ ॥[1]

ಈ ಸ್ತುತಿ ರಚಿಸುವ ಸಮಯದಲ್ಲಿ ನನ್ನ ಮನದಲ್ಲೆಲ್ಲಾ ಇದೇ ವಿಷಯ ತುಂಬಿತ್ತು ನಾನು ಏನು ಮಾಡುತ್ತಿದ್ದೇನೆ ಎನ್ನುವ ಪರಿವೆಯೇ ಇಲ್ಲದಂತಾಗಿತ್ತು. ಒಮ್ಮೆ ಕೆಳಗೆ ಇಳಿದೆ ಕೆಳಗೆ ದೀರ್ಘ ಶಂಕೆಗೋಸ್ಕರ ಹೋಗಬೇಕಾಗಿತ್ತು ಹಾಗೆಯೇ ಆಶ್ರಮದ ಹೊರಗೆ ಹೊರಟು ಹೋಗಿದ್ದೇನೆ. ಎದುರಿನ ಧರ್ಮಶಾಲೆಯ ಹತ್ತಿರ ಹೋಗುತ್ತಿದ್ದನ್ನು ನೋಡಿದ ಹುಡುಗ ಬಂದು ಕೇಳಿದ ಮಾತಾಜೀ ತಾವು ಎಲ್ಲಿಗೆ ಹೋಗುತ್ತೀದ್ದೀರಾ ನಾನು ಕಮಂಡಲ ಕೂಡ ಕೈಯಲ್ಲೇ ಹಿಡಿದುಕೊಂಡು ಹಿಂದೆ ಬಂದೆ. ಹೀಗೆ ಒಮ್ಮೆ ಆಹಾರ ಮುಗಿಸಿ ನಗರದಿಂದ ಆಶ್ರಮದ ಕಡೆ ಬರುತ್ತಿದ್ದವಳು ಆಶ್ರಮದ ಗೇಟನ್ನು ಬಿಟ್ಟು ಮುಂದೆ ಹೋಗುತ್ತಾ ಇದ್ದೇನೆ ಜೊತೆಯಲ್ಲಿ ಕಮಂಡಲು ಹಿಡಿದು ಬರುತ್ತಿದ್ದ ಶ್ರಾವಕ ಸ್ವಲ್ಪ ಮುಂದೆ ಹೋದ ಮೇಲೆ ಕೇಳಿದ ಮಾತಾಜೀ ತಾವು ಎಲ್ಲಿಗೆ ಹೋಗಬೇಕು ಪುನಃ ಬೆಪ್ಪಾಗಿ ವಾಪಾಸು ತಿರುಗಿ ಆಶ್ರಮಕ್ಕೆ ಬಂದೆ. ಇಂತಹ ನನ್ನ ನಡವಳಿಕೆ ಗಮನಿಸಿದ ವಿದ್ಯುಲ್ಲತೆ ನನ್ನನ್ನು ಭಕ್ತಿಯಿಂದಲೇ ಹಾಸ್ಯ ಮಾಡತೊಡಗಿದಳು. ಹೀಗೆ ಏನಾದರೂ ಸ್ತುತಿ ರಚನೆ ಮಾಡುವಾಗ 24 ಗಂಟೆಯೂ ಮನದಲ್ಲಿ ಅದೇ ವಿಷಯ ಸುತ್ತುತ್ತಾ ಇರುತ್ತದೆ. ಕನಸಿನಲ್ಲೂ ಅದೇ ವಿಷಯ ಬರುತ್ತಿರುತ್ತದೆ. ಹೀಗೆ 1987 ರಲ್ಲಿ ಸರ್ವೋತೋ ಭದ್ರ ವಿಧಾನದ ರಚನೆ ಮಾಡುವಾಗಲೂ ಕನಸಿನಲ್ಲೇ ಶ್ಲೋಕಗಳ ರಚನೆಯಾಗಿ

ಬಿಡುತ್ತಿತ್ತು. ಹೀಗೆ ವಚನ ಮತ್ತು ಕ್ರಿಯೆ ಎರಡರಲ್ಲೂ ಜನರು ಆತ್ಮದ ಕಡೆಯೇ ಇದ್ದರೆ ಮೋಕ್ಷ ಪ್ರಾಪ್ತಿ ದೂರವೇನಿಲ್ಲ.

ಭಕ್ತಿ ಸುಮನಾವಲೀ ಪ್ರಕಾಶನ

ಕಟಕ್‌ನಿಂದ ಫತೇಚಂದ ಮತ್ತು ಅವರ ಪತ್ನಿ ಇಬ್ಬರು ಆಹಾರ ದಾನ ಮಾಡುವ ಉದ್ದೇಶದಿಂದ ಬಂದವರು ಸುಮಾರು ಒಂದು ತಿಂಗಳು ಇದ್ದರು. ಒಂದು ದಿನ ಅವರು ನನ್ನನ್ನು ಮಾತಾಜೀ ನನಗೆ ಏನಾದರೂ ಖರ್ಚು ಮಾಡಬೇಕೆಂದು ಮನಸ್ಸಾಗಿದೆ ಏನಾದರೂ ಕೆಲಸ ಹೇಳಿ ಎಂದರು ಅದಕ್ಕೆ ನಾನು ಇವನ್ನೆಲ್ಲಾ ಅಚ್ಚು ಹಾಕಿಸಿ ಎಂದೆ. ಅಷ್ಟರಲ್ಲಿ ಸುಮತೀಬಾಯಿ ಆ ಸ್ತುತಿಗಳನ್ನೆಲ್ಲಾ ಅದಕ್ಕೆ 'ಭಕ್ತಿ ಸುಮನಾವಲೀ' ಎಂದು ಹೆಸರಿಟ್ಟಿದ್ದರು. ಬ್ರ. ಫೂಲ್‌ಚಂದ ಶಹಾ ರವರು ತಮ್ಮ ಪ್ರೆಸ್‌ನಲ್ಲೇ ಮುದ್ರಿಸಿದರು ಇದರ ಖರ್ಚನ್ನೆಲ್ಲಾ ಫತೇಹ ಚಂದರೇ ನೋಡಿಕೊಂಡರು.

ಶ್ರವಣಬೆಳಗೊಳದಲ್ಲಿ ಭಗವಾನ್ ಬಾಹುಬಲಿಯ ಹಿಂದಿಯ ಚರಿತ್ರೆಯನ್ನು ಪಂಡಿತ ವರ್ಧಮಾನ ಶಾಸ್ತ್ರಿಗಳು ಮೂರುಸಾವಿರ ಪ್ರತಿಗಳನ್ನು ಮುದ್ರಿಸಿದ್ದರು. ಇಬ್ಬರು ಮೂವರು ಮಹಿಳೆಯರು ಅದನ್ನು ಪ್ರಕಾಶಿಸಿದ್ದರು. ಪಂಡಿತ ವರ್ಧಮಾನಜೀಯವರು ನಾನು ರಚಿಸಿದ್ದ 'ಬಾಹುಬಲಿಯ ಸ್ತೋತ್ರ' ಗಳನ್ನು ಕನ್ನಡಕ್ಕೆ ಅನುವಾದ ಮಾಡಿ ಅಚ್ಚು ಹಾಕಿಸಿದ್ದರು. ಇದರ ಕನ್ನಡ ಅನುವಾದ ಸಹಿತ ಬಾಹುಬಲಿ ಸ್ತೋತ್ರವನ್ನು ಶ್ರವಣಬೆಳಗೊಳದಲ್ಲಿರುವಾಗಲೇ ಬೆಳ್ಳೂರಿನ ಗಂಗರಾಜಯ್ಯನವರು ಅಚ್ಚು ಹಾಕಿಸಿದ್ದರು.

ಆಹಾರ ದಾನ ಮತ್ತು ಭಕ್ತಿ

ಹೀಗೆ ಚಾಂದಮಲ್ಲರು ಸಪತ್ನೀಕರಾಗಿ ಬಂದು ಆಹಾರ ದಾನದ ಪುಣ್ಯ ಪಡೆಯುತ್ತಿದ್ದರು ಕ್ಷುಲ್ಲಿಕೆ ಅಭಯಮತಿಯವರು ಒಮ್ಮೆ ಅಶಾಂತಳಾಗಿ ಆಚಾರ್ಯ ವಿಮಲಸಾಗರರ ಸಂಘಕ್ಕೆ ಹೋಗಲು ಬಯಸಿದಳು. ಇದನ್ನು ಕಂಡ ಅವರು ಸಮಾಧಾನ ಪಡಿಸುತ್ತಾ ನೋಡಿ 'ನೀರಿನಲ್ಲಿ ಮೀನಿಗೆ ಬಾಯಾರಿಕೆಯೇ ' ಜ್ಞಾನಮತಿಯಂತಹ ಮಾತಾಜೀಯು ಹತ್ತಿರದಲ್ಲಿರುವ ನಿಮಗೆ ತೃಪ್ತಿಯಾಗಿಲ್ಲವೇ ನೀವು ಆ ಕಡೆ ಈ ಕಡೆ ಹೋಗಲು ಬಯಸುತ್ತಿರುವುದು ನೋಡಿದರೆ ಮೀನಿಗೆ ನೀರಿನಲ್ಲಿದ್ದರೂ ಬಾಯಾರಿಕೆಯಿರುವಂತೆ ನಿಮ್ಮ ಸ್ಥಿತಿ ಕಾಣಿಸುತ್ತಿದೆ. ಮಾತಾಜೀಯಿಂದ ನಿಮಗೆ ಆಗಿರುವ ಕೊರತೆಯಾದರೂ ಏನು ಹೇಳಿ ಎಂದರು.

ಆಚಾರ್ಯ ವಿಮಲಸಾಗರರ ವಾತ್ಸಲ್ಯ

ಕ್ಷುಲ್ಲಿಕೆ ಅಭಯಮತಿ ಗ್ಯಾಸಿನ ತೊಂದರೆ ಜಾಸ್ತಿಯಾದ್ದರಿಂದ ಒಮ್ಮೊಮ್ಮೆ ಜ್ಞಾನ ತಪ್ಪುತ್ತಿದ್ದಳು. ಒಮ್ಮೆ ಆಚಾರ್ಯ ವಿಮಲಸಾಗರರು ಹೇಳಿದರು ಮಾತಾಜೀ ಅವರನ್ನು ನನ್ನ ಹತ್ತಿರ ಕಳುಹಿಸಿರಿ ನಾನು ಅವರನ್ನು ಸರಿಮಾಡಿಸುತ್ತೇನೆ ಎಂದರು. ಹೀಗಾಗಿ ಅವರ ಆಶ್ರಮಕ್ಕೆ ಕಳುಹಿಸಿದೆ. ಆಚಾರ್ಯರು ಔಷಧಿಯನ್ನು ಕುಡಿಸಿ ಅವರಿಂದ ಜಪವನ್ನು ಮಾಡಿಸಿ ಅನುಶಾಸನದಲ್ಲಿ ಇಟ್ಟು ಒಂದು ತಿಂಗಳು ತಮ್ಮಲ್ಲೇ ಇಟ್ಟುಕೊಂಡು ಆರೋಗ್ಯ ಸುಧಾರಿಸಿದ ಮೇಲೆ ಕಳುಹಿಸಿಕೊಟ್ಟರು. ಇವರಂತಹ ಧರ್ಮವಾತ್ಸಲ್ಯ ಇರುವ ಮುನಿಗಳು ಇನ್ನೆಲ್ಲೂ ದೊರೆಯಲಾರರು. 1987 ರ ಮಾರ್ಚ್ ಎಂಟನೆಯ ತಾರೀಖು ಜಂಬೂದ್ವೀಪ ಹಸ್ತಿನಾಪುರಕ್ಕೆ ಬಂದು ಪಂಚಕಲ್ಯಾಣ ಪ್ರತಿಷ್ಠೆಯನ್ನು ಮಾಡಿಸಿದರು. ಹಾಗೇ ಮೋತಿಚಂದರಿಗೆ ಕ್ಷುಲ್ಲಕ ದೀಕ್ಷೆಯನ್ನು ಕೊಟ್ಟು

ಮೋತಿಸಾಗರನನ್ನಾಗಿ ಮಾಡಿ ನನಗೆ ಬಹಳ ಉಪಕಾರವನ್ನು ಮಾಡಿದ್ದರಲ್ಲದೇ ನನ್ನ ಬಗ್ಗೆ ತೋರಿದ ವಾತ್ಸಲ್ಯವನ್ನು ನಾನು ಮಾತುಗಳಿಂದ ವರ್ಣಿಸಲಾರೆ.

ಕುಂಭೋಜದ ಶ್ರೀ ಸಮಂತ ಭದ್ರರ ವಾತ್ಸಲ್ಯ

ಕಂಭೋಜದಲ್ಲಿ ಮುನಿಶ್ರೀ ಸಮಂತಭದ್ರರು ವಿರಾಜಮಾನರಾಗಿದ್ದರು. ಒಮ್ಮೆ ಅಲ್ಲಿಂದ ಬಂದ ಮಹಾನುಭಾವರು ಹೇಳಿದರು. ಮಾತಾಜೀ ಶ್ರೀ ಸಮಂತಭದ್ರರು ನಿಮ್ಮನ್ನು ಯಾವಾಗಲೂ ಪ್ರಶಂಸಿಸುತ್ತಿರುತ್ತಾರೆ. ಅವರಿಗೂ ನೀವು ಒಮ್ಮೆ ಕುಂಭೋಜಕ್ಕೆ ಬರಲಿ ಎಂದು ಆಶಿಸುತ್ತಿದ್ದಾರೆ. ಆದ್ದರಿಂದ ತಾವು ದಯಮಾಡಿ ಕುಂಭೋಜಕ್ಕೆ ಬನ್ನಿರಿ ಎಂದು ವಿನಂತಿಸಿದರು. ಮಹಾನ್ ಮುನಿಶ್ರೀ ಸಮಂತಭದ್ರರು ಧರ್ಮವಾತ್ಸಲ್ಯರು ಮಹಾನ್ ಗುಣಗ್ರಾಹಿಗಳು ಆಗಿದ್ದರು. ಜಂಬೂದ್ವೀಪ ಜ್ಞಾನಜ್ಯೋತಿಯು ಅಲ್ಲಿಗೆ ತಲುಪಿದಾಗ ನನ್ನ ಬಗ್ಗೆ ಬಹಳ ಒಳ್ಳೆಯ ಮಾತುಗಳನ್ನು ಹೇಳಿದ್ದರು. ಒಬ್ಬ ಮಹಿಳೆಯಾಗಿ ಜ್ಞಾನಮತಿಯವರು ಇಷ್ಟೊಂದು ಮಹಾನ್‌ಕಾರ್ಯ ಮಾಡಿದ್ದಾರೆ ಒಂದು ವೇಳೆ ಇವರು ಪುರುಷಾರಾಗಿದ್ದಿದ್ದರೆ ಇನ್ನೆಷ್ಟು ಮಹಾನ್ ಕಾರ್ಯಗಳನ್ನು ಮಾಡಿಬಿಡುತ್ತಿದ್ದರೋ ಎಂದು.

ಸೋಲಾಪುರಕ್ಕೆ ಗಜಾಬೆನ್ ಬಂದು ಸುಮಾರು ಒಂದು ತಿಂಗಳು ಇದ್ದು ಆಹಾರ ಕೊಟ್ಟರು. ಪ್ರವಚನ ಕೇಳಿ ಚರ್ಚೆಯಲ್ಲಿ ಭಾಗವಹಿಸಿ ಬಹಳ ಭಕ್ತಿಯನ್ನು ತೋರಿಸಿದ್ದರು. ಅವರು ಕುಂಭೋಜಕ್ಕೆ ಹೊರಡಲು ಬಹಳ ಆಗ್ರಹ ಮಾಡಿದರು. ಆದರೆ ಆದಿಮತಿ ಮತ್ತು ಅಭಯಮತಿಯರ ಆರೋಗ್ಯ ಬಹಳ ಸೂಕ್ಷ್ಮವಾಗಿದ್ದರಿಂದ ವಿಹಾರ ಹೊರಡುವ ವಿಚಾರ ಬಿಡಬೇಕಾಯಿತು. ಆದರೂ ಮನದಲ್ಲಿ ಆಚಾರ್ಯರಲ್ಲಿಗೆ ಹೋಗುವ ಮಾರ್ಗ ಸುಗಮವಾಗಲಿ ಎಂದುಕೊಂಡೆ. ಹಾಗಾಗಿ ಅವರ ಕೋರಿಕೆಯನ್ನು ಕೇಳಿದರೂ ಕೇಳದಂತೆ ಸುಮ್ಮನಾದೆ. ಇದರ ಮಧ್ಯೆ ಅಕಲೂಜದಿಂದ ಕೆಲವು ಮಹನೀಯರು ಚಂಪಾಬಾಯಿ ಕೆಲವು ಹೆಂಗಸರೊಡನೆ ಬಂದು ಅಲ್ಲಿ ಪಂಚಕಲ್ಯಾಣ ಪ್ರತಿಷ್ಠೆ ನಡೆಯ ಬೇಕಾಗಿದ್ದರಿಂದ ನನ್ನನ್ನು ಆಹ್ವಾನಿಸಲು ಪ್ರಾರ್ಥಿಸಿದರು. ಮಾತಾಜೀ ಅಕಲೂಜಿಗೆ ಬಂದು ಪಂಚಕಲ್ಯಾಣ ಪ್ರತಿಷ್ಠೆ ನಡೆಸಲು ನಮ್ಮನ್ನು ಆಶೀರ್ವದಿಸಬೇಕು. ಇದರ ನಂತರ ತಾವು ಎಲ್ಲಿಗೆ ಪ್ರಯಾಣ ಬೆಳಸಬೇಕು ಅಲ್ಲಿಗೆ ತಲುಪಿಸುವ ಜವಾಬ್ದಾರಿ ನಮ್ಮದು. ಎಂದರು. ಚಂಪಾಬಾಯಿ ಬಹಳ ಸಲ ಕೇಳಿಕೊಂಡರು. ಇವರ ಕೋರಿಕೆಗೆ ಮನ್ನಣೆ ಇತ್ತು ಉಳಿದ ಆರ್ಯಿಕೆಯರಲ್ಲಿ ಚರ್ಚಿಸಲಾಗಿ ಜಿನಮತಿಯು ಹೊರಡಲು ಒಪ್ಪಲೇ ಇಲ್ಲ. ಹೀಗಾಗಿ ನಮ್ಮ ಸಂಘ ಅಲ್ಲಿಗೆ ಹೋಗಲು ಅನುಮತಿ ನೀಡಲಾಗಲಿಲ್ಲ. ಚಂಪಾಬಾಯಿ "ವ್ರತ ವಿಧಿ-ಸುಮನಾವಲಿ" ಎಂಬ ಪುಸ್ತಕವನ್ನು ಅಚ್ಚು ಹಾಕಿಸಿದ್ದರು.

ಬಾಸಂತೀಬಾಯಿ

ಪುಣೆಯಿಂದ ಬಾಸಂತಿಬಾಯಿ ಎಂಬ ಒಬ್ಬ ಪ್ರಬುದ್ಧ ಮಹಿಳೆ ಬಂದು ಇಲ್ಲಿ ಒಂದೆರಡು ದಿನಗಳು ಇದ್ದರು. ಬಿಸಲಿನ ಕಾಲ ಮಧ್ಯಾಹ್ನ ಶಿಷ್ಯರಿಗೆ ತ್ರಿಲೋಕಸಾರ ಮೊದಲಾದವನ್ನು ಅಧ್ಯಯನ ಮಾಡಿಸುತ್ತಿದ್ದೆ. ನಂತರ ಉಪದೇಶ, ಇದರ ಮಧ್ಯೆ ಆಹಾರದಲ್ಲಿ ಅಂತರಾಯ ಹೀಗಾಗಿ, ಮಧ್ಯಾಹ್ನದ ವೇಳೆಗೆ ಮುಖ ಬಾಡುತ್ತಿತ್ತು. ತುಟಿಗಳು ಒಣಗುವುದನ್ನು ಗಮನಿಸಿದ ಆಕೆ ಮಾತಾಜೀ ಸಾಯಂಕಾಲದ ವೇಳೆ ಒಂದು ಗ್ಲಾಸ್ ಮೂಸಂಬಿ ರಸ ತೆಗೆದುಕೊಳ್ಳಿ ನಿಮ್ಮ ಶರೀರಕ್ಕೆ ಎಷ್ಟು ಕಷ್ಟ ಕೊಡುತ್ತಿದ್ದೀರ ಎಂದರು. ನಾನು ನಕ್ಕು ಹೇಳಿದೆ ಒಂದು ವೇಳೆ ನಾವು ಶರೀರವನ್ನು ಪೋಷಿಸತೊಡಗಿದರೆ ದೀಕ್ಷೆಯನ್ನು ತೆಗೆದುಕೊಳ್ಳಲೇಬಾರದಾಗಿತ್ತು.

ವಿಚಿತ್ರಾ ಜೈನೀ ದೀಕ್ಷಾ ಹೀ ಸ್ವೈರಾಚಾರ ವಿರೋಧಿನೀ. ಎಷ್ಟೊಂದು ಸಲ ಹೇಳಿದರು. ಮಾತಾಜೀ ಜೈನ ಧರ್ಮದಲ್ಲಿ ಈ ಕಾಯಕ್ಲೇಶ ತಪ ಇದೆ. ಅಲ್ಲಿ ಅದು ಸರಿಯಲ್ಲ ಎಂದರು . ಇನ್ನೂ ಬಾಕಿಯದೆಲ್ಲ ಚೆನ್ನಾಗಿದೆ. ಆಧ್ಯಾತ್ಮ ಭಾವನೆ ಇವೆಲ್ಲ ಚೆನ್ನಾಗಿದೆ. ಆಗ ನಾನು ತಿಳುವಳಿಕೆ ಹೇಳಿದೆ ನೋಡು ಸುಖ ಜೀವನದಲ್ಲಿ ಮಾಡಿದ ತತ್ವದ ಅಭ್ಯಾಸ - ದುಃಖ ಬಂದಾಗ ಪಲಾಯನಗೈಯುತ್ತದೆ. ದುಃಖವನ್ನು ಕರೆದು ಕರೆದು ಆತ್ಮ ತತ್ವದ ಭಾವನೆ ಮಾಡಬೇಕು. ಶ್ರೀ ಪೂಜ್ಯ ಪಾದಸ್ವಾಮಿಗಳು ಹೇಳಿದ್ದಾರೆ.

ಅದುಃಖ ಭಾವಿತಂ ಜ್ಞಾನಂ ಕ್ಷೀಯತೆ ದುಃಖ ಸನ್ನಿದೌ ।
ತಸ್ಮಾದ್ ಯಥಾಬಲಂ ದುಃಖೈರಾತ್ಮಾನಂ ಭಾವಯೇನ್ಮುನಿ॥

ಸುಖಜೀವನದಲ್ಲಿ ತತ್ವಜ್ಞಾನ ಮರೆಯಾಗುತ್ತದೆ. ದುಃಖ ಬಂದಾಗಲೂ ತತ್ವಜ್ಞಾನವಿಲ್ಲ. ಆದ್ದರಿಂದ ತನ್ನ ಶಕ್ತಿಗೆ ಅನುಸಾರ ದುಃಖದಿಂದ ಕಾಯಕ್ಲೇಶ, ಉಪವಾಸ ಮೊದಲಾದ ತಪಶ್ಚರಣವನ್ನು ಮಾಡುತ್ತಾ ಮುನಿ ಮಹಾರಾಜರು ತಮ್ಮ ಭಾವನೆಗಳನ್ನು ಇಂತಹ ಸುಬೋಧನೆಗಳನ್ನು ಕೇಳಿದ ಬಾಸಂತೀ ಬಾಯಿಯವರು ಹೇಳಿದರು. ನಿಮ್ಮ ಹೇಳಿಕೆ ಸತ್ಯ ನನಗೂ ಒಮ್ಮೆ ಹೀಗೆ ಆಗಿತ್ತು. ನನಗೆ ಮೂಗಲ್ಲಿ ನೋವಿತ್ತು ಅದಕ್ಕೆ ಡಾಕ್ಟರ್ ಮೂಳೆ ದೊಡ್ಡದಾಗಿ ಬಿಟ್ಟಿದೆ. ಆಪರೇಷನ್ ಮಾಡಬೇಕೆಂದಾಗ ನಾನು ಅಳತೊಡಗಿದೆ. ಅದಕ್ಕೆ ತಂದೆಯವರು ಇದಕ್ಕೆ ಏಕೆ ಅಳಬೇಕು ಶರೀರ ಬೇರೆ ಆತ್ಮ ಬೇರೆ ಎಂದು ತಿಳಿ ಎಂದರು. ಅಪ್ಪ ತತ್ವ ಹೇಳುವುದಕ್ಕೆ ಸರಿ ಆದರೆ ಡಾಕ್ಟರ್ ಆಪರೇಷನ್ ಮಾಡಿದಾಗ ನಾನು ಹೇಗೆ ಉಸಿರಾಡಲಿ ಎಂದು ಯೋಚಿಸುತ್ತಿದ್ದೇನೆ ಹೀಗೆ ನಾನು ಬಹಳ ಗಾಬರಿಯಾಗಿದ್ದೆ. ಕೊನೆಗೆ ಆಪರೇಷನ್ ಆಯಿತು. ಎರಡು ಮೂರು ದಿನಗಳಲ್ಲಿ ಗಾಯವು ಒಣಗಿ ನಾನು ಸರಿಯಾದೆ. ಆದರೆ ಮೊದಲು ಹೆದರಿದ್ದೆ. ಹೀಗೆ ಅವರು ಯಾವಾಗಲು ಹೇಳುತ್ತಿದ್ದರು. ಮಾತಾಜೀ, ಜೈನ ಶಾಸ್ತ್ರಗಳ ಅನುಸಾರವಾಗಿಯೇ ಈಗಲೂ ತಾವು ತಪಶ್ಚರ್ಯ ಮಾಡುತ್ತೀದ್ದೀರಲ್ಲ ನಿಮ್ಮ ಆತ್ಮಸ್ಥೈರ್ಯ ಬಹಳ ದೊಡ್ಡದು. ಇದಲ್ಲದೆ ನನ್ನ ಬಗ್ಗೆ ಬರೆಯುವುದಕ್ಕಾಗಿ ಸಮಯ ಸಿಕ್ಕಾಗಲೆಲ್ಲಾ ನನ್ನ ಪರಿಚಯ ಕೇಳುತ್ತಲೇ ಇದ್ದರು. ಆದರೆ ನಾನೇ ಒಪ್ಪಿರಲಿಲ್ಲ. ನಾನು ನನ್ನ ಯಾವ ಪರಿಚಯವು ಹೇಳದೆ ಬರೇ ನನ್ನ ದೀಕ್ಷಾ ಗುರು ಆಚಾರ್ಯ ವೀರಸಾಗರರ ಬಗ್ಗೆ ಮಾತ್ರ ಹೇಳಿದ್ದೆ.

ಬ್ರ. ರಾಜುಬಾಯಿ

ರಾಜುಬಾಯಿ ರಾಜವೀ ಸುಖರಾಮ್ ದೋಷಿಯವರ ಧರ್ಮಪತ್ನಿ. ಇವರ ಗಂಡ ಶಾಂತಿಸಾಗರರ ಪರಮಭಕ್ತ. ಇವರು ಶಾಂತಿ ಸಾಗರರಿಗೆ ಚಿನ್ನದ ಪಾತ್ರೆಯಲ್ಲಿ ಆಹಾರ ಇಟ್ಟುಕೊಂಡು ಕೊಡುತ್ತಿದ್ದರು. ಈಗ ಅವರ ಗಂಡ ಸ್ವರ್ಗಸ್ಥರಾಗಿದ್ದಾರೆ. ಇವರು 7ನೇ ಪ್ರತಿಮಾಧಾರಿ ಆಗಿದ್ದರು. ಸಾಧುಗಳಿಗೆ ಆಹಾರ ಕೊಡುವುದರಲ್ಲಿ ಯಾವಾಗಲೂ ಮುಂದು. ಪ್ರವಚನ ಕೇಳುವುದರಲ್ಲಿ ತುಂಬ ಆಸಕ್ತಿ. ಒಂದು ದಿನ ಹೀಗೆ ಏನೋ ಚರ್ಚೆ ಮಾಡುತ್ತಾ ಇವರು ನನ್ನನ್ನು ಕೇಳಿದರು. ಮಾತಾಜೀ ಹೀಗೆ ಸುಮಾರು ಒಂದು ವರ್ಷದ ಹಿಂದೆ ಬ್ರ. ಗುಲಾಬಚಂದ ಚಂಡಿಕರ ಜೊತೆ ಏನೋ ಮಾತಿಗೆ ಮಾತು ಬಿಟ್ಟವಳು ಇಂದಿಗೂ ಮಾತು ಆಡಿಲ್ಲ ಎಂದರು. ಇವರು ಈ ಮಾತನ್ನು ತಮ್ಮ ಸ್ವಾಭಿಮಾನವನ್ನು ತೋರಿಸುವುದಕ್ಕಾಗಿ ಹೇಳಿದ್ದರು. ಆದರೆ ನಾನು ಅವರೊಬ್ಬರನ್ನೆ ಕರೆದು ಕೆಲವು ನೀತಿಯ ಮಾತನ್ನು ಹೇಳಿದೆ. ರಾಜೂಬಾಯಿ ಸಮ್ಯಗ್ದೃಷ್ಟಿಯುಳ್ಳವರ ಸಿಟ್ಟು ಹೆಚ್ಚು ಅಂದರೆ ಆರು ತಿಂಗಳು ಮಾತ್ರ. ಇದಕ್ಕಿಂತಲೂ ಜಾಸ್ತಿ ಮುಂದುವರಿಸಿದರೆ ಅವರು ಮಿಥ್ಯಾದೃಷ್ಟಿಯಾಗುತ್ತಾರೆ ಇದನ್ನೇ ಅನಂತಾಂತಾನುಬಂಧಿ ಕಷಾಯವಾಗಿ ಬಿಡುತ್ತದೆ. ತಾವಂತೂ ವ್ರತಧಾರಕರು. ವ್ರತಿಗಳಿಗೆ ಕಷಾಯ ಜಾಸ್ತಿ ಎಂದರೆ

15 ದಿನಗಳವರೆಗೆ ಮಾತ್ರ ಇರಬೇಕು. ಆದ್ದರಿಂದ ತಾವು ಅವರ ಬಗ್ಗೆ ಕಷಾಯವನ್ನು ಬಿಟ್ಟು ಮಾತಾಡಿಸಬೇಕು. ಹೀಗೆ ನಾನು ಹೇಳುತ್ತಲೇ ಇದ್ದುದ್ದರಿಂದ ಕೊನೆಗೆ ನನ್ನ ಜನ್ಮದಿನದ ದಿನ ಅವರನ್ನು ಮಾತನಾಡಿಸುತ್ತೇನೆ ಎಂದರು. ಅವರ ಜನ್ಮದಿವಸದ ದಿನ ಅವರ ಮಗ ಗೋವಿಂದರಾವ್ ಮತ್ತು ಸೊಸೆ ಕುಮುದಿನಿಯು ಬಂಧು ವರ್ಗದವರಿಗೆಲ್ಲ ಊಟವನ್ನು ಏರ್ಪಡಿಸಿದ್ದರು. ಮತ್ತು ಮನೆಯ ಗೃಹ ಚೈತ್ಯಾಲಯದಲ್ಲಿ ದೊಡ್ಡದಾಗಿ ಅಭಿಷೇಕವನ್ನು ಮಾಡಿಸುತ್ತಿದ್ದರು. ಆ ದಿನ ಬ್ರ. ರಾಜುಬಾಯಿಜೀಯವರೇ ಗುಲಾಬಚಂದ ಚಂಡಕರ ಮನೆಗೆ ಹೋಗಿ ಕೈಗಳನ್ನು ಮುಗಿದು ನಮಸ್ಕರಿಸಿ ಕೇಳಿಕೊಂಡರು. ಈ ದಿನ ನಮ್ಮ ಮನೆಗೆ ನೀವು ಬನ್ನಿರೆಂದು ಕೇಳಿಕೊಂಡರು.

ಆ ಬ್ರಹ್ಮಚಾರಿಗಳು ನನ್ನಲ್ಲಿ ಬರುತ್ತಿದ್ದರು ನನ್ನ ಉಪದೇಶಗಳನ್ನು ಕೇಳುತ್ತಿದ್ದರು. ಅವರ ಕಷಾಯಗಳಲ್ಲಿ ಉಪಶಮ ಭಾವವಿದ್ದುದ್ದರಿಂದ ತಕ್ಷಣವೇ ಅವರು ನಾನು ಬರುತ್ತೇನೆ ಅಂದರು. ಮನೆಗೆ ಬಂದು ಊಟ ಮಾಡಿ ಮಾತಾಡಿಕೊಂಡು ಹೋದರೆಂಬ ವಿಷಯವನ್ನು ರಾಜೂಬಾಯಿ ಹೇಳಿದರು. ಹೀಗೆ ಸಮ್ಯಗ್ದೃಷ್ಟಿ ಜೀವಿಗಳು ಗುರೂಪದೇಶದಿಂದಲೇ ಎಂತಹ ಕಷಾಯವನ್ನಾಗಲಿ ಮನಸ್ಸಿನ ಬೇಸರವನ್ನಾಗಲಿ ಬಿಟ್ಟು ಪ್ರೇಮಭಾವದಿಂದ ಮೊದಲಿನಂತೆಯೇ ವ್ಯವಹಾರ ಮಾಡಲು ಸಾಧ್ಯವಾಗುತ್ತದೆ. ಇಂತಹವರೇ ನಿಜವಾದ ಶಿಷ್ಯರು ಇಂತಹವರನ್ನು ಕಂಡರೆ ಗುರುಗಳಿಗೂ ಶಿಷ್ಯರ ಬಗ್ಗೆ ಪ್ರೀತಿ ಹೆಚ್ಚಾಗುತ್ತದೆ. ಕ್ಷಮಾವಳಿಯ ದಿನ ಇಬ್ಬರು ತಮ್ಮ ತಮ್ಮಲ್ಲಿಯೇ ಕ್ಷಮಾಯಾಚನೆ ಮಾಡಿಕೊಂಡರು.

ಜೈನ ಕಾಲೇಜು

ಕಪ್ಪೆಗಳನ್ನು ಬಾಕ್ಸ್‌ನಲ್ಲಿ ಹಾಕಿ ಜೈನ ಕಾಲೇಜಿಗೆ ಕಳುಹಿಸುವ ವಿಷಯ ತಿಳಿಯಿತು. ಬಯಾಲಜಿ ಓದುವ ಮಕ್ಕಳು ಅವುಗಳನ್ನು ಕತ್ತರಿಸಿ ಅದರಿಂದ ಕಲಿಯುತ್ತಿದ್ದರು. ಇದನ್ನು ಕೇಳಿದ ನನಗೆ ರೋಮ ರೋಮವು ನಿಮಿರಿತು. ನಾನು ಸುಮತಿಬಾಯಿಯನ್ನು ಕರೆದು ಈ ಜೀವ ಹಿಂಸೆ ನಿಲ್ಲುವವರೆಗೆ ನಾನು ಆಹಾರ ತೆಗೆದು ಕೊಳ್ಳುವುದಿಲ್ಲವೆಂದು ಉಪವಾಸ ಕೈಕೊಂಡೆ.

ಸುಮತೀಬಾಯಿ ಆ ವಿಷಯಕ್ಕೆ ಸಂಬಂಧಿಸಿದ ಎಲ್ಲ ಅಧಿಕಾರಿಗಳನ್ನು ಕರೆಸಿದರು. ನಾನು ಅವರ ಜೊತೆಯಲ್ಲಿ ಬಹಳ ಚರ್ಚೆ ಮಾಡಿದೆ ಕುಂಭೋಜದಲ್ಲಿ ಮುನಿಶ್ರೀ ಸುಮಂತಭದ್ರ ಮಹಾರಾಜರ ಪ್ರೇರಣೆಯಿಂದ ನಡೆಯುತ್ತಿರುವ ಅನೇಕ ಕಾಲೇಜಿನಲ್ಲಿ ಈ ಹಿಂಸೆ ನಡೆಯುತ್ತಿಲ್ಲ. ಏಕೆಂದರೆ ಇದು ಸಂಕಲ್ಪ ಹಿಂಸೆ ಆಗಿದೆ ಇದನ್ನು ತಾವು ಆರಂಭೀ ಹಿಂಸೆಯಲ್ಲಿ ತೆಗೆದುಕೊಂಡು ಹೋಗಬೇಡಿ. ಇದು ಉದ್ಯೋಗ ಹಿಂಸೆಯು ಆಗಬಾರದು ವಿರೋಧಿ ಹಿಂಸೆಯು ಆಗಬಾರದು. ಸತ್ತ ಕಪ್ಪೆಗಳನ್ನು ತೆಗೆದುಕೊಂಡು ಏಕೆ ಕಲಿಸಬಾರದು ಜೈನ ಹೆಸರಿನ ಸಂಸ್ಥೆಯಲ್ಲಿ ನಿರ್ದಯಿ ಕೆಲಸ ಮಾಡಬೇಡಿರೆಂದೆ. ಅವರು ನಮಗೆ ವಿವರಗಳನ್ನು ಹೇಳಿದರು. ಕಪ್ಪೆಗಳನ್ನು ಪೆಟ್ರೋಲಿನಲ್ಲಿ ನೆನೆಸಿ, ಕರುಣೆಯಿಲ್ಲದೆ ಅವುಗಳನ್ನು ಕತ್ತರಿಸಿ ಪಾಠ ಕಲಿಸಲಾಗುತ್ತದೆ ಎಂದು ಕೇಳಿ ನನ್ನ ಹೃದಯ ನಡುಗಿತು. ಆ ಮಹಾನುಭಾವರು ಎಷ್ಟೇ ಚರ್ಚೆ ಮಾಡಿದರೂ ಅದೇ ವಿಷಯ ಹೇಳುತ್ತಿದ್ದರು. ಕೊನೆಗೆ ಮಾತಾಜೀ ತಾವು ಉಪವಾಸ ಮಾಡುವ ಅವಶ್ಯಕತೆ ಇಲ್ಲ. ನಿಮ್ಮ ಆದೇಶದಿಂದ ನಾವು ಬಯಾಲಜಿ ಶಿಕ್ಷಣವನ್ನೇ ನಿಲ್ಲಿಸಿಬಿಡುತ್ತೇವೆ ಎಂದರು.

ಮಾತಾಜೀ ತಾವು ಆಹಾರ ಸ್ವೀಕರಿಸಬೇಕು ನಿಮ್ಮ ಆಜ್ಞೆಯನ್ನು ಪಾಲಿಸುತ್ತೇವೆ ಎಂದರು. ಹೀಗಾಗಿ ನಾನು ಮಾರನೇ ದಿನ ಆಹಾರವನ್ನು ತೆಗೆದುಕೊಂಡೆ. ಕೆಲವು ತಿಂಗಳ ನಂತರ ಗೊತ್ತಾಯಿತು ಕುಂಭೋಜದಲ್ಲಿ ಮುನಿಗಳ

ಪ್ರೇರಣೆಯಿಂದ ನಡೆಯುತ್ತಿರುವ ಎಲ್ಲಾ ಕಾಲೇಜುಗಳಲ್ಲಿಯೂ ಕೂಡ ಈ ಶಿಕ್ಷಣ ಯಥಾಸ್ಥಿತಿಯಲ್ಲಿಯೇ ನಡೆಯುತ್ತಿದೆ. ಆಗ ನನಗೆ ಬಹಳ ದುಃಖವಾಯಿತು.

ನಿಜವಾಗಿಯೂ ಜೈನರು ಎಂದು ಹೆಸರಿಟ್ಟುಕೊಂಡಿರುವ ಕಾಲೇಜಿನಲ್ಲಿ ಈ ಹಿಂಸೆಯಿಂದ ಆಗಿರುವ ಬಯಾಲಜಿ ಶಿಕ್ಷಣವೇ ನಡೆಯಬಾರದು ಹಿಟ್ಟಿನ ಕೋಳಿಯನ್ನು ಬಲಿಕೊಟ್ಟು ಯಶೋಧರ ಎಷ್ಟೆಲ್ಲಾ ದುಃಖವನ್ನು ಅನುಭವಿಸಿದ. ಈ ಕತೆಯನ್ನು ಓದಿಯಾದರೂ ತಿಳಿದು ಕೊಳ್ಳದಿದ್ದರೆ ಹೇಗೆ ಅವರು ಕಪ್ಪೆಗೆ ಕತ್ತರಿಸಿಯೇ ಡಾಕ್ಟರಿಯನ್ನು ಕಲಿಯಬೇಕು ಒಂದೆರಡು ಜೀವವನ್ನು ಕತ್ತರಿಸಿ ಮುಂದೆ ಸಾವಿರಾರು ಜನಗಳ ರೋಗ ಮೂಲವನ್ನು ಕಂಡು ಹಿಡಿದು ಗುಣ ಪಡಿಸಬಹುದಲ್ಲ ಎಂಬುದು ವಾದ. ಆದ್ದರಿಂದ ಒಂದೆರಡು ಜೀವಗಳ ಹರಣ ಅನಿವಾರ್ಯವೇ ಆಗಿದೆ.

ಆಚಾರ್ಯ ಸಂಘದ ವಿಹಾರ

ಸೋಲಾಪುರದಲ್ಲಿ ಚಾತುರ್ಮಾಸ ಮುಗಿಸಿದ ಆಚಾರ್ಯರು ಸಂಘ ಸಹಿತವಾಗಿ ಗಿರಿನಾರ ಕಡೆಗೆ ಯಾತ್ರೆ ಹೊರಟರು. ವಾತ್ಸಲ್ಯಮಯಿ ಆಚಾರ್ಯರನ್ನು ಸ್ವಲ್ಪ ದೂರದವರೆಗೂ ಕಳುಹಿಸಿ ಬಂದು ನಾವು ಕುಂಥಳಗಿರಿಯ ಕಡೆಗೆ ಹೊರಟೆವು. ಬ್ರ. ಗುಲಾಬಚಂದ ಚಂಡಕರು ನನ್ನ ವಿಹಾರದ ಎಲ್ಲ ವ್ಯವಸ್ಥೆ ಸರಿಯಾಗಿ ಮಾಡಿಸಿದ್ದರು.

ಸಂಘದ ವಿಹಾರ

ನಾವು ಅಲ್ಲಿಂದ ಹೊರಡುವ ಕಾರ್ಯಕ್ರಮ ಆಯೋಜನೆ ಸಿದ್ಧ ಮಾಡಿಕೊಂಡೆವು. ಹೊರಡುವ ದಿನ ಸಭೆಯನ್ನು ಆಯೋಜಿಸಲಾಗಿತ್ತು. ಬ್ರ. ಸುಮತಿಬಾಯಿಯವರಿಗೆ ನಮ್ಮ ಸಂಘ ಯಾವಾಗಲೂ ಅಲ್ಲೇ ನಿಲ್ಲಬೇಕೆಂದು ಮನದಾಶೆ. ನಿಯಮದಂತೆ ಸುತ್ತಮುತ್ತ ಒಂದೆರಡು ದಿನ ಸುತ್ತಾಡಲಿ ಎಂದು, ಹಾಗಾಗಿ ಅವರು ನಿಜಕ್ಕೂ ಖಿನ್ನರಾಗಿದ್ದರು. ಬೀಳ್ಕೊಡಿಗೆಯಲ್ಲಿ ಅದೇ ಭಾವನೆ ವ್ಯಕ್ತಪಡಿಸಿದರು. ವರ್ಧಮಾನಜೀಯಂತು ಕನ್ನಡದಲ್ಲಿ ಒಂದು ಕವಿತೆಯನ್ನು ರಚಿಸಿ ತಮ್ಮ ಪೈಸ್ಸಿನಲ್ಲಿ ಅಚ್ಚು ಹಾಕಿಸಿಕೊಂಡು ಬಂದು ಓದಿ ಎಲ್ಲರಿಗೂ ಹಂಚಿದರು. ಹೀಗೆ 1966 ನೇ ವರ್ಷದ ಚಾತುರ್ಮಾಸ ಅತ್ಯಂತ ಜ್ಞಾನಾರಾಧನೆಯಿಂದ ಕೂಡಿತ್ತು.

ಕುಮಾರಿಶೀಲ

ಶ್ರವಣಬೆಳಗೊಳ ವಿಹಾರದ ಸಮಯದಲ್ಲಿ ಇಲ್ಲಿನ ಧರಣೇಂದ್ರಯ್ಯನವರ ಧರ್ಮಪತ್ನಿ ಲಲಿತಮ್ಮನವರು ತಮ್ಮ ಮಗಳು ಕು. ಶೀಲಳನ್ನು ಆಹಾರ ಮಾಡುವುದಕ್ಕಾಗಿ ನಮ್ಮ ಜೊತೆ ಕಳುಹಿಸಿದ್ದರು. ಅವಳು ಸೋಲಾಪುರದಿಂದ ಊರಿಗೆ ಹೋಗುತ್ತೇನೆ ಎಂದಳು. ಆದರೆ ನಾನು ವೈರಾಗ್ಯದ ಉಪದೇಶ ಹೇಳಿ ಹೇಳಿ ಅವಳನ್ನು ತಡೆದೆ. ಒಮ್ಮೊಮ್ಮೆ ಅಳಲು ಪ್ರಾರಂಭಿಸುತ್ತಿದ್ದಳು. ಇಲ್ಲಿ ಕನ್ನಡ ಮಾತಡುವವರು ಯಾರೂ ಸಿಗದೆ ಗಾಬರಿಯಾಗುತ್ತಿತ್ತು. ಕೊನೆಗೆ ಇಬ್ಬರು ಮೂವರು ಕನ್ನಡ ಭಾಷೆಯವರಿಗೆ ಅವಳ ಹತ್ತಿರ ಕನ್ನಡ ಮಾತನಾಡಲು ಹೇಳಿದೆ. ಅವಳಿಗೆ ತಿಳುವಳಿಕೆ ಹೇಳಿ, ಶಿಕ್ಷಣ ಕೊಟ್ಟು ಧರ್ಮಕಾರ್ಯದಲ್ಲಿ ತೊಡಗಿಸಿದೆ. ಅವಳಿಗೆ ಪುಣ್ಯ ಉದಯಕ್ಕೆ ಬಂದಿದ್ದರಿಂದ ಕೊನೆಗೆ ಅಲ್ಲೇ ನಿಂತಳು ಕೊನೆಗೆ ಆರ್ಯಿಕೆ ಶಿವಮತಿಯಾಗಿ ನನ್ನ ಹತ್ತಿರ 27 ವರ್ಷಗಳು ಇದ್ದರು.

೫೦

ಕುಂಥಲಗಿರಿ ದರ್ಶನ

ನಮ್ಮ ವಿಹಾರ ಕುಂಥಲಗಿರಿಗೆ ತಲುಪಿತು. ಇಲ್ಲಿ ದರ್ಶನ ಮಾಡುತ್ತಲೇ ಆಚಾರ್ಯ ಶಾಂತಿಸಾಗರರ ಸಲ್ಲೇಖನದ ಸಮಯದ ಹಲವಾರು ನೆನಪುಗಳು ಬರತೊಡಗಿದವು. ಗುರುದೇವರ ನಿಷಧಿಗೆ ವಂದನೆ ಮಾಡಿದೆವು. ಸಾಧು ಜೀವನದಲ್ಲಿ ಇದು ಬಹಳ ಮಹತ್ವದ್ದು.

ಸಿದ್ಧಕ್ಷೇತ್ರ

ವಂಸತ್ಥಲವರ ಣಯರೆ ಪಚ್ಛಿಮ ಭಾಯಮ್ಮಿ ಕುಂಥುಗಿರಿಸಿಹರೇ।
ಕುಲದೇಸಭೂಸಣಮುಣೇ ಣೆವ್ವಾಣಗಯಾ ಣಮೋ ತೇಸಿಂ ॥

ವಂಶಸ್ಥಲನಗರದ ಪಶ್ಚಿಮ ದಿಕ್ಕಿನ ಕುಂಥಳಗಿರಿ ಶಿಖರದದಲ್ಲಿ ಕುಲಭೂಷಣ ಮತ್ತು ದೇಶಭೂಷಣ ಮುನಿಗಳ ನಿರ್ವಾಣವಾಗಿತ್ತು. ಅವರಿಗೆ ನನ್ನ ನಮಸ್ಕಾರಗಳು. ಆಚಾರ್ಯ ಶಾಂತಿಸಾಗರರಿಗೆ ಈ ಇಬ್ಬರು ಮುನಿಗಳ ಬಗ್ಗೆ ಅಗಾಧವಾದ ಭಕ್ತಿ. ಇವರ ಪ್ರೇರಣೆಯಿಂದಲೇ ಈ ಪರ್ವತದ ಮೇಲೆ ದೇಶಭೂಷಣ ಮತ್ತು ಕುಲಭೂಷಣ ಮಹಾಮುನಿಗಳ 4 ಅಡಿ ಎತ್ತರದ ಖಡ್ಗಾಸನದ ಪ್ರತಿಮೆಗಳನ್ನು ಸ್ಥಾಪಿಸಿದ್ದಾರೆ. ನಾನು ಪ್ರತಿದಿನ ಆಚಾರ್ಯರು ಈ ಪ್ರತಿಮೆಗಳಿಗೆ ಪಂಚಾಮೃತ ಅಭಿಷೇಕವನ್ನು ಬಹಳ ಪ್ರೀತಿಯಿಂದ ಮಾಡುತ್ತಿದ್ದುದ್ದನ್ನು ನೆನದುಕೊಂಡೆ. ಈ ಕ್ಷೇತ್ರದಲ್ಲಿ ಈ ಇಬ್ಬರು ಮುನಿಗಳು ಧ್ಯಾನಸ್ಥರಾಗಿ ನಿಂತಿದ್ದಾಗ ಇಬ್ಬರಿಗೂ ಉಂಟಾಗುತ್ತಿದ್ದ ಉಪಸರ್ಗವನ್ನು ಶ್ರೀ ರಾಮಚಂದ್ರನು ವನವಾಸದ ಸಮಯದಲ್ಲಿ ದೂರ ಮಾಡಿದ್ದರಿಂದ ಅವರಿಗೆ ಕೇವಲಜ್ಞಾನವು ಉಂಟಾಯಿತು. ಇಲ್ಲಿ ಪರ್ವತದಲ್ಲಿ ಏಳು ಮಂದಿರಗಳಿವೆ. ಕುಲಭೂಷಣ - ದೇಶಭೂಷಣ ಮಂದಿರ 2 ಶಾಂತಿನಾಥ ಮಂದಿರ, 3 ಬಾಹುಬಲಿ ಮಂದಿರ, 4 ಆದಿನಾಥ ಮಂದಿರ, 5 ಅಜಿತಸಾಗರ ಮಂದಿರ, 6 ಚೈತ್ಯ ಮಂದಿರ, 7 ನಂದೀಶ್ವರ ಜಿನಾಲಯ. ಇದೇ ಪರ್ವತದಲ್ಲಿಆಚಾರ್ಯ ಶಾಂತಿಸಾಗರ ನಿಷಧಿಯಲ್ಲಿ ಚರಣಗಳನ್ನು ನಿರ್ಮಾಣ ಮಾಡಿದ ಮೇಲೆ ಛತ್ರಿಯನ್ನು ನಿರ್ಮಿಸಿದ್ದಾರೆ. ಇಲ್ಲಿ ಕೆಳಗೆ ನಾಲ್ಕು ಮಂದಿರಗಳಿವೆ 1 ನೇಮಿನಾಥ ಮಂದಿರ 2 ಮಹಾವೀರ ಮಂದಿರ 3 ರತ್ನತ್ರಯ ಮಂದಿರ 4 ಸಮವಸರಣ ಮಂದಿರ. ಇಲ್ಲಿ ದೇಶಭೂಷಣ, ಕುಲಭೂಷಣರ ಬ್ರಹ್ಮಚರ್ಯಾಶ್ರಮ ಮತ್ತು ಒಂದು ಗುರುಕುಲವಿದೆ. ಅಲ್ಲದೆ ಎರಡು ಧರ್ಮಶಾಲೆಗಳಿವೆ.

ಕ್ಷುಲ್ಲಿಕೆ ಅಜಿತಮತೀ ಅಮ್ಮ

1955 ರಲ್ಲಿ ನಾನು ಆಚಾರ್ಯರ ಸಲ್ಲೇಖನದ ಸಮಯದಲ್ಲಿ ಇದ್ದೆ. ನಾನು ಮೈಸವಡದ ಚಾತುರ್ಮಾಸದಲ್ಲಿ ವಿಶಾಲಮತೀ ಅಮ್ಮನ ಜೊತೆ ಇಲ್ಲಿಗೆ ಬಂದು ಒಂದು ತಿಂಗಳು ಇದ್ದೆ. ಇಲ್ಲಿ ಒಂದು ಚಿಕ್ಕ ಕೊಠಡಿಯಲ್ಲಿ ಕ್ಷುಲ್ಲಿಕೆ ಅಜಿತಮತಿ ಅಮ್ಮ, ನಾವಿಬ್ಬರು ಪಕ್ಕ -ಪಕ್ಕದಲ್ಲೇ ಮಲಗುತ್ತಿದ್ದೆವು. ಇವರಿಂದ ನಾನು ಬಹಳ ಪ್ರಭಾವಿತಳಾಗಿದ್ದೆ. ಅವರಿಗೂ ನನ್ನ ವಯಸ್ಸು ನೋಡಿ ಬಹಳ ವಾತ್ಸಲ್ಯ ತೋರುತ್ತಿದ್ದರು. ಆಗಾಗ್ಗೆ ನನ್ನ ಹತ್ತಿರ ಗೊಮ್ಮಟಸಾರದ ಜೀವಕಾಂಡ ಚರ್ಚೆ ಮಾಡುತ್ತಿದ್ದರು. ಹಾಗೇ ಶಾಂತಿಸಾಗರ ಬಗ್ಗೆ ತಮ್ಮ ಅನುಭವಗಳನ್ನು ಹೇಳುತ್ತಿದ್ದರು. ನನಗೂ ಅವರ ಬಗ್ಗೆ ಬಹಳ ವಾತ್ಸಲ್ಯ. ಆದ್ದರಿಂದಲೇ ನಾನು ಅವರನ್ನೂ ಇಲ್ಲಿಗೆ ಕರೆಸಿದೆ. ಅವರು ಕಾರಿನಲ್ಲಿ ಪ್ರಯಾಣ ಮಾಡುತ್ತಾರೆ. ಅವರು ಬಂದವರೇ ನನ್ನ ಆರ್ಯಿಕೆ ಪದವಿಯಿಂದಾಗಿ ನನಗೆ 'ವಂದಾಮಿ' ಹೇಳಿದರು. ನಾವಿಬ್ಬರೇ ಕುಳಿತು ಬೇಕಾದಷ್ಟು ಚರ್ಚೆ, ಅನುಭವಗಳನ್ನೂ ಹಂಚಿಕೊಂಡೆವು.

ಕಳೆದ ವರ್ಷ ನಾನು ಹಸ್ತಿನಾಪುರದಿಂದ ಇವರಿಗೆ ಒಂದು ಜಂಬೂದ್ವೀಪದ ದರ್ಶನ ಮಾಡಬೇಕೆಂದು ಕಾಗದ ಹಾಕಿಸಿದ್ದೆ. ಅದಕ್ಕೆ ಅವರು ತುಂಬ ವಯಸ್ಸಾಗಿದ್ದರಿಂದ ಕಾರಿನಲ್ಲಿಯು ಕೂಡ ದೂರ ಪ್ರಯಾಣ ಮಾಡಲು ಸಾಧ್ಯವಿಲ್ಲವೆಂದು ಉತ್ತರ ಬರೆಸಿದ್ದರು.

ಬ್ರ. ಸುಮತೀಬಾಯಿ

ಸುಮತೀ ಬಾಯಿ ಇಬ್ಬರು ಬಾಯಿಜೀಗಳ ಜೊತೆ ದರ್ಶನಕ್ಕಾಗಿ ಬಂದಿದ್ದರು. ಅವರು ತಕ್ಷಣವೇ ವಾಪಸ್ಸು ಹೋಗಲು ಇಷ್ಟಪಡಲಿಲ್ಲ. ಹಾಗಾಗಿ ಅವರು "ಮಾತಾಜೀ, ಆಚಾರ್ಯ ವಿಮಲಸಾಗರಜೀಯವರು ಗಿರಿನಾರ ಯಾತ್ರೆಗೆ ಹೊರಟಿದ್ದಾರೆ. ಅವರಿಗೆ ಇಂತಹವರ ಅವಶ್ಯಕತೆ ಇದೆ ಆದ್ದರಿಂದ ತಾವು ಇವರಿಬ್ಬರನ್ನು ಅವರಲ್ಲಿಗೆ ಕಳುಹಿಸಿರಿ ಎಂದರು. ಅವರ ಇಚ್ಛೆಯಂತೆ ನಾನು ಮಾಲತಿ, ಮತ್ತು ಸುಮನರನ್ನು ಆಚಾರ್ಯರ ಸಂಘಕ್ಕೆ ಕಳುಹಿಸಿದೆ.

ಧಾರಾಶಿವರ ಗುಹೆಗಳು

ಇಲ್ಲಿ ಗುಹೆಗಳಿಗೆ 'ಲಯಣ' ಎಂದು ಕರೆಯುತ್ತಾರೆ. ಈ ಜಾಗ ಉಸ್ಮಾನಾಬಾದಿನಿಂದ ಐದು ಕಿಲೋಮೀಟರ್ ದೂರದಲ್ಲಿದೆ. ನಾವು ಈ ಗುಹೆಗಳನ್ನು ನೋಡಲು ಬಂದೆವು. ಭಗವಾನ ಪಾರ್ಶ್ವನಾಥರ ನಂತರದಲ್ಲೇ ಕೆಲವು ವರ್ಷಗಳಾದ ಮೇಲೆ ಕರಕಂಡು ರಾಜನು ಈ ಮೂರು ಗುಹೆಗಳ ನಿರ್ಮಾಣ ಮಾಡಿಸಿದ್ದಾನೆ. ಇದರಲ್ಲಿ ಪಾರ್ಶ್ವನಾಥರ ಪ್ರತಿಮೆಗಳುವಿರಾಜಮಾನವಾಗಿವೆ. ಈ ಗುಹೆಗಳ ಉಲ್ಲೇಖಗಳು ಬೃಹತ್‌ಕೋಶದಲ್ಲಿ ಸಿಗುತ್ತವೆ. ಇಲ್ಲಿ ಗುಹೆಗಳು 30 ಸ್ತಂಭಗಳ ಆಧಾರದಿಂದ ವಿಶಾಲ ಮಂಟಪವನ್ನು ಹೊಂದಿದೆ. ಇಲ್ಲಿ ಎಲ್ಲ ಜಾಗದಲ್ಲೂ ಮೇಲಿನಿಂದ ನೀರು ಹನಿಯುತ್ತಲೇ ಇರುತ್ತದೆ. ಗರ್ಭಗೃಹದಲ್ಲಿ ಭ. ಪಾರ್ಶ್ವನಾಥರ 6 ಅಡಿ ಎತ್ತರದ ಪ್ರತಿಮೆ ಇದೆ. ಮುಂದೆಯೂ ಗುಹೆಗಳಿವೆ. ಅವು ಪ್ರಾಚ್ಯ ಸಂಶೋಧನೆಗೆ ಸೇರಿವೆ. ಆದರೆ ಈಗ ಅವೆಲ್ಲ ಹಾಳಾಗುತ್ತಿವೆ ಇದರ ಕಡೆ ಜೈನರು ಗಮನ ಕೊಡಬೇಕಾಗಿದೆ.

ತೇರಾ ಅತಿಶಯ ಕ್ಷೇತ್ರ

ಇಲ್ಲಿ 'ತೇರಾ' ಎಂಬುದು ಒಂದು ಅತಿಶಯವಾದ ಕ್ಷೇತ್ರ. ಎರಡು ಮೂರು ವರ್ಷದಿಂದ ಮಳೆ ಆಗದೆ ಮಣ್ಣು ಗಾಜಿನಂತೆ ಗಟ್ಟಿಯಾಗಿತ್ತು. ಅದರ ಮೇಲೆ ನಡೆಯಲು ತುಂಬ ಕಷ್ಟವಾಗತೊಡಗಿತು. ಬ್ರ. ಗುಲಾಬಚಂದ ಚಂಡಕರಿಗೆ ಗಾಡಿಯನ್ನು ಧರ್ಮಶಾಲೆಯವರೆಗೂ ತೆಗೆದುಕೊಂಡು ಬರಲು ಆಗದೆ ಅವರು ಅವರ ಪತ್ನಿಯರೇ ಸೇರಿ ಸಾಮಾನುಗಳನ್ನು ತಲೆಯ ಮೇಲೆ ಎತ್ತಿಕೊಂಡು ತಂದು ಚೌಕ ಮಾಡಿ ಆಹಾರ ದಾನ ಮಾಡಿದರು.

ಇಲ್ಲಿ ಒಂದು ಐತಿಹ್ಯವಿದೆ ಇಲ್ಲಿ ಮಂದಿರಕ್ಕೆ ಉಪಯೋಗಿಸಿರುವ ಇಟ್ಟಿಗೆಗಳು ನೀರಿನಲ್ಲಿ ತೇಲುತ್ತವೆಯಂತೆ ಮಂದಿರದ ಒಂದು ಕಡೆಯ ಗೋಡೆಯನ್ನು ಬೀಳಿಸಿ ಕಿಟಕಿ ಮಾಡಿಸಿದ್ದಾರೆ. ಅಲ್ಲಿಂದ ತೆಗೆದಿರುವ ಇಟ್ಟಿಗೆಗಳೇ ತೇಲುತ್ತಿರುವುದು ಈಗಲೂ ನೋಡಬಹುದು. ಈ ಅತಿಶಯದಿಂದಲೇ ಈ ಕ್ಷೇತ್ರಕ್ಕೆ 'ತೆರ' ಎಂಬ ಹೆಸರು ಬಂದಿದೆ. ಅಲ್ಲಿಯ ಪ್ರಾಚೀನ ಮೂರ್ತಿಗಳನ್ನೂ ದರ್ಶನ ಮಾಡಿ ಮನಸ್ಸಿಗೆ ತುಂಬ ಶಾಂತಿ ಸಿಕ್ಕಿತು.

ಪೈಠಣ ಅತಿಶಯ ಕ್ಷೇತ್ರ

ಬ್ರ. ಗುಲಾಬಚಂದರ ಪ್ರೇರಣೆಯಿಂದ ಪೈಠಣ ಕ್ಷೇತ್ರ ದರ್ಶನಕ್ಕೆ ಹೋಗಬೇಕೆಂದು ನಿಶ್ಚಯಿಸಿದೆ. ಆದರೆ ಆರ್ಯಿಕೆ, ಜಿನಮತಿ ಮತ್ತು ಆದಿಮತಿಯರಿಗೆ ಹೋಗಲು ಇಷ್ಟವಿರಲಿಲ್ಲ. ನಾನು ಇಲ್ಲಿಂದ 10-20 ಮೈಲಿ ದೂರದಲ್ಲಿದೆ. ಈಗ ಬಿಟ್ಟರೆ ನಾನು ಜೀವನದಲ್ಲಿ ಇಷ್ಟು ದೂರ ವಿಹಾರ ಮಾಡಿಬಂದು ನೋಡುವುದು ಖಂಡಿತಾ ಸಾಧ್ಯವಿಲ್ಲವೆಂದೆ. ನಾನು ನಿರ್ಣಯಿಸಿದಂತೆ ಹೊರಟೆ ಕೊನೆಗೆ ನನ್ನ ಜೊತೆ ಬಂದ ಇವರು ಮಂದಿರದೊಳಗೆ ಪ್ರವೇಶಿಸಿದವರೇ ಮುನಿಸುವ್ರತ ಸ್ವಾಮಿಯ ದರ್ಶನ ಮಾಡಿದವರೇ ಆನಂದದಿಂದ ಅಲ್ಲೇ ನಿಂತು ಸ್ತುತಿಪಾಠವನ್ನು ಮಾಡುತ್ತಾ ಎಷ್ಟು ಮಗ್ನರಾಗಿದ್ದರೆಂದರೆ ಗಂಟೆಗಳು ಕಳೆದರೂ ಪರಿವೆಯೇ ಇಲ್ಲ. ಇಷ್ಟವಿಲ್ಲದವರನ್ನು ಕರೆದುಕೊಂಡು ಬಂದು ದರ್ಶನ ಮಾಡಿಸಿದರೂ ಎಷ್ಟು ಖುಷಿ ಪಡುತ್ತಿದ್ದಾರೆ ಎಂದುಕೊಂಡೆ. ಒಂದು ವೇಳೆ ಮಿಶ್ರ ರುಚಿಯಿಂದ ತಿಂದರೂ ಸಿಹಿಯಾಗಿಯೇ ಇರುತ್ತದೆ. ಹಾಗೆಯೇ ಏನೂ ರುಚಿಯಿಲ್ಲ ಎಂದು ತಿಂದರೂ ರುಚಿಯಾಗಿಯೇ ಇರುತ್ತದೆ. ಹೀಗೆ ಭಗವಂತನ ದರ್ಶನವನ್ನು ಕೂಡ ಇಷ್ಟ ಪಟ್ಟವರೊಂದಿಗೆ ಮಾಡು ಇಷ್ಟವಿಲ್ಲದೇ ಮಾಡಿದರೂ ಸಿಹಿಯಂತೆ ಮಧುರವಾಗಿಯೇ ಇರುತ್ತದೆ. ಇದರಲ್ಲಿ ಸಂದೇಹವೇ ಇಲ್ಲ. ಒಂದು ವೇಳೆ ಇಷ್ಟವಿಲ್ಲದೆ ಸ್ವಾಮಿಯ ದರ್ಶನ ಮಾಡಿದರೂ ಪ್ರೇಮ ಭಾವ ತುಂಬಿಹರಿದರೆ ಅದು ಪುಣ್ಯದಿಂದಲೇ ಆಗುತ್ತದೆ.

ಕಚನೇರ ಅತಿಶಯ ಕ್ಷೇತ್ರ

ಕಚನೇರ ಒಂದು ಪ್ರಸಿದ್ಧ ಅತಿಶಯ ಕ್ಷೇತ್ರ ಮೂರ್ತಿಯ ದೇಹದಿಂದ ಶಿರ ಬೇರ್ಪಟ್ಟಿದ್ದು ಕನಸಿನಲ್ಲಿ ಹಾಲು ತುಪ್ಪದಲ್ಲಿ ಮೂರ್ತಿಯನ್ನು ಇಟ್ಟರೆ ಸೇರಿಕೊಳ್ಳುತ್ತದೆ ಎಂದು ಅಪ್ಪಣೆಯಾಯಿತು. ಅದರಂತೆ ಚಮತ್ಕಾರ ನಡೆಯಿತು. ಇಂದಿಗೂ ಮೂರ್ತಿಯ ಕತ್ತಿನ ಬಳಿ ಬೇರೆಯಾದ ಗುರುತಿದೆ. ಇಲ್ಲಿಗೆ ಬಂದಾಗ ನನಗೆ ಆರ್ಯಿಕೆ ದೀಕ್ಷೆ ಕೊಟ್ಟ ಆಚಾರ್ಯ ವೀರಸಾಗರರ ಕತೆ ನೆನಪಿಗೆ ಬಂತು. ಅವರು ಮೊದಲು ಇಲ್ಲಿ ಒಂದು ಪಾಠಶಾಲೆಯನ್ನು ತೆಗೆದು ಗುರೂಜೀಯಾದವರು ಕೊನೆಯವರೆಗೂ ವಿದ್ಯಾರ್ಥಿಗಳಿಗಷ್ಟೇ ಅಲ್ಲ ಇಡೀ ವಿಶ್ವಕ್ಕೇ ಗುರುಗಳಾದರು.

ಔರಂಗಾಬಾದ್

ಔರಂಗಾಬಾದ್ ನಗರ ತಲುಪುವ ವೇಳೆಗೆ ಅಲ್ಲಿಯ ಶ್ರಾವಕ ಶ್ರಾವಿಕೆಯರು ಸ್ವಾಗತಿಸಲು ಬಂದರು. ಅಲ್ಲಿಯ ಮಂದಿರವನ್ನು ಸಂದರ್ಶಿಸಿ 5-6 ದಿನಗಳು ಅಲ್ಲಿಯೇ ತಂಗಿದ್ದೆವು. ಇಲ್ಲಿಯ ವ್ಯವಸ್ಥೆಯನ್ನೆಲ್ಲಾ ಸರಿಯಾಗಿ ಮಾಡಿ ಬ್ರ. ಗುಲಾಬಚಂದ ಅವರ ಹೆಂಡತಿ ಅವರ ತಂಗಿಯವರೆಲ್ಲಾ ಸೋಲಾಪುರಕ್ಕೆ ಹಿಂದಿರುಗುವ ಸಲುವಾಗಿ ನನ್ನ ಆಶೀರ್ವಾದಗಳನ್ನು ತೆಗೆದುಕೊಳ್ಳಲು ಬಂದವರ ಕಣ್ಣಲ್ಲಿ ಗುರು ವಿಯೋಗದ ದುಃಖ ಇಣುಕಿ ಹಾಕುತ್ತಿತ್ತು. ನಂತರ ಅವರೆಲ್ಲಾ ಹಿಂದಿರುಗಿದರು.

ಬ್ರ. ಗುಲಾಬಚಂದರ ಭಕ್ತಿ

ಸೋಲಾಪುರದಲ್ಲಿ ನಾನು ಇರುವಷ್ಟು ದಿನ ಗುಲಾಬಚಂದರು ಬೆಳಗ್ಗೆ ಬಂದವರು ದಿನವೆಲ್ಲಾ ಇಲ್ಲೇ ಇರುತ್ತಿದ್ದರು. ನನ್ನ ಉಪದೇಶ, ಸ್ವಾಧ್ಯಾಯ, ಅಧ್ಯಾಪನ, ಚರ್ಚೆಗಳಲ್ಲಿ ಅವರಿಗೆ ಬಹಳ ಆಸಕ್ತಿ. ಇನ್ನೊಂದು ವಿಶೇಷ ಗುಣವೆಂದರೆ ನಾನು ಮಂದಿರದಲ್ಲಿ ಇರಲಿ ವರಾಂಡದಲ್ಲೋ, ಪ್ರಾಂಗಣದಲ್ಲಿ ಇರಲಿ ಒಂದು ಮಣೆ

ತೆಗೆದುಕೊಂಡು ನನ್ನ ಸಹಾಯಕ್ಕೆ ಯಾವಾಗಲೂ ಇರುತ್ತಿದ್ದರು. ನಾನು ಹಾಸ್ಯ ಮಾಡಿದರೂ ಅವರು ಈ ಕೆಲಸ ಬಿಡುತ್ತಿರಲಿಲ್ಲ. ನಾನು ನಗರದಲ್ಲಿದ್ದ ಆಚಾರ್ಯರ ದರ್ಶನಕ್ಕೆ ಹೊರಟರೆ ಸಾಕು ತಾವೇ ಕಮಂಡಲ ತೆಗೆದುಕೊಂಡು ನಡೆದುಕೊಂಡು ಹಿಂದೆ ಬರುತ್ತಿದ್ದರು. ಅವರಿಗೂ ವಯಸ್ಸಾಗಿತ್ತು. ಇಂತಹ ಭಕ್ತರನ್ನು ನಿಜವಾಗಿಯೂ ನೋಡುವುದು ಬಹಳ ಕಷ್ಟ. ತಮಗೆ ಆಯಾಸವಾಗುತ್ತಿದ್ದರೂ ಲೆಕ್ಕ ಹಾಕದೇ ಶಾಂತಿ ಸಾಗರರ ಯಾವುದಾದರೂ ನೆನಪುಗಳನ್ನು ಹೇಳುತ್ತಾ ಬರುತ್ತಿದ್ದರು. ಬಾಕಿ ಏನೂ ಹೆಚ್ಚಿಗೆ ಮಾತನಾಡುತ್ತಿರಲಿಲ್ಲ.

ಇವರು ಸೋಲಾಪುರದಿಂದ ಔರಂಗಬಾದಿಗೆ ನನ್ನ ಜೊತೆ ನಡೆದುಕೊಂಡೇ ಬಂದರು. ಒಂದು ಕೈಯಲ್ಲಿ ಕಮಂಡಲ ಒಂದು ಕೈಯಲ್ಲಿ ಚಿಕ್ಕ ಡಬ್ಬಿಯನ್ನು ಹಿಡಿದೇ ಬರುತ್ತಿದ್ದರು. ನನಗಿಂತ ಯಾವಾಗಲೂ ಸ್ವಲ್ಪ ಹಿಂದೆಯೇ ನಡೆದು ಬರುತ್ತಿದ್ದರು. ಆದರೆ ನಾನು ಹಿಂದೆ ಯಾಕೆ ಬರುತ್ತಾರೆ ಕೈಯಲ್ಲಿರುವ ಡಬ್ಬಿಯಲ್ಲಿ ಏನಿದೆ ಎಂಬುದನ್ನು ಕೇಳಿರಲಿಲ್ಲ. ಏನೋ ಅವರ ಸ್ವಭಾವವೆಂದು ಸುಮ್ಮನಾಗಿದ್ದೆ. ಇಲ್ಲಿ ಔರಂಗಾಬಾದಿಗೆ ಬಂದ ಮೇಲೆ ಆರ್ಯಿಕೆಯರಿಂದ ನನಗೆ ಇವರು ಅದರಲ್ಲಿ ಮೊಸರು ಹಿಡಿದುಕೊಂಡು ಬರುತ್ತಾರೆ. ಅದು ಮಾತಾಜೀಗೆ ಗೊತ್ತಾಗಿ ಬಿಟ್ಟರೆ ಎಲ್ಲಿ ಮಜ್ಜಿಗೆಯನ್ನು ತೆಗೆದುಕೊಳ್ಳುವುದಿಲ್ಲ ಎಂಬ ಭಯಕ್ಕೆ ಹಿಂದೆ ಹಿಂದೆ ಬರುತ್ತಿದ್ದರು. ಇಂತಹ ಭಕ್ತರು ನಡೆಯುವ ಶಕ್ತಿಯನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿತ್ತು. ವೃದ್ದರು ಕಾಲ್ನಡಿಗೆಯಲ್ಲೇ ಕೈಯಲ್ಲಿ ಮೊಸರಿನ ಪಾತ್ರೆ ಹಿಡಿದು ದಾರಿಯಲ್ಲಿ ಆಹಾರವಾಗುವ ಹೊತ್ತಿಗೆ ಸರಿಯಾಗಿ ಮಜ್ಜಿಗೆಯನ್ನು ತಲುಪಿಸುತ್ತಿದ್ದರು. ಅವರಿಗೆ ಗೊತ್ತಿತ್ತು. ಮಾತಾಜೀಯ ಆರೋಗ್ಯಕ್ಕೆ ಔಷಧಿಯ ಜೊತೆಗೆ ಮಜ್ಜಿಗೆಯು ಅವಶ್ಯಕ ಎಂಬುದನ್ನು ಮನಗಂಡ ಅವರು ಅದು ತಮ್ಮ ಕರ್ತವ್ಯವೆಂದು ತಿಳಿದು ತಮ್ಮ ಅಪೂರ್ವ ಭಕ್ತಿಯನ್ನು ತೋರಿಸುತ್ತಿದ್ದರು.

ಆಚಾರ್ಯ ಶಾಂತಿಸಾಗರರಿಗೆ ಎಲ್ಲ ಬಾವಿಯ ನೀರು ಸರಿ ಹೋಗುವುದಿಲ್ಲವೆಂದು 4-5 ಮೈಲಿ ದೂರವಾದರೂ ನಡೆದುಕೊಂಡು ಹೋಗಿ ತಂದು ಚೌಕಮಾಡುವ ಜಾಗಕ್ಕೆ ತರುತ್ತಿದ್ದರು. ಇವರಂತು ಸುಮಾರು 60 ವರ್ಷಗಳ ಕಾಲ ಅವರಿಗೆ ಸೇವೆ ಮಾಡಿ, ಗುರುಭಕ್ತಿ ತೋರಿಸಿದ್ದರಿಂದಲೇ ಇರಬೇಕು ಇಷ್ಟು ವರ್ಷಗಳು ಆರೋಗ್ಯವಾಗಿದ್ದರೆಂದು ಕೊಳ್ಳುತ್ತಿದ್ದೆ.

ಮಹಿಳೆಯರ ಭಕ್ತಿ

ಔರಂಗಾಬಾದಿನಲ್ಲಿ ಹೆಂಗಸರು ಬೆಳಗ್ಗೆ ಬಂದವರೇ ಭಗವಂತನ ಅಭಿಷೇಕ ಪೂಜೆ ಮುಗಿಸಿ, ಪುನಃ ನನ್ನ ಹತ್ತಿರ ಬಂದವರೇ ನನ್ನ ಪೂಜೆ ಮಾಡಲು ತೊಡಗುತ್ತಿದ್ದರು. ಈ ಹೆಂಗಸರು 10 ಗಂಟೆಯಾದರೂ ಪೂಜೆ ಮಾಡುತ್ತಲೇ ಇರುತ್ತಿದ್ದರು. ಇಲ್ಲಿಯವರೆಗೂ ಸಂಘದಲ್ಲಿ ಈ ಪರಂಪರೆ ಇರಲಿಲ್ಲ. 1959 ರಲ್ಲಿ ಅಜಮೇರದಲ್ಲಿ (ಟಿಕ್ಕೈತನಗರದವರು) ನನ್ನ ಪೂಜೆಯನ್ನು ಮಾಡಿಸಿದ್ದಾರೆ. ಆದರೆ ನಾನು ಅಚ್ಚು ಹಾಕಿಸಲು ಬಿಟ್ಟಿರಲಿಲ್ಲ.

ಇಲ್ಲಿ ಮಹಿಳೆಯರಾದರೂ ರೂಢಿಯಲ್ಲಿರುವ ಪೂಜೆಯ ಅಷ್ಟಕದೊಂದಿಗೆ ಎರಡು ಸಾಲುಗಳನ್ನು ಕೊನೆಯ ಎರಡು ಸಾಲುಗಳಿಗೆ ನನ್ನ ಹೆಸರನ್ನು ಸೇರಿಸಿ ಅಷ್ಟಕವನ್ನು ಹೇಳುತ್ತಿದ್ದರು. ಕೊನೆಗೆ ಜಯಮಾಲ ಹೇಳದೆ ಅರ್ಘ್ಯವನ್ನು ಎತ್ತುತ್ತಿದ್ದರು.

ಮುನಿಮನ ಸಮ ಉಜ್ವಲ ನೀರ, ಪ್ರಾಸುಕ ಗಂಧ ಭರಾ ।
ಭರೀ ಕನಕ ಕಟೋರಿ ನೀರ ದೀನೀ ಧಾರಾ ಕರಾ ॥
ಶ್ರೀ ಜ್ಞಾನಮತೀಜೀ ಅಂಬ ಆನಂದ ಕಂದ ಸಹೀ
ಪದಜಜತ ಹರತಾ ಭವಫಂದ ಪಾವತ ಮೋಕ್ಷ ಮಹೀ ॥

ಹೀಗೆ ಪೂಜೆ ಮಾಡುವಾಗ ಹೆಸರನ್ನು ಸೇರಿಸಿ ಪೂಜೆ ಮಾಡಿ ಗುರುಭಕ್ತಿಯನ್ನು ತೋರಿಸುತ್ತಿದ್ದದ್ದು ನಾನೆಲ್ಲೂ ಕಾಣಲಿಲ್ಲ.

ಆಚಾರ್ಯ ಮಹಾವೀರ ಕೀರ್ತಿಗಳ ದರ್ಶನ

ಮಹಾವೀರ ಕೀರ್ತಿಗಳ ಸಂಘ ಅಲ್ಲಿಗೆ ಬರುವುದಿತ್ತು. ಆದ್ದರಿಂದ ಅಲ್ಲಿಯವರು ನಮ್ಮನ್ನು ಇರುವಂತೆ ಒತ್ತಾಯ ಮಾಡಿದರು. ಅಲ್ಲದೇ ನನಗೂ ಆಚಾರ್ಯರನ್ನು ನೋಡಬೇಕೆಂಬ ಇಚ್ಛೆಯಿದ್ದುದರಿಂದ ನಿಂತೆ. ಆಚಾರ್ಯರ ಸಂಘ ಆಗಮಿಸಿತು. 1957 ರಲ್ಲಿ ನೋಡಿದ್ದು ಈಗ 1966 ರಲ್ಲಿ ನೋಡುವ ಸೌಭಾಗ್ಯ ಸಿಕ್ಕಿತು. ಎರಡು ಮೂರು ದಿನ ಅವರ ಸಾನಿಧ್ಯದಲ್ಲಿ ಇದ್ದೆವು. ಅವರ ಪ್ರವಚನಕ್ಕಾಗಿ ದೊಡ್ಡ ಪೆಂಡಾಲ ಹಾಕಲಾಗಿತ್ತು. ಮೊದಲು ಅವರ ಪ್ರವಚನವಾಗುತ್ತಿತ್ತು. ನಂತರ ನಾನು ಉಪದೇಶ ಕೊಡುತ್ತಿದ್ದೆ ಒಟ್ಟಿನಲ್ಲಿ ಒಳ್ಳೆಯ ಧರ್ಮ ಪ್ರಭಾವನೆ ಆಗುತ್ತಿತ್ತು. ಇದರ ನಂತರ ಆಚಾರ್ಯರ ಸಂಘ ಕುಂಥಳಗಿರಿಯ ಕಡೆಗೆ ಹೊರಟಿತು. ನಾವು ಅಲ್ಲಿಂದ ಕಸಾಬಖೇಡಾ ಕಡೆಗೆ ಹೊರಟೆವು.

ಕಸಾಬಖೇಡಾದಲ್ಲಿ ಅಸ್ಪಷ್ಟತೆ

ಕಸಬಖೇಡಾದಲ್ಲಿ ನನಗೆ ಅನಾರೋಗ್ಯ ಉಂಟಾಯಿತು. ಇಲ್ಲಿ ಶ್ರಾವಕರದು 8-10 ಮನೆಗಳು ಮಾತ್ರ ಇತ್ತು. ಎಲ್ಲವೂ ಒಂದೇ ಸಾಲಿನಲ್ಲಿ ಇತ್ತು. ಅಲ್ಲಿಯ ಶ್ರಾವಕರು ಕೇಳಿದರು ಮಾತಾಜೀ ಏಳು ಮನೆಗಳಲ್ಲಿ ಆಹಾರ ತಗೋತೀರಾ ಅಲ್ಲವೇ. ಅದಕ್ಕೆ ಬ್ರ. ಭಂವರೀಬಾಯಿ ಹೇಳಿದರು ತೆಗೆದುಕೊಳ್ಳುತ್ತಾರೆ. ಇಲ್ಲಿಯವರೂ ಚಂದ್ರಸಾಗರ ಮುನಿರಾಜರ ಪರಮಭಕ್ತರು ಶಾಸ್ತ್ರಗಳಲ್ಲಿ ಏಳು ಮನೆಯ ಆಹಾರವನ್ನು ತೆಗೆದುಕೊಳ್ಳಲು ಹೇಳಿದೆ. ಒಂದು ವೇಳೆ ಒಂದು ಸಾಲಿನಲ್ಲಿ ಇರದಿದ್ದರೆ 'ಅಭಿಘಾಟ' ದ ದೋಷ ಬರುತ್ತದೆ. ಇಲ್ಲಿ ಎಲ್ಲವು ಒಂದೇ ಸಾಲಿನಲ್ಲಿ ಇದ್ದುದ್ದರಿಂದ ನಾನು ಆಚಾರ್ಯ ಪರಂಪರೆಗೆ ಅನುಸಾರ ಇಲ್ಲಿ ಆಹಾರಕ್ಕೆ ಸಮ್ಮತಿಸಿದೆ. ಇಲ್ಲಿ ಅಕ್ಕ ಪಕ್ಕದ ಎರಡು ಮೂರು ಮನೆಯವರು ರೋಟಿ, ಅನ್ನ ಎಲ್ಲ ತಂದು ನೀಡುತ್ತಿದ್ದರು. ಆದರೆ ಇಲ್ಲಿ ನನ್ನ ಆರೋಗ್ಯ ಹೆಚ್ಚು ಕಮ್ಮಿಯಾದ್ದರಿಂದ ಆಹಾರವೇ ಸೇರುತ್ತಿರಲಿಲ್ಲ. ಜನರು ವೈಯಾವೃತ್ತಿಯಲ್ಲಿ ಕುಶಲರಾಗಿದ್ದರು. ಒಳ್ಳೆಯ ವೈದ್ಯರನ್ನು ಕರೆಸಿ ಔಷಧೋಪಚಾರ ಮಾಡಿಸಿದರು. ಗುಣ ಕಾಣಲಿಲ್ಲ ಹೈದರಾಬಾದಿಗೆ ಸೂಚನೆ ಕೊಟ್ಟಿದ್ದರಿಂದ ಜಯಚಂದ್ರ ಲೋಹಾಡಿಯಾ ದರ್ಶನಾರ್ಥ ಬಂದರು ಇಲ್ಲಿಗೆ ಎಲ್ಲೋರ ಹತ್ತಿರದಲ್ಲಿತ್ತು. ಅಲ್ಲಿ ಮಧ್ಯಮ ಲೋಕದ ಚೈತ್ಯಾಲಯದ ರಚನೆಯ ಬಗ್ಗೆ ಮಾತಾಡಿದರು.

ಮಧ್ಯಲೋಕದ ಚರ್ಚೆ

ಸೋಲಾಪುರದಲ್ಲಿ ನಡೆದ ಮಾತುಕತೆಯನ್ನು ಕೇಳಿದ ಇವರಿಗೆ ಮಾತಾಜೀಯ ಮನಸ್ಸಿನಲ್ಲಿರುವುದನ್ನು ಅರ್ಥ ಮಾಡಿಕೊಂಡಿದ್ದರು. ಮಾತಾಜೀ ನಾನು ಒಂದು ಅಹಿಂಸಾ ಪ್ರಚಾರ ಕೇಂದ್ರವನ್ನು ತೆರೆಯಬೇಕೆಂದಿದ್ದೇನೆ ನನ್ನ ಜೀವನದಲ್ಲಿ ಏನಾದರೂ ಒಂದು ಒಳ್ಳೆಯ ಕೆಲಸ ಮಾಡಬೇಕು ಆದ್ದರಿಂದ ತಾವು ಇಲ್ಲೇ ಇರಿ ನಾನು ಬಾಂಬೆಯಿಂದ ಒಳ್ಳೆಯ ಮಾದರಿ ಕೆಲಸ ಮಾಡುವ ಕೆಲಸಗಾರರನ್ನು ಕರೆತರುತ್ತೇನೆ ನಿಮ್ಮ ಮನಸ್ಸಿನಲ್ಲಿರುವ ಮಧ್ಯಲೋಕದ ರಚನೆಯನ್ನು ತಿಳಿಸಿ. ಎಲ್ಲೋರದಲ್ಲಿ ಮಾಡಿಸೋಣ ಇಲ್ಲಿ ಜಾಗ ಸುಮಾರು 85 ಎಕರೆ ಇದೆ

ಎಂದರು. ಇವರು ಇಷ್ಟು ಅನುನಯದಿಂದ ಕೇಳಿದರು ನಾನು ಸಮ್ಮತಿಸಲಿಲ್ಲ. ಮತ್ತು ನಾನು ಬೇಗ ಸಂಘವನ್ನು ಸೇರಬೇಕೆಂದು ಮಾತನ್ನು ತಳ್ಳಿ ಹಾಕಿದೆ. ಪುನಃ ಜಯಚಂದಜೀ ಮುನಿಶ್ರೀ ಆರ್ಯನಂದಿಗಳ ಪ್ರೇರಣೆಯನ್ನು ಕ್ಯಾಸೆಟ್ ಮಾಡಿ ಕಳುಹಿಸಿ ಅಭಿಪ್ರಾಯ ಕೇಳಿದರು. ಮುನಿಶ್ರೀಗಳು ವಿಶೇಷ ಕಾರ್ಯಮಾಡಲು ಬಯಸುತ್ತಿದ್ದಾರೆ. ನೀವು ಹಣಕ್ಕಾಗಿ ಯಾರಿಗೂ ಪ್ರೇರೇಪಿಸ ಬೇಕಾಗಿಲ್ಲ. ಎಲ್ಲಾ ವ್ಯವಸ್ಥೆಗಳನ್ನು ಕೈಕೊಳ್ಳಲಾಗುತ್ತದೆ. ಎಲ್ಲೋರ ಒಂದು ರಮ್ಯವಾದ ಸ್ಥಳವಾಗಿದೆ ಶಾಂತವಾದ ವಾತಾವರಣ ವಿದೇಶಿಯರನ್ನು ಆಕರ್ಷಿಸುತ್ತದೆ ಎಂದೆಲ್ಲಾ ಹೇಳಿ ಕಳುಹಿಸಿದ್ದರು. ಮುನಿಗಳ ಧ್ವನಿ ಮುದ್ರಿಕೆಯನ್ನು ಕೇಳಿದೆ. ಅವರ ಪ್ರೇರಣೆ ಮತ್ತು ಅಭಿರುಚಿಯನ್ನು ಅರ್ಥಮಾಡಿಕೊಂಡೆ ಆದರೆ ಆಚಾರ್ಯ ಶಿವಸಾಗರರ ಆಜ್ಞೆಯಂತೆ ಎಲ್ಲೋರಾದಲ್ಲಿ ಮಾಡಿಸೋಣ ಎಂದೆ.

10-15 ದಿನಗಳಾದ ಮೇಲೆ ಆರೋಗ್ಯ ಸ್ವಲ್ಪ ಸುಧಾರಿಸಿತು ಸ್ವಲ್ಪ ನಡೆಯುವ ಹಾಗಾದೆ. ಎಲ್ಲರ ವಿರೋಧದ ನಡುವೆಯೇ ಮುಂದಿನ ಪ್ರಯಾಣ ಬೆಳೆಸಿದೆ ಒಂದು ಫರ್ಲಾಂಗ್ ನಡೆಯುವುದು ಕುಳಿತುಕೊಳ್ಳುವುದು ಹೇಗೋ ಮಾಡಿಕೊಂಡು ಸಾಯಂಕಾಲದ ವೇಳೆಗೆ ಅಲ್ಲಿಗೆ ತಲುಪಿದೆ. ತಲುಪುತ್ತಿದ್ದಂತೆ ವಾಂತಿಯಾಯಿತು. ಸಂಘದ ಉಳಿದ ಮಾತಾಜೀ ಗಾಬರಿಯಾದರು. ಎಲ್ಲಿ ಆರೋಗ್ಯ ಬಿಗಡಾಯಿಸುತ್ತದೋ ಎಂದು. ಆದರೆ ಮಾರನೆಯ ದಿನ ಮನೋಬಲದಿಂದಲೇ ಚಿಕ್ಕ ಪರ್ವತವನ್ನು ಏರಿದೆ ಭ. ಪಾರ್ಶ್ವನಾಥರ ಪ್ರತಿಮೆಯನ್ನು ದರ್ಶನ ಮಾಡುತ್ತಲೇ ಮನಸ್ಸಿಗೆ ಶಾಂತಿ ದೊರಕಿತು.

ದರ್ಶನಂ ದೇವ ದೇವಸ್ಯ ದರ್ಶನಂ ಪಾಪನಾಶನಂ ।
ದರ್ಶನಂ ಸ್ವರ್ಗಸೋಪಾನಂ ದರ್ಶನಂ ಮೋಕ್ಷ ಸಾಧನಂ ॥
ಅನಂತಾನಂತ ಸಂಸಾರ ಸಂತತಿ ಚ್ಛೇದ ಕಾರಣಮಂ ।
ಜಿನರಾಜ ಪದಾಂಭೋಜ ಸ್ಮರಣಂ ಶರಣಂ ಮಮ ॥

ಹೀಗೆ ಶ್ಲೋಕವನ್ನು ಶ್ರದ್ಧೆಯಿಂದ ಹೇಳುತ್ತಾ ವಂದಿಸಿ ಕೆಳಗೆ ಬಂದೆವು. ಬರುತ್ತಲೇ ಬಹಳ ಅತಿಸಾರವಾಯಿತು ಎಲ್ಲರು ಗಾಬರಿ ಆದ್ದರಿಂದ ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಳ್ಳ ಬೇಕಾಯಿತು. ಆರೋಗ್ಯದಲ್ಲಿ ಸ್ವಲ್ಪ ಸುಧಾರಣೆ ಕಂಡಂತಾಯಿತು. ಹೋ ನಾನು ಸುಧಾರಿಸುತ್ತಿದ್ದೇನೆ ಅನ್ನಿಸಿತು. ಜಿನೇಂದ್ರ ದೇವನ ಭಕ್ತಿಯಲ್ಲಿ ಅಸಾತಾ ಕರ್ಮ ಸಾತಾದಲ್ಲಿ ಸಂಕ್ರಮಿತವಾಗುತ್ತದೆ. ಎಂದು ಸಿದ್ಧಾಂತ ಗ್ರಂಥಗಳಲ್ಲಿ ಹೇಳಿದೆ. ಅದೂ ಖಂಡಿತ ಸತ್ಯ ಇದರ ಬಗ್ಗೆ ವಿಶ್ವಾಸವಿಡುವುದೇ ಸಮ್ಯಗ್ದರ್ಶನ. ಇದನ್ನು ನಾನು ಬಾಹುಬಲಿಯ ಸ್ತೋತ್ರದಲ್ಲಿ ಸೇರಿಸಿದ್ದೇನೆ.

ತ್ವಾಮಾಶ್ರಿತಸ್ಯ ಜಿನ ಮೇ ಕಟುಕರ್ಮಬಂದಾಃ ಕ್ರೂರತ್ವ ಮತ್ರ ಜಹತು ತ್ವರಮದ್ಭುತಂ ಕಿಂ ॥
ಸ್ವಾಮಿನ್ನ ಸಾತವಿವಿಧ ಪ್ರಕೃತಿಃ ಸುಭಕ್ತಿಃ । ಸಂಕ್ರಾಮಯತ್ಯಪಿ ಶುಬೇಕಥಿತಂ ತ್ವಯೈವ॥ 4 ॥

ಹೇ ಜಿನೇಂದ್ರ ದೇವ ನಿಮ್ಮ ಆಶ್ರಯಕ್ಕೆ ಬರುವವರು ಕಟುಕರ್ಮಬಂಧ ಕ್ರೂರತೆಯನ್ನು ಬಿಡುಗಡೆ ಹೊಂದುತ್ತಾರೆ. ಇದರಲ್ಲಿ ಆಶ್ಚರ್ಯವೇನಿದೆ. ಹೇ ಸ್ವಾಮಿ ನಿಮ್ಮ ಭಕ್ತಿಯು ಅನೇಕ ವಿಧ ಅಸಾತ ಪ್ರಕೃತಿಗಳನ್ನು ಶುಭ ಸಾತಾ ಪ್ರಕೃತಿಯಲ್ಲಿ ಸಂಕ್ರಮಣಗೊಳ್ಳುತ್ತದೆ. ಈ ರೀತಿ ನೀವೆ ಹೇಳಿದ್ದೀರ.

ಎಲ್ಲೋರ ಕ್ಷೇತ್ರದ ಪರಿಚಯ

ಇಲ್ಲಿ 34 ಗುಹೆಗಳು ಇವೆ. 1 ರಿಂದ 12ರವರೆಗಿನ ಗುಹೆಗಳು ಬೌದ್ಧಧರ್ಮಕ್ಕೆ ಸಂಬಂಧಿಸಿವೆ. 13 ರಿಂದ 29 ರ ವರೆಗಿನ ಗುಹೆಗಳು ಶೈವ ಧರ್ಮಾವಲಂಭಿಗಳದ್ದು. ಉಳಿದವು ಮಾತ್ರ ಜೈನಧರ್ಮಕ್ಕೆ ಸಂಬಂಧಿಸಿದೆ.

ಈ ಎಲ್ಲೋರ ತನ್ನ ಶಿಲ್ಪ ಮತ್ತು ಸ್ಥಾಪತ್ಯ ಕಲೆಯ ದೃಷ್ಟಿಯಿಂದ ಇಡೀ ಪ್ರಪಂಚದಲ್ಲೇ ಪ್ರಸಿದ್ಧಿಯನ್ನು ಪಡೆದಿದೆ. ಕಠಿಣವಾದ ಪಾಷಾಣದ ಕಲ್ಲಿನಲ್ಲಿ ಲಾವಣ್ಯ, ಮನೋಜ್ಞತೆ ಮತ್ತು ವೀತರಾಗತೆ, ಮುಂತಾದ ಕೋಮಲ ಭಾವನೆಗಳನ್ನು ವ್ಯಕ್ತ ಪಡಿಸುವಲ್ಲಿ ಶಿಲ್ಪಿಯು ತನ್ನ ಕಲೆಯನ್ನು ಉನ್ನತ ಶಿಖರಕ್ಕೆ ಕೊಂಡ್ಯೊಯ್ದಿದ್ದಾರೆ.

ಮೂವತ್ತನೆಯ ಗುಹೆಯಿಂದ ಉತ್ತರಕ್ಕೆ ಒಂದು ರಸ್ತೆ ಬೆಟ್ಟದ ಮೇಲಕ್ಕೆ ಹೋಗುತ್ತದೆ. ಇಲ್ಲಿ ಭ. ಪಾರ್ಶ್ವನಾಥರ ಮಂದಿರವಿದೆ. ಇಲ್ಲಿ ಭ. ಪಾರ್ಶ್ವನಾಥರ 16 ಅಡಿ ಮೂರ್ತಿಯು ಶ್ಯಾಮವರ್ಣದಿಂದ ವಿರಾಜಮಾನವಾಗಿದೆ. ಇದು ಅರ್ಧ ಪದ್ಮಾಸನದಲ್ಲಿದೆ. ಅಕ್ಕ ಪಕ್ಕದಲ್ಲಿ ಧರಣೇಂದ್ರ ಪದ್ಮಾವತಿ ಯಕ್ಷ - ಯಕ್ಷಣಿಯರು ಇದ್ದಾರೆ. ಮೂರ್ತಿಯ ತಲೆಯ ಮೇಲೆ 9 ಹೆಡೆಯಿಂದ ಶೋಭಿತವಾಗಿದೆ. ಈ ಯುಗದಲ್ಲಿ ಗುಹೆಗಳಲ್ಲಿ ಇದೇ ದೊಡ್ಡ ಗುಹಾದೇವಾಲಯವಾಗಿದೆ.

ಧರ್ಮಸಹಿಷ್ಣುತಾ

ಸುತ್ತಾಮುತ್ತಾ ಜೈನರ ಕಲಾತ್ಮಕವಾದ ಮಂದಿರಗಳಿವೆ. ಹಾಗೇ ಬೌದ್ಧರ ಮತ್ತು ಶಿವ ಮಂದಿರಗಳು ಇವೆ. ಇಲ್ಲಿ ಜೈನಮಂದಿರ ಮತ್ತು ಗುಹೆಗಳಲ್ಲಿ ಭ. ಪಾರ್ಶ್ವನಾಥರ ಉಪಸರ್ಗದ ಚಿತ್ರಣ ಮತ್ತು ಶ್ರೀ ಬಾಹುಬಲಿ ಬಳ್ಳಿಗಳಿಂದ ಸುತ್ತುವರಿದ ಮೂರ್ತಿ ಬಹಳವಾಗಿವೆ. ಇವೆಲ್ಲವನ್ನು ಕಲ್ಲಿನಲ್ಲಿಯೇ ಕೆತ್ತಲಾಗಿದೆ. ಬಾಹುಬಲಿಯ ಮೂರ್ತಿಗೆ ಸುತ್ತುವರಿದಿರುವ ಬಳ್ಳಿಗಳನ್ನು ಗಂಧರ್ವ ಬಾಲಕಿಯರು ಅಥವಾ ಬ್ರಾಹ್ಮಿ ಸುಂದರಿಯರನ್ನು ಚಿತ್ರಿಸಿದ್ದಾರೆ.

ನಾಂದ ಗಾಂವ

ಕಸಾಬಖೇಡದಿಂದ ವಿಹಾರ ಮಾಡುತ್ತಾ ನಾಂದಗಾಂವಗೆ ಬಂದೆವು. ಇದು ಆಚಾರ್ಯಕಲ್ಪ ಶ್ರೀ ಚಂದ್ರಸಾಗರಜೀ ಮಹಾರಾಜರ ಜನ್ಮ ಭೂಮಿ. ಇಲ್ಲಿಯ ಶ್ರಾವಕರ ಗುರುಭಕ್ತಿ ಬಹಳ ಚೆನ್ನಾಗಿದೆ. ಇಲ್ಲಿಯ ದೇವಪೂಜೆಯ ಅವಶ್ಯಕ ಕ್ರಿಯೆಯು ಅನುಸರಿಸಬೇಕಾಗುವಂತಿದೆ. ಬೆಳಗ್ಗೆ ಒಂದೊಂದು ಪರಿವಾರದ ಹೆಂಗಸಾಗಲಿ, ಗಂಡಸಾಗಲಿ ತಮ್ಮ - ತಮ್ಮ ಸಮೂಹದ ಮಹಿಳೆಯರೇ. ಬೇರೆ - ಬೇರೆ ಚೌಕದಲ್ಲಿ ಜಿನ ಪ್ರತಿಮೆಯನ್ನು ವಿರಾಜಮಾನಗೊಳಿಸಿ ವಿಧಿವತ್ತಾಗಿ ಪಂಚಾಮೃತ ಅಭಿಷೇಕ ಮತ್ತು ಶಾಂತಿಧಾರೆಯನ್ನು ಮಾಡಿ ಪೂಜೆ ಮಾಡುತ್ತಾರೆ.

ಆಚಾರ್ಯ ಕಲ್ಪ ಶ್ರೀ ಚಂದ್ರಸಾಗರರ ಉಪದೇಶವನ್ನು ಇಲ್ಲಿ ಪೂರ್ಣರೂಪದಲ್ಲಿ ಸಾಕಾರಗೊಳಿಸಿದ್ದಾರೆ. ಇದನ್ನು ನೋಡಿದ ನನಗೆ ಚಂದ್ರಸಾಗರರ ಬಗ್ಗೆ ಅಗಾಧವಾದ ಶ್ರದ್ಧೆ ಉಂಟಾಯಿತು. ನಾನು ಆ ಗುರುಗಳ ದರ್ಶನ ಮಾಡಿಲ್ಲವಾದರೂ ಅವರ ಚರಣಗಳಿಗೆ ಪರೋಕ್ಷವಾಗಿ ನಮೋಸ್ತುಗಳನ್ನು ಹೇಳಿ ಅವರ ಗುಣಗಳನ್ನು ಸ್ಮರಿಸಿಕೊಂಡು ಹಾಗೇ ನಾನು ಗಜಪಂಥ ಮತ್ತು ಮಾಂಗೀತುಂಗಿಯ ಕ್ಷೇತ್ರಗಳ ದರ್ಶನ ಮಾಡಿದೆ. ಈ ಸಿದ್ಧ ಕ್ಷೇತ್ರಗಳ ವಂದನೆಯಿಂದ ಬಹಳ ಹರ್ಷವಾಯಿತು.

ಗಜಪಂಥ ಕ್ಷೇತ್ರ ದರ್ಶನ

ನಾಸಿಕದಿಂದ ಗಜಪಂಥವನ್ನು ತಲುಪಿದೆವು. ಅಂದು ಮಾಘಮಾಸದ ಶುಕ್ಲ ಪಕ್ಷದ ಚತುರ್ದಶಿಯಂದು ನನಗೆ ಉಪವಾಸ ರತ್ನತ್ರಯ ವ್ರತವಿತ್ತು. ಮಾರನೆಯ ದಿನ ಆಹಾರವಾದ ನಂತರ ಬೆಟ್ಟವನ್ನು ಹತ್ತತೊಡಗಿದೆ. ಸಂಘದಲ್ಲಿದ್ದ ಆರ್ಯಿಕೆಯರ ಜೊತೆಗೆ ಕೆಲವರು ಶ್ರಾವಕರು ಇದ್ದರು. ನನಗೆ ಕೆಲವು ಮೆಟ್ಟಿಲು ಹತ್ತುತ್ತಿದ್ದಂತೆ

ಮೇಲುಸಿರು ಪ್ರಾರಂಭವಾಯಿತು. ನನಗೆ ಮುಂದೆ ಹತ್ತಲು ಸಾಧ್ಯವಾಗಲಿಲ್ಲ. ಅಲ್ಲೇ ಕುಳಿತೆ, ನನಗೆ ಅನ್ನಿಸಿತು. ಈ ಪರ್ವತ ಹತ್ತಿ ದರ್ಶನ ಮಾಡಲು ಆಗುವುದೇ ಇಲ್ಲವೆನ್ನಿಸಿತು. ಎದೆ ಹೊಡೆದುಕೊಳ್ಳುವುದು ಜಾಸ್ತಿಯಾಗಿದ್ದು, ಸರಿಯಾದ ಮೇಲೆ ನಿಶ್ಯಕ್ತಿಯಿಂದ ಹತ್ತುವುದು ದುಸ್ತರ ಎನ್ನಿಸತೊಡಗಿತು. ನಾನು ಪಂಚನಮಸ್ಕಾರ ಹೇಳುತ್ತಾ ಇದ್ದೆ ಸುತ್ತಲು ಎಲ್ಲರು ಕುಳಿತು ಮಂತ್ರ ಹೇಳತೊಡಗಿದರು. ಸ್ವಲ್ಪ ಹೊತ್ತಿನ ನಂತರ ಎಲ್ಲರು ಮಾತಾಜೀ ಈಗ ಕೆಳಗೆ ಇಳಿಯಿರಿ ನಾಳೆ ಆಹಾರವಾದ ಮೇಲೆ ಬೆಟ್ಟ ಹತ್ತಿ ವಂದನೆ ಮಾಡುವಿರಂತೆ ಎನ್ನತೊಡಗಿದರು. ಆದರೆ ನಾನು ಯಾರ ಮಾತನ್ನು ಕೇಳದೆ ಮನೋಬಲದಿಂದ ಧೈರ್ಯಮಾಡಿ ಹತ್ತತೊಡಗಿದೆ. ನಿಧಾನವಾಗಿ ಮೇಲೆ ಹತ್ತಿದಾಗ ಆದ ಖುಷಿಗೆ ಏನೆಂದು ಹೇಳಲಿ, ಇದರ ವಂದನೆಯಿಂದ ನನಗೆ ಹೆಚ್ಚಾಗಿ ಫಲ ಸಿಕ್ಕಿತು. ನಿರ್ವಾಣ ಕ್ಷೇತ್ರದ ವಂದನೆಯಿಂದ ಸಿದ್ಧ ಭಕ್ತಿ, ಚಾರಿತ್ರ ಭಕ್ತಿ, ಯೋಗಿ ಭಕ್ತಿ, ಶ್ರುತ ಭಕ್ತಿ, ನಿರ್ವಾಣ ಭಕ್ತಿ, ಶಾಂತಿ ಭಕ್ತಿ ಮತ್ತು ಸಮಾಧಿ ಭಕ್ತಿ ಓದಿ ನಿರ್ವಾಣವನ್ನು ಪ್ರಾಪ್ತಿಗೊಳಿಸಿಕೊಳ್ಳುತ್ತಾ ಸಿದ್ಧರನ್ನು ಮತ್ತೇ - ಮತ್ತೇ ವಂದಿಸಿದೆ.

ಕ್ಷೇತ್ರ ಪರಿಚಯ

ಸತ್ತೇವ ಯ ಬಲಭದ್ದಾ ಜದುವಣರಿಂದಾಣ ಅಟ್ಠಕೋಡೀ ಓ ।
ಗಜಪಂಥೇ ಗಿರಿಸಿಹರೇ ಣಿವ್ವಾಣಗಯಾ ಣಮೋ ತೇಸಿಂ ॥ ೬॥

ಏಳು ಬಲಭದ್ರರು ಮತ್ತು ಎಂಟು ಕೋಟಿ ಯದುವಂಶ ರಾಜರು ಗಜಪಂಥಗಿರಿಯ ಶಿಖರದಿಂದ ನಿರ್ವಾಣವನ್ನು ಪ್ರಾಪ್ತಿ ಮಾಡಿಕೊಂಡರು. ಇವರೆಲ್ಲರಿಗೂ ನನ್ನ ವಂದನೆಗಳು ಏಳು ಬಲಭದ್ರರುಗಳಾದ ವಿಜಯ, ಅಚಲ, ಸುಧರ್ಮ, ಸುಪ್ರಭಾ, ನಂದಿ, ನಂದೀಮಿತ್ರ ಮತ್ತು ಸುದರ್ಶನ. ಈ ಏಳು ಬಲಭದ್ರರು ಇಲ್ಲಿ ಮುಕ್ತಿಯನ್ನು ಪಡೆದರು ಈ ಕ್ಷೇತ್ರವು ನಾಸಿಕದಿಂದ 6 ಕಿಲೋಮೀಟರ್ ದೂರದಲ್ಲಿದೆ.

ಈ ಕ್ಷೇತ್ರದಲ್ಲಿ ಕೆಳಗೆ ಧರ್ಮಶಾಲೆಯಲ್ಲಿ ಒಂದು ಮಂದಿರವಿದೆ. ಈ ಪರ್ವತದ ಎತ್ತರ 400 ಅಡಿಗಳು ಮೆಟ್ಟಿಲುಗಳು 1 ಅಡಿ ಎತ್ತರವಾಗಿದೆ. ಪರ್ವತದ ಮೇಲೆ ಬಲಭದ್ರ ಮುನಿಗಳ ಚರಣವಿದೆ. ಬೆಟ್ಟದ ಮೇಲಿನ ಜಿನಾಲಯದಲ್ಲಿ ಭಗವಾನ್ ಪಾರ್ಶ್ವನಾಥರ 10 ಅಡಿ 4 ಇಂಚಿನ ಶ್ಯಾಮವರ್ಣದ ಪದ್ಮಾಸನ ಮೂರ್ತಿಯು ವಿರಾಜಮಾನವಾಗಿದೆ. ಇಲ್ಲಿಯ ಗೋಡೆಗಳ ಮೇಲೆ ಸಿದ್ಧ ಪರಮೇಷ್ಠಿಗಳನ್ನು ಕೆತ್ತಲಾಗಿದೆ. ಒಂದು ಫಲಕದಲ್ಲಿ ಸಾಧುಗಳ ಖಡ್ಗಾಸನ ಮೂರ್ತಿಯಿದೆ. ಹಾಗೂ ಎರಡು ಪಾರ್ಶ್ವಗಳಲ್ಲಿ ಆಚಾರ್ಯ ಮತ್ತು ಉಪಾಧ್ಯಾಯರ ಪದ್ಮಾಸನ ಮೂರ್ತಿಗಳಿವೆ. ಸಾಧು ಪರಮೇಷ್ಠಿಗಳ ಕೈಯಲ್ಲಿ ಮಾಲೆ ಮತ್ತು ಪಿಂಛಿ ಇದೆ. ಸಾಧು ಗಣವು ಆಚಾರ್ಯ ಪರಮೇಷ್ಠಿಗಳಿಗೆ ವಂದಿಸುತ್ತಿದ್ದಾರೆ. ಉಪಾಧ್ಯಾಯ ಪರಮೇಷ್ಠಿಗಳ ಮುಂದೆ ಶಾಸ್ತ್ರವಿದೆ ಹಾಗೂ ಶ್ರೋತೃಗಣ ಕುಳಿತಿರುವುದನ್ನು ಚಿತ್ರಿಸಿದ್ದಾರೆ. ಅನೇಕ ತೀರ್ಥಂಕರ ಮೂರ್ತಿಗಳನ್ನು ಮತ್ತು ಸಪ್ತ ಖುಷಿಗಳ ಚರಣ ಚಿಹ್ನೆ ಹಾಗೇ ಏಳು ಜನ ಬಲಭದ್ರ ಚರಣ ಚಿಹ್ನೆಗಳು ಸಹಾ ಇವೆ.

ಇದೇ ಕ್ಷೇತ್ರದಲ್ಲಿ ಚಾರಿತ್ರ ಚಕ್ರವರ್ತಿ ಶಾಂತಿ ಸಾಗರರು 1936 ಮತ್ತು 1950 ರಲ್ಲಿ ಎರಡು ಸಲ ಚಾತುರ್ಮಾಸ ಮಾಡಿದ್ದಾರೆ. ಆಚಾರ್ಯ ಮಹಾವೀರ ಕೀರ್ತಿಗಳು ಎರಡು ಸಲ ಮಾಡಿದ್ದಾರೆ. ಇಲ್ಲಿನ ಶ್ರಾವಕರು ಹಾಗೇ ಕ್ಷೇತ್ರದ ಮುನೀಮರು ನನ್ನಲ್ಲಿ ಪ್ರಾರ್ಥಿಸಿದರು ಮಾತಾಜೀ ಈ ಕ್ಷೇತ್ರ ರಮ್ಯವಾಗಿದೆ ಬಹಳ ಜಾಗವೂ ಇದೆ. ತಾವು ಇಲ್ಲಿ ನಿಂತು ಮಧ್ಯ ಲೋಕದ ಚೈತ್ಯಾಲಯಗಳನ್ನು ಇಲ್ಲಿಯೇ ಮಾಡಿಸಿರಿ ಎಂದರು. ಇವರ ಪ್ರಾರ್ಥನೆ ಕೇಳಿದ ಮೇಲೆ ಇಲ್ಲಿ ಹವಾಗುಣವು ಹಿಡಿಸಿತ್ತು ಮತ್ತು ಶ್ರಾವಕರ ಭಕ್ತಿಯು ಚೆನ್ನಾಗಿತ್ತು. ವಿಶೇಷವಾಗಿ

ಇಲ್ಲಿ ಆಗಮ ಪಂಥಗಳಾದ ಬೀಸ ಪಂಥ ಅಲ್ಲದೇ ತೇರಾ ಪಂಥ ಅಥವಾ ಸೋನಗಢ ಪಂಥ ಮುಂತಾದವುಗಳು ಇರಲಿಲ್ಲ. ಇಲ್ಲಿಯ ಜನರು ಗುರುಗಳ ಬಗ್ಗೆ ಯೋಗಕ್ಷೇಮದ ಚರ್ಚೆ ಮಾಡಿ ಅವರಲ್ಲಿ ಸಂಕ್ಲೇಶತ ಮಾಡುವುದರಿಂದ ಭಕ್ತರು ಗುಣಗ್ರಾಹಿಗಳು ಆಗಿದ್ದರು. ಇಷ್ಟೆಲ್ಲಾ ಅನುಕೂಲಗಳಿದ್ದರೂ ನನ್ನ ಮನಸ್ಸು ಶಿವಸಾಗರರ ಸಂಘದ ಕಡೆ ಎಳೆಯುತ್ತಿದ್ದುದ್ದರಿಂದ ಎಲ್ಲೂ ನಿಲ್ಲಬಾರದೆಂದು ಮುಂದೆ ವಿಹಾರ ಕೈಗೊಂಡೆವು.

ಮಾಂಗೀ ತುಂಗೀ ಕ್ಷೇತ್ರ ದರ್ಶನ

ನಾಂದ ಗಾಂವ್‌ನಲ್ಲಿಯೇ ಆರ್ಯಿಕೆ ಜಿನಮತಿಯು ಹೇಳುತ್ತಿದ್ದರು ನಾನು ಮಾಂಗೀ ತುಂಗೀಗೆ ಹೋಗುವುದಿಲ್ಲ. ಈ ಪರ್ವತ ಬಹಳ ಎತ್ತರವಾಗಿದೆ ನನಗೆ ಈ ಕ್ಷೇತ್ರವನ್ನು ನೋಡಲೇಬೇಕೆಂಬ ಉತ್ಕಟ ಇಚ್ಛೆ ಏನೂ ಇಲ್ಲ ಎಂದಿದ್ದರು. ನಾನು ಒಂದೆರಡು ದಿನ ಊಹಾಪೋಹದಲ್ಲೇ ಇದ್ದು ಇವರನ್ನು ಹೇಗೆ ಸಮಾಧಾನ ಪಡಿಸುವುದು ಅಥವಾ ಇವರನ್ನು ಬಿಟ್ಟು ಹೋಗುವುದು ಹೇಗೆ? ಇಲ್ಲಾ ನಾನು ಹೋಗುವುದೋ ಬೇಡವೋ ಎಂದು ಯೋಚಿಸುತ್ತಿದ್ದೆ. ಕಸಾಬಖೇಡದಿಂದ ಧರ್ಮಚಂದ ಎಂಬ ಶ್ರಾವಕ ಬಂದಿದ್ದರು. ಅವರು ಒಬ್ಬ ಅತ್ಯಂತ ನಿಕಟ ಭಕ್ತರಾಗಿದ್ದರು. ನನ್ನ ಅನ್ಯ ಮನಸ್ಕತೆಯನ್ನು ನೋಡಿದವರು ಅವರು ಮಾತಾಜೀ ಏನಾದರೂ ಆಗಲೀ ತಾವು ಮಾಂಗೀ ತುಂಗೀಯ ದರ್ಶನ ಮಾತ್ರ ಬಿಡಬೇಡಿ ಇದೊಂದು ಮಹಾತೀರ್ಥವೇ ಆಗಿದೆ. ಇಲ್ಲಿ 99 ಕೋಟಿ ಮುನಿಗಳು ಮುಕ್ತಿ ಹೊಂದಿದ್ದಾರೆ ಎಂದರು. ಅಲ್ಲದೇ ಮಾತಾಜೀ ನೀವು ಇನ್ನೊಮ್ಮೆ ಈ ಕಡೆ ಬರುವ ಸಂಭವ ಬರುತ್ತದೋ ಇಲ್ಲವೋ ನೀವು ನಿಮ್ಮ ಶಿಷ್ಯರ ಮಾತಿಗೆ ಗಮನ ಕೊಡಬೇಡಿ ಎಂದರು. ಕೊನೆಗೆ ವಿಚಾರ ಮಾಡಿದೆ ಹೋ ಈ ಮಾಂಗೀ ತುಂಗೀ ಕ್ಷೇತ್ರ ಇಲ್ಲಿಂದ ಸ್ವಲ್ಪ ದೂರದಲ್ಲೇ ಇದೆ. ಮರ್ಯಾದಾ ಪುರೋಷತ್ತಮ ರಾಮನ ನಿರ್ವಾಣ ಭೂಮಿ. ನಾನು ನಿಜವಾಗಿಯೂ ಶಿಷ್ಯ ಮೋಹದಲ್ಲಿ ಬಿದ್ದು ಇಂತಹ ತೀರ್ಥಕ್ಷೇತ್ರ ದರ್ಶನ ಮಾಡದೇ ಹೋಗುವುದು ಬುದ್ಧಿವಂತಿಕೆ ಅಲ್ಲವೇ ಅಲ್ಲವೆಂದು ದೃಢವಾಗಿ ಹೋಗುವುದೆಂದು ನಿರ್ಣಯ ಕೈಗೊಂಡೆ. ನಾಂದಗಾಂವ್‌ನ ಸೇಠಾಣಿ ಹಾಗೂ ಶ್ರಾವಕರೆಲ್ಲಾ ಸೇರಿ ಯಾತ್ರೆಯ ವ್ಯವಸ್ಥೆಯನ್ನು ಮಾಡಿದರು.

ನನ್ನ ಹತ್ತಿರವೇ ಇದ್ದ ಭಂವರೀ ಬಾಯಿ ಒಂದು ರಾತ್ರಿ ಬಿದ್ದು ಗಾಯವಾಯಿತು. ಅವಳು ನನ್ನನ್ನು ಮನೆಗೆ ಕಳುಹಿಸಿ ಬಿಡಿ ಇಲ್ಲಿ ಯಾತ್ರೆಯಲ್ಲಿ ಯಾರೂ ನನ್ನನ್ನೂ ನೋಡಿಕೊಳ್ಳಲು ಸಾಧ್ಯ. ನಾನು ಮೊದಲೇ ಯಾತ್ರೆ ಮಾಡಿದ್ದೇನೆ. ಆದ್ದರಿಂದ ಮನೆಗೆ ಹೋಗುತ್ತೇನೆ ಎಂದಿದ್ದರಿಂದ ಅವರನ್ನು ಮನೆಗೆ ಕಳುಹಿಸಬೇಕಾಯಿತು. ಆದರೆ ನನ್ನ ಹತ್ತಿರ ಕು. ಶೀಲಾ ಇದ್ದುದ್ದರಿಂದ ಭಯವಿರಲಿಲ್ಲ. ನನ್ನ ನಿರ್ಣಯದಂತೆ ವಿಹಾರ ಹೊರಟಿತು ಜಿನಮತಿ ಮನಸ್ಸಿಲ್ಲದ್ದಿದ್ದರೂ ಜೊತೆಯಲ್ಲಿ ಹೊರಟಿದ್ದು ಮನಸ್ಸಿಗೆ ಸಮಾಧಾನವಾಯಿತು. ದಾರಿಯಲ್ಲಿ ಕೆಲವು ತೊಂದರೆಗಳು ಆದರೂ ಹೇಗೋ ಅನುಸರಿಸಿಕೊಂಡು ನಾವೆಲ್ಲ ಮಾಂಗೀ ತುಂಗೀ ಸೇರಿದೆವು ಇಲ್ಲಿಯ ಮುನೀಮರಾದ ಗಣೇಶಲಾಲಜೀ ನಮಗೆಲ್ಲಾ ಒಳ್ಳೆಯ ವ್ಯವಸ್ಥೆಯನ್ನು ಮಾಡಿದರು. ಸಂಘದ ವ್ಯವಸ್ಥೆ ಮಾಡುವಲ್ಲಿ ಅವರು ಕುಶಲರು.

ಪರ್ವತದ ವಂದನೆ

ನಾವೆಲ್ಲರೂ ಒಟ್ಟಾಗಿ ಮಂತ್ರ ಜಪಿಸುತ್ತಾ ಪರ್ವತ ಏರತೊಡಗಿದೆವು ಮೇಲೆ ಹತ್ತಿ ನಿರ್ವಾಣ ಭೂಮಿಯ ದರ್ಶನ ಮಾಡಿದ ಮೇಲೆ ವಂದನೆ ಮಾಡಿ ಬಹಳ ಆನಂದವಾಯಿತು. ಆರ್ಯಿಕೆ ಜಿನಮತಿಯಂತೂ ಅಮ್ಮಾ

ನಿಮ್ಮ ಅನುಗ್ರಹದಿಂದಲೇ ನನಗೆ ದರ್ಶನವಾಯಿತು. ಇಲ್ಲದಿದ್ದರೆ ನಾನು ಇಂತಹದನ್ನು ಕಳೆದುಕೊಳ್ಳುತ್ತಿದ್ದೆ. ನಾನು ಇಲ್ಲಿಂದ ಕುಸುಂಬಾಕ್ಕೆ ಹೋಗಲು ಯೋಚಿಸುತ್ತಿದ್ದೆ. ನಿಮ್ಮ ಜೊತೆ ಈ ಕ್ಷೇತ್ರ ವಂದನೆಯಿಂದ ಪುಣ್ಯ ಬಂದಂತಾಯಿತು. ಆಗ ನಾನು ಶಿಷ್ಯರ ಮೋಹದಲ್ಲಿ ಸಿಕ್ಕಿ ಅವರಿಗೆ ಅನುಕೂಲವಾಗುವಂತೆ ನಡೆಯಬಾರದು ನಮಗೆ ಅನುಕೂಲವಾಗುವಂತೆ ನಡೆಯಬೇಕು. ಇಂತಹ ಸಂದರ್ಭದಲ್ಲಿ ಅವರ ಮಾತುಗಳನ್ನು ಉಪೇಕ್ಷೆಯನ್ನೇ ಮಾಡಬೇಕು ಎಂದುಕೊಂಡೆ.

ಕ್ಷೇತ್ರ ಪರಿಚಯ

ನಿರ್ವಾಣ ಕಾಂಡದಲ್ಲಿ ಹೇಳಿದೆ
ರಾಮಹನು ಸುಗ್ಗೀವೋ ಗವಯಗವ ಕ್ಷೋ ಯ ನೀಲಮಹನೀಲೋ ।
ಣವಣವದೀ ಕೋಡೀ ಓ ತುಂಗೀ ಗಿರಿ ಣಿ ವ್ವುದೇ ವಂದೇ ॥ 8 ॥

ರಾಮ ಹನುಮಾನ, ಸುಗ್ರೀವ ಗವಯ, ಗವಾಕ್ಷ, ನೀಲ ಮತ್ತು ಮಹಾನೀಲ ಮುಂತಾದ 99 ಕೋಟಿ ಮುನಿಗಳು ತುಂಗೀ ಗಿರಿಯಿಂದ ನಿರ್ವಾಣವನ್ನು ಪಡೆದರು. ಇವರೆಲ್ಲರಿಗೂ ನಾನು ವಂದಿಸುತ್ತೇನೆ.

ಗ್ರಂಥಗಳಲ್ಲಿ ತುಂಗೀ ಗಿರಿಯ ಹೆಸರು ಬಂದಿದೆ. ಆದರೆ ಮಾಂಗೀಯು ಒಂದು ಪರ್ವತವೆಂದು ತಿಳಿಯಬೇಕು ಇಲ್ಲಿಗೆ ಸಂಬಂಧಿಸಿದ ಒಂದು ಘಟನೆ ಇದೆ. ಕೋಶಂಬಿಯ ವನದಲ್ಲಿ ಜರತ್ ಕುಮಾರನು ತನ್ನ ಬಾಣದಿಂದ ಶ್ರೀ ಕೃಷ್ಣನ ಮೃತ್ಯುವಿಗೆ ಕಾರಣನಾದನು. ಆಗ ಬಲಭದ್ರನು ಅತಿಯಾದ ಮೋಹ ಮತ್ತು ಶೋಕದಿಂದ ಹುಚ್ಚನಂತೆ ತಮ್ಮನ ಹೆಣವನ್ನು 6 ತಿಂಗಳವರೆಗೆ ಹೊತ್ತುಕೊಂಡು ಅಲೆದಾಡುತ್ತಿದ್ದನು. ಒಂದು ದಿನ ಒಬ್ಬ ದೇವನು ಇವನಿಗೆ ತಿಳುವಳಿಕೆ ಹೇಳಿದ್ದರಿಂದ ಕೊನೆಗೆ ತುಂಗೀ ಗಿರಿಯ ಪರ್ವತದ ಮೇಲೆ ಶ್ರೀ ಕೃಷ್ಣನ ದೇಹವನ್ನು ದಹನ ಮಾಡಿದ್ದರಿಂದ ಇಂದು ಈ ಜಾಗವು 'ದಹನ ಕುಂಡ' ವೆಂದು ಪ್ರಸಿದ್ಧಿಯಾಗಿದೆ.

ನಂತರ ಸಂಸಾರದಿಂದ ವಿರಕ್ತರಾಗಿ ಬಲಭದ್ರರು ಜಿನೇಶ್ವರ ದೀಕ್ಷೆಯನ್ನು ಪಡೆದು ಈ ಪರ್ವತದ ಮೇಲೆಯೇ ಧ್ಯಾನವನ್ನು ಮಾಡಿದರು. ಇಲ್ಲಿ ಮೂರ್ತಿ ಬೆನ್ನು ತಿರುಗಿಸಿಕೊಂಡಿರುವುದಕ್ಕೂ ಒಂದು ಐತಿಹ್ಯವಿದೆ ಬಲಭದ್ರ ಮುನಿಗಳು ಆಹಾರಕ್ಕಾಗಿ ಹಳ್ಳಿಗೆ ಹೋದಾಗ ಇವರ ರೂಪ ಸೌಂದರ್ಯವನ್ನು ಮಹಿಳೆಯರು ನೋಡುತ್ತಲೇ ನಿಂತುಕೊಂಡು ಬಿಡುತ್ತಿದ್ದರಂತೆ. ಅಷ್ಟೇ ಅಲ್ಲ ಪುರುಷರು ನಿಬ್ಬೆರಗಾಗಿ ನಿಲ್ಲುತ್ತಿದ್ದರಂತೆ. ಈ ವಿಷಯವನ್ನು ಅರಿತ ಅವರು ಕೊನೆಗೆ ಹಳ್ಳಿಗೆ ಹೋಗುವುದನ್ನೇ ಬಿಟ್ಟು ಕೆಲ ಕಾಲದವರೆಗೆ ಇಲ್ಲಿ ಧ್ಯಾನ ಮಾಡುತ್ತಿದ್ದರು. ಕೊನೆಗೆ ಯಮಸಲ್ಲೇಖವನ್ನು ಕೈಕೊಂಡು ಸಿದ್ಧಿಯನ್ನು ಪಡೆದು 5 ನೇಯ ಮಹಾರ್ಧಿಕ ಸ್ವರ್ಗದಲ್ಲಿ ದೇವನಾದರು.

ಇಲ್ಲಿ ಧರ್ಮಶಾಲೆಯಿದೆ, ಮಂದಿರವಿದೆ, ಮಾನಸ್ತಂಭವಿದೆ ಇಲ್ಲಿ ತಂಗಿದ್ದು ಪರ್ವತವನ್ನು ಏರಬಹುದು ಇಲ್ಲಿ 2960 ಮೆಟ್ಟಿಲುಗಳು ಇವೆ. ಇನ್ನೂ ಮೆಟ್ಟಿಲುಗಳ ನಿರ್ಮಾಣ ಬಾಕಿ ಇದೆ. ಇಲ್ಲಿ ಕೆಲವು ಮೆಟ್ಟಿಲು ಏರುತ್ತಿದ್ದಂತೆ ಎಡಗಡೆ ಎರಡು ಗುಹೆಗಳಿವೆ ಇವಕ್ಕೆ ಸುಧ - ಬುಧ ಗುಹೆ ಎಂದು ಕರೆಯುತ್ತಾರೆ. ಇಲ್ಲಿ ಜಿನ ಪ್ರತಿಮೆಗಳಿವೆ ಗೋಡೆಗಳ ಮೇಲೆಯು ಮೂರ್ತಿಗಳನ್ನು ಕೆತ್ತಿದ್ದಾರೆ. ಗುಹೆಯ ಹತ್ತಿರವೇ ಪ್ರಾಕೃತಿಕ ಕುಂಡದಲ್ಲಿ ಶುದ್ಧಜಲವಿದೆ ಈ ಪರ್ವತದ ಮಂದಿರಗಳಲ್ಲಿ ಅನೇಕ ತೀರ್ಥಂಕರ ಮೂರ್ತಿಗಳಿವೆ. ಹಾಗೇ ಅನೇಕ ಸಾಧುಗಳಲ್ಲಿ ಶ್ರೀರಾಮಚಂದ್ರ, ಹನುಮಂತ ಮುಂತಾದವರ ಪ್ರತಿಮಗಳು ವಿರಾಜಮಾನವಾಗಿವೆ. ಬಹಳಷ್ಟು ಮುನಿಗಳ ಪ್ರತಿಮೆಗಳ ಕೈಯಲ್ಲಿ ಪಿಂಛಿ ಮತ್ತು ಮಾಲೆ ಇದೆ. ಗೋಡೆಗಳ ಮೇಲೂ ಪ್ರತಿಮೆಗಳನ್ನು ಕೆತ್ತಿದ್ದಾರೆ.

ಸೀತೆ ಮಾತೆಯ ಚರಣಗಳು

ಅಲ್ಲೆಲ್ಲಾ ಸುತ್ತಾಡಿ ಇಳಿಯುವ ಸಮಯದಲ್ಲಿ ಬಯಲಲ್ಲಿ ಒಂದು ಗುಹೆಯಲ್ಲಿ ಸೀತೆಯ ಚರಣ ಚಿಹ್ನೆಗಳಿವೆ. ಇಲ್ಲಿ ಸೀತೆ ಆರ್ಯಿಕೆಯಾಗಿದ್ದಾಗ ತಪಸ್ಸು ಮಾಡಿದ್ದರು. ಇಲ್ಲಿ ಆರ್ಯಕೆ ಸೀತೆಯ ಚರಣಗಳಿಗೆ ವಂದಿಸಿದಾಗ ಬಹಳ ಸಂತೋಷವಾಯಿತು. ಆಗ ನನಗೆ ಹೇ ಮಾತೆ ನಿಮ್ಮಂತಹ ತಪಶ್ಚರ್ಯ ಮತ್ತು ಧೈರ್ಯ ನಮಗೂ ಉಂಟಾಗಲಿ ಎಂದು ಕೊಂಡೆ. ಶೀಲವಂತೆಯಾದ ಚರಣಗಳಿಗೆ ಯಾರ ತಲೆಯಾದರು ಕೂಡ ಬಾಗಿಯೇ ಬಾಗುತ್ತದೆ. ಅಗ್ನಿ ಪರೀಕ್ಷೆಗೆ ಒಳಗಾದ ಸೀತೆಯ ಪಾತಿವ್ರತ್ಯದಿಂದ ಅಗ್ನಿಕುಂಡವು ಜಲಕುಂಡವಾಯಿತು. ಪರೀಕ್ಷೆಯಲ್ಲಿ ಉತ್ತೀರ್ಣಳಾದ ಸೀತೆ ತ್ರಿಖಂಡಾಧಿಪತಿಯಾದ ಶ್ರೀರಾಮಚಂದ್ರನ ಪಟ್ಟದ ರಾಣಿಯ ಪಟ್ಟವನ್ನು ತ್ಯಜಿಸಿ. ಆರ್ಯಿಕಾ ದೀಕ್ಷೆಯನ್ನು ತೆಗೆದುಕೊಂಡು ಕಠಿಣ ತಪಸ್ಸನ್ನು ಮಾಡಿ ಸ್ತ್ರೀ ಪರ್ಯಾಯದಿಂದ ಬಿಡುಗಡೆ ಹೊಂದಿ ಅಚ್ಯುತೇಂದ್ರ ಪದವಿಯನ್ನು ಪಡೆದಳು.

ಶ್ರೀರಾಮಚಂದ್ರನ ಮೂರ್ತಿ

ತುಂಗೀ ಪರ್ವತದಲ್ಲಿ ಒಂದು ಪ್ರಸಿದ್ಧ ಗುಹೆ ಶ್ರೀರಾಮನದು ಇದರಲ್ಲಿ ಶ್ರೀರಾಮನ ಮೂರ್ತಿ ಇದೆ. ಇಲ್ಲಿಯ ಗೋಡೆಯ ಮೇಲು ಮುನಿಗಳ ಪ್ರತಿಮೆಗಳನ್ನು ಕೆತ್ತಲಾಗಿದೆ. ಈ ಕ್ಷೇತ್ರದಲ್ಲಿ ಪರ್ವತದ ಕೆಳಗಡೆ ಮೂರು ಮಂದಿರಗಳಿವೆ. ವರ್ತಮಾನದಲ್ಲಿ 8-10 ವರ್ಷದ ಹಿಂದೆ ಶ್ರೇಯಾಂಸ ಸಾಗರರ ಪ್ರೇರಣೆಯಿಂದ ಇಲ್ಲಿ ನೂತನ ನಿರ್ಮಾಣ ಕಾರ್ಯಗಳು ನಡೆಯುತ್ತಿವೆ. 24 ತೀರ್ಥಂಕರರ ವಿರಾಜಮಾನಗೊಳಿಸಲಾಗುತ್ತದೆ. ವಿ. ಸ. 1997ರಲ್ಲಿ ಮಾನಸ್ತಂಭ ಪ್ರತಿಷ್ಠೆಯ ಸಮಯದಲ್ಲಿ ಆಚಾರ್ಯ ವೀರಸಾಗರರು ಸಂಘ ಸಹಿತವಾಗಿ ಇಲ್ಲಿಯೇ ಇದ್ದರು. ಪ್ರತಿಷ್ಠೆಯ ಸಮಯಕ್ಕೆ ಚಾರಿತ್ರ ಚಕ್ರವರ್ತಿ ಶಾಂತಿಸಾಗರರು ಸಂಘ ಸಹಿತ ಬಂದಿದ್ದರು.

ನನ್ನ ಸಂಘದ ಕ್ಷುಲ್ಲಿಕಾ ಅಭಯಮತಿಗೆ ಅನಾರೋಗ್ಯವಾಗಿದ್ದರು ಸಾಹಸದಿಂದ ಹತ್ತಿ ವಂದನೆ ಮಾಡಿದರು. ಇಲ್ಲಿ ಕ್ಷೇತ್ರದ ಮಹಿಮೆಯೇ ಹಾಗಿರುತ್ತದೆ. ಇಷ್ಟೊಂದು ಮೆಟ್ಟಿಲನ್ನು ಹತ್ತಿ ದರ್ಶನ ಮಾಡೇ ಬಿಟ್ಟರು. ಸಮ್ಮೇದ ಶಿಖರದಲ್ಲಿ ಹೇಗೆ ಎರಡು ಮೈಲಿ ಕೂಡ ನಡೆಯದವರು ಭಕ್ತಿಯಿಂದ 16 ಮೈಲಿ ಸುತ್ತಿ ವಂದನೆ ಮಾಡಿ ಬರುತ್ತಾರೆ.

ನಿರ್ವಾಣ ಪ್ರಾಪ್ತ ಮುನಿಗಳ ನಿರ್ವಾಣ ಸ್ಥಳಗಳ ವಂದನೆ ಮಾಡಿ ನಿರ್ವಾಣದ ಪ್ರಾಪ್ತಿಯನ್ನು ಬೇಡಬೇಕು. ಎಲ್ಲಿಯವರೆಗೆ ನಿರ್ವಾಣ ದೊರೆಯುವುದಿಲ್ಲವೋ ಅಲ್ಲಿಯವರೆಗೆ ಹೃದಯದಲ್ಲಿ ಅದರ ಚರಣಕಮಲಗಳನ್ನು ಸ್ಥಾಪನೆ ಮಾಡಿಕೊಳ್ಳುತ್ತಿರುವುದೇ ನಿರ್ವಾಣ ವಂದನೆಯ ಫಲವಾಗಿದೆ.

ಎಲ್ಲರು ಓದುತ್ತಾರೆ

ತವ ಪಾದೌ ಮಮ ಹೃದಯ ಮಮ ಹೃದಯಂ ತವ ಪದದ್ವಯೇ ಲೀನಮ್ ।
ತಿಷ್ಠತ್ ಜಿನೇಂದ್ರ । ತಾವದ್ ಯಾವನ್ನಿರ್ವಾಣ ಸಂಪ್ರಾಪ್ತಿಃ ॥

ಮಧ್ಯಲೋಕ ಚೈತ್ಯಾಲಯ ರಚನೆಯ ಪ್ರೇರಣೆ

ಇಲ್ಲಿಯ ಮುನೀಮರು ಮತ್ತು ನಾಂದಗಾಂವದ ಪ್ರಮುಖ ಜನಗಳು ಇಲ್ಲಿಯೇ ಮದ್ಯಲೋಕದ ಚೈತ್ಯಾಲಯವನ್ನು ರಚನೆ ಮಾಡಿಸಲು ಪ್ರಾರ್ಥಿಸಿದರು, ಅನುನಯದಿಂದ ಕೇಳಿಕೊಂಡರು, ಕೊನೆಗೆ ಆಗ್ರಹವನ್ನು

ಮಾಡಿದರು. ಆದರೆ ಎಲ್ಲಿ ಯೋಗವಿರುತ್ತದೋ ಅಲ್ಲಿ ಸಾಧ್ಯವಾಗುವುದು ಎಂಬ ಸೂಕ್ತಿ 'ಇಂದಿಗೂ ಸತ್ಯವಾಗಿದೆ. ನನಗೆ ಇಂತಿಂತಹ ಕ್ಷೇತ್ರಗಳನ್ನೆಲ್ಲ ಬಿಟ್ಟು ಹಸ್ತಿನಾಪುರದಲ್ಲೇ ಮಾಡಿಸಲು ಸಾಧ್ಯವಾಗಿದ್ದು.

ಇಲ್ಲಿಗೆ ಬ್ರ. ಸುಗನಚಂದ ಅವರ ಸಹೋದರ ಮೊದಲಾದವರೆಲ್ಲ ಬಂದರು. ಮುಂದಿನ ವಿಹಾರಕ್ಕಾಗಿ ಅವರಿಗೆ ಸೂಚನೆ ಕೊಟ್ಟು ಅವರೆಲ್ಲ ಇಲ್ಲಿಯ ದರ್ಶನ ಮುಗಿಸಿದವರೇ ಇಲ್ಲಿಂದ ಕುಸುಂಬಾ, ದೂಲಿಯಾ ಮಾರ್ಗವಾಗಿ ಸಂಘ ಸಹಿತ ಬಡವಾನಿ ಸಿದ್ಧಕ್ಷೇತ್ರಕ್ಕೆ ಬಂದೆವು. ನಾನು ಇಲ್ಲಿಗೆ ಬರುವ ಸಮಯಕ್ಕೆ ಸರಿಯಾಗಿ ಶ್ರವಣಬೆಳಗೊಳದ ಮಸ್ತಕಾಭಿಷೇಕ ಪ್ರಾರಂಭವಾಗಿತ್ತು. ನಾನು ಅಲ್ಲೇ ನಿಂತು. ಬ್ರ. ಸುಗನಚಂದ, ಕುಮಾರಿ ಶೀಲ, ಸಂಘದ ಭಂವರೀಲಾಲ ಮೊದಲಾದವರನ್ನೆಲ್ಲ ನಾನೇ ಶ್ರವಣಬೆಳಗೊಳಕ್ಕೆ ಕಳುಹಿಸಿದೆ. ಅವರಿಗೆಲ್ಲ ನನ್ನ ಯೋಚನೆ ನಿಮ್ಮ ಆಹಾರ ಮತ್ತು ಆರೋಗ್ಯವನ್ನು ನೋಡಿಕೊಳ್ಳಲು ಯಾರಾದರು ಇರುತ್ತೇವೆ ಎಂದು. ಇಲ್ಲಿಯು ಕೂಡ ಯಾರದು ವಿಶೇಷ ಪರಿಚಯವಾಗಿರದಿದ್ದರು ನಾನು ಸಾಧುಗಳ ಆಹಾರ ವಿಹಾರ ಅವರ ಅದೃಷ್ಟದಂತೆ ಆಗುವುದು. ನೀವೇನು ಚಿಂತೆ ಮಾಡಬೇಡಿ ಹೋಗಿ ಬಾಹುಬಲಿಯ ಮಹಾಮಸ್ತಕಾಭಿಷೇಕ ನೋಡಿಬನ್ನಿ ಅಲ್ಲಿಯವರೆಗೆ ನಾನು ಇಲ್ಲಿಯೇ ಇರುತ್ತೇವೆ ಎಂದು ಎಲ್ಲರನ್ನು ನಾನೇ ಕಳುಹಿಸಿದೆ.

೫೧

ಬಾವನಗಜಾ ತೀರ್ಥಕ್ಷೇತ್ರದ ದರ್ಶನ

ಪ್ರಾತಃಕಾಲ ಎಲ್ಲರಿಗೂ ಆಶೀರ್ವಾದ ಕೊಟ್ಟು ಕಳುಹಿಸಿದೆ. ಇದರ ನಂತರ ಜನಗಳು ಬರತೊಡಗಿದ್ದರು. 8ರಿಂದ 9 ಗಂಟೆಯವರೆಗೆ ಉಪದೇಶವಾಯಿತು. ಅನಂತರ ಕಮಂಡಲುಗಳಿಗೆ ನೀರು ಬಂತು. ನಾವೆಲ್ಲ ಶುದ್ಧಿ ಮಾಡಿಕೊಂಡು ಆಹಾರಕ್ಕಾಗಿ ಹೊರೆಟವು. ಶ್ರಾವಕರು (ಹಲವಾರು) ನಾಕೈದು ಚೌಕಗಳನ್ನು ಮಾಡಿಕೊಂಡಿದ್ದರು. ಎಲ್ಲಾ ಸಾಧ್ವಿಗಳಿಗೂ ನಿರಂತರಾಯವಾಗಿ ಆಹಾರವಾಯಿತು.

ಇಲ್ಲಿಂದ ಚೂಲಾಗಿರಿ ಸಿದ್ಧಕ್ಷೇತ್ರ ಏಳು ಮೈಲಿ ದೂರವಿದೆ ಇಲ್ಲಿಯ ಬಡವಾನಿ ಒಂದು ಪ್ರಸಿದ್ಧ ನಗರ. ಮಧ್ಯಾಹ್ನದಲ್ಲಿ ಬ್ರ. ದಾಖಾಬಾಯಿ ಬಂದರು. ಇವರು ಆಚಾರ್ಯಕಲ್ಪ ಚಂದ್ರಸಾಗರ ಮಹಾರಾಜರ ಶಿಷ್ಯೆಯಾಗಿದ್ದರು. ಮನೆಯಲ್ಲಿ ಧರ್ಮಾರಾಧನೆ ಚೆನ್ನಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಇವರೊಡನೆ ಮಾತಾಡುತ್ತಾ ಯೋಚಿಸಿದೆ. (ನನಗೆ) ನಾನು ಚೂಲಗಿರಿಗೆ ಹೋಗಿ ಒಂದೆರಡು ದಿನ ಇರಬಹುದು. ಆದರೆ ಚೌಕ ಮಾಡಲು ಬಾಯಿಗಳು ಬೇಕಾಗಿದ್ದರಲ್ಲ ಇಲ್ಲಿಯ ಜನ ಉಪದೇಶದಿಂದ ಚೆನ್ನಾಗಿ ಪ್ರಭಾವಿತರಾಗಿದ್ದರು. ಒಂದೆರಡು ದಿನಗಳಾದ ಮೇಲೆ ದಾಖಾಬಾಯಿ ಹೇಳಿದರು. ಮಾತಾಜೀ ತಾವು ಚೂಲಾಗಿರಿಗೆ ಬನ್ನಿರಿ. ನಾವು ನಿಮ್ಮ ಸಂಘದವರ ಎಲ್ಲಾ ವ್ಯವಸ್ಥೆಯನ್ನು ಮಾಡುತ್ತೇವೆ ಎಂದರು. ಅಲ್ಲಿಂದ ಕೆಲವು ಶ್ರಾವಕರು ಅಲ್ಲಿರಲು ಸಿದ್ಧರಾದರು.

ಬಾಗಿಲು ತೆರೆದು ರಾತ್ರಿಯ ವಿಶ್ರಾಮ

ಬಡವಾನಿಯ ಧರ್ಮಶಾಲೆಯಲ್ಲಿ ಒಂದು ದಿನ ರಾತ್ರಿ ನಿದ್ದೆ ಮಾಡುತ್ತಿದ್ದೆವು. ಯಾತ್ರಿಗಳ ಒಂದು ಬಸ್ಸು ಬಂದಿತು. ಅವರುಗಳು ಕೂಡ ಅದೇ ಧರ್ಮಶಾಲೆಯಲ್ಲಿ ತಂಗಿದ್ದರು. ರಾತ್ರಿ ಸುಮಾರು 11-12 ಗಂಟೆಯ ಸಮಯ ಬಾಗಿಲು ತೆರೆದುಕೊಂಡು ಬಳಿಗೆ ಬಂದ ಕೆಲವರು ನೋಡತೊಡಗಿದರು ಒಬ್ಬ ಮನುಷ್ಯ ಬುಂದೇಲಖಂಡೀ ಭಾಷೆಯಲ್ಲಿ ಹೇಳತೊಡಗಿದ.

ಈತೌ ತೋ ಬಿರಮಚಾರೀ ಪರೇ ಹೈ

ನಾವೆಲ್ಲ ಎದ್ದು ಕುಳಿತೆವು. (ನಿಜವಾಗಿ) ಮೊದಲೇ ನಾವೆಲ್ಲ ಬಿಳಿ ಸೀರೆ, ಸೀರೆಯನ್ನ ಮುಸುಗು ಹಾಕಿ ಮಲಗಿದ್ದೆವು. ಚಳಿಗಾಲವಾದ್ದರಿಂದ ಹುಲ್ಲಿನ ಮೇಲೆ ಮಲಗಿದ್ದೆವು. ಅವರು ನಾವೆಲ್ಲ ಬ್ರಹ್ಮಚಾರಿಗಳು ಎಂದು ತಿಳಿದಿದ್ದಾರೆ. ಹಾಗೆ ಅಂದುಕೊಂಡು ಎಲ್ಲರು ಹೊರಟುಹೋದರು. ಬೆಳಗ್ಗೆ ಈ ಎಲ್ಲ ಯಾತ್ರಿಕರಿಗೆ ನಾವು ಮಾತಾಜೀಗಳು ಎಂದು ಗೊತ್ತಾಗಿ ಅವರಿಗೆ ತುಂಬ ಸಂಕೋಚವಾಯಿತು. ನಮ್ಮ ಮಾತಾಜೀಗಳು ಬ್ರಹ್ಮಚಾರಿಗಳೇ ಬಿಡಿ ಎಂದರು. ಇದೊಂದು ತಮಾಶೆಯ ವಿಷಯವೇ ಆಯಿತು. ಬ್ರ. ದಾಖಾಬಾಯಿ ನನ್ನ ಹತ್ತಿರ ಹೇಳಿದರು. ಮಾತಾಜಿ ರಾತ್ರಿ ಮಲಗುವ ವೇಳೆಯಲ್ಲಿ ಬಾಗಿಲ ಚಿಲಕ ಹಾಕಿಕೊಂಡು ಮಲಗಿ ಅದಕ್ಕೆ ನಾನು ನಾವು ಯಾವಾಗಲು ಬಾಗಿಲನ್ನು ಮುಚ್ಚಿ ಮಲಗುವುದಿಲ್ಲ. ಏನಾದರು ಬಾಗಿಲ ಹತ್ತಿರದಲ್ಲೇ ರಸ್ತೆ ಇದೆ ಎಂದಾದರೆ ಬಾಗಿಲು ಹಾಕಿಕೊಳ್ಳಬೇಕು ಇಲ್ಲದಿದ್ದರೆ ಜೈನಧರ್ಮಶಾಲೆಗಳಲ್ಲಿ ಏತಕ್ಕೆ ಬಾಗಿಲು ಚಿಲುಕ ಹಾಕಬೇಕು. ಚಳಿಗಾಲವಾದರೆ ಬಾಗಿಲು ಮುಚ್ಚುತ್ತಿದ್ದರು. ಬೇಸಿಗೆಯಲ್ಲಿ ಬಾಗಿಲು ಮುಚ್ಚುವ ಅವಶ್ಯಕತೆ ಇರಲಿಲ್ಲ ತೆಗೆದುಕೊಂಡೆ ಮಲಗುತ್ತಿದ್ದೆವು. ಇಲ್ಲಿ ಕೆಲವು ದಿನಗಳು ಇದ್ದು ಪುನಃ ಭಾವನಗಜಾಕ್ಕೆ ಬಂದೆವು ಇಲ್ಲಿಯ ಮಂದಿರಗಳ ದರ್ಶನವಾಯಿತು. ಭ ಆದಿನಾಥರ ವಿಶಾಲಕಾಯದ ದರ್ಶನವಾಯಿತು. ಸ್ವಾಮಿಯನ್ನ ನೋಡಿ ಸಂತೋಷವಾಯಿತು ಶಿಖರದ ಮೇಲೆ ಹೋಗಿ ನಿರ್ವಾಣ ಭೂಮಿಯನ್ನು ವಂದಿಸಿ ಬಂದೆವು.

ಬಾವನ ಗಜಾ ಕ್ಷೇತ್ರದ ಪರಿಚಯ

ಇದು ಚೂಲಗಿರಿಯ ಸತೆಪುಡ ಶೈಲಿಯಲ್ಲಿ ಎಲ್ಲಕ್ಕಿಂತ ಎತ್ತರದ ಪರ್ವತವಾಗಿದೆ. ಇಲ್ಲಿ ಬೆಟ್ಟದ ಮಧ್ಯದಲ್ಲಿಯ ಒಂದು ಬಂಡೆಯಲ್ಲಿಯೇ ಕೆತ್ತಿರುವ ಭ ಆಧಿನಾಥರ ಕಾಯೋತ್ಸರ್ಗ ಮುದ್ರೆಯ 84 ಅಡಿ ಎತ್ತರದ ಮೂರ್ತಿ ಇದೆ. ಇದೇ ಬಾವನಗಜ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಪ್ರಾಚೀನಕಾಲದಲ್ಲಿ ಈ ಪ್ರಾಂತ್ಯದಲ್ಲಿ ಒಂದು ಮೊಳಕ್ಕೆ ಅಳತೆಯನ್ನು ಗಜ ಎಂದು ಪರಿಗಣಿಸುತ್ತಿದ್ದರು. ಈ ಪ್ರತಿಮೆ 51 ಮೊಳಕ್ಕೆ ಅಳತೆ ಇದೆ. ಜೈನತೀರ್ಥಗಳಲ್ಲಿ ಇದೇ ವಿಶಾಲವಾದ ಮೂರ್ತಿ ಇದಕ್ಕೆ ಸರಿಗಟ್ಟುವ ಮೂರ್ತಿ ಇನ್ನೆಲ್ಲು ಇಲ್ಲ. ಈ ಮೂರ್ತಿಯ ಬಗ್ಗೆ ಯಾವ ಲೇಖನ ಇಲ್ಲವಾಗಿ ಸರಿಯಾದ ಕಾಲ ತಿಳಿಯದಂತಾಗಿದೆ. ಜನರು ಇದನ್ನು ಚತುರ್ಥಕಾಲದ್ದೆಂದು ಸಹ ಹೇಳುತ್ತಾರೆ.

ಈಗ ಅಭಿಷೇಕಕ್ಕೆ ಅನುಕೂಲವಾಗುವಂತೆ ಬೆಟ್ಟದ ಎರಡು ಕಡೆಯಿಂದ ಮೆಟ್ಟಿಲುಗಳನ್ನು ಮಾಡಿದ್ದಾರೆ. ಬೆಟ್ಟದ ಮೇಲಿರುವುದೇ ಚೂಲಗಿರಿ ಇದೊಂದು ಸಿದ್ಧಭೂಮಿಯಾಗಿದೆ. ಇಲ್ಲಿಂದಲೇ ಇಂದ್ರಜಿತ್, ಕುಂಭಕರ್ಣರು ಮೋಕ್ಷಕ್ಕೆ ಹೋಗಿದ್ದಾರೆ ಇದರ ಉಲ್ಲೇಖ ಪ್ರಾಕೃತದ ನಿರ್ವಾಣ ಕಾಂಡದಲ್ಲಿ ಹೇಳಿದೆ.

ಬಡವಾಣಿವರಣಯರೆ ದಕ್ಖಿಣಭಾಯಮ್ಮಿ ಚೂಲಗಿರಿಸಿಹರೇ ।
ಇಂದಜಿಯ ಕುಂಭಯಣ್ಣೋ ಣಿವ್ವಾಣಗಯಾ ಣಮೋ ತೇಸಿಂ ॥ ೨ ॥

ಬಡಮನಿ ನಗರದ ದಕ್ಷಣದ ಕಡೆಯ ಚೂಲಗಿರಿ ಶಿಖರದಿಂದ ಇಂದ್ರಜಿತ ಮತ್ತು ಕುಂಭಕರ್ಣ ಮೊದಲಾದವರು ಮೋಕ್ಷಕ್ಕೆ ಹೋದರು ಈ ಎಲ್ಲರಿಗೂ ನಾನು ವಂದನೆಗಳನ್ನು ಮಾಡಿದೆ.

ಮೇಲಿನ ಮಂದಿರದಲ್ಲಿ ಮೂರು ಮುನಿಗಳ ಚರಣ ಜಿಹ್ನೆಗಳಿವೆ. ಎರಡು ಪ್ರತಿಮಗಳು ಇವೆ. ಇದಲ್ಲದೆ ಇನ್ನು ಹಲವಾರು ಮೂರ್ತಿಗಳು ಇವೆ. ಕೆಳಗೆ 11 ಜನ ಮಂದಿರಗಳಿವೆ. ಒಂದು ಮಾನಸ್ತಂಭ ಮತ್ತು 4 ಧರ್ಮಶಾಲೆಗಳಿವೆ.

ವೃಷಭ ಜಯಂತಿ ಮಹೋತ್ಸವ

ಶ್ರವಣ ಬೆಳಗೊಳದಲ್ಲಿ ಆದಿ ನಾಥರ ಮಗ ಬಾಹುಬಲಿಯ 57 ಅಡಿ ಮಹಾನ್ ಮೂರ್ತಿಗೆ ಮಹಾಮಸ್ತಕಾಭಿಷೇಕ ಆಗುವುದಿತ್ತು ಇಲ್ಲಿ ಚೈತ್ರ ಕೃಷ್ಣ ನವಮಿಯ ದಿನ ಭ ಆದಿನಾಥರ ಜನ್ಮ ಜಯಂತಿಯ ದಿನ 84 ಅಡಿ ಎತ್ತರದ ಭ ಆದಿನಾಥರ ಪ್ರತಿಮೆಗೆ ಅಭಿಷೇಕ ಮಾಡಿಸುವ ಭಾವನೆ ಉಂಟಾಯಿತು. ಶ್ರಾವಕರುಗಳು ಇದರ ಬಗ್ಗೆ ವಿಚಾರ ವಿಮರ್ಶೆಮಾಡಿ ನಿರ್ಣಯ ಕೈಕೊಂಡು ಚಿಕ್ಕ ಪುಟ್ಟ ಆಯೋಜನೆ ಮಾಡಿಕೊಂಡರು. 108 ಕಳಸಗಳಿಂದ ಹಾಲು, ಮೊಸರು ಇಕ್ಷುರಸ ಮುಂತಾದ ಪಂಚಾಮೃತದಿಂದ ಅಭಿಷೇಕ ಮುಂತಾದವುಗಳ ರೂಪರೇಖೆ ಮಾಡಿದರು.

ಅಲ್ಲಿ ಜೇನುಗೂಡು ಇದ್ದುದ್ದರಿಂದ ಅಭಿಷೇಕ ಮಾಡಿದ್ದರಿಂದ ಜೇನುಗೂಡಿನಿಂದ ಜೇನುಗಳು ಎದ್ದರೆ ಏನು ಮಾಡುವುದು ಎಂದು. ಆದರೆ ನಾನು ಆತ್ಮವಿಶ್ವಾಸದಿಂದ ಹೇಳಿದೆ. ಜೇನುಹುಳುಗಳು ತೊಂದರೆ ಕೊಡುವುದಿಲ್ಲ ತಾವು ನಿಶ್ಚಂತರಾಗಿ ಅಭಿಷೇಕದ ವ್ಯವಸ್ಥೆಯನ್ನು ಮಾಡಿಕೊಳ್ಳಿರಿ. ಆ ಮಂಗಳ ದಿವಸ ಬಂದಿತು. ನನಗಂತು ಬಹಳ ಖುಷಿ ಆಯಿತು. ಬಾಹುಬಲಿಯ ಅಭಿಷೇಕ ನೋಡಲು ಆಗಲಿಲ್ಲ ಆದರೆ ಅವರ ತಂದೆ ಭ. ಆದಿನಾಥರ 84 ಅಡಿಯ ಮೂರ್ತಿಗೆ ಅಭಿಷೇಕ ನೋಡುವ ಭಾಗ್ಯ ಸಿಕ್ಕಿತು. ಅಕ್ಕಪಕ್ಕದ ಕೆಲವು ಶ್ರಾವಕರು ಸೇರಿದರು ಒಳ್ಳೆ ವಿಜೃಂಭಣೆಯಿಂದ ಅಭಿಷೇಕ ನೆರವೇರಿತು. ವಿಶಾಲಕಾಯದ ಮೂರ್ತಿಗೆ ಮೊದಲು ಪಂಚಾಮೃತ ಅಭಿಷೇಕವಾಯಿತು. ಆಮೇಲೆ 108 ಕಳಸಗಳಿಂದ ಅಭಿಷೇಕವಾಯಿತು ಮೂರ್ತಿ ಮಟ್ಟಕ್ಕೆ ಸಾಕಷ್ಟು ನೆನೆಯಲಿಲ್ಲ. ಆದರೂ ತೊಂದರೆ ಇಲ್ಲದೆ ಅಭಿಷೇಕವಾಯಿತು. ಸ್ವಾಮಿಯ ಜನ್ಮಜಯಂತಿಯಂದು ನನ್ನ ಪ್ರವಚನವು ಆಯಿತು. ಹೀಗೆ ಚರ್ಚೆಯಾಗಿದ್ದ ವಿಷಯ ಸಹಜವಾಗಿಯೇ ಶಾಂತವಾಯಿತು.

ಬರೆದಿರುವ ವಿಷಯವೇ ಪ್ರಮಾಣಿತವಾಯಿತು

ಅಭಿಷೇಕದ ಸಮಯದಲ್ಲಿ ಹರಾಜುಗಳನ್ನು ಕೂಗಿದ್ದರು. ಇದರಲ್ಲಿ ಒಬ್ಬರು ಜೈನೇತರರು ತೆಗೆದುಕೊಂಡಿದ್ದರು. ಅದನ್ನು ಪಟ್ಟಿ ಮಾಡುವಾಗ ಗೊತ್ತಾಯಿತು ಕೆಲವರು ಜೈನೇತರ ಹೆಸ ಇದ್ದುದ್ದಕ್ಕೆ ಮತ್ತೇ ಹರಾಜ ಮಾಡೋಣ ಎಂದರು. ಕೆಲವರು ಅವರು ಕೂಗಿರುವುದರಿಂದ ಅವರ ಕೈಯಲ್ಲೇ ಮಾಡಿಸಿ ಎಂದು ಕೊನೆಗೆ ಚರ್ಚೆ ನಡೆದು ನನ್ನ ಹತ್ತಿರ ವಿಷಯ ತಂದರು. ಆಗಮದ ಅನುಸಾರ ನಮ್ಮ ಗುರು ಪರಂಪರೆಯ ಅನುಸಾರ ಜೈನೇತರರು ಅಭಿಷೇಕ ಮಾಡುವಂತಿಲ್ಲ ನಮ್ಮ ಪರಂಪರೆಯನ್ನು ಬಿಡುವುದು ಬೇಡ ಎಂದೆ. ಪ್ರಮುಖ ಶ್ರಾವಕರು ಕೂಡ ಆಗಮದ ಉಲ್ಲೇಖವನ್ನ ಪ್ರಸ್ಥಾಪಿಸಿದರು ಅಭಿಷೇಕವನ್ನು ಜೈನೇತರರು ಮಾಡುವಂತಿಲ್ಲ ಎಂದು ಕೆಲವು ಕ್ಷಣಗಳಲ್ಲಿಯ ಹರಾಜ ಕೂಗಿದ್ದ ಮಹಾನುಭಾವರೇ ಬಂದು. ನಾನು ಹರಾಜ ಕೂಗಿದ್ದು ಸರಿ ಆದರೆ ನೀವೆ ಯಾರಾದರು ಅಭಿಷೇಕ ಮಾಡಿ ಆದರೆ ಹರಾಜು ಕೂಗಿರುವ ಹಣವನ್ನು ನಾನು ಸಂದಾಯ ಮಾಡುತ್ತೇನೆ

ಎಂದರು ಚರ್ಚೆ ಶಾಂತವಾಗಿ ಪ್ರಸನ್ನತೆ ಮೂಡಿ ಕಾರ್ಯಕ್ರಮ ಸಾಂಗವಾಗಿ ನೇರವೇರಿತು. ಈ ಪ್ರಸಂಗದಿಂದ ನನ್ನ ಮನದಲ್ಲಿ ಒಂದು ಆಲೋಚನೆ ಬಂದಿತು. ಎಲ್ಲ ದಿಗಂಬರ ಜೈನ ತೀರ್ಥ ಕಮಿಟಿಗಳ ಮಂದಿರಗಳಲ್ಲಿ ವಿಧಿ ವಿಧಾನ ಮಾಡುವಾಗ ಯಾವುದೇ ಪೂಜೆ ಅಭಿಷೇಕಗಳಲ್ಲಿ ಹರಾಜನ್ನು ಕೂಗುವ ಮೊದಲೆ ಜೈನರು ಮಾತ್ರ ಭಾಗವಹಿಸುವಂತೆ ಮೊದಲೇ ಏರ್ಪಾಟು ಮಾಡಬೇಕು ದಾನವನ್ನಾಗಲಿ ಜೈನೇತರರಿಂದ ಸ್ವೀಕರಿಸಬಾರದು. ಈ ರೀತಿಯ ನಿಯಮವನ್ನು ಮಾಡಿದರೆ ಎಷ್ಟು ಚೆನ್ನಾಗಿರುತ್ತದೆ. ವರ್ತಮಾನದಲ್ಲಿ ದಿಗಂಬರರಲ್ಲಿಯ ಎರಡು ಪಂಥಗಳಿವೆ. ಬೀಸಪಂಥ ಮತ್ತು ತೇರಹ ಪಂಥ. ಈ ಎರಡು ಸಂಪ್ರದಾಯದವರು ತಮ್ಮ ತಮ್ಮ ಪದ್ಧತಿಯಲ್ಲೇ ಪೂಜೆ ಮಾಡುತ್ತಾರೆ. ಇದನ್ನೇನು ತಡೆಯುವಂತಿಲ್ಲ ಎಲ್ಲ ತೀರ್ಥಕ್ಷೇತ್ರಗಳಲ್ಲೂ ಎಲ್ಲ ಪಂಥದವರು ಭಾಗವಹಿಸುತ್ತಿದ್ದಾರೆ ಅವರು ಜಾಸ್ತಿ ಇರುವ ಕಡೇ ಅವರ ಪದ್ಧತಿಯಂತೆ ಇವರು ಜಾಸ್ತಿ ಇರುವ ಕಡೆ ಇವರ ಪದ್ಧತಿಯಂತೆ ಅಭಿಷೇಕ ಪೂಜೆ ನಡೆಸುತ್ತಿದ್ದಾರೆ ಆದರೆ ಎಲ್ಲಾ ಕಡೆ ಇಬ್ಬರು ದಾನಗಳನ್ನು ಕೊಡುತ್ತಾರೆ. ನಗರದಲ್ಲಾಗಲಿ ಹಳ್ಳಿಯಲ್ಲಾಗಲಿ ಪೂಜೆಯ ವಿಧಾನಗಳನ್ನು ನಿಯಮಬದ್ಧ ಮಾಡುವುದು ಸಾಧ್ಯವಿಲ್ಲ. ಹಸ್ತಿನಾಪುರದಲ್ಲಿ ಜಂಬೂದ್ವೀಪಸ್ಥಳದಲ್ಲಿ 1975ರಲ್ಲಿ ಸಂಸ್ಥಾನದ ಮಿಂಟಿಂಗ್‌ನಲ್ಲಿ ಕೂಡ ಅವರವರ ಸಂಪ್ರದಾಯದಂತೆ ಪೂಜೆ ಮಾಡಲು ಅನುಮತಿಯನ್ನು ಮಂಜೂರು ಮಾಡಲಾಯಿತು. ಆದರೆ ನಾನು ಸ್ವಯಂ ಚಾರಿತ್ರ ಚಕ್ರವರ್ತಿ ಆಚಾರ್ಯ ಶಾಂತಿಸಾಗರರರ ಪರಂಪರೆಯನ್ನು ಆಚರಿಸುವವಳು ಜಯ ಧವಲದ ಪ್ರಮಾಣ, ಶ್ರೀಪೂಜ್ಯಪಾದರ ಪಂಚಾಮೃತ ಅಭಿಷೇಕ ಪಾಠ ಮುಂತಾದ ಶಾಸ್ತ್ರಾಧಾರಗಳಿಂದ ಬೀಸಪಂಥದ ಅನುಸಾರವಾಗಿಯೇ ಶಿಷ್ಯರಿಗೆ ಅನುಜ್ಞೆಯನ್ನು ಕೊಡುತ್ತೇನೆ. ಆದರೂ ದಿಗಂಬರ ಜೈನ ಸಮಾಜದಲ್ಲಿ ಚಾಲ್ತಿ ಇರುವ ಪಂಥ ಭೇದವನ್ನು ನೋಡಿಕೊಂಡು ಸಂಘರ್ಷದಲ್ಲೂ ಉದಾರ ಮನಸ್ಸಿನಿಂದ ಜಂಬೂದ್ವೀಪದಲ್ಲಿ ಈ ನಿಯಮಗಳನ್ನು ಮಾಡಲಾಯಿತು. ಈ ಸಮನ್ವಯಾತ್ಮಕ ಪದ್ಧತಿಯನ್ನು ಎಲ್ಲ ತೀರ್ಥಕ್ಷೇತ್ರಗಳಲ್ಲೂ ಅಳವಡಿಸಿಕೊಂಡರೆ ತೀರ್ಥಕ್ಷೇತ್ರಗಳಲ್ಲಿ ಶಾಂತಿ ನೆಲಸುತ್ತದೆ. ಅನೇಕ ಕಟ್ಟರ್‌ವಾದಿಗಳು ತೇರಪಂಥಿಗಳು ದಕ್ಷಿಣದಲ್ಲಿ ಭ. ಬಾಹುಬಲಿಗೆ ಪಂಚಾಮೃತ ಅಭಿಷೇಕ ಮಾಡಿ ಬಂದಿದ್ದಾರೆ.

ಈ ಕ್ಷೇತ್ರದಲ್ಲಿ ನಾವು ಸುಮಾರು 20, 25 ದಿನ ಇದ್ದೆವು ಶ್ರವಣಬೆಳಗೊಳದಿಂದ ಹಲವಾರು ಯಾತ್ರಿಗಳ ಬಸ್ಸು ವಾಪಸ್ಸು ಬಂದಿತು. ಅವರೆಲ್ಲ ನಮ್ಮ ಸಂಘದ ದರ್ಶನಕ್ಕೂ ಬಂದರು. ಬ್ರ. ಸುಗನಚಂದರು ಶ್ರವಣ ಬೆಳಗೊಳದ ಹತ್ತಿರ ಸುತ್ತಮುತ್ತಲ ತೀರ್ಥಕ್ಷೇತ್ರದ ದರ್ಶನ ಮಾಡಿಕೊಂಡು ಬಂದರು. ನಂತರ ನಮ್ಮ ಸಂಘ ಮುಂದಕ್ಕೆ ವಿಹಾರ ಹೊರಟಿತ್ತು. ಹೊರಡುವಾಗ ಇಲ್ಲಿಯ ಜನ ಚಾತುರ್ಮಾಸಕ್ಕೆ ನಿಲ್ಲುಲು ಆಗ್ರಹ ಪಡಿಸಿದರು. ಆದರೆ ನಿಲ್ಲಲು ಸಾಧ್ಯವಿರಲಿಲ್ಲ. ಸನಾವದ, ಇಂದೂರ, ಮೂಲಕ ಉದಯ ಪುರದಲ್ಲಿದ್ದ ಆಚಾರ್ಯ ಶಿವಸಾಗರರ ಸಂಘವನ್ನು ತಲುಪಬೇಕಾಗಿತ್ತು.

ಪಾವಾಗಿರಿ ಕ್ಷೇತ್ರ ದರ್ಶನ

ಇಲ್ಲಿಂದ ವಿಹಾರ ಮಾಡುತ್ತಾ ಪಾವಾಗಿರಿ ಸಿದ್ಧಕ್ಷೇತ್ರಕ್ಕೆ ಬಂದೆವು ಇದನ್ನ 'ಊನ'ವೆಂದು ಕರೆಯಲಾಗುತ್ತದೆ. ಇಲ್ಲಿ ನಾಲ್ಕು ಮುನಿಗಳ ನಿರ್ವಾಣವಾಗಿದೆ.

ಪಾವಾಗಿರಿವರಸಿಹರೆ ಸುವಣ್ಣಭದ್ವಾಇಮುಣಿವರಾ ಚಉರೋ I
ಚೇಲಣಾಣಈತಡಗ್ಗೆ ಣಿವ್ವಾಣಗಯಾ ಣಮೋ ತೇಸಿಂ II 13 II

ಚೇಲನಾ ನದಿಯ ದಡದಲ್ಲಿ ಪಾವಾಗಿರಿ ಶಿಖರದಲ್ಲಿ ಸುವರ್ಣಭದ್ರ ಮೊದಲಾದ ನಾಲ್ಕು ಮುನಿಗಳು ಮೋಕ್ಷವನ್ನು ಪಡೆದರು. ಅವರಿಗೆ ನನ್ನ ನಮಸ್ಕಾರಗಳು. ವಿ. ಸ. 1991ರಲ್ಲಿ ಈ ಕ್ಷೇತ್ರ ಪ್ರಕಾಶಕ್ಕೆ ಬಂದಿತು. ಒಂದು ಕಥೆ ಇದೆ. ಒಬ್ಬ ಬಲ್ಲಾಲವೆಂಬ ರಾಜನು 100 ಮಂದಿರಗಳನ್ನು ಕಟ್ಟಿಸುತ್ತೇನೆ ಎಂದು ಪ್ರತಿಜ್ಞೆ ಮಾಡಿದ್ದ ಅದರಲ್ಲಿ 99 ಮಂದಿರಗಳಾದವು ಒಂದು ಕಡಿಮೆ ಆದ್ದರಿಂದ ಈ ಹಳ್ಳಿಗೆ 'ಊನ' ಎಂದು ಕರೆದರು. ಇಲ್ಲಿಂದ ಖನನದಲ್ಲಿ ಜಿನಪ್ರತಿಮೆಗಳು ಮತ್ತು ಚರಣ ಚಿಹ್ನೆ ದೊರೆತಿವೆ. ಕ್ಷೇತ್ರದ ಜೈನ ಧರ್ಮಶಾಲೆಯ ಮಧ್ಯೆ ಒಂದು ಮಹಾವೀರ ಮಂದಿರವನ್ನು ಕಟ್ಟಿಸಲಾಗಿದೆ. ಇನ್ನೊಂದು ಚಂದ್ರಪ್ರಭ ಮಂದಿರ ಈ ಎರಡು ಮಂದಿರಗಳ ಎದುರಿಗೆ ಮಾನಸ್ತಂಭವಿದೆ. ಇದರ ಎದುರಿಗೆ ಗ್ವಾಲೇಶ್ವರ ಅಥವ ಶಾಂತಿನಾಥ ಮಂದಿರವಿದೆ. ಈ ಮಂದಿರವನ್ನು ಎತ್ತರದ ಮೇಲೆ ಕಟ್ಟಲಾಗಿದೆ. ಸುವರ್ಣ ಭದ್ರ ಮುಂತಾದ ಮುನಿಗಳ ನಿರ್ವಾಣ ಭೂಮಿ ಸಹ ಇದೆ ಎಂದು ಪರಿಗಣಿಸಲಾಗಿದೆ. ಈ ಶಾಂತಿನಾಥ ಮಂದಿರದಿಂದ ಇಳಿದು ಸ್ವಲ್ಪದೂರದಲ್ಲಿ ಎತ್ತರದ ದಿನ್ನೆ ಸಿಗುತ್ತದೆ. ಇದನ್ನ ಪಂಚಪಹಾಡಿ ಎನ್ನುತ್ತಾರೆ. ಇಲ್ಲಿ 6 ಚಿಕ್ಕ-ಚಿಕ್ಕ ಹೊಸ ಮಂದಿರಗಳನ್ನು ಕಟ್ಟಲಾಗಿದೆ. ಬಹಳಷ್ಟು ಹಳೆಯ ಮಂದಿರಗಳ ಅವಶೇಷಗಳು ಬಿದ್ದಿವೆ. ಇಲ್ಲಿ ಭ. ಬಾಹುಬಲಿಯ ಒಂದು ಪ್ರತಿಮೆ ಇದೆ. ಆಚಾರ್ಯ ಶಾಂತಿಸಾಗರರ ಚರಣ ಚಿಹ್ನೆಗಳಿವೆ. ಈ ಕ್ಷೇತ್ರ ಖರಗೌನ ಜಿಲ್ಲೆಯಲ್ಲಿದೆ.

೫೧

ಸನಾವದಕ್ಕೆ ಆಗಮನ

ಕ್ಷೇತ್ರದ ದರ್ಶನ ಮಾಡಿ ಖರಗೌನದ ಮೂಲಕ ನಾವು ಸನಾವದ ಹತ್ತಿರದ ಬೇಡಿಯಾ ಎಂಬ ಹೆಸರಿನ ಒಂದು ಚಿಕ್ಕ ಹಳ್ಳಿಗೆ ಬಂದೆವು. ಇಲ್ಲಿಯ ಮಂದಿರದ ದರ್ಶನವಾಯಿತು. ವಿಶ್ರಾಂತಿ ಪಡೆದು ಆಹಾರವಾದ ಮೇಲೆ ಸಾಮಾಯಿಕ ಮಾಡಿ ಮಂದಿರದಲ್ಲಿ ನಾವೆಲ್ಲ ಕುಳಿತಿದ್ದೆವು. ಸನಾವದದಿಂದ ಕೆಲವು ಶ್ರಾವಕ ಶ್ರಾವಕಿಯರು ಬಂದರು ದರ್ಶನವಾಯಿತು. ಎಲ್ಲ ಹತ್ತಿರದಲ್ಲೇ ಕುಳಿತರು ಅದರಲ್ಲಿ ಒಬ್ಬ ಯುವಕ ನನ್ನನ್ನು ಕೇಳಿದ ದೊಡ್ಡ ಮಾತಾಜಿ ಯಾರು? ನಾನು ಸಹಜವಾಗಿಯೇ ಆರ್ಯಿಕೆ ಪದ್ಮಾವತಿಯ ಕಡೆಗೆ ತೋರಿಸಿದೆ ಇವರೆ ಏಕೆಂದರೆ ಅವರು ವಯಸ್ಸಿನಲ್ಲಿ ದೊಡ್ಡವರು ಆದರೆ ತಕ್ಷಣವೇ ಅವರು ನನ್ನ ಕಡೆ ಕೈತೋರಿ ಹೇಳಿದರು. ದೊಡ್ಡ ಮಾತಾಜೀ ಇವರು ಕೊನೆಗೆ ಅವರಿಗೆ ಸಂಶಯವಾಯಿತು. ಯಾರೆಂದು ಕೊನೆಗೆ ನಾನೇ ಎಂದು ನಿಶ್ಚಯಿಸಿಕೊಂಡು ನನ್ನ ಹತ್ತಿರ ಬಂದು ಪ್ರಾರ್ಥಿಸತೊಡಗಿದ ಮಾತಾಜೀ ನಾವು ಸನಾವದದಿಂದ ಬಂದಿದ್ದೇವೆ. ತಮ್ಮ ವಿಹಾರದ ವ್ಯವಸ್ಥೆಯನ್ನು ತಿಳಿಯಲು ಬಂದಿದ್ದೇವೆ ಎಂದ. ಅದಕ್ಕೆ ನಾನು ಅಲ್ಲಿ ಜೈನರ ಮನೆಗಳು ಎಷ್ಟಿದೆ, ಮಂದಿರಗಳು ಎಷ್ಟು ಇದೆ ಎಂದು ಕೇಳಿ ನಮ್ಮ ವಿಹಾರದ ಮಾರ್ಗಸೂಚಿ ಹೇಳಿದೆ. ಆ ಯುವಕನ ಹೆಸರು ದೇವೇಂದ್ರಕುಮಾರ ಶಾಹ ಮಾತಾಡುತ್ತಾ ಊರಿನ ಪರಿಚಯ ಹೇಳಿದ ರಖಬಚಂದರ ಪತ್ನಿ ಕಮಲಬಾಯಿ ಅವರು ಮಹಿಳಾ ಸಮಾಜದ ಮುಖ್ಯಸ್ಥೆ ಒಳ್ಳೆಯ ಕೆಲಸಗಾರ್ತಿಯು. ಗುರುಗಳ ಭಕ್ತಿಯು ಆಗಿರುವ ಅವರು ಧಾರ್ಮಿಕ ಕೆಲಸಗಳನ್ನು ಚೆನ್ನಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಹಾಗೇ ಅಜನ್ಮ ಬ್ರಹ್ಮಚಾರಿಯಾಗಿರುವ ತನ್ನ ಸ್ನೇಹಿತ ಮೋತಿಚಂದ ಸರಾಫನ ಬಗ್ಗೆಯು ಹೇಳಿದ. ನಾನು ಹಿಂದಿನ ರಾತ್ರಿ ಕನಸಿನಲ್ಲಿ ನನ್ನ ಚಿಕ್ಕ ತಮ್ಮ ಪ್ರಕಾಶಚಂದ ನಮಸ್ಕರಿಸಿ ಕಾಲುಗಳ ಹತ್ತಿರವೇ ಕುಳಿತಂತೆ ಕಂಡಿದ್ದೆ. ಮೋತಿಚಂದನ ಮಾತುಗಳನ್ನು ಕೇಳಿದ ನನಗೆ ಅದೇ ಸ್ವಲ್ಪ ಕಣ್ಣ ಮುಂದೆ ಬಂದಂತೆ ಆಯಿತು. ಆಗ ಮೋತಿಚಂದನು ನನ್ನ ಭಕ್ತನಾಗಬಹುದು ಎನ್ನಿಸಿತು. ಅಲ್ಲಿಂದ ವಿಹಾರ

ಹೊರಟು ಚೈತ್ರ ಶುದ್ಧ ಪೂರ್ಣಿಮೆಯದಿನ ಸನಾವದಕ್ಕೆ ಬಂದೆವು ಬೆಳಗ್ಗೆ ಜನ ಬ್ಯಾಂಡ, ವಾಲಗವನ್ನು ತಂದು ಸ್ವಾಗತ ಮಾಡಿ ಮೆರೆವಣಿಗೆಯಲ್ಲಿಯೇ ಧರ್ಮಶಾಲೆಯವರೆಗೂ ಕರೆದುಕೊಂಡು ಹೋದರು ಅಲ್ಲಿ ಧಾರ್ಮಿಕ ಸಭೆ ನಡೆಯಿತು.

ಸಭೆಯಲ್ಲಿ ನಾವೆಲ್ಲ ಆಸನಗಳಲ್ಲಿ ಕುಳಿತೆವು ಎಲ್ಲರು ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತರು ನಾನು ಒಂದು ಕ್ಷಣ ಮೌನವಾದೆ. ಆಗ ಒಬ್ಬ ನವಯುವಕ ಬಂದು ಫಲವನ್ನು ಇಟ್ಟು. ಮಾತಾಜಿ ಮಂಗಳ ಆಶೀರ್ವಾದವನ್ನು ದಯಪಾಲಿಸಬೇಕೆಂದು ಪ್ರಾರ್ಥಿಸಿದ. ನಾನು ಮಂಗಳ ಪ್ರವಚನ ಆಶೀರ್ವಾದ ಕೊಟ್ಟ ನಂತರ ಸಭೆಯ ವಿಸರ್ಜಿತವಾಯಿತು. ಆಮೇಲೆ ದೇವೇಂದ್ರ ಕುಮಾರನು ಒಂದು ಹೇಳಿದ ಈಗ ಶ್ರೀಫಲವನ್ನು ಇಟ್ಟು ಪ್ರಾರ್ಥಿಸಿದವನೇ ಮೋತಿಚಂದನೆಂದು.

ನಾನು ಅವನೆಡೆಗೆ ನೋಡಿ ಮುಗುಳನಕ್ಕು ಶುದ್ಧಿ ಮಾಡಿಕೊಳ್ಳಲು ಹೊರಟೆ. ಭಗವಂತರ ದರ್ಶನ ಮಾಡಿ ಆಹಾರಕ್ಕೆ ಹೊರೆಟವು ನಿರಾಂತಕವಾಗಿ ಆಹಾರವಾಗಿ ಸಮಾಯಿಕ ಮಾಡಿ ಆಯಿತು. ಚೈತ್ರಮಾಸದಲ್ಲೆ ಬಿಸಿಲು ಚೋರಾಗಿತ್ತು. ಬ್ರ. ಸುಗನಚಂದರಿಗೆ ಬಿಸಿಲ ಹೊಡೆತ ಆಗಿತ್ತು. ಆರ್ಯಿಕೆ ಜಿನಮತಿಗೂ ಬಿಸಿಲು ತಡೆಯಲಾಗುತ್ತಿರಲಿಲ್ಲ 4-5 ದಿನ ವಿಶ್ರಾಂತಿ ಪಡೆದಾಯಿತು. ಇಲ್ಲಿಂದ ಸಿದ್ಧವರಕೂಟದ ದರ್ಶನಕ್ಕೆ ಹೋಗಬೇಕೆಂದು ನನಗೆ ಬಹಳ ಇಚ್ಛೆಇತ್ತು. ಆದರೆ ಅಲ್ಲಿಯ ಜನ ಮಾತಾಜೀ ಈಗ ಇಲ್ಲೆ ಇರಿ ಬಿಸಿಲು ಬಹಳವಾಗಿದೆ. ಕೆಲವು ದಿನಗಳ ನಂತರ ಸಿದ್ಧವರ ಕೂಟದ ದರ್ಶನ ಮಾಡಿಸುತ್ತೇವೆ. ತಾವು ಚಾತುರ್ಮಾಸಕ್ಕೆ ಇಲ್ಲಿಯೇ ನಿಲ್ಲಿರಿ. ಆದರೆ ನಾನು ಚಾರ್ತುಮಾಸಕ್ಕೆ ಮೊದಲು ಸಂಘ ತಲುಪಬೇಕೆಂದು ಇಷ್ಟವಿತ್ತು. ಜಿನಮತಿಗೂ ಬೇಸಿಗೆಯನ್ನ ಸಹಿಸಲಾಗುತ್ತಿಲ್ಲ ಕೊನೆಗೆ ಆರ್ಯಿಕೆಯರೆಲ್ಲ ಕುಳಿತು ವಿಚಾರಮಾಡಿದೆವು. ಕೊನೆಗೆ ಇಲ್ಲಿಯ ಜನರಲ್ಲಿ ಬಹಳ ಭಕ್ತಿ ಕಂಡುಬರುತ್ತಿರುವುದರಿಂದ ಇಲ್ಲಿಯೇ ತಂಗೋಣ ಮುಂದೆಯದು ಆಮೇಲೆ ನೋಡೋಣ ಎಂದುಕೊಂಡೆವು.

ಜನರು ಸಹ ಮಾತಾಜಿ ಇಲ್ಲಿ ಚಾತುರ್ಮಾಸ ಮಾಡಿರಿ ತಮಗೆ ಮುಕ್ತಾಗಿರಿಯ ದರ್ಶನ ಮಾಡಿಸಿ ತಮ್ಮನ್ನು ಆಚಾರ್ಯ ಸಂಘಕ್ಕೆ ನಾವು ತಲುಪಿಸುತ್ತೇವೆ ಎಂದರು. ಇವರ ನಿರ್ಧಾರ ಕೇಳಿದ ನಾನು ಬ್ರ. ಸುಗನಚಂದರನ್ನು ಆಶೀರ್ವಾದ ಮಾಡಿ ಇಲ್ಲಿಂದ ಉದಯಪುರದಲ್ಲಿದ್ದ ಆಚಾರ್ಯರ ಸಂಘಕ್ಕೆ ಕಳುಹಿಸಿಕೊಟ್ಟೆ ಇಲ್ಲಿ ಸಂಘದಲ್ಲಿ 5 ಜನ ಸಾಧ್ವಿಯರು ಇಬ್ಬರು ಬ್ರಹ್ಮಚಾರಿಣಿಯರಾದ ಕು. ಶೀಲ ಹಾಗು ಸೌರಾಬಾಯಿ ಇದ್ದರು. ಇಲ್ಲಿಯ ಮಹಿಳಾ ಮಂಡಳಿಯವರು ಮತ್ತು ನವಯುವಕರು ಬಹಳ ಉತ್ಸಾಹಿಗಳು ರಖಿಬಚಂದ ಪಾಂಡ್ಯ. ಅವರ ಹೆಂಡತಿ ಸಂಘದ ವ್ಯವಸ್ಥೆಯಲ್ಲಿ ಯಾವಾಗಲು ಇರುತ್ತಿದ್ದರು. ಜೊತೆಗೆ ಮಂದಿರದ ಸೇಠಾಣಿಯು ಪ್ರತಿದಿನ ಚೌಕ ಮಾಡುತ್ತಿದ್ದರು. ಶ್ರೀಚಂದ, ತ್ರಿಲೋಕಚಂದ ವಿಮಲಚಂದ, ಮೋತಿಚಂದ ಮುಂತಾದ ಪ್ರತಿಯೊಬ್ಬರು ಒಬ್ಬರಿಗಿಂತ ಒಬ್ಬರು ಮಿಗಿಲಾಗಿ ಸಂಘದ ಸೇವೆಯಲ್ಲಿ ನಿಂತರು.

ಮಧ್ಯಲೋಕದ ರಚನೆಯ ರೂಪರೇಖೆ

ಇಲ್ಲಿ ಕೂಡ ಮಧ್ಯಲೋಕದ ರಚನೆಯ ಚರ್ಚೆ ಬಂತು ಜನರು ಆಸಕ್ತಿಯಿಂದ ವಿವರಣೆಗಳನ್ನು ಕೇಳಿ ಈ ಭವ್ಯ ರಚನೆಯನ್ನು ಸಿದ್ಧವರಕೂಟದ ಸಿದ್ಧಕ್ಷೇತ್ರದಲ್ಲಿ ಮಾಡಿದರೆ ಚೆನ್ನಾಗಿರುತ್ತದೆ ಅದಲ್ಲದೆ ನರ್ಮದಾ ನದಿಯ ದಡದಲ್ಲಿಯೇ ಈ ಕ್ಷೇತ್ರ ಇದೆ.

ಶ್ರವಣಬೆಳಗೊಳದಿಂದ ಮಸ್ತಕಾಭಿಷೇಕ ಮುಗಿಸಿ ಬಂದ ಒಂದು ಯಾತ್ರೆ ಬಸ್ಸಿನವರ ಜೊತೆ ತಂದೆ ಛೋಟೆಲಾಲರು ಒಂದು 6-7 ಪುಟಗಳ ಪತ್ರವನ್ನು ಕಳುಹಿಸಿದ್ದರು. ಅದರಲ್ಲಿ ತಮ್ಮನ್ನು ನೋಡುವ ಸಲುವಾಗಿಯೆ ಶ್ರವಣಬೆಳಗೊಳದ ಅಭಿಷೇಕದ ನೆಪಮಾಡಿ ಮಗ, ಸೊಸೆಯರೊಡನೆ ಬಂದವರಿಗೆ ಅಮ್ಮನ 3ನೇಯ ಪ್ರತಿಮೆಯಿಂದಾಗಿ ಆದ ತೊಂದರೆಗಳನ್ನು ವಿವರಿಸಿದ್ದರು. ನೀರು ಸಿಗದೆ ಅವರ ಆಹಾರಕ್ಕೆ ಆದ ತೊಂದರೆ, ಕೊನೆಗೆ ಅವರ ದೇಹಾರೋಗ್ಯ ಅಲ್ಲದೆ ನನ್ನ ದರ್ಶನವು ಆಗದ ನಿರಾಶೆಯನ್ನೆಲ್ಲ ಬಣ್ಣಿಸಿದ್ದರು. ಸೊಂಟದ ನೋವು ಕಾಲು ನಡಿಗೆ ಎಲ್ಲವು ಕಷ್ಟವಾಗಿದ್ದರು. ನನ್ನನ್ನು ನೋಡಬಹುದೆಂಬ ಆಸೆಯಿಂದ ಬಂದವರಿಗೆ ಆಘಾತವಾಯಿತು. ಹೀಗೆಲ್ಲ ತಮ್ಮ ದುಃಖವನ್ನು ಹೇಳಿಕೊಂಡಿದ್ದರು. ಈ ಪತ್ರವು ನನಗೆ ಸನಾವದದಲ್ಲಿ ಸಿಕ್ಕಿತು. ಇದನ್ನು ಓದಿದ ನಾನು ಸಂಕೋಚವಶಳಾಗಿ ಅದಕ್ಕೆ ಗಮನ ಕೊಡದೆ ಚೌಕದಲ್ಲೆ ಅದನ್ನು ಹಾಕಿದ್ದೆ ಮೋತಿಚಂದನು ಆ ಪತ್ರವನ್ನು ಓದಿ ದುಃಖಿತನಾದನು.

೧) ಸ್ವಲ್ಪ ಹೊತ್ತಾದ ಮೇಲೆ ನಾನೇ ಮನದಲ್ಲಿ ಮೋಹದ ಮಹಾತ್ಮೆ ಅಚಿಂತ್ಯವಾಗಿದೆ ಅವರು ನನ್ನನ್ನು ಇನ್ನು ಮಗಳೆಂದೆ ತಿಳಿದು ಮೋಹದಲ್ಲಿ ಒದ್ದಾಡುತ್ತಿದ್ದಾರಲ್ಲ ನಿಜವಾಗಿ ನೋಡಿದರೆ ಯಾರು ತಂದೆ ಯಾರು ತಾಯಿ ಯಾರು ಮಗಳು ಹೀಗೆಂದುಕೊಂಡು ಪತ್ರವನ್ನು ಉಪೇಕ್ಷಿಸಿದೆ. 1968ರಲ್ಲಿ ಪ್ರತಾಪಗಢದಲ್ಲಿ ಚಾತುರ್ಮಾಸ ಮಾಡುವಾಗ ತಂದೆಯವರು ದರ್ಶನಕ್ಕಾಗಿ ಬಂದಾಗ ಅವರು ನನ್ನ ಪತ್ರಕ್ಕಾಗಿ ಕಾದು ಹೇಗೆ ಹುಚ್ಚರಂತಾಗಿದ್ದರೆಂದು ದಿನ ಅಂಚೆಯನ್ನು ಕಾದು ಕಾದು ಬರದೆ ಇದ್ದಾಗ ಅಳುತ್ತಿದ್ದರಂತೆ. ಮಾತಾಜಿ ಯಾರಾದರು ಶ್ರಾವಕರಿಂದಲೇ ಆಶೀರ್ವಾದಪೂರ್ವಕ ಎರಡು ಸಾಲುಗಳನ್ನಾದರು ಬರೆಸಬಹುದೆಂದು ಬಯಸಿದ್ದರು. ಇಷ್ಟು ದೊಡ್ಡ ಪತ್ರವನ್ನು ಓದಿಯು ಮಾತಾಜಿ ಕರಗಲಿಲ್ಲವಲ್ಲ ಎಂದು ನೊಂದರು. (ನನ್ನ ದರ್ಶನ ಮಾಡಿದವರೇ ಕೇಳಿಯೇ ಬಿಟ್ಟರು) ಇದು ಅವರ ಮೊದಲ ಹಾಗು ಕೊನೆಯ ಪತ್ರವಾಯಿತು. ಇನ್ನೆಂದು ಅವರು ಪತ್ರವನ್ನು ಬರೆಸಲಿಲ್ಲ. ಇದರ ನಂತರ ಪ್ರತಾಪಗಡದಲ್ಲಿ ತಂದೆ ಸಿಕ್ಕರು. ನನ್ನ ಹತ್ತಿರ ಬಂದು ತಮ್ಮ ಸುಖ ದುಃಖಗಳನ್ನು ಹೇಳಿಕೊಳ್ಳಬೇಕೆಂಬ ಬಯಕೆ ಅವರ ಕಣ್ಣುಗಳಲ್ಲಿ ಅವರ ಜೊತೆ ಕಾಮಿನಿ ಬಂದಿದ್ದಳು. ಅವಳನ್ನು ನೋಡಿದವಳೇ ನನ್ನ ಹತ್ತಿರ ಬಿಟ್ಟು ಹೋಗಲು ಕೇಳುತ್ತಿದ್ದಂತೆ ನಕ್ಕು ಹೇಳಿದರು.

ಮಾತಾಜಿ ಬೇರೆ ಯಾವ ವಿಷಯವನ್ನು ಕೇಳುವುದಿಲ್ಲ ನನ್ನ ಮಗಳು ಅಭಯಮತಿಯನ್ನು ನೋಡಿ ಎಷ್ಟು ನಿಶ್ಯಕ್ತಳಾಗಿದ್ದಾಳೆ. ನೀವು ಸಂಗ್ರಹಿಣಿ ರೋಗದಿಂದ ಸಾಕಷ್ಟು ಬಳಲಿದ್ದೀರ. ಈಗ ನಾನು ಈ ಮಗಳನ್ನು ಖಂಡಿತ ನಿಮ್ಮ ಬಳಿ ಬಿಡುವುದಿಲ್ಲ ನಿಮ್ಮ ಬಳಿ ಬಿಟ್ಟರೆ ಖಂಡಿತ ಇವಳಿಗೂ ದೀಕ್ಷೆ ಕೊಟ್ಟೆ ಬಿಡುತ್ತೀರ ಹೀಗೆ ಹೇಳಿ ನಕ್ಕು ಎದ್ದು ಹೊರಟೆಬಿಟ್ಟರು.

ತಂದೆಯ ಪತ್ರದ ನೆನಪು ಬಂದಾಗಲೆಲ್ಲ ನನ್ನ ಹೃದಯ ಮನೆಯವರ ಬಗ್ಗೆ ನಿರ್ಮೋಹವನ್ನ ತಾಳಿದೆಯಲ್ಲ ನನ್ನನ್ನು ಮನೆ ತ್ಯಾಗ ಮಾಡಿ ಮೋಕ್ಷ ಮಾರ್ಗಕ್ಕೆ ಅನುವು ಮಾಡಿದವರಿಗೆ ವಾತ್ಸಲ್ಯ ತೋರಿಸಬೇಕು. ಮೋಹವನ್ನು ತ್ಯಜಿಸದೆ ಮೋಕ್ಷ ದೊರೆಯುವಂತಿಲ್ಲ.

ಸನಾವದದಲ್ಲಿ ಆಕೃತ್ರಿಮ ಚೈತ್ಯಾಲಯ ರಚನೆಯ ಬಗ್ಗೆ ರೂಪರೇಖೆ ಸಿದ್ಧವಾಯಿತು. ನಾನು ಹೋದಂತೆ ಜನಗಳಲ್ಲಿ ಆಸಕ್ತಿ ಹೆಚ್ಚಾಗುತ್ತಾ ಹೋಯಿತು. ಎಲ್ಲಾ ಕಾರ್ಯದಲ್ಲೂ ಮೋತೀಚಂದ, ರಖಬಚಂದ ಮತ್ತು ಕಮಲಾಬಾಯಿ ಮುಂದೆ ಇರುತ್ತಿದ್ದರು. ಮೋತಿಚಂದ ಬಾಲಕೃಷ್ಣನೆಂಬ ಬಣ್ಣದ ಕೆಲಸದವನನ್ನು ಕರೆಸಿದರು. ನನ್ನ ಹತ್ತಿರ ರಚನೆಯ ಬಗ್ಗೆ ಕೇಳಿ ತಿಳಿದು ಚಿತ್ರವನ್ನು ರಚಿಸಿದರು. ಮೊದಲು ಸುಮೇರು ಪರ್ವತದ ಚಿತ್ರ

ಬರೆದರು. ಇದರ ನಾಲ್ಕುಕಡೆಯು ವನದಲ್ಲಿ ಹಸುರನ್ನು ತೋರಿಸಲಾಗಿತ್ತು, ಹತ್ತಿರದಲ್ಲೇ ಹೂದೋಟವನ್ನು ಚಿತ್ರಿಸಲಾಗಿತ್ತು. ಚಿತ್ರ ಚೆನ್ನಾಗಿ ಬಂದಿತ್ತು. ಮುಂದೆ ಜಯಪುರದಲ್ಲಿ "ಜಿನಸ್ತವನಮಾಲಾ" ಮತ್ತು ಸಾಮಾಯಿಕ ಎಂಬ ಪುಸ್ತಕದ ರಕ್ಷಾ ಕವಚದಲ್ಲಿ ಮುದ್ರಿಸಲಾಯಿತು. ಎರಡನೆಯ ಚಿತ್ರ ಹಿಮವನ್ ಪರ್ವತದ ಪದ್ಮ ಸರೋವರದಿಂದ ಇಳಿಯುತ್ತಿರುವ ಗಂಗಾನದಿಯ ಚಿತ್ರ. ಇಲ್ಲಿ ಕೆಳಗಿನ ಕುಂಡದಲ್ಲಿ ಪರ್ವತದ ಮೇಲಿನ ಗಂಗಾದೇವಿಯ ಭವನದ ಛಾವಣಿಯ ಮೇಲೆ ಕಮಾಲಾಸನದಲ್ಲಿ ಜಟಾಜೂಟ ಸಹಿತ ಇರುವ ಜಿನಪ್ರತಿಮೆ ಇದೆ. ಇವರ ಮುಖದಿಂದಲೇ ಗಂಗಾನದಿ ಬೀಳುತ್ತಿರುವಂತೆ ಕಾಣಿಸುತ್ತದೆ. ಈ ಚಿತ್ರವನ್ನು ಲಕ್ಷಾಂತರ ಜನರಿಗೆ ತೋರಿಸಲಾಗಿದೆ.

ಸಿದ್ಧವರ ಕೂಟಕ್ಷೇತ್ರದ ದರ್ಶನ

ಸಿದ್ಧವರ ಕೂಟ ತಲುಪಿದೆವು. ಕೆಲವು ದಿನ ಬಿಸಿಲು ಬಹಳವಿತ್ತು. ಅಲ್ಲಿಯ ಒಂದು ಸಾವಿರ ಅಡಿಯ ಸುತ್ತಳತೆಯಲ್ಲಿ ರಚನೆ ಮಾಡಿಸಬೇಕೆಂದು ಮೋತಿಚಂದನು ತನ್ನ ಜೊತೆಯವರೊಡನೆ ಜೇಷ್ಠಮಾಸದ ಸುಡುಬಿಸಿಲಿನಲ್ಲಿ ಆ ಮೈದಾನದ ಜಾಗವನ್ನು ಅಳೆಯುತ್ತಿದ್ದರು. ಅವರ ಉತ್ಸಾಹ, ಓಡಾಟ ನೋಡಿ ನನ್ನ ಮನಸ್ಸಿಗೆ ಭೂಮಿಯ ಮೇಲೆ ಈ ರಚನೆ ಸಾಕಾರವಾಗಬೇಕಾದರೆ ಇಂತಹ ಯುವಕರಿಂದಲೇ ಸಾಧ್ಯ ಎಂದುಕೊಂಡೆ.

ಕ್ಷೇತ್ರದ ಪರಿಚಯ

ಪ್ರಾಕೃತದ ನಿರ್ವಾಣಕಾಂಡದಲ್ಲಿರುವ ಉಲ್ಲೇಖ

ರೇವಾಣಾಯಿ. ತೀರೇ ಪಚ್ಛಿಮಭಾಯಮ್ಮಿ ಸಿದ್ಧವರ ಕೂಟೇ ।
ದೋ ಚಕ್ಕೀ ದಹಕಪ್ಪೇ ಆಹುಟ್ಟೆಯಕೋಡಿ ಣವ್ವುದೇ ವಂದೆ ॥ ೧೧ ॥

ರೇವಾ ನದಿಯ ದಡದಲ್ಲಿ ಪಶ್ಚಿಮ ದಿಕ್ಕಿನಲ್ಲಿ ಸಿದ್ಧವರ ಕೂಟವಿದೆ. ಇಲ್ಲಿಂದ ಇಬ್ಬರು ಚಕ್ರವರ್ತಿಗಳು ಹತ್ತು ಜನ ಕಾಮದೇವರು ಮತ್ತು ಮೂರುವರೆ ಕೋಟಿ ಮುನಿಗಳು ಮುಕ್ತಿ ಹೊಂದಿದರು ಇವರೆಲ್ಲರಿಗೂ ನನ್ನ ವಂದನೆಗಳು. ಗೋಡೆಯ ಮೇಲೆ ಹತ್ತು ಜನ ಕಾಮದೇವರ ಹೆಸರನ್ನು ಕೆತ್ತಿದ್ದಾರೆ. 1 ಸನತ್‌ಕುಮಾರ, 2 ವತ್ಸರಾಜ ಕನಕ ಪ್ರಭ 4 ಮೇಘ ಪ್ರಭ 5 ವಿಜಯರಾಜ 6 ಶ್ರೀಚಂದ 7 ನಲರಾಜ 8 ಬಲರಾಜ 9 ವಸುದೇವ 10 ಜೀವಂಧರ ಇಲ್ಲಿ ಹತ್ತು ಮಂದಿರಗಳಿವೆ. ಇಲ್ಲಿ 7 ಅಡಿಯ ಒಂದು ಬಾಹುಬಲಿಯ ಮೂರ್ತಿಯು ಇದೆ.

ಈ ಕ್ಷೇತ್ರದ ಹತ್ತಿರವೇ ಓಂಕಾರೇಶ್ವರ ಮಂದಿರವಿದೆ. ಇದು ಓಂ ಆಕಾರದಲ್ಲಿದೆ. ನರ್ಮದ ಮತ್ತು ಕಾವೇರಿನದಿಯ ಮಧ್ಯದಲ್ಲಿದೆ ಮಾಂದಾತ ಎಂಬ ಒಂದು ಬೆಟ್ಟ ಇದರ ಸುತ್ತಳತೆ ಒಂದು ವರ್ಗಮೂಲವಿದೆ. ಈ ಮಂದಿರ ಹಿಂದುಗಳ ಆಡಳಿತದಲ್ಲಿದೆ ಆದರೆ ಇಲ್ಲಿಯ ಭಗ್ನಾವಶೇಷ ನೋಡಿದರೆ ಜೈನದೇವಾಲಯವೆಂಬ ಸಂಶಯ ಬರುತ್ತದೆ. ಕೆಲವು ಸ್ಥಾಪತ್ಯ ಕಲೆ ವಿಶೇಷ್ಞರು. ಅಂಕುಲೇಶ್ವರ ಮಂದಿರ, ಕೊಲ್ಹಾಪುರದ ಮಂದಿರ, ಅಜಮೇರದ ಕ್ವಾಜಾ ಸಾಹೇಬರ ದರಗಾಹ. ಈ ಮೂರು ಮಂದಿರದ ರಚನಾ ಶೈಲಿಯಲ್ಲಿ ಬಹಳ ಸಮಾನತೆಯು ಕಂಡುಬರುತ್ತದೆ. ಈ ಕ್ಷೇತ್ರ ದರ್ಶನಕೋಸ್ಕರ ನಾವೆಯ ವ್ಯವಸ್ಥೆ ಇದೆ. ನಾವುಗಳು ನಾವೆಯಲ್ಲಿಯೇ ಹೋಗಿ ದರ್ಶನ ಮಾಡಿದೆವು.

ಇಲ್ಲಿ 1000 x 1000 ಅಡಿ ಜಾಗವನ್ನು ಅಳೆದು ಗುರುತಿಸಲಾಯಿತು. ಎಲ್ಲಕ್ಕಿಂತ ಮೊದಲು ಸುಮೇರು ಪರ್ವತಕ್ಕಾಗಿ ಶಿಲಾನ್ಯಾಸ ಮಾಡುವ ವಿಚಾರವಿತ್ತು. ನಾನು ಸನಾವದಗೆ ವಾಪಸ್ಸಾದೆ. ಇಂದೂರಿನ ಮಹಾನುಭಾವ

ತೀರ್ಥರಾಜ ಕಮಿಟಿಯ ಪ್ರಮುಖರು ಸನಾವದ್‌ಗೆ ಬಂದಿದ್ದರು ತೀರ್ಥರಾಜ ಕಮಿಟಿಯ ಪ್ರಮುಖ ಪಂ. ನಾಥೂಲಾಲರು ಅನೇಕ ಪ್ರಶ್ನೆಗಳನ್ನು ಕೇಳಿದರು.

ಮಾತಾಜಿ ತಾವೇನು ಇಲ್ಲಿ ರಚನೆಯನ್ನು ನಿರ್ಮಾಣ ಮಾಡಿಸುತ್ತಿದ್ದೀರ. ಅದಕ್ಕೆ ನಾನು ನಕ್ಷೆಯನ್ನು ಮಾತ್ರ ಹೇಳುತ್ತೇನೆ. ಶ್ರಾವಕರು ಮಾಡಿಸುತ್ತಾರೆಂದೆ. ನಾನು ಹಣವನ್ನಾಗಲಿ, ಕಟ್ಟಿಸುವುದಾಗಲಿ ಮಾಡುತ್ತಿಲ್ಲ ಎಂದೆ. ಬಂದಿದ್ದವರಲ್ಲಿ ಬಾಬುಲಾಲಜೀ ಪಾಟೋದಿ ಕೈಲಾಸ ಚಂದಜೀ ಚೌಧರಿ ಸೇಠ ಹೀರಾಲಾಲಜೀ ಕಾಸಲೀವಾಲ ಧನ್ನಾಲಾಲಜೀ ಗೋದಾಮಾಣಿಕ ಚಂದಜೀ ಕಾಲಾ. ರತನಲಾಲಜೀ ಬಡೋದಿಯಾ ಮುಂತಾದವರು ಈ ಕ್ಷೇತ್ರದಲ್ಲಿಯ ನಿರ್ಮಾಣವಾಗುತ್ತಿರುವುದನ್ನು ಪ್ರಶಂಸಿಸಿದರು. ನನ್ನ ಉತ್ತರದಿಂದ ನಾಥೂಲಾಲರು ಮಾತಾಜೀ ನಿರ್ಮಾಣಕ್ಕಾಗಿ ಹಣವನ್ನು ಕೇಳುವವರಲ್ಲ ಎನ್ನುವ ಭಾವನೆಯನ್ನು ಅರ್ಥಮಾಡಿಕೊಂಡರು. ಅವರು ಕೇವಲ ಗ್ರಂಥದ ಆಧಾರದಿಂದ ನಕ್ಷೆಯನ್ನು ಮಾತ್ರ ಹೇಳಿದ್ದಾರೆ. ಕೆಲಸವನ್ನು ಶ್ರಾವಕರೇ ಮಾಡಿಸಬೇಕು. ಇದಕ್ಕಾಗಿ ಸನಾವದದ ರಖಬಚಂದಜೀ ಪಾಂಡ್ಯ ಮುಂತಾದವರು ಸಕ್ರಿಯವಾಗಿ ಪಾಲ್ಗೊಂಡು ಸುಮೇರು ಪರ್ವತದ ನಕ್ಷೆ ತಯಾರಾಯಿತು.

ಸೋಲಾಪುರದ ಮ್ಹಸವಾಡದ ಹಳ್ಳಿಯಿಂದ ಕಂಕೂಬಾಯಿ ಎಂಬ ಮಹಿಳೆ ಬಂದು ಈ ರಚನೆಯನ್ನು ನೋಡಿದವರು ಬಹಳ ಪ್ರಭಾವಿತರಾದರು. ಈ ನಿರ್ಮಾಣವನ್ನು ಎಲ್ಲಿ ಮಾಡಿದರು ಇದರ ಖರ್ಚನ್ನು ನಾನು ವಹಿಸಿಕೊಳ್ಳುತ್ತೇನೆ ಎಂದರು. ಈ ಮಾತನ್ನು ಕೇಳಿದ ಜನರು ವಿಚಾರ ಮಾಡಿ ಇಲ್ಲಿಂದ ಮೋತಿಚಂದ ಮತ್ತು ತ್ರಿಲೋಕ ಚಂದ ಇಬ್ಬರು ಮ್ಹಸವಡಕ್ಕೆ ಹೋಗಿ ಕಂಕುಬಾಯಿಯ ಹತ್ತಿರ ಈ ವಿಷಯವಾಗಿ ಮಾತಾಡಿ ಅವರು 50,000 ರೂ.ಗಳನ್ನು ಕೊಡುವ ಭರವಸೆಯನ್ನು ಹೊತ್ತು ಬಂದರು.

ಶಿಲಾನ್ಯಾಸದ ಮಹೂರ್ತ ಬಂದಿತು. ಕಂಕೂಬಾಯಿ ಬಂದರು. ಸಿದ್ಧವರಕೂಟದಲ್ಲಿ ಸುಮೇರು ಪರ್ವತದ ಶಿಲಾನ್ಯಾಸವಾಯಿತು. ಕಂಕೂಬಾಯಿಯನ್ನು ಗೌರವಿಸಿದರು. ಕೆಲವರು ಅವರನ್ನು ಖಂಡವಾ ಮೊದಲಾದ ಸ್ಥಳಗಳಿಗೆ ಕರೆದುಕೊಂಡು ಹೋಗಿ ತೋರಿಸಿಕೊಂಡು ಬಂದರು. ಒಂದೆರಡು ದಿನಗಳಾದ ಮೇಲೆ ಅವರಿಂದ ಪತ್ರ ಬಂದಿತು. ಏನೇನು ಬರೆದಿದ್ದರು ಎಂಬುದು ನೆನಪಿಲ್ಲದಿದ್ದರು ಸಾರಾಂಶ ನೆನಪಿದೆ. ಶಿಲಾನ್ಯಾಸದ ಸಮಯದಲ್ಲೇ 10,000 ರೂ.ಗಳನ್ನು ಕೊಟ್ಟು ಉಳಿದ ಹಣ ಕೆಲಸ ಶುರುವಾದ ಮೇಲೆ ತಲುಪಿಸುತ್ತೇನೆಂದು ಹೇಳಿದ್ದರು ಮತ್ತು ಖಂಡವಾದಲ್ಲಿರುವ ಸೋನಗಡಿ ಜನರ ಸ್ಥಿತಿಯನ್ನು ನೋಡಿ ಬಹಳ ನೊಂದುಕೊಂಡಿದ್ದರು.

ಸೋನಗಢ ಸಾಹಿತ್ಯದ ಬಹಿಷ್ಕಾರ

1965ರಲ್ಲಿ ಇಂದುಮತಿ ಮಾತಾಜೀಯವರು ಇಲ್ಲಿ ಚಾತುರ್ಮಾಸ ಮಾಡಿದ್ದರು. ಆ ಸಮಯದಲ್ಲಿ ಶ್ರಾವಕರು ಸೋನಗಡ ಸಾಹಿತ್ಯವನ್ನು ಬಹಿಷ್ಕರಿಸಿದ್ದರು. ಸೋನಗಢ ಸಾಹಿತ್ಯದ ಬಹಿಷ್ಕಾರದ ಮೊದಲ ಹಂತವಾಗಿ ಊರಿನಲ್ಲೆ ಎರಡು ಪಾರ್ಟಿಯಾಗಿತ್ತು ಮುನಿಭಕ್ತ ಸಮಾಜಬೇರೆಯಾಗಿತ್ತು. ಇವರಲ್ಲಿ ಕಮಲಬಾಯಿಯೇ ಮುಖ್ಯಸ್ಥರಾಗಿದ್ದರು ಆದರೆ ಇದರಿಂದ ನನಗೇನು ತೊಂದರೆ ಆಗಲಿಲ್ಲ. ಇಲ್ಲಿ ಕೆಲವು ದಿನ ಇದ್ದು ನಾನು ಇಂದೂರ ಸಮಾಜದ ವಿಶೇಷ ಆಗ್ರಹದಿಂದ ನಾವು ಸಂಘ ಸಹಿತವಾಗಿ ಇಂದೂರಿಗೆ ವಿಹಾರ ಮಾಡಿದೆವು.

ಇಂದೂರಿನಲ್ಲಿ ಶಿಕ್ಷಣ ಶಿಬಿರ

ಇಲ್ಲಿ ಸನಾವದ ಯುವಕ ಮಂಡಳಿ ಮತ್ತು ಮಹಿಳಾ ಮಂಡಳಿಗಳು ಸೇರಿ ಇಂದೂರಿನಲ್ಲಿ ಶಿಕ್ಷಣ ಶಿಬಿರದ ಆಯೋಜನೆಯನ್ನು ಮಾಡಿದ್ದವು. ದ್ರವ್ಯಸಂಗ್ರಹ, ಛಹಡಾಲ. ತತ್ವಾರ್ಥಸೂತ್ರ ಮೊದಲಾದ ಗ್ರಂಥಗಳ ಶಿಕ್ಷಣವನ್ನು ಕೊಟ್ಟು ಒಂದು ಗಂಟೆ ಚರ್ಚೆನಡೆಯುತ್ತಿತ್ತು. ಪಂ ಮಿಶ್ರೀಲಾಲ ಮೊದಲಾದವರು ಈ ಚರ್ಚೆಯಲ್ಲಿ ಭಾಗವಹಿಸಿದರು. ಕಂವೆರೀಲಾಲಜೀ. ಪೂಲ್‌ಚಂದಜೀ ಕಾಸಲಿವಾಲ ಮೊದಲಾದವರಿಗೆ ಬಹಳ ಇಷ್ಟವಾಯಿತು. ಇಲ್ಲಿ ಮಾರವಾಡಿ ಮಂದಿರ ಇತವಾರಿಯ ಮಂದಿರ ಮುಂತಾದಕಡೆ ನನ್ನ ಉಪದೇಶವಾಯಿತು. ಜನಗಳಲ್ಲಿ ಗುರುಭಕ್ತಿ ಚೆನ್ನಾಗಿತ್ತು. ಅನೇಕ ಮಹಾನುಭಾವರು ಸೇರಿಕೊಂಡು ಚಾತುರ್ಮಾಸಕ್ಕಾಗಿ ಶ್ರೀಫಲವನ್ನು ಇಟ್ಟು ಪ್ರಾರ್ಥಿಸಿದರು. ಛಹೋಗೆಟನ ಜನರು ಮೊದಲಬಾರಿಗೆ ಒಟ್ಟಾಗಿ ತಮ್ಮ ಬಳಿಗೆ ಬಂದು ಪ್ರಾರ್ಥಿಸಿದ್ದಾರೆ. ಈ ಕಡೆ ಸನಾವದದ ಜನರು ಕೂಡ ಹೋಗುತ್ತಾ ಬರುತ್ತಲೇ ಇರುತ್ತಿದ್ದರು. ಕಮಲಾಬಾಯಿಯಂತು ನನ್ನ ಹತ್ತಿರವೇ ಇರುತ್ತಿದ್ದರು ಅವರು ಚಾರ್ತುಮಾಸಕ್ಕೆ ತಮ್ಮಲ್ಲಿಗೆ ಕರೆದುಕೊಂಡು ಹೋಗಲು ಬಯಸುತ್ತಿದ್ದರು.

ಕೊನೆಗೆ ನಾನು ಉದಯಪುರದಲ್ಲಿರುವ ಆಚಾರ್ಯ ಶಿವಸಾಗರ ಮಹಾರಾಜರಲ್ಲಿ ಹೋಗಿ ನಾನು ಎಲ್ಲಿ ಚಾತುರ್ಮಾಸ ಮಾಡಬೇಕೆಂಬುದನ್ನು ತೀರ್ಮಾನಿಸಿಕೊಂಡು ಬನ್ನಿ ಎಂದೆ. ಸನಾವದದ ಮೋತಿಚಂದ, ತ್ರಿಲೋಕಚಂದ ಶ್ರೀಚಂದ ಮುಂತಾದ ಹಲವಾರು ಮಹಾನುಭಾವರು ಬೇಗನೆ ಉದಯಪುರಕ್ಕೆ ಹೊರಟೆಬಿಟ್ಟರು. ಆಚಾರ್ಯರಲ್ಲಿ ನಿವೇದನೆಯನ್ನು ಮಾಡಿಕೊಂಡರು. ಅವರು ಅಳೆದು ಸುರಿದು. ಆಚಾರ್ಯರು ಬ್ರ. ಚಾಂದಮಲ್ಲಗುರೂಜೀಯವರ ಕೈಯಿಂದ ಸನಾವದದಲ್ಲೇ ಚಾತುರ್ಮಾಸಕ್ಕೆ ಅನುಮತಿಯನ್ನು ಕೊಡಿಸಿದರು. ಪತ್ರಕೊಟ್ಟಾದ ಸ್ವಲ್ಪ ಹೊತ್ತಿಗೆ ಇಂದೂರಿನ ಮಹಾಶಯರು ಅಲ್ಲಿಗೆ ತಲುಪಿದ್ದಾರೆ. ಸಹೋದರರೆ ಈಗ ತಾನೇ ಸನಾವದದವರಿಗೆ ಅನುಮತಿಯ ಪತ್ರವನ್ನು ಕೊಟ್ಟಾಯಿತಲ್ಲ ಎಂದರು ಇಂದೂರಿನವರು ಆಚಾರ್ಯರಿಗೆ ವಿನಯವನ್ನು ತೋರಿಸಿ ವಾಪಸ್ಸು ಹೊರಟರು. ಇಲ್ಲಿಗೆ ಬಂದ ಸನಾವದದ ಜನರು ಅಲ್ಲಿ ನಡೆದಿದ್ದನ್ನೆಲ್ಲ ಹೇಳುತ್ತಾ ಅಲ್ಲಿ ಕುಳಿತಿದ್ದ ಮಹಾನುಭಾವರ ಹತ್ತಿರ ಆಚಾರ್ಯರು ಹೇಳುತ್ತಿದ್ದರು. ನೋಡಿ ಜ್ಞಾನಮತಿ ಎಷ್ಟು ದೂರವಿದ್ದರು ಚಾತುರ್ಮಾಸಕ್ಕೆ ನನ್ನ ಆಜ್ಞೆಯನ್ನ ಅನುಸರಿಸುತ್ತಾರಲ್ಲ ಸಾವಿರಾರು ಮೈಲಿ ದೂರದಲ್ಲಿದ್ದರು ನನ್ನ ಆಜ್ಞೆಯನ್ನು ಪಾಲಿಸುತ್ತಾರೆ ಎಂದು ಹೆಮ್ಮೆ ಪಟ್ಟುಕೊಂಡರು.

ಇವರು ಕೂಡ ನನ್ನ ಗುರುದೇವರು ಆಚಾರ್ಯ ಶ್ರೀವೀರ ಸಾಗರದಿಂದಲೇ ದೀಕ್ಷಿತರಾದವರು. ಆದರೂ ನನ್ನ ಬಗ್ಗೆ ಗೌರವವನ್ನು ತೋರಿಸುತ್ತಾರೆ. ಇದು ಇವರ ವಿಶೇಷತೆ ಆಗಿದೆ. ಶಿವಸಾಗರರು ನನ್ನ ಬಗ್ಗೆ ಇಟ್ಟಿರುವ ಗೌರವ ಮತ್ತು ವಾತ್ಸಲ್ಯವನ್ನು ನೋಡಿ ಇಲ್ಲಿಯ ಜನರು ಇನ್ನು ಪ್ರಭಾವಿತರಾದರು.

ಇಂದೂರಿನ ಸಭೆಯಲ್ಲಿ ಎರಡು ಪಕ್ಷದವರು ಸೇರಿ ಸಾಕಷ್ಟು ಭಿನ್ನಾಭಿಪ್ರಾಯಗಳು ಜಾಸ್ತಿ ಆಯಿತು. ನಾನು ಬಹಳ ಪ್ರೀತಿಯಿಂದ ಜನಗಳನ್ನು ಶಾಂತಗೊಳಿಸಿದೆ. ಜನರು ಉತ್ಸಾಹದಲ್ಲಿ ಇದ್ದಾಗಲೇ ಚಾತುರ್ಮಾಸಕ್ಕೆ ಮಾತಾಜೀ ನಿಲ್ಲುವುದಿಲ್ಲವಲ್ಲ ಎಂದು ಕೆಲವರು ದುಃಖದ ಆವೇಶದಿಂದ ಕೆಲವರು ಹೀಗೆ ಮುಖಾಮುಖಿಯಾಗಿ ಮನಸ್ತಾಪಗೊಂಡರು ಇದು ದೊಡ್ಡ ವಿಷಯವಲ್ಲವಾದರೂ ಕೆಲವರು ವಿಷಯವನ್ನು ತಿರುಚುವಂತವರು ಇದ್ದೆ ಇರುತ್ತಾರೆ.

ಸೇಠ ಹೀರಾಲಾಲಜೀ, ಕಾಸಲೀವಾಲ, ಬಾಯಿಯವರು ಬಂದಿದ್ದರು. ಮಧ್ಯಲೋಕದ ರಚನೆಯ ಬಗ್ಗೆ ಚರ್ಚೆಗಳಾಯಿತು. ಸೇಠಾಣಿ ಕಂಚನಬಾಯಿಯು ಈ ಚರ್ಚೆಯಲ್ಲಿ ಭಾಗವಹಿಸಿದ್ದವರು ಮಾತಾಜೀ ಈ ಭವ್ಯ

ರಚನೆಯನ್ನು ತಾವು ಇಂದೂರಿನಲ್ಲೇ ಮಾಡಿಸಿರಿ. ನನ್ನದು ಇಲ್ಲಿ ಕಂಚನಭಾಗನಲ್ಲಿ ದೊಡ್ಡದೇ ಜಾಗ ಇದೆ. ನಗರದಲ್ಲೇ ಮಾಡಿಸಿದರೆ ಸಲಕರಣೆಗಳು ಸುಲಭವಾಗಿ ದೊರೆಯುತ್ತವೆ. ಲಕ್ಷಾಂತರ ಜನರು ದರ್ಶನ ಮಾಡುತ್ತಾರೆ. ಎಂದಾಗ ನನ್ನ ಮನದಲ್ಲಿ ಇದರ ನಿರ್ಮಾಣ ತೀರ್ಥಕ್ಷೇತ್ರದಲ್ಲೇ ಆಗಬೇಕು. ಪವಿತ್ರತೆಯ ರಕ್ಷಣೆ ತೀರ್ಥಕ್ಷೇತ್ರದಲ್ಲಿ ಸಂಭವ ಇದು ನಗರದಲ್ಲಿ ಸಾಧ್ಯವಿಲ್ಲ. ಸೇಠಾಣಿಯ ಮಾತನ್ನು ಕೇಳಿ ನಕ್ಕು ಹೇಳಿದೆ. ಎಲ್ಲಿಯೋಗವಿದೆ ಅಲ್ಲೇ ಆಗುವುದು.

ಕೆಲವು ಹಿರಿಯರು ಒಂದು ಒಳ್ಳೆಯ ಭಾವನೆಗಳನ್ನು ವ್ಯಕ್ತಪಡಿಸಿದರು. ಮಾತಾಜೀ ಜೈನ ಸಮಾಜದಲ್ಲಿ ನಾವು ಮೊಟ್ಟಮೊದಲ ಬಾರಿಗೆ ನಿಮ್ಮಂತಹ ವಿದುಷಿ ಸಾಧ್ವಿಯನ್ನು ನೋಡಿದ್ದು, ನಿಮ್ಮ ಪ್ರವಚನ ಒಳ್ಳೆ ಪ್ರಭಾವಶಾಲಿಯಾಗಿದೆ. ನಿಮ್ಮಂತವರು ಇಂದೂರಿನಂತಹ ಊರಿನಲ್ಲಿ ಚಾತುರ್ಮಾಸ ಮಾಡಬೇಕು. ಆದ್ದರಿಂದ ಮುಂದಿನ ಚಾತುರ್ಮಾಸವನ್ನಾದರೂ ನೀವು ಇಲ್ಲಿ ನಿಂತು ಜೈನಧರ್ಮದ ಪ್ರಭಾವನೆ ಮಾಡಬೇಕೆಂದರು.

ಆಗ ನನಗೆ ಇದ್ದಕ್ಕಿದ್ದಂತೆ ನಾನು ಮೊದಲು ಕೇಳಿದ ಆಚಾರ್ಯಕಲ್ಪದ ಚಂದ್ರಸಾಗರರ ಪ್ರತಿ ಇಲ್ಲಿ ನಡೆದ ಘಟನೆಯು ನೆನಪಿಗೆ ಬಂದಿತು. ಈ ನಗರದಲ್ಲಿ ಮುನಿಗಳು ಇದ್ದರೆ ಗುರುಭಕ್ತಿ ತೋರಿಸುವವರು ಇದ್ದೇ ಇರುತ್ತಾರೆ. ಮುನಿಗಳ ಪ್ರಭಾವನೆಯಿಂದ ಅನೇಕ ಕಾರ್ಯಗಳು ನಡೆದೆ ನಡೆಯುತ್ತವೆ.

೫೨

ಸನಾವದದ ಕಡೆ ಮತ್ತೆ ವಿಹಾರ

ಚಾತುರ್ಮಾಸ ಹತ್ತಿರ ಬರುತ್ತಿತ್ತು. ಸನಾವದ ಜನರು ಕರೆಯಲು ಬಂದರು. ಆಗ ಇಂದೂರಿನ ಬಹಳಷ್ಟು ಜನರು ಗಂಡಸು ಹೆಂಗಸಾದಿಯಾಗಿ ಎಲ್ಲರ ಕಣ್ಣುಗಳಲ್ಲಿ ನೀರು. ವಿಹಾರ ಹೊರಟಂತೆ ದಾರಿಯಲ್ಲಿ ಎಲ್ಲರ ಮನೆಯ ಬಾಗಿಲಲ್ಲೂ ನನ್ನನ್ನೂ ತಡೆದು ಹಾಲಿನಿಂದ ಕಾಲು ತೊಳೆದರು. ಒಂದು ಮನೆಯ ಹತ್ತಿರ ಒಬ್ಬ ಪುರುಷರು ಬಂದು ನನ್ನ ಕಾಲು ತೊಳೆಯ ತೊಡಗಿದರು ಹೆಂಗಸು ಬಾಗಿಲಲ್ಲೆ ನಿಂತಿದ್ದಳು ಆಗ ನಾನು ಹೀಗೇಕೆ ಎಂದೆ. ಅದಕ್ಕೆ ಜನರು ಪುರುಷ ಮುನಿಭಕ್ತ ವರ್ಗ ಹೆಂಡತಿ ಸೋನಗಡಿ ಎಂದರು. ನನಗೆ ಆಶ್ಚರ್ಯವಾಯಿತು. ಈಗ ಬಹಳಷ್ಟು ಮನೆಯಲ್ಲಿ ಒಂದೇ ಮನೆಯಲ್ಲಿ ಎರಡು ವಿಚಾರಧಾರೆಯವರು ಇದ್ದಾರೆ ಅವರೆಲ್ಲ ನಮ್ಮ ಹತ್ತಿರ ಬರುತ್ತಾರೆ ಆದರೆ ನಮಸ್ಕಾರ ಮಾಡುವ ಆಹಾರ ಮಾಡುವ ಭಾವನೆ ಇರುವುದಿಲ್ಲ. ನಾವು ಸಂಘ ಸಹಿತವಾಗಿ ಸನಾವದಕ್ಕೆ ಬಂದೆವು. ಚಾತುರ್ಮಾಸದ ಸ್ಥಾಪನೆಯ ದಿವಸವು ಬಂದಿತು. ಎಲ್ಲರು ಶ್ರೀಫಲವನ್ನು ಇಟ್ಟು ಪ್ರಾರ್ಥಿಸುತ್ತಿದ್ದರು. ಆಗ ನಾನು ಸೇಠ ಅಮೋಲಕಚಂದರನ್ನ ಉದ್ದೇಶಿಸಿ ಕೇಳಿದೆ ಅಮೋಲಕಚಂದಜೀ ತಾವು ನಿಮ್ಮ ಮಗನನ್ನು ನನಗೆ ದತ್ತು ಕೊಡಿರಿ. ಅವರು ಸಹಜವಾಗಿಯೇ ಮಾತಾಜಿ ಅವನು ನಿಮ್ಮ ಮಗನೇ ಎಂದರು. ಎಲ್ಲರು ನಿಮ್ಮ ಮಗನೇ ಎಂದು ಹೇಳುತ್ತಾರೆ. ಆದರೆ ಎಷ್ಟು ಜನರು ಕೊಡುತ್ತಾರೆ ಹೇಳಿ ಎಂದೆ. ಕೊನೆಗೆ ಮೋತಿಚಂದ ಅಜನ್ಮ ಬ್ರಹ್ಮಚಾರಿ ವ್ರತ ತೆಗೆದುಕೊಂಡಿರುವುದು ಗೊತ್ತಿತ್ತು. ಅವನು ಇನ್ನೆಷ್ಟು ದಿನ ಮನೆಯಲ್ಲಿ ಇರುತ್ತಾನೆ. ಮೋತಿಚಂದನ ತಾಯಿ ರೂಪಾಬಾಯಿ ನನ್ನ ಹತ್ತಿರ ಕುಳಿತುಕೊಳ್ಳುತ್ತಿದ್ದುದ್ದೇ ಕಡಿಮೆ. ದರ್ಶನ ಮಾಡಿ ಉಪದೇಶ ಕೇಳಿ ಹಾಗೇ ಹೊರಟು ಹೋಗುತ್ತಿದ್ದರು. ಅಮೋಲಚಂದರು ಬಂದಾಗ ಸ್ವಲ್ಪ ಹೊತ್ತು ಕುಳಿತಿರುತ್ತಿದ್ದರು. ವಿಷಯ ನಗುತ್ತಾ ಮುಗಿಯಿತು. ಚಾತುರ್ಮಾಸದ ಸ್ಥಾಪನೆ ವಿಧಿವತ್ತಾಗಿ ಆಷಾಢ ಶುಕ್ಲ ಚತುರ್ದರ್ಶಿಯ ದಿನ ನಡೆಯಿತು.

ನಾವು ಇಳಿದುಕೊಂಡಿದ್ದ ಧರ್ಮಶಾಲೆಗೆ ಮಂದಿರದಿಂದ ಒಂದು ಜಿನಪ್ರತಿಮೆಯನ್ನು ತಂದು ಇಟ್ಟರು. ನಮ್ಮಲ್ಲಿ ಇದ್ದ ಪ್ರತಿಮೆಯನ್ನು ಇಟ್ಟು ದಿನಾ ಅಭಿಷೇಕ, ಉಪದೇಶ ನಡೆಯತೊಡಗಿತು. ಚಾತುರ್ಮಾಸದಲ್ಲಿ ಶಿಕ್ಷಣ ಶಿಬಿರದ ವ್ಯವಸ್ಥೆಯನ್ನು ಮಾಡಲಾಗಿತ್ತು. ಹುಡುಗ ಹುಡುಗಿಯರು ಛಹಡಾಲ ಓದುತ್ತಿದ್ದರು. ಶ್ಯಾಮಾಬಾಯಿ ಎಂಬ ಮಹಿಳೆ ವಿದ್ಯಾರ್ಥಿನಿಯರಿಗೆ ತತ್ತ್ವಾರ್ಥಸೂತ್ರ, ಪುರುಷಾರ್ಥ ಸಿಧ್ಯುಪಾಯ ಹೇಳಿಕೊಡುತ್ತಿದ್ದರು.

ಆಲಾಪ ಪದ್ಧತಿ - ಭಕ್ತಿ ಪಲ್ಲವೀ

ಆಧ್ಯಾತ್ಮ ಗ್ರಂಥಗಳನ್ನು ತಿಳಿಯುವುದಕ್ಕಾಗಿ ನಯಗಳನ್ನು ಮೊದಲು ತಿಳಿಯಬೇಕು. ಆಲಾಪ ಪದ್ಧತಿ ಗ್ರಂಥದಲ್ಲಿ ನಯಗಳ ವಿವೇಚನೆ ಚೆನ್ನಾಗಿ ಕೊಟ್ಟಿದ್ದಾರೆ. ನಾನು ಪ್ರಥಮ ಗುಚ್ಛದ ಪುಸ್ತಕದಲ್ಲಿ ಈ ಆಲಾಪ ಪದ್ಧತಿಯ ಹಿಂದಿ ಅನುವಾದವನ್ನು ಮಾಡಿದ್ದೇನೆ ಇದನ್ನು ಮೋತಿಚಂದರು ಅಚ್ಚು ಹಾಕಿಸಿದರು. ಅದೇ ಪ್ರಕಾರ ನಾನು ಪಾತ್ರ ಕೇಸರೀ ಸ್ತೋತ್ರದ ಹಿಂದಿ ಪದ್ಯಾನುವಾದ ಮಾಡಿದೆ. ಅದು "ಭಕ್ತಿ ಪಲ್ಲವೀ" ಎಂಬ ಪುಸ್ತಕದ ರೂಪದಲ್ಲಿ ಅಚ್ಚಾಯಿತು ತ್ರಿಲೋಕವಂದನೆ, ಸಮ್ಮೇದ ಶಿಖರ ವಂದನೆ, ಉಷಾವಂದನೆ ಮುಂತಾದ ರಚನೆ ಮಾಡಿದೆ. ಶಿಕ್ಷಣ ಶಿಬಿರಗಳಲ್ಲಿ ಈ ಪುಸ್ತಕಗಳ ಅಧ್ಯಯನ ನಡೆಯಿತು. ಇಲ್ಲಿ ಚಾತುರ್ಮಾಸದಲ್ಲಿ ಒಂದಲ್ಲ ಒಂದು ವಿಧಾನ ನಡೆಯುತ್ತಲೇ ಇತ್ತು.

ಮಧ್ಯಮಲೋಕ ಚೈತ್ಯಾಲಯ ನಿರ್ಮಾಣದಲ್ಲಿ ವಿಘ್ನ

ಆಚಾರ್ಯ ಶಿವಸಾಗರರ ಪ್ರೇರಣೆಯಿಂದ ಬ್ರಹ್ಮಚಾರಿಗಳು ಒಂದು ಪತ್ರವನ್ನು ಕಳುಹಿಸಿದರು. ಆರ್ಯಿಕೆ ಜ್ಞಾನಮತಿಯು ತಮ್ಮ ಸಂಘಸಹಿತವಾಗಿ ಆಚಾರ್ಯರ ಸಂಘಕ್ಕೆ ಬರಬೇಕು. ಮಹಾವೀರಜೀ ಅತಿಶಯ ಕ್ಷೇತ್ರದಲ್ಲಿ ಮಧ್ಯಲೋಕದ ನಿರ್ಮಾಣವಾಗಬೇಕಾಗಿದೆ ಎಂದು. ಇಂದೂರಿನ ಶ್ರೀಮಾನ ಬಾಯಿ ಸಾಹೇಬ ಸೇಠ ಹೀರಾಲಾಲಜೀ, ಕಾಸಲೀವಾಲ, ಮೊದಲಾದವರು ಜಂಬೂದ್ವೀಪದ ರಚನೆಗಾಗಿ ಬ್ಯಾಂಕಿನಲ್ಲಿ ಒಂದು ಲಕ್ಷ ರೂಪಾಯಿಗಳನ್ನು ನಿಶ್ಚಿತ ಠೇವಣಿಯಲ್ಲಿ ಇಡಿಸಿರಿ ಮತ್ತೆ ಸುಮೇರು ಪರ್ವತದ ಕೆಲಸವನ್ನು ನಾವು ಪ್ರಾರಂಭಿಸುತ್ತೇವೆ ಎಂದರು.

ಜನರ ಮಾತುಗಳನ್ನ ಕೇಳಿ ನನಗೆ ಆಶ್ಚರ್ಯವಾಯಿತು ನನಗೆ ಬ್ಯಾಂಕ್‌ನಲ್ಲಿ ಹಣ ಇಡದೆ ನಿರ್ಮಾಣದ ಕೆಲಸ ಪ್ರಾರಂಭವಾಗಲಿ ಆಮೇಲೆ ದಾನಿಗಳು ತಾವೇ ಕೊಡುತ್ತಾರೆ ಎನ್ನುವುದು ನನ್ನ ಭಾವನೆ. ಅದಲ್ಲದೆ ಹಣವನ್ನು ಕೂಡಿಸುವುದು ನನ್ನ ಉದ್ದೇಶವಲ್ಲ ಕೇವಲ ನಕ್ಷೆಯ ರೂಪರೇಖೆ ಹೇಳುವುದು ಮಾತ್ರ ನನ್ನ ಕರ್ತವ್ಯ.

ಇಂದೂರಿನವರ ಇಂತಹ ಸೂಚನೆ, ಆಚಾರ್ಯರ ಆದೇಶ ಈ ಎರಡು ಕಾರಣಗಳಿಂದ ಅಲ್ಲಿ ಸಿದ್ಧವರಕೂಟದಲ್ಲಿ ನಿರ್ಮಾಣಕಾರ್ಯ ಪ್ರಾರಂಭವಾಗಲೇ ಇಲ್ಲ. ಸೇಠ ಹೀರಾಲಾಲಜೀ ಪಾಟನೀ ಆಚಾರ್ಯ ಸಂಘದ ಪ್ರಮುಖ ಭಕ್ತರು ಗಿರಿನಾರ ಯಾತ್ರೆ ಮಾಡಿಸಿದ ನಂತರ ಸಂಘಪತೀ ಎಂದು ಕರೆಯಲಾಗುತ್ತಿತ್ತು. ಈ ಮಹಾನುಭಾವರ ಜೊತೆ ಬ್ರ. ಸೂರಜಮಲರು ಸನಾವದಗೆ ಬಂದರು. ಈ ರಚನೆಯ ರೂಪರೇಖೆಯನ್ನು ಕೇಳಿ ವಿಚಾರ ವಿಮರ್ಶೆ ಮಾಡಿ ಮತ್ತೆ-ಮತ್ತೆ ಹೇಳತೊಡಗಿದರು. ಮಾತಾಜೀ ಚಾತುರ್ಮಾಸದ ನಂತರ ವಿಹಾರ ಮಾಡಿ ಸಂಘಕ್ಕೆ ಬನ್ನಿರಿ. ಆಚಾರ್ಯರ ಇಚ್ಛಾನುಸಾರ ಈ ರಚನೆಯು ಮಹಾವೀರ ಕ್ಷೇತ್ರದಲ್ಲೇ ಆಗಲಿ ಎಂದರು. ಹೀಗೆ ಪ್ರಭಾವನಾ ಪೂರ್ವಕವಾಗಿ ಈ ಸಲದ ಚಾತುರ್ಮಾಸ ಮುಗಿಯಿತು.

ಮುಕ್ತಾಗಿರಿ ತೀರ್ಥಕ್ಕೆ ವಿಹಾರ

ಸೇಠಾಣಿ ಮಂದಿರಮಾಯ, ರಾಮ ಕುಂವರ ಬಾಯಿ. ಕಮಲಾಬಾಯಿ ಪಾಂಡ್ಯ ಇವರೆಲ್ಲ ಸೇರಿ ಮಾತಾಜೀ ಇಲ್ಲಿಂದ ಮುಕ್ತಾಗಿರಿ ತೀರ್ಥಕ್ಷೇತ್ರ ಸುಮಾರು 250 ಮೈಲಿ ಇದೆ ತಾವು ವಿಹಾರ ಮಾಡಿ ದರ್ಶನ ಮಾಡಿರಿ. ಪುನಃ ನೀವು ರಾಜಸ್ತಾನದ ಕಡೆ ಹೊರಟರೆ ಈ ಕಡೆ ಎಲ್ಲಿ ಬರುತ್ತೀರ ಎಂದರು.

ಆರ್ಯಿಕೆ ಜಿನಮತಿಗೆ ಚಾತುರ್ಮಾಸದಲ್ಲಿ ಬಹಳ ದಿನವರೆಗೆ ಮಲೇರಿಯಾ ಜ್ವರ ಇದ್ದುದ್ದರಿಂದ ಅವರು ನಿಶ್ಯಕ್ತರಾಗಿದ್ದರು. ಆದ್ದರಿಂದ ಅವರು ಯಾತ್ರೆಗೆ ಬರುವುದಿಲ್ಲವೆಂದರು ಕ್ಷುಲ್ಲಿಕ ಅಭಯಮತಿ ಮೊದಲೆ ಈ ಕ್ಷೇತ್ರದ ದರ್ಶನ ಮಾಡಿದ್ದರಿಂದ ನಾನು ಅವರಿಬ್ಬರಿಗೂ ಸನಾವದದಲ್ಲಿಯೇ ಇರಲು ಹೇಳಿ ಉಳಿದ ಪದ್ಮಾವತಿ, ಆದಿಮತಿ ಮತ್ತು ಶ್ರೇಯಾಂಸಮತಿಯರೊಡನೆ ಯಾತ್ರೆಗೆ ಹೊರಟೆ.

ಸಂಘದ ವ್ಯವಸ್ಥೆಯನ್ನೆಲ್ಲ ಮಂದಿರಮಾಯ, ಗಂಡಸರಲ್ಲಿ ಮೋತಿಚಂದವಹಿಸಿಕೊಂಡಿದ್ದರು. ಕೆಲವು ಶ್ರಾವಕ-ಶ್ರಾವಕಿಯರು ಜೊತೆಗೆ ಇದ್ದರು. ಮಾರ್ಗಶಿರದ ಚಳಿಯಲ್ಲಿ ನಾವು ಎರಡು ಹೊತ್ತು ನಡೆಯುತ್ತಿದ್ದೆವು ನನಗೆ ಆಶ್ಚರ್ಯವೆಂದರೆ ಸುಮಾರು ಎರಡು ವರ್ಷದಿಂದ ಅನಾರೋಗ್ಯದಿಂದ ನರಳುತ್ತಿದ್ದ ಅವರನ್ನು ಕಷ್ಟದಿಂದ (ಬಲವಂತವಾಗಿ) ಡೋಲಿಯಲ್ಲಿ ವಿಹಾರ ಮಾಡಿಸುತ್ತಿದ್ದೆವು. ಆದರೆ ಇಲ್ಲಿಯ ಹವಾಗುಣದಿಂದ ಆರೋಗ್ಯ ಸುಧಾರಿಸಿ ಈಗ ನನಗೆ ಸಮಾನವಾಗಿಯೇ ಹೆಜ್ಜೆ ಹಾಕುತ್ತಿದ್ದರು. ಈ ಬದಲಾವಣೆಯಿಂದ ಆರೋಗ್ಯದ ಮೇಲೆ ಹವಾಗುಣದ ಪ್ರಭಾವ ಇದೆ ಎಂಬುದನ್ನು ಒಪ್ಪಿಕೊಂಡೆ. ರಸ್ತೆಯಲ್ಲಿ ಮಂದಿರಮಾಯ ಒಂದು ಚೌಕ ಮಾಡುತ್ತಿದ್ದರು. ಶೀಲ ಒಂದು ಚೌಕ ಮಾಡುತ್ತಿದ್ದರು. ನನಗೆ ಆಶ್ಚರ್ಯವೆಂದರೆ ಮಂದಿರಮಾಯ ಧಡೂತಿ ಹೆಂಗಸರಾದರು ಆಲಸಿಯಾಗಿರಲಿಲ್ಲ. ಎದ್ದೇಳಲು ಕಷ್ಟವಾದರು ಅವರಲ್ಲಿ ಸ್ಫೂರ್ತಿ ಇತ್ತು. ದಿನಪೂರ್ತಿ ಕೆಲಸಮಾಡಿದ್ದರು. ಬೆಳಗ್ಗೆ-ರಾತ್ರಿ ಸಾಮಾಯಿಕ ಪಾಠ ಮಾಡಿಯೇ ಮಲಗುತ್ತಿದ್ದರು. ಯಾವಾಗಲು 9-10 ಗಂಟೆಯ ತನಕ ಕುಳಿತಿದ್ದು ನಾನು ಮಲಗಿದ ಮೇಲೆ ನನಗೆ ಮೇಲೆ ಹುಲ್ಲನ್ನು ಹೊದ್ದಿಸಿ ಹೋಗುತ್ತಿದ್ದರು.

ಅವರಿಗೆ ಇಂತಹ ಚಳಿಯಲ್ಲೂ ಮಾತಾಜಿಯವರು ಹೇಗೆ ಒಂದೇ ಸೀರೆಯಲ್ಲಿ ಮಲಗುತ್ತಾರೆ ಎಂದು ಆತಂಕ. ಹುಲ್ಲನ್ನು ಹೊದ್ದಿಸಿಯು ಮಗ್ಗಲು ಬದಲಾಯಿಸಿದಾಗ ಹುಲ್ಲು ಜಾರಿ ಬಿದ್ದು ಚಳಿ ಆಗುತ್ತದೆಯಾ ಎಂದು ಆತಂಕ ಪಡುತ್ತಿದ್ದ ಅವರ ಅಂತಃಕರಣಕ್ಕೆ ನಾನೇ ಬೆರಗಾಗುತ್ತಿದ್ದೆ. ವಯಸ್ಸಾಗಿದ್ದರು ವೈಯಾವೃತ್ತಿ ಮಾಡುವುದರಲ್ಲಿ ಎಂತಹ ಶ್ರದ್ಧೆ ನಿಜವಾಗಿಯು ಇಂತಹವರೇ ಭವ್ಯಜೀವಿಗಳು ಸಂಸಾರದಿಂದ ಪಾರಾಗಲು ಪುರುಷಾರ್ಥ ಮಾಡುತ್ತಿದ್ದಾರೆ.

ಮಾರ್ಗದಲ್ಲಿ ಒಂದು ವೈರಾಗ್ಯದ ಘಟನೆ

ನಮ್ಮ ಯಾತ್ರೆಯಲ್ಲಿ ಎರಡು ಎತ್ತಿನಗಾಡಿಗಳನ್ನು ಬಳಸುತ್ತಿದ್ದೆವು. ಒಂದು ಮುಂದಿನ ಚೌಕದ ಜಾಗಕ್ಕೆ ಹೋಗುತ್ತಿತ್ತು ಇನ್ನೊಂದು ನಮ್ಮ ವಿಹಾರವಾದ ನಂತರ ಹುಲ್ಲು ಹೇರಿಕೊಂಡು ಹೊರಡುತ್ತಿತ್ತು. ಒಂದು ದಿನ ಮಧ್ಯಾಹ್ನ ಯಾರೊ ಹಿಂದಿನ ಗಾಡಿಯವನ ಹೆಂಡತಿಯ ಜೊತೆ ಸಹಜವಾಗಿ ಹೇಳುತ್ತಿದ್ದ. ಈ ದಿನ ನಿನ್ನ ಹೆಂಡತಿ ಮುಂದಿನ ಗಾಡಿಯಲ್ಲಿ ಹೋಗಲಿ ನೀನು ಹಿಂದಿನ ಗಾಡಿಯಲ್ಲಿ ಇರು ಎಂದು. ನಾವು ಒಂದು ಸ್ಥಾನ ತಲುಪಿದೆವು ಗಾಡಿಯವನು ಸಾಯಂಕಾಲ ಸಾಮಾಯಿಕದ ಸಮಯದಲ್ಲಿ ಹೊರಗೆ ಕುಳಿತು ಕೆಮ್ಮಿನಿಂದ ತೊಂದರೆ ಪಡುತ್ತಿದ್ದ. ನಾನು ಸಾಮಾಯಿಕ ಆಗುತ್ತಿದ್ದಂತೆ ಮೋತಿಚಂದನನ್ನು ಕರೆದು ಅವನನ್ನು ಒಳಗೆ ಕರೆದು ಗಂಟಲಿಗೆ

ಎಣ್ಣೆ ಹಚ್ಚಿ ಮಾಲೀಶ್ ಮಾಡಿ ಎಂದೆ. ಮೋತಿಚಂದ ಸಂಕೋಚ ಬಿಟ್ಟು ಅವನಿಗೆ ಮಾಲೀಶ್ ಮಾಡಿದ ಆದರೂ ಅವರಿಗೆ ಆರಾಮವಾಗಲಿಲ್ಲ. ನಾನು ಬೇಗ ಹೋಗಿ ಡಾಕ್ಟರನ್ನು ಕರೆದುಕೊಂಡು ಬಾ ಎಂದೆ, ಡಾಕ್ಟರ್ ಬಂದವರೇ ನೋಡಿದಾಗ ಉಸಿರು ಜೋರಾಗಿ ಬಿಡುತ್ತಿದ್ದ ಡಾಕ್ಟರ್ ಇಂಜೆಕ್ಷನ್ ಕೊಡಬೇಕೆಂದು ರೆಡಿ ಮಾಡಿಕೊಳ್ಳತೊಡಗಿದರು. ಅಷ್ಟರಲ್ಲಿ ಅವನ ಬಾಯಿಂದ ನೊರೆ ಬರತೊಡಗಿತು. ನಾನು ತಕ್ಷಣ ಪಂಚ ನಮಸ್ಕಾರ ಹೇಳತೊಡಗಿದೆ. ಹಾಗೆ ಭೋದನೆಯನ್ನು ಮಾಡಿದೆ, ಅದೇ ಕ್ಷಣ ಪ್ರಾಣ ಹೊರಟೆ ಹೋಯಿತು. ಮೋತಿ ಚಂದ ಡಾಕ್ಟರಿಗೆ ಹೇಳುತ್ತಲೇ ಇದ್ದಾನೆ ಬೇಗ ಇಂಜೆಕ್ಷನ್ ಕೊಡಿ ಔಷಧಿ ಕೊಡಿ ಎಂದು, ಡಾಕ್ಟರ್ ಹೇಳಿದರು. ಎಲ್ಲ ದಂಡ ಅವನ ಪ್ರಾಣ ಹೋಯಿತು ಎಂದು.

ಮೋತಿಚಂದ ಕಕ್ಕಾಬಿಕ್ಕಿ ಆದ ಡಾಕ್ಟರ್ ಹೊರಟು ಹೋದರು ಹತ್ತಿರದಲ್ಲಿದ್ದ 2-3 ಮುಸಲ್‌ಮಾನರು ಬಂದವರೇ ನೀವಾದರೂ ಯಾತ್ರಿಗಳು ನಾಳೆ ಬೆಳಗಾದರೆ ಇದು ಪೋಲಿಸ್ ಕೇಸ್ ಆಗಬಹುದು ಆದ್ದರಿಂದ ಈಗಲೇ ಸರಪಂಚರನ್ನು ಕರೆಸಿ ವಿಷಯ ತಿಳಿಸಿಬಿಡಿ ಎಂದರು. ಗಂಟೆ 11 ಆಗಿತ್ತು ಮೋತಿಚಂದನು ಕಾಡಿನ ದಾರಿಯಲ್ಲೇ ನಡೆದುಕೊಂಡು ಹೋಗಿ ಸರಪಂಚರನ್ನು ಕರೆದುತಂದು ಅವರಿಗೆ ಎಲ್ಲ ವಿಷಯವನ್ನು ತಿಳಿಸಲಾಯಿತು ಯಾವುದೋ ಟ್ರಕ್ಕಿನವರ ಹತ್ತಿರ ಹೇಳಿ ಕಳುಹಿಸಿ ಮುಂದಿನ ಗಾಡಿಯಲ್ಲಿ ಹೋಗಿದ್ದ ಅವನ ಹೆಂಡತಿಯನ್ನು ಕರೆಸಲಾಯಿತು. ಈ ಎಲ್ಲ ಕೆಲಸಗಳನ್ನು ಮಾಡುವಷ್ಟರಲ್ಲಿ ರಾತ್ರಿ ಎರಡುಗಂಟೆ ಆಯಿತು.

ಪದ್ಮಾವತಿಯಂತೂ ಅಮ್ಮ ಮೋತಿಚಂದನನ್ನು ನೀವು ಸಶ್ಮಾನದಂತಿರುವ ಕಾಡಿನಲ್ಲಿ ಎಲ್ಲಿಗೆ ಕಳುಹಿಸುತ್ತಿದ್ದೀರ ಅವನನ್ನು ತಡೆಯರಿ ರಾತ್ರಿಯಲ್ಲಿ ಮತ್ತೆ ಕಳುಹಿಸಬೇಡಿ ಎಂದರು, ಅವರೆಲ್ಲ ಸಾಕಷ್ಟು ಹೆದರಿದ್ದರು. ನಾನು ಮೌನವಾಗಿದ್ದೆ ರಾತ್ರಿಯಲ್ಲಿ ನಿರ್ಜನ ಸ್ಥಾನದಲ್ಲಿ ಕುಳಿತಿದ್ದೆವು, ಮುಂದೆ ಹೆಣ ಇತ್ತು ಆದ್ದರಿಂದ ವರಾಂಡದ ಭಯಂಕರ ಚಳಿಯಲ್ಲೇ ಎಲ್ಲಾ ಆರ್ಯಿಕೆಯರು ಕುಳಿತು ಣಮೋಕಾರ ಮಂತ್ರವನ್ನು ಜಪಿಸುತ್ತಿದ್ದೆವು. ಸಾಮಾಯಿಕ ಆದ ಮೇಲೆ ನಾವು ವಿಹಾರ ಹೊರಟೆವು. ಈ ಕಡೆ ಮೋತಿಚಂದನು ಸರಪಂಚರನ್ನು ಜೊತೆಗೆ ಕರೆತಂದು, ಹೆಂಗಸನ್ನು ಕರೆದುಕೊಂಡು ಅಲ್ಲೇ ಸ್ಮಶಾನದಲ್ಲಿ ದಹನ ಕ್ರಿಯೆ ಮಾಡಿಸಿದ. ಆ ಹೆಂಗಸು ಕೂಡ ಮೋತಿಚಂದನನ್ನು ಅದನ್ನು ತೆಗೆದುಕೊಂಡು ಬಾ ಇದನ್ನು ತೆಗೆದುಕೊಂಡು ಬಾ ಎಂದು ಸಾಕಷ್ಟು ಓಡಿಯಾಡಿಸಿದಳು. ಅವರ ಅಂತ್ಯಕ್ರಿಯೆ ಎಲ್ಲ ಮುಗಿಸಿ ಅವರೆಲ್ಲ ನಾವು ಇರುವಲ್ಲಿ ಬರುವಾಗ ಮಧ್ಯಾಹ್ನವಾಯಿತು. ನನಗೆ ಬಹಳ ಚಿಂತೆಯಾಗಿತ್ತು. ಆಹಾ ಸಂಸಾರವೇ ಯಾರಿಗೂ ಜೀವನ, ಮರಣದ ಬಗ್ಗೆ ಭರವಸೆ ಇಲ್ಲವಲ್ಲ. ಅವನಿಗೆ ವಯಸ್ಸಾಗಿತ್ತು ಮೇಲಾಗಿ ಕಾಯಿಲೆಯಿಂದ ನರಳುತ್ತಲು ಇದ್ದ. ಅವನ ಸಾವು ಏನು ಆಶ್ಚರ್ಯವಲ್ಲವಾದರು ನಾನು ಎದುರಿಗೆ ನೋಡಿದ ಮೊದಲ ಸಾವು ಇದಾಗಿತ್ತು.

ನನ್ನ ಕಣ್ಣ ಮುಂದೆ ಆ ನಿರ್ಜನ ಪ್ರದೇಶ, ಮೋತಿಚಂದ ಆ ರಾತ್ರಿಯಲ್ಲಿ 2-3 ಗಂಟೆಯ ವರೆಗೂ ಓಡಾಟ, ಅದರ ಜೊತೆಗೆ ಮಾತಾಜಿಯವರ ನಿರ್ಬಂಧ ಇವನ್ನೆಲ್ಲ ನೋಡಿದ ನಾನು ಮೋತಿಚಂದನು, ಮೋತಿ ಏನು ಹೇಳಿದರು ಕೇಳಲು ಸಿದ್ಧನಿದ್ದ ಅರ್ಧರಾತ್ರಿಯಲ್ಲಿ ಸಶ್ಮಾನದಲ್ಲಿ ನಿಂತುಕೊ ಎಂದರು. ನಿಲ್ಲಲು ಸಿದ್ದನಿದ್ದ ಮೋತಿಚಂದನ ಈ ಆಜ್ಞಾಪಾಲನಾ ಪ್ರವೃತ್ತಿ, ನಿರ್ಭೀತತೆ ಎಲ್ಲ ಶಿಷ್ಯರಲ್ಲೂ ಅನುಕರಣೀಯತೆಗೆ ಬರಬೇಕು. ಒಮ್ಮೆ ಇವನೇ ಒಂದು ಬಾರಿ ಹೇಳಿದ್ದ ಚಿಕ್ಕವನಿದ್ದಾಗ ಮನೆಯ ಮಹಡಿಯಿಂದ ಒಬ್ಬನೆ ಕೆಳಗೆ ಇಳಿಯಲು ಹೆದರುತ್ತಿದ್ದವನು ಈಗ ಜವಾಬ್ದಾರಿ, ಗುರುಭಕ್ತಿ ಮತ್ತು ಮಹಾಮಂತ್ರದ ಸ್ಮರಣೆಯಿಂದ ಧೈರ್ಯವನ್ನು ಕಂಡುಕೊಂಡಿದ್ದ.

ಪರತವಾಡಾ

ನಡೆಯುತ್ತಾ ಕ್ಷೇತ್ರದ ಹತ್ತಿರದ ಒಂದು ಹಳ್ಳಿಯಲ್ಲಿ ಪರತವಾಡಾದಲ್ಲಿ ತಂಗಿದೆವು ಇಲ್ಲಿಯ ಶ್ರಾವಕರು ಒಳ್ಳೆಯ ಭಕ್ತಿಯನ್ನು ತೋರಿದ್ದರಿಂದ ಒಂದೆರಡು ದಿನ ವಿಶ್ರಾಂತಿಯನ್ನು ಪಡೆದೆವು ಶ್ರಾವಕರು ಆಹಾರ ದಾನ ಕೊಡುತ್ತಿದ್ದರು ಉಪದೇಶ ಕೇಳುತ್ತಿದ್ದರು, ಇದರಿಂದ ಪ್ರಭಾವಿತರಾದರು. ಇಲ್ಲಿಂದ ಕ್ಷೇತ್ರ ದರ್ಶನಕ್ಕೆ ಹೊರೆಟೆವು.

ಮುಕ್ತಾಗಿರಿ ಕ್ಷೇತ್ರ ದರ್ಶನ

ತೀರ್ಥಕ್ಷೇತ್ರ ತಲುಪಿದ ಮೇಲೆ ಮಂದಿರದ ದರ್ಶನ ಮಾಡಿ ಧರ್ಮಶಾಲೆಯಲ್ಲಿ ತಂಗಿದೆವು. ಆಹಾರವಾದ ಮೇಲೆ ಮಧ್ಯಾಹ್ನ ತೀರ್ಥವಂದನೆಗಾಗಿ ಬೆಟ್ಟ ಹತ್ತ ತೊಡಗಿದೆವು. ಮೇಲಿನ ಮಂದಿರಗಳನ್ನ ದರ್ಶನ ಮಾಡಿ, ಸಿದ್ಧಗತಿಯನ್ನು ಪಡೆದಿರುವ ಮುನಿಗಳನ್ನು ವಂದಿಸಿದೆ, ಅಲ್ಲಿಯ ಝರಿಗಳ ದೃಶ್ಯ ಮನೋರಮವಾಗಿದೆ. ಮನಸ್ಸು ಪ್ರಕೃತಿಯ ದೃಶ್ಯದಿಂದ ಪ್ರಸನ್ನವಾಗಿ ಯೋಚಿಸತೊಡಗಿದೆ. ಭಗವಾನ ಇಂತಹ ಪರ್ವತಗಳ ಮೇಲೆ, ಗಿರಿ ಕಂದರಗಳ ಗುಹೆಗಳು, ನಿರ್ಜನ ವನ ಮತ್ತು ನದಿಗಳ ಹತ್ತಿರ ಏಕಾಕಿಯಾಗಿ ವಿಹರಿಸುತ್ತಾ ಶುದ್ಧಾತ್ಮದ ಧ್ಯಾನ ಮಾಡುವ ಅವಕಾಶ ನನಗೂ ಪ್ರಾಪ್ತವಾಗಲಿ, ಹೇ ನಾಥ ಈ ಭವದಲ್ಲಾಗದಿದ್ದರೂ, ಮುಂದಿನ ಭವದಲ್ಲಾದರೂ ಸಿಗಲಿ, ಆತ್ಮನನ್ನು ಶುದ್ಧ ಪರಮಾತ್ಮನನ್ನಾಗಿ ಮಾಡುವ ಪುರುಷಾರ್ಥ ಆಗ ಸಫಲವಾಗೇ ಆಗುತ್ತದೆ.

ಅಚಲಪುರ ಕ್ಷೇತ್ರ ಪರಿಚಯ

ಇಲ್ಲಿಂದ 3½ ಕೋಟಿ ಮುನಿಗಳು ಮೋಕ್ಷಕ್ಕೆ ಹೋದರೆಂದು ನಿರ್ವಾಣಕಾಂಡದಲ್ಲಿ ಹೀಗೆ ಬರೆದಿದೆ.

ಅಚ್ಚಲಪುರವರಣಯರೆ, ಈ ಸಾಣಭಾವಿ ಮೇಡಗಿರಿಸಿಹರೇ ।
ಆಹುಚ್ಚೇಯಕೋಡೀಓ ಣಿವ್ವಾಣಗಯಾ ಣಮೋ ತೇಸಿಂ ॥ 16 ॥

ಅಚಲಪುರ ನಗರದ ಈಶ್ಯಾನದಿಕ್ಕಿನಲ್ಲಿರುವ ಮೇಢಗಿರಿ ಶಿಖರದಲ್ಲಿ 3 ½ ಕೋಟಿ ಮುನಿಗಳು ಮುಕ್ತಿ ಪಡೆದಿದ್ದಾರೆ. ಅವರೆಲ್ಲರಿಗೂ ನನ್ನ ನಮಸ್ಕಾರಗಳು. ಈಗ ಇದನ್ನ ಮುಕ್ತಾಗಿರಿ ಎಂದು ಕರೆಯಲಾಗುತ್ತಿದೆ.

ಈ ಕ್ಷೇತ್ರದ ಧರ್ಮಶಾಲೆಯ ಮೆಟ್ಟಿಲುಗಳನ್ನು ಏರಿದರೆ ಎರಡು ಮಂದಿರಗಳಿವೆ. ಆದಿನಾಥ ಮಂದಿರ ಮತ್ತು ಮಹಾವೀರ ಮಂದಿರ. ಪರ್ವತದ ಮೇಲೆ ಪಾರ್ಶ್ವನಾಥ ಮಂದಿರದಿಂದ ಹಿಡಿದು 53 ಜಿನಮಂದಿರಗಳು ಇವೆ. 1 ಆದಿನಾಥಮಂದಿರ ಅದರ ಹಿಂದೆ ಜಲಪ್ರಪಾತವಿದೆ. 100 ಅಡಿ ಎತ್ತರದಿಂದ ನೀರು ಬೀಳುತ್ತದೆ. ಪ್ರಪಾತದ ಎಡಗಡೆ ಗುಹಾ ಮಂದಿರವಿದೆ. ಇದನ್ನ ಮೇಢಗಿರಿಮಂದಿರವೆಂದು ಕರೆಯುತ್ತಾರೆ. ಇದೇ ಜಲಪ್ರಪಾತದ ಹತ್ತಿರವೇ ಒಂದು ಗುಹೆಯ ಮುಂದೆ ಒಂದು ಕಪ್ಪೆ ಬಿದ್ದಿತು. ಇದಕ್ಕೆ ಒಬ್ಬ ಮುನಿಗಳು ಣಮೋಕಾರ ಮಂತ್ರವನ್ನು ಹೇಳಿದರು. ಇದರ ಪ್ರಭಾವದಿಂದ ಅದು ಸತ್ತು ದೇವನಾಯಿತು. ಅದೇ ಜಾಗದಲ್ಲಿ ಮುತ್ತಿನ ಮಳೆ ಸುರಿಸಿತು ಆದ್ದರಿಂದಲೇ ಈ ಕ್ಷೇತ್ರಕ್ಕೆ ಮುಕ್ತಾಗಿರಿ ಅಥವ ಮೇಢಗಿರಿ ಎಂದು ಪ್ರಸಿದ್ಧಿಯನ್ನು ಪಡೆಯಿತು. ಮಳೆಗಾಲದಲ್ಲೂಂತು ಝರಿ ಇನ್ನೂ ಸುಂದರವಾಗಿ ಕಾಣಿಸುತ್ತದೆ.

ಈ ಕ್ಷೇತ್ರದಲ್ಲಿ 4-5 ದಿನವಿದ್ದು ದರ್ಶನ ಮಾಡಿ ಮತ್ತೇ ಪರತವಾಡಕ್ಕೆ ಬಂದೆವು. ಹೋದ ಮಾರ್ಗದಲ್ಲೇ ಹಿಂದಿರುಗಿದೆವು. ಸನಾವದಕ್ಕೆ ಬರುವಷ್ಟರಲ್ಲಿ ಚಳಿ ಜಾಸ್ತಿಯಾಗಿತ್ತು. ಎಲ್ಲರ ಆರೋಗ್ಯ ಸರಿಯಾಗಿತ್ತು. ಇಲ್ಲಿಂದ ಸಂಘಕ್ಕೆ ಹೊರಡಲು ಕಾರ್ಯಕ್ರಮ ತಯಾರಾಗಿತ್ತು.

ಆಚಾರ್ಯ ಸಂಘದ ಕಡೆ ವಿಹಾರ

ಮಂದಿರಮಾಯ, ವಿಮಲಚಂದರ ಅಮ್ಮ ಮುಂತಾದ ಹೆಂಗಸರು ಮೋತಿಚಂದನ ಮಾಮನ ಮಗ ನವೀನಚಂದ ಎಂಬ ಯುವಕರು ವಿಹಾರದ ಜವಾಬ್ದಾರಿಯನ್ನೂ ಹೊತ್ತಿದ್ದರು, ಯಶವಂತನೆಂಬ ಯುವಕನ ವ್ಯವಹಾರದಿಂದ ಅವರ ತಂದೆ ದುಃಖಿತರಾಗಿದ್ದರು ನನ್ನ ಹತ್ತಿರ ಹೇಳಿಕೊಂಡಿದ್ದರು. ಇದರಿಂದ ಅವನಿಗೆ ವೈರಾಗ್ಯದ ಉಪದೇಶವನ್ನು ಮಾಡಿ ಸಂಘದ ಜೊತೆ ಬರುವಂತೆ ಮನಸ್ಸು ಹದಗೊಳಿಸಿದೆ. ನಂತರ ಬಡವಾಹ, ಇಂದು, ರತಲಾಮ ಮಾರ್ಗವಾಗಿ ಬಾಂಸವಾಡಾಕ್ಕೆ ಬಂದೆವು.

ಶಿಷ್ಯಲಾಭ

ಬಾಲಂಸವಾಡದಲ್ಲಿ ಉಪದೇಶಮಾಡುತ್ತಾ ನಾನು ಪ್ರತಿಯೊಂದು ಹಳ್ಳಿಯಲ್ಲಿಯು ಪ್ರತಿಯೊಬ್ಬ ಶ್ರಾವಕರು ತಮ್ಮ ಪುತ್ರಿಯರನ್ನು ನನಗೆ ಕೊಟ್ಟಿದ್ದೇ ಆದರೆ ಅವರನ್ನೆಲ್ಲ ಓದಿಸಿ ವಿದುಷಿಯರನ್ನಾಗಿ ಮಾಡಿ ಮನೆ ಮನೆಯಲ್ಲೂ ಸೀತೆ, ಮನೋರಮರಂತಹ ನಾರಿರತ್ನಗಳನ್ನು ನೋಡಬಹುದೆಂದೆ. ಉಪದೇಶದಿಂದ ಪ್ರಭಾವಿತರಿಂದ ಪನ್ನಾಲಾಲ ಎಂಬ ಶ್ರಾವಕರು ಅದೇ ಸಭೆಯಲ್ಲಿ 9-10 ವರ್ಷ ಇನ್ನೊಬ್ಬಳು 11-12 ವರ್ಷದ ಕನಕಲತ, ಮತ್ತು ಕಲಾ ಎಂಬ ಇಬ್ಬರು ಹುಡುಗಿಯರನ್ನು ನನ್ನ ಹತ್ತಿರ ಕರೆತಂದು, ಮಾತಾಜಿ ಐದುವರ್ಷಗಳವರೆಗೆ ಇವರಿಬ್ಬರನ್ನು ನಿಮಗೆ ಒಪ್ಪಿಸುತ್ತಿದ್ದೇನೆ ಎಂದರು. ಇಡೀ ಸಭೆಯು ಚಪ್ಪಾಳೆ ತಟ್ಟಿ ಅವರನ್ನು ಗೌರವಿಸಿತು. ನಾನು ಆ ಹುಡುಗಿಯರನ್ನು ಕೇಳಿದೆ. ಮಗಳೇ ನೀವು ತಂದೆ ತಾಯಿಯರನ್ನು ಬಿಟ್ಟು ನಮ್ಮ ಬಳಿ ಬರುತ್ತೀರ ಎಂದೆ. ಅವರಿಬ್ಬರು ಹೌದು ಇರುತ್ತೇವೆ ಎಂದರು. ಅದೇ ಸಮಯದಲ್ಲಿ ಹಾಗೆಯೇ ಅವರನ್ನು ಸಂಘಕ್ಕೆ ಸೇರಿಸಿಕೊಂಡೆ.

ಒಂದು ದಿನ ವಿಶೇಷ ಸಭೆಯಲ್ಲಿ ನಾನು ಪ್ರವಚನ ಮಾಡುತ್ತಿದ್ದೆ, ಲೋಹಾರಿಯದ ಒಬ್ಬ ಹುಡುಗ ನನ್ನ ಹತ್ತಿರ ಬಂದು ಮಾತಾಜಿ ನಾನು ನಿಮ್ಮ ಸಂಘದಲ್ಲಿ ಇರುತ್ತೇನೆ ನಾನು ಮದುವೆ ಮಾಡಿಕೊಳ್ಳುವುದಿಲ್ಲ ಎಂದ. ಆದರೆ ತಂದೆ, ತಾಯಿ ಅವನನ್ನು ಬಲವಂತದಿಂದ ಕರೆದೊಯ್ದರು. ಕೆಲವು ದಿನ ನಂತರ ವಿಮಲಸಾಗರ ಸಂಘವನ್ನು ಸೇರಿದ ಆ ಹುಡುಗ ಮುಂದೆ ಕ್ಷುಲ್ಲಕ ದೀಕ್ಷೆಯನ್ನು ತೆಗೆದುಕೊಂಡ.

1969ರಲ್ಲಿ ವಿಮಲಸಾಗರರ ಸಂಘ ಬಂದಿತು. ನಾನು ಆಚಾರ್ಯ ಧರ್ಮಸಾಗರರ ಸಂಘದಲ್ಲಿ ಇದ್ದೆ. ಈ ಕ್ಷುಲ್ಲಕರು ನನ್ನಲ್ಲಿ ಬಂದು ನಿವೇದಿಸಿದರು. ಮಾತಾಜೀ ನಾನು ಕೆಲವು ದಿನ ನಿಮ್ಮಲ್ಲಿ ಇದ್ದು ವ್ಯಾಕರಣ, ನ್ಯಾಯ, ಮತ್ತು ಸಿದ್ಧಾಂತ ಗ್ರಂಥಗಳನ್ನು ಓದಬೇಕೆಂದು. ಅದಕ್ಕೆ ನಾನು ಯಾವುದೇ ಶಿಷ್ಯರನ್ನಾಗಲಿ ಅವರ ಗುರುಗಳ ಅಪ್ಪಣೆಯಿಲ್ಲದೆ ನಾನು ಸಂಘದಲ್ಲಿ ಇಟ್ಟುಕೊಳ್ಳಲಾರೆ ಎಂದೇ. ಅವರು ಆಚಾರ್ಯ ಶ್ರೀ ವಿಮಲಸಾಗರಜೀಯವರನ್ನು ಆಜ್ಞೆ ತೆಗೆದುಕೊಳ್ಳಲು ಹೋದಾಗ ಮಹಾರಾಜರು ಹೇಳಿದರು. ಮಾತಾಜಿ ಅವರನ್ನು ಬಿಟ್ಟು ಬೇರೆಯವರನ್ನಾದರು ಕರೆದುಕೊಂಡು ಹೋಗಿ ಓದಿಸಿ ಎಂದರು. ಮಾತು ಅಲ್ಲಿಗೆ ಮುಗಿಯಿತು. ಇಂದು ಅವರೇ ಸಂಘದಲ್ಲಿ ಭರತಸಾಗರರೆಂದು ಪ್ರಸಿದ್ಧರಾಗಿದ್ದಾರೆ.

ಕಲಕತ್ತೆಯಲ್ಲಿ ನಾನು 1963ರ ಚಾತುರ್ಮಾಸದಲ್ಲಿ ಮುನಿ ಶ್ರುತಸಾಗರರ ಗೃಹಸ್ಥಾವಸ್ಥೆಯ ಮಗಳು ಸುಶೀಲರನ್ನು ಸಂಸ್ಕರಿಸಿ ಅವಳಿಗೆ ಬ್ರಹ್ಮಚರ್ಯವ್ರತವನ್ನು ಕೊಟ್ಟಿದ್ದೆ. ಆದರೆ ಅವರ ಅಣ್ಣಂದಿರು ವಿರೋಧಿಸಿ ಇಲ್ಲಿಯವರೆಗೂ ನನ್ನ ಹತ್ತಿರ ಕಳುಹಿಸಲಿಲ್ಲ ಈಗ ಆಚಾರ್ಯರ ಸಂಘಕ್ಕೆ ಬಂದು ಆರ್ಯಿಕೆ ವಿಶುದ್ಧಮತಿಯ ಹತ್ತಿರ ಅಧ್ಯಯನ ಮಾಡುತ್ತಿದ್ದಳು. ನಾನು ಇಲ್ಲಿಗೆ ಬಂದ ಮೇಲೆ ನನ್ನ ಹತ್ತಿರ ಬಂದಳು. ಅವಳಿಗೆ ಇಂದು ತನ್ನ ತಾಯಿಯೇ ಸಿಕ್ಕಂತೆ ಆಯಿತು ಎನ್ನಿಸಿತು.

ಆ ನಂತರ ದೀಕ್ಷೆ ತೆಗೆದುಕೊಳ್ಳುವವರೆಗೂ ನನ್ನ ಹತ್ತಿರವೇ ಇದ್ದರು. 1974ರಲ್ಲಿ ದೆಹಲಿಯಲ್ಲಿ ಆರ್ಯಿಕೆ ಶ್ರುತಮತಿ ಆದರು ತಮ್ಮ ತಂದೆ ಆಚಾರ್ಯಕಲ್ಪ ಶ್ರೀ ಶ್ರುತಸಾಗರ ಮಹಾರಾಜರ ಸಂಘದಲ್ಲಿದ್ದರು ಈಗ ಆರ್ಯಿಕೆ ಆದಿಮತಿಯ ಹತ್ತಿರವಿದ್ದಾರೆ.

ಸಂಘವನ್ನು ನವೀನಚಂದನು ನೋಡಿಕೊಳ್ಳುತ್ತಿದ್ದುದ್ದರಿಂದ ನಾವೆಲ್ಲ ಅವನನ್ನು ಸಂಘಪತೀ ಎಂದು ಕರೆಯುತ್ತಿದ್ದೆವು. ಮಂದಿರ ಮಾಯರ ಗುರುಭಕ್ತಿಯನ್ನು ಏನೆಂದು ಹೊಗಳಿದರೂ ಕಡಿಮೆಯೆ. ನಾನು ಸನಾವದದಲ್ಲಿ ಇರುವವರೆಗೂ ಪ್ರತಿದಿನ ಚೌಕ ಮಾಡುತ್ತಿದ್ದರು. ತಾವು ಒಬ್ಬರೇ ಇದ್ದರೂ ಎಲ್ಲ ಕೆಲಸವನ್ನು ತಾವೇ ಮಾಡಿಕೊಳ್ಳುತ್ತಿದ್ದರು. ಆಗ ಅವರ ವಯಸ್ಸು 65-70 ಇರಬಹುದು. ಮುಕ್ತಾಗಿರಿಯಲ್ಲೂ ಚೌಕ ಮಾಡುತ್ತಿದ್ದರು. ಪುನಃ ಸಂಘವನ್ನು ತಲುಪಿಸುವವರೆಗೂ ನನ್ನ ಜೊತೆಯೇ ಇದ್ದರು. ವಿಮಲಚಂದನ ತಾಯಿಯು ವಯಸ್ಸಾಗಿದ್ದರೂ ಪ್ರತಿದಿನ ನನ್ನ ಜೊತೆ ನಡೆಯುತ್ತಿದ್ದರು. ಇಲ್ಲಿ ಬಾಂಸವಾಡಾದಿಂದ ನಾವು ಸಲುಂಬರ ತಲುಪಿದೆವು. ಸಲುಂಬರದಲ್ಲಿ ಸೇಠ್ ಬಾದಾಮಿಲಾಲ ಗಾಂಧೀಜೀಯವರು ಚೈತ್ಯಾಲಯದ ಹತ್ತಿರ ಒಂದು ಕೊಠಡಿಯಲ್ಲಿ ನಮ್ಮನ್ನು ಇಳಿಸಿದ್ದರು. ಅಲ್ಲಿಗೆ ಸನಾವದದಿಂದ ಮೋತಿಚಂದ ಮೊದಲಾದ ಮಹನೀಯರು ಬಂದಿದ್ದರು. ಒಂದು ದಿನ ಬದಾಮಿಲಾಲಜೀ ನನ್ನನ್ನು ಕೇಳಿದರು ಮಾತಾಜೀ ಇಲ್ಲಿ ಒಂದು ಸರೋವರವಿದೆ ಇದರ ಮಧ್ಯೆ ಒಂದು ಭ. ಮಹಾವೀರ ಮಂದಿರವನ್ನು ಮಾಡಿಸಬೇಕೆಂದು ಇದ್ದೇವೆ ತಾವು ಆಶೀರ್ವಾದ ಕೊಡಬೇಕು. ಇದರಿಂದ ನಮಗೆ ಸಫಲತೆಯು ಸಿಗುತ್ತದೆ. ಇದರ ಇಡೀ ರೂಪರೇಷೆಗಳನ್ನು ಕೇಳಿ ನನಗೆ ಸಂತೋಷವಾಯಿತು. ನಾನು ಅವರಿಗೆ ಆಶೀರ್ವದಿಸುತ್ತಾ ಹೇಳಿದೆ. ಧರ್ಮಕಾರ್ಯಗಳಲ್ಲಿ ನಿಮಗೆ ಸಫಲತೆಯು ಖಂಡಿತ ಸಿಗುತ್ತದೆ. ಈ ಕೆರೆಯಲ್ಲಿ ಮಂದಿರವನ್ನು ಮಾಡಿ ಇದನ್ನು ಒಂದು ತೀರ್ಥಕ್ಷೇತ್ರವನ್ನಾಗಿ ಮಾಡಿರಿ ಎಂದೆ.

ಆಚಾರ್ಯ ಸಂಘದ ದರ್ಶನ

ಇಲ್ಲಿಂದ ವಿಹಾರ ಮಾಡಿ ನಾನು ಕರಾವಲಿ ಎಂಬ ಹಳ್ಳಿಗೆ ಬಂದೆ, ಆಚಾರ್ಯ ಶಿವಸಾಗರರರು ಸಂಘ ಸಹಿತವಾಗಿ ಇಲ್ಲಿಯೇ ಇದ್ದಿದ್ದು. ಆರ್ಯಿಕೆ ವಿಶುದ್ಧಮತಿ ಕ್ಷುಲ್ಲಕ ಸಂಭವಸಾಗರ ಮೊದಲಾದ ಸಾಧುಗಣವೇ ಶ್ರಾವಕರೊಡನೆ ಸ್ವಾಗತಿಸಲು ಬಂದಿದ್ದರು. ನಾವು ಆರು ಜನರು ನಮ್ಮ ಶಿಷ್ಯರೊಡನೆ ಮೊದಲು ಮಂದಿರದ ದರ್ಶನ ಮಾಡುತ್ತಿದ್ದಂತೆ ಆಚಾರ್ಯರ ಬಳಿಗೆ ಸಾಗಿದೆವು ಅಂದಿಗೆ ನಾವು ಸಂಘದಿಂದ ಹೊರಟು ಐದುವರ್ಷಗಳಾಗಿದ್ದವು. ಈ ಮಿಲನ ಚಿರಸ್ಮರಣೀಯ ಗುರು ಶಿಷ್ಯೆಯರೆಲ್ಲರಿಗೂ ಆನಂದಬಾಷ್ಪ ಇದನ್ನು ನೋಡುತ್ತಿದ್ದ ಶ್ರಾವಕರು ಉತ್ಕಂಠಿತರಾದರು.

ಸಂಘದಲ್ಲಿದ್ದ ಮೋತಿಚಂದ, ಯಶವಂತ, ಕು. ಶೀಲ, ಸುಶೀಲ, ಕಲಾ ಮತ್ತು ಕನಕ ಎಲ್ಲರನ್ನು ನೋಡಿ ಪ್ರಸನ್ನರಾದ ಆಚಾರ್ಯರು ಹೇಳಿದರು ಜ್ಞಾನಮತಿಯವರು ಸಂಘವನ್ನು ಸರಿಯಾಗಿ ಬೆಳೆಸಿದ್ದಾರೆ ಎಂದು. ಎಲ್ಲರಿಗೂ ಮತ್ತೊಮ್ಮೆ ಆಶೀರ್ವದಿಸಿದರು ನಾನು ಆಚಾರ್ಯರ ರತ್ನತ್ರಯ ಕುಶಲ ಕೇಳಿದಂತೆ ಅವರು ನಮ್ಮ ರತ್ನತ್ರಯ ಕುಶಲ ವಿಚಾರಿಸಿದರು. ನಂತರ ಶ್ರುತಸಾಗರರ ಬಳಿಗೆಸಾಗಿ ವಂದಿಸಿದಾಗ, ತಂದೆಯ ವಾತ್ಸಲ್ಯದ ಅನುಭವವಾಯಿತು. ಇವರು ಮುನಿದೀಕ್ಷೆ ತೆಗೆದುಕೊಳ್ಳಲು ಎಷ್ಟೊಂದು ಸಾಹಸ ಮಾಡಿದ್ದಿದ್ದು ಹಾಗೆ ಅಜಿತ ಸಾಗರರಿಗೆ ವಂದಿಸಿ, ಅನ್ಯ ಮುನಿಗಳನ್ನು ವಂದಿಸಿ ಪುನಃ ಆರ್ಯಿಕೆ ವೀರಮತಿ ಮಾತಾಜಿಯ ಹತ್ತಿರ ತಲುಪಿ ವಂದಾಮಿಯ ವಿನಿಮಯ ಎಲ್ಲ ಆರ್ಯಿಕೆಯರೊಡನೆ ಆಯಿತು.

ಆರ್ಯಿಕೆ ವಿಶುದ್ಧಮತಿಯನ್ನು ನೋಡಿ ಸಂತೋಷವಾಯಿತು. ಇವರೇ ನನಗೆ ಎಲ್ಲ ಕಡೆಯು ಪತ್ರ ಬರೆದು ಕ್ಷೇಮ ವಿಚಾರಿಸುತ್ತಿದ್ದವರು ಪತ್ರದಲ್ಲಿ ನನ್ನ ಬಗ್ಗೆ ಭಕ್ತಿಯ ಭಾವ ತುಂಬಿ ತುಳುಕಿರುತ್ತಿತ್ತು. ಅಲ್ಲದೆ ಅಜಿತಸಾಗರರನ್ನು ತಾಯಿಯಂತೆ ನೋಡಿಕೊಳ್ಳುತ್ತಿದ್ದರು. ಆರ್ಯಿಕೆ ಪದ್ಮಾವತಿ ಮತ್ತು ಜಿನಮತಿಯರಂತು ಸಂಘ ನೋಡುತ್ತಿದ್ದಂತೆ ಬಹಳ ಹರ್ಷಿತರಾದರು. ಆರ್ಯಿಕೆ ಆದಿಮತಿ ಮತ್ತು ಅಭಯಮತಿಯರು 2 ವರ್ಷಗಳವರೆಗೂ ಅನಾರೋಗ್ಯ ಪೀಡಿತರಾಗಿದ್ದವರು. ಇಂದು ಆರೋಗ್ಯದಿಂದ ಲವಲವಿಕೆಯಿಂದ ಇದ್ದರು. ಆಚಾರ್ಯರಂತು ಮೋತಿಚಂದ, ಯಶವಂತ, ಶೀಲ ಮೊದಲಾದ 6 ಶಿಷ್ಯರನ್ನು ನೋಡಿ ಬಹಳವೇ ಗದ್ಗದಿತರಾದರು. ಹೈದರಾಬಾದಿಗೆ ಬಂದಿದ್ದ ಬ್ರ. ಸುರೇಶಚಂದ ಈಗ ಕ್ಷುಲ್ಲಕ ಸಂಭವಸಾಗರರಾಗಿದ್ದರು. ಇವರಿಗಂತು ನನ್ನ ತಾಯಿಯನ್ನು ನೋಡಿ ನಾಲ್ಕು ವರ್ಷಗಳಾಗಿತ್ತು ಎಂದು ಹರ್ಷ ವ್ಯಕ್ತಪಡಿಸಿದರು.

ದಾನಕ್ಕೆ ಪ್ರೇರಣೆ

ಮಾರನೆ ದಿನ ಆಚಾರ್ಯರನ್ನು ಚೌಕದಲ್ಲಿ ತಡೆದು, ಮೋತಿಚಂದ ಮೊದಲಾದವರು ನವಧಾ ಭಕ್ತಿಯಿಂದ ಹರ್ಷೋಲ್ಲಾಸದಿಂದ ನಿರಾಬಾಧವಾಗಿ ಆಹಾರ ನೀಡಿ ಪುನಃ ಆಸನದಲ್ಲಿ ಕೂರಿಸಿ ಆರತಿ ಮಾಡಿದ ಮೇಲೆ ಆಚಾರ್ಯರು ಮಾತನಾಡುತ್ತಾ ಹೇ ಬಾಯ್ ನಮಗೆ ದಕ್ಷಿಣೆ ಬೇಕಾಗಿದೆ ಎಂದು ಹೇಳಿ ಎಷ್ಟು ದಕ್ಷಿಣೆಯನ್ನು ಕೊಡುತ್ತೀರ ಎಂದರು. ತಕ್ಷಣ ಮಂದಿರಮಾಯ 500ರೂ.ಗಳನ್ನು ಕೊಟ್ಟರು. ಮೋತಿಚಂದನ ಕಡೆ ನೋಡಿದಾಗ ಅವನು ಕೂಡ 200. ರೂ. ಗಳನ್ನು ಕೊಟ್ಟನು. ಆಚಾರ್ಯರು ನಗುತ್ತಾ ಹೇಳಿದರು (ನನಗೆ) ತ್ಯಾಗದ ದಕ್ಷಿಣೆಯನ್ನು ನಾನು ಬಯಸುತ್ತಿದ್ದೇನೆ ಎಂದರು. ಎಲ್ಲರು ಒಂದಲ್ಲ ಒಂದು ನಿಯಮವನ್ನು ಸ್ವೀಕರಿಸಿದರು. ಆಚಾರ್ಯರ ಮೋತಿಚಂದನಿಗೆ ನೀವು ಮನೆಯನ್ನು ತ್ಯಜಿಸಿ ಇಲ್ಲೇ ಇರಬೇಕೆಂದು ತಿಳಿಸಿದರು. ಅದಕ್ಕೆ ಅವನು ನಗುತ್ತಾ ಈಗ ಮನೆಗೆ ಹೋಗಿ ಮತ್ತೊಮ್ಮೆ ತಂದೆಯವರ ಆಜ್ಞೆ ಪಡೆದು ಬರುತ್ತೇನೆ ಎನ್ನುವ ಆಶ್ವಾಸನೆ ಕೊಟ್ಟ. ಆಗ ಈ ಏಳು ನೂರು ರೂಪಾಯಿಯಿಂದ ಶಾಂತೀವೀರನಗರದ ಮಹಾರಾಜ ವೀರಜೀಯಿಂದ ಸಮಾಧಿ-ತಂತ್ರ ಪುಸ್ತಕ ತಂದು ಎಲ್ಲರಿಗೂ ವಿತರಿಸಿ ಎಂದರು. ಆಚಾರ್ಯರು ಶಿಷ್ಯರೊಡನೆ (ತೋರಿಸುತ್ತಾ ಇದ್ದ ಸರಳತೆ), ದಕ್ಷಿಣೆ ಕೊಡು ಎಂದು ಕೇಳಿ, ಶಾಸ್ತ್ರದಾನ, ಜ್ಞಾನದಾನ ಮಾಡಿಸುತ್ತಿದ್ದ ಇವರ ಬುದ್ಧಿ ಚಾತುರ್ಯ, ಇವರ ಸರಳತೆ ಇಂದಿಗೂ ನನಗೆ ನೆನಪಾಗುತ್ತಲೇ ಇರುತ್ತದೆ.

ನಿಜವಾಗಿಯು ಇವರ ಪ್ರೇರಣೆಯಿಂದಲೇ ಶಾಂತಿ ವೀರನಗರ ಮಹಾವೀರಜೀಯಲ್ಲಿ 25 ಅಡಿಯ ಭ. ಶಾಂತಿನಾಥಸ್ವಾಮಿಯನ್ನು ನಿರ್ಮಾಣಗೊಳಿಸಲು ಪ್ರೇರಕರಾದ ಸುದ್ಧಿ ಅವರೇ ಹೇಳಿದರು. ಮಾತಾಜೀ ನನ್ನ ಮನದಲ್ಲಿ ವಿಶಾಲಕಾಯದ ಖಡ್ಗಾಸನದ ಮೂರ್ತಿಯನ್ನು ಮಾಡಿಸಿಡಬೇಕು. ಎನ್ನುವ ಭಾವ ಬಂದಿತ್ತು, ಡೀಮಾಪುರದ ಅಂಗೂರಿಬಾಯಿಯವರಿಗೆ ಪ್ರೇರಣೆ ಕೊಡುತ್ತಿದ್ದಂತೆ ಅವರು ಇಲ್ಲಿ ನಿರ್ಮಾಣ ಮಾಡಿಸಿದರು. ನಂತರ ಉಳಿದ ಸಾಧು ಸಾಧ್ವಿಯರಿಗೂ ಸನಾವದದವರ ಚೌಕದಲ್ಲೇ ಆಹಾರವಾಯಿತು. ನಂತರ ಅವರೆಲ್ಲ ಆಚಾರ್ಯರಾದಿಯಾಗಿ ಎಲ್ಲರಿಂದ ಆಶೀರ್ವಾದ ಪಡೆದು ಸನಾವದಕ್ಕೆ ಹೊರಟರು.

ಐದು ವರ್ಷದ ಯಾತ್ರೆಯ ಸಮಾಪ್ತಿ

1962 ಡಿಸೆಂಬರ್‌ನಲ್ಲಿ 'ನಾವಾ'ದಿಂದ ಹೊರಟ ನಾವು ಪದ್ಮಪುರಿ, ಮಹಾವೀರಜೀ ಮಥುರ, ಸಿದ್ಧಕ್ಷೇತ್ರದ ದರ್ಶನ ಮಾಡಿ 1963ರಲ್ಲಿ ಅಯೋಧ್ಯೆ ಸೌರಾಹೀ ರತ್ನಪುರಿ, ಬನಾರಸ, ಚಂಪಾಪುರೀ ರಾಜಗೃಹ,

ಪಾವಾಪುರಿಗುಣಾವ, ದರ್ಶನಿ ಸಮ್ಮೇದ ಶಿಖರದ ಯಾತ್ರೆ ಮಾಡಿದ್ದೆವು. 1964ರಲ್ಲಿ ಕಲಕತ್ತೆಯ ಚಾತುರ್ಮಾಸದಿಂದ ಮತ್ತೇ ಸಮ್ಮೇದ ಶಿಖರಕ್ಕೆ ಹೋಗಿ ಅಲ್ಲಿಂದ (ಓಡಿಸ್ಸಾ) ಉಡಿಸ್ಸಾದ ಖಂಡಗಿರಿ, ಉದಯಗಿರಿ 1965ರಲ್ಲಿ ಶ್ರವಣಬೆಳಗೊಳದ ಬಾಹುಬಲಿಯ ದರ್ಶನ, ಒಂದು ವರ್ಷದ ವರೆಗೆ ಸ್ವಾಮಿಯ ಚರಣ ಸಾನಿಧ್ಯದಲ್ಲೆ ಕಳೆದು 1966ರಲ್ಲಿ ಮೂಡಬಿದ್ರೆ, ಕಾರ್ಕಳ, ವೇಣೂರು, ಹೊಂಬುಜದ ಪದ್ಮಾವತಿ, ಧರ್ಮಸ್ಥಳ, ಕುಂದಕುಂದಾದ್ರಿಯ ದರ್ಶನ ಮಾಡಿ ಮತ್ತೆ ಬಿಜಾಪುರಕ್ಕೆ ಹತ್ತಿರವಿರುವ ಬಾಬಾನಗರದ ದರ್ಶನ, ನಂತರ ಸೋಲಾಪುರದಲ್ಲಿ ಚಾತುರ್ಮಾಸ ನಂತರ ಕುಂಥಳಗಿರಿಯ ದರ್ಶನ ಮಾಡಿ ತೈರ, ಪೈಠಣ, ಕಚನೇರ, ಮೊದಲಾದ ಅತಿಶಯ ಕ್ಷೇತ್ರಗಳನ್ನು ದರ್ಶಿಸಿ, ಔರಂಗಬಾದಿಗೆ ಬಂದೆವು.

ಇದರ ನಂತರ 1967ರಲ್ಲಿ ಎಲ್ಲೋರದ ದರ್ಶನ, ಗಜಪಂಥ ಮಾಂಗಿ ತುಂಗಿ, ಪುನಃ ಬಡವಾನಿ, ಊನ ದರ್ಶನ ಮಾಡಿ ಸಿದ್ಧವರಕೂಟ ಇದರ ನಂತರ ಸನಾವದ ವಿಹಾರ ಮಾಡಿ ರಾಜಸ್ತಾನಕ್ಕೆ ಬಂದೆವು. ಈ ಐದುವರ್ಷಗಳಲ್ಲಿ 1963 ಕಲಕತ್ತಾ 1964 ಹೈದರಬಾದ್ 1965. ಶ್ರವಣಬೆಳಗೊಳ 1966 ಸೋಲಾಪುರ 1967 ಸನಾವದದಲ್ಲಿ ಚಾತುರ್ಮಾಸ. ಸಂಘದ ಎಲ್ಲಾ ಆರ್ಯಿಕೆಯರನ್ನು ಕ್ಷುಲ್ಲಕೆಯರನ್ನು ಯಾತ್ರೆ ಮಾಡಿಸಿಕೊಂಡು ಕುಶಲತೆಯಿಂದ ಮತ್ತೆ ಸಂಘ ಸೇರಿದ್ದು ಎಲ್ಲರಿಗೂ ಸಂತೋಷವಾಗಿತ್ತು.

□

ಚತುರ್ಥ ಖಂಡ

ಚತುರ್ಥ ಖಂಡ

೫೩

ಆಚಾರ್ಯ ಸಂಘದ ಜೊತೆ

ಸಲೂಂಬರ ಜೈನ ಸಮಾಜದಲ್ಲಿ ಹೂವಡ, ನಾಗದ, ನರಸಿಂಹಪುರ ಮೊದಲಾದ ಪಂಗಡಗಳ ಪರಿವಾರಗಳು ಇದ್ದವು. ಎಲ್ಲರಲ್ಲೂ ಒಳ್ಳೆಯ ಗುರುಭಕ್ತಿ ಇತ್ತು. ದಿನಕ್ಕೆ ಸುಮಾರು 100 ಚೌಕಗಳನ್ನು ಮಾಡುತ್ತಿದ್ದರು. ಇಲ್ಲಿನ ವಿಶೇಷತೆ ಎಂದರೆ ಎಲ್ಲರು ಶುದ್ಧ ಜಲದ ನಿಯಮವನ್ನು ತೆಗೆದುಕೊಂಡಿದ್ದರು. ಆಹಾರದ ಸಮಯ ಬಂತೆಂದರೆ ಎಲ್ಲರ ಮನೆಯ ಮುಂದೆಯು ಆಹಾರಕ್ಕಾಗಿ ತಡೆಯಲು ಜನರು ನಿಂತಿದ್ದು ಹೇ ಸ್ವಾಮಿನ್ ನಮೋಸ್ತು -ನಮೋಸ್ತು- ನಮೋಸ್ತು ಅತ್ರ, ತಿಷ್ಠ, ತಿಷ್ಠ, ತಿಷ್ಠ ಎಂದು ಆಹ್ವಾನವನ್ನು ಮಾಡುತ್ತಿದ್ದ ದೃಶ್ಯ ನಿಜಕ್ಕೂ ಚತುರ್ಥ ಕಾಲವನ್ನೇ ನೆನಪಿಗೆ ತರುತ್ತಿತ್ತು. ಆಗ ಅಲ್ಲಿ ಜೈನರು ಜೈನೇತರರು ಸೇರುತ್ತಿದ್ದರು. ಅವರಿಗೆ ಸಾಧುಗಳ ಆರ್ಯಿಕೆಯ ಚರ್ಯೆ ನೋಡಿ ಪ್ರಭಾವಿತರಾಗಿ ಅವರಿಂದ ಬರುತ್ತಿದ್ದ ಮಾತುಗಳೆಂದರೆ, ನಿಜವಾದ ಸಾಧುಗಳೆಂದರೆ ಇವರೇ ಇವರ ಆಹಾರಚರ್ಯೆ ಎಷ್ಟು ಕಠಿಣವಾಗಿದೆ ಎಂದು.

ದೀಕ್ಷೆಗಳು

ಪ್ರತಾಪಗಢದ ನಿವಾಸಿಯಾದ ಬೊಂಬಾಯಿಯ ಸೇಠ್ ಮೋತಿಲಾಲರು ನಮ್ಮ ಸಂಘದಲ್ಲಿ ಕ್ಷುಲ್ಲಕ ಸುಬುದ್ಧಿ ಸಾಗರರಾಗಿದ್ದರು. ಇವರು ಆಚಾರ್ಯರಲ್ಲಿ ಮುನಿದೀಕ್ಷೆ ಬೇಡಿದ್ದರಿಂದ ಸ್ವೀಕೃತಿ ನೀಡಿದ ಆಚಾರ್ಯರು ಮಹೂರ್ತವನ್ನು ನಿಶ್ಚಯಗೊಳಿಸಿದರು. ಮುನಿದೀಕ್ಷೆಗಾಗಿ ವಿಶಾಲವಾದ ಸಭಾಂಗಣ ಸಿದ್ಧವಾಯಿತು. ನನ್ನ ಹತ್ತಿರವಿದ್ದ ಕ್ಷುಲ್ಲಕ ಶ್ರೇಯಾಂಸಮತಿಯು ಆರ್ಯಿಕೆದೀಕ್ಷೆ ತೆಗೆದುಕೊಳ್ಳ ಬಯಸಿದ್ದರಿಂದ ಅವರಿಗೂ ಹೇಳಿ ಆರ್ಯಿಕಾದೀಕ್ಷೆ ಕೊಡಿಸಲಾಯಿತು. ಅವರ ಹೆಸರನ್ನು ಆಚಾರ್ಯರು ಶ್ರೇಷ್ಠಮತಿ ಎಂದು ಇಟ್ಟರು. ಈಗ ಸಂಘದಲ್ಲಿದ್ದ ಶ್ರೇಯಾಂಸಸಾಗರರ ಧರ್ಮಪತ್ನಿಯಾಗಿದ್ದವರೇ ಶ್ರೇಯಾಂಸಮತಿ ಆದ್ದರಿಂದ ಆಚಾರ್ಯರು ಆರ್ಯಿಕೆ ಆದ ಮೇಲೆ ಶ್ರೇಷ್ಠಮತಿ ಎಂದು ನಾಮಕರಣ ಮಾಡಿದರು.

ಅಧ್ಯಾಪನ ಕಾರ್ಯ

ಆರ್ಯಿಕೆ ಸಂಭವಮತೀಯ ಶಿಷ್ಯೆ ಆದ ಕುಮಾರಿ ವಿಮಲಾ ಬಂದು ನನ್ನಲ್ಲಿ ಮಾತಾಜೀ ಬಹಳ ದಿನಗಳಿಂದ ಜ್ಞಾನದಲ್ಲಿ ನಿಮ್ಮ ಹೆಸರನ್ನೇ ಕೇಳಿದ್ದೀನಿ ತಾವು ದಯಮಾಡಿ ನನಗೆ ವ್ಯಾಕರಣ ಮೊದಲಾದವುಗಳನ್ನು

ಕಲಿಸಬೇಕೆಂದಳು. ನಾನು ಅವಳಿಗೆ ನನ್ನ ಶಿಷ್ಯೆ ಆರ್ಯಿಕೆ ಜಿನಮತಿಯ ಹತ್ತಿರ ಕಲಿಯಲು ಕಳುಹಿಸಿದೆ ಜಿನಮತಿಯ ಹತ್ತಿರ ವಿದ್ಯಾಭ್ಯಾಸ ಪ್ರಾರಂಭ ಮಾಡಿದ ಅವಳು ಮುಂದೆ ಆರ್ಯಿಕೆ ಶುಭಮತೀ ಆದರು. ಈಗಲೂ ಜಿನಮತಿ ಇವರ ಜೊತೆಯೇ ಇದ್ದಾರೆ.

ಸಲೂಂಬರನಲ್ಲಿ ಆರ್ಯಿಕೆ ಸಿದ್ಧಮತಿಯಾದಿಯಾಗಿ ಎಲ್ಲ ಆರ್ಯಿಕೆಯರು ಮಾತಾಜೀ ನಮಗೆಲ್ಲರಿಗೂ ಏನಾದರು ಪಾಠ ಮಾಡಿ ಎಂದು ಕೇಳುತ್ತಿದ್ದರು. ಆಗ ನಾನು ಗೊಮ್ಮಟಸಾರದ ಜೀವಕಾಂಡವನ್ನು ಎಲ್ಲರಿಗೂ ಪಾಠ ಮಾಡತೊಡಗಿದೆ. 5-7 ಜನ ಆರ್ಯಿಕೆಯರು 5-7 ಬ್ರಹ್ಮಚಾರಿಣಿಯರು ಕುಳಿತುಕೊಳ್ಳುತ್ತಿದ್ದರು. ಪ್ರಾರಂಭದಲ್ಲೇ ನಾನು ನನ್ನ ಶಿಷ್ಯೆ ಆದಿಮತಿಗೆ ಹೇಳಿದೆ ನೀನು ಈ ಎಲ್ಲರಿಗೂ ಗೊಮ್ಮಟಸಾರವನ್ನು ಪಾಠಮಾಡು ಇದರಿಂದ ನಿಮಗೂ ವಿಷಯ ಚೆನ್ನಾಗಿ ಮನದಟ್ಟಾಗುತ್ತದೆ. ಮನಸ್ಸು ಸ್ವಸ್ಥವಾಗಿದ್ದರೆ ಶರೀರದ ಆರೋಗ್ಯವು ಚೆನ್ನಾಗಿ ಆಗುತ್ತದೆ.

ಅವರು ಎಲ್ಲರಿಗೂ ಗೊಮ್ಮಟಸಾರ ಹೇಳಿಕೊಡಲು ಪ್ರಾರಂಭಿಸಿದರು ಜಿನಮತಿ, ಶ್ರೇಯಾಂಸಮತಿಯರು ಜೀವಂಧರ ಚಂಪೂ ಮೊದಲಾದವನ್ನು ಓದುತ್ತಿದ್ದರು. ಕು. ವಿಮಲಾ ವ್ಯಾಕರಣ, ನ್ಯಾಯ ಸಾಹಿತ್ಯ ಮತ್ತು ಗೊಮ್ಮಟ ಸಾರ ಎಲ್ಲವನ್ನು ಕಲಿಯುತ್ತಿದ್ದಳು. ಇವಳ ಸಮಯವೆಲ್ಲ ಬರೆ ಅಧ್ಯಾಪನದಲ್ಲೇ ಕಳೆಯುತ್ತಿತ್ತು. ಕು. ಸುಶೀಲ ವ್ಯಾಕರಣ, ನ್ಯಾಯ, ಧರ್ಮ, ಮುಂತಾದವನ್ನು ಅಭ್ಯಾಸ ಮಾಡುತ್ತಿದ್ದರು. ಕು. ಕಲಾ, ಕನಕರಿಗೆ ನಾನು ಓದಿಸುತ್ತಿದ್ದೆ ಎಲ್ಲ ಆರ್ಯಿಕೆಯರು ಒಂದಲ್ಲ ಒಂದು ಕಲಿಸುತ್ತಿದ್ದರು.

ಹೀಗೆ ಶಿಷ್ಯೆಯರೆಲ್ಲ ಅಧ್ಯಾಪನ, ಅಧ್ಯಯನದಲ್ಲಿ ತೊಡಗಿಕೊಂಡಿರುವುದು ನೋಡಿ ಮನಸ್ಸಿಗೆ ಬಹಳ ಖುಷಿಯಾಗುತ್ತಿತ್ತು. ಮನಸ್ಸು ಪ್ರಸನ್ನವಾಗಿತ್ತು. ಹೇಗೆ ತಂದೆ ತಾಯಿಗಳು ತಮ್ಮ ಏಳಿಗೆ ನೋಡಿ ಸಂತೋಷಿಸುತ್ತಾರೋ ಹಾಗೇ ಶಿಷ್ಯರ ಯೋಗ್ಯತೆ, ಕ್ಷಮತೆ, ನೋಡಿ ನನಗೂ ಹರ್ಷವೆನಿಸುತ್ತಿತ್ತು. ನನ್ನ ಆರೋಗ್ಯ ಕ್ಷೀಣಿಸಿದ್ದರಿಂದ ನಾನು ಅಧ್ಯಾಪನದ ಕೆಲಸ ಜಾಸ್ತಿ ಮಾಡದೆ ಶಿಷ್ಯರಿಗೆ ಜಾಸ್ತಿ ವಹಿಸಿದ್ದ ನನ್ನ ಉದ್ದೇಶ ಅವರ ಜ್ಞಾನವು ಸ್ಫುಟವಾಗಬೇಕೆಂಬುದೇ ಆಗಿದ್ದರಿಂದ ಅವರನ್ನು ಸದಾ ಅಧ್ಯಯನದಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸುತ್ತಿದ್ದೆ. ಆರ್ಯಿಕೆ ಜಿನಮತಿ ಸ್ವತಃ ಹೇಳುತ್ತಿದ್ದರು. ಅಮ್ಮ ನಾನು ದ್ರವ್ಯ ಸಂಗ್ರಹ, ಗೊಮ್ಮಟಸಾರ ಪ್ರಮೇಯ ಕಮಲಮಾರ್ತಂಡ ಇವೆಲ್ಲ ಓದಿ ನಿಮಗೆ ಒಪ್ಪಿಸುವಾಗಲು ನನಗೆ ಇಷ್ಟೊಂದು ವಿಷಯಗಳು ಹೃದಯಗತವಾಗಿರಲಿಲ್ಲ. ಈಗ ನಾನು ಓದಿಸುತ್ತಿರುವುದರಿಂದ ವಿಷಯಗಳು ಬಹಳ ಚೆನ್ನಾಗಿ ಅರ್ಥವಾಗುತ್ತಿದೆ. ಇದರಿಂದ ಬಹಳ ಖುಷಿಯಾಗುತ್ತಿದೆ ಎಂದು. ಆದರೆ ಆಗ ಕೆಲವರಿಗೆ ನನ್ನ ಉತ್ಕರ್ಷ ನನ್ನ ಶಿಷ್ಯೆಯರ ವಿಶೇಷತೆಯನ್ನು ಸಹಿಸಲು ಆಗದೆ, ಕಾರಣವಿಲ್ಲದೆ ಸುಳ್ಳು-ಸುಳ್ಳು ನಿಂದನೆಯನ್ನು ಮಾಡುತ್ತಿದ್ದರು. ನಾನು ಸಹನೆಯಿಂದ ಅವರ ಅಸತ್ಯ ಮಾತುಗಳಿಗೆ ಪ್ರತೀಕಾರವನ್ನು ಮಾಡಲು ಬಯಸುತ್ತಿರಲಿಲ್ಲ. ಇದರ ಪರಿಣಾಮ ನನಗೆ ಸಿಹಿಯಾಗದೆ ಕಹಿಯೆ ಆಗತೊಡಗಿತು. ಆದರೂ ಸಹಿಸದೆ ಮೋಕ್ಷವಿಲ್ಲವಲ್ಲ, ಇದಂತೂ ನಿಶ್ಚಿತವಲ್ಲ.

ಶಿಕ್ಷಣ ಶಿಬಿರದಲ್ಲಿ ವಿಘ್ನ

ನಾನು ಸೋಲಾಪುರ ಸನಾವದ ಮತ್ತು ಇಂದೂರಿನಲ್ಲಿ ಮಾಡಿದಂತೆ ಸಂಲೂಬರನಲ್ಲಿಯು ಶಿಕ್ಷಣ ಶಿಬಿರದ ರೂಪ ರೇಖೆಯನ್ನು ಮಾಡಿದೆ. ಸಾಧು ಸಾಧ್ವಿಯರಿಗೆ ಕೆಲವು ಸಜ್ಜನರು ಇದನ್ನು ಪ್ರೋತ್ಸಾಹಿಸಿದರು. ಆದರೆ ಕೆಲವರು ಇದನ್ನು ಪ್ರಯೋಜನವಿಲ್ಲ ಎನ್ನತೊಡಗಿದರು. ಆಚಾರ್ಯರಲ್ಲಿ ಅನುಮತಿ ತೆಗೆದುಕೊಳ್ಳಲು ಹೋದಾಗ

ಅವರು ಸಹ ಉಪಯೋಗವಿಲ್ಲವೆಂದು ತಳ್ಳಿಹಾಕಿದರು. ಆಮೇಲೆ ಕೇಳಿದರು ಯಾರು ಯಾರು ಪಾಠ ಮಾಡುವವರು ಎಂದು ನಾನು ಯೋಚಿಸಿದವಳೇ ಹಳ್ಳಿಗಳಲ್ಲಿ ಎಲ್ಲಾದರು ಶಿಬಿರವನ್ನು ಮಾಡಿಸೋಣವೆಂದು ಇದಕ್ಕೂ ತಣ್ಣೀರು ಎರಚಿದರು. ಕೊನೆಗೆ ನಾನು ಸಂತೋಷದಿಂದಲೇ ಉಸಿರೆಳೆದೆ ಯಾವುದು ಜವಾಬ್ದಾರಿ ಇಲ್ಲದೆ ಇರುವುದೇ ಒಳ್ಳೆಯದೆಂದು.

ಒಮ್ಮೆ ಆರ್ಯಿಕೆ ಮಿಶುದ್ಧಮತೀ ಸಭೆಯಲ್ಲಿ ಪ್ರವಚನ ಮಾಡುತ್ತಾ ಹೇಳಿದರು. ಎದುರುಗಡೆಯವರ ಮೇಲೆ ಯುದ್ಧ ಮಾಡುವಾಗಲೇ ಶಸ್ತ್ರವನ್ನು ಎತ್ತಬೇಕು. ಹಾಗೇ ಹೇಳುವವರ ಪಂಥ ನಿಶ್ಚಯ ಏಕಾಂತ ಪಂಥದವರಲ್ಲಿ ಸಹ ಖಂಡನೆಯಲ್ಲಿ ಸಮಾನವಾಗಿಯೇ ಕೆಲಸ ಮಾಡಬೇಕು. ಆಗ ಕೆಲವು ಶ್ರಾವಕರು ಬಂದು ಹೇಳಿದರು. ಮಾತಾಜೀ ಈ ಪಂಥದವರು ಹಲವಾರು ಸ್ಥಳಗಳಲ್ಲಿ ಶಿಬಿರಗಳ ಮೂಲಕ ಬಹಳಷ್ಟು ಧಾರ್ಮಿಕ ಸಂಸ್ಕಾರವನ್ನು ಕೊಡುತ್ತಿದ್ದಾರೆ. ಆದ್ದರಿಂದ ತಾವು ಶಿಬಿರಗಳು ಆಯೋಜನೆ ಮಾಡಿ 7-8 ದಿನಗಳ ಶಿಕ್ಷಣ ಶಿಬಿರದಲ್ಲಿ ಸ್ವಲ್ಪವಾದರು ಧಾರ್ಮಿಕ ಶಿಕ್ಷಣವನ್ನು ಕೊಡಬಹುದು ಎಂದು ಅಭಿಪ್ರಾಯಪಟ್ಟರು. ಆಗ ನಾನು ತುಟಿ ಪಿಟಕ್ ಎನ್ನಲಿಲ್ಲ. ಮುಂದೆಯು ಕಿವಿಗೊಡಲಿಲ್ಲ. 1969ರಲ್ಲಿ ಜಯಪುರದಲ್ಲಿ ನಾನು "ಜೈನಜ್ಯೋತಿರ್ಲೋಕ" ಎಂಬ ಶಿಬಿರವನ್ನು ಆಯೋಜಿಸಿದಾಗ ದೊಡ್ಡ-ದೊಡ್ಡ ವಿದ್ವಾಂಸರು ಕೂಡ ಬಂದು ಭಾಗವಹಿಸಿದರು.

ಕೇಶರಿಯಾಜಿಯ ಯಾತ್ರೆ ಮಾಡುವ ಮನಸ್ಸು

ಉದಯಪುರ ಬಿಂಡರ ಮೊದಲಾದ ಕಡೆಯಿಂದ ಹೆಂಗಸರು ಹೋಗುತ್ತಾ ಬರುತ್ತಾ ಇದ್ದರು. ಮೋತಿಲಾಲಜೀ ಮಿಂಡ ಮೊದಲಾದ ಅನೇಕ ಜನರು ನನ್ನಲ್ಲಿ ವಿನಂತಿಸಿದರು. ಮಾತಾಜೀ ಇಲ್ಲಿಂದ ಕೇಶರಿಯಾಜಿ ತೀರ್ಥ ಕ್ಷೇತ್ರ ಹತ್ತಿರದಲ್ಲೇ ಇದೆ. ಹಾಗೇ ಉದಯಪುರದಲ್ಲಿಯು ಹಲವಾರು ಮಂದಿರಗಳಿವೆ. ಹೀಗೆ ದೇವರ ದರ್ಶನವು ಆಯಿತು. ಹಾಗೇ ಉದಯಪುರದಲ್ಲಿ ವಿಹಾರ ಮಾಡುವುದರಿಂದ ಜನರಲ್ಲಿ ಧರ್ಮ ಸಂಚಾಲನೆಯನ್ನು ಮಾಡಿದ ಹಾಗಾಗುತ್ತದೆ. ಆದ್ದರಿಂದ ತಾವು ಒಂದು ತಿಂಗಳ ಕಾರ್ಯಕ್ರಮ ನಿರೂಪಿಸಿರಿ ನಾವು ಏರ್ಪಾಟು ಮಾಡುತ್ತೇವೆ ಎಂದರು ನಾನು ಯೋಚಿಸಿದೆ. ಈ ಕಡೆಯಿಂದ ವಿಹಾರ ಮಾಡಿ ಹೊರಟರೆ ಕೇಶರಿಯಾಜಿಯ ದರ್ಶನವಾಗುವುದಿಲ್ಲ ಎಂದು ಯೋಚಿಸಿ ಆಚಾರ್ಯರಲ್ಲಿ ಅನುಮತಿ ಬೇಡಿದೆ, ಅದಕ್ಕೆ ಅವರು ಐದು ವರ್ಷಗಳ ವರೆಗೆ ಸುತ್ತಾಡಿಕೊಂಡು ಬಂದಿದ್ದೀಯ ಇನ್ನು ನಿನಗೆ ಸಾಕಾಗಲಿಲ್ಲವೇ ಸಾಕು ಶಾಂತಿಯಿಂದ ಇರು ನಿನ್ನ ಆರೋಗ್ಯವು ಯಾತ್ರೆಗೆ ಅನುಕೂಲವಾಗಿ ಇಲ್ಲ ಎಂದರು. ಇದನ್ನು ಕೇಳಿದ ನಾನು ಸುಮ್ಮನೆ ಆದೆ. ಪುನಃ ಯಾತ್ರೆಯ ಬಗ್ಗೆ ಯೋಚಿಸಲಿಲ್ಲ. ಕೆಲವು ದಿನಗಳ ನಂತರ ಯಾತ್ರೆ ಮಾಡುತ್ತಾ ಬಾಂಸವಾಡಕ್ಕೆ ಬಂದೆವು.

ಬಾಂಸವಾಡಾದಲ್ಲಿ ಆಚಾರ್ಯರ ಸಂಘ

ಬೇಸಿಗೆಯ ದಿನವಾದ್ದರಿಂದ ಬಿಸಿಲು ಜೋರಾಗಿತ್ತು. ನನ್ನ ಆರೋಗ್ಯ ಸಾಕಷ್ಟು ಹದಗೆಡತೊಡಗಿತು. ಇಲ್ಲಿಯ ಶ್ರಾವಕರು ಸಂಘವನ್ನು ಬಹಳ ಪ್ರಯತ್ನಪಟ್ಟು ನೋಡಿಕೊಳ್ಳುತ್ತಿದ್ದರು. ಸಂಘಕ್ಕೆ ಬರುತ್ತಲೇ ನಾನು ಇಲ್ಲಿಗೆ ಬಂದು ಬಿಟ್ಟಿದ್ದೆ. ಕೆಲವು ಶ್ರಾವಕರು ಬಹಳ ಹತ್ತಿರದವರಾಗಿದ್ದರು ಅಂಥವರಲ್ಲಿ ಹೀರಾಲಾಲರು ಒಬ್ಬರು.

ಇಲ್ಲಿಯ ಪನ್ನಾಲಾಲರೇ ನನಗೆ ಇಬ್ಬರು ಹೆಣ್ಣು ಮಕ್ಕಳನ್ನು ಕೊಟ್ಟವರು. ಅನೇಕರು ಸಂಘದ ವ್ಯವಸ್ಥೆಯ ಬಗ್ಗೆ ಪರೀಕ್ಷೀಲಿಸುತ್ತಿದ್ದರು. ಚಾತುರ್ಮಾಸಕ್ಕೆ ನಿಲ್ಲಲು ಆಚಾರ್ಯರಲ್ಲಿ ಅನೇಕ ಸಲ ಪ್ರಾರ್ಥನೆ ಮಾಡಿದ್ದರು. ನನ್ನ ಹತ್ತಿರ ಬಂದು ಮಾತಾಜೀ ತಾವು ಆಚಾರ್ಯರಿಗೂ ಎಲ್ಲಾ ಸಾಧುಗಳಿಗೆ ಚಾತುರ್ಮಾಸಕ್ಕೆ ನಿಲ್ಲಲು ಪ್ರೇರಣೆ ಕೊಡಿರಿ ಎಂದರು.

ಆಚಾರ್ಯರು ಕೆಲವೊಮ್ಮೆ ಇಲ್ಲಿಯ ಜನರ ಭಕ್ತಿಗೆ ಪ್ರಭಾವಿತರಾಗುತ್ತಿದ್ದರು. ಇನ್ನೊಮ್ಮೆ ಪ್ರತಾಪಗಢದವರು ಚಾತುರ್ಮಾಸಕ್ಕೆ ಬರಲು ಕೇಳಿಕೊಳ್ಳುತ್ತಿದ್ದರು. ಆಚಾರ್ಯರ ಉದ್ದೇಶ ಎಲ್ಲಿಯವರು ಚಾತುರ್ಮಾಸದ ನಂತರ ಮಹಾವೀರಜೀ ತಲುಪಿಸುತ್ತಾರೋ ಅಲ್ಲಿ ನಾವು ಚಾತುರ್ಮಾಸ ಕೈಕೊಳ್ಳೋಣ ಎಂದರು. ಕೊನೆಗೆ ಒಂದು ವಿಶೇಷ ಕಾರಣದಿಂದಾಗಿ ಆಚಾರ್ಯರು ಪ್ರತಾಪಗಢದಲ್ಲಿಯೇ ಚಾತುರ್ಮಾಸಕ್ಕೆ ನಿಲ್ಲಲು ಆಶ್ವಾಸನೆಕೊಟ್ಟರು. ಇಲ್ಲಿಂದ ಪ್ರತಾಪಗಢದ ಕಡೆ ಸಂಘದ ವಿಹಾರ ಹೊರಟಿತು. ಸಮಯಕ್ಕೆ ಸರಿಯಾಗಿ ಸಂಘದ ಮಂಗಳ ಪ್ರವೇಶವಾಯಿತು. ಅಲ್ಲಿಯ ಶ್ರಾವಕರ ಹರ್ಷಕ್ಕೆ ಪಾರವೇ ಇಲ್ಲ. ಇಷ್ಟು ದೊಡ್ಡ ಸಂಘದ ವ್ಯವಸ್ಥೆಯಲ್ಲಿ ಏನಾದರು ವ್ಯತ್ಯಾಸವಾದರು ಯಾರಾದರು ಮಾತಾಜಿಗಳು ಆಚಾರ್ಯರಲ್ಲಿ ದೂರು ಕೊಡುತ್ತಿದ್ದರು. ಆಚಾರ್ಯರು ಹಲವಾರು ಸಲ ಶ್ರಾವಕರುಗಳಿಗೆ ಹೇಳುತ್ತಿದ್ದರು. ಬೈಯಾ ಈಗ ಮಗಳು ತಂದೆಯ ವಶ ನಾನು ಈಗ ಸ್ವತಂತ್ರ ನಿಮ್ಮ ವ್ಯವಸ್ಥೆಯಲ್ಲಿ ಗಡಬಡ ಆದರೆ ನಾವು ಬೇರೆ ಕಡೆ ಚಾತುರ್ಮಾಸ ಮಾಡುತ್ತೇವೆ ಎನ್ನುತ್ತಿದ್ದರು.

ಆಚಾರ್ಯರ ಬಾಯಿಯಲ್ಲಿ ಇಂತಹ ಮಾತುಗಳನ್ನು ಕೇಳಿದ ಶ್ರಾವಕರು ನಗುತ್ತಿದ್ದರು ಮತ್ತು ವ್ಯವಸ್ಥೆಯನ್ನು ಸರಿಮಾಡುತ್ತಿದ್ದರು. ಕೆಲವು ಸಲ ವ್ಯವಸ್ಥೆಯ ಬಗ್ಗೆ ನನ್ನ ಹತ್ತಿರವೇ ಬಂದು ಮೊದಲೇ ಕೇಳಿಕೊಂಡು ಬಿಡುತ್ತಿದ್ದರು.

ನಿಜವಾಗಿಯು ದೊಡ್ಡ-ದೊಡ್ಡ ಸಂಘಗಳಲ್ಲಿ ಆಚಾರ್ಯರ ಮೇಲೆಯೇ ಜವಾಬ್ದಾರಿ ಇರುವುದಿಲ್ಲ. ಆಚಾರ್ಯ ವೀರಸಾಗರರ ಸಮಯದಲ್ಲಿ ಆರ್ಯಿಕೆ ಸುಮತಿಮತಿಜೀಯವರೇ ಎಲ್ಲ ಪ್ರಸಂಗಗಳನ್ನು ನೋಡಿಕೊಳ್ಳುತ್ತಿದ್ದರು ಮತ್ತು ಶ್ರಾವಕರಿಗೂ ಉಚಿತವಾದ ಮಾರ್ಗದರ್ಶನವನ್ನು ಕೊಡುತ್ತಿದ್ದರು. ಬ್ರ. ಸೂರಜಮಲ್ಲರಂತು ವ್ಯವಸ್ಥೆಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಆದರೆ ಈಗ ಆರ್ಯಿಕೆ ಸುಮತಿಮತಿಯವರು ಇಲ್ಲ. ಬ್ರ. ಸೂರಜಮಲ್ಲರು ಸಂಘದಲ್ಲಿ ಇಲ್ಲ, ಹೀಗಾಗಿ ಚಿಕ್ಕ ಪುಟ್ಟ ತೊಂದರೆಗಳನ್ನು ಆಚಾರ್ಯರ ಹತ್ತಿರ ತೆಗೆದುಕೊಂಡು ಹೋಗದಂತೆ ಶ್ರಾವಕರಿಗೆ ಉಚಿತವಾದ ಮಾರ್ಗದರ್ಶನ ಕೊಡುವುದು ನನ್ನ ಕರ್ತವ್ಯವೆಂದು ತಿಳಿದುಕೊಂಡೆ.

ವರ್ಷಾಯೋಗದ ಸ್ಥಾಪನೆ

1968ರಲ್ಲಿ ಆಷಾಢ ಶುಕ್ಲ ಚತುರ್ದಶಿಯ ದಿನ ಶ್ರಾವಕರ ಪ್ರಾರ್ಥನೆಯಂತೆ ಆಚಾರ್ಯ ಶಿವಸಾಗರರು ತಮ್ಮ ದೊಡ್ಡ ಸಂಘದೊಡನೆ ಪ್ರತಾಪಗಢದಲ್ಲಿ ವರ್ಷಾಯೋಗದ ಸ್ಥಾಪನೆ ಮಾಡಿದರು. ಇಲ್ಲಿ ಬಹಳಷ್ಟು ಚೌಕಗಳನ್ನು ಮಾಡುತ್ತಿದ್ದರು. ಸಾಧು-ಸಾಧ್ವಿಯರ ಆಹಾರವಾಗುತ್ತಿತ್ತು. ಕೆಲವು ಸಲ ಬ್ರಹ್ಮಚಾರಿಣಿಯರನ್ನು ಯಾರೂ ನಿಮಂತ್ರಣ ಕೊಡದೆ ಇದ್ದುದ್ದರಿಂದ ಅವರ ಆಹಾರದ ವ್ಯವಸ್ಥೆ ಆಗುವಾಗ ತುಂಬ ತಡವಾಗುತ್ತಿತ್ತು. ಅಂದರೆ ಶ್ರಾವಕರು ಅವರನ್ನು ಕರೆಯುವುದನ್ನು ಮರೆತೆ ಬಿಡುತ್ತಿದ್ದರು. ಇದರಿಂದ ಆಚಾರ್ಯರಿಗೆ ಬೇಸರವಾಯಿತು. ನನ್ನನ್ನು ಕರೆದು ಕೇಳಿದರು. ನಿಮ್ಮ ಶೀಲಾ ಬ್ರಹ್ಮಚಾರಿಯ ಹತ್ತಿರ ಏನಾದರು ಹಣವಿದೆಯಾ ಎಂದು ಕೇಳಿದರು. ನಾನು ಖಂಡಿತ ಇರಬಹುದು ಎಂದೇ ತಕ್ಷಣ ಅವಳನ್ನು ಕರೆಸು ಎಂದರು. ನಾನು ಯಾರಿಗೋ ಕೊಡಬೇಕಾಗಿರಬೇಕು.

ಎಂದು ಕೊಂಡೆ ತಕ್ಷಣ ಅವಳು ಬಂದಳು. ಆಚಾರ್ಯರು ಶೀಲಳಿಗೆ (ನಿನ್ನ ಹತ್ತಿರ) ನೋಡು ಸಾವಿರ ರೂ. ತಂದು ಎಲ್ಲರಿಗೂ 100-100 ರೂಪಾಯಿ ಕೊಡು ಎಂದರು. ಎಲ್ಲರನ್ನು ಏಕಾಂತದಲ್ಲಿ ಕರೆದು ಎಲ್ಲರ ಕೈಗೂ ಹಣಕೊಟ್ಟು ನೀವೆಲ್ಲರು ಶ್ರಾವಕರ ನಿಮಂತ್ರಣ ಇಲ್ಲದೆ ಇದ್ದಾಗ ನೀವೇ ಊಟದ ವ್ಯವಸ್ಥೆಯನ್ನು ಮಾಡಿಕೊಂಡು ತಿನ್ನಬೇಕು. ಯಾರೂ ಕರೆಯದೆ ಯಾರ ಮನೆಗೂ ಹೋಗಬಾರದು ಎಂದು ಹೇಳಿದರು.

ಈ ವಿಷಯ ಗೊತ್ತಾದ ತಕ್ಷಣ ಒಂದಿಬ್ಬರು ಶ್ರಾವಕರು ನನ್ನ ಬಳಿಗೆ ಓಡೋಡಿ ಬಂದರು. ಗಾಬರಿಯಿಂದ ಏನಾಯಿತು ಎಂದರು. ನಾನು ನಕ್ಕು ಸಮಾಧಾನಗೊಳಿಸುತ್ತಾ ನೀವು ಬ್ರಹ್ಮಚಾರಿ ಮತ್ತು ಬ್ರಹ್ಮಚಾರಿಣಿಯವರ ಪಟ್ಟಿ ಮಾಡಿಕೊಂಡು ನಿಮ್ಮಲ್ಲೇ ತೀರ್ಮಾನಿಸಿಕೊಂಡು ಮರೆಯದೆ ಅವರುಗಳನ್ನು ಮೊದಲೆ ಊಟಕ್ಕೆ ಕರೆಯಿರಿ ವ್ಯವಸ್ಥೆಯು ಸರಿಯಾಗಿ ನಡೆಯಲಿ ಎಂಬ ಉದ್ದೇಶದಿಂದಲೇ ಆಚಾರ್ಯರು ಅನುಶಾಸನವನ್ನು ಮಾಡಿದ್ದಾರೆ ಎಂದರು.

ನಿಜವಾಗಿಯು ಸಂಘದಲ್ಲಿ ಬಹಳ ಜನ ತ್ಯಾಗಿಗಳು ಇದ್ದುದ್ದರಿಂದ ಒಬ್ಬೊಬ್ಬರ ಹತ್ತಿರವೇ ಪರಿವಾರದ ಜನವು ಜಾಸ್ತಿ ಇದ್ದುದ್ದರಿಂದಲೇ ಈ ರೀತಿಯಾಗುವ ಸಂಭವ ಸಹಜವಾಗಿಯೂ ಇತ್ತು. ಆ ಸಮಯದಲ್ಲಿ ನನ್ನ ಹತ್ತಿರವೇ ದೊಡ್ಡ ಪರಿವಾರವಿತ್ತು. ಒಮ್ಮೆ ಸೇಠ್ ಹೀರಾಲಾಲಜೀ ಎಣಿಸಿ ನಗುತ್ತಾ ಹೇಳಿದರು. ಮಾತಾಜೀ ನಿಮ್ಮ ಹತ್ತಿರ ಮೋತಿಚಂದ, ಯಶವಂತ ಇಬ್ಬರು ವಿದ್ಯಾರ್ಥಿಗಳು ಸುಶೀಲ, ಶೀಲ, ಕಲಾ, ಮನೋರಮಾ, ಗೇಂದೀಬಾಯಿ, ತಾರಾಬಾಯಿ ಆರು ವಿದ್ಯಾರ್ಥಿನಿಯರು ನಿಮ್ಮದೇ ದೊಡ್ಡ ಪರಿವಾರ ಎಂದಿದ್ದರು. ಅದಕ್ಕೆ ನಾನು ನೋಡಿ ಸೇಠ್‌ಜೀ ನಾನು ಇಲ್ಲಿಯವರೆಗೂ ಆಚಾರ್ಯರ ಹತ್ತಿರ ಯಾವುದೇ ವ್ಯವಸ್ಥೆಯ ಬಗ್ಗೆ ಸ್ವಲ್ಪವು ಶ್ರಾವಕರ ಬಗ್ಗೆ ದೂರು ಹೇಳಿಲ್ಲ ಅಂತಹುದರಲ್ಲಿ ನೀವೇಕೆ ನನ್ನ ಶಿಷ್ಯರ ಲೆಕ್ಕ ತೆಗೆದುಕೊಳ್ಳುತ್ತಿದ್ದೀರ ಎಂದೆ. ಅವರು ನಕ್ಕು ಸುಮ್ಮನಾದರು.

ಕ್ಷುಲ್ಲಿಕೆ ಅಭಯಮತಿಯ ದರ್ಶನ

1968ರ ಜೈನಮಿತ್ರ ಪತ್ರಿಕೆಯಲ್ಲಿ ಆಚಾರ್ಯ ಶಿವಸಾಗರ ಸಂಘದ ಜೊತೆ ಜ್ಞಾನಮತಿ ಮಾತಾಜಿಯ ಸಂಘವು ಸಹ ಇಲ್ಲಿಯೇ ಚಾತುರ್ಮಾಸ ಮಾಡುತ್ತಿರುವ ಸುದ್ದಿಯನ್ನು ಟಿಕೈತನಗರದಲ್ಲಿ ತಂದೆಯವರು ಓದಿದ ಮೇಲೆ ತಾಯಿಯು ಬಲವಂತವಾಗಿ ಪ್ರತಾಪಗಢಕ್ಕೆ ಪರಿವಾರವನ್ನೆಲ್ಲ ಕರೆದುತಂದಿದ್ದರು. ಮಗ, ಸೊಸೆ, ಇನ್ನೊಬ್ಬ ಮಗ ರವೀಂದ್ರ ಮಗಳು ಕಾಮಿನಿ ಎಲ್ಲರು ಇಲ್ಲಿಗೆ ಬಂದಾಗ ಮೋತಿಚಂದನೇ ಅವರನ್ನೆಲ್ಲ ಸ್ವಾಗತಿಸಿ ಕರೆತಂದು ಸಮಾಜಕ್ಕೆ ಅವರ ಪರಿಚಯ ಮಾಡಿಸಿ, ಸೇಠ್ ಮೋತಿಲಾಲಜೀ ಜೌಹರೀಯವರ ಎದುರಿನ ಕೊಠಡಿಯಲ್ಲೇ ನಿಲ್ಲುವ ವ್ಯವಸ್ಥೆಯನ್ನು ಮಾಡಿಸಿದ್ದನು. ಕೊಠಡಿಯಲ್ಲಿ ಇಳಿದುಕೊಂಡು, ನಂತರ ಬಂದು ನನ್ನನ್ನು, ಅಭಯಮತಿಯನ್ನು ದರ್ಶನ ಮಾಡಿದರು. 5 ವರ್ಷಗಳ ನಂತರ ನಮ್ಮನ್ನು ನೋಡಿ ಅವರಿಗೆ ಅತೀವವಾದ ಆನಂದವಾಗಿತ್ತು. ತಂದೆಯವರಂತೂ ಪ್ರತಿದಿನ ಆಹಾರದ ಚೌಕದಲ್ಲಿ ಇರುತ್ತಿದ್ದರು.

ಕಲಕತ್ತೆಯಿಂದ ಚಾಂದಮಲಜೀ ಬಂದಿದ್ದರು. 1963ರಿಂದ 67ರ ವರೆಗೆ ಪ್ರತಿಯೊಂದು ಚಾತುರ್ಮಾಸದಲ್ಲೂ ಬೇರೆ ಬೇರೆ ಶಿಷ್ಯರು ದೊರೆತಿದ್ದು ಇಂದು ಅವರೆಲ್ಲರು ಇಲ್ಲಿಯೇ ಇದ್ದರು ಇದೇ ಚರ್ಚೆಯಾಗುತ್ತಿತ್ತು.

ಶಿಷ್ಯೆ, ಶಿಷ್ಯರ ಪರಿಚಯ

ಕಲಕತ್ತೆಯ ಚಾತುರ್ಮಾಸದಲ್ಲಿ ಕು. ಸುಶೀಲಳಿಗೆ 5 ವರ್ಷದ ಬ್ರಹ್ಮಚರ್ಯ ವ್ರತವನ್ನು ಕೊಡಲಾಗಿತ್ತು. ಅವಳು ಮತ್ತು ಅವಳ ತಾಯಿ ಬಸಂತೀಬಾಯಿ ಇಬ್ಬರು ಈಗ ನನ್ನ ಹತ್ತಿರವೇ ಇದ್ದಾರೆ. ಬ್ರ. ಕುಮಾರಿ ಶೀಲ, ಮನೋರಮೆ, ಕಲಾ ಇವರು ಸಹ ಇದ್ದಾರೆ ಗೇಂದೀಬಾಯಿ, ಮೋತಿಚಂದ ಮತ್ತು ಯಶವಂತಕುಮಾರರು ಸಂಘದಲ್ಲೇ ಇದ್ದರು. ಎಲ್ಲರು ನನ್ನ ಹತ್ತಿರ ಅಧ್ಯಯನ ಮಾಡುತ್ತಿದ್ದರು. ಅಮ್ಮ ಒಮ್ಮೆ ಇವರನ್ನೆಲ್ಲ ಹೇಗೆ ಮನೆಯಿಂದ ಕರೆದು ತಂದಿರಿ ಎಂದು ಕೇಳಿದರು. ನಾನು ಪ್ರತಿಯೊಬ್ಬರನ್ನು ಕರೆತಂದ ಕಥೆಯನ್ನೆಲ್ಲ ಹೇಳಿದೆ. ಸುಶೀಲ ಕಲಾರ ನಗುಮುಖ, ಚಂಚಲ ಪ್ರವೃತ್ತಿ ಶೀಲಳ ಗಂಭೀರತೆ, ಯಶವಂತಳ ಕಾರ್ಯ ಕುಶಲತೆ ಮತ್ತು ಮೋತಿಚಂದನ ಪುತ್ರ ವಾತ್ಸಲ್ಯದಿಂದ ಜನರು ಬಹಳ ಪ್ರಸನ್ನರಾಗಿದ್ದರು. ಇವರನ್ನೆಲ್ಲ ಕರೆದುಕೊಂಡು ಬರಲು ಎದುರಿಸಿದ ಸಂಘರ್ಷವನ್ನು ಕೇಳಿ ತಂದೆಯವರು ಆಶ್ಚರ್ಯಪಡಲಾರಂಭಿಸಿದರು.

ಮೋತಿಚಂದನಂತೂ ಟಿಕೈತನಗರದ ಪರಿವಾರವನ್ನು ಯಾವುದೋ ನಿಧಿ ಸಿಕ್ಕಂತೆ ಹರ್ಷದಿಂದ ನೋಡಿಕೊಂಡ, ತಂದೆ, ತಾಯಿಯವರನ್ನು ನೋಡಿಕೊಳ್ಳುವುದರಲ್ಲಾಗಲಿ, ಚೌಕದ ವ್ಯವಸ್ಥೆಯಲ್ಲಾಗಲಿ ತೊಡಗಿಕೊಂಡು ಇರುತ್ತಿದ್ದನು. ನಾನು ಓದುವುದು ಓದಿಸುವುದರಲ್ಲಿಯೇ ತೊಡಗಿರುತ್ತಿದ್ದೆ. ಆಗಾಗ್ಗೆ ಉಪದೇಶಗಳು ನಡೆಯುತ್ತಿತ್ತು.

ಆಚಾರ್ಯ ಶಿವಸಾಗರರ ಉದಾರತೆ

ಒಂದು ದಿನ ಕ್ಷುಲ್ಲಿಕೆ ಅಭಯಮತಿಗೂ ಮತ್ತು ಇನ್ನೊಬ್ಬ ಮಾತಾಜಿಗೂ ಯಾವುದೋ ವಿಷಯಕ್ಕೆ ಮಾತಿಗೆ ಮಾತು ಆಗಿದೆ. ಅದೇ ಕ್ಷಣ ಆ ಸುದ್ದಿ ಆಚಾರ್ಯರಲ್ಲಿಗೆ ತಲುಪಿದೆ. ಆಚಾರ್ಯರು ಇಬ್ಬರಿಗೂ 7-7ದಿನವರೆಗೆ ಎಲ್ಲ ರಸಗಳನ್ನು ತ್ಯಾಗ ಮಾಡಿಸಿದ್ದಾರೆ ಒಂದು ದಿನ ಮೋಹಿನಿ ಆಚಾರ್ಯರ ಹತ್ತಿರ ಬಹಳ ಹೊತ್ತಿನವರೆಗೂ ಕುಳಿತಿದ್ದರು ಏನು ಮಾತು ಆಡಿಲ್ಲ.

ಮಾರನೆಯ ದಿನ ಆಚಾರ್ಯರು ಆಹಾರಕ್ಕೆ ಹೊರಡುವ ಸಮಯದಲ್ಲಿ ಕ್ಷುಲ್ಲಿಕೆ ಅಭಯಮತಿಯನ್ನು ಜೊತೆಯಲ್ಲಿ ಬರಲು ಸಂಕೇತ ಮಾಡಿದ್ದಾರೆ. ಅವರು ಆಚಾರ್ಯರ ಹಿಂದೆಯೆ ಬಂದರು. ಮಹಾರಾಜರು ನೇರ ಮೋಹಿನಿಯವರ ಚೌಕದಲ್ಲೇ ನಿಂತರು. ಅಭಯಮತಿಯು ಅಲ್ಲೇ ನಿಲ್ಲಬೇಕಾಯಿತು. ತಂದೆ-ತಾಯಿಗಳಿಬ್ಬರು ಪ್ರದಕ್ಷಿಣೆ ಬಂದು ನವಧಾ ಭಕ್ತಿಯಿಂದ ಕರೆದೊಯ್ದರು. ಕ್ಷುಲ್ಲಕ ಅಭಯಮತಿಯನ್ನು ಆಹ್ವಾನಿಸಿ ಚೌಕದಲ್ಲಿ ಕೂರಿಸಲಾಯಿತು. ಆಚಾರ್ಯರಿಗೆ ತಟ್ಟೆಯಲ್ಲಿ ಎಲ್ಲವನ್ನು ಬಡಿಸಿದ ಮೇಲೆ ಮಹಾರಾಜರೇ ಸಂಕೇತದಿಂದ ತಟ್ಟೆಯಲ್ಲಿ ಹಾಲು ತುಪ್ಪ ಮೊದಲಾದ ರಸಗಳನ್ನು ಇಡಲಾಯಿತು. ಇನ್ನೊಂದು ತಟ್ಟೆಯಲ್ಲಿ ಅಭಯಮತಿಗೂ ಬಡಿಸಲು ಹೇಳಿದರು. ತಾಯಿಯವರು ಅವರ ರಸ ಪರಿತ್ಯಾಗದಿಂದ ನೀರಸ ಆಹಾರವನ್ನು ಇಟ್ಟುಕೊಂಡರು. ಮಹಾರಾಜರು ಸಂಕೇತದಿಂದ ಹಾಲು, ತುಪ್ಪ, ಮುಂತಾದವುಗಳನ್ನು ಬಡಿಸಲು ಹೇಳಿದರು. ಮಹಾರಾಜರ ಆಹಾರ ಪ್ರಾರಂಭವಾದ ಮೇಲೆ ಅಭಯಮತಿಗೂ ಆಹಾರ ಸ್ವೀಕರಿಸಲು ಸಂಕೇತ ಮಾಡಿದರು. ಮಹಾರಾಜರ ಆಜ್ಞೆಯಂತೆ ರಸಗಳನ್ನು ತೆಗೆದುಕೊಳ್ಳಬೇಕಾಯಿತು. ತಂದೆ ತಾಯಿಗೆ ಆಚಾರ್ಯರ ಉದಾರತೆಯನ್ನು ಕಂಡು ಆಶ್ಚರ್ಯಗೊಂಡರು. ಮಧ್ಯಾಹ್ನ ನನ್ನ ಹತ್ತಿರ ಬಂದವರೇ ಈ ಎಲ್ಲವನ್ನು ಹೇಳಿ ನೋಡಿರಿ ಆಚಾರ್ಯರು ತಪ್ಪು ಮಾಡಿದವರಿಗೆ ಅನುಶಾಸನವನ್ನು ಮಾಡಿದರು ಮತ್ತೆ ನಾನು ಮಧ್ಯಾಹ್ನ ಬಹಳ ಹೊತ್ತಿನವರೆಗೂ ಅವರು

ಕುಳಿತಿದ್ದು ನೋಡಿ ನನ್ನ ಹೃದಯದಲ್ಲಿ ತ್ಯಾಗದ ದುಃಖವಿರಬೇಕೆಂದು ತಿಳಿದು ಇಂದು ಸ್ವಯಂ ಅವರೇ ನಮ್ಮ ಚೌಕಕ್ಕೆ ಅಭಯಮತಿಯನ್ನು ಕರೆತಂದು ರಸವನ್ನು ಕೊಡಿಸಿದ್ದಾರೆ. ನಿಜವಾಗಿಯು ಗುರುಗಳ ಹೃದಯ ಎಂತಹ ಕರುಣೆಯಿಂದ ತುಂಬಿದೆ ಎಂದರು.

ರವೀಂದ್ರ ಕುಮಾರನಿಗೆ ವ್ರತ

ನಾನು ಒಂದು ದಿನ ರವೀಂದ್ರನಿಗೆ ತಿಳುವಳಿಕೆ ಹೇಳಿದೆ. ನೀನು ಒಂದು ವರ್ಷವಾದರು ಸಂಘದಲ್ಲಿ ಇದ್ದು ಧಾರ್ಮಿಕ ಅಧ್ಯಯನವನ್ನು ಮಾಡು ಎಂದು. ಅದಕ್ಕೆ ಅವನು ನಾನು ಬಿ.ಎ. ವರೆಗೆ ಓದಬೇಕು ಎಂದ ಆಗ ಅವನಿಗೆ ಸ್ವಲ್ಪ ಉಪದೇಶ ಮಾಡಿ ಎರಡು ವರ್ಷಗಳವರೆಗೆ ಬ್ರಹ್ಮಚರ್ಯ ವ್ರತಕೊಟ್ಟು ನೀನು ಹೊಸದಾಗಿ ವ್ಯಾಪಾರವನ್ನೇ ಮಾಡು, ವಿವಾಹವೇ ಆಗು ಅದಕ್ಕಿಂತ ಮೊದಲು ಸಂಘಕ್ಕೆ ಬಂದು ನನ್ನ ಆಶೀರ್ವಾದವನ್ನು ತೆಗೆದುಕೊಂಡು ಹೋಗಬೇಕು. ಅಮ್ಮನಿಗೂ ಈ ವಿಷಯವನ್ನು ಹೇಳಿದೆ.

ಕಾಮಿನಿಗೋಸ್ಕರ ಪ್ರಯತ್ನ

ಮೋಹಿನಿಯವರ ಮಗಳು ಕಾಮಿನಿಗೆ 13 ವರ್ಷಗಳಾಗಿತ್ತು. ಅವಳು ಸಮಯ ಸಿಕ್ಕಾಗಲೆಲ್ಲ ನನ್ನ ಹತ್ತಿರ ಬಂದು ಕುಳಿತುಕೊಳ್ಳುತ್ತಿದ್ದಳು. ಏನಾದರು ಧರ್ಮದ ಅಧ್ಯಯನವನ್ನು ಮಾಡುತ್ತಿದ್ದಳು. ಅವಳ ಬುದ್ಧಿಯು ಬಹಳ ಚುರುಕಾಗಿತ್ತು. ಗಣಿತದಲ್ಲೂ ಬಹಳ ಚೆನ್ನಾಗಿದ್ದಳು. ನಾನು ಸಂಘದಲ್ಲೆ ಕೆಲವು ದಿನಗಳು ಇದ್ದು ಅಧ್ಯಯನ ಮಾಡಲು ಪ್ರೇರೇಪಿಸಿದೆ. ಅವಳು ತಯಾರಾಗಿದ್ದಳು, ಅವಳು ಹೇಗೋ ತಾಯಿಯನ್ನು ಇಲ್ಲಿ ಇರಲು ರಾಜಿ ಮಾಡಿಸಿದ್ದಳು. 4-5 ತಿಂಗಳು ಇರಲು, ಸಂಘದಲ್ಲಿ ಸೀರೆ ಉಡಬೇಕಾಗಿದ್ದರಿಂದ ಅಮ್ಮನಿಗೆ ಹಿಂಸೆ ಮಾಡಿ ಪೆಟ್ಟಿಕೋಟ್, ಬ್ಲೌಸ್ ಹೊಲೆಸಿಕೊಂಡು ಒಂದು ಸೀರೆಯನ್ನು ತೆಗೆದುಕೊಂಡಿದ್ದಳು.

ತಂದೆಯವರು ದಿನಕ್ಕೆ 10-15 ನಿಮಿಷವಾದರು ನನ್ನ ಹತ್ತಿರ ಕುಳಿತುಕೊಳ್ಳುತ್ತಿದ್ದರು. ಆಗೆಲ್ಲ ಮನೆಯದೂ ಅಂಗಡಿಯದೂ ಏನಾದರೂ ಸಮಸ್ಯೆಗಳನ್ನು ಹೇಳಿ, ಸಮಾಧಾನ ಕೇಳುತ್ತಿದ್ದರು. ಆಗೆಲ್ಲ ನಾನು ಮೌನವಾಗಿರುತ್ತಿದ್ದೆ. ಆಗ ಕೊಠಡಿಗೆ ಹೋದ ಮೇಲೆ ತಾಯಿ ಮೋಹಿನಿಯ ಹತ್ತಿರ ನೋಡು ನಾನು ಯಾವುದೇ ವಿಷಯವನ್ನು ಮಾತಾಜಿಯ ಹತ್ತಿರ ಮಾತಾಡಿದರೂ ಅವರು ಏನು ಮಾತಾಡುವುದಿಲ್ಲ ನೋಡು ಎಂದಾಗ ಅಮ್ಮ ಅವರು ಮನೆಗೆ ಸಂಬಂಧಿಸಿದ ವಿಷಯದ ಬಗ್ಗೆ ಏನೂ ಹೇಳುವುದಿಲ್ಲ. ಅವರಿಗೆ ಅನುಮತಿ ತ್ಯಾಗ ವ್ರತವಿದೆಯಲ್ಲ ಎಂದಾಗ ಸುಮ್ಮನಾದರಂತೆ.

ಒಂದು ದಿನ ನಾನೇ ಅವರಲ್ಲಿ ಕಾಮಿನಿಯ ಬುದ್ಧಿಯು ಬಹಳ ಚೆನ್ನಾಗಿದೆ ಇವಳನ್ನು ಎರಡು ಮೂರು ತಿಂಗಳು ನನ್ನ ಹತ್ತಿರ ಬಿಟ್ಟು ಹೋಗಿ ಸ್ವಲ್ಪ ಧಾರ್ಮಿಕ ಅಧ್ಯಯನ ಮಾಡಿಸಿ ಕಳುಹಿಸಿಕೊಡುತ್ತೆನೆ ಎಂದೆ. ಇದನ್ನು ಕೇಳಿದ ತಂದೆಯು ಜೋರಾಗಿ ನಗುತ್ತಾ ಹೇಳಿದರು ತಾವು ಮನೋವತಿಯನ್ನು ಮಾತಾಜಿ ಮಾಡಿಬಿಟ್ಟಿರಿ. ಅವರು ಕಷ್ಟಪಡುತ್ತಿರುವುದನ್ನು ನೋಡುತ್ತಿದ್ದೇನೆ. ಈಗ ಯಾರನ್ನು ನಿಮ್ಮ ಹತ್ತಿರ ನಾನು ಬಿಡುವುದಿಲ್ಲ ಎಂದರು.

ನನ್ನ ಸ್ವಭಾವವು ಹಾಗೇ ಯಾವಾಗ ತಂದೆ ನನ್ನ ಬಳಿ ಕುಳಿತರು ನಾನು ಕಾಮಿನಿಯ ಬಗ್ಗೆಯೇ ಅವರಿಗೆ ತಿಳುವಳಿಕೆ ಹೇಳಿ ಒತ್ತಾಯ ಮಾಡತೊಡಗಿದೆ. ಅವಳನ್ನು ಬಿಟ್ಟು ಹೋಗಿ ಎಂದು ಒಮ್ಮೆ ಸುಮ್ಮನೆ ನಗುತ್ತಿದ್ದರು,

ಕೆಲವೊಮ್ಮೆ ಸಿಡುಕುತ್ತಿದ್ದರು ಇಲ್ಲ ಎದ್ದು ಹೊರಟೇ ಹೋಗುತ್ತಿದ್ದರು. ಅಮ್ಮನ ಹತ್ತಿರ ಹೋಗಿ ನೋಡು ಮಾತಾಜಿ ಎಷ್ಟು ಸ್ವಾರ್ಥಿಗಳು ನಾವೇನಾದರೂ ಕೇಳಿದರೆ ಉತ್ತರವನ್ನೇ ಕೊಡುವುದಿಲ್ಲ ಆದರೆ ಈಗ ನಾನು ಹೋದಾಗಲೆಲ್ಲ ಕಾಮಿನಿಯನ್ನು ಬಿಟ್ಟು ಹೋಗಲು ಎಷ್ಟೊಂದು ಸಮಜಾಯಿಷಿ ಹೇಳುತ್ತಿದ್ದಾರೆ. ಹೀಗೆ ಹೇಳಿ ನಗುತ್ತಾ ಕಾಮಿನಿಗೆ ಹೇಳುತ್ತಿದ್ದರಂತೆ. ಕಾಮಿನಿ ನೀನು ಮಾತಾಜಿಯ ಮಾತುಗಳಿಗೆ ಒಪ್ಪಿಕೊಳ್ಳಬೇಡ, ನೋಡು ಮನೋವತಿಯನ್ನ ಹೇಗೆ ಮಾತಾಜಿಯನ್ನಾಗಿ ಮಾಡಿಬಿಟ್ಟಿದ್ದಾರೆ. ಅದಕ್ಕೆ ಅವಳು ನಗುತ್ತಾ ನಾನೇನಾದರು ಇದ್ದರೆ ತಾನೇ ದೀಕ್ಷೆ ತೆಗೆದುಕೊಳ್ಳುವುದಕ್ಕೆ ನಾನು ಒಂದೆರಡು ದಿನ ಇದ್ದು ಪಾಠ ಓದಿಕೊಂಡು ಮನೆಗೆ ಬರುತ್ತೇನೆ.

ಒಂದು ದಿನ ನಾನು ತಂದೆಯವರಿಗೆ ಕಲಾ ಮತ್ತು ಮನೋರಮಾರ ಪರಿಚಯ ಮಾಡಿಕೊಡುತ್ತಾ ಹೇಳಿದೆ ಬಾಂಸವಾಡಾದಲ್ಲಿ ಒಂದು ದಿನ ನಾನು ಉಪದೇಶ ಮಾಡುತ್ತಾ ಭಕ್ತಗಣದಲ್ಲಿ ಮಾಡಿದ ವಿನಂತಿ ಎಂದರೆ ಹಳ್ಳಿಯ ಪ್ರತಿಯೊಬ್ಬರು ತಮ್ಮ ಮಕ್ಕಳನ್ನು ನನ್ನಲ್ಲಿ ಕಳುಹಿಸಿದರೆ ನನ್ನ ಹತ್ತಿರ ಓದಿ ಅವರು ಗೃಹಸ್ಥಾಶ್ರಮಕ್ಕೆ ಹೋಗಲಿ ಹಳ್ಳಿ ಹಳ್ಳಿಯಲ್ಲಿ ಸತೀ ಮನೋರಮೆ, ಮೈನಾ ಸುಂದರಿಯರಂತಹ ಆದರ್ಶ ವ್ಯಕ್ತಿಗಳಾಗಲಿ ಎಂದು ಈ ಮಾತನ್ನು ಕೇಳಿದ ಪನ್ನಾಲಾಲರು ತಮ್ಮ ಇಬ್ಬರು ಪುತ್ರಿಯರನ್ನು ನನ್ನ ಹತ್ತಿರ ತಂದು ಬಿಟ್ಟರು ಹಾಗೆ ತಾವು ನಿಮ್ಮ ಮಗಳನ್ನು ಕೆಲವು ದಿನದ ಮಟ್ಟಿಗೆ ಮಾತ್ರ ಬಿಡಿರಿ ಆಮೇಲೆ ಬಂದು ಕರೆದುಕೊಂಡು ಹೋಗಿರಿ ಇದನ್ನು ಕೇಳಿ ಅವರು ನಗುತ್ತಿದ್ದರೇ ಹೊರತು ಅವರ ಮೇಲೆ ಏನೂ ಪರಿಣಾಮ ಮಾತ್ರ ಬೀಳಲಿಲ್ಲ.

ಟಿಕೈತ ನಗರಕ್ಕೆ ಹೋಗುವ ಘಳಿಗೆ ಬಂದೇ ಬಿಟ್ಟಿತು. ಸಾಮಾನು ಎಲ್ಲ ಪ್ಯಾಕ್ ಆಗಿ ಇನ್ನೇನು ಗಾಡಿಯಲ್ಲಿ ಕುಳಿತುಕೊಳ್ಳಬೇಕು ಅಷ್ಟರಲ್ಲಿ ಕಾಮಿನಿ ತನ್ನ ಬ್ಯಾಗ್ ತೆಗೆದುಕೊಂಡು ಓಡಿದಳು. ತಂದೆಯಾದರೂ ಅಲ್ಲಿ ಹುಡುಕಿ ಅವಳನ್ನು ಕಂಕುಳಿನಲ್ಲೆ ಎತ್ತಿಕೊಂಡು ಬಂದು ಗಾಡಿಯಲ್ಲಿ ಕೂರಿಸಿಕೊಂಡು ಹೊರಟೆ ಹೋದರು. ಸ್ಟೇಷನ್ ತಲುಪುತ್ತಿದ್ದಂತೆ ತಾಯಿಗೆ ಜೋರು ಮಾಡಲು ಪ್ರಾರಂಭಿಸಿದರು. ಇನ್ನೊಂದು ನಿನ್ನನ್ನಾಗಲಿ ಮಕ್ಕಳನ್ನಾಗಲಿ ನಾನು ಸಂಘಕ್ಕೆ ಕರೆತರುವುದಿಲ್ಲವೆಂದು ತಾಯಿ ಮೋಹಿನಿ ಮತ್ತು ರವೀಂದ್ರರಿಗೆ ನಮ್ಮನ್ನು ಬಿಟ್ಟುಹೋಗಬೇಕೆಂಬ ದುಃಖ ಒಂದು ಕಡೆ. ಮುನಿಗಳ ಸಂಘದಿಂದ ಆಗುತ್ತಿದ್ದ ಧರ್ಮ ಲಾಭದಿಂದ ವಂಚಿತರಾದರೆಂಬ ಬೇಸರ ಒಂದು ಕಡೆ.

ಸಾಧುಗಳ ಸಮಾಧಿ

ಮುನಿಶ್ರೀ ಜಯಸಾಗರಜೀ ಅವರ ಸಮಾಧಿ ಆಯಿತು. ಕೊನೆಯಲ್ಲಿ ಅವರು ಅಧ್ಯಾತ್ಮ ಭಾವನೆಯಲ್ಲಿ ಲೀನರಾಗಿದ್ದರು ಚಿನ್ಮಯ ಸ್ವರೂಪೋಹಂ, ನಿರ್ವಿಕಾರೋಽಹಂ ಶುದ್ಧೋಹಂ ಬುದ್ಧೋಹಂ ನಿರಂಜನೋಹಂ ಇತ್ಯಾದಿ ಭಾವನೆಗಳನ್ನು ಮಾಡುತ್ತಲೇ ಅವರು ನಶ್ವರ ಶರೀರವನ್ನು ಬಿಟ್ಟರು.

1954ರಲ್ಲಿ ಆಚಾರ್ಯ ದೇಶಭೂಷಣರ ಜೊತೆ ನಾನು ಚಾತುರ್ಮಾಸ ಮಾಡುತ್ತಿದ್ದೆ. ಆಗ ಪಾಟೋದಿ ಮಂದಿರಕ್ಕೆ ಇವರು ಪ್ರತಿದಿನ ದರ್ಶನಾರ್ಥವಾಗಿ ಬರುತ್ತಿದ್ದರು ಇವರನ್ನು ಲೋಕ್ಯಾಜೀ ಎಂದು ಕರೆಯುತ್ತಿದ್ದರು. ಇವರು ತಮ್ಮ ಪತ್ನಿ ಮತ್ತು ಪುತ್ರನನ್ನು ಬಿಟ್ಟು ಆಚಾರ್ಯ ವೀರಸಾಗರರ ಹತ್ತಿರ ದೀಕ್ಷೆ ತೆಗೆದುಕೊಂಡರು. ದೀಕ್ಷೆಗೆ ಮೊದಲು ಜಯಪುರದಲ್ಲಿ ನನ್ನ ಹತ್ತಿರ ಬಂದು ಮಾತಾಡುತ್ತಾ ಮಾತಾಜೀ ನೀವು ಇಷ್ಟು ಚಿಕ್ಕ ವಯಸ್ಸಿನಲ್ಲಿ ದೀಕ್ಷೆ ತೆಗೆದುಕೊಂಡಿದ್ದೀರ ನನಗೂ ದೀಕ್ಷೆ ತೆಗೆದುಕೊಳ್ಳಬೇಕೆಂದು ಇಷ್ಟ ಆದರೆ ನನ್ನ ಮಗ ಚಿಕ್ಕವನು ಮನೆಯನ್ನು ಹೇಗೆ ನೋಡಿಕೊಳ್ಳುತ್ತಾನೆ ಎಂಬ ಚಿಂತೆ ಎನ್ನುತ್ತಿದ್ದರು. ಹತ್ತಿರದಲ್ಲೆ ಕುಳಿತಿದ್ದ ಕ್ಷುಲ್ಲಕ ವಿಶಾಲಮತಿಯವರು

ಭಯ್ಯಾ ದೀಕ್ಷೆ ತೆಗೆದುಕೊಳ್ಳುವವರು ಎಂದೂ ಭವಿಷ್ಯದ ಕುರಿತು ಯೋಚಿಸುವುದಿಲ್ಲ. ಅವರವರ ಭಾಗ್ಯ ಅವರವರ ಜೊತೆಯೆ ಇರುತ್ತದೆ ಎನ್ನುತ್ತಿದ್ದರು. ಆಗ ಆ ಮಹಾನುಭಾವರು ನನಗೆ ಈ ಚಿಕ್ಕ ಮಾತಾಜಿಯವರನ್ನು ನೋಡಿದರೆ ವೈರಾಗ್ಯ ತಾನಾಗಿಯೆ ಬರುತ್ತದೆ ಎನ್ನುತ್ತಿದ್ದರು. ಕೊನೆಗೆ ಮನೆ, ಮಗ ಎಲ್ಲರನ್ನು ಬಿಟ್ಟು ದೀಕ್ಷೆ ತೆಗೆದುಕೊಂಡರು. ಮಗ ಕೊಡ ಯೋಗ್ಯನಾಗಿ ಮನೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾನೆ. ಇದಾದ ಕೆಲವೇ ದಿನಗಳಿಗೆ ಆರ್ಯಿಕೆ ಸಿದ್ಧಮತೀ ಮಾತಾಜೀ ಈ ನಶ್ವರ ಶರೀರದ ಕ್ಷೀಣತೆ ಮತ್ತು ವೃದ್ಧಾವಸ್ಥೆಯಿಂದಾಗಿ ಸಲ್ಲೇಖನ ತೆಗೆದುಕೊಂಡರು ಇವರು ಮಹಾಮಂತ್ರ ಕೇಳುತ್ತಲೇ ದೇಹತ್ಯಾಗ ಮಾಡಿದರು. ಇವರಿಬ್ಬರದು ಇಲ್ಲೇ ಸಮಾಧಿ ಆಯಿತು ಇದು ಯಾರಲ್ಲಾದರು ವೈರಾಗ್ಯ ಜಾಸ್ತಿ ಮಾಡುವುದಾಗಿತ್ತು.

ಪ್ರೀತಿ ಭೋಜ

ಪ್ರೀತಿ ಭೋಜವೆಂದರೆ ಧಾರ್ಮಿಕ ಆಯೋಜನೆಯಲ್ಲಿ ಮಾಡುವ ಊಟವೆಂದು ಅರ್ಥ. ಆಗ ದೊಡ್ಡ ದೊಡ್ಡ ಚರ್ಚೆ ಮಾಡುತ್ತಾರೆ ಇಲ್ಲಿಯ ಭೋಜನ ಎಲ್ಲಾ ಪ್ರಾಂತ್ಯಕ್ಕಿಂತ ವಿಶೇಷವಾದುದು ಅವರನ್ನು ನೋಡಿ ನಮ್ಮ ಸಂಘದವರು ನಕ್ಕು ನಕ್ಕು ಇಡುತ್ತಿದ್ದರು. ಈ ಪುಡಿಯಾ ಸುಮಾರು ಒಂದೂವರೆ ಅಡಿ ಸುತ್ತಳತೆ ಇದೆ. ಒಂದೇನು ಅರ್ಧ ತಿಂದರು ಸಾಕು ಹೊಟ್ಟೆ ತುಂಬುತ್ತಿತ್ತು. ಮುನಿಗಳ ಕೇಶಲೋಚದ ಸಂದರ್ಭದಲ್ಲಿ 'ಪ್ರಭಾವನ' ಎಂಬ ಹೆಸರಿನಲ್ಲಿ ದೊಡ್ಡ ದೊಡ್ಡ ಬತಾಶೆಯನ್ನು ಹಂಚುತ್ತಾರೆ.

ಅಧ್ಯಯನ ಅಧ್ಯಾಪನ

ನನ್ನ ಶಿಷ್ಯ ವಿದ್ಯಾರ್ಥಿಗಳಿಗೆ ನ್ಯಾಯ ದೀಪಿಕಾ, ಕಾತಂತ್ರ ವ್ಯಾಕರಣ, ಗೊಮ್ಮಟಸಾರ ಮೊದಲಾದ ಗ್ರಂಥಗಳ ಅಧ್ಯಯನ ಮಾಡಿಸುತ್ತಿದ್ದೆ ಇಲ್ಲಿ ಬರುತ್ತಿದ್ದ ರತನಚಂದ ಮುಖ್ತಾರರು ಸ್ವಾಧ್ಯಾಯ ಮಾಡುತ್ತಾ ಧವಲಾ ಅಧ್ಯಯನದ ಗಣಿತದ ಲೆಕ್ಕಾಚಾರಗಳನ್ನು ಚೆನ್ನಾಗಿ ತಿಳಿದಿದ್ದರು. ಅದಕ್ಕೆ ನಾನು ಪಂಡಿತಜೀ ನನಗೆ ತಿಲೋಯ ಪಣ್ಣತ್ತಿಯಿಂದ ಜ್ಯೋರ್ತಿಲೋಕದ ಗಣಿತ ಲೆಕ್ಕಾಚಾರದ ಬಗ್ಗೆ ಸ್ವಲ್ಪ ತಿಳಿಸಿ ಕೊಡಿ ಎಂದರು.

ಅವರಿಗೆ ಆಸಕ್ತಿ ಏನು ಕಂಡುಬರಲಿಲ್ಲ ಆದರೂ ನಾನು ಅವರ ಮುಂದೆ ವಾಸ್ತವವನ್ನು ಬಿಡಿಸಿ ಕುಳಿತೆಬಿಟ್ಟೆ. ಧಾತಕೀ ಖಂಡದಲ್ಲಿ ಸೂರ್ಯನ ಚಕ್ರಗಳು ಎಲ್ಲಿಂದ ಎಲ್ಲಿಯವರೆಗೆ ಇದೆ ಎಂದು ಕೇಳಿದೆ ತಕ್ಷಣ ಅವರಿಗೆ ಹೇಳಲು ಸಾಧ್ಯವಾಗಲಿಲ್ಲ. ನಾನೇ ಭಗವಂತನ ಮುಂದೆ ಕುಳಿತು ಕಠಿಣ ಅಭ್ಯಾಸ ಮಾಡಿ ಕೊನೆಗೂ ಸಾಹಸದಿಂದ ಅದರ ಪರಿಧಿಯ ಅಳತೆಯಿಂದ ಅದರ ಗಾಲಿಗಳ ಅಳತೆಯನ್ನು ತಿಳಿದುಕೊಂಡೆ. ನನಗೆ ಸಂತೋಷವಾಯಿತು. ಇದನ್ನು ನಾನು 1969ರ ಜಯಪುರದ ಶಿಬಿರದಲ್ಲಿ ಇದನ್ನು ಅಚ್ಚು ಹಾಕಿಸಿ ಜೈನಜ್ಯೋರ್ತಿಲೋಕವೆಂಬ ಪುಸ್ತಕದಲ್ಲಿ ಪ್ರಕಟಿಸಿದೆ. ಕೊನೆಗೆ ನಿರ್ಣಯವನ್ನು ನಾನೇ ಕೊಟ್ಟೆ.

೫೪

ಅತಿಶಯ ಕ್ಷೇತ್ರ ಮಹಾವೀರಜೀಯಲ್ಲಿ ವಿಹಾರ

ವರ್ಷಾಯೋಗ ಮುಗಿಯುತ್ತಿದ್ದಂತೆ ಮೊದಲೇ ನಿರ್ಧರಿಸಿದಂತೆ ಪ್ರತಾಪಗಢದ ಜನರು ಮಹಾವೀರಜೀಗೆ ತಲುಪಿಸಲು ಸಿದ್ಧರಾಗಿದ್ದರು. ದಾರಿಯಲ್ಲಿ ಮೋತಿಚಂದನದು ಒಂದು ಚೌಕ ಬ್ರ. ಶೀಲಾ, ಗೇಂದಿಬಾಯಿ,

ಕಲಾ, ಮನೋರಮ ಮೊದಲಾದಬಾಯಿಗಳೇ ಬಂದು ಚೌಕ ಮಾಡಿ ಮುನಿಗಳಿಗೆಲ್ಲ ಆಹಾರ ಕೊಟ್ಟು ಸಂತೋಷಪಡುತ್ತಿದ್ದರು.

ಬ್ರ. ಚಾಂದಮಲಜೀಯವರ ಸಮಾಧಿ ಮರಣ

ಬ್ರ. ಚಾಂದಮಲ್ಲರಿಗೆ ತುಂಬ ವಯಸ್ಸು ಆಗಿತ್ತು. ನಿಶ್ಯಕ್ತರೂ ಆಗಿದ್ದರು. ಅಲ್ಲಲ್ಲಿ ನಿಂತಾಗ ಕೆಲವು ಕಡೆ ಅವರಿಗೆ ಕಷ್ಟವೇ ಆಗುತ್ತಿತ್ತು ತಮಗೆ ಕಷ್ಟವಾಗುತ್ತಿದ್ದರು. ಸಂಘದಲ್ಲೇ ವಿಹರಿಸುತ್ತಿದ್ದರು. ಭವಾನಿಮಂಡೀಯಲ್ಲಿ ಸಂಘ ನಿಂತಿತ್ತು. ಮಂದಿರ ಮಹಡಿಯ ಮೇಲೆ ಚತುದರ್ಶಿಯ ದೀರ್ಘವಾದ ಪ್ರತಿಕ್ರಮಣ ನಡೆಯುತ್ತಿತ್ತು. ಚಾಂದಮಲರು ಕೆಳಗೆ ಕುಳಿತಿದ್ದರು. ಅವರು ಬೆಳಗ್ಗೆಯೇ ಮಹಾರಾಜರ ಹತ್ತಿರ ಹೇಳುತ್ತಿದ್ದರು. ಮಹಾರಾಜಜೀ ನನಗೆ ಉಸಿರು ಹಿಡಿದಿಡಿದು ಬರುತ್ತದೆ ಎಂದು. ಇದನ್ನು ಕೇಳಿ ಮಹಾರಾಜರು ನಗುತ್ತಾ ವಾಹ್ ಬ್ರಹ್ಮಚಾರಿಜೀ ಮಾತಾಡುತ್ತಿದ್ದೀರ ಕುಳಿತಿದ್ದೀರ ಪುನಃ ಉಸಿರು ಹಿಡಿಯುತ್ತಿದೆ ಎನ್ನುತ್ತಿದ್ದೀರಲ್ಲ ಎಂದು ಬಿಟ್ಟರು. ಮಧ್ಯಾಹ್ನ ಸುಮಾರು ಎರಡು ಗಂಟೆಯ ವೇಳೆಗೆ ನನ್ನನ್ನು ಕರೆದು ಮಾತಾಜೀ ನನ್ನ ಹತ್ತಿರವೇ ಕುಳಿತು ಏನಾದರು ಹೇಳಿ ನನಗೆ ನಾಡಿಯು ಸರಿಯಾಗಿ ಮಿಡಿಯುತ್ತಿಲ್ಲವೆಂದರು. ಇದನ್ನು ಕೇಳಿದ ನಾನು ಹತ್ತಿರದಲ್ಲೇ ಕುಳಿತು ಸ್ವಲ್ಪ ಆಧ್ಯಾತ್ಮಿಕವನ್ನು (ಹೇಳತೊಡಗಿದೆ) ಒಳ್ಳೆಯ ವಚನವನ್ನು ಹೇಳುತ್ತಾ ಇದ್ದ ನನ್ನ ಪಕ್ಕ ಇನ್ನೊಬ್ಬ ಆರ್ಯಿಕೆಯು ಕುಳಿತಿದ್ದರು. ನನಗೇನೊ ಅವರ ಸ್ಥಿತಿ ಗಂಭೀರವಾಗುತ್ತಿದೆ ಎನ್ನಿಸಿತು. ತಕ್ಷಣ ಮೇಲೆ ಹೋಗಿ ಆಚಾರ್ಯರಿಗೆ ತಿಳಿಸಿದೆ ಆಚಾರ್ಯರು ಸಂಘಸಹಿತ ಬಂದವರೇ ಅವರನ್ನು ನಗ್ನಗೊಳಿಸಿ ಅವರಿಗೆ ಜೀವನಪರ್ಯಂತ ಚತುರ್ವಿಧ ಆಹಾರ ತ್ಯಾಗಕೊಟ್ಟು ಸಲ್ಲೇಖನ ವಿಧಿಯನ್ನು ಕೊಟ್ಟರು. ಸ್ವಲ್ಪ ಹೊತ್ತಿನಲ್ಲೆ ಅವರ ಶರೀರದಿಂದ ಆತ್ಮ ಪ್ರಯಾಣಮಾಡೇ ಬಿಟ್ಟತು. ಇದನ್ನು ನೋಡಿದ ಎಲ್ಲರಿಗೂ ಬಹಳ ಆಶ್ಚರ್ಯವಾಯಿತು.

ಅವರಿಗೆ ಆಯುರ್ವೇದದ ಜ್ಞಾನ ನಾಡಿಯ ಬಡಿತ ಬಗ್ಗೆ ತಿಳುವಳಿಕೆ ಇದ್ದುದ್ದರಿಂದ ಅವರ ಇಚ್ಛೆ ನೆರವೇರಿತು. ಅಲ್ಲದಿದ್ದರೆ ಸಾಧುಗಳು ಪ್ರತಿಕ್ರಮಣ ಮಾಡುತ್ತಿದ್ದಂತೆ ಅವರ ಪ್ರಾಣ ಹೋಗಿರುತ್ತಿತ್ತು. ಇವರ ಸಮಾಧಿಯಿಂದ ಜನರಿಗೆ ಒಂದು ಪಾಠ ಕಲಿತಂತೆ ಆಯಿತು. ಜೀವನದ ಅಂತ್ಯದಲ್ಲಿ ಗುರುಗಳ ಸನ್ನಿಧಿಗೆ ಬಂದರೆ ಜೀವನ ಪೂರ್ತಿ ಸಾಧನೆಗೆ ಸಲ್ಲೇಖನದಂತಹ ಪ್ರತಿಫಲದೊರೆತಂತೆ ಆಗುತ್ತದೆ. ಆಯ್ ಎಲ್ಲರು ಬದುಕುವ ಕಲೆಯನ್ನು ಕಲಿಯುತ್ತಾರೆ. ಆದರೆ ಸಾಯುವ ಕಲೆಯನ್ನು ಕಲಿಯುವವರು ಜೈನರು ಮಾತ್ರ. ಈ ಕಲೆಯನ್ನು ಕಲಿತವರು ಮೃತ್ಯುಂಜಯಿಗಳಾಗುತ್ತಾರೆ. ಅಜರಾಮರ ಪದವಿಯನ್ನು ಪಡೆದುಕೊಳ್ಳುತ್ತಾರೆ.

ಶಿಷ್ಯರ ವ್ಯವಸ್ಥೆ

ಭವಾನೀಮಂಡೀಯ ಒಬ್ಬ ಶ್ರಾವಕರು ತಮ್ಮ ಮಗಳನ್ನು ಆಚಾರ್ಯರ ಹತ್ತಿರ ಕರೆದುಕೊಂಡು ಬಂದು (ಹೇಳಿದರು) ಮಹಾರಾಜರೇ ನನ್ನ ಮಗಳ ಮದುವೆಯಾಗಿದೆ. ಆದರೆ ಅವಳಿಗೆ ಗಂಡನ ಮನೆಯಲ್ಲಿ ಶಾಂತಿ ಇಲ್ಲ ಹಾಗಾಗಿ ಅವಳು ಅಲ್ಲಿಗೆ ಹೋಗುವುದಿಲ್ಲ ಎನ್ನುತ್ತಿದ್ದಾಳೆ. ಆದ್ದರಿಂದ ಮಾತಾಜೀಯವರ ಹತ್ತಿರ ಧರ್ಮ ಅಧ್ಯಯನ ಮಾಡಿ ಆತ್ಮ ಕಲ್ಯಾಣ ಮಾಡಿಕೊಳ್ಳಲಿ ನನಗೆ ಬೇರೆ ವಿವಾಹ ಮಾಡುವುದಕ್ಕೆ ಇಷ್ಟವಿಲ್ಲ ಈ ಹುಡುಗಿಯು ಸಂಘದಲ್ಲಿ ಇರಲು ಬಯಸುತ್ತಿದ್ದಾಳೆ ಆದ್ದರಿಂದ ಇರಲು ಅವಕಾಶ ಕೊಡಿ ಎಂದರು. ಅದೇ ಕ್ಷಣ ಮಹಾರಾಜರು ನನ್ನನ್ನು ಕರೆದು ಹೇಳಿದರು ಜ್ಞಾನಮತಿ ಮಾತಾಜೀ ನೋಡಿ ಈ ಹುಡುಗಿಯನ್ನು ನಿಮ್ಮ

ಹತ್ತಿರ ಇಟ್ಟುಕೊಂಡು ಜ್ಞಾನ ಮತ್ತು ವೈರಾಗ್ಯದಿಂದ ಯೋಗ್ಯಳನ್ನಾಗಿ ಮಾಡಿರಿ. ಹಾಗೇ ಆ ಶ್ರಾವಕರಿಗೂ ಹೇಳಿದರು. ನೋಡಿ ನನ್ನ ಸಂಘದಲ್ಲಿರುವ ಮಾತಾಜಿಗಳಲ್ಲಿ ಬಹಳ ಯೋಗ್ಯತೆಯನ್ನು ಹೊಂದಿರುವವರು ಇವರು ಹುಡುಗಿಯರನ್ನು ನೋಡಿಕೊಳ್ಳುತ್ತಾರೆ. ವಯಸ್ಸಾದ ಹೆಂಗಸರನ್ನು ನೋಡಿಕೊಳ್ಳುತ್ತಾರೆ ಮತ್ತು ಯುವತೀ ಮಹಿಳೆಯರನ್ನು ಸಹ ವೈರಾಗ್ಯದ ಕಡೆಗೆ ತಿರುಗಿಸುತ್ತಾರೆ. ಜ್ಞಾನವನ್ನು ವೃದ್ಧಿಗೊಳಿಸುತ್ತಾರೆ. ಚೆನ್ನಾಗಿ ವ್ಯಾಕರಣ, ನ್ಯಾಯ ಮುಂತಾದವುಗಳಲ್ಲಿ ನಿಷ್ಣಾತರು ಕಲಿಸುವುದರಲ್ಲೂ ಅವರು ಶ್ರೇಷ್ಠರು. ಶಿಷ್ಯರುಗಳಲ್ಲಿ ವೈರಾಗ್ಯವನ್ನು ಉಂಟುಮಾಡುವುದರಲ್ಲಿ ನಿಷ್ಣಾವಂತರು. ಅದ್ದರಿಂದ ಅವರ ಹತ್ತಿರವೇ ಈ ಹುಡುಗಿಯನ್ನು ಬಿಟ್ಟರೆ ಸರ್ವಗುಣ ಸಂಪನ್ನಳನ್ನಾಗಿ ಮಾಡುತ್ತಾರೆ ಎಂದರು.

ಆ ಶ್ರಾವಕರು ಎರಡು ಮೂರು ದಿನ ಅಲ್ಲೇ ಇದ್ದರು. ಆಗಲೇ ನನ್ನ ಹತ್ತಿರ ಬಂದವಳು ಸ್ವಲ್ಪ ಹೊತ್ತಾದ ಮೇಲೆ ಊಟದ ಸಮಯಕ್ಕೆ ತಂದೆಯ ಹತ್ತಿರಕ್ಕೆ ಹೋದಳು. ಆಗ ಕೆಲವು ಆರ್ಯಿಕೆಯರು ಅವಳ ಹತ್ತಿರ ಮಾತಾಡುತ್ತಿದ್ದರು ಯಾರೋ ಅವರ ಹತ್ತಿರವೇ ಇರುವುದಕ್ಕೆ ಪ್ರೇರೇಪಿಸುತ್ತಿದ್ದರು. ಇದನ್ನೆಲ್ಲ ಗಮನಿಸಿದ ಯಾರೋ ಬಂದು ನನ್ನ ಹತ್ತಿರ ಹೇಳಿದರು ನೋಡಿ ಕೆಲವು ಮಾತಾಜಿಗಳು ಅವಳನ್ನು ತಮ್ಮ ಹತ್ತಿರ ಇಟ್ಟುಕೊಳ್ಳಬೇಕೆಂದಿದ್ದಾರೆ ಎಂದರು. ಇದನ್ನು ಕೇಳಿದ ನಾನು ಅಷ್ಟೇನು ಗಮನಕೊಡಲಿಲ್ಲ. ಆದರೆ ಮಾರನೆಯ ದಿನ ಮಧ್ಯಾಹ್ನ ಆ ಹುಡುಗಿಯನ್ನು ಕರೆದುಕೊಂಡು ತಂದೆಯು ನನ್ನ ಬಳಿಗೆ ಬಂದರು.

ಮಾತಾಜೀ ಈಗ ನಾವು ಹೋಗುತ್ತಿದ್ದೇವೆ ಯಾವಾಗ ಯೋಗ ಬರುತ್ತದೋ ಆಗ ಕರೆತರುತ್ತೇವೆ. ಅದಕ್ಕೆ ನಾನು ಏನಾಯಿತು ಏನು ವಿಷಯವೆಂದೆ. ಅದಕ್ಕೆ ಹುಡುಗಿ ಒಬ್ಬ ಮಾತಾಜಿ ನನ್ನನ್ನು ಕರೆದು ನನ್ನ ಹತ್ತಿರ ಇರು ಎಂದರು. ಇನ್ನೊಬ್ಬರು ನನ್ನ ಹತ್ತಿರ ಇರು ಎಂದರು ಇಲ್ಲಿರುವ ದ್ವೇಷ, ಅಸೂಯೆಗಳನ್ನು ನೋಡಿ ನನಗೆ ಮನೆಯೇ ಮೇಲು ಎನ್ನಿಸುತ್ತಿದೆ ಎಂದಳು.

ನಾನು ಒಂದೇ ಸಮನೆ ನೋಡಲಾರಂಭಿಸಿದೆ. ಇಬ್ಬರೂ ಹೊರಟುಹೋದರು. ಆಚಾರ್ಯರಲ್ಲಿಯು ನಾನು ಏನು ಹೇಳಲಿಲ್ಲ, ನಂತರ ನಾನು ಯೋಚಿಸಲಾರಂಭಿಸಿದೆ. ಅಯ್ಯೋ ಈ ಸಂಸಾರ ಸಮುದ್ರದಿಂದ ಪಾರಾಗುವುದು ಎಷ್ಟು ಕಷ್ಟ. ಕಾರಣವಿಲ್ಲದೆ ಆಚಾರ್ಯರ ಆಜ್ಞೆಯನ್ನು ಪಾಲಿಸುವ ಸಾಧ್ವಿಯರನ್ನು ಸ್ವಾರ್ಥವು ಬಿಡಲಿಲ್ಲವಲ್ಲ ಎಂತಹ ಆಶ್ಚರ್ಯದ ವಿಷಯ ಯಾರನ್ನೇ ಆಗಲಿ ಮೋಕ್ಷ ಮಾರ್ಗದಲ್ಲಿ ತೊಡಗಿಸುವಾಗ ಪರೋಪಕಾರ ಭಾವನೆಯೇ ಪ್ರಮುಖವಾಗಿರಬೇಕು. ಈ ಸ್ವಾರ್ಥ ಬುದ್ಧಿ, ಶಿಷ್ಯರ ಲೋಭ ಇವರಲ್ಲಿ ಏಕೆ ಬಂದಿದೆಯೋ ಗೊತ್ತಿಲ್ಲ. ಕೊನೆಗೆ ನಾನು ಯಾವ ಶಿಷ್ಯರನ್ನೂ ಹತ್ತಿರದಲ್ಲಿ ಇಟ್ಟುಕೊಂಡಿಲ್ಲ. ನನ್ನ ಹತ್ತಿರವೇ ಇರು ಎಂದು ಪ್ರೇರೇಪಿಸುವುದಿಲ್ಲ. ನಾನು 1956ರಲ್ಲಿ ಮೂಲಾಚಾರದಲ್ಲಿ ಓದಿದ್ದೇನೆ.

"ಸಂಗ್ರಹೀತಾನಿ ಚಾತ್ಮವಶೀಕೃತಾನಿ ಚ ಕ್ಷೇತ್ರ ವಾಸ್ತು ಧನ ಧಾನ್ಯ ಪುಸ್ತಕೋಪಕರಣಬ್ಭಾತ್ಯಾದೀನಿ ತೇಷಾಂ ಸರ್ವೇಷಾಂ ನಾದಾನಂನ ಗ್ರಹಣಂ ಆತ್ಮೀಯ ಕರಣಾವಿಸರ್ಜನಂ".[೧]

ಬೇರೆಯವರಿಂದ ಸಂಗ್ರಹಿಸಿದ ಗದ್ದೆ, ಮನೆ, ಧನ, ಧಾನ್ಯ, ಪುಸ್ತಕ, ಉಪಕರಣ, ಪಿಂಛಿ, ಕಮಂಡಲು ಪಾತ್ರೆ-ಶಿಷ್ಯ ಮೊದಲಾದವನ್ನು ತೆಗೆದುಕೊಳ್ಳಬಾರದು ಸಂಗ್ರಹಿಸಲೂ ಬಾರದು ಅಂದರೆ ತಮ್ಮದನ್ನಾಗಿ ಮಾಡಿಕೊಳ್ಳಬಾರದು. ಇದಕ್ಕೆ ಆಚಾರ್ಯರು ಮಹಾವ್ರತ ಎನ್ನುತ್ತಾರೆ. ಆಗ ಅಂದುಕೊಂಡೆ ಯಾರ ಶಿಷ್ಯ, ಶಿಷ್ಯೆಯರೇ ಬರಲಿ ಅವರನ್ನು ನನ್ನ ಹತ್ತಿರ ಇಟ್ಟುಕೊಳ್ಳದೆ ಅವರನ್ನು ಶಿಕ್ಷಣಕ್ಕೆ ಗುರುಗಳ ಹತ್ತಿರವೇ ಕಳುಹಿಸೋಣ.

---

೧. ಮೂಲಾಚಾರ ಟೀಕಾ. ಪು. ೧೨

1975ರಲ್ಲಿ ಮುಜಫರನಗರದಲ್ಲಿದ್ದೆ. ಅಲ್ಲಿ ಸುಪಾರ್ಶ್ವ-ಸಾಗರಜೀಯವರು ಸಲ್ಲೇಖನ ತೆಗೆದುಕೊಂಡರು. ಆದ್ದರಿಂದ ನನ್ನನ್ನು ಅಲ್ಲಿಗೆ ಕರೆದಿದ್ದರು. ಅಲ್ಲಿ ಫಿರೋಜಾಬಾದಿನ ಪಂಡಿತ ಶ್ಯಾಮಸುಂದರಲಾಲಜೀ ಬಂದಿದ್ದರು. ಒಂದೆರಡು ದಿನ ಅಲ್ಲಿದ್ದವರು ಹೇಳಿದರು. ಮಾತಾಜೀ ಇಬ್ಬರು ಬ್ರಹ್ಮಚಾರಿಣಿಯರು ದೀಕ್ಷೆ ತೆಗೆದುಕೊಳ್ಳಬೇಕೆಂದಿದ್ದಾರೆ. ಅವರಿಗೆ ತಿಳುವಳಿಕೆಯನ್ನು ಕೊಟ್ಟು ಸಂರಕ್ಷಣೆ ಮಾಡಿರಿ. ಜ್ಞಾನಪಡೆದು ಯೋಗ್ಯರಾಗಲಿ ಅವರು ಇನ್ನೆಲ್ಲೋ ಇದ್ದು ಯೋಗ್ಯರಾಗಲಾರರು ಇದಂತೂ ನನ್ನ ಜೀವನದ ಅನುಭವವಾಗಿದೆ ಎಂದರು. ಅದಕ್ಕೆ ನಾನು ಈಗ ನನ್ನ ಹತ್ತಿರವೇ ಇಟ್ಟುಕೊಳ್ಳಲು ಸಾಧ್ಯವಾಗಲಾರದು ಏಕೆಂದರೆ ಇಲ್ಲಿ ನಾನೇ ಸಂಘದಲ್ಲಿ ಇದ್ದೇನೆ ಎಂದು. ಆದರೂ ಪಂಡಿತರು ಅವರಿಬ್ಬರನ್ನು ನನ್ನ ಹತ್ತಿರ ಕರೆತಂದು ನೀವೇ ಅವರಿಗೆ ಶಿಕ್ಷಣವನ್ನು ಕೊಡಬೇಕೆಂದು ಒತ್ತಾಯ ಮಾಡತೊಡಗಿದರು. ನೀವೇ ಅವರ ಯೋಗ್ಯ ಶಿಕ್ಷಣವನ್ನು ಕೊಡಲು ಸಾಧ್ಯ ಎಂದರು.

ಆಚಾರ್ಯ ವೀರಸಾಗರರು ಮಹಿಳೆಯರು ಅಂದರೆ ಬ್ರಹ್ಮಚಾರಿಣಿ ಮತ್ತು ಆರ್ಯಿಕೆಯರ ಸಂರಕ್ಷಣೆ ಆರ್ಯಿಕೆಯರ ಹತ್ತಿರವೇ ಆಗಬೇಕು ಎನ್ನುತ್ತಿದ್ದರು. ಅನುಭವಿ ಆರ್ಯಿಕೆಯರು ಆಗದ ಹೊರತು ದೀಕ್ಷೆಗೆ ಅನುಮತಿ ಕೊಡುತ್ತಿರಲಿಲ್ಲ. ನಾನು ಆ ಪದ್ಮಾವತಿ ಮೊದಲಾದವರ ಉದಾಹರಣೆ ಹೇಳಿದೆ. ಈ ಮಾತನ್ನು ಆಚಾರ್ಯ ಶಿವಸಾಗರದರು ಮಹಾವೀರಜೀಯಲ್ಲಿ ಬ್ರ. ಅಶರಫಿ ಬಾಯಿಗೆ ಹೇಳಿದರು. ನೀನು ಯಾವ ಆರ್ಯಿಕೆಯರನ್ನು ಎಂದು ತಿಳಿದು ಅವರ ಹತ್ತಿರ ಇರಬೇಕೆಂದು ನಿಶ್ಚಿಯಿಸುತ್ತೀಯಾ ಅವರನ್ನು ಮುಂದೆ ತರುತ್ತಾರೆ ಆಗ ನಾನು ದೀಕ್ಷೆ ಕೊಡಬಲ್ಲೆ ಎಂದಿದ್ದರು.

ಹೀಗೆ ನಾನು ಪಂಡಿತರಿಗೆ ಹೇಳಿ ಇವರಿಬ್ಬರು ಯಾರನ್ನು ಬೇಕಾದರು ವಿದೂಷಿ ಎಂದು ತಿಳಿದ್ದೀರೆ ಅವರ ಹತ್ತಿರವೇ ಇರಲಿ ಅವರೇ ಇವರ ಸುಖ ದುಃಖವನ್ನು ನೋಡಿಕೊಳ್ಳುತ್ತಾರೆ ಅವರಿಗೆ ಬೇಕಾದ ಪರಿಚರ್ಯೆಯನ್ನು ಮಾಡಿ ಅವರಿಂದ ಕಲಿಯಲಿ. ನೋಡಿ ಈ ಸಮಯದಲ್ಲಿ ಆರ್ಯಿಕೆಯರಾದ ಜಿನಮತಿ, ಆದಿಮತೀ, ಭದ್ರಮತೀ, ಸಂಭವಮತೀ ಮೊದಲಾದ ದೊಡ್ಡ ದೊಡ್ಡ ಆರ್ಯಿಕೆಯರು ಇಲ್ಲಿದ್ದಾರೆ. ಅವರಲ್ಲಿ ಇವರಿಬ್ಬರಿಗೆ ಯಾರಾದರು ಆಶ್ರಯ ಕೊಡಬಹುದು.

ಅವರಿಬ್ಬರಿಗೂ ನನ್ನ ಈ ಮಾತು ಹಿಡಿಸಲಿಲ್ಲ. ಎದ್ದು ಮುನಿಗಳ ಹತ್ತಿರ ಹೋಗಿ ಈ ಎಲ್ಲಾ ಸಮಾಚಾರ ಹೇಳಿದ್ದಾರೆ ಅದಕ್ಕೆ ಅವರು. ಅವರು ಏನಾದರೂ ಬಡ ಬಡಾಯಿಸಲಿ ಬಿಡಿ. ನಿಮ್ಮಿಬ್ಬರ ಜೊತೆ ನಿಮ್ಮ ತಾಯಿಯು ಇದ್ದಾರೆ ತಾನೇ ಚಿಂತೆ ಮಾಡಬೇಡಿ ನೀವು ಸ್ವತಂತ್ರರು ಇಲ್ಲಿ ಯಾರು ಯಾರ ಕೈಕೆಳಗೂ ಇರುವ ಅವಶ್ಯಕತೆ ಇಲ್ಲ.

ಕೊನೆಗೆ ನಾನು ಕೆಲವು ದಿನಗಳ ನಂತರ ಹಸ್ತಿನಾಪುರಕ್ಕೆ ಬಂದೆ. ಆಚಾರ್ಯ ಧರ್ಮಸಾಗರರು ಈ ಇಬ್ಬರು ಹುಡುಗಿಯರಿಗೂ ಮತ್ತು ಅವರ ತಂದೆ ತಾಯಿಯರಿಗೂ ದೀಕ್ಷೆ ಕೊಟ್ಟರು.

ಕೆಲವು ವರ್ಷಗಳ ನಂತರ ಇವರಿಬ್ಬರು ಸಹೋದರಿಯರಿಗೆ ಅನಾರೋಗ್ಯವಾಗಿ ಆರ್ಯಿಕೆ ದೀಕ್ಷೆಯನ್ನು ಬಿಟ್ಟು ಮನೆಗೆ ಹೋದರಂತೆ ಮುಜಫರ ನಗರದ ಈ ಚರ್ಚೆ ನೆನಪಿಗೆ ಬಂದಾಗ ರೋಮಾಂಚನವಾಗುತ್ತಿತ್ತು. ಒಂದು ವೇಳೆ ಇವರಿಬ್ಬರು ಯಾರನ್ನಾದರೂ ಗುರುಗಳನ್ನಾಗಿ ಮಾಡಿಕೊಂಡಿದ್ದರೆ ಬಹುಶಃ ಇವರ ಸ್ಥಿತೀಕರಣ ಸಂಭವವಿತ್ತು. ಅವರ ಪರಿಚೆರ್ಯ ವೈಯಾವೃತ್ತಿ ಸಂಭವವಿತ್ತು. ಅವರು ದೀಕ್ಷೆಯನ್ನು ತ್ಯಜಿಸುವ ಅವಶ್ಯಕತೆ ಇರಲಿಲ್ಲ.

ಈ ಶ್ರಾವಕರು ಭವಾನೀಮಂಡೀಗೆ ಬಂದು ಹೋದ ಮೇಲೆ ಆಚಾರ್ಯರಿಗೆ ಈ ಎಲ್ಲ ವಿಷಯಗಳು ಗೊತ್ತಾಯಿತು. ಅವರು ತಕ್ಷಣವೇ ಕೇಳಿದರು. ಜ್ಞಾನಮತಿ ಅವರು ಸಂಘದಲ್ಲಿ ಇದ್ದಿದ್ದರೆ ಚೆನ್ನಾಗಿತ್ತು ಏಕೆ ಹೊರಟುಹೋದರು ಎಂದರು. ಆಮೇಲೆ ವಿಷಯ ಗೊತ್ತಾದ ಮೇಲೆ ಗುರುಗಳಿಗೆ ನಿಜಕ್ಕೂ ಖೇದವಾಯಿತು ನಂತರ ನಮ್ಮ ಸಂಘವು ಮಹಾವೀರಜೀ ಕಡೆ ಹೊರಟಿತು.

ಚಮತ್ಕಾರಿಯ ದರ್ಶನ

'ಸವಾಈ ಮಾಧೋಪುರ' ಎಂಬ ಒಂದು ಹಳ್ಳಿ ಇದೆ ಅಲ್ಲಿ ಚಮತ್ಕಾರಜೀ ಎಂಬ ಹೆಸರಿನ ಒಂದು ಮಂದಿರ ಪ್ರಸಿದ್ಧವಾಗಿದೆ. ಅಲ್ಲಿ ದರ್ಶನ ಮಾಡಿ ಆ ಹಳ್ಳಿಯಲ್ಲಿಯೇ ಇದ್ದೆವು ಊರಿನ ಉಳಿದ ದೇವಾಲಯಗಳನ್ನು ದರ್ಶನ ಮಾಡಿದೆವು.

ಕ್ಷೇತ್ರ ಪರಿಚಯ

ಇಲ್ಲಿ ಒಂದು ಗದ್ದೆಯಲ್ಲಿ ಭೂಮಿಯ ಒಳಗೆ ವೃಷಭ ತೀರ್ಥಂಕರರ ಮೂರ್ತಿಯು ಇದ್ದು ಒಬ್ಬ ಯೋಗಿಯು ಕನಸಿನಲ್ಲಿ ಬಂದಾಂತಾಗಿ ಅದೇ ಜಾಗದಲ್ಲಿ ತೆಗಿಸಿದಾಗ ಮೂರ್ತಿಯು ದೊರೆತಿದೆ. ಅದರಿಂದಾಗಿ ಈ ಕ್ಷೇತ್ರದ ಹೆಸರೇ ಚಮತ್ಕಾರಿ ಎಂದು ಆಯಿತು. ಮೂರ್ತಿಯನ್ನು ಭೂಮಿಯಿಂದ ತೆಗೆದು ಮೇಲೆ ಛತ್ರಿ ನಿರ್ಮಿಸಿದ್ದಾರೆ. ಸ್ಫಟಿಕದ ಮೂರ್ತಿ ವಿರಾಜಮಾನವಾಗಿದೆ ಜೈನರು ಆ ಜೈನರಾದಿಯಾಗಿ ಹಲವಾರು ಬೇಡಿಕೆಗಳನ್ನು ತಂದು ಪೂಜೆ ಮಾಡಿಸಿ, ತಮ್ಮ ಇಷ್ಟ ಪೂರೈಸಿದ ಮೇಲೆ ಇಲ್ಲಿಯ ನಿರ್ಮಾಣ ಕಾರ್ಯಗಳನ್ನು ಕೈಕೊಂಡಿದ್ದಾರೆ. ಹೀಗೆ ಈ ಕ್ಷೇತ್ರ ಪ್ರಸಿದ್ಧಿಯನ್ನು ಪಡೆಯುತ್ತಿದೆ.

ಆರೋಗ್ಯ ಸರಿ ಇಲ್ಲದಾಗ ಡೋಲಿಯಲ್ಲಿ ಕುಳಿತು ಪ್ರಯಾಣ ಮಾಡಲು ಶಾಸ್ತ್ರದಲ್ಲಿ ಅನುಮತಿ ಇರುವುದರಿಂದ ಸಂಘದಲ್ಲಿ ಅದೇ ಪರಂಪರೆಯು ನಡೆದುಬರುತ್ತಿದೆ.

ಯುಗ್ಯಾದಿಗಮನೆ ಶುದ್ಧಿಂ ದ್ವಿಗುಣಾಂ ಪಥಿ ಶುದ್ಧಿತಃ ।
ಜ್ಞಾತ್ವಾಂ ನೃಜಾತಂ ವಾಚಾರ್ಯೋ ದದ್ಯಾತ್ತದ್ದೋಷ ಘಾತಿನೀ[೧] ॥ 83 ॥

ಡೋಲಿಯಲ್ಲಿ ಪ್ರಯಾಣ ಮಾಡುವ ಮಂದರೋಗಿ ಸಾಧುಗಳಿಗೆ ಆಚಾರ್ಯರು ಅವರ ಸ್ಥಿತಿಗೆ ಅನುಗುಣವಾಗಿ ದೋಷವನ್ನು ದೂರಮಾಡುವ ಸಲುವಾಗಿ ಮಾರ್ಗಶುದ್ಧಿ ಪ್ರಾಯಶ್ಚಿತ್ತವನ್ನು ಕೊಡುತ್ತಾರೆ. ಒಂದು ವೇಳೆ ಮುನಿಗಳಾಗಲಿ ಆರ್ಯಿಕೆಯರಾಗಲಿ ಹುಷಾರಿಲ್ಲದಿದ್ದರೆ ಡೋಲಿಯಲ್ಲಿ ಪ್ರಯಾಣ ಮಾಡುವುದು ಕಳಂಕವೇನಲ್ಲ ಎಂದು ಆಗಮದಲ್ಲಿ ಅದನ್ನು ಸಹಜವೆಂದೇ ಹೇಳಿದೆ.

ಆಚಾರ್ಯರು ಸಂಘದಲ್ಲಿರುವ ಸಾಧುಗಳ ಚರ್ಯೆಯನ್ನು ಗಮನಿಸುತ್ತಾ ಇರುತ್ತಾರೆ. ಯಾವ ಯಾವ ಚರ್ಯೆ ಆಗಮಕ್ಕೆ ಅನುಕೂಲವಾಗಿದೆ ಎನ್ನುವ ಅಂಶ ದೊರೆಯುವುದರಿಂದ ಮೋಕ್ಷಮಾರ್ಗವು ನಿರಾಬಾಧವಾಗಿ ನಡೆಯುತ್ತಿದೆ. ಇಂದು ಪಂಚಮಕಾಲದಲ್ಲಿ ಹೀನ ಸಂಹನನ ಆಗಿರುವುದರಿಂದ ಜಿನಕಲ್ಪಿ ಮುನಿಗಳಾಗುವುದು ಸಾಧ್ಯವಿಲ್ಲ. ಸ್ಥವಿರಕಲ್ಪಿಗಳ ಚರ್ಯೆಯಲ್ಲಿಯು ಅನೇಕ ಸಮಸ್ಯೆಗಳು ಬರುತ್ತವೆ. ಇವುಗಳಿಗೆ ಪರಿಹಾರವನ್ನು

---

೧. ಪ್ರಾಯಶ್ಚಿತ್ತ ಚೂಲಿಕಾ

ಆಗಮ ಮತ್ತು ಗುರು ಪರಂಪರೆಯ ಅನುಸಾರ ಮಾಡಬೇಕಾಗಿದೆ. ಆದರೆ ಕೆಲವು ಮುನಿಗಳು ಏಕಲವಿಹಾರಿ ಸಾಧುಗಳಾಗಿ ತೊಡಕಿನಿಂದ ಅಥವ ಶಿಥಿಲ ಚರ್ಯೆಮಾಡಿ ಮೋಕ್ಷಮಾರ್ಗವನ್ನು ಹಾಳು ಮಾಡುತ್ತಿದ್ದಾರೆ. ಇಲ್ಲಿ ತುಂಬ ಎಳೆದಾಡಿ ಶಾಸ್ತ್ರ ಸ್ವಾಧ್ಯಾಯದ ವಿಶೇಷ ಅಧ್ಯಯನವನ್ನು ಸರಿಯಾಗಿ ಮಾಡದೆ, ಮೋಕ್ಷಮಾರ್ಗವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಮುನಿಗಳು ಚೌಕಕ್ಕೆ ಬಂದ ಮೇಲೆ ಪಾದಪ್ರಕ್ಷಾಲನೆಯ ಸಮಯದಲ್ಲಿ ಮಹಿಳೆಯರು ಕಾಲನ್ನು ಸ್ಪರ್ಶಿಸಿದರೆ ಆಗ ಮುನಿಗಳು ಚೌಕದಿಂದ ಹೊರನಡೆದು ಉಪವಾಸ ಮಾಡಬೇಕು. ಆ ಹೆಂಗಸು ಹೇಳುತ್ತಿದ್ದರು ಇಲ್ಲಿಗೆ ಆಚಾರ್ಯ ಧರ್ಮಸಾಗರರ ಸಂಘ ಬಂದಿತ್ತು. ಆ ಮುನಿಗಳ ಕಾಲುಗಳನ್ನು ಸ್ಪರ್ಶಿಸಿ ನಾನು ಕಾಲುಗಳನ್ನು ತೊಳೆದೆ. ಆ ಮುನಿಗಳು ಆಚಾರ್ಯ ಸಂಘದ ನಿಂದನೆಯನ್ನು ಅವರನ್ನೆ ಚಾರಿತ್ರ ಹೀನರೆಂದು ಕರೆಯತೊಡಗಿದರು, ಅಲ್ಲದೆ ಅವರು ಆಗಮಜ್ಞಾನದಿಂದ ವಿಮುಖರಾಗಿದ್ದರು. ಅವರ ಚರ್ಯೆ ಬಾಧಿತವಾಗಿತ್ತು. ಈಗಂತೂ ಅವರು ಸೋನಗಢಿ -ಕಹಾನಪಂಥಿಗಳಾಗಿದ್ದಾರೆ ಸಂಘ ವಿಹಾರ ಮಾಡುತ್ತಾ ಮಹಾವೀರಕ್ಷೇತ್ರವನ್ನು ತಲುಪಿತು. ನಾವೆಲ್ಲ ಅತಿಶಯವನ್ನು ಪಡೆದಿರುವ ಸ್ವಾಮಿಯ ದರ್ಶನ ಮಾಡಿದೆವು.

೫೫೫

ಅತಿಶಯ ಕ್ಷೇತ್ರ ಮಹಾವೀರಜೀಯ ದರ್ಶನ

ನಾವೆಲ್ಲ ಇಲ್ಲಿ ಮಹಾವೀರಸ್ವಾಮಿಯ ಮಂದಿರ ಕೆಳಗಿನ ಧರ್ಮಶಾಲೆಯಲ್ಲೇ ತಂಗಿದ್ದೆವು. ಇಲ್ಲಿ ದರ್ಶನವಾದ ಮೇಲೆ ಶಾಂತಿವೀರನಗರದ ಮಂದಿರದ ದರ್ಶನ ಮಾಡಿ ಕಮಲಾಬಾಯಿ ಆದರ್ಶ ವಿದ್ಯಾಲಯದಲ್ಲಿರುವ ಜಿನಮಂದಿರದ ದರ್ಶನ ಮಾಡಿ ಬ್ರ. ಕೃಷ್ಣಾಬಾಯಿ ಮುಮುಕ್ಷು ಮಹಿಳಾಶ್ರಮದ ಮಂದಿರವನ್ನು ದರ್ಶನ ಮಾಡಿದೆವು.

ಕ್ಷೇತ್ರ ಪರಿಚಯ

ಚಂದನಪುರ ಹಳ್ಳಿಯ ಹತ್ತಿರದಲ್ಲಿ ಈ ಮಂದಿರವಿದೆ. ಬಹಳ ಹಿಂದೆ ಒಂದು ಹಸು ಗುಡ್ಡದ ಮೇಲೆ ಹೋಗಿ ನಿಂತುಕೊಳ್ಳುತ್ತಲೆ ಅದರ ಕೆಚ್ಚಲುಗಳಿಂದ ತನ್ನಿಂದ ತಾನೇ ಹಾಲು ಸುರಿಯುತ್ತಿತ್ತಂತೆ. ಇದನ್ನು ಗೊಲ್ಲ ಅವಿತುಕೊಂಡು ಗಮನಿಸಿ, ನಂತರ ಆ ಗುಡ್ಡವನ್ನು ಅಗೆಯಲಾಗಿ ಅಲ್ಲಿ ಭ. ಮಹಾವೀರರ ಮೂರ್ತಿ ದೊರಕಿತು ಮಹಾವೀರರ ಮೂರ್ತಿ ದೊರೆತ ಸುದ್ದಿ ತಿಳಿಯುತ್ತಿದ್ದಂತೆ (ಎಲ್ಲ ಕಡೆ) ಸುತ್ತಮುತ್ತಲಿನ ಜೈನರೆಲ್ಲ ಬಂದು ಮೂರ್ತಿಗೆ ಮಂದಿರವನ್ನು ಕಟ್ಟಿಸಿ, ಮೂರ್ತಿಯ ಸ್ಥಾಪನೆ ಮಾಡಿದರು ಮತ್ತು ಮೂರ್ತಿ ಸಿಕ್ಕಿದ ಜಾಗದಲ್ಲಿ ಚರಣಗಳನ್ನು ಸ್ಥಾಪಿಸಿ ಮೇಲೆ ಛತ್ರಿಯನ್ನು ನಿರ್ಮಿಸಲಾಗಿದೆ.

ಇಂದು ಈ ಕ್ಷೇತ್ರಕ್ಕೆ ಅಜೈನರಾದಿಯಾಗಿ ದರ್ಶನಕ್ಕೆ ಬರುತ್ತಾರೆ. ಮೀನಾಗೂಜರ ಜನರು ಕೂಡ ತಮ್ಮ ಆರಾಧ್ಯದೇವರೆಂದು ತಿಳಿದಿದ್ದಾರೆ. ಈ ಸ್ಥಾನ ಆಮೇರಗದ್ದೆಯ ಮೂಲ ಸಂಘ ಆಮ್ನಾಯ ಜೈನ ಭಟ್ಟಾರಕರ ಕೇಂದ್ರವಾಗಿದೆ. ಇಂದು ಈ ಕ್ಷೇತ್ರ ವೈಭವವಾಗಿ ಮೆರೆಯುತ್ತಿರುವುದಕ್ಕೆ ಸಮಸ್ತ ಜೈನ ಬಂಧುಗಳ ಶ್ರದ್ಧೆಯೇ ಕಾರಣ. ಇಲ್ಲಿ ಒಂದು ದೊಡ್ಡದಾದ ಬಸದಿಯು ಇದೆ. ಆಶ್ರಮದಲ್ಲಿ ಎರಡು ಮಂದಿರಗಳಿವೆ ಶಾಂತಿವೀರನಗರದಲ್ಲಿ ಒಂದು ವಿಶಾಲಕಾಯದ 28 ಅಡಿ ಎತ್ತರದ ಖಡ್ಗಾಸನದ ಶಾಂತಿನಾಥ ಪ್ರತಿಮೆಗೆ ಪಂಚಕಲ್ಯಾಣವಾಗಬೇಕಾಗಿತ್ತು. ಈ ಕ್ಷೇತ್ರದಲ್ಲಿ ಆರು ಧರ್ಮಶಾಲೆಗಳಿವೆ. ಔಷಧಾಲಯ ಮುಂತಾದ ಸೇವಾಸಂಸ್ಥೆಗಳು ಇವೆ. ಇಲ್ಲಿ ಶ್ರೀಲಾಲಜಿ

ಕಾವ್ಯ ತೀರ್ಥರು ಒಂದು ಪ್ರಿಂಟಿಂಗ್ ಪ್ರೆಸ್ ಇಟ್ಟುಕೊಂಡು ಹಲವಾರು ವರ್ಷಗಳ ವರೆಗೆ ಜೈನಗ್ರಂಥಗಳನ್ನು ಮುದ್ರಿಸುತ್ತಿದ್ದರು.

ಮಧ್ಯಲೋಕ ಚೈತ್ಯಾಲಯದ ರೂಪರೇಖೆ

ಆಚಾರ್ಯ ಶಿವಸಾಗರರು ಒಂದು ದಿನ ನನಗೆ ಹೇಳಿದರು. ಮಾತಾಜಿ ಪಂಚಕಲ್ಯಾಣದ ಪ್ರತಿಷ್ಠೆಗಾಗಿ ವೇದಿಕೆ ಪೆಂಡಾಲಿನ ಸಿದ್ಧತೆ ನಡೆಯುತ್ತಿದೆ. ತಾವು ಅಲ್ಲಿ ಮಧ್ಯಲೋಕ ಚೈತ್ಯಾಲಯದ ರಚನೆಯನ್ನು ಮಾಡಿರಿ. ಜಾಗವು ವಿಸ್ತೃತವಾಗಿದೆ. ವಿಸ್ತಾರದಲ್ಲಿ ಕಡಿಮೆ ಆಗಬಹುದು. ಅಲ್ಲದೆ ನನಗೆ ಇಲ್ಲೇ ಸ್ವಲ್ಪ ದಿನ ಇರಬೇಕೆಂದು ಅನ್ನಿಸುತ್ತಿದೆ. ಇಲ್ಲಿಯ ಮೂಲೆಯ ಕೊಠಡಿ ಗುಹೆಯಂತೆಯೆ ಇದೆ. ಅದರಲ್ಲಿ ನಾನು ಇರುತ್ತೇನೆ. ಅದರ ಪಕ್ಕದಲ್ಲಿ ಶೃತಸಾಗರರು ಇರುತ್ತಾರೆ. ಸ್ವಲ್ಪ ಹೊತ್ತಾದ ಮೇಲೆ ಪುನಃ ಹೇಳತೊಡಗಿದರು. ನಾನು ಆಚಾರ್ಯರಾಗಿ ಹನ್ನೆರಡು ವರ್ಷಗಳು ಕಳೆದವು ಹನ್ನೆರಡು ವರ್ಷದಿಂದಲೂ ದಿನವೂ ಏರುತ್ತಿದ್ದ ಸೂರ್ಯ ೧೨ ಗಂಟೆ ನಂತರ ಇಳಿಯುತ್ತಾನೆ. ಹಾಗೆಯೇ ಹನ್ನೆರಡು ವರ್ಷ ಮೇಲೆರಿದ ನಾನು ಈಗ ಕೆಳಗಿಳಿಯುತ್ತಿದ್ದೇನೆ. ಆಚಾರ್ಯರ ಬಾಯಿಯಿಂದ ಈ ಮಾತುಗಳು ಏಕೆ ಬಂದವೋ ಗೊತ್ತಿಲ್ಲ. ಈ ಮಾತನ್ನಂತೂ ಸಾಧುಗಳ ಮುಂದೆಯು ಹಲವಾರು ಬಾರಿ ಹೇಳಿದ್ದರು.

ಫಾಲ್ಗುಣ ಶುಕ್ಲ ಷಷ್ಮಿಯಿಂದ ದಶಮಿಯವರೆಗೆ ಪಂಚಕಲ್ಯಾಣದ ಮಹೂರ್ತವಿಟ್ಟಿದ್ದರು. ಒಬ್ಬ ಪ್ರತಿಷ್ಠಾಚಾರ್ಯರು ಸಂಘದ ಒಬ್ಬ ಮಾತಾಜೀಯ ಹತ್ತಿರ ಈ ಮಹೂರ್ತವು ಪ್ರಮುಖ ವ್ಯಕ್ತಿಗಳಿಗೆ ಹಾನಿಯಾಗಿದೆ ಎಂಬ ಸೂಚನೆಯನ್ನು ಕಳುಹಿಸಿದರು. ಆದರೆ ಜೈನಶಾಸ್ತ್ರಾನುಸಾರ ಹೋಲಾಷ್ಟಕ (ಫಾಲ್ಗುಣ ಶುಕ್ಲ ಅಷ್ಟಮಿಯಿಂದ ಪೌರ್ಣಿಮೆಯವರೆಗೆ ಹೋಲಾಷ್ಟಕ ಎಂದು ಕರೆಯುತ್ತಾರೆ.) ದಲ್ಲಿ ಯಾವುದೇ ಉಲ್ಲೇಖವಿಲ್ಲ. ಬಾವನಗಜದಲ್ಲಿ ಹೋಲಾಷ್ಟಕದಲ್ಲಿ ಪ್ರತಿಷ್ಠೆ ಇತ್ತು. ಆಗ ಆಚಾರ್ಯ ಕಲ್ಪಶ್ರೀ ಚಂದ್ರಸಾಗರ ಮಹಾರಾಜರು ಹೋಗಿದ್ದರು ಹಾಗೇ ಸಮಾಧಿಯು ಆಗಿಹೋದರು. ಏನಾದರು ಆಗಲಿ 1985ರ ಪ್ರತಿಷ್ಠೆಯನ್ನು ಮೊದಲು ಫಾಲ್ಗುಣ ಶುಕ್ಲ ಅಷ್ಟಮಿಯ ತನಕ ಮುಹೂರ್ತವಿತ್ತು. ಆಚಾರ್ಯ ಧರ್ಮಸಾಗರರು ಮನಸ್ಸಿಗೆ ಅಳುಕಾಗಿ ಅವರು ಮುನಿಶ್ರೀ ಶ್ರುತಸಾಗರರ ಅಜ್ಞಾನುಸಾರ ವೈಶಾಖಕ್ಕೆ ಮುಂದೂಡಿದರು. ಅದರ ನಂತರ ನಾನು ಆಷಾಢದಿಂದ ಮುಂದಿನ ಚೈತ್ರಮಾಸದವರಗೆ ಖಾಯಿಲೆ ಬಿದ್ದೆ. ಕೊನೆಗೆ 1987ರಲ್ಲಿ ಆಚಾರ್ಯ ವಿಮಲಸಾಗರರ ಆಜ್ಞೆಯಂತೇ ಪಾಲ್ಗುಣ ಶುಕ್ಲ ಸಪ್ತಮಿಯಿಂದ ಏಕಾದಶಿಯವರೆಗೆ ಇಡಿಸಿದರು. ಆಚಾರ್ಯರಿಗೆ ಹೋಲಾಷ್ಟಕವನ್ನು ಪರಿಗಣಿಸುತ್ತಿರಲಿಲ್ಲ. ಕುಂಭೋಜದಲ್ಲಿಯು ಫಾಲ್ಗುಣದ ಅಷ್ಟಾಹ್ನಿಕದಲ್ಲಿಯೇ ಪ್ರತಿಷ್ಠೆ ಆಗಿತ್ತು. ಈ ವಿಷಯದಲ್ಲಿ ನನಗೇನು ವಿಶೇಷವಾದ ಜ್ಞಾನವಿರಲಿಲ್ಲ.

ಪಂಚ ಕಲ್ಯಾಣದ ಪ್ರತಿಷ್ಠೆ

ಆಚಾರ್ಯರ ಸಂಘ ಬಂದ ಮೇಲೆ ಭ ಶಾಂತಿನಾಥಸ್ವಾಮಿಯ ಪಂಚಕಲ್ಯಾಣದ ತಯಾರಿಯು ಜೋರಾಗಿ ಆಗತೊಡಗಿತು. ಪ್ರತಿಷ್ಠೆಯ ಮುಹೂರ್ತವು ಫಾಲ್ಗುಣದ ಅಷ್ಟಾಹ್ನಿಕದಲ್ಲೆ ಆಗಿತ್ತು.

ಧ್ವಜಾರೋಹಣ

ಮಾಘಮಾಸದ ಶುಕ್ಲಪಕ್ಷದ 15ನೇಯ ದಿನ ಸಂಘದ ಸಾನಿಧ್ಯದಲ್ಲಿ ಪ್ರತಿಷ್ಠೆಗಾಗಿ ಧ್ವಜಾರೋಹಣ

ಮಾಡಲಾಯಿತು. ಧ್ವಜವು ವಿರುದ್ಧ ದಿಕ್ಕಿನಲ್ಲಿ ಹಾರಾಡುತ್ತಿತ್ತು. ಇದನ್ನು ಗಮನಿಸಿದ ಶ್ರೇಯಾಂಸಾಗರ ಮೊದಲಾದ ಮುನಿಗಳು ತಮ್ಮ ತಮ್ಮಲ್ಲೇ ಗುಜು ಗುಜು ಮಾಡಲಾರಾಂಭಿಸಿದ್ದಾರೆ ಎಂದು ವಿಶುದ್ಧಮತಿಯು ನನ್ನ ಹತ್ತಿರ ನನಗೇನೋ ಇದು ಅಶುಭ ಎನ್ನಿಸುತ್ತಿದೆ. ಏನಾದರು ಉಪಾಯ ಯೋಚಿಸಬೇಕೆಂದರು. ನಾನು ಬ್ರಹ್ಮಚಾರಿ ಸೂರಜಮಲ್ಲರಿಗೆ ಬಾಬಾಜಿ ಏನಾದರು ಶಾಂತಿ ವಿಧಾನವನ್ನು ಮಾಡಿರಿ ಎಂದೆ. ಏನಾದರು ಆಗುವುದಿದ್ದರೆ ಹಾಗೇ ಆಗುತ್ತದೆ ತಡೆಯಲಾಗುವುದಿಲ್ಲ. ಅದೇ ಸಾಯಂಕಾಲ ಪ್ರತಿಕ್ರಮಣದ ಸಮಯದಲ್ಲಿ ಶಿವಸಾಗರರಿಗೂ ವೀರಮತಿ ಮಾತಾಜೀಗೂ ಸ್ವಲ್ಪ ಮಾತಿಗೆ ಇಬ್ಬರಿಗೂ ಮನಸ್ತಾಪವಾಯಿತು.

ಎರಡು ಸಂಘಗಳ ದೊಡ್ಡವರಲ್ಲಿ ಉಂಟಾದ ಉಗ್ರತೆಯನ್ನು ಯಾರೂ ತಡೆಯಲು ಸಾಧ್ಯವಿಲ್ಲ. ಸ್ವಲ್ಪ ಹೊತ್ತಿನ ನಂತರ ಭಿನ್ನಾಭಿಪ್ರಾಯ ಶಾಂತವಾಯಿತು. ಮಾಮೂಲಿಯಂತೆ ದೈನಿಕ ಪ್ರತಿಕ್ರಮಣವಾಯಿತು. ನಾವೆಲ್ಲರು ನಮ್ಮ ನಮ್ಮ ಸ್ಥಾನಕ್ಕೆ ಬಂದು ಕುಳಿತೆವು. ಈ ಅಶಾಂತಿಯು ಕೆಲವು ತ್ಯಾಗಿಗಳ ಮನಸ್ಸಿನಲ್ಲಿ ಪ್ರತಿಷ್ಠೆಯ ಗಳಿಗೆಯಿಂದಲೇ ಈ ಅಶುಭ ಭಾಸವಾಗುತ್ತಿದೆ ಎನ್ನಿಸಿತು. ವಿಷಾದದ ಛಾಯೆ ಎಳೆದಂತೆ ಕಾಣಿಸಿತು. ಸಂಘದ ವಾತಾವರಣವೇ ಉದಾಸವಾಗಿ ಕಾಣತೊಡಗಿತು.

ಆಚಾರ್ಯರ ಅಸ್ವಸ್ಥತೆ

ಆಚಾರ್ಯರಿಗೆ ಅಷ್ಟಮಿಯ ದಿನ ಜ್ವರದ ಹೊತ್ತು ಮೋತಿಚಂದನಿಂದ ವೈಯಾವೃತ್ತಿ ಮಾಡಿಸಿಕೊಂಡಿದ್ದಾರೆ. ಎಣ್ಣೆಯಿಂದ ಮಾಲಿಶ್ ಮಾಡಿಸಿಕೊಂಡರು ಅವರು ಇದೇ ಮೊದಲು ಶರೀರಕ್ಕೆ ಎಣ್ಣೆ ಹಚ್ಚಿಸಿಕೊಂಡಿದ್ದು. ಮೋತಿಚಂದನ ಹತ್ತಿರ ಹೇಳಿಕೊಂಡರಂತೆ ಮೋತಿಚಂದ ನೋಡು ಏಕೋ ಗೊತ್ತಿಲ್ಲ ನನಗೆ ಇಷ್ಟೊಂದು ಸುಸ್ತು ಆಗಿರಲಿಲ್ಲ ಕೈಕಾಲುಗಳಲ್ಲಿ ಎಷ್ಟೊಂದು ನೋವು ಆಗುತ್ತಿದೆ. ದಿನದಿಂದ ದಿನಕ್ಕೆ ಶರೀರ ಬೀಳುವಂತೆ ಆಗುತ್ತಿದೆ ಎಂದರು. ಮೋತಿಚಂದನು ಬಂದು ಹೇಳಿದಾಗ ನನಗೆ ಮನಸ್ಸಿಗೆ ಬಹಳ ಯೋಚನೆಯಾಯಿತು. ಏನು ಮಾಡುವುದು ನನಗೂ ಹೊಳೆಯಲಿಲ್ಲ, ಆಚಾರ್ಯರಿಗೆ ಆಹಾರ ತೆಗೆದುಕೊಳ್ಳುವುದರಲ್ಲೂ ಗಂಟಲಲ್ಲಿ ತೊಂದರೆ ಆಗ ತೊಡಗಿತು. ಸಾಧಾರಣವಾದ ಔಷಧಿ ಕೊಟ್ಟರು. ವೈದ್ಯರು ಮುನಿಶ್ರೀ ಶ್ರುತಸಾಗರರು ಮೊದಲಾದವರನ್ನು ಏಕಾಂತದಲ್ಲಿ ಕರೆದು ಸಂಶಯ ವ್ಯಕ್ತಪಡಿಸಿದರು. ಹಾಗೆ ಹೀಗೆ ಮಾತಾಡಿ ಕೆಲವು ಶ್ರಾವಕರು ಆಚಾರ್ಯರಿಗೆ ಮಹಾರಾಜಜೀ ತಾವು ಅಷ್ಟು ದೂರ ಪೆಂಡಾಲಿಗೆ ಬರಲಾರಿರಿ, ದೀಕ್ಷೆ ಯಾರು ಕೊಡುತ್ತಾರೆ. ಆಚಾರ್ಯರು ಇಲ್ಲ ಇಲ್ಲ ನಾನು ಹುಷಾರಾಗುತ್ತೇನೆ ನಾನು ಬರುತ್ತೇನೆ ಎಂದರು.

ದೀಕ್ಷೆಗಾಗಿ ಪ್ರಾರ್ಥನೆ

ಕೆಲವು ದಿನಗಳ ಮೊದಲು ಆಚಾರ್ಯರ ಮುಂದಕ್ಕೆ ಕೆಲವು ಶಿಷ್ಯ, ಶಿಷ್ಯೆಯರಿಗೆ ದೀಕ್ಷೆ ಕೊಡಿಸುವಸಲುವಾಗಿ ಕರೆದುಕೊಂಡು ಹೋಗಿದ್ದೆ ಕ್ಷುಲ್ಲಕ ಅಭಯಮತಿಗೆ ಆರ್ಯಿಕೆ ದೀಕ್ಷೆ, ಸಂಭವಸಾಗರರಿಗೆ ಮುನಿದೀಕ್ಷೆ, ಯಶವಂತನಿಗೆ ಮುನಿ ದೀಕ್ಷೆ , ಗೇಂದೀಬಾಯಿಗೆ ಕ್ಷುಲ್ಲಕ ದೀಕ್ಷೆ, ಬ್ರ. ಅಶ್ರಫಿಬಾಯಿ, ಬ್ರ. ವಿದ್ಯಾಬಾಯಿ ಆರ್ಯಿಕೆ ದೀಕ್ಷೆ ತೆಗೆದುಕೊಳ್ಳಲು ಸಿದ್ಧರಿದ್ದರು.

ಆಚಾರ್ಯರು ಎಲ್ಲರಿಗೂ ದೀಕ್ಷೆ ಕೊಡಲು ಸಮ್ಮತಿಸಿ ಅತೀವ ವಾತ್ಸಲ್ಯದಿಂದ ನನ್ನ ಕಡೆ ನೋಡುತ್ತಾ ಖುಷಿಯಲ್ಲಿ ಹೇಳಿದರು. ಮಾತಾಜೀ ಮೋತಿಚಂದರಿಗೂ ದೀಕ್ಷೆಕೊಟ್ಟು ಬಿಡಿ ಅವರು ಒಳ್ಳೆ ಯೋಗ್ಯರಿದ್ದಾರೆ

ಎಂದರು. ಅದಕ್ಕೆ ನಾನು ಮಹಾರಾಜರೇ ಅವರಿಗೆ ತುಂಬ ಪ್ರೇರಣೆಕೊಟ್ಟರು ಈಗಲೆ ಅವರು ಸಿದ್ಧವಾಗಿಲ್ಲ ಎಂದೆ. ದೀಕ್ಷಾರ್ಥಿಗಳನ್ನು ಸಿದ್ಧಗೊಳಿಸುವುದು ನಿನ್ನ ಕೆಲಸ, ದೀಕ್ಷೆ ಕೊಡುವುದು ನನ್ನ ಕೆಲಸ ಎಂದರು. ಯಾರಿಗೆ ಗೊತ್ತು ಭವಿಷ್ಯದಲ್ಲಿ ಏನಾಗುತ್ತದೆ ಎಂದು.

ಸಾಧುಗಳ ಊಹಾಪೋಹ

ನಮಗೆಲ್ಲ ಆತಂಕವಾಗತೊಡಗಿತು ಆಚಾರ್ಯರು ಹೇಗೆ ಗುಣಹೊಂದುತ್ತಾರೆ ಅದಕ್ಕೆ ನಾವೇನು ಮಾಡಬೇಕು. ನನಗೆ ಕಲಕತ್ತೆಗೆ ಫೋನು ಮಾಡಿಸಿ ವೈದ್ಯರಾಜ ಕೇಶವದೇವರನ್ನು ಕರೆಸಬೇಕೆಂದು. ಮನಸ್ಸು ಹೈದರಾಬಾದಿಗೆ ಬಂದು ನನಗೆ ಚಿಕಿತ್ಸೆ ಮಾಡಿದ್ದರು. ಶ್ರವಣಬೆಳಗೊಳಕ್ಕೆ ಬಂದು ಆದಿಮತಿ ಮತ್ತು ಅಭಯಮತಿಯವರಿಗೂ ಚಿಕಿತ್ಸೆ ಮಾಡಿದ್ದರು. ಆದರೆ ಯಾರು ನನ್ನ ಮಾತಿಗೆ ಕಿವಿಗೊಡಲಿಲ್ಲ. ನಿಜವಾಗಿ ವೈದ್ಯರು ಅದೃಷ್ಟವು ಅಲ್ಲ ಭಗವಂತರು ಅಲ್ಲ ನನ್ನ ಚಡಪಡಿಕೆಯನ್ನೂ ನೋಡಿದ ಮೋತಿಚಂದರು ಮಾತಾಜೀ ನನಗೆ ಏನಾದರು ಆಜ್ಞೆ ಕೊಡಿ ನಾನು ಮಾಡಲು ಸಿದ್ಧನಿದ್ದೇನೆ ಎಂದೆ. ಅದಕ್ಕೆ ನಾನು ಕಲಕತ್ತೆಗೆ ಫೋನು ಮಾಡು ಎಂದೆ. ಆಚಾರ್ಯರ ಸ್ಥಿತಿ ತುಂಬ ಸೂಕ್ಷ್ಮವಾಗತೊಡಗಿತು. ನನಗಂತೂ ಕಲಕತ್ತೆಗೆ ಫೋನಿನಲ್ಲಿ ವಿಷಯ ತಿಳಿದು ವೈದ್ಯರು ಇಲ್ಲಿಗೆ ಯಾವಾಗ ಬರುತ್ತಾರೋ ಚಿಕಿತ್ಸೆ ಯಾವಾಗ ಪ್ರಾರಂಭವಾಗಿ ಅವರಿಗೆ ಔಷಧಿ ಕೊಡಲ್ಪಡುತ್ತದೊ ಎಂದು ಚಿಂತಿಸುತ್ತಿದ್ದೆ. ಆದರೆ ಫಾಲ್ಗುಣ ಕೃಷ್ಣ ಅಮಾವಾಸ್ಯೆಯ ದಿನ ತನ್ನ ಪ್ರಭಾವವನ್ನು ತೋರಿಯೇಬಿಟ್ಟಿತು.

ಆಚಾರ್ಯ ಶಿವಸಾಗರರ ಸಮಾಧಿ

ಮಧ್ಯಾಹ್ನ ಸಾಮಾಯಿಕವಾದ ಮೇಲೆ ಲಘು ಶಂಖನಿರ್ಹರ ಎದ್ದರು. ಮಧ್ಯದಲ್ಲೇ ಗಡಿಬಿಡಿಯಾಗಿ ಅಲ್ಲೇ ಆಗಿ ಹೋಯಿತು. ಇದನ್ನು ಕಂಡು ಆಚಾರ್ಯರಿಗೆ ಬಹಳ ಖೇದವಾಯಿತು. ಮೌನವಾಗೇ ಖೇದವನ್ನು ವ್ಯಕ್ತಪಡಿಸಿದರು. ಶುದ್ಧಿ ಮಾಡಿಕೊಂಡು ಬಂದು ಕುಳಿತರು. ಆರ್ಯಿಕ ವಿಶುದ್ಧಮತೀ ಮೊದಲಾದವರು ಅವರ ಹತ್ತಿರವೇ ಇದ್ದರು. ಸುದ್ಧಿ ತಿಳಿದ ನಾನು ಮೇಲಕ್ಕೆ ಹೋದೆ. ಸ್ವಲ್ಪ ಹೊತ್ತು ಆದ ಮೇಲೆ ಆಚಾರ್ಯರು ಧ್ಯಾನಮುದ್ರೆಯಲ್ಲಿ ಕುಳಿತರು. ನಾವೆಲ್ಲ ಮಹಾಮಂತ್ರವನ್ನು ಉಚ್ಚರಿಸತೊಡಗಿದೆವು. ಆಚಾರ್ಯರ ದೇಹ ನಶ್ವರ ಶರೀರವನ್ನು ಬಿಟ್ಟು ದಿವ್ಯ ವೈಕ್ರಿಯಿಕ ಶರೀರವನ್ನು ಪಡೆದುಕೊಂಡಿತು. ಇದ್ದಕ್ಕಿದ್ದಂತೆ ಹಾಹಾಕಾರ ಶುರುವಾಯಿತು. ಎಲ್ಲರ ಹೃದಯಕ್ಕೂ ವಜ್ರಾಘಾತವಾಯಿತು. ಕರೆಂಟು ಹೊಡೆದಂತೆ ಈ ಸುದ್ಧಿ ಎಲ್ಲ ಕಡೆಗೂ ಹರಡಿತು. ಜಯಪುರಕ್ಕೂ ಫೋನಿನಿಂದ ಸುದ್ಧಿ ಹೋಯಿತು. ಅದೇ ದಿನ ಸಂಜೆ 5 ಗಂಟೆಗೆ ಶಾಂತಿವೀರ ನಗರದಲ್ಲಿ ಆಚಾರ್ಯರ ಪಾರ್ಥಿವ ಶರೀರಕ್ಕೆ ಅಂತಿಮ ಸಂಸ್ಕಾರ ನಡೆಯಿತು.

ಮುನಿಶ್ರೀ ಧರ್ಮಸಾಗರರ ಸಂಘ

ಮುನಿಶ್ರೀ ಧರ್ಮ ಸಾಗರರು 1958ರಲ್ಲಿ ಬ್ಯಾವರದಿಂದ ಬೇರೆಯಾಗಿ ವಿಹಾರ (ಮಾಡಿಕೊಂಡು) ಹೋಗಿದ್ದರು. ಈ ಪ್ರತಿಷ್ಠಾಪನೆಯಲ್ಲಿ ಭಾಗವಹಿಸಲು ಸಂಘ ಸಹಿತ ಬಂದಿದ್ದರು. ಅವರು ಈ ಸಮಯದಲ್ಲಿ ಇಲ್ಲೇ ಇದ್ದರು. ಆದಾಗ್ಯೂ ಮುನಿ ಆರ್ಯಿಕೆ ಎಲ್ಲ ಸಾಧುಗಳು ಶೋಕವನ್ನು ವ್ಯಕ್ತಪಡಿಸುವಂತಿಲ್ಲ. ನಾವೇ

ಶ್ರಾವಕರಿಗೆ ಇಷ್ಟವಿಯೋಗ ಮರಣ ಮುಂತಾದ ಸಂದರ್ಭಗಳಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಹೇಳುತ್ತೀರುತ್ತೇವೆ ಅಳುವನ್ನು ತಡೆದುಕೊಂಡೆವು.

ದುಃಖಶೋಕತಾಪಾಕ್ರಂದನವಧ ಪರಿದೇವನಾನ್ಯಾತ್ಮಪರೋಭಯಸ್ಥಾನಾನ್ಯಸದ್ವೇದ್ಯಸ್ಯ ।

ದುಃಖಿಪಡುವುದು, ಶೋಕಪಡುವುದು, ಪಶ್ಚಾತ್ತಾಪಪಡುವುದು ಕರುಣಕ್ರಂದನ ಮಾಡುವುದು ಅಳುವುದು ವಧೆಮಾಡುವುದು ಹೀಗೆ ಅಳುವುದು ಬೇರೆಯವರನ್ನು ಅಳಿಸುವುದು ಹೀಗೆ ಸ್ವಯಂ ಅಳುವುದು. ಬೇರೆಯವರಲ್ಲೂ ದುಃಖ ಉತ್ಪನ್ನ ಮಾಡುವುದು ಅಥವ ಸ್ವಯಂದುಃಖಿಪಡುವುದು ಬೇರೆಯವರಿಗೆ ದುಃಖ ಉಂಟುಮಾಡುವುದರಿಂದ ಅಸಾತಾವೇದನೀಯ ಕರ್ಮದ ಆಸ್ರವವಾಗುತ್ತದೆ.

ಎರಡನೆಯದೆಂದರೆ ಮೃತ್ಯುವಿನ ಮುಂದೆ ಯಾರ ಆಟವು ನಡೆಯುವುದಿಲ್ಲ. ಅಲಂಘ್ಯಶಕ್ತಿ ರ್ಭವಿತವ್ಯತೇಯಂ ಭವಿತವ್ಯತಾ ಅಂದರೆ ಆಗುವುದು ಅಲಂಘ್ಯವಾದುದು ತಳ್ಳಿದರೂ ತಳ್ಳಲಾಗದು. ಇದೆಲ್ಲವನ್ನು ತಿಳಿದು ಸಹ ಸಂಘದ ಎಲ್ಲಾ ಸಾಧುಗಳು ತಮ್ಮನ್ನು ತಾವೇ ಮರೆತು ಎಲ್ಲರು ಅಳತೊಡಗಿದರು. ಬಹುಶಃ ಒಂದಿಬ್ಬರು ಕಣ್ಣಲ್ಲಿ ನೀರನ್ನು ತಂದುಕೊಳ್ಳದೆ, ಅಂತಃಕರಣದಲ್ಲಿ ಶೋಕವನ್ನು ಬಚ್ಚಿಟ್ಟುಕೊಂಡರು. ಹೀಗೆ ಅಕಸ್ಮಾತ್ತಾಗಿ ಸಮಾಧಿಯಾಗಿದ್ದು ಪ್ರತಿಷ್ಠೆಗೆ ಕೇವಲ 6 ದಿನಗಳು ಮಾತ್ರ ಉಳಿದಿತ್ತು.

ಆಚಾರ್ಯರಾಗುವ ಸಮಯದಲ್ಲಿ ಅವರುಗಳ ಮನದಲ್ಲಿ ಸಾಧು ಸಾಧ್ವಿಯರ ಮನವನ್ನು ಅರಿತು, ವಾತ್ಸಲ್ಯವನ್ನು ತೋರಿಸುವಂತವರು ಗುರುಗಳಾಗಬಲ್ಲರು ಮಹಾರಾಜರ ಅನುಶಾಸನದಲ್ಲಿ ಕಠಿಣತೆಯು ಇತ್ತು. ಮತ್ತು ತಾಯಿಯಂತೆ ಮಾತೃ ವಾತ್ಸಲ್ಯವನ್ನು ತೋರಿಸುತ್ತಿದ್ದರು. ಇದರಿಂದಾಗಿ ಪ್ರತಿಯೊಬ್ಬರಿಗೂ ಅವರು ಹಿತೈಶಿ ಎನ್ನಿಸಿಕೊಂಡಿದ್ದರು. ಇದೇ ಕಾರಣದಿಂದಾಗಿಯೇ ಅವರನ್ನು ಕಳೆದುಕೊಂಡ ಎಲ್ಲರು ದುಃಖಿತರಾದರು.

ಆಚಾರ್ಯ ಪಟ್ಟದ ಚರ್ಚೆ

ಈಗ ಸಂಘದಲ್ಲಿ ಯೋಗ್ಯ ಸಂಚಾಲಕರಾಗಿದ್ದವರು ಶ್ರೀ ಶ್ರುತಸಾಗರರು. ಚತುರ್ವಿಧ ಸಂಘದವರು ಅವರನ್ನೆ ಆಚಾರ್ಯರನ್ನಾಗಿ ಮಾಡಬೇಕೆಂಬ ವಿಷಯವನ್ನು ಮಾತಾನಾಡುತ್ತಿದ್ದರು. ಇದರ ಮಧ್ಯೆ ಧರ್ಮಸಾಗರರು ನಾಲ್ಕು ಮುನಿವರ್ಯರ ಜೊತೆ ಅಲ್ಲಿಯೇ ಇದ್ದರು. ಅಲ್ಲದೆ ಆಚಾರ್ಯ ವೀರಸಾಗರರ ಎರಡನೆಯ ಶಿಷ್ಯರಾಗಿದ್ದರು. ಅವರ ಸಂಘದ ಮುನಿಗಳಾದ ನಿರ್ಮಲಸಾಗರರು ಸಂಯಮ ಸಾಗರರು ಹಾಗೂ ದಯಾಸಾಗರರ ಮಧ್ಯೆಯು ಚರ್ಚೆ ನಡೆಯಿತು. ಹಿರಿತನದ ಆಧಾರದ ಮೇಲೆ ನೋಡುವುದಾದರೆ ಧರ್ಮಸಾಗರರೇ ಮೊದಲು ಶ್ರುತಸಾಗರರು ಎರಡನೆಯವರಾಗುತ್ತಾರೆ. ಇವರಿಗೆ ಪಟ್ಟಕಟ್ಟಿದರೆ ಅವರು ಮುಂದಕ್ಕೆ ವಿಹಾರ ಮಾಡಬಹುದು. ಹೀಗಾಗಿ ಸಂಘದಲ್ಲಿದ ಮುನಿಗಳು ಆರ್ಯಿಕೆಯರು ಬ್ರಹ್ಮಚಾರಿಗಳು ಶ್ರಾವಕ ಪ್ರಮುಖರೆಲ್ಲರು ಗಂಭೀರವಾಗಿ ಯೋಚಿಸಲಾರಂಭಿಸಿದರು. ಹಗಲು ರಾತ್ರಿ ವಿಚಾರ ಮಂಥನ ಪ್ರಾರಂಭವಾಯಿತು. ಕೆಲವರಂತು ತಟಸ್ಥರಾದರು ಯಾರಾದರು ನಾವು ಏನು ಮಾಡಲು ಸಾಧ್ಯವೆಂದು ಆದರೆ ನಾವುಗಳು ಭಾಗವಹಿಸಲೇಬೇಕಾಗಿತ್ತು. ಈ ತಾಕಲಾಟದಲ್ಲಿ ಸೇಠ್ ಹೀರಾಲಾಲಜೀ ಪಾಟನೀ ನಮ್ಮ ಜೊತೆ ಹಲವಾರು ಬಾರಿ ಈ ವಿಷಯವಾಗಿ ಚರ್ಚೆ ಮಾಡಿ ನಿರ್ಣಯಕ್ಕೆ ಬರಲು ಪ್ರಯತ್ನಿಸಿದರು. ಎಲ್ಲ ಮುನಿಗಳು ಚರ್ಚೆಯಲ್ಲಿ ಭಾಗವಹಿಸಲೇ ಬೇಕಾಗಿ ಬಂತು. ಶೇಷ್ಠಿಗಳು ಸೇರಿದ್ದರು. ಕೊನೆಗೆ ಆಚಾರ್ಯ ಪದವಿಗೆ ಶ್ರೀ ಧರ್ಮಸಾಗರರ ಹೆಸರನ್ನ ಘೋಷಿಸಲಾಯಿತು. ಅದೇ ಫಾಲ್ಗುಣ ಶುಕ್ಲ ಅಷ್ಟಮಿಯ ದಿನ ಭಗವಂತರ ತಪಕಲ್ಯಾಣದ ದಿನವೇ ಆಚಾರ್ಯರ ಪಟ್ಟವಾದ ಮೇಲೆ ನೂತನ ಆಚಾರ್ಯ ಪದವಿಯಿಂದ 11 ಜನ ದೀಕ್ಷಾರ್ಥಿಗಳಿಗೆ ದೀಕ್ಷೆ ಎಂದು ನಿಶ್ಚಿತವಾಯಿತು.

ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವ

ಪಂಚಕಲ್ಯಾಣ ಮಹೋತ್ಸವ ಪ್ರಾರಂಭವಾಗಿ ಗರ್ಭಕಲ್ಯಾಣ ಜನ್ಮ ಕಲ್ಯಾಣ ಮಹೋತ್ಸವವಾಗಿ ತಪಕಲ್ಯಾಣದ ದಿನ ಬಂದೇಬಿಟ್ಟಿತು.

ತಂದೆ - ತಾಯಿಗಳ ಆಗಮನ

ಟಿಕೈತನಗರದಲ್ಲಿ ಕೈಲಾಸಚಂದನಿಗೆ ಅಂಗಡಿಗೆ ಒಂದು ಪತ್ರ ಬಂದಿತು. ಮೋತಿಚಂದನು ಅವರಿಗೆ ವಿಷಯ ತಿಳಿಸಿದ್ದರು. ಸಂಘವು ಈಗ ಮಹಾವೀರಜೀಯಲ್ಲಿ ವಿರಾಜಮಾನವಾಗಿದೆ. ಫಾಲ್ಗುಣ ಸುದಿಯಲ್ಲಿ ಶಾಂತಿವೀರನಗರದಲ್ಲಿ ಭ. ಶಾಂತಿನಾಥಸ್ವಾಮಿಯ ವಿಶಾಲಕಾಯ ಪ್ರತಿಮೆಗೆ ಪಂಚಕಲ್ಯಾಣ ಮಹೋತ್ಸವ ನೆರವೇರಲಿದೆ. ಇದೇ ಸಂದರ್ಭದಲ್ಲಿ ಹಲವರು ದೀಕ್ಷೆ ಕೈಗೊಳ್ಳಲಿದ್ದಾರೆ. ಇದರಲ್ಲಿ ಕ್ಷುಲ್ಲಿಕ ಅಭಯಮತಿಯವರ ಆರ್ಯಿಕೆ ದೀಕ್ಷೆಯು ಆಗಲಿದೆ. ಆದ್ದರಿಂದ ತಂದೆ-ತಾಯಿಗಳಾಗುವ ಕೊನೆಯ ಅವಕಾಶ ದೀಕ್ಷೆಯ ಸಂದರ್ಭದಲ್ಲಿ ಇದನ್ನು ತಾವು ಕಳೆದುಕೊಳ್ಳದೆ ಅವಶ್ಯವಾಗಿ ಬನ್ನಿರಿ ಎಂದು ತಿಳಿಸಿದ್ದರು. ಆದರೆ ಆ ಸಮಯದಲ್ಲಿ ತಂದೆಯು ಕಾಮಾಲೆಯಿಂದ ಬಳಲಿ ಬಲಹೀನರಾಗಿದ್ದರು. ಪ್ರಯಾಣ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ ಆದರೂ ಅಮ್ಮ ಒತ್ತಾಯ ಮಾಡತೊಡಗಿದರು. ಇದು ನಮಗೆ ಕೊನೆಯ ಅವಕಾಶ ಹಿಂಜರಿಯುವುದು ಬೇಡ, ಭ ಮಹಾವೀರಸ್ವಾಮಿಯ ಕೃಪೆಯಿಂದ ನಿಮಗೆ ಹುಷಾರಾಗಬಹುದು, ಧೈರ್ಯತಂದುಕೊಳ್ಳಿ. ಭಗವಂತರ ತೀರ್ಥಕ್ಷೇತ್ರ ಗುರುಗಳ ಸಾನಿಧ್ಯದಲ್ಲಿ ನಿಮಗೆ ಸರಿಹೋಗಬಹುದೆಂದು ಹುರಿದುಂಬಿಸಿದರು.

ಕೈಲಾಸಚಂದ್ರನು ಧೈರ್ಯ ಮಾಡಿ ಹುಷಾರಿಲ್ಲದ ತಂದೆಯನ್ನು ಜೊತೆಗೆ ಕರೆದುಕೊಂಡು ತಾಯಿಯ ಆಸೆಯನ್ನು ಪೂರ್ಣಗೊಳಿಸುವ ಸಲುವಾಗಿ ಮಹಾವೀರಜೀಗೆ ಬಂದರು. ಇಲ್ಲಿಯ ಗಂಭೀರ ವಾತಾವರಣ ಅಮಾವಾಸ್ಯೆಯ ದಿನ ಆಚಾರ್ಯರ ಸಮಾಧಿಯಾಗಿದ್ದು, ಸಾಧು ಸಾಧ್ವಿಯರ ಮುಖಗಳಲ್ಲಿ ಕಾಣುತ್ತಿದ್ದ ಉದಾಸೀನತೆ, ಇಲ್ಲಿಯ ಪಟ್ಟ ಧರ್ಮಸಾಗರರಿಗೋ ಅಥವಾ ಶ್ರುತಸಾಗರರಿಗೋ ಎನ್ನುವ ಅಳುಕು ಸಾಧುಗಳ ಮಧ್ಯೆ ಈ ಜಟಿಲ ಸಮಸ್ಯೆ ನಡೆಯುತ್ತಿದ್ದರೂ ಅವರಿಗೆ ಇದರಲ್ಲಿ ಏನು ಪಾತ್ರ ಇರಲಿಲ್ಲವಲ್ಲ, ಅವರೆಲ್ಲ ಕಟರಾ ಧರ್ಮಶಾಲೆಯಲ್ಲಿ ಇಳಿದುಕೊಂಡಿದ್ದರು. ಅಮ್ಮ ಬಂದು ಎಲ್ಲ ಸಾಧುವರ್ಗದವರನ್ನು ದರ್ಶನ ಮಾಡಿದರು, ತಂದೆಗೆ ಓಡಾಡಲು ಆಗುತ್ತಿರಲಿಲ್ಲ. ಬಾಗಿಲ ಹತ್ತಿರವೇ ಮಂಚ ಹಾಕಿಸಿಕೊಂಡು ಮಲಗಿದ್ದೇ ಸಾಧುಗಳ ದರ್ಶನವನ್ನು ಮಾಡುತ್ತಿದ್ದರು. ರೋಗದಿಂದ ಜರ್ಜರಿತರು ಆಗಿದ್ದರು. ಹಲವಾರು ಬಾರಿ ನನ್ನನ್ನು ದರ್ಶನ ಮಾಡಬೇಕೆಂದು ಕೈಲಾಸಚಂದ್ರನ ಹತ್ತಿರ ಹೇಳಿಕಳುಹಿಸಿದ್ದರು. ಕೈಲಾಸನು ನನ್ನ ಹತ್ತಿರ ಬಂದು ಪ್ರಾರ್ಥಿಸಿದರೂ ನನಗೆ ಧಾರ್ಮಿಕ ಕೆಲಸಗಳಲ್ಲಿ ತೊಡಗಿಕೊಂಡಿದ್ದರಿಂದ ಬಿಡುವು ದೊರೆತಿರಲಿಲ್ಲ. ಅಲ್ಲದೆ ಅಲ್ಲಿಗೆ ಹೋಗುವುದಕ್ಕೆ ಸಂಕೋಚವು ಇತ್ತು.

ಮಾತೆ ಮೋಹಿನಿಯ ಮನೋಭಾವನೆ ಪೂರ್ಣಗೊಂಡಿದ್ದು

ಫಾಲ್ಗುಣ ಶುಕ್ಲ ಅಷ್ಟಮಿಯ ದಿನ ಭ. ತಪಕಲ್ಯಾಣದ ದಿನ ಧರ್ಮಸಾಗರರಿಗೆ ಚತುರ್ವಿಧ ಸಂಘದ ಸಮಕ್ಷದಲ್ಲಿ ಆಚಾರ್ಯ ಪದವಿಯನ್ನು ಪ್ರದಾನ ಮಾಡಲಾಯಿತು. ಹಾಗೆಯೇ ಹೊಸ ಆಚಾರ್ಯರ ಕರಕಮಲಗಳಿಂದಲೇ 11 ಜನಕ್ಕೆ ದೀಕ್ಷೆಯನ್ನು ಕೊಡಲಾಯಿತು. ಕೈಲಾಸಚಂದನು ಇಂತಹ ಜನ ಜಂಗುಳಿಯಲ್ಲು ತಂದೆಯವರನ್ನು ಸಭೆಗೆ ಕರೆತಂದನು. ಅಭಯಮತಿಯ ಆರ್ಯಿಕೆ ದೀಕ್ಷೆಯ ಸಮಯದಲ್ಲಿ ತಂದೆ-ತಾಯಿಯ

ಸ್ಥಾನದಿಂದ ಅವರ ಕೈಗಳಿಂದಲೇ ತಾಂಬೂಲವನ್ನು ಉಡಿ ತುಂಬಿದರು. ಈ ಅವಕಾಶದಿಂದ ಅವರಿಗೆ ಬಹಳ ಸಂತೋಷವಾಯಿತು. ಇದೇ ಸಮಯದಲ್ಲಿ ನನ್ನ ಪ್ರೇರಣೆಯಿಂದ ಸನಾವದದ ಯಶವಂತಕುಮಾರನು ಮುನಿದೀಕ್ಷೆ ತೆಗೆದುಕೊಂಡರು. ಅಶ್ರಫೀಬಾಯಿ ಮತ್ತು ವಿದ್ಯಾಬಾಯಿಯವರು ಆರ್ಯಿಕ ದೀಕ್ಷೆಯನ್ನು ತೆಗೆದುಕೊಂಡರು. ಕ್ಷುಲ್ಲಕೆ ಅಭಯಮತಿಯ ಹೆಸರು ಬದಲಾಯಿಸಲಿಲ್ಲ. ಅಶ್ರಫಿಬಾಯಿಯ ಹೆಸರು ಆರ್ಯಿಕೆ ಗುಣಮತೀ ಎಂದಾಯಿತು. ವಿದ್ಯಾಬಾಯಿಯ ಹೆಸರು ವಿದ್ಯಾಮತೀ ಎಂದಾಯಿತು. ಈ ದೀಕ್ಷಾ ಸಮಾರಂಭದಲ್ಲಿ ನಾನು ಉತ್ಸಾಹದಿಂದಲೇ ಭಾಗವಹಿಸಿದೆ. ಉಳಿದ ಎರಡು ಕಲ್ಯಾಣಗಳು ಚೆನ್ನಾಗಿ ಆಯಿತು. ಪ್ರತಿಷ್ಠೆಯ ನಂತರ ಜನಗಳ ಗುಂಪು ಕಡಿಮೆಯಾಯಿತು. ತಾಯಿ ಒಂದೆರಡು ದಿನ ಅಲ್ಲೇ ಇರಲು ಬಯಸಿದರು.

ಶ್ರೀಮಾನ ಛೋಟೆಲಾಲರ ಅಂತಿಮ ದರ್ಶನ

ಗೃಹಸ್ಥಾಶ್ರಮದ ತಂದೆಯವರು ಕಾಮಾಲೆಯಿಂದ ಬಳಲುತ್ತಿದ್ದರು. ಕೈಲಾಸನ ಜೊತೆ ಹೇಳಿ ಕಳುಹಿಸುತ್ತಲೇ ಇದ್ದರು. ಆದರೂ ನಾನು ತಳ್ಳುತ್ತಲೇ ಇದ್ದೆ. ಕೊನೆಗೆ ಒಂದು ದಿನ ಅವನ ಜೊತೆ ಅವರ ಕೊಠಡಿಗೆ ಹೋದೆ ನನ್ನನ್ನು ನೋಡುತ್ತಲೆ ಅಳತೊಡಗಿದರು. ಮಾತಾಜೀ ಇನ್ನು ನನ್ನ ಜೀವನದಲ್ಲಿ ನಿಮ್ಮನ್ನು ದರ್ಶನ ಮಾಡಲಾರೆ ಎಂದರು. ನಾನು ಒಂದೆರಡು ನಿಮಿಷ ಅಲ್ಲಿ ನಿಂತಿದ್ದು ಆಶೀರ್ವಾದ ಮಾಡಿ ಗಾಬರಿ ಏಕೆ ಆಗುತ್ತೀರ ಎಂದೆ. ತಕ್ಷಣ ವಾಪಸ್ಸು ಬಂದವಳಿಗೆ ಅನ್ನಿಸಿತು. ತಂದೆಗೆ ಸ್ವಲ್ಪ ಶಿಕ್ಷಣವನ್ನು ಕೊಡುವುದಕ್ಕೆ ಏಕೆ ಮನಸ್ಸು ಹಿಂಜರಿಯಿತು ಎಂದು. ತಂದೆಯವರು ಮಾತಾಜಿ ಬಂದು ನನ್ನ ಹತ್ತಿರ ಸ್ವಲ್ಪ ಹೊತ್ತು ಕುಳಿತು ಏನಾದರು ಹೇಳಬಹುದು ಎಂದು ಬಯಸಿದ್ದರು. ಆದರೆ ಅವರ ಇಷ್ಟ ನೆರವೇರಲಿಲ್ಲ. ಎರಡು ಮೂರು ದಿನ ಆದ ಮೇಲೆ ಮನೆಗೆ ಹೊರಟರು.

ಕ್ಷುಲ್ಲಿಕೆ ವಿಶಾಲಮತಿಯ ಜೊತೆ ಭೇಟಿ

1955ರಲ್ಲಿ ನಾನು ವಿಶಾಲಮತಿಯವರ ಆಜ್ಞೆ ಪಡೆದು ನಾನು ಆಚಾರ್ಯ ವೀರಸಾಗರರ ಸಂಘಕ್ಕೆ ಬಂದಿದ್ದೆ. ವಿಶಾಲಮತಿಯವರು ನನ್ನ ಬಗ್ಗೆ ಇಟ್ಟಿದ್ದ ವಾತ್ಸಲ್ಯವನ್ನು ನಾನು ಶಬ್ದಗಳಲ್ಲಿ ವರ್ಣಿಸಲಾರೆ. ನಾವಿಬ್ಬರು ಇಷ್ಟು ಬೇಗನೆ ಒಬ್ಬರನ್ನು ಒಬ್ಬರು ಆಗಲುತ್ತೇವೆಂದು ನಮಗೆ ಗೊತ್ತಿರಲಿಲ್ಲ. ಎರಡು ವರ್ಷವಾದ ಮೇಲೆ ನಾನು ಆರ್ಯಿಕೆ ದೀಕ್ಷೆ ತೆಗೆದುಕೊಳ್ಳಲೇಬೇಕೆಂದು ನಿರ್ಣಯಿಸಿದ್ದರಿಂದ ಅವರು ಒಳ್ಳೆ ಶಿಕ್ಷಣ ಮತ್ತು ಪ್ರೇರಣೆಕೊಟ್ಟು ಹರಸಿ ಸಂಘಕ್ಕೆ ಕಳುಹಿಸಿಕೊಟ್ಟರು. ಪುನಃ 1956ರಲ್ಲಿ ರೈಸಲಾಲಗೆ ಸಂಘದಲ್ಲಿ ನನ್ನನ್ನು ನೋಡಲು ಬಂದು ಕಷ್ಟ ಸುಖಗಳ ಅನುಭವವನ್ನು ಕೇಳಿ ನಾನು ಸಂತುಷ್ಟಿಯಿಂದ ಇರುವುದು ಕಂಡು 4-5 ದಿನ ಇದ್ದು ಹೋಗಿದ್ದರು. ಈಗ ವಿಷಯವೇನೆಂದರೆ ಸಂಘದ ವಯೋವೃದ್ಧ ಮಾತಾಜಿ ಕ್ಷುಲ್ಲಕೆವಿಶಾಲಮತಿಯು ರೈಲು ಮೋಟಾರಿನಲ್ಲಿ ಓಡಾಡುವುದರಿಂದ ನೀನು ಅವರ ಜೊತೆ ಆಹಾರ ತೆಗೆದುಕೊಳ್ಳಬಾರದೆಂದು ಹೇಳಿದ್ದರು. ನಾನು ಆಗಲಿ ಎಂದು ಒಪ್ಪಿಕೊಂಡಿದ್ದೆ. ವಿಶಾಲಮತಿಯವರು ಮೊದಲಿನ ಪ್ರೇಮದಿಂದ ನನ್ನ ಜೊತೆಯ ಆಹಾರಕ್ಕೆ ಬರುತ್ತಿದ್ದರು. ನಾನು ವಾಸ್ತವ ಸಂಗತಿಯನ್ನು ಹೇಳಲಾರದೆ ಆ ಚೌಕದಲ್ಲಿ ನಿಲ್ಲುತ್ತಿರಲಿಲ್ಲ. ಅಲ್ಲದೆ ಅವರು ಹೋದ ಚೌಕದಲ್ಲೆಲ್ಲ ಎಲ್ಲ ಸಾಧುಗಳು ಕೂಡ ಹೊರಟುಬಿಡುತ್ತಿದ್ದರು. ಇದನ್ನು ತಿಳಿದ ಅವರಿಗೆ ಬಹಳ ದುಃಖವಾಯಿತು. ನನಗೆ ಇವತ್ತು ಅನ್ನಿಸುತ್ತಿದೆ ನಾನು ಏಕಾಂತದಲ್ಲಿ ಸಂಘದ ಮರ್ಯಾದೆ ಮತ್ತು ಕಠೋರತೆಯನ್ನು ತಿಳಿಸಬೇಕಾಗಿತ್ತು. ಆದರೆ ಅವರು ನನ್ನ ವರ್ತನೆಯಂತೆಯೇ ನನ್ನ ಬಗ್ಗೆ ಉಪೇಕ್ಷಿತರಾಗಿ ಹೊರಟು ಹೋದರು.

ನನ್ನ ಜೀವನದಲ್ಲಿ ಇಂತಹ ಅನೇಕ ಪ್ರಸಂಗಗಳು ಬಂದು ಹೋದವು. ಕೆಲವು ಸಲ ನಾನು ಸಾಧುಗಳಲ್ಲಿ ಆಗಲಿ, ಶ್ರಾವಕರುಗಳಿಗಾಗಲಿ ವಾಸ್ತವಿಕ ಸ್ಥಿತಿಯನ್ನು ಹೇಳಲಾರದೆ ಮೌನವಾಗಿರಬೇಕಾಗುತ್ತಿತ್ತು. ಆಗ ಜನರಿಗೆ ನನ್ನ ಬಗ್ಗೆ ಉಂಟಾದ ಭಾವನೆಯಿಂದ ನನಗೆ ಹಲವಾರು ಕಷ್ಟಗಳ ಅನುಭವವಾಗಿತ್ತು. ಈಗ ನನಗೆ ಗೊತ್ತಾಗುತ್ತಿದೆ. ನನ್ನ ಈ ಸಹನಶೀಲತೆಯೇ ಬಹಳ ದೊಡ್ಡ ಕೊರತೆಯಾಗಿದೆ. ಈಗಲೂ ನನಗೆ ಅದೇ ಕೊರತೆ.

ಇದಾದ ನಂತರ 1969ರಲ್ಲಿ ಮಹಾವೀರಜೀಗೆ ಈಗ ಕ್ಷುಲ್ಲಕೆ ವಿಶಾಲಮತೀ ಬಂದಿದ್ದರು. ನನಗೆ ಅವರನ್ನು ಕಾಣುತ್ತಲೇ ಅಪ್ಪಿಕೊಂಡುಬಿಟ್ಟೆ ಅವರು ಕೂಡ ನನಗೆ ಆರ್ಯಿಕೆಯ ಪದವಿಗೆ ಗೌರವಕೊಟ್ಟು 'ವಂದಾಮಿ' ಎಂದರು. ರತ್ನತ್ರಯ ಕುಶಲತೆಯನ್ನು ವಿಚಾರಿಸಿದೆವು. ರಾತ್ರಿ ನನ್ನ ಹತ್ತಿರವೇ ಮಲಗಿದರು ಅನೇಕ ಮಾತುಗಳನ್ನು ಪರಸ್ಪರ ವಿಚಾರಿಸಿಕೊಂಡೆವು. ಆ ಸಮಯದಲ್ಲಿ ಆಚಾರ್ಯಪಟ್ಟದ ಸಮಸ್ಯೆಗಳು ತೊಡಕಾಗಿದ್ದವು. ಆದ್ದರಿಂದ ನನ್ನ ಮನದಲ್ಲಿ ವಿಕ್ಷಿಪ್ತತೆ ಉಂಟಾಗಿತ್ತು. ಬೆಳಗ್ಗೆ ಅವರು ಆಹಾರವನ್ನು ತೆಗೆದುಕೊಳ್ಳದೆ ಹೋದರು ಎಂಬ ವಿಷಯ ತಿಳಿದು ಮನಸ್ಸಿಗೆ ಬಹಳ ದುಃಖವಾಯಿತು. ಬಹುಶಃ ಅವರಿಗೆ ರೈನವಾಲದ ಮೊದಲಿನ ಘಟನೆಯನ್ನು ನೆನಪಿಸಿಕೊಂಡು ಹೊರಟು ಹೋಗಿರಬೇಕೆಂದು ನೆನಸಿಕೊಂಡು ನಿಜಕ್ಕೂ ತುಂಬ ದುಃಖವೇ ಆಯಿತು. ಆದರೂ ಏನೂ ಉಪಾಯವಿರಲಿಲ್ಲ. ಇದಾದ ಮೇಲೆ ನನ್ನ ಜೀವನದಲ್ಲಿ ಅವರ ಜೊತೆ ಮಾತಾಡುವುದಾಗಲಿ, ಪತ್ರ ವ್ಯವಹಾರವಾಗಲಿ ಏನು ನಡೆಯಲೇ ಇಲ್ಲ ಈಗ ಅವರು ಸ್ವರ್ಗಸ್ಥರಾಗಿದ್ದಾರೆ. ಬಹುಶಃ ನಾವಿಬ್ಬರು ಮತ್ತೆ ಸ್ವರ್ಗದಲ್ಲಿ ಸಂಧಿಸಬೇಕು.

ವ್ಯಾಕರಣದ ಅಧ್ಯಾಪನ

ಆರ್ಯಿಕೆ ವಿಶುದ್ಧಮತೀ ಹಾಗೇ ಮಾತಾಜಿಗಳು ಜೈನೇಂದ್ರಪ್ರಕ್ರಿಯೆ ವ್ಯಾಕರಣವನ್ನು ಹೇಳಿಕೊಡಿ ಎಂದು ಕೇಳುತ್ತಿದ್ದರು. ಹಾಗಾಗಿ ಬೆಳಗ್ಗೆ ಸಾಮಾಯಿಕವಾದ ಮೇಲೆ ವ್ಯಾಕರಣ ಹೇಳಿಕೊಡಲು ಸಮಯವನ್ನು ನಿರ್ಧರಿಸಿದ್ದೆವು. ಆಗ ಹಲವಾರು ಆರ್ಯಿಕೆಯರ ಜೊತೆ ಮೋತಿಚಂದ ಬಂದು ಕುಳಿತುಕೊಳ್ಳುತ್ತಿದ್ದರು. ವ್ಯಾಕರಣದ ತರಗತಿಗಳು ಚೆನ್ನಾಗಿ ನಡೆಯುತ್ತಿತ್ತು. ಆದರೆ ಅಕಸ್ಮಾತ್ತಾಗಿ ಶಿವಸಾಗರರ ಸ್ವರ್ಗವಾಸದಿಂದಾಗಿ ನಿಂತೇ ಹೋಯಿತು.

ಆಚಾರ್ಯ ವಿಮಲಸಾಗರರ ಸಂಘದ ದರ್ಶನ

ಆಚಾರ್ಯ ವಿಮಲ ಸಾಗರರು ತಮ್ಮ ಸಂಘದೊಡನೆ ಮಹಾವೀರಜೀಗೆ ಬಂದರು. ಎರಡು ಸಂಘದ ಮಿಲನದಿಂದಾಗಿ ಒಟ್ಟು 75 ಪಿಂಛಿದಾರಿಗಳು ಒಂದೇ ಕಡೆ ಇದ್ದಿದ್ದು ಎಲ್ಲರಿಗೂ ಬಹಳ ಸಂತೋಷವಾಗಿತ್ತು. ನನಗಂತೂ ವಿಮಲಸಾಗರರ ಹತ್ತಿರ ಬಹಳ ಸೌಹಾರ್ದವು ಉಂಟಾಗುತ್ತಿತ್ತು. ಹಾಗಾಗಿ ಮೋತಿಚಂದನನ್ನು ಕರೆದು ಇದೇ ಮುನಿ ಸಮೂಹದ ಫೋಟೋ ತೆಗೆಸಲು ಹೇಳಿ, ನಂತರ ಆರ್ಯಿಕೆಯರದು ಬೇರೆ, ಮುನಿಗಳದು ಬೇರೆಯಾಗಿ ಫೋಟೋ ತೆಗೆಸಲು ಹೇಳಿದೆ. ಮೋತಿಚಂದನಿಗೆ ಫೋಟೋ ತೆಗೆಯುವುದು ಎಂದರೆ ಎಲ್ಲಿಲ್ಲದ ಪ್ರೇಮ. ಆದರೆ ಎಲ್ಲ ಸಾಧುಗಳನ್ನು ಒಂದೇ ಸಲ ಫೋಟೋಗೆ ಕರೆತರುವುದು ಸಾಹಸವೇ ಆಯಿತು. ಒಬ್ಬರನ್ನು ಕರೆತಂದರೆ ಇನ್ನೊಬ್ಬರು ಕಾಣಿಸುತ್ತಿರಲಿಲ್ಲ. ಎಲ್ಲರ ಸಮಯ ನೋಡಿ ಅನುನಯದಿಂದ ಪ್ರಾರ್ಥಿಸಿದರು ಒಟ್ಟುಗೂಡಿಸುವುದು ಒಂದು ಕಷ್ಟದ ಕೆಲಸವೆನ್ನಿಸಿತು. ಕೊನೆಗೆ ಅವರು ಮಾತಾಜೀ ಇದು ನನ್ನ ಕೈಯಲ್ಲಿ ಆಗುವುದಿಲ್ಲ. ಎನ್ನಿಸುತ್ತದೆ ಎಂದರು ಕೊನೆಗೆ ನನ್ನ ಪ್ರೇರಣೆಯಿಂದಾಗಿ ಒಟ್ಟಿಗೆ ಫೋಟೋ ತೆಗೆದಿದ್ದು ಆಯಿತು. ಆ ನಂತರ ಅವರು ಇನ್ನೊಂದು ಫೋಟೋ ತೆಗೆಯಲಿಲ್ಲ.

ಇದೊಂದು ಇತಿಹಾಸವಾಯಿತು, ಮಹಾವೀರಜೀಯಲ್ಲಿ ಒಂದೇ ಕಡೆ 76 ತ್ಯಾಗಿವರ್ಗ ಸೇರಿದ್ದು ಅಪೂರ್ವ ಸಂಗಮವೇ ಸರಿ. ಇದನ್ನು ಚಿರಸ್ಮರಣೀಯ ಮಾಡುವುದರಲ್ಲಿ ನನ್ನ ಸ್ವಾರ್ಥವೇನಿರಲಿಲ್ಲ. ನನಗೆ ಚೆನ್ನಾಗಿ ನೆನಪಿದೆ ದೆಹಲಿಯಲ್ಲಿ ಆಚಾರ್ಯ ಶಾಂತಿಸಾಗರರು ಎಲ್ಲಿಗೆ ಹೋದರೂ ಫೋಟೋ ತೆಗೆಸಿಕೊಳ್ಳುತ್ತಿದ್ದರು. ಆಗ ಯಾರೋ ಕೇಳಿದ್ದರು ಮಹಾರಾಜಜೀ ನಿಮಗೆ ಫೋಟೋ ತೆಗೆಸಿಕೊಳ್ಳಲು ಬಹಳ ಇಷ್ಟವೇ ಎಂದು. ಅದಕ್ಕೆ ಮಹಾರಾಜರು ನನಗೇನು ಫೋಟೋ ತೆಗೆಸಿಕೊಳ್ಳುವ ಖಯಾಲಿ ಇಲ್ಲ. ಇದರ ಗುಟ್ಟು ಏನೆಂದರೆ ಮುಂದಿನ ಪೀಳಿಗೆಗೆ ರಾಜಧಾನಿ ದೆಹಲಿಯಲ್ಲಿ ದಿಗಂಬರ ಮುನಿಗಳ ವಿಹಾರವು ನಿರಾಬಾಧವಾಗಿ ನಡೆಯುತ್ತಿತ್ತು ಎಂಬುದನ್ನು ಜನಗಳು ತಿಳಿದುಕೊಳ್ಳಲಿ ಎನ್ನುವ ಉದ್ದೇಶದಿಂದಲೇ ಎಲ್ಲ ಜಾಗಗಳಲ್ಲೂ ಫೋಟೋ ತೆಗೆಸಿಕೊಳ್ಳುತ್ತಿರುವುದು ಎಂದು ನಿಜವಾದ ಉದ್ದೇಶವನ್ನು ತಿಳಿಸಿದರು. ಅಂದು ಮೋತಿಚಂದನು ತೆಗೆಸಿದ ಫೋಟೋ ಇಂದಿಗೂ ಹಲವಾರು ದೇವಸ್ಥಾನಗಳಲ್ಲೂ ಮುನಿಭಕ್ತಿ ಶ್ರಾವಕ ಮನೆಗಳಲ್ಲೂ ರಾರಾಜಿಸುತ್ತಿದ್ದಾವೆ.

ಮಹಾವೀರಜೀಯಲ್ಲಿ ವಾರ್ಷಿಕ ಜಾತ್ರೆ

ಇಲ್ಲಿ ಚೈತ್ರ ಶುದ್ದಿ ತ್ರಯೋದಶಿಯಿಂದ ವೈಶಾಖಮಾಸದ ಪಂಚಮಿಯವರೆಗೆ ಬಹಳ ದೊಡ್ಡ ಜಾತ್ರೆ ನಡೆಯುತ್ತದೆ. ಮಹಾವೀರ ಸ್ವಾಮಿಯವರ ರಥಯಾತ್ರೆ ಹೊರಡುತ್ತದೆ. ಸಾವಿರಾರು ಜೈನರು ಭಾಗವಹಿಸಿದರೆ ಅಜೈನರ ಸಂಖ್ಯೆ ಅದನ್ನು ಮೀರಿಸುತ್ತದೆ. ಇದರಲ್ಲಿ ಮೀಣಾಗೂಜರದ ಜನರು ಜಾಸ್ತಿ ಇರುತ್ತಾರೆ. ಅವರುಗಳಂತು ಹಾಡಿ ಕುಣಿದು ತಮ್ಮ ಭಕ್ತಿಯನ್ನು ಪ್ರದರ್ಶಿಸುತ್ತಾರೆ. ಜಾತ್ರೆಯ ಜನಜಂಗುಳಿ ಆಗ ನೋಡಬೇಕು. ನಂತರ ಅಲ್ಲಿಂದ ಸಂಘ ಮುಂದೆ ವಿಹರಿಸಿತು.

ಮಹಾವೀರಜೀಯಿಂದ ಸಂಘದ ವಿಹಾರ ಅಜಮೇರದ ಶ್ರಾವಕರು ಶ್ರೀಫಲವನ್ನು ಇಟ್ಟು ಚಾತುರ್ಮಾಸಕ್ಕಾಗಿ ಪ್ರಾರ್ಥನೆ ಸಲ್ಲಿಸಿದ್ದರಾದರೂ ಅಲ್ಲಿಗೆ ಹೋಗಲು ಅನುಮತಿ ದೊರೆತಿದ್ದರಿಂದ ಅವರು ನಾಕೈದು ಚೌಕ ಮಾಡುತ್ತಿದ್ದರು. ಆಚಾರ್ಯರ ಸಂಘ ಸಹಿತ ಜಯಪುರದ ಕಡೆ ಹೊರಟಿತು. ಪದ್ಮಪುರಿಯ ದರ್ಶನವಾದ ನಂತರ ಜಯಪುರದ ಖಾನಿಯಗೆ ಹೊರಟಿತು ಅಲ್ಲಿ ವೀರಸಾಗರರ ನಿಷಧಿಯ ದರ್ಶನ ಮಾಡಿದರು. ಮಂದಿರಗಳ ದರ್ಶನ ಮಾಡಿ ಆಚಾರ್ಯರ ಚಾತುರ್ಮಾಸದ ನೆನಪನ್ನು ಮಾಡಿಕೊಂಡು ಗುರುಗಳ ಚರಣಗಳಿಗೆ ಭಕ್ತಿ ಕುಸುಮಾಂಜಲಿಗಳನ್ನು ಅರ್ಪಿಸಿದರು. ಬೇಸಿಗೆಯಲ್ಲಿ ಸಂಘ ಅಲ್ಲೇ ನಿಂತಿತು. ಆಚಾರ್ಯರು ಅಜಮೇರದ ಶ್ರಾವಕರನ್ನು ಅಲ್ಲಿಂದ ಅಜಮೇರಕ್ಕೆ ಕಳುಹಿಸಿದರು.

ಸಂಘ ವಿಚ್ಛೇದಃ

ಖಾನಿಯಾದಿಂದ ಮುನಿಶ್ರೀ ಶ್ರುತಸಾಗರರು ಸುಬುದ್ಧಿ ಸಾಗರರೊಡನೆ ಇನ್ನು ಕೆಲವು ಮುನಿಗಳ ಜೊತೆ ಬೇರೆಯಾಗಿ ವಿಹಾರ ಹೊರಟರು. ಆರ್ಯಿಕಾ ವಿಶುದ್ಧಮತಿ ಕೆಲವು ಆರ್ಯಿಕೆಯರೊಡನೆ ಅವರು ಬೇರೆಯಾಗಿ ಹೊರಟರು. ಹೀಗೆ ಬೇರೆಯಾಗುತ್ತಿರುವುದು ಒಂದು ಸಂಘರ್ಷವೇ ಆಯಿತು. ಉಳಿದವರು ಆಚಾರ್ಯರ ಜೊತೆ 'ಖಜಾಂಚಿ'ಯಲ್ಲಿ ಬಂದು ತಂಗಿದ್ದೆವು. ಇಲ್ಲಿಂದ ಶ್ರೇಯಾಂಸ ಸಾಗರರು ಆರ್ಯಿಕೆ ಅರಹಮತೀ ಮಾತಾಜೀ, ಶ್ರೇಯಾಂಸಮತಿ ಮೊದಲಾದವರು ಬೇರೆಯಾಗಿ ವಿಹಾರ ಹೊರಟಿದ್ದು ನೋಡಿ ಪಂಡಿತವರ್ಗದವರಿಗೆಲ್ಲ ಕಳವಳವಾಗತೊಡಗಿತು. ಕೆಲವು ಶ್ರಾವಕರು ಪಂಡಿತರು ನನ್ನೊಡನೆ ಬಂದು ಪ್ರಾರ್ಥಿಸತೊಡಗಿದರು. ಮಾತಾಜಿ ಎಲ್ಲಾ ಸಂಘದವರು ಸೇರಿ ಇವರನ್ನ ಆಚಾರ್ಯ ಶಾಂತಿಸಾಗರರ ತೃತೀಯ ಪಟ್ಟಾಧೀಶರನ್ನಾಗಿ ಮಾಡಿದ್ದಾರೆ.

ಆದರೆ ಸಂಘದಿಂದ ಪ್ರಮುಖರೆಲ್ಲಾ ಬೇರೆ ಬೇರೆಯಾಗಿ ಹೋಗುತ್ತಿದ್ದಾರೆ ಒಂದು ವೇಳೆ ತಾವು ಬೇರೆಯಾಗಿ ಹೊರಟರೆ ಸಂಘದಲ್ಲಿಯೇ ಪ್ರಮುಖ ಸಾಧುಗಳು ಯಾರು. ಆದ್ದರಿಂದ ತಾವು ಸಂಘದಲ್ಲಿಯೇ ಇದ್ದು ಆಚಾರ್ಯ ಪರಂಪರೆಯ ಮರ್ಯಾದೆಯನ್ನು ಕಾಪಾಡಿಕೊಂಡು ಹೋಗಬೇಕು. ನಾನು ಅದನ್ನೇ ಯೋಚಿಸುತ್ತಿದ್ದೆ ಈಗ ಏನು ಮಾಡುವುದು ಎಂದು.

ಆದರೆ ಆಚಾರ್ಯ ಧರ್ಮಸಾಗರರ ಆಜ್ಞೆ ಇಲ್ಲದೆ ನಾನು ನನ್ನ ವಿಹಾರದ ಬಗ್ಗೆ ಯೋಚಿಸುವ ವಿಚಾರವೇ ಇರಲಿಲ್ಲ. ಇದರಿಂದ ಮಹಾರಾಜರು ನನ್ನ ಬಗ್ಗೆ ಪ್ರಸನ್ನರಾಗಿದ್ದರು. ಜಯಪುರದ ಜನರು ಅಲ್ಲಿಯೇ ಚಾತುರ್ಮಾಸ ಮಾಡಿಸಬೇಕೆಂದಿದ್ದರು. ಮಂದಿರದಲ್ಲಿ ಮುನಿಸಂಘವಿತ್ತು ಮತ್ತು ಧರ್ಮಶಾಲೆಯಲ್ಲಿ ಆರ್ಯಿಕೆಯರು ತಂಗಿದ್ದೆವು. ದೊಡ್ಡ ಮಾತಾಜಿ ವೀರಮತಿಯವರು ಸಂಘದಲ್ಲೆ ಇದ್ದರು. ಆಚಾರ್ಯರು ಬಕ್ಷೀಜೀಯವರ ಚೌಕಕ್ಕೆ ಹೋಗಿದ್ದರು. ಅವರು ಶ್ರಾವಕರಲ್ಲಿ ಹೇಳಿದರು. ಇಲ್ಲಿ ಗುರುಕುಲದ ಸ್ಥಾಪನೆ ಮಾಡುವುದಾದರೆ ನಾವು ಇಲ್ಲಿ ಚಾತುರ್ಮಾಸ ಮಾಡುತ್ತೇವೆ ಎಂದರು. ಜನರು ಒಪ್ಪಿಕೊಂಡರು ಹಣವನ್ನು ಒಟ್ಟುಗೂಡಿಸಿ ಗುರುಕುಲವು ಪ್ರಾರಂಭವಾಯಿತು. ಆದರೆ ಅದು ಹೆಚ್ಚು ದಿನ ನಡೆಯಲಿಲ್ಲ. ಇಲ್ಲಿಯ ಒಳ್ಳೆಯ ಮಹಾನುಭಾವರಾದ ಜಯಕುಮಾರ ಛಾವಡಾ ಅವರು ಆಚಾರ್ಯರ ಪ್ರತಿಯೊಂದು ಕಾರ್ಯದಲ್ಲೂ ಆಸಕ್ತಿ ತೋರುತ್ತಿದ್ದರು. ಕೆಲವು ಶ್ರಾವಕ ಶ್ರಾವಕಿಯರು ಭಕ್ತಿವಂತರಿದ್ದರು.

ಚಾತುರ್ಮಾಸ ಇಲ್ಲೇ ಮಾಡುವುದು ಎಂದು ನಿಶ್ಚಿತವಾಯಿತು. ಅಜಮೇರದ ಶ್ರಾವಕರು ಎರಡು ಮೂರು ಸಲ ಬಸ್ಸು ಮಾಡಿಕೊಂಡು ಬಂದು ಅಲ್ಲಿಗೆ ಬರಲು ಪ್ರಾರ್ಥಿಸಿದರು. ಕೊನೆಗೆ ಅವರಿಗೆ ದುಃಖವಾಯಿತು. ಹೀಗೆ ಅಜಮೇರದಿಂದ ಶ್ರಾವಕರು ಬಸ್ಸು ಮಾಡಿಕೊಂಡು ಬರುವಾಗ ಮಧ್ಯದಲ್ಲಿ ಅಪಘಾತವಾಗಿ ಕೆಲವರಿಗೆ ಜೋರಾದ ಪೆಟ್ಟಾಯಿತು. ಮುನಿಭಕ್ತ ಮಹೇಂದ್ರಕುಮಾರ ಬೋಹರಾರವರಿಗೆ ಮೂಳೆಗೆ ಪೆಟ್ಟಾಗಿತ್ತು. ಅವರಿಗೆ ಹುಷಾರಾಗಲು ಬಹಳಷ್ಟು ದಿನಗಳೇ ಹಿಡಿಯಿತು. ಆದರೂ ಅವರುಗಳಿಗೆ ಮುನಿಯ ಬಗ್ಗೆ ಉಪೇಕ್ಷಾ ಭಾವ ಬರಲಿಲ್ಲ. ಮೊದಲಿನಂತೆಯೆ ಭಕ್ತಿಭಾವವನ್ನು ತೋರುತ್ತಿದ್ದರು. ಈಗಿನ ದಿನಗಳಲ್ಲಿ ಈ ರೀತಿ ಆದರೆ ಧರ್ಮವನ್ನು ಬಿಟ್ಟುಬಿಡುವಂತಹವರಿಗೆ ಇದೊಂದು ಒಳ್ಳೆಯ ಉದಾಹರಣೆಯಾಗಿದೆ.

ವರ್ಷಾಯೋಗದ ಸ್ಥಾಪನೆ

ಆಷಾಢ ಶುಕ್ಲ ಚತುರ್ದಶಿಯ ದಿನ ರಾತ್ರಿಯಲ್ಲಿ ವರ್ಷಾಯೋಗದ ಸ್ಥಾಪನೆ ಆಯಿತು.

ಸಾಂವತ್ಸರಿಕ ಪ್ರತಿಕ್ರಮಣ

ಮೊದಲು ಆ ವೀರಸಾಗರರು ಪ್ರತಿಕ್ರಮಣವನ್ನು ದೀಪಾವಳಿಯಲ್ಲಿ ಮಾಡುತ್ತಿದ್ದರು. ಅದನ್ನು ಆ ಶಿವಸಾಗರರು ಮುಂದುವರಿಸಿಕೊಂಡು ಬಂದರು. 1969ರ ಜಯಪುರದ ಚಾತುರ್ಮಾಸದಲ್ಲಿ ನಾನು ಆ ಧರ್ಮಸಾಗರಕರಿಗೆ ಅನಗಾರಧರ್ಮಾಮೃತದ ಪಂಕ್ತಿಗಳನ್ನು ತೋರಿಸಿ ಪ್ರಾರ್ಥಿಸಿದೆ. ಮಹಾರಾಜಜೀ ಈ ಸಾಂವತ್ಸರಿಕ ಪ್ರತಿಕ್ರಮಣವನ್ನು ಶಾಸ್ತ್ರಾಧಾರದಲ್ಲಿ ಆಷಾಢಮಾಸದ ಚತುರ್ದಶಿಯಂದೇ ಮಾಡಬೇಕಾಗಿದೆ ಅಲ್ಲವೇ ಎಂದೆ. ಇದೇ "ಆಷಾಢಾಂತ ಸಾವಂತ್ಸರಿ"[೧]

---

೧. ಅನಾಗಾರ ಧರ್ಮಾಮೃತ ಮೂಲಾಚಾರ ಪು. ೫೭೯

ಆಚಾರ್ಯರು ಮುಗಳ್ನಕ್ಕು ಸರಿ ಎಂದರು. ವರ್ಷಾಯೋಗದ ಸ್ಥಾಪನೆಯಂದೇ ಸಾಂವತ್ಸರಿಕ ಪ್ರತಿಕ್ರಮಣವು ಆಯಿತು. ಇದಕ್ಕೆ ಮೊದಲೇ ವೀರಮತಿಯವರಿಗೂ ಇದರ ಉಲ್ಲೇಖವನ್ನು ತೋರಿಸಿ ಅವರ ಒಪ್ಪಿಗೆ ತೆಗೆದುಕೊಂಡಿದ್ದೆ ಅಂದಿನಿಂದ ಹಿಡಿದು 1986ರವರೆಗೆ ಚಾತುರ್ಮಾಸದಲ್ಲಿಯೇ ಆಚಾರ್ಯರು ಸಾವಂತ್ಸರಿಕ ಪ್ರತಿಕ್ರಮಣವನ್ನು ಮಾಡಿಕೊಂಡು ಬಂದರು.

ಯುಗ ಪ್ರತಿಕ್ರಮಣ

ಹಾಗೆಯೆ ಅನಗಾರ ಧರ್ಮಾಮೃತದಲ್ಲಿ ಐದು ವರ್ಷಗಳಿಗೊಮ್ಮೆ ಯುಗ ಪ್ರತಿಕ್ರಮಣ ಮಾಡಬೇಕಾಗಿರುವ ಉಲ್ಲೇಖವು ಇದೆ. ತಧಾ ಪಂಚ ಸಂವತ್ಸರಾಂತೇ ವಿಧೇಯಾ ಯೌಗಾಂತೀ ಪ್ರತಿಕ್ರಮಣಾ[೧] ಇದು ಐದುವರ್ಷಗಳ ಕೊನೆಯಲ್ಲಿ "ಯೌಗಾಂತ" ಪ್ರತಿಕ್ರಮಣವಾಗಿದೆ. ಇದನ್ನೆ ಯುಗ ಪ್ರತಿಕ್ರಮಣವೆಂದೂ ಕರೆಯುತ್ತೇನೆ. ಇದನ್ನು ನಾನು 1985ರ ಪ್ರತಿಷ್ಠೆಯ ಸಮಯದಲ್ಲಿ ಆಚಾರ್ಯ ಧರ್ಮಸಾಗರರಿಗೆ ಹೇಳಿದೆ ಅವರೇ ಒಪ್ಪಿಕೊಂಡರು. ಆದರೆ ಅವರು ನಿಶ್ಯಕ್ತರಾದ್ದರಿಂದ ಅವರಿಗೆ ಬರಲು ಆಗಲಿಲ್ಲ 1987ರ ಪ್ರತಿಷ್ಠೆಯಲ್ಲಿ ಆಚಾರ್ಯ ಶ್ರೀ ವಿಮಲಸಾಗರರು ಹಸ್ತಿನಾಪುರದಲ್ಲಿ ಈ ಯುಗ ಪ್ರತಿಕ್ರಮಣವನ್ನು ಪ್ರಾರಂಭ ಮಾಡಿದರು.

ವರ್ಷಾಯೋಗ ಸ್ಥಾಪನೆ ಮಾಡುವ ಕಾಲ

ಆಚಾರ್ಯರಾದ ವೀರಸಾಗರರು ಆ ಶಿವಸಾಗರರು ವರ್ಷಾಯೋಗದ ಪ್ರತಿಸ್ಥಾಪನೆಯ ಕಲಾಪಗಳನ್ನು ಹಗಲಿನಲ್ಲಿಯೇ ಮಾಡುತ್ತಿದ್ದರು. ನಾನು ಕೇಳಿದಂತೆ ಆಚಾರ್ಯಕಲ್ಪದ ಚಂದ್ರಸಾಗರರು ಮತ್ತು ಆ ಶ್ರೀ ಮಹಾವೀರ ಕೀರ್ತಿಗಳು. ರಾತ್ರಿಯಲ್ಲಿ ವರ್ಷಾಯೋಗ ಪ್ರತಿಷ್ಠಾಪನೆ ಮಾಡುತ್ತಿದ್ದರು ಆ ದೇಶಭೂಷಣ ಮಹಾರಾಜರು ಜಯಪುರದಲ್ಲಿ ರಾತ್ರಿಯೇ ಪ್ರತಿಷ್ಠೆಯ ಕಲಾಪಗಳನ್ನು ಮಾಡಿದ್ದರು. ಅನಗಾರ ಧರ್ಮಾಮೃತದಲ್ಲಿ ಉಲ್ಲೇಖಿಸಿದಂತೆ.

ತತಶ್ಚತುರ್ದಶೀಪೂರ್ವರಾತ್ರೆ ಸಿದ್ಧಮುನಿಸ್ತುತೀ
ಚತುರ್ದಿಕ್ಷು ಪರೀತ್ಯಾಲ್ಪಾಶೌಚ್ಚಕ್ತಿ ಗುರುಸ್ತುತಿಂ ॥ 60 ॥
ಶಾಂತಿಭಕ್ತಿಂ ಚ ಕುರ್ವಾಣೈರ್ವರ್ಷಾ ಯೋಗಸ್ತು ಗೃಹ್ಯತಾಮ್ ।
ಊರ್ಜಕೃಷ್ಣಾ ಚತುರ್ದಶ್ಯಾಂ ಪಶ್ಚಾದ್‌ರಾತ್ರೌ ಚ ಮುಚ್ಯತಾಮ್ ॥ 66 ॥

ಮಹಾರಾಜರು ನೋಡಿ ಹೇಳಿದರು ಹೌದು ಆಚಾರ್ಯ ಕಲ್ಪಶ್ರೀ ಚಂದ್ರಸಾಗರರು ರಾತ್ರಿಯಲ್ಲಿಯೇ ಸ್ಥಾಪನೆಯನ್ನು ಮಾಡುತ್ತಿದ್ದರಿಂದ ಅದೇ ಸರಿ ಎಂದು. ಜಯಪುರದಲ್ಲಿಯೂ ರಾತ್ರಿಯಲ್ಲಿಯೇ ಚಾತುರ್ಮಾಸದ ಸ್ಥಾಪನೆಯನ್ನು ಪ್ರಾರಂಭಿಸಿದರು. ಹಾಗೇ ದೀಪಾವಳಿಯ ಕಾರ್ತೀಕ ಚತುರ್ದಶಿಯ ಹಿಂದಿನ ರಾತ್ರಿಯೇ ವರ್ಷಾಯೋಗದ ವಿಸರ್ಜನೆಯನ್ನು ಮಾಡಿಸಿದರು. ಆರ್ಯಿಕೆಯರು ಸ್ಥಾಪನೆಯ ದಿನ ರಾತ್ರಿ ಸಾಯಂಕಾಲವೇ ಎಲ್ಲರು ಮಂದಿರದಲ್ಲಿ ಸೇರಿದ್ದರು. ವಿಸರ್ಜನೆಯ ದಿನವು ಆಚಾರ್ಯರ ಸಂಘದ ಹತ್ತಿರದ ಸ್ಥಾನದಲ್ಲೇ ಎಲ್ಲರು ಮೊದಲೆ ವಿರಾಜಮಾನರಾಗಿದ್ದರು. 1974ರಲ್ಲಿ ಆಚಾರ್ಯ ಧರ್ಮಸಾಗರರು ಚಾತುರ್ಮಾಸ ಸ್ಥಾಪನೆಯನ್ನು ಲಾಲಮಂದಿರದಲ್ಲಿ ರಾತ್ರಿಯೇ ಮಾಡಿದರು. ವಿಸರ್ಜನೆಯನ್ನು ದರಿಯಾಗಂಜನ ಬಾಲಾಶ್ರಮದಲ್ಲಿ ಚತುರ್ದಶಿಯ ಹಿಂದಿನ ದಿನ ಮಾಡಿದ್ದರು.

---

೧. ಅನಾಗಾರ ಧರ್ಮಾಮೃತ ಅಧ್ಯಾಯ ೯

ಪ್ರಕಾಶ ಚಂದ್ರನಿಗೆ ಗುರುದರ್ಶನ

1969ರಲ್ಲಿ ಪ್ರಕಾಶಚಂದನು ತನ್ನ ಹೆಂಡತಿ ಜ್ಞಾನದೇವಿ, ಮಕ್ಕಳು, ಸಹೋದರಿ ಮಾಧುರಿ, ಭಾವಮೈದ ಮಂಜು, ಎಲ್ಲರನ್ನು ಸಂಘದ ದರ್ಶನಕ್ಕಾಗಿ ಕರೆದುಕೊಂಡು ಬಂದಿದ್ದ. 1963ರಲ್ಲಿ ನಮ್ಮ ಸಮ್ಮೇದ ಶಿಖರ ಯಾತ್ರೆಯ ನಂತರ ಸುಮಾರು 6 ವರ್ಷಗಳ ನಂತರ ಬಂದವನು ಕೆಲವು ದಿನಗಳವರೆಗೆ ಸಂಘದಲ್ಲಿ ಇದ್ದ.

ಮೋತಿಚಂದರು ನನ್ನಿಂದ ರಚಿತವಾದ ಉಷಾವಂದನೆ ಎಂಬ ಪುಸ್ತಕವನ್ನು 1000 ಪ್ರತಿ ಅಚ್ಚು ಹಾಕಿಸುವ ನಿರ್ಣಯ ಕೈಕೊಂಡರು. ಪ್ರಕಾಶ ಚಂದ ತನ್ನ ಪರಿವಾರದ ಕಡೆಯಿಂದಲೇ ಖರ್ಚನ್ನು ವಹಿಸಿಕೊಂಡ ಹಾಗೇ ಜೈನ ಜ್ಯೋತಿರ್ಲೋಕ ಪುಸ್ತಕವನ್ನು ತಂದೆಯವರ ಹೆಸರಿನಲ್ಲಿ ಪ್ರಕಾಶಿಸಲು ಸಮ್ಮತಿಸಿ ಊರಿಗೆ ಹೋಗಿ ಹಣ ಕಳುಹಿಸುತ್ತೇನೆ ಅಂದ.

ಮಾಧುರಿ ಮೇಲೆ ಪ್ರಭಾವ

ನನ್ನ ಹತ್ತಿರ ಕು. ಸುಶೀಲ, ಶೀಲ, ಕಲಾ ಮೊದಲಾದವರು ಗೊಮ್ಮಟಸಾರದ ಜೀವಕಾಂಡವನ್ನು ಮತ್ತು ಕಾತಂತ್ರ ವ್ಯಾಕರಣವನ್ನು ಓದುತ್ತಿದ್ದರು., ಮಾಧುರಿಯ ಬುದ್ಧಿಮತ್ತೆಯನ್ನು ನೋಡಿದ ನಾನು ಅವಳಿಗೂ ಇವುಗಳ ಶಿಕ್ಷಣ ಕೊಡಲಾರಂಭಿಸಿದೆ. ಹಾಗೇ ಇಲ್ಲೇ ಸ್ವಲ್ಪ ದಿನ ಇರು ಧಾರ್ಮಿಕವನ್ನೆಲ್ಲ ಕಲಿತು ಊರಿಗೆ ಹೋಗುವಂತೆ ಎಂದು ಹೇಳಿದೆ. ಒಮ್ಮೆ ಮಾಧುರಿ ಮತ್ತು ಮಂಜುವಿಗೂ ಇರೋಣವೆನ್ನಿಸಿತು. ಆದರೆ ಪ್ರಕಾಶ ಹೊರಟು ನಿಂತಾಗ ಇವರು ಅವರ ಜೊತೆ ಹೊರಟೇ ಹೋದರು. ಮಾಧುರಿ 10-11 ವರ್ಷವಿರುವಾಗ ಒಮ್ಮೆ ಬಂದಾಗಲು ಅವಳು ಇರಲಿಲ್ಲ. ಅವಳು ಮನೆಗೆ ಹೋಗುತ್ತಲೆ ತಂದೆ ಅವಳನ್ನ ಅಲಂಗಿಸುತ್ತಾ ಒಳ್ಳೆ ಕೆಲಸ ಮಾಡಿದೆ ಮಗಳೆ ನೀನು ಮಾತಾಜಿಯ ಹತ್ತಿರ ಇರದೆ ಬಂದಿದ್ದು ಒಳ್ಳೆಯದೆ ಆಯಿತೆಂದಿದ್ದರು.

ಸಂಘದಲ್ಲಿ ಮಧ್ಯಾಹ್ನ 1 ಗಂಟೆಯಿಂದ 4 ಗಂಟೆಯವರೆಗೂ ಮುನಿಶ್ರೀ ದಯಾಸಾಗರಜೀ, ಅಭಿನಂದನಸಾಗರಜೀ, ಸಂಯಮ ಸಾಗರಜೀ, ಬೋಧಿಸಾಗರಜೀ, ನಿರ್ಮಲ ಸಾಗರಜೀ, ಮಹೇಂದ್ರಸಾಗರಜೀ, ಸಂಭವಸಾಗರಜೀ, ವರ್ಧಮಾನಸಾಗರಜೀ ಗಳಿಗೆ ಗೊಮ್ಮಟ ಸಾರದ ಜೀವಕಾಂಡ, ಕಲ್ಯಾಣ ಮಂದಿರ, ಮೊದಲಾದ ಗ್ರಂಥಗಳನ್ನು ಸ್ವಾಧ್ಯಾಯ ಮಾಡಿಸುತ್ತಿದ್ದರು. ಇದರಲ್ಲಿ ಆರ್ಯಿಕೆಯರು ಹಾಗೇ ಮೋತಿಚಂದರು ಕುಳಿತುಕೊಳ್ಳುತ್ತಿದ್ದರು. ಆಹಾರವಾದ ನಂತರ ಕೆಲವು ಆರ್ಯಿಕೆಯರು ತಮ್ಮ ಸ್ಥಾನದಲ್ಲೇ ಪ್ರಾಕೃತ ವ್ಯಾಕರಣವನ್ನು ಕಲಿಸುತ್ತಿದ್ದೆ. ಬೆಳಗ್ಗೆ 7 ರಿಂದ 9.30ಯವರೆಗೂ ಮುನಿಗಳಿಂದ ಅಭಿನಂದನ ಸಾಗರಜೀ, ವರ್ಧಮಾನ ಸಾಗರಜೀ ಮೊದಲಾದವರಿಗೆ, ಮಾತಾಜೀಗಳಲ್ಲಿ ಆದಿಮತೀ, ಅಭಯಮತೀ, ಮೋತಿಚಂದ ಅವರಿಗೆ ತತ್ವಾರ್ಥ ರಾಜವಾರ್ತಿಕ ಮತ್ತು ಅಷ್ಟ ಸಹಸ್ರಿಯನ್ನು ಓದಿಸುತ್ತಿದ್ದೆ. ಹೀಗೆ ನನ್ನ ದಿನಚರಿ ದಿನಪೂರ್ತಿ ಅಳವಡಿಸಿಕೊಂಡಿದ್ದೆ.

ಟಿಕೈತನಗರದಲ್ಲಿ ಮಾಧುರಿ ನನ್ನ ಹತ್ತಿರ ಕಲಿತ ಗೊಮ್ಮಟಸಾರದ 34 ಗಾಥೆಗಳನ್ನು ಆಚಾರ್ಯ ಸುಬಲ ಸಾಗರರ ಹತ್ತಿರ ಬಾಯಿಪಾಠ ಮಾಡಿ ಹೇಳಿದಾಗ ಅವರು ಬಹಳ ಹರ್ಷಿತರಾದರು. ಮಾತೆ ಮೋಹಿನಿಯ ಗರ್ಭದಿಂದ ಜನ್ಮ ಪಡೆದ ಎಲ್ಲಾ ಸಂತಾನಗಳಿಗೆ ಬುದ್ಧಿಯ ಕ್ಷಯೋಪಶಮ. ಪ್ರತಿಯೊಬ್ಬ ಮಗ, ಮಗಳು, ಮಕ್ಕಳ ಬುದ್ಧಿಯು ತೀಕ್ಷ್ಣವಾಗಿದೆ. ಆಚಾರ್ಯರಂತು ಪ್ರತಿದಿನ ಅವಳಿಂದ ಗೊಮ್ಮಟಸಾರದ 34 ಗಾಥೆಗಳನ್ನು ಹೇಳಿಸಿ ಗದ್ಗದಿತರಾಗುತ್ತಿದ್ದರು.

ಅಷ್ಟಸಹಸ್ರಿಯ ಅನುವಾದ

ಮೋತಿಚಂದ ಬಾಂಬೆಯ ಪರೀಕ್ಷಾಲಯದಿಂದ ಶಾಸ್ತ್ರಿ ಪರೀಕ್ಷೆಗೆ ಅರ್ಜಿ ತುಂಬಿಸಿದ್ದ. ಹಾಗೇ ಕಲಕತ್ತೆಯ ಬಂಗೀಯ ಸಂಸ್ಕೃತ ಪರಿಷದನ ಪರೀಕ್ಷಾಲಯದಿಂದ ನ್ಯಾಯತೀರ್ಥ ಪರೀಕ್ಷೆಗೂ ಕುಳಿತಿದ್ದ. ಈ ಎರಡು ಕೋರ್ಸಿನಲ್ಲೂ ಅಷ್ಟಸಹಸ್ರೀ ಗ್ರಂಥವನ್ನು ಓದಬೇಕಾಗಿತ್ತು. ಇದೊಂದು ಉಚ್ಚತಮ ನ್ಯಾಯಗ್ರಂಥವಾಗಿದೆ. ಇದು ಸಂಸ್ಕೃತದಲ್ಲಿ ಮಾತ್ರ ಇತ್ತು. ಮೋತಿಚಂದ್ರನು ಸಂಸ್ಕೃತದಲ್ಲಿ ಓದಿ ನಾನು ಪರೀಕ್ಷೆ ಬರೆಯುವುದು ಕಠಿಣ ಎಂದು ಕುಳಿತ. ಮಾತಾಜಿ ನಾನು ಗ್ರಂಥವನ್ನು ಮೂಲದಿಂದ ಓದಿ ಪರೀಕ್ಷೆ ಬರೆಯಲಾರೆ ಎನ್ನತೊಡಗಿದ.

ಹಾಗಾಗಿ ನಾನು ಗ್ರಂಥದ ಹಿಂದಿ ಅನುವಾದ ಮಾಡಲು ಆರಂಭಿಸಿದೆ. ಪ್ರಾರಂಭದ ಕೆಲವು ಪುಟಗಳನ್ನು ಓದಿಯೇ ಮೋತಿಚಂದನಿಗೆ ಬಹಳ ಆನಂದವಾಯಿತು. ಅವನಿಗೆ ಪರೀಕ್ಷೆಗೆ ಬಹಳ ಅನುಕೂಲವಾಯಿತು. ಜೊತೆಗೆ ಪಂಡಿತ ಭಂವರಿಲಾಲ ನ್ಯಾಯಮೂರ್ತಿಗಳು "ಜಿನಸ್ತವನಮೂಲ" ಮುಂತಾದ ನನ್ನ ರಚನೆಗಳನ್ನು ತಮ್ಮ ಪ್ರೆಸ್ಸಿನಲ್ಲೆ ಅಚ್ಚುಹಾಕಿಸಿದರು. ಅವರಿಗೆ ಬಹಳ ಸಂತೋಷವಾಯಿತು. ಇಲ್ಲಿಯ ಸಂಸ್ಕೃತ ವಿದ್ಯಾಲಯದ ಪ್ರಾಚಾರ್ಯ ಪಂ ಗುಲಾಬಚಂದ್ರ ಜೈನ ದರ್ಶನಾಚಾರ್ಯರಿಗೆ ಬಹಳ ಸಂತೋಷವಾಗಿತ್ತು. ಪಂ. ಇಂದ್ರಲಾಲಜೀ ಶಾಸ್ತ್ರೀಜೀಯವರು ನನ್ನ ಹತ್ತಿರ ಬರುತ್ತಿದ್ದರು. ಹೀಗೆ 7- 8 ವಿದ್ವಾಂಸರು ನನ್ನ ಅನುವಾದವನ್ನು ನೋಡಿದವರೇ ನನ್ನ ಹತ್ತಿರ ಬಂದು ಪ್ರಾರ್ಥಿಸಿದರು. ಮಾತಾಜಿ ಈ ಗ್ರಂಥದ ಅನುವಾದವನ್ನು ಇಷ್ಟು ಚೆನ್ನಾಗಿ ಬೇರೆ ಯಾರೂ ಮಾಡಲು ಸಾಧ್ಯವೇ ಇಲ್ಲ. ಆದ್ದರಿಂದ ತಾವು ನಿಲ್ಲಿಸದೇ ಆ ಕೆಲಸವನ್ನು ಪೂರ್ಣಗೊಳಿಸಬೇಕು. ಇದೊಂದು ಮಹಾನ್‌ಕಾರ್ಯವಾಗಿದೆ ಎಂದರು.

ನಾನು ಹಿಂದಿ ಅನುವಾದವನ್ನು ಬರೆದ ಮೇಲೆ ಅವರಿಗೆ ಓದಿ ಅರ್ಥಮಾಡಿಸಿದಾಗ ಅವರಿಗೆಲ್ಲ ಹೃದಯಗತವಾಯಿತು. 1970ರಲ್ಲಿ ಟೊಂಕ ಚಾತುರ್ಮಾಸದ ನಂತರ ಟೋಡಾರಾ ಸಿಂಹ ಹಳ್ಳಿಯಲ್ಲಿ ಪೌಷ ಶುಕ್ಲ ದ್ವಾದಶಿಯಲ್ಲಿ ಈ ಗ್ರಂಥದ ಅನುವಾದವನ್ನು ಮುಗಿಸಿದೆ. ಅದೇ ಸಮಯದಲ್ಲಿ ನಾನು ಈ ಗ್ರಂಥವನ್ನು ಸಾರರೂಪದಲ್ಲಿ 54 ಸಾರಾಂಶ ರಚಿಸಿದೆ. ಇದನ್ನು ಓದಿದ 1972ರಲ್ಲಿ ತ್ರಿಶಲಾ, ಮಾಧುರೀ, ಮಾಲತೀ, ರವೀಂದ್ರ ಕುಮಾರ, ಮೋತಿಚಂದ ಮೊದಲಾದ ಎಲ್ಲಾ ಶಿಷ್ಯರು ಶಾಸ್ತ್ರೀ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಈ ಗ್ರಂಥದ ಅನುವಾದ ಕಾರ್ಯ ಮಾಡುವಾಗ ನೆಗಡಿ, ಕೆಮ್ಮು ಮೊದಲಾದವುಗಳು ನನ್ನನ್ನು ಸತಾಯಿಸತೊಡಗಿತು. ಡಾಕ್ಟರ್, ವೈದ್ಯರುಗಳು ಮಾತಾಜಿ ಇಷ್ಟೊಂದು ಬಗ್ಗಿ ಬರೆಯುವುದು, ಮನಸ್ಸಿನಲ್ಲಿ ಅಧಿಕವಾದ ಯೋಚನೆ ಮಾಡುವುದನ್ನು ಕಡಿಮೆ ಮಾಡಬೇಕು. ಇಲ್ಲದಿದ್ದರೆ ನೆಗಡಿಯು ನಿಯಂತ್ರಣಕ್ಕೆ ಬರುವುದಿಲ್ಲ ಎಂದರು. ಆದರೆ ಯಾರು ಏನು ಹೇಳಿದರೂ ಕೇಳದೆ ಆ ಗ್ರಂಥದ ಅನುವಾದ ಕಾರ್ಯವನ್ನು ಮುಗಿಸಿದ ಮೇಲೆ ನೆಮ್ಮದಿ ಆಯಿತು. ಇದಕ್ಕೆ ಇನ್ನೊಂದು ಕಾರಣವೇನೆಂದರೆ ಅಷ್ಟಸಹಸ್ರೀ ಗ್ರಂಥದ ಅನುವಾದ ಮಾಡುವಾಗ ನನಗೆ ವಿಶೇಷವಾದ ಆನಂದದ ಅನುಭವವಾಗತೊಡಗಿತು. ಸಮ್ಯಗ್ದರ್ಶನದ ನಿರ್ಮಲತೆಯ ಜೊತೆಗೆ ಶ್ರೀ ಜಿನೇಂದ್ರ ಭಗವಂತರ ಬಗ್ಗೆ ಅತೀವವಾದ ಅನುರಾಗವು ಹೆಚ್ಚುತ್ತಾ ಹೋಯಿತು. ಇದನ್ನು ನಾನು ಬರೇ ಶಬ್ದಗಳಲ್ಲಿ ವರ್ಣಿಸಲಾರೆ.

ಜೈನ ಜ್ಯೋತಿರ್ಲೋಕದ ಶಿಬಿರ

ಇಲ್ಲಿನ ಜೈನ ದರ್ಶನ ವಿಭಾಗದ ಪ್ರಾಚಾರ್ಯ ಪಂ. ಗುಲಾಬಚಂದ ಜೈನರು ನನಗೆ ಬಹಳ ಹತ್ತಿರವಾಗಿದ್ದರು. ಅವರಿಗೆ ಜೈನ ಭೂಗೋಳ ವಿಷಯದಲ್ಲಿ ಬಹಳ ಪ್ರೇಮವಿತ್ತು. ನಮ್ಮಗಳ ನಡುವೆ ಹಲವಾರು

ಚರ್ಚೆ ಸಂಶಯ ಸಮಾಧಾನಗಳು ನಡೆಯುತ್ತಿತ್ತು. ಕೆಲವು ವಿದ್ವಾಂಸರ ಅಪೇಕ್ಷೆಯ ಮೇರೆಗೆ ಆಚಾರ್ಯರ ಅನುಮತಿಯನ್ನು ಪಡೆದು 15 ದಿನಗಳ "ಜ್ಯೋತಿರ್ಲೋಕ"ದ ಶಿಕ್ಷಣ ಶಿಬಿರದ ಆಯೋಜನೆಯನ್ನು ಮಾಡಿದ್ದೆ.

ಎಲ್ಲಾ ವಿದ್ವಾಂಸ ಮತ್ತು ಶ್ರೇಷ್ಠಿವರ್ಗದವರೆಲ್ಲ ಪೆನ್ನು ಪುಸ್ತಕ ಹಿಡಿದು ಕುಳಿತುಕೊಂಡರು. ನಾನು ಪ್ರಮುಖವಾಗಿ "ಲೋಕ ವಿಭಾಗ" ಎಂಬ ಗ್ರಂಥದ ಆಧಾರದಿಂದ ಜ್ಯೋತಿರ್ಲೋಕದ ವಿಷಯದಲ್ಲಿ ಶಿಕ್ಷಣ ಕೊಟ್ಟೆ. ಜನರಿಗೆ ಜೈನಶಾಸ್ತ್ರಾಧಾರದಿಂದ ಸೂರ್ಯ, ಚಂದ್ರ, ನಕ್ಷತ್ರ ಮುಂತಾದವುಗಳ ವಿಮಾನದ ಗಮನ ಮುಂತಾದವುಗಳ ಜ್ಞಾನದಿಂದ ಎಲ್ಲರಿಗೂ ಬಹಳ ಆನಂದವಾಯಿತು. ಈ ವಿಷಯವನ್ನು ಶಿಬಿರದಿಂದ ಮೋತಿಚಂದನು ಇನ್ನು ಚೆನ್ನಾಗಿ ಅರಿತುಕೊಂಡನು. ತನ್ನ ನೋಟ್ಸ್‌ನಲ್ಲಿ ಬರೆದುಕೊಂಡಿದ್ದನು. ಶಿಬಿರ ಎಂದ ಮೇಲೆ ನಾನು ಆ ನೋಟ್ಸನ್ನು ತಿದ್ದಿ ಪುಸ್ತಕದ ರೂಪದಲ್ಲಿ ತಯಾರು ಮಾಡಿಸಿದೆ. ಮೋತಿಚಂದನು ಅದನ್ನು ಜೈನಜ್ಯೋತಿರ್ಲೋಕ ಎಂಬ ಹೆಸರಿನಲ್ಲೇ ಅಚ್ಚು ಮಾಡಿಸಿದನು. ಆ ಪುಸ್ತಕದ ರಕ್ಷಾ ಕವಚದ ಮೇಲೆ ನಕ್ಷತ್ರ, ತಾರಾಮಂಡಲ ಮತ್ತು ಚಂದ್ರನನ್ನು ಸುಂದರವಾಗಿ ಚಿತ್ರಿಸಿದ್ದರು. ಇದರ ಎರಡನೆಯ ಸಂಸ್ಕರಣವು ದೆಹಲಿಯಿಂದ ಪ್ರಕಟಗೊಂಡಿತು. ಈ ಪುಸ್ತಕವು ಹೆಚ್ಚು ಲೋಕಪ್ರಿಯವಾಗಿದೆ.

ದಶ ಲಕ್ಷಣ ಪರ್ವ

ದಶಲಕ್ಷಣಪರ್ವಕ್ಕಾಗಿ ಬಕ್ಸೀಯ ಚೌಕದಲ್ಲಿ ಪೆಂಡಾಲ ಹಾಕಲಾಗಿತ್ತು. ಅಲ್ಲಿ ಆಚಾರ್ಯರ ಪ್ರವಚನದ ಏರ್ಪಾಟು ಆಗಿತ್ತು. ಇದಕ್ಕೆ ಮೊದಲು ಆಚಾರ್ಯರು ನನ್ನನ್ನು ಕರೆದು ಹೇಳಿದರು. ಮಾತಾಜಿ ತಾವು ರಾಜವಾರ್ತಿಕವನ್ನು ಪಾಠ ಮಾಡಿರುವುದರಿಂದ ಹತ್ತು ದಿನವೂ ತತ್ವಾರ್ಥಸೂತ್ರದ ಒಂದೊಂದು ಅಧ್ಯಾಯವನ್ನು ಅರ್ಥ ಸಹಿತ ಪ್ರವಚನ ಮಾಡಿರಿ ಎಂದು ಹೇಳಿದರು.

ನಾನು ತಮ್ಮ ಆಜ್ಞೆಯಂತೆ ಆಗಲಿ ಎಂದು ಸಮ್ಮತಿ ಸೂಚಿಸಿದ್ದು ಬಹಳಷ್ಟು ಜನರಿಗೆ ಮುದ ತಂದಿತು. ಮಾತಾಜಿ ನಾವೆಲ್ಲ ವಿದ್ವಾಂಸರು ನಿಮ್ಮಿಂದ ತತ್ತ್ವಾರ್ಥಸೂತ್ರದ ಪ್ರವಚನ ಕೇಳಲು ಕಾತುರವಾಗಿದ್ದೇವೆ. ತಾವು ರಾಜವಾರ್ತಿಕ, ಶ್ಲೋಕವಾರ್ತಿಕ, ಮುಂತಾದ ಗ್ರಂಥಗಳ ಆಧಾರದಿಂದ ಹೆಚ್ಚಾಗಿ ಸಿದ್ಧಾಂತ, ನ್ಯಾಯ, ಭೂಗೋಲ ಖಗೋಲದ ಮೇಲೆ ಬೆಳಕು ಬೀರುತ್ತೀರೆಂದು ಇದಕ್ಕಾಗಿ ಉಜ್ಜೈನಿಯಿಂದ ಪಂ. ಸತ್ಯಂಧರ ಕುಮಾರಜೀ ಮೊದಲಾದವರೆಲ್ಲ ಮೊದಲೇ ಬಂದು ತಂಗಿದ್ದರು.

ಆದರೆ ಒಬ್ಬ ಬ್ರಹ್ಮಚಾರಿ ಮಹಾನುಭಾವರು ಆಚಾರ್ಯರ ಹತ್ತಿರ ಬಂದು - ಮಹಾರಾಜಜೀ ತಾವೇ ತತ್ತ್ವಾರ್ಥಸೂತ್ರದ ಮೇಲೆ ಪ್ರವಚನವನ್ನು ಮಾಡಿರಿ ಒಬ್ಬೊಬ್ಬ ಸಾಧು ಸಾಧ್ವಿಗಳು ಒಂದೊಂದು ಧರ್ಮದ ಬಗ್ಗೆ ಮಾತಾಡಲಿ. ಜ್ಞಾನಮತಿಯರು ತತ್ತ್ವಾರ್ಥಸೂತ್ರದ ಮೇಲೆ ಪ್ರವಚನ ಮಾಡುವುದು ಬೇಡ ಎಂದು ವಿನಂತಿಸಿ ಕೊಂಡರು.

ಆಚಾರ್ಯರು ಬಹಳ ಸರಳ ಸ್ವಭಾವದವರಾದ್ದರಿಂದ ಅವರ ಮಾತಿಗೆ ಬೆಲೆಕೊಟ್ಟರು. ನಾನು ಚಿಂತೆಯನ್ನೇನು ಮಾಡಲಿಲ್ಲ. ಆದರೆ ವಿದ್ವಾಂಸರುಗಳು ನನ್ನ ಹತ್ತಿರ ಬಂದು ಕಾರ್ಯಕ್ರಮ ಬದಲಾದ ಬಗ್ಗೆ ಹೇಳುತ್ತಾ ಮಾತಾಜೀ ನಾವೆಲ್ಲರು ಬೇರೆಯ ಕಡೆ ನಿಮ್ಮ ತತ್ತ್ವಾರ್ಥದ ಸೂತ್ರದ ಪ್ರವಚನ ಕೇಳ ಬಯಸುತ್ತೇವೆ ಅಂದರು. ಆದರೆ ನಾನು ಒಪ್ಪಿಕೊಳ್ಳದೆ ನೀವೆಲ್ಲರು ಆಚಾರ್ಯರಿಂದಲೇ ಪ್ರವಚನವನ್ನು ಕೇಳಿರಿ ನನ್ನ ಅನುಭವ ಜ್ಞಾನಕ್ಕಿಂತ ಅವರ ಜ್ಞಾನ ವಿಶೇಷವಾದುದು. ನನ್ನದಾದರೂ ಕೋರಾನ್ಯಾಯ ಮತ್ತು ವ್ಯಾಕರಣದಲ್ಲಿ ಶಾಬ್ದಿಕ ಜ್ಞಾನ ಮಾತ್ರ

ಎಂದು ಸಮಾಧಾನಿಸಿದೆ. ಆ ವಿದ್ವಾಂಸರಲ್ಲಿ ಒಂದಿಬ್ಬರು ಬಂದು ಹೇಳುತ್ತಿದ್ದರು. ಆ ಕಾರಣವಾಗಿ ಆಸೂಯೆಯ ಜನರು ನಮಗೆ ಅಂತರಾಯದ ಕೆಲಸ ಮಾಡಿಬಿಟ್ಟರು.

ಶಾಂತಿಬಾಯಿಯ ದೀಕ್ಷೆ

ಖಾನಿಯಾದಲ್ಲಿ ನನ್ನ ಹತ್ತಿರ ಬಂದಿದ್ದ ಶಾಂತಿಬಾಯಿ ಎಂಬ ಕನ್ಯೆಯು ಬ್ರಹ್ಮಚರ್ಯ ವ್ರತವನ್ನು ಧಾರಣೆ ಮಾಡಿದ್ದರು. ನನ್ನ ಹತ್ತಿರ ಅಧ್ಯಯನ ಮಾಡುತ್ತಿದ್ದಳು. ಆಚಾರ್ಯರ ಆಜ್ಞೆಯಿಂದಲೇ ಅವಳನ್ನು ನನ್ನ ಹತ್ತಿರವೇ ಇಟ್ಟುಕೊಂಡು ಅಧ್ಯಯನ. ಪ್ರಾರಂಭಿಸಿದ್ದ ಇವಳ ಕ್ಷಯೋಪಶಮ ಚೆನ್ನಾಗಿತ್ತು. ನಿಧಾನವಾಗಿ ವೈರಾಗ್ಯದ ಕಡೆ ವಾಲುತ್ತಿದ್ದಳು. ಈಗ ಇದೇ ಚಾತುರ್ಮಾಸದಲ್ಲಿ ದೀಕ್ಷೆ ತೆಗೆದುಕೊಳ್ಳಲು ಸಿದ್ಧಳಾಗಿದ್ದಳು. ಆಚಾರ್ಯರು ಅನುಮತಿ ಕೊಟ್ಟಿದ್ದರು. ಇಲ್ಲಿಯ ಸಮಾಜದವರು ಬ್ರಹ್ಮಚಾರಿಣಿಯನ್ನು ಚೆನ್ನಾಗಿ ಸನ್ಮಾನಿಸಿದ್ದರು. ಅವಳಿಗೆ ಬಿಂದೋರ, ಶೋಭಾಯಾತ್ರೆ ಯಂತು ಕೆಲವು ದಿನಗಳವರೆಗೆ ನಡೆಯಿತು. ಒಳ್ಳೆಯ ಪ್ರಭಾವನೆಯು ಉಂಟಾಯಿತು. ಅವಳಿಗೆ ಆರ್ಯಿಕೆ ದೀಕ್ಷೆ ನಡೆಯಿತು ಅವರು ಜಯಮತೀ ಮಾತಾಜೀ ಆದರು.

ಈ ಆರ್ಯಿಕೆ ಜಯಮತೀ ಕೆಲವು ವರ್ಷ ನನ್ನ ಹತ್ತಿರವೇ ಇದ್ದು ಧಾರ್ಮಿಕ ಅಧ್ಯಯನ ಮಾಡಿದಳು. ತಪಶ್ಚರ್ಯದ ಶಕ್ತಿಯು ಚೆನ್ನಾಗಿತ್ತು. 8-8 ಉಪವಾಸಗಳನ್ನು ಮಾಡಿ, ಮೆಟ್ಟಲನ್ನು ಏರಿದ್ದಳು. ಮಾತಾಡುವುದರಲ್ಲಿ ಜೋರಾಗಿ ಮಾಡುವುದನ್ನು ನೋಡಿ ನನಗೆ ಇವಳ ಪೂರ್ವ ಬಹಳ ಚೆನ್ನಾಗಿದೆ. ನನಗೆ ಒಂದು ಉಪವಾಸ ಮಾಡಿದರೂ ಸಾಕು ಒಂದು ಮೆಟ್ಟಲನ್ನು ಏರಲಾರೆ, ಮಾತಾಡುವುದಕ್ಕೂ ಶಕ್ತಿ ಇರುವುದಿಲ್ಲ, ಆದರೆ ಇವಳ ಶಕ್ತಿ ನೋಡಿ ಅಚ್ಚರಿಪಟ್ಟೆ.

ಆರ್ಯಿಕೆ ಜಯಮತೀಯವರು 1971ರಲ್ಲಿ ಸುಪಾರ್ಶ್ವ ಸಾಗರರ ಜೊತೆ ಸಮ್ಮೇದಶಿಬಿರ ಯಾತ್ರೆ ಹೋಗಿದ್ದು ಪುನಃ 1974ರಲ್ಲಿ ಸಂಘಕ್ಕೆ ವಾಪಸ್ಸು ಬಂದು ಸೇರಿದರು. 1975ರಲ್ಲಿ ಅವರು ಸಂಘದಿಂದ ಬೇರೆಯಾಗಿ ಹೋಗಿದ್ದು ನಮಗೆ ಇಷ್ಟವಿರಲಿಲ್ಲ ಏಕೆಂದರೆ ಸಂಘದಲ್ಲಿ ಅನುಶಾಸನವಿರುವುದರಿಂದಲೇ ಆತ್ಮ ಹಿತವಿರುತ್ತದೆ. ಇವರು ಹೀಗೆ ವಿಹಾರ ಮಾಡುವಾಗ ಅಕ್ಸಿಡೆಂಟ್ ಆಗಿ ಬಹಳ ಏಟಾಗಿ ಇವರನ್ನು ಮುಜಫರ ನಗರದಲ್ಲಿ ಚಿಕಿತ್ಸೆಗಾಗಿ ಸೇರಿಸಿದಾಗ ದೀಕ್ಷೆಯನ್ನು ಬಿಡಬೇಕಾಗಿ ಬಂದಿತು. ಅವರು ಹುಷಾರಾದ ಮೇಲೆ ಪುನಃ ಮುನಿಶ್ರೀ ಜಯಸಾಗರರ ಹತ್ತಿರ ಆರ್ಯಿಕೆ ದೀಕ್ಷೆಯನ್ನು ತೆಗೆದುಕೊಂಡರು.

1988ರ ಜನವರಿಯಲ್ಲಿ ಹಸ್ತಿನಾಪುರದ ದೊಡ್ಡ ಮಂದಿರದಲ್ಲಿ ತಂಗಿದ್ದು ಜಂಬೂದ್ವೀಪದ ದರ್ಶನಕ್ಕೂ ಬರಲಿಲ್ಲ ನನ್ನನ್ನು ದರ್ಶನ ಮಾಡಲು ಬರಲಿಲ್ಲ. ಆದರೆ ಅವರಿಗೆ ಅಪಘಾತವಾದ ಮೇಲೆ ಮೆದುಳಿನಲ್ಲಿ ನೆನಪಿನ ಕೊರತೆ ಎಂದರು.

ಇಂತಹ ಅನಾರೋಗ್ಯವಾಗಲಿ ಅಥವ ವಿಶೇಷ ಆಪತ್ತಿನಲ್ಲಾಗಲಿ, ಸ್ಥಿತೀಕರಣ, ಉಪಗೂಹನ, ಸಂರಕ್ಷಣ ಮುಂತಾದವುಗಳಿಗಾಗಿಯೇ ಮುನಿ ಸಂಘದಲ್ಲಿಯೇ ಇರಲು ಆದೇಶ ಕೊಡಲಾಗಿದೆ. ಒಬ್ಬಂಟಿಯಾಗಿ ಇರುವುದಕ್ಕೆ ಯಾವಾಗಲೂ ವಿರೋಧವಿದೆ. ಹಾಗೇ ಆರ್ಯಿಕೆಯರಿಗಂತು ಒಂಟಿಯಾಗಿ ಓಡಾಡುವುದಕ್ಕೆ ಅನುಮತಿಯನ್ನು ಕೊಡುವುದೇ ಇಲ್ಲ. ಯಾರು ಇದನ್ನು ಪಾಲಿಸುವುದಿಲ್ಲವೋ ಅವರಿಗೆ ಇದೇ ಸ್ಥಿತಿ ಬರುವುದು. ಈ ದೃಷ್ಟಾಂತವನ್ನು ನೋಡಿ ಮನಸ್ಸಿಗೆ ಬಹಳ ದುಃಖವಾದರೂ ಉಪಾಯವೆಲ್ಲಿದೆ. ಈ ಕಲಿಕಾಲದಲ್ಲಿ ಗುರುಜನರ ಅನುಶಾಸನದಲ್ಲೇ ಇರುವಂತಹವರು ಕೆಲವೇ ಪುಣ್ಯಶಾಲಿ ಜೀವಗಳಿವೆ ಎಂದು ತಿಳಿಯಬೇಕು.

ಹಾಗೇ ನನ್ನ ಮನಃಪಟಲದಲ್ಲಿ ಗುರು ಆಜ್ಞೆಯನ್ನು ಉಲ್ಲಂಘಿಸಿದ ಒಂದು ರೋಮಾಂಚಕಾರಿ ಘಟನೆ ನೆನಪಿಗೆ ಬಂದಿತು. 1957ರಲ್ಲಿ ಖಾನಿಯಾದಲ್ಲಿ ಒಬ್ಬ ವಿಧವಾ ಮಹಿಳೆ ಸಂಘದಲ್ಲಿ ಇದ್ದು ಅಭ್ಯಾಸ ಮಾಡುವ ಉದ್ದೇಶದಿಂದ ಬಂದಿದ್ದರು. ಆಗ ಆ ವೀರಸಾಗರರು ನನ್ನನ್ನು ಕರೆದು ಇವರನ್ನು ನಿಮ್ಮ ಹತ್ತಿರವೇ ಇಟ್ಟುಕೊಂಡು ಪಾಠ ಹೇಳಿ, ಅನುಶಾಸನದಲ್ಲಿ ಇಟ್ಟಿರಿ ಎಂದರು. ನಾನು ಪ್ರೇಮದಿಂದಲೇ ಛಡಾಪಾಲ, ತತ್ತ್ವಾರ್ಥಸೂತ್ರ ಮೊದಲಾದವನ್ನೆಲ್ಲ ಹೇಳಿಕೊಟ್ಟೆ ಹಾಗೇ ದಶಲಕ್ಷಣ ಪರ್ವ ಬಂದಾಗ ಹತ್ತು ದಿನವು ಉಪವಾಸ ಮಾಡುತ್ತೇನೆ ಎಂದು ಬಯಸಿದರು. ಆದರೆ ನಾನು ಆಚಾರ್ಯರಿಂದ ಎರಡು ಉಪವಾಸವನ್ನು ಮಾತ್ರ ಕೊಡಿಸಿದೆ.

ಮಾರನೆಯ ದಿನ ಚರ್ಚೆ ನಡೆಯತೊಡಗಿತು. ನಾನು ವ್ರತವನ್ನು ಬಿಡುವುದಿಲ್ಲ ಎಂದು ಆ ಹೆಂಗಸು ಹಠ ಮಾಡತೊಡಗಿದ್ದಳು. ಆರ್ಯಿಕೆ ವೀರಮತಿ, ಬ್ರ. ಸೂರಜಮಲ್ಲರು ತಿಳುವಳಿಕೆ ಹೇಳಿದರು. ನೋಡು ಬಾಯಿ ನಿನಗಿನ್ನು ಚಿಕ್ಕ ವಯಸ್ಸು ಅನುಶಾಸನದಲ್ಲಿ ಇರಬೇಕು. ಆಗಲೇ ಇಹದಲ್ಲೂ ಪರದಲ್ಲೂ ಸುಧಾರಣೆ ಆಗುವುದು ಇಲ್ಲದಿದ್ದರೆ ಖಂಡಿತ ಹಾಳಾಗುತ್ತೀಯ. ಯಾರು ಹೇಳಿದರೂ ಅವಳು ಕೇಳಲಿಲ್ಲ. ವಿಷಯ ಆಚಾರ್ಯರಲ್ಲಿಗೆ ಹೋಯಿತು. ಆಚಾರ್ಯ ವೀರಸಾಗರರು, ಮಹಾವೀರಕೀರ್ತಿಗಳು ತಿಳುವಳಿಕೆ ಹೇಳಿದರು ಆಗಮದ ಪ್ರಮಾಣಗಳನ್ನು ತೋರಿದರು. ಅವಳು ತನ್ನ ಹಠವನ್ನು ಬಿಡಲಿಲ್ಲ ಆ ಹೆಂಗಸು ಹೀಗೆ ಹಠ ಹಿಡಿದಿತ್ತು. ಆಚಾರ್ಯರಿಗೂ ಬೇಸರ ತಂದಿತು. ಕೊನೆಗೆ ಸಂಘದಿಂದ ಇವಳನ್ನು ಕಳುಹಿಸಿ ಎಂದರು.

ಸಂಘದಿಂದ ದೂರ ಹೋಗಬೇಕಾಯಿತು. ಕೆಲವು ದಿನಗಳ ನಂತರ ತೇರಹಪಂಥಿ ಮುನಿಗಳಿಂದ ಕ್ಷುಲ್ಲಕ ದೀಕ್ಷೆಯನ್ನು ಪಡೆದು ಅಲ್ಲಿಂದಲೂ ಏಕಾಂಗಿಯಾಗಿ ವಿಹಾರ ಮಾಡಿ, ಕೊನೆಗೆ ದೀಕ್ಷೆಯನ್ನು ಬಿಟ್ಟಳು. ಈಗ ಸಾಧಾರಣ ಮಹಿಳೆಯಾಗಿ ಜೀವನ ಮಾಡುತ್ತಿದ್ದಾಳೆ. 1987ರಲ್ಲಿ ಹಸ್ತಿನಾಪುರಕ್ಕೆ ಬಂದಿದ್ದಳು. ದೊಡ್ಡ ಮಂದಿರದಲ್ಲೇ ತಂಗಿದ್ದಳು. ಇಲ್ಲಿಗೆ ಬಂದಾಗ ನನಗೆ ಗುರುತು ಸಿಕ್ಕಿತು. ಆಗ ಅವಳು ದುಃಖದಿಂದ ಹೇಳಿದಳು ಮಾತಾಜಿ ನನ್ನದು ಬಹಳ ದುರವಸ್ಥೆಯಾಗಿದೆ ಎಂದಳು. ಅದಕ್ಕೆ ನಾನು ಎಲ್ಲಿ ವಾಸಿಸುತ್ತಿದ್ದೀಯ ಎಂದೆ. ಅದಕ್ಕೆ ಅವಳು ಜಬಲಪುರದಲ್ಲಿ ಎಂದಳು. ಊಟ ತಿಂಡಿಯ ವ್ಯವಸ್ಥೆ ಹೇಗೆ ಎಂದೆ. ಮಕ್ಕಳಿಗೆ ಗುಳಿಗೆಗಳನ್ನು ಮಾಡಿ ಸ್ವಲ್ಪ ಹಣ ಸಂಪಾದಿಸಿ ಹೇಗೋ ಉದರ ಪೋಷಣೆ ಮಾಡಿಕೊಳ್ಳುತ್ತಿದ್ದೇನೆ ಎಂದಳು. ಇವಳ ಕರುಣಾಜನಕ ಸ್ಥಿತಿಗೆ ನನ್ನ ಹೃದಯ ಕರುಣೆಯಿಂದ ತುಂಬಿ ಬಂದಿತು. ಹೀಗೆ ಹಳೆಯ ನೆನಪಿನಿಂದ ದುರಾಗ್ರಹದಿಂದಾಗಿ ಪಟ್ಟಪಾಡು ಕಣ್ಣ ಮುಂದೆ ಬಂದಿತು. ನಾನೇನು ಮಾತಾಡದೆ ಮೂಕಳಾದೆ.

ದೇವ ಪೂಜೆ, ದಾನ, ಶ್ರಾವಕ ಶ್ರಾವಕಿಯರಿಗೋಸ್ಕರ ಸಾಗಾರ ಧರ್ಮಾಮೃತದಲ್ಲಿ ಸೋಮದೇವಸೂರಿ ಕೃತ, ಯಶಸ್ತಿತಿಲಕ ಚಂಪೂವಿನಲ್ಲಿ ಆಚಮನ ಮುಖ ಶುದ್ಧಿಗೋಸ್ಕರ ಪ್ರಮಾಣವಿದೆ.

ಆಪ್ಲುತಃ ಸಂಪ್ಲುತಸಾವಂತಃ ಶುಚಿವಾಸೋ ವಿಭೂಷಿತಃ ।
ಮೌನಸಂಯಮ ಸಂಪನ್ನಃ ಕುರ್ಯಾದ್ದೇವಾರ್ಚನಾ ವಿಧಿಮ್ ॥ ೪೩೮ ॥

ದಂತಧಾವನಶುದ್ಧಾಸ್ಯೋ ಮುಖವಾಸೋಚಿತಾನನಃ ।
ಅಸಂಜಾತಾನ್ಯಸಂಸರ್ಗ: ಸುಧೀರ್ದೇವಾನುಪಾಚರೇತ್ ॥ ೪೩೯ ॥
(ಯಶಸ್ತಿಲಿಕ ಚಂಪೂ)

ಸ್ನಾನಮಾಡಿ ಶುದ್ಧ ವಸ್ತ್ರಗಳನ್ನು ಧರಿಸಿ ಮನವನ್ನು ವಶದಲ್ಲಿಟ್ಟುಕೊಂಡು ಸಂಯಮ ಪೂರ್ವಕವಾಗಿ ಜಿನೇಂದ್ರದೇವನ ಪೂಜೆ ಮಾಡಿ. ಹಲ್ಲುಉಜ್ಜಿ ಮುಖಶುದ್ಧಿ ಮಾಡಿ ಬೇರೆಯವರನ್ನು ಮುಟ್ಟದೆ ಜಿನೇಂದ್ರ ದೇವನ ಪೂಜೆ ಮಾಡಿ.

ಆಚಾರ್ಯ ಶ್ರೀ ವೀರಸಾಗರ ಮಹಾರಾಜರು ಹೇಳುತ್ತಿದ್ದರು ಉಪವಾಸವನ್ನು ಬಿಟ್ಟು ಪೂಜೆ ಮಾಡಬೇಕು. ಹಲ್ಲುಜ್ಜುವುದು ಮುಖ ತೊಳೆಯುವುದು ಬೇಡ ಮುನಿಗಳು ಆಹಾರವಾದ ಮೇಲೆ ಮುಖ ಶುದ್ಧಿ ಮಾಡಿಕೊಳ್ಳುವುದು ಅಂತರಾಯದ ನಂತರ ನೀರನ್ನು ಕುಡಿಯಬಾರದು. ಆದರೆ ಮುಖಶುದ್ಧಿಯು ಬಾಯಿ ಮುಕ್ಕಳಿಸಿ ಉಗುಳುವುದರಿಂದ ನೀರು ಕುಡಿದ ದೋಷ ಆಗುವುದಿಲ್ಲ.

ಆಚಾರ್ಯ ಶಿವಸಾಗರರು, ಧರ್ಮಸಾಗರರು ಮಹಾವೀರ ಕೀರ್ತಿಗಳು, ವಿಮಲಸಾಗರರು ಮೊದಲಾದವರೆಲ್ಲ ಶಾಂತಿಸಾಗರರ ಪರಂಪರೆಯ ಸಾಧು ಸಾಧ್ವಿಯರಿಗೆ ಮಾನ್ಯತೆ ಕೊಡುತ್ತಾರೆ. ನಾನು, ಸುಪಾರ್ಶ್ವಮತಿ, ವಿಜಯಮತಿಯರು ಆ ಮಾನ್ಯತೆಯನ್ನು ಪಡೆದಿದ್ದೇವೆ.

ಒಬ್ಬ ಬ್ರಾಹ್ಮಣ ವೈದ್ಯ

ಜಯಪುರದಲ್ಲಿ ಸಂಘದಲ್ಲಿ ಸಾಧು, ಸಾಧ್ವಿಯರ ಅನಾರೋಗ್ಯಕ್ಕೆ ನಾನು ವೈದ್ಯರನ್ನು ಕರೆಸಿ ಔಷಧೋಪಚಾರ ಮಾಡಿಸಬೇಕಾಗಿ ಬರುತ್ತಿತ್ತು. ಒಮ್ಮೆ ಸಾಧುವಿಗೆ ಹುಷಾರಿಲ್ಲದಾಗ ಜೈನವೈದ್ಯರೇ 'ಕಾಮದುಧಾ' ರಸವನ್ನು ಔಷಧವೆಂದು ಹೇಳಿದ್ದರು. ನಾನು ಪ್ರಾರಂಭದಲ್ಲಿ ಔಷಧಕ್ಕೆ ಏನೇನು ಉಪಯೋಗಿಸುತ್ತಾರೆ ಎಂದು ತಿಳಿದುಕೊಂಡೆ ಅದನ್ನು ಕೊಡಲು ಅನುಮತಿಯನ್ನು ಕೊಡುತ್ತಿದ್ದೆ. ಹಾಗಾಗಿ ಔಷಧಗಳ ಬಗ್ಗೆ ತಿಳುವಳಿಕೆ ಇತ್ತು. ನಾನು ತಕ್ಷಣವೇ ಕೇಳಿದೆ. ವೈದ್ಯರೇ ಇದರಲ್ಲಿ ಕವಡೆ ಮತ್ತು ಚಿಪ್ಪಿನ ಭಸ್ಮ ಹಾಕುವುದರಿಂದ ಜೈನ ಸಾಧುಗಳು ಉಪಯೋಗಿಸುವಂತಿಲ್ಲ ಎಂದು ಹೇಳಿದೆ. ಈ ಮಾತನ್ನು ಕೇಳಿದ ವೈದ್ಯರಿಗೆ ಬಹಳ ಸಿಟ್ಟು ಬಂದಿತು. ಹಾಗಾಗಿ ನಾನು ಮುಂದೆ ಆ ವೈದ್ಯರನ್ನು ಕರೆಸುವುದನ್ನು ನಿಲ್ಲಿಸಿದೆ. ಜಯಪುರದಲ್ಲಿ ರಾಮದಯಾಳ ಎಂಬ ಬ್ರಾಹ್ಮಣ ವೈದ್ಯರಿದ್ದರು. ಬಹಳ ಸರಳ ಸ್ವಭಾವ. ಔಷಧಗಳ ಪಟ್ಟಿ ಕೊಡುತ್ತಿದ್ದರು. ಸಂಘದ ಬ್ರಹ್ಮಚಾರಿಗಳೇ ತಂದು ಅವರು ಹೇಳಿದಂತೆ ಕುಟ್ಟಿ ಪುಡಿ ಮಾಡಿ ಆಹಾರದ ಸಮಯದಲ್ಲಿ ಕೊಡುತ್ತಿದ್ದರು ಔಷಧಿಗಳ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದರು.

ಖಾನಿಯಾದಲ್ಲಿ ಒಮ್ಮೆ ಒಬ್ಬ ಬ್ರಹ್ಮಚಾರಿಣಿಗೆ ಬೇಸಿಗೆ ದಿನದಲ್ಲಿ ಭೇದಿಯೇ ಆಗಿರಲಿಲ್ಲ. ಎರಡು ದಿನ ಆದ ಮೇಲೆ ಹೊಟ್ಟೆ ಉಬ್ಬರಿಸಿಕೊಂಡು ಒದ್ದಾಡತೊಡಗಿದಳು. ನನಗೆ ಸುದ್ದಿ ಗೊತ್ತಾಯಿತು ರಾತ್ರಿ ಹೇಗೋ ಮಾಡಿ ವೈದ್ಯರನ್ನು ಕರೆಸಿದೆವು. ಬಂದವರೆ ವೈದ್ಯರು ಎಲ್ಲರೂ ಭಕ್ತಾಮರ ಸೋತ್ರವನ್ನು ಹೇಳಿರಿ ಎಂದು ಹೇಳಿಸತೊಡಗಿದರು. ನನಗೆ ಆತಂಕವಾಗ ತೊಡಗಿತು. ನಾನು ಮನದಲ್ಲೆ ಯೋಚಿಸತೊಡಗಿದೆ ನಾವು ಎಷ್ಟೊಹೊತ್ತಿನಿಂದ ಹೇಳುತ್ತಲೇ ಇದ್ದೇವೆ. ಆದರೆ ನೀವೇನಾದರೂ ಉಪಚಾರ ಮಾಡಿ ಎಂದೆ. ಅದಕ್ಕೆ ಅವರು ಎಲ್ಲಕ್ಕಿಂತ ಭಕ್ತಾಮರವೇ ದೊಡ್ಡ ಔಷಧವಾಗಿದೆ ಎಂದರು. ಸ್ವಯಂ ಅವರೇ ಹೇಳತೊಡಗಿದರು. ಅವರ ಉಚ್ಚಾರಣೆ ಬಹಳ ಶುದ್ಧವಾಗಿ ಎಲ್ಲಾ ಸ್ತೋತ್ರಗಳು ಬಾಯಿಪಾಠವಾಗಿತ್ತು. ಕೊನೆಗೆ ಆ ಹುಡುಗಿಯನ್ನು ನೀರು ತುಂಬಿದ ಟಬ್‌ನಲ್ಲಿ ಕೂರಿಸಿದರು. ರಾತ್ರಿಯಾಗಿದ್ದರಿಂದ ಏನನ್ನೂ ತಿನ್ನುವುದಿಲ್ಲ ಎಂಬುದು ಗೊತ್ತಿದ್ದರಿಂದ ಹೊಟ್ಟೆಯ ಮೇಲೆ ಲೇಪನ ಮಾಡಿಸಿದರು. ಸ್ವಲ್ಪ ಹೊತ್ತಾದ ಮೇಲೆ ಲಘುಶಂಕೆಯಾಗಿ ಹುಡುಗಿಗೆ ಸಮಾಧಾನವಾಯಿತು. ಅವರ ಬಾಯಲ್ಲಿ ಭಕ್ತಾಮರ ಕೇಳಿದ ನಾನು ಒಂದು ದಿನ ವೈದ್ಯರನ್ನು ಕೇಳಿದೆ. ವೈದ್ಯಜೀ ನೀವು ಬ್ರಾಹ್ಮಣರು ಆದರೂ ಭಕ್ತಾಮರ ಸ್ತೋತ್ರದ ಬಗ್ಗೆ ಇಷ್ಟೊಂದು ಶ್ರದ್ಧೆ ಹೇಗೆ ಬಂದಿತು ಎಂದು ಕೇಳಿದೆ.

ಅದಕ್ಕೆ ಅವರು ನಮಗೆ ಇದು ಪರಂಪರೆಯಿಂದ ಸಿಕ್ಕಿದ ಸ್ತೋತ್ರವಾಗಿದೆ. ನನ್ನ ತಂದೆಯವರು ಕೂಡ ಈ ಸ್ತೋತ್ರದ ಬಗ್ಗೆ ಶ್ರದ್ಧೆ ಇತ್ತು. ಇದನ್ನು ಓದಿಯೇ ಅವರು ಯಾವುದೇ ರೋಗಿಗೆ ಔಷಧವನ್ನು ಕೊಡುತ್ತಿದ್ದರು.

ಇದರಿಂದ ಖಂಡಿತ ಗುಣವಾಗುತ್ತಿತ್ತು. ಅದರಿಂದಲೇ ನನ್ನ ಔಷಧಿಯು ಇಂದು ಇಷ್ಟು ಪ್ರಸಿದ್ಧಿಯನ್ನು ಪಡೆದಿದೆ ಎಂದರು. ಇದೇ ವೈದ್ಯರನ್ನು 1976ರಲ್ಲಿ ಖತೌಲಿಗೆ ಆರ್ಯಿಕೆ ರತ್ನಮತಿ ಮಾತಾಜಿಗೆ ಚಿಕಿತ್ಸೆ ಕೊಡಿಸುವುದಕ್ಕೂ ಕರೆಸಿಕೊಂಡಿದ್ದೆ. ಆದರೆ ಅವರು ಈಗ ಇಲ್ಲ ಸ್ವರ್ಗಸ್ಥರಾಗಿದ್ದಾರೆ.

ನನಗೆ ಈ ಪ್ರಸಂಗ ಬಹಳ ಸಂತೋಷಕೊಟ್ಟಿತು. ನಾನು ಮೊದಲಿನಿಂದಲು ಡಾಕ್ಟರಿಗೆ ನನ್ನ ಹತ್ತಿರ ಬಂದಾಗ ಇದೇ ಶಿಕ್ಷಣವನ್ನು ಕೊಡುತ್ತಿದ್ದೆ. ಓಂ ನಮಃ ಮಂತ್ರವನ್ನು ಹೇಳುತ್ತಿದ್ದೆ. ಲಘು ಮಂತ್ರಕ್ಕೆ ಸರ್ವ ಸಂಪ್ರದಾಯವು ಮಾನ್ಯತೆಯನ್ನು ಕೊಟ್ಟಿದೆ. ಮಹಾಶಕ್ತಿಶಾಲಿಯಾಗಿದೆ. ವೈದ್ಯರಾದ ನೀವು ರೋಗಿಗಳಿಗೆ ಕೆಲವು ಸಲಹೆಯನ್ನು ಕೊಡಬೇಕು. ರೋಗಿಯಾದವನು ಮಾಂಸ, ಮೀನು, ಮೊಟ್ಟೆ ತಿನ್ನುವುದು ಶರಾಬನ್ನು ಕುಡಿಯುವುದರಿಂದ ರೋಗ ವಾಸಿಯಾಗುವುದಿಲ್ಲವೆಂದು ನೀವು ಎಚ್ಚರಿಕೆಯನ್ನು ಕೊಟ್ಟರೆ ಅವರುಗಳು ಖಂಡಿತ ಅವೆಲ್ಲವನ್ನು ತ್ಯಾಗ ಮಾಡುತ್ತಾರೆ ಎಂದು ಎಚ್ಚರಿಕೆ ಕೊಟ್ಟೆ. ನಾನು ಹಲವಾರು ಜೈನ ವೈದ್ಯರಿಗೂ ದೆಹಲಿಯಲ್ಲಿ ಇದನ್ನೇ ಹೇಳಿದ್ದೇನೆ. ಅವರುಗಳು ಶಪಥ ಕೈಕೊಂಡರು. ನಾನು ಔಷಧಿಗೋಸ್ಕರವಾಗಿಯು ಕೂಡ ಮೊಟ್ಟೆ. ಶರಾಬನ್ನು ಪ್ರಯೋಗ ಮಾಡುವುದಿಲ್ಲ ಎಂದರು. ಹೀಗೆ ಹಲವಾರು ಧರ್ಮಪ್ರಭಾವನಾತ್ಮಕ ಕಾರ್ಯಗಳು ಚಾತುರ್ಮಾಸದಲ್ಲಿ ನಡೆದವು. ಇದರ ನಂತರ ಆಚಾರ್ಯರು ದೀವಾನಜಿಯ ನಶಿಯಾಕ್ಕೆ ಬಂದೆವು. ಕೆಲವು ದಿನ ಅಲ್ಲಿದ್ದೆವು.

೫೬

ಜಯಪುರದಿಂದ ವಿಹಾರ

ಒಂದು ದಿನ ಆಹಾರವಾಗುತ್ತಲೇ ಒಂದು ಸುದ್ದಿ ಗೊತ್ತಾಯಿತು. ಆಚಾರ್ಯರು ಆಹಾರವಾದ ನಂತರ ಒಬ್ಬರೇ ರಸ್ತೆಯಲ್ಲಿ ನಡೆದು ಹೋಗುತ್ತಿದ್ದಾರೆ ಎಂದು. ನಾವು ಅವರನ್ನು ಅನುಸರಿಸಿಕೊಂಡು ಹಿಂದೆಯೇ ಹೋದೆವು. ಅವರು ಒಂದು ಹಳ್ಳಿಗೆ ಹೋಗಿ ಅಲ್ಲಿ ವಿಶ್ರಾಂತಿಗಾಗಿ ಕುಳಿತರು. ಆ ದಿನ ಸಂಘದಲ್ಲಿ ನಗರದಲ್ಲಿ ಕೋಲಾಹಲ ಉಂಟಾಯಿತು. ಜೈನಸಮಾಜದಲ್ಲಿ ಆಚಾರ್ಯರು ಹಾಗೇ ಹೋಗಿದ್ದೆ ಒಂದು ಕ್ಷೋಬೆಯನ್ನುಂಟುಮಾಡಿತು. ಶ್ರಾವಕರು ನನ್ನ ಹತ್ತಿರ ನಿವೇದಿಸಿದರು. ಮಾತಾಜೀ ತಾವು ಆಚಾರ್ಯರಿಗೆ ತಿಳಿಸಿ ಹೇಳಬೇಕೆಂದು ಕೇಳಿಕೊಂಡರು. ಕೆಲವರು ಅವರಿಗೆ ಕೇಳಿಸುವಂತೆಯೆ ಮಾತಾಡುತ್ತಿದ್ದರು. ವಾತಾವರಣ ಶಾಂತವಾದ ಮೇಲೆ ನಾನೇ ಒಂದು ದಿನ ಆಚಾರ್ಯರಲ್ಲಿ ನಿವೇದಿಸಿದೆ. ಮಹಾರಾಜಜೀ ತಾವು ಇಷ್ಟು ದೊಡ್ಡ ಸಂಘದ ಆಚಾರ್ಯರು, ಚಿಕ್ಕ ದೊಡ್ಡ, ಆರೋಗ್ಯವಂತ, ಅನಾರೋಗ್ಯ ಹೀಗೆ ಹಲವಾರು ಸ್ವಾಭಾವದ ಸಾಧುಗಳು ಇದ್ದಾರೆ. ಇವರನ್ನೆಲ್ಲ ಸಂಭಾಳಿಸಿಕೊಂಡು ಹೋಗಲೇ ಬೇಕಾಗಿದೆ. ಇಲ್ಲದಿದ್ದರೆ ಶಾಂತಿ ಇರುವುದಿಲ್ಲ ಒಬ್ಬೊಬ್ಬರು ಒಂದೊಂದು ಕಡೆ ಹೊರಡುತ್ತಾರೆ ಅಷ್ಟೇ. ಆಗ ನೀವು ಅವರನ್ನು ಹಿಡಿತದಲ್ಲಿ ತರಲಾರಿರಿ. ತಮ್ಮದು ವೀರಚರ್ಯೆಯಾಗಿದೆ. ಆದರೂ ತಾವು ಸಂಘಕ್ಕೆ ಸೂಚನೆ ಕೊಡುವುದು ಅವಶ್ಯಕವಿಲ್ಲವೇ ಎಂದೆ. ಆಚಾರ್ಯರು ನನ್ನ ಮಾತನ್ನು ಕೇಳಿ ನಕ್ಕು ಸರಿ ಎಂದರು. ಇದಾದನಂತರ ಅವರ ನೇತೃತ್ವದಲ್ಲಿ ಇಂದು ಪೂರ್ವಸೂಚನೆಯನ್ನು ಕೊಡದೆ ವಿಹಾರ ಮಾಡಲಿಲ್ಲ. ಸಂಘ ಸಾಂಗನೇರ ತಲುಪಿತು. ಅಲ್ಲಿ ಕೆಲವು ದಿನಗಳವರೆಗೆ ತಂಗಿದ್ದೆವು.

ನನ್ನ ಅಸ್ವಾಸ್ಥ್ಯ

ನನಗೆ ಚಿಕ್ಕ ಒಂದು ಗುಳ್ಳೆ ಎದ್ದಿದ್ದ ಕಾರಣವಾಗಿ ಏಳಲು ಕುಳಿತುಕೊಳ್ಳಲು ತೊಂದರೆ ಆಗತೊಡಗಿತು.

ನಾನು ಅಸ್ವಸ್ಥತೆಯಿಂದ ಯಾವಾಗಲೂ ಮಲಗಿಯೇ ಇರತೊಡಗಿದೆ. ಒಂದು ದಿನ ಮೋತಿಚಂದನು ಟಿಕೈತ ನಗರದಿಂದ ತಂದೆಯ ಸಾವನ್ನು ಹೊತ್ತು ತಂದ ತಾರಿನ ವಿಷಯ ತಿಳಿಸಿದ. ನಾನೇ ಮಲಗಿದ್ದರಿಂದ ತಕ್ಷಣ ದುಃಖ ಒತ್ತರಿಸಿ ಬಂದಿತು. ತಕ್ಷಣ ಸಾವರಿಸಿಕೊಂಡೆ ತಂದೆ-ತಾಯಿಗಳ ಮೋಹವನ್ನು ಬಿಟ್ಟು ಉಪೇಕ್ಷಾ ಭಾವನೆಯನ್ನು ಬೆಳೆಸಿಕೊಂಡಿದ್ದ ನಾನು ಈಗ ಏಕೆ ಮೋಹವನ್ನು ತಂದುಕೊಳ್ಳಬೇಕು. ಈ ಸಂಸಾರದಲ್ಲಿ ಅನಂತ ಅನಂತ ಜನ್ಮಗಳಲ್ಲಿ ಅನಂತಾನಂತ ತಂದೆ-ತಾಯಿಗಳಾಗಿದ್ದಾರೆ ಹೀಗೆ ಇವರು ಅಗಲಿದರೆಂದು ಏಕೆ ದುಃಖ ಪಡಬೇಕು.

ಹಾಗೇ ಯಾರು ಮನೆಯನ್ನು ತ್ಯಜಿಸಿದ್ದಾರೋ ಅವರಿಗೆ ಮನೆಯವರು ಸತ್ತರೂ ಸೂತಕವಿರುವುದಿಲ್ಲ. ಆದರೆ ತಂದೆಯು ಸತ್ತಿರುವುದರಿಂದ ಒಂದು ದಿನದ ಸೂತಕವಿರುತ್ತದೆ ಎಂದು ಶ್ರಾವಕಾಚಾರದಲ್ಲಿಹೇಳಿದೆ. ನನಗೆ ಜಯಪುರದಲ್ಲೇ ತಂದೆಗೆ ಆರೋಗ್ಯ ಸರಿ ಇಲ್ಲದಾಗಲೇ ತಾಯಿಗೆ ಪತ್ರ ಬರೆದಿದ್ದೆ. ನೀವಾಗಲಿ ಮಕ್ಕಳಾಗಲಿ ತಂದೆಯವರಿಗೆ ಧರ್ಮದ ವಿಷಯ ಹೇಳುತ್ತಿರಿ. ಇವರಿಗೆ ಸಮಾಧಿ ಮರಣವು ದೊರಕಲಿ. ಯಾರೂ ಅವರ ಮುಂದೆ ಅತ್ತು-ಕರೆದು ಮೋಹದಿಂದ ಅವರ ಮನಸನ್ನು ಹಾಳು ಮಾಡಬೇಡಿ. ಧೈರ್ಯದಿಂದ ಸಮಾಧಿ ಮರಣದ ಪಾಠವನ್ನು ಮಹಾಮಂತ್ರವನ್ನು ಹೇಳುತ್ತಿರಿ ಎಂದು. ನನ್ನ ತಾಯಿಯು ವಿವೇಕ ಉಳ್ಳವರಾದ್ದರಿಂದ ಎಲ್ಲರಿಗೂ ತಿಳುವಳಿಕೆ ಹೇಳಿಕೊಂಡು ಅವರಿಗೆ ಸಮಾಧಿ ಮರಣವು ಉಂಟಾಗುವಂತೆ ಮಾಡಿದ್ದರು. ಮೊದಲೆಲ್ಲ ಧೈರ್ಯವಾಗಿ ಇದ್ದವರು ಪ್ರಾಣ ಹೋದ ಮೇಲಷ್ಟೇ ಅತ್ತಿದ್ದಾರೆ.

ಕೊನೆಯ ಸಮಯದಲ್ಲಿ ನೋಡುವ ಆಶೆ. 1969ರ ಡಿಸೆಂಬರ 25ರಂದು ತಂದೆಯವರು ನನ್ನನ್ನು ನೋಡಬೇಕು ಎನ್ನುತ್ತಲೆ ಮಹಾಮಂತ್ರವನ್ನು ಜಪಿಸುತ್ತಲೇ ಸಮಾಧಿ ಮರಣದಿಂದಲೇ ನಶ್ವರ ಶರೀರವನ್ನು ತ್ಯಾಗ ಮಾಡಿದರು. ಇವರ ಮರಣಕ್ಕೆ ಮೊದಲು ಟಿಕೈತನಗರದಲ್ಲಿ ಆ. ಸುಮತೀಸಾಗರರ ಸಂಘ ಇತ್ತು. ಆಚಾರ್ಯರೇ ಸ್ವತಃ ಮನೆಗೆ ಹೋಗಿ ಅವರಿಗೆ ಬೋಧನೆಯನ್ನು ಮಾಡಿ ಅವರಿಗೆ ಆನಂದವನ್ನು ಉಂಟು ಮಾಡಿದ್ದರಂತೆ ತಾಯಿಯವರು ಚೌಕ ಮಾಡಿದ್ದಾರೆ. ತಂದೆಯವರ ಸ್ವರ್ಗವಾಸವಾದ ಮೇಲೆ ಮೋತಿಚಂದರು ಟಿಕೈತ ನಗರಕ್ಕೆ ಹೋಗಿ ತಾಯಿಯೊಡನೆ ಮಾತಾಡಿ ಮಾತಾಜೀ ಜ್ಞಾನಮತಿಯವರು ತಮ್ಮನ್ನು ಸಂಘಕ್ಕೆ ಆಹ್ವಾನಿಸಿದ್ದಾರೆ. ನೀವು ಇಲ್ಲಿದ್ದು ಇನ್ನೇನು ಮಾಡಬೇಕಾಗಿದೆ. ಸಂಘದಲ್ಲಿ ಆತ್ಮ ಕಲ್ಯಾಣವನ್ನು ಮಾಡಿಕೊಳ್ಳಬೇಕಂತೆ ಎಂಬ ವಿಷಯವನ್ನು ಹೇಳಿ, ತಾಯಿಯವರು ಈ ವಿಷಯವನ್ನು ಮಕ್ಕಳಿಗೆ ತಿಳಿಸಿದಾಗ ಕೈಲಾಸ ಈಗ ತಂದೆಯನ್ನು ಕಳೆದುಕೊಂಡ ದುಃಖ ಆರಿಲ್ಲ ಆಗಲೇ ನೀವು ದೂರವಾಗುವ ವಿಷಯ ಹೇಳುತ್ತಿದ್ದೀರಲ್ಲ ಈಗಲೇ ನಿಮ್ಮನ್ನ ಕಳುಹಿಸಿ ನಾವು ಇರಲಾರೆವೆಂದು ಹೇಳಿ ಕಳುಹಿಸಿದ.

ಮುನಿಶ್ರೀ ಸನ್ಮತಿ ಸಾಗರರ ಬೇಟಿ

ತಂದೆ ಸತ್ತು 15-20 ದಿನಗಳಾದ ಮೇಲೆ ಟಿಕೈತನಗರಕ್ಕೆ ಮುನಿ ಸನ್ಮತಿಸಾಗರರ ಸಂಘ ಬಂದಿತು. ತಾಯಿ ಬಹಳ ಧೈರ್ಯ ತಂದುಕೊಂಡು ಮನೆಯವರಿಗೆಲ್ಲ ಧೈರ್ಯ ಹೇಳಿಕೊಂಡು ಮನೆಯಲ್ಲಿ ಶೋಕದ ವಾತಾವರಣವನ್ನು ದೂರ ಮಾಡಿದ್ದರು. ಸಂಘದವರಿಗೆ ಚೌಕಗಳನ್ನು ಮಾಡತೊಡಗಿದರು. ಕೊನೆಗೆ ಸಂಘ ವಿಹಾರ ಮಾಡುವಾಗ ತನ್ನ ಅಕ್ಕನ ಜೊತೆ ಕಾನಪುರದವರಿಗೆ ಚೌಕ ಮಾಡಿಕೊಂಡು ಸಂಘದ ಜೊತೆ ಬಂದರಂತೆ. ಒಮ್ಮೆ ಮುನಿಗಳು ಸಭೆಯಲ್ಲೇ ಅಮ್ಮನನ್ನು ಹೊಗಳಿದರಂತೆ - ಜ್ಞಾನಮತಿಯಂತಹ ಕನ್ಯಾರತ್ನಕ್ಕೆ ಜನ್ಮ ನೀಡಿದ ಮಹಾತಾಯಿ ಇವರು. ಇವರ ಜನ್ಮ ಸಾರ್ಥಕವಾಗಿದೆ. ಅಮ್ಮ ನಿಮ್ಮ ಪುತ್ರಿ ಜ್ಞಾನಮತಿಯಿಂದ ನನಗೆ ಬಹಳ

ಉಪಕಾರವಾಗಿದೆ. ನಾನು ಕ್ಷುಲ್ಲಕನಾಗಿದ್ದಾಗ ಒಮ್ಮೆ ಸಂಘದಿಂದ ಬೇರೆ ಆಗುವ ಯೋಚನೆ ಬಂದಿದ್ದಾಗ ಅಲ್ಲಿಗೆ ಬಂದ ಮಾತಾಜಿ ಚೆನ್ನಾಗಿ ಬೋಧನೆ ಮಾಡಿ ಪುನಃ ಸಂಘಕ್ಕೆ ಬರುವಂತೆ ಮಾಡಿದರು. ಆಗ ಆಚಾರ್ಯರು ಹರ್ಷಗೊಂಡರು. ಅವರ ಹತ್ತಿರವೇ ನಾನು ಪ್ರತಿಕ್ರಮಣದ ಅರ್ಥ, ದೇವವಂದನೆಯ ವಿಧಿ ಆಲಾಪ ಪದ್ಧತಿಯ ಗ್ರಂಥಗಳನ್ನು ಓದಿದೆ ಎಂದು ತಮ್ಮ ಗುಣದ ಶಿಷ್ಟತೆಯನ್ನು ಪ್ರದರ್ಶಿಸಿದ್ದಾರೆ.

ಟಿಕ್ಕೈತ ನಗರದಿಂದ ಮೋತಿಚಂದ ಬಂದು ನನಗೆ ಅರುಹಿದ. ತಂದೆಯವರು ತಮ್ಮ ಕೊನೆಯ ದಿನ ಜ್ಞಾನಮತಿಯ ದರ್ಶನ ಮಾಡಿಸಿ ಎಂದು ತುಂಬ ಹಲಬುತ್ತಿದ್ದರಂತೆ. ಕೊನೆಗೆ ಮಾತಾಜಿಯವರು ಒಬ್ಬ ಬ್ರಹ್ಮಚಾರಿಣಿಗೆ ಬಿಳಿ ಸೀರೆ ಉಡಿಸಿ ಎದುರಿಗೆ ಕರೆತಂದು ನೋಡಿ ನಿಮ್ಮ ಜ್ಞಾನಮತಿ ಬಂದಿದ್ದಾರೆ ಎಂದಾಗ ನೋಡುತ್ತಿದ್ದಂತೆ ಇವರು ನನ್ನ ಮಾತಾಜಿ ಅಲ್ಲವೆಂದು ನಿಮ್ಮನ್ನೇ ನೆನೆಸಿಕೊಂಡೇ ಕಣ್ಣು ಮುಚ್ಚಿದ್ದಾರೆ. ಕೊನೆಗೆ ಪಂಚನಮಸ್ಕಾರ ಮಾಡುತ್ತಾ ಮನೆಯಲ್ಲಿ ಶುಭ ವಾತಾವರಣದಲ್ಲೇ ಶರೀರ ತ್ಯಾಗ ಮಾಡಿದ್ದಾರೆ.

ಅಮ್ಮ ಹೇಳುತ್ತಿದ್ದರು. ತಂದೆಯವರಿಗೆ ಸಾಯುವ ಮುನ್ನ ಪಶ್ಚಾತ್ತಾಪವಾಗಿತ್ತು. ಅಮ್ಮನಿಗೆ ಯಾವಾಗಲು ನಾನು ನಿನಗೆ ಧರ್ಮಕಾರ್ಯಗಳನ್ನು ಮಾಡುವಾಗ ಮೋಹದಿಂದ ತಡೆದಿದ್ದೇನೆ ನನ್ನನ್ನು ನೀನು ಕ್ಷಮಿಸಬೇಕು. ನನ್ನ ನಂತರ ನೀನು ಚೆನ್ನಾಗಿ ಧರ್ಮವನ್ನು ಮಾಡು. ಬೇಕಾದರೆ ನೀನು ಮಾತಾಜಿಯವರ ಹತ್ತಿರಕ್ಕೆ ಹೋಗಿ ನಿನ್ನ ಜೀವನವನ್ನು ಧರ್ಮದಲ್ಲಿಯೇ ತೊಡಗಿಸಿಕೋ ಎಂದಿದ್ದರಂತೆ.

ನಿವಾಯಿಯಲ್ಲಿ ಪ್ರಭಾವನೆ

ನಾವು ನೀವಾಈಗೆ ಬಂದಿದ್ದೆವು. ಮಹಾವೀರ ಜಯಂತಿಯ ಸಂದರ್ಭ ಸಭೆಯಲ್ಲಿ ಒಬ್ಬ ಮಹಾನುಭಾವ ಸ್ತ್ರೀಮುಕ್ತಿಯ ಬಗ್ಗೆ ಪ್ರತಿಪಾದಿಸುತ್ತಿದ್ದರು. ಆದರೆ ಅಲ್ಲೇ ಇದ್ದ ನಮ್ಮ ಸಾಧುವರ್ಗದವರಿಗೆ ಆವೇಶದ ಭಾವದಿಂದ ನನ್ನ ಕಡೆಗೂ ಆಚಾರ್ಯರ ಕಡೆಗೂ ನೋಡಲಾರಂಭಿಸಿದರು. ಕೊನೆಗೆ ನನ್ನ ಭಾಷಣದ ಸರತಿ ಬಂದಾಗ ನಾನು ಬಹಳ ಶಾಂತಿಯಿಂದಲೇ ಉಪದೇಶ ಕೊಡುತ್ತಾ ಈ ವಿಷಯವನ್ನು ತೆಗೆದುಕೊಂಡು ತೀರ್ಮಾನವನ್ನು ಕೊಟ್ಟೆ. ದಿಗಂಬರ ಜೈನ ಸಂಪ್ರದಾಯದಲ್ಲಿ ಸ್ತ್ರೀಯರಿಗೆ ಶಾರೀರಿಕ ಸಾಮರ್ಥ್ಯ ಕಡಿಮೆ ಎಂದು ಹೇಳಿದೆ. ಅದರಿಂದಾಗಿ ಇವರಿಗೆ ಮುಕ್ತಿ ಪ್ರಾಪ್ತ ಮಾಡಿಕೊಳ್ಳುವ ಶುಕ್ಲ ಧ್ಯಾನವೇ ಸಂಭವವಿಲ್ಲ. ಎರಡನೆಯದಾಗಿ ಸ್ತ್ರೀ ಪರ್ಯಾಯದಲ್ಲಿ ವಸ್ತ್ರತ್ಯಾಗ ಮಾಡಿ ದಿಗಂಬರತ್ವ ಆಗುವುದಿಲ್ಲ. ಮೂರನೆಯದಾಗಿ ಸ್ತ್ರೀಯರಿಗೆ ಪುರುಷರಿಗೆ ಸಮಾನವಾದ ಅಧಿಕಾರವಿಲ್ಲ. ಸ್ತ್ರೀಯರಿಗೆ ಗರ್ಭದ ಯೋಗ್ಯತೆ ಇದೆ. ಪುರುಷರಿಗೆ ಇಲ್ಲ ಈ ರೀತಿ ಅನೇಕ ಕಾರಣದಿಂದ ದಿಗಂಬರ ಜೈನ ಸಂಪ್ರದಾಯದಲ್ಲಿ ಸ್ತ್ರೀಯರಿಗೆ ಮುಕ್ತಿ ಇಲ್ಲ ಎಂದೆ.

ಈ ಉಪದೇಶವನ್ನು ಕೇಳಿದ ಆ ಮಹಾನುಭಾವ ನನ್ನ ಹತ್ತಿರ ಬಂದು ತಪ್ಪು ಪ್ರವಚನ ಮಾಡಿದ್ದಕ್ಕೆ ನನ್ನ ಹತ್ತಿರ ಕ್ಷಮೆಯನ್ನು ಬೇಡಿ. ಮಾತಾಜೀ ನಾನು ಕೇವಲ ಶ್ವೇತಾಂಬರ ಸಂಪ್ರದಾಯದ ಗ್ರಂಥಗಳನ್ನು ಮಾತ್ರ ಓದಿದ್ದೆ. ದಯಮಾಡಿ ದಿಗಂಬರ ಪಂಥದ ಜ್ಞಾನವರ್ಧಕ ಗ್ರಂಥಗಳನ್ನು ಕೊಡಿರಿ ಎಂದು ಪ್ರಾರ್ಥಿಸಿದರು. ವಾತಾವರಣ ಶಾಂತವಾಯಿತು. ಒಂದು ವೇಳೆ ಮಹಾನುಭಾವನಿಗೆ ಸಭೆಯಲ್ಲೇ ಏನಾದರೂ ಆವೇಶದ ಮಾತು ಆಡಿದ್ದರೆ ಸಭೆಯಲ್ಲಿ ಗೊಂದಲವು ಆಗುತ್ತಿತ್ತು. ಆ ವ್ಯಕ್ತಿಯು ಪುಸ್ತಕ ಹಿಡಿದುಕೊಂಡು ತರ್ಕ ವಿತರ್ಕಕ್ಕೆ ಬರುತ್ತಿದ್ದರು. ನನಗೆ ಸಭೆಯಲ್ಲಿ ಯಾವ ವ್ಯಕ್ತಿಯೇ ಆಗಲಿ ವಿಪರೀತವಾಗಿ ಹೇಳುತ್ತಿದ್ದರೂ ಶಾಂತವಾಗಿ ಕೇಳಿಸಿಕೊಂಡು ನಂತರ ನಿಧಾನವಾಗಿ ಅವರಿಗೆ ವಿಷಯವನ್ನು ಅರ್ಥೈಸಬೇಕು. ಹೀಗೆ ಇಂತಹ ಸಮಯಗಳಲ್ಲಿ ಆವೇಶವನ್ನು ತಡೆಯದಿದ್ದರೆ ಹಾನಿಯಾಗುವ ಸಂಭವಗಳೇ ಹೆಚ್ಚಾಗಿರುತ್ತವೆ. ಶಾಂತಿಯಿಂದ ಕೇಳಿ ಆ

ಮಹಾನುಭಾವನು ತನ್ನ ತಪ್ಪನ್ನು ತಿದ್ದಿಕೊಂಡಿದ್ದು ಆಚಾರ್ಯರಿಗೆ ಬಹಳ ಸಮಾಧಾನವನ್ನು ತಂದುಕೊಟ್ಟು ಸಭೆ ಸುಖಾಂತವಾಯಿತು.

ಅಧ್ಯಾಪನ ಕೆಲಸ

ಇಲ್ಲಿ ಆಚಾರ್ಯರ ಅನುಜ್ಞೆ ಪಡೆದು ನಾನು ಗೊಮ್ಮಟಸಾರವನ್ನು ಅಧ್ಯಯನ ಮಾಡಿಸುತ್ತಿದ್ದಾಗ ಎಲ್ಲ ಸಾಧುವರ್ಗ ಮತ್ತು ಸಾಧ್ವಿಯರು ಭಾಗವಹಿಸುತ್ತಿದ್ದರು. ಅಲ್ಲಿಯೇ ಹತ್ತಿರದಲ್ಲಿ ಆಚಾರ್ಯರು ಸ್ವಾಧ್ಯಾಯ ಮಾಡುತ್ತಾ ಗಮನಿಸುತ್ತಾ ಬಹಳ ಖುಷಿ ಪಡುತ್ತಿದ್ದರು. ನಾನು ಇಲ್ಲಿಯ "ಅಷ್ಟಸಹಸ್ರೀ"ಯ ಅನುವಾದ ಕಾರ್ಯವನ್ನು ಹಗಲು, ರಾತ್ರಿ ಮಾಡುತ್ತಿದ್ದೆ. 'ಅಷ್ಟಸಹಸ್ರಿ'ಯ ಕೆಲಸವನ್ನು ಮಾಡುವಾಗ ಮುನಿಶ್ರೀ ಅಭಿನಂದನಾ ಸಾಗರರು ಅಲ್ಲೇ ಕುಳಿತಿರುತ್ತಿದ್ದರು. ಒಂದು ದಿನ ಸಭೆಯಲ್ಲಿಯೇ ಹೇಳಿದರು. ಆರ್ಯಿಕಾ ಜ್ಞಾನಮತಿ ಮಾತಾಜಿ ಒಬ್ಬ ಕುಶಲರಾದ ಶಿಲ್ಪಿ ಗಡಗಡ ಎಂದು ಮೂರ್ತಿಯನ್ನು ಕೆತ್ತುವಂತೆ ಇವರು ಗ್ರಂಥಗಳ ರಚನೆ ಮಾಡಿದ್ದಾರೆ. ಆಚಾರ್ಯರು ಇಂತಹವರನ್ನು ಗುರುತಿಸಿ ಆರ್ಯಿಕೆ ದೀಕ್ಷೆಯನ್ನು ಕೊಟ್ಟು ಪೂಜ್ಯರನ್ನಾಗಿ ಮಾಡಿದ್ದಾರೆ ಈ ಮಾತನ್ನು ಕೇಳಿದ ಹೀರಾಲಾಲಜೀಗೆ ಮುನಿಗಳ ಗುಣಗ್ರಾಹಕತೆಯನ್ನು ಕಂಡು ಬಹಳ ಪ್ರಸನ್ನರಾಗಿ ನನ್ನಲ್ಲೂ ಹೇಳುತ್ತಿದ್ದರು. ಮಾತಾಜೀ ನೀವು ಇಂತಹ ಚಿಕ್ಕವರಿಗೆಲ್ಲ ಸಿದ್ಧಾಂತ ಗ್ರಂಥಗಳ ಅಧ್ಯಯನವನ್ನು ಚೆನ್ನಾಗಿ ಮಾಡಿಸಿ, ನಮ್ಮ ಆರ್ಷ ಪರಂಪರೆಯ ಯೋಗ್ಯ ಸಾಧುಗಳನ್ನಾಗಿ ಮಾಡುತ್ತಿದ್ದೀರ. ಇವರಿಂದ ನಮ್ಮ ಆರ್ಷ ಪರಂಪರೆಯು ರಕ್ಷಣೆ ಆಗುತ್ತಿದೆ.

ಟೋಂಕಾಕ್ಕೆ ಆಗಮನ

ಇಲ್ಲಿಂದ ಸಂಘ ಟೋಂಕಾನಗರಕ್ಕೆ ಬಂದಿತು ಬೇಸಿಗೆಯಲ್ಲಿ ಇಲ್ಲೇ ಇದ್ದೆವು. ನಾನು ನನ್ನ ಅಧ್ಯಯನ ಮತ್ತು ಬರವಣಿಗೆಯಲ್ಲಿ ತೊಡಗಿದ್ದೆ. ಸಂಘ ಸುಮಾರು ಒಂದು ತಿಂಗಳು ಇಲ್ಲೇ ಇತ್ತು. ಕೆಲವು ವರ್ಷಗಳ ಪುರಾತನ ಪ್ರತಿಮೆಯ ದರ್ಶನವಾಯಿತು. ನಂತರ ನಾವು ಹಳೆಯ ಟೋಂಕಾಕ್ಕೆ ಬಂದೆವು. ಇಲ್ಲಿ ಒಳ್ಳೆಯ ಧರ್ಮಪ್ರಭಾವನೆ ಆಯಿತು. ಜನರ ವಿಶೇಷ ಆಗ್ರಹದಿಂದ ಹೊಸ ಟೋಂಕದಲ್ಲೇ ಚಾತುರ್ಮಾಸ ನಿಶ್ಚಿತವಾಯಿತು.

ವರ್ಷಾಯೋಗದ ಸ್ಥಾಪನೆ

ಆಷಾಢ ಶುಕ್ಲ ತ್ರಯೋದಶಿಯ ದಿನವೇ ಆಚಾರ್ಯರು ವಿಧಿವತ್ತಾಗಿ ಚಾತುರ್ಮಾಸದ ಸ್ಥಾಪನೆಯನ್ನು ಮಾಡಿದರು. ಇಲ್ಲಿಯೂ ಒಳ್ಳೆಯ ಧರ್ಮ ಪ್ರಭಾವನೆ ಆಗತೊಡಗಿತು. ನನಗೆ ನೆಗಡಿ ಶುರುವಾಗಿ ಆರೋಗ್ಯಕ್ಕೆ ತುಂಬ ತೊಂದರೆ ಆಗತೊಡಗಿತು. ಹೊರಗಡೆ ಥಂಡಿಯಲ್ಲಿ ಕುಳಿತು ಬರೆದುದರ ಪರಿಣಾಮ. ಆದರೂ ಲೇಖನದ ಕಾರ್ಯ ನಿಲ್ಲಿಸಲಿಲ್ಲ.

ಅಮ್ಮ ಮೋಹಿನಿಯ ಆಗಮನ

ಇಲ್ಲಿಯ ಚಾತುರ್ಮಾಸದಲ್ಲಿ ದರ್ಶನ ಮಾಡಿ ಆಹಾರ ದಾನ ಮಾಡುವ ಸಲುವಾಗಿ ಮೋಹಿನಿ, ಮಕ್ಕಳಾದ ಕೈಲಾಸ ಚಂದ್ರ, ಸುಭಾಷಚಂದ್ರ, ಸೊಸೆಯರಾದ ಚಂದ, ಸುಷಮ, ಹಾಗೇ ಎಲ್ಲರಿಗಿಂತ ಚಿಕ್ಕವಳಾದ 9 ವರ್ಷದ ತ್ರಿಶಲಾ ಕೂಡ ಬಂದಿದ್ದಳು ಒಂದು ತಿಂಗಳು ಇದ್ದರು.

ಒಂದು ದಿನ ನಾನು ಅಧ್ಯಯನ ಮಾಡುತ್ತಿದ್ದ ಜಾಗಕ್ಕೆ ಬಂದ ತ್ರಿಶಲಾ - ಮಾತಾಜಿ ನನಗೂ ಏನಾದರು ಹೇಳಿ ಕೊಡಿ ಎಂದಳು. ಅದಕ್ಕೆ ನಾನು ಗೊಮ್ಮಟಸಾರವನ್ನು ಓದುತ್ತಿದ್ದೇನೆ ನೀನು ಓದುತ್ತೀಯ ಎಂದೆ. ಅದಕ್ಕೆ ಅವಳು ನಾನೇ ಓದುತ್ತೇನೆ ನೀವು ಬೇಕಾದರೆ ಹೇಳಿಕೊಡಿ ಎಂದಳು. ನನಗೂ ಕುತೂಹಲವಾಗಿ ಕರ್ಮಕಾಂಡದ ಒಂದೆರಡು ಗಾಥೆಗಳನ್ನು ಓದಿದೆ. ಅದನ್ನು ಅವಳು ಕಲಿತು ಶುದ್ಧ ಉಚ್ಚಾರಣೆಯೊಂದಿಗೆ ಹೇಳಿ ಅರ್ಥವನ್ನು ಸಹ ನನಗೆ ಒಪ್ಪಿಸಿದಾಗ ನನಗೆ ಬಹಳ ಸಂತೋಷವಾಯಿತು. ಇವರ ಕ್ಷಯೋಪಶಮದ ಬಗ್ಗೆ ಪುನಃ ತಾಯಿಯವರ ಹಿಂದೆ ಬಿದ್ದೆ. ನೀವು ಇವಳನ್ನು ನನ್ನ ಹತ್ತಿರ ಬಿಟ್ಟು ಹೋಗಿ ಸ್ವಲ್ಪ ದಿನ ಪಾಠ ಹೇಳಿಕೊಟ್ಟು ವಾಪಸ್ಸು ಕಳುಹಿಸುತ್ತೇನೆ ಎಂದು ಎಷ್ಟೊಂದು ಸಲ ಹೇಳಿ-ಹೇಳಿ ಕೊನೆಗೆ ಸಾಹಸ ಮಾಡಿ ಅವಳನ್ನು ನನ್ನ ಹತ್ತಿರ ಉಳಿಸಿಕೊಂಡೆ. ಮೋತಿಚಂದ ಮತ್ತು ರವೀಂದ್ರರ ಜೊತೆ ಶಾಸ್ತ್ರಿ ಕೋರ್ಸನ್ನು ಓದಿದಳು. ರಾಜವಾರ್ತಿಕ, ಅಷ್ಟಸಹಸ್ರಿಯ ಸಾರಾಂಶ, ಗೊಮ್ಮಟಸಾರದ ಕರ್ಮಕಾಂಡ ಓದಿ ಶಾಸ್ತ್ರೀ ಪರೀಕ್ಷೆ ಬರೆದಳು. ಆಚಾರ್ಯರು ಸಾಯಂಕಾಲದ ವೇಳೆ ಆಗಾಗ್ಗೆ ಪ್ರತಿಕ್ರಮಣವಾದ ಮೇಲೆ ಈ ವಿದ್ಯಾರ್ಥಿಗಳ ಜೊತೆ ಕರ್ಮಕಾಂಡದ ಬಗ್ಗೆ ಚರ್ಚೆ ಮಾಡುತ್ತಿದ್ದರು. ಅವರು ಏನೇ ಪ್ರಶ್ನೆ ಕೇಳಿದರು ತ್ರಿಶಲ ಗಾಥೆಗಳನ್ನೆಲ್ಲ ಬಾಯಿಪಾಠ ಮಾಡಿದ್ದರಿಂದ ತಕ್ಷಣವೇ ಉತ್ತರ ಹೇಳುತ್ತಿದ್ದಳು. ಆಚಾರ್ಯರಿಗಂತೂ ಬಹಳ ಖುಷಿ ಆಗುತ್ತಿತ್ತು.

ಕುಮಾರಿ ತ್ರಿಶಲ 1970 ರಿಂದ 79 ರವರೆಗೂ ನನ್ನ ಹತ್ತಿರವೆ ಇದ್ದಳು. ನಂತರ ಮನೆಗೆ ಹೋದಳು. 1980ರಲ್ಲಿ ಅವಳ ವಿವಾಹವಾಯಿತು. ಈಗ ಎರಡು ಮಕ್ಕಳು ಇವೆ. ಇಂದು ಕೂಡ ಅವಳ ಜ್ಞಾನ, ಅಧ್ಯಯನ ಮತ್ತು ಕ್ಷಯೋಪಶಮ ನೆನಪು ನೋಡಿದಾಗ ಆಶ್ಚರ್ಯವಾಗುತ್ತದೆ. ನಿಜವಾಗಿಯು ಇಷ್ಟು ಚಿಕ್ಕ ವಯಸ್ಸಿನಲ್ಲಿ ಅವಳು ಹೇಗೆ ಸಿದ್ಧಾಂತ, ನ್ಯಾಯ ವ್ಯಾಕರಣ, ಕಾವ್ಯ, ಅಲಂಕಾರಗಳನ್ನು ಓದಿದಳು ಎಂದು.

ಒಂದು ತಿಂಗಳ ಉಪವಾಸದ ಪಾರಣೆ

ಆರ್ಯಿಕೆ ಪದ್ಮಾವತಿ ಸುಮಾರು ಒಂದು ತಿಂಗಳ ಉಪವಾಸ ಮಾಡಿದರು. ನನ್ನ ಹತ್ತಿರವೇ ಇರುತ್ತಿದ್ದರು. ಉಪವಾಸದಲ್ಲಿಯು ಸಹ ಬೆಳಗ್ಗೆ ನನಗೆ ವೈಯಾವೃತ್ತಿ ಮಾಡುತ್ತಿದ್ದರು. ನಾನು ದಿನಕ್ಕೆ ಐದುಗಂಟೆಗಳವರೆಗೂ ಓದುತ್ತಿದ್ದೆ ಆಗಲೂ ಅವರು ಅಲ್ಲೇ ಕುಳಿತಿರುತ್ತಿದ್ದರು. ಭಾದ್ರಪದ ಮಾಸದಲ್ಲಿ ಒಂದು ತಿಂಗಳ ಉಪವಾಸದಲ್ಲಿ 3-4 ಸಲ ಮಾತ್ರ ಬಿಸಿ ನೀರನ್ನು ತೆಗೆದುಕೊಂಡಿದ್ದರು. ನಾನು ಇದೇ ಮೊದಲ ಸಲ ಒಂದು ತಿಂಗಳ ಉಪವಾಸವನ್ನು ನೋಡಿದ್ದು. ನಾನು ಅವರಿಗೆ ಸ್ವಲ್ಪ ವಿಶ್ರಾಂತಿಯನ್ನು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೆ. ಅದಕ್ಕೆ ಅವರು ಅಮ್ಮ ನಿಮ್ಮ ಬಾಯಿಯಿಂದ ದಿನಪೂರ್ತಿ ಪಾಠ ಓದುವುದು ಓದಿಸುವುದರಿಂದ ಧರ್ಮ ಕೇಳಿ, ಕೇಳಿ ಕೇಳಿ ನನಗೆ ಅಮೃತ ಕುಡಿದಂತೆ ತೃಪ್ತಿಯ ಅನುಭವವಾಗುತ್ತಿದೆ. ನನಗೆ ಸುಸ್ತಾಗಲಿ ನಿಶ್ಯಕ್ತಿಯಾಗಲಿ ಅನ್ನಿಸುತ್ತಲೇ ಇಲ್ಲ ಎನ್ನುತ್ತಿದ್ದರು. ಇವಳ ಮನೋಬಲ ಬಹಳ ಸ್ಥಿರ. ಉಪವಾಸ ನಿರ್ವಿಘ್ನವಾಗಿ ನಡೆಯಿತು. ಆಶ್ವೀಜ ದ್ವಿತೀಯದಂದು ನನ್ನ ಆಹಾರ ಮಾತಾ ಮೋಹಿನಿಯವರಲ್ಲಿ ಆಯಿತು. ಪದ್ಮಾವತಿಯವರ ತಿಂಗಳ ಉಪವಾಸ ಮುಗಿದು 31ನೇಯ ದಿನ ಮಾತೆ ಮೋಹೀನಿಯವರ ಪುಣ್ಯೋದಯದಿಂದ ಅವರ ಚೌಕದಲ್ಲೇ ಇವರಿಗೂ ಆಹಾರವಾಯಿತು. ಒಂದು ತಿಂಗಳು ಉಪವಾಸದ ನಂತರ ಇವರ ಪಾರಣೆ ಆದ ದಿನ ಎಲ್ಲರಿಗೂ ಆನಂದವಾಯಿತು. ಆ ದಿನ ಅವರ ಮಗಳು ಬಾಲ ಬ್ರಹ್ಮಚಾರಿಣಿ ಕು. ಸ್ನೇಹಲತ ಕೂಡ ಬಂದಿದ್ದಳು.

ಸಪ್ತಮ ಪ್ರತಿಮೆಯ ವ್ರತ

ಒಂದು ದಿನ ಮೋಹಿನಿಯವರೇ ಆಚಾರ್ಯರಲ್ಲಿ ಶ್ರೀಫಲವನ್ನು ಇಟ್ಟು 7ನೇಯ ಪ್ರತಿಮಾವನ್ನು ಕೋರಿದರು. ಆಚಾರ್ಯರು ಪ್ರೇಮದಿಂದಲೇ ವ್ರತಕೊಟ್ಟರು. ತಾಯಿಯವರು ತಂದೆಯವರು ಕಾಲವಾದ ಮೇಲೆ ಕೂದಲನ್ನು ತೆಗೆಸಿ ಬಿಳಿಸೀರೆಯನ್ನು ಉಡುತ್ತಿದ್ದರು. ಈಗ ನಿಜಕ್ಕೂ ಬ್ರಹ್ಮಚಾರಿಣಿಯೇ ಆದರಲ್ಲ, ಆದಾಗ್ಯೂ ನಾನು ಮೋಹಿನಿಯವರನ್ನು ಮನೆಯ ಮೋಹವನ್ನು ಬಿಟ್ಟು ಸಂಘದಲ್ಲಿಯೇ ಇರಲು ಆಗ್ರಹಪಡಿಸತೊಡಗಿದೆ. ಆದರೆ ಅವರು ಮನೆಗೆ ಹೋಗಿ ಕಾಮಿನಿಯ ಮದುವೆ ಮಾಡಿ ಮುಂದಿನ ಸಲ ಬಂದು ಇಲ್ಲೇ ಇರುತ್ತೇನೆ ಎಂದರು. ಹೀಗೆ ಈ ಸಲದ ಚಾತುರ್ಮಾಸ ಆನಂದ ಮತ್ತು ಪ್ರಭಾವನೆಯಿಂದ ಮುಗಿಯಿತು.

೫೭

ಟೋಡಾರಾಯ ಸಿಂಹದಲ್ಲಿ ಸಂಘ

ಇಲ್ಲಿಂದ ವಿಹಾರ ಟೋಡಾರಾಯಸಿಂಹವೆಂಬ ಹಳ್ಳಿಗೆ ಬಂದಿತು. ಇಲ್ಲಿಯ ಜನರಂತು ಭಕ್ತಿಯಿಂದ ಚಳಿಯಲ್ಲೂ ಮುನಿಗಳ ಸ್ವಾಧ್ಯಾಯಕ್ಕೆ ಬರುತ್ತಿದ್ದರು. ನಾನು ಮಧ್ಯಾಹ್ನ ಪಾರ್ಶ್ವನಾಥ ಮಂದಿರದಲ್ಲಿ ಸಾಮಾಯಿಕಕ್ಕೆ ಹೋಗುತ್ತಿದ್ದೆ. ಪದ್ಮಾವತಿ ನನ್ನ ಲೇಖನ ಸಾಮಗ್ರಿಗಳನ್ನು ಜೊತೆಯಲ್ಲಿಯೇ ಹಿಡಿದುಕೊಂಡು ಬರುತ್ತಿದ್ದರು. ಸಾಮಾಯಿಕವಾದ ಮೇಲೆ ಅಲ್ಲೆ ಭಗವಂತರ ಮುಂದೆ ಕುಳಿತು ಅನುವಾದ ಮಾಡುತ್ತಿದ್ದೆ. ನನಗೆ ಭಗವಂತರ ಸಾನಿಧ್ಯದಲ್ಲಿ ಯಾವುದೇ ಶಬ್ದದ ಅರ್ಥವು ತಕ್ಷಣ ನೆನಪಿಗೆ ಬರುತ್ತದೆ ಎಂಬುವ ವಿಶ್ವಾಸ.

ಒಂದು ದಿನ ಟಿಕೈತನಗರದಿಂದ ಪ್ರಕಾಶಚಂದನು. ಬಂದನು ಅವನಿಗೆ ಈ ಸಂಸಾರದ ನಶ್ವರತೆಯನ್ನು ತಿಳಿಸುತ್ತಾ ಆನಾದಿಕಾಲದಿಂದ ಈ ಸಂಸಾರದಲ್ಲಿ ಜೀವವು ಜನ್ಮ ಮರಣವೆಂಬ ದುಃಖದಲ್ಲಿ ಮುಳುಗಿದೆ. ಸಮುದ್ರದಲ್ಲಿ ಕಾಳನ್ನು ಹಾಕಿ ಹೇಗೆ ಹುಡುಕಲು ಸಾಧ್ಯವಿಲ್ಲವೋ ಹಾಗೆಯೇ ಒಮ್ಮೆ ಕಳೆದುಕೊಂಡ ಮನುಷ್ಯಜನ್ಮವನ್ನು ಪಡೆಯುವುದು ದುರ್ಲಭವೆಂಬುದನ್ನು ಮನದಟ್ಟು ಮಾಡತೊಡಗಿದೆ. ಚಿಕ್ಕವಯಸ್ಸಿನ ಒಂದು ನೆನಪು ಬಂತು.

ಖೋಜೋ ಸಮುದ್ರ ಮೇ ಡಾಲ್‌ಕೆ ರಾಈ ಮಿಲೇ ನಹೀಂ ।
ರಾಈ ಭೀ ಮಿಲ ಜಾಯ ಪರ ಮನುಜ ಜನಮ್ ನಹೀಂ ॥

ನೋಡು ಪ್ರಕಾಶ (ನಾನು ನಿನಗೆ) ಈ ಸಂಸಾರದಲ್ಲಿ ಜೀವವು ಅನಾದಿಕಾಲದಿಂದ ಐದು ಪರಿವರ್ತನೆಗಳಲ್ಲಿ ಸಾಗುತ್ತಾ ಬರುತ್ತಿದೆ. ನಾನು ಒಂದು ಭವದ ಪರಿವರ್ತನೆಯನ್ನು ಹೇಳಿದರೂ ಸಾಕು ನೀನು ನಡುಗಿ ಹೋಗುತ್ತೀಯ. ಯಾವುದೇ ಜೀವ ನರಕಗತಿಯಲ್ಲಿ ಕಡಿಮೆ ಎಂದರೂ 10,000 ವರ್ಷಗಳ ಆಯುವನ್ನು ಬಂಧ ಮಾಡಿಕೊಂಡಿರುತ್ತದೆ. ಅಲ್ಲಿಂದ ಬಂದ ಜೀವ ಮನುಷ್ಯ ಅಥವ ತಿರ್ಯಂಚವಾಗಿ ಪುನಃ 10,000 ವರ್ಷಗಳಲ್ಲಿ ಎಷ್ಟು ಸಮಯವಿದೆಯೋ ಅಷ್ಟು ಸಲ ಜಘನ್ಯ ಆಯುಷ್ಯವನ್ನು ಬಂಧಿಸಿಕೊಂಡು ನರಕಕ್ಕೆ ಹೋಗುತ್ತದೆ. ಸಮಯ ಎಷ್ಟು ಸೂಕ್ಷ್ಮವೆಂದರೆ ಆ ಜೀವವೇನಾದರೂ ಮತ್ತೆ ನರಕವನ್ನು ಪಡೆದುಕೊಂಡರೆ 10,000 ವರ್ಷಕ್ಕೂ ಹೆಚ್ಚು ಸಮಯ ನರಕದಲ್ಲೇ ಇರಬೇಕಾಗುತ್ತದೆ. ಪುನಃ ಎರಡು ಸಲವೇನಾದರು ನರಕವನ್ನು ಪಡೆದಿದ್ದೇ ಆದರೆ ಅದು ಒಂದೊಂದು ಸಮಯವನ್ನು ಜಾಸ್ತಿ ಮಾಡಿಕೊಳ್ಳುತ್ತಾ 7ನೇ ನರಕಕ್ಕೆ ಹೋದರೆ ಉತ್ಕೃಷ್ಟವಾದ 33

ಸಾಗರೋಪಮಕ್ಕೆ ತಲುಪುತ್ತದೆ. ಸಾಗರದಲ್ಲಿ ಎಷ್ಟು ವರ್ಷ ಎಷ್ಟು ದಿನ ಎಷ್ಟು ಗಂಟೆ ಎಂದರೆ, ಅನುಮಾನ ಪಡುವಂತೆಯು ಇಲ್ಲ. ಸರ್ವಜ್ಞರು ಹೇಳಿರುವಂತೆ ಅಸಂಖ್ಯಾತ ವರ್ಷಗಳಿಗೆ ಸಾಗರವೆಂದು ಕರೆಯುತ್ತೇವೆ. ಸಾಗರವೆಂದರೆ ಒಂದು ಸಮುದ್ರದ ದಡದಲ್ಲಿ ಕುಳಿತು ಸೂಜಿಯ ಮೊನೆಯಿಂದ ನೀರನ್ನು ತೆಗೆಯುತ್ತಾ ಸಮುದ್ರ ಒಣಗುವವರೆಗೆ ಎಷ್ಟು ಕಾಲವಾಗುತ್ತದೋ ಅಷ್ಟು ಸಮಯಕ್ಕೆ ಸಾಗರವೆಂದು ಕರೆಯಲಾಗುತ್ತದೆ.

ಹೀಗೆ ಆನಂತ ಸಂಸಾರದಲ್ಲಿ ಭ್ರಮಣೆ ಮಾಡುತ್ತಾ ಜೀವವು ತೀರ್ಯಂಚಗತಿಯಲ್ಲಿ ಜಘನ್ಯ ಆಯು ಒಂದು ಶ್ವಾಸದ 18ನೇ ಪ್ರಮಾಣದ ಒಂದು ಭಾಗ ಇಷ್ಟು ಸಮಯಕ್ಕೆ ಜನ್ಮ. ಹೀಗೆ ಜಘನ್ಯ ಆಯುಷ್ಯವಾದರೂ ಎಷ್ಟು ಸಮಯವೋ ಅಷ್ಟೇ ಸಲ ಜಘನ್ಯ ಆಯುಷ್ಯ ಪಡೆದು ತಿರ್ಯಂಚ ಯೋನಿಯಲ್ಲಿ ಜನ್ಮವನ್ನು ಪಡೆಯುತ್ತದೆ. ಒಂದೊಂದು ಸಮಯವೂ ಹೆಚ್ಚಾಗುತ್ತಾ ತಿರ್ಯಂಚವು ಆನಂತ ಭವವನ್ನು ಪಡೆಯುತ್ತದೆ. ಭೋಗಭೂಮಿಯಲ್ಲಿ ಆಯಸ್ಸು ಹೆಚ್ಚೆಂದರೆ ಮೂರು ಪಲ್ಯೋಪಮ ವರ್ಷ. ಇಂತಹ ಮನುಷ್ಯನ ಜಘನ್ಯ ಆಯು ಶ್ವಾಸದ ಹದಿನೆಂಟನೆಯ ಒಂದು ಭಾಗ. ಈ ಸಮಯವನ್ನೆ ಎಣಿಸುತ್ತಾ ಜಘನ್ಯ ಆಯುವನ್ನು ಒಂದು ಸಮಯವನ್ನು ಹೆಚ್ಚಿಸುತ್ತಾ ಮೂರು ಪಲ್ಯದವರೆಗೆ ಉತ್ಕೃಷ್ಟ ಆಯುಷ್ಯ ಭೋಗ ಭೂಮಿಯಲ್ಲಿ ಇದೆ. ಹೀಗೆ ದೇವಗತಿಯಲ್ಲಿ ಜಘನ್ಯ ಆಯು 10,000ದಿಂದ ಹಿಡಿದು ಒಂದೊಂದು ಸಮಯವನ್ನು ಹೆಚ್ಚಿಸುತ್ತಾ 9ನೇ ಗ್ರೈವೆಯಕದಲ್ಲಿ ಉತ್ಕೃಷ್ಟ ಆಯಸ್ಸು 22 ಸಾಗರದವರೆಗೆ ಇರುತ್ತದೆ. ಹೀಗೆ ಭವಪರಿವರ್ತನೆ ಆಗುತ್ತಾ ಇರುತ್ತದೆ. ನಾನು ಇದನ್ನು ಹೆಸರಿಗೆ ಮಾತ್ರ ಹೇಳಿದೆ. ಇದೇ ಪ್ರಕಾರ ದ್ರವ್ಯ ಕ್ಷೇತ್ರ ಕಾಲ ಮತ್ತು ಭಾವದಿಂದ ನಾಲ್ಕು ಪರಿವರ್ತನೆಗಳು ಬಹಳ ಕಠಿಣವಿದೆ. ಹೀಗೆ ಹಲವಾರು ಬಾರಿ ಅವನಿಗೆ ವೈರಾಗ್ಯದ ಉಪದೇಶವನ್ನು ಕೇಳಿ ಕೇಳಿ ಪ್ರಕಾಶಚಂದನ ಮನಸ್ಸನ್ನು ಕೆಲವು ಕ್ಷಣದವರೆಗಾದರೂ ಸಂವೇಗ ಭಾವದಿಂದ ಆದರ ಭಾವ ಉಂಟುಮಾಡಿದೆ. ಅವನು ಮಾತಾಜಿ ನಿಜವಾಗಿಯು ಈ ಸಂಸಾರ ಮಹಾ ಸಮುದ್ರವನ್ನು ನೋಡಿ ನಾನು ಇದರಿಂದ ಹೊರಬಂದು ಪುನಃ ಇದರಲ್ಲೇ ಸಿಕ್ಕಿಕೊಂಡೆ ಏನಾಗಬೇಕೂ ಅದೇ ಆಯಿತು. ಆದರೆ ಬೇರೆಯವರನ್ನು ಇದರಲ್ಲಿ ಬೀಳಿಸುವಂತಹ ಸಾಹಸ ಮಾಡಲಾರೆ ಎಂದೆ.

ಅಷ್ಟ ಸಹಸ್ರೀಯ ಅನುವಾದ ಪೂರ್ಣಗೊಂಡಿತು

ನಾನು ಪುಷ್ಯಮಾಸದ ಶುದ್ಧ ದ್ವಾದಶಿಯ ದಿನ ಅಷ್ಟಸಹಸ್ರೀಯ ಅನುವಾದ ಪೂರ್ಣಗೊಳಿಸಿದೆ. ಇದರಲ್ಲಿ ಭಾವನಾ, ನಿಯೋಗ ಮೊದಲಾದ ಪ್ರಕರಣವನ್ನು ನಾನು ಬಿಟ್ಟು ಬಿಟ್ಟಿದ್ದೆ. ನಾನು ಫಿರೋಜಬಾದಿನ ಪಂ. ಮಾಣಿಕಚಂದ್ರಜೀ ನ್ಯಾಯತೀರ್ಥರವರನ್ನು ಅನೇಕ ವಿದ್ವಾಂಸರಿಗೆ ಪತ್ರ ಬರೆದು ಅವರನ್ನು ಕರೆದು ಈ ಕಠಿಣ ವಿಷಯದಲ್ಲಿ ನನಗೆ ಸಹಕಾರವನ್ನು ಕೊಡಬೇಕೆಂದು ಕೇಳಿದೆ. ಆದರೆ ಎಲ್ಲರಿಂದ ಈ ನ್ಯಾಯದ ವಿಷಯ ಉಪಲಬ್ಧ ಇಲ್ಲದೆ ಇರುವುದರಿಂದ ತಮ್ಮನ್ನು ಕ್ಷಮಿಸಬೇಕೆಂದು ಕೇಳಿಕೊಂಡರು. ಮತ್ತೆ ನಾನು ಭಗವಂತರ ಮುಂದೆ ಕುಳಿತು ಈ ಕಠಿಣ ವಿಷಯವನ್ನು ಅನುವಾದ ಮಾಡತೊಡಗಿದೆ. ಹಾಗೇ ಬೇಗನೆ ಪೂರ್ತಿಗೊಳಿಸಿದೆ. ಜೊತೆಯಲ್ಲಿಯೇ 54 ಸಾರಾಂಶಗಳನ್ನು ಬರೆದೆ. ಸನಾವದದಿಂದ ರಖಬಚಂದರು ಪತ್ನಿ ಸಹಿತ ಬಂದಿದ್ದರು. ಮೋತಿಚಂದರು ಅವರಿಂದ ಶ್ರುತಸ್ಕಂಧ ವಿಧಾನವನ್ನು ಮಾಡಿಸಿ ನನ್ನಿಂದ ಅನುವಾದಿತವಾಗಿದ್ದ ಈ ಗ್ರಂಥದ ಹತ್ತು (ಕಾಪಿ) ಪುಸ್ತಕಗಳನ್ನು ಪೂಜೆ ಮಾಡಿಸಿದರು.

ಆಚಾರ್ಯರ ಜಯಂತಿ ಮಹೋತ್ಸವ

ನಾನು ಇಲ್ಲಿ ಒಂದು ತಿಂಗಳ ಮೊದಲೆ ಆಚಾರ್ಯರ ಜನ್ಮಜಯಂತಿಯ ಸಮಾರಂಭಕ್ಕೆ ರೂಪರೇಖೆಯನ್ನು ಸಿದ್ಧಗೊಳಿಸಿದ್ದೆ. ಎಲ್ಲರು ಆಚಾರ್ಯರು ಜಯಂತಿ ಮಾಡುವುದಕ್ಕೆ ಒಪ್ಪಿಕೊಳ್ಳುವುದಿಲ್ಲ ಎನ್ನತೊಡಗಿದರು. ಆದರೆ ನಾನು ಆಚಾರ್ಯರಿಂದ ಆಜ್ಞೆಯನ್ನು ಪಡೆದುಕೊಂಡೆ. ಪುಷ್ಯಮಾಸದ ಶುಕ್ಲ ಪೂರ್ಣಿಮೆಯ ದಿನ ರಥಯಾತ್ರೆಯ ಕಾರ್ಯಕ್ರಮದಲ್ಲಿ ಆಚಾರ್ಯರು ಮೆರವಣಿಗೆಯಲ್ಲಿ ಭಾಗವಹಿಸಿದರು. ಹಾಗೇ ರಥಯಾತ್ರೆಯ ಜೊತೆ ಒಂದು ಪಾಲಕಿಯಲ್ಲಿ ಅಷ್ಟಸಹಸ್ರೀಯ ಮೂಲ ಮತ್ತು ಅನುವಾದಿತ ಗ್ರಂಥವನ್ನು ಮೆರವಣಿಗೆ ಮಾಡಿದರು. ಸಂಜೆ ಮೆರವಣಿಗೆ ವಾಪಸ್ಸು ಬಂದಾಗ ನಾನು ಗ್ರಂಥಗಳನ್ನು ಎಚ್ಚರಿಕೆಯಿಂದ ತೆಗೆದಿಡುವಾಗ ಒಂದು ಪುಸ್ತಕ ಕಾಣದಾಯಿತು. ನನಗೆ ಉಸಿರು ನಿಂತಂತಾಯಿತು. ನಾನು ಅಚೇತನಳಾದೆ. ಗಾಬರಿಯಿಂದ ಮೋತಿಚಂದನಿಗೆ ಎಲ್ಲಿ ಹೋಯಿತು, ಎಲ್ಲಿ ಬೀಳಿಸಿದಿರಿ, ಯಾರು ತೆಗೆದುಕೊಂಡು ಹೋದರು ಎಂದೆ. ನನ್ನ ಆಕುಲತೆಯನ್ನು ನೋಡಿ ಸಮಾಧಾನ ಮಾಡಿಸುತ್ತಾ, ಮಾತಾಜಿ ಲಕ್ಷಾಂತರ ರೂ. ಬೆಲೆಯ ಮನುಷ್ಯನೇ ಸತ್ತರೂ ಚಿಂತೆ ಮಾಡಲಾಗುವುದಿಲ್ಲ. ಶಾಂತವಾಗಿರಿ ನಾನು ಹುಡುಕುತ್ತೇನೆ ಎಂದ.

ಅವರು ಹಾಗೇ ಅಂದಿದ್ದು ನನಗೆ ಕಹಿ ಎನ್ನಿಸಿತು. ನಾನು ತಡಬಡಾಯಿಸಿದೆ. ಅಷ್ಟರಲ್ಲಿ ಒಬ್ಬ ಮಹಾನುಭಾವರು ಆ ಪುಸ್ತಕ ಹಿಡಿದುಕೊಂಡು ಬಂದು ಮೋತಿಚಂದನಿಗೆ ಕೊಟ್ಟರು. ನಾನು ಮೆರವಣಿಗೆ ಬಂದ ಮೇಲೆ ಗ್ರಂಥವನ್ನು ನೋಡೋಣ ಎಂದು ತೆಗೆದುಕೊಂಡಿದ್ದೆ ಎಂದು ನಕ್ಕರು. ಅದಕ್ಕೆ ನಾನು ನಾನೇನು ಕಷ್ಟಪಟ್ಟು ಅನುವಾದ ಮಾಡಿದ್ದೆನೋ ಅದನ್ನು ನಾನು ನನ್ನ ಜೀವನದಲ್ಲಿ ಮತ್ತೆ ಬರೆಯಲು ಸಾಧ್ಯವಿಲ್ಲ. ಅದರಿಂದಾಗಿ ನನಗೆ ಇದು ಲಕ್ಷಾಂತರ ರೂ.ಗಳಿಗೂ ಮಿಗಿಲಾದುದು. ಆದರೆ ಈಗಿನ ತಾಂತ್ರಿಕ ಅನುಕೂಲದಲ್ಲಿ ತಕ್ಷಣ ಜೆರಾಕ್ಸ್ ಮಾಡಿಸಬಹುದು. ಡಿ.ಟಿ.ಪಿ. ಮಾಡಿಸಬಹುದು. ಈಗಂತು ನಾನು ಕಲ್ಪದ್ರುಮ ವಿಧಾನವನ್ನು ಬರೆಯುತ್ತಿದ್ದಂತೆ ಜೆರಾಕ್ಸ್ ಮಾಡಿಸಿ ಇಟ್ಟೆ. ಯಾವುದೇ ಕೆಲಸ ಮಾಡಿದ ತಕ್ಷಣ ಟೈಪ್ ಮಾಡಿಸಿ ಇಟ್ಟು ಬಿಡುತ್ತೇನೆ ಇವತ್ತು. ಅಷ್ಟಸಹಸ್ರೀಯ ಗ್ರಂಥದ ಅನುವಾದಿತ ಎಲ್ಲ ಗ್ರಂಥಗಳು ಹಸ್ತಿನಾಪುರದ ರತ್ನತ್ರಯ ನಿಲಯದಲ್ಲಿ ಸುರಕ್ಷಿತವಾಗಿವೆ. ಆ ದಿನ ಅನುವಾದಿತ ಪುಸ್ತಕಗಳಿಗೆ ಆರತಿ ಮಾಡಲಾಯಿತು. ಆಚಾರ್ಯರು ಬಹಳ ಪ್ರಸನ್ನತೆಯಿಂದ ಮಾತಾಜೀ ನೀವು ಇಂತಹ ಮಹಾನ್ ಕಾರ್ಯಗಳನ್ನು ಮಾಡುತ್ತಲೇ ಇರಿ ಇದಕ್ಕೆ ನನ್ನ ಆಶೀರ್ವಾದ ಯಾವಾಗಲೂ ಇದೆ ಎಂದರು. ನಂತರ ನಾನು ನ್ಯಾಯ ಕುಮುದಚಂದ್ರ ಎಂಬುವ ಗ್ರಂಥವನ್ನು ಮೂಲ ಆಧಾರ ಶ್ಲೋಕಗಳ ಅನುವಾದ ಸಹಿತ ಮಾಡಿದೆ ಲಘೀಯ ಸ್ತ್ರಯ ಎಂಬ ಅನುವಾದಿತ ಇನ್ನೂ ಪ್ರಕಾಶವಾಗದೆ ಜಂಬೂದ್ವೀಪದ ರತ್ನತ್ರಯ ನಿಲಯದಲ್ಲಿ ಸುರಕ್ಷಿತವಾಗಿದೆ.

ಪಂಚಕಲ್ಯಾಣದ ಪ್ರತಿಷ್ಠೆ

ಇಲ್ಲಿಂದ ವಿಹಾರ ಟೋಂಕಕ್ಕೆ ಬಂದಿತು. ಇಲ್ಲಿ ಮಾಘ ಮಾಸದಲ್ಲಿ ಪಂಚಕಲ್ಯಾಣ ಆಗಬೇಕಾಗಿತ್ತು. 1971ರ ಫೆಬ್ರವರಿಯಲ್ಲಿ ಈ ಪ್ರತಿಷ್ಠೆಗಾಗಿ ಟಿಕೈತನಗರದಿಂದ ಛೋಟಶಾಹ, ಕೈಲಾಸಚಂದ ಮತ್ತು ರವೀಂದ್ರ ಕುಮಾರ ಬಂದಿದ್ದರು. ಆಗ ನಾನು ಹಾಗೆ ಹೀಗೆ ರವೀಂದ್ರನಿಗೆ ತಿಳುವಳಿಕೆ ಹೇಳಲು ಪ್ರಾರಂಭಿಸಿದೆ. ಒಬ್ಬನನ್ನ ಕೂರಿಸಿಕೊಂಡು ವೈರಾಗ್ಯದ ಉಪದೇಶ ಕೊಡತೊಡಗಿದೆ. ಒಂದು ದಿನ ಕಾಲಪರಿವರ್ತನೆಯ ಬಗ್ಗೆ ಹೇಳುತ್ತಾ ರವೀಂದ್ರ ಮನುಷ್ಯಪರ್ಯಾಯವನ್ನು ಪಡೆದಿರುವ ನೀನು ಶ್ರೇಷ್ಠವಾದ ಕೆಲಸವನ್ನು ಮಾಡು ಪೂಜ್ಯಪಾದ ಸ್ವಾಮಿಗಳು ಹೇಳುವ

ಇತಶ್ಚಿಂತಾ ಮಣಿರ್ದಿವ್ಯ ಇತಃ ಪಿಣ್ಯಾಕಖಂಡಕಂ ।
ಧ್ಯಾನೇನ ಚೇದುಭೇ ಲಭ್ಯೇ ಕ್ಷಾಂದ್ರಿಯಂತಾಂ ವಿವೇಕಿನಃ॥

ಒಂದು ಕೈಯಲ್ಲಿ ಚಿಂತಾಮಣಿರತ್ನವನ್ನು ಇನ್ನೊಂದು ಕೈಯಲ್ಲಿ ಗಾಜಿನ ಚೂರನ್ನು ಇಟ್ಟುಕೊಂಡಿರುವ ವಿವೇಕಿಯು ಯಾವುದನ್ನು (ಇಟ್ಟುಕೊಳ್ಳುತ್ತಾನೆ) ಆಧರಿಸುತ್ತಾನೆ. ಈ ಸಂಸಾರ ಸುಖವೆನ್ನುವುದು ಹಿಂಡಿಯ ಚೂರಿಗೆ ಸಮಾನವಾದುದು ಮತ್ತು ಧರ್ಮವು ದಿವ್ಯ ಚಿಂತಾಮಣಿಯ ರತ್ನ ಸಮಾನವಾದದ್ದು. ಪುನಃ ನಾನು ಕಾಲದ ಬಗ್ಗೆ ಹೇಳುತ್ತಾ ನೋಡು ಒಂದು ಅವಸರ್ಪಿಣಿ ಮತ್ತು ಎರಡನೆಯದು ಉತ್ಸರ್ಪಿಣಿ. ಹೀಗೆ ಎರಡು ಕಾಲವು ಒಂದು ಕಲ್ಪಕಾಲವಾಗುತ್ತದೆ. ಒಂದು ಅವಸರ್ಪಿಣೀ ಹತ್ತು ಕೋಡಾ-ಕೋಡಿ ಸಾಗರ ಹಾಗೂ ಒಂದು ಉತ್ಸರ್ಪಿಣಿ ಹತ್ತು ಕೋಡಾ-ಕೋಡಿ ಸಾಗರ. ಹೀಗೆ ಇಪತ್ತು ಕೋಡಾ-ಕೋಡಿ ಒಂದು ಕಲ್ಪಕಾಲವಾಗಿದೆ. ಒಂದು ಕೋಟಿಯನ್ನು ಒಂದು ಕೋಟಿಯಿಂದ ಗುಣಿಸಿದರೆ ಬರುವುದೇ ಕೋಡಾ-ಕೋಡಿ ಆಗುತ್ತದೆ. ಮತ್ತು ಸಾಗರ ಎಂದರೆ ಅಗಾಧವಾದುದು.

ಯಾವ ಜೀವವು ಅವಸರ್ಪಿಣಿಯ ಪ್ರಥಮ ಕಾಲದಲ್ಲಿ ಜನ್ಮವನ್ನು ತಳೆದು ಆಯಸ್ಸು ಪೂರ್ತಿಯಾದ ಮೇಲೆ ಸಾಯುತ್ತದೆಯೋ ಅದೇ ಜೀವ ಎರಡನೆಯ ಅವಸರ್ಪಿಣಿಯ ಎರಡನೆಯ ಸಮಯದಲ್ಲಿ ಜನ್ಮ ತಳೆಯುತ್ತದೆ. ಮೂರನೆಯ ಅವಸರ್ಪಿಣಿಯ ಮೂರನೆಯ ಸಮಯದಲ್ಲಿ ಜನ್ಮ ತಳೆಯುತ್ತದೆ. ನಾಲ್ಕನೆಯ ಅವಸರ್ಪಿಣಿ ನಾಲ್ಕನೆಯ ಸಮಯದಲ್ಲಿ ಜನ್ಮ ತಳೆಯುತ್ತದೆ. ಈ ಪ್ರಕಾರವಾಗಿ ಅಸಂಖ್ಯಾತ ಅವಸರ್ಪಿಣಿ ಕಳೆಯುತ್ತಾ ಇದೆ. ಇಂತಹ ಅವಸರ್ಪಿಣಿಯಲ್ಲಿ ಜನ್ಮವನ್ನು ಪೂರೈಸುತ್ತದೆ. ಪುನಃ ಅದೇ ಜೀವ ಅವಸರ್ಪಿಣಿಯ ಪ್ರಥಮ ಸಮಯದಲ್ಲಿ ಸತ್ತು ಅದೇ ಜೀವ ದ್ವಿತೀಯ ಅವಸರ್ಪಿಣಿಯ ದ್ವಿತೀಯ ಸಮಯದಲ್ಲಿ ಸತ್ತು. ತೃತೀಯ ಅವಸರ್ಪಿಣಿಯ ತೃತೀಯ ಸಮಯದಲ್ಲಿ ಸತ್ತು. ಇದೇ ಪ್ರಕಾರ ಮರಣದಿಂದ ಅವಸರ್ಪಿಣಿಯ ಸಮಯ ಸರಾಸರಿಯಾಗಿ ಅವಸರ್ಪಿಣಿಯಲ್ಲಿ ಸಮಾಪ್ತಗೊಳಿಸಿ ಉತ್ಸರ್ಪಿಣಿಯಲ್ಲಿ ಮರಣ ಹೊಂದಿ ಸಮಾಪ್ತಿಗೊಳಿಸುತ್ತದೆ. ಆಗ ಯಾವುದೋ ಒಂದು ಕಾಲ ಪರಿವರ್ತನೆ ಪೂರ್ಣಗೊಳ್ಳುತ್ತದೆ.

ಸಮಯದ ವ್ಯಾಖ್ಯಾನವಾದರೂ ಬಹಳ ಸೂಕ್ಷ್ಮವಾದುದು ಒಂದು ಆವಲಿಯಲ್ಲಿ ಅಸಂಖ್ಯಾತ ಸಮಯವಾಗುತ್ತದೆ. ಆವಲಿಯು ಒಂದು ಸೆಕೆಂಡಿಗೂ ಚಿಕ್ಕದು. ಉದಾಹರಣೆಗೆ ವಿಳ್ಳೆಯದೆಲೆಯ ನೂರು ಎಲೆಗಳ ಒಂದು ಚೂರು ಮಾಡಿ ಅದನ್ನು ಒಂದು ಸೂಜಿಯಿಂದ ಒಂದೇ ಸಮನೆ ಚೂರುಮಾಡುತ್ತಾ ಒಂದೊಂದು ಎಲೆಯನ್ನು ಚೂರು ಮಾಡಲು ಎಷ್ಟು ಸಮಯ ಹಿಡಿಸುತ್ತದೆಯೊ ಅದೇ ಸಮಯ. ಇದು ಬಹಳ ವಿಸ್ತಾರವಾದ ವ್ಯಾಖ್ಯಾನ ನಿಜವಾದ ಕಾಲದ ಎರಡನೇ ಭಾಗ. ವಿಭಾಗ ಮಾಡಲು ಸಾಧ್ಯವಾಗುವುದಿಲ್ಲ. ಇಂತಹ ಸೂಕ್ಷ್ಮಕಾಲವನ್ನು ಸಮಯ ಎನ್ನುತ್ತಾರೆ. ನೋಡು ನಾನು ನೀನು ಎಲ್ಲಾ ಜೀವಿಗಳು ಈ ಸಂಸಾರದಲ್ಲಿ ಪರಿಭ್ರಮಣೆ ಮಾಡುತ್ತಾ ಗೊತ್ತಿಲ್ಲದೆ ಎಷ್ಟು ಪಂಚ ಪರಿವರ್ತನೆಗಳನ್ನು ಸಮಾಪ್ತಗೊಳಿಸಿದ್ದೇವೆ ಜನ್ಮ ಮರಣಗಳ ದುಃಖವನ್ನು ಸಹಿಸಿ. ಸಹಿಸಿ ಈಗ ಯಾರು ಜೈನಧರ್ಮದಲ್ಲಿ ಜನ್ಮ ತಳೆದು ಸ್ವಲ್ಪ ಯೋಗ್ಯತೆಯನ್ನು ಪ್ರಾಪ್ತಿ ಮಾಡಿಕೊಂಡು ಗುರುವಿನ ಉಪದೇಶವನ್ನು ಗ್ರಹಣೆ ಮಾಡಿಕೊಳ್ಳಬಲ್ಲರು. ಗುರುವೇ ಕೈ ಹಿಡಿದು ಭವ್ಯ ಜೀವಿಗಳನ್ನು ಮೋಕ್ಷ ಮಾರ್ಗಕ್ಕೆ ಕರೆದೊಯ್ಯಬಲ್ಲರು.

ಮನುಷ್ಯ ಪರ್ಯಾಯದಿಂದ ನೀವು ಬಯಸಿದರೆ ಸಂಸಾರದ ಐಹಿಕ ಸುಖಗಳನ್ನು ಪಡೆಯಬಹುದು. ಅಥವ ನಿವೃತ್ತಿ ಹೊಂದಬಹುದು. ಮತ್ತು ನಾವು ಈ ಶರೀರದಿಂದಲೇ ನಾವು ಮೋಕ್ಷಮಾರ್ಗದ ಸಾಧನೆಯನ್ನು ಮಾಡಿ ಈ ಸಂಸಾರದಿಂದ ಬಿಡುಗಡೆ ಹೊಂದಬಹುದು. ಹೇಗೆಂದರೆ ಯಾವ ವ್ಯಕ್ತಿಯು ಮರದ ಕೆಳಗೆ ಹೋಗಿ

ಮರದ ನೆರಳಿನಿಂದಲೇ ಸಂತೃಪ್ತಿಯನ್ನು ಪಡೆಯುತ್ತಾನೆ. ಎರಡನೆಯವನು ಅದರ ಹಣ್ಣುಗಳನ್ನು ತಿಂದು ತೃಪ್ತಿಪಡುತ್ತಾನೆ. ಈ ಸಾಂಸಾರಿಕ ಸುಖ ಎನ್ನುವುದು ನೆರಳಿದ್ದಂತೆ ತುಚ್ಛವಾದುದು ಮತ್ತು ಧರ್ಮಸಾಧನೆಯಿಂದ ಸಿಗುವ ಸುಖ, ಸ್ವರ್ಗ-ಮೋಕ್ಷದ ವೈಭವ ಅಮೃತಫಲಗಳಿಗೆ ಸಮಾನವಾದುದು.

ಹೀಗೆ ಹಲವಾರು ರೀತಿಯಿಂದ ರವೀಂದ್ರನ ಮನದಲ್ಲಿ ವೈರಾಗ್ಯ ಅಂಕುರವಾಗುವಂತೆ ಮಾಡಿದೆ. ಪುನಃ ಪ್ರತಿಷ್ಠೆ ಆದ ಮೇಲೆ ನನ್ನ ಶಿಕ್ಷಣದಿಂದ ಪ್ರಭಾವಿತನಾಗಿದ್ದನ್ನು ಕಂಡು ನಾನು ಈಸಲ 2½ ತಿಂಗಳು ಇಲ್ಲಿದ್ದು ಶಾಸ್ತ್ರಿ ಪರೀಕ್ಷೆಗೆ ಓದಿ, ಬೊಂಬಾಯಿಯ ಪರೀಕ್ಷಾಲಯದಲ್ಲಿ ಪರೀಕ್ಷೆ ಬರಿ ನಂತರ ನಿನಗೆ ಹೇಗೆ ಅನ್ನಿಸುತ್ತದೋ ಹಾಗೆ ಮಾಡು ಎಂದೆ.

ರವೀಂದ್ರ ಕುಮಾರನು ಈ ಸಲ ಇಲ್ಲಿರುವ ಭಾವನೆ ವ್ಯಕ್ತಪಡಿಸಿದ. ನನಗೆ ಬಹಳ ಖುಷಿ ಆಯಿತು. ಹೀಗೆ ಯಾವುದೋ ಸಂದರ್ಭದಲ್ಲಿ ಯಾರಿಗೋ ಶ್ರೀಮಾನರು ಪರಿಚಯ ಹೇಳುತ್ತಿದ್ದರು. ಆಗ ಅವರು ಮಾತಾಜಿ ನೀವು ಏನನ್ನು ಬಯಸುತ್ತೀರ, ನಾನು ವ್ಯಾಪಾರಿಯಾಗಬೇಕೋ, ಉದ್ಯೋಗಪತಿಯಾಗಬೇಕೋ. ಆಗ ಹೀಗೆ ಶ್ರೀಮಾನ್ ಆಗಲು ನೀವು ಬಯಸಿದರೆ ನಾನು ಸಂಘದಲ್ಲಿ ಇದ್ದು ಮನೆ-ಮನೆಗಳಲ್ಲಿ ಭೋಜನ ಮಾಡಲೇ ಎಂದು ಕೇಳಿದ.

ನಾನು ರವೀಂದ್ರನಿಗೆ ನೋಡು ನೀನು ಬಯಸಿದರೆ ಎಂತಹ ಆದರ್ಶ ಮಹಾನ್ ವ್ಯಕ್ತಿ ಆಗಬಹುದೆಂದರೆ ಎಂತೆಂತಹ ಶ್ರೀಮಂತರೇ ನಿನ್ನ ಚರಣಗಳಿಗೆ ನಮಸ್ಕರಿಸುತ್ತಾರೆ. ಇದನ್ನು ಕೇಳಿದ ರವೀಂದ್ರನು ಯೋಚಿಸತೊಡಗಿದ. ನೀವು ಹೇಳುತ್ತೀರುವುದು ಸರಿಯೇ ಇದು ಸಂಭವವಿದೆ. ನಿಮ್ಮ ವಚನದಂತೆ ಈ ಯೋಗ್ಯತೆಯನ್ನು ಪ್ರಾಪ್ತ ಮಾಡಿಕೊಂಡರೆ ಚೆನ್ನಾಗಿರುತ್ತದೆ ಎಂದ. ನಂತರ ಕೈಲಾಸಚಂದ್ರನನ್ನು ಹೇಗೋ ಒಪ್ಪಿಸಿ ವಾಪಸ್ಸು ಕಳುಹಿಸಿದೆ. ರವೀಂದ್ರನನ್ನು ಅಲ್ಲೇ ಉಳಿಸಿಕೊಂಡೆ.

ಸುಮೇರುವಿನ ಪ್ರಾಣ ಪ್ರತಿಷ್ಠೆ

ಕಾರ್ಯವು ನಿರ್ವಿಘ್ನವಾಗಿ ನೆರವೇರುವುದಕ್ಕಾಗಿ ಮೋತಿಚಂದನು ನನ್ನ ಇಚ್ಛೆಯಂತೆ 3 1/2 ಅಡಿ ಎತ್ತರದ ಕಲ್ಲಿನ ಸುಮೇರು ಪರ್ವತವನ್ನು ನಿರ್ಮಾಣ ಮಾಡಿಸಿದ. ಅದರಲ್ಲಿ 16 ಚೈತ್ಯಾಲಯದಲ್ಲಿಯು 16 ಜಿನಬಿಂಬಗಳನ್ನು ಮಾಡಿಸಿದ. ಅದನ್ನು ಪಂಚಕಲ್ಯಾಣದ ಸ್ಥಳದಲ್ಲಿ ಪ್ರತಿಷ್ಠಿಸಿದ. ಟಿಕೈತನಗರದ ಪ್ರದ್ಯುಮ್ನಕುಮಾರ ಛೋಟಿಶಾಹನು ಇದನ್ನು ತಮ್ಮ ಊರಿಗೆ ತೆಗೆದುಕೊಂಡು ಹೋಗಿ ಮಂದಿರದಲ್ಲಿ ಇಟ್ಟುಕೊಳ್ಳುತ್ತೇವೆ ಎಂದು ಕೇಳಿದ್ದರಿಂದ ಮೋತಿಚಂದನಿಗೆ ಹೇಳಿ ಕೊಡಿಸಿದೆ. ಇಂದಿಗೂ ಅದು ಟಿಕೈತನಗರದ ಮಂದಿರದಲ್ಲಿದೆ. ಇದನ್ನು ನೋಡಿದ ದರಿಯಾಬಾದಿನ ಒಬ್ಬ ಶ್ರೇಷ್ಠಿ ಅಮೃತಲಾಲರು ಮೋತಿಚಂದನಿಂದ ಮತ್ತೊಂದು ಮಾದರಿಯನ್ನು ಮಾಡಿಸಿಕೊಂಡು ದರಿಯಾಬಾದಿನ ಮಂದಿರದಲ್ಲಿ ಪ್ರತಿಷ್ಠಾಪಿಸಿದ್ದಾರೆ.

೫೮

ಶಾಸ್ತ್ರಿ ಕೋರ್ಸಿನ ಅಧ್ಯಯನ

ಟೋಂಕದಲ್ಲಿ ರವೀಂದ್ರ ಕುಮಾರನು ನನ್ನ ಹತ್ತಿರ ಶಾಸ್ತ್ರಿ ಕೋರ್ಸ್‌ನ ಮೂರು ಖಂಡಗಳ ಅಧ್ಯಯನವನ್ನು ಒಟ್ಟಿಗೆ ಮಾಡುತ್ತಿದ್ದ. ಗೊಮ್ಮಟಸಾರದ ಕರ್ಮಕಾಂಡದ ಸುಮಾರು 400 ಗಾಹೆಗಳು, ರಾಜವಾರ್ತಿಕದ

ಪೂರ್ವಾರ್ಧ ಮತ್ತು ಉತ್ತರಾರ್ಧ ನ್ಯಾಯದಲ್ಲಿ ಅಷ್ಟಸಹಸ್ರೀ. ರವೀಂದ್ರನು ಹಿಂದಿಯಲ್ಲಿ ಈ ವಿಷಯವನ್ನೆಲ್ಲ ಓದಿ, ಮನನ ಚಿಂತನ ಮತ್ತು ಅಭ್ಯಾಸವನ್ನು ಪ್ರಾರಂಭಿಸಿದ್ದ, ಮೋತಿಚಂದನು ಶಾಸ್ತ್ರಿಯ ಮೂರನೆಯ ವರ್ಷದ ಕೋರ್ಸಿನಲ್ಲಿದ್ದನು.

ಸಂಘವು ವಿಹಾರ ಮಾಡುತ್ತಾ ಚಿಕ್ಕ ಚಿಕ್ಕ ಹಳ್ಳಿಗಳ ಮೂಲಕ ಲಾವಾ ಎಂಬ ಹಳ್ಳಿಗೆ ಬಂದಿತು. ಇಲ್ಲಿ ಇವರ ಅಭ್ಯಾಸ ಪ್ರಶ್ನೋತ್ತರ ಚೆನ್ನಾಗಿ ನಡೆಯುತ್ತಿತ್ತು. ಸಾಯಂಕಾಲ ಪ್ರತಿಕ್ರಮಣವಾದ ನಂತರ ಆಚಾರ್ಯ ಶ್ರೀ ಧರ್ಮಸಾಗರರು ಗೊಮ್ಮಟಸಾರದ ಕರ್ಮಕಾಂಡದ ಮೇಲೆ ಪ್ರಶ್ನೆಗಳನ್ನು ಕೇಳುತ್ತಿದ್ದರು. ಯಾವ ಗುಣಸ್ಥಾನದಿಂದ ಎಷ್ಟು ಪ್ರಕೃತಿಗಳು ಬಂಧದಿಂದ ವ್ಯುಚ್ಛಿನ್ನವಾಗುತ್ತದೆ ? ಯಾವ ಗುಣಸ್ಥಾನದಲ್ಲಿ ಎಷ್ಟು ಪ್ರಕೃತಿಗಳು ಉದಯದಿಂದ ವ್ಯುಚ್ಛಿನ್ನವಾಗುತ್ತವೆ ಮೊದಲಾಗಿ ಕೇಳುತ್ತಿದ್ದರು. ಈ ಪ್ರಶ್ನೆಗಳಿಗೆ ಇವರು ಕೊಡವ ಉತ್ತರದಿಂದ ಅವರಿಗೆ ಸಂತೋಷವಾಗುತ್ತಿತ್ತು. ಗೊಮ್ಮಟಸಾರದ ಕರ್ಮಕಾಂಡ, ರಾಜವಾರ್ತಿಕ ಮೊದಲಾದ ಅಧ್ಯಯನವನ್ನು ಮಹಾರಾಜರೇ ಮಾಡುತ್ತಿದ್ದರು. ಸಂಘ ಇಲ್ಲಿಂದ ಮಾಲಾಪುರಕ್ಕೆ ವಿಹಾರ ಮಾಡಿತು. ಬೇಸಿಗೆ ಆದ್ದರಿಂದ ಇಲ್ಲಿಯೆ ಕೆಲವು ದಿನಗಳು ಇದ್ದೆವು. ಪರೀಕ್ಷೆ - ಸೋಲಾಪುರದಿಂದ ಧಾರ್ಮಿಕ ಪರೀಕ್ಷೆಯ ಪ್ರಶ್ನೆ-ಪತ್ರಗಳು ಬಂದವು. ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರು ಉತ್ತರ ಬರೆದು ಪರೀಕ್ಷೆ ಮುಗಿಸಿದರು. ನಾನು ಕೆಲವು ವರ್ಷಗಳ ಹಿಂದೆ ಆಚಾರ್ಯ ಶಿವಸಾಗರ ವಿದ್ಯಾಲಯ ಎಂಬ ಹೆಸರಿನ ಸಂಘದಲ್ಲಿ ನಡೆಸುವ ಪರೀಕ್ಷೆಗಳಿಗೆ ಸ್ಥಾನವನ್ನು ನಿಶ್ಚಿತಗೊಳಿಸಿದ್ದೆ. ಸಂಘದಲ್ಲಿ ಮೋತಿಚಂದ, ರವೀಂದ್ರ, ಕುಮಾರಿಯರಾದ ಶೀಲ, ಸುಶೀಲ, ವಿಮಲ, ಕಲಾ, ತ್ರಿಶಲಾ ಎಲ್ಲರು ತಮ್ಮ ಅಧ್ಯಯನ ಅನುಸಾರ ಶಾಸ್ತ್ರಿ ಮುಂತಾದ ಪರೀಕ್ಷೆ ಕೊಟ್ಟಿದ್ದರು. ಉತ್ತರ ಪತ್ರಿಕೆಗಳನ್ನು ಕಳುಹಿಸಿ ಕೊಟ್ಟಿದ್ದೆವು. ಪ್ರಮಾಣಪತ್ರಗಳನ್ನು ಅಲ್ಲಿಂದ ಕಳುಹಿಸಿದ್ದರು.

ಸಮಯ ಸಾರದ ಸ್ವಾಧ್ಯಾಯ

ಸಂಘದಲ್ಲಿ ಸಮಯಸಾರದ ಸ್ವಾಧ್ಯಾಯ ನಡೆಯುತ್ತಿರಲಿಲ್ಲ. ರವೀಂದ್ರ ಕುಮಾರ ಆಗ್ರಹ ಮಾಡುತ್ತಲೇ ಇದ್ದ. ಮಾತಾಜೀ ಕಾನಜಿ ಪಂಥದವರು ಸಮಯಸಾರದ ಅರ್ಥವನ್ನು ಅನರ್ಥಮಾಡುತ್ತಿದ್ದಾರೆ. ನೀವು ನಮಗೆ ಸಮಯಸಾರದ ಪಾಠವನ್ನು ಮಾಡಿ ಸರಿಯಾದ ಅರ್ಥವನ್ನು ತಿಳಿಸಿರಿ ಎಂದು. ನಾನು ಆಶ್ವಾಸನೆ ಕೊಡುತ್ತಾ ಹೇಳಿದೆ. ಒಮ್ಮೆ ಅಷ್ಟಸಹಸ್ರೀಯ ಸಾರಾಂಶವನ್ನು ಓದು. ಗೊಮ್ಮಟಸಾರದ ಕರ್ಮಕಾಂಡ, ರಾಜವಾರ್ತಿಕವನ್ನು ಓದು. ಆನಂತರ ಸಮಯಸಾರದ ಸ್ವಾಧ್ಯಾಯ ಮಾಡಿಸುತ್ತೇನೆ.

ಮತ್ತೆ ಆಗ್ರಹಪಡಿಸತೊಡಗಿದ್ದರಿಂದ ಮಾಲಾಪುರದಲ್ಲೇ ಸಮಯಸಾರದ ಸ್ವಾಧ್ಯಾಯವನ್ನು ಪ್ರಾರಂಭ ಮಾಡಿದೆ. ಸಮಯಸಾರದ ಅಂತರ್ಗತ ನಿಶ್ಚಯ ವ್ಯವಹಾರಗಳನ್ನು ತಿಳಿಸುವುದಕ್ಕಾಗಿ ಆಲಾಪ ಪದ್ಧತಿ ಎಂಬ ಹೆಸರಿನ ಒಂದು ಚಿಕ್ಕ ಪುಸ್ತಕವನ್ನು ಜೊತೆಯಲ್ಲಿಯೇ ಪಾಠ ಮಾಡತೊಡಗಿದೆ. ಇದರಲ್ಲಿ ನಯಗಳು ಸಂಕ್ಷೇಪದಿಂದ 18 ಭೇದಗಳನ್ನು ಮಾಡಲಾಗಿದೆ. ಇದರಿಂದ ವಿಷಯಗಳು ಚೆನ್ನಾಗಿ ಅರ್ಥವಾಯಿತು.

ಆಧ್ಯಾತ್ಮ ಗ್ರಂಥಗಳ ಸ್ವಾಧ್ಯಾಯಕ್ಕೆ ಮೊದಲು ಆ ಆಲಾಪ ಪದ್ಧತಿಯ ಪುಸ್ತಕವನ್ನು ಪ್ರತಿಯೊಬ್ಬರು ಅವಶ್ಯಕವಾಗಿ ಓದಬೇಕು. ಇದನ್ನು ಓದಿದರೆಂದರೆ ಆಧ್ಯಾತ್ಮದ ಅರ್ಥ ಅನರ್ಥವಾಗಲಾರದು. ಜೊತೆಯಲ್ಲಿಯೇ ಶ್ರೀ ಪೂಜ್ಯಪಾದಸ್ವಾಮಿಗಳ ಸಮಾಧಿ ತಂತ್ರ ಮತ್ತು ಇಷ್ಟೋಪದೇಶವನ್ನು ಅವಶ್ಯವಾಗಿ ಓದಬೇಕಾಗಿದೆ.

ರವೀಂದ್ರನು ನನ್ನ ಆಜ್ಞೆಯಂತೆ ಬಡನಗರದಲ್ಲಿ ಒಬ್ಬ ಶ್ರೇಷ್ಠಿಗಳಿಂದ ಮಿಶ್ರೀಲಾಲರಿಗೆ ತತ್ತ್ವಾರ್ಥಸೂತ್ರ ಮತ್ತು ಇಷ್ಟೋಪದೇಶವನ್ನು ಪಾಠ ಮಾಡಲು ಪ್ರಾರಂಭಿಸಿದ. ಇವರಿಂದಾಗಿ ಅವನಿಗೆ ಆ ವಿಷಯ ಇನ್ನೂ ಚೆನ್ನಾಗಿ ತಿಳಿಯಲು ಸಹಾಯವಾಯಿತು. 1971ರ ಚಾತುರ್ಮಾಸವು ಶ್ರಾವಕರ ಆಗ್ರಹದಿಂದ ಅಜಮೇರದಲ್ಲಿ ನಡೆಯಿತು.

ಆಷಾಢ ಶುಕ್ಲ ಚತುರ್ದಶಿಯ ಪೂರ್ವದಿನವೇ ಸೇಠ್ ಸಾಹೇಬದ ನಶಿಯಾದಲ್ಲಿ ಆಚಾರ್ಯರು ತಮ್ಮ ದೊಡ್ಡ ಸಂಘದೊಂದಿಗೆ ದಯಮಾಡಿಸಿ ವರ್ಷಾಯೋಗವನ್ನು ಕೈಕೊಂಡರು. ಚಿಕ್ಕ ಛೋಟಘಢೆಯ ನಶಿಯಾದಲ್ಲಿ ಪ್ರಾತಃಕಾಲ ಉಪದೇಶವಾಗುತ್ತಿತ್ತು. ಅದರಲ್ಲಿ ಛಗನಲಾಲ ಮೊದಲಾದ ಪ್ರಬುದ್ಧ ಶ್ರಾವಕರು ಬರುತ್ತಿದ್ದರು. ಮೊದಲು ನನ್ನ ಉಪದೇಶವಾಗುತ್ತಿತು. ಕೆಲವು ಈರ್ಷೆಯ ಜನರು ನನ್ನ ಉಪದೇಶವನ್ನು ನಿಲ್ಲಿಸಿಸಿದರು. ಆಗ ಅನೇಕ ಪ್ರಬುದ್ಧ ಜನರಿಗೆ ಬಹಳ ಕೆಡುಕೆನಿಸಿತು. ಅಲ್ಲದೆ ನಾನು ಆ ದಿನಗಳಲ್ಲಿ ಆಪ್ತ ಮೀಮಾಂಸದ ಅಧ್ಯಯನ ಅಧ್ಯಾಪನೆಗಳಲ್ಲಿಯೇ ಇನ್ನು ಹೆಚ್ಚು ತೊಡಗಿಕೊಂಡೆ. ಇದರಲ್ಲೂ ಒಬ್ಬ ಮಹಾನುಭಾವ ಭಾಗವಹಿಸುತ್ತಿದ್ದರು. ನಾನು ಬೆಳಗ್ಗೆ ಮಧ್ಯಾಹ್ನ ಅಧ್ಯಯನದಲ್ಲೇ ಇರುತ್ತಿದ್ದೆ.

ಚರ್ಚೆಗಳು

ಒಮ್ಮೆ ಸರಸೇಠ ಶ್ರೀಭಾಗಚಂದ್‌ಜೀ ಸೋನಿಯ ಜೊತೆ ಪಂ. ಹುಕುಮಚಂದ್ ಬಾರಿಲ್ಲ ಅಷ್ಟ ಸಹಸ್ರೀಯ ಪ್ರಾಗಭಾವ, ಪ್ರಧ್ವಂಸಾಭಾವ ಮೊದಲಾದವುಗಳ ಬಗ್ಗೆ ವಿಶೇಷವಾಗಿ ತಿಳಿಯಲು ಜಿಜ್ಞಾಸೆಯಿಂದ ಬಂದರು. ನಾನು ಹಿಂದಿಯಲ್ಲಿ ಅನುವಾದ ಮಾಡಿರುವಂತೆಯೆ ಚೆನ್ನಾಗಿ ವಿಷಯ ತಿಳಿಸಿದೆ. ನ್ಯಾಯಗ್ರಂಥಗಳ ಅಭಾವವಾದ ಪ್ರಕರಣವನ್ನು ತಿಳಿಸುತ್ತಾ ಹೇಳಿದರು. ಮಾತಾಜೀ ಈ ಅಷ್ಟ ಸಹಸ್ರೀ ಗ್ರಂಥದ ಅನುವಾದವನ್ನು ಬೇಗನೆ ಪ್ರಕಾಶನ ಮಾಡಬೇಕು. ಇದರಲ್ಲಿ ಅಮೂಲ್ಯವಾದ ರತ್ನಗಳೇ ಅಡಗಿವೆ. ಹಿಂದಿಯಲ್ಲಿ ಪ್ರಕಾಶನಗೊಳಿಸಿದರೆ ತಮ್ಮ ಕೀರ್ತಿಯು ಪ್ರಕಾಶಮಾನಕ್ಕೆ ಬರುತ್ತದೆ ಎಂದರು. ಭಾಗಚಂದ ಸೋನಿಯವರು ನನ್ನ ಸಮಯಸಾರದ ಸ್ವಾಧ್ಯಾಯದಲ್ಲಿ ಬಹಳ ಸಲ ಬಂದು ಕೂರುತ್ತಿದ್ದರು. ನಿಶ್ಚಯ ಮತ್ತು ವ್ಯವಹಾರ ನಯಗಳ ಸಮನ್ವಯವನ್ನು ಕೇಳಿ ಬಹಳ ಸಂತೋಷಿಸುತ್ತಿದ್ದರು. ಅವರು ಹೇಳುತ್ತಿದ್ದರು. ಈ ನಯಗಳ ಸಮನ್ವಯವನ್ನು ಸರಿಯಾಗಿ ತಿಳಿಯದೆ ಇಂದು ದಿಗಂಬರ ಜೈನ ಸಮಾಜ. ಛಿದ್ರ ಛಿದ್ರವಾಗುತ್ತಿದೆ ಎಂದು. ಅದಕ್ಕೆ ನಾನು ಗುರುಮುಖದಿಂದ ಮತ್ತು ಗುರುಪರಂಪರೆಯಂತೆ ಅಧ್ಯಯನ ಮಾಡಿದರೆ ಸರಿಯಾದ ಅರ್ಥ ತಿಳಿಯುತ್ತದೆ. ಇಲ್ಲದಿದ್ದರೆ ಅರ್ಥವೇ ಅನರ್ಥವಾಗುತ್ತದೆ ಎಂದೆ.

ಆಚಾರ್ಯ ಶ್ರೀ ವೀರಸಾಗರರು ಹೇಳುತ್ತಿದ್ದರು. ತತ್ತ್ವಾರ್ಥ ಸೂತ್ರದ ಎರಡನೆಯ ಅಧ್ಯಾಯದಲ್ಲಿ "ನ ದೇವಾಃ" ಎಂದಿದೆ. ವ್ಯಾಕರಣತಜ್ಞರು ಇದರ ಅರ್ಥವನ್ನು ದೇವನಾಗುವುದಿಲ್ಲ ಎಂದು ಬಿಡುತ್ತಾರೆ. ಈ ಅರ್ಥವನ್ನು ತೆಗೆದುಕೊಂಡರೆ ಅನರ್ಥವೇ ಆಗುವುದು. ನಾವು ಎಲ್ಲ ಪೂರ್ವಾಪರ ಸಂಬಂಧವನ್ನು ಜೋಡಿಸಿದಾಗ ಇದರ ಅರ್ಥ ಬೇರೆಯೇ ಆಗುತ್ತದೆ. ಈ ಸೂತ್ರದ ಪೂರ್ವದಲ್ಲಿ "ನಾರಕ ಸಮೂರ್ಚ್ಛಿನೋ ನಪುಂಸಕಾನಿ" ಪುನಃ ಈ ಸೂತ್ರದಲ್ಲಿ ನದೇವಾಃ ಎಂದರೆ ಇದರ ಅರ್ಥ ನಾರಕೀ ಮತ್ತು ಸಂಮೂರ್ಚ್ಛನ ಜೀವವು ನಪುಂಸಕವೇ ಆಗುತ್ತದೆ. ಮತ್ತು ದೇವ ನಪುಂಸಕವಾಗುವುದಿಲ್ಲ ಎಂದು ಅರ್ಥ.

ಆದ್ದರಿಂದಲೇ ಆಧ್ಯಾತ್ಮ ಗ್ರಂಥವು ಸಹ ಒಂದು ವೇಳೆ ಕಾನಜೀ ಸಹೋದರರು ದಿಗಂಬರ ಗುರುಗಳಿಂದಲೇ ಕಲಿತರೂ ಈಗ ಅರ್ಥವು ಅನರ್ಥವೇ ಆಗುವ ಸಂಭಾವನವಷ್ಟೇ ಅಲ್ಲ ಒಂದು ಹೊಸ ಪಂಥವೇ ಹುಟ್ಟುತ್ತದೆ. ಅದರಿಂದಾಗಿ ಅನಾದಿ ನಿಧನ ಆರ್ಷ ಪರಂಪರೆ ಪ್ರಭಾವನೆ ಆಗಬೇಕು. ಕೊನೆಗೆ ಈ ಭವ್ಯಾತ್ಮ ಇಂದು ಗುರುವಿನಿಂದ ಕಲಿತು ಪುಣ್ಯಶಾಲಿಯಾಗಿದ್ದಾರೆ. ಹೀಗೆ ಅಲ್ಲಿಯ ಚಾತುರ್ಮಾಸ ನಡೆಯತೊಡಗಿತು.

ಆರ್ಯಿಕೆಯರ ಸಮಾಧಿ ಮರಣ

ಭಾದ್ರಪದದಲ್ಲಿ ಆರ್ಯಿಕ ವಾಸುಮತಿ ಮಾತಾಜೀ ಒಂದು ತಿಂಗಳ ಉಪವಾಸವನ್ನು ಮಾಡುತ್ತೀನಿ ಎಂದು ವ್ರತ ಕೈಕೊಂಡು 10ನೇಯ ಉಪವಾಸದಲ್ಲೆ ಇದ್ದಕ್ಕಿದ್ದಂತೆ ಆರೋಗ್ಯ ಕ್ಷೀಣಿಸಿ ಆಚಾರ್ಯರ ಸಾನಿಧ್ಯದಲ್ಲೇ ಸಮಾಧಿ ಆಯಿತು. ಆರ್ಯಿಕ ಶಾಂತಿಮತಿ ಮಾತಾಜೀ ಭಾದ್ರಪದದ 16 ಭಾವನೆಯ ವ್ರತದ ಒಂದು ತಿಂಗಳ ಉಪವಾಸ ಮಾಡಿ, ಅದರಲ್ಲೇ ಸಮಾಧಿ ಆದರು. ಆರ್ಯಿಕೆ ಪದ್ಮಾವತಿಯು ಟೋಂಕ ದಲ್ಲಿ ಭಾದ್ರಪದ ಮಾಸದ 16 ಭಾವನೆಯ 32 ಉಪವಾಸವನ್ನು ಮಾಡಿದರು. 22ನೇ ಉಪವಾಸದ ನಂತರ ಒಮ್ಮೆ ಆಹಾರಕ್ಕಾಗಿ ಎದ್ದವರು ಸ್ವಲ್ಪ ಬಿಸಿ ನೀರನ್ನು ತೆಗೆದುಕೊಂಡರು. 31ನೇಯ ಉಪವಾಸದ ದಿನ ಆಶ್ವೀಜದ ಪಾಡ್ಯದ ದಿನ ಕ್ಷಮಾವಾಣಿಯ ನಂತರ ನೋಡಿದಾಗ ಅವರ ಆರೋಗ್ಯ ಅತಂತ್ರವಾಗಿತ್ತು. ತಕ್ಷಣ ಆಚಾರ್ಯರನ್ನು ಕರೆಸಿದೆ. ಇಡೀ ಮುನಿ ಸಂಘವೇ ಬಂದಿತು. ಅವರು ಕೈಗಳಿಂದ ನನ್ನ ಸೀರೆ ಹಿಡಿದುಕೊಂಡರು. ನಾನು ಬೋಧನೆ ಮಾಡಿದೆ. ಇವರು ಎಲ್ಲರಲ್ಲೂ ಕ್ಷಮೆ ಯಾಚಿಸುತ್ತಾ ನಮೋಸ್ತು ಮಾಡಿದರು. ನೋಡು-ನೋಡುತ್ತಲೇ ಒಂದೇ ಕ್ಷಣದಲ್ಲಿ ನಶ್ವರ ಶರೀರವನ್ನು ಬಿಟ್ಟು ಸ್ವರ್ಗವಾಸಿಗಳಾದರು.

ಆಗ ಅವರ ಗೃಹಸ್ಥಾಶ್ರಮದ ಪತಿ ಲಾಲಚಂದ ಅಲ್ಲೇ ಇದ್ದರು. 22ನೇಯ ಉಪವಾಸದ ದಿನ ಜಲವನ್ನು ಅವರೇ ಕೊಟ್ಟಿದ್ದರು. ಇವರ ಸಮಾಧಿ ಆಗುತ್ತಲೇ ನನಗೆ ಆಘಾತವಾಯಿತು. ಇವರು ನನಗೆ ಯಾವಾಗಲು ನೆರಳಿನಂತೆ ಇರುತ್ತಿದ್ದರು. ಆಹಾರ, ವಿಹಾರದ ಹೊರತಾಗಿ ಬಾಕಿ ಎಲ್ಲ ಸಮಯ ನನ್ನ ಬಳಿಯೇ ಇರುತ್ತಿದ್ದರು. ನನ್ನ ಮುಂದೆ ಯಾರೇ ಸಾಧು ಸಾಧ್ವಿಗಳಾಗಲಿ, ಶ್ರಾವಕರರಾಗಲಿ ರಹಸ್ಯದ ಮಾತುಗಳನ್ನು ಆಡಿದ್ದರೂ ಇವರು ಯಾರಲ್ಲೂ ಇದನ್ನು ಹೇಳುತ್ತಿರಲಿಲ್ಲ. ಇಂತಹ ವಿಶ್ವಾಸಾರ್ಹ ನನಗೇನು ಯಾರಿಗೂ ಇಂತಹವರು ಸಿಗುವುದು ಬಹಳ ಕಠಿಣವೇ. ನನ್ನ ಬಗ್ಗೆ ಅವಳಿಗೆ ಎಷ್ಟು ಶ್ರದ್ಧೆ ಎಂದರೆ ಚಿಕ್ಕ ಪುಟ್ಟ ತಪ್ಪು ಮಾಡಿದಾಗ ಗದರಿದರೂ ಸಹ ಅವರಿಗೆ ನನ್ನ ಬಗ್ಗೆ ಭಕ್ತಿಯಲ್ಲಿ ವ್ಯತ್ಯಾಸ ಕಾಣುತ್ತಿರಲಿಲ್ಲ ಉಪವಾಸ ಮಾಡಿಯೂ ಕೂಡ ನನ್ನ ವೈಯ್ಯಾವೃತ್ತಿ ಮಾಡಿದರೆ ಅವರಿಗೆ ತೃಪ್ತಿ ಸಿಗುತ್ತಿತ್ತು. ನನ್ನ ಸ್ವಾಧ್ಯಾಯದಲ್ಲಿ ಅಧ್ಯಾಪನದಲ್ಲಿ ಏಕಾಗ್ರಚಿತ್ತದಿಂದ ಕುಳಿತಿರುತ್ತಿದ್ದರು. ಇವರು ಸಮಾಧಿಯಾದ ನಂತರ ನೇಮಮತಿ ಮಾತಾಜೀ ವಯಸ್ಸಾಗಿದ್ದರಿಂದ ಸಲ್ಲೇಖನ ತೆಗೆದುಕೊಂಡು ದೇಹತ್ಯಾಗ ಮಾಡಿದರು. ಹೀಗೆ ಈ ಚಾತುರ್ಮಾಸದಲ್ಲಿ ನಾಲ್ಕು ಜನ ಮಾತಾಜಿಯವರು ದೇಹ ತ್ಯಾಗ ಮಾಡಿದ್ದು ನೋಡಿ ಜೈನೇತರ ಜನರು ಚರ್ಚೆ ಮಾಡಲಾರಂಭಿಸಿದರು. ವಾಸ್ತವವಾಗಿ ಶರೀರ ನಾಶವಾಗುವವರಗೆ ಉಪವಾಸವನ್ನು ಆಚರಿಸುವಂತಿಲ್ಲ. ಆದರೂ ಶರೀರ ನಷ್ಟವಾದರೂ ಪರವಾಗಿಲ್ಲ ನಿಯಮವನ್ನು ಪಾಲಿಸಿಯೇ ಪಾಲಿಸುತ್ತೇವೆಂಬ ದೃಢತೆಯಿಂದ ಮಾಡುವುದು ಸಾಮಾನ್ಯವಾದ ವಿಷಯವೇನಲ್ಲ.

ಶರೀರ ಅನಾದಿಕಾಲದಿಂದ ಎಷ್ಟೆಷ್ಟು ಜನ್ಮಗಳನ್ನು ತಳೆದಿದೆಯೋ ಆದರೆ ಸಂಯಮ ಪೂರ್ವಕವಾಗಿ ಸಮಾಧಿ ಮರಣವನ್ನು ಒಂದು ಬಾರಿಯು ಪಡೆದುಕೊಂಡಿಲ್ಲ. ಆದ್ದರಿಂದಲೇ ಮತ್ತೆ ಮತ್ತೆ ಜನ್ಮ-ಮರಣವನ್ನೂ ಶರೀರ ಧಾರಣೆಯನ್ನೂ ಮಾಡುತ್ತಲೇ ಇದೆ. ಆದ್ದರಿಂದಲೇ ಸಂಯಮ ಧಾರಣೆ ಮಾಡಿ ಸಮಾಧಿ ಮರಣವನ್ನು

ಚತುರ್ವಿಧ ಸಂಘದ ಸಾನಿಧ್ಯದಲ್ಲಿ ಪಡೆಯುವುದು ಕಡಿಮೆ ಪುಣ್ಯವೇನಲ್ಲ. ಅನೇಕ ಜನ್ಮದ ಪುಣ್ಯದ ಯೋಗದಿಂದಲೇ ಇಂತಹ ಅವಕಾಶ ದೊರೆಯುವುದು.

ಜೈನ ಜ್ಯೋತಿರ್ಲೋಕದ ಉಪದೇಶ

ಸನ್ಮತಿ ಪರಿಷತ್‌ನ ಕಾರ್ಯ ಕರ್ತರ ಮೂಲಕ ಮೋನಿಯಾ ಇಸ್ಲಾಮಿಯಾ ಸ್ಕೂಲಿನ ಪ್ರಾಂಗಣದಲ್ಲಿ "ಜೈನಜ್ಯೋತಿರ್ಲೋಕದ" ವಿಷಯದ ಮೇಲೆ ನನ್ನ ಉಪನ್ಯಾಸವನ್ನು ಏರ್ಪಡಿಸಿದ್ದರು. ಇದರಲ್ಲಿ ಸೇಠ್ ಭಾಗಚಂದ ಸೋನಿಯವರೇ ಮುಂದಾಳತ್ವ ವಹಿಸಿದ್ದರು. ಮೋತಿಚಂದರು ಒಳ್ಳೆ ಉತ್ಸಾಹದಿಂದ ಕಾರ್ಯಕ್ರಮವನ್ನು ಏರ್ಪಾಡು ಮಾಡಿದ್ದರು. ನನ್ನ ಉಪದೇಶ ಅತ್ಯಧಿಕ ಪ್ರಭಾವಶಾಲಿಯಾಗೇ ಬಂದಿತು. ಅನೇಕ ಮಹಾನುಭಾವರು. ಅನೇಕ ಪ್ರೊಫೆಸರುಗಳು, ವಿದ್ವಾಂಸರು ಆಗಮಿಸಿದ್ದರು. ಪತ್ರಕಾರರು ಬಂದಿದ್ದರು. ನಾನು ಸರಳವಾದ ಹಿಂದಿ ಭಾಷೆಯಲ್ಲಿ ಜೈನ ಗ್ರಂಥದ ಆಧಾರದಿಂದ ಸೂರ್ಯ ಚಂದ್ರ, ನಕ್ಷತ್ರ, ಇವುಗಳ ಚಕ್ರಗಳು, ಇವುಗಳ ಕಿರಣಗಳು, ಅವುಗಳ ಆಕಾರ, ಎತ್ತರ, ಒಂದು ನಿಮಿಷದಲ್ಲಿ ಚಂದ್ರನು ಎಷ್ಟು ದೂರ ಚಲಿಸುತ್ತಾನೆ, ಎಷ್ಟು ದೊಡ್ಡದಿದೆ ಮುಂತಾದ ವಿಷಯಗಳ ಮೇಲೆ ಬೆಳಕು ಬೀರಿದೆ. ಜೈನಧರ್ಮದ ಅನುಸಾರ ಸೂರ್ಯ, ಚಂದ್ರರ ಬಗ್ಗೆ ಉಪದೇಶ ಕೇಳಿದ ಅವರೆಲ್ಲ ಬಹಳ ಸಂತೋಷಗೊಂಡರು.

ಜಂಬೂ ದ್ವೀಪ ನಿರ್ಮಾಣದ ಚರ್ಚೆ

ಅಜಮೇರನಲ್ಲಿ ಸೇಠ್ ಸಾಹೇಬ ನಶಿಯಾದಲ್ಲಿ ಅಯೋಧ್ಯೆಯ ರಚನೆ ಮತ್ತು ಪಾಂಡುಕ ಶಿಲೆ ಎಂಬ ಹೆಸರಿನ ಭವ್ಯವಾದ ನಿರ್ಮಾಣವಾಗಿತ್ತು. ಇದನ್ನು ನೋಡಲು ಸಾವಿರಾರು ಜೈನೇತರ ಜನರು ಬರತೊಡಗಿದರು ಇಲ್ಲಿ ವ್ಯವಸ್ಥೆ ಮಾಡಲು ಟಿಕೇಟನ್ನು ಮಾಡಲಾಯಿತು. ಸೇಠ್ ಸಾಹೇಬರು ನನ್ನ ಹತ್ತಿರ ಮಧ್ಯಲೋಕದ ಚೈತ್ಯಾಲಯದ ಚರ್ಚೆಯನ್ನು ಮಾಡಿದರು ಮೋತಿಚಂದ ಹೇಳುತ್ತಲೇ ಇದ್ದರು. ಮಾತಾಜೀ ನೀವು ಜಂಬೂದ್ವೀಪದ ರಚನೆಗೆ ಪೂರ್ಣ ಗಮನಕೊಟ್ಟರೆ ನಿರ್ಮಾಣ ತನ್ನಿಂದ ತಾನೇ ಆಗುತ್ತದೆ ಎಂದು. ಸೇಠ್ ಸಾಹೇಬರು ಸಹ ಮಾತಾಜೀ ಒಮ್ಮೆ ನೀವು ಈ ಪಾಂಡುಕಶಿಲೆಯ ರಚನೆಯನ್ನು ಒಳಗೆ ಹೋಗಿ ನೋಡಿರಿ ಏನೇನು ಮಾಡಿದ್ದಾರೆ ಎಂಬುದನ್ನು ಎಂದು ಹೇಳುತ್ತಲೇ ಇದ್ದರು.

ಇವರ ಪ್ರಾರ್ಥನೆಯಂತೆ ಸಾಧು ಸಾಧ್ವಿಯರೊಡನೆ ಮೋತಿಚಂದ ಮತ್ತು ನಾನು ಹೊರಟೆವು. ಅವರು ಅದರ ಬಾಗಿಲು ತೆರೆಸಿ ಒಳಗೆ ಕರೆದುಕೊಂಡು ಹೋದರು. ಅಲ್ಲಿ ಮಧ್ಯಲೋಕದ ಹದಿಮೂರು ದ್ವೀಪದವರೆಗೆ ರಚನೆ ಮಾಡಲಾಗಿತ್ತು. ಜಂಬೂದ್ವೀಪದ ಬಗ್ಗೆ ಸೇಠ್ ಸಾಹೇಬರು ಪ್ರತಿಯೊಂದು ವಿಷಯವನ್ನು ತಿಳಿದುಕೊಳ್ಳುತ್ತಿದ್ದರು. ಜಂಬೂದ್ವೀಪದ ಎಷ್ಟು ಅಡಿ ಎತ್ತರ ಸುಮೇರು ಪರ್ವತ ಎಷ್ಟು ಅಡಿ ಯಾವು ಯಾವುದಕ್ಕೆ ಎಷ್ಟೆಷ್ಟು ಅಡಿ ಇರಬೇಕು, ಇವೆಲ್ಲವನ್ನು ಆಸಕ್ತಿಯಿಂದ ಪರಾಮರ್ಶಿಸುತ್ತಿದ್ದರು. ಒಂದು ದಿನ ಮೋತಿಚಂದನಿಂದ ಮಂದಿರದ ತಾರಸಿಯ ಮೇಲೆ ಈ ವಿಶಾಲ ರಚನೆಯನ್ನು ತೆಗೆಸಿದರು. ಮಾತಾಜೀ ಈ ಭವ್ಯ ರಚನೆಯ 8-10 ಅಡಿ ಎತ್ತರದ ಒಂದು ಮಾದರಿ ಮಾಡಿಸಿದ್ದರೆ ರಚನೆ ಮಾಡಿಸುವಾಗ ಅನುಕೂಲವಾಗುತ್ತದೆ. ಅವರ ಆಸಕ್ತಿ ನೋಡುತ್ತಿದ್ದರೆ ನನಗೂ ಆ ಕೆಲಸ ಮಾಡಲು ಪ್ರೇರಣೆ ಆಗುತ್ತಿತ್ತು.

ಅಷ್ಟ ಸಹಸ್ರೀ ಗ್ರಂಥದ ಪ್ರಕಾಶನಕ್ಕೆ ಪ್ರೇರಣೆ

ಸೇಠ್ ಸಾಹೇಬರು ಪ್ರಾಗಭಾವದ ಚರ್ಚೆ ಕೇಳಿದಾಗಿನಿಂದ ನನ್ನಿಂದ ಅನುವಾದಿತವಾದ ಪೆನ್ಸಿಲ್ ಕಾಪಿಯನ್ನು ನೋಡಿ ಮತ್ತೆ ಮತ್ತೆ ಹೇಳತೊಡಗಿದರು. ಮಾತಾಜೀ ಈ ಮಹಾನ್ ಗ್ರಂಥವನ್ನು ಬೇಗ ಅಚ್ಚು ಹಾಕಿಸೋಣ ಎಂದು. ಸಾಹಿತ್ಯಾಚಾರ್ಯ ಪಂ. ಪನ್ನಾಲಾಲರು ಬಂದಾಗ, ಮಾತಾಜಿ ಈ ಗ್ರಂಥವನ್ನು ಬೇಗ ಅಚ್ಚು ಹಾಕಲು ಕೊಡಿ. ನಿಧಾನ ಮಾಡಬೇಡಿ. ಇದರಿಂದ ಹಲವಾರು ವಿದ್ವಾಂಸರಿಗೆ ಲಾಭವಾಗುತ್ತದೆ.

ಅಷ್ಟ ಸಹಸ್ರೀಯನ್ನು ಅಚ್ಚು ಹಾಕುವ ಸಂಕಲ್ಪ

ನನ್ನಿಂದ ಅನುವಾದ ಕಾರ್ಯ ನಡೆಯುತ್ತೀರುವಾಗಲೇ ಗೋಹಾಟಿಯ ಸೇಠ್ ಚಾಂದಮಲ್ಲ ಪಾಂಡ್ಯ ಮಾತಾಜೀ ನಿಮ್ಮಿಂದ ನಡೆಯುತ್ತಿರುವ ಅನುವಾದ ಕಾರ್ಯವನ್ನು ಎಲ್ಲ ವಿದ್ವಾಂಸರು ಯಾವಾಗ ಮುದ್ರಣವಾಗುತ್ತದೆ ಎಂದು ನನ್ನನ್ನು ಕೇಳುತ್ತಿದ್ದಾರೆ. ಆದ್ದರಿಂದ ತಾವು ಕೊಟ್ಟರೆ ನಾನು ಅಚ್ಚು ಹಾಕಿಸುತ್ತೇನೆ ಎಂದರು. ನನಗೆ ಬಹಳ ಸಂತೋಷವಾಯಿತು. ನಾನು ಪೂರ್ತಿ ಆದ ತಕ್ಷಣ ಕೊಡುತ್ತೇನೆ ಎಂದರೂ ಅಜಮೇರದಿಂದಲೇ ಹಲವಾರು ಬಾರಿ ಕೇಳಿದರು. ಮಾತಾಜೀ ನೀವು ಗ್ರಂಥವನ್ನು ಪ್ರೆಸ್ಸಿನವರಿಗೆ ಕೊಡುತ್ತೀರೊ ಅಥವ ನನಗೆ ಕೊಡುತ್ತೀರೊ ಎಂದು. ಅದಕ್ಕೆ ನಾನು ಈಗ ಇರುವ ಪೆನ್ಸಿಲ್‌ಕಾಪಿಯನ್ನು ಪ್ರೆಸ್ ಕಾಫಿ ಪಾಂಡುಲಿಪಿಯಲ್ಲಿ ಬರೆಯುವ ವಿದ್ವಾಂಸರು ಸಿಕ್ಕುತ್ತಿಲ್ಲ ಎಂದೆ. ಆಗ ನಮ್ಮ ಬುದ್ಧಿಗೆ ಟೈಪ್ ಮಾಡಿಸುವುದು ಹೊಳೆದೇ ಇರಲಿಲ್ಲ. ಮೋತಿಚಂದರು ಪಾಂಡು ಲಿಪಿ ಬರೆಯುವ ವಿದ್ವಾಂಸರನ್ನು ಹುಡುಕುತ್ತಿದ್ದರು.

ತಾಯಿ ಮೋಹಿನಿಯವರು ಮನೆಯನ್ನು ಬಿಟ್ಟು ಬಂದಿದ್ದು

1971ರಲ್ಲಿ ಅಜಮೇರನಲ್ಲಿ ಚಾತುರ್ಮಾಸ ಮಾಡುತ್ತೀರುವಾಗ ತಾಯಿ ಮೋಹಿನಿ ದೊಡ್ಡ ಮಗ ಸೊಸೆಯನ್ನು ಕರೆದುಕೊಂಡು ಬಂದರು. ಮಗಳು ಮಾಧುರಿಯೂ ಬಂದಿದ್ದಳು. ತಾಯಿ ಪ್ರತಿ ದಿನ ಚೌಕ ಮಾಡಿ ಮುನಿಗಳಿಗೆ ಆಹಾರ ಮಾಡಿ ತಮ್ಮ ಜೀವನವನ್ನು ಸಾರ್ಥಕಪಡಿಸಿಕೊಳ್ಳುತ್ತಿದ್ದರು.

ಮಾಧುರಿಗೆ ಬಹುಚರ್ಯ ವ್ರತ

ನಾನು ಮಾಧುರಿಯನ್ನು ಎಚ್ಚರಿಕೆಯಿಂದ ಗಮನಿಸುತ್ತಾ ಇದ್ದೆ. ಮಾಧುರಿ ದೃಢವಾಗಿದ್ದಾಳೆಂದು ಮನದಟ್ಟಾಗುತ್ತಿದ್ದಂತೆ ಅವಳೊಬ್ಬಳನ್ನೇ ಮಂದಿರಕ್ಕೆ ಕರೆದು ಯಾರಿಗೂ ಹೇಳದಂತೆ ಶ್ರೀಫಲವನ್ನು ತರಲು ಹೇಳಿದೆ. ಅವಳು ಬಂದ ಮೇಲೆ ಭಗವಂತರ ಮುಂದೆ ಆ ದಿನ ಸುಗಂಧ ದಶಮಿಯು ಇತ್ತು. ಅವಳಿಗೆ ಆಜನ್ಮ ಬ್ರಹ್ಮಚರ್ಯವ್ರತವನ್ನು ಕೊಟ್ಟೆ. ಅವಳು ಸಂತೋಷದಿಂದಲೇ ನನ್ನ ಚರಣಗಳಿಗೆ ವಂದಿಸಿದಳು. ನಂತರ ಅಣ್ಣನ ಜೊತೆ ಕೇಶರಜೀಗೆ ಯಾತ್ರೆ ಹೊರಟರು. ಮುನಿಶ್ರೀ ಶ್ರುತಸಾಗರರ ದರ್ಶನ ಮಾಡಿದಳು. ತಾಯಿಯವರು ವಾಪಸ್ಸು ಅಜಮೇರಕ್ಕೆ ಬಂದರು. ಕೈಲಾಸನನ್ನು ಒಂದು ತಿಂಗಳ ನಂತರ ಬರಲು ಹೇಳಿ, ತಾವು ಅಭಯಮತಿಯ ಹತ್ತಿರ ಹೋಗುವ ಇಚ್ಛೆಯನ್ನು ತಿಳಿಸಿದರು. ಆ ಸಮಯದಲ್ಲಿ ಆರ್ಯಿಕೆ ಅಭಯಮತಿಯು ಕಿಶನಗಢದಲ್ಲಿದ್ದ ಆಚಾರ್ಯ ಜ್ಞಾನಸಾಗರರ ಸಂಘದಲ್ಲಿ ಚಾತುರ್ಮಾಸ ಮಾಡುತ್ತಾ ಅವರಲ್ಲಿ ಅಧ್ಯಯನವನ್ನು ಮಾಡುತ್ತಿದ್ದರು. ಮೋಹಿನಿಯವರು ಅಲ್ಲಿ ಒಂದು ತಿಂಗಳು ಇದ್ದು ನಂತರ ಇಲ್ಲಿಗೆ ಬಂದರು.

ಆರ್ಯಿಕೆ ರತ್ನಮತಿ

ದೀಪಾವಳಿ ಆದ ಮೇಲೆ ಒಂದು ದಿನ ನನ್ನಲ್ಲಿಗೆ ಅಮ್ಮ ಬಂದವರೇ ಧೈರ್ಯ ಮಾಡಿ, ಮಾತಾಜಿ ನನಗೆ ಮನೆಗೆ ಹೋಗುವ ಇಚ್ಛೆ ಇಲ್ಲ. ಕೈಲಾಸ, ಪ್ರಕಾಶ, ಸುಭಾಷ್ ಮೂವರು ಯೋಗ್ಯರಾಗಿ ಚೆನ್ನಾಗಿ ವ್ಯಾಪಾರ ವ್ಯವಹಾರಗಳನ್ನು ಮಾಡುತ್ತಿದ್ದಾರೆ. ತ್ರಿಶಲಾ, ಮಾಧುರಿ ಇನ್ನು ಚಿಕ್ಕವರು. ಇನ್ನು ಸ್ವಲ್ಪ ದಿನಗಳಾದ ಮೇಲೆ ಅವರ ಅಣ್ಣಂದಿರು ಮದುವೆ ಮಾಡುತ್ತಾರೆ . ಈಗ ನನ್ನ ಮನಸ್ಸು ಪೂರ್ಣ ವಿರಕ್ತವಾಗಿದೆ. ಆದ್ದರಿಂದ ನಾನು ದೀಕ್ಷೆ ತೆಗೆದುಕೊಂಡು ಆತ್ಮಕಲ್ಯಾಣ ಮಾಡಿಕೊಳ್ಳಬೇಕಂದಿದ್ದೇನೆ ಎಂದರು. ನಾನು ಎಷ್ಟೋ ಬಾರಿ ಈ ಬಗ್ಗೆ ಹೇಳಿದ್ದೆ. ಈಗ ಅವರ ಮಾತು ಕೇಳಿ ಖುಷಿಯೋ ಖುಷಿ ಆಯಿತು. ನಿಮ್ಮ ಯೋಚನೆ ಸರಿಯಾಗಿದೆ. ರೋಗ ಮುಪ್ಪು ಬರುವ ಮೊದಲೇ ಆತ್ಮ ಕಲ್ಯಾಣವನ್ನು ಮಾಡಿಕೊಳ್ಳಬೇಕು. ಈಗ ನೀವು ಯಾರಿಗೂ ಅಂಜದೆ ಆತ್ಮ ಸಾಧನೆಯಲ್ಲಿ ತೊಡಗಿರಿ. ನಿಮಗೆ ಇನ್ನೊಂದು ಮಾತು ಹೇಳುವುದಿದೆ. ನಾನು ಸುಗಂಧ ದಶಮಿಯ ದಿನ ಮಾಧುರಿಗೆ ಬ್ರಹ್ಮಚರ್ಯ ವ್ರತವನ್ನು ಕೊಟ್ಟಿರುವುದರಿಂದ ಅವಳಿಗೆ ಮದುವೆ ಮಾಡುವ ಪ್ರಶ್ನೆಯೇ ಇಲ್ಲವೆಂದೆ. ಇದನ್ನು ಕೇಳಿದ ತಾಯಿಗೆ ಆಶ್ಚರ್ಯವಾಗಿ ಹೇಳಿದರು. ಈಗಿನ್ನು ಮಾಧುರಿಗೆ 13 ವರ್ಷಗಳು ಅವಳಿಗೆ ಬ್ರಹ್ಮಚರ್ಯವೆಂದರೆ ಏನೂ ಗೊತ್ತಿಲ್ಲ ಈಗಲೇ ಅವಳಿಗೆ ಏಕೆ ವ್ರತ ಕೊಟ್ಟಿರಿ ಸ್ವಲ್ಪ ದಿನ ಸಂಘದಲ್ಲಿ ಇಟ್ಟುಕೊಂಡು ಓದಿಸಿದ್ದರೆ ಚೆನ್ನಾಗಿತ್ತು. ಒಳ್ಳೆಯದಾಯಿತು ಬಿಡಿ, ಬೇರೆಯವರ ಮೋಕ್ಷಮಾರ್ಗದಲ್ಲಿ ನಾನೇಕೆ ಅಡ್ಡಿಯಾಗಲಿ ಯಾರ ಭಾಗ್ಯದಲ್ಲಿ ಏನು ಬರೆದಿದೆಯೋ ಯಾರು ಬಲ್ಲರು. ಈಗ ನನಗೆ ಆರ್ಯಿಕೆ ದೀಕ್ಷೆ ಕೊಡಿರಿ.

ನಾನು ತಕ್ಷಣ ರವೀಂದ್ರನನ್ನು ಕರೆಸಿ ಅಮ್ಮನ ಭಾವನೆಗಳನ್ನು ತಿಳಿಸಿದೆ. ರವೀಂದ್ರ, ತಕ್ಷಣ ವಿಕ್ಷಿಪ್ತನಾಗಿ ಎದ್ದು ಅಮ್ಮನಿಗೆ ಹೇಳಿದ. ನಿಮ್ಮ ದೇಹ ದೀಕ್ಷೆಯನ್ನು ತಡೆಯಲಾರದು. ಬಹಳ ನಿಶ್ಯಕ್ತರಾಗಿದ್ದೀರ ಮಕ್ಕಳು ಸ್ವಲ್ಪ ಗಲಾಟೆ ಮಾಡಿದರೂ ಸಹ ನಿಮಗೆ ತಲೆ ನೋವಾಗುತ್ತದೆ. ಅಂತಹದರಲ್ಲಿ ನೀವು ದೀಕ್ಷೆ ತೆಗೆದುಕೊಂಡು ಒಮ್ಮೆ ಮಾತ್ರ ಆಹಾರ, ಕಾಲುನೆಡಿಗೆ, ಕೇಶಲೋಚ ಇವೆಲ್ಲ ನಿಮಗೆ ಸಾಧ್ಯಾವಾಗುವುದಿಲ್ಲ ಬಿಡಿ ಎಂದನು.

ಆದರೆ ಮೋಹಿನಿ ನಾನು ಎಲ್ಲ ಯೋಚಿಸಿಕೊಂಡೆ ನಿರ್ಣಯ ಕೈಕೊಂಡಿದ್ದೇನೆ. ಆದ್ದರಿಂದ ನಾನು ಈಗ ದೀಕ್ಷೆ ತೆಗೆದುಕೊಳ್ಳುತ್ತೇನೆ ಎಂದರು. ರವೀಂದ್ರ ಅನ್ಯಮನಸ್ಕನಾದುದನ್ನು ನೋಡಿ ಮೋತಿಚಂದನನ್ನು ಕರೆಸಿದೆ ರವೀಂದ್ರ ಕೆಲವು ಕಾರಣಗಳಿಂದ ಹಿಂದೆ ಮುಂದೆ ನೋಡುತ್ತಿದ್ದುದ್ದನ್ನು ಕಂಡು ಮೋತಿಚಂದನು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಪೇಟೆಗೆ ಹೋಗಿ ತೆಂಗಿನಕಾಯಿ ತಂದನು. ಅವರಂತೂ ಖುಷಿಯಿಂದ ಕುಣಿದಾಡಿದರು. ಶ್ರೀ ಫಲವನ್ನು ತೆಗೆದುಕೊಂಡು ಮೋಹಿನಿಯವರ ಜೊತೆ ನಾನೇ ಸೇಠ್ ಸಾಹೇಬರ ನಶಿಯಾಂನಲ್ಲಿದ್ದ ಆಚಾರ್ಯರ ಹತ್ತಿರ ಕರೆದುಕೊಂಡು ಹೋದೆ. ಆಚಾರ್ಯರಿಗೆ ಶ್ರೀಫಲವನ್ನು ಇಟ್ಟು ದೀಕ್ಷೆ ಕೊಡಬೇಕೆಂದು ಪ್ರಾರ್ಥಿಸಿದರು.

ಆಚಾರ್ಯರು ಸಂತೋಷದಿಂದ ನನ್ನ ಕಡೆಗೆ ನೋಡಿದರು. ಅಲ್ಲಿ ಉಪಸ್ಥಿತರಿದ್ದ ಸಾಧುವರ್ಗದವರೆಲ್ಲ ಸಂತೋಷದಿಂದ ತಾಯಿಯವರನ್ನು ಹೊಗಳ ತೊಡಗಿದರು. ನಿಮ್ಮ ಯೋಚನೆ ಬಹಳ ಚೆನ್ನಾಗಿದೆ. ಗೃಹಸ್ಥಾಶ್ರಮದ ಎಲ್ಲಾ ಕರ್ತವ್ಯಗಳನ್ನು ಮುಗಿಸಿರುವ ನೀವು ಈಗ ಒಳ್ಳೆಯ ಮಾರ್ಗವನ್ನು ಆರಿಸಿಕೊಂಡಿದ್ದೀರ ಎಂದರು. ಆಚಾರ್ಯರು ಬಾಯಿ ನಿಮ್ಮ ಶರೀರ ಬಹಳ ಬಲಹೀನವಾಗಿದೆ. ಯೋಚನೆ ಮಾಡಿ ಜೈನದೀಕ್ಷೆ ಎಂಬುದು ಕತ್ತಿಯ ಅಲಗು ಇದ್ದಂತೆ ಎಂದರು. ಅದಕ್ಕೆ ಮೋಹಿನಿಯವರು ಸಂಸಾರದಲ್ಲಿ ಏನೆಲ್ಲ ಕಷ್ಟವನ್ನು ಸಹಿಸಿದ್ದೇನೆ ಅದರ ಮುಂದೆ ದೀಕ್ಷೆಯು ಕಷ್ಟವೇ ಅಲ್ಲ ಅದ್ದರಿಂದ ನಾನು ಈಗ ದೀಕ್ಷೆ ತೆಗೆದುಕೊಳ್ಳಲೇಬೇಕು ಎಂದರು.

ನಾನು ಅಲ್ಲಿಂದ ಅತಿವಿಶ್ವಾಸ ಪಾತ್ರನಾದ ಒಬ್ಬ ಶ್ರಾವಕನನ್ನು ಟಿಕೈತನಗರ್ಕೆ ಕಳುಹಿಸಿದೆ. ಮನೆಗೆ ಹೋಗಿ ಸುದ್ದಿ ಮುಟ್ಟಿಸಿ ಮನೆಯಿಂದ ಮೂವರು ಗಂಡು ಮಕ್ಕಳು ಸೊಸೆಯಂದಿರು, ನಾಲ್ಕು ಜನ ಮದುವೆಯಾದ ಹೆಣ್ಣು ಮಕ್ಕಳು ಅಳಿಯಂದಿರುಗಳು ಮಾಧುರಿ, ತ್ರಿಶಲಾ, ಮೋಹಿನಿಯವರ ಸಹೋದರ ಭಗವಾನದಾಸ ಎಲ್ಲರು ಅಜಮೇರಗೆ ಬಂದರು. ಎಲ್ಲರೂ ತಾಯಿ ಮೋಹಿನಿಯನ್ನು ತಬ್ಬಿಕೊಂಡು ಅಳತೊಡಗಿದರು. ಎಲ್ಲರು ಅವರ ದೀಕ್ಷೆಯನ್ನು ತಡೆಯಬೇಕೆಂದು ಬಹಳ ಪ್ರಯತ್ನಪಟ್ಟರು. ಆಚಾರ್ಯರು ಒಪ್ಪಿಕೊಳ್ಳಲಿಲ್ಲ. ಇವರೆಲ್ಲ ಮೋಹದಿಂದ ಉಪದ್ರವ ಕೊಡಲಾರಂಭಿಸಿದರು. ನನಗೆ ಆಶ್ಚರ್ಯವೆಂದರೆ ಇವರ ಜೊತೆ ರವೀಂದ್ರನು ಸೇರಿಕೊಂಡು ಬಿಟ್ಟ. ಅವನು ಅಲ್ಲಿಯವರಗೆ ಬ್ರಹ್ಮಚರ್ಯ ದೀಕ್ಷೆಯನ್ನು ತೆಗೆದುಕೊಂಡಿರಲಿಲ್ಲ. ಸಂಘದಲ್ಲೆ ಇರುವ ನಿರ್ಣಯವನ್ನು ತೆಗೆದುಕೊಂಡಿರಲಿಲ್ಲ. ಆದರೆ ಇವರೇನು ಮಾಡಿದರು ಮೋಹಿನಿಯು ಸಂಪೂರ್ಣ ನಿರ್ಮೂಹಿನಿಯೇ ಆಗಿದ್ದರು. ತಮ್ಮ ನಿರ್ಣಯದಿಂದ ಹಿಂದೆ ಸರಿಯಲಿಲ್ಲ. ಕೊನೆಗೆ ಉಲ್ಲಾಸಿತ ವಾತಾವರಣದಲ್ಲೇ ದೀಕ್ಷಾ ಕಾರ್ಯಗಳು ಮಾರ್ಗಶಿರ ಅಂದರೆ 5-11-1971ರಂದು ನಡೆಯಿತು. ಜೊತೆಗೆ ಕುಮಾರಿ ವಿಮಲ, ಬ್ರ. ಪೂಲಬಾಯಿಯವರು ದೀಕ್ಷೆ ತೆಗೆದುಕೊಂಡರು. ಅಜಮೇರ ಸಮಾಜಕ್ಕಂತೂ ಇದೊಂದು ಐತಿಹಾಸಿಕ ಘಟನೆಯಾಯಿತು.

ಸೇಠ್ ಸಾಹೇಬರ ನಿಗರ್ವತ್ವ

ದೀಕ್ಷೆಗೆ ಮೊದಲು ಮೋಹಿನಿಯವರು ವ್ಯತಿಕರೆಲ್ಲರಿಗೂ ಊಟದ ಔತಣವನ್ನು ಏರ್ಪಡಿಸಿದ್ದರು. ವಿಶೇಷ ಜನರನ್ನು ಆಮಂತ್ರಿಸಲಾಗಿತ್ತು. ಸೇಠ್ ಭಾಗಚಂದ ಸೋನಿಯವರನ್ನು ಆಮಂತ್ರಿಸಲಾಗಿತ್ತು. ಆವರನ್ನು ಆಸನದಲ್ಲಿ ಕುಳಿತುಕೊಳ್ಳಲು ಹೇಳಿದರು ಅವರು ಪಂಕ್ತಿಯಲ್ಲೆ ಕುಳಿತು ಹೇಳಿದರು.ನಾವೆಲ್ಲರು ಧರ್ಮಬಂಧುಗಳೇ ಒಟ್ಟಿಗೆ ಕುಳಿತುಕೊಳ್ಳುತ್ತೇವೆ ಎಂದಾಗ ಅವರ ಸರಳತೆ ನಿರಭಿಮಾನವನ್ನು ನೋಡಿ ಎಲ್ಲರಿಗೂ ಸಂತೋಷವಾಯಿತು. ಸೇಠ್‌ಜೀ ಅವರು ಮಧ್ಯಾಹ್ನ ನನ್ನ ಹತ್ತಿರ ಸಮಯಸಾರದ ಸ್ವಾಧ್ಯಾಯಕ್ಕೆ ಕುಳಿತುಕೊಳ್ಳುವಾಗ ಅವರ ಹೆಂಡತಿ ಮತ್ತು ಸೊಸೆಯು ಕುಳಿತುಕೊಳ್ಳುತ್ತಿದ್ದರು. ದೀಕ್ಷಾ ಸಮಯದಲ್ಲೂ ಎಲ್ಲ ಕಾರ್ಯಗಳಲ್ಲೂ ಸಹಕರಿಸಿದರು.

ಪ್ರಥಮ ಕೇಶಲೋಚ

(ದೀಕ್ಷೆಯ ದಿನ) ಮೋಹಿನಿಯವರು ಕೂದಲನ್ನು ಕತ್ತರಿಸಿಕೊಂಡು ಬರೇ ಒಂದು ತಿಂಗಳಾಗಿದ್ದರೂ ಕೂದಲು ಬಹಳ ಚಿಕ್ಕದು ಲೋಚ ಮಾಡುವುದಕ್ಕೆ ಕೈಗೆ ಸಿಗುತ್ತಿರಲಿಲ್ಲ ಇದರಿಂದ ಚಿಮ್ಮಟದಿಂದಲೇ ತೆಗೆಯಬೇಕಾಯಿತು. ಇದನ್ನು ನೋಡಿತ್ತಿದ್ದ, ಮಕ್ಕಳು, ಸೊಸೆಯಂದಿರು, ಅಳಿಯಂದಿರಾದಿಯಾಗಿ ಎಲ್ಲರ ಕಣ್ಣುಗಳಲ್ಲಿ ನೀರು, ಆದರೆ ಅವರ ಧೈರ್ಯ ನೋಡಿ ಎಲ್ಲರೂ ಪ್ರಶಂಸಿಸತೊಡಗಿದರು. ಮೋಹಿನಿಯವರು ಎಂತಹ ಕನ್ಯಾರತ್ನಗಳಿಗೆ ಜನ್ಮ ನೀಡಿದ್ದಾರೆ. ಇವರು ರತ್ನಗಳ ಗಣಿಯೇ ಆಗಿದ್ದಾರೆ. ಆದ್ದರಿಂದ ಇವರ ಹೆಸರನ್ನು ರತ್ನಮತೀ ಎಂದು ಇಡೋಣವೆಂದೆ. ಮುನಿವರ್ಗದವರೆಲ್ಲ ನಿರ್ಣಯಿಸಿದ್ದರಿಂದ ಆಚಾರ್ಯರು ದೀಕ್ಷೆಯ ನಂತರ ಇವರ ಹೆಸರನ್ನು ರತ್ನಮತೀ ಎಂದು ಘೋಷಿಸಿದರು.

ತನ್ನ ತಾಯಿಯ ದೀಕ್ಷಾ ಮಹೋತ್ಸವದಲ್ಲಿ ಭಾಗವಹಿಸಲು ಆರ್ಯಿಕೆ ಆಭಯಮತಿಯು ಕಿಶನಗಢದಿಂದ ಅಜಮೇರಕ್ಕೆ ಬಂದರು. ನನಗೆ ದೀಕ್ಷೆ ತೆಗೆದುಕೊಳ್ಳುವ ಸಂದರ್ಭವೆಂದರೆ ಸಂಭ್ರಮ. ಅಂತಹದರಲ್ಲಿ ಇದು

ನನ್ನ ಜನ್ಮದಾತೆಯ ದೀಕ್ಷಾಮಹೋತ್ಸವ ಅಲ್ಲದೆ ನನಗೆ ದೀಕ್ಷೆ ತೆಗೆದುಕೊಳ್ಳುವಲ್ಲಿ ಸಹಾಯ ಮಾಡಿದ ಮಾತೆಯೇ ಇಂದು ದೀಕ್ಷೆ ತೆಗೆದುಕೊಳ್ಳುತ್ತಿದ್ದಾರೆ. ಅಜಮೇರದ ರಾಜಮೋನಿಯಾಇಸ್ಲಾಮಿಯ ಉರ್ದ ಮಹಿಳಾ ವಿದ್ಯಾಲಯದ ಆವರಣದಲ್ಲಿ ಹಾಕಿದ ಸಭಾಂಗಣದಲ್ಲಿ ವೈಭವೋಪೇತವಾಗಿ ಆಚಾರ್ಯರಿಂದ ದೀಕ್ಷೆಯನ್ನು ಗ್ರಹಣೆ ಮಾಡಿದರು. ಈ ಸಮಾರಂಭ ವೀಕ್ಷಿಸಲು ಲೆಕ್ಕವಿಲ್ಲದಷ್ಟು ಜನ ಜೈನರು ಜೈನೇತರರು ಸೇರಿದ್ದರು.

ರವೀಂದ್ರ ಕುಮಾರನು ಮನೆಗೆ ಪ್ರಸ್ಥಾನ

ತಾಯಿಯ ದೀಕ್ಷೆಯ ನಂತರ ಕೈಲಾಸಚಂದನು ರವೀಂದ್ರನನ್ನು ಸಂಘದಲ್ಲಿ ಬಿಡಲು ಇಷ್ಟಪಡಲಿಲ್ಲ. ಸಂಘಕ್ಕೆ ಅವನ ಅಗತ್ಯತೇ ಬಹಳೇ ಇತ್ತು. ಆದರೆ ಅವನ ಯೋಚನೆ ಇವನನ್ನು ಮಾತಾಜೀ ಅವಶ್ಯವಾಗಿ ಬ್ರಹ್ಮಚಾರಿ ಮಾಡೇ ಮಾಡುತ್ತಾರೆಂದು ಅವನನ್ನು ಕರೆದುಕೊಂಡು ಹೋಗಿ ಹೊಸ ವ್ಯವಹಾರದಲ್ಲಿ ತೊಡಗಿಸಿದರೆ ತಾಯಿಯ ವಿಯೋಗದ ದುಃಖವನ್ನು ಮರೆಯುತ್ತಾನೆ ಎಂದು ಭಾವಿಸಿ, ಮೂರು ಜನ ಅಣ್ಣಂದಿರು ನಿರ್ಧರಿಸಿ ನನ್ನ ಅನುಮತಿ ಪಡೆಯಲು ಅವನೊಡನೆ ಬಂದರು. ನನಗೂ ಕಳುಹಿಸಲು ಇಷ್ಟವಿರಲಿಲ್ಲ ಅವನಿಗೂ ಹೋಗುವ ಇಚ್ಛೆ ಇರಲಿಲ್ಲ ಎನ್ನಿಸುತ್ತದೆ. ಆದರೆ ಅಣ್ಣಂದಿರ ಒತ್ತಾಯದ ಮುಂದೆ ನಿರುಪಾಯನಾದ. ಆಗ ನಾನು ಅನುಮತಿಯನ್ನು ಕೊಡಲೇಬೇಕಾಯಿತು.

ಎಲ್ಲರೂ ಒಂದೆರಡು ದಿನ ತಂಗಿದ್ದರು. ಎಲ್ಲಾ ಸಾಧುಗಳಿಗೆ ಆಹಾರದಾನ ಮಾಡಿದರು. ಒಂದು ದಿನ ಇವರ ಚೌಕದಲ್ಲಿ ನನಗೆ, ಅಭಯಮತಿಗೆ, ರತ್ನಮತಿಗೆ ಮೂವರಿಗೂ ಆಹಾರ ದಾನವಾಯಿತು. ಎಲ್ಲ ಮಕ್ಕಳು, ಸೊಸೆಯಂದಿರು. ಅಳಿಯಂದಿರು ಮನಪೂರ್ವಕವಾಗಿ ಆಹಾರ ದಾನ ಮಾಡಿ ತಮ್ಮ ಜೀವನವನ್ನು ಧನ್ಯ ಮಾಡಿಕೊಂಡರು. ನಂತರ ಅವರೆಲ್ಲರು ತಾಯಿಯ ವಿಯೋಗವನ್ನು ಮನದೊಳಗೆ ನುಂಗಿಕೊಳ್ಳುತ್ತಾ ಪ್ರತಿಯೊಬ್ಬರನ್ನೂ ಮೋಕ್ಷಮಾರ್ಗದ ಕಡೆಗೆ ಸೆಳೆಯುವ ನನ್ನ ಸ್ವಭಾವವನ್ನು ಚರ್ಚೆ ಮಾಡುತ್ತಾ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಅಣ್ಣಂದಿರ ಪ್ರೇರಣೆಯಂತೆ ರವೀಂದ್ರ ಊರಿಗೆ ಹೋಗಿ ಹೊಸ ಅಂಗಡಿಯನ್ನು ತೆಗೆಯುವ ಯೋಚನೆ ಮಾಡಿದ್ದು ಹಳೆಯ ಅಂಗಡಿಯ ಮೇಲೆ ಒಂದು ಹೊಸಮನೆಯನ್ನು ಕಟ್ಟಿಸಿದನು.

೫೯

ಅಜಮೇರದ ಚಾತುರ್ಮಾಸ ಮುಗಿದ ಮೇಲೆ ಕಾಲೂ ಎಂಬ ಹಳ್ಳಿಯ ಶ್ರಾವಕರ ಪ್ರಾರ್ಥನೆಯ ಮೇಲೆ ವಿಹಾರ ಅತ್ತ ಹೊರಟಿತು. ಅಜಮೇರದಿಂದ ವಿಹಾರ "ಪೀಸಾಂಗನ" ಎಂಬ ಚಿಕ್ಕ ಹಳ್ಳಿಯಲ್ಲಿ ಕೆಲವು ದಿನಗಳು ತಂಗಿತ್ತು. ಆಚಾರ್ಯ ದೇಶಭೂಷಣರ ಸಂಘ ಅಜಮೇರದ ಕಡೆ ಬರುವ ಸುದ್ದಿ ತಿಳಿಯಿತು. ಅವರು ಇಲ್ಲಿಂದ ದೆಹಲಿಗೆ ಹೋಗುವವರಿದ್ದರು. ಆಚಾರ್ಯ ಮಹಾವೀರ ಕೀರ್ತಿಗಳು ಗಿರಿನಾರ ಯಾತ್ರೆ ಮುಗಿಸಿಕೊಂಡು, ಬ್ಯಾವರ ಅಜಮೇರ ಮಾರ್ಗವಾಗಿ ಸಮ್ಮೇದ ಶಿಖರದ ಕಡೇ ಪ್ರಯಾಣ ಬೆಳಸುವವರಿದ್ದರು. ಈ ಇಬ್ಬರು ಗುರುಗಳ ದರ್ಶನ ಮಾಡುವ ಉತ್ಕಂಠ ಆಸೆ ಉಂಟಾಯಿತು. ಹಾಗಾಗಿ ಆಚಾರ್ಯ ಧರ್ಮಸಾಗರರಲ್ಲಿ ಪ್ರಾರ್ಥನೆ ಮಾಡಿಕೊಂಡೆ ನಾನು ಇನ್ನು ಕೆಲವು ದಿನ ಇಲ್ಲೇ ಇದ್ದು ಈ ಆಚಾರ್ಯರುಗಳ ದರ್ಶನವಾದ ಮೇಲೆ ಸಂಘಕ್ಕೆ ಬರುತ್ತೇನೆ ಎಂದೆ. ಆಚಾರ್ಯರು ಒಪ್ಪಿಗೆ ಕೊಟ್ಟರು.

ಸಂಘದಲ್ಲಿ ಇದಕ್ಕಿಂತ ಮೊದಲೆ ಮುನಿ ಅಭಿನಂದನಾ ಸಾಗರರು ಸಮ್ಮೇದ ಶಿಖರಕ್ಕೆ ಹೋಗುವ ಯೋಜನೆ ಮಾಡಿದ್ದರು. ಇದರಲ್ಲಿ ಸುಪಾರ್ಶ್ವ ಸಾಗರರೇ ಪ್ರಮುಖರಾಗಿದ್ದರು. ಆಚಾರ್ಯ ಧರ್ಮ ಸಾಗರರ ಹಿಂದಿನ ದೀಕ್ಷಿತ ಶಿಷ್ಯ ದಯಾಸಾಗರಜೀ ಅವರು ಅದರಲ್ಲಿ ಹೊರಟು ಹೋಗಿದ್ದರು. ಅನೇಕ ಮುನಿ, ಆರ್ಯಿಕೆಯರು ಇದೇ ಸಂಘದಿಂದ ಹೊರಟು ಹೋಗಿದ್ದರು. ಆಚಾರ್ಯರಿಗೆ ದಯಾಸಾಗರರು ಹೋಗಿದ್ದು ಬಹಳ ಬೇಸರ ಉಂಟುಮಾಡಿತ್ತು. ನನ್ನ ಹತ್ತಿರವೇ ಹಲವಾರು ಬಾರಿ ಹೇಳಿಕೊಂಡಿದ್ದರು. ಮಾತಾಜೀ ನನಗೆ ಆಶ್ಚರ್ಯವಾಗುತ್ತಿದೆ. ದಯಾಸಾಗರರು ಹೋಗೇ ಬಿಟ್ಟರು. ನನಗೆ ನಂಬಿಕೆಯೇ ಆಗುತ್ತಿಲ್ಲ ಅವರು ನನ್ನನ್ನು ಬಿಟ್ಟು ಹೋದರು ಎಂದರು. ಆಗ ನಾನು ಮಹಾರಾಜರೇ ಅವರು ಕೇವಲ ಸಮ್ಮೇದ ಶಿಖರಕ್ಕೆ ಹೋಗಿದ್ದಾರೆ. ಯಾತ್ರೆ ಮುಗಿದ ಮೇಲೆ ಸಂಘಕ್ಕೆ ಬಂದೇ ಬರುತ್ತಾರೆ ಬಿಡಿ ಎಂದೆ. ಅವರಿಗೆ ಹಾಗೆ ಹೇಳಿದ್ದರೂ ನನಗೇ ವಿಶ್ವಾಸವಿರಲಿಲ್ಲ ಯಾವ ಶಿಷ್ಯರು ಎಷ್ಟು ದಿನ ಜೊತೆಯಲ್ಲಿ ಇರುತ್ತಾರೆಂದು.

ನಾನು ಇಲ್ಲಿ ಇರುವ ಅನುಮತಿಯನ್ನು ಪಡೆದಂತೆ ಉಳಿದ ಆರ್ಯಿಕೆಯರಾದ ಜಿನಮತೀ, ಆದೀಮತಿ, ಶ್ರೇಷ್ಠಮತೀ, ರತ್ನಮತೀಯರು ಜೊತೆಗೆ ಸಂಭವಸಾಗರರು, ವರ್ಧಮಾನಸಾಗರರು ಕೂಡ ಮುನಿದ್ವಯರ ದರ್ಶನ ಮಾಡುವ ಸಲುವಾಗಿ ಅನುಮತಿಯನ್ನು ಕೇಳಿದರು. ನಾನು ಮಾತಾಜೀಯ ಜೊತೆ ಇಬ್ಬರ ದರ್ಶನ ಮಾಡಿಕೊಂಡು ಬರುತ್ತೇವೆ ಎಂದರು. ಆಚಾರ್ಯರಿಗೆ ಚೆನ್ನಾಗಿ ಗೊತ್ತಿತ್ತು. ಇವರಿಬ್ಬರು ಜ್ಞಾನಮತಿಯ ಶಿಷ್ಯರಾಗಿ ಅವರ ಪ್ರೇರಣೆಯಿಂದಲೇ ದೀಕ್ಷೆ. ಅಭ್ಯಾಸವನ್ನೆಲ್ಲ ಅವರಲ್ಲೇ ಪಡೆದರು ಎಂದು ಅವರ ಕಾರಣದಿಂದಲೇ ನಿಲ್ಲುತ್ತಿದ್ದಾರೆ ಎಂದು ಅವರಿಗೂ ಅನುಮತಿ ದೊರೆಯಿತು. ಹೀಗಾಗಿ ಆಚಾರ್ಯರು ಹೊರಟಾಗ ಸ್ವಲ್ಪ ದೂರ ಕಳುಹಿಸಿ ಬಂದೆವು.

ಪ್ರಥಮ ಶಿಷ್ಯೆಯರ ವಿಯೋಗ

ಆಚಾರ್ಯರ ಸಂಘದೊಡನೆ ಆರ್ಯಿಕೆ ಸಂಭವಮತೀ ಮತ್ತು ಅವರ ಶಿಷ್ಯೆ ಆರ್ಯಿಕಾಶುಭಮತಿಯು ಹೊರಟು ಹೋದರು. ಬೆಳಗ್ಗೆ ಜಿನಮತಿ ನನ್ನ ಜೊತೆ ಮಂದಿರಕ್ಕೆ ಬಂದು ಯಾರೂ ಇಲ್ಲದ್ದು ನೋಡಿಕೊಂಡು ನನ್ನನ್ನು ತಬ್ಬಿಕೊಂಡು ಅಳತೊಡಗಿದರು. ಅಮ್ಮ ನಿಮ್ಮನ್ನು ಬಿಟ್ಟಿರಲು ನನ್ನ ಕೈಯಲ್ಲಿ ಆಗುತ್ತಿಲ್ಲ. ಆದರೆ ನನ್ನ ಶಿಷ್ಯೆ ಶುಭಮತಿಯು ನನ್ನನ್ನು ಬಿಟ್ಟು ಇರಲಾರಳು ನನಗೂ ಅವಳನ್ನು ಬಿಟ್ಟಿರಲು ಆಗುವುದಿಲ್ಲ. ಅದು ನಿಮಗೂ ಗೊತ್ತು ನನಗೆ ನಾನು ಅವಳು ನಿಮ್ಮ ಹತ್ತಿರವೇ ಇದ್ದರೆ ಇಬ್ಬರಿಗೂ ಸಂಕಟವಿಲ್ಲ. ಆದರೆ ನಮ್ಮ ಗುರುಣೀ ಸಂಭವಮತೀ ಇರಲು ಬಿಡುವುದಿಲ್ಲ. ನನ್ನ ಎದುರಿಗೆ ಈಗ ಅತ್ತ ದರಿ ಇತ್ತ ಪುಲಿಯಾಗಿದೆ ನಾನೇನು ಮಾಡಲಿ ಎಂದು ಅಳಲು ತೋಡಿಕೊಂಡಾಗ ನನಗೂ ಒಂದು ಕ್ಷಣ ದುಃಖವಾದರೂ ಸಾವರಿಸಿಕೊಂಡು ಮೌನವಾದೆ. ಕೊನೆಗೆ ಆಶೀರ್ವಾದ ಕೊಡಲೇ ಬೇಕಾಯಿತು. ಅವಳ ತಲೆಯ ಮೇಲೆ ಕೈ ಆಡಿಸುತ್ತಾ ಬೀಳ್ಕೊಡುವಾಗ ನನ್ನ ಹೃದಯ ಚೂರಾಗುತ್ತಿದೆ ಅನ್ನಿಸಿತು. ಪುನಃ ಜ್ಞಾನ ಮತ್ತು ವೈರಾಗ್ಯದಿಂದ ಮನಸ್ಸನ್ನು ಸಂತೈಯಿಸಿಕೊಂಡರೂ ಮನದೊಳಗೆ ಪ್ರಥಮ ಶಿಷ್ಯೆಯನ್ನು ಮೊದಲಬಾರಿಗೆ ಬೇರೆ ಕಳುಹಿಸುವುದು ಬಹಳ ಕಷ್ಟವೆನ್ನಿಸಿತು. ಹತ್ತಿರವೆ ಇದ್ದ ಒಬ್ಬ ಮಹಿಳೆ ಹೇಳಿಯೇ ಬಿಟ್ಟಳು ನಿಜವಾಗಿಯು ಸೊಸೆ ಮನೆಗೆ ಬಂದಾಗ ತಂದೆ ತಾಯಿಯನ್ನು ಬಿಟ್ಟು ಬರುತ್ತಾಳೆ. ಆಗ ತಂದೆ, ತಾಯಿಗೆ ತುಂಬ ದುಃಖವಾಗುತ್ತದೆ. ಹಾಗೇ ಜ್ಞಾನಮತಿ ಮಾತಾಜಿಯ ಹತ್ತಿರ ಕಲಿತ ಶಿಷ್ಯೆಯರನ್ನು ಅವರಿಂದ ಕರೆದುಕೊಂಡು ಹೋಗಿದ್ದು ದುಃಖವಾಗಿದೆ ಎಂದು.

1955ರಲ್ಲಿ ಜಿನಮತಿಯು ನನ್ನ ಜೊತೆ ಬಂದವಳು 1971ರಲ್ಲಿ ನನ್ನನ್ನು ಬಿಟ್ಟು ದೂರಹೋಗಿದ್ದು, 16 ವರ್ಷಗಳ ಒಡನಾಡಿಯ ನೆನಪು ಬಂದಿತು. ಇದನ್ನು ಗಮನಿಸಿದ ಆರ್ಯಿಕಾ ರತ್ನಮತಿ ಹೇಳಿದರು. ನೋಡಿ ನನ್ನ ಮನೆಯನ್ನು ತ್ಯಜಿಸಿ ಹೊರಟ ಮಗಳು ಮೈನಾ, ಅಂದು ಜ್ಞಾನಮತಿ ಎಷ್ಟು ನಿರ್ಮೋಹಿಯಾಗಿದ್ದಳು. ಆದರೆ ಇಂದೇಕೆ ಇಷ್ಟು ಭಾವಪರವಶಳಾಗಿದ್ದಾಳೆ ಎಂದು ಯೋಚಿಸತೊಡಗಿದರು ಇವರು ಶಿಷ್ಯರ ಮೋಹದಿಂದ ಎಷ್ಟು ವಿಕ್ಷಿಪ್ತರಾಗಿದ್ದಾರಲ್ಲ ಎಂದು ಇದನ್ನು ಕೇಳಿದ ನನಗೆ ಬಹಳ ಲಜ್ಜೆಯಾಯಿತು. ಆಗ ವಿವೇಕದಿಂದ ಕೆಲಸ ಮಾಡಬೇಕೆಂದುಕೊಂಡೆ.

ಉತ್ತಮಾ ಸ್ವಾತ್ಮಚಿಂತಾ ಸ್ಯಾತ್ ಮೋಹಚಿಂತಾ ಚ ಮದ್ಯಮಾ ।
ಅಧಮಾ ಕಾಮಚಿಂತಾ ಸ್ಯಾತ್ ಪರಚಿಂತಾಧಮಾಧಮಾ ॥

ಬ್ಯಾವರದ ಜನ ಬಂದು ತಮ್ಮಲ್ಲಿಗೆ ಬರಲು ಪ್ರಾರ್ಥಿಸತೊಡಗಿದರು. ಮಾತಾಜಿ ನೀವು ಬ್ಯಾವರಕ್ಕೆ ಬಂದು ನಮಗೆ ಉಪದೇಶದ ಲಾಭವನ್ನು ದೊರಕಿಸಿಕೊಡಬೇಕು. ನಿಮ್ಮ ಇಬ್ಬರು ಆಚಾರ್ಯರಲ್ಲಿ ಯಾರೇ ಬಂದರು ತಮಗೆ ದರ್ಶನ ಮಾಡಿಸುತ್ತೇವೆ ಎಂದರು. ನಾವೆಲ್ಲರು ಕೆಲವು ದಿನಗಳ ಬಳಿಕ ಬ್ಯಾವರದ ಕಡೆಗೆ ವಿಹಾರ ಹೊರಟೆವು.

ಬ್ಯಾವರದಲ್ಲಿ ಧರ್ಮ ಪ್ರಭಾವನೆ

ಆಚಾರ್ಯ ಧರ್ಮಸಾಗರರು ಕಾಲೂ ಗ್ರಾಮದಲ್ಲಿ ವಾಸ್ತವ್ಯ ಹೂಡಿದ್ದರು. ಬ್ಯಾವರದಲ್ಲಿ ಸೇಠ್ ಸಾಹೇಬ ಚಂಪಾಲಾಲ ರಾಮಸ್ವರೂಪಜೀಯವರ ನಶಿಯಾದಲ್ಲಿ ಐಲಕ ಪನ್ನಾಲಾಲ ಸರಸ್ವತಿ ಭವನದಲ್ಲಿ ನಾವು ತಂಗಿದ್ದೆವು. ಸಂಭವಸಾಗರರು, ಹಾಗೂ ವರ್ಧಮಾನಸಾಗರರು ಮಂದಿರದ ಕೆಳಗಿನ ಕೊಠಡಿಯಲ್ಲಿ ತಂಗಿದ್ದರು.

ರತ್ನಮತಿ ಮಾತಾಜೀಯವರ ಚರ್ಯೆ

ಅಜಮೇರದಿಂದ ಬ್ಯಾವರದವರೆಗೂ ರತ್ನಮತಿ ಮಾತಾಜೀಯವರು ನಡೆದುಕೊಂಡು ಬಂದರು. ಅವರ ಆರೋಗ್ಯ ಚೆನ್ನಾಗಿತ್ತು ಅಲ್ಲದೆ ಅವರ ಮನೋಬಲ ಗಟ್ಟಿಯಾಗಿತ್ತು. ದೀಕ್ಷೆ ತೆಗೆದುಕೊಂಡ ಸಮಯದಿಂದ ಅವರು ದಿನ ಎರಡು ಹೊತ್ತು ಪ್ರಾಕೃತದ ಪ್ರತಿಕ್ರಮಣವನ್ನು ಮಾಡುತ್ತಿದ್ದರು. ಬೇರೆ ಆರ್ಯಿಕೆಯರಿಗೆ ದೀಕ್ಷೆ ಆದ ಮೇಲೆ ಸಂಸ್ಕೃತದ ಭಕ್ತಿಗಳನ್ನು ಪ್ರಾಕೃತದ ಪ್ರತಿಕ್ರಮಣಗಳನ್ನು ಬಹಳ ಸಲ ಹೇಳಿ ಕೊಡಬೇಕಾಗುತ್ತಿತ್ತು. ಆದರೆ ಇವರು ಸ್ವತಃ ತಾವೇ ಓದಿಕೊಳ್ಳತೊಡಗಿದರು. ಇವರಿಗೆ ಬೇರೆಯವರಿಂದ ಹೇಳಿಸುವ ಅವಶ್ಯಕತೆಯೇ ಕಂಡು ಬರಲಿಲ್ಲ. ಇದೇ ಸಂಸ್ಕಾರ ಇವರ ಎಲ್ಲ ಮಕ್ಕಳಿಗೂ ಇತ್ತು.

ಗೃಹಸ್ಥಾವಸ್ಥೆಯಲ್ಲಿ ಇವರು ನಿತ್ಯ ಮೂರು ಕಾಲದಲ್ಲೂ ಸಾಮಾಯಿಕದಲ್ಲಿ ಕಾಲ ಅನಂತ ಭ್ರಮ್ಯೋ ಜಗ ಮೇ ಸಹಿಯ ದುಃಖ ಬಾರೀ ಈ ಹಿಂದೀ ಭಾಷೆಯ ಸಾಮಾಯಿಕವನ್ನು ಮಾಡುತ್ತಿದ್ದರು. ಅದಕ್ಕೆ ನಾನು ಈಗ ನೀವು ಆಚಾರ ಸಾರ ಮೊದಲಾದ ಗ್ರಂಥಗಳಲ್ಲಿ ಮಾನ್ಯ ಮಾಡಿರುವ ದೇವವಂದನೆಯ ವಿಧಿಯಲ್ಲಿರುವ ಸಾಮಾಯಿಕವನ್ನು ಮಾಡಿರಿ ಇದೇ ಪ್ರಮಾಣಿತವಾಗಿರುವುದು ಎಂದೆ. ಆ ದಿನದಿಂದ ಅವರು ಅದೇ ಸಮಾಯಿಕವನ್ನು ಮಾಡತೊಡಗಿದರು. ಇದರಲ್ಲಿ ಗೌತಮ ಸ್ವಾಮಿಯಿಂದ ರಚಿತವಾದ ಸಂಸ್ಕೃತದ ಚೈತ್ಯ ಭಕ್ತಿ ಮತ್ತು ಶ್ರೀ ಕುಂದ ಕುಂದರಿಂದ ರಚಿತವಾದ ಪ್ರಾಕೃತದ ಪಂಚ ಭಕ್ತಿಪಾಠವನ್ನು ಹೇಳತೊಡಗಿದರು. ಇದೇ ಪ್ರಕಾರ ಎರಡು ಹೊತ್ತು

ಪ್ರತಿಕ್ರಮಣ, ಮೂರು ಕಾಲದಲ್ಲಿ ವಿಧಿವತ್ತಾಗಿ ಸಾಮಾಯಿಕ ಮಾಡತೊಡಗಿದ್ದರಿಂದ ಒಂದು ತಿಂಗಳಲ್ಲೇ ಎಲ್ಲ ಬಾಯಿ ಪಾಠವಾಯಿತು.

ಒಮ್ಮೆ ನನಗೆ ಅವರು ನಿಮಗೆ ಸಂಸ್ಕೃತ ಚೆನ್ನಾಗಿ ಗೊತ್ತಿರುವುದರಿಂದ ಸಾಮಾಯಿಕ ಮತ್ತು ಭಕ್ತಿಯ ಅರ್ಥ ಗೊತ್ತಾಗುತ್ತದೆ. ನನಗೆ ಅವುಗಳ ಅರ್ಥ ತಿಳಿಯುತ್ತಿಲ್ಲ ಅದ್ದರಿಂದ ತಾವು ಇವುಗಳನ್ನು ಹಿಂದಿಯಲ್ಲಿ ಅನುವಾದ ಮಾಡಿಕೊಟ್ಟರೆ ಚೆನ್ನಾಗಿರುತ್ತದೆ ಎಂದರು. ನಾನು ಮೊದಲೇ ಟೋಂಕದಲ್ಲೇ ದೇವವಂದನೆಯ ಪದ್ಯಾನುವಾದ ಮಾಡಿದ್ದು ಇತ್ತು. ಅದನ್ನು ತೋರಿಸಿದೆ. ಅವರಿಗೆ ಖುಷಿಯಾಗಿ ಬೇಗ ಅಚ್ಚು ಹಾಕಿಸುವಂತೆ ಪ್ರೇರೇಪಿಸಿದರು. ಫಲಸ್ವರೂಪವಾಗಿ "ಸಾಮಾಯಿಕ" ಎಂಬ ಹೆಸರಿನಿಂದ ಈ ಪುಸ್ತಕ ಪ್ರಕಟಗೊಂಡಿತು. ಈ ಪುಸ್ತಕದಿಂದ ಹಿಂದಿಯಲ್ಲಿ ಅರ್ಥ ತಿಳಿದು ಅವರು ಗದ್ಗದಿತರಾದರು.

ಬ್ಯಾವರದಲ್ಲಿ ಪ್ರತಿ ದಿನ ಬೆಳಗ್ಗೆಯ ಹೊತ್ತಿನಲ್ಲಿ ನನ್ನ ಉಪದೇಶ ನಡೆಯುತ್ತಿತ್ತು. ಮಧ್ಯಾಹ್ನದಲ್ಲಿ "ಛಹಡಾಲ"ದ ತರಗತಿಗಳು ನಡೆಯುತ್ತಿದ್ದವು. ನಂತರ ಉಪದೇಶವಿರುತ್ತಿತ್ತು. ಬ್ಯಾವರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪುರುಷರು ಭಾಗವಹಿಸುತ್ತಿದ್ದರು. ಸೇಠ್ ಹೀರಾಲಾಲರು ಎಲ್ಲಾ ತರಗತಿಯಲ್ಲೂ ಹಾಜರಿರುತ್ತಿದ್ದರು. ರತ್ನಮತಿಯವರು ಸಹ ಎರಡು ಹೊತ್ತು ಉಪದೇಶದಲ್ಲಿ ಕುಳಿತಿರುತ್ತಿದ್ದರು. ನಾನಂತೂ ದಿನ ಪೂರ್ತಿ ರಾಜವಾರ್ತಿಕ, ಅಷ್ಟ ಸಹಸ್ರೀ ಮುಂತಾದ ಗ್ರಂಥಗಳ ಅಧ್ಯಯನದಲ್ಲಿ ತೊಡಗಿರುತ್ತಿದ್ದೆ. ಹಾಗೆ ಜೈನೇಂದ್ರ ಪ್ರಕ್ರಿಯದ ಅಧ್ಯಯನವನ್ನು ಮಾಡುತ್ತಿದ್ದೆ. ಇದನ್ನು ಮುನಿ ವರ್ಧಮಾನಸಾಗರರು, ಆರ್ಯಿಕೆ ಆದಿಮತೀ, ಬ್ರ. ಮೋತಿಚಂದ, ಮಾಧುರಿ, ಕಲಾ ಮೊದಲಾದವರು ಓದುತ್ತಿದ್ದರು. ಸಂಘ ನಶಿಯಾಂದಲ್ಲಿತ್ತು. ಆದರೆ ಚೌಕಗಳು ನಗರದಲ್ಲಿ ಮಾಡುತ್ತಿದ್ದರು. ಸೇಠ್ ಹೀರಾಲಾಲ, ರಾನಿವಾಲ, ಸೋಹನಲಾಲ ಮೊದಲಾದವರು ರತ್ನಮತಿಯವರಿಗೂ ಅಲ್ಲಿಗೆ ಆಹಾರಕ್ಕೆ ಬರಲು ಒತ್ತಾಯಿಸಿದ್ದರಿಂದ ಅವರು ನಗರಕ್ಕೆ ನಡೆದು ಬಂದು ಹೋಗಿ ಆರ್ಯಿಕೆಯರ ಎಲ್ಲ ಚರ್ಯೆಗಳನ್ನು ನಡೆಸಿಕೊಂಡು ಹೋಗುತ್ತಿದ್ದರು.

ಜಂಬೂದ್ವೀಪದ ಮಾದರಿ

ಅಜಮೇರದಲ್ಲಿ ಸೇಠ್ ಸಾಹೇಬ ಭಾಗಚಂದರು ಜಂಬೂದ್ವೀಪದ ರಚನೆಯ ಬಗ್ಗೆ ಪರಾಮರ್ಶೆ ಮಾಡಿದರು. ಸೇಠ್‌ರು ಇಲ್ಲಿಗೂ ಬಂದಿದ್ದರು. ಇವರ ವಿಶೇಷ ಪ್ರೇರಣೆಯಿಂದ ಒಂದು ಕೊಠಡಿಯಲ್ಲಿ ಜಂಬೂದ್ವೀಪದ ಮಾದರಿಯನ್ನು ಮಾಡಿಸಲಾಯಿತು. ಸೇಠ್ ಹೀರಾಲಾಲ, ರಾನಿವಾಲಾ ಧರ್ಮಚಂದ ಮೋದಿ ಮೊದಲಾದವರೆಲ್ಲ ಸೇಠ್ ಪಂಚಾಯತಿ ನಶಿಯಾದ ಒಂದು ಕೊಠಡಿಯಲ್ಲಿ ಮಾದರಿ ಮಾಡಿಸಿದರು ನನ್ನ ಅನುಮತಿ ಪಡೆದು ಮೋತಿಚಂದನು ಕೆಲಸಗಾರರಿಗೆ ಅಳತೆಗಳನ್ನು ಹೇಳಿ ತಾನೇ ಕುಳಿತು ಸಿಮೆಂಟಿನಿಂದ ಜಂಬೂದ್ವೀಪದ ಭವ್ಯವಾದ ಮಾದರಿಯನ್ನು ಮಾಡಿಸಿದ. ಇಂದಿಗೂ ಅದು ಅಲ್ಲಿದೆ.

ಅಷ್ಟ ಸಹಸ್ರೀ ಗ್ರಂಥದ ಪ್ರಕಾಶನದ ಯೋಜನೆ

ಸರಸ್ವತಿ ಭವನದಲ್ಲೇ ಹೀರಾಲಾಲ ಸಿದ್ಧಾಂತ ಶಾಸ್ತ್ರಿಗಳು ಇದ್ದರು. ಅವರು ಒಳ್ಳೆಯ ಭಕ್ತರಾಗಿದ್ದರು. ನನ್ನ ಹಿಂದಿ ಅನುವಾದವನ್ನು ತೋರಿಸಿದಾಗ ಮೊದಲು ಅವರು ಮಾತಾಜೀ ನಾನು 40-45 ವರ್ಷದ ಮೊದಲೇ ಈ ಗ್ರಂಥವನ್ನು ಓದಿದ್ದೇನೆ. ಆದರೆ ನನಗೆ ನ್ಯಾಯದ ವಿಷಯದಲ್ಲಿ ಏನೇನು ಉಪಯೋಗವಾಗಲಿಲ್ಲ ಎಂದರು. ಆದರೂ ನಾನು ವಿಶೇಷ ಪ್ರೇರಣೆಕೊಟ್ಟು ಎರಡು ಮೂರು ಸಲ ಮೂಲಪ್ರತಿಯನ್ನು ಇಟ್ಟುಕೊಂಡು ಹಿಂದಿ

ಅನುವಾದವನ್ನು ಓದಿದ ಮೇಲೆ ಅವರಿಗೆ ಬಹಳ ಖುಷಿ ಆಯಿತು. ಮಾತಾಜಿ ದರಬಾರಿನ ವಿದ್ವಾಂಸರೇಕೆ ಅನೇಕ ನ್ಯಾಯಾಚಾರ್ಯರು ಕೂಡ ಇಷ್ಟು ಚೆನ್ನಾಗಿ ಹಿಂದಿ ಅನುವಾದವನ್ನು ಮಾಡಲಾರರು ಎಂದರು. ಅನುವಾದ ಬಹಳ ಚೆನ್ನಾಗಿ ಬಂದಿದೆ. ನ್ಯಾಯ ಮತ್ತು ವ್ಯಾಕರಣದ ದೃಷ್ಟಿಯಿಂದಲೂ ಬಹಳ ಶುದ್ಧವಾಗಿದೆ. ನೀವು ಅನುಮಾನ ಪಡದೆ ಇದನ್ನು ಮುದ್ರಣಕ್ಕೆ ಕೊಡಿರಿ ಎಂದರು.

ಇದಾದ ನಂತರ 7-8 ದಿನಗಳ ವರೆಗೆ ಅನುವಾದವನ್ನು ಮತ್ತೆ ಓದಿದವರು, ಹೆಚ್ಚಿಗೆ ಪರೀಕ್ಷಿಸುವ ಗೋಜಿಗೆ ಹೋಗದೆ ಮುದ್ರಣಕ್ಕೆ ಕಳುಹಿಸಿರಿ ಎಂದರು. ಮೋತಿಚಂದನಿಗೆ ನೀವು ಇದನ್ನು ಬೇಗ ಮುದ್ರಿಸುವ ವ್ಯವಸ್ಥೆ ಮಾಡಿರಿ ಎಂದರು. ಒಂದು ದಿನ ಸೇಠ್ ಹೀರಾಲಾಲರು ಬಂದವರೆ ನನ್ನ ಮಗ ಬಾಂಬೆಯಿಂದ ಬಂದವನು ನನಗೆ ಈ ಹಣವನ್ನು ಕೊಟ್ಟಿದ್ದಾನೆ. ನಿಮಗೆ ಬೇಕಾದರೆ ಈ ಹಣವನ್ನು ಉಪಯೋಗಿಸಿಕೊಳ್ಳಿ ಎಂದರು. ಅದಕ್ಕೆ ನಾನು ಜಂಬೂದ್ವೀಪದ ಮಾದರಿ ಆಗುತ್ತಿದೆಯಲ್ಲ ಅದರಲ್ಲಿ ತೊಡಗಿಸಿ ಎಂದೇ. ಅದಕ್ಕೆ ಅವರು ಆ ಕೆಲಸ ನಡೆಯುತ್ತಿದೆಯಲ್ಲ ಇದನ್ನು ಸಂಘದ ಬೇರೆ ಕೆಲಸಗಳಿಗಾಗಿ ಉಪಯೋಗಿಸಿಕೊಳ್ಳಿ ಎಂದರು. ಆಗ ಮೋತಿಚಂದನು ಈ ಹಣದಿಂದ ಕಾಗದ ಖರೀದಿಸಿ ಪ್ರೆಸ್ಸಿನವರಿಗೆ ಕೊಡೋಣ ತಾವು ಅನುಮತಿ ಕೊಟ್ಟಿರಿ. ಅಜಮೇರಗೆ ಹೋಗಿ ಒಳ್ಳೆಯ ಪ್ರೆಸ್ ನೋಡಿ ಬರುತ್ತೇನೆ ಎಂದರು. ಅದಕ್ಕೆ ನಾನು ಚಾಂದಮಲಜೀ ಪಾಂಡ್ಯರವರು ಬೇರೆಯವರನ್ನು ಕೇಳುವುದು ಬೇಡ ನಾನೇ 'ಅಷ್ಟ ಸಹಸ್ರೀಯ' ಪುಸ್ತಕವನ್ನು ಅಚ್ಚು ಹಾಕಿಸುತ್ತೇನೆ ಎಂದಿದ್ದರು. ಅವರನ್ನು ಹೇಗೆ ಬಿಡುವುದು ಎಂದು. ಮೋತಿಚಂದರು ಇಲ್ಲಿಯವರೆಗೆ ಅವರು ಬಂದಿಲ್ಲ. ಅವರು ಬರುವುದು ಯಾವಾಗ, ವಿಚಾರ ಮಾಡುವುದು ಯಾವಾಗ. ಅಲ್ಲಿಯವರೆಗೆ ಕೆಲಸ ಪ್ರಾರಂಭಿಸೋಣ ಎಂದರು. ಮಾತಾಜಿ ಸರಿ ಎಂದರು.

ಆಜ್ಞೆ ಸಿಗುತ್ತಲೇ ಮೋತಿಚಂದ ಅಜಮೇರಗೆ ಹೋಗಿ ಪ್ರೆಸ್ ಗೊತ್ತು ಮಾಡಿಕೊಂಡು ಬಂದ. ನನ್ನ ಹತ್ತಿರ ಬೇರೆ ಬೇರೆ ವಿಧದಲ್ಲಿ ಶೀರ್ಷಿಕೆ ಕೊಟ್ಟು. ಬೇರೆ ಬೇರೆ ರೀತಿಯಾಗಿ ಕಂಪೋಜ್ ಮಾಡಿಸಿದ್ದನು. ಒಂದೊಂದು ಪೇಜಿನಲ್ಲೂ ಸಂಸ್ಕೃತ, ಹಿಂದಿ ಮೊದಲಾದ ಟಿಪ್ಪಣಿ ಸಹಿತ ವಿಷಯಾನುಕ್ರಮಣಿಕೆಯನ್ನು ಹೊಂದಿಸಿ ಕೊಡಲಾಯಿತು. ಸರಸ್ವತಿ ಭವನದಲ್ಲಿ ಅಷ್ಟ ಸಹಸ್ರೀಯ ಪ್ರಾಚೀನವಾದ ಹಸ್ತಲಿಖಿತ ಪ್ರತಿ ದೊರೆಯಿತು. ಅದು ಬಹಳ ಶುದ್ಧವಾಗಿ ಇದ್ದು, ವಿಶೇಷ ಟಿಪ್ಪಣಿಯಿಂದ ಕೂಡಿತ್ತು. ಮೊದಲು ಹಸ್ತಪ್ರತಿ ಓದುವುದನ್ನು ಅಭ್ಯಾಸ ಮಾಡಿದೆ. ಇದರಲ್ಲಿ ಮಾತ್ರೆಗಳೆಲ್ಲ ಹಿಂದು ಮುಂದಾಗಿತ್ತು. ನಾನು, ರವೀಂದ್ರಕುಮಾರ, ಕು. ಮಾಧುರಿ ಎಲ್ಲ ಕುಳಿತು ಅಭ್ಯಾಸ ಮಾಡಿ ಮೂಲಪ್ರತಿಯಿಂದ ಸ್ವಲ್ಪ ಪಾಠಾಂತರ ಮತ್ತು ಟಿಪ್ಪಣಿಯನ್ನು ಬರೆಯಲು ಪ್ರಾರಂಭಿಸಿದೆವು.

ಆಚಾರ್ಯ ಸಂಘದ ದರ್ಶನವಾಗಲಿಲ್ಲ

ಆಚಾರ್ಯರು ಅಜಮೇರಗೆ ಬರಲಿಲ್ಲವಾಗಿ ನಮಗೆ ಅವರ ದರ್ಶನವಾಗಲಿಲ್ಲ. ಇದಲ್ಲದೆ ಕೆಲವು ದಿನಗಳ ನಂತರ ಎರಡನೆಯ ಆಕಸ್ಮಿಕ ಸುದ್ದಿ ಬಂದಿತು. ಆಚಾರ್ಯ ಶ್ರೀ ಮಹಾವೀರಕೀರ್ತಿಜೀಯವರು ಮಹಸಾನಾದಲ್ಲಿ ಸಮಾಧಿಪೂರ್ವಕವಾಗಿ ಸ್ವರ್ಗವಾಸಿಗಳಾದರು ಎಂದು. ಈ ಘಟನೆಯಿಂದ ನನಗೆ ವಿಕ್ಷಿಪ್ತತೆ ಉಂಟಾಯಿತು. ಸೋಲಾಪುರ ಬಾಂಬೆಯ ಪರೀಕ್ಷೆ ತೆಗೆದುಕೊಂಡಿದ್ದ ಸಂಘದ ಕು. ಮಾಧುರಿ, ತ್ರಿಶಲಾ ಕಲಾ, ಮೊದಲಾದವರು ಶಾಸ್ತ್ರೀಯ ವಿಷಯಗಳ ತಯಾರಿ ನಡೆಸತೊಡಗಿದರು. ಒಂದು ಕಡೆ ನನಗೆ ರವೀಂದ್ರನ ಬಗ್ಗೆಯು ಚಿಂತೆಯಾಗತೊಡಗಿತು. ರವೀಂದ್ರ ಇಷ್ಟು ದಿನವಾದರು ಏಕೆ ಸಂಘದ ಕಡೆ ಬರಲಿಲ್ಲ. ಮನೆಯಲ್ಲೇ ಇದ್ದರೆ ಖಂಡಿತ ಗೃಹಸ್ಥಾಶ್ರಮದಲ್ಲಿ ಬಿದ್ದೇ ಬೀಳುತ್ತಾನೆ ಎಂದು ಹಲವಾರು ಬಾರಿ ಪತ್ರವನ್ನು ಬರೆಸಿದೆ. ರವೀಂದ್ರನು ಸಂಘಕ್ಕೆ ಬರಬೇಕು ಮಾತಾಜಿ ನಿಮ್ಮನ್ನು ತುಂಬ ನೆನೆಸಿಕೊಳ್ಳುತ್ತಿದ್ದಾರೆ ಎಂದು.

ರವೀಂದ್ರನ ಪತ್ರ

ಮನೆಯಿಂದ ರವೀಂದ್ರನ ಪತ್ರ ಬಂದಿತು. ನಾನು ಅಂಗಡಿಯ ಮೇಲೆ ಒಂದು ಕೊಠಡಿಯನ್ನು ಮಾಡಿಸಿದ್ದೇನೆ. ಅದರಲ್ಲಿ "ಉಪಹಾರಸಾಡಿ ಮತ್ತು ರೆಡಿಮೇಡ್‌ಕೇಂದ್ರ" ಎಂಬ ಹೆಸರಿನ ಒಂದು ಹೊಸ ಅಂಗಡಿಯನ್ನು ಪ್ರಾರಂಭಿಸಬೇಕೆಂದಿದ್ದೇನೆ. 13-4-1972ರಲ್ಲಿ ಅದನ್ನು ಪ್ರಾರಂಭಿಸಲು ನಿಶ್ಚಯ ಮಾಡಲಾಗಿದೆ. ಇದೇ ಸಂದರ್ಭದಲ್ಲಿ ಮೋತಿಚಂದನು ಇಲ್ಲಿಗೆ ಬಂದರೆ ಚೆನ್ನಾಗಿರುತ್ತದೆ. ಆಗ ನಾನು ಸಂಘಕ್ಕೆ ಬರಬಹುದು. ಇಲ್ಲದಿದ್ದರೆ ನನಗೆ ಬರಲು ಕಷ್ಟವಾಗುತ್ತದೆ ಎಂದು. ಮೋತಿಚಂದನಿಗೆ ಆಗ ಜ್ವರಬಂದಿತು. ಹೊದ್ದಿಕೆ ಹೊದ್ದುಕೊಂಡು ಮಲಗಿಬಿಟ್ಟಿದ್ದ. ಸ್ವಲ್ಪ ಹೊತ್ತಾದ ಮೇಲೆ ಮಂದಿರಕ್ಕೆ ಬಂದ. ನಾನು ಇನ್ನೂ ಅಂಗಳದಲ್ಲೇ ಪತ್ರವನ್ನು ಕೊಟ್ಟೆ ಅವನಿಗೆ ಪತ್ರ ಓದುತ್ತಿದ್ದಂತೆ ಜ್ವರವೆಲ್ಲ ಓಡಿಹೋಗಿ ಬೆವರು ಬರಲಾರಂಭಿಸಿತು. ಮಾತಾಜಿ ನಾನು ಟಿಕೈತನಗರಕ್ಕೆ ಹೋಗುತ್ತೇನೆ ಎಂದರು. ಅದಕ್ಕೆ ನಾನು ಈಗ ನಿನಗೆ 104 ಡಿಗ್ರಿ ಜ್ವರ ಇದೆ ನೀನು ಹೇಗೆ ಹೋಗುತ್ತೀಯ ಎಂದೆ. ಅವನು ಬೇಕಾದರೆ ನೋಡಿ ಮಾತಾಜಿ ನನಗೆ ಜ್ವರ ಇಲ್ಲವೆಂದ. ನನಗೆ ಎಷ್ಟು ಸಂತೋಷವಾಯಿತೆಂದರೆ ಮೋತಿಚಂದನು ತನ್ನ ಮನೆಗೇ ಹೋಗುತ್ತಿದ್ದಾನೆ ಎನ್ನಿಸಿತು.

ಮೋತಿಚಂದನು ಮಾರನೆಯ ದಿನವೇ ಟಿಕೈತನಗರಕ್ಕೆ ಹೊರಟ. ಇಟ್ಟ ಮಹೂರ್ತದಲ್ಲಿ ಅಂಗಡಿಯ ಪ್ರಾರಂಭೋತ್ಸವವಾಯಿತು. ಮೋತಿಚಂದನು ರವೀಂದ್ರನನ್ನು ಜೊತೆಯಲ್ಲಿ ಕರೆದುಕೊಂಡು ಬರಲು ಪ್ರಯತ್ನಿಸಿದಾಗ ಕೈಲಾಸಚಂದ್ರ ಮತ್ತು ಪ್ರಕಾಶ್‌ಚಂದನು ಹೇಗೆ ಹಿಡಿದಿಟ್ಟಿದ್ದಾರೆಂದು. ರವೀಂದ್ರನನ್ನು ನಾವು ಏನಾದರೂ ಕಳುಹಿಸುವುದಿಲ್ಲ ಎಂದರು. ಕೊನೆಗೆ ಬಹಳ ಸಾಹಸ ಮಾಡಿ ಅವನನ್ನು ಬ್ಯಾವರಕ್ಕೆ ಕರೆತಂದನು. ಮೋತಿಚಂದನಿಗೆ ಖುಷಿ ಆಯಿತು. ನನಗಂತು ಬಹಳ ಸಂತೋಷವಾಯಿತು. ರವೀಂದ್ರ ಕೆಲವು ದಿನ ಇದ್ದ. ಪ್ರತಿ ದಿನ ನಾನು ಅವನಿಗೆ ಪ್ರೇರಣೆ ಕೊಡುತ್ತಿದ್ದೆ. ನೀನು ಅಜನ್ಮ ಬ್ರಹ್ಮಚರ್ಯ ವ್ರತವನ್ನು ತೆಗೆದುಕೊಂಡೇ ಮನೆಗೆ ಹೋಗಬೇಕು. ಇಲ್ಲದಿದ್ದರೆ ಮದುವೆಯ ಬಂಧನಕ್ಕೆ ಒಂದು ದಿನ ಬಿದ್ದೇ ಬೀಳುತ್ತೀಯ. ಈ ಮನುಷ್ಯ ಜನ್ಮವನ್ನು ಆತ್ಮ ಹಿತಕ್ಕೋಸ್ಕರ ಉಪಯೋಗಿಸಿಕೊಳ್ಳಬೇಕು. ಈ ನಶ್ವರ ಭೋಗದಲ್ಲಿ ತೊಡಗಿಸಿಕೊಂಡು ಹಾಳುಮಾಡಿಕೊಳ್ಳುವುದಕ್ಕೆ ಅಲ್ಲ. ಯಾವ ಶರೀರದಿಂದ ಆತ್ಮ ನಿಧಿಯನ್ನು ಪ್ರಕಟಗೊಳಿಸಿಕೊಳ್ಳಬಹುದೋ, ಆ ಶರೀರವನ್ನು ಚಂಚಲ ಲಕ್ಷ್ಮಿಯನ್ನುಗಳಿಸುವುದರಲ್ಲಿ ಏತಕ್ಕೆ ತೊಡಗಿಸಿಕೊಳ್ಳುತ್ತೀಯ ಎಂದೆ. ಹೀಗೆ ಬಹಳಷ್ಟು ಶಿಕ್ಷಾಪ್ರದ ಮಾತುಗಳನ್ನು ಹೇಳಿ ಹೇಳಿ ಕೊನೆಗೆ ನನ್ನ ಮಾತಿನ ಪ್ರಭಾವ ಅವನ ಮೇಲಾಯಿತು. ಕೊನೆಗೆ ಬ್ರಹ್ಮಚರ್ಯೆ ತೆಗೆದುಕೊಳ್ಳುತ್ತೇನೆ. ಎಂದು ಹೇಳುತ್ತಲೇ, ಮೋತಿಚಂದನಿಗೆ ಇವನನ್ನು ನಾಗೌರಕ್ಕೆ ಕರೆದುಕೊಂಡು ಹೋಗಿ ಆಚಾರ್ಯರ ಹತ್ತಿರ ವ್ರತಕೊಡಿಸಿಕೊಂಡು ಬರಲು ಹೇಳಿದೆ.

ಇಬ್ಬರು ನಾಗೌರಿಗೆ ಹೋಗಿ ರವೀಂದ್ರ ಶ್ರೀಫಲ ಇಟ್ಟು ಅಜನ್ಮ ಬ್ರಹ್ಮಚರ್ಯ ವ್ರತವನ್ನು ಗ್ರಹಣೆ ಮಾಡಿದ. ಸಂಘದಲ್ಲಿದ್ದ ಎಲ್ಲರು ಸಂತೋಷಿಸಿದಂತೆ ನಾಗೌರಿನ ಜೈನ ಸಮಾಜದವರು ರವೀಂದ್ರನನ್ನು ಒಳ್ಳೆ ಸನ್ಮಾನ ಮಾಡಿದರಂತೆ. ಇಬ್ಬರೂ ಬಹಳ ಖುಷಿಯಿಂದಲೇ ಬಂದರು. ಮೋತಿಚಂದನು ಇಲ್ಲಿಯ ಸಮಾಜದವರಿಗೂ ಇದನ್ನು ಪ್ರಕಟಿಸಿದನು. ಇವನ ಪರಿಚಯದ ಒಂದು ಚಿಕ್ಕ ಪರಿಚಯ ಪುಸ್ತಿಕೆಯನ್ನು ಅಚ್ಚುಹಾಕಿಸಿ, ಸಮಾಜದಿಂದ ಒಂದು ಸಭೆಯ ಆಯೋಜನೆಯನ್ನು ಮಾಡಿಸಿ ಇವನಿಗೆ ಹಾರಹಾಕಿಸಿ ಸನ್ಮಾನಿಸಿ ಎಲ್ಲರಿಗೂ ಪರಿಚಯ ಪುಸ್ತಕವನ್ನು ಹಂಚಲಾಯಿತು. ರತ್ನಮತಿ ಮಾತಾಜಿಯವರು ನೀನು ನಿನ್ನ ಜೀವನದಲ್ಲಿ ಧರ್ಮರೂಪಿ ಧನವನ್ನು ಚೆನ್ನಾಗಿ ಸಂಪಾದಿಸಿಕೋ. ತ್ಯಾಗದಲ್ಲಿ ಜೀವನ ಮುಂದುವರಿಸುತ್ತಾ ಒಂದು ದಿನ ನಿನ್ನ

ಗುರಿ ಮುಟ್ಟು ಎಂದು ಆಶೀರ್ವದಿಸಿದರು. ಹಾಗೇ ನಾನು ಆಶೀರ್ವದಿಸುತ್ತಾ ಈ ನಶ್ವರ ಶರೀರದಿಂದಲೇ ಅವಿನಶ್ವರ ಸುಖ ಪ್ರಾಪ್ತವಾಗುತ್ತದೆ. ಈಗ ನೀನು ವನಿತೆಯ ಬೇಡಿಯನ್ನು ಕತ್ತರಿಸಿದ್ದೀಯ. ಆದ್ದರಿಂದ ಮನೆಯ ಕಾರಾಗೃಹದಲ್ಲಿ ಮತ್ತೆ ಬೀಳಬೇಡ. ಈಗ ನೀನು ಅಧ್ಯಯನ ಮಾಡುವ ಸಮಯ ಇದನ್ನು ಲೆಕ್ಕಹಾಕಿಕೊಂಡು ಮನೆ, ಅಂಗಡಿಯ ಮೋಹಕ್ಕೆ ಬೀಳದೆ ಬೇಗ ಸಂಘಕ್ಕೆ ಬಾ ಎಂದೆ.

ಹೊಸ ಅಂಗಡಿ ಹೊಸ ಉತ್ಸಾಹ

ಹೊಸ ಅಂಗಡಿ ತೆರೆದಿದ್ದರಿಂದ ಹೊಸ ಉತ್ಸಾಹ, ಹೊಸಜೀವನದ ಜೊತೆ ಹೊಸ ಸಂಪಾದನೆ. ತನ್ನದೆ ಸಂಪಾದನೆ ಆದ್ದರಿಂದ ಹೊಸ ಹೊಸ ಅವಶ್ಯಕತೆ ಕಾಣತೊಡಗಿತು. ನನಗೆ ನಿಶ್ಚಿಂತತೆ ಇದ್ದರೂ ಯೋಚಿಸುತ್ತಿದ್ದೆ. ಅವನು ಎಷ್ಟು ದಿನ ಮನೆಯಲ್ಲಿ ಇರಬಲ್ಲ ಎಷ್ಟು ದಿನ ಅಂಗಡಿ ನೋಡಿಕೊಳ್ಳುವನು. ಬ್ರಹ್ಮಚರ್ಯವ್ರತ ತೆಗೆದುಕೊಂಡಿರುವುದರಿಂದ ಮೋಕ್ಷಮಾರ್ಗದಲ್ಲಂತೂ ಬಂದಾಗಿದೆ. ಒಂದಲ್ಲ ಒಂದು ದಿನ ಸಂಘಕ್ಕೆ ಬಂದು ಆತ್ಮ ಸಾಧನೆಯಲ್ಲಿ ತನ್ನ ಲಕ್ಷ್ಯವನ್ನು ತೊಡಗಿಸಿಕೊಳ್ಳುವನು.

ದೆಹಲಿ ಪ್ರಯಾಣದ ಚರ್ಚೆ

ಫಲಟನನಿಂದ ಮಾಣಕಚಂದ ಗಾಂಧಿಯವರು ಬಂದರು. ಇವರು ಜಂಬೂದ್ವೀಪದ ಮಾದರಿ ಮಾಡುವಾಗಲೇ ನೋಡಿದ್ದರು. ಅವರು ಪ್ರಸನ್ನಚಿತ್ತರಾಗಿ ನನ್ನಲ್ಲಿ ಪ್ರಾರ್ಥಿಸತೊಡಗಿದರು. ಭ. ಮಹಾವೀರರ 2500ನೇಯ ನಿರ್ವಾಣೋತ್ಸವ ಬಹಳ ವಿಜೃಂಭಣೆಯಿಂದ ಆಚರಿಸಬೇಕೆಂದು ತಯಾರಿಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿಯೇ ಜಂಬೂದ್ವೀಪದ ರಚನೆಯು ಅಭೂತಪೂರ್ವವಾಗುತ್ತದೆ. ಅಖಿಲ ಭಾರತೀಯ ಮಟ್ಟದಲ್ಲಿ ನಡೆಯುತ್ತಿರುವುದರಿಂದ ತಾವು ದೆಹಲಿಗೆ ಬಂದರೆ ಬಹಳ ಚೆನ್ನಾಗಿರುತ್ತದೆ ಎಂದರು.

ಸೇಠ್ ಭಾಗಚಂದವರು ಕೂಡ ಅಲ್ಲಿಗೆ ಬರಲು ಪ್ರೇರೇಪಿಸುತ್ತಿದ್ದರು. ಹಾಗೇ ಸೇಠ್ ಹೀರಾಲಾಲರ ನಿವಾಸದಲ್ಲಿ ಚರ್ಚೆ ಮಾಡಿದಾಗ ಅವರು ಸಹ ಅದೇ ಸಲಹೆಗೆ ಪುಷ್ಟಿಕೊಟ್ಟರು. ದೆಹಲಿಯ ಪರಸಾದಿ ಲಾಲಜೀ ಅವರು ವಿಶೇಷ ಆಗ್ರಹಪಡಿಸಿದರು. ಅಲ್ಲದೆ ಮಹಾಸಭೆಯ ಅಧ್ಯಕ್ಷರಾದ ಪರಮ ಗುರುಭಕ್ತರಾದ ಚಾಂದಮಲ್ಲಜೀಯವರು ವಿಶೇಷ ಆಗ್ರಹವನ್ನು ಮಾಡುತ್ತಾ, ಮಾತಾಜೀ ತಾವು ದೆಹಲಿಗೆ ದಯಾಮಾಡಿಸಿರಿ. ನಿರ್ವಾಣ ಮಹೋತ್ಸವವನ್ನು ಸಫಲಗೊಳಿಸುವುದರಲ್ಲಿ ಬಹಳ ದೊಡ್ಡ ಜವಾಬ್ದಾರಿ ತಮ್ಮ ಮೇಲಿದೆ. ಈ ಕಾರ್ಯದಲ್ಲಿ ತಮ್ಮಂತಹ ಸಾಧು ಸಾಧ್ವಿಯರ ಪವಿತ್ರ ಪ್ರೇರಣೆ ದೆಹಲಿ ಮಹಾನಗರಕ್ಕೆ ಬೇಕಾಗಿದೆ. ದೆಹಲಿ ಭಾರತದ ರಾಜಧಾನಿಯ ಜೊತೆಗೆ ಜೈನ ಸಮಾಜದ ಒಂದು ಕೇಂದ್ರ ಸ್ಥಾನವು ಆಗಿದೆ.

ಟಿಕೈತನಗರದಿಂದ ಪ್ರಕಾಶಚಂದನು ಬಂದಿದ್ದ. ಅವನು ಕೂಡ ನಾನು ದೆಹಲಿಗೆ ಹೋಗಬೇಕೆಂದು ಉತ್ತೇಜಿಸಿದ. ತಾಯಿ ರತ್ನಮತೀ ಮಾತಾಜಿಯ ಹತ್ತಿರ ಮಾತಾಡಿ ಅನುಮತಿ ಪಡೆದೆ. ಜೊತೆಯಲ್ಲಿದ್ದ ಇಬ್ಬರು ಮುನಿಗಳು ಮತ್ತು ಆರ್ಯಿಕೆಯರೊಡನೆಯೂ ಸಮಾಲೋಚಿಸಿ ಮೋತಿಚಂದನನ್ನು ನಾಗೌರನಲ್ಲಿದ್ದ ಆಚಾರ್ಯರ ಹತ್ತಿರ ಆಜ್ಞೆ ಪಡೆಯಲು ಕಳುಹಿಸಿದೆ. ಆಚಾರ್ಯರಿಂದ ಆಜ್ಞೆ ಪಡೆದ ನಂತರ ಬ್ಯಾವರದಿಂದ ನಾನು ವಿಹಾರ ಹೊರಟು ನಸೀರಬಾದಿನಲ್ಲಿ ಆಚಾರ್ಯ ಕಲ್ಪಶ್ರುತಸಾಗರರ ಸಂಘವನ್ನು ದರ್ಶನ ಮಾಡಿದೆ.

ಜಂಬೂದ್ವೀಪವನ್ನ ಮಾಡುವ ನಿರ್ಣಯ

ಮೋತಿಚಂದರು ಹಲವಾರು ಬಾರಿ ಹೇಳುತ್ತಲೇ ಇದ್ದರು. ಮಾತಾಜಿ ತಾವು ಮಧ್ಯಲೋಕದ 13ನೇ ದ್ವೀಪದ ಅಕೃತಿ ರಚನೆ ಮತ್ತು 458 ಚೈತ್ಯಾಲಯದ ದೃಷ್ಟಿಯಿಂದ ಜಂಬೂದ್ವೀಪವನ್ನು ಮಾಡಿಸುವ ವಿಷಯವನ್ನ ಯೋಚಿಸಿರಿ. ಆಗ ಅದು ಸಾಧ್ಯವಾಗುತ್ತದೆ. ಅಲ್ಲದೆ ತಾವು ಬಯಲಿನಲ್ಲಿ ಈ ರಚನೆಯನ್ನು ಮಾಡಿಸಬೇಕು. ಕಡಿಮೆ ಎಂದರು ನೂರು ಅಡಿ ಎತ್ತರದ ಸುಮೇರು ಪರ್ವತ ಬರಬೇಕು. ಕೊನೆಗೆ ನಾನು ಬಹಳ ಯೋಚಿಸಿ ಒಂದು ದಿನ ನಿರ್ಣಯ ಕೈಕೊಂಡು ಸರಿ ಜಂಬೂದ್ವೀಪದ ನಿರ್ಮಾಣದ ಕೆಲಸವನ್ನು ತೆಗೆದುಕೋ ಮೈದಾನದಲ್ಲೆ ಸುಮಾರು 200 ಅಥವ 150 ಅಡಿಗಳಲ್ಲಿ ನಿರ್ಮಾಣವಾಗಲಿ ಎಂದೆ.

ಮೋತಿಚಂದ ಶ್ರಾವಕರಲ್ಲಿ ಹೇಳತೊಡಗಿದೆ. ಯಾರಾದರೂ ಆಚಾರ್ಯರ ಆಶ್ರಯದಲ್ಲಿ ಈ ರಚನೆ ಭೂಮಿಯ ಮೇಲೆ ಆಗಲೇಬೇಕು. ಇದನ್ನು ಮುಂದೆ ಹಾಕುವುದು ಬೇಡ. ಮೋತಿಚಂದನು ನನಗೆ ಮಾತಾಜೀ ತಮ್ಮ ಮಾರ್ಗದರ್ಶನವಿರದೆ ಇದರ ನಿರ್ಮಾಣ ಸಾಧ್ಯವಿಲ್ಲ ತಾವು ಮುಂದುವರಿಯಲೇಬೇಕು. ತಾವು ಏನು ಹೇಳಿದರು ನಾನು ಅದರಂತೆ ಮಾಡಲು ಸಿದ್ಧನಿದ್ದೇನೆ. ಕೊನೆಗೆ ನಾನು ಹಸನ್ಮುಖಿಯಾಗಿಯೇ ಹೇಳಿದೆ. ಮೋತಿಚಂದ ನೀನು ನನಗೆ ಬರೆದುಕೊಡಬೇಕು. ಈ ಕೆಲಸಕ್ಕಾಗಿ ನಾನು ತನು, ಮನ, ಧನದಿಂದ ಈ ಕಾರ್ಯವನ್ನು ಮಾಡಿ ಮುಗಿಸುತ್ತೇನೆ. ನನ್ನ ಸಂಯಮದಲ್ಲಿ ಯಾವುದೇ ರೀತಿಯ ತೊಂದರೆ ಆಗಲು ಎಡೆಮಾಡುವುದಿಲ್ಲ. ಯಾರಲ್ಲೂ ಹಣಕ್ಕಾಗಿ ಯಾಚನೆ ಮಾಡುವುದಿಲ್ಲ. ನಿನಗೆ ಇದು ಒಪ್ಪಿಗೆಯಾದರೆ ನಾನು ಮುಂದುವರಿಯುತ್ತೇನೆ ಎಂದೆ. ಮೋತಿಚಂದನು ತಕ್ಷಣವೇ ಒಂದು ಕಾಗದ ತೆಗೆದುಕೊಂಡು ಪೆನ್ನಿನಿಂದ ಬರೆಯತೊಡಗಿದ ಮಾತಾಜೀ ನಾನು ಜಂಬೂದ್ವೀಪದ ನಿರ್ಮಾಣದಲ್ಲಿ ತನು, ಮನ, ಧನದಿಂದ ಕಾರ್ಯ ಮಾಡಿ ಇದರ ನಿರ್ಮಾಣವನ್ನು ಪೂರ್ತಿಗೊಳಿಸುತ್ತೇನೆ. ತಮ್ಮ ಸಂಯಮದಲ್ಲಿ ಯಾವುದೇ ಪ್ರಕಾರದ ತೊಂದರೆ ಆಗಲು ಬಿಡುವುದಿಲ್ಲ. ತಾವು ಯಾರಲ್ಲಿಯು ಹಣಕ್ಕಾಗಿ ಯಾಚನೆ ಮಾಡಲು ಬಿಡುವುದಿಲ್ಲ. ನಾನೇ ನನ್ನ ಯಥಾಶಕ್ತಿ ಹಣದ ವ್ಯವಸ್ಥೆಯನ್ನು ಮಾಡುತ್ತೇನೆ. ತಾವು ಮಾರ್ಗದರ್ಶನವನ್ನು ಕೊಡುತ್ತಾ ಇರಬೇಕು. ತಮ್ಮ ಇರುವಿಕೆ ಮತ್ತು ಆಶೀರ್ವಾದವೇ ನನಗೆಲ್ಲವು ಎಂದು ಬರೆದುಕೊಟ್ಟರು. ಇದರ ನಂತರ ನಾನು ದೆಹಲಿಗೆ ಹೊರಡಲು ನಿರ್ಣಯಿಸಿದ್ದು.

ಮುನಿ ಶ್ರುತಸಾಗರರ ದರ್ಶನ

ಶ್ರುತಸಾಗರರು ಬ್ಯಾವರದ ಹತ್ತಿರದ ನಸೀರಬಾದಿಗೆ ಬರುವ ಸುದ್ದಿ ತಿಳಿಯಿತು. 1969ರಲ್ಲಿ ಅಂದರೆ ಮೂರು ವರ್ಷಗಳ ನಂತರ ಅವರ ದರ್ಶನದ ಯೋಗ ಬಂದಿತು. ಮನಸ್ಸಿಗೆ ಬಹಳ ಹಿತವೆನ್ನಿಸಿ ಮುನಿಗಳು ಆರ್ಯಿಕೆಯರೆಲ್ಲ ನಸೀರಬಾದಿಗೆ ಹೊರಟೆವು. ಅಲ್ಲಿಯೇ ಜ್ಞಾನಸಾಗರರು ತಂಗಿದ್ದರು. ಅವರ ಶಿಷ್ಯ ವಿದ್ಯಾಸಾಗರರು ಅಲ್ಲಿಯೇ ಇದ್ದರು. ಎರಡು ಸಂಘಗಳನ್ನು ದರ್ಶನ ಮಾಡಿದ್ದು ಮನಸ್ಸಿಗೆ ಹರ್ಷವಾಯಿತು. ಬ್ಯಾವರದಿಂದಲೇ ನಾನು ದೆಹಲಿಗೆ ಹೋಗಲು ತೀರ್ಮಾನ ಕೈಕೊಂಡಿದ್ದೆ. ಜ್ಞಾನಸಾಗರರ ಜೊತೆ ವಾರ್ತಾಲಾಪವಾಯಿತು. ಒಂದು ದಿನ ವಿಶೇಷವಾಗಿ ವಿದ್ಯಾಸಾಗರ ಜೊತೆ ಸುಮಾರು ಒಂದು ಗಂಟೆ ಸಂಸ್ಕೃತದಲ್ಲೆ ವಾರ್ತಾಲಾಪವಾಯಿತು. ಮುನಿಗಳ ಸಂಸ್ಕೃತ ಜ್ಞಾನ ನೋಡಿ ಬಹಳ ಹರ್ಷವಾಯಿತು. ಅವರೊಡನೆ ಸಮಯೋಚಿತ ವಿಷಯಗಳ ಪ್ರಶ್ನೋತ್ತರವು ಆಯಿತು. ಎಂದರೆ ಜನಿವಾರವಿಲ್ಲದ ಶ್ರಾವಕರಿಂದ ಆಹಾರ ತೆಗೆದುಕೊಳ್ಳುವುದು ಜಾತಿವ್ಯವಸ್ಥೆ, ವರ್ಣವ್ಯವಸ್ಥೆಯನ್ನು ಒಪ್ಪಿಕೊಳ್ಳದೆ ಇರುವುದು. ಈಗಂತು ಮುನಿಗಳು ಜನಿವಾರ ಇಲ್ಲದವರಲ್ಲು ಆಹಾರ ತೆಗೆದುಕೊಳ್ಳುತ್ತಿದ್ದಾರೆ ಆಚಾರ್ಯ ಜ್ಞಾನಸಾಗರರಂತೂ ಇದುವರೆಗೂ ಜನಿವಾರ ಧರಿಸಿರುವವರಲ್ಲೇ ಆಹಾರ

ತೆಗೆದುಕೊಳ್ಳುತ್ತಿದ್ದರು. ಅವರು ಮಾತಾಜಿ ಇಂದು ನಾವು ನವಯುವಕರನ್ನು ಹೇಗೆ ಆಕರ್ಷಿತಗೊಳಿಸುವುದು. ಅವರನ್ನು ಧರ್ಮದಲ್ಲಿ ಹೇಗೆ ತೊಡಗಿಸುವುದು ಮುಂತಾದ ಆಲೋಚನೆಗಳನ್ನು ಮಾಡಿದೆವು.

ಮಾಧುರಿಗೆ ಶುದ್ಧ ಜಲದ ವ್ರತ

ಮಾತಾಜೀ ತಾವು ದೆಹಲಿಗೆ ಹೋಗುತ್ತಿದ್ದೀರ ಪುನಃ ನಿಮ್ಮ ಸಂಘವನ್ನು ಯಾವಾಗ ನೋಡುವುದು. ಅದ್ದರಿಂದ ನಾನು ಶುದ್ಧ ಜಲದ ನಿಯಮ ತೆಗೆದುಕೊಂಡು ಆಹಾರ ಕೊಡುತ್ತೇನೆ ಅಂದಳು. ನನ್ನ ಆಜ್ಞೆ ಪಡೆದು ಎಲ್ಲಾ ಸಾಧು ಸಾಧ್ವಿಯರಿಗೂ ಆಹಾರವನ್ನು ಕೊಟ್ಟು ಹರ್ಷಪಟ್ಟಳು. ಕೆಲವು ದಿನಗಳ ನಂತರ ನಾವು ಅಜಮೇರಕ್ಕೆ ಹೊರಟೆವು. ಮುನಿಗಳು ಅಲ್ಲಿಗೆ ವಿಹಾರ ಮಾಡಿದರು.

ಮುನಿಶ್ರೀ ಸನ್ಮತಿಸಾಗರರು ತಮ್ಮ ಸಂಘದೊಡನೆ ಅಲ್ಲೇ ತಂಗಿದ್ದರು. ನಾವು ಕೆಲವು ದಿನಗಳು ಅಲ್ಲಿದ್ದೆವು. ಸನ್ಮತಿಸಾಗರರೊಡನೆ ತಾಯಿ ರತ್ನಮತಿ ಮಾತಾಜೀಯವರು ಧರ್ಮಚರ್ಚೆಯಲ್ಲಿ ಗುಣಸ್ಥಾನ ಮತ್ತು ಮಾರ್ಗಣಸ್ಥಾನದ ಚರ್ಚೆಗಳನ್ನು ಮಾಡುತ್ತಿದ್ದರು.

ಗೊಮ್ಮಟಸಾರ ಮತ್ತು ತ್ರಿಲೋಕಸಾರದ ಅನುವಾದ

ನಾನು ಒಂದು ದಿನ ಮುನಿಶ್ರೀ ಅಜಿತಸಾಗರರು ಮತ್ತು ಆರ್ಯಿಕೆ ವಿಶುದ್ಧಮತೀಯವರಲ್ಲಿ ಗೊಮ್ಮಟಸಾರದ ಜೀವಕಾಂಡ , ಕರ್ಮಕಾಂಡ, ತ್ರಿಲೋಕಸಾರ, ಲಬ್ಧಿಸಾರ ಮತ್ತು ಕ್ಷಪಣಸಾರ ಈ ಐದುಗ್ರಂಥಗಳನ್ನು ಸಂಸ್ಕೃತ ಟೀಕೆಯ ಆಧಾರದಿಂದ ಹಿಂದಿ ಅನುವಾದವಾಗಬೇಕು ಎಂದು ವಿನಂತಿಸಿದೆ. ಆರ್ಯಿಕೆ ವಿಶುದ್ಧಮತಿಯವರಲ್ಲಿ ವಿಶೇಷವಾಗಿ (ವಿನಂತಿಸಿದೆ) ನಿಮಗೆ ಅಲೌಕಿಕ ಗಣಿತದ ಬಗ್ಗೆ ಚೆನ್ನಾಗಿ ಗೊತ್ತಿದೆ. ಇದರಿಂದಾಗಿ ನೀವು ಅನುವಾದ ಕಾರ್ಯಮಾಡಲು ಸಮರ್ಥರು. ನಿಮ್ಮ ವಿದ್ವತ್ತನ್ನು ಜಿನವಾಣಿಯ ಸೇವೆಯಲ್ಲಿ ತೊಡಗಿಸಿರಿ ಎಂದು ವಿನಂತಿಸಿದೆ.

ವಿಶುದ್ಧಮತಿಜೀ ತ್ರಿಲೋಕಸಾರದ ಸ್ವಾಧ್ಯಾಯವನ್ನು ಮಾಡುತ್ತಲೇ ಅದರ ಹಿಂದಿ ಅನುವಾದವನ್ನು ಮಾಡುತ್ತಾ ಬಂದರು. ಮೊದಲು ಇವರಿಗೆ ಭೌಗೋಳಿಕ ಗ್ರಂಥಗಳು ನೀರಸವೆನ್ನಿಸಿ ಬರೆಯುವುದರಲ್ಲಿ (ಪ್ರೇಮ) ಆಸಕ್ತಿ ಇರಲಿಲ್ಲ. ಪುನಃ ರತನ್‌ಚಂದಜೀ ಮುಖ್ತ್ಯಾರೊಂದಿಗೆ ಸ್ವಾಧ್ಯಾಯ ಮಾಡಿ ಅದರ ಅನುವಾದ ಮಾಡಿದರು. ಅದು ಅಚ್ಚಾಗಿ ಪ್ರಕಾಶಿತಗೊಂಡಿತು. ನಂತರ ಅವರು ಸಿದ್ಧಾಂತಸಾರ ದೀಪಕದ ಅನುವಾದ ಮಾಡಿದರು. ಇದು ಮೂರುಲೋಕಗಳಿಗೆ ಸಂಬಂಧಿತವಾದ ವಿಷಯವೇ ನಂತರ "ತಿಲೋಯ ಷಣ್ಣತ್ತಿ"ಯನ್ನು ಸಂಶೋಧಿಸಿ ಅನುವಾದ ಮಾಡಿ ಪ್ರಕಾಶನಗೊಳಿಸಲಾಯಿತು.

1967ರಲ್ಲಿ ನನ್ನ ಭ. ಬಾಹುಬಲಿ ಪುಸ್ತಕ ಅಚ್ಚಾಗಿತ್ತು. ಆಗ ಇವರು ಆರ್ಯಿಕೆಯರು ಉಪಚಾರದಿಂದ ಮಹಾವತ್ರಿಗಳಾಗಿದ್ದಾರೆ. ಅದ್ದರಿಂದ ಇವರ ಮೂಲಕ ಬರೆದ ಗ್ರಂಥ ಹೇಗೆ ಪ್ರಮಾಣಿತವಾಗುತ್ತದೆ ಎಂದಿದ್ದರು. ಪಂ ಅಶಧರ ಪ ಚಾಮುಂಡರಾಯರ ಮೂಲಕ ಬರೆದ ಅನಾಗಾರ ಧರ್ಮಾಮೃತ, ಚಾರಿತ್ರಸಾರ ಮೊದಲಾದವು ಪ್ರಮಾಣ ಕೋಟಿಯಲ್ಲಿವೆ. ಕೊನೆಗೆ ನಾನೇ ಗ್ರಂಥಗಳನ್ನು ಅನುವಾದ ಮಾಡಿ ಕೆಲಸ ಮುಗಿಸಿದಾಗ ತುಂಬ ಖುಷಿ ಆಯಿತು. ನನ್ನ ಶಿಷ್ಯ ಆದಿಮತಿಯು ಗೊಮ್ಮಟಸಾರದ ಕರ್ಮಕಾಂಡದ ಅನುವಾದವನ್ನು ಮಾಡಿದರು. ಅದೂ ಪ್ರಕಾಶಿತವಾಯಿತು. ಇದಕ್ಕೂ ಮೊದಲು ಜಿನಮತಿಯು ಪ್ರಮೇಯ ಕಮಲಮಾರ್ತಾಂಡ ಓದಿ 1970ರಲ್ಲೇ ಇದರ ಅನುವಾದ ಮಾಡಿ ಮುದ್ರಣವು ಆಗಿತ್ತು.

೬೦

ದೆಹಲಿಯ ಕಡೆ ಪ್ರಯಾಣ

ಶ್ರುತಸಾಗರರನ್ನು ದರ್ಶನ ಮಾಡಿಕೊಂಡು ದೆಹಲಿಯ ಕಡೆ ಪ್ರಯಾಣವೆಂದು ಕಾರ್ಯಕ್ರಮ ರೂಪಿತವಾಗಿತ್ತು. ಮಹಾರಾಜರ ಗೃಹಸ್ಥಾಶ್ರಮದ ಮಗಳು ಸುಶೀಲಾ ಮತ್ತು ಧರ್ಮಪತ್ನಿ ಬಸಂತೀಬಾಯಿ ನನ್ನ ಹತ್ತಿರವೇ ಇದ್ದರು. ಶ್ರುತಸಾಗರರೇ ಒಮ್ಮೆ ಹೇಳಿದ್ದರು ಮಾತಾಜೀ ನಾವು ನಿಮಿತ್ತ ಮಾತ್ರಕ್ಕೆ ತಂದೆ. ಇವಳಿಗೆ ನಿಜವಾದ ತಾಯಿ ತಾವೇ, ನಿಮ್ಮಿಂದಲೇ ಅವಳ ಹೃದಯದಲ್ಲಿ ವೈರಾಗ್ಯ ಹುಟ್ಟಿತು. ನಿಮ್ಮ ಹತ್ತಿರವೇ ಅವಳು ಸುರಕ್ಷಿತವಾಗಿರುತ್ತಾಳೆ. ಅನುಶಾಸನವನ್ನು ಮಾಡುವುದರಲ್ಲಿ ನೀವೇ ಕುಶಲರು ಎಂದಿದ್ದರು. ಮಹಾರಾಜರು ಯಾವಾಗಲೂ ಹೇಳುತ್ತಿದ್ದರು. ಜ್ಞಾನಮತಿ ನೀವೊಂದು ಪಾದರಸ (ಮಣಿ) ರಸವೇ ಇದ್ದಂತೆ. **ಲೋಕದಲ್ಲಿ ಪಾದರಸ ಲೋಹವನ್ನು ಚಿನ್ನ ಮಾಡುವಂತೆ ಜ್ಞಾನಮತಿಯನ್ನು ಆಶ್ರಯಿಸಿದ ಶಿಷ್ಯರೂಪಿ ಲೋಹಗಳೆನ್ನೆಲ್ಲ ತನ್ನಂತೆಯೇ ಚಿನ್ನವನ್ನಾಗಿ ಮಾಡಿ ಬಿಡುತ್ತಾರೆ.** ಎಲ್ಲಿಯವರೆಗೆ ಎಂದರೆ **ತಾವು 105 ಆರ್ಯಿಕೆ ಆಗಿದ್ದರು. ಶಿಷ್ಯರನ್ನು 108 ಮುನಿಗಳನ್ನಾಗಿ ಮಾಡುತ್ತಿದ್ದಾರೆ.** ಇದು ಅವರ ಮನಪೂರ್ವಕವಾದ ಉದಾರತೆ ಮತ್ತು ಗುಣ ಗ್ರಾಹಕತೆಯ ದ್ಯೋತಕವಾಗಿದೆ.

ಅಜಮೇರದಿಂದ ಹೊರಟು ಅನೇಕ ಕಷ್ಟಗಳನ್ನು ಎದುರಿಸುತ್ತಾ ಮುಂದುವರಿದೆವು. ಸಂಘ ಸಹಿತವಾಗಿ ಜ್ಯೇಷ್ಠ ಆಷಾಢದ ಬಿಸಿಲಿನಲ್ಲೇ ನಡೆಯುತ್ತಾ ದೆಹಲಿಯ ಹತ್ತಿರದ ಗುಡಗಾಂವ ಹಳ್ಳಿಗೆ ಬಂದೆವು. ಮಾರ್ಗದಲ್ಲಿ ಕು. ಶೀಲ ಒಂದು ಚೌಕ ಕು. ಮಾಧುರಿ ಒಂದು ಚೌಕ ಮಾಡುತ್ತಿದ್ದರು. ಸಂಘದ ವ್ಯವಸ್ಥೆಯನ್ನು, ಜವಾಬ್ದಾರಿಯನ್ನು ಮೋತಿಚಂದನು ನಿರ್ವಹಿಸುತ್ತಿದ್ದನು.

ಮಾರ್ಗದ ಎಲ್ಲ ಜವಾಬ್ದಾರಿಯನ್ನು ಮೋತಿಚಂದನು ವಹಿಸಿಕೊಂಡಿದ್ದರಿಂದ, ವ್ಯವಸ್ಥೆಯ ಕಡೆ ನಾನೇನು ಗಮನಹರಿಸುವ ಅವಶ್ಯಕತೆ ಇರಲಿಲ್ಲ. ದೀಕ್ಷೆ ತೆಗೆದುಕೊಂಡಾಗ ನಾವು ವಿಹಾರ ಮಾಡುವಾಗ ಅಂದರೆ 1957ರಲ್ಲಿ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಯವರೆಗೆ ಮಾತ್ರ ಹೋಗುತ್ತಿದ್ದುದ್ದರಿಂದ ವ್ಯವಸ್ಥೆಯ ಅವಶ್ಯಕತೆ ಕಂಡು ಬರುತ್ತಿರಲಿಲ್ಲ. ಅಲ್ಲದೆ ನನ್ನ ಜೊತೆ ಬ್ರ. ಲಾದೂಲಾಲರು ಇದ್ದರು. ಈಗ ಅವರೇ ಭವ್ಯಸಾಗರರಾಗಿದ್ದಾರೆ ಹಾಗು ಚತುರಬಾಯಿಯು ಇರುತ್ತಿದ್ದರು. ಇನ್ನು ರಾಜಸ್ತಾನದಿಂದ ಸಮ್ಮೇದ ಶಿಖರಕ್ಕೆ ಯಾತ್ರೆ ಹೋಗುವಾಗ ಎಲ್ಲಾ ಜವಾಬ್ದಾರಿಯನ್ನು ಬ್ರ. ಸುಗನಚಂದರು ತೆಗೆದುಕೊಂಡಿದ್ದರು. ಚೌಕದ ಜವಾಬ್ದಾರಿಯನ್ನು ಮನೋವತಿಯ ಜೊತೆ ಹಲವರು ಇದ್ದುದ್ದರಿಂದ ಗಾಡಿ, ಚೌಕದ ವ್ಯವಸ್ಥೆಯ ಕಡೆಗೂ ನನಗೆ ಚಿಂತೆ ಇರಲಿಲ್ಲ. ಹೀಗೆ ನನಗೆ ದೀಕ್ಷಿತ ಬದುಕಿನಲ್ಲಿ ಎಲ್ಲಾ ವಿಹಾರದಲ್ಲಿಯೂ ಬ್ರ. ಸುಗನಚಂದ್ರ, ಗುಲಾಬಚಂದ ಅವರ ನಂತರ ಮೋತಿಚಂದ, ರವೀಂದ್ರರಂತಹವರು ಇದ್ದುದ್ದರಿಂದ ನನಗೆ ಮಾರ್ಗದಲ್ಲಿ ಶ್ರಾವಕರನ್ನು ಯಾವುದಕ್ಕೂ ಕೇಳುವ ಪ್ರಮೇಯವೇ ಬರಲಿಲ್ಲ. ಅಲ್ಲದೆ ಅದು ನನ್ನ ಸ್ವಭಾವಕ್ಕೆ ವಿರೋಧವೂ ಆಗಿತ್ತು.

ಗುಢಗಾಂವಗೆ ಆಗಮನ

ಗುರ್‌ಗಾಂವನ ಜನರಲ್ಲಿ ಧರ್ಮಭಾವನೆಯು ಚೆನ್ನಾಗಿತ್ತು. ನಾವು ಆಹಾರವಾದ ಮೇಲೆ ಮಂದಿರದಲ್ಲಿ ಸಾಮಾಯಿಕ ಮಾಡುತ್ತಿದ್ದೆವು. ದೆಹಲಿಯ ಮುನಿಭಕ್ತ ಸೇಠ್ ಜಯನಾರಾಯಣಜೀ ಸಪರಿವಾರವಾಗಿ ದರ್ಶನಕ್ಕೆ ಬಂದವರು ತಮ್ಮ ಪರಿಚಯ ಹೇಳಿಕೊಂಡು ಪ್ರಾರ್ಥನೆ ಮಾಡಿದರು. ಮಾತಾಜೀ ದೆಹಲಿಯ ಚಾತುರ್ಮಾಸವನ್ನು

ತಾವು ನನ್ನ ಪಹಾಡಿ ಧೀರಜನಲ್ಲಿ ಮಾಡಬೇಕೆಂಬುದೇ ನನ್ನ ಪ್ರಾರ್ಥನೆ ಎಂದರು. ಇದಕ್ಕಿಂತ ಮೊದಲು ಪಂ. ಕೈಲಾಸಚಂದಜೈನ ರಾಜಾಟಾಯಸ್‌ರವರು ಒಂದೆರಡು ಸಲ ಬಂದು ನಿವೇದನೆ ಮಾಡಿದ್ದರು. ಆದರೆ ಪಹಾಡಿ ಧೀರಜನ ವ್ಯವಸ್ಥೆಯನ್ನು ತಿಳಿದುಕೊಂಡು ಅಲ್ಲೇ ಇರಲು ಅನುಮತಿ ಕೊಟ್ಟೆ. ಇದಕ್ಕಿಂತ ಮೊದಲು ವಿಮಲಸಾಗರರು ಇಲ್ಲಿ ಚಾತುರ್ಮಾಸವನ್ನು ಮಾಡಿದ್ದರು. ಅಲ್ಲಿ ಶುದ್ಧ ಜಲದ ನಿಯಮವನ್ನು ಪಾಲಿಸುವವರು ಬಹಳಷ್ಟು ಜನರಿದ್ದರು ಎಂಬುದು ಗೊತ್ತಿತ್ತು. ಇವರು ಮತ್ತು ಲಾಲ ಉಪ್ಪಲತರಾಯಜೀಯವರು ಟೋಂಕದಲ್ಲಿದ್ದ ಆ ಧರ್ಮಸಾಗರರನ್ನು ದರ್ಶನ ಮಾಡಲು ಬಂದಿದ್ದರು ಅಲ್ಲಿ ಕೆಲವು ದಿನ ತಂಗಿದ್ದರಿಂದ ನನಗೂ ಪರಿಚಯವಿತ್ತು.

ಜಯನಾರಾಯಣರು ಸಂಘವನ್ನು ಭವ್ಯವಾಗಿ ಸ್ವಾಗತಿಸಿದರು. ಪಹಾಡಿ ಧೀರಜನಲ್ಲಿ ಎರಡು ಮಂದಿರಗಳಿವೆ. ಆರ್ಯಿಕೆಯರು ದೊಡ್ಡ ಧರ್ಮಶಾಲೆಯಲ್ಲಿ ತಂಗಿದೆವು. ಇಬ್ಬರು ಮುನಿಗಳು ಮಂದಿರದ ಮೇಲಿನ ಕಟ್ಟಡದಲ್ಲಿ ತಂಗಿದ್ದರು ಆಹಾರವಾದ ಮೇಲೆ ಕೊಂಚ ಸೇಠ್ ಅತಿಥಿ ಭವನದಲ್ಲಿ ತಂಗಿದ್ದ ಆಚಾರ್ಯ ರತ್ನ ದೇಶಭೂಷಣರನ್ನು ದರ್ಶನ ಮಾಡಿದೆವು.

1957ರ ನಂತರ ನಾನು ಆರ್ಯಿಕಾ ದೀಕ್ಷೆ ತೆಗೆದುಕೊಂಡ ನಂತರ ವಿಹಾರ ಮಾಡುತ್ತಾ 1972ರ ಆಷಾಢ ಶುಕ್ಲ ದ್ವಾದಶಿಯಂದು ಅವರ ದರ್ಶನ ಮಾಡಿ ಗುರುದೇವರನ್ನು ಕಂಡ ನನಗೂ ಅತೀವ ಸಂತೋಷ, ಇಷ್ಟು ಉನ್ನತಿಗೇರಿರುವ ನನ್ನನ್ನು ಕಂಡು ಅವರು ಕೂಡ ಸಂತೋಷದಿಂದ ಮತ್ತೆ ಮತ್ತೆ ಆಶೀರ್ವಾದ ಮಾಡುತ್ತಾ ಪ್ರಸನ್ನತೆಯನ್ನು ತೋರಿದರು. ಅವರ ಆಜ್ಞೆಯನ್ನು ಪಡೆದು ಮತ್ತೆ ಬಂದು ಪಹಾಡಿಧೀರಜನಲ್ಲಿಯೇ ವರ್ಷಾಯೋಗವನ್ನು ಸ್ಥಾಪಿಸಿದೆವು.

ವರ್ಷಾಯೋಗ ಸ್ಥಾಪನೆ

ಆಷಾಢ ಶುಕ್ಲ ಚತುರ್ದಶಿಯಂದು ಜಯನಾರಾಯಣ ಮೊದಲಾದ ಪ್ರಮುಖರು ಶ್ರೀಫಲವನ್ನಿಟ್ಟು ಚಾತುರ್ಮಾಸಕ್ಕಾಗಿ ಪ್ರಾರ್ಥನೆಯನ್ನು ಮಾಡಿದರು. ಅದಕ್ಕೆ ಸ್ವೀಕೃತಿಯನ್ನು ಸೂಚಿಸಿ ಸಭೆಯಲ್ಲಿ ಚಾತುರ್ಮಾಸದ ಉಪಯೋಗದ ಬಗ್ಗೆ ನಾನು ಪ್ರವಚನವನ್ನು ಕೊಟ್ಟೆ. ಮುನಿಶ್ರೀ ಸಂಭವಸಾಗರರು ಪ್ರವಚನಕೊಟ್ಟರು. ಆದರೆ ಹಿಂದಿನ ದಿನವೇ ನಾವೆಲ್ಲರು ನಿಯಮ ತೆಗೆದುಕೊಂಡಿದ್ದು ಆಗಿತ್ತು. ಪ್ರತಿ ದಿನ ಬೆಳಗ್ಗೆ 8 ರಿಂದ 9 ಗಂಟೆಯವರಗೆ ನನ್ನ ಮತ್ತು ಮುನಿ ಸಂಭವ ಸಾಗರರ ಪ್ರವಚನವಾಗುತ್ತಿತ್ತು.

ಇಲ್ಲಿ ಮಹಿಳೆಯರ ಸಂಘಟನೆ ಚೆನ್ನಾಗಿ ಇದೆ. ಶ್ರೀಮತಿ ಬೋಖಿತಬಾಯಿ ಅಧ್ಯಕ್ಷಿಣಿ. ಪರಸಂದಿಬಾಯಿ ಮಂತ್ರಿ ಆಗಿದ್ದರು ಬೆಳಗ್ಗೆಯೇ 50ಕ್ಕಿಂತ ಹೆಚ್ಚಾಗಿ ಮಹಿಳೆಯರು ಮಡಿಯಲ್ಲೇ ಬಂದು ದೇವರ ಪೂಜೆ ನೋಡಿ ಅಷ್ಟವಿಧಾರ್ಚನೆ ಮಾಡುವುದು ನೋಡಿ ನಿಜಕ್ಕೂ ಬಹಳ ಹಿತವೆನ್ನಿಸುತ್ತಿತ್ತು. ಕರಮಚಂದ ಮೊದಲಾದವರು ಆಹಾರದ ಸಮಯದಲ್ಲೂ ಬಹಳ ಎಚ್ಚರಿಕೆ ವಹಿಸುತ್ತಿದ್ದರು . ಪ್ರತಿಯೊಬ್ಬರನ್ನು ಭಕ್ತಿಯಿಂದ ಚೌಕದವರೆಗೂ ಕರೆದೊಯ್ಯುತ್ತಿದ್ದರು. ಸಂಘದಲ್ಲಿ ಇಬ್ಬರು ಮುನಿಗಳು, ನಾಲ್ವರು ಆರ್ಯಿಕೆಯರು, 3 ಜನ ಬ್ರಹ್ಮಚಾರಿಣಿಯರು, ಒಬ್ಬ ಬ್ರಹ್ಮಚಾರಿ ಮೋತಿಚಂದ್ರ ಇದ್ದರು. ಪ್ರತಿ ದಿನ ನನ್ನ ಮತ್ತು ಮಹಾರಾಜರ ಪ್ರವಚನವಾಗುತ್ತಿತ್ತು. ಇಲ್ಲಿ 7-8 ಚೌಕಗಳು ಆಗುತ್ತಿದ್ದವು. ಎಲ್ಲ ವ್ಯವಸ್ಥೆಯು ವ್ಯವಸ್ಥಿತವಾಗಿ ನಡೆಯುತ್ತಿತ್ತು. ಇಲ್ಲಿ ವಿಮಲಸಾಗರರಿಂದ

ದೀಕ್ಷಿತರಾಗಿದ್ದ ಜ್ಞಾನಮತಿ (ಶುಕ್ಲಮತಿ) ಎಂಬುವವರು ಇದ್ದರು. ಸಂಘದಲ್ಲಿ ಬಹಳ ಆಸಕ್ತಿಯಿಂದ ವೈಯಾವೃತ್ತಿ ಮಾಡುತ್ತಿದ್ದರು.

ಅಸ್ವಸ್ಥತೆ ಗುರುವಿನ ಆರ್ಶೀವಾದ

ಶ್ರಾವಣಮಾಸದ ಅಧಿಕವಾದ ಬಿಸಿಲಿನಿಂದಾಗಿ, ವಿಹಾರದ ಶ್ರಮವು ಸೇರಿ ನನ್ನ ಆರೋಗ್ಯದ ಮೇಲೆ ಹೆಚ್ಚಾದ ಪರಿಣಾಮವನ್ನು ಬೀರಿತು. ಆಮಶಂಕೆ ಪ್ರಕೋಪಕ್ಕೆ ಹೋಯಿತು. ಆಹಾರ ಸೇರದಂತಾಯಿತು. ಇದರಿಂದಾಗಿ ಉಪದೇಶವನ್ನು ಕೊಡಲಾಗುತ್ತಿರಲಿಲ್ಲ. ಇದೇ ಕಾರಣದಿಂದಾಗಿ ಆಚಾರ್ಯ ದೇಶಭೂಷಣರೇ ನನಗೆ ಆಶೀರ್ವಾದವನ್ನು ಕೊಡಲು ತಾವೇ ಬಂದರು . ಉಪದೇಶ ಮಾಡುತ್ತಾ ಅವರು ಈ ಜ್ಞಾನಮತಿ ನನ್ನ ಶಿಷ್ಯೆ. ಅವಳು ಮನೆ ಬಿಡಲು ಮಾಡಿದ ಸಾಹಸ ಇಂದು ಪುರುಷರಿಗೂ ಅಸಂಭವ. ಇವರ ಆರೋಗ್ಯ ಬಿಗಾಡಾಯಿಸಿರುವುದನ್ನು ಕೇಳಿ ನಾವೇ ಶುಭಾಶೀರ್ವಾದವನ್ನು ಕೊಡಲು ಬಂದಿದ್ದೇವೆ. ಇಂದು ಇವರು ಮಾಡುತ್ತಿರುವ ಅಷ್ಟಸಹಸ್ರೀ ಗ್ರಂಥದ ಅನುವಾದ ಒಂದು ಅಭೂತ ಪೂರ್ವವಾದ ಕೆಲಸವಾಗಿದೆ. ಅವರು ಬೇಗನೆ ಆರೋಗ್ಯವಂತರಾಗಬೇಕು ಇವರಿಂದ ಸಮಾಜಕ್ಕೆ ಬಹಳಷ್ಟು ಲಾಭವಾಗಬೇಕಾಗಿದೆ. ಇಂತಹ ಸುಯೋಗ್ಯ ಶಿಷ್ಯೆಯನ್ನು ಪಡೆದು ನನ್ನ ಹೃದಯ ತುಂಬಿ ಬರುತ್ತಿದೆ. ಹೀಗೆ ಉಪದೇಶದಲ್ಲಿ ಮನಃಪೂರ್ತಿ ನನ್ನನ್ನು ಹರಸಿದರು. ಆಚಾರ್ಯರ ನುಡಿಗಳನ್ನು ಕೇಳಿದ ಜನರು ಭಾವಪರವಶವಾದರು. ನನ್ನ ಬಗ್ಗೆ ಅವರಿಗಿದ್ದ ಶ್ರದ್ಧೆ ದ್ವಿಗುಣವಾಯಿತು. ಮಹಾರಾಜರು ರತ್ನಮತಿ ಮಾತಾಜೀಗೆ ತುಂಬು ಹೃದಯದಿಂದ ಆಶೀರ್ವಾದ ಕೊಡುತ್ತಾ ಹೇಳಿದರು. ತಮ್ಮ ಜೀವನದಲ್ಲಿ ಸರ್ವೋತ್ಕೃಷ್ಟವಾದ ಆರ್ಯಿಕಾ ಪದವಿಯನ್ನು ಗ್ರಹಣೆ ಮಾಡಿ ಒಂದು ಆದರ್ಶವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ವಯಸ್ಸಿನಲ್ಲಿ ತಮ್ಮ ತುಂಬಿದ ಸಂಸಾರದ ಸುಖವನ್ನು ತ್ಯಜಿಸಿ ದೀಕ್ಷೆ ತೆಗೆದುಕೊಂಡಿದ್ದಾರೆ. ಇವರು ವಿರಳವಾದ ಪುಣ್ಯಶಾಲಿಗಳಾಗಿದ್ದಾರೆ. ನಿಮ್ಮ ಧಾರ್ಮಿಕ ಪ್ರೇಮವನ್ನು ಅವರಿಗೆ ನೀವೆಲ್ಲರು ತೋರಿಸಬೇಕು. ಮೈನಾ ಮನೆಬಿಡುವಾಗ ಸಮಾಜದಲ್ಲಿ ಅವರು ಎಂತಹ ವಿರೋಧವನ್ನು ಎದುರಿಸಬೇಕಾಗಿ ಬಂದಿತ್ತು. ಆದರೂ ಅವೆಲ್ಲವನ್ನು ಮೆಟ್ಟಿ ನಿಂತು ಬಂದು ನನ್ನಿಂದ ಮಗಳಿಗೆ ದೀಕ್ಷೆಯನ್ನು ಕೊಡಿಸಿಯೇ ಬಿಟ್ಟರು. ನನ್ನಿಂದ ನಿಮಗೆಲ್ಲರಿಗೂ ಸಂಯಮವನ್ನು ಕಾಪಾಡಿಕೊಂಡು ಅಂತ್ಯದಲ್ಲಿ ಸಮಾಧಿ ಮರಣವನ್ನು ಧರಿಸಿರಿ ಎಂದರು. ಈ ಮಾತುಗಳನ್ನು ತುಂಬಿದ ಸಭೆಯಲ್ಲಿ ಕೇಳಿದ ತಾಯಿಯ ಹೃದಯ ತುಂಬಿಬಂದಿತು. ಅವರು ಮತ್ತೆ, ಮತ್ತೆ ಗುರುಗಳ ಚರಣಕ್ಕೆ ಎರಗಿದವರೇ ತಮ್ಮಿಂದ ಧನ್ಯಳಾದೆ ಎಂಬ ಭಾವನೆಯನ್ನು ಮನಕ್ಕೆ ತುಂಬಿಕೊಂಡರು.

ಜಂಬೂದ್ವೀಪದ ಯೋಜನೆ

ಜಂಬೂದ್ವೀಪದ ವಿಷಯ ಮೊದಲೆ ಎಲ್ಲ ಕಡೆ ಹರಡಿತ್ತು. ರಾಜಾಟಾಯ್ಸನ ಡಾ|| ಕೈಲಾಸಚಂದ, ಶ್ಯಾಮಲಾಲ, ಹಾಗೇ ಸಮಾನ ಅಭಿರುಚಿಯುಳ್ಳ ಮಹಾವೀರ ಪ್ರಸಾದಜೀ ಕರ್ಮಚಂದಜೀ ಮೊದಲಾದ ಪುರುಷರು ಹಾಗೆ ಮಹಿಳೆಯರಲ್ಲಿ ಪರಸಂದೀಬಾಯಿ ಮೊದಲಾದವರೆಲ್ಲ ಇದರಲ್ಲಿ ಸಕ್ರಿಯವಾಗಿ ತೊಡಗಿಕೊಂಡರು. ಪ್ರಾಯಶಃ ಮೋತಿಚಂದನು ಇದಕ್ಕಾಗಿ ಜಾಗದ ಹುಡುಕಾಟದಲ್ಲೇ ತೊಡಗಿಕೊಂಡಿದ್ದನು. ಡಾ|| ಕೈಲಾಸಚಂದರು ಪಿ.ಡಬ್ಲ್ಯೂ.ಡಿಯಲ್ಲಿ ಒಬ್ಬ ಕುಶಲ ಸೂಪರಿಂಟೆಂಡೆಂಟ್ ಇಂಜಿನಿಯರ್ ಆಗಿದ್ದ ಕೆ.ಸಿ. ಜೈನರೊಡನೆ ಪರಾಮರ್ಶಿಸಿ ಮಾದರಿಯನ್ನು ತಯಾರು ಮಾಡಿಸಿಯೇ ಬಿಟ್ಟರು. ನನ್ನ ಆರೋಗ್ಯವು ನಿಧಾನಕ್ಕೆ ಸುಧಾರಿಸಿತು. ಅಷ್ಟರಲ್ಲಿ ಪರ್ಯೂಷಣ ಪರ್ವವೇ ಬಂದಿತು.

ದಶಲಕ್ಷಣ ಪರ್ವ

ನಾನು ಪ್ರತಿ ದಿನ 1½ ಯಿಂದ 2 ಗಂಟೆ ತತ್ತ್ವಾರ್ಥ ಸೂತ್ರದ ಬಗ್ಗೆ ಪ್ರವಚನ ಮಾಡುತ್ತಿದ್ದೆ ಜಯನಾರಾಯಣ ಮೊದಲಾದ ಅನೇಕ ಭಕ್ತರು ಆಗಾಗ್ಗೆ - ಆಗಾಗ್ಗೆ ಹೇಳುತ್ತಲೇ ಇದ್ದರು. ನಮ್ಮ ಇಷ್ಟು ವರ್ಷದ ಜೀವನದಲ್ಲಿ 40-45 ವಿದ್ವಾಂಸರಿಂದ ನಾವು ತತ್ತ್ವಾರ್ಥಸೂತ್ರದ ಬಗ್ಗೆ ಪ್ರವಚನ ಕೇಳಿದ್ದೇವೆ. ಆದರೆ ಇಷ್ಟೊಂದು ರಹಸ್ಯಗಳನ್ನು ಸರಳ ಶಬ್ದಗಳಲ್ಲಿ ಮಾತಾಜೀ ತಿಳಿಸಿದಂತೆ. ನೀರಸ ವಿಷಯವನ್ನು ಸಹ ರೋಚಕ ಮಾಡಿದ ಶೈಲಿಯನ್ನು ನಾವು ಯಾವ ವಿದ್ವಾಂಸರಿಂದಲೂ ಇಲ್ಲಿಯವರೆಗೂ ಕೇಳಿರಲಿಲ್ಲ ಎಂದರು. ಪ್ರವಚನದಲ್ಲಿ ಯಾವಾಗಲು ಜನ ದಟ್ಟಣೆ ಇರುತ್ತಿತ್ತು ಜನರು ಧರ್ಮಶಾಲೆಯ ಹೊರಗೂ ಹೇಗೆಂದರೆ ಹಾಗೇ ಕುಳಿತು ಕೇಳುತ್ತಿದ್ದರು. ಒಳಗೆ ಜಾಗ ಸಿಗದಿದ್ದ ಜನರು ಮನಸ್ಸಿಗೆ ಬೇಜಾರು ಮಾಡಿಕೊಳ್ಳುತ್ತಿದ್ದರು. ದೆಹಲಿಯ ಡಾII ಕೈಲಾಸಚಂದರು ಎಲ್ಲಾ ಉಪದೇಶಗಳ ಕ್ಯಾಸೆಟ್ ಮಾಡಿಸಿದ್ದರು.

ಆರ್ಯಿಕಾ ದೀಕ್ಷೆ

ನಾನು ಪಹಾಢಿ ಧೀರಜನ ಒಬ್ಬ ಮೀನಾಬಾಯಿ ಮಹಿಳೆಗೂ, ಶಾಹದರದ ಮನಬಾರೀ ಬಾಯಿ ಎಂಬ ಮಹಿಳೆಗೂ ಇಲ್ಲಿ ಆ ದೇಶಭೂಷಣರ ಕರ ಕಮಲಗಳಿಂದ ಆರ್ಯಿಕೆ ಮತ್ತು ಕ್ಷುಲ್ಲಿಕೆ ದೀಕ್ಷೆಯನ್ನು ಕೊಡಿಸಿದೆ.

ರತ್ನಮತಿ ಮಾತಾಜೀಯ ಉತ್ಸಾಹ

ಆರ್ಯಿಕೆ ರತ್ನಮತಿ ಮಾತಾಜೀಯವರು ವಯಸ್ಸಾಗಿದ್ದರೂ ಡಿಪ್ಟಿಗಂಜನವರಗಿನ ಚೌಕದವರೆಗೂ ಹೋಗಿ ಆಹಾರ ತೆಗೆದುಕೊಳ್ಳುತ್ತಿದ್ದರು. 4-6 ದಿನಗಳಿಗೊಮ್ಮೆ ಇಲ್ಲಿಂದ ಎರಡು ಮೈಲಿ ದೂರದಲ್ಲಿದ್ದ ಆಚಾರ್ಯರ ದರ್ಶನಕ್ಕೂ ಹೋಗಿ ಬರುತ್ತಿದ್ದರು. ನಿರ್ವಾಣೋತ್ಸವದ ಸಮಾರಂಭದಲ್ಲಿ ನಡೆಯುತ್ತಿದ್ದ ಎಲ್ಲಾ ಕಾರ್ಯಕ್ರಮಗಳಲ್ಲೂ ಭಾಗವಹಿಸುತ್ತಿದ್ದರು. ಆಚಾರ್ಯರ ಉಪದೇಶಗಳನ್ನು ಕೇಳಿ ಬಹಳ ಸಂತೋಷಪಡುತ್ತಿದ್ದರು. ಮಧ್ಯಾಹ್ನದ ವೇಳೆ ಮುನಿಸಂಭವಸಾಗರರು ಆರ್ಯಿಕೆ ಆದಿಮತಿ ಮೊದಲಾದವರ ಜೊತೆ ಸಿದ್ಧಾಂತ ಪ್ರವೇಶಿಕೆ ಚೌಬೀಸಠಾಣಾ ಮೊದಲಾದವುಗಳ ಚರ್ಚೆಯಲ್ಲಿ ಭಾಗವಹಿಸುತ್ತಿದ್ದರು. ಈ ಚರ್ಚೆ ಅವರಿಗೆ ಬಹಳ ಖುಷಿಕೊಡುತ್ತಿತ್ತು. ಕರೋಲ್ ಭಾಗ, ಮಾಡಲ್‌ಬಸ್ತಿ ಮೊದಲಾದ ಮಂದಿರಗಳಿಗೆ ಬಹಳ ಸಲ ಹೋಗಿ ಬರುತ್ತಿದ್ದರು.

ವಿಶೇಷ ಭಕ್ತಿಯ ಲಾಭ

ಒಂದು ದಿನ ನಾವು ಕರೋಲ್ ಭಾಗ ಮಂದಿರದ ದರ್ಶನಕ್ಕೆ ಹೋಗಿದ್ದೆವು ಇಲ್ಲಿ ಮಂದಿರದಲ್ಲಿ ಒಬ್ಬ ಶ್ರಾವಕರು ನನ್ನ ಕಮಂಡಲುವನ್ನು ಹಿಡಿದು ನನ್ನ ಜೊತೆ ಬರತೊಡಗಿದರು. ಹೋಗುತ್ತಾ ಹೋಗುತ್ತಾ ತಮ್ಮ ಪರಿಚಯ ಮಾಡಿಕೊಂಡರು. ಅಲ್ಲದೆ ದೆಹಲಿಯಲ್ಲಿ ಚಾತುರ್ಮಾಸ ಮಾಡುವ ಉದ್ದೇಶವನ್ನು ತಿಳಿದುಕೊಂಡಿದ್ದರು. ಅದೇ ದಿನ ಸಂಜೆ ಬಂದವರೇ ನಾನು ಈಗ ಕಛೇರಿಯಿಂದ ಮನೆಗೆ ಹೋಗುತ್ತಿದ್ದೇನೆ. ನಾನು ಮಾಡಬಹುದಾದ ಯಾವುದಾದರು ಕೆಲಸವಿದ್ದರೆ ಹೇಳಿ ಎಂದು ಮೋತಿಚಂದನನ್ನು ಪರಿಚಯ ಮಾಡಿಕೊಂಡರು. ನನ್ನ ಹೆಸರು ಕೈಲಾಸಚಂದ, ನಾನು ಕರೋಲಬಾಗನಲ್ಲಿ ವಾಸಿಸುತ್ತೇನೆ. ನಿಮ್ಮ ಪ್ರತಿಯೊಂದು ಕೆಲಸದಲ್ಲೂ ಸಹಯೋಗ ಕೊಡಲು ನಾನು ಸಿದ್ಧನಿದ್ದೇನೆ ಎಂದರು. ಆ ದಿನದಿಂದ ಕೈಲಾಸಚಂದರು ನಮ್ಮ ಪರಮಭಕ್ತರಾಗಿ ಮೋತಿಚಂದನಿಗೆ

ಜೊತೆಯಾದರು. ನಾನೇ ಕೇಳಿದೆ ಕೈಸಲಾಚಂದಜೀ ಮೋತಿಚಂದರು ಇಲ್ಲಿ ಜಂಬೂದ್ವೀಪಕೋಸ್ಕರ ಜಾಗವನ್ನು ಹುಡುಕುತ್ತಿದ್ದಾರೆ. ಇವರಿಗೆ ಡಿ. ಡಿ. ಎ. ಯವರ ಸಹಯೋಗ ಬೇಕಾಗಿದೆ. ಕೈಲಾಸಚಂದರು ಎರಡೇ ದಿನದಲ್ಲಿ ಡಿ. ಡಿ. ಎ. ಯವರ ಕೆಲವು ಪ್ರಮುಖ ಅಧಿಕಾರಿಗಳನ್ನು ತಮ್ಮ ಜೊತೆ ಕರೆದುಕೊಂಡು ನನ್ನ ಹತ್ತಿರ ಬಂದರು. ಅವರೊಡನೆ ಇಷ್ಟು ವಿಶಾಲರಚನೆಗೆ ಬೇಕಾಗಿರುವ ಜಾಗದ ಬಗ್ಗೆ ವಿಚಾರ ವಿಮರ್ಶೆ ನಡೆಯಿತು. ಅವರು ಹೇಳಿದರು ಮಾತಾಜೀ ಇಷ್ಟು ವಿಸ್ತೀರ್ಣದ ಜಾಗ ದೆಹಲಿಯಲ್ಲಿ ಮಹರೌಲೀ ಹತ್ತಿರದಲ್ಲಿ ಸಿಗಬಹುದು. ನಗರದ ಒಳಗೆ ಸಿಗಲಾರದು. ಇದರ ನಂತರ ಮೋತಿಚಂದನ ಜೊತೆಯಲ್ಲಿ ಕೈಲಾಸಚಂದನು ದೆಹಲಿಯ ಅನೇಕ ಜಾಗಗಳನ್ನು ನೋಡಿಕೊಂಡು ಬಂದರು.

೬೧

ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದ ಸ್ಥಾಪನೆ

ಹಲವಾರು ಸಲ ಅನೇಕ ಶ್ರಾವಕರು ಶ್ಯಾಮಲಾಲಜೀ ಡಾ. ಕೈಲಾಸಚಂದಜೀ ಮೊದಲಾದವರು ಇಷ್ಟು ದೊಡ್ಡ ನಿರ್ಮಾಣ ಕಾರ್ಯ ನಡೆಯಬೇಕಾಗಿರುವುದರಿಂದ ಅದಕ್ಕೆ ಒಂದು ಸಂಸ್ಥಾನದ ನಿರ್ಮಾಣವಾಗಬೇಕು ಎಂದು ಅಭಿಪ್ರಾಯಪಟ್ಟರು. ಅದ್ದರಿಂದ ದಿಗಂಬರ "ಜೈನ ತ್ರಿಲೋಕ ಶೋಧ ಸಂಸ್ಥಾನ" ದಿಗಂಬರ ಇಂಡಸ್ಟ್ರೀಸ್ ಆಫ್ ಕಾಸ್ಮೋಗ್ರೆಫಿಕ್ ರಿಸರ್ಚ್" ಎಂಬ ಹೆಸರಿನಲ್ಲಿ ಒಂದು ಸಂಸ್ಥೆ ಸ್ಥಾಪನೆಯಾಯಿತು. ಇದರ ಹೆಸರಿನಲ್ಲಿ ಒಂದು ಸೈನ್‌ಬೋರ್ಡ್ ನಕ್ಷತ್ರಗಳ ಹೆಸರನ್ನು ಬರೆಯಲ್ಪಟ್ಟಿತ್ತು. ಅದೆಲ್ಲ ತಯಾರಿಯು ಆಗಿತ್ತು. ವಿಧಿವತ್ತಾಗಿ ಕಾರ್ತಿಕ ಕೃಷ್ಣ ಅಮಾವಸ್ಯೆಯ ದಿನ ಮಹಾವೀರ ಸ್ವಾಮಿಯವರ ಮೋಕ್ಷ ಕಲ್ಯಾಣದ ಒಳ್ಳೆಯ ದಿವಸವೇ ಸಂಸ್ಥಾನದ ಸ್ಥಾಪನೆಯಾಗಿ ಬೋರ್ಡನ್ನು ಧರ್ಮಶಾಲೆಯ ಮೇಲೆ ಹಾಕಿಸಲಾಯಿತು. ಇದೇ ದಿನ "ವೀರಚ್ಞಾನೋದಯ ಗ್ರಂಥ ಮಾಲೆ" ಎಂಬ ಗ್ರಂಥಮಾಲೆಯ ಸ್ಥಾಪನೆಯನ್ನು ಮಾಡಲಾಯಿತು. ಅಜಮೇರದ ಪ್ರೆಸ್‌ನಲ್ಲಿ ಅಚ್ಚಾಗುತ್ತಿದ್ದ ಅಷ್ಟ ಸಹಸ್ರೀಯನ್ನು ತಂದು ಇಲ್ಲೇ ಪಹಾಡೀ ಧೀರಜನಲ್ಲಿದ್ದ ಸಮ್ರಾಟ ಪ್ರೆಸ್ಸ್‌ನಲ್ಲೇ ಪ್ರಿಂಟಿಗೆ ಕೊಟ್ಟಾಯಿತು. ಮೋತಿಚಂದನೇ ಅದರ ಎಲ್ಲಾ ವ್ಯವಸ್ಥೆಯನ್ನು ಮಾಡಿದರು. ನಾನು ಕೊನೆಯ ಫ್ರೂಪ್ ನೋಡಿಕೊಟ್ಟೆ ಗ್ರಂಥಮಾಲೆಯಿಂದ ಮೊದಲ ಪುಸ್ತಕವೇ 'ಅಷ್ಟ ಸಹಸ್ರೀ'ಯಾಯಿತು.

ಮಂದಿರದಲ್ಲಿ ವಿಧಾನ

ಒಂದು ದಿನ ಪಹಾಡಿಧೀರಜನ ಮಂದಿರದಲ್ಲಿ ಶಾಂತಿವಿಧಾನದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಎಷ್ಟು ಜನಗಳು ಸೇರಿದ್ದರೆಂದರೆ ದೇವಸ್ಥಾನವೇ ಚಿಕ್ಕದಾಗಿ ತೋರತೊಡಗಿತು. ಮಹಿಳೆಯರು ಪೂಜಾ ಸಾಮಗ್ರಿಗಳನ್ನೆಲ್ಲ ಹಿಡಿದುಕೊಂಡು ಬಂದರೆ ದೇವಸ್ಥಾನದಲ್ಲಿ ಜಾಗವೇ ಇಲ್ಲ. ಕೊನೆಗೆ ಎಲ್ಲರ ಒತ್ತಾಯದಿಂದ ಇನ್ನು ಎರಡು ದಿನ ಶಾಂತಿ ವಿಧಾನವನ್ನು ಮುಂದುವರಿಸಲಾಯಿತು. ಇಲ್ಲಿಯ ಮಹಿಳೆಯರು ಪೂಜಾವಿಧಾನವನ್ನು ಬಹಳ ಭಕ್ತಿಯಿಂದ ಮಾಡುತ್ತಿದ್ದರು. ಅಷ್ಟಾಹ್ನಿಕದಲ್ಲಿ ಸಿದ್ಧಚಕ್ರದ ಆರಾಧನೆಯನ್ನು ಮಾಡಲಾಯಿತು. ಮೋತಿಚಂದನು ಎಲ್ಲ ವ್ಯವಸ್ಥೆಯನ್ನು ನೋಡಿಕೊಂಡರು. ಒಳ್ಳೆಯ ಪ್ರಭಾವನೆ ಉಂಟಾಯಿತು.

ಚಾತುರ್ಮಾಸದ ನಂತರ ವಿಹಾರ

ಚಾತುರ್ಮಾಸದ ನಂತರ ಸಂಘ ಸಹಿತವಾಗಿ ಕೈಲಾಸನಗರಕ್ಕೆ ಹೋದೆವು ಅಲ್ಲಿಯು ಒಳ್ಳೆಯ ಪ್ರಭಾವನೆ ಉಂಟಾಯಿತು. ಪ್ರತಿ ದಿನ ಉಪದೇಶಕ್ಕೆ ಬಹಳ ಜನ ಸೇರುತ್ತಿದ್ದರು. ಇಲ್ಲಿಂದ ದರಿಯಾಗಂಜ್ ಆಶ್ರಮದಲ್ಲಿ ತಂಗಿದ್ದು ನಜಫಗಢಗೆ ಬಂದೆವು. ಇಲ್ಲಿಯು ಜನರು ಭಕ್ತಿಯಿಂದ ಸ್ವಾಗತಿಸಿದರು. ಹೀಗೆ ಹೋದ ಕಡೆಯೆಲ್ಲ ಉಪದೇಶದಿಂದ ಒಳ್ಳೆಯ ಧರ್ಮ ಪ್ರಭಾವನೆ ಉಂಟಾಗುತ್ತಿತ್ತು. ಇಲ್ಲಿ ನಾನು ತ್ರಿಲೋಕ ಭಾಸ್ಕರ (ಮುಂತಾದ) ಕಾತಂತ್ರ ವ್ಯಾಕರಣದ ಹಿಂದಿ ಅನುವಾದವನ್ನು ಮಾಡಿದೆ. ಇಲ್ಲಿ ಉಲ್ಫತರಾಯ, ಮುರಾರೀಲಾಲ, ಸಾಗರಚಂದ ಮುಂತಾದ ಶ್ರಾವಕರು ಧರ್ಮಲಾಭದಿಂದ ಸಂತೋಷಗೊಂಡರು. ಚಿಕ್ಕ ಪುಟ್ಟ ಅನೇಕ ವಿಧಾನಗಳಾದವು "ತೀನಲೋಕ ವಿಧಾನ"ವನ್ನು ದೊಡ್ಡದಾಗಿಯೇ ಮಾಡಿದರು.

"ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನ" ಎಂಬ ಹೆಸರಿನ ಸ್ಥಾಪನೆ ಆಗುತ್ತಲೇ ಮೂರುಲೋಕಗಳ ಬಗ್ಗೆ ವಿಶೇಷ ತಿಳುವಳಿಕೆಯನ್ನು ಉಂಟುಮಾಡುವ ಅವಶ್ಯಕತೆ ಕಂಡು ಬರತೊಡಗಿತು.

ಧರ್ಮಧ್ಯಾನದಲ್ಲಿ ನಾಲ್ಕು ಬೇಧಗಳಿವೆ. ಆಜ್ಞಾವಿಚಯ ಅಪಾಯವಿಚಯ, ವಿಪಾಕವಿಚಯ, ಸಂಸ್ಥಾನ ವಿಚಯ. ಸಂಸ್ಥಾನ ವಿಚಯದಲ್ಲಿ ಮೂರು ಲೋಕದ ಸಂಸ್ಥಾನ. ಆಕಾರದ ಚಿಂತನೆಯನ್ನು ಮಾಡಲಾಗಿದೆ. ಊರ್ಧ್ವಲೋಕದಲ್ಲಿ 16 ಸ್ವರ್ಗ, 9 ಗೈವೇಯಕ, 9 ಅನುದಿಶೆ, ಮತ್ತು 5 ಅನುತ್ತರ ವಿಮಾನವಿದೆ. ಅದರ ಮೇಲೆ ಸಿದ್ಧಶಿಲೆ ಇದೆ. ಅಧೋಲೋಕದಲ್ಲಿ ಏಳು ನರಕಗಳಿವೆ. ಎಲ್ಲಕ್ಕಿಂತ ಕೆಳಗೆ ನಿಗೋದ ಸ್ಥಾನವಿದೆ. ಮಧ್ಯಲೋಕದಲ್ಲಿ ಅಸಂಖ್ಯಾತ ದ್ವೀಪ ಸಮುದ್ರಗಳಿವೆ. ಇವುಗಳ ಮಧ್ಯಭಾಗದಲ್ಲಿ ಜಂಬೂದ್ವೀಪವಿದೆ. ಹೀಗೆ ದ್ವೀಪ ಸಮುದ್ರಗಳ ವಿಸ್ತಾರವಾದ ಚಿಂತನೆಯನ್ನು ಮಾಡುವುದೇ ಸಂಸ್ಥಾನ ವಿಚಯ ಧರ್ಮ ಧ್ಯಾನವಾಗಿದೆ. ಹೀಗೆಂದು ಜ್ಞಾನಾರ್ಣವ ಗ್ರಂಥದಲ್ಲಿ ಉಲ್ಲೇಖವಿದೆ.

ನಾನು ತಿಲೋಯ ಪಣ್ಣತ್ತಿ, ತ್ರಿಲೋಕಸಾರ, ಜಂಬೂ ದ್ವೀಪ ಪಣ್ಣತ್ತಿ, ಮತ್ತು ಲೋಕ ವಿಭಾಗ ಮುಂತಾದ ಗ್ರಂಥಗಳ ಆಧಾರದಿಂದ 'ತ್ರಿಲೋಕ ಭಾಸ್ಕರ' ಎಂಬ ಗ್ರಂಥದ ರಚನೆ ಮಾಡಿದೆ. ದೊಡ್ಡ ಯೋಜನದಲ್ಲಿ ಎರಡು ಸಾವಿರ ಕ್ರೋಶವನ್ನು ಪರಿಗಣಿಸಲಾಗಿದೆ. ಅದ್ದರಿಂದ ಇಂದು ಒಂದು ಕ್ರೋಶದಲ್ಲಿ ಎರಡು ಮೈಲಿಗಳ ಪರಂಪರೆಯನ್ನು ಪರಿಗಣಿಸಿದರೆ ಒಂದು ಮಹಾಯೋಜನೆಯನ್ನು ನಾಲ್ಕು ಸಾವಿರ ಮೈಲಿಯಿಂದ ಗುಣಿಸಿ ಈ ಪುಸ್ತಕದಲ್ಲಿ ಎಲ್ಲಾ ಕಡೆಯು ಯೋಜನವನ್ನು ಸರಳ ಗಣಿತದಲ್ಲಿ ಕೊಟ್ಟಿದ್ದೇನೆ. ಇದರಿಂದಾಗಿ ಇಂದು ಸ್ವಾಧ್ಯಾಯ ಪ್ರೇಮಿಗಳಿಗೆ ಸರಳವಾಗಿದೆ. ಈ ಗ್ರಂಥವನ್ನು ಒಂದು ಸಾವಿರ ಕಾಪಿ ಮಾಡಿಸಲಾಗಿತ್ತು. ಇದರ ಮೇಲು ಹೊದಿಕೆಯಲ್ಲಿ ಮೂರುಲೋಕವನ್ನು ತೋರಿಸುವಂತಹ ಚಿತ್ರವನ್ನು ಅಳವಡಿಸಲಾಗಿತ್ತು. ಈಗ ಇದರ ಒಂದೆರಡು ಕಾಪಿಗಳು ಇಲ್ಲವಾಗಿದೆ. ದ್ವಿತೀಯ ಆವೃತ್ತಿ ಆಗಬೇಕಾಗಿದೆ. ಅನೇಕ ವಿದ್ವಾಂಸರು ಕೂಡ ಇದನ್ನು ಬಹಳವಾಗಿ ಸ್ವಾಗತಿಸಿದ್ದಾರೆ.

ಅಷ್ಟ ಸಹಸ್ರ ಗ್ರಂಥದ ಪ್ರಕಾಶನದಲ್ಲಿ ವಿಘ್ನ

ಚಂದಮಲಜೀ ಗೋಹಾಟಿಗೆ ಹೋಗುತ್ತಾ ಬರುತ್ತಾ ಇರುತ್ತಿದ್ದರು. ಅಷ್ಟ ಸಹಸ್ರಿ ಗ್ರಂಥ ಅಚ್ಚಾಗುತ್ತಿತ್ತು. ಇದರ ಬಗ್ಗೆ ಚರ್ಚೆ ಬಂದಾಗ ಅವರು ಮಾತಾಜೀ ನಾನು ಇವನ್ನು ಅಚ್ಚುಹಾಕಿಸುವುದಿಲ್ಲ ಎಂದರು. ಆ ನಂತರ ಅವರು ಸಂಘದ ಒಬ್ಬ ಶಿಷ್ಯರ ಹತ್ತಿರ ಅಳಲನ್ನು ತೋಡಿಕೊಳ್ಳುತ್ತಾ ಈ ಗ್ರಂಥವನ್ನು ನಾನೇ ಅಚ್ಚು ಹಾಕಿಸುತ್ತೇನೆ ಎಂದಿದ್ದೆ. ಇದಕ್ಕಾಗಿ ಖರ್ಚಾಗುವ ಒಂದು ಲಕ್ಷದ ವಿಷಯವಲ್ಲ, ಆದರೆ ಒಬ್ಬ ವಿಶೇಷ

ಮುನಿರಾಜರು ಇದನ್ನು ಅಚ್ಚು ಹಾಕಿಸಬಾರದೆಂದು ನನ್ನನ್ನು ತಡೆದಿದ್ದಾರೆ ನಾನು ಇದನ್ನು ಹೇಗೆ ಉಲ್ಲಂಘಿಸಲಿ ಎಂದು ಪೇಚಾಡಿಕೊಂಡರು.

ಈ ವಿಷಯ ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ಆ ಮುನಿರಾಜರು ನನ್ನ ಬಗ್ಗೆ ಎಷ್ಟು ವಾತ್ಸಲ್ಯ ತೋರಿಸುತ್ತಾರೆ. ಆದರೆ ಪುನಃ ಇವರೇಕೆ ಇಂತಹ ಕೆಲಸ ಮಾಡಿದರು. ಇಂತಹ ಕೆಲಸವನ್ನು ತಡೆದಿದ್ದರಿಂದ ಸೇಠ್‌ರ ಹಣ ದುಪ್ಪಟ್ಟು ಆಗುತ್ತದೆಯೇ ಜ್ಞಾನ ದಾನಕ್ಕಾಗಿ ಖರ್ಚು ಮಾಡಿದ ಹಣ ಹೆಚ್ಚಾಗುತ್ತದೆಯೇ ಹೊರತು ಕಡಿಮೆ ಆಗುವ ಮಾತೇ ಇಲ್ಲ. ನನ್ನ ಈ 53 ವರ್ಷದ ಜೀವನದಲ್ಲಿ ಇಂದಿಗೂ ಯಾವ ಕಾರ್ಯದಲ್ಲೂ ವಿಘ್ನ ಉಂಟಾಗಿಯೇ ಇರಲಿಲ್ಲ. ಮಾತಾಜೀ ಯಾರಪ್ಪ ಇಂತಹ ಧರ್ಮಕಾರ್ಯ ಮಾಡಲು ಹೇಳಿದವರು. ಈಗೇನು ಮಾಡುವುದು. ಏನಾದರೂ ಆಗಲಿ, ನನ್ನ ವಿರೋಧ ಏಕೆ ಮಾಡುತ್ತಿದ್ದಾರೆ. ಅವರ ಕೆಲಸವನ್ನು ಹೊಗಳಿ ಕೇಳಿದವರಿಗೆ ಪ್ರೇರಣೆಯನ್ನು ಕೊಟ್ಟು ನೀವು ಅವರ ಕೆಲಸವನ್ನು ಪೂರ್ಣಗೊಳಿಸಿರಿ ಎಂದೆ. ಹಣವನ್ನು ಧರ್ಮದಲ್ಲಿ ತೊಡಗಿಸುವವರ ಹಣ ಜಾಸ್ತಿಯಾಗುತ್ತದೆಯೇ ಹೊರತು ಕಡಿಮೆ ಆಗುವುದಿಲ್ಲ. (ನನಗೆ) ಆ ಶ್ರೇಷ್ಠಿಗೆ ನನ್ನ ಗ್ರಂಥವನ್ನು ಪ್ರಕಾಶನಗೊಳಿಸುವ ಯೋಗವಿಲ್ಲ ಬಿಡಿ ಯಾರಿಗೆ ಯೋಗವಿದೆ ಅವರೇ ಮಾಡಬೇಕು ಎಂದು ಯೋಚಿಸಿ ಸಂತೋಷಗೊಂಡ.

ಬ್ಯಾವರದಲ್ಲಿ ಹೀರಾಲಾಲ ರಾನಿವಾಲರು ಪ್ರಕಾಶನಕ್ಕಾಗಿ 5000ರೂ. ಕೊಟ್ಟಿದ್ದರಲ್ಲೇ ಕೆಲಸ ಪ್ರಾರಂಭಿಸಿದ್ದು ಈಗ ಅವರ ಮಗ ಸುರೇಂದ್ರ ಕುಮಾರರ ಸಂಕೇತದಂತೆ ಅವರನ್ನೇ ಮತ್ತೆ ಕೇಳಲಾಗಿ ಅವರಿಂದ ಒಪ್ಪಿಗೆ ಸಿಕ್ಕಿತು. ಧನವೆಲ್ಲವು ಸಕಾಲದಲ್ಲಿ ತಲುಪಿ ಗ್ರಂಥ ಯಾವ ತೊಂದರೆ ಇಲ್ಲದೆ ಮುದ್ರಣಗೊಂಡಿತು. ಪ್ರತಿಯೊಂದು ದೊಡ್ಡ ಕೆಲಸಗಳಲ್ಲೂ ಒಂದಲ್ಲ ಒಂದು ವಿಘ್ನಗಳು ಖಂಡಿತ ಒಂದೇ ಬರುತ್ತವೆ. ಆದರೂ ಒಬ್ಬರಲ್ಲ ಒಬ್ಬರು ಮಹಾನ್ ಪುರುಷರು ಕೆಲಸವನ್ನು ಪೂರ್ತಿ ಮಾಡಿಯೇ ಮಾಡುತ್ತಾರೆ. ಕೆಲಸಗಳು ಸಂಘರ್ಷಗಳನ್ನು ಎದುರಿಸಿಕೊಂಡೇ ಆಗುತ್ತವೆ ಎನ್ನುವುದು ಸತ್ಯ. ನಾನು ನಜಫಗಢದ ಚಾತುರ್ಮಾಸದ ನಂತರ ದೆಹಲಿ ನಗರದಲ್ಲಿರುವ ಕೂಚಾಸೇಟ್‌ನ ತ್ಯಾಗಿ ಭವನದಲ್ಲಿ ತಂಗಿದ್ದೆವು ಇಲ್ಲಿಂದ ಎಲ್ಲಿಗಾದರು ಹೋಗಿ ಬರಬಹುದಾಗಿತ್ತು.

ಮುನಿಶ್ರೀ ವಿದ್ಯಾನಂದರು ದೆಹಲಿಗೆ ಬಂದರು

ಮುನಿಶ್ರೀ ವಿದ್ಯಾನಂದರು ದೆಹಲಿಗೆ ಬಂದಿದ್ದರು. ಅವರೊಬ್ಬ ಪ್ರಭಾವಿಮುನಿಗಳಾಗಿದ್ದಾರೆ. ಹಾಲಾಂಕಿಯಲ್ಲಿ ಆಚಾರ್ಯ ದೇಶಭೂಷಣರು ಸಂಘ ಸಹಿತ ವಿರಾಜಮಾನರಾಗಿದ್ದರು. 2500 ವರ್ಷದ ನಿರ್ವಾಣೋತ್ಸವವನ್ನು ಸಫಲಗೊಳಿಸುವುದರಲ್ಲಿ ಗುರುದೇವರು ಮಹಾಪ್ರಭಾವಿಗಳಾಗಿದ್ದರು. ಇಲ್ಲಿ ಸಂಸದಭವನದಲ್ಲಿ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯಿತು. ಆಗ ಶ್ವೇತಾಂಬರ ಸಂಪ್ರದಾಯದ ಸುಶೀಲಮುನಿಗಳು ಅಲ್ಲಿಗೆ ಬಂದಿದ್ದರು. ಅದೇ ಸಮಯದಲ್ಲಿ ಅನೇಕ ತೊಂದರೆಗಳ ನಡುವೆಯು ಆಚಾರ್ಯ ರತ್ನ ದೇಶಭೂಷಣ ಮಹಾರಾಜರು ಇಡೀ ದಿಗಂಬರ ಜೈನಸಮಾಜದ ಪ್ರತಿನಿಧಿತ್ವವನ್ನು ವಹಿಸಿ ಅಲ್ಲಿಗೆ ತಲುಪಿದರು. ಅಲ್ಲಿ ದಿಗಂಬರತ್ವದ ಧ್ವಜವನ್ನು ಹಾರಿಸಿ ದಿಗಂಬರತ್ವದ ಮಹತ್ವವನ್ನು ಹಬ್ಬಿಸಿದರು. ಇದು ಶಬ್ದಗಳಲ್ಲಿ ಹೇಳಲು ಸಾಧ್ಯವಿಲ್ಲ. ಹಾಗೇ ದಿಗಂಬರ ಜೈನ ಸಮಾಜದ ನಮ್ಮ ಬಂಧುಗಳು ಈ ದಿಗಂಬರ ಗುರುಗಳ ಬಗ್ಗೆ ಆ ಸಮಯದಲ್ಲಿಯೂ ಸಹ ಟೀಕೆ ಟಿಪ್ಪಣಿ ಮಾಡುವುದರಲ್ಲಿ ಹಿಂದೆ ಬೀಳಲಿಲ್ಲ. ಈ ಮಹಾನ್ ಕಾರ್ಯ 1972ರಲ್ಲಿ ಆಚಾರ್ಯರು ದೆಹಲಿಯಲ್ಲಿ ಮಾಡಿದರು. ಈ ಗುರುದೇವರು ಸ್ವಯಂ ಇಂತಹ ಕೆಲಸ ಮಾಡುವುದರಲ್ಲಿ ಗಟ್ಟಿಗರು.

ನಿರ್ವಾಣೋತ್ಸವದ ತಯಾರಿಗಳು

ಸಾಧುವರ್ಗದವರಲ್ಲಿ ಹಾಗೇ ನಾಲ್ಕು ಸಂಪ್ರದಾಯದ ಜನಗಳಲ್ಲೂ ಮೀಟಿಂಗ್‌ಗಳು ನಡೆಯುತ್ತಾ ಇದ್ದವು. ನಿರ್ವಾಣೋತ್ಸವವನ್ನ ಅಂತರಾಷ್ಟ್ರೀಯ ಮಟ್ಟದಲ್ಲಿ ಆಚರಿಸುವುದರಲ್ಲಿ ದೇಶವೇ ಅಲ್ಲದೆ ವಿದೇಶದಲ್ಲಿಯು ಭ. ಮಹಾವೀರರ ಆದರ್ಶ ಜೀವನ ಮತ್ತು ಅಹಿಂಸಾಮಯ ಉಪದೇಶವನ್ನು ತಲುಪಿಸುವುದಕ್ಕಾಗಿ ತಯಾರಿಗಳು ಜೋರಾಗಿ ನಡೆಯತೊಡಗಿತು. ಪರಮ ಗುರುದೇವ ಆಚಾರ್ಯರತ್ನ ದೇಶಭೂಷಣ ಮಹಾರಾಜರು ನನ್ನನ್ನು ಪ್ರತಿಯೊಂದು ಕೆಲಸಕ್ಕೂ ಮೀಟಿಂಗಿಗೂ, ಕರೆಯುತ್ತಿದ್ದರು. ನಡೆಯುವ ಕೆಲಸಗಳ ಬಗ್ಗೆ ಹೇಳುತ್ತಿದ್ದರು. ಅಲ್ಲಿಗೆ ಬಂದ ವಿದ್ಯಾನಂದ ಮುನಿಗಳು ಸಹ ಪ್ರತಿಯೊಂದು ಕೆಲಸಕ್ಕೂ ನನ್ನನ್ನು ಕರೆಯುತ್ತಿದ್ದರು, ಸಲಹೆ ಕೇಳುತ್ತಿದ್ದರು.

ಮೂರು ಲೋಕದ ಪ್ರತೀಕ

ಒಂದು ದಿನ ವಿದ್ಯಾನಂದರ ಹತ್ತಿರ ನನ್ನಿಂದ ಸ್ಥಾಪಿತವಾದ "ತ್ರಿಲೋಕ ಶೋಧ ಸಂಸ್ಥಾನ"ದ ಬಗ್ಗೆ ಚರ್ಚೆ ನಡೆಯುತ್ತಿತ್ತು. ಅಲ್ಲಿ ಮಹೋತ್ಸವದಲ್ಲಿ ಲೋಕದ ಆಕಾರದ ಚಿಹ್ನೆಯನ್ನು ಮಾಡಿಸಬೇಕೆಂದು ತೀರ್ಮಾನವಾಯಿತು. ಜೈನರ ಮನೆಯ ಮುಂದೆಲ್ಲ ಮೂರು ಲೋಕದ ಆಕಾರವನ್ನು ಪ್ರತಿಷ್ಠಾಪಿಸಬೇಕೆಂದು ತೀರ್ಮಾನಿಸಿ ಇದೊಂದು ಜೈನರೆಂದು ತಿಳಿಯಲು ಚಿಹ್ನೆಯಾಗಿ ಪರಿವರ್ತಿತವಾಯಿತು. ಇದರಿಂದ ಆದ ಸಂತೋಷದಿಂದ ನನಗೆ ಧ್ವನಿಯೇ ಹೊರಡಲಿಲ್ಲ. ಈ ಪ್ರತೀಕವನ್ನು ನಾಲ್ಕು ಸಂಪ್ರದಾಯದವರೂ ಯಾವುದೇ ತಕರಾರು ಇಲ್ಲದೆ ಸ್ವೀಕರಿಸಿದರು. ನಿರ್ವಾಣೋತ್ಸವದ ಸಂದರ್ಭದಲ್ಲಿ ಸುಂದರ ಪ್ರತೀಕವಾದಂತೆ ಪ್ರತಿಯೊಬ್ಬ ಜೈನರು ಸಂತೋಷದಿಂದ ಆ ಚಿಹ್ನೆಯನ್ನು ತಮ್ಮ ಮನೆಗಳ ಮುಂದೆಯೂ ರಾರಾಜಿಸತೊಡಗಿಸಿದರು. ಮೂರು ಲೋಕದಲ್ಲಿ ತ್ರಸನಾಳಿ ಮತ್ತು ಸಿದ್ಧಶಿಲೆಯ ರಚನೆಯ ರೇಖೆಗಳಾಗಬೇಕಾಗಿತ್ತು ಆದರೆ ಮಹಾನುಭಾವರು ಮೂರುಲೋಕದ ಮಧ್ಯೆ ಚಕ್ರ ಮತ್ತು ಹಸ್ತ ಗುರುತನ್ನ ಮಾಡಿಸಿ ಇದು ಧರ್ಮಚಕ್ರ ಮತ್ತು ಅಭಯದಾನದ ಸೂಚನೆಯನ್ನು ತೋರಿಸತೊಡಗಿತು. ಆದರೂ ಈ ಚಿಹ್ನೆ ನನಗೂ ಚೆನ್ನಾಗಿದೆ ಎನ್ನಿಸಿತು. ನನ್ನ ಪ್ರೇರಣೆಯಿಂದಲೇ ನಿರ್ಮಾಣ ಮುಂತಾದ ಸ್ಥಾನಗಳಲ್ಲಿ ಆಗಮದಲ್ಲಿ ಹೇಳಿರುವಂತೆ ತ್ರಸನಾಳಿ ಸಹಿತವಾದ ಮೂರುಲೋಕವನ್ನೇ ತೋರಿಸಲಾಗಿದೆ. ಈ ಚಿಹ್ನೆ ಹಸ್ತಿನಾಪುರದ ಮುಖ್ಯ ಕಾರ್ಯಾಲಯದ ಮುಂದೆ ಧರ್ಮ ಶಾಲೆ ಮುಂತಾದ ಕಡೆಗಳೆಲ್ಲೆಲ್ಲ ರಚಿಸಲ್ಪಟ್ಟಿತು. ಇದು ಮುಂದಿನ ಪೀಳಿಗೆಗೆ ಶಾಶ್ವತವಾಗಿ ಉಳಿಯಬೇಕು. ಅದರಲ್ಲಿ ಹಸ್ತದ ಗುರುತನ್ನು ಹೆಚ್ಚಾಗಿ ಹಾಕಿಸಲಿಲ್ಲ. ಹಾಗೆ ಈ ನಿರ್ವಾಣ ಮಹೋತ್ಸವದ ಅಂಗವಾಗಿ ಚಿಹ್ನೆ ಮತ್ತು ಪಂಚವರ್ಣದ ಧ್ವಜವು ಎಲ್ಲ ನಾಲ್ಕು ಸಂಪ್ರದಾಯದವರು ಒಪ್ಪಿಕೊಂಡು ಇಡೀ ಭಾರತದಲ್ಲಿ ಒಳ್ಳೆಯ ಪ್ರಚಾರ ಪಡೆಯಿತು.

ನಾಲ್ಕು ಸಂಪ್ರದಾಯಗಳು ಯಾವುವು

1. ದಿಗಂಬರ ಸಂಪ್ರದಾಯ 2. ಶ್ವೇತಾಂಬರ ಸಂಪ್ರದಾಯ 3. ಸ್ಥಾನಕವಾಸಿ ಸಂಪ್ರದಾಯ 4. ತೇರಹಪಂಥಿ ಶ್ವೇತಾಂಬರ ಸಂಪ್ರದಾಯ.

1. ಶ್ವೇತಾಂಬರರಲ್ಲಿ ಮೂರು ಭೇದಗಳಿವೆ. ಇವರಲ್ಲಿ ಮಂದಿರ ಮಾರ್ಗಿಗಳು ಭಗವಂತ ಮೂರ್ತಿಯನ್ನು ಪೂಜಿಸುತ್ತಾರೆ. ಮೂರ್ತಿಗಳಿಗೆ ಕಣ್ಣುಗಳನ್ನ ಹಾಕಿಸುತ್ತಾರೆ. 2. ಸ್ಥಾನಕವಾಸಿಗಳು ಪ್ರಾರ್ಥನೆ ಮಾಡುವ ಜಾಗಗಳಿಗೆ ಸ್ಥಾನಕ ಎನ್ನುತ್ತಾರೆ. ಇವರು ಮೂರ್ತಿ ಪೂಜೆಯನ್ನು ಮಾಡುವುದಿಲ್ಲ. ಇವರನ್ನು ಡೂಂಢಿಯಾ ಎಂದು ಕರೆಯುತ್ತಾರೆ. ಈ ಸಂಪ್ರದಾಯದ ಸಾಧುಗಳು ಮುಖಪಟ್ಟಿಗಳನ್ನು ಧರಿಸುತ್ತಾರೆ. ಇದೇ ತೇರಹಪಂಥಿ

ಸಂಪ್ರದಾಯದ ಸಾಧುಗಳು ಮುಖಪಟ್ಟಿಗಳನ್ನು ಧರಿಸುತ್ತಾರೆ. ಇವರು ಮೂರ್ತಿ ಪೂಜೆಯನ್ನು ಮಾಡುವುದಿಲ್ಲ. ಇವರಲ್ಲಿ ಹೆಚ್ಚಿಗೆ ಅಂತರವಿಲ್ಲ, ಕೇವಲ ಮುಖಪಟ್ಟಿಯಲ್ಲಿ ವ್ಯತ್ಯಾಸವಿದೆ ಅಷ್ಟೇ.

ದಿಗಂಬರರಲ್ಲಿಯೂ ಮೊದಲು ತಾರಣಸ್ವಾಮಿ ಎಂದಿತ್ತು ಅವರು ಮಂದಿರದಲ್ಲಿ ಮೂರ್ತಿಯ ಜಾಗದಲ್ಲಿ ಶಾಸ್ತ್ರವನ್ನು ಇಟ್ಟು ಮೂರ್ತಿ ಪೂಜೆಯನ್ನು ಮನ್ನಿಸುತ್ತಿರಲಿಲ್ಲ. ಈ ಸಂಪ್ರದಾಯ ಹೆಚ್ಚು ಪ್ರಚಾರಕ್ಕೆ ಬರಲಿಲ್ಲ. ಇಂದೂ ಬುಂದೇಲಖಂಡದಲ್ಲಿ ಅಲ್ಲಲ್ಲಿ ಮಾತ್ರ ಅಸ್ತಿತ್ವದಲ್ಲಿದೆ. ಎಲ್ಲ ಜೈನರಿಗೂ ಇದರ ಬಗ್ಗೆ ಗೊತ್ತೆ ಇಲ್ಲ. ಹೀಗೆ ದಿಗಂಬರರಲ್ಲೂ ತೇರಹಪಂಥ, ಬೀಸಪಂಥಗಳು ಇವೆ. ಇವುಗಳು ಕೂಡ ಬಹಳ ವರ್ಷದವಲ್ಲ. ಇಂದಿನಿಂದ ನಾಲ್ಕು ನೂರು ವರ್ಷಗಳ ಹಿಂದಿನಿಂದ ಜಯಪುರದಲ್ಲಿ ಪಂಡಿತರು ತೇರಹಪಂಥವನ್ನು ನಡೆಸಿಕೊಂಡು ಬರುತ್ತಿದ್ದಾರೆ.[೧] ಶಾಸ್ತ್ರ ಮತ್ತು ಗುರು ಪರಂಪರೆಯ ಅನುಯಾಯಿಗಳನ್ನು ಬೀಸಪಂಥಿಗಳೆಂದು ಕರೆಯಲಾಗುತ್ತದೆ. ಆಯಿತು ಈ ವಿಷಯವನ್ನು ಆಮೇಲೆ ಚರ್ಚೆ ಮಾಡೋಣ. ದಿಗಂಬರ ಸಂಪ್ರದಾಯದ ಮುನಿಗಳಲ್ಲಿ ಆಚಾರ್ಯ ಶ್ರೀ ಶಾಂತಿಸಾಗರರ ಪರಂಪರೆಯ ಎಲ್ಲಾ ಸಾಧುಗಳನ್ನು ಬೀಸಪಂಥಿಗಳೆಂದು ಕರೆಯುತ್ತಾರೆ. ನಿಜವಾಗಿ ಇವರೆಲ್ಲ ಆಗಮ ಪಂಥಿಗಳು. ಕೆಲವು ವರ್ಷಗಳಿಂದ ಸಾಧುಗಳು ತಮ್ಮನ್ನು ತೇರಹಪಂಥಿಗಳೆಂದು ಹೇಳಿಕೊಳ್ಳತೊಡಗಿದ್ದಾರೆ. ಆದರೆ ದಿಗಂಬರ ಮುನಿಗಳಲ್ಲಿ (ಯಾವುದೇ ಅಂತರವಿಲ್ಲ). ಚರ್ಯೆ ಮತ್ತು ವೇಷದಲ್ಲಿ ವ್ಯತ್ಯಾಸವಿಲ್ಲದಿದ್ದರು ಪೂಜೆಯಲ್ಲಿ ಸ್ವಲ್ಪ ವ್ಯತ್ಯಾಸವಿದೆ ಇದೇನು ಮುಖ್ಯವಲ್ಲ.

೬೨

ದಿಲ್ಲಿಯ ಗಾಂಧಿನಗರದಲ್ಲಿ ಪ್ರಭಾವನೆ

ಕೂಚಾಸೇಠ್‌ನಲ್ಲಿ ಸ್ವಲ್ಪ ಜ್ವರ ಬಂದಿದ್ದರಿಂದ ಕೆಲವು ದಿನ ಅನಾರೋಗ್ಯಗೊಂಡಿದ್ದ ನನ್ನನ್ನು ಸ್ವಸ್ಥಳಾದ ಮೇಲೆ ಗಾಂಧಿನಗರದವರು ಭಕ್ತಿಯಿಂದ ಕರೆದುಕೊಂಡು ಹೋದರು. ಇಲ್ಲಿಗೆ ಪಂಡಿತ ಪ್ರಕಾಶಚಂದ್ರ ಜೈನರ ಪತ್ನಿಯು ಆಹಾರ ದಾನ ಕೊಡಲು ಬರುತ್ತಿದ್ದರು. ಹಾಗೇ ಪ್ರಕಾಶಚಂದ್ರರು ಸನ್ಮತಿ ಸಂದೇಶದ ಪ್ರಕಾಶಕರು ಆಗಿದ್ದರು. ಇವರು ಕೂಡ ಶಾಸ್ತ್ರದ ಚರ್ಚೆ ಮಾಡುತ್ತಿದ್ದರು. ದಿನ ಒಂದೊಂದು ಮನೆಯವರು ಬಂದು ಶುದ್ಧ ಜಲದ ನಿಯಮ ತೆಗೆದುಕೊಂಡು ಆಹಾರ ಕೊಡಲಾರಂಭಿಸಿದರು. ದಿನದಿಂದ ದಿನಕ್ಕೆ ಚೌಕಗಳ ಸಂಖ್ಯೆ ಜಾಸ್ತಿಯಾಗತೊಡಗಿತು.

ಜನರು ದೆಹಲಿಯಲ್ಲಿ ಧರ್ಮವಿಲ್ಲವೆನ್ನುತ್ತಾರೆ ಆದರೆ ಇಲ್ಲಿ ಮಂದಿರಗಳು ಜಾಸ್ತಿಯಾಗುತ್ತಿವೆ. ಪೂಜೆ ಮಾಡುವವರು ಜಾಸ್ತಿಯಾಗುತ್ತಿದ್ದಾರೆ ಹಾಗೆ ಆಹಾರ ಕೊಡಲು ಜನ ಮುಂದೆ ಬರುತ್ತಿದ್ದಾರೆ. ಹಾಗಾಗಿ ಮಂದಿರಗಳು ಜಾಸ್ತಿ ಆದಂತೆ ಮುನಿಗಳ ಆಗಮನವಾಗಿ ತ್ಯಾಗದ ಭಾವನೆ ಹೆಚ್ಚಿದಂತೆ ಆಹಾರ ದಾನ ಕೊಡುವವರ ಸಂಖ್ಯೆಯು ಜಾಸ್ತಿ ಆದ ಅನುಭವವಾಗತೊಡಗಿತು. ಅಲ್ಲಿಗೆ ಮೋತಿಚಂದನ ಹೆಸರಿಗೆ ಅಲವರದಿಂದ ಬ್ರಹ್ಮಚಾರಿ ಶ್ರೀ ಶಿವಕರಣರು ಪತ್ರ ಬರೆದಿದ್ದರು.

---

೧. ಅರ್ಧಕಥಾನಕ ಶ್ರೀ ಬನಾರಸೀದಾಸರಿಂದ ರಚಿತವಾಗಿರುವ ಪ್ರಸ್ತಾವನೆಯಲ್ಲಿದೆ.

ಆಚಾರ್ಯ ಧರ್ಮಸಾಗರರು ಸಂಘ ಸಹಿತವಾಗಿ ಇಲ್ಲಿಯೇ ಇದ್ದಾರೆ. ದೆಹಲಿಯ ನಿರ್ವಾಣೋತ್ಸವಕ್ಕೆ ಉತ್ತೇಜನ ಕೊಡಲು ಬಂದಿದ್ದಾರೆ. ಆದರೆ ನಾನು ಏಕಾಂತದಲ್ಲಿ ಮಾತಾಡಿದಾಗ ದೆಹಲಿಯ ಜನರು ಇಲ್ಲಿಯವರೆಗೂ ಸಂಘವನ್ನು ಆಹ್ವಾನಿಸಲು ಬಂದೇ ಇಲ್ಲ. ಆದ್ದರಿಂದ ಸಂಘ ಸ್ವಲ್ಪ ದಿನ ಇಲ್ಲಿದ್ದು ರಾಜಸ್ಥಾನಕ್ಕೆ ಹೋಗುತ್ತದೆ. ಇಲ್ಲಿ ಶುದ್ಧ ಜಲ ತ್ಯಾಗಮಾಡಿದವರು ಬಹಳ ಕಡಿಮೆ ಜನ ಇರುವುದರಿಂದ ಚೌಕಗಳು ಕಡಿಮೆಯಾಗಿದೆ. ನಾನು ಕೂಡ ಚೌಕದಲ್ಲಿ ಆಹಾರ ಕೊಡುತ್ತಿದ್ದೇನೆ. ಅಲ್ಲದೆ ನನ್ನ ಧರ್ಮಪತ್ನಿಯು ಸಹ ಇಲ್ಲ. ಹೀಗೆ ಎಲ್ಲ ವಿಷಯವನ್ನು ವಿಷದವಾಗಿ ತಿಳಿಸಿದರು. ಹಾಗೆ ಇದೇ ವಿಷಯವನ್ನು ಹೊತ್ತು ತಂದ. ಇನ್ನೊಂದೆರಡು ಪತ್ರಗಳು ಬಂದ ಮೇಲೆ ನಾನೇ ನನ್ನ ಕೈಗಳಿಂದಲೇ ಒಂದು ವಿಸ್ತೃತವಾದ ಪತ್ರ ಬರೆದೆ.

ಆಚಾರ್ಯಕಲ್ಪ ಚಂದ್ರಸಾಗರ ಮಹಾರಾಜರ ಬಗ್ಗೆ ನಾನು ಕೇಳಿರುವಂತೆ ಸಮಾಜದವರು ಆಹ್ವಾನಿಸದಿದ್ದರು ಅಲ್ಲಿಗೆ ಹೋಗಿಯೇ ಹೋಗುತ್ತಿದ್ದರು. ನೀವು ಅವರ ಕ್ಷುಲ್ಲಕ ಶಿಷ್ಯರಾಗಿದ್ದೀರ ಅವರ ಸಿಂಹವೃತ್ತಿಯ ಎಲ್ಲ ಅನುಭವವು ನಿಮಗೆ ಚೆನ್ನಾಗಿ ಗೊತ್ತಿದೆ. ತಾವು ದೆಹಲಿಗೆ ಬರಲು ಶ್ರಾವಕರ ಆಹ್ವಾನವನ್ನು ನಿರೀಕ್ಷಿಸಬೇಕಾಗಿಲ್ಲ. ತಾವು ನಿರ್ವಾಣ ಮಹೋತ್ಸವಕ್ಕೆ ಬಂದು ಕೀರ್ತಿಯನ್ನು ಹೆಚ್ಚಿಸಬೇಕು ಭವಿಷ್ಯದಲ್ಲಿ ಉಜ್ವಲವಾದ ಇತಿಹಾಸ ನಿರ್ಮಿಸಬೇಕು. ಇದಕ್ಕಾಗಿ ನನ್ನ ನಮ್ರ ಪ್ರಾರ್ಥನೆ ಏನೆಂದರೆ ತಾವು ಖಂಡಿತ ಇಲ್ಲಿಗೆ ಆಗಮಿಸಬೇಕು. ನೀವು ಇಲ್ಲಿಗೆ ಬಂದ ಮೇಲೆ ಇಡೀ ಸಮಾಜವೇ ನಿಮ್ಮ ಭಕ್ತರಾಗುತ್ತಾರೆ. ಈ ಪತ್ರವನ್ನು ಬರೆದು ಮೋತಿಚಂದನಿಗೆ ಸಾಕಷ್ಟು ಹೇಳಿ ಅವನನ್ನ ಅಲವರಕ್ಕೆ ಕಳುಹಿಸಿದ ಮೋತಿಚಂದನು ಆಚಾರ್ಯರನ್ನು ದರ್ಶನ ಮಾಡಿ ಏಕಾಂತದಲ್ಲಿ ಈ ಪತ್ರವನ್ನು ಓದಿ ತಿಳಿಸಿದಾಗ ಅವರು ಸಂತೋಷದಿಂದ ನಕ್ಕರಂತೆ.

ಇದರ ನಂತರ ನಾನು ಶ್ಯಾಮಲಾಲಜೀ ಡಾII ಕೈಲಾಸಚಂದಜೀ ಮಹತಾಬಸಿಂಹಜೀ ಜೌಹರೀ ಪನ್ನಾಲಾಲಜೀ ಮುಂತಾದ ಪ್ರಮುಖರನ್ನು ಕರೆದು ಅಲವರಕ್ಕೆ ಹೋಗಿ ಆಚಾರ್ಯರಿಗೆ ಶ್ರೀಫಲವನ್ನಿಟ್ಟು ಪ್ರಾರ್ಥಿಸಿರಿ ಎಂದು ಬಹಳ ಪ್ರಯಾಸ ಮಾಡಿದೆ. ಸಂಘವನ್ನು ಕರೆತರಲು ಮೀಟಿಂಗ್ ಆಗಬೇಕು. ಖರ್ಚುವೆಚ್ಚಗಳ ಚರ್ಚೆ ಆಗಬೇಕು. ಇಷ್ಟು ದೊಡ್ಡ ಸಂಘ ಕರೆತರಲು ಚೌಕಗಳ ವ್ಯವಸ್ಥೆ ಆಗಬೇಕು. ಆಹ್ವಾನ ಕೊಡಲು ಅಲವರಕ್ಕೆ ಯಾರ್ಯಾರು ಹೋಗಬೇಕು. ಇವೆಲ್ಲ ವ್ಯವಸ್ಥೆಯಾಗದೆ ಆಹ್ವಾನಿಸುವಂತಿಲ್ಲ. ಹೀಗೆ ಹಲವಾರು ಸಮಸ್ಯೆಗಳನ್ನು ತೆಗೆದುಕೊಂಡು ಕೈಲಾಸಚಂದ ನನ್ನ ಹತ್ತಿರ ಬರುತ್ತಲೇ ಇದ್ದರು. ನಾನು ಮೊದಲು ನೀವೆಲ್ಲ ಹೋಗಿ ಶ್ರೀಫಲ ಇಟ್ಟು ಪ್ರಾರ್ಥಿಸಿ ಬನ್ನಿ ನಂತರ ಇವೆಲ್ಲವನ್ನು ಯೋಚಿಸೋಣ ಎಂದೆ.

ಒಂದು ದಿನ ರಾತ್ರಿ ಲಾಲಮಂದಿರದಲ್ಲಿ ಮೀಟಿಂಗ್ ನಡೆಯಿತು. ಸಾಹೂ ಶಾಂತಿ ಪ್ರಸಾದರವರು. ಭಾಗವಹಿಸಿದ್ದರು ಕರೆತರಬೇಕೆಂದು ನಿರ್ಣಯಿಸಿದರು ಪುನಃ ಅನಿಶ್ಚಿತತೆ ವಿಚಾರ ವಿಮರ್ಶೆ ನಡೆಯತೊಡಗಿತು. ಇಲ್ಲಿ ಇಷ್ಟು ದೊಡ್ಡ ಸಂಘಕ್ಕೆ ಚೌಕದ ವ್ಯವಸ್ಥೆಯನ್ನು ಹೇಗೆ ನಿರ್ವಹಿಸುವುದು ಎಂದು. ನಾನೇ ಗಾಂಧಿ ನಗರದ ಶ್ರಾವಕರನ್ನು ಕರೆದು ಹೀಗೆ ಹೀಗೆ ವಿಚಾರ ಮಾಡಿ ಅಲವರಕ್ಕೆ ಹೋಗಿ ಶ್ರೀಫಲ ಇಡಲು ಮುಂದುವರಿಸಿದೆ. ಹಾಗೇ ಲಾಲ ಶ್ಯಾಮಲಾಲಜೀ ಪನ್ನಾಲಾಲಜೀಯವರನ್ನು ಕರೆದು ತಿಳುವಳಿಕೆ ಹೇಳತೊಡಗಿದೆ.

ನೋಡಿ ಮಗು ತಾಯಿಯ ಹೊಟ್ಟೆಯಲ್ಲಿ ಇರುವಾಗ ತಾಯಿಯ ಮೊಲೆಯಲ್ಲಿ ಹಾಲಿರುವುದಿಲ್ಲ. ಜನ್ಮ ನೀಡುತ್ತಲೇ ತನ್ನಿಂದ ತಾನೇ ತಾಯಿಯ ಮೊಲೆಯಲ್ಲಿ ಹಾಲು ಬರಲಾರಂಭಿಸುತ್ತದೆ. ಈಗ ನೀವು ಬರೇ ಸಮಸ್ಯೆಗಳನ್ನೆ ಯೋಚಿಸುತ್ತಿದ್ದೀರ. ಆಚಾರ್ಯರ ಸಂಘವನ್ನು ಕರೆ ತರುತ್ತಲೇ ಅವರ ಪುಣ್ಯದ ಪ್ರಭಾವನೆಯಿಂದಾಗಿ ಕೆಲವರಾದರು

ಶುದ್ಧ ಜಲದ ಶ್ರಾವಕರು ಮುಂದೆ ಬರುತ್ತಾರೆ. ದೆಹಲಿಯೇ ಏಕೆ ಸುತ್ತ ಮುತ್ತ ಊರಿನವರು ಬಂದು ಆಹಾರ ಮಾಡಿಯೇ ಮಾಡುತ್ತಾರೆ ಎಂದು ಆಶ್ವಾಸನೆ ಕೊಟ್ಟೆ. ಇಂದಿನವರೆಗೂ ನನಗೆ ಆಹಾರ ಕೊಡುವವರು ಇಲ್ಲದಂತಾಗಿ ನಾನು ಉಪವಾಸವನ್ನಂತು ಮಾಡಿಲ್ಲವಲ್ಲ ಎಂದೆ. ಸಾಧುಗಳ ಪುಣ್ಯವೇ ಅವರ ಜೊತೆ ಬಂದೇ ಬರುತ್ತದೆ. ಹೀಗೆ ಅವರಿಗೆ ಸಮಜಾಯಿಸಿ ಮಾಡಿ. ಅಲವರಕ್ಕೆ ಹೋಗಿ ಶ್ರೀಫಲ ಇಡಲು ಪ್ರೇರಣೆ ಮಾಡಲಾಗಿ ಕೊನೆಗೂ ನನ್ನ ಶ್ರಮ ಫಲಿಸಿತು. ವಿಧಿವತ್ತಾಗಿ ಜನಗಳು ಹೋಗಿ ಆಹ್ವಾನಿಸಿದಾಗ ನನ್ನ ಸಂತೋಷಕ್ಕೆ ಪಾರವಿಲ್ಲದಂತಾಯಿತು.

ಟಿಕೈತನಗರ ಮತ್ತು ದೆಹಲಿಯಲ್ಲಿ ಪಂಚಕಲ್ಯಾಣದ ಪ್ರತಿಷ್ಠೆ

1974ರಲ್ಲಿ ಟಿಕೈತನಗರದಲ್ಲಿ ಪಂಚಕಲ್ಯಾಣ ಪ್ರತಿಷ್ಠೆಯನ್ನು ಅಯೋಜಿಸಲಾಗಿತ್ತು. 7¼ ಅಡಿಯ ಭ. ಬಾಹುಬಲಿಯ ಮೂರ್ತಿಯ ಪ್ರತಿಷ್ಠಾಪನೆಯನ್ನು ಸಹ ಇಟ್ಟುಕೊಂಡಿದ್ದರು. ರವೀಂದ್ರ ಮೊದಲೇ ಮನೆಗೆ ಹೋಗಿದ್ದ ಮೋತಿಚಂದನಿಗಾಗಿ ನಿಮಂತ್ರಣ ಪತ್ರಿಕೆಯನ್ನು ಕಳುಹಿಸಿದ್ದ. ಇಲ್ಲಿಂದ ಮೋತಿಚಂದ, ಕು. ಸುಶೀಲ, ಶೀಲ, ಕಲಾ ಎಲ್ಲರನ್ನು ಟಿಕೈತನಗರಕ್ಕೆ ಕಳುಹಿಸಿಕೊಟ್ಟೆ, ಆ ಸಮಯದಲ್ಲಿ ನನ್ನ ಹತ್ತಿರ ಯಾವ ಬ್ರಹ್ಮಚಾರಿಣಿಯರೂ ಇರಲಿಲ್ಲ.

ದೆಹಲಿಯ ಶಕ್ತಿನಗರದಲ್ಲಿಯು ಪಂಚಕಲ್ಯಾಣ ಪ್ರತಿಷ್ಠೆ ಆಗುವುದಿತ್ತು. ಆಚಾರ್ಯ ದೇಶಭೂಷಣರು ಸಂಘಸಹಿತ ಅಲ್ಲಿಗೆ ಹೋಗುವವರಿದ್ದರು. ನನಗೂ ಸಂಘ ಸಮೇತ ಬರಲು ಆಜ್ಞೆ ಇತ್ತಿದ್ದರು. ಹಾಗಾಗಿ ರತ್ನಮತಿಯವರು ನನ್ನ ಜೊತೆ ನಡೆದುಕೊಂಡೇ ಬಂದರು.

ಇಲ್ಲಿ ನಾವೊಂದು ಶ್ರಾವಕರ ಮನೆಯಲ್ಲೇ ತಂಗಿದ್ದೆವು. ಇಲ್ಲಿಂದ ಶಕ್ತಿ ಮಂದಿರದ ದೇವಾಲಯವು ದೂರವಿತ್ತು. ಆಚಾರ್ಯರು ತಂಗಿದ್ದ ಜಾಗವು ದೂರವಿತ್ತು. ನಾನು ಹೋದ ಕಡೆಯಲ್ಲಿ ರತ್ನಮತೀ ಮಾತಾಜಿಯವರು ಬರುತ್ತಿದ್ದರು. ಕಾಲುಗಳಲ್ಲಿ ನೋವಿದ್ದರೂ ಬಾವು ಬಂದರೂ ಲೆಕ್ಕಿಸದೆ ಓಡಾಡುತ್ತಿದ್ದುದು ಅವರ ವಿಶೇಷ ಮನೋಬಲದಿಂದಲೇ. ಇಲ್ಲಿಯ ಪ್ರತಿಷ್ಠಾ ಸಮಾರಂಭದಲ್ಲಿ ಒಳ್ಳೆಯ ಭಕ್ತಿ ಪ್ರಭಾವನೆಯಿಂದಾಗಿ ಸಾಧುಗಳಿಗೂ ಸಂತೋಷವಾಯಿತು.

ಹ್ಯಾಂಡ್‌ಪಂಪಿನ ನೀರು ಶುದ್ಧವೇ ಇಲ್ಲವೇ

ಇಲ್ಲಿ ಕೆಲವು ಚೌಕಗಳಲ್ಲಿ ಹ್ಯಾಂಡ್‌ಪಂಪಿನ ನೀರನ್ನು ಬಳಸುತ್ತಿದ್ದರು. ಇದು ಗೊತ್ತಾದ ಮೇಲೆ ನಾನು ನನ್ನ ಸಂಘಸ್ಥ ಆರ್ಯಿಕೆಯರ ಜೊತೆ ಹತ್ತಿರದಲ್ಲೆ ಇರುವ ಸಬ್ಜೀ ಮಂಡಿಯ ಮಂದಿರಕ್ಕೆ ಹೋಗುತ್ತೇವೆ. ಅಲ್ಲಿಯೇ ಆಹಾರವನ್ನು ಮಾಡುತ್ತೇವೆ. ಪ್ರತಿಷ್ಠೆಯ ಕೆಲಸಕ್ಕೆ ಎಷ್ಟು ಸಲ ಹೋಗಿ ಬರುವುದು ಎಂದೆ. ಇದನ್ನು ಕೇಳಿದ ಶ್ರೀ ಸುಂದರಲಾಲಜೀ ಬೀಡೀವಾಲರು ಒಬ್ಬ ಪ್ರಸಿದ್ಧ ಸೇಠ್‌ರು ಒಳ್ಳೆ ಕಾರ್ಯಕರ್ತರು ಸಹ. ಅವರು ಬಂದವರೇ, ಮಾತಾಜೀ ಹ್ಯಾಂಡ್‌ಪಂಪಿನ ಜಲವು ನಿಜವಾಗಿಯೂ ಶುದ್ಧವಾಗಿದೆ. ಭೂಮಿಯಲ್ಲಿ ಬರುವ ಹೊಸ ನೀರನ್ನು ಅದು ಮೇಲೆತ್ತುತ್ತದೆ. ಆದ್ದರಿಂದ ಅದು ಅಶುದ್ಧವಾಗುವುದೇ ಇಲ್ಲ. ಆದರೆ ಇಲ್ಲಿರುವುದು ಜೀವಾನಿಯ ವಿಷಯ. ನಾವು ಹ್ಯಾಂಡ್‌ಪಂಪಿನಲ್ಲಿ ಜೀವಾನಿಯನ್ನು ತಲುಪಿಸಲು ಒಂದು ಬೇರೆ ಪೈಪ್ ಜೋಡಿಸಬೇಕು. ಆದ್ದರಿಂದ ಬಾವಿಯ ಜಲಕ್ಕಿಂತಲು ಇದು ಜಾಸ್ತಿ ಶುದ್ಧವಾಗಿದೆ. ಬಾವಿಯ ನೀರನ್ನು ಮೇಲೆ ತಂದಾಗ ನೋಡಿದಿರಲ್ಲ ಅದರಲ್ಲಿ ಜೀವಿಗಳನ್ನು ನೋಡಿದರೆ ತಿರಸ್ಕಾರ ಬರುತ್ತದೆ.

ಅವರು ಹೀಗೆ ಎಷ್ಟು ಹೇಳಿದರೂ ನಾನು ಅವರ ಮಾತನ್ನು ಒಪ್ಪಿಕೊಳ್ಳಲಿಲ್ಲ. ಆಗ ಅವರು ಸ್ವಲ್ಪ ಸಿಟ್ಟಾಗಿಯೇ ಹೇಳಿದರು. ಆಗ ನಾನು ಸೇಠ್‌ಜೀ ನಮ್ಮಂತಹ ಸಾಧು ಸಾಧ್ವಿಯರ ಮೇಲೆ ನೀವು ಒತ್ತಡ ಹೇರುವಂತಿಲ್ಲ. ಆಗ ಅವರು ವಿನಮ್ರರಾಗಿ ಹೇಳಿದರು. ಒಳ್ಳೆಯದು ಏನಾದರಾಗಲಿ ನೀವುಗಳು ಪ್ರತಿಷ್ಠೆಗಿಂತ ಮೊದಲು ಎಂದಿಗೂ ಹೋಗಲು ಬಿಡುವುದಿಲ್ಲ. ಬೇಡ ಒಂದು ಮೈಲಿ ಆದರೂ ಪರವಾಗಿಲ್ಲ ನಾನೇ ನೀರು ತಂದು ಚೌಕಗಳನ್ನು ಮಾಡಿಸುತ್ತೇನೆ ಎಂದರು. ಹೀಗೆ ಹೇಳಿದವರೇ ಬಾವಿಗಳನ್ನು ಹುಡುಕಿಕೊಂಡು ಹೊರಟೇ ಬಿಟ್ಟರು. ಹತ್ತಿರದಲ್ಲೇ ಯಾವುದೋ ವೈಷ್ಣವ ಮಂದಿರದಲ್ಲೇ ಒಂದು ಬಾವಿ ಇತ್ತು. ಮತ್ತು ಸೇಠ್ ಸುಂದರಲಾಲರು ತಮ್ಮ ಕೋಠಿಯ ಕಾಂಪೌಂಡನ್ನು ಒಡೆಸಿ ಹತ್ತಿರದಿಂದಲೇ ಬಾವಿಯ ನೀರನ್ನು ತೆಗೆದುಕೊಳ್ಳುವ ವ್ಯವಸ್ಥೆ ಮಾಡಿದರು. ನಂತರ ನನ್ನ ಹತ್ತಿರ ಬಂದವರೇ ತುಂಬ ಹೊಗಳುತ್ತಾ ಹೇಳಿದರು. ಮಾತಾಜೀ ನೀವು ಬಹಳ ದೃಢವಂತರು. ಸ್ಥಾನ ಯಾವುದಾದರೂ ಆಗಿರಲಿ ನಮ್ಮ ಧರ್ಮ, ನಿಯಮದ ರಕ್ಷಣೆ ಮಾಡಿಕೊಳ್ಳಲೇಬೇಕು ಎಂಬುದೇ ನಿಮ್ಮ ಧ್ಯೇಯ. ನಾನು ಒಮ್ಮೆ ವಿದೇಶಕ್ಕೆ ಹೋಗಿದ್ದಾಗ ಪಿಂಗಾಣಿ ಪಾತ್ರೆಯಲ್ಲಿ ಊಟಮಾಡುವುದಿಲ್ಲವೆಂಬ ನಿಯಮದಿಂದಾಗಿ ಬೇರೆಯ ವ್ಯವಸ್ಥೆಯನ್ನು ಮಾಡಿದರು. ಅದೂ ನಾನು ನನ್ನ ವ್ರತದಲ್ಲಿ ದೃಢನಾಗಿದ್ದರಿಂದ ಇಂದು ನನಗೆ ನಿಮ್ಮ ಚರ್ಯೆ ಮತ್ತು ದೃಢತೆಯನ್ನು ನೋಡಿ ಗೌರವ ಹೆಚ್ಚಾಯಿತು ಎಂದರು.

ಜನರು ಮೊದಲು ಹೆದರಿಸುತ್ತಾರೆ, ನಂತರ ದೃಢತೆಯನ್ನು ನೋಡಿ ಹೊಗಳುತ್ತಾರೆ ಎಂದು ಕೊಂಡೆ. ಈ ಪ್ರಾಂತ್ಯದಲ್ಲಿ ಬಾವಿಯ ನೀರನ್ನು ಹೆಚ್ಚಾಗಿ ಬಳಸದೆ ಇರುವುದರಿಂದ ನೀರೆಲ್ಲವು ಹಾಳಾಗಿತ್ತು. ಕ್ರಿಮಿ ಕೀಟಗಳು ಇದ್ದವು. ಹೀಗಾಗಿ ಜನ ಎಲ್ಲ ಜಾಗದಲ್ಲೂ ಬಾವಿಯ ನೀರನ್ನು ಬಳಸದೆ ಹ್ಯಾಡ್‌ಪಂಪಿಗೆ ಶರಣಾಗಿದ್ದಾರೆ. ಆಚಾರ್ಯ ನಮಿಸಾಗರರು ಆ. ಶಾಂತಿಸಾಗರರ ಶಿಷ್ಯರಾಗಿದ್ದವರು ಸಹ ಹ್ಯಾಂಡ್‌ಪಂಪಿನ ನೀರನ್ನು ಬಳಸುತ್ತಿದ್ದರು. ಹಸ್ತಿನಾಪುರದಲ್ಲಿ ನಾನೇ ಬೋರ್‌ವೆಲ್ ಹಾಕುವುದನ್ನು ನೋಡಿದೆನು. 3-4 ಗಂಟೆಗಳಲ್ಲೇ ಹ್ಯಾಂಡ್‌ಪಂಪ್ ಹಾಕಿದ್ದರಿಂದ ನೀರು ಬಂತು ಭೂಮಿಯಿಂದ ಶುದ್ಧವಾದ ನೀರು ಮೇಲೆ ಬಂದಿತು. ಇಲ್ಲಿ ಮೋತಿಚಂದನು ಒಂದು ಹ್ಯಾಂಡ್‌ಪಂಪಿನಲ್ಲಿ ಜೀವಾಳಿಯನ್ನು ಹಾಕುವಂತಹ ಸಾಧನವನ್ನು ಇಡಿಸಿದ. ಮೇಕಠ ಮೊದಲಾದ ಹಲವಾರು ಮಂದಿರಗಳಲ್ಲಿ ಹ್ಯಾಂಡ್‌ಪಂಪಿನ ನೀರಿನಿಂದಲೇ ಭಗವಂತರಿಗೆ ಅಭಿಷೇಕ ಮಾಡಲಾಗುತ್ತದೆ. ಕೊನೆಗೆ ಪ್ರತ್ಯಕ್ಷ ನೋಡಿದ ಮೇಲೆ ನನಗೆ ಶುದ್ಧ ಜಲವೆಂದು ನಂಬಿಕೆ ಆದ ಮೇಲೆಯೇ ನಾನು ಕಮಂಡಲುಗಳಿಗೆ ಅದೇ ನೀರನ್ನು ಬಳಸತೊಡಗಿದೆ.

1975ರಲ್ಲಿ ಮೇಕಠದಲ್ಲಿಯೇ ಆಚಾರ್ಯ ಧರ್ಮಸಾಗರರ ಸಮ್ಮುಖದಲ್ಲಿಯೇ ಈ ಚರ್ಚೆ ಬಂದಾಗ ಆಚಾರ್ಯರೇ ಇದು ಶುದ್ಧಜಲ ಇದರಿಂದ ಯಾವ ದೋಷವು ಇಲ್ಲವೆಂದು ದೃಢಪಡಿಸಿದರು. ಆದರೂ ಸಂಘದ ಒಂದಿಬ್ಬರು ಆಹಾರದಲ್ಲಿ ತೆಗೆದುಕೊಳ್ಳುತ್ತಿರಲಿಲ್ಲ. ಇವರ ಆಜ್ಞೆಯಿಂದಾಗಿ ನಾನು ಕಮಂಡಲುವಿಗೆ ಬಳಸಲಾರಂಭಿಸಿದೆ.

ಇದಕ್ಕಿಂತ ಮೊದಲು ತಾಯಿಯವರು ಎರಡನೇಯ ಪ್ರತಿಮಾಧಾರಿಯಾದಾಗ ತಂದೆಯವರು ಮನೆಯಲ್ಲಿಯೇ ಹ್ಯಾಂಡ್‌ಪಂಪ್ ಹಾಕಿದರು ತಾಯಿಗೆ ಅನುಕೂಲವಾಗಲಿ ಎಂದು. ಆ ವಿಷಯವಾಗಿ ತಾಯಿ ಪತ್ರ ಹಾಕಿ ಅನುಮತಿ ಕೋರಿದಾಗ ನಾನು ನಿರಾಕರಿಸಿದ್ದೆ. ತಾಯಿಯವರು ಎಷ್ಟು ಕಷ್ಟವಾದರೂ ಆ ಜಲವನ್ನು ಉಪಯೋಗಿಸಲಿಲ್ಲ. ಇದರಿಂದ ತಂದೆಯವರು ಎಷ್ಟು ಸಿಟ್ಟಾದರೂ ಅವರು ಸೋಲಲಿಲ್ಲ. ಹಲವಾರು ವರ್ಷಗಳಿಂದ ಪಂ. ರತನಚಂದ ಮುಖ್ತ್ಯಾರ ಮೊದಲಾದವರು ಈ ನೀರನ್ನು ಕುಡಿಯಲು ಉಪಯೋಗಿಸುತ್ತಿದ್ದರು. ಈಗ ನಾನು ಸಂಘದಲ್ಲಿದ್ದ

ಎಲ್ಲರಿಗೂ ಈ ನೀರನ್ನು ಉಪಯೋಗಿಸಲು ಅನುಮತಿ ಕೊಟ್ಟೆ. ಕೊನೆಗೆ ನಾನು ನೀರಿನ ಶುದ್ಧಿ ಅಶುದ್ಧಿಯನ್ನು ಸ್ವತಃ ನೋಡಿ ನಿರ್ಣಯ ಕೈಕೊಳ್ಳಬೇಕು. ಲಕೀರ ಕೆ ಫಕೀರ ಮಾಡುವುದರಲ್ಲಿ ಏನೂ ಸಾರವಿಲ್ಲ ಎನ್ನಿಸಿತು.

ಸಮ್ಯಗ್‌ಜ್ಞಾನದ ರೂಪರೇಖೆ

1974ರಲ್ಲಿ ನಾನು ಗಾಂಧಿನಗರದಲ್ಲಿ ತಂಗಿದ್ದೆ. ಮೋತಿಚಂದನು ಹಲವಾರು ಬಾರಿ ಹೇಳಿದ್ದ. ಮಾತಾಜೀ ತಮ್ಮ ಉಪದೇಶ ರೂಪ ಅಮೃತವನ್ನು ನಾವು ಪ್ರತಿಯೊಬ್ಬರಿಗೂ ಮುಟ್ಟಿಸಲು ಏಕೆ ಒಂದು ಮಾಸಿಕ ಪತ್ರವನ್ನು ಹೊರಡಿಸಬಾರದೆಂದು. ಪತ್ರಿಕೆಯ ಮೇಲೆ ಚರ್ಚೆ ನಡೆಯಲಾರಂಭಿಸಿತು. ಪತ್ರಿಕೆಯಲ್ಲಿ ಸ್ವಾಧ್ಯಾಯಕ್ಕಾಗುವ ಉಪಯುಕ್ತ ವಿಷಯವಿರಬೇಕು. ಜೈನಧರ್ಮವನ್ನು ತಿಳಿಯುವಂತಹ ವಿಷಯವಿರಬೇಕು. ಸಮಾಚಾರಗಳು ನಿರ್ವಿವಾದವಾಗಿರಬೇಕು. ಹೀಗೆ ಸಂಕ್ಷೇಪವಾಗಿ 4-5 ಪೇಜುಗಳಿದ್ದರು ಸಾಕು ಎನ್ನಲು ಊಹಾಪೋಹಗಳು ನಡೆದು, ರವೀಂದ್ರ ಕುಮಾರನೇ ಸಮ್ಯಗ್ ಜ್ಞಾನ ಎಂಬ ಹೆಸರು ಸೂಚಿಸಿದನು. ನನಗೂ ಚೆನ್ನಾಗಿ ಕಾಣಿಸಿತು. ಕೊನೆಗೆ ಅದೇ ಹೆಸರನ್ನಿಟ್ಟೆವು.

ವಿಷಯ ವಿಭಜನೆಯ ಬಗ್ಗೆ ನಾನು ಯೋಚಿಸುತ್ತಾ ಶಾಸ್ತ್ರದಲ್ಲಿ ನಾಲ್ಕು ಅನುಯೋಗಗಳಿವೆ. ಈ ನಾಲ್ಕರ ಸಾರವೇ ಜೈನ ವಾಙ್ಮಯದ ರಹಸ್ಯವೇ ಬಂದಂತಾಯಿತು. ಹಿಂದಿನ ಕಾಲದವರು ಪುರಾಣಗಳನ್ನು ಓದುವುದಕ್ಕೆ ಆಸಕ್ತರಾಗಿರುತ್ತಾರೆ. ಜೊತೆಗೆ ಶ್ರಾವಕಾಚಾರವನ್ನು ಶಾಸ್ತ್ರವೆಂದು ತಿಳಿದಿದ್ದಾರೆ. ಇಂದು ಪ್ರಬುದ್ಧ ಜನರು ಕಾನಜೀ ಗಾಳಿ ಬೀಸಿ. ಸಮಯಸಾರ, ಮೋಕ್ಷ ಮಾರ್ಗ ಪ್ರಕಾಶಕ ಮೊದಲಾದ ಗ್ರಂಥಗಳನ್ನು ಬಿಟ್ಟು ಬೇರೆ ಪುಸ್ತಕವನ್ನೇ ನೋಡಲು ಬಯಸುವುದಿಲ್ಲ. ನಾಲ್ಕು ಅನುಯೋಗಗಳ ಬಗ್ಗೆ ಸಾಮಾನ್ಯ ಜನರಿಗೆ ಗೊತ್ತಿಲ್ಲ. ಹಾಗಾಗಿ ಪತ್ರಿಕೆಯಲ್ಲಿ ನಾಲ್ಕು ಸ್ಥಾಯಿ ವಿಭಾಗಗಳನ್ನಾಗಿ ಮಾಡಿ ಮಹಿಳೆಯರು ಮತ್ತು ಮಕ್ಕಳಿಗಾಗಿಯೂ ವಿಷಯ ಮೀಸಲಿಡಬೇಕೆಂದು ನಿರ್ಧರಿಸಿದೆ. ಕೊನೆಗೆ ಯೋಚಿಸಿ ನಾನು ನಾರೀಜಗತ್ ಮತ್ತು ಬಾಲಜಗತ್ ಎಂಬ ಎರಡು ಸ್ಥಾಯಿ ಅಂಕಣವನ್ನು ಸೇರಿಸಿದೆನು. ಮೋತಿಚಂದ್ರನು ತಾವು ಆರು ಅಂಕಣಗಳಿಗೂ ತಮ್ಮದೇ ಲೇಖನಗಳನ್ನು ಇಡಬೇಕು ಎಂದನು. ಪ್ರಥಮ ಸಂಚಿಕೆಗೆ ಎಲ್ಲ ಅಂಕಣಗಳಿಗೂ ಲೇಖನಗಳು ಸಿದ್ಧವಾದವು. ಮಧ್ಯದಲ್ಲಿ ಧ್ಯಾನಕೊಡಿರಿ, 'ನೆನಪಿಡಿ' ಎಂಬುದನ್ನು ಸೇರಿಸಿದ್ದೆ. ಪತ್ರಿಕೆಯನ್ನು ರಿಜಿಸ್ಟರ್ ಮಾಡುವ ಜವಾಬ್ದಾರಿ ಕೈಲಾಸಚಂದ್ರರಿಗೆ ವಹಿಸಿದೆವು. ಅವರೇ ಅದನ್ನು ಮಾಡಿಸಿದರು.

ಈ ಎಲ್ಲಾ ವ್ಯವಸ್ಥೆ ಆದ ಮೇಲೆ ನನ್ನ ನಿಕಟ ಭಕ್ತರೇ ಆದ ರಾಜಾಟಾಯ್ಸ್‌ನ ಕೈಲಾಸಚಂದರು ಮೋತಿಚಂದನ ಹತ್ತಿರ ನೀನು ಪತ್ರಿಕೆ ನಡೆಸುವಷ್ಟು ಸಮರ್ಥನಲ್ಲ. ಇದು ಮಕ್ಕಳ ಆಟ ಎಂದು ಕೊಂಡಿದ್ದೀಯ ಎರಡು ಮೂರು ಸಂಚಿಕೆ ಆಗುವಷ್ಟರಲ್ಲೇ ಸೋತು ಹೋಗುತ್ತೀಯ. ಪತ್ರಿಕೆ ನಡೆಸುವುದು ಬಹಳ ಕಠಿಣ. ಹೀಗೆ ಅವರ ಉತ್ಸಾಹವನ್ನು ಕುಗ್ಗಿಸತೊಡಗಿದರು. ಇಷ್ಟೆಲ್ಲ ಹೇಳಿದರೂ ಮೋತಿಚಂದರು ತಮ್ಮ ಸಾಹಸ ಬಿಡದೆ ಹೇಳಿದರು ಮಾತಾಜೀಯವರ ಶುಭಾರ್ಶೀವಾದ ಇರುವವರೆಗೂ ನಾನು ಫೇಲ್ ಆಗಲು ಸಾಧ್ಯವೇ ಇಲ್ಲ. ಇಂದು ಮಹತ್ವಪೂರ್ಣ ದಿನವಾಗಿದೆ. ಯುಗದ ಆದಿಯು ಕೂಡ ಇದೆ ತಿಥಿಯಲ್ಲಿ ಪ್ರಾರಂಭವಾಗಿರುವುದು. ಭ. ಮಹಾವೀರರ ಪ್ರಥಮ ಉಪದೇಶವು ಇಂದೇ ಆಗಿರುವುದು. ಆದ್ದರಿಂದ ಈ ಮಂಗಳ ದಿನವೇ ಇದರ ಪ್ರಾರಂಭೋತ್ಸವ ಎಂದರು.

ದೆಹಲಿಯ ಧರ್ಮಪುರದಲ್ಲಿ ಹೊಸ ಮಂದಿರದಲ್ಲಿ ಯಾವುದೋ ಕಾರ್ಯಕ್ರಮಕ್ಕೆ ಆಚಾರ್ಯ ಧರ್ಮಸಾಗರರು ವಿದ್ವಾನಂದರು ಬರುವುದರಿಂದ ಮಂದಿರದ ಕಾರ್ಯಕರ್ತರಿಂದ ಅನುಮತಿಯನ್ನು ಪಡೆದು ಸಮ್ಯಗ್‌ಜ್ಞಾನ ಪತ್ರಿಕೆಯ ವಿಮೋಚನೆಯನ್ನು ಆಚಾರ್ಯರಿಂದಲೇ ಮಾಡಿಸಲು ಯೋಜನೆ ಹಾಕಿ ಕರಪತ್ರಗಳನ್ನು ಅಚ್ಚು ಹಾಕಿಸಲಾಯಿತು. ಯಾರೋ ಮಹಾನುಭಾವರು ಬಂದು ವಿದ್ಯಾನಂದರು ಇದಕ್ಕೆ ಒಪ್ಪಿಕೊಂಡಿಲ್ಲ ಎಂಬುದನ್ನು ತಿಳಿಸಿದರು. ಮೋತಿಚಂದನಿಗೆ ಚಿಂತೆ ಆಗತೊಡಗಿತು ಆಗ ನಾನು ಲಾಲಮಂದಿರದಲ್ಲೇ ಆಚಾರ್ಯರ ಕೈಯಲ್ಲೇ ಪತ್ರಿಕೆಯನ್ನು ಬಿಡುಗಡೆ ಮಾಡಿಸಿದರಾಯಿತು ಚಿಂತೆ ಏಕೆ ಮಾಡುತ್ತೀಯ ಎಂದೆ.

ಮೋತಿಚಂದ ಮತ್ತು ರವೀಂದ್ರಕುಮಾರ ಇಬ್ಬರು ಸಂಪಾದಕರಾಗಿದ್ದರು. ಇಬ್ಬರು ಪತ್ರಿಕೆ ತೆಗೆದುಕೊಂಡು ಲಾಲ ಮಂದಿರಕ್ಕೆ ಹೋಗಿ ಆಚಾರ್ಯರ ಕೈಗಳಿಂದ ವಿಮೋಚನೆ ಮಾಡಿಸಿದರು ಮೊದಲು ಬೇಡವೆಂದವರು ಕೊನೆಗೆ ಪತ್ರಿಕೆಯನ್ನು ಹೊಗಳಿದರಂತೆ. ಅವರು ಇಲ್ಲವೆಂದಾಗ ಮೋತಿಚಂದನು ಇದೇನಪ್ಪ "ಪ್ರಥಮ ಗ್ರಾಸೇ ಮಕ್ಷಿಕಾಪಾತಃ" ಈ ಗಾದೆಯಂತೂ ಮೊದಲೇ ಅಮಂಗಳವಾಯಿತಲ್ಲ ಎಂದುಕೊಂಡರಂತೆ ಇವತ್ತಿಗೂ ಅವರು ಹೇಳುತ್ತಿರುತ್ತಾರೆ. ಮಾತಾಜೀ ನೀವು ದೀಕ್ಷಿತರಾದ 34 ವರ್ಷಗಳಲ್ಲಿ ನಾನು 20 ವರ್ಷಗಳನ್ನು ನೋಡಿದ್ದೇನೆ ತಾವು ಯಾವುದೇ ಕಾರ್ಯ ಮಾಡುವಾಗಲು ಅಡೆ-ತಡೆಗಳು ಬಂದೇ ಬರುತ್ತವೆ. ಆದರೆ ಸಂಘರ್ಷಗಳನ್ನ ಎದುರಿಸುತ್ತಲೇ ತಾವು ಮುಂದುವರಿಯುತ್ತಿದ್ದೀರ. ಹೀಗಾಗಿ ತೊಂದರೆಗಳು ನಿಮ್ಮನ್ನೇನು ಅಳ್ಳಾಡಿಸಲು ಸಾಧ್ಯವಾಗಿಲ್ಲ. ಸಂಘರ್ಷಗಳನ್ನು ಎದುರಿಸುವುದೇ ನಿಮ್ಮ ಜೀವನವಾಗಿದೆ.

ಇಂದು ಈ ಸಮ್ಯಗ್‌ಜ್ಞಾ ಪತ್ರಿಕೆ ತನ್ನ ಹದಿನಾಲ್ಕನೆಯ ವರ್ಷಕ್ಕೆ ಕಾಲಿಟ್ಟಿದೆ.ಿ ರವೀಂದ್ರಕುಮಾರ ಹೇಳುತ್ತಿರುತ್ತಾನೆ. ಮಾತಾಜೀ ಈ ಹದಿಮೂರು ವರ್ಷಗಳಲ್ಲಿ ಐದು ಲಕ್ಷಕ್ಕಿಂತಲು ಅಧಿಕವಾದ ಪತ್ರಿಕೆಗಳು ಪ್ರಕಾಶಿತವಾಗಿರಬೇಕು. ಇದನ್ನು ಸುಮಾರು 50 ಲಕ್ಷ ಜನರು ಓದಿರಬಹುದು. ಯಾವುದಾದರೂ ಕಾರಣದಿಂದ ಪತ್ರಿಕೆ ಒಂದೆರಡು ದಿನ ವಿಳಂಬವಾದರು ಸಹ ಪಾಠಕರಿಂದ ಪತ್ರಗಳ ರಾಶಿಯೇ ಬಂದು ಬೀಳುತ್ತವೆ. ಜನರು ಪತ್ರಿಕೆಯ ಪ್ರತೀಕ್ಷೆಯಲ್ಲಿರುವುದು ಅವರ ಪತ್ರಗಳಿಂದಲೇ ಕಂಡುಬರುತ್ತದೆ.

ಈ ಪತ್ರಿಕೆಯಲ್ಲಿ ಶುದ್ಧ ಧಾರ್ಮಿಕ ಲೇಖನಗಳು ಮಾತ್ರ ಇವೆ. ಅದು ಶಾಸ್ತ್ರಗಳಿಗೆ ಸಂಬಂಧಿತವಾದವು ಮನಕ್ಕೆ ರಂಜಿಸುವ ಕಥೆಗಳಾಗಲಿ, ಸಮಾಜದ ವಿವಾದಿತ ವಿಷಯಗಳಿಗಾಗಲಿ ಇದರಲ್ಲಿ ಸ್ಥಾನವಿಲ್ಲ. ಇದೇ ಕಾರಣದಿಂದಾಗಿ ಪ್ರತಿಯೊಬ್ಬ ಮುನಿಗಳಿಗೂ ಆರ್ಯಿಕೆಯರಿಗೂ ಇದು ಪ್ರಿಯವಾಗಿದೆ. ಅದನ್ನು ಆಸಕ್ತಿಯಿಂದ ಓದುತ್ತಾರೆ.

ಮಾದರಿಯ ರಚನೆ

ಜಂಬೂದ್ವೀಪ 8 x 8 ಅಡಿಯ ಮಾದರಿ ಸಿದ್ಧವಾಗಿ ಬಂದಿತು. ಇದರಲ್ಲಿ ದೇವಭವನ, ಚೈತ್ಯಾಲಯದ ಸುಂದರ ಸುಂದರ ಮಾದರಿಗಳಲ್ಲಿ ತಯಾರಿಸಲಾಗಿತ್ತು. ಮೋತಿಚಂದ ಯಾರೋ ಒಬ್ಬ ಗಾರೆಯವನು ಮತ್ತು ಮರಗೆಲಸದವನನ್ನು ಕರೆತಂದನು. ಅವರು ಮಾಡಿದ ಡಿಸೈನ್ ನನ್ನ ಮನಸ್ಸಿಗೆ ಬರಲಿಲ್ಲ. ದೆಹಲಿಯಲ್ಲಿ ಮೋತಿಚಂದನಿಗೆ ವಿಶೇಷ ಪರಿಚಯ ಇಲ್ಲದ್ದರಿಂದ ಸನಾವದದಿಂದಲೇ ಬಣ್ಣದ ಕೆಲಸದವರಾದ ಬಾಲಕೃಷ್ಣನನ್ನೆ ಕರೆಸಿದರು. ಅವರಿಗೆ ಮಂದಿರದಲ್ಲಿ ಚಿತ್ರ ಕೆಲಸವನ್ನು ಮಾಡಿದ ಅನುಭವವಿತ್ತು. ಸುಂದರ ದೃಶ್ಯಗಳನ್ನು ಮಾಡಿದ್ದರು. ಅವರು ಜಂಬೂದ್ವೀಪದ ಮಾದರಿಯಲ್ಲಿ ಯಥಾ ಸ್ಥಾನದಲ್ಲಿ ದೇವಭವನಗಳ ಒಳ್ಳೆಯ ಡಿಸೈನ್‌ಗಳನ್ನು ಮಾಡಿದರು. ನನ್ನ ಅಭಿಪ್ರಾಯದಂತೆ ಮೊದಲು ಕಾಗದದ ಮೇಲೆ ಬರೆದು ತೋರಿಸಿ ನನಗೆ

ಸಂತೋಷವಾದ ಮೇಲೆ ಮೋತಿಚಂದನು ಅದನ್ನು ಚಿತ್ರಕಾರರಿಂದ ಮರದಿಂದ ದೇವಭವನ, ಚೈತ್ಯಾಲಯ, ತೋರಣದ್ವಾರ, ಗೋಮುಖ, ಕಮಲ ಮೊದಲಾದವುಗಳನ್ನು ಮಾಡಿಸಿದ. ಅದಕ್ಕೆ ಒಳ್ಳೆಯ ಬಣ್ಣದ ಮೆರಗನ್ನು ಮಾಡಿಸಿದ. ಈ ಮಾದರಿಯು ಎಷ್ಟು ಸುಂದರವಾಗಿ ಬಂದಿತು ಎಂದರೆ ನೋಡುವವರ ಮನವನ್ನು ತನ್ನತ್ತ ಸೆಳೆಯುತ್ತಿತ್ತು. ಈ ಮಾದರಿಯು ದೆಹಲಿಯ ನಮಿಸಾಗರರ ಔಷಧಾಲಯ ಕೂಚಾಸೇಠನ ಮೇಲಿನ ಕೊಠಡಿಯಲ್ಲಿ ಇರಿಸಲಾಗಿತ್ತು. ನಂತರ ಹಸ್ತಿನಾಪುರಕ್ಕೆ ತರಲಾಯಿತು. ಇದನ್ನು ಇಡುವುದಕ್ಕಾಗಿಯೇ ದೊಡ್ಡ ಮಂದಿರದಲ್ಲಿ ಒಂದು ಕೊಠಡಿಯನ್ನು ಕಟ್ಟಿಸಿ ಅದರಲ್ಲಿ ಇಡಲಾಗಿದೆ. 1975ರ ಪ್ರತಿಷ್ಠೆಯ ಸಮಯದಲ್ಲಿ ಆಚಾರ್ಯ ಧರ್ಮಸಾಗರರು ಉಪಾಧ್ಯಾಯ ಮುನಿಶ್ರೀ ವಿದ್ಯಾನಂದಜೀ ಮತ್ತು ಚತುರ್ವಿಧ ಸಂಘದ ಸಾನಿಧ್ಯದಲ್ಲಿ ಈ ಮಾದರಿಯ ಕೊಠಡಿಯ ಅನಾವರಣದ ಉದ್ಘಾಟನೆಯನ್ನು ಮಾಡಿಸಲಾಯಿತು. ಈಗ ಇದು ಜಂಬೂದ್ವೀಪದಲ್ಲಿ ಪ್ರವೇಶ ಮಾಡುತ್ತಲೇ ಒಂದು ಕೊಠಡಿಯಲ್ಲಿ ಇಡಲಾಗಿದೆ. ಇದನ್ನು ಲಕ್ಷಾಂತರ ಜನರು ನೋಡಿದ್ದಾರೆ.

1987ರಲ್ಲಿ ಈ ಮಾದರಿಯನ್ನು ಸನಾವದ ಮೊದಲಾದ ಜನರ ಪ್ರೇರಣೆಯಿಂದ ಸಿದ್ಧವರ ಕೂಟದಲ್ಲಿ ಶ್ರೀಮತಿ ಮೈನಾಬಾಯಿಯವರ ಸೌಜನ್ಯದಿಂದ ಇಡಲಾಗಿತ್ತು. 1974ರಿಂದಲೂ ಈ ಮಾದರಿಯನ್ನು ನಾನು ನೋಡಿ ನೋಡಿ ನನ್ನ ಮನಸ್ಸಿನಲ್ಲಿ ಹಲವಾರು ಬಾರಿ (ನನ್ನ ಮನದಲ್ಲಿ) ಭಾವನೆಗಳು ಜಾಗೃತವಾಗುತ್ತಿದ್ದವು. ಭಗವಾನರು ಒಂದಲ್ಲ ಒಂದು ದಿನ ಈ ಭವ್ಯ ಆಕರ್ಷಕ ಜಂಬೂದ್ವೀಪದ ಮಾದರಿಯನ್ನು ಗಾಡಿಯಲ್ಲಿ ಇಟ್ಟುಕೊಂಡು ಇಡೀ ಭಾರತದಲ್ಲೆಲ್ಲ ಸುತ್ತಾಡಿಸಿ ಪ್ರತಿಯೊಬ್ಬರಿಗೂ ತಮ್ಮ ನಿವಾಸ ಸ್ಥಳವಾದ ಜನ್ಮಭೂಮಿಯ ಪರಿಚಯ ಮಾಡಿಸಬೇಕು. ಜೊತೆಗೆ ಭ. ಮಹಾವೀರರ ಅಹಿಂಸಾ ಉಪದೇಶವನ್ನು ಜೈನೇತರರವರೆಗೂ ಚೆನ್ನಾಗಿ ಪ್ರಚಾರ ಮಾಡಬೇಕು.

ಈ ನನ್ನ ಭಾವನೆ ಸಫಲವಾಯಿತು. 1982ರಲ್ಲಿ "ಜಂಬೂದ್ವೀಪ ಜ್ಞಾನಜ್ಯೋತಿ" ಎಂಬ ಒಂದು ಆಕರ್ಷಕ ಜಂಬೂದ್ವೀಪದ ಮಾದರಿ ತಯಾರಿನ ದೆಹಲಿಯ ಲಾಲಖಿಲೆಯಲ್ಲಿ ಆಗಿನ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧೀಜಿಯವರ ಕರಕಮಲಗಳಿಂದ ಈ ಯಾತ್ರೆಯ ಶುಭಾರಂಭ ಪ್ರಾರಂಭವಾಯಿತು. ಈ ಜ್ಞಾನಜ್ಯೋತಿಯು ಸುಮಾರು 3 ವರ್ಷಗಳವರೆಗೆ ಇಡೀ ಭಾರತದಲ್ಲೆಲ್ಲ ಸುತ್ತಾಡಿ ಪುನಃ 18 ಏಪ್ರಿಲ್ 1985ರಂದು ಹಸ್ತಿನಾಪುರಕ್ಕೆ ಬಂದು ಪೂರ್ಣಗೊಂಡಿತು. ಅದೇ ದಿನ ಆಗಿನ ಕೇಂದ್ರದಲ್ಲಿ ರಕ್ಷಣಾಮಂತ್ರಿಯಾಗಿದ್ದ ಪಿ. ವಿ. ನರಸಿಂಹರಾವ್‌ರು ಈ ಜ್ಞಾನಜ್ಯೋತಿಯನ್ನು ಸ್ಥಾಯಿಯಾಗಿ ಸ್ಥಾಪಿಸಿದರು. ಅದು ಉರಿಯುತ್ತಾ ನೋಡುವವರಿಗೆ ಜ್ಞಾನದ ಬೆಳಕನ್ನು ಇಂದೂ ಕೊಡುತ್ತಿದೆ. ಈಗ ಇದೇ ಪ್ರತಿಕೃತಿಯನ್ನು ತ್ರಿಮೂರ್ತಿ ಮಂದಿರದಲ್ಲಿ ಇಡಿಸಲಾಗಿದೆ.

ಗ್ರಂಥದ ಮುಖಪುಟದಲ್ಲಿನ ಚಿತ್ರ

ಸನಾವದದ ಚಿತ್ರಕಾರನಿಂದಲೇ ಅಷ್ಟಸಹಸ್ರೀಯ ಪುಸ್ತಕದ ಮೇಲು ಹೊದಿಕೆಗಾಗಿ ಚಿತ್ರ ರಚಿಸಲಾಯಿತು. ಮೊದಲು ಆ ಉಮಾಸ್ವಾಮಿ ಕೃತ ತತ್ತ್ವಾರ್ಥ ಸೂತ್ರದ ಮಂಗಳಾಚರಣೆ ಅಷ್ಟಸಹಸ್ರೀಯ ಮೋಕ್ಷ ಮಾರ್ಗಸ್ಯನೇತಾರಂ ಉಲ್ಲೇಖ. ನಂತರ ಆ ಸಮಂತ ಭದ್ರರ "ದೇವಾಗಮ ನಭೋಯಾನ" ದಿಂದ ಪ್ರಾರಂಭಿಸಿ ದೇವಾಗಮ ಸ್ತೋತ್ರ ನಂತರ ಅಕಲಂಕರ ಅಷ್ಟಶತಿ ಭಾಷ್ಯ ಬರೆದು ನಂತರ ವಿದ್ಯಾನಂದರ ಅಷ್ಟಸಹಸ್ರೀಯನ್ನು ಬರೆಸಲಾಯಿತು. ಈ ಹೊದಿಕೆಯ ಚಿತ್ರ ಗ್ರಂಥದ ವಿಶೇಷತೆಯನ್ನು ಪ್ರಕಟಗೊಳಿಸುವ ಸಲುವಾಗಿ ಆಕರ್ಷಕವಾಗಿ ಬಂದಿತು. ಇದು ನೋಡಿದವರಿಗೆಲ್ಲ ಪ್ರಿಯವಾಗಿ ಕಂಡಿತು. ಹಾಗೇ ಭಗವಾನ್ "ಮಹಾವೀರರು ಹೇಗಾದರು"

ಎಂದು ಪುಸ್ತಕದ ಮೇಲೊದಿಕೆಯ ಚಿತ್ರವನ್ನು ಮಾಡಿಸಿದೆವು. ಇದರಲ್ಲಿ ಭ. ಮಹಾವೀರರು ಬಾಲ್ಯಕಾಲದಲ್ಲಿ ಸರ್ಪದ ಜೊತೆ ಆಟವಾಡುತ್ತಿರುವ ಚಿತ್ರಣ ನಂತರ ಧ್ಯಾನಾವಸ್ಥೆಯ ಚಿತ್ರಣ ಮಾಡಿಸಿ ಮೇಲೆ ಕಮಲಾಸನದಲ್ಲಿ ವಿರಾಜಮಾನರಾಗಿರುವ ಭಗವಂತರ ಅರ್ಹಂತ ಅವಸ್ಥೆಯ ಚಿತ್ರವಿದೆ. ಇದು ಕೂಡ ಬಹಳ ಆಕರ್ಷಕವಾಗಿ ಬಂದಿದೆ.

ಹೀಗೆ ಹಸ್ತಿನಾಪುರದ ತೀರ್ಥಕ್ಷೇತ್ರದ ಚಿತ್ರ - ಬಾಲವಿಕಾಸದ ಚಿತ್ರಣ ಮೊದಲಾದ ಅನೇಕ ಚಿತ್ರಣವನ್ನು ಮಾಡಿಸಿದೆವು "ವೀರಜ್ಞಾನೋದಯ ಗ್ರಂಥಮಾಲೆ"ಯಿಂದ ಪ್ರಕಾಶಿತವಾದ ಗ್ರಂಥ ಮತ್ತು ಪುಸ್ತಕಗಳೆಲ್ಲವು ಆ ಬಾಲಗೋಪಾಲದಲ್ಲಿ ಎಲ್ಲರಿಗೂ ಹಿಡಿಸಿತು. ವಿದ್ವಾಂಸರು, ಹಾಗೇ ಸಾಧುಸಾಧ್ವಿಯರು ಹೊಗಳತೊಡಗಿದರು.

ಕಾರ್ಯವ್ಯಸ್ತತೆ

ಈ ಗ್ರಂಥದ ಲೇಖನ ಕಾರ್ಯವು ನಡೆಯುತ್ತಿದ್ದ ಹಾಗೇ, ಶ್ರಾವಕರ ವಿಶೇಷ ಆಗ್ರಹದಿಂದಾಗಿ ಬೆಳಗ್ಗೆ ಒಂದು ಗಂಟೆ ಪ್ರವಚನವು ನಡೆಯುತ್ತಿತ್ತು. ದೆಹಲಿಯ ಎಲ್ಲಾ ಪ್ರವಚನಗಳು ಕ್ಯಾಸೆಟ್‌ಗಳಾಗಿ ಹೊರಬಂದವು.

ನಿರ್ವಾಣೋತ್ಸವದ ಕಾರ್ಯಕ್ಕಾಗಿ ಆ ದೇಶಭೂಷಣರು ವಿದ್ವಾನಂದರ ಸಾನಿಧ್ಯದಲ್ಲಿ ವಿಚಾರವಿಮರ್ಶೆಯು ಆಗತೊಡಗಿತು. ಈ ಎಲ್ಲದರಲ್ಲೂ ದೇಶಭೂಷಣರ ಅಣತಿಯಂತೆ ನಾನು ಭಾಗವಹಿಸಲೇ ಬೇಕಾಗುತ್ತಿತ್ತು. ಕೆಲವು ಸಲ ತೇರಹ ಪಂಥಿ ಸ್ಥಾನಕವಾಸಿ ಮತ್ತು ಶ್ವೇತಾಂಬರ ಸಂಪ್ರದಾಯದ ಸಾಧು-ಸಾಧ್ವಿಯರ ಜೊತೆಯೂ ವಿಚಾರ ವಿನಿಮಯಗಳಲ್ಲೂ, ಮೀಟಿಂಗ್‌ಗಳಲ್ಲೂ ಭಾಗವಹಿಸುತ್ತಿದ್ದೆ. ಈ ಎಲ್ಲಾ ಕಡೆಯು ನಾನು ಭಾಗವಹಿಸಲು ಮುನಿದ್ವಯರ ಅಭಿಮಾನವೇ ಕಾರಣವಾಗಿತ್ತು.

□

ಐದನೇ ಖಂಡ

ಐದನೇ ಖಂಡ

೬೩

ಹಸ್ತಿನಾಪುರ ತೀರ್ಥಕ್ಷೇತ್ರದ ದರ್ಶನ

ಭಗವಾನ್ ಶಾಂತಿನಾಥರ ಜನ್ಮಭೂಮಿಯಾದ ಹಸ್ತಿನಾಪುರವನ್ನು ದರ್ಶನ ಮಾಡಬೇಕೆಂಬ ಅಭಿಲಾಷೆಯು ಮನದಲ್ಲಿ ಜಾಗೃತವಾಯಿತು. ಸಂಘದಲ್ಲಿದ್ದ ಆರ್ಯಿಕೆಯರೊಡನೆ ಮತ್ತು ಮುನಿಗಳೊಡನೆ ಸಮಾಲೋಚನೆಯನ್ನು ಮಾಡಿದೆ. ಈಗ ಸಂಘದಲ್ಲಿ ಇಬ್ಬರು ಮುನಿಗಳು ಮತ್ತು 6 ಜನ ಆರ್ಯಿಕೆಯರು ಇದ್ದರು. ಹಾಗೇ ದರಿಯಾಗಂಜದ ಲಾಲ ಉಲ್ಫತರಾಯರನ್ನು ಕರೆದು ಕ್ಷೇತ್ರದ ಬಗ್ಗೆ ವಿವರಗಳನ್ನು ತಿಳಿದುಕೊಳ್ಳುತ್ತಾ ಅಲ್ಲಿ ಜಂಬೂದ್ವೀಪದ ನಿರ್ಮಾಣಕ್ಕೆ ಜಾಗ ಸಿಗಬಹುದೇ ಎಂದೂ ಕೇಳಿದ್ದೆ. ಉಲ್ಫತರಾಯ, ಶ್ಯಾಮಲಾಲರೂ ಆಚಾರ್ಯರ ದರ್ಶನಾರ್ಥ ಟೋಂಕಕ್ಕೆ ಬಂದಿದ್ದರಿಂದ ಪರಿಚಯವಿತ್ತು. ಈಗ ಅವರು ಹಸ್ತಿನಾಪುರ ಕ್ಷೇತ್ರ ಕಮಿಟಿಯ ಅಧ್ಯಕ್ಷರಾಗಿದ್ದಾರೆ. ಇವರ ಬಗ್ಗೆ ಮೊದಲೇ ಮಹತಾಬಸಿಂಹಜೀ ಜೌಹರೀ ಹೇಳಿದ್ದರು. ಅವರು ಮಾತಾಜೀ ತಾವು ಮೊದಲು ಹಸ್ತಿನಾಪುರಕ್ಕೆ ದಯಮಾಡಿಸಿ ನಾನು ಅಲ್ಲಿಗೆ ಬಂದು ತಮ್ಮ ಮಂಗಳ ಕಾರ್ಯಕ್ಕೆ ಎಷ್ಟು ಸಾಧ್ಯವೋ ಅಷ್ಟೂ ಸಹಯೋಗವನ್ನು ಕೊಡುತ್ತೇನೆ ಎಂದು.

ನಾನು ಫಾಲ್ಗುಣದಲ್ಲಿ ವಿಹಾರ ಹೊರಟೆ. ಶಾಹದರಾ, ಜೈನವಾಚ ಫ್ಯಾಕ್ಟರಿ, ಗಾಜಿಯಾಬಾದ್, ಮೋತಿನಗರ, ಮೇರಟ ಮತ್ತು ಮವಾನಾ ಮಾರ್ಗವಾಗಿ ಹಸ್ತಿನಾಪುರವನ್ನು ತಲುಪಿದೆವು. ಜೊತೆಯಲ್ಲಿ ಬ್ರಹ್ಮಚಾರಿ, ಬ್ರಹ್ಮಚಾರಿಣಿಯರು ಇದ್ದರು. ಕ್ಷೇತ್ರಕ್ಕೆ ಬಂದು ಭ. ಶಾಂತಿನಾಥರ ದರ್ಶನ ಮಾಡಿ ಮನಸ್ಸು ತುಂಬಿ ಬಂದಿತು. ಪ್ರಾಕೃತಿಕ ಸೌಂದರ್ಯವು ಆಹ್ಲಾದಕಾರಿಯಾಗಿತ್ತು. ಮಂದಿರದ ಉತ್ತರದ ಕಡೆಯಿಂದ ಮೊದಲ, ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ನಶಿಯಾದ ದರ್ಶನ ಮಾಡಿದೆವು. ಭ. ಶಾಂತಿನಾಥ, ಕುಂಥುನಾಥ, ಅರಹನಾಥರ ಗರ್ಭ, ಜನ್ಮ ತಪ, ಮತ್ತು ಜ್ಞಾನ ಈ ನಾಲ್ಕು ಕಲ್ಯಾಣಗಳು ನಡೆದ ಪವಿತ್ರ ಭೂಮಿಯ ವಂದನೆಯಿಂದ ಮನಸ್ಸಿಗೆ ಸಂತೋಷವಾಯಿತು. ನಶಿಯಾಗಳಲ್ಲಿ ಚರಣಗಳ ಬದಲಿಗೆ ಸಾಧಿಯಾ ಮಾಡಲಾಗಿದೆ.

ಸಾಧಿಯಾಗೆ ವಂದನೆ ಮಾಡುವುದು ಮನಸ್ಸಿಗೆ ಹಿತಕೊಡಲಿಲ್ಲ. ಇದೇ ವಿಷಯವನ್ನು ಅಲ್ಲಿಯ ಮಂತ್ರಿಯಾದ ಸುಕುಮಾರ ಚಂದರಲ್ಲೂ ಹೇಳಿದೆ. ಅದಕ್ಕೆ ಅವರು ಮುಂದಿನ ಮೀಟಿಂಗ್‌ನಲ್ಲಿ ವಿಚಾರ ಮಾಡಿ ಚರಣ ಚಿಹ್ನೆಗಳನ್ನು ಮಾಡಿಸುತ್ತೇವೆ ಎಂದರು. ಆಚಾರ್ಯ ಧರ್ಮಸಾಗರರು 1975ರಲ್ಲಿ ಹೋಗಿದ್ದಾಗಲು ಚರಣ ಚಿಹ್ನೆಗಳನ್ನು ಮಾಡಿಸಲು ಪ್ರೇರಣೆ ಕೊಟ್ಟಿದ್ದರು. ಸ್ಥಾಪನೆ ಆಗಿರಲಿಲ್ಲ. ಮತ್ತೊಮ್ಮೆ ಅವರು ದರ್ಶನಕ್ಕೆ ಹೋಗಲೇ ಇಲ್ಲ. ಚರಣಗಳಿಲ್ಲದ ಮಂದಿರಗಳಲ್ಲಿ ಯಾವುದಕ್ಕೆ ವಂದಿಸುವುದು ಎಂದುಕೊಂಡರು. 1985ರಲ್ಲಿ ಚರಣಗಳನ್ನು ಸ್ಥಾಪಿಸಿದರು. ಇವತ್ತೂ ನೋಡಲು ಸಂತೋಷವಾಗುತ್ತದೆ. ಫಾಲ್ಗುಣದ ಅಷ್ಟಾಹ್ನಿಕದಲ್ಲಿ ಮುನಿಶ್ರೀ ಸಂಭವಸಾಗರಜೀಯವರು 8 ಉಪವಾಸಗಳನ್ನು ಮಾಡಿದರು. ಆ ಸಮಯದಲ್ಲಿ ಬಂದಿದ್ದ, ಜಯಚಂದಜೀ,

ಜಯಕುಮಾರಜೀ, ಬೂಲಚಂದಜೀ ಎಲ್ಲ 8-10 ದಿನ ಇದ್ದು ಮುನಿಗಳಿಗೆ ಆಹಾರ ದಾನ, ವೈಯ್ಯಾವೃತ್ತಿಯ ಲಾಭ ಪಡೆದರು.

ದೊಡ್ಡ ಮಂದಿರದ ಮೂಲವೇದಿಕೆಯ ಮೇಲೆ ಭ. ಶಾಂತಿನಾಥರ ಪ್ರತಿಮೆಗೆ ಪ್ರತಿ ದಿನ ಸುಶೀಲ, ಶೀಲ, ಮೊದಲಾದವರು ಪಂಚಾಮೃತ ಅಭಿಷೇಕ ಮಾಡುತ್ತಿದ್ದರು. ಜನರು ಪ್ರೇಮದಿಂದ ನೋಡುತ್ತಿದ್ದರು. ಮೇರ್ಠ, ಮವಾನಾ ಕಡೆಯಿಂದಲೂ ಶ್ರಾವಕರು ಬರತೊಡಗಿದ್ದುದನ್ನು ಕಂಡು ಪ್ರಮುಖ ಬ್ರಹ್ಮಚಾರಿ ಹುಕುಮಚಂದಜೀ ಬ್ರ. ಸುಶೀಲರು ಇದರಿಂದ ಪ್ರಸನ್ನ ಚಿತ್ತರಾದರು.

ಹಸ್ತಿನಾಪುರದಲ್ಲಿ ಜಂಬೂದ್ವೀಪದ ನಿರ್ಮಾಣದ ರೂಪರೇಖೆ

ನನ್ನ ಜಂಬೂದ್ವೀಪದ ನಿರ್ಮಾಣದ ಬಗ್ಗೆ ಆಲೋಚನೆ ನಡೆಯುತ್ತಿತ್ತು. ಚೈತ್ರ ಕೃಷ್ಣ ಪಾಡ್ಯದ ದಿನ ಇಲ್ಲಿ ಜಾತ್ರೆ ನಡೆಯುತ್ತದೆ. ರಥಯಾತ್ರೆ ಪಾಂಡುಕಶಿಲೆಯ ಹಿಂಭಾಗಕ್ಕೆ ಬರುತ್ತಲೇ ಅಲ್ಲಿ ಉಪಸ್ಥಿತರಿದ್ದ ಜನ ಸಮುದಾಯಕ್ಕೆ ಸುಕುಮಾರಚಂದ ಮೊದಲಾದವರ ಪ್ರೇರಣೆಯಿಂದ ಮೋತಿಚಂದನು "ಜಂಬೂದ್ವೀಪ"ದ ನಕ್ಷೆಯನ್ನು ಹರಡಿ ತೋರಿಸಿದೆನು. ನೋಡಿದ ಜನರೆಲ್ಲರು ಅದರಿಂದ ಪ್ರಭಾವಿತರಾದರು. ಎಲ್ಲರು ಒಂದೇ ಸ್ವರದಿಂದ ಈ ಅಪೂರ್ವ ರಚನೆಯು ಹಸ್ತಿನಾಪುರದ ಪುಣ್ಯಭೂಮಿಯಲ್ಲಿಯೇ ಆಗಬೇಕೆಂದು ಬಯಸಿದರು.

ಮಹಾಮಂತ್ರಿ ಸುಕುಮಾರ ಚಂದಜೀ, ಪಾಂಡುಕ ಶಿಲೆಯ ಹತ್ತಿರವೇ ವಿಶಾಲವಾದ ಜಾಗ ತೋರಿಸಿದರು. ಭ. ಮಹಾವೀರ ಜಲಮಂದಿರದ ಶಿಲಾನ್ಯಾಸವಾಗಬೇಕಾಗಿದೆ. ಆದರೆ ಜನರು ಮೊದಲು ನೀವು ಜಂಬೂದ್ವೀಪಕ್ಕಾಗಿ ಜಾಗವನ್ನು ಆರಿಸಿಕೊಂಡರೆ ನಂತರ ಜಲಮಂದಿರದ ಶಿಲಾನ್ಯಾಸವನ್ನು ಮಾಡಿಕೊಳ್ಳುತ್ತೇವೆ ಅಂದರು. ಆಗಲೇ ಅಧ್ಯಕ್ಷ ಉಲ್ಪತರಾಯರೊಡನೆ ವಿಚಾರ ವಿನಿಮಯವನ್ನು ಮಾಡಲಾಗಿ ಅವರು ಮಾತಾಜೀ ತಾವು ಇದರ ರಚನೆಗಾಗಿ ಬೇರೆಲ್ಲಿಯು ಜಾಗ ತೆಗೆದುಕೊಳ್ಳಬೇಡಿ ಕಮಿಟಿಯ ಅಧ್ಯಕ್ಷನಾಗಿ ಹೇಳುತ್ತಿಲ್ಲ ನಿಮಗೆ ಚಿರಪರಿಚಿತನಾದ ಭಕ್ತನಂತೆ ಹೇಳುತ್ತಿದ್ದೇನೆ ನಿಜವಾಗಿಯು ಈ ಕಮಿಟಿಯಲ್ಲಿ ಹಳೆಯ ವಿಚಾರಗಳ ಸಾಧು ಸಾಧ್ವಿಯರ ಬಗ್ಗೆ ಶ್ರದ್ಧೆ ಇರುವವರು ಬಹಳ ಕಡಿಮೆ ಜನ. ಎಲ್ಲರೂ ಆಧುನಿಕ ವಿಚಾರಗಳಿಂದ ಪ್ರಭಾವಿತರಾಗಿರುವರೇ ಜಾಸ್ತಿ. ಆದ್ದರಿಂದ ತಾವು ಕಮಿಟಿಯಿಂದಲೇ ಸ್ವತಂತ್ರವಾಗಿಯೇ ಜಾಗವನ್ನು ಖರೀದಿಸಿ ಜಂಬೂದ್ವೀಪದ ನಿರ್ಮಾಣ ಮಾಡುವುದು ಸೂಕ್ತ. ಇದೇ ವಿಷಯವನ್ನು ಅವರು ಹಲವಾರು ಬಾರಿ ಹೇಳಿದ್ದರು. ಈ ಕ್ಷೇತ್ರದ ಪದಾಧಿಕಾರಿಗಳು ಇದರ ಬಗ್ಗೆ ಆಸಕ್ತಿವಹಿಸಿದಾಗಲೂ ನಾನು ದೆಹಲಿಗೆ ಹೋಗಿ ವಿಚಾರ ಮಾಡಿ ನಿರ್ಣಯ ಕೈಕೊಳ್ಳುತ್ತೀನಿ ಎಂದೆ.

ಹಸ್ತಿನಾಪುರದಿಂದ ಮತ್ತೇ ವಾಪಸ್ಸು ಹೊರಟವಳು ಮೇರಠ್‌ನಲ್ಲಿ 4-5 ದಿನ ತಂಗಿದ್ದೆ. ಅಲ್ಲಿಯ ಕೆಲವು ಮಹಾನುಭಾವರು ನಿರ್ಮಾಣ ಸಂಬಂಧಿ ಚರ್ಚೆ ಮಾಡಿದರು. ಮೋತಿಚಂದನು ಆರ್ಕಿಟೆಕ್ಟ್ ಹತ್ತಿರ ಮಾತಾಡಿ ಸುಮೇರು ಪರ್ವತಕ್ಕೆ ಸುಮಾರು 2 ½ ಲಕ್ಷದ ಅಂದಾಜು ಬರಬಹುದೆಂಬುದನ್ನು ಹೇಳಿದನು. ಸುಮೇರು ಪರ್ವತದ 16 ಚೈತ್ಯಾಲಯದಲ್ಲಿ ಪ್ರತಿಯೊಂದಕ್ಕೂ 15 ಸಾವಿರ 15 ಸಾವಿರದ ಕೊಡುಗೆಯ ಬಂದರೂ ಸುಮೇರು ಪರ್ವತ ಸಿದ್ಧವಾಗುತ್ತದೆ. ಈ ಮಾತನ್ನು ಕೇಳಿದ ಮೇರಠ್‌ನ ಜಯಕುಮಾರ ಸರಾಫರ ಪುತ್ರ ಮೂಲಚಂದರು ಬಂದು ಚೈತ್ಯಾಲಯಕ್ಕೆ ಒಪ್ಪಿಕೊಂಡರು. ಇದಕ್ಕೆ ಮೊದಲೇ ಮೋತಿಚಂದನು 25,000 ರೂ. ಗಳನ್ನು ದಾನವಾಗಿ ಕೊಟ್ಟಿದ್ದರು. ಮೊದಲನೆಯ ಚೈತ್ಯಾಲಯ ಇವರ ಹೆಸರಿಗೂ, ಎರಡನೆಯದು ಜಯಕುಮಾರರ ಹೆಸರಿನಲ್ಲೂ ನಿಶ್ಚಿತವಾಯಿತು.

ಶೀಘ್ರಗತಿಯಿಂದ ದೆಹಲಿಗೆ

ಮೇರಠನಲ್ಲಿಯೇ ಆಚಾರ್ಯ ಧರ್ಮಸಾಗರರು ದೆಹಲಿಯ ಹತ್ತಿರಕ್ಕೆ ಬಂದಿರುವ ಸುದ್ದಿ ತಿಳಿಯಿತು. ಹೀಗಾಗಿ ಆಚಾರ್ಯರಿಗಿಂತ ಮೊದಲು ನಾವು ತಲುಪುವುದು ಅನಿವಾರ್ಯವಾದ್ದರಿಂದ ದಿನದಲ್ಲಿ ಎರಡು ಹೊತ್ತು ನಡೆಯಲು ನಿರ್ಧರಿಸಿದೆವು. ಮೇರಠನಿಂದ ಹೊರಟು ಎರಡು ಹೊತ್ತು ನಡೆಯುತ್ತಿದ್ದುದ್ದರಿಂದ ರತ್ನಮತಿಯ ಕಾಲುಗಳಲ್ಲಿ ಬಾವುಬಂದಿತು. ತೊಡೆಯವರೆಗೂ ವಿಪರೀತ ನೋವು ಅವರನ್ನು ಕಾಡತೊಡಗಿತು. ಹೇಗೋ ಕೂತು ನಿಂತು ಒಟ್ಟಿನಲ್ಲಿ ದೆಹಲಿ ತಲುಪಿದೆವು. ನನಗೆ ಅವರ ಆರೋಗ್ಯದ ಕಡೆಗಿಂತ ಗುರುಗಳ ಕಡೆಗೆ ಗಮನ ಕೊಡಬೇಕಾಯಿತು. ಅವರಿಗೂ ದೀಕ್ಷಾ ಗುರುಗಳನ್ನು ನೋಡುವ ಆತುರದಿಂದ ಖುಷಿಯಾಗೇ ಇದ್ದರು.

ದೆಹಲಿಯ ಪಹಾಡಗಂಜದ ಹತ್ತಿರಕ್ಕೆ ಮುನಿಗಳ ದರ್ಶನ ಮಾಡಲು ನಾವೆಲ್ಲ ಹೊರಟೆವು. 1971ರಲ್ಲಿ ಮುನಿಗಳಿಂದ ಅನುಮತಿ ಪಡೆದು ಬಂದವರು ಮೂರು ವರ್ಷಗಳನ್ನು ಕಳೆದಿದ್ದೆವು. ಸಂಘವು ಲಾಲಮಂದಿರದಲ್ಲೇ ತಂಗಿತ್ತು. ದಿಗಂಬರ ಜೈನ ಅತಿಥಿ ಭವನ ಅಂದರೆ ಕಮ್ಮೋಜಿಯವರ ಧರ್ಮಶಾಲೆಯಲ್ಲಿ ಆಚಾರ್ಯ ರತ್ನ ಶ್ರೀ ದೇಶಭೂಷಣ ಮಹಾರಾಜರು ಸಂಘ ಸಹಿತ ಆಸೀನರಾಗಿದ್ದರು.

ಈ ಎರಡು ಸಂಘದ ಆಚಾರ್ಯರು ಅವರ ಹಿಂದೆ ಉಳಿದ ಮುನಿ, ಆರ್ಯಿಕೆಯರು ಆಹಾರಕ್ಕೆ ಹೊರಡುವ ದೃಶ್ಯವನ್ನು ಎಲ್ಲರು ಶ್ರದ್ಧೆಯಿಂದ ಕಣ್ಣುತುಂಬಿಕೊಳ್ಳುತ್ತಿದ್ದರು. ನಾನು ಇಲ್ಲಿಯ ನಮಿಸಾಗರ ಔಷಧಾಲಯದ ಮೇಲೆ ತ್ಯಾಗಿಭವನದಲ್ಲಿ ಇದ್ದೆವು. ಇಲ್ಲಿಯೇ "ಜಂಬೂದ್ವೀಪದ ಮಾದರಿ" ರೆಡಿಯಾಗಿ ಬಂದಿತು. ನಿರ್ವಾಣೋತ್ಸವಕ್ಕೆ ಉಪಯುಕ್ತವಾದ ಪುಸ್ತಕದ ರಚನೆಯಲ್ಲಿ ತೊಡಗಿದ್ದೆ.

ಹಸ್ತಿನಾಪುರ ಕ್ಷೇತ್ರಕ್ಕೆ ಪುನರಾಗಮನ

ಒಂದು ದಿನ "ಜೈನ ತ್ರಿಲೋಕ ಶೋಧ ಸಂಸ್ಥಾನದ ವಿಶೇಷ ಸದಸ್ಯರುಗಳನ್ನು ಕರೆಸಿ ವಿಚಾರ ವಿನಿಮಯಮಾಡಿದೆ. ಲಾಲ ಶ್ಯಾಮಲಾಲಜೀ, ಕೈಲಾಸಚಂದಜೀ ವೈದ್ಯ ಶಾಂತಿಪ್ರಸಾದಜೀ, ಡಾII ಕೈಲಾಸಚಂದಜೀ ಎಲ್ಲರೂ ಒಂದೇ ಅಭಿಪ್ರಾಯಪಟ್ಟರು. ಅದೇ ಕ್ಷೇತ್ರದಲ್ಲಿ ಅಲ್ಲಿಯವರ ಜಾಗವನ್ನು ಬಿಟ್ಟು ಬೇರೆಯವರಿಂದಲೇ ಜಾಗವನ್ನು ಕೊಂಡುಕೊಂಡು ಜಂಬೂದ್ವೀಪದ ನಿರ್ಮಾಣ ಮಾಡುವುದು ಒಳ್ಳೆಯದು ಎಂದು.

ಪುನಃ ಸಂಸ್ಥಾನದ ಜನರ ಪ್ರಾರ್ಥನೆಯಿಂದ ನಾನು ವೈಶಾಖಮಾಸದಲ್ಲಿ ಹಸ್ತಿನಾಪುರಕ್ಕೆ ವಿಹಾರ ಹೊರಡಬೇಕಾಯಿತು. ಅಸ್ವಸ್ಥರಾಗಿದ್ದ ರತ್ನಮತಿ ಮಾತಾಜೀಯವರನ್ನು ಧರ್ಮಸಾಗರರ ಸಂಘದಲ್ಲಿಯೇ ಬಿಟ್ಟು ಯಶೋಮತಿ ಆರ್ಯಿಕೆಯವರನ್ನು ಜೊತೆಯಲ್ಲಿ ಕರೆದುಕೊಂಡು ಹೊರಟೆ. ಸಂಜೆಯೇ ದೇಶಭೂಷಣರ ಆಶೀರ್ವಾದವನ್ನು ಪಡೆದುಕೊಂಡಿದ್ದೆ. ಪುನಃ ಬೆಳಗ್ಗೆ 5 1/2 ಗಂಟೆಗೆ ಭಗವಂತರ ದರ್ಶನಕ್ಕಾಗಿ ಕಮ್ಮೋಜಿ ಧರ್ಮಶಾಲೆಗೆ ಬಂದಾಗ ಆಗತಾನೇ ಆಚಾರ್ಯರು ಶೌಚಕ್ಕಾಗಿ ಹೊರಗಡೆ ಹೋಗಿದ್ದರು. ನನಗೆ ಮತ್ತೊಮ್ಮೆ ದರ್ಶನ ಮಾಡುವ ಅಭಿಲಾಷೆ. ಒಂದು ಗಂಟೆಯಾದರೂ ಬರಲಿಲ್ಲ. ಇನ್ನು ಬಿಸಿಲು ಏರುತ್ತದೆ ಎಂದು ಕಾರ್ಯಕರ್ತರು ಹೊರಡಲು ಅವಸರಿಸತೊಡಗಿದರು ಇನ್ನೇನು ಮಾಡುವದೆಂದು ಮನದಲ್ಲೇ ವಂದನೆ ಮಾಡುತ್ತಾ ಎದ್ದು ರಸ್ತೆಗೆ ಬರುವಷ್ಟರಲ್ಲಿ ಆಚಾರ್ಯರ ದರ್ಶನವಾಯಿತು. ಮನಸ್ಸಿಗೆ ಬಹಳ ಸಮಾಧಾನವಾಗಿ ಅವರ ಚರಣಗಳನ್ನು ನಮೋಸ್ತು ಹೇಳುತ್ತಾ ಸ್ಪರ್ಶಿಸಿದೆ. ಆಚಾರ್ಯರು ಆಶೀರ್ವಾದ ಹೇಳುತ್ತಾ ನನ್ನ ಮಸ್ತಕದ ಮೇಲೆ ಪಿಂಛಿಯನ್ನು ಇಟ್ಟಾಗ ಮನದಲ್ಲಿ ಇದ್ದಕ್ಕಿದ್ದಂತೆ ಯತೀಶ್ವರರನ್ನು ನೋಡುತ್ತಲೇ ಯುದ್ಧಕ್ಕೆ ಹೊರಟಿದ್ದ ಶ್ರೀಕೃಷ್ಣನು ಅರ್ಜುನನಿಗೆ ಹೇಳಿದ ವಾಕ್ಯ ನೆನಪಿಗೆ ಬಂದಿತು.

ಆರುರೋಹ ರಥಂ ಪಾರ್ಥ, ಗಾಂಡೀವಂ ಚಾಪಿ ಧಾರಯ ।
ನಿರ್ಜಿತಾಂ ಮೇದಿನೀಂ ಮನ್ಯೇ, ನಿರ್ಗ್ರಂಥೋ ಯತಿರಗ್ರತಃ ॥

ಹೇ ಅರ್ಜುನ, ನೀನು ರಥವನ್ನು ಏರಿ ಗಾಂಢೀವ ಧನುಸ್ಸನ್ನು ಧಾರಣೆ ಮಾಡಿ ನಾನು ಪೃಥ್ವಿಯನ್ನೇ ಗೆಲ್ಲುತ್ತೇನೆ ಎಂದು ಭಾವಿಸುತ್ತಿದ್ದೀಯ. ಆದರೆ ಎದುರಿಗೆ ನಿರ್ಗ್ರಂಥ ಮುನಿಗಳು ಕಾಣುತ್ತಿದ್ದಾರೆ. ನೋಡು ಎಂದ ಈ ಸೂಕ್ತಿ ನೆನಪಾಗುತ್ತಲೇ ನನಗೆ ಈ ಸಲದ ಹಸ್ತಿನಾಪುರದಲ್ಲಿ ನನ್ನ ಕಾರ್ಯದಲ್ಲಿ ಸಫಲತೆ ಸಿಕ್ಕೇ ಸಿಗುತ್ತದೆ ಎಂದು ಸೂಚನೆ ಸಿಕ್ಕಂತಾಯಿತು. ವೈಶಾಖ ಶುಕ್ಲ ಪೂರ್ಣಿಮೆಯ ದಿನ ಅಲ್ಲಿಂದ ಶಾಹದರಾ ಜೈನವಾಚ ಫ್ಯಾಕ್ಟರಿ, ಗಾಜಿಯಾಬಾದ್ ಮೋದೀನಗರ ಮೇರಟ, ಮವಾನಾ ಮೂಲಕ ಜ್ಯೇಷ್ಠ ಕೃಷ್ಣ ತ್ರಯೋದಶಿಯಂದು ಹಸ್ತಿನಾಪುರಕ್ಕೆ ಬಂದೆವು. ಇಲ್ಲಿ ಜ್ಯೇಷ್ಠ ಕೃಷ್ಣ ಚತುರ್ದಶಿಯಂದು ಭ. ಶಾಂತಿನಾಥರ ಮೋಕ್ಷ ಕಲ್ಯಾಣವಾದ್ದರಿಂದ ನಿರ್ವಾಣದ ದಿನ ಒಂದು ಚಿಕ್ಕ ಜಾತ್ರೆಯೇ ನಡೆಯುತ್ತದೆ.

ಜಂಬೂದ್ವೀಪ ನಿರ್ಮಾಣದ ಸ್ಥಳ

ನಾನು ದೊಡ್ಡ ಮಂದಿರದ ಹತ್ತಿರದಲ್ಲೇ ಇರುವ ಒಂದು ಕೊಠಡಿಯಲ್ಲಿ ತಂಗಿದ್ದೆ. ನನ್ನ ಜೊತೆ ಒಬ್ಬ ಆರ್ಯಿಕೆ, ಬ್ರ. ಭುಹಾರಾಬಾಯಿ, ಬ್ರ. ಶೀಲಾಬಾಯಿ ಇಬ್ಬರು ಸಹೋದರಿಯರು ಮತ್ತು ಮೋತಿಚಂದ್ರ ಇದ್ದರು. ಸಂಘದ ಚೈತ್ಯಾಲಯದ ಪ್ರತಿಮೆಯನ್ನು ಮಂದಿರದಲ್ಲೇ ಇಡಲಾಗಿತ್ತು. ಮಂದಿರದ ಮ್ಯಾನೇಜರ ಆತ್ಮರಾಮ ಮತ್ತು ಅನ್ಯ ಪದಾಧಿಕಾರಿಗಳಾದ ಬೂಲಚಂದ, ಲಖಮೀಚಂದ ಮುಂತಾದವರ ಸಹಕಾರದಿಂದ ಜಾಗ ಹುಡುಕಲು ತೊಡಗಲಾಯಿತು.

ಮಂದಿರದಿಂದ ಒಂದು ಫರ್ಲಾಂಗ್ ದೂರದಲ್ಲಿ ತೋಟಕ್ಕೆ ಸೇರಿದಂತಿರುವ ಜಾಗವು ನನ್ನ ಕಣ್ಣುಗಳಿಗೆ ಬಿದ್ದಿತು. ಈ ಕಡೆಯಿಂದಲೇ ಜನರು ನಶಿಯಾಕ್ಕೆ ದರ್ಶನಕ್ಕೆ ಹೋಗುತ್ತಿದ್ದರು. ಇಲ್ಲಿ ಮಹೇಶಚಂದರನ್ನು ಡೆಪ್ಟಿ ಸಾಹೇಬ ಎಂದು ಕರೆಯುತ್ತಿದ್ದರು. ಅವರು ಕೂಡ ಕೆಲಸಕ್ಕಾಗಿ ಪೂರ್ಣ ಸಹಕಾರ ಕೊಡಲು ಸಿದ್ಧರಿದ್ದರು. ಅವರ ಹೆಂಡತಿ ಕುಸುಮಲತ ನನ್ನ ಜೊತೆ ಕುಳಿತು ಇದೇ ಚರ್ಚೆ ಮಾಡುತ್ತಿದ್ದರು. ನಾವು ಈ ತೋಟದ ಕಡೆ ಎಲ್ಲ ಸುತ್ತಾಡಿ ಬರುತ್ತಿದ್ದೆವು.

ಈ ಕಡೆ ಒಬ್ಬ ಬುದ್ಧ ಚಮ್ಮಾರನ ಗದ್ದೆ ಇತ್ತು. ಅವನು ಮಾರುವುದರಲ್ಲಿ ಇದ್ದುದ್ದರಿಂದ ಬೂಲಚಂದಲಾಲ ಅವರು ಬೇರೆ ಜಾಗ ನೋಡಿದ್ದರು. ಆಷಾಢದಲ್ಲಿಯೇ ಬುದ್ಧನ ಗದ್ದೆ ವ್ಯಾಪಾರವಾಗುವುದರಲ್ಲಿ ಇತ್ತು. ಆದರೆ ಅವನ ಹೆಂಡತಿ ಒಪ್ಪಿಕೊಳ್ಳಲಿಲ್ಲ. ನನಗೆ ದೆಹಲಿಗೆ ಬೇಗ ಹೋಗುವ ಆಕುಲತೆ. 1974ರ ನಿರ್ವಾಣೋತ್ಸವದ ಚಾತುರ್ಮಾಸದಲ್ಲೇ ದೆಹಲಿಯವರಿಗೆ ಆಶ್ವಾಸನೆ ಕೊಟ್ಟಿದ್ದೆ. ದೆಹಲಿಯಲ್ಲಿ ಇಬ್ಬರು ಆಚಾರ್ಯರ ಸಂಘವಿತ್ತು (ಆಚಾರ್ಯ) ವಿದ್ಯಾನಂದಜೀಯವರು ಇದ್ದರು. ಎಲ್ಲರು ನನ್ನನ್ನು ಚಾತುರ್ಮಾಸಕ್ಕೆ ಅಲ್ಲೇ ಇರಲು ಬಯಸುತ್ತಿದ್ದರು. ಇಲ್ಲಿ ನನ್ನ ಆರೋಗ್ಯ ಕೂಡ ಹದಗೆಡತೊಡಗಿತ್ತು. ಆಷಾಢದ ಬಿಸಿಲು ಕೂಡ ಬಹಳವಿದ್ದುದ್ದರಿಂದ ದೆಹಲಿ ತಲುಪಲು ಕಡಿಮೆ ಎಂದರೂ ಹದಿನೈದು ದಿನಗಳು ಬೇಕಾಗುತ್ತಿತ್ತು.

ಬೂಲಚಂದಜೀ ಬಂದು ನನ್ನಲ್ಲಿ ನಿವೇದಿಸಿದರು. ಹಾಗೇ ಪಂ. ಹುಕುಮಚಂದಜೀ ಅವರೂ ಹೇಳಿದರು. ಮಾತಾಜೀ ತಾವು ಚಾತುರ್ಮಾಸವನ್ನು ಇಲ್ಲಿಯೇ ಮಾಡಿರಿ ಎಂದು ಕೇಳಿಕೊಂಡರು. ನಾನು ನಿರಾಕರಿಸಿದೆ. ಆಗ ಬೂಲ್‌ಚಂದಜೀ ತಾವು ಈಗ ವಿಹಾರ ಮಾಡಿ ಜಮೀನು ಖರೀದಿಸುವ ಜವಾಬ್ದಾರಿ ನಾನು ವಹಿಸಿಕೊಳ್ಳುತ್ತೇನೆ ಎಂದರು. ನಾನೂ ಯೋಚಿಸಿ ಸರಿ ಎಂದೆ.

ಜಂಬೂದ್ವೀಪ ವಿಧಾನದ ಪ್ರಥಮ ರಚನೆ

ಅದೇ ದಿನ ರಾತ್ರಿ ಸಾಮಾಯಿಕವಾದ ಮೇಲೆ ಜಂಬೂದ್ವೀಪದ ಪೂಜೆ ಮಾಡಲು ಕುಳಿತುಕೊಂಡೆ. ರಾತ್ರೆ ಒಂದು ಎರಡು ಗಂಟೆಯವರೆಗೂ ಪೂಜೆ ಮಾಡುತ್ತಾ 78 ಚೈತ್ಯಾಲಯಗಳಿಗೂ 78 ಅರ್ಘ್ಯ ಎತ್ತಿ ಪುನಃ ಮಲಗಿದೆ. ಬೆಳಗಿನ ಜಾವ 4 ಗಂಟೆಗೆ ಎದ್ದು ಸಾಮಾಯಿಕವೆಲ್ಲ ಆದ ಮೇಲೆ ಪುನಃ ಪೂರ್ಣಾರ್ಘ್ಯ ಮಾಡಿ ಜಯಮಾಲೆ ಹೇಳಿದೆ. ಪೂಜೆ ಪೂರ್ಣವಾಗುತ್ತಲೇ ಮೋತಿಚಂದನು ಬಂದು ಹೇಳಿದನು. ಮಾತಾಜೀ ಬುದ್ಧನ ಜಾಗದ ಪಕ್ಕದಲ್ಲಿನ ರಸ್ತೆಯ ಬದಿಯ ಒಂದು ಚಿಕ್ಕ ಗದ್ದೆಯು ಬೇರೆಯವರಿಗೆ ಸೇರಿದೆ. ಅದು ವ್ಯಾಪಾರವಾಗಿದೆ ಇಂದೇ ಕರಾರು ಮಾಡಲು ಸಿದ್ಧವಿದ್ದಾರೆ ಎಂದರು. ನಾನು ಸಂತೋಷದಿಂದ ಒಪ್ಪಿಕೊಂಡೆ.

ಬೆಳಗ್ಗೆ 9 ಗಂಟೆಯ ಸಮಯದಲ್ಲಿ ಆಹಾರಕ್ಕಾಗಿ ಮಹೇಶಚಂದ್‌ರವರಲ್ಲಿ ನಿಂತಿದ್ದೆವು. ಮೋತಿಚಂದ ಆಹಾರ ಕೊಡುತ್ತಿದ್ದರು. ಆಗ ಅಲ್ಲಿಗೆ ಬಂದ ಸುಕುಮಾರ ಚಂದನು ಅವರನ್ನು ಕರೆದು ಹೇಳಿದರು. ಮೋತಿಚಂದಜೀ ಆ ಜಾಗದ ರೈತನಿಗೆ ಮುಂಗಡ ನೂರು ರೂಪಾಯಿ ಕೊಟ್ಟಿದ್ದೇನೆ. ನಿಮ್ಮ ಜಂಬೂದ್ವೀಪದ ರಚನೆಯ ಜಾಗ ಗ್ಯಾರಂಟಿ ಆಯಿತು ಎಂದರು. ಕೇಳಿ ಖುಷಿ ಆಯಿತು. ಮಾರನೆಯ ದಿನವೇ ಕಛೇರಿಗೆ ಹೋಗಿ ಮೋತಿಚಂದನು ಮುಂಗಡ ಕೊಟ್ಟು ಬಂದ ಮೇಲೆ ನಾನು ನಾಳೆ ಆಷಾಢ ಶುಕ್ಲ ತೃತೀಯ ದಿನ 22.6.1974ರಂದು ಸುದರ್ಶನ ಮೇರುವಿನ ಶಿಲಾನ್ಯಾಸ ಮಾಡಿಯೇ ವಿಹಾರ ಮಾಡುತ್ತೇನೆ ಎಂದು ನಿರ್ಣಯ ಕೈಕೊಂಡೆ. ಮುಂಗಡ ಹಣ ಕೊಡಲು ಸೌಭಾಗ್ಯವತಿ ಕುಸುಮಲತ ಬಹಳ ಸದ್ಭಾವನೆಯಿಂದ 1001 ರೂ. ಗಳನ್ನು ತಂದು ಮೋತಿಚಂದನ ಕೈಯಲ್ಲಿ ಕೊಡುತ್ತಾ ಹೇಳಿದರು. ಈ ಶುಭ ಕಾರ್ಯಕ್ಕಾಗಿ ಈ ನನ್ನ ಅಲ್ಪ ಕಾಣಿಕೆಯನ್ನು ಈ ಶುಭ ಪ್ರಸಂಗದಲ್ಲಿ ಕೊಡುತ್ತಿದ್ದೇನೆ ಎಂದರು.

ಸುದರ್ಶನ ಮೇರುವಿನ ಶಿಲಾನ್ಯಾಸ

ಅದೇ ದಿನ ಒಂದು ಪಾಂಪ್ಲೆಟ್ ಅಚ್ಚು ಹಾಕಿಸಲಾಯಿತು. ಮೇರಠದ ಜಯಕುಮಾರ ಸರಾಫ ಜೈನರವರು ಸಪರಿವಾರವಾಗಿ ಆಸಕ್ತಿಯಿಂದ ಬಂದಿದ್ದರು. ಅವರಿಗೆ ಶಿಲಾನ್ಯಾಸ ಮಾಡುವ ಅವಕಾಶ ಸಿಕ್ಕಿತು. ಮಂಗಳ ವಾತಾವರಣದಲ್ಲಿ ಶಿಲಾನ್ಯಾಸ ವಿಧಿ ಮುಗಿಯಿತು. ಅದೇ ದಿನ ಬರೇ ಹತ್ತು ಅಡಿ ಆಳದಲ್ಲೇ ನೀರು ಬಂದಿತು. ಅಲ್ಲೇ ಚೌಕ ಮಾಡಿಸಿ ನಾನು ಅಲ್ಲೇ ನಿಂತೆ. ಮೋತಿಚಂದ ಮತ್ತು ಕು. ಶೀಲರೇ ಶಿಲಾನ್ಯಾಸದ ಮಂತ್ರವನ್ನು ಓದಿ ಪೂರ್ಣಗೊಳಿಸಿದರು. ಆಗ ನಿರ್ಮಲಸಾಗರರ ಶಿಷ್ಯ ಶ್ರೀ ಶಾಂತಿಸಾಗರ ಮಹಾರಾಜರು ಅಲ್ಲೇ ಇದ್ದರು.

ದೆಹಲಿಯ ಕಡೆ ಪ್ರಯಾಣ

ನಂತರ ಆಹಾರ ಮುಗಿಸಿ ನಾನು ದೆಹಲಿಯ ಕಡೆಗೆ ಪ್ರಯಾಣ ಬೆಳೆಸಿದೆ, ಅಕ್ಕ ಪಕ್ಕದ ಮೊಹಲ್ಲೆಯ ಬಡಾವತ, ಸರಧನಾ ಮೊದಲಾದ ಕಡೆಯ ಶ್ರಾವಕರ ವಿಶೇಷ ಒತ್ತಾಯದಿಂದ ಇದೇ ಮಾರ್ಗದಲ್ಲಿ ಹೊರಟೆ. ಎರಡು ಹೊತ್ತು ಪ್ರಯಾಣ ಮಾಡುತ್ತಿದ್ದೆವು. ಯಾವುದೋ ಊರಿನಲ್ಲಿ ಆಹಾರ, ಎಲ್ಲೋ ವಿಶ್ರಾಂತಿ. ಹೀಗೆ 7-8 ಮೈಲಿಗಿಂತ ಜಾಸ್ತಿ ನಡೆಯಲು ನನ್ನಲ್ಲಿ ಶಕ್ತಿ ಇರಲಿಲ್ಲ. ಇಲ್ಲಿಂದ ದೆಹಲಿಗೆ 90 ಕಿಲೋಮೀಟರ್ ಇದ್ದರೂ ನನಗೆ ದಾರಿ ಬಹಳ ದೂರವಿದೆ ಎನ್ನಿಸತೊಡಗಿತು. ನನಗೆ ರಕ್ತಬೇಧಿ ಬೇರೆ ಆಗತೊಡಗಿತ್ತು. ಆದರೂ ಸಾಹಸದಿಂದ ಆಷಾಢ ಶುಕ್ಲ ಚತುರ್ದಶಿಯ ದಿನ ದೆಹಲಿಯನ್ನು ತಲುಪಿದೆವು ಮತ್ತು ಚತುರ್ದಶಿಯ ದಿನ ಉಪವಾಸ. ಶಾಸ್ತ್ರದಲ್ಲಿ ಶ್ರಾವಣಮಾಸದ ಕೃಷ್ಣಪಕ್ಷದ ಚತುರ್ಥಿಯವರೆಗೂ ವರ್ಷಾಯೋಗವನ್ನು ಸ್ಥಾಪನೆ ಮಾಡಲು

ಅವಕಾಶವಿದ್ದರೂ ಶರೀರಕ್ಕೆ ಹೆಚ್ಚು ಶ್ರಮಕೊಟ್ಟು ಖಾಯಿಲೆ ಬೀಳುವುದು ನನ್ನ ಸ್ವಭಾವವೇ ಆಗಿ ಬಿಟ್ಟಿದೆ. ಲಾಲ ಮಂದಿರದಲ್ಲಿ ಆಚಾರ್ಯ ಧರ್ಮಸಾಗರರು ಪೂರ್ವ ರಾತ್ರಿಯಲ್ಲಿಯೇ ಚಾತುರ್ಮಾಸ ಸ್ಥಾಪನೆ ಮಾಡಿದ್ದರು. ಸಾಹೂ ಶಾಂತಿ ಪ್ರಸಾದಜೀಯವರು ಆಚಾರ್ಯರ ಮುಂದೆ ನಿವೇದನೆ ಮಾಡಿ ಪುಷ್ಪಗುಚ್ಛ ಇರಿಸಿದ್ದರು.

೬೪

ಸಮ್ಯಗ್ ಜ್ಞಾನ ಪತ್ರಿಕೆಯ ಬಿಡುಗಡೆ

ಶ್ರಾವಣ ಕೃಷ್ಣ ಪಕ್ಷದ ಪ್ರತಿಪದೆಯ ದಿನ "ವೀರಶಾಸನ ಜಯಂತಿ"ಯ ಪುಣ್ಯದಿನವೇ ನನ್ನಿಂದ ರಚಿತವಾಗಿದ್ದ ನಾಲ್ಕು ಅನುಯೋಗಗಳ ಲೇಖನಗಳೊನ್ನೊಳಗೊಂಡ ಸಮ್ಯಗ್‌ಜ್ಞಾನ ಮಾಸಪತ್ರಿಕೆಯು ಲಾಲಮಂದಿರದಲ್ಲಿ ಆಚಾರ್ಯ ಧರ್ಮಸಾಗರರ ಕರಕಮಲಗಳಿಂದ ಬಿಡುಗಡೆ ಹೊಂದಿತು. ಇಂದು 14ನೇ ವರ್ಷಕ್ಕೆ ಕಾಲಿಟ್ಟಿದ್ದು, ಇಡೀ ಭಾರತವೇ ಅಲ್ಲದೆ ವಿದೇಶಗಳಲ್ಲಿಯು ಪ್ರಚಾರ ಪ್ರಸಾರಗೊಂಡಿದೆ.

ದರಿಯಾಗಂಜದಲ್ಲಿ ಆಚಾರ್ಯ ಧರ್ಮಸಾಗರರ ಸಂಘ

ಆಚಾರ್ಯರಿಗೆ ಇಲ್ಲಿಯ ಜನದಟ್ಟಣೆಯನ್ನು ನೋಡಿ, ದೆಹಲಿಯಲ್ಲಿ ಶಾಂತವಾದ ಸ್ಥಾನವನ್ನು ಬಯಸಿದರು. ಅದಕ್ಕೆ ನಾನು ಮಹಾರಾಜಜೀ ದರಿಯಾಗಂಜದಲ್ಲೇ ಬಾಲ ಆಶ್ರಮದಲ್ಲಿ ಬಹಳ ದೊಡ್ಡ ಚೌಕವು ಇದೆ. ಕೊಠಡಿಗಳು ಬಹಳ ದೊಡ್ಡವಾಗಿವೆ. ಆಹಾರಕ್ಕೆ ಹೊರಡಲು ರಸ್ತೆಗಳು ಆಗಲವಾಗಿವೆ. ಈ ಸ್ಥಾನ ತಮಗೆ ಸರಿಹೋಗಬಹುದು. ದರಿಯಾಗಂಜಿನ ಉಲ್ಫತರಾಯರನ್ನು ಕರೆಸಿ ಹೇಳಿದೆ. ಲಾಲಜೀ ಆಚಾರ್ಯರ ಸಂಘವನ್ನು ದರಿಯಾಗಂಜಿಗೆ ಕರೆದುಕೊಂಡು ಹೋಗಿರಿ ಎಂದೆ. ಅವರು ಗಾಬರಿಯಾಗಿ ನನಗೆ 3-4 ಬಾರಿ ಕೇಳಿಕೊಳ್ಳಲು ಬಂದರು.

ಮಾತಾಜಿ ದರಿಯಾಗಂಜಿನಲ್ಲಿ ಇಷ್ಟು ದೊಡ್ಡ ಸಂಘದ ವ್ಯವಸ್ಥೆ ಸಾಧ್ಯವೇ ಇಲ್ಲ. ಆದರೆ ತಾವು ಆಚಾರ್ಯರ ಮುಂದೆ ಯಾವಾಗಲೂ ಹೇಳಬೇಡಿ. ಆದರೂ ನಾನು ಅವರನ್ನು ಕರೆಸಿ ಮತ್ತೆ ಮತ್ತೆ ತಿಳಿಸಿ ಹೇಳಿದೆ. ಆಗಲೂ ಅವರು ಅಲ್ಲಿ ಶುದ್ಧ ಜಲದ ನಿಯಮವನ್ನು ಪಾಲಿಸುವವರು ಸರಿಯಾಗಿ ಇಲ್ಲ. ಅಲ್ಲೆಲ್ಲ ಬಾಬು ಪಾರ್ಟಿಯ ಜನರೇ ಇರುವುದು ಶುದ್ಧ ಜಲದ ನಿಯಮವನ್ನು ಯಾರು ತೆಗೆದುಕೊಳ್ಳುತ್ತಾರೆ. ಆಗ ನಾನು ಆಚಾರ್ಯರ ಪ್ರಭಾವದಿಂದ ಬಹಳ ಜನ ಆಹಾರ ಕೊಡುತ್ತಾರೆ ತಾವು ಚಿಂತೆ ಮಾಡಬೇಡಿರೆಂದೆ. ಆಗ ರಾಯಸಾಹೇಬರು ಉಲ್ಫಫತರಾಯರ ಹತ್ತಿರ ಹೇಳಿದರು. ತಾವು ಮಹಾರಾಜರಲ್ಲಿ ಅವರ ಜೊತೆ ಕೇವಲ ಇಬ್ಬರು ಮುನಿಗಳನ್ನು ಮಾತ್ರ ಕರೆತರಲು ನಿವೇದನೆಯನ್ನು ಮಾಡಿರೆಂದು ಹೇಳಿದರು ಅದಕ್ಕೆ ನಾನು ಅದು ಸಾಧ್ಯವಿಲ್ಲ ನಾನು ಮೊದಲೇ ಹೇಳಿದ್ದೇನೆ ಆರ್ಯಿಕೆಯರೆಲ್ಲಾ ಇಲ್ಲೇ ಇರುತ್ತಾರೆ. ಮುನಿಗಳು ಮಾತ್ರ ಅಲ್ಲಿಗೆ ಬರುತ್ತಾರೆ ಎಂದೆ.

ರಾಯ ಸಾಹೇಬರು ಸಮ್ಮತಿಸಿ, ದರಿಯಾಗಂಜಿನಲ್ಲಿ ಚರ್ಚೆ ಮಾಡಿ ಮಹಾನುಭಾವರ ಜೊತೆ ಬಂದು ಮಹಾರಾಜರಲ್ಲಿ ಕೆಲವರು ಪ್ರಾರ್ಥನೆ ಮಾಡಿದರು. ನಾನು ಮೊದಲೇ ಆಚಾರ್ಯರಲ್ಲಿ ವಿಷಯ ಪ್ರಸ್ತಾಪ ಮಾಡಿ ತಾವು ಮುನಿಗಳು ಮೊದಲು ಅಲ್ಲಿ ಹೋಗಿ ವ್ಯವಸ್ಥೆ ಸರಿಯಾದ ಮೇಲೆ ಆರ್ಯಿಕೆಯರು ಬರಲು ಅನುಮತಿ ಕೊಡಿ ಎಂದೆ. ಆಚಾರ್ಯರು ಸಂಘ ಸಹಿತವಾಗಿ ದರಿಯಾಗಂಜಿಗೆ ಬಂದರು. ಅಲ್ಲಿಯ ವಾತಾವರಣ ಸ್ಥಳವೆಲ್ಲವೂ ಅವರಿಗೆ ಸಂತೃಪ್ತಿಯನ್ನು ತಂದಿತು. ನಿಧಾನವಾಗಿ ಅಲ್ಲಿಯ ಪ್ರಬುದ್ಧ ಜನರು ಆಹಾರ ಕೊಡಲು ಪ್ರಾರಂಭಿಸಿದರು. ಚೌಕಗಳನ್ನು ಮಾಡಲು ಪ್ರಾರಂಭಿಸಿದರು. ಆಚಾರ್ಯರ ಆಜ್ಞೆಯಂತೆ ಉಲ್ಫತರಾಯರು

ಆರ್ಯಿಕೆಯರನ್ನು ಅಲ್ಲಿಗೆ ಕರೆಸಿಕೊಂಡರು. ನಾನು ಇಲ್ಲಿ ತ್ಯಾಗಿ ಭವನದಲ್ಲಿಯೆ ಇದ್ದೆ. ನಾನು ಎರಡು ಮೂರು ದಿನಗಳಿಗೊಮ್ಮೆ ದರ್ಶನಕ್ಕೆ ಹೋಗಿರುತ್ತಿದ್ದೆ ಒಂದು ದಿನ ಶಾಂತಿಲಾಲಜೀ ಕಾಗಜೀಯವರು ನನಗೆ ಒಂದು ಪತ್ರ ಬರೆದರು.

ಮಾತಾಜೀ ತಾವು ಇಲ್ಲಿಗೆ ಬನ್ನಿರಿ ನಾವು ನಿಮ್ಮಿಂದ ದಿನಕ್ಕೆ ಅರ್ಧ ಗಂಟೆಯಾದರೂ ಉಪದೇಶವನ್ನು ಕೇಳಲು ಬಯಸುತ್ತೇವೆ. ಆಚಾರ್ಯರು ಮಾರವಾಡಿ ಭಾಷೆಯನ್ನು ಜಾಸ್ತಿ ಬಳಸುವುದರಿಂದ ನಮಗೆ ತಿಳಿದುಕೊಳ್ಳಲು ತೊಂದರೆಯಾಗುತ್ತಿದೆ. ಹೀಗಾಗಿ ನಾನು ಆಚಾರ್ಯರ ಅನುಜ್ಞೆಯನ್ನು ಪಡೆದು ಪ್ರತಿ ದಿನ ಉಪದೇಶ ಪ್ರಾರಂಭಿಸಿದೆ. ನನ್ನ ಮಾತಾದ ನಂತರ ಆಚಾರ್ಯರು ಉಪದೇಶ ಕೊಡುತ್ತಿದ್ದರು. ಜನರಲ್ಲಿ ಉಪದೇಶ ಕೇಳಲು ಆಸಕ್ತಿ ಬೆಳೆಯತೊಡಗಿತು. ಒಂದು ದಿನ ಯಾವುದೋ ವ್ಯಕ್ತಿ ಆಚಾರ್ಯರಲ್ಲಿ ಹೇಳತೊಡಗಿದ. ಮಹಾರಾಜಜೀ ನಿಮ್ಮ ಸಂಘದಲ್ಲಿರುವ ಉಳಿದ ಸಾಧು ಸಾಧ್ವಿಯರು ಮೂರ್ಖರೇ. ಜ್ಞಾನಮತಿಯೊಬ್ಬರೇ ಏನು ಜ್ಞಾನವಂತರು. ನಾನು ನಾಕೈದು ದಿನಗಳಿಂದ ನೋಡುತ್ತಲೇ ಇದ್ದೇನೆ. ಬರೇ ಅವರೊಬ್ಬರೇ ಉಪದೇಶಿಸುತ್ತಿದ್ದಾರೆ. ಆಚಾರ್ಯರು ಬಹಳ ಸರಳ ವ್ಯಕ್ತಿಗಳು. ಅವರು ಆಯಿತು ಬಿಡಿ ನಾಳೆಯಿಂದ ಪ್ರತಿಯೊಬ್ಬರೂ ಮಾತಾಡುತ್ತಾರೆ ಎಂದರು. ಆ ಸಮಯದಲ್ಲಿ ಸಂಘದಲ್ಲಿ ಅಭಿನಂದನ ಸಾಗರ ಮತ್ತು ಜಿನಮತಿಯನ್ನು ಬಿಟ್ಟು ಉಳಿದವರಿಗೆ ಉಪದೇಶ ಮಾಡುವ ಅಭ್ಯಾಸ ಇರಲೇ ಇಲ್ಲ ಅನ್ನಬೇಕು. ಕೆಲವು ಸಾಧುಗಳು ತಾವು ಕಲಿಯಲು ಕುಳಿತಿರುತ್ತಿದ್ದರು. ಒಬ್ಬ ಶ್ರಾವಕರು ಬಂದು. ಮಾತಾಜೀ ಇದೇನು? ಇಲ್ಲಿ ಒಳ್ಳೆಯ ಉಪದೇಶ ಕೇಳೋಣ ಎಂದು ಬಂದರೆ, ಆ ನಿಮ್ಮ ಸಾಧುಗಳು ಇನ್ನೂ ಕಲಿಯುತ್ತಿದ್ದಾರೆ ಅಷ್ಟೇ ಅದಕ್ಕೆ ನೋಡಿ ಬರುವವರ ಸಂಖ್ಯೆ ತನ್ನಿಂದ ತಾನೇ ಕಡಿಮೆಯಾಗುತ್ತಿದೆ ಎಂದರು.

ಆದರೆ ಈ ರೀತಿಯ ಮಾತುಗಳಿಗೆ ಬೆಲೆಕೊಡದೆ ಇರುವಂತಹ ಅಭ್ಯಾಸಮಾಡಿಕೊಂಡಿದ್ದರಿಂದ ಸಹನೆಯಿಂದ ಸುಮ್ಮನಾದೆ. ಇದಾಗುವುದಕ್ಕಿಂತ ಹಿಂದಿನ ರಾತ್ರಿಯೇ ಪಂ. ಬಾಬೂಲಾಲವಕ್ತಾರರು ಆಚಾರ್ಯರ ಮುಂದೆಯೇ ಕೇಳಿದ್ದರು. ಸಮಯಸಾರವನ್ನು ಓದದೆ ಸಮ್ಯಗ್‌ದರ್ಶನವಾಗಲಾರದು. ಆದರೆ ಆಚಾರ್ಯರು ಮಧ್ಯದಲ್ಲೇ ಹೇಳಿದರು. ಪಂಡಿತರೇ ಹಾಗೇ ಹೇಳಬಾರದು. ಎಲ್ಲಾ ಅನುಯೋಗಗಳ ಸ್ವಾಧ್ಯಾಯದಿಂದಲೂ ಸಮ್ಯಾಗ್‌ದರ್ಶನವಾಗುತ್ತದೆ. ಎಲ್ಲಿ ಬರೆದಿದೆ ಸಮಯಸಾರವನ್ನು ಓದದೆ ಸಮ್ಯಗ್‌ದರ್ಶನವಾಗುವುದಿಲ್ಲವೆಂದು.

ಆ ದಿನದಿಂದ ಬಾಬೂಲಾಲ ಬಹಳ ಎಚ್ಚರಿಕೆಯಿಂದ ಮಾತಾಡುತ್ತಿದ್ದರು. ಅವರು ಪ್ರತಿದಿನ ಚೌಕ ಮಾಡಿ ಸಾಧುಗಳನ್ನು ಆಹ್ವಾನಿಸಿ ನವಧಾಭಕ್ತಿಯಿಂದ ಆಹಾರ ದಾನ ಮಾಡುತ್ತಿದ್ದರು. ದಶಲಕ್ಷಣ ಪರ್ವದಲ್ಲಿ ಸುಭಾಷ್ ಮೈದಾನದಲ್ಲಿ ಬಹಳ ದೊಡ್ಡ ಪೆಂಡಾಲ ಹಾಕಿದ್ದರು. ಪ್ರತಿ ದಿನ ವಿದ್ಯಾನಂದರು ಪ್ರವಚನ ಮಾಡುತ್ತಿದ್ದರು. ಮಧ್ಯಾಹ್ನದ ಹೊತ್ತು ಧರ್ಮಸಾಗರರು ತತ್ತ್ವಾರ್ಥ ಸೂತ್ರದ ಒಂದೊಂದು ಅಧ್ಯಯನವನ್ನು ಅರ್ಥಸಹಿತ ವಿವೇಚನೆ ಮಾಡುತ್ತಿದ್ದರು. ನಾನು ಪ್ರತಿ ದಿನ ಒಂದೊಂದು ಧರ್ಮದ ಬಗ್ಗೆ ಉಪದೇಶ ಕೊಡುತ್ತಿದ್ದೆನು.

ಈ ರೀತಿ ದಶಲಕ್ಷಣವು ಬಹಳ ಚೆನ್ನಾಗಿ ನಡೆಯಿತು. ಆ ದಿನಗಳಲ್ಲಿ ಪ್ರತಿ ವಾರವು ನಿರ್ವಾಣೋತ್ಸವವನ್ನು ಆಚರಿಸುವ ವಿಷಯವಾಗಿ ಸಾಧುವರ್ಗದಲ್ಲಿ ಸಭೆಗಳು ನಡೆಯುತ್ತಿದ್ದವು. ವಿದ್ಯಾನಂದ ಮುನಿಗಳು ಪ್ರತಿಯೊಂದು ವಿಷಯದಲ್ಲೂ ನನ್ನ ಸಲಹೆಯನ್ನು ಕೇಳುತ್ತಿದ್ದರು. ಒಂದೆರಡು ಬಾರಿ ಆಹಾರವಾದ ಮೇಲೆ ಮೀಟಿಂಗ್ ನಡೆಯುತ್ತಿದ್ದ ಮೇಲ್ಚಾಗಕ್ಕೆ ನನಗೆ ಹತ್ತಲು ಆಗುತ್ತಿರಲಿಲ್ಲ. ಆಗ ಸ್ವತಃ ಮುನಿಗಳೇ ಕೆಳಗೆ ಬಂದು ಕೊಠಡಿಯಲ್ಲಿ ಮೀಟಿಂಗ್ ಮಾಡುತ್ತಿದ್ದರು. ಆಗ ಮುನಿಗಳ ಸರಳತೆ ಮತ್ತು ವಾತ್ಸಲ್ಯದಿಂದಲೇ ನಿರ್ವಾಣ ಮಹೋತ್ಸವ ಬಹಳ ವಿಜೃಂಭಣೆಯಿಂದ ನಡೆಯಿತು.

ಸಂಗೀತದ ಆಯೋಜನೆ

ರಾಷ್ಟ್ರ ಸಂತ ವಿನೋಬಾಭಾವೆಯವರ ಭಾವನೆಯಂತೆ ಬ್ರ. ಜಿನೇಂದ್ರ ಪ್ರಸಾದ ವರ್ಣಿಯವರು ಒಂದು ಪುಸ್ತಕ ಬರೆದರು. ಇದರ ಹೆಸರೇ ಸಮಣಸುತ್ತಂ. ಇದರಲ್ಲಿ ಜೈನ ಧರ್ಮದ ಮೂಲ ಸಿದ್ಧಾಂತಗಳೆಲ್ಲ ಇದ್ದವು. ಅಲ್ಲದೆ ಈ ಪುಸ್ತಕವನ್ನು ನಾಲ್ಕು ಸಂಪ್ರದಾಯದ ಸಾಧುಗಳು ಒಪ್ಪಿಕೊಂಡಿದ್ದರು, ಆಶೀರ್ವಾದಿಸಿದರು. ಇದರ ಉದ್ದೇಶದಿಂದ ದರಿಯಾಗಂಜದಲ್ಲಿ ಸರ್ವಸಾಧುಗಳ ಹಾಗೂ ವಿದ್ವಾಂಸರ ಸಮೂಹದಲ್ಲಿ ಒಂದು ಗೋಷ್ಠಿಯ ಆಯೋಜನೆ ನಡೆದಿತ್ತು. ನಾನು ಅದರಲ್ಲಿ ಭಾಗವಹಿಸಿ, ಕೆಲವು ಸೂಚನೆಯನ್ನು ಕೊಟ್ಟಿದ್ದೆ.

ಭ. ಮಹಾವೀರಸ್ವಾಮಿಯ ಪ್ರತಿಮೆ

ದಿಗಂಬರಜೈನ ತ್ರಿಲೋಕ ಶೋಧ ಸಂಸ್ಥಾನ ಮೂಲಕ ಹಸ್ತಿನಾಪುರದಲ್ಲಿ ಜಂಬೂದ್ವೀಪದ ರಚನೆಯ ನಿರ್ಮಾಣಕ್ಕಾಗಿ ಕೊಂಡುಕೊಂಡಿದ್ದ ಜಾಗದಲ್ಲಿ ಸ್ಥಾಪಿಸಲು 9 1/4 ಅಡಿಯ ಬಿಳಿಯ ಅಮೃತಶಿಲೆಯ ಮನೋಜ್ಞಮೂರ್ತಿ ಜಯಪುರದಿಂದ ಹಸ್ತಿನಾಪುರಕ್ಕೆ 27-08-1974ರಲ್ಲಿ ಬಂದಿತು ನ್ಯೋಚಾವರದ ಸಂತೋಷಕುಮಾರರವರು ಈ ಮೂರ್ತಿಯನ್ನು ಮಾಡಿಸಿದ್ದರು. ಮೂರ್ತಿಯನ್ನು ಪ್ಯಾಕೇಟ್‌ಸಹಿತ ದೊಡ್ಡಮಂದಿರದಲ್ಲೇ ಇಡಲಾಗಿತ್ತು.

ಜಂಬೂದ್ವೀಪದ ಕ್ಯಾಲೆಂಡರ್

ಭ. ಮಹಾವೀರರ ಮಹಾಮಹೋತ್ಸವದ ಸಂದರ್ಭದಲ್ಲಿ ಅತ್ಯಂತ ಸುಂದರವಾಗಿ ಏಳು ಬಣ್ಣಗಳಿಂದ ಜಂಬೂದ್ವೀಪದ ಕ್ಯಾಲೆಂಡರ್ ಸಿದ್ಧವಾದವು ನೋಡಲು ಬಹಳ ಚೆನ್ನಾಗಿ ಕಾಣಿಸುತ್ತಿತ್ತು.

೬೫

ಗ್ರಂಥ ಪ್ರಕಾಶನ

'ಅಷ್ಟ ಸಹಸ್ರೀ' ಗ್ರಂಥದ ಪ್ರಥಮ ಭಾಗ ಪಹಾಡಿಧೀರಜನ ಸಮ್ರಾಟ ಪ್ರೆಸ್‌ನಲ್ಲಿ ಅಚ್ಚಾಗುತ್ತಿತ್ತು. ಬೇರೆ ಪುಸ್ತಕಗಳಾದ ಭ. ಮಹಾವೀರ ಹೇಗಾದರು? ಎಂಬ ಪುಸ್ತಕ ಕೂಡಾ ಸೇಠ್‌ನಲ್ಲಿ ಬೇರೆ ಪ್ರೆಸ್ಸ್‌ನಲ್ಲಿ ಅಚ್ಚಾಗುತ್ತಿತ್ತು. ಮೋತಿಚಂದನು ಬೆಳಗ್ಗೆ ಎದ್ದವನೆ ಎರಡು ಪ್ರೆಸ್ಸ್‌ಗೂ ಹೋಗಿ ಫ್ರೂಫ್ ನೋಡಿ ಪುಸ್ತಕಗಳ ವ್ಯವಸ್ಥೆ ನೋಡಿ ಬರುವಷ್ಟರಲ್ಲಿ ಸಂಜೆಯಾದರೂ ಆಗುತ್ತಿತ್ತು. ಊಟ ಒಮ್ಮೊಮ್ಮೆ ರಾತ್ರಿಯೇ ತೆಗೆದುಕೊಳ್ಳಬೇಕಾಗುತ್ತಿತ್ತು.

ಅಷ್ಟ ಸಹಸ್ರೀ ಗ್ರಂಥದ ಬಿಡುಗಡೆ

27-10-1974ರಂದು ಪುಸ್ತಕದ ಬಿಡುಗಡೆಯಂದು ನಿರ್ಧರಿಸಲಾಗಿತ್ತು. ಬ್ರ. ಕು. ಶೀಲಾಳಿಗೆ ನವೆಂಬರ್‌ನಲ್ಲಿ ಆರ್ಯಿಕೆಯ ದೀಕ್ಷೆಯು ನಿಶ್ಚಯವಾಗಿತ್ತು. ನಾನು ರವೀಂದ್ರಕುಮಾರ್, ಮಾಲತಿ, ಶೀಲರನ್ನು ಬುಂದೇಲಖಂಡ ಹಾಗೇ ದಕ್ಷಿಣದ ಯಾತ್ರೆಗಾಗಿ ಕಳುಹಿಸಿದ್ದೆ. ಈಗ ಮೋತಿಚಂದನು ಒಬ್ಬಂಟಿಗನಾಗಿದ್ದರು. ಗ್ರಂಥಗಳ ಮುದ್ರಣ ನೋಡುವ ಕೆಲಸ, ಪುಸ್ತಕ ಬೈಂಡಿಂಗ್ ಇವುಗಳಲ್ಲಿ ಬಿಡುವೇ ಇರುತ್ತಿರಲಿಲ್ಲ.

ಪುಸ್ತಕದ ಬಿಡುಗಡೆ ಸಮಾರಂಭವು ದರಿಯಾಗಂಜಿನ ಬಾಲಾಶ್ರಮದ ಪ್ರಾಂಗಣದಲ್ಲಿ ಏರ್ಪಾಟಾಗಿತ್ತು. ಆಚಾರ್ಯ ಧರ್ಮಸಾಗರರ ಸಂಘ, ಆ. ದೇಶಭೂಷಣರ ಸಂಘ ಉಭಯ ಮುನಿರಾಜರು ಆಸೀನರಾಗಿದ್ದರು.

ವಿದ್ಯಾನಂದರು, ಅಲ್ಲದೆ ಸ್ಥಾನಕವಾಸಿ ಮುನಿಗಳಾಂದ ಸುಶೀಲ ಕುಮಾರಜೀ, ತೇರಪಂಥಿ ಶ್ವೇತಾಂಬರ ಆಚಾರ್ಯರಾದ ತುಲಸೀಗಣೀಗಳು ತಮ್ಮ ಶಿಷ್ಯರೊಡನೆ ಉಪಸ್ಥಿತರಿದ್ದರು. ಶ್ವೇತಾಂಬರ ಸಾಧ್ವಿ ಶ್ರೀ ವಿಚಕ್ಷಣಜೀಯವರು ಆ ಸಭೆಯಲ್ಲಿ ಉಪಸ್ಥಿತರಿದ್ದರು. ಈ ವಿಶಾಲ ಸಭೆಯ ಅಧ್ಯಕ್ಷತೆಯನ್ನು ಜಯಸುಖಿಲಾಲರು ವಹಿಸಿದ್ದರು. ಹೀರಾಲಾಲ ಕೌಶಾಲರು ಮಂಗಳಾಚರಣೆ ಮಾಡಿದರು. ಡಾ|| ಲಾಲಬಹೂದ್ದೂರ ಶಾಸ್ತ್ರಿಜೀಯವರು ಹಾಗೂ (ಸಂಸ್ಕೃತ) ವಿಶ್ವವಿದ್ಯಾನಿಲಯದ ಸಂಸ್ಕೃತ ವಿಭಾಗಾಧ್ಯಕ್ಷರಾದ ಶ್ರೀ ಸತ್ಯವ್ರತಜೀ ಶಾಸ್ತ್ರಿಜೀಯವರು ಅಷ್ಟಸಹಸ್ರೀ ಗ್ರಂಥದ ಮಹತ್ವದ ಬಗ್ಗೆ ಪ್ರಕಾಶ ಬೀರಿದರು. ಅಧ್ಯಕ್ಷ ಮಹೋದಯ ಉಪರಾಜ್ಯಪಾಲ ಶ್ರೀ ಕೃಷ್ಣಚಂದರವರನ್ನು ಮಾಲಾರ್ಪಣೆ ಮಾಡಿ ಸನ್ಮಾನಿಸಲಾಯಿತು. ಗ್ರಂಥಮಾಲೆ ಹಾಗೂ ಗ್ರಂಥದ ಸಂಪಾದಕ ಮೋತಿಚಂದನು ಸಂಪಾದನೆಯ ವಿವಿಧ ಹಂತಗಳ ಬಗ್ಗೆ ಪ್ರಕಾಶ ಬೀರಿದನು. ನಂತರ ಕೃಷ್ಣಚಂದರು ಹರ್ಷಪೂರ್ಣ ವಾತಾವರಣದಲ್ಲಿ ಅಷ್ಟ ಸಹಸ್ರೀ ಗ್ರಂಥದ ಬಿಡುಗಡೆ ಮಾಡಿದರು. ಆಗ ಮಹಾವೀರರ ಜಯಘೋಷದೊಂದಿಗೆ ಇಡೀ ಸಭಾಂಗಣವು ಮಾರ್ದನಿಗೊಂಡಿತು.

ಪುಸ್ತಕ ಬಿಡುಗಡೆಯಾದ ಮೇಲೆ ಯುಗಲ ಆಚಾರ್ಯರ ಕರಕಮಲಗಳಲ್ಲಿ ಗ್ರಂಥವನ್ನು ಸಮರ್ಪಿಸಿದೆ. ಸಾಧ್ವಿಶ್ರೀ ವಿಚಕ್ಷಣಜೀಯವರಂತೂ ಭಾವೋದ್ವೇಗದಿಂದ ಆರ್ಯಿಕೆ ಜ್ಞಾನಮತೀಜೀಯವರು ಇಂತಹ ಮಹಾನ್ ಗ್ರಂಥವನ್ನು ಹಿಂದಿಗೆ ಅನುವಾದ ಮಾಡಿ ಇಡೀ ನಾರೀ ಜಗತ್ತಿಗೆ ಒಂದು ಶೋಭೆಯನ್ನು ಹೆಚ್ಚಿಸಿದ್ದಾರೆ. ಮುನಿಶ್ರೀ ವಿದ್ಯಾನಂದರು ಮತ್ತು ಮುನಿಶ್ರೀ ಸುಶೀಲಕುಮಾರಜೀಯವರು ಈ ಗ್ರಂಥದ ಉಪಯುಕ್ತತೆಯ ಬಗ್ಗೆ ಪ್ರಭಾವಪೂರ್ಣವಾದ ಮಾತುಗಳನ್ನು ಹೇಳಿದರು. ನ್ಯಾಯಗ್ರಂಥಗಳ ಪಠಣ, ಪಾಠನದಿಂದ ದೃಷ್ಟಿಯಲ್ಲಿ ನಿರ್ದೋಷತೆಯು ಬರುತ್ತದೆ. ಕೊನೆಗೆ ನಾನು ಮಾತಾಡುತ್ತಾ ನನ್ನ ಅಲ್ಪ ಜ್ಞಾನವನ್ನು ವ್ಯಕ್ತಗೊಳಿಸುತ್ತಾ ಇಂದು ನನ್ನಲ್ಲಿರುವ ಅಲ್ಪಜ್ಞಾನವು ಆಚಾರ್ಯ ದೇಶಭೂಷಣ ಮಹಾರಾಜರು ಮತ್ತು ಆರ್ಯಿಕಾದೀಕ್ಷಾ ಗುರುಶ್ರೀ ವೀರಸಾಗರ ಮಹಾರಾಜರಿಂದ ಆಶೀರ್ವಾದದ ಫಲದಿಂದಾಗಿ ನಾನು ಈ ಕಾರ್ಯಮಾಡಲು ಸಾಧ್ಯವಾಯಿತು ಎಂದು ನನ್ನ ವಿನಯವನ್ನು ತೋರಿಸಿದೆ.

ಬೇರೆ ಗ್ರಂಥಗಳ ಬಿಡುಗಡೆ

ಉಳಿದ ಗ್ರಂಥಗಳಾದ ಭ. ಮಹಾವೀರರು ಹೇಗಾದರು (2) ತೀರ್ಥಂಕರ ಮಹಾವೀರ ಮತ್ತು ಅವರ ಧರ್ಮತೀರ್ಥ (3) ಸಾಮಾಯಿಕ (4) ಜೈನ ಜ್ಯೋತಿರ್ಲೋಕ ಮತ್ತು ನ್ಯಾಯಸಾರ, ಈ ಪುಸ್ತಕಗಳ ಬಿಡುಗಡೆಯನ್ನು ಸಾಹೂಶಾಂತಿ ಪ್ರಸಾದ ಜೈನರವರು ಬಿಡುಗಡೆ ಮಾಡಿದರು. ಎಲ್ಲಾ ಪುಸ್ತಕಗಳನ್ನ ಆಚಾರ್ಯರ ಕರಕಮಲಗಳಲ್ಲಿ ಸಮರ್ಪಿಸಲಾಯಿತು. ಪಂ. ಬಾಬೂಲಾಲರು ಸಭೆಯ ಕಾರ್ಯಕ್ರಮಗಳನ್ನು ಬಹಳ ಚಾಣಾಕ್ಷತನದಿಂದ ನಿರ್ವಹಿಸುತ್ತಾ ಸಂಸ್ಥಾನದ ಕಾರ್ಯ ಚಟುವಟಿಕೆಗಳ ಬಗ್ಗೆ ಪ್ರಕಾಶ ಬೀರಿದರು.

ಆಚಾರ್ಯ ಧರ್ಮಸಾಗರರು ಹಾಗೂ ದೇಶಭೂಷಣರು ಇಬ್ಬರೂ ಆಶೀರ್ವಾದ ಮಾಡುತ್ತಾ ಜ್ಞಾನದ ಶೋಭೆ ಚಾರಿತ್ರದಿಂದ ಚಾರಿತ್ರದ ಶೋಭೆ ಜ್ಞಾನದಿಂದ ಆಗಿದೆ. ಆಚಾರ್ಯ ದೇಶಭೂಷಣರಂತೂ ಹೃದಯ ತುಂಬಿ ಹೇಳಿದರು. ನಾನು ಬಿತ್ತಿದ ಬೀಜ ಇಂದು ವೃಕ್ಷವಾಗಿ ಬೆಳೆದಿದೆ. ಇದರಲ್ಲಿ ಫಲವು ಬಿಟ್ಟಿದೆ. ಇದನ್ನು ನೋಡಿ ನಾನು ಹರ್ಷಿತನಾಗಿದ್ದೇನೆ. ಆನಂತರ ಆಭಾರಿ ಪ್ರದರ್ಶನ ಕೃತಜ್ಞತಾಪೂರ್ವಕ ಕಾರ್ಯಕ್ರಮ ಸಂಪನ್ನವಾಯಿತು.

ಅಷ್ಟ ಸಹಸ್ರೀ ಗ್ರಂಥದ ಪರಿಚಯ

ಇಂದಿಗೆ 2000 ವರ್ಷದ ಹಿಂದೆ ಆಚಾರ್ಯ ಉಮಾಸ್ವಾಮಿ ಆಚಾರ್ಯರು ತತ್ತ್ವಾರ್ಥಸೂತ್ರವೆಂಬ ಸೂತ್ರಗ್ರಂಥವನ್ನು ಸಂಸ್ಕೃತದಲ್ಲಿ ರಚಿಸಿದ್ದಾರೆ. ಇದರ ಮಂಗಳಾಚರಣವು

ಮೋಕ್ಷ ಮಾರ್ಗಸ್ಯ ನೇತಾರಂ ಭೇತ್ತಾರಂ ಕರ್ಮ ಭೂಭೃತಾಮ್।
ಜ್ಞಾತಾರಂ ವಿಶ್ವತತ್ತ್ವಾನಾಂ, ವಂದೇ ತದ್‌ಗುಣ ಲಬ್ಧಯೇ॥

ಅರ್ಥ :- ಯಾರು ಮೋಕ್ಷ ಮಾರ್ಗದ ನೇತಾರರೋ, ಕರ್ಮವೆಂಬ ಪರ್ವತವನ್ನು ಭೇದಿಸಿರುವರೋ, ಎಲ್ಲಾ ಜ್ಞಾನವನ್ನು ತಿಳಿದಿರುವರೋ ನಾನು ಅವರಿಗೆ ಅವರ ಗುಣಗಳು ನನಗೂ ಪ್ರಾಪ್ತವಾಗಲೆಂದು ನಮಸ್ಕಾರಿಸುತ್ತೇನೆ.

ಶ್ರೀ ಸಮಂತಭದ್ರಸ್ವಾಮಿಗಳು ಇದೇ ಮಂಗಳಚಾರಣದ ಮೇಲೆ ಆಪ್ತಮೀಮಾಂಸ ಎಂಬ ಸ್ತೋತ್ರ ರಚಿಸಿದ್ದಾರೆ. ಅದರಲ್ಲಿ 1¼ ಕಾರಿಕೆಗಳಲ್ಲಿ ಸರ್ವಜ್ಞರನ್ನು ಒರೆಗಲ್ಲಿನಲ್ಲಿ ಹಚ್ಚಿ ಶುದ್ಧ ಸಿದ್ಧರನ್ನಾಗಿ ಮಾಡಿದ್ದಾರೆ. ಶ್ರೀ ಭಟ್ಟಾಕಲಂಕ ದೇವರು ಇದೇ ಸ್ತೋತ್ರದ ಆಧಾರದ ಮೇಲೆ "ಅಷ್ಟ ಶತಿ" ಎಂಬ ಭಾಷ್ಯ ಗ್ರಂಥವನ್ನು ರಚಿಸಿದ್ದಾರೆ. ಪುನಃ ಶ್ರೀ ವಿದ್ಯಾನಂದರು ಇಂದಿಗೆ 1200 ವರ್ಷಗಳ ಹಿಂದೆ ಆಪ್ತಮೀಮಾಂಸಾವನ್ನು ಅಷ್ಟಶತಿ ಸಹಿತವಾಗಿ ಸೇರಿಸಿ ಅಷ್ಟ ಸಹಸ್ರಿ ಎಂಬ 800 ಶ್ಲೋಕ ಪ್ರಮಾಣದ ಬೃಹತ್‌ಗ್ರಂಥವನ್ನು ರಚಿಸಿದ್ದಾರೆ. ಈ ಅಷ್ಟ ಸಹಸ್ರೀಯಲ್ಲಿ ಸ್ವಯಂ ಆಚಾರ್ಯರು ಬರೆದಿದ್ದಾರೆ.

ಶ್ರೋತವ್ಯಾಷ್ಟ ಸಹಸ್ರೀ ಶ್ರುತೈಃ ಕಿಮನ್ಯೈಃ ಸಹಸ್ರಸಂಖ್ಯಾನೈಃ ।
ವಿಜ್ಞಾಯತೇ ಯಯೈವ ಸ್ವಸಮಯ ಪರಸಮಯ ಸದ್ಭಾವಃ ॥

ಬೇರೆ ಸಾವಿರಾರು ಶಾಸ್ತ್ರಗಳನ್ನು ಕೇಳುವುದರಿಂದ ಏನು ಲಾಭ ಕೇವಲ ಅಷ್ಟಸಹಸ್ರೀ ಗ್ರಂಥವನ್ನು (ಓದಿದರೆ) ಕೇಳಿದರೆ ಸಾಕು. ಏಕೆಂದರೆ ಈ ಗ್ರಂಥವನ್ನು ಕೇಳುವುದರಿಂದಲೇ ಸ್ವಸಿದ್ಧಾಂತ ಮತ್ತು ಪರಸಿದ್ಧಾಂತದ ಜ್ಞಾನ ಉಂಟಾಗುತ್ತದೆ. ಅಷ್ಟಸಹಸ್ರೀ ಗ್ರಂಥ ಜೈನ ಪರಮಾಗಮದಲ್ಲಿ ಅದ್ಭುತ ಹಾಗೂ ಗಹನವಾದ ಗ್ರಂಥವಾಗಿದೆ. ಅದ್ಭುತ ಹೇಗೆಂದರೆ ಇದೊಂದೇ ಗ್ರಂಥ ಸಾಕು ಸಮಸ್ತ ವಾಙ್ಮಯವನ್ನು ತಿಳಿಯಲು ಆಧಾರ ಭೂತವಾಗಿದೆ. ಗಹನವೇನೆಂದರೆ ಇದು ತಾರ್ಕಿಕ ಶೈಲಿಯಿಂದ ರಚಿಸಲ್ಪಟ್ಟಿದೆ ತರ್ಕಶಾಸ್ತ್ರದ ಆಧಾರದಿಂದಲೇ ಇದು ಹೃದಯಂಗಮವೂ ಆಗಿದೆ. ಗ್ರಂಥದ ಗಹನತೆಯ ಕಾರಣದಿಂದಲೇ ಅಷ್ಟಸಹಸ್ರೀ ಗ್ರಂಥವನ್ನು ಕಷ್ಟ ಸಹಸ್ರೀಎಂದು ಕರೆಯಲಾಗುತ್ತಿದೆ. ಸ್ವಯಂ ಗ್ರಂಥಕಾರರೇ ಬರೆದಿದ್ದಾರೆ.

ಕಷ್ಟ ಸಹಸ್ರೀ ಸಿದ್ಧಾ ಸಾಷ್ಟಸಹಸ್ರೀಯಮತ್ರಮೇ ಪುಷ್ಯಾತ್ ।
ಶಾಶ್ವದಭೀಷ್ಟ ಸಹಸ್ರೀ ಕುಮಾರ ಸೇನೋಕ್ತಿ ವರ್ಧಮಾನಾರ್ಥಾ ॥

ಸಾವಿರಾರು ಕಷ್ಟಗಳನ್ನು ಒಳಗೊಂಡಿರುವ ಕಷ್ಟ ಸಹಸ್ರಿ ಸ್ವರೂಪವಾದ ಈ ಅಷ್ಟ ಸಹಸ್ರೀ ಗ್ರಂಥವು ನನ್ನ ಸಾವಿರಾರು ಅಭೀಷ್ಟಗಳನ್ನು ಪೂರ್ಣಗೊಳಿಸಿ ನಾನು ಇದನ್ನು ಕುಮಾರಸೇನರ ಉಕ್ತಿಯನ್ನು ಸ್ಪಷ್ಟಗೊಳಿಸುವುದಕ್ಕಾಗಿ ಬರೆದಿದ್ದೇನೆ. ಆಪ್ತಮೀಮಾಂಸದ ಪ್ರಥಮ ಶ್ಲೋಕ ಮತ್ತು ಭಾವ

ದೇವಾಗಮ ನಭೋಯಾನಚಾಮರಾದಿ ವಿಭೂತಯಃ ।
ಮಾಯಾವಿಷ್ವಪಿ ದೃಶ್ಯಂತೇ ನಾತಸ್ತ್ವಮಸಿ ನೋ ಮಹಾನ್ ॥

ದೇವತೆಗಳು ಬರುವ, ಆಕಾಶದಲ್ಲಿ ಗಮನ ಮಾಡುವ, ಚಾಮರ ಛತ್ರಿ ಮುಂತಾದ ವಿಭೂತಿಗಳ ವೈಭವವನ್ನು ಹೊಂದಿರುವ ಭಗವಂತರೇ ತಾವು ಮಹಾನ್‌ರಲ್ಲ ಏಕೆಂದರೆ ಇದೆಲ್ಲವನ್ನು ಮಾಯಾವಿ ಪುರುಷರಲ್ಲಿಯೂ ಕೂಡ ಈ ರೀತಿ ನೋಡುತ್ತೇವೆ.

ಸಮಸ್ತ ಗ್ರಂಥದಲ್ಲಿ ಅರ್ಹಂತರನ್ನೂ ಆಪ್ತ ಮತ್ತು ನಿರ್ದೋಷರನ್ನಾಗಿ ಸಿದ್ಧ ಮಾಡುವುದಕ್ಕಾಗಿ ಅನೇಕ ಯುಕ್ತಿಗಳನ್ನು ಕೊಡಲಾಗಿದೆ. ಹಾಗೇ ಅನ್ಯ ಬೌದ್ಧ, ವೈದಿಕ, ಮುಂತಾದ ದರ್ಶನಗಳನ್ನು ಅಲೋಚನೆ ಮಾಡುತ್ತಾ ಅವುಗಳ ಖಂಡನೆಯನ್ನು ಮಾಡಲಾಗಿದೆ. ಎಲ್ಲಾ ಅಧ್ಯಯನ ಅಥವ ಪ್ರಕರಣಗಳ ಕೊನೆಯಲ್ಲಿ ಸಪ್ತ ಭಂಗೀಯನ್ನು ಕಳೆದು ಅನೇಕಾಂತವನ್ನು ಸ್ಪಷ್ಟಗೊಳಿಸಲಾಗಿದೆ. ಹೇಗಿರುವರೆ ದೇವ ಮತ್ತು ಪುರುಷಾರ್ಥಗಳ ಏಕಾಂತದ ಮಾನ್ಯತೆಯನ್ನು ದೂರಗೊಳಿಸಲು ಸಪ್ತಭಂಗೀಯನ್ನು ವಿವರಿಸಿದಿದ್ದಾರೆ.

ಬುದ್ಧಿ ಇಲ್ಲದೆ ಯಾವುದಾದರು ಕೆಲಸವಾದರೆ ದೈವಯೋಗ ಪ್ರಧಾನವಾಗಿದೆ ಎಂದೂ, ಮತ್ತು ಬುದ್ಧಿಪೂರ್ವಕವಾಗಿ ಕಾರ್ಯ ಸಿದ್ಧಿಯಾದರೆ. ಪುರುಷಾರ್ಥ ಪ್ರಧಾನವೆಂದೂ ತಿಳಿಯಲಾಗುತ್ತದೆ. ಹೀಗೆ ಅನೇಕ ವಿಷಯಗಳಲ್ಲಿ ಸಪ್ತಭಂಗೀ ತಿಳಿಯುವುದಕೋಸ್ಕರ ಈ ಗ್ರಂಥದ ಸ್ವಾಧ್ಯಾಯ ಅವಶ್ಯಕವಾಗಿದೆ.

ಅಷ್ಟಸಹಸ್ರೀಯ ವಿಷಯದಲ್ಲಿ ಆಚಾರ್ಯ ಹಾಗೂ ವಿದ್ವಾಂಸರ ಉದ್ಗಾರ

ಮೊದಲು 1970ರಲ್ಲಿ ಆಚಾರ್ಯರ ಜನ್ಮಜಯಂತಿಯಂದೇ ಟೋಡಾರಾಯಸಿಂಹದಲ್ಲಿಯೇ ಪಾಲಕಿಯಲ್ಲಿ ಇದರ ಮೆರವಣಿಗೆ ಆಗಿತ್ತು. ಆ ದಿನವೇ ಆಚಾರ್ಯರು ಸಂತಸದಿಂದ ಆಶೀರ್ವಾದ ಮಾಡಿದ್ದರು. ಆಚಾರ್ಯ ದೇಶಭೂಷಣರಂತೂ ಯಾವಾಗಲು ಸರಸ್ವತಿದೇವಿಯ ಉಪಾಸನೆಯಲ್ಲಿಯೇ ತೊಡಗಿರು ಎಂದು ಆಶೀರ್ವದಿಸುತ್ತಿದ್ದರು. ಆಚಾರ್ಯ ವಿಮಲಸಾಗರರಂತೂ ಆಗಾಗ್ಗೆ ಈ ಗ್ರಂಥವನ್ನು ಮುದ್ರಿಸಲು ಪ್ರೇರೇಪಿಸುತ್ತಿದ್ದರು. ಆಚಾರ್ಯ ಜ್ಞಾನಸಾಗರ ಮಹಾರಾಜರು 1971ರಲ್ಲಿ ಕು. ಮಾಲತಿಯ ಹತ್ತಿರ ಹಿಂದಿ ಅನುವಾದವನ್ನು ತೋರಿಸಲು ಕಳುಹಿಸಿದ್ದಾಗ ಕೆಲವು ಪುಟಗಳನ್ನು ವಿದ್ಯಾಸಾಗರರ ಹತ್ತಿರ ಓದಿಸಿ ಸಂತಸದಿಂದ ಮಾತಾಜೀಗೆ ಈ ಗ್ರಂಥವನ್ನು ಅಚ್ಚುಹಾಕಿಸಲು ಹೇಳಿ ಹಿಂದಿ ಅನುವಾದ ಚೆನ್ನಾಗಿ ಬಂದಿದೆ ಎಂದು ಹೇಳಿ ಕಳುಹಿಸಿದ್ದರು.

ಪಂಡಿತ ಪನ್ನಾಲಾಲರಂತೂ ಹಲವು ಬಾರಿ ಹೇಳಿದ್ದರು. ಆದಷ್ಟು ಬೇಗ ಮುದ್ರಣವಾಗಲಿ ಇದರಿಂದ ವಿದ್ವಾಂಸರಿಗೆ ಬಹಳ ಅನುಕೂಲವಾಗುತ್ತದೆ. ಸಿದ್ಧಾಂತಾಚಾರ್ಯ ಪಂಡಿತ ಹೀರಾಲಾಲ 1971ರಲ್ಲಿ ಬ್ಯಾವರದಲ್ಲಿ ಕೆಲವು ಪೇಜುಗಳನ್ನು ಮಾತ್ರ ನೋಡಿದ್ದೆ. ಸುಮಾರು 20-25 ವರ್ಷಗಳಿಂದ ನನಗೆ ನ್ಯಾಯಗ್ರಂಥಗಳ ಅಭ್ಯಾಸ ಬಿಟ್ಟುಹೋಗಿದೆ. ಆದ್ದರಿಂದ ನಾನು ಪೂರ್ತಿ ನೋಡಲಾರೆ. ಕೆಲವು ಪೇಜುಗಳಿಂದಲೇ, ಹಿಂದಿ ಅನುವಾದ ಬಹಳ ಸಮರ್ಪಕವಾಗಿದೆ. ಮಾತಾಜೀ ಈಗಲೇ ಅಚ್ಚಿಗೆ ಕಳುಹಿಸಿರಿ. ನಾನು ನೋಡಿರುವ ಪೇಜುಗಳಲ್ಲಿ ಒಂದೂ ತಪ್ಪು ಸಿಕ್ಕಿಲ್ಲ. ಆದ್ದರಿಂದ ಇನ್ನು ವಿದ್ವಾಂಸರಿಗೆ ತೋರಿಸುವ ಅವಶ್ಯಕತೆ ಇಲ್ಲ. ಒಬ್ಬ ವಿದ್ವಾಂಸರು ಏಕೆ ಅನೇಕ ಜನ ಸೇರಿಕೊಂಡೂ ಕೂಡ ಇಷ್ಟು ಚೆನ್ನಾಗಿ ಅನುವಾದ ಮಾಡಲಾರರು.

ನಾನು ದೆಹಲಿಯ ತ್ಯಾಗಿಭವನದಲ್ಲಿರುವಾಗ ಪಂಡಿತ ಕೈಲಾಸಚಂದರವರು ಬಂದವರೆ ನಮಸ್ಕಾರ ಮಾಡುತ್ತಾ ಹೇಳಿದರು. ಮಾತಾಜಿ ತಾವು ಅನುವಾದ ಮಾಡಿರುವ ಅಷ್ಟಸಹಸ್ರೀ ಮುದ್ರಣವಾಗುತ್ತಿದೆ ಎಂದು ಕೇಳಿದೆ. ನಾನು ಅದನ್ನು ನೋಡಬಹುದೇ ಎಂದರು. ಅದೇ ಸಮಯಕ್ಕೆ ಬಂದ ಮೋತಿಚಂದನು ಸುಮಾರು 100 ಪೇಜುಗಳು

ಅಚ್ಚಾಗಿರುವುದನ್ನು ನನ್ನ ಹಸ್ತಪ್ರತಿಯನ್ನು ಕೊಟ್ಟರು. ಗಂಟೆಗಳವರೆಗೆ ಅಲ್ಲೆ ಕೂತು ಓದಿ ಮಾತಾಜಿ ನಾನು ಯಾರೋ ಜ್ಞಾನಮತಿ ಎಂಬ ಆರ್ಯಿಕೆ ಅಷ್ಟಸಹಸ್ರೀಯ ಅನುವಾದ ಮಾಡುತ್ತಿದ್ದಾರೆ ಎಂದು ಕೇಳಿದ್ದೆ. ಆಗ ನಾನು ಯಾರೋ ಆರ್ಯಿಕೆ ಬರೆದಿರಬೇಕು ಅದನ್ನು ಉಲಟಪಲಟ ಮಾಡಿ ಬರೆದಿರಬೇಕೆಂದು ಭಾವಿಸಿದ್ದೆ. ಆದರೆ ಇಂದು ನೀವು ಬರೆದಿರುವ ಪುಟಗಳನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿದೆ. ಇಷ್ಟು ಸುಂದರವಾದ ಹಿಂದಿ ವ್ಯಾಕರಣದ ಜ್ಞಾನವಿರುವ ಅತ್ಯುತ್ತಮ ನ್ಯಾಯಜ್ಞಾನದಿಂದ ಕೂಡಿದೆ. ಈ ದಿನಗಳಲ್ಲಿ ಪಂಡಿತ ದರಬಾರಿಲಾಲಜೀ ಕೋಠಿಯಾರವರಿಗೆ ಈ ಗ್ರಂಥದ ಅನುವಾದಕ್ಕೆ ಕೇಳಿಕೊಳ್ಳಲಾಗಿತ್ತು. ಅವರೊಬ್ಬರೇ ಸಮರ್ಥರೆಂದು ತಿಳಿದಿದ್ದೆವು. ಹೀಗೆ ಬಹಳ ಪ್ರಶಂಸೆಯನ್ನು ಮಾಡಿದ ಅವರು ಸುಮಾರು ದಿನ ನನ್ನ ಬಳಿಯೇ ಇದ್ದರು. ನನ್ನಿಂದ ಬರೆಯಲ್ಪಟ್ಟಿದ್ದ ಪೆನ್ಸಿಲಿನ ಕಾಪಿಗಳನ್ನು ನೋಡಿದಾಗಲೆಲ್ಲ ಹೇಳುತ್ತಿದ್ದರು ಇವೆಲ್ಲವನ್ನು ಜ್ಞಾನಪೀಠದಿಂದಲೇ ಅಚ್ಚು ಹಾಕಿಸಿರೆಂದು.

ಆದರೆ ವೀರಜ್ಞಾನೋದಯ ಗ್ರಂಥದ ಪ್ರಥಮ ಪುಷ್ಪವಾಗಿ ಇದು ಹೊರಬಂದಿತು. ಮೋತಿಚಂದರು ಕೂಡ ಮುಂದೆ ಬೇರೆ ಗ್ರಂಥವನ್ನು ಜ್ಞಾನಪೀಠದಲ್ಲಿ ಮಾಡಿಸೋಣ ಇದು ಬೇಡ ಎಂದರು. ಪಂಡಿತ ಕೈಲಾಸಚಂದ್ರರು ಹಲವಾರು ಬಾರಿ ಕೇಳಿಕೊಂಡರು. ಹಲವಾರು ಬಾರಿ ಸೂಚನೆಯನ್ನು ಕಳುಹಿಸಿದರು. ಈ ಗ್ರಂಥ ಬೇಗನೆ ಅಚ್ಚಾಗಲಿ. ಕರ್ಮಯೋಗದಲ್ಲಿ ಒಂದು ಭಾಗ ಅಚ್ಚಾದ ಮೇಲೆ ಎರಡನೆಯ ಭಾಗ ಅಚ್ಚು ಮಾಡುವ ಯೋಗ ಇನ್ನು ಬಂದಿಲ್ಲವೆಂದು. ಒಂದು ದಿನ ಇಲ್ಲಿಗೆ ಪಂಡಿತ ದರಬಾರಿಲಾಲರೇ ಬಂದರು. ಅವರು ಇದನ್ನು ನೋಡಿದವರೇ ಹೇಳಿದರು. ಮಾತಾಜೀ ಇದನ್ನು ಅನುವಾದ ಮಾಡುವ ಭಾರ ನನ್ನ ಮೇಲಿದೆ. ಇಲ್ಲಿಯವರೆಗೂ ನಾನು ಪ್ರಾರಂಭವೇ ಮಾಡಿಲ್ಲ. ಇದನ್ನು ಅಕ್ಷರಶಹ ಅನುವಾದ ಮಾಡದೇ ಭಾವದಿಂದ ಮಾಡಬೇಕೆಂಬುದು ನನ್ನ ಅಭಿಲಾಷೆಯಾಗಿತ್ತು. ಆದರೆ ಇಂದು ನಿಮ್ಮಿಂದ ಆಗಿರುವ ಅನುವಾದವನ್ನ ನೋಡಿ ಬಹಳ ಸಂತೋಷವಾಗುತ್ತಿದೆ. ಬಹುಶಃ ನನ್ನಿಂದಲೂ ಇಷ್ಟು ಚೆನ್ನಾಗಿ ಅನುವಾದವಾಗುತ್ತಿತ್ತೇ ಎಂಬುದು ಅನುಮಾನ. ನಿಮ್ಮ ಅನುವಾದ ಬಹಳ ಶುದ್ಧವಾಗಿದೆ.

ಇದಾದ ನಂತರ ಅವರು ಒಂದು ಲೇಖನವನ್ನು ಕಳುಹಿಸಿದರು. ಮೋಕ್ಷಮಾರ್ಗಸ್ಯ ಈ ಮಂಗಳಾಚರಣವು ಶ್ರೀ ಉಮಾಸ್ವಾಮಿಕೃತವೇ ಎಂದು. ಇದರ ಬಗ್ಗೆ ಸ್ವಲ್ಪ ಪ್ರಮಾಣವನ್ನು ಸಂಕಲನಗೊಳಿಸಲಾಗಿದೆ ಎಂದು. ನಾನು ಸಹ ಶ್ಲೋಕವಾರ್ತಿಕದ ಸ್ವಲ್ಪ ಪ್ರಮಾಣವನ್ನು ತೋರಿಸಿದೆ. ಆಗ ಪಂಡಿತರು ಮಾತಾಜಿ ಈ ಲೇಖನದಲ್ಲಿ ಇನ್ನೂ ಸ್ವಲ್ಪ ಹೆಚ್ಚಾಗಿ ಪ್ರಸ್ತಾವನೆಯಲ್ಲಿ ಈ ವಿಷಯವನ್ನು ಕೊಡಿರಿ ಎಂದರು.

ಒಮ್ಮೆ ಕೋಠಿಯಾಜಿಯವರು ಪ್ರೇಮಚಂದ್ ಜೈನ (ಹೋಟೆಲ್ ಶಾಖಾಹಾರಿ) ರ ಜೊತೆ ಹಸ್ತಿನಾಪುರಕ್ಕೆ ಬಂದರು. ಸಭೆಯಲ್ಲಿ ಅವರನ್ನು ಹೊಗಳುತ್ತಾ ನಾನು, ಪಂಡಿತಜೀ ತಾವು ಸರಸ್ವತಿ ಪುತ್ರರು ಎಂದೆ. ಅದಕ್ಕೆ ಪಂಡಿತರು ತಮ್ಮ ಭಾಷಣದಲ್ಲಿ ನಾನಂತೂ ಸರಸ್ವತಿಯ ಮಗನಾಗಿರಬಹುದು. ಆದರೆ ಮಾತಾಜೀ ನೀವು ಸ್ವತಃ ಸರಸ್ವತಿಯೇ ಆಗಿದ್ದೀರ ನಿಮ್ಮ ಬರವಣಿಗೆಯಲ್ಲಿ ನ್ಯಾಯ, ವ್ಯಾಕರಣ. ಜೈನ ಭೂಗೋಳ, ಆಧ್ಯಾತ್ಮ ಮುಂತಾದ ಎಲ್ಲ ವಿಷಯಗಳು ಸರ್ವಾಂಗೀಣವಾಗಿಯು ಪರಿಪೂರ್ಣವಾಗಿವೆ.

ಹೀಗೆ ತ್ಯಾಗಭವನಕ್ಕೆ ಒಮ್ಮೆ ಅಷ್ಟ ಸಹಸ್ರೀ ಅಚ್ಚಾಗುವ ಸಮಯದಲ್ಲೇ ಪಂ. ಪರಮೇಷ್ಠಿ ದಾಸಜೀ ಬಂದಿದ್ದರು. ಅವರು ಕೂಡ ಅಚ್ಚಾಗಿರುವುದನ್ನು ನೋಡಿ ಹೊಗಳುತ್ತಾ ಪಂಡಿತರೇ ನಾನು ಒಂದು ಮಾತು ಹೇಳಿದರೆ ತಾವು ಒಪ್ಪಿಕೊಳ್ಳುತ್ತೀರ ಎಂದೆ. ಪಂಡಿತರು ನೀವು ನನ್ನ ಗುರುಗಳು ಹೇಳಿರಿ ಎಂದರು. ಆಗ ನಾನು ಪಂಡಿತರೇ ತಮ್ಮ ತಲೆಯ ಕೂದಲೆಲ್ಲ ಬಿಳಿಯಾಗಿದೆ. ಆದ್ದರಿಂದ ಈಗ ತಾವು ಮುನಿಗಳ ಬಗ್ಗೆಯಾಗಲಿ,

ಆರ್ಯಿಕೆಯರ ಬಗ್ಗೆಯಾಗಲಿ ಅಥವ ಯಾವುದೇ ಪಿಂಛಿಧಾರಿಗಳ ಬಗ್ಗೆಯಾದರೂ ನಿಂದನೆಯನ್ನು ಮಾಡಬಾರದು ಮತ್ತು ಯಾವ ಲೇಖನವನ್ನು ಬರೆಯಬಾರದು. ಆಗ ಅವರು ಸಹಜ ಭಾವದಿಂದಲೇ ನನ್ನ ಮುಂದೆಯೇ ನಿಯಮವನ್ನು ಕೈಕೊಂಡರು ಮುಂದೆ ಇನ್ನೊಂದು ನಿಂದನೆಯನ್ನಾಗಲಿ, ಲೇಖನವನ್ನಾಗಿ ಬರೆಯುವುದಿಲ್ಲವೆಂದು ನಂತರ 7-8 ತಿಂಗಳಲ್ಲಿಯೇ ಅವರು ಸ್ವರ್ಗಸ್ಥರಾದರು.

ಒಮ್ಮೆ ಉದಯಪುರದಿಂದ ಶ್ರೀ ಕಮಲಚಂದ ಸೋಗಾನಿಯವರು ಬಂದಿದ್ದರು. ಮಾತಾಜೀ ತಾವು ಜೈನಸಮಾಜದಲ್ಲಿ ಏಕೆ ಹುಟ್ಟಿದಿರಿ ನೀವು ಬೇರೆ ಯಾವುದಾದರು ಜನ್ಮದಲ್ಲಿ ಹುಟ್ಟಿದ್ದರೆ ಜನರು ನಿಮ್ಮನ್ನು ಚಿನ್ನ ಬೆಳ್ಳಿಯಿಂದ ತೂಗುತ್ತಿದ್ದರು. ನೀವು ಜನ್ಮ ತಳೆದಿರುವ ಈ ಸಮಾಜದಲ್ಲಿ ನಿಮ್ಮನ್ನು ಸರಿಯಾಗಿ ತಿಳಿಯುವವರೇ ಬಹುಶಃ ಯಾರೂ ಇಲ್ಲ ಎಂದರು. ಅದಕ್ಕೆ ನಾನು ಪ್ರೊಫೆಸರ್‌ಜೀ ನಾನು ಅನುವಾದ ಮಾಡುವಾಗ ಯಾರೂ ನನ್ನನ್ನು ಗೌರವಿಸಲಿ ಎನ್ನುವ ಭಾವ ಖಂಡಿತ ಇಲ್ಲ ನನಗೆ ಜ್ಞಾನವನ್ನು ಸಮೀಚೀನ ಮಾಡುವ ಮತ್ತು ಶುದ್ಧ ಸಮ್ಯಕ್ ತತ್ವವನ್ನು ಉಂಟು ಮಾಡುವ ಹಾಗೂ ದೃಢಗೊಳಿಸಬೇಕಾಗಿತ್ತು. ಈ ಅನುವಾದದಿಂದಲೇ ನನಗೆ ಎಂತಹ ಆನಂದ ಸಿಕ್ಕಿದೆ ಅದನ್ನು ವರ್ಣಿಸಲು ಸಾಧ್ಯವಿಲ್ಲ. ಆ ಆನಂದ ಪ್ರೀತಿಯೇ ಜ್ಞಾನದ ಫಲ. ನನ್ನನ್ನು ಗೌರವಿಸಿದರೆ ನನಗೆ ಲಾಭವೇನು ಅಥವ ಗೌರವಿಸದಿದ್ದರೆ ನಷ್ಟವೇನು. ಇನ್ನೊಂದು ವಿಷಯವೆಂದರೆ ನಾನು ಶಿಷ್ಯರಿಗೆ ಇದನ್ನು ಬೋಧಿಸುವಾಗ ಅವರಿಗೆ ಸರಿಯಾಗಿ ಅರ್ಥವಾಗುತ್ತಿದೆಯೆ ಎಂಬುದು. ಏಕೆಂದರೆ ಮೋತಿಚಂದನು ಶಾಸ್ತ್ರಿ ಮತ್ತು ನ್ಯಾಯತೀರ್ಥ ಪರೀಕ್ಷೆಯ ಅರ್ಜಿ ತುಂಬಿದಾಗ ಅವನಿಗೆ ಸರಿಯಾಗಿ ಅರ್ಥವಾಗಲಿ ಎನ್ನುವ ಉದ್ದೇಶದಿಂದಲೇ ನಾನು ಇದನ್ನು ಅನುವಾದ ಮಾಡಿರುವುದು ಎಂದೆ.

1971ರಲ್ಲಿ ಅಜಮೇರದ ಚಾತುರ್ಮಾಸದಲ್ಲಿ ಸೇಠ್ ಭಾಗಚಂದ್ ಸೋನಿ ಮತ್ತು ಪಂಡಿತ ಹುಕುಮಚಂದ ಭಾರಿಲ್ಲಾರವರು ಬಂದು ನನ್ನಲ್ಲಿ ಮಾತಾಜಿ ನಿಮ್ಮಿಂದ ಅಷ್ಟಸಹಸ್ರೀಯಲ್ಲಿ ಬಂದಿರುವ ಪ್ರಾಗಭಾವ ಮೊದಲಾದ ವಿಷಯದಲ್ಲಿ ಚರ್ಚೆ ಮಾಡಬೇಕಾಗಿದೆ ಎಂದರು. ಅಷ್ಟ ಸಹಸ್ರೀಯಲ್ಲಿ ಪ್ರಾಗಭಾವ, ಪ್ರಧ್ವಂಸಾಭಾವ, ಅನ್ಯೋನ್ಯಾಭಾವ ಮತ್ತು ಅತ್ಯಂತಾಭಾವ ಈ ನಾಲ್ಕು ಭಾವಗಳ ಬಹಳ ವಿಷದವರ್ಣನೆಯು ಇದೆ. ಜೈನಾಚಾರ್ಯರು ಅಭಾವವನ್ನು ಶೂನ್ಯವೆಂದು ಪರಿಗಣಿಸದೆ ಸ್ವಲ್ಪವಾದರು ಸದ್ಭಾವವೆಂದು ಪರಿಗಣಿಸಬೇಕು. ಹೇಗೆಂದರೆ ಜೈನನಲ್ಲ ಅಜೈನ ಎಂದು ಹೇಳುವುದರಿಂದ ಜೈನನಾಗುವುದಿಲ್ಲ. ಅಜೈನನಿಂದ ಬ್ರಾಹ್ಮಣ, ಕ್ಷತ್ರಿಯ (ಎಂದು) ಯಾರಾದರು ಆಗಿಯೇ ಆಗುತ್ತಾರೆ. ಹೀಗೆ ವಿಧ ವಿಧವಾಗಿ ಈ ಪಂಡಿತರು ಗಂಟೆಗಳವರೆಗೆ ಚರ್ಚೆ ಮಾಡುತ್ತಿದ್ದರು. ಅವರುಗಳು ಈ ಗ್ರಂಥದ ಆಧಾರದಿಂದ ಅಭಾವಗಳನ್ನು ತಿಳಿದುಕೊಂಡು ಅವರಿಗೆ ಬಹಳ ಸಂತೋಷವಾಯಿತು.

ಹಸ್ತಿನಾಪುರಕ್ಕೆ ಬಿಜನೋರಿನ ಡಾII ರಮೇಶಚಂದ ಬಂದಿದ್ದರು ಅವರು ಬೌದ್ಧ ದರ್ಶನ ಮತ್ತು ಜೈನದರ್ಶನದ ಬಗ್ಗೆ ಡಿಲಿಟ್ ಮಾಡುತ್ತಿದ್ದರು ಅವರು ಮಾತಾಜೀ ನನಗೆ ತಮ್ಮ ಹಸ್ತಲಿಖಿತ ಪ್ರತಿಗಳನ್ನು ಕೊಡಿರಿ ಒಂದು ವಾರದಲ್ಲಿ ವಾಪಸ್ಸು ಮಾಡುತ್ತೇನೆ ಎಂದರು. ಅದಕ್ಕೆ ನಾನು ಪಂಡಿತರೇ ಈ ಪ್ರತಿಗಳು ಇನ್ನು ಅಚ್ಚಾಗಿಲ್ಲ, ಆದ್ದರಿಂದ ನನಗೆ ಅವು ಪ್ರಾಣಕ್ಕೆ ಸಮಾನವಾದುದು. ಆದ್ದರಿಂದ ತಾವು ಇಲ್ಲಿಯೇ ಕುಳಿತು ಅವಲೋಕನ ಮಾಡಿರಿ, ತಾವು ಹೊರಗಡೆಗೆ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲವೆಂದೆ. ಹಾಗಾಗಿ ಅವರೇ ಒಂದುವಾರ ಇಲ್ಲಿದ್ದು ವಿಷಯಗಳನ್ನು ಗುರುತು ಹಾಕಿಕೊಂಡು ನನ್ನಲ್ಲಿಯೂ ಸಾಕಷ್ಟು ಚರ್ಚೆ ಮಾಡಿದರು.

ಈ ಅಷ್ಟ ಸಹಸ್ರೀಯು 6 ಕಾರಿಕೆಗಳನ್ನು ಒಳಗೊಂಡು ಈ ಗ್ರಂಥದ ಪ್ರಥಮ ಭಾಗದ ರೂಪದಲ್ಲಿ 1974ರಲ್ಲಿ ಮುದ್ರಣವಾಗಿ ಬಂದಿತು. ಹೀಗೆ ಬಂದ ಯೋಗವು ಮುಂದಿನ ಭಾಗಕ್ಕೆ ಸುಮಾರು 13 ವರ್ಷಗಳಲ್ಲಿ

ಅನುವಾದವಾಗಿಯೂ ಮುದ್ರಣಗೊಳ್ಳಲು 18 ವರ್ಷಗಳನ್ನು ತೆಗೆದುಕೊಂಡಿತು.[೧] ಹಾಗೇ ಈ ಗ್ರಂಥಮಾಲೆಯಿಂದ ಸುಮಾರು 87 ಪುಸ್ತಕಗಳು ಅಚ್ಚಾಗಿವೆ.

೬೬

ಪಂಚರಂಗೀ ಧ್ವಜ

ಒಮ್ಮೆ ಧರ್ಮಸಾಗರರ ಹತ್ತಿರ ಲಾಲಮಂದಿರಕ್ಕೆ ಕೆಲವರು ಪಂಚರಂಗೀ ಧ್ವಜದ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಲು ಬಂದಿದ್ದರು. ನಾನು ಅಲ್ಲೇ ಕುಳಿತಿದ್ದವಳು ಎಲ್ಲವನ್ನೂ ಕೇಳಿಸಿಕೊಂಡೆ. ಆಚಾರ್ಯರು ಎಲ್ಲವನ್ನು ಕೇಳಿದರು. ಸ್ವಲ್ಪ ಹೊತ್ತಾದ ಮೇಲೆ ನಾನು ಆಚಾರ್ಯರ ಹತ್ತಿರ ಆಜ್ಞೆ, ಪಡೆದು ಅವರಿಗೆ ತಿಳುವಳಿಕೆ ಹೇಳತೊಡಗಿದೆ. ನೋಡಿ ನಾಲ್ಕು ಸಂಪ್ರದಾಯದಿಂದ ಒಂದು ವಿಷಯ ಅಂಗೀಕಾರವಾಗಿದೆ. ಎಂದರೆ ಅದು ಪ್ರಭಾವನಾ ದೃಷ್ಟಿಯಿಂದ ಬಹಳ ಒಳ್ಳೆಯದು ಇದರಲ್ಲಿ ಕೆಟ್ಟದು ಏನಿದೆ ? ದೆಹಲಿಯಲ್ಲಿ ದಿಗಂಬರ ಜೈನ ಮಂದಿರಗಳ ಶಿಖರಗಳ ಮೇಲೆ ಎಲ್ಲಿಯಾದರು, ಹಾಗೇ ಯಾವುದಾದರು ಚೌಕಗಳಲ್ಲಿಯು ಕೆಂಪು ಬಣ್ಣದ ಧ್ವಜಗಳಿವೆಯೇ, ಬ್ರ. ಸೂರಜಮಲಜೀ ಪ್ರತಿಷ್ಠೆಯ ಸಮಯದಲ್ಲಿ ಪಂಚವರ್ಣದ ಪಟ್ಟಿಗಳಿಂದ ಧ್ವಜವನ್ನು ಮಾಡಿಸಿ ಧ್ವಜಾರೋಹಣ ಮಾಡಿದ್ದಾರೆ. ಇದಲ್ಲದೆ ಜಂಬೂದ್ವೀಪ ಪಣ್ಣತ್ತಿಯಲ್ಲಿ ಪಂಚವರ್ಣದ ಧ್ವಜಗಳ ವರ್ಣನೆ ಇದೆ. ಹೇಗೆಂದರೆ ಅಕೃತ್ರಿಮ ಮಂದಿರಗಳಲ್ಲಿ ಮಣಿಮಯ ಕಂಭಗಳ ಮೇಲೆ ಧ್ವಜಸಮೂಹವನ್ನು ನಿರ್ದಿಷ್ಟಗೊಳಿಸಲಾಗಿದೆ. ಅವು ಸಿಂಹ, ಗಜ, ಹಂಸ, ವೃಷಭ ಕಮಲ ಮಯೂರ, ಮಕರ, ಚಕ್ರ, ಛತ್ರಿ ಮತ್ತು ಗರುಡ ಈ ಹತ್ತು ಚಿಹ್ನೆಗಳಿಂದ ಚಿಹ್ನಿತವಾಗಿತ್ತು. ಇವುಗಳಲ್ಲಿ ಒಂದೊಂದು ಧ್ವಜಗಳು ಮುತ್ತಿನ ಮಣಿಗಳ ಮಾಲೆಯಿಂದಲೂ ಶೋಭಾಯಮಾನವಾಗಿ ಉತ್ತಮ ಪಂಚವರ್ಣದ 1008 ದಿವ್ಯ ಪರಿವಾರ ಧ್ವಜಗಳಾಗಿರುತ್ತವೆ.

ಅಟ್ಠಸಯಂ ಅಟ್ಠಸಯಂ ಏಗೇಗಧಯಾಣ ಹೊಂತಿ ಪರಿವಾರಾ ।
ವರಪಂಚವಣ್ಣದಿವ್ವಾ ಮುತ್ತಾಮಣಿದಾಮಕಯ ಸೋಹಾ ॥ 7 ॥

ಆಗ ಜನರಿಗೆಲ್ಲ ನನ್ನ ಮಾತು ಒಪ್ಪಿಗೆಯಾಯಿತು. ಆಗ ನಾನು ಹೀಗೆ ನಿರ್ವಾಣೋತ್ಸವದಲ್ಲಿ ಯಾವುದೇ ವಿಷಯದಲ್ಲಾದರು ಅನುಮಾನಪಟ್ಟು ವಿರೋಧವನ್ನು ಮಾಡದೆ ಕೆಲಸವು ಸಫಲವಾಗುವುದರಲ್ಲಿ ನಿಮ್ಮ ಶಕ್ತಿಯನ್ನು ವಿನಿಯೋಗಿಸಿದರೆ ಆಗ ಎಲ್ಲವು ಚೆನ್ನಾಗಿ ಆಗುತ್ತದೆ ಎಂದೆ. ಎಲ್ಲರಿಗೂ ನನ್ನ ಮಾತು ಚೆನ್ನಾಗಿ ಹಿಡಿಸಿತು.

ಭಗವಾನ ಮಹಾವೀರರ ಪುಸ್ತಕ

ಶ್ವೇತಾಂಬರರ ತೇರಪಂಥಿಯ ಅನುಯಾಯಿ ಶ್ರೀ ತುಲಸೀಗಣಿಗಳು ಭ. ಮಹಾವೀರರ ಮೇಲೆ ಒಂದು ಪುಸ್ತಕವನ್ನು ಬರೆದಿದ್ದರು. ಸಾಹೂ ಶಾಂತಿಪ್ರಸಾದರು ಈ ಪುಸ್ತಕವು ದಿಗಂಬರ ಶ್ವೇತಾಂಬರರ ಮೂರು ಭೇದಗಳು ಹೀಗೆ ನಾಲ್ಕು ಸಂಪ್ರದಾಯಗಳಿಂದಲೂ ಮಾನ್ಯತೆಯನ್ನು ಪಡೆದರೆ, ಈ ಗ್ರಂಥವನ್ನು ಭಾರತದ ನಾನಾ ಭಾಷೆಗಳಲ್ಲಿ ಲಕ್ಷಾಂತರ ಪುಸ್ತಕಗಳನ್ನು ಮಾಡಿಸುವ ಯೋಜನೆಯಿಂದ ಆಚಾರ್ಯರ ಹತ್ತಿರಕ್ಕೆ ಒಂದು ಪುಸ್ತಕವನ್ನು ಕಳುಹಿಸಿದ್ದರು. ಆಚಾರ್ಯರು ನನಗೆ ಜ್ಞಾನಮತೀಜೀ ಈ ಪುಸ್ತಕವು ದಿಗಂಬರ ಪರಂಪರೆಗೆ ಅನುಸಾರ ಮಾನ್ಯತೆಯನ್ನು ಪಡೆಯಲು ಯೋಗ್ಯವಾಗಿದೆಯೋ ನೋಡಿ ಹೇಳಿರಿ ಎಂದರು.

---

೧. ಜಂಬೂದ್ವೀಪ ಪಣ್ಣತ್ತಿ. ಪು. ೯೦

ನಾನು ಅದರಲ್ಲಿ ಸುಮಾರು 60 ತಪ್ಪುಗಳನ್ನು ಹುಡುಕಿ ಬರೆದು ಆಚಾರ್ಯರ ಹತ್ತಿರ ಕೊಟ್ಟೆ. ಸಾಹೂಶಾಂತಿಪ್ರಸಾದಜೀ ಬಂದಾಗ ಅವರಿಗೆ ಆ ಕಾಗದವನ್ನು ಕೊಡಲಾಯಿತು. ಬೇರೆಯವರ ಹತ್ತಿರ ಚರ್ಚೆ ಮಾಡಿ ಕೆಲವು ದಿನ ನಂತರ ಬಂದು ಈ ತಪ್ಪುಗಳಿಗೆ ಪ್ರಮಾಣಗಳು ಬೇಕು ಎಂದು ಕೇಳಿದರು.

ಆಚಾರ್ಯರು ಪ್ರಮಾಣಗಳನ್ನು ತೋರಿಸಲು ನನಗೆ ಹೇಳಿದರು. ನಾನು ಎರಡು ಮೂರು ದಿನಗಳು ಬಹಳ ಪರಿಶ್ರಮಪಟ್ಟು ಅನೇಕ ಗ್ರಂಥಗಳನ್ನು ಮಂಥನ ಮಾಡಿ ಪ್ರಮಾಣಗಳನ್ನು ತೆಗೆದು ನಾನೇ ಬರೆದು ಆಚಾರ್ಯರ ಕೈಲಿ ಕೊಟ್ಟೆ. ಅವರಿಗೆ ಸಾಹೂಜೀಯವರಿಗೆ ಕೊಡಲಾಯಿತು. ಅದರಲ್ಲಿ ಕೊಟ್ಟಿದ್ದ ಒಂದು ಪ್ರಮಾಣವನ್ನು ನೋಡಿದ ಅವರು ತಮ್ಮ ಪುಸ್ತಕದಲ್ಲಿ ಭ ಮಹಾವೀರರ. ದೊಡ್ಡ ಅಣ್ಣ ಇದ್ದರು ಎಂದು ಹೇಳಿದ್ದಾರೆ. ಆದರೆ ದಿಗಂಬರ ಸಂಪ್ರದಾಯದ ಅನುಸಾರ ತೀರ್ಥಂಕರರು ಅವರ ತಂದೆ ತಾಯಿಗಳಿಗೆ ಏಕಮಾತ್ರ ಪುತ್ರರಾಗಿರುತ್ತಾರೆ ಇವರಿಗೆ ಯಾವುದೇ ಸಹೋದರ ಸಹೋದರಿಯರು ಇರುವುದಿಲ್ಲ.

ಏಕಪ್ರಸೂರಪ್ಯಸಿ ವಿಶ್ವಮಾತಾ, ತ್ವಂ ಮಾನುಷೀಚಾಪ್ಯಾಧಿದೇವತಾಸಿ ।
ಸ್ತ್ರೈಣಂ ದಧಾನಾಪಿ ನಿರಸ್ತ ದೋಷಾ ಚಿತ್ರಂಚಾರಿತ್ರಂ ತವ ಲೋಕಮಾತಃ ॥
(ಪ್ರತಿಷ್ಠಾ ತಿಲಕ ಪು. ೪೯೯)

ಹೇ ಲೋಕಮಾತಾ ತಮಗೆ ಒಂದೇ ಪ್ರಸೂತಿ ಒಬ್ಬನೇ ಮಗನಿಗೆ ಜನ್ಮಕೊಟ್ಟಿರುವವರು ಆದರೂ ತಾವು ವಿಶ್ವಕ್ಕೇ ಮಾತೆ ಎನ್ನಿಸಿದ್ದೀರ. ತಾವು ಮನುಷ್ಯರಲ್ಲಿ ನಾರಿ ಆಗಿದ್ದೀರ ಆದರೂ ದೇವತೆಗಳಲ್ಲಿ ದೇವತೆಯಾಗಿ ಅಧಿ ದೇವತೆಯಾಗಿದ್ದೀರ ತಾವು ಸ್ತ್ರೀ ಪರ್ಯಾಯವನ್ನು ಧಾರಣೆ ಮಾಡಿಯೂ ಸ್ತ್ರೀ ಪರ್ಯಾಯದ ಮಾಯಾಚಾರ ಮೊದಲಾದ ದೋಷಗಳಿಂದ ರಹಿತರಾಗಿದ್ದೀರ ಹೇ ಮಾತೆ ನಿಮ್ಮ ಚಾರಿತ್ರ ಆಶ್ಚರ್ಯಕಾರಿಯಾಗಿದೆ.

ಈ ಪ್ರಕಾರವಾಗಿ ಅನೇಕ ಪ್ರಮಾಣವನ್ನು ತೆಗೆದುಕೊಟ್ಟಿದ್ದರಿಂದ ಸಾಹೂಜೀಯವರು ಪುನಃ ಆಚಾರ್ಯರ ಹತ್ತಿರ ಬಂದು ನಿವೇದನೆ ಮಾಡಿಕೊಂಡರು. ಏನಾದರೂ ಆಗಲಿ ಈ ಪುಸ್ತಕಕ್ಕೆ ಮಾನ್ಯತೆಯನ್ನು ಘೋಷಣೆ ಮಾಡಿರಿ. ಒಂದೆರಡು ವಿಷಯಗಳಲ್ಲಿ ಸಂಶೋಧನೆ ಮಾಡಿರಿ ಎಂದರು. ಆದರೆ ಎರಡು ಮೂರು ವಿಷಯಗಳಲ್ಲಿ ಸಂಶೋಧನೆ ಮಾಡಿದರು. ಈ ಪುಸ್ತಕ ದಿಗಂಬರ ಸಂಪ್ರದಾಯಕ್ಕೆ ಯಾವುದೇ ಸಂಬಂಧವಿಲ್ಲ. ಆಚಾರ್ಯರು ಮಾನ್ಯತೆಯನ್ನು ನಿರಾಕರಿಸಿದರು. ಸಾಹೂಜೀ ನನ್ನ ಹತ್ತಿರ ಬಂದು ನಿವೇದಿಸಿದರು. ಮಾತಾಜೀ ಏನಾದರು ಆಗಲಿ ನಾಲ್ಕು ಸಂಪ್ರದಾಯದ ಮಾನ್ಯತೆಯನ್ನು ಕೊಟ್ಟು ಪುಸ್ತಕವನ್ನು ಮುದ್ರಿಸಲು ಆಜ್ಞೆಯನ್ನು ಕೊಡಿಸಿ ಕೊಡಿ ಎಂದರು. ಅದಕ್ಕೆ ನಾನು ಯಾವ ಸ್ಥಿತಿ ಇದೆ ಅದನ್ನು ಆಚಾರ್ಯರ ಆಜ್ಞಾನುಸಾರ ನಾನು ಬರೆದು ಕೊಟ್ಟಿದ್ದೇನೆ ಈ ವಿಷಯದಲ್ಲಿ ಆಚಾರ್ಯರ ಅಧಿಕಾರವೆಂದೆ. ನಿಜವಾಗಿಯೂ ಆಚಾರ್ಯರು ಬಹಳ ದೃಢವಾಗಿ ಹೇಳಿದರು. ಒಂದು ವೇಳೆ ತಾವು ಈ ಪುಸ್ತಕವನ್ನು ನಾಲ್ಕು ಸಂಪ್ರದಾಯದ ಮಾನ್ಯತೆಯನ್ನು ಕೊಟ್ಟು ಮುದ್ರಿಸಿದ್ದೆ ಆದರೆ ನಾವು ದಿಗಂಬರ ಸಂಪ್ರದಾಯದಿಂದ ಈ ಪುಸ್ತಕಕ್ಕೆ ಬಹಿಷ್ಕಾರ ಹಾಕಿಸುತ್ತೇವೆ ಎಂದರು. ಇವರ ಇಷ್ಟು ಕಟುವಾದ ಎಚ್ಚರಿಕೆಯಿಂದ ಜನರು ಸುಮ್ಮನಾದರು. ಅದನ್ನು ಎಚ್ಚುಹಾಕಿಸುವ ಸಾಹಸಕ್ಕೆ ಹೋಗಲಿಲ್ಲ. ಆದರೂ ಕೆಲವರು ನನ್ನಲ್ಲಿ ಮಾತಾಜಿ ತಾವೇ ಇಂತಹ ಒಂದು ಪುಸ್ತಕವನ್ನು ಮಹಾವೀರರನ್ನು ಕುರಿತು ಬರೆಯಿರಿ. ಅದು ಎಲ್ಲರಿಗೂ ಮಾನ್ಯವಾಗುತ್ತದೆ ಎಂದರು. ನಾನು ಎರಡು ಸಂಪ್ರದಾಯಗಳಿಗೆ ಒಪ್ಪಿಗೆ ಆಗದಿದ್ದ ವಿಷಯಗಳನ್ನು ಗೌಣವನ್ನಾಗಿ ಮಾಡಿ ಒಂದು ಪುಸ್ತಕ ಬರೆದೆ. ಹೇಗೆಂದರೆ ಭಗವಂತರಿಗೆ ವಿವಾಹ ಆಯಿತೆ ಇಲ್ಲವೇ ಈ ಎರಡು ವಿಷಯಗಳನ್ನು ತೆಗೆದುಕೊಳ್ಳದೆ 30 ವರ್ಷ ವಯಸ್ಸಿನಲ್ಲಿ ದೀಕ್ಷೆ ತೆಗೆದುಕೊಂಡರು ಎಂದು ಉಲ್ಲೇಖಿಸಿದೆ. ಆದರೆ ತುಲಸಿಗಣಿಗಳು ಪುಸ್ತಕವನ್ನು ಒಪ್ಪಿಕೊಳ್ಳದೆ ಇದ್ದುದ್ದರಿಂದ ಚರ್ಚೆ ಅಲ್ಲಿಗೆ ನಿಂತಿತು. ಇಂದಿಗೂ ಜಂಬೂದ್ವೀಪದ ಪುಸ್ತಕಾಲಯದಲ್ಲಿ ತುಲಸಿಗಣಿಗಳ ಮತ್ತು ನನ್ನ ಎರಡು ಪುಸ್ತಕಗಳು ಇವೆ.

ಭಗವಾನ ಮಹಾವೀರರು ಹೇಗಾದರು ?

ನಾನು ಭಗವಾನ ಮಹಾವೀರರು ಹೇಗಾದರು ? ಇದೊಂದು ಸಚಿತ್ರವಾಗಿತ್ತು. ಇದರಲ್ಲಿ ಸಂಕ್ಷೇಪವಾಗಿ ಭಗವಾನ ಮಹಾವೀರರ ಪೂರ್ವದ 34 ಭವವನ್ನು ತೋರಿಸಲಾಗಿತ್ತು. ಇದು ಮುದ್ರಣವಾದ ಒಂದು ವಾರದಲ್ಲೇ ಮುಗಿದು ಹೋಯಿತು. ಜನರಿಂದ ಮತ್ತೆ ಬೇಡಿಕೆ ಬರತೊಡಗಿತು. ಮೋತಿಚಂದನು ನನ್ನ ಅನುಮತಿ ಪಡೆದು ಮತ್ತೆ 10,000 ಪ್ರತಿಗಳನ್ನು ಅಚ್ಚುಹಾಕಿಸಿದರು. ಒಟ್ಟಿನಲ್ಲಿ ಮಹಾವೀರ ಜಯಂತಿಯಲ್ಲಿ ಮಹಾವೀರರ ಸಾಹಿತ್ಯಕ್ಕೂ ಒಳ್ಳೆಯ ಸತ್ಕಾರ ದೊರೆಯಿತು.

ದಿಗಂಬರ ಸಂಪ್ರದಾಯದ ಇಬ್ಬರು ಆಚಾರ್ಯರು

2500ನೇ ನಿರ್ವಾಣ ಮಹೋತ್ಸವದಲ್ಲಿ ನಾಲ್ಕು ಸಂಪ್ರದಾಯಗಳ ಸಮಿತಿಯಲ್ಲಿ ಶ್ವೇತಾಂಬರ ಮಂದಿರ ಮಾರ್ಗಿಗಳು ಸ್ಥಾನಕವಾಸೀ ಮತ್ತು ತೇರಹಪಂಥೀ ಹೀಗೆ ಮೂರು ಸಂಪ್ರದಾಯಗಳು ಇದ್ದವು. ದಿಗಂಬರರದು ಒಂದೇ ಆದ್ದರಿಂದ ಈ ಸಮಿತಿಯಲ್ಲಿ ಆಚಾರ್ಯಶ್ರೀ ದೇಶ ಭೂಷಣಜಿ ಮತ್ತು ಆಚಾರ್ಯಶ್ರೀ ಧರ್ಮಸಾಗರ ಇಬ್ಬರ ಹೆಸರು ಇತ್ತು. ಆದರೆ ಧರ್ಮಸಾಗರರ ಹೆಸರನ್ನು ತೆಗೆದುಹಾಕಬೇಕೆಂಬ ಚರ್ಚೆ ಶುರುವಾಯಿತು. ನನ್ನ ಹತ್ತಿರವು ಇದನ್ನು ಚರ್ಚೆ ಮಾಡಿದರು. ನಾನು ಬಹಳ ಪ್ರಯತ್ನಪಟ್ಟೆನು. ಕೊನೆಗೆ ನೀವೇನಾದರು ಹೆಸರು ತೆಗೆದಿದ್ದೇ ಆದರೆ ನಾನು ಉಪವಾಸ ಮಾಡುತ್ತೇನೆ ಎಂದೆ. ಹೀಗಾಗಿ ಕೊನೆಗೆ ಇಬ್ಬರ ಹೆಸರು ಉಳಿದುಕೊಂಡಿತು.

ದೆಹಲಿಯಲ್ಲಿ ಸಾಧುಗಳ ಬೃಹತ್ ಸಮೂಹ

1974ರಲ್ಲಿ (1) ಆಚಾರ್ಯ ಧರ್ಮಸಾಗರ ಮಹಾರಾಜರು (2) ಮುನಿಶ್ರೀ ವೃಷಭಸಾಗರಜೀ ಮಾಸೋಪವಾಸೀ ಮುನಿಶ್ರೀ ಸುಪಾರ್ಶ್ವಸಾಗರಜೀ (4) ಮುನಿಶ್ರೀ ನೇಮಿಸಾಗರಜೀ (5) ಬೋಧಿಸಾಗರಜೀ (6) ಸಂಯಮ ಸಾಗರಜೀ (7) ದಯಾಸಾಗರಜೀ (8) ಮಹೇಂದ್ರ ಸಾಗರಜೀ (9) ಅಭಿನಂದನಸಾಗರಜೀ (10) ಸಂಭವ ಸಾಗರಜೀ (11) ಮುನಿಶ್ರೀ ವರ್ಧಮಾನಸಾಗರಜೀ (12) ಮುನಿಶ್ರೀ ಭೂಪೇಂದ್ರ ಸಾಗರಜೀ (13) ಮುನಿಶ್ರೀ ಬುದ್ಧಿಸಾಗರಜೀ (14) ಮುನಿಶ್ರೀ ಪದ್ಮಸಾಗರಜೀ (15) ಮುನಿಶ್ರೀ ಚಾರಿತ್ರ ಸಾಗರಜೀ (16) ಮುನಿಶ್ರೀ ವಿನಯ ಸಾಗರಜೀ (17) ವಿಜಯ ಸಾಗರಜೀ (18) ಆರ್ಯಿಕೆ ಜ್ಞಾನಮತೀ (ನಾನು) (19) ಆರ್ಯಿಕೆ ಶ್ರೀ ಜಿನಮತಿಜೀ (20) ಆದಿಮತಿ (21) ಸಂಭವಮತೀಜೀ (22) ಭದ್ರಮತೀ (23) ಕಲ್ಯಾಣಮತೀಜೀ (24) ಆರ್ಯಿಕೆಶ್ರೀ ಶ್ರೇಷ್ಯಮತೀ (25) ಆರ್ಯಿಕೆ ಗುಣಮತೀ (26) ವಿದ್ಯಾಮತೀ (27) ಜಯಮತೀ (28) ಸಿದ್ಧಮತೀ (29) ಆರ್ಯಿಕೆ ಶ್ರೀ ವಿಮಲಮತೀಜೀ (30) ರತ್ನಮತೀ (31) ನಿರ್ಮಲಮತೀ (32) ಶುಭಮತೀ (33)ಯಶೋಮತೀ (34) ಐಲಕ ವಿನಯಸಾಗರ (35) ಐಲಕಶ್ರೀ ಕೀರ್ತಿಸಾಗರಜೀ (36) ಕ್ಷುಲ್ಲಕ ವೀರಸಾಗರಜೀ (37) ಕ್ಷುಲ್ಲಕಶ್ರೀ ಗುಣಸಾಗರಜೀ (38) ಕ್ಷುಲ್ಲಕ ಶ್ರೀ ಭದ್ರಸಾಗರಜೀ (39) ಕ್ಷುಲ್ಲಕ ಶ್ರೀ ಸುರಲಸಾಗರ (40) ಕ್ಷುಲ್ಲಕ ಶ್ರೀ ಮನೋಮತಿಜೀ.

ದೆಹಲಿ 1975ರಲ್ಲಿ ದೆಹಲಿಯ ಚಾತುರ್ಮಾಸದಲ್ಲಿ ದೇಶಭೂಷಣರ ಸಂಘ

1. ಆಚಾರ್ಯ ರತ್ನಶ್ರೀ ದೇಶಭೂಷಣ ಮಹಾರಾಜಜೀ 2. ಮುನಿಶ್ರೀ ಜ್ಞಾನ ಭೂಷಣಜೀ 3.ಸನ್ಮತಿ ಭೂಷಣಜೀ 8. ಕ್ಷುಲ್ಲಕ ಶ್ರೀ ಬಾಹುಬಲಿಜೀ 5. ಕ್ಷುಲ್ಲಕಶ್ರೀ ಜಿನಭೂಷಣಜೀ 6. ಕ್ಷುಲ್ಲಕಶ್ರೀ ಚಂದ್ರಭೂಷಣಜೀ

7. ಕ್ಷುಲ್ಲಕಶ್ರೀ ಇಂದ್ರಭೂಷಣಜೀ 8. ಆರ್ಯಿಕೆ ಶ್ರೀ ಚಾರಿತ್ರಮತೀ 9. ಆರ್ಯಿಕೆಶ್ರೀ ಶೀಲಮತಿಜೀ 10. ಕ್ಷುಲ್ಲಕಶ್ರೀ ವೀರಮತೀಜೀ 11. ಕ್ಷುಲ್ಲಕ ಕೃಷ್ಣಮತೀಜೀ 12. ಅಜಿತಮತಿ 13. ಅನಂತಮತೀ 14. ರಾಜಮತಿಜೀ

ಮುನಿಶ್ರೀ ವಿದ್ಯಾನಂದಿಜೀ ಆರ್ಯಿಕೆ ಶ್ರೀ ಚಂದ್ರಮತೀ (ಆಚಾರ್ಯಶ್ರೀ ಶಾಂತಿಸಾಗರರ ಶಿಷ್ಯೆ) (ಉಳಿದ) ಅನ್ಯ 3. ಜನ ಆರ್ಯಿಕೆಯರು ಮತ್ತು ಕ್ಷುಲ್ಲಕೆಯವರು.

೬೭

ಭ. ಮಹಾವೀರರ **2500** ನೇಯ ನಿರ್ವಾಣ ಮಹೋತ್ಸವ

ಯಾವ ಪಾವನ ಮಹೋತ್ಸವಕ್ಕಾಗಿ ಹಲವು ವರ್ಷಗಳಿಂದ ತಯಾರಿ ನಡೆಸಿತ್ತೋ ಆ ಮಹೋತ್ಸವ ಬಂದೇ ಬಿಟ್ಟಿತು. ಮಂಗಳ ಗಳಿಗೆಯು ಬಂದಾಯಿತು. ದೆಹಲಿಯಲ್ಲಿ ನಾಲ್ಕು ಸಂಪ್ರದಾಯದ ಸಾಧು, ಸಾಧ್ವಿಯರು ಮತ್ತು ಶ್ರಾವಕ ಶ್ರಾವಕಿಯರು ಸೇರಿ ಮಹೋತ್ಸವವನ್ನು ಸಫಲಗೊಳಿಸಿದರು. 1974ರ ನವೆಂಬರ್ 13 ರಿಂದ 20 ರವರೆಗೆ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಆಚಾರ್ಯ ರತ್ನ ದೇಶಭೂಷಣರ ಸಾನಿಧ್ಯದಲ್ಲಿ 10-11-74ರಂದು ಪಹಾಡಿಧೀರಜ (ದೆಹಲಿ) ನಿಂದ ವೀರಜ್ಯೋತಿಯನ್ನು ಪ್ರಜ್ವಲಿತಗೊಳಿಸಿ ಜ್ಯೋತಿಯ ಪಾತ್ರವನ್ನು ರಥದಲ್ಲಿಟ್ಟು ಒಂದು ದೊಡ್ಡ ಮೆರವಣಿಗೆಯು ಹೊರಟು ಲಾಲಮಂದಿರದ ಚಾಂದನಿ ಚೌಕಕ್ಕೆ ಬಂದು. ಸಮಾಪ್ತವಾಯಿತು. ಈ ಜ್ಯೋತಿ ನವೆಂಬರ್ 14ರವರೆಗೂ ಅಖಂಡವಾಗಿ ಉರಿಯುತ್ತಿತ್ತು.

ನವೆಂಬರ್ 13, 1974 ಕಾರ್ತಿಕ ಕೃಷ್ಣ ಅಮಾವಾಸ್ಯೆಯ ಬೆಳಗ್ಗೆ ಇಡೀ ದೇಶದಲ್ಲೆಲ್ಲ ಜೈನಮಂದಿರಗಳಲ್ಲಿ ಬಹಳ ಸಂಭ್ರಮದಿಂದ ನಿರ್ವಾಣದ ಲಾಡು ಏರಿಸಲಾಯಿತು. ದೆಹಲಿಯ ಎಲ್ಲಾ ಮಂದಿರಗಳಲ್ಲೂ ಲಾಡು ಇಡಲಾಯಿತು. ದಿಗಂಬರ ಮುನಿಗಳೆಲ್ಲ ನಿರ್ವಾಣದ ವೇಳೆಗಿಂತ ಮೊದಲೇ ವರ್ಷಾಯೋಗವನ್ನು ಸಮಾಪನಗೊಳಿಸಿದ್ದರು. ನಿರ್ವಾಣ ಕಾರ್ಯಕಲಾಪಗಳಲ್ಲಿ ತೊಡಗಿಕೊಂಡಿದ್ದರು.

ಲಾಲಖಿಲೆಯ ಮೈದಾನದಲ್ಲಿ ಹಾಕಿದ ವಿಶಾಲವಾದ ಪೆಂಡಾಲಿನಲ್ಲಿ ನವೆಂಬರ್ 13ರಂದು "ನಿರ್ಗ್ರಂಥ ಪರಿಷದ್ ವಂದನಾ" ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿತ್ತು. ನವೆಂಬರ್ 14 ರಂದು "ಗೌತಮ ಗಣಧರ ಸ್ಮೃತಿದಿವಸ" ಎಂಬ ಕಾರ್ಯಕ್ರಮ ನಡೆಯಿತು. 15 ರಂದು "ಶ್ರಮಣ ಸಂಸ್ಕೃತಿ ಪರಿಷದ್" ಎಂಬ ಸಭೆಯು ನಡೆಯಿತು ನವೆಂಬರ್ 15 ರಂದೇ ಒಂದು ದೊಡ್ಡ ಮೆರವಣಿಗೆ ಅಜಮಲಖಾನ್ ಪಾರ್ಕ್‌ನಿಂದ ಪ್ರಾರಂಭವಾಗಿ ಮಾಡಲ್‌ಬಸ್ತಿ ಬಾಡಾ ಹಿಂದುರಾವ್, ಪಹಾಢಿ ಧೀರಜ ಫತೇಹಪುರ್ ಚಾಂದನೀ ಚೌಕ ಮಾರ್ಗವಾಗಿ ಬಂದು ಲಾಲಾಖಿಲೆಯ ಮೈದಾನದಲ್ಲಿ ಸಮಾಪ್ತವಾಯಿತು.

ಈ ಮೆರವಣಿಗೆಯಲ್ಲಿ ರಥಯಾತ್ರೆ ಹೊರಡಲೇಬೇಕೆಂದು ಧರ್ಮಸಾಗರರು ಅನುಜ್ಞೆಯನ್ನು ಕೊಟ್ಟಿದ್ದರು. ರಥದ ಜೊತೆಯಲ್ಲಿ ಶಿರೋಮಣಿ ಧರ್ಮಸಾಗರ ಮಹಾರಾಜರು ಚತುರ್ವಿಧ ಸಂಘ ಸಹಿತವಾಗಿ ದೇಶಭೂಷಣರು, ತಮ್ಮ ಸಂಘಸಹಿತವಾಗಿ ಮುನಿಶ್ರೀ ವಿದ್ಯಾನಂದರು, ಅನೇಕ ತೇರಹಪಂಥಿ, ಸ್ಥಾನಕವಾಸೀ ಶ್ವೇತಾಂಬರ ಸಾಧು ಸಾಧ್ವಿಗಳು ಎಲ್ಲರು ಭಾಗವಹಿಸಿದ್ದರು. ಮೈಲಿ ಉದ್ದಕ್ಕೂ ಮೆರವಣಿಗೆ ಸಾಗಿತು. ಮೋತಿಚಂದರು ರೆಕ್ಸೀನ್‌ನಲ್ಲಿ ಮಾಡಿದ್ದ 6 ಅಡಿ ಎತ್ತರದ ಚೌಕೋನಾಕೃತಿಯ ಬಣ್ಣದ ಜಂಬೂದ್ವೀಪದ ಚಿತ್ರವನ್ನು ಒಂದು ಟೆಂಪೋದಲ್ಲಿ ಮೆರವಣಿಗೆ ಹೊರಟಿತು. ನಿರ್ವಾಣೋತ್ಸವದ ಅಂಗವಾಗಿ ರಚನೆಗೊಳ್ಳುವ ಜಂಬೂದ್ವೀಪದ ಪರಿಚಯವನ್ನು

ಜನಗಳಿಗೆ ಮಾಡಿಸಬೇಕಾದುದು ಪ್ರಮುಖ ಉದ್ದೇಶವಾಗಿತ್ತು ಮೆರವಣಿಗೆ ರಾತ್ರಿಯವರೆಗೂ ನಡೆಯಿತು. ಆದರೆ ಸೂರ್ಯ ಮುಳುಗುವ ಮೊದಲೆ ಸಾಧು ವರ್ಗದವರು ತಮ್ಮ ನಡಿಗೆಯನ್ನು ನಿಲ್ಲಿಸಿದ್ದರು.

ಬೃಹತ್ ಸಾರ್ವಜನಿಕ ಸಭೆ

ನವೆಂಬರ್ 17ರ ಮಧ್ಯಾಹ್ನ ಎರಡು ಗಂಟೆಗೆ ದೆಹಲಿಯ ರಾಮಲೀಲಾ ಮೈದಾನದಲ್ಲಿ ಸಭೆಯು ಪ್ರಾರಂಭವಾಯಿತು. ಮೂರು ವೇದಿಕೆಯು ಸಜ್ಜುಗೊಳಿಸಲಾಗಿತ್ತು. ಒಂದರಲ್ಲಿ ನಾಲ್ಕು ಸಂಪ್ರದಾಯದ ಆಚಾರ್ಯರು, ಐಲಕರು, ಕ್ಷುಲ್ಲಕರು ಆಸೀನರಾಗಿದ್ದರು. ಎರಡನೆಯ ವೇದಿಕೆಯಲ್ಲಿ ಪ್ರಧಾನಮಂತ್ರಿ ಇಂದಿರಗಾಂಧೀ ಮತ್ತು ರಾಜಕೀಯ ವ್ಯಕ್ತಿಗಳು ಆಸೀನರಾಗಿದ್ದರು. ಮೂರನೆಯ ವೇದಿಕೆಯಲ್ಲಿ ಎಲ್ಲಾ ಸಂಘದ ಮಾತಾಜಿಗಳು ಆಸೀನರಾಗಿದ್ದರು.

ಪ್ರಮುಖ ಆಚಾರ್ಯರಲ್ಲಿ ದಿಗಂಬರ ಆಚಾರ್ಯರಾದ ಧರ್ಮಸಾಗರ, ದೇಶಭೂಷಣರು, ಶ್ವೇತಾಂಬರ ಆಚಾರ್ಯರು, ತುಲಸಿಜೀ ದಿಗಂಬರ ಆಚಾರ್ಯ ವಿದ್ಯಾನಂದಜೀ, ಶ್ವೇತಾಂಬರ ಸುಶೀಲಕುಮಾರಜೀ, ನಥಮಲ್ಲಜೀ, ಜನಕ ವಿಜಿಯಜೀ, ಮುನಿ ಹೇಮಚಂದ್ರಜೀ, ರಾಕೇಶಕುಮಾರಜೀ, ಪ್ರಮುಖ ಸಾಧ್ವಿಯರಲ್ಲಿ ಸಾಧ್ವಿ ವಿಚಕ್ಷಣಜೀ, ಶ್ರೀ ಮೃಗಾವತಿಜೀ, ಶ್ರೀ ಕನಕಪ್ರಭಾಜೀ, ಶ್ರೀ ಪ್ರೀತಿ ಸುಧಾ ಎಂಬುವವರು ಪ್ರಮುಖರಾಗಿದ್ದರು.

ಸಭೆಯಲ್ಲಿ ಅತಿ ಪ್ರಮುಖರು ಮಾತ್ರ ಮಾತಾಡಿದರು. ಇಂದಿರಗಾಂಧಿಯವರು ಭ. ಮಹಾವೀರರ ಆದರ್ಶಗಳು ದೇಶಕ್ಕೆ ಉಪಯುಕ್ತವಾಗಿದೆ ಎಂದರು. ಉಳಿದ ಸಂಪ್ರದಾಯದ ಪ್ರಮುಖರು ಮಾತಾಡಿದ ಮೇಲೆ ದಿಗಂಬರ ಜೈನ ಸಂಪ್ರದಾಯದಿಂದ ವಿದ್ಯಾನಂದರ ಪ್ರವಚನವಾದ ಮೇಲೆ ಕೊನೆಗೆ ಆಶೀರ್ವಾದ ಸ್ವರೂಪವಾಗಿ ಆಚಾರ್ಯ ಧರ್ಮಸಾಗರರು ಪ್ರವಚನವಾಯಿತು. ಈ ಮಹೋತ್ಸವದ ಸಮಾಪನದನ್ನ ಸಮಯದಲ್ಲಿ ಧರ್ಮಚಕ್ರದ ಉದ್ಘಾಟನೆಯನ್ನು ಸ್ವತಃ ಇಂದಿರಗಾಂಧಿಯವರ ಕರಕಮಲಗಳಿಂದ ಮಾಡಿಸಲಾಯಿತು. ಈ ವಿಶಾಲ ಸಮಾರಂಭದಲ್ಲಿ ಲಕ್ಷಾಂತರ ಜೈನ, ಅಜೈನರು ಸೇರಿದ್ದರು. ಈ ಸಮಾರಂಭದ ಮೊದಲೇ ವಿದ್ಯಾನಂದರು ನನಗೆ ಐದು ನಿಮಿಷಗಳ ಕಾಲ ಮಾತನಾಡಲು ಹೇಳಿದ್ದರು. ಆದರೆ ನಾನು ಅವಕಾಶವನ್ನು ಧರ್ಮಸಾಗರರಿಗೆ ಕೊಡಬೇಕೆಂದು ವಿನಂತಿಸಿದ್ದರಿಂದ ಅವರ ಹೆಸರನ್ನು ಹೇಳಲಾಯಿತು.

ಈ ವಿಶಾಲ ಸಭೆಯ ನಂತರ ನವೆಂಬರ್ 18ರಂದು "ನಿರ್ವಾಣವಾದಿ ವಿಚಾರಧಾರೆಯ ಕೊಡುಗೆ" ಎಂಬ ವಿಷಯದ ಮೇಲೆ ಗೋಷ್ಠಿ ನಡೆಯಿತು. ನವೆಂಬರ್ 19ರಂದು "ಅನೇಕಾಂತವಿಚಾರ" ಎಂಬ ಸಭೆಯು ಜರುಗಿತು. 20ರಂದು "ವಿಕಾಸಯೋಜನೆಗಳು" ಎಂಬ ನಿರ್ಧಾರಿತ ವಿಷಯದ ಸಭೆ ಜರುಗಿತು. ಇದಲ್ಲದೆ ಮಹಿಳಾ ಪರಿಷದ್‌ನ ಸಾಂಸ್ಕೃತಿಕ ಕಾರ್ಯಕ್ರಮ, ಕವಿ ಸಮ್ಮೇಳನ, ಮೊದಲಾದ ಹಲವು ಕಾರ್ಯಕ್ರಮಗಳು ನಡೆದವು. ಈ ಪ್ರಕಾರ 2500ನೇ ನಿರ್ವಾಣೋತ್ಸವ ಬಹಳ ಉತ್ಸಾಹದಿಂದ ಇಡೀ ಭಾರತದಲ್ಲಿ ಆಚರಿಸಲ್ಪಟ್ಟಿತು.

ವಿಶ್ವಧರ್ಮ ಸಮ್ಮೇಳನ

ಒಂದು ದಿನ ವಿಶ್ವಧರ್ಮ ಸಮ್ಮೇಳನದಲ್ಲಿ ಮುನಿಶ್ರೀ ಸುಶೀಲಕುಮಾರಜೀಯವರು ನನ್ನ ಪ್ರವಚನವನ್ನು ಇಡಿಸಿದರು. ನಾನು ನನ್ನ ಸಂಘ ಸಹಿತ ಅಲ್ಲಿಗೆ ಹೋಗಿದ್ದೆ. ಅಲ್ಲಿ ಸಾಧ್ವಿಯರ ವೇದಿಕೆಯ ಮೇಲೆ ದಿಗಂಬರ ಶ್ವೇತಾಂಬರ ಸಾಧ್ವಿಯರು ಉಪಸ್ಥಿತರಿದ್ದರು. ನನಗೆ ಮಾತಾಡುವ ಸಮಯ ಬಂದಿತು. ಮೈಕ್‌ನಲ್ಲಿ ಜನರಿಗೆ

ಸೂಚನೆ ಕೊಡುತ್ತಿದ್ದರು. ಈಗ ದಿಗಂಬರ ಸಂಪ್ರದಾಯದ ಪ್ರಮುಖ ಆರ್ಯಿಕೆ ಜ್ಞಾನಮತಿ ಮಾತಾಜೀಯವರು ಜೈನಧರ್ಮದ ಮಹತ್ವದ ಬಗ್ಗೆ ಪ್ರಕಾಶ ಬೀರುತ್ತಾರೆ ಎಂದು.

ನಾನು ಸರಳತೆಯಿಂದ ಹಾಗೂ ಉದಾರತೆಯಿಂದ ನನ್ನ ಹತ್ತಿರವೇ ಕುಳಿತಿದ್ದ ಒಬ್ಬ ಕ್ಷುಲ್ಲಕಿ ಆದೂ ದಕ್ಷಿಣದವರು ಅವರಿಗೆ 2 ನಿಮಿಷ ಮಂಗಳಾಚರಣೆ ಹೇಳಿರಿ ನಂತರ ನಾನು ಮಾತಾನಾಡುತ್ತೇನೆ ಎಂದೆ. ಮೈಕ್ ಕೈಗೆ ತೆಗೆದುಕೊಂಡು ಅವರು ಮಂಗಳಾಚರಣೆ ಹೇಳುತ್ತಾ ಹೇಳುತ್ತಾ ಆಮೇಲೆ ಕೆಲವು ಮಾತನ್ನಾಡಲು ಶುರುಮಾಡಿದವಳು ನನಗೆ ಕೊಟ್ಟಿದ್ದ ಎಲ್ಲ ಸಮಯವನ್ನು ತಾವೇ ಆಡಿ ಮುಗಿಸಿದರು ನಂತರ ಮೈಕ್ ಮುಂದಿನ ಪ್ರವಚನಕಾರರ ಹತ್ತಿರ ಹೋಯಿತು.

ಕಾರ್ಯಕ್ರಮವೆಲ್ಲ ಮುಗಿದು ಎಲ್ಲರು ವೇದಿಕೆಯಿಂದ ಇಳಿದು ಬರುವಾಗ ಸುಶೀಲಜೀಯವರು ಅದೇ ಮಾತಾಜಿ ಇಷ್ಟೊಂದು ವಿಶಾಲ ಸಭೆಯ ಜನತೆಗೆ ನಿಮ್ಮಿಂದ ಪ್ರವಚನ ಕೇಳಿಸಬೇಕೆಂದು ನಾನು ಬಯಸಿದ್ದರೆ, ನೀವು ಯಾರೋ ಅಪರಿಚಿತ ಸಾಧ್ವಿಗೆ ಏಕೆ ಅವಕಾಶ ಕೊಟ್ಟಿರಿ ಎಂದು ಹೇಳಿದರು. ಅವರಂತೂ ಮಂಗಳಾಚರಣೆ ಹೇಳುತ್ತಲೇ ಸಮಯವನ್ನೆಲ್ಲ ಕಳೆದೇಬಿಟ್ಟರು. ನಿಮ್ಮ ಈ ಉದಾರತೆ ನನಗೆ ಒಳ್ಳೆಯದು ಎನ್ನಿಸಲಿಲ್ಲ. ಪುನಃ ವಿಚಕ್ಷಣಜೀ ಸ್ವಾಧ್ವಿ ಕೂಡ ಟೀಕೆ ಮಾಡುತ್ತಾ ಹೇಳಿದರು. ಮಾತಾಜೀ ತಮ್ಮ ಜೈನಧರ್ಮದ ಮಹತ್ವದ, ಸಾರಗರ್ಭಿತವಾದ ಪ್ರವಚನವಾಗಿದ್ದರೆ ಅದು ವಿಶೇಷತೆಯನ್ನು ಪಡೆಯುತ್ತಿತ್ತು. ನಿಮಗೆ ಇಷ್ಟೊಂದು ಪರೋಪಕಾರದ ಭಾವನೆ ಇರಬಾರದು. ತಾವು ನವೆಂಬರ್ 11ರ ವಿಶಾಲ ಸಭೆಯಲ್ಲಿಯು ಕೂಡ ತಮ್ಮ ಹೆಸರಿದ್ದುದ್ದನ್ನು ಬಿಟ್ಟುಕೊಟ್ಟಿರಿ ಮತ್ತು ಈ ದಿನವು ಕಾರಣವಿಲ್ಲದ ಆ ಕ್ಷುಲ್ಲಕಿಗೆ ಕೊಟ್ಟು ಜನರ ಕುತೂಹಲವನ್ನು ಹಾಳುಮಾಡಿದಿರಿ ಎಂದರು.

ನಿಜವಾಗಿ ನೋಡಿದರೆ ಆ ಸಾಧ್ವಿ ದೆಹಲಿಯಲ್ಲೇ ಇದ್ದರು. ನನ್ನ ಎದುರು ಬದುರೇ ಓಡಾಡಿಕೊಂಡು ಇರುತ್ತಿದ್ದರು. ನನ್ನ ಹತ್ತಿರದಲ್ಲೇ ಕುಳಿತುಕೊಂಡಿದ್ದರು. ನನಗೆ ಯಾವಾಗಲು ನಮಸ್ಕಾರವನ್ನು ಮಾಡುತ್ತಿರಲಿಲ್ಲ ನನ್ನ ಹತ್ತಿರ ಒಂದು ಮಾತು ಆಡಿರಲಿಲ್ಲ. ನನ್ನ ದೃಷ್ಟಿಸಿ ನೋಡುತ್ತಲೂ ಇರಲಿಲ್ಲ ಇವರಿಗೆ ನನ್ನಲ್ಲಿ ಯಾವ ಕಷಾಯವಿತ್ತೋ ಯಾವಾಗಿನಿಂದ ಇಟ್ಟುಕೊಂಡಿದ್ದರೋ ಗೊತ್ತಿಲ್ಲ. ನಾನು ಸಹಜಭಾವದಿಂದ ಯೋಚಿಸಿದೆ ಆಕೆ ಮಂಗಳಚರಣ ಹೇಳಲಿ ನಾನು ಪ್ರವಚನ ಮಾಡೋಣ ಎಂದು. ಆದರೆ ಆಕೆ ಧಾಷ್ಟ್ಯತೆಯಿಂದ ನನ್ನ ಸಮಯವನ್ನೆಲ್ಲ ತಾನೇ ತೆಗೆದುಕೊಂಡು ನನಗೆ ಮಾತಾಡಲು ಅವಕಾಶ ಕೊಡಲಿಲ್ಲ, ಇದಾದ ನಂತರವು ನಾನು ದೆಹಲಿಯಲ್ಲಿ ಇರುವವರೆಗೂ ಆಕೆ ನನ್ನೊಡನೆ ಮಾತಾಡಲಿಲ್ಲ. ಕಾರಣವೇ ಇಲ್ಲದೆ ದ್ವೇಷಪಡುವ ಇಂತಹ ಸಾಧುಗಳನ್ನು ನಾನು ಇಲ್ಲಿಯವರೆಗೂ ಎಲ್ಲೂ ಕಾಣಲಿಲ್ಲ.

ದೀಕ್ಷಾ ಸಮಾರಂಭ

ಮಾರ್ಗಶಿರ ಕೃಷ್ಣ ಪಕ್ಷ ದಶಮಿಯ ದಿನ 8-12-1974ರ ದಿನ ದೀಕ್ಷಾ ಸಮಾರಂಭ ನೇರವೇರಿತು. ದರಿಯಾಗಂಜದಲ್ಲಿ ವಿಶಾಲ ಪೆಂಡಾಲ ಹಾಕಲಾಗಿತ್ತು. ಮೊಟ್ಟ ಮೊದಲು ಕು. ಸುಶೀಲ (ಕಲಕತ್ತದವರು ಆಚಾರ್ಯ ಕಲ್ಪಶ್ರೀ ಶ್ರುತಸಾಗರರ ಪುತ್ರಿ) ಮತ್ತು ಶ್ರವಣಬೆಳಗೊಳದ ಕು. ಶೀಲ ಈ ಇಬ್ಬರು ಬ್ರಹ್ಮಚಾರಿಣಿಯರು ಆರ್ಯಿಕೆ ದೀಕ್ಷೆ ತೆಗೆದುಕೊಳ್ಳುವವರಿದ್ದರು. ಇವರಿಬ್ಬರು ಧರ್ಮಸಾಗರರ ಸಮಕ್ಷ ಶ್ರೀ ಫಲವನ್ನಿಟ್ಟು ಪ್ರಾರ್ಥಿಸಿದರು. ಅವರ ಜೊತೆ ಇನ್ನು ಕೆಲವರು ದೀಕ್ಷೆ ತೆಗೆದುಕೊಳ್ಳುವವರಿದ್ದರು.

ಸಮಾರಂಭಕ್ಕೆ 2-3 ದಿನ ಮೊದಲೇ ಸಾಹೂ ಶಾಂತಿ ಪ್ರಸಾದರವರು ಆಚಾರ್ಯರ ಬಳಿಗೆ ಬಂದಿದ್ದರು. ಮಹಾರಾಜರೇ ಈಗಿನ ಕಾಲದಲ್ಲಿಯೂ ತಾವು ಚಿಕ್ಕ ವಯಸ್ಸಿನವರಿಗೆ ದೀಕ್ಷೆ ಕೊಡಬಾರದು. ಅವರು ಚೆನ್ನಾಗಿ

ಅಧ್ಯಯನ ಮಾಡಿದ ಮೇಲೆ ದೀಕ್ಷೆ ಕೊಡಿರಿ. ಎಂದು ನಿವೇದಿಸಿದರು. ಅದಕ್ಕೆ ಆಚಾರ್ಯರು ನೀವೇ ದೀಕ್ಷೆ ತೆಗೆದುಕೊಳ್ಳಿರಿ ತಾವು ವಿದ್ವಾಂಸರಲ್ಲ ಆ ಬಡಪಾಯಿ ಸುಮ್ಮನಾಗಿಬಿಟ್ಟರು. ಆಚಾರ್ಯರು ಹೇಳತೊಡಗಿದರು. ಬಹುಶಃ ವಿದ್ವಾಂಸರು ದೀಕ್ಷೆ ತೆಗೆದುಕೊಳ್ಳುವಂತಿಲ್ಲ ತಮ್ಮಂತಹ ಅಗರ್ಭ ಶ್ರೀಮಂತರು ತೆಗೆದುಕೊಳ್ಳುವುದಿಲ್ಲ ಮತ್ತೆ ಯಾರು ತಗೋತೀವಿ ಅನ್ನುತ್ತಾರೆ ಅವರು ತೆಗೆದುಕೊಳ್ಳಲಿ ಬಿಡಿ. ನಾನೆಂದೆ ದೀಕ್ಷೆಯ ಸಂಬಂಧ ವಯಸ್ಸಾಗಲಿ ವಿದ್ವತ್ತಾಗಲಿ ಅಲ್ಲ ವೈರಾಗ್ಯ ಯಾರಲ್ಲಿ ಬರುತ್ತದೆಯೊ ಅವರೇ ದೀಕ್ಷೆಗೆ ಪಾತ್ರರು.

ಈ ಕಡೇ ದೀಕ್ಷಾರ್ಥಿ ಬಾಲಿಕೆಯರ ಶೋಭಯಾತ್ರೆ ಹೊರಟಿತ್ತು ಜನರು ಧರ್ಮಪ್ರೇಮದಿಂದ ಉತ್ಸಾಹದಿಂದ ಈ ಕಾರ್ಯದಲ್ಲಿ ಭಾಗವಹಿಸುತ್ತಿದ್ದರು.

ಸ್ತ್ರಿಯರಿಂದ ಜಿನಾಭಿಷೇಕ

ದರಿಯಾಗಂಜೀನ ಹಲವು ಮಹಾನುಭಾವರು ಪೆಂಡಾಲಿನಲ್ಲಿ ದೀಕ್ಷಾರ್ಥಿ ಬಾಲಕಿಯರಿಂದ ಜನಪ್ರತಿಮೆಗೆ ಅಭಿಷೇಕ ಮಾಡಿಸಬಾರದು ಎಂದರು. ಆಗ ಆಚಾರ್ಯರು ದೃಢವಾಗಿ ಹೇಳಿದರು. ಸಂಘದಲ್ಲಿರುವ ಜಿನಪ್ರತಿಮೆಗಳಿಗೆ ಬಾಲಕಿಯರು ಮಹಿಳೆಮಾಡಬಹುದು. ಇದನ್ನು ಯಾರೂ ತಡೆಯುವಂತಿಲ್ಲ. ಒಂದು ವೇಳೆ ನೀವು ವಿರೋಧವನ್ನು ಮಾಡುವುದೇ ಆದರೆ ನಾವು ಮುಂದಕ್ಕೆ ವಿಹಾರ ಬೆಳೆಸುತ್ತೇವೆ ಕಾಡಿನಲ್ಲೇ ದೀಕ್ಷೆ ಕೊಡುತ್ತೇವೆ. ನಮಗೆ ಪ್ರಭಾವನೆಯಾಗಲಿ ನಗರದ ಅವಶ್ಯಕತೆಯಾಗಲಿ ಇಲ್ಲ ಎಂದರು. ಆಗ ಎಲ್ಲರು ಶಾಂತವಾದರು ದೀಕ್ಷಾ (ಜಯಂತಿ) ಮಹೋತ್ಸವ ವಿಧಿ ಪೂರ್ವಕವಾಗಿ ನೇರವೇರಿತು. ಇಲ್ಲಿಯ ದರಿಯಾಗಂಜಿನ ಬಾಲ್ಯಾಶ್ರಮದ ಮಂದಿರದಲ್ಲಿದ್ದ ಸಂಘದ ಪ್ರತಿಮೆಗಳಿಗೆ ಪ್ರತಿ ದಿನ ಸಂಘದ ಬ್ರಹ್ಮಚಾರಿ ಮತ್ತು ಬ್ರಹ್ಮಚಾರಿಣಿಯರು ಅಭಿಷೇಕ ಮಾಡುವಾಗ ಜನರು ಪ್ರೇಮದಿಂದ ನೋಡುತ್ತಿದ್ದರು. ಯಾರೂ ಏನೂ ವಿರೋಧ ತೋರಿಸಲಿಲ್ಲ.

ವಿಶೇಷವಾದ ಸಾಧು ಸಮೂಹ

ಈ ದೀಕ್ಷಾ ಮಹೋತ್ಸವದಲ್ಲಿ ಆಚಾರ್ಯರತ್ನ ಶ್ರೀ ದೇಶಭೂಷಣ ಮಹಾರಾಜರು ಸಂಘ ಸಹಿತವಾಗಿ ಧರ್ಮಸಾಗರರು ಸಂಘ ಸಹಿತ ಹಾಗೂ ವಿದ್ಯಾನಂದ ಮುನಿಗಳು ವಿರಾಜಮಾನರಾಗಿದ್ದರು. ಐಲಕ ಕೀರ್ತಿಸಾಗರರಿಗೆ ಮುನಿದೀಕ್ಷೆ ಕೊಟ್ಟು ಕೀರ್ತಿಸಾಗರರೆಂದು, ಗುಣಸಾಗರರಿಗೆ, ಗುಣ ಸಾಗರರೆಂದು ಭದ್ರಸಾಗರರಿಗೆ ಅದೇ ಹೆಸರನ್ನು ಇಡಲಾಯಿತು. ಕ್ಷುಲ್ಲಕ ಮನೋಮತಿಗೆ ಆರ್ಯಿಕೆ ದೀಕ್ಷೆ ಕೊಟ್ಟು ಸಂಯಮಮತೀ ಎಂದು ಬ್ರಹ್ಮಚಾರಿಣಿ ಭಾಗಾಬಾಯಿಗೆ ಆರ್ಯಿಕಾ ದೀಕ್ಷೆ ನೀಡಿ ವಿಪುಲಮತೀ ಎಂದೂ, ಬ್ರ. ಸುಶೀಲ, ಶೀಲರಿಗೂ ಆರ್ಯಿಕೆ ದೀಕ್ಷೆ, ಕ್ರಮವಾಗಿ ಶೃತಮತಿ ಮತ್ತು ಶಿವಮತಿ ಎಂದು ಹೆಸರು ಇಡಲಾಯಿತು. ಬ್ರ. ಜ್ರಜಭಾನರಿಗೆ ಕ್ಷುಲ್ಲಕ ದೀಕ್ಷೆ ಕೊಟ್ಟು ನಿರ್ವಾಣ ಸಾಗರರೆಂದು ಕರೆದರು.

ಈ ಎಲ್ಲರಿಗೂ ದೀಕ್ಷೆಯನ್ನು ಧರ್ಮಸಾಗರರೇ ಕೊಟ್ಟರು. ಇಬ್ಬರು ಕುಮಾರಿಯರಿಗೆ ನಾನು ದೀಕ್ಷೆಯನ್ನು ಕೊಟ್ಟೆ ಅಲ್ಲದೆ ಅವರಿಬ್ಬರು ನನ್ನ ಬಳಿಯೇ ಇರುತ್ತಿದ್ದರು. ವೇದಿಕೆಯ ಮೇಲೆ ಈ ಕುಮಾರಿಯರ ನೀಳ ಕೇಶರಾಶಿಯನ್ನು ನಾನೂ ಉಳಿದ ಆರ್ಯಿಕೆಯರು ಲೋಚ ಮಾಡುತ್ತಿದ್ದೆವು. ದೀಕ್ಷೆಯ ಈ ದೃಶ್ಯ ಬಹಳ ವೈರಾಗ್ಯಪೂರ್ಣವೂ ರೋಮಾಂಚನಕಾರಿವೂ ಆಗಿತ್ತು. ವೇದಿಕೆಯ ಮೇಲ್ವಿಚಾರಣೆಯನ್ನು ಶಾಂತಿಲಾಲಜೀ

ಕಾಗಜೀಯವರು ನೋಡಿಕೊಳ್ಳುತ್ತಿದ್ದರು. ದೀಕ್ಷಾವಿಧಿಯ ವ್ಯವಸ್ಥೆಗೆ ಮೋತಿಚಂದರು ಸಹಯೋಗವನ್ನು ಕೊಡುತ್ತಿದ್ದರು. ಈ ಸಮಯದಲ್ಲಿ ಪ್ರಮುಖ ವಕ್ತಾರರಾಗಿ ಡಾ॥ ಲಾಲಬಹದ್ದೂರು ಜೀ ಶಾಸ್ತ್ರಿ ಪಂ. ಹೀರಾಲಾಲಜೀ ಶಾಸ್ತ್ರಿ ಮುಂತಾದವರು ಇದ್ದರು.

ಉಪಾಧ್ಯಾಯ ಮುಂತಾದ ಪದವಿಗಳ ಪ್ರದಾನ

ಇದೇ ಮಂಗಳ ಸಮಯದಲ್ಲಿ ಆಚಾರ್ಯರತ್ನ ದೇಶಭೂಷಣರು ಪ್ರಭಾವಿ ಮುನಿಶ್ರೀಗಳಾದ ವಿದ್ಯಾನಂದರಿಗೆ ವಿಧಿವತ್ತಾಗಿ ಉಪಾಧ್ಯಾಯ ಪದವಿಯನ್ನು ಪ್ರಧಾನ ಮಾಡುತ್ತಾ ಹೊಸ ಪಿಂಛಿಯನ್ನು ಕೊಟ್ಟರು. ನನಗೆ ಆರ್ಯಿಕಾರತ್ನ ಹಾಗೂ ನ್ಯಾಯಪ್ರಭಾಕರ ಎಂಬ ಪದವಿಯಿಂದ ಗೌರವಾನ್ವಿತವಾಗಿ, ವಾತ್ಸಲ್ಯದಿಂದ ಹೊಸ ಪಿಂಛಿ ಮತ್ತು ಶಾಸ್ತ್ರವನ್ನು ದಯಪಾಲಿಸಿದರು.

25 ದಿಗಂಬರ ಮುನಿರಾಜರು

ಈ ಸಮಯದಲ್ಲಿ ಅಂದರೆ ನವೆಂಬರ್ 13 ರಿಂದ ಡಿಸೆಂಬರ್ 8 ವರೆಗೆ ಸರಿಯಾಗಿ 25 ದಿವಸಗಳಲ್ಲಿ ಈ ವೇದಿಕೆಯಿಂದಲೇ 2500 ನೇಯ ನಿರ್ವಾಣ ಮಹೋತ್ಸವದ ಸಂದರ್ಭದಲ್ಲಿ 25 ದಿಗಂಬರ ಮುನಿಗಳು ಒಟ್ಟಿಗೆ ವಿರಾಜಮಾನರಾಗಿದ್ದರು. ಮೊದಲು 22 ಮುನಿಗಳು ಇದ್ದರು. ಈಗ ಮೂರು ಜನ 11ನೇಯ ಪ್ರತಿಮಾಧಾರಿ ಮುನಿಗಳು ದೀಕ್ಷೆತೆಗೆದು ಕೊಂಡಿದ್ದರಿಂದ ಈಗ ಒಟ್ಟು 25 ಮುನಿಗಳಾದರು. ಅವರ ಹೆಸರುಗಳು ಹೀಗಿವೆ. ಆಚಾರ್ಯಧರ್ಮಸಾಗರರು ದೇಶಭೂಷಣಮಹಾರಾಜರು ಉಪಾಧ್ಯಾಯ ವಿದ್ಯಾನಂದರು. ಮುನಿಗಳಾದ ವೃಷಭಸಾಗರರು. ಸುಪಾಶರ್ವಸಾಗರರು ನೇಮಿಸಾಗರರು ಬೋಧಿಸಾಗರರು ಸಂಯಮ ಸಾಗರರು ದಯಾಸಾಗರರು, ಮಹೇಂದ್ರಸಾಗರರು. ಅಭಿನಂದನಸಾಗರರು. ಸಂಭವಸಾಗರರು ವರ್ಧಮಾನಸಾಗರರು. ಭೂಪೇಂದ್ರಸಾಗರರು ಬುದ್ಧಿಸಾಗರರು ಪದ್ಮಸಾಗರರು ಚರಿತ್ರಸಾಗರರು. ವಿನಯ ಸಾಗರರು, ವಿಜಯಸಾಗರರು, ಜ್ಞಾನಭೂಷಣರು ಸನ್ಮತಿ ಭೂಷಣರು, ವರ್ದಮಾನಸಾಗರರು ಕೀರ್ತಿಸಾಗರರು ಗುಣಸಾಗರರು ಭದ್ರ ಸಾಗರರು.

ಆಚಾರ್ಯರತ್ನರ ವಿಹಾರ

ಈ ದೀಕ್ಷಾ ಸಮಾರಂಭದ ನಂತರ ಆಚಾರ್ಯ ಶ್ರೀ ದೇಶಭೂಷಣರು ದಕ್ಷಿಣದ ಕಡೆ ವಿಹಾರ ಹೊರಟರು. ದೆಹಲಿಯ ಜನತೆಯು ಅಶ್ರುಪೂರಿತ ನೇತ್ರಗಳಿಂದಲೇ ಬಿಳ್ಕೊಟ್ಟರು.

ಕುಮಾರಿ ಮಾಧುರಿಯ ಆಗಮನ

ಕು. ಮಾಧುರಿ 1973ರಲ್ಲಿ ಮನೆಗೆ ಹೋದವಳು ಮತ್ತೆ ಬಂದೇ ಬರಲಿಲ್ಲ ಈಗ ಬ್ರ. ಸುಗನಚಂದನನ್ನು ಕಳುಹಿಸಿ ಕರೆಸಿಕೊಂಡೆ.

ಆರ್ಯಿಕೆ ಚಂದ್ರಮತಿಯವರ ಶತಾಬ್ದಿ ಸಮಾರಂಭ

ದಿಗಂಬರ ಜೈನ ಲಾಲಮಂದಿರದಲ್ಲಿ ಪೂಜ್ಯ 100 ವರ್ಷದ ಆರ್ಯಿಕ ಚಂದ್ರಮತಿ ಮಾತಾಜೀಯವರ ಶತಾಬ್ದಿ ಸಮಾರಂಭವನ್ನು ಆಚರಿಸಲಾಯಿತು. ಇವರು ಚಾರಿತ್ರ ಚಕ್ರವರ್ತಿ ಆಚಾರ್ಯಶ್ರೀ ಶಾಂತಿಸಾಗರ

ಮಹಾರಾಜರಿಂದ ದೀಕ್ಷಿತರಾದ ಪ್ರಥಮ ಶಿಷ್ಯೆ ಆಗಿದ್ದರು. ವೃದ್ಧೆಯಾಗಿದ್ದರೂ ತಮ್ಮ ಆಚರಣೆಯನ್ನು ಯಥಾವಧಿ ಆಚರಿಸಿಕೊಂಡು ಬರುತ್ತಿದ್ದರು. ದೇಶಭೂಷಣರ ಸಾನಿಧ್ಯದಲ್ಲೇ ಈ ಸಮಾರಂಭವು ಆಚರಿಸಲ್ಪಟ್ಟಿತು. ಇದೇ ಸಂದರ್ಭದಲ್ಲಿ ನನ್ನಿಂದ ರಚಿತವಾಗಿದ್ದ ತ್ರಿಲೋಕ ಭಾಸ್ಕರ ಹಾಗು ಬಾಲವಿಕಾಸ ಎಂಬ ಪುಸ್ತಕಗಳು ಬಿಡುಗಡೆಯನ್ನು ಹೊಂದಿತು. ದೇಶಭೂಷಣರೇ ಪುಸ್ತಕ ಬಿಡುಗಡೆಯನ್ನು ಮಾಡಿದರು. ತ್ರಿಲೋಕಸಾರದ ಆಧಾರದಿಂದಲೇ ಮೂರು ಲೋಕಗಳ ವಿವರಣೆಯನ್ನು ಸಂಕ್ಷಿಪ್ತವಾಗಿ ಬರೆಯಲಾಗಿತ್ತು. ಮಕ್ಕಳಿಗಾಗಿಯೇ ಬಾಲವಿಕಾಸ ಎಂಬ ಬಹಳ ಉಪಯೋಗಿಯಾದ ಪುಸ್ತಕವು ಬಿಡುಗಡೆಯಾಗಿ ಇಂದು ಎಲ್ಲಾ ಕಡೆಯಲ್ಲಿಯೂ ಇದರಿಂದ ನೀತಿ ಕಲಿಸಲಾಗುತ್ತಿದೆ.

೬೮

ಹಸ್ತಿನಾಪುರಕ್ಕೆ ಸಂಘದ ಆಗಮನ

ದೆಹಲಿಯ ಚಾತುರ್ಮಾಸ ಮತ್ತು ನಿರ್ವಾಣೋತ್ಸವದ ಮಂಗಳ ಕಾರ್ಯಕ್ರಮ ಮುಗಿದ ಮೇಲೆ ಆಚಾರ್ಯ ಧರ್ಮಸಾಗರರ ಸಂಘವು ಹಸ್ತಿನಾಪುರ ತೀರ್ಥಕ್ಷೇತ್ರದ ದರ್ಶನ ಮಾಡಿದರು. ಮೇರಠನ ಕೆಲವು ಶ್ರೀಮಂತರು ಚೀಲದ ಭರ್ತಿ ತೆಂಗಿನಕಾಯಿಗಳನ್ನು ತುಂಬಿಕೊಂಡು ಭಕ್ತಿಭಾವದಿಂದ ಶ್ರೀಫಲವನ್ನು ಇಟ್ಟು ಪ್ರಾರ್ಥಿಸಲು ಬಂದಿದ್ದರು. ಇದರ ಮಧ್ಯೆಯೇ ಒಂದು ಚರ್ಚೆ ಉಂಟಾಯಿತು. ಯಾರ ಮನೆಗಳಲ್ಲಿ ಅಂತರ್ಜಾತಿಯ ವಿವಾಹವಾಗಿದೆಯೋ, ಖಂಡೇಲವಾಲ, ಅಗ್ರವಾಲ, ಪರವಾರ ಮೊದಲಾದ ಜಾತಿಯೊಳಗೆ ವಿವಾಹ ಏರ್ಪಟ್ಟಿದ್ದರೆ ಅವರಲ್ಲಿ ಸಾಧು ವರ್ಗದವರು ಆಹಾರ ತೆಗೆದುಕೊಳ್ಳುವುದಿಲ್ಲ ಎಂದು.

ಈ ಮಾತನ್ನು ಕೇಳಿದ ಅವರಿಗೆಲ್ಲ ಸಿಟ್ಟು ಬಂತು ಎಲ್ಲರು ನನ್ನ ಹತ್ತಿರ ಚರ್ಚೆಗೆ ಬಂದರು. ನಾನು ಇದನ್ನೇ ಹೇಳಿದೆ. ಇದು ಸಂಘದ ಪರಂಪರೆಯಾಗಿದೆ. ಆಚಾರ್ಯ ಶಾಂತಿ ಸಾಗರರ ಪರಂಪರೆಯನ್ನು ನಡೆಸಿಕೊಂಡು ಬರುತ್ತಿರುವ ಯಾವ ಸಾಧುಗಳು ಇಂತಹ ಸಂಬಂಧದವರಿಂದ ಆಹಾರವನ್ನು ತೆಗೆದುಕೊಳ್ಳುವುದಿಲ್ಲ. ಅನೇಕ ಚರ್ಚೆಗಳು ನಡೆದು ಅಳೆದು ಸುರಿದು ಮರಾಠ ನಿವಾಸಿಗಳೆಲ್ಲ ತೆಂಗಿನಕಾಯಿಗಳ ಚೀಲಗಳನ್ನೆಲ್ಲ ವಾಪಸ್ಸು ತೆಗೆದುಕೊಂಡು ಹೊರಟರು.

ಆಚಾರ್ಯ ಸಂಘದ ಎಲ್ಲ ಸಾಧುಗಳಿಗೂ ಹಸ್ತಿನಾಪುರದ ದರ್ಶನ ಮಾಡುವ ಮನಸ್ಸಿತ್ತು. ಅವರಿಗಿಂತ ಹೆಚ್ಚಾಗಿ ನನಗೆ ಅಲ್ಲಿ ಹೋಗಿ ಸುದರ್ಶನ ಮೇರು ಪರ್ವತದ ಶಿಲಾನ್ಯಾಸ ಮಾಡಿಸಿದ್ದರಿಂದ, ಆಚಾರ್ಯರ ಮಂಗಳ ಪದಾರ್ಪಣೆಯನ್ನು ಮಾಡಿಸುವ ಅವಶ್ಯಕತೆ ಇತ್ತು.

ನಾನು ಲಾಲ ಶ್ಯಾಮಲಾಲಜೀ ಡಾII ಕೈಲಾಸಚಂದ ಮುಂತಾದವರನ್ನು ಮುಂದೆ ಮಾಡಿಸಿ ಅವರಿಂದ ಶ್ರೀಫಲವನ್ನು ಇಡಿಸಿ ಪ್ರಾರ್ಥನೆ ಮಾಡಿಸಿದೆ. ಸುಖಾಂತ್ಯವಾಗಿ ಆಚಾರ್ಯರ ಸಂಘವು 15-12-1974ರ ಮಧ್ಯಾಹ್ನ ಹಸ್ತಿನಾಪುರಕ್ಕೆ ವಿಹಾರ ಹೊರಟಿತು. ಡಿಸೆಂಬರ್ 22ರಂದು ಸಂಘ ಮೇರಠ ತಲುಪಿತು. ಮೇರಠದ ಜನರು ಭಕ್ತಿ ಪೂರ್ವಕವಾಗಿ ರೈಲ್ವೆ ರೋಡಿನಲ್ಲಿರುವ ದಿಗಂಬರ ಜೈನ ಧರ್ಮಶಾಲೆಯಲ್ಲಿಯೇ ಇಳಿದುಕೊಳ್ಳಲು ವ್ಯವಸ್ಥೆ ಮಾಡಿಸಿದರು. ಶ್ರೀಫಲವನ್ನು ಹಿಂದಕ್ಕೆ ತೆಗೆದುಕೊಂಡು ಹೋಗಿದ್ದ ಶ್ರೀಮಂತರೆಲ್ಲ ಬಂದು ಶ್ರೀಫಲವನ್ನಿಟ್ಟರು ಭಕ್ತಿಯಿಂದ ಎಲ್ಲರ ಮನೆಯಲ್ಲು ಚೌಕಗಳನ್ನು ಮಾಡತೊಡಗಿದರು. ಹೀಗಾಗಿ ಆಚಾರ್ಯರು ಅಲ್ಲಿ ಕೆಲವು ದಿನಗಳು ನಿಂತರು.

ನಾನು ಹಸ್ತಿನಾಪುರಕ್ಕೆ ಬಂದೆ

1975ರ ಫೆಬ್ರವರಿಯಲ್ಲಿ ಇಲ್ಲಿ ಪಂಚಕಲ್ಯಾಣ ಆಗಬೇಕಾದುದರಿಂದ ನಾನು ಆಚಾರ್ಯರ ಅನುಜ್ಞೆ ಪಡೆದು ಜೊತೆಯಲ್ಲಿ ರತ್ನಮತಿ ಮತ್ತು ಆರ್ಯಿಕೆ ಶಿವಮತೀ ಮಾತಾಜಿಯವರನ್ನು ಮಾತ್ರ ಜೊತೆಯಲ್ಲಿ ಕರೆದುಕೊಂಡು ಉಳಿದ ಶಿಷ್ಯರನ್ನೆಲ್ಲ ಸಂಘದಲ್ಲಿಯೇ ಬಿಟ್ಟು ಮೇರಠನಿಂದ ಹಸ್ತಿನಾಪುರಕ್ಕೆ ಹೊರಟೆ. ಸಂಘವನ್ನು ಮೇರಠನಿಂದ ಸರಧನದ ಜನರು ಅಲ್ಲಿಗೆ ಕರೆದೊಯ್ದರು. ಸರಧನದ ಜನರ ಭಕ್ತಿ ವಿಶೇಷವಾದುದು. ಪುಷ್ಯಮಾಸದ ಶುಕ್ಲಪಕ್ಷದ ದಿನಾಂಕ 27-6-1975ರಂದು ಆಚಾರ್ಯರ 61ನೇಯ ಜನ್ಮಜಯಂತಿಯನ್ನು ಆಚರಿಸಿದರು.

ಭ. ಮಹಾವೀರರ ಪ್ರತಿಮೆ (ಅನಾವರಣ) ಯ ಸ್ಥಾಪನೆ

ಇಲ್ಲಿಯ ದೊಡ್ಡ ಮಂದಿರದ ಭ. ಬಾಹುಬಲಿಯ ಹಾಗೂ ಜಲಮಂದಿರದಲ್ಲಿ ಭ. ಮಹಾವೀರರ ಪಂಚಕಲ್ಯಾಣ ಪ್ರತಿಷ್ಠೆಯು ಫೆಬ್ರವರಿ 20ರಿಂದ 24ರವರೆಗೆ ನಿಶ್ಚಿತವಾಗಿತ್ತು. ನನ್ನ ಪ್ರೇರಣೆಯಿಂದ ಪ್ರತಿಷ್ಠಾಚಾರ್ಯರಾಗಿ ಪಂ. ವರ್ಧಮಾನಶಾಸ್ತ್ರಿಗಳೆಂದು ನಿಶ್ಚಯಿಸಲಾಯಿತು.

ಭಗವಾನ್ ಮಹಾವೀರಸ್ವಾಮಿಯ 9¼ ಅಡಿಯ ಸ್ವಾಮಿ ದೊಡ್ಡಮಂದಿರದಲ್ಲೆ ಪೆಟ್ಟಿಗೆಯ ಒಳಗೆ ಇಡಲ್ಪಟ್ಟಿತು. ಶ್ರೀ ಸುಕುಮಾರಚಂದ ಮೊದಲಾದವರು, ಮಾತಾಜೀ ಈ ಪ್ರತಿಮೆಯನ್ನು ಇಲ್ಲೇ ಗುರುಕುಲದಲ್ಲಿ ನಿಲ್ಲಿಸಿ ಪ್ರತಿಷ್ಠಾಪಿಸಿರಿ ಜಂಬೂದ್ವೀಪದ ಮಂದಿರವಾದ ಮೇಲೆ ಅಲ್ಲಿಗೆ ತೆಗೆದುಕೊಂಡು ಹೋಗಿ ಇಟ್ಟರಾಯಿತು ಎಂದರು. ನಾನು ಸಹಜವಾಗಿಯೇ ಆಯಿತೆಂದೆ. ಇದರ ಮಧ್ಯೆ ನಾನು ಕಾಲಿನ ಬೆರಳ ಮೇಲೆ ಮರದ ತುಂಡು ಬೀಳಿಸಿಕೊಂಡು ಉಗುರಿಗೆ ತುಂಬ ಏಟಾಗಿ ಆ ನೋವಿಗೆ ಜ್ವರ ಬಂದು ಮೇಲೆಳಲು ಆಗದೆ ಮಲಗಿಬಿಟ್ಟಿದ್ದೆ. ಎರಡು ಮೂರು ದಿನದಿಂದ ಮೋತಿಚಂದ, ರವೀಂದ್ರ ಬಹಳ ಸುಸ್ತಾದವರಂತೆ ಕಾಣುತ್ತಿದ್ದರು. ನಾನು ನೋಡಿದವಳೇ ಏನು ವಿಷಯ ಏಕೆ ಮಂಕಾಗಿದ್ದೀರ ಎಂದು ಕೇಳಿದೆ. ಆಗ ಒಬ್ಬರು ಇನ್ನೊಬ್ಬರ ಮುಖ ನೋಡತೊಡಗಿದರು. ಮತ್ತೆ-ಮತ್ತೆ ಕೇಳಲಾಗಿ ಹೇಳಿದರು ಮಂದಿರಮಾರ್ಗಿಗಳು ಒಂದು ಕಾಗದ ಬರೆದಿದ್ದಾರೆ. ಅದಕ್ಕೆ ಅದೇನು ವಿಷಯ ಹೇಳಿ ನನಗೇನು ಆಗುವುದಿಲ್ಲವೆಂದೆ. ಪತ್ರವನ್ನು ತಂದು ತೋರಿಸಿದರು. ಜಂಬೂದ್ವೀಪದಲ್ಲಿ ಪ್ರತಿಮೆಯನ್ನು ಸ್ಥಾಪಿಸಲು ಸಾಧ್ಯವಿಲ್ಲ ಮಂದಿರವಾದ ಮೇಲೆಯೆ ಪ್ರತಿಷ್ಠಾಪನೆ ಎಂದಿದೆ.

ನಾನು ಎದ್ದು ಕೂತವಳೆ, ನೋಡಿ ಮೋತಿಚಂದ್ ಮತ್ತು ರವೀಂದ್ರ ಇಬ್ಬರು ಸೇರಿ ಸಾಹಸವನ್ನೇ ಮಾಡಿ ಒಂದು ಚಿಕ್ಕ ಗರ್ಭಗುಡಿಯನ್ನಾದರೂ ಕಟ್ಟಿಸಿಬಿಡಿ 8 x 10 ಇದ್ದರೂ ಸಾಕು. ಮೊದಲು ಪ್ರತಿಮೆಯನ್ನು ನಿಲ್ಲಿಸಿಬಿಡೋಣ ಮಂದಿರ ನಂತರ ಕಟ್ಟಿದರೂ ಪರವಾಗಿಲ್ಲ. ಚಿಂತೆ ಮಾಡಬೇಡಿ ಇದು ನನ್ನ ಇಚ್ಛೆ. ಈ ಸ್ವಾಮಿಯ ಪ್ರತಿಷ್ಠೆಯಲ್ಲಿ ಆಚಾರ್ಯರೇ ಸೂರಿಮಂತ್ರವನ್ನು ಕೊಡಬೇಕು. ಮತ್ತೆ ಯಾರಿಗೆ ಗೊತ್ತು ಆಚಾರ್ಯರು ಇನ್ನೊಮ್ಮೆ ಈ ಕಡೆ ಬರುತ್ತಾರೋ ಇಲ್ಲವೋ ಮೂರ್ತಿಯ ಪ್ರತಿಷ್ಠೆ ಈಗಲೇ ಆಗಬೇಕು.

ಇಷ್ಟರಲ್ಲಿ ವರ್ಧಮಾನ ಶಾಸ್ತ್ರಿಗಳ ಪತ್ರವು ಬಂದಿತು. ಮಂದಿರವಿಲ್ಲದ ಮೂರ್ತಿಯ ಪ್ರತಿಷ್ಠಾಪನೆ ಮಾಡಲು ಸಾಧ್ಯವಿಲ್ಲವೆಂದು ನನಗೆ ಬಹಳ ದುಃಖವಾಯಿತು. ಆ ವಿದ್ವಾಂಸರು ಹೀಗೆ ಹೇಳುತ್ತಿದ್ದಾರಲ್ಲ ನಾನೇ ಸಾಹಸ ಮಾಡಿ ಇವರನ್ನು ಕರೆಸಲು ಹೇಳಿದವಳು. ಈ ವಿದ್ವಾಂಸರನ್ನು ನನ್ನವರು ಎಂದು ಭಾವಿಸಿದ್ದೆ. ಇವರೊಬ್ಬ ಮುನಿಭಕ್ತರೆಂದು ತಿಳಿದಿದ್ದೆವಲ್ಲ. ನಾನು ಪ್ರತಿಷ್ಠೆಗೆ ಬರುತ್ತಾರೆಂದು ಭಾವಿಸಿದ್ದರೆ ಹೀಗೆ ಬರೆದಿದ್ದಾರಲ್ಲ ಆಯಿತು. ಮಾತಾಜಿ ಹೇಳಿದರು. ನೀವು ಯೋಚನೆ ಮಾಡಬೇಡಿ. ಏನಾದರೂ ಪುರುಷಾರ್ಥ ಮಾಡಿ ಎಂದೆ.

ಅವರಿಬ್ಬರು ಅಲ್ಲಿ ಕೆಲಸ ಮಾಡುತ್ತಿದ್ದವರನ್ನೇ ಕರೆದುಕೊಂಡು ಬಂದು ಹೇಳಿದರು ನಾವು ಕೆಲಸವನ್ನು ಹೇಗೆ ಮಾಡಬೇಕೆಂದರೆ 8-10 ದಿನದಲ್ಲಿ ಒಂದು ಕೊಠಡಿಯನ್ನು ಮುಗಿಸಬೇಕು ಎಂದರು. ಇವರಿಬ್ಬರಿಗೂ ಅಲ್ಲಿ ಯಾರ ಪರಿಚಯವೂ ಅಷ್ಟಾಗಿ ಇರಲಿಲ್ಲ. ಬಾಬೂಜಿ ನೀವು ಹೇಳಿದಂತೆ ರಾತ್ರೋರಾತ್ರಿ ನಿಮ್ಮ ಕೆಲಸ ಮುಗಿಸುತ್ತೇವೆ. ಆಗ ಅವರಿಬ್ಬರ ಮುಂದೆ ಬಂದ ಸಮಸ್ಯೆ ನನ್ನೆದುರಿಗೆ ಹೇಳಿದರು. ಹಣವಿಲ್ಲ, ಅದಕ್ಕೆ ನಾನು ನೀವೊಬ್ಬೊಬ್ಬರೂ ಊರಿಗೆ 5000-5000 ಸಾವಿರ ಕಳುಹಿಸಲು ಪತ್ರ ಬರೆಯಿರಿ.

ನಾನು ಹೇಳಿದಂತೆ ಪತ್ರ ಬರೆದು ಸನಾವದದಿಂದ 5000, ಟಿಕೈತನಗರದ 5000 ರೂ. ಬಂತು. ಮೋತಿಚಂದನಂತು ಮೈದಾನದಲ್ಲಿ ರಜಾಯಿ ಹೊದ್ದುಕೊಂಡು ರಾತ್ರಿ ಎಲ್ಲ ಜನವರಿ ಫೆಬ್ರುವರಿ ಚಳಿಯಲ್ಲೇ ಕುಳಿತು ಕೆಲಸ ಮಾಡಿಸುತ್ತಿದ್ದರು. ಆಗ ಆ ಜಾಗಕ್ಕೆ ರಾತ್ರಿ ಬೇಡ ಹಗಲು ಕೂಡ ಯಾರೂ ಬರುತ್ತಿರಲಿಲ್ಲ ಹೆದರಿಕೊಂಡು. ಅಲ್ಲೆಲ್ಲ ಬರೇ ಕಾಡೇ ಇದ್ದಿದ್ದು.

7-8 ದಿನಗಳಲ್ಲಿ ತಳಪಾಯವಾಗಿ ಗೋಡೆ ಮೇಲೇರತೊಡಗಿತು. ಈಗ ಸಮಯ ಬೇರೆ ಹತ್ತಿರ ಬರುತ್ತಿದೆ. ಗೋಡೆ ಲಿಂಟಲ್ ಎತ್ತರಕ್ಕೆ ಬಂದಿತು. 10-12 ದಿನಗಳಲ್ಲಿ ಅದನ್ನು ತೆಗೆದು ಆಯಿತು. ಇನ್ನೇನು ಮೂರ್ತಿಯನ್ನು ಇಡುವಷ್ಟು ಆಯಿತೆಂದರೆ ಇನ್ನೊಂದು ಸಮಸ್ಯೆ ಬಂದಿತು. ನಾನು ಮಾನಸ್ತಂಭದ ಹತ್ತಿರ ಮೆಟ್ಟಿಲ ಮೇಲೆ ಕುಳಿತಿದ್ದೆ. ಮೋತಿಚಂದ, ರವೀಂದ್ರ ಸಮಸ್ಯೆ ಹೇಳುತ್ತಿದ್ದರು. ಆಗ ಅಲ್ಲಿ ಇದ್ದ ಮೇರಠನ ಮಹಾನುಭಾವರು ನಮ್ಮ ಚರ್ಚೆಯನ್ನು ಕೇಳುತ್ತಿದ್ದವರು ಹೇಳಿದರು. ಅ. ಅ. ಅ. ಅ. ಅಸಂಭವವೆಂದು ಪುನಃ ಯೋಚಿಸಿ ಅಲ್ಲೆ ಇದ್ದ ಇನ್ನೊಬ್ಬ ಮಹಾನುಬಾವರು ಹೇಳಿದರು ಬೇಡ ಹಿಂದಿನ ರೀತಿ ಕಬ್ಬಿಣದ (ಗಾಟರ್) ಚಪ್ಪರವನ್ನು ಹಾಕಿಸಿ ಮೇಲೆ ಕಲ್ಲುಗಳನ್ನು ಚಪ್ಪಡಿಗಳನ್ನು ಹಾಕಿಸಿಬಿಟ್ಟರೆ ಮಾಳಿಗೆ ಸಿದ್ಧವಾಗುತ್ತದೆ. ಒಂದೆರಡು ದಿನಗಳಲ್ಲೆ ಮಂದಿರ ಸಿದ್ಧವಾಗುತ್ತದೆ ಎಂದರು.

ಇದನ್ನು ಕೇಳಿದ್ದೇ ಇವರಿಬ್ಬರು ಕಬ್ಬಿಣದವರನ್ನು ಕರೆಸಿ ಕಬ್ಬಿಣ ಕಟ್ಟಿಸಿ ಮೇಲೆ ಕಲ್ಲು ಹಾಕಿಸಿ ಛಾವಣಿ ಸಿದ್ಧ ಮಾಡಿಸಿಯೇ ಬಿಟ್ಟರು. ಸಮಯದಲ್ಲೇ ಮೂರ್ತಿಯನ್ನು ಕ್ರೇನ್ ಸಹಾಯದಿಂದ ತಂದು ನಿಲ್ಲಿಸಿ ಆಗೇ ಬಿಟ್ಟಿತು. ನೂತನ ಗರ್ಭಗೃಹದಲ್ಲಿ ಮೂರ್ತಿಯನ್ನು ನಿಲ್ಲಿಸಲಾಯಿತು. ಆ ಸಮಯದಲ್ಲಿ ಸ್ವತಃ ವಿದ್ಯಾನಂದರೇ ಬಂದರು. ಆಚಾರ್ಯ ಧರ್ಮಸಾಗರರು ಸಂಘ ಸಹಿತ ಆಗಮಿಸಿದ್ದರು. ಮಂದಿರದ ಕೆಲಸ ನಡೆಯುವ ಜಾಗದಲ್ಲಿ ಕುಳಿತುಕೊಳ್ಳಲು ನೆರಳಲ್ಲಿ ಸಾಧುಗಳಿಗೆ ನಿಲ್ಲಲು, ಕುಳಿತುಕೊಳ್ಳಲು ಟೆಂಟ್‌ಗಳನ್ನು ಹಾಕಿಸಲಾಯಿತು. ಸಾಧು ಸಾಧ್ವಿಯರು ದಿನವೆಲ್ಲ ಅಲ್ಲೇ ಇರುತ್ತಿದ್ದರು.

ಮೂರ್ತಿ ಸಾಗಿಸುವ ಮೊದಲು ಪೆಟ್ಟಿಗೆ ತೆರೆಯುತ್ತಿದ್ದಂತೆ ವಿದ್ಯಾನಂದರು ಕರ್ಪೂರ ಹಚ್ಚಿಸಿ ಮಸಿಯನ್ನು ಮೂರ್ತಿಯ ಕತ್ತಿನಲ್ಲಿ ಲೇಪಿಸಿ ಪೂರ್ತಿ ತೆಗೆಯಲು ಹೇಳಿದರು. ಮೂರ್ತಿಯನ್ನು ನೋಡಿದವರೇ ಮಾತಾಜೀ ಈ ಮೂರ್ತಿ ಬಹಳ ಸುಂದರವಾಗಿದೆ. ಬಹಳವೇ ಚಮತ್ಕಾರಿಕವಾಗಿದೆ ಇಂತಹ ಮೂರ್ತಿಗಳು ಸಿಗುವುದು ದುರ್ಲಭವೆಂದರು. ಅದೇ ಸಮಯಕ್ಕೆ ಅವರು ಹೇಳಿದಂತೆ ಆಯಿತು. ಭ. ಮಹಾವೀರಸ್ವಾಮಿಯಮೂರ್ತಿ ನಿಜಕ್ಕೂ ಕಲ್ಪವೃಕ್ಷದಂತೆ ತೋರಿತು. ಇಂದು ಸುಮಾರು 2½ ಕೋಟಿಯ ಕೆಲಸ ವೈಭವದಿಂದ ಮೈದಳೆಯಲು ಈ ವಿಶಾಲ ಜಂಬೂದ್ವೀಪ ರಚನೆಯಾಗಲು ಈ ಸ್ವಾಮಿಯದೇ ಪ್ರಭಾವವಾಗಿದೆ.

ಈ ಮೂರ್ತಿ ನಿಲ್ಲಿಸುವಾಗ ಕೆಳಗೆ ಅಚಲಯಂತ್ರವನ್ನು ಆಚಾರ್ಯ ಧರ್ಮಸಾಗರರು ಸ್ಥಾಪಿಸಿದರು. ಆಶ್ಚರ್ಯವೆಂದರೆ 1975ರ ಫೆಬ್ರುವರಿಯಲ್ಲಿ ಈ ಚಿಕ್ಕ ಗರ್ಭಗೃಹದಲ್ಲಿ ಸ್ಥಾಪಿಸಿದ ಮಹಾವೀರ ಸ್ವಾಮಿ ಇಂದಿಗೂ ಅಲ್ಲೇ ವಿರಾಜಮಾನರಾಗಿದ್ದಾರೆ. ನಾನು ಆ ಮೂರ್ತಿ ಮುಂದೆಯೂ ಅಲ್ಲೇ ಇರಬೇಕೆಂದು ನಿಶ್ಚಯ ಮಾಡಿದೆ.

ದೈವಯೋಗದಿಂದ 1987ರಲ್ಲಿ ಅಲ್ಲಿ ಪ್ರಭುವಿಗೆ ಕಮಲಮಂದಿರವು ಕಟ್ಟಲ್ಪಟ್ಟಿತು. ಈ ಕಮಲ ಮಂದಿರ ಇಡೀ ಭಾರತದಲ್ಲಿಯೇ ದಿಗಂಬರ ಜೈನ ಸಂಪ್ರದಾಯದಲ್ಲಿ ಮೊದಲನೆಯದು. ಇದರ ನಿರ್ಮಾಣಕ್ಕಾಗಿ ಅಸ್ಸಾಮಿನಿಂದ ಕೆಲಸಗಾರರನ್ನು ಕರೆಸಲಾಗಿತ್ತು.

ಅಚಲಯಂತ್ರ ಸ್ಥಾಪನೆ

ದೊಡ್ಡ ಮಂದಿರದಲ್ಲೂ ಬಾಹುಬಲಿಯ ಪ್ರತಿಮೆಯನ್ನು ನಿಲ್ಲಿಸುವಾಗಲು ಕೆಳಗೆ ಅಚಲಯಂತ್ರದ ಸ್ಥಾಪನೆಯನ್ನು ನಾನೇ ಮಾಡಿದೆ. ಜಲಮಂದಿರದಲ್ಲಿ ಮಹಾವೀರರ ಪ್ರತಿಮೆಯನ್ನು ನಿಲ್ಲಿಸಬೇಕಾದಾಗ ಅಲ್ಲಿಯಾ ನಾನೇ "ಅಚಲಯಂತ್ರ" ಸ್ಥಾಪನೆ ಮಾಡಿದೆ.

ಪಂಚಕಲ್ಯಾಣ ಪ್ರತಿಷ್ಠೆ

ಪ್ರತಿಷ್ಠೆಗಾಗಿ ಮೊದಲೇ ಸಹಾರನಪುರದಲ್ಲಿ ಪೆಂಡಾಲಗಳನ್ನ ಹಾಕಿಸತೊಡಗಿದರು. ಒಂದೆರಡು ಸಲ ಬಿರುಗಾಳಿ ಬಂದು ಬಿದ್ದುಹೋಯಿತು. ಶ್ರೀಸುಕುಮಾರ ಚಂದ ನನ್ನ ಬಳಿ ಓಡಿಬಂದು ಈ ಸಮಸ್ಯೆಯನ್ನು ಹೇಳಿದರು. ಮಾತಾಜೀ ಬೇಗ ಏನಾದರೂ ಒಂದು ಉಪಾಯ ಮಾಡಿ; ಯಾವುದೇ ವಿಘ್ನಗಳು ಬರದಂತೆ, ನಾನು ಒಂದು ಭೋಜಪತ್ರದ ಮೇಲೆ ಒಂದು ಯಂತ್ರವನ್ನು ಬರೆದು ಮಂತ್ರ ಹೇಳಿ ಒಂದು ಡಬ್ಬಿಯಲ್ಲಿ ಹಾಕಿ ಅವರ ಕೈಯಲ್ಲಿ ಕೊಟ್ಟು ಪೆಂಡಾಲಿನ ವೇದಿಕೆಯ ಮೇಲೆ ಸ್ವಾಮಿಯ ಬಿಂಬಗಳನ್ನು ಇಡುವ ಸಿಂಹಾಸನದ ಕೆಳಗೆ ಈ ಯಂತ್ರವನ್ನು ಇಡು. ಪ್ರತಿಷ್ಠಾ ಮಹೋತ್ಸವ ಮುಗಿಯುವವರೆಗೂ ಏನೂ ತೊಂದರೆ ಬರುವುದಿಲ್ಲವೆಂದು ಹೇಳಿದೆ, ಪ್ರತಿಷ್ಠೆ ಯಾವ ತೊಂದರೆಯು ಇಲ್ಲದೆ ನೆರವೇರಿತು.

ಅಂಕನ್ಯಾಸ ವಿಧಿ

ಮೂರ್ತಿಯ ಪ್ರತಿಷ್ಠೆಯಲ್ಲಿ ಕೇವಲ ಜ್ಞಾನ ಕಲ್ಯಾಣಕ್ಕಿಂತ ಮೊದಲು ಮೂರ್ತಿಯ ಅಂಗಾಂಗಳ ಮೇಲೆ ಮಂತ್ರವನ್ನು ಬರೆಯಲಾಗುತ್ತೆ. ಈ ಮಂತ್ರವನ್ನು ಕೇಸರಿಯಿಂದ ಚಿನ್ನದ ಲೇಖನಿಯಲ್ಲಿ ಬರೆಯಲಾಗುತ್ತದೆ. ಶಾಸ್ತ್ರೋಕ್ತ ವಿಧಿಯಿಂದ ಮಂತ್ರ ಬರೆಯುವ ಸಮಯದಲ್ಲಿ ಅಂಕನ್ಯಾಸ ಮಾಡುತ್ತಿರುವಾಗ ಒಬ್ಬ ವಿದ್ವಾಂಸನು ಬಾಹುಬಲಿ ಪ್ರತಿಮೆಯ ಹತ್ತಿರಕ್ಕೆ ಓಡಿಬಂದವನು ಧರ್ಮಸಾಗರರ ಕೈಗಳನ್ನು ಹಿಡಿದುಕೊಂಡು ತಡೆದನು. ಆಚಾರ್ಯರು ವಿಧಿವತ್ತಾಗಿ ಕೆಲಸ ಮಾಡುವಾಗ ಯಾರಿಗೂ ಬಗ್ಗುವವರಲ್ಲ. ಆಗ ಸ್ವಲ್ಪ ಗಲಾಟೆ ಪ್ರಾರಂಭವಾಯಿತು. ಯಾರೋ ಮಹಾನುಭಾವರು ನನ್ನ ಹತ್ತಿರ ಬಂದು ಹೇಳಿದರು. ಮಾತಾಜೀ ಈ ಅಂಕನ್ಯಾಸವನ್ನು ಕೇಸರಿಯಿಂದ ಬರೆಯುವ ಅಳತೆಯನ್ನು ತೋರಿಸಿರೆಂದು. ನಾನು ತಕ್ಷಣ ಬ್ರಹ್ಮಚಾರಿ ಶೀತಲ ಪ್ರಸಾದನಿಂದ ಪ್ರತಿಷ್ಠಾ ಪಾಠ ಸಂಗ್ರಹ ತರಿಸಿ ಈ ಪ್ರಕರಣವನ್ನು ತೆಗೆದು ನೋಡಿದೆ. ಅದರಲ್ಲಿ ಈ ಮಂತ್ರದ ಅಂಕನ್ಯಾಸ ವಿಧಿಯನ್ನು ಚಿನ್ನದ ಲೇಖನಿಯಿಂದ ಕೇಸರಿಯಲ್ಲಿ ಬರೆಯಬೇಕೆಂದು ನಮೂದಿಸಲ್ಪಟ್ಟಿತ್ತು. ಆದರೆ ಅಷ್ಟರಲ್ಲಿ ವಿಧಿ ಪೂರ್ಣಗೊಂಡಿತ್ತು. ಆಚಾರ್ಯರು ಪ್ರತಿಮೆಗಳಿಗೆ ಎಲ್ಲ ಭಾಗಗಳಿಗೂ ಸೂರಿಮಂತ್ರವನ್ನು ಪ್ರಧಾನಗೊಳಿಸಿದ್ದರು. ಪಂ. ವರ್ಧಮಾನಶಾಸ್ತ್ರಿಗಳು ಸರ್ವವಿಧಿಗಳನ್ನು ಶಾಸ್ತ್ರೋಕ್ತವಾದವಿಧಿಯಿಂದ ಪೂರ್ಣಗೊಳಿಸಿದ್ದರು.

ಪಂಚಾಮೃತ ಅಭಿಷೇಕ

ಪಂಚಕಲ್ಯಾಣ ಪ್ರತಿಷ್ಠೆ ಪೂರ್ಣಗೊಂಡಿತು. ಅದರ ನಂತರ ಸಂಘದ ಬ್ರಹ್ಮಚಾರಿ ಬ್ರಹ್ಮಚಾರಿಣಿಯರೇ ಸೇರಿಕೊಂಡು ಜಂಬೂದ್ವೀಪದ ಭ ಮಹಾವೀರಸ್ವಾಮಿಗೆ ದೊಡ್ಡದಾಗಿಯೇ ಪಂಚಾಮೃತ ಅಭಿಷೇಕವನ್ನು ಮಾಡಿದರು. ಅದೇ ಸಮಯಕ್ಕೆ ಅಲ್ಲಿಗೆ ಆಗಮಿಸಿದ ವಿದ್ಯಾನಂದರೇ ಅರೇ ನನಗೆ ಮೊದಲೆ ಏಕೆ ಹೇಳಲಿಲ್ಲ ಎಂದರು. ಹೀಗೆ ಮಂದಿರದಲ್ಲಿ ಅಂದರೆ ಒಂದೇ ಕೊಠಡಿಯಲ್ಲಿ ಸಂಘದ ಪ್ರತಿಮೆ ಇಟ್ಟಿದ್ದ ಜಾಗದಲ್ಲೇ ಬಂದು ಕುಳಿತು ವಿದ್ಯಾನಂದರು ಏನಾದರು ಪರಾಮರ್ಶೆ ಮಾಡುತ್ತಿದ್ದರು.

ಸಂಘಸ್ಥ ಸಾಧುಗಣ

1975ರಲ್ಲಿ ಜಂಬೂದ್ವೀಪದ ಸ್ಥಳದಲ್ಲಿ ಒಂದು ದೊಡ್ಡ ಸಂಖ್ಯೆಯಲ್ಲಿಯೇ ಸಾಧು ಸಮೂಹ ನೆರೆದಿತ್ತು. ೧. ಆ ಧರ್ಮಸಾಗರರು ೨. ವೃಷಭಸಾಗರರು ೩. ಸುಪಾರ್ಶ್ವಸಾಗರರು ೪. ಶ್ರೀ ಬೋಧಿಸಾಗರರು ೫. ಶ್ರೀ ಸಂಯಮ ಸಾಗರ್ ೬. ದಯಾಸಾಗರರು ೭. ಮಹೇಂದ್ರ ಸಾಗರರು ೮. ಅಭಿನಂದನ ಸಾಗರರು ೯. ಸಂಭವ ಸಾಗರರು ೧೦. ವರ್ಧಮಾನ ಸಾಗರರು ೧೧. ಭೂಪೇಂದ್ರ ಸಾಗರರು ೧೨. ಶ್ರೀ ಬುದ್ಧಿ ಸಾಗರರು ೧೩. ಚಾರಿತ್ರ ಸಾಗರರು ೧೪. ವಿನಯ ಸಾಗರರು ೧೫. ವಿಜಯ ಸಾಗರರು. ೧೬. ಕೀರ್ತಿ ಸಾಗರರು ೧೭. ಗುಣ ಸಾಗರರು ೧೮. ಭದ್ರ ಸಾಗರರು. ಹಾಗೇ ಉಪಧ್ಯಾಯ ಮುನಿ ವಿದ್ಯಾನಂದರು

ಆರ್ಯಿಕಾರಲ್ಲಿ ೧. ಆರ್ಯಿಕೆ ಜಿನಮತಿ, ೨. ಸಂಭವಮತಿ ೩. ಆದೀಮತೀ ೪. ಭದ್ರಮತೀ ೫. ಕಲ್ಯಾಣಮತೀ ೬. ಶ್ರೇಷ್ಠಮತೀ ೭. ಗುಣಮತೀ ೮. ವಿದ್ಯಾಮತೀ ೯. ಆರ್ಯಿಕಾ ಸಿದ್ಧಮತೀ ೧೦. ಜಯಮತೀ ೧೧. ವಿಮಲಮತೀ ೧೨. ನಿರ್ಮಲಮತೀ ೧೩. ಶುಭಮತೀ ೧೪. ಶೃತಮತೀ ೧೫. ಯಶೋಮತೀ ೧೬. ಸಂಯಮಮತೀ ೧೭. ವಿಪುಲಮತೀಜೀ ಹಾಗೇ ನಾನು ಜ್ಞಾನಮತಿ ರತ್ನಮತಿ ಶಿವಮತೀ ಎಲ್ಲ ಸೇರಿ ಆರ್ಯಿಕೆಯರೇ ೨೦ ಮಂದಿ. ೧. ಐಲಕ ವೈರಾಗ್ಯ ಸಾಗರಜೀ ೨.ಕ್ಷುಲ್ಲಕ ಸುರತ್ನ ಸಾಗರಜೀ ೩. ಕ್ಷುಲ್ಲಕ ನಿರ್ವಾಣಸಾಗರರು ಹೀಗೆ ೧೯ ಜನಮುನಿಗಳು ೨೦ ಆರ್ಯಿಕರು ೩ ಜನ ಐಲಕರು-ಕ್ಷುಲ್ಲಕರು ಸೇರಿ ೪೩ ಜನ ತ್ಯಾಗಿ ವೃಂದ ಅಲ್ಲಿತ್ತು.

ಜಂಬೂದ್ವೀಪದ ಮಾದರಿ

ದೆಹಲಿಯಲ್ಲಿ ಸಿದ್ಧವಾಗಿದ್ದ ಜಂಬೂದ್ವೀಪದ ಮಾದರಿಯನ್ನು ದೊಡ್ಡಮಂದಿರದ ಪರಿಸರದಲ್ಲೇ ಒಂದು ಕೊಠಡಿಯಲ್ಲಿ ಅನಾವರಣವನ್ನು (ಸುಕುಮಾರ ಚಂದರು) ದೆಹಲಿ ನಿವಾಸಿಗಳಾದ ಶ್ರೀ ಚಂದ ಚಾವಲ್‌ರವರು ಮಾಡಿದರು. ಅದೇ ಸಮಯದಲ್ಲಿ ಸುಕುಮಾರ ಚಂದರವರು ತಮ್ಮ ತಮ್ಮ ವಕ್ತವ್ಯವನ್ನು ವ್ಯಕ್ತಗೊಳಿಸಿದರು (ಮಾತುಗಳನ್ನು ಕೊಟ್ಟರು). ಉಪಾಧ್ಯಾಯ ಮತ್ತು ಆಚಾರ್ಯ ಶ್ರೀಗಳು ರಚನೆಗೊಳ್ಳಬೇಕಾಗಿದ್ದ ಜಂಬೂದ್ವೀಪಕ್ಕಾಗಿ ಬಹಳ ಆಶೀರ್ವಾದಗಳನ್ನು ಪ್ರದಾನ ಮಾಡಿದರು. ಶ್ರಾವಕರು ತನು-ಮನ-ಧನಗಳಿಂದ ಸಹಯೋಗವನ್ನು ಕೊಡುವ ಭರವಸೆ ಕೊಟ್ಟರು.

೬೯

ಗಣಧರ ವಲಯ ವಿಧಾನ

ಜಂಬೂದ್ವೀಪದ ಸ್ಥಳದಲ್ಲಿಯೇ ಭ. ಮಹಾವೀರರ ಪ್ರತಿಮೆಯ ಎದುರಿಗೆ ಚಿಕ್ಕ ಪೆಂಡಾಲ ಹಾಕಿಸಿ ದೆಹಲಿಯ ವಿಪಿನಚಂದ ಜೈನರು ಗಣಧರವಲಯ ವಿಧಾನವನ್ನು ಮಾಡಿಸಿದರು. ಆಚಾರ್ಯರ ಸಂಘದ ಸಾನ್ನಿಧ್ಯದಲ್ಲೇ ಈ ವಿಧಾನವು ಬಹಳ ಸಂಭ್ರಮದಿಂದ ನೆರವೇರಿತು. ಈ ವಿಧಾನದಲ್ಲಿ ಮೇರಠನವರಾದ ಸುಕುಮಾರಚಂದರು ಭಾಗವಹಿಸಿದ್ದರು. ಇದು ಅಷ್ಟಾಹ್ನಿಕದ 28-03-1975ರಲ್ಲಿ ಆಯಿತು.

ಸಲ್ಲೇಖನಾ

ಇದರ ನಂತರ ಮುನಿಶ್ರೀ ವೃಷಭಸಾಗರರು ನನ್ನ ಹತ್ತಿರ ಬಂದು-ಮಾತಾಜೀ ನಾನು ಈ ಕ್ಷೇತ್ರದಲ್ಲೇ ಆಚಾರ್ಯರ ಸಾನಿಧ್ಯದಲ್ಲಿಯೇ ಸಲ್ಲೇಖನ ತೆಗೆದುಕೊಳ್ಳಬೇಕೆಂದು ಬಯಸುತ್ತಿದ್ದೇನೆ. ತಾವು ಸಹಯೋಗವನ್ನು ಕೊಡಿರೆಂದರು. ನಾನು ಯೋಚಿಸಿದೆ ಅವರ ವಿಚಾರಗಳನ್ನು ಪ್ರಶಂಸಿಸುತ್ತಾ ಆಚಾರ್ಯರಲ್ಲಿ ನಿವೇದನೆಯನ್ನು ಮಾಡಿದೆ. ಅವರು ಆಚಾರ್ಯರ ಸಮ್ಮುಖದಲ್ಲೇ ಸಂಸ್ತರವನ್ನು ಗ್ರಹಣೆ ಮಾಡಿದರು. ಸಲ್ಲೇಖನವನ್ನು ಘೋಷಣೆ ಮಾಡಿದ ಮೇಲೆ ದೆಹಲಿಯ ಆಸುಪಾಸಿನ ಜನರು ದರ್ಶನ ಮಾಡಲು ಬರತೊಡಗಿದರು. ಆ ಸಮಯದಲ್ಲಿ ಸರಧನದ ಶ್ರಾವಕರು ಹೀಗೆ ಬಂದವರನ್ನೆಲ್ಲ ಭಕ್ತಿ ಶ್ರದ್ಧೆಯಿಂದ ಅವರ ವ್ಯವಸ್ಥೆಯನ್ನು ನೋಡಿಕೊಂಡರು.

ಮುನಿಶ್ರೀ ವೃಷಭಸಾಗರರು ಕ್ರಮ ಕ್ರಮವಾಗಿ ಆಹಾರ ಬಿಡುತ್ತಾ ಒಂದು ದಿನ ನನ್ನಲ್ಲಿ ಮಾತಾಜೀ ನನಗೆ ಉತ್ತಮಾರ್ಥ ಪ್ರತಿಕ್ರಮಣವನ್ನು ಹೇಳಿರಿ ಎಂದರು. ನಾನು ಕೆಲವು ಮುನಿಗಳನ್ನು ಕೂರಿಸಿಕೊಂಡು ಉತ್ತಮಾರ್ಥ ಪ್ರತಿಕ್ರಮಣವನ್ನು ಹೇಳಿದೆ. ಕೊನೆಗೆ ಅವರು ಮಾರ್ಚ್ 28ರಂದು ನೀರಿನ ಹೊರತಾಗಿ ಬಾಕಿ ಎಲ್ಲ ಆಹಾರವನ್ನು ತ್ಯಜಿಸುವ ನಿಯಮ ತೆಗೆದುಕೊಂಡರು. ಮುನಿಗಳು ಕ್ರಮವಾಗಿ ನೀರನ್ನು ಬಿಡಲು ಹೇಳಿದರು. (ಮಹಾರಾಜಜೀ) ಈ ಶರೀರಕ್ಕೆ ಎಷ್ಟು ವರ್ಷಗಳಿಂದ ತಿನ್ನಿಸಿ, ಕುಡಿಸಿ ಸಲಹಿದ್ದರು ಆತ್ಮಕ್ಕೆ ಜೊತೆ ಕೊಡುವವರು ಯಾರೂ ಇಲ್ಲ.

ಉಪವಾಸದಲ್ಲಿ ಮಹಾರಾಜರು ಜ್ಞಾನಾಮೃತದ ಭೋಜನದಿಂದ ತೃಪ್ತಿ ಪಡಿಸತೊಡಗಿದರು. ಸಾಧುವರ್ಗದವರು ಪ್ರತಿ ಗಂಟೆಗೂ ಸ್ವಾಧ್ಯಾಯ ಹೇಳತೊಡಗಿದರು. ನಾನು ಎರಡು ಮೂರು ಬಾರಿ ಸ್ವಲ್ಪ ಅಧ್ಯಾತ್ಮ ಮತ್ತು ವೈರಾಗ್ಯದ ವಿಷಯವನ್ನು ಹೇಳಿದೆ. 8ನೆಯ ದಿನ ಸುಕುಮಾರಚಂದರು ಮಹಾರಾಜರ ಸಮಾಧಾನತೆಯನ್ನು ಕಂಡವರೇ ಹೇಳಿದರು. ನಾನು ಇಲ್ಲಿಯವರೆಗೂ ಇಂತಹ ಸಮಾಧಿಯನ್ನು ನೋಡೇ ಇರಲಿಲ್ಲ.

ಕೊನೆಗೆ 1975ನೇ ಏಪ್ರಿಲ್ 7ರಂದು ಬೆಳಿಗ್ಗೆ 3.30ಕ್ಕೆ ಣಮೋಕಾರ ಮಂತ್ರ ಕೇಳುತ್ತಲೇ ಶಾಂತಿಯಿಂದ ಮುನಿಶ್ರೀಗಳು ನಶ್ವರ ಶರೀರವನ್ನು ಬಿಟ್ಟು ಸ್ವರ್ಗ ಸೇರಿದರು. ಹೀಗೆ ಮಾರ್ಚ್ 29ರಿಂದ ಏಪ್ರಿಲ್ 7ರ ವರೆಗೆ ಒಂಬತ್ತು ದಿನಗಳ ವರೆಗೆ ನಿರಾಹಾರವಾಗಿದ್ದರು. ಇವರ ಅಂತ್ಯೇಷ್ಠಿಯನ್ನು ಬೆಳಗ್ಗೆ 9ಗಂಟೆಗೆ ಸಾವಿರಾರು ಪುರುಷರ ಸಮ್ಮುಖದಲ್ಲಿ ಮಾಡಲಾಯಿತು. ಅವರ ಗೃಹಸ್ಥಾಶ್ರಮದ ಪತ್ನಿ ಅಂದು ಶ್ವೇತವಸ್ತ್ರವನ್ನು ಧರಿಸಿದ್ದರು. ಅವರ ಮಗ ಕೂಡ ವಿರಕ್ತ ಚಿತ್ತ ಧರ್ಮಾತ್ಮನಾಗಿದ್ದರು. ಇವರ ಸಮಾಧಿಯ ಸಮಯದಲ್ಲಿ ಮುನಿಗಳ ದರ್ಶನಕ್ಕಾಗಿ ಸುಮಾರು 50,000 ಸ್ತ್ರೀ ಪುರುಷರು ಹಸ್ತಿನಾಪುರಕ್ಕೆ ಬಂದು ದರ್ಶನ ಮಾಡಿದ್ದಾರೆ. ಅದೇ ದಿನ ಮಧ್ಯಾಹ್ನ ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಲಾಗಿತ್ತು. ಅದರಲ್ಲಿ ಪಂಡಿತ ರತನಚಂದ ಮುಖ್ತ್ಯಾರ, ಶ್ರೀ ಪ್ರೇಮಚಂದ,

ಜೈನಾವಾಚ ಮುಂತಾದ ಶ್ರಾವಕರು ಆರ್ಯಿಕೆಯರು ಮುನಿಗಳು, ಬ್ರಹ್ಮಚಾರಿಗಳು. ಶ್ರದ್ಧಾ ಸುಮನವನ್ನು ಅರ್ಪಿಸಿದರು. ವಿದ್ವಾಂಸರು ಸಲ್ಲೇಖನವು "ಆತ್ಮಘಾತ"ವಲ್ಲ ಎಂಬುದರ ಬಗ್ಗೆ ಒಳ್ಳೆಯ ಬೆಳಕನ್ನು ಬೀರಿದರು. ಇದೊಂದು ರತ್ನತ್ರಯದ ಆರಾಧನೆಯಾಗಿದೆ. ಜೀವನ ಪೂರ್ತಿ ಆಚರಿಸಿಕೊಂಡು ಬಂದ ಧರ್ಮವನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗುವ ಉಪಾಯ ಇದಾಗಿದೆ. ಇದನ್ನೇ ಪಂಡಿತ ಮರಣವೆಂದು ಉಲ್ಲೇಖಿಸಿ ಕೊನೆಗೆ ಎಲ್ಲರು 9ಸಲ ಮಹಾಮಂತ್ರವನ್ನು ಜಪಿಸಿ ಸಭೆಯನ್ನು ವಿಸರ್ಜಿಸಲಾಯಿತು.

ಇದಾದ ನಂತರ ಏಪ್ರಿಲ್ 9ರಂದು ಆಚಾರ್ಯರು ಹಸ್ತಿನಾಪುರದ ವಿಹಾರ ಹೊರಟು 13ರಂದು ಮುಜಫ್ಫರನಗರವನ್ನು ತಲುಪಿದರು. ಆಚಾರ್ಯರ ಆಜ್ಞೆಯಿಂದ ನಾನು ಇಲ್ಲಿಯೇ ತಂಗಿದ್ದೆ. ಆಚಾರ್ಯರು ಸಭೆಯಲ್ಲಿಯೇ ಹೇಳಿದರು. ಮಾತಾಜಿ ತಾವು ಇಲ್ಲಿ ನಿಲ್ಲದೆ ಜಂಬೂದ್ವೀಪದ ನಿರ್ಮಾಣ ಕಾರ್ಯ ಸಫಲವಾಗಲಾರದು ಎಂದು ನನ್ನ ಜೊತೆ ರತ್ನಮತೀ ಮತ್ತು ಶಿವಮತೀಯರು ಉಳಿದುಕೊಂಡರು.

ಇಲ್ಲಿ ಹಸ್ತಿನಾಪುರದಲ್ಲಿ ದೊಡ್ಡ ಮಂದಿರದಲ್ಲಿ 15-4-1975 ರಂದು ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದ ಸಭೆ ನಡೆಯಿತು. ಸದಸ್ಯರೆಲ್ಲ ನನ್ನ ಮುಂದೆ ಮಹತ್ವಪೂರ್ಣವಾದ ಪ್ರಸ್ತಾವನೆಯನ್ನು ಇಟ್ಟರು. ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನ ಮೂಲಕ ಹಸ್ತಿನಾಪುರದಲ್ಲಿ ನಿರ್ಮಿತವಾಗುವ ಮಂದಿರ ಹಾಗೂ ಜಂಬೂದ್ವೀಪದ ರಚನೆಯಲ್ಲಿ ನಿರ್ಮಿತವಾಗುವ ಮಂದಿರ ಹಾಗೂ ಜಂಬೂದ್ವೀಪದ ರಚನೆಯಲ್ಲಿ ಅಭಿಷೇಕ ಹಾಗೂ ಪೂಜೆಗಳು ದಿಗಂಬರ ಆಮ್ನಾಯದಂತೆ ಆಗಲಿ, ಈಗ ದಿಗಂಬರ ಆಮ್ನಾಯದಲ್ಲಿಯು ತೇರಾಪಂಥ ಹಾಗೂ ಬೀಸಪಂಥ ಎರಡೂ ಪ್ರಚಲಿತದಲ್ಲಿವೆ. ಎರಡು ಸಂಪ್ರದಾಯದವರಿಗೂ ಅವರ ಪರಂಪರೆಯಂತೆಯೂ ಅಭಿಷೇಕ ಹಾಗೂ ಪೂಜೆಯನ್ನು ಮಾಡಬಹುದು ಎಂದು.

ಮಂತ್ರಿ

ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನ

ಹಸ್ತಿನಾಪುರ (ಮೇರಠ) ಉ. ಪ್ರ.

ಈ ಸಭೆಯಲ್ಲಿ ಮೇರಠದ ಸುಕುಮಾರ ಚಂದಜೀ, ಜಯಚಂದ ಜೀ, ಮವಾನದ ಬೂಲಚಂದಜೈನ. ಲಖಮೀಚಂದ ಮುಂತಾದವರು ಉಪಸ್ಥಿತರಿದ್ದರು. ಎಲ್ಲರು ಈ ಪ್ರಸ್ತಾವನೆಗೆ ಸಮರ್ಥನೆಯನ್ನು ಕೊಟ್ಟರು.

ಇದಾದ ನಂತರ ವೈಶಾಖ ಶುದ್ಧ ಅಕ್ಷಯ ತೃತೀಯ ದಿನ ಸುಮೇರು ಪರ್ವತದ ಕಾರ್ಯ ಪ್ರಾರಂಭವಾಯಿತು. ತಳಹದಿಯನ್ನು ಹಾಕುವುದೇ ಮಹತ್ವಪೂರ್ಣ ಕೆಲಸವಾಗಿತ್ತು. ಇದರಲ್ಲಿ ಕಮಲದ ಆಕಾರದಲ್ಲಿ ಲೋಹದಿಂದ ಮಾಡಲು ಹೆಣೆದುಕೊಳ್ಳಲಾಯಿತು. ಇಲ್ಲಿಗೆ ಸುಮಾರು 60 ಟನ್ ಕಬ್ಬಿಣವನ್ನು ಬಳಸಲಾಗಿದೆ.

1975ರ ಚಾತುರ್ಮಾಸ ಇಲ್ಲೆ ಕೈಕೊಳ್ಳಲಾಯಿತು. ಬೆಳಗ್ಗೆಯ ವೇಳೆ ಸ್ವಾಧ್ಯಾಯ ನಡೆಯುತ್ತಿತ್ತು. ಇದರಲ್ಲಿ ಸನಾವದವರಾದ ಬ್ರ. ಹುಕುಮಚಂದ ಜೈನ. ಬ್ರ. ಮುಖ್ತ್ಯಾರಸಿಂಹ ಜೈನ ಮುಂತಾದ ಸ್ಥಾನೀಯ ವಿದ್ವಾಂಸರು ಸೇರುತ್ತಿದ್ದರು. ಮಧ್ಯಾಹ್ನದಲ್ಲಿ ಧವಲಾ ಜೀವಂಧರ ಚಂಪೂ, ವೃತ್ತರತ್ನಾಕರ ಮುಂತಾದ ಗ್ರಂಥಗಳನ್ನು ನಾನು ಶಿಷ್ಯರಿಗೆ ಓದಿಸುತ್ತಿದ್ದೆ.

ದಶಲಕ್ಷಣ ಪರ್ವದಲ್ಲಿ ಬೆಳಗ್ಗೆ ಪ್ರವಚನದ ಮೇಲೆ ವ್ಯಾಖ್ಯಾನ ಮಧ್ಯಾಹ್ನದಲ್ಲಿ ತತ್ತ್ವಾರ್ಥಸೂತ್ರದ ಒಂದೊಂದು ಅಧ್ಯಾಯವನ್ನು ಅರ್ಥಸಹಿತ ವಿವೇಚನೆ ಹಾಗೂ ಒಂದೊಂದು ಧರ್ಮದ ಮೇಲೆ ಪ್ರವಚನ

ಇರುತ್ತಿತ್ತು. ಇದೇ ಸಮಯದಲ್ಲಿ ಅಖಿಲ ಭಾರತೀಯ ದಿಗಂಬರ ಜೈನ ಮಹಾಸಮಿತಿಯ ಮಹಾಮಂತ್ರಿ ಸುಕುಮಾರ ಚಂದರು ಋಷಿಮಂಡಲ ವಿಧಾನವನ್ನು ಮಾಡಿಸಿದರು. ದಶಲಕ್ಷಣ ಪರ್ವದಲ್ಲಿ ಭೋಪಾಲ, ಗ್ವಾಲಿಯರ್, ದೆಹರಾಡೂನ, ಖತೌಲೀ, ಮೇರಠ, ಮವಾನಾ, ದೆಹಲಿ, ಟಿಕೈತನಗರದಿಂದ ಯಾತ್ರಿಗಳು ಬಂದಿದ್ದರು.

ಆಚಾರ್ಯ ಧರ್ಮಸಾಗರರು ಸಹಾರನಪುರದಲ್ಲಿ ಚಾತುರ್ಮಾಸಕ್ಕೆ ನಿಂತಿದ್ದರು. ಇವರ ಸಂಘದ ಸುಪಾರ್ಶ್ವಸಾಗರ ಮುಂತಾದ ಮುನಿಗಳು ಕೆಲವು ಆರ್ಯಿಕೆಯರು ಮುಜಫರನಗರಕ್ಕೆ ಬಂದಿದ್ದರು. ಅಲ್ಲಿಯೇ ಚಾತುರ್ಮಾಸ ಕೈಗೊಂಡಿದ್ದರು. ಮುನಿಶ್ರೀ ಸುಪಾರ್ಶ್ವಸ್ವಾಮಿಗಳು 12 ವರ್ಷಗಳ ಸಲ್ಲೇಖನ ತೆಗೆದುಕೊಂಡಿದ್ದರು. ಅವರ ಕಾಲ ಪೂರ್ತಿಯಾಗಿದ್ದರಿಂದ ಆಗ ಯಮಸಲ್ಲೇಖನ ತೆಗೆದುಕೊಂಡಿದ್ದರು. ಅವರು ನನಗೆ ಅನೇಕ ಸಲ ಸೂಚನೆ ಕಳುಹಿಸಿದ್ದರು. ಜ್ಞಾನಮತೀ ಮಾತಾಜೀ ಇಲ್ಲಿಗೆ ಬನ್ನಿರಿ ಎಂದು.

ಶಾಸ್ತ್ರದಲ್ಲಿಯೂ ಸಹ ಸಲ್ಲೇಖನಾದ ಸಮಯದಲ್ಲಿ ಸಾಧುಗಳು 96 ಕಿ.ಲೋ. ಮೀಟರ್ ವರೆಗೆ ಹೊರಗೆ ಹೋಗಬಹುದೆಂದು ಉಲ್ಲೇಖವಿದೆ. ನಾನು ವರ್ಷಾಯೋಗದ ಸಮಯದಲ್ಲೇ ಅದನ್ನು ವ್ಯಕ್ತಪಡಿಸಿದೆನು. ಆದ್ದರಿಂದ ನಾನು ದಶಲಕ್ಷಣವು ಮುಗಿಯುತ್ತಿದ್ದಂತೆ ಆಶ್ವೀಜದಲ್ಲಿ ನಾನು ಮುಜಫರನಗರಕ್ಕೆ ವಿಹಾರ ಹೊರಟೆ. ಅಲ್ಲಿ ಕ್ಷಪಕ ಮುನಿಶ್ರೀ ಸುಪಾರ್ಶ್ವಸಾಗರರ ಸಂಘದ ದರ್ಶನ ಮಾಡಿದೆ. ಮಹಾರಾಜ ಜೀ ನನ್ನ ಹತ್ತಿರ ಸಲ್ಲೇಖನದ ವಿಷಯದ ಬಗ್ಗೆ ಪರಾಮರ್ಶೆ ಮಾಡಿದರು. ಆನಂತರ ಅವರ ಇಚ್ಛೆಯಂತೆ ಅಲ್ಲಿ "ಚಾರಿತ್ರ ಶುದ್ಧಿ ವಿಧಾನ"ದ ಆಯೋಜನೆಯನ್ನು ಮಾಡಿಸಲಾಯಿತು. ಕು ತ್ರಿಶಲಾ ಹಾಗೂ ಕು. ಮಾಧುರಿಯವರು ಕಮಲಾಕಾರ ಮಂಡಲವನ್ನ ಬಹಳ ಚೆನ್ನಾಗಿ ಬಿಡಿಸಿದ್ದರು. ವಿಧಾನಮಂಡಲ ಮುಗಿದನಂತರ ಅಕ್ಟೋಬರ 22ರಂದು ರಥಯಾತ್ರೆಯಾಯಿತು. ಅಲ್ಲಿ ನಾನು 26-27 ಅಕ್ಟೋಬರದಂದು ಅನೇಕ ಗಂಡಸರಿಗೆ-ಹೆಂಗಸರಿಗೆ ಸಾಮಾಯಿಕ ವಿಧಿಯನ್ನು ಕಲಿಸಿದೆ. ಅನಂತರ 29 ಅಕ್ಟೋಬರದಂದು ಅಲ್ಲಿಂದ ಹೊರಟು ನಾನು ಹಸ್ತಿನಾಪುರಕ್ಕೆ ವಾಪಸ್ಸು ಬಂದೆ. ಆರ್ಯಿಕೆ ರತ್ನಮತೀಯವರು ಸಲ್ಲೇಖನ ನೋಡುವ ಸಲುವಾಗಿ ಅಲ್ಲಿಯೇ ಉಳಿದರು.

ಆಚಾರ್ಯ ಧರ್ಮಸಾಗರರಿಂದ ದೀಕ್ಷೆಗಳು

ಸಹಾರನಪುರದ ಚಾತುರ್ಮಾಸ ಮುಗಿಸಿಕೊಂಡು ಆಚಾರ್ಯ ಶ್ರೀಯವರು ಸಂಘಸಹಿತವಾಗಿ ಡಿಸೆಂಬರ 11ರಂದು ಮುಜಫರನಗರಕ್ಕೆ ಬಂದರು. ಸಲ್ಲೇಖನ ನಿರತರಾದ ಮುನಿಶ್ರೀ ಸುಪಾರ್ಶ್ವಸಾಗರರು ಬರೇ ಹಾಲು ಮತ್ತು ನೀರನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರು. ಇಲ್ಲಿ ಆಚಾರ್ಯರ ಕರಕಮಲದಿಂದ 5-2-1976ರಂದು 4 ಮುನಿಗಳಿಗೆ 6 ಆರ್ಯಿಕರಿಗೆ ಹಾಗು ಒಬ್ಬ ಕ್ಷುಲ್ಲಕರಿಗೆ ದೀಕ್ಷೆಯನ್ನು ಕೊಟ್ಟರು. ಕ್ಷುಲ್ಲಕ ನಿರ್ವಾಣಸಾಗರರು, ಬ್ರ. ವೀರಚಂದ್, ಬ್ರ. ಪೂನಮಚಂದ ಮತ್ತು ಬ್ರ. ಮಲ್ಲಪ್ಪ. ಈ ನಾಲ್ವರು ಮುನಿದೀಕ್ಷೆ ತೆಗೆದುಕೊಂಡರು. ಇವರ ಹೆಸರುಗಳು ಕ್ರಮವಾಗಿ ನಿರ್ವಾಣಸಾಗರ, ವಿಪುಲಸಾಗರ, ಪೂರ್ಣಸಾಗರ ಮತ್ತು ಮಲ್ಲೀಸಾಗರ ಎಂದು ಇಡಲ್ಪಟ್ಟಿತು. ಹಾಗೇ ಬ್ರ. ಜೀವನೀಬಾಯೀ. ಆರ್ಯಿಕಾ ಚೇತನಮತಿ ಆದರು. ಬ್ರ. ಶ್ರೀಮತಿ (ಮಲ್ಲಪ್ಪನ ಧರ್ಮಪತ್ನಿ) ಆರ್ಯಿಕ ಸಮಯಮತಿ ಆದರು. ಕು. ಶಾಂತಾ ಮತ್ತು ಕು. ಸುವರ್ಣರು ಆರ್ಯಿಕೆ ಆಗಿ ನಿಯಮಮತೀ ಮತ್ತು ಪ್ರವಚನಮತೀ ಎಂಬ ಹೆಸರು ಪಡೆದರು. ಬ್ರ. ಫಿರೋಜೀದೇವಿಯು ಆರ್ಯಿಕೆಯಾಗಿ ಸಮಾಧಿಮತಿ ಎಂಬ ಹೆಸರನ್ನು ಪಡೆದರು. ಸುಧಾ ಆರ್ಯಿಕಾ ಆದರು. ಇವರ ಹೆಸರು ಸುರತ್ನಮತೀ ಎಂದಾಯಿತು. ಹಾಗೆ ಬ್ರ. ಶಿವಕರಣರು ಕ್ಷುಲ್ಲಕ ದೀಕ್ಷೆ ಪಡೆದು ಸಿದ್ಧಸಾಗರರೆಂದು ಹೆಸರು ಪಡೆದರು.

ಸಮಾಧಿ ಮರಣ

ಜನವರಿ 31ರಂದು ಪ್ರಾತಃಕಾಲ 7ಗಂಟೆಗೆ 73 ವರ್ಷದ ಮುನಿಶ್ರೀ ಬೋಧಿಸಾಗರರು ಆಚಾರ್ಯರ ಸಾನಿಧ್ಯದಲ್ಲಿಯೇ ಅಕಸ್ಮಾತ್ತಾಗಿ ಸಮಾಧಿ ಮರಣವನ್ನು ಹೊಂದಿದರು. ಇದೇ ರೀತಿ ದೆಹಲಿಯಲ್ಲಿ ಇದ್ದ ನೂರುವರ್ಷದ ಮಾತಾಜೀ ಚಂದ್ರಮತಿಯವರು ಫೆಬ್ರವರಿ 6ರಂದು ಸಮಾಧಿ ಪೂರ್ವಕ ಸ್ವರ್ಗವಾಸವನ್ನು ಹೊಂದಿದರು.

ಪುನಃ 29 ಫೆಬ್ರವರಿಯಲ್ಲಿ ಮುನಿಶ್ರೀ ಸುಪಾರ್ಶ್ವಸಾಗರರ ಸಮಾಧಿಯು ಆಚಾರ್ಯ ಸಂಘದ ಸಾನಿಧ್ಯದಲ್ಲಿಯೇ ಸಂಪನ್ನವಾಯಿತು. ಆ ದಿನ ಎಸ್. ಡಿ. ಎಸ್. ನ ಆದೇಶಾನುಸಾರ ಇದೇ ಮುಜಫ್ಫರ ನಗರದಲ್ಲಿ ಎಲ್ಲರೂ ಮಧ್ಯಾಹ್ನ 3 ಗಂಟೆಯವರೆಗೆ ತಮ್ಮ ವ್ಯಾಪಾರ ವಹಿವಾಟುಗಳನ್ನು ನಿಲ್ಲಿಸಿ ಎಲ್ಲರೂ ದಹನ ಸಂಸ್ಕಾರದಲ್ಲಿ ಭಾಗವಹಿಸಿದರು. ವಹೇಲಾನಾದಲ್ಲಿ ದಹನ ಸಂಸ್ಕಾರ ನಡೆಯಿತು.

ಸಿದ್ಧ ಚಕ್ರ ವಿಧಾನ

ಹಸ್ತಿನಾಪುರದಲ್ಲಿ ಬಡೌತದ ಅನಂತವೀರ ಜೈನರು 9-3-1976 ರಿಂದ 16-3-76ರ ವರೆಗೆ ಸಿದ್ಧ ಚಕ್ರ ಆರಾಧನೆಯನ್ನು ಮಾಡಿದರು. ಆರ್ಯಿಕೆ ರತ್ನಮತಿಯವರು ಮುಜಫ್ಫರನಗರದಿಂದ ವಿಹಾರಮಾಡಿ ಹಸ್ತಿನಾಪುರಕ್ಕೆ ನನ್ನ ಬಳಿಗೆ ಬಂದರು. ನಂತರ ನಾನು ಇಲ್ಲಿಂದ ಖತೌಲೀಯ ಕಡೇ ವಿಹಾರ ಬೆಳೆಸಿದೆ. ನನ್ನ ಜೊತೆ ಆರ್ಯಿಕೆ ರತ್ನಮತೀ ಇದ್ದರು.

ದಕ್ಷಿಣದಿಂದ ಬಂದಿದ್ದ ಮಲ್ಲಪ್ಪನವರ ಪತ್ನಿ ಮತ್ತು ಇಬ್ಬರು ಪುತ್ರಿಯರು ದೀಕ್ಷೆ ತೆಗೆದುಕೊಳ್ಳಲು ಬಯಸಿದಾಗ ಆರ್ಯಿಕೆ ರತ್ನಮತಿಯವರು ಮಲ್ಲಪ್ಪಜೀ ಯವರಿಗೆ ಗಂಟೆಗಟ್ಟಲೇ ಚೆನ್ನಾಗಿ ಬೋಧನೆಮಾಡಿ ನೀವೇಕೆ ದೀಕ್ಷೆ ತೆಗೆದುಕೊಳ್ಳಬಾರದೆಂದು ಪ್ರೇರೇಪಿಸಿದರು. ಇದರ ಪರಿಣಾಮ ಅವರು ಕೂಡ ದೀಕ್ಷೆಯನ್ನು ತೆಗೆದುಕೊಳ್ಳಲು ಸಿದ್ಧರಾದರು. ಇವರ ಪ್ರಾರ್ಥನೆಯನ್ನು ಮನ್ನಿಸಿದ ಆಚಾರ್ಯರು ಇವರಿಗೆ ದೀಕ್ಷೆಕೊಟ್ಟು "ಮಲ್ಲಿಸಾಗರ"ರನ್ನಾಗಿ ಮಾಡಿದರು.

೭೦

ಖತೌಲಿಯಲ್ಲಿ ಏಪ್ರಿಲ್ 12ರಿಂದ 16ರವರೆಗೆ ಮಹಾವೀರ ಜಯಂತಿಯ ಪ್ರಯುಕ್ತ ವಿಶೇಷ ಕಾರ್ಯಕ್ರಮಗಳ ಆಯೋಜನೆಯನ್ನು ಮಾಡಲಾಗಿತ್ತು. ಪ್ರತಿದಿನ ಸಾವಿರಾರು ಸ್ತ್ರೀಪುರುಷರು ನನ್ನ ಪ್ರವಚನದ ಲಾಭ ಪಡೆಯುತ್ತಿದ್ದರು. ಅಲ್ಲಿಯ ಶೀತಲಚಂದಜೀ ಆಡತೀಲಾಲ ಧನಪ್ರಕಾಶ, ನರೇಂದ್ರಕುಮಾರ ಸರಾಫ ಮುಂತಾದವರು ನನಗೆ ಒತ್ತಾಯ ಮಾಡತೊಡಗಿದರು. ಮಾತಾಜೀ ಬೇಸಿಗೆಯಲ್ಲಿ ತಾವು ಇಲ್ಲೇ ಉಳಿದರೆ ನಾವು ಉಪದೇಶದ ಲಾಭವನ್ನು ಪಡೆಯುತ್ತೇವೆ ಎಂದು ವಿನಂತಿಸಿದರು.

ಹಾಗಾಗಿ ಗ್ರೀಷ್ಮಕಾಲದಲ್ಲಿ ನನ್ನ ಪ್ರೇರಣೆಯಿಂದ ಮೋತಿಚಂದ ಮತ್ತು ರವೀಂದ್ರ ಕುಮಾರರು ಇಲ್ಲಿ ಶಿಕ್ಷಣ ಶಿಬಿರವನ್ನು ಆಯೋಜಿಸಿದರು. 2ಜೂನ್ 1976 ರಿಂದ 16ಜೂನ್ 1976ರ ವರೆಗೆ ಇಲ್ಲಿ ಸಮ್ಯಗ್‌ಜ್ಞಾನ

ಶಿಕ್ಷಣ ಶಿಬಿರ ನಡೆಯಿತು. ಇಲ್ಲಿ ಹುಡುಗರಿಂದ ಹಿಡಿದು ವೃದ್ಧರವರಗೆ ಬಾಲಕಿಯರಿಂದ ಹಿಡಿದು ಮಹಿಳೆಯರವರೆಗೆ ಎಲ್ಲರು ಅರ್ಜಿಭರ್ತಿಮಾಡಿ ಅಧ್ಯಯನ ಮಾಡಿದರು. ಇದರ ಸಂಯೋಜಕರು ಅಮರಚಂದ ಸರಾಫ ಜೈನರು. ಪ್ರಮಾಣ ಪತ್ರವನ್ನು ಮಗನಿಂದ ತಂದೆಯಾದ ಶೀತಲ್ ಪ್ರಸಾದ ಆಡತೀಯವರು ಪಡೆದಾಗ ಸೇರಿದ್ದ ಜನರೆಲ್ಲ ಚಪ್ಪಾಳೆತಟ್ಟಿ ತಮ್ಮ ಪ್ರಶಂಸನೆಯನ್ನು ತೋರಿಸಿದರು. ಸೇರಿದ್ದ ಶಿಬಿರದಲ್ಲಿ ಬಾಲವಿಕಾಸ, ಛಹಡಾಲ, ದ್ರವ್ಯ ಸಂಗ್ರಹಪದ್ಯ,ಸಮಾಧಿ ತಂತ್ರಪದ್ಯ ತತ್ತ್ವಾರ್ಥಸೂತ್ರದ ವಿಷಯಗಳನ್ನು ಓದಿಸಲಾಗಿತ್ತು. ಇಲ್ಲಿಂದ ನಾನು ಶಾಹಪುರ ಸೋರಮ ಮುಂತಾದ ಕಡೆಗೆ ವಿಹಾರ ಮಾಡಿಕೊಂಡು ಪುನಃ ಖತೌಲೀ ಸಮಾಜದ ಗೌರವಪೂರ್ವಕ ಒತ್ತಾಯದಿಂದ ಮತ್ತೆ ಇಲ್ಲೇ ಬಂದು ವರ್ಷಾಯೋಗವನ್ನು ಕೈಗೊಳ್ಳಬೇಕಾಯಿತು.

ಇಂದ್ರಧ್ವಜ ಆರಾಧನೆಯ ರಚನೆ

ನಾನು ಶ್ರಾವಣ ಕೃಷ್ಣ ಸಪ್ತಮಿಯಿಂದ "ಇಂದ್ರಧ್ವಜ ಆರಾಧನೆ" ಬರೆಯಲು ಪ್ರಾರಂಭಿಸಿದೆ. ಆಹಾರವಾದ ಮೇಲೆ ಸಾಯಂಕಾಲ 6ಗಂಟೆಯವರೆಗೂ ಮೌನವಾಗಿ ಈ ಪೂಜಾ ವಿಧಾನದ ಪೂಜೆಗಳನ್ನು ಮಾಡುತ್ತಿದ್ದೆ. ಒಮ್ಮೊಮ್ಮೆ ಹೊರಗಿನಿಂದ ಬಂದವರೊಡನೆ ವಾರ್ತಾಲಾಪವನ್ನು ಆಡಬೇಕಾಗುತ್ತಿತ್ತು. ನಾನು ಬೆಳಗಿನ ಜಾವ 4 ಗಂಟೆಗೆ ಎದ್ದವಳು ಅಪರ ರಾತ್ರಿತನಕ ಸ್ವಾಧ್ಯಾಯ, ರಾತ್ರಿಕ ಪ್ರತಿಕ್ರಮಣ ಮತ್ತು ಸಾಮಾಯಿಕವಾದ ಮೇಲೆ ಶೌಚಾದಿಗಳಾದ ಮೇಲೆ ರವೀಂದ್ರ, ಮಾಲತೀ ಮಾಧುರೀ, ತ್ರಿಶಲಾ, ಮಂಜು ಈ ಎಲ್ಲರಿಗೂ 6ರಿಂದ 7 ಗಂಟೆಯವರೆಗೆ ಕಾತಂತ್ರ ವ್ಯಾಕರಣವನ್ನು ಹೇಳಿಕೊಡುತ್ತಿದ್ದೆ. 7 ರಿಂದ 8 ಸಮಯಸಾರದ ಸ್ವಾಧ್ಯಾಯ ನಡೆಯುತ್ತಿದ್ದವು. ನಂತರ 9 ರಿಂದ 10 ಗಂಟೆಯ ವರೆಗೆ ಪ್ರವಚನ ನಡೆಯುತ್ತಿತ್ತು. ಆನಂತರ ನಾನು ಆಹಾರಕ್ಕೆ ಹೊರಡುತ್ತಿದ್ದೆ, ಆಹಾರದಿಂದ ಬಂದವಳು ಸಾಮಾಯಿಕ ಮಾಡಿ. ಇಂದ್ರಧ್ವಜ ಆರಾಧನೆಯ ರಚನೆಯಲ್ಲಿ ತೊಡಗುತ್ತಿದ್ದೆ. ಸಾಯಂಕಾಲ 6 ಗಂಟೆಗೆ ಮೌನವನ್ನು ಬಿಟ್ಟು ಪ್ರತಿಕ್ರಮಣವನ್ನು ಮಾಡಿ, ಸಾಮಾಯಿಕ ಮಾಡಿದ ನಂತರವು ಒಮ್ಮೊಮ್ಮೆ ಬರೆಯುತ್ತಿದ್ದೆ. ಒಮ್ಮೊಮ್ಮೆ ಬೇಗ ಮಲಗುತ್ತಿದ್ದೆ.

ಇಂದ್ರಧ್ವಜ ಆರಾಧನೆಯ ರಚನೆಯು ದೀಪಾವಳಿಯ ವರಗೆ ಮುಗಿಯಿತು. ನಾನು ಬರೆದ ಪೇಜುಗಳನ್ನೆಲ್ಲ ಒಂದರ ಮೇಲೆ ಒಂದು ಇಟ್ಟು ಬಟ್ಟೆಯಿಂದ ಬಿಗಿಯಾಗಿ ಸುತ್ತಿ ಇಡುತ್ತಿದ್ದೆ. ಅಲ್ಲಿ ಕೋತಿಗಳು ಬಹಳವಾಗಿದ್ದವು. ಒಂದು ದಿನ ಒಂದು ದೊಡ್ಡ ಕೋತಿ ಬಂದು ಈ ಗಂಟನ್ನು ಎತ್ತಿಕೊಂಡು ಸೂರಿನ ಮೇಲಕ್ಕೆ ಹೊರಟು ಹೋಯಿತು. ನಾನು ನೋಡುತ್ತಲೇ ಇದ್ದೆ. ನನಗೆ ಉಸಿರೇ ನಿಂತಂತಾಯಿತು. ಅರೇ ಭಗವಾನ ಇದೇನಾಯಿತು. ನಾನು ಪುನಃ ನನ್ನ ಜೀವನದಲ್ಲಿ ಈ ಪೂಜಾವಿಧಾನದ ಒಂದು ಸಾಲನ್ನು ಬರೆಯಲಾರೇ ನನಗಂತೂ ನನ್ನ ಪ್ರಾಣವೇ ಹೋಗುತ್ತಿದೆ ಎನ್ನಿಸಿತು. ಮೋತಿ ಚಂದನು ತನ್ನ ಕೋಣೆಯಿಂದ ಬಂದವನೇ ನೋಡಿ ಹೇಳಿದ. ಮಾತಾಜೀ ಶಾಂತವಾಗಿ ಶಾಂತವಾಗಿ ನಾನು ಪಂಚ ನಮಸ್ಕಾರವನ್ನು ಜಪಿಸತೊಡಗಿದ. ಮೋತಿಚಂದನು ನಿಧಾನವಾಗಿ ಛಾವಣಿಯ ಮೇಲೆ ಏರಿದವನು ಕೋತಿಗೆ ತಿಂಡಿಯ ಆಮಿಷವನ್ನು ತೋರಿಸ ತೊಡಗಿದ. ತಿಂಡಿಯ ಆಸೆಯಿಂದ ಈ ಬಟ್ಟೆ ಗಂಟನ್ನು ಮೇಲಿಂದ ಕೆಳಗೆ ಹಾಕಿತು. ಪುಣ್ಯಯೋಗದಿಂದ ಅದು ಗಂಟನ್ನು ಬಿಚ್ಚಿರಲಿಲ್ಲ, ಬಟ್ಟೆ ಹರಿದಿರಲಿಲ್ಲ. ತೆಗೆದು ನೋಡಿದರೆ ಪೇಜುಗಳು ಅಲ್ಲಾಡಿರಲಿಲ್ಲ. ಹೇಗೆ ಇಟ್ಟಿದ್ದೆನೋ ಹಾಗೆ ಇತ್ತು. ಇದನ್ನು ಕೈಯಲ್ಲಿ ತೆಗೆದುಕೊಂಡು ನಾನು ಕಣ್ಣಿಗೆ ಒತ್ತಿಕೊಂಡು ಅದೆಷ್ಟು ಹೊತ್ತು ತಲೆಯ ಮೇಲಿಟ್ಟುಕೊಂಡು ನನ್ನ ಭಾಗ್ಯವನ್ನು ನೆನಸಿಕೊಂಡು ಹರ್ಷಿಸಿದೆ.

ಇದಾದ ಮೇಲೆ ಮೋತಿಚಂದನು ಇದರ 4 ಕಾಪಿಗಳನ್ನು ಮಾಡಿಸಿದರು. ಇದರ ಆರಾಧನೆಯನ್ನು ಮಾಡಲು ಮಹಾನುಭಾವರು ಸಿದ್ಧರಿದ್ದರು. ಮೋತಿಚಂದನು ಮಣ್ಣಿನಿಂದ 458 ಮಂದಿರಗಳನ್ನು ಮಾಡಿದರು. ಅದನ್ನು ಸುಟ್ಟು ಗಟ್ಟಿಮಾಡಿ ಬಣ್ಣಕೊಟ್ಟರು. 458 ಧ್ವಜಗಳನ್ನು ತಯಾರು ಮಾಡಿ ಅವುಗಳಿಗೆ ಹತ್ತು ವಿಧದ ಚಿಹ್ನೆಗಳನ್ನು ಬರೆಸಲಾಯಿತು. ಅವುಗಳನ್ನು ಸಿಗಿಸಲು ಕಡ್ಡಿಗಳು ರೆಡಿಯಾದವು. ಆರಾಧನೆಯ ಎಲ್ಲ ಸಿದ್ಧತೆಗಳು ಆದವು. ಅಷ್ಟರಲ್ಲಿ ಬ್ರ. ಆನಂದಸ್ವರೂಪರು ಬಂದು ಸಮಸ್ಯೆ ಎತ್ತಿದರು. ಮಾತಾಜೀ ಈ ಧ್ವಜಗಳಲ್ಲಿ ಎತ್ತಿನ ಚಿಹ್ನೆ ಇರುವುದನ್ನು ಮಂದಿರದ ಮೇಲೆ ಸಿಗಿಸಿದರೆ ಪೂಜೆಯಲ್ಲಿ ಪಶುಬಲಿಯ ದೋಷ ಬರುತ್ತದೆ ಎಂದು.

ಅವನ ಈ ಚರ್ಚೆಯನ್ನು ಕೇಳಿದವಳೇ ಅವನನ್ನು ಕರೆದು ಧವಲಾ, ಜಯಧವಲಾ, ತಿಲೋಯಪಣ್ಣತ್ತಿ ಮೊದಲಾದ ಪ್ರಮಾಣಗಳನ್ನು ತೋರಿಸಿದೆ. ಅಕೃತ್ರಿಮ ಮಂದಿರಗಳ ಧ್ವಜಗಳಲ್ಲಿ ಸಮವಸರಣದ ಧ್ವಜಗಳಲ್ಲಿ ಹತ್ತು ವಿಧದ ಚಿಹ್ನೆಗಳು ಇರುತ್ತವೆ. ವರ್ತಮಾನದಲ್ಲಿ ತೇರಹಪಂಥೀಯ ಶಿರೋಮಣಿ ವಿದ್ವಾನ ಪಂಡಿತ ನಾಥೂಲಾಲಜೀಯವರೇ ಸ್ವತಃ ಈ ಶ್ಲೋಕದ ಅರ್ಥವನ್ನು ಬರೆದು ಕಳುಹಿಸಿದ್ದಾರೆ. ಇಂದಿನ ದಿನಗಳಲ್ಲಿ ಕೆಲವು ವಿದ್ವಾಂಸರು ಅಂಶುಕದ ಜಾಗದಲ್ಲಿ ಶುಕ ಎಂದು ಹೇಳಿ ಗಿಣಿಯ ಚಿಹ್ನೆಯನ್ನು ಹಾಕುತ್ತಾರೆ. ಈ ಪತ್ರ ಇಂದಿಗೂ ರವೀಂದ್ರಕುಮಾರನ ಫೈಲಿನಲ್ಲಿದೆ. ಆದರೆ ಆ ಬ್ರಹ್ಮಚಾರಿಯು ನನ್ನ ಹತ್ತಿರ ಬರದೆ ಹೊರಗೆಯೇ ಭ್ರಮೆಯನ್ನು ಹುಟ್ಟಿಸಿ ವಿಧಾನದ ಆಯೋಜನೆಯನ್ನು ಸ್ಥಗಿತಗೊಳಿಸಿದ ಇದರಿಂದ ನನಗೇನು ವಿಶೇಷ ದುಃಖವಾಗದಿದ್ದರೂ ಮನಸ್ಸಿಗೆ ಖೇದವೆನ್ನಿಸಿತು. ಇಲ್ಲಿಂದ ವಿಹಾರ ಹೊರಟು ಹಸ್ತಿನಾಪುರಕ್ಕೆ ಬಂದೆ. ಇಲ್ಲಿಗೆ ಬಂದು ಭಗವಾನ ಮಹಾವೀರ ಸ್ವಾಮಿಯ ಮುಂದೆ ಪೆಂಡಾಲ ಹಾಕಿಸಿ ಈ ವಿಧಾನವನ್ನು ಮಾಡಿಸಿದೆ. ಮೊದಲು ಈ ಆರಾಧನೆಯನ್ನು ಮಾಡಿಸಿದ ಶ್ರೇಯಸ್ಸು ದೆಹಲಿಯ ನಿವಾಸಿಗಳಾದ-ಶ್ರೀ ವಿಪಿನಚಂದಜೈನ ಹಾಗೂ ಉಗ್ರಸೇನ ಜೈನರವರಿಗೆ ಸೇರುತ್ತದೆ. ಈ ವಿಧಾನವನ್ನು ಮಾಡಲು ಪ್ರಾರ್ಥಿಸಿದ ಮದನಲಾಲ ಚಾಂದವಡರವರು ಇದರಲ್ಲಿ ಭಾಗವಹಿಸಿದರು. ಈ ವಿಧಾನವು 1977ನೇ ಇಸವಿ ಫೆಬ್ರವರಿ 26ರಿಂದ ಮಾರ್ಚ್ 7ರವರೆಗೆ ನಡೆಯಿತು.

ಕಲ್ಪವೃಕ್ಷಕ್ಕೆ ಸಮಾನರಾಗಿದ್ದ ಭ. ಮಹಾವೀರ ಸ್ವಾಮಿಯ ಸಾನಿಧ್ಯದಲ್ಲೇ ನಡೆದಿದ್ದು ನನಗೂ ಬಹಳ ಖುಷಿಯನ್ನು ಕೊಟ್ಟಿತು. ಕೆಲವರು ಯಾವುದೇ ಕೆಲಸವನ್ನು ಪ್ರಾರಂಭಿಸಿದರೂ, ಪ್ರಾರಂಭದಲ್ಲಿ ಏನಾದರೂ ಅಡೆತಡೆ ಬಂದರೆ ಹತಾಶರಾಗಿ ಬಿಡುತ್ತಾರೆ. ಅದಕ್ಕೆ "ಪ್ರಥಮ ಗ್ರಾಸೇ ಮಕ್ಷಿಕಾಪಾತಃ" ಆದರೆ ನನಗೆ ನನ್ನ ಪ್ರತಿಯೊಂದು ಕಾರ್ಯದಲ್ಲೂ ಅಡೆತಡೆಗಳು ತುಂಬಿಯೇ ಇರುತ್ತಿದ್ದವು. ಆದರೂ ನಾನು ಸಫಲತೆಯನ್ನು ಪಡೆಯುತ್ತಲೇ ಇದ್ದೇನೆ. ಇಂದು ಈ ವಿಧಾನವನ್ನು ತೆಗೆದುಕೊಂಡರೂ ಪ್ರಾರಂಭದ ಆರಾಧನೆಯಲ್ಲಿ ಕೆಲವರು ವಿಘ್ನವನ್ನು ತಂದೊಡ್ಡಿದರು. ಈಗ ನೋಡಿ 1976ರಿಂದ 1987ರವರೆಗೆ ಇಡೀ ಭಾರತ ದೇಶದಲ್ಲಿಯ ಪ್ರತಿಯೊಂದು ಪ್ರಾಂತ್ಯದಲ್ಲೂ ಪ್ರತಿಯೊಂದು ಸಂಘದಲ್ಲಿಯೂ ಎಷ್ಟೋಬಾರಿ ಆಗಿದೆ ಮತ್ತು ಜನಪ್ರಿಯವೂ ಆಗಿದೆ. ಒಂದಲ್ಲ ಒಂದು ಕಡೆ ನಡೆಯುತ್ತಲೇ ಇರುವ ಸುದ್ದಿ ದಿನವೂ ಬರುತ್ತದೆ. ಕೆಲವೆಡೆ ಧಾತುವಿನ 458 ಬಿಂಬಗಳನ್ನ ಮಾಡಿಸಿದ್ದಾರೆ. ನಾನೂರು ಪ್ರತಿಮೆಗಳನ್ನು ಪ್ರತಿಷ್ಠಾಪನೆಯನ್ನು ಮಾಡಿದ್ದಾರೆ. ಈಗ ಈ ವಿಷಯ ಇಷ್ಟು ಸಾಕು.

1976ರಲ್ಲಿಯೇ ಹಸ್ತಿನಾಪುರದಲ್ಲಿ ನಿಯಮಸಾರದ ಹಿಂದಿ ಅನುವಾದವನ್ನು ಪೂರ್ಣಗೊಳಿಸಿದೆ. ದಶಲಕ್ಷಣ, ಧರ್ಮದ ಪದ್ಯ ಸಂಸ್ಕೃತ ಮತ್ತು ಹಿಂದಿಯಲ್ಲಿ ಮಾಡಿದೆ. "ಪ್ರತಿಜ್ಞಾ" ಎನ್ನುವ ಉಪನ್ಯಾಸವನ್ನು "ರೋಹಿಣೀ" ಎಂಬ ನಾಟಕವನ್ನು ಬರೆದೆ. ಖತೌಲಿಯಲ್ಲಿ "ದೀಪಾವಳಿಯ ಪೂಜೆ ವಿಧಿ" ಮತ್ತು "ವ್ರತವಿಧಿ ಹಾಗೂ ಪೂಜೆ" ಎಂಬ ಪುಸ್ತಕವನ್ನು ಬರೆದಿದ್ದೆ.

ಖತೌಲೀಯಲ್ಲಿ ದಶಲಕ್ಷಣಪರ್ವ

ಖತೌಲಿಯಲ್ಲಿ ದೊಡ್ಡಪೇಟೆಯಲ್ಲಿರುವ ಠಾಕುರದ್ವಾರದ ಪ್ರಾಂಗಣದಲ್ಲಿಯೇ ಪೆಂಡಾಲ ಹಾಕಲಾಗಿತ್ತು. ಪ್ರತಿದಿನ ಬೆಳಗ್ಗೆ 8ರಿಂದ9 ಗಂಟೆಯವರೆಗೆ ಒಂದೊಂದು ಧರ್ಮದ ಬಗ್ಗೆ ಪ್ರವಚನ ನಡೆಯುತ್ತಿತ್ತು. ಮಧ್ಯಾಹ್ನ ತತ್ತ್ವಾರ್ಥ ಸೂತ್ರದ ಒಂದೊಂದು ಅಧ್ಯಾಯವನ್ನು ಅರ್ಥಸಹಿತ ವಿವೇಚನೆ ಮಾಡಲಾಗುತ್ತಿತ್ತು. ಪ್ರಾತಃಕಾಲದ ಪ್ರವಚನದಲ್ಲಿ ಜೈನರು ಜೈನೇತರರು ಬಹಳಷ್ಟು ಸಂಖ್ಯೆಯಲ್ಲಿ ಬಂದು ಧರ್ಮಲಾಭವನ್ನು ಪಡೆಯುತ್ತಿದ್ದರು. ಚಾತುರ್ಮಾಸ ಸ್ಥಾಪನೆಯ ಸಮಾರಂಭವನ್ನು ನಗರಪಾಲಿಕೆಯ ಟಂಕೀಮೈದಾನದಲ್ಲಿ ಏರ್ಪಡಿಸಲಾಗಿತ್ತು. ಅದೇ ದಿನ ನನ್ನ ಕೇಶಲೋಚನವು ಇತ್ತು. ಸಾವಿರಾರು ಜೈನ ಜೈನೇತರ ಜನರು ಆರ್ಯಿಕೆಯ ದಿನಚರಿ ಮತ್ತು ಕೇಶಲೋಚದಂತಹ ಕಠೋರ ವೀರಚರ್ಯೆಯನ್ನು ನೋಡುವಂತಹ ಮೊದಲ ಅವಕಾಶ ದೊರೆಯಿತು.

ಲಲಿತಪುರದಲ್ಲಿ 1976ರ ಜೂನ್ 13ರಿಂದ20ರ ವರೆಗೆ "ಅಖಿಲ ಭಾರತ ವರ್ಷೀಯ ದಿಗಂಬರ ಜೈನ ಶಾಸ್ತ್ರಿ ಪರಿಷತ್ತಿನ ನೈಮಿತ್ತಿಕ ಅಧಿವೇಶನದ ದೊಡ್ಡ ಸಮಾರಂಭವು ನೆರವೇರಿತು. ಈ ಸಮಾರಂಭಕ್ಕೆ ಇಲ್ಲಿಂದ ಮೋತಿಚಂದ ಮತ್ತು ರವೀಂದ್ರಕುಮಾರರು ಹೋಗಿದ್ದರು. ಕೆಲವು ಮಹತ್ವಪೂರ್ಣ (ವಿಷಯಗಳು) ಪ್ರಸ್ತಾವಗಳು ಅನುಮೋದನೆಗೊಂಡವು. ಮದನಲಾಲ ಚಾಂದವಡರವರು ಇವರ ಕೈಯಲ್ಲಿ ಪೂಜ್ಯ ಮಾತಾಜೀಯವರಿಗೆ ನನ್ನ ಪ್ರಾರ್ಥನೆಯೊಂದಿಗೆ ಇಂದ್ರ ಧ್ವಜ ಆರಾಧನೆಯನ್ನು ತಿಳಿಸಬೇಕಾಗಿ ಹೇಳಿರಿ ಎಂದು.

ಇವರು ಬಂದು ವಿಷಯ ತಿಳಿಸಿದಾಗ ನಾನು ಹಸ್ತಿನಾಪುರದಿಂದ ತಿಲೋಯ ಪಣ್ಣತ್ತಿ ಮತ್ತು ತ್ರಿಲೋಕಸಾರ ಮೊದಲಾದ ಗ್ರಂಥಗಳನ್ನು ಕಲಿಸುವ ಉದ್ದೇಶದಿಂದ ಜೊತೆಯಲ್ಲಿಯೆ ತೆಗೆದುಕೊಂಡು ಖತೌಲಿಗೆ ಹೋಗಿದ್ದೆ. ನಾನು ಮೂರುಲೋಕದ ಮಂಡಲ ವಿಧಾನವನ್ನು ರಚಿಸಬೇಕಾಗಿತ್ತು. ಈಗ ಮದನಲಾಲರ ಪ್ರಾರ್ಥನೆಯಿಂದಾಗಿ ಈ ಗ್ರಂಥಗಳ ಆಧಾರದಿಂದಲೇ ಇಂದ್ರಧ್ವಜ ಆರಾಧನೆಯ ವಿಧಾನವನ್ನು ಸಿದ್ಧಪಡಿಸಿದೆ. ಪುನಃ ಮೂರುಲೋಕದ ಮಂಡಲ ಆರಾಧನೆಯನ್ನು 1986ರ ವರೆಗೆ ಮಾಡಲಾಯಿತು. ಈ ವಿಧಾನವನ್ನು "ಸರ್ವತೋಭದ್ರ" ಎಂಬ ಹೆಸರಿನಿಂದ ಮಾಡಿದೆ. ಇದು ಫೆಬ್ರುವರಿ 1987ರ ದಿನ ಪೂರ್ಣವಾಯಿತು. ಖತೌಲೀ ಚಾತುರ್ಮಾಸದಿಂದ ಪುನಃ ಹಸ್ತಿನಾಪುರಕ್ಕೆ ಹಿಂತಿರುಗಿ ಬಂದೆ.[೧]

೭೧

ಫಲಟಣದಲ್ಲಿ ಮಹತ್ವಪೂರ್ಣ ಸಮ್ಮೇಳನ

ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಫಲಟಣದಲ್ಲಿ ಆಚಾರ್ಯರತ್ನ ದೇಶಭೂಷಣರು, ಸಿದ್ಧಸೇನ ಮಹಾರಾಜರ ಪ್ರೇರಣೆಯಿಂದ ಮುನಿದ್ವಯರ ಸಾನಿಧ್ಯದಲ್ಲಿ 19-12-1976 ರಿಂದ 3-1-1977ರ ವರೆಗೆ ಒಂದು ವಿಶೇಷ ಭವ್ಯ ಸಮ್ಮೇಳನದ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ಶಾಸ್ತ್ರಿ ಪರಿಷದ್‌ನ 54ನೆಯ ಅಧಿವೇಶನ, ದಿಗಂಬರ ಜೈನ ವಿದ್ವತ್ತ್ ಸಮ್ಮೇಳನ, ದಿಗಂಬರ ಜೈನ ಮುನಿ ಸಮ್ಮೇಳನ, ದಿಗಂಬರ ಜೈನ ಭಟ್ಟಾರಕ ಸಮ್ಮೇಳನ ಮತ್ತು ದಿಗಂಬರ ಜೈನತೀರ್ಥ ಸಮ್ಮೇಳನಗಳನ್ನು ಆಯೋಜಿಸಲಾಗಿತ್ತು. ಮೊದಲೇ ದಿಗಂಬರ ಜೈನಮುನಿ ಮಾರ್ಗದ ರಕ್ಷಣೆ ಆರ್ಷ ಪರಂಪರೆಯ ರಕ್ಷಣೆಗಳಿಗಾಗಿ ಅನೇಕ ಪ್ರಸ್ತಾವನೆಗಳನ್ನ ಅನುಮೋದನೆ

---

೧. **ಈ ಪ್ರಕರಣವನ್ನು 1987ರಲ್ಲಿ ಬರೆದಿತ್ತು.**

ಗೊಳಿಸಲಾಗಿದೆ ಎಂಬುದನ್ನು ಘೋಷಣೆ ಮಾಡಲಾಗಿತ್ತು. ಇದಕ್ಕೆ ಕಾನಜೀ ಪಂಥದ ಪ್ರಬಲ ವಾದ ವಿರೋಧವು ಇತ್ತು.

ಈ ಸಮಾರಂಭದ ಸಂಚಾಲನೆಯ ಪ್ರಮುಖರಾಗಿ ಪಂ. ಬಾಬೂಲಾಲ ಜಮಾಧಾರರು, ಹಾಗೇ ಸಫಲ ಆಯೋಜಕರಾಗಿ ಮೋಹನಲಾಲ ಗುಲಾಬಚಂದ್, ಮಾನಿಕ ಚಂದ ವೀರಚಂದ, ಆನಂದಲಾಲ ಜೀವರಾಜ ದೋಶಿಯವರು ಟೊಂಕಕಟ್ಟಿ ನಿಂತಿದ್ದರು. ಈ ಸಮಾರಂಭಕ್ಕೆ ಮೋತಿಚಂದ ಹೋಗಿದ್ದರು. ಅಲ್ಲಿ ಮಹತ್ವಪೂರ್ಣ ಪ್ರಸ್ತಾವಗಳು ಅನುಮೋದನೆಗೊಂಡವು.ಇಲ್ಲಿ ಸಾಧು ಸಂಘದ ಜೊತೆ ಭಟ್ಟಾರಕ ಸಮುದಾಯವು (ವಿದ್ವಾನರ) ವಿದ್ವಾಂಸರ ಸಮೂಹವು ಅಧಿಕ ಸಂಖ್ಯೆಯಲ್ಲಿ ಉಪಸ್ಥಿತವಿತ್ತು. ಅಲ್ಲಿಯೇ ಅಖಿಲ ಭಾರತ ವರ್ಷೀಯ ಜೈನ ಯುವ ಪರಿಷತ್‌ನ ಸಂಘಟನೆಯು ಆಯಿತು. ಈಗ ಹಸ್ತಿನಾಪುರದ ರವೀಂದ್ರಕುಮಾರ ಜೈನರು ಅಧ್ಯಕ್ಷರಾಗಿದ್ದಾರೆ.

ಫಲಟಣದಲ್ಲಿ ಅಧಿವೇಶನದ ಕಾರ್ಯಕ್ರಮಗಳು ನಡೆಯುತ್ತಿದ್ದವು. ಈ ಕಡೆ ಹಸ್ತಿನಾಪುರದಲ್ಲಿ ನಾನು ಶಾಂತಿನಾಥ ಮಂದಿರದ ಹೊರಗೆ ಬಿಸಿಲಿನಲ್ಲಿ ಕುಳಿತು ಲೇಖನ ಕಾರ್ಯವನ್ನು ಮಾಡುತ್ತಿದ್ದಾಗ ಮೇರಠನ ಯಾರೋ ಒಬ್ಬ ಮಹಾನುಭಾವರು ಬಂದವರೇ ಜೋರಾಗಿ ಮಾತಾಜೀ ಲಲಿತಪುರದಲ್ಲಿ ಅನುಮೋದನೆಗೊಂಡ ವಿಷಯಗಳು ಫಲಟಣದಲ್ಲೂ ಅನುಮೋದನೆಯನ್ನು ಪಡೆಯಬಹುದು. ಕಾನಜಿಪಂಥದ ಕಾರ್ಯಗಳ ಬಗ್ಗೆ ನಮಗೆಲ್ಲರಿಗೂ ಬಹಳ ಕ್ಷೋಭೆ ಇದೆ. ನಾವೆಲ್ಲರೂ ಇಂದಿನವರೆಗೂ ಸೋನಾಗಡದ ಕಾನಜಿಪಂಥದವರ ವಿರೋಧಿಗಳೆ. ಆದರೂ ಆ ಜನಗಳು ಇಂದೂ ಹಳ್ಳಿ ಹಳ್ಳಿಯಲ್ಲಿ ಮನೆ ಮನೆಯಲ್ಲಿ ಸೋನಾಗಡದ ವಿದ್ವಾಂಸರನ್ನು ಬೆಳೆಸುತ್ತಲೇ ಇದ್ದಾರೆ. ಪ್ರಚಾರ ಮಾಡುತ್ತಿದ್ದಾರೆ, ಮಾಡಿಸುತ್ತಲೂ ಇದ್ದಾರೆ. ಈಗ ಬೆಳೆಯುತ್ತಿರುವ ಅವರ ಪ್ರಚಾರದಿಂದ ತಮ್ಮಂತಹವರಿಗೆ ಉಸಿರು ಕಟ್ಟುತ್ತಿದೆ ಎಂದರು.

ಇದನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ನಾನು ನಗುತ್ತಾ ಹೇಳಿದೆ. ಬೈಯಾ ಕಾರ್ಯಕ್ರಮ ಇಲ್ಲಿಂದ ದೂರದಲ್ಲಿರುವ ಫಲಟಣದಲ್ಲಿ ಆಗುತ್ತಿದೆ. ಈಗ ನೀವು ನನ್ನ ಹತ್ತಿರ ಬಂದು ನಿಮ್ಮ ಸಿಟ್ಟನ್ನು ತೋರಿಸುತ್ತಿದ್ದೀರಲ್ಲ ಎಂದೆ. ಆಗ ಅವರು ಮಾತಾಜೀ ಪಂ. ಬಾಬುಲಾಲ ಜಮಾದಾರರು ಇದರಲ್ಲಿ ಸೇರಿಕೊಂಡಿದ್ದಾರೆ. ಅವರು ನಿಮ್ಮ ಸಂಸ್ಥೆಯಲ್ಲಿಯು ಸಂಪರ್ಕವಿಟ್ಟುಕೊಂಡಿದ್ದಾರೆ. ಎರಡನೆಯದು ನಿಮ್ಮ ಶಿಷ್ಯರುಗಳಾದ ಮೋತಿಚಂದ, ರವೀಂದ್ರ ಕುಮಾರರು ಅಲ್ಲಿ ಭಾಗವಹಿಸಲು ಹೋಗಿದ್ದಾರೆ. ಮೂರನೆಯದಾಗಿ ತಾವು ಈ ವಿಷಯದಲ್ಲಿ (ಸಹಮತ) ಒಪ್ಪಿಗೆ ಸೂಚಿಸಿದಂತೆ ಇದೆ ಎಂದರು. ಅದಕ್ಕೆ ನಿಮ್ಮ ಮಾತು ಸತ್ಯ ಏಕೆಂದರೆ ನಾನು ಯಾವಾಗಲೂ ಗುರುಪರಂಪರೆ, ಆರ್ಷಪರಂಪರೆಯ ಪಕ್ಷದವಳೇ. ಏನು ಬೇಕಾದರೂ ಆಗಲಿ ಕಾನಜೀ ಪಂಥದ ವಿಚಾರಗಳ ಕಡೆಗೆ ಮಾತ್ರ ನಾನು ಇರುವುದು ಅಸಂಭವವೆಂದೇ ಎಂದೆನು.

ಅವರಿಗೆ ಆರ್ಷ ಪರಂಪರೆಯ ಗುಣ ಮತ್ತು ಕಾನಜೀ ಪಂಥದ ದೋಷ ಎರಡನ್ನೂ ತಿಳಿಸುತ್ತಾ ಬಂದೆ. ಎಷ್ಟು ಹೇಳಿದರೂ ಅವರು ನಿಮ್ಮ ವಿಚಾರಧಾರೆಯ ಜನರು ತೀರ್ಥಕ್ಷೇತ್ರದ ಸಂದರ್ಶನ ಅಥವಾ ಸಂರಕ್ಷಣೆಯನ್ನು ಮಾಡುತ್ತಾರೋ ಇಲ್ಲವೋ ಆದರೆ ಆ ಜನರು ಮಾಡುತ್ತಿದ್ದಾರೆ. ತೆರೆದ ಕೈಗಳಿಂದ ಹಣವನ್ನು ಕೊಡುವಾಗ ನೀವೇಕೆ ಅವರ ವಿಚಾರಗಳನ್ನು ಒಪ್ಪಿಕೊಳ್ಳುತ್ತಿಲ್ಲ. ಅದಕ್ಕೆ ನಾನು ಹಣದ ಅಥವಾ ಕೆಲಸ ಮಾಡುತ್ತಾರೆ ಎನ್ನುವ ಹಂಗಿಗೆ ಬಂದು ಧರ್ಮದ ಸತ್ಯದ ಪರಂಪರೆಯನ್ನು ಬಿಡುವುದು ತಪ್ಪು ಮತ್ತು ಏಕಾಂತ ಪರಂಪರೆಯನ್ನು ಒಪ್ಪಿಕೊಳ್ಳಬಾರದು ಎಂದೆ ಅದಕ್ಕೆ ಪೂಜ್ಯಪಾದರ ಒಂದು ಸೂಕ್ತಿ ಹೇಳಿದೆ.

क्षुद्व्याधेर्वैद्यं कवलयति कः कालकूटं बुभुक्षुः

ಹಸಿವನ್ನು ಹೋಗಲಾಡಿಸುವುದಕ್ಕಾಗಿ ಯಾವುದೇ ಮನುಷ್ಯ ಕಾಲಕೂಟ ವಿಷವನ್ನು ತಿನ್ನುವುದಿಲ್ಲ. ಕೊನೆಗೆ ಆ ಮಹಾನುಭಾವ ಮತ್ತೆ ಮತ್ತೆ ಅದನ್ನೇ ಹೇಳತೊಡಗಿದರು. ನೀವು ಬಾಬುಲಾಲ ಜಮಾದಾರರನ್ನು ತಮ್ಮ ಸಂಸ್ಥೆಯಿಂದ ದೂರಹಾಕಿ ಇಲ್ಲದಿದ್ದರೆ ನಿಮ್ಮಿಂದ ಸ್ಥಾಪಿತವಾಗಿರುವ ಸಂಸ್ಥಾನಗಳ ವಿರೋಧವನ್ನು ನಾವು ಮಾಡುತ್ತೇವೆ. ಹೀಗೆ ನನ್ನ ಮೇಲೆ ಒತ್ತಡ ಹೇರುವುದಾದರೆ ಏನು ಪ್ರಭಾವವಾಗುತ್ತದೆ.

ಸುದರ್ಶನ ಮೇರುವಿನ ನಿರ್ಮಾಣ

ಈ ಕಡೆ ಸುದರ್ಶನ ಮೇರು ಪರ್ವತದ ನಿರ್ಮಾಣ ಕೆಲಸ ನಡೆಯುತ್ತಿತ್ತು. ತಳಹದಿಯಾಗಿ ಸುಮಾರು ನಂದನವನದ ವರೆಗೆ ಗೋಡೆಗಳು ಎದ್ದಿದ್ದವು. ದೆಹಲಿ, ರೂರ್‌ಕೀ ಮುಂತಾದ ಕಡೆಯಿಂದ ಇಂಜಿನಿಯರ್‌ಗಳು ಪ್ರತಿಫಲ ತೆಗೆದುಕೊಳ್ಳದೆ ಕೆಲಸ ಮಾಡುತ್ತಿದ್ದರು. ಡಾ. ಓ. ಪೀ. ಜೈನ ವಿಶ್ವದ ವಿಖ್ಯಾತ ರೂರ್‌ಕೀ ವಿಶ್ವವಿದ್ಯಾನಿಲಯದ ಪ್ರಸಿದ್ಧಿ ಪಡೆದಿದ್ದ ಸಿವಿಲ್ ವಿಭಾಗದ ಮುಖ್ಯಸ್ಥರು. ಇವರೇ ನಿಂತು ಇದನ್ನು ಮಾಡಿಸುತ್ತಿದ್ದರು. ಆದರೂ ಒಬ್ಬ ಪ್ರಸಿದ್ಧ ಮುನಿಗಳೇ ಸುಮೇರ ಪರ್ವತದ ಬಗ್ಗೆ ಜನಗಳಲ್ಲಿ ಅಲ್ಲಿ ಹಸ್ತಿನಾಪುರದಲ್ಲಿ ಆರ್ಯಿಕಾ ಜ್ಞಾನಮತಿ ಬಹಳ ದೊಡ್ಡ ಬಾವಿಯನ್ನು ಮಾಡಿಸುತ್ತಿದ್ದಾರಲ್ಲ. ಏಕೆ ನೀವು ನೋಡಿಲ್ಲವೇ ಎಂದು ಜನಗಳ ಮುಂದೆಯೇ ಹೇಳುತ್ತಿದ್ದರು.

ಜನರಿಂದ ಈ ಮಾತುಗಳನ್ನು ಕೇಳಿದಾಗ ನನಗೆ ನಾನೇ ಅಂದುಕೊಂಡೆ ಇಲ್ಲಿಯವರೆಗೆ ಯಾವುದೇ ಮುನಿಗಳು ಮಾಡಿಸಿರುವ ಕೆಲಸವನ್ನು ವಿರೋಧಿಸಿಲ್ಲ. ಮುನಿಗಳು ಸ್ವತಃ ಇಂತಹ ಕೆಲಸಗಳನ್ನು ಮಾಡಿಸುವವರಿಗೆ ಪ್ರೇರಣೆ ಕೊಡುವಂತಹವರು ಹೀಗೇಕೆ ತಪ್ಪುಪ್ರಚಾರ ಮಾಡುತ್ತಿದ್ದಾರೆ ಎಂದು ಯೋಚಿಸಿದೆ. ಸಮಾಲೋಚನೆ ಮಾಡುತ್ತಾ ತಿಳುವಳಿಕೆಗೆ ಬಂದಿತು. ಅವರು ಕೇವಲ ದ್ವೇಷಕ್ಕೊಳಗಾಗಿ ಬೇರೆಬೇರೆಯವರ ಮೂಲಕ ಹೇಳಿಸುತ್ತಿದ್ದಾರೆ. ಆದರೆ ಹೊರಗಿನಿಂದ ಅವರು ಮೌನವಿದ್ದಾರೆ ಮತ್ತು ಪ್ರಚಾರವನ್ನೂ ಮಾಡುತ್ತಿಲ್ಲ ಅಪಪ್ರಚಾರವನ್ನೂ ಮಾಡುತ್ತಿಲ್ಲ.

ಹಸ್ತಿನಾಪುರದಲ್ಲಿ ಚಾತುರ್ಮಾಸ

ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದ ಪದಾಧಿಕಾರಿಗಳ ಪ್ರೇರಣೆಯಿಂದಾಗಿ 1976ರ ಚಾತುರ್ಮಾಸವನ್ನು ಇಲ್ಲಿಯೇ ಕೈಕೊಂಡು ಚಾತುರ್ಮಾಸದಲ್ಲಿ ಬೆಳಗ್ಗೆ ಸಮಯಸಾರ, ಮೂಲಾಚಾರ ಮುಂತಾದ ಗ್ರಂಥಗಳನ್ನು ಸ್ವಾಧ್ಯಾಯ ಮಾಡುತ್ತಾ ಮಧ್ಯಾಹ್ನದಲ್ಲಿ ಕು. ಮಾಧುರೀ ಅಂತಹವರಿಗೆ ಅಧ್ಯಯನ ಮಾಡಿಸುತ್ತಿದ್ದೆ.

ಇಲ್ಲಿಯ 'ದಿಗಂಬರಮುನಿ', 'ಆರಾಧನೆ', 'ವರ್ಷಾಯೋಗ', 'ಭೂಮಿ ಮೇಲಿನ ದೇವತೆ' ಮತ್ತು 'ಪಂಚಮೇರು ವಿಧಾನ' ಹೀಗೆ ಐದು ಪುಸ್ತಕಗಳನ್ನು ಬರೆದಿದ್ದೆ. ಇದರಲ್ಲಿ ಆರಾಧನಾ ಪುಸ್ತಕದಲ್ಲಿ ಸಂಸ್ಕೃತದ 444 ಶ್ಲೋಕಗಳನ್ನು ರಚಿಸಿದ್ದೆ. ಇದು ಮೂಲಾಚಾರ, ಆಚಾರಸಾರ, ಅನಗಾರ ಧರ್ಮಾಮೃತ ಮುಂತಾದ ಗ್ರಂಥಗಳ ಆಧಾರದಿಂದ ಮುನಿ ಮತ್ತು ಆರ್ಯಿಕೆಯರ ಚರ್ಯೆಯನ್ನು ತಿಳಿಸುವಂತಹ ಒಂದು ಸಣ್ಣ ಪುಸ್ತಕವಾಗಿತ್ತು.

ಸಮ್ಯಗ್‌ಜ್ಞಾನ ಪತ್ರಿಕೆಯಲ್ಲಿ ವರ್ಷಾಯೋಗ ಎಂಬ ಅಂಕಣದ ಅಡಿಯಲ್ಲಿ ವರ್ಷಾಯೋಗದ ಪುಸ್ತಕವನ್ನು ಪ್ರಕಟಗೊಳಿಸಲಾಯಿತು. ಈ ಅಂಕಣ ಅನೇಕ ಸಾಧುಗಳು, ಭಟ್ಟಾರಕರು, ವಿದ್ವಾಂಸರು ತಮ್ಮ ಮೆಚ್ಚುಗೆಯನ್ನು ಸೂಚಿಸಿದರು. 1977ರಲ್ಲಿ ಸುಮೇರು ಪರ್ವತದ ನಿರ್ಮಾಣ 72 ಅಡಿ ಎತ್ತರದವರೆಗೂ ಆಗಿತ್ತು. ಡಿಸೆಂಬರಗೆ 81ಅಡಿ ಎತ್ತರ ನಿರ್ಮಿಸಲಾಯಿತು. ಯಾವಾಗ ತಾರಸಿಯ ಕೆಲಸ ಮಾಡುತ್ತಿದ್ದಾರೋ ಆಗೆಲ್ಲ ಮಳೆ ಬರುವಂತೆ ತೋರುತ್ತಿತ್ತು. ಆದರೆ ನಾನು ಭಗವಾನ್ ಮಹಾವೀರ ಮಂದಿರದ ಅಂಗಳದಲ್ಲೇ ಜಪ ಮಾಡುತ್ತಾ ಕುಳಿತು ಬಿಡುತ್ತಿದ್ದೆ. ಪೂರಾ ತಾರಸಿ ಗಟ್ಟಿಆದ ಮೇಲೆ ರಾತ್ರಿ ಮಳೆ ಆಗುತ್ತಿತ್ತು. ಹೀಗೆ ಕೆಲಸಗಾರರಿಗೆ ಯಾವಾಗಲು ನೆಮ್ಮದಿಯಾಗಿ ಅವರ ಸಂತೋಷಕ್ಕೆ ಪಾರವೇ ಇಲ್ಲ.

ಅವರೆಲ್ಲ ಹರ್ಷದಿಂದ ಮಾತಾಜೀ ರಾತ್ರಿಯ ಮಳೆ ನಮಗೆ ಅಮೃತಧಾರೆಯ ಕೆಲಸ ಮಾಡಿದೆ. ಏಕೆಂದರೆ ಸುಮೇರುವಿನ ತಾರಸಿ ಚೆನ್ನಾಗಿ ಗಟ್ಟಿಯಾಯಿತು. ಇದೇ ಮಹಾವೀರ ಸ್ವಾಮಿಯ ಚಮತ್ಕಾರ. ಶ್ರಾವಣದಲ್ಲಿ ನನಗೆ ಮಲೇರಿಯಾ ಜ್ವರ ಬರತೊಡಗಿತು. ಮೂರು ದಿನಕ್ಕೊಮ್ಮೆ ಚಳಿಜ್ವರ ಹೆಚ್ಚಾಗುತ್ತಿತ್ತು. ಇದರಿಂದ ಬಹಳ ನಿಶ್ಯಕ್ತಿ ಉಂಟಾಯಿತು. ಆದರೂ ಯಥಾಶಕ್ತಿ ಬರವಣಿಗೆಯ ಕೆಲಸವನ್ನು ಮಾಡುತ್ತಲೇ ಇದ್ದೆ.

ಪ್ರಶಿಕ್ಷಣ ಶಿಬಿರ

1978ರ ಮೇ 14ರಿಂದ 18 ರವರೆಗೆ ಭಿಂಡರನಲ್ಲಿ ಆಚಾರ್ಯ ಧರ್ಮಸಾಗರ ಸಾನಿಧ್ಯದಲ್ಲಿ ಪಂಚಕಲ್ಯಾಣ ಪ್ರತಿಷ್ಠೆಯ ಮಹೋತ್ಸವ ಆಯಿತು. ಈ ಮಹೋತ್ಸವಕ್ಕೆ ಸಂಘದಿಂದ ಮೋತಿಚಂದ ಮತ್ತು ರವೀಂದ್ರಕುಮಾರರು ಹೋಗಿದ್ದರು. ಅಲ್ಲಿ "ಅಖಿಲ ಭಾರತ ವರ್ಷೀಯ ದಿಗಂಬರ ಜೈನ ಸಿದ್ಧಾಂತ ಸಂರಕ್ಷಿಣಿ ಸಭೆಯ ರಜತ ಜಯಂತಿಯ ಅಧಿವೇಶನವಾಯಿತು. ಅಲ್ಲಿ ಶೇಷ್ಠಿವರ್ಗ ಮತ್ತು ವಿದ್ವಾಂಸರಲ್ಲಿ ಚರ್ಚೆ ನಡೆಯತೊಡಗಿತು ನಮ್ಮೆಲ್ಲ ವಿದ್ವಾಂಸರಿಗೂ ಪ್ರಶಿಕ್ಷಣ ಶಿಬಿರದ ಅವಶ್ಯಕತೆ ಇದೆ. ಇದಕ್ಕೆ ಪೂಜ್ಯ ಮಾತಾಜೀಯವರ ಮಾರ್ಗದರ್ಶನದ ಅವಶ್ಯಕತೆಯು ಇದೆ ಎಂದು. ಮೋತಿಚಂದ್ರ ಮತ್ತು ರವೀಂದ್ರರು ಸರಿ ನೀವೆಲ್ಲರು ಹಸ್ತಿನಾಪುರಕ್ಕೆ ಬಂದು ಮಾತಾಜೀಯವರಲ್ಲಿ ವಿಚಾರಮಾಡಿ. ಏನಾಗುತ್ತದೆ ಹಾಗೆ ನಾವೆಲ್ಲ ನಿಮಗೆ ಸಹಯೋಗ ಕೊಡುತ್ತೇವೆ ಎಂದರು.

ಗ್ರೀಷ್ಮಕಾಲದಲ್ಲಿ ಹಸ್ತಿನಾಪುರಕ್ಕೆ ತ್ರಿಲೋಕಚಂದಜೀ ಕೊಠಾರಿ, ಗಣೇಶಲಾಲಾಜೀ, ರಾನಿವಾಲರು ಬಂದು ಮಾತಾಜೀಯವರ ಸಾನಿಧ್ಯದಲ್ಲಿ ವಿದ್ವಾಂಸರಿಗಾಗಿ ಪ್ರಶಿಕ್ಷಣ ಶಿಬಿರಕ್ಕಾಗಿ ವಿನಂತಿಸಿ ನನ್ನಿಂದ ಸ್ವೀಕೃತಿಯನ್ನು ಪಡೆದು-ಮಾತಾಜೀ ತಾವು ವಿಶೇಷ ವಿಷಯವನ್ನೊಳಗೊಂಡ ಸಂಕಲನವನ್ನು ಮಾಡಿ ವಿದ್ವಾಂಸರಿಗೆ ಮಾರ್ಗದರ್ಶನ ಮಾಡಲು ಒಂದು ಪುಸ್ತಕವನ್ನು ಸಿದ್ಧಪಡಿಸಿಕೊಟ್ಟರೆ, ಇದರಿಂದ ವಿದ್ವಾಂಸರಿಗೆ ಪ್ರಶಿಕ್ಷಣ ಕೊಡಬಹುದು ಎಂಬ ವಿನಂತಿಯನ್ನು ಮುಂದಿಟ್ಟರು.

ಆ ವರ್ಷವು ನಾನು ಚಾತುರ್ಮಾಸವನ್ನು ಹಸ್ತಿನಾಪುರದಲ್ಲೇ ಕೈಗೊಂಡಿದ್ದೆ. ಇವರ ವಿನಂತಿಯನ್ನು ಸ್ವೀಕರಿಸಿದ ನಾನು ಒಂದು ತಿಂಗಳಲ್ಲಿ 'ಪ್ರವಚನ ನಿರ್ದೇಶಿಕಾ' ಎಂಬ ಹೆಸರಿನಲ್ಲಿ ಒಂದು ಪುಸ್ತಕವನ್ನು ಸಿದ್ಧಪಡಿಸಿದೆ. ಮಳೆಗಾಲದಲ್ಲಿ ನನಗೆ ಈ ಬಾರಿಯು ಮಲೇರಿಯಾ ಜ್ವರ ಬರತೊಡಗಿತು. ಆದರೂ ಕಷ್ಟಪಟ್ಟು ಸಿದ್ಧಮಾಡಿದ್ದೆ. ರವೀಂದ್ರನು ಮೇರಠನಲ್ಲಿ ಅಚ್ಚುಹಾಕಿಸಿ ಪ್ರೂಫ್‌ರೀಡಿಂಗ್ ಮುಂತಾದವನ್ನು ನೋಡಿ ಪುಸ್ತಕಗಳನ್ನು ಸಾಕಷ್ಟು

ಪರಿಶ್ರಮಪಟ್ಟು ಸಿದ್ಧಪಡಿಸಿದ್ದರು. ಶಿಕ್ಷಣ ಶಿಬಿರವು 1987ರ ಅಕ್ಟೋಬರ್ 7 ರಿಂದ 16ರವರೆಗೆ ಏರ್ಪಾಟಾಗಿತ್ತು. ಪಂ. ಮೋತಿಲಾಲಕೊಠಾರಿಯವರನ್ನ ಕುಲಪತಿಯರನ್ನಾಗಿ ಮಾಡಲು ನಿರ್ಧರಿಸಲಾಗಿತ್ತು.

ಈ ಶಿಬಿರದ ಆಯೋಜನಗೆ ಮೊದಲು ಧರ್ಮಶಾಲೆಯನ್ನು ಬಿಟ್ಟುಕೊಡಲು ಒಪ್ಪಿದ್ದ ಕ್ಷೇತ್ರ ಕಮಿಟಿಯ ಜನರು ನಂತರ ಇಲ್ಲವೆಂದಿದ್ದರಿಂದ ನಮಗೆ ಮತ್ತೆ ಎಲ್ಲ ಮಾಡಬೇಕೆಂಬ ಯೋಚನೆ ಉಂಟಾಯಿತು. ಕೊನೆಗೆ ನಾನು ಜಂಬೂದ್ವೀಪದ ಸ್ಥಳದಲ್ಲಿಯೇ ಶಾಮಿಯಾನ, ಟೆಂಟುಗಳನ್ನು ಹಾಕಿಸಿ ನಡೆಸಿದರಾಯಿತು ಎಂದೆ. ಆದರೆ ಅಕ್ಟೋಬರ ಚಳಿಯಲ್ಲಿ ಅದು ಸಾಧ್ಯವಿಲ್ಲವೆಂದು ಕೆಲವರು ಒಪ್ಪಲಿಲ್ಲ. ಅಷ್ಟರಲ್ಲಿ ಶ್ವೇತಾಂಬರ ಧರ್ಮಶಾಲೆಯಲ್ಲಿ ಬಾಲಾಶ್ರಮದ ಮಹಾನುಭವರು ಬಂದು ನಾವು ಜಾಗವನ್ನು ಮತ್ತು ಅನುಕೂಲತೆಯನ್ನು ಮಾಡಿಕೊಡುತ್ತೇವೆ. ಶಿಬಿರ ನಡೆಸಿರಿ ಎಂದು ಹೇಳಿದರು. ಅಷ್ಟರಲ್ಲಿ 30-40ಜನ ವಿದ್ವಾಂಸರು ಬಂದಾಗಿತ್ತು. ಇವರನ್ನು ಇಳಿಸಲು ವ್ಯವಸ್ಥೆ ಇಲ್ಲವಾಗಿತ್ತು. ಇಲ್ಲಿಯ ಮಂದಿರದ ಆರು ಧರ್ಮಶಾಲೆಯಲ್ಲಿ ಒಟ್ಟು 250 ಕೊಠಡಿಗಳಿಗೂ ಬೀಗ ಹಾಕಲಾಗಿತ್ತು. ಕೆಲವು ಮಹಾನುಭಾವರು ನಾವು ಬೀಗ ಒಡೆದು ವಿದ್ವಾಂಸರಿಗೆ ಜಾಗ ಮಾಡಿಕೊಡುತ್ತೇವೆ. ಈ ಕ್ಷೇತ್ರದ ಅಭಿವೃದ್ಧಿಗೆ ಇಡೀ ಭಾರತವರ್ಷದ ಜೈನ ಸಮಾಜವು ಹಣದ ಸಹಾಯ ಮಾಡಿದೆ ಎನ್ನ ತೊಡಗಿದರು. ಆದರೆ ನಾನು ಒಪ್ಪಿಕೊಳ್ಳಲಿಲ್ಲ. ಯಾವುದೇ ಪ್ರಕಾರದಿಂದಲೂ ಅಶಾಂತಿಯನ್ನು ಉಂಟುಮಾಡಬಾರದೆಂದೆ.

ಸಾಯಂಕಾಲ ಬಂದ ತ್ರಿಲೋಕಚಂದಜೀ ಕೊಠಾರಿ, ಗಣೇಶಲಾಲಜೀ, ರಾನಿವಾಲರಿಗೆ ಈ ಸುದ್ದಿ ತಿಳಿದು ದಂಗಾದರು. ಕೊನೆಗೆ ನನ್ನ ಹತ್ತಿರ ವಿಚಾರ ವಿಮರ್ಶೆಮಾಡಿ ಮಾತಾಜೀ ತಾವು ಬೇಗನೆ ಬಾಲಾಶ್ರಮದಲ್ಲಿ ವಿದ್ವಾಂಸರಿಗೆ ತಂಗಲು ಅನುಮತಿ ಕೊಡಿ ಎಂದು ಈಗ ಯೋಚಿಸಲು ಸಮಯವಿಲ್ಲವೆಂದರು. ಆಗ ನಾನು ನಾವು ದಿಗಂಬರ-ದಿಗಂಬರರಲ್ಲೆ ಮತಭೇದ ಉಂಟಾಗಿ ಶ್ವೇತಾಂಬರರ ಸ್ಥಾನಕ್ಕೆ ಹೋಗುವುದು ನನಗೆ ಉಚಿತವೆನ್ನಿಸುತ್ತಿಲ್ಲ ಎಂದೆ.

ಆದರೂ ಜನರ ಬಹಳ ಒತ್ತಾಯ ಹಾಗೂ ಬೇರೆ ಮಾರ್ಗವಿಲ್ಲದೆ ಸ್ವೀಕೃತಿಯನ್ನು ಕೊಡಲೇಬೇಕಾಯಿತು. ಶಿಬಿರಾರ್ಥಿಗಳಿಗೆಲ್ಲ ಅಲ್ಲಿಯೇ ವ್ಯವಸ್ಥೆ ಆಯಿತು. ಮಾರನೆಯ ದಿನವೇ ಪ್ರಾತಃಕಾಲ ಪ್ರಶಿಕ್ಷಣದ ಶಿಬಿರದ ಉದ್ಘಾಟನೆಯಾಗಿ ಪ್ರೊ. ಮೋತಿಚಂದ ಕೊಠಾರಿಯವರು ನನ್ನಿಂದ ರಚಿಸಲ್ಪಟ್ಟಿದ್ದ "ಪ್ರವಚನ ನಿರ್ದೇಶಿಕಾ" ಪುಸ್ತಕದ ಬಿಡುಗಡೆಯನ್ನು ಮಾಡಿದರು. ಬಂದಿದ್ದವರಿಗೆಲ್ಲ ಪುಸ್ತಕವು ಬಹಳ ಹಿಡಿಸಿತು. ಅದನ್ನು ಅಧ್ಯಯನಕ್ಕಾಗಿ ಇಟ್ಟುಕೊಂಡರು. ಈ ಶಿಬಿರಕ್ಕೆ ಭಾರತದ ಮೂಲೆ ಮೂಲೆಯಿಂದ ಸುಮಾರು 150 ಜನ ಪ್ರಶಿಕ್ಷಣಾರ್ಥಿಗಳು ಬಂದಿದ್ದರು. ಇವರಲ್ಲಿ ಕೆಲವರು ಶ್ರೀಮಂತರು, ಬಾಕಿಯವರೆಲ್ಲ ವಿದ್ವಾಂಸರಾಗಿದ್ದರು. ನಾನು ಶಿಬಿರದಲ್ಲಿ ಎಲ್ಲರಿಗೂ ಕೆಲವು ನಿಬಂದನೆಗಳನ್ನು ವಿಧಿಸಿದ್ದೆ.

1. ಪ್ರಶಿಕ್ಷಣ ಶಿಬಿರದ 10 ದಿನಗಳಲ್ಲೂ ಧಾರ್ಮಿಕ ಚರ್ಚೆಯನ್ನು ಬಿಟ್ಟು ಬೇರೆ ಚರ್ಚೆ ನಡೆಯಬಾರದು. ವಿಕಥೆಯನ್ನು ಬಿಡಬೇಕು. "ಪ್ರವಚನ ನಿರ್ದೇಶಿಕಾ"ದ ಅಧ್ಯಯನದಲ್ಲಿ ತತ್ಪರರಾಗಿ, ಯಾವುದೇ ವ್ಯಕ್ತಿಗತ ಪಂಥವಾದದ ಚರ್ಚೆ ಆಗಬಾರದು.
2. ಪ್ರವಚನ ಹಾಗೂ ಪ್ರಶಿಕ್ಷಣದ ಸಮಯದಲ್ಲಿ ಯಾವುದೇ ಶಂಕೆ ಉಂಟಾದರೆ ಆಗಲೇ ಕೇಳಬಾರದು. ಅದನ್ನು ಗುರುತು ಹಾಕಿಕೊಂಡು ರಾತ್ರಿಯ ಶಂಕಾಸಮಾಧಾನದ ಸಮಯದಲ್ಲೇ ಪರಿಹರಿಸಿಕೊಳ್ಳಬೇಕು.
3. ಶಿಬಿರ ಪೂರ್ಣಗೊಳ್ಳುವವರೆಗೆ ಪಂಚಾಣುವ್ರತವನ್ನು ಪಾಲಿಸುತ್ತಾ ಅಷ್ಟಮೂಲಗುಣಗಳ ಧಾರಣೆಯನ್ನು ಎಲ್ಲರೂ ಮಾಡಬೇಕು. ಇದನ್ನು ಮುಂದೆಯು ಅನುಸರಿಸುವುದು ಇನ್ನೂ ಶ್ರೇಷ್ಠವಾದುದು.

4. ಪ್ರತಿಯೊಂದು ಕಾರ್ಯಕ್ರಮದ 5 ನಿಮಿಷ ಮೊದಲೇ ಎಲ್ಲಾ ಶಿಬಿರಾರ್ಥಿಗಳು ಉಪಸ್ಥಿತರಿವುದು ಅವಶ್ಯಕ.
5. ಪ್ರಶಿಕ್ಷಣದ ನಂತರ ಆರ್ಷಮಾರ್ಗವನ್ನು ಯಥೋಚಿತವಾಗಿ ಪ್ರಚಾರ ಮಾಡೋಣ.
6. ಕುಲಪತಿಗಳ ಅನುಮತಿ ಇಲ್ಲದೆ ಯಾವುದೇ ವಿಷಯದಿಂದ ವಿಷಯಾಂತರ ಮಾಡಿ ಯಾವುದೇ ಚರ್ಚೆ ಮಾಡುವಂತಿಲ್ಲ.
7. ತೇರಹಪಂಥಿ ಬೀಸಪಂಥದ ಚರ್ಚೆ ಬೇಡ.
8. ಕಾನಜೀ ಪಂಥ ಶ್ವೇತಾಂಬರ ಪಂಥದ ವಿಷಯದಲ್ಲೂ ಯಾವುದೇ ಪ್ರಶ್ನೋತ್ತರ ಮಾಡುವುದು ಬೇಡ.
9. ಈ ಪ್ರಶಿಕ್ಷಣ ಶಿಬಿರ ಬೆಳಗ್ಗೆ 5 ಗಂಟೆಗೆ ಮಹಾವೀರಾಷ್ಟಕ ಸ್ತೋತ್ರದ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುತ್ತಿತ್ತು. ಸ್ವಯಂ ಕುಲಪತಿಗಳೇ ಸಾಲಿನಲ್ಲಿ ನಿಂತುಕೊಳ್ಳುತ್ತಿದ್ದರು. ಈ ಶಿಬಿರದ ಪ್ರತಿಯೊಂದು ತರಗತಿಯು ನನ್ನ ಎದುರಿಗೆ ನಡೆಯುತ್ತಿತ್ತು. ನಾನು ಆಗಾಗ್ಗೆ ಶಿಕ್ಷಣವನ್ನು ಕೊಡುತ್ತಿದ್ದೆ. ಆರ್ಯಿಕೆ ರತ್ನಮತೀ ಮಾತಾಜೀಗಂತೂ ವಯಸ್ಸಾಗಿದ್ದರೂ ಬಹಳ ಉತ್ಸಾಹದಿಂದ ಇದರಲ್ಲಿ ಭಾಗವಹಿಸುತ್ತಿದ್ದರು. ಎರಡು ಹೊತ್ತೂ ಮಂದಿರದಿಂದ ಬಾಲಾಶ್ರಮಕ್ಕೆ ಹೋಗಿ ಬರುತ್ತಿದ್ದರು. ವಿದ್ವಾಂಸರ ಸಮ್ಮೇಳನ ಅವರಿಗೆ ಬಹಳ ಆನಂದವನ್ನು ಕೊಟ್ಟಿತ್ತು. ಒಂದು ದಿನ ನಾನು ಸಾಮಾಯಿಕ ವಿಧಿಯ ಶಿಕ್ಷಣವನ್ನು ಕೊಟ್ಟೆ. ಪಂ. ಬಾಬುಲಾಲಜೀ ಜಮಾದಾರರು ಶಿಬಿರದ ಸಂಚಾಲನೆ ಮತ್ತು ನಿಯಮಗಳ ಪಾಲನೆಯನ್ನು ಬಹಳ ಚೆನ್ನಾಗಿ ನಿರ್ವಹಿಸಿದರು. ಕೊನೆಯ ದಿನ ಪ್ರಮಾಣ-ಪತ್ರದ ವಿತರಣೆಯ ಸಮಾರಂಭ ನಡೆಯಬೇಕಾಗಿತ್ತು. ಆಗ ಪ್ರೊ. ಮೋತಿಚಂದ್‌ಜೀ ಕೊಠಾರೀಯವರೇ ಸ್ವತಃ ತಾನೇ ಎದ್ದುನಿಂತು ಕೈಗಳನ್ನು ಜೋಡಿಸಿ ನಾನು ಕೂಡ ಮಾತಾಜಿಯವರ ವಿದ್ಯಾರ್ಥಿಯೇ ಆದ್ದರಿಂದ ನನಗೂ ಪ್ರಮಾಣಪತ್ರವನ್ನು ಕೊಡಬೇಕು ಎಂದು ನಮ್ರತೆಯಿಂದ ಕೇಳಿ ಪ್ರಮಾಣ ಪತ್ರವನ್ನು ಪಡೆದುಕೊಂಡರು. ಇವರ ಸರಳತೆ ನಿರಭಿಮಾನತೆಯನ್ನು ಸ್ವಾಗತಿಸುತ್ತಾ ಜನರೆಲ್ಲ (ಹರ್ಷದಿಂದ) ಚಪ್ಪಾಳೆ ತಟ್ಟಿ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು. ಪ್ರಮಾಣಪತ್ರ ವಿತರಣೆಯ ನಂತರ ಕುಲಪತಿಗಳು ಎಲ್ಲರಿಗೂ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

ನಾವು ದೇವ, ಶಾಸ್ತ್ರ ಗುರುಗಳನ್ನು ಕಾಯಾ, ವಾಚಾ, ಮನಸಾ ವಂದಿಸುತ್ತಾ ಮನ, ವಚನ, ಕಾಯದಿಂದ ಪ್ರತಿಜ್ಞೆ ಮಾಡುತ್ತೇವೆ. ಯಾವ ನಮ್ಮ ಆರ್ಷಪರಂಪರೆಯು ನಡೆದು ಬಂದಿದೆಯೊ ಅದನ್ನು ತನು, ಮನ, ಧನದಿಂದ ರಕ್ಷಣೆ ಮಾಡುತ್ತೇವೆ. ದೇಶ, ಸಮಾಜ, ಜಾತಿ ಮತ್ತು ಮನುಷ್ಯರ ಸೇವೆಯನ್ನು ಯಥಾಶಕ್ತಿ ಮಾಡುತ್ತೇವೆ ಎಂದು ಎಲ್ಲರಿಂದಲೂ ಹೇಳಿಸಿದರು.

ಅದೇ ಸಂದರ್ಭದಲ್ಲಿ ಅಖಿಲ ಭಾರತೀಯ ದಿಗಂಬರ ಜೈನ ಸಿದ್ಧಾಂತ ಸಂರಕ್ಷಣಿ ಸಭಾ, ಅಖಿಲ ಭಾರತ ವರ್ಷೀಯ ದಿಗಂಬರ ಜೈನ ಯುವ ಪರಿಷತ್, ಅಖಿಲ ಭಾರತದ ವರ್ಷೀಯ ದಿಗಂಬರ ಜೈನಶಾಸ್ತ್ರಿ ಪರಿಷತ್ ಮತ್ತು ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನಗಳಿಂದ ನನಗೆ ಅಭಿನಂದನಾ ಪತ್ರವನ್ನು ಸಮರ್ಪಿಸಿ "ಸಿದ್ಧಾಂತ ವಾಚಸ್ಪತಿ" ಎಂಬ ಬಿರುದನ್ನು ಕೊಟ್ಟರು.

ನಿಜವಾಗಿಯೂ ವಿಚಾರ ಮಾಡಿದರೆ ಸಾಧು-ಸಾಧ್ವಿಯರಿಗೆ ಜ್ಞಾನಾರಾಧನೆ ಮತ್ತು ಚಾರಿತ್ರಾರಾಧನೆಯೇ ಅವರ ಕೆಲಸ. ಇದೇ ಅವರ ಧರ್ಮ, ಕರ್ತವ್ಯವೂ ಹೌದು. ಈ ಪದವಿಗಳಿಂದ ಅವರೇನು ಮಹಾನ್ ವ್ಯಕ್ತಿಗಳಾಗುವುದಿಲ್ಲ. ಅವರ ಆಚರಣೆಗಳೇ ಅವರನ್ನು ಮಹಾನ್ ವ್ಯಕ್ತಿಗಳನ್ನಾಗಿ ಮಾಡಿಸುವುದು.

ಈ ಶಿಬಿರಕ್ಕೆ ಬಂದಿದ್ದ ಮಕ್ಕನಲಾಲರು "ಗುರುವಿನ ಗುರು" ಎಂದು ಉದ್ಗರಿಸಿದರೆ ಬಾಬುಲಾಲಜೀ ಮಾತಾಜೀಯಂತೆ ಯಾರೂ ಇಂತಹ ಶಿಬಿರವನ್ನು ಹಿಡಿತದಲ್ಲಿಟ್ಟುಕೊಳ್ಳಲು ಶಕ್ತರಲ್ಲ ಎಂದರು. ನಾನು ಅವರಿಗೆ ಚಿಂತೆ ಮಾಡಿಬೇಡಿರೆಂದೆ. ಮಕ್ಕನಲಾಲರಿಗೂ ಪಂಡಿತರೇ ಶಿಬಿರದಲ್ಲಿ ನಿಯಮಗಳನ್ನು ವಿಧಿಸಿದ ಉದ್ದೇಶವೆಂದರೆ ಯಾರೂ ಮನಸ್ಸಿಗೆ ಬಂದಂತೆ ಕಾನಜೀ ಪಂಥದ ವಿರೋಧವನ್ನು ಮಾಡಬಾರದು ಎಂದು.

ಅವರು ನಮ್ರತೆಯಿಂದ ತಮ್ಮ ಆಜ್ಞೆಯಂತೇ ಆಗಲಿ ಎಂದರು. ಈ ಶಿಬಿರದಲ್ಲಿ ಹೈದರಾಬಾದಿನ ಶ್ರೀ ಜಯಚಂದ್ರ ಲೋಹಾಡೆ, ಸೀತಾಪುರದ ಶ್ರೀ ನಿರ್ಮಲಕುಮಾರ್‌ಜೀ, ಸೇಠಿ. ಸತನಾದಿಂದ ಶ್ರೀ ನೀರಜಜೈನ ಮೊದಲಾದ ಮಹಾನುಭಾವರು ಭಾಗವಹಿಸಿದ್ದರು. ದಿಗಂಬರರ ಆರು ಧರ್ಮಶಾಲೆಗಳು ಖಾಲಿಯೇ ಇದ್ದವು. ಶ್ವೇತಾಂಬರ ಬಾಲಾಶ್ರಮದ ಶಾಂತಿಪೂರ್ಣ ವಾತಾವರಣದಲ್ಲಿ ನಡೆದಿದ್ದು ಎಲ್ಲರಿಗೂ ಆಶ್ಚರ್ಯವಾಯಿತು. ಕೊನೆಗೆ ಇದರ ಬಗ್ಗೆ ಇಡೀ ಭಾರತದ ಜೈನಸಮಾಜದಲ್ಲಿ ಚರ್ಚೆಯಾಯಿತು. ಎಲ್ಲರೂ ಕ್ಷೇತ್ರ ಕಮಿಟಿಯವರ ಧೂರ್ತತೆಯನ್ನೂ, ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದ ಪ್ರಶಂಸೆಯನ್ನು ಮಾಡಿದರು. ಅಂತೂ ಸಹನಶೀಲತೆ ಎಂಬುದುಬಹಳ ದೊಡ್ಡಗುಣವಾಗಿದೆ.

ಈ ಶಿಬಿರವಾದ ಮೇಲೆ ಕಾರ್ತಿಕ ಶುಕ್ಲ ಪಕ್ಷದ ಪ್ರತಿಪದೆಯ ದಿನ ಇಲ್ಲಿ ಜಾತ್ರೆ ಆಗುತ್ತದೆ. ಆಗ ಅಲ್ಲಿಗೆ ಬಂದಿದ್ದ ಹುಕುಮ್‌ಚಂದ ಭಾರಿಲ್ಲಾ ಮೊದಲಾದ ವಿದ್ವಾಂಸರು ನನ್ನ ಕೊಠಡಿಯಲ್ಲಿಯೇ ಕುಳಿತು ಬಹಳಷ್ಟು ವಿಷಯಗಳ ಚರ್ಚೆ ಮಾಡಿದರು. ಆದಾಗ್ಯೂ ನನ್ನ ಆರೋಗ್ಯದಲ್ಲಿ ನಿಶ್ಯಕ್ತತೆ ಹೆಚ್ಚಾಗ ತೊಡಗಿತ್ತು. ಆರ್ಯಿಕೆ ರತ್ನಮತಿಯವರು ಜ್ವರದಿಂದ ನಿಶ್ಯಕ್ತರಾಗಿದ್ದರು. ಆದರೂ ಮನಸ್ಸನ್ನು ಗಟ್ಟಿಮಾಡಿಕೊಂಡು ಸಂಘ ಸಹಿತವಾಗಿ ಚಾತುರ್ಮಾಸದ ನಂತರ ದೆಹಲಿಯ ಕಡೆಗೆ ವಿಹಾರ ಹೊರಟೆ.

ದೆಹಲಿಗೆ ಆಗಮನ

ಶಿಬಿರವಾದ ಮೇಲೆ ಒಂದು ದಿನ ಒಬ್ಬ ವ್ಯಕ್ತಿ ಬಂದು ನನ್ನಲ್ಲಿ ಮಾತಾಜೀ ತಮ್ಮ ಸಿದ್ಧಾಂತ ಸಂರಕ್ಷಣೆ ಸಭೆಯ ಹೆಸರಿನಲ್ಲಿ ಎಂತಹ ಮಲತಾಯಿ ಧೋರಣೆಯನ್ನು ತೋರಿಸಿದಿರಲ್ಲ ಎಂದರು. ಆಗ ನನಗೆ ಏನೂ ಅರ್ಥವಾಗಲಿಲ್ಲ. ದೆಹಲಿಗೆ ಬಂದಮೇಲೆ ರವೀಂದ್ರಕುಮಾರ್ ಸರಾಫರು ಒಂದು ದಿನ ಹೇಳಿದರು. ದಿಗಂಬರ ಜೈನ ಮಹಾಸಭೆ ಮತ್ತು ಅಖಿಲ ಭಾರತೀಯ ದಿಗಂಬರ ಜೈನ ಸಿದ್ಧಾಂತ ಸಂರಕ್ಷಣೆ ಸಬೆಯಲ್ಲಿ ವಿಧವಾ ವಿವಾಹ, ಅಂತರ್ಜಾತಿಯ ವಿವಾಹವನ್ನು ವಿರೋಧಿಸಿ ನಿಯಮಗಳನ್ನು ಮಾಡಿತ್ತು. ಈ ಎರಡು ಸಂಸ್ಥೆಗಳು, ಜಾತಿ-ಪಂಥ, ವರ್ಣ ವ್ಯವಸ್ಥೆಯನ್ನು ಒಪ್ಪಿಕೊಳ್ಳುವ ಸಂಸ್ಥೆಗಳು. ಆದರೆ ದಿಗಂಬರ ಜೈನ ಪರಿಷದ್ ಸಂಸ್ಥೆಯು ವಿಧವಾವಿವಾಹ ಮೊದಲಾದ ವಿಷಯವನ್ನು ಸಮರ್ಥಿಸುವುದಕ್ಕೋಸ್ಕರ, ಪ್ರಚಾರ ಮಾಡುವುದಕ್ಕಾಗಿ ಇದ್ದ ಸಂಸ್ಥೆ. ಹೀಗಾಗಿ ಇದು ಮಲತಾಯಿ ಧೋರಣೆ ಎಂದು ಭಾವಿಸಿ ಈ ಸಭೆ ನಡೆಯಲು ಧರ್ಮಶಾಲೆಗಳನ್ನು ಕೊಡಬಾರದೆಂದು ನಿರ್ಧರಿಸಿ ಜಾಗವನ್ನ ಕೊಡಲಿಲ್ಲ ಎಂಬ ವಿಷಯ ಅರ್ಥವಾಯಿತು.

ಈ ವಿಷಯ ಹೀಗೆ ಬೆಳೆಯುತ್ತಾ ಬೆಳೆಯುತ್ತಾ ಮೇಲೆ ಬಂದಿತು. ಇಂದು ನಿರ್ಮಲಕುಮಾರ ಸೇಠಿ ಮಹಾಸಭೆಯ ಅಧ್ಯಕ್ಷರಾಗಿದ್ದಾರೆ. ಮಹಾಸಮಿತಿ ಕೂಡ ಹಲವಾರು ವರ್ಷಗಳಿಂದ ಇವುಗಳನ್ನು ವಿರೋಧಿಸುತ್ತಲೇ ಬಂದಿವೆ.

೭೨

ಆರ್ಯಿಕೆ ರತ್ನಮತೀಯವರಿಗೆ ದೆಹಲಿಯ ವಾತಾವರಣ ಸರಿಹೊಂದದ ಕಾರಣ ಅವರಿಗೆ ಅಲ್ಲಿಗೆ ಹೋಗಲು ಮನಸ್ಸಿರಲಿಲ್ಲ. ಆದರೆ ನಿಶ್ಯಕ್ತರಾಗಿದ್ದವರನ್ನು ಅಲ್ಲಿಯೂ ಬಿಡುವಂತಿಲ್ಲ. ಹಾಗೇ ದೆಹಲಿಗೆ ಅವರನ್ನು ಜೊತೆಯಲ್ಲಿ ಕರೆದುಕೊಂಡೆ ಹೋಗಬೇಕಾಯಿತು. ದೆಹಲಿಯಲ್ಲಿ ಡಿಸೆಂಬರಿನಲ್ಲಿ ಭಯಂಕರ ಚಳಿ 11ನೇ ಡಿಸೆಂಬರ್ ಅಲ್ಲಿಗೆ ತಲುಪಿದೆವು. ಅಲ್ಲಿ ಪ್ರತಿಷ್ಠೆಯ ದಿನಾಂಕವನ್ನು ನಿಶ್ಚಯಿಸಲಾಯಿತು.

ಸುದರ್ಶನ ಮೇರು ಪ್ರತಿಷ್ಠೆಯ ಘೋಷಣೆ

29-4-1979 ರಿಂದ 3-5-1979ರ ವರೆಗೆ ಶ್ರೀ ಸುದರ್ಶನ ಮೇರು ಜಿನಬಿಂಬ ಪಂಚಕಲ್ಯಾಣದ ಪ್ರತಿಷ್ಠೆ ಹಾಗೂ ಗಜರಥ ಮಹೋತ್ಸವ ಹಸ್ತಿನಾಪುರ ಮೇರಠ ಉತ್ತರ ಪ್ರದೇಶದಲ್ಲಿ ಮಾಡುವುದೆಂದು ನಿಶ್ಚಯವಾಯಿತು. ಇದಕ್ಕಾಗಿ ಪ್ರತಿಷ್ಠಾ ಸಮಿತಿಯ ರಚನೆ ಆಯಿತು. ಬ್ರ. ಸೂರಜಮಲ್ಲರನ್ನು ಪ್ರತಿಷ್ಠಾಚಾರ್ಯರೆಂದು ನಿರ್ಣಯಿಸಲಾಯಿತು. ಈ ಪ್ರತಿಷ್ಠೆಯು ತನ್ನಷ್ಟಕ್ಕೆ ತಾನೇ ಒಂದು ವಿಶೇಷತೆಯನ್ನು ಪಡೆದುಕೊಂಡಿತು. ಪ್ರತಿಷ್ಠೆಗಾಗಿ ಸಿದ್ಧತೆಗಳು ಭರದಿಂದ ಸಾಗತೊಡಗಿತು. ಪಂ. ಬಾಬೂಲಾಲ ಜಮಾದಾರರನ್ನು ಪ್ರಚಾರಮಂತ್ರಿಯನ್ನಾಗಿ ಮಾಡಲಾಗಿತ್ತು. ಇದಕ್ಕಾಗಿ ಮೋತಿಚಂದ, ರವೀಂದ್ರಕುಮಾರರವರು ಅಸ್ಸಾಮ್ ಗೋಹಾಟಿ, ಕಲ್ಕತ್ತಾ ಮುಂತಾದ ಕಡೆಗೆ ಪ್ರಚಾರ-ಪ್ರಸಾರ ಹಾಗೂ ವ್ಯವಸ್ಥೆಗಳಿಗಾಗಿ ಹೊರಟಿದ್ದರು. ಶ್ರಾವಕರ ತನು-ಮನ-ಧನಗಳ ಸಹಯೋಗ ಬಹಳ ಬೇಕಾಗಿತ್ತು.

ಇಂಜಿನಿಯರಗಳ ಸಲಹೆಯಂತೆ ಆಫೀಸ್ ಕಡೆಯಿಂದ ಸುದರ್ಶನ ಮೇರುವಿನ ಪಾಂಡುಕ ಶಿಲೆಯವರೆಗೆ ಪೈಪ್‌ಗಳ ಮೆಟ್ಟಿಲನ್ನು ನಿರ್ಮಿಸಲಾಗಿತ್ತು. ಇದರಿಂದ ಶ್ರಾವಕ-ಶ್ರಾವಕಿಯರು 1008 ಕಳಸವನ್ನು ತೆಗೆದುಕೊಂಡು ಹೋಗಿ ಅಭಿಷೇಕ ಮಾಡುವ ಕಲ್ಪನೆಯೇ ಅದ್ಭುತವಾಗಿತ್ತು. ಹಾಗೇ ಸಮಾಪನ್ನದ ದಿನ 'ಗಜರಥ ಮಹೋತ್ಸವ' ಉತ್ತರ ಪ್ರಾಂತ್ಯದಲ್ಲಿಯೇ ಮೊದಲ ಬಾರಿ ನಡೆಯುತ್ತಿತ್ತು. ಇದರ ಪ್ರತಿಷ್ಠಾ ಗಜರಥದ ಮಹೋತ್ಸವದ ಬಗ್ಗೆ ರೇಡಿಯೋನಲ್ಲಿಯು ಪ್ರಸಾರವಾಯಿತು.

ಸುದರ್ಶನ ಮೇರು ಪರ್ವತದಲ್ಲಿ ಬಹಳ ಚೆನ್ನಾಗಿರುವ ಹಳದಿ ಅಮೃತಶಿಲೆಯನ್ನು ಹಾಕಿಸಲಾಗಿತ್ತು. ಕೆಲಸಗಳು ಬಹಳ ಬೇಗನೆ ನಡೆಯುತ್ತಿತ್ತು. ಹದಿನಾರು ವೇದಿಕೆಗಳಿದ್ದವು. ನಾನು ದೆಹಲಿಯ ದರಿಯಾಗಂಜನಿಂದ ಸಮಯಕ್ಕೆ ಸರಿಯಾಗಿ ಹಸ್ತಿನಾಪುರ ತಲುಪಿದೆ.

ಜಂಬೂದ್ವೀಪಕ್ಕೆ ಆಗಮನ

ನನಗೆ ದೊಡ್ಡಮಂದಿರದಲ್ಲಿ ಇಳಿದುಕೊಳ್ಳುವ ಆಸೆ ಇರಲಿಲ್ಲ. ಅಲ್ಲದೆ ಪ್ರತಿಷ್ಠಾ ಸಮಯದಲ್ಲಿ ಇಲ್ಲಿಗೆ ಹೋಗಿಬರುವುದು ಕೂಡ ತೊಂದರೆಯ ಕೆಲಸವಾಗುತ್ತಿತ್ತು. ಜಿನೇಂದ್ರ ಪ್ರಸಾದ ಠಕೇದಾರ ಅವರುಗಳು ಸೇರಿಕೊಂಡು

ಮಹಾವೀರ ಮಂದಿರದ ಹತ್ತಿರದಲ್ಲೇ ಹುಲ್ಲಿನ (ಎರಡು) ಮಾಡಿನ ಎರಡು ಗುಡಿಸಲುಗಳನ್ನು ಸಿದ್ಧಗೊಳಿಸಿದ್ದರು. ನಾನು ದೆಹಲಿಯಿಂದ ಬಂದವಳೇ ದೊಡ್ಡ ಮಂದಿರಕ್ಕೆ ಹೋಗಿ ದರ್ಶನಮಾಡಿ ಸೀದಾ ಇಲ್ಲಿಗೆ ಬಂದೆವು. ಕ್ಷೇತ್ರ ಕಮಿಟಿಯವರು ಬಂದು ಅಲ್ಲೇ ನಿಲ್ಲಲು ಆಗ್ರಹ ಪಡಿಸಿದರು. ಆದರೆ ಓಡಾಡುವ ಸಮಸ್ಯೆಯಿಂದ ಅಲ್ಲಿಗೆ ಹೋಗಲಿಲ್ಲ. ಪ್ರತಿಷ್ಠೆಯ ಹೊತ್ತಿಗೆ ಉಮ್ಮೇದಮಲ್ ಪಾಂಡ್ಯರವರ ಪ್ಲಾಟ್ ಸಿದ್ಧವಾದ್ದರಿಂದ ಅಲ್ಲಿ ವಾಸ್ತವ್ಯ ಹೂಡಿದೆವು. ಈಗ ಜಂಬೂದ್ವೀಪದ ಆಫೀಸ್ ಆಗಿರುವ ಪಕ್ಕದ್ದೆ ಅದು.

ಪಂಚಕಲ್ಯಾಣಕ ಪ್ರತಿಷ್ಠೆ

ವೈಶಾಖ ಮಾಸದ ಸಪ್ತಮಿ 11-4-1979ರಂದು ಧ್ವಜಾರೋಹಣವಾಯಿತು. ಮುಜಫರ್ ನಗರದ ಶ್ರೀ ಭಾಗಚಂದವರು ನೆರವೇರಿಸಿದರು. 13ರಂದು ಅಂಕುರಾರೋಹಣ, 25ರಂದು ರಥಯಾತ್ರೆ (ಮಹೋತ್ಸವ)ಯಲ್ಲಿ ತಂದು ಜಿನೇಶ್ವರರ ಪ್ರತಿಮೆಯನ್ನು ಪೆಂಡಾಲಿನ ವೇದಿಕೆಯ ಮೇಲೆ ವಿರಾಜಮಾನ ಮಾಡಲಾಯಿತು. ಪೆಂಡಾಲಿನಲ್ಲೇ ನವದೇವತೆಗಳ ಆರಾಧನೆ. ಹಾಗೆ ಜಾಪ್ಯಾನುಷ್ಠಾನವು ಪ್ರಾರಂಭವಾಯಿತು.

ಆಚಾರ್ಯಕಲ್ಪ ಶ್ರೇಯಾಂಸ ಸಾಗರರ ಆಗಮನ

ವೈಶಾಖ ಶುಕ್ಲ ಪಾಡ್ಯ27 ಏಪ್ರಿಲ್‌ಗೆ ಅಹಿಚ್ಛತ್ರದಿಂದ ವಿಹಾರ ಮಾಡುತ್ತಾ ಶ್ರೇಯಾಂಸ ಸಾಗರರು ಸಂಘಸಹಿತ ಹಸ್ತಿನಾಪುರಕ್ಕೆ ಆಗಮಿಸಿದರು. ನಾನು ಮೈಲಿ ದೂರದಿಂದಲೇ ಅವರನ್ನು ಸ್ವಾಗತಿಸಿದೆ. ಅವರ ಆಗಮನ ಒಂದು ಸಂತೋಷದ ವಾತಾವರಣವನ್ನು ಉಂಟುಮಾಡಿತು. ವೈಶಾಖ ಶುದ್ಧ ದ್ವಿತೀಯದ ದಿನ ಜಲಯಾತ್ರೆ ನಡೆದು ಸುದರ್ಶನ ಮೇರುವಿನ ಹದಿನಾರು ಚೈತ್ಯಾಲಯಗಳ ವೇದಿಕೆಗಳು ಶುದ್ಧವಾದವು. ಸುದರ್ಶನ ಮೇರುವಿನಲ್ಲಿ ಹದಿನಾರು ಸಿದ್ಧಪರಮೇಷ್ಠಿಗಳದೇ ಪ್ರತಿಷ್ಠೆ. ಏಕೆಂದರೆ ಅಕೃತ್ರಿಮ ಜಿನಾಲಯದಲ್ಲಿ ಚಿಹ್ನೆ ಇಲ್ಲದೆ ಇರುವುದರಿಂದ ಎಲ್ಲವೂ ಸಿದ್ಧಪರಮೇಷ್ಠಿಗಳದೇ ಬಿಂಬಗಳು ಹಾಗೇ ವಿಧಿನಾಯಕ ಶಾಂತಿನಾಥರ ಪಂಚಕಲ್ಯಾಣಕ ಪ್ರತಿಷ್ಠೆ ನಡೆಯುತ್ತಿತ್ತು.

ವೈಶಾಖ ಶುಕ್ಲ ಪಕ್ಷದ ತೃತೀಯ ರವಿವಾರ ಅಂದರೆ 29-4-1979ರಂದು ಉತ್ತರ ಪ್ರದೇಶದ ಮಂತ್ರಿಗಳಾದ ರೇವತಿರಮಣರು ಮೇಳದ ಉದ್ಘಾಟನೆ ಮಾಡಿದರು. ರಾತ್ರಿಯಲ್ಲಿ ಪೆಂಡಾಲದಲ್ಲಿ ಇಂದ್ರರ ಸಂವಾದ ಕಾರ್ಯವಿತ್ತು. ಈ ಪ್ರತಿಷ್ಠೆಯಲ್ಲಿ ಕಲಕತ್ತೆಯ ಹರಕಚಂದರು ಸೌಧರ್ಮ ಇಂದ್ರರಾಗುವ ಭಾಗ್ಯ ಪಡೆದರು. ಹೀಗೆ 12 ಇಂದ್ರ ಮತ್ತು ಕುಬೇರರ ಸಂವಾದವಿತ್ತು.

ಕಲಕತ್ತೆಯ ಶ್ರೀಪುಷ್ಪರಾಜಜೀ ಅಗ್ರವಾಲಜೈನ ಮತ್ತು ಅವರ ಹೆಂಡತಿ ಭ. ಶಾಂತಿನಾಥರ ತಂದೆತಾಯಿಯವರಾದ ವಿಶ್ವಸೇನ ಮತ್ತು ಐರಾದೇವಿಯರಾದರು. ಗರ್ಭಕಲ್ಯಾಣದ ಪೂರ್ವವಿಧಿಗಳನ್ನು ವೇದಿಕೆಯ ಮೇಲೆ ಪ್ರದರ್ಶಿಸಲಾಯಿತು. ಏಪ್ರಿಲ್ 30ರಂದು ಬೆಳಗ್ಗೆ ಭಗವಂತರ ಜನ್ಮಾಭಿಷೇಕದ ಭವ್ಯವಾದ ಮೆರವಣಿಗೆ ಹೊರಟಿತು. ಆನಂತರ ತಾರಾಪುರ ಎಂಡ ಕಂಡನಿ ಮದ್ರಾಸನವರ ಸೌಜನ್ಯದಿಂದ ಇಂಜಿನಿಯರವರ ಮಾರ್ಗದರ್ಶನ, ದೆಹಲಿಯ ನರೇಶಕುಮಾರ ಬಂಸಲರ ಪ್ರಯತ್ನದಿಂದಾಗಿ ಪೈಪಿನಿಂದ ಸುಂದರವಾದ ಮೆಟ್ಟಿಲುಗಳನ್ನು ಹಾಕಲಾಗಿತ್ತು. ಇದರಿಂದ ಹತ್ತಿಕೊಂಡು ಸಾವಿರಾರು ಇಂದ್ರ ಇಂದ್ರಾಣಿಯರು 1008 ಕಳಸಗಳಿಂದ ಭಗವಾನ ಶಾಂತಿನಾಥರಿಗೆ ಜಿನಾಭಿಷೇಕ ಮಾಡಿದರು.

ಈ ಸಂದರ್ಭದಲ್ಲಿ ದೊಡ್ಡ ಮಂದಿರದ ಜನರು ಮೈಕಿನಲ್ಲೇ ಹೆಂಗಸರು ಅಭಿಷೇಕ ಮಾಡುವುದನ್ನು ವಿರೋಧಿಸ ತೊಡಗಿದರು. ಯಾವ ಸ್ತ್ರೀಯರು ಭಗವಂತನಿಗೆ ಅಭಿಷೇಕ ಮಾಡುತ್ತಾರೋ ಅವರು ದುರ್ಗತಿಯನ್ನು ಹೊಂದುತ್ತಾರೆಂದು ಅವರ ವಿರೋಧ ನಮ್ಮಗಳ ಮೇಲೇನೂ ಪ್ರಭಾವ ಬೀರಲಿಲ್ಲ. ನಾವು ಆಚಾರ್ಯ ಶಾಂತಿಸಾಗರರ ಪರಂಪರೆಯಲ್ಲಿ ದೃಢವಾಗಿರುವವರು ಎಲ್ಲ ಕೆಲಸವನ್ನು ಆಗಮಾನಾಕೂಲವಾಗಿಯೇ ಮಾಡುತ್ತಿದ್ದೇವೆ. ನಾವು ದೃಢತೆಯಿಂದ ಜನರಿಗೆ ಸಮಾಧಾನ ಮಾಡುತ್ತಿದ್ದೆವು. ಎರಡನೆಯದಾಗಿ 1975ರಲ್ಲಿಯೇ ಮೇರಠನ ಸುಕುಮಾರಚಂದ್ ಮೊದಲಾದವರ ಉಪಸ್ಥಿತಿಯಲ್ಲೇ ಜಂಬೂದ್ವೀಪದಲ್ಲಿ ತೇರಹಪಂಥ ಮತ್ತು ಬೀಸಪಂಥದವರಿಗೆ ಅವರ ಪದ್ಧತಿಯಂತೆಯೆ ಪೂಜೆ ಮಾಡಲು ಅವಕಾಶ ಕಲ್ಪಿಸಿಕೊಡಲಾಗಿತ್ತು.

ಸ್ತ್ರೀಯರಿಂದ ಜಿನಾಭಿಷೇಕಕ್ಕೆ ಪ್ರಮಾಣ

ಅಲ್ಲಿ ಅದಕ್ಕೆ ಆಗಮ ಪ್ರಮಾಣ ನೋಡ ಬಯಸುವವರಿಗಾಗಿ, ಆಗಮ ಪ್ರಮಾಣವನ್ನು ತೋರಿಸಲಾಯಿತು.

ತತಃ ಸುರಪತಿಸ್ತ್ರೀಯೋ ಜಿನಮುಪೇತ್ಯ ಶಚ್ಯಾದಯಃ
ಸುಗಂಧಿತನುಪೂರ್ವಕೈರ್ಮ್ಯದು ಕರಾಃ ಸಮುದ್ವರ್ತನಮ್॥
ಪ್ರಚಕ್ರುರಾಭಿಷೇಚನಂ ಶುಭಪಯೋಭರುಚ್ಚೈ ರ್ಘಟೈಃ
ಪಯೋಧರಭರೈರ್ನಿಜೈರಿವ ಸಮಂ ಸಮಾವರ್ಜಿತೈಃ ॥54॥

ಶಚಿ ಮುಂತಾದ ಇಂದ್ರಾಣಿಯರು ಜಿನೇಂದ್ರದೇವನ ಕೋಮಲ ಶರೀರವನ್ನುನೀವಿ ಶುಭಜಲದಿಂದ ಕಳಸಗಳಿಂದ ಜನ್ಮಾಭಿಷೇಕವನ್ನು ಮಾಡಿದರು.

ಇನ್ನೊಂದು ಪ್ರಮಾಣ

ಅಥೈಕದಾ ಸುತಾ ಸಾ ಚ ಸುಧೀಃ ಮದನ ಸುಂದರೀ ।
ಕೃತ್ವಾ ಪಂಚಾಮೃತೈಃ ಸ್ನಾನಂ ಜಿನಾನಾಂ ಸುಖಕೋಟಿದಮ್॥[೧]

ಒಮ್ಮೆ ಮೈನಾಸುಂದರಿಯು ಜಿನೇಂದ್ರದೇವನ ಕೋಟಿ ಸುಖಗಳನ್ನು ಕೊಡುವಂತಹ ಇಂತಹ ಪಂಚಾಮೃತ ಅಭಿಷೇಕವನ್ನು ಮಾಡಿದಳು ಹೀದೆ ಆಗಮದಲ್ಲಿ ಸ್ತ್ರೀಯರು ಜನ್ಮಾಭಿಷೇಕ ಮಾಡಿದ ಅನೇಕ ಪ್ರಮಾಣಗಳು ದೊರೆಯುತ್ತವೆ. ನಿಷೇಧವು ಎಲ್ಲಿಯು ಕಂಡುಬಂದಿಲ್ಲ. ಇಂದಿಗೂ ಕೂಡ ದಕ್ಷಿಣದಲ್ಲಿ, ಮಹಾರಾಷ್ಟ್ರದಲ್ಲಿ ಎಲ್ಲಾ ಕಡೆಯು ಸ್ತ್ರೀಯರಿಂದಲೇ ಅಭಿಷೇಕದ ಪರಂಪರೆಯು ನಡೆಯುತ್ತಾ ಬಂದಿದೆ. ಶಿಖರಚಂದಜೈನ, ರಾನಿಮಿಲ ರವರು ಪ್ರತಿಷ್ಠೆಯ ವಿಧಿ ವಿಧಾನಗಳನ್ನು ನೋಡಿಕೊಳ್ಳುತ್ತಿದ್ದರು.

ಮಂದಿರ ಮಾರ್ಗಿಗಳು ಮಾಡುತ್ತಿದ್ದ ಮೈಕಿನ ಸೂಚನೆಗಳನ್ನು ಕೇಳಿದ ಜನರಿಗೆ ಇದು ಬಹಳ ಮುಜುಗರ ತಂದಿತು. ಅದಕ್ಕೆ ಅವರು ಈ ಜನರು 1981ಲ್ಲಿ ಶ್ರವಣಬೆಳಗೊಳದಲ್ಲಿ ನಡೆಯುವ ಮಹಾಮಸ್ತಕಾಭಿಷೇಕದಲ್ಲಿ ಇವರಿಗೆ ಧೈರ್ಯವಿದ್ದರೆ ಘೋಷಣೆ ಮಾಡಲಿ ಎನ್ನತೊಡಗಿದರು. ನಿಜವಾಗಿ ನೋಡಿದರೆ ಮಂದಿರ ಮಾರ್ಗಿಗಳು ಬಹಳ ಸಣ್ಣ ಬುದ್ಧಿಯವರಾಗಿದ್ದಾರೆ.

---

೧. ಬೃಹನ್ನೇಮಿಚಂದ್ರಕೃತ ಶ್ರೀಪಾಲ ಚರಿತೆ.

ಇನ್ನೊಂದು ಆಶ್ಚರ್ಯವೆಂದರೆ ಈ ಜನರು ದೇವಸ್ಥಾನದ ಪ್ರಾಂಗಣದಲ್ಲೇ ಮೈಕಿನಲ್ಲಿ ವಿಧವಾ ವಿವಾಹ ಮಾಡಿರಿ, ಯಾರಿಗೆ ಗಂಡ ಬಿಟ್ಟಿದ್ದಾನೆ ಅಂತಹವರಿಗೂ ವಿವಾಹ ಮಾಡಿರಿ. ಅಂತರ್ಜಾತಿಯ ವಿವಾಹಕ್ಕೂ ಮಾನ್ಯತೆಯನ್ನು ಘೋಷಿಸುತ್ತಿದ್ದರು. ಇವರೇ ಜಿನಪ್ರತಿಮೆಗಳಿಗೆ ಹೆಂಗಸರು ಅಭಿಷೇಕ ಮಾಡಿದರೆ ನರಕಕ್ಕೆ ಹೋಗುತ್ತಾರೆ ಎಂದು ಸಾರುತ್ತಿದ್ದರು. ಬಹುಶಃ ಇವರ ಮಾನ್ಯತೆಯಂತೆ ಹೆಂಗಸರು ವಿಧವೆಯಾಗಿ, ಗಂಡಬಿಟ್ಟವಳಾಗಿ ಪುನರ್ವಿವಾಹ ಮಾಡಿಕೊಂಡರೆ ನಿಜವಾಗಿಯೂ ಸ್ವರ್ಗ ಸಿಗುತ್ತಿತ್ತೇನೋ, ನಿಜವಾಗಿಯು ಇದೊಂದು ಕಲಿಕಾಲದ ವಿಡಂಬನೆಯಾಗಿದೆ. ಒಬ್ಬ ಮಹಾನುಭಾವರು ಯಾವ ಹುಡುಗಿಯರೇ ಆಗಲಿ, ಮಹಿಳೆಯರಾಗಲೀ, ಖಡ್ಗಾಸನದ ನಗ್ನ ದಿಗಂಬರ ಜಿನ ಪ್ರತಿಮೆಗೆ ಅಭಿಷೇಕ ಮಾಡಿದರೆ ಶೀಲವ್ರತದ ದೋಷ ಉಂಟಾಗುತ್ತದೆ ಎಂದು ಹೇಳಿದ್ದಾರೆ. ಈ ವಿಷಯ ಕೇಳಿದಾಗ ಮನಸ್ಸಿಗೆ ಮಹಿಳೆಯರು ತೀರ್ಥಂಕರರಿಗೂ, ಮುನಿಗಳಿಗೂ ಆಹಾರ ದಾನ ನೀಡುತ್ತಾರೆ. ಅಥವಾ ನಗ್ನ ಮುನಿಗಳ ದರ್ಶನ ಮಾಡುತ್ತಾರೆ. ಇಂತಹವರಲ್ಲಿ ಚಂದನಬಾಲೆ, ಚೇಳನಾ, ಮೊದಲಾದವರು ನಿರ್ದೋಷಿಗಳು ಹೇಗಾಗುತ್ತಾರೆ. ಆದ್ದರಿಂದ ಇವರಿಗೂ ಶೀಲವ್ರತದ ದೋಷ ತಗುಲಲೇಬೇಕಲ್ಲವೆ.

ನಿಜವಾಗಿ ವಿಚಾರ ಮಾಡಿದರೆ ಮಹಿಳೆಯರು ತೀರ್ಥಂಕರರ ಮೂರ್ತಿಗಳಿಗೆ ಅಭಿಷೇಕ ಮಾಡಿದರೆ, ದರ್ಶನ ಮಾಡಿದರೆ, ದಾನ ಮಾಡಿದರೆ, ಇದರ ಪರಿಣಾಮ ಬ್ರಹ್ಮಚರ್ಯದಿಂದ ಚ್ಯುತರಾಗುವುದಾಗಲಿ ಅವರ ಮನದಲ್ಲಿ ವಿಕಾರ ಉಂಟಾಗುವುದಾಗಲಿ ಇದು ಎಂದಿಗೂ ಅಸಂಭವ.

ಪದ್ಮಪುರಾಣದಲ್ಲಿ ಸತೀ ಸೀತೆಯು ಮಹಾಮುನಿಗಳ ಚರಣಗಳನ್ನು ಪ್ರಕ್ಷಾಲನ ಮಾಡಿದ್ದಳು.

ಅಥೋದ್ವರ್ತ್ಯ ಚಿರಂ ಪಾದೌ ತಯೋರ್ನಿರ್ಝರವಾರಿಣಾ !
ಗಂಧೇನ ಸೀತಯಾ ಲಿಪ್ತೌ ಚಾರುಣಾ ಪುರುಭಾವಯಾ ॥೪೪॥
ಆಸನ್ನಾನಾಂ ಚ ವಲ್ಲೀನಾಂ ಕುಸುಮೈರ್ವನ ಸೌರಭೈಃ ।
ಲಕ್ಷ್ಮೀಧಾರಾರ್ಪಿತೈಃ ಶುಕ್ಲೈಃ ಪೂರಿತಾಂತರಮರ್ಚಿತೌ ॥೪೫॥
ತತಸ್ತೈ ಕರುಯುಗ್ಮಾಬ್ಜಮುಕುಲಭ್ರಾಜತಾಲಿಕಾಃ ।
ಚಕ್ರುರ್ಯೌಗೀಶ್ವರೀಂ ಭಕ್ತ್ಯಾ ವಂದನಾಂ ವಿಧಿಕೋವಿದಾಃ ॥೪೬॥
ವೀಣಾಂ ಚ ಸನಿಧಾಯಾಂಕೇ ವಧೂಮಿವ ಮನೋಹರಾಮ್ ।
ಪದ್ಮೋವಾದಯದತ್ಯುದ್ಧಂ ಗಾಯನ್ ಸುಮ ಧುರಾಕ್ಷರಮ್ ॥೪೭॥

ಆನಂತರ ಭಕ್ತಿ ತುಂಬಿದ ಸೀತೆಯು ನಿರ್ಜರ ಜಲದಿಂದ ಬಹಳ ಹೊತ್ತಿನವರೆಗೂ ಮುನಿಗಳ ಕಾಲು ತೊಳೆದು ಮನೋಹರವಾದ ಗಂಧವನ್ನು ಹಚ್ಚಿದರು. ಈ ಗಂಧದಿಂದ ವನವೇ ಸುಗಂಧಿತವಾಯಿತು. ಲಕ್ಷ್ಮಣನಿಂದ ತರಲ್ಪಟ್ಟ ಪುಷ್ಪದಿಂದ ಚೆನ್ನಾಗಿ ಪೂಜೆ ಮಾಡಿದಳು.

ಹೀಗೆ ಸೀತೆಗೆ ಮುನಿಗಳ ಚರಣ ಸ್ಪರ್ಶದಲ್ಲಿ ದೋಷ ಉಂಟಾಗಿದ್ದೇ ಆದರೆ ಅಗ್ನಿ ಪ್ರವೇಶ ಮಾಡಿದ ಈಕೆಗೆ ಅಗ್ನಿಯು ನೀರಿನಂತೆ ಶೀತಲತೆಯನ್ನು ಉಂಟುಮಾಡುತ್ತಾ ಇರಲಿಲ್ಲ. ಅದೇ ಕ್ಷಣ ಕೇವಲಜ್ಞಾನವು ಉಂಟಾಗುತ್ತಿರಲಿಲ್ಲ.

ಇನ್ನೊಂದು ವಿಷಯವೆಂದರೆ ತೀರ್ಥಂಕರರಂತಹ ಮಹಾಪುರುಷರಿಗೆ ಜನ್ಮಕೊಡುವ ಸೌಭಾಗ್ಯವು ಮಹಿಳೆಯವರಿಗೆ ಸಿಕ್ಕಿದೆ. ಜಿನ ಶಿಶುವನ್ನು ಮೊದಲು ಸ್ಪರ್ಶಮಾಡುವ, ಎತ್ತಿಕೊಳ್ಳುವ ಸೌಭಾಗ್ಯವು ಕೂಡ ಶಚಿ ಇಂದ್ರಾಣಿಗೆ ಸಿಕ್ಕಿದೆ, ಹಾಗೆ ಜಿನಪ್ರತಿಮೆಗೆ ಅಭಿಷೇಕ ಮಾಡುವ ಸೌಭಾಗ್ಯವು ಸಹ ಪ್ರತಿವ್ರತೆ ಅಥವಾ ಬ್ರಹ್ಮಚಾರಿಣಿ ಮಹಿಳೆಯರಿಗೆ ಸಲ್ಲಬೇಕು ಎಂದು. ಆಚಾರ್ಯ ಮಹಾವೀರಕೀರ್ತಿಗಳು ಹೇಳುತ್ತಿದ್ದರು.

त्रिपक्षं शुद्ध्यते सूतीं रजसा पंचवासरं।
अन्यासक्ता च या नारी यावज्जीवं न शुद्ध्यति॥

ಮಗುವಿಗೆ ಜನ್ಮಕೊಡುವ ಮಹಿಳೆಯರು 35 ದಿನಗಳ ನಂತರ ಶುದ್ಧರಾಗುತ್ತಾರೆ. ರಜಸ್ವಲೆಯಾದ ಮಹಿಳೆಯು 5 ದಿನಗಳ ನಂತರ ಶುದ್ಧಳಾಗುತ್ತಾಳೆ. ಅನ್ಯರಲ್ಲಿ ಆಸಕ್ತಳಾದ ಮಹಿಳೆಯು ವ್ಯಭಿಚಾರಿ ಎಂದು ಕರೆಯಲ್ಪಡುತ್ತಾಳೆ. ಈಕೆ ಜೀವನ ಪೂರ್ತಿಯಾಗಿಯು ಶುದ್ಧವಾಗುವುದಿಲ್ಲ. ಅಂತಹ ಮಹಿಳೆಯರಿಗೆ ದೀಕ್ಷೆಕೊಡುವ, ಅಭಿಷೇಕ ಮಾಡುವ ಪೂಜೆ ಮಾಡುವ ಅಥವಾ ಆಹಾರ ದಾನ ಕೊಡುವ ಅಧಿಕಾರವೂ ಸಹ ಇರುವುದಿಲ್ಲ.

ಜನ್ಮಕಲ್ಯಾಣವಾದ ಮೇಲೆ ಶ್ರೀಜಿನಭಗವಂತರನ್ನು ಸಲಹುವ ಬಾಲಕ್ರೀಡೆ, ರಾಜ್ಯಾಭಿಷೇಕ, ವೈರಾಗ್ಯ ಮೊದಲಾದ ಕಾರ್ಯಗಳನ್ನು ತೋರಿಸಲಾಯಿತು. ದೀಕ್ಷಾವಿಧಿಯ ನಂತರ ಸೂರಿಮಂತ್ರ ಮುಂತಾದ ಮುಖ್ಯ ವಿಧಿಗಳು ನಡೆಯಲ್ಪಡುತ್ತವೆ. ಪೂಜ್ಯ ಶ್ರೀ ಶ್ರೇಯಾಂಸ ಸಾಗರರು ಪ್ರತಿಮೆಗಳಿಗೆ ಸೂರಿಮಂತ್ರವನ್ನು ಪ್ರಧಾನ ಮಾಡಿದರು. ವೈಶಾಖ ಶುಕ್ಲ ಷಷ್ಮಿಯಂದು ಕೇವಲ ಜ್ಞಾನ ಕಲ್ಯಾಣದ ಉತ್ಸವವು ನಡೆಯಿತು. ಅದೇ ದಿನ ರಾತ್ರಿ ತ್ರಿಲೋಕ ಶೋಧ ಸಂಸ್ಥಾನದ ಪ್ರಥಮ ಅಧಿವೇಶನವು ನಡೆಯಿತು. ವೈಶಾಖ ಶುದ್ಧ ಸಪ್ತಮಿಯಂದು ಬೆಳಿಗ್ಗೆ ಮೋಕ್ಷ ಕಲ್ಯಾಣದ ವಿಧಿಯ ಆನಂತರ ಭಗವಂತರನ್ನು ವಿರಾಜಮಾನಗೊಳಿಸುವ ಕಾರ್ಯಕ್ರಮವು ಪ್ರಾರಂಭವಾಯಿತು. ಎಲ್ಲರಿಗೂ ಹೆದರಿಕೆಆಗ ತೊಡಗಿತು. ಇಷ್ಟು ದೊಡ್ಡ ಪ್ರತಿಮೆಗಳನ್ನು ಸುಮೇರು ಚೈತ್ಯಾಲಯಗಳಲ್ಲಿ ಹೇಗೆ ಪ್ರತಿಷ್ಠಾಪಿಸುತ್ತಾರೆ ಎಂದು. ಆದರೆ ಎಲ್ಲ 16 ಪ್ರತಿಮೆಗಳನ್ನು ಬಹಳ ಸುಲಭವಾಗಿ ಚೈತ್ಯಾಲಯಗಳಲ್ಲಿ ವಿರಾಜಮಾನಗೊಳಿಸಲಾಗಿದ್ದು, ನೋಡಿ ಜನರು ಆಶ್ಚರ್ಯಚಕಿತರಾದರು. ನಾನು ಎರಡುಮೂರು ಪ್ರತಿಮೆಗಳ ಸ್ಥಾಪನೆಯ ತನಕ ಉಪಸ್ಥಿತಿ ಇದ್ದವಳು ಎದುರಿನ ಫ್ಲಾಟಿನ ಮುಂದೆ ಮಹಾಮಂತ್ರ ಜಪಿಸುತ್ತಾ ಎಲ್ಲಾ ಮೂರ್ತಿಗಳ ಪ್ರತಿಷ್ಠಾಪನೆ ಆಗುವವರೆಗೂ ಧ್ಯಾನದಲ್ಲೇ ನಿರತಳಾಗಿದ್ದೆ.

ಆನಂತರ ಮಧ್ಯಾಹ್ನದಲ್ಲಿ ಗಜರಥ ಮಹೋತ್ಸವ ಜರುಗಿತು. ಈ ಪ್ರಾಂತ್ಯದಲ್ಲಿ ಈ ಮಹೋತ್ಸವ ನಡೆದಿದ್ದು ಬಹಳ ವಿಶೇಷವಾಗಿತ್ತು. ಇದೊಂದು ವಿಶೇಷ ಆಕರ್ಷಣೀಯ ಆಗಿ ಸಾವಿರಾರು ಜನರು ಈ ಶುಭ ಸಂದರ್ಭವನ್ನು ಅತ್ಯಂತ ಭಕ್ತಿಯಿಂದ ನೋಡಿ ಜೀವನವನ್ನು ಸಾರ್ಥಕ ಪಡಿಸಿಕೊಂಡರು.

ಜಂಬೂದ್ವೀಪದಲ್ಲಿ ದೃಶ್ಯಗಳು

ಈ ಪ್ರತಿಷ್ಠೆಯ ವಿಡಿಯೋ ಫಿಲಂನ್ನು ಮಾಡಿಸಲಾಗಿದೆ. ಜೈನ, ಜೈನೇತರರಿಗೆ ಆಕರ್ಷಣೀಯವಾದ 10 ದೃಶ್ಯಗಳನ್ನು ಬಹಳ ಸುಂದರವಾಗಿ ಮಾಡಿಸಲಾಗಿತ್ತು. ಆ ದೃಶ್ಯಗಳನ್ನು ಇಂದಿಗೂ ನೋಡಬಹುದು. ಅವೇ ಮಾತಾಡುತ್ತಿವೆಯೋ ಏನೋ ಎನ್ನುವಂತಿವೆ. ಇದೇ ಕಾರ್ಯಕ್ರಮದಲ್ಲಿ ಅಖಿಲ ಭಾರತೀಯ ದಿಗಂಬರ ಜೈನ ಯುವ ಪರಿಷತ್‌ನ ದ್ವಿತೀಯ ವಾರ್ಷಿಕೋತ್ಸವವನ್ನು ಬಹಳ ಚೆನ್ನಾಗಿ ಆಚರಿಸಲಾಯಿತು.

ಇದೇ ಪ್ರತಿಷ್ಠಾ ಸಮಾರಂಭದಲ್ಲೇ ಭಾರತೀಯ ದಿಗಂಬರ ಜೈನ ಶಾಸ್ತ್ರಿ ಪರಿಷತ್‌ನ ವಿಚಾರ ಸಂಕಿರಣವು ನಡೆಯಿತು. ಇದರಲ್ಲಿ 40 ಜನ ವಿದ್ವಾಂಸರು ಆಗಮಿಸಿದ್ದರು. ಇದೇ ಸಂದರ್ಭದಲ್ಲಿ "ಆಚಾರ್ಯ ಶ್ರೀ ವೀರಸಾಗರ ಸಂಸ್ಕೃತ ವಿದ್ಯಾಪೀಠ"ದ ಸ್ಥಾಪನೆಯೂ ಆಯಿತು. ಬ್ರ. ಕಪಿಲ ಕೋಠಡಿಯಾ ರವರು ಸೂರ್ಯಕಾಂತ ಕೋಠಡಿಯ ಎಂಬ ಹೆಸರಿನ ಒಬ್ಬ ಬಾಲ ಬ್ರಹ್ಮಚಾರಿ ವಿದ್ಯಾರ್ಥಿಯನ್ನು ಈ ವಿದ್ಯಾಪೀಠದ ಪ್ರಥಮ ವಿದ್ಯಾರ್ಥಿಯನ್ನಾಗಿ

ನೀಡಿದರು. 1978ರ ಪ್ರಶಿಕ್ಷಣ ಶಿಬಿರಕ್ಕೆ ಬಂದಿದ್ದ ಆಗ್ರಾದ ವಿದ್ವಾಂಸ ಶ್ರೀ ಸಾಹಿತ್ಯಾಚಾರ್ಯ ಗಣೇಶಲಾಲ ರವರನ್ನೇ ಈ ವಿದ್ಯಾಪೀಠದ ಪ್ರಥಮ ಆಚಾರ್ಯರನ್ನಾಗಿ ನೇಮಿಸಲಾಯಿತು. ಮುಂದೆ ಶ್ರಾವಣ ಕೃಷ್ಣ ಪಾಡ್ಯದ ದಿನ ವೀರಶಾಸನ ಜಯಂತಿಯಿಂದ ವಿಧಿವತ್ತಾಗಿ ಈ ವಿದ್ಯಾಪೀಠವನ್ನು ನಡೆಸಲಾಯಿತು.

ಸಿದ್ಧ ಪ್ರತಿಮೆ ಹಾಗೂ ಜಿನ ಪ್ರತಿಮೆ

ಸುದರ್ಶನ ಮೇರು ಪರ್ವತದಲ್ಲಿ 16 ಸಿದ್ಧ ಪ್ರತಿಮೆಗಳ ಪ್ರತಿಷ್ಠೆಯಾಯಿತು. ಮೇಲಿನ ಪಾಂಡುಕ ಶಿಲೆಯ ಮೇಲೆ ಭಗವಾನ ಶಾಂತಿನಾಥ, ನೀಮಂಧರ, ಸುಬಾಹು ಮತ್ತು ವೀರಸೇನ ಸ್ವಾಮಿಗಳ ಧಾತುವಿನ ಪ್ರತಿಮೆಗಳನ್ನು ಪ್ರತಿಷ್ಠಾಪಿಸಲಾಗಿತ್ತು. ಭ. ಬಾಹುಬಲಿಯ 6 ಅಡಿಯ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಯಿತು. ಭಗವಾನ ಶಾಂತಿನಾಥ, ಕುಂಥನಾಥ ಮತ್ತು ಅರಹನಾಥ ಹೀಗೆ ಖಡ್ಗಾಸನದ 31/2 ಅಡಿಯ ಮತ್ತು 3-3 ಅಡಿಯ ಪ್ರತಿಮೆಗಳನ್ನು ಹಾಗೂ ವಿಧಿನಾಯಕ ಭ. ಶಾಂತಿನಾಥರ 9 ಇಂಚಿನ ಜಿನಪ್ರತಿಮೆಗಳು ಜಂಬೂದ್ವೀಪದ ಸ್ಥಳದಲ್ಲಿ ವಿರಾಜಮಾನವಾಗಿವೆ. ಬೇರೆ ಬೇರೆ ಕಡೆಯಿಂದ ಜಿನ ಪ್ರತಿಮೆಗಳನ್ನು ತಂದಿದ್ದು, ಪ್ರತಿಷ್ಠಾ ಸಮಾರಂಭದಲ್ಲಿ ಇಡಿಸಿ ಭಕ್ತಿಯಿಂದ ತಮ್ಮ ತಮ್ಮ ಮನೆಗೆ ತೆಗೆದುಕೊಂಡು ಹೋದರು.

ಪ್ರತಿಷ್ಠಾ ಮಹೋತ್ಸವ ನಿರ್ವಿಘ್ನವಾಗಿ ನೆರವೇರಿದ್ದು ಮನಸ್ಸಿಗೆ ಬಹಳ ಸಂತೃಪ್ತಿಯನ್ನು ತಂದುಕೊಟ್ಟಿತ್ತು. ನಂತರ ಮೋರಿಗೇಟಿನ ದೆಹಲಿ ಸಮಾಜ ವಿಶೇಷವಾಗಿ, ಶಾಂತಿಬಾಯಿ ಮೊದಲಾದ ಮಹಿಳಾ ಸಮಾಜದವರು ಬಹಳ ಆಗ್ರಹ ಪಡಿಸಿದ್ದರಿಂದ ರತ್ನಮತೀಯವರಿಗೆ ಸ್ವಲ್ಪವು ಮನಸ್ಸಿಲ್ಲದಿದ್ದರೂ ಅವರನ್ನು ಜೊತೆಯಲ್ಲಿಯೇ ಕರೆದುಕೊಂಡು ಚೇಷ್ಮಮಾಸದ ಬಿಸಿಲಲ್ಲೇ ದೆಹಲಿಯ ಕಡೆಗೆ ಹೊರಟೆವು.

ಮೋರಿಗೇಟಿನ ಧರ್ಮಶಾಲೆಯಲ್ಲಿ ನಾನು ಆರ್ಯಿಕ ರತ್ನಮತೀ ಮಾತಾಜೀ, ಶಿವಮತೀ ಮಾತಾಜೀಯವರ ಜೊತೆ 1979ರ ಜುಲೈ 8ರಂದು ಆಷಾಢ ಶುಕ್ಲ ಚತುರ್ದಶಿಯಂದು ಚಾತುರ್ಮಾಸದ ಸ್ಥಾಪನೆಯನ್ನು ಮಾಡಿದೆವು. ಬೆಳಗಿನ ಹೊತ್ತಿನ ಉಪದೇಶದಿಂದ ಹೆಚ್ಚಿನ ಪ್ರಭಾವನೆ ಆಗುತ್ತಿತ್ತು. ಶ್ರಾವಣ ಶುಕ್ಲ ಸಪ್ತಮಿಯಂದು ದೆಹಲಿಯ ಸಬ್ಜಿಮಂಡಿಯ ಜನರ ಒತ್ತಾಯದಿಂದ ನಿರ್ವಾಣ ಲಾಡುವಿನ ಉತ್ಸವದಲ್ಲಿ ನನ್ನ ಪ್ರವಚನ ಇಡಿಸಿದ್ದರು. ಅಲ್ಲಿಗೆ ಆ. ಮಲ್ಲಿಸಾಗರರು ಆಗಮಿಸಿದ್ದರು.

೭೩

ಇಂದ್ರಧ್ವಜ ವಿಧಾನ

ದಶಲಕ್ಷಣ ಪರ್ವದಲ್ಲಿ ಮಹಿಳೆಯರೇ ಧೈರ್ಯವಹಿಸಿ ಇಂದ್ರಧ್ವಜ ಆರಾಧನೆಯನ್ನು ಏರ್ಪಡಿಸಿದ್ದರು. ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹೆಂಗಸರು-ಗಂಡಸರು ಭಾಗವಹಿಸಿದ್ದರು. ಸಂಪೂರ್ಣ ಜವಾಬ್ದಾರಿಯನ್ನು ರವೀಂದ್ರನೇ ವಹಿಸಿಕೊಂಡಿದ್ದನು. ಕುಮಾರಿಯರಾದ ಮಾಲತೀ, ಮಾಧುರಿ, ಮಂಜು ಮೊದಲಾದವರು ಆರಾಧನೆಯ ಪೂಜೆ ವಿಧಾನಗಳನ್ನು ಮಧುರ ಕಂಠದಿಂದ ಓದುತ್ತಿದ್ದರು. ಇವನ್ನು ಆಲಿಸಿದ ಭಕ್ತಗಣ ಮತ್ತು ದರ್ಶಕಗಣವು ಭಾವಾವೇಶ ಪೂರಿತರಾಗಿದ್ದರು. ಈ ಆರಾಧನೆಯು 27-8-79 ರಿಂದ 8-9-1979ರ ವರೆಗೆ ನಡೆಯಿತು. ಇದರಿಂದ ಒಳ್ಳೆಯ ಧರ್ಮ ಪ್ರಭಾವನೆ ಉಂಟಾಯಿತು. ಇದು ದೆಹಲಿಯಲ್ಲಿ ನಡೆದ ಪ್ರಥಮ ಆರಾಧನೆಯಾದ್ದರಿಂದ ದೆಹಲಿಯ ಮೂಲೆ-ಮೂಲೆಯಿಂದ ಜನರು ಬಂದು ಭಾಗವಹಿಸಿದ್ದರು.

ಹಸ್ತಿನಾಪುರದಲ್ಲಿ ಪ್ರತಿಮೆಗಳು

1979ರ ಜುಲೈ 20ರಂದು ರಾತ್ರಿಯಲ್ಲಿ ನಶಿಯಾದಲ್ಲಿ ಕಾಲುವೆಗಾಗಿ ಹಳ್ಳ ತೋಡುವಾಗ ಜೈನ ಪ್ರತಿಮೆಗಳು ದೊರೆತ ಸಮಾಚಾರ ಕೇಳಿ ಜೈನ ಸಮಾಜದಲ್ಲಿ ಹರ್ಷ ಉಂಟಾಯಿತು. ಆ ಮೂರ್ತಿಗಳಲ್ಲಿ ಭ. ಶಾಂತಿನಾಥ, ಅರಹನಾಥ ಮೂರ್ತಿಗಳು ಮತ್ತು ಒಂದು ಅಂಬಿಕಾ ದೇವಿಯದಾಗಿತ್ತು. ದೇವಿಯ ತಲೆಯ ಮೇಲೆ ಭ. ನೇಮಿನಾಥರ ಬಿಂಬವಿತ್ತು. ಈ ಮೂರು ಪ್ರತಿಮೆಗಳನ್ನು ದೊಡ್ಡ ಮಂದಿರದಲ್ಲಿ ವೇದಿಕೆ ನಿರ್ಮಿಸಿ ಪ್ರತಿಷ್ಠಾಪಿಸಲಾಯಿತು. ಅಂಬಿಕಾ ಪ್ರತಿಮೆಯ ಬಗ್ಗೆ ಮಂದಿರ ಮಾರ್ಗಿ ಮತ್ತು ತೇರಹ ಪಂಥಿಗಳ ನಡುವೆ ಮತಭೇದ ಉಂಟಾಗಿ ಆ ಜನರು ಅಂಬಿಕಾದೇವಿಯ ಪ್ರತಿಮೆಯನ್ನು ಮಂದಿರದ ಪರಿಸರದ ಒಂದು ಮೂಲೆಯ ಕೊಠಡಿಯಲ್ಲಿ ಇಡಿಸಿದರು. ಇದನ್ನು ದೇವಿಯ ಭಕ್ತರು ವಿರೋಧಿಸಿದರು. ಅವರಂತು ಈ ಅಂಬಿಕಾ ದೇವಿಯನ್ನು ಹೀಗೆ ಇಲ್ಲಿ ಇಡುವ ಬದಲು ಮಹಾವೀರಜೀಗೊ ಅಥವಾ ಜಂಬೂದ್ವೀಪಕ್ಕೊ ಕಳುಹಿಸಿಕೊಡಿ, ಹೀಗೆ ಕೊಠಡಿಯಲ್ಲಿ ಬಂಧಿಸಿ ಇಡಬೇಡಿ.

ಆದರೆ ಇಂದು ಅದೇ ಕೊಠಡಿಯಲ್ಲಿ ದೇವಿಯು ವಿರಾಜಮಾನಳಾಗಿದ್ದಾಳೆ. ಅಲ್ಲಿಯ ಭಕ್ತಗಣವು ಪೂಜೆ, ಆರತಿಯನ್ನು ಮಾಡುತ್ತಿದ್ದಾರೆ. ಮೊನ್ನೆ ನೋಡಿದಾಗ ದೇವಿಯ ತಲೆಯ ಮೇಲೆ ಚಿನ್ನದ ಛತ್ರಿಯನ್ನು ಹಾಕಲಾಗಿತ್ತು. ನಿಜವಾಗಿ ನೋಡಿದರೆ ಇಂದು ತೇರಹಪಂಥಿಗಳಲ್ಲಿ ಶಾಸನದೇವಿಯ ಭಕ್ತರು ಕಡಿಮೆಇಲ್ಲ ಹಾಗೆ ಶಾಸನದೇವ-ದೇವಿ ದಿಕ್ಪಾಲಕರು ಕ್ಷೇತ್ರಪಾಲ ಮೊದಲಾದವರ ಪೂಜೆಯ ಪ್ರಮಾಣ ಆಗಮದಲ್ಲಿ ಇದೆ ಎಂದು ತಿಳಿಯಬೇಕು.

ಪ್ರಶಿಕ್ಷಣ ಶಿಬಿರಗಳು

ಈ ವರ್ಷವು ಆಶ್ವಿಜದಲ್ಲಿ ಶಿಕ್ಷಣ ಶಿಬಿರಗಳನ್ನು ಏರ್ಪಡಿಸಬೇಕೆಂದು ತೀರ್ಮಾನಿಸಲಾಗಿತ್ತು. ಮೋರಿಗೇಟನಲ್ಲಿ ಜಾಗ ಚಿಕ್ಕದಾದ್ದರಿಂದ ದರಿಯಾಗಂಜಿನ ಬಾಲಾಶ್ರಮದಲ್ಲಿ ಅನುಮತಿ ಬೇಕಾಗಿತ್ತು. ಒಂದು ದಿನ ಮೋರಿಗೇಟನ ಮಂದಿರದಲ್ಲಿ ರಮೇಶಚಂದಜೈನ ಪಿ. ಎಸ್. ಮೋಟಾರನವರು ದರ್ಶನಕ್ಕೆ ಬಂದವರು ತಮ್ಮ ಪರಿಚಯವನ್ನು ಮಾಡಿಕೊಂಡು ತಾವು ನಮಗೆ ಆಜ್ಞೆ ಕೊಡಬೇಕೆಂದು ಕೇಳಿಕೊಂಡರು. ಆಗ ಪ್ರಶಿಕ್ಷಣ ಶಿಬಿರಕ್ಕಾಗಿ ಬಾಲಾಶ್ರಮದಲ್ಲಿ ಅವಕಾಶ ನೀಡಬೇಕೆಂದೆ. ಅವರು ಫೋನ್ ಮಾಡಿಯೇ ಅಲ್ಲಿಗೆ ಸೂಚನೆಗಳನ್ನು ಕೊಟ್ಟರು. ಸೆಪ್ಟೆಂಬರ್ 23 ರಿಂದ 30ರವರೆಗೆ ದರಿಯಾಗಂಜಿನ ಬಾಲಾಶ್ರಮದಲ್ಲಿ ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನ ಹಸ್ತಿನಾಪುರ ಹಾಗೂ ಸಿದ್ಧಾಂತ ಸಂರಕ್ಷಣ ಸಭೆಯ ತತ್ತ್ವಾವಧಾನದಲ್ಲಿ ಎರಡನೆಯ ಶಿಬಿರವು ಅತ್ಯಂತ ವ್ಯವಸ್ಥಿತವಾಗಿ ಆಯಿತು. ಇದರಲ್ಲಿ ಪ್ರೊ. ಮೋತಿಲಾಲ ಕೊಠಾರೀಯವರನ್ನು ಕುಲಪತಿಗಳನ್ನಾಗಿ ನೇಮಿಸಲಾಯಿತು. ವಿದ್ವತ್ ಪರಿಷದ್‌ನ ವಿದ್ವಾಂಸರಾದ ಪಂಡಿತ ಸಾಹಿತ್ಯಾಚಾರ್ಯ ಪನ್ನಾಲಾಲರು ಆಗಮಿಸಿದ್ದರು. ಶ್ರೀ ಶೀಲಚಂದ್ರಜೀ ಜೌಹರಿಯವರು ದೀಪ ಬೆಳಗಿ ಉದ್ಘಾಟನೆ ಮಾಡಿದರು. ಸೇಠ ಪನ್ನಾಲಾಲರು ಅಧ್ಯಕ್ಷತೆ ವಹಿಸಿದ್ದರು. ಏಳು ದಿನಗಳವರೆಗೆ ಸೇಠ ಪನ್ನಾಲಾಲ ಗಂಗಾವಾಲಾರು ಪ್ರೇಮಚಂದಜೀ, ಶಾಂತಿಲಾಲ ಜೀ ಕಾಗಜೀಯವರೆಲ್ಲ ಎಲ್ಲಾ ಕಾರ್ಯಕ್ರಮಗಳನ್ನು ಗಮನವಿಟ್ಟು ಭಾಗವಹಿಸುತ್ತಿದ್ದರು. ವಿದ್ವಾಂಸರು ಶಿಕ್ಷಣ-ಪ್ರಶಿಕ್ಷಣದಿಂದ ಶಂಕಾ-ಸಮಾಧಾನದಿಂದ ಪ್ರಭಾವಿತರಾದರು. ದೆಹಲಿಯಲ್ಲಿ ಈ ರೀತಿಯ ಶಿಬಿರದ ಆಯೋಜನೆಯು ಮೊದಲನೆಯದಾಗಿತ್ತು.

ಇಂದ್ರಧ್ವಜ ವಿಧಾನದ ಆರಾಧನೆ

ಇದರ ನಂತರ ಡಿಪ್ಪಿಗಂಜನಲ್ಲಿ ರತ್ನಮಾಲರ ಪ್ರೇರಣೆಯಂತೆ ಅಕ್ಟೋಬರ್ 3ರಂದು ಧ್ವಜಾರೋಹಣ ಮಾಡಿ ಅಕ್ಟೋಬರ್ 14ರಂದು ರಥಯಾತ್ರಾ ಪೂರ್ವಕ ಮಹಾಮಂಡಲದ ಆರಾಧನೆಯನ್ನು ಮಾಡಲಾಯಿತು. ಸುಮಾರು 96 ಗಂಡಸರು, ಹೆಂಗಸರು ಈ ಆರಾಧನೆಯಲ್ಲಿ ಭಾಗವಹಿಸಿದ್ದರು. ಈ ಎಲ್ಲಾ ಆರಾಧನೆಗಳು ಅತ್ಯಂತ ಪ್ರಭಾವನೆಯನ್ನು ಬೀರಿತು. ರಥಯಾತ್ರೆಯ ದಿನ ಬಹಳ ಮಳೆ ಆಗುತ್ತಿದ್ದುದು ರಥ ಹೊರಡುವ ಸಮಯಕ್ಕೆ ಸರಿಯಾಗಿ ಮಳೆ ನಿಂತಿದ್ದು ಕಂಡು ಜನರಿಗೆ ಈ ಆರಾಧನೆಯು ಬಹಳ ಚಮತ್ಕಾರಿಕವಾಗಿ ಕಂಡಿತು.

ಪುನಃ ನಾನು ಚಾತುರ್ಮಾಸವನ್ನು ಮೋರಿಗೇಟ್‌ನಲ್ಲೇ ಕೈಗೊಂಡಿದ್ದೆ. 15-10-79ರಿಂದ17-10-1979ವರೆಗೆ ಪಂಚಪರಮೇಷ್ಠಿಗಳ ಆರಾಧನೆಯ ಆಯೋಜನೆಯನ್ನು ರಮೇಶಚಂದ್ರ ಜೈನರವರು ಸಪರಿವಾರವಾಗಿ ನಡೆಸಿಕೊಟ್ಟರು. ಇದರ ನಂತರ ದೀಪಾವಳಿಯ ದಿನ ಚಾತುರ್ಮಾಸವನ್ನು ಸಮಾಪನ್ನ ಗೊಳಿಸಲಾಯಿತು.

ಹೀರಕ ಜಯಂತಿ ಸಮಾರಂಭ

ಶ್ರೀ ಭಾರತ ವರ್ಷೀಯ ಅನಾಥರಕ್ಷಕ ಜೈನ ಸೊಸೈಟಿ ಜೈನ ಬಾಲಾಶ್ರಮ, ದರಿಯಾಗಂಜ ಇದು ತನ್ನ 75ನೇ ವರ್ಷವನ್ನು ಪೂರ್ತಿಗೊಳಿಸಿ ಹೀರಕ ಜಯಂತಿ ಮಹೋತ್ಸವವನ್ನು ಆಚರಿಸಿಕೊಂಡಿತು. ಆ ಸಂದರ್ಭದಲ್ಲಿ ನಾನು ಅಲ್ಲೇ ಇದ್ದೆ. ನಾನು ಸೊಸೈಟಿಯ ಕಾರ್ಯಕರ್ತರಿಗೆ ಮಂಗಳ ಆಶೀರ್ವಾದವನ್ನು ಕೊಟ್ಟೆ. ಆ ಸಂದರ್ಭದಲ್ಲಿ ಅಟಲಬಿಹಾರಿ ವಾಜಪೇಯಿಯವರು ಬಂದಿದ್ದರು (ಭಾ. ಜ. ಪ. ನಾಯಕರು) ಅವರಿಗೂ ಶುಭಾಶೀರ್ವಾದ ಪೂರ್ವಕವಾಗಿ ನನ್ನಿಂದ ರಚಿಸಿರುವ ಸಾಹಿತ್ಯವನ್ನು ಅವರಿಗೆ ಉಡುಗೊರೆಯಾಗಿ ಕೊಡಲಾಯಿತು.

ತಪ್ಪಿಸಲು ಬಂದವರು ಒಪ್ಪಿಕೊಂಡು ಹೋದರು

ರಾಜೇಂದ್ರ ಪ್ರಸಾದ್ ಜೈನ್ ಮೋತಿ ಚಂದ್ರನ ಹತ್ತಿರ ದರಿಯಾಗಂಜನ ಬಾಲಾಶ್ರಮದಲ್ಲಿ ಇಂದ್ರಧ್ವಜ ಆರಾಧನೆಯನ್ನು ಮಾಡಬೇಕೆಂದು ಬಯಸಿದರು. ಒಂದು ದಿನ ನನಗೆ ಬರುತ್ತಲೇ ನಮೋಸ್ತು ಹೇಳಿದರು. ನಾನು ತಕ್ಷಣವೇ ಮೋತಿಚಂದ ಅವರಿಗೆ ಸಾಮಾನಿನ ಪಟ್ಟಿ ಕೊಡು ಮತ್ತು ನಾನು ಸಮಯಕ್ಕೆ ಸರಿಯಾಗಿ ಹೋಗುತ್ತೇನೆ ಎಂದೆ. ನನ್ನ ಮಾತುಗಳನ್ನು ಕೇಳಿದ ಅವರು ಖುಷಿಯಿಂದ ಪಟ್ಟಿಯನ್ನು ತೆಗೆದುಕೊಂಡವರೇ ಏನೇನು ಮಾಡಬೇಕೆಂಬ ವ್ಯವಸ್ಥೆಯನ್ನೆಲ್ಲ ಪಟ್ಟಿ ಮಾಡಿಕೊಂಡವರೇ ಏಳುತ್ತಾ ನಗುತ್ತಾ ಹೇಳಿದರು. ಮಾತಾಜೀ ನಾನು ಇಂದು ಬಂದಿದ್ದು ಆರಾಧನೆಯನ್ನು ಮಾಡಲು ಆಗುವುದಿಲ್ಲ ಎಂದು ಹೇಳಲು ಬಂದವನು, ನಿಮ್ಮ ಭಾವನೆಯನ್ನು ನೋಡಿದ ನನಗೆ ಮಾಡಲೇಬೇಕೆಂಬ ಸಂಕಲ್ಪ ಉಂಟಾಯಿತು. ತಡೆಯಲು ಬಂದವನು ಮಾಡಲು ಪಣ ತೊಟ್ಟು ಹೋಗುತ್ತಿದ್ದೇನೆ ಎಂದು ಅವರು ನಾನು ಮನಸಾರೆ ನಕ್ಕೆವು.

ನಾನು ಮತ್ತು ರತ್ನಮತೀ ಮಾತಾಜೀ ದರಿಯಾಗಂಜಗೆ ತಲುಪಿದೆವು. ಅಲ್ಲಿಯ ಮುಕ್ತವಾತಾವರಣ ರತ್ನಮತಿಯವರಿಗೆ ಬಹಳ ಹಿಡಿಸಿತು. ಅಕ್ಟೋಬರ್ 28ರಿಂದ ನವೆಂಬರ್ 4ರವರೆಗೆ ಕಾರ್ತೀಕಮಾಸದ ಆಷ್ಟಾಹ್ನಿಕದ ವಿಧಾನ ನಡೆಯಿತು. ಆರಾಧನೆಯನ್ನು ನೋಡಲು ಒಂದು ದಿನ ಕೇಂದ್ರದ ಮಂತ್ರಿಗಳು ಬಂದಿದ್ದರು. 458 ಮಂದಿರಗಳು ಅವುಗಳ ಮೇಲೆ ಧ್ವಜಗಳು ಈ ಆರಾಧನೆಯನ್ನು ದೂರದರ್ಶನದಲ್ಲಿಯೂ ಪ್ರಸಾರ ಮಾಡಲಾಯಿತು.

ಗ್ರೀನ್ ಪಾರ್ಕ್‌ನಲ್ಲಿ ಪ್ರಭಾವನೆ

ಇಲ್ಲಿಂದ ನಾವು ಸಂಘಸಹಿತವಾಗಿ ನವಂಬರ್ 25ರಂದು ಗ್ರೀನ್‌ಪಾರ್ಕ್ ದೆಹಲಿಯನ್ನು ತಲುಪಿದೆವು. ಅಲ್ಲಿ ನವಂಬರ್ 29ರಿಂದ ಡಿಸೆಂಬರ್9ರವರೆಗೆ 'ಧ್ಯಾನಸಾಧನ ಶಿಬಿರ'ದ ಆಯೋಜನೆ ಮಾಡಲಾಗಿತ್ತು. ಕು. ಮಾಧುರಿಯು ಎಲ್ಲರಿಗೂ ಸಾಮಾಯಿಕ ವಿಧಿಯನ್ನು ಕಲಿಸಿದಳು. ನಾನು "ಹ್ರೀಂ" ಧ್ಯಾನವನ್ನು ಕಲಿಸಿದೆ. ಈ ಶಿಬಿರದಿಂದ ಹಲವಾರು ಗಂಡಸರು ಹೆಂಗಸರು ಲಾಭ ಪಡೆದರು.

ಮಹಾಸಭೆಯ ಅಧ್ಯಕ್ಷ

ಸುಮಾರು 2½ ತಿಂಗಳು ಚಳಿಗಾಲದಲ್ಲೇ ನಾನು ಇಲ್ಲಿ ಇದ್ದೆ. ಪ್ರತಿದಿನ ಬೆಳಿಗ್ಗೆ ದ್ರವ್ಯ ಸಂಗ್ರಹದ ತರಗತಿಗಳು ನಡೆಯುತ್ತಿತ್ತು. ನಂತರ ನನ್ನ ಉಪದೇಶ ನಡೆಯುತ್ತಿತ್ತು. ನಿರ್ಮಲಕುಮಾರ ಸೇಠಿಯವರು ಇಲ್ಲೇ ದೂರದಲ್ಲಿ ಸಫದರಗಂಜಿನ ಡೆವಲಪ್‌ಮೆಂಟ್ ಏರಿಯಾದಲ್ಲಿ ಮನೆಮಾಡಿದ್ದರು. ಅವರ ತಂದೆಯವರನ್ನು ರಾಷ್ಟ್ರೀಯ ಆಯುರ್ವೇದ ಸಂಸ್ಥಾನದಲ್ಲಿ ಸೇರಿಸಿದ್ದರು. ಅವರಿಗೆ ಲಿವರಿನ ತೊಂದರೆಯಿಂದ ಡಯಾಲಿಸಿಸ್ ಮಾಡಿಸುತ್ತಿದ್ದರು. ಹೀಗಾಗಿ ಸೇಠಿಯವರು ದಿನವೂ ಇಲ್ಲಿಗೆ ಬಂದು ದೇವರ ದರ್ಶನಮಾಡಿ ನನ್ನ ಉಪದೇಶ ಕೇಳಿ ತಂದೆಯವರ ಸೇವೆ ಮಾಡಲು ಹೋಗುತ್ತಿದ್ದರು. ಮಂದಿರದಲ್ಲಿ ಮಹಾಮಂತ್ರದ ಅಖಂಡ ಪಾಠವನ್ನು ಮತ್ತು ಪಂಚ ಪರಮೇಷ್ಠಿ ಆರಾಧನೆಯನ್ನು ಇಡಿಸಿದ್ದರು. ಆಗ ತಂದೆಯವರನ್ನು ಮಂದಿರಕ್ಕೆ ಕರೆತಂದಿದ್ದರು.

ಆ ದಿನಗಳಲ್ಲಿ ಬಿಡುವಿದ್ದಾಗಲೆಲ್ಲ ನನ್ನ ಜೊತೆ ಸಂಸ್ಥಾನದ ಹಿಂದಿನ (ಗತಿವಿಧಿಯ) ಪರಿಸ್ಥಿತಿಯ ಬಗ್ಗೆಯು ಮುಂದೆ ಮಾಡಬೇಕಾಗಿರುವ ಕಾರ್ಯಗಳ ಬಗ್ಗೆಯು ಸಮಾಲೋಚಿಸುತ್ತಿದ್ದರು. ಇವರಿಗಿದ್ದ ಧರ್ಮದ ಬಗೆಗಿನ ಆಸಕ್ತಿ ಮತ್ತು ಉತ್ಸಾಹವನ್ನು ಗಮನಿಸಿದ ನಾನು ಜನರಿಗೆ ಅವರನ್ನು ಅಧ್ಯಕ್ಷರನ್ನಾಗಿ ಮಾಡಲು ಪ್ರೇರಣೆ ಕೊಡತೊಡಗಿದೆ. ಹೀಗಾಗಿ ಮಹಾಸಭೆಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ಅವರು ನನ್ನ ಬಗ್ಗೆ ಅತೀವ ವಿಶ್ವಾಸವನ್ನು ಇಟ್ಟುಕೊಂಡಿದ್ದರು. ಪ್ರತಿಯೊಂದು ಕಾರ್ಯ ಮಾಡಲು ನನ್ನ ಹತ್ತಿರ ಬಂದು ಆಶೀರ್ವಾದ ತೆಗೆದುಕೊಳ್ಳುತ್ತಿದ್ದರು. ಮಹಾರಾಷ್ಟ್ರದ ಮೋತಿಚಂದರ ವರ್ಧಂತಿಯಲ್ಲಿ ಇಂದ್ರಧ್ವಜ ಆರಾಧನೆ ಮಾಡಿಸಲು ಮೊದಲ ಬಾರಿಗೆ ಹೋಗಿದ್ದೆ. ಅವರ ಮಗ ಸುರೇಂದ್ರ ಜೀ ರಾನಿವಾಲರು ಆಗ್ರಹದಿಂದ ಈ ಆರಾಧನೆಯು ನವೆಂಬರ್೨೬ರಿಂದ ಡಿಸೆಂಬರ್ 7ವರೆಗೆ ಒಳ್ಳೆಯ ಧಾರ್ಮಿಕ ಪ್ರಭಾವನೆಯೊಂದಿಗೆ ನೆರವೇರಿತು.

ಶ್ರಾವಿಕೆಯ ಸಲ್ಲೇಖನ

ಒಂದು ದಿನ ರಾಷ್ಟ್ರೀಯ ಆಯುರ್ವೇದ ಸಂಸ್ಥಾನದಿಂದ ಒಂದು ಮೆಟಾಡೋರ ಮಂದಿರದ ಮುಂದಿನಿಂದ ಹೋದದ್ದು 5 ನಿಮಿಷದಲ್ಲೇ ಹಿಂದಿರುಗಿ ಬಂದು ನಿಂತಿತು. ಅದರಿಂದ ಒಬ್ಬ ಮಹಿಳೆ ಬಹಳ ಅವಸರ ಅವಸರವಾಗಿ ಇಳಿದು ಬಂದವರೇ ಮಾತಾಜೀ ಒಂದು ಜೀವಕ್ಕೆ ಸಮಾಧಿ ಮರಣ ಉಂಟಾಗುವಂತೆ ಮಾಡಿರಿ ಎಂದು ವಿನಂತಿಸಿದರು. ಎಲ್ಲರು ಆ ಕಡೆಯೇ ನೋಡತೊಡಗಿದರು. ಇವಳು ನನ್ನ ಸಹೋದರಿ ಇವಳಿಗೆ ಜಲೋದರ ಕಾಯಿಲೆ ಆಗಿದೆ. ಇಲ್ಲೇ ಆಸ್ಪತ್ರೆಯಲ್ಲಿ ಸೇರಿಸಿದ್ದೇವೆ. ಇವಳು ಹಲವಾರು ಸಲ ಡಾಕ್ಟರಲ್ಲಿ ನಿವೇದಿಸಿದ್ದಳು. ನಾನು ಸೀರಿಯಸ್ಸ್ ಹಂತವನ್ನು ತಲುಪಿದಾಗ ನನ್ನನ್ನು ದಯಮಾಡಿ ಮನೆಗೆ ಕಳುಹಿಸಿ ನನಗೆ ಇಲ್ಲಿ ಸಾಯಲು ಇಷ್ಟವಿಲ್ಲ. ಮನೆಯಲ್ಲಿ ಸಲ್ಲೇಖನ ತೆಗೆದುಕೊಂಡು ಜೀವವನ್ನು ತ್ಯಾಗಮಾಡಬೇಕು ಎಂದು ಕೇಳಿಕೊಂಡದ್ದರಿಂದ

ಡಾಕ್ಟರ್ ಈ ದಿನ 24 ಗಂಟೆಗಿಂತ ಹೆಚ್ಚು ಬದುಕಲಾರರೆಂದು ತಿಳಿಸಿದ್ದರು. ಹೀಗಾಗಿ ಮನೆಗೆ ಕರೆದುಕೊಂಡು ಹೋಗುವುದಕ್ಕಿಂತ ನಿಮ್ಮ ಸಮೀಪದಲ್ಲಿ ಸಮಾಧಿ ಮರಣವನ್ನು ಕರುಣಿಸಬೇಕೆಂದು ಪ್ರಾರ್ಥಿಸುತ್ತಾ ನಿಮ್ಮಲ್ಲಿಗೆ ಕರೆತಂದಿದ್ದೇನೆ ಎಂದರು.

ಉಪದೇಶ ಮಾಡುತ್ತಿದ್ದ ನಾನು ನಿಲ್ಲಿಸಿ ಹೊರಗಡೆಗೆ ಬಂದೆ. ಪ್ರಕಾಶಚಂದ ಚೌಹಾರಿಯವರ ಹತ್ತಿರ ಸಮಾಲೋಚನೆ ಮಾಡಿ ಬಂದಿದ್ದವರ ಇಚ್ಛೆಯಂತೆ ಆಕೆಯನ್ನು ಇಳಿಸಿಕೊಂಡು ಹಾಲಿಗೆ ಕರೆತರಲು ಹೇಳಿದೆ. ಅವಳನ್ನು ಕರೆತಂದರು. ಆಕೆ ಒಳ್ಳೆ ಸಮಾಧಾನವಾಗಿದ್ದರು. ಆದ್ದರಿಂದ ಅವಳಲ್ಲಿ ಮಾತಾಡಿ ಸದ್ಬೋಧನೆ ಮಾಡಿ, ವಿಧಿವತ್ತಾಗಿ ನಾಲ್ಕು ಪ್ರಕಾರದ ಆಹಾರವನ್ನು ತ್ಯಾಗ ಮಾಡಿಸಿದೆ. ಶರೀರದ ಮೇಲೆ ಹೊದ್ದಿರಿಸಿರುವ ಬಟ್ಟೆಯನ್ನು ಹೊರತುಪಡಿಸಿ ಬೇರೆ ಎಲ್ಲ ಪರಿಗ್ರಹಗಳನ್ನು ತೆಗೆಸಿ, ಆರಂಭದ ತ್ಯಾಗವನ್ನು ಮಾಡಿಸಿದೆ. ಈಕೆಯ ಜೊತೆ ಆಕೆಯ ಗಂಡ ಮತ್ತು ಮಗ ಹಾಗೂ ಬಹುಶಃ ಅತ್ತೆ ಮಾವರೂ ಇದ್ದರು.

ಸಂಘದಲ್ಲಿದ್ದ ಎಲ್ಲಾ ಆರ್ಯಿಕೆಯರು ಶ್ರಾವಕರು ಣಮೋಕಾರ ಮಂತ್ರವನ್ನು ಹೇಳತೊಡಗಿದರು. ಅಳುತ್ತಿದ್ದ ಗಂಡ ಮತ್ತು ಮಗನನ್ನು ಎಲ್ಲರೂ ಸಮಾಧಾನ ಮಾಡಿ ಶಾಂತಗೊಳಿಸಿದರು. ದಿನ ಕಳೆದು ರಾತ್ರಿಯೂ ಕಳೆಯಿತು. ಪುನಃ ಎರಡನೆಯ ರಾತ್ರಿಯಲ್ಲಿ ಮಹಾಮಂತ್ರವನ್ನು ಕೇಳುತ್ತಲೇ ಪ್ರಾಣವನ್ನು ತ್ಯಾಗಮಾಡಿದರು.

ಹೀಗೆ ಒಬ್ಬ ಶ್ರಾವಕಿಯು ತಾನೇ ಸ್ವತಃ ಚತುರ್ವಿಧಾಹಾರವನ್ನು ತ್ಯಾಗಮಾಡಿ ಗುರುಗಳ ಹತ್ತಿರ ಬಂದು ಸಲ್ಲೇಖನ ವಿಧಿಯಿಂದ ಮರಣವನ್ನು ಹೊಂದಿದ್ದು. ಸಮಾಜದಲ್ಲಿ ಒಂದು ರೀತಿಯ ಒಳ್ಳೆಯ ಪ್ರಭಾವನೆಯನ್ನು ಬೀರಿತು. ಕುಂದ ಕುಂದರು ಹೇಳಿರುವಂತೆ.

ವೀರತೆಯಿಂದ ಮರಣವನ್ನು ಸ್ವಾಗತಿಸಬೇಕು. ಹೆದರಿಕೆಯಿಂದ ಮರಣ ಹೊಂದುವುದಲ್ಲ. ಒಂದು ವೇಳೆ ವೀರತೆಯಿಂದ ಸಾಯವುದರಿಂದ (ಭ್ರಮಣ) ಸುತ್ತಾಟವು ಮುಗಿದು ಹೋಗಬಹುದು. ಆದ್ದರಿಂದ ನಾವು ಹೆದರಿಕೆಯಿಂದ ಏಕೆ ಸಾಯಬೇಕು.

ಈ ದಿನಗಳಲ್ಲಿ ನಾವು ನೋಡಿದಂತೆ ಆಧ್ಯಾತ್ಮಿಕ ಮಹಾಪುರುಷ ಕಾನಜೀಸ್ವಾಮೀಜಿ ಹಾಸ್ಪಿಟಲ್‌ಗೆ ಹೋದರು. ಅವರು ಮೂಗಿಗೆ ಪೈಪ್ ಹಾಕಿ ಉಸಿರಾಡಲು ಅನುಕೂಲ ಮಾಡಿದರು. ಅವರ ಸಾವು ಹಾಸ್ಪಿಟಲ್‌ನಲ್ಲೇ ಆಯಿತು. ಆಧ್ಯಾತ್ಮ ಪುರುಷನಾಗಿ, ಜ್ಞಾನವನ್ನು ತಿಳಿದವರು ಆಗಿ ಈ ರೀತಿಯ ಮರಣವನ್ನು ಹೊಂದಿದ್ದು ಏನು ಉಚಿತವೇ ಪುನಃ ಜೀವನದಲ್ಲಿ ಆಧ್ಯಾತ್ಮಿಕ ಎಲ್ಲಿದೆ ಆದ್ದರಿಂದಲೇ ಪ್ರತಿದಿನ ನಾವು ಈ ಭಾವನೆಯನ್ನು ಮಾಡುತ್ತಿರಬೇಕು.

ಅಬ ಯಾ ಅರಜ ಕರುಂ ಪ್ರಭು ಸುನಿಯೇ ಮರಣ ಸಮಯ ಯಹ ಮಾಂಗೋ ।
ರೋಗ ಜನಿತ ಪೀಡಾ ಮತ ಹೋವೋ ಅರು ಕಷಾಯ ಮತ ಜಾಗೋ॥
ಯಹ ಮುಜೆ ಮರಣ ಸಮಯ ದುಃಖದಾತಾ ಇನ ಹರ ಸಾತಾ ಕೀಜೆ।
ಜೋ ಸಮಾಧಿಯುತ ಮರಣ ಹೋಯೆ ಮುಝೆ ಅರು ಮಿಥ್ಯಾಗದ ಛೀಜೆ॥

ಅಥವಾ

ಪ್ರಭುವೀರ ಯಹ ವಿನಯಹೈ ಜಬ ಪ್ರಾಣ ತನ ಸೇ ನಿಕಲೇಂ ।
ತುಮ ನಾಮ ಜಪತೇ-ಜಪತೇ ಯಹ ಪ್ರಾಣ ತನ ಸೆ ನಿಕಲೇಂ ॥

ಹೀಗೆ ಭಾವಿಸುತ್ತಾ ಕೊನೆಗೆ ಗುರುಗಳ ಹತ್ತಿರ ಸಮಾಧಿ ಮರಣವನ್ನು ಪಡೆಯಬೇಕು. ನಮ್ಮ ತಂದೆಯ ಅತ್ತೆಯ ಮೊಮ್ಮಗಳು ಒಳ್ಳೆ ಧಾರ್ಮಿಕ ವಿಚಾರವನ್ನು ಹೊಂದಿದ್ದಾರೆ ಎಂದು ಯಾರೋ ಹೇಳಿದರು. ನಾನು ಟೆಕ್ಕೆತನಗರಿಂದ ಬಾರಾಬಂಕಿಗೆ ಹೋಗಿ ಇವರ ಮನೆಯಲ್ಲಿ ತಂಗಿದ್ದೆ.

ಸಾಹೂ ಅಶೋಕ ಕುಮಾರ ಜೈನ

ಗ್ರೀನ್ ಪಾರ್ಕ್‌ನಲ್ಲಿ ಸಾಹು ಅಶೋಕಕುಮಾರ ಜೈನರವರು ದರ್ಶನಾರ್ಥವಾಗಿ ಬಂದಿದ್ದರು. ಅವರಿಗೆ ಅವರ ತಂದೆ ಸಾಹು ಶಾಂತಿಪ್ರಸಾದರ ರೀತಿ ಸಮಾಜದಲ್ಲಿ ಮುಂದೆ ಬರಬೇಕೆಂದು ಪ್ರೇರಣೆಯನ್ನು ಕೊಟ್ಟೆ. ಆಗ ಅವರು ಮಾತಾಜೀ ಈಗ ನಾನು ಬರುವುದಕ್ಕೆ ಸ್ವಲ್ಪ ನಿಧಾನವಾಗುತ್ತದೆ. ಇನ್ನೊಂದು ವಿಷಯವೆಂದರೆ ನನ್ನ (ಮಾವ) ಚಿಕ್ಕಪ್ಪ ಶ್ರೇಯಾಂಸ ಪ್ರಸಾದರವರು ನನ್ನ ತಂದೆಯ ಸ್ಥಾನದಲ್ಲಿ ನಿಂತು ಸಮಾಜದಲ್ಲಿ ಸಾಕಷ್ಟು ಕೆಲಸಗಳನ್ನು ಮಾಡುತ್ತಿದ್ದಾರೆ,.

ಇಲ್ಲಿಗೆ ಸಾಹೂಶೋರ್ ಜೈನರ ಪತ್ನಿ "ಇಂದೂಜೈನ"ರವರು ಎರಡು ಬಾರಿ ಇಲ್ಲಿಗೆ ಬಂದಿದ್ದರು. ಯೋಗ-ಧ್ಯಾನದ ಬಗ್ಗೆ ಸಾಕಷ್ಟು ಚರ್ಚೆಯನ್ನು ಮಾಡಿದ್ದರು. ಒಂದು ಸಲ ಆರ್. ಕೆ. ಪುರಂಗೆ ಬರುವ ಸಮಯದಲ್ಲಿ ಸಾಹೂ ಶಾಂತಿ ಪ್ರಸಾದರವರ ಮನೆಯಲ್ಲಿ ಡಾIIಕೈಲಾಸಚಂದ್ರರು ನನ್ನನ್ನು ನಿಲ್ಲಿಸಿಕೊಂಡರು. ಆಗ ಶಾಂತಿ ಪ್ರಸಾದರ ಹೆಂಡತಿ ರಮಾಜೀಯವರು ನನ್ನ ಜೊತೆ ಬಹಳ ಚರ್ಚೆ ಮಾಡಿದರು. ಹಾಗೂ ಸಮಾಜ ಸುಧಾರಣೆಯ ಬಗ್ಗೆ ತಮ್ಮ ಮನೋಭಾವನೆಯನ್ನು ವ್ಯಕ್ತಪಡಿಸಿದರು. ನಿರ್ವಾಣೋತ್ಸವ ಸಮಯದಲ್ಲಿಯು ಆಚಾರ್ಯರ ಸಮ್ಮುಖದಲ್ಲಿ ಚರ್ಚೆಗಳು ನಡೆದವು. ಗ್ರೀನ್‌ಪಾರ್ಕ್‌ನಲ್ಲಿ ಅಶೋಕ ಕುಮಾರ ರವರು ಎರಡು ಮೂರು ಬಾರಿ ದರ್ಶನಾರ್ಥವಾಗಿ ಬಂದಿದ್ದರು. ಬಂದಾಗಲೆಲ್ಲ ಮಾತಾಜೀ ಒಮ್ಮೆ ನಮ್ಮ ಮನೆಗೆ ದಯಮಾಡಿಸಬೇಕೆಂದು ಪ್ರಾರ್ಥಿಸುತ್ತಲೇ ಇದ್ದರು. ಅದಕ್ಕೆ ನಾನು ಹೊಸದೆಹಲಿ ರಾಜಾಬಾಜಾರಿನ ಮಂದಿರಕ್ಕೆ ಬರುವ ಮಾರ್ಗದಲ್ಲಿ ತಮ್ಮ ಮನೆಗೂ ಬರುತ್ತೇನೆ ಎಂದೆ.

ಜಂಬೂದ್ವೀಪದ ಶಿಲಾನ್ಯಾಸ

ಹಸ್ತಿನಾಪುರ-ಜಂಬೂದ್ವೀಪದ ಸ್ಥಾನದಲ್ಲಿ ಪ್ರಥಮ ಹಂತವಾಗಿ ಸುದರ್ಶನ ಮೇರು ಪರ್ವತದ ನಿರ್ಮಾಣ, ಪ್ರತಿಷ್ಠೆ ಎಲ್ಲಾ ಮುಗಿದಿತ್ತು. ಈಗ ಜಂಬೂದ್ವೀಪದ ಹಿಮವಾನ ಪರ್ವತಗಳ ನಿರ್ಮಾಣವಾಗಬೇಕಿತ್ತು.

ಆದ್ದರಿಂದ ದ್ವಿತೀಯ ಹಂತದ ನಿರ್ಮಾಣದ ಶಿಲಾನ್ಯಾಸನ ಮುಹೂರ್ತವನ್ನು ಮಾಘ ಶುಕ್ಲ ಹದಿನೈದನೆಯ ದಿನ ಅಂದರೆ31-1-1980ರ ದಿನ ನಡೆಯಿತು. ಮೋತಿಚಂದ್ರ, ರವೀಂದ್ರಕುಮಾರ ಮೊದಲಾದವರು ಬಹಳ ಪರಿಶ್ರಮಪಟ್ಟು ಸಾಹು ಶ್ರೇಯಾಂಸ ಪ್ರಸಾದ್ ಮತ್ತು ಸಾಹೂ ಅಶೋಕಕುಮಾರರವರ ಹಸ್ತಗಳಿಂದಲೇ ಈ ಪುಣ್ಯ ಕೆಲಸಗಳನ್ನು ಮಾಡಲು ನಿವೇದಿಸಿದರು. ಅವರ ಅನುಮತಿ ದೊರಕಿದ ನಂತರ ಶಿಲಾನ್ಯಾಸದ ಸಮಾರಂಭ ಬಹಳ ಉತ್ಸಾಹದಿಂದ ನೆರವೇರಿತು.

ಹಸ್ತಿನಾಪುರದಲ್ಲಿ ಜನವರಿ 31ರ 12 ಗಂಟೆಗೆ ದೆಹಲಿಯ ಎಕ್ಸ್‌ಪೋರ್ಟ್ ಇಂಡಿಯಾದ ಆನಂದಕುಮಾರ ಜೈನ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದರು. ಆ ದಿನ ಹಸ್ತಿನಾಪುರಕ್ಕೆ ದೆಹಲಿ ಮೊದಲಾದ ಕಡೆಯಿಂದ ಸುಮಾರು 5000ಜನ ಸೇರಿದ್ದರು.

ಶಿಲಾನ್ಯಾಸ ಕಾರ್ಯಕ್ರಮಕ್ಕೆ ಸಾಹೂ ಶ್ರೇಯಾಂಸ ಪ್ರಸಾದ್, ಅಶೋಕಕುಮಾರ್, ಇಂದುಜೈನ ರವರು ಭಾಗವಹಿಸಿದ್ದರು. ಮೇರಠನ ಸುಕುಮಾರಚಂದ ಜೈನರವರು ಸಭೆಯಲ್ಲಿ ತಮ್ಮ ತಮ್ಮ (ಭಾವನೆ) ವಿಚಾರಗಳನ್ನು ವ್ಯಕ್ತಪಡಿಸಿದರು. ಸಾಹೂ ಟ್ರಸ್ಟ್‌ನ ವತಿಯಿಂದ ಒಂದು ಲಕ್ಷ ರೂ.ಗಳನ್ನು ದಾನವಾಗಿ ಘೋಷಿಸಿದರು. ರಾತ್ರಿ ಶಿಲಾನ್ಯಾಸ ಕಾರ್ಯಕ್ರಮವು ದೂರದರ್ಶನದಲ್ಲಿ ಪ್ರಸಾರವಾದ್ದರಿಂದ ಲಕ್ಷಾಂತರ ಜನರು ನೋಡಿ ಹರ್ಷಿಸಿದರು. ಈ ದ್ರವ್ಯದಿಂದಲೇ ನಿಷಧ ಪರ್ವತದ ನಿರ್ಮಾಣವಾಗಿ ಆ ಪರ್ವತದ ಚೈತ್ಯಾಲಯದಲ್ಲಿ ಸಾಹೂ ಪರಿವಾರದವರ ಹೆಸರಿನಲ್ಲಿಯೇ ಸಿದ್ಧ ಪರಮೇಷ್ಠಿಗಳನ್ನು ವಿರಾಜಮಾನಗೊಳಿಸಲಾಯಿತು. ಆ ಸಮಯದಲ್ಲಿ ಶ್ರೇಯಾಂಸ ಪ್ರಸಾದರವರು ಮಾತನಾಡುತ್ತಾ ಮೊದಲು ಈ ಕ್ಷೇತ್ರಕ್ಕೆ ಎತ್ತಿನಗಾಡಿಯಲ್ಲಿ ಬಂದು ದರ್ಶನಮಾಡತ್ತಿದ್ದೆವು. ಈಗ ಈ ಕ್ಷೇತ್ರ ಅಭಿವೃದ್ದಿಗೊಳ್ಳುತ್ತಾ ಜಂಬೂದ್ವೀಪದ ಖ್ಯಾತಿಯು ಇಡೀ ವಿಶ್ವದಲ್ಲೇ ಹರಡುತ್ತದೆ ಎಂದರು.

೭೪

ಇಂದ್ರಧ್ವಜ ವಿಧಾನ

ಗ್ರೀನ್‌ಪಾರ್ಕ್‌ನಿಂದ ವಿಹಾರ ಬರುವಾಗ ಅಶೋಕಕುಮಾರರವರ ಪ್ರಾರ್ಥನೆಯಿಂದಾಗಿ ಅವರ ಗೃಹದಲ್ಲಿಯು ತಂಗಿದ್ದು 1980 ಫೆಬ್ರವರಿ 6ರಂದು ದಿಗಂಬರ ಜೈನ ಮಂದಿರ ಕನಾಟಪ್ಲೇಸ್‌ಗೆ ಬಂದೆವು. ಶ್ಯಾಮಲಾಲಜೀ ಠೇಕೇದಾರ ಮೊದಲಾದವರ ವಿಶೇಷ ಆಗ್ರಹದಿಂದ ಇಲ್ಲಿ ಸುಮಾರು ಒಂದು ತಿಂಗಳವರೆಗೆ ತಂಗಿದ್ದವು. ಫಾಲ್ಗುಣ ಮಾಸದ ಆಷ್ಟಾಹ್ನಿಕದಲ್ಲಿ ಫೆಬ್ರವರಿ 23ರಿಂದ ಮಾರ್ಚ್ 3 ರವರೆಗೆ ಠೇಕೇದಾರ ಪರಿವಾರದವರು ಇಂದ್ರಧ್ವಜ ಆರಾಧನೆಯನ್ನು ಮಾಡಿಸಿದರು. ಸಂಸದ ಸದಸ್ಯರಾಗಿದ್ದ ಬೀಕುರಾಮ್ ಜೈನರ ಪತ್ನಿಯವರು ಬಹಳ ಶ್ರದ್ಧೆಯಿಂದ ಈ ಆರಾಧನಾ ವಿಧಿಯನ್ನು ನೋಡಿ ಸಂತೋಷವ್ಯಕ್ತಪಡಿಸಿದರು. ಈ ಆರಾಧನೆಯಿಂದ ಇಲ್ಲಿಯು ಒಳ್ಳೆಯ ಧರ್ಮಪ್ರಭಾವನೆ ಆಯಿತು.

ಈ ಮಧ್ಯೆ ಟಿಕ್ಕೈತನಗರದಲ್ಲಿ ಫೆಬ್ರವರಿ 10ರಿಂದ19ರವರೆಗೆ ಇಂದ್ರಧ್ವಜ ವಿಧಾನವನ್ನು ಏರ್ಪಡಿಸಿದ್ದರು. ಇದಕ್ಕೆ ಪ್ರದ್ಯುಮ್ನಕುಮಾರ ಶಾಹರ ಆಗ್ರಹದಿಂದ ಕು. ಮಾಧುರಿ ಹೋಗಿ (ವಿಧಾನ) ಆರಾಧನೆಯನ್ನು ಮಾಡಿಸಿದಳು. ಮೋತಿಚಂದ್ರನು ಆರಾಧನೆಯ ಮಹತ್ವವನ್ನು ತಿಳಿಸಿದರು. ಈ ಅವಧ ಪ್ರಾಂತ್ಯದಲ್ಲಿ ಮೊದಲ ಬಾರಿಗೆ ಈ ಆರಾಧನೆಯು ನೆಡಯಿತು. ಧರ್ಮ ಪ್ರಭಾವನೆ ಆಯಿತು. ರಾಜಾ ಬಾಜಾರ ನ ಹೆಪ್ಪೀ ಸ್ಕೂಲಿನಲ್ಲಿ ನನ್ನ ಪ್ರವಚನದಿಂದ ಸ್ಕೂಲಿನ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಧಾರ್ಮಿಕ ಲಾಭ ಪಡೆದರು.

ಶಿಕ್ಷಣ ಶಿಬಿರ

ಇಲ್ಲಿಂದ ನಾನು ಹೊಸ ದೆಹಲಿಗೆ ಪಹಾಡಗಂಜಗೆ ಹೋದೆ. ಅಲ್ಲಿ ಮಾರ್ಚ್ 7 ರಿಂದ ಮಾರ್ಚ್ 16ರವರೆಗೆ ಶಿಕ್ಷಣ ಶಿಬಿರ ಏರ್ಪಾಟಾಗಿತ್ತು. ಇದರಲ್ಲಿ ದ್ರವ್ಯಸಂಗ್ರಹದ ಪದ್ಯದ ತರಗತಿಗಳು ಬಹಳ ಚೆನ್ನಾಗಿ ನಡೆದವು. ಮಧ್ಯದಲ್ಲಿ ಪಂಚಪರಮೇಷ್ಠಿಗಳ ಆರಾಧನೆಯಾಯಿತು. ಚೈತ್ರ ಕೃಷ್ಣ ಪಕ್ಷದ ಪಾಡ್ಯದಿಂದ ಏಕಾದಶಿಯ ವರೆಗೆ ಭ. ಆದಿನಾಥರ ಜಯಂತಿಯನ್ನು ಆಚರಿಸಲಾಯಿತು. ನನ್ನ ಪ್ರವಚನವು ಇತ್ತು ಎಲ್ಲಾ ಕಡೆ ನನ್ನ ಬರವಣಿಗೆಯ ಕೆಲಸವೂ ಸಾಗುತ್ತಿತ್ತು. ನಾನು ರತ್ನಕರಂಡ ಪದ್ಯಾವಲಿ, ಶಾಂತಿವಿಧಾನ ಮುಂತಾದ ಗ್ರಂಥಗಳನ್ನು ರಚಿಸಿದೆ.

ಮಹಾವೀರ ಜಯಂತಿ ಕಾರ್ಯಕ್ರಮ

ಪಹಾಡಗಂಜ ನಿಂದ ಮಾರ್ಚ್ 17ರಂದು ಕಮ್ಮೋಜಿ ಧರ್ಮಶಾಲೆಗೆ ಬಂದ. ಮಹಾವೀರ ಜಯಂತಿಯ ವಿಶೇಷ ಕಾರ್ಯಕ್ರಮಗಳನ್ನು ಪ್ರತಿಭಾನುವಾರ ಬೇರೆ ಬೇರೆ ಕಡೆ ಏರ್ಪಡಿಸಿದ್ದರು. ಮಾರ್ಚ್ 23ರಂದು ಭಾನುವಾರ ಬೆಳಗ್ಗೆ ಪಹಾಡಿದೀರಜನ ಹೀರಾಲಾಲ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಮಹಾವೀರ ಜಯಂತಿಯ ಸಮಾರಂಭ ಏರ್ಪಾಟಾಗಿತ್ತು. ಇದರಲ್ಲಿ ನನ್ನ ಪ್ರವಚನವು ಒಳ್ಳೆಯ ಪ್ರಭಾವನೆಯನ್ನು ಉಂಟುಮಾಡಿತು.

ಅದೇ ದಿನ ಮಧ್ಯಾಹ್ನ ಕೈಲಾಸನಗರ ಮಹಾವೀರ ಉದ್ಯಾನದಲ್ಲಿ ರಥಯಾತ್ರೆಯ ವಿಶಾಲ ಮೆರವಣಿಗೆಯು ಹೊರಟಿತು. ಸಭೆಯಲ್ಲಿ ಜನಜಂಗುಳಿಯಲ್ಲೇ ಮಹಿಳಾ ಆಶ್ರಮದ ಹುಡುಗಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ಮುಖ್ಯ ಅತಿಥಿಗಳಾಗಿ ಎಚ್. ಕೆ. ಎಲ್. ಭಗತ ಅಂದರೆ ಬೀಕುರಾಮ್ ರವರು ಭಾಷಣ ಮಾಡಿದರು. ಅನೇಕ ಜನರು ಮಾತಾಡಿದ ನಂತರ ನಾನು ಭಗವಾನ ರಾಮಚಂದ್ರರ ಆದರ್ಶ ಮತ್ತು ಭಗವಾನ ಮಹಾವೀರರ ತ್ಯಾಗದ ಬಗ್ಗೆ ವಿಶೇಷತೆಯ ಬಗ್ಗೆ ಬೆಳಕನ್ನು ಬೀರಿದೆ.

ಚೈತ್ರ ಶುಕ್ಲ ತ್ರಯೋದಶೀ ಅಂದರೆ 1980ನೇ ಇಸವಿ ಮಾರ್ಚ್30ನೇಯ ತಾರೀಕು ಸುಭಾಷ್ ಮೈದಾನದಲ್ಲಿ ದೊಡ್ಡದಾದ ಪೆಂಡಾಲ ಹಾಕಿಸಿ ಮೂರು ದಿನದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮೂರುದಿನವು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ಇಲ್ಲಿ ಬೆಳಿಗ್ಗೆ ಮಧ್ಯಾಹ್ನ ನನ್ನ ಪ್ರವಚನ ಇತ್ತು. ಇಲ್ಲಿ ಜನಗಳು ವಿಶೇಷವಾಗಿ ಉಪಸ್ಥಿತವಾಗಿರುತ್ತಿದ್ದರು.

ಜಂಬೂದ್ವೀಪದ ನಿರ್ಮಾಣ ಕಾರ್ಯ

ಹಸ್ತಿನಾಪುರದಲ್ಲಿ ಜಂಬೂದ್ವೀಪದ ಸ್ಥಳದಲ್ಲಿ ಹಿಮವಾನ ಮೊದಲಾದ ಪರ್ವತ ಗಜದಂತ, ಭರತ ಕ್ಷೇತ್ರ ಮೊದಲಾದವುಗಳ ನಿರ್ಮಾಣ ಕೆಲಸ ಬೇಗನೆ ನಡೆಯುತ್ತಿದ್ದವು. ವಿದ್ಯಾಪೀಠದ ವಿದ್ಯಾರ್ಥಿಗಳ ಧಾರ್ಮಿಕ ಅಧ್ಯಯನದಲ್ಲೂ ಪ್ರಗತಿಯಾಗುತ್ತಿತ್ತು. ಈ ವಿದ್ಯಾರ್ಥಿಪೀಠದಲ್ಲಿ ಒಂದಲ್ಲ ಒಂದು ಸಮಾರಂಭಗಳು ನಡೆಯುತ್ತಲೇ ಇದ್ದವು. ಅಕ್ಷಯ ತೃತೀಯ ಮೇಳವು ಬಂದಿತು. ಪುನಃ ಜೇಷ್ಠಮಾಸದ ಚತುರ್ದಶಿಯಂದು ಭಗವಾನ ಶಾಂತಿನಾಥರ ನಿರ್ವಾಣ ಮಹೋತ್ಸವ ಆಚರಿಸಲ್ಪಟ್ಟಿತು. ದೆಹಲಿಯ ಒಂದು ಜಾಗದಲ್ಲಿ ಮಹಾವೀರ ಜಯಂತಿಯ ಕಾರ್ಯಕ್ರಮದಲ್ಲಿ ನಾನು ಉಪದೇಶ ಮಾಡಲು ಹೋಗಬೇಕಾಗಿತ್ತು.

ಶಾಂತಿ ವಿಧಾನ

ಶ್ರೀ ವಿಜೇಂದ್ರ ಕುಮಾರ ಜೈನ ಸರಾಫರು ದೆಹಲಿಯಲ್ಲಿ ಜೂನ್ 13ರಿಂದ ಜೂನ್ 28 ವರೆಗೆ 16ದಿನಗಳ ಆರಾಧನೆಯನ್ನು ಮಾಡಿಸಿದರು. ಶುಕ್ಲಪಕ್ಷದ 16ದಿನಗಳ ಆರಾಧನೆಯನ್ನು ಮಾಡಿದರು. ಶುಕ್ಲಪಕ್ಷದ 16ನೇ ದಿನ ಶಾಂತಿ ವಿಧಾನವನ್ನು ವಿಧಿವತ್ತಾಗಿ ಮಾಡಲಾಯಿತು. ವಿಜೇಂದ್ರಕುಮಾರ ಸಪರಿವಾರವು ಉತ್ಸಾಹದಿಂದ ಭಾಗವಹಿಸಿದ್ದರು. ನನ್ನಿಂದ ಅನುವಾದಿತವಾಗಿದ್ದ ಶಾಂತಿವಿಧಾನ ಕಾವ್ಯವನ್ನು ಪ್ರಿಂಟ್ ಮಾಡಿಸಲಾಯಿತು. ಈ ಪೂಜೆಯನ್ನು ಮಾಡಿದವರಿಗೂ ಮಾಡಿಸಿದವರಿಗೂ ಬಹಳ ಆನಂದ ದೊರೆಯಿತು. ವಿಜೆಯೆಂದ್ರ ಕುಮಾರರವರ ಮಕ್ಕಳ ಉತ್ಸಾಹ ನೋಡಿದಾಗ ಈ ನವಯುವಕರಲ್ಲಿ ಇದ್ದ ಧರ್ಮದ ಬಗ್ಗೆ ಆಸ್ಥೆ ಹೊಸಚೇತನಗದಿಂದ ನನಗೆ ಬಹಳ ಸಂತೋಷವಾಯಿತು.

ಸಮಗ್ಜ್ಞಾನ ಶಿಕ್ಷಣ ಶಿಬಿರ

1980ನೇ ಇಸವಿ ಮೇ 27ರಂದು ಜೂನ್ 6ರವರೆಗೆ ಕಮ್ಮೋಜಿಯ ಧರ್ಮಶಾಲೆಯಲ್ಲಿ ಸಮ್ಯಗ್ಜ್ಞಾನ ಶಿಕ್ಷಣ ಶಿಬಿರವನ್ನು ಆಯೋಜಿಸಲಾಗಿತ್ತು. ಹುಡುಗ, ಹುಡುಗಿಯರು, ಮಹಿಳೆಯರು ಪ್ರೌಢ ಪುರುಷವರ್ಗ ಎಲ್ಲರಿಗೂ ಬೇರೆ ಬೇರೆ ತರಗತಿಗಳನ್ನು ಏರ್ಪಡಿಸಲಾಗಿತ್ತು. ಬಾಲವಿಕಾಸ, ದ್ರವ್ಯಸಂಗ್ರಹ, ರತ್ನಕಂಡ ಪದ್ಯಾವಲಿ ಮೊದಲಾದ ಶಿಕ್ಷಣವನ್ನು ಕೊಡಲಾಯಿತು. ಎಲ್ಲರು ಧರ್ಮಲಾಭವನ್ನು ಪಡೆದುಕೊಂಡರು.

1978ರಿಂದ 80ರವರೆಗೆ ನಡೆದ ಶಿಕ್ಷಣ ಶಿಬಿರದ ಜವಾಬ್ದಾರಿಯನ್ನು ಬಾಬೂಲಾಲಜೀ ಜಮಾದಾರರು ವಹಿಸಿಕೊಂಡು ತಮ್ಮ ಪ್ರಭಾವಿತವಾದ ಭಾಷಣದಿಂದ ಜನರನ್ನು ಆಕರ್ಷಿಸುತ್ತಿದ್ದರು. ಶಿಬಿರದಲ್ಲಿ 10 ದಿನಗಳಲ್ಲಿ ಕಲಿತಿದ್ದನ್ನು ಮಕ್ಕಳು ಯಾವಾಗಲೂ ನೆನಪಿನಲ್ಲಿಟ್ಟು ಕೊಳ್ಳುತ್ತಿದ್ದರು. ಈ ಶಿಬಿರದಲ್ಲಿ 70-80 ವರ್ಷದವರು ಭಾಗವಹಿಸಿ ಪರೀಕ್ಷೆ ಬರೆದು ಪ್ರಮಾಣಪತ್ರವನ್ನು ಪಡೆದು ಸಂತೋಷಪಡುತ್ತಿದ್ದರು.

ಆರ್ಯಿಕೆ ರತ್ನ ಮತಿಯವರ ಅಸ್ವಸ್ಥತೆ

ಜೇಷ್ಠಮಾಸದ ಬಿಸಿಲಿನಲ್ಲಿ ಆರ್ಯಿಕಾ ಶ್ರೀ ರತ್ನಮತೀ ಮಾತಾಜೀಯವರಿಗೆ ಝಾಂಡಿಸ ಆಯಿತು. ಇಲ್ಲಿಯ 97ವರ್ಷ ಹಿರಿಯ ವೈದ್ಯರಾಗಿದ್ದ ಅತರಸೇನ ಜೈನ ಬಹಳ ಅನುಭವಿ ವೈದ್ಯರಾಗಿದ್ದರು. ಅವರು ಮಾತಾಜೀಗೋಸ್ಕರ ಬಂದು ಯುನಾನಿ ವೈದ್ಯವನ್ನು ಹೇಳಿದರು.

ಭಯಂಕರ ಬಿಸಿಲಿನಲ್ಲಿ ಅವರಿಗೆ ಮತ್ತೊಮ್ಮೆ ಕಾಮಾಲೆಯ ರೋಗ ಬಂದಿತು. ಹೀಗೆ ಅವರಿಗೆ ಬೇಸಿಗೆಯಲ್ಲಿ ಮೂರುಬಾರಿ ಈ ರೋಗ ಕಾಣಿಸಿಕೊಂಡಿತು. ಇವರನ್ನು ಪರೀಕ್ಷಿಸಲು ರಾಜೇಂದ್ರಕುಮಾರವರು ಡಾಕ್ಟರರನ್ನು ಕರೆತಂದರು. ಡಾಕ್ಟರ ಪರೀಕ್ಷಿಸಿದವರೆ ರೋಗ ಬಹಳ ಉಲ್ಬಣಿಸಿದರೆ ಇನ್ನು ಎರಡುಮೂರು ದಿನ ಉಳಿಯಬಹುದಷ್ಟೆ ಎಂದರು.

ಒಮ್ಮೆ ಕಮ್ಮೋಜಿಗೆ ಯಾರೋ ಕಾಮಾಲೆ ಕಾಯಿಲೆಗೆ ಔಷಧಿ ಕೊಡುವವರನ್ನು ಕರೆತಂದರು. ನಾನು ಅಷ್ಟಾಗಿ ಗಮನಿಸಲಿಲ್ಲ. ಅವನಿಗೆ ಏನು ಗೊತ್ತಿರಲಿಲ್ಲ. ಅವನ ಹತ್ತಿರ ಐದು ನಿಮಿಷ ಕುಳಿತುಕೊಳ್ಳಿ ಮಾತಾಜೀ ಎಂದು ಒಬ್ಬ ಶ್ರಾವಕ ಪ್ರಾರ್ಥಿಸಿದರು. ಅವರು ಕುಳಿತರು. ಆ ಔಷಧ ಕೊಡುವವರು ಬಂದು ತಟ್ಟೆ, ನೀರು ತರಿಸಿ ಏನನ್ನೋ ಓದಿದ. ಅವರು ನಂತರ ಕೇಳಿದರು ಇವರು ಯಾರು ಏನನ್ನು ಓದುತ್ತಿದ್ದಾರೆ. ಯಾರೋ ಹೇಳಿದರು. ಇವರು ಕಾಮಾಲೆಯನ್ನು ಹೋಗಲಾಡಿಸಲು ಬಂದಿದ್ದಾರೆ. ಆಗ ಮಾತಾಜೀ ನನ್ನನ್ನು ಕರೆಸಿ ಹೇಳಿದರು. ಮಾತಾಜೀ ತಾವು ಪ್ರಪಂಚಕ್ಕೇ ಯಂತ್ರಮಂತ್ರವನ್ನು ಕೊಡುತ್ತೀರ. ಆದರೆ ನನ್ನ ಕಾಮಾಲೆರೋಗ ಓಡಿಸಲು ಬೇರೆ ಮಂತ್ರವಾದಿಯನ್ನು ಕರೆಸಿದ್ದೀರಲ್ಲ. ನಾನು ಸಮ್ಯಗ್ ದೃಷ್ಟಿಯಾಗಿ ಅಜ್ಜೆನರ ಮಂತ್ರದ ಪ್ರಯೋಗವನ್ನು ಮಾಡಿಸಿಕೊಳ್ಳಲು ಸಿದ್ಧಳಿಲ್ಲ. ನನಗೆ ನಿಮ್ಮ ಮಂತ್ರದ ಬಗ್ಗೆಯೇ ಶ್ರದ್ಧೆ ಆದ್ದರಿಂದ ತಾವೇ ಮಂತ್ರವನ್ನು ಹೇಳಿರಿ ಎಂದರು. ಇದು ಅವರ ಶ್ರದ್ಧೆ ಮತ್ತು ಅಸ್ವಸ್ಥತೆ ಇದ್ದರೂ ಅವರ ಸಮಾಧಾನವನ್ನು ತೋರಿಸುತ್ತಿತ್ತು. ಆ ದಿನದಿಂದ ನಾನು ನನ್ನ ಲೇಖನಕಾರ್ಯದಲ್ಲಿ ಸ್ವಲ್ಪ ಸಮಯವನ್ನು ಅವರಿಗೆ ಮಂತ್ರವನ್ನು ಹೇಳಲು ತೊಡಗಿದೆ. ಇದರಿಂದ ಅವರಿಗೆ ಕಾಯಿಲೆಯಲ್ಲೂ ಸ್ವಲ್ಪ ಸುಧಾರಣೆ ಕಾಣತೊಡಗಿತು. ಆಹಾರದಲ್ಲಿ ಕೇವಲ ತಣ್ಣಗಿರುವುದು ಮತ್ತು ಸ್ವಲ್ಪ ದಾಳಿಂಬೆಯ ರಸ ಮಾತ್ರ ತೆಗೆದುಕೊಳ್ಳುತ್ತಿದ್ದರು. ಈ ಕಷಾಯದಿಂದಲೇ ಸುಧಾರಣೆ ಕಾಣತೊಡಗಿತು.

ಈ ಕಷಾಯದಿಂದಲೇ ನನಗೆ 1985ರಲ್ಲಿ ಕಂಡು ಬಂದ ಕಾಯಿಲೆಯಲ್ಲೂ ಗುಣ ಕಾಣತೊಡಗಿತು. ಈಗಲೂ ನನಗೆ ಆಹಾರದಲ್ಲಿ ಕಷಾಯವನ್ನು ಕೊಡುತ್ತಾರೆ. ಏಕೆಂದರೆ ಲಿವರ್‌ನ ಬಲಹೀನತೆ ಕಾಣಿಸುತ್ತಿದೆ.

ಚಾತುರ್ಮಾಸ ಸ್ಥಾಪನೆ ಮತ್ತು ಸಾಹಿತ್ಯ ಸೃಜನೆ

1980 ಜೂನ್ 20ರಂದು ದೆಹಲಿಯ ಜೈನ ಸಮಾಜದ ವಿಶೇಷ ಆಹ್ವಾನದ ಮೇರೆಗೆ ಕೂಚಾ ಬುಲಾಕಿಬೇಗಂ ನ ಅತಿಥಿ ಭವನದಲ್ಲಿ ನನ್ನ ಚಾತುರ್ಮಾಸ ಸ್ಥಾಪನೆ ಆಯಿತು. ಇದೇ ಸಂದರ್ಭದಲ್ಲಿ ಜುಲೈ 20ರಿಂದ 29ರ ಜುಲೈವರೆಗೆ ಇಂದ್ರಧ್ವಜದ ಆರಾಧನೆ ನಡೆಯಿತು. ಇಲ್ಲಿಯ ಮೇರು ಮಂದಿರದಲ್ಲಿ ನಂದೀಶ್ವರದ 52 ಚೈತ್ಯಾಲಯಗಳ ಭವ್ಯ ರಚನೆಯನ್ನು ನೋಡಿ ಮನಸ್ಸು ಹರ್ಷಧಾರೆಯಿಂದ ತುಂಬಿತು.

ಭಗವಾನ ಬಾಹುಬಲಿಯ ಸಹಸ್ರಾಬ್ದಿ ಮಹಾಮಸ್ತಾಕಾಭಿಷೇಕದ ತಯಾರಿಯು ಬಹಳ ಬಿರುಸಾಗಿ ನಡೆಯುತ್ತಿತ್ತು. ಶ್ರಾವಕರ (ಆಹ್ವಾನ) ಒತ್ತಾಯದ ಮೇರೆಗೆ ಸಮಯೋಚಿತವಾದ ಸಾಹಿತ್ಯದ ರಚನೆಯಲ್ಲಿ ನನ್ನೆಲ್ಲ ಸಮಯವನ್ನು ತೊಡಗಿಸಿಕೊಂಡೆ ಭ. ಬಾಹುಬಲಿಯನ್ನ ಕುರಿತಂತೆ "ಯೋಗ ಚಕ್ರೇಶ್ವರ ಬಾಹುಬಲಿ" ಎಂಬ ಉಪದೇಶಾತ್ಮಕ ಪುಸ್ತಕದ ರಚನೆ ಮಾಡಿದೆ. "ಕಾಮದೇವ ಬಾಹುಬಲಿ" ಎಂಬ ಒಂದು ಚಿಕ್ಕ ಪುಸ್ತಕದ ರಚನೆ ಮಾಡಿದ್ದೆ. ಇದು ಐದು ಭಾಷೆಗಳಲ್ಲಿ ಸಾವಿರಾರು ಪ್ರತಿಗಳು ಅಚ್ಚಾದವು. "ಬಾಹುಬಲಿಯ ನಾಟಕ" ಹಾಗೇ ಭರತ ಬಾಹುಬಲಿಗಳ ಚಿತ್ರಸಹಿತವಾದ ಕಾಮಿಕ್ಸ್ ಒಂದನ್ನು ಬರೆದೆ 'ಭಗವಾನ ಬಾಹುಬಲಿ' ಎಂಬ ಹಿಂದೆ ರಚಿಸಿದ್ದು ರೆಕಾರ್ಡ ಆಗಿತ್ತು. ಅದನ್ನು ಪುನಃ ಅಚ್ಚುಹಾಕಿಸಲಾಯಿತು. ಭಗವಾನ ಬಾಹುಬಲಿಯ ಪೂಜೆಯ ಪ್ರತಿಗಳು ಹಲವಾರು ಸಾವಿರ ಪ್ರತಿ ಅಚ್ಚಾದವು. ನಾನು ಶ್ರವಣಬೆಳಗೊಳದ ಬಾಹುಬಲಿಯ ಮುಂದೆಯೇ ಕುಳಿತು ರಚಿಸಿದ್ದ ಸಂಸ್ಕೃತದ ರಚನೆಯನ್ನು ಪ್ರಕಾಶನಗೊಳಿಸಲಾಯಿತು. ಯಾರೋ ಒಬ್ಬರ ಪ್ರೇರಣೆಯಿಂದ ರವೀಂದ್ರ ಕುಮಾರನು ಈ ಸಹಸ್ರಾಬ್ದಿ ಮಹೋತ್ಸವದಲ್ಲಿ ಮಾತಾಜೀಯವರ ರಚನೆಯ ಒಂದು ಲಕ್ಷ ಪುಸ್ತಕವನ್ನು ಹೊರತರುತ್ತೇನೆ ಎಂದು ಸಂಕಲ್ಪ ಗೈದಿದ್ದನು. ಹೀಗಾಗಿ ನನ್ನ ಈಗಿನ ಹಿಂದಿನ ಎಲ್ಲ ರಚನೆಗಳು ಸೇರಿ ಒಂದು ಲಕ್ಷ ಪ್ರತಿಗಳು ಪ್ರಕಾಶನಗೊಂಡವು-"ಕಾಮಿಕ್ಸ್" "ಟಾಯಿಮ್ಸ್ ಆಫ್ ಇಂಡಿಯಾ" ಪ್ರಕಾಶನ ಅಡಿಯಿಂದ 1½ ಲಕ್ಷ ಪ್ರತಿಗಳು ಅಚ್ಚಾದವು. 1ಲಕ್ಷ ಹಿಂದಿ 50,000 ಇಂಗ್ಲೀಷ ಪ್ರತಿಗಳು.

ದಶಲಕ್ಷಣ ಪರ್ವ

ದಶಲಕ್ಷಣ ಪರ್ವದಲ್ಲಿ (ಮಧ್ಯಾಹ್ನದ) ಪ್ರವಚನವನ್ನು ಅತಿಥಿಭವನದಲ್ಲೇ ಮಾಡುತ್ತಿದ್ದೆ. ಮಧ್ಯಾಹ್ನದಲ್ಲಿ ಪ್ರವಚನ ಕೂಚಾ ಸೇಠರ ದೊಡ್ಡ ಮಂದಿರದಲ್ಲಿ ಆಗುತ್ತಿತ್ತು. ಈ ಸಂದರ್ಭದಲ್ಲಿ ಬೊಂಬಾಯಿಯ ಉಷಾಜೈನ ಸಂಘದಲ್ಲೇ ಇದ್ದು ಹತ್ತು ಉಪವಾಸ ಮಾಡಿದ ಅವರನ್ನು ಸನ್ಮಾನಿಸಲಾಯಿತು. ಭಟ್ಟಾರಕ ಚಾರುಕೀರ್ತಿಗಳು ಮಹೋತ್ಸವದ ಬಗ್ಗೆ ಚರ್ಚೆ ಮಾಡಲು ಆಗಾಗ್ಗೆ ದೆಹಲಿಗೆ ಬರುತ್ತಿದ್ದರು.

ಮಂಗಳ ಕಳಸದ ಪ್ರವರ್ತನೆ

ಮಹಾಮಸ್ತಾಕಾಭಿಷೇಕದ ಪ್ರಯುಕ್ತ ದೆಹಲಿಯಲ್ಲಿ ಮಂಗಳ ಕಳಸದ ಆಯೋಜನೆ ಮಾಡಲಾಗಿತ್ತು. ಬಾಹುಬಲಿಯ ಸ್ಥಾಪನೆಯಾಗಿ 1981ನೇ ಇಸವಿಗೆ 1000 ವರ್ಷಗಳು ತುಂಬಿದ್ದವು. ಅದರ ನಿಮಿತ್ತವಾಗಿ

ಫೆಬ್ರವರಿ ಒಂದರಿಂದ 15 ಮಾರ್ಚಿಯವರೆಗೆ ಶ್ರವಣಬೆಳಗೊಳದಲ್ಲಿ ವಿಭಿನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ವೀರನಿರ್ವಾಣ ೨೫೦೭ ಅಂದರೆ ಫೆಬ್ರವರಿ 22ರಂದು ರವಿವಾರ ಮೊದಲ ಮಸ್ತಕಾಭಿಷೇಕ ನಿಶ್ಚಯವಾಗಿತ್ತು.

ಇಂದ್ರಧ್ವಜ ಮಂಡಲ ಆರಾಧನೆ

ಡೀಮಾಪುರದ ಶ್ರೀಪನ್ನಲಾಲ ಜೀ ಸೇಠರು ಸಪರಿವಾರವಾಗಿ ಬಂದು ನನ್ನ ಸಾನಿಧ್ಯದಲ್ಲಿ ಇಂದ್ರಧ್ವಜ ಮಹಾಮಂಡಲ ಆರಾಧನೆಯನ್ನು ಮಾಡಿದರು. ಆಗಷ್ಟ 9 ರಿಂದ 19ರ ವರೆಗೆ ಶ್ರಾವಣ ಮಾಸದಲ್ಲಿ ನಡೆಯಿತು. ಪ್ರತಿಷ್ಠಾಚಾರ್ಯರಾಗಿ ಮೋತಿಚಂದರೇ ನಡೆಸಿಕೊಟ್ಟರು. ಅವರಂತೂ ಈ ಆರಾಧನೆ ನೆರವೇರಿಸಲು ಬಹಳ ಉತ್ಸಾಹ ತೋರಿದರು. ಹಸ್ತಿನಾಪುರದ ಜಂಬೂದ್ವೀಪದಿಂದ ಪ್ರತಿಮೆಯನ್ನು ತಂದು, ಅತಿಥಿ ಭವನದಲ್ಲಿ ಸ್ಥಾಪಿಸಿ ಆರಾದನೆ ನಡೆಸಲಾಯಿತು. ಈ ಆರಾಧನೆಯಲ್ಲಿ ದೆಹಲಿಯ ವಿಪಿನಚಂದ ಜೈನ ವಿಮಲ ಕಿಶೋರ ಜೈನ ಮೊದಲಾದವರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ವಿಮಲಕಿಶೋರ ಮತ್ತು ಅವರ ಧರ್ಮಪತ್ನೀ ದಮಯಂತಿಯವರು ಜಂಬೂದ್ವೀಪದ ಜಾಗದಲ್ಲಿ ಭ. ಆದಿನಾಥರ ಮಂದಿರವನ್ನು ಕಟ್ಟಿಸುವ ಆಸೆಯನ್ನು ವ್ಯಕ್ತಪಡಿಸಿದರು.

ಮಂಗಳ ಕಳಸದ ಉದ್ಘಾಟನೆ

ಸೆಪ್ಟೆಂಬರ್ 29ರಂದು ಭಾರತದ ಪ್ರಧಾನ ಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರ ಕರಕಮಲಗಳಿಂದ ಮಂಗಳ ಕಳಸದ ಉದ್ಘಾಟನೆ ಮಾಡಿಸಲಾಯಿತು. ಆಗ ನಾನು ಮಂಗಳ ಆಶೀರ್ವಾದ ಪೂರ್ವಕವಾಗಿ ಮೂರು ನಿಮಿಷ ಮಾತನಾಡಿದೆ. ಹೇಗೆ ಮಸ್ತಕಾಭಿಷೇಕದಲ್ಲಿ ಗುಳ್ಳಕಾಯಿ ಅಜ್ಜಿಯು ಬಂದು ಭ. ಬಾಹುಬಲಿ ಅಭಿಷೇಕವನ್ನು ಮಾಡಿ ಧರ್ಮಪ್ರಭಾವನೆಯನ್ನು ಮಾಡಿದರೋ ಹಾಗೆ ಇಂದು ಗುಳ್ಳಕಾಯಿ ಅಜ್ಜಿಯಾಗಿ ಇಂದಿರಾಗಾಂಧಿಯವರು ಮಂಗಳ ಕಳಸದ ಉದ್ಘಾಟನೆಯನ್ನು ಮಾಡಿದ್ದಾರೆ ಎಂದೆ. ಈ ಜನಮಂಗಳ ಕಳಸವು ಅನೇಕ ಸ್ಥಳಗಳಲ್ಲಿ ಸುತ್ತಾಡಿ ಧರ್ಮಪ್ರಭಾವನೆಯನ್ನು ಮಾಡುತ್ತಾ ಮಹಾಮಸ್ತಕಾಭಿಷೇಕದ ಸಮಯಕ್ಕೆ ಶ್ರವಣಬೆಳಗೊಳವನ್ನು ತಲುಪಿತು.

೭೫

ಜನ್ಮದಿವಸದ ಸಮಾರಂಭ

1980ರ ಆಕ್ಟೋಬರ್ 13 ರಂದು ಅಂದರೆ ಆಶ್ವೀಜ ಶುಕ್ಲ ಪೂರ್ಣಿಮೆಯಂದು ನನ್ನ ಜನ್ಮದಿನವನ್ನು ಆಚರಿಸಬೇಕೆಂದು ಒಂದು ಸಮಾರಂಭವನ್ನು ಆಯೋಜಿಸಿದ್ದರು. ಆದರೆ ನಾನು ಬೇಡವೆಂದು ವಿರೋಧಿಸಿದೆ. ಸೇಠ, ಡೀಮಾಪುರದವರು ಆಗ್ರಹಪೂರ್ವಕವಾಗಿ ಕಾರ್ಯಕ್ರಮವನ್ನು ಮಾಡಿದರು.

ಈ ಕಾರ್ಯಕ್ರಮದ ಜೊತೆ ಸಮಯಸಾರ ಪ್ರಶಿಕ್ಷಣ ಶಿಬಿರವನ್ನು ಆಯೋಜಿಸಿದ್ದರು. ದಿನಗಳ ಸಮಯಸಾರ ಗ್ರಂಥರಾಜದ ವಾಚನವನ್ನು ವಿದ್ವಾಂಸ ವರ್ಗದ ಮುಂದೆ ಮಾಡಬೇಕೆಂಬ ನನ್ನ ಬಹಳ ಆಸೆಯಂತೆ ಆಕ್ಟೋಬರ್

23 ರಿಂದ ನವಂಬರ್ 2 ರವರೆಗೆ ಹಮ್ಮಿಕೊಳ್ಳಲಾಗಿತ್ತು. ಪ್ರಾರಂಭದಲ್ಲಿ ಜನ್ಮ ಜಯಂತಿಯ ಸಮಾರಂಭವನ್ನು ದರಿಯಾಗಂಜ ನ ಮಹಾವೀರ ವಾಟಿಕಾದಲ್ಲಿ ವಿಶಾಲವಾದ ಶಾಮಿಯಾನವನ್ನು ಹಾಕಿಸಿ 47ನೇಯ ಜನ್ಮಜಯಂತಿ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಕೇಂದ್ರೀಯ ಪೆಟ್ರೋಲಿಯಮ್ ರಸಾಯನ ಮಂತ್ರೀ ಶ್ರೀ ಪ್ರಕಾಶಚಂದ್ರಜೀ ಸೇಠಿ ಹಾಗೂ ಕೇಂದ್ರೀಯ ಪರ್ಯಟನ ವಿಮಾನಮಂತ್ರಿ ಎ. ಪಿ. ಶರ್ಮರವರು ಭಾಗವಹಿಸಿದ್ದರು.

ಕೇಂದ್ರೀಯ ಮಂತ್ರಿ ಶ್ರೀ ಎ. ಪಿ. ಶರ್ಮರವರು ವೀರ ಜ್ಞಾನೋದಯ ಗ್ರಂಥಮಾಲಾದ 47ನೆಯ ಪುಷ್ಪ "ದಿಗಂಬರ ಮುನಿ" ಪುಸ್ತಕದ ವಿಮೋಚನೆಯನ್ನು ಮಾಡಿದರು. ಪ್ರಕಾಶಚಂದ ಸೇಠಿಯವರು ಮಂಗಲದೀಪ ಪ್ರಜ್ವಲಿಸಿದರು. ಸಮಯಸಾರದ ಶಿಬಿರವನ್ನು ಉದ್ಘಾಟನೆ ಮಾಡಿದರು. ಆನಂತರ ಪ್ರಕಾಶಚಂದ ಸೇಠಿಯವರು 47ನೇ ವರ್ಷದ ಉಪಲಕ್ಷದಲ್ಲಿ 47 ವಿದ್ಯುತ್ ದೀಪಗಳನ್ನು ಪ್ರಜ್ವಲಿತಗೊಳಿಸಿದರು. ಹಾಗೇ ಭಗವಾನ ಬಾಹುಬಲಿ ಎಂಬ 90 ನಿಮಿಷಗಳ ಕ್ಯಾಸೆಟ್ಟನ್ನು ಟೇಪ್‌ರೆಕಾರ್ಡಿಂಗ್‌ಗೆ ಹಾಕಿ ಬಟನ್ ಒತ್ತಿ ಅಂದು ಬಿಡುಗಡೆ ಮಾಡಿದರು.

ಈ ಸಮಾರಂಭದಲ್ಲಿ ಭಾಗವಹಿಸಿದ್ದ ಅಶೋಕಕುಮಾರ ಜೈನ ಹಾಗೂ ಅಮರಚಂದ್ ಪಹಾಡಿಯ ಮುಂತಾದ ಅನೇಕರು ತಮ್ಮ ವಿನಯಾಂಜಲಿಯನ್ನು ಅರ್ಪಿಸಿದರು. ಸೇಠಿ ಡೀಮಾಪುರದವರು ಸುಮಾರು 5000 ಜನರಿಗೆ ಊಟದ ವ್ಯವಸ್ಥೆ ಮಾಡಿದ್ದರು. ರಾತ್ರಿಯಲ್ಲಿಯು ಸಭೆಯು ಏರ್ಪಾಟಾಗಿತ್ತು. ಇದರಲ್ಲಿ ಅನೇಕ ವಿದ್ವಾಂಸರು ಮತ್ತು ಶ್ರೀಮಂತರು ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ತಮ್ಮ ಗುರುಭಕ್ತಿಯನ್ನು ತೋರಿಸಿದರು. ನಾನು ದೀಕ್ಷೆ ತೆಗೆದುಕೊಂಡ ಮೇಲೆ 1966ರಲ್ಲಿ ಬ್ರ. ಸುಮತೀಬಾಯಿಯವರು ಸೋಲಾಪುರದಲ್ಲಿ ನಾನು ಬೇಡವೆಂದರೂ ಕೇಳದೆ ವಿಮಲಸಾಗರರ ಸಾನಿಧ್ಯದಲ್ಲಿ ನನ್ನ ಜನ್ಮಜಯಂತಿಯನ್ನು ಆಚರಿಸುತ್ತಿದ್ದರು. ಪುನಃ ಎರಡನೆಯ ಬಾರಿ 1980ರಲ್ಲಿ ಆದಂತಾಯಿತು.

ಸಮಯ ಸಾರದ ವಾಚನಾ

ಅಕ್ಟೋಬರ್ 24ರಂದು ಸಾಹಿತ್ಯಾಚಾರ್ಯ ಡಾ|| ಪನ್ನಾಲಾಲಜೀಯವರನ್ನು ಕುಲಪತಿಗಳನ್ನಾಗಿ ಮಾಡಿ ಸಮಯಸಾರದ ವಾಚನವನ್ನು ಪ್ರಾರಂಭಿಸಿದೆ. ಇದೇ ಸಮಯದಲ್ಲಿ ಪಂ. ಕೈಲಾಸಚಂದ್ರ ಸಿದ್ಧಾಂತ ಶಾಸ್ತ್ರಿಗಳು ಬಂದಿದ್ದರು. ಅವರೇ ಮೊದಲು ಮಂಗಳಾಚರಣೆಯನ್ನು ಮಾಡಿದರು. ಶಿಬಿರದಲ್ಲಿ ಸುಮಾರು 85 ಜನ ಭಾಗವಹಿಸಿದ್ದರು. ಪ್ರೊ. ಲಕ್ಷ್ಮೀಚಂದ್ ಜೀ, ಪಂ. ಕುಂಜೀಲಾಲಜೀ ಶಿವಚರಣ ಲಾಲ ಮೊದಲಾದ ವಿದ್ವಾಂಸರು ಸಮಯಸಾರದ ಗಾಥೆಗಳನ್ನು ವಾಚನ ಮಾಡಿ ಅರ್ಥವನ್ನು ಹೇಳುತ್ತಿದ್ದರು. ನಾನು ಪ್ರತಿದಿನ 1½ ಗಂಟೆ ಸಮಯಸಾರ ವಾಚನವಲ್ಲದೆ ಪ್ರತಿದಿನ ರಾತ್ರಿ ಚಾರಿತ್ರಪಾಹುಡ ಹಾಗೂ ರತ್ನಕರಂಡ ಪದ್ಯಾವಲಿಯ ತರಗತಿಗಳು ನಡೆಯುತ್ತಿದ್ದವು. ಇದೇ ಸಂದರ್ಭದಲ್ಲಿ ಅಖಿಲ ಭಾರತ ವರ್ಷೀಯ ದಿಗಂಬರ ಜೈನ ಯುವ ಪರಿಷತ್ ಶಾಸ್ತ್ರಿ ಪರಿಷತ್, ಆಚಾರ್ಯ ವೀರಸಾಗರರ ಸಂಸ್ಕೃತ ವಿದ್ಯಾಪೀಠ, ಆಚಾರ್ಯ ಶಾಂತಿವೀರ ದಿಗಂಬರ ಜೈನ ಸಿದ್ಧಾಂತ ಸಂರಕ್ಷಣೆ ಸಭೆ ಈ ನಾಲ್ಕರ ಅಧಿವೇಶನವು ಆಯಿತು. ಎಲ್ಲರು ಮಹಾಮಸ್ತಕಾಭಿಷೇಕಕ್ಕೆ ತಮ್ಮ ಸಹಯೋಗ ಕೊಡುವ ನಿರ್ಣಯ ಮಾಡಿದರು.

ನವೆಂಬರ್ 2ರಂದು ಲಾಲಮಂದಿರದ ಸರಸ್ವತಿ ಭವನದಲ್ಲಿ ಶಿಬಿರದ ಸಮಾಪನ ಸಮಾರಂಭವನ್ನು ಆಚರಿಸಲಾಯಿತು. ಶ್ರೀ ರಮೇಶಚಂದ್ ಜೈನರು ನನ್ನಿಂದ ರಚಿತವಾಗಿ ಮುದ್ರಿತಗೊಂಡಿದ್ದ ಹಲವಾರು ಪುಸ್ತಕಗಳ ಬಿಡುಗಡೆ ಮಾಡಿದರು. ಭಗವಾನ ವೃಷಭದೇವ, ಸಂಸ್ಕಾರ, ಪ್ರಭಾವನಾ, ಜೀವನದಾನ ಉಪಕಾರ ಮತ್ತು

ನಿಯಮಸಾರ, ಪದ್ಮಾವಲಿ ಮೊದಲಾದವು. ರಾಜೇಂದ್ರಪ್ರಸಾದ್, ಅಮರಚಂದ ಪಹಾಡಿಯಾ ಮೊದಲಾದವರಿಗೆ ಅಭಿನಂದನ ಪತ್ರವನ್ನು ಕೊಟ್ಟು ಸನ್ಮಾನಿಸಲಾಯಿತು. ಈ ಶಿಬಿರದಲ್ಲಿ ನಾನು ಸಮಯಸಾರದ ಬಗ್ಗೆ ಮಾಡಿದ ವಿಶೇಷ ಮಂಥನದ ಕೆಲವು ಅಂಶಗಳೆಂದರೆ -

ಸಮಯ ಸಾರದಲ್ಲಿ ವಿಶೇಷ ಜ್ಞಾತವ್ಯ

ಸಮಯಸಾರ ಗ್ರಂಥವು ಶ್ರೀ ಕುಂದಕುಂದ ದೇವರಿಂದ ರಚಿತವಾದ ಮಹಾನ್ ಅಧ್ಯಾತ್ಮಿಕವಾದ ಗ್ರಂಥವಾಗಿದೆ. ವರ್ತಮಾನದಲ್ಲಿ ಇದರ ಎರಡು ಸಂಸ್ಕೃತ ಟೀಕೆಗಳು ದೊರೆಯುತ್ತವೆ. ಶ್ರೀ ಅಮೃತಚಂದ್ರ ಸೂರಿಗಳಿಂದ ರಚಿತವಾದ "ಆತ್ಮಖ್ಯಾತಿ" ಹಾಗೂ ಎರಡನೆಯದು ಜಯಸೇನಾಚಾರ್ಯ ಕೃತ "ತಾತ್ಪರ್ಯವೃತ್ತಿ". ಮೊದಲನೆಯ ಟೀಕೆಯಲ್ಲಿ 415 ಗಾಥೆಗಳು ಮತ್ತು ಎರಡನೆಯ ಟೀಕೆಯಲ್ಲಿ 439 ಗಾಥೆಗಳಿವೆ. ಸಮಯಸಾರದಲ್ಲಿ ವ್ಯವಹಾರ ನಯದ ಉಪಯೋಗದ ಬಗ್ಗೆ ಅಲ್ಲಲ್ಲಿ ಅಲ್ಲಲ್ಲಿ ಬೆಳಕನ್ನು ಬೀರಿದ್ದಾರೆ. ಈ ಗ್ರಂಥವನ್ನು ಓದುವ ಅಧಿಕಾರವು ಮುಖ್ಯವಾಗಿ ಮುನಿಗಣಕ್ಕೆ ಇದೆ. ಗೌಣರೂಪದಿಂದ ಶ್ರಾವಕರಿಗೆ ಎಂದು ಜಯಸೇನಾಚಾರ್ಯರು ಹೇಳುತ್ತಾರೆ.

ಅತ್ರ ತು ಗ್ರಂಥೇ ಪಂಚಮಗುಣಸ್ಥಾನವರ್ತಿನಾಂ ವೀತರಾಗ ಸಮ್ಯಗ್ದೃಷ್ಟಿನಾಂ ಮುಖ್ಯವೃತ್ಯಾ ಗ್ರಹಣಂ ಸರಾಗ ಸಮ್ಯಗ್ದೃಷ್ಟೀ ನಾಂ ಗೌಣವೃತ್ಯೇತಿ ।

ಈ ಗ್ರಂಥದಲ್ಲಿ ಪಂಚಮ ಗುಣಸ್ಥಾನದಿಂದ ಮೇಲಿನ ಗುಣಸ್ಥಾನವುಳ್ಳ ವೀತರಾಗ ಸಮ್ಯಗ್ದೃಷ್ಟಿಗಳನ್ನು ಮುಖ್ಯರೂಪದಿಂದ ಗ್ರಹಣ ಮಾಡಲಾಗಿದೆ. ಸರಾಗ ಸಮ್ಯಗ್ದೃಷ್ಟಿಗಳನ್ನು ಗೌಣರೂಪದಿಂದ ತೆಗೆದುಕೊಳ್ಳಲಾಗಿದೆ.

ಸಮಯಸಾರದಲ್ಲಿ ವ್ಯವಹಾರನಯದ ಉಪಯೋಗತೆ

"ಆಚಾರ್ಯ ಕುಂದುಕುಂದರು ಸರ್ವಪ್ರಥಮ ಗಾಥೆ 7ರಲ್ಲಿ ವ್ಯವಹಾರನಯದಿಂದಲೇ ಜ್ಞಾನಿಗಳ ಚಾರಿತ್ರ, ದರ್ಶನ ಮತ್ತು ಜ್ಞಾನವನ್ನು ಹೇಳಿದ್ದಾರೆ. ಆದರೆ ನಿಶ್ಚಯನಯದಿಂದ ಜ್ಞಾನ, ದರ್ಶನ ಮತ್ತು ಚಾರಿತ್ರಗಳಿಲ್ಲವಾಗಿದೆ. ಈ ಆತ್ಮಜ್ಞಾಯಕ ಮಾತ್ರ ಶುದ್ಧವಾಗಿದೆ.[೧]

ಮತ್ತೆ ಹೇಳುತ್ತಾರೆ ಹೇಗೆ ಮ್ಲೇಚ್ಛರಿಗೆ ಅವರ ಭಾಷೆಯಲ್ಲಿ ಹೇಳಿದರೆ ಮಾತ್ರ ಅರ್ಥವಾಗುತ್ತದೆಯೊ ಹಾಗೆಯೇ ವ್ಯವಹಾರವಿಲ್ಲದೆ ಪರಮಾರ್ಥದ ಉಪದೇಶವು ಅಶಕ್ಯವೆಂದಿದ್ದಾರೆ.[೨] ಮುಂದಿನ 13ನೇ ಗಾಹೆಯಲ್ಲಿ ವ್ಯವಹಾರದಲ್ಲಿ ಅಭೂತಾರ್ಥ ಹೇಳಿ ತಕ್ಷಣವೇ ಮುಂದಿನ ಗಾಥೆಯಲ್ಲಿ ಹೇಳುತ್ತಾರೆ, ಪರಮಭಾವದರ್ಶಿ-ಪರಮ ಶುದ್ಧ ಆತ್ಮದ ಅನುಭವನ್ನು ಮಾಡಿಸುವ ಮಹಾಮುನಿಗಳಿಗೋಸ್ಕರ ಶುದ್ಧ ದ್ರವ್ಯದ ಕಥನವನ್ನು ಮಾಡುವಂತಹ ಶುದ್ಧನಯವೇ ಜ್ಞಾತವ್ಯವಾಗಿದೆ. ಅನುಭವಿಸಲು ಯೋಗ್ಯವಾಗಿದೆ. ಆದರೆ ಯಾವುದು ಅಪರಮಭಾವದಲ್ಲಿ ಸ್ಥಿತವಾಗಿದೆ, ಅಂದರೆ ನಾಲ್ಕನೇ ಐದನೇ ಮತ್ತು ಆರನೆಯ ಅಥವಾ ಏಳನೆಯ ಗುಣಸ್ಥಾನದಲ್ಲಿ ನಿಂತಿದೆ, ಅವರಿಗೋಸ್ಕರ ವ್ಯವಹಾರನಯದ ಉಪದೇಶವನ್ನು ಕೊಡಲಾಗಿದೆ.

---

೧. **ವವಹಾರೇಣುವದಿಸ್ಸ ೩. ಪಾಣಿಸ್ಸ ಚರಿತ್ತ ದಂಸಣಂ ಣಾಣಂ |**
ಣವಿ ಣಾಣಂ ಣ ಚರಿತ್ತಂ ಣ ದಂಸಣಂ ಜಾಣಗೋ ಸುದ್ಧೋ ||೭||

೨. **ಜಹ ಣವಿ ಸಕ್ಕಮಣಜ್ಜೇ ಅಣಜ್ಜಭಾಸಂ ವಿಣಾ ಉ ಗಾಹೇಉಂ |**
ತಹ ವವಹಾರೇಣ ವಿಣಾ ಪರಮತ್ಥು ವದೇಸಣಮಸಕ್ಕಂ ||೮||

ಇದರ ಟೀಕೆಯಲ್ಲಿ ಶ್ರೀ ಅಮೃತಚಂದ್ರ ಸೂರಿಗಳು ಹೇಳಿದ್ದಾರೆ. 16ನೆಯ ಸಲ ಕುಲುಮೆಯಲ್ಲಿ ಶುದ್ಧವಾದ ಸುವರ್ಣದಂತೆ ಪರಮಶುದ್ಧ ಭಾವದ ಅನುಭವವನ್ನು ಹೊಂದುತ್ತದೆ. ಇವರುಗಳಿಗಾಗಿಯೇ ಶುದ್ಧನಯ ಪ್ರಯೋಜನ ಭೂತವಾಗಿದೆ. ಆದರೆ ಒಂದು ಎರಡು ತಾಪದಿಂದ ಶುದ್ಧವಾದ ಚಿನ್ನಕ್ಕೆ ಸಮಾನವಾಗಿ ಅಪರಮಭಾವದ ಅನುಭವವಾಗುತ್ತದೆ. ಇವರುಗಳಿಗೆ ವ್ಯವಹಾರನಯವು ಪ್ರಯೋಜನವಾಗಿದೆ. ಏಕೆಂದರೆ ತೀರ್ಥ ಮತ್ತು ತೀರ್ಥದ ಫಲವು ವ್ಯವಹಾರ ನಯದಿಂದಲೇ ನಡೆಯುತ್ತದೆ.[೩]

ಕಳಶ ಕಾವ್ಯದಲ್ಲಿಯೂ ಹೇಳಿದೆ,

ಮೊದಲ ಸ್ಥಾನದಲ್ಲಿ ಕಾಲಿಡುವವರಿಗೆ ಈ ವ್ಯವಹಾರನಯ ಕೈ ಹಿಡಿಯುವ ಅವಲಂಬನದಂತಿದೆ. ಆದರೂ ಸಹ ಪರದಿಂದ ರಹಿತ ಚಿತ್ತ-ಚಮತ್ಕಾರ ಮಾತ್ರ ಪರಮ ಅರ್ಥಶುದ್ಧ ಆತ್ಮನನ್ನು ಅಂತರಂಗದಿಂದ ನೋಡುವವರಿಗೆ ಇದು ವ್ಯವಹಾರನಯ ಏನೂ ಅಲ್ಲ.[೪] ಮೊದಲ ಮೆಟ್ಟಿಲೇರುವ 4ನೆಯ ಐದನೆಯ ಆರನೆಯ ಗುಣಸ್ಥಾನವರ್ತಿ ಜೀವಿಗಳಿಗೆ ವ್ಯವಹಾರನಯ ಒಂದು ಆಸರೆಯಾಗಿದೆ, ಆಧಾರಸ್ತಂಭವಾಗಿದೆ ಎಂಬುದು ಸ್ಪಷ್ಟವಾಗಿದೆ.

ಕರ್ಮರೂಪಿ ನಾನೇ ಆಗಿದ್ದೇನೆ ಅಥವಾ ಇವು ನನ್ನವೇ ಆಗಿವೆ ಎಂಬುದನ್ನು 11ನೇಯ ಗಾಹೆಯಲ್ಲಿ ಸ್ಪಷ್ಟವಾಗಿದೆ. ಈ ಆತ್ಮವು ಮಾಡುವ ಭಾವಕ್ಕೆ ಅವನೇ ಕರ್ತನಾಗಿದ್ದನೆ ಎಂಬ ನಿಶ್ಚಯನಯದ ಕಥನವನ್ನು ತತ್ಕಾಲೀನ ಅನೇಕಾಂತದ ವ್ಯವಸ್ಥೆಯನ್ನು ಮಾಡುತ್ತಾ ಹೇಳಿದೆ ಮತ್ತು ವ್ಯವಹಾರನಯದ ಅಪೇಕ್ಷೆಯಿಂದ ಪುದ್ಗಲ ಕರ್ಮ ವೇ ಕರ್ತೃವಾಗಿದೆ.[೫] ಒಂದು ವೇಳೆ ಜೀವ ಮತ್ತು ಶರೀರವು ಒಂದೇ ಅಲ್ಲವಾದರೆ ತೀರ್ಥಂಕರ ಮತ್ತು ಆಚಾರ್ಯರ ಸ್ತುತಿ ಮಿಥ್ಯೆ ಆಗಬಹುದು ಎಂಬ ಸಂಶಯವಾಗುತ್ತದೆ. ವ್ಯವಹಾರ ನಯದ ಅಪೇಕ್ಷೆಯಿಂದ ಜೀವ ಮತ್ತು ಶರೀರ ಒಂದೇ ಆದರೂ ನಿಶ್ಚಯನಯದ ಅಪೇಕ್ಷೆಯಿದ ಎಂದಿಗೂ ಒಂದೇ ಆಗಲಾರದು[೬] ಎಂಬ ಸಮಾಧಾನ ಕೊಡಲಾಗಿದೆ. ತೀರ್ಥಂಕರ ಮೊದಲಾದವರ ಸ್ತುತಿ ವ್ಯವಹಾರನಯದ ಅಪೇಕ್ಷೆಯಿಂದಲೇ ಆಗುತ್ತದೆ. ಮುಂದೆ ಆಚಾರ್ಯರು ಎಂಟು ಪ್ರಕಾರದ ಕರ್ಮ ಮತ್ತು ಅದರ ಫಲ ಮುಂತಾದವುಗಳನ್ನು ಪುದ್ಗಲಮಯವೆಂದು ಹೇಳಿದ್ದಾರೆ. ಗಾಥೆ 51ರಲ್ಲಿ ಸಮಾಧಾನ ಹೇಳಿದೆ.

ವ್ಯವಹಾರ ನಯದ ಉಪದೇಶದಲ್ಲಿ ರಾಗಾದಿ ಭಾವ ಮೊದಲಾದ ಯಾವ ಅಧ್ಯವಸಾನ ಪರಿಣಾಮವಿದೆಯೊ ಅವೆಲ್ಲವೂ ಜೀವವಾಗಿದೆ ಎಂದು ಜಿನೇಂದ್ರದೇವರು ಹೇಳಿದ್ದಾರೆ.[೭] ಈ ಗಾಥೆಯ ಟೀಕೆಯಲ್ಲಿ ಅಮೃತಚಂದ್ರಸೂರಿಗಳು ಹೇಳಿದ್ದಾರೆ. ವ್ಯವಹಾರನಯ ಅಪರಮಾರ್ಥವಾಗಿದ್ದರೂ ಸಹ ಪರಮಾರ್ಥದ ಪ್ರತಿಪಾದಕವಾಗಿದೆ ಮತ್ತು ತೀರ್ಥ ಪ್ರವೃತ್ತಿಯ ನಿಮಿತ್ತವಾಗಿದೆ. ಆದ್ದರಿಂದ ಅದನ್ನು ತೋರಿಸುವುದು ನ್ಯಾಯವೇ ಆಗಿದೆ. ವ್ಯವಹಾರನಯವನ್ನು ಒಪ್ಪಿಕೊಳ್ಳದ ಹೊರತು. ಶರೀರದಿಂದ ಜೀವದಲ್ಲಿ ಪರಮಾರ್ಥದಿಂದ ಭೇದವಾಗುವುದರಿಂದ ತ್ರಸ ಮತ್ತು ಸ್ಥಾವರ ಜೀವಗಳ ವ್ಯವಸ್ಥೆ ಆಗಲಾರದು. ಪುನಃ ಯಾವುದನ್ನೇ ಆದರೂ ತ್ರಸ-ಸ್ಥಾವರಗಳನ್ನು ಬೂದಿಗೆ ಸಮಾನವಾಗಿ ನಿರ್ದೀವ

---

೩. ವವಹಾರ ದೇಸಿರಾ ಪುಣ ಜೆ ದು ಅಪರಮೇ ದಿಟ್ಠಿದಾ ಭಾವೇ ||೧೨||

೪. ವ್ಯವಹರಣನಯಃ ಸ್ಯಾದ್ ಯದ್ಯಪಿ ಪ್ರಾಕ್‌ಪದವ್ಯಾಂ- ಕಲಶ ||

೫. ಜಂ ಕುಣದಿ ಭಾವಮಾದಾ ||

೬. ವವಹಾರಣ ಓ ಭಾಸದಿ ಜೀವೋ ದೇಹೋ ಯ ಹವದಿ ಖಲು ಇಕ್ಕೋ |

೭. ವವಹಾರಸ್ಸ ದರೀಸಣ ಮುವಏಸೋ ವಣ್ಣಿದೋ ಜಿಣವರೇಹೀಂ |
ಜೀಓ ಏದೇ ಸವ್ವೇ ಅಜ್ಝವ ಸಾಣಾದಓ ಭಾವಾ |

ಮಾಡುವುದು ಹೀಗೆ ಮಾಡುವುದು ಸಹ ಹಿಂಸೆ ಆಗಲಾರದು. ಆಗ ಅದರ ಕರ್ಮಬಂಧವು ಆಗಲಾರದು ಪುನಃ ರಾಗ, ದ್ವೇಷ, ಮೋಹದಿಂದ ಜೀವದಲ್ಲಿ ಸರ್ವಥಾ ಭೇದ ಇರುವುದರಿಂದಲೇ ಮೋಕ್ಷ ಉಪಾಯದ ಗ್ರಹಣೆಯನ್ನು ಹೇಗೆ ಮಾಡಬಹುದು. ಆಗ ಮೋಕ್ಷದ ಅಭಾವವೇ ಆಗುತ್ತದೆ.[೯]

ಉಪಯುಕ್ತ ಗಾಥೆಯಲ್ಲಿ ಹಾಗೂ ಬಳಿಕ ಟೀಕೆಯಲ್ಲಿ ವ್ಯವಹಾರನಯದ ಉಪಯೋಗತೆಯನ್ನು ವಿಶೇಷ ರೀತಿಯಿಂದ ಧ್ಯಾನಕೊಡಲು ಯೋಗ್ಯವಾಗಿದೆ. 55ನೇ ಗಾಥೆಯಲ್ಲಿ ಜೀವಕ್ಕೆ ವರ್ಣ, ರಸ, ಗಂಧ, ಸ್ಪರ್ಶ ಮೊದಲಾದ ಗುಣಸ್ಥಾನ ಮುಂತಾದವುಗಳು ಏನೂ ಇಲ್ಲ. ಪುನಃ ನಯ ವಿವಕ್ಷತೆಯನ್ನು ಹೇಳಿದೆ.

ವ್ಯವಹಾರ ನಯದ ಅಪೇಕ್ಷೆಯಿಂದ ವರ್ಣಮೊದಲಾದವುಗಳಿಂದ ಹಿಡಿದು ಗುಣಸ್ಥಾನಪರ್ಯಂತ ಈ ಎಲ್ಲ ಭಾವಗಳು ಜೀವದ್ದೇ ಆಗಿವೆ. ಆದರೆ ನಿಶ್ಚಯ ನಯದ ಅಪೇಕ್ಷೆಯಿಂದ ಇವಾವುವೂ ಸಹ ಇಲ್ಲ.[೯] ಇದನ್ನು ಕೇಳಿದ ಶಿಷ್ಯ ಗುರುಗಳಲ್ಲಿ ಪ್ರಶ್ನೆ ಮಾಡಿದ ಶಾಸ್ತ್ರದಲ್ಲಿ ಜೀವಗಳನ್ನು ಏಕೇಂದ್ರೀಯ, ದ್ವೀಂದ್ರಿಯ ಪರ್ಯಾಪ್ತ, ಅಪರ್ಯಾಪ್ತ ಮುಂತಾದ ನಾನಾ ಭೇದಗಳನ್ನು ಹೇಗೆ ಪರಿಗಣಿಸಲಾಗಿದೆ. ಅದಕ್ಕೆ ಆಚಾರ್ಯರು ಪರ್ಯಾಪ್ತ ಅಪರ್ಯಾಪ್ತ, ಸೂಕ್ಷ್ಮ ಮತ್ತು ಬಾದರ ಮೊದಲಾದ ಯಾವುದೇ ಜೀವದ ಭೇದವನ್ನು ಪರಮಾಗಮದಲ್ಲಿ ಹೇಳಿದೆಯೋ ಅವೆಲ್ಲವು ವ್ಯವಹಾರನಯದ ಅಪೇಕ್ಷೆಯಿಂದಲೇ ಆಗಿದೆ, ಎಂದು ಸಮಾಧಾನ ಮಾಡಿದ್ದಾರೆ.

ಗಾಥೆ 79 ಮತ್ತು 90ರಲ್ಲಿ ಸಹ ನಿಶ್ಚಯ ಮತ್ತು ವ್ಯವಹಾರದ ಕಾರ್ಯವನ್ನು ಸ್ಪಷ್ಟ ಮಾಡುತ್ತಿದ್ದಾರೆ. ನಿಶ್ಚಯನಯದಿಂದ ಈ ಆತ್ಮ ತನ್ನನ್ನ ಕರ್ತನೆಂದು ಹೇಳಿದೆ ಮತ್ತು ತನ್ನನ್ನ ಭೋಕ್ತನೆಂದು ಹೇಳಿದೆ. ಆದರೆ ವ್ಯವಹಾರ ನಯದಿಂದ ಈ ಆತ್ಮ ಅನೇಕ ಪ್ರಕಾರದಿಂದ ಪುದ್ಗಲ ಕರ್ಮಗಳ ಕರ್ತನಾಗಿದೆ ಮತ್ತು ಅದೇ ಪ್ರಕಾರ ಪುದ್ಗಲ ಕರ್ಮಗಳ ಭೋಕ್ತನು ಆಗಿದ್ದಾನೆ.[೧೦]

ನಿಶ್ಚಯ ನಯವನ್ನು ತಿಳಿದಿರುವ ಮಹಾಮುನಿಗಳ ಆತ್ಮದ ಕರ್ತೃತ್ವವನ್ನು ಹೇಳಿ. ಅದನ್ನು ತಿಳಿದೂ ಅದೇ ಭವ್ಯಜೀವ ಸಂಪೂರ್ಣ ಕರ್ತೃತ್ವವನ್ನು ಬಿಡಲೂಬಹುದು. ಈ ಗಾಥೆಯ ಟೀಕೆಯಲ್ಲಿ ಜಯಸೇನಾಚಾರ್ಯರು ಆತ್ಮವು ನಿಶ್ಚಯನಯದಿಂದ ತನ್ನ ಭಾವಗಳ ಕರ್ತನಾಗಿದ್ದಾನೆ. ವ್ಯವಹಾರನಯದಿಂದ ಕರ್ಮಗಳ ಕರ್ತನು ಆಗಿದ್ದಾನೆ. ಈ ಜೀವ ಸರಾಗ ಸಮ್ಯಗ್‌ದೃಷ್ಟಿ ಆಗಿ, ಅಶುಭ ಕರ್ಮದ ಕರ್ತೃತ್ವವನ್ನು ಬಿಡುತ್ತದೆ. ಪುನಃ ನಿಶ್ಚಯ ಚಾರಿತ್ರದ ಜೊತೆ ವೀತರಾಗ ಸಮ್ಯಗ್‌ದೃಷ್ಟಿ ಆಗಿ. ಶುಭ-ಅಶುಭದಂತಹ ಸಂಪೂರ್ಣ ಕರ್ಮಗಳ ಕರ್ತೃತ್ವದಿಂದ ಚ್ಯುತವಾಗುತ್ತದೆ.

4ನೇ ಗುಣಸ್ಥಾನದಿಂದ ಹಿಡಿದು 7ನೇಯ ಗುಣಸ್ಥಾನದ ವರೆಗೆ ಜೀವ ಅಶುಭಕರ್ಮದ ಕರ್ತೃತ್ವದಿಂದ ಚ್ಯುತನಾಗುವ ಪ್ರಯತ್ನವನ್ನು ಮಾಡುತ್ತದೆ. ಇದರಿಂದ ಮುಂದಿನ ಜೀವಗಳು ಶುಭಕರ್ಮದ ಕರ್ತೃತ್ವವನ್ನು 10ನೇ ಗುಣಸ್ಥಾನದವರೆಗೂ ಮುಂದುವರೆಯುತ್ತದೆ. ಮುಂದೆ ಅದರಿಂದಲೂ ಚ್ಯುತವಾಗುತ್ತದೆ.

---

೮. ವ್ಯವಹಾರೋ ಹಿ ಪರಮಾರ್ಥಪ್ರತಿಪಾದ ಕತ್ವಾದ ಪರಮಾರ್ಥೋಪಿ |
ತೀರ್ಥ ಪ್ರವೃತ್ತಿ ನಿಮಿತ್ತಂ ದರ್ಶಯಿತುಂ ನ್ಯಾಯ ಏವಂ ತಮಂತರೇಣ |
ಭವತ್ಯೇವ ಮೋಕ್ಷಸ್ಯಾಭಾವಂ ಗಾಥೆ ೪೬ದ ಟೀಕೆ ಪುಟ |

೯. ವವಹಾರೇಣ ದು ಏದೇ ಜೀವಸ್ಸ ಹವಂತಿ ವಣ್ಣಮಾದಿಯಾ|
ಗುಣಠಾಣಾಂತ ಭಾವಾ ಣ ದು ಕೇಈ ಣಿಚ್ಛಯಣಯಸ್ಸ |

೧೦. ವವಹಾರಸ್ಸ ದು ಆದಾ ಪುಗ್ಗಲ ಕರೇದಿ ಅಮಿಯವಿಹಂ |
ತಂ ಚೇವ ವೇದಯದೇ ಪುಗ್ಗಲಕಮ್ಮಂ ಣಿಯವಹಿಂ |

ಮುಂದೆ ವ್ಯವಹಾರ ನಯವನ್ನು ಹೇಳುತ್ತಾ ಅಪೇಕ್ಷೆಯಿಂದ ಘಟ, ಪಟ, ರಥ ಮುಂತಾದ ದ್ರವ್ಯಗಳಿಗೆ ಆತ್ಮವು ಕರ್ತೃವಾಗಿದೆ. ಇಂದ್ರಿಯಗಳ ಜ್ಞಾನಾವರಣ ಮುಂತಾದ ಕರ್ಮಗಳು ಶರೀರ ಮೊದಲಾದ ನೋ ಕರ್ಮಗಳು ಮತ್ತು ಕ್ರೋಧಾದಿ ನಾನಾ ಪ್ರಕಾರದ ಭಾವ ಕರ್ಮಗಳಿಗೂ ಸಹಕರ್ತನಾಗಿದೆ. ಆತ್ಮ ಪುದ್ಗಲ ಕರ್ಮಗಳ ಉತ್ಪತ್ತಿ ಮಾಡಿಕೊಂಡು ಬಂಧನ ಮಾಡಿಕೊಳ್ಳುತ್ತದೆ. ಪರಿಣಮನ ಮತ್ತು ಗ್ರಹಣವನ್ನು ಮಾಡುತ್ತದೆ. ಇದೆಲ್ಲವು ವ್ಯವಹಾರನಯದ ಕಥನವಾಗಿದೆ.

ಮುಂದೆ ಜೀವವನ್ನು ಕಥಂಚಿತ ಅಕರ್ತನನ್ನಾಗಿ ಸಿದ್ಧಗೊಳಿಸುತ್ತಾ ಹೇಳುತ್ತಾರೆ. ಬಂಧವನ್ನು ಮಾಡುವಂತಹುದು ನಾಲ್ಕು ಪ್ರತ್ಯಯಗಳು, ಮಿಥ್ಯಾತ್ವ, ಅವಿರತಿ, ಕಷಾಯ ಮತ್ತು ಯೋಗ ಇವುಗಳದೇ ಭೇದ ಮಿಥ್ಯಾದೃಷ್ಟಿಯಿಂದ ಹಿಡಿದು ಸಯೋಗಕೇವಲಿ ಪರ್ಯಂತ ಹನ್ನೆರಡಾಗುತ್ತದೆ. ಈ ಗುಣಸ್ಥಾನ ಪುದ್ಗಲಕರ್ಮದ ಉದಯದಿಂದಲೇ ಆಗುತ್ತವೆ. ಆದ್ದರಿಂದ ಅಚೇತನವಾಗಿವೆ. ಇವೇ ಕರ್ಮಗಳನ್ನು ಮಾಡುತ್ತವೆ. ಆದ್ದರಿಂದ ಆತ್ಮ ಈ ಕರ್ಮಗಳ ಭೋಕ್ತನಾಗಲಾರವು. ಏಕೆಂದರೆ ಇವು ಗುಣಸ್ಥಾನದ ಕರ್ಮಗಳನ್ನು ಮಾಡುವಂತಹವು. ಆದ್ದರಿಂದ ಈ ಜೀವ ಕರ್ತೃವಾಗಿಲ್ಲ.[೧]

ಗಾಥೆಯ ತಾತ್ಪರ್ಯವೃತ್ತಿಯಲ್ಲಿ ಆಚಾರ್ಯರು ಮಿಥ್ಯಾತ್ವ ಮೊದಲಾದ ಪ್ರತ್ಯಯ ಮತ್ತು ಗುಣಸ್ಥಾನಗಳು ಏಕಾಂತ ಜೀವರೂಪದಲ್ಲಿ ಇಲ್ಲ. ಆದರೆ ಅದು ಸುಣ್ಣ ಮತ್ತು ಹಳದಿ ಸೇರಿದ ಬಣ್ಣಕ್ಕೆ ಸಮಾನವಾಗಿದೆ. ಆದ್ದರಿಂದ ಇವು ಅಶುದ್ಧ ನಿಶ್ಚಯನಯದಿಂದ ಮತ್ತು ಅಶುದ್ಧ ಅಪದಾನ ರೂಪದಿಂದ ಚೇತನವಾಗಿದೆ. ಜೀವದ ಜೊತೆ ಸಂಬಂಧಿಸಿದೆ ಹಾಗೂ ಶುದ್ಧ ನಿಶ್ಚಯನಯದಿಂದ ಮತ್ತು ಶುದ್ಧ ಉಪಾದಾನ ರೂಪದಿಂದ ಅಚೇತನಾಗಿವೆ, ಪೌದ್ಗಲಿಕವಾಗಿವೆ.

ಸೂಕ್ಷ್ಮ ಶುದ್ಧ ನಿಶ್ಚಯನಯ ಯಾರಿಗೆ ಆಗುತ್ತದೆ ಎಂಬ ಪ್ರಶ್ನೆಗೆ ಆಚಾರ್ಯರು ಸೂಕ್ಷ್ಮ ಶುದ್ಧ ನಿಶ್ಚಯನಯದಲ್ಲಿ ಇವುಗಳ ಅಸ್ತಿತ್ವವೇ ಇಲ್ಲವೆಂದಿದ್ದಾರೆ. ಅಲ್ಲದೆ "ಸವ್ವೇ ಸುದ್ಧಾ ಹು ಸುದ್ಧಣಯಾ"ಈ ನಿಯಮದಂತೆ ಎಲ್ಲ ಜೀವಗಳು ಶುದ್ಧವೇ ಆಗಿವೆ. ಪುನಃ ಈ ರಾಗಾದಿ ಪ್ರತ್ಯಯಗಳು ಎಲ್ಲಿ ನಿಲ್ಲುತ್ತವೆ?

ಮುಂದೆ ಇದೇ ಕರ್ತೃಕರ್ಮ ಅಧಿಕಾರದಲ್ಲಿ ಹೇಳುತ್ತಾರೆ. ಜೀವವು ಕರ್ಮ ಬದ್ಧವಾಗಿದೆ. ಮತ್ತು ಅದೇ ಜೀವದ ಪ್ರದೇಶಗಳಲ್ಲಿ ಸೇರಿರುತ್ತದೆ. ಇದು ವ್ಯವಹಾರ ನಯದ ಪಕ್ಷವಾಗಿದೆ ಮತ್ತು ಜೀವದಲ್ಲಿ ಕರ್ಮ ವು ಬಂಧಿಸುವುದು ಇಲ್ಲ ಮತ್ತು ಸ್ಪರ್ಶಿಸುವುದು ಇಲ್ಲ. ಇದು ನಿಶ್ಚಯನಯದ ಪಕ್ಷವಾಗಿದೆ. ಈ ಪ್ರಕಾರವಾಗಿ ಜೀವದಲ್ಲಿ ಕರ್ಮ ಬಂಧಿಸುತ್ತದೆ ಅಥವಾ ಬಂಧಿಸುವುದಿಲ್ಲ. ಈ ಎರಡೂ ನಯಗಳದೇ ಪಕ್ಷ ಆಗಿದೆ. ಯಾವುವು ಈ ಎರಡು ಪಕ್ಷಗಳಿಂದ ಮೇಲೆ ಬಂದಿದೆಯೋ. ಅವೇ ಮಹಾಮುನಿ ಸಮಯಸಾರ ರೂಪವಾಗಿದೆ. ಯಾವುದು ಸಮಯರೂಪ ಆತ್ಮದ ಅನುಭವವನ್ನು ಮಾಡುತ್ತದೆಯಾ-ಅವು ಎರಡೂ ರೀತಿಯ ನಯಗಳ ಕಥನವನ್ನು ಕೇವಲ ತಿಳಿಯುತ್ತದೆ. ಆದರೆ ಈ ಎರಡರಲ್ಲಿ ಯಾವುದೇ ಪಕ್ಷವನ್ನು ಗ್ರಹಣೆ ಮಾಡುವುದಿಲ್ಲ.[೨]

ಮಹಾಮಸ್ತಕಾಭಿಷೇಕ

ರವೀಂದ್ರಕುಮಾರನು 1981ರ ಫೆಬ್ರವರಿ ಸಮ್ಯಗ್‌ಜ್ಞಾನದಲ್ಲಿ "ಭಗವಾನ ಬಾಹುಬಲಿ"ಯ ವಿಶೇಷಾಂಕವನ್ನ ಹೊರತಂದನು. ಮೋತಿಚಂದ್ರ, ರವೀಂದ್ರಕುಮಾರ, ಮಾಲತಿ ಈ ಮೂವರು ಒಂದು ತಿಂಗಳು ಶ್ರವಣಬೆಳಗೊಳಕ್ಕೆ

---

೧. (೧) ಗಾಥೆ ೧೧೬ ರಿಂದ ೧೧೯

೨. ಗಾಥೆ ೧೪೯ ರಿಂದ ೧೫೧ 1

ಹೋಗಿದ್ದರು. ಇಲ್ಲಿಂದ ಫೆಬ್ರವರಿ 7ರಂದು ಹೊರಟವರು 9ರಂದು ಅಲ್ಲಿಗೆ ಸೇರಿದರು. ಅಲ್ಲಿಯ ಮಹೋತ್ಸವದ ಉದ್ಘಾಟನೆಯಿಂದ ಹಿಡಿದು ಕೊನೆಯವರೆಗೂ ಎಲ್ಲಾ ಕಾರ್ಯಕ್ರಮಗಳನ್ನು ಸರಿಯಾಗಿ ವೀಕ್ಷಿಸಿಕೊಂಡು ಬಂದು ನನಗೆ ಎಲ್ಲವನ್ನೂ ಹೇಳಿದರು ಹಾಗೆ ಮಾರ್ಚ್ ತಿಂಗಳ ಸಂಚಿಕೆಯಲ್ಲಿ ಇದೆಲ್ಲವನ್ನೂ ಪ್ರಕಟಗೊಳಿಸಿದರು.

ಇಲ್ಲಿನ ಎಲ್ಲ ಪತ್ರಿಕೆಯವರೂ ಮಹಾಮಸ್ತಕಾಭಿಷೇಕದ ಪ್ರಚಾರವನ್ನು ಓದಿದರು. ಫೆಬ್ರವರಿ 22ರಲ್ಲಿ ರೇಡಿಯೋದಲ್ಲಿ ಸಹ ಬಿತ್ತರಿಸಲ್ಪಟ್ಟಿತು. ಭ. ಬಾಹುಬಲಿಯ ಅಭಿಷೇಕವನ್ನು ದೂರದರ್ಶನದಲ್ಲಿಯು ನೋಡಲಾಯಿತು. ಈ ಸಹಸ್ರಾಬ್ದಿ ಮಹೋತ್ಸವ ಇಡೀ ಭಾರತದಲ್ಲೇ ಅಲ್ಲ ವಿದೇಶಗಳಲ್ಲಿಯು ಪತ್ರಿಕಾ ಮಾಧ್ಯಮಗಳಲ್ಲಿ ಪಡೆದ ಪ್ರಚಾರವು ಬಹುಶಃ 2½ ಸಾವಿರ ವರ್ಷಗಳಲ್ಲೇ ಪಡೆದಿರಲಾರದು ಎಂದರೆ ಅತಿಶಯಶೋಕ್ತಿ ಆಗಲಾರದು.

21ರ ಫೆಬ್ರವರಿಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಹೆಲಿಕಾಪ್ಟರ್‌ನಿಂದ ಭಗವಂತನಿಗೆ ಪುಷ್ಪವೃಷ್ಟಿಯನ್ನು ಮಾಡಿದರು. ದೂರದರ್ಶಕ ಯಂತ್ರದಿಂದ ಭಗವಂತನನ್ನು ದರ್ಶನ ಮಾಡಿದರು. ಅವರು ಬೆಟ್ಟವನ್ನು ಹತ್ತಲು ಅಶಕ್ತರಾಗಿದ್ದರು. ವಿಶಾಲ ಸಭೆಯಲ್ಲಿ ಭಾಷಣ ಮಾಡಿದರು. ಪ್ರಧಾನಿಯವರು ಭಗವಂತನನ್ನು ದರ್ಶನ ಮಾಡಿದ್ದರಿಂದ ಜೈನ, ಜೈನೇತರರು ಭಗವಂತ ಬಾಹುಬಲಿಯ ಕುರಿತು ಬಹಳ ಆಕರ್ಷಿತರಾದರು. ಈ ಮಹೋತ್ಸವಕ್ಕಾಗಿ ಚಾರುಕೀರ್ತಿ ಭಟ್ಟಾರಕರು 2-3 ವರ್ಷ ಎಲ್ಲಾಕಡೆ ಪ್ರವಾಸ ಮಾಡಿದ್ದರು. ಭಾರತದ ಇಡೀ ಜೈನ ಸಮಾಜವಲ್ಲದೆ ಇಡೀ ಸಾಧು ವರ್ಗವೇ ತಮ್ಮ ಭಕ್ತಿಯನ್ನು ವ್ಯಕ್ತಪಡಿಸಲು ಅಲ್ಲಿಗೆ ತಲುಪಿತ್ತು.

ಫೆಬ್ರವರಿ 22 ರಂದು ನಡೆದ 1008 ಕಳಶಗಳನ್ನು ಮೊದಲೇ ಶ್ರಾವಕರು ಪಡೆದುಕೊಂಡಿದ್ದರು. ಮಂಗಳಕಾರ್ಯ ನೆರೆವೇರಲು ಇದರಿಂದ ಸುಸೂತ್ರವಾಯಿತು. ನಾವುಗಳು ವಿಡಿಯೋನಲ್ಲಿ ನೋಡಿಯೇ ಅಪೂರ್ವವಾದ ಆನಂದವನ್ನು ಪಡೆದವು. ಇನ್ನು ಸ್ವತಃ ಎದುರಿಗೆ ನೋಡಿದವರಿಗೆ ಇನ್ನಷ್ಟು ಆನಂದ ದೊರಕಿರಬೇಕು. ಇವರೆಲ್ಲರು ಮಹಾನ ಪುಣ್ಯ ಬಂಧವನ್ನು ಹೊಂದಿದವರು.

ವಿಭಿನ್ನ ಕಾರ್ಯಕ್ರಮ

ಅಲ್ಲಿ ಫೆಬ್ರವರಿಯಲ್ಲಿ ಆಚಾರ್ಯ ದೇಶಭೂಷಣ ಮಹಾರಾಜರ ಹೀರಕ ಜಯಂತಿ ಮಹೋತ್ಸವವನ್ನು ಅಚ್ಚರಿಸಲಾಯಿತು. ಇಲ್ಲಿ ವಿಭಿನ್ನ ಸಂಘಗಳ ಸುಮಾರು 20 ದೀಕ್ಷೆಗಳಾಯಿತು. ಇಲ್ಲಿ ನೇಮಿನಾಥ ಪಂಚಕಲ್ಯಾಣ ಮಹೋತ್ಸವವು 14ನೇ ತಾರೀಖಿನಿಂದ 19ರವರೆಗೆ ತನಕ ನೆರವೇರಿತು. ಚಾಮುಂಡರಾಯ ಮಂಟಪದಲ್ಲಿ ವಿದ್ವಾಂಸರಿಂದಲೂ, ಸಾಧು, ಸಾಧ್ವಿಯರಿಂದಲೂ ಪ್ರವಚನಗಳು ನಡೆಯುತ್ತಿದ್ದವು. ಅದಲ್ಲದೆ ಸಾಂಸ್ಕೃತಿಕ ಕಾರ್ಯಕ್ರಮಗಳು ಏರ್ಪಾಟಾಗಿತ್ತು. ಫೆಬ್ರವರಿ 18 ರಂದು ಮಹಿಳಾ ಸಮ್ಮೇಳನವು ಆಯಿತು. 19ರಿಂದ ಸರ್ವಧರ್ಮ ಸಮ್ಮೇಳನವಾಯಿತು. ಇದರಲ್ಲಿ ಶ್ವೇತಾಂಬರ, ದಿಗಂಬರ ಮತ್ತು ವೈದಿಕ ಸಂಪ್ರದಾಯದ ಸಾಧುಗಣದವರೆಲ್ಲ ಸೇರಿದ್ದರು.

ಫೆಬ್ರವರಿ 23ರಂದು ಅಖಿಲ ಭಾರತೀಯ ದಿಗಂಬರ ಜೈನ ಸಿದ್ಧಾಂತ ಸಂರಕ್ಷಣಿಯ ಸಭೆಯು ಏರ್ಪಾಟಾಗಿನ್ನು. 24ರಂದು ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದ ಅಧಿವೇಶನ ನಡೆಯಿತು. ಇದರಲ್ಲಿ ನನ್ನ ಜೈನಭಾರತಿ ಪುಸ್ತಕದ ವಿಮೋಚನೆ ಆಯಿತು. ವಿದ್ಯಾನಂದಜೀ ಆದಿಯಾಗಿ ಎಲ್ಲರ ಪ್ರಶಂಸೆಯನ್ನು

ಪಡೆಯಿತು. ಇದನ್ನು ಅನೇಕ ಭಾರತೀಯ ಭಾಷೆಗಳಿಗೆ ಅನುವಾದ ಮಾಡಲು ಉತ್ತೇಜನ ದೊರಕಿತು. ಫೆಬ್ರವರಿ 25 ಅಖಿಲ ಭಾರತೀಯ ದಿಗಂಬರ ಜೈನ ಮಹಾಸಭೆಯ ಅಧಿವೇಶನವಾಯಿತು.

ಈ ಮಸ್ತಾಕಭಿಷೇಕದಲ್ಲಿ ಮುನಿಗಳು ಆರ್ಯಿಕೆಯರು ಕ್ಷುಲ್ಲಕ ಕ್ಷುಲ್ಲಕಿಯರು ಒಟ್ಟು 151 ಜನ ಇದ್ದರು. ಸಾಧುಗಳ ಸಮ್ಮೇಳನವೇ ಬಹಳ ದಿನಗಳವರೆಗೂ ನಡೆಯಿತು. ಕೆಲವೊಂದು ಮಹತ್ವಪೂರ್ಣವಾದ ನಿರ್ಣಯಗಳನ್ನು ಕೈಕೊಳ್ಳಲಾಯಿತು. ದೇಶಭೂಷಣ, ವಿಮಲಸಾಗರ, ಸುಮತಿ ಸಾಗರರು, ಏಲಾಚಾರ್ಯ ವಿದ್ಯಾನಂದಿಗಳು ಸಂಘಸಹಿತ ಇದ್ದರು. “ದಿಗಂಬರ ಜೈನ ಮುನಿ ಪರಿಷತ್” ಎಂಬ ಹೆಸರಿನಲ್ಲಿ ಒಂದು ಪರಿಷತ್‌ನ್ನು ಸಂಘಟಿಸಲಾಯಿತು. ಇದರಲ್ಲಿ ಏಳು ಪ್ರಮುಖ ಆಚಾರ್ಯರು ಏಳು ಆರ್ಯಿಕೆಯರು ಒಬ್ಬ ಐಲಕರು ಒಬ್ಬ ಕ್ಷುಲ್ಲಕರು ಒಬ್ಬ ಕ್ಷುಲ್ಲಿಕೆ ಮತ್ತು ಭಟ್ಟಾರಕರನ್ನು ನಿಯುಕ್ತಗೊಳಿಸಿದರು. ಒಟ್ಟು 18 ಸಾಧುಗಳ ಪರಿಷದ್‌ನ್ನು ಸಂಘಟಿಸಲಾಯಿತು. ಇದರಲ್ಲಿ ನನ್ನ ಹೆಸರನ್ನು ಸೇರಿಸಲಾಗಿತ್ತು. ಇದೊಂದು ಮಹತ್ವದ ಪ್ರಸ್ಥಾಪವಾಗಿತ್ತು. ಇದರಲ್ಲಿ 7ನೇಯ ಪ್ರಸ್ತಾವ ಅತ್ಯಧಿಕ ಮಹತ್ವಪೂರ್ಣವಾಗಿತ್ತು.

ಪ್ರಸ್ತಾವ 7ರಲ್ಲಿ ದಿಗಂಬರ ಜೈನ ಮುನಿ ಸಮ್ಮೇಳನ ನಿಶ್ಚಯವಾಯಿತು. ಪಿಂಡಶುದ್ಧಿಯುಳ್ಳ ದಿಗಂಬರ ಜೈನ ಧರ್ಮಾನುಯಾಯಿಗಳು ಮುನಿಗಳಿಗೆ ಹಾಗೂ ತ್ಯಾಗಿಗಳಿಗೆ ಆಹಾರ ಕೊಡಬಹುದು ಮತ್ತು ದೀಕ್ಷೆ ತೆಗೆದುಕೊಳ್ಳಬಹುದು ಎಂಬ ನಿರ್ಣಯ ತೆಗೆದುಕೊಳ್ಳಲಾಯಿತು. ಅಲ್ಲದೆ ಪ್ರಮುಖ ಆಚಾರ್ಯ ಧರ್ಮಸಾಗರರು ಹಾಗೂ ಆರ್ಯಿಕಾ ಜ್ಞಾನಮತಿಯವರು ಅಲ್ಲಿ ಉಪಸ್ಥಿತಿ ಇಲ್ಲದೆ ಇದ್ದುದರಿಂದ ಅವರಲ್ಲಿ ಸಮರ್ಥನೆಯನ್ನು ಪಡೆದ ಮೇಲೆ ಅದನ್ನು ಸಾಧುವರ್ಗದಲ್ಲಿ ಜಾರಿಗೊಳಿಸಬೇಕೆಂದು ನಿರ್ಣಯಿಸಲಾಯಿತು. ಶ್ರವಣಬೆಳಗೊಳದಲ್ಲಿ ಲಕ್ಷಾಂತರ ಜನ ಸೇರಿದ್ದರು. ರವೀಂದ್ರಕುಮಾರ, ಮೋತಿಚಂದ್ರ ಮತ್ತು ಮಾಲತಿಯವರು ಮಾರ್ಚ್ 5ರಂದು ಹೊರಟು 8ರಂದು ದೆಹಲಿ ತಲುಪಿದರು.

ಯಾತ್ರಿಗಳ ಸಮೂಹ

ಈ ಮಹಾಮಸ್ತಕಾಭಿಷೇಕದ ಒಂದು ತಿಂಗಳ ಮೊದಲೇ ಶ್ರವಣಬೆಳಗೊಳಕ್ಕೆ ಹೋಗಲು ಒಂದು ಬಸ್ಸಿನ ಜನ ಕಮ್ಮೋಜಿಯ ಧರ್ಮಶಾಲೆಯಲ್ಲಿ ನನ್ನ ಉಪದೇಶ ಕೇಳುತ್ತಿದ್ದರು. ಮತ್ತು ಫೆಬ್ರವರಿಯ ನಂತರ ವಾಪಸ್ಸು ಬಂದಾಗಲು ಜನ ದೆಹಲಿ ಹಸ್ತಿನಾಪುರಕ್ಕೆ ಬಂದು ನನ್ನ ಉಪದೇಶ ಕೇಳಲು ಪ್ರಯತ್ನಿಸುತ್ತಿದ್ದರು.

ಗಜರಥ ಮಹೋತ್ಸವ

ದೆಹಲಿಯಲ್ಲಿ ಪ್ರೇಮಚಂದ ಜೈನರು ಕೆಂಪುಕೋಟೆಯ ಮುಂದಿನ ಸುಭಾಷ ಮೈದಾನದಲ್ಲಿ ಪಕ್ಷಿಗಳಿಗಾಗಿ ಧಾನ್ಯಗಳನ್ನು ಮಾರುತ್ತಿದ್ದರು. ಅವರೇ ಗಜರಥವನ್ನು ಮಾಡಿಸಿದ್ದರು. ಲಾಲಮಂದಿರದಲ್ಲಿ ಇಂದ್ರಧ್ವಜ ವಿಧಾನವನ್ನು ಮಾಡಿ ಗಜರಥವನ್ನು ಹೊರಡಿಸಿದ್ದರು. ನನ್ನ ಉಪಸ್ಥಿತಿಗಾಗಿ ಪ್ರಾರ್ಥಿಸಿದರು. ಮಾರ್ಚ್ 9ರಿಂದ 16ರವರೆಗೆ ದಿಗಂಬರ ಲಾಲಮಂದಿರದಲ್ಲಿ ಈ ಆರಾಧನೆಯನ್ನು ವೈಭವಪೂರ್ಣವಾಗಿ ಆಚರಿಸಲಾಯಿತು. ಪಂ. ಪಂಚರಾಮಶಾಸ್ತ್ರಿಗಳೇ ವಿಧಾನಾಚಾರ್ಯರಾಗಿದ್ದರು. ಮೋತಿಚಂದ್ರ, ರವೀಂದ್ರಕುಮಾರ, ಮಾಲತಿ, ಮಾಧುರಿಯವರು ಸಮಯ ಸಮಯದಲ್ಲಿ ಪೂಜೆ ಉಪದೇಶದಲ್ಲಿ ಪಾಲ್ಗೊಂಡು ಜನರಿಗೆ ಸಂತೋಷ ತಂದುಕೊಟ್ಟರು. 16ರಂದು ದೆಹಲಿಯ ಪ್ರಮುಖ ಬೀದಿಗಳಲ್ಲಿ ಗಜರಥ ಮೆರವಣಿಗೆಯು ಪ್ರಥಮಬಾರಿಗೆ ನಡೆಯಿತು.

ಪ್ರೇಮಚಂದರವರು 1985ರಂದು ಜಂಬೂದ್ವೀಪದ ಪ್ರತಿಷ್ಠೆಯಲ್ಲಿ ಜಂಬೂದ್ವೀಪಕ್ಕಾಗಿಯೇ ಒಂದು ರಥವನ್ನು ಮಾಡಿಸಿ ಕಾಣಿಕೆಯಾಗಿ ಕೊಟ್ಟರು. ಹೀಗೆ ಕೇವಲ ಧಾನ್ಯವನ್ನು ಮಾರುವ ಇವರು ಹಲವಾರು ದೇವಸ್ಥಾನಕ್ಕೆ ರಥಗಳನ್ನು ಮಾಡಿಸಿಕೊಟ್ಟಿದ್ದಾರೆ. ಇದೊಂದು ಧಾನ್ಯ ಮಾರುವವರ ಉದಾರತೆಗೆ ಉದಾಹರಣೆಯಾಗಿದೆ.

ದೆಹಲಿಯಲ್ಲಿ 1979-1980ರ ಎರಡು ಚಾತುರ್ಮಾಸ ನಡೆಯಿತು. ಏಳು ಕಡೆ ನನ್ನ ಸಾನಿಧ್ಯದಲ್ಲಿ ಇಂದ್ರಧ್ವಜದ ಆರಾಧನೆ ಹಾಗೂ ಕೆಲವು ಕಡೆ ಶಾಂತಿವಿಧಾನ ಪಂಚಪರಮೇಷ್ಠಿ ವಿಧಾನ, ಋಷಿಮಂಡಲ ವಿಧಾನ, ಮುಂತಾದವು ಹಾಗೇ ಶಿಕ್ಷಣ ಶಿಬಿರಗಳು ನಡೆದು, ದೆಹಲಿಯ ಸಮಾಜಕ್ಕೆ ಬಹಳ ಲಾಭವೇ ಆಯಿತು. ಇಲ್ಲಿಂದ ನನ್ನ ವಿಹಾರವು ಹಸ್ತಿನಾಪುರಕ್ಕೆ ಹೊರಟಿತು.

೭೬

ಮಂಗಳ ವಿಹಾರ

ನಾನು ಲಾಲಮಂದಿರದಲ್ಲಿ ಮಾರ್ಚ್16ರಂದು ವಿಶಾಲ ಸಭೆಯಲ್ಲಿ ಮಂಗಳ ಆಶೀರ್ವಾದ ಕೊಟ್ಟು ಸಂಘಸಹಿತ ವಿಹಾರ ಹೊರಟು ಮೋರಿಗೇಟಿಗೆ ಬಂದೆ. ಅಲ್ಲಿ ಅಷ್ಟಾಹ್ನಿಕವಾದ ಮೇಲೆ ಮಾರ್ಚ್ 24ರಿಂದ ವಿಹಾರಮಾಡಿ ಏಪ್ರಿಲ್ 9ರಂದು ಹಸ್ತಿನಾಪುರಕ್ಕೆ ಬಂದೆ.

1979ರಂದು ಪ್ರತಿಷ್ಠೆ ಆದ ಮೇಲೆ ಜಂಬೂದ್ವೀಪದಲ್ಲಿ ಎರಡು ಧರ್ಮಶಾಲೆಗಳ ನಿರ್ಮಾಣವಾಗಿತ್ತು. ಈಗ ಆ ಜಾಗದ ಪೂರ್ವ ಮತ್ತು ಉತ್ತರದ ಜಾಗವನ್ನು ಕೊಂಡುಕೊಳ್ಳಲಾಯಿತು. ಏಪ್ರಿಲ್ 10ರಂದು ಸಂಸ್ಥಾನದ ಅಧ್ಯಕ್ಷರಾದ ಕಲಕತ್ತಾದ ಅಮರಚಂದ ಪಹಾಡಿಯಾ ಮತ್ತು ಉಮ್ಮೇದಮಲ ಪಾಂಡ್ಯ ಬಂದಿದ್ದರು. ಇಲ್ಲಿಯ ವಿದ್ಯಾಪೀಠದ ವಿದ್ಯಾರ್ಥಿಗಳು ಒಂದು ಸಣ್ಣ ಸಭೆಯಲ್ಲಿ ಅಧ್ಯಕ್ಷ ಮಹೋದಯರಿಗೆ ಸನ್ಮಾನ ಮಾಡಿದರು. ಈ ಸಂದರ್ಭದಲ್ಲಿ ಶ್ರೀ ಅಮರಚಂದ ಪಹಾಡಿಯಾರವರು ಜಂಬೂದ್ವೀಪಕ್ಕಾಗಿ ಒಂದು ಲಕ್ಷ ರೂಪಾಯಿಗಳ ದಾನವನ್ನು ಘೋಷಣೆ ಮಾಡಿದರು. ಮುಂದೆ ಇದೇ ಹಣದಿಂದ ನೀಲಪರ್ವತದ ನಿರ್ಮಾಣವನ್ನು ಮಾಡಿಸಿ ಚೈತ್ಯಾಲಯದಲ್ಲಿ ವಿಶಾಲವಾದ 2½ ಅಡಿಯ ಜಿನಪ್ರತಿಮೆಯನ್ನು ಇವರಿಂದಲೇ ವಿರಾಜಮಾನಗೊಳಿಸಲಾಯಿತು. ನನ್ನ ಸಾನಿಧ್ಯದಲ್ಲಿ ಬೆಳಗ್ಗೆ ಮಧ್ಯಾಹ್ನ ಅಷ್ಟಪಾಹುಡ, ಸರ್ವಾರ್ಥಸಿದ್ಧಿ ಮೊದಲಾದ ಗ್ರಂಥಗಳ ಸ್ವಾಧ್ಯಾಯ ನಡೆಯುತ್ತಿತ್ತು. ನನ್ನ ಲೇಖನಕಾರ್ಯವು ಸಾಂಗವಾಗಿ ನಡೆಯುತ್ತಿತ್ತು.

ಪ್ರತಿಷ್ಠಾಪನೆಯ ಸಮಾರಂಭ ಹಾಗೂ ಶಿಲಾನ್ಯಾಸ

ವೈಶಾಖ ಶುಕ್ಲ ಸಪ್ತಮಿಯ ದಿನ ಡಿಸೆಂಬರ 10-1981ರಂದು ಪ್ರಾತಃಕಾಲ 84 ಅಡಿ ಎತ್ತರದ ಸುದರ್ಶನ ಮೇರು ಪರ್ವತದ ಪಾಂಡುಕಶಿಲೆಯ ಮೇಲೆ ಭ. ಶಾಂತಿನಾಥರಿಗೆ 108 ಕಳಶಗಳಿಂದ ಅಭಿಷೇಕ ಮಹೋತ್ಸವವು ನಡೆಯಿತು. ಹಾಗೇ ಸುಮೇರು ಪರ್ವತದ ಎರಡನೇ ವರ್ಷದ ಪ್ರತಿಷ್ಠಾಪನೆಯ ಆಚರಣೆಯನ್ನು ಮಾಡಲಾಯಿತು- ಇದೇ ಸಂದರ್ಭದಲ್ಲಿ ತ್ರಿಮೂರ್ತಿ ಮಂದಿರ ಹಾಗೂ ರತ್ನತ್ರಯ ನಿಲಯದ ಶಿಲಾನ್ಯಾಸವನ್ನು ಮಾಡಲಾಯಿತು. ಇಂದು ತ್ರಿಮೂರ್ತಿ ಭವನದ ನಿರ್ಮಾಣ ಮುಗಿದು 1985ರಲ್ಲಿ ಭ. ಶಾಂತಿನಾಥರ ಹಾಗೂ ಭರತ, ಬಾಹುಬಲಿಗಳ ಖಡ್ಗಾಸನದ ಮೂರ್ತಿಯನ್ನು ವಿರಾಜಮಾನಗೊಳಿಸಲಾಯಿತು. ರತ್ನತ್ರಯ ನಿಲಯ 1983 ಮೇ 15ರಂದೇ ಸಿದ್ಧವಾಗಿ ನಾನು ಸಂಘಸಹಿತ ಅಲ್ಲಿಯೇ ನಿಂತು ಧರ್ಮರಾಧನೆಯನ್ನು ಮಾಡಿದೆನು.

ವಿಚಾರ ಬಿಂದು

ಮಹಾಮಸ್ತಕಾಭಿಷೇಕದ ನಂತರ ಒಂದು ದಿನ ದೆಹಲಿಯ ಕಮ್ಲೋಜಿ ಧರ್ಮಶಾಲೆಯಲ್ಲಿ ಕೆಲವು ಶ್ರಾವಕರು ನನ್ನ ಬಳಿ ಜಂಬೂದ್ವೀಪದ ರಚನೆಯ ಕುರಿತು ಮಾತಾಡುತ್ತಿದ್ದರು. ನಾನು ಮಾತಾಡುತ್ತಾ 1972ರಲ್ಲಿ ಜಂಬೂದ್ವೀಪದ ಸಾಮಾನ್ಯವಾದ ಮಾದರಿ ಮಾಡಿದಾಗ ನನ್ನ ಮನಸ್ಸಿನಲ್ಲಿ ಈ ಮಾದರಿಯನ್ನು ಸುಂದರವಾಗಿ ಆಕರ್ಷಣೀಯವಾಗಿ ಮಾಡಿ ಇಡೀ ಭಾರತದಲ್ಲಿಯೇ ಸುತ್ತಾಡಿಸಿ ಜೈನ ಜೈನೇತರರಿಗೆ ಜಂಬೂದ್ವೀಪದ ಪರಿಚಯ ಮಾಡಿಸಬೇಕೆಂದಿದ್ದೆ. ನನ್ನ ಮನಸ್ಸಿನಲ್ಲಿ ಈ ಭಾವನೆ ಮರುಕಳುಹಿಸುತ್ತಲೇ ಇತ್ತು. ಪುನಃ ನಿರ್ವಾಣೋತ್ಸವದ ಸಮಯದಲ್ಲಿ 5 ಕಡೇಯಿಂದ ಐದು ಧರ್ಮಚಕ್ರಗಳು ಹೊರಟವು. ಇದರಿಂದ ನನಗೆ ಸ್ವಲ್ಪ ಶಕ್ತಿ ಬಂದಂತಾಯಿತು. ಮನದ ಯೋಚನೆ ಸಾಕಾರ ಮಾಡಬಲ್ಲೆನೆಂದು. ಸುಮೇರು ಪರ್ವತದ ನಂತರ ನನ್ನ ಯೋಚನೆ ಇಂದಿನ "ಜನಮಂಗಲ ಕಳಶ"ದ ಪ್ರವರ್ತನೆ ಆಯಿತು. ಈಗ "ಜಂಬೂದ್ವೀಪದ ಭಾರತ ವಿಹಾರ" ದ ಯೋಜನೆಯು ಮನದಲ್ಲಿ ಹುಟ್ಟಿದೆ ಎಂದೆ.

ಒಬ್ಬ ಮಹಾನುಭಾವರು ಇದು ಒಳ್ಳೆಯ ಯೋಜನೆ. ಧರ್ಮಪ್ರಭಾವನೆಯ ಜೊತೆ ಜೊತೆಗೆ ನಿಮ್ಮ ನಿರ್ಮಾಣ ಕಾರ್ಯವು ಪೂರ್ಣಗೊಳ್ಳುತ್ತದೆ. ಈ ಮಾತಿನಿಂದ ನನಗೆ ಬಹಳ ಸಂತೋಷವಾಯಿತು. ರವೀಂದ್ರ ಉತ್ಸಾಹಿತನಾಗಿ ಇದರ ರೂಪರೇಖೆಗೆ ತೊಡಗಿದ. ನಾನು ಮೋತಿಚಂದನ ಬಳಿ ಮಾತಾಡಿದಾಗ ಮಾತಾಜೀ ನಾನು ತಮ್ಮ ಆಜ್ಞೆಯನ್ನು ಯಾವಾಗಲೂ ಪಾಲಿಸುತ್ತಿದ್ದೇನೆ. ಮುಂದೆಯು ಪಾಲಿಸುತ್ತೇನೆ. ಆದರೆ ನನ್ನ ಇಷ್ಟ ಜಂಬೂದ್ವೀಪದ ನಿರ್ಮಾಣ ಕಾರ್ಯ ಮೊದಲು ಮುಗಿಯಲಿ ಎಂದು.

ದೆಹಲಿಯ ಒಬ್ಬ ಶ್ರಾವಕರಲ್ಲಿ ಈ ಯೋಜನೆಯ ಬಗ್ಗೆ ತಿಳಿಸಿದಾಗ ಅವರು ಕೂಡ ಪ್ರಶಂಸಿಸಿದರು. ಹಸ್ತಿನಾಪುರಕ್ಕೆ ಬಂದ ಮೇಲೆ ಕೆಲವು ಶ್ರೀಮಂತರಲ್ಲಿಯು ಚರ್ಚಿಸಿದಾಗ ಅವರಿಗೂ ಕೂಡ ಸಂತೋಷವೆನ್ನಿಸಿತು. ಅದರಲ್ಲಿ ಕೆಲವರು ಮಾತಾಜೀ ಈ ಯೋಜನೆಯ ಬಗ್ಗೆ ನಾವು ವಿಚಾರ ಮಾಡುತ್ತೇವೆ ಎಂದರು. ನನ್ನದೊಂದು ಸ್ವಭಾವ ಮನದಲ್ಲಿ ಏನಾದರೊಂದು ಯೋಚನೆ ಬಂದು ಕುಳಿತಿತ್ತೆಂದರೆ ಅದನ್ನು ಮಾಡಿಯೇ ತೀರಬೇಕು. ಯಾರು ನನ್ನ ವಿಚಾರಕ್ಕೆ ಮನ್ನಣೆ ಕೊಡುತ್ತಾರೋ ಅವರಿಂದ ಸಹಯೋಗವನ್ನು ಪಡೆಯುವುದು ಯಾರು ಮನ್ನಣೆ ಕೊಡುವುದಿಲ್ಲವೋದನ್ನು ಗೌಣಗೊಳಿಸುವುದು. ವಾಸ್ತವವಾಗಿ ನಾನು ಆಗಮ ಮತ್ತು ಗುರು ಪರಂಪರೆಯ ಅನುಸಾರವಾಗಿಯೇ ಯೋಚನೆ ಮಾಡುವುದು. ಆದ್ದರಿಂದ ಹಿಂದು ಮುಂದೆ ನೋಡದೆ ಅದನ್ನು ಮಾಡುವ ಸಾಹಸ ಮಾಡಿಬಿಡುತ್ತಿದ್ದೆ.

ನನ್ನ ಹತ್ತಿರ ಕುಳಿತು ರವೀಂದ್ರ ಜಂಬೂದ್ವೀಪದ ಭಾರತ ವಿಹಾರದ ರೂಪರೇಖೆಯನ್ನು ಸಿದ್ಧಗೊಳಿಸುತ್ತಿದ್ದರೆ, ಈ ಕಡೆ ಮೋತಿಚಂದರು ಭೋಜನಶಾಲೆ, ಧರ್ಮಶಾಲೆ, ತ್ರಿಮೂರ್ತಿ ಮಂದಿರ, ರತ್ನತ್ರಯನಿಲಯದ ನಿರ್ಮಾಣಕಾರ್ಯವನ್ನು ತ್ವರಿತಗತಿಯಲ್ಲಿ ಮಾಡಿಸುತ್ತಿದ್ದರು. ವೈಶಾಖ-ಜೇಷ್ಠಮಾಸದ ಬಿರುಬಿಸಿಲಿನಲ್ಲಿ ಕೆಲಸ ಮಾಡಿಸುವುದು ಎಲ್ಲರಿಗೂ ಸಾಧ್ಯವಿಲ್ಲ. ಇದರ ಮಧ್ಯೆ ಸಮಯಮಾಡಿಕೊಂಡು ನನ್ನ ಹತ್ತಿರ ಕುಳಿತುಕೊಂಡು ಜಂಬೂದ್ವೀಪದ ರಚನೆಯ ನಿರ್ಮಾಣದ ಅಡಿ ಇಂಚುಗಳ ನಿರ್ಣಯ ಕೈಗೊಳ್ಳುತ್ತಿದ್ದರು. ಜಂಬೂದ್ವೀಪದಲ್ಲಿ ಆರು ಕುಲಾಚಲ, ನಾಲ್ಕು ಗಜದಂತ 16 ವಕ್ಷಾರ. 34 ವಿಜಯಾರ್ಧ, ಜಂಬೂವೃಕ್ಷ, ಶಾಲ್ಮಲೀ ವೃಕ್ಷ ಗಂಗಾ ಸಿಂಧು ಮೊದಲಾದ 90 ನದಿಗಳು. ಸುಮಾರು 300 ತೋರಣ ದ್ವಾರ ಇವುಗಳು ಎಲ್ಲೆಲ್ಲಿ ಇರಬೇಕೆಂದು ಬರೆದಿದ್ದೆನೋ ಅವನ್ನೆಲ್ಲ ಸರಿಯಾಗಿ ತಿಳಿದುಕೊಂಡು ಬರೆದುಕೊಳ್ಳುತ್ತಿದ್ದರು.

ಜಂಬೂದ್ವೀಪದ ವಿಹಾರ ರೂಪರೇಖೆ

ಸಂಸ್ಥಾನದಲ್ಲಿ ಒಂದು ಸಭೆಯನ್ನು ಕರೆದು ಎಲ್ಲಾ ವಿಷಯಗಳನ್ನು ನಿರ್ಧರಿಸಬೇಕೆಂದು ನಿರ್ಣಯಿಸಲಾಯಿತು. ಜುಲೈ 8ರಿಂದ 18ರವರೆಗಿನ ಅಷ್ಟಾಹ್ನಿಕದಲ್ಲಿ ಲಖನೌನ ನಿರ್ಮಲಕುಮಾರ್ ಸೇರಿ ಮತ್ತು ಡೀಮಾಪುರದ ಪನ್ನಾಲಾಲ ಸೇಠಿಯವರು ಆ ಇಂದ್ರಧ್ವಜ ಆರಾಧನೆ ಮಾಡಬೇಕೆಂದು ಬಯಸಿದರು. ಈ ಆರಾಧನೆಯ ಮಧ್ಯದಲ್ಲಿ ಅನೇಕ ಸಭೆಗಳು ನಡೆದವು. ಜುಲೈ 16ರ ಸಭೆಯಲ್ಲಿ ನಾನು ಚಾತುರ್ಮಾಸಕ್ಕೆ ಅಲ್ಲಿಯೆ ನಿಲ್ಲಬೇಕೆಂದು ಆಗ್ರಹಪಡಿಸಲಾಯಿತು. ಇದು ಜಂಬೂದ್ವೀಪದ ಪ್ರಥಮ ಚಾತುರ್ಮಾಸವಾಯಿತು. ಮೊದಲು ಹಸ್ತಿನಾಪುರದ ದೊಡ್ಡ ಮಂದಿರದಲ್ಲಿ ಕೈಕೊಂಡಿದ್ದ ಜುಲೈ 18ರ ಮಧ್ಯಾಹ್ನ ಒಂದು ಮಹತ್ವಪೂರ್ಣ ಸಭೆಯಲ್ಲಿ ಜಂಬೂದ್ವೀಪ ವಿಹಾರದ ವಿಷಯ ಚರ್ಚಿತವಾಗಿ ಎಲ್ಲರ ಅಭಿಮತ ದೊರೆತು ಹೆಸರಿನ ಬಗ್ಗೆ ಕೊಂಚ ಚರ್ಚೆ ನಡೆದು ಕೊನೆಗೆ "ಜಂಬೂದ್ವೀಪ ಜ್ಞಾನಜ್ಯೋತಿ" ಎಂಬ ಹೆಸರನ್ನು ಎಲ್ಲರು ಒಪ್ಪಿದರು.

ಈ ಮಹತ್ವಪೂರ್ಣ ಕಾರ್ಯಭಾರಕ್ಕಾಗಿ ಒಂದು ವಿಚಾರ ಸಂಕಿರಣವನ್ನು ಆಯೋಜಿಸಿ ಅನೇಕ ವಿದ್ವಾಂಸರನ್ನು ಆಮಂತ್ರಿಸಲಾಯಿತು. ಇದರ ನಂತರ ವೀರಶಾಸನ ಜಯಂತಿಯ ಸಮಾರಂಭ ರಥಯಾತ್ರೆ ಮುಂತಾದ ಕಾರ್ಯಗಳು ಯಶಸ್ವಿಯಾದವು. ಸಭೆಯ ಮೊದಲು ಕೆಲವು ಶ್ರೀಮಂತರು ನನ್ನ ಬಳಿ ನಿವೇದಿಸಿದ್ದರು. ಮಾತಾಜಿ ಈ ಜಂಬೂದ್ವೀಪದ ಮಾದರಿಯನ್ನು ಭಾರತದಾದ್ಯಂತ ವಿಹಾರ ಮಾಡುವುದು ಬಹಳ ಕಠಿಣ ಕೆಲಸವೆಂದು ತಮ್ಮ ಜಂಬೂದ್ವೀಪದ ನಿರ್ಮಾಣಕ್ಕಾಗಿ ನಾವು 30-40 ಶ್ರೀಮಂತರ ಹೆಸರನ್ನ ಸೂಚಿಸುತ್ತೇವೆ. ಅವರೆಲ್ಲರ ಒಂದೊಂದು ಲಕ್ಷ ಸಿಗುತ್ತದೆ ಇದರಿಂದ ನಿರ್ಮಾಣ ಕಾರ್ಯ ಮುಗಿಸಿರಿ ಈ ಯಾತ್ರೆ ಸಾಹಸವನ್ನು ಸ್ಥಗಿತಗೊಳಿಸಿರಿ ಎಂದು. ಅದಕ್ಕೆ ನಾನು ಜಂಬೂದ್ವೀಪದ ಮಾದರಿಯನ್ನು ದೇಶದಲ್ಲೆಲ್ಲ ಸುತ್ತಾಡಿಸಿ ನಿರ್ಮಾಣ ಮಾಡಬೇಕೆಂಬ ನನ್ನ ಉದ್ದೇಶ ಭಾರತದ ಜೈನ ಮತ್ತು ಅಜೈನರಿಗೂ ಭ. ಮಹಾವೀರರ ಅಹಿಂಸಾಮಯ ಧರ್ಮವನ್ನು ತಿಳಿಸುವುದು, ಜಿನಧರ್ಮದ ಪ್ರಭಾವನೆ ವಿಶೇಷವಾಗಿ ಜನಗಳ ಧನವನ್ನು ನಿರ್ಮಾಣದಲ್ಲಿ ತೊಡಗಿಸುವುದರಿಂದ ಜನಗಳಲ್ಲಿ ಆತ್ಮೀಯತೆಯು ಜಂಬೂದ್ವೀಪದಲ್ಲಿ ಬೆಸೆಯುವುದು ನನ್ನ ಉದ್ದೇಶವಾಗಿದೆ.

ನಿಜವಾಗಿಯೂ ಭಾರತಾದ್ಯಂತ ಧರ್ಮ ಪ್ರಭಾವನೆ ಮಾಡಬೇಕೆಂಬುದು ನನ್ನ ಬಹುದಿನದ ಯೋಜನೆ ಆಗಿತ್ತು. ಇದಕ್ಕಾಗಿ ಸಮಯ ಮತ್ತು ಜನಶಕ್ತಿಯ ಪ್ರತೀಕ್ಷೆಯಲ್ಲಿದ್ದೆ. ಇದರಿಂದಾಗಿ ಶ್ರೀಮಂತರ ನಿವೇದನೆಯನ್ನು ತಳ್ಳಿಹಾಕಬೇಕಾಯಿತು. ಯೋಜನೆಯಲ್ಲಿ ಪಂ. ಬಾಬುಲಾಲ ಜಮಾದಾರರು ಯಾವಾಗಲೂ ಉತ್ಸಾಹ ತೋರಿಸುತ್ತಿದ್ದರಿಂದ ಅವರಿಗೆ ಖುಷಿ ಆಯಿತು. ಜಂಬೂದ್ವೀಪದ ಮಾದರಿಯನ್ನು ತಯಾರಿಸಲು ದೆಹಲಿಯಿಂದ ಒಬ್ಬ ಕುಶಲಕರ್ಮಿಯನ್ನು ಕರೆಸಿ, ಭಾದ್ರಪದ ಮಾಸದ ಅನಂತ ಚತುರ್ದಶಿಯಂದು ಈ ಮಂಗಳ ಕೆಲಸವನ್ನು ಪ್ರಾರಂಭಿಸಲಾಯಿತು.

ಜಂಬೂದ್ವೀಪದ ವಿಚಾರ ಸಂಕಿರಣ

ಅನೇಕ ಧಾರ್ಮಿಕ ವಿದ್ವಾಂಸರು, ಆಧುನಿಕ ಪ್ರೊಫೆಸರ್‌ನ್ನು ವಿಚಾರ ಸಂಕಿರಣಕ್ಕಾಗಿ ಶೋಧಪೂರ್ಣ ಲೇಖನಕ್ಕಾಗಿ ಪತ್ರಾಚಾರಗಳು ನಡೆದು ಲೇಖನಗಳು ಬರತೊಡಗಿದವು. ಅಕ್ಟೋಬರ 11ರಿಂದ 15ರ ವರೆಗೆ ಜಂಬೂದ್ವೀಪ ವಿಚಾರ ಸಂಕಿರಣದ ಆಯೋಜನೆ ನಡೆಯಿತು. 11ರಂದು ಉದ್ಘಾಟನೆಯಲ್ಲಿ ಸಾಹಿತ್ಯಾಚಾರ್ಯ ಪಂ. ಪನ್ನಾಲಾಲಜೀ ಯವರನ್ನೇ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು.

ಅಭಿನಂದನ ಗ್ರಂಥ ಸಮರ್ಪಣೆ

ಇದೇ ಸಂದರ್ಭದಲ್ಲಿ ಶಾಸ್ತ್ರಿ ಪರಿಷದ್‌ನಿಂದ ಪಂ. ಬಾಬೂಲಾಲ ಜಮಾದಾರರ ಅಭಿನಂದನ ಗ್ರಂಥವನ್ನು ಬಿಡುಗಡೆಗೊಳಿಸಲಾಯಿತು. ಪಂ. ಬಾಬೂಲಾಲರ ವ್ಯಕ್ತಿತ್ವ ಮತ್ತು ಕೃತಿತ್ವದ ಬಗ್ಗೆ ಹಲವಾರು ವಿದ್ವಾಂಸರ ಅನುಭವವನ್ನು ಒಳಗೊಂಡ ಗ್ರಂಥ ಇದಾಗಿತ್ತು. ಆ ಸಮಯದಲ್ಲಿ ಮೋತಿಚಂದರು ಜ್ವರದಿಂದ ನರಳುತ್ತಿದ್ದರು. ಸಭೆಗೆ ಬಂದು ಪಂ. ಬಾಬೂಲಾಲರು ಜಂಬೂದ್ವೀಪದ ಬಗ್ಗೆ ತೋರಿದ ಅಸೀಮ, ಸಮರ್ಪಿತ ಭಾವನೆ, ಯುವಕರ ಉತ್ಸಾಹ ಬಗ್ಗೆ, ಮನತುಂಬಿ ಹೇಳಿದರು. ನಾನು ಸಹ ಅವರಿಗೆ ಹೃದಯ ತುಂಬಿ ಆಶೀರ್ವದಿಸಿದೆ.

ಜನ್ಮ ದಿವಸದ ಸಭೆ

ಅಕ್ಟೋಬರ್ 13ರ ಶರದ ಪೂರ್ಣಿಯ ದಿನ ನನ್ನ ಹುಟ್ಟಿದ ದಿನವಾದ್ದರಿಂದ ಆ ದಿನ ವಿದ್ವಾಂಸರೆಲ್ಲ ಸಭೆ ಸೇರಿ ತಮ್ಮ ತಮ್ಮ ಭಕ್ತಿಯನ್ನು ಅರ್ಪಿಸಿದರು. ಎಲ್ಲ ವಿದ್ವಾಂಸರು ಒಂದೇ ಅಭಿಪ್ರಾಯವಾಗಿತ್ತು. ಈ ಎಲ್ಲಾ ಉತ್ತಮ ಕಾರ್ಯಗಳಿಗೂ ಕಾರಣರಾದ ಪೂಜ್ಯ ಮಾತಾಜೀಯವರು ಇತಿಹಾಸದಲ್ಲಿ ಅಮರ ರಾಗಬೇಕೆಂದು.

ವಿಚಾರ ಸಂಕಿರಣದಲ್ಲಿ ಅನುಮಾನಗಳು, ಸಮಾಧಾನಗಳು

ಈ ವಿಚಾರ ಸಂಕಿರಣದಲ್ಲಿ ಅನುಮಾನ, ಸಮಾಧಾನಗಳಲ್ಲಿ ಜೈನ ಭೂಗೋಳದ ವಿಷಯದಲ್ಲಿ ನಾನೇ ಪರಿಹರಿಸಬಲ್ಲವಳಾಗಿದ್ದೆ. ಒಬ್ಬ ಜೈನ ವಿದ್ವಾಂಸರು ತಮ್ಮ ತರ್ಕವನ್ನು ಮುಂದಿಟ್ಟರು. ಈ ಜಂಬೂದ್ವೀಪ, ಸಮುದ್ರ ಮೊದಲಾದವು. ಅಪ್ರಯೋಜಿತ ತತ್ತ್ವಗಳಾಗಿವೆ. ಇವನ್ನು ತಿಳಿಯುವುದರಿಂದ ಸಮ್ಯಗ್ದರ್ಶನ ಉಂಟಾಗುವುದಾಗಲಿ ತಿಳಿಯದೆ ಇರುವುದರಿಂದ ಸಮ್ಯಗ್ದರ್ಶನ ಉಂಟಾಗುವುದಿಲ್ಲ ಎಂದಾಗಲಿ ಇಲ್ಲ. ಅದಕ್ಕೆ ಬದಲಾಗಿ ಆತ್ಮ, ಜೀವ, ಅಜೀವ, ತತ್ತ್ವಗಳು ಸಮ್ಯಗ್ದರ್ಶನದ ವಿಷಯವಾಗಿದೆ ಎಂದರು. ಆಗ ನಾನು ತತ್ತ್ವಾರ್ಥಸೂತ್ರ ಮಹಾಭಾಷ್ಯ ಗ್ರಂಥ ತತ್ತ್ವಾರ್ಥ ಶ್ಲೋಕ ವಾರ್ತಿಕದಲ್ಲಿ ದ್ವೀಪ ಸಮುದ್ರ ನದೀ ಎಲ್ಲೇ ಮುಂತಾದ ವಿಶೇಷ ಪ್ರರೂಪಣೆ ಅಪ್ರಯೋಜನವಾಗಿದೆ ಎಂಬ ಶಂಕೆಯನ್ನು ಮಾಡಬಾರದು. ಏಕೆಂದರೆ ಇದು ಮನುಷ್ಯರಿಗೆ ಆಧಾರಭೂತವಾದ ಸ್ಥಳದ ನಿರ್ಣಯವಾಗಿದೆ. ಸಂಪೂರ್ಣ ವಿಶ್ವದಲ್ಲಿಯೇ ಮನುಷ್ಯ ಮತ್ತು ಅದರ ಆಧಾರಭೂತವಾದ 2½ ದ್ವೀಪದ ನಿರೂಪಣೆ ಮಾಡುವುದು ವ್ಯರ್ಥವಲ್ಲ.

"ಇತಿ ತದಾಧಾರಾವಿಶೇಷಾಃ ಸರ್ವೇ ನಿರುಪಣೀಯಾ ಏವ"[೧] ಆಚಾರ್ಯರು ಜೀವತತ್ತ್ವದ ನಿರೂಪಣೆ ಮಾಡುವಾಗ ಮೂರು ಲೋಕ ಮಧ್ಯಲೋಕ ಮುಂತಾದವುಗಳನ್ನು ವರ್ಣನೆ ಮಾಡುವುದು ಆವಶ್ಯಕ. ಜೀವತತ್ತ್ವವನ್ನು ವಿಶೇಷವಾಗಿ ವಿವರಿಸದೆ ಉಳಿದ ತತ್ತ್ವಗಳನ್ನು ವಿಶೇಷ ರೂಪದಿಂದ ವರ್ಣನೆ ಮಾಡಲು ಸಾಧ್ಯವಿಲ್ಲ.

ತದಪ್ರರೂಪೇಣ ಜೀವ-ತತ್ತ್ವಂ ನ ಸ್ಯಾತ್ ಪ್ರರೂಪಿತಂ!
ವಿಶೇಷೇಣೇತಿ ತಜ್ಜ್ಞಾನ-ಶ್ರದ್ಧಾನೇ ನ ಪ್ರಸಿದ್ಧ್ಯತಃ ॥೬॥
ತನ್ನಿ ಬಂಧನ ಮಕ್ಷುಣ್ಣಂ ಚಾರಿತ್ರಂ ಚ ತಥಾ ಕ್ವ ನು।
ಮುಕ್ತಿ ಮಾರ್ಗೋಪದೇಶೋ ನೋ ಶೇಷತತ್ವ ವಿಶೇಷವಾಕ್ ॥[೨]

---

೧. ತತ್ತಾರ್ಥ ಶ್ಲೋಕವಾರ್ತಿಕ, ಖಂಡ ೫..

೨. ತತ್ತಾರ್ಥ ಶ್ಲೋಕವಾರ್ತಿಕ, ಖಂಡ ೫ ಪು. ೩೯೯

ಒಂದು ವೇಳೆ ತತ್ತ್ವಾರ್ಥ ಸೂತ್ರದಲ್ಲಿ ದ್ವೀಪ ಮೊದಲಾದವುಗಳ ವರ್ಣನೆ ಮಾಡದಿದ್ದರೆ ಜೀವ ತತ್ತ್ವದ ನಿರೂಪಣೆಯನ್ನ ತಿಳಿದುಕೊಳ್ಳಲು ಆಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಜೀವ ತತ್ತ್ವದ ಜ್ಞಾನ ಮತ್ತು ಶ್ರದ್ಧಾನ ಎರಡು ವಿಷಯಗಳ ಸಿದ್ಧಿ ಆಗಲಾರದು. ಇವು ಸಿದ್ಧಿಸದೆ. ಚಾರಿತ್ರ ಹೇಗೆ ಉಂಟಾಗುವುದು ಹೀಗೆ ರತ್ನತ್ರಯ ಉಂಟಾಗದೆ ಮೋಕ್ಷ ಮಾರ್ಗದ ಉಪದೇಶ ಹೇಗೆ ಸಾಧ್ಯ.

ಹೀಗೆ ಸಮಾಧಾನ ಹೇಳಿದ ಮೇಲೆ ವಿದ್ವಾಂಸರು ಈ ಶ್ಲೋಕವಾರ್ತಿಕದ ಪ್ರಮಾಣವನ್ನೂ ಗುರುತು ಹಾಕಿಕೊಂಡರು. ಪಂ. ಪನ್ನಾಲಾಲರು ಇದರ ಬಗ್ಗೆ ಬಹಳ ಗೌರವವನ್ನು ತೋರಿಸಿದರು. ಪಂ. ನರೇಂದ್ರಪ್ರಕಾಶ, ಡಾ. ಪ್ರೇಮಸುಮನ ಜೈನ ಮುಂತಾದ ವಿದ್ವಾಂಸರು ಜಂಬೂದ್ವೀಪದ ವಿಷಯವನ್ನು ಸರಿಯಾಗಿ ತಿಳಿದುಕೊಂಡು ಅದು ಸಮ್ಯಗ್‌ಜ್ಞಾನದ ವಿಷಯವೆಂದು ಪರಿಗಣಿಸಿದರು.

ಆರ್ಯಿಕೆ ರತ್ನಮತಿಯವರ ಅಭಿನಂದನ ಗ್ರಂಥ

ಪಂ. ಬಾಬೂಲಾಲರ ಮುಖಂಡತ್ವದಲ್ಲಿ ಕೆಲವು ವಿದ್ವಾಂಸರು ಸೇರಿಕೊಂಡು ಜ್ಞಾನಮತೀ ಮಾತಾಜೀಯವರ ಅಭಿನಂದನ ಗ್ರಂಥವನ್ನು ಸಿದ್ಧಪಡಿಸುವ ವಿಷಯ ನನ್ನ ಕಿವಿಗಳಿಗೆ ಬಿತ್ತು. ವಿದ್ವಾಂಸರಿಗೆ ನಾನು ಜಂಬೂದ್ವೀಪ ಜ್ಞಾನಜ್ಯೋತಿ ಇಡೀ ಭಾರತದಲ್ಲಿ ಸುತ್ತಾಡಿ ಬಂದು ಇಲ್ಲಿ ಅದರ ನಿರ್ಮಾಣ ಕಾರ್ಯವು ಪೂರ್ಣಗೊಂಡು ಪ್ರತಿಷ್ಠೆ ಆಗಬೇಕಾಗಿದೆ. ಇಂತಹುದರಲ್ಲಿ ನನ್ನ ಅಭಿನಂದನ ಗ್ರಂಥದ ಅವಶ್ಯಕತೆ ಏನು ಎಂದೆ. ಆದರೆ ವಿದ್ವಾಂಸರ ವಿಶ್ವಾಸಪೂರ್ಣ ಒತ್ತಾಯದಿಂದಾಗಿ ನಾನು ಒಳ್ಳೆಯದು ನನ್ನ ಜನ್ಮದಾತೆಯಾದ ತಾಯಿ ರತ್ನಮತೀ ಮಾತಾಜೀಯವರು ನಮ್ಮ ಸಂಘದಲ್ಲಿಯೇ ಇದ್ದಾರೆ. ನನ್ನ ಈ ಎಲ್ಲಾ ಕಾರ್ಯದಕ್ಷತೆಗೆ ಮೂಲ ಸ್ರೋತವಾಗಿರುವ ಅವರಿಗೆ ಈ ಎಲ್ಲಾ ಶ್ರೇಯಸ್ಸು ಸೇರಬೇಕಾದುದು ನ್ಯಾಯ ಆದ್ದರಿಂದ ಈ ಅಭಿನಂದನ ಗ್ರಂಥಕ್ಕೆ ಅವರೇ ಬಾದ್ಯರು ಎಂದೆ. ಪಂ. ಬಾಬುಲಾಲರಿಗೂ ಈ ವಿಷಯ ಬಹಳ ಸಮಂಜಸ ಎನಿಸಿತು. ಅವರು ಪುಳಕಿತರಾದರು. ಆರ್ಯಿಕ ರತ್ನಮತಿ ಮಾತಾಜೀಯ ಬಗ್ಗೆಯೇ ಅಭಿನಂದನ ಗ್ರಂಥ ತರಲು ಘೋಷಿಸಿದರು. ಅಲ್ಲಿಯೇ ಸಂಪಾದಕ ಮಂಡಲಿಯ ತೀರ್ಮಾನವು ಆಯಿತು. ಅದರಲ್ಲಿ ಸಾಹಿತ್ಯಾಚಾರ್ಯ ಪನ್ನಾಲಾಲ, ಪಂ. ಕುಂಜೀಲಾಲ ಜೈನ, ಡಾ. ಕಸ್ತೂರಚಂದ್, ಕಾಸಲೀವಾಲ, ಪಂ. ಬಾಬೂಲಾಲ ಜಮಾದಾರರ, ಬ್ರ. ಸುಮತಿ ಬಹಿನಜೀ ಶಾಹ, ಬ್ರ. ವಿದ್ಯುಲ್ಲತಾ, ಬ್ರ. ಕುಮಾರಿ ಮಾಧುರಿ ಶಾಸ್ತ್ರಿ ಮತ್ತು ಅನುಪಮ ಜೈನರ ಒಳಗೊಂಡ ಈ ಸಮಿತಿಯು ಕೆಲಸ ಕೈಕೊಂಡಿತು. ಈ ವಿಷಯವನ್ನು ರತ್ನಮತಿಯವರಿಂದ ಗೋಪ್ಯವಾಗಿ ಇಡಲಾಯಿತು. ತಿಳಿದರೆ ಅವರು ಒಪ್ಪುವುದಿಲ್ಲ ಎಂಬ ಭಯದಿಂದ 1983ರ ನವಂಬರ್‌ನಲ್ಲಿ ಇದನ್ನು ಅವರಿಗೆ ಸಮರ್ಪಿಸಲಾಯಿತು.

ವಿಚಾರ ಸಂಕಿರಣದಲ್ಲಿ ಸನ್ಮಾನ

ಈ ವಿಚಾರ ಸಂಕಿರಣದಲ್ಲಿ ಸಾಹಿತ್ಯಾಚಾರ್ಯ ಪಂ. ಪನ್ನಾಲಾಲಜೀ. ಪಂ. ಬಾಬೂಲಾಲ ಜಮಾದಾರ, ನಿರ್ಮಲ ಕುಮಾರ್ ಸೇಠಿ, ಪನ್ನಾಲಾಲ ಸೇಠಿ, ಎಸ್. ಎಸ್.ಗೋಯಲ್ ಇಂಜಿನಿಯರ್ ಕೈಲಾಸಚಂದ್ ಮೊದಲಾದ ವಿದ್ವಾಂಸರುಗಳನ್ನ ಶ್ರೀಮಂತರನ್ನ ಸನ್ಮಾನಿಸಿ ಅಭಿನಂದನ ಪತ್ರವನ್ನು ನೀಡಲಾಯಿತು. ಹೊಸ ಪ್ರೊಫೆಸರುಗಳು ವಿದ್ವಾಂಸರು ಜ್ಞಾನಜ್ಯೋತಿಯ ಬಗ್ಗೆ ತಮ್ಮ ಸಲಹೆ ಸೂಚನೆಗಳನ್ನು ಕೊಟ್ಟು ತಮ್ಮ ಸಹಕಾರ ಕೊಡುವ ಭರವಸೆಯನ್ನು ನೀಡಿದರು. ಅಲ್ಲಿ ಇದ್ದ ಒಬ್ಬ ಮಹಾನುಭಾವ ವಿಹಾರದಿಂದ ಬರುವ ದ್ರವ್ಯದ ಉಪಯೋಗದ ಬಗ್ಗೆ ಕೇಳಿದ. ತಕ್ಷಣ ಅಲ್ಲಿಯೇ ನರೇಂದ್ರಪ್ರಕಾಶರವರು ಸಮಾಧಾನ ಮಾಡುತ್ತಾ ಹೇಳಿದರು. ಈಗ ಇಲ್ಲಿ

ನಡೆಯುತ್ತಿರುವ ಜಂಬೂದ್ವೀಪದ ಕಾಮಗಾರಿಯನ್ನು ಪೂರ್ಣಗೊಳಿಸಬೇಕು ಮತ್ತು ಈ ಜಾಗದಲ್ಲಿ ಇನ್ನೂ ಹಲವಾರು ಅಭಿವೃದ್ಧಿ ಕೆಲಸಗಳು ಅವಶ್ಯಕವಾಗಿ ಆಗಬೇಕಾಗಿದೆ. ಇದೆಲ್ಲ ಆಗಿ ಉಳಿದ ಹಣವು ಜನಕಲ್ಯಾಣಕ್ಕೋಸ್ಕರ ಯೋಜನೆ ರೂಪಿಸಲಾಗುತ್ತದೆ ಎಂಬ ಭರವಸೆ ಕೊಟ್ಟರು. ಹೀಗೆ ಜನ್ಮದಿನ ಮಹೋತ್ಸವ ಸೆಮಿನಾರ ಎರಡೂ ಅದ್ಭುತ ಯಶಸ್ಸು ಕಂಡವು. ಕಮ್ಮೋಜಿಯ ರಾಜೇಂದ್ರಪ್ರಸಾದ್ ಮೊದಲಾದ ಮಹಾಶಯರು ನನ್ನನ್ನು ದೆಹಲಿಗೆ ಬರಲು ಒತ್ತಾಯಿಸತೊಡಗಿದರು. ಅವರ ಉದ್ದೇಶ ಮಾತಾಜೀ ತಾವು ದೆಹಲಿಗೆ ಬಂದರೆ ಜ್ಞಾನ-ಜ್ಯೋತಿಯ ಉದ್ಘಾಟನೆಯನ್ನು ಇಂದಿರಾಗಾಂಧಿಯವರ ಕೈಯಲ್ಲಿ ಮಾಡಿಸುವುದು ಸುಲಭವಾಗುತ್ತದೆ ಎಂದು. ಆದರೆ ನಾನು ಮನಸ್ಸು ಮಾಡಿರಲಿಲ್ಲ.

ಇಂದ್ರಧ್ವಜ ವಿಧಾನ

ಆರ್ಯಿಕ ರತ್ನಮತಿ ಮಾತಾಜೀಯವರ ಹುಟ್ಟೂರಾದ ಮಹಮೂದ ನಗರದಲ್ಲಿ ಇಂದ್ರಧ್ವಜ ಆರಾಧನೆಯನ್ನು ಹಮ್ಮಿಕೊಳ್ಳಲಾಗಿತ್ತು. ಇದರ ಸಲುವಾಗಿ ಕು. ಮಾಧುರಿಯನ್ನು ಕಳುಹಿಸಲಾಗಿತ್ತು. ಜೈನೇತರರು ಸಹ ಅವಳನ್ನು ನೋಡುವ ಸಲುವಾಗಿಯೇ ನೆರೆದಿದ್ದರಂತೆ. ಅವರಿಗೆಲ್ಲ ಮೋಹಿನಿದೇವಿಯ ಮಗಳು ಎಂಬ ವಿಪರೀತ ಮೋಹ. ಅವರಲ್ಲಿ ಬಹಳಷ್ಟು ಜನ ದೀಕ್ಷಾ ಆದ ಮೇಲೆ ಮೋಹಿನಿಯವರನ್ನು ಕಂಡಿರಲಿಲ್ಲ.

೭೭

ದೆಹಲಿಯ ಕಡೆ ಮಂಗಲ ವಿಹಾರ

ಎಲ್ಲರು ಒಂದೇ ಸ್ವರದಲ್ಲಿ ಮಾತಾಜೀ ದೆಹಲಿಯಲ್ಲಿ ತಮ್ಮ ಸಾನಿಧ್ಯದಲ್ಲಿಯೇ ಪ್ರಧಾನಮಂತ್ರಿ ಇಂದಿರಾಗಾಂಧಿಯವರಿಂದಲೇ ಜ್ಞಾನಜ್ಯೋತಿಯ ಪ್ರವರ್ತನೆ ಆಗಬೇಕಾಗಿದೆ ಎಂದು ಒತ್ತಾಯಿಸತೊಡಗಿದರು. ಆಗ ನಾನು ಹೊರಡಲೇ ಬೇಕಾಯಿತು. ರತ್ನಮತಿ ಮಾತಾಜಿಯವರು ಶಾರೀರಿಕವಾಗಿ ಜರ್ಜರಿತರಾಗಿದ್ದರು. ನಡೆಯಲು ಅಶಕ್ತರಾದ್ದರಿಂದ ಡೋಲಿಯಲ್ಲಿ ಕರೆದೊಯ್ಯೋಣವೆಂದರೆ ಡೋಲಿಯ ಪ್ರಯಾಣವು ಅವರಿಗೆ ಎದೆ ನೋವನ್ನು ತರತೊಡಗಿತು. ನನಗೆ ಸಂದಿಗ್ಧವಾಗ ತೊಡಗಿತು. ತಾಯಿಯವರನ್ನು ಈ ಅವಸ್ಥೆಯಲ್ಲಿ ಬಿಟ್ಟು ಹೊರಡುವಂತೆಯೇ ಇಲ್ಲ. ಒಬ್ಬರನ್ನು ಬಿಡಲು ಸಾಧ್ಯವಿಲ್ಲದ ಪರಿಸ್ಥಿತಿ ಚಿಂತೆಗೆ ಎಡೆಮಾಡಿ ಅಳೆದು ಸುರಿದು ಕೊನೆಗೆ ಧರ್ಮದ ಕೈ ಮೇಲಾಗಿ "ರತ್ನಮತಿ" ಯವರನ್ನು ಕರೆದುಕೊಂಡೇ. ಫೆಬ್ರವರಿ 13ರಂದು ದೆಹಲಿಯ ಕಡೆ ಹೊರಟೆ. ಮೋದಿನಗರದಲ್ಲಿ ಬಹಳ ಚಳಿ ಇತ್ತು. ಆದರೂ ಎಲ್ಲೂ ನಿಲ್ಲದೆ ಫೆಬ್ರವರಿ 27ರಂದು ಬೆಳಗ್ಗೆ 9ಗಂಟೆಗೆ ದೆಹಲಿಯನ್ನು ತಲುಪಿದೆವು. ಮೋರಿಗೇಟಿನ ಮಂದಿರ ಮುಖ್ಯರಸ್ತೆಯಿಂದ ಒಳಗಡೆಗೆ ಇದ್ದುದರಿಂದ ಸದ್ದು-ಗದ್ದಲವು ಅಷ್ಟಾಗಿ ಇರದ ಕಾರಣ ಅಲ್ಲಿಯೇ ತಂಗಿದೆವು. ಮೋರಿಗೇಟ್‌ಗೆ ಶಾಂತಿಭಾಯಿರವರು ಸ್ವಾಗತಿಸಿದರು. ಇದರಿಂದ ಇಡೀ ದೆಹಲಿ ಸಮಾಜಕ್ಕೆ ಬಹಳ ಹರ್ಷ ಉಂಟಾಯಿತು.

ರಾಜಾ ಟಾಯ್ಸ್‌ನ ಡಾ. ಕೈಲಾಸಚಂದ್ ಜೈನರವರು ಇಂದಿರಾಗಾಂಧಿಜೀ ಯವರನ್ನ ಭೇಟಿ ಮಾಡಿ ಕರೆತರುವ ಸಾಹಸ ಮಾಡಿದ್ದರು. ಜನವರಿ 18ರಂದು ಮಾಘ ಮಾಸದ ಅಷ್ಟಮಿಯಂದು ಮೋತಿಚಂದ್, ರವೀಂದ್ರಕುಮಾರ, ಮೋತಿಚಂದ್ ಮಾಲತಿ ಮೊದಲಾದ 17 ಜನರ ಒಂದು ಗುಂಪೇ ಅವರನ್ನು ಭೇಟಿಮಾಡಿ ವಿಷಯವನ್ನು

ಮನವರಿಕೆ ಮಾಡಿಕೊಟ್ಟಿತ್ತು. ಹೋದವರೆಲ್ಲ ಫೋಟೋ ಕೂಡ ತೆಗೆಸಿಕೊಂಡು ಬಂದಿದ್ದರು. ಅವರು ವಿಚಾರಮಾಡಿ ದಿನವನ್ನ ಕೊಡುವ ಭರವಸೆ ಕೊಟ್ಟು ಕಳುಹಿಸಿದ್ದರು. ಮೋರಿಗೇಟ್‌ನಲ್ಲಿ ಇಂದ್ರಧ್ವಜ ಆರಾಧನೆಯನ್ನು ಉತ್ಸಾಹದಿಂದ ಕೈಗೊಂಡಿದ್ದರು.

ಅಭಿನಂದನ ಗ್ರಂಥದ ಬಿಡುಗಡೆ

ಆಚಾರ್ಯ ಶಿರೋಮಣಿ ಧರ್ಮಸಾಗರರ ಕುರಿತು ಒಂದು ಆಕರ್ಷಕ ಅಭಿನಂದನಗ್ರಂಥ ಸಿದ್ಧವಾಗಿತ್ತು. ಅದು ಹಲವಾರು ಕಡೆ ಸಾಧು ಸಾಧ್ವಿಯರ ಸಾನಿಧ್ಯದಲ್ಲಿ ಬಿಡುಗಡೆಯನ್ನು ಹೊಂದಿತು ಹಾಗೇ ಮೋರಿಗೇಟ್‌ನಲ್ಲಿ ನನ್ನ ಸಾನಿಧ್ಯದಲ್ಲಿಯೂ ಉಮ್ಮೇದಜೀ ಪಾಂಡ್ಯ ಅವರು ಅಯೋಜಿಸಿದ್ದರು. ಶ್ರೀ ರಾಜೇಂದ್ರ ಕುಮಾರಜೀ ಅವರು ಗ್ರಂಥ ಬಿಡುಗಡೆ ಮಾಡಿ ನನಗೆ ಮೊದಲ ಪ್ರತಿ ಅರ್ಪಿಸಿದರು. ಈ ಗ್ರಂಥದಲ್ಲಿ ಆಚಾರ್ಯರ ಬಗ್ಗೆ ಸಂಕ್ಷಿಪ್ತ ಪರಿಚಯ ಹಾಗೂ ಅವರ ಗುಣಗಳ ಬಗ್ಗೆ ಬೆಳಕನ್ನು ಬೀರಿದೆ ಅವರಿಗೆ ಇಲ್ಲಿಂದಲೇ ನಮಸ್ಕರಿಸಿದೆ.

ಬಿಂಡರನಲ್ಲಿ ಆಚಾರ್ಯ ಕಲ್ಪಶ್ರೀ ಶ್ರುತಸಾಗರಜೀ ಮಹಾರಾಜರ ಸಾನಿಧ್ಯದಲ್ಲಿ ಫೆಬ್ರುವರಿ 28ರಿಂದ ಮಾರ್ಚ್ 2ರ ವರೆಗೆ ಮೂರುದಿನಗಳ ವರೆಗೆ ವಿದ್ವತ್ ಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ಅಲ್ಲಿ ಮಾರ್ಚ್ ಮೂರರಂದು ಅಭಿನಂದನ ಗ್ರಂಥದ ಬಿಡುಗಡೆಮಾಡಿ ಆ. ಶ್ರುತಸಾಗರರ ಕರಕಮಲಗಳಲ್ಲಿ ಸಮರ್ಪಿಸಲಾಯಿತು. ನಂತರ ಉದಯಪುರದಲ್ಲಿ ಇದ್ದ ಆ.ಧರ್ಮಸಾಗರರ ಬಳಿಗೆ ಆನೆಯ ಮೇಲೆ ಮೆರವಣಿಗೆಯಲ್ಲಿ ವಿದ್ವಾಂಸರ, ಶ್ರೀಮಂತರ ಜಯಘೋಷದೊಂದಿಗೆ ತಂದು ಆಚಾರ್ಯ ಶ್ರೀಯವರಿಗೆ ಗ್ರಂಥ ಅರ್ಪಿಸಲಾಯಿತು. ಅದನ್ನು ಸ್ವೀಕರಿಸಿದ ಅವರು ಅಭಿನಂದನ ಮಾಡುವುದು ಶ್ರಾವಕರ ಕರ್ತವ್ಯವಾಗಿದೆ. ಅವರು ಗುರುಭಕ್ತಿ ತೋರಿಸಿ ಪುಣ್ಯವನ್ನು ಸಂಪಾದಿಸುತ್ತಾರೆ. ಆದರೆ ನನಗೆ ಏಕೆ ಅಭಿನಂದನೆ ಸಾಧು ನರಕಕ್ಕೂ ಹೋಗಬಹುದು. ನಿಗೋದಕ್ಕೂ ಹೋಗಬಹುದು. ಆದರೆ ಗುರುವಿನಲ್ಲಿ ನಿಜವಾದ ಭಕ್ತಿಯನ್ನು ಇಡುವವರು ಏಳು ಭವಗಳಲ್ಲಿ ಮುಕ್ತಿಯನ್ನು ಪಡೆಯುತ್ತಾರೆ. ಆದರೆ ಗುರುವಿಗೆ ಅಭಿನಂದನೆಯ ಬಗ್ಗೆ ಯಾವ ಸಂಬಂಧವು ಇಲ್ಲ. ಅವರು ತಮ್ಮ ಹಿತವನ್ನು ತಾವೇ ಮಾಡಿಕೊಳ್ಳಬೇಕು.

ಆಚಾರ್ಯ ದೇಶಭೂಷಣರು ಜಯಪುರದಲ್ಲಿ

1982ರ ಮಾರ್ಚ್ 28ರಂದು ಆಚಾರ್ಯರತ್ನ ಶ್ರೀ ದೇಶಭೂಷಣ ಮಹಾರಾಜರ ವಿಹರಿಸುತ್ತಾ ಜಯಪುರಕ್ಕೆ ಆಗಮಿಸಿದ್ದರು. ಚೂಲಗಿರಿಯಲ್ಲಿ ವಿಶಾಲವಾದ ಜಿನಬಿಂಬದ ಪಂಚಕಲ್ಯಾಣ ಪ್ರತಿಷ್ಠೆ ನಡೆಯುತ್ತಿತ್ತು. ಬಂಬೂದ್ವೀಪ ಜ್ಞಾನಜ್ಯೋತಿ ಪ್ರವರ್ತನೆಗೋಸ್ಕರ ಸಮಯ ಸಮಯದಲ್ಲಿ ಮೀಟಿಂಗ್ ನಡೆಯುತ್ತಿತ್ತು. ಜಂಬೂದ್ವೀಪ "ಜ್ಞಾನಜ್ಯೋತಿ ಪ್ರವರ್ತನೆ" ಸಮಿತಿಯ ಸಂಘಟನೆಯು ಆಗಿತ್ತು. ನಿರ್ಮಲಕುಮಾರ್ ಸೇಠಿಯವರೇ ಅಧ್ಯಕ್ಷರಾಗಿಯೂ ಮೋತಿಚಂದ್ ಮತ್ತು ರವೀಂದ್ರಕುಮಾರರೇ ಮಹಾಮಂತ್ರಿ ಸಂಚಾಲಕರಾಗಿ ಪಂ. ಬಾಬೂಲಾಲರವರು ಕೆಲಸ ವಹಿಸಿಕೊಂಡಿದ್ದರು.

ಮಹಾವೀರ ಜಯಂತಿ

ದೆಹಲಿಯಲ್ಲಿ ಸಾಕಷ್ಟು ಮೊಹಲ್ಲೆಗಳು ರೂಪುಗೊಂಡಿದ್ದರಿಂದ ಏಪ್ರಿಲ್ 4ರಿಂದ ಜನಕಪುರೀಯ ಮಂದಿರದಲ್ಲಿ ವೇದಿಯ ಶಿಲಾನ್ಯಾಸವಿತ್ತು. ಅಲ್ಲಿ ಹೋಗಿ ಉಪದೇಶಕೊಟ್ಟು ಶಿಲಾನ್ಯಾಸ ಕಾರ್ಯಕ್ರಮ

ಮುಗಿಸಿ ಮರಳಿ ವಿಹಾರ ಮಾಡುತ್ತಾ ಪೂನಾರೋಡ ಧೀರಜ ಮಾರ್ಗವಾಗಿ ಮೋರಿಗೇಟ್‌ಗೆ ಬಂದೆವು. ಇಲ್ಲಿ ಬಂದು ತಿಂಗಳ ಮೊದಲೇ ಮಹಾವೀರ ಜಯಂತಿಯ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಏಪ್ರಿಲ್ 17ರಂದು ಲಾಲ್‌ಮಂದಿರದಲ್ಲಿ ಜ್ಞಾನಜ್ಯೋತಿ ಕಾರ್ಯಾಲಯದ ಉದ್ಘಾಟನೆ ಆಯಿತು. ಆ ಸಮಯದಲ್ಲಿ ಸಾಗರದಲ್ಲಿ ವಿದ್ಯಾಸಾಗರರ ಸಾನಿಧ್ಯದಲ್ಲಿ ಧವಲ ಗ್ರಂಥದ ವಾಚನ ನಡೆಯುತ್ತಿತ್ತು. ಆರ್ಯಿಕೆ ರತ್ನಮತಿಯರ ಆಚ್ಛೆಯಂತೆ ಮಾಲತಿ ಮತ್ತು ರವೀಂದ್ರ ಇಬ್ಬರು ಅಲ್ಲಿಗೆ ತೆರಳಿದ್ದರು.

ವೈಶಾಖ ಶುದ್ಧ ದ್ವಿತೀಯ ರವಿವಾರದಂದು "ಪಿಕ್ಕಿ ಆಡಿಟೋರಿಯಮ್"ನಲ್ಲಿ ಮಹಾವೀರ ಜಯಂತಿ ಕಾರ್ಯಕ್ರಮವನ್ನು ಖಂಡೇಲವಾಲ ಸಮಿತಿಯಿಂದ ಹಮ್ಮಿಕೊಳ್ಳಲಾಗಿತ್ತು. ವಿಜಯಕುಮಾರ ಲೋಹಾಡಿಯರ ಆಹ್ವಾನದಿಂದಾಗಿ ನಾನು ಶ್ಯಾಮಲಾಲರವರ ಮನೆಯಲ್ಲೇ ಆಹಾರ ತೆಗೆದುಕೊಂಡೆ. ಅಲ್ಲಿಂದ ಫಿಕ್ಕಿಹಾಲ್‌ನಲ್ಲಿ ಉಪದೇಶಿಸಿ ಮತ್ತೆ "ಮೋರಿಗೇಟ್‌ಗೆ" ಬಂದೆ.

ಜ್ಞಾನಜ್ಯೋತಿ ಪ್ರವರ್ತನೆಯ ತಯಾರಿ

ಜ್ಞಾನಜ್ಯೋತಿಯನ್ನು ಹೊತ್ತ ವಾಹನದ ನಾಲ್ಕು ಕಡೆಯು ಅನೇಕ ಚಿತ್ರಗಳು ಹಸ್ತಿನಾಪುರದ ಜಂಬೂದ್ವೀಪಕ್ಕೆ ಸಂಬಂಧಿಸಿದ್ದವು. ಇವುಗಳನ್ನು ಬರೆಯಲು ಮೋತಿಚಂದನು ರಾಜಸ್ಥಾನದ ಸುಭಾಷಚಂದ ಪೈಂಟರನನ್ನು ಕರೆತಂದಿದ್ದನು. ಹತ್ತುಚಿತ್ರಗಳನ್ನು ಬಿಡಿಸಿದ್ದು ಇಂದಿಗೂ ಆ ಚಿತ್ರಗಳು ತ್ರಿಮೂರ್ತಿ ಮಂದಿರದಲ್ಲಿವೆ. ಆ ಸುಂದರ ಚಿತ್ರಗಳು.

1. ಮೊದಲ ಚಿತ್ರದಲ್ಲಿ ರಾಜಕುಮಾರ ಶ್ರೇಯಾಂಸ ಮಲಗಿ ಹಿಂದಿನ ರಾತ್ರಿ ಕನಸಿನಲ್ಲಿ ಸುಮೇರು ಪರ್ವತ ಮುಂತಾದ ಏಳು ಕನಸು ಕಾಣುತ್ತಿರುವುದು.
2. ಎರಡನೆಯ ಚಿತ್ರದಲ್ಲಿ ತೀರ್ಥಂಕರ ವೃಷಭದೇವನಿಗೆ ರಾಜ ಸೋಮಪ್ರಭ, ಅವನ ಪತ್ನಿ ಮತ್ತು ಸಹೋದರ ಶ್ರೇಯಾಂಸರೊಡಗೂಡಿ ಇಕ್ಷುರಸವನ್ನು ಆಹಾರ ಕೊಡುತ್ತಿರುವುದು.
3. ಮೂರನೆಯ ಚಿತ್ರ ಹಸ್ತಿನಾಪುರದಲ್ಲಿ ಜನ್ಮ ತಳೆದ ಭ. ಶಾಂತಿನಾಥ, ಕುಂಥುನಾಥ ಮತ್ತು ಅರಹನಾಥರ ಪ್ರತಿಮೆಗಳು,
4. ನಾಲ್ಕನೆಯ ಚಿತ್ರ ಶಾಂತಿಸಾಗರ ಮಹಾರಾಜರದು.
5. ಐದನೆಯ ಚಿತ್ರ ಭ. ವೃಷಭದೇವರು ಬ್ರಾಹ್ಮಿ ಮತ್ತು ಸುಂದರಿಯರಿಗೆ ವಿದ್ಯಾಭ್ಯಾಸ ಮಾಡಿಸುತ್ತಿರುವುದು.
6. ಆರನೆಯ ಚಿತ್ರ ದ್ರೌಪದಿಯ ವಸ್ತ್ರಾಪಹರಣ ದೃಶ್ಯ.
7. ಏಳನೆಯ ಚಿತ್ರ ಏಳುನೂರು ಮುನಿಗಳ ಉಪಸರ್ಗ ನಿವಾರಣೆಯ ದೃಶ್ಯ.
8. ಎಂಟನೆಯ ದೃಶ್ಯ ಸುಮೇರು ಪರ್ವತದ ಪಾಂಡುಕ ಶಿಲೆಯ ಮೇಲೆ ಭಗವಂತರಿಗೆ ಅಭಿಷೇಕವಾಗುತ್ತಿರುವುದು.
9. ಒಂಬತ್ತನೆಯ ಚಿತ್ರ ಪದ್ಮಸರೋವರದಿಂದ ಗಂಗಾ ಸಿಂಧೂ ನದಿಗಳು ಹುಟ್ಟುತ್ತಿರುವುದು.
10. ಹತ್ತನೆಯ ಚಿತ್ರ ಶ್ರೀ ಬಾಹುಬಲಿಯು ಧ್ಯಾನಮಾಡುತ್ತಾ ಇರುವುದು.

ಹೀಗೆ ಹೇಳುತ್ತಿರುವ ನನ್ನ ಚಿತ್ರ. ಹೀಗೆ ಮೂರುಲೋಕದ ಬಗ್ಗೆ ಚಿಕ್ಕ ಚಿಕ್ಕ ಚಿತ್ರಗಳು ಅನೇಕ ಸೂಕ್ತಿಗಳನ್ನು ಬರೆಯಲಾಗಿತ್ತು. ಈ ಜ್ಯೋತಿವಾಹನದ ಮೇಲೆ ಧಾತುವಿನ ಸುಮೇರು ಪರ್ವತದ ಮೇಲೆ ಜ್ಯೋತಿಯನ್ನು ಬೆಳಗಲಾಗಿತ್ತು.

ಅಡಚಣೆಗಳು

ಇಂದಿರಾಗಾಂಧಿಯವರು ಜ್ಞಾನಜ್ಯೋತಿ ಪ್ರವರ್ತನೆಗೆ ಬರಲು ಆಗುವುದಿಲ್ಲವೆಂದರು. ಈ ಸುದ್ದಿಯನ್ನು ಕೇಳಿದ ಮೋತಿಚಂದ ಮತ್ತೆ ಇದೇ ಪ್ರಯತ್ನದಲ್ಲಿ ತೊಡಗಿದರು. ಮೋರಿಗೇಟಿನ ಒಬ್ಬ ಜೈನ ಜ್ಯೋತಿಷಿಗೆ ಇದಕ್ಕಾಗಿ ಮುಹೂರ್ತ ನೋಡಲು ಹೇಳಿದ್ದರೂ ಎರಡು ಮೂರು ಸಲ ಬಂದವರು ಮಹೂರ್ತವನ್ನಂತೂ ಇಟ್ಟುಕೊಡಲೇ ಇಲ್ಲ. ಅವರಂತೂ ಮಾತಾಜೀ ತಮ್ಮ ಈ ಯೋಜನೆಯನ್ನೇ ಕೈಬಿಡಿರಿ ಎಂದು ಹೇಳತೊಡಗಿದರು. ಏಕೆಂದರೆ ಇಂದಿರಾಗಾಂಧಿಯವರು ಬರುವುದಿಲ್ಲ. ನೀವು ಒಂದೆರಡು ತಿಂಗಳು ಪ್ರಯತ್ನಪಟ್ಟು ಸುಮ್ಮನಾಗುತ್ತೀರ ಎಂದರು. ಇದರ ಬಗ್ಗೆ ಒಬ್ಬ ಪ್ರಸಿದ್ಧ ಸಾಧುಕೂಡ ನನ್ನ ನಿಮಿತ್ತ ಜ್ಞಾನದ ಅನುಸಾರ ಇಂದಿರಾಗಾಂಧಿಯವರು ಬರುವುದಿಲ್ಲ ಎಂಬುದಾಗಿಯೂ ಅಭಿಪ್ರಾಯ ವ್ಯಕ್ತಪಡಿಸಿದರು.

ಇವೆಲ್ಲ ಕೇಳಿದ ಮೇಲೆಯೂ ನನ್ನ ನಿರ್ಧಾರ ಬದಲಾಗಲಿಲ್ಲ. ಆಗ ಯಾರೋ ಹೇಳಿದರು ಜೆ. ಕೆ. ಜೈನ ಸಂಸದ ಸದಸ್ಯರಾಗಿರುವುದರಿಂದ ಅವರನ್ನು ಸಂಪರ್ಕಿಸಿ ಅವರು ಇಂದಿರಾಗಾಂಧಿಯವರನ್ನು ಕರೆತರಬಲ್ಲರೆಂದು ಹೇಳಿದರು. ನಾನು ವೈದ್ಯ ಶಾಂತಿಪ್ರಸಾದ್ ಜೈನರವರಿಗೆ ಜೆ. ಕೆ. ಜೈನರನ್ನ ನನ್ನ ಬಳಿ ಕರೆತರಲು ಹೇಳಿದೆ. ಕೊನೆಗೆ ಜೆ. ಕೆ. ಜೈನ ಮತ್ತು ಅವರು ಮಿತ್ರ ಕೆ. ಸಿ. ಜೈನ ವಕೀಲರು ನನ್ನ ಬಳಿ ಬಂದರು. ನನ್ನ ಹತ್ತಿರ ತುಂಬ ಮಾತಾಡಿ ಕಾರ್ಯಕ್ರಮದ ಬಗ್ಗೆ ಕೇಳಿ ತಿಳಿದುಕೊಂಡು, ಇಂದಿರಾಗಾಂಧಿಯವರನ್ನು ಕರೆತರುವ ವಿಶ್ವಾಸ ತೋರಿದರು.

ಮೇರಠನಿಂದ ಹೊಸ ಬಸ್ಸು ಕೂಡ ದೆಹಲಿಗೆ ಬಂದಿತು. ಜಯಪುರದಲ್ಲಿ ದೇಶಭೂಷಣರ ಸಾನಿಧ್ಯದಲ್ಲಿ ಪಂಚ ಕಲ್ಯಾಣ ನಡೆಯುತ್ತಿತ್ತು. ಜಯಪುರ ಶಾಖೆಯ ಜ್ಞಾನಜ್ಯೋತಿಯ ವಿಷಯದಲ್ಲಿ ಮೀಟಿಂಗ್ ನಡೆಯುತ್ತಿತ್ತು. ಮೋತಿಚಂದ್, ಮಾಧುರಿ ಜಯಪುರಕ್ಕೆ ಹೋದರು. ಮೇ 13ರಂದು ಕೆ. ಸಿ. ಜೈನ ಮತ್ತು ಜೆ. ಕೆ. ಜೈನರು ಸ್ವೀಕೃತಿ ಪಡೆದು ಬಂದರು. ಪತ್ರಿಕೆಯವರಿಗೆ ಸಂದರ್ಶನವನ್ನು ಕೊಡಲಾಯಿತು. ಮಾದರಿಯ ನಿರ್ಮಾಪಕನ ಕೆಲಸವೇ ನಿಧಾನವಾಗಿತ್ತು. ಇಂದಿರಾಗಾಂಧಿಯವರ ತಾರೀಕು ನಿಗದಿಯಾಗಿರಲಿಲ್ಲವಾಗಿ ಎಲ್ಲರೂ ಹಾಸ್ಯ ಮಾಡತೊಡಗಿದರು. ಪಂ. ಬಾಬೂಲಾಲರು ಮಾತಾಜೀ ಮಾದರಿ ಸಿದ್ಧವಾಗುತ್ತಲೇ ನೀವು ಕೈಯಿಂದ ಮುಟ್ಟಿದರೆ ಸಾಕು ಉದ್ಘಾಟನೆ ಆದಂತೆ ನಾವು ರಥ ತೆಗೆದುಕೊಂಡು ಹೊರಡುತ್ತೇವೆ. ಸ್ವಲ್ಪ ಶಾಂತಿಯಿಂದ ಇರಿ, ಕೆಲಸ ಚೆನ್ನಾಗಿಯೆ ಆಗುತ್ತದೆ. ನಾನು ಮೋತಿಚಂದನ ಹತ್ತಿರ ಪರಾಮರ್ಶೆಮಾಡ ತೊಡಗಿದಾಗ ಮಾತಾಜೀ ಆಕುಲರಾಗಬೇಡಿ. ಉದ್ಘಾಟನೆ ಅಕ್ಟೋಬರ್‌ಗೆ ಆದರೂ ಇಂದಿರಾಗಾಂಧಿಯವರ ಹಸ್ತದಿಂದಲೇ ಮಾಡಿಸೋಣವೆಂದು ನನ್ನನ್ನು ಸಮಾಧಾನಿಸಿದರು.

ಇಂದಿರಾಗಾಂಧಿಯವರಿಂದ ರಥದ ಉದ್ಘಾಟನೆ ಮಾಡಿಸುವುದರಿಂದ ಎಲ್ಲಾ ಕಡೆಯಲ್ಲಿಯೂ ರಾಜಕೀಯ ವ್ಯಕ್ತಿಗಳಿಂದ ಸ್ವಾಗತ ಸನ್ಮಾನಗಳು ದೊರೆತು ಜೈನ ಜೈನೇತರ ವ್ಯಕ್ತಿಗಳಿಗೂ ಮಹಾವೀರರ ಉಪದೇಶದ, ಅಹಿಂಸೆ, ಅನೇಕಾಂತ ಮತ್ತು ಅಪರಿಗ್ರಹದ ಸಿದ್ಧಾಂತಗಳು ಗೊತ್ತಾಗುವುದು ಮತ್ತು ಜೈನಧರ್ಮದ ಪ್ರವರ್ತನೆ ಆಗುತ್ತದೆ.

ಇದರಿಂದಾಗಿ ಅವರು ದೃಢವಾಗಿದ್ದರು. ಮೇ 27ರ ಸಾಯಂಕಾಲ ಜೆ. ಕೆ. ಜೈನ 5-6 ಮಂದಿ ಮಹಾನುಭಾವರನ್ನು ಕರೆದಿದ್ದರು. ಪಂ. ಬಾಬೂಲಾಲರು ನನ್ನ ಹತ್ತಿರ ಮಾತಾಜೀ ಆಶೀರ್ವದಿಸಿ ಇಂದು ಕಾರ್ಯಸಫಲವಾಗಲಿ ಇಲ್ಲದಿದ್ದರೆ ನಾವು ಜ್ಯೋತಿರಥವನ್ನು ಉದ್ಘಾಟನೆ ಮಾಡೇ ಬಿಡುತ್ತೇವೆ. ನನ್ನಿಂದ ಇದ್ದಕ್ಕಿದ್ದಂತೆ ಪಂಡಿತ ಜೀ ತಮಗೆ ಇಂದು ಸಫಲತೆ ಸಿಗುತ್ತದೆ ಎಂದೆ. ಏಕೆಂದರೆ ಅಂದು ಮಧ್ಯಾಹ್ನ 9ಲಕ್ಷ ಜಪ ಪೂರ್ಣಗೊಂಡಿತ್ತು.

ಪಂಡಿತರು ನನ್ನ ಚರಣ ಸ್ಪರ್ಶಮಾಡಿ ಆಶೀರ್ವಾದ ಪಡೆದು ಹೊರಟರು. ರವೀಂದ್ರ, 1½ -2ಗಂಟೆಗಳ ನಂತರ ಎಲ್ಲರು ಜಯಕಾರ ಹೇಳುತ್ತಾ ಮಾವಿನಹಣ್ಣುಗಳನ್ನು ಹಿಡಿದುಕೊಂಡು ಬಂದು ಫಲ ಇಟ್ಟು ವಂದಾಮಿ ಹೇಳಿದರು. ಮಾತಾಜೀ ಜೂನ್ 4ರಂದು ಶುಕ್ರವಾರ ಜಂಬೂದ್ವೀಪ ಜ್ಞಾನಜ್ಯೋತಿಯ ಉದ್ಘಾಟನೆಗೆ ಇಂದಿರಾಗಾಂಧಿಯವರು ಸಮ್ಮತಿಸಿದ್ದಾರೆ. ಈಗ ಮಂಗಳ ಆಶೀರ್ವಾದ ಕೊಡಿರಿ. ನಮ್ಮ ಕೆಲಸಗಳನ್ನು ನಿರ್ವಿಘ್ನವಾಗಿ ಪೂರ್ಣಗೊಳಿಸುತ್ತೇವೆ.

ಇದರ ನಂತರ ಹಲವಾರು ಸಭೆಗಳಲ್ಲಿ ಪಂಡಿತರು ನನ್ನ ಜಾಪ್ಯದ ಚಮತ್ಕಾರವನ್ನು ಹೇಳಿದ್ದಾರೆ. ಆದರೆ ನಾನು ಯಾವುದೇ ಉದ್ದೇಶದಿಂದ ಜಪ ಮಾಡಿದ್ದಲ್ಲ. ಹಲವಾರು ತಿಂಗಳಿಂದ ದಿನ 5000 ಜಪದಂತೆ ಲೋಕ ಕಲ್ಯಾಣಾರ್ಥವಾಗಿಯೇ ಮಹಾಮಂತ್ರ ಕೆಲವೊಮ್ಮೆ ಸಿದ್ಧಚಕ್ರದ ಮಂತ್ರವನ್ನು ಜಪಮಾಡುತ್ತಿದ್ದೆ. ಎಲ್ಲರಿಗೂ ಆಶೀರ್ವಾದ ಕೊಟ್ಟೆ. ತಕ್ಷಣವೇ ಮಿಟಿಂಗ್ ಮಾಡಿ ಪೆಂಡಾಲಿನ ವ್ಯವಸ್ಥೆ ಮೊದಲಾದ ಕಾರ್ಯಗಳನ್ನೆಲ್ಲ ಜನರಿಗೆ ಒಪ್ಪಿಸಿ ಆಯಿತು. ಮೇ 27ಕ್ಕೆ ಮೋತಿಚಂದರು ಭಿತ್ತಿಚಿತ್ರ ತಯಾರಿಸಿದರು. ಸಮಯ ಕಡಿಮೆ ಪ್ರಚಾರ ವಿಶೇಷವಾಗಿ ಮಾಡಬೇಕಾಗಿತ್ತು. ಜೆ. ಕೆ. ಜೈನರು ಹೇಳಿದಂತೆ ಜನರು ಕೆಲಸಮಾಡುತ್ತಿದ್ದರು. ಮೇ. 28ರಂದು ಇಂದಿರಾಗಾಂಧಿಯವರ ಸ್ವೀಕೃತಿ ದೊರೆಯಿತು. 29ರಂದು ಪೋಷ್ಟರ್‌ಗಳನ್ನೆಲ್ಲ ಅಚ್ಚುಹಾಕಿಸಲಾಯಿತು.

ಈ ಮಂಗಳ ಕಾರ್ಯಗಳನ್ನು ನೋಡುತ್ತಿದ್ದ ರತ್ನಮತಿ ಮಾತಾಜಿಯವರು ಆನಂದ ವಿಭೋರರಾದರು. ಮೋತಿಚಂದರಂತು ಹಗಲುರಾತ್ರಿ ಒಂದು ಮಾಡಿಕೊಂಡು ಎಲ್ಲಾ ಕಾರ್ಯಕ್ರಮದ ಸಿದ್ಧತೆಯಲ್ಲಿ ತೊಡಗಿದ್ದರು. ರವೀಂದ್ರ ಕುಮಾರ ಆಫೀಸ್ ಪತ್ರ-ಪೋಷ್ಟರ್ ಮುಂತಾದ ವ್ಯವಸ್ಥೆಯಲ್ಲಿ ತೊಡಗಿದ್ದರು. ಕಮಿಟಿಯ ಪದಾಧಿಕಾರಿಗಳು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿಕೊಂಡಿದ್ದರು. ಕಾರ್ಯಕ್ರಮದ ಪೆಂಡಾಲಿನ ಗೇಟನ್ನು ಮೇರುವಿನ ಆಕಾರದಲ್ಲಿ ಮಾಡಲು ನಿರ್ಣಯಿಸಲಾಗಿತ್ತು.

ಬಹಳ ಪರಿಶ್ರಮಪಟ್ಟು ಮಾದರಿಯ ರಥದ ಮೇಲೆ 2½ ಅಡಿಯ ಧಾತುವಿನ ಸುಮೇರು ಪರ್ವತ ಸಿದ್ಧವಾಗಿ ಮೇ-26ರಂದು ಬಂದಿತು. ಎಲ್ಲಾ ವಸ್ತುಗಳು ಸಿದ್ಧವಾಗತೊಡಗಿತು. ಇಂದಿರಾಗಾಂಧಿಯವರಿಗೆ ಕಾಣಿಕೆಯಾಗಿ ಶ್ರೀಗಂಧದ ಸುಮೇರುವಿನ ಪ್ರತಿಕೃತಿಯು ಸಿದ್ಧವಾಯಿತು. ಜಂಬೂದ್ವೀಪದ ಮಾದರಿಯ ಮೋರಿಗೇಟಿನ ಶಾಂತಿಬಾಯಿ ಮನೆಯಲ್ಲಿತ್ತು. ಅಲ್ಲಿಗೆ ಹೋಗಿ ಜಿನಾಭಿಷೇಕ ಮಾಡಿ, ಮಾದರಿಯ ಶುದ್ಧಿಮಾಡಿ, ಯಂತ್ರದ ಸ್ಥಾಪನೆ ಮಾಡಿ ಬಂದೆ.

ಸಭೆಗೆ ಇಂದಿರಾಗಾಂಧಿಯವರ ಆಗಮನ

ಲಾಲಕೀಲಾ ಮೈದಾನದಲ್ಲಿ ಹಾಕಿದ್ದ ಪೆಂಡಾಲಿನಲ್ಲಿ 1982ನೇ ಇಸವಿ ಜೂನ್ 4ರಂದು ಮಧ್ಯಾಹ್ನ 3ರಿಂದ4ರವರೆಗೆ ದೊಡ್ಡದಾದ ಸಭೆಯನ್ನು ಆಯೋಜಿಸಲಾಗಿತ್ತು. ಪ್ರಧಾನಮಂತ್ರಿ 4ರಿಂದ 5ಗಂಟೆಯವರೆಗೆ ಸಮಯ ನೀಡಿದ್ದರು. 3 ಗಂಟೆಯಿಂದಲೇ ಸಭೆ ತುಂಬಿತ್ತು. 4 ಗಂಟೆಗೆ ಸರಿಯಾಗಿ ಇಂದಿರಾಗಾಂಧಿಯವರ ಕಾರು ಪೆಂಡಾಲಿನ ಹತ್ತಿರ ಬಂದು ನಿಂತಿತು. ಸಂಸ್ಥಾನದ ಪದಾಧಿಕಾರಿಗಳು ಮುಂದೆ ಬಂದು ಸ್ವಾಗತಿಸಿದರು. ಹೈಪ್ಪಿ ಸ್ಕೂಲಿನ ಮಕ್ಕಳು ಬ್ಯಾಂಡ ಬಾರಿಸಿ ಸ್ವಾಗತಕೋರಿದರು. ವೇದಿಕೆಯ ಹತ್ತಿರವೇ ಒಂದು ಕುಟೀರದಂತೆ ಮಾಡಿಸಿ ನನ್ನನ್ನು ಮೊದಲೇ ಅಲ್ಲಿ ವಿರಾಜಮಾನಗೊಳಿಸಿದ್ದರು. ಇಂದಿರಾಗಾಂಧಿಯವರನ್ನು ಅಲ್ಲಿಗೆ ಕರೆ ತಂದರು. ಅವರು ಭಕ್ತಿಯಿಂದ ನಮಸ್ಕರಿಸಿ ಯಥೋಚಿತವಾದ ಆಸನದಲ್ಲಿ ಕುಳಿತರು. ಒಂದೆರಡು ಫೋಟೋಗಳನ್ನು ತೆಗೆಯಲಾಯಿತು. ಜೆ. ಕೆ. ಜೈನರವರು ಎಲ್ಲರನ್ನು ಹೊರಡಿಸಿಕೊಂಡು ತಾವು ಅಲ್ಲಿಂದ

ಹೊರಗೆ ಬಂದರು. ಮೊದಲೇ ನಿರ್ಧರಿಸಿದಂತೆ ಇಂದಿರಾಗಾಂಧಿಯವರು ನನ್ನ ಹತ್ತಿರ 2 ನಿಮಿಷ ಏಕಾಂತದಲ್ಲಿ ಮಾತಾಡಲು ಕೇಳಿದರು. ನಾನು ಸಮಯೋಚಿತವಾಗಿ ಉತ್ತರ ಕೊಟ್ಟೆ. ದೇಶದ ಹಲವಾರು ಸಮಸ್ಯೆಗಳನ್ನು ಹೇಳಿದರು. ಇದಕ್ಕೆ ಸಮಾಧಾನವನ್ನು ಹೇಳಿದೆ. ಅವರು ಮಾತನಾಡುತ್ತಾ ಎಷ್ಟು ತನ್ಮಯರಾದರೆಂದರೆ 2 ನಿಮಿಷ ಏನು 15 ನಿಮಿಷಗಳೇ ಕಳೆದವು. ಆ ಕಡೆ ಸಭೆಯಲ್ಲಿ ಕಾತುರತೆ ಹೆಚ್ಚತೊಡಗಿತು. ನಾನು ಮಾತಾನಾಡುತ್ತಾ ಅಹಿಂಸಾಧರ್ಮ ಮತ್ತು ಭಾರತೀಯ ಸಂಸ್ಕೃತಿಯ ಸುರಕ್ಷೆಯ ಕಡೇ ಹೆಚ್ಚು ಒತ್ತುಕೊಡುತ್ತಾ ಧರ್ಮದಲ್ಲಿಯೇ ರಾಷ್ಟ್ರದ ಶಾಂತಿ ಅಡಗಿದೆ. ಜನ-ಜನಗಳಲ್ಲಿ ಶಾಂತಿ ನೆಲಸುತ್ತದೆ. ಸಾಂಪ್ರದಾಯಿಕತೆಯ ಹೆಸರಿನಲ್ಲಿ ಹಿಂಸೆ-ಅನೈತಿಕತೆ ದೇಶಕ್ಕೆ ಹಾನಿಪ್ರದವಾದುದು ಮುಂತಾಗಿ ಹೇಳಿದೆ. ಇಂದಿರಾಗಾಂಧಿಯವರು ಹಸ್ತಿನಾಪುರಕ್ಕೆ ಕೂಡ ಬರುವ ಭರವಸೆಯನ್ನು ಕೊಟ್ಟರು.

ಹೀಗೆ ಹಿತಕರವಾದ ವಾರ್ತಾಲಾಪದ ನಂತರ ಇಂದಿರಾಗಾಂಧಿಯವರು ವೇದಿಕೆಗೆ ಬಂದರು. ನಾನು ವೇದಿಕೆಗೆ ತಲುಪಿದೆ. ಜನರೆಲ್ಲ ಎದ್ದುನಿಂತು ನಮಸ್ಕರಿಸಿದರು. ನಮಸ್ಕಾರವನ್ನು ಸ್ವೀಕರಿಸಿದ ಇಂದಿರಾಗಾಂಧಿ ಆಸೀನರಾದರು. ಇಡೀ ಸಭೆಯ ಸಂಚಾಲನೆಯ ಭಾರವನ್ನು ಜೆ. ಕೆ. ಜೈನರೇ ವಹಿಸಿದ್ದರು. ಮೊದಲು ಕು. ಮಾಧುರಿಯಿಂದ ಮಂಗಳಾಚರಣೆ ಆಯಿತು. ಅದರ ಸಂದರ್ಭಿತ ಪ್ರಸಂಗವು ನೆನಪಿದೆ.

ತ್ವಯಾ ಧೀಮನ್ ಬ್ರಹ್ಮಪ್ರಣಿಧಿ ಮನಸಾ ಜನ್ಮನಿಗಲಂ ।
ಸಮೂಲಂ ನಿರ್ಭಿನ್ನಂ ತ್ವಮಸಿ ವಿದುಷಾಂ ಮೋಕ್ಷಪದವೀ ॥
ತ್ವಯಿ ಜ್ಞಾನ ಜ್ಯೋತಿರ್ವಿಭವ ಕಿರಣೈರ್ಭಾತಿ ಭಗವನ್ ।
ಅಭೂವನ್ ಖದ್ಯೋತಾ ಇವ ಶುಚಿರವಾವನ್ಯಮತಯಃ ।

ಮಂಗಲಾಚರಣದ ನಂತರ ಆಗಿನ ಗೃಹಮಂತ್ರಿಗಳಾದ ಪ್ರಕಾಶಚಂದ್ ಸೇಠಿಯವರು ಇಂದಿರಾಗಾಂಧಿಯವರಿಗೆ ಪುಷ್ಪಹಾರ ಹಾಕಿ ಸ್ವಾಗತಿಸಿದರು. ನಿರ್ಮಲಕುಮಾರ ಸೇಠಿಯವರು ಸಮ್ಮಾನಪತ್ರ ಓದಿದರು. ನಂತರ ರವೀಂದ್ರಕುಮಾರ್ ಸಂಸ್ಥಾನದ ಪರಿಚಯ ಮಾಡಿಕೊಟ್ಟನು. ಮೋತಿಚಂದ ಜಂಬೂದ್ವೀಪದ ಜ್ಞಾನಜ್ಯೋತಿಯ ಸ್ವರೂಪ, ವ್ಯವಸ್ಥೆಗಳ ಬಗ್ಗೆ ತಿಳುವಳಿಕೆ ಕೊಟ್ಟರು. ನಾನು ಆಶೀರ್ವಾದ ಪೂರ್ವಕವಾದ ಪ್ರವಚನದಲ್ಲಿ ಯುಗಾದಿ ಭ.ವೃಷಭದೇವರ ಸಮಯದ ಬಗ್ಗೆ ಬೆಳಕು ಬೀರುತ್ತಾ ಕರ್ಮಭೂಮಿಯ ವ್ಯವಸ್ಥೆಯ ಬಗ್ಗೆ ಹೇಳಿ ಪುನಃ ಜಂಬೂದ್ವೀಪದ ಸಂಕ್ಷಿಪ್ತ ಪರಿಚಯ, ಭರತಕ್ಷೇತ್ರದ ಆರ್ಯಾಖಂಡದ ಪವಿತ್ರ ವಸುಂಧರೆಯ ಬಗ್ಗೆ ಬೆಳಕು ಬೀರುತ್ತಾ,

ಇದೊಂದು ಮಹರ್ಷಿಗಳ ತಪೋಕ್ಷೇತ್ರ ಇಲ್ಲಿ ಪುಣ್ಯಶಾಲಿಗಳಾದ ತಪಸ್ವಿಗಳ ಸಾಧನೆ ಮತ್ತು ತಪಸ್ಸಿನಬಲದಿಂದ ಧರಿತ್ರಿಯು ಪವಿತ್ರಳಾಗಿದ್ದಾಳೆ. ಜೊತೆಗೆ ಇಲ್ಲಿರುವ ಎಲ್ಲ ಜೀವಿಗಳನ್ನು ಪವಿತ್ರಗೊಳಿಸಿದ್ದಾಳೆ. ಸುಖಶಾಂತಿಯನ್ನು ನೀಡಿದ್ದಾಳೆ. ಈ ಸಂದರ್ಭದಲ್ಲಿ ರಾಮಾಯಣದ ಒಂದು ಸೂಕ್ತಿ ನೆನಪಿಗೆ ಬರುತ್ತದೆ.

ಯಸ್ಯ ದೇಶಂ ಸಮಾಶ್ರಿತ್ಯ ಸಾಧವಃ ಕುರ್ವತೇ ತಪಃ ।
ಷಷ್ಠಮಂಶಂ ನೃಪಸ್ತಸ್ಯ ಲಭತೇ ಪರಿಪಾಲನಾತ್ ।

ಯಾವ ದೇಶದಲ್ಲಿ ಸಾಧುಜನರು ತಪಸ್ಸು ಮಾಡುತ್ತಾರೋ ಅಲ್ಲಿಯ ಶಾಸಕ ಅವರ ಪ್ರತಿಪಾಲನೆಯನ್ನು ಮಾಡುವುದರಿಂದ ಸಾಧುಗಳ ತಪಶ್ಚರ್ಯದ 6ನೇ ಒಂದು ಭಾಗದ ಪುಣ್ಯ ಅವನಿಗೆ ಲಭಿಸುತ್ತದೆ. ಇದರಿಂದಾಗಿಯೇ ಸಾಧುಗಳ ತಪಶ್ಚರ್ಯದ ಪುಣ್ಯ ಇಂದು ಇಂದಿರಾಗಾಂಧಿಯವರ ಪರಮಸೌಭಾಗ್ಯ ನಾನು ನೋಡಿರುವಂತೆ ಅವರು ಅನೇಕ ಧಾರ್ಮಿಕ ಆಯೋಜನೆಗಳಿಗಾಗಿ ತಮ್ಮ ಸಮಯವನ್ನು ಮೀಸಲಾಗಿರಿಸಿದ್ದಾರೆ.

ಈ ನನ್ನ ಮಾತುಗಳನ್ನು ಹಲವಾರು ಪತ್ರಿಕೆಯವರು ಗುರುತು ಹಾಕಿಕೊಂಡರು. ಸಂಸಾರದಲ್ಲಿ ಅಜ್ಞಾನಕ್ಕೆ ಸಮಾನವಾದ ಕತ್ತಲೆ ಬೇರೊಂದಿಲ್ಲ. ಹಾಗೇ ಜ್ಞಾನಕ್ಕೆ ಸಮಾನವಾದ ಬೆಳಕು ಬೇರೆ ಇಲ್ಲ. ಈ ಜ್ಞಾನಜ್ಯೋತಿಯು ಇಡೀ ಭಾರತದಲ್ಲಿಯೇ ಭ್ರಮಣೆ ಮಾಡಿ ಎಲ್ಲಾ ಜೀವಿಗಳ ಅಜ್ಞಾನವೆಂಬ ಅಂಧಕಾರವನ್ನು ದೂರಮಾಡಿ ಜ್ಞಾನದ ಪ್ರಚಾರ ಮಾಡಿ, ಇಡೀ ವಿಶ್ವದಲ್ಲಿಯೇ ಸುಖ-ಮತ್ತು ಶಾಂತಿಯನ್ನು ಉಂಟು ಮಾಡಲಿ. ಪ್ರಧಾನಮಂತ್ರಿ ಇಂದಿರಾಗಾಂಧಿಯವರ ಶುಭ ಹಸ್ತದಿಂದ ಇಂತಹ ಪುಣ್ಯಕಾರ್ಯಗಳು ನಡೆಯುತ್ತಲೇ ಇರಲಿ. ಜನತಂತ್ರಶಾಸನದಲ್ಲಿ ಜನತೆಯಲ್ಲಿ ಧರ್ಮನೀತಿಮಯ ಅನುಶಾಸನ ನಡೆಯುತ್ತಿರಲಿ ಇದು ನನ್ನ ಆಶೀರ್ವಾದವಾಗಿದೆ ಎಂದೆ.

ಶ್ರೀಮತಿ ಇಂದಿರಾಗಾಂಧಿಯವರು ತಮ್ಮ ಭಾಷಣದಲ್ಲಿ ಜಂಬೂದ್ವೀಪದ ವರ್ಣನೆ ನಮ್ಮ ಎಲ್ಲಾ ಶಾಸ್ತ್ರಗಳಲ್ಲೂ ಇದೆ. ಹೇಗೆ ಜೈನ, ಬೌದ್ಧ, ವೈದಿಕ ಧರ್ಮದಲ್ಲಿ ವರ್ಣಿಸಿದೆಯೊ. ಅದು ಕೇವಲ ಭಾರತ ವರ್ಷಕ್ಕೆ ಅಷ್ಟೇ ಅಲ್ಲ ಅದಕ್ಕಿಂತಲೂ ದೊಡ್ಡದಾಗಿದೆ. ಇದನ್ನು ತಿಳಿಯದ ನಾವು ಬೇರೆಯವರನ್ನು ಆಶ್ರಯಿಸಿ, ಅವರಿಂದ ತಿಳಿಯುತ್ತಿದ್ದೇವೆ. ನಾನು ನನ್ನ ಭೂಮಿಯಿಂದ ಜನರಿಂದ ಸಂತುಷ್ಮಳಾಗಿದ್ದೇನೆ ಎಂದು ಹೇಳುತ್ತಾ ಜ್ಞಾನಮತೀ ಮಾತಾಜೀಯವರು ಮಾದರಿಯನ್ನು ಮಾಡಿಸಿ ಹಸ್ತಿನಾಪುರದಲ್ಲಿ ನಿರ್ಮಾಣವನ್ನು ಮಾಡಿಸುತ್ತಿದ್ದಾರೆ. ಇದರಿಂದ ಜ್ಞಾನಜ್ಯೋತಿ ಹೋದ ಕಡೆಯಲ್ಲೆಲ್ಲಾ ಜನರು ಜಂಬೂದ್ವೀಪದ ಬಗ್ಗೆ ತಿಳುವಳಿಕೆಯನ್ನು ಪಡೆಯಲಿದ್ದಾರೆ. ಇದರಿಂದಾಗಿ ಒಂದು ಒಳ್ಳೆಯ ಧಾರ್ಮಿಕ ವಾತಾವರಣ ಖಂಡಿತ ಉಂಟಾಗುತ್ತದೆ. ಇಂತಹ ಒಂದು ಮಹಾನ್ ಕಾರ್ಯದ ಉದ್ಘಾಟನೆ ನನ್ನಿಂದ ಆಗುತ್ತಿರುವುದು ನನಗೆ ಬಹಳ ಖುಷಿಯನ್ನು ತಂದುಕೊಟ್ಟಿದೆ ಎಂದರು.

ಜೆ. ಕೆ. ಜೈನರ ವಕ್ತವ್ಯದ ನಂತರ ಇಂದಿರಾಜೀ ಜಂಬೂದ್ವೀಪ ಜ್ಞಾನಜ್ಯೋತಿಯ ರಥದ ಹತ್ತಿರ ಬಂದರು. ಅಲ್ಲಿ ಶ್ಲೋಕ, ಮಂತ್ರೋಚ್ಚಾರಣೆಯಿಂದ ಅವರ ಕರಕಮಲಗಳಿಂದ ವಿಧಿ ಪೂರ್ವಕವಾಗಿ ಉದ್ಘಾಟನೆ ಮಾಡಿಸಲಾಯಿತು. ಮೊದಲು ಅವರ ಕೈಗಳನ್ನು ನೀರಿನಿಂದ ತೊಳೆಸಿ ಸಂಘಧ ಬ್ರಹ್ಮಚಾರಿಣಿಯವರು ಅವರ ಕೈಗಳಿಗೆ ಕಂಕಣವನ್ನು ಕಟ್ಟಿದರು.

ಅರ್ಹತೋ ಮಂಗಲಂ ಕುರ್ಯುಃ ಸಿದ್ಧಾಃ ಕುರ್ಯುಶ್ಚ ಮಂಗಲ ।
ಆಚಾರ್ಯಃ ಪಾಠಕ ಶ್ಚಾಪಿ ಸಾಧವೋ ತವ ಮಂಗಲಂ॥

ಪುಷ್ಪಾಂಜಲಿ ಮಾಡುವಾಗಲು ಮಂತ್ರೋಚ್ಚರಣೆ ಮಾಡಲಾಯಿತು.

ಜ್ಯೋತಿರ್ವ್ಯಂತರ ಭಾವನಾಮರಗೃಹೇ ಮೇರೌ ಕುಲಾದ್ರೌ ತಥೌ।
ಜಂಬೂ ಶಾಲ್ಮಲೀ ಚೈತ್ಯ ಶಾಖಿಷು ತಥಾ ವಕ್ಷಾರರೂಪ್ಯಾದ್ರಿಷು ॥
ಇಷ್ವಾಕಾರಗಿರೌ ಚ ಕುಂಡಲನಗೇ ದ್ವೀಪೆ ಚ ನಂದೀಶ್ವರೇ।
ಶೈಲೇ ಯೇ ಮನುಜೋತ್ತರೇ ಜಿನಗೃಹಾಃ ಕುರ್ವಂತು ತೇ ಮಂಗಲಂ॥

ಮಾದರಿಯ ಮೇಲೆ ಪುಷ್ಪಾಂಜಲಿ ಮಾಡಿ ಸ್ವಸ್ತಿಕವನ್ನು ಬರೆದು ಶ್ರೀ ಫಲವನ್ನಿಟ್ಟು ನಂತರ

ಓಂ ಶ್ರೀಮಜ್ಜಿನಶಾಸನೇ ಭಗವತೋ ಮಹತಿ ಮಹಾವೀರ ವರ್ಧಮಾನ ತೀರ್ಥಂಕರ ಧರ್ಮತೀರ್ಥಸ್ಯ ಶ್ರೀ ಮೂಲ ಸಂಘೇ ಮಧ್ಯಲೋಕೆ ಜಂಬೂದ್ವೀಪ ಭರತಕ್ಷೇತ್ರೇ ಆರ್ಯಖಂಡೇ ಇಂದ್ರಪ್ರಸ್ಥನಗರೇ ಜೇಷ್ಮಮಾಸೇ

ಶುಕ್ಲಪಕ್ಷೇ ತ್ರಯೋದಶ್ಯಾಂ ತಿಥೌ ಶುಕ್ರವಾಸರೇ ಶುಭಲಗ್ನೇ ಮಂಗಲ ವೇಲಾಯಾಂ ಆರ್ಯಿಕಾರತ್ನ ಶ್ರೀ ಜ್ಞಾನಮತಿ ಸನ್ನಿದ್ಧೌ ಭಾರತ ದೇಶಸ್ಯ ಪ್ರಧಾನಮಂತ್ರೀ ಶ್ರೀಮತಿ ಇಂದಿರಾಗಾಂಧಿ ಅಸ್ಯಾಃ ಕರಕಮಲಾಭ್ಯಾಂ ಜಂಬೂದ್ವೀಪ-ಜ್ಞಾನಜ್ಯೋತಿ-ಪ್ರವರ್ತನಂ ಕಾರಯಿಶ್ಯಾಮಹೇ । ಶ್ರೀ ಜನೇಂದ್ರ ದೇವಾಃ ಜಗತಾಂ ಸರ್ವಂಶಾಂತಿಂ ಕುರ್ವಂತು ತುಷ್ಟಿಂ ಕುರ್ವಂತು ಪುಷ್ಟಿಂ ಕುರ್ವಂತು ಸರ್ವಜನ ಮನಸಿ ಸಮ್ಯಕ್ ಜ್ಞಾನಜ್ಯೋತಿಃ ಪ್ರದ್ಯೋತನಂ ಕುರ್ವಂತು ಸ್ವಾಹಾ ।

ಈ ಪ್ರಶಸ್ತಿಯ ನಂತರ ಇಂದಿರಾಗಾಂಧಿಯವರು ಮಾದರಿಗೆ ಆರತಿಯನ್ನು ಎತ್ತಿದರು ನಂತರ

ಸಂಪೂಜಕಾನಾಂ ಪ್ರತಿಪಾಲಕಾನಾಂ ಯತೀಂದ್ರ ಸಾಮಾನ್ಯ ತಪೋಧನಾನಾಂ।
ದೇಶಸ್ಯ ರಾಷ್ಟ್ರಸ್ಯ ಪುರಸ್ಯ ರಾಜ್ಞಾಃ ಕರೋತು ಶಾಂತಿಂ ಭಗವಾನ್ ಜೀನೇಂದ್ರಃ ॥

ಶ್ಲೋಕ ಹೇಳುತ್ತಾ ಶಾಂತಿಧಾರೆ ಆದ ಮೇಲೆ ಪುಷ್ಪಾರ್ಚನೆ ಮಾಡಿ ರಥವನ್ನು ಎಳೆಯಲಾಯಿತು. ಸಭೆಯ ಜನರು ಮಹಾವೀರಸ್ವಾಮೀ ಕಿ ಜಯ, ಅಹಿಂಸಾಧರ್ಮ ಕೀ ಜಯ, ಜಂಬೂದ್ವೀಪ ಜ್ಞಾನಜ್ಯೋತಿ ಕೀ ಜಯ, ಆರ್ಯಿಕಾ ಜ್ಞಾನಮತಿ ಮಾತಾಜೀ ಕಿ ಜಯ ಹೀಗೆ ಜಯಕಾರಗಳಿಂದ ಸಭೆಯು ಪ್ರತಿಧ್ವನಿಸ ತೊಡಗಿತು. ವಾದ್ಯಗಳ ಮಧುರ ಧ್ವನಿ ಉಚ್ಚಧ್ವನಿಗಳಿಂದ ದೆಹಲಿಯ ಇಡೀ ಚಾಂದನಿ ಚೌಕವೇ ತುಂಬಿ ತುಳುಕ ತೊಡಗಿತು. ಇಂದಿಗೂ ಆ ನೆನಪು ಮನದಲ್ಲಿ ಬರುತ್ತಲೇ ಇಡೀ ದೃಶ್ಯವೇ ಮನದ ಮುಂದೆ ಬಂದಂತಾಗಿ ಮನ ರೋಮಾಂಚನಗೊಳ್ಳುತ್ತದೆ. ಹೃದಯ ತುಂಬಿ ಬಂದಂತಾಗುತ್ತದೆ.

ದೆಹಲಿಯಲ್ಲಿ ಜ್ಞಾನ ಜ್ಯೋತಿ ಮೆರವಣಿಗೆ

ಅದೇ ಕ್ಷಣ ಜ್ಞಾನಜ್ಯೋತಿಯ ಮೆರವಣಿಗೆ ಹೊರಟಿತು. ಚಾಂದನೀ ಚೌಕದಿಂದ ಮುಂದೆ ಹೊರಟಿತು. ಮೊದಲು ನಿರ್ಮಲಕುಮಾರ್ ಸೇಠಿಗಳು ಸೌಧರ್ಮ ಇಂದ್ರನ ಪದವಿಯನ್ನೂ ಸ್ವೀಕರಿಸಿದ್ದರು. ರಥದಲ್ಲಿ ಇಂದ್ರ, ಇಂದ್ರಾಣಿಯ ಪಾತ್ರದಲ್ಲಿ ಭಯಂಕರ ತಾಪದಲ್ಲೂ ಕುಳಿತಿದ್ದರು. ಉತ್ಸಾಹದಿಂದ ನಾನು ಲಾಲಮಂದಿರದ ಸ್ವಲ್ಪ ದೂರದವರೆಗೂ ಮೆರವಣಿಗೆಯ ಜೊತೆ ನಡೆದುಕೊಂಡು ಹೋದೆ. ಮೆರವಣಿಗೆ ರಾತ್ರಿ 9 ಗಂಟೆಗೆ ಕರೋಲ್‌ಬಾಗ್ ತಲುಪಿ ಅಂದಿನ ಪ್ರಯಾಣ ಮುಗಿಯಿತು. ಪುನಃ ಜೂನ್ 6ರಂದು ದೆಹಲಿಯಿಂದ ವಾಗ್ಪಾನವಾಗಿ ಯಾತ್ರೆ ಮುಂದುವರಿಯಿತು. ಮೊದಲು ರಾಜಾಸ್ಥಾನದ ತಿಜಾರಾತೀರ್ಥಕ್ಕೆ ಪ್ರಥಮವಾಗಿ ಮಂಗಳ ಪ್ರವೇಶ ಪಡೆಯಿತು.

ಸಂಚಾಲಕ ಪಂ. ಬಾಬೂಲಾಲ ಜಮಾದಾರ

ಪಂ. ಬಾಬೂಲಾಲ ಜಮಾದಾರರು ಬಹಳ ಉತ್ಸಾಹದಿಂದ ಸಂಚಾಲನೆಯನ್ನು ಮತ್ತು ಮಹಾಮಂತ್ರಿಯಾಗಿದ್ದ ಮೋತಿಚಂದ್ರರು ಕಾರ್ಯಾಲಯದ ವ್ಯವಸ್ಥೆಯನ್ನು ನೋಡುತ್ತಾ ಜ್ಞಾನಜ್ಯೋತಿಯ ಪ್ರವರ್ತನೆಯ ಭಾರವನ್ನು ಹೊತ್ತಿದ್ದರು.

ಜಂಬೂದ್ವೀಪ ಜ್ಞಾನಜ್ಯೋತಿಯ ರೂಪುರೇಖೆ

ಜೈನಾಗಮದಲ್ಲಿ ವರ್ಣಿಸಿರುವಂತೆ ಭೂಗೋಳ ಹಾಗೂ ಖಗೋಳದ ಅಧ್ಯಯನ, ಅನುಸಂಧಾನದ ಪ್ರಕ್ರಿಯೆಯನ್ನು ಗತಿಶೀಲಗೊಳಿಸುವ ಉದ್ದೇಶದದಿಂದಲೇ ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದ ತತ್ತ್ವಾವಧಾನದಲ್ಲಿ ಪರಮ ಪುನೀತವಾದ ಹಸ್ತಿನಾಪುರದಲ್ಲಿ ಜಂಬೂದ್ವೀಪದ ರಚನೆಯು ನಡೆಯತೊಡಗಿತ್ತು.

ಈ ಮಹತ್ವಪೂರ್ಣ ಯೋಜನೆಯ ವ್ಯಾಪಕ ಪ್ರಚಾರ-ಪ್ರಸಾರದ ಸಲುವಾಗಿ ಜಂಬೂದ್ವೀಪ ಜ್ಞಾನಜ್ಯೋತಿಯ ಪ್ರವರ್ತನೆಯ ಯೋಜನೆ ಮಾಡಲಾಗಿತ್ತು. ಈ ಪ್ರವರ್ತನೆಯಲ್ಲಿ ಜಂಬೂದ್ವೀಪದ ಮಾದರಿಯನ್ನು ಒಂದು ಸುಂದರ ಟ್ರಕ್‌ನಲ್ಲಿ ಇಡಲಾಗಿತ್ತು. ಈ ವಾಹನವು 25 ಅಡಿ ಉದ್ದ, 8 ಅಡಿ ಅಗಲ ಹಾಗೂ 13ಅಡಿ ಎತ್ತರವಿತ್ತು. ಈ ಮಾದರಿಯಲ್ಲಿ ವಿದ್ಯುತ್ತಿನ ಪ್ರಕಾಶ ಝರಿಗಳು ಮತ್ತು ನದಿ ಮುಂತಾದವುಗಳು ಪ್ರವಾಹದ ಸುಂದರ ದೃಶ್ಯಗಳನ್ನು ಒಳಗೊಂಡಿತ್ತು. ಈ ವಾಹನದಲ್ಲಿ ಇಂದ್ರನ ಸ್ಥಾನದಲ್ಲಿ ಕುಳಿತುಕೊಳ್ಳುವವರಿಗೆ ಸ್ಥಾನ ಮತ್ತು ಗುಪ್ತದಾನದ ಪೆಟ್ಟಿಗೆಯನ್ನು ಇಡಲು ವ್ಯವಸ್ಥೆ ಮಾಡಲಾಗಿತ್ತು.

ಪ್ರವರ್ತನ ಸಮಿತಿಯ ನಿರ್ಣಯದಂತೆ ಪ್ರತ್ಯೇಕ ಕ್ಷೇತ್ರದಲ್ಲಿಯೂ ಒಬ್ಬ ಸಂಯೋಜಕರನ್ನು ನೇಮಿಸಲಾಗಿತ್ತು. ಸ್ಥಾನೀಯ ಕಾರ್ಯಕ್ರಮದಲ್ಲಿ ಮಾರ್ಗದರ್ಶನ ಹಾಗೂ ಕೇಂದ್ರೀಯ ಸಮಿತಿಯ ಜತೆ ಸಂಪರ್ಕವನ್ನು ಸಾಧಿಸಿ ಶೋಭಾಯಾತ್ರೆಯ ಉದ್ದೇಶವನ್ನು ಸಫಲಗೊಳಿಸುತ್ತಿದ್ದರು. ಪೂರ್ವ ನಿರ್ಧಾರಿತ ಕಾರ್ಯಕ್ರಮದಂತೆ ಎಲ್ಲೆಲ್ಲಿ ಜ್ಯೋತಿ ಸಂಚರಿಸಿತೊ ಅಲ್ಲಿ ಮೊದಲೇ ಜನರು ಸ್ವಾಗತಿಸಲು ಸಿದ್ಧರಾಗಿ ಪ್ರತಿಯೊಂದು ಕ್ಷೇತ್ರದಲ್ಲಿಯು ಇಂದ್ರನ ಪದವಿಯನ್ನು ವಹಿಸಿಕೊಂಡು ಮೆರವಣಿಗೆಯಲ್ಲಿ ಭಾಗವಹಿಸಿ, ಗುಪ್ತದಾನವನ್ನು ಮಾಡಿ ನಿರ್ಮಾಣ ಕಾರ್ಯಕ್ಕೆ ಸಹಕಾರವನ್ನು ಕೊಡ ತೊಡಗಿದರು.

ಸೌಧರ್ಮಇಂದ್ರ, ಐಶಾನ ಇಂದ್ರ, ಸಾನತ್ಕುಮಾರ, ಮಾಹೇಂದ್ರ ಹಾಗೂ ಕುಬೇರ ಈ ಐದು ಪದವಿಯನ್ನು ಉದ್ದೇಶಿಸಲಾಗಿತ್ತು. ತಮ್ಮ ತಮ್ಮ ಸ್ಥಾನಮಾನಕ್ಕೆ ತಕ್ಕಂತೆ ಪದವಿಯನ್ನು ಹರಾಜಿನಲ್ಲಿ ಕೂಗುತ್ತಿದ್ದರು. ಮೆರವಣಿಗೆಯಲ್ಲಿ ಸಂಗೀತ ಮತ್ತು ನೃತ್ಯದ ಆಯೋಜನೆಯನ್ನು ಸಹ ಮಾಡಿಸುತ್ತಿದ್ದರು. ಸಂಚಾಲಕರ ಜೊತೆ ಪಂ. ಗಣೇಶಲಾಲಜೀ[1] ಸಹ ಸಂಚರಿಸುತ್ತಿದ್ದರು. ಈ ಕಾರ್ಯಕ್ರಮದ ವಿವರಣೆಯನ್ನು ಸಮ್ಯಗ್‌ಜ್ಞಾನ ಪತ್ರಿಕೆಯು ಚೆನ್ನಾಗಿ ಪ್ರಚಾರ ಮಾಡಿತು.

ಆಚಾರ್ಯರ ಆಶೀರ್ವಾದ

ಈ ಜ್ಞಾನಜ್ಯೋತಿಯು ಮೊದಲು ಜಯಪುರದಲ್ಲಿದ್ದ ಆಚಾರ್ಯರತ್ನ ಶ್ರೀ ದೇಶಭೂಷಣ ಮಹಾರಾಜರಲ್ಲಿಗೆ ಹೋಗಿ ಅವರ ಆಶೀರ್ವಾದವನ್ನು ಪಡೆಯಿತು. ನಂತರ ಲೋಹಾರಿಯಲ್ಲಿದ್ದ ಆಚಾರ್ಯ ಶ್ರೀ ಧರ್ಮಸಾಗರರ ಆಶೀರ್ವಾದ ದೊರೆಯಿತು. ಆಚಾರ್ಯರಂತೂ ಸಂಘ ಸಮೇತರಾಗಿ ಶೋಭಾಯಾತ್ರೆಯಲ್ಲಿ ಭಾಗವಹಿಸಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ವಿಮಲಸಾಗರರ ಆಶೀರ್ವಾದವೂ ದೊರೆಯಿತು.

ಚಾತುರ್ಮಾಸ ಸ್ಥಾಪನೆ

1982ರ ಚಾತುರ್ಮಾಸವನ್ನು ನಿರ್ಮಲಕುಮಾರ ಸೇಠಿ, ಉಮ್ಮೇದಮಲಪಾಂಡ್ಯ, ಪನ್ನಾಲಾಲಜೀ, ಜೀನೇಂದ್ರ ಪ್ರಸಾದ್, ಸುಮತ ಪ್ರಕಾಶ ಮುಂತಾದವರ ಪ್ರಾರ್ಥನೆಯಂತೆ ಹಾಗೇ ರತ್ನಮತಿಯವರೊಡನೆ ಸಮಾಲೋಚನೆ ಮಾಡಿ ದೆಹಲಿಯ ಕೂಚಾ ಸೇಠ ನಗರದಲ್ಲೇ ಕೈಗೊಂಡೆವು.

---

1. ಇವರು ಕೆಲವು ವರ್ಷಗಳವರೆಗೆ ಆಚಾರ್ಯ ವೀರಸಾಗರರ ವಿದ್ಯಾಪೀಠ ಹಸ್ತಿನಾಪುರದಲ್ಲಿ ಪ್ರಾಚಾರ್ಯರಾಗಿದ್ದರು.

ಮೋರಿಗೇಟಿನಿಂದ ವಿಹಾರ ವರ್ಷಾಯೋಗ ಸ್ಥಾಪನೆ

ಜುಲೈ 4ರಂದು ಮೋರಿಗೇಟಿನಿಂದ ವಿಹಾರ ಹೊರಟು ಸಾಯಿಕಿಲ್ ಮಾರ್ಕೆಟಿನಲ್ಲಿ ಇರುವ ಅತಿಥಿ ಭವನದಲ್ಲಿ ಬಂದು ತಂಗಿದ್ದೆವು. ಸಭೆಯಲ್ಲಿ ಮಂಗಳ ಆಶೀರ್ವಾದವಾಯಿತು. 1982ರ ಜುಲೈ 5ರಂದು ಆಷಾಢದ ಶುಕ್ಲ ಚತುರ್ದಶಿಯಂದು ರಾತ್ರಿ 8ಗಂಟೆಗೆ ಸಭೆ ಪ್ರಾರಂಭವಾಯಿತು. ಆನಂತರ ಜನರು ವರ್ಷಾಯೋಗಕ್ಕೆ ನಿಲ್ಲಲು ಪ್ರಾರ್ಥನೆಯನ್ನು ಸಲ್ಲಿಸಿದರು. ದೆಹಲಿಯಲ್ಲಿ ವರ್ಷಾಯೋಗಕ್ಕೆ ನಿಲ್ಲುವ ಎಲ್ಲರೂ ನಗರದಲ್ಲಿ ಸುತ್ತಾಡುವ ಅವಕಾಶವಿತ್ತು. ನಾನು ಈ ಅವಕಾಶವನ್ನು ಉಪಯೋಗಿಸಿಕೊಂಡೆ ಜುಲೈ 11ರಂದು ಜಂಬೂದ್ವೀಪದಲ್ಲಿ ಸೆಮಿನಾರ್ ಮಾಡುವ ನಿರ್ಣಯ ಕೈಕೊಳ್ಳಲಾಯಿತು.

ವಿಭಿನ್ನ ಕಾರ್ಯಕ್ರಮ

ಆಗಸ್ಟ್ 20 ರಂದು ವೇದವಾಡದಲ್ಲಿ ಆಚಾರ್ಯ ಶಾಂತಿಸಾಗರರ ಪುಣ್ಯತಿಥಿಯನ್ನು ಆಚರಿಸಲಾಯಿತು. ಅಲ್ಲಿಗೆ ಹೋಗಿ ಉಪದೇಶಕೊಟ್ಟಿದ್ದು ಒಳ್ಳೆಯ ಪ್ರಭಾವನೆಯನ್ನು ಬೀರಿತು. ನಗರದ ದೊಡ್ಡಮಂದಿರದಲ್ಲಿ ಆಗಾಗ್ಗೆ ವಿಶೇಷ ಪ್ರವಚನಗಳು ನಡೆಯುತ್ತಲೇ ಇದ್ದವು. ಆಗಸ್ಟ್ 4 ರಂದು ಮೆಟ್ಟಿಲಿನಿಂದ ಇಳಿಯುವಾಗ ಕಾಲುಜಾರಿ ಉಳುಕಿತು. ಆಗ ನಾನು ಅಷ್ಟಾಗಿ ಗಮನ ಕೊಡದೆ ದೊಡ್ಡಮಂದಿರದಲ್ಲಿ ರಕ್ಷಾಬಂಧನದ ದಿನ ಉಪದೇಶ ಕೊಡಲು ಹೋದವಳಿಗೆ ಬರುವಾಗ ನಡೆಯಲು ಆಗದೆ ಕಾಲು ಊತ ಬಂದಿತು. ಈ ನೋವಿನಿಂದ ಸುಮಾರು 4 ತಿಂಗಳು ನೋವು ಅನುಭವಿಸಬೇಕಾಗಿ ಬಂತು.

ದಶಲಕ್ಷಣ ಪರ್ವದಲ್ಲಿ ಪ. ಪನ್ನಾಲಾಲರನ್ನು ಕರೆಸಿದ್ದರು. ಅವರು ದೊಡ್ಡ ಬಸದಿಯಲ್ಲಿ ತತ್ತ್ವಾರ್ಥ ಸೂತ್ರದ ಬಗ್ಗೆ ಪ್ರವಚನ ಮಾಡುತ್ತಿದ್ದರು. ನಾನು ದಶಧರ್ಮಗಳ ಬಗ್ಗೆ ವ್ಯಾಖ್ಯಾನ ಮಾಡುತ್ತಿದ್ದೆ. ಹೀಗೆ ಪರ್ವವು ಪ್ರಭಾವಯುತವಾಗಿ ಕಳೆಯಿತು. ಪಹಾಡಗಂಜನ ಹೇಮಚಂದಜೀ ಉಗ್ರಸೇನರು ನನ್ನ ಸಾನಿಧ್ಯದಲ್ಲಿ ಇಂದ್ರಧ್ವಜ ಆರಾಧನೆಯನ್ನು ಮಾಡಲು ಜೂನ್ ತಿಂಗಳಿಂದ ಕಾಯುತ್ತಿದ್ದರು. ಅವರ ಕೋರಿಕೆಯನ್ನು ಮನ್ನಿಸಿ ಅತಿಥಿ ಭವನದಿಂದ ಪಹಾಡಗಂಜಿಗೆ ಬಂದೆ. ಸೆಪ್ಟೆಂಬರ್ 10ರಂದು ಧ್ವಜಾರೋಹಣ ನಡೆದು 12ರಂದು ವಾರ್ಷಿಕ ರಥೋತ್ಸವವು ಬಹಳ ಸಡಗರದಿಂದ ನೆರವೇರಿತು. ಸೆಪ್ಟೆಂಬರ್ 13ರಂದು ಇಂದ್ರಧ್ವಜ ವಿಧಾನದ ಕಾರ್ಯಕ್ರಮಗಳು ಪ್ರಾರಂಭವಾಯಿತು.

ಆ ಕಡೇ ಶಾಹದರದ ಜನರು ಇಂದ್ರಧ್ವಜ ಆರಾಧನೆ ಮಾಡುವ ಉದ್ದೇಶದಿಂದ ಪ್ರವೀಣಚಂದ್‌ಶಾಸ್ತ್ರಿಗಳನ್ನು ಕಳುಹಿಸಿಕೊಟ್ಟಿದ್ದರು. ಅವರೇ ಧ್ವಜಾರೋಹಣೆ ಮಾಡಿದರು. ಆರ್ಯಿಕೆ ರತ್ನಮತಿಯವರಿಗೆ 2-3 ದಿನಗಳಿಗೊಮ್ಮೆ ಜ್ವರ ಬರತೊಡಗಿತು. ಅವರ ಆರೋಗ್ಯ ಪ್ರಯಾಣ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ. ಆ ಜನರ ವಿಶೇಷ ಒತ್ತಾಯದಿಂದಾಗಿ ಅವರು ಕಮ್ಲೇಜಿಯ ಧರ್ಮಶಾಲೆಯಿಂದ ಬಂದು ಒಂದು ದಿನ ವಿಶ್ರಾಂತಿಯನ್ನು ಪಡೆದು ಶಾಹದರ ಕಡೆಗೆ ಹೊರಟರು. ಮೊಹಮದ್ ಬಾದಿನ ಪಂ. ಪ್ರೇಮಚಂದ ಜೀ ಅವರು ಸಂಸಾರದ ಸಮೇತರಾಗಿ ಹಳ್ಳಿಯ ಕೆಲವು ಮಹಾನುಭಾವರನ್ನು ಕರೆದುಕೊಂಡು ಬಂದಿದ್ದಾರೆ. 25-30 ವಿಧಾನಗಳನ್ನು ಮಾಡಲು ಬಂದಿದ್ದರು. ಅವರಿಗೆ ಇಳಿದುಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗಿತ್ತು.

ಜೊತೆ ಜೊತೆಗೆ ಎರಡು ವಿಧಾನಗಳು

ಸೆಪ್ಟೆಂಬರ್ 26ರಂದು ಜೈನ ಧರ್ಮಶಾಲೆಯಲ್ಲಿ ಇಂದ್ರಧ್ವಜ ಮಂಡಲ ವಿಧಾನಪೂಜೆಯು ಪ್ರಾರಂಭ

ವಾಯಿತು. ಅದೇ ಸಮಯಕ್ಕೆ ಮಂದಿರದಲ್ಲಿ ಮಧ್ಯಾಹ್ನವೇ ಮಹಮದ್‌ನಗರದವರು ಮೂವತ್ತು-ಇಪ್ಪತ್ತನಾಲ್ಕು ವಿಧಾನಗಳ ಆಯೋಜನೆಯನ್ನು ಮಾಡಲಾಗಿತ್ತು. ಒಟ್ಟಿಗೆ ಎರಡು ಆರಾಧನೆ ನಡೆದವು. 1ಗಂಟೆಯಿಂದ 2ಗಂಟೆ ಯವರೆಗೆ ಇಂದ್ರಧ್ವಜ ವಿಧಾನವು ನಡೆಯುತ್ತಿತ್ತು. ಪುನಃ ಎರಡು ಗಂಟೆಯಿಂದ ಮುವತ್ತು, ಇಪ್ಪತ್ತನಾಲ್ಕು ವಿಧಾನವು ಪ್ರಾರಂಭವಾಗುತ್ತಿತ್ತು. ಸಾಯಂಕಾಲದವರೆಗೂ ನಡೆಯುತ್ತಿತ್ತು. ಅಕ್ಟೋಬರ್ 10ರಂದು ರಥಯಾತ್ರೆ ಮಾಡಿ ಆರಾಧನೆಯ ಸಮಾರೋಪವನ್ನು ಮಾಡಲಾಯಿತು. ಒಳ್ಳೆಯ ಧಾರ್ಮಿಕ ವಾತಾವರಣವು ನಿರ್ಮಿತವಾಗಿತ್ತು. ಶಾಂತಿವಿಧಾನ ಮೊದಲಾದ ಹಲವಾರು ಚಿಕ್ಕಪುಟ್ಟ ವಿಧಾನಗಳನ್ನು ಕೂಡ ಕೈಗೊಳ್ಳಲಾಯಿತು.

ಮಂದಿರದ ಶಿಲಾನ್ಯಾಸ

ಭೋಗಲದಲ್ಲಿ ಮಂದಿರದ ಶಿಲಾನ್ಯಾಸ ಮಾಡಲು ಜನರು ಬಹಳ ಒತ್ತಾಯಿಸಿದ್ದರಿಂದ ಭೋಗಲಕ್ಕೆ ಹೋದೆ. ಅಕ್ಟೋಬರ್ 18ರಂದು ಬೆಳಿಗ್ಗೆ 10½ಗಂಟೆಗೆ ಕಾರ್ಯಕ್ರಮ ಪ್ರಾರಂಭವಾಯಿತು. ನನ್ನ ಮಂಗಳ ಆಶೀರ್ವಚನವಾದ ಮೇಲೆ ಶಿಲಾನ್ಯಾಸವಾಯಿತು. ನಂತರ ಆಹಾರವಾಯಿತು. ಮಧ್ಯಾಹ್ನ ಮೂರುಗಂಟೆಗೆ ಪ್ರವಚನದ ಕಾರ್ಯಕ್ರಮವಿತ್ತು. ಮಾರನೆಯ ದಿನ ಬೆಳಗ್ಗೆ ವಿಹಾರ ಕೈಗೊಂಡು ಜೆ. ಕೆ. ಜೈನರವರ ಮನೆಯಲ್ಲಿ ½ಗಂಟೆ ವಿಶ್ರಾಂತಿ ಪಡೆದು ಪ್ರಯಾಣ ಮುಂದುವರಿಸಿ ರಾಜಾಬಾಜಾರ್‌ನ ಮಂದಿರಕ್ಕೆ ಬಂದೆವು. ಅಕ್ಟೋಬರ್ 20ರಂದು ಜೈನ ಹೈಪ್ಪೀ ಶಾಲೆಯಲ್ಲಿ ನನ್ನ ಉಪದೇಶದ ಕಾರ್ಯಕ್ರಮ ಏರ್ಪಾಡಾಗಿತ್ತು.

ಜಂಬೂದ್ವೀಪದ ಜ್ಞಾನಜ್ಯೋತಿ ಸೆಮಿನಾರ್

1982ರ ಅಕ್ಟೋಬರ್ 21ರಿಂದ ನವಂಬರ್ 2ರಂದು ಜ್ಞಾನಜ್ಯೋತಿ ಸೆಮಿನಾರ್ ಇತ್ತು. ಇದರ ಉದ್ಘಾಟನಾ ಸಮಾರಂಭ ಫಿಕ್ಕಿ ಸಭಾಂಗಣದಲ್ಲಿ ಏರ್ಪಾಟಾಗಿತ್ತು. ಜೆ. ಕೆ. ಜೈನರವರು ಪ್ರಯತ್ನಪಟ್ಟು ರಾಜೀವ್‌ಗಾಂಧಿಯವರನ್ನು ಉದ್ಘಾಟನೆಗೆ ಕರೆತಂದರು. ಅವರು ನನ್ನ ಹತ್ತಿರ ಬಂದು 5-10 ನಿಮಿಷ ಮಾತಾಡಿ ಆಶೀರ್ವಾದ ಪಡೆದರು. ಕಾರ್ಯಕ್ರಮದಲ್ಲಿ ಮಾತಾಡುತ್ತಾ ಧರ್ಮವನ್ನು ರಾಜನೀತಿಯಿಂದ ಬೇರೆ ಇಡಬೇಕಾದ ಅವಶ್ಯಕತೆ ಇದೆ. ಹಾಗೇ ಮುಂದುವರಿಸುತ್ತಾ, ಧರ್ಮವನ್ನು ರಾಜನೀತಿಯಿಂದ ಬೇರೆ ಇಡಬೇಕೆಂಬ ಮಾತು ಸರಿ ಇದೊಂದು ಮಹತ್ವಪೂರ್ಣವಾದ ವಿಷಯವೇ ಆಗಿದೆ. ರಾಜನೀತಿಯನ್ನು ಧರ್ಮನೀತಿಯ ಜೊತೆ ನಡೆಸಿದಾಗ ಮಾತ್ರ ದೇಶದಲ್ಲಿ ಸುಖ ಮತ್ತು ಶಾಂತಿ ನೆಲಸಲು ಸಾಧ್ಯ ನಾನು ಇದೇ ಮಾತಿಗೆ ಒತ್ತುಕೊಡುತ್ತಾ ಶಾಸನದಲ್ಲಿ ಹಿಂಸೆಗೆ ಅವಕಾಶವಿರಬಾರದು ಎಂದು ವಿನಂತಿಸಿದೆ.

ರಾಜೀವಗಾಂಧಿಯವರು ಏಳು ದೀಪಗಳನ್ನು ಬೆಳಗಿ ವಿಚಾರ ಸಂಕಿರಣದ ಉದ್ಘಾಟನೆಯನ್ನು ಮಾಡಿದರು. ಜಂಬೂದ್ವೀಪದ ಸ್ಮರಣ ಸಂಚಿಕೆಯನ್ನು ರಾಜೀವ್‌ಗಾಂಧಿಯವರು ಬಿಡುಗಡೆ ಮಾಡಿ ಪ್ರಥಮ ಪ್ರತಿಯನ್ನು ನನಗೆ ಅರ್ಪಿಸಿದರು. ಇದೇ ಸಂದರ್ಭದಲ್ಲಿ ಬೆಳ್ಳಿಯ ಫಲಕದಲ್ಲಿ ಜಂಬೂದ್ವೀಪದ ಮಾದರಿಯನ್ನು ಮಾಡಿಸಿ ರಾಜೀವ್‌ಗಾಂಧಿಯವರಿಗೆ ಅರ್ಪಿಸಲಾಯಿತು. ಉದ್ಘಾಟನೆಯ ನಂತರ ಮೇರಠ ವಿಶ್ವವಿದ್ಯಾನಿಲಯದ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮೊದಲನೆಯ ವಿಚಾರಸಂಕಿರಣ ಜರುಗಿತು. ಈ ಕಾರ್ಯಕ್ರಮ ಎಲ್ಲಾ ಭಾಷೆಯ ಪತ್ರಿಕೆಗಳಲ್ಲೂ, ರೇಡಿಯೋ, ದೂರದರ್ಶನಗಳಲ್ಲೂ ಕಾಯಕ್ರಮ ಬಿತ್ತರಿಸಲ್ಪಟ್ಟು ಒಳ್ಳೆಯ ಪ್ರಚಾರ ಪಡೆಯಿತು.

ಅತಿಥಿ ಭವನದಲ್ಲಿ ಉಳಿದ ಕಾರ್ಯಕ್ರಮಗಳು ನಡೆದವು

ನಾನು ಅದೇದಿನ ಸೈಕಲ ಮಾರ್ಕೆಟಿನ ಅತಿಥಿ ಭವನದ ಧರ್ಮಶಾಲೆಗೆ ಹಿಂದಿರುಗಿದೆ. ಈ ವಿಚಾರ

ಸಂಕಿರಣಕ್ಕೆ ಒಬ್ಬ ಜಾಪಾನಿ ಮಹಾನುಭಾವರು ಬಂದಿದ್ದರು. ಪಟಿಯಾಲಾ ವಿಶ್ವವಿದ್ಯಾನಿಲಯದ ಒಬ್ಬ ಪ್ರೊಫೆಸರ್ ಆದ ತಿಲಕರು ಬಂದಿದ್ದರು. ಈ ವಿಚಾರಸಂಕಿರಣದಲ್ಲಿ ಆಧುನಿಕ ವಿದ್ವಾಂಸರೇ ಅಧಿಕ ಸಂಖ್ಯೆಯಲ್ಲಿ ಇದ್ದರು. ಅನೇಕ ವಿದ್ವಾಂಸರು ತಮ್ಮ ಶೋಧಪೂರ್ಣ ಲೇಖನಗಳನ್ನು ಮಂಡಿಸಿದ್ದರು. ವಿಶುದ್ಧಮತಿಯವರು ಒಂದು ಲೇಖನವಿತ್ತು ಪ್ರತಿಯೊಂದು ಅಧಿವೇಶನದಲ್ಲೂ ಕಂಡುಬಂದ ಸಂದೇಹಗಳನ್ನು ನಿವಾರಿಸುತ್ತ ತಿಲೋಯಪಣ್ಣತ್ತಿ ಶ್ಲೋಕವಾರ್ತಿಕ ಮೊದಲಾದ ಗ್ರಂಥಗಳನ್ನು ಓದಲು ಪ್ರೇರಣೆಕೊಟ್ಟೆ.

ಒಮ್ಮೆ ಒಬ್ಬ ಜೈನ ವಿದ್ವಾಂಸನೇ ಪ್ರೊ. ಅಲೀಯವರ ಪುಸ್ತಕವನ್ನು ಆಧಾರವಾಗಿಟ್ಟುಕೊಂಡು ಈ ವಿಶ್ವದಲ್ಲಿ ಇಡೀ ಜಂಬೂದ್ವೀಪವನ್ನೆ ಇಲ್ಲವೆನ್ನುವ ಪ್ರಯತ್ನವನ್ನು ಮಾಡಿದ. ಆಗ ನಾನು ಅವನಿಗೆ ಶ್ಲೋಕವಾರ್ತಿಕದ ಪಂ. ಮಾಣಿಕಚಂದ್ರರ ಹಿಂದಿ ಅನುವಾದವನ್ನು ಓದಲು ಪ್ರೇರೇಪಿಸಿ ಅದರ ಮುಖ್ಯ ಅಂಶಗಳನ್ನು ತಿಳಿಸಿದೆ. ನವಂಬರ್ 1ರಂದು ಶರದಪೂರ್ಣಿಮೆಯಂದು ನನ್ನ ನಲವತ್ತೊಂಬತ್ತನೆಯ ಜನ್ಮಜಯಂತಿಯನ್ನು 49 ದೀಪಗಳನ್ನ ಹಚ್ಚಿ ಶ್ರಾವಕರು ಆಚರಿಸಿದರು. ಅದೇ ದಿನ ತ್ರಿಲೋಕ ಶೋಧ ಸಂಸ್ಥಾನದ ಅಧಿವೇಶನವು ನಡೆಯಿತು. ಜ್ಞಾನಜ್ಯೋತಿಯ ಪೂರ್ವಾಚಲ ಸಮಿತಿಯ ಸಭೆ, ಅಖಿಲ ಭಾರತ ವರ್ಷೀಯ ದಿಗಂಬರ ಜೈನ ಯುವ ಪರಿಷತ್‌ನ ಸಭೆಯು ನಡೆಯಿತು. ನವೆಂಬರ್ 2ರಂದು ಮಧ್ಯಾಹ್ನ ವಿಚಾರ ಸಂಕಿರಣದ ಸಮಾಪನ್ನ ಕಾರ್ಯಕ್ರಮ ನಡೆಯಿತು. ಎಲ್ಲಾ ವಿದ್ವಾಂಸರಿಗೂ ಪ್ರಮಾಣ ಪತ್ರ, ಸನ್ಮಾನಪತ್ರ, ಸುಮೇರುವಿನ ಪ್ರತೀಕ, ಫೋಟೋ ಹಾಗೂ ಸಾಹಿತ್ಯವನ್ನೂ ನೀಡಿ ಗೌರವಿಸಲಾಯಿತು.

೭೮

ಮಂಗಳ ವಿಹಾರ

ಕಾರ್ತಿಕಮಾಸ, ಅಂದರೆ 1982ನೇ ಇಸವಿ ನವೆಂಬರ್ 18ರಂದು ಕಮ್ಮೋಜಿ ಧರ್ಮಶಾಲೆಯಿಂದ ಹೊರಟು ಹೊಸ ಶಾಹದರಾಗೆ ಬಂದು ಅಲ್ಲಿ ಎರಡು ದಿನ ತಂಗಿದ್ದು, ದೆಹಲಿಯಿಂದ ಹೊರಟು, ಪೂರ್ವನಿರ್ಧಾರಿತ ಸಾಹಿಬಾಬಾದ್, ಗಾಜಿಯಬಾದ್, ಮೋದಿನಗರ, ಮೇರಠನ ಮಾರ್ಗವಾಗಿ ಮವಾನಾಗೆ ಬಂದೆವು. ಅಲ್ಲಿಂದ ನವಂಬರ್ 29ರಂದು ಕಾರ್ತಿಕ ಶುಕ್ಲ ತ್ರಯೋದಶಿಯ ದಿನ ಹಸ್ತಿನಾಪುರವನ್ನು ತಲುಪಿದೆವು.

ಇಲ್ಲಿ ತ್ರಿಲೋಕಸಾರ, ಶ್ಲೋಕವಾರ್ತಿಕ, ಮೊದಲಾದ ಸ್ವಾಧ್ಯಾಯವನ್ನು ಸ್ವಲ್ಪ ಲೇಖನ ಕಾರ್ಯದಲ್ಲೂ ಮಗ್ನಳಾದೆ. ತ್ರಿಮೂರ್ತಿ ಮಂದಿರ, ರತ್ನತ್ರಯ ನಿಲಯ, ಭೋಜನಶಾಲೆ ಮೊದಲಾದವುಗಳ ನಿರ್ಮಾಣ ಕೆಲಸಗಳು ಹಿಮವದ್ ಪರ್ವತದ ಕೆಲಸಗಳು ಅತ್ಯಂತ ತ್ವರಿತವಾಗಿ ಜಂಬೂದ್ವೀಪದಲ್ಲಿ ನಡೆಯುತ್ತಿದ್ದವು.

ಜಂಬೂದ್ವೀಪ ಜ್ಞಾನಜ್ಯೋತಿಯ ವಿಹಾರ

ಜೂನ್ 4ರಂದು ದೆಹಲಿಯಿಂದ ಹೊರಟ "ಜ್ಞಾನಜ್ಯೋತಿ"ಯ ಪ್ರಯಾಣವು ಹರಿಯಾಣದ ಕೆಲವು ಗ್ರಾಮಗಳಲ್ಲಿ ಸಂಚರಿಸಿ ತಿಜಾರ ಕ್ಷೇತ್ರದಿಂದ ರಾಜಸ್ಥಾನವನ್ನು ತಲುಪಿತು. ಧರ್ಮ ಪ್ರಭಾವನೆಯನ್ನು ಮಾಡುತ್ತಾ ದಶಲಕ್ಷಣದ ನಿಮಿತ್ತ ಆಗಸ್ಟ್ 15, 1982ರಂದು ಜ್ಞಾನಜ್ಯೋತಿಯ ವಿಹಾರವನ್ನು ಒಂದು ತಿಂಗಳ ಮಟ್ಟಿಗೆ ಸ್ಥಗಿತಗೊಳಿಸಲಾಯಿತು. ಪುನಃ ಸೆಪ್ಟೆಂಬರ್ 12ರಂದು ಬೂಂದ್ ಗ್ರಾಮದಿಂದ ಪ್ರಾರಂಭವಾಯಿತು. ಈ ಪ್ರಯಾಣ

ದೀಪಾವಳಿಯ ಸಮಯದಲ್ಲಿ ನವೆಂಬರ್ 1ರಿಂದ 17 ನವೆಂಬರ್‌ರವರೆಗೆ ಪುನಃ ಸ್ಥಗಿತವಾಯಿತು. ನವಂಬರ್ 19ರಂದು ಡೊಂಗಪುರ ಜಿಲ್ಲೆಯನ್ನು ಪ್ರವೇಶಿಸಿತು. ಹೋದ ಕಡೆ ಎಲ್ಲಾ ಧರ್ಮಪ್ರಭಾವನೆ ಮಾಡುತ್ತಾ ಡಿಸೆಂಬರ್ 20ರಂದು ರಾಜಸ್ತಾನ ಕೇಸರಿಯನಾಥ ತೀರ್ಥಕ್ಷೇತ್ರದಲ್ಲಿ ಸಮಾಪನ ಸಮಾರಂಭವನ್ನು ಆಚರಿಸಲಾಯಿತು.

ಇಂದ್ರಧ್ವಜ ಆರಾಧನೆ

ಹಸ್ತಿನಾಪುರದಲ್ಲಿ ಸರಧನದ ಮೋಹನಲಾಲ ಮೊದಲಾದವರು ಸೇರಿ ನನ್ನ ಸಾನಿಧ್ಯದಲ್ಲಿ ಡಿಸೆಂಬರ್ 17ರ ವರೆಗೆ ಇಂದ್ರಧ್ವಜ ಆರಾಧನೆಯನ್ನು ಮಾಡಿದರು. ಪುನಃ ಫೆಬ್ರವರಿ 17ರಿಂದ 27ರವರೆಗೆ ಮೇರಠ ನವರ ಪವನಕುಮಾರ್‌ನವರು ಇಲ್ಲಿಯ ಇಂದ್ರಧ್ವಜ ವಿಧಾನವನ್ನು ಮಾಡಿದರು.

ಬೊಂಬಾಯಿಯಲ್ಲಿ ಆಚಾರ್ಯ ಶ್ರೀ ವಿಮಲಸಾಗರ ಸಾನಿಧ್ಯದಲ್ಲಿ ತ್ರಿಲೋಕಚಂದ್ ಕೊಠಾರಿ ಕೋಟಾವಾಲಾರು ಇಂದ್ರಧ್ವಜ ಆರಾಧನೆಯನ್ನು ಬಹಳ ವಿಜೃಂಭಣೆಯಿಂದ ಮಾಡುವ ಆಯೋಜನೆ ಮಾಡಿಕೊಂಡಿದ್ದರು. ಫೆಬ್ರವರಿ 1ರಂದು ಜಂಬೂದ್ವೀಪ ಜ್ಞಾನಜ್ಯೋತಿಯ ಮೀಟಿಂಗ್ ಒಳ್ಳೆ ಉತ್ಸಾಹದಿಂದ ನಡೆದು ಮಹಾರಾಷ್ಟ್ರ ಪ್ರಾಂತೀಯ ಜ್ಞಾನಜ್ಯೋತಿ ಪ್ರವರ್ತನ ಸಮಿತಿಯ ಸಂಘಟನೆಯು ಆಯಿತು. ಇದರ ಸಂರಕ್ಷಕ ಸ್ಥಾನವನ್ನು ಶ್ರೇಯಾಂಸ ಪ್ರಸಾದರವರೇ ವಹಿಸಿಕೊಂಡರು. ಜನವರಿ 28ರಿಂದ ಫೆಬ್ರವರಿ 28ರವರೆಗೆ ಬಂಗಾಲದ ಕಲಕತ್ತ ಠಾಕುರಗಂಜನವರೆಗೂ ಧರ್ಮಪ್ರಭಾವ ಚೆನ್ನಾಗಿ ನಡೆಯಿತು. ಪುನಃ ಮಾರ್ಚ್‌ನಿಂದ ಬಿಹಾರ ಪ್ರಾಂತ್ಯದ ಪರ್ಯಟನೆಯ ಬಗ್ಗೆ ಕಾರ್ಯಸೂಚಿಯನ್ನು ಮಾಡಲಾಯಿತು. ಫೆಬ್ರವರಿ 13ರಿಂದ ಕಲಕತ್ತಾದಲ್ಲಿ ಜ್ಞಾನಜ್ಯೋತಿಯ ಸ್ವಾಗತ ಕಾರ್ಯಕ್ರಮ ಚೆನ್ನಾಗಿ ಆಯೋಜಿಸಿದ್ದರು. ಬಡೌತ ನಿವಾಸಿ ಈಗ ಹಸ್ತಿನಾಪುರದಲ್ಲೇ ಇರುವ ಅನಂತವೀರರು ಮಾರ್ಚ್ 13ರಿಂದ 24ರವರೆಗೆ ಫಾಲ್ಗುಣ ಮಾಸದ ಅಷ್ಟಾಹ್ನಿಕದಲ್ಲಿ ಇಂದ್ರಧ್ವಜ ಆರಾಧನೆಯನ್ನು ಮಾಡಿಸಿದರು.

ರತ್ನಮತಿ ಬಾಲವಿದ್ಯಾ ಮಂದಿರ

ಟಿಕೈತ ನಗರದಲ್ಲಿ[1] 1982 ಇಸವಿ ಡಿಸೆಂಬರ್ 11ರಂದು ಪ್ರಕಾಶಚಂದನು ಮಂತ್ರ ಮತ್ತು ಭಕ್ತಿಯಿಂದ ಪ್ರೇರಿತನಾಗಿ ತನ್ನ ತಾಯಿಯ ಹೆಸರಿನಲ್ಲಿ "ರತ್ನಮತೀ ಬಾಲವಿದ್ಯಾಮಂದಿರ"ವನ್ನು ಬಹಳ ವರ್ಷಗಳ ಪ್ರಯತ್ನದಿಂದ ಪ್ರಾರಂಭಿಸಿಯೇ ಬಿಟ್ಟನು. ಚಿಕ್ಕ ಮಕ್ಕಳಿಗೂ ಧಾರ್ಮಿಕ ಸಂಸ್ಕಾರ ಕೊಡುವುದೇ ಮುಖ್ಯ ಉದ್ದೇಶವಾಗಿತ್ತು. ಇಂದಿಗೂ ಅದು ನಡೆಯುತ್ತಿದೆ.

ಜಂಬೂದ್ವೀಪ ಪ್ರಬಂಧದ ಸ್ಪರ್ಧೆ

ಜಂಬೂದ್ವೀಪ ಪ್ರಬಂಧ ಸ್ಪರ್ಧೆಯನ್ನು ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದಿಂದ ಘೋಷಿಸಲ್ಪಟ್ಟಿತು. ಸ್ಪರ್ಧೆಗೆ ಅನೇಕ ನಿಬಂಧಗಳು ಬಂದಿದ್ದವು. ಮೌಲ್ಯ ಆಧಾರಿತವಾಗಿ ಪ್ರಥಮ, ದ್ವಿತೀಯ,

---

1. ಆರ್ಯಿಕಾರತ್ನ ಜ್ಞಾನಮತಿ ಮಾತಾಜಿಯವರ ಜನ್ಮಭೂಮಿಯಲ್ಲಿ.

ತೃತೀಯ ಬಹುಮಾನಗಳಿಂದ ಪುರಸ್ಕರಿಸಲಾಯಿತು. ಸಂಘದಲ್ಲೇ ಇರುವ ಕು. ಮಾಧುರಿ, ಕು. ಭಾವನರಿಗೆ ಪ್ರಥಮ ಬಹುಮಾನ ಲಭಿಸಿತು.

ಪಂ. ಬಾಬೂಲಾಲರ ಸಹಯೋಗ

ಬಿಹಾರದ ಭಾಗಲಪುರದಲ್ಲಿ ಮಾರ್ಚ್ 3ರಂದು ಜ್ಞಾನಜ್ಯೋತಿಯ ವಿಹಾರ ಪ್ರಾರಂಭವಾಯಿತು. ಪಂ. ಬಾಬೂಲಾಲ ಜಮಾದಾರರೇ ಮಾರ್ಚ್ 23ರವರೆಗೆ ಜ್ಞಾನಜ್ಯೋತಿಯ ಪ್ರವರ್ತನೆಯ ಸಂಚಾಲನೆಯ ಹೊಣೆ ಹೊತ್ತಿದ್ದರು. ಮಧ್ಯೆ - ಮಧ್ಯೆ ಮೋತಿಚಂದರು ಹೋಗಿ ಬರುತ್ತಿದ್ದರು. ಸ್ವಲ್ಪ ಸಮಯದ ನಂತರ ಅವರ ಆರೋಗ್ಯ ಕೆಟ್ಟಿದ್ದರಿಂದ ಅವರಿಗೆ ಮನಸ್ಸಿದ್ದರೂ ಪ್ರವರ್ತನೆಗೆ ಹೋಗಲು ಸಾಧ್ಯವಾಗಲಿಲ್ಲ. ಮಾರ್ಚ್24ರಿಂದ ರವೀಂದ್ರಕುಮಾರನು ಜ್ಯೋತಿಯ ಸಂಚಾಲನೆಯ ಹೊಣೆಯನ್ನು ಹೊತ್ತುಕೊಂಡನು. 8-8-1983ರ ವರೆಗೆ ಜಮಶೆಡ್‌ಪುರ ನಗರದ ವರೆಗೆ ಧರ್ಮಪ್ರಭಾವನೆಯ ಜ್ಯೋತಿಯ ಸಂಚಾರ ಮಾಡಿಸಿದ. ಏಪ್ರಿಲ್ 8ರ ನಂತರ ಈ ಜ್ಞಾನಜ್ಯೋತಿ ಉಡಿಸ್ಸಾ, ಕಟಕ್ ಮಾರ್ಗವಾಗಿ ಮಹಾರಾಷ್ಟ್ರ ಸಂಚಾರಕ್ಕೆ ಬೊಂಬಾಯಿಗೆ ಹೊರಟಿತು.

ಬೊಂಬಾಯಿಯಲ್ಲಿ ಜ್ಞಾನಜ್ಯೋತಿ

ರಾಜಸ್ಥಾನ, ಬಂಗಾಳ, ಬಿಹಾರ ಮತ್ತು ಉಡಿಸ್ಸಾದಲ್ಲಿ ಸುತ್ತಾಡುತ್ತಾ ಮಹಾರಾಷ್ಟ್ರದ ಪ್ರಮುಖ ನಗರವಾದ ಬೊಂಬಾಯಿಗೆ ಜ್ಞಾನಜ್ಯೋತಿಯು ತಲುಪಿತು. ಏಪ್ರಿಲ್ 19ರಂದು ಜೆ. ಕೆ. ಜೈನರವರೇ ಬಾಂಬೆಯಲ್ಲಿ ಜ್ಞಾನಜ್ಯೋತಿಯನ್ನು ಸ್ವಾಗತಿಸಿದರು. ಈ ಮಹಾನಗರದಲ್ಲಿ ಏಪ್ರಿಲ್ 18ರಿಂದ 29ರವರೆಗೆ ವಿಭಿನ್ನ ಸ್ಥಳದಲ್ಲಿ ಸ್ವಾಗತಿಸಿ ಶೋಭಾಯಾತ್ರೆಯಲ್ಲಿ ಜನ ಪಾಲ್ಗೊಂಡರು.

ಭೋಜನ ಶಾಲೆಯ ಉದ್ಘಾಟನೆ

ಜಂಬೂದ್ವೀಪ ಸ್ಥಳದಲ್ಲಿ ಯಾತ್ರಿಗಳಿಗಾಗಿ ಉಚಿತವಾಗಿ ಊಟದ ವ್ಯವಸ್ಥೆಗಾಗಿ ಭೋಜನಶಾಲೆಯ ಉದ್ಘಾಟನೆಯನ್ನು 1983ರ ಮಾರ್ಚ್‌ರಂದು ಹಮ್ಮಿಕೊಳ್ಳಲಾಗಿತ್ತು. ಒಂದು ಸಣ್ಣ ಸಮಾರಂಭವನ್ನು ಏರ್ಪಡಿಸಿ ಅದರಲ್ಲಿ ಉದ್ಘಾಟನೆ ಮಾಡಿದ ಜೆ. ಕೆ.ಜೈನರವರ ಸಹಯೋಗವನ್ನು ಎಲ್ಲರು ಮುಕ್ತಕಂಠದಿಂದ ಸ್ಮರಿಸುತ್ತಾ ಅವರಿಗೆ ಸಂಸ್ಥೆಯ ವತಿಯಿಂದ ಅಭಿನಂದನ ಪತ್ರವನ್ನು ಸಲ್ಲಿಸಲಾಯಿತು.

ಆಚಾರ್ಯ ವೀರಸಾಗರರ ಸಂಸ್ಕೃತ ವಿದ್ಯಾಪೀಠ

1989ರಲ್ಲಿ ನನ್ನ ಪ್ರೇರಣೆಯಿಂದ ಗುರುದೇವರ ಹೆಸರಿನಲ್ಲಿ ಒಂದು ಸಂಸ್ಕೃತ ವಿದ್ಯಾಪೀಠವನ್ನು ಸ್ಥಾಪಿಸಿ ಅವರ ಹೆಸರನ್ನು ಚಿರಸ್ಥಾಯಿಗೊಳಿಸಲಾಯಿತು. ಆಚಾರ್ಯ ಶ್ರೀ ವೀರಸಾಗರ ಸಂಸ್ಕೃತ ವಿದ್ಯಾಪೀಠದಲ್ಲಿ ಭಾನುವಾರ ಮತ್ತು ವಿಶೇಷ ಪರ್ವದಿನಗಳಲ್ಲಿ ಸಮ್ಯಗ್‌ಜ್ಞಾನ ಗೋಷ್ಠಿಯನ್ನು ನಡೆಸಲಾಗುತ್ತಿತ್ತು. ಇದರಿಂದ ವಿದ್ಯಾರ್ಥಿಗಳಿಗೆ ಧಾರ್ಮಿಕ ಕ್ಷೇತ್ರದಲ್ಲಿ ಒಳ್ಳೆಯ ಪ್ರಗತಿಯು ಕಂಡು ಬರತೊಡಗಿತು. "ಸಮ್ಯಗ್‌ಜ್ಞಾನ" ಪತ್ರಿಕೆಯ "ವಿದ್ಯಾಪೀಠ ಅಂಕ"ದಲ್ಲಿ ವಿದ್ಯಾಪೀಠದ ಸಮಗ್ರ ಪರಿಚಯವನ್ನು ಮಾಡಿಕೊಡಲಾಗಿತ್ತು.

ರತ್ನತ್ರಯ ನಿಲಯದ ಉದ್ಘಾಟನೆ

ಜಂಬೂದ್ವೀಪದಲ್ಲಿ ದೆಹಲಿಯ ಹೇಮಚಂದರ ಸಹಯೋಗದಿಂದ "ರತ್ನತ್ರಯ ನಿಲಯ" ಎಂಬ ವಸತಿಭವನ ನಿರ್ಮಾಣವಾಗಿತ್ತು. 1983ರ ಮೇ 15ರಂದು ಇದರ ಉದ್ಘಾಟನೆ ಸಮಾರಂಭವು ನೆರವೇರಿತು. 7ಗಂಟೆಗೆ ಭ. ಶಾಂತಿನಾಥರ ಪ್ರತಿಮೆಯನ್ನು ತಂದು ಶಾಂತಿ ವಿಧಾನ ಪೂಜೆಯನ್ನು ಮಾಡಿ ಪುನಃ 9ಗಂಟೆಗೆ ರಥಯಾತ್ರೆಯನ್ನು ಹೊರಡಿಸಲಾಯಿತು. ಭೋಜನ ಶಾಲೆಯಲ್ಲಿ ಭ. ಋಷಭ ತೀರ್ಥಂಕರರಿಗೆ ಅಭಿಷೇಕವಾಯಿತು. ಅನಂತರ ಉಪದೇಶ ಆಶೀರ್ವಾದದ ನಂತರ ಉಗ್ರಸೇನ ಹೇಮಚಂದರು 11-45 ಗಂಟೆಗೆ ಸರಿಯಾಗಿ ಶಿಲಾಲೇಖದ ಅನಾವರಣ ಮಾಡಿ "ರತ್ನತ್ರಯ ನಿಲಯ"ದ ಉದ್ಘಾಟನೆಯನ್ನು ಮಾಡಿದರು. ರಥಯಾತ್ರೆ ಹಿಂದಿರುಗಿದ ಮೇಲೆ ಭ. ಪ್ರತಿಮೆಯ ಜೊತೆ ನಾನು ಸಂಘದೊಡನೆ ಭವನವನ್ನು ಪ್ರವೇಶಿಸಿದೆ.

ಪ್ರಶಿಕ್ಷಣ ಶಿಬಿರ

ದಶಲಕ್ಷಣ ಪರ್ವದಲ್ಲಿ ಎಲ್ಲಾ ಜೈನಮಂದಿರಗಳಲ್ಲಿ ವಿದ್ವಾಂಸರನ್ನು ಕರೆಸಿ ತತ್ವಾರ್ಥಸೂತ್ರವನ್ನು ಮತ್ತು ದಶಧರ್ಮದ ಬಗ್ಗೆ ಪ್ರವಚನವನ್ನು ಏರ್ಪಡಿಸುತ್ತಾರೆ. ಇದೇ ಉದ್ದೇಶದಿಂದ ಜೂನ್ 5ರಿಂದ 15ರವರೆಗೆ ಪ್ರಶಿಕ್ಷಣ ಶಿಬಿರವನ್ನು ಏರ್ಪಡಿಸಿತ್ತು. ಸರಧನ ನಿವಾಸಿಗಳ ಆಗ್ರಹದಿಂದ ನಾನು ಸರಧನಕ್ಕೆ ಬರಲು ಒಪ್ಪಿಗೆ ಕೊಟ್ಟಿದ್ದೆ. ಆದರೆ ಆರ್ಯಿಕೆ ರತ್ನಮತಿಯವರ ಆರೋಗ್ಯವಂತು ಬಹಳ ಸೂಕ್ಷ್ಮವಾಗತೊಡಗಿತ್ತು. ಆದರೂ ನಾನು ಧೈರ್ಯಮಾಡಿ ವೈಶಾಖ ಸಪ್ತಮಿ ಅಂದರೆ ಮೇ 11ರಂದು ಸಂಜೆ 5 ಗಂಟೆಗೆ ವಿಹಾರ ಹೊರಟು ಗಣೇಶಪುರವನ್ನು ತಲುಪಿದೆ. ಅದೇ ರಾತ್ರಿ ಅವರ ಆರೋಗ್ಯ ಇನ್ನೂ ಕ್ಷೀಣಿಸತೊಡಗಿತು. ಆದರೂ ರಾತ್ರಿ 12ಗಂಟೆಯವರೆಗೂ ದೃಢವಾಗಿದ್ದೆ. ಆದರೂ ಯೋಚಿಸತೊಡಗಿದೆ. ಇವರನ್ನು ಹಸ್ತಿನಾಪುರಕ್ಕೆ ವಾಪಸ್ಸು ಕಳುಹಿಸಲೇ ಅಥವಾ ಹೇಗೋ ಹಾಗೆ ಜೊತೆಯಲ್ಲಿ ಕರೆದೊಯ್ಯಲೇ ಆದರೆ ರತ್ನಮತಿಯವರ ಬಾಯಿಂದಲೇ ಮಾತಾಜೀ ನನ್ನ ಶರೀರ ಸೋತು ಹೋಗಿದೆ. ನನ್ನ ಸಮಾಧಿಯನ್ನು ಹಸ್ತಿನಾಪುರದಲ್ಲಿ ಮಾಡಿಸಿಬಿಡಿ ಎಂದರು. ಇವರ ಮಾತನ್ನು ಕೇಳಿದ ಮೇಲೆ ನನ್ನ ನಿರ್ಧಾರವನ್ನು ಬದಲಾಯಿಸಲೇ ಬೇಕಾಯಿತು.

ಇವರನ್ನು ಕರೆದುಕೊಂಡು ಸರಧನವನ್ನು ತಲುಪಲೇ ಒಂದು ವೇಳೆ ಚಿಂತಾಜನಕವಾದರೇ ಅಥವಾ ವಾಪಸ್ಸು ಹಸ್ತಿನಾಪುರಕ್ಕೆ ಕರೆದೊಯ್ಯಲೇ ಅಲ್ಲಿಗೆ ಕಳುಹಿಸಿದರೆ ವೈಯ್ಯಾವೃತ್ತಿ ಯಾರು ಮಾಡುತ್ತಾರೆ. ಸಮಾಧಿ ಯಾರು ಮಾಡಿಸುತ್ತಾರೆ ಎಂಬ ಯೋಚನೆಗಳು ಕೊರೆಯತೊಡಗಿತು.

ಮತ್ತೆ ಮನಸ್ಸು ಅನಗಾರ ಧರ್ಮಕ್ಕೆ ಪ್ರವರ್ತಿಸಿದ ನಾನೇ ಅವರ ಸಮಾಧಿಯ ವರೆಗೂ ನೋಡುವುದು ಧರ್ಮವೆಂಬ ಭಾವನೆ ಮೇಲಾಯಿತು. ಹೀಗೆ ಮನಸ್ಸನ್ನು ಒಂದು ನಿರ್ಧಾರಕ್ಕೆ ತಂದು ಬೆಳಿಗ್ಗೆ ಡೋಲಿಯ ಸಹಾಯದಿಂದ ಮತ್ತೆ ಹಸ್ತಿನಾಪುರದ ಕಡೆಗೆ ಪ್ರಯಾಣ ಬೆಳೆಸಿದೆವು. ಹಸ್ತಿನಾಪುರ ತಲುಪಿದ ಮೇಲೂ ಅವರ ಆರೋಗ್ಯ ಸೂಕ್ಷ್ಮವಾಗಿಯೇ ಇತ್ತು.ಇದರ ಪರಿಣಾಮ ಅವರ ಮೇಲಾಯಿತು. ನನ್ನ ದೆಸೆಯಿಂದಾಗಿ ಸರಧನ ಸಮಾಜಕ್ಕೆ ಮಾತಾಜೀಯವರ ಉಪದೇಶದಿಂದ ವಂಚಿತರಾಗುತ್ತಿದ್ದರಲ್ಲ ಎಂದು.

ಕೊನೆಗೆ ಪ್ರಶಿಕ್ಷಣ ಶಿಬಿರವನ್ನು ಇಲ್ಲಿಯೆ ಮಾಡುವುದೆಂದು ನಿರ್ಣಯಿಸಲಾಯಿತು. ಜ್ಞಾನಜ್ಯೋತಿಯ ಪರ್ಯಟನೆಯನ್ನು ಬಿಟ್ಟು ಮೋತಿಚಂದರು ಪ್ರಶಿಕ್ಷಣ ಶಿಬಿರದ ಜವಾಬ್ದಾರಿಯನ್ನು ವಹಿಸಿಕೊಂಡರು. ಪಂ.

ಪನ್ನಾಲಾಲಜೀ ಕುಲಪತಿಗಳಾದರು. ಶಿಬಿರದಲ್ಲಿ 40-50 ಜನ ವಿದ್ವಾಂಸರು ತತ್ತ್ವಾರ್ಥಸೂತ್ರ ಮತ್ತು ದಶಧರ್ಮದ ವಿಷಯದಲ್ಲಿ ಶಿಬಿರವು ನಡೆಯಿತು.

ರತ್ನತ್ರಯ ನಿಲಯದಲ್ಲಿ ಶಿಬಿರದ ಸಮಾಪನ ಸಮಾರಂಭ

ವಿಚಾರ ಸಂಕಿರಣದ ಸಮಾಪನದ ದಿನ ವಿದ್ವಾಂಸರು ತಮ್ಮ ತಮ್ಮ ವಿಚಾರಗಳನ್ನು ಮಂಡಿಸುತ್ತಿರುವಾಗ ಪನ್ನಾಲಾಲರು ಹೇಳಿದರು- ಇಲ್ಲಿಯ ಸುಮೇರು ಪರ್ವತವನ್ನು ದರ್ಶನ ಮಾಡುವಾಗ ಎಂತಹ ಆನಂದ ಸಿಗುತ್ತದೆ. ಅದೊಂದು ಅಪೂರ್ವವಾದ ಅನುಭವ ಯಾರಾದರೂ ಈ ಮಹಾನ್ ಜಂಬೂದ್ವೀಪದ ಬಗ್ಗೆ ನಿಂದನೆಯನ್ನು ಮಾಡಿದ್ದೇ ಆದರೆ ಮಾತಾಜಿ ನಿಮ್ಮಲ್ಲಿ ಪ್ರಾರ್ಥಿಸುತ್ತಾ ಹೇಳುತ್ತಿದ್ದೇನೆ. ಅವರು ಈ ಕ್ಷೇತ್ರದ ದರ್ಶನ ಮಾಡಿದ್ದೇ ಆದರೆ ಅವರು ಒಂದಲ್ಲ ಒಂದು ದಿನ ಪ್ರಭಾವಿತರಾಗಿ ಖಂಡಿತ ಹೊಗಳುತ್ತಾರೆ. ನಾನು ಮಾತಾಜೀ ಬರೆದಿರುವ ನನ್ನ ನೆನಪುಗಳ ಪುಸ್ತಕವನ್ನು ಓದಿದ್ದೇನೆ. ನಿಜವಾಗಿಯೂ ಮಾತಾಜೀ ತಮ್ಮ ವಚನವನ್ನು ಸರಿಯಾಗಿ ನಿಭಾಯಿಸಿದ್ದಾರೆ. ಅವರು ಮನೆಯಿಂದ ಹೊರಡುವ ಸಮಯದಲ್ಲಿ ಅವರ ಮಾತೃಶ್ರೀಯವರು ಮಗಳೇ ಇಂದು ನಿನಗೆ ಮನೆಯಿಂದ ಹೊರಡಲು ನಾನು ಸಹಕಾರವನ್ನು ಕೊಡುತ್ತಿದ್ದೇನೆ. ಹಾಗೇ ಮುಂದೆ ನೀನು ನನ್ನನ್ನು ಈ ಸಂಸಾರದಿಂದ ಬಿಡುಗಡೆಮಾಡಿ ಮುಕ್ತಿ ಪಥದ ಕಡೆ ಒಯ್ಯಬೇಕೆಂದು ಹೇಳಿದ್ದ ಮಾತನ್ನು ಅವರು ಅಕ್ಷರಶಃ ಸತ್ಯವನ್ನಾಗಿ ಮಾಡಿ ತೋರಿಸಿದ್ದಾರೆ. ನೋಡಿ 13 ವರ್ಷಗಳ ಹಿಂದೆಯೆ ತಾಯಿಯವರನ್ನು ಮನೆಯಿಂದ ಕರೆತಂದು ಆಯಿರ್ಕೆಯು ಮಹಾನ್ ಪದವಿಯಲ್ಲಿ ವಿರಾಜಮಾನಗೊಳಿಸಿದ್ದಾರೆ. ಮಾತಾಜೀ ಕೊಟ್ಟ ಮಾತಿನಂತೆ ನಡೆದು ಆದರ್ಶಪ್ರಾಯವಾಗಿದ್ದಾರೆ.

ಹೀಗೆ ಹೇಳುತ್ತಾ ಇದ್ದ ಅವರ ಗಂಟಲು ಗದ್ಗದಿತವಾಗಿ ಕಣ್ಣಲ್ಲಿ ನೀರು ತುಂಬಿತು. ಅಲ್ಲಿ ಉಪಸ್ಥಿತರಿದ್ದ ಎಲ್ಲರ ಮನಸ್ಸು ತುಂಬಿ ಕಣ್ಣೀರು ಹನಿಯಿತು. ಅಲ್ಲಿ ಉಪಸ್ಥಿತರಿದ್ದ ರತ್ನಮತೀ ಮಾತಾಜಿಯವರು ಅತ್ತೇ ಬಿಟ್ಟರು. ಒಟ್ಟಿನಲ್ಲಿ ಆ ದೃಶ್ಯ ಬಹಳ ಅಪ್ಯಾಯಮಾನವಾಗಿತ್ತು. ಎಲ್ಲ ವಿದ್ವಾಂಸರು ಜಂಬೂದ್ವೀಪದ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಗೊಳಿಸುತ್ತಾ ರತ್ನಮತಿಯರ ವೈರಾಗ್ಯದಿಂದಲೂ ಪ್ರೇರಿತರಾದರು.

ಒಟ್ಟಿಗೆ ಎರಡು ಸಿದ್ಧಚಕ್ರ ಆರಾಧನೆ

ಆಷಾಢ ಅಷ್ಟಮಿಯ ದಿನ ಅಷ್ಟಾಹ್ನಿಕ ಪರ್ವ ಪ್ರಾರಂಭವಾಯಿತು. ಮೇರಠನ ಕೆಲವು ಮಹಾನುಭಾವರು ಹಾಗೂ ಮಹಮೂದಾಬಾದಿನ ಶ್ರೇಯಾಂಸ ಕುಮಾರವರು ಇಬ್ಬರು ಸಿದ್ಧಚಕ್ರ ಆರಾಧನೆಯನ್ನು ಮಾಡಿಸುವ ಅಭಿಲಾಷೆ ವ್ಯಕ್ತಗೊಳಿಸಿದ್ದರಿಂದ ಭೋಜನ ಶಾಲೆಯಲ್ಲಿಯ ಎರಡು ಮಂಡಳಗಳನ್ನು ರಚಿಸಿ, ಮೇರಠನವರು ತೇರಹಪಂಥದಂತೆ ವಿಧಾನವನ್ನು ಮಹಮೂದಬಾದಿನವರು ಬೀಸಪಂಥದ ವಿಧಾನದಂತೆಯೂ ಆರಾಧನೆ ಮಾಡಿದರು. ಎರಡು ಪಂಥದವರು ಸ್ನೇಹಪೂರ್ವಕವಾಗಿ ಕೈಗೊಂಡ ದೇವಾರಾಧನೆ ಬಹಳ ಒಳ್ಳೆಯ ವಾತಾವರಣವನ್ನು ಕಲ್ಪಿಸಿತ್ತು.

ಸುಮೇರು ಪರ್ವತದ 108 ವಂದನೆ

1982 ಜುಲೈ 22ರಂದು ಅಂದರೆ ಆಷಾಢ ಶುಕ್ಲ ತ್ರಯೋದಶಿಯಂದು ಸುಮೇರುವಿನ 108 ವಂದನೆಗಳನ್ನು ಮಾಡಿ ಮನಸ್ಸು ಬಹಳ ಉಲ್ಲಾಸಗೊಂಡಿತ್ತು. ಸುಮಾರು 10 ತಿಂಗಳಿನಿಂದ ನಾನು ಪರ್ವತಕ್ಕೆ 108 ವಂದನೆಗಳನ್ನು

ಮಾಡುತ್ತಿದ್ದೆ. ಜುಲೈ 23ರಂದು ದೆಹಲಿಯಿಂದ ಜನಗಳು ಬಂದು ಚಾತುರ್ಮಾಸದ ಸ್ಥಾಪನೆಯ ಪ್ರಾರ್ಥನೆಯೊಂದಿಗೆ ವರ್ಷಾಯೋಗ ಪ್ರಾರಂಭವಾಯಿತು.

ಜ್ಞಾನಜ್ಯೋತಿ ಪ್ರವರ್ತನೆ

ಆ ಕಡೆ ಜ್ಞಾನಜ್ಯೋತಿ ಪ್ರವರ್ತನೆಯಲ್ಲಿ ತೊಡಗಿಕೊಂಡಿದ್ದ ಮೋತಿಚಂದರು ತೀವ್ರವಾದ ಜ್ವರದಿಂದ ಬಳಲತೊಡಗಿದ್ದರಿಂದ ನವಲಚಂದ ಚೌಧರಿಯವರು ಸನಾವದದ ಅವರ ಮನೆಗೆ ಅವರನ್ನು ಬಿಟ್ಟು ಬಂದಿದ್ದರು. ಜ್ಞಾನಜ್ಯೋತಿಯ ಸಂಚಾರದಲ್ಲಿ ಪ್ರಚಾರಕರು ಇಲ್ಲದಂತಾಗಿ ರವೀಂದ್ರ ಹೊರಟಿದ್ದ ಆದರೆ, ಅಕಸ್ಮಾತ್ತ್ ಅವರಿಗೆ ಉದರಶೂಲೆ ಉಂಟಾದ್ದರಿಂದ ಯಶವಂತರಾವ್ ಮತ್ತು ನರೇಶಚಂದ ಎಂಬ ಇಬ್ಬರು ಈ ಕಾರ್ಯಕ್ಕಾಗಿ ಹೊರಟರು. ಅಲ್ಲಿ ಇನ್ನೊಂದು ಸಂತೋಷದ ಸುದ್ದಿ ಎಂದರೆ ಕೈಲಾಸಚಂದ್ ಮತ್ತು ಜ್ಞಾನಜ್ಯೋತಿ ವಾಹನದ ಚಾಲಕ ಇವರಿಬ್ಬರ ಸಹವಾಸದಿಂದ ಚತುರ ವಾಗ್ಮಿಗಳಾಗಿ ಶೋಭಯಾತ್ರೆಯನ್ನು ಸಫಲ ಪೂರ್ವಕವಾಗಿ ನಡೆಸಿಕೊಂಡು ಬಂದ ಸುದ್ದಿ ಕೇಳಿ ಮನಸ್ಸಿಗೆ ಸಮಾಧಾನವಾಯಿತು.

ಸನಾವದದಲ್ಲಿ ಶ್ರಾವಣ ಮಾಸದ ತೃತೀಯ ದಿನದಿಂದ ಇಂದ್ರಧ್ವಜ ಆರಾಧನೆಯನ್ನು ಮಾಡುವ ಸಲುವಾಗಿ ಅಲ್ಲಿಂದ ರವೀಂದ್ರ ಮತ್ತು ಮಾಧುರಿಯನ್ನು ಕರೆದಕೊಂಡು ಹೋಗಲು ಜನಗಳು ಬಂದಿದ್ದರು. ಮಾಧುರಿಯನ್ನು ಕಳುಹಿಸಿದೆ. ಅಲ್ಲಿ ಆರಾಧನೆ ಪೂರ್ಣಗೊಳಿಸಿ ರಕ್ಷಾಬಂಧನದ ನಂತರ ಮೋತಿಚಂದರು ಅಲ್ಲಿಂದಲೇ ಜ್ಞಾನಜ್ಯೋತಿಯ ಕಡೇ ಹೊರಟಿದ್ದರು. ಒಳ್ಳೆಯ ರೀತಿಯಿಂದ ಸಂಚಾಲನೆಯನ್ನು ಮಾಡಿಕೊಂಡು ಮಹಾರಾಷ್ಟ್ರದಲ್ಲಿ ಒಳ್ಳೆಯ ಧಾರ್ಮಿಕ ವಾತಾವರಣವನ್ನು ಉಂಟುಮಾಡಿದ್ದರು.

ಜಂಬೂದ್ವೀಪದ ದರ್ಶನ ಹಾಗೂ ಉಪದೇಶದಿಂದ ಪ್ರಭಾವನೆ

ಕೇಂದ್ರೀಯ ಶಿಕ್ಷಣ ಸಂಸ್ಥಾನದ ವೀ. ಪಿ. ಧಾವನ, ಭಾರತ ಸ್ಕೌಟ್ ಮತ್ತು ಗೈಡ್ಸ್‌ನ ಕಮೀಶನರ್ ಎಸ್. ಕೆ. ಮನಚಂದಾ, ಉತ್ತರ ಪ್ರದೇಶದ ನ್ಯಾಷನಲ್ ಟ್ರೈನಿಂಗ್ ಕಮೀಶನರ್ ಜಿ. ರಂಗಾರಾವ್, ಉಡಿಸ್ಸಾ, ಝಾನ್ಸಿ, ಬಿಹಾರ, ಮಣಿಪುರ, ಜಮ್ಮು ಮತ್ತು ಕಾಶ್ಮೀರದ ಕೇಂದ್ರೀಯ ವಿದ್ಯಾಲಯದ ಸಂಘಟಕರು ನವದೆಹಲಿ ಹೀಗೆ 13ರಾಜ್ಯಗಳ ಸ್ಕೌಟ್ ಮತ್ತು ಗೈಡ್ಸ್‌ನ ಸುಮಾರು 300 ಜನ ವಿದ್ಯಾರ್ಥಿ, ವಿದ್ಯಾರ್ಥಿನಿಯರುಗಳು ಇಲ್ಲಿಗೆ ದರ್ಶನಕ್ಕಾಗಿ ಬಂದಿದ್ದವರು. ದರ್ಶನ ಮತ್ತು ಉಪದೇಶದಿಂದ ಅತ್ಯಂತ ಪ್ರಭಾವಿತರಾಗಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು.

1983ರ ಸೆಪ್ಟೆಂಬರ್ 9 ರಿಂದ16ರ ವರೆಗೆ ದಶಲಕ್ಷಣದ ಪರ್ವದಲ್ಲಿ ಜ್ಞಾನಜ್ಯೋತಿಯ ಸಂಚಾರವು ಸ್ಥಗಿತಗೊಂಡಿದ್ದು, ಪುನಃ ಅಕ್ಟೋಬರ್ 27ರಂದು ಕೊಲ್ಹಾಪುರ ಜಿಲ್ಲೆಯಿಂದ ಮತ್ತೇ ಸಂಚರಿಸತೊಡಗಿತು.

ಆಚಾರ್ಯರು ಮನಿಸಂಘವನ್ನು ಇಲ್ಲಿಗೆ ಆಗಮಿಸಲು ಪ್ರಾರ್ಥನೆ

1983ನೇ ಅಕ್ಟೋಬರ್ 28ರಂದು ರವೀಂದ್ರಕುಮಾರನ ಸಂಗಡ ಒಂದು ಶಿಷ್ಯ ಮಂಡಲಿಯು ಆಚಾರ್ಯರುಗಳನ್ನು ಆಹ್ವಾನಿಸಲು ಹೊರಟಿತು. ಪ್ರತಾಪಗಢದಲ್ಲಿದ್ದ ಧರ್ಮಸಾಗರರನ್ನು ಡೊಂಗರಪುರದಲ್ಲಿದ್ದ

ಸನ್ಮತಿಸಾಗರರನ್ನು ದರ್ಶನಮಾಡಿ ಈ ಇಪ್ಪತ್ತು ಜನರ ತಂಡವು ಶ್ರೀಫಲವನ್ನು ಇಟ್ಟು ಪ್ರಾರ್ಥಿಸಿದರು. ಮಹಾನ್ ಆಚಾರ್ಯರುಗಳಾದ ತಾವುಗಳೆಲ್ಲರು ಹಸ್ತಿನಾಪುರಕ್ಕೆ ಆಗಮಿಸಿ ಜಂಬೂದ್ವೀಪದ ಜಿನಬಿಂಬಗಳ ಮಹಾನ್ ಪ್ರತಿಷ್ಠೆಯನ್ನು ಮಾಡಿಸಬೇಕೆಂದು ಕೇಳಿಕೊಂಡರು. ಆಚಾರ್ಯ ಧರ್ಮಸಾಗರರಂತು ಜ್ಞಾನಮತಿ ಮಾತಾಜೀ ಬಹಳ ಪುರುಷಾರ್ಥ ಮಾಡಿದ್ದಾರೆ. ಎಷ್ಟೊಂದು ವಿರೋಧದ ನಡುವೆಯೂ ಅಚಲವಾಗಿ ನಿಂತು ಜಂಬೂದ್ವೀಪದ ನಿರ್ಮಾಣವನ್ನು ಪೂರ್ಣಗೊಳಿಸಿದ್ದಾರೆ. ಅಲ್ಲದೆ ಜ್ಞಾನಜ್ಯೋತಿ ರಥವು ನಿರ್ವಿಘ್ನವಾಗಿ ಸಾಗುತ್ತಿದೆ. ಇದರಿಂದ ನಮಗೆಲ್ಲ ಬಹಳ ಸಂತೋಷವಾಗಿದೆ ಎಂದರು. ಘಾಟೋಲದಲ್ಲಿ ಉಪಾಧ್ಯಾಯಮುನಿ ಅಜಿತಸಾಗರರು ಸಂಘ ಸಹಿತ ಇದ್ದರು. ಅಲ್ಲಿಗೂ ತಂಡವು ಹೋಗಿ ಶ್ರೀಫಲವನ್ನು ಇಟ್ಟು ಪ್ರಾರ್ಥಿಸಿ, ಉದಯಪುರದಲ್ಲಿದ್ದ ಆರ್ಯಿಕಾ ವಿಶುದ್ಧಮತಿಯವರನ್ನು ಶ್ರೀಫಲವಿಟ್ಟು ಪ್ರಾರ್ಥಿಸಲಾಯಿತು. ಹೀಗೆ ನಾಲ್ಕು ದಿನಗಳಲ್ಲಿ ರಾಜಸ್ಥಾನದ ಸುಮಾರು 10 ಸ್ಥಾನಗಳಲ್ಲಿ ತಂಗಿದ್ದ 100ಕ್ಕೂ ಅಧಿಕ ದಿಗಂಬರ ಸಾಧು-ಸಾಧ್ವಿಯರ ದರ್ಶನಮಾಡಿ - ಶ್ರೀಫಲವಿಟ್ಟು ಪ್ರತಿಷ್ಠಾ ಮಹೋತ್ಸವಕ್ಕೆ ಆಗಮಿಸಲು ನಿವೇದನೆಯನ್ನು ಮಾಡಲಾಯಿತು. ಔರಂಗಾಬಾದ್‌ನಲ್ಲಿ ವರ್ಷಾಯೋಗದಲ್ಲಿದ್ದ ಆಚಾರ್ಯ ವಿಮಲಸಾಗರರನ್ನು ಆಹ್ವಾನಿಸಲು ಮೋತಿಚಂದ್, ನಿರ್ಮಲಕುಮಾರ್ ಸೇಠಿ, ಜೆ. ಕೆ. ಜೈನರವರು ಹೋಗಿ ಆಹ್ವಾನಿಸಿ ಬಂದರು.

ಅಕ್ಟೋಬರ್ 14ರಿಂದ ಜ್ಞಾನಜ್ಯೋತಿಯು ಕುಂಭೋಜವನ್ನು ತಲುಪಿತು. ಅಲ್ಲಿಯೇ ವಿರಾಜಮಾನರಾಗಿದ್ದ ಮುನಿಶ್ರೀ ಸಮಂತಭದ್ರ ಮಹಾರಾಜರು ಮತ್ತು ಏಲಾಚಾರ್ಯ ಶ್ರೀ ವಿದ್ಯಾನಂದ ಮಹಾರಾಜರು ಜ್ಞಾನಜ್ಯೋತಿಗೆ ಬಹಳ ಆಶೀರ್ವಾದವನ್ನು ಮಾಡಿ ಜಂಬೂದ್ವೀಪದ ಮಾದರಿಯನ್ನು ಅವಲೋಕಿಸಿದ ಸಮಂತಭದ್ರರು ಆರ್ಯಿಕೆ ಶ್ರೀಜ್ಞಾನಮತಿಯವರ ಅಚಲ ಪರಿಶ್ರಮದಿಂದ ಈ ಮಹಾನ್ ಕಾರ್ಯ ನಡೆದಿದೆ. ಸಮಾಜಕ್ಕೆ ಇವರು ಬಹಳ ದೊಡ್ಡ ಉಪಕಾರ ಮಾಡಿದ್ದಾರೆ. ಅವರ ಈ ಕಾರ್ಯ ಅಪ್ರತಿಮವಾದದ್ದು ಎಂದು ಪ್ರಶಂಸಿಸಿದರು.

ಹಸ್ತಿನಾಪುರದ ಪದವಿಪೂರ್ವ ಕಾಲೇಜಿನಲ್ಲಿ ಉಪದೇಶ

1983ರ ಅಕ್ಟೋಬರ್ 2ರಂದು ಹಸ್ತಿನಾಪುರದ ಪದವಿಪೂರ್ವ ಕಾಲೇಜಿನಲ್ಲಿ ನನ್ನ ಸಾರಗರ್ಭಿತವಾದ ಉಪದೇಶವಾಯಿತು. ಗಾಂಧೀಜಿಯವರ ಅಹಿಂಸಾ, ಬ್ರಹ್ಮಚರ್ಯ ಮತ್ತು ಅಪರಿಗ್ರಹದ ವಿಚಾರಧಾರೆಯಿಂದಲೇ ದೇಶಕ್ಕೆ ಹಿತವಾಗುತ್ತಿರುವುದು ಎನ್ನುವ ವಿಚಾರವನ್ನು ಪ್ರಿನ್ಸಿಪಾಲ್ ಅಧ್ಯಾಪಕರಾದಿಯಾಗಿ ಎಲ್ಲಾ ವಿದ್ಯಾರ್ಥಿಗಳು ಒಪ್ಪಿಕೊಂಡರು.

ಕರ್ನಾಟಕದಲ್ಲಿ ಜ್ಞಾನಜ್ಯೋತಿ

ನವೆಂಬರ್ 8ರಿಂದ ಜ್ಞಾನಜ್ಯೋತಿಯ ರಥವು ಕರ್ನಾಟಕವನ್ನು ಪ್ರವೇಶಿಸಿತು. ಹೋದ ಕಡೆಯಲ್ಲೆಲ್ಲಾ ಒಳ್ಳೆಯ ಧರ್ಮಪ್ರಭಾವನೆ ಆಗತೊಡಗಿತು. ಒಂದು ಒಂದೂವರೆ ತಿಂಗಳಿಗೊಮ್ಮೆ ಮೋತಿಚಂದರು ನನ್ನ ಬಳಿ ಬಂದು ಜ್ಞಾನಜ್ಯೋತಿಯ ಪರ್ಯಟನೆಯ ಸುದ್ದಿ ಸಮಾಚಾರ ತಿಳಿಸಿ ಮುಂದೆ ಮಾಡಬೇಕಾದ ಕಾರ್ಯಕ್ರಮದ ಬಗ್ಗೆ ನನ್ನಲ್ಲಿ ಸಲಹೆ ಕೇಳಿ ಅವರ ವಾಕ್‌ಪಟುತ್ವದ ಬಗ್ಗೆ ಕೇಳಿ ನನ್ನ ಆನಂದಕ್ಕೆ ಪಾರವಿಲ್ಲದಂತಾಯಿತು. ನಾನು ಭಗವಂತನೇ ಈ ಮೋತಿಚಂದನಿಗೆ ಇಡೀ ಭಾರತದಲ್ಲೆಲ್ಲ ಸುತ್ತಾಡಿದರೂ ಅವರ ಉತ್ಸಾಹ ಕುಗ್ಗದೆ

ದ್ವಿಗುಣವಾಗುತ್ತಿರುವುದನ್ನು ನೋಡಿದ. ನಾನು ನನ್ನ ಇಚ್ಛೆಯನ್ನು ನೆರವೇರಿಸಿದೆ. ದೂತನ ಶ್ರೇಯಸ್ಸನ್ನು ಮನದುಂಬಿ ಹರಸಿದೆ.

ಮೋತಿಚಂದರು 1981ರಿಂದಲೇ ಜಂಬೂದ್ವೀಪದ ಪ್ರತಿಷ್ಠೆಯವರೆಗೂ ಆಹಾರದಲ್ಲಿ ಉಪ್ಪು ಸಿಹಿಯನ್ನು ತ್ಯಾಗ ಮಾಡಿದ್ದರು. ಕೈಯಿಂದ ಬೀಸಿದ ಹಿಟ್ಟನ್ನೆ ಉಪಯೋಗಿಸುತ್ತಿದ್ದರು. ಅವರ ಸುತ್ತಾಟದಲ್ಲಿ ಆಹಾರದ ವೇಳೆ 2ಗಂಟೆ ಆದರೂ ಆಗುತ್ತಿತ್ತು. ಅದು ಬಿಸಿ ಇರುತ್ತಿರಲಿಲ್ಲ. ಸುತ್ತಾಟದಲ್ಲಿ ಪ್ರತಿ ಆಹಾರದ ಸಮಯದಲ್ಲಿ ಊರು ಬೇರೆ ಆಹಾರ ಪದ್ಧತಿ ಬೇರೆ. ಜನಗಳು ಬೇರೆ ಆಗುತ್ತಿದ್ದರು. ಅವರು ಎದಗುಂದದೆ ತಮ್ಮ ಗುರಿಯತ್ತ ಅಚಲರಾಗಿರುತ್ತಿದ್ದ ಅವರ ಸ್ಥೈರ್ಯ ಮೆಚ್ಚುವಂತಿತ್ತು. ಅವರು ನನ್ನ ಹತ್ತಿರ ಬಂದಾಗ ಮಾತಾಜೀ ಈ ಜ್ಯೋತಿಯ ವಿಹಾರದಿಂದ ಸಿಗುತ್ತಿರುವ ಆನಂದ ಲಕ್ಷರೂಗಳನ್ನು ಕೊಟ್ಟರೂ ಸಮನಾಗಲಾರದು ಎನ್ನುತ್ತಿದ್ದರು. ಆಗಾಗ್ಗೆ ಮಹಾರಾಷ್ಟ್ರ ಮತ್ತು ಕರ್ನಾಟಕದ ಕಾರ್ಯಕ್ರಮಗಳ ಕ್ಯಾಸೆಟನ್ನು ಕೇಳುವಾಗ ನನಗೆ ಸ್ವಲ್ಪ ಕನ್ನಡ ಮತ್ತು ಮರಾಠಿ ಅರ್ಥವಾಗುತ್ತಿದ್ದರಿಂದ ಸಂತೋಷವಾಗುತ್ತಿತ್ತು. ರತ್ನಮತಿ ಆರ್ಯಿಕೆಯವರಿಗೆ ಮರಾಠಿ, ಕನ್ನಡ ಅರ್ಥವಾಗದಿದ್ದರೂ ಸಂತೋಷದಿಂದ ಆಲಿಸುತ್ತಿದ್ದರು.

ಇಂದ್ರಧ್ವಜ ಆರಾಧನೆ

1983 ಸೆಪ್ಟೆಂಬರ್ 11 ರವಿವಾರದಂದು ಹಸ್ತಿನಾಪುರದಲ್ಲಿ ಸೋರಮನ ಆನಂದ ಪ್ರಕಾಶ ಜೈನರು ಇಂದ್ರಧ್ವಜ ವಿಧಾನವನ್ನು ಪ್ರಾರಂಭಿಸಿದರು. ದಶಲಕ್ಷಣದ ಆರಾಧನೆಯಂತು ಇಡೀ ವಾತಾವರಣವನ್ನೇ ಧರ್ಮಮಯವನ್ನಾಗಿ ಮಾಡಿಬಿಟ್ಟಿತು. ನವಂಬರ್ 7 ರಿಂದ 15ರವರೆಗೆ ಜಯಕುಮಾರ್‌ಜೀ ಬಾಗಲಪುರದ ವಿನಾಯಕಜೀಯವರು ಇಂದ್ರಧ್ವಜ ಆರಾಧನೆಯನ್ನು ಮಾಡಿದರು.

೭೯

ಆರ್ಯಿಕೆ ರತ್ನಮತಿಯವರಿಗೆ ಅಭಿನಂದನ ಗ್ರಂಥದ ಸಮರ್ಪಣೆ

ಚಾತುರ್ಮಾಸದಲ್ಲಿ ಒಂದು ದಿನ ನನ್ನ ಹತ್ತಿರ ರವಿಂದ್ರ ಮತ್ತು ಮಾಧುರಿಯು ಕುಳಿತು "ಆರ್ಯಿಕ ರತ್ನಮತಿ ಅಭಿನಂದನ ಗ್ರಂಥ"ದ ಫೋಟೋಗಳನ್ನು ವ್ಯವಸ್ಥಿತವಾಗಿ ಜೋಡಿಸುತ್ತಿದ್ದರು. ಇದನ್ನು ನೋಡಿದ ರತ್ನಮತಿಯವರಿಗೆ ಅಭಿನಂದನ ಗ್ರಂಥ ತಯಾರಾಗುತ್ತಿದ್ದ ಇದನ್ನು ನನಗೆ ಅರ್ಪಿಸುತ್ತಾರೆ ಎಂದು ಗೊತ್ತಾಯಿತು. ಆಗ ಅವರು ನನ್ನನ್ನು ಕರೆದು ಹೇಳಿದರು. ಮಾತಾಜೀ ಇದೇನು ನಡೆಯುತ್ತಿದೆ. ನೀವೇನು ನನ್ನನ್ನು ಹಾಸ್ಯ ಮಾಡುತ್ತಿಲ್ಲ ತಾನೇ ನಾನೇನು ಅಂತಹ ಮಹಾನ್ ಕೆಲಸವನ್ನು ಮಾಡಿದ್ದೇನೆ. ಈ ಗ್ರಂಥವನ್ನು ಸಮರ್ಪಿಸಲು ಸಮರ್ಥವ್ಯಕ್ತಿ ನೀವು, ನೀವೇನಾದರು ನನಗೆ ಅರ್ಪಿಸಲು ಹೇಳಿದರೆ ನಾನು ಸಭೆಗೆ ಬರುವುದೇ ಇಲ್ಲ ಎಂದರು. ಆದರೆ ಮಾತಿನಲ್ಲಿ ಅವರಿಗಾಗುತ್ತಿದ್ದ ಸಂಕೋಚವನ್ನು ತೋರಿಸುತ್ತಿತ್ತು. ನಾನು ಒಂದೇ ವಾಕ್ಯದಲ್ಲಿ ಗೃಹಸ್ಥಾಶ್ರಮದ ತಮ್ಮ ಆದರ್ಶ ಜೀವನ, ತುಂಬಿದ ಸಂಸಾರವನ್ನು ತ್ಯಜಿಸಿ ದೀಕ್ಷೆ ತೆಗೆದುಕೊಂಡಿದ್ದು ಎಲ್ಲಾ ಮಹಿಳೆಯರಿಗೂ ಆದರ್ಶಪ್ರಾಯವಾಗಿ ಅನುಕರಣೀಯವಾಗಿದೆ. ಆದ್ದರಿಂದ ಈ ಅಭಿನಂದನ ಗ್ರಂಥ ಸಮರ್ಪಣೆಯು ಯಾವುದೇ ಅನುಚಿತ ಕಾರ್ಯವಲ್ಲವೆಂದು ಹೇಳಿದೆ-

ಆ ಮಂಗಳ ದಿನವು ಬಂದಿತು ಹಸ್ತಿನಾಪುರದ ಪ್ರಸಿದ್ಧ ತೀರ್ಥದಲ್ಲಿ ಪ್ರತಿವರ್ಷದಂತೆ ಕಾರ್ತಿಕ ಶುಕ್ಲದಂದೂ ಜಾತ್ರೆ ನಡೆಯುತ್ತದೆ. ನವಂಬರ್ 20ರಂದು ಜಂಬೂದ್ವೀಪ ಸ್ಥಳದಲ್ಲಿ ವಿಶಾಲ ಪೆಂಡಾಲ್ ಹಾಕಲಾಗಿತ್ತು. ಸಂಸದೀಯ ಸದಸ್ಯರಾದ ಜೆ. ಕೆ. ಜೈನರನ್ನ ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಲಾಗಿತ್ತು.

ಈ ಸಮಾರಂಭಕ್ಕೆ ಅಮರ್‌ಚಂದ್ ಪಹಾಡಿಯ, ನಿರ್ಮಲಕುಮಾರ್ ಸೇಠಿ, ಗಣೇಶಲಾಲ್ ರಾನಿವಾಲ ಲಾಲ್ ಶ್ಯಾಮಲಾಲ ಜೀ ಠೇಕೇದಾರ ಮುಂತಾದ ಅನೇಕ ಗಣಮಾನ್ಯ ಭಕ್ತಗಣ ಸೇರಿದ್ದರು. ಗ್ರಂಥ ಸಂಪಾದಕರಾದ ಡಾ||ಕಸ್ತೂರಚಂದ್ ಕಾಸಲೀವಾಲ, ಪಂ. ಬಾಬೂಲಾಲ ಜಮಾದಾರ ಮೊದಲಾದ ವಿದ್ವಾಂಸರು ಉಪಸ್ಥಿತರಿದ್ದರು- ಈ ವಿಶಾಲಸಭೆಯಲ್ಲಿ ನನ್ನ ಪ್ರೇರಣೆಯಂತೆ ರತ್ನಮತಿ ಮಾತಾಜೀಯವರ ಪರಿಚಯವನ್ನು ಮಾಡಿಕೊಡಲಾಯಿತು- ಶ್ರೀ ಜೆ. ಕೆ. ಜೈನರವರನ್ನು ಪುಷ್ಪಹಾರಗಳಿಂದ ಸ್ವಾಗತಿಸಲಾಯಿತು. ನನ್ನ ಅನುಮತಿ ಪಡೆದು ಪುಸ್ತಕ ಬಿಡುಗಡೆಯನ್ನು ಜೆ. ಕೆ. ಜೈನರವರು ಬಿಡುಗಡೆಮಾಡಿ ಮೊದಲ ಪ್ರತಿಯನ್ನು ಭಕ್ತಿಯಿಂದ ರತ್ನಮತಿ ಮಾತಾಜಿಗೆ ಅರ್ಪಿಸಿದರು. ಇದೇ ಸಮಾರಂಭದಲ್ಲಿ ಶ್ಯಾಮಲಾಲ ಜೀ ಠೇಕೇದಾರರಿಗೆ ರಜತಪಟ್ಟಿಯಲ್ಲಿ ಪ್ರಶಸ್ತಿಯನ್ನು ಬರೆಸಿ ಸಮ್ಮಾನಿಸಲಾಯಿತು. ಜೆ. ಕೆ. ಜೈನರವರು ರತ್ನಮತಿ ಮಾತಾಜೀಯವರಿಗೆ ಹೊಸ ಪಿಂಚಿಯನ್ನು ಕೊಟ್ಟು ಹಳೆಯ ಪಿಂಛಿಯನ್ನು ತಾವು ಪಡೆದರು. ಅಮರಚಂದ್ ಪಹಾಡಿಯರವರು ನನ್ನ ಪಿಂಛಿಯನ್ನು ಬದಲಾಯಿಸಿದರು. ಸಮಾರಂಭದ ನಿರ್ವಹಣೆಯನ್ನು ಪಂ. ಬಾಬೂಲಾಲ ಜಮಾದಾರರವರು ನಿರ್ವಹಿಸಿದರು. ಸಂಸ್ಥಾನದ ವಿಚಾರವನ್ನು ರವಿಂದ್ರಕುಮಾರ್ ತಿಳಿಸಿದನು. ಉಪಸ್ಥಿತ ಮಹಾನುಭಾವರು ರತ್ನಮತಿಯ ಜೀವನದ ಆದರ್ಶದ ಬಗ್ಗೆ ಬೆಳಕು ಬೀರಿದರು. ಕೊನೆಗೆ ನನ್ನ ಆಶೀರ್ವಾದ ಪೂರ್ವಕವಾದ ಪ್ರವಚನದಲ್ಲಿ ನಾನು ವರದಕ್ಷಿಣೆ ಎಂದರೆ ಇಂತಹ ವರದಕ್ಷಿಣೆಯನ್ನು ಕೊಡಿ. ಇಂದಿಗೆ 70 ವರ್ಷದ ಮೊದಲು 1914ರಲ್ಲಿ ಮಹಮೂದಾಬಾದಿನ ಶ್ರೇಷ್ಠಿ ಸುಖಪಾಲದಾಸ ಸೇಠಿಯವರಿಗೆ ಮೋಹಿನಿ ಎಂಬ ಕನ್ಯಾರತ್ನವು ಜನಿಸಿತು. ಈ ಸುಖಪಾಲ ಸೇಠರು ತಮ್ಮ ಕನ್ಯಾರತ್ನವನ್ನು ವಿವಾಹಮಾಡಿ ಕಾಣಿಕೆಯಾಗಿ "ಪದ್ಮನಂದಿಪಂಚ ವಿಂಶಂತಿಕಾ" ಎಂಬ ಗ್ರಂಥವನ್ನು ಕಾಣಿಕೆಯಾಗಿ ಕೊಟ್ಟರು. ಇದನ್ನು ಅಷ್ಟಮಿ ಚತುರ್ದಶಿ ಪರ್ವದಂದು ಬ್ರಹ್ಮಚರ್ಯ ವ್ರತದ ನಿಯಮ ಪಾಲಿಸುತ್ತಾ ಬಂದಿದ್ದರು. ಇವರಿಗೆ 1934ರಲ್ಲಿ ಶರದ ಪೂರ್ಣಿಮೆಯಂದು ಜನಿಸಿದ ಮೊದಲ ಕನ್ಯಾರತ್ನವೇ "ಮೈನಾ" ತನ್ನ ಮಗಳಿಗೂ ಈ ಗ್ರಂಥದ ಸ್ವಾಧ್ಯಾಯಕ್ಕೆ ಪ್ರೇರಣೆ ಕೊಟ್ಟವರೇ ಮೋಹಿನಿ. ಈ ಗ್ರಂಥವೇ ಮೈನಾಗೆ ವೈರಾಗ್ಯ ಕ್ಕೆ ಕಾರಣವಾಗಿದ್ದು 18ನೆಯ ವರ್ಷಕ್ಕೆ ದೀಕ್ಷೆ ತೆಗೆದುಕೊಂಡು ಇಂದು ನಿಮ್ಮ ಮುಂದೆ ಜ್ಞಾನಮತಿಯಾಗಿರುವುದು. ಇಂದು ನನ್ನ ಜೀವನದಲ್ಲಿ ಜ್ಞಾನದ ಪ್ರಕಾಶ ಕಾಣುವುದಕ್ಕೆ ಕಾರಣವಾಗಿರುವುದು. ವರದಕ್ಷಿಣೆಯ ರೂಪದಲ್ಲಿ ದೊರೆತಿದ್ದ ಆ ಗ್ರಂಥವೇ ಕಾರಣ. ಆದ್ದರಿಂದ ಭವ್ಯ ಶ್ರಾವಕರೇ ಶ್ರಾವಕಿಯರೇ ನಿಮ್ಮ ಕನ್ಯಾರತ್ನಗಳಿಗೂ ಇಂತಹ ಅಮೂಲ್ಯ ಗ್ರಂಥಗಳನ್ನು ಕಾಣಿಕೆಯಾಗಿ ನೀಡಿರಿ ಎಂದು ಆದೇಶಿಸಿದೆನು. ಜಾತ್ರೆಗೆ ಸೇರಿದ್ದವರಿಗೆಲ್ಲ ಭೋಜವನ್ನು ಮಾಡಿಸಲಾಯಿತು. ಈ ಸುಸಮಯದಲ್ಲಿ ಶ್ರೀರತ್ನಮತಿ ಮಾತಾಜಿಯವರ ಪ್ರಶಸ್ತಿಯನ್ನು ಓದಲಾಯಿತು.

ಲೋಕಾಲೋಕ ಪ್ರಕಾಶಿಕೇವಲ ಜ್ಞಾನಜ್ಯೋತಿಷಾ ಸಕಲ ಚರಾಚರ ವಸ್ತುಸಾಕ್ಷಾತ್ಕಾರಿ-ಮಹಾಶ್ರಮಣ ಭಗವದ್ ವರ್ಧಮಾನಸ್ಯ ಸಾರ್ವಭೌಮ ಶಾಸನಂ ವರ್ಧಯತಿ ಶ್ರೀ ಕುಂದ ಕುಂದಾಮ್ನಾಯೇ ನಂದಿಸಂಘೇ ಸರಸ್ವತೀ ಗಚ್ಛೇ ಬಲಾತ್ಕಾರಗಣೇ ಚಾರಿತ್ರ ಚಕ್ರವರ್ತೀ ಶ್ರೀ ಶಾಂತಿಸಾಗರಾಚಾರ್ಯ ವರ್ಯಸ್ತತ್ಪಟ್ಟೇ ಶ್ರೀವೀರಸಾಗರ ಮುನೀಂದ್ರ ಸ್ತತ್ಪಟ್ಟಾಧೀಶೋ ಶ್ರೀ ಶಿವಸಾಗರ ಸೂರಿಸ್ತತ್ಪಟ್ಟ ಸ್ಥಿತಃ ಶ್ರೀ ಧರ್ಮಸಾಗರಾಚಾರ್ಯೋಸ್ಯ ಕರಕಮಲಾತ್ "ವೀರಾಬ್ದೇ ಅಷ್ಟಾನವತ್ಯುತ್ತರ ಚತುರ್ವಿಂಶಂತಿಶತತಮೇ ವರ್ಷೇ ಮಾರ್ಗ ಶೀರ್ಷಮಾಸೇ ಕೃಷ್ಣಪಕ್ಷೇ ತೃತೀಯಾತಿಥೌ ಅಜಮೇರಪತ್ತನೇ ದೀಕ್ಷಿತಾ ಸಂಯತಿಕಾ ಆರ್ಯಿಕಾ ರತ್ನಮತೀ ಮಾತಾಽಹ ಭೂತಲೇ ಚಿರಂ

ಜೀಯಾತ್, ಅಧುನಾ ವೀರಾಬ್ದೇ ನವೋತ್ತರ ಪಂಚವಿಶಂತಿಶತತಮೇ ವರ್ಷೇ ಕಾರ್ತಿಕಮಾಸೇ ಶುಕ್ಲಪಕ್ಷೇ ಪೂರ್ಣಿಮಾತಿಥೌ ಅದ್ಯಾವಧಿ ಶ್ರೀಜ್ಞಾನಮತೀ ಮಾತುಃ ಸಂಘೇ ದ್ವಾದಶ ವರ್ಷಾಯೋಗಂ ವ್ಯತೀತ್ಯಾ ನಿರ್ವಿಘ್ನ ತಯಾ ಸಂಯಮಂ ಪರಿಪಾಲಯಂತೀ ಸತ್ಯಾಗ್ರೇಪಿ ಯಾವಜ್ಜೀವಂ ನಿರ್ಬಾಧಂ ಚಾರಿತ್ರೆ ಸ್ಥೇಯಾತ್ ಇತಿ ವರ್ದ್ಧತಾಂ ಜಿನಶಾಸನಮ್॥

ಆರ್ಯಿಕೆ ರತ್ನಮತೀ ಮಾತಾಜೀಯವರ ಸಂಕ್ಷಿಪ್ತ ಜೀವನ

ಅವಧ ಪ್ರಾಂತದ ಸೀತಾಪುರ ಜಿಲ್ಲೆಯಲ್ಲಿ ಮಹಮೂದಾಬಾದ್ ಎಂಬ ಹಳ್ಳಿಯು ಪ್ರಸಿದ್ಧವಾಗಿದೆ. ಅಲ್ಲಿ ಸುಖಪಾಲದಾಸ ಎಂಬ ಒಳ್ಳೆ ಧರ್ಮಾತ್ಮ ವ್ಯಕ್ತಿ ಇದ್ದರು. ಅವರಿಗೆ ಇಬ್ಬರು ಪುತ್ರರು ಮಹಿಪಾಲದಾಸ, ಭಗವಾನದಾಸರು. ಇಬ್ಬರು ಪುತ್ರಿಯರು ರಾಜದುಲಾರಿ, ಮೋಹಿನಿ, ಇವರ ಎರಡನೆಯ ಮಗನನ್ನು ಟಿಕೈತನಗರದ ಲಾಲಧನಕುಮಾರರ ಮಗ ಛೋಟೇಲಾಲನಿಗೆ ಕೊಟ್ಟು ವಿವಾಹ ಮಾಡಲಾಗಿತ್ತು. ಇವರ ವಿವಾಹ 1932ರಲ್ಲಿ ಆಯಿತು. 1934ರ ಅಕ್ಟೋಬರ್ 24ರಂದು ಇವರಿಗೆ ಮೊದಲ ಸಂತಾನವಾಗಿ "ಮೈನಾ" ಜನಿಸಿದಳು. ಅವಳೇ ನಾನು ಜ್ಞಾನಮತಿ ಆಗಿದ್ದೇನೆ. ಆನಂತರ 8ಜನ ಹೆಣ್ಣುಮಕ್ಕಳು ಮತ್ತು ನಾಲ್ಕು ಜನ ಗಂಡುಮಕ್ಕಳು. ಅವರೆಂದರೆ 1.ಮೈನಾ 2. ಶಾಂತಿ 3. ಕೈಲಾಶಚಂದ್ 4. ಶ್ರೀಮತಿ 5. ಮನೋವತಿ 6. ಪ್ರಕಾಶಚಂದ್ರ 7. ಸುಭಾಷ್‌ಚಂದ 8. ಕುಮುದಿನಿ 9. ರವೀಂದ್ರಕುಮಾರ್ 10. ಮಾಲತಿ 11. ಕಾಮಿನೀ 12. ಮಾಧುರಿ 13. ತ್ರಿಶಲಾ.

ಇವರ ಮಕ್ಕಳಲ್ಲಿ ನಾಲ್ಕು ಜನ ಮೈನಾ, ಮನೋವತಿ ರವೀಂದ್ರಕುಮಾರ್ ಮಾಧುರಿ ಬಾಲ ಬ್ರಹ್ಮಚಾರಿಗಳು. ಇಂದು ಇಡೀ ಸಮಾಜಕ್ಕೆ ಪರಿಚಿತರು. ತಂದೆ ಛೋಟೆಲಾಲರು 1969ರಲ್ಲಿ ಮನೆಯಲ್ಲಿಯೇ ಸಮಾಧಿ ಮರಣವನ್ನು ಹೊಂದಿದರು. ಇದರ ನಂತರ ಮಾತೆ ಮೋಹಿನಿಯವರು 1971ರಲ್ಲಿ ಅಜಮೇರದಲ್ಲಿ ಆರ್ಯಿಕಾ ದೀಕ್ಷೆಯನ್ನು ತೆಗೆದುಕೊಂಡು ರತ್ನಮತೀ ಮಾತಾಜೀ ಆದರು. ಕಳೆದ 13ವರ್ಷಗಳಿಂದ ಸಂಘದಲ್ಲಿದ್ದು ಸಾಧನೆಯಲ್ಲಿ ತತ್ಪರರಾಗಿದ್ದಾರೆ. ಕೊನೆಗೆ ಇವರು 1985ರಲ್ಲಿ ಹಸ್ತಿನಾಪುರದಲ್ಲಿ ಸಮಾಧಿ ಪೂರ್ವಕವಾಗಿ ನಶ್ವರ ಶರೀರವನ್ನು ತ್ಯಜಿಸಿ ದೇವಪದವನ್ನು ಪಡೆದರು.

ನಾನು ಇನ್ನೊಂದು ವಿಷಯವನ್ನು ಗರ್ವದಿಂದ ಹೇಳುತ್ತಿದ್ದೇನೆ. ಇವರ ಉಳಿದ ಸಂತಾನವು ಗೃಹಸ್ಥಾಶ್ರಮದಲ್ಲಿದ್ದರೂ ಧರ್ಮ ನಿಷ್ಠರಾಗಿದ್ದಾರೆ. ದೇವಪೂಜಾ, ಗುರುಪಾಸ್ತಿ, ಸ್ವಾಧ್ಯಾಯ, ಮೊದಲಾದ ಆವಶ್ಯಕ ಕ್ರಿಯೆಗಳನ್ನು ಮಾಡತ್ತಾ ತಮ್ಮ ತಮ್ಮ ಕರ್ತವ್ಯದ ಪಾಲನೆ ಮಾಡುತ್ತಾ ಗೃಹಸ್ಥಾಶ್ರಮವನ್ನು ಸುಚಾರುರೂಪದಿಂದ ಆಚರಿಸುತ್ತಾ ವೈರಾಗ್ಯಪರರಾಗಿದ್ದಾರೆ.

ಜ್ಞಾನಜ್ಯೋತಿಯ ವಿಹಾರ

ಕರ್ನಾಟಕ, ಕೇರಳ, ತಮಿಳುನಾಡಿನಲ್ಲಿ ಜಂಬೂದ್ವೀಪದ ಪರಿಭ್ರಮಣೆಯಲ್ಲಿ ನೇತೃತ್ವವನ್ನು ಮೋತಿಚಂದ್ರರು ವಹಿಸಿಕೊಂಡು ಎಲ್ಲಾ ಸಾಮಾನ್ಯ ಜನರಿಗೂ ಜಂಬೂದ್ವೀಪದ ಮಹತ್ವವನ್ನು ತಿಳಿಸುತ್ತಾ ಜೈನಧರ್ಮದ ಪತಾಕೆಯನ್ನು ಹಾರಿಸುತ್ತಿದ್ದರು. ಫೆಬ್ರವರಿ 1984ರಲ್ಲಿ ಮಧ್ಯ ಪ್ರದೇಶದಲ್ಲಿ ಜ್ಯೋತಿಯನ್ನು ಕರೆದೊಯ್ಯಲು ಮೋತಿಚಂದರು ಉತ್ಸಾಹದಿಂದಲೇ ಹಲವಾರು ಬಾರಿ ಸನಾವದದಲ್ಲಿ ಮೀಟಿಂಗ್ ಮಾಡಿ ಒಳ್ಳೆಯ ಶುಭಾರಂಭವನ್ನ ಮಾಡಲು ಪ್ರಯತ್ನ ನಡೆಸಿದ್ದರು. ಮಧ್ಯ ಪ್ರದೇಶದ ಪ್ರವರ್ತನೆಯ ಸಮಿತಿಯ ಸಂಘಟನೆಯನ್ನು ಶ್ರೀದೇವಕುಮಾರ

ಸಿಂಹ ಕಾಸಲೀವಾಲರವರೇ ಅಧ್ಯಕ್ಷತೆಯನ್ನು ವಹಿಸಿದರು. ಜಬಲ್‌ಪುರದಿಂದ ವಿಹಾರ ಪ್ರಾರಂಭವಾಯಿತು. ಶೀಲಚಂದ್ ಜೈನರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು.[1]

1984ರ ಫೆಬ್ರವರಿ ಒಂದರಂದು ಜಬಲ್‌ಪುರದಿಂದ ಪರ್ಯಟನೆಯು ಪ್ರಾರಂಭವಾಯಿತು. ಶುಭಾರಂಭದ ದಿನ ಮಧ್ಯಪ್ರದೇಶದ ಶಿಕ್ಷಣಮಂತ್ರಿ ಶ್ರೀಮೋತಿಲಾಲಜೀ ಬೋರಾ, ಅರಣ್ಯಮಂತ್ರಿ ಶ್ರೀ ಅಜಯನಾರಾಯಣ ಮುಸರಾನ, ರಾಜ್ಯಪರ್ಯಾವರಣ ಮಂತ್ರಿ ಶ್ರೀ ಚಂದ್ರ ಶ್ರೀಲಲಿತ ಶ್ರೀವಾಸ್ತವ ಹಾಗೂ ಸಂಸತ್ತಿನ ಶ್ರೀ ಸುಭಾಷ ಯಾದವರು ಉಪಸ್ಥಿತರಿದ್ದರು. ಇವರ ಜೊತೆ ಕೇಂದ್ರಿಯ ಮಹಾಮಂತ್ರಿ ಮೋತಿಚಂದ್‌ಜೈನ, ಇಂದೂರಿನ ದೇವಕುಮಾರ್‌ಸಿಂಹ ಕಾಸಲೀವಾಲ, ಇಂದೂರಿನ ಕೈಲಾಸಚಂದ್ರ ಸನಾವದದ ಇಂದರಚಂದ್ ಚೌದರಿ ಮುಂತಾದ ಮಹಾನುಭಾವರು ಉಪಸ್ಥಿತರಿದ್ದರು. ಸಭೆಯ ನಂತರ ಶೋಭಾಯಾತ್ರೆಯಲ್ಲಿ ಸುಮಾರು ಹತ್ತುಸಾವಿರ ಹೆಂಗಸರು, ಗಂಡಸರು ಭಾಗವಹಿಸಿದ್ದರು. ಈ ರೀತಿ ಅತ್ಯಂತ ಉತ್ಸಾಹದಲ್ಲಿ ಮಧ್ಯಪ್ರದೇಶದಲ್ಲಿ ಪರ್ಯಟನೆಯು ಪ್ರಾರಂಭವಾಯಿತು.

ಇಂದ್ರಧ್ವಜ ವಿಧಾನ

ಹಸ್ತಿನಾಪುರದಲ್ಲಿ ಮಾರ್ಚ್ 10ರಿಂದ 19ರವರೆಗೆ ಅಷ್ಟಾಹ್ನಿಕ ಪರ್ವದಲ್ಲಿ ಟಿಕೈತನಗರದಿಂದ ಪ್ರದ್ಯುಮ್ನ ಕುಮಾರ ಜೈನರು ಇಂದ್ರಧ್ವಜ ವಿಧಾನವನ್ನು ಬಹಳ ಉತ್ಸಾಹದಿಂದ ಮಾಡಿಸಿದರು. ಈ ಆರಾಧನೆಯಲ್ಲಿ ಟಿಕೈತನಗರ ಮತ್ತು ಅವಧ ಪ್ರಾಂತದ ನರ-ನಾರಿಯರು ಭಾಗವಹಿಸಿದ್ದರು.

ಅಕ್ಷಯ ತೃತೀಯದ ಜಾತ್ರೆ

ಹಸ್ತಿನಾಪುರದಲ್ಲಿ ಭ. ವೃಷಭದೇವ ಆಹಾರವಾದ್ದರಿಂದ ಅದು ತೀರ್ಥಕ್ಷೇತ್ರವಾಯಿತು. ಇದರ ನೆನಪಿಗಾಗಿ ಪ್ರತಿವರ್ಷ ಮೇ ತಿಂಗಳ 4ರಂದು ರಥಯಾತ್ರೆಯನ್ನು ಹೊರಡಿಸಿ ಒಂದು ಚಿಕ್ಕ ಜಾತ್ರೆ ನಡೆಯುತ್ತದೆ.

ಪಂಚಕಲ್ಯಾಣ ಪ್ರತಿಷ್ಠೆಯ ತಾರೀಕಿನಲ್ಲಿ ಬದಲಾವಣೆ

1984 ಮಾರ್ಚ್ 11ರಂದು ತ್ರಿಲೋಕ ಜೈನ ಸಂಸ್ಥಾನದ ಸಭೆ ಸೇರಿ ಜಂಬೂದ್ವೀಪ ಜಿನಬಿಂಬ ಪ್ರತಿಷ್ಠಾಪನೆಯ ಮಹೋತ್ಸವಕ್ಕೋಸ್ಕರ ಒಂದು ಸಮಿತಿಯನ್ನು ರಚಿಸಿದರು. ಆ ಸಭೆಯಲ್ಲಿ ಮಹೋತ್ಸವವನ್ನು ಫೆಬ್ರವರಿ 14ರಿಂದ 19, 1985ರಂದು ಮಾಡಲು ನಿರ್ಧರಿಸಿದರು. ಮೊದಲು ಫಾಲ್ಗುಣ ಶುಕ್ಲ ಚತುರ್ಥಿಯಿಂದ ಅಷ್ಟಮಿಯವರೆಗೆ ಎಂದು ನಿರ್ಧರಿಸಲಾಗಿತ್ತು. ನಿರ್ಣಯವನ್ನು ಧರ್ಮಸಾಗರರಿಂದ ಆಶೀರ್ವಾದ ಪಡೆದು ಘೋಷಣೆಯನ್ನು ಮಾಡಲಾಯಿತು. ಈ ನಿಮಿತ್ತ ಹಲವಾರು ಬಾರಿ ಆಚಾರ್ಯರಲ್ಲಿಗೆ ಹೋದಾಗ ಅವರಲ್ಲಿ ವಿಕಲ್ಪವಾಗಿ ಈಗ ನಿಶ್ಚಯಿಸಿರುವ ತಿಥಿಯು ನನಗೆ ಸರಿ ಎನ್ನಿಸುತ್ತಿಲ್ಲ. ಏಕೆಂದರೆ ಹಿಂದೆ ಇದೇ ತಿಥಿಯಲ್ಲಿ ಎಂದರೆ ಮೊದಲಬಾರಿ ಹೋಲಾಷ್ಟಕದಲ್ಲಿ ಪ್ರತಿಷ್ಠೆ ಇಟ್ಟು, ಆಚಾರ್ಯ ಕಲ್ಪ ಶ್ರೀ ಚಂದ್ರಸಾಗರರವರ ಸಮಾಧಿ ಆಯಿತು. ಪುನಃ ನೀವೇ ನೋಡಿದಂತೆ ಮಹಾವೀರಜೀ ಶಾಂತಿವೀರ ನಗರದಲ್ಲಿ ಹೋಲಾಷ್ಟಕದಲ್ಲಿ ಪ್ರತಿಷ್ಠೆ ಇಟ್ಟು ಅದಕ್ಕಿಂದ ಮೊದಲೇ ಕೃಷ್ಣಪಕ್ಷದ ಅಮಾವಾಸ್ಯೆಯ ದಿನ ಶಿವಸಾಗರರ ಸಮಾಧಿ ಆಯಿತು. ಆದ್ದರಿಂದ

---

1. ಈ ಪ್ರಕರಣವನ್ನು 1988ರಲ್ಲಿ ಬರೆದಿತ್ತು.

ಪ್ರತಿಷ್ಠೆಯ ದಿನವನ್ನು ಮುಂದೂಡೋಣ ಎಂದರು. ಇವರ ಈ ಅನ್ಯಮನಸ್ಕತೆ ಕಂಡು ಶ್ರುತಸಾಗರರಲ್ಲಿ ವಿಚಾರಮಾಡಿ ರವೀಂದ್ರನು ನನ್ನ ಹತ್ತಿರ ಬಂದು ಎಲ್ಲಾ ವಿಚಾರವನ್ನು ಹೇಳಿದ. ಆಗ ನಾನು ಆಚಾರ್ಯರ ಆಜ್ಞಾನುಸಾರ ತಿಥಿಯನ್ನು ವೈಶಾಖಮಾಸಕ್ಕೆ ಇಡಿಸಿದೆವು.

ರವೀಂದ್ರನು ಬ್ರಹ್ಮಚಾರಿ ಸೂರಜಮಲ್ಲರ ಹತ್ತಿರಹೋಗಿ ವೈಶಾಖ ಮಾಸದ ಶುಕ್ಲ ಪಕ್ಷದ ಅಷ್ಟಮಿಯಿಂದ ದ್ವಾದಶಿಯವರೆಗೆ ಅಂದರೆ ಏಪ್ರಿಲ್ 28ರಿಂದ ಮೇ 2ರವರೆಗೆ ದಿನ ನಿಶ್ಚಯ ಗೊಳಿಸಲಾಯಿತು. ನಾನು ಅದನ್ನ ಘೋಷಣೆ ಮಾಡಿದೆ. ಇದಕ್ಕೂ ಮೊದಲು ಕೆಲವು ಜ್ಯೋತಿಷ್ಯಾಚಾರ್ಯರ ಜೊತೆ ವಿಚಾರ ವಿನಿಮಯ ಮಾಡಿದೆ. ಅವರೆಲ್ಲರು ಜೈನಧರ್ಮದಲ್ಲಿ ಹೋಲಾಷ್ಟಕವನ್ನು ಪರಿಗಣಿಸುವುದಿಲ್ಲವೆಂದೂ ಆದ್ದರಿಂದ ಈ ಸಂದೇಹ ವ್ಯರ್ಥವೆಂದರು. ಆದರೂ ಆಚಾರ್ಯರ ಮನಸ್ಸಿಗೆ ಹಿಡಿಸದ ಕಾರಣ ತಿಥಿಯನ್ನು ಬದಲಾಯಿಸಿ ಘೋಷಿಸಲಾಯಿತು.

ಸನಾವದನಲ್ಲಿ ಜ್ಞಾನಜ್ಯೋತಿ

ಮೋತಿಚಂದರ ಜನ್ಮಭೂಮಿ ಸನಾವದ. 1967ರಲ್ಲಿ ನಾನು ಇಲ್ಲಿ ಚಾತುರ್ಮಾಸ ಮಾಡಿದಾಗ ನನ್ನ ಬಳಿ ಬಂದ ಮೋತಿಚಂದರು ಇಂದು ನಾನು ಹೇಳುವ ಮೊದಲೇ ನನ್ನ ಮನದ ಭಾವನೆಗಳನ್ನು ಅರಿತು ನಡೆಸಿಕೊಡುವ ನನ್ನ ಅತ್ಯಂತ ಪ್ರೀತಿಪಾತ್ರನಾದ ಶಿಷ್ಯರಾಗಿದ್ದಾರೆ. ತನ್ನ ಹುಟ್ಟೂರಿನಲ್ಲಿ 3 ದಿನದ ಕಾರ್ಯಕ್ರಮ ಮಾಡಲು ಮೊದಲೇ ಯೋಜನೆಯನ್ನು ಹಾಕಿದ್ದರು. ಈ ಮೂರುದಿನಗಳಲ್ಲಿ ಅಖಿಲ ಭಾರತ ವರ್ಷೀಯ ಜೈನ ಶಾಸ್ತ್ರಿ ಪರಿಷತ್ ನ ಅಧಿವೇಶನ ದಿಗಂಬರ ಚೈನ ತ್ರಿಲೋಕ ಶೋಧ ಸಂಸ್ಥಾನ ಹಾಗೂ ಮಧ್ಯ-ಪ್ರದೇಶೀಯ ದಿಗಂಬರ ಜೈನ ಮಹಾಸಭೆಯ ಅಧಿವೇಶನವನ್ನು ಹಮ್ಮಿಕೊಳ್ಳಲಾಗಿತ್ತು. ಸಮಾರಂಭಕ್ಕೆ ನಿರ್ಮಲಕುಮಾರ್ ಸೇಠಿ, ಇಂದೂರಿನ ದೇವಕುಮಾರ್ ಸಿಂಹ, ಶ್ರೀ ಬಾಬೂಲಾಲ ಜೀ ಪಾಟೋದಿ ಮುಂತಾದ ಮಹಾನುಭಾವರು ಭಾಗವಹಿಸಿದ್ದರು. ಅಲ್ಲದೇ ದೆಹಲಿಯ ಡಾ||ಲಾಲಬಹದ್ದೂರ್ ಶಾಸ್ತ್ರಿ ಬಡೌದದ ಪಂ. ಬಾಬೂಲಾಲಜೀ ಜಮಾದಾರ ಮುಂತಾದ ವಿದ್ವಾಂಸರು ಉಪಸ್ಥಿತರಿದ್ದರು. ಪ್ರತಿದಿನ ಬೆಳಿಗ್ಗೆ, ಮಧ್ಯಾಹ್ನ, ರಾತ್ರಿ ಸಭೆಗಳಾಗುತ್ತಿದ್ದವು. ಮೇ 17ರಂದು ಬೆಳಗ್ಗೆ 8ಗಂಟೆಗೆ ಜ್ಞಾನಜ್ಯೋತಿ ವಾಹನವು ಸನಾವದ ನಗರವನ್ನು ಪ್ರವೇಶಿದ್ದು ಸ್ವಾಗತಕ್ಕೆ 101 ಮೋಟಾರ್ ಸೈಕಲ್ಲುಗಳು ಬಾವುಟವನ್ನು ಸಿಕ್ಕಿಸಿಕೊಂಡು ಮೆರವಣಿಗೆಯಲ್ಲಿ ಭಾಗವಹಿಸಿದ್ದವು. ಈ ಸಮಾರಂಭಕ್ಕಾಗಿ ಹರಾಜಿನಲ್ಲಿ 80,000ರೂಗಳು ಸಂಗ್ರಹವಾಗಿತ್ತು. ಬಂದಿದ್ದ ವಿದ್ವಾಂಸರೆಲ್ಲರು ಜ್ಞಾನಜ್ಯೋತಿಯ ಬಗ್ಗೆ ಒಳ್ಳೆ ಜ್ಞಾನದ ಬೆಳಕನ್ನು ಬೀರಿ ಶ್ರಾವಕರ ಮನಸ್ಸನ್ನು ಗೆದ್ದಿದ್ದರು.

ಜ್ಞಾನಜ್ಯೋತಿಯ ಪ್ರಾಯೋಜಿತ ಕಾರ್ಯಕ್ರಮ

ಜ್ಞಾನಜ್ಯೋತಿಯ ಹೆಸರಿನಲ್ಲಿ ಪ್ರಾಯೋಜಿತ ಕಾರ್ಯಕ್ರಮಗಳನ್ನು ದೆಹಲಿಯ ಮೋರಿಗೇಟ್‌ನಲ್ಲಿರುವಾಗಲೇ ಸಿದ್ಧಗೊಳಿಸಲಾಗಿತ್ತು. ರೇಡಿಯೋನಲ್ಲಿ ನಾಲ್ಕು ವಾರಗಳವರೆಗೆ ಶುಕ್ರವಾರ ರಾತ್ರಿ 9-45ಕ್ಕೆ ಸುಮೇರು ಮತ್ತು ಜಂಬೂದ್ವೀಪದ ವಂದನೆಯ ಭಜನೆಗಳು ಪ್ರಸಾರವಾಗುತ್ತಿತ್ತು. ಜ್ಞಾನಜ್ಯೋತಿಯ ರಥದ ಜೊತೆ ಟೇಪ್‌ರೆಕಾರ್ಡ್‌ನಲ್ಲಿ ಈ ಹಾಡುಗಳ ಪ್ರಸಾರವಾಗುತ್ತಿತ್ತು. ಆ ಬಾಲವೃದ್ಧರ ಬಾಯಿಯಲ್ಲಿ ಅದನ್ನು ಹೀಗೆ ಗುಣಗುಣಿಸುತ್ತಿದ್ದರು. ಸುಮೇರು ದರ್ಶನದಿಂದ ಜೀವನವು ಸಫಲವಾಗುತ್ತಿದೆ ಅದರ ಮಹಿಮೆಯ ಹಾಡಿರಿ.....ಎಂದು.

೮೦

ಭಗವಾನ್ ಆದಿನಾಥರ ಪ್ರತಿಮೆ

1979ರಲ್ಲಿ ತ್ರಿಮೂರ್ತಿ ಮಂದಿರದ ಶಿಲಾನ್ಯಾಸದ ಸಮಯದಲ್ಲಿ ನನ್ನ ಮನಸ್ಸಿನಲ್ಲಿ ಇದ್ದುದು ಮಧ್ಯದಲ್ಲಿ ಆದಿತೀರ್ಥಂಕರ ಮೂರ್ತಿಯ ಅಕ್ಕಪಕ್ಕದಲ್ಲಿ ಭರತ, ಬಾಹುಬಲಿಯ ಮೂರ್ತಿಯನ್ನು ನಿರ್ಮಿಸಿ, ತ್ರಿಮೂರ್ತಿಯ ಭವನದ ಹೆಸರನ್ನು ಸಾರ್ಥಕಗೊಳಿಸಬೇಕೆಂದು, ಇದನ್ನು ತಿಳಿಸುತ್ತಲೇ ಎಲ್ಲರು ಯೋಚಿಸಿ ಕೊನೆಗೆ ಭ. ಆದಿನಾಥರ ಪ್ರತಿಮೆ ಮಾಡಲು ಆರ್ಡರ್ ಕೊಟ್ಟರು.

ಜಂಬೂದ್ವೀಪದ ಸುಮೇರು ಪರ್ವತದ ಹೊರತಾಗಿ 62 ಜಿನ ಪ್ರತಿಮೆಗಳನ್ನು ಮತ್ತು ದೇವ ಭವನದಲ್ಲಿ ಸ್ಥಾಪಿಸಲು ಮತ್ತೆ 123 ಜಿನ ಪ್ರತಿಮೆಗಳನ್ನು ಪ್ರತಿಷ್ಠಾಪಿಸಲು ತರಿಸಲಾಗಿತ್ತು. ನಾನು ಮತ್ತೆ ಮತ್ತೆ ಜ್ಞಾಪಿಸಲಾಗಿ ಡಿಸೆಂಬರ್ 8-1981ರಂದು ಮೋತಿಚಂದ್ ಮತ್ತು ರವೀಂದ್ರ ಕುಮಾರರು 7 ಅಡಿಯ ಭ. ಆದಿನಾತರ ಖಡ್ಗಾಸನ ಪ್ರತಿಮೆಗಾಗಿ ಆದೇಶಕೊಟ್ಟು ಬಂದರು. 1979 ಮೇ 10ರಂದು ಮಂದಿರ ಶಿಲಾನ್ಯಾಸಕ್ಕೆ ಬಂದಿದ್ದ ವಿಮಲಕಿಶೋರ್ ವಾಲರೇ ಇಡೀ ಮಂದಿರದ ನಿರ್ಮಾಣ ಮತ್ತು ಆದಿನಾಥರ ಪ್ರತಿಮೆಯ ಖರ್ಚನ್ನು ತಾವೇ ವಹಿಸಿಕೊಂಡರು.

ಇಂದ್ರಧ್ವಜ ಆರಾಧನೆ

1984ನೇ ಇಸವಿ ಜುಲೈ 5ರಿಂದ ಜುಲೈ 14ರವರೆಗೆ ಇಂದ್ರಧ್ವಜ ಆರಾಧನೆಯು ಜರುಗಿತು. ಪಾಟ್ನಾದ ಸುಮೇರ್‌ಚಂದ್ ಹೈದರಾಬಾದಿನ ಮಾಂಗೀಲಾಲ, ನಿರ್ಮಲಕುಮಾರ ಸೇಠ್ ಈ ಮೂರು ಕುಟುಂಬಗಳು ಒಟ್ಟಿಗೆ ಸೇರಿ ಆರಾಧನೆ ನಡೆಸಿದ್ದರು. ಜುಲೈ 12ರಂದು ಗುರುವಾರ ನಾನು ಸಂಘಸಹಿತ ಇಲ್ಲಿಗೆ ಆಗಮಿಸಿದ್ದೆ. ಇಲ್ಲಿ ವರ್ಷಾಯೋಗದ ಸ್ಥಾಪನೆ ಆಯಿತು.

ನಿರ್ಮಾಣ ಕಾರ್ಯದಲ್ಲಿ ತೊಂದರೆ

1979ರಲ್ಲಿ ಜಂಬೂದ್ವೀಪದ ಮೊದಲ ಹಂತದ ನಿರ್ಮಾಣದಲ್ಲಿ ಸುದರ್ಶನ ಮೇರು ಪರ್ವತದ ನಿರ್ಮಾಣದ ಕಾರ್ಯ ಮುಗಿದು ಪ್ರತಿಷ್ಠೆಯು ಆಗಿತ್ತು. ಪುನಃ ಜಂಬೂದ್ವೀಪದ ನಿರ್ಮಾಣಕ್ಕಾಗಿ ಶಿಲಾನ್ಯಾಸವಾಗಿತ್ತು. ಹಿಮವಾನ್, ಮಹಾಹಿಮವಾನ್ ಮುಂತಾದ ಪರ್ವತಗಳ ನಿರ್ಮಾಣವಾಗುತ್ತಿತ್ತು. 1982ರಲ್ಲಿ ಜಂಬೂದ್ವೀಪದ ಜ್ಞಾನಜ್ಯೋತಿ ಇಡೀ ಭಾರತದಲ್ಲಿಯೇ ಸಂಚರಿಸ ತೊಡಗಿತು. ಒಂದು ಕಡೆ ನಿರ್ಮಾಣಕಾರ್ಯ ಇನ್ನೊಂದೆಡೆ ಸಂಚಾರ ಎರಡು ಕಾರ್ಯಗಳು ಏಕಕಾಲದಲ್ಲಿ ನಡೆಯುತ್ತಿತ್ತು. ನನಗೆ ಯೋಚನೆ ಆಗುತ್ತಿತ್ತು. ಪರ್ವತದ ಮೇಲೆ ಪ್ರತಿಷ್ಠಾಪಿಸುವ ವಿಗ್ರಹಗಳ ನಿರ್ಮಾಣಕ್ಕೆ ಮೋತಿಚಂದ್ರ ಮತ್ತು ರವೀಂದ್ರರು ಜಿನಮೂರ್ತಿಗಳು ಅದರ ಚೈತ್ಯಾಲಯ ಇವುಗಳ ಅಳತೆಯನ್ನು ನಿರ್ಧರಿಸಿ ಇವರಿಬ್ಬರು ಜಯಪುರಕ್ಕೆ ಮಾರ್ಚ್17ರಂದು ಹೋಗಿ ನಿಕೇತನ ಮೂರ್ತಿ ಆರ್ಟ್‌ನ ಜಗದೀಶ ಮೂರ್ತಿರವರಿಗೆ 58 ಚೈತ್ಯಾಲಯಗಳಿಗೂ ಮೂರ್ತಿಗಳನ್ನು ಆರ್ಡರ್ ಮಾಡಿ ಬಂದರು. ಹಸ್ತಿನಾಪುರದ ಅಬ್ದುಲ್ ಜಬ್ಬಾರ (ಜುಮ್ಮಾಜೀ) ಮಾಕರಾಲರಿಗೆ 134 ದೇವಭವನವನ್ನು ನಿರ್ಮಾಣಮಾಡಲು ಆದೇಶಿಸಲಾಯಿತು. 1983ರ ನವೆಂಬರ್ 16ರ ವೇಳೆಗೆ ಸಿದ್ಧವಾದವು. ಆರ್ಡರ್ ಕೊಡಲಾಗಿದ್ದರೂ ಕೆಲಸಗಳು ಬಹಳ ಮಂದಗತಿಯಲ್ಲಿ ಸಾಗಿದ್ದವು. ಇದನ್ನು ನೋಡಿ ಇವರಿಬ್ಬರಿಗೂ

ಅಸಮಾಧಾನವಾಗ ತೊಡಗಿತು. ದೇವಭವನದ ಕೆಲಸವು ಸರಿಯಾಗಿ ನಡೆಯದೆ ಇದ್ದದು ಇನ್ನೂ ಆತಂಕ ಉಂಟುಮಾಡಿತ್ತು. ಕಷ್ಟದಿಂದ 45 ದೇವಭವನಗಳು ಮಾತ್ರ ಆಗಿದ್ದವು. ಇವೆಲ್ಲವು ಅವರ ಚಿಂತೆಯನ್ನು ಹೆಚ್ಚುಮಾಡಿತ್ತು.

ಇವರಿಬ್ಬರು ಅಬ್ದುಲ್ ಜಬ್ಬಾರರ ಹತ್ತಿರ ಎಷ್ಟೇ ಪ್ರಯತ್ನ ಪಟ್ಟರೂ ಕೆಲಸ ಆಗದೆ ಇದ್ದುದರಿಂದ ಗುತ್ತಿಗೆಯನ್ನು ರದ್ದುಪಡಿಸಿ ಬೇರೆಯವರಿಗೆ ಕೊಡಲಾಯಿತು. ಇವರು ಕೆಲಸವನ್ನು ಬೇಗ ಬೇಗ ಸಿದ್ಧಗೊಳಿಸ ತೊಡಗಿದ್ದರು. ಇನ್ನುಳಿದ ಕೆಲಸಗಳನ್ನು ಇವರಿಗೇ ಕೊಡಲಾಯಿತು. ಮೊದಲು ಜಗದೀಶ ಪ್ರಸಾದ್ ಮೂರ್ತಿಕಾರರ ಕೆಲಸವು ಬಹಳ ನಿಧಾನವಾಗಿ ನಡೆದಿದ್ದರಿಂದ ಕೊನೆಗೆ ಇವರ ಗುತ್ತಿಗೆಯನ್ನು ಮಂಶಾರಾಮ್‌ರವರಿಗೆ ಕೊಡಲಾಯಿತು. ಅವರು ಸಮಯದಲ್ಲಿ ಕೆಲಸಮಾಡಿಕೊಟ್ಟರು. ಜಗದೀಶ ಮೂರ್ತಿಕಾರರ ಹತ್ತಿರ ಕೆಲಸಮಾಡಿಸಿ ತಯಾರಿ ಪೂರ್ಣಗೊಂಡಿತ್ತು. ದೇವಮಂದಿರಗಳಲ್ಲಿ ಮೂರ್ತಿಗಳನ್ನು ಕೂರಿಸಿದ ಮೇಲೆಯೇ ಚಿಂತೆ ದೂರವಾಗಿತ್ತು. ಈಗ ಕೇವಲ ಪ್ರತಿಷ್ಠೆಯ ಚಿಂತೆ ಮಾತ್ರ ಉಳಿಯಿತು. ನಾವು ಗುತ್ತಿಗೆ ಕೊಟ್ಟಷ್ಟು ಮೂರ್ತಿಗಳ ನಿರ್ಮಾಣವಾಗದಿದ್ದರು ಇರುವಷ್ಟೇ ಮೂರ್ತಿಗಳನ್ನು ಸ್ಥಾಪನೆ ಮಾಡಲು ನಿರ್ಣಯಿಸಿಲಾಯಿತು.. ಉಳಿದವುಗಳನ್ನು ಸಿದ್ಧವಾದ ಮೇಲೆ ಮಾಡಲು ನಿರ್ಣಯಿಸಲಾಯಿತು.

ಹೀಗೆ ಜಂಬೂದ್ವೀಪದ ನಿರ್ಮಾಣದಲ್ಲಿ ಬಂದ ತೊಂದರೆಗಳು ನೂರಾರು. ನನ್ನ ಮನಸ್ಸಿನಲ್ಲಿ ಮಾಡಿದ್ದ ನಿರ್ಮಾಣದ ಕಲ್ಪನೆಗಳನ್ನು ಸಾಕಾರಗೊಳಿಸುವಲ್ಲಿ ಬಂದ ವಿಘ್ನುಗಳೆಷ್ಟು. ಇವುಗಳನ್ನು ಬರೆಯುವುದು ಇರಲಿ ಯೋಚಿಸುವುದೂ ಸಾಧ್ಯವಿಲ್ಲ. ಈಗ ಇದರ ಬಗ್ಗೆ ಬರೆಯ ಬೇಕಾದ್ದರಿಂದ ನೆನಪಿಗೆ ಬಂದಷ್ಟು ತಿಳಿಸುತ್ತಾ ಇದ್ದೇನೆ. ಇದಕ್ಕಾಗಿ ನನ್ನ ತಲೆಯಲ್ಲಿ ಬಂದ ಯೋಚನೆ ಆಂತಕ ವ್ಯಕ್ತ ಪಡಿಸಲಾರೆ.

ನಾವು ಜುಮ್ಮರವರ ಗುತ್ತಿಗೆಯನ್ನು ರದ್ದು ಪಡಿಸಿದ್ದರಿಂದ ಅವರ ಕಡೆಯಿಂದ ಜಂಬೂದ್ವೀಪದ ಕಾರ್ಯಕ್ಕೆ ವಿಘ್ನ ಉಂಟುಮಾಡತ್ತಾರೆಂಬ ಸುದ್ದಿ ತಿಳಿಯಿತು. ಒಳ್ಳೆಯ ಕಾರ್ಯಗಳಿಗೆ ವಿಘ್ನ ಮಾಡಲು ಬಯಸಿದರೂ ಅದು ಪರಿಣಾಮ ಬೀರಲಾರದು ಎಂಬುದು ವಾಸ್ತವಿಕ ಸತ್ಯವೇ ಆಗಿದೆ.

ಆಗ ನಾನು ಮಗ ಕುಡುಕನಾದರೆ ಮತ್ತು ಅನ್ಯದುರ್ವ್ಯಸನಿಯಾದರೆ ತಂದೆ ತಾಯಿ ಅತ್ತು ಅತ್ತು ಹುಚ್ಚರಾಗುತ್ತಾರೆ. ಆಘಾತದಿಂದ ಕಾಯಿಲೆ ಬೀಳುತ್ತಾರೆ. ಕೆಲವರು ಜೀವವನ್ನ ಬಿಡುತ್ತಾರೆ. ಹೊರತು ಮಗನನ್ನ ಸರಿದಾರಿಗೆ ತರಲು ಪ್ರಯತ್ನಿಸುವುದಿಲ್ಲ. ಒಳ್ಳೆ ಕೆಲಸ ಮಾಡುವವರನ್ನು ಯಾರೂ ತಡೆಯುವುದಿಲ್ಲ. ಒಳ್ಳೆಯ ಕೆಲಸಗಳಿಗೆ ಎಷ್ಟೇ ವಿಘ್ನುಗಳನ್ನು ತಂದರೂ ಸಹ ಆಗುವ ಕೆಲಸವನ್ನು ಮಾತ್ರ ತಡೆಯಲಾರರು ಎಂದು ಚಿಂತಿಸತೊಡಗಿದೆ.

ಹಸ್ತಿನಾಪುರದಲ್ಲಿಯೂ ಮೊದಲು ಜಾಗವನ್ನು ಖರೀದಿಸುವಾಗ ತುಂಬ ಸಹಾಯ ಮಾಡಿದ ಜನಗಳು ದಿನಕಳೆದಂತೆ, ವೈಚಾರಿಕ ಭೇದಗಳಿಂದ, ತೇರಹಪಂಥ ಬೀಸಪಂಥ ಕಾನಜಿ ಪಂಥಗಳ ಕಾರಣ ಮಾಡಿಕೊಂಡು ಸಹಾಯಹಸ್ತವನ್ನು ನಿಲ್ಲಿಸಿದ್ದರು. ಅಲ್ಲದೆ ಕೆಲವು ಮಹಾನುಭಾವರು ಆಗುವ ಕೆಲಸಗಳಿಗೂ, ವಿರೋಧ ವ್ಯಕ್ತಪಡಿಸ ತೊಡಗಿದರು. ಸುಳ್ಳು ವಿಷಯಗಳನ್ನು ಮುಖ್ಯ ಕಾರಣ ಮಾಡತೊಡಗಿದರು.

ನಾನು ಹಲವಾರು ಬಾರಿ ದೊಡ್ಡ ಮಂದಿರದ ಕಾರ್ಯಕರ್ತರನ್ನು ಸಮಾಧಾನಪಡಿಸುತ್ತಾ (ಹಲವಾರು ಬಾರಿ) ಸಹೋದರರೆ ನೀವು ಮಾಡುವ ವಿರೋಧ ಕೆಲಸವನ್ನು ಸೃಜನಾತ್ಮಕ ಕೆಲಸವನ್ನಾಗಿ ಮಾಡಿದ್ದರೆ ಎಷ್ಟು

ಚೆನ್ನಾಗಿರುತ್ತಿತ್ತು. ನೀವು ಎಷ್ಟೇ ವಿರೋಧ ಮಾಡಿದರೂ ಜಂಬೂದ್ವೀಪದ ಕೆಲಸವನ್ನಂತು ನಿಲ್ಲಿಸುವುದಿಲ್ಲ ಎಂದು ಎಚ್ಚರಿಸುತ್ತಿದ್ದೆ.

ನನಗೆ ಹೆಮ್ಮೆಯ ವಿಷಯವೆಂದರೆ ಕೆಲವು ಮಹಾನುಭಾವರು ಮಂದಿರದ ನಿರ್ಮಾಣ ಕೆಲಸದಲ್ಲಿ ತೊಡಗಿಕೊಂಡಿದ್ದರಿಂದ ನಾನು ಪೂರ್ತಿ ಮನಸ್ಸನ್ನು ನಂದೀಶ್ವರ ನಿರ್ಮಾಣದಲ್ಲಿ ತೊಡಗಿಸಿಕೊಂಡೆ ಪ್ರತಿಷ್ಠೆಯೂ ಆಯಿತು. ಸಮವಶರಣದ ನಿರ್ಮಾಣ ಕೆಲಸವು ನಡೆಯುತ್ತಿತ್ತು. ಭ. ಪಾರ್ಶ್ವನಾಥರ ವಿಶಾಲ ಮಂದಿರದ ಕೆಲಸವು ನಡೆಯುತ್ತಿತ್ತು. ಮೊದಲು ನಿರ್ಮಾಣ ಕೆಲಸವನ್ನು ವಿರೋಧಿಸಿದವರು ನಿರ್ಮಾಣಕಾರ್ಯದಲ್ಲಿ ತನು, ಮನ, ಧನಗಳಿಂದ ತೊಡಗಿಕೊಳ್ಳುತ್ತಿದ್ದರು.

ಪಂ. ಬಾಬೂಲಾಲಜೀ ಜಮಾದಾರ

1983ರ ಮಾರ್ಚ್‌ರಂದು ಪಂ. ಬಾಬೂಲಾಲಜೀಯವರು ಬಿಹಾರದಿಂದ ಜ್ಞಾನಜ್ಯೋತಿ ರಥದೊಡನೆ ಇದ್ದವರು ಪತ್ನಿಯ ಆರೋಗ್ಯ ನಿಮಿತ್ತ ವಾಪಸ್ಸಾಗಿದ್ದರು. ಒಂದೆರಡು ಸಲ ರೈಲ್ವೆ ಟಿಕೆಟ್ ಮಾಡಿಸಿಯೂ ಹೆಂಡತಿಯ ಅಸ್ವಸ್ಥತೆಯಿಂದ ಹೊರಡಲು ಆಗದೆ ಹೋಯಿತು. 1984ರ ಮೇ 17ರಂದು ಜ್ಞಾನಜ್ಯೋತಿಯು ಸನಾವದಗೆ ಬಂದಾಗ ಸ್ವಾಗತ ಸಮಿತಿಯಲ್ಲಿ ನವಯುವಕನಂತೆ ಇವರು ಭಾಗವಹಿಸಿದ್ದು ತುಂಬ ನೆಮ್ಮದಿಯನ್ನು ತಂದುಕೊಟ್ಟಿತು. ಆದರೆ 1984ರ ಜೂನ್ 9ರಂದು ಬಡೌದದಲ್ಲಿ ಅವರ ತಂದೆಯ ಮನೆಯಲ್ಲೇ ಇದ್ದಕ್ಕಿದ್ದಂತೆ ಮರಣವನ್ನು ಅಪ್ಪಿದರು. ಸಾವಿಗಿಂತ ಕೆಲವು ದಿನ ಮೊದಲು ಹಸ್ತಿನಾಪುರಕ್ಕೆ ಬಂದು ಅವರು ಮಾತಾಜೀ-ನಿಮ್ಮ ಕೈಯಲ್ಲಿ ಇದ್ದ ಹಳೆಯ ಪಿಂಛಿಯು ನನಗೆ ಬೇಕು. ಏಕೆಂದರೆ ಆ ಪಿಂಛಿಯಿಂದ ಅನಂತ ಜೀವಿಗಳ ರಕ್ಷಣೆ ಆಗಿದೆ. ಅಲ್ಲದೆ ಲಕ್ಷಾಂತರ ಜಪ ಮಾಡಿದ ಪ್ರಭಾವ ಅದರಲ್ಲಿದೆ. ಅದರಿಂದ ಅದು ನನಗೆ ಬೇಕು ಎಂದಿದ್ದರು. ಆಗಲೇ ನಾನು ಹೊಸ ಪಿಂಛಿಯನ್ನು ತೆಗೆದುಕೊಂಡು ಹಳೆಯ ಪಿಂಛಿಯನ್ನು ಅವರಿಗೆ ಕೊಟ್ಟಿದ್ದೆ. ಬಹಳ ಭಕ್ತಿಯಿಂದ ತಲೆಯ ಮೇಲಿಟ್ಟುಕೊಂಡು ತೆಗೆದುಕೊಂಡು ಹೋಗಿ ಮಲಗುವ ರೂಮಿನಲ್ಲೇ ಕಣ್ಣೆದುರಿಗೆ ಕಾಣುವಂತೆ ಇಟ್ಟುಕೊಂಡು ಪ್ರತಿದಿನ ಅದಕ್ಕೆ ನಮಸ್ಕರಿಸುತ್ತಿದ್ದರು. ಅವರಿಗೆ ಸಂಯಮ, ಸಂಯಮಿ ಮತ್ತು ಸಂಯಮೋಪಕರಣದ ಬಗ್ಗೆ ಬಹಳ ಭಕ್ತಿ ಇದ್ದಿತು.

ಪಂಡಿತರ ಸ್ವರ್ಗವಾಸವಾದ 10ದಿನಗಳ ನಂತರ ಅವರ ಪತ್ನಿ, ಮಗ, ಮಗಳು, ಸೊಸೆಯಂದಿರೆಲ್ಲ ಇಲ್ಲಿಗೆ ಬಂದು ಅಳುತ್ತಾ ತಮ್ಮ ದುಃಖವನ್ನು ಹೇಳಿಕೊಳ್ಳುವಾಗ ಅವರ ಪತ್ನಿಯು ಮಾತಾಜೀ ಸಾಯುವ ಸರದಿ ನನ್ನದಾಗಿತ್ತು. ಆದರೆ ಆದದ್ದು ಬೇರೆ. ಜನಗಳು ಯಾವಾಗಲೂ ಮನೆಗೆ ಬಂದು, ಇವರನ್ನು ಕೇಳಲು ಬರುತ್ತಿದ್ದರು. ಈಗ ಇವರೇ ದುಃಖದಲ್ಲಿ ಹೀಗೆ ವರ್ತಿಸುವುದು ಎನ್ನಿಸಿತು. ಮಧ್ಯಾಹ್ನ ಒಂದು ಶೋಕಸಭೆಯನ್ನು ಏರ್ಪಡಿಸಿ, ವೈರಾಗ್ಯ ಮತ್ತು ಆಧ್ಯಾತ್ಮ ಪೂರ್ಣವಾದ ಉಪದೇಶಕೊಟ್ಟೆ. ಅವರ ದುಃಖ ಬಹಳಷ್ಟು ಹಗುರವಾಯಿತು.

ನೋಡಿ **"ಸಂಯುಕ್ತಾನಾಂ ವಿಯೋಗಶ್ಚ ಭವಿತಾ ಹೀ ನಿಯೋಗತಃ"** ಎಂದರೆ ಯಾರದೇ ಸಂಯೋಗವಾಗಲಿ ವಿಯೋಗವಾಗಲಿ ನಿಯಮದಂತೆಯೇ ಆಗುವುದು. ನಾವೆಲ್ಲ ಒಂದಲ್ಲ ಒಂದು ದಿನ ಹೋಗುವವರೇ ಈಗ ಅವರ ಸರದಿ ಬಂದಿತಷ್ಟೆ. ಇದಕ್ಕಾಗಿ ಏಕೆ ಅಳಬೇಕು. ಅವರೇನೂ ವಾಪಸ್ಸು ಬರಲಾರರಷ್ಟೇ ನೋಡಿ. ಅಳುವುದಿರಂದ ಅಸಾತಾ ಕರ್ಮದ ಬಂಧವಾಗುತ್ತದೆ. ಆಚಾರ್ಯ ಉಮಾಸ್ವಾಮಿಯವರು ಹೇಳಿದ್ದಾರೆ

"ದುಃಖಶೋತಾಪಾಕ್ರಂಧನ ವಧ ಪರಿವೇದನಾನ್ಯಾತ್ಮ ಪರೋಭಯಸ್ಥಾನಾನ್ಯಸದ್ವೇದ್ಯಸ್ಯII"

ದುಃಖ ಪಡುವುದು ಶೋಕ ಪಡುವುದು ಪಶ್ಚಾತ್ತಾಪ ಪಡುವುದು ಅಳುವುದು ಬೇರೆಯವರನ್ನು ವಧಿಸುವುದು, ಹೀಗಿರೋ ದಿನಾ ವಿಲಾಪಮಾಡುವುದರಿಂದ ಬೇರೆಯವರು ಅಳುತ್ತಾರೆ. ಈ ಎಲ್ಲಾ ಮಾಡುತ್ತಾ ಮಾಡಿಸುತ್ತಾ ಅಸಾತಾ ವೇದನೀಯ ಕರ್ಮದ ಆಸ್ರವವಾಗುತ್ತದೆ. ಇದರಿಂದ ಮುಂದಿನ ಭವದಲ್ಲಿಯೂ ಅಳಬೇಕಾಗುತ್ತದೆ. ಆದ್ದರಿಂದ ಇಂತಹ ಪ್ರಸಂಗದಲ್ಲಿ ಧೈರ್ಯತಂದುಕೊಂಡು ಧರ್ಮಧ್ಯಾನದಲ್ಲಿ ಮನಸ್ಸನ್ನು ತೊಡಗಿಸಿಕೊಂಡರೆ ವಿಯೋಗದಲ್ಲಿ ಅಳುವುದು ಕರೆಯುವುದು ಇಲ್ಲವಾಗುತ್ತದೆ.

ಇನ್ನೊಂದು ವಿಷಯವೆಂದರೆ ಪ್ರತಿ ಜೀವಿಗಳಿಗೂ ಅನಾದಿಕಾಲದಿಂದಲೂ ಈ ಸಂಸಾರದಲ್ಲಿ ಅನೇಕ ಸಂಬಂಧಗಳು ಆಗಿವೆ. ಎಷ್ಟೆಷ್ಟು ಜನರನ್ನು ತಂದೆತಾಯಿಗಳೆಂದು ಭಾವಿಸಿದ್ದೆವೋ ಮಗ, ಮಗಳು, ಪತ್ನಿ ಇವಕ್ಕೆಲ್ಲ ಆದಿ ಅಂತ್ಯಗಳಿಲ್ಲ. ಯಾರು ಯಾರಿಗೆ ಅಳುವುದು ಇಲ್ಲಿ ಮರಣ ಹೊಂದುತ್ತೇವೆ. ಬೇರೆ ಗತಿಯಲ್ಲಿ ಮತ್ತೆ ಸಂಬಂಧವನ್ನೂ ಹೊಂದುತ್ತೇವೆ. ಅವರಿಗೆ ನೆನಪು ಇರುವುದಿಲ್ಲ. ಹೀಗಾಗಿ ಜನ ಅತ್ತು-ಅತ್ತು ಅಶುಭಕರ್ಮವನ್ನು ಏಕೆ ಬಂಧಿಸಿಕೊಳ್ಳುತ್ತಾರೆ. ಉಪದೇಶವನ್ನು ಕೇಳಿದ ಅವರಿಗೆಲ್ಲ ಶಾಂತಿ ಸಿಕ್ಕಿತು. ಮತ್ತೆ ಅವರ ಹೆಂಡತಿಗೆ ಇನ್ನೂ ಒಂದೆರಡು ದಿನ ಇದೇ ಪರಿಸರದಲ್ಲಿದ್ದರೇ ದುಃಖ ದೂರವಾಗುತ್ತದೆ ಎಂದೆ. ಅದಕ್ಕೆ ಅವರು ಒಂದೆರಡು ದಿನ ಕಳೆದ ಮೇಲೆ ಮತ್ತೇ ಬರುತ್ತೇನೆ ಎಂದರು. ಹೀಗೆ ಹೋದವರಿಗೆ ಆರೋಗ್ಯ ಕ್ಷೀಣಿಸತೊಡಗಿ 1984ರ ಜುಲೈ 14ರಂದು ಸ್ವರ್ಗವಾಸಿಗಳಾದರು. ಮಕ್ಕಳಿಗೆ ತಂದೆ ತಾಯಿಗಳ ವಿಯೋಗ ಉಂಟಾಯಿತು. ಇದೇ ಜನ್ಮ-ಮರಣಗಳೇ ಸಂಸಾರ ಆಗಿದೆ.

ಇಂದ್ರಧ್ವಜ ಆರಾಧನೆ

ಬಾಗಲಪುರದ ಜಯಕುಮಾರ್ ವಿನಾಯಕರವರು ಸೆಪ್ಟೆಂಬರ್ 30ರಿಂದ ಅಕ್ಟೋಬರ್ 9ರವರೆಗೆ ಇಂದ್ರಧ್ವಜ ಆರಾಧನೆಯನ್ನು ಮಾಡಿ ಕೊನೆಯ ದಿನ 1008 ಕಲಶಗಳಿಂದ ಭ. ಶಾಂತಿನಾಥರ ಮಹಾಭಿಷೇಕ ಪೂಜೆಯು ಆಯಿತು. ಶರತ್ ಪೂರ್ಣಿಮೆಯಂದು ನನ್ನ 50ನೇ ವರ್ಷದ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು. ಮಧ್ಯಾಹ್ನ ಸರಧನದ ವೀರ ಬಾಲಸದನದ ಮಕ್ಕಳಿಂದ ವೃಷಭದೇವರ ವೈರಾಗ್ಯ ಎಂಬ ನಾಟಕವನ್ನು ಪ್ರಸ್ತುತಗೊಳಿಸಲಾಯಿತು. ಮೋತಿಚಂದ್, ರವೀಂದ್ರ, ಪಂ. ಸುಧರ್ಮಚಂದರು ತಮ್ಮ ವಿನಯಾಂಜಲಿಯನ್ನು ಅರ್ಪಿಸಿದರು.

ಅಸ್ಸಾಮಿನಲ್ಲಿ ಧರ್ಮ ಪ್ರಭಾವನೆ

ಜ್ಞಾನಜ್ಯೋತಿಯ ಭ್ರಮಣೆಯು ಆಗಸ್ಟ್ 9ರಿಂದ ಅಕ್ಟೋಬರ್ ವರೆಗೆ ಗುಜರಾತಿನಲ್ಲಿ ಆಗಿ ನಂತರ ಅಸ್ಸಾಂನ್ನೂ ಪ್ರವೇಶಿಸಿತು. ರಥದ ಜೊತೆಯಲ್ಲಿ ಮೋತಿಚಂದ, ರವೀಂದ್ರಚಂದ, ಮಾಧುರಿ ಹಾಗೂ ಪಂಡಿತ ಸುಧರ್ಮ ಚಂದ ಜೈನ ತಿವಾರಿಯವರು ಇದ್ದು ಒಳ್ಳೆಯ ಪ್ರಭಾವನೆಯನ್ನು ಉಂಟುಮಾಡುತ್ತಿದ್ದರು.

ಇಂದಿರಾಗಾಂಧಿಯವರ ಕೈಗಳಿಂದ 1982ನೆಯ ಇಸವಿ ಜೂನ್ 4ರಂದು ಜ್ಞಾನಜ್ಯೋತಿಯ ಉದ್ಘಾಟನೆಯನ್ನು ಕೈಗೊಂಡು ಇಡೀ ಮೂರು ವರ್ಷಗಳವರೆಗೆ ಇಡೀ ಭಾರತದಲ್ಲಿ ವಿಹರಿಸಿ ಧರ್ಮಸಹಿಷ್ಣುತೆ ಸೌಹಾರ್ದ ಮತ್ತು ಅಹಿಂಸೆಯ ಪ್ರಚಾರಮಾಡಿ ಅಜರಾಮರವಾಯಿತು. ಅಕ್ಟೋಬರ್ 30, 1984ನೆಯ ಇಸವಿಯಂದು ಇಂದಿರಾಗಾಂಧಿಯವರು ತಮ್ಮ ಅಂಗರಕ್ಷಕರಿಂದಲೇ ಹತರಾದ ಸುದ್ದಿ ಕೇಳಿ ಸಾಧುವರ್ಗಕ್ಕೂ ದುಃಖವಾಯಿತು. ಆದರೆ ಆಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲವಲ್ಲವೆಂದೇ ತಿಳಿಯಬೇಕು.

ಇದೊಂದು ನೆನಪಿಸಿಕೊಳ್ಳಬೇಕಾದ ಮಾತು. 1982ನೆಯ ಅಕ್ಟೋಬರ್ 31ರಂದು ಪಿಕ್ಕಿ ಆಡಿಟೋರಿಯಂನಲ್ಲಿ ಜಂಬೂದ್ವೀಪದ ಸೆಮಿನಾರ್‌ನಲ್ಲಿ ರಾಜೀವಗಾಂಧಿ ಭಾಗವಹಿಸಲು ಬಂದಿದ್ದರು. ಸಭೆಗೆ ಮೊದಲು ಅವರಿಗೆ ಸ್ವಲ್ಪ ಶಿಕ್ಷಣವನ್ನು ಕೊಟ್ಟು ಆಶೀರ್ವದಿಸಿದ್ದೆ. ಇಂದು ಅಕ್ಟೋಬರ್ 31, 1984ರಂದು ಅವರೇ ಭಾರತದ ಪ್ರಧಾನಮಂತ್ರಿ ಆದರು. ಆದಿನದ ನನ್ನ ಆಶೀರ್ವಾದವನ್ನು ಕೆಲವರು ನೆನಪಿನಲ್ಲಿಟ್ಟುಕೊಂಡಿದ್ದರು.

ಇಂದಿರಾಗಾಂಧಿಯವರನ್ನು ಅವರ ಅಂಗರಕ್ಷನೇ ಕೊಂದನೆಂದರೆ ಅಂಗರಕ್ಷನೇ ಭಕ್ಷಕನಾಗಿದ್ದ. ಈ ಘಟನೆಯು ಜೀವಂಧರ ಚರಿತದಲ್ಲಿ ವರ್ಣಿತವಾಗಿರುವ ಕಾಷ್ಠಾಂಗಾರನ ನೆನಪನ್ನು ತರುತ್ತದೆ. ಸತ್ಯಂಧರ ಮಹಾರಾಜನು ಕಾಷ್ಠಾಂಗರ ಎಂಬ ಮಂತ್ರಿಗೆ ರಾಜ್ಯಭಾರವನ್ನು ವಹಿಸಿ ಮಹಲಿನಲ್ಲೇ ಇರತೊಡಗಿದ. ದುಷ್ಟನಾದ ಮಂತ್ರಿ ಸತ್ಯಂಧರ ಮಹಾರಾಜನನ್ನ ಕೊಂದ. ರಾಜ್ಯವನ್ನೇ ಅಪಹರಿಸಿದ. ಅದೇ ಕ್ಷಣ ಸ್ಮಶಾನ ಭೂಮಿಯಲ್ಲಿ ಮಹಾರಾಜನ ರಾಣಿ ವಿಜಯಳು ಮಗನಿಗೆ ಜನ್ಮ ನೀಡಿದಳು. ಇವನಿಗೆ ಜೀವಂಧರ ಎಂದು ಹೆಸರಿಟ್ಟು ಗಂಧೋತ್ಕಟನು ಸಾಕಿದನು. ಕಾಲಾಂತರದಲ್ಲಿ ಇದೇ ಜೀವಂಧರನು ಕಾಷ್ಠಾಂಗಾರನನ್ನು ಕೊಂದು ಮತ್ತೆ ತನ್ನ ರಾಜ್ಯವನ್ನು ಪಡೆದನು.

ಹೀಗೆ ಇಂದಿರಾ ಗಾಂಧಿಯವರ ಅಂಗರಕ್ಷಕನಿಂದ ಹತರಾದರೂ ನಂತರ ಅವರ ಮಗನೇ ಪ್ರಧಾನಮಂತ್ರಿಯ ಸ್ಥಾನವನ್ನು ಹೊಂದಿದ್ದು, ಜೀವಂಧರ ಚರಿತ್ರೆಯನ್ನು ನನಗೆ ನೆನಪಿಗೆ ತಂದಿತು.

“ಅಲಂಘ್ಯಶಕ್ತಿರ್ಭವಿತವ್ಯತೇಯಂ” ಸಮಂತಭದ್ರರ ಒಂದು ಮಾತು ತಕ್ಷಣ ನೆನಪಿಗೆ ಬಂದಿತು. ಅಂಗರಕ್ಷಕರ ಈ ನಿಂದ್ಯ ಪ್ರವೃತ್ತಿಯನ್ನು ನೋಡಿದರೆ ಯಾರು ಯಾರಿಗೆ ರಕ್ಷಣೆ ಕೊಡುತ್ತಾರೆ. ಯಾರ ಮೇಲೆ ವಿಶ್ವಾಸವನ್ನು ಇಡಬೇಕು.

ಈ ವಿಷಯವಾಗಿ ಪೂಜ್ಯಪಾದರ ಒಂದು ಶ್ಲೋಕ ಪುನಃ ನೆನಪಿಗೆ ಬರುತ್ತದೆ.

ಜಗದ್ದೇಹಾತ್ಮದೃಷ್ಟೀನಾಂ ವಿಶ್ವಾಸ್ಯಂ ರಮ್ಯಮೇವ ಚ ।
ಸ್ವಾತ್ಮನ್ಯೇವಾತ್ಮದೃಷ್ಟೀನಾಂ ಕ್ವ ವಿಶ್ವಾಸಃ ಕ್ವ ವಾ ರತಿಃ॥

ಶರೀರ ಮತ್ತು ಆತ್ಮವನ್ನು ಒಂದೇ ಎಂದು ತಿಳಿಯುವ ಬಹಿರಾತ್ಮನಿಗೆ ಈ ಸಂಸಾರ ವಿಶ್ವಾಸಕ್ಕೆಯೋಗ್ಯವಾಗಿದೆ ಮತ್ತು ರಮಣೀಯ ಮತ್ತು ಸುಂದರವಾಗಿ ಕಾಣಿಸುತ್ತದೆ. ಆದರೆ ಯಾರಿಗೆ ತಮ್ಮ ಆತ್ಮನಲ್ಲಿಯೇ ವಿಶ್ವಾಸವಿದೆಯೋ ಅಂತಹವರು ಈ ಶರೀರ ಮತ್ತು ಆತ್ಮನನ್ನು ಬೇರೆ ಬೇರೆ ಎನ್ನುವ ಅಂತರಾತ್ಮ ಸಮ್ಯಗ್ದೃಷ್ಟಿಗೆ ಈ ಪ್ರಪಂಚದಲ್ಲಿ ವಿಶ್ವಾಸ ಎಲ್ಲಿದೆ, ಪ್ರೇಮ ಎಲ್ಲಿದೆ. ಅಂದರೆ ಸಮ್ಯಗ್‌ದೃಷ್ಟಿಗೆ ಈ ಪ್ರಪಂಚದಲ್ಲಿ ಯಾರಲ್ಲಿಯೂ ವಿಶ್ವಾಸವಾಗಲೀ ಪ್ರೇಮವಾಗಲೀ ಇರುವುದಿಲ್ಲ. ಕರ್ಮದ ನಡೆಯು ಬಹಳ ವಿಚಿತ್ರವಾಗಿರುತ್ತದೆ.

೮೧

ಜ್ಞಾನಜ್ಯೋತಿಯ ಪ್ರವರ್ತನೆ

ಅಕ್ಟೋಬರ್ 31ರಂದು ಜ್ಞಾನಜ್ಯೋತಿಯು ಮೇಘಾಲಯದಲ್ಲಿತ್ತು. ಇಲ್ಲಿ ಶೋಭಾಯಾತ್ರೆಯ ಕಾರ್ಯಕ್ರಮ ಸಾಧ್ಯವಿರಲಿಲ್ಲ. ಆದರೂ ಮಂದಿರದಲ್ಲೇ ಸಭೆಗಳು ನಡೆದವು. ವೀಡಿಯೋ ಫಿಲಂ ಕೂಡ

ಮಾಡಿದ್ದರು. ಭಕ್ತ ಜನರು ಹರಾಜುಗಳನ್ನು ತೆಗೆದುಕೊಳ್ಳುವ ಮೂಲಕ ಜ್ಯೋತಿಯ ಪ್ರವರ್ತನೆಗೆ ಸಹಯೋಗವನ್ನು ಮಾಡಿದ್ದಾರೆ ಹೀಗೆ ಅಸ್ಸಾಂ, ನಾಗಾಲ್ಯಾಂಡ್, ಮಣಿಪುರ ಮತ್ತು ಮೇಘಾಲಯದಲ್ಲಿ ನವಂಬರ್ 9ರಿಂದ 13ರ ವರೆಗೆ ಸಂಚಾರವನ್ನು ಕೈಕೊಂಡಿತ್ತು.

ಉತ್ತರ ಪ್ರದೇಶದಲ್ಲಿ ನನ್ನ ಜನ್ಮಭೂಮಿಯಿಂದ ಟಿಕೈತನಗರದಲ್ಲಿಯೂ ಜ್ಞಾನಜ್ಯೋತಿಯ ಸಂಚಾರದ ನಿರ್ಣಯ ಕೈಕೊಳ್ಳಲಾಯಿತು. ಅಲ್ಲಿಯ ತಯಾರಿಗಾಗಿ ನಾನು ರವೀಂದ್ರನನ್ನು ಮೊದಲೇ ಕಳುಹಿಸಿಕೊಟ್ಟಿದ್ದೆ. ಅಲ್ಲಿಯ ಕಾರ್ಯಕ್ರಮವನ್ನು ನಾರಾಯಣದತ್ತ ತಿವಾರಿಯವರು ಜ್ಞಾನಜ್ಯೋತಿಯ ಪ್ರವರ್ತನೆಯ ಶುಭಾರಂಭಕ್ಕೋಸ್ಕರ ಬರಲು ಒಪ್ಪಿದ್ದರು. ಅವರು ಬರುತ್ತಾರೆಂದು ತಿಳಿದ ಮೇಲೆ ಸಮಾರಂಭದ ಸಿದ್ಧತೆಗಳು ಬರದಿಂದ ಸಾಗಿದ್ದವು. ಆದರೆ ಯಾವುದೋ ಕಾರಣದಿಂದ ಬರಲು ಆಗುವುದಿಲ್ಲ ಎಂಬ ಸೂಚನೆ ಸಿಕ್ಕಿದ ತಕ್ಷಣ ರವೀಂದ್ರ ಬಂದು ಮತ್ತೆ ಮತ್ತೆ ಪ್ರಯತ್ನಪಟ್ಟು ಬರುವಂತೆ ಮಾಡಿದನು.

ಟಿಕೈತನಗರದಲ್ಲಿ ನವಂಬರ್ 14ರಂದು ವಿಶಾಲವಾದ ಸಭಾಮಂಟಪದಲ್ಲಿ ಕಾರ್ಯಕ್ರಮವು ಆಯೋಜನೆಗೊಂಡಿತ್ತು. 11ಗಂಟೆಗೆ ಸರಿಯಾಗಿ ಶ್ರೀ ನಾರಾಯಣ ದತ್ತ ತಿವಾರಿ, ತಮ್ಮ ವರಿಷ್ಠತಮ ಸಹಯೋಗಿಗಳಾದ ಪ್ರೊ. ವಾಸುದೇವಸಿಂಹ, ಅಬಕಾರಿ ಮಂತ್ರಿಯ ಜೊತೆ ಹೆಲಿಕಾಪ್ಟರ್‌ನಲ್ಲಿ ಬಂದಿಳಿದರು. ಅವರಿಗೆ ಯಥೋಚಿತವಾದ ಗೌರವವನ್ನು ನೀಡಿ ಸ್ವಾಗತಿಸಲಾಯಿತು. ಸಭೆಯಲ್ಲಿ ನಾರಾಯಣದತ್ತ ತಿವಾರಿಯವರು ಹಸ್ತಿನಾಪುರದಲ್ಲಿ ನಡೆಯುತ್ತಿರುವ ಜಂಬೂದ್ವೀಪ ನಿರ್ಮಾಣಕ್ಕೆ ಪೂರ್ಣ ಸಹಕಾರಕೊಡುವ ವಾಗ್ದಾನ ಮಾಡುತ್ತಲೇ ಸಭೆಯು ಕರತಾಡನದಿಂದ ಹರ್ಷವನ್ನು ವ್ಯಕ್ತಪಡಿಸಿತು. ಅವರಿಗೆ ಟಿಕೈತನಗರ ನನ್ನ ಜನ್ಮಭೂಮಿ ಎನ್ನುವ ಕಾರಣದಿಂದಲೇ ಅವರಿಗೆ ಅದು ಪುಣ್ಯ ಭೂಮಿಯಾಗಿ ಗೋಚರಿಸಿ, ಆ ಗ್ರಾಮವನ್ನು ಪ್ರಶಂಸಿಸಿ ಅದಕ್ಕೆ ಮೊದಲು ವಂದಿಸಿದರು ಮತ್ತು ಶ್ರೀಫಲವನ್ನಿಟ್ಟು ಆರತಿ ಮಾಡಿ ಜ್ಞಾನಜ್ಯೋತಿಯ ಸಂಚಾರಕ್ಕೆ ಶುಭ ಹಾರೈಸಿದರು. ನಂತರ ಅವರು ನಾನು ಪೂಜ್ಯ ಮಾತಾಜೀಯವರ ಜನ್ಮಸ್ಥಾನವನ್ನು ನೋಡಬೇಕೆಂಬ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದರಿಂದ ಕೈಲಾಸಚಂದ[1] ಮತ್ತು ಊರಿನ ಮಹಾನುಭಾವರು ಅವರನ್ನು ನಾವು ವಾಸಿಸುತ್ತಿದ್ದ ಮನೆಗೆ ಕರೆದೊಯ್ದರು. ಅಲ್ಲಿಗೆ ಹೋಗಿ ಮನೆಯನ್ನು ನೋಡಿ ಅವರಿಗೆ ತುಂಬಾ ಸಂತೋಷವಾಯಿತು. ಅಲ್ಲಿಯೇ ಅವರಿಗೆ ಅಲ್ಪಾಹಾರ ವ್ಯವಸ್ಥೆಯನ್ನು ಮಾಡಿದ್ದರು. ನಂತರ ಹೆಲಿಕಾಪ್ಟರ್‌ನಲ್ಲಿ ವಾಪಸ್ಸು ಲಖನೌಗೆ ಹೋದರು. ಜ್ಞಾನಜ್ಯೋತಿಯ ಶೋಭಾಯಾತ್ರೆಗೆ ಅಪಾರ ಸಂಖ್ಯೆಯಲ್ಲಿ ಜನಗಳು ಭಾಗವಹಿಸಿದ್ದರು. ಮೆರವಣಿಗೆಯಲ್ಲಿ ಜೈನರು ಅಜೈನರೆಲ್ಲರು ಪೂಜ್ಯ ಜ್ಞಾನಮತಿ ಮಾತಾಜೀಯವರಿಗೆ ಜಯ ಎಂಬ ಘೋಷಣೆ ಆಕಾಶದಲ್ಲೆಲ್ಲ ಪ್ರತಿಧ್ವನಿಸುತ್ತಿದ್ದ ಸುದ್ದಿ ತಿಳಿಯಿತು. ಒಂದು ಮನೆಯಿಂದ ಇಬ್ಬರು ಸಹೋದರಿ ಸ್ವತಃ ತಾಯಿ ಸ್ವಯಂ ದೀಕ್ಷಿತರಾಗಿ ಸಾಧ್ವಿಗಳಾಗಿ ಸಮಾಜದಲ್ಲಿ ಪ್ರತಿಷ್ಠೆಯನ್ನು ಪಡೆದಿದ್ದರು. ಅದಲ್ಲದೆ ಮನೆಯ ಸದಸ್ಯರೆಲ್ಲರು ಜ್ಞಾನಜ್ಯೋತಿಯ ಪ್ರವರ್ತನೆಯಲ್ಲಿ ಮನಪೂರ್ವಕವಾಗಿ ತೊಡಗಿಕೊಂಡಿದ್ದು, ಇಡೀ ಸಮಾಜಕ್ಕೆ ಒಂದು ಗೌರವ ವಿಷಯವಾಗಿತ್ತು. ಅಂತಹ ಮಹಾನ್‌ವ್ಯಕ್ತಿಯ ಜನ್ಮಭೂಮಿಯ ಬಗೆಗೆ ಜನಕ್ಕೆ ಹೆಮ್ಮೆಯೇ ಆಗಿತ್ತು. ಉತ್ತರ ಪ್ರದೇಶ ವಿಹಾರದ ಶುಭಾರಂಭದ ನಂತರ ಮೋತಿಚಂದ ಇಲ್ಲಿಗೆ ಬಂದರು. ಅವರಿಗೆ ಪ್ರತಿಷ್ಠೆಯ ತಯಾರಿಯ ಮತ್ತು ನಿರ್ಮಾಣ ಕೆಲಸವನ್ನು ಪೂರ್ಣಗೊಳಿಸುವ ಮಹಾನ್ ಜವಾಬ್ದಾರಿ ಅವರನ್ನು ಚಿಂತೆಗೆ ಎಡೆಮಾಡಿತ್ತು.

---

1. ಇವರು ನನ್ನ (ಆರ್ಯಿಕ ಜ್ಞಾನಮತಿಯ) ಚಿಕ್ಕ ತಮ್ಮ.

ಸ್ಯಾದ್ವಾದ ಚಂದ್ರಿಕೆ ಟೀಕೆಯ ಉಪಲಬ್ಧಿ

1978ರಲ್ಲಿ ಪ್ರಾರಂಭಿಸಿದ್ದ ನಿಯಮಸಾರ ಸಂಸ್ಕೃತ ಟೀಕೆಯನ್ನು ಸ್ವಾಧ್ಯಾಯ ಮಾಡುತ್ತಿದ್ದು ನಿಂತುಹೋಗಿದ್ದು ಈಗ 4ನೆಯ ಅಧ್ಯಾಯದ ಟೀಕೆ ಮತ್ತು ಹಿಂದಿಯ ಅನುವಾದವನ್ನು ಪ್ರಾರಂಭಿಸಿದ್ದೆ[1]. ಮನಸ್ಸು ವಾತಾವರಣ ಸ್ವಸ್ಥವಾದ ಮೇಲೆ ಜೇಷ್ಠ ಶುಕ್ಲ[1] ಅಂದರೆ ಮೇ 21ರಂದು ಸಂಸ್ಕೃತ ಟೀಕೆ ಬರೆಯಲು ಪ್ರಾರಂಭಿಸಿದೆ. 4ನೆಯ ಅಧ್ಯಾಯ ಜೂನ್ 4ರಂದು ಮುಗಿಯಿತು. ಜ್ಞಾನಜ್ಯೋತಿಯ ಸಮಾರಂಭಗಳನ್ನು ಮುಗಿಸಿ ಶಾಸ್ತ್ರದ ಪೂಜೆಮಾಡಿ, ನಿಯಮಸಾರದ 5ನೇಯ ಅಧ್ಯಾಯದ ಸಂಸ್ಕೃತ ಟೀಕೆಯನ್ನು ಪ್ರಾರಂಭಿಸಿದೆ.

ಅರ್ಹತ್ ಸಿದ್ಧಾಚಾರ್ಯೋಪಾಧ್ಯಾಯೇಭ್ಯಸ್ತಥಾ ಚ ಸಾಧುಭ್ಯತ್ಃದಿಂದ ಪ್ರಾರಂಭಿಸಿ ಮಂಗಳ ವೇಳೆಯಲ್ಲಿ ರತ್ನತ್ರಯ ನಿಲಯದಲ್ಲಿ ಕುಳಿತು ಎದುರಿಗೆ ಇದ್ದ ಸುದರ್ಶನಮೇರು ಪರ್ವತಕ್ಕೆ ನಮಸ್ಕರಿಸಿ ಬರವಣಿಗೆ ಪ್ರಾರಂಭಿಸಿದೆ. ಆಗ ಈ ಸಾಲುಗಳನ್ನು ಬರೆದೆ. ಅಧುನಾSಕೃತ್ರಿಮ ಮನಾದಿ ನಿಧನಂ ಸುದರ್ಶನ ಮೇರುಂ ಮಹಾಶೈಲೇಂದ್ರಂ ಹೃದಿ ಸ್ಮೃತ್ವಾ ತಂ ಪರೋಕ್ಷರೂಪೇಣ ಪುನಃ ಪುನಃ ನಮಸ್ಕೃತ್ಯ, ಇಮಂ ಚ ನಯನ ಪಥಗೋಚರಂ ಕೃತ್ರಿಮಂ ತಸ್ಯೈವ ಪ್ರತಿಕೃತಿರೂಪಂ ಸುಮೇರು ಪರ್ವತಂ ತತ್ರಸ್ಥಾನ್ ತ್ರಿಭುವನತಿಲಕ ಜಿನಾಲಯಾನ್ ಜಿನಪ್ರತಿಮಾಂಶ್ಚಾಪಿ ತ್ರಿಯೋಗ ಶುದ್ಧ್ಯಾ ಮುಹುರ್ಮುಹುರ್ವಂದಿತ್ವಾ ದೀರ್ಘಕಾಲ ವ್ಯವಧಾನಾನಂತರಂ ಸ್ಯಾದ್ವಾದ ಚಂದ್ರಿಕಾ ಟೀಕಾಯಾ ಲೇಖಿನ ಕಾರ್ಯಂ ಪುನಃ ಪ್ರಾರಭ್ಯತೇ ಮಯಾ ಏತನ್ನಿರ್ವಿಘ್ನ ತಯಾ ಪೂರ್ಣತಾಂ ಲಬೇಥ ಈದೃಗ್ಭಾವನಯಾ ಪಂಚಗುರು ಚರಣಶರಣಂ ಗೃಹೀತ್ವಾ ಏವ ಮೇವ ಪ್ರಾರ್ಥ್ಯತೆ॥

ಈಗ ಅಕೃತ್ರಿಮ ಮತ್ತು ಅನಾದಿನಿಧನ ಸುದರ್ಶನ ಮೇರು ಮಹಾಗಿರಿರಾಜನನ್ನು ಹೃದಯದಲ್ಲಿ ಸ್ಮರಿಸುತ್ತಾ ಪರೋಕ್ಷದಲ್ಲಿ ಪುನಃ ಪುನಃ ನಮಸ್ಕರಿಸುತ್ತಾ ಎದುರಿಗೆ ಕಾಣುತ್ತಿದ್ದ ಕೃತ್ರಿಮ ಪ್ರತಿರೂಪವಾದ ಸುಮೇರು ಪರ್ವತದಲ್ಲಿರುವ 16 ಜಿನಾಲಯಗಳನ್ನು ಅದರಲ್ಲಿ ವಿರಾಜಮಾನವಾಗಿರುವ ಸರ್ವಜಿನ ಪ್ರತಿಮೆಗಳನ್ನು ಮನ, ವಚನ, ಕಾಯಗಳಿಂದ ವಂದಿಸಿ, ವ್ಯವಧಾನದಿಂದ ಸ್ಯಾದ್ವಾದ ಚಂದ್ರಿಕೆಯ ಟೀಕೆಯನ್ನು ಬರೆಯಲು ಪ್ರಾರಂಭಿಸಿದ್ದು ನಿರ್ವಿಘ್ನವಾಗಿ ಪೂರ್ಣಗೊಳ್ಳುವವರೆಗೂ ಪಂಚಪರಮೇಷ್ಠಿಗಳಲ್ಲಿ ನನ್ನ ಪ್ರಾರ್ಥನೆ ಸಲ್ಲಿಸುತ್ತಲೇ ಇರುತ್ತೇನೆ.

ವೈಶಾಖ ಶುದ್ಧ ತೃತೀಯ 1978ರಲ್ಲಿ ನಾನು ನಿಯಮಸಾರದ ಸ್ಯಾದ್ವಾದ ಚಂದ್ರಿಕಾ ಟೀಕೆಯನ್ನು ಸಂಸ್ಕೃತದಲ್ಲಿ ಬರೆಯಲು ಪ್ರಾರಂಭಿಸಿದ್ದು 1979 ಫೆಬ್ರವರಿಯಲ್ಲಿ ನಿಂತು ಹೋಯಿತು. 74 ಗಾಹೆಗೆ ಟೀಕೆ ಬರೆದಿದ್ದೆ 75ನೆಯದು ಅರ್ಧಕ್ಕೆ ನಿಂತಿದ್ದು 5 ವರ್ಷಗಳ ನಂತರ ನಾನು ಜೇಷ್ಠ ಶುಕ್ಲದಲ್ಲಿ ಮತ್ತೆ ಬರೆಯಲು ಪ್ರಾರಂಭಿಸಿದೆ.

ಬೆಳಿಗ್ಗೆ ಸಂಸ್ಕೃತ ಟೀಕೆಯನ್ನು ಮಧ್ಯಾಹ್ನ ಹಿಂದಿ ಅನುವಾದವನ್ನು ಬರೆಯುತ್ತಾ ನಿರಂತರ ಬರವಣಿಗೆ ಸಾಗಿ ಮಾರ್ಗಶಿರ ಕೃಷ್ಣ ಸಪ್ತಮಿಯ ಗುರುವಾರ ಪುಷ್ಯ ನಕ್ಷತ್ರ ನವಂಬರ್ 15ರ ಬೆಳಿಗ್ಗೆ 7ಗಂಟೆಗೆ 41 ನಿಮಿಷಕ್ಕೆ ಟೀಕೆಯು ಪೂರ್ಣಗೊಂಡಿತು.

ಪೂರ್ಣಗೊಂಡನಂತರ ಈ ಶ್ಲೋಕವನ್ನು ಬರೆದೆ.

ಶ್ರೀಕುಂದಕುಂದದೇವೇಭ್ಯೋ ನಮೋ ಯೈಃ ಖಲುದರ್ಶಿತಾಃ।
ಪಂಥಾ ನಿಯಮಸಾರೇಣಾ ನಃ ಸನ್ನಸ್ತೀಷ್ಟಸಿದ್ಧಯೇ ॥೧॥

ಏಕೈಕ ಪಂಚಯುಗ್ಮಾಂಕೇ ವೀರಾಬ್ದೇ ಸಪ್ತಮೀ ತಿಥೌ ।
ಮಾರ್ಗೇಽಸಿತೆ ಮಯಾ ಟೀಕಾ, ಜ್ಞಾನಮತ್ಯಾ ಪ್ರಪೂರ್ಯತೇ ॥೨॥

ಯಾವದ್ಧರ್ಮೋSಪ್ಯಯಂ ಮೇರುಸ್ತಾವತ್ ಸ್ಥೇಯಾದಿಹೈಷ ಹಿ
ಯಸ್ಯಾತಿಶಾಯಿನೋ ಭಕ್ತ್ಯಾ ಪೂರ್ಣೇಜಾತಾ ಕೃತಿಸ್ತ್ವರಮ್ ॥೩॥

ಯಾವತ್ ಶ್ರೀವೀರನಾಥಸ್ಯ ವರ್ತೇತ ಭುವಿಶಾಸನಮ್ ।
ತಾವದ್ ಗ್ರಂಥೋಪ್ಯಯಂ ಸ್ಥೇಯಾತ್ ನಂದ್ಯಾಚ್ಚ ಭವ್ಯಮಾನಸೇ ॥೪॥

ಯೇ ಸಿದ್ಧಾಃ ಸಮಯತ್ರಯೇ ನೃಜಗತಃ ಸಿದ್ಧ್ಯಂತಿ ಸೇತ್ಸ್ಯಂತಿ ಚ ।
ತೇ ಸರ್ವೇ ವ್ಯವಹಾರನಿಶ್ಚಯಮಯಂ ರತ್ನತ್ರಯಂ ಪ್ರಾಪ್ಯ ಹಿ ॥೫॥

ಟೀಕಾನ್ತ್ಯೇ ಮಮ ಮಂಗಲಂ ಚ ಜಗತೇ ಸಂಘಾಯ ಕುರ್ವಂತ್ವ ಮೀಃ।
ದಾತ್ಯಾ ಜ್ಞಾನಮತೀಂ ಜಗತ್ ತ್ರಯ ನುತಾಂ ಸ್ಯುರ್ಮೇSಚಿರಾತ್ ಸಿದ್ಧಯೇ ॥

ಈ ಟೀಕೆಯನ್ನು ಬರೆಯುವ ಸಮಯದಲ್ಲಿ ರತ್ನಮತಿಯವರು ನನ್ನ ಹತ್ತಿರವೇ ಕುಳಿತಿರುತ್ತಿದ್ದರು. ಇದೊಂದು ನನಗೆ ಬಹಳ ಅಪ್ಯಾಯಮಾನ ಎನ್ನಿಸುತ್ತಿತ್ತು. ಇದನ್ನು ವ್ಯಕ್ತಪಡಿಸಲು ಶಬ್ದಗಳಿಲ್ಲ. ನಾನು ಮೇ 31ರಂದು ಪ್ರಾರಂಭಿಸಿದಾಗ ಪ್ರತಿಷ್ಠೆಯ ನಂತರ ಮುಗಿಸಬಹುದು ಎಂದು ಭಾವಿಸಿದ್ದೆ ಆದರೆ ಸುದರ್ಶನ ಮೇರುವಿನ ಮೂಲಕ ಭಕ್ತಿಯಿಂದ ಪ್ರತಿಷ್ಠೆಗಿಂತ ಮೊದಲೇ ಸುಮಾರು 5ತಿಂಗಳಲ್ಲೇ ಪೂರ್ತಿಗೊಂಡಿತು. ಇದರಿಂದ ರತ್ನಮತೀ ಮಾತಾಜಿಯವರು ಬಹಳ ಸಂತೋಷಪಟ್ಟರು.

ಆ ದಿನ ಮೋತಿಚಂದರು ಇಲ್ಲೇ ಇದ್ದರು. ಇವರು ಸರಸ್ವತಿ ವಂದನೆಯ ಹೆಸರಿನಲ್ಲಿ ಒಂದು ಕಾರ್ಯಕ್ರಮವನ್ನು ಆಯೋಜಿಸಿದ್ದರು. ನನ್ನಿಂದ ರಚಿತವಾದ ಗ್ರಂಥವನ್ನು ಪಾಲಕಿಯಲ್ಲಿಟ್ಟು ಮೆರವಣಿಗೆ ಮಾಡಿಸಿದರು. ಇದರ ಸುದ್ದಿ ತಿಳಿದು ಮವಾನದಿಂದ ಜನ ಬಂದಿದ್ದರು. ಮೆರವಣಿಗೆಯ ನಂತರ ಶಾಸ್ತ್ರದ ಪೂಜೆ, ಆರತಿ ಮಾಡಿ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಶ್ರೀಕುಂದಕುಂದರು ಮತ್ತು ಅವರಿಂದ ರಚಿತವಾದ ಗ್ರಂಥಗಳ ಬಗ್ಗೆ ತಿಳುವಳಿಕೆ ಕೊಟ್ಟು ನಂತರ ನನ್ನಿಂದ ರಚಿಸಲ್ಪಟ್ಟಿದ್ದ ಟೀಕೆಯ ಬಗ್ಗೆ ಮತ್ತು ನನ್ನ ಬಗ್ಗೆ ಭಕ್ತಿ ಸಮರ್ಪಿಸಿದರು.

ನಾನು ಅದರ ಪ್ರಶಸ್ತಿಯನ್ನು ಬರೆಯುತ್ತಾ ಆಚಾರ್ಯ ಶಾಂತಿಸಾಗರರ ಪರಂಪರೆ ನನ್ನ ಗುರು ಪರಂಪರೆ ಕೊಡುತ್ತಾ ವರ್ತಮಾನ ಶಾಸನದವರೆಗೂ ಬರೆದೆ.

ಅದ್ಯತ್ವೇ ಭಾರತೆ ದೇಶೇ ಗಣತಂತ್ರಾಖ್ಯಾಶಾಸನಮ್
ಜೈನ ಧರ್ಮಸ್ಯ ವೃದ್ಧಿಸ್ತು ಧರ್ಮನಿರಪೇಕ್ಷತಾವಿದೌ ॥೧೭॥
ಅದ್ಯ ರಾಷ್ಟ್ರ ಪ್ರತಿರ್ಜ್ಞಾನೀಜೈಲಸಿಂಹೋSತ್ರ ಶಾಸಕಃ ।
ರಾಜೀವಗಾಂಧಿನಾಮಾಸ್ತಿ ಪ್ರಧಾನಮಂತ್ರೀ ಕೀರ್ತಿಮಾನ್ ॥

ಪುನಃ ಜಂಬೂದ್ವೀಪ ಜ್ಞಾನಜ್ಯೋತಿಯ ಸ್ವಲ್ಪ ಪರಿಚಯವನ್ನು ನೀಡಿದೆ. ಆದಿನ ಜ್ಞಾನಜ್ಯೋತಿಯ ಪ್ರವರ್ತನೆಯಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಟಿಕೈತನಗರದಲ್ಲಿ ತೊಡಗಿರುವ ಸಮಯದಲ್ಲಿ ನಾನು ಪ್ರಶಸ್ತಿಯನ್ನು ಪೂರ್ಣಗೊಳಿಸುತ್ತಾ ಇದ್ದೆ. ಅದರ ಶ್ಲೋಕ

ಭಾರತಸ್ಯೇಂದಿರಾಗಾಂಧೀ ಪ್ರಧಾನಮಂತ್ರಿ ನಾಮಭಾಕ್।
ಸಾರ್ಧದ್ವಯಾಬ್ದಪೂರ್ವಂ ಯತ್ ಪ್ರಾವರ್ತನ ಕರಾಬ್ಜತಃ ॥೨೯॥
ಜಂಬೂದ್ವೀಪಾಕೃತೇಃ ರೂಪಂ ಜ್ಞಾನಜ್ಯೋರ್ತಿಯದಾSಭ್ರಮತ್ ।
ಸರ್ವತ್ರ ಭಾರತೇ ದೇಶೇ ಉತ್ತರ ಪ್ರಾಂತಮಾಶ್ರಯತ್ ॥೩೦॥
ಟಿಕೈತನಗರೇ ತಸ್ಯ ಮಜ್ಜನ್ಮಭುವಿ ಸ್ವಾಗತಮ್।
ಮಹೋತ್ಸವೈ ಶ್ಚಲನ್ನಾಸ್ತೆ ಪ್ರಸನ್ನಾಹಂ ತದಾ ತ್ವಿಹ ॥೩೧॥
ಮತ್ಪಾರ್ಶ್ವೇಚೋಪವಿಷ್ಟೇಯಂ ರತ್ನಮತ್ಯಾರ್ಯಿಕಾ ಪ್ರಸೂಃ ।
ಮಾರ್ಗೇ ಶುಕ್ಲೇ ದ್ವಿತೀಯಾಯಾಂ ಪ್ರಶಸ್ತಿಃ ರಚಿತಾಮಯಾ ॥೩೨॥

ಅರ್ಥ

ಇಂದು ಭಾರತದೇಶದಲ್ಲಿ ಗಣತಂತ್ರ ಶಾಸನವು ನಡೆಯುತ್ತಿದೆ. ಈಗ ಧರ್ಮ ನಿರಪೇಕ್ಷ ವಿಧಾನವಿರುವುದರಿಂದ ಅಂದರೆ ಆಡಳಿತದಲ್ಲಿ ಧರ್ಮನಿರಪೇಕ್ಷತೆಯಿಂದ ಜೈನಧರ್ಮವು ಅಭಿವೃದ್ಧಿಯನ್ನು ಹೊಂದುತ್ತಿದೆ. ಇಂದು ಜೈಲಸಿಂಗ್ ಭಾರತದ ರಾಷ್ಟ್ರಪತಿಗಳಾಗಿಯು ಕೀರ್ತಿಶಾಲಿ ರಾಜೀವಗಾಂಧಿಯವರು ಪ್ರಧಾನಮಂತ್ರಿಗಳೂ ಆಗಿದ್ದಾರೆ.

ಭಾರತದ ಪ್ರಧಾನಮಂತ್ರಿಯಾಗಿದ್ದ ಇಂದಿರಾಗಾಂಧಿಯವರು 2½ ವರ್ಷದ ಹಿಂದೆ ಉದ್ಘಾಟಿಸಿದ ಜಂಬೂದ್ವೀಪ ಜ್ಞಾನಜ್ಯೋತಿಯು ಭಾರತದಲ್ಲೆಲ್ಲ ಸಂಚರಿಸಿ ಈಗ ಉತ್ತರ ಪ್ರದೇಶ ಪ್ರಾಂತ್ಯಕ್ಕೆ ಬಂದಿದೆ. ಇಂದು ನನ್ನ ಹುಟ್ಟೂರು ಟಿಕೈತ ನಗರದಲ್ಲಿ ಅದನ್ನು ಸ್ವಾಗತಿಸಲು ಒಂದು ಮಹೋತ್ಸವವೇ ನಡೆಯುತ್ತಿದೆ. ಈಗ ಪ್ರಸನ್ನವದನಳಾಗಿ ಪ್ರಶಸ್ತಿಯನ್ನು ಪೂರ್ಣಗೊಳಿಸುತ್ತಿದ್ದೇನೆ. ನನ್ನ ಜನ್ಮದಾತೆ ಆರ್ಯಿಕೆ ರತ್ನಮತಿಯವರು ನನ್ನ ಹತ್ತಿರವೇ ಕುಳಿತಿದ್ದಾರೆ.

1984ರ ನವಂಬರ್ 14ರಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ನಾರಾಯಣದತ್ತರು ಟಿಕೈತನಗರದಲ್ಲಿ ಜ್ಞಾನಜ್ಯೋತಿಯ ಪ್ರವರ್ತನೆಯ ಶುಭಾರಂಭ ಮಾಡುತ್ತಿದ್ದಾರೆ. ನಾನು ಪ್ರಸನ್ನ ಚಿತ್ತಳಾಗಿ ಆಹಾರ ಮುಗಿಸಿಬಂದು ಕುಳಿತೆ. ರತ್ನಮತಿ ಆರ್ಯಿಕೆಯವರು ಅಲ್ಲೇ ಕುಳಿತಿದ್ದರು. ನಾನು 11ಗಂಟೆ 15ನಿಮಿಷಕ್ಕೆ ಸರಿಯಾಗಿ ಪ್ರಶಸ್ತಿಯನ್ನು ಪೂರ್ಣಗೊಳಿಸಿದೆ.

ಟೀಕೆಯಲ್ಲಿ ವಿಶೇಷತೆಗಳು

ಈ ಸಂಸ್ಕೃತ ಟೀಕೆಯಲ್ಲಿ ನಿಶ್ಚಯ ವ್ಯವಹಾರದ ಸಮನ್ವಯಗೊಳಿಸುತ್ತಾ ಎಲ್ಲಾಕಡೆ ಗುಣಸ್ಥಾನ ವ್ಯವಸ್ಥೆಯ ಮೇಲೆ ಪ್ರಕಾಶ ಬೀರಿದ್ದೇನೆ. ಇದು ನನ್ನ ಅಭಿಪ್ರಾಯವಲ್ಲ. ಸಮಯಸಾರ ಪ್ರವಚನಸಾರದ ಟೀಕೆಯಲ್ಲಿ ಜಯಸೇನಾಚಾರ್ಯರು ಹೇಳಿರುವ ವಿಷಯವನ್ನೇ ಅನುಸರಿಸಿದ್ದೇನೆ. ಹೇಗೆ ನಿಶ್ಚಯ ಸಮ್ಯಕ್ತ್ವವನ್ನ ವೀತರಾಗ ಚಾರಿತ್ರದಿಂದ ಅವಿನಾಭಾವೀ ನಿಶ್ಚಯರತ್ನತ್ರಯ ಅವಸ್ಥೆಯಲ್ಲಿಯೇ ಯೋಜಿಸಲಾಗಿದೆ. ಇದೇ ವಿಚಾರ ಸರಣಿಯು ಪಂ. ಆಶಾಧರ ಸೂರಿಯವರ ಅನಗಾರ ಧರ್ಮಾಮೃತದ ಟೀಕೆಯಲ್ಲಿಯೂ ಇದೆ.

1986ರಲ್ಲಿ ಪಂ. ಪೂಲ್‌ಚಂದ್ ಸಿದ್ಧಾಂತಶಾಸ್ತ್ರಿಗಳು ನನ್ನ ಅನಾರೋಗ್ಯ ಸಮಯದಲ್ಲಿ ಬಂದವರು ಈ ಗ್ರಂಥವನ್ನು ಓದಿ ಹೇಳಿದರು. ಅವರು ನನ್ನ ಟೀಕೆಯ ಬಗ್ಗೆ ಪ್ರಶಂಸಿಸುತ್ತಾ, ಮಾತಾಜೀ ಸಮಯೋಚಿತವಾದ

ಒಳ್ಳೆ ಒಳ್ಳೆಯ ಉದ್ಧರಣೆಗಳನ್ನು ತೆಗೆದುಕೊಂಡಿದ್ದೀರ ಎಂದು ಹಲವಾರು ಬಾರಿ ಹೇಳಿದರು. ಅವರು ನಿರ್ವಿಕಲ್ಪ ಧ್ಯಾನವನ್ನು ನಾಲ್ಕನೆ ಗುಣಸ್ಥಾನದಲ್ಲಿ ಅಂಶಾತ್ಮಕವಾಗಿ ಪರಿಗಣಿಸಬಹುದೆಂಬುದು ಅವರ ವಿಚಾರಧಾರೆಯಾಗಿತ್ತು. ಆದರೆ ಅದು ನನ್ನ ಗುರುಪರಂಪರೆಯಲ್ಲಿ ಅದಕ್ಕೆ ಮಾನ್ಯತೆ ಇಲ್ಲ. ಆಚಾರ್ಯ ಶ್ರೀ ಶಾಂತಿಸಾಗರರು ತಮ್ಮ ಅಂತಿಮ ಉಪದೇಶದಲ್ಲಿಯು ನಿರ್ವಿಕಲ್ಪ ಸಮಾಧಿ ಧ್ಯಾನವು ಏಳನೆಯ ಗುಣಸ್ಥಾನದಲ್ಲಿ ಮಾತ್ರ ಆಗುತ್ತದೆ ಎಂದು ಹೇಳಿದ್ದರು. ಪಂ. ಫೂಲಚಂದರು ಹಲವಾರು ಬಾರಿ ಮಾತಾಜಿ ತಮ್ಮ ವಿಚಾರಧಾರೆ ಒಂದು ಪಕ್ಷದ ಶಾಸ್ತ್ರದಿಂದ ಸಮ್ಮತವೆಂದು ಹೇಳಿದರು. ನನ್ನ ಟೀಕೆಯನ್ನು ಗುರುಪರಂಪರೆಯಲ್ಲಿ ಆರ್ಷ ಪರಂಪರೆಯಲ್ಲಿ ಮುನಿಗಳು, ಆಚಾರ್ಯರು, ಆರ್ಯಿಕೆಯರು, ವಿದ್ವಾಂಸರು ಎಲ್ಲರು ಬಹಳ ಚೆನ್ನಾಗಿ ಮೂಡಿದೆ ಎಂದರು.

ಲಖನೌನಲ್ಲಿ ಜ್ಞಾನಜ್ಯೋತಿ

ಲಖನೌ ನಗರದಲ್ಲಿ ಜ್ಞಾನಜ್ಯೋತಿಯ ಸ್ವಾಗತಕ್ಕೆ ಸ್ವತಃ ನಾರಾಯಣದತ್ತ ತಿವಾರಿಯವರೇ ಬಂದಿದ್ದರು. ಒಳ್ಳೆಯ ಭಾಷಣವನ್ನು ಮಾಡಿ ಉತ್ತರ ಪ್ರದೇಶದ ತೀರ್ಥಕ್ಷೇತ್ರ ವಿಕಾಸಕ್ಕಾಗಿ 25ಲಕ್ಷ ರೂ. ಗಳನ್ನು ಅನುದಾನವಾಗಿ ಘೋಷಿಸಿದರು. ಆದರೆ ದಿಗಂಬರ ಜೈನ ನಾಯಕರಲ್ಲಿ ಐಕ್ಯತೆ ಇಲ್ಲದೆ ಇಲ್ಲಿಯವರೆಗೂ ಅದನ್ನು ಪಡೆದುಕೊಂಡಿಲ್ಲ.

೮೨

ಆರ್ಯಿಕೆ ರತ್ನಮತಿಯವರ ಸಲ್ಲೇಖನ

ಈ ಕಲಿಕಾಲದಲ್ಲಿ ಧರ್ಮದುರಂಧರ ಚಾರಿತ್ರ ಚಕ್ರವರ್ತಿ ಆಚಾರ್ಯವರ್ಯ ಶಾಂತಿಸಾಗರ ಮಹಾರಾಜರು ಹನ್ನೆರಡು ವರ್ಷಗಳ ಭಕ್ತ ಪ್ರತ್ಯಾಖ್ಯಾನವೆಂಬ ಉತ್ಕೃಷ್ಟ ಸಲ್ಲೇಖನವನ್ನು ಸ್ವೀಕರಿಸಿದ್ದರು. ಆದರೆ ಅವರ ಕಣ್ಣಿನ ದೃಷ್ಟಿಯು ಕ್ಷೀಣವಾದ್ದರಿಂದ 1955ರಲ್ಲಿ ಕುಂಥಲಗಿರಿ ಸಿದ್ಧಕ್ಷೇತ್ರದಲ್ಲಿ ಸಲ್ಲೇಖನ ವಿಧಿಯಿಂದ ಪಂಡಿತ ಮರಣವನ್ನು ಹೊಂದಿದರು.

ಅವರ ಪಟ್ಟ ಶಿಷ್ಯರಾದ ಆಚಾರ್ಯ ವೀರಸಾಗರರು 1957ರಲ್ಲಿ ಜಯಪುರದ ಖಾನಿಯಾದಲ್ಲಿ ಸಲ್ಲೇಖನಾ ಪೂರ್ವಕ ಪಂಡಿತ ಮರಣದಿಂದ ಶರೀರತ್ಯಾಗ ಮಾಡಿದರು. ಆಚಾರ್ಯರು ಭಕ್ತ ಪ್ರತ್ಯಾಖ್ಯಾನ ವಿಧಿಯಿಂದ ಸ್ವಲ್ಪ ಸ್ವಲ್ಪವೇ ಆಹಾರ ವಸ್ತುಗಳನ್ನು ಕಡಿಮೆ ಮಾಡುತ್ತಾ ಬಂದು ಕಾಯದ ಜೊತೆಗೆ ಕಷಾಯವನ್ನು ಕ್ಷೀಣಿಸತೊಡಗಿಸಿ ಬಹಿರಂಗವಾಗಿ ಸಲ್ಲೇಖನವನ್ನು ಘೋಷಣೆ ಮಾಡದೆ. ಸಾಧು ಸಾಧ್ವಿಗಳಿಗೆ ಸುಲಭವಾದ ಸಲ್ಲೇಖನ ವಿಧಿಯನ್ನು ತೋರಿಸುವುದಕ್ಕಾಗಿಯೇ ಪ್ರತಿದಿನ ಆಹಾರಕ್ಕಾಗಿ ಹೊರಟು ಸ್ವಲ್ಪವೇ ಗಂಜೀ ಮುಂತಾದವುಗಳನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರು. ಇಂತಹ ಆಚಾರ್ಯರ ಆದರ್ಶಗಳನ್ನು ಮಾದರಿಯಾಗಿ ಪರಿಗಣಿಸಿ ನಾನು ಆರ್ಯಿಕ ರತ್ನಮತೀಯವರಿಗೆ ಸಲ್ಲೇಖನ ವಿಧಿಯನ್ನು ಕೊಟ್ಟೆ. ಮಾರ್ಗಶಿರ ಚತುರ್ಥಿ ಅಂದರೆ ನವೆಂಬರ್ 26ರಂದು ಆಹಾರವಾದ ಮೇಲೆ ಮೇಲುಸಿರು ಪ್ರಾರಂಭವಾಯಿತು. ನಾನು ಮಹಾಮಂತ್ರವನ್ನು ಹೇಳುತ್ತಾ ಸಮಾಧಾನ ಪಡಿಸಿದೆ. ಆತ್ಮ ಬೇರೆ ಶರೀರ ಬೇರೆ ಮುಂತಾದ ವಾಕ್ಯಗಳನ್ನು ಹೇಳತೊಡಗಿದೆ. ಸುಮಾರು ½ ಗಂಟೆಯ ಮೇಲೆ ವಾಂತಿಯಾಗಿ ನಂತರ ಚೇತರಿಸಿಕೊಂಡರು. ಮೊದಲಿನಂತೆ ಸಾಮಾಯಿಕ ಮಾಡಿದರು. ಮಧ್ಯಾಹ್ನ ಸ್ವಾಧ್ಯಾಯದಲ್ಲಿ ಕುಳಿತರು. ಆಗ ಕೆಲವರು ದೊಡ್ಡ ಮಾತಾಜೀಯವರು ನಿಮಗೆ ಸಲ್ಲೇಖನ

ಕೊಡಬೇಕೆಂದಿದ್ದಾರೆ ಎಂದರು. ಅವರು ಮುಗಳ್‌ನಕ್ಕರು. ಅವರಿಗೆ 5 ದಿನಗಳು ಮೊದಲೇ ಆಹಾರದಲ್ಲಿ ಅನಾಸಕ್ತಿ ಉಂಟಾಗಿತ್ತು. ಕುಟ್ಟಿದಾಲನ್ನು ಕೈಯಲ್ಲೂ ತೆಗೆದುಕೊಳ್ಳುತ್ತಿರಲಿಲ್ಲ. ಇದರಿಂದಾಗಿ ನಾನು ಮೇರಠನಿಂದ ವೈದ್ಯರನ್ನು ಕರೆಸಿ ವಿಚಾರಮಾಡಿ ಔಷಧದಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಿಸಿದ್ದೆ.

ಇದರ ನಂತರ ನಾನು ಬರವಣಿಗೆಯಲ್ಲಿ ತೊಡಗಿಕೊಂಡು ಬಿಟ್ಟಿದ್ದೆ. ಆದರೆ ರಾತ್ರಿ ಮಾತ್ರ-ಅವರ ಹತ್ತಿರವೇ ಮಲಗುತ್ತಿದ್ದೆ. ಅವರೇ ಸ್ವತಃ ತಮ್ಮ ದರ್ಶನ, ಪ್ರತಿಕ್ರಮಣ ಸ್ವಾಧ್ಯಾಯ ಆಹಾರ ಮುಂತಾದವನ್ನು ಮಾಡಿಕೊಳ್ಳುತ್ತಾ ಇದ್ದರು. ನಿಧಾನವಾಗಿ ಆಹಾರದಲ್ಲಿ ಕಡಿಮೆ ಮಾಡತೊಡಗಿದರು. ಔಷಧಿ ಪರಿಣಾಮ ಬೀರಲಿಲ್ಲ. ನಿಶ್ಯಕ್ತಿ ಜಾಸ್ತಿ ಆಗತೊಡಗಿತು. ಪ್ರಾಯಶಃ ಅವರು ಆಹಾರಕ್ಕಿಂತ ಮೊದಲು ಅಥವಾ ನಂತರ ಉದ್ವಿಗ್ನರಾಗುತ್ತಿದ್ದರು.

ಡಿಸೆಂಬರ್ 6ರಂದು ಮಾರ್ಗಶಿರ ತ್ರಯೋದಶಿಯಂದು ಆಹಾರಕ್ಕಿಂತ ಮೊದಲೇ ವಾಂತಿ ಆಯಿತು. ಹೀಗಾಗಿ ಆಹಾರದಲ್ಲಿ ಸ್ವಲ್ಪವೇ ರಸ ಸೇವಿಸಿದರು. ಡಿಸೆಂಬರ್ 13ರಿಂದ 15ರವರೆಗೆ ಅವರ ಆರೋಗ್ಯದಲ್ಲಿ ಬಹಳ ವ್ಯತ್ಯಾಸವಾಯಿತು. ನಾನು ಇದು ಆಮ್ಲಪಿತ್ತದ ದೋಷವಿರಬೇಕು ಸರಿಹೋಗುತ್ತದೆ ಎಂದುಕೊಂಡೆ. ಆಹಾರಕ್ಕಿಂತ ಮೊದಲೇ ತಳಮಳಗೊಳ್ಳುತ್ತಿದ್ದ ಅವರ ಬಾಯಿಯಿಂದ ನೊರೆ ಬರತೊಡಗಿತು. ಆಗ ನನಗೆ ಇವರು ಬದುಕುವ ಬಗ್ಗೆ ಸಂಶಯ ಬರತೊಡಗಿತು. ಈಗ ಇವರನ್ನೇ ಕ್ಷಪಕ ಸೇವೆ ಮಾಡಬೇಕೆಂದು ನಿರ್ಧರಿಸಿ ದೆಹಲಿ ಮೇರಠನಿಂದ ಬಂದಿದ್ದ ವೈದ್ಯರೊಡನೆ ಪರಾಮರ್ಶೆ ಮಾಡಿದೆ.

ಡಿಸೆಂಬರ್ 16ರಂದು ಪ್ರತಿಷ್ಠಾ ಸಮಿತಿಯ ಮೀಟಿಂಗ್ ಇತ್ತು. ಅದಕ್ಕಾಗಿ ಕೈಲಾಶ್‌ಚಂದ್ ಟಿಕೈತ ನಗರದಿಂದ ಬಂದಿದ್ದ. ವೈದ್ಯರು ಅವನ ಮುಂದೆಯ ಇನ್ನು ನಿಮ್ಮ ತಾಯಿ ಎರಡು ಮೂರು ದಿನದ ಅತಿಥಿಗಳಷ್ಟೇ ಎಂದರು. ನಾನು ಮಾರನೆಯ ದಿನವೇ ಅವರನ್ನು ಏಕಾಂತದಲ್ಲಿ ಕೂರಿಸಿಕೊಂಡು, ಕ್ಷಮೆಬೇಡಿ, ವಿಧಿವತ್ತಾಗಿ ಸಲ್ಲೇಖನ ವ್ರತವನ್ನು ಕೊಟ್ಟೆ.

ನನಗೆ ಯಥೋಚಿತವಾದ ಕೆಲಸಮಾಡಿದ ಅನುಭವವಾಗತೊಡಗಿತು. ತಾಯಿಯವರು ಬಹಳ ಸಾವಧಾನದಿಂದ ಇದ್ದರು. ಅವರು ಸಂಘದ ಬಗ್ಗೆಯಾಗಲಿ, ಶರೀರದ ಬಗ್ಗೆಯಾಗಲೀ ನಿರ್ಮೋಹಿಯಾಗಿದ್ದರು. ಇದರಿಂದಾಗಿ ಅಭೂತಪೂರ್ವವಾದ ಶಾಂತಿ ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು. ಸ್ವಾಧ್ಯಾಯ ಪಾಠ ಶ್ರವಣದಲ್ಲಿ ಉತ್ಕಂಟ ಪ್ರೇಮವನ್ನು ತೋರಿಸಿದರು. ಕೈಯಲ್ಲಿ ಮಾಲೆಹಿಡಿದು ಜಪಮಾಡತೊಡಗಿದ್ದರು. ಇವರ ಅತ್ಯಂತ ವಿಶೇಷ ಗುಣವೆಂದರೆ "ಆವಶ್ಯಕಅಪರಿಹಾಣಿ" ಇವರು ಅಂತಿಮ ಕ್ಷಣದವರೆಗೂ ತಮ್ಮ ಆವಶ್ಯಕ ಕ್ರಿಯೆಗಳಲ್ಲಿ ಸಾವಧಾನವಾಗಿದ್ದರು. ಹಿಂದಿನ ರಾತ್ರಿ ಮೊದಲು 9 ಸಲ ನವಕಾರ ಮಂತ್ರ ಜಪಿಸಿ "ಅಪರರಾತ್ರಿಕ" ಸ್ವಾಧ್ಯಾಯವನ್ನು ವಿಧಿವತ್ತಾಗಿ ಮಾಡಿ ಜನವರಿ 15ರಂದು ಸಹ ಗಣಧರ ವಲಯ ಮಂತ್ರವನ್ನು ಕೇಳಿದರು. ಅನಂತರ ಪ್ರತಿಕ್ರಮಣ ಹೇಳಲಾಯಿತು. ರಾತ್ರಿಯೋಗ ನಿಷ್ಠಾಪನ ಕ್ರಿಯೆ ಮಾಡುತ್ತಾ ಯೋಗಭಕ್ತಿಯನ್ನು ಕೇಳಿದರು. ನಂತರ ಮೂರು ಕಡಿಮೆ ನವಕೋಟಿ ಮುನಿಗಳಿಗೆ ವಂದಿಸಿ, ಅನುಕ್ರಮವಾಗಿ ಚಾರಿತ್ರ ಚಕ್ರವರ್ತಿ 108 ಶಾಂತಿಸಾಗರರು, ವೀರಸಾಗರರು ಶಿವಸಾಗರರಿಗೆ ವಂದಿಸಿ ತಮ್ಮ ದೀಕ್ಷಾಗುರು ಧರ್ಮಸಾಗರರಿಗೂ ನಮೋಸ್ತುಗಳನ್ನು ಹೇಳಿದರು. ಎದುರಿಗೆ ಇದ್ದ ಆಚಾರ್ಯರ ಫೋಟೋದ ಕಡೆಗೆ ನೋಡುತ್ತಿದ್ದರು. ನಂತರ ಸಾಮಾಯಿಕ ಮಾಡುತ್ತಾ ಚೈತ್ಯ ಭಕ್ತಿ ಪಂಚಗುರುಭಕ್ತಿಗಳನ್ನು (ಹೇಳಿದರು) ಕೇಳಿದರು. ಣಮೋಕಾರ ಮಂತ್ರ ಸಿದ್ಧಚಕ್ರ ಮಂತ್ರ ಶಾಂತಿಮಂತ್ರಗಳ ಜಪ (ಕೇಳುತ್ತಲೇ)ಗಳನ್ನು ಬಹಳ ಮನಸ್ಸಿಟ್ಟು ಕೇಳುತ್ತಿದ್ದರು. ಇದರ ನಂತರ ನನ್ನನ್ನು ಸಮಯವೆಷ್ಟು ಎಂದು ಕೇಳಿದರು.7-10ಎಂದೇ ನಂತರ ದಿನನಿತ್ಯದಂತೆ ಅವರ ಮುಂದೆಯ ಭ. ಶಾಂತಿನಾಥರ

ಬಿಂಬವಿಟ್ಟು ಅಭಿಷೇಕ, ಶಾಂತಿ ಧಾರೆಗಳು ಆದವು. ಅಭಿಷೇಕ ಮಾಡುವಾಗ ನೆಟ್ಟದೃಷ್ಟಿಯಿಂದಲೇ ನೋಡುತ್ತಿದ್ದರು. ಹೀಗೆ ನಾಲ್ಕು ಕಾಲದ ಸ್ವಾದ್ಯಾಯ ಮೂರು ಕಾಲದ ಸಾಮಾಯಿಕ ಕ್ರಿಯೆ ಹಾಗೂ ಎರಡು ಕಾಲದ ಪ್ರತಿಕ್ರಮಣ ಮಾಡಿ ಪೂರ್ಣತೃಪ್ತಿಯನ್ನು ಹೊಂದಿದರು.

ಒಂದು ದಿನ ಸಾಯಂಕಾಲ ನಾನು ಸಾಮಾಯಿಕದ ಮೊದಲು ರಾತ್ರಿಯೋಗ ಪ್ರತಿಷ್ಠಾಪನೆಯ ಮಾಡುವುದನ್ನು ಮರೆತಿದ್ದೆ. (ಆಗ ಅವರು)ಪಡಿಕ್ಕಮಾಮೀ ಭಂತೇ ಹೇಳುತ್ತಾ ಸಾಮಾಯಿಕ ಮಾಡಲು ಪ್ರಾರಂಭಿಸಿದೆ ಆಗ ಅವರು

"ಅಥ ರಾತ್ರಿಯೋಗ ಪ್ರತಿಷ್ಠಾಪನಪಕ್ರಿಯಾಯಾಂ ಯೋಗಭಕ್ತಿ ಕಾಯೋತ್ಸರ್ಗಂ ಕರೋಮ್ಯಹಂ।"

ನಿಶ್ಯಕ್ತಿಯಲ್ಲಿಯೂ ಅವರು ಅಷ್ಟೊಂದು ಎಚ್ಚರವಾಗಿರುವುದು ನೋಡಿ ನನಗೆ ಆಶ್ಚರ್ಯವಾಯಿತು. ವೈದ್ಯಗಣವು ಕೂಡ ಅವರ ಸಾವಧಾನಚಿತ್ತತೆ-ಮನೋ ಬಲವನ್ನು ನೋಡಿ ಆಶ್ಚರ್ಯಗೊಳ್ಳ ತೊಡಗಿದರು. ಹೀಗೆ ಒಂದುದಿನ ಸಾಮಾಯಿಕ ಕ್ರಿಯೆಯಲ್ಲಿಪ್ರಥಮಂ ಕರಣಂ, ಚಾರಣಂ ನಮಃ ಪಾಠ ಬಿಟ್ಟು ಹೋಗಿದ್ದು ಗುರುತಿಸಿ ಹೇಳತೊಡಗಿದರು. ಮಧ್ಯಾಹ್ನವಾಗುತ್ತಲೇ ಸಮಯ ಕೇಳುತ್ತಿದ್ದರು. ಏಕೆಂದರೆ 12ಗಂಟೆಗೆ ಸರಿಯಾಗಿ ಸಾಮಾಯಿಕ ಪಾಠ ಕೇಳಬೇಕಾಗಿತ್ತು. ಹೀಗಾಗಿ ಅವರ "ಆವಶ್ಯಕ ಅಪರಿಹಾಣಿ" ಭಾವನೆ ಬಹಳ ಉತ್ತಮವಾಗಿತ್ತು. ಎಲ್ಲರಿಗೂ ಈ ಭಾವನೆ ಉಂಟಾಗುವುದು ದುರ್ಲಭ.

ಆರ್ಯಿಕ ರತ್ನಮತಿ ಮಾತಾಜಿಯವರ ಅಸ್ವಸ್ಥತೆಯನ್ನು ನೋಡಿ ಆಶೀರ್ವಾದ ಮತ್ತು ಆದೇಶಕ್ಕಾಗಿ ರವೀಂದ್ರ ಕುಮಾರನು ಆಚಾರ್ಯರ ಧರ್ಮಸಾಗರರಿಗೆ ಒಂದು ಪತ್ರ ಬರೆದು ಒಬ್ಬ ಶ್ರಾವಕರ ಕೈಯಲ್ಲಿ ಕಳುಹಿಸಿದ್ದ. ಅವರಿಂದ ಬಂದ ಉತ್ತರವನ್ನು ಮಾತಾಜಿಗೆ ಓದಿ ತಿಳಿಸಲಾಯಿತು. ಅವರು ಬಹಳ ಭಕ್ತಿಯಿಂದ ಕೇಳಿಸಿಕೊಂಡು ಪಿಂಚಿ ಹಿಡಿದು ಮತ್ತೆ ಮತ್ತೇ ಕೈಯಿಂದ ನಮಸ್ಕರಿಸುತ್ತಾ ಪರೋಕ್ಷವಾಗಿ ದೀಕ್ಷಾ ಗುರುಗಳಿಗೆ ನಮನವನ್ನು ಅರ್ಪಿಸಿದರು.

ಆಚಾರ್ಯರ ಪತ್ರ

ಆಚಾರ್ಯ ಶ್ರೀ ಧರ್ಮಸಾಗರರ ಶುಭಾಶೀರ್ವಾದಗಳು. ಮಾತಾಜಿ ತಾವು ಅಜಮೇರದಲ್ಲಿ ತಮ್ಮ ಪುತ್ರ ಪುತ್ರಿ ಮನೆ ಕುಟುಂಬದ ಮೋಹವನ್ನು ತ್ಯಜಿಸಿ ಶರೀರದ ಬಗ್ಗೆಯು ನಿಸ್ಪೃಹಳಾಗಿ ಬಹಳ ಸಾಹಸಮಾಡಿ ದೀಕ್ಷೆಯನ್ನು ಕೈಕೊಂಡಿರಿ. ಇಲ್ಲಿಯವರೆಗೂ ರತ್ನತ್ರಯ ಸಾಧನೆಯಲ್ಲಿ ಸಂಯಮವನ್ನು ಸಾಧಿಸಿದ್ದೀರಿ. ಈಗ ಸಲ್ಲೇಖನರೂಪಿ ಕಳಸವನ್ನು ಧರಿಸಿದ್ದೀರಿ. ಆದ್ದರಿಂದ ಪೂರ್ಣರೂಪದಲ್ಲಿ ಸಾವಧಾನವಾಗಿ ನಿಮ್ಮ ಜೀವನದ ಸಾರವೇ ಸಂಯಮ. ಇದು ಕೊನೆಯವರೆಗೂ ನಿಮ್ಮದಾಗಿರಲಿ ಎಂಬುದೇ ನನ್ನ ಶುಭಾಶೀರ್ವಾದವಾಗಿದೆ.

ಜನವರಿ 13ರಂದು ನಾನು ಮಾತಾಜಿಯವರಿಗೆ ಶುದ್ಧಿಮಾಡಿ, ಮಡಿಸೀರೆಯನ್ನು ಉಡಿಸಿ ಆಹಾರಕ್ಕಾಗಿ ಎಬ್ಬಿಸಲು ಪ್ರಯತ್ನಿಸಿದೆ. ನಿಶ್ಯಕ್ತರಾದ್ದರಿಂದ ಆಹಾರಕ್ಕೆ ಏಳಲಿಲ್ಲ. ಹತ್ತುಗಂಟೆಯ ವೇಳೆಗೆ ಮೇಲುಸಿರು ಬಿಡತೊಡಗಿದರು. ಇದನ್ನು ಕಂಡು ಅವರು ಹೊರಡುತ್ತಿದ್ದಾರೆ ಎನ್ನಿಸಿತು. ಎಲ್ಲರು ಮಂತ್ರ ಜಪಿಸತೊಡಗಿದರು. ನಾನು ಮಧ್ಯೆ ಮಧ್ಯೆ ಆತ್ಮಭಿನ್ನ, ಶರೀರಭಿನ್ನ, ಆತ್ಮಕ್ಕೆ ಮೃತ್ಯುವಿಲ್ಲ. ಅದು ಅಜರಾಮರ, ಅವಿನಾಶಿ, ಶುದ್ಧ, ಬುದ್ಧ, ನಿತ್ಯ, ನಿರಂಜನ, ನಿರ್ವಿಕಾರ, ನಿರಾಕಾರವಾದುದು-ಜ್ಞಾನ, ದರ್ಶನ, ಸುಖ, ವೀರ್ಯ ಸ್ವರೂಪವಾದುದು. ಆತ್ಮನೇ ಭಗವಂತನು ಸಿದ್ಧನು ಎಂಬುದಾಗಿ ಬೋಧಿಸುತ್ತಲೇ ಇದ್ದೆ.

12 ಗಂಟೆಗೆ ಅವರಿಗೆ ಚತುರ್ವಿಧ ಆಹಾರವನ್ನು ತ್ಯಾಗಮಾಡಿಸಿದೆ. ಡಾಕ್ಟರುಗಳು ಸಹ ಇದು ಅಂತಿಮ ಕ್ಷಣವೆಂದೇ ಹೇಳಿದರು. ಅವರಿಗೆ ವ್ರತ ಕೊಡುವಾಗಲೂ ಮಾತಾಜೀ ಇಂದು ನಿಮಗೆ ಚತುರ್ವಿಧ ಆಹಾರದ ತ್ಯಾಗವಿದೆ. ನಾಳೆ ಬೆಳಗ್ಗೆ ತಮ್ಮ ಆರೋಗ್ಯ ಸುಧಾರಿಸಿದರೆ ಆಹಾರ ತೆಗೆದುಕೊಳ್ಳಿ ಇಲ್ಲದಿದ್ದರೆ ತ್ಯಾಗವೇ ಇರಲಿ ಎಂದೆ.

ಭೋದನೆ, ಮಂತ್ರ ಪಠನೆ, ನಿರಂತರ ನಡೆಯುತ್ತಲೇ ಇತ್ತು. ಎರಡು ಗಂಟೆಯ ವೇಳೆಗೆ ಜ್ಞಾನ ಬಂತು. ಒಳ್ಳೆಯ ಸಮಾಧಾನವು ಇತ್ತು. ಮೇರಠನಿಂದ ಬಂದಿದ್ದ 2-3 ವೈದ್ಯರು ಅವರಿಗೆ ನೀರು, ಹಾಲು, ಹಣ್ಣಿನರಸ ಕೊಡಿರಿ. ಅವರ ಗಂಟಲು ಒಣಗುತ್ತಿದೆ ಎಂದು ಆಗ್ರಹ ಪಡಿಸತೊಡಗಿದರು. ಅದಕ್ಕೆ ನಾನು ಈ ದಿನ ಅವರಿಗೆ ಚತುರ್ವಿದ ಆಹಾರ ತ್ಯಾಗವಿರುವುದರಿಂದ ಆಹಾರ ಕೊಡುವ ಪ್ರಶ್ನೆಯೇ ಇಲ್ಲವೆಂದೆ. ನಾಳೆ ಬೆಳಗಾದ ಮೇಲೆ ನೋಡೋಣವೆಂದೆ. ಒಂದು ವೇಳೆ ನೀರಿನಿಂದಲೇ ಬಾಯಾರಿಕೆ ಹೋಗುತ್ತದೆ ಎನ್ನುವುದಾದರೆ ಅನಾದಿಕಾಲದಿಂದ ಎಷ್ಟುನೀರು ಕುಡಿದಿದ್ದೇವೆಯೋ ಕುಡಿಸಿದ್ದೇವೆಯೋ ಈಗಂತು ಭಗವಂತನ ನಾಮಸ್ಮರಣೆಯೇ ಅಮೃತವಾಗಿದೆ.

ಪುನಃ ವೈದ್ಯರು ನಾವು ಮಾತಾಜೀಯವರನ್ನ ಕೇಳುತ್ತೇನೆ ಎಂದು ಅವರಲ್ಲಿ ನಿವೇದನೆ ಮಾಡತೊಡಗಿದರು. ಮಾತಾಜೀ ಇನ್ನು ಸಮಯವಿದೆ. ತಾವು ಆಹಾರಕ್ಕಾಗಿ ಏಳಿರಿ, ಸ್ವಲ್ಪ ನೀರು, ಹಣ್ಣಿನ ರಸ ತೆಗೆದುಕೊಳ್ಳಿರಿ. ಅವರು ಬೇಡವೆಂದು ಸನ್ನೆ ಮಾಡಿದರು. ಆಗ ನಾನೇ ಮಾತಾಜೀ ಇಂದು ಆಹಾರ ತೆಗೆದುಕೊಳ್ಳುತ್ತೀರ ಎಂದೇ. ಆದರೆ ಅವರು ಬೇಡವೆಂದು ತಲೆ ಅಲ್ಲಾಡಿಸಿದರು. ಇನ್ನು ನಾಳೆ ಆಹಾರವೆಂದೆ. ಅವರು 'ಹೂಂ' ಎಂದರು. ಅವರ ಜ್ಞಾನ ಬಹಳ ಚೆನ್ನಾಗಿತ್ತು. ನಿಮಯದಲ್ಲಾಗಲೀ ತ್ಯಾಗದಲ್ಲಾಗಲೀ ಪ್ರೇಮವಿತ್ತು. ಆದರೆ ಶರೀರದಲ್ಲಿ ಮಮತೆ ಇರಲಿಲ್ಲ. ನಿಜವಾಗಿಯು ಅವರ ಗಂಟಲು ಒಣಗಿತ್ತು. ರಾತ್ರಿ ಎಲ್ಲ ಜಾಗರಣೆ, ಸಾಯಂಕಾಲ ಸರಧನದಿಂದ ಕೆಲವು ಭಕ್ತರು ಬಂದು ವಸತಿಕಾ ಹಾಲ್‌ನಲ್ಲೇ ಇದ್ದರು. ಅವರೆಲ್ಲರು ಜೋರಾಗಿ ಣಮೋಕಾರ ಮಂತ್ರವನ್ನು ಪಠಿಸುತ್ತಿದ್ದರು. ನಾನು ಅವರಿಗೆ ಮಧ್ಯ ಮಧ್ಯ ಶಾಂತಿಮಂತ್ರವನ್ನು ಪಠಿಸಲು ಹೇಳಿದೆ. ನಾನು ರಾತ್ರಿ ಆಗಾಗ್ಗೆ ಮಾತಾಜೀಯವರು ಕೇಳುತ್ತಿದ್ದೆ. ಈಗ ಯಾವ ಮಂತ್ರವನ್ನು ಹೇಳುತ್ತಿದ್ದಾರೆ. ಣಮೋಕಾರ ಮಂತ್ರವೆಂದು ಸರಿಯಾಗಿ ಹೇಳುತ್ತಿದ್ದರು.

ಶಾಂತಿಮಂತ್ರ ಹೇಳುವಾಗ ಕೇಳಿದೆ, ಶಾಂತಿಮಂತ್ರವೆಂದೇ ಹೇಳಿದರು. ನಾಲ್ಕು ಗಂಟೆಯಿಂದ ಅಪರ ರಾತ್ರಿಕ ಸ್ವಾಧ್ಯಾಯ ಪ್ರತಿಕ್ರಮಣ ಮತ್ತು ಸಾಮಾಯಿಕ ಕ್ರಿಯೆಗಳನ್ನು ಆಲಿಸಿದರು. ಬೆಳಗ್ಗೆ 7 ಗಂಟೆಗೆ ಎದ್ದು ಶುದ್ಧಿಮಾಡಿಕೊಂಡು ಆಹಾರದಲ್ಲಿ ಸ್ವಲ್ಪವೇ ಹಾಲು, ನೀರು ಹಣ್ಣಿನರಸ ತೆಗೆದಕೊಂಡರು. ಅದೂ ಕಷ್ಟದಿಂದ ಗಂಟಲಿನಲ್ಲಿ ಇಳಿಯಿತು. 14ನೇ ತಾರೀಕು ಸೋಮವಾರದ ಆಹಾರವಾಯಿತು.

ಹೀಗೆ ಸುಮಾರು 20 ದಿನಗಳು ರಾತ್ರಿ ಪೂರ್ತಿ ಜಾಗರಣೆ ಆಗಿತ್ತು. ನಾವುಗಳು ಶಾಂತಿ ಮಂತ್ರವನ್ನು ಹೇಳುತ್ತಲೇ ಇರುತ್ತಿದ್ದೆವು. ವಿದ್ಯಾಲಯದ ವಿದ್ಯಾರ್ಥಿಗಳು ಎಚ್ಚರವಾಗೇ ಇರುತ್ತಿದ್ದರು. ಈ ಮಧ್ಯೆ ಇಂದೂರಿನಿಂದ ವೈದ್ಯ ಧರ್ಮಚಂದ್ ಶಾಸ್ತ್ರಿಗಳು ಬಂದಿದ್ದರು. ಅವರು 5-6 ದಿನಗಳು ಮಾತಾಜೀಗೆ ಔಷಧ ಮತ್ತು ಭಕ್ತಿ ವೈಯ್ಯಾವೃತ್ಯ ಮಾಡುತ್ತಾ ಅವರ ಸಾನಿಧ್ಯವನ್ನು ನೋಡಿ ಬಹಳ ಪ್ರಭಾವಿತರಾದರು.

ಜನವರಿ 15ನೇಯ ತಾರೀಕು ಪ್ರತಿದಿನದಂತೆ ಎಲ್ಲಾ ವಿಧಾನಗಳು ನಡೆದುವು. 7-30 ಗಂಟೆಗೆ ಭಗವಾನ ಶಾಂತಿನಾಥರ ಪ್ರತಿಮೆಗೆ ಅಭಿಷೇಕ ನೋಡಿದರು. ಗಂಧೋದಕ ತೆಗೆದುಕೊಂಡರು. ಅನಂತರ ನಾನೇ ಶುದ್ಧಿಮಾಡಿ, ಮಡಿಸೀರೆ ಉಡಿಸಿ ಕೂರಿಸುವಾಗ ಮೇಲುಸಿರು ಬರತೊಡಗಿತು. ಪ್ರತಿದಿನಕ್ಕಿಂತ ಉಸಿರು ನಿಧಾನವಾಗತೊಡಗಿತು. ಪುನಃ ಮೊದಲಿನಂತೆ ಆದರು. ಆದರೆ ಇಂದು ಆರೋಗ್ಯ ಕಾಣಿಸಲಿಲ್ಲ. ನಾನು ನಿತ್ಯದಂತೆ.

ಮಾತಾಜಿ ಆಹಾರಕ್ಕೆ ಏಳಿರಿ ಎಂದೆ. ದಿನದಂತೆ 'ಹಾಂ'ಎನ್ನಲಿಲ್ಲ. ನನ್ನ ಮುಖವನ್ನೇ ನೋಡತೊಡಗಿದರು. ನನಗೆ ಅವರಿಗೆ ಇಂದು ಆಹಾರ ಬೇಕಾಗಿಲ್ಲ ಎಂದು ತಿಳಿದು, ಮಂತ್ರ ಮತ್ತು ಬೋಧನೆಯನ್ನು ಮಾಡತೊಡಗಿದೆ. ಸ್ವಲ್ಪ ಹೊತ್ತು ಣಮೋಕಾರ ಮಂತ್ರ ಸ್ವಲ್ಪ ಹೊತ್ತು ಓಂ ಸಿದ್ಧಾಯ ನಮಃ ಸ್ವಲ್ಪ ಹೊತ್ತು ಓಂ ನಮಃ ಸಿದ್ಧೇಭ್ಯಃ ಸ್ವಲ್ಪ ಹೊತ್ತು "ಅರಹಂತ ಸಿದ್ಧ ಶರಣಂ" ಮೊದಲಾಗಿ ಹೇಳತೊಡಗಿದೆ. ನನ್ನ ಜೊತೆ ಶ್ರಾವಕ-ಶ್ರಾವಕಿಯರು ಮಂತ್ರ ಹೇಳತೊಡಗಿದರು. ಮಧ್ಯೆ-ಮಧ್ಯೆ ಬೋಧನೆಯನ್ನು ಮಾಡತೊಡಗಿದೆ.

ಮಾತಾಜೀ ಸಮಾಧಾನವಾಗಿರಿ. ಆತ್ಮಭಿನ್ನವಾಗಿದ್ದಾನೆ. ಶರೀರ ಭಿನ್ನವಾಗಿದೆ. ಈ ಶರೀರ ಪುದ್ಗಲ, ಜೀರ್ಣ ಶೀರ್ಣವಾಗಿದೆ. ಬಿದ್ದುಹೋಗುತ್ತದೆ. ಶರೀರಕ್ಕೆ ಮೃತ್ಯು ಎಂಬುದು ಆತ್ಮಕ್ಕೆ ಅಲ್ಲ. ಆತ್ಮನೇ ಭಗವಂತನು ಶುದ್ಧನು ಸಿದ್ಧನು ಅನಂತಜ್ಞಾನ ದರ್ಶನ-ಸುಖ. ವೀರ್ಯಸ್ವರೂಪನು ಜ್ಞಾನಾನಂದ ಸ್ವರೂಪನು ಪರಮಾನಂದ ಸ್ವರೂಪನು ಚಿಚ್ಛೈತನ್ಯ ಸ್ವರೂಪನು ಆಗಿದ್ದಾನೆ.

ಆಗಾಗ್ಗೆ ಭ. ಮಹಾವೀರರ, ವಿದೇಹ ಕ್ಷೇತ್ರದ ಸಮವಸರಣದಲ್ಲಿ ವಿದ್ಯಮಾನವಾಗಿರುವ ಸೀಮಂಧರ ಸ್ವಾಮಿಗೆ ಜಯಕಾರವನ್ನು ಹೇಳುತ್ತಾ ಇರುವುದನ್ನು ಕಣ್ಣುತೆರೆದು ಕೇಳುತ್ತಾ ತಾನು ಕೇಳುತ್ತಿರುವುದನ್ನು ನಮಗೆ ಆಶ್ವಾಸನೆ ಕೊಡುತ್ತಿದ್ದರು.

ಮಂತ್ರ ಕೇಳುತ್ತಲೇ ಉಸಿರು ಮೇಲಾಯಿತು. ನಾಡಿ ಬಡಿತ ಕಡಿಮೆ ಆಗಿ ಉಸಿರು ನಿಲ್ಲತೊಡಗಿತು. ಆಗ ನಾನು ಅವರನ್ನು ಪದ್ಮಾಸನದಲ್ಲಿ ಕೂರಿಸಿದೆ. 1-45 ಗಂಟೆಗೆ ಸರಿಯಾಗಿ ಆತ್ಮ ಈ ನಶ್ವರ ಶರೀರವನ್ನು ಬಿಟ್ಟು ಸ್ವರ್ಗದಲ್ಲಿ ದಿವ್ಯ ವೈಕ್ರಿಯಿಕ ಶರೀರವನ್ನು ಪ್ರವೇಶಿಸಿತು. ಮಂತ್ರೋಚ್ಚಾರಣೆ ನಡೆದೇ ಇತ್ತು. ನಂತರ ಹೊರಗಡೆ ಹಜಾರಕ್ಕೆ ಅವರನ್ನು ತರಲಾಯಿತು. ದರ್ಶನಾರ್ಥಿ ಜನಗಳು ಬರತೊಡಗಿದರು. ಒಳಗಡೆ ಇರುವವರು ಮಂತ್ರೋಚ್ಚಾರಣೆ ಮಾಡುತ್ತಲೇ ಇದ್ದರು.

ಮಾತಾಜೀ ಅಸ್ವಸ್ಥರಾದ 17 ಮತ್ತು 22ರ ತಾರೀಕಿನಲ್ಲಿ ಆಹಾರ ತೆಗೆದುಕೊಳ್ಳುತ್ತಿರುವುದನ್ನು ವಿಡಿಯೋ ತೆಗೆಯಲಾಗಿತ್ತು. ಅವರು ಆಹಾರ, ಉಪದೇಶಮಂತ್ರವನ್ನು ಚಿತ್ರಿಸಲಾಗಿತ್ತು. ಹಾಗೇ ಈ ದಿನದ ಪೂರ್ತಿ ವಿಡಿಯೋ ಚಿತ್ರೀಕರಿಸಿಕೊಂಡರು.

ಮೊದಮೊದಲು ಅವರು ವಿದ್ಯಾರ್ಥಿಗಳದೆ ಆಗಲಿ ಯಾತ್ರಿಗಳದೆ ಆಗಲಿ ಜೋರಾದ ಮಾತುಕತೆಯಾಗಲೀ, ರಾತ್ರಿವೇಳೆ ಟ್ರಕ್‌ನಲ್ಲಿ ಏನಾದರು ಸಾಮಾನು ಬಂದಾಗ ಇಳಿಸುವಾಗ ಆಗಲಿ ಸದ್ದನ್ನು ಅವರು ಸಹಿಸಲು ಆಗುತ್ತಿರಲಿಲ್ಲ. ಕೋಣೆಯ ಬಾಗಿಲು ಮುಚ್ಚು, ನನಗೆ ಈ ಗಲಾಟೆಯಿಂದ ತಲೆ ನೋವಾಗುತ್ತಿದೆ. ಗಾಬರಿಯಾಗುತ್ತದೆ ಎನ್ನುತ್ತಿದ್ದರು. ಆದರೆ ನವಂಬರ್ 26ರಿಂದ ಒಂದು ರೀತಿಯ ಅಪೂರ್ವವಾದ ಶಾಂತಿ ಮುಖದಲ್ಲಿ ನೆಲಸಿತ್ತು. 2½ ವರ್ಷ ಮೊದಲು ದೆಹಲಿಯಲ್ಲಿ ಇರುವಾಗಲು ಇವರು ಸದ್ದುಗದ್ದಲವನ್ನು ಸಹಿಸುತ್ತಿರಲಿಲ್ಲ. ಇಂತಹವರು ನವಂಬರ್ 26ರ ನಂತರ ಏನೇ ಸದ್ದಾದರೂ ಏನು ಹೇಳುತ್ತಿರಲಿಲ್ಲ. ನಾನು ಸಂಘದಲ್ಲು ಹೇಳುತ್ತಿದ್ದೆ. ಇವರಿಗೆ ಇಂತಹ ಶಾಂತಿ ಹೇಗೆ ಬಂದಿತು ಎಂದು, ಏಕೆ ಬಂದಿತು ಎಂದು. ಆಗ ಮೋತಿಚಂದರು ಇದು ಚಿರಶಾಂತಿ ಎಂದು ಹೇಳುತ್ತಿದ್ದರು. ಒಮ್ಮೆ ರವೀಂದ್ರರು ಮಾತಾಜೀ ನಿಮಗೆ ಯಾರ ಬಗ್ಗೆಯಾದರು ರಾಗಭಾವವಿದೆಯೇ ಇಲ್ಲವೇ ಎಂದಾಗ ಅವರು ಇಲ್ಲ ಎನ್ನುತ್ತಿದ್ದರು. ಆಗ ಅವನು ನನ್ನ ಕೈ ತೋರಿಸಿ ಈ ಮಾತಾಜಿಯ ಬಗ್ಗೆ ಎಂದು ಕೇಳಿದಾಗಲೂ ತಲೆ ಅಲ್ಲಾಡಿಸುತ್ತಾ ಇಲ್ಲವೆಂದೇ ಹೇಳುತ್ತಿದ್ದರು. ಆಗ ನಾನು ಇದು ಸರಿಯಾದ ಹೆಚ್ಚೆ ನೀವು ಯಾರ ಬಗ್ಗೆಯೂ ಅನುರಾಗ ಪ್ರೇಮವನ್ನು ಇಟ್ಟುಕೊಳ್ಳಬೇಡಿ, ಕೊನೆಗೆ ನಿಮ್ಮ ಶರೀರದ ಬಗ್ಗೆ ನನ್ನದು ಎನ್ನುವ ಮೋಹ ಬೇಡ. ನಾವಂತೂ ಪ್ರತ್ಯಕ್ಷವಾಗಿಯೆ ಬೇರೆಯವರು ಎಂದು.

ಜನವರಿ ಒಂದರಂದು ಬೆಳಗಿನ ಜಾವ 5ಗಂಟೆಯಲ್ಲಿ ಮಾತಾಜಿ ಈಗ ನನ್ನ ಶರೀರ ಕೆಲಸ ಮಾಡುತ್ತಿಲ್ಲ. ಮಾಡಿದರೆ ಒಳ್ಳೆಯದು ಮಾಡದಿದ್ದರು ಒಳ್ಳೆಯದೇ ಎಂದರು. ಆಗ ನಾನು ಮಾತಾಜೀ ತಾವು 70 ವರ್ಷಗಳಿಂದ ಈ ಶರೀರವನ್ನು ಸಾಕಷ್ಟು ದುಡಿಸಿದ್ದೀರ ಬಾಲ್ಯದಿಂದಲೇ ಧಾರ್ಮಿಕ ಸಂಸ್ಕಾರದಲ್ಲೇ ಇದ್ದೀರ. ಮಂದಿರಕ್ಕೆ ಹೋಗವುದು, ಸ್ವಾಧ್ಯಾಯ ಪದ್ಮನಂದಿಪಂಚವಿಂಶತಿಕಾದ ಸ್ವಾಧ್ಯಾಯದಿಂದ ಆತ್ಮನಲ್ಲಿ ಒಳ್ಳೆಯ ಸಂಸ್ಕಾರವನ್ನು ಉಂಟಮಾಡಿಕೊಂಡಿದ್ದೀರ. ಗೃಹಸ್ಥಾಶ್ರಮ ಪ್ರವೇಶಿಸುತ್ತಲೇ ದಾನ, ಪೂಜೆ, ಶೀಲ ಮತ್ತು ಉಪವಾಸ ಸ್ವಾಧ್ಯಾಯವನ್ನು ಮಾಡುತ್ತಾ ಇದ್ದೀರಿ. ತೀರ್ಥಯಾತ್ರೆಗಳನ್ನು ಮುಗಿಸಿದ್ದೀರಿ, ಅಲ್ಲದೆ ತಮ್ಮ 13 ಜನ ಮಕ್ಕಳನ್ನು ಒಳ್ಳೆಯ ಸಂಸ್ಕಾರಕೊಟ್ಟು ಬೆಳೆಸಿ ಯೋಗ್ಯರನ್ನಾಗಿ ಮಾಡಿದ್ದೀರಿ. ನಿಶ್ಯಕ್ತರಾದ ಮೇಲೆಯೆ ದೀಕ್ಷೆ ತೆಗೆದುಕೊಂಡು ಪಂಚಮಹಾಮಂತ್ರ, ಪಂಚಸಮಿತಿ, ಮೂರು ಗುಪ್ತಿ ಹೀಗೆ 13ಪ್ರಕಾರದ ಚಾರಿತ್ರವನ್ನು 13 ವರ್ಷಗಳಿಂದ ನಡೆಸಿದ್ದೀರಿ ಈಗ ಶರೀರದ ಮೋಹವನ್ನು ತ್ಯಜಿಸಿ ಸಲ್ಲೇಖನ ಕೈಗೊಂಡು 2-3 ಭವಗಳಲ್ಲಿ 13ನೇ ಗುಣಸ್ಥಾನವನ್ನು ಅರ್ಹಂತ ಪದವಿಯನ್ನೂ ಪಡೆಯುತ್ತೀರಿ ಎಂದು ಅವರಿಗೆ ಹೇಳುತ್ತಿದ್ದೆ.

ಡಿಸೆಂಬರ್ 16ರಂದು ಪ್ರತಿಷ್ಠಾ ಸಮಿತಿಯ ಮೀಟಿಂಗ್‌ಗೆ ಕೈಲಾಸಚಂದ್ರ ಬಂದಾಗ ವೈದ್ಯರು ಅವರು ಇನ್ನು ಹೆಚ್ಚುದಿನ ಬದುಕುವುದಿಲ್ಲ ಎಂದಿದ್ದರಿಂದ ಅವನು ಊರಿಗೆ ಹೋದಮೇಲೆ ಪ್ರಕಾಶ್‌ಚಂದ್, ಸುಭಾಷ್‌ಚಂದ್ ಅವರ ಹೆಂಡತಿಯರು ಎಲ್ಲರನ್ನೂ ದರ್ಶನಾರ್ಥವಾಗಿ ಕಳುಹಿಸಿದ್ದ ಅವರನ್ನೆಲ್ಲ ನೋಡಿದ ಅವರು ನನ್ನ ಹತ್ತಿರ ಇವರಿಗೆಲ್ಲ ಸುದ್ದಿ ಕೊಟ್ಟವರಾರು ಎಂದರು.

ಅದಕ್ಕೆ ಕೈಲಾಸ ಕಳುಹಿಸಿದ್ದಾನೆ. ಇವರಾರನ್ನು ನಿಲ್ಲಲು ಹೇಳುವುದಿಲ್ಲ. ಎಲ್ಲರು ದರ್ಶನ ಮಾಡಿಕೊಂಡು ಹೋಗುತ್ತಾರೆ. ಬಿಡು ಎಂದೆ. ಇದಾದನಂತರ ಹೆಣ್ಣುಮಕ್ಕಳು ಬರತೊಡಗಿದರು. ಎಲ್ಲರು ಒಂದೆರಡುದಿನ ಇದ್ದು ವೈಯ್ಯಾವೃತ್ಯ ಮಾಡಿ ಸ್ವಾಧ್ಯಾಯ ಮಾಡಿಹೋದರು. ಯಾರನ್ನು ತುಂಬ ಹತ್ತಿರಕ್ಕೆ ಹೋಗಲು ಬಿಡಲಿಲ್ಲ. ತಾಯಿಯವರು ದೀಕ್ಷೆ ತೆಗೆದುಕೊಳ್ಳುವಾಗ ಸುಭಾಷ ಬಹಳ ವಿಕ್ಷಿಪ್ತನಾಗಿದ್ದ, ಚೆನ್ನಾಗಿ ಅತ್ತಿದ್ದ. ಆದರೆ ಈಗ ನಗುತ್ತಲೇ ಸಮಾಧಿ ಮರಣ ಮುಂತಾದ ಪಾಠಗಳನ್ನು ಓದಿ ವೀರಮರಣ ಉಂಟಾಗಲಿ ಎಂದು ಬಯಸುತ್ತಿದ್ದ.

ಮಾತಾಜಿ ನಮಗೂ ಇಂತಹ ವೀರ ಮರಣ ಉಂಟಾಗಲಿ. ಸಾವಿಗೆ ಏಕೆ ಹೆದರಬೇಕು, ಸಾಯುವುದಾದರೆ ಇಂತಹ ಸಲ್ಲೇಖನ ವಿಧಿಯಿಂದ ಸಾಯಬೇಕು. ಇದೇ ನಮ್ಮನ್ನ ದುಃಖದಿಂದ ಬಿಡುಗಡೆ ಮಾಡುವುದು.

ಎಲ್ಲ ಮಕ್ಕಳು ಒಂದು ತಿಂಗಳಲ್ಲಿ ಹಲವಾರು ಬಾರಿ ಮನೆಗೆ ಹೋಗಿ ಪುನಃ ಬಂದು ಬಂದು ನೋಡಿಕೊಂಡು ಹೋಗತೊಡಗಿದರು. ಆದರೆ ರತ್ನಮತಿ ಮಾತಾಜಿಯವರು ಯಾರನ್ನು ಯಾವಾಗ ಬಂದಿರಿ, ಯಾವಾಗ ಹೋದಿರಿ ಎಂದು ಕೂಡ ಕೇಳುತ್ತಿರಲಿಲ್ಲ. ಇವರ ಈ ನಿರ್ವಿಕಾರ ಭಾವನೆಯನ್ನು ಅರಿತ ನಾನು ಯಾರನ್ನು ಬರುವುದನ್ನು ತಡೆಯಲಿಲ್ಲ. ಮೊದಮೊದಲು ಹೋಗಲು ಹೇಳಿದಾಗ ಅವರೆಲ್ಲ ಹೊರಟು ಹೋಗಿದ್ದರು. ಆದರೆ ಪುನಃ ಸಲ್ಲೇಖನವಿಧಿಯನ್ನು ನೋಡಲು ವೈಯ್ಯಾವೃತ್ತಿ ಮಾಡಲು ಬಂದವರನ್ನು ತಡೆಯಲು ಆಗಲಿಲ್ಲ. ಆದರೆ ನನ್ನ ಆಜ್ಞೆಯಿಂತೆಯೇ ಎಲ್ಲರು ವೈರಾಗ್ಯಪ್ರದ ಮತ್ತು ಆಧ್ಯಾತ್ಮಿಕ ಪಾಠಗಳನ್ನು ಓದಿ ಹೇಳುತ್ತಿದ್ದರು. ನಾವು ಏಕಾಂತದಲ್ಲಿ ಮಾತಾಜೀಯವರನ್ನು ಮಾತಾಡಿಸಿದಾಗಲೆಲ್ಲ ಅವರು ವೈರಾಗ್ಯ ಪರವಾಗಿಯೇ ಮಾತಾಡಿದ್ದು, ನಿರ್ಮಮತೆ ಮತ್ತು ಶಾಂತಿಯ ಅನುಭವವನ್ನು ತೋರಿಸಿತು.

ಜಿನಭಕ್ತಿ

ಅವರ ಎದುರಿಗೆ ಭ. ಬಾಹುಬಲಿಯ ವಿಶಾಲಕಾಯದ ಫೋಟೋ ಇತ್ತು. ಅವರು ಯಾವಾಗಲೂ ಅದನ್ನು ದಿಟ್ಟಿಸಿ ನೋಡುತ್ತಿದ್ದರು. ಜನವರಿ 5ರಿಂದ ಹಾಗೇ ನೋಡುತ್ತಿರುವಾಗ ನಾನು ಮಾತಾಜೀ ತಾವು ಬಾಹುಬಲಿಸ್ವಾಮಿಯನ್ನು ಬಹಳ ಹೊತ್ತಿನಿಂದ ನೋಡುತ್ತಿದ್ದೀರ ಏನು ಸ್ವಾಮಿಯಲ್ಲಿ ಶಾಂತಿ ಬೇಡುತ್ತಿದ್ದೀರ ಎಂದೆ.

ಅವರು ನಸುನಕ್ಕರು. ಅವರ ಜಿನಭಕ್ತಿ ಮತ್ತು ಅವರ ಒಳಗಿನ ಭಾವನೆ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಅವರಿಗೆ ಯಾವಾಗಲೂ ಜಿನಭಕ್ತಿಯಿಂದ ಮನೋಬಲ ಜಾಸ್ತಿಯಾಗಿ ರೋಗ, ರುಜಿನಗಳನ್ನು ಸೈರಿಸಿ ವಿಘ್ನಗಳನ್ನು ನಾಶಮಾಡಿ ಸಂಯಮಗಳನ್ನು ಪಾಲಿಸುವುದರಲ್ಲಿ ಶಕ್ತಿ ಹೆಚ್ಚಾಗುತ್ತದೆ ಎಂಬ ದೃಢವಿಶ್ವಾಸ. ಅವರಿಗೆ ಮೊದಲು ಕೂಡ ಅಮ್ಮಪಿತ್ತ ಜಾಸ್ತಿಯಾಗಿ ನಿದ್ದೆ ಬರದಿದ್ದಾಗಲೂ ಉದ್ವಿಗ್ನತೆ ಹೆಚ್ಚಾದಾಗಲು ರಾತ್ರಿ ಎಲ್ಲ ನಮಃ ಸಿದ್ಧೇಭ್ಯಃ ಓಂ ಶಾಂತಿನಾಥಯ ನಮಃ| ಓಂ ಣಮೋ ಅರಿಹಂತಾಣಂ" ಮುಂತಾದ ಮಂತ್ರಗಳನ್ನು ಹೇಳಿಕೊಳ್ಳುತ್ತಿದ್ದರು. ಹೀಗಾಗಿ ಅವರಿಗೆ ಕೊನೆವರೆಗೂ ಕಣ್ಣು, ಕಿವಿ, ಬುದ್ಧಿ ಎಲ್ಲವೂ ಚೆನ್ನಾಗಿದ್ದವು. ಜ್ಞಾಪಕಶಕ್ತಿಯು ಚೆನ್ನಾಗಿತ್ತು.

ಯಾವಾಗಲು ಗಂಭೀರವಾಗುತ್ತಿದ್ದ ಅವರು ಜನವರಿ 14ರಂದು ಆಗಂತುಕ ಯಾತ್ರಿಗಳಲ್ಲಿ ವಿಶೇಷ ಭಕ್ತರನ್ನು ನೋಡಿ ಮುಗುಳ್ನಕ್ಕರು. ಇದನ್ನು ಕಂಡು ಭಕ್ತರ ಕಣ್ಣುಗಳು ತೇವವಾಯಿತು. ನನಗೆ ಅನುಭವವಾದಂತೆ ಡಿಸೆಂಬರ್ 16ರಿಂದ ಜನವರಿ 15ರವರೆಗೆ ಆಧ್ಯಾತ್ಮಿಕ ಪಾಠಗಳನ್ನು ಬಹಳ ಆಸಕ್ತಿಯಿಂದ ಕೇಳುತ್ತಿದ್ದರು. ನಿಜವಾಗಿಯು ಆತ್ಮಭಿನ್ನ ಶರೀರಭಿನ್ನ ಎಂದು ಹೇಳುವುದು ಸುಲಭ. ಆದರೆ ಜೀವನಪೂರ್ತಿ ಆಧ್ಯಾತ್ಮಿಕವನ್ನು ಅರೆದು ಕುಡಿದವರು ಕೂಡ ರೋಗ ಸಾವು ಬಂದಾಗ ಎಲ್ಲವನ್ನು ಮರೆತು ಬಿಡುತ್ತಾರೆ. ಆದರೆ ಒಂದು ವೇಳೆ ಆಧ್ಯಾತ್ಮವನ್ನು ಸಾಕಾರರೂಪದಿಂದ ಯಾರಾದರೂ ನೋಡ ಬಯಸಿದರೆ ಸಾಧು ಸಂಘದಲ್ಲಿ ಇಂತಹ ಸಲ್ಲೇಖನ ಸಮಯದಲ್ಲಿ ಸಲ್ಲೇಖನದಲ್ಲಿ-ನಿರತೆ ಸಾಧು ಕ್ಷಪಕರುಗಳನ್ನು ನೋಡಬೇಕು. ಆದ್ದರಿಂದಲೇ ಭಗವತೀ ಆರಾಧನೆಯಲ್ಲಿ ಆಚಾರ್ಯ ಶಿವಕೋಟಿ ಆಚಾರ್ಯರು ಕ್ಷಪಕರನ್ನೆ "ತೀರ್ಥ" ಎಂಬ ಸಂಜ್ಞೆಯನ್ನು ಕೊಟ್ಟಿದ್ದಾರೆ.

ತೇ ವಿ ಕದತ್ಥಾ ಧಣ್ಣಾ, ಯ ಹುಂತಿ, ಜೆ ಪಾವಕಮ್ಮ ಮಲಹರಣೇ
ಣಹಾಯಂತಿ ಖವಯತಿತ್ಥೇ ಸವ್ವಾದರ ಭತ್ತಿ ಸಂಜುತ್ತಾ॥೨೦೦೦॥
ಗಿರಿಣದಿಯಾದಿಪದೇಸಾ, ತಿತ್ಥಾಣಿ ತಪೋಧಣೆಹಿಂ ಜದಿ ಉಸಿದಾ।
ತಿತ್ಥಂ ಕಧಂ ಣ ಹುಜ್ಜೋ ತವಗುಣ ರಾಸೀ ಸಯಂ ಖವಗು ॥೨೦೦೧॥
ಪುವ್ವರಿಸೀಣಂ ಪಡಿಮಾಓ, ವಂದಮಾಣಸ್ಸ ಹೋದಿ ಜದಿ ಪುಣ್ಣಂ।
ಖವಯಸ್ಸ ವಂದಓ ಕಿಹ, ಪುಣ್ಣಂ ವಿಉಲಂ ಣ ಪಾವಿಜ್ಜ ॥೨೦೦೨॥

ಸಂಸಾರವನ್ನು ದಾಟಲು ಕ್ಷಪಕತೀರ್ಥವು ಒಂದು ನಿಮಿತ್ತವಾಗಿದೆ. ಇದರಲ್ಲಿ ಸ್ನಾನಮಾಡುವುದರಿಂದ ಪಾಪಕರ್ಮರೂಪಿ ಮಲವು ದೂರವಾಗುತ್ತದೆ. ಯಾವ ದರ್ಶಕನು ಆದರಭಕ್ತಿಯಿಂದ ಮಹಾತೀರ್ಥದಲ್ಲಿ ಸ್ನಾನಮಾಡುತ್ತಾನೋ ಅವನು ಕೃತಕೃತ್ಯನಾಗುತ್ತಾನೆ. ಅವನೇ ಸೌಭಾಗ್ಯಶಾಲಿಯು ಆಗಿದ್ದಾನೆ. ಹಾಗೇ ತಪಸ್ವಿಗಳು ಇರುವ ಬೆಟ್ಟ, ನದಿ ಮುಂತಾದ ತೀರ್ಥಗಳು, ಪ್ರದೇಶಗಳೇ ತೀರ್ಥಗಳಾಗುತ್ತವೆ. ಎಂದರೆ ಸ್ವಯಂ ತಪಸ್ಸಿನ ಗುಣಗಳೇ ರಾಶಿಯಾದ ಕ್ಷಪಕನು ಸ್ವಯಂ ತೀರ್ಥನೇ ಅಲ್ಲವೇ. ಒಂದು ವೇಳೆ ಪ್ರಾಚೀನ ಋಷಿಗಳಿಗೆ, ಪ್ರತಿಮೆಗಳಿಗೆ ವಂದಿಸುವುದರಿಂದ ಪುಣ್ಯ ಬರುತ್ತದೆ ಎನ್ನುವುದಾರೆ, ಕ್ಷಪಕರಿಗೆ ವಂದಿಸುವುದರಿಂದ ವಿಪುಲವಾದ

ಪುಣ್ಯ ಬರುವುದಿಲ್ಲವೇ ಯಾರು ಶುದ್ಧ ದೃಷ್ಟಿಯಿಂದ ಭಕ್ತಿಯಿಂದ ಕ್ಷಪಕರ ಸೇವೆಯನ್ನು ಮಾಡುತ್ತಾರೋ ಅವರಿಗೆ ಸಂಪೂರ್ಣವಾದ ಆರಾಧನೆಯ ಫಲವು ದೊರೆತೇ ದೊರೆಯುತ್ತದೆ.[1]

ಸೇವೆ ಮಾಡಿ ಶರೀರದಿಂದ ಕೆಲಸ ಮಾಡುವುದು

ನನಗೆ ಕೆಲವೊಮ್ಮೆ ಹೇಳುತ್ತಲೇ ಇದ್ದರು ಮಾತಾಜಿ. ನೀವು ದಿನಪೂರ್ತಿ ಓದುವುದು ಬರೆಯವುದು ಮಾಡುತ್ತಲೇ ಇರುತ್ತೀರ. ದಿನಕ್ಕೆ ಒಮ್ಮೆಯಾದರು ಶರೀರಕ್ಕೆ ಎಣ್ಣೆಯನ್ನು ಹಚ್ಚಲು ಬಿಡಿ. ನಾನು ಶರೀರಕ್ಕೆ ಸೇವೆ ಮಾಡಿಯೇ ಇಂದು ಶರೀರದಿಂದ ಕೆಲಸ ಮಾಡುತ್ತಿದ್ದೇನೆ. ನೀವು ತಮ್ಮ ಶರೀರಕ್ಕೆ ಸೇವೆ ಮಾಡಿಸಿಕೊಳ್ಳುವುದರಿಂದ ನೀವು ಇನ್ನು ಹೆಚ್ಚುಕೆಲಸಗಳನ್ನು ಮಾಡಬಹುದು ಎನ್ನುತ್ತಿದ್ದರು.

1985ರಲ್ಲಿ ಧೀರ್ಘ ಖಾಯಿಲೆ ಬಿದ್ದಮೇಲೆ ಡಾಕ್ಟರ್ ಮತ್ತು ವೈದ್ಯರು ನನಗೆ ಶರೀರಕ್ಕೆ ಎಣ್ಣೆಯ ಮಾಲೀಶ್ ಮಾಡಿಸಿಕೊಳ್ಳಲೇಬೇಕೆಂದು ಪ್ರೇರೇಪಿಸಿದರು. ಪಂ. ಪೂಲ್‌ಚಂದ್ ಸಿದ್ಧಾಂತ ಶಾಸ್ತ್ರಿಗಳು ಹಲವಾರು ಬಾರಿ ಮಾಧುರಿಗೆ ಬಹನ್‌ಜಿ ಮಾತಾಜೀಯವರ ದೇಹಕ್ಕೆ ಎಣ್ಣೆಯ ಮಾಲೀಶ್ ಅವಶ್ಯವಾಗಿ ಮಾಡಿ ಎನ್ನುತ್ತಿದ್ದರು. ನನಗೂ ಅನುಭವಕ್ಕೆ ಬಂದಿತು. ಎಣ್ಣೆ ಅಥವಾ ತುಪ್ಪದಿಂದ ಮಾಲೀಸ್ ಮಾಡಿಸಿಕೊಂಡಾಗ, ಆಯಾಸ, ಗಾಬರಿ ಮುಂತಾದವು ಶಾಂತವಾಗುತ್ತಿತೆಂಬುದು. ನಾನು ಲೇಖನ ಕಾರ್ಯಕ್ಕೆ ಕುಳಿತಾಗಲೆಲ್ಲ ರತ್ನಮತಿಯವರು ಹೇಳುತ್ತಿದ್ದ ಹಿತನುಡಿಗಳೇ ಕಣ್ಣಮುಂದೆ ನಿಲ್ಲುತ್ತಿತ್ತು. ನಿಜವಾಗಿಯೂ ದೇಹಕ್ಕೆ ಸೇವೆಮಾಡಿಸಿಕೊಂಡು ದೇಹದಿಂದ ಹೆಚ್ಚಾಗಿ ಕೆಲಸ ಮಾಡಬಹುದು.

ಆರ್ಯಿಕೆ ರತ್ನಮತಿಯ ದರ್ಶನಾರ್ಥವಾಗಿ ಸುಕುಮಾರಚಂದರವರು ಬಂದಿದ್ದರು. ಇವರ ಶಾಂತ ಮುದ್ರೆಯನ್ನು ಪ್ರಶಂಸಿಸುತ್ತಿದ್ದರು. ರೇಡಿಯೋನಲ್ಲಿ ಅವರ ಸಮಾಧಿಯಾದ ವಿಷಯ ಪ್ರಸಾರವಾಗುತ್ತಿದ್ದಂತೆ ಇಡೀ ಭಾರತದ ಎಲ್ಲಾ ಜೈನರಿಗೂ ವಿಷಯ ತಿಳಿದು, ಅಲ್ಲಲ್ಲೇ ಶ್ರದ್ಧಾಂಜಲಿ ಸಭೆಗಳು ಜರುಗಿದವು. ಸಂಸದ್ ಸದಸ್ಯರಾದ ಜೆ. ಕೆ. ಜೈನರು ಮಾತಾಜೀಯವರು ಅಂತ್ಯೇಷ್ಟಿಯಲ್ಲಿ ಶ್ರೀಫಲವನ್ನಿಟ್ಟು ಶ್ರದ್ಧಾಂಜಲಿ ಅರ್ಪಿಸಿದರು.

ಸಮಾಧಿಯನಂತರ ಶಿಖರ್‌ಚಂದ್, ಸುಕುಮಾರಚಂದರವರು ಬಂದು ಮಾತಾಡುತ್ತಾ ಅವರನ್ನು ಪ್ರಶಂಸಿಸುತ್ತಾ ಹೇಳಿದರು. ತಾಯಿ[2] ಕ್ಷಪಕ ಸ್ಥಾನದಲ್ಲಿ ಮಗಳು ನಿರ್ಯಾಪಕಾಚಾರ್ಯ ಸ್ಥಾನದಲ್ಲಿನ ದೃಶ್ಯ ಪ್ರಪಂಚದಲ್ಲಿಯೇ ಈ ಯುಗದ ಒಂದು ವಿಶೇಷತೆ ಆಗಿದೆ ಎಂದರು.

ಮನೋಬಲದ ಪ್ರಬಲತೆ

ಶಾರೀರಿಕ ಶಕ್ತಿ ಕಡಿಮೆ ಆದಂತೆ ಮನೋಬಲ ಜಾಸ್ತಿ ಆದ ಅನುಭವವನ್ನು ನಾನು ರತ್ನಮತಿ ಮಾತಾಜೀಯವರಲ್ಲಿ ಕಂಡೆ. ತಮ್ಮ 13ಜನ ಸಂತಾನಕ್ಕೆ ಜನ್ಮನೀಡಿ ಅವರನ್ನ ಸಾಕಿ ಸಲಹಿ ಧರ್ಮವಂತರನ್ನಾಗಿ ಮಾಡಿ ತಮ್ಮ 57ನೆಯ ವಯಸ್ಸಿನಲ್ಲಿ ದೀಕ್ಷೆ ಪಡೆದು, ಪದವಿಹಾರಿಯಾಗಿ ಕೇಶಲೋಚ ಮುಂತಾದ 28 ಮೂಲಗುಣಗಳನ್ನು ಪಾಲನೆ ಮಾಡುತ್ತಾ ಅಕ್ಷಯ ಸುಖ ಪಡುವುದನ್ನೆ ಗುರಿ ಇಟ್ಟುಕೊಂಡು ಕೊನೆಗೆ ಒಂದು

---

1. ಭಗವತೀ ಆರಾಧನ ಪು-೮೭೦

2. ಆರ್ಯಿಕ ರತ್ನಮತಿ ಮಾತಾಜೀ.

ತಿಂಗಳ ಸಲ್ಲೇಖನ ಕೈಕೊಂಡು ಮಹಾಮಂತ್ರವನ್ನು ಸ್ಮರಣೆ ಮಾಡುತ್ತಾ ಧರ್ಮಶ್ರವಣ ಮಾಡುತ್ತಾ ನಶ್ವರ ಶರೀರವನ್ನು ಬಿಟ್ಟು ದೇವಪದವನ್ನು ಪಡೆದರು.

ದೀಕ್ಷಿತ ಜೀವನ

ದೀಕ್ಷಿತ ಜೀವನವು ಬಾರಾಬಂಕಿಯಿಂದ ಪ್ರಾರಂಭವಾಯಿತು. ನನ್ನ ಹತ್ತಿರ ಇದ್ದ 13 ವರ್ಷಗಳಲ್ಲಿ ಒಮ್ಮೆ ಆದರೂ ಗೃಹಸ್ಥಾಶ್ರಮದ ಸುಖ-ದುಃಖಗಳನ್ನು ನೆನಪಿಸಿಕೊಳ್ಳಲಿಲ್ಲ. ನನ್ನ ಮುಂದೆ ಅಲ್ಲದೆ ಬೇರೆಯವರ ಮುಂದೆ ಮಾತಾಡಲಿಲ್ಲ. ಅಭಿನಂದನ ಗ್ರಂಥದಲ್ಲಿ ಪರಿಚಯ ಬರೆಯುವಾಗ ಕೇಳಿದ ಯಾವ ವಿಷಯಕ್ಕೂ ನನಗೆ ಏನೂ ನೆನಪಿಲ್ಲ ಎಂದೇ ಹೇಳಿದರು. ಇವರ ಈ ಮಾತುಗಳನ್ನು ಕೇಳಿ ನಾನು ನಗುತ್ತಾ ನಿಮಗೆ ಪುನರ್ಜನ್ಮ ಆಗಿ ಹೋಗಿದೆ ಎನ್ನಿಸುತ್ತದೆ ಎಂದು ಹೇಳುತ್ತಿದ್ದೆ.

ನಿಜ ಹೇಳಬೇಕೆಂದರೆ 13 ವರ್ಷಗಳು ದೀಕ್ಷಿತ ಜೀವನದಲ್ಲಿ ಅವರು ಪುನರ್ಜನ್ಮವನ್ನು ಪಡೆದಿದ್ದರು. ತಮ್ಮ ಪೂರ್ವಾಶ್ರಮದ ಮಕ್ಕಳು ಸೊಸೆಯಂದಿರನ್ನಾಗಲಿ ಅಳಿಯಂದಿರ ಬಗ್ಗೆಯಾಗಲಿ ತಮ್ಮ ಜೀವನದ ಕಹಿ ಪ್ರಸಂಗವನ್ನಾಗಲಿ ನೆನಪಿಗೆ ತಂದುಕೊಳ್ಳುತ್ತಿರಲಿಲ್ಲ. ತಮ್ಮ ಗಂಡ ಧರ್ಮಕಾರ್ಯದಲ್ಲಿ ತರುತ್ತಿದ್ದ ವಿಘ್ನಗಳನ್ನು ಸಹ ನೆನಪಿನಿಂದ ತೆಗೆದು ಹಾಕಿದ್ದರು. ತಮ್ಮ ಆನಂದವನ್ನೆಲ್ಲ ಆವಶ್ಯಕ ಕ್ರಿಯೆಗಳಲ್ಲಿ ಸ್ವಾಧ್ಯಾಯದಲ್ಲಿ ಧರ್ಮ ಚರ್ಚೆಯಲ್ಲಿ ಧರ್ಮೋಪದೇಶ ಕೇಳುವುದರಲ್ಲಿ ಧರ್ಮಪ್ರಭಾವನೆ ಮಾಡುವುದರಲ್ಲಿ ಕಂಡುಕೊಳ್ಳತೊಡಗಿದ್ದರು. ಮನಸ್ಸನ್ನು ಯಾವಾಗಲೂ ಅದರಲ್ಲೇ ತೊಡಗಿಸಿಕೊಳ್ಳುತ್ತಿದ್ದರು.

ಸಲ್ಲೇಖನ ಪಡೆದ ಮೇಲೆ ಅವರಿಗೆ ಪುನಃ ಸ್ತ್ರೀಪರ್ಯಾಯ ಬರುವುದಿಲ್ಲವೆಂದು ನಂಬಿದ್ದರು. ಅವರ ಸಮ್ಯಗ್ದರ್ಶನ ಬಹಳ ದೃಢವಾಗಿತ್ತು. ಯಾವುದೇ ನಿಯಮವನ್ನಾಗಲಿ ಪಾಲನೆ ಮಾಡುದರಲ್ಲಿ ಪಾಷಾಣ ಸದೃಶ ಕಠೋರವಾಗಿರುತ್ತಿದ್ದರು. ನನ್ನ ಪ್ರತಿ ಮಾತೃತ್ವದ ಸ್ನೇಹವಿದ್ದರೂ ಅವರು ನನ್ನನ್ನು ಗುರುವಿನಂತೆಯೆ ನಂಬುತ್ತಿದ್ದರು. ಚತುರ್ದಶಿಯಲ್ಲಾಗಲಿ ಬೇರೆ ವಿಶೇಷ ಪ್ರಸಂಗಗಳಲ್ಲಾಗಲಿ ನನ್ನಿಂದಲೇ ವಿಧಿವತ್ತಾಗಿ ಪ್ರಾಯಶ್ಚಿತ್ತವನ್ನು ಪಡೆಯುತ್ತಿದ್ದರು. ನನ್ನ ಮಾತಿಗೆ ಬಹಳ ಬೆಲೆ ಕೊಡುತ್ತಿದ್ದರು.

ಅವರ ಸಮಾಧಿಯಲ್ಲಿ ನನ್ನ ಉತ್ಸಾಹ

ಡಿಸೆಂಬರ್ 16ರಂದು ವೈದ್ಯರು ನನ್ನ ಬಳಿ ಅವರ ಬಗ್ಗೆ ಇವರೇನಿದ್ದರೂ ಒಂದೆರಡು ದಿನದ ಅತಿಥಿ ಎಂದು ಹೇಳಿದಾಗಿನಿಂದ ನನ್ನ ಬರವಣಿಗೆಯ ಕೆಲಸವನ್ನೆಲ್ಲ ನಿಲ್ಲಿಸಿ ಅವರಿಗೆ ಸಲ್ಲೇಖನ ಕೊಡುವುದರಲ್ಲೇ ತತ್ಪರಳಾದೆ. ಅವರಿಗೆ ಸಮಾಧಿ ಮಾಡಿಸುವಾಗಲೂ ನಾನು ಕನಸಿನಲ್ಲಿಯೂ ಹೀಗಾಗುತ್ತದೆ ಎಂದು ಯೋಚಿಸಲಿಲ್ಲ.

ನಂತರ ಅವರಿಲ್ಲದ ಅಭಾವ ನನ್ನನ್ನು ಕುಟುಕ ತೊಡಗಿತು. ವರ್ಷದವರೆಗೂ, ಅವರನ್ನು ಮರೆಯಲು ಸಾಧ್ಯವಾಗಲಿಲ್ಲ. ಇದು ನನ್ನ ಬಲಹೀನತೆಯಾಗಿತ್ತು. ಈಗ ಬೇರೆ ಯಾರದೆ ಸಮಾಧಿ ಮಾಡಿಸುವ ಧೈರ್ಯ ಬರುತ್ತಿಲ್ಲ. ಇದಕ್ಕೆ ಕಾರಣ ಶಾರೀರಕವಾದ ಬಲಹೀನತೆ ಅಲ್ಲದೆ ರಕ್ತಸಂಬಂಧವು ಕಾರಣ ಎನ್ನಿಸುತ್ತಿದೆ.[1]

---

1. ಗಣನೀ ಜ್ಞಾನಮತೀ ಮಾತಾಜೀ

ನನ್ನ ತ್ಯಾಗಮಯ ಜೀವನದಲ್ಲಿ ನನ್ನ ಕೈಯಿಂದಲೇ ತಾಯಿಯವರ ಸಮಾಧಿಯನ್ನು ಮಾಡಲಾಯಿತು. ಅದರಿಂದ ನನಗೂ ಕರ್ತವ್ಯ ಪಾಲಿಸಿದೆ ಎಂಬುದು ನೆಮ್ಮದಿ. ಆದರೆ ಮೋಹದಿಂದ ಆಗಾಗ್ಗೆ ಇಷ್ಟವಿಯೋಗ ಆರ್ತಧ್ಯಾನವಂತೂ ಅವಶ್ಯವಾಗಿ ಆಗುತ್ತಿತ್ತು. ಕೊನೆಗೆ ಜ್ಞಾನ ಮತ್ತು ವೈರಾಗ್ಯದ ಬಲದಿಂದ ನನ್ನನ್ನು ನಾನು ಸಂಭಾಳಿಸಿಕೊಳ್ಳುವುದರಲ್ಲಿ ಸಫಲಳಾದೆ. ಇದೆಲ್ಲವು ಸ್ವಾಧ್ಯಾಯದ ಬಲದಿಂದಲೇ. ಅವರ ಮಗಳು ಮನೋವತಿ 1961ರಲ್ಲಿ ಗೃಹತ್ಯಾಗ ಮಾಡಿ ಬಂದವಳು. 1964ರಲ್ಲಿ ಕ್ಷುಲ್ಲಿಕೆಯ ದೀಕ್ಷೆ ತೆಗೆದುಕೊಂಡವರು. 1969ರಲ್ಲಿ ಮಹಾವೀರಜೀಯಲ್ಲಿ ಆರ್ಯಿಕಾ ದೀಕ್ಷೆಯನ್ನು ಪಡೆದಿದ್ದರು. 1971ರಲ್ಲಿ ಆರ್ಯಿಕ ರತ್ನಮತಿಯವರ ದೀಕ್ಷಾ ಸಮಯದಲ್ಲಿ ಅಜಮೀರದಲ್ಲಿದ್ದರು. ರತ್ನಮತಿ ಮಾತಾಜೀಯವರು ಬೇಡವೆಂದರೂ ಕೇಳದೆ ಬುಂದೇಲಖಂಡದ ಯಾತ್ರೆಗಾಗಿ ಹೊರಟರು. ದೈವಯೋಗದಿಂದ ಮಾತಾಜಿಯವರ ಸಮಾಧಿಯ ಸಮಯದಲ್ಲಿ ಮೌಜಮಾಬಾದಿನ ಹತ್ತಿರವಿರುವ 'ದೂದೂ'ವಿನಲ್ಲೇ ಇದ್ದರು.

ರತ್ನಮತಿಯವರ ಸಮಾಧಿಯ ಸುದ್ದಿ ಕೇಳಿ ಬಹಳ ಆಘಾತವಾಯಿತು. ಅವರನ್ನು ಎರಡು ಮೂರು ವರ್ಷಗಳಿಂದ ಭೇಟಿ ಆಗಲು ಆಗಿರಲಿಲ್ಲ. ಅವರಿಗೆ ಭೇಟಿಯಾಗಿ ಸಂಚಾರದ ಸುಖ-ದುಃಖ ಹೇಳಿಕೊಳ್ಳಬಯಸಿದ್ದರು. ಆದರೆ ಪ್ರತಿಷ್ಠೆಯ ಮಹೋತ್ಸವದಲ್ಲಿ ಭೇಟಿಯಾಗುವ ಆಸೆ ಇಟ್ಟುಕೊಂಡಿದ್ದರು. ಯಾರೂ ಇವರು ಪ್ರತಿಷ್ಠೆಯ ಮೊದಲೇ ಕಾಲವಾಗುತ್ತಾರೆ ಎಂದು ಕಲ್ಪನೆ ಮಾಡಿರಲಿಲ್ಲ. ಆದರೆ ಆಗುವುದನ್ನು ಯಾರೂ ತಡೆಯುವಂತಿಲ್ಲ ಎಂದು ಸಮಾಧಾನಗೊಳ್ಳಬೇಕಷ್ಟೆ. ಆದರೆ ತಾಯಿಯನ್ನು ಭೇಟಿಯಾಗದ ದುಃಖ ಇಂದು ಅವರನ್ನು ಬಾಧಿಸುತ್ತಿದೆ. ಇವೆಲ್ಲವನ್ನು ಮರೆಸುವ ಔಷಧತತ್ತ್ವಜ್ಞಾನವಲ್ಲದೆ ಬೇರೊಂದಿಲ್ಲ. ಅನಾದಿಕಾಲದಿಂದ ಈ ಜೀವ ಎಷ್ಟೆಷ್ಟು ಜನರನ್ನು ತಂದೆ-ತಾಯಿ, ಮಗ, ಮಗಳು ರೂಪದಲ್ಲಿ ಪಡೆದಿದೆಯೋ ಈ ಶರೀರದೊಡನೆ ಕರ್ಮದ ಸಂಬಂಧದಿಂದ ಆಗಿದೆ. ಆದರೆ ಶರೀರವೇ ನಮ್ಮದಲ್ಲವೆಂದ ಮೇಲೆ ಸಂಬಂಧ ಯಾರೊಡನೆ. ಹೀಗಾಗಿ ಶುದ್ಧಾತ್ಮ ಚಿಂತನೆಯೊಂದೇ ಶಾಶ್ವತ ಸುಖ-ಶಾಂತಿಯನ್ನು ನೀಡಬಲ್ಲದು.

ಉತ್ತಮಾ ಸ್ವಾತ್ಮ ಚಿಂತಾ ಸ್ಯಾತ್ ಮೋಹಚಿಂತಾ ಚ ಮದ್ಯಮಾ ।
ಅಧಮಾ ಕಾಮ ಚಿಂತಾ ಸ್ಯಾತ್ ಪರಚಿಂತಾಧಮಾಧಮಾ ॥

ಆತ್ಮ ಚಿಂತನೆಯನ್ನು ಮಾಡುವುದು ಉತ್ತಮ, ಮೋಹದ ಚಿಂತನೆಯನ್ನು ಮಾಡುವುದು ಮಧ್ಯಮ, ಕಾಮಭೋಗಗಳನ್ನು ಕುರಿತು ಚಿಂತೆಮಾಡುವುದು ಅಧಮ. ಆದರೆ ಬೇರೆಯವರನ್ನು ಕುರಿತು ಚಿಂತೆ ಮಾಡುವುದು ಅದಕ್ಕಿಂತಲೂ ನೀಚವಾದುದು. ಪ್ರತಿಯೊಬ್ಬ ತತ್ತ್ವಜ್ಞಾನಿ ಯಾವಾಗಲೂ ಇದನ್ನು ಕುರಿತು ಚಿಂತಿಸುತ್ತಿರಬೇಕು.

೮೩

ಒಂದು ವರ್ಷದವರೆಗೆ ಆರಾಧನೆ

ಜಂಬೂದ್ವೀಪದ ಜ್ಞಾನಜ್ಯೋತಿ ಭಾರತದಲ್ಲೆಲ್ಲಾ ವಿಹರಿಸಿತ್ತು. ಪ್ರತಿಯೊಂದು ಸ್ಥಳದಲ್ಲೂ ಹರಾಜು ಕೂಗಿದ ಮಹನೀಯರುಗಳಿಗೆ ಪ್ರತಿಷ್ಠೆಯ ಸಮಯದಲ್ಲಿ ಸುಮೇರು ಪರ್ವತದ ಪಾಂಡುಕ ಶಿಲೆಯ ಮೇಲೆ ಭಗವಂತರಿಗೆ ಅಭಿಷೇಕ ಮಾಡಬಹುದು ಎಂದು ಪ್ರಚಾರ ಮಾಡಿದ್ದೆವು. ಇದರಿಂದಾಗಿಯೇ ಎಲ್ಲಾ ಕೆಲಸವು ನಿರ್ವಿಘ್ನವಾಗಿ ನೆರವೇರಿತ್ತು. ಇದಕ್ಕಾಗಿಯೇ ನಾನು ಜಂಬೂದ್ವೀಪದಲ್ಲಿ ಒಂದು ವರ್ಷದವರೆಗೂ ವಿಧಿ

ವಿಧಾನಗಳನ್ನು ನಡೆಸಲು ನಿರ್ಧರಿಸಿದ್ದೆವು. 1984ನೆಯ ಏಪ್ರಿಲ್ 15 ರಂದು ಪ್ರಾರಂಭವಾಯಿತು. ಮಾಧುರಿಯೇ ಮೊದಲನೆಯ ಆರಾಧನೆಯ ಶಾಂತಿವಿಧಾನವನ್ನು 11 ದಿನದವರೆಗೆ ಮೂವತ್ತು, ಇಪ್ಪತ್ತನಾಲ್ಕು ವಿಧಾನಗಳನ್ನು ಮಾಡಿದಳು. ಪುನಃ ಪಂಚಪರಮೇಷ್ಠಿ, ನವದೇವತೆ, ಸಿದ್ಧಚಕ್ರ, ಮೊದಲಾದ ಆರಾಧನೆಗಳು ಏಪ್ರಿಲ್ 21-1985ರವರೆಗೆ ನಡೆದವು. ಜಾಪ್ಯ ಮಂತ್ರಗಳು ನಡೆಯುತ್ತಿದ್ದವು. ವಿದ್ಯಾಪೀಠದ ವಿದ್ಯಾರ್ಥಿಗಳು ಬಹಳ ಸಹಕರಿಸಿದರು.

ರತ್ನಮತಿಯರ ಸಮಾಧಿಯ ನಂತರ ನನ್ನಲ್ಲೇ ಉಂಟಾದ ಆರ್ತಧ್ಯಾನವನ್ನು ದೂರಮಾಡುವ ಸಲುವಾಗಿ ಜಂಬೂದ್ವೀಪದ ಪೂಜೆ, ಹಸ್ತಿನಾಪುರದ ಪೂಜೆ, ಭ. ಆದಿನಾಥರ ಪೂಜೆ ಮೊದಲಾದ ಪೂಜೆಗಳ ಜೊತೆ ಪ್ರತಿಷ್ಠೆಯಲ್ಲಿ ಜ್ಞಾನಜ್ಯೋತಿಯ ಇಂದ್ರರುಗಳಿಂದಲೇ ನಡೆಯಬೇಕಾದ "ಕಶಲಪತ್ರಕ" ಮೊದಲಾದ ಕಾರ್ಯಗಳಲ್ಲಿ ನನ್ನನ್ನು ನಾನೇ ತೊಡಗಿಸಿಕೊಂಡೆನು.

ಉತ್ತರ ಪ್ರದೇಶದ ಮುಖ್ಯಮಂತ್ರಿಯ ಆಗಮನ

ನಾರಾಯಣದತ್ತ ತಿವಾರಿಯವರು ನನ್ನ ದರ್ಶನಾರ್ಥವಾಗಿ ಬರುತ್ತಾರೆ ಎಂಬ ಸೂಚನೆ ಸಂಜೆಗೆ ಬಂದಿತು. ರಾತ್ರಿಯೆ ಜಂಬೂದ್ವೀಪದ ಹತ್ತಿರದ ಗದ್ದೆಯಲ್ಲಿ ಹೆಲಿಪ್ಯಾಡ್ ಮಾಡಿಸಲಾಯಿತು. 12-25ಕ್ಕೆ ಟಿಕೈತನಗರದ ಕೈಲಾಸ ಚಂದರ ಜೊತೆ ಹೆಲಿಕಾಪ್ಟರ್‌ನಲ್ಲಿ ಬಂದರು. ಜಂಬೂದ್ವೀಪದ ದರ್ಶನ ಮಾಡಿಕೊಂಡು ಬಂದವರು ನನ್ನ ಜೊತೆ ಸುಮಾರು 4 ಗಂಟೆಗಳ ಕಾಲ ಸಮಾರಂಭದ ಕುರಿತಾಗಿ ಚರ್ಚೆ ನಡೆಸಿ ನನ್ನಿಂದ ಆಶೀರ್ವಾದವನ್ನು ಪಡೆದು ಹೊರಟರು. ಏಪ್ರಿಲ್ 14ರಂದು ಮೇರಠ ಜಿಲ್ಲೆಯ ಮಂತ್ರಿ ವಾಸುದೇವ ಸಿಂಹರು ತಮ್ಮ ಹಲವಾರು ಅಧಿಕಾರಿಗಳ ಜೊತೆ ಬಂದವರು ತ್ರಿಮೂರ್ತಿ ಭವನದಲ್ಲಿ ಮೀಟಿಂಗ್ ಮಾಡಿ ಮಹೋತ್ಸವಕ್ಕೆ ಅಗತ್ಯವಾದ ಕೆಲಸಗಳಿಗೆ ಸರ್ಕಾರದ ಅಧಿಕಾರಿಗಳನ್ನು ನಿಯೋಜಿಸಿದರು.

ಶಾಂತಿಮಂತ್ರದ ಜಾಪ್ಯ

ಈ ಪ್ರತಿಷ್ಠಾಪನೆಯು ನಿರ್ವಿಘ್ನವಾಗಿ ನಡೆಯುವ ಸಲುವಾಗಿ ಮಂತ್ರವನ್ನು ಅಚ್ಚುಹಾಕಿಸಿ ಜ್ಞಾನಜ್ಯೋತಿಯಲ್ಲಿ ವಿತರಿಸಲಾಯಿತು. ಅಲ್ಲದೆ, ಸಮ್ಯಗ್ಜ್ಞಾನ ಪತ್ರಿಕೆಯಲ್ಲೂ ಮಂತ್ರವನ್ನು ಅಚ್ಚುಹಾಕಿಸಲಾಗಿತ್ತು. ಪರಿಣಾಮವಾಗಿ ಸಾವಿರಾರು ಜನರು ಶಾಂತಿಮಂತ್ರವನ್ನು ಸ್ವಪ್ರೇರಣೆಯಿಂದಲೇ ಧ್ಯಾನಿಸತೊಡಗಿದರು.

ಮಂತ್ರ

ಓಂ ಹ್ರೀಂ ಅರ್ಹಂ ಅಸಿ ಆ ಉಸಾ ನಮಃ ಚತುರ್ವಿಧ ಸಂಘಸ್ಯ
ಸರ್ವಲೋಕಸ್ಯ ಚ ಶಾಂತಿಂ ಕುರುಕುರು ಸ್ವಾಹಾ ।

ಜಂಬೂದ್ವೀಪದಲ್ಲಿ ಜಿನಬಿಂಬ ಪ್ರತಿಷ್ಠಾಪನಾ ಮಹೋತ್ಸವ

ವೈಶಾಖ ಮಾಸದ ಶುಕ್ಲ ಅಷ್ಟಮಿಯಿಂದ ಹಿಡಿದು ದ್ವಾದಶಿಯವರೆಗೆ ಅಂದರೆ 1985ನೇ ಇಸವಿ ಏಪ್ರಿಲ್ 28ಕ್ಕೆ ಜಂಬೂದ್ವೀಪ ಜ್ಞಾನಜ್ಯೋತಿಯ ವಿಹಾರವು ಪೂರ್ಣಗೊಂಡಿತು. ಪಂಚಕಲ್ಯಾಣ ಮಹೋತ್ಸವು ಏಪ್ರಿಲ್

22ರಿಂದ ಪ್ರಾರಂಭವಾಗಿತ್ತು. ಇದರ ಪ್ರಚಾರ ಪ್ರಸಾರವು ಇಡೀ ಭಾರತ ದೇಶದಲ್ಲಿಯೆ ರಾಷ್ಟ್ರೀಯ ಮಟ್ಟದಲ್ಲಿಯೇ ಚೆನ್ನಾಗಿ ನಡೆದಿತ್ತು. ಏಪ್ರಿಲ್ 26ರಿಂದ 28ರವರೆಗೆ 3ದಿನಗಳ ಅಂತರಾಷ್ಟ್ರೀಯ ವಿಚಾರ ಸಂಕಿರಣ ಆಯೋಜನೆ ಆಗಿತ್ತು.

ಮುನಿಸಂಘಗಳ ಆಗಮನ ಧ್ವಜಾರೋಹಣ

1983ರಲ್ಲಿಯೇ ಮೋತಿಚಂದ, ರವೀಂದ್ರ ಮತ್ತು ಮಾಧುರಿಯ ಜೊತೆ ಉಳಿದ ಸಂಸ್ಥಾನದ ಪದಾಧಿಕಾರಿಗಳು ಆಚಾರ್ಯ ಶ್ರೀ ಧರ್ಮಸಾಗರರನ್ನು ಪಂಚಕಲ್ಯಾಣ ಮತ್ತು ಮೂರ್ತಿಗಳ ಪ್ರತಿಷ್ಠೆಗಾಗಿ ಸಾಷ್ಟಾಂಗ ನಮಸ್ಕರಿಸಿ ಪ್ರಾರ್ಥಿಸಿದ್ದರು. ಕು. ಮಾಧುರಿ ಫೆಬ್ರವರಿ 14ರಿಂದ ಇಲ್ಲಿಂದ ಹೊರಟು ಆಚಾರ್ಯರಲ್ಲಿ ಅನುನಯದಿಂದ ಪ್ರತಿಷ್ಠೆಗಾಗಿ ಆಹ್ವಾನಿಸಿದ್ದನ್ನು ಗಮನಿಸಿದ ಗುರುಗಳು ತಕ್ಷಣವೇ ಹಸ್ತಿನಾಪುರದ ಕಡೆ ಪ್ರಯಾಣ ಬೆಳೆಸಿದ ನೆನಪು ಫೆಬ್ರವರಿ 15 ಇಂದಿಗೂ ನನಗೆ ಹಚ್ಚಹಸಿರಾಗಿ ನೆನಪಿನಲ್ಲಿದೆ. ಆಚಾರ್ಯರು ಪುಲೇರದ ವರೆಗೆ ಬಂದವರು. ಅಲ್ಲಿಂದ ಮೊಣಕಾಲಿನ ನೋವಿನಿಂದ ಬರುವುದು ಅಸಂಭವವೇ ಆಯಿತು. ಆಚಾರ್ಯರ ಅನುಮತಿಯನ್ನು ಪಡೆದ ಮುನಿವರ್ಗವು ಏಪ್ರಿಲ್ 11ರಂದು ಹಸ್ತಿನಾಪುರ ತಲುಪಿದರು. ಮಂಗಳ ವಾದ್ಯದೊಂದಿಗೆ ಮುನಿಸಂಘವನ್ನು ಸ್ವಾಗತಿಸಲಾಯಿತು.

ಧ್ವಜಾರೋಹಣ ಸಮಾರಂಭ

ಏಪ್ರಿಲ್ 22ರಂದು ಪ್ರತಿಷ್ಠಾಚಾರ್ಯರಾದ ಬ್ರ. ಸೂರಜಮಲ್‌ರನ್ನು ಆನೆಯ ಮೇಲೆ ಮೆರವಣಿಗೆ ಮಾಡಿಕೊಂಡು ಕರೆತರಲಾಯಿತು. ಬ್ರಹ್ಮಚಾರಿಗಳು ಚತುರ್ವಿಧ ಸಂಘದ ಮುಂದೆ ಶ್ರೀಫಲವನ್ನಿಟ್ಟು ಪ್ರತಿಷ್ಠೆ ಮಾಡಲು ಅನುಮತಿಯನ್ನು ಬೇಡಿದರು. ಸಾಧುಗಳ ಮತ್ತು ನನ್ನ ಮಂಗಳ ಆಶೀರ್ವಾದ ಪೂರ್ವಕ ಪ್ರವಚನವಾಯಿತು. ರಥಯಾತ್ರೆಯಲ್ಲಿ ಶ್ರೀಜಿನಭಗವಂತರನ್ನು ತಂದು ನೂತನ ವೇದಿಕೆಯ ಮೇಲೆ ವಿರಾಜಮಾನಗೊಳಿಸಲಾಯಿತು.

41ಅಡಿ ಎತ್ತರವಿದ್ದ ಧ್ವಜಕಂಬದ ಮೇಲೆ ಮಂತ್ರೋಚ್ಚಾರಣೆಯೊಡನೆ ಶ್ರೀ ನಿರ್ಮಲಕುಮಾರ ಸೇಠಿ ಹಾಗೂ ಮುಖ್ಯ ಅತಿಥಿಯಾಗಿ ಬಂದಿದ್ದ ಉತ್ತರ ಪ್ರದೇಶದ ಅಬಕಾರಿ ಮಂತ್ರಿ ಪ್ರೊ. ಶ್ರೀ ವಾಸುದೇವಸಿಂಹರು ಧ್ವಜಾರೋಹಣವನ್ನು ಮಾಡಿದರು. ಇವರು ತಮ್ಮ ಭಾಷಣದಲ್ಲಿ ಹಸ್ತಿನಾಪುರದಲ್ಲಿ ಆರಾಧನೆ ಪ್ರಾರಂಭವಾಯಿತು. ಇದು "ಅಥ"ವಾಗಿದೆ "ಇತಿ" ಆಗಬಾರದು. ನಮ್ಮ ಪ್ರತಿಯೊಂದು ಕಾರ್ಯವನ್ನು "ಅಥ"ದಿಂದ ಪ್ರಾರಂಭ ಮಾಡುತ್ತೇನೆ "ಇತಿ" ಸಮಾಪನವಲ್ಲ ಎಂದು ಭಾಷಣ ಮಾಡಿದರು.

ಮಧ್ಯಾಹ್ನ ಒಂದು ಗಂಟೆಯಿಂದ 4 ಗಂಟೆಯವರೆಗೆ "ನವದೇವತೆಗಳ ವಿಧಾನ"ವನ್ನು ಪ್ರಾರಂಭಮಾಡಿ, 4ಗಂಟೆಗೆ ಅಂಕುರಾರೋಪಣೆ ಮಾಡಲಾಯಿತು. ಮಧ್ಯಾಹ್ನ ಮುನಿಗಳ ಆರ್ಯಿಕೆಯರ ಪ್ರವಚನ, ರಾತ್ರಿ ವಿದ್ವಾಂಸರ ಭಾಷಣವಾಗುತ್ತಿತ್ತು.

ಏಪ್ರಿಲ್ 26

ಇಂದ್ರಾಣಿಯರ ಮೆರವಣಿಗೆ ಹೊರಟಿತು. ಈ ಮಹೋತ್ಸವಕ್ಕಾಗಿಯೇ ವಿಶೇಷವಾಗಿ ನೇಯ್ದ ಕೇಸರಿ ಬಣ್ಣದ ಜಂಬೂದ್ವೀಪದ ಭರತಕ್ಷೇತ್ರ ಚಿತ್ರದ ಅಂಚುಳ್ಳ ಸೀರೆಯನ್ನು ಉಟ್ಟು ಮಹಿಳೆಯರು ತಲೆಯಮೇಲೆ ಮಂಗಳ

ಕಳಶಗಳನ್ನು ಹೊತ್ತು ತರುತ್ತಿದ್ದ ದೃಶ್ಯ ಮನೋಹರವಾಗಿತ್ತು. ಈ ಮಂಗಳ ಕಳಶಗಳ ಜಲದಿಂದ 150 ವೇದಿಗಳನ್ನು ಶುದ್ಧಿಗೊಳಿಸಲಾಯಿತು.

ಅಂತರಾಷ್ಟ್ರೀಯ ಸೆಮಿನಾರ್

1983ನೆಯ ನವೆಂಬರ್ 20ರಂದು ವಿಚಾರಸಂಕೀರ್ಣ ಮಾಡಬೇಕೆಂದು ಉದ್ದೇಶಿಸಲಾಗಿತ್ತು. ಆದರೆ ಜ್ಞಾನಜ್ಯೋತಿಯ ಪರ್ಯಟನೆ ಜಂಬೂದ್ವೀಪದ ಕೆಲಸಗಳ ಒತ್ತಡ ಜಾಸ್ತಿ ಇದ್ದುದರಿಂದ ಈ ಸೆಮಿನಾರನ್ನು ಮುಂದೆ ಹಾಕಲಾಗಿ, ಅದನ್ನು ಪ್ರತಿಷ್ಠೆಯ ಎರಡು ದಿನ ಮೊದಲು ಇಟ್ಟುಕೊಳ್ಳಲು ನಿಶ್ಚಯಿಸಿ ಇದರಿಂದ ವಿದ್ವಾಂಸರು ಕೂಡ ಈ ಪ್ರತಿಷ್ಠಾ ಸಮಾರಂಭವನ್ನು ನೋಡುವಂತಹ ಸುವರ್ಣ ಅವಕಾಶ ದೊರೆಯಿತು-ವಿಚಾರ ಸಂಕಿರಣವು ಬೆಳಗ್ಗೆ 9 ಗಂಟೆಗೆ ಮೇರಠ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಮೂರ್ಧನ್ಯ ಭಾಷಾವಿಧ ವರಿಷ್ಠ ಮಂತ್ರಿಗಳಾದ ಪ್ರೊ. ವಾಸುದೇವಸಿಂಹರು ದೀಪ ಬೆಳಗಿಸುವ ಮೂಲಕ ಉದ್ಘಾಟನೆ ಮಾಡಿದರು. ಈ ವಿಚಾರ ಸಂಕಿರಣದಲ್ಲಿ ರಾಂಚಿಯ ಅಂತರಾಷ್ಟ್ರೀಯ ಗಣಿತ, ಇತಿಹಾಸ ಆಯೋಗದ ಪ್ರತಿನಿಧಿ ಪ್ರೊ. ರಾಧಾಚರಣಗುಪ್ತ, ಜಾಪಾನ್‌ನ ಮಿಜಿವಾಕಿಯ ಗುನ್ಮಾ ವಿಶ್ವವಿದ್ಯಾನಿಲಯದ ಪ್ರೊ. ಯೋಶೋಮಾಶಾರವರು, ನೈಜಿರಿಯದ ಡೀನ-ವಿಜ್ಞಾನಸಂಕಾಯ. ರೀವರ್ಸ್‌ಸ್ಟೇಟ ಯುನಿವರ್ಸಿಟಿಯ ಪ್ರೊ. ಶ್ರೀಧರ ವಾಜಪೇಯಿ ಮುಂತಾದ ಅನೇಕ ಪ್ರೊಫೆಸರ್‌ಗಳು ಬಂದಿದ್ದರು. 26, 27, 28ರ ಎಲ್ಲಾ ಗೋಷ್ಠಿಗಳಲ್ಲೂ ಈ ವಿದ್ವಾಂಸರು ಜೈನ ಗಣಿತ, ಹಾಗೂ ಮೂರು ಲೋಕಗಳ ಬಗ್ಗೆ ಸಿದ್ಧಪಡಿಸಿ ತಂದಿದ್ದ ತಮ್ಮ ವಿದ್ವತ್‌ಪೂರ್ಣ ಲೇಖನಗಳನ್ನು ಮಂಡಿಸಿದರು. ಅದರ ಮೇಲೆ ಉಪಯುಕ್ತ ಪೂರ್ಣ ಚರ್ಚೆಗಳಾದವು. ಆಗಾಗ್ಗೆ ನಾನೂ ಕೂಡ ಚರ್ಚೆಯನ್ನು ಆಲಿಸಿ ಉಪಯುಕ್ತ ಸಮಾಧಾನವನ್ನು ಕೊಡುತ್ತಿದ್ದೆ.

ಏಪ್ರಿಲ್ 26

ಜೆ. ಕೆ. ಜೈನ ರವರ ಅಧ್ಯಕ್ಷತೆಯಲ್ಲಿ ಆಗಿನ ರಕ್ಷಾಮಂತ್ರಿಗಳಾಗಿದ್ದ ಪಿ. ವಿ. ನರಸಿಂಹರಾವ್‌ರವರು ಪ್ರಾಚೀನ ಭಾರತದ ಗಣಿತದ ಉಪಲಬ್ಧಿಗಳನ್ನು ಕುರಿತು ಚರ್ಚೆಮಾಡುತ್ತಾ ವಿಚಾರ ಸಂಕಿರಣದ ಸಮಾಪನ ಭಾಷಣವನ್ನು ಮಾಡಿದರು. ಅನಂತರ ಸ್ವಾಗತಾಧ್ಯಕ್ಷರಾಗಿದ್ದ ನಿರ್ಮಲಕುಮಾರ್ ಸೇರಿಯವರ ಅಧ್ಯಕ್ಷತೆಯಲ್ಲಿ ಭೂತಪೂರ್ವ ಬಿಹಾರದ ಮುಖ್ಯಮಂತ್ರಿಗಳು ಹಾಗೂ ವಿಶ್ವವಿದ್ಯಾನಿಲಯದ ಕುಲಪತಿಗಳು ಆಗಿದ್ದ ಪ್ರೊ. ಎ. ಆರ್. ಕಿದವಾಯಿಗಳು ಮುಖ್ಯ ಅತಿಥಿಗಳಾಗಿದ್ದು ವಿದ್ವತ್ ಸನ್ಮಾನ ಸಮಾರಂಭವನ್ನು ನಡೆಸಿಕೊಟ್ಟರು. ಕಿದವಾಯಿಯವರ ಸಮಾಪನ ಭಾಷಣದ ನಂತರ ನನ್ನ ಉದ್‌ಬೋದನ ಹಾಗೂ ಆಶೀರ್ವಾದದೊಂದಿಗೆ ಸಭೆಯು ಮುಗಿಯಿತು.

ಏಪ್ರಿಲ್ 27

ಪ್ರತಿಷ್ಠಾಚಾರ್ಯರು ಪೆಂಡಾಲಿನಲ್ಲಿ ಯಾಗಮಂಡಲ ವಿಧಾನ, ವಾಸ್ತುವಿಧಾನ ಮುಂತಾದ ಕಾರ್ಯಗಳಲ್ಲಿ ವಿಧಿಪೂರ್ವಕವಾಗಿ ಮಾಡುತ್ತಿದ್ದರು. 1982ನೇ ಜೂನ್ 4ರಂದು ದೇಶ ಸಂಚಾರಕ್ಕೆ ಹೊರಟಿದ್ದ ಜ್ಞಾನಜ್ಯೋತಿ ರಥವು 1045 ದಿನಗಳ ಸಂಚಾರ ಪೂರ್ಣಮಾಡಿ ಹಸ್ತಿನಾಪುರಕ್ಕೆ ಆಗಮಿಸುವುದಿತ್ತು.

ಏಪ್ರಿಲ್ 28

ಜ್ಞಾನಜ್ಯೋತಿ ರಥದ ಜೊತೆ ಭಗವಂತರ ರಥವು ಹೊರಟಿತು. ಈ ಭವ್ಯ ಮೆರವಣಿಗೆಯ ಸೆಂಟ್ರಲ್ ಟೌನ್‌ನಿಂದ ಜಂಬೂದ್ವೀಪದ ವರೆಗೂ ಬಂದಿತು. ಇದನ್ನು ಎದುರ್ಗೊಂಡಾಗ ನನಗೆ ತುಂಬ ಹರ್ಷವೆನ್ನಿಸಿತು. ಜೂನ್ 4-1982ರಲ್ಲಿ ಬೀಳ್ಕೊಟ್ಟ ರಥವನ್ನು ಇಂದು ದರ್ಶನ ಮಾಡಿದ ನಾನು ಇದರ ಮೆರವಣಿಗೆಯಲ್ಲಿ ಭಾಗವಹಿಸಿದೆ. ಭಾರತ ಸರ್ಕಾರದ ರಕ್ಷಣಾಮಂತ್ರಿ ನರಸಿಂಹರಾವ್‌ರವರು ಜೆ. ಕೆ. ಜೈನರವರ ಜೊತೆ ಹೆಲಿಕಾಪ್ಟರ್‌ನಲ್ಲಿ ಬಂದವರು ಮೊದಲು ನನ್ನ ಬಳಿ ಬಂದು ಮಂಗಳ ಆಶೀರ್ವಾದವನ್ನು ಪಡೆದು ಸ್ವಲ್ಪ ಹೊತ್ತು ಚರ್ಚೆಗಳನ್ನು ಮಾಡಿದರು. ಆನಂತರ ಅವರೆಲ್ಲರು ಜ್ಞಾನಜ್ಯೋತಿಯ ಸ್ವಾಗತವನ್ನು ಮಾಡಿದರು. ಪ್ರತಿಷ್ಠಾ ಮಂಟಪದಲ್ಲಿಯ ಸಭೆಯನ್ನು ಏರ್ಪಡಿಸಲಾಗಿತ್ತು. ಅತಿಥಿಗಳನ್ನು ಸ್ವಾಗತಿಸುತ್ತಾ ಜಂಬೂದ್ವೀಪ ಜ್ಞಾನಜ್ಯೋತಿಯ ಉಪಯುಕ್ತತೆಯ ಬಗ್ಗೆ ಸಮಯೋಚಿತವಾದ ಭಾಷಣ ನಡೆಯಿತು. ಪಿ. ವಿ. ನರಸಿಂಹರಾವ್ ಮತ್ತು ಜೆ. ಕೆ. ಜೈನರವರಿಗೆ ಬೆಳ್ಳಿಯ "ಸುಮೇರು"ವನ್ನು ಕಾಣಿಕೆಯಾಗಿ ನೀಡಲಾಯಿತು.

ಅಖಿಂಡ ಜ್ಯೋತಿಯ ಸ್ಥಾಪನೆ

ಜಂಬೂದ್ವೀಪದ ಎದುರಿಗೆ ಜ್ಞಾನಜ್ಯೋತಿಯನ್ನು ಸ್ಥಾಪಿಸುವುದಕ್ಕಾಗಿಯೇ ಒಂದು ಕಮಲಾಕಾರದ ಗೋಲ ಭವನವನ್ನು ನಿರ್ಮಿಸಲಾಗಿತ್ತು. ವೇದಿಕೆಯಿಂದ ಜೆ. ಕೆ. ಜೈನ್, ಪಿ. ವಿ. ನರಸಿಂಹರಾವ್ ಎಲ್ಲರು ಇಲ್ಲಿಗೆ ಬಂದರು. ಇದಕ್ಕಾಗಿಯೇ ನಾನು ಪ್ರಶಸ್ತಿಯನ್ನು ರಚಿಸಿದ್ದೆ. ಇದನ್ನು ಮಾಧುರಿಯು ವಾಚನ ಮಾಡಿದಳು. ನರಸಿಂಹರಾವ್ ಗುಂಡಿಯನ್ನು ಒತ್ತುತ್ತಿದ್ದಂತೆ ಜ್ಯೋತಿಬೆಳಗಿತು. ಇದು ನಿರಂತರವಾಗಿ ಬೆಳಕು ಕೊಡುತ್ತಲೇ ಇದೆ. "ಜಂಬೂದ್ವೀಪದ ಜ್ಞಾನಜ್ಯೋತಿ"ಯ ಜಯಕಾರ ಇಡೀ ನಭೋಮಂಡಲವನ್ನೇ ಆವರಿಸಿತು.

ಪ್ರಶಸ್ತಿ

"ಓಂ ಹ್ರೀಂ ಶ್ರೀಂ ಕ್ಲೀಂ ಐಂ ಅರ್ಹಂ ಆಧ್ಯಾನಾಮಾಧ್ಯೆ ಜಂಬೂದ್ವೀಪೇ ಭರತಕ್ಷೇತ್ರೇ ಆರ್ಯಾಖಂಡೇ ಹಸ್ತಿನಾಪುರ ತೀರ್ಥಕ್ಷೇತ್ರೇSಸ್ಮಿನ್ ಪಂಚಮಕಾಲೇ ಶತೇಂದ್ರ ವಂದ್ಯ ಪ್ರಥಮತೀರ್ಥಂಕರ ಆದಿ ಬ್ರಹ್ಮಣೋ ಭಗವತ್ ಋಷಭದೇವಸ್ಯ ಪರಂಪರಾಯಾಂ ಅಂತಿಮ ತೀರ್ಥಂಕರ ದೇವಾಧಿ ದೇವ ಭಗವನ್ ಮಹಾವೀರ ಸ್ವಾಮಿನಃ ಸಾರ್ವಭೌಮ ಜಿನ ಶಾಸನೇ ಶ್ರೀಮೂಲಸಂಘೇ ದಿಗಂಬರ ಜೈನಾಚಾರ್ಯ ಶ್ರೀಕುಂದ ಕುಂದಾಮ್ನಾಯೇ ಸರಸ್ವತೀಗಚ್ಛೇ ಬಲಾತ್ಕಾರ ಗಣೇಚಾರಿತ್ರಚಕ್ರವರ್ತಿ ಆಚಾರ್ಯವರ್ಯ। ಶ್ರೀಶಾಂತಿಸಾಗರ ಮುನೀಂದ್ರ ಪರಂಪರಾಯಾಂ ತೃತೀಯ ಪಟ್ಟಾಧೀಶ ಆಚಾರ್ಯ ಶಿರೋಮಣಿ ಶ್ರೀ ಧರ್ಮಸಾಗರ ಮಹಾರಾಜ ಸಂಘಸ್ಥ ಮುನಿ ಆರ್ಯಿಕಾದಿಸಾನಿಧ್ಯೇ ಆಚಾರ್ಯ ಚೂಡಾಮಣಿ ಶ್ರೀವೀರಸಾಗರ ಮಹಾಮುನೇಃ ಶಿಷ್ಯಾರ್ಯಿಕಾರತ್ನ ಶ್ರೀ ಜ್ಞಾನಮತೀ ಮಾತುಃ ಸದುಪದೇಶಾತ್ ಸಸಂಘತತ್ಸಾನಿಧ್ಯೇ ಚ ಮಾಸೋತ್ತಮಮಾಸೇ ವೈಶಾಖ ಮಾಸೇ ಶುಕ್ಲ ಪಕ್ಷೇSಷ್ಟಮ್ಯಾಂ ತಿಥೌ ಸೂರ್ಯವಾಸರೇ ಇಹ ಭಾರತದೇಶೇ ಗಣತಂತ್ರ ಶಾಸನೇ ರಾಷ್ಟ್ರಪತಿ ಜ್ಞಾನಿಜೈಲ್‌ಸಿಂಹ ಪ್ರಧಾನಮಂತ್ರಿ ರಾಜೀವಗಾಂಧೀ ಮಹಾಪುರುಷಸ್ಯ ನೇತೃತ್ವಕಾಲೇ ಜೆ. ಕೆ. ಜೈನಸ್ಯ (ರಾಜ್ಯಸಭಾ ಸಂಸತ್ಸದಸ್ಯ) ಅಧ್ಯಕ್ಷತಾಯಾಂ ಕೇಂದ್ರಸ್ಯ ರಕ್ಷಾಮಂತ್ರಿಣಃ ಶ್ರೀ ಪಿ.ವಿ. ನರಸಿಂಹರಾವ ಕರಕಮಲಾಭ್ಯಾಂ ಜ್ಞಾನಜ್ಯೋತಿಃ ಪ್ರಜ್ವಾಲ್ಯ ತಸ್ಯಾ-ಖಂಡಸ್ಥಾಪನಾಂ ಕಾರಯಾಮಹೇ॥

ಇದಂ ಜ್ಞಾನಜ್ಯೋತಿಃ ಸರ್ವಜನಾಜ್ಞಾನಾಂಧಕಾರಂ ಹರತು ಸರ್ವತ್ರ ಸದಾ ಶಶ್ವತ್‌ಕಾಲಂ ಜ್ಞಾನಪ್ರಕಾಶಂ ವಿತರತು. ದೇಶೇ ರಾಷ್ಟ್ರೇ ರಾಜ್ಯೇ ಸರ್ವಗ್ರಾಮೇ ನಗರೇ ಚ ಶಾಂತಿಂ ತುಷ್ಟಿಂ ಪುಷ್ಟಿಂ ಮಂಗಲಂ ಚ ಕರೋತು ಇತಿ ಸ್ವಸ್ತಿ ಭವತು ಸ್ವಾಹ || ವಿಧಿವಿಧಾನವು ನಾಯಕ ಭ. ಆದಿನಾಥರದೇ ಆಗಿತ್ತು.

ರಾತ್ರಿ ಸೌಧರ್ಮ ಇಂದ್ರ, ಇಂದ್ರಾಣಿಯರ ಹರಾಜು ನಡೆಯಿತು. ಶ್ರೀ ತ್ರಿಲೋಕಚಂದ್ ಕೊಠಾರಿ ಮತ್ತು ಅವರ ಪತ್ನಿ ಲಾಡಾಬಾಯಿಯವರು ಭ. ವೃಷಭದೇವರ ತಂದೆತಾಯಿಯಾಗುವ ಭಾಗ್ಯ ಪಡೆದರು. ನಾಗೌರಿನ ಶ್ರೀನಿವಾಸ ಜೈನರು ಸೌಧರ್ಮ ಇಂದ್ರನಾಗುವ ಪುಣ್ಯಯೋಗವನ್ನು ಪಡೆದರು. ರಾತ್ರಿ 11ಗಂಟೆಯಲ್ಲಿ ಪ್ರತಿಷ್ಠಾಚಾರ್ಯರು ಅಷ್ಟದಿಕನ್ಯೆಯರಿಗೆ ತಾಯಿಯ ಸೇವೆ ಮಾಡುವ ಅಭಿನಯ ಮಾಡಿಸಿದರು. ಗರ್ಭಕಲ್ಯಾಣ, ಹದಿನಾರು ಸ್ವಪ್ನಗಳ ಕಾರ್ಯ ಮಾಡಿಸಿದರು.

ಏಪ್ರಿಲ್ 29

ಬೆಳಗ್ಗೆ ಭ. ವೃಷಭಸ್ವಾಮಿಯ ಜನ್ಮ ಕಲ್ಯಾಣ ನಡೆಯಿತು. ತೀನಮೂರ್ತಿ ಮಂದಿರದಲ್ಲಿ ಭಗವಂತರ ಅಕ್ಕಪಕ್ಕಗಳಲ್ಲಿ ಭರತ ಬಾಹುಬಲಿಗಳ 6 ಅಡಿ ಎತ್ತರದ ಖಡ್ಗಾಸನ ಮೂರ್ತಿಗಳನ್ನು ನಿಲ್ಲಿಸಿದ್ದರು. ಈ ಕಡೆ ವೇದಿಕೆಯ ಮೇಲೆ ಇಂದ್ರರಿಂದ ನೃತ್ಯದ ಅಭಿನಯದ ಕಾರ್ಯಕ್ರಮ ನಡೆಯುತ್ತಿತ್ತು. ನಂತರ ಸೌಧಮೇಂದ್ರನು ಐರಾವತ ಆನೆಯ ಮೇಲೆ ಕುಳಿತು ಮಡಿಲಲ್ಲಿ ಭ. ಮೂರ್ತಿ ಹಿಡಿದುಕೊಂಡು ಪೆಂಡಾಲಿಗೆ ಮೂರು ಪ್ರದಕ್ಷಿಣೆ ಹಾಕಿ ಮೆರವಣಿಗೆ ಹೊರಟಿತು.

ಜಂಬೂದ್ವೀಪದ ಸುತ್ತ ವಿಶಾಲವಾದ ಜಾಗವಿತ್ತು. ಇಲ್ಲೆಲ್ಲ ಇಳಿದುಕೊಳ್ಳಲು ವ್ಯವಸ್ಥೆ ಮಾಡಲಾಗಿತ್ತು. ಉತ್ತರ ಪ್ರದೇಶ, ಮಧ್ಯಪ್ರದೇಶ, ಅಸ್ಸಾಂ, ಗುಜರಾತ್, ಮಹಾರಾಷ್ಟ್ರ ಮುಂತಾದ ರಾಜ್ಯಗಳಿಂದ ಬಂದಿದ್ದ 35,000ಕ್ಕೂ ಹೆಚ್ಚು ಜನರಿಗೆ ಟೆಂಟುಗಳನ್ನು ಹಾಕಲಾಗಿತ್ತು. ಮೆರವಣಿಗೆ ಈ ಮಾರ್ಗವಾಗಿ ಹೊರಟು ಪ್ರಾಚೀನ ಮಂದಿರದ ಕಡೆಯಿಂದ ಜಂಬೂದ್ವೀಪದ ವರೆಗೆ ಬರುವಷ್ಟರಲ್ಲಿ 10 ಗಂಟೆ ಆಗಿತ್ತು. ಸುಮೇರು ಪರ್ವತವನ್ನು ಹತ್ತಲು ಉತ್ತರ ಪ್ರದೇಶದ ಸರ್ಕಾರವೇ ವಿಶೇಷ ವ್ಯವಸ್ಥೆಯನ್ನು ಮಾಡಿಸಿಕೊಟ್ಟಿದ್ದರು. 84 ಅಡಿ ಎತ್ತರದ ಸುಮೇರು ಪರ್ವತದ ಮೇಲೆ ಕಳಸಗಳನ್ನು ಹಿಡಿದ ಇಂದ್ರಾಣಿಯರ ದೃಶ್ಯ ನೈಜತೆಯನ್ನ ಕಣ್ಣಮುಂದೆ ತಂದಿತ್ತು. ಸುಮೇರು ಪರ್ವತದ ಮೇಲೆ ಪಾಂಡುಕಶಿಲೆಯ ಮೇಲೆ ಈಶಾನ್ಯ ದಿಕ್ಕಿನಲ್ಲಿ ಸ್ಥಾಪಿಸಿದ್ದ ಪೀಠದ ಮೇಲೆ ತೀರ್ಥಂಕರರ ಬಾಲಸ್ವರೂಪದ ಜಿನ ಪ್ರತಿಮೆಯನ್ನು ಸ್ಥಾಪಿಸಿ ಅಭಿಷೇಕ ಮಾಡಲಾಯಿತು. ಹೆಲಿಕಾಪ್ಟರ್‌ನಿಂದ ಜಿನ ಪ್ರತಿಮೆಯ ಮೇಲೆ ಪುಷ್ಪವೃಷ್ಟಿ ಮಾಡಿಸಲಾಯಿತು. ನಾನು ಅಸ್ವಸ್ಥಳಾಗಿದ್ದರು ಉತ್ಸಾಹದಿಂದ ಪರ್ವತವನ್ನು ಏರಿ ಭಗವಂತರ ಜನ್ಮಾಭಿಷೇಕವನ್ನು ನೋಡಿಕೊಂಡೇ ಬಂದು ಆಹಾರಕ್ಕೆ ಹೋದೆ.

ಜ್ಞಾನಜ್ಯೋತಿ ಸಂಚರಿಸಿದ ಕಡೆಗಳಲ್ಲಿ ಇಂದ್ರ, ಇಂದ್ರಾಣಿಯರ ಪಟ್ಟವನ್ನು ಹರಾಜಿನಲ್ಲಿ ಪಡೆದುಕೊಂಡಿದ್ದವರಿಗೆ ಮೊದಲೇ ಕಳಸ ಪತ್ರಿಕೆಯನ್ನು ಕಳುಹಿಸಿ ಕೊಡಲಾಗಿತ್ತು. ಅವರೆಲ್ಲರು ಬೆಟ್ಟವನ್ನು ಹತ್ತಿ ಅಭಿಷೇಕ ಮಾಡಿ ತಮ್ಮ ಇಷ್ಟಾರ್ಥವನ್ನು ಪಡೆದುಕೊಳ್ಳುತ್ತಿದ್ದ ದೃಶ್ಯ ಕಣ್ಣಿಗೆ ಅಪ್ಯಾಯಮಾನವಾಗಿ ಕಾಣಿಸುತ್ತಿತ್ತು. ಇವೆಲ್ಲ ವ್ಯವಸ್ಥೆಯನ್ನು ಕೋಟಾದ ಮಹೇಂದ್ರಕುಮಾರರು ವ್ಯವಸ್ಥಿತವಾಗಿ ನೆರವೇರಿಸಿದ್ದರು.

ಅಧಿವೇಶನ

ಅದೇ ದಿನ ಮಧ್ಯಾಹ್ನ ಪೆಂಡಾಲಿನಲ್ಲಿ ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದ ಅಧಿವೇಶನವು ನಡೆಯಿತು. ಇದರ ಅಧ್ಯಕ್ಷತೆಯನ್ನು ಮೂಡಬಿದ್ರೆಯ ಭಟ್ಟಾರಕರು ವಹಿಸಿದ್ದರು. ಈ ಅಧಿವೇಶನದಲ್ಲಿ ಸಂಸ್ಥಾನದ ಹಾಗೂ ಜ್ಞಾನಜ್ಯೋತಿಯ ಕಾರ್ಯಕರ್ತರಿಗೆ ಪ್ರಶಸ್ತಿ ಪತ್ರಗಳನ್ನು ಸ್ವರ್ಣಪದಕ ಮುಂತಾದವುಗಳನ್ನು ಭಟ್ಟಾರಕರು ವಿತರಿಸಿದರು. ರಾತ್ರಿ ತೊಟ್ಟಿಲು ತೂಗುವ ಕಾರ್ಯಕ್ರಮವಿತ್ತು. ರವೀಂದ್ರ ಜೈನರವರ ಸಂಗೀತ ಕಾರ್ಯಕ್ರಮ ಮತ್ತು ಜಯಪುರದ "ಮಹಿಳಾ ಜಾಗೃತ ಸಂಘದಿಂದ"ಪುರುದೇವ" ನಾಟಕವು ಪ್ರದರ್ಶಿತವಾಯಿತು.

ಏಪ್ರಿಲ್ 30

ಏಪ್ರಿಲ್ 30ರಂದು ಮಧ್ಯಾಹ್ನ ಉತ್ತರ ಪ್ರದೇಶದ ಮುಖ್ಯಮಂತ್ರಿಗಳಾದ ನಾರಾಯಣದತ್ತ ತಿವಾರಿಯವರು ಹೆಲಿಕಾಪ್ಟರ್ ಮೂಲಕ ಹಸ್ತಿನಾಪುರಕ್ಕೆ ಬಂದರು. ಮೊದಲು ಮಹಾವೀರಸ್ವಾಮಿಯ ದರ್ಶನಮಾಡಿ ನಂತರ ನನ್ನ ಬಳಿಗೆ ಬಂದರು. ಆಶೀರ್ವಾದ ಪಡೆದರು. ವೇದಿಕೆಗೆ ಹೋದರು. ಇವರ ಜೊತೆ ಸಂಸದೀಯ ರಾಜ್ಯಮಂತ್ರಿಗಳಾದ ಶ್ರೀ ಹುಕುಮಸಿಂಹರು ಸಹ ಇದ್ದರು. ಸಭೆಯಲ್ಲಿ ಇವರಿಬ್ಬರನ್ನು ಸ್ವಾಗತಿಸಿ ಬೆಳ್ಳಿಯ "ಸುಮೇರು"ವನ್ನು ಕಾಣಿಕೆಯಾಗಿ ನೀಡಲಾಯಿತು. ಮುಖ್ಯಮಂತ್ರಿಗಳು ಪ್ರತಿಷ್ಠಾಚಾರ್ಯರಿಗೆ ಬೆಳ್ಳಿಯ ಪ್ರಶಸ್ತಿ ಪತ್ರವನ್ನು ಕಾಣಿಕೆಯಾಗಿತ್ತರು.

ನಿರ್ಮಲಕುಮಾರ್ ಸೇಠಿಗಳು ಮಾತಾನಾಡುತ್ತ ಈ ಮಹೋತ್ಸವು ಇಷ್ಟೊಂದು ಯಶಸ್ವಿಯಾಗಲು ಕಾರಣ ಇಬ್ಬರು ಮಹಾನ್ ವ್ಯಕ್ತಿಗಳ ಕಾರ್ಯದಕ್ಷತೆಯೇ ಕಾರಣ. ತಮ್ಮ ಜೀವನವನ್ನೇ ಈ ಕ್ಷೇತ್ರದ ಸರ್ವತೋಮುಖವಾದ ಅಭಿವೃದ್ಧಿಗಾಗಿಯೇ ಸಮರ್ಪಿಸಿಕೊಂಡಿರುವ ವ್ಯಕ್ತಿಗಳೆಂದರೆ ಬ್ರಹ್ಮಚಾರಿಗಳಾದ ಮೋತಿಚಂದ ಮತ್ತು ರವೀಂದ್ರಕುಮಾರರೆಂದು ಹೃದಯಪೂರ್ವಕವಾಗಿ ಅವರನ್ನು ವೇದಿಕೆಗೆ ಆಹ್ವಾನಿಸಿದರು. ಸ್ವತಃ ಮುಖ್ಯಮಂತ್ರಿಗಳೇ ಅವರಿಗೆ ಬೆಳ್ಳಿಯ ಪ್ರಶಸ್ತಿ ಪತ್ರಗಳನ್ನು ಕಾಣಿಕೆಯಾಗಿತ್ತರು.

ಗ್ರಂಥ ಬಿಡುಗಡೆ

ಮುಖ್ಯಮಂತ್ರಿಗಳು "ನಿಯಮಸಾರ" ಪ್ರಾಭೃತ ಗ್ರಂಥವನ್ನು ಬಿಡುಗಡೆ ಮಾಡಿ ಕೃತಿಯನ್ನು ನನಗೆ ಸಮರ್ಪಿಸಿದರು. ಇನ್ನೊಂದು ಅನುವಾದಿತ ಮತ್ತು ಜ್ಞಾನಪೀಠದಿಂದ ಪ್ರಕಾಶಿತವಾಗಿರುವ ಮೂಲಾಚಾರ ಗ್ರಂಥವನ್ನು ಬಿಡುಗಡೆ ಮಾಡಿ ಮುನಿಶ್ರೀ ನಿರ್ಮಲಸಾಗರ ಹಾಗೂ ಸಮಸ್ತ ಮುನಿವರ್ಗಕ್ಕೆ ಕೃತಿಯನ್ನು ಅರ್ಪಿಸಿದರು. ಮುಖ್ಯಮಂತ್ರಿಗಳು ಕೂಡ ಬಹಳ ಚೆನ್ನಾಗಿ ಮಾತನಾಡಿದರು. ಅನಂತರ ಚಾರುಕೀರ್ತಿ ಭಟ್ಟಾರಕರು ಮಾತಾನಾಡುತ್ತಾ ನನ್ನನ್ನು ಬಹಳ ಪ್ರಶಂಸಿಸಿದರು. ಈ ಮಾತಾಜೀ ಕೇವಲ ಜ್ಞಾನಮತೀ ಅಷ್ಟೇ ಅಲ್ಲ. ದರ್ಶನಮತಿ, ಹಾಗೇ ಚಾರಿತ್ರಮತಿಯೂ ಆಗಿದ್ದಾರೆ. ಇವರೊಬ್ಬ ರತ್ನತ್ರಯದ ಪ್ರತಿಮೂರ್ತಿ ಆಗಿದ್ದಾರೆ ಇವರ ಪ್ರೇರಣೆಯಿಂದಲೇ ಇಂದು ಜಂಬೂದ್ವೀಪದ ನಿರ್ಮಾಣವನ್ನು ಕಾಣುತ್ತಿದ್ದೇನೆ.

ಇವರ ಮಾತು ಕೇಳುತ್ತಿದ್ದಂತೆ ಮನದಲ್ಲಿ ಯೋಚಿಸತೊಡಗಿದೆ. ಆರ್ಯಿಕಾ ಸ್ಥಾನದಿಂದ ಪೂರ್ಣವಾಗಲಾರದು. ಭಗವಂತನೇ ಮುಂದಿನ ಭವದಲ್ಲಾದರೂ ಪುರುಷ ಪರ್ಯಾಯವು ಪ್ರಾಪ್ತವಾಗಿ ನಾನು ಪೂರ್ಣರೂಪದಲ್ಲಿ ರತ್ನತ್ರಯವನ್ನು ಪಾಲಿಸುವಂತಾಗಿ ಸಾಕ್ಷಾತ್ ರತ್ನತ್ರಯ ಮೂರ್ತಿ ಆಗುವಂತಾಗಲಿ ಎನ್ನುವುದೇ ನನ್ನ ಜೀವನದ ಉದ್ದೇಶವಾಗಿದೆ.

ನಾನು ಪ್ರವಚನದಲ್ಲಿ ಕನ್ನಡದಲ್ಲಿ, ಮರಾಠಿಯಲ್ಲಿ, ಹಾಗೇ ಹಿಂದಿಯಲ್ಲೂ ಆಶೀರ್ವಾದ ಮಾಡಿದೆ. ಜ್ಞಾನಜ್ಯೋತಿ ಸಂಚರಿಸಿದ ಜಾಗದಲ್ಲೆಲ್ಲಾ ಇಂದ್ರನ ಪದವಿಯನ್ನು ಹರಾಜಿನಲ್ಲಿ ತಮ್ಮದಾಗಿಸಿಕೊಂಡಿದ್ದ ಭಕ್ತರೆಲ್ಲ ಇಲ್ಲಿ ಸೇರಿದ್ದರು. ಅವರೆಲ್ಲರ ಸಲುವಾಗಿ ಅವರ ಭಾಷೆಗಳಲ್ಲೇ ಹೇಳುವುದು ಸಮಂಜಸವಾಗಿತ್ತು.

ಉತ್ತರ ಭಾರತದಲ್ಲಿ ಮೊಟ್ಟ ಮೊದಲಿಗೆ ನಡೆದ ಪ್ರತಿಷ್ಠಾ ಮಹೋತ್ಸವ ಇದಾಗಿದ್ದರಿಂದ ದಕ್ಷಿಣ ಭಾರತದ ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ, ಗುಜಾರಾತ್, ಅಸ್ಸಾಂ, ಬಿಹಾರ, ಬಂಗಾಳ, ಮಧ್ಯಪ್ರದೇಶ, ಹರಿಯಾಣ ಮುಂತಾದ ಕಡೆಗಳಿಂದ ಬಹಳ ಸಂಖ್ಯೆಯಲ್ಲಿ ಸ್ತ್ರೀ ಪುರುಷರು ಬಂದು ಸೇರಿದ್ದರು. ವೇದಿಕೆಯ ಕಾರ್ಯಕ್ರಮ ಮುಗಿಯುತ್ತಿದ್ದಂತೆ ಮುಖ್ಯಮಂತ್ರಿಗಳು ಜಂಬೂದ್ವೀಪದ ಮುಂದೆ ಬಂದರು. ಶಿಲಾಲೇಖನವನ್ನು ಅನಾವರಣಗೊಳಿಸಿದರು. ಪಶ್ಚಿಮದಿಕ್ಕಿನಲ್ಲಿದ್ದ ವಿದ್ಯುತ್‌ಭವನಕ್ಕೆ ಬಂದು ಬಟನ್ ಅದುಮುತ್ತಿದ್ದಂತೆ ಜಂಬೂದ್ವೀಪದ ಸುತ್ತಲೂ ಇದ್ದ ಲವಣ ಸಮುದ್ರದಲ್ಲಿ ಬೆಳಕಿನ ಚಿಲುವೆಗಳು ಚಿಮ್ಮಿದವು. ಆ ಕ್ಷಣ ಆ ಬೆಳಕಿನಲ್ಲಿ ಇಡೀ ಜಂಬೂದ್ವೀಪ ಎಲ್ಲರ ಮನಸ್ಸನ್ನು ಸೂರೆಗೊಂಡಿತು. ಕಾರ್ಯವನ್ನು ಉದ್ಘಾಟಿಸಿ, ಭೋಜನ ಮುಗಿಸಿ, ಅವರು ರಾಜಧಾನಿಗೆ ತೆರಳಿದರು.

ರಾಜ್ಯಾಭಿಷೇಕ ಹಾಗೂ ದೀಕ್ಷಾ ಕಲ್ಯಾಣ

ಮಧ್ಯಾಹ್ನ ಮೂರು ಗಂಟೆಗೆ ರಾಜ್ಯಾಭಿಷೇಕ ಮಹೋತ್ಸವ ನೆರವೇರಿತು. ಆಗ ನೀಲಾಂಜನೆಯ ನೃತ್ಯದಿಂದ ಪ್ರಭುವಿಗೆ ಉಂಟಾದ ವೈರಾಗ್ಯವನ್ನು ಚಿತ್ರಿಸುತ್ತಾ, ಲೋಕಾಂತಿಕ ದೇವರಿಂದ ಸ್ತುತಿಯ ದೃಶ್ಯಗಳನ್ನು ಪ್ರದರ್ಶಿಸಲಾಯಿತು. ನಂತರ ಪಾಲಕಿಯಲ್ಲಿ ಭಗವಂತನನ್ನು ಕರೆದುಕೊಂಡು ಹೋಗಿ, ದೀಕ್ಷೆಯನ್ನು ಕೊಡಲಾಯಿತು. ಅದೇ ರಾತ್ರಿ ಅಖಿಲ ಭಾರತ ದಿಗಂಬರ ಜೈನ ಮಹಾಸಭೆಯ ಅಧಿವೇಶನ ನಡೆಯಿತು. ನಂತರ ರೋಹತಕ್‌ನ ಯುವ ಪರಿಷತ್‌ನ ಜೈನ ಕಲಾ ಕೇಂದ್ರದವರು "ವೈರಾಗ್ಯದ ಕಡೆಗೆ" ಎನ್ನುವ ನೃತ್ಯರೂಪಕವನ್ನು ಪ್ರಸ್ತುತ ಪಡಿಸಿದರು. ಅಲ್ಲಿದ್ದ ಅಪಾರ ಜನಸಂದಣಿಯು ನೋಡಿ ಆನಂದಿಸಿತು.

ಮೇ 31

ಬೆಳಗ್ಗೆ 9 ಗಂಟೆಗೆ ಭಗವಂತರಿಗೆ ಆಹಾರ ಭಿಕ್ಷೆಯ ದೃಶ್ಯವನ್ನು ತೋರಿಸಲಾಯಿತು. ಅದೇ ಮಧ್ಯಾಹ್ನ 1ರಿಂದ 2ರವರೆಗೆ ವೇದಿಕೆಯಲ್ಲಿ ಭಾರತ ವರ್ಷೀಯ ದಿಗಂಬರ ಯುವ ಪರಿಷದ್‌ನ ಅಧಿವೇಶನವು ನಡೆಯಿತು. ಪ್ರತಿಷ್ಠಾಚಾರ್ಯರು ಗರ್ಭಗೃಹದಲ್ಲಿ ಮುನಿಶ್ರೀ ನಿರ್ಮಲಸಾಗರರ ಮೂಲಕ ಸೂರಿ ಮಂತ್ರವನ್ನು ಹೇಳಿಸಿ ಜಿನ ಪ್ರತಿಮೆಗಳ ಪ್ರತಿಷ್ಠಾ ವಿಧಿಯನ್ನು ಕೈಗೊಂಡಿದ್ದರು. ಆ ಸಮಯದಲ್ಲಿ ಇಡೀ ಮುನಿ ಸಮೂಹವೇ ಅಲ್ಲಿ ನೆರೆದಿತ್ತು. ನಾನು ಅಲ್ಲಿ ಉಪಸ್ಥಿತಳಿದ್ದೆ. ಪ್ರತಿಷ್ಠಾಚಾರ್ಯರು ಮಂತ್ರಗಳಿಂದ ಪಾಷಾಣ ಮೂರ್ತಿಗಳಿಗೆ ಪ್ರಾಣ ಪ್ರತಿಷ್ಠೆಯನ್ನು ಕೊಡುತ್ತಿದ್ದರು. ಮಂತ್ರಗಳ ಶಕ್ತಿ ಮತ್ತು ಮಹಿಮೆ ಅತ್ಯಂತ ಮಹತ್ವವುಳ್ಳದ್ದು.

ಸಮವಸರಣದ ರಚನೆ

ವೇದಿಕೆಯ ಮೇಲೆ ಪ್ರತಿಷ್ಠಾಚಾರ್ಯರು ಸಮವಶರಣ ಹನ್ನೆರಡು ಸಭೆಗಳ ದೃಶ್ಯವನ್ನು ಚಿತ್ರಿಸಿದ್ದರು. ಒಳಗೆ ಗಂಧಕುಟಿಯಲ್ಲಿ ನಾಲ್ಕು ಕಡೆಗೆ ನಾಲ್ಕು ಪ್ರತಿಮೆಗಳನ್ನು ಅನುಷ್ಠಾನಗೊಳಿಸಿ, ನಾಲ್ಕು ದಿಕ್ಕುಗಳಲ್ಲೂ

ಒಂದೊಂದು ಮಾನಸ್ತಂಭವನ್ನೂ ನಿಲ್ಲಿಸಿ, ಅದರಲ್ಲಿ ಪ್ರತಿಮೆಗಳನ್ನು ವಿರಾಜಮಾನಗೊಳಿಸಲಾಗಿತ್ತು. ಹನ್ನೆರಡು ಸಭೆಗಳಲ್ಲಿ ಗಣಧರ ಮುನಿಗಳ ವರ್ಗ 2. ಕಲ್ಪವಾಸೀ ದೇವಿಯರು 3. ಆರ್ಯಿಕಾ-ಶ್ರಾವಕಿಯರು 4. ಜ್ಯೋತಿರ್ವಾಸಿ ದೇವಿಯರು 5. ವ್ಯಂತರ ದೇವಿಯರು 6. ಭವನವಾಸಿ ದೇವಿಯರು 7. ಭವನವಾಸಿ ದೇವರು 8. ವ್ಯಂತರ ದೇವರು 9. ಜ್ಯೋತಿರ್ವಾಸ ದೇವರು 10. ಕಲ್ಪವಾಸಿ ದೇವರು 11. ಚಕ್ರವರ್ತಿ ಮತ್ತು ಮನುಶ್ಯರು 12. ತಿರ್ಯಂಚಗಣ-ಈ ಪ್ರಕಾರವಾಗಿ 12 ಸಭೆಗಳಲ್ಲಿ ಜೀವರು ಕುಳಿತಿದ್ದರು. ಪರದೆ ಸರಿಯುತ್ತಿದ್ದಂತೆಯೇ ಜಯಕಾರದ ಧ್ವನಿಯು ಮುಗಿಲು ಮುಟ್ಟಿತು. ಸ್ವಲ್ಪ ಹೊತ್ತಿನಲ್ಲೇ ಭಗವಂತರ ದಿವ್ಯಧ್ವನಿಯಂತೆ ಮುನಿವರ್ಯರಾದ ನಿರ್ಮಲಸಾಗರರು ಮಂಗಳಾಚರಣ ಮಾಡಿದರು. ಮುನಿಶ್ರೀ ವರ್ಧಮಾನ ಸಾಗರರು ಪ್ರವಚನ ಮಾಡಿದರು. ನಂತರ ನನ್ನ ಪ್ರವಚನದಲ್ಲಿ ಸಮವಶರಣದ ರಚನೆಯ ಮಹಿಮೆಯನ್ನು ಕುರಿತು ಹೇಳಿದೆ.

ಗಣಿನೀ ಪದವಿಯ ಗೌರವ

ಸಮವಶರಣದ ಸಂದೇಶ ಮುಗಿಯುತ್ತಿದ್ದಂತೆ ನನ್ನ ಪಟ್ಟ ಶಿಷ್ಯೆಯಾದ ಜಿನಮತಿಯು ಗಣಿನೀಪದವಿಯ ಸಂಸ್ಕಾರಗಳನ್ನು ಮಾಡಿ ನನಗೆ ಹೊಸದಾದ ಪಿಂಛೀ, ಕಮಂಡಲು ಮತ್ತು ಶಾಸ್ತ್ರವನ್ನು ನೀಡುವುದರೊಂದಿಗೆ ನನ್ನನ್ನು ಆ ಪದವಿಯಿಂದ ಗೌರವಿಸಿ ವಿಭೂಷಿತಗೊಳಿಸಿದರು. ಅಲ್ಲಿ ನೆರೆದಿದ್ದ ಎಲ್ಲಾ ಆರ್ಯಿಕೆಯರು ನನಗೆ ವಂದಾಮಿ ಹೇಳಿ ಪದವಿಯನ್ನು ಊರ್ಜಿತಗೊಳಿಸಿದರು. ನೆರದಿದ್ದ ಶ್ರಾವಕ-ಶ್ರಾವಕಿಯರು ಗಣನೀ ಆರ್ಯಿಕಾ ರತ್ನ ಜ್ಞಾನಮತೀ ಮಾತಾಜೀ ಯವರಿಗೆ ಜಯವಾಗಲಿ ಎಂದು ಹರ್ಷೋದ್ಗಾರ ಗೈದರು. ಅದೇ ರಾತ್ರಿ ಶಾಸ್ತ್ರೀ ಪರಿಷತ್‌ನ ಅಧಿವೇಶನವು ನಡೆಯಿತು.

ಮೇ 2

ಬೆಳಗ್ಗೆ ವೇದಿಕೆಯಲ್ಲಿ ಕೈಲಾಸ ಪರ್ವತದ ದೃಶ್ಯವನ್ನು ತೋರಿಸಲಾಗಿತ್ತಲ್ಲ. ಅಲ್ಲಿಂದಲೇ ಭಗವಂತರು ಮೋಕ್ಷ ಪಡೆದಂತೆ ತೋರಿಸಲಾಯಿತು. ನಂತರ ಭಗವಂತರ ಶರೀರವನ್ನು ಅಗ್ನಿಕುಮಾರ ದೇವತೆಯು ತನ್ನ ಮಕುಟದಿಂದ ಹೊರಟ ಜ್ಯೋತಿಯಿಂದ ಹವನ ಸಂಸ್ಕಾರವನ್ನು ವಿಧಿಪೂರ್ವಕ ಚಿತ್ರಿಸಿ ನಿರ್ವಾಣ ಕಲ್ಯಾಣವನ್ನು ಮಾಡಿದರು.

ಧರ್ಮಧ್ವಜದ ಸ್ಥಾಪನೆ

ಜಂಬೂದ್ವೀಪದ ಎದುರಿಗೆ ಪೂರ್ವದಲ್ಲಿ ಈ ಕಡೆ ತ್ರಿಮೂರ್ತಿ ಮಂದಿರಕ್ಕೆ ಸರಿಯಾಗಿ ಉತ್ತರ ದಿಕ್ಕಿನಲ್ಲಿ ಎತ್ತರವಾದ ಧ್ವಜದಂಡದಲ್ಲಿ ಧ್ವಜವನ್ನು ಮಂತ್ರೋಚ್ಚಾರಣೆಯಿಂದ ಏರಿಸಲಾಗಿತ್ತು. ದೆಹಲಿಯ "ಜೈನ ಮೋಟಾರ್ಸ್‌ನ ಶ್ರೀ ರಮೇಶ್‌ಚಂದ ಜೈನರು ಧ್ವಜಾರೋಹಣ ಮಾಡಿದ್ದರು. ಹಾರಾಡುತ್ತಿದ್ದ ಧ್ವಜದ ಜಯಕಾರವು ನಭೋಮಂಡಲದಲ್ಲೆಲ್ಲ ಹರಡುತ್ತಿತ್ತು. ಕಿಕ್ಕಿರಿದ ಜನಸಂದಣಿಯನ್ನು ಅತ್ಯಂತ ಕುಶಲತೆಯಿಂದ ನಿಯಂತ್ರಿಸುತ್ತಿದ್ದ ಜಯಪುರದ ಸಮರ್ಥ ಸ್ವಯಂ ಸೇವಕರನ್ನು ನಾನು ಸಭೆಯಲ್ಲಿ ಮನಪೂರ್ವಕವಾಗಿ ಪ್ರಶಂಸಿಸಿದೆ. ಧರ್ಮಧ್ವಜದ ಮಹತ್ವವನ್ನು ವಿವರಿಸುತ್ತಾ ಇಂದು ಈ ಧ್ವಜವು ಹಸ್ತಿನಾಪುರದ ಜಂಬೂದ್ವೀಪದಲ್ಲಿ ಮೇಘಮಂಡಲವನ್ನು ಸ್ಪರ್ಶಿಸುತ್ತಿದೆ. ಇದು ಹೀಗೆ ಹಾರಾಡುತ್ತಾ ಭವ್ಯ ಜೀವಿಗಳನ್ನ ಆಹ್ವಾನಿಸುತ್ತಿರಲಿ. ಇದು ಹೀಗೆ ಎಂದೆಂದಿಗೂ

ಎತ್ತರದಲ್ಲಿ ಹಾರಾಡುತ್ತಲೇ ಇರಲಿ. ಎಂದಿಗೂ ಕೆಳಗೆ ಇಳಿಯಬಾರದೆಂಬುದೇ ನನ್ನ ಮಂಗಳ ಕಾಮನೆ ಎಂದು ಮನಸಾರೆ ಹರಸಿದೆ.

ಜಂಬೂದ್ವೀಪದಲ್ಲಿ ಜಿನಪ್ರತಿಮೆಗಳ ಸ್ಥಾಪನೆ

ಮೋಕ್ಷ ಕಲ್ಯಾಣದ ನಂತರ ಜಿನಪ್ರತಿಮೆಗಳನ್ನು ಜಂಬೂದ್ವೀಪದಲ್ಲಿ ಸ್ಥಾಪಿಸಲು ದಾನಿಗಳು ಅವುಗಳನ್ನು ತಲೆಯ ಮೇಲೆತ್ತಿಕೊಂಡು ಬಂದರು. ಪೆಂಡಾಲಿನಿಂದ ಜಂಬೂದ್ವೀಪದ ವರೆಗೆ ಬರುವವರೆಗೂ ಮಹಾರಾಷ್ಟ್ರದ ಸ್ವಯಂ ಸೇವಕರು ಮಧುರವಾಗಿ ವಾದ್ಯ ನುಡಿಸುತ್ತಿದ್ದರು. ಚತುರ್ವಿಧ ಸಂಘದ ಸಾನಿಧ್ಯದಲ್ಲಿ ಎಲ್ಲಾ ಪ್ರತಿಮೆಗಳನ್ನು ನಿಶ್ಚಿತ ಜಾಗದಲ್ಲಿ ವಿರಾಜಮಾನಗೊಳಿಸಲಾಯಿತು. ಕೆಲವು ಕಡೆ ನಿರ್ಮಲಸಾಗರರು, ಕೆಲವು ಕಡೆ ವಿಪುಲಸಾಗರರು ತಮ್ಮ ಕೈಗಳಿಂದಲೇ ಪೀಠದಲ್ಲಿ ಅಚಲಯಂತ್ರವನ್ನು ರಚಿಸಿ ಜಿನ ಪ್ರತಿಮೆಗಳನ್ನು ವಿರಾಜಮಾನಗೊಳಿಸಿದರು. ಒಂದೆರಡು ಕಡೆ ನಾನು ಮತ್ತು ಜಿನಮತಿಯು ಯಂತ್ರವನ್ನು ರಚಿಸಿದೆವು.

ರಥಯಾತ್ರೆ

ಜಿನಬಿಂಬ ಸ್ಥಾಪನೆಯ ನಂತರ ರಥಯಾತ್ರೆಯನ್ನು ಹೊರಡಿಸಲಾಯಿತು. ಭಗವಂತರನ್ನು ರಥದಲ್ಲಿ ಕೂರಿಸಿ ಸಾರಥ್ಯವನ್ನು ವಹಿಸುವ ಸೌಭಾಗ್ಯವನ್ನು ದೆಹಲಿಯ ಪ್ರೇಮಚಂದ ಜೈನರು ಪಡೆದುಕೊಂಡರು. ರಥಯಾತ್ರೆಯ ನಂತರ ಭಗವಂತರ ಪ್ರತಿಮೆಯನ್ನು ಮಹಾವೀರ ಮಂದಿರದಲ್ಲಿ ಪ್ರತಿಷ್ಠಾಪಿಸಲಾಯಿತು.

ಸಮಾರೋಪ ಸಮಾರಂಭ

ಮೇ - 3ರಂದು ಮಧ್ಯಾಹ್ನ ಮಂತ್ರಿಗಳಿಂದ ವಾಸುದೇವಸಿಂಹರ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭ ಜರುಗಿತು. ಪ್ರತಿಷ್ಠಾ ಸಮಿತಿಯ ಮಹಾಮಂತ್ರಿ ರವೀಂದ್ರಕುಮಾರರು ಸಮಸ್ತ ಕಾರ್ಯಕರ್ತರಿಗೂ ಸಮಸ್ತ ಅಧಿಕಾರಿಗಳಿಗೂ ಸ್ವಯಂ ಸೇವಕ ಮಂಡಳಿಯವರಿಗೂ ವಾಸುದೇವರ ಕರಕಮಲಗಳಿಂದ ಪ್ರಶಸ್ತಿಪತ್ರಗಳನ್ನು ರಜತಪದಕವನ್ನು ಕೊಡಿಸಿ ಎಲ್ಲ ಮಹಾನುಭಾವರಿಗೂ ಆಭಾರವನ್ನು ವ್ಯಕ್ತಪಡಿಸಿದರು. ನಾನು ಪ್ರತಿಷ್ಠಾ ಸಮಿತಿಯ ಅಧ್ಯಕ್ಷರಾದ ಮೋತಿಚಂದ್‌ಜೈನ, ಕಾರ್ಯಾಧ್ಯಕ್ಷ ಗಣೇಶಲಾಲ ರಾನಿವಾಲ ಹಾಗೇ ಮಹಾಮಂತ್ರಿ ರವೀಂದ್ರ ಕುಮಾರರನ್ನು ಮನದುಂಬಿ ಆಶೀರ್ವದಿಸಿ, ಪ್ರಶಂಸಿಸಿ, ಮಂಗಳ ಕಾಮನೆ ಗೈದೆನು.

ಸನ್ಮಾನಗಳನ್ನು ನೀಡಿದ ವಾಸುದೇವ ಸಿಂಹರು ತಮ್ಮ ಭಾಷಣದಲ್ಲಿ ಇಂದಿನ ಪ್ರತಿಷ್ಠಾ ಮಹೋತ್ಸವ ಮುಗಿಯಿತು ಎಂದು "ಇತಿಶ್ರೀ" ಹೇಳುವಂತಿಲ್ಲ. ಇದೇ ಕಮಿಟಿಯವರು ಪ್ರತಿವರ್ಷ ಇಲ್ಲಿ ವಾರ್ಷಿಕ ಆಚರಣೆಯನ್ನು ಆಚರಿಸುವ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಬೇಕು. ಅದಕ್ಕಾಗಿ ಉತ್ತರ ಪ್ರದೇಶ ಸರ್ಕಾರವು ಪೂರ್ಣಸಹಯೋಗ ಕೊಡುವುದಕ್ಕೆ ತಾವು ಸಹಕರಿಸುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟರು. "ಅಹಿಂಸಾದಿನ"ವನ್ನಾಗಿ ಘೋಷಿಸುವಂತೆ ಪ್ರೇರೇಪಿಸಿ 1. ಚೈತ್ರಮಾಸದ ನವಮಿಯ ದಿನ ವೃಷಭ ಜಯಂತಿ 2. ಚೈತ್ರ ಶುಕ್ಲ ರಾಮನವಮಿ 3. ಚೈತ್ರ ಶುಕ್ಲ ತ್ರಯೋದಶಿ ಮಹಾವೀರ ಜಯಂತಿ 4. ವೈಶಾಖ ಶುಕ್ಲ ತೃತೀಯ ಅಕ್ಷಯ ತೃತೀಯಾ 5. ಅಶ್ವಿಜ ಶುಕ್ಲ ಪೂರ್ಣಿಮೆಯ ಶರದ್ ಪೂರ್ಣಿಮ 6. ಅಕ್ಟೋಬರ್ 2ರಂದು ಗಾಂಧಿ ಜಯಂತಿ 7. ವೈಶಾಖ ಶುದ್ಧ ಪೂರ್ಣಿಮೆಯಂದು ಬುದ್ಧ ಜಯಂತಿ 8. ಫಾಲ್ಗುಣ ಮಾಸ ಕೃಷ್ಣಪಕ್ಷ ಚತುರ್ದರ್ಶಿಯಂದು ಶಿವರಾತ್ರಿ-ಈ ಎಂಟು ದಿನಗಳು ಉತ್ತರಪ್ರದೇಶ ಸರ್ಕಾರದ ವತಿಯಿಂದ ಮಧ್ಯ, ಮಾಂಸದ

ಅಂಗಡಿಗಳನ್ನು ಮುಚ್ಚಬೇಕೆಂದು ಆದೇಶವನ್ನು ತುಂಬಿದ ಸಭೆಯಲ್ಲಿ ಘೋಷಣೆ ಮಾಡುತ್ತಿದ್ದಂತೆ ಸಭೆಯು ಹರ್ಷದಿಂದ ಚಪ್ಪಾಳೆ ತಟ್ಟಿ ಘೋಷಿಸಿತು.

ಜ್ಞಾನಜ್ಯೋತಿ ವರ್ಷದ ಘೋಷಣೆ

ಸಮಾರೋಪದ ಮಹಾಮಂತ್ರಿ ರವೀಂದ್ರ ಕುಮಾರರು "ಜ್ಞಾನಜ್ಯೋತಿ ವರ್ಷವನ್ನು ಇಡೀ ವರ್ಷ ಆಚರಿಸುವ ನಿರ್ಣಯವನ್ನ ತಿಳಿಸುತ್ತಾ 1985ನೇ ಇಸವಿ ಏಪ್ರಿಲ್ 28ರಿಂದ 1986ನೇ ಏಪ್ರಿಲ್ 28ರವರೆಗೆ ಜ್ಞಾನಜ್ಯೋತಿ ವರ್ಷವೆಂದು ಘೋಷಿಸುತ್ತಾ ಕಾರ್ಯಕ್ರಮವನ್ನು ತಿಳಿಸಲಾಗುತ್ತದೆ ಎಂದರು. ಆ ವಿಶೇಷ ದಿನಗಳೆಂದರೆ ಜೂನ್ 4 ರಂದು ಜ್ಞಾನಜ್ಯೋತಿಯ ಪ್ರವರ್ತನೆಯ ದಿನ ಸಮಾರಂಭವನ್ನು 2. ಭಾದ್ರಪದ ಶುದ್ಧ ತೃತೀಯದಂದು ಆಚಾರ್ಯ ಶಾಂತಿಸಾಗರರ ಸಲ್ಲೇಖನ ದಿವಸವನ್ನು 3. ಆಶ್ವೀಜ ಹುಣ್ಣಿಮೆಯಂದು ಶರದ್ ಪೂರ್ಣಿಮೆಯನ್ನು 4. ಪುಷ್ಯಮಾಸದ ಏಕಾದಶಿಯಂದು ಶಾಂತಿನಾಥರ ಕೇವಲ ಜ್ಞಾನ ದಿನವನ್ನು 5. ವೈಶಾಖ ತೃತೀಯ ಅಂದರೆ ಅಕ್ಷಯ ತೃತೀಯ ದಿನವೆಂದು ಆಚರಿಸಲು ನಿರ್ಣಯಿಸಲಾಯಿತು.

ಮಂಗಳ ಆಶೀರ್ವಾದ

ಮಂಗಳ ಆಶೀರ್ವಾದ ಮಾಡುತ್ತಾ ಹನ್ನೊಂದು ವರ್ಷದ ಹಿಂದೆ ನಾನು ಬಿತ್ತಿದ ಬೀಜವು ಇಂದು ದೊಡ್ಡಮರವಾಗಿ ಬೆಳೆದು ನಿಂತಿದೆ. ಇದನ್ನು ಕಂಡು ನನಗೆ ಬಹಳ ಸಂತೋಷವಾಗುತ್ತಿದೆ. ಇಡೀ ಭಾರತ ವರ್ಷೀಯ ಜೈನ ಸಮಾಜದ ಸಹಯೋಗದಿಂದಲೇ ಈ ಕೆಲಸ ಸಾಧ್ಯವಾಗಿರುವುದು. ನಾನು ಕೇವಲ ನಿಮಿತ್ತ ಮಾತ್ರಳು ನನಗೆ ರವೀಂದ್ರ ಮತ್ತು ಮೋತಿಚಂದ ಇಬ್ಬರು ಶಿಷ್ಯರು ದೊರೆತಿದ್ದು ಬಹಳ ಹೆಮ್ಮೆ ಎನಿಸುತ್ತಿದೆ. ಇವರಿಬ್ಬರ ಶ್ರಮದಿಂದಲೇ ಈ ಕೆಲಸ ಸಂಪೂರ್ಣಗೊಂಡಿದ್ದು ಎಂದರೆ ಅತಿಶಯೋಕ್ತಿ ಆಗಲಾರದು. ಇವರೊಡನೆ ಪೂರ್ಣಸಹಾಕರ ಕೊಟ್ಟವರೆಂದರೆ ದೆಹಲಿಯ ಶ್ಯಾಮಲಾಲಜೀ ಮತ್ತು ಗಣೇಶಲಾಲಜೀ ಯವರು. ಇವರೆಲ್ಲರು ನಾನು ಒಮ್ಮೊಮ್ಮೆ ಅರ್ಧರಾತ್ರಿಯಲ್ಲಿ ಹೇಳಿದ ಕೆಲಸವನ್ನು ಸಂತೋಷದಿಂದಲೇ ಮಾಡಿದ್ದಾರೆ. ಇವರೆಲ್ಲರ ಪರಿಶ್ರಮದಿಂದಲೇ ಇಂದು ಈ ಸಂಸ್ಥಾನ ಸರ್ವತೋಮುಖವಾಗಿ ಬೆಳೆದು ನಿಂತಿದೆ. ಜ್ಞಾನಜ್ಯೋತಿಯ ಪರ್ಯಟನೆಯಲ್ಲಿ ಇಡೀ ದೇಶದ ಜನತೆಯೇ ಸಹಕಾರವನ್ನು ನೀಡಿದೆ. ಇದೊಂದು ಅವಿಸ್ಮರಣೀಯ ಘಟನೆಯಾಗಿದೆ ಎಂದು ನನ್ನ ಮನಸ್ಸನ್ನೇ ತೆರೆದಿಟ್ಟೆ.

ಎಲ್ಲರ ಭಾವವೂ ಹೀಗೆ ಸದಾ ಧರ್ಮದಲ್ಲೇ ತೊಡಗಿದ್ದು ಇಡೀ ಸಮಾಜ, ರಾಷ್ಟ್ರ ಧರ್ಮವು ಒಂದೇ ಸೂತ್ರದಲ್ಲಿ ಬಂಧಿತವಾಗಲಿ ಎಂಬುದೇ ನನ್ನ ಮಹದಾಸೆ ಆಗಿದೆ ಎಂದೆ. ಕೊನೆಗೆ ವೃಷಭದೇವರ ಜಯಕಾರದೊಂದಿಗೆ ಸಮಾರೋಪದ ಘೋಷಣೆಯಾಯಿತು. ನಂತರ ಪ್ರತಿಷ್ಠಾಚಾರ್ಯರು ಏಪ್ರಿಲ್ 27ರಂದು ಏರಿಸಿದ್ದ ಧ್ವಜವನ್ನು ಮಂತ್ರೋಚ್ಚಾರಣೆಯೊಡನೆ ಪ್ರೊ. ವಾಸುದೇವಸಿಂಹರಿಂದಲೇ ಅವರೋಹಣ ಮಾಡಿಸಿದರು. ಈ ಎಲ್ಲಾ ಕಾರ್ಯಗಳನ್ನು ಪೂರ್ಣಗೊಳಿಸಿದ ವಾಸುದೇವರು ತಮ್ಮ ಶ್ರದ್ಧಾ ಕುಸುಮವನ್ನು ಮತ್ತೊಮ್ಮೆ ಅರ್ಪಿಸಿ ಪ್ರತಿಷ್ಠಾಕಾರ್ಯವನ್ನು ಪೂರ್ಣಗೊಳಿಸಿದರು.

ಮೇ 3ರಂದೇ ಮುನಿಸಂಘವು ಅಲ್ಲಿಂದ ವಿಹಾರ ಹೊರಟಿತು. ಆರ್ಯಿಕ ಜಿನಮತಿ ಮತ್ತು ಶುಭಮತಿ ಮಾತ್ರ ಅಲ್ಲಿ ಉಳಿದರು.

ಪ್ರತಿಷ್ಠೆಯಲ್ಲಿ ವಿಶೇಷ ಸಹಯೋಗ ದೊರೆತಿದ್ದು

ಈ ಪ್ರತಿಷ್ಠಾ ಸಮಾರಂಭಕ್ಕೆ ಆಚಾರ್ಯ ರತ್ನ ಶ್ರೀದೇಶಭೂಷಣ ಮಹಾರಾಜರು ಪರಮಪೂಜ್ಯ ಧರ್ಮಸಾಗರರು ಆಚಾರ್ಯ ಶ್ರೀ ವಿಮಲಸಾಗರರು ಆಚಾರ್ಯ ವಿದ್ಯಾಸಾಗರ ಮಹಾರಾಜರ ಆಶೀರ್ವಾದ ದೊರೆತಿತ್ತು. ಮೂಡಬಿದ್ರೆ ಮತ್ತು ಲಾತೂರ ಮಠದ ಭಟ್ಟಾರಕರುಗಳು ಈ ಮಹೋತ್ಸವಕ್ಕೆ ಬಂದು ಕಾರ್ಯಕರ್ತರನ್ನು ಆಶೀರ್ವದಿಸಿದರು.

ಪ್ರತಿಷ್ಠಾಚಾರ್ಯರಾಗಿದ್ದ ಬ್ರಹ್ಮಚಾರಿ ಸೂರಜಮಲ್ಲರು ಪ್ರತಿಷ್ಠಾಚಾರ್ಯರುಗಳಾದ ಕಚೋಢಮಲ್ಲರು ಶ್ರೀಲಾಡಲೀ ಪ್ರಸಾದ್ ಪಂ. ಧರ್ಮ ಚಂದಜೀಯವರೆಲ್ಲ ಅತ್ಯಂತ ಸಮರ್ಪಕವಾಗಿ ಕಾರ್ಯಕ್ರಮ ನಡೆಸಿಕೊಟ್ಟಿದ್ದರು. ಉತ್ತರ ಪ್ರದೇಶದ ಸರ್ಕಾರವು ಎಲ್ಲ ಹಂತದಲ್ಲೂ ಸಹಕಾರವನ್ನು ಕೂಡಲು ಮುಖ್ಯಮಂತ್ರಿ ತಿವಾರಿಯವರು ಮತ್ತು ಪ್ರೊ. ವಾಸುದೇವಸಿಂಹರು ಕಾರಣರಾಗಿದ್ದರು ಹಾಗೇ ಮೇಲಿನ ಜಿಲ್ಲಾಧಿಕಾರಿ ಶ್ರೀ ಎಲ್.ಆರ್. ಸಿಂಹ, ಆಯುಕ್ತರಾದ ಗೋಸ್ವಾಮಿ ಹಾಗೂ ಎಲ್ಲಾ ವಿಭಾಗದ ಜನರು ಸಹ ಸಹಯೋಗವನ್ನು ಕೊಟ್ಟಿದ್ದಾರೆ. ಕೇಂದ್ರ ಸರಕಾರದ ರಕ್ಷಾಮಂತ್ರಿಗಳಾಗಿದ್ದ ಪಿ.ವಿ. ನರಸಿಂರಾವ್ ಅವರು ಜೆ. ಕೆ. ಜೈನರೊಡನೆ ಬಂದು ಜ್ಞಾನಜ್ಯೋತಿಯವನ್ನು ಶಾಶ್ವತವಾಗಿ ಸ್ಥಾಪಿಸಿದರು. ಸಾರ್ವಜನಿಕ ನಿರ್ಮಾಣ ವಿಭಾಗದ ಅಧೀಕ್ಷಕ ಅಭಿಯಂತರರಾಗಿದ್ದ ಶ್ರೀ ಭ್ರಜಭೂಷಣ ಕುಮಾರ ಹಾಗೂ ಡೆಪ್ಯೂಟಿ ಅಭಿಯಂತಕರಾಗಿದ್ದ ಶ್ರೀ ಎಮ್ ಖರೇಯವರು ತಮ್ಮ ಆಡಳಿತಾವಧಿ ಕಾಲದಲ್ಲೇ 84 ಅಡಿ ಎತ್ತರದ ಸುಮೇರು ಪರ್ವತಕ್ಕೆ ಲೋಹದ ಪೈಪುಗಳಿಂದ ಮೆಟ್ಟಿಲುಗಳನ್ನು ನಿರ್ಮಿಸಿಕೊಟ್ಟರು. ಇವೆಲ್ಲದರ ರಕ್ಷಣೆಗೆ ಪೊಲೀಸ ಮತ್ತು ಹೋಂಗಾರ್ಡಗಳ ಸಹಯೋಗವಂತು ಪ್ರಶಸಂಸನೀಯವಾದರು ಧಾರ್ಮಿಕಸಂಸ್ಥಾನದ ಸ್ವಯಂಸೇವಕರ ಸೇವೆಯಂತು ಅಭಿನಂದನಾರ್ಹವಾಗಿತ್ತು. ಇದು ಉತ್ತರ ಭಾರತದಲ್ಲೇ ಈ ಶತಮಾನದಲ್ಲಿ ನಡೆದ ಅಭೂತಪೂರ್ವ ಕಾರ್ಯವಾಗಿತ್ತು. ಗುಲಾಬಿ ಹೂವಿಗೆ ಮನಸೋಲುವ ಜನ ಅದರ ಮುಳ್ಳಿಗೆ ಗಮನ ಕೊಡದೆ ಇರುವಂತೆ ಈ ಪ್ರತಿಷ್ಠೆ ವಿಶೇಷತೆಯನ್ನು ಸಹಿಸದ ಜನರು ಈ ಕಾರ್ಯಕ್ಕೆ ವಿಘ್ನವನ್ನು ತರಲು ಪ್ರಯತ್ನಿಸಿದ ಪ್ರಸಂಗಗಳು ನಡೆದರೂ ಈ ಮಹಾನ್‌ಕಾರ್ಯವನ್ನು ಯಾರೂ ನಿಲ್ಲಿಸಲು ಆಗಲಿಲ್ಲ.

೮೪

ತ್ರಿಮೂರ್ತಿಗಳ ಸ್ಥಾಪನೆ

ತ್ರಿಮೂರ್ತಿಭವನದಲ್ಲಿ ವೇದಿಕೆಯ ಮೇಲೆ ಕಮಲದ ಪೀಠವನ್ನು ಸಿದ್ಧಗೊಳಿಸಿ 1985ನೇ ಜೂನ್ 20ರಂದು ಆಷಾಢ ಶುಕ್ಲ ದ್ವಿತೀಯ ದಿನದಂದು ಮಧ್ಯದ ಕಮಲದಲ್ಲಿ ಪ್ರಾತಃ ಕಾಲ 11-55ಕ್ಕೆ ಭ. ವೃಷಭ ದೇವರ ಮೂರ್ತಿಯನ್ನು 1 ಗಂಟೆ 7 ನಿಮಿಷಕ್ಕೆ ಬಲಗಡೆಯ ಕಮಲದಲ್ಲಿ ಭರತೇಶ್ವರ ಮೂರ್ತಿಯನ್ನು ಸ್ಥಾಪಿಸಲಾಯಿತು. ಎಡಗಡೆಯ ಕಮಲದ ರಚನೆ ಪೂರ್ಣಗೊಂಡಿಲ್ಲವಾದ್ದರಿಂದ ಮುಂದೆ ಆಗಷ್ಟ್ 11ರಂದು ಬೆಳಿಗ್ಗೆ 7-45ಕ್ಕೆ ಬಾಹುಬಲಿಯ ಮೂರ್ತಿಯನ್ನು ಸ್ಥಾಪಿಸಲಾಯಿತು. ಈಗ ವೇದಿಕೆಗೆ ತೋರಣದ್ವಾರ ಮಟ್ಟಿಲುಗಳ ಕಾರ್ಯವು ಮುಗಿದಿದೆ.

ಇಂದ್ರಧ್ವಜ ಆರಾಧನೆ

ಜೂನ್ 24ರಿಂದ ಜುಲೈ 3ರವರೆಗೆ ತ್ರಿಮೂರ್ತಿಮಂದಿರದಲ್ಲಿ ಇಂದ್ರಧ್ವಜದ ಮೂರು ಮಂಡಲ ಪೂಜೆಯನ್ನು ಕೈಗೊಳ್ಳಲಾಯಿತು. ಮೇರಠನ ಅಮರಚಂದ ಜೈನ, ಟಿಕೈತನಗರದ ಪ್ರದ್ಯುಮ್ನಕುಮಾರ ಬಹರಾಇಚದ ಸುಖಾನಂದರು ವಿಧಾನವನ್ನು ನಡೆಸಿದರು. ಈ ಮಧ್ಯೆ ನನಗೆ ಕುರುಎದ್ದು ಅದು ಹಣ್ಣಾಗಿ ಕುಳಿತುಕೊಳ್ಳಲು ಆಗುತ್ತಲೇ ಇರಲಿಲ್ಲಿ ಹೀಗಾಗಿ ಮಲಗಿಯೇ ಆರಾಧನೆಯನ್ನು ನೋಡುವಂತಾಯಿತು. ವೇದನಾಜನ್ಯ ಆರ್ತಧ್ಯಾನವನ್ನು ಮೆಟ್ಟಿ ಪೂಜೆಯಲ್ಲಿ ಲೀನಳಾಗಲು ಬಹಳ ಪುರುಷಾರ್ಥವನ್ನು ಮಾಡಬೇಕಾಯಿತು. ಪೂಜೆಯ ಜಯಮಾಲೆಗಳನ್ನು ಕೇಳುತ್ತಾ ನೋವನ್ನು ಮೆಟ್ಟಿ ನಿಂತೆ ಆದರೆ ಜನಗಳಿಗೆ ನಾನು ಮಂದಿರದಲ್ಲಿ ಉಪಸ್ಥಿತಿ ಇಲ್ಲದ್ದು ಬಹಳ ಕೊರತೆ ಎನ್ನಿಸಿತು.

ಚಾತುರ್ಮಾಸ ಸ್ಥಾಪನೆ

ಜೂನ್ ಒಂದರಂದು ಆಷಾಢದ ಚತುರ್ದಶಿಯಂದು ಚಾತುರ್ಮಾಸದ ವಿಧಿವಿಧಾನವನ್ನು ಮಲಗಿಯೆ ಪೂರೈಯಿಸುವಂತಾಗಿದ್ದು ಶ್ರಾವಕರ ಕಣ್ಣಲ್ಲಿ ನೀರು ಬರಿಸಿತು.

ಜಂಬೂದ್ವೀಪ ವಿಧಾನ

ನಾನು ಆಗಷ್ಟ 1ರಿಂದ ಜಂಬೂದ್ವೀಪ ವಿಧಾನವನ್ನು ರಚಿಸಲು ಪ್ರಾರಂಭಿಸಿದೆ ಕೆಲವು ಪೂಜೆಗಳು ಇನ್ನು ಉಳಿದಿತ್ತು ಆದರೆ ನನಗೆ ಜ್ವರ ಬರಲು ತೊಡಗಿತು. ಆದರೆ ಅಸ್ವಸ್ಥತೆಯಲ್ಲಿಯು ರಚನಾಕಾರ್ಯ ಬಿಡಲಿಲ್ಲ.

ವೈರಸ ಜ್ವರವು ಸುಮಾರು ಒಂದು ತಿಂಗಳವರೆಗೂ ನನ್ನನ್ನು ಕಾಡಿತು. ಇದಕ್ಕೆ ಮಾಡಿದ ಪಥ್ಯದಿಂದಾಗಿ 'ಲಿವರ್' ಬಲಹೀನವಾಗಿ ಆಹಾರ ತೆಗೆದುಕೊಳ್ಳುತ್ತಲೆ ವಾಂತಿಯಾಗತೊಡಗಿತು. ಹೊಟ್ಟೆಗೆ ಹನಿ ನೀರು ಸೇರದಂತಾಯಿತು. ಹೊಟ್ಟೆಯಲ್ಲಿ ಭಯಂಕರ ನೋವು ಉಂಟಾಗಿ ಅತಿಸಾರಕ್ಕೆ ತಿರುಗಿತು. ತಾರಪಿನ ಎಣ್ಣೆಯನ್ನು ನೀರಿಗೆ ಹಾಕಿ ಹೊಟ್ಟೆಗೆ ಶಾಕ ಕೊಡತೊಡಗಿದರು ಈ ಎಲ್ಲ ಚಿಕಿತ್ಸೆಯಿಂದ ನನ್ನ ಸ್ಥಿತಿ ತುಂಬ ಅಪಾಯದ ಹಂತವನ್ನು ಮುಟ್ಟಿತು. ಉಳಿಯುವ ಆಶೆಯೇ ಕಮರತೊಡಗಿತು 24 ಗಂಟೆಗಳ ಅಖಂಡವಾಗಿ ಣಮೋಕಾರಮಂತ್ರ ಇಂದ್ರ ಧ್ವಜದ ಜಯಮಾಲೆ, ಭಕ್ತಾಮರ ಸ್ತೋತ್ರ, ಶಾಂತಿಭಕ್ತಿ ಹನ್ನೆರಡು ಭಾವನೆಗಳ ಪಠನೆ ನಡೆಯತೊಡಗಿತು.

ಆರ್ಯಿಕೆ ಶಿವಮತಿ ಬ್ರ ಮಾಧುರಿ ಬ್ರ. ಬೀನಾ ಮೋತಿಚಂದ ರವೀಂದ್ರರೆಲ್ಲರು ವೈಯ್ಯಾ ವೃತ್ತಿಯಲ್ಲೇ ತೊಡಗಿಕೊಂಡಿದ್ದರು. ಹಾಗೇ ಪಂ. ಸುಧರ್ಮಚಂದ ನರೇಶಕುಮಾರ, ಬ್ರ. ಸುಭಾಷಚಂದ ಕುಮುದಿನಿ ಬ್ರ. ಶ್ಯಾಮ ಬಾಯಿಯವರು ನನ್ನ ಸೇವೆಯಲ್ಲೇ ನಿರತರಾದರು. ಇವರೆಲ್ಲರ ವೈಯ್ಯಾವೃತ್ತಿ ಅನವರತ ಮಂತ್ರ ಪಠಣ, ಸ್ವಾಧ್ಯಾಯವನ್ನು ಕೇಳುತ್ತಲೇ ನನ್ನ ಅಸಾತಾ ವೇದನೆಯ ತೀವ್ರ ಸ್ವರೂಪದಿಂದಲೂ ನಾನು ಗೆದ್ದು ಬಂದೆ.

ಇಂದೂರ, ಕಟನೀ, ಮೇರಠ ದೆಹಲಿಯಿಂದ ಐದು ಜನ ವೈದ್ಯರು ಬಂದು ಚರ್ಚೆಮಾಡಿದರು ರೋಗದ ಬಗ್ಗೆ ತಿಳಿಯದೆ, ಔಷಧಿಯಿಂದ ಗುಣಪಡಿಸಲಾರದಾದರು ನವೆಂಬರ್ 19ರಂದು ರವೀಂದ್ರ ಮತ್ತು ಮೋತಿಚಂದರು ಸೇರಿ ಚರ್ಚೆಮಾಡಿ ಯಾವುದಾದರು ವಿಶೇಷ ಡ್ಯಾಕ್ಟರಗೆ ತೋರಿಸಿ ಕಾಯಿಲೆ ಬಗ್ಗೆ ತಿಳಿಯಬೇಕೆಂದು ನಿರ್ಧರಿಸಿ ಮೇರಠನಿಂದ ಡಾಕ್ಟರ ಅಗ್ರವಾಲರನ್ನ ಕರೆದು ತಂದರು. ಅವರು ನೋಡುತ್ತಲೇ ಇದು ಜಾಂಡೀಸ್ ಎಂದರು. ಆನಂತರ ಮೂತ್ರ ಪರೀಕ್ಷೆಯು ಆಯಿತು. ಎಲ್ಲರು ಇದು ಕಾಮಾಲೆ ಇರಲಾರದು ಏಕೆಂದರೆ ಉಗುರುಗಳಲ್ಲಿ

ಹಳದಿ ಬಣ್ಣವಿಲ್ಲವೆಂದು ವಾದಿಸಿದರು. ಮೂತ್ರ ಪರೀಕ್ಷೆಯ ನಂತರ ಡಾಕ್ಟರ ಇದು 'ಕಾಮಾಲೆ' ಎಂದು ಧೃಡಪಡಿಸಿದರು ಆಗ ಮಾಧುರಿ ದಯಮಾಡಿ ನೀವೆಲ್ಲ ಸುಮ್ಮನಿರಿ ನಾನು ಔಷಧಿ ಕೊಡುತ್ತೇನೆ ಎಂದಳು.

ಏಕೆಂದರೆ ಮೂರುವರ್ಷದ ಹಿಂದೆ ರತ್ನಮತಿ ಮಾತಾಜಿಯವರಿಗೆ ಕಾಮಾಲೆ ಆಗಿದ್ದಾಗ 95 ವರ್ಷದ ವೈದ್ಯ ಅತರಸೇನ ಜೈನರು 'ಯುನಾನಿ' ವೈದ್ಯಪದ್ಧತಿಯಿಂದ ಕಾಸನೀಯಬೀಜ ಗಿಡಮೂಲಿಕೆ ಸೌಂಪು ಮೊದಲಾದವುಗಳಿಂದ ಕಷಾಯವನ್ನು ಮಾಡಿದ್ದರಿಂದಲೇ ಅವರಿಗೆ ಗುಣಮುಖವಾಯಿತು ಅವರಿಗೆ ಕೊನೆಯವರೆಗೂ ಅದೇ ಕಷಾಯವನ್ನು ಕೊಡಲಾಗುತ್ತಿತ್ತು ಈ ಔಷಧ ಸರಿ ಎಂದು ಒಪ್ಪಿಕೊಂಡರು. ಡಾಕ್ಟರ ಅಗ್ರವಾಲರು ದೃಢತೆಯಿಂದ ಈ ಮಾತಾಜಿಯನ್ನು ಎರಡು ಮೂರು ದಿನಗಳಿಗಿಂತ ಹೆಚ್ಚು ಉಳಿಸಿಕೊಳ್ಳಲಾರರೆಂದರು. ಆದ್ದರಿಂದ ಇವರನ್ನು ನಮಗೆ ಒಪ್ಪಿಸಿ ನಾವು ಗ್ಲೂಕೋಸ್ ಹಾಕಿ ಉಳಿಸಲು ಪ್ರಯತ್ನಿಸುತ್ತೇವೆ ಎಂದರು ಡಾಕ್ಟರರ ಒತ್ತಾಯ ಹೆಚ್ಚು ಆದಂತೆ ರವೀಂದ್ರ ಮತ್ತು ಮೋತಿಚಂದರು ಗ್ಲೂಕೋಸ ಹಾಕುವುದೆಲ್ಲ ಸಾಧ್ಯವಿಲ್ಲದ ಮಾತು ಈ ವಿಷಯ ಬಿಟ್ಟು ಬೇರೆ ಉಪಾಯ ಮಾಡಿರೆಂದು ಕೇಳಿಕೊಂಡರು. ಕೊನೆಗೆ ಡಾಕ್ಟರ ಹೋಗಲಿ ½ ಗಂಟೆಗೊಮ್ಮೆಯಾದರೂ ಚಮಚದಲ್ಲಿ 'ಕಬ್ಬಿನರಸ' ಕುಡಿಸುತ್ತಾ ಬನ್ನಿರೆಂದು ಹೇಳಿದರು ಈ ಉಪಾಯವನ್ನು ತಳ್ಳಿ ಹಾಕಿದರೆ ಉಳಿಸಿಕೊಳ್ಳುವ ಅವಕಾಶವೇ ಇಲ್ಲವೆಂದರು.

ರವೀಂದ್ರ ಮತ್ತು ಮೋತಿ ಚಂದರು ಕುಳಿತು ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದರು ಮಾತಾಜೀ ಆಹಾರ ತೆಗೆದುಕೊಳ್ಳುವುದು ಒಂದೇ ಸಲ ಅದು ತಕ್ಷಣವೇ ವಾಂತಿಯಾಗಿ ಹೋಗುತ್ತಿದೆ. ಡಾಕ್ಟರ ಅರ್ಧಗಂಟೆಗೊಮ್ಮೆ ಕೊಡಲು ಹೇಳುತ್ತಿದ್ದಾರೆ ಏನು ಮಾಡುವುದು. ಮೂಲಾಒಚಾರದಲ್ಲಿ ಆಹಾರದ ಅವಧಿಯನ್ನು ಚಾಸ್ತಿ ಎಂದರೆ 2¼ ಗಂಟೆ ಎಂದು ಹೇಳಿದೆ. ಆದ್ದರಿಂದ ಮಾತಾಜೀಯವರನ್ನು ಚೌಕದಲ್ಲೇ ನಿಲ್ಲಿಸಿಕೊಂಡು ಇದೇ ಅವಧಿಯಲ್ಲಿ ಮತ್ತೆ ಮತ್ತೆ ಕಷಾಯವನ್ನು ಕುಡಿಸುವ ಪ್ರಯತ್ನ ಮಾಡಲು ನಿರ್ಧರಿಸಿದರು.

ಇದೇ ವಿಷಯ ಕುರಿತು ಡಾಕ್ಟರ್‌ರಲ್ಲಿಯು ಚರ್ಚೆಮಾಡಿ ನಾಳೆಯಿಂದಲೆ ಪ್ರಯೋಗಮಾಡಲು ನಿರ್ಧರಿಸಿಯೇ ಬಿಟ್ಟರು ನನ್ನನ್ನು ಒಂದು ಹಲಗೆಯ ಮೇಲೆ ಮಲಗಿಸಿಯೇ ಆಹಾರದ ಚೌಕಕ್ಕೆ ಕರೆದೊಯ್ದು ತಡೆದು ವಿಧಿಯಂತೆ ಕುಳ್ಳಿರಿಸಿ ನವಧಾ ಭಕ್ತಿಯ ನಂತರ ಮಾಧುರಿ, ರವೀಂದ್ರ ಮೋತಿಚಂದರು ಶಾಂತಿಮಂತ್ರ ಹೇಳತೊಡಗಿದರು. ಮೂರು ಸಲ ಶಾಂತಿಮಂತ್ರ ಹೇಳಿ ಒಂದುಚಿಕ್ಕ ಬಟ್ಟಲಿನಲ್ಲಿ ನೀರನ್ನುನನ್ನಬೊಗಸೆಗೆ ಹಾಕಿದರು. ಇದನ್ನು ತೆಗೆದುಕೊಂಡ ನಂತರ ಮತ್ತೆ ಶಾಂತಿಮಂತ್ರದ ಪಠಣೆ ನಂತರ ಚಿಕ್ಕ ಬಟ್ಟಲಿನಲ್ಲಿ ಕಷಾಯ ಮತ್ತೆ ಶಾಂತಿಮಂತ್ರ ಮತ್ತೆ ಹಾಲು ಮತ್ತೆ ಶಾಂತಿ ಮಂತ್ರ ಹೀಗೆ ಹೇಳಿ ಹೇಳಿ ಸ್ವಲ್ಪ ಸ್ವಲ್ಪವೇ ಹೊಟ್ಟೆಗೆ ಕುಡಿಸತೊಡಗಿದರು. ಮೊದಲದಿನ ವಾಂತಿ ಆಯಿತು ಆದರೆ ಸ್ವಲ್ಪ ಆಹಾರ ಹೊಟ್ಟೆ ಸೇರಿತ್ತು. ಹೀಗೆ ಪರಿಚಾರಿಕೆ ನಡೆಯುತ್ತಲೇ ಸ್ವಲ್ಪ ಸ್ವಲ್ಪ ಆಹಾರ ಹೊಟ್ಟೆಯಲ್ಲಿ ನಿಲ್ಲುತ್ತಾ ವಾಂತಿ ಕ್ರಮೇಣ ನಿಂತಿತು. ಆರೋಗ್ಯ ಸುಧಾರಿಸತೊಡಗಿ ಎಲ್ಲರು ನೆಮ್ಮದಿಯ ಉಸಿರು ಬಿಡುವಂತಾಯಿತು.

ಏಳು ದಿನಗಳ ಬಳಿಕ ಮತ್ತೆ ವೈದ್ಯರನ್ನು ಕರೆತಂದು ತೋರಿಸಿದಾಗ ವೈದ್ಯರಿಗೆ ಆಶ್ಚರ್ಯವೋ ಆಶ್ಚರ್ಯ ಅರೇ ನೀವೆಲ್ಲರೂ ಜಾದೂವನ್ನು ಮಾಡಿದ್ದೀರ ನಾರುಬೇರಿನ ಕಷಾಯದಿಂದಲೇ ಮಾತಾಜಿಯನ್ನು ಉಳಿಸಿಕೊಂಡು ಬಿಟ್ಟಿರಲ್ಲ ಎಂದವರೇ ಇವೆಲ್ಲವು ಔಷಧಿಯ ಪರಿಣಾಮಕ್ಕಿಂತ ಮಾತಾಜಿಯವರ ತಪಶ್ಚರ್ಯ ಮತ್ತು ಸಾಧನೆಯ ಪರಿಣಾಮದಿಂದಲೇ ಈ ರೋಗದಿಂದ ಮುಕ್ತರಾದರು ಎಂದು ಹೃದಯಪೂರ್ವಕವಾಗಿ ನಿವೇದಿಸಿದರು.

ಇಲ್ಲಿ ನಾನು ಹೇಳ ಬಯಸುವುದೇನೆಂದರೆ ಈಗಿನ ಕಾಲದಲ್ಲಿ ಶ್ರಾವಕರು ಮುನಿಗಳ ಆಚಾರ ಗ್ರಂಥವಾದ ಮೂಲಾಚಾರವನ್ನು ಓದಿ ಬರುವ ಮುನಿಗಳ ಅವಗುಣಗಳನ್ನು ಕಂಡು ಹಿಡಿದು ಅವುಗಳ ಬಗ್ಗೆ ಟೀಕೆ-ಟಿಪ್ಪಣಿಯನ್ನು ಮಾಡುವುದೇ ಸ್ವಾಧ್ಯಾಯವೆಂದು ತಿಳಿದು ಶಾಸ್ತ್ರವನ್ನೆ ಶಸ್ತ್ರ ವನ್ನಾಗಿ ಮಾಡಿಕೊಂಡಿದ್ದಾರೆ. ಶಾಸ್ತ್ರವನ್ನು ಗುರುಮುಖದಲ್ಲಿ ಕೇಳಬೇಕು ನಾನು ಕೆಲವು ಶಿಷ್ಯರಿಗೆ ಈ ಗ್ರಂಥವನ್ನು ಪಾಠ ಮಾಡಿದ್ದೇನೆ ಮುನಿಗಳ ಮೂಲಗುಣದಲ್ಲಿ ಏಕಭುಕ್ತವು ಒಂದು ಗುಣ ಇದರ ಲಕ್ಷಣ.

ಉದಯತ್ಥಮಣೇ ಕಾಲೇ ಣಾಲಿತಿಯವಜ್ಜಿಯಮ್ಮಿ..... ಏಕಮ್ಮಿ ದುಆ ತಿಏ ವಾ ಮುಹುತ್ತಕಾಲೇಯಭತ್ತಂ ಭು[1]

ಸೂರ್ಯೋದಯ ಮತ್ತು ಅಸ್ತದ ನಡುವಿನ ಮೂರು ಮೂರು ಗಂಟೆಗಳ ನಡುವಿನ ಮಧ್ಯಕಾಲದಲ್ಲಿ ಒಂದು ಎರಡು ಅಥವ ಮೂರನೇ ಮುಹೂರ್ತದ ಕಾಲದಲ್ಲಿ ಒಮ್ಮೆ ಮಾತ್ರ (ಮಾಡುವ) ಊಟ ಮಾಡುವುದೇ ಏಕ ಭಕ್ತ ಎಂಬ ಮೂಲಗುಣ.

ಒಂದು ಮುಹೂರ್ತವೆಂದರೆ 48 ನಿಮಿಷವಿದೆ. ಮೂರು ಮುಹೂರ್ತವೆಂದರೆ 48+48+48-144 ನಿಮಿಷವಾಗುತ್ತದೆ ಒಂದು ಗಂಟೆಗೆ 60 ನಿಮಿಷವಿದೆ. 144-60=2 ಗಂಟೆ 24 ನಿಮಿಷ ಅಂದರೆ ಮುನಿಗಳ ಆಹಾರದ ಸಮಯ ಹೆಚ್ಚೆಂದರೆ 2ಗಂಟೆ 24ನಿಮಿಷಗಳಾಗಿವೆ.

ರವೀಂದ್ರಕುಮಾರನು ಮೂಲಾಚಾರವನ್ನು ಅಮೂಲಾಗ್ರವಾಗಿ ಅಧ್ಯಯನಮಾಡಿ ಅದರ ಸದುಪಯೋಗದಿಂದಲೇ ನನಗೆ ಜೀವದಾನ ಮಾಡಿದನೆಂದರೆ ತಪ್ಪಾಗಲಾರದು.

ನಿಧಾನವಾಗಿ ಈ ಕಷಾಯದಿಂದ ಚಳಿಗಾಲದಲ್ಲಿ ವಮನವಾಗುತ್ತಿತ್ತು. ಹಾಗೇ ಅತಿಸಾರವು ಹಿಡಿತಕ್ಕೆ ಬರಲಿಲ್ಲ ಹಲವಾರು ವೈದ್ಯರು ಈ ಕಷಾಯವನ್ನು ಅದಲು ಬದಲು ಮಾಡಿ ನೋಡಿದರು. ಮೇರಠನಿಂದ ಸೈಪುದ್ದೀನ್ ಎಂಬ ವೈದ್ಯರನ್ನು ಕರೆತರಲಾಯಿತು. ನನಗೆ ಮೊದಲೇ ಆಮಶಂಕೆಯ ವ್ಯಾಧಿಗೆ ಪಥ್ಯವಿತ್ತು ಈಗ ಅದನ್ನೆ ಮುಂದುವರಿಸಲು ಸಲಹೆ ಇತ್ತರು. 1985ರಿಂದಲೂ ಅದೇ ಕಷಾಯವನ್ನೇ ಕೊಡಲಾಗುತ್ತಿತ್ತು. ನನ್ನ ಆರೋಗ್ಯ ಸಾಮಾನ್ಯ ಸ್ಥಿತಿಗೆ ಬಂದಿತು.

ಕಾಮಾಲೆಯು ಸ್ವಲ್ಪ ಪ್ರಮಾಣದಲ್ಲಿ ಇದ್ದುದರಿಂದ ಜ್ವರ ಬರುತ್ತಲೆ ಇತ್ತು. ವೈಶಾಖ ಮಾಸದ ಅಂದರೆ 1986ರ ಏಪ್ರಿಲ್ ತನಕ ಸತಾಯಿಸುತ್ತಲೇ ಇತ್ತು ಇದರಿಂದಾಗಿ ಹೆಚ್ಚು ಹೊತ್ತು ಕುಳಿತುಕೊಳ್ಳುವುದಾಗಲಿ, ಬರೆಯುವುದಾಗಲಿ ಮಾತಾಡುವುದಾಗಲಿ ಸಾಧ್ಯವಾಗುತ್ತಿರಲಿಲ್ಲ ಸ್ವಲ್ಪ ಶ್ರಮವಾದರು ಹೆಚ್ಚು ವಿಶ್ರಾಂತಿ ಪಡೆಯುವ ಸ್ಥಿತಿಗೆ ಬಂದಿದ್ದೆ.

ಇಂದ್ರಧ್ವಜ ಮಹಾಮಂಡಲ ವಿಧಾನ

1985ನೆಯ ಅಕ್ಟೋಬರ 18ರಿಂದ 27ರ ವರೆಗೆ ಮೇರಠನ ಅಮರಚಂದ ಹೋಂಬ್ರೆಡ್‌ನವರು ತ್ರಿಮೂರ್ತಿ ಭವನದಲ್ಲಿ ಇಂದ್ರಧ್ವಜ ಆರಾಧನೆಯನ್ನು ಏರ್ಪಡಿಸಿದ್ದರು. ಪಂ. ಶ್ರೀ ಶಿಖಿರಚಂದರೇ ಪ್ರತಿಷ್ಠಾಚಾರ್ಯರಾಗಿದ್ದರು ಈ ಆರಾಧನೆಗೂ ಭಾಗವಹಿಸಲು ನಾನು ನಿಶ್ಶಕ್ತಳಾಗಿದ್ದೆ ಕೊನೆಯದಿನ ಸ್ವಲ್ಪ ಜ್ವರ ಕಡಿಮೆ ಇದ್ದುದ್ದರಿಂದ ಸ್ವಲ್ಪ ಹೊತ್ತು ಕುಳಿತಿದ್ದೆ.

---

1. ಮೂಲಾಚಾರ. ಅ. ೧

2. ರಾಷ್ಟ್ರಪತಿಗಳಿಗೆ ಚಿಕಿತ್ಸೆಕೊಡಲು ನೇಮಕವಾಗಿರುವರು.

ಸ್ವರ್ಣಜಯಂತಿ ಮಹೋತ್ಸವ

ಭಕ್ತರು ಭಕ್ತಿಯ ಪರವಶತೆಯಿಂದ ಅನಾರೋಗ್ಯದ ನಡುವೆ ನನ್ನ ಸ್ವರ್ಣಜಯಂತಿಯ ಮಹೋತಸಿವವನ್ನು ಆಚರಿಸಲು ಸಿದ್ಧತೆಯನ್ನು ನಡೆಸಿದ್ದರು. ಅಕ್ಟೋಬರ್ 27ರಂದು ರಥಯಾತ್ರೆಯನ್ನು ನಡೆಸಿ ಸುಮೇರು ಪರ್ವತದ ಎಲ್ಲಾ ಜಿನಬಿಂಬಗಳಿಗೂ 1008 ಕಳಸಾಭಿಷೇಕ ಮಾಡಿಸಿದರು. ಅಮರಚಂದ್ರರು ಬಂದಿದ್ದ ಎಲ್ಲಾ ಯಾತ್ರಿಕರ ಊಟತಿಂಡಿಯ ವ್ಯವಸ್ಥೆಯನ್ನು ಮಾಡಿದ್ದರು. ಪೆಂಡಾಲಿನಲ್ಲಿ ನನ್ನ 52ನೆಯ ಜನ್ಮ ಜಯಂತಿಯ ಮಹೋತ್ಸವವನ್ನು ವೈಭವದಿಂದಲೇ ಆಚರಿಸಿದರು ಜೆ.ಕೆ. ಜೈನರವರು ದೆಹಲಿಯಿಂದ ಈ ಸಮಾರಂಭಕ್ಕಾಗಿಯೆ ಬಂದಿದ್ದರು. ಸಭೆಯಲ್ಲಿ ನನಗೆ ವಿನಯಾಂಜಲಿ ಅರ್ಪಿಸುತ್ತಾ ಜಂಬೂದ್ವೀಪ ಹಾಗೂ ಜ್ಞಾನಜ್ಯೋತಿಯ ಕೆಲಸದಲ್ಲಿ ನನ್ನ ಪಾತ್ರವನ್ನು ಸ್ಮರಿಸಿದರು, ಇದಲ್ಲದೆ ಊರಿನಿಂದ ನಶಿಯ ಮಾರ್ಗದವರೆಗೆ 52 ಬಾಗಿಲುಗನ್ನು ರಚನೆ ಮಾಡಿ 52 ಬಡ ಮಹಿಳೆಯರಿಗೆ ಟಿಕೈತನಗರದಮದನಲಾಲರು ಸೀರೆಗಳನ್ನು ದಾನಮಾಡಿ ಕಾರ್ಯಕ್ರಮಕ್ಕೆ ಮೆರುಗು ತಂದರು.

ನಾನು ಎಷ್ಟು ನಿಶ್ಯಕ್ತಳಾಗಿದ್ದೆ ಎಂದರೆ ಕಾರ್ಯಕ್ರಮದಲ್ಲೂ ಭಾಗವಹಿಸಲಾರಳಾಗಿದ್ದೆ ಕೊನೆಗೆ ಆಹ್ವಾನಿತ ಅತಿಥಿಗಳಾದ ಜೆ.ಕೆ. ಜೈನ ಪಂ. ಲಾಲಬಹದ್ದೂರ ಜೈನಶಾಸ್ತ್ರಿಗಳು'ರತ್ನತ್ರಯನಿಲಯ"ಕ್ಕೆ ಬಂದು ನನ್ನ ದರ್ಶನ ಪಡೆದರು. ಅವರ ಜೊತೆ ನಾನು ಮಾತನಾಡಲು ಅಶಕ್ತಳಾಗಿದ್ದನ್ನು ಕಂಡು ಅವರಿಗೆ ಬಹಳ ನೋವಾಯಿತು ಕಾರ್ಯಕ್ರಮದಲ್ಲೂ ಯಾರಿಗೂ ಆನಂದವೆನ್ನಿಸಲಿಲ್ಲ.

ಯುವ ಪರಿಷದನ ಅಧ್ಯಕ್ಷ

ಅಕ್ಟೋಬರ್ 13ರಂದು ಜಂಬೂದ್ವೀಪದಲ್ಲೇ ಅಖಿಲ ಭಾರತೀಯ ಯುವ ಪರಿಷತ್ತಿನ ಕೇಂದ್ರಿಯ ಕಾರ್ಯಕಾರಿಣೀ ಸಭೆ ನಡೆಯಿತು. ಎಲ್ಲರು ಸರ್ವಾನುಮತದಿಂದ ರವೀಂದ್ರಕುಮಾರನನ್ನೆ ಅಧ್ಯಕ್ಷನನ್ನಾಗಿ ಚುನಾಯಿಸಿದರು. ಇದಕ್ಕೆಂತ ಮೊದಲೇ ನನ್ನಲ್ಲಿ ಹಲವಾರು ಬಾರಿ ಬೇಡಿಕೆಯನ್ನು ಇಡುತ್ತಲೇ ಇದ್ದರು. ಮಾತಾಜೀ ರವೀಂದ್ರ ಕುಮಾರರಿಗೆ ಈ ಸಾಧನೆಯನ್ನು ಒಪ್ಪಿಕೊಳ್ಳಲು ತಾವು ದಯಮಾಡಿ ಅನುಮತಿಯನ್ನು ಕೊಡಬೇಕು ಎಂದು. ನನಗೂ ನಂಬಿಕೆ ಇತ್ತು ರವೀಂದ್ರ ಕುಮಾರನು ಜಂಬೂದ್ವೀಪದ ನಿರ್ಮಾಣದಲ್ಲಿ ನಿರ್ವಹಿಸಿದ ಕಾರ್ಯ ಬಾಹುಳ್ಯದ ಅರಿವಿತ್ತು. ಹೀಗಾಗಿ ಅನುಮತಿ ಕೊಟ್ಟೆ ಎಲ್ಲರಿಗೂ ಖುಷಿಯೋ ಖುಷಿ, ನಾನು ರವೀಂದ್ರನಿಗೆ ಆಶೀರ್ವದಿಸುತ್ತಾ ಯುವ ವರ್ಗವನ್ನು ಧರ್ಮದಲ್ಲಿ ತೊಡಗಿಸುವ ಎಲ್ಲಾ ಪ್ರಯತ್ನವನ್ನು ಮಾಡು ಸೃಜನಾತ್ಮಕ ಕಾರ್ಯಗಳಿಗೆ ನಿನ್ನ ಬುದ್ಧಿಯನ್ನು ಉಪಯೋಗಿಸು ವಿರೋಧಾತ್ಮಕ ಚಟುವಟಿಕೆಗಳನ್ನು ತಡೆಗಟ್ಟು ಧರ್ಮ, ಧರ್ಮಾತ್ಮ ಮತ್ತು ಧರ್ಮಾಯತನದ ರಕ್ಷಣೆಗಾಗಿ ಯಾವುದೇ ವಿರೋಧ ಬಂದರು ಹೆದರಬೇಡ ಹಿಂಜರಿಯಬೇಡವೆಂದು ಹೇಳಿದೆ. ಎಲ್ಲರು ನನ್ನ ಆರೋಗ್ಯ ಬೇಗ ಸುಧಾರಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿದರು.

ಇಂದ್ರಧ್ವಜ ವಿಧಾನ

ನನ್ನ ಅನಾರೋಗ್ಯದಲ್ಲಿಯು 1985ರ ನವೆಂಬರ್ 17ರಿಂದ 18ರ ವರೆಗೆ ಕಾರ್ತಿಕ ಅಷ್ಟಾಹ್ನಿಕ ಪರ್ವದಲ್ಲಿ ಟಿಕೈತನಗರದ ಮದನಲಾಲರು ತ್ರಿಮೂರ್ತಿ ಮಂದಿರದಲ್ಲಿ ಇಂದ್ರಧ್ವಜ ಆರಾಧನೆಯನ್ನು ಏರ್ಪಡಿಸಿದ್ದರು.

ನಾನು ಅಸ್ವಸ್ಥತೆಯಿಂದ ಆರಾಧನೆಯನ್ನು ಮಲಗಿಯೆ ನೋಡುತ್ತಿದ್ದೆ ಆರಾಧನೆಯ ಪೂಜೆ ಜಯಮಾಲೆಗಳೇ ನನಗೆ ಔಷಧಿಯಂತೆ ತೋರತೊಡಗಿದವು ಇದಕ್ಕೆಂತ ಮೊದಲು ನೋವಿನಿಂದ ಜರ್ಜರಿತಳಾಗಿದ್ದ ನಾನು ಬದುಕಿನ ಆಶೆಯನ್ನೆ ಕಳೆದುಕೊಂಡು ನಿಯಮ ಸಲ್ಲೇಖನವನ್ನೆ ತೆಗೆದುಕೊಂಡಿದ್ದೆ, ಹಾಗೇ ಮಾಧುರಿಗೂ ಹೇಳುತ್ತಿದ್ದೆ ನನ್ನ ಈ ಕಾಯಿಲೆಗಾಗಿ ನೀನು ಕಣ್ಣೀರು ಸುರಿಸಬಾರದು. ನಾನು ಹೇಗೆ ರತ್ನಮತಿ ಮಾತಾಜಿಯವರಿಗೆ ಚೆನ್ನಾಗಿ ಸಮಾಧಿಮರಣದ ವಾತಾವರಣವನ್ನು ಕಲ್ಪಿಸಿದ್ದೇನೊ ಹಾಗೇ ನೀನು ನನಗೆ ಧೈರ್ಯವಂತಳಾಗಿ ಪಾಠವನ್ನು ಹೇಳಿ ಪರಿಚರ್ಯೆಯನ್ನು ಮಾಡು ಎಂದು ಸಾಂತ್ವನ ಹೇಳುತ್ತಿದ್ದೆ. ಮಾಧುರಿ ಸಹ ಮಾತಾಜಿ ನನಗೆ ಧೈರ್ಯವಿದೆ ನಾನು ಮೋಹದಿಂದ ನಿಮಗೆ ಪ್ರತಿಕೂಲವಾಗಿ ನಡೆದುಕೊಳ್ಳುವುದಿಲ್ಲ ಎಂದು ಆಶ್ವಾಸನೆಯನ್ನುಕೊಟ್ಟಳು. 'ಕಾಮಾಲೆ' ಎಂದು ಗೊತ್ತಾದ ಮೇಲೆ ಅದಕ್ಕಾಗಿ ಔಷಧಿ ಮಾಡತೊಡಗಿದ ಮೇಲೆ ನನಗೆ ಸುಧಾರಣೆ ಕಾಣತೊಡಗಿತು. ಆರಾಧನೆಯು ಒಂದು ರೀತಿಯಲ್ಲಿ ಚೇತರಿಕೆಯನ್ನೇ ತಂದುಕೊಟ್ಟಿತು.

ಕುಂದ ಕುಂದ ದೇವರು ಹೇಳಿದ್ದಾರೆ

ಜಿನವಚನಮೌಷಧಮಿದಂ ವಿಷಯ ಸುಖ ವಿರೇಚ ನಮಮೃತಭೂತಂ ।
ಜನ್ಮಜರಾವ್ಯಾಧಿಹರಣಂ ಕ್ಷಯಕಾರಣಂ ಸರ್ವದುಃಖಾನಾಮ್ ॥

ಜಿನೇಂದ್ರರ ವಚನವು ಪರಮ ಔಷಧವು ವಿಷಯ ಸುಖಗಳನ್ನು ವಮನ ಮಾಡಿಸುವಲ್ಲಿ ಅಮೃತ ಸ್ವರೂಪವಾಗಿದೆ. ಜನ್ಮ ಮುಪ್ಪೆಂಬರೋಗವನ್ನು ನಷ್ಟಗೊಳಿಸುವಂತದ್ದು ಮತ್ತು ಎಲ್ಲಾ ದುಃಖವನ್ನು ನಾಶಗೊಳಿಸುವಂತದ್ದು ಎಂದು ಕುಂದ ಕುಂದರು ಹೇಳಿದ್ದಾರೆ.

ನಿಜ ಹೇಳಬೇಕೆಂದರೆ ಅಸಾತಾಕರ್ಮವನ್ನು ಮಂದಗೊಳಿಸಲು ಜಿನೇಂದ್ರ ದೇವರ ಭಕ್ತಿ, ಸ್ತುತಿ ಮತ್ತು ಮಂತ್ರಕ್ಕಿಂತ ಹಿರಿದಾದ ಉಪಾಯ ಬೇರೊಂದಿಲ್ಲ. ಇದಕ್ಕಾಗಿಯೇ ವಾದಿರಾಜ ಮಹಾಮುನಿಗಳು ಹೇಳಿದ್ದಾರೆ.

ಪ್ರಾಗೆವೇಹ ತ್ರಿದಿವಭವನಾದೇಷ್ಯತಾ ಭವ್ಯ ಪುಣ್ಯಾತ್ ।
ಪೃಥ್ವೀಚಕ್ರಂ ಕನಕಮಯತಾಂ ದೇವ ನಿನ್ಯೇ ತ್ವಯೀದಮ್ ॥
ಧ್ಯಾನದ್ವಾರಂ ಮಮ ರುಚಿಕರಂ ಸ್ವಾಂತಗೇಹಂ ಪ್ರವಿಷ್ಟಸ್ತ್ವಿಂ ।
ಚಿತ್ರಂ ಜಿನ ವಪುರಿದಂ ಯತ್ಸುವರ್ಣೀಕರೋಷಿ ॥

ಹೇ ನಾಥನೇ ಸ್ವರ್ಗದಿಂದ ಈ ಮಧ್ಯಮ ಲೋಕಕ್ಕೆ ಅವತರಿಸುವ ಆರು ತಿಂಗಳ ಮೊದಲೇ ಭವ್ಯರುಗಳ ಪುಣ್ಯದಿಂದ ಈ ಪೃಥ್ವಿಯೇ ಸ್ವರ್ಣಮಯಿ ಆಗುತ್ತದೆ. ಅಂದರೆ ಇಂದ್ರನ ಆಜ್ಞೆಯಿಂದ ಕುಬೇರನು ರತ್ನಗಳ ಸ್ವರ್ಣದ ಮಳೆ ಕರೆದು ಈ ಭೂಮಿಯನ್ನೆ ಸ್ವರ್ಣಮಯಿಯನ್ನಾಗಿ ಮಾಡುತ್ತಾ ಈ ಧ್ಯಾನರೂಪಿ ಮಾರ್ಗದಿಂದ ತಾವು ನಮ್ಮ ಮನವೆಂಬಮನೆಯ ಪ್ರವೇಶಿಸಿದ್ದೀರ ಪುನಃ ನನ್ನ ಶರೀರವನ್ನು ಒಂದು ವೇಳೆ ಸ್ವರ್ಣಮಯವನ್ನಾಗಿ ಮಾಡಿದರೆ ಇದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ಅಂದರೆ ನಮ್ಮ ಹೃದಯದಲ್ಲಿ ತಾವು ವಿರಾಜಮಾನರಾದರೆಂದರೆ ಈ ರುಗ್ಣ ಶರೀರವು ಸುವರ್ಣಮಯವಾಗಲಾರದೇನು ಇದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ಇಂತಹ ಪವಿತ್ರ ಭಾವನೆಯಿಂದಲೇ ನಾನು ಎಂತೆಂತಹ ತೀವ್ರತರದ ಅಸಾತಾಕರ್ಮೋದಯವನ್ನು ಜಯಿಸಿದ್ದೇನೆ ಇಂತಹ ಸಮಯದಲ್ಲೇ ನನಗೆ ಆಧ್ಯಾತ್ಮಿಕ ಸಮಯಸಾರದ ಗಾಥೆಯು ನೆನಪಾಗುತ್ತಿದೆ.

ಅಹಮಿಕ್ಕೋ ಖಲು ಸುದ್ಧೋ ದಂಸಣಣಾಣಮಇ ಓ ಸದಾರೂವೀ ।
ಣವಿ ಅತ್ಥಿ ಮಜ್ಝು ಕಿಂಚಿವಿ ಅಣ್ಣಂ ಪರಮಾಣುಮಿತ್ತಂ ಪಿ ॥

ನಾನು ಒಬ್ಬಂಟಿ, ನಿಶ್ಚಯನಯದಿಂದ ಶುದ್ಧನೂ, ದರ್ಶನ ಜ್ಞಾನಮಯನು ಮತ್ತು ಸದಾ ಅಮೂರ್ತಿಕನು ಆಗಿದ್ದೇನೆ. ಅಣುಮಾತ್ರವು ನನ್ನದಲ್ಲ. ಇದೇ ಭಾವದ ಪೂಜ್ಯಪಾದರ ಶ್ಲೋಕವು ನೆನಪಿಗೆ ಬಂದಿತು.

ನ ಮೇ ಮೃತ್ಯುಃ ಕುತೋ ಭೀತಿಃ ನಮೇ ವ್ಯಾಧಿಃ ಕುತೋ ವ್ಯಥಾ ।
ನಾಹಂ ಬಾಲೋ ನ ವೃದ್ಧೋಹಂ ನ ಯುವೈತಾನಿ ಪುದ್ಗಲೇ ॥

ನನಗೆ ಸಾವಿಲ್ಲ ಎಂದಮೇಲೆ ಯಾವುದರ ಭಯ, ರೋಗವಿಲ್ಲವೆಂದ ಮೇಲೆ ಯಾವುದರ ನೋವು ನಾನು ಹುಡಗನು ಅಲ್ಲ ಯುವಕನು ಅಲ್ಲ, ಮುದುಕನು ಅಲ್ಲ ಇವೆಲ್ಲ ಪುದ್ಗಲದ ಪರ್ಯಾಯ ಎಂಬುದಾಗಿ ಹೇಳಿದ್ದಾರೆ.

ಪರಮಾನಂದ ಸಂಯುಕ್ತಂ ನಿರ್ವಿಕಾರಾಂ ನಿರಾಮಯಂ ಮುಂತಾದ ಸಾಲುಗಳಿಂದ ಅಸಾತಾವೇದನೆಯನ್ನು ಸಹಿಸುವ ಶಕ್ತಿಯು ಬರುತ್ತದೆ. ಆದರೆ ಬಾಹ್ಯದಲ್ಲಿ ಗಿಡಮೂಲಿಕೆಯ ಕಷಾಯವು ರೋಗವನ್ನು ಹೋಗಲಾಡಿಸಲು ನಿಮಿತ್ತವಾಗಿದೆ ಎಂದು ತಿಳಿಯುತ್ತೇವೆ.

೮೫

ಲೇಖನದ ಕೆಲಸ ಪ್ರಾರಂಭ

ನನಗೆ ಸ್ವಲ್ಪ ಸಲ್ವವಾಗಿಯೇ ವ್ಯಾಧಿ ಗುಣಮುಖವಾಗುತ್ತಿದೆ ಎಂದು ಭಾಸವಾಗ ತೊಡಗಿತು ಆದರೂ ನಿಲ್ಲಲು ತ್ರಾಣವಿರಲಿಲ್ಲ ಇನ್ನು ನಡೆಯುವುದೆಲ್ಲಿ ನನ್ನನ್ನು ಆಹಾರಕ್ಕೂ ಹಲಗೆಯ ಮೇಲೆ ಮಲಗಿಸಿ ಕರೆದುಕೊಂಡು ಹೋಗಿ ಬರುತ್ತಿದ್ದರು ಸ್ವಲ್ಪ ಸಮಯ ಬಿಸಿಲಿಗೂ ಕರೆದುಕೊಂಡು ಹೋಗುತ್ತಿದ್ದರು. 1985ರ ಡಿಸಂಬರ್ 29ರಂದು ಬೆಳಗ್ಗೆ ಎದ್ದವಳೇ ಸಾಹಸದಿಂದ ½ ಗಂಟೆ ಕುಳಿತು ಬರವಣಿಗೆ ಮಾಡಿದೆ. ಆಗ ನನಗೆ ಇಂದು ಆತ್ಮಕ್ಕೆ ಆಹಾರ ದೊರೆಯಿತು ಎಂದು ಆನಂದವಾಯಿತು. ಅಂದರೆ ಬರೆಯುವುದು ಓದುವುದು ನನ್ನ ನಿತ್ಯ ಹವ್ಯಾಸವಾಗಿದ್ದರಿಂದ ಏನನ್ನಾದರು ಬರೆಯದೆ ಓದದೆ ಇದ್ದರೆ ನನಗೆ ದಿನವೆಲ್ಲ ಶೂನ್ಯವೆನ್ನಿಸುತ್ತಿತ್ತು. ಏನನ್ನೊ ಕಳೆದುಕೊಂಡಂತೆ ಭಾವವಾಗುತ್ತಿತ್ತು. ಸಮ್ಯಗ್‌ಜ್ಞಾನಕ್ಕೋಸ್ಕರ ಪಂಚಾಸ್ತಿಕಾಯದಿಂದ ದ್ರವ್ಯಾನುಯೋಗದ ಲೇಖನ ಸಿದ್ಧಪಡಿಸಿದೆ. ಮೂಲಾಚಾರದ ಆಧಾರದಿಂದ ಆರು ಆವಶ್ಯಕ ಕ್ರಿಯೆಗಳ ಆರು ಲೇಖನ ಸಿದ್ಧಪಡಿಸಿದೆ.

ಸಮ್ಯಗ್‌ಜ್ಞಾನ ಪತ್ರಿಕೆಯಲ್ಲಿ ಅಡಚಣೆ

ಸಮ್ಯಗ್‌ಜ್ಞಾನಪತ್ರಿಕೆಗೆ ನಾಲ್ಕು ಅನುಯೋಗ, ನಾರೀ ಜಗತ್ತು, ಬಾಲಜಗತ್ತು, ಪ್ರತಿಷ್ಠಾಕಾರ್ಯ ದಿಂದಾಗಿಯೂ ಬಿಸಿಲಿನಿಂದಲೂ, ಅನ್ಯ ನಿಮಿತ್ತದಿಂದಲೂ ಈ ಎಲ್ಲ ಲೇಖನದ ಕೆಲಸಗಳು ನಿಧಾನವಾಗಿ ಸೆಪ್ಟಂಬರನ ಸಂಚಿಕೆ ಹೇಗೊ ಪ್ರಕಟವಾಯಿತು. ಆದರೆ ಅಕ್ಟೋಬರ್ ಮತ್ತು ನವೆಂಬರ್ ಸಂಚಿಕೆಯಂತೂ ನಿಂತೇ ಹೋಯಿತು. ಇದರಿಂದಾಗಿ ಚಂದಾದಾರರಿಂದ ಪತ್ರಗಳು ಬರಲಾರಂಭಿಸಿತು. ಅಲ್ಲದೆ ರವೀಂದ್ರ ಮೋತಿಚಂದ ಮಾಧುರಿ ಎಲ್ಲರು ಹಗಲುರಾತ್ರಿ ನನ್ನ ಸೇವೆಯಲ್ಲೇ ನಿಂತಿದ್ದರಿಂದ ಲೇಖನ ಬರೆಯುವವರು ಯಾರು ಕೊನೆಗೆ ಇವರೆಲ್ಲ ಪತ್ರಿಕೆಯನ್ನು ನಿಲ್ಲಿಸುವ ಬಗ್ಗೆಯೇ ಚರ್ಚೆ ನಡೆಸುತ್ತಿದ್ದುದ್ದನ್ನು ಗಮನಿಸಿದ ನನಗೆ ಚಿಂತೆಯಾಗತೊಡಗಿತು. ಕೊನೆಗೆ ನಾನು ನೋಡಿ ಯಾವುದೂ ಫೈಲಿನಲ್ಲಿ ಐತಿಹಾಸಿಕ ಆರ್ಯಿಕೆಯರು ಎನ್ನುವ ಬಗ್ಗೆ ವಿಷಯ ಸಂಗ್ರಹಣೆಯು ಇದೆ ಅದನ್ನೆ ತೆಗೆದು ಮೂರುತಿಂಗಳ ವಿಶೇಷ ಸಂಚಿಕೆಯನ್ನು ಸಿದ್ಧಪಿಡಿಸಿ ಪ್ರಕಟಿಸಿ ಅಷ್ಟರಲ್ಲಿ ನಾನು ಚೇತರಿಸಿಕೊಂಡು ಮುಂದಿನ ಅನುಯೋಗಗಳ ಲೇಖನವನ್ನು ಸಿದ್ಧಪಡಿಸುತ್ತೇನೆ ಎಂದೆ.

ನನ್ನ ಮಾತಿನಂತೆ ಅಕ್ಟೋಬರ್ ನವೆಂಬರ್ ಡಿಸೆಂಬರ್ ಮೂರು ತಿಂಗಳನ್ನು ಸೇರಿಸಿ ಐತಿಹಾಸಿಕ ಆರ್ಯಿಕೆಯರು ಎನ್ನುವ ಹೆಸರಿನಲ್ಲಿ ವಿಶೇಷಾಂಕ ಪ್ರಕಟವಾಯಿತು. 1986ರ ಜನವರಿ ಸಂಚಿಕೆಗೆ ನಾನೇ ನಾಲ್ಕು ಅನುಯೋಗಗಳಿಗೂ ಲೇಖನವನ್ನು ಸಿದ್ಧಪಡಿಸಿ ನಾರೀಜಗತ್ ಕಾಲಂನ್ನು ಸಿದ್ಧಪಡಿಸಿದೆ. ಮಾಧುರಿಯನ್ನು ಹತ್ತಿರ ಕೂರಿಸಿಕೊಂಡು 'ಧನ್ಯಕುಮಾರ' ಕಥೆಯನ್ನೂ ಕೊಟ್ಟು 'ಬಾಲಜಗತ್' ಕಾಲಂಗೆ ಲೇಖನ ಸಿದ್ಧಗೊಳಿಸಿದರೆ ಅಂದಿನಿಂದ ಇಂದಿನವರೆಗೂ ಪತ್ರಿಕೆ ಯಾವುದೇ ತೊಂದರೆ ಇಲ್ಲದೆ ನಡೆದುಕೊಂಡು ಬರುತ್ತಿದೆ ಈಗ ನಾರಿಜಗತ್ತಿಗೆ ಲೇಖನವನ್ನು ಮಾಧುರಿಯೇ ಸಿದ್ಧಪಡಿಸುತ್ತಿದ್ದಾಳೆ.

ಇಲ್ಲಿಂದ 15 ವರ್ಷಗಳಿಂದಲೂ ನಾಲ್ಕು ಅನುಯೋಗ ನಾರಿಜಗತ್, ಬಾಲಜಗತ್ ಈ ಆರು ಸ್ಥಾಯಿ ಸ್ತಂಭಗಳು ನನ್ನ ಶಿಷ್ಯರಿಂದಲೇ ಮುಂದುವರಿಯುತ್ತಾ ಬರುತ್ತಿದೆ. ಕ್ಷುಲ್ಲಕ ಮೋತಿಸಾಗರ, ಬ್ರ. ರವೀಂದ್ರ ಕುಮಾರ್ ಬ್ರ. ಮಾಧುರಿ ಈ ಮೂರು ಶಿಷ್ಯರಿಗೂ ನನ್ನ ಮನೋಭಾವನೆಯನ್ನು ಅರಿತು ಅದರಂತೆ ಲೇಖನ ಸಿದ್ಧಪಡಿಸುವ ಸಾಮರ್ಥ್ಯವಿತ್ತು.[1] ನಾನು ಅಸ್ವಸ್ಥತೆಯಲ್ಲೂ ಬರವಣಿಗೆಯ ಕೆಲಸವನ್ನು ಮಾಡುವುದನ್ನು ಕಂಡು ವೈದ್ಯರಿಗೆ ಆಶ್ಚರ್ಯವೆನ್ನಿಸಿದರೂ ಶ್ರಮವಹಿಸಬಾರದೆಂದು ನಿರ್ಬಂಧವನ್ನು ಹೇರತೊಡಗಿದರು. ಆಗ ನಾನು ಈ ಕೆಲಸವೇ ನನಗೆ ಔಷಧಿಯಾಗಿದೆ ಸ್ವಲ್ಪವೇ ಕೆಲಸಮಾಡುತ್ತೇನೆ ಎಂದು ಆಶ್ವಾಸನೆ ಕೊಟ್ಟೆ.

ಪಂ. ಪೂಲ್ ಚಂದ್ ಶಾಸ್ತ್ರಿಗಳಿಂದ ಸ್ವಾದ್ಯಾಯ

ಪಂಡಿತ ಪೂಲ್‌ಚಂದ ಸಿದ್ಧಾಂತಚಾರ್ಯರು ದೊಡ್ಡ ಮಂದಿರದಲ್ಲೇ ಪತ್ನಿಸಮೇತ ಧರ್ಮಶಾಲೆಯಲ್ಲಿ ತಂಗಿದ್ದರು. ನನ್ನನ್ನು ನೋಡಲು ಕೆಲವು ಸಲ ಬಂದಿದ್ದರು. ಬಹಳ ಹೊತ್ತು ಕುಳಿತಿರುತ್ತಿದ್ದರು ಹಾಗೆ ಮಾತಾಜಿ ನಾನು ಯಾವ ರೀತಿ ತಮಗೆ ವೈಯ್ಯಾವೃತ್ತಿಯನ್ನು ಮಾಡಬಲ್ಲೆ ಎಂದು ಕೇಳಿದರು. ನಾನು ಹೆಚ್ಚು ಕುಳಿತು ಕೇಳುವ ಚರ್ಚೆಮಾಡುವ ಸಾಮರ್ಥ್ಯವೇ ಇಲ್ಲದಂತಾಗಿದ್ದರಿಂದ ನಾನೇ ಅವರ ಕೋರಿಕೆಯನ್ನು ತಳ್ಳುತ್ತಾ ಬಂದಿದ್ದೆ ಆದರೆ ಅವರ ಒತ್ತಾಯದಿಂದ ರವೀಂದ್ರನನ್ನು ಕರೆದು ಅವರು ಸ್ವಾಧ್ಯಾಯ ಮಾಡುವಾಗ ನೀನುಹೆಚ್ಚು ಚರ್ಚೆ ಮಾಡಬಾರದೆಂದು ನಿಬಂದನೆಯನ್ನು ವಿಧಿಸಿ ಅವರಿಗೆ ಸ್ವಾಧ್ಯಾಯ ಮಾಡಲು ಅನುವು ಮಾಡಿದೆ.

ರವೀಂದ್ರನು ನನ್ನ ಅಸ್ವಸ್ಥತೆ ಕಂಡು ಸಮ್ಮತಿಸಿದ ಪಂಡಿತರು 1986ರ ಜನವರಿ 29ರಂದು "ನಿಯಮಸಾರ ಪ್ರಾಭೃತ"ದ ಮೇಲೆ ನನ್ನಿಂದ ರಚಿತವಾಗಿದ್ದ "ಸ್ಯಾದ್ವಾದ ಚಂದ್ರಿಕೆ"ಯ ಟೀಕಾಗ್ರಂಥದಿಂದ ಪ್ರಾರಂಭ ಮಾಡಿದರು ನಾನು ಹುಲ್ಲಿನ ಮೇಲೆ ಮಲಗೇ ಕೇಳುತ್ತಿದ್ದೆ ಬಳಿಯಲ್ಲಿ ರವೀಂದ್ರ ಮತ್ತು ಮೋತಿಚಂದ ಇಬ್ಬರು ಕುಳಿತುಕೊಳ್ಳುತ್ತಿದ್ದರು. ಪ್ರಾರಂಭದ ದಿನಗಳಲ್ಲಿ ಹವಾಮಾನ ಅತ್ಯಂತ ವಿಪರೀತವಾಗಿತ್ತು. ಆದರೂ ಪಂಡಿತರು ಭಯಂಕರ ಚಳಿಯಲ್ಲೂ ದೊಡ್ಡ ಮಂದಿರದಿಂದ ನಡೆದೆ ಸರಿಯಾದ ಸಮಯಕ್ಕೆ ಬರುತ್ತಿದ್ದರು. ವಯಸ್ಸಾಗಿ ನಿಶ್ಯಕ್ತರಾಗಿದ್ದರೂ ಲೆಕ್ಕಿಸುತ್ತಿರಲಿಲ್ಲ. ರವೀಂದ್ರ ಹಲವಾರು ಸಲ ಪಂಡಿತರೆ ಬೆಳಿಗ್ಗೆ ಹೊತ್ತು ರಿಕ್ಷಾ ಕಳುಹಿಸುತ್ತೇನೆ ಎಂದು ಹೇಳಿದರು. ಒಪ್ಪಿಕೊಳ್ಳಲಿಲ್ಲ ನಡೆದೆ ಬರುತ್ತಿದ್ದರು ಬಹಳ ಸರಳವಾದ ವ್ಯಕ್ತಿ ಶಾಂತಿಪೂರ್ವಕವಾಗಿ ನನ್ನಿಂದಲೇ ರಚಿತವಾಗಿದ್ದ ಸಂಸ್ಕೃತ ಟೀಕೆಯನ್ನು ಓದಿ ಅರ್ಥ ಹೇಳುತ್ತಿದ್ದರು. ಇವರಿಂದ ಸ್ವಾಧ್ಯಾಯ ಕೇಳುವಾಗ ನನಗೆ ಎಂತಹ ಸರಳವ್ಯಕ್ತಿ, ಗುಣಗ್ರಾಹಿ ಮತ್ಸರ ರಹಿತರು ಎನ್ನಿಸುತ್ತಿತ್ತು. ಇವರ ಒಳ್ಳೆಯ ಸದ್‌ಭಾವನೆವುಳ್ಳವರು ಆಗಿದ್ದರು. ಮಾಧುರಿಗೆ ಯಾವಾಗಲು ಆಹಾರದಲ್ಲಿ ಇದನ್ನು ಕೊಡು ಅದನ್ನು ಕೊಡು, ಹಾಗೇ ತೈಲದಿಂದ ಮಾಲೀಸ ಮಾಡು ಎಂದು ಸಲಹೆಗಳನ್ನು ಕೊಡುತ್ತಿದ್ದರು.

---

1. ಈ ಪ್ರಕರಣವನ್ನು ಡಿಸೆಂಬರ್ 30, 1987 ರಲ್ಲೇ ಬರೆದಿದ್ದೇನೆ.

ಆದರೆ ಅವರು ಕಟ್ಟಾ ತೇರಹಪಂಥಿಗಳಾಗಿದ್ದರು ಆಧ್ಯಾತ್ಮಿಕ ವಿಷಯಗಳಲ್ಲಿ ನನ್ನ ಗುರುಪರಂಪರೆಗೆ ಅವರ ವಿಷಯ ಸಮರ್ಥನೆಗೂ ನನಗೆ ಸ್ವಲ್ಪ ವ್ಯತ್ಯಾಸಗಳು ಕಂಡು ಬರುತ್ತಿತ್ತು. ನಾವು ನಾಲ್ಕನೆಯ ಗುಣಸ್ಥಾನದಲ್ಲಿಯೇ ಶುದ್ಧಾತ್ಮನ ಅನುಭವವನ್ನು ಪರಿಗಣಿಸದೆ ಕೇವಲ ಶ್ರದ್ಧಾನ ಭಾವವನ್ನು ಮಾತ್ರ ಪರಿಗಣಿಸುತ್ತಿದ್ದೇವೆ. ಅನುಭವವು ನಿರ್ವಿಕಲ್ಪ ಧ್ಯಾನದಲ್ಲಿ ಏಳನೆಯ ಗುಣಸ್ಥಾನದಿಂದಲೇ ಪರಿಗಣಿಸಲ್ಪಡುತ್ತದೆ. ಇದನ್ನುಶುದ್ಧೋಪಯೋಗವೆಂದು ಕರೆಯುತ್ತೇವೆ ಆದರೆ ಪಂಡಿತರು ನಾಲ್ಕನೆಯ ಗುಣಸ್ಥಾನದಿಂದಲೇ ನಿರ್ವಿಕಲ್ಪ ಅಂಶವನ್ನು ಶುದ್ಧಾತ್ಮನ ಅನುಭವವನ್ನು ಪರಿಗಣಿಸುತ್ತಿದ್ದರು. ಇದರ ಮೇಲೆ ಅವರು ಹಠಾಗ್ರಹಿಗಳು, ಕದಾಗ್ರಹಿಗಳು ಆಗಿರಲಿಲ್ಲ. ಇದರಿಂದಾಗಿ ಹಲವಾರು ಸಲ ಈ ಟೀಕೆಯಲ್ಲಿ ಮಾತಾಜೀಯವರು ಪರಂಪರೆಯಂತೆ ಅಂದರೆ ಜಯಸೇನಾಚಾರ್ಯ ಕೃತ ಸಮಯಸಾರ ಟೀಕೆಯನ್ನು ಆಧಾರ ಇಟ್ಟುಕೊಂಡಿರುವುದರಿಂದ ಈ ಸಮರ್ಥನೆಯ ಒಂದು ರೀತಿ ತಪ್ಪಲ್ಲವೆಂದುಒಪ್ಪಿಕೊಳ್ಳುತ್ತಿದ್ದರು.

ಕೊನೆಗೆ ನಾವು ಇದೊಂದು ಎರಡನೆಯ ಪರಂಪರೆ ಎಂದು ಪರಿಗಣಿಸಿದ್ದೆವು 4ನೇಯ ಗುಣಸ್ಥಾನ ನಿರ್ವಿಕಲ್ಪ ಧ್ಯಾನದ ಅಂಶದಿಂದ ಆಗಮ ಸಮ್ಮತವಲ್ಲ ಇದೊಂದು ವರ್ತಮಾನದ ಮುಮುಕ್ಷು ಪಂಥವಾಗುತ್ತದೆ. ಇಲ್ಲಿ ಕಾನಜೀ ಪಂಥದ ವಿದ್ವಾಂಸರ ಪರಂಪರೆಯನ್ನುಸೂಚಿಸುತ್ತದೆ.

ಏನಾದರೂ ಇರಲಿ ಪಂಡಿತರು ಟೀಕೆಯನ್ನು ಸ್ವಾಧ್ಯಾಯ ಮಾಡುತ್ತಾ ಮಾಡುತ್ತಾ ನನ್ನನ್ನು ಪ್ರಶಂಸಿಸುತ್ತಲೆ ಇರುತ್ತಿದ್ದರು. ತೇರಹಪಂಥ -ಬೀಸ ಪಂಥದ ಅಮ್ನಾಯ ಭೇದಗಳಿಂದ ಮತಬೇಧ ಕಂಡರು ನನ್ನ ಬಗ್ಗೆ ಅವರು ತೋರುತ್ತಿದ್ದ ವಾತ್ಸಲ್ಯ ಹಾಗೂ ವೈಯ್ಯಾವೃತ್ಯದ ಭಾವನೆಯನ್ನು ಪ್ರಶಂಸಿಸಲೇ ಬೇಕು.

ಹೀಗೆ ಪಂಡಿತರು ಮೇ 21ರ ವರೆಗೂ ಗ್ರಂಥಗಳನ್ನು ಸ್ವಾಧ್ಯಾಯ ಮಾಡಿ ಮುಗಿಸಿದರು. ರವೀಂದ್ರನಿಗೆ ಅದರಿಂದ ಕೆಲವು ಸೈದ್ಧಾಂತಿಕ ಗ್ರಂಥಗಳ ಸ್ವಾಧ್ಯಾಯ ಮಾಡಿಸಬೇಕೆಂದು ಮನಸ್ಸಿತ್ತು. ಆದರೆ ಪಂಡಿತರ ಬಳಿ ಕುಂದಲತೆ ಮುಂತಾದ ಮೂರು ಮಹಿಳೆಯರು ಪಾಠ ಹೇಳಿಸಿಕೊಳ್ಳುವುದಕ್ಕಾಗಿಯೇ ದೆಹಲಿಯಿಂದ ಬಂದಿದ್ದರು. ಅವರಿಗೆ ಪಾಠ ಹೇಳುವ ಹಾಗೇ ಧವಲಗ್ರಂಥಗಳ ಶುದ್ಧೀಕರಣ ಕೆಲಸವನ್ನು ಅವರು ಒಪ್ಪಿಕೊಂಡಿದ್ದರಿಂದ ನಮ್ಮಲ್ಲಿಗೆ ಸ್ವಾಧ್ಯಾಯಕ್ಕೆ ಬರಲು ಅವರಿಗೆ ಸಮಯಾಭಾವ ಉಂಟಾಯಿತು. ಆದರೂ ನನ್ನ ಅಸ್ವಸ್ಥತೆಯನ್ನು ವಿಚಾರಿಸಲು ಅಗಾಗ್ಗೆ ನನ್ನ ಬಳಿ ಬರುತ್ತಿದ್ದರು.

ಫೆಬ್ರವರಿ ಮಾರ್ಚ್ ತಿಂಗಳ ಹೊತ್ತಿಗೆ ಹೆಚ್ಚು ಸುಧಾರಿಸಿದ್ದರಿಂದ ನಾನೇ ಕುಳಿತು ಸ್ವಾಧ್ಯಾಯ ಹಾಗೂ ಚರ್ಚೆಗಳಲ್ಲಿ ಭಾಗವಹಿಸ ತೊಡಗಿದೆ. ಇದನ್ನು ಕಂಡು ಪಂಡಿತರಿಗೂ ನೆಮ್ಮದಿ ಎನ್ನಿಸತೊಡಗಿತು. ಮೋತಿಚಂದನು ಪಂಡಿತರೇ ನಿಮ್ಮ ಸ್ವಾಧ್ಯಾಯದಿಂದಲೇ ಮಾತಾಜೀ ಬೇಗ ಸ್ವಸ್ಥರಾದರು ಎಂದು ಹರ್ಷ ವ್ಯಕ್ತಪಡಿಸಿದರು.ಏನಾದರು ಆಗಲಿ ಒಬ್ಬ ವಿಪಕ್ಷದ ವಿದ್ವಾಂಸರು ಒಳ್ಳೆಯಭಾವನೆಯಿಂದ ನನಗೆ ಸ್ವಾಧ್ಯಾಯವನ್ನು ಕೇಳಿಸಿಸಿದರೆಂದರೆ ಹೆಚ್ಚುಗಾರಿಕೆಯ ಮಾತೇ ಆಗಿತ್ತು. ಆದರೆ ಕೆಲವು ದಿನಗಳಿಂದ ಪಂಥಧರ್ಮದ ವ್ಯಾಮೋಹದಿಂದಲೂ ಅಥವಾ ಜನಗಳ ಹೇಳಿಕೆ ಮಾತಿನಿಂದಲೂ, ಕೊನೆಗೆ ಜಂಬೂದ್ವೀಪಕವನ್ನು ವಿರೋಧಿಸತೊಡಗಿದರು ಆಗ ನನಗೆ ಆಶ್ಚರ್ಯವೆನ್ನಿಸತೊಡಗಿತು.

ಸತೀ ಅಂಜನಾ ಮೊದಲಾದ ಸಮ್ಯಗ್‌ಜ್ಞಾನ ಮೊದಲಾದ ಲೇಖನಗಳ ಜೊತೆಗೆ ನಾನು "ಮೂಲಾಚಾರದಸಾರ"ವನ್ನು ರಚಿಸಿ ಚಿಕ್ಕದಾದ ಪ್ರಸ್ತಾವನೆಯನ್ನು ಬರೆದು ಜ್ಞಾನಪೀಠಕ್ಕೆ ಕಳುಹಿಸಿದೆ. ನಂತರ

ಅದು "ಮೂಲಚಾರ ಉತ್ತರಾರ್ಧ"ದಲ್ಲಿ ಅಚ್ಚಾಯಿತು.

ಶಾಂತಿ ವಿಧಾನಗಳು

ನನ್ನ ಆರೋಗ್ಯವು ಬೇಗ ಸುಧಾರಿಸಲಿ ಎಂಬ ಭಾವನೆಯಿಂದ ಪೆಬ್ರವರಿ 9ರಿಂದ 14ರ ವರೆಗೆ "ಶಾಂತಿ ಆರಾಧನೆ"ಯನ್ನು ಮಾಡಿಸಿ 16ನೇಯ ದಿನ ಪೂರ್ಣಾಹುತಿಯನ್ನು ಕೊಡಲಾಯಿತು.ಪಾಲ್ಗುಣ ಅಷ್ಟಾಹ್ನಿಕದಲ್ಲಿ ದೆಹಲಿಯ ಶ್ರೀಮತಿ ಶಕುಂತಲಾದೇವಿಯರು ತ್ರಿಮೂರ್ತಿಭವನದಲ್ಲಿ ಆರಾಧನೆಯನ್ನುಮಾಡಿಸಿದರು. ಮಾರ್ಚ್ 11ರಿಂದ 16ರವರೆಗೆ ಆರಾಧನೆ ನಡೆಯಿತು. ಶುಕ್ಲಪಕ್ಷದ 16ನೇ ದಿನ ಶಾಂತಿ ಆರಾಧನೆ, ಸಿದ್ಧ ಚಕ್ರ ಆರಾಧನೆ ಎರಡಕ್ಕೂ ಹವನವನ್ನು ಮಾರ್ಚ್ 27ರಂದು ಮಾಡಿಸಲಾಯಿತು.

ದೊಡ್ಡದಾದ ಶಾಂತಿಧಾರೆ

ಮಾರ್ಚ್ 2 ರಿಂದ 28ರ ಪ್ರತಿದಿನ ಮಧ್ಯಾಹ್ನ ಭಗವಾನ ಮಹಾವೀರ ಸ್ವಾಮಿಗೆ ಹಾಲಿನಿಂದ ಶಾಂತಿಧಾರೆಯನ್ನು ಮಾಡಿಸಲಾಯಿತು. ಇದಕ್ಕೆ ಮೊದಲು ನನ್ನ ಆರೋಗ್ಯ ಮತ್ತೆ ತಿರುಗುಮುರುಗಾಯಿತು ಇದರಿಂದ ಎಲ್ಲರು ಚಿಂತಿತರಾದರು. ಜನಗಳ ಆಗ್ರಹದಿಂದಾಗಿ ಮೋತಿಚಂದ್, ರವೀಂದ್ರ, ಮಾಧುರಿ ಕುಳಿತು ಚರ್ಚೆ ಮಾಡಿ ಒಂದು ನಿರ್ಣಯಕ್ಕೆ ಬಂದರು. ಮಾತಾಜೀಯವರ ಆರೋಗ್ಯ ರಕ್ಷಣೆಗಾಗಿ ಒಂದು ತಿಂಗಳವರೆಗೆ ಮೃತ್ಯುಂಜಯ ಆರಾಧನೆಯನ್ನು ಮಾಡಿಸೋಣ ಎಂದು ಜನವರಿ 12ರಿಂದ ಮೃತ್ಯುಂಜಯ ಆರಾಧನೆಯನ್ನು ಪ್ರಾರಂಭಿಸಿದ್ದರು. ಮೊದಲು ಸಂಸ್ಕೃತದ ಪೂಜೆಯನ್ನು ಮಾಡಿಸಲಾಯಿತು. ನಂತರ ಆರ್ಯಿಕೆ ಅಭಯಮತೀಯಿಂದರಚಿತವಾಗಿದ್ದ ಹಿಂದಿಯ ಪೂಜೆ ವಿಧಾನದಲ್ಲೇ ಆರಾಧನೆಯನ್ನು ಮಾಡಿಸಿ ಫೆಬ್ರವರಿ 11ರವರೆಗೆ 1¼ಲಕ್ಷ ಜಪಮಾಡಿ ಪೂರ್ಣಾಹುತಿ ಕೊಡಲಾಯಿತು.

ಜ್ಯೋತಿಷ್ಯಾಚಾರ್ಯರ ಮಾತು

ನನ್ನ ಅನಾರೋಗ್ಯದ ಮಧ್ಯೆಯೇ ಒಂದಿಬ್ಬರು ಜ್ಯೋತಿಷ್ಯವಿದ್ವಾಂಸರು ಬಂದು ಏನೇನೊ ಹೇಳಿದ್ದರು.ನಾನು ವಿಶೇಷ ಗಮನ ಹರಿಸಿರಲಿಲ್ಲ. ನಾನು ಶ್ರಾವಕರು ಸಹ ಜ್ಯೋತಿಷಿಗಳ ಬಲೆಗೆ ಬೀಳಬಾರದೆಂದೆ ಹೇಳುತ್ತಿದ್ದೆ, ಏನಾಗುವುದು ಇರುತ್ತದೋ ಅದು ಹಾಗೇ ಆಗುತ್ತದೆ ಅದನ್ನು ಮೊದಲೇ ಕೇಳಿಕೊಂಡು ಏಕೆ ಚಿಂತೆಪಡಬೇಕು. ಯಾರಾದರೂ ಜ್ಯೋತಿಷಿಗಳು ಭವಿಷ್ಯ ಸುಳ್ಳಾಗಲುಬಹುದು. ಪುರುಷಾರ್ಥದಿಂದ ಅಸಾತಾವನ್ನು ಸಾತಾದಲ್ಲಿ ಸಂಕ್ರಮಣಮಾಡಿ ಅಶುಭ ಭಾಗ್ಯವನ್ನು ಸಹ ಬದಲಾಯಿಸಬಹುದು ಎಂದು ಹೇಳುತ್ತಿದ್ದರು.

ಒಂದು ದಿನ ಒಬ್ಬ ಪ್ರಬುದ್ಧ ಶ್ರಾವಕರು ಒಬ್ಬ ಬ್ರಾಹ್ಮಣ ಜ್ಯೋತಿಷಿಯನ್ನು ಕರೆದುಕೊಂಡು ಬಂದು ಮಾಧುರಿ, ಮೋತಿಚಂದ, ರವೀಂದ್ರರೊಡನೆ ಚರ್ಚಿಸಿದ್ದಾರೆ. ಇನ್ನು ಎರಡು ತಿಂಗಳಲ್ಲಿ ಮಾತಾಜಿಗೆ ಮೃತ್ಯುಯೋಗವಿದೆ. ಆದ್ದರಿಂದ ನಾನು ಒಂದು ಮೃತ್ಯುಂಜಯ ಮಹಾಮಂತ್ರದ ಅನುಷ್ಠಾನ ಮಾಡುತ್ತೇನೆ ಎಂದು. ಬ್ರಾಹ್ಮಣರ ಮಂತ್ರವು ನನ್ನ ಶಿಷ್ಯರಿಗೆ ಇಷ್ಟವಾಗದೆ ಅವರನ್ನು ಸಾಗಹಾಕಲು ನೋಡಿದ್ದಾರೆ. ಆಗ ಅವರು ಸಹೋದರ ಮಾತಾಜಿಯವರಿಗೆ ತಮ್ಮ ಶರೀರದ ಮೇಲೆ ಮೋಹವಿಲ್ಲವೆಂಬುದು ನನಗೂ ಗೊತ್ತು ಆದರೆ ಇಂದು ವಿಶ್ವಕ್ಕೆ ಇಂತಹ ವಿದುಷಿಮಾತೆಯ ಬಹಳ ಅವಶ್ಯಕತೆ ಇದೆ. ಇವರ ಜೀವನ ಅವರಿಗಾಗಿ ಅಲ್ಲ

ಇಡೀ ಪ್ರಪಂಚದ ಹಿತಕ್ಕಾಗಿ ಎಲ್ಲಾ ಪ್ರಾಣಿಗಳ ಉಳಿವಿಗಾಗಿ ಅವರು ಇನ್ನು ಬಹಳ ಕಾಲ ಜೀವಿಸಬೇಕಾಗಿದೆ. ಇದರಿಂದ ವಿಶ್ವಕ್ಕೆ ಉಪಕಾರ ಆಗಬೇಕಾಗಿದೆ. ಇವರಿಗೆ ನೀವೇ ಬೆಲೆ ಕಟ್ಟಬಲಾರಿರಿ ಎಂದು ನಿವೇದಿಸಿದ್ದಾರೆ.

ಶ್ರಾವಕರು ವಿದ್ವಾಂಸರು ಜ್ಯೋತಿಷಿಗಳೆಲ್ಲರ ಆಗ್ರಹದ ಮುಂದೆ ಈ ಮೂವರುನಿರುಪಾಯರಾಗಿ ಕೊನೆಗೆ ಒಂದು ನಿರ್ಣಯಕ್ಕೆ ಬಂದು ಜೈನಧರ್ಮದಲ್ಲಿಯು ಮೃತ್ಯುಂಜಯ ಮಹಾಮಂತ್ರವಿದೆ. ಅದರದೆ ಆರಾಧನೆ ಆಗಬೇಕು. ಮಾತಾಜಿಯವರೇ ಒಮ್ಮೆ ಖತೌಲಿಯಲ್ಲಿ ಒಬ್ಬ ಶ್ರಾವಕನಿಗೆ ಮೃತ್ಯುಂಜಯ ಯಂತ್ರಮಂತ್ರವನ್ನು ಹೇಳಿ ಮಾಡಿಸಿದ್ದರು. ಆ ವ್ಯಕ್ತಿ ಎರಡು ವರ್ಷಗಳ ನಂತರ ಬಂದು ನನ್ನ ಮಗನ ಗ್ರಹಚಾರ ದೂರವಾಯಿತು ಅವನಿಗೆ ಮದುವೆಯು ಆಗಿ ಒಬ್ಬ ಮಗನು ಹುಟ್ಟಿದ್ದಾನೆ ಎಂಬ ವಿಷಯವನ್ನು ಹೇಳಿದ್ದ. ಇವೆಲ್ಲವನ್ನು ನೆನಪಿಸಿಕೊಂಡ ಅವರು ನನ್ನ ಬಳಿ ಬಂದು ಆ ವಿಧಾನದ ಪುಸ್ತಕವನ್ನುಕೇಳಿದರು. ಅದಕ್ಕೆ ನಾನು ಲೈಬ್ರರಿಯಲ್ಲಿ ಒಂದು ಚಿಕ್ಕ ಪುಸ್ತಕದಲ್ಲಿ ಸಂಸ್ಕೃತದ ಪೂಜೆ ಅರ್ಘ್ಯಗಳು ಇದೆ ಎಂದೆ.

ಈ ಪುಸ್ತಕವನ್ನು ಹುಡುಕಿ ಜನರೆಲ್ಲ ಸೇರಿ ವಿಧಿವತ್ತಾಗಿ ಆರಾಧನೆಗೆ ಸಿದ್ಧತೆಯನ್ನು ನಡೆಸಿದರು. ಆರಾಧನೆ ಒಂದೊಂದೆ ದಿನವಾದರೂ ಅನೇಕ ಜನಗಳು ಮಾಡಿಸಿದರು ಜಾಪ್ಯದ ಅನುಷ್ಠಾನವನ್ನುಮೋತಿಚಂದ್, ರವೀಂದ್ರ ಮತ್ತು ಮಾಧುರಿಯವರೇ ಮಾಡಿದರು. ಬೇರೆಯವರು ಕೂಡ ಜಪಕ್ಕೆ ಕುಳಿತಿದ್ದರು. 1½ ಲಕ್ಷ ಜಪವನ್ನು ಮಾಡಿದರು. ಪುನಃ ಕೊನೆಗೆ ಹೋಮ್ ಬ್ರೆಡ್‌ನ ಅಮರಚಂದ್‌ರವರು ಮೂರುದಿನಗಳ ಕಾಲ ಮೃತ್ಯುಂಜಯ ಆರಾಧನೆಯನ್ನು ಮಾಡಿ ಫೆಬ್ರವರಿ 11ರಂದು ಹವನ ಮಾಡಿ ಪೂರ್ಣಗೊಳಿಸಿದರು.

ಈ ರೀತಿಯ ಶಾಂತಿ ವಿಧಾನಗಳನ್ನು 16 ದಿನಗಳವರೆಗೆ ಅನುಷ್ಠಾನಮಾಡುವುದರಲ್ಲಿ ನನಗೆ ಹೆಚ್ಚಿನ ಶ್ರದ್ಧೆ ಇದ್ದುದರಿಂದ ಪಾಲ್ಗುಣಮಾಸದಲ್ಲಿ 16-16 ದಿನಗಳ ಪಕ್ಷ ಬರುವುದರಿಂದ ಎರಡು ಶಾಂತಿ ಆರಾಧನೆಯನ್ನು ಮಾಡಿಸಲಾಯಿತು. ಮಧ್ಯದ ದಿನಗಳಲ್ಲೂ ಸಿದ್ಧ ಚಕ್ರ ಆರಾಧನೆಯು ನಡೆಯುತ್ತಿತ್ತು.

ಮೇರಠನ ಹಕೀಮರನ್ನು ಕರೆತಂದು ಪರಾಮರ್ಶೆ ಮಾಡಿ ಚಿಕಿತ್ಸೆ ಪ್ರಾರಂಭಿಸಿದರು. ಆದರೆ 4-5 ದಿನ ಬಿಟ್ಟು ಪುನಃ ವಾಂತಿ, ಅತಿಸಾರ ಪ್ರಾರಂಭವಾಯಿತು. ಮತ್ತೇ ಆರೋಗ್ಯ ತಲೆಕೆಳಗಾಯಿತು. ಇದರ ನಂತರ ಜನವರಿ 28ರಂದು ಹಕೀಮ ಸೈಫುದ್ದೀನರನ್ನು ಕರೆತರಲಾಯಿತು. ಇವರು ರಾಷ್ಟ್ರಪತಿಗಳಿಗೆ ಚಿಕಿತ್ಸೆ ಮಾಡುತ್ತಿದ್ದ ವೈದ್ಯರು ಇವರ ಜೊತೆ ಪರಾಮರ್ಶೆಮಾಡಿ ಹಳೆಯ ಔಷಧಿಯನ್ನೆ ಮತ್ತೆ ಕೊಡಲಾರಂಭಿಸಿದರು ಮತ್ತೆ ಪ್ರತಿ ವಾರ ಅವರ ಜೊತೆಯೆಪರಾಮರ್ಶಿಸಿ ಔಷಧಗಳ ಬದಲಾವಣೆ ಮಾಡುತ್ತಾ ಬರತೊಡಗಿದರು. ಈ ಪರಿವರ್ತನೆಯಿಂದ ಹಿತಕಾಣತೊಡಗಿತು. ಪೆಬ್ರವರಿ 8ರಂದು ವಾಂತಿ ಆಗಿದ್ದು ನಂತರದಲ್ಲಿ ಪೂರ್ತಿ ನಿಂತುಹೋಯಿತು. ಅಲ್ಲಿಂದ ಈಚೆಗೆ ಆರೋಗ್ಯವು ಪೂರ್ಣ ಸುಧಾರಿಸಿತು. ಇದನ್ನು ಕಂಡು ಎಲ್ಲರು ನನ್ನ ಪನರ್ಜನ್ಮವೆಂದೆ ತಿಳಿದರು.

ಪಾಲ್ಗುಣ ಮಾಸದಲ್ಲಿ ನಿಧಾನವಾಗಿ ಮಾಧುರಿಯ ಕೈಗಳನ್ನು ಹಿಡಿದು ನಡೆಯತೊಡಗಿದೆ. ನಂತರ ನಿಧಾನವಾಗಿ ಒಬ್ಬಳೇ ಓಡಾಡಲು ಪ್ರಾರಂಭಿಸಿದೆ ಶಿಷ್ಯರೆಲ್ಲ ಸಂತೋಷದಿಂದಲೇ ಹಾಸ್ಯ ಮಾಡತೊಡಗಿದರು. ಮೊದಲು ಮಾತಾಜೀ ನಮಗೆ ಮೋಕ್ಷಮಾರ್ಗದಲ್ಲೇ ನಡೆಯುವುದನ್ನು ಕಲಿಸಿದರು ಈಗ ನಾವು ಮಾತಾಜಿಗೆ ನಡೆಯುವುದು ಕಲಿಸುತ್ತಿದ್ದೇವೆ.

ಇಂದ್ರಧ್ವಜ ಆರಾಧನೆ

ಫೆಬ್ರುವರಿಯಲ್ಲಿ ಛೋಟೆಶಾಹರು ತುಂಬ ಒತ್ತಾಯಮಾಡಿ ಮಾಧುರಿಯನ್ನು ಟಿಕೈತನಗರಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಇಂದ್ರಧ್ವಜ ಆರಾಧನೆಯನ್ನು ಬಹಳ ಪ್ರಭಾವಯುತವಾಗಿ ಮಾಡಿಸಿದರು. ಆರಾಧನೆಗೆ ಸುಮಾರು 150 ಜನರು ಕುಳಿತಿದ್ದರು. ಆರಾಧನೆಯನ್ನು ಮುಗಿಸಿ ಮಾಧುರಿ ಮತ್ತೇ ಮಾರ್ಚ್ 7ರಂದು ಇಲ್ಲಿಗೆ ಬಂದಳು.

ಕ್ಷೇತ್ರ ಪಾಲನ ಸ್ಥಾಪನೆ

ಒಮ್ಮೆ ಆಚಾರ್ಯ ವಿಮಲ ಸಾಗರರು ಇಲ್ಲಿಯ ಮಂದಿರದಲ್ಲಿ ಕ್ಷೇತ್ರಪಾಲನನ್ನು ಸ್ಥಾಪಿಸಬೇಕು ಎಂದು ಹೇಳಿ ಸ್ವತಃ ಅವರೇಪ್ರತಿಷ್ಠಾಪನೆಯನ್ನು ಮಾಡಿಸಿದ್ದರು. ಅಲ್ಲಿಂದ ತಂದುಇಲ್ಲಿ ರತ್ನತ್ರಯ ನಿಲಯದಲ್ಲಿ ಸಿದ್ಧ ಪರಮೇಷ್ಠಿಗಳ ಪ್ರತಿಮೆಯ ಬಳಿ ಇಟ್ಟಿತ್ತು. ಡಿಸೆಂಬರ್ 26ರಂದು ಅದಕ್ಕಾಗಿಯೆ ವೇದಿಕೆಯನ್ನು ನಿರ್ಮಾಣಮಾಡಿ ಮೋತಿಚಂದ್ ರವೀಂದ್ರಕುಮಾರ್ ಮತ್ತು ಮಾಧುರಿ ಸೇರಿ ಕ್ಷೇತ್ರಪಾಲನನ್ನು ಸ್ಥಾಪಿಸಿದರು ಅದೇ ದಿನ ಬೊಂಬಾಯಿಯಿಂದ ಬಂದ ಯಾತ್ರಿಗಳು ಸುಮ್ಮನೆ ಹೇಳಿದ್ದಕ್ಕೆ ಮೂಲ ವೇದಿಕೆಯನ್ನು ಮಾಡಿಸಲು ಒಪ್ಪಿಕೊಂಡರು ಟಿಕೈತನಗರದ ಕೈಲಾಸಚಂದ ಜೈನರು ಕ್ಷೇತ್ರ ಪಾಲರ ವೇದಿಕೆಗಾಗಿ ಆಶ್ವಾಸನೆಯನ್ನು ಕೊಟ್ಟರು. ಡಿಸೆಂಬರ್ 22ರಂದುದೆಹಲಿಯ ಪಲ್ಟೂಮಲ್ ಜೈನರು ತ್ರಿಮೂರ್ತಿಮಂದಿರದ ಹಾಲಿಗೆ ಶಂಕುಸ್ಥಾಪನೆಯನ್ನು ಮಾಡಿದರು. ಇಂದು ಹಾಲ್ ಸಿದ್ಧವಾಗಿದೆ. ಜಿನೇಂದ್ರ ಭಗವಂತರ ಅನುಗ್ರಹದಿಂದಾಗಿ ಮಂದಿರವು ಉತ್ಥಾನವಾಗುತ್ತಲೇ[1] ಇದೆ. 1987ರ ಸುತ್ತಮುತ್ತಲಿನ ವೇದಿಕೆಯಲ್ಲಿ ಸುಂದರವಾದ ಕಮಲವನ್ನು ರಚಿಸಿ ಭಗವಾನ ಪಾರ್ಶ್ವನಾಥ ಮತ್ತು ನೇಮಿನಾಥರ ವಿಶಾಲ ಪ್ರತಿಮೆಯನ್ನು ವಿರಾಜಮಾನಗೊಳಿಸಲಾಗಿದೆ.

ಮೃತ್ಯುಂಜಯ ವಿಧಾನ

ಏಪ್ರಿಲ್ 14ರಿಂದ ಮೇ 16ರವರೆಗೆ ಮೃತ್ಯುಂಜಯ ಆರಾಧನೆಯನ್ನು ಮಾಡಿ ಮೇ 16ರಂದು ಹೋಮ ಮಾಡಲಾಯಿತು.

೮೬

ಅಭಯಮತೀಯ ಆಗಮನ

ಅಭಯಮತೀಯವರ 1985ರ ಚಾತುರ್ಮಾಸ ಧರ್ಮಸಾಗರರ ಹತ್ತಿರವೇ ಆಯಿತು. ನನ್ನಅಸ್ವಸ್ಥತೆಯನ್ನು ಕೇಳಿ ಅವರಿಗೆ ಗಾಬರಿಯಾಯಿತು ಏನಾದರೂ ರತ್ನಮತಿ ಮಾತಾಜೀಯವರ ದರ್ಶನವಾಗದ ರೀತಿ ತನ್ನ ಗುರುವಾದ ಜ್ಞಾನಮತೀಯವರನ್ನು ದರ್ಶನ ಮಾಡಲು ಆಗುತ್ತದೋ ಇಲ್ಲವೋ ಎಂದು ನನ್ನನ್ನುದರ್ಶನ ಮಾಡಬೇಕೆಂಬ ಭಾವನೆಯಿಂದ ಮಾರ್ಗದಲ್ಲಿ ಹಲವಾರು ತೊಂದರೆಗಳನ್ನು ಸಹಿಸುತ್ತಾ ಕ್ಷುಲ್ಲಕ ಶಾಂತಿಮತಿಯ ಜೊತೆ ಅವರು ಬರುತ್ತಿದ್ದಾರೆ ಎಂದು ತಿಳಿಯಿತು. ನಿಜವಾಗಿಯು ಸಂಘದಲ್ಲಿ ಬ್ರಹ್ಮಚಾರಿಣಿಯರು ಇಲ್ಲದೆ ಇರುವಾಗ ಹಲವಾರು ತೊಂದರೆಗಳನ್ನು ಸಹಿಸಲೇಬೇಕಾಗುತ್ತದೆ. ಇದು ಸಾಧು ಜೀವನದಲ್ಲಿ ಅನಿವಾರ್ಯ ಏಪ್ರಿಲ್ 28ರಂದು

ಮಹಾನಾದಿಂದ ಹೊರಟು ಸಂಜೆ 6 ಗಂಟೆಗೆ ಜಂಬೂದ್ವೀಪ ಸ್ಥಳಕ್ಕೆ ಬಂದು ತಲುಪಿದರು. ನನ್ನನ್ನು ನೋಡುತ್ತಲೇ ಅಳತೊಡಗಿದರು 1971ರಲ್ಲಿ ನನ್ನನ್ನು ಬಿಟ್ಟು ಬೇರೆ ವಿಹಾರಮಾಡಲು ಹೊರಟ್ಟಿದ್ದರು. ಶಾರೀರಿಕ ಸ್ವಾಸ್ಥ್ಯ ತಿರುಗುಮುರುಗಾಗುತ್ತಿದ್ದರೂ ಮನೋಬಲದಿಂದ 14 ವರ್ಷಗಳವರೆಗೆ ಇಡೀ ಮಧ್ಯಪ್ರದೇಶದಲ್ಲೆಲ್ಲ ಚೆನ್ನಾಗಿ ಸುತ್ತಾಡಿದ್ದಾರೆ. ಯಾತ್ರೆ ಮಾಡುತ್ತಲೆ ಮಂಡಲವಿಧಾನ, ಶಿಕ್ಷಣ, ಶಿಬಿರ, ಮಹಿಳಾಮಂಡಲಗಳನ್ನು ಉತ್ತೇಜಿಸಿ ಧರ್ಮದ ಪ್ರಭಾವನೆಯನ್ನು ಮಾಡುತ್ತಾ ಹಾಗೇ ಪರಮಾತ್ಮಪ್ರಕಾಶ, ಸಮಯಸಾರ ಕಳಸ ಪುರುಷಾರ್ಥಸಿದ್ಧ್ಯುಪಾಯ, ಆತ್ಮಾನುಶಾಸನ ಮುಂತಾದ ಗ್ರಂಥಗಳ ಪದ್ಯಾನುವಾದಮಾಡಿ ಸಮಾಜಕ್ಕೆ ಬಹುದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ.

ಇದೊಂದು ಗುರು ಶಿಷ್ಯರ ಮಿಲನವಾಗಿತ್ತು ಅವರ ಕಣ್ಣೀರು ನೋಡುತ್ತಲೇ ನನಗೂ ಕಣ್ಣಲ್ಲಿ ನೀರು ಬಂತು. ಅವರನ್ನು ಎಬ್ಬಿಸಿ ತಲೆಯನ್ನು ಕೈಯಿಂದ ಸವರಿ, ರತ್ನತ್ರಯ ಕುಶಲವನ್ನು ವಿಚಾರಿಸಿದೆ. ಮಾತಾಡುತ್ತಾ ಆರ್ಯಿಕೆ ರತ್ನಮತಿಯವರನ್ನು ನೆನಪಿಸಿಕೊಳ್ಳುತ್ತಾ[1] ಹೃದಯ ಒಡೆದಂತೆ ಆಯಿತು. ಎಂತಹ ಮಮತಾಮಯಿ ತಾಯಿ ತನ್ನ ಹೆಣ್ಣುಮಕ್ಕಳಿಗೆ ಧರ್ಮಾಮೃತವನ್ನೆ ಕುಡಿಸಿ ತಾನು ಮೋಕ್ಷ ಮಾರ್ಗದಲ್ಲೇ ನಡೆದು ಆರ್ಯಿಕಾ ದೀಕ್ಷೆಯನ್ನು ಪಡೆದಳು. ತಂದೆಯ ವಿರೋಧದ ನಡುವೆಯು ಹೆಣ್ಣುಮಕ್ಕಳು ಮೋಕ್ಷ ಮಾರ್ಗದಲ್ಲಿ ನಡೆಯುತ್ತೇವೆ ಎಂದಾಗ ಸಹಕರಿಸಿ ವಾತ್ಸಲ್ಯಮಯಿ ಅವಳು ಮಾಡಿದ ಸಾಹಸದಿಂದಲೇ ನಾವು ಮೋಕ್ಷ ಮಾರ್ಗದಲ್ಲಿ ನಡೆಯುವಂತಾಯಿತು ಇದನ್ನರಿತು ಮೋಕ್ಷ ಪಡೆಯುವರೆಗೂ ಮರೆಯುವಂತಿಲ್ಲ.

ಇಂದು ಈ ಲೇಖನ ಬರೆಯುವಾಗಲು ಅವರ ನೆನಪಿನಿಂದ ಕೈಗಳು ನಡುಗುತ್ತಿದೆ ಕಣ್ಣಿನಿಂದ ನೀರು ತನ್ನಿಂದ ತಾನೇ ಹನಿಯುತ್ತಿದೆ ನಿಜವಾಗಿಯು ಜನ್ಮದಾತೆ ಇಡೀ ವಿಶ್ವದಲ್ಲೇ ಉನ್ನತಸ್ಥಾನ ಪಡೆದಿರುವವಳು ಅಂತಹವರಲ್ಲಿ ತನ್ನ ಮಕ್ಕಳನ್ನು ಮೋಕ್ಷಮಾರ್ಗದಲ್ಲಿ ನಡೆಯಲು ಸಹಕರಿಸಿ, ಅವರ ಸಾನಿಧ್ಯದಲ್ಲೇ ತಾನು ಮೋಕ್ಷ ಮಾರ್ಗದಲ್ಲಿ ನಡೆದಂತಹ ಮಾತೆಯಂತಹವರು ಎಲ್ಲರಿಗೂ ಸಿಗುವುದು ದುರ್ಲಭ.

ಅಭಯಮತಿ ಇಲ್ಲಿರುವವರೆಗೆ ರತ್ನಮತಿಯನ್ನು ಹತ್ತಿರದಿಂದ ನೋಡದೆ ಇದ್ದ ಅವರ ದುಃಖವನ್ನು ದೂರ ಮಾಡುವ ಉಪಾಯವನ್ನು ಹೇಳುತ್ತಿದ್ದೆ. ಇದೊಂದು ಕೊರಗು ಅವರಿಗೂ ಕೊರಗಾಗಿಯೇ ಉಳಿದಿತ್ತು. ಅವರ ಆರೋಗ್ಯ ಕೂಡ ಬಹಳ ಸೂಕ್ಷ್ಮ ಇವರು 1987ರ ಚಾತುರ್ಮಾಸವನ್ನು ಸರಧನದಲ್ಲೇ ಕಳೆದರು. ಕಳೆದ ವರ್ಷ ಪಂಚಕಲ್ಯಾಣದ ಪ್ರತಿಷ್ಠೆ ಹಾಗೂ ಮೋತಿಚಂದರ ದೀಕ್ಷಾ ಸಮಯದಲ್ಲಿ ಬಂದು ಭಾಗವಹಿಸಿ ಮತ್ತೆ ಅಲ್ಲಿಗೆ ಹೋದರು ಇವರ ಜೊತೆ ಕ್ಷುಲ್ಲಿಕಶಾಂತಿಮತಿಯವರು ಇದ್ದರು.

ಆರ್ಯಿಕಾ ರತ್ನಮತಿಯವರ ಸಮಾಧಿಯ ಸಮಯದಲ್ಲಿ ಅವರ ಮಕ್ಕಳೆಲ್ಲ ಬಂದು ದರ್ಶನಪಡೆದಾಗ ಇವರೊಬ್ಬರು ಮಾತ್ರ ದರ್ಶನಕ್ಕೆ ಬರಲು ಆಗಿರಲಿಲ್ಲ. ಆ ಸಮಯದಲ್ಲಿ ಇವರು ರಾಜಸ್ಥಾನದ ಮೌಜಮಾಬಾದಿನಲ್ಲಿ ಇದ್ದರು. ಹೀಗೆ ಪ್ರಪಂಚದಲ್ಲಿ ಸಂಯೋಗ ವಿಯೋಗ ಎನ್ನುವುದು ಸುಖದುಃಖ ಮೊದಲಾದವೆಲ್ಲ ಕರ್ಮದ ಉದಯದಿಂದಲೇ ಆಗುವುದು ಮೋಹವನ್ನು ದೂರ ಮಾಡುವುದಕ್ಕಾಗಿಯೇ ದೀಕ್ಷೆಯನ್ನು ಪಡೆಯಬೇಕಾಗಿದೆ ಎಂದು ಯೋಚಿಸಿ ಇಷ್ಟ ವಿಯೋಗ, ಅನಿಷ್ಠ ಸಂಯೋಗ ಇವುಗಳಲ್ಲಿ ಸಮಭಾವವನ್ನುಧರಿಸುವುದೇ ನಮ್ಮ ಕರ್ತವ್ಯವಾಗಿದೆ.

---

1. ಈ ಪ್ರಕರಣವನ್ನು 1987ರಲ್ಲಿ ಬರೆದಿದ್ದೆ.

ದುಃಖೇ-ಸುಖೇ ವೈರಿಣಿ ಬಂಧುವರ್ಗೇ ಯೋಗೇ ವಿಯೋಗೇ ಭವನೇ ವನೆ ವಾ ।
ನಿರಾಕೃತಾಶೇಷಮಮತ್ವಬುದ್ಧೇಃ ಸಮಂ ಮನೋ ಮೇಸ್ತು ಸದಾಪಿ ನಾಥ ॥

ಅಥವ

ಸಂಯೋಗಮೂಲಾ ಜೀವನ ಪ್ರಾಪ್ತ್ಯ ದುಃಖಪರಂಪರಾ ।
ತಸ್ಮಾತ್ ಸಂಯೋಗಬಂಧಂ ತ್ರಿಧಾ ಸರ್ವಂ ತ್ಯಜಾಮ್ಯಹಂ ॥

ಈ ಜೀವವು ಸಂಸಾರದಲ್ಲಿ ಸಂಯೋಗದ ನಿಮಿತ್ತದಿಂದಲೇ ದುಃಖವನ್ನು ಪಡೆದುಕೊಳ್ಳುತ್ತದೆ. ಆದ್ದರಿಂದ ಈಗ ನಾನು ಮನ, ವಚನ ಕಾಯದಿಂದಲೇ ಈ ಎಲ್ಲಾ ಸಂಯೋಗದ ಸಂಬಂಧವನ್ನು ತ್ಯಾಗಮಾಡುತ್ತೇನೆ. ಈ ಭಾವನೆಯಿಂದ ಈ ಸಂಸಾರದಲ್ಲಿ ಸಂಬಂಧದ ಎಲ್ಲಾ ಬಂಧನಗಳನ್ನು ಬಿಟ್ಟಾಗಲೇ ನಮಗೆ ಶಾಶ್ವತವಾದ ಸುಖವು ದೊರೆಯುವುದು.

ಜಂಬೂದ್ವೀಪದ ವಿಧಾನದ ಅಪರನಾಮವೇ ಮೃತ್ಯುಂಜಯ ಆರಾಧನೆ

ನನಗೆ ಆರೋಗ್ಯ ತಪ್ಪಿದ್ದರಿಂದ ಜಂಬೂದ್ವೀಪದ ಆರಾಧನೆಯ ರಚನೆ ನಿಂತುಹೋಯಿತು. ಪೂಜೆಯ ಸಂಸ್ಕರಣೆಯನ್ನು ಅನಾರೋಗ್ಯದಲ್ಲೂ ಮಾತಾಡುತ್ತಲೇ ಇದ್ದೆ. ಪೂಜೆಗೋಸ್ಕರ ಹೊಸ ಹೊಸ ಪಂಕ್ತಿಗಳು ಮನದಲ್ಲಿ ಮೂಡುತ್ತಿದ್ದವು. ಅನಾರೋಗ್ಯ ಬಹಳ ದಿನಗಳು ಸತಾಯಿಸಿದ್ದರಿಂದ ಅನಿವಾರ್ಯವಾಗಿ ಕೆಲಸ ನಿಂತಿತು. 1986ರ ಮೇ ನಲ್ಲಿ ಮತ್ತೇ ಆರಾಧನಾ ವಿಧಿಯ ಪುಸ್ತಕರಚನೆಗೆ ಕೈಹಾಕಿದವಳೇ ಶತಪಂಚಮಿಯ ವೇಳೆಗೆ ಮುಗಿಸಿದೆ. ಆಗ ನನ್ನ ಮನಸ್ಸಿಗೆ ಶತದೇವಿ ಈ ಕೆಲಸ ಮಾಡಿಸಲೆಂದೇ ನನಗೆ ಪುನರ್ಜನ್ಮ ಕೊಟ್ಟಿರಬೇಕು ಎನಿಸಿತು. ಇದರಿಂದಲೇ ನನ್ನ ಅಪಮೃತ್ಯುವನ್ನು ಗೆಲ್ಲಲು ಆಯಿತು ಎನ್ನಿಸಿತು. ಹೀಗಾಗಿ ಇದರ ಶೀರ್ಷಿಕೆಯನ್ನು ಜಂಬೂದ್ವೀಪ ಆರಾಧನೆಯ ಅಪರನಾಮ "ಮಹಾಮೃಂತ್ಯುಜಯ ಆರಾಧನೆ" ಎಂದು ಹೆಸರಿಟ್ಟು ಪ್ರಶಸ್ತಿಯಲ್ಲಿ ಇದರ ಉಲ್ಲೇಖ ಮಾಡಿದ್ದೇನೆ.

1986ರ ಜೂನ್ 12ರಂದು ಜಂಬೂದ್ವೀಪ ಆರಾಧನೆ, ಧವಲ ಪುಸ್ತಕ, ಮತ್ತು ಮೂಲಾಚಾರದ ಪುಸ್ತಕಗಳನ್ನು ಪಲ್ಲಕ್ಕಿಯಲ್ಲಿ ವಿರಾಜಮಾನಗೊಳಿಸಿ ಮೋತಿಚಂದನು ಶೋಭಾಯಾತ್ರೆ ಮಾಡಿಸಿ ಮಧ್ಯಾಹ್ನ ಶತಸ್ಕಂಧದ ಆರಾಧನೆ ಆಗಿ ಶತಪಂಚಮಿ ಸಮಾರಂಭ ಮುಗಿಯಿತು.

ಶ್ವೇತಾಂಬರ ಸಾಧು ಸಾಧ್ವಿಯರ ಸದ್ಭಾವನೆ

ನನ್ನ ಅನಾರೋಗ್ಯದ ನಿಮಿತ್ತ ದರ್ಶನಕ್ಕಾಗಿ ಹಲವಾರು ಪ್ರಬುದ್ಧ ಜನರು ಬಂದು ಸಂತೈಸತೊಡಗಿದರು. (ಹೀಗೆ) ವಿಶೇಷವಾಗಿ ಬಂದವರಲ್ಲಿ ಶ್ವೇತಾಂಬರ ಸಾಧ್ವಿಯರು ಇದ್ದರು. ಅವರಂತು ಸಂತೈಸುತ್ತಾ ನೋಡಿ ಮಾತಾಜಿ ನಿಮ್ಮಿಂದ ಜನಗಳಿಗೆ ಮಹಾನ್ ಉಪಕಾರ ಆಗಿದೆ, ಆಗುತ್ತಿದೆ ಆಗಬೇಕಾಗಿದೆ ಆದ್ದರಿಂದ ನೀವು ಬದಕನ್ನು ನಿಮ್ಮೊಬ್ಬರದೇ ಎಂದು ತಿಳಿಯಬೇಡಿ ನೀವು ಜನಗಳಿಗೆ ಮಹಾನ್ ವ್ಯಕ್ತಿಯಾಗಿದ್ದರು ಅವರ ಉದ್ಧಾರಕ್ಕೆ ನಿಮ್ಮ ಮಾರ್ಗದರ್ಶನ ಅವಶ್ಯಕತೆ ಇದೆ ನಿಮ್ಮ ದೇಹವನ್ನು ಸಂರಕ್ಷಿಸಲು ದಯಮಾಡಿ ದಿನಕ್ಕೆ

---

1. ಈ ಪ್ರಕರಣವನ್ನು 1988ರಲ್ಲಿ ಬರೆದಿದ್ದೆ.

ಎರಡುಬಾರಿಯಾದರು ಔಷಧಿಯನ್ನು ತೆಗೆದುಕೊಂಡು ಬೇಗ ಗುಣಮುಖರಾಗಿ ನಂತರ ಪ್ರಾಯಶ್ಚಿತ್ತವನ್ನು ತೆಗೆದುಕೊಳ್ಳಬಹುದೆಂದು ವಾತ್ಸಲ್ಯಪೂರ್ವಕವಾಗಿ ಹೇಳತೊಡಗಿದರು. ಅದಕ್ಕೆ ನಾನು ದಿಗಂಬರ ಪಂಥದಲ್ಲಿ ಮುನಿಚರ್ಯೆಯು ಬಹಳ ಕಠಿಣವಾದುದು. ನಾವು ಸಮಾಧಿ ಮರಣವನ್ನು ಬಯಸುತ್ತೇವೆಯೆ ಹೊರತು ನಮ್ಮ ವ್ರತಗಳ ಭಂಗವನ್ನಲ್ಲ. ಈ ಸಂಯಮದ ಜೀವನ ನಮಗೆ ಮತ್ತೆ ಸಿಗುವುದು ದುರ್ಲಭ ಈ ಶರೀರವಾದರೂ ಅನಂತ ಸಲ ಸಿಕ್ಕಿದೆ.

ಆದರೂ ಇವರ ಸಲಹೆಗಳನ್ನು ಕೇಳುವಾಗ ಯೋಚನೆಯಲ್ಲಿ ಕುಂದುಕುಂದರ ವಚನ ಜ್ಞಾಪಕಕ್ಕೆ ಬಂದಿತು.

ಆದಹಿದಂ ಕಾದವ್ವಂ ಜಇ ಸಕ್ಕಇ ಪರಹಿದಂ ಚ ಕಾದವ್ವಂ ।
ಆದಹಿದ ಪರಹಿದಾದೋ ಆದಹಿದೇ ಸುಟ್ಠು ಕಾದವಂವ ॥

ಆತ್ಮಹಿತವನ್ನು ಮಾಡಿಕೊಳ್ಳಬೇಕು. ಒಂದು ವೇಳೆ ಶಕ್ತಿ ಇದ್ದರೆ ಪರಹಿತವನ್ನು ಮಾಡಬೇಕು. ಆತ್ಮಹಿತ ಮತ್ತು ಪರ ಹಿತಗಳಲ್ಲಿ ಆತ್ಮಹಿತಕ್ಕೆ ಹೆಚ್ಚು ಗಮನ ಕೊಡಬೇಕು. ಇದನ್ನು ಪೂಜ್ಯಪಾದರು

ಪರೋಪಕೃತಿಮುತ್ಸೃಜ್ಯ ಸ್ವೋಪಕಾರಪರೋ ಭವ ।
ಉಪಕುರ್ವನ್ ಪರಸ್ಯಜ್ಞೋ ದೃಶ್ಯಮಾನಸ್ಯ ಲೋಕವತ್ ॥

ಹೇ ಭವ್ಯನೇ ನೀನು ಪರೋಪಕಾರವನ್ನು ಬಿಟ್ಟು ನಿನ್ನ ಉಪಕಾರದಲ್ಲಿ ತತ್ಪರನಾಗು. ನೋಡು ಪ್ರಪಂಚದಲ್ಲೆಲ್ಲ ಮೂಢರು ಬೇರೆಯವರಿಗೆ ಉಪಕಾರ ಮಾಡುವುದರಲ್ಲಿ ತಮ್ಮ ಕಡೆಗೆ ಗಮನವನ್ನೆ ಕೊಡುವುದಿಲ್ಲವೆಂದು ಹೇಳಿದ್ದಾರೆ.

ಆಗ ನನಗೆ ಅನ್ನಿಸುತ್ತಿತ್ತು. ನನ್ನ ಪೂರ್ವಜನ್ಮದ ಪುಣ್ಯದ ಪ್ರಭಾವವೇ ಇರಬೇಕು. 8-10 ತಿಂಗಳ ಕಾಯಿಲೆಯಲ್ಲೂ ನನ್ನ ಮನಸ್ಸಿಗೆ ಚಾರಿತ್ರವನ್ನು ಕಳಂಕ ಮಾಡಿಕೊಳ್ಳುವ ದುರ್ಬಲ ಮನಸ್ಸು ಬರಲಿಲ್ಲವಲ್ಲ ನನ್ನ ಪರಿವಾರದವರೆ ಆಗಲಿ ಶಿಷ್ಯವರ್ಗದವರೇ ಆಗಲಿ ಪರಿಚರ್ಯೆ ಮಾಡುವಾಗ ಸಂಯಮಕ್ಕೆ ಯಾವುದೇ ತೊಂದರೆ ಕೊಡಲಿಲ್ಲ.

ಇಂದ್ರಧ್ವಜ ಆರಾಧನೆ ಹಾಗೇ ಶಿಕ್ಷಣ ಶಿಬಿರ

1986ನೇ ಜೂನ್ 19ರಂದು ಹೋಂಬ್ರೆಡ್‌ನ ಅಮರಚಂದ ಜೈನರು ಮೂರನೆಯ ಬಾರಿಗೆ ಇಂದ್ರಧ್ವಜ ಆರಾಧನೆಯನ್ನು ಮಾಡಿಸಿದರು. ಬೆಳಗ್ಗೆ 5-30ಗೆ ಆರಾಧನೆಯ ಕಾರ್ಯಕ್ರಮಗಳು ಪ್ರಾರಂಭವಾಯಿತು. ಇದರ ಮಧ್ಯೆ ಶ್ರೀ ಅಮರಚಂದರು ವಿದ್ವಾಂಸರಿಗಾಗಿ ಒಂದು ಪ್ರಶಿಕ್ಷಣ ಶಿಬಿರವನ್ನು ಏರ್ಪಡಿಸಿದ್ದರು. ಫಿರೋಜಾಬಾದಿನ ನರೇಂದ್ರ ಪ್ರಕಾಶಜೈನರು ಕುಲಪತಿಗಳಾಗಿದ್ದರು. ತತ್ವಾರ್ಥಸೂತ್ರ ಹಾಗು ದಶಧರ್ಮದ ಬಗ್ಗೆ ಶಿಕ್ಷಣ ಶಿಬಿರ ನಡೆಯಿತು. 29ರವರೆಗೆ ಶಿಕ್ಷಣ ಶಿಬಿರ ನಡೆಯಿತು. ಶ್ರೇಯಾಂಸಕುಮಾರ, ನರೇಂದ್ರ ಪ್ರಕಾಶಜೈನರು ಶಿಕ್ಷಣವನ್ನು ಕೊಟ್ಟರು ಸುಮಾರು 40 ಜನ ವಿದ್ವಾಂಸರು ಲಾಭ ಪಡೆದರು.

1986ರ ಜುಲೈ ಸಂಚಿಕೆಯಲ್ಲಿ "ಸಮ್ಯಗ್‌ಜ್ಞಾನ ಅಂಕಣ"ದಲ್ಲಿ ಸಾಮಾಯಿಕ ವಿಧಿಯನ್ನು ಶಾಸ್ತ್ರೋಕ್ತ ವಿಧಿಯಿಂದ ಕೊಡಲಾಗಿತ್ತು. ಇದರ ವಿಧಿ ಮತ್ತು ಧ್ಯಾನದ ಸಾಧನೆಯ ಶಿಕ್ಷಣವನ್ನು ಕೊಟ್ಟಿದ್ದರಿಂದ ಎಲ್ಲರು ಬಹಳ ಪ್ರಭಾವಿತರಾದರು. ನರೇಂದ್ರ ಪ್ರಕಾಶ ಮತ್ತುಕೆಲವು ಮಹಿಳೆಯರು ತಿಂಗಳವರೆಗೆ ಸಾಧನೆಮಾಡುವ ನಿಯಮವನ್ನು ತೆಗೆದುಕೊಂಡರು.

ಸರಧನದಲ್ಲಿ ಶಿಬಿರ

ಹಸ್ತಿನಾಪುರದ ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದ ವತಿಯಿಂದ ಮೇ 14 ರಿಂದ 21ರವರೆಗೆ ಸರಧನದಲ್ಲಿ ಶಿಕ್ಷಣಶಿಬಿರವನ್ನು ಆಯೋಜಿಸಲಾಗಿತ್ತು. ಸ್ವಯಂ ಮೋತಿಚಂದರೇ ಬಾಲಕರಿಗೂ ಯುವಕ ಯುವತಿಯರಿಗೂ ಅಲ್ಲದೆ ಮಧ್ಯಮ ವಯಸ್ಸಿನವರಿಗೂ ಒಳ್ಳೆಯ ಧಾರ್ಮಿಕ ಸಂಸ್ಕಾರವನ್ನು ಉಂಟುಮಾಡಿದರು ಶಿಕ್ಷಣ ಪಡೆದವರು ನನ್ನ ಹತ್ತಿರ ಬಂದು ಶ್ಲಾಘನೆಯನ್ನು ಮಾಡಿದರು.

ಜಂಬೂದ್ವೀಪದಲ್ಲಿ ಜಿನಪ್ರತಿಮೆಗಳನ್ನು 1985ರ ಮೇ 2ರಂದೇ ಸುಮೇರ ಪರ್ವತವಲ್ಲದೆ 62 ಜಿನಮಂದಿರಗಳಲ್ಲಿ 122 ದೇವಭವನಗಳಲ್ಲಿ ಸಿದ್ಧ ಭಗವಾನರ ಪ್ರತಿಮೆಗಳನ್ನೂ ಸ್ಥಾಪಿಸಲಾಗಿತ್ತು. ಜಿನಪ್ರತಿಮೆಗಳನ್ನು ಬಾಗಿಲು ಇರುವ ಗೂಡುಗಳಲ್ಲೆ ಇಡಬೇಕೆಂದಿದ್ದೆ. ಬಾಗಿಲುಗಳಿಗೆ ಆರ್ಡರ್ ಕೊಟ್ಟಿದ್ದರೂ ಬಾಗಿಲುಗಳು ಸಿದ್ಧವಾಗಿರಲಿಲ್ಲ, ಹೀಗಾಗಿ ಪ್ರತಿಷ್ಠಾಚಾರ್ಯರಾದ ಬ್ರ. ಸೂರಜಮಲ್ಲರ ಅನುಮತಿ ಪಡೆದು ಎಲ್ಲಾ ಪ್ರತಿಮೆಗಳನ್ನು ರತ್ನತ್ರಯ ನಿಲಯದ ಕೊಠಡಿಯೊಳಗೆ ಇರಿಸಲಾಗಿತ್ತು. ಏಕೆಂದರೆ ಇಲ್ಲಿ ಮಂಗಗಳ ಕಾಟವು ಜಾಸ್ತಿ ಇತ್ತು ಜೈನರಿಗಿಂತ ಜೈನೇತರರ ಯಾತ್ರಿಗಳ ಸಂಖ್ಯೆಯು ಜಾಸ್ತಿಇತ್ತು ಗಾಜಿನ ಬಾಗಿಲನ್ನು ಹಾಕಿಸುವ ಪ್ರಯತ್ನವು ನಡೆಯುತ್ತಿತ್ತು. ಬಾಗಿಲುಗಳು ಸಿದ್ಧವಾಗುತ್ತಿದ್ದಂತೆ ಪೀಠವನ್ನು ಶುದ್ಧಿಗೊಳಿಸಿ ಮುಹೂರ್ತ ನೋಡಿ ಮೂರ್ತಿಗಳನ್ನು ಮತ್ತೆ ಸ್ಥಾಪಿಸುವ ಕಾರ್ಯವು ನಡೆಯತೊಡಗಿತು.

ಮೊದಲು ವೈಶಾಖ ಶುಕ್ಲ ಅಕ್ಷಯ ತೃತೀಯದ ದಿನ ಪೀಠಶುದ್ಧಗೊಳಿಸಿ ಕೆಲವು ಪ್ರತಿಮೆಗಳನ್ನು ಮತ್ತೆ ಪ್ರತಿಷ್ಠಾಪಿಸಲಾಯಿತು. ಇನ್ನು ಎರಡನೆಯ ಹಂತ ಜೇಷ್ಠಮಾಸದ ಶ್ರುತ ಪಂಚಮಿಯಂದು ಕೆಲವು ಪ್ರತಿಮೆಗಳ ಸ್ಥಾಪನೆಯನ್ನು ಮೋತಿಚಂದ ಮತ್ತು ರವೀಂದ್ರರೇ ಸೇರಿ ಮರುಸ್ಥಾಪಿಸಿದರು. ಇನ್ನು ಮೂರನೆಯಬಾರಿ ಆಷಾಢ ಶುದ್ಧ ದಶಮಿ ಅಂದರೆ ಜುಲೈ 17ರಂದು ಎಲ್ಲಾ ಮೂರ್ತಿಗಳನ್ನು ಸುರಕ್ಷಿತವಾಗಿ ಸ್ಥಾಪಿಸಿದ ದಿನ ನನಗೆ ಅತ್ಯಂತ ನೆಮ್ಮದಿ ತಂದಿದೆ. ನನಗೆ ಆನೆ ಹೋಗಿ ಬಾಲ ಸಿಕ್ಕಿ ಹಾಕಿಕೊಂಡಂತೆ ದೊಡ್ಡ ಕೆಲಸಗಳು ಶೀಘ್ರವಾಗಿಯು ನಿರಾಂತಕವಾಗಿಯು ಆಗಿ ಸಣ್ಣ ಕೆಲಸಕ್ಕೆ ಸುಮಾರು ಒಂದು ವರ್ಷ ತೆಗೆದುಕೊಂಡಿದ್ದು ನೋಡಿ ಸ್ವಲ್ಪ ಆತಂಕವಾಗಿದ್ದು 184 ಪ್ರತಿಮೆಗಳ ಮಂದಿರಕ್ಕೂ ಗಾಜಿನ ಬಾಗಿಲುಗಳು ಸಿದ್ಧವಾಗಿ ಮರುಸ್ಥಾಪನೆಗೆ ಒಂದು ವರ್ಷವೇ ಹಿಡಿಯಿತು.

ಇಂದ್ರಧ್ವಜ ಆರಾಧನೆ

1986ನೇ ಜುಲೈ 3ರಂದು ದರಿಯಾಬಾದಿನಲ್ಲಿರುವ ಮಾಧುರಿಯ ಅಕ್ಕ ಕಾಮಿನಿಯು ಇಂದ್ರಧ್ವಜ ಆರಾಧನೆಯನ್ನು ಮಾಡಿಸಲು ಮಾಧುರಿಯನ್ನು ಕರೆದೊಯ್ದಳು. ಇಲ್ಲಿ ಹತ್ತಿನಾಪುರದಲ್ಲಿ ತ್ರಿಮೂರ್ತಿ ಭವನದಲ್ಲಿ ದೆಹಲಿಯ ಆನಂದ ಪ್ರಕಾಶ, ಪ್ರಕಾಶ ಚಂದ ಜೈನ ..... ಸುಭಾಷಚಂದ ಜೈನ ಎರಡು ಮಂಡಲ ಪೂಜೆಯನ್ನು

ಜುಲೈ 14ರಂದು ಇಂದ್ರಧ್ವಜ ಆರಾಧನೆಯನ್ನು ಮಾಡಿಸಿದರು ಮಾಧುರಿಯ ಅಣ್ಣಂದಿರು ಪರಿವಾರ ಸಮೇತರಾಗಿ ಬಂದಿದ್ದರು. ಇವರ ಮಕ್ಕಳಿಗಾಗಿ ಮೋತಿಚಂದನು ಶಿಕ್ಷಣ ಶಿಬಿರವನ್ನು ಮಾಡಿದ್ದರಿಂದ ಇನ್ನಿತರ ಮಕ್ಕಳು ಲಾಭ ಪಡೆದರು ಇಡೀ ವಾತಾವರಣ ಧಾರ್ಮಿಕತೆಯಿಂದ ತುಂಬಿತು. ಜುಲೈ 10ಕ್ಕೆ ನನ್ನ ಚಾತುರ್ಮಾಸ ಸ್ಥಾಪನೆಯು ಆಗಿತ್ತು. ಜುಲೈ 22ರಂದು ಹವನ, ರಥ ಯಾತ್ರೆಗಳು ಮುಗಿದವು. ಸೆಪ್ಟೆಂಬರ್‌ನಲ್ಲಿ ಉತ್ತರ ಪ್ರದೇಶದ ಬಹರಾಡದಲ್ಲಿ ಶ್ರೀಮತಿ ಪ್ರೇಮಚಂದರವರ ಕುಟುಂಬದವರು ಮಾಡಿಸಿದ್ದರು. ಈ ಕಾರ್ಯಕ್ರಮಕ್ಕೆ ರವೀಂದ್ರ ಮೋತಿಚಂದ ಮತ್ತು ಮಾಧುರಿಯವರು ಅಲ್ಲಿಗೆ ಹೋಗಿ ಧರ್ಮ ಪ್ರಭಾವನೆಯನ್ನು ಮಾಡಿಬಂದರು ಸ್ಥಳೀಯ ಜನರು ಧಾರ್ಮಿಕ ಲಾಭ ಪಡೆದರು ಮಾಧುರಿಯ ಪ್ರವಚನದಿಂದ ಅತ್ಯಂತ ಪ್ರಭಾವಿತರು ಆಗಿದ್ದರು.

ಆರನೇ ಖಂಡ

ಆರನೇ ಖಂಡ

೮೭

ಕಲ್ಪದ್ರುಮ ಆರಾಧನೆ

1983ರಿಂದ ನನ್ನ ಮನಸ್ಸಿಗೆ ಕಲ್ಪದ್ರುಮ ಆರಾಧನೆಯನ್ನು ರಚಿಸಬೇಕೆಂಬ ಭಾವನೆ ಬರುತ್ತಿತ್ತು. ಅದರ ರೂಪರೇಖೆಯನ್ನು ಡೈರಿಯಲ್ಲಿ ಬರೆದಿಟ್ಟುಕೊಂಡಿದ್ದೆ. 1985ರಲ್ಲಿ ಜಂಬೂದ್ವೀಪ ಪ್ರತಿಷ್ಠೆಗೆ ಮೊದಲು ನಾಂದಣಿಯ ಭಟ್ಟಾರಕ ಜಿನಸೇನಸ್ವಾಮಿಗಳು ಇಲ್ಲಿ ಬಂದಾಗ ನನ್ನಲ್ಲಿ ಮಾತಾಜೀ ತಾವು ಇಂದ್ರಧ್ವಜ ಆರಾಧನೆಯನ್ನು ರಚಿಸಿದಂತೆ ಕಲ್ಪಧ್ರುಮ ಆರಾಧನೆಯ ಬಗ್ಗೆ ಏನಾದರೂ ಯೋಚಿಸಿದ್ದೀರ ಎಂದು ಕೇಳಿದರು ಅದಕ್ಕೆ 2-3 ವರ್ಷದಿಂದ ಯೋಚಿಸಿ ರೂಪರೇಖೆ ಹಾಕಿಕೊಂಡಿದ್ದೇನೆ ಈಗ ಪ್ರತಿಷ್ಠಾ ಕಾರ್ಯ ನಡೆಯಲಿ ನಂತರ ಯೋಚಿಸುತ್ತೇನೆ ಎಂದಿದ್ದೆ.

ಅನಂತರ ನನ್ನ ಅಸ್ವಸ್ಥತೆಯಿಂದಾಗಿ ಒಮ್ಮೆ ಮಾಧುರಿಯ ಹತ್ತಿರ ಹೇಳಿದೆ ಮಾಧುರಿ ಕಲ್ಪಧ್ರುಮ ಆರಾಧನೆಯ ಬಗ್ಗೆ ರೂಪರೇಖೆಯನ್ನು ಹಾಕಿ ಇಟ್ಟಿದ್ದೇನೆ ಮುಂದೆ ನೀನು ಆ ಕಾರ್ಯವನ್ನು ಪೂರ್ಣಗೊಳಿಸಬೇಕೆಂದು ಹೇಳಿದಾಗ ಅವಳು ಮಾತಾಜಿ ಈಗ ಹುಷಾರಾಗುತ್ತಿದ್ದೀರಲ್ಲ ತಾವೇ ಇದನ್ನು ರಚಿಸುತ್ತೀರ ಇದಲ್ಲದೆ ಇನ್ನು ಬಹಳಷ್ಟು ಕೆಲಸ ನಿಮ್ಮಿಂದ ಆಗೇ ಆಗುತ್ತದೆ ಎಂದು ಭರವಸೆಯನ್ನು ಕೊಟ್ಟಿದ್ದಳು.

ನಿಧಾನವಾಗಿ ಚೇತರಿಕೆ ಕಾಣಿಸುತ್ತಿದ್ದಂತೆ ಆರಾಧನೆಯ ಬಗ್ಗೆ ಮನಸ್ಸು ಎಳೆಯುತ್ತಿತ್ತು. 1986 ಜುಲೈ 8ರಂದು ರಾತ್ರಿ ನನ್ನ ಮನಸ್ಸಿಗೆ ಅದರ ರೂಪರೇಖೆಗಳೇ ಸ್ಪಷ್ಟವಾಗಿ ಗೋಚರಿಸತೊಡಗಿತು. ಅದರಂತೆ ಬೆಳಗ್ಗೆ ಎದ್ದವಳೇ ಪ್ರಾತಃವಿಧಿ ಮುಗಿಸಿ, ಜುಲೈ 9ರಂದು ಬೆಳಗ್ಗೆ 5-45ಕ್ಕೆ ಲೇಖನ ಹಿಡಿದು ರತ್ನತ್ರಯ ನಿಲಯದಲ್ಲಿ ಸುಮೇರುವಿನ ಎದುರಿಗೆ ಕುಳಿತು "ಓಂ ನಮಃ ಸಿದ್ಧೇಭ್ಯಃ" ಎಂದು ಬರೆಯಲು ಪ್ರಾರಂಭಿಸಿದೆ. ಆಗ ನನಗೆ ಆದ ಆನಂದವನ್ನು ಬರೆಯಲು ಶಬ್ದಗಳೇ ಸಿಗುತ್ತಿಲ್ಲ. ವ್ಯಕ್ತಪಡಿಸಲಾರದ ಸಂತೋಷ ಉಂಟಾಯಿತು. ಲೇಖನಿ ಧಾರಾಪೂರ್ವಕವಾಗಿ ಚಲಿಸತೊಡಗಿತು. ಸಮವಸರಣದ ಪ್ರಕರಣದಲ್ಲಿ ತಿಲೋಯಪಣ್ಣತ್ತಿ, ಆದಿಪುರಾಣ, ಹರಿವಂಶ ಪುರಾಣವನ್ನು ಸಮವಸರಣ ಸ್ತೋತ್ರದಲ್ಲಿ ತಿಳಿಸುತ್ತಾ ಬಂದೆ.

ನನ್ನ ಮನಸ್ಸಿಗೆ ಹಲವಾರು ಬಾರಿ ಯೋಚನೆ ಬರುತ್ತಿತ್ತು. ಮಾನತುಂಗಾಚಾರ್ಯರು ಭಕ್ತಾಮರ ಸ್ತೋತ್ರವನ್ನುರಚಿಸಿ 48 ಬೀಗಮುದ್ರೆಗಳನ್ನು ಕಳಚಿಸಿದರು ಮತ್ತು ಶ್ರೀವಾದಿರಾಜ ಮುನಿರಾಜರು ಏಕೀಭಾವಸೂತ್ರದ ರಚನೆ ಮಾಡಿ ತಮ್ಮ ಶರೀರದಲ್ಲಿ ಉಂಟಾಗಿದ್ದ ಕುಷ್ಠರೋಗದಿಂದ ಮುಕ್ತರಾಗಿ ಹೊಂಬಣ್ಣದ ಶರೀರವನ್ನು ಹೊಂದಿದರು. ಇಂತಹದರಲ್ಲಿ ನಾನು ಸಮವಸರಣ ವೈಭವ"ದಲ್ಲಿ 24 ತೀರ್ಥಂಕರರ ಭಕ್ತಿ ಪೂಜೆ ಮಂತ್ರ ಮತ್ತು ಜಯಮಾಲೆಯ ರಚನೆಯನ್ನು ಮಾಡಿ ನಾನು ನನ್ನ ಅಶುಭ ಕರ್ಮವನ್ನು ಕಳೆದುಕೊಳ್ಳಲಾರೆನೆ ಒಂದು ವೇಳೆ ನನ್ನ ಶರೀರ ರೋಗದಿಂದ ಮುಕ್ತವಾದರೆ ಆಶ್ಚರ್ಯವೇನು ಇಲ್ಲ.

ನಿಜವಾಗಿಯು ಆರಾಧನೆಯನ್ನು ರಚನೆ ಮಾಡುವುದರಲ್ಲಿ ಉಂಟಾಗುತ್ತಿದ್ದ ಏಕಾಗ್ರತೆ ತನ್ಮಯತೆ ಆನಂದವೆಷ್ಟು ಇದು ಅನಿರ್ವಚನೀಯವಾದುದು. ನನಗೆ ಬಹುಷಃ ಸಾಮಾಯಿಕದಲ್ಲಿಯು ಇಷ್ಟೊಂದು ಏಕಾಗ್ರತೆ ಬರುತ್ತಿರಲಿಲ್ಲ ಅಷ್ಟು ಏಕಾಗ್ರತೆ ಈ ಪೂಜಾ ವಿಧಾನದ ಪಂಕ್ತಿಗಳನ್ನು ರಚಿಸುವುದರಲ್ಲಿ ಅನುಭವವಾಗುತ್ತಿತ್ತು. ಈ ವಿಧಾನದಲ್ಲಿ 14 ಪೂಜೆಗಳು ಬಂದಿವೆ. 24ರ ಸಂಖ್ಯೆಯು 108ಸಲ ಬಂದಿದೆ. ಇದನ್ನು ಪ್ರಸ್ಥಾಪನೆಯಲ್ಲಿ ಸ್ಪಷ್ಟಪಡಿಸಿದ್ದೇನೆ.

ಈ ಆರಾಧನೆಯನ್ನು 1986ರ ಅಕ್ಟೋಬರ್ 17ರಂದು ಬೆಳಗ್ಗೆ 6-10 ಕ್ಕೆ ಮುಕ್ತಾಯ ಮಾಡಿದೆ. ತಕ್ಷಣ ಮಹಾವೀರ ಸ್ವಾಮಿಯನ್ನು ದರ್ಶನ ಮಾಡಿ ಆನಂದ ತುಂಬಿತುಳುಕಿ ಅದೇ ದಿನ "ತ್ರಿಲೋಕವಿಧಾನ"ದ ರಚನೆಯನ್ನು ಪ್ರಾರಂಭ ಮಾಡಿದೆ ಏಕೆಂದರೆ 1976ರಲ್ಲಿ ನಾನು ತ್ರಿಲೋಕವಿಧಾನದ ರಚನೆಯನ್ನು ಕೈಗೆತ್ತಿಕೊಂಡವಳು, ಮೋತಿಚಂದ ಮತ್ತು ರವೀಂದ್ರರ ಕೋರಿಕೆಯಂತೆ ಇಂದ್ರಧ್ವಜ ಆರಾಧನೆಯನ್ನು ರಚಿಸಿದೆ ಆಗಿನಿಂದ ತ್ರಿಲೋಕ ಆರಾಧನೆ ಮಾಡಬೇಕೆಂಬ ಭಾವನೆಗೆ ಈ ದಿನ ಸಮಯ ಬಂದಿತು.

ಮಧ್ಯಾಹ್ನದಲ್ಲಿ ರಚನೆಯನ್ನು ಗಾಜಿನ ಪೆಟ್ಟಿಗೆಯಲ್ಲಿಟ್ಟು ಪಂಚಾಮೃತ ಅಭಿಷೇಕ ಮಾಡಲಾಯಿತು. ಮೋತಿಚಂದನು ಶತಸ್ಕಂಧ ಆರಾಧನೆಯನ್ನು ಮಾಡಿ ಕಲ್ಪದ್ರುಮ ಆರಾಧನೆಯ ಗ್ರಂಥವನ್ನು ಪೂಜಿಸಿದರು.

ಜನ್ಮಜಯಂತಿ ಸಮಾರಂಭ

ಶರದಪೂರ್ಣಿಮೆಯಂದು ನನ್ನ ಜನ್ಮಜಯಂತಿಯಂದು ಮಾಧುರಿ ಮೊದಲಾದವರು ನನ್ನ ಚರಣಗಳನ್ನು ಹಾಲಿನಿಂದ ತೊಳೆದು ರಾತ್ರಿ 53 ದೀಪಗಳಿಂದ ಆರತಿ ಮಾಡಿ ತಮ್ಮಭಕ್ತಿಯನ್ನುಅರ್ಪಿಸಿದರು. ದೆಹಲಿಯ ಭಕ್ತರು ಶ್ರದ್ಧಾಭಕ್ತಿಯಿಂದ ಅಕ್ಟೋಬರ್ 19ರಂದು ಜನ್ಮ ಜಯಂತಿಯ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಅಕ್ಟೋಬರ್ 17ರಿಂದಲೇ ಮೂರು ದಿನಗಳ ಕಾಲ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಹಸ್ತಿನಾಪುರಕ್ಕೆ ದೆಹಲಿ, ಮೇರಠ ಮವಾನ, ಸರಧನ ಮುಂತಾದ ಸ್ಥಳಗಳಿಂದ ಜನರು ಬಸ್ಸು ಮಾಡಿಕೊಂಡು ಬಂದು ಸೇರಿದ್ದರು. ಸನಾವದ್ ಮತ್ತು ಟಿಕೈತ ನಗರದಿಂದಲೂ ಭಕ್ತಗಣ ಬಂದು ಬೆಳಗ್ಗೆ 6ರಿಂದ 10ಗಂಟೆಯವರೆಗೆ ಪೂಜೆ, ನಶಿಯಾದ ದರ್ಶನ ಮಾಡಿದರು. ಇಲ್ಲಿಯವರೇ ಆದ ಅನಂತವೀರ್ಯರು ಬಂದಿದ್ದು ಯಾತ್ರೆಗಳ ಊಟ ತಿಂಡಿಯ ವ್ಯವಸ್ಥೆ ಮಾಡಿದರು. ಪೆಂಡಾಲಿನ ವ್ಯವಸ್ಥೆಯನ್ನು ಮಾಡಿಸಿ ಮಧ್ಯಾಹ್ನ ದೆಹಲಿಯ ಇಲಮಚಂದ ಪಾರ್ಟಿ ಹಾಗೂ ಭೂಪಾಲಿನ ಅಶೋಕಕುಮಾರರವರಿಂದ ಸಂಗೀತ ಏರ್ಪಡಿಸಿದ್ದರು ಅಲ್ಲಿಗೆ ಆಗಮಿಸಿದ್ದ ವಿದ್ವಾಂಸರಿಂದ ಮಂಗಳಾಚರಣದೊಂದಿಗೆ ಭಾಷಣವು ಆಯಿತು. ನನ್ನ ಬಗ್ಗೆ ಎಲ್ಲರು ವಿನಯಾಂಜಲಿಯನ್ನು ಅರ್ಪಿಸುತ್ತಾ ನನ್ನ ದೀರ್ಘಾಯಸ್ಸಿಗಾಗಿ ಹರಸಿದರು.

ವೇದಿಕೆಯಲ್ಲಿ ದೆಹಲಿಯ ರಾಜಕುಮಾರ್ ಜೈನರು 53 ವಿದ್ಯುತ್‌ದೀಪ ಬೆಳಗಿಸಿದ್ದರು. ಟಿಕೈತನಗರದ ಮದನಕುಮಾರ ಜೈನರು ಹಸ್ತಿನಾಪುರದ 53 ಜನ ಬಡ ಮಹಿಳೆಯರಿಗೆ ವಸ್ತ್ರದಾನವನ್ನು ಮಾಡಿದರು ಅರುಣಕುಮಾರ ಜೈನರ ಪತ್ನಿ ರೇಣುಜೈನ ಕೂಡ 53 ಸೀರೆಗಳನ್ನು ಹಂಚಿದರು.ದೆಹಲಿಯ ಮೋತಿಚಂದ್ ಜೈನ ಕಾಲೀವಾಲರು 53ಸೀರೆಗಳ ಜೊತೆ 53ತಟ್ಟೆಗಳನ್ನು ವಿತರಿಸಿದರು.

ನನಗೆ ಪಿಂಛಿ ಕಮಂಡಲು ಮತ್ತು ಶಾಸ್ತ್ರವನ್ನು ಅರ್ಪಿಸಲು ಹರಾಜು ಕೂಗಲಾಯಿತು. ಹೊಸಪಿಂಛಿ ಕೊಟ್ಟು ಹಳೆಯ ಪಿಂಛಿಯನ್ನು ಪಡೆದರು. ಹಾಗೇ ಶಾಸ್ತ್ರದಾನ ಕಾಲುತೊಳೆಯುವುದು ಆರತಿ ಎತ್ತುವುದು

ಎಲ್ಲವನ್ನುಪೈಪೋಟಿಯಿಂದ ಹರಾಜಿನಲ್ಲಿ ಪಡೆದು ಧನ್ಯರಾದರು. ನಾನು ಕೊನೆಗೆ ಮಂಗಳ ಆಶೀರ್ವಾದವನ್ನು ಮಾಡಿದೆ.

ಇದರ ನಂತರ ರಥಯಾತ್ರೆಯು ಕೂಡ ಹರಾಜಾಯಿತು. ಟಿಕೈತನಗರದ ಭೋಟೆಶಾಹರು ನನ್ನಿಂದ ರಚಿತವಾದ ಕಲ್ಪದ್ರುಮ ಆರಾಧನೆಯ ಗ್ರಂಥವನ್ನು ಹಿಡಿದು ರಥ ಏರುವ ಭಾಗ್ಯವನ್ನು ಪಡೆದರು. ರಥಯಾತ್ರೆ ನಡೆದು ಹಿಂದಿರುಗಿದ ಮೇಲೆ ಭಗವಂತನಿಗೆ ಅಭಿಷೇಕ ಮಾಲಾರ್ಪಣೆಯಾಗಿ ಕಾರ್ಯಕ್ರಮ ಮುಗಿಯಿತು. ಬೇರೆ ಕಡೆಯಲ್ಲಿಯು ಜನ್ಮಜಯಂತಿಯ ಆಚರಣೆಯ ಸುದ್ದಿ ಬಂದಿದ್ದವು.

ಸಿದ್ಧ ಮತ್ತು ಸಿದ್ಧಿಶಬ್ದ ಮಹತ್ವ

1954ರಲ್ಲಿ ನಾನು ಕಾತಂತ್ರ ವ್ಯಾಕರಣವನ್ನುಓದುವ ಸಮಯದಲ್ಲಿ "ಸಿದ್ಧೋವರ್ಣ ಸಮಾಮ್ನಾಯಃ" ಅಂದರೆ ಪ್ರಾರಂಭದಲ್ಲಿಸಿದ್ಧ ಶಬ್ದ ಬಂದರೆ ಮಂಗಳ ಪ್ರದವಾದುದು ಎಂದು ಇದೇ ರೀತಿ 1957ರಲ್ಲಿ ಜೈನೇಂದ್ರ ವ್ಯಾಕರಣವನ್ನು ಓದಿದ್ದೆ ಅದರ ಪ್ರಾರಂಭದ ಸೂತ್ರದಲ್ಲಿ ಸಿದ್ಧಿರನೇಕಾಂತಾತ್" ಆಗ ತಿಳಿಯಿತು. ಪ್ರಾರಂಭದಲ್ಲಿಸಿದ್ಧಿ ಶಬ್ದ ಬಂದಾಗಲೇ ಮಂಗಳಾಚರಣ ಆಗಿ ಹೋಗುತ್ತದೆ ಎಂದು. ವಾಸ್ತವವಾಗಿ "ಸಿದ್ಧ" ಶಬ್ದವು ಅನಂತ ಸಂಸಾರದಿಂದ ಮುಕ್ತಿ ಪಡೆದ ಜೀವದ ವಾಚಕ ಶಬ್ದ ಇದು ಯಾವಾಗಲು ಮಂಗಳ, ಉತ್ತಮ ಶರಣಾಗತವೆಂದಾಗುತ್ತದೆ. ಹೀಗಾಗಿ ನಾನುಎಲ್ಲಗ್ರಂಥದ ಪ್ರಾರಂಭದಲ್ಲಿ ಸಿದ್ಧ ಅಥವ ಸಿದ್ಧಿ ಶಬ್ದದ ಪ್ರಯೋಗ ಮಾಡಿಯೇ ಇರುತ್ತೇನೆ.

ಮೊದಲು ಬಾಹುಬಲಿ ಸ್ತೋತ್ರದಲ್ಲಿ

ಸಿದ್ಧಿಪ್ರದಂ ಮುನಿಗಣೇಂದ್ರಶತೇಂದ್ರ ವಂದ್ಯಂ

ಹೀಗೆ ಕೊನೆಯಲ್ಲಿಯು ಸಿದ್ಧಿ ಅಥವ ಸಿದ್ಧ ಎನ್ನುವ ಪದದಿಂದಲೇ ಕೊನೆಯ ಸಾಲನ್ನುಬರೆಯಲು ಪ್ರಯತ್ನಿಸಿದ್ದೇನೆ.

ಜ್ಞಾನೇನ ಶೋಭಿತಮತಿಃ ಸಮುಪೈತಿ ಸಿದ್ಧಿಂ

ಹೀಗೆ ಇಂದ್ರಧ್ವಜ ಆರಾಧನೆಯ ಪ್ರಾರಂಭದಲ್ಲಿಯು

"ಸಿದ್ಧೋಂ ಕಿ ಕರುಂ ವಂದನಾ"

"ಸಿದ್ಧಾನ್ ತ್ರೈಲೋಕ್ಯಮೂರ್ಧಸ್ಥಾನ್" ಹೀಗೆ ಕೊನೆಯಲ್ಲಿ ಸೋ ಜನ ಮನವಾಂಛಿತ ಲಹೇಂ,ವರೇಂ ಅಂಗನಾ ಸಿದ್ಧಿ**II**

ಜಂಬೂದ್ವೀಪ ವಿಧಾನದ ಪ್ರಾರಂಭದಲ್ಲಿ

"ಸಿದ್ಧಿ ಕೆ ದಾತಾ ಕಲ್ಪವೃಕ್ಷ"
ಕಲ್ಪದ್ರುಮ ಆರಾಧನೆಯ ಪ್ರಾರಂಭದಲ್ಲಿ
"ಸಿದ್ಧೋಂ ಕೋ ಕರ ನಮಸ್ಕಾರ"

ಮಂಗಳಸೂತ್ರದಲ್ಲಿ "ಸಿದ್ಧೇಃಕಾರಣಮುತ್ತಮಾಃ ಜಿನವರಾ" ಪ್ರಶಸ್ತಿಯ ಕೊನೆಯಲ್ಲಿ "ಜಿಸಸೆ ಹೋ ಜಾವೆ ಸ್ವಾತ್ಮಸಿದ್ಧಿ"

ಇದೇ ರೀತಿ ನಿಯಮಸಾರದಲ್ಲಿ ಸ್ಯಾದ್ವಾದ ಚಂದ್ರಿಕಾ ಟೀಕೆಯ ಪ್ರಾರಂಭದಲ್ಲಿ

ಸಿದ್ಧೇಃ ಸಾಧನಮುತ್ತಮಂ ಜಿನಪತೆಃ ಶ್ರೀ ಪಾದ ಪದ್ಮದ್ವಯಮ್|

ಅದರ ಕೊನೆಯಲ್ಲಿ

ದತ್ವಾ ಜ್ಞಾನಮತೀಂ ಜಗತ್ತ್ರಯನುತಾಂ

ಸ್ಯುರ್ಮೇಚಿರಾತ್ ಸಿದ್ಧಯೇ ||

ನನಗೆ ಪ್ರಾರಂಭದಲ್ಲಿ ಸಿದ್ಧ ಅಥವ ಸಿದ್ಧಿ ಶಬ್ದ ಸಿದ್ಧರ ಶಬ್ದ ಭಾವಪೂರ್ವಕವಾಗಿ 'ನಮಸ್ಕಾರ' ಮಾಡುವವರು ಎಂದು ಆದ್ದರಿಂದಲೇ ಪ್ರಾರಂಭಿಸಿದ ಗ್ರಂಥ ಪೂರ್ಣಗೊಳ್ಳುವುದು ಕೊನೆಯಲ್ಲಿ ಬರುವ ಸಿದ್ಧ ಅಥವ ಸಿದ್ಧಿ ಶಬ್ದ ಗ್ರಂಥಕರ್ತನನ್ನು ಸಿದ್ಧಿ ಪ್ರಧಾನ ನನ್ನಾಗಿಸುವುದು ಈ ಸಿದ್ಧಿಶಬ್ದದಿಂದ ಲೋಕದಲ್ಲಿ ಸಮಸ್ತ ಮನೋರಥವನ್ನು ಈಡೇರಿಸುವುದು ಮತ್ತು ಪರಲೋಕದಲ್ಲಿಯು ಮುಕ್ತಿ ಪದವನ್ನು ಪಡೆಯುತ್ತಾರೆ. ಇದರಲ್ಲಿ ಯಾವುದೇ ಸಂದೇಹವಿಲ್ಲ.

೮೮

ದೀಕ್ಷೆಗೋಸ್ಕರ ಶ್ರೀಫಲವನ್ನು ಇಟ್ಟು ಪ್ರಾರ್ಥನೆ

1986ಫೆಬ್ರವರಿ 21ರಂದು ನನ್ನ ಬಳಿ ಕುಳಿತು ಮೋತಿಚಂದನು ಮಾತಾಜೀ ಈಗ ನಾನು ಕ್ಷುಲ್ಲಕ ದೀಕ್ಷೆತೆಗೆದುಕೊಳ್ಳಬೇಕೆಂದಿದ್ದೇನೆ ನನಗೆ ಅನುಮತಿ ಕೊಡಿರಿ ಎಂದು ಕೇಳಿದರು. ನನಗೆ ಸಂತೋಷವಾಯಿತು. ಇದಕ್ಕಿಂತ ಮೊದಲೇ 1980ರಲ್ಲಿ ನನ್ನ ಜನ್ಮ ಜಯಂತಿಯಂದೇ ದೀಕ್ಷೆ ತೆಗೆದುಕೊಳ್ಳಲು ಬಯಸಿದ್ದರು. ಆಗ ನಾನೇ ಜಂಬೂದ್ವೀಪದ ಕಾರ್ಯ ಪೂರ್ಣಗೊಳಿಸುವ ಜವಾಬ್ದಾರಿ ಮುಗಿದ ಮೇಲೆ ತೆಗೆದುಕೊಳ್ಳುವಿರಂತೆ ಎಂದು ನಿಧಾನಿಸಿದ್ದೆ.

ನನ್ನ ಜೀವನದಲ್ಲಿ ಇದೇ ಮೊದಲು ದೀಕ್ಷೆ ತೆಗೆದುಕೊಳ್ಳುತ್ತೇನೆ ಎಂದವರನ್ನು ತಡೆದಿದ್ದು ಯಾವಾಗಲು ನನ್ನೊಡನೆ ಇರುವವರನ್ನು ದೀಕ್ಷೆಯ ಕಡೆಗೆ ಪ್ರೇರೆಪಿಸುವ ನನಗೆ ಇವರನ್ನು ತಡೆದಿದ್ದು ದುಃಖವು ಆಗಿತ್ತು. ಆದರೆ ಜಂಬೂದ್ವೀಪದ ಮಹಾ ನಿರ್ಮಾಣದ ಆಶೆಯಿಂದಾಗಿ ದೀಕ್ಷೆಯನ್ನು ಮುಂದೂಡಿದ್ದು ಅವರು ಪುನಃ ದೀಕ್ಷೆಗಾಗಿ ಪ್ರಾರ್ಥಿಸುತ್ತಲೇ ಇದ್ದರು. 1981 ರಲ್ಲಿ ಪ್ರಾರ್ಥಿಸಿದಾಗಲು ಅನುಮತಿ ಕೂಡದೆ ಇದ್ದಾಗ ಸಭೆಯಲ್ಲಿ ದೀಕ್ಷೆಯವರೆಗೂ ಒಂದು ರಸವನ್ನು ತ್ಯಾಗಮಾಡಿದ್ದರು.

ಇದಕ್ಕಿಂತ ಮೊದಲೇ ಉಪ್ಪು ಸಿಹಿ ಎರಡನ್ನುತ್ಯಾಗ ಮಾಡಿದ್ದರು. ಹಣ್ಣುಗಳಲ್ಲಿ ಸೇಬು ಮತ್ತು ಕಿತ್ತಲೆಯನ್ನು ತ್ಯಾಗ ಮಾಡಿದ್ದರು. ಇದರ ನಂತರ ಜಂಬೂದ್ವೀಪ ಪ್ರತಿಷ್ಠಾಪನೆಯ ಸಮಯದಲ್ಲಿ ದೀಕ್ಷೆತೆಗೆದುಕೊಳ್ಳುವ ಆಶೆ ವ್ಯಕ್ತಪಡಿಸಿದಾಗಲೂ ನಾನು ಶಿಷ್ಯನ ಮೋಹದಿಂದ ಪ್ರತಿಷ್ಠೆ ಆದ ಆರುತಿಂಗಳ ನಂತರ ದೀಕ್ಷೆತೆಗೆದುಕೊಳ್ಳಲು ಅನುಮತಿ ಕೊಡುತ್ತೇನೆ ಎಂದೆ.

ಏಕೆಂದರೆ ಅವರು ನನ್ನ ಸಂಪರ್ಕಕ್ಕೆ ಬಂದು ಸುಮಾರು ಇಪ್ಪತ್ತು ವರ್ಷಗಳಾದವು ನನ್ನ ಆಜ್ಞೆಯನ್ನು ಯಥಾವತ್ತಾಗಿ ನೇರವೇರಿಸಿದ ಭಕ್ತಶಿರೋಮಣಿ ಅವರ ಸಮರ್ಪಣ ಭಾವನೆಯಿಂದಲೇ ನನ್ನ ಕಲ್ಪನೆಯ ಜಂಬೂದ್ವೀಪ, ಜ್ಞಾನಜ್ಯೋತಿ ವಿಹಾರ ಮತ್ತು ನನ್ನ ಸಾಹಿತ್ಯ ಪ್ರಕಾಶನ ಎಲ್ಲವು ನಡೆಯುತ್ತಿರುವುದು ಇವರಿಂದಲೇ ಇವರು ದೀಕ್ಷೆತೆಗೆದುಕೊಂಡು ಎಲ್ಲಿ ನನ್ನಿಂದ ದೂರವಾಗುತ್ತಾರೋ ಎನ್ನುವ ಭಾವ ನನ್ನನ್ನು ಬಾಧಿಸತೊಡಗಿತು.

ಆದರೆ ಅವರು ದೀಕ್ಷೆ ಆದ ಮೇಲೂ ಸಾಮೀಪ್ಯವನ್ನು ತೊರೆಯುವುದಿಲ್ಲ ಎನ್ನುವ ಆಶ್ವಾಸನೆ ಕೊಟ್ಟಮೇಲೆ ಮನಸ್ಸಿಗೆ ಸಮಾಧಾನವಾಯಿತು.

ಅವರು ಕುಲ್ಲಕ್ಷರಾಗಿ ಇಲ್ಲೇ ಇದ್ದು ನನ್ನೆಲ್ಲ ಜವಾಬ್ದಾರಿಯನ್ನು ವಹಿಸಿಕೊಂಡು ನನಗೆ ಯಥೋಚಿತವಾಗಿ ಸ್ವಾಧ್ಯಾಯಕ್ಕೆ ಅನುವು ಮಾಡಿಕೊಟ್ಟು ನನ್ನ ವೈಯ್ಯಾವೃತ್ತಿಯನ್ನು ಮಾಡುತ್ತಾ ನನಗೆ ಸಮಾಧಿ ಮರಣವನ್ನು ಉಂಟು ಮಾಡಲಿ ಎಂಬುದೇ ನನ್ನ ಅಭಿಲಾಷೆಯಾಗಿದೆ. ಏಕೆಂದರೆ ಯೋಗ್ಯ ಶಿಷ್ಯನ ವಿಯೋಗವು ಮಾತೆಗೆ ಯೋಗ್ಯಪುತ್ರನ ವಿಯೋಗಕ್ಕಿಂತಲು ಹೆಚ್ಚು ದುಃಖವನ್ನು ಕೊಡುತ್ತದೆ.

ಹಾಗಾಗಿ ಈ ಸಲ ಅವರ ಪ್ರಾರ್ಥನೆಯನ್ನು ಮನಸಾರೆ ಸ್ವೀಕರಿಸಿ ಬಹಳ ಒಳ್ಳೆಯದು ಈಗ ನನ್ನ ಪೂರ್ಣ ಅನುಮತಿ ಇದೆ. ನೀನು ದೀಕ್ಷೆ ಪಡೆದು ಆತ್ಮ ಕಲ್ಯಾಣವನ್ನು ಮಾಡಿಕೋ ಎಂದು ಸಮ್ಮತಿಸಿದೆ. ನನ್ನ ಅನುಮತಿಯಿಂದ ಅವರಿಗೆ ಸಂತೋಷವಾಯಿತು. ನಾನು ತಕ್ಷಣ ಮೋತಿಚಂದ ನೀನು ಆಚಾರ್ಯರ ಸಂಘವನ್ನು ಇಲ್ಲಿಗೆ ಕರೆತಂದು ನನ್ನ ಸಮ್ಮುಖದಲ್ಲಿಯೆ ದೀಕ್ಷೆ ಸ್ವೀಕರಿಸು ಇಲ್ಲಿಯೇ ಉಳಿದುಕೊಂಡು ನನ್ನಸಮಾಧಿಯನ್ನು ನೀನೆ ಮಾಡಬೇಕೆಂದೆ.

ನನ್ನ ಅನಾರೋಗ್ಯದ ಸಮಯದಲ್ಲಿ ಮೋತಿಚಂದ್, ರವೀಂದ್ರ ಮತ್ತು ಮಾಧುರಿಯವರು ಮಾಡಿರುವ ಸೇವೆಯನ್ನು ಶಬ್ದಗಳಿಂದ ವರ್ಣಿಸಲಾರಳಾದೆ ನಿಜವಾಗಿಯು ಸಂಯಮದಲ್ಲಿ ಸ್ಥಿರನಾಗಿ ಎಷ್ಟು ತನ್ಮಯತೆಯಿಂದ ಸೇವೆ ಮಾಡಿದ್ದಾರೆಂದರೆ ಇಂತಹ ಪುತ್ರನ ಸೇವೆ ಎಲ್ಲ ತಾಯಂದಿರಿಗೂ ಸಿಗಲಿ ಈ ದಿನಗಳಲ್ಲಿ ತಂದೆತಾಯಿಗಳು ದೀರ್ಘಕಾಲದವರೆಗೆ ಕಾಯಿಲೆ ಬಿದ್ದರೆ ಮಕ್ಕಳು ನೋಡಿಕೊಳ್ಳಲು ದಾದಿಯನ್ನು ನೇಮಿಸುತ್ತಾರೆ. ಆದರೆ ನನ್ನ ಅಂತಹ ಕಾಯಿಲೆಯಲ್ಲಿಯು ಒಂದು ಚೂರು ಬೇಸರಿಸದೆ ನನ್ನ ಸೇವೆ ಮಾಡಿತಂದಹ ಇಂತಹ ಶಿಷ್ಯರು ಪ್ರಪಂಚದಲ್ಲಿ ಹುಡುಕಿದರೂ ಸಿಗಲಾರದು. ನನಗೆ ಒಮ್ಮೊಮ್ಮೆ ಅನ್ನಿಸುತ್ತಿತ್ತು. ಇಷ್ಟೊಂದು ಕಾಯಿಲೆಯಿಂದ ಬಾಧೆಪಡುವ ಈ ಶರೀರ ಜರ್ಜರಿತವಾಗಿದೆ ಇಂತಹ ಯೋಗ್ಯ ಶಿಷ್ಯರು ನನಗೆ ಚೆನ್ನಾಗಿ ಸಮಾಧಿ ಮಾಡಿಬಿಡಲಿ ಅಂದುಕೊಳ್ಳುತ್ತಿದ್ದೆ.

ನನ್ನಿಂದ ಸಮ್ಮತಿ ಸಿಕ್ಕಮೇಲೆ ಒಂದೆರಡು ದಿನ ಯೋಚಿಸಿ ಮೋತಿಚಂದರು ಮಾತಾಜಿ ಇಲ್ಲಿಯವರೆಗೂ ನಿಮ್ಮ ಆಜ್ಞೆಯನ್ನು ಪಾಲಿಸುತ್ತಾ ಬಂದವನಿಗೆ ಇಂದು ತಳ್ಳಿಹಾಕುವ ಸಾಹಸವಿಲ್ಲ ನೀವು ಹೇಳಿದಂತೆಯೇ ಆಗಲಿ ಎಂದು ವಿನಯದಿಂದ ಹೇಳಿದರು. ನಾನು ದೆಹಲಿಯಿಂದ ಜಿನೇಂದ್ರ ಪ್ರಸಾದ್ ಮತ್ತು ಕೈಲಾಸಚಂದ್ರರನ್ನು ಕರೆಸಿದೆ. ರವೀಂದ್ರ ಮತ್ತು ಇವರಿಬ್ಬರು ಕುಳಿತು ವಿಚಾರಮಾಡಿ, ಜಿನೇಂದ್ರ ಪ್ರಸಾದ್ ಮತ್ತು ಕೈಲಾಸಚಂದರು ಹೋಗಿ ವಿಮಲಸಾಗರರನ್ನು ಹಸ್ತಿನಾಪುರಕ್ಕೆ ಆಹ್ವಾನಿಸಲಿ ಅವರು ಬಂದ ನಂತರ ದೀಕ್ಷಾ ಸಮಾರಂಭವನ್ನು ಏರ್ಪಡಿಸೋಣ ಎಂದು ತೀರ್ಮಾನಿಸಲಾಯಿತು.

ನನ್ನ ಆಜ್ಞೆಯಂತೆ ಮೂವರು ಇಂದೂರಿಗೆ ಹೋಗಿ ಆಚಾರ್ಯರನ್ನು ದರ್ಶನಮಾಡಿ ಮೋತಿಚಂದರ ಅಭಿಲಾಶೆಯನ್ನು ತಿಳಿಸಿ, ಆಚಾರ್ಯರ ಅಭಿಪ್ರಾಯವನ್ನು ತಂದರು. ಆಚಾರ್ಯರು ತಮಗೆ ಆಶೀರ್ವಾದಗಳನ್ನು ತಿಳಿಸಿದ್ದಾರೆ. ಈ ಸಲದ ಚಾತುರ್ಮಾಸವು ಫಿರೋಜಾಬಾದಿನಲ್ಲಿ ನಿಶ್ಚಿತವಾಗಿರುವುದರಿಂದಲೂ ಮತ್ತು ಬೇಸಿಗೆ ಹೆಚ್ಚಾಗಿರುವುದರಿಂದ ಈಗ ಹಸ್ತಿನಾಪುರದವರೆಗೆ ಪ್ರಯಾಣ ಬೆಳೆಸುವುದು ಕಠಿಣವಾಗಿದೆ ಹೀಗಾಗಿ ಚಾತುರ್ಮಾಸ ಮುಗಿದ ಮೇಲೆ ಸೋನಾಗಿರಿ, ಜಯಪುರ ಮಾರ್ಗವಾಗಿ ಹಸ್ತಿನಾಪುರಕ್ಕೆ ಬರಲು ಸಮ್ಮತಿಸಿ ಆಗಲೇ ದೀಕ್ಷಾ ಸಮಾರಂಭಕ್ಕೂ ಅನುಮತಿ ನೀಡಿದರು.

ಈ ಮಾತನ್ನು ಕೇಳಿದ ಮೋತಿ ಚಂದನಿಗೆ ಚಾತುರ್ಮಾಸ ಕಳೆಯುವವರೆಗೆ ಕಾಯುವುದು ಬಹಳ ಬೇಸರತರಿಸಿತು ಅವರು ನನ್ನಲ್ಲಿ ನನಗೆ ಒಂದೊಂದು ದಿನ ಕಳೆಯುವುದು ಬಹಳ ದೀರ್ಘ ಎನ್ನಿಸುತ್ತಿದೆ. ತಾವು ನಾಳೆಯೇ ದೀಕ್ಷೆಕೊಟ್ಟರು ನಾನು ಸಿದ್ಧಸಿದ್ದೇನೆ ಎನ್ನುತ್ತಿದ್ದರು.

ಅವರ ಮಾತನ್ನು ಕೇಳಿದ ನನಗೆ ನಾನು ಆರ್ಯಿಕಾ ದೀಕ್ಷೆ ತೆಗೆದುಕೊಳ್ಳಲು ಕಾಯುತ್ತಿದ್ದ ಕಾತುರದ ಅನುಭವ ಮತ್ತೊಮ್ಮೆ ಕಣ್ಣಮುಂದೆ ನಿಂತಂತೆ ಆಯಿತು. ಮ್ಯಾಸವಾಡದ ಮಿಯಾಚಂದರು ಆರ್ಯಿಕೆಯ ದೀಕ್ಷೆಯ ಮೊದಲು ಶ್ರವಣ ಬೆಳಗೊಳದ ಯಾತ್ರೆಮಾಡಿಸುತ್ತೇನೆ ಎಂದರು ನಾನು ದೀಕ್ಷೆಯನ್ನು ಮುಂದೆ ತಳ್ಳಲು ಸಿದ್ಧಳಿರಲಿಲ್ಲ. ಆದರೆ ವೀರಸಾಗರರು ನನ್ನ ವಯಸ್ಸು ಚಿಕ್ಕದೆಂದು ಚಾತುರ್ಮಾಸ ಮುಗಿಯುವವರೆಗೂ ಮುಂದೂಡಿದಾಗ ನನಗೆ ಆದ ಚಡಪಡಿಕೆಯ ಅನುಭವವನ್ನು ಮೋತಿಚಂದರು ಅನುಭವಿಸುತ್ತಿದ್ದರು ಕಾದು ಕಾದು ಕೊನೆಗೆ ಆರ್ಯಿಕೆ ದೀಕ್ಷೆಯನ್ನು ಪಡೆದಂತೆ ನೀನು ಪಡೆಯುತ್ತೀಯ ಎಂದು ಸಮಾಧಾನ ಪಡಿಸುತ್ತಿದ್ದೆ. ಹಾಗೇ ಈ ನಿರಂತರ ಕಾಯುವಿಕೆಯನ್ನು ಮರೆಯಲು ಯಾತ್ರೆಯನ್ನು ಮಾಡಿಕೊಂಡು ಬರಲು ಸಲಹೆ ಇತ್ತೆ.

ಅವರಂತು ಸಾಕಷ್ಟು ಯಾತ್ರೆಯನ್ನು ಮಾಡಿ ಮುಗಿಸಿದ್ದರು ಮೂರು ವರ್ಷಗಳು ಜ್ಞಾನಜ್ಯೋತಿಯಾತ್ರೆ ಸಾಕಷ್ಟು ಪ್ರದೇಶಗಳ ಪರಿಚಯ ಮಾಡಿಕೊಟ್ಟಿತು. ಆದರೆ ಮನದಲ್ಲಿ ಇನ್ನು ಕೆಲವು ಜಾಗವನ್ನು ನೋಡುವ ಮನಸ್ಸು ಇತ್ತು ಅದಕ್ಕೆ ತಕ್ಕಂತೆ ರೂಪರೇಖೆ ಹಾಕತೊಡಗಿದರು.

1987ರಲ್ಲಿ ಆಚಾರ್ಯರು ಹಸ್ತಿನಾಪುರಕ್ಕೆ ಬರುವುದು ಎಷ್ಟು ದಿನ ಹಿಡಿಯಬಹುದು. ಆಚಾರ್ಯರು ಫಿರೋಜಬಾದಿನಿಂದ ನೇರವಾಗಿ ಇಲ್ಲಿಯೇ ಬರಲಿ, ಆದರೂ ದೀಕ್ಷೆಯ ಯೋಗ ಯಾವಾಗ ಬರುವುದೋ ಬಂದಾಗಲೇ ಆಗಲಿ ಎಂದು ಮನಸ್ಸನ್ನು ಸಮಾಧಾನ ಪಡಿಸಿಕೊಂಡರು ಮಾತಿನಲ್ಲಿ ಆತಂಕ ವ್ಯಕ್ತವಾಗುತ್ತಲೇ ಇರುತ್ತಿತ್ತು. ಮಾತಾಜೀ ಈಗಲೇ ನನ್ನ ದೀಕ್ಷೆಯ ಬಗ್ಗೆ ಪ್ರಚಾರಮಾಡಬೇಡಿ, ಯಾರಲ್ಲೂ ಇದರ ಬಗ್ಗೆ ಚರ್ಚೆ ಮಾಡಬೇಡಿ ಆಚಾರ್ಯರು ಬಂದು ಮುಹೂರ್ತ ನಿಶ್ಚಯಿಸುವವರೆಗೂ ಪ್ರಚಾರವಾಗುವುದು ಬೇಡಿ ಎಂದು ನನ್ನನ್ನೆ ನಿಯಂತ್ರಿಸುತ್ತಿದ್ದರು ಇದರ ಮಧ್ಯ ಆರಾಧನೆ ಅದೂ ಇದು ಎಂದುಕೊಂಡು ಓಡಾಟದಲ್ಲಿ ತೊಡಗಿಕೊಂಡರು.

ಆಚಾರ್ಯರ ದರ್ಶನ

ಸೆಪ್ಟಂಬರ್ ಒಂದರಂದು ಮೋತಿಚಂದ್, ರವೀಂದ್ರಕುಮಾರ್ ಮತ್ತು ಸುಧರ್ಮಚಂದರವರು ಫಿರೋಜಿಬಾದಿಗೆ ಹೋದರು. ಆಚಾರ್ಯರು ಪಂಚಾಂಗ ನೋಡಿ ದಿನವನ್ನು ಘೋಷಣೆ ಮಾಡಿದರು ಪಾಲ್ಗುಣ ಮಾಸದಲ್ಲಿ ದೀಕ್ಷೆ ಎಂದು ದಿನವನ್ನು ತಿಳಿದುಕೊಂಡು ಮೂವರು ಸೆಪ್ಟೆಂಬರ್ 2ರಂದು ಹಿಂತಿರುಗಿ ಬಂದರು.

ಇಂದ್ರಧ್ವಜದ ಆರಾಧನೆ

ದೆಹಲಿಯಲ್ಲಿ ಇಂಜಿನಿಯರ್ ಆಗಿದ್ದ ಪಲ್ಲೂಮಲ್ ಜೈನರು ದಶಲಕ್ಷಣದಲ್ಲಿ ಇಂದ್ರಧ್ವಜ ಆರಾಧನೆಯನ್ನುಹಸ್ತಿನಾಪುರಕ್ಕೆ ಬಂದು ಮಾಡಲು ಉದ್ದೇಶಿಸಿದ್ದರು. ಮಾಧುರಿ, ರವೀಂದ್ರ, ಮೋತಿಚಂದರು ಆರಾಧನೆಯನ್ನು ಮಾಡಬೇಕೆಂದು ಬಯಸಿದ್ದರು.ಆದರೆ ಮಾಧುರಿಯು ಮೊದಲೆ ದಶಲಕ್ಷಣ ಪರ್ವಕ್ಕಾಗಿ ಅಹಮದಾಬಾದಿಗೆ ಹೋಗಲು ನಿಶ್ಚಯವಾಗಿತ್ತು ಅಹಮದಬಾದಿನಿಂದ ಬಂದಿದ್ದ ಸೌಭಾಗ್ಯಮಲ್

ಕಟಾರಿಯರವರು ಮೋತಿಚಂದನನ್ನು ಬರಲು ಒತ್ತಾಯ ಮಾಡತೊಡಗಿದರು ಅವರು ದೀಕ್ಷಿತರಾಗುವ ಸಂದರ್ಭಕ್ಕಾಗಿ ಕಾಯುತ್ತಿದ್ದವರು ವಿನಯವಾಗಿ ನಿರಾಕರಿಸಿದರು ಆದರೆ ನನ್ನ ಮಾತಿಗೆ ಪ್ರತಿಯಾಡದೆ ಕೊನೆಗೆ ಸೆಪ್ಟೆಂಬರ್ 6ರಂದು ಮೋತಿಚಂದ್, ಮಾಧುರಿ, ಶ್ಯಾಮಬಾಯಿ, ತಿವರಿಲಾಲ್ ನಾಲ್ವರು ಇಲ್ಲಿಂದ ಹೊರಟರು.

ಮೋತಿಚಂದನಿಗೆ ಪಿತೃವಿಯೋಗ

ಅವರು ಆ ಕಡೆ ಹೋಗುತ್ತಿದ್ದಂತೆ ದೆಹಲಿಯಿಂದ ಒಬ್ಬ ವ್ಯಕ್ತಿ ಬಂದು ಮೋತಿಚಂದನ ಭಾವ ಮತ್ತು ತಂದೆ ಇಬ್ಬರು ಸ್ವರ್ಗಸ್ಥರಾದ ವಿಷಯ ತಿಳಿಸಿದರು. ಇಲ್ಲಿಂದ ಅನಿಲಕುಮಾರ್ ಜೈನರನ್ನು ಸನಾವದ್‌ಗೆ ತಕ್ಷಣ ಕಳುಹಿಸಿ ಮತ್ತೆ ದೂರವಾಣಿಯ ಮೂಲಕ ಅಹಮದಾಬಾದಿ ನಲ್ಲಿದ್ದ ಮೋತಿಚಂದರಿಗೂ ಸುದ್ದಿ ತಿಳಿಸಲಾಯಿತು. ಪಂ. ಸುಧರ್ಮಚಂದ ಮೋತಿಚಂದರನ್ನು ಸನಾವದ್‌ಗೆ ಕರದೊಯ್ದರು. ಭಾವ ಮಹೇಂದ್ರಕುಮಾರ್ 4ನೇ ತಾರೀಖು ಮತ್ತು ತಂದೆ ಅಮೋಲಕಚಂದರು ಸೆಪ್ಟಂಬರ್ 5ರಂದು ನಿಧನರಾಗಿದ್ದರು.ಹೀಗಾಗಿ ಮೋತಿಚಂದರು ಸನಾವದನಲ್ಲೆ ಉಳಿಯಬೇಕಾಯಿತು. ಪಂಡಿತರು ದಶಲಕ್ಷಣ ಕಾರ್ಯಕ್ರಮಕ್ಕಾಗಿ ಅಹಮದಬಾದಿಗೆ ಹಿಂದಿರುಗಿದರು.

ಇಂದ್ರಧ್ವಜದ ಆರಾಧನೆ

ಪಲ್ಟೂಮಲ್ ಜೈನರು ಅನೇಕ ಜನ ಧರ್ಮಪ್ರೇಮಿಗಳೊಡನೆ ಬಂದು ಹಸ್ತಿನಾಪುರದ ತ್ರಿಮೂರ್ತಿ ಮಂದಿರದಲ್ಲಿ ಆರಾಧನೆ ಮಾಡಿಸಿದರು. ಸೆಪ್ಟಂಬರ್ 5ರಂದು ಧ್ವಜಾರೋಹಣ ಮಾಡಿ 16ರವರೆಗೆ ಆರಾಧನೆ ರಥಯಾತ್ರೆ ಭಗವಂತರಿಗೆ 108 ಕಳಶಗಳಿಂದ ಅಭಿಷೇಕ ನಡೆಯಿತು ಹನ್ನೊಂದು ದಿನಗಳವರೆಗೆ ಧಾರ್ಮಿಕ ವಾತಾವರಣ ಎಲ್ಲರಿಗೂ ಪ್ರಭಾವನೆಗೊಳಿಸಿತು. ಪಲ್ಟೂಮಲ್‌ರವರು ಅಳಿಯ ರಾಜಕುಮಾರ್ ಜೈನ ಸ್ವಇಚ್ಛೆಯಿಂದ ಕಮಲಮಂದಿರಕ್ಕಾಗಿ 51 ಸಾವಿರ ರೂ.ಗಳ ದಾನವನ್ನು ನೀಡಿದರು. ಅಳಿಯ ಮತ್ತು ಮಾವ ಇಬ್ಬರು ಸಂಸ್ಥಾನಕ್ಕೆ ಬಹಳ ಆತ್ಮೀಯರಾಗಿದ್ದಾರೆ.

ಬುಂದೇಲಖಂಡದ ಯಾತ್ರೆ

ಸನಾವದಗೆ 13ನೇಯ ದಿನದ ಶಾಂತಿ ಪೂಜೆಗಾಗಿ ಮನೋಜಕುಮಾರ ಮತ್ತು ರವೀಂದ್ರಕುಮಾರರು ಹೋಗಿ ಶ್ರದ್ಧಾಂಜಲಿ ಸಭೆಯಲ್ಲಿ ರವೀಂದ್ರನು ಮಾತಾನಾಡುತ್ತಾ ನನ್ನ ಸಂದೇಶವನ್ನು ತಿಳಿಸಿ ಸಂವೇದನೆಯನ್ನು ವ್ಯಕ್ತಪಡಿಸಿದನು. ಇದರ ನಂತರ ಸನಾವದದ ಜನರು ಬುಂದೇಲ ಖಂಡದ ಯಾತ್ರೆಯನ್ನು ಹೊರಡಿಸಿದ್ದರು. ಸೆಪ್ಟಂಬರ್ 20ರಂದು ಯಾತ್ರೆ ಹೊರಟಿತ್ತು. ಅಲ್ಲಿಯ ಜನರು ರವೀಂದ್ರ ಮತ್ತು ಮೋತಿ ಚಂದರನ್ನು ಜೊತೆಯಲ್ಲಿ ಕರೆದುಕೊಂಡು ಹೊರಟರು. ಸುಮಾರು 175 ಜನರು 8ದಿನಗಳವರೆಗೆ ಚಂದೇರಿ, ದೇವಗಡ ಲಲಿತಪುರ ಪಪೌರಾಜೀ, ಆಹಾರಜೀ ಖಜುರಾಹೋ, ಕುಂಡಲಗಿರಿ, ನೈನಾಗಿರಿ ಮೊದಲಾದವುಗಳನ್ನೆಲ್ಲ ಸಂದರ್ಶಿಸಿದರು. ಇದರ ನಂತರ ಮೋತಿಚಂದ ಮತ್ತು ರವೀಂದ್ರರು ಹಿಂದಿರುಗಿ ಬಂದರು. ಮೋತಿಚಂದನಿಗೆ ತನ್ನ ತಂದೆ ದೀಕ್ಷೆಯನ್ನು ನೋಡಲಿಲ್ಲವೆಂದು ಮನಸ್ಸಿಗೆ ಬಹಳ ನೋವಾಯಿತು.

ಆಚಾರ್ಯರ ಜನ್ಮದಿವಸ

ಸೆಪ್ಟಂಬರ್ 25 ರಂದು ಆಚಾರ್ಯ ವಿಮಲಸಾಗರರ ಜನ್ಮಜಯಂತಿಯನ್ನ ಫಿರೋಜಬಾದಿನಲ್ಲಿ ವಿಜೃಂಭಣೆಯಿಂದ ಆಚರಿಸಿದರು. ಈ ಸಮಾರಂಭಕ್ಕೆ ಇಲ್ಲಿಂದ ಸುಧರ್ಮಚಂದ ಮತ್ತು ನರೇಶಕುಮಾರ ಭಾಗವಹಿಸಲು ಹೋಗಿ ಹಾಗೇ ಆಹ್ವಾನಿಸಿಯೂ ಬಂದರು. ಮಾಧುರಿ ಅಲ್ಲಿಂದ ಬಂದು ಅಸ್ವಸ್ಥಳಾದಳು. ಮುನಿಸಂಘವು ಇಲ್ಲಿಗೆ ಬರಲು ಉತ್ಸಾಹವಾಗಿತ್ತು.

ದೀಕ್ಷೆಗೋಸ್ಕರ ಶ್ರೀಫಲ ಅರ್ಪಣೆ

ಅಕ್ಟೋಬರ್ 8ರಂದು ಮೋತಿಚಂದನು ಶ್ರೀಫಲ ಅರ್ಪಣೆ ಮಾಡಿ ದೀಕ್ಷೆಗಾಗಿ ಪ್ರಾರ್ಥಿಸಿದಾಗ ನಾನು ಪ್ರಸನ್ನಳಾಗಿ ಮೋತಿಚಂದ್ರ ಈ ಮಹಾನ್ ಜಂಬೂದ್ವೀಪದ ನಿರ್ಮಾಣಗೊಳ್ಳಲು ಬಹಳ ಶ್ರಮಪಟ್ಟಿದ್ದೀಯ ಈಗ ಆತ್ಮಕಲ್ಯಾಣಕ್ಕಾಗಿ ಹೊರಟಿದ್ದೀಯ ಇದು ಅತ್ಯಂತ ಶ್ಲಾಘನೀಯವಾದುದು. ಆಚಾರ್ಯರ ಸಂಘ ಬಂದ ಮೇಲೆ ದೀಕ್ಷೆಯನ್ನು ತೆಗೆದುಕೊಂಡು ಮನುಷ್ಯ ಪರ್ಯಾಯವನ್ನು ಸಾರ್ಥಕಗೊಳಿಸಿಕೋ. ಸಂಯಮವನ್ನು ಯಾವಾಗಲು ರಕ್ಷಿಸಿಕೋ. ಇದೇ ನನ್ನ ಶುಭಕಾಮನೆ, ಮಂಗಳ ಆಶೀರ್ವಾದ ಎಂದೆ.

ನಂತರ ಮೋತಿಚಂದನು ದೆಹಲಿಗೆ ಹೋಗಿ ಅಲ್ಲಿಂದ ಸಂಸ್ಥಾನದ ಸದಸ್ಯರನ್ನು ಕರೆದುಕೊಂಡು ಫಿರೋಜಬಾದ್‌ಗೆ ಹೋಗಿ ಅಕ್ಟೋಬರ್ 12ರ ವಿಜಯದಶಮಿಯಂದು ವಿಮಲಸಾಗರರ ಮುಂದೆ ಶ್ರೀಫಲ ಇಟ್ಟು ದೀಕ್ಷೆಗಾಗಿ ವಿನಂತಿಸಿದರು. ಸಮ್ಮತಿಸಿದ ಆಚಾರ್ಯರು ಮುಹೂರ್ತನೋಡಿ 1987ರ ಮಾರ್ಚ್ 8ರಂದು ದಿನ ನಿಶ್ಚಯಿಸಿದರು. ಅಲ್ಲಿಗೆ ಹೋಗಿದ್ದ ಸದಸ್ಯರಲ್ಲಿ ರವೀಂದ್ರ, ಜಿನೇಂದ್ರ, ರಾಜೇಂದ್ರ, ಸುರೇಶಚಂದ್ರರು ಇದ್ದರು. ಆಚಾರ್ಯರು ಮೋತಿಚಂದನಿಗೆ ಶೋಭಯಾತ್ರೆಯನ್ನು ಮಾಡಲು ಹೇಳಿದರು. ಅಲ್ಲಿಯೇ ಆಸೀನರಾಗಿದ್ದ ಭರತಸಾಗರರು ಮೋತಿಚಂದರ ದೀಕ್ಷೆಯು ಆದರ್ಶವಾಗಿ ನಡೆಯಬೇಕು. ಇವರು ಜಂಬೂದ್ವೀಪ ನಿರ್ಮಾಣ, ಜ್ಞಾನಜ್ಯೋತಿಯ ಪರ್ಯಟನೆಯಂತಹ ಮಹಾನ್ ಕಾರ್ಯಗಳನ್ನು ಸಾಧಿಸಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಬದರಿನಾಥ ಯಾತ್ರೆ

ಸನಾವದನ ಶ್ರೀಚಂದ, ಜೈನ ಅವರ ಪತ್ನಿ ಸರಳ, ಮೋತಿಚಂದ, ರವೀಂದ್ರ, ಮನೋಜ ಎಲ್ಲರು ಸೇರಿಕೊಂಡು ಅಕ್ಟೋಬರ್ 20ರಂದು ಬದರಿಯಾತ್ರೆಗೆ ಹೊರಟರು. ಹರಿದ್ವಾರಕ್ಕೆ ಹೋಗಿ ಅಲ್ಲಿ ಜೌಹರೀಲಾಲರಲ್ಲಿ ತಂಗಿದ್ದು ಪುನಃ ಅಲ್ಲಿಂದ ಟ್ಯಾಕ್ಸಿ ಮಾಡಿಕೊಂಡು ಶ್ರೀನಗರ ಜೋಶಿಮಠದ ಮೂಲಕ ಬದರಿನಾಥ ತಲುಪಿ ಅಲ್ಲಿಯ ತಪ್ತಕುಂಡದಲ್ಲಿ ಸ್ನಾನಮಾಡಿ ಮಂದಿರದ ದರ್ಶನಮಾಡಿದ್ದಾರೆ ಅಲ್ಲಿ ದರ್ಶನಕ್ಕೆ ಹತ್ತಿರಕ್ಕೆ ಬಿಡುವುದಿಲ್ಲ ಏಕೆಂದರೆ ವಾಸ್ತವವಾಗಿ ಮೂರ್ತಿ ಆದಿನಾಥ ಭಗವಂತರದು ಇಂದೂರಿನ ಒಬ್ಬ ಶ್ರೇಷ್ಠಿಗಳು ಇಲ್ಲಿಯೇ ಜಾಗವನ್ನು ತೆಗೆದುಕೊಂಡು ಭಗವಂತರ ಚರಣ ಚಿಹ್ನೆಗಳನ್ನು ಮಾಡಿಸಿದ್ದಾರೆ. ಇವರು ಅಲ್ಲಿಗೂ ಹೋಗಿ ದರ್ಶನಮಾಡಿದ್ದಾರೆ. ಹಿಮಬೀಳುವ ಸಮಯದಲ್ಲಿ ದೇವಸ್ಥಾನವನ್ನು ಮುಚ್ಚಿದ್ದರಿಂದ ಹೊರಗಿನಿಂದನೇ ವಂದಿಸಿ ಅಕ್ಟೋಬರ್ 25ರಂದು ಹಸ್ತಿನಾಪುರಕ್ಕೆ ಹಿಂದಿರುಗಿದರು. ವಾಪಸ್ಸು ಬರುವಾಗ ಶ್ರೀನಗರದಲ್ಲಿ ಮಂದಿರಕ್ಕೆ ಹೋಗಿ ಪೂಜೆ ಮಾಡಿಸಿ ಹರಿದ್ವಾರದಲ್ಲಿ ಜೌಹಾರಿಲಾಲರ ಸನ್ಮಾನವನ್ನು ಸ್ವೀಕರಿಸಿ ಹರ್ಷಚಿತ್ತದಿಂದ ಹಿಂದಿರುಗಿದರು.

ಕಮಲ ಮಂದಿರಕ್ಕೆ ಶಿಲಾನ್ಯಾಸ

1986ರ ಅಕ್ಟೋಬರ್ 26 ಸುವರ್ಣದಿನ. ಏಕೆಂದರೆ 1974ರಲ್ಲಿ ನಾವು ಜಂಬೂದ್ವೀಪಕ್ಕಾಗಿ ಈ ಭೂಮಿಯನ್ನು ಖರೀದಿಸಿ ಮೊದಲು 9ಅಡಿಯ ಭಗವಾನ ಮಹಾವೀರರ ಪ್ರತಿಮೆಗೆ ಒಂದು ಚಿಕ್ಕ ಗುಡಿಯನ್ನು ನಿರ್ಮಿಸಿದ್ದೆವು. ಆ ಭಗವಂತನ ಅನುಗ್ರಹದಿಂದ ದಿನದಿಂದ ದಿನಕ್ಕೆ ಹಸ್ತಿನಾಪುರದಲ್ಲಿ ಎಲ್ಲ ಕೆಲಸಗಳು ಯೋಚಿಸಿದಂತೆಯೆ ಮೂರ್ತಿರೂಪ ಪಡೆಯುತ್ತಾ ಬಂದಿದೆ. ಇಂದು ಈ ಭಗವಂತನಿಗಾಗಿ ಕಮಲ ಮಂದಿರವನ್ನು ಮಾಡುವ ಯೋಜನೆಯನ್ನು ಅಂದೇ ರೂಪಿಸಿದ್ದು ಇಂದು ಕಾರ್ಯಗತವಾಗುವ ಸುವರ್ಣದಿನವಾಗಿತ್ತು ಇದರ ಶ್ರೇಯಸ್ಸು ದೆಹಲಿಯ ರಾಜಕುಮಾರರಿಗೆ ಸಲ್ಲಬೇಕು. 26ರ ಬೆಳಗ್ಗೆ 9-45ಕ್ಕೆ ಪೂಜೆಮಾಡಿ 5ಅಡಿ ಆಳದಲ್ಲಿ ಅಚಲಯಂತ್ರವನ್ನು ಸ್ಥಾಪಿಸಿ ವಿಧಿವತ್ತಾಗಿ ಶಿಲಾನ್ಯಾಸ ಮಾಡಲಾಯಿತು ರಾಜಕುಮಾರ ಜೈನರೇ ಬಂದು ಉತ್ಸಾಹದಿಂದ ಈ ಕಾರ್ಯವನ್ನು ನಡೆಸಿದರು. ಡಿಸಂಬರ್ 31ರ ವೇಳೆಗಾಗಲೇ ಕಮಲಾಕಾರದಲ್ಲಿ ಮಂದಿರವು ರೂಪುಗೊಳ್ಳತೊಡಗಿತು. ಈ ಕೆಲಸಕ್ಕಾಗಿ ಅಸ್ಸಾಂನಿಂದ ಒಳ್ಳೆಯ ನುರಿತ ಕಟ್ಟಡ ನಿರ್ಮಾಣಗಾರರಾದ ವಾಸುದೇವ ಪಾಲರೇ ಬಂದು ಕಮಲ ದಳದ ನಿರ್ಮಾಣದಲ್ಲಿ ತೊಡಗಿದ್ದರು. ಈ ಕೆಲಸವನ್ನೆಲ್ಲ ನೋಡಲು ಆರ್ಯಕಾ ಅಭಯಮತಿ, ಶಿವಮತೀ, ಕ್ಷುಲ್ಲಕಿ ಶಾಂತಿಮತಿಯರು ಆಗಮಿಸಿದ್ದರು. ಅಮರಚಂದ ಜೈನರು ಇಲ್ಲಿ ಶಾಂತಿ ವಿಧಾನದ ಆರಾಧನೆ ಮಾಡಿಸಿದರು.

ಸಮ್ಮೇದಶಿಖರದ ಯಾತ್ರೆ

ಅಕ್ಟೋಬರ್ 28ರಂದು ನನ್ನ ಆಶೀರ್ವಾದ ಪಡೆದು ಮೋತಿಚಂದ್ ರವೀಂದ್ರಕುಮಾರ, ಕು. ಮಾಧುರಿ, ಕುಮುದಿನಿ, ಕು. ಬೀನಾ ಎಲ್ಲರು ಸಮ್ಮೇದ ಶಿಖರಕ್ಕೆ ಯಾತ್ರೆ ಹೊರಟರು. ಇಲ್ಲಿನ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಅವರನ್ನು ಹಾರಹಾಕಿ ಶುಭ ಕಾಮನೆಗಳನ್ನು ಹೇಳಿ ಬೀಳ್ಕೊಟ್ಟರು. ಅವರು ಇಲ್ಲಿಂದ ಅಯೋಧ್ಯೆ ಬನಾರಸಗೆ ಹೋಗಿ ಪಾವಾಪುರಿಯಲ್ಲಿ ಭಗವಾನ ಮಹಾವೀರರ ನಿರ್ವಾಣದ ದಿನ ನಿರ್ವಾಣ ಲಾಡು ಅರ್ಪಿಸಿ, ರಾಜಗೃಹ, ಚಂಪಾಪುರಿ ದರ್ಶನ ಮಾಡಿ ಸಮ್ಮೇದಶಿಖರಕ್ಕೆ ಹೋಗಿ ದರ್ಶನಮಾಡಿ ನವಂಬರ್ 12ರಂದು ಹಸ್ತಿನಾಪುರಕ್ಕೆ ಹಿಂದಿರುಗಿದರು.

ಮಹಮೂದಬಾದ್‌ನಲ್ಲಿ ಪ್ರಥಮ ಸಮ್ಮಾನ

ಮೋತಿಚಂದರು ಹಲವಾರು ಬಾರಿ ರತ್ನಮತಿ ಮಾತಾಜಿಯ ಜನ್ಮಭೂಮಿಯನ್ನು ನೋಡಬೇಕೆಂದು ಹೇಳುತ್ತಿದ್ದರು. ಈಗ ದೀಕ್ಷೆಯ ದಿನವು ನಿಶ್ಚಿತವಾದ್ದರಿಂದ ಶ್ರಾವಕರೇ ಈ ಪ್ರವಾಸವನ್ನು ಏರ್ಪಡಿಸಿದ್ದರು 15-12-1986ರಂದು ಮೋತಿಚಂದ್ರನಿಗೆ ಅಲ್ಲಿಯ ಜನ ಸನ್ಮಾನವನ್ನು ಇಟ್ಟುಕೊಂಡಿದ್ದರು. ಮಾರನೆಯದಿಂದ 16-12-1089ರಂದು ರಥಯಾತ್ರೆಯನ್ನು ಜೊತೆಯಲ್ಲಿ ತೆರೆದ ಜೀಪಿನಲ್ಲಿ ಮೋಚಿಚಂದನನ್ನು ಮೆರವಣಿಗೆ ಮಾಡಿ ಅವರಿಗೆ ತಮ್ಮ (ಭಕ್ತಿಯನ್ನು) ಅಭಿನಂದನೆಯನ್ನು ಅರ್ಪಿಸಿದರು. ಸುತ್ತಮುತ್ತಲಿನ ಊರಿನ ಜನರು ಈ ಸಮಾರಂಭದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು.

೮೯

ಪಂಚಕಲ್ಯಾಣ ಪ್ರತಿಷ್ಠೆಯ ಭಾವನೆ

ಡಿಸೆಂಬರ್ 15ರಂದು ಬೆಳಗ್ಗೆಯೇ ರವೀಂದ್ರಕುಮಾರನು ನನ್ನಬಳಿಗೆ ಬಂದವನೇ ವಂದಾಮಿ ಹೇಳಿ ಮಾತಾಜಿ ನನ್ನ ಮನದಲ್ಲಿ ಒಂದು ಒಳ್ಳೆಯ ಯೋಚನೆ ಬಂದಿದೆ ಎಂದ. ನಾನು ಏನು ಹೇಳು ಎಂದೆ. ಮಾತಾಜೀ ಶ್ರೀ ವಿಮಲಸಾಗರರು ಬಂದಾಗ ಅವರಿಂದ ಚಿಕ್ಕದಾಗಿ ಪಂಚ ಕಲ್ಯಾಣದ ಪ್ರತಿಷ್ಠೆಯನ್ನು ಮಾಡಿಸೋಣ. ಇದಕ್ಕಾಗಿ ನಾನು ಖರ್ಚುವೆಚ್ಚದ ಪಟ್ಟಿಯನ್ನು ಮಾಡಿದ್ದೇನೆ ಅದನ್ನು ಹೇಳಲು ಬಂದೆ ಎಂದ. ಆ ಮಾತನ್ನು ಕೇಳುತ್ತಿದ್ದಂತೆ ನನಗೆ ನನ್ನ ಮನದೊಳಗಿನ ಸುಪ್ತವಾದ ಯೋಚನೆಯನ್ನು ಹೇಳಿದನಲ್ಲ ಎಂದು ಮನಸ್ಸು ತುಂಬಿ ಬಂದಿತು. ನನಗೆ ಯೋಚನೆ ಬಂದಿತು ಆದರೆ ಯಾರ ಮೇಲೆ ಈ ಹೊಣೆಯನ್ನು ಹೊರಿಸಲಿ ಎಂದು ಗೊತ್ತಾಗದೆ ತೊಳಲಾಡುತ್ತಿದ್ದೆ. ಆದರೆ ಆ ಹೊಣೆಯನ್ನು ನೀನಾಗೆ ಹೇಳಿದೆಯಲ್ಲ ಇದಕ್ಕಿಂತ ಮತ್ತೇನು ಖುಷಿಬೇಕು ಎಂದೆ. ಮೋತಿಚಂದರು ಮಹಮೂದ್‌ಬಾದಿನಿಂದ ಬಂದಮೇಲೆ ಕಾರ್ಯಕ್ರಮ ತೀರ್ಮಾನಮಾಡಿ ಆಚಾರ್ಯರಲ್ಲಿ ಅನುಜ್ಞೆ ಪಡೆದು ನಂತರ ಹೊರಗಡೆ ವಿಷಯವನ್ನು ಬಹಿರಂಗಗೊಳಿಸೋಣ ಎಂದರು.

ತ್ರಿಮೂರ್ತಿಮಂದಿರದಲ್ಲಿ ಎಡಬಲದ ವೇದಿಕೆಯಲ್ಲಿ ಭಗವಾನ್ ನೇಮಿನಾಥ ಮತ್ತು ಪಾರ್ಶ್ವನಾಥರ ಸಹಸ್ರ ಫಣಿ ಪ್ರತಿಮೆಯನ್ನು ವಿರಾಜಮಾನಗೊಳಿಸಲಾಯಿತು ಮಹಮೂದಾ ಬಾಂದ್‌ನಿಂದ ಡಿಸೆಂಬರ್ 18ರಂದು ಮೋತಿಚಂದ ಬಂದಮೇಲೆ ಅವರಿಗೆವಿಷಯ ತಿಳಿಸಿ ಅಮೀನಗರದ ಧನರಾಜ ಜೈನ ಜ್ಯೋತಿಷಿಗಳನ್ನು ಕರೆಸಿ ಪಂಚ ಕಲ್ಯಾಣಕ್ಕಾಗಿ ಮುಹೂರ್ತದ ಬಗ್ಗೆ ವಿಚಾರಿಸಲಾಯಿತು. ಹಾಗೇ ಸಮಾಚಾರವನ್ನು ಮೊದಲು ಆಚಾರ್ಯರಲ್ಲಿ ಅರುಹಿದ ಅವರು ಸಂತೋಷದಿಂದ ಸಮ್ಮತಿಸಿದರು. ಮಾರ್ಚ್ 6ರಿಂದ 11ರವರೆಗೆ ಪಂಚಕಲ್ಯಾಣವನ್ನು ನಡೆಸಲು ನಿರ್ಧಾರವಾಯಿತು. ಡಿಸೆಂಬರ್ 19ರಂದು ಮೀಟಿಂಗ್‌ಗೆ ಗಣೇಶಲಾಲರು ಬಂದಿದ್ದರು. ಭಗವಾನ್ ಪಾರ್ಶ್ವನಾಥರ ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವ ಹಾಗೂ ದೀಕ್ಷಾ ಸಮಾರಂಭ ಸಮಿತಿಯ ಸ್ಥಾಪನೆಯಾಯಿತು. ಅಧ್ಯಕ್ಷರಾಗಿ ಗಣೇಶಲಾಲರು ಕಾರ್ಯಾಧ್ಯಕ್ಷರಾಗಿ ಮೋತಿಚಂದ್, ಮಹಾಮಂತ್ರಿಯಾಗಿ ರವೀಂದ್ರಕುಮಾರ ಅಮರಚಂದ್‌ರು ಸಂಯೋಜಕರಾದರು. ಬಡೌದದ ನರೇಶಚಂದ್‌ಜೈನರು ಆಚಾರ್ಯರ ಸಂಘವನ್ನು ಕರೆತರುವ ಜಾವಾಬ್ದಾರಿಯನ್ನು ಹೊತ್ತರು. ಅವರಿಗೆ ಹಾರ ಹಾಕಿ ಸಂಘಪತಿಯಾಗಿ ಗೌರವಿಸಲಾಯಿತು. ಅವರು ಬಂದಾಗ ಅವರಿಗೆ ವಾಸ್ತವ್ಯದ ಜವಾಬ್ದಾರಿಯನ್ನು ವೀರೇಂದ್ರಕುಮಾರ ಮತ್ತು ವಿಶಾಲಚಂದರು ವಹಿಸಿಕೊಂಡರು. ಪ್ರತಿಷ್ಠಾಚಾರ್ಯರಾಗಿ ಶಿಖರಚಂದರನ್ನು ಕರೆಸಲಾಯಿತು. ಅವರಿಗೆ ತಿಲಕವಿಟ್ಟು ಶ್ರೀ ಫಲಕೊಟ್ಟು ಜವಾಬ್ದಾರಿಯನ್ನು ವಹಿಸಿದಾಗ ಅವರು ಹರ್ಷದಿಂದ ಇದೊಂದು ನನ್ನ ಪುಣ್ಯದ ಯೋಗವೇ ಆಗಿದೆ. ಹಸ್ತಿನಾಪುರದಲ್ಲಿ 100 ಪ್ರತಿಷ್ಠೆಯನ್ನು ಮಾಡಿದ ಮೇಲೆ ಇದು ನೂರೊಂದನೆಯ ಅದೂ ಪಾರ್ಶ್ವನಾಥರ ಪ್ರತಿಷ್ಠೆಯ ಯೋಗ ಇದೇ ಮೊದಲಬಾರಿಗೆ ದೊರೆತಿದೆ ಎಂದರು. ಈಗ ಜಯಪುರಕ್ಕೆ ಹೋಗಿ ಭಗವಂತರ ಪ್ರತಿಮೆ ಮಾಡಲು ಆದೇಶ ಕೊಡಲು ಹೇಳಿದೆ.

ನನ್ನಿಂದ ಆಜ್ಞೆಪಡೆದ ರವೀಂದ್ರ ಜಯಪುರಕ್ಕೆ ಹೋಗಿ ಸಹಸ್ರಫಣೀ ಪಾರ್ಶ್ವನಾಥರ ಮತ್ತು ನೇಮಿನಾಥರ ಮೂರ್ತಿಗೆ ಆರ್ಡರ್ ಕೊಡಲಾಯಿತು. ಈ ಪ್ರತಿಷ್ಠೆಯ ಸಂದರ್ಭದಲ್ಲಿಯ ಸುದರ್ಶನ ಮೇರು ಪರ್ವತದ ಮೇಲೆ ಸ್ವರ್ಣಕಳಸಗಳನ್ನು ಹಾಕಿಸಲಾಯಿತು. ಇದನ್ನು ದಾನಮಾಡಿದವರ ಪಟ್ಟಿಯನ್ನು ಪ್ರವೇಶ ದ್ವಾರದಲ್ಲೇ ಹಾಕಲಾಗಿದೆ. ಇದರ ಕಾರ್ಯನಿಮಿತ್ತ ರವೀಂದ್ರ ಅಹಮದಬಾದ್ ಮತ್ತು ಬೊಂಬಾಯಿಗೆ ಹೊರಟ.

ಪೆಂಡಾಲಿಗಾಗಿ ಭೂಮಿ ಶುದ್ಧಿ

ಡಿಸೆಂಬರ್ 27ರಂದು ಪೆಂಡಾಲಿಗಾಗಿ ಭೂಮಿ ಶುದ್ಧಿಯನ್ನು ಮಾಡಲಾಯಿತು. ವೇದಿಕೆಯ ಸ್ಥಾನದಲ್ಲಿ ಕ್ಷೇತ್ರಪಾಲರನ್ನು ಸ್ಥಾಪಿಸಿ 9ಇಟ್ಟಿಗೆಗಳನ್ನು ಇಡಲಾಯಿತು. ಇದೇ ಸಮಯಕ್ಕೆ ಒಂಭತ್ತು ಇಂಚಿನ ಪಾರ್ಶ್ವನಾಥರ ಬಿಂಬ ತೆಗೆದುಕೊಂಡು ನನಗೆ ತೋರಿಸಲು ಒಬ್ಬ ಶ್ರಾವಕರು ಅಲ್ಲಿಗೆ ಬಂದರು. ಅವರ ಕೈಯಲ್ಲಿದ್ದ ದೇವರನ್ನು ನೋಡಿ ಮನಸ್ಸಿಗೆ ಖುಷಿ ಆಯಿತು. ಪೀಠಕ್ಕೆ ಕಮಲದ ರಚನೆ ಮಾಡಲು ಅಸ್ಸಾಂನಿಂದ ವಾಸುದೇವರೆ ಬಂದರು.

ಶ್ರವಣ ಬೆಳಗೊಳದ ಯಾತ್ರೆ

ಮೋತಿಚಂದರು ತನ್ನ ತಂಗಿ ಚತುರಮಣಿಯನ್ನು ಮತ್ತು ತಂಗಿಯ ಮಗಳು ಸೀಮಳನ್ನು ಕರೆಸಿದ್ದರು. ಜನವರಿ 1ರಂದು ಅವರು ಬಂದ ಮೇಲೆ ಶ್ರವಣಬೆಳಗೊಳದ ಯಾತ್ರೆಯ ಏರ್ಪಾಟು ನಡೆಯಿತು. ದಕ್ಷಿಣ ಯಾತ್ರೆಗೆ ಮೋತಿಚಂದ್, ಚತುರಮಣಿ, ಸೀಮಾ ಮಾಧುರಿ ವಿಜಯಕುಮಾರ ಇವರೆಲ್ಲರನ್ನು ಹಾರಹಾಕಿ ಶುಭಕೋರಿ ಕಳುಹಿಸಿಕೊಡಲಾಯಿತು. ಇವರು ಗಜಪಂಥದ ದರ್ಶನಮಾಡಿ, ಅಲ್ಲಿಗೆ ರವೀಂದ್ರನು ಬಾಂಬೆಯಿಂದ ಬಂದು ಜೊತೆಗೂಡಿ, ನಂತರ ಎಲ್ಲರು ಆಚಾರ್ಯ ದೇಶಭೂಷಣರ ಹತ್ತಿರ ತಲುಪಿ ದರ್ಶನಮಾಡಿ ಆಶೀರ್ವಾದ ಪಡೆದರು. ಕುಂಭೋಜದಲ್ಲಿಮುನಿ ಸಮಂತಭದ್ರರ ಆಶೀರ್ವಾದ ಪಡೆದು ಕೆಲವು ವಿಷಯಗಳನ್ನು ಅವರೊಡನೆ ಚರ್ಚಿಸಿ ನಂತರ ಶ್ರವಣಬೆಳಗೊಳ ತಲುಪಿದರು. ಅಲ್ಲಿಯ ಭಟ್ಟಾರಕರಾದ ಚಾರುಕೀರ್ತಿಗಳು ಮೋತಿಚಂದರನ್ನು ಆದರದಿಂದ ಸನ್ಮಾನಮಾಡಿದರು. ಧರಣೇಂದ್ರಯ್ಯ ಮತ್ತು ಲಲಿತಮ್ಮನವರು ಅವರನ್ನು ಚೆನ್ನಾಗಿ ಆಧರಿಸಿ ಹೋದಕಡೆಯೆಲ್ಲೆಲ್ಲ ಗೌರವಿಸಿದ್ದಾರೆ. ಇಲ್ಲಿಂದ ಕನ್ಯಾಕುಮಾರಿಯವರೆಗೆ ಯಾತ್ರೆ ಮಾಡಿಕೊಂಡು ಜನವರಿ 19ರಂದು ಯಾತ್ರೆ ಮುಗಿಸಿಕೊಂಡು ವಾಪಸ್ಸು ಬಂದರು.

ರತ್ನಮತಿ ಮಾತಾಜೀಯ ಎರಡನೆಯ ಪುಣ್ಯತಿಥಿಯನ್ನು ಆಚರಿಸಿದ ಮಾರನೆಯ ದಿನವೇ ಪ್ರತಿಷ್ಠಾ ಸಮಿತಿಯ ಮೀಟಿಂಗ್‌ನಲ್ಲಿ ರವೀಂದ್ರ ಮೋತಿಚಂದರು ದಕ್ಷಿಣಯಾತ್ರೆಯ ಅನುಭವವನ್ನು ವಿವರಿಸಿದರು. ಕೇಳಿದ ಜನ ಹರ್ಷದಿಂದ ಅಭಿನಂದಿಸಿದರು.

ದೀಕ್ಷಾರ್ಥಿಗಳು ದೀಕ್ಷೆಯ ಮೊದಲೇ ಯಾತ್ರೆಗಳನ್ನು ಮುಗಿಸುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಕೆಲವರು ದೀಕ್ಷೆ ಆದ ಮೇಲೆ ಯಾತ್ರೆಯ ಕಾರಣದಿಂದ ಸಂಘದಿಂದ ದೂರವಾಗುತ್ತಾರೆ. ಮುನಿವೃತ್ತಿಗೆ ಪ್ರತಿಕೂಲವಾದ ಯಾಚನೆಮಾಡುವುದು ವೃತ್ತಿಗೆ ಗೌರವವಲ್ಲ. ಹೀಗಾಗಿ ಮೊದಲೆ ಯಾತ್ರೆ ಮುಗಿಸುವುದು ಒಳ್ಳೆಯದು ನಂತರ ಕಾಲುನಡಿಗೆಯಲ್ಲಿ ಯಥೋಚಿತ ಸಂಚಾರ ಇದ್ದೇ ಇರುತ್ತದೆ.

ಮೂರುಲೋಕ ಹಾಗು ಸರ್ವತೋಭದ್ರ ಆರಾಧನೆಯ ಮುಕ್ತಾಯ

ಈ ಆರಾಧನಾ ಗ್ರಂಥಗಳ ರಚನೆಯಲ್ಲಿ ನಾನು ತನ್ಮಯಳಾಗಿ ಕೆಲಸಮಾಡುವಾಗ ರಾತ್ರಿ ವೇಳೆಯನ್ನೆ ಗಮನಿಸದೆ ಕಾರ್ಯಪ್ರವೃತ್ತಳಾಗುತ್ತಿದ್ದೆ. ಹೀಗಾಗಿ ಮನಸ್ಸಿಗೆ ಅಧಿಕ ಒತ್ತಡ ಬೀಳುತ್ತಿತ್ತು. ದೀರ್ಘಕಾಯಿಲೆಯ ನಂತರ ಶರೀರ ಹೆಚ್ಚು ಆಯಾಸವನ್ನು ಸಹಿಸುವ ಶಕ್ತಿಯನ್ನು ಕಳೆದುಕೊಂಡಿತು ಆದರೂ ಹಠದಿಂದ ಕೆಲಸ ಮಾಡುತ್ತಿದ್ದೆ. ಜನವರಿ 17ರಂದು ಸಾಯಂಕಾಲ ಸಾಮಾಯಿಕ ಮಾಡುತ್ತಿದ್ದವಳು ಜಪಮಾಡುತ್ತಲೆ ಜ್ಞಾನತಪ್ಪಿಬಿದ್ದೆ.

ನನಗೆ ಏನಾಯಿತು ಎಂದು ಗೊತ್ತಾಗುತ್ತಲೇ ಹತ್ತಿರದಲ್ಲೇ ಕುಳಿತ್ತಿದ್ದ ಹೀರಾಮಣಿ ಬ್ರ. ರಾಜಮತೀ ಗೀತ ಕುಮಾರಿ ಬೀನ ಮುಂತಾದವರೆಲ್ಲ ಗಾಬರಿಯಾದರು. ನನ್ನನು ಹಿಡಿದುಕೊಂಡು ಎಲ್ಲರು ಪಂಚನಮಸ್ಕಾರಗಳನ್ನು ಹೇಳಲು ಪ್ರಾರಂಭಿಸಿದ್ದರು. ಸ್ವಲ್ಪ ಹೊತ್ತಿನ ಮೇಲೆ ಎಚ್ಚರವಾಯಿತು.

ಮಾರನೆಯದಿನ ಮಧ್ಯಾಹ್ನವೇ ಮೇರಠನಿಂದ ಸೈಫುದ್ದೀನ ಹಕೀಮರು ಬಂದು ನೋಡುತ್ತಲೇ ಮಾತಾಜಿಯವರ ಶರೀರದಲ್ಲಿ ನೀರಿನ ಅಂಶ ಕಡಿಮೆಯಾಗಿದೆ. ಆಹಾರದಲ್ಲಿ ರಸಪದಾರ್ಥಗಳನ್ನು ಜಾಸ್ತಿ ಕೊಡಿರಿ. ಅದಲ್ಲದೆ ಹಿಂದಿನ ದಿನದ ಉಪವಾಸವು ಹೀಗಾಗಲು ಕಾರಣವಾಗಿತ್ತು. ಆರೋಗ್ಯ ನಿಧಾನವಾಗಿ ಸುಧಾರಿಸಿತು. 19ರಂದು ಮಾಧುರಿ ಬಂದವಳೇ ನನಗೆ ಜನವರಿ 17ರಂದೇ ರಾತ್ರಿ ಮನಸ್ಸಿಗೆ ತಳಮಳ ಪ್ರಾರಂಭವಾಗಿ ರಾತ್ರಿ ಗಾಡಿಗೆ ಹೊರಟು ಬಂದೆ. ಅದನ್ನು ಕೇಳಿದ ಮಹಿಳೆಯರು ಇಲ್ಲಿ ನಡೆದ ಪ್ರಸಂಗವನ್ನು ಹೇಳಿ ಕಣ್ಣರಿಯದಿದ್ದರು ಕರುಳು ಅರಿಯುವುದು ಎಂದರು. ಇದರ ನಂತರ ನನ್ನ ಬರವಣಿಗೆಯ ಕೆಲಸ ಮುಗಿಸಿದೆ, ಪ್ರತಿಷ್ಠಾ ಕಾರ್ಯದ ಮೊದಲ ಬರವಣಿಗೆಯ ಕಾರ್ಯ ಮುಗಿಸಬೇಕೆಂಬ ಸಂಕಲ್ಪ ಪೂರ್ಣಗೊಂಡಿತು.

ಮೂರು ಲೋಕದ ಮೂರು ಆರಾಧನೆಗಳು

ಮೂರುಲೋಕದ ಆರಾಧನೆಯಲ್ಲಿ ಮೊದಲನೆಯ ಆರಾಧನೆಯಲ್ಲಿ 32 ಪೂಜೆಗಳು ಇವೆ. ಸಂಕ್ಷೇಪವಾಗಿ ಮೂರುಲೋಕದ ಎಲ್ಲ ಅಕೃತ್ರಿಮ ಜಿನಮಂದಿರಕ್ಕೂ ಅರ್ಘ್ಯವನ್ನು ಕೊಡಲಾಗಿದೆ. ಎರಡನೆಯದು ಮಧ್ಯಮಲೋಕದ ಆರಾಧನೆ ಇದರಲ್ಲಿ 64 ಪೂಜೆಗಳನ್ನು ಹೇಳಲಾಗಿದೆ. ಇದರಲ್ಲಿಯು ಮೂರುಲೋಕದ ಎಲ್ಲಾ ಅಕೃತ್ರಿಮ ಜಿನಮಂದಿರದ ಜಿನಪ್ರತಿಮೆಗಳಿಗೂ ಪೂಜೆಯನ್ನು ಹೇಳಲಾಗಿದೆ. ಮೊದಲಿನದಕ್ಕಿಂತ ವಿಸ್ತಾರವಾಗಿದೆ. ಈ ಆರಾಧನೆಯ ಮತ್ತೊಂದು ಹೆಸರೇ "ಮೋನೋಕಾಮನಾಸಿದ್ಧಿ" 1987ರ ಜನವರಿ 12ರಂದು ಬೆಳಗ್ಗೆ 7-30ಕ್ಕೆ ಬರವಣಿಗೆ ಮುಗಿಯಿತು. ಜೊತೆಗೆ ಬೃಹತ್ ಆರಾಧನೆಯ ಒಂದುನೂರ ಒಂದು ಪೂಜೆಗಳನ್ನು ಅಳವಡಿಸಿದ್ದ ಮೂರುಲೋಕದಲ್ಲಿ ಎಷ್ಟು ಮಹಾಪುರುಷರಿದ್ದಾರೋ ಅದರ ಕಲ್ಯಾಣಗಳಿಂದಲೇ ಪವಿತ್ರತೀರ್ಥಗಳಾಗಿವೆ, ಇವೆಲ್ಲವಕ್ಕೂ ಪೂಜೆಯನ್ನು ಹೇಳಲಾಗಿದೆ.

ಮಧ್ಯಮಲೋಕದಲ್ಲಿ ಒಟ್ಟು 2½ ದ್ವೀಪದವರೆಗೆ ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸಾಧುಗಳು ಜಿನಧರ್ಮ, ಜಿನಾಗಮಗಳು, ಕೃತ್ರಿಮ ಜಿನಪ್ರತಿಮೆ, ಜಿನಮಂದಿರಗಳು ಇವೆಲ್ಲ ನವದೇವತೆಗಳ ಒಳಗೆ ಸೇರಿದ ಜಿನಮಂದಿರಗಳು. ಅಧೋಲೋಕ, ಮಧ್ಯಮಲೋಕ, ಊರ್ದ್ವಲೋಕಗಳಲ್ಲಿಯು ಇವೆ. ಈ ಮೂರುಲೋಕದ ಪೂಜಾ ಸಂಗ್ರಹಕ್ಕೆ ಸಾರ್ಥಕವಾದ ಹೆಸರು "ಸರ್ವತೋಭದ್ರ ಆರಾಧನೆ" ಎಂದು ಇಡಲಾಗಿದೆ.

ಫೆಬ್ರವರಿ 8ನೇಯ ತಾರೀಕು 12-55ಕ್ಕೆ ಈ ರಚನೆ ಪೂರ್ಣಗೊಂಡಿತು. ಎಲ್ಲಾ ವಿಧದಲ್ಲೂ ಎಲ್ಲಾ ರೀತಿಯಲ್ಲೂ "ಭದ್ರ" ಪರಿಣಾಮವನ್ನು ಇದು ಉಂಟುಮಾಡುತ್ತದೆ ಎಂಬುದು ವಿಶ್ವಾಸ. ಇದರ ರಚನೆಯಲ್ಲಿ ನನ್ನ ಮನಸ್ಸು ತನ್ಮಯವಾಗಿ ಒಂದು ರೀತಿಯ ಅನಿರ್ವಚನೀಯವಾದ ಆನಂದ ಉಂಟಾಗುತ್ತಿತ್ತು. ಆಚಾರ್ಯರುತಮ್ಮೆಲ್ಲ ಜ್ಞಾನದ ಅನುಭವವನ್ನು ಪರಿಪಕ್ವತೆಯನ್ನು ತಮ್ಮ ಆತ್ಮ ಸಂತೋಷಕ್ಕಾಗಿ ರಚನೆ ಮಾಡಿದ್ದಾರೆಯೆ ಹೊರತು ಬೇರೆಯವರನ್ನು ಮೆಚ್ಚಿಸಲಿಕ್ಕಲ್ಲ. ಇದೇ ರೀತಿ ನನ್ನ ಎಲ್ಲಾ ರಚನೆಯ ಉದ್ದೇಶವು ನನಗೆ ಆಗುತ್ತಿದ್ದ ಜ್ಞಾನದ ಅನುಭವಕ್ಕೆ ಮೂರ್ತಸ್ವರೂಪಕೊಟ್ಟು. ನಾನು ಆತ್ಮ ಸಂತೋಷಗೊಳಿಸುತ್ತಿದ್ದೇನೆ

ಹೊರತು ಬೇರೆಯವರನ್ನು ದೃಷ್ಟಿಯಲ್ಲಿ ಇಟ್ಟುಕೊಂಡಲ್ಲ ಇದರಿಂದ ದೊರೆಯುತ್ತಿದ್ದ ಅಪೂರ್ವಶಾಂತಿ ಮತ್ತು ಸಮ್ಯಗ್ಜ್ಞಾನ ವರ್ಣಿಸಲು ಅಸಾಧ್ಯ.

ನಿರ್ಮಾಣ ಕಾರ್ಯ

ತ್ರಿಮೂರ್ತಿ ಮಂದಿರದ ಬಲಗಡೆಯ ವೇದಿಕೆಯ ಮೇಲೆ ನಾನು ಅಚಲ ಯಂತ್ರವನ್ನು ಇಟ್ಟು ಅಲ್ಲಿ ಕಮಲದ ರಚನೆಯನ್ನು ಮಾಡಿಸಲಾಯಿತು. ಇದರ ಮೇಲೆ ಭಗವಾನ ನೇಮಿನಾಥರ ಬಿಂಬವನ್ನು ವಿರಾಜಮಾನಗೊಳಿಸಲಾಗಿದೆ. ಬಿಂಬದ ಎದುರು ಶಂಖದ ರಚನೆಯನ್ನು ಬಹಳ ಚೆನ್ನಾಗಿ ಮಾಡಲಾಯಿತು. ಜನವರಿ 26ರಂದು ಎಡಗಡೆಯ ವೇದಿಕೆಯ ಮೇಲೆ ಯಂತ್ರವನ್ನು ಇಡಿಸಿ ಕಮಲದ ರಚನೆಯನ್ನು ಮಾಡಿ ಪಾರ್ಶ್ವನಾಥರ ಬಿಂಬವನ್ನು ಸರ್ಪದ ಲಾಂಛನವನ್ನು ರಚಿಸಲಾಗಿದೆ.

ಲವಣ ಸಮುದ್ರದ ಆಕಡೆ ಜಂಬೂದ್ವೀಪದ ಹೊರಗೆ ಗೋಪುರ ದ್ವಾರದ ಎಡಬಲಗಳಲ್ಲಿ ಅನಾವೃತ ಯಕ್ಷನ ಭವನ ಮತ್ತು ಕ್ಷೇತ್ರಪಾಲ ಮಂದಿರವನ್ನು ನಿರ್ಮಾಣಮಾಡಲು 1987ರ ಜನವರಿ 22ರಂದು ಅಚಲಯಂತ್ರವನ್ನು ಸ್ಥಾಪಿಸಿದೆನು. ವೇದಿಕೆಯಲ್ಲಿ ಮಾರ್ಚ್ 11ರಂದು ಅನಾವೃತಯಕ್ಷನನ್ನು ಸ್ಥಾಪಿಸಿದೆವು ಗೃಹ ಚೈತ್ಯಾಲಯದಲ್ಲಿ ಸಿದ್ಧಪ್ರತಿಮೆಯನ್ನು ಸ್ಥಾಪಿಸಲಾಯಿತು. ಹಾಗೇ ಬಲಗಡೆ ಮಾರ್ಚ್ 16ರಂದು 'ಕ್ಷೇತ್ರಪಾಲ' ಯಕ್ಷನನ್ನು ಸ್ಥಾಪಿಸಲಾಯಿತು. ಅನಾವೃತಯಕ್ಷ ಜಂಬೂದ್ವೀಪದ ಸ್ವಾಮಿ. ಕ್ಷೇತ್ರಪಾಲ ಸದಾ ಜಿನಧರ್ಮ ಹಾಗು ಜಿನಭಕ್ತರನ್ನು ರಕ್ಷಣೆ ಮಾಡುವವನು ಈ ಇಬ್ಬರು ದೇವತೆಗಳು ಈ ಕ್ಷೇತ್ರ ಹಾಗೂ ಧರ್ಮವನ್ನು ರಕ್ಷಿಸುವವರು.

ಮೋತಿ ಚಂದನಿಗೆ ಸನ್ಮಾನ

ಮೋತಿಚಂದನಿಗೆ ಜನವರಿ 28ರಂದು ಸರಧನದಲ್ಲಿ ಶ್ರಾವಕರು ಭವ್ಯ ಸನ್ಮಾನವನ್ನು ಮಾಡಿದರು. ಫೆಬ್ರವರಿ ಒಂದರಂದು ದೆಹಲಿಯಲ್ಲಿ ಮೆರವಣಿಗೆ ಮಾಡಿಕೊಂಡು ಸಭೆಗೆ ಕರೆದೊಯ್ದು ಸನ್ಮಾನ ಮಾಡಿ ರಜತಪ್ರಶಸ್ತಿಯನ್ನು ಕಾಣಿಕೆಯಾಗಿ ಅರ್ಪಿಸಿದರು. ಬಸಂತಪಂಚಮಿಯಂದು ಲಖನೌನಲ್ಲಿಯು ಸ್ವಾಗತಿಸಿ ಅಭಿನಂದನ ಪತ್ರವನ್ನು ಅರ್ಪಿಸಿದರು ಟಿಕೈತನಗರದಲ್ಲಿಯು ತುಂಬ ಉತ್ಸಾಹದಿಂದ ಆಹ್ವಾನಿಸಿ ಮೆರವಣಿಗೆ ಮಾಡಿದರು. ಫೆಬ್ರವರಿ 8ರಂದು ಮೋತಿಚಂದ ಸನಾವದಗೆ ತೆರಳಿದರು. ಜನ್ಮಭೂಮಿಯಲ್ಲಂತು ಅತ್ಯಂತ ಸಂಭ್ರಮದಿಂದ ಸ್ವಾಗತಿಸಿ ಸನ್ಮಾನ ಮಾಡಿದರು.

ಫೆಬ್ರವರಿ 11ರಂದು ನಾನು ಮೋತಿಚಂದನನ್ನು ಆಚಾರ್ಯಶ್ರೀ ಧರ್ಮಸಾಗರರನ್ನು ದರ್ಶನ ಮಾಡಿಕೊಂಡು ಬರಲು ಕಳುಹಿಸಿದೆ. ಆಚಾರ್ಯರ ಆರೋಗ್ಯ ಕ್ಷೀಣಿಸಿದ್ದರಿಂದ ಆಹಾರವನ್ನು ತೆಗೆದುಕೊಳ್ಳುತ್ತಿರಲ್ಲಿಲ್ಲ. ಬರೆ ನೀರನ್ನು ಆಹಾರದಲ್ಲಿ ಕೊಡುತ್ತಿದ್ದರು. ಅಲ್ಲಿಯು ಮೋತಿಚಂದನನ್ನುಸ್ವಾಗತಿಸಿ ಶೋಭಾಯಾತ್ರೆಯನ್ನು ಹೊರಡಿಸಿದ್ದರು. ಮಧ್ಯಾಹ್ನದ ಸಭೆಯಲ್ಲಿ ಆಚಾರ್ಯರು ತುಂಬು ಹೃದಯದಿಂದ ಆಶೀರ್ವದಿಸುತ್ತಾ ನಿನ್ನಂತಹ ವೀರರು ಬರೇ ಕ್ಷುಲ್ಲಕನಾಗುವುದಲ್ಲ ನೀನು ಮುನಿಯೇ ಆಗು ನೀನು ಸಾಕಷ್ಟು ಧರ್ಮ ಪ್ರಭಾವನೆಯನ್ನು ಮಾಡಿದ್ದೀಯ ಈಗ ಆತ್ಮಸಾಧನೆಯನ್ನು ಮಾಡಿಕೋ ಎಂದರು. ಆದರೆ ಆಶೀರ್ವಾದವನ್ನು ಪಡೆದು ಬಂದ ಮೋತಿಚಂದನು ಅವರ ಆರೋಗ್ಯದ ಬಗ್ಗೆ ತಿಳಿಸಿದಾಗ ನನಗೆ ಅತೀವ ನೋವಾಯಿತು. ನಾನು ಅವರಿಂದ

ದೂರದಲ್ಲಿದ್ದರಿಂದ ದರ್ಶನ ಮಾಡುವುದು ಅಸಾಧ್ಯ. ಆದರೆ ರವೀಂದ್ರನು ಅಲ್ಲಿಂದ ಮುನಿಗಳ ದರ್ಶನವನ್ನು ವೀಡಿಯೋದಲ್ಲಿ ರೆಕಾರ್ಡ್ ಮಾಡಿಸಿ ತೋರಿಸಿದನು.

ದೀಕ್ಷೆಯ ಮೊದಲು ಮಾರ್ಚ್ 7ರಂದು ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದ ಕಾರ್ಯಕರ್ತರು ಸಹ ಮೋತಿಚಂದರನ್ನು ರಜತಪ್ರಶಸ್ತಿ ಕೊಟ್ಟು ಸನ್ಮಾನಿಸಿದರು. ಮಾರನೆಯ ದಿನ ಅವರ ತಾಯಿ ರೂಪಾಬಾಯಿಯವರನ್ನು ರಜತ ಪ್ರಶಸ್ತಿಕೊಟ್ಟು ಸನ್ಮಾನಿಸಿದರು. ಮನುಷ್ಯ ಜೀವನದಲ್ಲಿ ತಾಯಿಯವರ ಉಪಕಾರ ಬಹಳ ಮಹತ್ವದ್ದು, ಯಾವ ತಾಯಿಯು ಮಗನಿಗೆ ಧರ್ಮಾಮೃತವನ್ನು ಕುಡಿಸಿ ಯೋಗ್ಯರನ್ನಾಗಿ ಮಾಡುತ್ತಾರೋ ಅಂತಹವರ ಉಪಕಾರವನ್ನು ಸ್ಮರಣೆ ಮಾಡಲೇಬೇಕು.

ಮೋತಿಚಂದ್ರನು ಸನ್ಮಾನಗಳಿಗೆ ಸ್ಪಂದಿಸುತ್ತಾ ಈ ಎಲ್ಲಾ ಸನ್ಮಾನಗಳಿಗೂ ನನ್ನನ್ನು ಪಾತ್ರನನ್ನಾಗಿ ಮಾಡಿರುವುದು ಮಾತಾಜಿ ಅವರ ಆಶೀರ್ವಾದದಿಂದಲೇ ನಾನು ಇಂದು ನಿಮ್ಮ ಮುಂದೆ ಯೋಗ್ಯನಾಗಿ ಕಾಣಿಸುತ್ತಿದ್ದೇನೆ ಜಂಬೂದ್ವೀಪದ ನಿರ್ಮಾಣ ಜ್ಞಾನಜ್ಯೋತಿಯ ಪರ್ಯಟನೆಯಲ್ಲಿ ನಾನು ನಿಮಿತ್ತ, ಮೂಲಕಾರಣಮಾತಾಜಿಯವರು ಎಂದು ತನ್ನ ಭಕ್ತಿಯನ್ನು ಪ್ರದರ್ಶಿಸಿದರು.

ಆಚಾರ್ಯ ಶ್ರೀ ವಿಮಲಸಾಗರರ ಮಂಗಳ ಪ್ರವೇಶ

ಆಚಾರ್ಯ ವಿಮಲಸಾಗರರ ಸಂಘವು ಮಂಗಳ ವಿಹಾರ ಮಾಡುತ್ತಾ ಮಾರ್ಚ್ 1ರಂದು ಹಸ್ತಿನಾಪುರವನ್ನು ಪ್ರವೇಶಿಸಿತು. ಅವರನ್ನು ಮುಂದೆ ಹೋಗಿ ಸ್ವಾಗತಿಸಿ ವಂದನೆಗಳನ್ನು ಹೇಳಿದಾಗ ನನಗೆ ಹೃದಯ ತುಂಬಿ ಬಂದಿತು. ಆನಂದದಿಂದ ಕಣ್ಣುತುಂಬಿ ಬಂದಿತು. ಅವರನ್ನು ಸ್ವಾಗತಿಸಿ ಆರತಿ ಎತ್ತಿ ಕರೆದೊಯ್ಯಲಾಯಿತು. ಮೊದಲು ಬಂದವರೇ ಮಹಾವೀರಸ್ವಾಮಿಯ ದರ್ಶನ ಪಡೆದು ಜಂಬೂದ್ವೀಪದ ದರ್ಶನ ಪಡೆದು ತ್ರಿಲೋಕಮಂಡಲ ಆರಾಧನೆಗೆ ದಯಮಾಡಿಸಿದರು.

1986ರ ಶರದ್ ಪೂರ್ಣಿಮೆಯಂದು ಪ್ರಾರಂಭಿಸಿದ್ದ ತ್ರಿಲೋಕಮಂಡಲ ಆರಾಧನೆಯನ್ನು ನಾನು ಪುಷ್ಯಮಾಸದ ಶುಕ್ಲ ಪಕ್ಷದ ತ್ರಯೋದಶಿಯಂದು ಪೂರ್ಣಗೊಳಿಸಿದ್ದೆ. ಆಚಾರ್ಯವೀರ ಸಾಗರರು ದೀಕ್ಷಾರ್ಥಿಗಳ ಬಗ್ಗೆ ಯಾವಾಗಲು ಹೇಳುತ್ತಿದ್ದ ಮಾತೆಂದರೆ ದೀಕ್ಷಾರ್ಥಿಗಳು ದೀಕ್ಷೆಯ ಮೊದಲು ಯಾತ್ರೆಯನ್ನು ಮಾಡಬೇಕು. ಆರಾಧನೆಗಳನ್ನು ಕೈಕೊಂಡು, ಮುನಿಸಂಘದ ಸೇವೆಯನ್ನು ಚೆನ್ನಾಗಿ ಮಾಡಿರಬೇಕು ಎಂದು ಆ ನೀತಿಯನ್ನು ನಾನು ಅನುಸರಿಸುತ್ತಿದ್ದೆ. ಇದರಂತೆ ಮೋತಿಚಂದನಿಗೆ ಉತ್ತರ ಭಾರತದಿಂದ ಹಿಡಿದು ದಕ್ಷಿಣ ಭಾರತದವರೆಗೂ ಯಾತ್ರೆ ಕೈಕೊಳ್ಳುವಂತೆ ಮಾಡಿ ಈಗ ಫೆಬ್ರವರಿ 20ರಿಂದ ಹಿಡಿದು ಮಾರ್ಚ್ ಒಂದರವರೆಗೆ ಆರಾಧನೆಯನ್ನು ಪೂರ್ಣಗೊಳಿಸಿ ಈಗ ಪೂರ್ಣಾಭಿಷೇಕವನ್ನು ಕೈಗೊಂಡಿದ್ದರು. ಆ ಸಮಯಕ್ಕೆ ಆಚಾರ್ಯರು ಆಗಮಿಸಿದರು. ಆಚಾರ್ಯರು ಗಂಧೋದಕ ತೆಗೆದು ತಲೆಯಮೇಲೆ ಹಾಕಿಕೊಂಡು ಬೇರೆಯವರಿಗೂ ಕೊಟ್ಟರು.

ತ್ರಿಮೂರ್ತಿ ಮಂದಿರದಲ್ಲಿ ಸಭೆ

ಆಚಾರ್ಯರ ಶೋಭಾಯಾತ್ರೆ ಮಂದಿರವನ್ನು ತಲುಪಿ ಅಲ್ಲಿ ಸಭೆಯಾಗಿ ಪರಿವರ್ತನೆಗೊಂಡಿತು. ಸ್ವಾಗತ, ಪ್ರವಚನ, ಸಂಘಪತಿಗಳಿಗೆ ಸನ್ಮಾನ ಮಾಡಿ, ಆಚಾರ್ಯರ ಚರಣಗಳಿಗೆ ಭಕ್ತಿಯಿಂದ ನಮಿಸುತ್ತಾ ದೀಕ್ಷಾ ಸಮಾರಂಭವು ನಿರ್ವಿಘ್ನವಾಗಿ ನೆರವೇರುವಂತೆ ಕೋರಿಕೆಯನ್ನು ಸಲ್ಲಿಸಿದೆ. ಆಚಾರ್ಯರು ಮಂಗಳ ಆಶೀರ್ವಚನ

ನೀಡಿದರು. ಧರ್ಮಶಾಲೆಯಲ್ಲಿ ಸಂಘವು ವಾಸ್ತವ್ಯ ಹೂಡಿತು. ಸಂಘದ ಸ್ವಾಧ್ಯಾಯ ಧರ್ಮ ಚರ್ಚೆ ನೋಡಲು ಕೇಳಲು ಜನರ ತಂಡವೇ ಆಗಮಿಸತೊಡಗಿತು.

೯೦

ಮಂಗಳ ಮಹೋತ್ಸವ

ಪಾಲ್ಗುಣಮಾಸದ ಶುಕ್ಲ ಪಕ್ಷದ ತೃತೀಯ ಅಂದರೆ 1987 ಮಾರ್ಚ್ 2ರಂದು ಪ್ರತಿಷ್ಠಾ ಸಮಿತಿಯ ಪ್ರಮುಖರೆಲ್ಲ ಆಗಮಿಸಿದರು ಆಚಾರ್ಯರು ಪ್ರತಿಷ್ಠಾಚಾರ್ಯ ಶಿಖರಚಂದ್ರರಿಗೆ ಅನುಮತಿ ಕೊಟ್ಟರು. ಪ್ರತಿಷ್ಠೆಗಾಗಿ ಹಾಕಿದ ಶ್ರೀ ವಿಮಲ ಮಂಟಪದಲ್ಲಿ ಸಂಘ ವಿರಾಜಮಾನಗೊಂಡಿದ್ದಿತು. ಮೇರಠನ ಶ್ರೀ ಪ್ರೇಮಚಂದ ಜೈನರು ಆಚಾರ್ಯರ ಅನುಮತಿ ಪಡೆದು ಧ್ವಜಾರೋಹಣವನ್ನು ಮಾಡಿದರು.

ಪಾಲ್ಗುಣಮಾಸದ ಶುಕ್ಲಪಕ್ಷದ ಚತುರ್ಥಿ ಅಂದರೆ ಮಾರ್ಚ್ 3ರಂದು ಮಧ್ಯಾಹ್ನ ರಥಯಾತ್ರೆ ಹೊರಟಿತು. ಮಂಟಪದ ವೇದಿಕೆಯಲ್ಲಿ ಭಗವಂತರನ್ನು ಪ್ರತಿಷ್ಠಾಪಿಸಲಾಗಿತ್ತು. ಆರಾಧನ, ಪೂಜೆ, ಜಾಪ್ಯಾನುಷ್ಠಾನ, ಪ್ರಾರಂಭವಾಯಿತು. ಮೃತ್ತಿಕಾನಯನ, ಅಂಕುರಾರೋಪಣವಾಗಿ ಪಂಚ ಪರಮೇಷ್ಠಿಗಳ ಆರಾಧನೆ ಪ್ರಾರಂಭವಾಯಿತು. 4-5ರ ವರೆಗೆ ಪಂಚಕಲ್ಯಾಣ ವಿಧಿಗಳು ನಡೆದು ಮಾರ್ಚ್ 6ರಂದು ಯಾಗಮಂಡಲ ವಿಧಾನ ನಡೆದು ಮಧ್ಯಾಹ್ನ ಚಂದ್ರಪ್ರಭ ತೀರ್ಥಂಕರರಿಗೆ ನಿರ್ವಾಣಲಾಡುಗಳನ್ನು ಅರ್ಪಿಸಲಾಯಿತು. ಅದೇ ದಿನ ಸನಾವದನ ಶ್ರೀಚಂದಜೈನ ಮತ್ತು ಅವರ ಧರ್ಮಪತ್ನಿ ಸರಳ ಜೈನರು ಭಗವಾನ ಪಾರ್ಶ್ವನಾಥರ ತಂದೆ, ತಾಯಿಗಳಾದ ಅಶ್ವಸೇನ ಮತ್ತು ವಾಮಾದೇವಿಯ ಪದವಿಯ ಸೌಭಾಗ್ಯವನ್ನು ಪಡೆದು ಮೆರವಣಿಗೆಯಲ್ಲಿ ಪಾಲ್ಗೊಂಡರು.

ಒಂದು ಶುಭ ಸಂಕಲ್ಪ

ಶ್ರೀ ಚಂದ ಜೈನ ಸನಾವದನವರೇ ಆಗಿದ್ದು ಮೋತಿಚಂದನ ಪರಮಮಿತ್ರರು ಸನಾವದದಿಂದ ನನ್ನ ಜೊತೆ ಮೋತಿ ಚಂದ ಹೊರಟ ದಿನ ಅವರು ಮೋತಿಚಂದನನ್ನು ಹಾಸ್ಯ ಮಾಡುತ್ತಾ ನೀವು ದೀಕ್ಷೆ ತೆಗೆದುಕೊಳ್ಳುವ ದಿನ, ನಾನು ಬ್ರಹ್ಮಚರ್ಯ ವ್ರತವನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದರಂತೆ 1986ರಲ್ಲಿ ಶರದ ಪೂರ್ಣಿಮೆಯ ದಿನ ನನ್ನಲ್ಲಿ ಇದನ್ನು ನಿವೇದಿಸಿ ಅವರು ಮಾತಾಜಿ ಈಗ ನಾನು ಬ್ರಹ್ಮಚರ್ಯ ವ್ರತ ಕೈಗೊಳ್ಳುತ್ತೇನೆ ಎಂದಿದ್ದರು. ಇವರ ಈ ತ್ಯಾಗ ಭಾವನೆಯಿಂದಲೇ ನಾನು ಈ ತಂದೆ, ತಾಯಿಯ ಸ್ಥಾನವನ್ನು ಅವರಿಗೆ ವಹಿಸಲು ಹೇಳಿದೆ.

ದೀಕ್ಷಾರ್ಥಿಯ ಸನ್ಮಾನ

1987ನೇ ಮಾರ್ಚ್ 7ರಂದು ಮಧ್ಯಾಹ್ನ ಆಚಾರ್ಯರು ಮೋತಿಚಂದನ ಕೈಯಲ್ಲಿ ಗಣಧರವಲಯ ಆರಾಧನೆಯನ್ನು ಮಾಡಿಸಿದರು. ತ್ರಿಲೋಕ ಶೋಧ ಸಂಸ್ಥಾನದ ಕಡೆಯಿಂದ ಕಾರ್ಯಕರ್ತರು ಮೋತಿಚಂದನನ್ನು ಸನ್ಮಾನಿಸಿದರು. ಇದೇ ಸಂದರ್ಭದಲ್ಲಿ ಅವರ ತಾಯಿ, ಸಹೋದರ ಪ್ರಕಾಶಚಂದನನ್ನು ಹಾರಹಾಕಿ

ಸನ್ಮಾನಿಸಲಾಯಿತು. ಮಾರ್ಚ್ 1ರಿಂದಲೇ ಮೋತಿಚಂದನಿಗೆ ಬಟ್ಟಲಿನಲ್ಲಿಯೇ ಆಹಾರ ತೆಗೆದುಕೊಳ್ಳುವುದನ್ನು ಅಭ್ಯಸಿಸಲಾಗುತ್ತಿತ್ತು.

ಗರ್ಭಕಲ್ಯಾಣ, ಜನ್ಮಕಲ್ಯಾಣ

ಮಾರ್ಚ್ 7ರಂದು ಭಗವಾನ್ ಪಾರ್ಶ್ವನಾಥರ ಗರ್ಭಕಲ್ಯಾಣ ಕಾರ್ಯಕ್ರಮ ಸೌಧರ್ಮ ಇಂದ್ರನಾಗುವ ಭಾಗ್ಯ ಬೊಂಬಾಯಿಯ ಜ್ಞಾನಚಂದ ಜೈನರು ಪಡೆದುಕೊಂಡರು. ಮಾರ್ಚ್ 8ರಂದು ರವಿವಾರ ಬೆಳಗ್ಗೆ ಭಗವಂತರ ಜನ್ಮಕಲ್ಯಾಣ ಮಹೋತ್ಸವ, ದೊಡ್ಡ ಮೆರವಣಿಗೆ ಹೊರಟಿತು. ಮೆರವಣಿಗೆಯಲ್ಲಿ ಚತುರ್ವಿಧ ಸಂಘದೊಡನೆ ಆಚಾರ್ಯರು ಹೊರಟರು. ನಂತರ 84 ಅಡಿ ಎತ್ತರದ ಸುಮೇರುಪರ್ವತದ ಮೇಲೆ ಭಗವಾನ ಪಾರ್ಶ್ವನಾಥರಿಗೆ 1008 ಕಳಸಗಳಿಂದ ಜನ್ಮಾಭಿಷೇಕವಾಯಿತು. ವಾಯುಯಾನದ ಮೂಲಕ ಪುಷ್ಪವೃಷ್ಟಿಯಾಯಿತು.

ದೀಕ್ಷಾ ಸಮಾರಂಭ

ಭಗವಂತರಿಗೆ ಜನ್ಮಾಭಿಷೇಕವಾಗುತ್ತಿದ್ದಂತೆ ದೀಕ್ಷಾರ್ಥಿ ಮೋತಿಚಂದನನ್ನು ಪಲ್ಲಕಿಯಲ್ಲಿ ಕೂರಿಸಿ ಶೋಭಾಯಾತ್ರೆ ಹೊರಟಿತು. ಮೆರವಣಿಗೆ ಮಂಟಪಕ್ಕೆ ಹಿಂದಿರುಗಿದ ಮೇಲೆ ಮೋತಿಚಂದನುಶ್ರೀಫಲ ಇಟ್ಟು ಸಾವಿರಾರು ಜನಗಳ ಮುಂದೆ ವಿಧಿಪೂರ್ವಕವಾಗಿ ಆಜ್ಞೆ ಬೇಡುವ ಮುನ್ನ ಸಂಸ್ಥಾನದ ಪದಾಧಿಕಾರ ಮತ್ತು ಪ್ರತಿಷ್ಠಾ ಸಮಿತಿಯ ಕಾರ್ಯಾಧ್ಯಕ್ಷ ಪದವಿಯ ಕಾರ್ಯಭಾರದಿಂದ ಮುಕ್ತಿಪಡೆಯುತ್ತಾ ಮಾತಾಡಿದನು. ಇಂದು ನನಗೆ ಅತ್ಯಂತ ಶುಭದಿವಸ. ಇವೆಲ್ಲವು ಪೂಜ್ಯ ಮಾತಾಜಿಯವರ ಅನುಗ್ರಹದಿಂದ ಪಡೆದೆನು. ಗುರು ಗೋವಿಂದ ಇಬ್ಬರು ಜೊತೆಗಿದ್ದರೆ ಮೊದಲು ಗುರುವಿಗೆ ನಮಸ್ಕರಿಸುತ್ತೇನೆ ಏಕೆಂದರೆ ದೇವರ ಬಗ್ಗೆ ತಿಳಿಸಿದವರು ಗುರುತಾನೇ. ಹಾಗೇ ತಾಯಿ ಮತ್ತು ಮನೆಯವರೊಡನೆ ಕ್ಷಮೆಯನ್ನು ಯಾಚಿಸಿದರು. ಅನುಮತಿಯನ್ನು ಪಡೆದರು. ಸಂಸ್ಥಾನದ ಪೂರ್ಣ ಜವಾಬ್ದಾರಿಯನ್ನು ತನ್ನ ಆಪ್ತಮಿತ್ರನಾದ ರವೀಂದ್ರನಿಗೆ ತನ್ನಲ್ಲಿದ್ದ ಬೀಗದ ಕೈಯನ್ನು ಒಪ್ಪಿಸಿ ಹೇಳಿದ್ದು ನೋಡಿದವರಿಗೆಲ್ಲ ರೋಮಾಂಚನವನ್ನು ಉಂಟುಮಾಡಿತು. ನಂತರ ಆಚಾರ್ಯರು ಮಂಗಳ ಚೌಕದಲ್ಲಿ ಅವರನ್ನು ಕೂರಿಸಿದರು.

ಶ್ರೀ ಮಾಧವರಾವ್ ಸಿಂಧಿಯಾರವರ ಆಗಮನ

ಅದೇ ಸಮಯಕ್ಕೆ ಸರಿಯಾಗಿ ಕೇಂದ್ರದ ರೈಲ್ವೆ ಸಚಿವರಾದ ಮಾಧವರಾವ್ ಸಿಂಧಿಯ ಮತ್ತು ಜೆ.ಕೆ. ಜೈನರು ಹೆಲಿಕ್ಯಾಪ್ಟರ್‌ನಲ್ಲಿ ಬಂದಿಳಿದರು. ಮೊದಲು ಬಂದವರೇ ಮಹಾವೀರ ಸ್ವಾಮಿಯ ದರ್ಶನ ಮಾಡಿ ನಂತರ ನನ್ನಹತ್ತಿರ ಬಂದರು. ನಾನು ಕೆಲವು ವಿಶೇಷ ಶಿಕ್ಷಣವನ್ನು ಕೊಟ್ಟೆ ರಾಜಮನೆತನಕ್ಕೆ ಸೇರಿದವರಾದ ಅವರಲ್ಲಿ ಸಾತ್ವಿಕ ಗುಣ ನೋಡಿ ಬಹಳ ಮೆಚ್ಚುಗೆಯಾಯಿತು. ನಂತರ ಸಭೆಗೆ ಆಗಮಿಸಿದಾಗ ಗೌರವದಿಂದ ಸ್ವಾಗತಿಸಲಾಯಿತು. ಆಚಾರ್ಯರ ದರ್ಶನಮಾಡಿ ದೀಕ್ಷಾ ವಿಧಿ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ನಾನು ಹತ್ತಿರದಲ್ಲೇ ಕುಳಿತೆ. ದೀಕ್ಷಾ ವಿಧಿ ಪ್ರಾರಂಭವಾಯಿತು. ಆಚಾರ್ಯರು ಮೋತಿಚಂದನ ಪಂಚೆ, ಕೋಟು, ಅಂಗಿಗಳನ್ನು ತೆಗೆಸಿದರು. ಐದುಬಾರಿ ಕೇಶಲೋಚ ಮಾಡಿದರು ಲಂಗೋಟಿ ಮೇಲುಹೊದಿಕೆ ಹೊದ್ದಿಸಿ ಪಿಂಛಿ, ಕಮಂಡಲು ಮತ್ತು ಶಾಸ್ತ್ರವನ್ನು ಕೊಡಲಾಯಿತು. ಆಹಾರಕ್ಕಾಗಿ ಬಟ್ಟಲನ್ನು ನೀಡಲಾಯಿತು. ಹಣೆಯ ಮೇಲೆ ಕ್ಷುಲ್ಲಕ ದೀಕ್ಷಾ. ಯೋಗ್ಯಮಂತ್ರ ಸಂಸ್ಕಾರ ಮಾಡಿದರು. ಭರತಸಾಗರರು ಮಂತ್ರೋಚ್ಚಾರಣೆ ಮಾಡಿದರು. ದೀಕ್ಷಾ

ವಿಧಿಯ ನಂತರ "ಮೋತಿಸಾಗರ" ಎಂದು ಘೋಷಿಸಲಾಯಿತು. ಇಡೀ ಪೆಂಡಾಲಿನಲ್ಲಿ ಇದ್ದವರೆಲ್ಲ "ಕ್ಷುಲ್ಲಕಮೋತಿ ಸಾಗರ ಮಹಾರಾಜರಿಗೆ" ಜಯವಾಗಲಿ ಎಂದು ಜಯಘೋಷ ಮಾಡಿದ್ದು ಇಡೀ ಜಂಬೂದ್ವೀಪದಲ್ಲೇ ಪ್ರತಿಧ್ವನಿಸಿತು.

ಪಾರಮಾರ್ಥಿಕ ಟ್ರಸ್ಟ್

ಅದೇ ಸಂದರ್ಭದಲ್ಲಿ ಮೋತಿಚಂದರ ಸಹೋದರ ಪ್ರಕಾಶಚಂದರು 25,000ರುಗಳ ದಾನವನ್ನು ಘೋಷಿಸಿದರು ಇದನ್ನು ಧಾರ್ಮಿಕ ಟ್ರಸ್ಟ್‌ಗೆ ಉಪಯೋಗಿಸಿಕೊಳ್ಳಬೇಕೆಂದು ವಿನಂತಿಸಿದರು. ಮಾಧವರಾವ್ ಸಿಂಧಿಯಾರವರು ತಮ್ಮ ಭಾಷಣದಲ್ಲಿ 18ನೇಯ ವಯಸ್ಸಿನಲ್ಲಿ ಮಾತಾಜಿಯವರ ಜೊತೆ ಬಂದು ಬ್ರಹ್ಮಚರ್ಯವನ್ನು ಪಾಲಿಸುತ್ತಾ ಈ ಜಂಬೂದ್ವೀಪದ ನಿರ್ಮಾಣ ಕಾರ್ಯದಲ್ಲೂ ಜ್ಞಾನಜ್ಯೋತಿಯ ಪ್ರವರ್ತನೆಯಲ್ಲೂ ತಮ್ಮನ್ನು ತೊಡಗಿಸಿಕೊಂಡು ಇಂತಹ ಅದ್ಭುತ ಕೆಲಸ ಸಾಧಿಸಿ ತೋರಿಸಿ ಇಂದು ಆತ್ಮಕಲ್ಯಾಣಕ್ಕಾಗಿ ದೀಕ್ಷೆಯನ್ನು ಪಡೆದಿದ್ದು ಬಹಳ ಮಹತ್ವಪೂರ್ಣವಾದುದು ಎಂದರು. ಜೆ.ಕೆ. ಜೈನರು ಇವರು ಜಂಬೂದ್ವೀಪದ ನಿರ್ಮಾಣದಲ್ಲಿ ಮಾಡಿದ ಅಸೀಮ ಸೇವೆಯನ್ನು ಸ್ಮರಿಸುತ್ತಾ ರಾಷ್ಟ್ರಪತಿ, ಪ್ರಧಾನಮಂತ್ರಿ ಹಾಗೂ ಮೋಹ್ಸೀನಾ ಕಿದವಾಯಿಯವರ ಸಂದೇಶಗಳನ್ನು ಓದಿದರು. ಆನಂತರ ಮಂತ್ರಿಮಹೋದಯರಿಗೆ ಹಾರ ಮತ್ತು ರಜತಮಂಗಳ ಕಳಸಗಳಿಂದ ಸನ್ಮಾನಿಸಲಾಯಿತು.

ನಾನು ಆಶೀರ್ವಾದ ಪ್ರವಚನವನ್ನು ಮಾಡುತ್ತಾ ಸಿಂಧಿಯಾರವರಿಗೆ ಕ್ಷತ್ರಿಯೋಚಿತ ದೇಶ, ಧರ್ಮದ ರಕ್ಷಣೆ ಮಾಡುತ್ತಾ ಅಹಿಂಸೆಯ ರಕ್ಷಣೆಗೋಸ್ಕರ ಪ್ರೇರಣೆಯನ್ನು ಕೊಟ್ಟು ಅವರು ಧರ್ಮ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಆಶೀರ್ವದಿಸಿದೆ. ಮೋತಿಚಂದನ ಬಗ್ಗೆ ಮಾತಾಡುತ್ತಾ ಸನಾವದದಿಂದ ಅಮೋಲಕಚಂದರಂತಹ ಸಾಗರದಿಂದ ನಾನು ಮುತ್ತನ್ನು ಆರಿಸಿ ತಂದೆ. ಈ ಆಚಾರ್ಯರು ಮುತ್ತಿನಜೊತೆ ಸಾಗರವನ್ನು ಸೇರಿಸಿ ಕ್ಷುಲ್ಲಕ ಮೋತಿಸಾಗರರನ್ನಾಗಿ ಮಾಡಿದ್ದಾರೆ ಎಂದೆ.

ಉಪಾಧ್ಯಾಯ ಭರತಸಾಗರರು ಮಾತನಾಡುತ್ತಾ ಬಹಳಷ್ಟು ದೀಕ್ಷೆಗಳನ್ನು ಕಂಡಿದ್ದೇವೆ ಆದರೆ ಇಂತಹ ಐತಿಹಾಸಿಕ ಕ್ಷೇತ್ರದಲ್ಲಿ ನಡೆದ ಮೋತಿಚಂದರ ದೀಕ್ಷೆ ಒಂದು ಐತಿಹಾಸಿಕ ಮಹತ್ವವನ್ನು ಪಡೆದಿದೆ. ಚಕ್ರವರ್ತಿಗಳು ಹೇಗೆ ಆರು ಖಂಡಗಳನ್ನು ದಿಗ್ವಿಜಯ ಕೈಕೊಂಡು ಬಂದು ಆ ವೈಭವವನ್ನೆಲ್ಲ ಬಿಟ್ಟು ದೀಕ್ಷೆ ಕೈಕೊಳ್ಳುತ್ತಾರೋ ಹಾಗೇ ಮೋತಿಚಂದರು ಇಡೀ ಭಾರತದಲ್ಲಿ ಜಂಬೂದ್ವೀಪದ ಜ್ಞಾನಜ್ಯೋತಿಯನ್ನು ಬೆಳಗಿಸಿ ಧರ್ಮ ಧ್ವಜವನ್ನು ಹಾರಿಸಿ ದಿಗ್ವಿಜಯ ಮಾಡಿ ಇದೀಗ ದೀಕ್ಷೆಯನ್ನು ತೆಗೆದುಕೊಂಡಿದ್ದಾರೆ ಎಂದು ಆಚಾರ್ಯರು ಮಂಗಳ ಆಶೀರ್ವಾದ ನೀಡುತ್ತಾ ನೀವೆಲ್ಲರು ಹೆಗಲಿಗೆ ಹೆಗಲು ಕೊಟ್ಟು ಸನ್ಮಾರ್ಗವನ್ನು ಪ್ರಚಾರ ಮಾಡುತ್ತಿದ್ದೀರ. ಹೀಗೆಯೆ ಅಹಿಂಸೆಯಲ್ಲಿ ದೃಢವಾಗಿರಿ ಮೋತಿಚಂದರು ತಮ್ಮ ಜೀವನದಲ್ಲಿ ಚಾರಿತ್ರವನ್ನು ಗ್ರಹಿಸಿ ಹೊಸಹಾದಿಯನ್ನು ತೋರಿಸಿದ್ದಾರೆ. ಇದೇ ರೀತಿ ಪ್ರತಿಯೊಬ್ಬರು ತಮ್ಮ ಆತ್ಮಬಲವನ್ನು ಹೆಚ್ಚಿಸಿಕೊಂಡು ಚಾರಿತ್ರದಲ್ಲಿ ಉನ್ನತ ಸ್ಥಾನವನ್ನು ಪಡೆಯಲಿ ಎಂಬುದೇ ನನ್ನ ಆಶೀರ್ವಾದವೆಂದರು. ಕೊನೆಗೆ ರವೀಂದ್ರಕುಮಾರನು ಮಾತಾನಾಡುತ್ತಾ ಈ ಸಂಸ್ಥಾನ ಇಡೀ ಭಾರತ ವರ್ಷದ ಜೈನ ಸಮಾಜಕ್ಕೆ ಸೇರಿದೆ. ಇದರ ಬೀಗದ ಕೈಯನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಮಾತ್ರ ನಾನು ಹೊತ್ತಿದ್ದೇನೆ ಮಾತಾಜಿಯವರಿಂದ ನನಗೆ ದೀಕ್ಷೆಗೆ ಅನುಮತಿ ಸಿಗುವವರೆಗೂ ನಾನು ಈ ಸಂಸ್ಥಾನದ ಆಗು-ಹೋಗುಗಳನ್ನು ನೋಡಿಕೊಳ್ಳುತ್ತೇನೆ. ಇಡೀ ಸಮಾಜವೇ ನನ್ನೊಂದಿಗೆ ಸಹಕರಿಸಿದೆ ಈಗಲೂ ಸಹಕರಿಸುತ್ತಿದೆ ಎಂದನು. ಕಾರ್ಯಕ್ರಮದ

ನಂತರ ಮಂತ್ರಿಗಳು ಹೆಲಿಕ್ಯಾಪ್ಟರನಲ್ಲಿ ಹಿಂದಿರುಗಿದರು. ರಾತ್ರಿಗೆ ಭಗವಂತರನ್ನು ತೂಗುವ ಕಾರ್ಯಕ್ರಮ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಮಾರ್ಚ್ -9 - 9 ಸಾಧುಗಳಿಗೆ ಆಹಾರ

ತಾಯಿ ರೂಪಾಬಾಯಿ ಮಾಧುರಿ ಮೊದಲಾದವರೆಲ್ಲ ಸೇರಿ ಒಂದೇ ಚೌಕದಲ್ಲಿ ಆಚಾರ್ಯ ಶ್ರೀ ವಿಮಲಸಾಗರರು, ಶ್ರೀ ಭರತಸಾಗರರು,ಆರ್ಯಿಕೆಯಾದ ನಾನು ನವದೀಕ್ಷಿತ ಕ್ಷುಲ್ಲಕ ಮೋತಿಸಾಗರವನ್ನು ಹಾಗೇ ಒಂಬತ್ತು ಸಾಧುಗಳಿಗೆ ಒಟ್ಟಿಗೆ ಆಹಾರ ದಾನವನ್ನು ಮಾಡಿ ತೃಪ್ತಿಗೊಂಡರು.

ಭಗವಂತರ ದೀಕ್ಷಾ ಕಲ್ಯಾಣ

ಮಾರ್ಚ್ 9ರಂದು ಪಾರ್ಶ್ವನಾಥರ ದೀಕ್ಷಾ ಕಲ್ಯಾಣ ಮಹೋತ್ಸವ ನೆರವೇರಿತು ಆಚಾರ್ಯರು ಜಿನಪ್ರತಿಮೆಯ ಮಸ್ತಕದಲ್ಲಿದ್ದ ಚಂದನವನ್ನು ಔಪಚಾರಿಕ ವಿಧಿಯಿಂದ ಕೇಶಲೋಚದಂತೆ ಮಾಡಿ ದೀಕ್ಷಾ ಕಲ್ಯಾಣ ನೆರವೇರಿಸಿದರು.

ಸಂಸ್ಥಾನದ ಅಧಿವೇಶನ

ರಾತ್ರಿ ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದ ಅಧಿವೇಶನದಲ್ಲಿ ಸಂಸ್ಥಾನದ ಪ್ರತಿಷ್ಠಾ ಸಮಿತಿಯ ಮಹಾಮಂತ್ರಿ ರವೀಂದ್ರನು 1974ರಿಂದ 1986ರ ವರೆಗಿನ 12 ವರ್ಷಗಳ ಆಯ-ವ್ಯಯಗಳ ಲೆಕ್ಕಾಚಾರದ ವರದಿಯನ್ನು ಪ್ರಸ್ತುತ ಪಡಿಸಿದನು. ಇದರಲ್ಲಿ ಸುಮಾರು 1¼ ಕೋಟಿ ರೂಗಳು ಜೈನ ಸಮಾಜದಿಂದ ದೊರೆತಿದ್ದು ಜಂಬೂ ದ್ವೀಪದ ನಿರ್ಮಾಣಕ್ಕಾಗಿಯು, ಗ್ರಂಥ ಪ್ರಕಾಶನದ ಕಾರ್ಯದಲ್ಲಿಯು ಹಣ ವಿನಿಯೋಗವಾಗಿತ್ತು. ನವದೀಕ್ಷಿತ ಕ್ಷುಲ್ಲಕ ಮೋತಿಸಾಗರರು ಸಂಸ್ಥಾನಕ್ಕೆ ಮೊದಲಬಾರಿ ಆಶೀರ್ವಾದ ಮಾಡುತ್ತಾ ನಾವುಗಳು ಹೇಗೆ ಮಾತಾಜಿಯವರ ಅಜ್ಞಾನುಸಾರ ಕೆಲಸಗಳನ್ನು ಮಾಡುತ್ತಾ ಬಂದಿದ್ದೇವೊ ಹಾಗೆಯೇ ತಾವುಗಳು ಕೆಲಸ ಮಾಡಬೇಕು. ನಿಮ್ಮ ಶಕ್ತ್ಯಾನುಸಾರ ಸಂಸ್ಥೆಗೆ ಸಹಕಾರ ಕೊಡುತ್ತಿರಿ ಎಂದರು.

ಕೇವಲ ಜ್ಞಾನ ಕಲ್ಯಾಣ

ಮಾರ್ಚ್ 10ರಂದು ಭಗವಂತರ ಕೇವಲ ಜ್ಞಾನಕಲ್ಯಾಣಪೂಜೆಯಾಯಿತು. ಆಚಾರ್ಯ ಶ್ರೀ ಮತ್ತು ಉಪಾಧ್ಯಾಯ ಶ್ರೀಯವರು ಚಿನ್ನದ ಕಳಸದಿಂದ ಎಲ್ಲಾ ಪ್ರತಿಮೆಗಳಿಗೂ ಅಂಕನ್ಯಾಸ ವಿಧಿಯಿಂದ ನೇತ್ರೋನ್ಮೀಲನ ಕ್ರಿಯೆ ಕೈಕೊಂಡರು ಹಾಗೆ ಸೂರಿಮಂತ್ರವನ್ನು ಪ್ರಧಾನಮಾಡಿದರು.

ಈ ಇಬ್ಬರು ಮುನಿಗಳು ಉತ್ಸಾಹದಿಂದ ನಿರ್ವಹಿಸುತ್ತಿದ್ದ ಅಭೂತಪೂರ್ವ ಕಾರ್ಯವನ್ನು ನೋಡುವಂತಹ ಮೊದಲ ಅವಕಾಶ ನನಗೆ ದೊರೆತಿತ್ತು ಅದೇ ದಿನ ಜಂಬೂದ್ವೀಪದಲ್ಲಿ ಪುಸ್ತಕಾಲಯದ ಉದ್ಘಾಟನೆ ಮಾಡಲಾಯಿತು. ಪೆಂಡಾಲಿನಲ್ಲೇ ಭಗವಾನ್ ಪಾರ್ಶ್ವನಾಥರ ಸಮವಸರಣದ ಸಭೆಯ ರಚನೆ ಆಯಿತು. ಮೊದಲ ಗಣಧರರ ಸ್ಥಾನದಲ್ಲಿ ಆಚಾರ್ಯರು ದ್ವಿತೀಯಗಣಧರರ ಸ್ಥಾನದಲ್ಲಿ ಭರತಸಾಗರರು ಆರ್ಯಿಕಾಗಣಿನಿಯ ಸ್ಥಾನದಿಂದ ನಾನು ಸಂಕ್ಷಿಪ್ತ ಪ್ರವಚನವನ್ನು ಮಾಡಿದೆವು. ರಾತ್ರಿ ಅಖಿಲ ಭಾರತವರ್ಷೀಯ ದಿಗಂಬರ ಜೈನ ಯುವ ಪರಿಷತ್ತಿನದ ಅಧಿವೇಶನವು ನಡೆಯಿತು.

ನಿರ್ವಾಣ ಕಲ್ಯಾಣ

ಮಾರ್ಚ್ 11ರಂದು ಭಗವಂತರ ಮೋಕ್ಷ ಕಲ್ಯಾಣ ಕ್ರಿಯೆಗಳು ನಡೆದವು. ತ್ರಿಮೂರ್ತಿ ಮಂದಿರದ ಎಡಬಲದ ವೇದಿಕೆಯ ಮೇಲೆ ಸುಂದರವಾಗಿ ಕಮಲಗಳ ರಚನೆಯಾಗಿತ್ತು. ಕಮಲದ ಮೇಲೆ ನೇಮಿನಾಥರ ಮತ್ತು ಸಹಸ್ರಫಣಿ ಭಗವಾನ ಪಾರ್ಶ್ವನಾಥರ 4½ ಅಡಿ ಎತ್ತರದ ಪದ್ಮಾಸನ ಮೂರ್ತಿಗಳನ್ನು ವಿರಾಜಮಾಗೊಳಿಸಲಾಯಿತು.

ಸುಮೇರು ಪರ್ವತದಲ್ಲಿ ಕಳಸಾರೋಹಣ

ನಂತರ 12½ ಗಂಟೆಗೆ ಆಚಾರ್ಯಶ್ರೀ ಆದಿಯಾಗಿ ಎಲ್ಲಾ ಮುನಿವರ್ಗವು ಸುಮೇರು ಪರ್ವತದ ಮೇಲಿದ್ದ ಪಾಂಡುಕವನಕ್ಕೆ ಬಂದರು. ನವ ನಿರ್ಮಿತ ಮೆಟ್ಟಿಲುಗಳನ್ನು ಏರಿ ಅನೇಕ ಮಹಾನುಭಾವರು ಸುಮೇರುವಿನ ಮೇಲೆ ಚೂಲಿಕಗೆ ಸಮಾನವಾಗಿ ಸ್ವರ್ಣಕಳಸಗಳನ್ನು ಏರಿಸಿದರು. ಪ್ರಥಮ ಕಳಸವನ್ನು ಆಚಾರ್ಯರೆ ಮಂತ್ರೋಚ್ಚಾರಣೆ ಮಾಡುತ್ತಾ ಇಡಿಸಿದರು. ಉಪಾಧ್ಯಾಯ ಭರತಸಾಗರರು ಹಾಗೂ ನಾನು ಒಂದೊಂದು ಕಳಸ ಇಡಿಸಿದೆವು ಸ್ವರ್ಣ ಕಳಸವನ್ನು ಇರಿಸಿದ 11 ಜನ ಮಹಾನುಭಾವರು 50-50 ಸಾವಿರ ರೂಗಳ ದಾನವನ್ನು ಘೋಷಿಸಿದರು. ಇವರಲ್ಲಿ ಶಾಹ ಕೋದರಲಾಲ ಹುಕುಂಚಂದ ಪರಿವಾರವು ಒಂದು ಎಲ್ಲಾ ಹೆಸರುಗಳನ್ನು ದ್ವಾರದಲ್ಲಿ ಕೆತ್ತಿಸಲಾಗಿದೆ. ಕೊನೆಯದಾಗಿ ರಾತ್ರಿ ರಥಯಾತ್ರೆಯನ್ನು ಹೊರಡಿಸಲಾಗಿತ್ತು ಹೀಗೆ ಮಾರ್ಚ್ 1ರಿಂದ 11ರ ವರೆಗೆ ವಿವಿಧ ಕಾರ್ಯಗಳು ನಡೆದು ಮೋತಿಚಂದರ ದೀಕ್ಷೆ ಬಹಳ ವಿಜೃಂಭಣೆಯಿಂದ ನಡೆಯಿತು.

ಸನ್ಮಾನ ಮತ್ತು ಕೃತಜ್ಞತೆಗಳ ಅರ್ಪಣೆ : ಮಾರ್ಚ್ 11ರಂದು ತ್ರಿಮೂರ್ತಿಮಂದಿರದಲ್ಲಿ ಪ್ರತಿಷ್ಠಾಚಾರ್ಯ ಪಂ. ಶಿಖರ್‌ಚಂದ್‌ಜೀ ಅವರ ಸಹಯೋಗಿ ಪಂ. ರಾಜಕುಮಾರಜೈನ ಹಾಗು ಸುಧರ್ಮಚಂದ ಜೈನ ತಿವಾರಿಯವರಿಗೆ ಪ್ರಶಸ್ತಿ ಪತ್ರಗಳನ್ನು ಕೊಟ್ಟು ಸನ್ಮಾನ ಮಾಡಲಾಯಿತು.

ಯುಗಪ್ರತಿಕ್ರಮಣದ ಮಹಾನ್‌ಕಾರ್ಯ

ನನಗೆ ಬಹಳ ದಿನಗಳಿಂದ ಪಂಚವರ್ಷೀಯ ಯುಗಪ್ರತಿಕ್ರಮಣದ ಪರಂಪರೆಯನ್ನು ಮತ್ತೆ ಆಚರಣೆಗೆ ತರಬೇಕೆಂಬ ಆಸೆ ಇತ್ತು. 1985ರಲ್ಲೇ ಇದನ್ನು ಪ್ರಾರಂಭಿಸಬೇಕೆಂದಿದ್ದೆ. ಆದರೆ ಧರ್ಮಸಾಗರರು ಇಲ್ಲಿಗೆ ಆಗಮಿಸದಿದ್ದರಿಂದ ಸಾಧ್ಯವಾಗಲಿಲ್ಲ. ಈಗ ಆಚಾರ್ಯ ವಿಮಲಸಾಗರದಲ್ಲಿ ನಿವೇದಿಸಿದಾಗ ಅವರು ಸಂತೋಷದಿಂದಲೇ ಅನುಮತಿಕೊಟ್ಟಿದ್ದರಿಂದ ಲುಪ್ತಪರಂಪರೆಯು ಪುನರ್ಜೀವಿತಗೊಂಡಿತು. 1987ರ ಮಾರ್ಚ್ 14 ಒಂದು ಐತಿಹಾಸಿಕ ದಿನವಾಯಿತು. ತ್ರಿಮೂರ್ತಿ ಮಂದಿರದಲ್ಲಿ ಚತುರ್ವಿಧ ಸಂಘ ಸಹಿತವಾಗಿ ಆಚಾರ್ಯರೊಡನೆ ನಾನೂ ಕುಳಿತು ಯುಗ ಪ್ರತಿಕ್ರಮಣವನ್ನು ಮಾಡಿದೆವು. ಆಚಾರ್ಯರಲ್ಲಿ ನಾವೆಲ್ಲರು ಪ್ರಾಯಶ್ಚಿತ್ತವನ್ನು ಬೇಡಿದೆವು ಆಚಾರ್ಯರು ಪ್ರಾಯಶ್ಚಿತ್ತವನ್ನು ಪ್ರಧಾನಮಾಡಿ ನನ್ನದೊಂದು ಇಚ್ಛೆಯನ್ನು ಘೋಷಣೆ ಮಾಡಿದರು.

ಮುಂದಿನ 5 ವರ್ಷಗಳಿಗೊಮ್ಮೆ ಈ ಪ್ರತಿಕ್ರಮಣ ಪದ್ಧತಿಯನ್ನು ಆಚರಿಸಲಾಗುತ್ತದೆ. ಈ ಶುಭ ಸಂದರ್ಭದಲ್ಲಿ ಆಚಾರ್ಯರನ್ನು "ತೀರ್ಥೋದ್ಧಾರಕ ಚೂಡಾಮಣಿ" ಪದವಿಯನ್ನು ಕೊಟ್ಟು ಗೌರವಿಸಿದೆವು ಹಾಗೇ ಉಪಾಧ್ಯಾಯ ಮುನಿಗಳಾದ ಭರತಸಾಗರರ ಉಪಶಮ ಗುಣವನ್ನು ಗೌರವಿಸಿ "ಪ್ರಶಮಮೂರ್ತಿ" ಪದವಿಯಿಂದ ವಿಭೂಷಿತಗೊಳಿಸಲಾಯಿತು. ಸಂಘದಲ್ಲಿದ್ದ ಸ್ಯಾದ್ವಾದಮತಿಯ ವಾಕ್ ಚಾತುರ್ಯ ಕಲೆಯನ್ನು ಒಪ್ಪಿಕೊಂಡ

ಎಲ್ಲರು ಅವರನ್ನು "ಪ್ರವಚನ ಪ್ರಭಾಕರ" ಎಂಬ ಪದವಿಯಿಂದ ಸನ್ಮಾನಿಸಲಾಯಿತು. ಈ ಪದವಿ ಸಮಾರಂಭವನ್ನು ವೀಕ್ಷಿಸಿದ ಚತುರ್ವಿದ ಸಂಘದವರೆಲ್ಲ ಆನಂದದಿಂದ ವಿಸ್ಮಿತರಾದರು.

ಒಂದು ದಿನ ನಾನು ರಚಿಸಿದ್ದ ಕಲ್ಪದ್ರುಮ ಆರಾಧನೆ, ಸರ್ವತೋಭದ್ರ ಆರಾಧನೆ ಹಾಗೂ ಮೂರು ಲೋಕದ ಆರಾಧನೆಯ ಪಾಂಡುಲಿಪಿಯನ್ನು ಆಚಾರ್ಯರಿಗೆ ತೋರಿಸಿದೆ. ಒಂದೇ ರಾತ್ರಿಯಲ್ಲಿ ಎಲ್ಲವನ್ನು ಅವಲೋಕಿಸಿದ ಆಚಾರ್ಯರು ನನಗೆ ತಕ್ಷಣವೇ "ವಿಧಾನವಾಚಸ್ಪತಿ" ಎಂದು ಗೌರವಿಸಿದರು.

ಅನಾವೃತಯಕ್ಷ ಹಾಗೂ ಕ್ಷೇತ್ರಪಾಲ

ಮಾರ್ಚ್ 16ರ ರಂದು ಆಚಾರ್ಯರು ಕರಕಮಲಗಳಿಂದಲೇ ಜಂಬೂದ್ವೀಪದ ಪ್ರವೇಶದ್ವಾರದ ಎಡ ಬಲಗಳ ವೇದಿಕೆಯ ಮೇಲೆ ಕ್ಷೇತ್ರಪಾಲ ಮತ್ತು ಅನಾವೃತ ಯಕ್ಷರ ಪ್ರತಿಮೆಯನ್ನು ಸ್ಥಾಪಿಸಲಾಯಿತು. ಅನಾವೃತ ಯಕ್ಷರ ದೇವಭವನದ ಮೇಲೆ ಸಿದ್ಧ ಪ್ರತಿಮೆಯನ್ನು ವಿರಾಜಮಾನಗೊಳಿಸಲಾಯಿತು. ಅಂದೇ ಜಂಬೂದ್ವೀಪ ಕ್ಷೇತ್ರದಲ್ಲಿ ಧ್ಯಾನಕೇಂದ್ರದ ಭವನಕ್ಕಾಗಿ ಶಿಲಾನ್ಯಾಸವನ್ನು ಆಚಾರ್ಯರ ಸಾನಿಧ್ಯದಲ್ಲೇ ಮಾಡಿಸಲಾಯಿತು. ನನಗೆ ಬಹಳ ವರ್ಷಗಳಿಂದಲೇ ಧ್ಯಾನಕೇಂದ್ರವನ್ನು ಸ್ಥಾಪಿಸಬೇಕೆಂಬ ಅಭಿಲಾಷೆ ಇತ್ತು "ಹ್ರೀಂ" ಬೀಜಾಕ್ಷರವು ನನಗೆ ಬಹಳ ಪ್ರಿಯವಾದುದರಿಂದ "ಹ್ರೀಂ" ಮೂರ್ತಿಯನ್ನು ಸ್ಥಾಪಿಸಬೇಕೆಂಬ ಇಚ್ಛೆಯು ಇತ್ತು. ಆಚಾರ್ಯರಿಗೆ ಪ್ರತಿದಿನ ಅಭಿಷೇಕ, ಪೂಜೆಯನ್ನು ವೀಕ್ಷಿಸಿ ಗಂಗೋದಕವನ್ನು ತೆಗೆದುಕೊಳ್ಳುವುದರಲ್ಲಿ ಬಹಳ ಆಸಕ್ತಿ ಮಧ್ಯಾಹ್ನ ಒಂದು ಗಂಟೆಗೆ ತ್ರಿಮೂರ್ತಿ ಮಂದಿರದಲ್ಲಿ ಆಚಾರ್ಯರರನ್ನು ಉಪಾಧ್ಯಾಯ ಭರತಸಾಗರರ ಪಾದಗಳನ್ನು ಹಾಲಿನಿಂದ ತೊಳೆದು ಪೂಜಿಸಿ ಆರತಿ ಎತ್ತಿದರು. ಆಚಾರ್ಯರು ಮಂಗಳ ಪ್ರವಚನ ಮಾಡಿದರು. ಮಾರ್ಚ್ 17ರಂದು ಆಚಾರ್ಯರ ಸಂಘವು ಎಲ್ಲರನ್ನು ಆಶೀರ್ವದಿಸಿ ಅಲ್ಲಿಂದ ಮೇರಠಗೆ ಮಂಗಳ ವಿಹಾರ ಗೈದರು.

ನನ್ನ ಅನುಭವ ನನಗೆ ಹಿಂದಿನ ದಿನಗಳ ಆಚಾರ್ಯರ ವಾತ್ಸಲ್ಯ ನೆನಪಿಗೆ ಬರತೊಡಗಿತು. 1966ರಲ್ಲಿ ಸೋಲಾಪುರದಲ್ಲಿ ಬ್ರ. ಸುಮತಿಬಾಯಿ ಶರದಪೂರ್ಣಿಮೆಯಂದು ನನ್ನ ಜನ್ಮಜಯಂತಿಯನ್ನು ಆಚರಿಸಲು ಬಯಸಿದಾಗ ನಾನು ಬೇಡವೆಂದು ತಡೆದಾಗ ಆಚಾರ್ಯರೇ ಬಹಳ ಪ್ರೀತಿಯಿಂದ ಜನ್ಮಜಯಂತಿಯ ಆಚರಣೆಗೆ ಪ್ರೇರಣೆಕೊಟ್ಟು ತಾವೇ ಸ್ವತಃ ಸಭೆಯಲ್ಲಿ ಸಂಘಸಹಿತ ವಿರಾಜಮಾನರಾಗಿ ನನಗೆ ಆಶೀರ್ವಾದವನ್ನು ಕೊಟ್ಟಿದ್ದರು.

ಮಾರ್ಚ್ 6ರಂದು ಇನ್ನೇನು ಆಹಾರಕ್ಕೆ ಹೊರಡಬೇಕೆಂದು ಎದ್ದೆ ಇದ್ದಕ್ಕಿಂದಂತೆ ಎದೆಯಲ್ಲಿ ನೋವು ಕಾಣಿಸಿಕೊಂಡು ಸಹಿಸಲಾರದೆ ಮಣೆಯ ಮೇಲೆ ಮಲಗಿಯೆ ಬಿಟ್ಟೆ ಮಾಧುರಿ ತುಪ್ಪದಿಂದ ಉಜ್ಜಿದರು ನೋವು ಉಪಶಮನವಾಗಲಿಲ್ಲ. ವಿಷಯ ಆಚಾರ್ಯರಿಗೆ ತಲುಪಿ, ಭರತಮುನಿಗಳೊಡನೆ ಸ್ವತಃ ಬಂದು ಹತ್ತಿರವೇ ಕುಳಿತು 15-20 ನಿಮಿಷ ಮಂತ್ರಗಳನ್ನು ಹೇಳತೊಡಗಿದರು. ಸ್ವಲ್ಪಹೊತ್ತಿನ ನಂತರ ನೋವು ಉಪಶಮನವಾಗಿ ಎದ್ದು ಆಹಾರಕ್ಕೆ ಹೊರಟೆ.

ಪ್ರತಿಷ್ಠಾಸಮಯದಲ್ಲಿ ಕೂಡ ಆಚಾರ್ಯರು ಪ್ರತಿಯೊಂದು ಕಾರ್ಯವನ್ನು ತಮ್ಮದೆ ಎಂದು ತಿಳಿದು ಉಪಸ್ಥಿತರಿದ್ದು ಮಂಗಳ ಆಶೀರ್ವಾದವನ್ನು ಕೊಡುತ್ತಿದ್ದರು ಜೊತೆಗೆ ನನ್ನನ್ನು ಎಲ್ಲಾ ಕಾರ್ಯಗಳಿಗೂ ಇರುಂತೆ ಪ್ರೇರೇಪಿಸುತ್ತಿದ್ದರು ನನಗೆ ನಾವು ಅವರನ್ನು ಆಹ್ವಾನಿಸಿದ್ವೀವಿ ಎನ್ನಿಸುತ್ತಿರಲಿಲ್ಲ ಅವರೇ ನಿಂತು ಎಲ್ಲವನ್ನು ನಡೆಸುತ್ತಿದ್ದರು. ಜೊತೆಗೆ ಸಂಘದ ಎಲ್ಲಾ ಮುನಿ ವರ್ಗವು ಎಲ್ಲದರಲ್ಲೂ ಭಾಗವಹಿಸುತ್ತಿದ್ದರು.

ಬ್ರ. ಚಿತ್ರಾಬಾಯಿಯವರ ವಾತ್ಸಲ್ಯ ನನಗೆ ಅದ್ಭುತ ಎನ್ನಿಸುತ್ತಿತ್ತು. ಅವರು ಎಷ್ಟೊಂದು ಹರ್ಷಚಿತ್ತರಾಗಿ ಸೇವೆ ಮಾಡುತ್ತಿದ್ದರೆಂದರೆ ನಾನು ಕಲ್ಪನೆಯನ್ನು ಮಾಡಿರಲಿಲ್ಲ ಒಮ್ಮೆ ಅವರ ಚೌಕಕ್ಕೆ ಒಂದೇ ದಿನ ಆಚಾರ್ಯರು ಉಪಾಧ್ಯಯ ಶ್ರೀ ನಾನು ಮೋತಿಸಾಗರರು ಒಟ್ಟಿಗೆ ಆಹಾರಕ್ಕಾಗಿ ನಿಂತಾಗಲು ನವಧಾ ಭಕ್ತಿಯಿಂದ ಆಹಾರ ದಾನಮಾಡಿ ನನ್ನ ಮೇಲಂತು ಗುಲಾಬಿ ಹೂಗಳಿಂದ ಅಭಿಷೇಕವನ್ನು ಮಾಡಿಬಿಟ್ಟರು. ನನಗೆ ಪಿಂಛಿ ಪ್ರಧಾನ ಮಾಡುವ ಹರಾಜನ್ನು 35,000 ರೂಗಳಿಗೆ ಕೂಗಿದ್ದು ಅವರ ವಿಶೇಷ ಭಕ್ತಿ ಮತ್ತು ಉದಾರತೆಗೆ ಜ್ವಲಂತ ಉದಾಹರಣೆ ಆಗಿತ್ತು.

ಮೋತಿ ಚಂದನ ದೀಕ್ಷೆ ಬಗ್ಗೆ ನನ್ನ ಭಾವನೆ

ನಾನು 1967ರಲ್ಲಿ ಸನಾವದದಿಂದ ಹೊರಡುವಾಗ ಮೋತಿಚಂದನನ್ನು ಮನೆತ್ಯಾಗಮಾಡಿ ಸಂಘದೊಡನೆ ಬರಲು ಪ್ರೇರೇಪಿಸಿದಾಗ ಅವರು "ಮಾತಾಜಿ ನಾನು ಏನನ್ನು ಬಿಡುವುದಿಲ್ಲ ಎಂಬ ಶರತ್ತಿನ ಮೇಲೆ ನಿಮ್ಮ ಜೊತೆ ಬರುತ್ತೇನೆ" ಎಂದಿದ್ದರು.

ಹಾಗೇ ಸಂಘದೊಡನೆ ಬಂದ ಯುವಕ ನನ್ನಲ್ಲಿ ಅಧ್ಯಯನ ಮಾಡುತ್ತಾ ಶಾಸ್ತ್ರ ಮತ್ತು ನ್ಯಾಯತೀರ್ಥ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ನನ್ನ ಮಾತಿನಂತೆ ಜಂಬೂದ್ವೀಪದ ನಿರ್ಮಾಣದಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡರು. ದಿಗಂಬರ ಜೈನ ತ್ರಿಲೋಕಶೋಧ ಸಂಸ್ಥಾನವನ್ನು ಹುಟ್ಟಿಹಾಕಿ ಬೆಳೆಸಿದರು. ನನ್ನ ಆಜ್ಞೆಯಂತೆ ಸಂಸ್ಥಾನದ ಪ್ರಥಮ ಕೋಶಾಧ್ಯಕ್ಷರಾದರು. ನಂತರ ಮಂತ್ರಿಯಾಗಿ 1985ರಲ್ಲಿ ಜ್ಞಾನಜ್ಯೋತಿ ಪ್ರವರ್ತನೆಯಲ್ಲಿ ಮಹಾಮಂತ್ರಿಯಾಗಿ, ನಂತರ 1985ರ ಜಂಬೂದ್ವೀಪದ ಪ್ರತಿಷ್ಠಾಪನಾ ಸಮಿತಿಯ ಅಧ್ಯಕ್ಷ ಪದವಿಯನ್ನು ಮತ್ತು ನನ್ನ ಸಲಹೆಯಂತೆ 'ಕಾರ್ಯಧ್ಯಕ್ಷ" ಪದವಿಯನ್ನು ನಿರ್ವಹಿಸಿದ್ದಾರೆ.

ದಕ್ಷಿಣ ಭಾರತದಲ್ಲಿ ಮಹಾಮಂತ್ರಿ ಚಾಮುಂಡರಾಯನು ತನ್ನ ತಾಯಿಯ ನಿಯಮವನ್ನು ಪೂರ್ಣಗೊಳಿಸಲು ಬಾಹುಬಲಿಯ ಮೂರ್ತಿಯನ್ನು ಸ್ಥಾಪಿಸಿದರು. ಹಾಗೇಯೆ ನನ್ನ ನಿಯಮವನ್ನು ಪೂರ್ಣಗೊಳಿಸಲು ಮೋತಿಚಂದನು ಸುದರ್ಶನ ಮೇರು ಪ್ರತಿಷ್ಠೆಯನ್ನು ಜಂಬೂದ್ವೀಪದ ನಿರ್ಮಾಣವನ್ನು ಮಾಡಿದ್ದಾರೆ. ಇದರಿಂದಾಗಿಯೆ ಅವರು ಅಭಿನವ ಚಾಮುಂಡರಾಯರಾಗಿದ್ದಾರೆ. ಈಗ ಕ್ಷುಲ್ಲಕ ಮೋತಿಸಾಗರರಾಗಿ ಈ ಸಂಸ್ಥಾನದ "ಪೀಠಾಧೀಶ"ರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಹೀಗೆ ಒಬ್ಬ ಶಿಷ್ಯನಲ್ಲಿ ಎಷ್ಟು ಆಶೆ ಇಟ್ಟುಕೊಳ್ಳಬಹುದೋ ಅಷ್ಟನ್ನು ಅವರು ಪೂರ್ತಿಗೊಳಿಸಿದ್ದರು. ಮುಂದೆಯು ಅವರು ನನ್ನ ಆಜ್ಞೆಯನ್ನು ಪಾಲಿಸುತ್ತಾರೆ. ಹಾಗೇ ತಮ್ಮ ಆತ್ಮಸಾಧನೆಯ ಜೊತೆಗೆ ಜೈನಧರ್ಮವನ್ನು ಬೆಳಗಿಸಲಿ ಎಂಬುದೇ ನನ್ನ ಶುಭ ಆಶೀರ್ವಾದವಾಗಿದೆ.

1987ರಲ್ಲಿ ಜಂಬೂದ್ವೀಪದಲ್ಲಿ ವಿಮಲಸಾಗರ ಮಹಾರಾಜರು, ಭರತಸಾಗರರು, ಮುನಿಗಳಾದ ಅರಹಸಾಗರರು, ಬಾಹುಬಲಿಸಾಗರರು, ಉದಯಸಾಗರರು, ಶ್ರವಣಸಾಗರರು, ನಿರಂಜನಸಾಗರರು, ಆರ್ಯಿಕೆಯರಾದ ಆದಿಮತಿ, ಸೂರ್ಯಮತಿ ಪಾರ್ಶ್ವಮತಿ, ನಂದಮತಿ, ಸಪಾರ್ಶ್ವಮತಿ, ಗೊಮ್ಮಟಮತೀ, ಸ್ಯಾದ್ವಾದಮತೀ ಮಾತಾಜಿಯವರು ಪಾಲಕರಾದ ಮಧುಸಾಗರರು ದೇವಸಾಗರರು ಸುಹಾಗಸಾಗರರು ಚಂದ್ರಸಾಗರರು, ಸನ್ಮತಿಸಾಗರರು ಕ್ಷುಲ್ಲಕರಾದ ಕಾಮವಿಜಯ ನಂದಿಗಳು ಸ್ಯಾದ್ವಾದಸಾಗರರು ಸೋಮಪ್ರಭರು, ಅಕಂಪನಸಾಗರರು ವಿಷ್ಣುಸಾಗರರು ಜಿತೇಂದ್ರಸಾಗರರು, ಪವಿತ್ರಸಾಗರರು ನವೀನ ಸಾಗರರು, ಧ್ಯಾನಸಾಗರರು

ಕ್ಷುಲ್ಲಿಕೆಯರಾದ ಶೀತಲಮತಿ, ಶ್ರೀಮತಿ, ಧೈರ್ಯಮತೀ ಮನೋವತಿ ಭರತಮತಿ ಧವಲಮತೀ ಮುಂತಾದ 34 ಜನ ಸಾಧು ಸಾದ್ವಿಯರು ಆಚಾರ್ಯ ಸಂಘದಲ್ಲಿ ಇದ್ದರು.

ಜೊತೆಗೆ ಆರ್ಯಿಕ ಕಲ್ಯಾಣಮತಿಯವರು ಅಭಯಮತೀ ಬಂದಿದ್ದರು. ಇವರ ಜೊತೆ ಕ್ಷುಲ್ಲಿಕೆ ಶಾಂತಿಮತಿಯು ಇದ್ದರು. ನನ್ನ ಜೊತೆ ಶಿವಮತಿ ಮಾರ್ಚ್ 8ರಂದು ಮೋತಿ ಸಾಗರರು ಸಾಧುವರ್ಗಕ್ಕೆ ಸೇರಿದ ನಂತರ 40 ಜನ ಯತಿವರ್ಗದವರಾದರು.

೯೧

ರವೀಂದ್ರನ ಬ್ರಹ್ಮಚರ್ಯವ್ರತ

1972ರಲ್ಲಿ ರವೀಂದ್ರಕುಮಾರನು ಬ್ಯಾವರದಿಂದ ನಾಗೌರಗೆ ಹೋಗಿ ಧರ್ಮಸಾಗರದಿಂದ ಆಜೀವನ ಬ್ರಹ್ಮಚರ್ಯ ವ್ರತವನ್ನು ಕೈಗೊಂಡಿದ್ದನು. 1987ರ ಮಾರ್ಚ್ 19ರಂದು ಆಚಾರ್ಯರನ್ನು ದರ್ಶನ ಮಾಡಲು ಸೀಕರಕ್ಕೆ ಹೋಗಿದ್ದಾಗ ಆಚಾರ್ಯರು ಇವರಿಗೆ ಎರಡನೆಯ ಪ್ರತಿಮಾವ್ರತವನ್ನು ಕೊಟ್ಟಿದ್ದರು.

ಆಚಾರ್ಯ ಧರ್ಮಸಾಗರರ ಸಮಾಧಿಮರಣ

ಧರ್ಮಸಾಗರರ ನಿಶ್ಯಕ್ತತೆಯನ್ನು ನೋಡಿದ ರವೀಂದ್ರನು ನನ್ನ ಅನುಮತಿಯನ್ನು ಪಡೆದು ಮೇರಠನ ಸುಪ್ರಸಿದ್ಧ ಹಕೀಮರಾದ ಸೈಫುದ್ದೀನರನ್ನು ವಾಹನಮಾಡಿ ಕರೆದುಕೊಂಡು ಹೋಗಲಾಯಿತು ಅವರು ಐದು ದಿನಗಳು ಅಲ್ಲಿದ್ದು ಆಹಾರದಲ್ಲಿ ಔಷಧಿಯ ವ್ಯವಸ್ಥೆ ಮಾಡಿದರು. ಆದರೆ ಆಚಾರ್ಯರು ಔಷಧಿಯ ಉಪಚಾರವನ್ನು ಉಪೇಕ್ಷೆ ಮಾಡಲಾಗಿ ರವೀಂದ್ರನು ಮಾರ್ಚ್ 31ರಂದು ಹಿಂದಿರುಗಿದನು.

1987ರ ಏಪ್ರಿಲ್ 22ರ ವೈಶಾಖ ಮಾಸದ ನವಮಿಯಂದು ಸಾಯಂಕಾಲ 7-35ಕ್ಕೆ ಸಮಾಧಿ ಪೂರ್ವಕವಾಗಿ ದೇಹವನ್ನು ತ್ಯಾಗಮಾಡಿದರು. ರವೀಂದ್ರನು ಸೀಕರಕ್ಕೆ ಹೋಗಿ ಅಂತಿಮ ಸಂಸ್ಕಾರದಲ್ಲಿ ಭಾಗವಹಿಸಿದನು. ಅವರ ಅಸ್ವಸ್ಥತೆ ಮರಣ ಎಲ್ಲವನ್ನು ವೀಡಿಯೊ ಮಾಡಿ ನನಗೂ ತಂದು ತೋರಿಸಿದರು. ಅದಕ್ಕೆ ನಮಸ್ಕರಿಸಿ ಅವರ ಗುಣಗಳನ್ನು ಸ್ಮರಿಸುತ್ತಾ ಶ್ರದ್ಧಾಂಜಲಿ ಅರ್ಪಿಸಿದೆನು.

ಆಚಾರ್ಯ ಧರ್ಮಸಾಗರ ಮಹಾರಾಜರು

ವಿಕ್ರಮ ಸಂವತ್ಸರ 1970ರಲ್ಲಿ ರಾಜಸ್ಥಾನದ ಬೂಂಧೀ ಜಿಲ್ಲೆಯ ಗಂಭೀರ ಎಂಬ ಹೆಸರಿನ ಹಳ್ಳಿಯಲ್ಲಿ ಬಖ್ತಾವರ್ ಮಲ್ಲ ಹಾಗು ಉಮಾರಾವ್ ಎಂಬುವರಿಗೆ ಪುತ್ರನಾಗಿ ಜನಿಸಿದರು. ತಂದೆತಾಯಿಗಳು ಇವರಿಗೆ "ಚಿರಂಜೀಲಾಲ"ರೆಂದು ಹೆಸರುಇಟ್ಟಿದ್ದರು. ಇವರು ಖಂಡೇಲವಾಲ ಜಾತಿಯ ಭೂಷಣ ಛಾಬಡಾ ಗೋತ್ರಿಯರು ಚಿಕ್ಕಂದಿನಲ್ಲೆ ತಂದೆತಾಯಿಯರನ್ನು ಕಳೆದುಕೊಂಡು ಚಿಕ್ಕಪ್ಪನ ಮಗಳು ದಾಖಾಬಾಯಿಯೇ ಲಾಲನೆ ಪಾಲನೆ ಮಾಡಿದರು, ಆಚಾರ್ಯ ವೀರಸಾಗರರಿಂದ ಎರಡನೆಯ ಪ್ರತಿಮೆಯ ವ್ರತವನ್ನು ಕೈಕೊಂಡಿದ್ದರು. ಅನಂತರ ಆಚಾರ್ಯಕಲ್ಪ ಶ್ರೀ ಚಂದ್ರಸಾಗರರ ಸಂಘದಲ್ಲೇ ಇದ್ದುಕೊಂಡು 2001ರಲ್ಲಿ ಕ್ಷುಲ್ಲಕ ದೀಕ್ಷೆಯನ್ನು ಪಡೆದರು. ಆರು ವರ್ಷಗಳ ನಂತರ ಗುರುಗಳ ಸಮಾಧಿ ಆದ ಮೇಲೆ ಆಚಾರ್ಯ ಶ್ರೀ ವೀರಸಾಗರ ಮಹಾರಾಜರ ಹತ್ತಿರ ಬಂದು ಕಾರ್ತಿಕ ಶುಕ್ಲ ಚತುರ್ದಶಿ ಅಂದರೆ ವಿಕ್ರಮ ಸಂವತ್ 2008ರಂದು ಮುನಿದೀಕ್ಷೆಯನ್ನು ಪಡೆದರು.

ನಾನು 1956ರಲ್ಲಿ ಆಚಾರ್ಯ ಶ್ರೀ ವೀರಸಾಗರರ ಸಂಘಕ್ಕೆ ಬಂದಂದಿನಿಂದಲೂ ಅವರ ಪರಿಚಯ ಚೆನ್ನಾಗಿ ಇತ್ತು ಬಹಳ ಸರಳ ಹಾಗು ಗಂಭೀರ ಸ್ವಭಾದವರು ಆಚಾರ್ಯರ ಸಮಾಧಿ ಆದ ಮೇಲೆ ಗಿರಿನಾರ ಯಾತ್ರೆಯವರೆಗೂ ಆಚಾರ್ಯ ಶಿವಸಾಗರರ ಸಂಘದಲ್ಲೆ ಇದ್ದರು. ನಂತರ ಅವರು 1958ರಲ್ಲಿ ಬ್ಯಾವರದಿಂದ ಅವರು ಬೇರೆಯಾಗಿ ವಿಹಾರವನ್ನು ಕೈಕೊಂಡರು 1969ರಲ್ಲಿ ಮಹಾವೀರಜೀಯಲ್ಲಿ ಶಾಂತಿವೀರ ನಗರದಲ್ಲಿ ನಡೆದ ಪಂಚಕಲ್ಯಾಣಕ್ಕೆ ಬಂದಿದ್ದರು. ಅಲ್ಲಿ ಅಕಸ್ಮಾತಾಗಿ ಅಮಾವಾಸ್ಯೆಯಂದು ಆಚಾರ್ಯ ಶ್ರೀ ಶಿವಸಾಗರರ ಸಮಾಧಿ ಆಯಿತು. ಚತುರ್ವಿಧ ಸಂಘದ ಎದುರಿಗೆ ಜ್ಯೇಷ್ಠತೆಯ ಆಧಾರದ ಮೇಲೆ ಅವರಿಗೆ ಆಚಾರ್ಯಪಟ್ಟವನ್ನು ಕೊಟ್ಟು, ಎಲ್ಲರೂ ಗೌರವ ಸಲ್ಲಿಸಿದರು. ಅದೇ ದಿನ ಅವರ ಕೈಯಿಂದಲೇ 11 ದೀಕ್ಷೆಗಳು ನೆರವೇರಿದವು.

ಇದರ ನಂತರ ಅವರು ಜಯಪುರಕ್ಕೆ ಬಂದರು. ಇಲ್ಲಿಂದ ಶ್ರುತಸಾಗರರು ಕೆಲವು ಮುನಿ, ಆರ್ಯಿಕೆಯರೊಡನೆ ಬೇರೆಯಾಗಿ ವಿಹಾರ ಮಾಡಿದರು. ಮುನಿ ಶ್ರೀ ಶ್ರೇಯಾಂಸಸಾಗರರು ಅಲ್ಲಿಂದ ಬೇರೆಯಾಗಿ ವಿಹಾರ ಮಾಡಿದರು ಇದನ್ನೆಲ್ಲ ಗಮನಿಸುತ್ತಾ ಬಂದ ಶ್ರಾವಕವರ್ಗವು ನನ್ನಲ್ಲಿ ಆಗಾಗ್ಗೆ ನಿವೇದಿಸುತ್ತಲೇ ಇದ್ದರು. ಮಾತಾಜೀ ಶ್ರೀ ಧರ್ಮಸಾಗರರು ಈಗ ಆಚಾರ್ಯ ಪದವಿಯಲ್ಲಿದ್ದಾರೆ. ತಾವು ಕೆಲವು ವರ್ಷಗಳವರೆಗೆ ಸಂಘದಲ್ಲೆ ಇದ್ದು ಅಧ್ಯಯನ ಮತ್ತು ಧರ್ಮ ಪ್ರಭಾವನೆಯನ್ನು ಮಾಡಬೇಕು. ಇದರಿಂದ ಆಚಾರ್ಯ ಶಾಂತಿಸಾಗರರ ಪರಂಪರೆಯನ್ನು ರಕ್ಷಿಸಿದಂತೆ ಆಗುತ್ತದೆ ಎಂದು. ಇದನ್ನೆಲ್ಲ ಯೋಚಿಸಿದ ನಾನು ಸಂಘದಲ್ಲಿದ್ದುಕೊಂಡು ಆಚಾರ್ಯರ ಆಜ್ಞೆಪಡೆದು ಸಂಘದಲ್ಲಿದ್ದ ಮುನಿಗಳಿಗೂ ಆರ್ಯಿಕೆಯರಿಗೂ ಅಧ್ಯಯನ ಪ್ರಾರಂಭ ಮಾಡಿಸಿದೆ. ದಿನದ 5-6 ಗಂಟೆಗಳನ್ನು ಅಧ್ಯಾಪನದಲ್ಲಿ ತೊಡಗಿಸುತ್ತಿದ್ದೆ ಇದೇ ಸಂದರ್ಭದಲ್ಲಿ ಮೋತಿಚಂದ ರವೀಂದ್ರ ಕುಮಾರಿ ಮಾಲತಿ ತ್ರಿಶಲಾ ಮೊದಲಾದವರಿಗೂ ಅಷ್ಟ ಸಹಸ್ರಿಯ ಸಾರಾಂಶ, ಗೊಮ್ಮಟಸಾರದ ಕರ್ಮಕಾಂಡ, ರಾಜವಾರ್ತಿಕ ಮೊದಲಾದ ಗ್ರಂಥಗಳನ್ನು ಅಧ್ಯಯನ ಮಾಡಿಸಿದೆ. ನನಗೆ ಚೆನ್ನಾಗಿ ನೆನಪಿದೆ ಲಾವಾ ಮಾಲಪುರ ಮುಂತಾದ ಹಳ್ಳಿಯಲ್ಲಿ ಇರುವಾಗ ಆಚಾರ್ಯರು ಸಾಯಂಕಾಲದ ಪ್ರತಿಕ್ರಮಣದ ನಂತರ, ಕು. ತ್ರಿಶಲ (11 ವರ್ಷಗಳು) ಮೊದಲಾದವರನ್ನು ಕರ್ಮಕಾಂಡದ ಮೇಲೆ ಪ್ರಶ್ನೆಗಳನ್ನು ಕೇಳಿ ಅವರಿಂದ ಸಮರ್ಪಕವಾದ ಉತ್ತರ ದೊರೆತಾಗ ಅಭಿಮಾನದಿಂದ ಗದ್ಗದಿತರಾಗುತ್ತಿದ್ದರು.

ಇದರ ನಂತರ ಮಾತೆ ಮೋಹಿನಿಯವರಿಗೆ ಆರ್ಯಿಕೆಯ ದೀಕ್ಷೆಯನ್ನು ಕೊಟ್ಟು ಆರ್ಯಿಕೆ ರತ್ನಮತಿಯನ್ನಾಗಿ ಮಾಡಿದರು. ನಾನು 2500ನೇ ವರ್ಷದ ಮಹಾವೀರ ಜಯಂತಿಯಲ್ಲಿ ಭಾಗವಹಿಸುವ ಸಲುವಾಗಿ ಅವರಿಂದ ಅನುಮತಿಯನ್ನು ಪಡೆದು 1972ರಲ್ಲಿ ದೆಹಲಿಗೆ ವಿಹಾರ ಮಾಡಿದೆ. 1974ರಲ್ಲಿ ಆಚಾರ್ಯರು ತಮ್ಮ ದೊಡ್ಡ ಸಂಘದೊಡನೆ ದೆಹಲಿಗೆ ಆಗಮಿಸಿದರು. ನಿರ್ವಾಣೋತ್ಸವದ ಪ್ರತಿಯೊಂದು ಕೆಲಸವನ್ನು ನನ್ನೊಡನೆ ಚರ್ಚಿಸಿ ಕೈಕೊಳ್ಳುತ್ತಿದ್ದರು. ಇದರ ಹಲವಾರು ನೆನಪುಗಳು ಈಗಲು ಇದೆ.

ಅನಂತರ 1975ರಲ್ಲಿ ತಮ್ಮ ದೊಡ್ಡ ಸಂಘದೊಡನೆ ಹಸ್ತಿನಾಪುರಕ್ಕೆ ಆಗಮಿಸಿ ಜಂಬೂದ್ವೀಪದ ಸ್ಥಳದಲ್ಲಿ ಮೊದಲು ಭ. ಮಹಾವೀರರ ಪ್ರತಿಮೆಯನ್ನು ವಿರಾಜಮಾನಗೊಳಿಸಿದರು. ತಾವೇ ಸ್ವತಃ ಮೂರ್ತಿಯ ಕೆಳಗೆ ಅಚಲಯಂತ್ರವನ್ನು ಇಟ್ಟು, ಮಾರ್ಗಶಿರ ಶುಕ್ಲ ದ್ವಾದಶಿಯಂದು ಸೂರಿಮಂತ್ರವನ್ನು ಸ್ಥಾಪಿಸಿದರು. ಇಂದು ಈ ಮಹಾವೀರ ತೀರ್ಥಂಕರರೇ ಕಲ್ಪವೃಕ್ಷದಂತೆ ಅಮೃತ ಫಲಗಳನ್ನು ಕೊಡುತ್ತಿದ್ದಾರೆ. ಅಲ್ಲಿ ನಡೆದ ಜಂಬೂದ್ವೀಪದ ನಿರ್ಮಾಣ, ಜ್ಞಾನಜ್ಯೋತಿಯ ಪರ್ಯಟನೆ, ಪಂಚಕಲ್ಯಾಣ ಪ್ರತಿಷ್ಠೆಯ ಪ್ರತಿಯೊಂದು ಮಂಗಲ ಕಾರ್ಯವನ್ನು ಕೂಡ ಆಚಾರ್ಯರ ಆಶೀರ್ವಾದವನ್ನು ತೆಗೆದುಕೊಂಡೇ ಮಾಡಲಾಗಿದೆ. ಎಷ್ಟೇ ದೂರದಲ್ಲಿದ್ದರು ನನ್ನ

ಆರೋಗ್ಯವನ್ನು ವಿಚಾರಿಸಿಕೊಳ್ಳುತ್ತಿದ್ದರು. ಸಭೆಗಳಲ್ಲಿ ನನ್ನ ಕೆಲಸಗಳನ್ನು ಹರ್ಷದಿಂದ ಪ್ರಶಂಸಿಸುತ್ತಿದ್ದರು. ಅವನ್ನೆಲ್ಲ ರವೀಂದ್ರನು ವೀಡಿಯೊ ಮಾಡಿ ತಂದು ನನಗೆ ತೋರಿಸುತ್ತಿದ್ದನು. ನಿಜವಾಗಿಯು ಮಹಾನ್ ವ್ಯಕ್ತಿಗಳು ಬೇರೆಯವರನ್ನು ಮಹಾನ್ ವ್ಯಕ್ತಿಗಳನ್ನಾಗಿ ಮಾಡುತ್ತಾರೆ ಎಂಬುದನ್ನು ಧರ್ಮಸಾಗರರು ಜ್ವಲಂತ ಉದಾಹರಣೆ ಅವರ ಗುಣ ಗ್ರಾಹಕತೆ ಮತ್ತು ವಾತ್ಸಲ್ಯವನ್ನು ವ್ಯಕ್ತಪಡಿಸುವಂತಹ ಶಬ್ದಗಳೇ ನನ್ನಲ್ಲಿ ಇಲ್ಲ.

ನಾಲ್ಕನೆಯ ಆಚಾರ್ಯ ಪಟ್ಟಾಧೀಶರಾಗಿ ಅಜಿತ ಸಾಗರರು

ಧರ್ಮಸಾಗರರ ಸಮಾಧಿ ನಂತರ ಆಚಾರ್ಯಕಲ್ಪ ಶ್ರುತಸಾಗರರನ್ನು ಎಷ್ಟು ಪ್ರಾರ್ಥಿಸಿದರೂ ಆಚಾರ್ಯ ಪದವಿಯನ್ನು ಸ್ವೀಕರಿಸಲು ಸಮ್ಮತಿಸಲಿಲ್ಲ. ಕೊನೆಗೆ ಚತುರ್ವಿಧ ಸಂಘದ ಆಗ್ರಹದಿಂದ ಶ್ರುತಸಾಗರರು ವೈಶಾಖ ಶುಕ್ಲ ಅಷ್ಟಮಿ ಅಂದರೆ 1987ಮೇ 6ರಂದು ಉಪಾಧ್ಯಾಯ ಮುನಿಶ್ರೀ ಅಜಿತಸಾಗರರನ್ನು ಆಚಾರ್ಯಪಟ್ಟಕ್ಕೆ ಘೋಷಣೆ ಮಾಡಿದರು. ಜೂನ್ 7ರಂದು ಉದಯಪುರದ ಸಭೆಯಲ್ಲಿ ಅಜಿತಸಾಗರರಿಗೆ ಆಚಾರ್ಯ ಪಟ್ಟದ ಜವಾಬ್ದಾರಿಯನ್ನು ವಹಿಸಲಾಯಿತು. ಈ ಸಭೆಯಲ್ಲಿ ರವೀಂದ್ರನು ಪಾಲ್ಗೊಂಡಿದ್ದನು. ಈ ಸಮಾಚಾರವನ್ನು ರವೀಂದ್ರನು ಬಂದು ಹೇಳಿದಾಗ ನನ್ನಿಂದ ತಕ್ಷಣ ನನ್ನ ಮಗ ಚಕ್ರವರ್ತಿಯಾದ ಎಂಬ ಹರ್ಷದಿಂದ ಹೃದಯ ತುಂಬಿ ಬಂದಿತು.

ನಾನು ನಿಜವಾಗಿ ಈ ಮಾತು ಹೇಳುವುದು ಉಚಿತವಲ್ಲ ಏಕೆಂದರೆ ಆರ್ಯಿಕೆಯರು ಮುನಿಗಳಿಗೆ ವಂದಿಸಬೇಕು. ಮೊದಲು ಇವರು ನನ್ನಲ್ಲಿ 1956ರಿಂದ 60ರ ವರೆಗೆ ನನ್ನಲ್ಲಿ ಅಭ್ಯಾಸಮಾಡಿದವರು ಬ್ರ. ಅವಸ್ಥೆಯಲ್ಲಿದ್ದಾಗ ರಾಜಮಲ್ಲರಾಗಿದ್ದರು. ನನ್ನಲ್ಲಿ ತಾಯಿಯ ವಾತ್ಸಲ್ಯವನ್ನು ಹೊಂದಿದ್ದರು. ನನಗೂ ಪುತ್ರ ವಾತ್ಸಲ್ಯವಿತ್ತು. 1961ರಲ್ಲಿ ಮುನಿ ಅಜಿತಸಾಗರರಾಗಿ ನನಗಿಂತಲೂ ಪೂಜ್ಯಸ್ಥಾನ ಪಡೆದರು

ಶ್ರೇಯಾಂಸ ಸಾಗರರ ತಾಯಿ ಅರಹಮತಿಯವರು ಆರ್ಯಿಕೆಯಾಗಿದ್ದರು ಅವರು ಮುನಿಗಳಿಗೆ ಭಕ್ತಿಯಿಂದ ನಮಸ್ಕರಿಸುತ್ತಿದ್ದರು. ಅವರ ಹೃದಯಲ್ಲಿ ಮುನಿಗಳ ಬಗ್ಗೆ ವಾತ್ಸಲ್ಯ ಭಕ್ತಿಯು ಅವರ ಶಿಷ್ಯರ ಹೃದಯದಲ್ಲಿದ್ದ ಭಕ್ತ ವಾತ್ಸಲ್ಯಕ್ಕಿಂತಲು ಭಿನ್ನವಾದುದು ಅಲ್ಲವೇ. ಇವರ ಭಾವನೆ ಬೇರೆ ಶಿಷ್ಯರಲ್ಲಿ ಉಂಟಾಗುವುದು ಅಸಂಭವ ಹಾಗೇ ನನ್ನ ಜನ್ಮದಾತೆ ಮೋಹಿನಿಯು ಆರ್ಯಿಕೆ ಆದ ಮೇಲೆಯು ನನ್ನನ್ನು ತಮಗಿಂತ ಪೂಜ್ಯರೆಂದೇ ಭಾವಿಸಿ ನನಗೆ ನಮಸ್ಕರಿಸುತ್ತಿದ್ದರು. ಹಾಗೇ ನನ್ನಿಂದ ಪ್ರಾಯಶ್ಚಿತ್ತವನ್ನು ತೆಗೆದುಕೊಳ್ಳುತ್ತಿದ್ದರು. ನನಗೆ ಅವರ ಮೇಲಿದ್ದ ವಾತ್ಸಲ್ಯ ಭಕ್ತಿಯು ಉಳಿದ ಶಿಷ್ಯೆಯರಾದ ಆರ್ಯಿಕೆ ಜಿನಮತಿ ಆದಿಮತಿ ಮೊದಲಾದವರ ಭಕ್ತಿ ಭಾವನೆಗಿಂತ ಭಿನ್ನವಾದುದಲ್ಲವೇ. ಇದೇ ಮುನಿಶ್ರೀ ಅಜಿತಸಾಗರರು ಸಹ ಬ್ರ. ರಾಜಮಲ್ಲರಾಗಿದ್ದಾಗ ನನ್ನನ್ನು ತಾಯಿಯಂತೆ ಗೌರವಿಸುತ್ತಿದ್ದರು. ಅದರಿಂದಾಗಿಯೆ ಇಂತಹ ಶಿಷ್ಯರ ಭಕ್ತಿಯು ನನ್ನಲ್ಲಿ ವಿಲಕ್ಷಣವಾದ ವಾತ್ಸಲ್ಯಭಾವವನ್ನು ತಂದುಕೊಡುತ್ತದೆ ಬೇರೆ ಶಿಷ್ಯರೊಡನೆ ಇವರನ್ನು ಅಳೆಯುವುದು ಅಸಂಭವ ಎಂದೆ.

1957ರಿಂದ 59ರ ವರೆಗೆ ಬ್ರ. ರಾಜಮಲ್ಲರಿಗೆ ನಾನು ತತ್ತ್ವಾರ್ಥ ರಾಜವಾರ್ತಿಕ, ಗೊಮ್ಮಟಸಾರ ಕರ್ಮಕಾಂಡ, ಇಷ್ಟೋಪದೇಶ, ಪಂಚಾಧ್ಯಾಯೀ, ಮೊದಲಾದ ಗ್ರಂಥಗಳನ್ನು ಅಭ್ಯಾಸ ಮಾಡಿಸಿದ್ದೆ. ಅವರಿಗೆ ಹೆಚ್ಚು ಪ್ರೇರಣೆಯನ್ನು ಕೊಟ್ಟು 1961ರಲ್ಲಿ ಮುನಿದೀಕ್ಷೆ ತೆಗೆದುಕೊಳ್ಳಲು ಅನುವು ಮಾಡಿದ್ದೆ. ಅವರನ್ನು ದೀಕ್ಷೆಗೆ ಅನುವುಗೊಳಿಸುತ್ತಿದ್ದ ಮಾತುಗಳು ಇಂದೂ ನೆನಪಿಗೆ ಬರುತ್ತವೆ. ಈಗ ನನ್ನ ಪ್ರೇರಣೆಯ ಬೀಜವು ಮರವಾಗಿ ಫಲಭರಿತವಾಗಿದೆ ಇದರಿಂದ ಉತ್ತಮ ಫಲಗಳು ದೊರಕುತ್ತವೆ. ಅದಾಗ್ಯೂ ಮುನಿಗಳಾಗುವುದು

ಅವರ ಪೂರ್ವಸಂಚಿತವಾದ ಪುಣ್ಯೋದಯದಿಂದಲೇ ನಾನು ಎಂಬುದು ನಿಮಿತ್ತ. ಆದರೂ ನಾನು ಮಾಡಿದ ಶ್ರಮವು ಸಾರ್ಥಕವಾದುದರ ಅನುಭವ ಮನಸ್ಸನ್ನು ತುಂಬಿದೆ.

1962ರಲ್ಲಿ ನಾನು ಸಮ್ಮೇದಶಿಖರದ ಯಾತ್ರೆಗಾಗಿ ಹೊರಟು ಐದು ವರ್ಷಗಳ ಅವಧಿಯಲ್ಲಿ ಹಲವಾರು ತೊಂದರೆಗಳನ್ನು ಎದುರಿಸಬೇಕಾಯಿತು. ಈ ಎಲ್ಲಾ ಸಮಾಚಾರಗಳನ್ನು ಮುನಿಶ್ರೀಯವರು ತಿಳಿದುಕೊಳ್ಳುತ್ತಾ ಚಿಂತೆ ಮಾಡುತ್ತಿದ್ದರು. ಆರ್ಯಿಕೆ ವಿಶುದ್ಧಮತಿಯವರಿಂದ ನನಗೆ ಪತ್ರಗಳನ್ನು ಬರೆಸುತ್ತಿದ್ದರು. 1967ರಲ್ಲಿ ನಾನು ಮತ್ತೆ ಶಿವಸಾಗರರ ಸಂಘಕ್ಕೆ ಹಿಂದಿರುಗಿದೆನು. 1969ರಲ್ಲಿ ಆಚಾರ್ಯರ ಸಮಾಧಿಯನಂತರ ಇವರು ಶ್ರುತಸಾಗರರ ಜೊತೆ ಬೇರೆಯಾಗಿ ವಿಹಾರವನ್ನು ಕೈಕೊಂಡರು. 1972ರಲ್ಲಿ ದೆಹಲಿಗೆ ಹೊರಟಿದ್ದ ಇವರು ಮಾರ್ಗದಲ್ಲಿ ಅಜಮೇರದಲ್ಲಿ ನನ್ನನ್ನು ದರ್ಶನ ಮಾಡಿದ್ದರು. ಇಂದು ಅವರು ಆಚಾರ್ಯಪಟ್ಟವನ್ನು ಅಲಂಕರಿಸಿದ್ದಾರೆ ಎಂದು ಕೇಳಿದಾಗ ಸಂತೋಷವಾಗುವುದು ಸ್ವಾಭಾವಿಕವಲ್ಲವೇ. ನೂತನ ಪಟ್ಟಾಧೀಶರ ಬಗ್ಗೆ ನಾನು ಅರ್ಪಿಸಿದ ಶ್ರದ್ಧಾಕುಸುಮವನ್ನು ರವೀಂದ್ರನು ಸಮ್ಯಗ್‌ಜ್ಞಾನದಲ್ಲಿ ಪ್ರಕಟಿಸಿದ್ದ.

ಚತುರ್ಥ ಪಟ್ಟಾಚಾರ್ಯ ಪೂಜ್ಯಶ್ರೀ ಅಜಿತಸಾಗರರ ಬಗ್ಗೆ ನನ್ನಭಾವನೆ

ಕುಂಥಲಗಿರಿ ಸಿದ್ಧಕ್ಷೇತ್ರದಲ್ಲಿ 1955ರಲ್ಲಿ ಚಾರಿತ್ರ ಚಕ್ರವರ್ತಿ ಆಚಾರ್ಯ ಶ್ರೀ ಶಾಂತಿಸಾಗರ ಮಹಾರಾಜರು ಯಮಸಲ್ಲೇಖನ ತೆಗೆದುಕೊಂಡು ತಮ್ಮ ಆಚಾರ್ಯ ಪದವಿಯನ್ನು ಪ್ರಥಮ ಶಿಷ್ಯರಾದ ವೀರಸಾಗರರಿಗೆ ವಹಿಸಿದರು. 1957ರಲ್ಲಿ ಆಚಾರ್ಯ ಶ್ರೀ ವೀರಸಾಗರರು ತಮ್ಮ ನಶ್ವರ ಶರೀರವನ್ನು ತ್ಯಜಿಸಿದರು. ಆಗ ಅವರ ಪ್ರಥಮ ಶಿಷ್ಯರಾದ ಶಿವಸಾಗರ ಜೀ ಮಹಾರಾಜರು ಆಚಾರ್ಯ ಪಟ್ಟದಲ್ಲಿ ಆರೂಢರಾದರು. 1969ರಲ್ಲಿ ಪರಮತಪಸ್ವಿ ಆಚಾರ್ಯ ಶಿವಸಾಗರರು ಮಹಾವೀರಜೀಯಲ್ಲಿ ಆಕಸ್ಮಿಕವಾಗಿ ಸಮಾಧಿಯನ್ನು ಹೊಂದಿದರು. ಆಚಾರ್ಯ ವೀರಸಾಗರರ ದ್ವಿತೀಯ ಶಿಷ್ಯರಾದ ಧರ್ಮಸಾಗರರು ಆಚಾರ್ಯಪಟ್ಟವನ್ನು ಅಲಂಕರಿಸಿದರು. 1987ರಲ್ಲಿ ಇವರ ಸಮಾಧಿಯಾಗಲು ಈ ಗುರುತರ ಜವಾಬ್ದಾರಿಯನ್ನು ಶಾಂತಿಸಾಗರರ ಪರಂಪರೆಯ ನಾಲ್ಕನೆಯ ಪಟ್ಟಾಧೀಶ ಉಪಾಧ್ಯಾಯ ಮುನಿಗಳಿಂದ ಶ್ರೀ ಅಜಿತಸಾಗರರು ವಹಿಸಿದರು.

1961ರಲ್ಲಿ ಬ್ರ. ರಾಜಮಲಜೀಯವರು ಆಚಾರ್ಯ ಶ್ರೀ ಶಿವಸಾಗರದಿಂದ ಮುನಿದೀಕ್ಷೆಯನ್ನು ಪಡೆದು ಅಜಿತಸಾಗರರೆಂದು ಹೆಸರು ಪಡೆದರು. ಜ್ಞಾನಾರಾಧನೆಯಲ್ಲಿ ಸತತವಾಗಿ ತೊಡಗಿಕೊಂಡು ಉಪಾಧ್ಯಾಯ ಪದವಿಯನ್ನು ಪಡೆದರು. ಇಂದು ಸರ್ವಶ್ರೇಷ್ಠವಾದ ಆಚಾರ್ಯ ಪರಂಪರೆಯ ಮಣಿಸ್ವರೂಪವಾದ ಆಚಾರ್ಯರ ಸ್ಥಾನವನ್ನು ಅಲಂಕರಿಸಿದ್ದಾರೆ. ಒಂದನೆಯದಾಗಿ ಅವರು ಅಭೀಕ್ಷ್ಣ ಜ್ಞಾನೋಪಯೋಗಿಗಳು 2ನೇಯದಾಗಿ ಮಿತಭಾಷಿಗಳು ಮೂರನೆಯದಾಗಿ ಸರಳ ಸ್ವಭಾವಿಗಳು 4ನೆಯದಾಗಿ ಆರ್ಷ ಪರಂಪರೆಯ ಬಗ್ಗೆ ದೃಢರಾಗಿದ್ದವರು 5ನೇಯದಾಗಿ ಶಿಷ್ಯರ ಅನುಗ್ರಹದಲ್ಲಿ ಕುಶಲರು ಈ ಐದುಗುಣಗಳಿಂದ ವಿಭೂಷಿತರಾದ ತಾವು ಚಿರಕಾಲದವರೆಗೆ ಈ ಭೂಮಿಯ ಮೇಲೆ ಧರ್ಮ ಪ್ರಭಾವನೆಯನ್ನು ಮಾಡುತ್ತಾ ದಿಗಂಬರ ಜೈನಧರ್ಮದ ಪರಂಪರೆಯನ್ನು ಯುಗ ಯುಗದವರೆಗೆ ಕೊಂಡೊಯ್ಯ ಬೇಕೆಂಬ ಮಹದಾಸೆಯೊಂದಿಗೆ ನಿಮಗೆ ಶತ ಶತ ವಂದನೆಯನ್ನು ಮಾಡುತ್ತೇನೆ.

ಜೂನ್ 7, 1988

ಜಂಬೂದ್ವೀಪ ಹಸ್ತಿನಾಪುರ ಗಣಿನೀ ಆರ್ಯಿಕೆ ಜ್ಞಾನಮತಿ.

ಆಚಾರ್ಯ ಶ್ರೀ ದೇಶಭೂಷಣರ ಸಮಾಧಿ

ಆಚಾರ್ಯಶ್ರೀ ಧರ್ಮಸಾಗರರ ವಿಯೋಗದ ದುಃಖವನ್ನು ಇನ್ನೂ ಮರೆತಿರಲಿಲ್ಲ. ಅಕಸ್ಮಾತಾಗಿ ಆಚಾರ್ಯ ದೇಶಭೂಷಣ ಮಹಾರಾಜರ ಸಮಾಧಿಯ ಸಮಾಚಾರ ತಿಳಿದು ದುಃಖದಿಂದ ಕಲಿಕಾಲದಲ್ಲಿ ಧರ್ಮಪ್ರಭಾವನೆಯ ದುರಂಧರರಾದ ಆಚಾರ್ಯ ರತ್ನ ಹೊರಟೆಬಿಟ್ಟರೇ ಎಂದೆ. ಆಚಾರ್ಯರು ಕರ್ನಾಟಕದ ಬೆಳಗಾವ್ ಜಿಲ್ಲೆಯ "ಕೋಥಳಿ"ಎಂಬ ಚಿಕ್ಕಹಳ್ಳಿಯ ಸತ್ಯಗೊಂಡ ಪಾಟೀಲರ ಮನೆಯಲ್ಲಿ ಅಕ್ಕಾದೇವಿಯ ಮಗನಾಗಿ ಜನಿಸಿದ್ದರು. ಚಿಕ್ಕಂದಿನಲ್ಲೇ ತಂದೆ-ತಾಯಿಗಳನ್ನು ಕಳೆದುಕೊಂಡು ಅಜ್ಜಿಯ ಸಂರಕ್ಷಣೆಯಲ್ಲಿ ಬೆಳೆದು ದೊಡ್ಡವರಾದರು. ಅವರ ಹೆಸರು ಬಾಲಗೌಡ ಇವರು ಆಚಾರ್ಯ ಜಯಕೀರ್ತಿ ಮಹಾರಾಜರ ಜೊತೆ ಸಮ್ಮೇದ ಶಿಖರದ ಯಾತ್ರೆ ಮಾಡಿ ರಾಮ್‌ಟೇಕನಲ್ಲಿ ಆಚಾರ್ಯರಿಂದ ಐಲಕ ದೀಕ್ಷೆಯನ್ನು ಪಡೆದರು. ಆಗ ಗುರುಗಳಿಂದ ದೇಶಭೂಷಣರೆಂದು ಹೆಸರು ಪಡೆದರು. ದೇಶಭೂಷಣರು ಇಡೀ ವಿಶ್ವಕ್ಕೆ ಭೂಷಣಪ್ರಾಯರಾಗಿ ತಮ್ಮ ಹೆಸರನ್ನು ಸಾರ್ಥಕಪಡಿಸಿಕೊಂಡರು. ಅಲ್ಲಿಂದ ಸ್ವಲ್ಪ ದಿನಗಳಲ್ಲಿ ಮುನಿದೀಕ್ಷೆಯನ್ನು ಪಡೆದು ಕಠಿಣ ತಪಶ್ಚರ್ಯೆಯನ್ನು ಕೈಕೊಳ್ಳುತ್ತಾ ಜ್ಞಾನಾರಾಧನೆಯಲ್ಲಿ ಮುಂದುವರಿದರು.

ಜಯಕೀರ್ತಿ ಮಹಾರಾಜರ ಸಮಾಧಿಯ ನಂತರ ಇವರ ಯೋಗ್ಯತೆಯನ್ನು ನೋಡಿ ಆಚಾರ್ಯ ಪಾಯಸಾಗರರ ಆಜ್ಞೆಯಂತೆ ಇವರನ್ನು 1948ರಲ್ಲಿ ಆಚಾರ್ಯ ಪದವಿಯಲ್ಲಿ ಪ್ರತಿಷ್ಠಿತಗೊಳಿಸಲಾಯಿತು. 1936ರಿಂದ 1948ರ ವರೆಗೆ ದಕ್ಷಿಣ ಭಾರತದಲ್ಲಿ ಧರ್ಮದಲ್ಲಿ ಪ್ರಚಾರತೊಡಗಿದ್ದ ಇವರು 1948ರ ನಂತರ ಸುಮಾರು ಇಡೀ ಉತ್ತರ ಭಾರತದಲ್ಲೆಲ್ಲ ಸಂಚರಿಸಿ ಜೈನಧರ್ಮದ ಪ್ರಭಾವನೆಯನ್ನು ಕೈಕೊಂಡರು.

1947ರಲ್ಲಿ ಆಚಾರ್ಯರ ಚಾತುರ್ಮಾಸವು ಬನಾರಸದಲ್ಲಿ ಆಯಿತು. ನಂತರದ ವರ್ಷಗಳಲ್ಲಿ ಸೂರತ, ಆರಾ, ಲಖನೌ, ಬಾರಾ ಬಂಕೀ, ಟಿಕೈತನಗರಗಳಲ್ಲಿ ಪಡೆದು 1986ರ ಚಾತುರ್ಮಾಸವು ಸದಲಗಾದಲ್ಲಿ ನಡೆದಿತ್ತು ನಂತರ ಅವರು ಕೋಥಳಿಯಲ್ಲಿ ಇರುತ್ತಿದ್ದರು.

1987ರ ಮೇ 28ರಂದು ಬೆಳಗಿನಜಾವ 4ಗಂಟೆಗೆ ಅವರು ಸಮಾಧಿ ಮರಣವನ್ನು ಹೊಂದಿದರು. ಅವರ ಸಮಾಧಿ ಮರಣದ ಸಮಯದಲ್ಲಿ ಗಣಧರಾಚಾರ್ಯ ಶ್ರೀ ಕುಂಥುಸಾಗರರು ಅಲ್ಲೇ ಇದ್ದರು. ಅವರು ಬಹಳ ಸಹಯೋಗ ನೀಡಿದರು. ಅಷ್ಟೇ ಅಲ್ಲದೆ ಸ್ವಯಂ ಆಚಾರ್ಯರೇ ಮಹಾಮಂತ್ರವನ್ನು ಜಪಿಸುತ್ತಲೇ ನಶ್ವರ ಶರೀರವನ್ನು ತ್ಯಾಗಮಾಡಿದರು. ನನಗೆ 29ರಂದು ವಿಷಯ ತಿಳಿಯಿತು. ನಾನು ಭಕ್ತಿ ಪಾಠ ಹೇಳಿ ಗುರುಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದೆನು. ಇಡೀ ಭಾರತ ವರ್ಷದಲ್ಲೆಲ್ಲ ಶ್ರದ್ಧಾಂಜಲಿ ಸಭೆಗಳನ್ನು ಆಯೋಜಿಸಲಾಗಿತ್ತು.

ನಾನು 1952ರಲ್ಲಿ ಮನೆಬಿಟ್ಟು ಬಂದಾಗ ಬಾರಾಬಂಕಿಯಲ್ಲಿ ಚಾತುರ್ಮಾಸವನ್ನು ಕೈಗೊಂಡಿದ್ದ ಆಚಾರ್ಯರು ನನಗೆ ಆಶ್ರಯವನ್ನು ಕೊಟ್ಟು ಕ್ಷುಲ್ಲಿಕಾದೀಕ್ಷೆಯನ್ನು ಕೊಟ್ಟು ತಮ್ಮ ಸಾನಿಧ್ಯದಲ್ಲಿಯೇ ಎರಡು ವರ್ಷಗಳವರೆಗೆ ಇರಲು ಅವಕಾಶ ಕೊಟ್ಟು ಸಾಕಷ್ಟು ಶಿಕ್ಷಣವನ್ನು ಕೊಟ್ಟಿದ್ದರು. ಅವರ ಅಪೇಕ್ಷೆಯ ಮೇರೆಗೆ ನಾನು ಆರ್ಯಿಕಾ ದೀಕ್ಷೆಗಾಗಿ ವೀರಸಾಗರರ ಬಳಿಗೆ ತೆರಳಿದೆ. ಏಕೆಂದರೆ ಅಲ್ಲಿಯವರೆಗೆ ಅವರು ಯಾರಿಗೂ ಆರ್ಯಕೆಯ ದೀಕ್ಷೆ ಕೊಟ್ಟಿರಲಿಲ್ಲ. ಅವರ ಅಸೀಮವಾದ ವಾತ್ಸಲ್ಯದ ಅನುಭವವನ್ನು ನಾನು ಪಡೆದಿದ್ದೆ. ಅಲ್ಲದೆ ದೆಹಲಿಯಲ್ಲಿ 1972-73-74ನೇ ಚಾತುರ್ಮಾಸದಲ್ಲಿ ಒಟ್ಟಿಗೆ ಇದ್ದೆವು. ಅವರ ಒತ್ತಾಯದಿಂದಲೇ ನಾನು ಜಂಬೂದ್ವೀಪದ ನಿರ್ಮಾಣಕ್ಕಾಗಿ ಪಣಕೊಟ್ಟೆ.

ಆಚಾರ್ಯರು ಆಯೋಧ್ಯಾ ತೀರ್ಥಕ್ಷೇತ್ರವನ್ನು ಜೀರ್ಣೋದ್ಧಾರಗೊಳಿಸಿ ಉತ್ತುಂಗ ಪ್ರತಿಮೆಯನ್ನು ಪ್ರತಿಷ್ಠಾಪಿಸಿದ್ದರು. ಜಯಪುರದ ಖಾನಿಯಾದಲ್ಲಿ ಚೂಲಗಿರಿ ತೀರ್ಥಕ್ಷೇತ್ರದ ನಿರ್ಮಾಣಕ್ಕೂ ಹಾಗೇ ಕೋಥಳಿಯಲ್ಲಿ ಶಾಂತಿಗಿರಿ ತೀರ್ಥಸ್ಥಾನ ರಚಿಸಿ ದಕ್ಷಿಣಭಾರತವನ್ನು ಪುಣ್ಯಕ್ಷೇತ್ರವನ್ನಾಗಿ ಮಾಡಿದ ಶ್ರೇಯಸ್ಸು ಇವರಿಗಿದೆ. ಅನೇಕ ಮಂದಿರ ಮತ್ತು ಜಿನಪ್ರತಿಮೆಗಳ ನಿರ್ಮಾಣ ಮಾಡಿ ಸಾತಿಶಯ ಪುಣ್ಯವನ್ನು ಯಶಸ್ಸನ್ನು ಪಡೆದಿದ್ದರು. ಅನೇಕ ಗ್ರಂಥಗಳ ರಚನೆಯನ್ನು ಕನ್ನಡ,ಮರಾಠಿ, ಹಿಂದಿ ಮತ್ತು ಆಂಗ್ಲ ಭಾಷೆಗಳಲ್ಲೂ ಮಾಡಿದ್ದಾರೆ ಅವರಿಂದ ಅನೇಕ ಸ್ವತಂತ್ರಗ್ರಂಥಗಳು ಅನುವಾದಗ್ರಂಥಗಳು ಪ್ರಕಟವಾಗಿವೆ. ರತ್ನಾಕರ ಶತಕ, ಅಪರಾಜಿತಶತಕ, ಣಮೋಕಾರಗ್ರಂಥ ಮೊದಲಾದ ಗ್ರಂಥಗಳು ಆಬಾಲವೃದ್ಧರಾಗಿ ಸ್ವಧ್ಯಾಯಕ್ಕಾಗಿ ಉತ್ತಮ ಗ್ರಂಥಗಳಾಗಿವೆ.

ಆಚಾರ್ಯರಿಂದ ಹಲವರು ಮುನಿದೀಕ್ಷೆ ಆರ್ಯಿಕೆ, ಕ್ಷುಲ್ಲಕ, ಕ್ಷುಲ್ಲಿಕೆ, ದೀಕ್ಷೆಯನ್ನೂ ಪಡೆದುಕೊಂಡಿದ್ದಾರೆ. ಇವರಲ್ಲಿ ಅತ್ಯಂತ ಪ್ರಸಿದ್ಧಿ ಪಡೆದವರೆಂದರೆ ಆಚಾರ್ಯ ಸುಬಲಸಾಗರರು, ಆಚಾರ್ಯ ವಿದ್ಯಾನಂದರು. ಬಾಹುಬಲಿ ಸಾಗರರು ಹಾಗೆ (ಕ್ಷುಲ್ಲಿಕ) ಆರ್ಯಿಕೆ ಜ್ಞಾನಮತೀಯವರು.

1987ರಲ್ಲಿಯೆ ಮೋತಿಚಂದ್ರ ರವೀಂದ್ರ ಕುಮಾರ, ಮಾಧುರಿ, ಮೊದಲಾದವರು ದಕ್ಷಿಣ ಭಾರತದ ಯಾತ್ರೆಗೆ ಹೋದಾಗ ಆಚಾರ್ಯರ ದರ್ಶನ ಮಾಡಲು ಹೋಗಿದ್ದರು. ಅವರ ವಾತ್ಸಲ್ಯ ಅಪ್ಯಾಯಮಾನವಾಗಿತ್ತು. ಮೋತಿ ಚಂದನನ್ನಂತು ಎಷ್ಟುಬಾರಿ ಎಚ್ಚರಿಸಿದೆರಂದರೆ ಮೋತಿ ಚಂದ ನೀನುದೀಕ್ಷೆ ಪಡೆದು ಕೈಹಿಡಿದು ಕುಳಿತುಕೊಳ್ಳಬಾರದು ಜೈನ ಧರ್ಮದ ಪ್ರಭಾವನೆಗಾಗಿ ಕಾರ್ಯಶೀಲನಾಗಬೇಕು ನೋಡಿರಿ ಅನ್ಯ ಧರ್ಮಿಯರು ತಮ್ಮ ಧರ್ಮದ ಪ್ರಭಾವನೆಯಲ್ಲಿ ಹೇಗೆ ತೊಡಗಿಕೊಡಿದ್ದಾರೆ ಅನಾದಿ ನಿಧನ ಸಾರ್ವಭೌಮ ಧರ್ಮವಾದ ಜೈನ ಧರ್ಮದ ಉನ್ನತಿ ವೃದ್ಧಿಗಾಗಿ ಎಷ್ಟು ಶ್ರಮಿಸಿದರು ಕಡಿಮೆ ಎಂಬುದನ್ನು ಸದಾ ಮನದಲ್ಲಿ ಇಟ್ಟುಕೊಂಡಿರಿ ಎಂದರು.

ಅವರ ಉಪದೇಶ ಪ್ರತಿಯೊಬ್ಬ ಜೈನನಿಗೂ ಅನ್ವಯಿಸುತ್ತದೆ. ಅವರ ಉಪದೇಶದ ಒಂದೊಂದು ಮಾತು ನೆನಪಿಗೆ ಬರುತ್ತಲೆ ಇರುತ್ತದೆ. ಅವರ ಹಿತನುಡಿಗಳು ಮನೋಬಲವನ್ನು ಹೆಚ್ಚಿಸುತ್ತದೆ ಮುಂದೆಯು ಪ್ರೇರಣೆ ಕೊಡುತ್ತದೆ. ಅವರು ಭಾರತದ ಎಲ್ಲಾ ಕಡೆ ಪ್ರಭಾವನೆಯನ್ನು ಉಂಟುಮಾಡುತ್ತಿದ್ದ ಮಹಾನ್ ಚೇತನ. ಭಗವಾನ ಮಹಾವೀರರ 2500ನೇ ನಿರ್ವಾಣ ಮಹೋತ್ಸವ ರಾಷ್ಟ್ರೀಯಮಟ್ಟದಲ್ಲಿ ಆಚರಣೆಗೊಳ್ಳಲು ತಾವೇ ಪ್ರೇರಕಶಕ್ತಿ, ಶ್ವೇತಾಂಬರ ಮುನಿಗಳಾದ ಶ್ರೀ ಸುಶೀಲರು .. ಮತ್ತು ನೀವು ಕುಳಿತುಕೊಂಡು ಕಾರ್ಯಕ್ರಮದ ರೂಪರೇಖೆಯನ್ನು ಸಿದ್ಧಪಡಿಸಿದ್ದೀರಿ. ಆಚಾರ್ಯರು ರೂಪರೇಖೆಗಳನ್ನು ನನಗೆ ಸ್ವಯಂ ಅವರೇ ತಿಳಿಸುತ್ತಿದ್ದರು.

ಮಂದಿರಗಳನ್ನು ಮೂರ್ತಿಗಳನ್ನು ನಿರ್ಮಾಣ ಮಾಡಲು ಜನರಿಗೆ ಪ್ರೇರಣೆ ಕೊಡುತ್ತಿದ್ದ ಮಹಾನ್ ಚೇತನವಾಗಿದ್ದ ಆಚಾರ್ಯರು ಹೋದೆಡೆಯಲ್ಲೆಲ್ಲ ತಮ್ಮ ಮಾತಿನಿಂದ ಆಕರ್ಷಿಸಿ ಮಂತ್ರಮುಗ್ಧರನ್ನಾಗಿ ಮಾಡುತ್ತಿದ್ದರು. ಇವರ ವಾಕ್ ಚಾತುರ್ಯಕ್ಕೆ ಎಬಾಲ ವೃದ್ಧರೆಲ್ಲ ಆಕರ್ಷಿತರಾಗುತ್ತಿದ್ದರು. ದೊಡ್ಡ ದೊಡ್ಡ ಪ್ರತಿಷ್ಠೆಗಳನ್ನು ಆಚಾರ್ಯರು ನೆರವೇರಿಸಿದ್ದಾರೆ. ಅದರಿಂದ ಹಲವಾರು ಜನರು ದೀಕ್ಷಿತರಾಗಿದ್ದಾರೆ. ಅವರ ಶ್ರೀ ಚರಣಗಳಿಗೆ ಮತ್ತೆ ಮತ್ತೆ ನಮಿಸುತ್ತಾ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿದೆ.

ಶಿಕ್ಷಣ ಪ್ರಶಿಕ್ಷಣ ಶಿಬಿರ

ಗುಜರಾತಿನ ರಾಜಧಾನಿ ಅಹಮದಬಾದಿನಲ್ಲಿ ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನ ಹಸ್ತಿನಾಪುರದ

ಮೂಲಕ 1987ರ ಮೇ 31ರಿಂದ ಜೂನ್ 8ರವರೆಗೆ ಜ್ಞಾನಜ್ಯೋತಿ ಶಿಕ್ಷಣ ಪ್ರಶಿಕ್ಷಣ ಶಿಬಿರದ ಆಯೋಜನೆ ಮಾಡಲಾಗಿತ್ತು. ಇಲ್ಲಿಂದ ರವೀಂದ್ರ ಮತ್ತು ಮಾಧುರಿ ಹೋಗಿದ್ದರು. ಅನೇಕ ಜನ ವಿದ್ವಾಂಸರು ವಿವಿಧ ಕಡೆಯಿಂದ ಆಗಮಿಸಿದ್ದರು. ಸುಮಾರು 1000 ಜನ ವಿದ್ಯಾರ್ಥಿಗಳು ಲಾಭ ಪಡೆದರು. ಗುಜರಾತಿನ ಆರ್ಷಪರಂಪರೆಯಲ್ಲಿಯ ಇದೊಂದು ಹಿರಿದಾದ ಮೊದಲ ಶಿಬಿರವಾಗಿತ್ತು.

ಈ ಶಿಬಿರದಿಂದ ಪ್ರಭಾವಿತರಾದ ಕೆಲವು ಮಹಾನುಭಾವರು ತಮ್ಮ ಮಕ್ಕಳನ್ನು ನಮ್ಮ ವಿದ್ಯಾಪೀಠಕ್ಕೆ ಅಧ್ಯಯನಕ್ಕಾಗಿ ಕಳುಹಿಸಿದರು. ಹೀಗೆ ಬಂದ ವಿದ್ಯಾರ್ಥಿಗಳಲ್ಲಿ ಧರ್ಮೇಂದ್ರಕುಮಾರನು ಇಲ್ಲಿ ಬಂದು ಆಜನ್ಮ ಬ್ರಹ್ಮಚರ್ಯವ್ರತವನ್ನು ಎರಡನೆಯ ಪ್ರತಿಮೆಯ ವ್ರತವನ್ನು ತೆಗೆದುಕೊಂಡರು.

೯೨

ವರ್ಷಾಯೋಗದ ಸ್ಥಾಪನೆ

1987ರ ಚಾತುರ್ಮಾಸವನ್ನು ಜಂಬೂದ್ವೀಪದಲ್ಲೆ ಕೈಕೊಳ್ಳಲಾಯಿತು. ಈಗ ಸಂಘದಲ್ಲಿ ಆರ್ಯಿಕೆ ಶಿವಮತಿ ಮತ್ತು ಮೋತಿಸಾಗರರು ಇದ್ದರು.

ಇಂದ್ರಧ್ವಜ ಆರಾಧನೆ

1987ರ ಜುಲೈ 15ರಂದು ಮಹಮೂದಿಬಾದಿನ ಹೀರಾಮಣಿಯವರು ತಮ್ಮ ಪರಿವಾರದೊಡನೆ ಬಂದು ಇಂದ್ರಧ್ವಜ ಆರಾಧನೆಯನ್ನು ಮಾಡಿದರು. ಅದೇ ಸಮಯದಲ್ಲಿ ದೆಹಲಿಯ ಕಮಲಚಂದ್ ಪರಿವಾರವು ಬಂದು ಇಂದ್ರಧ್ವಜ ಆರಾಧನೆಯನ್ನು ಕೈಕೊಂಡರು. ಒಂದೇ ಸಮಯದಲ್ಲಿ 2 ಇಂದ್ರಧ್ವಜ ಆರಾಧನೆಯು ನಡೆದವು. ಜುಲೈ 24 ರಥಯಾತ್ರೆ ನಡೆಯಿತು ಎರಡು ಪರಿವಾರದವರು ಧರ್ಮಲಾಭವನ್ನು ಪಡೆದರು ಕಮಲ ಚಂದ್ ಜೈನರು ಕಮಲಮಂದಿರಕ್ಕಾಗಿ 51,000ಗಳ ಕೊಡುಗೆಯನ್ನು ಮಹಮೂದಬಾದಿನ ಕೋಮಲಚಂದರು 18,000 ರೂಪಾಯಿಗಳ ಕೊಡುಗೆಯನ್ನು ನೀಡಿದರು.

ಬರಣಿಗೆಯ ಕೆಲಸ

1976ರಲ್ಲಿ "ಕಲ್ಪತರುಸ್ತೋತ್ರ' ಎಂಬ ಸಂಸ್ಕೃತದ ಚತುರ್ವಿಂಶತಿ ಸ್ತೋತ್ರದ ಅರ್ಥವನ್ನು ಪೂಜ್ಯಪಾದಸ್ವಾಮಿಕೃತ ಪಂಚಾಮೃತ ಅಭಿಷೇಕದ ಹಿಂದಿ ಅನುವಾದ, ಸಕಲೀಕರಣ, ಹವನ ಮುಂತಾದ ವಿಧಿಕ್ರಿಯೆಗಳನ್ನು ಸಂಸ್ಕೃತ ಶ್ಲೋಕಗಳ ಸಂಕ್ಷಿಪ್ತ ಮಾಡಿ ಭಾವರೂಪದ ಪದ್ಯಾನುವಾದವನ್ನು ಮಂತ್ರಗಳನ್ನು ಹಾಗೇ ಇಟ್ಟು ಮಂಡಲವಿಧಾನದ ಪ್ರಾರಂಭವಿಧಿ ಹಾಗೂ ಹವನವಿಧಿ ಎಂಬ ಹೆಸರಿನಲ್ಲಿ ಪುಸ್ತಕ ರಚಿಸಿದ್ದೆ. ಇದಾದ ಮೇಲೆ ಭಗವಾನ ನೇಮಿನಾಥರ ಚರಿತ್ರೆ ಪೂರ್ಣಗೊಳಿಸಿ "ನನ್ನ ನೆನಪು" ಕೃತಿಯನ್ನು ಕೈಗೆತ್ತಿಕೊಂಡೆ.

ಸಂಸ್ಥಾನದ ವ್ಯವಸ್ಥೆ

1986-87ರಲ್ಲಿ ನನ್ನ ಆರೋಗ್ಯ ಸುಧಾರಿಸಿದ ಮೇಲೆ ನನ್ನ ಯೋಚನೆ ಹರಿದಿದ್ದು ಮೂಲಾಚಾರ ಅಂದರೆ

ಮುನಿಗಳ ಆಚಾರದ ಬಗ್ಗೆ ಇದರಲ್ಲಿ 6 ಘಟ್ಟಗಳನ್ನು ಕಾಣುತ್ತೇವೆ. ದೀಕ್ಷೆ, ಶಿಕ್ಷಣ, ಗಣಪೋಷಣೆ, ಆತ್ಮಸಂಸ್ಕಾರ, ಸಲ್ಲೇಖನ, ಉತ್ತಮಾರ್ಥ. ಮೊದಲಿನ ಮೂರು ಸಂಸ್ಕಾರದ ವರ್ಣನೆ ಮೂಲಾಚಾರದಲ್ಲಿ ದೊರೆಯುತ್ತದೆ. ಮುಂದಿನ ವರ್ಣನೆ ಭಗವತೀ ಆರಾಧನೆಯಲ್ಲಿದೆ. ನಾನು 18ನೇ ವರ್ಷದಲ್ಲಿ ದೀಕ್ಷೆ ಕೈಕೊಂಡೆ. ದೀಕ್ಷೆಯ ನಂತರ ಪಠನ-ಪಾಠನ ಮಾಡುತ್ತಾ ಅನೇಕ ಗ್ರಂಥಗಳ ಸ್ವಾಧ್ಯಾಯ ಮುಗಿಸಿದ್ದೆ. ನನ್ನ ಶಿಕ್ಷಣ ಕಾಲವು ಮುಗಿದಿದೆ. ಇದರ ನಂತರ ಅನೇಕ ಹುಡುಗ ಮತ್ತು ಹುಡುಗಿಯರು, ಮಹಿಳೆಯರನ್ನು ಗೃಹತ್ಯಾಗಮಾಡಿಸಿ ಆತ್ಮಕಲ್ಯಾಣದ ಕಡೆ ಕರೆದೊಯ್ದಿದ್ದೇನೆ. ಧರ್ಮದಲ್ಲಿ ಸ್ಥಿರಗೊಳಿಸಿದ್ದೇನೆ. ಹಾಗೇ ಆತ್ಮಸಂಸ್ಕಾರವನ್ನು ಗ್ರಹಣೆ ಮಾಡಿದ್ದೇನೆ. ನನ್ನಿಂದ ದೀಕ್ಷೆ ಪಡೆದವರು ಉನ್ನತ ಸ್ಥಾನವನ್ನು ಗ್ರಹಿಸಿದ್ದಾರೆ. ಅವರಿಗೆ ಅನುಗ್ರಹವನ್ನು ಕರುಣಿಸಿದ್ದೇನೆ ಹಾಗೆ ತಪ್ಪು ಮಾಡಿದಾಗ ನಿಗ್ರಹವನ್ನು ಮಾಡಿದ್ದೇನೆ ಇಂದು ನನ್ನ ಶಿಷ್ಯರು ಮುನಿ, ಉಪಾಧ್ಯಾಯ, ಆಚಾರ್ಯ ಪದವಿಗಳಲ್ಲಿದ್ದಾರೆ. ಹೀಗೆ ಮೋಕ್ಷ ಪರಂಪರೆಯನ್ನು ಮುನ್ನಡೆಸಿದ್ದೇನೆ. ಇದು ಗಣಪೋಷಣೆ ಕಾಲವನ್ನು ಪೂರ್ಣಗೊಳಿಸಿದೆ. ತೀರ್ಥಕ್ಷೇತ್ರಗಳ ದರ್ಶನದಲ್ಲಿ ಸಮ್ಮೇದಶಿಖರ, ಗಿರಿನಾರಜೀ, ಪಾವಾಪುರಿ, ಶ್ರವಣಬೆಳಗೊಳ ಮಾಂಗಿತುಂಗಿ, ಗಜಪಂಥ ಕುಂಥಲಗಿರಿ ಮುಂತಾದ ಕ್ಷೇತ್ರಗಳಲ್ಲಿ ಚಾತುರ್ಮಾಸ ಕೈಕೊಂಡು ಆತ್ಮ ವಿಶುದ್ಧಿಗಾಗಿ ಅನೇಕ ಗ್ರಂಥಗಳ ರಚನೆಯನ್ನು ಮಾಡಿದ್ದೇನೆ. ಇನ್ನು ಇಂದ್ರಧ್ವಜ, ಜಂಬೂದ್ವೀಪ ಕಲ್ಪದ್ರುಮ, ಸಿದ್ಧಚಕ್ರ, ತ್ರಿಲೋಕ, ಸರ್ವತೋಭದ್ರ ಮುಂತಾದ ಹಲವಾರು ಆರಾಧನೆ ಪೂಜೆಗಳ ರಚನೆಮಾಡಿ ಆರಾಧನೆಗಳನ್ನು ಮಾಡಿಸಿದ್ದೇನೆ. ಎಲ್ಲಕ್ಕಿಂತ ಜಂಬೂದ್ವೀಪದ ನನ್ನ ಕಲ್ಪನೆಯು ಸಾಕಾರಗೊಂಡು ಜನಗಳನ್ನು ಆಧ್ಯಾತ್ಮದ ಕಡೆಗೆ ಆಹ್ವಾನಿಸುತ್ತಿದೆ. ಹಾಗೆ ಅತಿಶಯಧರ್ಮ ಪ್ರಭಾವನೆಯನ್ನು ಉಂಟುಮಾಡಿದ ಕೆಲಸವೆಂದರೆ 'ಜಂಬೂದ್ವೀಪಜ್ಞಾನಜ್ಯೋತಿ"ಯ ಪರ್ಯಟನೆಯು ಇಡೀ ಭಾರತದಲ್ಲೆಲ್ಲ ಸುತ್ತಾಡಿದೆ.

ವಿದ್ಯಾಪೀಠದಲ್ಲಿ ವಿದ್ಯಾರ್ಥಿಗಳು ಧಾರ್ಮಿಕ ಅಧ್ಯಯನ ಮಾಡುತ್ತಾ ಆಚಾರ್ಯಚಕ್ರವರ್ತಿ ಶಾಂತಿಸಾಗರರ ಪರಂಪರೆಯನ್ನು ಮುಂದುವರಿಸುತ್ತಿದ್ದಾರೆ "ಸಮ್ಯಗ್‌ಜ್ಞಾನ" ಮಾಸಿಕಪತ್ರಿಕೆಯು ಲಕ್ಷಾಂತರ ಭವ್ಯಜೀವಿಗಳಿಗೆ ಪ್ರತಿತಿಂಗಳು ಜ್ಞಾನಬೋಧನೆಯನ್ನು ಮಾಡುತ್ತಿದೆ.

ಹೀಗೆ ನನ್ನ ಮೊದಲ ಮೂರು ಘಟ್ಟಗಳು ಪೂರ್ಣಗೊಂಡು ನಾಲ್ಕನೆಯ "ಆತ್ಮಸಂಸ್ಕಾರ"ದ ಘಟ್ಟವು ನಡೆಯುತ್ತಿದೆ. ನಾನು ಬಾಹ್ಯಸಂಪರ್ಕವನ್ನು ವಿಮುಖಗೊಳಿಸಿ ಆತ್ಮ ಸಂಸ್ಕಾರದಲ್ಲಿ ತೊಡಗಿಸಿಕೊಂಡಿದ್ದೇನೆ. ಆತ್ಮವನ್ನುಆಧ್ಯಾತ್ಮಭಾವನೆಯಿಂದ ಸಂಸ್ಕಾರಿತಗೊಳಿಸಬೇಕು. ನಂತರದಲ್ಲಿ ಸಲ್ಲೇಖನ ಮತ್ತು ಉತ್ತಮಾರ್ಥಕ್ಕೆ ಸಾಧನೆ ಮಾಡಬೇಕು.

ಈಗ ನಾನು ಸಂಸ್ಥಾನದ ಕೆಲಸಗಳಿಗೆ (ನಾನು) ಸಲಹೆ ಕೊಡುವುದರಿಂದ ಮುಕ್ತಳಾಗ ಬಯಸುತ್ತಿದ್ದೇನೆ. ಇದೇ ಭಾವನೆಯಿಂದ ಸರಿಯಾದ ಸಮಯ ನೋಡಿ ಸಂಸ್ಥಾನದ ಮೀಟಿಂಗ್ ಕರೆದು 1987ರ ಆಗಸ್ಟ್ 2ರಂದು "ಹೊಸ ಕಾರ್ಯಕಾರಿಣಿ" ಪದಾಧಿಕಾರಿಗಳ ಸಂಘಟನೆಯಾಯಿತು. ಇದು 51 ಜನ ಸದಸ್ಯರನ್ನು ಒಳಗೊಂಡಿದೆ. ರವೀಂದ್ರಕುಮಾರನು ಅಧ್ಯಕ್ಷನಾಗಿ ಸರ್ವಾನುಮತದಿಂದ ಆಯ್ಕೆಗೊಂಡನು. ಜಿನೇಂದ್ರ ಠೇಕೆದಾರರು ಕಾರ್ಯಾಧ್ಯಕ್ಷರಾಗಿಯು, ಕೈಲಾಸಚಂದ ಜೈನರು ಕೋಷಾಧ್ಯಾಕ್ಷರು ಗಣೇಶಲಾಲ ರಾನಿವಾಲರು ಮಹಾಮಂತ್ರಿಗಳಾಗಿ ಕುಮಾರಿ ಮಾಧುರಿ ಮಂತ್ರಿಯನ್ನಾಗಿಯು ಘೋಷಿಸಲಾಯಿತು.

ಇಲ್ಲಿಯವರೆಗೆ ಸಂಸ್ಥಾನಕ್ಕೆ ನಾನು ಹೇಗೆ ಪ್ರೇರಣೆಯನ್ನು ಮಾರ್ಗದರ್ಶನವನ್ನು ನೀಡುತ್ತಿದ್ದೇನೋ ಆ ಕಾರ್ಯಭಾರವನ್ನು ಮೋತಿಸಾಗರರ ಮೇಲೆ ಹೊರಿಸಲಾಯಿತು. ಅವರನ್ನು "ಪೀಠಾಧೀಶ"ರೆಂದು ಘೋಷಿಸಲಾಯಿತು.

ಮುಂದೆಯು ಸಂಸ್ಥೆಯು ವ್ಯವಸ್ಥಿತವಾಗಿ ಮುಂದುವರಿಯುವಂತೆ ಏಳುಜನ ಸದಸ್ಯರ ಕಾರ್ಯಕಾರಿ ಸಮಿತಿಯ ರಚನೆಯು ಆಯಿತು. ಮೀಟಿಂಗ್‌ನಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಈ ತೀರ್ಮಾನಗಳು ಬಹಳ ಸಮಾಧಾನವನ್ನುಕೊಟ್ಟವು. ಎಲ್ಲರು ತುಂಬ ಪ್ರಶಂಸಿಸಿದರು ಸ್ಥಾಯೀ ಸಮಿತಿಯ ಸದಸ್ಯರೆಲ್ಲರು "ಗೋಪ್ಯತೆ"ಯ ಶಪಥ ಕೈಕೊಂಡು ಸರ್ವಸಮ್ಮತಿಯ ನಿರ್ಣಯ ಕೈಕೊಂಡರು. ಈ ಘೋಷಣೆಯ ಪತ್ರವನ್ನು ತಾಮ್ರಪತ್ರದ ಮೇಲೆ ಬರೆಸಿ ಪೀಠಾಧೀಶರಿಗೆ ಸಮರ್ಪಿಸಿದರು. ಇದೆಲ್ಲ ಆದ ಮೇಲೆ ನನ್ನ ಆಶೀರ್ವಚನ, ಜಯಕಾರದೊಂದಿಗೆ ಮಹತ್ಪಪೂರ್ಣಸಭೆ ಮುಕ್ತಾಯ ವಾಯಿತು.

1987ರ ಆಗಶ್ಟ್ 3ರಂದು ಕ್ಷುಲ್ಲಕ ಮೋತಿಸಾಗರರ ಕಾಲುತೊಳೆದು "ಸ್ಥಾಯೀಸಮಿತಿ"ಯ ಸದಸ್ಯರು ಅವರಿಗೆ ನವೀನ ಲಂಗೋಟಿ, ಚಾದರ ಪ್ರಧಾನ ಮಾಡಿದರು ನಂತರ ತ್ರಿಮೂರ್ತಿಮಂದಿರದಲ್ಲಿ ಪೀಠಾಧೀಶರ ಸ್ಥಾನಲ್ಲಿ ಕುಳ್ಳಿರಿಸಿ ಹೊಸ ಪಿಂಛಿಯನ್ನು ನೀಡಲಾಯಿತು. ಅವರಿಗೂ ಸಂಸ್ಥಾನದ ಗೋಪ್ಯತೆಯನ್ನು ಶಪಥವನ್ನು ಮಾಡಿಸಲಾಯಿತು. ಸ್ಥಾಯೀ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ಮುಕ್ತ ಮನಸ್ಸಿನಿಂದ ವ್ಯಕ್ತಗೊಳಿಸದರು. ಪೀಠಾಧೀಶರಾದ ಮೋತಿಸಾಗರರು ತಮ್ಮ ಕಿರಿತನವನ್ನು ಪ್ರಕಟಗೊಳಿಸುತ್ತಾ ಧರ್ಮ ಮತ್ತು ಪದವಿಗೆ ಅನುಕೂಲವಾಗಿ ನಡೆಯುವ ಆಶ್ವಾಸನೆಯನ್ನು ವ್ಯಕ್ತಗೊಳಿಸಿದರು. ನಾನು ಸಮಯೋಚಿತವಾದ ಉಪದೇಶ ಕೊಟ್ಟೆ. ಈ ರೀತಿ ದಿಗಂಬರ ಜೈನ ತ್ರಿಲೋಕಶೋಧ ಸಂಸ್ಥಾನದ ಭಾವೀ ವ್ಯವಸ್ಥೆಗಳನ್ನು ಮಾಡಿಸಿದ ಮೇಲೆ ಮನಸ್ಸು ಧನ್ಯತಾ ಭಾವನೆಯಿಂದ ಮುದಗೊಂಡು ಅಪೂರ್ವಶಾಂತಿಯ ಅನುಭವವಾಗತೊಡಗಿತು.

ಜನಶ್ರುತಿ

1985ರ ಅಕ್ಟೋಬರನಿಂದ ಡಿಸಂಬರ ಅವಧಿಯಲ್ಲಿ ನಾನು ತೀವ್ರ ಅಸ್ವಸ್ಥಳಾಗಿ ಸಲ್ಲೇಖನದ ಹಂತವನ್ನೆ ಮುಟ್ಟಿದ್ದೆ. ಆಗ ನನಗೆ ಆಸರೆಯಾಗಿದ್ದು ಣಮೋಕಾರಮಂತ್ರ, ಶಾಂತಿಮಂತ್ರ, ಜಿನೇಂದ್ರ ಸ್ತುತಿಗಳ ಹೊರತು ಬೇರೆಯ ಚಿಂತೆ ಇರಲಿಲ್ಲ. ಕೆಲವು ಧರ್ಮಾಭಿಮಾನಿಗಳಿಗೆ ಜಂಬೂದ್ವೀಪದ ಭವಿಷ್ಯದ ನಿರ್ವಹಣೆಯ ಬಗ್ಗೆ ಚಿಂತೆಯಾಗಿದ್ದ ಸುದ್ದಿಯು ನನ್ನ ಕಿವಿಗೆ ಬಿದ್ದಿತು. ಭವಿಷ್ಯದಲ್ಲಿ ಈ ಸಂಸ್ಥೆಯ ವ್ಯವಸ್ಥೆ ಹೇಗೆ ಎಂದು ಆದರೆ ನನಗೆ ಇದರ ಬಗ್ಗೆ ಚಿಂತೆ ಇರಲಿಲ.

ಈ ಸಂಸ್ಥೆಯು ಪ್ರಾರಂಭವಾದ ಹಂತದಿಂದ ಹಿಡಿದು ಇಲ್ಲಿಯವರೆಗೆ ನೋಡುತ್ತಿರುವ ಮೂರು ಆಧಾರ ಸ್ತಂಭಗಳೆಂದರೆ ಮೋತಿಚಂದ, ರವೀಂದ್ರ ಮತ್ತು ಮಾಧುರಿ. ಇವರಿರುವಾಗ ನನಗೆ ಚಿಂತೆಗೆ ಅವಕಾಶವೇ ಇಲ್ಲ. ನನ್ನೊಡನೆ ಸುಮಾರು 31 ವರ್ಷಗಳಿಂದ ನನ್ನ ಭಾವನೆಯನ್ನು ಅರಿಯುವವರು ಇವರು ಸಂಸ್ಥೆಯ ಜಾಗವನ್ನು 11ವರ್ಷಗಳ ಹಿಂದೆ ಖರೀದಿಸುವ ಪ್ರಕ್ರಿಯೆಯಿಂದ ಹಿಡಿದು ಪರಿಶ್ರಮದಿಂದ ಮಳೆ, ಗಾಳಿ, ಚಳಿ ಎನ್ನದೆ ವಿರೋಧಿ ಜನರ ಅಡೆತಡೆಗಳನ್ನು ವಾಕ್‌ಪ್ರಹರವನ್ನು ಸಹಿಸಿ ನನ್ನ ಹೆಗಲಿಗೆ ಹೆಗಲನ್ನು ನೀಡಿದ ಇವರ ಸಹಕಾರ ಇಲ್ಲದಿದ್ದರೆ ನನ್ನ ಕನಸು ನನಸಾಗುತ್ತಿರಲಿಲ್ಲ. ರವೀಂದ್ರ, ಮೋತಿಚಂದ ನನ್ನ ಪುತ್ರರಿದ್ದಂತೆ. ನನ್ನ ಚಿಕ್ಕ ತಂಗಿಯು ನನ್ನ ಭಾವನೆಯನ್ನು ತನ್ನ ಭಾವನೆ ಎಂದೇ ಭಾವಿಸಿದ್ದಾಳೆ. ಈಮೂವರ ಮೇಲ್ವಿಚಾರಣೆಯಲ್ಲಿ ಸಂಸ್ಥೆಯು ಬಹಳ ಚೆನ್ನಾಗಿ ಮುಂದುವರಿಯುತ್ತದೆ ಎಂಬ ನಿಶ್ಚಿಂತೆ ನನಗೆ ಇದೆ. ಇವರ ಹೃದಯದಲ್ಲಿ ಸ್ವಾರ್ಥವಿಲ್ಲ ಬೇರೆ ಯೋಚನೆಗಳೇ ಇಲ್ಲ. ನನ್ನ ಮಾತಿಗೆ ಇವರು ಕೊಡುವ ಗೌರವ ನನಗಿಂತಲೂ ಹಿರಿದಾದದ್ದು. ಆರ್ಷಪರಂಪರೆಯನ್ನು ನಿರ್ಬಾಧವಾಗಿ ಮುಂದುವರಿಸುತ್ತಾರೆ. ಇವರಲ್ಲಿ ಕುಶಲತೆ, ಕಾರ್ಯದಕ್ಷತೆ, ನಿರ್ಮೋಹತೆ ತುಂಬಿದೆ.

ಸಂಸ್ಥೆಯ ಲಾಭ-ನಷ್ಟ, ಸುಖದುಃಖಗಳಲ್ಲಿ ತಮ್ಮನ್ನೆ ಮರೆತಿದ್ದಾರೆ. ಇಂತಹ ವ್ಯಕ್ತಿಗಳು ನನಗೆ ಸಿಕ್ಕಿರುವುದು ನನ್ನ ಪುಣ್ಯ ವಿಶೇಷ. ಗುರುಭಕ್ತಿಯಲ್ಲಿ ನನ್ನಗಿಂತಲೂ ಸಂಸ್ಥೆಯ ಬಗ್ಗೆ ಹೆಚ್ಚು ಚಿಂತಿಸುವವರು. ಈ ಮೂವರು ಮಹಾನುಭಾವರು ವ್ಯಾಕರಣದ ಆದೇಶಪ್ರತ್ಯಯಕ್ಕೆ ಸಮಾನರು. ಇವರಿಲ್ಲದಿದ್ದರೆ ಸಂಸ್ಥಾನದ ಉಜ್ವಲ ಭವಿಷ್ಯದ ಬಗ್ಗೆ ಹೇಗೆ ಯೋಚಿಸಲಾಗುತ್ತಿತ್ತು.

ನನ್ನ ತೀವ್ರ ಅಸ್ವಸ್ಥತೆಯಲ್ಲಿ ಕಿಂಚಿತ್ತು ನಾನು ಯೋಚಿಸಲಿಲ್ಲ. ಆದರೂ ಮಹಾನುಭಾವರ ಪ್ರೇರಣೆಯಿಂದ (ಆಶ್ರಯದಾರಿಗೆ) ನಾನು ಇಲ್ಲದಂತಾದರೆ ಇವರು ಸಂಸ್ಥೆಯನ್ನು ಮುನ್ನಡೆಸುತ್ತಾರೆಂದು ವ್ಯವಸ್ಥಾಪಕರಾಗಿ ಇವರನ್ನು ಹೆಸರಿಸಿದ್ದೇನೆ..

ಇಂದು ನನ್ನ ಹಿಂದೆ ನಡೆದಿರುವ ಚರ್ಚೆಗಳು ಕಿವಿಗೆ ಬಿದ್ದಿವೆ. ಕ್ಷುಲ್ಲಕ ಮೋತಿಸಾಗರರನ್ನೆ ಏಕೆ ಪೀಠಾಧೀಶರನ್ನಾಗಿ, ರವೀಂದ್ರಕುಮಾರರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿದ್ದಾರೆ ಎಂದು. ಇದಕ್ಕೆ ಈಗಲೂ ನನ್ನ ಉತ್ತರವೇನೆಂದರೆ ಒಂದು ವೇಳೆ ಇವರಿಗಿಂತಲೂ ಯೋಗ್ಯ ವಿಶ್ವಾಸಾರ್ಹರಾದ ಯಾರಾದರೂ ಮಹಾನುಭಾವರು ಮುಂದೆ ಬಂದು ಸಂಸ್ಥಾನಕ್ಕಾಗಿ ತಮ್ಮನ್ನ ಅರ್ಪಿಸಿಕೊಳ್ಳುವಂತಹವರು ನನ್ನ ರೀತಿ ನೀತಿಗಳನ್ನು ಗೌರವಿಸಿ ನನ್ನ ಆಜ್ಞೆಗಳನ್ನು ಪಾಲಿಸುವವರು ಸಿಕ್ಕಿದರೆ ಈ ಎಲ್ಲಾ ಜವಾಬ್ದಾರಿಯನ್ನು ಅವರಿಗೆ ಕೊಡುತ್ತೇನೆ. ದೂರದಲ್ಲಿ ಕುಳಿತು ಚರ್ಚೆಮಾಡುವುದರಿಂದ ಸಂಸ್ಥೆಯನ್ನು ನಡೆಸಲು ಸಾಧ್ಯವಿಲ್ಲ. ಇವರಲ್ಲಿ ಇರುವ ದೋಷವನ್ನು ತೋರಿಸಿದರೆ ಅದನ್ನು ಹೋಗಲಾಡಿಸಲು ಪ್ರಯತ್ನಿಸುತ್ತೇನೆ.

ಇವರು ಸುಮಾರು 20 ವರ್ಷಗಳಿಂದ ನನ್ನ ಹತ್ತಿರವೇ ಇದ್ದು ಎಲ್ಲಾ ಆಜ್ಞೆಗಳನ್ನು ಎದುರು ಹೇಳದೆ ಬಯಸಿದಂತೆ ಮಾಡಿ ತೋರಿಸುತ್ತಿದ್ದರೆ? ನಿರ್ಮಾಣದಂತಹ ಕೆಲಸದಲ್ಲಿ ಅವರು ಮಾಡಿರುವ ಸೇವೆ ಅನುಪಮವಾದುದು. ಈ ಪವಿತ್ರ ಕ್ಷೇತ್ರದ ನಿರ್ಮಾಣವೆಲ್ಲಿಯದು, ನನ್ನ ಜೀವನ ಸಾರ್ಥಕತೆಗೆ ಇವರ ಪರಿಶ್ರಮವೇ ಮುಖ್ಯ ಕಾರಣ. ಈ ಸಂಸ್ಥೆಯ ಆಯ ವ್ಯಯದ ಪೈಸೆ ಪೈಸೆಗೂ ಲೆಕ್ಕವಿಟ್ಟಿದ್ದಾರೆ. ಇವೆಲ್ಲವು ಆಡಿಟಿಂಗ್ ಆಗಿ ರೆಕಾರ್ಡ್ ಆಗಿದೆ. ಆದರೂ ಯಾರಿಗಾದರೂ ಸಂದೇಹವಿದೆ ಎಂದಾದರೆ ಇಲ್ಲಿಯ ಕಾರ್ಯಾಲಯಕ್ಕೆ ಬಂದು ಒಂದೆರಡು ದಿನವೇಕೆ ತಿಂಗಳುಗಟ್ಟಲೆ ಇದ್ದು ತಮ್ಮ ಸಂದೇಹವನ್ನು ದೂರಮಾಡಿಕೊಳ್ಳಬಹುದು. ಇದು ಬಿಟ್ಟು ಮನೆಯಲ್ಲೇ ಕುಳಿತು ಬೇರೆಯವರ ಮೇಲೆ ಟೀಕೆ ಟಿಪ್ಪಣಿ ಮಾಡಬೇಡಿ.

ಯಾರಾದರೂ ನಾನು ಅಷ್ಟು ಸಾವಿರ ಕೊಟ್ಟಿದ್ದೀನಿ ಇಷ್ಟು ಕೊಟ್ಟೀದೀನಿ ಎಂದರೆ ಈ ಎಲ್ಲಾ ಹಣವು ಸಂಸ್ಥೆಯಲ್ಲಿ ವಿನಿಯೋಗವಾಗಿದೆ. ಒಂದು ಕೋಟಿ ನಲವತ್ತು ಲಕ್ಷರೂಗಳಿಗೆ ಲೆಕ್ಕವಿದೆ. ಇದೆಲ್ಲವೂ ಭಾರತ ವರ್ಷದ ಸಮಸ್ತ ಜೈನ ಸಮಾಜದ್ದೇ ಕೊಡುಗೆ. ದಾನಿಗಳನ್ನೇ ಸಂಸ್ಥೆಯ ಅಧ್ಯಕ್ಷರನ್ನಾಗಿ ಮಾಡಬೇಕೆಂಬುದಿಲ್ಲ. ಅದಕ್ಕೆ ಪ್ರತಿಯಾಗಿ ತನು, ಮನ, ಧನದಿಂದ ತಮ್ಮನ್ನ ಸಂಸ್ಥೆಗಾಗಿ ಸಮರ್ಪಿಸಿಕೊಳ್ಳುವಂತಹ ನಿಸ್ವಾರ್ಥ ವ್ಯಕ್ತಿ ಕ್ಷುಲ್ಲಕ ಮೋತಿಸಾಗರರು, ಸಂಸ್ಥೆಗೆ ತಕ್ಷಣ ಬೇಕಾದ ಹಣವನ್ನು ತನ್ನ ಮನೆಯಿಂದಲೇ ರವೀಂದ್ರರು ಮತ್ತು ಮೋತಿಚಂದರು ತರಿಸಿ ವಿನಿಯೋಗಿಸಿದ್ದಾರೆ. ಇವರಿಬ್ಬರು ಸಂಸಾರ ಬಂಧನದಲ್ಲಿ ಸಿಕ್ಕಿಕೊಳ್ಳದೆ ವ್ರತಧಾರಿಗಳಾಗಿ ಸಂಸ್ಥೆಯನ್ನು ಮುಂದುವರಿಸುವುದರಲ್ಲಿ ಸಮರ್ಥರಾಗಿದ್ದಾರೆ. ಇವರ ಸಾಮರ್ಥ್ಯದ ಬಗ್ಗೆ ನನಗೆ ಪೂರ್ಣ ಭರವಸೆ ಇದೆ.

ಆಗಮ ಮತ್ತು ಆದೇಶ ಪ್ರತ್ಯಯ

ನಾನು ಮೊಲು ಆಗಮ ಮತ್ತು ಆದೇಶ ಎಂಬ ಹೆಸರಿನ ವ್ಯಾಕರಣ ಪ್ರತ್ಯಯಗಳ ಬಗ್ಗೆ ಉದಾಹರಣೆ ಕೊಡುತ್ತಿದ್ದೇನೆ.

ಯುಜೇರ ಸಮಾಸೇನುಘ್ರುಟಿ ॥೨೭೨॥

ಯುಜ್ ಶಬ್ದ 'ನು' ಎಂಬ ಆಗಮದ ಅಂತಿಮ ಸ್ವರದಿಂದ ಆಗುತ್ತದೆ.[1] ಮಿತ್ರವದಾಗಮಃ ಅಥವಾ "ಪ್ರಕೃತಿ ಪ್ರತ್ಯಯಯೋರನುಪಘಾತೀ ಆಗಮ ಉಚ್ಯತೇ|| ಶತೃವದಾದೇಶಃ||

ಯಾವುದು ಮಿತ್ರವತ್ ಆಗಿದೆಯೊ ಅದನ್ನ ಆಗಮವೆಂದು ಕರೆಯುತ್ತಾರೆ. ಅಥವಾ ಪ್ರಕೃತಿ ಪ್ರತ್ಯಯಕ್ಕೆ ಕ್ಷತಿಯನ್ನು ಉಂಟುಮಾಡದೆ ಇರುವುದನು ಆಗಮ ಆಗಿದೆ. ಆದೇಶವು ಶತೃವತ್ ಆಗಿದೆ. ಅದು ಯಾವುದನ್ನಾದರೂ ಹೋಗಲಾಡಿಸಿ ಅದರ ಸ್ಥಾನವನ್ನು ಪಡೆಯುತ್ತದೆ. ಆದ್ದರಿಂದ ಯುಜ್‌ನಲ್ಲಿ 'ನು' ಪ್ರತ್ಯಯದ ಆಗಮವಾಗಿ ಯುಜ್ ಆಗುತ್ತದೆ. ಇದರಿಂದ ವಿರುದ್ಧವಾಗಿ ಆದೇಶ ಪ್ರತ್ಯಯ ಬೇರೆಯದನ್ನು ತೊಡೆದು ಹಾಕುತ್ತದೆ.

ಹೇಗೆಂದರೆ "ಜಸ್‌ಶಸೋಃ ಶಿಃ ॥೨೩೯॥[2]

ನಪುಂಸಕ ಲಿಂಗದಿಂದ ಕೂಡಿರುವ ಜಶ್ ಶಸ್ ವಿಭಕ್ತಿಗೆ 'ಶಿ' ಆದೇಶವಾಗುತ್ತದೆ. ಇಲ್ಲಿ 'ಶಿ' ಆದೇಶವು ಜಸ್ ವಿಭಕ್ತಿಯನ್ನು ತೊಡೆದು ಹಾಕಿದೆ. ಆದ್ದರಿಂದ ಕುಲ+ಜಸ್ ಬರುವುದರಿಂದ ಜಸ್ ಅನ್ನು ಹೋಗಲಾಡಿಸಿ 'ಶಿ' ಆಗುವುದರಿಂದ "ಕುಲಾನಿ" ಆಗಿದೆ.

ಈಗ ಬಹಳಷ್ಟು ಜನರು ಸಂಘ ಅಥವಾ ಸಂಸ್ಥೆ ಹಾಗೂ ಪರಿವಾರದಲ್ಲಿ ಸೇರಿಕೊಂಡು ಆಗಮ ಪ್ರತ್ಯಯಕ್ಕೆ ಸಮಾನವಾಗಿ ಮಿತ್ರವತ್ ಆಗಿ ಸೇರಿಕೊಂಡಿದ್ದಾರೆ. ಅಲ್ಲಿರುವ ಜನರಿಗೆ ತೊಂದರೆ ಕೊಡದೆ ಅವರೊಡನೆ ಬಂಧುತ್ವ ಭಾವದಿಂದಲೇ ಇದ್ದಾರೆ. ಮತ್ತು ಮೊದಲಿದ್ದವರನ್ನು ತುಳಿದು ಹೊರಹಾಕಲು ಪ್ರಯತ್ನಿಸುತ್ತಿದ್ದಾರೆ. ಇಂತಹ ಜನರನ್ನ "ಆದೇಶ" ಪ್ರತ್ಯಯಕ್ಕೆ ಸಮಾನರೆಂದು ಕರೆಯಲಾಗಿದೆ. ಇವರಿಂದ ಧರ್ಮನೀತಿಯ ರಕ್ಷಣೆಯ ಸಂಭವವಿಲ್ಲವೇ ಇಲ್ಲ. ಇವರಲ್ಲಿ ಪೂರ್ತಿ ಸ್ವಾರ್ಥತುಂಬಿದೆ. ಕಾಷ್ಟಾಂಗಾರನಿಗೆ ಸಮಾಧಾನ ಧರ್ಮನೀತಿಯ ಶತ್ರುಗಳಾಗಿದ್ದಾರೆ. ಇಂತಹ ಜನರಿಂದ ಧರ್ಮನಿಷ್ಠೆಯ ಜನರು ಯಾವಾಗಲೂ ಎಚ್ಚರಿಕೆಯಿಂದ ಇರಬೇಕು. ಇವರೊಡನೆ ಸಂಪರ್ಕ ಇಟ್ಟುಕೊಂಡಿದ್ದೆ. ಆದರೆ ನಮ್ಮ ಎಲ್ಲವನ್ನು ಕಳೆದುಕೊಳ್ಳುತ್ತಾರೆ. ಇಂತಹ ಜನರಿಂದಲೇ ನಾವು ನಮ್ಮ ಮಂದಿರಗಳನ್ನು ತೀರ್ಥಕ್ಷೇತ್ರಗಳನ್ನು ಕಳೆದುಕೊಳ್ಳುತ್ತೆವೆ.

ಪೀಠಾಧೀಶ ಪದವಿಯ ಅವಶ್ಯಕತೆ

ಧರ್ಮದ ಪರಂಪರೆಯು ಅಕ್ಷುಣ್ಣರೂಪದಿಂದ ತೀರ್ಥಂಕರರ ಕಾಲದಿಂದಲೂ ತೀರ್ಥ ನಡೆದು ಬರುತ್ತಿದೆ. ಈ ನಿರಂತರತೆಯು ಅದೇ ರೀತಿ ಅವರ ಅಭಾವದಲ್ಲಿಯೂ ಆಚಾರ್ಯ ಪಟ್ಟದಿಂದ ಪರಂಪರೆಯಿಂದ

---

1. ಕಾತಂತ್ರರೂಪಮಾಲ ಪು. ೧೦೬

2. ಕಾತಂತ್ರರೂಪಮಾಲ ಪು. ೮೪

ಮುನ್ನಡೆಯುತ್ತದೆ. ಪೂರ್ವಾಚಾರ್ಯರಂತೂ ತೀರ್ಥಂಕರ ಭಗವಂತನನ್ನು ಮತ್ತು ದಿಗಂಬರ ಆಚಾರ್ಯರನ್ನು "ಭಟ್ಟಾರಕ" ಶಬ್ದದಿಂದ ಸಂಬೋಧಿಸಿದ್ದಾರೆ.

ತದೋ ಮೂಲ ತಂತಕತ್ತಾ ವಡ್ಢಮಾಣ ಭಡಾರ ಓ ||

ಈ ರೀತಿ ಮೂಲ ಗ್ರಂಥಕರ್ತಾರರು 'ವರ್ಧಮಾನ ಭಟ್ಟಾರಕರಾಗಿದ್ದಾರೆ'

"ಧರಸೇಣ ಭಢಾರ ಏಣ"

ಧರಸೇನ ಭಟ್ಟಾರಕರಿಂದ ಇಂತಹ ಬಹಳಷ್ಟು ಪ್ರಮಾಣಗಳಿವೆ. ಇದರಲ್ಲಿ ಎರಡನ್ನು ಮಾತ್ರ ಕೊಟ್ಟಿದ್ದೇನೆ.

ಆಚಾರ್ಯ ಪರಂಪರೆಯು ಬೆಳೆದು ಬಂದಂತೆ ಮಧ್ಯಕಾಲೀನ ಯುಗದಿಂದ ಧರ್ಮ ಪರಂಪರೆಯನ್ನು ಉಳಿಸುವುದಕ್ಕೋಸ್ಕರ ಭಟ್ಟಾರಕ ಪರಂಪರೆಯು ಬೆಳೆದು ಬರುತ್ತಿದೆ. ಭಟ್ಟಾರಕರು ವಸ್ತ್ರಧಾರಿಗಳಾಗಿದ್ದಾರೆ. ಕೆಲವು ಕಡೆ ಕ್ಷುಲ್ಲಕರನ್ನು ಭಟ್ಟಾರಕರನ್ನಾಗಿ ಮಾಡಲಾಗಿದೆ. ಈಗಲೂ ನಾಂದಣಿಮಠದ ಜಿನಸೇನ ಭಟ್ಟಾರಕರು ಕ್ಷುಲ್ಲಕರು ಕ್ಷುಲ್ಲಕರ ಚರ್ಯೆಯನ್ನು ಪಾಲಿಸುತ್ತಲೇ ಸಂಸ್ಥೆ ಮತ್ತು ಮಠಗಳನ್ನು ರಕ್ಷಿಸುತ್ತಿದ್ದಾರೆ.

ಆಚಾರ್ಯ ಶಾಂತಿಸಾಗರರು ಸಹ ಕ್ಷುಲ್ಲಕರಿಗೆ ಸಂಸ್ಥೆಯನ್ನು ನೋಡಿಕೊಳ್ಳುವ ಅಧಿಕಾರ ನಡೆಸುವ ಅಧಿಕಾರ ಕೊಟ್ಟಿದ್ದಾರೆ. ಆಚಾರ್ಯ ಶಾಂತಿಸಾಗರರ ಜನ್ಮ ಶತಾಬ್ದಿಯಸ್ಮೃತಿಗ್ರಂಥದ ಪಾಠದ 34ರಲ್ಲಿ ಕೊಟ್ಟಿರುವ ಸುಂದರ ಪ್ರಕರಣವನ್ನು ಇಲ್ಲಿ ಕೊಟ್ಟಿದ್ದೇನೆ.

ಶಾಸ್ತ್ರಶುದ್ಧ ವ್ಯಾಪಕ ದೃಷ್ಟಿಕೋನ

ಮಹಾರಾಜರು ತಮ್ಮದೇ ದೃಷ್ಟಿಕೋನದಿಂದ ಪ್ರತಿ ಸಮಸ್ಯೆಯನ್ನು ಬಿಡಿಸಲು ಮೂಲದಿಂದಲೇ ಪ್ರಯತ್ನಿಸುತ್ತಿದ್ದರು. ಯೋಗಾಯೋಗವೆಂದರೆ ಇದೇ ಚಾತುರ್ಮಾಸದಲ್ಲಿ ಕಾರಂಜಾ ಗುರುಕುಲ ಮುಂತಾದ ಸಂಸ್ಥೆಗಳ ಸಂಸ್ಥಾಪಕ ಹಾಗೂ ಅಧಿಕಾರಿಯಾಗಿದ್ದ ಬ್ರ. ಶ್ರೀದೇವಚಂದ ಜೀಯವರು ದರ್ಶನಾರ್ಥವಾಗಿ ಬ್ಯಾವರಕ್ಕೆ ಬಂದಿದ್ದರು. ಆಗ ಪೂಜ್ಯ ಆಚಾರ್ಯರು ಕ್ಷುಲ್ಲಕ ದೀಕ್ಷೆ ತೆಗೆದುಕೊಳ್ಳುವುದಕ್ಕೆ ಪ್ರೇರಣೆಕೊಟ್ಟರು. ಬ್ರಹ್ಮಚಾರಿಗಳು ಸ್ವಯಂ ಗೊಂದಲದಲ್ಲಿ ಬಿದ್ದರು. ಅವರು ಅದಕ್ಕಾಗಿಯೇ ಬ್ಯಾವರಕ್ಕೆ ಬಂದಿದ್ದರು. ಅವರ ಸಮಸ್ಯೆ ಎಂದರೆ ಒಂದು ವೇಳೆ ಸಂಸ್ಥೆಯ ಸಂಚಾಲನೆಯನ್ನು ನಿಭಾಯಿಸುತ್ತಲೇ ಕ್ಷುಲ್ಲಕ ಪ್ರತಿಮೆಯ ದೀಕ್ಷೆಯನ್ನು ಕೊಡುವುದಾದರೆ ನಾನು ದೀಕ್ಷೆ ತೆಗೆದುಕೊಳ್ಳಲು ಸಿದ್ಧವೆಂದರು. ಈ ರೀತಿ ತಮ್ಮ ಮನದಾಸೆಯನ್ನು ಅವರು ವ್ಯಕ್ತಗೊಳಿಸಿದ್ದರು. 5-6ದಿನ ಅಲ್ಲಿದ್ದ ಪಂಡಿತರೊಡನೆ ಸಾಕಷ್ಟು ವಿಚಾರ ವಿಮರ್ಶೆಗಳು ನಡೆದವು. ಪಂಡಿತರ ಅಭಿಪ್ರಾಯ ಕ್ಷುಲ್ಲಕ ಪದವಿಯಲ್ಲಿರುವ ವ್ರತಧಾರಿಗಳು ಸಂಸ್ಥೆಯನ್ನು ನಿರ್ವಹಿಸುವಂತಿಲ್ಲ. ಆಚಾರ್ಯರ ಅಭಿಪ್ರಾಯ ಪೂರ್ವದಲ್ಲಿ ಮುನಿಸಂಘದಲ್ಲಿ ಕೆಲವು ಮುನಿಗಳು ಸಂಘದ ಜವಾಬ್ದಾರಿಯ ಜೊತೆಗೆ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು. ಇದೊಂದು ಕ್ಷುಲ್ಲಕ ಪ್ರತಿಮೆಯ ವ್ರತವು ಆಗಿದೆ ಹಾಗೂ ಗೃಹಸ್ಥವ್ರತವೂ ಆಗಿದೆ. ಕೊನೆಗೆ ಆಚಾರ್ಯರೇ ಶಾಸ್ತ್ರದ ಆಧಾರದಿಂದ ತಮ್ಮ ನಿರ್ಣಯವನ್ನು ಸಿದ್ಧಗೊಳಿಸಿದರು. ಪರಿಣಾಮವಾಗಿ ಬ್ರ. ಶ್ರೀ ದೇವಚಂದ್ರರು ಕ್ಷುಲ್ಲಕ ದೀಕ್ಷೆಯನ್ನು ತುಂಬ ಉತ್ಸಾಹದಿಂದ ಸ್ವೀಕರಿಸಿದರು. ಆಚಾರ್ಯರು ತಮ್ಮ ಮನದೊಳಗಿನ ಭಾವನೆಗಳನ್ನು ಪ್ರಕಟಗೊಳಿಸುತ್ತಾ ದೀಕ್ಷೆ ಆದ ಮೇಲೆ ಅವರಿಗೆ "ಸಮಂತಭದ್ರ"ರೆಂಬ ಭವ್ಯವಾದ ಹೆಸರನ್ನು ಕ್ಷುಲ್ಲಕರಿಗೆ ಕೊಟ್ಟರು. ಸಮಂತಭದ್ರರಂತೆಯೇ ನೀವುಕೂಡ ಧರ್ಮದ ವ್ಯಾಪಕ ಪ್ರಚಾರಮಾಡಿರೆಂದು

ಶುಭಾಶೀರ್ವಾದ ಮಾಡಿದರು. ಕೂದಲೆಳೆಯ ದೋಷವನ್ನೇ ದೊಡ್ಡದು ಮಾಡುವ ಈಗಿನ ಜನರಲ್ಲಿ ಎಲ್ಲರನ್ನು ಕಾಯುವ ಆಚಾರ್ಯಶ್ರೀಯಂಥವರ ದೂರದರ್ಶಿತ್ವಗುಣವಲ್ಲಿ!

ಈ ಎಲ್ಲ ವಿಷಯಗಳು ನೆನಪಿಗೆ ಬಂದು ನಾನು ಇಂದಿಗೂ ಪ್ರತ್ಯೇಕ ಪ್ರಸಿದ್ಧ ತೀರ್ಥ ಮತ್ತು ವಿಶೇಷ ಸಂಸ್ಥೆಗಳಿಗೆ ಇಂತಹದೇ ಕಾರ್ಯಕುಶಲತೆಯುಳ್ಳ ಮಾರ್ಗದರ್ಶಕ ಅವಶ್ಯಕತೆ ಇದೆ ಎಂದು ಮನಗೊಂಡೆ. ಹೀಗೆ ಭಟ್ಟಾರಕ ಶಬ್ದದಲ್ಲಿ ಒಂದು ವಿಶೇಷ ಭಕ್ತಿ ಮತ್ತು ಪ್ರೇಮವಿದೆ. ಏಕೆಂದರೆ ಪ್ರಾಚೀನ ಗ್ರಂಥಗಳಲ್ಲಿ ದಿಗಂಬರಾಚಾರ್ಯರಿಗೆ ಭಟ್ಟಾರಕ ಶಬ್ದವನ್ನು ಉಪಯೋಗಿಸಲಾಗುತ್ತಿತ್ತು. ಇದೆಲ್ಲವನ್ನು ಯೋಚಿಸಿಕೊಂಡೇ ನಾನು ಕ್ಷುಲ್ಲಕ ಮೋತಿಸಾಗರರಿಗೆ ಪೀಠಾಧೀಶರೆಂಬ ಶಬ್ದವನ್ನ ಆಯ್ಕೆ ಮಾಡಿಕೊಂಡೆ.

ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದಲ್ಲಿ ಧರ್ಮದ ಪರಂಪರೆಯ ಸಂರಕ್ಷಣೆ, ಸಂವೇದನೆಗಾಗಿ ಕ್ಷುಲ್ಲಕರಂತಹವರನ್ನೆ "ಪೀಠಾಧೀಶ"ರನ್ನಾಗಿ ಘೋಷಣೆ ಮಾಡಿದೆ. ಈಗ ಪ್ರಸ್ತುತ ಮೋತಿಸಾಗರರೇ ಪೀಠಾಧೀಶರು.

ಆಚಾರ್ಯ ಶಾಂತಿಸಾಗರ ಮಹಾರಾಜರು ಧಾರ್ಮಿಕ ಸಂಸ್ಥೆಗಳಿಗೆ ಸಮರ್ಥರಾದ ಮಹಾನುಭಾವರುಗಳಿಗೆ ಕಾರ್ಯವಹಿಸಿಕೊಳ್ಳಲು ಪ್ರೇರಣೆ ಕೊಡುತ್ತಿದ್ದರು. ಆಗಾಗ್ಗೆ ಕಾರ್ಯಕರ್ತರ ಬಗ್ಗೆ ಜನಗಳು ವ್ಯಕ್ತಪಡಿಸುವ ಸಂಶಯಗಳಿಗೆ ಬೆಲೆಯನ್ನೂ ಕೊಡದೆ ಕಾರ್ಯಮಾಡಲು ಪ್ರೋತ್ಸಾಹಿಸುತ್ತಿದ್ದರು. ಇದಕ್ಕೆ ಪ್ರಮಾಣವೆಲ್ಲವು ಆಚಾರ್ಯ ಶಾಂತಿಸಾಗರರ ಜನ್ಮಶತಾಬ್ದಿ ಸ್ಮೃತಿ ಗ್ರಂಥದಲ್ಲಿದೆ (ಪು. ೧೬೯ ಕಾರ್ಯಕರ್ತ್ಯಾಚಿ ನಿವಡ ಕರಣ್ಯಾ ಚ ಚಾತುರ್ಯ ಬಾಲಚಂದ ದೇವಚಂದ್

ಪರಮಪೂಜ್ಯ ಆಚಾರ್ಯಶ್ರೀನಿ ಸದರಹು ಜೀರ್ಣೋದ್ಧಾರಕ ಸಂಸ್ಥೇಚೀ ಸ್ಥಾಪನಾ ಕೆಲೀ | ಸಂಸ್ಥೇ ಚಾ ಕಾರಭಾರ ಚೋಖಾ ಚಾಲಾವಾ ಮ್ಹಣೂನ ಪ್ರಾಮಾಣಿಕ ವ ಸೇವಾ ಭಾವೀ ಕಾರ್ಯಕರ್ತ್ಯಾಚಿ ನಿವಡ ಕರಣ್ಯಾಚೆ ಅಪೂರ್ವ ಚಾತುರ್ಯ ಮಹಾರಾಜಾನಾ ಹೋತೆ, ದೋನ, ವರ್ಷಾತ ತೀನ ಲಾಖಾಂಚಾ ದ್ರುವನಿಧಿ ಜಮಲಾ, ಹಾ ಸರ್ವನಿಧಿ ಶ್ರೀ ತುಲಜಾರಾಮ ಚತುರಚಂದ ಶಾಹಾ... ರಾ... ಬಾರಾಮತಿ ಯಾಂನಾ ಕೋಷಾಧ್ಯಕ್ಷ ನೆಮೂನ ತ್ಯಾಂಚೇ ಸ್ವಾಧೀನ ಕೇಲಾ, ಮೀ ಸಂಸ್ಥೇಚಾ ಮಂತ್ರೀ ಹೋತೋ ತೆವ್ಹಾಚಾ ಹಾ ಪ್ರಸಂಗ.

ಶ್ರೀ ತುಲಜಾರಾಮ ಶೇಠ ಆರ್ಥಿಕ ವ್ಯವಹಾರಾಂತ ಅತ್ಯಂತ ಚೋಖ ಅಸತ, ಖಾಜಗೀ ದೇವ ಘೇವೀಚ್ಯಾ ವ್ಯಾಹಾರಾಚ್ಯಾ ಪ್ರಸಂಗಾಮುಲೇ ಕಾಹೀ ಮೋಠ್ಯಾ ಮಹಾನುಭಾವಾಂನೀ ವೈಯಕ್ತಿಕ ಹೆವ್ಯಾನೆ ಬಾಬತ ಸಮಾಜಾಮದ್ಯೇ ಕುಜಬುಜ ಪೈಲಾವಲೀ "ಯಾಚ್ಯಾಜವಢ ಗೋಲಾ ಕಲೇಲಾ ಸಾಮಾಜಿಕ ನಿಧಿ ಅಸೂನತೆ ವೈಯಕ್ತಿ ಧಂಧಾಸಾಠೀ ತ್ಯಾಚಾ ವಾಪರ ಕರತಾತ" ಅಸಾ ತ್ಯಾಂಚೆವರ ಆರೋಪ ಹೋತಾ, ವಸ್ತುತಃ ಸಂಸ್ಥೇಬಿ ಶಿಲ್ಲಕ ಆಪಲ್ಯಾ ವಹಿಖಾತ್ಯಾಂತ ಪಾ ಚಾ ಪೈಶಾಪೇಕ್ಷಾ ಜಾಸ್ತ ಅಸೂ ನಯ ವ ಸರ್ವೆ ರಕ್ಕಮ ಬಂಕೆತಚ ಜಮಾ ಅಸಾವಿ ಹಾ ತ್ಯಾಂಚಾ ಪಕ್ಕಾ ದಂಡಕ ಏವಡೇಚ ನವ್ಹೇ ತರ ದಾತಾರಾಂನಾ ಸ್ವೀಕೃತ ದಾನ ಪಾಠ ವೂನ ದೆಣ್ಯಾ ಬಾಬತ ವಾಂರವಾರ ಸ್ಮರಣಪತ್ರೇ ದೇಮೂನ ತ್ಯಾಂಚಾ ಲಡ್ಯಾ ಮಾಗೇ ಅಸಾವಯಾಚ್, ಪಣ ಹಾ ರೋಖಠೇಕ ವ್ಯವಹಾರಚ ವಿರೋಧಕಾಂನಾ ಬೋಚಲಾ ಹೀ ಕುಜಬುಜ ಪ. ಪೂ. ಮಹಾರಾಜಾಂಚೆ ವ ತಸೆಚ ಶ್ರೀ ಸೇಠೆ ತುಲಜಾರಾಮ ಚೆ ಕಾನಾವರ ಗೇಳೀ ಶೇಠ ಜೀ ಮಹಾರಾಜಾಂಕಡೆ ಸರ್ವ ವಹೀಖಾತೆ, ಬೈಂಕ ಬುಕ, ರೋಖ ಶಿಲ್ಲಕ ದೇಊನ ಗೇಲೆ ವ ಉಪಸ್ಥಿತ ಸಮಾಜಾಸಮೋರ ಮ್ಹಣಾಲೇ "ಮಹಾರಾಜ ಹೇ ವಹೀಖಾತೇ ಸರ್ವ ಜಮಾ ರಕ್ಕಮ ತಾಬಡತೋಬ ಬಂಕೇತ ಜಮಾ ಝಾಲೀ ಕೀ ನಾಹೀ ಹೆ ಬಧಾ, ಹೇ ಬೈಂಕ-ಬುಕ| ಮಾ ಝು

ವಾಢೆ ಕೈ ಹ್ವಾಹೀ ಪಾಂಚ ಪೈಶಾಂ ಪೇಕ್ಷಾ ಜಾಸ್ತ ಶಿಲ್ಲಕ ನಹ್ವಾತೀ ಆಜ ಹೀ ನಾಹೀ, ಹಾ ಪಾಂಚ ಪೈಶಾಂಚಾ ಉಬಾರ ಆಣಿ ಹಾ ಮಾಝಾ ರಾಜೀನಾಮಾ"

ಮಹಾರಾಜ ಹೆ ಪಾಹೂನ ಸಗದಿತ ಝುಲೇ ಮಹಾರಾಜಾಂನೇ ಸರ್ವ ಆಕ್ಷೇಪಕಾಂನಾ ಸಮಜ ದೇಊನ ತ್ಯಾಂಚೇ ಸಮಾಧಾನ ಕಲೇ ವ ತುಲಜರಾಮ ಶೆಠಲಾಮ್ಹಣಾಲೇ "ಅರೇ ಬಾಬ, ತುಛಯ ಹಾತೂನ ಅಸೇ ಕಾ ಹೀ ಹೋಣಾರ ನಾಹೀ ಯಾಚಾ ಮಲಾ ವಿಶ್ವಾಸ ಆಹೇ ಮಾಝಾ ಆದೇಶ ಆಹೇ ತ್ಯ ಹಾ ರಾಜೀನಾಮಾ ಪರತ ಘೇ ವ ಹಾ ಸರ್ವ ವ್ಯವಹಾರ ಸಾಂಬಾಲ" ಮಹಾರಾಜಾಂಚೀ ಆಜ್ಞಾ ಅವಮಾನಣ್ಯಾಚೆ ಧಾಡಸ ತ್ಯಾನಾಂ ಝುಲೇ ನಾಹಿ, ಕಾರ್ಯಕರ್ತ್ಯಾಚಿ ಪಾರಖಿಕರಣ್ಯಾ ಚೆ ಹೆ ಚಾತುರ್ಯ ಯಾನಂತರ ಆಜಿತಾಗಾಯತ ಹೇ ಕಾಮ ತ್ಯಾಂಚೇಕಡೇ ವ ತ್ಯಾಂಚೆ ಸುಪುತ್ರ ಮಾಣಿಕಚಂದ ಬಾಯಿ ಕಡೆ ಆಹೇ

ಇದರ ಹಿಂದಿ ಭಾಷಾಂತರ

ಕಾರ್ಯಕರ್ತಾಓಂ ಚಯನ ಕರನೇ ಕಿ ಚತುರತ

ಬಾಲಚಂದ್ರ ದೇವಚಂದ್ರ ಕಾರ್ಯಕರ್ತ್ಯಗಳನ್ನು ಆರಿಸುವ ಚಾತುರ್ಯ

ಪರಮಪೂಜ್ಯ ಆಚಾರ್ಯರು ಆ ದಿನಗಳಲ್ಲಿ ಜೀರ್ಣೋದ್ಧಾರಕ ಸಂಸ್ಥೆಯೊಂದನ್ನು ಸ್ಥಾಪಿಸಿದರು. ಸಂಸ್ಥೆ ಕಾರ್ಯದಲ್ಲಿ ಚೆನ್ನಾಗಿ ನಡೆಯುತ್ತಿತ್ತು. ಪ್ರಾಮಾಣಿಕ ಮತ್ತು ಸೇವಾ ಮನೋಭಾವದ ಕಾರ್ಯಕರ್ತರನ್ನು ಆರಿಸುವಂತಹ ಅಪೂರ್ವವಾದ ಚಾತುರ್ಯ ಆಚಾರ್ಯರಲ್ಲಿತ್ತು. ಎರಡು ವರ್ಷಗಳಲ್ಲಿ ಮೂರುಲಕ್ಷ ರೂ.ಗಳ ಧ್ರುವನಿಧಿಯು ಸಂಗ್ರಹವಾಗಿತ್ತು. ಈ ನಿಧಿಯನ್ನು ಬಾರಾಮತೀಯ ತುಲಜಾರಾಮ ಚತುರಚಂದ ಶಾಹಾ ರವರನ್ನುಕೋಷಾಧ್ಯಕ್ಷನನ್ನಾಗಿ ಮಾಡಿ ಅವರಿಗೆ ಒಪ್ಪಿಸಿದರು ಆಗ ನಾನು ಮಂತ್ರಿಯಾಗಿದ್ದೆ.೧

ಶ್ರೀ ತುಲಜಾರಾಮ ಸೇಠರು ಹಣಕಾಸಿನ ವ್ಯವಹಾರದಲ್ಲಿ ಬಹಳ ಚತುರರು. ಅವರಲ್ಲಿ ಕೊಡುವುದು ತೆಗೆದುಕೊಳ್ಳುವುದು ವ್ಯವಹಾರವನ್ನು ನಡೆಸುತ್ತಿದ್ದ ಒಬ್ಬ ದೊಡ್ಡ ಮನುಷ್ಯರೇ ಅವರ ಮೇಲಿನ ವೈಯಕ್ತಿಕ ದ್ವೇಷದಿಂದ ಸಮಾಜದಲ್ಲಿ ತುಲಜಾರಾಮರು ಸಂಗ್ರಹವಾಗಿರುವ ಸಾಮಾಜಿಕ ಸಂಪತ್ತನ್ನು ತಮ್ಮ ವ್ಯವಹಾರಕ್ಕೆ ಬಳಸಿಕೊಳ್ಳುತ್ತಿದ್ದಾರೆ ಎಂದು ಸುದ್ದಿ ಹಬ್ಬಿಸಿ ಬಿಟ್ಟರು. ಆದರೆ ಸಾಮಾಜಿಕ ಸಂಪತ್ತನ್ನು ಅವರು ಜಾಗ್ರತೆಯಾಗಿ ಬ್ಯಾಂಕಿನಲ್ಲಿ ಜಮಾಮಾಡಿದ್ದರು. ಅಂತಹ ಒಂದು ಚಿಕ್ಕ ಕಾಸನ್ನು ಕೂಡ ಅವರು ತಮ್ಮ ಜೇಬಿನಲ್ಲೂ ಇಟ್ಟುಕೊಳ್ಳುತ್ತಿರಲಿಲ್ಲ. ಅವರು ಬಹಳ ಕಟ್ಟುನಿಟ್ಟಿನ ಮನುಷ್ಯ. ಆದರೆ ಯಾರಾದರೂ ದಾನವನ್ನು ಕೊಡುತ್ತೇನೆ ಎಂದು ಆಶ್ವಾಸನೆ ಕೊಟ್ಟ ಮೇಲೆ ಅವರನ್ನು ಮರೆಯಲು ಬಿಡುತ್ತಿರಲಿಲ್ಲ. ಮತ್ತೆ ಮತ್ತೆ ನೆನಪನ್ನು ಕೊಟ್ಟು ಹಣವನ್ನು ಸಂಗ್ರಹಿಸದೆ ಬಿಡುತ್ತಿರಲಿಲ್ಲ. ಅವರ ಈ ಮನೋಭಾವನೆಯಿಂದ ಜನ ಇವರ ಮೇಲೆ ಆರೋಪ ಹೊರಿಸಲು ಹಿಂಜರಿಯಲಿಲ್ಲ.

ಇವರ ಬಗ್ಗೆ ಹಬ್ಬಿದ ವದಂತಿ ಹೇಗೋ ಆಚಾರ್ಯ ಮಹಾರಾಜರ ಕಿವಿಗೂ ತುಲಜಾರಾಮರ ಕಿವಿಗೂ ಬಿತ್ತು. ತಕ್ಷಣ ಸೇಠರು ಹಣದ ಎಲ್ಲಾ ಲೆಕ್ಕಾಚಾರವನ್ನು ರಸೀತಿ ಪುಸ್ತಕವನ್ನು ತೆಗೆದುಕೊಂಡು, ಉಪಸ್ಥಿತರಿದ್ದ ಜನಗಳ ಮುಂದೆಯೆ ಆಚಾರ್ಯರ ಮುಂದೆ ಇಟ್ಟು, ಮಹಾರಾಜರೇ ಇದೆಲ್ಲವು ಈ ವರೆಗೆ ಸಂಗ್ರವಾಗಿರುವ ಹಣ. ಇದು ಬಂದಿರುವ ವಿವರ. ಇವೆಲ್ಲವನ್ನು ತಾವು ಒಪ್ಪಿಸಿಕೊಳ್ಳಬೇಕು. ಆ ಲೆಕ್ಕದಲ್ಲಿರುವ ಐದು ಪೈಸೆಯು ನನ್ನಲ್ಲಿ ಇಲ್ಲ. ದಯಮಾಡಿ ನನ್ನ ತ್ಯಾಗಪತ್ರವನ್ನು ಸ್ವೀಕರಿಸಬೇಕು ಎಂದು ವಿನಂತಿಸಿದರು.

---

೧. ಆಧಾರ : ಆಚಾರ್ಯ ಶಾಂತಿಸಾಗರರ ಶತಾಬ್ಧಿಯ ಸ್ಮರಣ ಸಂಚಿಕೆ.

ಮಹಾರಾಜರು ಇದೆಲ್ಲವನ್ನು ನೋಡಿ ಪ್ರಸನ್ನವದನರಾಗಿಯೇ ಅಲ್ಲಿದ್ದ ಎಲ್ಲರಿಗೂ ಆ ಲೆಕ್ಕಾಚಾರವನ್ನು ನೋಡಲು ಹೇಳಿ, ತುಲಜರಾಮರಿಗೆ-ಅರೇಬಾಬಾ ನಿನ್ನಿಂದ ಅನ್ಯಾಯವಾಗಲು ಸಾಧ್ಯವೇ ಇಲ್ಲ. ನನಗೆ ನಿನ್ನ ಮೇಲೆ ವಿಶ್ವಾಸವಿದೆ. ನಿನ್ನ ರಾಜೀನಾಮೆ ಪತ್ರವನ್ನು ವಾಪಸ್ಸು ತೆಗೆದುಕೊ, ಎಲ್ಲಾ ಕಾರ್ಯವನ್ನು ಮೊದಲಿನಂತಲೇ ಮಾಡಿಕೊಂಡು ಹೋಗು ಎಂದು ಆದೇಶಿಸಿದರು.

ಮಹಾರಾಜರ ಆಜ್ಞೆಯನ್ನು ಉಲ್ಲಂಘಿಸುವಂತಹ ದಾಷ್ಟ್ರ್ಯತೆ ಅವರಲ್ಲಿ ಇರಲಿಲ್ಲ. ಅವರೇ ಜೀವನ ಪರ್ಯಂತ ಆ ವ್ಯವಹಾರವನ್ನು ನೋಡಿಕೊಂಡು ಈಗ ಅವರ ಮಗ ಮಾಣಿಕ್‌ಚಂದರು ನೋಡಿಕೊಳ್ಳುತ್ತಿದ್ದಾರೆ. ಆದರೆ ಈ ಪ್ರಸಂಗ ಆಚಾರ್ಯರ ಕಾರ್ಯಕುಶಲತೆಯನ್ನು ತೋರಿಸುತ್ತದೆ ಎಂದರೆ ನಿಷ್ಠಾವಂತ ಕಾರ್ಯಕರ್ತರ ಬಗ್ಗೆ ಮಾತನಾಡುವ ವಾಚಾಳಿಗೆ ಇದೊಂದು ಪಾಠವಾಗಲಿ ಎಂಬುದು ಉದ್ದೇಶ.

ಚಾರಿತ್ರ ಚಕ್ರವರ್ತಿ ಶಾಂತಿಸಾಗರರು ಮುನಿಶ್ರೀ ಸಮಂತಭದ್ರರಿಗೆ ಕುಂಭೋಜ ತೀರ್ಥಕ್ಷೇತ್ರದಲ್ಲಿ ನೆಲಸುವಂತೆ ಪ್ರೇರಣೆ ನೀಡಿದರು. ಇಲ್ಲಿ ವಿಶಾಲಮೂರ್ತಿಯ ನಿರ್ಮಾಣ ಮಾಡಿಸಿ ಸ್ಥಾಪನೆ ಮಾಡಲು ಆದೇಶ ಕೊಟ್ಟರು. ಇವರ ಈ ಉದಾಹರಣೆಯಿಂದಲೇ ನಾನು ಜಂಬೂದ್ವೀಪದ ನಿರ್ಮಾಣ ಮತ್ತು ಜ್ಞಾನಜ್ಯೋತಿಯ ಪರ್ಯಟನೆಗೆ ಪ್ರೇರಣೆ ಕೊಟ್ಟಿದ್ದು. ಆದರೆ ಈಗ ನನಗೆ ವಿಹಾರ ಮಾಡುವ ಶಕ್ತಿಯಿಲ್ಲವಾದ್ದರಿಂದ ಇಲ್ಲಿಯೇ ಇದ್ದೇನೆ. ನನ್ನ ಎಲ್ಲಾ ನಿರ್ಣಯಗಳಿಗೆ ಪರೋಕ್ಷವಾಗಿ ಆಚಾರ್ಯರು ಬೆಂಬಲವಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಆಚಾರ್ಯ ಶಾಂತಿಸಾಗರರ ಒಂದು ಪ್ರಶಸ್ತ ವಿಕಲ್ಪ ಜನ್ಮಶತಾಬ್ದಿ ಸ್ಮರಣಗ್ರಂಥ

ವರ್ಷಗಳಿಂದ ನನ್ನ ಮನಸ್ಸಿನಲ್ಲಿ ಒಂದು ಸಂಕಲ್ಪ ಕುಳಿತಿತ್ತು. ತಾಯಿಯ ಹೊಟ್ಟೆಯಲ್ಲಿರುವ ಮಗು ಅದು ಕರುಣೆ ಕೋಮಲ ಚಿತ್ತದ ಚಿಲುಮೆಯು ಆಗಿರುತ್ತದೆ. ಮಹಾರಾಷ್ಟ್ರದ ಜೈನ ಸಮಾಜ ಕಾಷ್ಟಕಾರರದು. ಅವರಲ್ಲಿ ಧರ್ಮದ ವಿಷಯದಲ್ಲಿ ಹೆಚ್ಚು ತಿಳುವಳಿಕೆ ಇಲ್ಲ. ಇದನ್ನು ಆಚಾರ್ಯರು ಆಳವಾದ ಅಧ್ಯಯನ ಮಾಡಿ ಅನುಭವಕ್ಕೆ ತಂದುಕೊಂಡಿದ್ದರು. ಇವರಲ್ಲಿ ಶಾಸ್ತ್ರಜ್ಞಾನವನ್ನಾಗಲೀ, ತತ್ತ್ವವಿಚಾರದ ಕಡೆಗಾಗಲಿ ಮನಸ್ಸನ್ನು ತಿರುಗಿಸುವುದು ಅತ್ಯಂತ ಕಠಿಣವೆಂದು ಅನುಭವವಾಗಿದ್ದು, ಇವರಿಗೆ ಪ್ರಥಮಾನುಯೋಗದ ಕಡೆಗೆ ಗಮನ ಸೆಳೆಯಲು ಭಗವಂತನ ದರ್ಶನ ಮಾಡಿಸಲು ಮೂರ್ತಿಗಳನ್ನು ನಿರ್ಮಿಸುವುದು ಸರಿಯಾದ ಮಾರ್ಗವೆಂದು ಮನಗಂಡಿದ್ದರು. ಇದೇ ಉದ್ದೇಶದಿಂದ ಪ್ರಶಸ್ತ ಸ್ಥಳಗಳಲ್ಲಿ ಬಾಹುಬಲಿಯ ವಿಶಾಲ ಕಾಯಮೂರ್ತಿಗಳು ಅಂದರೆ 25 ಅಡಿ ಎತ್ತರದ ಮೂರ್ತಿಗಳನ್ನು ನಿರ್ಮಿಸಲು ಹೋದ ಕಡೆಯಲ್ಲೆಲ್ಲ ಪ್ರೇರೇಪಿಸುತ್ತಿದ್ದರು. ಎಲ್ಲಿಯೂ ಅವರು ಈ ಪ್ರಯತ್ನವನ್ನು ಬಿಟ್ಟಿರಲಿಲ್ಲ. "ಬಾವಾವಶ್ಯಂ ಭವೇ ದೇವ ನ ಹಿ ಕೇನಾಪಿ ರುಧ್ಯತೆ|| ಯೋಗಾಯೋಗದಂತೆ ಆಗ ಅತಿಶಯ ಕ್ಷೇತ್ರ ಬಾಹುಬಲಿ ಕ್ಷೇತ್ರದ ವಾರ್ಷಿಕೋತ್ಸವದ ಸಮಯ. ಇಲ್ಲಿ ಮೂರ್ತಿಯ ನಿರ್ಮಾಣವಾಗಲಿ ಎಂದು ಸದಾಶಯದೊಂದಿಗೆ ಆಚಾರ್ಯರು ಆಗಮಿಸಿದ್ದರು. ವೃದ್ಧಾವಸ್ಥೆಯನ್ನು ಲೆಕ್ಕಿಸದೆ ಬಂದಿದ್ದರು. ಇವರ ಈ ಸಂಕಲ್ಪಕ್ಕೆ ಕಮಿಟಿ ಮತ್ತು ಕಾರ್ಯಕರ್ತರ ಪೂರ್ಣ ಸ್ವೀಕೃತಿಯನ್ನು ಕೊಡುತ್ತಲೇ ಅವರಿಗೆ ಆನಂದೋಲ್ಲಾಸ ಉಂಟಾಯಿತು. ಸಂಸ್ಥೆಯ ಮಂತ್ರಿಯಾಗಿದ್ದ ಸೇಠ ಬಾಲಚಂದ ಮತ್ತು ಸಮಂತಭದ್ರರನ್ನು ಸಂಬೋಧಿಸುತ್ತಾ ತುಂಬಿದ ಸಭೆಯಲ್ಲಿ ಆಚಾರ್ಯರು ಸಮಯೋಚಿತವಾಗಿ ಹೇಳಿದ್ದು ಆಚಾರ್ಯರ ಪಾರಗಾಮಿ ದೃಷ್ಟಿಯ ಸಂಪನ್ನತೆಗೆ ಸೂಚಕವಾಗಿದೆ.

ತಮ ಚಿ ಇಚ್ಛಾ ಯೇಥ ಹಜಾರೋಂ ವಿದ್ಯಾರ್ಥಿನೀ ರಾಹಾವೇ ಶಿಕಾವೇ ಅಶಿ ಪವಿತ್ರ ಆಹೇ ಹೇ ಮೀ ಓಡಖತೋ ಹಾ ಕಲ್ಪವೃಕ್ಷ ಉಭಾ ಕರೂನ ಜಾತೋ ಭಗವಂತಾ ಚ ದಿವ್ಯ ಅಧಿಷ್ಠಾನ ಸರ್ವ ಘುಡವೂನ ಆಣೇಲ, ಮಿಡೆಲ ತಿತಕಾ ಮೋಠಾ ಪಾಷಾಣ ಮಿಲವಾ ವ ಲವಕರ ಹೇ ಪೂರ್ಣಕರ|| ಮುನಿಶ್ರೀ ಸಮಂತ ಭದ್ರಾ ಕ್ಡೆ ವಲೂನ ಮ್ಹಣಾಲೇ "ತುಝೀ ಪ್ರಕೃತಿ ಓಡಖತೋ, ಹೇ ತೀರ್ಥಕ್ಷೇತ್ರ ಆಹೇ ಮುನಿನೀ ವಿಹಾರ ಕರಾವಯಾತ ಪಾಹಿಜೇ ಅಸಾ ಸರ್ವಸಾಮಾನ್ಯ ನಿಯಮ ಅಸಲಾ ತರೀ ವಿಹಾರ ಕರುನಹೀ ಜೆ ಕರವಾಯಾಜೇ ತೇ ಯಥೇಚ ಏಕೇ ಠಿಕಾಣೇ ರಾಹೂನ ಕರಣೆ, ಕ್ಷೇತ್ರ ಅಹೇ, ಏಕೇ ಠಿಕಾಣೇ ರಾಹಾಣ್ಯಾಸ ಕ ಹೀಚ ಹರಕತ ನಾಹೀ ವಿಕಲ್ಪ ಕರೂ ನಕೋ, ಕಾಮ ಲವಕರ ಪೂರ್ಣ ಕರೂನ ಘೇ ಕಾಮ ಪೂರ್ಣ ಹೋಈಲ ನಿಶ್ಚಿತ ಹೋಈಲ ಹಾ ತುಮ್ಹಾ ಸರ್ವಾನಾ ಆಶೀರ್ವಾದ ಆಹೇ.

ನಿಮ್ಮ ಆಂತರಿಕ ಇಚ್ಛೆಯಂತೆ ಇಲ್ಲಿ ಸಾವಿರಾರು ವಿದ್ಯಾರ್ಥಿಗಳು ಧರ್ಮಧ್ಯಾನ ಮಾಡುತ್ತಿದ್ದಾರೆ. ಇದರ ಪರಿಚಯ ನನಗಿದೆ. ಇಲ್ಲಿ ಕಲ್ಪವೃಕ್ಷವನ್ನು ನಿಲ್ಲಿಸಿ ಹೋಗುತ್ತಿದ್ದೇನೆ. ಭಗವಂತರ ಸ್ಥಾಪನೆಯಿಂದ ಎಲ್ಲ ಕೆಲಸಗಳೂ ಸಾಂಗವಾಗಿ ನೆರವೇರಲು ಸಮರ್ಥವಾಗುತ್ತದೆ. ಎಷ್ಟು ಸಾಧ್ಯವೋ ಅಷ್ಟು ದೊಡ್ಡ ಶಿಲೆಯನ್ನು ಹುಡುಕಿ ಕಾರ್ಯ ಪ್ರಾರಂಭಿಸಿ, ಮುಗಿಸಿರಿ. ಮುನಿಗಳು ಸಮಂತಭದ್ರರನ್ನು ಉದ್ದೇಶಿಸಿ ಹೇಳುತ್ತಾ-ತಮ್ಮ-ಪ್ರಕೃತಿಯ ಬಗ್ಗೆ ತಿಳಿದಿದೆ. ಇದೊಂದು ತೀರ್ಥಭೂಮಿ, ಮುನಿಗಳು ವಿಹಾರ ಮಾಡುತ್ತಿರಬೇಕು. ಇದೊಂದು ಮುನಿಗಳ ಸಾಮಾನ್ಯ ನಿಯಮ. ಆದರೂ ಸಹ ವಿಹಾರ ಮಾಡುತ್ತಾ ಯಾವ ಸಾಧನೆಯನ್ನು ಮಾಡಬೇಕೊ ಅದೇ ಸಾಧನೆಯನ್ನು ಒಂದೇ ಜಾಗದಲ್ಲಿದ್ದುಕೊಂಡು ಮಾಡಿ ತೋರಿಸಬೇಕೆಂದರು. ಆಗ ಇದು ತೀರ್ಥಕ್ಷೇತ್ರವು ಆಗುತ್ತದೆ. ಒಂದೇ ಜಾಗದಲ್ಲಿ ನಿಂತರೆ ಏನೂ ದೋಷವಿಲ್ಲ. ವಿಕಲ್ಪದ ಯಾವುದೇ ಆವಶ್ಯಕತೆ ಇಲ್ಲ. ಕೆಲಸ ಬೇಗನೆ ಮುಗಿಯುವಂತೆ ಪ್ರಯತ್ನ ಮಾಡಿರಿ. ಅದು ಪೂರ್ಣವಾಗೇ ಆಗುತ್ತದೆ. ನಿಮ್ಮ ಎಲ್ಲ ಪ್ರಯತ್ನಕ್ಕೂ ನನ್ನ ಶುಭಾಶೀರ್ವಾದ ಇದೆ.

ಪೂರ್ಣಿಮೆಯ ದಿನದಂದು ಶುಭ ಸಂಕೇತವಾಗಿ 50,000ದ ವಾಗ್ದಾನ ದೊರೆಯಿತು. ಆದರೆ ಕೆಲಸ ಲಕ್ಷಾಂತರ ರೂ.ಗಳದು. ಆದರೂ ಸರಿಯಾದ ಸಮಯಕ್ಕೆ ಕೆಲಸ ಪೂರ್ಣಗೊಂಡಿತು. "ಪಯಸಾ ಕಮಲಂ ಕಮಲೇನ ಪಯಃ ಪಯಾ ಕಮಲೇನ ವಿಭಾತಿಸರಃ" ನೀರಿನಿಂದ ಕಮಲ, ಕಮಲದಿಂದ ನೀರು ಮತ್ತು ಎರಡರಿಂದಲೂ ಸರೋವರದ ಶೋಭೆ ಹೆಚ್ಚುತ್ತದೆ. ಇದರಂತೆ ಭಗವಂತರ ಮೂರ್ತಿಯಿಂದ ಸಂಸ್ಥೆಯ ಆಧ್ಯಾತ್ಮ ವೈಭವ ಹೆಚ್ಚುತ್ತದೆ. ಅತಿಶಯ ಕ್ಷೇತ್ರದ ಅತಿಶಯತೆಯಲ್ಲಿಯು ವೃದ್ಧಿಯಾಗುತ್ತದೆ. ಈಗ ಮೂರ್ತಿಯ ಪ್ರಾಗಂಣದಲ್ಲಿಯೂ ಮತ್ತು ಸಿದ್ಧಕ್ಷೇತ್ರದ ಪ್ರತಿಕೃತಿಯನ್ನು ಮಾಡಿಸುವುದರಲ್ಲಿಯು ಯಥಾರ್ಥವಾದ ಅತಿಶಯತೆ ವಿಶೇಷವಾಗಿ ಉಂಟಾಗಿದೆ. ಹೀಗೆ ಮಹಾರಾಜರ ಆಶೀರ್ವಾದವು ಫಲಿಸಿದೆ.

ದಶಲಕ್ಷಣ ಪರ್ವ

1987ರ ದಶಲಕ್ಷಣ ಪರ್ವದಲ್ಲಿ ರವೀಂದ್ರ ಕುಮಾರನು ಗುಜರಾತಿನ ತಲೋದಕ್ಕೆ ಹೋದನು. ಮಾಧುರಿಯು ಬಡೌದಕ್ಕೆ ಹೋದಳು. ಇಲ್ಲಿಂದ ಪಂ. ಸುಧರ್ಮಚಂದರ ಮತ್ತು ನರೇಶಚಂದ ಮೊದಲಾದವರು ಗುಜರಾತಿನವರ ಆಹ್ವಾನದ ಮೇಲೆ ಎಲ್ಲರು ಅಲ್ಲಿಗೆ ಹೋದರು. ಎಲ್ಲಾ ಕಡೆ ಒಳ್ಳೆಯ ಧರ್ಮ ಪ್ರಭಾವನೆ ಆಗತೊಡಗಿತು. ಹಸ್ತಿನಾಪುರದಲ್ಲಿ ಪೀಠಾಧೀಶ ಕ್ಷುಲ್ಲಕ ಮೋತಿಸಾಗರರು ತತ್ತ್ವಾರ್ಥಸೂತ್ರ ಮತ್ತು ದಶಲಕ್ಷಣ ಧರ್ಮದ ಮೇಲೆ ಪ್ರವಚನ ಮಾಡುತ್ತಿದ್ದರು. ನನ್ನಿಂದಲೂ ಸಂಕ್ಷಿಪ್ತ ಪ್ರವಚನ ನಡೆಯುತ್ತಿತ್ತು.

ಇಂದ್ರಧ್ವಜ ಆರಾಧನೆ

ಸೆಪ್ಟೆಂಬರ್ 14ರಂದು ಫತೇಹಪುರದ ಪ್ರತಾನಚಂದರು ಸಪರಿವಾರವಾಗಿ ಬಂದು ಇಲ್ಲಿ ತ್ರಿಮೂರ್ತಿ ಮಂದಿರದಲ್ಲಿ ಉತ್ಸಾಹದಿಂದ ಇಂದ್ರಧ್ವಜ ಆರಾಧನೆಯನ್ನು ಮಾಡಿದರು. ಇದಕ್ಕೂ ಮೊದಲು ಅವರ ಸಹೋದರ ಹೀರಾಮಣಿಯವರು ಆರಾಧನೆ ಮಾಡಿಸಿದಾಗ ಹತ್ತುದಿನಗಳು ಬಂದು ಇಲ್ಲೇ ತಂಗಿದ್ದರು. ಹತ್ತು ದಿನ ಆರಾಧನೆ ಪೂರ್ಣಾಹುತಿ ಮತ್ತು ರಥಯಾತ್ರೆ ಮೊದಲಾದವು ನಡೆದವು.

ಪೀಠಾಧೀಶರ ಜನ್ಮಜಯಂತಿ

ಪೀಠಾಧೀಶ ಕ್ಷುಲ್ಲಕ ಮೋತಿಚಂದರ ಜನ್ಮಜಯಂತಿ ಸೆಪ್ಟೆಂಬರ್ 21ರಂದು. ಅಂದು ಅವರಿಗೆ 48 ವರ್ಷಗಳು ತುಂಬಿದವು. ಈ ಸಂದರ್ಭದಲ್ಲಿ ಅವರ ತಾಯಿ ಮತ್ತು ಸಹೋದರಿ ಕಿರಣಬಾಯಿ ಇಲ್ಲಿಗೆ ಬಂದಿದ್ದರು. ಒಂದು ಚಿಕ್ಕ ಕಾರ್ಯಕ್ರಮ ಏರ್ಪಾಡು ಮಾಡಲಾಗಿತ್ತು. ವಿದ್ಯಾಪೀಠದ ವಿದ್ಯಾರ್ಥಿಗಳು ಬೆಳಗ್ಗೆ ಪ್ರಭಾತ ಫೇರಿ ಹೊರಟರು. ಮಕ್ಕಳಿಗೆ ಕೂಗುವುದಕ್ಕೆ ಒಳ್ಳೆಯ ಘೋಷಣೆ ಸಿಕ್ಕಿತು. ಪ್ರತಿಯೊಬ್ಬ ತಾಯಿಗೂ ಎಂತಹ ಮಕ್ಕಳು ಬೇಕು ಮೋತಿಸಾಗರರಂಥವರು ಎಂದು. ಮಧ್ಯಾಹ್ನದಲ್ಲಿ ಸಭೆ ನಡೆಯಿತು. ನಾನು ಆಶೀರ್ವಾದ ಮಾಡುತ್ತಾ ಜನ್ಮಜಯಂತಿಯನ್ನು ಆಚರಿಸುವುದು ಅವರ ಗುಣಗಳನ್ನು ಮೆಚ್ಚಿ ಅವರ ವಯಸ್ಸಿಗಲ್ಲ. ಕ್ಷುಲ್ಲಕ ಮೋತಿಸಾಗರರು ಗುರುವಿನ ಆಜ್ಞೆಯನ್ನು ಪಾಲಿಸುವುದರಲ್ಲಿ ಒಂದು ಆದರ್ಶವನ್ನು ಮೆರೆದಿದ್ದಾರೆ ಎಂದೆ.

ಅವರ ತಾಯಿ ಎಲ್ಲರಿಗೂ ಕಾಣಿಕೆಯನ್ನು ಹಂಚಿದರು. ಆರತಿ, ಭಜನೆಯೊಡನೆ ಕಾರ್ಯಕ್ರಮ ಮುಗಿಯಿತು. ಮೋತಿಸಾಗರರು ಹಲವಾರು ಬಾರಿ ನನ್ನ ಹತ್ತಿರ ಮಾತಾಜಿ ತಮ್ಮ ಮುಂದೆ ನನ್ನ ಜನ್ಮಜಯಂತಿ ನನಗೆ ಸರಿ ಎನಿಸುತ್ತಿಲ್ಲ ಎಂದಾಗ ನಾನು ತಾಯಿ ಮುಂದೆ ಮಕ್ಕಳ ಗುಣಗಾನ ನಡೆದರೆ ಒಳ್ಳೆಯದೇ ಬಿಡು ನಡೆಯಲಿ ಎಂದೆ.

54ನೆಯ ಜನ್ಮ ಜಯಂತಿ

ಶರದ್ ಪೂರ್ಣಿಮೆ ನನ್ನ ಜನ್ಮಜಯಂತಿ ಆದರೆ ದೆಹಲಿಯವರು ಸೇರಿ ರವಿವಾರವೇ ವಿಶೇಷ ಆಯೋಜನೆಗಳನ್ನು ಅಕ್ಟೋಬರ್ 4ರಂದೇ ಏರ್ಪಡಿಸಿದ್ದರು. ವಿದ್ಯಾರ್ಥಿಗಳು ಪ್ರಭಾತಫೇರಿ ಹೊರಟರು. ಕ್ಷುಲ್ಲಕರ ಮುಂದಾಳತ್ವದಲ್ಲಿ ಶ್ರಾವಕರು ಮೆರವಣಿಗೆಯಲ್ಲಿ ನಶಿಯಾವನ್ನು ದರ್ಶನ ಮಾಡಿದರು. ಮಧ್ಯಾಹ್ನದಲ್ಲಿ ದೆಹಲಿಯ ಮಹಿಳಾಶ್ರಮದ ಹುಡುಗಿಯರು ಒಂದು ಏಕಾಂಕಿಯನ್ನು ಪ್ರದರ್ಶಿಸಿದರು. ಶ್ರಾವಕಗಣ ವಿನಯಾಂಜಲಿ ಅರ್ಪಿಸಿ ನನ್ನ ಚರಣಗಳನ್ನು ಹಾಲಿನಿಂದ ತೊಳೆದು, ಪಿಂಛಿ ಮತ್ತು ಶಾಸ್ತ್ರವನ್ನು ನೀಡಿ ತಮ್ಮ ಭಕ್ತಿ ಪ್ರದರ್ಶಿಸಿದರು. ಇದೇ ಸಂದರ್ಭದಲ್ಲಿ ವಾರ್ಷಿಕ ಜಾತ್ರೆ ರಥೋತ್ಸವ ನಡೆಯಿತು. ದೆಹಲಿಯ ಮೋತಿಲಾಲ ಕಾಸಲೀವಾಲರು 500ಜನಕ್ಕೆ ಉಡುಗೊರೆಯನ್ನು, ವಸ್ತ್ರಗಳನ್ನು ದೀಪಗಳನ್ನು ಹಂಚಿದರು.

ನಾನು ಆಶೀರ್ವಾದ ಮಾಡುತ್ತಾ ಈ ಶರದ್ ಪೂರ್ಣಿಮೆಯು ನಿಜವಾಗಿಯೂ ನನ್ನ ಜನ್ಮದಿನವೇ. ಏಕೆಂದರೆ 1952ರಲ್ಲಿ ಈ ದಿನವೇ ನಾನು ಬ್ರಹ್ಮಚರ್ಯ ವ್ರತವನ್ನು ಕೈಕೊಂಡು ಮನೆಯನ್ನು ತ್ಯಾಗ ಮಾಡಿದ್ದೆ. ನಾನು ಭಗವಂತನಲ್ಲಿ ಪ್ರಾರ್ಥನೆಯನ್ನು ಮಾಡುವುದು ಇದನ್ನೆ. ಎಲ್ಲಾ ಭಕ್ತರು ಧರ್ಮದಲ್ಲಿ ಯಾವಾಗಲೂ ತತ್ಪರರಾಗಿ. ಸುಖ ಸಂಪತ್ತು ಮತ್ತು ಸಮೃದ್ಧಿಯು ಉಂಟಾಗಲಿ.

ಇದಾದನಂತರ ಅಕ್ಟೋಬರ್ 7ರಂದು ಶರದ ಪೂರ್ಣಿಮೆಯಂದು ರವೀಂದ್ರ-ಮಾಧುರಿಯರು ಬೆಳಿಗ್ಗೆಯೆ ಬಂದು ನನ್ನ ಕಾಲುತೊಳೆದು ಪೂಜೆಮಾಡಿದರು. "ಸ್ಥಾಯಿಸಮಿತಿ"ಯ ಸದಸ್ಯೆಯರು ಪೀಠಾಧೀಶ ಮೋತಿಸಾಗರರಿಗೆ ರಜತ ಪ್ರಶಸ್ತಿಯನ್ನು ಕಾಣಿಕೆಯಾಗಿ ಅರ್ಪಿಸಿದರು. ಪೀಠಾಧೀಶರು ಅದನ್ನು ತಂದು ರವೀಂದ್ರನಿಗೆ ಕೊಟ್ಟು ಕಾರ್ಯಾಲಯದಲ್ಲಿ ಇಡಿಸಿದರು. ಮಧ್ಯಾಹ್ನದಲ್ಲಿ ಸೇರಿದ್ದವರೆಲ್ಲ ವಿನಯಾಂಜಲಿ ಅರ್ಪಿಸಿ, ರಾತ್ರಿ 54 ದೀಪಗಳನ್ನು ಬೆಳಗಿ ಆರತಿ ಎತ್ತಿದರು. ದೆಹಲಿಯವರು ತಮ್ಮ ಅನುಕೂಲಕ್ಕೆ ತಕ್ಕಂತೆ ಭಾನುವಾರಗಳಲ್ಲೇ ಕಾರ್ಯಕ್ರಮಗಳನ್ನು ರೂಪಿಸುತ್ತಾರೆ. ಹಾಗಾಗಿ ಮಹಾವೀರ ಜಯಂತಿಯನ್ನು ಒಂದು ತಿಂಗಳು ಮೊದಲೇ ವಿವಿಧ ಕಡೆ ಭಾನುವಾರಗಳಲ್ಲಿ ಆಚರಿಸಿ, ತ್ರಯೋದಶಿಯಂದು ಸಾಂಪ್ರದಾಯಿಕವಾಗಿ ಮಾತ್ರ ಆಚರಿಸುತ್ತಾರೆ. ಆಚಾರ್ಯ ದೇಶಭೂಷಣ ಮಹಾರಾಜರ ಜನ್ಮಜಯಂತಿಯನ್ನು ಅವರು ಭಾನುವಾರದಂದೇ ಆಚರಿಸುತ್ತಾರೆ.

2

ಇಂದ್ರಧ್ವಜ ಆರಾಧನೆ

ಈ ಜನ್ಮ ಜಯಂತಿಯ ಉಪಲಕ್ಷ್ಯದಲ್ಲಿಯೇ ಜಗಾಧರೀ ಪುರುಷೋತ್ತಮದಾಸರು ಅಕ್ಟೋಬರ 2ರಿಂದ 11ರವರೆಗೆ ಆರಾಧನೆಯನ್ನು ಮಾಡಿಸಿದರು.

ಉಪದೇಶ

ಅಕ್ಟೋಬರ್ 15ರಂದು ಹಸ್ತಿನಾಪುರಕ್ಕೆ ಬಾಲಕಿಯರು ಬಂದಿದ್ದರು. ಅವರಿಗೆ ಉಪದೇಶಿಸುತ್ತಾ ನಾನು ಚಾರಿತ್ರದ ಬಗ್ಗೆ ಹೇಳುತ್ತಾ ಅಂಜನಾ ಮೊದಲಾದವರ ಬಗ್ಗೆ ಹೇಳುತ್ತಾ ರಾವಣನು ಸ್ತ್ರೀ ಸೇವನೆಯ ಮಹಾಪಾಪವನ್ನು ಮಾಡಲಿಲ್ಲ. ಕೇವಲ ಭಾವದಿಂದ ಮಾಡಿದ್ದ. ಆದರೂ ಯಾರು ತಮ್ಮ ಮಕ್ಕಳಿಗೆ ರಾವಣನೆಂದು ಸೂರ್ಪನಖಿ ಎಂದು ಹೆಸರಿಡುವುದಿಲ್ಲ. ಆದರೆ ಸೀತೆ, ಅಂಜನಾ ಎಂದು ಪ್ರೀತಿಯಿಂದ ಇಡುತ್ತಾರೆ ಎಂದೆ.

ವೇದಿ ಪರಿವರ್ತನೆ

ಅಕ್ಟೋಬರ 20ರಂದು ಭಗವಾನ ಮಹಾವೀರ ಸ್ವಾಮಿಯ ಗರ್ಭಗುಡಿಯನ್ನು ಒಳಗಿನಿಂದ ಗೋಲಾಕಾರ ಮಾಡಿ ಮೇಲೆ ಕಮಲಾಕಾರ ಮಾಡುವ ಸಲುವಾಗಿ ಮೂರ್ತಿಯನ್ನು ತ್ರಿಮೂರ್ತಿ ಮಂದಿರಕ್ಕೆ ತಂದು ಇಡಲಾಯಿತು.[೧]

ಇಂದ್ರಧ್ವಜ ಆರಾಧನೆ

ಅಕ್ಟೋಬರ್ 20ರಂದು ಲಖನೌನಲ್ಲಿ ಕೈಲಾಸಚಂದ್ರ ಜೈನಹಾಗೇ ಟಿಕೈತನಗರದಲ್ಲೂ ಇಂದ್ರಧ್ವಜ ಆರಾಧನೆಯನ್ನು ಮಾಡಲಾಯಿತು. ಈ ಆರಾಧನೆಯು ಲಖನೌನಲ್ಲಿ ಒಳ್ಳೆ ಧರ್ಮಪ್ರಭಾವನೆಯನ್ನು ಮಾಡಿತು. ಇಲ್ಲಿಂದ ರವೀಂದ್ರಕುಮಾರ, ಮಾಧುರಿ, ಪಂ. ಸುಧರ್ಮಚಂದರು ಹೋಗಿದ್ದರು. ಇದಕ್ಕಿಂತ ಮೊದಲೆ ಟಿಕೈತನಗರದಲ್ಲಿ ರವೀಂದ್ರನ ಚಿಕ್ಕಪ್ಪನ ಮಗ ಬಾಲಚಂದ್ರರ ಸುಪುತ್ರ ವೀರೇಂದ್ರಕುಮಾರನು 58 ಜಿನಪ್ರತಿಮೆಗಳನ್ನು ಪಂಚಕಲ್ಯಾಣ ಪ್ರತಿಷ್ಠೆಮಾಡಿದ್ದರು. ಅದೇ ಸಮಯಕ್ಕೆ ದರಿಯಾಬಾದ್‌ನಲ್ಲಿ ಇಂದ್ರಧ್ವಜ ಆರಾಧನೆ ನಡೆಯಿತು. ಈಗ ಎಲ್ಲಾ ಕಡೆಯಿಂದಲೂ ಆರಾಧನೆ ನಡೆಯುವ ಸುದ್ದಿಗಳು ಬರುತ್ತಿದ್ದವು. ಹೀಗೆ

---

೧. ಈಗ ಕಮಲಾಕಾರ ಮಂದಿರವಾಗಿದೆ.

ಜೀನೇಂದ್ರ ದೇವರಿಗೆ ಪೂಜೆ, ವಿಧಾನಗಳು ನಡೆಯುವುದು ಕೇಳಿ ಮನಸ್ಸು ಹರ್ಷದಿಂದ ತುಂಬಿತು. ನನ್ನಿಂದ ರಚಿತವಾದ ಆರಾಧನೆಗಳು ಎಲ್ಲಾಕಡೆ ಆಚರಣೆಗೆ ಬರುತ್ತಿರುವುದು ಕೇಳಿ ಮನಸ್ಸಿಗೆ ಬಹಳ ತೃಪ್ತಿಯಾಯಿತು.

ನಿರ್ವಾಣ ಲಾಡು

ಅಕ್ಟೋಬರ್ 22ರಂದು ತ್ರಿಮೂರ್ತಿ ಮಂದಿರದಲ್ಲಿ ಬೆಳಗ್ಗೆ 5-45ಕ್ಕೆ ನಿರ್ವಾಣಲಾಡು ಇಡಲಾಯಿತು. ಈ ಸಲ ಮಹಾವೀರ ಮಂದಿರದಲ್ಲಿ ನಿರ್ಮಾಣದ ಕೆಲಸ ನಡೆಯುತ್ತಿತ್ತು. ಗೋಷ್ಠಿ ಉಪದೇಶವಾದ ಮೇಲೆ ಸಾಯಂಕಾಲ ದೀಪಾವಳಿಯನ್ನು ಆಚರಿಸಲಾಯಿತು. ಇದಕ್ಕಿಂತ ಮೊದಲು ಗಣಧರದೇವ ಪೂಜೆ ಮತ್ತು ಕೇವಲಜ್ಞಾನ ಮಹಾಲಕ್ಷ್ಮಿಯ ಪೂಜೆ ಮಾಡಲಾಯಿತು.

ಜಂಬೂದ್ವೀಪ ಮಂಡಲ ವಿಧಾನ

ದೆಹಲಿಯ ಆನಂದ ಪ್ರಕಾಶರು ಜಂಬೂದ್ವೀಪದಲ್ಲಿ ಆರಾಧನೆಗೋಸ್ಕರ ಧ್ವಜಾರೋಹಣ ಮಾಡಿದರು. ಈ ಆರಾಧನೆಗಾಗಿ ಪೆಂಡಾಲ ಹಾಕಿಸಿ ಅದರಲ್ಲಿ ವೇದಿಕೆ ಮಾಡಿಸಿ ಪೂಜೆ ಮಾಡಲಾಯಿತು. 1008 ಅರ್ಘ್ಯಗಳನ್ನು ಜಂಬೂದ್ವೀಪದ ಮೇಲೆ ಏರಿಸಲಾಯಿತು ಇದನ್ನು ಕಂಡು ಬಹಳ ಹರ್ಷವಾಯಿತು. ಹೀಗೆ ಆಯಾ ಸ್ಥಾನದಲ್ಲಿ 1008 ಅರ್ಘ್ಯ ಮತ್ತು ಜಯಮಾಲೆಗಳನ್ನು ಅರ್ಪಿಸಲಾಯಿತು. ಬಹಳಷ್ಟು ಶ್ರಾವಕರು ಇದರಲ್ಲಿ ಭಾಗವಹಿಸಿದ್ದರು ಈ ಸಮಯದಲ್ಲಿ ಶ್ರೀ ಸುಭಾಹುಸಾಗರರು ಸಂಘಸಹಿತವಾಗಿ ಇಲ್ಲಿಗೆ ಆಗಮಿಸಿ ಆರಾಧನೆಯನ್ನು ನೋಡಿ ಉಪದೇಶಕೊಟ್ಟರು.

ಈ ವಿಧಾನದ ಬಗ್ಗೆ ಇನ್ನೊಂದು ಮಾತೆಂದರೆ ಕೆಲವು ತಿಂಗಳ ಮೊದಲೇ ಆನಂದಪ್ರಕಾಶರು ನನ್ನ ಹತ್ತಿರ ನಾನು ಕಾರ್ತಿಕ ಅಷ್ಟಾಹ್ನಿಕದಲ್ಲಿ ಜಂಬೂದ್ವೀಪದ ಆರಾಧನೆಯನ್ನು ಮಾಡುತ್ತೇನೆ ಅಂದವರು ಪುನಃ ಬಂದು ಆಗುವುದಿಲ್ಲ ಎಂದು ಹೇಳಲು ಬಂದಿದ್ದರು. ನಾನು ಏತಕ್ಕೆ ಎಂದು ಕೇಳಿದೆ. ಮಾತಾಜಿ ಸುಮಾರು ಒಂದು ತಿಂಗಳಿಂದ ಸಂಘದಲ್ಲಿ ಆಹಾರ ದಾನ ಮಾಡಲು ಹೋಗಿದ್ದೆವು. ಅಲ್ಲಿಂದ ಬಂದ ಮೇಲೆ ನಾವಿಬ್ಬರು ಅಸ್ವಸ್ಥರಾಗಿದ್ದೇವೆ. ಆರಾಧನೆಯಲ್ಲಿ ಕುಳಿತುಕೊಳ್ಳಲು ಆಗದಷ್ಟು ನಿಶ್ಯಕ್ತರಾಗಿದ್ದೇವೆ ಎಂದು ಅಸಹಾಯಕತೆಯನ್ನು ತೋಡಿಕೊಂಡರು. ಅದಕ್ಕೆ ನಾನು ಚಿಂತೆಯನ್ನು ಮಾಡಬೇಡಿ. ಆರಾಧನೆಯಲ್ಲಿ ಕುಳಿತುಕೊಳ್ಳಲು ಶಕ್ತಿ ತನ್ನಿಂದ ತಾನೇ ಬರುತ್ತದೆ ಎಂದೆ ಆನಂದಪ್ರಕಾಶರು ನಿಮ್ಮ ಆಶೀರ್ವಾದದಂತೆ ಆಗಲಿ ಎಂದರು.

ನನ್ನ ಆಶೀರ್ವಾದ ಪಡೆದು ಆರಾಧನೆಗೆ ಬೇಕಾದ ಸಾಮಾಗ್ರಿಗಳನ್ನು ಹೊಂದಿಸಿಕೊಂಡರು. ನಿಜವಾಗಿಯೂ ಜಿನಭಕ್ತಿಯಿಂದ ಯಾವುದೇ ತೊಂದರೆ ಆಗಲಿಲ್ಲ. ಒಳ್ಳೆ ಉತ್ಸಾಹದಿಂದ ಓಡೋಡಿ ಬಂದು ಜಂಬೂದ್ವೀಪದಲ್ಲಿ ಭರತಕ್ಷೇತ್ರದಲ್ಲಿ ಐರಾವತ ಕ್ಷೇತ್ರದಲ್ಲಿ ವಿದೇಹ ಕ್ಷೇತ್ರದಲ್ಲಿ ಓಡಾಡಿಕೊಂಡು ಪೂಜೆಮಾಡುವುದಕ್ಕೆ ಅರ್ಘ್ಯ ಎತ್ತುವುದರಲ್ಲಿ ತೊಡಗಿಕೊಂಡಿದ್ದರು. ಮಧ್ಯಾಹ್ನ 1-2ಗಂಟೆಯ ವರೆಗೆ ಪೂಜೆ ನೋಡಿ ಆನಂದವಾಗುತ್ತಿತ್ತು. ನವಂಬರ್ 4ರಂದು ಪೂರ್ಣಾಹುತಿ ಕೊಟ್ಟು ರಥಯಾತ್ರೆ ಹೊರಡಿಸಿದರು.

ಇದೇ ಸಂದರ್ಭದಲ್ಲಿ ಕ್ಷೇತ್ರ ಮೀಟಿಂಗ್‌ಗಾಗಿ ಅಶೋಕಕುಮಾರ್ ದೆಹಲಿಯ ನರೇಶಚಂದ, ಸಂಸದ ಸದಸ್ಯ ಡಾಲಚಂದ ಜೈನ್‌ರೆಲ್ಲ ಸೇರಿದ್ದರು. ಇವರ ಜೊತೆ ನಿರ್ಮಲಕುಮಾರರು ಸೇರಿದರು. ಇವರೆಲ್ಲ ಸಾಮಾಯಿಕ ಚರ್ಚೆಯಲ್ಲಿ ತೊಡಗಿದರು. ವರ್ತಮಾನದಲ್ಲಿ ದಿಗಂಬರ ಜೈನ ಸಂಪ್ರದಾಯದಲ್ಲಿ ಆಗಿರುವ ಮತಭೇದದ

ಬಗ್ಗೆ ಹಲವಾರು ಪ್ರಶ್ನೆಗಳು ಎದುರಾದವು. ಇವೆಲ್ಲಕ್ಕೂ ಆಗಮಕ್ಕೆ ಅನುಸಾರವೇ ನಡೆಯಲು ಕಾರ್ಯಕರ್ತರಿಗೆ ಪ್ರೇರಣೆಕೊಟ್ಟೆ.

ವಾರ್ಷಿಕ ಜಾತ್ರೆ

1987ರ ನವಂಬರ್ 5ರಂದು ವಾರ್ಷಿಕ ಜಾತ್ರೆ ನಡೆಯಿತು. ದೆಹಲಿಯ ಮಹಿಳಾಶ್ರಮದವರು "ನೇಮಿನಾಥರ ವೈರಾಗ್ಯ"ದ ನಾಟಕ ಆಡಿದರು. ತ್ರಿಮೂರ್ತಿ ಮಂದಿರದಲ್ಲಿ ಸರಸ್ವತಿ ಮತ್ತು ಪದ್ಮಾವತಿದೇವಿಯರಿಗೆ ವೇದಿಕೆ ಸಿದ್ಧಪಡಿಸಿ ಬಹಿರಾಇಚದ ಶ್ರೀಮತಿ ಜೈನ ಮತ್ತು ಮಾಧುರಿಯವರು ಮೂರ್ತಿಗಳನ್ನು ಸ್ಥಾಪಿಸಿದರು. ಮಧ್ಯಾಹ್ನ ದೊಡ್ಡ ಮಂದಿರದಿಂದ ಯಾತ್ರೆ ಹೊರಟು, ಜಂಬೂದ್ವೀಪದಿಂದ ನಶಿಯಾಗೆ ಹೋಯಿತು. ಜಂಬೂದ್ವೀಪದ ಜನರು ಭಗವಾನರಿಗೆ ಆರತಿ ಕೊಟ್ಟು ಗುಪ್ತಭಂಡಾರಕ್ಕೆ ಕಾಣಿಕೆ ಹಾಕುತ್ತಾರೆ. ನಾನು ಜಂಬೂದ್ವೀಪದ ಹೊರಗೆ ಹೋಗಿ ದೇವರ ದರ್ಶನ ಮಾಡಿದೆ.

ಉಪದೇಶ ಕಾರ್ಯಕ್ರಮ

ಬೆಳಗ್ಗೆಯ ಹೊತ್ತು ರವೀಂದ್ರ ಮತ್ತು ಮೋತಿಸಾಗರರು ನನ್ನ ಹತ್ತಿರ ಕುಳಿತು ನಿಯಮಸಾರ ಪ್ರಾಭೃತ ಮತ್ತು ಲಬ್ಧಿಸಾರವನ್ನು ಓದುತ್ತಿದ್ದರು. ಈ ಸ್ವಾಧ್ಯಾಯದ ಲಾಭವನ್ನು ಬಂದಿದ್ದ ಯಾತ್ರಿಗಳು ಪಡೆಯುತ್ತಿದ್ದರು. ಹಾಗಾಗಿ ಸ್ವಾಧ್ಯಾಯಕ್ಕೆ ನಂತರ ನಾನು ಉಪದೇಶ ಕೊಡುತ್ತಿದ್ದೆ. ಬಹಳಷ್ಟು ಯಾತ್ರಿಗಳು ಅಲ್ಲಿಗೆ ಸದಾ ಹೋಗಿ ಬರುವವರು ಮಾತಾಜೀ ನಿಮ್ಮನ್ನು ನೋಡಿ ವರ್ಷಗಳೇ ಕಳೆದಿತ್ತು. ಇಂದು ನಿಮ್ಮನ್ನು ನೋಡಿ ಮನಸ್ಸಿಗೆ ಬಹಳ ಹರ್ಷವಾಯಿತೆಂದರು. ನಿಜ ಹೇಳಬೇಕೆಂದರೆ ನಾನು ದೀರ್ಘಕಾಲ ಅಸ್ವಸ್ಥಳಾಗಿದ್ದರಿಂದ ಯಾರನ್ನೂ ವಿಚಾರಿಸಲು ಆಗಿರಲಿಲ್ಲ.

ಜನರಂತೂ ನಾವು ಇಂತಹ ದರ್ಶನವನ್ನು ಎಂದೂ ಮಾಡಿರಲಿಲ್ಲ. ನಮಗೆ ಎಲ್ಲೆ ಇಲ್ಲದ ಆನಂದ. ನಿಜ ಹೇಳಬೇಕೆಂದರೆ ಇಂತಹ ದರ್ಶನ ಪ್ರಪಂಚದಲ್ಲೆಲ್ಲೂ ಸಿಗಲಾರದು. ಹೀಗಾಗಿ ನಮಗೆಲ್ಲರಿಗೂ ಆಕರ್ಷಣೆ ಭಕ್ತಿ ಆನಂದ ಒಟ್ಟೊಟ್ಟಿಗೆ ಇಲ್ಲಿ ಸಿಗುತ್ತಿದೆ. ಅವರ ಹರ್ಷೋದ್ಗಾರ ಎಲ್ಲೆ ಮೀರಿತ್ತು. ನಾವು ಹರಾಜಿನಲ್ಲಿ ದಾನಕೊಟ್ಟ ಹಣ ಎಷ್ಟು ಸುಂದರ ರೂಪವನ್ನು ಪಡೆದು ನಮ್ಮನ್ನು ತಮ್ಮತ್ತ ಸೆಳೆದು ನಮಗೆ ಆನಂದವನ್ನು ತಂದುಕೊಡುತ್ತಿದೆ. ಹೀಗೆ ಭಕ್ತರ ನುಡಿಗಳು ಕಿವಿಗೆ ಬೀಳುತ್ತಿದ್ದವು. ಹೀಗೆ ನೋಡಿದರೆ ಜೈನರಿಗಿಂತ ಅಜೈನರೇ ಜಾಸ್ತಿ ಬರುತ್ತಿದ್ದಾರೆ.

ಭಿಂಡರನಲ್ಲಿ ಜಂಬೂದ್ವೀಪದ ವಿಧಾನ

ಭಿಂಡರನಿಂದ ಕು. ಮಾಧುರಿ, ಕು. ಆಸ್ಥಾ ರವರು ಜನವರಿ 25ರಂದು ಬಂದರು. ಅಲ್ಲಿ ಆಚಾರ್ಯ ಅಜಿತಸಾಗರರ ಸಾನಿಧ್ಯದಲ್ಲಿ ಜಂಬೂದ್ವೀಪದ ಮಂಡಲದ ಆರಾಧನೆ ನಡೆಯಿತು. ಸ್ವಯಂ ಆಚಾರ್ಯರೇ ಕುಳಿತು ಮಂತ್ರವನ್ನು ಓದುತ್ತಿದ್ದುದು ಒಳ್ಳೆಯ ಧರ್ಮ ಪ್ರಭಾವನೆಯನ್ನು ಉಂಟುಮಾಡಿತು. ವಾಸ್ತವವಾಗಿ ಪೂಜ್ಯಪಾದ ಸ್ವಾಮಿಯಂತಹ ಮಹಾನ್ ಆಚಾರ್ಯರೇ ಜಿನೇಂದ್ರ ಭಗವಂತರ ಅಭಿಷೇಕ ಪಾಠದ ರಚನೆ ಮಾಡಿದ್ದಾರೆ. ಇದರಿಂದ ಆಚಾರ್ಯರು, ಮುನಿಗಳು, ಆರ್ಯಿಕೆಯರು ಇದನ್ನು ಓದುವುದರಲ್ಲಿ ಆಸಕ್ತಿಯನ್ನು ತಳೆದರೆ ಇದೊಂದು ರೀತಿಯ ಶುಭೋಪಯೋಗವಾಗುತ್ತದೆ. ಆಚಾರ್ಯ ಚಕ್ರವರ್ತಿ ಆಚಾರ್ಯ ಶಾಂತಿಸಾಗರರೂ

ಬೆಳಗ್ಗೆ ಜಿನೇಂದ್ರದೇವರ ಪಂಚಾಮೃತ ಅಭಿಷೇಕವನ್ನು ಬಹಳ ಆಸಕ್ತಿಯಿಂದ ನೋಡುತ್ತಿದ್ದರು. ಇದನ್ನು ನಾನು 1955ರಿಂದಲೂ ಗಮನಿಸಿದ್ದೇನೆ.

ಹಸ್ತಿನಾಪುರದಲ್ಲಿ ಕೇಶಲೋಚ

ಫೆಬ್ರವರಿ 3ರಂದು ಜಂಬೂದ್ವೀಪದ ರತ್ನತ್ರಯ ನಿಲಯದ ಅಂಗಳದಲ್ಲಿಯೇ ನನ್ನ ಕೇಶಲೋಚ ಸಮಾರಂಭ ನಡೆಯಿತು. ಬಾಲಾಶ್ರಮದ ಸುಮಾರು ಇನ್ನೂರು ಮುನ್ನೂರು ಹುಡುಗರು ಬಂದು ಸೇರಿದ್ದರು. ಮಹಾವೀರ ಕ್ಷೇತ್ರದಿಂದ ಕಪೂರಚಂದಪಾಟನೀಯವರು ಬಂದಿದ್ದವರು ಸಭೆಯಲ್ಲಿ ಮಾತಾಡುತ್ತಾ "ಜ್ಞಾನಮತೀ" ಎಂಬ ಹೆಸರನ್ನು ಮಾತಾಜೀಯವರು ಸಾರ್ಥಕಪಡಿಸಿಕೊಂಡಿದ್ದಾರೆ. ಕಬೀರನು ಕಣ್ಣಿಲ್ಲದವರಿಗೆ 'ನಯನಸುಖ' ಎಂದು ಕರೆಯುತ್ತಿದ್ದ. ಆದರೆ ಹೆಸರಿನಂತೆ ವ್ಯಕ್ತಿ ಇರುತ್ತಿರಲಿಲ್ಲ. ಅವನೇನಾದರು ಇಂದು ಸ್ವರ್ಗದಿಂದ ಮಾತಾಜೀಯವರನ್ನು ನೋಡಿದ್ದರೆ ಯಥಾಗುಣದ ವ್ಯಕ್ತಿಯನ್ನು ನೋಡಿ ಎಷ್ಟು ಖುಷಿ ಪಡುತ್ತಿದ್ದನೋ ಎಂದರು. ಕೇಶಲೋಚ ಮಾಡಿಕೊಳ್ಳುತ್ತಲೆ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ನಾನು ವಿಚಾರ ಮಾಡತೊಡಗಿದೆ. ಈ ಎಲ್ಲಾ ಜ್ಞಾನವು ಗುರುಮುಖದಿಂದ ಹಾಗೂ ಸರಸ್ವತಿಯ ಅನುಗ್ರಹದಿಂದ ದೊರೆತಿರುವುದು. ವೀರಸಾಗರರು ಎಂತಹ ಅಮೃತಗಳಿಗೆಯಲ್ಲಿ ನನ್ನನ್ನು ಜ್ಞಾನಮತಿ ಎಂದು ಕರೆದರೋ ಅವರ ದಿವ್ಯಶಕ್ತಿಯು ನನ್ನಲ್ಲೂ ಪ್ರವಹಿಸಿತ್ತು. ಜಿನವಾಣಿ ಎನ್ನುವುದು ಒಬ್ಬರ ಸ್ವತ್ತಲ್ಲ. ಅವಳಲ್ಲಿ ಅಪಾರ ಜ್ಞಾನಭಂಡಾರವಿದೆ. ಇರುವ ಜ್ಞಾನಭಂಡಾರದಲ್ಲಿ ನಾನು ತಿಳಿದಿರುವುದು ಒಂದು ಅಂಶ ಏಕೆ ಅದರಲ್ಲೂ ತೃಣಮಾತ್ರ ನಾನು ತಿಳಿದಿದ್ದೇನೆ. ನನಗೆ ಅನ್ನಿಸುವುದು ಮೋಕ್ಷ ಮಾರ್ಗಕ್ಕೆ ಬೇಕಾದಷ್ಟು ಆಯಿತು ಎನ್ನಿಸುತ್ತಿದೆ. ನಂತರ ನಾನು ಮಂಗಳ ಆಶೀರ್ವಾದ ಕೊಟ್ಟೆ. 1988ರ ಫೆಬ್ರವರಿ 7ರಂದು ನನ್ನ ನೆನಪುಗಳು "ಈ ಗ್ರಂಥ ಬರೆಯತೊಡಗಿದೆ".

೯೩

ಕಲ್ಪದ್ರುಮ ಆರಾಧನೆ : 1988ರ ಫೆಬ್ರವರಿ 24

ಅಂದು ತ್ರಿಮೂರ್ತಿ ಮಂದಿರದಲ್ಲಿ ಮಂಡಲ ರಚಿಸಿ, ಕಲ್ಪದ್ರುಮ ಆರಾಧನೆಗೆ ಸಿದ್ಧತೆ ನಡೆದಿತ್ತು. ಬಣ್ಣ ಬಣ್ಣದ ರಂಗೋಲಿಯ ನಡುವೆ ಚಂದ್ರೋಪಕ, ಚಾಮರ, ಛತ್ರಿ ಮೊದಲಾದವುಗಳು ಯಥಾಸ್ಥಾನದಲ್ಲಿ ರಾರಾಜಿಸುತ್ತಿತ್ತು. ಮಧ್ಯದಲ್ಲಿ ಗಂಧಕುಟಿಯ ಒಳಗೆ ನಾಲ್ಕು ದಿಶೆಯಲ್ಲಿ ನಾಲ್ಕು ಜಿನ ಪ್ರತಿಮೆಗಳನ್ನು ಇಡಲಾಗಿತ್ತು. ರವೀಂದ್ರ ಆರಾಧನೆಗಾಗಿಯೇ ಮಾನಸ್ತಂಭ, ತೋರಣದ್ವಾರ, ಧರ್ಮಚಕ್ರ, ಧ್ವಜಗಳನ್ನು ಧಾತುವಿನಿಂದ ಮಾಡಿಸಿ ತಂದಿದ್ದ. ಚೈತ್ಯವೃಕ್ಷ, ಸಿದ್ಧಾರ್ಥ ವೃಕ್ಷಗಳಿಂದ ಸಮವಸರಣ ಶೋಭಿಸ ತೊಡಗಿತ್ತು.

ಈ ಆರಾಧನೆಯಲ್ಲಿ ಪಂಚ ಇಂದ್ರ ಇಂದ್ರಾಣಿಯರಾಗಿ ಟಿಕೈತನಗರದ ಪ್ರದ್ಯುಮ್ನ ಕುಮಾರ್ ಶಾಂತಿಪ್ರಸಾದ್ ಲಖನೌ ಡಾಲಿಗಂಜನ ವಿಮಲಕುಮಾರ್ ಮಹಮೂದ್‌ನಗರದ ಪ್ರೇಮಚಂದ್ ಶಿಖರಚಂದ ಜೈನ್ ಹಾಪುಡದ 5 ಶ್ರಾವಕರು ಸಪತ್ನಿಕರಾಗಿ ಚಕ್ರವರ್ತಿಗಳಾಗಿ ಆರಾಧನೆ ನಡೆಸಿದರು. ಸಕಲೀಕರಣ ಮಂಟಪ, ಪ್ರತಿಷ್ಠೆ, ಅಭಿಷೇಕ, ಪೂಜೆಗಳೊಂದಿಗೆ ಆರಾಧನೆ ಪ್ರಾರಂಭವಾಯಿತು. ಈ ಆರಾಧನೆಯ ಯಜಮಾನರಾಗಿ ಸಾರಥ್ಯ ವಹಿಸಿದ್ದ ಪ್ರದ್ಯುಮ್ನಕುಮಾರರು ನಾನು 1976ರಲ್ಲಿ ಕಲ್ಪದ್ರುಮ ಆರಾಧನೆಯನ್ನು ಬರೆಯಲು ಪ್ರಾರಂಭಿಸಿ 3½ ತಿಂಗಳಲ್ಲೇ

ಮುಗಿಸಿದ್ದು ನೋಡಿ ಮಾತಾಜೀ ಈ ಮಹಾ ವಿಧಾನವನ್ನು ನಾನೇ ಪ್ರಕಟಗೊಳಿಸುತ್ತೇನೆ. ಹಾಗೆ ತಮ್ಮ ಸಾನಿಧ್ಯದಲ್ಲೇ ಇದನ್ನು ಆರಾಧನೆ ಮಾಡುತ್ತೇನೆ ಎಂದು ವಾಗ್ದಾನ ಮಾಡಿ, ಶರದ್ ಪೂರ್ಣಿಮೆಯ ದಿನ ನನ್ನ ಜನ್ಮದಿನದಂದೇ ಹಸ್ತಪ್ರತಿಯನ್ನು ರಥದಲ್ಲಿರಿಸಿ ಮೆರವಣಿಗೆ ಮಾಡಿ ತೆಗೆದುಕೊಂಡು ಹೋಗಿ ಹೇಳಿದಂತೆ ಮಾಡಿ ತೋರಿಸಿದರು.

ಅದ್ಭುತಯೋಗ

ಈ ಆರಾಧನೆಯಲ್ಲಿ ತೀರ್ಥಂಕರ ಜಿನೇಂದ್ರ ಭಗವಂತರ ಸಮವಸರಣದ ವೈಭವದ ಪೂಜೆಮಾಡಿ ಜೊತೆ-ಜೊತೆಗೆ ತೀರ್ಥಂಕರರ ಅಂತರಂಗ-ಬಹಿರಂಗ ಲಕ್ಷ್ಮಿಯರನ್ನು ವಿಶೇಷ ರೀತಿಯಿಂದ ಉಪಾಸನೆಯನ್ನು ಕೈಗೊಳ್ಳಲಾಗುತ್ತದೆ. ಇದರಲ್ಲಿ 2424 ಅರ್ಘ್ಯ 72 ಪೂರ್ಣಾರ್ಘ್ಯ 24 ಪೂಜೆಗಳು 24 ಅಕ್ಷರೀ ಮಂತ್ರ ಮಂಗಲಸೂತ್ರದಲ್ಲಿ 24 ಕಾವ್ಯ ಹಾಗೂ ಅಂತಿಯ ಜಯಮಾಲೆ ಚೂಲಿಕಯಲ್ಲಿ 24 ಕಾವ್ಯವಿದೆ. ಇದರಲ್ಲಿ ಒಟ್ಟು 24 ರ ಸಂಖ್ಯೆ 108 ಬಾರಿ ಬರುತ್ತದೆ.

ಮೊದಲು ಈ ಆರಾಧನೆಯನ್ನು ಮಾಡಲು ಮಾಘಮಾಸ ಮತ್ತು ಚೈತ್ರಮಾಸದಲ್ಲಿ ಮುಹೂರ್ತ ನೋಡಿದ್ದರು. ಕೊನೆಗೆ ಅಷ್ಟಾಹ್ನಿಕ ಪರ್ವದಲ್ಲಿ ಇದಕ್ಕೆ ಯೋಗ ಕೂಡಿ ಬಂದಿತು. ಹಾಗೆ ಇನ್ನೊಂದು ಆಶ್ಚರ್ಯದ ಸಂಗತಿ ಎಂದರೆ ಅರಿವಿಲ್ಲದೆ ಇದನ್ನು ಪ್ರಾರಂಭಿಸಿದ ತಾರೀಕ ಫೆಬ್ರವರಿ 24 ಪೂಜೆಗಳ ಸಂಖ್ಯೆಯು 24 ಆರಾಧನೆ ಮಾಡಲು ಕುಳಿತಿದ್ದರು. 48 ಜನ, ಇದು ಹೇಗೆ ದೈವಯೋಗದಿಂದ ಇವೆಲ್ಲ ಸಂಖ್ಯೆಗಳು ಸರಿಯಾಗಿದ್ದವು. ಇವನ್ನು ನೋಡುತ್ತಲೆ ನನ್ನಿಂದ ಉದ್ಗಾರ ಹೊರಟಿತು. ಅಹಾ ನೋಡಿರಿ ವಿಧಾನದ ಸಂಖ್ಯೆ 24, ಅದು 108 ಸಲ ಬರುತ್ತದೆ. ಅಲ್ಲದೆ ಗೊತ್ತಿಲ್ಲದೆ ಪ್ರಾರಂಭ ವಾಗಿರುವ ತಾರೀಕು 24 ಮತ್ತು ಭಾಗವಹಿಸುವರು 48ಜನ. ಇವೆಲ್ಲ ಯೋಗಾಯೋಗ ವೆಂದೆ. 24ರ ಸಂಖ್ಯೆ 3 ಬಾರಿ ಬಂದಿದ್ದು ನನಗಂತೂ ಬಹಳ ಬಹಳ ಖುಷಿ ಆಯಿತು. ಇದೊಂದು ಅದ್ಭುತಯೋಗ ಮಹತ್ವಪೂರ್ಣತೆ, ಅತಿಶಯತೆ ಎನ್ನಿಸಿತು. 24 ತೀರ್ಥಂಕರರಿಗೂ ಮತ್ತೆ ಮತ್ತೆ ನಮಸ್ಕರಿಸಿದೆ ಮಹಾ ಆರಾಧನೆಯು ಸಾಕ್ಷಾತ್ 'ಕಲ್ಪತರು' ಬಂದಂತೆಯೇ ಆಯಿತು.

ಚತುರ್ವಿಧ ವಿಧಾನ

ಈ ಆರಾಧನೆಯಲ್ಲಿ ಹೇಳಿರುವಂತೆ ಆರಾಧನೆಯ ಮಾಡಿಸುವವರು ಪ್ರತಿದಿನ ಬಡವರಿಗೆ ಊಟ, ಪಾತ್ರೆ, ಔಷದಿ ಹಾಗೆ ಧಾರ್ಮಿಕ ಪುಸ್ತಕಗಳನ್ನು ಹಂಚುತ್ತಿದ್ದರು. ಸುಮಾರು 500 ಜನರು ದಾನ ಪಡೆದರು. ಬೇಡಿದ್ದನ್ನೆಲ್ಲ ಕೊಡುತ್ತಾ ಚಕ್ರವರ್ತಿಗಳ ಮೂಲಕ ಜಿನೇಂದ್ರನ ಮಹಾಪೂಜೆಯನ್ನು ಮಾಡುವುದೇ ಕಲ್ಪಧ್ರುಮ ಆರಾಧನೆ ಯಾಗಿದೆ. ಆದರೆ ಇಂದು ಪಂಚಮಕಾಲದಲ್ಲಿ ಚಕ್ರವರ್ತಿಗಳಿಲ್ಲ ಆದರೂ ತೀರ್ಥಂಕರ ಭಗವಾನ್ ಪ್ರತಿಮೆಗಳಿಗೆ ಪಂಚಕಲ್ಯಾಣದ ಪ್ರತಿಷ್ಠೆ ಮಾಡುವಾಗ ಶ್ರಾವಕರೇ ಸೌಧರ್ಮ ಇಂದ್ರ ಮೊದಲಾದ ಸ್ಥಾನವನ್ನು ಗ್ರಹಿಸಿ ಪಂಚಕಲ್ಯಾಣ ಮಹೋತ್ಸವವನ್ನು ಆಚರಿಸಿ, ಯಥಾಶಕ್ತಿ ಆಹಾರ, ಔಷಧಿ, ಶಾಸ್ತ್ರ ಮತ್ತು ಅಭಯದಾನ ಮಾಡುತ್ತಾ ಆರಾಧನೆಗಳನ್ನು ಕೈಕೊಳ್ಳುತ್ತಿದ್ದಾರೆ.

ಮೊದಲಬಾರಿಗೆ ಹಸ್ತಿನಾಪುರದಲ್ಲಿ ನನ್ನ ಸಾನಿಧ್ಯದಲ್ಲೇ ಈ ಆರಾಧನೆಯು ನಡೆಯಿತು. ನಂತರ ಅಷ್ಟಾಹ್ನಿಕ ಪರ್ವದಲ್ಲಿ ಅಸ್ಸಾಂನ ತೇಜಪುರದಲ್ಲಿಯು ನಡೆದ ಸಮಾಚಾರ ಗೊತ್ತಾಯಿತು.

ಕಲ್ಪಧ್ರುಮ ಆರಾಧನೆಯ ವಿಷಯ

ನಂದೀಶ್ವರ ಭಕ್ತಿಯಲ್ಲಿ ಒಂದು ಶ್ಲೋಕ ಬಂದಿದೆ

ಜಿನಪತಯಸ್ತತ್ಪ್ರತಿಮಾಸ್ತದಾಲಯಾಸ್ತನ್ನಿಷದ್ಯಕಾಸ್ಥಾನಾನಿ।
ತೇ ತಾಶ್ಚ ತೇ ಚತಾನಿ ಚ ಭವಂತು ಭವಘಾತಹೇತವೋ ಭವ್ಯಾನಾಮ್॥36॥

ಜಿನೇಂದ್ರ ದೇವ

ತೀರ್ಥಂಕರ ಮಹಾಪುರುಷ, ಅವರ ಪ್ರತಿಮೆ ಅವರ ಮಂದಿರ ಅವರ ನಿರ್ವಾಣಕ್ಷೇತ್ರ ಅಥವಾ ಪಂಚಕಲ್ಯಾಣ ಕ್ಷೇತ್ರ ಇವು ನಾಲ್ಕು ವಂದನೀಯವಾದುದು. ತೀರ್ಥಸ್ಥಳಗಳಲ್ಲಿ ಭವ್ಯ ಜೀವಿಗಳಿಗೆ ಸಂಸಾರವನ್ನು ಕೊನೆಗೊಳಿಸುವುದಕ್ಕೆ ಕಾರಣವಾಗಿದೆ.

ನನಗಂತೂ ಇದು ಅತಿಶಯವಾದ ಪ್ರಿಯವಾದುದು ಜಿನರ ಪ್ರತಿಮೆ ಮಂದಿರ. ಅವರು ಸ್ಪರ್ಶಿಸಿದ ಕ್ಷೇತ್ರವೇ ಪೂಜ್ಯವಾದುದೆಂದರೆ ಸ್ವಯಂ ಜಿನೇಂದ್ರ ತೀರ್ಥಂಕರ ಭಗವಂತರು ಎಷ್ಟು ಪೂಜ್ಯರಾಗಿರಬಹುದು. ಪ್ರಪಂಚದಲ್ಲಿ ತೀರ್ಥಂಕರಿಗಿಂತ ಪೂಜ್ಯರಾದವರು ಯಾರೂ ಇಲ್ಲ. ಯಾರೂ ಆಗಲು ಸಾಧ್ಯವೂ ಇಲ್ಲ. ಇದೇ ಕಾರಣದಿಂದ ನಾವು ಈ ಆರಾಧನೆಯಲ್ಲಿ ಸಮವಸರಣ ವೈಭವದ ಜೊತೆ ತೀರ್ಥಂಕರ ದೇವರ ಪೂಜೆಯನ್ನು ರಚಿಸಿದ್ದೇವೆ. ಏಕೆಂದರೆ ಈ ಕಲ್ಪಧ್ರುಮ ಆರಾಧನೆಯು ಸಹ ಎಲ್ಲಾ ಆರಾಧನೆಗಳಿಗೆ ಶಿರೋಮಣಿಯಾಗಿದೆ. ಇದನ್ನು ಎಲ್ಲರಿಗಿಂತ ಮಹಾನ್ ಚಕ್ರವರ್ತಿಗಳು ಆಚರಿಸುತ್ತಾರೆ.

ಆರಾಧನೆಯ ರಚನೆಯ ಸಮಯದಲ್ಲಿ ಸ್ವಾಧ್ಯಾಯ ಮತ್ತು ಧ್ಯಾನ :- ಈ ಆರಾಧನೆಯ ರಚನೆಯ ಸಮಯದಲ್ಲಿ ತಿಲೋಯಪಣ್ಣತ್ತಿ ಮೊದಲಾದ ಗ್ರಂಥವನ್ನು ಸ್ವಾಧ್ಯಾಯ ಮಾಡುತ್ತಿದ್ದೆ ಹಾಗೆ ತನ್ಮಯತೆ ಹಾಗೂ ಏಕಾಗ್ರತೆಗಾಗಿ ಧರ್ಮಧ್ಯಾನವನ್ನು ಮಾಡುತ್ತಿದ್ದೆ. ನನ್ನ ಅನುಭವದಂತೆ ಹೀಗೆ ಯಾವುದಾದರೂ ಗ್ರಂಥ, ಕಾವ್ಯದ ರಚನೆಯ ಸಮಯದಲ್ಲಿ ಮನಸ್ಸಿಗೆ ಉಂಟಾಗುತ್ತಿದ್ದ ನಿರ್ಮಲ ಶಾಂತಿ ಇನ್ನಾವುದೇ ಸಮಯದಲ್ಲಿ ನನಗೆ ಕಂಡು ಬರುತ್ತಿರಲಿಲ್ಲ.

ಎರಡು ವರ್ಷದ ಹಿಂದೆ ಈ ಆರಾಧನೆಯ ಜಯಮಾಲೆಗಳನ್ನು ಕುಮಾರಿ ಮಾಧುರಿ ಶಾಸ್ತ್ರಿಯವರಿಂದ ಹಾಡಿಸಿ ಕ್ಯಾಸೆಟ್ ಮಾಡಿಸಲಾಗಿತ್ತು. ಸಾಯಂಕಾಲ ಸಾಮಾಯಿಕವಾದ ನಂತರ ಕೆಲವು ಸಲ ನಿದ್ದೆ ಬರದಿದ್ದಾಗ ಮಾಧುರಿ ಈ ಕ್ಯಾಸೆಟ್ ಹಾಕುತ್ತಿದ್ದಳು. ಅದನ್ನು ಕೇಳುತ್ತಾ ಕೇಳುತ್ತಾ ಭಗವಂತನ ಗುಣಗಳನ್ನು ನೆನಪಿಸಿಕೊಳ್ಳುತ್ತಾ ಹಾಗೇ ನಿದ್ದೆ ಹೋಗುತ್ತಿದ್ದೆ. ನನ್ನ ಆರೋಗ್ಯಕ್ಕೆ ಇದು ಔಷಧದಂತೆ ಕೆಲಸ ಮಾಡುತ್ತಿತ್ತು.

1985ರಲ್ಲಿ ನಾನು ಕಾಮಾಲೆಯಿಂದ ಬಳಲುತ್ತಿದ್ದಾಗ ಮೋತಿಚಂದ, ರವೀಂದ್ರ, ಮಾಧುರಿ, ಬೀನಾ ಆರ್ಯಿಕೆ ಶಿವಮತಿಯವರು ನನ್ನ ಹತ್ತಿರ ಕುಳಿತು ಇಂದ್ರಧ್ವಜ ಆರಾಧನೆಯ ಜಯಮಾಲೆಗಳನ್ನು ಚೆನ್ನಾಗಿ ಹಾಡುತ್ತಿದ್ದರು. ಈ ಜಯಮಾಲೆ ಕೇಳುತ್ತಲೇ ಎಲ್ಲಾ ನೋವುಗಳು ಮರೆಯಾಗಿ ಶಾಂತಿ ಸಿಗುತ್ತಿತ್ತು. ಇದನ್ನು ಶಬ್ದಗಳಿಂದ ನಾನು ವರ್ಣಿಸಲು ಅಶಕ್ತಳು.

ಈ ನನ್ನ ಅನುಭವವನ್ನು ನಾನು ನನ್ನ ಹತ್ತಿರ ಬರುತ್ತಿದ್ದ ಮಾನಸಿಕ ಅಶಾಂತಿಯಿಂದ ಪೀಡಿತಳಾದ ಶ್ರಾವಕ ಶ್ರಾವಕಿಯರಿಗೂ ಹೇಳುತ್ತಿದ್ದೆ. ನೋಡಿ ನೀವು ಆಧುನಿಕ ತಾಂತ್ರಿಕ ಉಪಕರಣವಾದ ಟೇಪ್‌ರೆಕಾರ್ಡಿನ ಉಪಯೋಗದಿಂದ ಧಾರ್ಮಿಕ ಸ್ತುತಿಗಳನ್ನು ಜಯಮಾಲೆಗಳನ್ನು ರೆಕಾರ್ಡ್ ಮಾಡಿಕೊಂಡು ರಾತ್ರಿ ನಿದ್ದೆ

ಬರದಿದ್ದಾಗ ಕೇಳಿರಿ. ನಿದ್ದೆ ಮಾತ್ರೆಗಿಂತ ಭಗವಂತನ ಕೀರ್ತನೆಯಲ್ಲಿ ಮನಸ್ಸು ತೊಡಗಿಸಿಕೊಳ್ಳಿ. ಇದು ಸರ್ವೋತ್ತಮ ಔಷಧ. ನನ್ನ ಅನುಭವವನ್ನು ನೀವು ಪಡೆಯಿರಿ ಎಂದು ಹೇಳುತ್ತಿದ್ದೆ.

ಈ ಆರಾಧನೆಯ ಕೆಲವು ಪಂಕ್ತಿಗಳು ಬಹಳ ಹೃದಯಸ್ಪರ್ಶಿಯಾಗಿದೆ.

ತೀನ ರತ್ನ ಕೆ ಹೇತು ಮೈ ನಂವೂ ಅನಂತೋ ಬಾರ ।
ಜ್ಞಾನಮತೀ ಕಿ ಯಾಚನಾ ಪೂರೋ ನಾಥ ಅಬಾರ ॥

ಹಾಗೇ

ಪಂಚ ಕಲ್ಯಾಣಕ ಪುಣ್ಯಮಯ ಹುಏ ಆಪ್ ಕೆ ನಾಥ ।
ಬಸ ಏಕಹಿ ಕಲ್ಯಾಣ ಮುರ್ಝು, ಕರ ದೀಜೆ ಹೇ ನಾಥ ॥

ಈ ವಿಧಾನವನ್ನು ಮಾಡುವವರು, ಓದುವವರು, ಕೇಳುವವರು ಭಗವಂತನಲ್ಲಿ ಭಕ್ತಿಯಲ್ಲಿ ತೇಲಿಹೋಗುತ್ತಾರೆ. ಇದು ಪ್ರತ್ಯಕ್ಷವಾಗಿ ಅನುಭವಿಸಬುಹುದು. ಇದನ್ನು ಮಾಡುವುದರಿಂದ, ಮಾಡಿಸುವುದರಿಂದ ಜೈನ ವಾಙ್ಮಯದ ಸ್ವಾಧ್ಯಾಯದ ಜೊತೆಗೆ ಮಹಾನ್ ಪುಣ್ಯದ ಸಂಚಯವು ಆಗುತ್ತದೆ. ಅಸ್ತು ಈ ವಿಧಾನದಲ್ಲಿ ಏನೋ ವಿಶೇಷತೆ ಇದೆ. ಇದೆಲ್ಲವು ಭಗವಂತನ ಭಕ್ತಿಯ ಅನುಗ್ರಹ.ಇದರಲ್ಲಿ ನನ್ನದೇನು ಇಲ್ಲ.

ಶ್ರೀಮಾನ ತುಂಗಾಚಾರ್ಯರು ಹೇಳಿದ್ದಾರೆ.

ಮತ್ತೇತಿ ನಾಥ, ತವ ಸಂಸ್ತವನಂ ಮಯೇದ-ಮಾರಭ್ಯತೇ ತನುಧಿಯಾಪಿ ತವ ಪ್ರಭಾವಾತ್।
ಚೇತೋ ಹರಿಷ್ಯತಿ ಸತಾಂ ನಲಿನೀದಲೇಷು ಮುಕ್ತಾ ಫಲದ್ಯುತಿ ಮುಪೈತಿ ನನೂದ ಬಿಂದುಃ ॥

ಅಂದರೆ ಹೇ ಸ್ವಾಮಿ ಅಲ್ಪ ಬುದ್ದಿಯವನಾದ ನಾನು ನಿಮ್ಮ ಸ್ತುತಿಯನ್ನು ಮಾಡುತ್ತಿದ್ದೇನೆ. ನಿಮ್ಮ ಪ್ರಭಾವವು ಸಜ್ಜನ ಪುರುಷರ ಚಿತ್ತವನ್ನು ಗೆಲ್ಲುತ್ತದೆ. ಕಮಲ ಪತ್ರದ ಮೇಲೆ ಬಿದ್ದ ಜಲಬಿಂದುವು ಮುತ್ತಿನಂತೆ ಕಾಣುವಂತೆ.

ಭಕ್ತಿರಸದಲ್ಲಿ ನನಗೆ ಬಹಳ ಆನಂದ ಸಿಗುತ್ತದೆ. ಆಗ ನಾನು ಯೋಚಿಸುತ್ತೇನೆ. ಆಚಾರ್ಯ ಜಿನಸೇನರು ಮಹಾಪುರಾಣದಲ್ಲಿ ಭಗವಂತನ ಭಕ್ತಿಯಲ್ಲಿ ತನ್ಮಯರಾಗಿ "ಸ್ವಯಂಭು ನಮಸ್ತುಭ್ಯಂ" ಎಂಬ ಶ್ಲೋಕದಿಂದ ಒಂದು ಸಾವಿರದ ಎಂಟು ನಾಮಗಳಿಂದ ಭಗವಂತನ ಸ್ತವನಮಾಡಿದ್ದರೆ, ಶ್ರೀ ಇಂದ್ರನಂದಿ ಆಚಾರ್ಯರು ಪ್ರತಿಷ್ಠಾ-ಪಾಠ ಮುಂತಾದ ಗ್ರಂಥಗಳನ್ನು ರಚಿಸಿದ್ದಾರೆ. ಶ್ರೀಪೂಜ್ಯಪಾದಸ್ವಾಮಿ, ಗುಣಭದ್ರಾಚಾರ್ಯರು ಶ್ರೀ ಅಭಯನಂದಿ ಸೂರಿ ಮುಂತಾದ ಅನೇಕ ಆಚಾರ್ಯರು ಜಿನೇಂದ್ರದೇವನ ಅಭಿಷೇಕ ವಿಧಿ-ಪಂಚಾಮೃತ ಅಭಿಷೇಕ ಪಾಠಗಳನ್ನು ರಚಿಸಿದ್ದಾರೆ. ಶ್ರೀ ಪದ್ಮನಂದಿ ಆಚಾರ್ಯರು ಸಹ ತಮ್ಮ ಪದ್ಮನಂದಿಪಂಚವಿಂಶತಿಕಾ ಗ್ರಂಥದಲ್ಲಿ ಜಿನೇಂದ್ರ ದೇವರ ಪೂಜೆಯ ಅಷ್ಟಕಗಳನ್ನು ಬರೆದಿದ್ದಾರೆ.

ನಿಜವಾಗಿಯೂ ಈಗ ಪಂಚಮ ಕಾಲದಲ್ಲಿ ವೀತರಾಗ ಚಾರಿತ್ರದವರು ಇದ್ದರೋ ಇಲ್ಲವೋ ಸರಾಗ(ಚರ್ಯ) ಚಾರಿತ್ರವುಳ್ಳ ಮುನಿಗಳಿದ್ದಾರೆ. ಇವರುಗಳಿಗೆ ಜಿನೇಂದ್ರ ದೇವರ ಭಕ್ತಿ ಮುಂತಾದ ಸರಾಗ ಕ್ರಿಯೆಗಳೇ ಪ್ರಧಾನವಾದುದು ಮತ್ತು ಜಿನೇಂದ್ರ ದೇವನ ಪೂಜೆ ಉಪದೇಶ ಕೊಡುವುದು ಪ್ರಧಾನವಾಗಿದೆ. ಶ್ರೀ ಕುಂದ ಕುಂದ ದೇವರು ಹೇಳಿದ್ದಾರೆ.

"ಚರಿಯಾ ಯ ಸರಾಗಾಣಾಂ ಜಿಣಿಂದ ಪೂಜೋವದೆಸೋ ಯ (ಪ್ರವಚನಸಾರ) ಈಗ ನಾನಾದರೊ ಆರ್ಯಿಕೆಯಾಗಿದ್ದೇನೆ. ಈ ಅವಸ್ಥೆಯಲ್ಲಿ ಸರಾಗಚರ್ಯೆ ಮತ್ತು ಜಿನಭಕ್ತಿ ಮುಂತಾದ ಕ್ರಿಯೆಗಳು ಆತ್ಮನ

ವಿಶುದ್ಧಿ ಮತ್ತು ಧರ್ಮಧ್ಯಾನದಲ್ಲಿ ಸ್ಥಿರತೆ ಉಂಟಾಗಲು ಕಾರಣವಾಗಿದೆ. ಹೀಗೆ ಯೋಚಿಸಿ ನಾನು ಸದಾ ಜಿನಭಕ್ತಿಯಲ್ಲೇ ತಲ್ಲೀನಳಾಗಿ ಭಕ್ತರಿಗೂ ಅದೇ ಪ್ರೇರಣೆಯನ್ನು ಕೊಡುತ್ತೇನೆ.

ನನ್ನ ಜೀವನದಲ್ಲಿ ನೋಡಿರುವ ಪ್ರಸಂಗಗಳಲ್ಲಿ ಅಧ್ಯಾತ್ಮವಾದಿಗಳು ಆತ್ಮನ ಚಿಂತೆಯನ್ನು ಮಾಡುತ್ತಾ ವ್ಯಾಧಿಯ ಸಂಕಟದ ಸಮಯದಲ್ಲಿ ಜಿನೇಂದ್ರ ದೇವನ ಭಕ್ತಿಯ ಆಸರೆ ಪಡೆಯದಿದ್ದರೆ ಪ್ರಾಯಶಃ ಭ್ರಷ್ಟರಾಗಿ ಕೊನೆಗೆ ಹಾಸ್ಪಿಟಲ್‌ನಲ್ಲಿ ಸತ್ತು ಸಲ್ಲೇಖನ ಮರಣದಿಂದಲೂ ವಂಚಿತರಾಗುತ್ತಾರೆ. ಆದರೆ ಯಾರು ಜಿನೇಂದ್ರರ ಭಕ್ತಿಯ ಆಸರೆಗೆ ಬರುತ್ತಾರೆ ಅವರು ಸಾವಿರಾರು ಸಂಕಟ ಬಂದರೂ ಬಿಡುಗಡೆ ಹೊಂದಿ ಮನುಷ್ಯ ಭವವನ್ನು ಸಫಲಗೊಳಿಸಿಕೊಳ್ಳುತ್ತಾರೆ.

ಯೋಗಾಸನ

ಛತ್ರಪುರದ ಫೂಲ್‌ಚಂದರು ಯೋಗ ಶಿಕ್ಷಕರು ಇವರಿಗೆ ನೂರಾರು ರೀತಿಯ ಯೋಗಾಸನ ಗೊತ್ತು. ಅವರು ಜಂಬೂದ್ವೀಪದಲ್ಲಿ ಹಲವು ದಿನ ತರಗತಿಯನ್ನು ನಡೆಸಿದರು. ಇಲ್ಲಿ ಬರುವ ಶ್ರಾವಕ, ಶ್ರಾವಕಿಯರಿಗೂ ಬಹಳ ಆಸಕ್ತಿ ಉಂಟಾಯಿತು. ಯಾವ ತೊಂದರೆಗೆ ಯಾವ ಯೋಗಾಸನ ಎಂದು ಹೇಳಿಕೊಡುತ್ತಿದ್ದರು.

ಸಾಮಾಯಿಕ ವಿಧಿಯಲ್ಲಿ ಯೋಗಾಸನ

ಜಯಧವಲ, ಆಚಾರಸಾರ, ಮೂಲಾಚಾರ, ಅನಗಾರ ಧರ್ಮಾಮೃತ ಮುಂತಾದ ಗ್ರಂಥಗಳಲ್ಲಿ ಸಾಧುಗಳಿಗಾಗಿ ದೇವವಂದನೆಯ ವರ್ಣನೆ ಬರುತ್ತದೆ. ಅದೇ ಸಾಮಾಯಿಕ ವಿಧಿಯಾಗಿದೆ. ಇದರಲ್ಲಿ ನಾಲ್ಕು ಪ್ರಕಾರದ ಮುದ್ರೆಗಳ ಪ್ರಯೋಗ ಬರುತ್ತದೆ. ಜಿನಮುದ್ರೆ, ಯೋಗಮುದ್ರೆ, ಮುಕ್ತಶಕ್ತಿಮುದ್ರೆ ಮತ್ತು ವಂದನಾಮುದ್ರೆ. ನಿಂತುಕೊಂಡು ಕಾಯೋತ್ಸರ್ಗ ಮಾಡುವುದೇ ಜಿನಮುದ್ರೆ. ಪದ್ಮಾಸನ ಅಥವಾ ಅರ್ಧಪದ್ಮಾಸನದಲ್ಲಿ ಕುಳಿತು ಅಥವಾ ಕಾಯೋತ್ಸರ್ಗ ಮಾಡುವುದೇ ಯೋಗಮುದ್ರೆ ಆಗುತ್ತದೆ. ಸಾಮಾಯಿಕ ದಂಡಕಥೋಸ್ಸಾಮಿ ಸ್ತವವನ್ನು ಓದುವ ಸಮಯದಲ್ಲಿ ಕೈಗಳನ್ನು ಮುಚ್ಚಿಕೊಂಡು ಜೋಡಿಸುವುದು, ಮುಕ್ತಶಕ್ತಿ ಮುದ್ರೆ ಆಗುತ್ತದೆ. ಮತ್ತು ಚೈತ್ಯಶಕ್ತಿ, ಪಂಚಗುರುಭಕ್ತಿ ಓದುವ ಸಮಯದಲ್ಲಿ ಮುಕುಲಿತ ಕೈಗಳನ್ನು ಜೋಡಿಸುವ ಮುದ್ರೆಗೆ ವಂದನಾಮುದ್ರೆ ಎಂದು ಕರೆಯುತ್ತಾರೆ.

ಒಂದು ಕಾಯೋತ್ಸರ್ಗವನ್ನು ಮಾಡಿದ ಮೇಲೆ ಕೃತಿಕರ್ಮ ವಿಧಿಯನ್ನು ಮಾಡಲಾಗುತ್ತದೆ. ಇದರಲ್ಲಿ ಹನ್ನೆರಡು ಆವರ್ತ, ನಾಲ್ಕು ಶಿರೋನತಿ ಮತ್ತು ಎರಡು ಪ್ರಣಾಮಗಳು ಇರುತ್ತವೆ. ಇದನ್ನು ಮಾಡುವುದೇ ಯೋಗಾಸನವಾಗುತ್ತದೆ. ಹೀಗೆ ಜೋಡಿಸಿದ ಕೈಗಳನ್ನು ಮೂರು ಬಾರಿ ತಿರುಗಿಸುವುದರಿಂದ ಮೂರು ಆವರ್ತವಾಗುತ್ತದೆ.

ಇವು ಕೈಗಳನ್ನು ತಿರುಗಿಸುವ ಆಸನಗಳಾಗಿವೆ. ತೆರೆದ ಕೈಗಳಲ್ಲಿ ಮುಖವನ್ನು ಇಟ್ಟುಕೊಂಡು ನಮಸ್ಕಾರ, ಶಿರೋನತಿ ಮಾಡುವುದರಿಂದ ಕುತ್ತಿಗೆ ಸರಾಗವಾಗುತ್ತದೆ. ಗವಾಸನದಿಂದ ಅಥವಾ ಮಂಡಿಊರಿ ಪಂಚಾಂಗ ನಮಸ್ಕಾರ ಮಾಡುವುದರಿಂದ ಸೊಂಟ, ಬೆನ್ನು ಹೊಟ್ಟೆಗೆ ವ್ಯಾಯಾಮವಾಗುತ್ತದೆ. ಇದರಿಂದ ಸೊಂಟ, ಬೆನ್ನಿನ ರೋಗಗಳು ಉಪಶಮನವಾಗುತ್ತವೆ. ಯೋಗ ಮುದ್ರೆಯಿಂದ ಕಾಯೋತ್ಸರ್ಗ ಮತ್ತು ಧ್ಯಾನಮಾಡುವುದರಿಂದ ಅಸ್ಥಿಬಂಧನ ಸರಿಯಾಗುತ್ತದೆ. ಮತ್ತು ಕರ್ಮಬಂಧನವು ಶಿಥಿಲವಾಗುತ್ತದೆ. ಹೀಗೆ ಜಿನಮುದ್ರೆಯಿಂದ

ಕಾಯೋತ್ಸರ್ಗ ಮಾಡುವುದರಿಂದ ಸಹ ಶರೀರದ ಅವಯವಗಳು ದೃಢವಾಗುತ್ತವೆ. ಮತ್ತು ಕರ್ಮಬಂಧನವು ಶಿಥಿಲವಾಗುತ್ತವೆ.

ಪೂಲ್‌ಚಂದ ಯೋಗಿಗಳಿಗೆ ಯಾವಾಗ ನಾನು ವಿಧಿವತ್ತಾದ ಸಾಮಾಯಿಕ ವಿಧಿಯನ್ನು ಹೇಳಿದೆನೊ ಆಗ ಅವರು ಕೂಡಾ ಯೋಗಾಸನದಲ್ಲಿ ಅದನ್ನು ಅಳವಡಿಸಿಕೊಂಡು ಶಾರೀರಿಕ ಸ್ವಾಸ್ಥ್ಯವನ್ನು ಸಿದ್ಧಮಾಡಿ ತೋರಿಸಿದರೊ ಈ ಕಾರಣದಿಂದಲೇ ನಾನು ಯಾವಾಗಲೂ ಹೇಳುತ್ತಲೇ ಇರುತ್ತೇನೆ, ಮುನಿ ಆರ್ಯಿಕೆಯರು ಕ್ಷುಲ್ಲಕ, ಕ್ಷುಲ್ಲಕಿಯರು ಒಂದು ವೇಳೆ ಪ್ರತಿದಿನ ಮೂರುಹೊತ್ತು ಸಾಮಾಯಿಕವನ್ನು ವಿಧಿವತ್ತಾಗಿ ಮಾಡಿದರೆ ನಿಸರ್ಗತಃ ಯೋಗಾಸನ ಸಹ ಆಗುತ್ತದೆ. ಹಾಗೆ ಸ್ವಾಸ್ಥ್ಯ ಲಾಭದ ಜೊತೆಗೆ ಕರ್ಮವೂ ಸಹ ಪತನವಾಗುತ್ತದೆ. ಇಂದು ಪ್ರಾಯಶಃ ಇದು ಕೃತಿಕರ್ಮವಿಧಿ ಸಾಮಾಯಿಕದಲ್ಲಿ ಲುಪ್ತವಾಗುತ್ತದೆ. ಆದರು ಸಹ ಆಗಮದ ಆಧಾರದಿಂದ ಈ ವಿಧಿಯನ್ನು ಎಲ್ಲ ಸಾಧುಗಳು ಆಚರಣೆಗೆ ತಂದುಕೊಳ್ಳಬೇಕು. ಪಂ. ಪನ್ನಾಲಾಲಜೀ ಸೋನಿಯವರು ಆಚಾರ್ಯ ಶ್ರೀ ಶಾಂತಿಸಾಗರ ಮಹಾರಾಜರ ಆಜ್ಞೆಯಂತೆ ಸಂಘದಲ್ಲಿರುವ ಬೇರೆ ಸಾಧುಗಳ ಪ್ರೇರಣೆಯಿಂದ "ಕ್ರಿಯಾ ಕಲಾಪ" ಎಂಬ ಹೆಸರಿನಲ್ಲಿ ಮುದ್ರಿತಸಿದ್ದಾರೆ. ಇದರಲ್ಲಿ ಸಹ ಸಾಮಾಯಿಕದ ವಿಧಿಗಳನ್ನು ಹೇಳಲಾಗಿದೆ. "ಸಾಮಾಯಿಕ" ಎಂಬ ಹೆಸರಿನ ಪುಸ್ತಕ ಅಚ್ಚಾಗಿದೆ. ಇದರ ಹಿಂದಿ ಪದ್ಯಾನುವಾದ ಸಹ "ಸಾಮಾಯಿಕ ಪಾಠ" ಎಂಬ ಹೆಸರಿನಿಂದ ಮುದ್ರಿತವಾಗಿದೆ. ಶ್ರಾವಕರು ಸಹ ಈ ವಿಧಿಯಿಂದಲೇ ಸಾಮಾಯಿಕ ಮಾಡಬೇಕು.

ಇಂದು ಮನುಷ್ಯರು ಹಲವಾರು ಕಾಯಿಲೆಗಳಿಂದ ನರಳುತ್ತಿದ್ದಾರೆ. ಶಾರೀರಿಕ ರೋಗಕ್ಕಿಂತ ಹೆಚ್ಚಾಗಿ ಮಾನಸಿಕ ಒತ್ತಡ ಜಾಸ್ತಿಯಾಗುತ್ತಿದೆ. ಈ ಮಾನಸಿಕ ಅಶಾಂತಿಯನ್ನು ದೂರಮಾಡುವುದಕ್ಕಾಗಿ ಮತ್ತು ಶಾರೀರಿಕ ಸ್ವಾಸ್ಥ್ಯ ಕಾಪಾಡಲು ಯೋಗಾಸನ ಬಹಳ ಉಪಯೋಗವಾಗಿದೆ ಜೊತೆಗೆ ಆತ್ಮದಶುದ್ಧಿ ಮತ್ತು ಸಿದ್ಧಿಗೋಸ್ಕರ ಪಾಪಬಂಧದಿಂದ ಪಾರಾಗಿ ಪುಣ್ಯಬಂಧದ ಸಂಚಯ ಮಾಡುವುದಕ್ಕಾಗಿ ದೇವಪೂಜೆ, ಗುರೂಪಾಸನೆ, ಮುಂತಾದ ಕ್ರಿಯೆಗಳು ಬಹಳ ಉಪಯೋಗ ಆಗಿದೆ.

ದಿಗಂಬರ ಮುನಿ ಮತ್ತು ಆರ್ಯಿಕೆಯರು ದಿನಕ್ಕೆ ಒಂದು ಬಾರಿ ಆಹಾರ ತೆಗೆದುಕೊಳ್ಳುತ್ತಾರೆ. ಅದೇ ಸಮಯದಲ್ಲಿ ನೀರು, ಹಾಲು, ಕಷಾಯ, ಹಣ್ಣಿನರಸ, ಎಲ್ಲವನ್ನು ತೆಗೆದುಕೊಳ್ಳಬೇಕು. ಮತ್ತೆ ಏನನ್ನು ತೆಗೆದುಕೊಳ್ಳುವಂತಿಲ್ಲ. ಕೆಲವೊಮ್ಮೆ ಅಂತರಾಯವಾಗಬಹುದು. ಆಗಾಗ್ಗೆ ಉಪವಾಸ, ಕೆಲವೊಮ್ಮೆ ಗ್ಯಾಸಿನ ತೊಂದರೆ, ಮಂಡಿ, ಸೊಂಟಗಳ ನೋವು ಬಾಧಿಸುವುದು. ಈ ಎಲ್ಲಾ ತೊಂದರೆಗಳಿಗಾಗಿ ಯೋಗಾಸನ ಬಹಳ ಅವಶ್ಯಕವಾಗಿದೆ. ಇದು ಒಂದು ರೀತಿ ಅಲ್ಪಸ್ವಲ್ಪ ವ್ಯಾಯಾಮವು ಆಗುತ್ತದೆ. ಇಂದು ಶ್ರಾವಕರಿಗೆ ಬಹುಶಃ ಶಾರೀರಿಕ ಶ್ರಮವಾಗುವ ಕೆಲಸಗಳೇ ಇಲ್ಲ. ನೀರು ತುಂಬುವುದು, ಹಿಟ್ಟು ಬೀಸುವುದು ಮುಂತಾದ ಕೆಲಸಗಳು ಇಲ್ಲ. ಹಾಗಾಗಿ ಶರೀರಕ್ಕೆ ಆರೋಗ್ಯ ಬರಬೇಕಾದರೆ ಯೋಗಾಸನ ಬರಬೇಕು. ಶೀತಕಾಲದಲ್ಲಿ ರೋಹತಕನಿಂದ ಎಸ್. ಕೆ. ಜೈನರನ್ನು ಸಹ ರವೀಂದ್ರಕುಮಾರನು ಕರೆಸಿದ್ದನು ಅವರು ಕೂಡ ಮೂರು ದಿನಗಳವರೆಗೆ ಯೋಗಾಸನದ ಶಿಕ್ಷಣವನ್ನು ಕೊಟ್ಟರು.

ಶ್ರೀ ವೃಷಭ ಜಯಂತಿ

ಚೈತ್ರ ಶುಕ್ಲ ನವಮಿಯಂದು ಭ. ವೃಷಭದೇವರ ಜನ್ಮದಿವಸವಾಗಿದೆ. ಕ್ಷೇತ್ರದಲ್ಲಿ 108 ಕಳಸಗಳಿಂದ ಭಗವಂತರಿಗೆ ಅಭಿಷೇಕ ಮುಂತಾದವುಗಳನ್ನು ಮಧ್ಯಾಹ್ನದಲ್ಲಿ ಪ್ರವಚನ ಮತ್ತು ಗೋಷ್ಠಿ ಮುಂತಾದವುಗಳನ್ನು ಆಯೋಜಿಸಿ ಸಂಕ್ಷೇಪವಾಗಿ ಭಗವಂತ ವೃಷಭನಾಥರ ಜಯಂತಿಯನ್ನು ಜೈನ ಸಮಾರಂಭವು ಎಲ್ಲಾ ಕಡೆಯಲ್ಲಿಯೂ

ದೊಡ್ಡದಾಗಿ ಆಚರಿಸಬೇಕು. ಏಕೆಂದರೆ ಭಗವಾನರು ಈ ಯುಗದ ಆದಿ ಪ್ರವರ್ತಕರು ಹಾಗೂ ಬೇರೆ ಜನರಲ್ಲಿ "ಭಗವಾನ ಮಹಾವೀರ" ರನ್ನು ಜೈನಧರ್ಮದ ಪ್ರವರ್ತಕರೆಂಬ ಭ್ರಾಂತಿಯನ್ನು ದೂರಮಾಡಿದಂತೆ ಆಗುತ್ತದೆ. ಹಾಗೆ "ಜೈನಧರ್ಮ ಅನಾದಿನಿಧನ" ಎಂಬ ಮಾತನ್ನು ಸಿದ್ಧಗೊಳಿಸಿದಂತೆ ಆಗುತ್ತದೆ.

ಉಪದೇಶ

ಚೈತ್ರವದಿ ದಶಮಿ ಬುಧವಾರ ಹೋಮ್ ಗಾರ್ಡನ ಜನರು ಇಲ್ಲಿಗೆ ಬಂದಿದ್ದರು. ಅವರಿಗೆ ಉಪದೇಶ ಮಾಡಿದಾಗ ಸ್ವಲ್ಪ ಜನರು ಮಾಂಸ, ಮದಿರೆ, ಮೊಟ್ಟೆ ಮುಂತಾದವುಗಳನ್ನು ತ್ಯಾಗ ಮಾಡುತ್ತಿದ್ದರು. ಕೆಲವರು ಕೆಲವು ತಿಂಗಳವರೆಗೆ ಕೆಲವರು ಸ್ವಲ್ಪ ದಿನಗಳ ವರೆಗೆ ತ್ಯಾಗಮಾಡುತ್ತಿದ್ದರು. ಹೀಗೆ ಜಂಬೂದ್ವೀಪಕ್ಕೆ ಬರುವ ಜೈನರಿಗೂ ಉಪದೇಶಮಾಡಿ ಅಭಕ್ಷ್ಯ ಭಕ್ಷಣವನ್ನು ದೂರಮಾಡುವ ಕೆಲಸ ನಡೆಯುತ್ತಿತ್ತು. ಹೀಗೆ ಅಜೈನರ ಮೂಲಕ ಮಾಂಸ, ಮದ್ಯವನ್ನು ತ್ಯಾಗಮಾಡಿಸಿದಾಗ ಅತ್ಯಂತ ಹೆಚ್ಚಿನ ಸಂತೋಷವಾಗುತ್ತಿತ್ತು. ಇಲ್ಲಿಗೆ ಪ್ರತಿದಿನ ಹಲವಾರು ಅಜೈನರೇ ಹಲವಾರು ಸಮಸ್ಯೆಗಳನ್ನು ತೆಗೆದುಕೊಂಡು ನನ್ನ ಹತ್ತಿರಕ್ಕೆ ಪರಿಹಾರಕ್ಕೆ ಬರುತ್ತಿರುತ್ತಾರೆ. ಅವರಿಗೆ ಮಾಂಸ ಮದ್ಯ ಮೊಟ್ಟೆ ತಿನ್ನುವುದನ್ನು ತ್ಯಾಗಮಾಡಿಸಿ "ಓಂ ನಮಃ" ಎಂಬ ಚಿಕ್ಕಮಂತ್ರವನ್ನು ಕೊಟ್ಟು ಕಳುಹಿಸುತ್ತೇವೆ. ಇದನ್ನು ಪಡೆದ ಜನ ಮತ್ತೆ ಬಂದು - ಮಾತಾಜೀ ನಿಮ್ಮಿಂದ ಪಡೆದ ಮಂತ್ರ ಹಾಗೂ ನಿಮ್ಮ ಆಶೀರ್ವಾದದಿಂದ ನನ್ನ ಕಾರ್ಯ ಆಯಿತು. ನನ್ನ ಆರೋಗ್ಯ ಸುಧಾರಿಸಿತು ಎಂದು ತಮ್ಮ ಕೃತಜ್ಞತೆ ಸೂಚಿಸಿ ಹೋಗುತ್ತಾರೆ.

ನಿಜವಾಗಿಯೂ ಮಧು, ಮಧ್ಯ, ಮಾಂಸವನ್ನು ತ್ಯಾಗಮಾಡಿಸುವುದೇ ಎಲ್ಲಕ್ಕಿಂತ ದೊಡ್ಡ ಧರ್ಮಲಾಭವಾಗಿದೆ. ಉತ್ತರ ಪುರಾಣದಲ್ಲಿ ಶ್ರೀ ಗುಣಭದ್ರಾಚಾರ್ಯರು ಪುರೂರವ ಬಿಲ್ಲನಿಗೆ "ಧರ್ಮಲಾಭೋಸ್ತು" ಆಶೀರ್ವಾದವನ್ನು ಕೊಟ್ಟು ಮೂರು ಮಕಾರಗಳನ್ನು ತ್ಯಾಗ ಮಾಡಿಸಿದರು. ಇದೇ ಒಂದು ದೊಡ್ಡ ಧರ್ಮಲಾಭವಾಗಿದೆ.

ಅಜೈನರಿಗೆ ಇಂತಹದನ್ನು ತ್ಯಾಗ ಮಾಡಿಸುವುದು ಆಶ್ಚರ್ಯಕಾರಿ ಅಲ್ಲ. ಆದರೆ ಜೈನರಿಗೆ ಮಂತ್ರ ತಂತ್ರಗಳನ್ನು ಹೇಳಿಕೊಡುವ ಸಮಯದಲ್ಲಿ ಅವರು ವ್ಯಸನಿಗಳಾಗಿದ್ದಾರೆ ಎಂದು ತಿಳಿದಾಗ ಆಶ್ಚರ್ಯದ ಜೊತೆಗೆ ಹೃದಯಕ್ಕೆ ಬಹಳ ನೋವಾಗುತ್ತದೆ. ಮನದಲ್ಲಿ ಪುಣ್ಯದಿಂದ ಮನುಷ್ಯಭವ ಅದೂ ಜೈನಧರ್ಮವನ್ನು ಪಡೆಯಬೇಕಾದರೆ ಪೂರ್ವಜನ್ಮದ ಪುಣ್ಯವೇ ಕಾರಣವಾಗಿದೆ. ಅಂತಹುದರಲ್ಲಿ ಈ ಜನ್ಮದಲ್ಲಿ ಅಭಕ್ಷ್ಯದಿಂದ ಪಾಪಕರ್ಮ ಮಾಡಿ ಪುನಃ ದುರ್ಗತಿಗೆ ಕಾರಣವಾಗುತ್ತಿದ್ದರಲ್ಲ. ಜೈನ ಬಂಧುಗಳೇ ದುರ್ವ್ಯಸನಗಳನ್ನು ತ್ಯಜಿಸಿರಿ. ಧರ್ಮವನ್ನು ಅರಿಯಿರಿ. ಈ ಧರ್ಮದಲ್ಲಿ ಇದ್ದು ತ್ಯಜಿಸದಿದ್ದರೆ ಅವರಂತಹ ಅಭಾಗ್ಯರು ಬೇರೆ ಇಲ್ಲ.

ವಿಕ್ರಮ ಸಂವತ್ಸರ ಹೊಸವರ್ಷ

1988ರ ಮಾರ್ಚ್ 18ರಂದು ಚೈತ್ರ ಶುಕ್ಲ ಪಾಡ್ಯದ ದಿನ ವಿಕ್ರಮ ಸಂವತ್ 2045ರ ಸೋಲಾಪುರದ ಕಾಂತಿಲಾಲ ಮೋಹೋತರವರು ಶಾಂತಿ ಆರಾಧನೆಯನ್ನು ಮಾಡಿಸಿದರು. ಮಹಾರಾಷ್ಟ್ರದಲ್ಲಿ ವಿಕ್ರಮ. ಸಂವತ್ಸರ ಪ್ರಥಮ ದಿನವನ್ನು "ಗುಡೀ ಪಾಡವಾ" ಎಂದು ಕರೆಯುತ್ತಾರೆ. ಮೈಸೂರು ಪ್ರಾಂತ್ಯದಲ್ಲಿ "ಯುಗಾದಿಹಬ್ಬ" ಎಂದು ಕರೆಯುತ್ತಾರೆ. ಹೀಗೆ ವರ್ಷದ ಪ್ರಥಮ ದಿನದಂದು ಧರ್ಮದ ಅನುಷ್ಠಾನ ಕೈಕೊಳ್ಳಬೇಕು. ಜೈನ ಸಮಾಜದಲ್ಲಿ ದೀಪಾವಳಿಯ ಮಾರನೆಯದಿನ ಹೊಸವರ್ಷ ಇದು ವಿಕ್ರಮ ಸಂವತ್ಸರಿಗಿಂತ ಪ್ರಾಚೀನವಾದುದು.

ಮಹಾವೀರ ಜಯಂತಿ

ಬೆಳಗ್ಗೆ ಪ್ರಭಾತ ಫೇರಿ ಹೊರಡುತ್ತದೆ. ಭ. ಮಹಾವೀರ ಸ್ವಾಮಿಗೆ 108 ಕಳಸಗಳಿಂದ ಅಭಿಷೇಕ. ಮಧ್ಯಾಹ್ನದಲ್ಲಿ ಸಭೆಯನ್ನು ಆಯೋಜಿಸಲಾಗುತ್ತದೆ. ಯಾತ್ರಿಗಳಿಗಾಗಿ ಉಪದೇಶದ ಕಾರ್ಯಕ್ರಮ ನಡೆಯುತ್ತದೆ. ಇದಲ್ಲದೆ ವಿಶೇಷವಾದ ಧರ್ಮಪ್ರಭಾವನೆಯ ಯಾವ ಆಯೋಜನೆಯು ಇಲ್ಲ. ಚೈತ್ರಮಾಸದಲ್ಲಿ ಮಹಾಪುರುಷರ ಜನ್ಮವಾಗಿರುವುದರಿಂದ ಇದೊಂದು ಮಾಸ ವಿಶೇಷವಾಗಿದೆ. ಚೈತ್ರಮಾಸದ ನವಮಿಯಂದು ಭ. ಋಷಭದೇವರ ಜನ್ಮ ಮತ್ತು ತಪಕಲ್ಯಾಣವು ಆಗಿದೆ. ನವಮಿಯಂದೇ ಭರತ ಚಕ್ರವರ್ತಿಯ ಜನ್ಮವು ಆಗಿದೆ. ಚೈತ್ರ ಶುದ್ಧಿ ನವಮಿಯಿಂದ ರಾಮಚಂದ್ರರ ಜನ್ಮವಾಗಿ ರಾಮನವಮಿ ಎಂದು ಜಗತ್ ಪ್ರಸಿದ್ಧಿ ಪಡೆದಿದೆ. ಅದೇ ಚೈತ್ರಮಾಸದ ತ್ರಯೋದಶಿಯಂದು ಮಹಾವೀರ ಸ್ವಾಮಿಗಳ ಜನ್ಮದಿವು ಆಗಿದೆ. ಇದೇ ತಿಂಗಳು ಪೂರ್ಣಿಮೆಯಂದು ಮಹಾಪುರುಷ ಹನುಮಂತನ ಜನ್ಮತಿಥಿಯು ಆಗಿದೆ.

ಇಂದು ಇಡೀ ಭಾರತ ದೇಶದಲ್ಲೇ ದಿಗಂಬರ, ಶ್ವೇತಾಂಬರ, ಆದಿಯಾಗಿ ನಾಲ್ಕು ಸಂಪ್ರದಾಯದವರು ಮಹಾವೀರ ಜಯಂತಿಯ ಮಹೋತ್ಸವವನ್ನು ವೈಭವಪೂರ್ಣವಾಗಿ ಆಚರಿಸುತ್ತಾರೆ. ಅದು ಸರಿಯೇ ಏಕೆಂದರೆ ನಾವೆಲ್ಲರು ಮಹಾವೀರರ ಶಾಸನಕಾಲದಲ್ಲೇ ಇದ್ದೇವೆ.

ಇಂದು ಬಹಳಷ್ಟು ಜನಕ್ಕೆ ಗೌತಮಬುದ್ಧನಿಂದ ಬೌದ್ಧಧರ್ಮ, ಮಹಾವೀರರಿಂದ ಜೈನಧರ್ಮದ ಸ್ಥಾಪನೆಯಾಗಿದೆ ಎಂದೇ ತಿಳಿದಿದ್ದಾರೆ. ಒಂದು ವೇಳೆ ನಾವು 24 ತೀರ್ಥಂಕರರ ಜನ್ಮ ಜಯಂತಿಯನ್ನು ಆಚರಿಸಲು ಆಗದಿದ್ದರು ಕಡೇಪಕ್ಷ ಪ್ರಥಮ ತೀರ್ಥಂಕರ ವೃಷಭ ದೇವರ ಜನ್ಮಜಯಂತಿ ಮತ್ತು ಮಾಘಮಾಸದ ಚತುರ್ದಶಿಯಂದು ನಿರ್ವಾಣ ಮಹೋತ್ಸವವನ್ನಾದರೂ ಆಚರಿಸಲೇಬೇಕು.

ರಥಯಾತ್ರೆ, ಸಭೆ, ಪ್ರವಚನ, ಧಾರ್ಮಿಕ ನಾಟಕ ಮೊದಲಾದ ಮಾಧ್ಯಮಗಳಿಂದ ಜೈನರನ್ನು, ಅಜೈನರನ್ನು ಧರ್ಮದ ಕಡೆಗೆ ಸೆಳೆಯುತ್ತಾ ಮುಂದಿನ ಪೀಳಿಗೆಗೆ ಮಾರ್ಗದರ್ಶನವನ್ನು ಮಾಡುವ ಧರ್ಮದ ಬೀಜವನ್ನು ಬಿತ್ತುವ ಕಾರ್ಯವನ್ನು ಈ ಕಾರ್ಯಗಳು ಮಾಡುತ್ತವೆ.

ಭಿಂಡರನಲ್ಲಿ ಕಲ್ಪದ್ರುಮ ಆರಾಧನೆ

ನಿರ್ಮಲಕುಮಾರ ಸೇಠರು ಭಿಂಡರನಲ್ಲಿ ಅಜಿತಸಾಗರರ ಸಾನಿಧ್ಯದಲ್ಲಿ ವೈಭವದಿಂದ ಕಲ್ಪದ್ರುಮ ಆರಾಧನೆಯನ್ನು 1988ರ ಏಪ್ರಿಲ್ 8ರಂದು ಆಚರಿಸಿದರು. ಅಲ್ಲೇ ಇದ್ದ ಆರ್ಯಿಕೆ ವಿಶುದ್ಧಮತಿಯರ ನೇತೃತ್ವದಲ್ಲಿ ಪಂ. ಹಂಸಮುಖಜೀ ಯವರ ಮಾರ್ಗದರ್ಶನದಲ್ಲಿ ಸಮವಸರಣದ ಸುಂದರ ರಚನೆಯು ಆಗಿತ್ತು. ಹಸ್ತಿನಾಪುರದಿಂದಲೇ ಗಂಧಕುಟಿ, ಧರ್ಮಚಕ್ರ ಮುಂತಾದ ಧಾತುವಿನಿಂದ ಮಾಡಿಸಿದ್ದನ್ನು ಕಳುಹಿಸಲಾಗಿತ್ತು. ಮೊದಲು ಸೇಠರು ಇಲ್ಲೇ ಮಾಡಬೇಕೆಂದು ನಿಶ್ಚಯಿಸಿದರು. ಆದರೆ ಕಾರಣಾಂತರದಿಂದ ನಾನೇ ಒಪ್ಪಿಗೆ ಕೊಟ್ಟಿರಲಿಲ್ಲ. ಅಲ್ಲದೆ ಅಜಿತಸಾಗರರ ಸಾನಿಧ್ಯದಲ್ಲೇ ಮಾಡಲು ಸೂಚಿಸಿದ್ದೆ. ಸೇಠಜೀಯವರು ಆಗ್ರಹಮಾಡಿ ಕು. ಮಾಧುರಿ ಮತ್ತು ರವೀಂದ್ರರನ್ನು ಅಲ್ಲಿಗೆ ಕರೆಸಿಕೊಂಡಿದ್ದರು. ಇದು ಅಲ್ಲಿ ನಡೆಯುತ್ತಿರುವ 3ನೇಯ ಆರಾಧನೆ ಆಗಿತ್ತು. ಮೊದಲು 24ರ ಫೆಬ್ರುವರಿಯಂದು. ಹಸ್ತಿನಾಪುರದಲ್ಲಿ ಎರಡನೆಯದಾಗಿ ಅಸ್ಸಾಂ ತೇಜಪುರದಲ್ಲಿ 24 ಫೆಬ್ರುವರಿಯಂದೇ ನಡೆದಿತ್ತು.

ಅಲ್ಲಿಯು ಆರ್ಯಿಕೆಯರನ್ನು ಪೂಜಿಸುವ ಬಗ್ಗೆ ಮತ್ತೆ ಗೊಂದಲವೆದ್ದಿತು. ಪಂ. ಮೋತಿಲಾಲರು ಸಮಾಧಾನ ಪಡಿಸಿದರು. ಯಾವಾಗ ಆರ್ಯಿಕೆಯರು ಉಪಚಾರದಿಂದ ಮಹಾವ್ರತಿಗಳಾಗುತ್ತಾರೆ ಮತ್ತು ಆಹಾರದ ಸಮಯದಲ್ಲಿ ಅವರನ್ನು ಅಷ್ಟದ್ರವ್ಯಗಳಿಂದ ಪೂಜಿಸಲಾಗುತ್ತದೆ. ಅಂತಹದರಲ್ಲಿ ಪೂಜೆ ಮಾಡಲು ಆತಂಕ ಪಡಬೇಕು. ಈ ವಿಧಾನದಲ್ಲಿ ಬ್ರಾಹ್ಮಿ, ಸುಂದರಿಯರಿಂದ ಹಿಡಿದು ಚಂದನ ಸಂಘ-ದ ಆರ್ಯಿಕೆಯರವರೆಗೂ 24 ತೀರ್ಥಂಕರರ ಸಮವಶರಣದಲ್ಲಿರುವ ಎಲ್ಲಾ ಆರ್ಯಿಕೆಯರಿಗೂ ಪೂಜೆ ಸಲ್ಲಿಸಲಾಯಿತು.

ಅಕ್ಷಯತೃತೀಯ ಜಾತ್ರೆ

ಈ ದಿನದಂದು ಹಸ್ತಿನಾಪುರದಲ್ಲಿ ಜಾತ್ರೆ ನಡೆಯುತ್ತದೆ. ಅದರಂತೆ ಈ ವರ್ಷವು ನಡೆಯಿತು. ಶ್ವೇತಾಂಬರರು ವರ್ಷಾಕಾಲ ತಪಸ್ಸು ಮಾಡಿ ಪಾರಣೆ ಮಾಡಿದ ಕಾರಣ ದೊಡ್ಡದಾಗಿ ಜಾತ್ರೆಯನ್ನು ಮಾಡುತ್ತಾರೆ. ನನಗೆ ಮೊದಲಿನಿಂದಲೂ "ಹಸ್ತಿನಾಪುರದಲ್ಲಿ ಭಂವೃಷಭದೇವರ ಪ್ರಥಮ ಆಹಾರವಾದುದರಿಂದಲೇ ಪುಣ್ಯ ಕ್ಷೇತ್ರದ ಹೆಸರು ಪಡೆದಿದೆ. ಇದರಿಂದಾಗಿ ಅಕ್ಷಯ ತೃತೀಯ ಮಹೋತ್ಸವವನ್ನು ಇಲ್ಲಿ ವಿಜೃಂಭಣೆಯಿಂದ ಆಚರಿಸಬೇಕು ಎಂದು ಆಸೆ. ಆದರೆ ದಿಗಂಬರ ಜೈನರಿಗೆ ಆಸಕ್ತಿ ಬಂದಿಲ್ಲ. ಚಿಕ್ಕದಾಗಿ ಆಚರಿಸುತ್ತಾರೆ. ಮುಂದೆ ಭವಿಷ್ಯದಲ್ಲಾದರು ಈ ಪರ್ವವನ್ನು ಜೈನಸಮಾಜದಿಂದ ಆಚರಿಸಲಿ ಎಂದು ಆಶೀರ್ವದಿಸುತ್ತೇನೆ.

ವೈಶಾಖ ಶುಕ್ಲ ಸಪ್ತಮಿಯಂದು ಸುಮೇರು ಪ್ರತಿಷ್ಠಾಪನೆ. ತ್ರಯೋದಶಿಯಂದು ಜಂಬೂದ್ವೀಪ ಪ್ರತಿಷ್ಠಾಪನೆಯನ್ನು ಸಂಕ್ಷೇಪವಾಗಿ ಆಚರಿಸಲಾಗುತ್ತದೆ. ಎಲ್ಲಾ ಮೂರ್ತಿಗಳಿಗೂ ಅಭಿಷೇಕ ಮಧ್ಯಾಹ್ನದಲ್ಲಿ ಸಭೆಯನ್ನು ಆಯೋಜಿಸಿ ರಾತ್ರಿ ಆರತಿಯ ಕಾರ್ಯಕ್ರಮ ನಡೆಯುತ್ತದೆ.

೯೪

ಆಚಾರ್ಯ ಕಲ್ಪಶ್ರೀ ಶ್ರುತಸಾಗರರ ಸಮಾಧಿ

ವೈಶಾಖ ಶುಕ್ಲ ಏಪ್ರಿಲ್ 19ರಂದು ಆಚಾರ್ಯ ಕಲ್ಪ ಮುನಿಶ್ರೀ ಶ್ರುತಸಾಗರರು ಅನ್ನವನ್ನು ತ್ಯಾಗಮಾಡಿದರು. 28ರಂದು ಇದ್ದಕ್ಕಿದ್ದಂತೆ ಚತುರ್ವಿಧ ಆಹಾರವನ್ನು ತ್ಯಾಗಮಾಡಿದರು. ಇಲ್ಲಿಂದ ರವೀಂದ್ರ, ಮಾಧುರಿ ಹಾಗೇ ಕೆಲವು ಶ್ರಾವಕರು ಇಲ್ಲಿಂದ ರಾಜಸ್ಥಾನದ ಲೂಣವಾಗೆ ಹೊರಟರು. ಅಲ್ಲಿ ಸ್ವಾಧ್ಯಾಯವನ್ನು ನಿಲ್ಲಿಸಿ ಮೂರು ದಿನಗಳ ವರೆಗೆ ಣಮೋಕಾರ ಮಂತ್ರವನ್ನು ಜಪಿಸುತ್ತಿದ್ದರು.

1988ರ ಮೇ 6ರಂದು ಶುಕ್ರವಾರ ಬೆಳಗ್ಗೆ 9ಗಂಟೆಗೆ ಪೂಜ್ಯಶ್ರೀಯವರು ಮಹಾಮಂತ್ರವನ್ನು ಸ್ಮರಣೆ ಮಾಡುತ್ತಲೇ ತಮ್ಮ ನಶ್ವರ ಶರೀರವನ್ನು ತ್ಯಾಗಮಾಡಿದರು. ಈ ಸಮಾಚಾರ ಕೇಳುತ್ತಲೇ ನಾವೆಲ್ಲ ಭಕ್ತಿ ಪಾಠವನ್ನು ಹೇಳಿ, ಶ್ರದ್ಧಾಂಜಲಿ ಅರ್ಪಿಸಿದೆವು. ರವೀಂದ್ರ ಬಂದು ಅತ್ಯಂತ ಶಾಂತಿ ಪೂರ್ವಕವಾಗಿ ಸಮಾಧಿ ಮರಣವು ಉಂಟಾಯಿತು ಎಂದು ಹೇಳಿದನು.

ಮುನಿಗಳು ಹನ್ನೆರಡು ವರ್ಷಗಳ ಸಲ್ಲೇಖನವನ್ನು ಕೈಕೊಂಡಿದ್ದರು. ಅವಧಿ ಮುಗಿಯುತ್ತಲೇ ತಕ್ಷಣ ಅನ್ನಪಾನಾದಿ ಚತುರ್ವಿದ ಆಹಾರವನ್ನು ತ್ಯಾಗ ಮಾಡಿದರು. ಆಚಾರ್ಯರತ್ನ ಶ್ರೀ ದೇಶಭೂಷಣರು

ಹೇಳುತ್ತಿದ್ದರು. ಆಯಸ್ಸು 12 ಮಾತ್ರ ಎಂದು ನಿಶ್ಚಯಿಸಿದ ಹೊರತು ಹನ್ನೆರಡು ವರ್ಷಗಳ ಸಲ್ಲೇಖನವನ್ನು ತೆಗೆದುಕೊಳ್ಳಬಾರದು.

ಮಹಾನ್ ಗ್ರಂಥ ಆಚಾರಸಾರದಲ್ಲಿ ಸಿದ್ಧಾಂತಚಕ್ರವರ್ತಿ ಶ್ರೀ ವೀರನಂದಿ ಆಚಾರ್ಯರು ಹೇಳಿದ್ದಾರೆ.

ಜ್ಯೋತಿಃ ಶಾಸ್ತ್ರವಿನೂತ ಜಾತಕಮತಾನ್ನಾನಾನಿಮಿತ್ತಕ್ಷಣಾತ್।
ಪ್ರಶ್ನಾಚ್ಚಾ ಪಚಯಗ್ರಹಾವಲಿಬಲಕ್ಷೀಣತ್ವಸಂಪ್ರೇಕ್ಷಣಾತ್॥
ಪ್ರಶ್ನಸ್ಯಾಕ್ಷರ ಲಕ್ಷಣೇ ಕ್ಷಣವಶಾತ್ ಕಾಲಾಗಮಾಸ್ತ್ಯಾಯುಷೇ ।
ಮಾನಂ ದ್ವಾದಶಾವರ್ಷೇ ಸಂಮಿತಮತೋ ಹೀನಂ ಚ ನಿಶ್ಚಿತ್ಯ ಸಃ॥3॥[೧]

ಅಂದರೆ ಜ್ಯೋತಿಷ್ಯ ಶಾಸ್ತ್ರದಿಂದ ಜಾತಕದಲ್ಲಿ ಹೇಳಿರುವ ಸಂಕೇತಗಳಿಂದ ನಾನಾ ನಿಮಿತ್ತಗಳು ಲಕ್ಷಣಗಳಿಂದಲೂ ಪ್ರಶ್ನೆಗಳಿಂದಲೂ ಧ್ವಜಾದಿ ಸಮೂಹ ಗ್ರಹಾವಲಿಗಳ ಬಲದಿಂದ ಮುಂತಾವುಗಳಿಂದ ಮುಮುಕ್ಷು ಆಚಾರ್ಯರು ತಮ್ಮ ಆಯಸ್ಸು ಹನ್ನೆರಡು ವರ್ಷ ಅಥವಾ ಅದಕ್ಕಿಂತ ಕಡಿಮೆ ಎಂದು ತಿಳಿದಾಗ ಈ ಸಲ್ಲೇಖನವನ್ನು ಗ್ರಹಣೆ ಮಾಡಬೇಕು ಎಂದು ಹೇಳಿದೆ.

ವರ್ತಮಾನದಲ್ಲಿ ಮುನಿ ಶ್ರೀ ಸುಪಾರ್ಶ್ವಸಾಗರರು 1966ರಲ್ಲಿ ಉದಯಪುರದಲ್ಲಿ ಆಚಾರ್ಯ ಶ್ರೀ ಶಿವಸಾಗರರ ಬಳಿ ಇಂಹದೇ ವೀರ ಮರಣವನ್ನು ಪಡೆದರು. ಆಚಾರ್ಯಕಲ್ಪ ಶ್ರೀ ಶ್ರುತಸಾಗರರು ಸಲ್ಲೇಖನ ಗ್ರಹಣೆ ಮಾಡಿದಾಗ ಮುನಿಶ್ರೀ ಸುಪಾರ್ಶ್ವಸಾಗರರು ಅಸ್ವಸ್ಥರಾಗಿದ್ದರು. ಅವರಿಗೆ ಶರೀರವನ್ನು ಪೋಷಿಸುವ ಬಯಕೆ ಇರಲಿಲ್ಲ. ಆದರೆ ಅವಧಿ ಮುಗಿದ ಮೇಲೆ ಇನ್ನೂ ಸ್ವಲ್ಪ ಒಂದು ವರ್ಷವೇ ಬದುಕಬಹುದಾದ ಶಕ್ತಿ ಬಂದಿತು. ಆದ್ದರಿಂದಲೇ ನಾನು ಅಂದುಕೊಂಡೆ. ಗುರುದೇವ ವೀರಸಾಗರರು ಹಾಗೂ ಆಚಾರ್ಯ ಧರ್ಮಸಾಗರರು 12ವರ್ಷಗಳ ಸಲ್ಲೇಖನವನ್ನು ತೆಗೆದುಕೊಳ್ಳಲಿಲ್ಲ. ಆದರೂ ಶರೀರ ಶಿಥಿಲವಾಗುತ್ತಿದೆ ಎಂಬ ಅನುಭವ ಬರುತ್ತಲೇ ಕ್ರಮ ಕ್ರಮವಾಗಿ ಆಹಾರ ತ್ಯಾಗ ಮಾಡುತ್ತಾ ವಿಧಿವತ್ತಾಗಿ ಪ್ರತ್ಯಾಖ್ಯಾನ ಮರಣವನ್ನು ಕೈಗೊಂಡು ಅತ್ಯಂತ ನೆಮ್ಮದಿಯಿಂದ ಸಮಾಧಿ ಮರಣವನ್ನು ಹೊಂದಿದರು-ಗುರುದೇವ ವೀರಸಾಗರರ ಸಮಾಧಿಯ ಸಮಯದಲ್ಲಿ ನಾನು ಸಂಘದಲ್ಲೇ ಇದ್ದೆ. ಆಚಾರ್ಯ ಧರ್ಮಸಾಗರರ ದರ್ಶನಕ್ಕೆ ರವೀಂದ್ರ-ಮಾಧುರಿ ಮೊದಲಾದವರು ಹೋಗಿದ್ದರು.

ಆಚಾರ್ಯ ಶ್ರೀ ಶಾಂತಿಸಾಗರರನ್ನುಒಬ್ಬ ವಿವೇಕಿ ಶ್ರಾವಕರು ಹಲವಾರು ಸಲ ಸಲ್ಲೇಖನ ತೆಗೆದುಕೊಳ್ಳಲು ಕೇಳಿಕೊಂಡರು. ಆಗ ಆಚಾರ್ಯರು ಬಾಬಾ ನನಗೆ ಆಗಮದ ಜ್ಞಾನವಿದೆ. ನಾನು ಸಲ್ಲೇಖನಕ್ಕೆ ಶರೀರ ಯೋಗ್ಯವೆಂದು ತಿಳಿದಾಗ ತೆಗೆದುಕೊಳ್ಳುತ್ತೇನೆ. ಸ್ವರ್ಗದಲ್ಲಿಸಂಯಮವಿಲ್ಲ ಅಲ್ಲಿ ಅಸಂಯಮಿ ಜೀವನವೇ ಆದ್ದರಿಂದ ಇಲ್ಲಿ ಇರುವವರೆಗೂ ಸಂಯಮದ ಸಾಧನೆ ಮಾಡುವುದೇ ಒಳ್ಳೆಯದು.

ಹಸ್ತಿನಾಪುರಕ್ಕೆ ಮುನಿಶ್ರೀ ದರ್ಶನಸಾಗರರ ಆಗಮನ

ಮುನಿಶ್ರೀ ದರ್ಶನಸಾಗರರು ಸಹಾರನಪುರದಲ್ಲಿ ಪಂಚಕಲ್ಯಾಣದ ಪ್ರತಿಷ್ಠೆಯನ್ನು ಮಾಡಿಸಿ ಬಡೌತ, ಖತೌಲೀ ಮೊದಲಾದ ಜೈನ ಸಮಾಜದ ಆಗ್ರಹದಿಂದ ಮೇ. 13ರಂದು ಹಸ್ತಿನಾಪುರಕ್ಕೆ ಬಂದರು. ದಿಗಂಬರ

---

೧. ಆಚಾರಸಾರ. ಅಧಿಕಾರ - ೧೦.

ಜೈನರ ದೊಡ್ಡ ಮಂದಿರದಲ್ಲಿ ತಂಗಿದ್ದರು. ಅವರು ಎತ್ತರದಲ್ಲಿ ಘೋಷಣೆ ಮಾಡಿದರು. ಈ ದೊಡ್ಡ ಬಸದಿಯ ಆವರಣದಲ್ಲಿ ಏಕಾಂತವಾದಿ ಕಾನಜೀಪಂಥಿಗಳ ಶಿಕ್ಷಣ, ಪ್ರಶಿಕ್ಷಣ ಶಿಬಿರ ನಡೆಯುವಂತಿಲ್ಲ. ಕಾರ್ಯಕರ್ತರಿಗೆ ಕಠಿಣವಾದ ನಿಯಮಗಳನ್ನು ವಿಧಿಸಿದರು. ಇಲ್ಲಿಯ ಬಹಳಷ್ಟು ಜನ ಮುನಿಭಕ್ತರು ಹಾಗೇ ಕಾನಜೀ ಪಂಥವನ್ನು ವಿರೋಧಿಸುವವರು. ಸಹಾರನಪುರದಲ್ಲಿ ಕೆಲವು ಜನಗಳ ಸಮರ್ಥನೆಯಿಂದ ಕಾನಜೀ ಪಂಥದ ವಿದ್ವಾಂಸರ ಮೂಲಕ ಪಂಚಕಲ್ಯಾಣದ ಪ್ರತಿಷ್ಠೆ ಮಾಡಿಸುವ ನಿಶ್ಚಯವಾಗಿತ್ತು. ಆದರೆ ಧ್ವಜಾರೋಹಣೆಯ ದಿನವೇ ಕೆಲವು ವಿದ್ವಾಂಸರಲ್ಲಿ ವಿರೋಧ ಉಂಟಾಗಿ ಅವರನ್ನು ಬಿಟ್ಟು ಪ್ರತಿಷ್ಠಾಚಾರ್ಯರನ್ನು ಬಿಟ್ಟು ಪಂ. ಪತೇಹಸಾಗರರನ್ನು ಕರೆದು ಪ್ರತಿಷ್ಠೆಯನ್ನು ಮಾಡಲಾಯಿತು.

ಮುನಿಶ್ರೀಗಳು ಜಂಬೂದ್ವೀಪವನ್ನು ದರ್ಶನಮಾಡಲು ಬಂದಿದ್ದರು. ಇವರ ಸಂಘದ ಸಾಧುಗಳು ನಮ್ಮಲ್ಲಿಯ ಚೌಕಗಳಿಗೆ ಬರತೊಡಗಿದ್ದರು. ದೊಡ್ಡ ಮಂದಿರದಿಂದ ಹಸ್ತಿನಾಪುರಕ್ಕೆ ಬಂದು ತಂಗಿದ್ದರು. ಆದಾಗ್ಯೂ ತೇರಹಪಂಥ ಪರಂಪರೆಯ ಸಾಧುಗಳು ಇದ್ದರಾದರೂ ಪ್ರಪಂಚದಲ್ಲಿ ಬೀಸಪಂಥ ಶಾಸನದೇವಿ ಪದ್ಮಾವತಿಯರ ಸಮರ್ಥನೆಯನ್ನು ಮಾಡುತ್ತಿದ್ದರು.

ಈ ಪ್ರಾಂತ್ಯದ ಶ್ರಾವಕರ ಕಠಿಣ ಪರಿಶ್ರಮದಿಂದ ಮತ್ತು ಮುನಿಗಳ ನಿರ್ಭೀಕ ಪ್ರವೃತ್ತಿ ಹಾಗೆ ಕಠಿಣ ನಿಯಮಗಳಿಂದ ಈ ಸಲ ಸ್ಥಾನಕವಾಸಿ, ಶಿಬಿರಗಳು ನಡೆಯಲ್ಲಿಲ. ನಂತರ ಶಿಬಿರ ಮವಾನದಲ್ಲಿ ನಡೆಯಿತು ಎನ್ನುವ ಸುದ್ದಿ ತಿಳಿಯಿತು. ಅಲ್ಲದೆ ಈ ಶಿಬಿರ ವಿವಾದಾತ್ಮಕವು ಆಗಿ ಮಂದಿರದಲ್ಲೇ ಕಾರ್ಯಕರ್ತರು ಹೊಡೆದಾಡಿ ಪೋಲಿಸ್ ಕೇಸು ಆಯಿತು. ಸಾಕಷ್ಟು ಅಶಾಂತಿ ಎಳೆದಾಟಗಳು ನಡೆದವು.

ಕಾನಜೀ ಪಂಥದ ಚರ್ಚೆ

ವರ್ತಮಾನ ಕಾಲದಲ್ಲಿ ದಿಗಂಬರ ಜೈನ ಸಮಾಜದಲ್ಲಿ ಎಲ್ಲ ಕಡೆಯು ಈ ಕಾನಜೀ ಪಂಥ ಚರ್ಚೆಯ ವಿಷಯವೇ ಆಗಿದೆ. ಇದರ ಬಗ್ಗೆ ಹೆಚ್ಚಿಗೆ ಏನು ಹೇಳಿದಿದ್ದರೂ ಸ್ವಲ್ಪವಾದರು ಹೇಳಲೇ ಬೇಕಾಗಿದೆ. ಪ್ರತಿಯೊಂದು ಸಂಪ್ರದಾಯದಲ್ಲೂ ಒಬ್ಬರಲ್ಲ ಒಬ್ಬರು ತಾವೇ ದೇವರ ಅವತಾರ ಪುರುಷರೆಂದು ಹೇಳಿಕೊಳ್ಳುವವರು ಕಂಡುಬರುತ್ತಿದ್ದಾರೆ. ಅಂತರವಿಷ್ಟೆ ಒಂದು ವೇಳೆ ತಮ್ಮ ಸಂಪ್ರದಾಯದ ಗುರುಗಳನ್ನು ನೀಚ ನರಕಗಾಮಿ ಎನ್ನದಿದ್ದರೂ ಅವಶ್ಯಕವಾಗಿ ಪೂಜೆ ಮಾಡುತ್ತಾರೆ ಅಥವಾ ಯಾವುದೇ ವ್ಯಕ್ತಿ ಗುರುಗಳನ್ನು ನೀಚ, ಪಾಷಂಡಿ ಮುಂತಾಗಿ ಹೇಳುತ್ತಾ ಆದರೆ ಚರ್ಯೆಯಲ್ಲಿ ಸ್ವಯಂ ಅವರಿಗಿಂತ ಹೀನರಾಗಿಯೂ ಸಹ. ತನ್ನನ್ನು ಭಗವಂತನೆಂದು ಹೇಳದಿದ್ದರೂ ಜನ ಅವರ ಮಾತನ್ನು ಗೌರವಿಸುತ್ತಾರೆ.

ಕಾನಜೀ ಬಾಯಿ ಇದಕ್ಕಿಂತ ಮುಂದುವರಿದು ದಿಗಂಬರ ಜೈನಮುನಿ, ಆರ್ಯಿಕ, ಕ್ಷುಲ್ಲಕ-ಕ್ಷುಲ್ಲಿಕೆ ಸಾಧುಗಳನ್ನು ದ್ರವ್ಯಲಿಂಗಿಖಂಡಿ, ಮಿಥ್ಯಾದೃಷ್ಟಿ ನರಕಗಾಮಿ ಮುಂತಾದ ಶಬ್ದಗಳಿಂದ ಅವಮಾನ ಮಾಡಿ ಸ್ವಯಂ ತಾನೇ ಸ್ವತಃ ನಮಸ್ಕಾರ ಮಾಡದೆ ಅವರಿಗೆ ನವಧಾ ಭಕ್ತಿಯಿಂದ ಆಹಾರವನ್ನು ಕೊಡಲಿಲ್ಲ. ಇದನ್ನೆ ಅವರ ಭಕ್ತರು ಸಹ ಅನುಸರಿಸುತ್ತಿದ್ದಾರೆ. ಇದಲ್ಲದೆ ಸ್ವಯಂ ಕಾನಜೀ ಬಾಯಿಯು ಚಂಪಾಬೆಹನಗೆ ಜಾತಿ ಸ್ಮರಣೆಯ ನೆಪಮಾಡಿ ತನ್ನನ್ನೆ ಭಾವಿ ತೀರ್ಥಂಕರರೆಂದು ಘೋಷಿಸಿಕೊಂಡಿದ್ದಾರೆ. ತನಗೆ ತಾನೇ ಭಾವೀ ತೀರ್ಥಂಕರರ ಅನುಭವವನ್ನು ಅನುಭವಿಸುತ್ತಾ ಖುಷಿ ಪಡತೊಡಗಿದ್ದಾರೆ. ಅವರು ಚಂಪಾಬೆಹನರ ಅಂಗಾಲುಗಳನ್ನು ನೆಕ್ಕುವುದರಿಂದಲೇ ಮುಕ್ತರಾಗುವ ಉಪದೇಶವನ್ನು ಕೊಟ್ಟಿದ್ದಾರೆ. ಅವರ ಸಂಸ್ಥೆಯಿಂದಲೇ ಹೊರಬಂದಿರುವ

ಪುಸ್ತಕದಲ್ಲಿ ಇದೆ. ಅದರ ಹೆಸರು"ಧನ್ಯಾವತಾರ" ಪ್ರಕಾಶಕರು ಶ್ರೀವೀತರಾಗ ಸತ್ ಸಾಹಿತ್ಯ ಪ್ರಸಾರಕ ಟ್ರಸ್ಟ್, ಭಾವನಗರ ಪ್ರಕಾಶನ ವೀರ ಸಂವತ್ 2038ರಲ್ಲಿ, ಪುಸ್ತಕದಲ್ಲಿ ಚಂಪಾಬೆಹನ ಮೂಲಕ ಕಾನಜೀಸ್ವಾಮಿಯು ಸಮಯ ಸಮಯದಲ್ಲಿ ಪ್ರಕಟಗೊಳಿಸುತ್ತಿರುವ ಅತಿಶಯೋಕ್ತಿಪೂರ್ಣ ಉದ್ಗಾರಗಳು ಮುದ್ರಿತವಾಗಿದೆ. ಅದರ ಒಂದು ಉದಾಹರಣೆ ನೋಡಿ:

ಚಂಪಾಬೆಹನಳು ಕಾನಜೀ ಸ್ವಾಮಿಯ ಬಗ್ಗೆ ಹೇಳಿರುವ ಉದ್ಗಾರ ನೋಡಿ. ಅರೇ ಇವರ ದರ್ಶನದಿಂದಲೇ ಈ ಭವದ ಪಾಪವೆಲ್ಲ ದೂರವಾಗುತ್ತದೆ. ಎಲ್ಲರು ಇವರ ಅಂಗಾಲುಗಳನ್ನು ನೆಕ್ಕುವುದು ಕಡಿಮೆಯೆ. ಅಂತಹ ಅದ್ಭುತ ದ್ರವ್ಯವಾಗಿದ್ದಾರೆ. ಇಷ್ಟೇ ಅಲ್ಲ ಇವರ ಭಕ್ತರು ಇವರನ್ನು ತೀರ್ಥಂಕರ ರೂಪದಲ್ಲಿ ಪ್ರತಿಮೆಯನ್ನು ಮಾಡಿಸಿ ಅನೇಕ ಮಂದಿರಗಳಲ್ಲಿ ಪ್ರತಿಷ್ಠಾಪಿಸಿ ಬಿಟ್ಟಿದ್ದಾರೆ.

ದಿಗಂಬರ ಜೈನ ಆಚಾರ್ಯರು ಮುನಿಗಳು, ಆರ್ಯಿಕೆಯರು, ಕ್ಷುಲ್ಲಕ, ಕ್ಷುಲ್ಲಕೆಯರು ಹಾಗೂ ಭಟ್ಟಾರಕರು ಸಹ ಈ ಸಂಪ್ರದಾಯವನ್ನು ದಿಗಂಬರ ಜೈನಮತದಿಂದ ದೂರಮಾಡಿದ್ದಾರೆ. ಪಂ. ಮಕ್ಖನಲಾಲಜೀ ಮುಂತಾದ ವಿದ್ವಾಂಸರು ತಮ್ಮ ಅನೇಕ ಲೇಖನಗಳಿಂದ ಪುಸ್ತಕವನ್ನೆ ಮಾಡಿದ್ದಾರೆ. ಆಚಾರ್ಯ ವಿದ್ಯಾನಂದರು ಹಲವು ವರ್ಷ ಮೊದಲೇ "ದಿಗಂಬರ ಜೈನ ಸಾಹಿತ್ಯದಲ್ಲಿ ವಿಕಾರ" ಎಂಬ ಹೆಸರಲ್ಲಿ ಪುಸ್ತಕ ಬರೆದು ಇದರ ಮೂಲಕ ಪ್ರಕಟವಾಗಿರುವ ಸಾಹಿತ್ಯವನ್ನು ದೂಷಿತವೆಂದು ಹೇಳಿದ್ದಾರೆ. ವರ್ತಮಾನದಲ್ಲಿ ಶ್ರೀ ಸತನಾದ ನೀರಜ ಜೈನರು "ಸೋನಗಡ ಸಮೀಕ್ಷಾ" ಎಂಬ ಹೆಸರಿನ ಪುಸ್ತಕ ಬರೆದು ಅದರ ಪ್ರಮಾಣವನ್ನೆಲ್ಲ ಕೊಟ್ಟು ಹೇಳಿಕೆಯನ್ನೆಲ್ಲ ಸತ್ವಹೀನವನ್ನಾಗಿ ಮಾಡಿ ಚೆನ್ನಾಗಿ ಝಾಡಿಸಿದ್ದಾರೆ. ನನ್ನ ಮನವಿ ಏನೆಂದರೆ ಪ್ರತಿಯೊಬ್ಬ ಜೈನ ಸಹೋದರ ಸಹೋದರಿಯರು ಹಠದ ಸ್ವಭಾವ ಬಿಟ್ಟು ಈ ಪುಸ್ತಕಗಳನ್ನು ಅಮೂಲಾಗ್ರವಾಗಿ ಖಂಡಿತ ಓದಬೇಕು ಮತ್ತು ನಮ್ಮ ಮೂಲ ಸಂಸ್ಕೃತಿಯ ಅನುಸಾರ ದಿಗಂಬರ ಜೈನ ಗುರುಗಳಲ್ಲಿ ಆರ್ಯಿಕೆಯರಲ್ಲಿ ಭಕ್ತಿ ಪೂಜೆಯನ್ನು ಮಾಡುತ್ತಾ ಅವರಿಗೆ ನವಧಾಭಕ್ತಿ ಪೂರ್ವಕ ಆಹಾರದಾನಕೊಟ್ಟು ನಮ್ಮ ಮಾನವ ಜೀವನವನ್ನು ಗೃಹಸ್ಥ ಜೀವನವನ್ನು ಸಫಲ ಮಾಡಿಕೊಳ್ಳಬೇಕು.

ಪಂಥದ ದುರಾಗ್ರಹ

ದಿಗಂಬರ ಜೈನ ಸಂಪ್ರಾದಯದಲ್ಲಿ 400 ವರ್ಷಗಳಿಂದ ತೇರಹ ಪಂಥ ಮತ್ತು ಬೀಸ ಪಂಥ ಎಂಬ ಎರಡು ಸಂಪ್ರದಾಯಗಳು ನಡೆದು ಬಂದಿವೆ. ಆದಾಗ್ಯೂ ಜೈನಾಗಮದಲ್ಲಿ ಈ ಹೆಸರಿನ ಉಲ್ಲೇಖ ಎಲ್ಲೂ ಬಂದಿಲ್ಲ. ಶ್ರಾವಕರಲ್ಲಿ ಜಿನಪೂಜೆಯಲ್ಲಿ ಮಾತ್ರ ಮತಭೇದವಿದೆ. ತೇರಹ ಪಂಥಿ ವಿದ್ವಾಂಸ ಮತ್ತು ಶ್ರಾವಕರಲ್ಲಿ ನಾನು ಸ್ವಯಂ ನೋಡಿದ್ದೇನೆ. ಅವರು ಬೀಸಪಂಥಿ ಮಂದಿರಕ್ಕೆ ಬಂದು ಜಿನಪ್ರತಿಮೆಗಳ ದರ್ಶನ ಮಾಡಿದ್ದಾರೆ. ಪೂಜೆಯನ್ನು ಮಾಡಿದ್ದಾರೆ. ಅಜಮೇರ, ಜಯಪುರ, ಬ್ಯಾವರ, ಇಂದೊರ, ಶ್ರವಣಬೆಳಗೊಳ ಮುಂತಾದ ಸ್ಥಳಗಳಲ್ಲಿ ಉದಾಹರಣೆ ನೋಡಬಹುದು.

ಶಿಬಿರಕ್ಕೆ ಬಂದಿದ್ದ ವಿದ್ವಾಂಸರೇ ಆಗಲಿ ಶ್ರಾವಕರೇ ಆಗಲಿ ಅಧಿಕಾಂಶ ಜನ ಜಂಬೂದ್ವೀಪಕ್ಕೆ ಬಂದಾಗ ತ್ರಿಮೂರ್ತಿ ಮಂದಿರದಲ್ಲಿ ಆಗಲಿ, ಕಮಲಮಂದಿರದಲ್ಲಾಗಲಿ ಜಿನಪ್ರತಿಮೆಗಳಿಗೆ ನಮಸ್ಕರಿಸುವುದಿಲ್ಲ. ಆದಾಗ್ಯೂ ಕ್ಷುಲ್ಲಕ ಮೋತಿಸಾಗರರು ಇದರ ಬಗ್ಗೆ ಕೇಳಿದಾಗ ಅವರು ನಾವು ಶುದ್ಧ ತೇರಹಪಂಥಿ ಕೇಶರ ಚರ್ಚಿತ ಪುಷ್ಪವನ್ನ ಏರಿಸಿರುವ ಜಿನಬಿಂಬವನ್ನು ನಮಸ್ಕರಿಸುವುದಿಲ್ಲ. ಅಗ್ನಿಯಲ್ಲಿ ಧೂಪವು ಹುಟ್ಟುವುದಿಲ್ಲ. ಈ ವಿಷಯದಲ್ಲಿ

ಕಟ್ಟಾ ತೇರಹಪಂಥಿ ಶ್ರಾವಕರು ಈ ಮಾತಿಗೆ ವಿರೋಧಿಗಳು. ಅವರು ಸಹ ಈ ನವೀನ "ಶುದ್ಧ ತೇರಹ ಪಂಥ ಎಲ್ಲಿಂದ ಹುಟ್ಟಿತು" ಇದರ ಬಗ್ಗೆ ಈ ಜನರು ಆಗಮ ಪ್ರಮಾಣವನ್ನು ಕೊಡಲಾರರು. ಕೇವಲ ಅಸಂದರ್ಭ ಪ್ರಕರಣಗಳಿಂದಲೇ ಮುಗ್ಧ ಜನರನ್ನು ದಿಗ್ಭ್ರಮೆಗೊಳಿಸುತ್ತಿದ್ದಾರೆ.

ಕೊನೆಗೆ ನಾನು ಹೇಳಬೇಕಾಗಿರುವುದು ಏನೆಂದರೆ ವರ್ತಮಾನ ಶತಾಬ್ದಿಯ ಚಾರಿತ್ರ ಚಕ್ರವರ್ತಿ ಆಚಾರ್ಯ ಶಾಂತಿಸಾಗರ ಮಹಾರಾಜರಿಂದ ಹಿಡಿದು ಇಲ್ಲಿಯವರೆಗೆ ಸುಮಾರು 400 ಜನಕ್ಕಿಂತಲೂ ಅಧಿಕ ಸಾಧುಗಳು ಕಾನಜೀ ಪಂಥವನ್ನು ತಪ್ಪು ಎಂದೇ ಹೇಳುತ್ತಾರೆ. ಒಬ್ಬರೆ ಶಾಂತಿಸಾಗರರೆಂಬ ಅದರಲ್ಲೂ ಆಚಾರ್ಯರಾಗಿದ್ದವರು 15 ವರ್ಷದ ಹಿಂದೆಯೇ 1978ರಲ್ಲಿ ನನ್ನ ಎದುರಿಗೆ ಇದೊಂದು ಮಿಥ್ಯಾತ್ವದ ಬಿರುಗಾಳಿ ಎಂದು ಹೇಳುತ್ತಿದ್ದವರು. ಈಗ ಈ ಪಂಥವನ್ನೇ ಸಮರ್ಥಿಸುತ್ತಿದ್ದಾರೆ. ಅವರಿಂದಲೇ ದೀಕ್ಷಿತರಾದ ಒಬ್ಬ ಕ್ಷುಲ್ಲಕ ಹಾಗೂ ಒಬ್ಬ ಮುನಿಯು ಸಹ ಇದೇ ದುರಾಗ್ರಹದಲ್ಲಿ ತೊಡಗಿದ್ದಾರೆ. ಅದಾಗ್ಯೂ ಈ ಮತದ ವಿದ್ವಾನ ಪಂಡಿತರೂ ಅಥವಾ ಶ್ರೀಮಂತರು ಯಾರೊಬ್ಬರು ಸಹ ಇಲ್ಲಿಯವರೆಗೆ ಆಹಾರ ದಾನವನ್ನು ಕೊಟ್ಟಿಲ್ಲ. ಈ ಕಾನಜೀ ಪಂಥದ ಜನರು ಪ್ರತಿಮೆಯಲ್ಲೂ, ಊರಿನಲ್ಲೂ, ಪಟ್ಟಣಗಳಲ್ಲೂ ತಮ್ಮೊಳಗೆಯೆ ವೈರಭಾವವನ್ನು ಕಲಹವನ್ನು ಉಂಟುಮಾಡುತ್ತಿದ್ದಾರೆ. ಇದೇ ಕಾರಣದಿಂದ ಎಲ್ಲಾ ಜಾಗಗಳಲ್ಲೂ ಕೋರ್ಟುಕೇಸುಗಳು ಆಗುತ್ತಿವೆ. ಹೀಗೆ ಜನತೆ ಅನ್ಯಾಯವಾಗಿ ನೋವನ್ನು ಅನುಭವಿಸುತ್ತಿದ್ದಾರೆ. ಹಣವು ನಷ್ಟವಾಗುತ್ತಿದೆ. ಇದನ್ನು ನೋಡಿ ನಾವು ಭವಿಷ್ಯದಲ್ಲಿ ಹುಂಡಾವ ಸರ್ವಿಣಿಯ ದೋಷ ಕಲಿಕಾಲದ ಪ್ರಭಾವವೆಂದು ತಿಳಿಯಬೇಕು.

ಇಂದು ಸಹ ಜೈನಬಂಧುಗಳು ಸಹೋದರಿಯರು, ಪೂರ್ವಾಚಾರ್ಯರ ಗ್ರಂಥಗಳನ್ನು ಒಂದು ವೇಳೆ ಸ್ವಾಧ್ಯಾಯ ಮಾಡಿ, ಪ್ರಥಮಾನುಯೋಗ, ಕರಣಾನುಯೋಗ, ಚರಣಾನುಯೋಗ, ದ್ರವ್ಯಾನುಯೋಗದ ಗ್ರಂಥಗಳನ್ನು ಕ್ರಮದಿಂದ ಓದಿ ಗುರುಮುಖದಿಂದ ಕೇಳಿ ವರ್ಷದಲ್ಲಿ ಕಡೇ ಪಕ್ಷ ಒಂದು ತಿಂಗಳಾದರು ದಿಗಂಬರ ಗುರುಗಳ, ಆರ್ಯಿಕೆಯರ, ಸಂಘಗಳಿಗೆ ಹೋಗಿ ಸರಿಯಾದ ಮಾರ್ಗದರ್ಶನ ಪಡೆದು ಈ ಪಂಚಮಕಾಲದಲ್ಲೂ ಚತುರ್ಥಕಾಲದಂತೆ ಮೋಕ್ಷಮಾರ್ಗಿಗಳಾಗುವುದರಲ್ಲಿ ಸಂದೇಹವಿಲ್ಲ.

ಶ್ರೀ ಕುಂದ ಕುಂದ ದೇವರು ತಮ್ಮ ಪಾಹುಡ ಗ್ರಂಥದಲ್ಲಿ ಪಂಚಮ ಕಾಲದಲ್ಲಿಯು ಮುನಿಗಳ ಅಸ್ತಿತ್ವವನ್ನು ಹೇಳಿದ್ದಾರೆ.

ಭರಹೇ ದುಸ್ಸಮಕಾಲೇ ಧಮ್ಮಝಾಣಂ ಹವೇ ಇ ಸಾಹುಸ್ಸ।
ತಂ ಅಪ್ಪಸಹಾವಠಿದೇ ಣ ಹು ಮಣ್ಣಇ ಸೋ ವಿ ಅಣ್ಣಾಣೇ॥

ಈ ಭರತ ಕ್ಷೇತ್ರದಲ್ಲಿ ದುಷಮ ಕಾಲದಲ್ಲಿಯು ಸಹ ಸಾಧುಗಳು ಆತ್ಮ ಸ್ವಭಾವದಲ್ಲಿ ಸ್ಥಿರವಾಗಿ ಧರ್ಮಧ್ಯಾನಸ್ಥನಾಗಬಹುದು. ಈ ರೀತಿ ತಿಳಿಯದವರು ಅಜ್ಞಾನಿಗಳು ಎಂಬುದಾಗಿ ತಿಳಿಯಬೇಕು. 21,000 ವರ್ಷಗಳವರೆಗೆ ಪಂಚಮ ಕಾಲದ ಕೊನೆಯವರೆಗೂ ಅವಿಚ್ಛಿನ್ನವಾಗಿ ಮುನಿ, ಆರ್ಯಿಕೆ, ಶ್ರಾವಕ ಶ್ರಾವಿಕ ಹೀಗೆ ನಾಲ್ಕು ಸಂಘಗಳು ಇರುತ್ತವೆ. ಕೊನೆಯ ಮುನಿ "ವೀರಾಂಗಜ" ಎಂಬ ಹೆಸರಿನವರಾಗುತ್ತಾರೆ. ಕೊನೆಯ ಆರ್ಯಿಕೆಯಾಗಿ ಸರ್ವಶ್ರೀ ಆಗುತ್ತಾರೆ ಎಂದು ಭ.ಮಹಾವೀರರು ಭವಿಷ್ಯ ನುಡಿದಿದ್ದಾರೆ.

ವ್ರತಿಗಳು ವ್ರತವನ್ನು ಬಿಡುತ್ತಾರೆ

ಇಲ್ಲಿಗೆ ಒಬ್ಬ ಬ್ರಹ್ಮಚಾರಿ ಶಿಬಿರಕ್ಕೆ ಬಂದಿದ್ದರು. ಅವರು ಮೊದಲು ಆಚಾರ್ಯರಲ್ಲಿ ಶ್ರುತಸಾಗರರ ಸಂಘದಲ್ಲಿ ವರ್ಷಗಳವರೆಗೆ ಇದ್ದವರು. ಅಜಿತಸಾಗರರ ಸಾನಿಧ್ಯದಲ್ಲಿ "ಸರ್ವಾರ್ಥಸಿದ್ಧಿ" ಮುಂತಾದ ಗ್ರಂಥಗಳನ್ನು ಅಭ್ಯಾಸಮಾಡಿದ್ದರು. ಅಲ್ಲದೆ ಆಚಾರ್ಯರಿಂದ 7ನೆಯ ಪ್ರತಿಮೆಯ ವ್ರತವನ್ನು ಧಾರಣೆ ಮಾಡಿದ್ದರು. ಅವರು ತಾವೇ ವ್ರತವನ್ನು ತ್ಯಜಿಸಿ ನಾನು ಅವುಗಳನ್ನ ಆಚರಿಸಲು ಸರಿಯಾದ ಪಾತ್ರನಲ್ಲನೆಂದು ತಮಗೆ ತಾವೇ ನಿಶ್ಚಯಿಸಿಕೊಂಡು ಬಿಟ್ಟಿದ್ದಾರೆ.

ಇಂತಹ ಹಲವಾರು ವ್ಯಕ್ತಿಗಳೊಡನೆ ಚರ್ಚೆ ಮಾಡಿದ್ದೇವೆ. ಇವರ ತರ್ಕದ ಬುದ್ಧಿ ಮತ್ತು ಹೊಸ ವಿಚಾರಗಳನ್ನು ಕಂಡು ಬಹಳ ದುಃಖವಾಗಿದೆ. ಕ್ಷುಲ್ಲಕ ಮೋತಿಸಾಗರರು ಅವರಲ್ಲಿ ವಿಚಾರ ಮಾಡುತ್ತಾ ಸಹೋದರ ಗುರು ಆಚಾರ್ಯ ಕಲ್ಪರ ಸಮಾಧಿ ಆಗಿ ಆಯಿತು. ಅವರ ಸಂಪ್ರದಾಯದವರಾದ ನೀವೆಲ್ಲ ಸೇರಿ ನಿಮ್ಮ ಸಂಪ್ರದಾಯದಂತೆ ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಿ ಎಂದು ಸಲಹೆ ಕೊಟ್ಟಿದ್ದಾರೆ. ಆ ಮುನಿಗಳು ಮೊದಲು ಶ್ವೇತಾಂಬರ ಪಂಥದಿಂದ ದಿಗಂಬರ ಪಂಥಕ್ಕೆ ಬಂದು ಆಚಾರ್ಯ ಶ್ರೀ ವೀರಸಾಗರರ ಸಂಘದಲ್ಲಿ ಇದ್ದು ಅವರಿಂದಲೇ ದೀಕ್ಷೆಯನ್ನು ಪಡೆದು ಮುನಿಗಳಾದರು. ಅವರ ಸಮಾಧಿಯು ಚೆನ್ನಾಗಿಯೇ ಆಯಿತು. ಇಷ್ಟೆಲ್ಲ ಹೇಳಿದರು. ಆ ಬ್ರಹ್ಮಚಾರಿ ಮೌನವಾಗೇ ಇದ್ದರು. ಏಕೆಂದರೆ ಈಗ ಆ ವ್ಯಕ್ತಿ ಕಾನಜೀ ಪಂಥದ ಕಟ್ಟಾಭಿಮಾನಿ ಆಗಿದ್ದಾರೆ. ಇದು ಒಂದು ವಿಡಂಬನೆಯೇ ಸರಿ.

೯೫

ಸಮಯಸಾರದ ಅನುವಾದ ಪ್ರಾರಂಭ

ಜೂನ್ 19 ಅಂದರೆ ಶ್ರುತಪಂಚಮಿಯಂದು ನಾವೆಲ್ಲ ಜಿನವಾಣಿಯ ಪೂಜೆಮಾಡಿ ಶ್ರುತಪಂಚಮಿಯನ್ನು ಆಚರಿಸಿ, ಅಂದೇ ನಾನು ಸಮಯಸಾರದ ಎರಡು ಟೀಕೆಗಳ ಅನುವಾದವನ್ನು ಪ್ರಾರಂಭಿಸಿದೆ. ಮೊದಲು 1978ರಲ್ಲಿ ದೆಹಲಿಯಲ್ಲಿ ಅನುವಾದವನ್ನು ಪ್ರಾರಂಭಿಸಿದ್ದು ಬರೇ 18 ಗಾಥೆಗಳ ಅನುವಾದ ಮಾತ್ರ ಆಗಿತ್ತು. ದೆಹಲಿಯಿಂದ ವಿಹಾರಮಾಡುತ್ತಾ ಹಸ್ತಿನಾಪುರಕ್ಕೆ ಬಂದು ಇಲ್ಲಿ 1979ರಲ್ಲಿ ಸುಮೇರುವಿನಲ್ಲಿ ಸುಮೇರು ಪರ್ವತದಲ್ಲಿ ಜಿನಬಿಂಬಗಳ ಪ್ರತಿಷ್ಠೆ ಆಗಿತ್ತು. ಇದರ ನಂತರ ಚಿಕ್ಕ ಪುಟ್ಟದಾದ ಅನೇಕ ಪುಸ್ತಕ ಆರಾಧನೆಗಳ ಲೇಖನ ಪ್ರಕಾಶನ ಆಗಿತ್ತು. ಅತ್ಯಧಿಕ ಉಪಯೋಗಿ ಗ್ರಂಥವಾದ ಸಮಯಸಾರದ ಗ್ರಂಥಗಳನ್ನು ಕೈಗೆತ್ತಿಕೊಂಡು 18ನೇ ಗಾಥೆಯಿಂದಲೇ ಅನುವಾದ ಪ್ರಾರಂಭಮಾಡಿದೆ.

ಹೊಸದಾದ ಸಮನ್ವಯ

ಗ್ರಂಥದಲ್ಲಿ ಸ್ವಯಂ ಕುಂದ ಕುಂದ ದೇವರೇ ನಿಶ್ಚಯನಯ ಮತ್ತು ವ್ಯವಹಾರ ನಯದ ವಿಷಯವನ್ನು ತೋರಿಸಿ ಪುನಃ ಎರಡು ನಯಗಳನ್ನೂ ಎಲ್ಲಕಡೆ ಸಮನ್ವಯ ಗೊಳಿಸಿದ್ದಾರೆ. ಟೀಕಾಕಾರರು ವ್ಯವಹಾರ ನಯದ ಜಾಗದಲ್ಲೂ ಸಮನ್ವಯ ಕೊಟ್ಟಿರುವುದನ್ನು ಸ್ಪಷ್ಟಪಡಿಸಿದ್ದಾರೆ. ಹೇಗೆಂದರೆ "ತೀರ್ಥ ಪ್ರವೃತ್ತಿಗೋಸ್ಕರ ವ್ಯವಹಾರ ನಯವನ್ನು ತೋರಿಸುವುದು ಅವಶ್ಯಕವಾಗಿದೆ. ಇಲ್ಲದಿದ್ದರೆ ಜನರು ತ್ರಸಾದಿ ಜೀವಗಳನ್ನು ಬೂದಿಗೆ ಸಮಾನವಾಗಿ ತುಳಿದು ಬಿಡುತ್ತಾರೆ.

ಶ್ರೀ ಜಯಸೇನಾಚಾರ್ಯರು ಎಲ್ಲಾ ಕಡೆ ಗುಣಸ್ಥಾನದ ವ್ಯವಸ್ಥೆಯನ್ನು ತೆರೆದಿಟ್ಟಿದ್ದಾರೆ. ಮಹಾಮುನಿಗಳ ನಿರ್ವಿಕಲ್ಪ ಧ್ಯಾನದಲ್ಲಿಯೇ ಸಮಯಸಾರದ ಅವಸ್ಥೆ ಬರುತ್ತದೆ ಎಂದಿದ್ದಾರೆ.

ಯಥಾ "ಪಕ್ಖಾತಿಕ್ಕಂತೋ ಪುಣ ಭಣ್ಣದಿ ಜೋ ಸೋ ಸಮಯ ಸಾರೋ"[೧]

ಜಯಸೇನಾಚಾರ್ಯರು ಹಲವಾರು ಕಡೇ ಇದನ್ನು ಹೇಳಿದ್ದಾರೆ. ಈ ಗ್ರಂಥದಲ್ಲಿ ಪಂಚಮ ಗುಣಸ್ಥಾನದ ವ್ರತಿ ಶ್ರಾವಕನಿಗಿಂತ ಮೇಲಿನವರಾದ ಮಹಾಮುನಿಗಳಿಗೆ ಹೇಳಿದ್ದಾರೆ. ಶ್ರೀ ಅಮೃತ ಚಂದ್ರಸೂರಿಯವರು ಹಲವಾರು ಜಾಗಗಳಲ್ಲಿ ಇದನ್ನು ಸ್ಪಷ್ಟಪಡಿಸಿದ್ದಾರೆ. ಸರಳ ಶಬ್ದಗಳಿಂದ ಇವುಗಳನ್ನು ಅನುಸರಿಸಿದ್ದಾರೆ. ಹೇಗೆಂದರೆ ಯಥಾಖ್ಯಾತ ಚಾರಿತ್ರದಲ್ಲಿ ಮೊದಲು ರಾಗವು ಅವಶ್ಯಂ ಭಾವಿಯಾಗಿದೆ. ಅಲ್ಲಿಯವರೆಗೆ ಕರ್ಮವು ಬಂಧವಾಗತ್ತಲೇ ಹೋಗುತ್ತದೆ.[೨] ಹಾಗೇ ಅಪ್ರತಿಕ್ರಮಣ, ಪ್ರತಿಕ್ರಮಣದಿಂದ ಮುಂದೆ ಯಾವ ತೃತೀಯ ಭೂಮಿಕೆ ಇದೆಯೋ ಇಲ್ಲಿಯೆ ಪ್ರತಿಕ್ರಮಣವು ಬಿಟ್ಟು[೩] ಹೋಗುತ್ತದೆ. ಇದು ಮೂರನೆಯ ಅವಸ್ಥೆಯಲ್ಲಿ ನಿರ್ವಿಕಲ್ಪ ಧ್ಯಾನಿಶುದ್ಧೋಪಯೋಗಿ ಮುನಿಗಳಿಗೆ ಆಗುತ್ತದೆ ಎಂದು ತಿಳಿಯಬೇಕು.

ಹೀಗೆ ಈ ಗ್ರಂಥದ ಅನುವಾದ ಮಾಡುವಾಗ ನಿಜವಾದ ಆನಂದ ದೊರೆಯ ತೊಡಗಿತು. ಇದನ್ನು ಶಬ್ದಗಳಿಂದ ವರ್ಣಿಸಲು ಸಾಧ್ಯವಿಲ್ಲ. ನಿಜವಾಗಿಯು ಇದರಲ್ಲಿ ಆಧ್ಯಾತ್ಮಿಕ ಆನಂದವು ಕೊನೆಯವರೆಗೂ ಉಳಿಯುತ್ತದೆ. ಏಕೆಂದರೆ ಆಧ್ಯಾತ್ಮಿಕ ಭಾವನೆಯಿಂದಲೇ ಭವ ಭವಗಳನ್ನು ತೊಡೆಯಲು ಸಾಧ್ಯ ಇದರಿಂದಾಗಿಯೇ ಈ ಗ್ರಂಥವು ನನಗೆ ವಿಶೇಷವಾದ ಆಸಕ್ತಿಯನ್ನು ಹುಟ್ಟಿಸಿತು.

ಇಂದ್ರಧ್ವಜ ಆರಾಧನೆ

1988ರ ಜೂನ್ 17ರಂದು ಇಂಫಾಲದ ಶಾಂತಿಲಾಲಜೀ ಗಂಗವಾಲರು ತಮ್ಮ ಜೊತೆ ಹಲವಾರು ಕಾಕಾಜಿಗಳನ್ನು ಕರೆದುಕೊಂಡು ಬಂದು ತ್ರಿಮೂರ್ತಿ ಭವನದಲ್ಲಿ ಇಂದ್ರಧ್ವಜ ಆರಾಧನೆಯನ್ನು ಮಾಡಲು ನಿಶ್ಚಯಿಸಿದ್ದರು. ಶುಕ್ರವಾರ ದ್ವಜಾರೋಹಣೆ ಆಯಿತು. ಬೆಳಗ್ಗೆ ಆರಾಧನೆಯ ಪೂಜೆ, ಮಧ್ಯಾಹ್ನ ನನ್ನ ಪ್ರವಚನವಾಗುತ್ತಿತ್ತು. ನಂತರ ಮಾಧುರಿ ಸಾಮಾಯಿಕ ವಿಧಿಯನ್ನು ಕಲಿಸುತ್ತಿದ್ದಳು. ಹಾಗೇ ಧ್ಯಾನದ ತರಗತಿಗಳು ನಡೆಯುತ್ತಿದವು. 27ನೇ ತಾರೀಕಿನವರೆಗೂ ಸಾಂಗವಾಗಿ ನೆರವೇರಿಸಿ ಪೂರ್ಣಾಹುತಿ ಆಗಿ ಆರಾಧನೆ ಪೂರ್ಣಗೊಂಡಿತು. ಅದೇ ದಿನ ಜಂಬೂದ್ವೀಪ ಜ್ಞಾನಜ್ಯೋತಿ"ಯ ಪ್ರವರ್ತನೆಯ ವಾರ್ಷಿಕೋತ್ಸವ ನೆನಪಿಗಾಗಿ ಜಿನಬಿಂಬಗಳಿಗೆ ಅಭಿಷೇಕ ಪೂಜೆಗಳು ನಡೆದವು.

ಈ ಆರಾಧನೆಯಲ್ಲಿ ಭಾಗವಹಿಸಿದ್ದ ಮಾಣಿಕಚಂದ್ ಗಂಗಾವಾಲರ ಧರ್ಮಪತ್ನಿ ಹೇಳತೊಡಗಿದರು. ಮಾತಾಜೀ 3-4 ವರ್ಷಗಳ ಮೊದಲು ನನಗೆ ಭಯಂಕರ ತಲೆನೋವು ಬರುತ್ತಿತ್ತು. ಇದರಿಂದ ಜ್ಞಾನವೇ ತಪ್ಪುತ್ತಿತ್ತು. ಮೂರುದಿನವಾದರು ಜ್ಞಾನವೇ ಬರುತ್ತಿರಲಿಲ್ಲ. ಈಗ ಮೂರು ವರ್ಷದ ಹಿಂದೆ ಸಮ್ಮೇದ ಶಿಖರದಲ್ಲಿ ಇಂದ್ರಧ್ವಜದ ಆರಾಧನೆಯನ್ನು ಸಮ್ಮೇದ ಶಿಬಿರದಲ್ಲಿ ಮಾಡಿಸಿದಾಗಿನಿಂದ ನನ್ನ ತಲೆನೋವು ಮಾಯವಾಯಿತು. ಈ ವಿಧಾನ ಅತ್ಯಂತ ಅತಿಶಯ ಪೂರ್ಣವಾದುದು ಎಂದು ತಮ್ಮ ಅನುಭವಗಳನ್ನು ಹೇಳಿಕೊಂಡರು. ಆಗ ನಾನು

---

೧. ಗಾಥೆ ೧೪೨ ಆಚಾರ್ಯ ಅಮೃತ ಚಂದ್ರಸೂರಿಗಳ ಅಭಿಪ್ರಾಯದಂತೆ ೧೫೨ ಜಯಸೇನಾಚಾರ್ಯರ ಅಭಿಪ್ರಾಯದಂತೆ.

೨. ಗಾಥೆ ೧೭೧ರ ಟೀಕೆ.

೩. ಸಮಯಸಾರ ಗಾಥೆ. ೩೨೬-೩೨೭ರ ಟೀಕೆಯ ಅಂಶ

ನಿಜವಾಗಿಯು ಜಿನೇಂದ್ರದೇವರ ಭಕ್ತಿಯಲ್ಲಿ ಇಂತಹ ಅದ್ಭುತವಾದ ಶಕ್ತಿಯಿದೆ. ನನ್ನ ಅನುಭವವನ್ನೆ ನೋಡಿ ನನ್ನ ಅತ್ಯಂತ ಅಸ್ವಸ್ಥತೆಯಲ್ಲೂ ಈ ಇಂದ್ರಧ್ವಜ ಆರಾಧನೆಯ ಜಯಮಾಲೆಗಳನ್ನು ಕೇಳುತ್ತಲೇ ನಾನು 1985ರ ಅವಧಿಯಲ್ಲಿ 10 ತಿಂಗಳ ದೀರ್ಘಕಾಯಿಲೆಯಿಂದ ನನ್ನ ಆರೋಗ್ಯ ಸುಧಾರಿಸಿತು. ಇಂತಹ ಸುಂದರವಾದ ಭಕ್ತಿರಸ ಈ ಜಯಮಾಲೆಯಲ್ಲಿ ಅಡಗಿದೆ.

ಶಿಕ್ಷಣ ಶಿಬಿರಗಳು

ಗ್ರೀಷ್ಮಕಾಲದಲ್ಲಿ ಇಲ್ಲಿನ ಸುತ್ತಮುತ್ತಲಿನ ಉತ್ತರ ಪ್ರದೇಶ, ಬಹರಾಇಚ, ದರಿಯಾಬಾದ್, ಟಿಕೈತನಗರಗಳಿಂದ ಹುಡುಗ-ಹುಡುಗಿಯರು ಇಲ್ಲಿಗೆ ಶಿಬಿರಕ್ಕೆ ಬರುತ್ತಾರೆ. ಕ್ಷುಲ್ಲಕ ಮೋತಿಸಾಗರರು ಮಾಧುರಿ ಮತ್ತು ಪ್ರವೀಣಚಂದ್, ನರೇಶಚಂದಶಾಸ್ತ್ರಿ ಇವರೆಲ್ಲ ಸೇರಿ ಬಾಲವಿಕಾಸ, ದ್ರವ್ಯಸಂಗ್ರಹ, ಇಷ್ಟೋಪದೇಶ, ತತ್ವಾರ್ಥಶಾಸ್ತ್ರ, ಮಂಡಲ ವಿಧಾನದ ಪ್ರಾರಂಭದ ವಿಧಿಯಲ್ಲಿ ಸಕಲೀಕರಣ, ಹವನವಿಧಿ ಮುಂತಾದವುಗಳ ತಿಳುವಳಿಕೆ ಕೊಡುತ್ತಾರೆ. ನಿಜವಾಗಿಯೂ ಮಕ್ಕಳನ್ನು ಬೇಸಿಗೆ ರಜಕ್ಕೆ ಇಂತಹ ತೀರ್ಥಕ್ಷೇತ್ರಕ್ಕೆ ಅಥವಾ ಮುನಿ ಆರ್ಯಿಕೆಯರ ಸಂಘಗಳಿಗೆ ಖಂಡಿತ ಕಳುಹಿಸಬೇಕು. ಕಡೇ ಪಕ್ಷ ವರ್ಷದಲ್ಲಿ 15 ದಿನವಾದರೂ ಮಕ್ಕಳಿಗೆ ಧಾರ್ಮಿಕ ಶಿಕ್ಷಣದ ಅಧ್ಯಯನ ಮಾಡಿದರೆ ಜೀವನ ಪೂರ್ತಿ ಸಂಸ್ಕಾರ ದೊರೆಯುತ್ತದೆ. ತೀರ್ಥಕ್ಷೇತ್ರದ ಗುರುಗಳ ಸಂಸ್ಕಾರ ಅತ್ಯಂತ ಮಹತ್ವದ್ದು.

ಅಷ್ಟಾಹ್ನಿಕ ಪರ್ವದಲ್ಲಿ ಇಂದ್ರಧ್ವಜ ಆರಾಧನೆ

ಲಖನೌದ ರಾಜಕುಮಾರಜೈನ ಅವರ ಪತ್ನಿ ಮತ್ತು ಮಗ ಸುಶೀಲಕುಮಾರ ಸಮೇತ ಬಂದಿಳಿದರು. ಹಾಗೆ ದೆಹಲಿಯಿಂದ ವಿಜೇಂದ್ರಕುಮಾರ ಜೈನರು ಸಪರಿವಾರ ಬಂದರು. ಇಬ್ಬರು ಎರಡು ಮಂಡಲಗಳನ್ನ ರಚಿಸಿ ಆರಾಧನೆ ಮಾಡಿಸಿದರು. ದೆಹಲಿಯವರು ತೇರಹ ಪಂಥಿಗಳು, ಲಖನೌನವರು ಬೀಸ ಪಂಥಿಗಳು.

1988ರ ಜುಲೈ 21ರಂದು ಬೆಳಗ್ಗೆ 7-30ಕ್ಕೆ ಧ್ವಜಾರೋಹಣ ಮಾಡಲ್ಪಟ್ಟಿತು. ಎಲ್ಲಾ ಭಕ್ತರು ಕ್ಷುಲ್ಲಕ ಮೋತಿಸಾಗರ ಜೊತೆ ನಶಿಯಾ ದರ್ಶನಕ್ಕೆ ಹೊರಟರು. ಹೀಗೆ ಗುರುಗಳ ಜೊತೆ ತೀರ್ಥಕ್ಷೇತ್ರ ದರ್ಶನಕ್ಕೆ ಹೋಗುವ ದೃಶ್ಯ ನನಗೆ ವಿಶೇಷವಾದ ಆನಂದದ ಅನುಭವವನ್ನು ತಂದುಕೊಟ್ಟಿತು. ಎರಡು ಆರಾಧನೆಗಳು ಒಟ್ಟಿಗೆ ನಡೆಯುತ್ತಿತ್ತು. ಜಂಬೂದ್ವೀಪದಲ್ಲಿ ಅನೇಕಬಾರಿ ಹೀಗೆ ಒಟ್ಟೊಟ್ಟಿಗೆ ಆರಾಧನೆಗಳು ನಡೆದಿದ್ದರು. ಈ ಸಲ ನಡೆಯುತ್ತಿದ್ದ ಪರಸ್ಪರ ಸೌಹಾರ್ದ ಮತ್ತು ಸಮನ್ವಯ ಮತ್ತೆ ನೋಡಲು ಎಲ್ಲಿ ಸಿಗುತ್ತದೆ. ಆರಾಧನೆಯು ಶಾಂತಿಯಿಂದ ನಡೆಯುತ್ತಿತ್ತು. ಆರಾಧನೆಯ ಸಮಯದಲ್ಲಿ ದೆಹಲಿಯಿಂದ ಬಸ್ಸುಗಳಲ್ಲಿ ಜನ ಬರುತ್ತಿದ್ದರು. ಆರಾಧನೆಯನ್ನು ನೋಡಿ ಉಪದೇಶ ಕೇಳಿ ಆನಂದದ ಅನುಭವವನ್ನು ಪಡೆಯುತ್ತಿದ್ದರು. ಜುಲೈ 30ಕ್ಕೆ ಪೂರ್ಣಾಹುತಿಯಾಗಿ ರಥಯಾತ್ರೆ ನಡೆದು, ಜುಲೈ 31ರಂದು 108 ಕಳಸಗಳಿಂದ ಮಹಾಭಿಷೇಕವಾಯಿತು.

ಅಜನ್ಮ ಬ್ರಹ್ಮಚರ್ಯದ ವ್ರತಗ್ರಹಣ

ಆಚಾರ್ಯ ಶ್ರೀ ವೀರಸಾಗರ ಸಂಸ್ಕೃತ ವಿದ್ಯಾಪೀಠದ ವಿದ್ಯಾರ್ಥಿ ಕಮಲೇಶಕುಮಾರ ಜೈನ ಮೈನಪುರಿ ಶಾಸ್ತ್ರೀ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಇಲ್ಲೇ ಹತ್ತಿರದ ಶಾಹಪುರಿ ಗ್ರಾಮದಲ್ಲಿ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡಲು ಹೋದನು. ಆಗಾಗ್ಗೆ ಇಲ್ಲಿಗೆ ಬಂದು ನನ್ನನ್ನು ಭೇಟಿ ಆಗುತ್ತಿದ್ದನು. ಜುಲೈ 1988ರಂದು

ಬೆಳಗ್ಗೆ ನನ್ನ ಬಳಿ ಬಂದು ಅಜನ್ಮ ಬ್ರಹ್ಮಚರ್ಯ ವ್ರತವನ್ನು ಗ್ರಹಣೆ ಮಾಡಿದನು. ಇದನ್ನು ಕಂಡು ಹರ್ಷವಾಯಿತು. ನಾನಂದೆ ನನ್ನ ಪ್ರೇರಣೆಯಿಂದ ಗುರುದೇವರ ಹೆಸರಿನಲ್ಲಿ ಸ್ಥಾಪಿತವಾದ ಈ ಸಂಸ್ಕೃತ ವಿದ್ಯಾಪೀಠದ ವಿದ್ಯಾರ್ಥಿ ಇಂದು ಆಜನ್ಮ ಬ್ರಹ್ಮಚರ್ಯ ವ್ರತವನ್ನು ಸ್ವೀಕರಿಸಿ ತನ್ನ ಮನುಷ್ಯ ಜೀವನವನ್ನು ಸಾರ್ಥಕ ಮಾಡಿಕೊಂಡಿದ್ದಾನೆ. ಮುಂದೆ ನಮ್ಮ ಗುರುದೇವರ ಹೆಸರನ್ನು ಎಲ್ಲ ಕಡೆಯೂ ಹರಡಲಿ ಇದೇ ನನ್ನ ಮನೋಭಿಲಾಷೆ. "ನಿಜವಾದ ಗುರುದಕ್ಷಿಣೆ".

ಅಸಲೀದಹೇಜ ನಾಟಕ

ಇಲ್ಲಿ ಗ್ರೀಷ್ಮಕಾಲದ ಅಧ್ಯಯನಕ್ಕಾಗಿ ಬಂದಿದ್ದ ಹುಡುಗಿಯರೇ ಒಂದು ಚಿಕ್ಕ ನಾಟಕವನ್ನು ಸಿದ್ಧಪಡಿಸಿಕೊಂಡಿದ್ದರು. ಬ್ರ. ಮಾಧುರಿಯೇ ಈ ನಾಟಕವನ್ನು ಬರೆದಿದ್ದಳು. ಜುಲೈ 28 ರಂದು ಮಧ್ಯಾಹ್ನ ಈ ನಾಟಕವನ್ನು ಪ್ರದರ್ಶಿಸಿದರು. ನಾಟಕದ ವಿಷಯವೆಂದರೆ ನನ್ನ ಜನ್ಮದಾತೆ ಮೋಹಿನಿಗೆ ಅವರ ತಂದೆ ಸುಖಿಪಾಲದಾಸರು ವರದಕ್ಷಿಣೆಯಾಗಿ "ಪದ್ಮನಂದಿಪಂಚವಿಂಶತಿಕ" ಎಂಬ ಶಾಸ್ತ್ರವನ್ನು ನೀಡಿದ್ದರು. ಅದನ್ನು ಸ್ವಾಧ್ಯಾಯ ಮಾಡಿ ಮಾಡಿ ತಾಯಿಯವರು ತನ್ನ ಗೃಹಸ್ಥ ಜೀವನವನ್ನು ಧರ್ಮಮಯವನ್ನಾಗಿ ಮಾಡಿಕೊಂಡು ತಮ್ಮ 58ನೆಯ ವಯಸ್ಸಿನಲ್ಲಿ ಆರ್ಯಿಕೆ ದೀಕ್ಷೆಯನ್ನು ಪಡೆದು ಆರ್ಯಿಕೆ ರತ್ನಮತಿ ಆದರು. 1985ರ ಜನವರಿ 15ರಂದು ಜಂಬೂದ್ವೀಪ ಸ್ಥಳದಲ್ಲಿಯೇ ಸಮಾಧಿ ಮರಣವನ್ನು ಹೊಂದಿದರು.

ಅವರು ತಮ್ಮ ಮಕ್ಕಳಿಗೆ ಹಾಲಿನ ಜೊತೆ ಧರ್ಮವನ್ನು ಕುಡಿಸಿದ್ದರು. ಇದರ ಫಲಸ್ವರೂಪವಾಗಿಯೇ ಅವರ ಸಂತಾನದಲ್ಲಿ ಆರ್ಯಿಕೆ ಜ್ಞಾನಮತಿ, ಆರ್ಯಿಕ ಅಭಯಮತಿ ಈಗ ನವದೀಕ್ಷಿತರಾದ ಚಂದನಾಮತಿ ಈ ಮೂವರು ಪುತ್ರಿಯರು ಅವರ ಮಕ್ಕಳೇ.

ಚಾತುರ್ಮಾಸಕ್ಕಾಗಿ ಪ್ರಾರ್ಥನೆ

ಈ ನಾಟಕವನ್ನು ನೋಡಿದ ದೆಹಲಿಯ ನಿವಾಸಿಗಳು (ನಾಟಕ ನೋಡಿ) ರೋಮಾಂಚಿತರಾದರು. ನಿಜವಾಗಿಯು ವರದಕ್ಷಿಣೆ ಎಂಬ ಕೆಟ್ಟ ಪದ್ಧತಿ ಸಮಾಜವನ್ನು ಬಾಧಿಸುತ್ತಿದ್ದ ಜೈನ ಸಮಾಜದಲ್ಲೂ ಅಶಾಂತಿಯನ್ನು ಹರಡುತ್ತದೆ. ಇದನ್ನು ಹೇಳುವ ಅವಶ್ಯಕತೆ ಇಲ್ಲ, ಪ್ರತಿಯೊಬ್ಬರಿಗೂ ಗೊತ್ತಿದೆ. ಇಂದು ಸಹ ಪ್ರಬುದ್ಧ ತಂದೆ ತಾಯಿಗಳು ತಮ್ಮ ಮಕ್ಕಳ ಮದುವೆಯಲ್ಲಿ ಧರ್ಮಶಾಸ್ತ್ರಗಳನ್ನು ಹಂಚಿದರೆ ವಿಶೇಷವಾಗಿ ತಮ್ಮ ಮಗಳಿಗೆ ಧರ್ಮಶಾಸ್ತ್ರವನ್ನು ಸ್ವಾಧ್ಯಾಯ ಮಾಡಲು ಪ್ರೇರಣೆ ಕೊಟ್ಟಂತೆ ಆಗುತ್ತದೆ. ಇದರಿಂದ ಸಮಾಜದ ಹಲವಾರು ಕೆಟ್ಟ ನಡವಳಿಕೆಯನ್ನು ದೂರಗೊಳಿಸಬಹುದು.

ಶ್ರಾವಕರು ನನ್ನ ಎದುರಿಗೆ ಶ್ರೀಫಲವನ್ನೇ ಇಟ್ಟು ಚಾತುರ್ಮಾಸಕ್ಕೆ ಜಂಬೂದ್ವೀಪದಲ್ಲೇ ನಿಲ್ಲಬೇಕೆಂದು ಪ್ರಾರ್ಥಿಸಿದರು. ಸಾಧು-ಸಾಧ್ವಿಯರು ಪ್ರತಿವರ್ಷವು ಚಾತುರ್ಮಾಸವನ್ನು ಮಾಡುತ್ತಲೇ ಇರುತ್ತಾರೆ. ಕೆಲವೊಮ್ಮೆ ಭಕ್ತರ ಕೋರಿಕೆಯಂತೆ ನಗರಗಳಲ್ಲಿ ಊರುಗಳಲ್ಲಿ ನಡೆಯುತ್ತದೆ. ಕೆಲವೊಮ್ಮೆ ವಿಶೇಷವಾಗಿ ಧರ್ಮರಾಧನೆಗಾಗಿಯೊ ಸ್ವಾಸ್ಥ್ಯದ ಬಲಹೀನತೆಯಿಂದಲೂ ತೀರ್ಥಕ್ಷೇತ್ರಗಳಲ್ಲಿಯೂ ಚಾತುರ್ಮಾಸ ಮಾಡುತ್ತಾರೆ. ತೀರ್ಥಕ್ಷೇತ್ರಗಳಲ್ಲಿಯೂ ಚಾತುರ್ಮಾಸ ಮಾಡುತ್ತಾರೆ. ಕ್ಷೇತ್ರಗಳಲ್ಲಿ ಶ್ರಾವಕರಿಗೆ ಇರುವ ವ್ಯವಸ್ಥೆ ಇದೆ. ಹೀಗಾಗಿ ಶ್ರಾವಕರ ಪ್ರಾರ್ಥನೆಯನ್ನು ಸ್ವೀಕರಿಸಿ ಜಂಬೂದ್ವೀಪದಲ್ಲಿಯ ಚಾತುರ್ಮಾಸ ಕೈಕೊಳ್ಳುವುದಾಗಿ ಘೋಷಿಸಿದೆ. ರಾತ್ರಿ 9ಗಂಟೆಗೆ ವಿಧಿವತ್ತಾಗಿ ಭಕ್ತಿ ಪಾಠ ನಡೆದು ವರ್ಷಾಯೋಗದ ಸ್ಥಾಪನೆ ಆಯಿತು.

ಧಾರ್ಮಿಕ ನಾಟಕ

ಇಂದು ಜೈನ ಸಮಾಜದಲ್ಲಿ ಎಲ್ಲ ಕಡೆಯಲ್ಲಿಯು ಧರ್ಮ ಕಥೆಗಳ ಆಧಾರದಿಂದ ಅನೇಕ ನಾಟಕಗಳನ್ನು ಆಡಿಸುತ್ತಿದ್ದಾರೆ. 30-40ವರ್ಷದಿಂದ ನಾಟಕ ಆಡುವವರು ಪುರುಷರಾದರೆ ಸ್ತ್ರೀಪಾತ್ರವನ್ನು ಅವರೇ ಮಾಡುತ್ತಿದ್ದರು. ಹಾಗೇ ಸ್ತ್ರೀಯರು ನಾಟಕವಾಡುವಾಗ ಪುರುಷ ಪಾತ್ರವನ್ನು ಸ್ತ್ರೀಯರೇ ಮಾಡುತ್ತಿದ್ದರು. ಮಹಾವೀರಜೀಯ ಆಶ್ರಮ. ದೆಹಲಿಯ ಬಾಲಾಶ್ರಮ ಮುಂತಾದ ಕಡೆ ಬಾಲಕಿಯರಿಂದ ಆಡಿಸಲಾಗುತ್ತದೆ.

ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಎಲ್ಲೋ ವಿಸಂಗತಿಯು ನಡೆಯುತ್ತಿರುವ ವಿಷಯವು ಕಿವಿಗೆ ಬಿತ್ತು. ಸಿನೆಮ ಟಿ.ವಿಯ ಪ್ರಭಾವದಿಂದ ಪ್ರಬುದ್ಧ ಮಹಿಳೆಯರೇ ನಮ್ಮ ಸಂಸ್ಕೃತಿಯನ್ನು ಕಡೆಗಣಿಸುತ್ತಿದ್ದಾರೆ. 10 ವರ್ಷದ ಮೊದಲು ಒಬ್ಬ ಮಹಿಳೆ ತನ್ನ ಮಗಳನ್ನ ಗಂಡ-ಹೆಂಡತಿಯಂತೆ ನಟಿಸಲು ಕಲಿಸಿದ್ದಾರೆ. ಇದನ್ನು ತಿಳಿದು ಆಕೆಯನ್ನು ಕರೆತಂದು ಕೇಳಿದಾಗ ಅವಳು ಮಾತಾಜೀ ಈ ಹುಡುಗ-ಹುಡುಗಿಯರಿಗೇನು ತಿಳಿಯುತ್ತದೆ. ಇದರಲ್ಲಿ ದೋಷವೇನು ಎಂದು ನನ್ನನ್ನು ಕೇಳಿದಳು, ಅದಕ್ಕೆ ನಾನು- ಬಾಯಿ ಇವರು ದೊಡ್ಡವರಾದ ಮೇಲೆ ಇವರಿಗೆ ಆ ಫೋಟೋ ನೋಡಿದಾಗ ಜ್ಞಾಪಕ ಬರುವುದಿಲ್ಲವೇ ಆಗ ಅವರು ಏನು ಯೋಚಿಸಬಹುದು. ಈಗ ಮಕ್ಕಳಿಗೆ 10-11 ವರ್ಷ ಚಿಕ್ಕವರೇನಲ್ಲ ಕೊನೆಗೆ ಅವಳು ನನ್ನ ಮಾತನ್ನು ಒಪ್ಪಿಕೊಂಡಳು. ಇಬ್ಬರು ಕನ್ಯೆಯರನ್ನೇ ಗಂಡ-ಹೆಂಡತಿಯನ್ನಾಗಿ ಮಾಡಿದರು. ಆಗ ನನಗೆ ಸಂತೋಷವಾಯಿತು.

ಬಂಜೂದ್ವೀಪದಲ್ಲಿ ನನ್ನ ಸಾನಿಧ್ಯದಲ್ಲಿ ನಡೆಯುವ ವಿದ್ವಾಂಸರುಗಳ ಶಿಕ್ಷಣ, ಶಿಬಿರ ಹಾಗೂ ಸೆಮಿನಾರುಗಳಲ್ಲಿ ಯಾವಾಗಲೂ ಹೇಳುತ್ತಿರುತ್ತೇನೆ.

ನಾಟಕಗಳಲ್ಲಿ ಯಾವ ಯಾವ ಉಲ್ಲೇಖನಗಳನ್ನು ಹೇಳಬಾರದು.

ಸುತ್ತತ್ಥಪಯವಿಣಟ್ಠೋ ವ್ಯಿಚ್ಛಾಇಟ್ಠೋ ಹು ಸೋ ಮುಣೆಯವ್ವೋ ।
ಖೇಡೆ ವಿ ಣ ಕಾಯವ್ವಂ ಪಾಣಿಪತ್ತಂ ಸಚೇಲಸ್ಸ ॥7॥
(ಸೂತ್ರಪಾಹುಢ ಶ್ರೀ ಕುಂದಕುಂದದೇವ)

ಅರ್ಥ

ಯಾವ ಮನುಷ್ಯನು ಸೂತ್ರದ ಅರ್ಥ ಮತ್ತು ಪದ ರಹಿತನಾಗಿರುತ್ತಾನೋ ಅವನನ್ನೆ ಮಿಥ್ಯಾದೃಷ್ಟಿ ಎಂದು ಕರೆಯುತ್ತಾರೆ. ವಸ್ತ್ರಸಹಿತನಾಗಿ ಆಟದಲ್ಲಿಯೂ ಕೂಡ ಪಾಣಿಪಾತ್ರದಲ್ಲಿ ಆಹಾರವನ್ನು ತೆಗೆದುಕೊಳ್ಳಬಾರದು. ಅರ್ಥವೇನೆಂದರೆ ಆಟ ಆಡುವುದರಲ್ಲಿ ದಿಗಂಬರ ಮುನಿಯ ವೇಷ ಮತ್ತು ಅವರ ಚರ್ಯೆಯನ್ನು ಆಡಿ ತೋರಿಸಬಾರದು.

ನಾಟಕವಾಡುವಾಗಲು ದಿಗಂಬರ ಮುನಿಗಳು ದೀಕ್ಷೆ ತೆಗೆದುಕೊಳ್ಳುವುನ್ನು ಅಂತೆಯೇ ಆರ್ಯಿಕೆ, ಕ್ಷುಲ್ಲಕ, ಐಲಕ ಮತ್ತು ಕ್ಷುಲ್ಲಿಕೆಯರ ಅಭಿನಯ ಮಾಡಬಾರದು. ತೀರ್ಥಂಕರ ಬಗ್ಗೆ ಹೇಳುವಾಗಲು ಅವರ ದೀಕ್ಷೆಗೆ ಪೂರ್ವದ ಅಂಶವನ್ನು ಮಾತ್ರ ಮಾಡಬೇಕು. ನಂತರದ ಅಭಿನಯವನ್ನು ಚಿತ್ರವನ್ನೇ ತೋರಿಸಿರಿ. ಪರದೆಯ ಹಿಂದಿನಿಂದ ಮಾತುಗಳನ್ನ ಹೇಳಬೇಕು. ದೀಕ್ಷೆ ತೆಗೆದುಕೊಂಡ ಮೇಲಿನ ದೃಶ್ಯಗಳನ್ನು ಯಾವುದೇ ಸಂದರ್ಭದಲ್ಲಿಯೂ ಗ್ರಹಣೆ ಮಾಡಬಾರದು. ಮಯೂರ ಪಿಂಛಿ ಬಹಳ ಪೂಜ್ಯವಾದುದು ಇದನ್ನು ನಾಟಕದಲ್ಲಿ

ಉಪಯೋಗಿಸಬಾರದು. ಈ ವಿಷಯಕ್ಕೆ ಉತ್ತಮ ಉದಾಹರಣೆ ಎಂದರೆ ಮುನಿಯ ಅಭಿನಯ ಮಾಡಿದ ಬ್ರಹ್ಮಗುಲಾಲನು ಮತ್ತೆ ಮನೆಗೆ ಹೋಗಲೇ ಇಲ್ಲ.

ನಾಟಕ ಮಾಡುವಾಗಲೂ ಹುಡುಗ-ಹುಡುಗಿಯರು ಗಂಡ-ಹೆಂಡತಿಯ ಅಭಿನಯ ಮಾಡುವುದು ಬೇಡ. ಒಟ್ಟಿಗೆ ಇರುವುದು ಬೇಡ. ಭಾರತೀಯ ನಾರಿ ಕನಸಿನಲ್ಲಿಯು ಬೇರೆಯವರನ್ನು ಗಂಡನೆಂದು ನೆನೆಯಬಾರದು. ಅಭಿನಯ ಮಾಡಬಾರದು. ಇದು ಅವರ ಶೀಲವ್ರತದ ಭಂಗವೆಂದು ಪರಿಗಣಿಸಲಾಗುತ್ತದೆ. ಈ ರೀತಿಯ ನಾಟಕಗಳಲ್ಲಿ ನಿಜವಾದ ಗಂಡ-ಹೆಂಡತಿಯು ಮಾಡಲಿ ಇಲ್ಲ ಹುಡುಗ-ಹುಡುಗರ ಇಲ್ಲವೇ ಹುಡುಗಿ-ಹುಡಗಿಯರೇ ಮಾಡಲಿ. ಇದು ಹಿಂದಿನಿಂದ ನಡೆದು ಬಂದ ಪದ್ಧತಿ. ಈಗ ಸಿನೆಮಾ, ನಾಟಕಗಳಲ್ಲಿ ಅಭಿನಯ ಎಂದು ಜನ ತಿಳಿದುಕೊಳ್ಳುತ್ತಿದ್ದಾರೆ. ಅದು ಭಾರತೀಯ ಸಂಸ್ಕೃತಿಗೆ ವಿರುದ್ಧವಾದುದು.

ಪಂಚಕಲ್ಯಾಣದಲ್ಲಿ ಭಗವಂತರ ತಂದೆ ತಾಯಿಗಳ ಪ್ರಸಂಗ ಬಂದಾಗ ಯಾರನ್ನು ಈ ಪಾತ್ರಕ್ಕೆ ಆರಿಸಿರುತ್ತಾರೋ ಅವರು ಹುಡುಗಿ ಇರಬಾರದು. ಮಹಿಳೆ ಇರಬಹುದು. ಪ್ರತಿಷ್ಠಾಚಾರ್ಯರು ಮಾತುಗಳನ್ನು ಹೇಳಿಕೊಡುತ್ತಾರೆ. ಆಗ ಅವರು ಬೇರೆ ಗಂಡಸರನ್ನು ಹೇ ಸ್ವಾಮಿನ್ ಎಂದು ಹೇಳುವುದು ಆ ಪಾತ್ರಕ್ಕೆ ಶೋಭೆಯಲ್ಲ. ಏಕೆಂದರೆ ಆ ಪಾತ್ರ ಉನ್ನತವಾದುದು. ಈ ಪಾತ್ರಕ್ಕೆ ಬೇರೆಯವರಿಗೆ ಹೇಳಿದರೆ ಕಳಂಕ ಬರುತ್ತದೆ. ನಿಜವಾದ ಗಂಡ-ಹೆಂಡತಿಯರನ್ನೇ ಆರಿಸಿ ಮಾಡಿಸಿ ಉನ್ನತ ಪಾತ್ರಗಳನ್ನು ನಾಟಕದಲ್ಲೂ ಬೇರೆಯವರಿಂದ ಮಾಡಿಸಿದರೆ ಚಾರಿತ್ರದ ಕಳಂಕತೆಯನ್ನು ತೋರಿಸಿದಂತೆ ಆಗುತ್ತದೆ. ಇದು ಧಾರ್ಮಿಕ ವೇದಿಕೆ ಇದರಲ್ಲಿ ತೋರಿಕೆಗೂ ಅಭಿನಯ ಮಾಡಬಾರದು.

ಚಾತುರ್ಮಾಸದ ಕಾರ್ಯಕ್ರಮ

ಇಲ್ಲಿ ಚಿಕ್ಕ ಪುಟ್ಟ ಶಾಂತಿಯ ಆರಾಧನೆಗಳು ನಡೆಯುತ್ತಲೇ ಇರುತ್ತವೆ. 1988ರ ಆಗಸ್ಟ್ 4ರಂದು ಮಾಧುರಿ 108 ಕಮಲ ಪುಷ್ಪಗಳನ್ನು ಮಹಾವೀರ ಸ್ವಾಮಿಗೆ ಅರ್ಪಿಸಿದರು. ನಾನೇ ಕುಳಿತು ಮಂತ್ರಗಳನ್ನು ಹೇಳುತ್ತಾ ಪುಷ್ಪಾರ್ಚನೆ ಮಾಡಿಸುವಾಗ ಬಹಳ ಆನಂದ ಉಂಟಾಯಿತು. ಆಗಸ್ಟ್ 21ರಂದು ದೆಹಲಿಯಿಂದ ಸುಮಾರು 52 ಹುಡುಗ-ಹುಡುಗಿಯರು ಬಂದು ಬೆಳಗ್ಗೆಯಿಂದ ಸಾಯಂಕಾಲದ ವರೆಗೆ ಇದ್ದು ಶಿಕ್ಷಣ ಆಶೀರ್ವಾದ ಪಡೆದು ಹೋದರು. ಈ ರೀತಿಯ ಸಂಸ್ಕಾರ ಜೀವನದಲ್ಲಿ ಬಹಳ ಅವಶ್ಯಕತೆ ಇದೆ.

ಕಲ್ಪದ್ರುಮ ಆರಾಧನೆ

ಬಡೌತದಲ್ಲಿ ದಶಲಕ್ಷಣ ಪರ್ವದಲ್ಲಿಮೊದಲೇ "ಕಲ್ಪದ್ರುಮ" ಆರಾಧನೆಯನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ರವೀಂದ್ರ ಮತ್ತು ಮಾಧುರಿಯರು ಹೋಗಬೇಕೆಂದು ನಿಶ್ಚಯವಾಗಿತ್ತು. ಆದರೆ ಮಾಧುರಿ ಬಚ್ಚಲಮನೆಯಲ್ಲಿ ಬಿದ್ದು ಕಾಲು ನೋವಾಗಿ ಅಲ್ಲಿಗೆ ಎರಡು ದಿನ ತಡವಾಗಿ ಹೋದಳು. ಅಲ್ಲಿಯು ಜನರಿಗೆ ಒಳ್ಳೆಯ ಪ್ರಭಾವನೆಯನ್ನು ಉಂಟು ಮಾಡಿಬಂದರು.

ಜಂಬೂದ್ವೀಪ ಸ್ಥಳದಲ್ಲಿ ದಶಲಕ್ಷಣ ಪರ್ವ

ದಶಲಕ್ಷಣ ಆಚರಣೆಗಾಗಿಯೇ ಇಲ್ಲಿಗೆ ಜನ ಹೊರಗಡೆ ಊರುಗಳಿಂದ ಬರುತ್ತಾರೆ. ಅಹಮದನಗರದಿಂದ ಚಂದೂಬಾಯಿ, ದಿನೇಶಬಾಯಿ, ಅವರ ತಾಯಿ ಬ್ರ. ಚಂದನಾ ಬೆಹನ ಬಂದಿದ್ದರು. ಒಬ್ಬ ಮಹಿಳೆ ಸಕ್ಕರೆ

ಮತ್ತು ಒಣಗಿದ ಹಣ್ಣುಗಳ ರಸವನ್ನು ಮಾತ್ರ ತೆಗೆದುಕೊಂಡು ಹತ್ತುದಿನವು ಇದ್ದರು. ಸಂಸ್ಥಾನದ ಆವಾಸ ಪ್ರಬಂಧಕ ಸತ್ಯಪ್ರಕಾಶ ಜೈನರು 5 ಉಪವಾಸಗಳನ್ನು ಮಾಡಿದರು. ಪ್ರತಿದಿನ ಪ್ರಾತಃಕಾಲ ಪರ್ವಪೂಜೆ ಸಮಯಸಾರದ ಸ್ವಾಧ್ಯಾಯ ನಡೆಯುತ್ತಿತ್ತು. ಮಧ್ಯಾಹ್ನದಲ್ಲಿ ಸರಸ್ವತಿಯ ಪೂಜೆ ಹಾಗೂ ತತ್ತ್ವಾರ್ಥಸೂತ್ರದ ಪೂಜೆ ಆಗುತ್ತಿತ್ತು. ಕ್ಷುಲ್ಲಕ ಮೋತಿ ಸಾಗರರು ಒಂದೊಂದು ಅಧ್ಯಾಯವನ್ನು ಅರ್ಥಸಹಿತ ಓದಿ ಹೇಳುತ್ತಿದ್ದರು. ಅನಂತರ ಆಯಾ ಧರ್ಮದ ಬಗ್ಗೆ ನನ್ನ ಪ್ರವಚನ ಇರುತ್ತಿತ್ತು. ವ್ರತಿಗಳನ್ನು ಕೊನೆಯ ದಿನ ಸನ್ಮಾನಿಸಲಾಯಿತು. ಇದರಿಂದ ಬೇರೆಯವರಿಗೂ ಪ್ರೇರಣೆಯಾಗಲಿ ಎಂದು ಮುಖ್ಯ ಉದ್ದೇಶವಾಗಿದೆ.

ಹಾಪುಡದಲ್ಲಿ ಇಂದ್ರಧ್ವಜ ಆರಾಧನೆ

ಹಾಪುಡದಲ್ಲಿ ಆಶ್ವೀಜ ಕೃಷ್ಣಪಕ್ಷ ಪಂಚಮಿಯಂದು ಇಂದ್ರಧ್ವಜ ಆರಾಧನೆಗಾಗಿ ಧ್ವಜಾರೋಹಣ ಮಾಡಿದರು. ಶ್ರೀ ಶಿಖರಚಂದ ಜೈನರು ಆಗ್ರಹ ಪೂರ್ವಕವಾಗಿ ಮಾಧುರಿಯನ್ನು ಕರೆದೊಯ್ದರು. ಯಾರೇ ಆಗಲಿ ಒಮ್ಮೆ ಮಾಧುರಿಯ ಬಾಯಿಂದ ಆರಾಧನೆಯ ಮಂತ್ರಗಳನ್ನು ಕೇಳಿದರೆಂದರೆ ಆಕರ್ಷಿತರಾಗುತ್ತಿದ್ದರು. ಅವಳ ಕಂಠದಿಂದ ಹೊರಡುತ್ತಿದ್ದ ಧ್ವನಿ ಉಚ್ಚಾರಣೆಗಳ ಮುಂದೆ ಸಂಗೀತಗಾರರ ಧ್ವನಿಯು ಸಪ್ಪೆ ಎನಿಸುತ್ತಿತ್ತು. ಇದು ಭಗವಂತ ಅವಳಿಗೆ ಕೊಟ್ಟಿರುವ ಅಪೂರ್ವ ಕೊಡುಗೆ. ಅವಳ ಪೂರ್ವ ಪುಣ್ಯವು ಹೌದು.

ಕಲ್ಪದ್ರುಮ ಆರಾಧನೆ

1988ರ ಅಕ್ಟೋಬರ್ 16ರಂದು ಇಲ್ಲಿ ಕಲ್ಪದ್ರುಮ ಆರಾಧನೆಯನ್ನು ಹೈದರಾಬಾದಿನ ಮಾಂಗೀಲಾಲ ಪಹಾಡೆಯವರು ಸಪರಿವಾರ ಬಂದು ನಡೆಸಿದರು. ಒಳ್ಳೆಯ ಮನಸ್ಸಿನಿಂದ ಚತುರ್ವಿಧ ದಾನಗಳನ್ನು ಕೊಟ್ಟರು. ಆರಾಧನೆ ಮಾಡಿಸುವವರಿಗೆ ಪ್ರತಿಷ್ಠಾಚಾರ್ಯರು ಮತ್ತೆ ಮತ್ತೆ ಚಕ್ರವರ್ತಿ ಎಂದು ಕರೆಯುವುದು ಮಾಡಿಸುವವರಿಗೆ ಒಂದು ರೀತಿಯ ಅಪೂರ್ವವಾದ ಆನಂದ ತಂದುಕೊಡುತ್ತದೆ. ಪಂಚಕಲ್ಯಾಣಗಳನ್ನು ಇಂದ್ರನ ಪದವಿಯನ್ನು ಹರಾಜುಗಳಲ್ಲಿ ತೆಗೆದುಕೊಳ್ಳುವವರು ಇದೇ ಆನಂದದ ಅನುಭವ ಪಡೆಯುತ್ತಾರೆ. ನನ್ನ ಉಪದೇಶಗಳನ್ನೆಲ್ಲ ಸಂಗ್ರಹಿಸಿ ಕು. ಮಾಧುರಿಯು "ಜ್ಞಾನರಶ್ಮಿ" ಎಂದು ಒಂದು ಚಿಕ್ಕ ಪುಸ್ತಕವನ್ನು ಸಿದ್ಧಪಡಿಸಿದ್ದಳು. ಇದರ ಪ್ರಕಾಶನಕ್ಕಾಗಿ ಅಜೈನರಾದಿಯಾಗಿ ದಾನವನ್ನು ಕೊಟ್ಟರು.

ಆರ್ಷಗ್ರಂಥಗಳಲ್ಲಿ ಪೂಜೆಯು ನಾಲ್ಕು ಪ್ರಕಾರವಾಗಿ ಹೇಳಿದೆ. ಸದಾರ್ಚನ, ಚತುರ್ಮುಖ, ಕಲ್ಪದ್ರುಮ ಮತ್ತು ಅಷ್ಟಾಹ್ನಿಕ ಎಂದು. ಪ್ರತಿದಿನ ಅಷ್ಟ ದ್ರವ್ಯಗಳನ್ನು ಮನೆಯಿಂದ ತಂದು ಜಿನ ಪೂಜೆ ಮಾಡುವುದು. ಸದಾರ್ಚನ, ಜಿನಬಿಂಬಗಳನ್ನು ಮಾಡಿಸಿ, ಪೂಜೆಗಾಗಿ, ಗದ್ದೆ ಹೊಲಗಳನ್ನು ದಾನಮಾಡುವುದೇ ಸದಾರ್ಚನ. ಮಹಾಕಿರೀಟದಾರಿಗಳು ನಡೆಸುವ ಆರಾಧನೆಗಳನ್ನು "ಚತುರ್ಮುಖ ಪೂಜೆ" ಎಂದು ಇದನ್ನು ಸರ್ವತೋಭದ್ರ ಪೂಜೆ ಎಂದು ಕರೆಯುತ್ತಾರೆ. ಚಕ್ರವರ್ತಿಗಳಿಂದ ಕೇಳಿದ್ದನ್ನೆಲ್ಲ ದಾನ ಪಡೆದು ಸಮಸ್ತಜನಗಳನ್ನು ಸಂತೃಪ್ತಿಗೊಳಿಸಿ ಮಾಡುವುದೇ ಜಿನಯಜ್ಞವೆಂದೂ. ಇದನ್ನು "ಕಲ್ಪದ್ರುಮ" ಆರಾಧನೆ ಎಂದು ಕರೆಯಲಾಗುತ್ತದೆ. ಕಾರ್ತೀಕ, ಫಾಲ್ಗುಣ ಮತ್ತು ಆಷಾಢ ಮಾಸದ ಕೊನೆಯ ಎಂಟುದಿನಗಳಲ್ಲಿ ನಂದೀಶ್ವರ ದ್ವೀಪದ ಜಿನಾಲಯಗಳಲ್ಲಿ ದೇವತೆಗಳು ಬಂದು ಪೂಜೆ ಸಲ್ಲಿಸುತ್ತಾರೆ ಇದೆ-ಅಷ್ಟಾಹ್ನಿಕ ಪೂಜೆ. ಇದಲ್ಲದೆ "ಇಂದ್ರಧ್ವಜ" ಮಹಾಯಜ್ಞವೆಂದಿದೆ. ಇದು ಇಂದ್ರರುಗಳಿಂದ ಮಾಡಲ್ಪಡುವ ಪೂಜೆಯಾಗಿದೆ.

ಶರದ ಪೂರ್ಣಿಮೆ

ಅಕ್ಟೋಬರ್ 25ರಂದು ನನ್ನ ಜನ್ಮದಿನಾಂಕ. ಆದಿನವೇ ಶರದಪೂರ್ಣಿಮೆ ಸಹ. ಇದಕ್ಕಾಗಿಯೇ ಮಾಂಗೀಲಾಲ ಜೀ ಪಹಾಡೆ, ಅವರ ಸಹೋದರ ಬಾಬೂಲಾಲಜೀ ಪಹಾಡೆ ಅವರಿಬ್ಬರ ಸೊಸೆಯಂದಿರು ಸೇರಿ ಬಂದು ಚಿಕ್ಕ ನಾಟಕವನ್ನು ಪ್ರಸ್ತುತಗೊಳಿಸಿದರು.

ಇದರ ಭೂಮಿಕೆಯನ್ನು ಟಿಕೈತನಗರದ ವೀರಕುಮಾರ ಸಿದ್ಧಪಡಿಸಿ ಕೊಟ್ಟಿದ್ದರು. 1964ರಲ್ಲಿ ಹೈದರಾಬಾದಿನಲ್ಲಿ ನಾನು ಚಾತುರ್ಮಾಸ ಕೈಕೊಂಡಂದಿನಿಂದ ಪಹಾಡೆ ಪರಿವಾರದವರು ನನ್ನ ಅನನ್ಯ ಭಕ್ತರಾಗಿದ್ದಾರೆ. ಗುರುಭಕ್ತಿಯಿಂದಲೇ ಈ ಕೌತುಕವನ್ನು ಮಾಡಿದ್ದರು.

ಈ ಸಂದರ್ಭದಲ್ಲಿ ಬಾಬೂಲಾಲ ಪಹಾಡೆಯವರ (ಪುತ್ರವಧು) ಸೊಸೆ ಆಶಾ ಒಂದು ಲಕ್ಷದ ಹತ್ತುಸಾವಿರ ರೂ.ಗಳ ಕೊಡುಗೆಯನ್ನು ಘೋಷಿಸಿದರು. ಅದು ವಿಶೇಷವಾಗಿ ಜ್ಞಾನದಾಹವನ್ನು ತಣಿಸುವಂತಹ ಗ್ರಂಥಗಳ ಪ್ರಕಾಶನಕ್ಕಾಗಿ. ಈ ದ್ರವ್ಯದಿಂದಲೇ ಸಮಯಸಾರದ ಪೂರ್ವಾರ್ಧದ ಪ್ರಕಾಶನ ಈಗ ಆಗಿದೆ. ಇದು ಕೇವಲ 1½ ತಿಂಗಳಲ್ಲೇ ಜನಗಳ ಕೈ ತಲುಪಿದೆ.[1]

ಈ ಆರಾಧನೆ ನಡೆಯುವಾಗ ಚಾರುಕೀರ್ತಿ ಭಟ್ಟಾರಕರು ಇಲ್ಲಿಗೆ ಆಗಮಿಸಿದ್ದರು. ಅವರು ಶ್ರವಣಬೆಳಗೊಳದಲ್ಲಿ ಈ ಆರಾಧನೆಯನ್ನು ಮಾಡಿಸುವುದಾಗಿ ಹೇಳಿ ನವಂಬರ್ 16ರಂದು ದಿನವನ್ನು ಘೋಷಿಸಿದರು. ಇಲ್ಲಿಂದಲೇ ಸಂಗೀತಗಾರರು ಉಪಕರಣಗಳು ಧರ್ಮಚಕ್ರ ಮಾನಸ್ತಂಭ ಎಲ್ಲವನ್ನು ಕಳುಹಿಸುವುದಾಗಿ ನಿರ್ಣಯವಾಯಿತು. ಇವರಿಂದ ನಡೆಸಲ್ಪಟ್ಟ ಈ ಆರಾಧನೆಯು ದಕ್ಷಿಣ ಭಾರತದಲ್ಲಿ ಒಂದು ಪ್ರಮುಖ ಆಕರ್ಷಣೆಯನ್ನು ಪಡೆಯಿತು. ಬಸ್ಸುಗಳಲ್ಲಿ ಆಗಮಿಸಿದ ಯಾತ್ರಿಗಳು ಆರಾಧನೆಯನ್ನು ಮುಕ್ತಕಂಠದಿಂದ ಹೊಗಳಿದರು.

ಇಲ್ಲಿಯವರೆಗೆ ಸಂಗ್ರಹಿಸಿದ ಮಾಹಿತಿಯಂತೆ ಶ್ರವಣಬೆಳಗೊಳದಲ್ಲಿ ನಡೆದ ಆರಾಧನೆ 8ನೆಯದು 1. ಫೆಬ್ರವರಿ 24-1988 ರಂದು ಜಂಬೂದ್ವೀಪದಲ್ಲಿ. 2. ಫೆಬ್ರವರಿ 24-1988ರಂದು ತೇಜಪುರ ಅಸ್ಸಾಂನಲ್ಲಿ. 3. ಭಿಂಡರನಲ್ಲಿ ಆಚಾರ್ಯ ಅಜಿತಸಾಗರರ ಸಾನಿಧ್ಯದಲ್ಲಿ. 4. ಬಿಹಾರನ ಝುಮರೀತಲೈಯನಲ್ಲಿ 5. ಬಡೌತ ಉತ್ತರ ಪ್ರದೇಶದ ಬಡೌತದಲ್ಲಿ 6. ದೆಹಲಿಯ ಗೌತಮಪುರದಲ್ಲಿ 7. ಹಸ್ತಿನಾಪುರದ ಜಂಬೂದ್ವೀಪದಲ್ಲಿ. 8. ಕರ್ನಾಟಕದ ಶ್ರವಣಬೆಳಗೊಳದಲ್ಲಿ. ಬೇರೆ ಕಡೆಯಲ್ಲಿಯೂ ನಡೆದಿರಬಹುದು. ಆದರೆ ಅವರು ಇಲ್ಲಿಗೆ ಸಮಾಚಾರ ಕಳುಹಿಸಿಲ್ಲ.

ನನ್ನ ಅನುಭವದಂತೆ ಇಂದು ಶ್ರಾವಕರು ಅನೇಕ ಸಮಸ್ಯೆಗಳಿಂದ ಪಾರಾಗಲು ಗುರುಗಳ ಹತ್ತಿರ, ಹಾಗೆ ನನ್ನ ಹತ್ತಿರ ಬಂದು ಯಂತ್ರ ಮಂತ್ರಗಳನ್ನು ತೆಗೆದುಕೊಳ್ಳಲು ಬಯಸುತ್ತಾರೆ. ಆದರೆ ಜಾಪ್ಯವನ್ನು ಮಾಡುವುದರಲ್ಲಿ ಅಸಮರ್ಥನೆಯನ್ನು ವ್ಯಕ್ತಪಡಿಸುತ್ತಾರೆ. ಇಂತಹ ಜನಗಳಿಗಾಗಿ ಈ ಆರಾಧನೆಯು ಒಂದು ಅದ್ಭುತವಾದ ವರವಾಗಿದೆ. 10-12 ದಿನಗಳು ಈ ಆರಾಧನೆಯಲ್ಲಿ ತಲ್ಲೀನರಾಗಿ ಭಕ್ತಿರಸದಿಂದ ಉನ್ಮತ್ತರಾಗುತ್ತಾರೆ. ಹಾಗೆ ನಿಯಮದಿಂದ ಬಯಸಿದ ಕಾರ್ಯಗಳಲ್ಲಿ ಸಿದ್ಧಿಯನ್ನು ಪಡೆದಿರುವುದನ್ನು ವ್ಯಕ್ತಗೊಳಿಸಲು ಅವರೇ ಸ್ವಯಂ ಬಂದಿದ್ದಾರೆ. ಮಾತಾಜೀ ಯೋಚಿಸಿರುವುದಕ್ಕಿಂತ ಹೆಚ್ಚಿನ ಲಾಭವನ್ನು ನಾನು ಪಡೆದಿದ್ದೇನೆ ಎಂದು.

ಜಿನೇಂದ್ರ ಭಕ್ತಿಯಲ್ಲಿ ನಿಜವಾಗಿಯು ಮೋಕ್ಷಫಲವನ್ನು ಪಡೆಯುವ ಸಾರ್ಥಕತೆ ಇರುವುದರಿಂದ ಈ ಲೌಕಿಕ ಅಭೀಷ್ಮಗಳು ಸಿದ್ಧಿಯಾಗುವುದರಲ್ಲಿ ಹೆಚ್ಚಿನ ಆಶ್ಚರ್ಯವಿಲ್ಲ.

ವರ್ಷಾಯೋಗದ ಸಮಾರೋಪ ಸಮಾರಂಭ

1988ರ ನವೆಂಬರ್ 8ರ ಹಿಂದಿನ ರಾತ್ರಿಯೆ - ನಾವು ಸಾಧುಗಳೆಲ್ಲ ಕ್ರಿಯಾಕಲಾಪಗಳನ್ನು ಮಾಡಿ ಚಾತುರ್ಮಾಸದ ವಿಸರ್ಜನೆಯನ್ನು ಮಾಡಿದ್ದೆವು. ಕಾರ್ತಿಕ ಕೃಷ್ಣ ಅಮಾವಾಸ್ಯೆ ಎಂದರೆ ನವಂಬರ್ 9ರಂದು ಬೆಳಗಿನ ಜಾವವೇ ಶ್ರಾವಕರೆಲ್ಲ ಬಂದು ಭಗವಂತರಿಗೆ ಪೂಜೆ ಸಲ್ಲಿಸಿ "ನಿರ್ವಾಣಲಾಡುವನ್ನು" ಸಲ್ಲಿಸಿದರು. ಅದೇ ದಿನ ದಕ್ಷಿಣದಿಂದ ಬಸ್ಸಿನಲ್ಲಿ ಯಾತ್ರಿಕರು ಬಂದಿದ್ದರು. ಉಪದೇಶ ಕಾರ್ಯಕ್ರಮವು ನಡೆಯಿತು.

ದೀಪಾವಳಿಯ ಪೂಜೆ

ಸಾಯಂಕಾಲ ಸಂಘದಲ್ಲಿದ್ದ ಬ್ರಹ್ಮಚಾರಿ, ಬ್ರಹ್ಮಚಾರಿಣಿಯರು ನನ್ನಿಂದ ರಚಿತವಾಗಿದ್ದ ಗೌಮತಸ್ವಾಮಿಯವರ ಪೂಜೆ ಮತ್ತು ಕೇವಲಜ್ಞಾನ ಮಹಾಲಕ್ಷ್ಮಿಯ ಪೂಜೆಯನ್ನು ನೆರವೇರಿಸಿದರು. ಕಾರ್ಯಾಲಯದಲ್ಲಿ ರವೀಂದ್ರಕುಮಾರರು ಪೂಜೆ ಮಾಡಿ ತನ್ನ ಲೆಕ್ಕಾಚಾರದ ಪುಸ್ತಕದಲ್ಲಿ "ಸ್ವಸ್ತಿಕ" ಶ್ರೀ ಬರೆದು ಹೂಸ ವರ್ಷದ ಮಂಗಳ ಹಾಡಿದನು. ಸಾಯಂಕಾಲ ಶ್ರಾವಕರು ದೀಪಗಳನ್ನು ಬೆಳಗಿ ಇಡೀ ಜಂಬೂದ್ವೀಪ ಹಾಗೂ ಸುಮೇರು ಪರ್ವತವನ್ನೇ ಜಗಮಗಗೊಳಿಸಿರು.

ಮಾರನೆಯ ದಿನವೇ ಜೈನರಾದ ನಮಗೆ ಹೊಸವರ್ಷ. ಏಕೆಂದರೆ ನಾವು ಮಹಾವೀರ ಸಂವತ್ಸರ್ನೇ ಆಚರಿಸಬೇಕು. ಇದರ ಮೇಲೆ ನಾನೊಂದು ಲೇಖನವನ್ನು ಬರೆದಿದ್ದೇನೆ.

ಹೊಸ ವರ್ಷದ ಅಭಿನಂದನೆ

ಇಂದು ಭಾರತದಲ್ಲಿ ವೀರನಿರ್ವಾಣ ಸಂವತ್ತು ವಿಕ್ರಮ ಸಂವತ್ತು ಶಾಲಿವಾಹನ ಶಕ ಹಾಗೆ ಕ್ರಿಸ್ತಶಕವನ್ನು ಅನುಸರಿಸುವ ಪದ್ಧತಿ ಬೆಳೆದು ಬಂದಿದೆ. ಎಲ್ಲರು ಈ ಪ್ರಥಮದಿನವನ್ನು ಹೊಸವರ್ಷದ ಅಭಿನಂದನೆಯೊಂದಿಗೆ ಪರಸ್ಪರ ಹಂಚಿಕೊಳ್ಳುತ್ತಾರೆ. ಜೈನ ಧರ್ಮಾವಲಂಭಿಗಳು ಇದರಲ್ಲಿ ಯಾವ ಸಂವತ್ಸರ್ನು ಆಚರಿಸಿ, ಅಭಿನಂದನೆಗಳನ್ನು ವಿನಿಮಯ ಮಾಡಿಕೊಳ್ಳಬೇಕು.

ಇಂದು ಕ್ರಿಸ್ತಶಕವೇ ಎಲ್ಲಾಕಡೆಯು ಪ್ರಚಲಿತದಲ್ಲಿರುವುದು, ಪ್ರಾಯಶಃ ಕ್ಯಾಲೆಂಡರ್, ಡೈರಿ ಎಲ್ಲದರಲ್ಲೂ ಅದೇ ಕಂಡುಬರುತ್ತದೆ. ನಾವು ಯೋಚಿಸಿದರೆ ಆಂಗ್ಲರು ಭಾರತದಲ್ಲಿ ಆಡಳಿತ ನಡೆಸಿ ನಮ್ಮ ಮೇಲೆ ಎಷ್ಟು ಪ್ರಭಾವವನ್ನು ಬೀರಿದ್ದಾರೆಂದರೆ ಅದರಿಂದ ಹೊರಬರಲು ಸಾಧ್ಯವೇ ಇಲ್ಲ. ಇದಾವುದು ಮನಸ್ಸಿಗೆ ಬೇಡ. ಈಗ 1988ನೇ ಇಸವಿ ನಡೆಯುತ್ತಿದೆ. ಅದನ್ನು ಒಪ್ಪಿಕೊಳ್ಳೋಣ ಏನು ತೊಂದರೆ ಇಲ್ಲ.

ಕರ್ನಾಟಕ ಮತ್ತು ಮಹಾರಾಷ್ಟ್ರ, ಗುಜರಾತಿನಲ್ಲಿ ಹೆಚ್ಚಾಗಿ ವಿಕ್ರಮ ಸಂವತ್ಸರ್ನ ಬಳಕೆಗೆ ಮಹತ್ವ ಕೊಡುತ್ತಾರೆ. ನಾನು ಶ್ರವಣಬೆಳಗೊಳದಲ್ಲಿ ಇದ್ದಾಗ, ಜನರು ಅದೇ ಕ್ಷೇತ್ರದಲ್ಲಿ ಇದ್ದರು. ಮೇಲೆ ಹೋಗಿ ಸ್ವಾಮಿಯ ದರ್ಶನ ಮಾಡುತ್ತಿರಲಿಲ್ಲ. ಆದರೂ ಸಹ ಜೈನ ಬಂಧುಗಳು ಚೈತ್ರಮಾಸದ ಅಮಾವಾಸ್ಯೆಯ ದಿನ ರಾತ್ರಿ ಬೆಟ್ಟದ ಮೇಲೆ ಹೋಗಿ ಅಲ್ಲೆ ಮಲಗಿ ಬೆಳಗ್ಗೆ ಆಗುತ್ತಿದ್ದಂತೆ ಹೊಸವರ್ಷದಲ್ಲಿ ಮೊಟ್ಟಮೊದಲಿಗೆ ಸ್ವಾಮಿಯ

ದರ್ಶನಮಾಡಿ ಒಬ್ಬರಿಗೆ ಒಬ್ಬರು ಹೊಸವರ್ಷದ ಅಭಿನಂದನೆಗಳನ್ನು ಹೇಳಿಕೊಳ್ಳುತ್ತಾ ಬೆಟ್ಟ ಇಳಿಯುವ ದೃಶ್ಯ ಕಂಡಿದ್ದೇನೆ. ಚೈತ್ರಮಾಸ ಪಾಡ್ಯದಿಂದ ವಿಕ್ರಮ ಸಂವತ್ಸರ ಪ್ರಾರಂಭವಾಗುತ್ತದೆ. ಇಂದು ಪಂಚಾಂಗ ಇದೇ ಸಂವತ್ಸರನಲ್ಲಿ ನಡೆಯುತ್ತಿದೆ.

ಈಗ 15-16 ವರ್ಷದಿಂದ ವೀರನಿರ್ವಾಣ ಮಹೋತ್ಸವದ ಚರ್ಚೆ ಜೈನರಲ್ಲದೆ, ಜೈನೇತರರಲ್ಲೂ ಇಡೀ ದೇಶದಲ್ಲಿ ನಡೆಯುತ್ತಿದೆ. ಮಹಾವೀರರ 2500ನೇ ವರ್ಷದ ನಿರ್ವಾಣ ಮಹೋತ್ಸವವನ್ನು (ಜೈನ) ನಾಲ್ಕು ಸಂಪ್ರದಾಯದ ಜನರು ಒಂದು ವರ್ಷದವರೆಗೂ ಆಚರಿಸಿ, ಅಂತಿಮ ತೀರ್ಥಂಕರರ ಅಹಿಂಸಾ ಧರ್ಮದ ಪ್ರಚಾರವನ್ನು ಭಾರತದಲ್ಲೆಲ್ಲ ಮಾಡಿದ್ದಾರೆ. ಆಗ ತಿಥಿ ದರ್ಪಣವನ್ನು "ವೀರನಿರ್ವಾಣ ಸಂವತ್ಸರ"ನಿಂದ ಪ್ರಕಟಗೊಳಿಸಲಾಯಿತು. ಪಂ. ನಾಥೂಮಲಶಾಸ್ತ್ರಿಯವರಿಂದ "ಜೈನತಿಥಿದರ್ಪಣ"ವು ಪ್ರಕಾಶಿತವಾಗಿದೆ. ಅದು ಯಾವಾಗಿನಿಂದ ಚಾಲನೆಯಲ್ಲಿದೆ ನನಗೆ ತಿಳಿದಿಲ್ಲ. ಆದರೂ ಇದೊಂದು ಪ್ರಾಮಾಣಿಕ ಗ್ರಂಥವೆಂದು ಪರಿಗಣಿಸಲಾಗಿದೆ.

ಇಂದು ಜೈನಸಮಾಜದ ಜೈನರೇ ಅಲ್ಲದೆ ಜೈನೇತರರು ಕೂಡ ವೀರನಿರ್ವಾಣ ದಿನ ರಾತ್ರಿಯಲ್ಲಿ ಗಣೇಶಪೂಜೆ, ಲಕ್ಷ್ಮ್ಯಯ ಪೂಜೆಯನ್ನು ಮಾಡಿ ಹಳೆಯ ಲೆಕ್ಕ ಮುಗಿಸಿ ಹೊಸಲೆಕ್ಕ ಪ್ರಾರಂಭಿಸುತ್ತಾರೆ ಪ್ರಬುದ್ಧ ಜೈನರು ಇಂದು-ತಮ್ಮ ತಮ್ಮ ಅಂಗಡಿಗಳಲ್ಲಿ ಯಂತ್ರ ಅಥವಾ ಜಿನವಾಣಿಯನ್ನು ಇಟ್ಟು ಭ. ಮಹಾವೀರರ ಪೂಜೆ, ಸರಸ್ವತಿಯ ಪೂಜೆಯನ್ನು ಮಾಡಿ ಅಷ್ಟಕಗಳನ್ನು ಮಾಡಿ ಹೊಸಲೆಕ್ಕ ಪ್ರಾರಂಭ ಮಾಡಲು ಗಳಿಗೆ ನೋಡಿ ಸ್ವಸ್ತಿಕವನ್ನು ಬರೆದು, ಶ್ರೀ ಮಹಾವೀರಾಯ ನಮಃ ಎಂದು ಬರೆದು ಪ್ರಾರಂಭಿಸುತ್ತಾರೆ.

ಈ ದಿನ ಲಕ್ಷ್ಮಿ ಮತ್ತು ಗಣೇಶ ಪೂಜೆಯ ಸ್ಥಾನದಲ್ಲಿ ಸರಿಯಾದ ತಿಳಿವಳಿಕೆಯನ್ನು ಉಂಟುಮಾಡಲು ನಾನು ಶ್ರೀ "ಗಣಧರ ಪೂಜೆ" ಮತ್ತು ಕೇವಲಜ್ಞಾನ ಮಹಾಲಕ್ಷ್ಮ್ಯಯ ಪೂಜೆಯನ್ನು ಸಿದ್ಧಪಡಿಸಿದೆ. ಕಾರ್ತಿಕ ಮಾಸದ ಅಮಾವಾಸ್ಯೆಯ ದಿನ ಬೆಳಗ್ಗಿನ ವೇಳೆಯಲ್ಲಿ ಭ. ಮಹಾವೀರರು ಪಾವಾಪುರಿಯಿಂದ ನಿರ್ವಾಣವನ್ನು ಹೊಂದಿದರು ಇದರ ಉಪಲಕ್ಷಕ್ಕಾಗಿಯೆ ಸ್ವರ್ಗದಿಂದ ಅಸಂಖ್ಯಾತ ದೇವ-ದೇವಿಯರು ಬಂದು ಪಾವಾಪುರಿಯಲ್ಲಿ ಭಗವಂತರ ನಿರ್ವಾಣೋತ್ಸವವನ್ನು ಆಚರಿಸಿದರು ದೀಪಗಳನ್ನು ಬೆಳಗಿ ಉತ್ಸವವನ್ನು ಆಚರಿಸಿದರು. ಇದನ್ನು ಇಡೀ ಭಾರತವರ್ಷದಲ್ಲಿ ಸಾಯಂಕಾಲದಲ್ಲಿ ಎಲ್ಲ ಕಡೇ ದೀಪ ಬೆಳಗಿ "ದೀಪಮಾಲಿಕೆ"ಯ ಹಬ್ಬವನ್ನಾಗಿ ಆಚರಿಸಲಾಗುತ್ತಿದೆ ಹೀಗೆಂದು ಹರಿವಂಶ ಪುರಾಣದಲ್ಲಿ ಹೇಳಲಾಗಿದೆ.

ತತಸ್ತು ಲೋಕಃ ಪ್ರತಿವರ್ಷಮಾದರಾತ್ಪ್ರಸಿದ್ಧ ದೀಪಾಲಿಕಯಾತ್ರ ಭಾರತೇ।
ಸಮುದ್ಯತಃ ಪೂಜಯಿತುಂ ಜಿನೇಶ್ವರಂ ಜಿನೇಂದ್ರ ನಿರ್ವಾಣ ಭೂತಿ ಭಕ್ತಿಭಾಕ್ ॥೨೧॥

ಭ ಮಹಾವೀರರು (ಯಾವಾಗಲು) ಭಕ್ತ ಸಮೂಹದೊಡನೆ ಪಾವಾನಗರಿಯನ್ನು ತಲುಪಿ ಮತ್ತು ಅಲ್ಲಿನ ಮನೋಹರೋದ್ಯಾನ ಎಂಬ ವನದಲ್ಲಿ ನಿಂತರು ॥೧೫॥

ಭಗವಾನರ ನಿರ್ವಾಣ ಕಲ್ಯಾಣದ ಭಕ್ತಿಯಲ್ಲಿ ಇರುವ ಪ್ರಪಂಚದ ಎಲ್ಲಾ (ಪ್ರಾಣಿ) ಜೀವಿಗಳು ಭರತಕ್ಷೇತ್ರದಲ್ಲಿ ಆದರಪೂರ್ವಕವಾಗಿ ಭಗವಾನ ಮಹಾವೀರರ ಪೂಜೆ ಮಾಡಿ ಅವರ ಸ್ಮೃತಿಯಲ್ಲಿಯೇ ದೀಪಾವಳಿ ಉತ್ಸವವನ್ನು ಆಚರಿಸುತ್ತಾರೆ.

ದೀಪಾವಳಿಯದಿನ ರಾತ್ರಿ ಹೊಸಲೆಕ್ಕ ಬರೆಯುವ ಮೊದಲು ಲಕ್ಷ್ಮಿ ಮತ್ತು ಗಣೇಶನ ಪೂಜೆ ಮಾಡುವ ಪದ್ಧತಿಯಲ್ಲೂ ಒಂದು ರಹಸ್ಯ ಅಡಗಿದೆ ಭಗವಂತರಿಗೆ ಮೋಕ್ಷ ಲಭಿಸುತ್ತಲೇ, ಅದೇ ಸಂಜೆ ಗೌತಮ ಗಣಧರರಿಗೆ ಕೇವಲ ಜ್ಞಾನವು ಪ್ರಕಟವಾಯಿತು.ತಕ್ಷಣ ಇಂದ್ರನು ಬಂದು ಅವರಿಗೆ ಗಂಧಕುಟಿಯ ರಚನೆಯನ್ನು ಮಾಡಿ

“ಕೇವಲ ಜ್ಞಾನದ” ಪೂಜೆಯನ್ನು ಮಾಡಿದರು. ಗಣಾನಾಂ ಈಶಃ ಗಣೇಶಃ ಗಣಧರಃ ಇದು ಗೌತಮ ಸ್ವಾಮಿಗಳ ಪರ್ಯಾಯವಾಚಿ ಶಬ್ದವಾಗಿದೆ. ಆದರೆ ಜನರು ಇದರ ಸರಿಯಾದ ಅರ್ಥ ತಿಳಿಯದೆ ಗಣೇಶ ಮತ್ತು ಲಕ್ಷ್ಮಿಯ ಪೂಜೆ ಮಾಡತೊಡಗಿದ್ದಾರೆ. ವಿಶೇಷವಾಗಿ ಜೈನರು ಕಾರ್ತಿಕ ಶುಕ್ಲಪ್ರತಿಪದೆಯಿಂದ ನೂತನವರ್ಷವನ್ನು ಆಚರಿಸಿ ಅದರಂತೆ ತಿಥಿದರ್ಪಣ ಮತ್ತು ಕ್ಯಾಲೆಂಡರನ್ನು ಮುದ್ರಿಸಬೇಕು.

ಯುಗಾದಿ

ನನ್ನ ದೃಷ್ಟಿಯಲ್ಲಿ "ಯುಗಾದಿಯ ದಿನವೂ"ಬಹಳ ಮಹತ್ವಪೂರ್ಣದ್ದು ಆದರೆ ಜೈನರಿಗೆ ಅಷ್ಟಾಗಿ ಗಮನ ಹೋಗಿಲ್ಲ. ಶ್ರಾವಣ ಕೃಷ್ಣ ಪ್ರತಿಪದೆಯ ದಿನ ಪ್ರತಿಯೊಂದು ಯುಗದ ಆದಿ ದಿವಸವಾಗಿದೆ. ಆದ್ದರಿಂದಲೇ ಇದನ್ನು ಯುಗಾದಿ ಎಂದು ಕರೆಯುತ್ತಾರೆ. ಉತ್ಸರ್ಪಿಣಿ ಮತ್ತು ಅವಸರ್ಪಿಣಿಯ ಸುಷಮಾ ಸುಷಮಾ, ಸುಷಮಾ ದುಷಮಾ ದುಷಮಾಸುಷಮಾ ದುಷಮಾ ಮತ್ತು ಅತಿದುಷಮಾ ಇವೆಲ್ಲವು ಉತ್ಸರ್ಪಿಣಿಯಲ್ಲಿ ತಿರುಗುಮುರುಗಾಗಿ (ತಲೆಕೆಳಕಾಗಿ ಕ್ರಮದಿಂದ) ನಡೆಯುತ್ತದೆ ಈ ಎಲ್ಲಾ ಕಾಲಗಳ ಸಮಾಪ್ತಿ ಆಷಾಢ ಶುಕ್ಲ ಪೂರ್ಣಿಮೆಯಂದು ಆಗುತ್ತದೆ. ಪ್ರಾರಂಭ ಶ್ರಾವಣ ಕೃಷ್ಣ ಪ್ರತಿಪದೆಯಂದು ಆಗುತ್ತದೆ.

ಈ ಮಂಗಳ ದಿವಸವೇ ಭಗವಾನರ ದಿವ್ಯಧ್ವನಿಯು ಹೊರಟಿದ್ದು ಆದ್ದರಿಂದ ಈ ದಿನವನ್ನು "ವೀರಶಾಸನಜಯಂತಿ" ಎಂದು ಆಚರಿಸಲಾಗುತ್ತದೆ. ಈ ವಿಷಯಕ್ಕೆ ಪ್ರಮಾಣವು ಇದೆ.

ಎತ್ಥಾವಸಪ್ಪಿಣೀಏ ಚ ಉತ್ಥ ಕಾಲಸ್ಸ ಚರಿಮಭಾಗಮ್ಮಿ ।
ತೆತ್ತೀಸವಾಸ ಅಡಮಾಸಪಣ್ಣರ ಸದಿವಸಸೇಸಮ್ಮಿ ॥೬೮॥

ವಾಸಸ್ಸ ಪಢಮಮಾಸೇ ಸಾವಣಣಾಮಮ್ಮಿ ಬಹುಲಪಡಿವಏ ।
ಅಭಿಜೀಣಕ್ಖತ್ತಮ್ಮಿಯ ಉಪ್ಪತ್ತೀ ಧಮ್ಮತಿತ್ಥಸ್ಸ ॥೬೯॥

ಸಾವಣ ಬಹುಲೇ ಪಾಡಿವರುದ್ದಹುತ್ತೇ ಸಹೋದಯೆ ರವಿಣೋ।
ಅಭಿಜಿಸ್ಸ ಪಢಮಜೋಏ ಜುಗಸ್ಸ ಆದೀ ಇಮಸ್ಸ ಪುಢಂ ॥ ೭೦॥

ಅವಸರ್ವಣಿಯ ನಾಲ್ಕನೆ ಕಾಲದ ಅಂತಿಮಭಾಗದಲ್ಲಿ 33 ವರ್ಷ 8ತಿಂಗಳು 15 ದಿನ ಇರುವಾಗ ವರ್ಷದ ಶ್ರವಣ ಎಂಬ ತಿಂಗಳಿನ ಕೃಷ್ಣಪಕ್ಷದ ಪ್ರತಿಪದೆಯ ದಿನ ಅಭಿಜಿತ ನಕ್ಷತ್ರದಲ್ಲಿರುಲು ಧರ್ಮತೀರ್ಥದ ಉತ್ಪತ್ತಿ ಆಯಿತು. ||೬೮-೬೯||

ಶ್ರಾವಣ ಕೃಷ್ಣಪಕ್ಷದ ಪ್ರತಿಪದೆಯ ದಿನ ರುದ್ರಮಹೂರ್ತ ಇರುವಾಗ ಸೂರ್ಯನ ಉದಯವಾದ ಮೇಲೆ ಅಭಿಜಿತ್ ನಕ್ಷತ್ರದ ಪ್ರಥಮಯೋಗದಲ್ಲಿ ಯುಗದ ಆರಂಭವಾಯಿತು ಎಂಬುದು ಸ್ಪಷ್ಟವಾಗಿದೆ. ||೭೦||[೧]

ಧವಲದಲ್ಲಿರುವ ಉಲ್ಲೇಖ

ಈ ಅವಸರ್ಪಿಣಿ ಕಲ್ಪಕಾಲದ ದುಃಷಮ-ಸುಷಮ ಎಂಬ ನಾಲ್ಕನೆ ಕಾಲದ ಮೊದಲು 45 ವರ್ಷ ಇರುವಾಗಲೇ ವರ್ಷದ ಪ್ರಥಮಮಾಸ ಅರ್ಥಾತ್ ಶ್ರಾವಣ ಮಾಸದ ಪ್ರತಿಪದೆಯಂದು ಬೆಳಿಗ್ಗೆ ಆಕಾಶದಲ್ಲಿ ಅಭಿಜಿತ್ ನಕ್ಷತ್ರ ಹುಟ್ಟಿದಾಗ ಭ. ಮಹಾವೀರರ ದಿವ್ಯಧ್ವನಿ ಧರ್ಮತೀರ್ಥದ ಉತ್ಪತ್ತಿಯಾಯಿತು.

---

೧. ತಿಲೋಯಪಣ್ಣತ್ತಿ ಅಧ್ಯಾಯ ೧. ಪುಟ ೯.

सावण-बहुल पडिवदेरुद्द मुहुत्ते सुहोद ए रविणो ॥
अभिजिस्स पढमजोए ए एत्थ जुगाईमुणे यव्वो ॥

ಶ್ರಾವಣ ಕೃಷ್ಣ ಪ್ರತಿಪದೆಯದಿನ ರುದ್ರ ಮಹೂರ್ತದಲ್ಲಿ ಸೂರ್ಯನ ಶುಭ ಉದಯದೊಂದಿಗೆ ಅಭಿಜಿತ್ ನಕ್ಷತ್ರದ ಪ್ರಥಮಯೋಗದಲ್ಲಿ ಯುಗದ ಆರಂಭವಾಗಿದೆ ಆಗಲೇ ತೀರ್ಥದ ಉದ್ಭವವು ಆಗಿದೆ. ॥೫೭॥[೧]

ಈ ಎಲ್ಲಾ ಪ್ರಮಾಣಗಳಿಂದ ಶ್ರಾವಣಕೃಷ್ಣಪ್ರತಿಪದೆಯೇ ಯುಗದ ಆದಿಆಗಿದೆ. ಮಹಾವೀರರ ಮೋಕ್ಷವಾದ ಮೇಲೆ ಪಂಚಮಕಾಲದ ಪ್ರವೇಶವಾಗಿ ಮೂರುವರ್ಷ 8 ತಿಂಗಳು 15 ದಿನ ಬಾಕಿ ಇದ್ದಾಗ ಮೂರು ವರ್ಷ ಕಾರ್ತಿಕ ಶುಕ್ಲದ 15ನೇಯ ದಿನ ಮತ್ತು ಮಾರ್ಗಶಿರಾಷಾಢದವರೆಗೆ 8 ತಿಂಗಳನ್ನು ಎಣಿಸಬೇಕು.

ಕರ್ನಾಟಕದ ಜನರು ಚೈತ್ರ ಶುಕ್ಲ ಪ್ರತಿಪದೆಯನ್ನು "ಯುಗಾದಿಹಬ್ಬ"ವೆಂದು ಕರೆಯುತ್ತಾರೆ. ಆದರೆ ಇದು ವಿಕ್ರಮರಾಜನಿಂದ ನಡೆದು ಬಂದಿದ್ದು ಇದು ಯುಗಾದಿ ಅಲ್ಲ ಯುಗಾದಿಯ ಶ್ರಾವಣ ಕೃಷ್ಣಪಕ್ಷದ ಪಾಡ್ಯದಂದೆ ಬರುವುದು ದಕ್ಷಿಣದಲ್ಲಿ ಪರ್ವವನ್ನು ಹಬ್ಬವೆಂದುಕರೆಯುತ್ತಾರೆ.

ಇಲ್ಲಿ ನಾನು ಬರೆಯುತ್ತಿರುವ ಉದ್ದೇಶ ಜೈನರು ವೀರನಿರ್ವಾಣ ಸಂವತ್ಸರ್ನೇ 'ನೂತನವರ್ಷ'ವೆಂದು ಆಚರಿಸಬೇಕು ಮತ್ತು ಶ್ರಾವಣ ಕೃಷ್ಣಪಕ್ಷದ ಪಾಡ್ಯದಂದು "ವೀರಶಾಸನ ಜಯಂತಿ" ಮತ್ತು ಯುಗಾದಿ ದಿವಸವೆಂದು ಅವಶ್ಯವಾಗಿ ಆಚರಿಸಬೇಕು. ಒಂದು ವೇಳೆ ಜೈನರಾಗಿ ನಾವೇ ನಮ್ಮ ಸಂಸ್ಕೃತಿಯ ಪ್ರಚಾರ-ಪ್ರಸಾರ ಮಾಡದಿದ್ದರೆ ನಮ್ಮ ಸಂಸ್ಕೃತಿ ಉಳಿಯುವುದೆಲ್ಲಿ ವೀರ ನಿರ್ವಾಣದ ದಿನವೇ ಜೈನ ವಿಧಿಯಿಂದ ಲೆಕ್ಕದ ಪುಸ್ತಕವನ್ನು ಬದಲಾಯಿಸಿ ಹೊಸಲೆಕ್ಕವನ್ನು ಪ್ರಾರಂಭಿಸಿ "ಹೊಸವರ್ಷ"ದ ಆಚರಣೆ ಮಾಡಿರಿ.

ಸರ್ವತೋಭದ್ರ ಆರಾಧನೆ

1988ರ ನವೆಂಬರ್ 16ರಂದು ಆಷ್ಟಾಹ್ನಿಕ ಪರ್ವ ಪ್ರಾರಂಭವಾಯಿತು ಬೆಳಿಗ್ಗೆ 7-45ಕ್ಕೆ ಸರ್ವತೋಭದ್ರ ಆರಾಧನೆಯ ಧ್ವಜಾರೋಹಣೆಯನ್ನು ಮಾಡಲಾಯಿತು ದೆಹಲಿಯ ವಿಜೇಂದ್ರಕುಮಾರ ಜೈನ, ಮತ್ತುಟಿಕೈತ ನಗರದ ವಿರೇಂದ್ರಕುಮಾರ ಪರಿವಾರದವರು ಬಂದಿದ್ದರು. ಎರಡು ಪರಿವಾರದವರು ತ್ರಿಮೂರ್ತಿ ಮಂದಿರದಲ್ಲಿ ಮೂರುಲೋಕದ ಆಕಾರದ ಎರಡು ಮಂಡಲಗಳನ್ನು ರಚಿಸಿದ್ದರು. ವಿರೇಂದ್ರಕುಮಾರರು ಬೀಸಪಂಥಿಗಳು ವಿಜೇಂದ್ರಕುಮಾರ ತೇರಹಪಂಥಿಗಳು ವಿರೇಂದ್ರಕುಮಾರ್ ಮಾಧುರಿಯ ಚಿಕ್ಕಪ್ಪನ ಮಗ ಮಾಧುರಿಯು ಆರಾಧನೆಯಲ್ಲಿ ಕುಳಿತಿದ್ದಳು.

ಆರಾಧನೆಯ ವಿಷಯ

1976ರಲ್ಲಿ ಖತೌಲಿಯಲ್ಲಿ ವಿಹಾರ ಮಾಡುವಾಗ "ತ್ರಿಲೋಕಮಂಡಲ" ಆರಾಧನೆಯನ್ನು ರಚಿಸಬೇಕೆಂದು ತಿಲೋಯತಣ್ಣತ್ತಿ ಮತ್ತು ತ್ರಿಲೋಕಸಾರ ಮೊದಲಾದ ಗ್ರಂಥಗಳನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗಿದ್ದೆ. ಆ ಸಮಯದಲ್ಲಿ ರವೀಂದ್ರ ಮತ್ತು ಮೋತಿಚಂದರು ಮೊದಲು ಇಂದ್ರಧ್ವಜ ಆರಾಧನೆಯನ್ನು ರಚಿಸಿರಿ ಎಂದಿದ್ದರಿಂದ ಮೊದಲು ಅದೇ ಸಿದ್ಧವಾಯಿತು. "ತೀಸ ಚೌಬೀಸ" ಮುಂತಾದ ಚಿಕ್ಕ ಪುಟ್ಟ ಆರಾಧನೆಗಳು ಆದವು.

---

೧. ಧವಲ ಪುಸ್ತಕ ೧. ಪುಟ ೬೩-೬೪

ತ್ರಿಲೋಕಮಂಡಲ ಆರಾಧನೆಯಲ್ಲಿ ಮೂರುಲೋಕದ ಸಮಸ್ತ ತೀರ್ಥಂಕರ ಮಹಾಪುರಷರು ಅವರ ಕೃತ್ರಿಮ ಅಕೃತಿಮ ಪ್ರತಿಮೆಗಳು ಅವರ ಪಂಚಕಲ್ಯಾಣದ ಸ್ಥಾನಗಳು ಇವೆಲ್ಲವು ಬರುತ್ತವೆ. ಇದೇ "ಸರ್ವತೋಮುಖಿ" ಅಥವ ಸರ್ವತಃ ಎಲ್ಲಾ ರೀತಿಯಿಂದಲೂ ಭದ್ರಕಲ್ಯಾಣವನ್ನು ಮಾಡುವಂತಹುದಾಗಿದೆ. ಆದ್ದರಿಂದಲೇ ಇದಕ್ಕೆ "ಸರ್ವತೋಭದ್ರ"ವೆಂಬ ಹೆಸರು ಕೊಡಲಾಗಿದೆ. ಈ ಆರಾಧನೆಯಲ್ಲಿ ನಾಲ್ಕು ಪ್ರಕಾರದ ದೇವರ ಗೃಹಗಳ ಎಲ್ಲಾ ಅಕೃತ್ರಿಮ ಜಿನ ಮಂದಿರಗಳು ಜಿನಪ್ರತಿಮೆಗಳ ಪೂಜೆ ಇದೆ. ಮಧ್ಯಲೋಕದ "೪೫೮" ಅಕೃತ್ರಿಮ ಜಿನಮಂದಿರ ಹಾಗೂ ಜಿನಪ್ರತಿಮೆಗಳ ಪೂಜೆ ಇದೆ. ವಿದೇಹಕ್ಷೇತ್ರದ ೩೦ ತೀರ್ಥಂಕರರು 5 ಭರತ 5 ಐರಾವತದ ಭೂತ, ಭಾವೀ ವರ್ತಮಾನ ಹೀಗೆ 30, 34ಪೂಜೆಗಳು ಇವೆ. 170 ಕರ್ಮಭೂಮಿಯಲ್ಲಿ ಆಗುವ ಅರ್ಹಂತ, ಸಿದ್ಧ, ಆಚಾರ್ಯ ಉಪಾಧ್ಯಾಯ, ಸಾಧು "ಜಿನಧರ್ಮ, ಜಿನಾಗಮ ಜಿನಚೈತ್ಯ ಮತ್ತು ಚೈತ್ಯಾಲಯಗಳ ಪೂಜೆ ಇದೆ. ಇದರಲ್ಲಿ ಪೂಜೆ ವಿಧಾನ ಯಾವುದನ್ನು ಬಿಟ್ಟಿಲ್ಲ ಸಂಕ್ಷೇಪವಾಗಿಯಾದರೂ ಎಲ್ಲವು ಉಲ್ಲೇಖವಾಗಿದೆ.

ಇದರಲ್ಲಿ 101 ಪೂಜೆಗಳಿವೆ ಒಂದಕ್ಕಿಂದ ಒಂದು ರೋಚಕವಾಗಿದೆ. ಕು. ಮಾಧುರಿ ಎಲ್ಲಾ ಪೂಜೆಗಳನ್ನು ಓದುತ್ತಾ ಸ್ವಯಂ ತಾನು ಮಾಡುತ್ತಾ ಬೇರೆಯವರ ಕೈಯಿಂದಲೂ ಮಾಡಿಸಿದಳು. ಜನರ ಈಗಲೂ ಹೇಳುತ್ತಿರುತ್ತಾರೆ. ಮಾತಾಜೀ ಭಗವಂತನ ಪೂಜೆಯಲ್ಲಿ ಬರುವ ಭಕ್ತಿರಸದಲ್ಲಿ ಉಂಟಾಗುವ ಆನಂದ ನಮಗೆ ಜೀವನದಲ್ಲಿ ಇನ್ನಾವುದರಲ್ಲೂ ಸಿಗಲಾರದು.

ಆರಾಧನೆಯಲ್ಲಿ ಇಡುವುದಕ್ಕಾಗಿಯೇ 108 ಸ್ವಸ್ತಿಕಗಳನ್ನು ಕು. ಮಾಧುರಿ ಮುರಾದಬಾದಿನಿಂದ ಮಾಡಿಸಿ ತರಿಸಿದ್ದಳು. ಒಳ್ಳೆ ಉತ್ಸಾಹದಿಂದ ಮಾಧುರಿಯು ಮಂಡಲದ ಮೇಲೆ ಪ್ರತಿಯೊಂದು ಜಯಮಾಲೆ ಆದ ಮೇಲೆ ಇಡುತ್ತಾ ಬರುತ್ತಿದ್ದಳು. ಇನ್ನೊಂದು ಮಂಡಲದ ಮೇಲೆ ವಿಜೇಂದ್ರ ಕುಮಾರರು ಇಡುತ್ತಿದ್ದರು. ಆಗ ಮಂಡಳಗಳು ನೋಡಲು ಸುಂದರವಾಗಿ ಕಾಣುತ್ತಿತ್ತು. ಸ್ವಸ್ತಿಕಗಳು ಇಡೀ ಜಗತ್ತನ್ನು ಕಲ್ಯಾಣ, ಭದ್ರಗೊಳಿಸುವ ಸೂಚನೆಯನ್ನು ಕೊಡುತ್ತಿದ್ದವು.

ಹಾಪುಡದ ಶಿಖರಚಂದ ಮತ್ತು ಅವರ ಪತ್ನಿ ಶಕುಂತಲರವರು ಆರಾಧನೆಯಲ್ಲಿ ಕುಳಿತಿದ್ದರು. ಶಕುಂತಲ ಅಷ್ಟಾಹ್ನಿಕದ 8 ದಿನವು ಶರಬತನಲ್ಲಿ ಕಳೆದರು. ಆದರೆ ಪೂಜೆಯಲ್ಲಿ ಭಕ್ತಿರಸದಿಂದ ಎದ್ದು ಸ್ವಯಂ ಚಾಮರ ಹಿಡಿದು ನರ್ತನ ಮಾಡುತ್ತಿದ್ದರು. ಇದರಿಂದ ಇಡೀ ಆರಾಧಕರೇಎದ್ದು ಜೊತೆಗೂಡುತ್ತಿದ್ದರು. ಇದರ ಪೂರ್ಣಾಹುತಿಯು ಸಾಂಗವಾಗಿ ನಡೆದು ಆರಾಧನೆ ಮುಗಿಯಿತು. ನವೆಂಬರ್ ೩೩ರಂದು ವಾರ್ಷಿಕ ರಥಯಾತ್ರೆಯು ನಡೆಯಿತು.

ಆಚಾರ್ಯ ಸುಮತಿಸಾಗರರ ಆಗಮನ

ನವೆಂಬರ್ 20ರಂದು ಆಚಾರ್ಯ ಸುಮತಿ ಸಾಗರರು ಹಸ್ತಿನಾಪುರಕ್ಕೆ ಆಗಮಿಸಿದರು. ದೊಡ್ಡ ಬಸದಿಯಲ್ಲಿ ತಂಗಿದ್ದರು ಇಲ್ಲಿಗೆ ದರ್ಶನಕ್ಕೆ ಬಂದವರು ಬೀಸಪಂಥಿ ತೇರಹ ಪಂಥಿ ಎರಡು ಪಂಗಡಗಳ ಆರಾಧನೆಯು ಒಟ್ಟಿಗೆ ನಡೆಯುತ್ತಿದ್ದುದ್ದನ್ನು ಕಂಡು ಹರ್ಷದಿಂದ ಅವರು ತಮ್ಮ ಭಾಷಣದಲ್ಲಿ ನಾನು ಜಂಬೂದ್ವೀಪದ ಬಗ್ಗೆ ಯಾವುದೋ ಹಾರಿಕೆಯ ಸುದ್ದಿ ಕೇಳಿದ್ದೆ, ಆದರೆ ಇಲ್ಲಿ ಅಂತಹ ಲಕ್ಷಣವೇ ಇಲ್ಲ ಅವೆಲ್ಲವು ಸುಳ್ಳೆಂದು ಗೊತ್ತಾಗುತ್ತಿದೆ. ಇಲ್ಲಿನ ವಾತಾವರಣ ಅತ್ಯಂತ ಚೆನ್ನಾಗಿ ತೋರುತ್ತಿದೆ. ಚತುರ್ದಶಿಯ ದಿನ ರಥಯಾತ್ರೆಯ ಸಮಯದಲ್ಲಿ ರಥಯಾತ್ರೆಮುಗಿಸಿ ಹಾಗೇ ಇಲ್ಲಿಂದ ಸಂಘವು ಮುಂದೆ ಹೊರಟಿತು.

ಇಲ್ಲಿ ಬ್ರ. ಮಾಧುರಿ ಹಾಗೂ ಬ್ರ ಶ್ಯಾಮಬಾಯಿಯವರ ಚೌಕದಲ್ಲಿ ಪ್ರತಿದಿನ 4-5 ಜನ ಸಾಧ್ವಿಗಳು ಆಹಾರಕ್ಕೆ ನಿಲ್ಲುತ್ತಿದ್ದರು. ಒಂದು ದಿನ ಆಚಾರ್ಯಸುಮತಿಸಾಗರರು, ಆರ್ಯಿಕೆ ಜ್ಞಾನಮತಿ ಮತ್ತು ನಾವು ಮೋತಿ ಸಾಗರರು ಒಟ್ಟಿಗೆ ಕುಳಿತು ಧರ್ಮದ ಬಗ್ಗೆ ಮಾತಾಡುತ್ತಾ ನಮ್ಮೊಳಗೆ ಇದ್ದ ಪಂಥಬೇದದ ಬಗ್ಗೆ ಚರ್ಚೆ ನಡೆಯತೊಡಗಿತ್ತು. ಕೊನೆಗೆ ತೀರ್ಮಾನದಲ್ಲಿ ಅಂತರ್ಜಾತಿಯ ವಿವಾಹ, ವಿಧವಾ ವಿವಾಹವನ್ನು ವಿರೋಧಿಸಿದೆವು ಇಂತಹವರಿಂದ ಆಹಾರ ಗ್ರಹಣೆಮಾಡುತ್ತಿರಲಿಲ್ಲ. ಕಾನಜೀಪಂಥವನ್ನು ವಿರೋಧಿಸಲಾಯಿತು. ತೇರಹಪಂಥಿಗಳು ಆಗ್ರಹಿಗಳಾಗಿದ್ದರು. ಬೀಸಪಂಥಿಗಳಿಗೆ ತೇರಹಪಂಥಿಗಳು ಆಗ್ರಹಿಗಳಾಗಿದ್ದರು. ಬೀಸಪಂಥಿಗಳಿಗೆ ಸ್ವಲ್ಪವೂ ಆಲೋಚನೆ ಇರಲಿಲ್ಲ. 26 ಡಿಸೆಂಬರ್‌ರಂದು ಸಂಘಸಹಿತವಾಗಿ ಆಗಮಿಸಿದ ಸಂಘವು ಒಟ್ಟಿಗೆ ಸಾಮಾಯಿಕಕ್ಕೆ ಕುಳಿತಿತು. ಹೀಗೆ ಮತಬೇಧ ಮರೆತು ಸೌಹಾರ್ದವಾಗಿ ಕಾಲ ಕಳೆದಿದ್ದೇವೆ.

ಆರ್ಯಿಕ ಅಭಯಮತಿಯ ಆಗಮನ

1988ರಂದು (ವಿಕ್ರಮ ಸಂವತ್ಸ) ಡಿಸಂಬರ್ 13ರಂದು ಅಭಯಮತಿ ಮಾತಾಜಿಯವರು ಇಲ್ಲಿಗೆ ಆಗಮಿಸಿದರು. ಮಾಧುರಿಯು ಅವರ ಕಾಲುಗಳನ್ನು ಹಾಲಿನಿಂದ ತೊಳೆದು ಪೂಜೆಯನ್ನು ಮಾಡಿದರು. ಸಂಜೆ 47 ದೀಪಗಳಿಂದ ಪೂಜಿಸಿದರು. ಆ ದಿನ ಅವರ ಹುಟ್ಟಿದ ದಿನವಾಗಿತ್ತು. 1988ರ ಚಾತುರ್ಮಾಸವನ್ನು ಬಡೆಗಾಂವನಲ್ಲಿ ಆಚರಿಸಿದ್ದರು. 1964ರಲ್ಲಿ ಕ್ಷುಲ್ಲಕ ದೀಕ್ಷೆಪಡೆದವರು 1969ರಲ್ಲಿ ಶ್ರೀ ಧರ್ಮಸಾಗರರಿಂದ ಆರ್ಯಿಕೆ ಪದವಿ ಪಡೆದು, ಅನುಮತಿಯನ್ನು ಪಡೆದು ಚರ್ಯೆಯನ್ನುಪಾಲಿಸುತ್ತಾ ಅನೇಕ ಊರುಗಳನ್ನು ಸುತ್ತುತ್ತಾ ಅಹರ್ನಿಶಿ ಜ್ಞಾನಾರಾಧನೆಯಲ್ಲಿ ತೊಡಗಿದ್ದಾರೆ. ಇವರ ಆರೋಗ್ಯಕೂಡ ಬಹಳ ಸೂಕ್ಷ್ಮವಾದದ್ದು.

ಸಮಯಸ್ಸಾರದ ಸ್ವಾದ್ಯಾಯ ಮತ್ತು ಅದರ ಅನುವಾದ ಕೆಲಸ

ಇಲ್ಲಿ ಬೆಳಗಿನ ಹೊತ್ತು ಸಮಯಸಾರದ ಸ್ವಾಧ್ಯಾಯ ನಡೆಯುತ್ತಿತ್ತು. ಆಗಾಗ್ಗೆ ಕ್ಷುಲ್ಲಕ ಗಣೇಶ ಪ್ರಸಾದಜೀವರ್ಣಿ ಹಾಗು ಪ್ರೊ. ಮೋತೀಲಾಲ ಜೀ. ಪಾಲ್ಪನರವರ ಅನುವಾದಿತ ಸಮಯಸಾರದ ಅವಲೋಕನವನ್ನು ಮಾಡಲಾಗುತ್ತಿತ್ತು. ಪ್ರತಿದಿನ ನನ್ನಿಂದ ಅನುವಾದಿಸಲಾದ ಟೀಕೆಗಳನ್ನು ಓದಲಾಗುತ್ತಿತ್ತು. ಪ್ರತಿದಿನ 2ಗಂಟೆ ಅನುವಾದ ಕಾರ್ಯ ನಡೆಯುತ್ತಿತ್ತು. ಮಧ್ಯಾಹ್ನ ಒಂದು ಗಂಟೆ ದರ್ಶನಾರ್ಥವಾಗಿ ಬರುತ್ತಿದ್ದ ಯಾತ್ರಿಗಳೊಡನೆ ಕಳೆಯುತ್ತಿತ್ತು. ಉಳಿದ ಸಮಯ ಆವಶ್ಯಕಕ್ರಿಯೆ ಹಾಗು ನನ್ನ ಶರೀರದ ಸೇವೆಯಲ್ಲಿ ಕಳೆಯುತ್ತಿತ್ತು. ಏನಾದರು ಆಗಲಿ ಸಮಯಸಾರದ ಅನುವಾದದ ಕೆಲಸ ನನಗೆ ಬಹಳ ಆನಂದವನ್ನು ಕೊಡುತ್ತಿತ್ತು. ಇದು ಶಬ್ದಗಳನ್ನು ಮೀರಿದ್ದು. ನಿಶ್ಚಯ ವ್ಯವಹಾರ ನಯಗಳನ್ನು ಎಲ್ಲಿ ಇಡಲಿ ಆಚಾರ್ಯರ ಶಬ್ದಗಳನ್ನು ನೋಡಿ ಬರೆಯುವಾಗ ನಿರ್ಮಲ ಮನಶ್ಶಾಂತಿಯಿಂದ ಉಂಟಾಗುತ್ತಿದ್ದ ಭಾವವೆಂದರೆ ಭಗವಾನ ನಿಶ್ಚಯನಯದ ಅವಲಂಬನೆಯಿಂದ ನಿರ್ವಿಕಲ್ಪ ಧ್ಯಾನದಲ್ಲಿ ಸ್ಥಿತಳಾಗಿ ನನ್ನ ಶುದ್ಧಾತ್ಮನ ಧ್ಯಾನದಲ್ಲಿ ನಿಲ್ಲುವ ಸಮಯ ಎಂದು ಬರುತ್ತದೆ. ಎಂದು ಭಾವವಶಳಾಗುತ್ತಿದ್ದೆ. ನನಗೂ ಗೊತ್ತಿತ್ತು. ಈ ಭಾವನೆ ಈ ಭವದಲ್ಲಿ ಆಗದಿದ್ದರು ಮುಂದಿನ ಭವದಲ್ಲಾದರು ಆಗಿಯೆ ಆಗುತ್ತದೆ ಎಂದು.

ಸಮಯಸಾರದ ಅನುವಾದ ಪೂರ್ಣಗೊಂಡಿತು

ಜನವರಿ 3ರಂದು ರವೀಂದ್ರಕುಮಾರನು ಮೇರಠನ ಸುಮಪ್ರಿಂಟರ್ಸ್‌ನ ಹರೀಶಜೈನರಿಗೆ ಪ್ರಿಂಟ್‌ಗೆ ಪೂರ್ವಾರ್ದದ ಸಮಯಸಾರವನ್ನುಕೊಡಲಾಯಿತು. ಮುಂದಿನ ಉತ್ತರಾರ್ಧವನ್ನು ಈಗ ಅನುವಾದ ಮಾಡುತ್ತಿದ್ದೇವೆ.

ಕುಂದ ಕುಂದ ಮಣಿಮಾಲಾ

ಸಮಯಸಾರದ ಅನುವಾದದ ಮಧ್ಯದಲ್ಲಿಯೆ ರವೀಂದ್ರಕುಮಾರನು ಅನೇಕ ಬಾರಿ ನಿವೇದಿಸಿದ ಮಾತಾಜೀ ಕುಂದಕುಂದರ ಎಲ್ಲಾ ಗ್ರಂಥಗಳನ್ನು ತಾವು ಚೆನ್ನಾಗಿ ಅಧ್ಯಯನ ಅಧ್ಯಾಪನ ಮಾಡಿದ್ದೀರಿ ಇದರಿಂದ ತಾವು ಅವುಗಳಲ್ಲಿ ಅತ್ಯಂತ ಶೇಷ್ಠವಾದ 50-60 ಗಾಹೆಗಳನ್ನು ಗುರ್ತಿಸಿ ಕೊಡಿ ಅವುಗಳನ್ನು ಚೆನ್ನಾಗಿ ಪ್ರಚಾರ ಮಾಡೋಣ ಎಂದು. ಹೀಗಾಗಿ ಅನುವಾದದ ನಂತರ ಅತಿಶಯವಾಗಿ ಪ್ರಿಯವಾದ ಗಾಹೆಗಳನ್ನು ಸಂಕಲನಗೊಳಿಸಲು ಪ್ರಾರಂಭಿಸಿದೆ. ಹೆಚ್ಚು ವಿಸ್ತಾರವು ಅಲ್ಲದ ಅತ್ಯಂತ ಚಿಕ್ಕದು ಅಲ್ಲದ 108 ಗಾಹೆಗಳನ್ನು ಆರಿಸಿ ಇದನ್ನುಕುಂದಕುಂದಮಣಿಮಾಲಾ ಎಂಬ ಹೆಸರನ್ನು ಕೊಟ್ಟು ಮೂಲ ಅರ್ಥ ಭಾವಾರ್ಥ ಸಹಿತವಾಗಿ "ಮಹಾವೀರಜಯಂತಿ"ಯ ದಿನ ಏಪ್ರಿಲ್ 18ರಂದು ಪೂರ್ಣಗೊಳಿಸಿದೆ. ಇಲ್ಲಿ ಶ್ರೀ ವೃಷಭ ಜಯಂತಿ ಶ್ರೀಮಹಾವೀರ ಜಯಂತಿಯ ದಿನದಂದು ಬೆಳಿಗ್ಗೆ ಪ್ರಭಾತಫೇರಿ ೧೦೮ ಕಳಸಗಳಿಂದ ಅಭಿಷೇಕ ಸಭಾಗೋಷ್ಠಿಗಳು ನಡೆಯುತ್ತವೆ. ಇದೇ ಸಂದರ್ಭದಲ್ಲಿ ಯಾತ್ರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರಿಂದ ಪೂಜೆಯ ಹರಾಜ ಕೂಡ ನಡೆಯುತ್ತದೆ. ಮಣಿಮಾಲದ ಪುಸ್ತಕ ಸಿದ್ಧವಾಗುತ್ತಿದ್ದಂತೆ ಪ್ರಶಿಕ್ಷಣ ಶಿಬಿರಕ್ಕೆ ಅನುಕೂಲವಾಗುವಂತೆ ಸಮ್ಯಗ್‌ಜ್ಞಾನ ಪತ್ರಿಕೆಯ ಮೇ , ಜೂನ್ ರ ಸಂಚಿಕೆಯಲ್ಲಿ ವಿಶೇಷಾಂಕವಾಗಿಯು ಮತ್ತೆ ಪುಸ್ತಕ ರೂಪದಲ್ಲಿಯು ಅಚ್ಚಾಯಿತು.

ಚತ್ತಾರಿಮಂಗಲಂ

ಚತ್ತಾರಿಮಂಗಲಂ ಪಾಠದಲ್ಲಿ ಕೆಲವು ದಿನಗಳಿಂದ ವಿಭಕ್ತಿಗಳನ್ನು ಸೇರಿಸಿ ಪಾಠವನ್ನು ಹೇಳುವ ವಾಡಿಕೆ ನಡೆದುಬಂದಿದೆ. ನಂತರ ಇದು ಶ್ವೇತಾಂಬರರಲ್ಲಿ ಈ ಪದ್ಧತಿಯಿಂದ ಬಂದಿದೆ ಎಂದು ತಿಳಿಯಿತು. ಬ್ರ. ಮಾಧುರಿಯಿಂದ ಸಾಧುಗಳ ಮತ್ತು ವಿದ್ವಾಂಸರ ಜೊತೆ ಈ ವಿಷಯವಾಗಿ ಪತ್ರಾಚಾರ ನಡೆದು ವಿಭಕ್ತಿ ಸಹಿತ ಹೇಳುವುದು ಸರಿಯೇ ಅಥವ ರಹಿತವಾಗಿ ಹೇಳಬೇಕೋ ಎಂದು ಚರ್ಚಿಸಲಾಗಿತ್ತು. ಈ ಸಂಬಂಧ ಬಂದ ಎಲ್ಲಾ ಪತ್ರಗಳನ್ನು ಶೇಖರಿಸಲಾಗಿತ್ತು ಅವುಗಳಲ್ಲಿ ಮೌಜಮಾಬಾದ್‌ನಿಂದ ಕ್ಷುಲ್ಲಕ ಸಿದ್ಧ ಸಾಗರರ ಪತ್ರದಲ್ಲಿ ಬಂದಿದ್ದ ವಿಷಯ ಸಂತೋಷವನ್ನು ಉಂಟು ಮಾಡಿತು. ಆ, ಆ ಇ ಉ ಎ ಹಾಗು ೌ ಅನ್ನು ವ್ಯಾಕರಣ ಸೂತ್ರದಲ್ಲಿ ಒಂದೇ ಸಮಾನವೆಂದು ಪರಿಗಣಿಸಲಾಗಿದೆ.

"ಏದೇ ಛ ಚ ಸಮಾಣ" ವನ್ನು ಪ್ರಾಕೃತ ಸೂತ್ರದ ಅನುಸಾರ ಅರಹಂತಾ ಮಂಗಲಂ ನ ಜಾಗದಲ್ಲಿ ಅರಹಂತೆ ಮಂಗಲಂ ಸಿದ್ಧಾಮಂಗಲಂ ಸ್ಥಾನದಲ್ಲಿ ಸಿದ್ಧ ಮಂಗಲಂ ಹಾಗೂ ಸಾಹೂ ಮಂಗಲಂ ಮತ್ತು ಕೇವಲಿಪಣತ್ತೋ ದಮ್ಮೋಮಂಗಲಂನಲ್ಲಿ ಆ ಹಾಗೂ ಅ ಸಮಾನವೆಂದು ಪರಿಗಣಿಸಿ ಅರಹಂತರ ಆ ದ ಜಾಗದಲ್ಲಿ ಅ ಎಂಬ ಪಾಠವನ್ನು ಇಡಲಾಗಿದೆ. ಇದು ವ್ಯಾಕರಣದಿಂದಲೂ ಶುದ್ಧವಾಗಿದೆ. ಹೀಗೆ ಅರಹಂತಲೋಗುತ್ತಮ ಮೊದಲಾದ ಪಾಠವು ಶುದ್ಧವಾಗಿದೆ. ಅರಹಂತೆ ಸರಣಂ ಪವ್ವಜ್ಜಾಮಿಯ ಸ್ಥಾನದಲ್ಲಿ ಅರಹಂತ ಸರಣಂ ಪವ್ವಜ್ಜಾಮಿ ಪಾಠಸಹ ಶುದ್ಧವಾಗಿದೆ ಏಕೆಂದರೆ "ಏದೇ ಛ ಚ ಸಮಾಣಾ" ಈ ವ್ಯಾಕರಣದ ಸೂತ್ರದ ಅನುಸಾರ ಎ ಹಾಗು ವನ್ನು ಸಮಾನವೆಂದುತಿಳಿದು 'ಎ' ನ ಸ್ಥಾನದಲ್ಲಿ 'ಅ'ಪಾಠವು ಶುದ್ಧವಾಗಿದೆ. ಆದ್ದರಿಂದ ಯಾವ ಚತ್ತಾರಿ ಮಂಗಲ ಪಾಠ ವಿಭಕ್ತಿ ರಹಿತವಾಗಿದೆ. ಪ್ರಾಚೀನಕಾಲದಿಂದಲು ಬಳಕೆಯಲ್ಲಿ ಬುರುತ್ತಿದೆಯಾ ಅದು ವಿಭಕ್ತಿ ಸಹಿತವಾಗಿದೆ. ಆದ್ದರಿಂದ ಶುದ್ಧವಾಗಿದೆ. ಶಾಸ್ತ್ರಗಳಲ್ಲಿ ಮತ್ತು ಯಂತ್ರಗಳಲ್ಲಿ ಸಹ ವಿಭಕ್ತಿ ರಹಿತವಾಗಿ ಕಂಡುಬರುವ ಪಾಠವು ಶುದ್ಧವಾಗಿದೆ. ಮತ್ತು ಲಾಘವಯುಕ್ತವಾಗಿದೆ. "ಕೇವಲಿಪಣ್ಣತ್ತೋ ಧಮ್ಮೋ" ಇಲ್ಲಿ "ಹೇತೌ ಪ್ರಾಯಃ ಸವೌಃ "

ಈ ವ್ಯಾಕರಣ ಸೂತ್ರದ ಅನುಸಾರ ಧರ್ಮ ಕೇವಲಿಗಳಿಂದ ಪ್ರಣೀತವಾಗಿದೆ. ಆದ್ದರಿಂದ "ಸರಣಂ" ಪವ್ವಜ್ಜಾಮಿಯಲ್ಲಿ ಅದಕ್ಕೆ ಶರಣು ಉಂಟಾಗುತ್ತದೆ. ಇಂತಹ ಪಾಠ ವ್ಯಾಕರಣದಿಂದ ಶುದ್ಧವಾಗಿದೆ.

ಇದರಿಂದ ನನ್ನ ಅಭಿಪ್ರಾಯ ಪ್ರಾಚೀನ ಪಾಠವೇ ಶುದ್ಧವಾಗಿದೆ. ಅದನ್ನ ಓದಬೇಕು ಹೊಸದಾಗಿ ಸಂಶೋಧಿಸಿರುವ ಪಾಠ(ಬೇಡ) ತೆಗೆದುಕೊಳ್ಳುವುದು ಬೇಡ. ಪಂಡಿತ ಸುಮೇರ ಚಂದ ದಿವಾಕರರಲ್ಲಿ 1974ರಲ್ಲಿ ಚರ್ಚೆ ಮಾಡಿದಾಗಲು ಅವರು ಕೂಡಪ್ರಾಚೀನ ಪಾಠಕ್ಕೆ ಮಾನ್ಯತೆಯನ್ನು ಕೊಟ್ಟಿದ್ದರು.

1975ರ ಬ್ಯಾವರ ಚಾತುರ್ಮಾಸದಲ್ಲಿ ಪಂ. ಪನ್ನಾಲಾಲಜೀ ಸೋನಿಜಿಯವರಲ್ಲೂ ಈ ಪಾಠದ ಕುರಿತು ಚರ್ಚೆಮಾಡಿದಾಗ ಅವರು ಹೇಳಿದರು. ನಮ್ಮ ಸರಸ್ವತಿ ಭವನದಲ್ಲಿರುವ ಬಹಳ ಪ್ರಾಚೀನ ಮಂತ್ರದಲ್ಲಿಯು ವಿಭಕ್ತಿ ರಹಿತವಾದ ಪಾಠವೇ ಇದೆ ಹಾಗೇ ಪ್ರಾಚೀನ ಹಸ್ತ ಲಿಖಿತ ಪ್ರತಿಗಳಲ್ಲಿಯು ಸಹ ಪ್ರಾಚೀನಪಾಠವೇ ಸಿಗುತ್ತದೆ. ವಿಭಕ್ತಿ ಸಹಿತವಾಗಿರುವ "ಚತ್ತಾರಿ ಮಂಗಲಪಾಠ" ಶಾಸ್ತ್ರಗಳಲ್ಲಿ ಎಲ್ಲೂ ಕಂಡು ಬಂದಿಲ್ಲ ಆದ್ದರಿಂದ ಪ್ರಾಚೀನ ಪಾಠವನ್ನು ಓದಬೇಕು. ಈಗಿನ ವಿದ್ವಾಂಸರು ಸಂಶೋಧಿಸಿರುವ ಪಾಠವನ್ನು ತೆಗೆದುಕೊಳ್ಳುವುದು ಬೇಡ. ಇನ್ನೊಂದು ವಿಷಯವೆಂದರೆ ಮಂತ್ರ ವ್ಯಾಕರಣ ಬೇರೆಯೆ ಇದೆ ಇಂದು ಅದರ ಜ್ಞಾನ ನಮ್ಮಗಳಿಗೆ ಇಲ್ಲ ಆದ್ದರಿಂದ ಮೂಲಮಂತ್ರಗಳಲ್ಲಿ ಮನಸ್ಸಿನಲ್ಲಿ ವಿಭಕ್ತಿಗಳು ಇಲ್ಲವೆಂದೇ ತಿಳಿಯಬೇಕು.

ನನ್ನ ಅಭಿಪ್ರಾಯವು ಮಂತ್ರಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಸೇರಿಸುವುದು ಬೇಡ.

ಇನ್ನೊಂದು "ತ್ರಯೋದಶಾಕ್ಷರೀ" ಮಂತ್ರವಿದೆ ಇದರಲ್ಲಿ ಪ್ರಥಮಾಂತ ವಿಭಕ್ತಿಯ ಜೊತೆ "ಸ್ವಾಹಾ" ಪಲ್ಲವಿ ಇದೆ. ಒಮ್ಮೆ ಯಾರೋ ವಿದ್ವಾಂಸರು ಈ ಮಂತ್ರದಲ್ಲಿ ಹ್ರೀಂ ಸೇರಿಸಿ ಮತ್ತು ಪ್ರಥಮಾಂತ್ಯದಲ್ಲಿ ಚತುರ್ಥಿ ವಿಭಕ್ತಿಯನ್ನು ಸೇರಿಸಿ "ಕೇವಲಿ ಸ್ವಾಹಾ" ದ ಸ್ಥಾನದಲ್ಲಿ "ಕೇವಲಿಭ್ಯಃ ಸ್ವಾಹಾ ಮಾಡಿ ಮೊದಲು ಅಕ್ಷರ ಜಾಸ್ತಿಯಾದ್ದರಿಂದ ಇದು ಪಂಚದಶಾಕ್ಷರ ಮಂತ್ರವಾಯಿತು. ಇದರ ಅನುಷ್ಠಾನದಲ್ಲಿ ಅನೇಕ ತೊಂದರೆಗಳು ಅಡೆತಡೆಗಳು ಬಂದವು. ನನ್ನ ಎದುರಿಗೂ ಈ ಚರ್ಚೆ ಬಂದಾಗ ಮೂಲಮಂತ್ರ ಆಚಾರ್ಯರಿಂದ ವರ್ಣಿತವಾಗಿದೆ. ಗ್ರಂಥದ ಆಧಾರದಿಂದ ಇದರಲ್ಲಿ ಅಕ್ಷರವನ್ನು ಸೇರಿಸಬಾರದು. ನಿಮ್ಮ ವ್ಯಾಕರಣವನ್ನು ಸೇರಿಸಬೇಡಿ ಮಂತ್ರ ಅಶುದ್ಧವಾಗುವುದಿರಂದಲೇ ಈ ಹಾನಿಯಾಗಿದೆ ಎಂದು ಮನದಟ್ಟು ಮಾಡಿದೆ.

ಪಂಚ ಕಲ್ಯಾಣದ ತಿಥಿಗಳು

ತಿಲೋಯ ಪಣ್ಣತ್ತಿ ಗ್ರಂಥದಲ್ಲಿ ಕಲ್ಯಾಣಗಳು ತಿಥಿಗಳಲ್ಲಿ ಕೆಲವು ಬೇರೆಯಾಗಿವೆ ಮತ್ತು ಉತ್ತರ ಪುರಾಣ ಗ್ರಂಥದಲ್ಲಿ ಸ್ವಲ್ಪ ಬೇರೆ ಇದೆ. ಕೆಲವು ವಿದ್ವಾಂಸ ಶ್ರಾವಕರು ತಿಲೋಯಪಣ್ಣತ್ತಿ ಗ್ರಂಥದ ಕಲ್ಯಾಣಕ್ಕೆ ತಿಥಿಗಳ ನಕ್ಷತ್ರದ ಆಧಾರದಿಂದ ಕೆಲವು ತಿಥಿಗಳನ್ನು ಬದಲಾಯಿಸಲು ಸಿದ್ಧವಾಗಿದ್ದಾರೆ. ನನ್ನ ಹತ್ತಿರ ಪತ್ರ ಕಳುಹಿಸಿದರು. ಪರಾಮರ್ಶನೆಗಾಗಿ ನಾನು ಹಲವಾರು ವರ್ಷಗಳಿಂದ ಬಹಳಷ್ಟು ಚಿಂತನೆಯನ್ನು ಮಾಡಿದ್ದೆ ಆದರೆ ತಿಲೋಯಪಣ್ಣತ್ತಿ ಹಾಗು ಉತ್ತರ ಪುರಾಣ ಗ್ರಂಥಗಳಿಂದ ಯಾವುದೇಗ್ರಂಥದಲ್ಲಿಯು ಒಂದುತಿಥಿಯ ಬಗ್ಗೆಯು ಸಹ ಪರಿವರ್ತನೆ ಬಗೆಗೆ ಯೋಚಿಸಲಾರದಾದೆ. ಇಂತಹ ಅತಿಯಾದ ಸಾಹಸ ತನ್ನಿಂದ ಸಂಭವವೇ ಇಲ್ಲ.

ಕಲ್ಪದ್ರುಮ ಆರಾಧನೆಯಲ್ಲಿಯು ಪಂಚಕಲ್ಯಾಣಕ್ಕೆ ಪೂಜೆಯ ರಚನೆಯ ಸಮಯದಲ್ಲಿಯು ನನ್ನ ಮನಸ್ಸಿಗೆ ಇದೇ ಸಮಸ್ಯೆ ಮತ್ತೆ ಬಂದಿತು ಯಾವ ಗ್ರಂಥದ ಆಧಾರದ ಮೇಲೆ ಅಷ್ಟಕಗಳ ರಚನೆಯನ್ನು ಮಾಡಲಿ?

ಮೊದಲು ನಾನು “ತಿಲೋಯಪಣ್ಣತ್ತಿ” ಗ್ರಂಥವೇ ಅತೀ ಪ್ರಾಚೀನವೆಂದು ತಿಳಿದು ಇದರ ಆಧಾರದಿಂದಲೇ ಬರೆಯಬೇಕೆಂದು ತಿಳಿದರೆ ಇದರಲ್ಲಿ ಗರ್ಭಕಲ್ಯಾಣದ ತಿಥಿಗಳು ಇಲ್ಲ. ಹೀಗಾಗಿ ಯಾವ ಗ್ರಂಥದಿಂದ ಜೋಡಿಸಲಿ ತಿಳುವಳಿಕೆಗೆ ಬರಲಿಲ್ಲ ಪುನಃ ಉತ್ತರ ಪುರಾಣದ ಆಧಾರದಿಂದಲೇ ನಾನು ತಿಥಿಗಳನ್ನು ತೆಗೆದುಕೊಂಡು ಪೂಜೆಗಳನ್ನುಸಿದ್ಧಗೊಳಿಸಿದೆ. ಬಹುಶಃ “ವೃಂದಾವನ” ಮೊದಲಾದ “ಚೌಬೀಸಿ”ಪೂಜೆಗಳಲ್ಲೂ ಸಹ ಇದೇ ತಿಥಿಗಳಿವೆ.

ಧವಲ ಟೀಕೆಯಲ್ಲಿಯು ಎರಡು ಅಭಿಪ್ರಾಯ ಕಂಡು ಬಂದ ಸಮಯದಲ್ಲಿ ಇದನ್ನು ಬರೆದಿದ್ದಾರೆ. ಎಲ್ಲಿಯವರೆಗೆನಮಗೆ ಕೇವಲಿಗಳು ಶ್ರುತಕೇವಲಿಗಳು ಸಿಗುವುದಿಲ್ಲವೋ ಅಲ್ಲಿಯವರೆಗೆ ಎರಡನ್ನು ನಾವುಪ್ರಮಾಣವೆಂದೆ ತಿಳಿಯಬೇಕಾಗಿದೆ. ಇದು ಸತ್ಯ ಅದು ಮಿಥ್ಯ ಎಂದು ನಿರ್ಣಯ ತೆಗೆದುಕೊಳ್ಳಬಾರದು. ಇಂತಹ ಹೇಳಿಕೆಗಳನ್ನು ನಾನು “ಪ್ರವಚನ ನಿರ್ದೇಶಿಕೆ”ಯಲ್ಲಿ ಕೊಟ್ಟಿದ್ದೀನಿ.

೯೬

ತ್ರೈಲೋಕ್ಯವಿಧಾನ

1989ರಲ್ಲಿ ಟಿಕ್ಕೈತನಗರದಿಂದ ಬಂದಿದ್ದ ಪ್ರಕಾಶಚಂದನು ಜೂನ್ 20ರಂದು ತ್ರೈಲೋಕ್ಯ ವಿಧಾನವನ್ನು ಪ್ರಾರಂಭ ಮಾಡಿದರು. ನಾನು ಸರ್ವತೋಭದ್ರ ಆರಾಧನೆ ಮೂರು ಲೋಕದ ಹೆಸರಿನಲ್ಲಿ ಮಧ್ಯಮ ಮೂರುಲೋಕದ ಆರಾಧನೆ ಮತ್ತು ತ್ರೈಲೋಕ್ಯ ಆರಾಧನೆ ಹೆಸರಿನಿಂದ ಲಘು ಮೂರು ಲೋಕದ ಆರಾಧನೆ ಹೀಗೆ ಮೂರು ಲೋಕದ ಮೂರು ಆರಾಧನೆಯನ್ನುಮಾಡಿದೆ.

1987ರ ಫೆಬ್ರವರಿಯಲ್ಲಿ ಮೋತಿಚಂದರು ದೀಕ್ಷೆಗೆ ಮೊದಲು ಮೂರುಲೋಕ ಆರಾಧನೆಯನ್ನು ಹಸ್ತಲಿಖಿತ ಪ್ರತಿಯಿಂದಲೇ ಮಾಡಿಸಿದ್ದ ದೊಡ್ಡ ಮೂರುಲೋಕದ ಆರಾಧನೆ -ಸರ್ವತೋಭದ್ರ ಆರಾಧನೆಯನ್ನು ವೀರೇಂದ್ರ ಕುಮಾರ ಬ್ರ. ಮಾಧುರಿ ವಿಜಯೇಂದ್ರ ಕುಮಾರ ಮೊದಲಾದವರು 1988ರ ಕಾರ್ತಿಕ ಅಷ್ಟಾಹ್ನಿಕದಲ್ಲಿ ಮಾಡಿದ್ದರು. ಈಗ ಪ್ರಕಾಶಚಂದನು ಲಘು ಮೂರು ಲೋಕದ ವಿಧಾನವನ್ನು ಮೊದಲಬಾರಿಗೆ ಮಾಡಿದರು. ಇದನ್ನು ಅವರು ತಮ್ಮ ಸೌಭಾಗ್ಯವೆಂದುತಿಳಿದರು. ಆರಾಧನೆ ಮಾಡುವಾಗ ಪಾಠ ಓದುವಾಗ ಅವರು ಎಷ್ಟು ನಿಮಗ್ನರಾಗಿದ್ದರೆಂದರೆ ಭಾವಾತಿರೇಕದಿಂದಅವರ ಧ್ವನಿ ಗದ್ಗದಿತ ವಾಣಿಯಿಂದ ಜಿನೇಂದ್ರ ಭಗವಂತರ ಭಕ್ತಿಯನ್ನು ಹೊಗಳುತ್ತಿದ್ದರು. ಆರಾಧನೆ ಮುಗಿದು ಗ್ರೀಷ್ಮಕಾಲ ಬಂದ ಮೇಲೆ ತಮ್ಮ ಮಕ್ಕಳಾದ ಅಕಲಂಕ, ನಿಷ್ಕಲಂಕ, ಇಂದು ಮಾಲ ಪ್ರಮೀಳ ಮೊದಲಾದ ಎಲ್ಲ ಮಕ್ಕಳೊಡನೆ ಊರಿಗೆ ಹೋದರು. ನಿಜವಾಗಿ ಹೇಳಬೇಕೆಂದರೆ ತಾಯಿ ಮೋಹಿನಿಯವರ ಧಾರ್ಮಿಕ ಸಂಸ್ಕಾರ ಎಲ್ಲ ಮಕ್ಕಳ ಮೇಲು ಇದೆ. ಇದರ ಫಲ ಸ್ವರೂಪವಾಗಿಯೆ ಮೂರು ಜನ ಗೃಹಸ್ಥ ಮಕ್ಕಳು ಮನೆಯಲ್ಲಿಯ ಜಿನಚೈತ್ಯಾಲಯ ಮಾಡಿಕೊಂಡಿದ್ದಾರೆ. ಪ್ರತಿದಿನ ತಮ್ಮಮನೆಯಲ್ಲೆ ಜಿನ ಅಭಿಷೇಕ ಪೂಜೆ ಮಾಡುತ್ತಾರೆ.

ಜಂಬೂದ್ವೀಪ ಆರಾಧನೆ

ಭರತಪುರದಿಂದ ಬಂದಿದ್ದ ತಾರಾಚಂದಜೈನರು 1989ರ ಜುಲೈನಲ್ಲಿ ಅಷ್ಟಾಹ್ನಿಕ ಪರ್ವದಲ್ಲಿ ಜಂಬೂದ್ವೀಪದಲ್ಲಿ ಈ ಆರಾಧನೆಯನ್ನು ಮಾಡಿದರು. ಆರಾಧನೆಯು ಸಾಂಗವಾಗಿ ನಡೆಯಿತು. ಜುಲೈ 16ರಂದು

ಮಧ್ಯಾಹ್ನ ಗಣೇಶ ಲಾಲರಾನಿವಾಲ ಜಿನೇಂದ್ರ ಪ್ರಸಾದ ತೇಕೆದಾರ ರವೀಂದ್ರ ಮೊದಲಾದವರು ನನ್ನ ಹತ್ತಿರ ಕುಳಿತು ಜಂಬೂದ್ವೀಪದ ಪ್ರಗತಿಯ ಬಗ್ಗೆ ಮಾತನಾಡುತ್ತಾ ಮುಂದೆ ಜಂಬೂ ದ್ವೀಪದ ಮಹೋತ್ಸವ ಮಾಡುವ ವಿಷಯವನ್ನು ಚರ್ಚೆ ಮಾಡುತ್ತಿದ್ದರು.

ನಾನು ಸರಿಯಾದ ಸಮಯ ನೋಡಿ ತಕ್ಷಣ ಬ್ರ. ಮಾಧುರಿ ದೀಕ್ಷೆ ಕೈಕೊಳ್ಳುವ ದಿನ ಆಗಷ್ಟ 13 ಎಂದು ಘೋಷಿಸಿಯೇ ಬಿಟ್ಟೆ. ಇದನ್ನು ಕೇಳಿದ ರವೀಂದ್ರ ಒಂದು ಕ್ಷಣ ಸ್ತಂಭಿತನಾದ ಪುನಃ ಮಾತಾಜೀ ಏನನ್ನೇ ಆಗಲಿ ಪೂರ್ಣ ಯೋಚಿಸಿಯೆ ಮಾಡಿರುತ್ತಾರೆ. ಇದರಲ್ಲಿ ಸಂಶಯದ ಎಳೆಯುಬೇಡ ಎಂದುಕೊಂಡರು ಆಗ ಅವನೇ ಸರಿ ದೀಕ್ಷೆಯನ್ನು ಬಹಳ ವಿಜೃಂಭಣೆಯಿಂದಲೇ ಮಾಡೋಣ ಖುಷಿಯಿಂದಲೇ ಕಾರ್ಯಗಳನ್ನು ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟರು.

ಅವನ ಈ ಮಾತುಗಳನ್ನು ಕೇಳಿ ನನಗೆ ಬಹಳ ನೆಮ್ಮದಿ ಆಯಿತು. ಮಾಧುರಿಗಂತೂ ಬಹಳ ಖುಷಿ ಆಯಿತು ಅವಳ ಸಂತೋಷಕ್ಕೆ ಪಾರವಿಲ್ಲ. ಸುಮಾರು ಎರಡು ವರ್ಷದಿಂದ ದೀಕ್ಷೆಗಾಗಿ ನನ್ನಲ್ಲಿ ಪ್ರಾರ್ಥಿಸುತ್ತಲೆ ಇದ್ದಳು. ಈ ವಿಷಯವಾಗಿ ರವೀಂದ್ರನಲ್ಲಿ ಮಾತನಾಡಿದಾಗ ಅವನು ಒಪ್ಪಿರಲಿಲ್ಲ. ನಾನು ಚೆನ್ನಾಗಿ ಮನದಟ್ಟು ಮಾಡಿದರೂ ಅವನಲ್ಲಿ ಉಂಟಾದ ಮೋಹನೀಯ ಕರ್ಮದ ಉದಯದ ಕಾರಣ ಒಪ್ಪಿಗೆ ಕೊಡಲಿಲ್ಲ ಮಾಧುರಿಯಲ್ಲಿ ದೃಢತೆ ಇತ್ತು. ಸ್ವಯಂ ನನ್ನಲ್ಲಿ ನಂಬಿಕೆ ಇತ್ತು ಇದರಿಂದಾಗಿ ಎಲ್ಲಿಯವರೆಗೆ ತಡೆಯಲು ಸಾಧ್ಯ ಆದ್ದರಿಂದ ಅವನನ್ನು ಕೇಳದೆಯ ನಾನೇ ನಿರ್ಣಯ ತೆಗೆದುಕೊಂಡು ಘೋಷಣೆಯನ್ನು ಮಾಡಿಬಿಟ್ಟೆ. ಏನಾಗಬೇಕು ಅದು ಆಗೇ ಆಗುತ್ತದೆ. ಮಾಧುರಿಯ ಪುಣ್ಯದಿಂದ ಎಲ್ಲವು ಅನುಕೂಲವಾಯಿತು ರವೀಂದ್ರಕುಮಾರನು ಒಳ್ಳೆಯ ಪ್ರಭಾವನೆಯಿಂದ ದೀಕ್ಷಾ ಮಹೋತ್ಸವವನ್ನು ನಡೆಸಲು ನಿಶ್ಚಯಿಸಿದರು.

ದೀಕ್ಷೆಗಾಗಿ ಪ್ರಾರ್ಥನೆ

1989ರ ಜುಲೈ 17ರಂದುಮಧ್ಯಾಹ್ನ ದೆಹಲಿ ಮುಂತಾದ ಕಡೆಯಿಂದ ಹಲವಾರು ಜನ ಶ್ರಾವಕ ಶ್ರಾವಕಿಯರು ಚಾತುರ್ಮಾಸ ಸ್ಥಾಪನೆಗೋಸ್ಕರ ಶ್ರೀಫಲವನ್ನು ಇಟ್ಟು ಪ್ರಾರ್ಥನೆ ಸಲ್ಲಿಸಿದರು. ಇದೇ ಸಭೆಯಲ್ಲಿ ಮಾಧುರಿ ಶ್ರೀ ಫಲವನ್ನು ಇಟ್ಟು ನನ್ನಲ್ಲಿ ಪ್ರಾರ್ಥಿಸಿದಳು ಹೇ ಮಾತಾಜೀ ನನ್ನನ್ನು ಈ ಸಂಸಾರ ಸಮುದ್ರದಿಂದ ಪಾರುಮಾಡುವ ಆರ್ಯಿಕ ದೀಕ್ಷೆಯನ್ನು ದಯಪಾಲಿಸಿರಿ ಎಂದು. ನಾನು ಸಮಯೋಚಿತವಾದ ಆಶೀರ್ವಚನ ಕೊಟ್ಟೆ. ಮಾಧುರಿಗೆ ದೀಕ್ಷೆಗಾಗಿ ಅನುಮತಿಯನ್ನು ಹಾಗೇ ಆ ವರ್ಷ ಚಾತುರ್ಮಾಸವನ್ನು ಹತ್ತಿನಾಪುರದಲ್ಲಿಯೇ ನಡೆಸಲು ಅನುಮತಿಯನ್ನು ಕೊಟ್ಟಾಯಿತು. ಜನತೆಗೆ ಮಾಧುರಿಯ ವೈರಾಗ್ಯವನ್ನು ನೋಡಿ ಧನ್ಯ(ಥ)ತಾ ಭಾವನೆಯು ಮಮತೆಯ ಒಟ್ಟಿಗೆ ಉಂಟಾಯಿತು. ರಾತ್ರಿ ವರ್ಷಾಯೋಗದ ಸ್ಥಾಪನೆ ಆಯಿತು.

ಮಾಧುರಿಗೆ ಸನ್ಮಾನ ಮತ್ತು ಶೋಭಾಯಾತ್ರೆ

ಹಾಪುಡದ ಶಿಖರಚಂದರವರು ಮಾಧುರಿಯನ್ನು ತಮ್ಮಲ್ಲಿಗೆ ಕರೆದುಕೊಂಡು ಹೋಗಿ ಸುಮ್ಮಾನವನ್ನು ಶೋಭಾ ಯಾತ್ರೆಯನ್ನು ಕೈಕೊಳ್ಳುವುದಕ್ಕಾಗಿ ಅನುಮತಿಯನ್ನು ಬೇಡಿದರು ಹೀಗಾಗಿ ಮೊದಲ ಸಮ್ಮಾನವು ಹಾಪುಡದಿಂದ ಪ್ರಾರಂಭವಾಯಿತು.

ಶಾಂತಿ ಆರಾಧನೆ

ನನ್ನ ಭಾವನೆ ದೀಕ್ಷೆಗಿಂತ ಮೊದಲು ದೀಕ್ಷಾರ್ಥಿಯು ತೀರ್ಥಕ್ಷೇತ್ರಗಳ ದರ್ಶನ ಆರಾಧನೆ, ಪೂಜೆ ಮುನಿಗಳಿಗೆ ಆಹಾರದಾನದ ಕ್ರಿಯೆಗಳನ್ನು ಮನಃಪೂರ್ತಿಯಾಗಿ ಮಾಡಿರಬೇಕು, ಇದರಿಂದಾಗಿ ದೀಕ್ಷೆ ಆದ ಮೇಲೆ ಯಾತ್ರೆ ಮಾಡುವ ಆಶೆಯಾಗದೆ ಸಂಘದಲ್ಲಿ ಮನಸ್ಸು ಸ್ಥಿರವಾಗಿರುತ್ತದೆ. ಇನ್ನೊಂದು ವಿಷಯ ಬಸ್ಸು, ರೈಲಿನಲ್ಲಿ ಮಾಡುವ ಪ್ರಯಾಣದಷ್ಟು ಕಾಲುನೆಡಿಗೆಯಲ್ಲಿ ಮಾಡುವುದು ಸುಲಭವಲ್ಲ. ಹೀಗೆ ಮಾಧುರಿ ಮೊದಲೇ ಎಲ್ಲ ಕಡೇ ಯಾತ್ರೆ ಮಾಡಿದ್ದಳು ಜ್ಞಾನ ಜ್ಯೋತಿಯ ಸಮಯದಲ್ಲಿ ಬುಂದೇಲಖಂಡದ ತೀರ್ಥಯಾತ್ರೆಯು ಆಗಿತ್ತು. ಹೀಗಾಗಿ ಜುಲೈ 21-22-23ರಂದು ಕ್ರಮವಾಗಿ ಪಂಚಕಲ್ಯಾಣ ವಿಧಾನ ಮೃತ್ಯುಂಜಯ ಆರಾಧನೆ ಮತ್ತು ಶಾಂತಿವಿಧಾನದ ಆರಾಧನೆಗಳನ್ನು ಮಾಡಿದಳು.

ಸಮ್ಮಾನ ಕಾರ್ಯಕ್ರಮ

ದೀಕ್ಷೆಯ ನಿರ್ಣಯವಾಗುತ್ತಲೆ ರವೀಂದ್ರನು ತನ್ನ ಮನೆಗೆ ಮಹಮೂದಬಾದಿಗೆ ತನ್ನ ಪರಿವಾರದ ಜನಗಳಿಗೆ, ಸನಾವದಗೆ ಪತ್ರವನ್ನು ಬರೆದು ವಿಷಯ ತಿಳಿಸಿದನು. ಇಲ್ಲಿಯ ವಿಶೇಷ ಭಕ್ತರಿಗೆ ಕಮಿಟಿಯ ಜನರಿಗೆ ಸೂಚನೆಯನ್ನು ಕಳುಹಿಸಲಾಯಿತು. ಟಿಕೈತ ನಗರದಿಂದ ಸುಭಾಷಚಂದ ಜೈನನು ಶ್ರಾವಣಮಾಸದ ಪಂಚಮಿಯಂದೇ ಇಲ್ಲಿಗೆ ಬಂದ ಇವನು ಮಾಧುರಿಯನ್ನುಟಿಕೈತ ನಗರಕ್ಕೆ ಕರೆದೊಯ್ಯಲು ಅನುಮತಿಯನ್ನು ಕೋರಿ ಜೊತೆಗೆ ರವೀಂದ್ರ ಪಂ. ನರೇಶನನ್ನು ಜೊತೆಗೆ ಕರೆದೊಯ್ದರು.

ಜೂನ್ 25ರಂದು ದರಿಯಾಬಾದ್‌ನಲ್ಲಿಅವಳ ಸಹೋದರಿ ಕಾಮಿನಿಯು ಸಮಾಜದ ಜನರೊಂದಿಗೆ ಸ್ವಾಗತಿಸಿದಳು. 25ರಂದು ಟಿಕೈತನಗರದಲ್ಲಿ ಇಡೀ ಜೈನಸಮಾಜವೇ ಆಬಾಲವೃದ್ಧರಾದಿಯಾಗಿ ಶೋಭಾಯಾತ್ರೆಯಲ್ಲಿ ಭಾಗವಹಿಸಿ ಒಳ್ಳೆಯ ಸಮ್ಮಾನವನ್ನು ಮಾಡಿದರು. ಜೈನೇತರರು ಕೂಡ ತಮ್ಮ ಊರಿನ ಮಗಳೆಂದು ಪ್ರೀತಿಯಿಂದ ಮಗಳೆಂದು ಕರೆಯುತ್ತಾ, ಅಶ್ರುತರ್ಪಣದೊಂದಿಗೆ ಸಮ್ಮಾನವನ್ನು ಗೈದರು ಮನೆಯ ಜನರಲ್ಲದೆ ಇಡೀ ಊರಿನವರೇ ಅವಳನ್ನು ಕಂಬನಿಗೆರೆಯುತ್ತಾ, ಬೀಳ್ಕೊಟ್ಟರು.

ಮಾಧುರಿ 1971ರಲ್ಲಿಯೆ ನನ್ನಿಂದ ಬ್ರಹ್ಮಚರ್ಯವ್ರತವನ್ನು ಪಡೆದು ಸಂಘದಲ್ಲಿ ಇದ್ದಳು ಆದರೂ ಆಗಾಗ್ಗೆ ಮನೆಗೆ ಹೋಗಿಬರುತ್ತಿದ್ದಳು. ಮೂವತ್ತು ಕಾರಣಗಳಿಂದ ಊರಿನ ಜನರು ಟಿಕೈತ ನಗರಕ್ಕೆ ಬಂದು ಕರೆದೊಯ್ಯುತ್ತಿದ್ದರು. ಈಗ ಎಲ್ಲರಿಗೂ ಮಾಧುರಿ ಇನ್ನು ಮೊದಲಿನಂತೆ ಊರಿಗೆ ಬರಲು ಸಾಧ್ಯವಿಲ್ಲವೆನ್ನುವ ಸತ್ಯದ ಅರಿವಾಯಿತು. ಆರ್ಯಿಕಾ ದೀಕ್ಷೆ ಪಡೆಯುವ ನಮ್ಮ ಮಗಳು ಮಾಧುರಿಈಗ ಮಗಳಾಗಿ ಅಲ್ಲ ನಮ್ಮೆಲ್ಲರ ತಾಯಿ ಆಗುತ್ತಾಳೆ. ಪುನಃ ವಿಹಾರ ಮಾಡುತ್ತಾ ನಮ್ಮೂರಿಗೆ ಬರುವ ಅವಕಾಶ ಎಂದು ಸಿಗುತ್ತದೆಯೋ ಮೊದಲು ಊರಿನ ಹಿರಿಯರು ದೀಕ್ಷೆಯನ್ನು ತಡೆಯಬೇಕೆಂದು ಬಹಳ ಪ್ರಯತ್ನವನ್ನುಪಟ್ಟರು. ಆದರೆ ಅವಳ ದೃಢತೆಯನ್ನು ನೋಡಿ ಸೋತು ಸುಮ್ಮನಾಗಿ ಮನಪೂರ್ವಕವಾಗಿ ಶೋಭಾಯಾತ್ರೆಯನ್ನು ಮಾಡಿ ಆಶೀರ್ವಾದದ ಮಳೆಯನ್ನೆ ಹರಿಸುತ್ತಾ ಬೀಳ್ಕೊಟ್ಟರು.

ಇಲ್ಲಿಂದ ಹೊರಟ ಮಾದುರಿಗೆ ಜೂನ್ 26ರಂದು ಬೆಳಗ್ಗೆ ಬರಹಾಇಚದಲ್ಲಿ ಸನ್ಮಾನವನ್ನುಮಾಡಿದರು. ಅದೇ ದಿನ ಸಂಜೆ ಲಖನೌನಲ್ಲಿ ಸಹೋದರಿ ಶಾಂತಿದೇವಿಯು ಸಮ್ಮಾನವನ್ನು ಮಾಡಿ ಅಲ್ಲಿಂದ ಜೂನ್ 27ರಂದು ಮಹಮೂದಬಾದಿನಲ್ಲಿ ಮಾಧುರಿಯ ಮಾಮ ಇಡೀ ಜೈನಸಮಾಜವನ್ನೇ ಸೇರಿಸಿ ವಿಶೇಷವಾದ

ಶೋಭಾಯಾತ್ರೆಯಲ್ಲಿ ಕರೆದೊಯ್ದುಸಮ್ಮಾನ ಮಾಡಿದರು. ಅಲ್ಲಿಂದ ಮಾಧುರಿ ರವೀಂದ್ರ ಕುಮಾರನ ಜೊತೆ ಹಸ್ತಿನಾಪುರಕ್ಕೆ ಬಂದಳು.

ಟಿಕೈತನಗರದಿಂದ ಬಂದ ಮಾಧುರಿ ಅಲ್ಲಿನ ಅನುಭವಗಳನ್ನು ಹೇಳ ತೊಡಗಿದಳು ಮಾತಾಜಿ. ನಾನು ಊರಿಗೆ ಹೋಗುತ್ತಲೆ ಕೈಲಾಸಬಾಯಿ ಸಾಹೇಬ ಸನಾವದ ಮನೆಗೆ ಹೋದೆ. ಅಲ್ಲಿಗೆ ಊರಿನ ಹಿರಿಯರು ಬಂದು ಭೇಟಿಯಾಗಿ ನನ್ನನು ಏಕಾಂತದಲ್ಲಿ ತಿಳುವಳಿಕೆ ಹೇಳತೊಡಗಿದರು. ನೀನು ದೀಕ್ಷೆ ತೆಗೆದುಕೊಳ್ಳುವುದನ್ನು ಮುಂದೂಡು. ನಮಗೆ ನೀನು ಇಲ್ಲದೆ ಆರಾಧನೆ ಪೂಜೆ ಮಾಡುವುದರಲ್ಲಿ ಆನಂದ ಸಿಗುವುದಿಲ್ಲ. ನೀನು ಇಲ್ಲಿಯೆ ಇದ್ದುಬಿಡು ನಾವು ಮಾತಾಜೀಯವರ ಹತ್ತಿರ ಹೋಗಿ ಈ ದೀಕ್ಷೆಯನ್ನು ನಿಲ್ಲಿಸಲು ಪ್ರಾರ್ಥಿಸುತ್ತೇವೆ. ಆರಾಧನೆಯನ್ನು ಮಾಡಿಸಲು ಒತ್ತಾಸೆಯನ್ನು ಕೊಡತೊಡಗಿದರು. ಒಪ್ಪಿಕೊಳ್ಳಲು ಒತ್ತಾಯವನ್ನು ಹೇರತೊಡಗಿದರು. ಅದಕ್ಕೆ ನಾನು ಯಾವುದೇ ಕಾರ್ಯವು ಯಾರಿಂದಲು ನಿಲ್ಲುವುದಿಲ್ಲ. ನಿಮ್ಮ ಈ ಆಮಿಷವು ನನ್ನನ್ನು ದೀಕ್ಷೆಯಿಂದ ತಡೆಯಲಾರದು. ಈಗ ನಾವೆಲ್ಲ ನನಗೆ ಆಶೀರ್ವದಿಸಿ ಕಳುಹಿಸಬೇಕು. ನಾನು ನನ್ನ ಜನ್ಮಭೂಮಿಯ ಹೆಸರನ್ನು ದೇಶದಲ್ಲೆಲ್ಲ ಪ್ರಕಾಶಗೊಳಿಸುತ್ತೇನೆ ಎಂದು ಸಮಾಧಾನಿಸಿ ಬಂದಿದ್ದಾಳೆ. ನಾನೆಂದುಕೊಂಡೆ ಮೋಹನೀಯ ಕರ್ಮ ಏನೆಲ್ಲ ಮಾಡಿಸುತ್ತದೆ.

ದೆಹಲಿಯಲ್ಲಿ ಜುಲೈ 29ರಂದು ಬೆಳಗ್ಗೆ 8ಗಂಟೆಗೆ ಲಾಲಮಂದಿರದಲ್ಲಿ ಆಚಾರ್ಯ ಸುಧರ್ಮ ಸಾಗರರ ಸಾನಿಧ್ಯದಲ್ಲಿ ತುಂಬಿದ ಸಭೆಯಲ್ಲಿ ಸ್ವಾಗತಿಸಿ ಆಧರಿಸಿದರು. ಪುನಃ 10 ಗಂಟೆಗೆ ಚಾಂದನಿ ಚೌಕದಲ್ಲಿ ಸ್ವಾಗತವಾಗುತ್ತಲೇ ಶೋಭಾಯಾತ್ರೆ ಹೊರಟಿತು. ಮಾರ್ಗದಲ್ಲಿ ಬರುವ ಧರ್ಮಶಾಲೆಯಲ್ಲಿ ಅನೇಕ ಪುರುಷರು ಮಹಿಳೆಯರು ಮಡಿಲುತುಂಬಿ ಆಶೀರ್ವದಿಸಿದ್ದಾರೆ.

ಜುಲೈ 30ರಂದು ಬಡೌತದಲ್ಲಿದ್ದ ಗಣಧರಾಚಾರ್ಯ ಶ್ರೀ ಕುಂಥುಸಾಗರ ಸಂಘದಲ್ಲಿ ಸ್ವಾಗತಿಸಿದರು. ಆಚಾರ್ಯ ಮಹಾರಾಜರು ಹಾಗೇ ಸಂಘದಲ್ಲಿದ್ದ ಎಲ್ಲರು ವಿಶೇಷವಾಗಿ ಆಶೀರ್ವದಿಸಿ ದೊಡ್ಡ ಮೆರವಣಿಗೆಯನ್ನು ಮಾಡಿ ಮಧ್ಯೆ ಮಧ್ಯೆ ಮಡಿಲು ತುಂಬಿ ಕಳುಹಿಸಿದ್ದಾರೆ.

ಪುನಃ ಮೋತಿಸಾಗರರ ಜನ್ಮಭೂಮಿಗೆ ವಿಶೇಷ ಆಗ್ರಹದಿಂದ ಕಳುಹಿಸಲೇ ಬೇಕಾಯಿತು ಅಲ್ಲಿ ಆಗಷ್ಟ ಒಂದರಂದು ಶೋಭಾಯಾತ್ರೆಯ ಕಾರ್ಯಕ್ರಮ ನಂತರ ಸಭೆಯನ್ನುಏರ್ಪಡಿಸಲಾಗಿತ್ತು. ಸಮಯಾಭಾವದಿಂದ ರವೀಂದ್ರ ಅಲ್ಲಿಂದ ಮಾಧುರಿಯನ್ನು ಬೇಗನೆ ಕರೆತಂದು ಅಲ್ಲಿಂದ ಬರುತ್ತಲೇ ಸೋನಾಗಿರಿಯಲ್ಲಿದ್ದ ಆಚಾರ್ಯ ವಿಮಲ ಸಾಗರರ ದರ್ಶನ ಮಾಡಿ ಆಶೀರ್ವಾದ ಪಡೆದು ಬ್ರ. ಚಿತ್ರಾಬಾಯಿಯವರ ಮಂಗಳಕಾಮನೆಯೊಂದಿಗೆ ಪುನಃ ಹಸ್ತಿನಾಪುರಕ್ಕೆ ಬಂದರು.

ಈ ಶೋಭಾ ಯಾತ್ರೆಯಗಳಲ್ಲೆಲ್ಲ ಮಾಧುರಿಗೆ ಮನಸ್ಸು ಇರದಿದ್ದರೂ ಜನಗಳ ಅತೀವ ಪ್ರೀತಿ, ಆಗ್ರಹ, ವಾತ್ಸಲ್ಯಕ್ಕೆ ತಲೆಬಾಗಿ ಹೋಗಲೆಬೇಕಾಗುತ್ತಿತ್ತು. ಅವಳಿಗೆ ಆಯಾಸವಾಗಿ ಎಲ್ಲೂ ಹೊರಡಲು ಶಕ್ತಿಯೇ ಇಲ್ಲದೆ ಸಿದ್ಧವಾಗಿರಲಿಲ್ಲ. ಇದರಿಂದ ಅಹಮದಾಬಾದಿನಿಂದ ಬಂದಿದ್ದ ಹೀರಾಲಾಲರು ತಮ್ಮ ಕಾರ್ಯಕ್ರಮವನ್ನು ಸ್ಥಗಿತಗೊಳಿಸಿದರು. ಆಚಾರ್ಯ ಅಜಿತಸಾಗರರನ್ನು ದರ್ಶನ ಮಾಡಲು ರೈಲಿಗೆ ರಿಸರ್ವೇಶನ್ ಮಾಡಿಸಿಯು ಸಮಯಾಭಾವದಿಂದ ಹೋಗಲು ಆಗದೆ ಇದ್ದದ್ದು ನನಗೂ ಬೇಜಾರಾಯಿತು. ಆಗಷ್ಟ್ 9ರಂದು ಬೆಳಗ್ಗೆ ಸರಧನನಲ್ಲಿ ಸಾಯಂಕಾಲ ಕಮಲಾನಗರ ಮೇರಠದಲ್ಲಿ ಸ್ವಾಗತ ಸಮಾರಂಭಗಳನ್ನು ನಡೆಸಿದರು.

ಬಂಧು ಜನರ ಆಗಮನ

ಇಲ್ಲಿಗೆ ಮಾಧುರಿಯ ಅಕ್ಕ-ಭಾವ ಅಣ್ಣ-ಅತ್ತಿಗೆ ಅವರ ಮಕ್ಕಳೊಡನೆ ಬಂದಿಳಿದರು. ಸನಾವದನಿಂದ ಮಾತೃಶ್ರೀ ರೂಪಾಬಾಯಿ, ಶ್ರೀ ಇಂದ್ರಚಂದ್ ಚೌಧರೀ ಮೊದಲಾದವರು ಬಂದರು. ಅವರೆಲ್ಲರು ಮಾಧುರಿಯನ್ನು ತಮ್ಮ ಸ್ವಂತ ಮಗಳಂತೆ, ತಂಗಿಯಂತೆ ಕಾಣುತ್ತಿದ್ದರು.

ಕು. ಮಾಧುರಿಯ ಸುತ್ತುವರಿದು ಕೈಗಳಿಗೆ ಮೆಹಂದಿಹಾಕಿ ಶುಭಕಾಮನೆಗಳನ್ನು ಕೋರಿದರು ಅವಳಿಗೆ ಈ ಎಲ್ಲಾ ಶೃಂಗಾರದಲ್ಲಿ ಮನಸ್ಸು ಇರಲಿಲ್ಲವಾದರು ವರ್ತಮಾನ ಪರಂಪರೆಯನ್ನು ಮೀರಲಾರದೆ ಸುಮ್ಮನಾದಳು. ನನ್ನ ಆಜ್ಞೆಗಳನ್ನು ಪಾಲಿಸುತ್ತಿದ್ದರು. ಬೇರೆಯವರು ಆಗ್ರಹ ಮಾಡಿದರು ಅವಳು ಬಣ್ಣದ ಸೀರೆಯನ್ನು ಉಡಲು ಇಷ್ಟ ಪಡಲಿಲ್ಲ. ಈ ವಿಷಯವಾಗಿ ನಾನು ಒತ್ತಾಯ ಮಾಡಲಿಲ್ಲ. ಕೊನೆಗೆ ಪಾಲಿಕೆಯಲ್ಲಿ ಕಾರುಗಳಲ್ಲಿ ಮೆರವಣಿಗೆ ಹೊರಟಿತು.

ಹಸ್ತಿನಾಪುರದ ಅನಂತವೀರ ಚೈನರು ಜುಲೈ 11ರಂದು ಭವ್ಯ ಸ್ವಾಗತಮಾಡಿ ಶೋಭಾಯಾತ್ರೆ ಏರ್ಪಡಿಸಿದ್ದರು. 12ರಂದು ಕತೌಲಿಯ ಭಕ್ತರು ಮಡಿಲು ತುಂಬಿ ಶೋಭಾಯಾತ್ರೆ ಮಾಡಿದ್ದರು.

ಭೋಜನ ಪರಿತ್ಯಾಗ ಮತ್ತು ಕರಪಾತ್ರೆಯಲ್ಲಿ ಆಹಾರದ ಅಭ್ಯಾಸ

ಆಗಷ್ಟ 11 ರ ಭೋಜನದ ನಂತರ ಮಾಧುರಿಗೆ ತಟ್ಟೆಯಲ್ಲಿ ಊಟ ಮಾಡುವುದನ್ನು ವಿಧಿ ಪೂರ್ವಕವಾಗಿ ತ್ಯಾಗ ಮಾಡಿಸಲಾಯಿತು. ಆಗಷ್ಟ 12 ರಂದು ಸಂಘದ ಸಾಧುಗಳ ಆಹಾರವಾದ ಮೇಲೆ ಮಾಧುರಿಗೆ ಕರಪಾತ್ರದಲ್ಲಿ ಆಹಾರವನ್ನು ತೆಗೆದುಕೊಳ್ಳುವ ಅಭ್ಯಾಸ ಮಾಡಿಸಲಾಯಿತು. ಅದನ್ನು ಕೂಡ ರವೀಂದ್ರ ವ್ಯವಸ್ಥಿತವಾಗಿ ಮಾಡಿಸಿದ್ದ. ಮನೆಯವರೆಲ್ಲರು ಆಹಾರ ಕೊಟ್ಟು ನಂತರ ಕಣ್ಣೀರು ತುಂಬಿಕೊಂಡು ಮಡಿಲು ತುಂಬಿದರು.

ಅನಂತರ ಊಟಕ್ಕಾಗಿ ಕುಳಿತ ರವೀಂದ್ರನು ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದ. ತಂಗಿಯನ್ನು ಅತ್ತೆಯ ಮನೆಗೆ ಕಳುಹಿಸಿದ ಭಾವ ಅವನಿಗೆ. ಇನ್ನು ಮುಂದೆ ತಾನೊಬ್ಬನೆ ಕುಳಿತು ಊಟ ಮಾಡಬೇಕೆಂಬ ಏಕಾಕಿತನ ಅವನನ್ನು ಕಾಡತೊಡಗಿತು. ಉಳಿದ ಅಕ್ಕ ತಂಗಿಯರು ಸಮಾಧಾನ ಮಾಡಿಸುತ್ತಾ ಆ ದಿನ ಹೇಗೋ ಊಟ ಮಾಡಿಸಿದರು. ದೀಕ್ಷೆಯ ಪ್ರಸಂಗ ಬಂದಾಗಲೆಲ್ಲಾ ಅವನು ಭಾವ ವಿಹ್ವಲನಾಗಿ ಅಳಲು ಪ್ರಾರಂಭಿಸುತ್ತಿದ್ದನು. ಆಗೆಲ್ಲ ನಾನೇ ಸಮಾಧಾನ ಪಡಿಸಬೇಕಾಗುತ್ತಿತ್ತು. ನೀನು ಒಂದು ದಿನ ದೀಕ್ಷೆಯನ್ನು ಧಾರಣೆ ಮಾಡುವವನೆ. ಸಂಸಾರದಲ್ಲಿ ಗೊತ್ತಿಲ್ಲದೆ ಎಷ್ಟು ಜನ ಅಣ್ಣತಮ್ಮಂದಿರನ್ನು ಅಕ್ಕತಂಗಿಯರನ್ನು ಅಗಲಿದ್ದೇವೆಯೋ ಈಗ ಗೊತ್ತಿಲ್ಲ. ನೀನೆ ಈಗ ಮನೆಯನ್ನು ಬಿಟ್ಟು ಸಂಘದಲ್ಲಿ ಇರುವೆ. ಅಳುವುದು ಶೋಭೆಯಲ್ಲ. ಮನೆಯವರೂ ಅಳುವುದನ್ನು ನಿಲ್ಲಿಸಿ ಅವನಿಗೆ ಧೈರ್ಯ ಹೇಳಿದರು.

ದೀಕ್ಷೆಯ ಮೊದಲು ಶೋಭಾ ಯಾತ್ರೆ

ಆಗಷ್ಟ 13, ಭಾನುವಾರ, ಬೆಳಗ್ಗೆ 10 ಗಂಟೆಗೆ ಜಂಬೂದ್ವೀಪ ಸ್ಥಳದಿಂದ ಮಾಧುರಿಯನ್ನು ಮಡಿಲು ತುಂಬಿ ಶೋಭಾಯಾತ್ರೆ ಕಳುಹಿಸಲಾಯಿತು. ಇಲ್ಲಿಂದ ದಿಗಂಬರ ದೊಡ್ಡ ಬಸದಿಯವರೆಗೆ ಹೋಗಿ ಹಿಂದಿರುಗಿ

ಪೆಂಡಾಲಿಗೆ ಮೆರವಣಿಗೆ ಬಂದಿತು. ಇನ್ನೊಂದು ವಿಶೇಷತೆ ಎಂದರೆ ರಾತ್ರಿ ಮೂರುಗಂಟೆಗೆ ಪ್ರಾರಂಭವಾದ ಮಳೆ ಬೆಳಗ್ಗೆ 10 ಗಂಟೆಯವರೆಗೆ ಚೆನ್ನಾಗಿ ಸುರಿದು, ನಿಂತ ಮಳೆ ಮತ್ತೇ ಕಾರ್ಯಕ್ರಮ ಮುಗಿಯುವವರೆಗೆ ಬರಲೇ ಇಲ್ಲ.

ಉದ್ದ ಕೂದಲುಗಳ ಲೋಚ

ಸರ್ವಪ್ರಥಮ ನಾನೇ ವಿಶಾಲ ಸಭೆಯಲ್ಲಿ ವೇದಿಕೆಯ ಮೇಲೆ ಮಂಗಳ ಭಕ್ತಿ ಪಾಠವನ್ನು ಹೇಳಿ ಮಾಧುರಿಯ ನೀಳ ಕೇಶವನ್ನು ಲೋಚಮಾಡತೊಡಗಿದೆ. ಅಂದಿನ ಸಮಾರಂಭದಲ್ಲಿ ಮಾಧುರಿಯ ಪರಿವಾರದವರೇ 70-80 ಜನ ಸೇರಿದ್ದರು. ಅವರಿಗೆ ಮೊದಲೇ ತಾಕೀತು ಮಾಡಿದ್ದೆ ಯಾರಾದರು ಜೋರಾಗಿ ಅಳುವವರಿದ್ದರೆ ಈಗಲೇ ಸಭೆಯಿಂದ ಆಚೆ ಹೋಗಬೇಕು ಎಂದು. ಹೀಗಾಗಿ ಎಲ್ಲರು ಧೈರ್ಯದಿಂದ ನನ್ನ ಆಜ್ಞೆಯಂತೆ ಕೇಶಲೋಚ ನೋಡತೊಡಗಿದರು. ಆದರೂ ಅವರು ಕಣ್ಣೀರು ಹರಿಯುವುದನ್ನು ತಡೆಯದಾದರು.ಕುಟುಂಬದವರೇ ಏಕೆ ಬೇರೆ ಜನರು ಕೂಡ ಅಳುವುದನ್ನು ನೋಡಿ ನನಗೆ ಆಶ್ಚರ್ಯವಾಗ ತೊಡಗಿತು. ನಿರ್ಮಲ ಕುಮಾರ ಸೇಠಿಯವರ ತಾಯಿಯಂತು ಬಹಳ ಅಳುತ್ತಿದ್ದರು. ಹಾಗೆ ಸನಾವದದ ಇಂದರಚಂದ ಚೌಧರಿಯು ಕಣ್ಣೀರು ತಡೆಯದಾಗಿದ್ದರು. ನಾನು, ಆರ್ಯಿಕೆ ಅಭಯಮತಿ ಮತ್ತು ಶಿವಮತಿಯು ಸೇರಿಕೊಂಡು ಕೇಶಲೋಚವನ್ನು ಮಾಡುತ್ತಿದ್ದೆವು. ಮಧ್ಯೆ ಮಧ್ಯೆ ಮಾಧುರಿಯು ತನ್ನ ನೀಳ ಕೇಶರಾಶಿಯನ್ನು ಕೀಳುತ್ತಾ ತನ್ನ ವೈರಾಗ್ಯಭಾವವನ್ನು ವ್ಯಕ್ತಪಡಿಸುತ್ತಿದ್ದಳು.

ರಾಖಿ ಬಂಧನ

ಕೇಶಲೋಚವಾಗುತ್ತಿದ್ದಂತೆ ಮಾಧುರಿ ಅಣ್ಮ ತಮ್ಮಂದಿರು ರಾಖೀ ಹಿಡಿದು ನಿಂತರು. ಮಾಧುರಿಯು ಅವರ ಮುಂಗೈಗಳಿಗೆ ಅಣ್ಣ - ಅಕ್ಕಂದಿರ ಪ್ರೀತಿಯ ರಕ್ಷಾ ಬಂಧನ ಕಟ್ಟಿದಳು. ವಿಮಲ ಕುಮಾರ ಸೋರಯಾರು ಮಂಗಳಾಚರಣೆ ಮಾಡಿ ಮಾಧುರಿಯನ್ನು ಪ್ರಶಂಸಿಸಿದರು. ನಂತರ ಡಾ. ಶ್ರೇಯಾಂಸ ಕುಮಾರರು ಮಾಧುರಿಯ 4 ಜನ ಸಹೋದರ, 8 ಜನ ಸಹೋದರಿಯರ ಪರಿಚಯ ಮಾಡಿಕೊಟ್ಟರು.

ಕೇಶಲೋಚವು ಸುಮಾರು 2.30 ಕ್ಕೆ ಮುಗಿಯಿತು. ಆಗ ಚಂದಾರಾನಿ, ಜ್ಞಾನದೇವಿ, ಸುಷಮಾ, ಶ್ರೀಮತಿ ಮೊದಲಾದ ಸೌಭಾಗ್ಯವತಿಯರು ಮಾಧುರಿಗೆ ಸ್ನಾನ ಮಾಡಿಸಿ ದೀಕ್ಷೆಗಾಗಿ 8 ಗಜದ ಸೀರೆಯನ್ನು ಉಡಿಸಿ ಕರೆದುಕೊಂಡು ಬಂದು ವೇದಿಕೆಯಲ್ಲಿ ಕೂರಿಸಿದರು. ನಂತರ ಭಗವಂತನಿಗೆ ಪಂಚಾಮೃತ ಅಭಿಷೇಕ ಮಾಡಿದರು.

ಮಾಧುರಿಯ ದೀಕ್ಷೆಗಾಗಿ ಪ್ರಾರ್ಥನೆ

ಪೂಜೆ ಆದನಂತರ ಮಾಧುರಿಯು ಎಲ್ಲರಿಗೂ ಗಂಧೋದಕ ಕೊಟ್ಟಳು. ನಂತರ ಸಭೆಯಲ್ಲಿ ಎದ್ದು ನಿಂತು ಮಂಗಳಾಚರಣೆ ಮಾಡಿ ತನ್ನ ಕುಟುಂಬದವರೊಡನೆ ದೀಕ್ಷೆಗಾಗಿ ಅನುಮತಿ ಕೇಳಿದಳು. ಎಲ್ಲರಲ್ಲೂ ಕ್ಷಮೆಯಾಚಿಸಿ ತಾನು ಎಲ್ಲರಿಗೂ ಕ್ಷಮೆಯ ಭಾವನೆಯನ್ನು ವ್ಯಕ್ತಗೊಳಿಸಿದಳು. ನಂತರ ನನ್ನಲ್ಲಿ ಪ್ರಾರ್ಥಿಸಿದಳು. ಹೇ ಮಾತಾಜಿ ಚತುರ್ಗತಿಯ ದುಃಖದಿಂದ ಬಿಡುಗಡೆಯನ್ನು ಪಡೆಯಲು ನನಗೆ ಜಿನೇಶ್ವರಿ ಆರ್ಯಿಕೆ ದೀಕ್ಷೆ ಕೊಟ್ಟು ನನ್ನ ಜೀವನವನ್ನು ಸಫಲಗೊಳಿಸಿರಿ. ಪುನಃ ಮಾಧುರಿಯ ಅಣ್ಣ ಕೈಲಾಸಚಂದ್ರನು ಎದ್ದು ನಿಂತು ತನ್ನ ಪರಿವಾರದ ಎಲ್ಲ ಸದಸ್ಯರ ಪರವಾಗಿ ಕ್ಷಮೆ ಬೇಡಿದನು. ದೀಕ್ಷೆಗಾಗಿ ಅನುಮೋದನೆಯನ್ನು ಕೊಟ್ಟನು. ಶ್ರೀ ಇಂದರಚಂದ್ ಚೌಧರಿ ಶ್ರೀ ನಿರ್ಮಲ ಕುಮಾರ್ ಸೇಠಿಯವರು ಎದ್ದು ನಿಂತು ಮಾಧುರಿಯ ವೈರಾಗ್ಯವನ್ನು ಹೊಗಳಿದರು.

ದೀಕ್ಷೆಯ ಸಂಸ್ಕಾರ

ನಾನು ಮಾಧುರಿಯ ಪ್ರಾರ್ಥನೆಯನ್ನು ಕೇಳಿ ಮೊದಲು ಪರಿವಾರದ ಜನರನ್ನು ಕೇಳಿದೆ ಕು. ಮಾಧುರಿ ಆರ್ಯಿಕಾ ದೀಕ್ಷೆಯನ್ನು ಕೇಳುತ್ತಿದ್ದಾರೆ ಇದಕ್ಕೆ ನಿಮ್ಮೆಲ್ಲರ ಒಪ್ಪಿಗೆ ಇದೆ ತಾನೇ . ಎಲ್ಲರು ಎದ್ದು ನಿಂತು ಅಶ್ರುಪೂರಿತ ನೇತ್ರ ಗಳಿಂದಲೇ ಸ್ವೀಕೃತಿಯನ್ನು ಕೊಟ್ಟರು. ಅನಂತರ ನಾನು ಪೆಂಡಾಲಿನಲ್ಲಿ ಇದ್ದ ಸಮಸ್ತ ದಿಗಂಬರಜೈನ ಸಮಾಜದವರನ್ನು ಕೇಳಿದೆ. ಕು. ಮಾಧುರಿಯನ್ನು ನೀವೆಲ್ಲ 1971 ರಿಂದ 18 ವರ್ಷಗಳಿಂದ ನೋಡಿದ್ದೀರ ಇಂದು ಅವಳು ಆರ್ಯಿಕೆಯ ದೀಕ್ಷೆ ತೆಗೆದುಕೊಳ್ಳಲು ಬಂದಿದ್ದಾಳೆ. ಈ ದೀಕ್ಷೆಯು ಕತ್ತಿಯ ಧಾರೆಗೆ ಸಮಾನವಾಗಿ ಕಠೋರವಾದುದು. ನಾನು ದೀಕ್ಷೆ ಕೊಡಬಹುದೇ ಎಂದೆ ಇದನ್ನು ಕೇಳಿದ ಇಡೀ ಸಭೆಯು ಮುಕ್ತ ಕಂಠದಿಂದ ಜಯಕಾರವನ್ನು ಹೇಳುತ್ತಾ ಚಪ್ಪಾಳೆ ತಟ್ಟಿ ತಮ್ಮ ಸ್ವೀಕೃತಿ ಕೊಟ್ಟು ಇವರಿಗೆ ದೀಕ್ಷೆ ಕೊಡಿರಿ ನಮ್ಮೆಲ್ಲರ ಸ್ವೀಕೃತಿ ಇದೆ ಎಂದರು.

ನಾನು ಮಾಧುರಿಗೆ ಸಂಕಲ್ಪವನ್ನು ಮಾಡಿಸಿದೆ. ನೀನು ಆಚಾರ್ಯ ಚಕ್ರವರ್ತಿ ಆಚಾರ್ಯ ಶಾಂತಿ ಸಾಗರ ಮಹಾರಾಜರ ಪಟ್ಟಾಧೀಶ ನನ್ನ ಗುರುಗಳಾದ ಆಚಾರ್ಯ ವೀರಸಾಗರ ಮಹಾರಾಜರ ಶಿಷ್ಯೆಯಾದ ಗಣನೀ ಆರ್ಯಿಕೆ ಜ್ಞಾನಮತಿ ಮಾತಾಜಿಯವರ ಪರಂಪರೆಯ ಅನುಸಾರ ದೀಕ್ಷೆ ನಡೆಯಬೇಕು. ಲೋಕವನ್ನು ಮೆಚ್ಚಿಸಲು ಹೆಸರು ಪಡೆಯಲು, ಲಾಭ ಪೂಜೆ ಮೊದಲಾದವುಗಳಿಗಾಗಿ ಗುರು ಪರಂಪರೆಯ ಉಲ್ಲಂಘನೆಯನ್ನು ಮಾಡಬಾರದು.

ಅದಕ್ಕೆ ಮಾಧುರಿಯು ಹೇ ಮಾತಾಜೀ ನನಗೆ ನಿಮ್ಮ ಆಜ್ಞೆಯು ಸಂತೋಷದಿಂದ ಸ್ವೀಕಾರವಾಗಿದೆ. ಈ ಲೋಕೋಪಚಾರದ ನಂತರ ನಾನು ಮೂರುಗಂಟೆಗೆ ಮಾಧುರಿಯನ್ನು ಸುಮಂಗಲಿಯರಿಂದ ಮಂಗಳ ಚೌಕದಲ್ಲಿ ಕೂರಿಸಿದೆ. ನಾನು ದೀಕ್ಷಾ ವಿಧಿ ಪ್ರಾರಂಭಿಸಿದೆ. ಇಷ್ಟರಲ್ಲಿ ಪಂ. ಸುಧರ್ಮ ಚಂದ ಹಾಗೂ ರವೀಂದ್ರ ಹರಾಜು ಕೂಗತೊಡಗಿದರು. ಸನಾವದದ ಇಂದರ ಚಂದ ಕೈಲಾಸಚಂದ ಚೌಧರಿಯವರು ಪಿಂಛಿಯನ್ನು ಪಡೆದುಕೊಂಡರು. ದೆಹಲಿಯ ಕಮಲಚಂದ ಜೈನ ಖಾರೀ ಬಾವಲಿಯವರು ಕಮಂಡಲುವನ್ನು ಪಡೆದುಕೊಂಡರು. ಝರಿಯಾದ ಪೂನಮ್ ಚಂದ ಗಜರಾಜರು ಶಾಸ್ತ್ರ ದಾನವನ್ನು ಹರಾಜಿನ ಮೂಲಕ ಪಡೆದುಕೊಂಡರು. ದೀಕ್ಷೆಯ ನಂತರ ಆರತಿಯ ಹರಾಜನ್ನು ದಿಲೀಪ ಚಂದ್ ಸುರೇಶ ಚಂದ ಕೋಟಡಿಯಾರವರು ಪಡೆದುಕೊಂಡರು. ಕೇಶ ವಿಸರ್ಜನೆಯ ಹರಾಜನ್ನು ಬೊಂಬಾಯಿಯ ಜ್ಞಾನಚಂದ ಮುನ್ನಾಲಾಲ ಜೈನರು ಪಡೆದುಕೊಂಡರು ಹರಾಜಿನಲ್ಲಿ ಪಡೆದುಕೊಂಡವರು ಪಿಂಛಿ ಕಮಂಡಲು ಮತ್ತು ಶಾಸ್ತ್ರವನ್ನು ನನಗೆ ತಂದುಕೊಟ್ಟರು.

ನಾನು ಮಾಧುರಿಯ ಮಸ್ತಕದ ಮೇಲೆ ಆರ್ಯಿಕೆ ದೀಕ್ಷೆಯ ಸಂಸ್ಕಾರವನ್ನು ಬರೆದು ಮಂತ್ರ ಹೇಳುತ್ತಾ ನವದೀಕ್ಷಿತರಿಗೆ ಪಿಂಛಿ ಕಮಂಡಲು ನೀಡಿದೆ. ಇವೆಲ್ಲವು ಶಾಸ್ತ್ರದ ಸಂಯಮದ ಉಪಕರಣ, ಜ್ಞಾನದ ಉಪಕರಣ ಮತ್ತು ಶೌಚದ ಉಪಕರಣವಾಗಿದೆ. ಇವನ್ನು ನೀಡಿ "ಚಂದನಮತಿ" ಎಂಬ ನಾಮಕರಣವನ್ನು ಮಾಡಿ ಸಭೆಯಲ್ಲಿ ಘೋಷಿಸಲಾಯಿತು. ಆಗ ಇಡೀ ಸಭೆಯೇ ಎತ್ತರದ ಧ್ವನಿಯಲ್ಲಿ ಮೂರು ಸಲ "ಆರ್ಯಿಕೆ ಚಂದನಮತಿಯವರಿಗೆ ಜಯವಾಗಲಿ" ಎಂಬ ಘೋಷಣೆ ಇಡೀ ಜಂಬೂದ್ವೀಪದಲ್ಲೇ ಮಾರ್ದನಿಸಿತು. ಅನಂತರ ಆರತಿಯ ಹರಾಜು ಕೂಗಿದ್ದವರು ನವದೀಕ್ಷಿತ ಆರ್ಯಿಕೆಗೆ ಆರತಿ ಎತ್ತಿದರು.

ದೀಕ್ಷಾರ್ಥಿಗೆ ವ್ರತ ತೊಡುವ ಸಮಯದಲ್ಲಿ ಅವರ ಬೊಗಸೆಯಲ್ಲಿ ಹಳದಿ ಅಕ್ಕಿಯನ್ನು ತುಂಬಿಸಿ ಅದರ ಮೇಲೆ ಅರಿಸಿನ, ಅಡಿಕೆ, ಲವಂಗ, ಶ್ರೀಫಲವನ್ನು ಇಟ್ಟು ಪುನಃ ಗುರುವಿನ 28 ಮೂಲಗುಣಗಳನ್ನು ಕೊಡಲಾಗುತ್ತದೆ. ನಂತರ ಇವೆಲ್ಲವನ್ನು ದೀಕ್ಷೆ ಕೊಡಿಸುವ ದಂಪತಿಗಳಿಗೆ ಮಡಿಲು ತುಂಬಿಸಲಾಗುತ್ತದೆ.

ವರ್ತಮಾನದಲ್ಲಿ ದೀಕ್ಷಾರ್ಥಿಗಳ ಮಾತಾ-ಪಿತರ ಹೆಸರನ್ನು ಸಂಬೋಧಿಸಲಾಗುತ್ತದೆ. ಮಾಧುರಿಗೆ ದೀಕ್ಷೆಯಾದ ಮೇಲೆ ಮಂಗಳ ವಸ್ತುಗಳನ್ನು ಕೊಡುವ ಮಾತಾ-ಪಿತರ ಸೌಭಾಗ್ಯವನ್ನು ಅವಳ ಅಣ್ಣ ಕೈಲಾಸಚಂದ ಮತ್ತು ಚಂದಾರಾನಿಯವರು ಪಡೆದುಕೊಂಡರು.

ಈ ಸಮಯದಲ್ಲಿ ಆರ್ಯಿಕೆ ಅಭಯಮತೀಯವರು ಮಂಗಲ ಪ್ರವಚನದಲ್ಲಿ ತಮ್ಮ ಆರ್ಶೀವಾದ ಕೊಟ್ಟರು. ಎಲ್ಲರು ತಮ್ಮ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಸನಾವದನ ಶ್ರೀಮಾನ್ ಇಂದರಚಂದ ಚೌಧರಿಯವರು ಗದ್ಗದಿತ ಕಂಠದಿಂದ ಇಂದು ಸಹೋದರಿ ಮಾಧುರಿಯವರು ದೀಕ್ಷೆ ಪಡೆದು ಚಂದನಮತಿಯಾದರು. ಅವರು ಇಂದು ನಮಗೆಲ್ಲರಿಗೂ ಪೂಜ್ಯರಾದರು. ಇವರ ಆದೇಶದ ಮೇಲೆ ಆರ್ಷ ಪರಂಪರೆಯ ರಕ್ಷಣೆಗೋಸ್ಕರ ನಾವೆಲ್ಲರು ಧೃಡ ಸಂಕಲ್ಪವನ್ನು ಮಾಡುತ್ತೇವೆ. ಹಾಗೂ ಧರ್ಮದ ರಕ್ಷಣೆಗೋಸ್ಕರ ಅವಶ್ಯಕತೆ ಉಂಟಾದರೆ ನಮ್ಮ ರಕ್ತದ ಹನಿ ಹನಿಯನ್ನು ಕೊಡಲು ಸಿದ್ಧವೆಂದರು. ಇವರ ಮಾತುಗಳಿಗೆ ಜನರು ಕರತಾಡನದೊಂದಿಗೆ ಸಮರ್ಥನೆ ಕೊಟ್ಟರು.

ಜನತೆಯ ಉತ್ಸಾಹ

ಬ್ರ. ರವೀಂದ್ರಕುಮಾರನು ಸುಮಾರು 3000 ದರ್ಶನಾರ್ಥಿಗಳಿಗಾಗಿ ಪೆಂಡಾಲನ್ನು ಹಾಕಿಸಿದ್ದ. ಆದರೆ 15-20 ಸಾವಿರ ಜನರು ಸೇರಿದ್ದರು. ಜಂಬೂದ್ವೀಪದಲ್ಲಿ ಎಲ್ಲಿ ನೋಡಿದರು ಜನವೇ ಜನ ಕಂಡು ಬರುತ್ತಿದ್ದರು. ಎಲ್ಲರು ಪೆಂಡಾಲು ಚಿಕ್ಕದಾಯಿತು ಎನ್ನುತ್ತಿದ್ದರು. ಎಲ್ಲಕ್ಕಿಂತ ಒಳ್ಳೆಯದು ಆಗಿದ್ದು ರಾತ್ರಿಯಿಂದ ಸುರಿಯುತ್ತಿದ್ದ ಮಳೆರಾಯ ಕಾರ್ಯಕ್ರಮಕ್ಕೆ ಸರಿಯಾಗಿ ನಿಂತು ಸಹಕರಿಸಿದ್ದು. ಶೋಭಾಯಾತ್ರೆ ಮುಗಿದು ಕಾರ್ಯಕ್ರಮ ನಡೆಯುವವರೆಗೂ ಶಾಂತವಾಗಿ ನೋಡುತ್ತಿದ್ದಾನೆ ಎನ್ನಿಸಿತು. ಅಲ್ಲಿ ಸೇರಿದ್ದ ಜನರಿಗೆ ಇದು ಒಂದು ಚಮತ್ಕಾರವಾಗಿಯೇ ಕಂಡು ಬಂದಿತು. ಆ ದಿನ ಬಂದಿದ್ದ ಎಲ್ಲರಿಗೂ ಊಟ ಉಪಚಾರದ ವ್ಯವಸ್ಥೆಯನ್ನು ಮದ್ರಾಸಿನ ಕಂವರೀ ಲಾಲರು ವಹಿಸಿಕೊಂಡಿದ್ದರು.

ಅಗಷ್ಟ 14 ರ ಕಾರ್ಯಕ್ರಮ

ದೀಕ್ಷೆಆದ ಮಾರನೇಯ ದಿನ ಅಗಷ್ಟ 14 ರಂದು ತ್ರಿಮೂರ್ತಿ ಮಂದಿರದಲ್ಲಿ ಒಂದು ಸಭೆಯನ್ನು ಆಯೋಜಿಸಲಾಗಿತ್ತು. ಅಲ್ಲೇ ತಂಗಿದ್ದ ಯಾತ್ರಿಗಣವು ಸಭೆಯಲ್ಲಿ ಆರ್ಯಿಕೆ ಚಂದನಮತಿಯವರ ಉಪದೇಶವನ್ನು ಕೇಳಬೇಕೆಂದು ಬಯಸತೊಡಗಿದರು ಅದಕ್ಕೆ ನಾನು ನಕ್ಕು ಸಹೋದರರೇ ನೆನ್ನೆಯಿಂದ ಉಪವಾಸವಿದ್ದಾರೆ. ಇಂದು ಆಹಾರವಾಗಲಿ, ಖಾಲಿಯ ಹೊಟ್ಟೆಯ ಅವರಲ್ಲಿಯು ಉಪದೇಶ ಬಯಸುವ ನೀವು ಸ್ವಾರ್ಥಿಗಳಾಗುತ್ತಿದ್ದೀರಿ ಎಂದೆ ಅವರುಗಳು ನಕ್ಕರು. ಕೊನೆಗೆ ಅವರೆಲ್ಲರ ಅಪೇಕ್ಷೆಯಂತೆ ಚಂದನಮತೀಗೆ 10-15 ನಿಮಿಷ ಮಾತನಾಡಲು ಹೇಳಿದೆ. ಭಕ್ತ ಜನರು ಸಂತೋಷಗೊಂಡರು.

ರವೀಂದ್ರ ಕುಮಾರನು ಮಹಮೂದಾಬಾದಿನ ಪಂ. ಜಮುನಾ ಪ್ರಸಾದಜೀ ಕಟನೀ ಪಂ. ಬಾಬುಲಾಲ ಜೈನ ಟಿಕೈತನಗರದ ಶ್ರೀಮಾನ ಸಾಹೇಬಲಾಲ ಪುಷ್ಪಮಾಲದಿಂದ ಸ್ವಾಗತ ಮಾಡಿಸಿದೆ. ನಾನು ಶ್ರಾವಕರಿಗೆ ಆರ್ಷ ಪರಂಪರೆಯ ರಕ್ಷಣೆ ಹಾಗೂ ಸಜ್ಜಾತಿಯ ರಕ್ಷಣೆಗೋಸ್ಕರ ಧೃಢಸಂಕಲ್ಪ ಮಾಡುವ ಆದೇಶವಿತ್ತೆ. ಎಲ್ಲರು ಇದನ್ನು (ಶಿರೋದಾರ್ಯ) ಶಿರಬಾಗಿ ಒಪ್ಪಿಕೊಂಡರು. ಕೆಲವರು ನಿಯಮವನ್ನು ತೆಗೆದುಕೊಂಡರು. ಶಾಸ್ತ್ರದ ಗದ್ದಿಗೆಯ ಮೇಲೆ ಮುನಿನಿಂದೆ ಆಗಲು ಬಿಡುವುದಿಲ್ಲ ಎಂಬುದಾಗಿ ಶಪಥ ಮಾಡಿದರು. ಇದೇ ಸಂದರ್ಭದಲ್ಲಿ

ನನ್ನಿಂದ ಬರೆಯಲ್ಪಟ್ಟ "ಜ್ಞಾನಾಮೃತ" ಗ್ರಂಥವನ್ನು ಶ್ರೀ ವಿಮಲ ಚಂದ ಜೈನರು ಬಿಡುಗಡೆ ಮಾಡಿದರು. ಇದೊಂದು ಸ್ವಾಧ್ಯಾಯಕ್ಕೆ ಉಪಯೋಗವಾದ ಲೇಖನಗಳಾದ ಸಮಯಸಾರದಸಾರ ಮುಂತಾದ ಅನೇಕ ವಿಷಯಗಳನ್ನು ಒಳಗೊಂಡಿದೆ.

ಆಹಾರಚರ್ಯೆ

ಬೆಳಗ್ಗೆ 10 ಗಂಟೆಯಲ್ಲಿ ಆಹಾರಕ್ಕಾಗಿ ಹೊರಟೆವು. ವೃತ್ತಿಪರಿಸಂಖ್ಯಾನ ತೆಗೆದುಕೊಂಡಿದ್ದರಿಂದ ಕೈಲಾಸಚಂದ, ಪ್ರಕಾಶಚಂದ್, ಸುಭಾಷಚಂದರು ಚೌಕದಲ್ಲಿ ನಿಯಮ ತೆಗೆದುಕೊಂಡಿದ್ದರಿಂದ ಅಲ್ಲಿಯೇ ಆಹಾರಕ್ಕಾಗಿ ನಿಂತೆ, ಹೊಸದಾಗಿ ದೀಕ್ಷೆ ತೆಗೆದುಕೊಂಡಿದ್ದ ಚಂದನಮತಿಯವರನ್ನು ಅಲ್ಲಿಯೇ ತಡೆದರು. ಭಕ್ತ ಜನರು ನವದೀಕ್ಷಿತ ಆರ್ಯಿಕೆಗೆ ಆಹಾರ ಕೊಟ್ಟು ಧನ್ಯತೆಯ ಭಾವನೆಯನ್ನು ಹೊಂದಿದರು. ರವೀಂದ್ರ ಮತ್ತು ಮೋತಿಸಾಗರರು ಒಳ್ಳೆಯ ವ್ಯವಸ್ಥೆಯನ್ನು ಮಾಡಿಸಿದ್ದರು. ಎಲ್ಲರಿಗೂ ನಿರಾತಂಕವಾಗಿ ಆಹಾರವಾದದ್ದು ಖುಷಿಯಾಯಿತು. ಒಟ್ಟಿನಲ್ಲಿ ಸಮಾರಂಭವು ಸಫಲತೆಯನ್ನು ಪಡೆಯಿತು.

ನನ್ನ ಅನುಭವ

ಪರಿವಾರದವರಲ್ಲದೆ ಬೇರೆ ಶ್ರಾವಕರೊಡನೆ ನಿರ್ಮಲಕುಮಾರ ಸೇಠಿಯವರ ತಾಯಿಯು ಹೇಳತೊಡಗಿದರು. ಮಾತಾಜೀ ಮಾಧುರಿ ಬಹಳ ಬಲಹೀನರಾಗಿದ್ದಾರೆ. ಇವರು ಇಂತಹ ಕಠಿಣ ಚರ್ಯೆಯನ್ನು ಸಹಿಸಬಲ್ಲರೇ ಎಂದು. ಅದಕ್ಕೆ ನಾನು ಶಾರೀರಿಕ ಬಲಕ್ಕಿಂತ ಮನೋಬಲ ವಿಶೇಷವಾದ ಮಹತ್ವ ಪಡೆಯುತ್ತದೆ. ನಾನು 1955 ರಲ್ಲಿ ಮನೆಬಿಟ್ಟು ಬಂದಾಗ ನನ್ನ ಶರೀರವು ಹೀಗೆ ಇತ್ತು 3-4 ಮೈಲಿ ನಡೆದರೆ ಸಾಕು ಜ್ವರ ಬರುತ್ತಿತ್ತು. ಒಂದು ಅಂತರಾಯವಾದರೆ ಸಾಕು. ಮಾರನೆಯ ದಿನ ಕಣ್ಣು ತೆರೆದು ಕುಳಿತುಕೊಳ್ಳಲು ನಿಂತುಕೊಳ್ಳಲು ಕಷ್ಟವಾಗುತ್ತಿತ್ತು. ಆದರೆ ಮನೋಬಲ ಧೃಡವಾಗಿತ್ತು. ಇದರಿಂದಲೇ ಇಂದು ನಾನು ಜೀರ್ಣ ಶೀರ್ಣ ಕೃಶವಾದ ಶರೀರದಿಂದಲೇ 10,000 ಕಿಲೋಮೀಟರ್ ಪಾದಯಾತ್ರೆಯನ್ನು ಮಾಡಿ ಸಮ್ಮೇದ ಶಿಖರ, ಶ್ರವಣಬೆಳಗೊಳ, ಮಾಂಗಿತುಂಗಿ, ಸಿದ್ಧವರ ಕೂಟ ಮುಂತಾದ ಯಾತ್ರೆ ಮಾಡಿದ್ದೇನೆ. ಶಿಷ್ಯರುಗಳಿಗೆ ಅಧ್ಯಯನ ಮಾಡಿಸುತ್ತಾ ಸುಮಾರು 24 ವರ್ಷಗಳಿಂದ ನಿರಂತರವಾಗಿ ಬರವಣಿಗೆಯ ಕೆಲಸಮಾಡಿ ಸುಮಾರು 150 ಗ್ರಂಥಗಳ ರಚನೆ, ಅನುವಾದ ನಡೆಸಿಕೊಂಡು ಬರುತ್ತಿದ್ದೇನೆ. ಈ ಎಲ್ಲಾ ಕೆಲಸವು ಮುಖ್ಯವಾಗಿ ಮನೋಬಲದಿಂದಲೇ ಸಾಧ್ಯವಾಗುವುದು. ಶರೀರವು ಯಾವಾಗಲು ವಿಶ್ರಾಂತಿಯನ್ನೇ ಬಯಸುತ್ತದೆ. ಶರೀರವು ಯಾವಾಗ ಏನನ್ನು ಮಾಡಲು ಅಸಾಧ್ಯವಾಗುತ್ತದೆ ಆಗ ಣಮೋಕಾರದ ಸ್ಮರಣೆ ಮಾಡುತ್ತಾ ಮಲಗುವುದು.

ನನ್ನ ಅನುಭವದಂತೆ ಮಾಧುರಿಗೂ ಮನೋಬಲ ಚೆನ್ನಾಗಿದೆ. ಇದರಿಂದಲೇ ಅವಳು ತನ್ನ ಶರೀರದ ನಿಶ್ಯಕ್ತತೆಯನ್ನು ಲೆಕ್ಕಿಸದೆ ಕಠೋರ ಚರ್ಯೆಯನ್ನು ಗ್ರಹಣೆ ಮಾಡಿದ್ದಾಳೆ. ನಾನು ಬಲವಂತವಾಗಿ ಅವಳಿಗೆ ದೀಕ್ಷೆಯನ್ನು ಕೊಟ್ಟಿಲ್ಲ. ಬದಲಾಗಿ ಅವಳ ವಿಶೇಷವಾದ ಆಗ್ರಹದಿಂದಲೇ ದೀಕ್ಷೆ ಕೊಡಲು ನಿರ್ಣಯಿಸಿದ್ದು. ಇದ್ಕಕಾಗಿ ಅವಳಿಗೆ ನನ್ನ ಮಂಗಳ ಆಶೀರ್ವಾದವಿದೆ.

ಅವಳ ಮನೋಬಲ ದಿನದಿಂದ ದಿನಕ್ಕೆ ವೃದ್ಧಿಯಾಗುತ್ತಿದೆ. ಸಂಯಮ ಸಾಧನೆಯಲ್ಲಿ ಅವಳು ಜೀವನವನ್ನು ಧನ್ಯವೆಂದು ತಿಳಿಯುತ್ತಾ ತನ್ನ ಆಚಾರದಲ್ಲಿ ಧೃಡವಾಗುತ್ತಿದ್ದಾಳೆ. ನೀವೆಲ್ಲರು ಅವಳ ಬಗ್ಗೆ ಇದೇ ಭಾವನೆಯನ್ನು ಇಡಿರಿ. ಇವಳ ಸಂಯಮ ನಿರಾತಂಕವಾಗಿ ಮುಂದುವರಿಯಲಿ.

ಇಂದು ಚಂದನಮತಿಯು ಪ್ರಸನ್ನರಾಗಿದ್ದಾರೆ. ದೀಕ್ಷೆಯಿಂದ ತಮ್ಮ ಜೀವನವನ್ನು ಸಫಲಗೊಳಿಸಿ ಕೊಂಡಿದ್ದಾರೆ. ಹಲವಾರು ಬಾರಿ ಅವರೇ ಹೇಳುತ್ತಿರುತ್ತಾರೆ. ಅಹಾ ಒಂದು ವೇಳೆ ನಾನು ಆರ್ಯಿಕೆ ರತ್ನಮತಿಯರ ಮುಂದೆಯೇ ದೀಕ್ಷೆ ತೆಗೆದುಕೊಂಡಿದ್ದರೆ ಅವರಿಗೆ ಎಷ್ಟು ಸಂತೋಷವಾಗುತ್ತಿತ್ತು ಎಂದು.

ಸಂಕ್ಷಿಪ್ತ ಜೀವನ ಪರಿಚಯ

ಅವಧ ಪ್ರಾಂತದ ಬಾರಾಬಂಕಿ ಜಿಲ್ಲೆಯ ಟಿಕೈತನಗರದಲ್ಲಿ ಅಲ್ಲಿಯ ಶ್ರೇಷ್ಠಿ ಛೋಟೆಲಾಲರ ಮನೆಯಲ್ಲಿ ಮಾತೆ ಮೋಹಿನಿಯು 1958 ರಲ್ಲಿ ಜೇಷ್ಠ ಮಾಸದ ಅಮಾವಾಸ್ಯೆಯ ದಿನ ಕನ್ಯಾರತ್ನಕ್ಕೆ ಜನ್ಮ ನೀಡಿದರು. ಅವಳೇ ಮಾಧುರಿ 13 ಸಂತಾನಗಳಲ್ಲಿ ಇವಳು ಹನ್ನೆರಡನೆಯವಳು. 1969 ರಲ್ಲಿ ಈ ಹುಡುಗಿಯು ತನ್ನ ಅಣ್ಣನೊಂದಿಗೆ ನನ್ನನ್ನು ನೋಡಲು ಜಯಪುರಕ್ಕೆ ಬಂದಿದ್ದಳು. ಆಗ ನಾನು ಧರ್ಮಸಾಗರರ ಸಂಘದಲ್ಲಿದ್ದೆ. ಆಗ ನಾನು ಗೊಮ್ಮಟಸಾರದ ಜೀವಕಾಂಡದ 38 ಗಾಥೆಗಳನ್ನು ಕಂಠಪಾಠ ಮಾಡಿಸಿದೆ. ಅವಳನ್ನು ನನ್ನ ಹತ್ತಿರವೇ ಇಟ್ಟು ಕೊಳ್ಳಬೇಕೆಂದು ಬಯಸಿದರೂ ನಿಲ್ಲದೇ ಹೊರಟು ಹೋದಳು. ಪುನಃ 1971 ರಲ್ಲಿ ನಾನು ಅ ಜಮೇರನಲ್ಲಿ ಚಾತುರ್ಮಾಸ ಮಾಡುವಾಗ ತಾಯಿಯ ಜೊತೆ ಮತ್ತೆ ಬಂದಳು. ಆಗಲೇ ನಾನು ಅವಳ ಭಾವನೆಯನ್ನು ಅರಿತು ಜಿನಮಂದಿರಕ್ಕೆ ಕರೆದೊಯ್ದು ಸುಗಂಧ ದಶಮಿಯ ದಿನವೇ ಆಜನ್ಮ ಬ್ರಹ್ಮಚರ್ಯಿಯ ವ್ರತವನ್ನು ಕೊಟ್ಟಿದ್ದೆ. ತಾಯಿಯವರ ದೀಕ್ಷೆಯ ದಿನ ಈ ಮಾತನ್ನು ಇವಳು ಹೇಳಿ ಪರಿವಾರದವರ ಮೋಹ, ಮಮತೆಗಳನ್ನು ಧಿಕ್ಕರಿಸಿ ಈ ಬಾಲಿಕೆಯು ಎರಡನೆಯ ಪ್ರತಿಮೆಯ ವ್ರತ ತೆಗೆದುಕೊಂಡು, ಸಪ್ತಮ ಪ್ರತಿಮೆಯ ವ್ರತದವರೆಗೂ ಪಾಲಿಸಿಕೊಂಡು ಬಂದಳು. 1987 ರಲ್ಲಿಯೇ ಗೃಹತ್ಯಾಗವನ್ನು ಮಾಡಿ, 1989 ಅಗಷ್ಟ 13 ರಂದು ಆರ್ಯಿಕೆ ದೀಕ್ಷೆಯನ್ನು ಪಡೆದು 'ಚಂದನಮತೀ" ಆದರು. ಇವರುನನ್ನ ಹತ್ತಿರವೇ ವ್ಯಾಕರಣ, ನ್ಯಾಯ, ಧರ್ಮ ಸಿದ್ಧಾಂತ ಕೋಷ ಅಲಂಕಾರ ಮೊದಲಾದವುಗಳನ್ನು ಓದಿ "ವಿದ್ಯಾವಾಚಸ್ಪತಿ" ಎಂಬ ಉಪಾಧಿಯನ್ನು ಪಡೆದರು. ಹೀಗೆ ಯಾವಾಗಲೂ ಜ್ಞಾನಾರಾಧನೆಯನ್ನು ಮಾಡುತ್ತಾ ನನ್ನ ಗುರುಪರಂಪರೆಯನ್ನು ಉಜ್ವಲಗೊಳಿಸಲಿ ಎಂಬುದೇ ನನ್ನ ಹಾರ್ದಿಕ ಶುಭಾಶೀರ್ವಾದವಾಗಿದೆ.

ವ್ರತ ಪ್ರತಿಮೆಗಳ ಗ್ರಹಣೆ

ಕು. ಮಾಧುರಿಯ ದೀಕ್ಷೆಯ ದಿನವೇ ಶಿಖರಚಂದ ಜೈನ ಮತ್ತು ಅವರ ಧರ್ಮಪತ್ನಿ ಶಕುಂತಲ ಕೂಡ ನನ್ನ ಹತ್ತಿರ ಎರಡು ಪ್ರತಿಮೆಗಳ ವ್ರತವನ್ನು ಗ್ರಹಣೆ ಮಾಡಿದರು. ಈ ಸಾತ್ವಿಕ ದಂಪತಿಗಳು ಪ್ರತಿಯೊಂದು ಧರ್ಮಕಾರ್ಯದಲ್ಲೂ ಆಸಕ್ತಿಯಿಂದ ಭಾಗವಹಿಸುತ್ತಾರೆ. ತಿಂಗಳಿನಲ್ಲಿ ಒಂದು ಎರಡು ಸಲವಾದರು ಆಹಾರದಾನ ಮಾಡುತ್ತಾರೆ. ಕಾರ್ತಿಕ ಕೃಷ್ಣ ಪಾಡ್ಯರ ದಿನ ನನ್ನ ಜನ್ಮ ಜಯಂತಿಯ ನೆಪದಲ್ಲಿ ಈ ದಂಪತಿಗಳು 7 ನೆಯ ಪ್ರತಿಮೆಯ ವ್ರತ ತೆಗೆದುಕೊಂಡರು.

ಮುಂದಿನ ಚಾರ್ತುಮಾಸಕ್ಕಾಗಿ ಪ್ರಾರ್ಥನೆ

ಮುಂದಿನ ಅಂದರೆ 1990 ರ ಚಾತುರ್ಮಾಸಕ್ಕಾಗಿ ಈಗಿನಿಂದಲೇ ಟಿಕೈತನಗರದಿಂದ ಸನಾವದ, ದೆಹಲಿ, ಬಡೌತ, ಹಾಪುಡ ಮೇರಠನಿಂದ ಶ್ರಾವಕರು ಬಂದು ಶ್ರೀಫಲವನ್ನಿಟ್ಟು ಪ್ರಾರ್ಥಿಸತೊಡಗಿದರು. ಎಲ್ಲರಿಗೂ "ಚಂದನಮತಿ" ಯವರ ಮೊದಲ ಚಾತುರ್ಮಾಸ ತಮ್ಮಲ್ಲಿ ನಡೆಯಬೇಕೆಂಬ ಮಹಾದಾಶೆ. ಇದಕ್ಕಿಂತ ಮೊದಲೇ

ಬಡೌತದವರು ಶ್ರೀಫಲ ಇಟ್ಟು ಮಾತಾಜೀ ಕು. ಮಾಧುರಿಯ ದೀಕ್ಷೆ ಆದನಂತರ ತಾವು ನಮ್ಮಲ್ಲಿಗೆ ಬಂದು ಚಾತುರ್ಮಾಸ ಮಾಡಬೇಕೆಂಬ ಮನವಿಯನ್ನು ಸಲ್ಲಿಸಿದ್ದರು.

ಆಗ ನಾನು ನಗುತ್ತಾ ಈ ವರ್ಷದ ಚಾತುರ್ಮಾಸವೇ ಮುಗಿದಿಲ್ಲ. ಆಗಲೇ ಮುಂದಿನ ವರ್ಷದ್ದನ್ನು ಚಿಂತಿಸುತ್ತಿದ್ದೀರಲ್ಲ. ಅದಕ್ಕೆ ಬಹಳ ಸಮಯವಿದೆಯಲ್ಲ ಎನ್ನುತ್ತಿದ್ದೆ. ಟಿಕೈತ ನಗರದವರು ದೆಹಲಿಯವರು ಕೂಡ ಏನಾದರು ಆಗಲಿ ಒಂದು ವೇಳೆ ತಾವು 1-2 ಮೈಲಿ ನಡೆದರು ಸಾಕು ನಾವು ನಿಮ್ಮಜೊತೆಯ ಇರುತ್ತೇವೆ. ತಮ್ಮನ್ನು ಸಂಘ ಸಹಿತವಾಗಿ ಕರೆದೊಯ್ಯುತ್ತೇವೆ ಎಂದು. ಆಗ ನನಗೆ ಅನ್ನಿಸತೊಡಗಿತು. ಇದು ಶ್ರಾವಕರ ಗುರುಭಕ್ತಿ ಅಷ್ಟೇ ಅಲ್ಲ ಮಾಧುರಿಯ ಪುಣ್ಯದ ಪ್ರತೀಕವು ಆಗಿದೆ ಎಂದು.

ಅದ್ಭುತವಾದ ಕನಸು

ಮಾಧುರಿಯ ದೀಕ್ಷೆಗೆ ಮೂರು ದಿನ ಮೊದಲು ಅಂದರೆ ಶ್ರಾವಣ ಶುಕ್ಲ ಸಪ್ತಮಿಯ ಹಿಂದಿನ ರಾತ್ರಿ ಅಷ್ಟಮಿಯ ಬೆಳಗಿನ ಜಾವ ನಾನೊಂದು ಕನಸನ್ನು ಕಂಡೆ. ವಿದೇಹ ಕ್ಷೇತ್ರದಿಂದ ಶ್ರೀ ಗಣಧರ ದೇವ ಅಥವಾ ಚಾರಣ ಋದ್ಧಿ ಮಹಾಮುನಿಗಳು ಆಕಾಶಮಾರ್ಗವಾಗಿ ಇಲ್ಲಿಗೆ ಬಂದರು. ಅವರ ಜೊತೆ ಆಚಾರ್ಯ ಧರ್ಮಸಾಗರಜೀ ಮಹಾರಾಜರು ಇದ್ದರು. ಇವರು ಉನ್ನತ ಆಸನದಲ್ಲಿ ವಿರಾಜಮಾನರಾದರು. ನನ್ನಿಂದ ದೀಕ್ಷಾವಿಧಿ ನಡೆಯತೊಡಗಿತು. ನಂತರ ಅವರು ಹೊರಡತೊಡಗಿದರು. ನಾನು ಅವರ ಪಾದಗಳನ್ನು ಹಿಡಿದು ಆಗ್ರಹ ಮಾಡಿದೆ. ಭಗವಾನ ಈಗ ಈ ಭರತ ಕ್ಷೇತ್ರದಲ್ಲಿಯೇ ವಿರಾಜಮಾನರಾಗಿರಿ. ಆದರೆ ಅವರು ಹೊರಟೇಬಿಟ್ಟರು. ಆಗ ನಾನು ನಿವೇದಿಸಿಕೊಂಡೆ. ಭಗವಾನ ಈ ಮಹಾಗ್ರಂಥವನ್ನಾದರು ನನಗೆ ದಯಪಾಲಿಸಿರಿ. ಆಗ ಅವರು ಗ್ರಂಥವನ್ನು ಕೊಟ್ಟರು. ಆಗಲೇ ನಾನು ರವೀಂದ್ರ ಕುಮಾರನಿಂದ 1½ ಅಡಿ ಎತ್ತರದ ಸಿಂಹಾಸನ ತರಿಸಿ ಗ್ರಂಥ ರಾಜವನ್ನು ವಿರಾಜಮಾನಗೊಳಿಸಿ ನಾನು ಇದನ್ನು ಪ್ರತಿದಿನ ಪೂಜಿಸುತ್ತೇನೆ ಎಂದು ಹೇಳಿದೆ. ಆಗ ಬೆಳಗಿನ ಜಾವ 4½ ಎಚ್ಚರವಾಯಿತು. ಕಣ್ಣು ತೆರೆದರೆ ಘಟನೆ ಈಗ ನಡೆದಿರುವಂತೆ ಕಣ್ಣ ಮುಂದೆ ಬರುತ್ತಿದೆ. ನಾನು ಅವಶ್ಯಕ ಕ್ರಿಯೆಗಳನ್ನು ಮುಗಿಸಿ ಬಂದು ಮಾಧುರಿಯಲ್ಲಿ ಕನಸನ್ನು ಹೇಳಿದೆ. ಅವಳಿಗೂ ತುಂಬಾ ಸಂತೋಷವಾಯಿತು. ಮಾತಾಜೀ ಏನಾದರೂ ಆಗಲಿ ಈ ಕನಸನ್ನು ಡೈರಿಯಲ್ಲಿ ಖಂಡಿತಾ ಬರೆದಿಡಿ ಎಂದಳು. ನಾನು ತಕ್ಷಣ ಬರೆದೆ. ಈಗ ಈ ಗ್ರಂಥ ಬರೆಯುವಾಗ ಆರ್ಯಿಕ ಚಂದನಮತಿ ಬಹಳ ಒತ್ತಾಯ ಮಾಡಿ ಇದನ್ನು ಇಲ್ಲಿ ಬರೆಸಿದಳು.

ಆರ್ಯಿಕೆಯ ಮೂಲಕ ಆರ್ಯಿಕೆಯ ದೀಕ್ಷೆ

1957ರಲ್ಲಿ ಜಯಪುರದ ಖಾನಿಯದಲ್ಲಿ ಆಚಾರ್ಯ ಶ್ರೀ ಮಹಾವೀರ ಕೀರ್ತಿಗಳ ಮುಂದೆ ಒಂದು ಚರ್ಚೆ ಬಂದಿತು. ಆರ್ಯಿಕೆಯರಿಂದ ಆರ್ಯಿಕೆಯರ ದೀಕ್ಷೆಯ ಪರಂಪರೆಯು ಬೆಳೆಯಬೇಕು. ಚರ್ಚೆಯಲ್ಲಿ ಪ್ರಮುಖರಾದವರು ಪಂ. ಚಾಂದಮಲರು. ಆ ಸಮಯದಲ್ಲಿ ನಾವೆಲ್ಲರು ಪ್ರಥಮಾನುಯೋಗದ ಗ್ರಂಥಗಳನ್ನು ಹುಡುಕಿದೆವು. ಆಗ ನಮಗೆ ಓದಲು ಸಿಕ್ಕಿದ್ದು. "ಬ್ರಾಹ್ಮಿ - ಸುಂದರಿ" ಚಂದನ ಮೊದಲಾದ ಆರ್ಯಿಕೆಯರು ಸಮವಶರಣದಲ್ಲಿ ದೀಕ್ಷೆ ತೆಗದುಕೊಳ್ಳುವ ಪ್ರಸಂಗ ನಂತರ ಬೇರೆ ಮಹಿಳೆಯರು ಈ ಗಣನೀ ಆರ್ಯಿಕೆಯರಿಂದ ದೀಕ್ಷೆ ತೆಗೆದುಕೊಂಡ ಪ್ರಸಂಗ.

ಭರತಸ್ಯಾನುಜಾ ಬ್ರಾಹ್ಮಿ ದೀಕ್ಷಿತ್ವಾ ಗುರೋರನು ಗ್ರಹಾತ್ ।
ಗಣಿನೀ ಪದ ಮಾರ್ಯಾಣಾಂ ಸಾ ಭೇಜೇ ಪೂಜಿತಾಮರೈಃ[೧] ॥೧೭೫॥

ಭರತ ಚಕ್ರವರ್ತಿಯ ಚಿಕ್ಕತಂಗಿಯಾದ ಬ್ರಾಹ್ಮಿಯು ಸಹ ಗುರುದೇವರ ಕೃಪೆಯಿಂದ ದೀಕ್ಷಿತರಾಗಿ ಆರ್ಯಿಕೆಯರ ಮಧ್ಯೆ ಗಣಿನೀ ಸ್ವಾಮಿನಿಯ ಪದವಿ ಪಡೆದರು. ಆ ಆರ್ಯಿಕೆ ಬ್ರಾಹ್ಮೀ ಎಲ್ಲಾ ದೇವತೆಗಳಿಂದಲೂ ಪೂಜಿತರಾದರು.

ಭಗವಾನ ಋಷಭ ದೇವರ ಸಮವಶರಣದಲ್ಲಿ ಶ್ರೀ ಜಯಕುಮಾರರು ದೀಕ್ಷಿತರಾದ ಮೇಲೆ ಸುಲೋಚನಾ ಸಹ ಗಣಿನೀ ಬ್ರಾಹ್ಮಿ ಆರ್ಯಿಕೆಯರ ಹತ್ತಿರ ಆರ್ಯಿಕೆ ದೀಕ್ಷೆಯನ್ನು ತೆಗೆದುಕೊಂಡರು.[೨] ಪದ್ಮಪುರಾಣದಲ್ಲಿ ಬರೆದಿದೆ. ಭರತನು ಮುನಿದೀಕ್ಷೆ ತೆಗೆದುಕೊಂಡ ಮೇಲೆ ಮಾತೆ ಕೈಕೆಯಿಯು ವಿರಕ್ತಳಾಗಿ ಮೂರುನೂರ ಸ್ತ್ರೀಯರೊಂದಿಗೆ ಪೃಥ್ವಿಮತೀ ಆರ್ಯಿಕೆಯ ಹತ್ತಿರ ಆರ್ಯಿಕೆ ದೀಕ್ಷೆಯನ್ನು ತೆಗೆದುಕೊಂಡಳು[೩] ಎಂದು ಮಹಾಸತಿ ಸೀತೆಯು ಸರ್ವಭೂಷಣ ಕೇವಲಿಯ ಸಮವಶರಣಕ್ಕೆ ಹೋಗಿ ಪೃಥ್ವಿಮತೀ ಆರ್ಯಿಕೆಯ ಹತ್ತಿರ ಆರ್ಯಿಕೆಯ ದೀಕ್ಷೆ ತೆಗೆದುಕೊಂಡಿದ್ದಳು.[೪]

1964 ರಲ್ಲಿ ಆಚಾರ್ಯ ಶ್ರೀ ಶಿವಸಾಗರರಲ್ಲಿ ಆಜ್ಞೆಯನ್ನು ಪಡೆದು ಕು. ಮನೋವತಿಗೆ ಕ್ಷುಲ್ಲಿಕಾ ದೀಕ್ಷೆಯನ್ನು ಕೊಟ್ಟೆ. ಇದು ಸಂತೋಷದ ವಿಷಯವೇ ಆಗಿದೆ. ಗಣಿನೀ ಆರ್ಯಿಕೆ ಸುಪಾರ್ಶ್ವಮತೀ ಗಣಿನೀ ಆರ್ಯಿಕೆ ವಿಜಯಮತೀ, ಆರ್ಯಿಕೆ ವಿಶುದ್ಧಮತೀ ಮೊದಲಾದ ಕೆಲವು ಆರ್ಯಿಕೆಯರಿಗೆ ಕ್ಷುಲ್ಲಿಕೆ, ಆರ್ಯಿಕೆಯರಿಗೆ ದೀಕ್ಷೆ ಕೊಡಲಾಗಿದೆ. ಈಗ ಈ ಆರ್ಯಿಕೆಯರಿಂದಲೇ ಆರ್ಯಿಕಾ ದೀಕ್ಷೆಯ ಮಾರ್ಗ ಪ್ರಶಸ್ತವಾಗಿದೆ. ಇದೊಂದು ಒಳ್ಳೆಯ ವಿಷಯ. ಆರ್ಯಿಕೆಯಿಂದ ದೀಕ್ಷೆ ಪಡೆದು ಆರ್ಯಿಕೆಯರಲ್ಲಿ ತಾಯಿ, ಮಗಳ ಸಹಜ ವಾತ್ಸಲ್ಯವನ್ನು ಪಡೆಯುವುದು ಒಂದು ಉತ್ತಮ ಅನುಭವವಾಗಿದೆ.

ಭಾದ್ರಪದದಲ್ಲಿ ದಶಲಕ್ಷಣ ಪರ್ವ

ಮೋದಿನಗರದಿಂದ ಸುಶೀಲಕುಮಾರಜೈನರು ಪತ್ನಿ ಸುಶೀಲರೊಡನೆ ಬಂದು ಇಲ್ಲಿ ಇಂದ್ರಧ್ವಜ ಆರಾಧನೆಯನ್ನು ಮಾಡಿದರು. ಮೋದಿನಗರದಿಂದ ಸೂರಜಭಾನ ಜೈನ ದೆಹಲಿಯಿಂದ ಜಯಕುಮಾರಜೈನ ಧರ್ಮಪತ್ನಿ ಸರಳಾದೇವಿ ಹಾಪುಡದ ಶಿಖರಚಂದ, ಶಕುಂತಲಾ ಎಲ್ಲರು ಭಾಗವಹಿಸಲು ಬಂದಿದ್ದರು. ಬೆಳಗ್ಗೆ ಅಭಿಷೇಕ ಪರ್ವ ಪೂಜೆಯ ನಂತರ ಆರಾಧನೆ ಪೂಜೆ ಆಗುತ್ತಿತ್ತು. ಮಧ್ಯಾಹ್ನ "ಸರಸ್ವತಿ ಪೂಜೆ" "ತತ್ತ್ವಾರ್ಥ ಪೂಜೆ" ಯ ಒಂದೊಂದು ಅಧ್ಯಾಯವನ್ನು ಅರ್ಥಸಹಿತವಾಗಿ ವಾಚನ ಹಾಗೇ ಆಯಾ ಧರ್ಮದ ಲಕ್ಷಣದ ಪ್ರವಚನ ನಡೆಯುತ್ತಿತ್ತು. ಕೊನೆಗೆ ನಾನು ಆಯಾ ಧರ್ಮದ ಬಗ್ಗೆ ವಿವೇಚನೆ ಮಾಡಿ ಒಂದೊಂದು ಧರ್ಮದ ಮಂತ್ರವನ್ನು ಹೇಳಿಸುತ್ತಿದ್ದೆ. ರಾತ್ರಿಯಲ್ಲಿ ಕು. ಆಸ್ಥಾ ಕು. ಬೀನ ರಮೇಶಚಂದ ಮೊದಲಾದವರು ಒಂದೊಂದು ಧರ್ಮದ ಬಗ್ಗೆ ಪ್ರವಚನ ಮಾಡುತ್ತಿದ್ದರು. ಶಕುಂತಲಜೀಯವರು ಬಾದಾಮಿಯ ನೀರಿನಿಂದಲೇ ಹತ್ತು ದಿನಗಳ

---

೧. ಆದಿಪುರಾಣ ಪರ್ವ ೨೪.
೨. ಆದಿಪುರಾಣ ಪರ್ವ ೪೭.
೩. ಆದಿಪುರಾಣ ಪರ್ವ ೮೬.
೪. ಆದಿಪುರಾಣ ಪರ್ವ ೧೦೫.

ವ್ರತ ಮಾಡಿದ್ದರು. ಆದರೂ ಉತ್ಸಾಹದಿಂದಲೇ ಪೂಜೆಯಲ್ಲಿ ಹಾಡಿ ಕುಣಿಯುತ್ತಿದ್ದರು. ಇಂದ್ರ ಧ್ವಜ ಆರಾಧನೆಯಿಂದ ಒಳ್ಳೆಯ ಪ್ರಭಾವನೆಯೇ ಆಗಿತ್ತು.

ಶರದ ಪೂರ್ಣಿಮ ಹಾಗೂ ಕ್ಷುಲ್ಲಿಕೆಯ ದೀಕ್ಷೆ

ಶರದ ಪೂರ್ಣಿಮೆಯ ದಿನ 1989 ರ ಅಕ್ಟೋಬರ 14 ರಂದು ದೆಹಲಿಯ ಜನರು ನನ್ನ ಜನ್ಮ ಜಯಂತಿಯನ್ನು ಆಚರಿಸಲು ಸಿದ್ಧತೆಯನ್ನು ನಡೆಸಿದ್ದರು. 13-14-15 ರಂದು ಮೂರು ದಿನದ ಕಾರ್ಯಕ್ರಮ ನಿರೂಪಿಸಿದ್ದರು. ಸಂಘದಲ್ಲಿಯೇ ಇದ್ದ ಬ್ರ. ಶ್ಯಾಮಾಬಾಯಿ 8 ನೆಯ ದಿನವೇ ಶ್ರೀಫಲ ಇಟ್ಟು ದೀಕ್ಷೆಗಾಗಿ ಪ್ರಾರ್ಥಿಸಿದ್ದರು. 15 ರಂದು ಇವರಿಗೆ ಕ್ಷುಲ್ಲಿಕಾ ದೀಕ್ಷೆ ಎಂದು ನಿರ್ಣಯಿಸಿದೆವು. 13-14 ನೇ ತಾರಿಖು ಪಂಚಪರಮೇಷ್ಠಿಗಳ ಆರಾಧನೆ ಮತ್ತು ಗಣಧರವಲಯ ಆರಾಧನೆಯು ನಡೆಯಿತು.

ಅಕ್ಟೋಬರ 15 ರಂದು ಬೆಳಗ್ಗೆ 7 ಗಂಟೆಗೆ ಪ್ರತಿವರ್ಷದಂತೆ ಜಾತ್ರೆಯಾಗಿ ರಥಯಾತ್ರೆಯು ಹೊರಟಿತು. ಇದರ ಮಧ್ಯೆ ದೀಕ್ಷಾರ್ಥಿಯ ಶೋಭಾಯಾತ್ರೆಯು ನಡೆಯಿತು. ಟಿಕೈತನಗರದಿಂದ ಅವರ ಮಕ್ಕಳು ಸೊಸೆಯಂದಿರು ಬಾರಾಬಂಕಿಯಿಂದ ಅವರ ಹೆಣ್ಣು ಮಕ್ಕಳು ಅಳಿಯಂದಿರು, ಪರಿವಾರದವರು ಬಂದಿದ್ದರು. ದೆಹಲಿ, ಬಡೌತ, ಮೇರಠ ಸರಧನ, ಹೈದಾರಾಬಾದ್‌ನಿಂದಲೂ ಅನೇಕ ಭಕ್ತರು ಬಂದು ಸೇರಿದ್ದರು.

ಮಧ್ಯಾಹ್ನ 12.30 ಗೆ ಸಂಘಸಹಿತ ಎಲ್ಲರು ಪೆಂಡಾಲಿಗೆ ತಲುಪಿದರು. ಈ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಶ್ರೀರಾಮಚಂದ್ರ ವಿಕಲ ಹಾಗೂ ಭೂತಪೂರ್ವ ಸಂಸದ ಸದಸ್ಯ ಶ್ರೀ ರಾಮಗೋಪಾಲ ರೆಡ್ಡಿ ಬಂದಿದ್ದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ತ್ರಿಲೋಕ ಚಂದಕೊಠಾರಿ ವಹಿಸಿದ್ದರು. ಅತಿಥಿಗಳ ಸ್ವಾಗತದ ನಂತರ 56 ನೇ ಜನ್ಮ ದಿನವಾದ್ದರಿಂದ 56 ವಿದ್ಯುತ್ ದೀಪವನ್ನು ಬೆಳಗಿಸಲಾಯಿತು. ಆರ್ಯಿಕೆ ಅಭಯಮತೀ, ಚಂದನಮತೀ, ಮೋತಿಸಾಗರರು ನನ್ನ ಪರಿಚಯ ಮಾಡಿಕೊಡುತ್ತಾ ತಮ್ಮ ವಿನಯಾಂಜಲಿಯನ್ನು ಅರ್ಪಿಸಿದರು. ಪ್ರತಿಷ್ಠಾಚಾರ್ಯ ಶಿಖರಚಂದ, ಶ್ರೀನಿರ್ಮಲಕುಮಾರ ಸೇಠಿ ಮೊದಲಾದವರು ತಮ್ಮ ವಿನಯಾಂಜಲಿ ಅರ್ಪಿಸಿದರು. ಹೊಸದಾದ ಪಿಂಛಿ, ಕಮಂಡಲು ಮತ್ತು ಶಾಸ್ತ್ರವನ್ನು ಪ್ರಧಾನ ಮಾಡಿದರು. ಶ್ರೀ ರಾಮಚಂದ್ರ ವಿಕಲರು ಜೈನ ಸಾಧ್ವಿಯರ ಚರ್ಯೆಯನ್ನು ತಿಳಿದು ತಮ್ಮ ಭಕ್ತಿಯ ಉದ್ಗಾರ ವ್ಯಕ್ತಪಡಿಸಿದರು. ಹಾಗೇ ರಾಮಗೋಪಾಲ ರೆಡ್ಡಿಯವರು ಚಿಕ್ಕದಾಗಿ ಭಾಷಣ ಮಾಡಿದರು.

ಇದರ ನಂತರ ದೀಕ್ಷಾ ಕಾರ್ಯಕ್ರಮ ಪ್ರಾರಂಭವಾಯಿತು. ಅವರಿಗೆ ಮೊದಲೇ ತ್ರಿಮೂರ್ತಿ ಭವನದಲ್ಲಿ ಕೇಶಲೋಚ ಮಾಡಿಸಿ ಮಂಗಳ ಸ್ನಾನ ಮಾಡಿಸಿ ಕರೆ ತಂದು ವೇದಿಕೆಯ ಮೇಲೆ ಕೂರಿಸಿದ್ದರು. ಜಿನೇಂದ್ರದೇವರಿಗೆ ಅಭಿಷೇಕ ಮಾಡಿಸಿದ ಮೇಲೆ ಶ್ಯಾಮಾಬಾಯಿ ದೀಕ್ಷೆಗಾಗಿ ಪ್ರಾರ್ಥಿಸಿದರು. ನಂತರ ಬಂಧುಗಳೊಡನೆ ಕ್ಷಮಾಯಾಚನೆಯಾದ ಮೇಲೆ ನಾನು ದೀಕ್ಷಾರ್ಥಿಯ ಪರಿವಾರ ಮತ್ತು ನೆರೆದಿದ್ದ ಜೈನ ಸಮಾಜದವರಿಂದ ಅನುಮತಿ ಪಡೆದು, ಸುಮಂಗಲಿಯರಿಂದ ಮಂಗಳ ಚೌಕದಲ್ಲಿ ಕುಳ್ಳಿರಿಸಲಾಯಿತು. ನಂತರ ಮಸ್ತಕದ ಮೇಲೆ ದೀಕ್ಷಾ ಸಂಸ್ಕಾರ ಪ್ರಾರಂಭವಾಯಿತು. ದೀಕ್ಷಾರ್ಥಿಗೆ ಕೊಡುವ ಸಾಧನಗಳನ್ನು ಹರಾಜು ಮಾಡಿದ ನಂತರ ನನಗೆ ತಂದೊಪ್ಪಿಸಿದರು. ದೀಕ್ಷೆಯ ನಂತರ ಈ ಪಿಂಛಿ ಕಮಂಡಲು ಶಾಸ್ತ್ರವನ್ನು ಕೊಟ್ಟು ಅವರಿಗೆ "ಶ್ರದ್ಧಾಮತಿ" ಎಂದು ನಾಮಕರಣ ಮಾಡಲಾಯಿತು. ದೀಕ್ಷೆ ತೆಗೆದುಕೊಂಡಾಗ ದೀಕ್ಷಾ ಗುರುವೇ ಮೊದಲು ಪಿಂಛಿ, ಕಮಂಡಲು, ಶಾಸ್ತ್ರವನ್ನು ಕೊಡಬೇಕು. ಅನಂತರ ದಿನಗಳಲ್ಲಿ ಜನರು ಹರಾಜಿನಲ್ಲಿ ಕೂಗಿ ಅವರೇ ಸಮರ್ಪಿಸಬಹುದು. ಹಳೆಯದನ್ನು ಶ್ರಾವಕರು ತಮ್ಮ ಮನೆಗಳಿಗೆ ತೆಗೆದುಕೊಂಡು ಹೋಗುತ್ತಾರೆ.

ಇದಾದ ನಂತರ ನನ್ನ ಮಂಗಳ ಆಶೀರ್ವಾದದೊಂದಿಗೆ ಕಾರ್ಯಕ್ರಮ ಮುಗಿಯಿತು. ಬಂದಿದ್ದ ಜನಗಳ ಊಟದ ವ್ಯವಸ್ಥೆಯನ್ನು ಹೈದಾರಾಬಾದಿನ ಮಾಂಗೀಲಾಲರೇ ವಹಿಸಿಕೊಂಡಿದ್ದರು. 1964 ರಲ್ಲಿ ನಾನು ಹೈದಾರಾಬಾದಿನಲ್ಲಿ ಚಾತುರ್ಮಾಸ ಮಾಡಿದಾಗಿನಿಂದ ಅವರು ಅನನ್ಯ ಭಕ್ತರಾಗಿದ್ದಾರೆ. ಇಲ್ಲಿಯ ಪ್ರತಿಯೊಂದು ಕಾರ್ಯಕ್ರಮದಲ್ಲೂ ಆಸಕ್ತಿಯಿಂದ ತನು ಮನ ಧನದಿಂದ ಭಾಗಹಿಸುತ್ತಾರೆ.

ಬ್ರ. ಶ್ಯಾಮಬಾಯಿ

ಬ್ರ. ಶ್ಯಾಮಬಾಯಿ 1975 ರಿಂದಲೂ ನಮ್ಮ ಸಂಘದಲ್ಲಿಯೇ ಇದ್ದಾರೆ. ಇವರು ಆರಾದ ರಾಜೇಂದ್ರ ಚಂದ ಮತ್ತು ಚಂದಾರ ಪುತ್ರಿ. ಇವರು ಟಿಕ್ಕೈತನಗರದ ಸೇಠ ಪುತ್ತೀಲಾಲರ ಮಗ ನನ್ನೂಮಲ್ಲರನ್ನು ಮದುವೆಯಾಗಿ ಮೂರು ಗಂಡು, ಹೆಣ್ಣು ಮಕ್ಕಳನ್ನು ಪಡೆದು ಅವರ ಮದುವೆ ಮುಂಜಿ ಮುಗಿಸಿ ಸಂಘಕ್ಕೆ ಬಂದು ಸೇರಿ ಇಂದು ದೀಕ್ಷೆಯನ್ನು ಪಡೆದು ಗೃಹಸ್ಥ ಜೀವನವನ್ನು ಸಫಲಗೊಳಿಸಿಕೊಂಡಿದ್ದರು.

ಗುರುದೇವರ ಶಿಕ್ಷಣ

ಗುರುದೇವ ಆಚಾರ್ಯ ಶ್ರೀ ವೀರಸಾಗರರು ಯಾವಾಗಲೂ ಹೇಳುತ್ತಿದ್ದರು. ಯಾರಾದರೂ ದೀಕ್ಷೆ ತೆಗೆದುಕೊಳ್ಳ ಬಯಸಿದರೆ ಅವರು ಕಡಿಮೆ ಎಂದರೆ 6 ತಿಂಗಳಾದರೂ ಸಂಘದಲ್ಲಿದ್ದು ಸ್ವಾಧ್ಯಾಯ ಮೊದಲಾದ ಅವಶ್ಯಕ ಕ್ರಿಯೆಗಳ ಅನುಭವವನ್ನು ಪಡೆಯಬೇಕು. ನಂತರ ದೀಕ್ಷೆಗೆ ಅರ್ಹರು. ಶಿಷ್ಯರನ್ನು ಸೇರಿಸಿಕೊಳ್ಳಲು ಅವಸರ ಮಾಡಬಾರದು. ಗುರುಗಳ ಈ ಧೀರ್ಘದರ್ಶಿತ್ವ ಬಹಳ ಒಳ್ಳೆಯದಾಗಿತ್ತು. ಇದೇ ಕಾರಣದಿಂದ ಅವರ ಶಿಷ್ಯರನ್ನು ಸಂಘದಿಂದ ಕಳುಹಿಸಿದ ಉದಾಹರಣೆಗಳು ಬಹಳ ಕಡಿಮೆ. ಹಾಗೇ ಗುರುನಿಂದೆ, ಅವಹೇಳನ ಮುಂತಾದ ಪ್ರಸಂಗಗಳು ಇರಲೇ ಇಲ್ಲ.

ನಾನು ಕೂಡ ಗುರುಗಳ ಈ ಪರಂಪರೆಯನ್ನು ಹೃದಯ ಪಟಲದಲ್ಲಿ ಅಂಕಿತಗೊಳಿಸಿಗೊಂಡಿದ್ದೆ. ಯಾರೋ ಒಬ್ಬರು ಮನೆ ಬಿಟ್ಟು ಬಂದಿದ್ದು ನನ್ನಲ್ಲಿ ದೀಕ್ಷೆಯನ್ನು ಕೇಳಿ ಮಾತಾಜೀ ತಾವು ದೀಕ್ಷೆ ಕೊಡುವುದಾದರೆ ತಮ್ಮ ಸಂಘದಲ್ಲಿ ಇರುತ್ತೇನೆ ಇಲ್ಲ ಎಂದರೆ ನಾನು ಇರುವುದಿಲ್ಲ ಎಂದರು. ನಾನು ಗುರುಗಳ ಪರಂಪರೆಯನ್ನು ಬಿಟ್ಟು ದೀಕ್ಷೆ ಕೊಡಲು ಸಮ್ಮತಿಸಲಿಲ್ಲ.

ಈ ಶ್ಯಾಮಬಾಯಿ ಕಳೆದ 5 ವರ್ಷಗಳಿಂದ ಸಂಘದಲ್ಲಿದ್ದರು. ಅವರ ಸ್ವಭಾವ, ನಡವಳಿಕೆಯನ್ನು ಚೆನ್ನಾಗಿ ತಿಳಿದಿದ್ದೆವು. ಸಂಘದ ನಿಯಮಗಳು ಚೆನ್ನಾಗಿ ಗೊತ್ತಿತ್ತು. ಆದ್ದರಿಂದ ಇವರಿಗೆ 63 ವರ್ಷ ವಯಸ್ಸಿನಲ್ಲಿ ವೈರಾಗ್ಯ ಧರ್ಮಪ್ರೇಮ ಸರಳತೆ ಇವನ್ನು ನೋಡಿಯೇ ಇವರಿಗೆ ಕ್ಷುಲ್ಲಕ ದೀಕ್ಷೆಯನ್ನು ಕೊಡಲಾಯಿತು.

ಪ್ರತಿಷ್ಠಾಚಾರ್ಯ ಸಂಗೋಷ್ಠಿ

ನನ್ನ ಪ್ರೇರಣೆಯಿಂದ 1989 ರ ಅಕ್ಟೋಬರ 15 ರಂದು ಮೂರು ದಿನದ ಪ್ರತಿಷ್ಠಾಚಾರ್ಯರುಗಳ ಸಂಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ನಿರ್ಮಲಕುಮಾರ ಸೇಠರು ದೀಪ ಬೆಳಗಿಸಿ ಉದ್ಘಾಟನೆ ಮಾಡಿದರು. ಗೋಷ್ಠಿಯಲ್ಲಿ ಪಂ. ಫತಹಸಾಗರಜೀ ಉದಯಪುರ ಶ್ರೀ ಶಿಖರಚಂದ ಜೈನ ಭಿಂಡ ಪಂ. ಹಂಸಮುಕಜೀ ಡಾಗರಿಯಾ, ಧರಿಯಾಪುರ, ಶಾಹಪುರದ ಪಂ. ಅಮರಚಂದ ಕುಸುಂಬಾದ ಪಂ. ಪ್ರದೀಪಕುಮಾರರು ಮೊದಲಾದವರು ಭಾಗವಹಿಸಿದ್ದರು.

ಪ್ರತಿದಿನ ಮಧ್ಯಾಹ್ನ 2, 2 ಗಂಟೆಗೂ ಹೆಚ್ಚು ಸಮಯ ಚರ್ಚೆ ನಡೆಯುತ್ತಿತ್ತು. ಈ ಗೋಷ್ಠಿಯಲ್ಲಿ ಆರ್ಯಿಕಾ ಚಂದನಮತಿ, ಕ್ಷುಲ್ಲಕ ಮೋತಿಸಾಗರ, ಬ್ರ. ರವೀಂದ್ರಕುಮಾರ ಬ್ರ. ಕಮಲೇಶ ಮುಂತಾದವರು ಉಪಸ್ಥಿತರಿರುತ್ತಿದ್ದರು.

ಪಾಷಾಣವನ್ನು ಭಗವಂತನನ್ನಾಗಿ ಮಾಡಲು ಪ್ರತಿಷ್ಠಾಚಾರ್ಯರದೇ ಬಹಳ ದೊಡ್ಡ ಹೊಣೆ ಇರುತ್ತದೆ. ಆದ್ದರಿಂದ ಪ್ರಾಚೀನ ಆಚಾರ್ಯರ ಮೂಲಕ ರಚಿತವಾದ ಯಾವುದೇ ಪ್ರತಿಷ್ಠಾ ಪಾಠ ಇರಲಿ, ಆದರಿಂದಲೇ ಯಾವುದಾದರೂ ಒಂದನ್ನು ತೆಗೆದುಕೊಂಡು ಪ್ರತಿಷ್ಠಾವಿಧಿಯನ್ನು ಮಾಡಬೇಕು. ಪಂ. ಹಂಸಮುಖರಿಗೆ ನನ್ನ ಸೂಚನೆಯನ್ನು ತೋರಿಸಿದೆ. ಇದರಿಂದಲೇ 24 (ಚೌಬೀಸ) ಪ್ರತಿಷ್ಠಾ ಪಾಠ ಗ್ರಂಥ ಇಂದು ಸಿಗುತ್ತಿದೆ. ಇವುಗಳಲ್ಲಿ ಕೆಲವು ಪ್ರಕಟಗೊಂಡಿವೆ. ನಾನು ಆಗಾಗ್ಗೆ ಇದನ್ನು ಹೇಳುತ್ತಿರುತ್ತೇನೆ. ಇಂದು ಕೇಳಿ ಬರುತ್ತಿರುವ ಚರ್ಚೆ ಎಂದರೆ ಪ್ರತಿಷ್ಠಾ ಪಾಠಗಳ ಆಧಾರದಿಂದ ಹೊಸದಾದ ಪ್ರತಿಷ್ಠಾ ಪಾಠವನ್ನು ಸಿದ್ಧಗೊಳಿಸಿ ಅದರ ಆಧಾರದಿಂದಲೇ ಪ್ರತಿಷ್ಠೆಯನ್ನು ಮಾಡಿರಿ. ಅದನ್ನು ನಾನು ಪರೀಕ್ಷಿಸಲಾರೆ. ಇನ್ನೊಂದು ವಿಷಯವೆಂದರೆ ಯಾರೇ ಪ್ರತಿಷ್ಠಾ ಪಾಠದ ರಚನಾಕಾರನು ಅಪೂರ್ಣವಾದ ಪಾಠವನ್ನು ಮಾಡಿದ್ದಾರೆ ಎಂದು ನಾವು ಹೇಗೆ ಹೇಳುವುದು. ನೇಮಿ ಚಂದ್ರ ಪ್ರತಿಷ್ಠಾ ತಿಲಕ ಗ್ರಂಥ ಪರಿಪೂರ್ಣವಾಗಿದೆ. ಈ ಗ್ರಂಥವನ್ನು ಓದಿಕೊಂಡೆ ಪ್ರತಿಷ್ಠಾಚಾರ್ಯರು ಸಿದ್ಧತೆ ಮಾಡಬೇಕು.

ನನ್ನ ಈ ಹೇಳಿಕೆಯನ್ನು ಎಲ್ಲರೂ ಪರೀಕ್ಷಿಸಿ ಒಂದು ತೀರ್ಮಾನಕ್ಕೆ ಬಂದರು. ಹೊಸದಾದ ಪ್ರತಿಷ್ಠಾ ಪಾಠದ ರಚನೆ ಬೇಡ. ಪ್ರಾಚೀನ ಗ್ರಂಥಗಳ ಆಧಾರದಿಂದಲೇ ವಿಧಿ ಸಂಪನ್ನಗೊಳಿಸೋಣ ಎಂದು ನಿರ್ಣಯಿಸಿದರು. ಆ ಸಮಯದಲ್ಲಿ ಉಪಸ್ಥಿತರಿದ್ದ ವಿದ್ವಾಂಸರು ಶಾಂತಿಪೂರ್ಣವಾಗಿ ಚರ್ಚೆ ಮಾಡಿ ಕೆಳಗೆ ಕೊಟ್ಟಿರುವ ಏಳು ನಿರ್ಣಯಗಳನ್ನು ಒಮ್ಮತವಾಗಿ ಸ್ವೀಕರಿಸಿದ್ದಾರೆ.

1) ಪ್ರತಿಷ್ಠಾಚಾರ್ಯರಿಗೆ ಸಂಸ್ಕೃತ, ವ್ಯಾಕರಣ, ಸಿದ್ಧಾಂತ ಶಿಲ್ಪ ಹಾಗೂ ಜ್ಯೋತಿಷ್ಯದ ಜ್ಞಾನ ಅವಶ್ಯಕವಾಗಿ ಇರಬೇಕು.

2) ಪ್ರಾಚೀನ ಆಚಾರ್ಯರಿಂದ ರಚಿತವಾಗಿರುವ ಪ್ರತಿಷ್ಠಾ ಪಾಠಗಳ ಆಧಾರದಿಂದಲೇ ಕ್ರಿಯಾಕಾಂಡದ ವಿಧಿಗಳನ್ನು ಮಾಡಬೇಕು. ಯಾವುದೇ ಹೊಸದಾದ ಪ್ರತಿಷ್ಠಾ ಪಾಠಗಳ ಸಂಕಲನದ ಪ್ರಕಾಶನದ ಅವಶ್ಯಕತೇ ಇಲ್ಲ.

3) ವರ್ತಮಾನದಲ್ಲಿ ನಡೆದು ಬರುತ್ತಿರುವ ತೇರಹ ಪಂಥ ಹಾಗೂ ಬೀಸ ಪಂಥ ಎಂಬ ಎರಡು ನಡವಳಿಕೆಗಳು ಪ್ರಚಲಿತದಲ್ಲಿವೆ. ಇವುಗಳನ್ನು ಗಮನದಲ್ಲಿಟ್ಟುಕೊಂಡೆ ವಿಧಿ - ವಿಧಾನಗಳ ಕಾರ್ಯಕ್ರಮಗಳನ್ನು ನಡೆಸಬೇಕು. ಆದರೆಪ್ರಾಚೀನ ಪ್ರತಿಷ್ಠಾ ಪಾಠಗಳ ಆಧಾರದಲ್ಲಿ ಯಾವುದೇ ವಿಧಿಯನ್ನು ಅಪೂರ್ಣಗೊಳಿಸಬಾರದು.

4) ಪ್ರತಿಷ್ಠೆಗೆ ಇಬ್ಬರು ಪ್ರತಿಷ್ಠಾಚಾರ್ಯರು ಇರುವುದು ಹೆಚ್ಚು ಶ್ರೇಷ್ಠವಾಗಿದೆ. ಒಬ್ಬ ಪ್ರತಿಷ್ಠಾಚಾರ್ಯರು ಪಂಚಕಲ್ಯಾಣದ ಬಹಿರಂಗ ಕ್ರಿಯೆಗಳನ್ನು ವೇದಿಕೆಯ ಮೇಲೆ ಮಾಡಿಕೊಳ್ಳಬೆಕು. ಹಾಗೂ ಎರಡನೆಯವರು ಅಂತರಂಗ ಕ್ರಿಯೆಗಳನ್ನು ಮಂತ್ರೋಚ್ಚಾರಣೆ, ಯಜ್ಞ, ವಿಧಾನ ಸಂಸ್ಕಾರ ವಿಧಿ ಮೊದಲಾದವುಗಳನ್ನು ನಡೆಸಬೇಕು. ಆಗ ಪಂಚಕಲ್ಯಾಣವು ಪರಿಪೂರ್ಣವಾಗುತ್ತದೆ. ಇದಕ್ಕಾಗಿ ಇಬ್ಬರು ಸಹಾಯಕ ಪಂಡಿತರನ್ನು ಇಟ್ಟುಕೊಳ್ಳಬೇಕು.

5) ವರ್ಷದಲ್ಲಿ ಒಮ್ಮೆ ಆದರೂ ಎಲ್ಲಾ ಪ್ರತಿಷ್ಠಾಚಾರ್ಯರುಗಳ ಸಮ್ಮೇಳನವಾದರೆ ಪರಸ್ಪರ ತಿಳುವಳಿಕೆಯನ್ನು ಹಂಚಿಕೊಂಡು ಮೈತ್ರಿಭಾವವು ಬೆಳೆಯುತ್ತದೆ.

6) ಜಾತಿಕುಲದ ಶುದ್ಧಿಯನ್ನು ಗಮನದಲ್ಲಿಟ್ಟುಕೊಂಡು ಪ್ರತಿಷ್ಠಾಚಾರ್ಯರು, ತಂದೆ-ತಾಯಿ ಹಾಗೂ ಇಂದ್ರರನ್ನು ನಿಯುಕ್ತಿಗೊಳಿಸಬೇಕು. ಅಂತರ್ಜಾತೀಯ ವಿಜಾತಿಯ ಹಾಗೂ ವಿಧವಾ ವಿವಾಹದ ದೋಷಗಳಿಂದ ಮುಕ್ತರಾಗುವುದು ಅವಶ್ಯಕವಾಗಿದೆ.

7) ಪ್ರತಿಷ್ಠೆ ಹಾಗೂ ಆರಾಧನೆಗಳಲ್ಲಿ ದೀಪವನ್ನು ಹಚ್ಚುವುದು ಅಗ್ನಿಯಲ್ಲಿ ದೂತದಾರ ಹೋಮ ಮಾಡುವುದು ಆಗಮಾನುಕೂಲವಾಗಿಯೇ ಆಗಬೇಕು.

ಇದರ ನಂತರ ಸೌಹಾರ್ದಪೂರ್ಣವಾತಾವರಣದೊಂದಿಗೆ ಗೋಷ್ಠಿಯು ಮುಕ್ತಾಯ ಗೊಂಡಿತು.

ಜಂಬೂದ್ವೀಪ ಮಹಾಮಹೋತ್ಸವದ ಘೋಷಣೆ

ವಿದ್ವಾಂಸರಿಂದ ಮಹಾಮಹೋತ್ಸವಕ್ಕಾಗಿ ತಿಥಿಯನ್ನು ನಿಶ್ಚಯಿಸಲಾಗಿತ್ತು. ವೈಶಾಖ ಶುಕ್ಲ ತೃತೀಯ ದಿನ ಧ್ವಜಾರೋಹಣೆಯ ಕಾರ್ಯಕ್ರಮ ಹಾಗೂ ನವಮಿಯಿಂದ ತ್ರಯೋದಶಿ ಅಂದರೆ 1990ರ ಮೇ ತಿಂಗಳ 3 ರಿಂದ 7ರವರೆಗೆ ಪಂಚಕಲ್ಯಾಣದ ಪ್ರತಿಷ್ಠೆಯನ್ನು ನಿರ್ಣಯಿಸಲಾಗಿತ್ತು. ಈ ವಿಷಯವನ್ನು ಸಮ್ಯಗ್‌ಜ್ಞಾನ ಸಂಚಿಕೆಯಲ್ಲಿ ಪ್ರಕಾಶಿಸಲಾಗಿತ್ತು.

ವರ್ಷಾಯೋಗ ಸಮಾಪನ್ನ

ಕಾರ್ತಿಕ ಕೃಷ್ಣ ಅಮಾವಾಸ್ಯೆಯ ಹಿಂದಿನ ದಿನವೇ ರಾತ್ರಿ ಶಾಸ್ತ್ರ ವಿಧಿಯ ಅನುಸಾರ ವರ್ಷಾಯೋಗದ ವಿಸರ್ಜನೆ ನಡೆಯಿತು. ನಂತರ ಭ. ಮಹಾವೀರರ ಮಂದಿರದಲ್ಲಿ ನಿರ್ವಾಣಲಾಡುಗಳನ್ನು ಅರ್ಪಿಸಿದರು. ಸಾಯಂಕಾಲದಲ್ಲಿ ಪ್ರತಿವರ್ಷದಂತೆ ಗಣಧರ ದೇವ ಪೂಜೆ, ಕೇವಲ ಜ್ಞಾನ, ಮಹಾಲಕ್ಷ್ಮಿಯ ಪೂಜೆ ನಡೆಯಿತು. ಜಂಬೂದ್ವೀಪದ ನಿವಾಸಿಗಳು ಜಂಬೂದ್ವೀಪ ಸುಮೇರು ಪರ್ವತಗಳನ್ನು ದೀಪಗಳಿಂದ ಜಗಮಗಗೊಳಿಸಿದರು.

ಶಾಸ್ತ್ರದಲ್ಲಿ ಕಾರ್ತಿಕ ಕೃಷ್ಣ ಚತುರ್ದಶಿಯ ಹಿಂದಿನ ರಾತ್ರಿಯ ಚಾತುರ್ಮಾಸ ಮುಗಿಯುತ್ತದೆ. ಆದರೆ ವಿಹಾರವನ್ನು ಕಾರ್ತಿಕ ಶುಕ್ಲ ಪಂಚಮಿಯಂದು ಮಾಡಬೇಕೆಂದು ಉಲ್ಲೇಖಿಸಿದೆ. ಅದರಂತೆ ನಾನು ನವೆಂಬರ 3 ರಂದು ಹಸ್ತಿನಾಪುರದಿಂದ ವಿಹಾರ ಮಾಡಿದೆ.

೯೭

ಮಂಗಳ ವಿಹಾರ

ಹಲವು ವರ್ಷಗಳಿಂದ ಸರಧನ, ಬಡೌತ, ಮುಂತಾದ ಕಡೆಯಿಂದ ಶ್ರಾವಕರು ತಮ್ಮಲ್ಲಿಗೆ ವಿಹಾರ ಬರಬೇಕೆಂದು ಆಗ್ರಹ ಪಡಿಸುತ್ತಿದ್ದರು. 1987 ರ ಬೇಸಿಗೆಯಲ್ಲಿ ಒಮ್ಮೆ ನಾನು ಅರ್ಧ ಒಪ್ಪಿಗೆ ಕೊಟ್ಟಿದ್ದು. ಅನಂತರ ಬೇಸಿಗೆಯ ತಾಪ ನೋಡಿ ನಿರಾಕರಿಸಿದ್ದೆ. 1989ರ ಅಕ್ಟೋಬರ 15 ರಂದು ಬಡೌತದ ಭಕ್ತಗಣ ಶ್ರೀಫಲ ಇಟ್ಟು ಪ್ರಾರ್ಥನೆ ಸಲ್ಲಿಸಿದಾಗ ನಾನು ಅನುಮತಿಯನ್ನು ಕೊಟ್ಟಿದ್ದೆ. ಅದರಂತೆ ನಾನು (ಕಾರ್ತಿಕ)

1989 ರ ಅಕ್ಟೋಬರ 30 ರಂದು ಮಧ್ಯಾಹ್ನ 3 ಗಂಟೆಗೆ ಸಂಘ ಸಹಿತವಾಗಿ ಜಂಬೂ ದ್ವೀಪದಿಂದ ವಿಹಾರ ಹೊರಟು ಅದೇ ಊರಿನ ಅನಂತವೀರ ಜೈನ ಕೋಠಿಯಾರ ಚೈತ್ಯಾಲಯವನ್ನು ದರ್ಶನ ಮಾಡಿದೆ. ಮತ್ತು ಅಲ್ಲೇ ತಂಗಿದ್ದೆ. ನವಂಬರ 2 ರಂದು ನನ್ನ ಸಾನಿಧ್ಯದಲ್ಲಿ ಶಾಂತಿ ವಿಧಾನವನ್ನು ಮಾಡಿದರು. ನವಂಬರ 5 ರಂದು 3 ಮೈಲಿ ನಡೆದುಕೊಂಡು ಗಣೇಶಪುರದಲ್ಲಿ ವಿಶ್ರಾಂತಿ ಪಡೆದೆ. ಆಹಾರಕ್ಕಾಗಿ ಗೋಶಾಲೆಯಲ್ಲಿ ವ್ಯವಸ್ಥೆ ಆಗಿತ್ತು. ಆಹಾರವಾದ ಮೇಲೆ ಮಧ್ಯಾಹ್ನ 4 ಗಂಟೆಗೆ ಮವಾನಾ ತಲುಪಿದೆವು. ಅಲ್ಲಿದ್ದ ಕಲ್ಯಾಣಸಾಗರರ ಅಪೇಕ್ಷೆಯಂತೆ ನನ್ನ ಪ್ರವಚನ ಆಯಿತು. ಕಲ್ಯಾಣ ಸಾಗರರು ಮಾತನಾಡುತ್ತಾ ನಾನು ಹಸ್ತಿನಾಪುರಕ್ಕೆ ಹೋಗಿ ಮಾತಾಜಿಯರಲ್ಲಿ ಚರ್ಚೆಮಾಡಿ ಜ್ಞಾನ ಪಡೆಯಬೇಕೆಂದಿದ್ದೆ. ಆದರೆ ಮಾತಾಜೀಯವರೇ ಬಡೌತ ಕಡೆಗೆ ಹೊರಡುತ್ತಿದ್ದಾರೆ ಎಂದರು.

ಬೆಳಗ್ಗೆ ನಾನು ತಂಗಿದ್ದ ಧರ್ಮಶಾಲೆಗೆ ಅವರು ನನ್ನಲ್ಲಿ ಮಾತಾಡಬೇಕೆಂದು ಬಂದಿದ್ದರು. ಒಂದು ಗಂಟೆಯವರೆಗೂ ಚರ್ಚೆ ನಡೆಯಿತು. ಆಗ ಅಲ್ಲಿ ಮೋತಿಸಾಗರ, ಚಂದನಮತಿಯರು ಇದ್ದರು. ನಾನು ಮುನಿಶ್ರೀಯವರಲ್ಲಿ ನಿವೇದಿಸಿದೆ ಆಗಮದಂತೆ ತಾವು ನಡೆದು ಣಮೋಕಾರ ಮಂತ್ರದ ಪ್ರಚಾರ ಪ್ರಸಾರ ಮಾಡಬೇಕು. ಇದಕ್ಕೆ ನಮ್ಮೆಲ್ಲರ ಪೂರ್ಣ ಸಮರ್ಥನೆಯು ತಮಗೆ ಯಾವಾಗಲು ದೊರೆಯುತ್ತದೆ ಎಂದು ಆಶ್ವಾಸನೆಯನ್ನು ಇತ್ತು ಅಲ್ಲಿಂದ ಹೊರಟೆವು.

ದಿನ 7-8 ಕಿಲೋಮೀಟರ್ ಮಾತ್ರ ಪ್ರಯಾಣ ಮಾಡುತ್ತಾ ಮಾರ್ಗದಲ್ಲಿ ಬಂದ ಭಗವಾನಪುರ ಲಾವಡ, ದೌರಾಲಾ ಬೇಗಮಬಾದ್ ನ ಮೂಲಕ ನವೆಂಬರ 11ರ ಸಂಜೆ ಸರಧನದ ಹೊರಗಿನ ಶ್ರೇಯಾಂಸಕುಮಾರರ ಪವರ್‌ಲೂಮ್ ಫ್ಯಾಕ್ಟರಿಗೆ ತಲುಪಿದೆವು. 13ರಂದು ಸರಧನದಲ್ಲಿ ಮಂಗಳ ಪ್ರವೇಶ ಆಯಿತು. ಶ್ರಾವಕರು ದೂರದಿಂದಲೇ ಸ್ವಾಗತಕ್ಕಾಗಿ ಕಾದು ನಿಂತಿದ್ದರು. ಊರೊಳಗೆ ಬರುವಾಗ ಎಲ್ಲರ ಮನೆಯ ಮುಂದೆಯು ಕಾಲು ತೊಳೆದು ಆರತಿ ಎತ್ತಿದರು. ನಂತರ ಮೆರವಣಿಗೆಯಲ್ಲಿ ಕರೆದೊಯ್ದು ಸಭೆಯಲ್ಲಿ ನನ್ನ ಮಂಗಳ ಪ್ರವಚನವು ಆಯಿತು. ಸರಧನದ ವಿಹಾರ 1983 ರಲ್ಲಿ ಅಪೂರ್ಣವಾಗಿತ್ತು. 350 ಕಿಲೋಮೀಟರ ನಡೆದು ಬಂದು ಗಣೇಶಪುರದವರೆಗೂ ಬಂದ ಮೇಲೆ ಆರ್ಯಿಕೆ ರತ್ನಮತಿಯವರ ಆರೋಗ್ಯ ಬಿಗಡಾಯಿಸಿದ್ದರಿಂದ ವಿಹಾರ ಸ್ಥಗಿತಗೊಳಿಸಿ ವಾಪಸ್ಸು ಹಸ್ತಿನಾಪುರಕ್ಕೆ ಹಿಂದಿರುಗಿದೆವು. ಪುನಃ 1985 ರಲ್ಲಿ ಅವರ ಸಮಾಧಿ ಆಯಿತು. ನಂತರ ಬೇಸಿಗೆಯ ಕಾಲದಲ್ಲಿ ನನ್ನ ಆರೋಗ್ಯ ವ್ಯತ್ಯಾಸವಾಯಿತು. ಹೀಗಾಗಿ ಜನರ ಆಶೆಯನ್ನು ಈಗ ಪೂರ್ಣಗೊಳಿಸುವ ಅವಕಾಶ ದೊರೆಯಿತು.

ಲಷ್ಕರ ಗಂಜದಲ್ಲಿ ಕಾರ್ಯಕ್ರಮ

ಸ್ವ. ಕೈಲಾಸಚಂದರ ಮಗ ಪವನಕುಮಾರ ವಿನೋದಕುಮಾರ ಜೈನರು ತಮ್ಮ ಸ್ಕೂಲಿನಲ್ಲಿ ವಾರ್ಷಿಕ ಉತ್ಸವದ ಕಾರ್ಯಕ್ರಮದಲ್ಲಿ ನೆಹರು ಶತಾಬ್ದಿ ಹಾಗೇ ಆರ್ಯಿಕ ಸಂಘದ ಸ್ವಾಗತದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರಿಂದ ಅವರ ಆಗ್ರಹದಿಂದ ಲಷ್ಕರ ಗಂಜಿಗೆ ಹೋಗಿ ಮಂದಿರದ ದರ್ಶನ ಮಾಡಿ ಶಾಲೆಯ ವಾರ್ಷಿಕೋತ್ಸವದಲ್ಲಿ ಮಕ್ಕಳಿಗೆ ಆಶೀರ್ವಾದ ಮಾಡಿ ಬಂದೆವು. ವಿನೋದಕುಮಾರ ಮಗಳು ನನ್ನ ಬಗ್ಗೆ ಭಕ್ತಿ ಗೀತೆಯನ್ನು ನೃತ್ಯದೊಂದಿಗೆ ಪ್ರದರ್ಶಿಸಿ ಕಾರ್ಯಕ್ರಮವನ್ನು ರಂಜಿಸಿದಳು.

ನವೆಂಬರ 14 ರಂದು ನನ್ನ ಆರೋಗ್ಯ ಪ್ರತಿಕೂಲವಾಯಿತು. ಆಮಶಂಕೆಯ ಪ್ರಕೋಪ ಹಾಗೇ ಅತಿಸಾರದ ಬಾಧೆ ಬಾಧಿಸತೊಡಗಿತು. 16 ರಂದು ಮೇರಠನಿಂದ ಹಕೀಮ ಶೇಫದ್ದೀನರನ್ನು ಕರೆಸಲಾಯಿತು. ಅವರು

ಮಾತಾಜೀಯ ಆರೋಗ್ಯ ಈಗ ನಡೆಯುವುದಕ್ಕೆ ಅನುಕೂಲವಾಗಿಲ್ಲ. ನೀವು ಇಷ್ಟೊಂದು ದೂರ ಅವರನ್ನು ನಡೆಸಿಕೊಂಡು ಬಂದು ಅನ್ಯಾಯ ಮಾಡಿದ್ದೀರಿ ಈಗ ಅವರ ಲಿವರ್‌ನಲ್ಲಿ ತೀವ್ರ ಒತ್ತಡ ಬಿದ್ದಿದೆ. ಈ ಮೂರು ನಾಲ್ಕು ದಿನ ಅತಿಸಾರ ಇದ್ದೇ ಇತ್ತು. ವಾಂತಿಯು ಆಗತೊಡಗಿತು. ಸಂಘದ ಎಲ್ಲರು ಗಾಬರಿಯಾದರು. ಎಲ್ಲಾದರೂ 1985 ರ ಸ್ಥಿತಿ ಮರುಕಳಿಸಿದರೆ ಎಂದು. ಚಂದನಮತಿ ಅದೇ ಹಿಂದಿನ ಔಷಧ ಕಷಾಯವನ್ನು ಕೊಡಿಸಲು ಪ್ರಾರಂಭಿಸಿದ್ದರಿಂದ 4-5 ದಿನದಲ್ಲಿ ಆರೋಗ್ಯ ಸುಧಾರಿಸಿತ್ತು. ನಂತರ ಜನರು ಬಹಳ ಭಕ್ತಿಯಿಂದ ಬಡೌತಕ್ಕೆ ಕರೆದೊಯ್ದರು.

ಬಡೌತದಲ್ಲಿ ನವಂಬರ 27 ರಂದು ತ್ರಿಲೋಕ ಆರಾಧನೆಗಾಗಿ ಧ್ವಾಜಾರೋಹಣ ಆಯಿತು. ಡಿಸೆಂಬರ 14 ರಂದ ಪೂರ್ಣವಾಯಿತು. ಈ ವಿಧಾನದಲ್ಲಿ ಭಾಗವಹಿಸಲೇಬೇಕೆಂದು ಬಡೌತದ ಜನರು ನನ್ನನ್ನು ವಿಹಾರ ಮಾಡಿಸಿಕೊಂಡು ಕರೆತಂದಿದ್ದರು. ಮಾರ್ಗದ ನಿರ್ವಹಣೆಯನ್ನು ರಾಜಕುಮಾರ ಮತ್ತು ಅನಿಲಜೈನರು ಹೊತ್ತಿದ್ದರು. ನಾನು ಎಷ್ಟು ದೂರ ನಡೆಯುತ್ತಿದ್ದೇನೋ ಅಲ್ಲಿ ಬಿಡಾರದ ವ್ಯವಸ್ಥೆಯನ್ನು ಮಾಡುತ್ತಿದ್ದರು. ನನ್ನ ಅನುಕೂಲ ನೋಡಿಕೊಂಡೇ ಕರೆದುಕೊಂಡು ಹೋಗುತ್ತಿದ್ದರು.

ಅವರು ನನ್ನಲ್ಲಿ ಪ್ರಾರ್ಥನೆ ಮಾಡಲು ಬಂದಾಗಲೇ ಹೇಳಿದ್ದರು. ಮಾತಾಜೀ ನೀವು ಎರಡು ಕಿಲೋಮೀಟರ್ ನಡೆದರು ಸಾಕು. ನಾವು ವ್ಯವಸ್ಥೆ ಮಾಡುತ್ತೇವೆ ಎಂದು. ಆಗ ನಾನು ಚೌಕ ಮಾಡಲು ಬಾವಿಯ ವ್ಯವಸ್ಥೆ ಹೇಗೆ ಮಾಡುತ್ತೀರಾ ಎಂದೆ. ಅದಕ್ಕೆ ಅವರು ನೀವು ನಿಲ್ಲುವ ಜಾಗದಲ್ಲೇ ಬಾವಿಯನ್ನು ತೋಡುತ್ತೇವೆ ಎಂದಾಗ ಎಲ್ಲರು ನಕ್ಕರು. ಮಾರ್ಗದಲ್ಲಿ ಅವರು ಮಾಡುತ್ತಿದ್ದ ವ್ಯವಸ್ಥೆಗಳನ್ನು ನೋಡಿ ಸಂತೋಷವಾಗುತ್ತಿದ್ದರು. ದೇಹ ದುರ್ಬಲವಾಗಿ ಸಹಕರಿಸುತ್ತಿರಲಿಲ್ಲ. ಪ್ರತಿದಿನ ಆರ್ಯಿಕೆ ಚಂದನಮತಿ ಕ್ಷುಲ್ಲಕ ಮೋತಿಸಾಗರರೇ ಉಪದೇಶ ಕೊಡುತ್ತಿದ್ದರು. ನಾನು ಯಾವಾಗಾದರೂ ಕೂಡುತ್ತಿದ್ದೆ.

ನನ್ನ ಶರೀರದ ಸ್ಥಿತಿ ನೋಡಿದಾಗ ನನಗೆ ಅನ್ನಿಸುತ್ತಿತ್ತು ಯಾತ್ರೆಯಲ್ಲಿ ಸಮಯ ಬಂದಾಗ 30-32 ಮೈಲಿ ನಡೆಯುತ್ತಿದ್ದವಳಿಗೆ ಈಗ 3-4 ಮೈಲಿ ನಡೆಯುವುದೇ ದುಸ್ತರವಾಗಿದೆಯಲ್ಲ. ನಿಜವಾಗಿಯೂ ಅನಾರೋಗ್ಯ, ವಯಸ್ಸು, ಮತ್ತು ಕಾಲ ಮತ್ತು ಪ್ರಾಂತ್ಯಗಳಲ್ಲಿ ಬಹಳ ಅಂತರವಿದೆ. ಚತುರ್ಥಕಾಲದಲ್ಲಿ ಉತ್ತಮ ಸಂಹನನವಿದ್ದುದ್ದರಿಂದ ಮತ್ತು ದ್ರವ್ಯ ಕ್ಷೇತ್ರ ಕಾಲ ಭಾವದ ಅನುಕೂಲತೆಯಿಂದ ಪರಿಷಹಗಳು, ಉಪಸರ್ಗಗಳು ಸಹನೆ ಶೀಲತೆಗೆ ಬರುತ್ತದೆ. ಇಂದು ವಿಷಮತೆ ಆಗಿರುವುದರಿಂದ ಮುಕ್ತಿಮಾರ್ಗ ಬಹಳ ಕಠಿಣವಾಗಿದೆ. ಅಸ್ತು ಭಗವಂತನೇ ನನ್ನ 38 ವರ್ಷಗಳ ಜೀವನದಲ್ಲಿ ಸಂಯಮ ಜೀವನದಲ್ಲಿ ರೋಗಾದಿಗಳು ಸಂಕಟ ಬಂದಾಗಲು ನನ್ನ ದೃಢತೆ ಕಡಿಮೆ ಆಗಿಲ್ಲ ಮುಂದೆಯು ಹೀಗೆ ಇರಲಿ. ಕೊನೆಯಲ್ಲಿ ಸಲ್ಲೇಖನ ಮರಣ ದೊರೆಯಲಿ. ಸಂಯಮದಿಂದ ಶರೀರವನ್ನು ತ್ಯಾಗಮಾಡಿ ಜೀವನ ಪೂರ್ತಿ ಭಾವಿತ ಭಾವನೆಯಂತೆ ಪುನಃ ಮೂರನೆ ಭವದಲ್ಲಿ ಪೂರ್ಣ ಸಂಯಮವನ್ನು ಪಡೆದು ಆತ್ಮ ಸಿದ್ಧಿಯನ್ನು ಮಾಡಿಕೊಳ್ಳಬೇಕೆಂಬ ನನ್ನ ಭಾವನೆ ನನ್ನ ಮನದಲ್ಲಿ ಯಾವಾಗಲು ಇದೆ. ಸರಧನದಲ್ಲಿ ಅಸ್ವಸ್ಥಳಾದಾಗ ಇಲ್ಲಿ ಕೆಲವು ದಿನ ಇದ್ದು ಸುಧಾರಿಸಿಕೊಳ್ಳೋಣ ಎನ್ನಿಸಿದರು. ಹಸ್ತಿನಾಪುರದ ಮಹಾಮಹೋತ್ಸವದ ಕರೆ ನನ್ನನ್ನು ಅಲ್ಲಿಗೆ ಸೆಳೆಯುತ್ತಿತ್ತು. ಆದರೆಬಡೌತದ ಜನರ ಭಕ್ತಿ ನನ್ನನ್ನು ನಿರುಪಾಯಳನ್ನಾಗಿ ಮಾಡಿತ್ತು. ಅವರಂತು ಮಾತಾಜೀ ಶಾಸ್ತ್ರಗಳಲ್ಲಿ ಅಸ್ವಸ್ಥತೆ ಇದ್ದಾಗ ಡೋಲಿಯಲ್ಲಿ ಪ್ರಯಾಣ ಮಾಡಲು ಅನುಮತಿ ಇರುವುದರಿಂದ ತಾವು ದಯಮಾಡಿ ಬರಬೇಕೆಂದು ವಿನಂತಿಸತೊಡಗಿದರು.

ನನಗೂ ಸಂಘದಲ್ಲಿ "ಡೋಲಿ" ವಿಹಾರದಲ್ಲಿ ಮಾಡಿದ ಹಲವಾರು ಪ್ರಸಂಗಗಳು ಕಣ್ಣಮುಂದೆ ಬರತೊಡಗಿತು. ಗಿರಿನಾರ ಯಾತ್ರೆಯಲ್ಲಿ ಆರ್ಯಿಕೆ ಸುಮತೀಮತೀ ಮಾತಾಜೀ, ಪಾರ್ಶ್ವಮತೀ ಮಾತಾಜೀ

ಡೋಲಿಯಲ್ಲಿ ವಿಹರಿಸಿದರು. 1968 ರಲ್ಲಿ ಶ್ರೀ ಮಹಾವೀರಜೀ ಹೋಗುವಾಗ ಸುಬುದ್ಧಿಸಾಗರರ ಕಾಲು ಊದಿದ್ದರಿಂದ ಡೋಲಿಯಲ್ಲಿ ಪ್ರಯಾಣ ಮಾಡಬೇಕಯಿತು. 1976 ರಲ್ಲಿ ಕಲ್ಪಶ್ರೀ ಶ್ರುತಸಾಗರರು ಸೊಂಟ ನೋವಿನಿಂದ ಡೋಲಿಯಲ್ಲಿಯೇ ಬಂದಿದ್ದರು. ಈ ಎಲ್ಲ ಪ್ರಸಂಗವನ್ನು ನೆನಪಿಸಿಕೊಂಡು ನಾನು ಡೋಲಿಯಲ್ಲಿ ಬರಲು ಸಮ್ಮತಿಸಿದೆ.

ಬಡೌತದ ಕಡೆ ಪ್ರಯಾಣ

ನವೆಂಬರ 22 ರಂದು ಸರಧನದಿಂದ ವಿಹಾರ ಹೊರಟು ಒಂದು ಸ್ಕೂಲಿನಲ್ಲಿ ತಂಗಿದ್ದೆವು. ಅಲ್ಲಿಂದ ಒಂದು ಕಿಲೋಮೀಟರ ದೂರದಲ್ಲಿ "ಢಾರ" ಎಂಬ ಊರಿದೆ ಅಲ್ಲಿಂದ ಶ್ರಾವಕ ಶ್ರಾವಕರು ಚಿಕ್ಕ ಮಕ್ಕಳಾದಿಯಾಗಿ ದರ್ಶನಕ್ಕಾಗಿ ಬಂದವರು ತಮ್ಮಲ್ಲಿಗೆ ಬರುವಂತೆ ಅತ್ಯಂತ ವಿನಯದಿಂದ ಪ್ರಾರ್ಥಿಸತೊಡಗಿದರು. ಆದರೆ ನಾನು ಹೋಗಿ ಬರುವುದು ಕಷ್ಟವೆಂದು ಅನುಮತಿ ಕೊಡಲಿಲ್ಲ. ರಾತ್ರಿ ವೈಯಾವೃತ್ತಿ ಮಾಡಿ ಹೋದವರು. ಮಾರನೆಯ ಬೆಳಗ್ಗೆ ಎಲ್ಲರು ಪುನಃ ದರ್ಶನಕ್ಕೆ ಬಂದಿದ್ದು ಕಂಡು ನನ್ನ ಅಂತಃಕರಣ ಕರಗಿತು. ಇಂತಹ ಚಿಕ್ಕ - ಚಿಕ್ಕ ಹಳ್ಳಿಗಳಲ್ಲಿ ಗುರುಗಳ ಆಗಮನಕ್ಕಾಗಿ ಕಾತರಿಸುತ್ತಿದ್ದರೆ ಇಂತಹ ಜನರನ್ನು ಸಂಘದಲ್ಲಿಇಟ್ಟುಕೊಳ್ಳುವ ಅವಕಾಶ ಸಿಗುವುದು ಕಡಿಮೆ. ಆ ಜನರಿಗೆ ಮೋತಿ ಸಾಗರ ಮತ್ತು ಚಂದನಮತಿಯರು ಉಪದೇಶ ಕೊಟ್ಟರು.

ಇಲ್ಲಿಂದ "ಹರ್ಸಾ" ಮೂಲಕ ಬರನಾವ ತಲುಪಿದೆವು. ಇಲ್ಲಿ ಚೆನ್ನಾಗಿ ಮಳೆ ಆಯಿತು. ಮಳೆ ನಿಂತ ಮೇಲೆ ಬಿನೋಲಿಯ ಕಡೆ ವಿಹಾರ ಮಾಡಿದೆವು. ಅಲ್ಲಿ ಜ್ಞಾನಸಾಗರ ಮಹಾರಾಜರು ಸಿಕ್ಕಿದರು. ಮಾರನೆಯ ದಿನ ಆಹಾರವಾದ ಮೇಲೆ ಅಂಗದ ಪುರದ ಮಂದಿರದಲ್ಲಿ ವಿಶ್ರಾಂತಿಯನ್ನು ಪಡೆದೆವು. ಇಲ್ಲಿಯ ಜನರ ದಯನೀಯ ಸ್ಥಿತಿ ನೋಡಿ ಆಶ್ಚರ್ಯದ ಜೊತೆಗೆ ದುಃಖವು ಆಯಿತು.

ಬಡೌತ ನಗರಕ್ಕೆ ಪ್ರವೇಶ

ಅಂಗದ ಪುರದಿಂದ ನವಂಬರ 26 ರ ಮಧ್ಯಾಹ್ನ 3 ಗಂಟೆಗೆ ಬಡೌತದ ಅತಿಥಿ ಭವನವನ್ನು ತಲುಪಿದೆವು. ಅಲ್ಲಿದ್ದ ಗಣಧರಾಚಾರ್ಯ, ಶ್ರೀ ಕುಂಥುಸಾಗರಜೀ ಮಹಾರಾಜರ ಚಾತುರ್ಮಾಸ ನಡೆದಿತ್ತು. ಅತಿಥಿಭವನದ ಪ್ರಾಂಗಣದಲ್ಲಿ ಸಭೆ ನೆರೆದಿತ್ತು. ಆಚಾರ್ಯ ಮಹಾರಾಜರು ಮಾತನಾಡುತ್ತಾ ಒಂದು ವೇಳೆ ಮಾತಾಜೀಯವರು ಬರದಿದ್ದರೆ ಕರೆತರಲು ನಾನೇ ಹೊರಡುತ್ತಿದ್ದೆ ಎಂದರು. ಹೀಗೆ ಎರಡು ಸಂಘಗಳು ಸಮಾಗಮ ಸೌಹಾರ್ದಯುತವಾಗಿತ್ತು.

ನಾವು ಗೆಸ್ಟಹೌಸನಲ್ಲಿ ತಂಗಿದ್ದೆವು. ನವೆಂಬರ 27ರಂದು ತ್ರಿಲೋಕ ಆರಾಧನೆಗಾಗಿ ಧ್ವಜಾರೋಹಣ ನಡೆಯಿತು. ದಿಗಂಬರ ಜೈನ ಕಾಲೇಜು ಎ ಫೀಲ್ಡನಲ್ಲಿ ವಿಶಾಲವಾದ ಸಭಾಂಗಣದಲ್ಲಿ ಮೂರು ಲೋಕದ ಆಕಾರದ ಮಂಡಲ ವಿಧಾನವನ್ನು ರಚಿಸಲಾಗಿತ್ತು. 28 ರಿಂದ ಆರಾಧನೆ ಪ್ರಾರಂಭವಾಯಿತು. ನನಗೆ ಮೊದಲೆರಡು ದಿನ ಆಯಾಸದಿಂದ ಬಳಲಿಕೆ ಇತ್ತು. ನಂತರ ಸರಿಹೋಯಿತು. ನಾನು ಬೆಳಗ್ಗೆ 7 ಗಂಟೆಗೆ ಪೆಂಡಾಲಿನಲ್ಲಿ ಕಾರ್ಯಕ್ರಮ ನಡೆಯುವ ಜಾಗಕ್ಕೆ ಹೋಗುತ್ತಿದ್ದೆ 10-15 ನಿಮಿಷ ಪ್ರವಚನ ಕೊಡುತ್ತಿದ್ದೆ. ಎಲ್ಲರು ಆರ್ಯಿಕೆ ಚಂದನಮತಿಯಿಂದ ಪೂಜೆಯ ವಿಧಾನಗಳನ್ನು ಕೇಳಬಯಸುತ್ತಿದ್ದರು. ಏಕೆಂದರೆ ಮೊದಲು ಅವರಿಂದ ಇಂದ್ರ ಧ್ವಜ ಆರಾಧನೆ ವಿಧಾನ, ಕಲ್ಪದ್ರುಮ ಆರಾಧನೆಯ ವಿಧಿಯ ವಾಚನವನ್ನು ಕೇಳಿದ್ದರು. ಆದ್ದರಿಂದಲೇ ಪ್ರತಿದಿನ

ಅವರಿಂದಲೇ ಪೂಜೆ ವಿಧಾನ ಕೇಳಲು ಬಯಸುತ್ತಿದ್ದರು. ಜನರ ವಿನಂತಿಯಿಂದಾಗಿ ಚಂದನಮತಿ ದಿನವೂ ಒಂದು ಗಂಟೆ ಓದುತ್ತಿದ್ದರು.

ಅಷ್ಟ ಸಹಸ್ರೀ ಗ್ರಂಥದ ಸ್ವಾಧ್ಯಾಯ

ನವಂಬರ 30ರಂದು ಇಡೀ ಸಾಧುಗಳೇ ನಾವು ತಂಗಿದ್ದ ಕಡೆ ಬಂದರು. ಇಲ್ಲಿಯೇ ಸಭೆ ನಡೆಯಿತು. ಉಪಾಧ್ಯಾಯಜೀಯವರು ಪ್ರಶ್ನೋತ್ತರ ಪ್ರಾರಂಭಿಸಿದರು. ಚರ್ಚೆಯ ಮುಖ್ಯ ವಿಷಯ ಮಾತಾಜೀ ಇಲ್ಲಿಯೇ ನಿಲ್ಲಬೇಕು. ಏಕೆಂದರೆ ಇವರಿಂದ ನಾನು ಸ್ವಾಧ್ಯಾಯ ಅಧ್ಯಯನ ಮಾಡಬೇಕಾಗಿದೆ. ಆಚಾರ್ಯ ಸಂಘದ ವಿಹಾರವನ್ನು ಮುಂದೂಡಿ ಇದಕ್ಕಾಗಿ ಕಾಯುತ್ತಿದ್ದರು. ಕೊನೆಗೆ ಅಷ್ಟ ಸಹಸ್ರೀ ಗ್ರಂಥವನ್ನು ಆರಿಸಿಕೊಳ್ಳಲಾಯಿತು. ನನಗೆ ಮೊಳಕಾಲು ನೋವಿದ್ದರಿಂದ ಮೆಟ್ಟಲು ಹತ್ತುವುದು ಕಷ್ಟವಾಗುತ್ತದೆ ಎಂದು ಎಲ್ಲರಾ ನಾವಿರುವ ಕಡೆಯೇ ಬರಲು ಒಪ್ಪಿದರು.

ಡಿಸೆಂಬರ 1ರಂದು ಆಚಾರ್ಯ ಸಹಿತ ಎಲ್ಲ ಮುನಿಗಣ ಮತ್ತು ಆರ್ಯಿಕೆಯರೆಲ್ಲರು ಅತಿಥಿ ಭವನದಲ್ಲಿ ಸೇರಿದರು. ಸಂಘದ ಚೈತ್ಯಾಲಯದಲ್ಲಿ ಜೀನೆಂದ್ರ ಭಗವಂತರಿಗೆ ಅಭಿಷೇಕ ಪೂಜೆ ಆದ ಮೇಲೆ ಅಷ್ಟ ಸಹಸ್ರೀ ಗ್ರಂಥದ ಸ್ವಾಧ್ಯಾಯ ಪ್ರಾರಂಭವಾಯಿತು. ಉಪಾಧ್ಯಾಯಜೀಯವರಿಗಂತೂ ಬಹಳ ಆನಂದವಾಗಿತ್ತು. ಮಧ್ಯೆ -ಮಧ್ಯೆ ಚರ್ಚೆ ಅನುಮಾನ, ಸಮಾಧಾನಗಳು ನಡೆಯುತ್ತಿತ್ತು. ಮಧ್ಯಾಹ್ನದಲ್ಲೂ 3 ರಿಂದ 4.30 ವರೆಗೂ ಸ್ವಾಧ್ಯಾಯ ನಡೆಯುತ್ತಿತ್ತು.

ಡಿಸಂಬರ 5 ರಂದು ವಿಪರೀತ ತಲೆಯ ನೋವು ಉಂಟಾಗಿದ್ದರಿಂದ ಡಿಸಂಬರ 6 ರಿಂದ ಮಧ್ಯಾಹ್ನದ ಸ್ವಾಧ್ಯಾಯ ನಿಂತಿತು. ಡಿಸಂಬರ 9 ರಲ್ಲಿ ಆರೋಗ್ಯ ಮತ್ತಷ್ಟು ವಿಷಮಿಸಿದ್ದರಿಂದ ಬೆಳಗ್ಗೆಯ ಸ್ವಾಧ್ಯಾಯವನ್ನು ನಿಲ್ಲಿಸಬೇಕಾಯಿತು. 11, 12 ನೇಯ ತಾರೀಖು ರಾತ್ರಿ ಹೊಟ್ಟೆಯ ನೋವು ಜಾಸ್ತಿಯಾಗಿ ಅತಿಸಾರ ಪ್ರಾರಂಭವಾಯಿತು. ಚಂದನಮತಿ, ಮೋತಿಸಾಗರರಿಗೆ ಬಹಳ ಚಿಂತೆ ಆಗತೊಡಗಿತು. ರವೀಂದ್ರ ಹಸ್ತಿನಾಪುರದಿಂದ ಬಂದನು. ಮೇರಠನಿಂದ ಹಕೀಮರನ್ನು ಕರೆಸಲಾಯಿತು.

ಆಚಾರ್ಯ ಸುಮತಿಸಾಗರರ ಸಂಘದ ಆಗಮನ

ಡಿಸೆಂಬರ 12 ರಂದು ಸುಮತಿಸಾಗರ ಮಹಾರಾಜರ ಸಂಘ ಬಡೌತ ನಗರಕ್ಕೆ ಆಗಮಿಸಿತು. 13ರಂದು ಆರಾಧನೆ ಪೂರ್ಣಗೊಂಡು ಬೆಳಗ್ಗೆ ಹವನವಾಯಿತು. ಮಧ್ಯಾಹ್ನ ರಥಯಾತ್ರೆಗೆ ಉಪಸ್ಥಿತವಿದ್ದ ಮೂರು ಸಂಘಗಳು ಒಟ್ಟಿಗೆ ನಡೆಯುತ್ತಿದ್ದುದು ನೋಡಲು ಆನಂದವಾಯಿತು. ಆದರೆ ನನಗೆ ಇನ್ನು ಆಯಾಸವಿತ್ತು. ಆರಾಧನೆ ಮುಕ್ತಾಯವಾದ ಮೇಲೆ ಮೂರು ಬಸ್ಸುಗಳಲ್ಲಿ ಜನರು ಹಸ್ತಿನಾಪುರದ ಯಾತ್ರೆಗೆ ಹೊರಟರು. ಇಲ್ಲಿಯ ಪರಂಪರೆ ಆರಾಧನೆಯ ನಂತರ ತೀರ್ಥಯಾತ್ರೆ.

ಶಿಕ್ಷಣ ಶಿಬಿರ

ಜನರ ಆಗ್ರಹದಿಂದ ಡಿಸಂಬರ 17 ರಿಂದ 7-8 ದಿನಗಳ ಶಿಬಿರವನ್ನು ಆಯೋಜಿಸಲಾಯಿತು. ಬೆಳಗಿನ ತರಗತಿಗಳನ್ನು ಚಂದನಮತಿಯು ರಾತ್ರಿಯ ತರಗತಿಯನ್ನು ಮೋತಿಚಂದರು ತೆಗೆದುಕೊಳ್ಳುತ್ತಿದ್ದರು. ನಾನು 10-15 ನಿಮಿಷ ಮಾತ್ರ ಮಾತನಾಡುತ್ತಿದ್ದೆ. ಚಳಿ, ಮಳೆಯಿಂದಾಗಿ ಶಿಬಿರದಿಂದ ವಿಶೇಷ ಆನಂದ ಉಂಟಾಗಲಿಲ್ಲ.

ಸ್ವಾಧ್ಯಾಯ ನಿಲ್ಲಿಸಿದ ಮೇಲೂ ತಲೆನೋವು ಮಾತ್ರ ಕಡಿಮೆಯಾಗಲಿಲ್ಲ. ಆಗ ನಾನು ನೆನಪಿಸಿ ಕೊಳ್ಳತೊಡಗಿದೆ. 1969-70-71 ರಲ್ಲಿ ದಿನಕ್ಕೆ 5 ರಿಂದ 6 ಗಂಟೆ ರಾಜವಾರ್ತಿಕ ಮೊದಲಾದವುಗಳ ಅಧ್ಯಯನ ಜೊತೆಗೆ ಬೆಳಗ್ಗೆಯಿಂದ ರಾತ್ರಿಯವರೆಗೆ ವಿಶ್ರಾಂತಿ ಇಲ್ಲದೆ, ಅಧ್ಯಯನವಲ್ಲದೆ ಅನುವಾದದ ಕಾರ್ಯವು ನಡೆಯುತ್ತಿತ್ತು. ನಿದ್ರೆ 4-5 ಗಂಟೆಗಿಂತ ಜಾಸ್ತಿ ನಿದ್ರೆ ಮಾಡುತ್ತಿರಲಿಲ್ಲ. ಆಗಲು ಉಂಟಾಗದ ತಲೆನೋವು ಈಗ ಬರತೊಡಗಿತು. ನನ್ನ ಆರೋಗ್ಯದ ವಿಷಯವನ್ನು ಗಾಬರಿ ಉಂಟು ಮಾಡಿಸುತ್ತಿತ್ತು. ರವೀಂದ್ರಕುಮಾರನಂತು ಮಾತಾಜೀ ಈಗ 4, 5 ವರ್ಷದಿಂದ ತಾವು ಅರ್ಧ ಗಂಟೆಗೆ ಹೆಚ್ಚು ಓದುತ್ತಿರಲಿಲ್ಲ. ಈಗ ಒಟ್ಟಿಗೆ ನೀವು ಎರಡೆರಡು ಗಂಟೆಗಳ ಅಭ್ಯಾಸ ಮಾಡಿದ್ದೀರ ಇದರಿಂದಾಗಿಯೇ ತಲೆನೋವು ಎಂದು ಅಪಾದಿಸ ತೊಡಗಿದ.

ಶೀತದಿಂದಾಗಿ ವಿಹಾರ ಬಂದ್

ಮೋದಿನಗರದಿಂದ ಸುಶೀಲಕುಮಾರ, ಸೂರಜಭಾನ್ ಮೊದಲಾದವರು ಬಂದು ಪ್ರಾರ್ಥನೆ ಮಾಡಿ ಇಂದ್ರಧ್ವಜ ಆರಾಧನೆಗೆ ತಾನು ಭಾಗವಹಿಸಲೇ ಬೇಕೆಂದು ಆಗ್ರಹಮಾಡಿ ಒಪ್ಪಿಗೆ ಪಡೆದು ಹೋಗಿದ್ದರು. ಆರಾಧನೆ 1990 ರ ಜನವರಿ 18 ರಂದು ನಿಶ್ಚಯವಾಗಿತ್ತು. ಅದಕ್ಕಾಗಿ ಡಿಸೆಂಬರ್ 27 ರಂದು ಇಲ್ಲಿಂದ ವಿಹಾರ ಮಾಡಬೇಕಾಗಿತ್ತು. ಡಿಸಂಬರ್ 23 ರಂದು ಭಾರಿ ಮಳೆ. ಚಳಿ ಇದ್ದುದ್ದರಿಂದ 24 ರ ಬೆಳಗ್ಗೆ ನರೇಶಚಂದ್ ಮುಂತಾದವರು ಬಂದು ವಿಹಾರವನ್ನು ಸ್ಥಗಿತ ಮಾಡಲೇ ಬೇಕೆಂದು ಸತ್ಯಾಗ್ರಹ ಮಾಡುತ್ತಾ ಕುಳಿತರು. ಇದರಿಂದ ವಿಹಾರ ಸ್ಥಗಿತಗೊಂಡು ಜನವರಿ 2 ರವರೆಗೆ ಅಲ್ಲೇ ಉಳಿದೆ. ಯುವ ಕ್ರಾಂತಿದಳದವರು ಉತ್ಸಾಹದಿಂದ ಕೌಶಲ ಭವನದಲ್ಲಿ ಜಿನಗುಣ ಸಂಪತ್ತಿಯ ಆರಾಧನೆ ಮಾಡಿದರು.

ಬಡೌತದಿಂದ ವಿಹಾರ

1990 ರ ಜನವರಿ 5 ರಂದು ನಾವೆಲ್ಲ ಬಡೌತದಿಂದ ಹೊರಟು 6 ರಂದು 'ಪೋಯಸು' ಹಳ್ಳಿಯಲ್ಲಿ ತಂಗಿದ್ದೆವು. ಅಲ್ಲಿಗೆ ರವೀಂದ್ರಕುಮಾರ, ಅನುಪಮ ಜೈನ ಹಾಗೂ ಇಬ್ಬರು ಜಪಾನಿನ ಅತಿಥಿಗಳೊಂದಿಗೆ ಅಲ್ಲಿಗೆ ಬಂದಿದ್ದರು. ಜಪಾನಿನ ಚೋಬು ವಿಶ್ವವಿದ್ಯಾಲಯದ ಗಣಿತದ ಪ್ರಾಧ್ಯಾಪಕ ಪ್ರೋ. ಯೋಶೇ ಮಾಶಾ ಮಿಚಿವಾಕಿ ಹಾಗೂ ಅವರ ಮಗಳು ಕು. ಮುತ್ಸಕೋ ಮಿಚಿವಾಕಿ ಇವರು 1985 ರ ಅಂತರರಾಷ್ಟ್ರೀಯ ಸೆಮಿನಾರ್‌ಗೆ ಜಂಬೂದ್ವೀಪಕ್ಕೆ ಬಂದಿದ್ದರು.

ಆಮಿನಗರ ಸರಾಯಕ್ಕೆ ಪ್ರವೇಶ

ಜನವರಿ 12 ರಂದು ಉಪವಾಸ ಮಾಡಿ ಕೇಶಲೋಚ ಮಾಡಿಕೊಳ್ಳಬೇಕೆಂದು ನಿರ್ಧಿಯಿಸಿದ್ದೆ. ಕನ್ಯಾಪಾಠಶಾಲೆಯಲ್ಲಿ ಕಾರ್ಯಕ್ರಮ ಆಯೋಜಿಸಿದ್ದರು. 13 ರಂದು ಶಾಂತಿ ವಿಧಾನದ ಆರಾಧನೆ ಆಯಿತು. ಜನರಿಗೆ ಬಹಳ ಆನಂದವಾಯಿತು. ಜನರೆಲ್ಲ ಮಾತಾಜೀ ತಾವು ಒಂದು ತಿಂಗಳಾದರೂ ಇರಬೇಕೆಂದು ಒತ್ತಾಯ ಪಡಿಸತೊಡಗಿದರು. ಆದರೆ ಮೋದಿನಗರಕ್ಕೆ ಹೋಗಲೇಬೇಕಾದ್ದರಿಂದ ಎಲ್ಲೂ ನಿಲ್ಲುವಂತಿರಲಿಲ್ಲ.

ದೆಹಲಿಗೋಸ್ಕರ ಆಗ್ರಹ

ದೆಹಲಿಯ ಭಕ್ತ ಜನರು ಮುಂದಿನ ವಿಹಾರ ದೆಹಲಿಗೆ ಬರಬೇಕೆಂದು ಅತೀವ ಆಗ್ರಹ ಮಾಡಿದರು. ಆದರೆ ನಾನು ಒಪ್ಪಿಕೊಳ್ಳಲಿಲ್ಲ.

ಆಮಿನಗರ ಸರಾಯದಲ್ಲಿ ಧರ್ಮಲಾಭ

ಆಮಿನಗರದಲ್ಲಿ 25 ರಂದು ಉಪದೇಶ ಮಾಡಿ ಮಹಿಳೆಯರಿಗೆ ಪುರುಷರಿಗೆ ಅಣುವ್ರತ, ಸ್ವಾಧ್ಯಾಯ ಮೊದಲಾದ ನಿಯಮಗಳನ್ನು ಮಾಡಿಸಿದೆ. ನಂತರ ಬಾಲೇನಿ ಎಂಬ ಹಳ್ಳಿಯಲ್ಲಿ ಬಂದು ಒಳ್ಳೆಯ ಪರಿವಾರದಲ್ಲಿ ತಂಗಬೇಕಾಯಿತು. ಇವರೆಲ್ಲರಿಗೂ ದೇವ ದರ್ಶನದ ಸೌಲಭ್ಯವಿರಲಿಲ್ಲ. ಅದಕ್ಕಾಗಿ ಗೃಹ ಚೈತ್ಯಾಲಯದ ವ್ಯವಸ್ಥೆ ಮಾಡಿರಿ ಎಂದು ಪ್ರೇರಣೆ ಕೊಟ್ಟರೆ ಅವರು ಒಪ್ಪಿಕೊಳ್ಳದೆ ಇದ್ದುದ್ದು ನನಗೆ ಆಶ್ಚರ್ಯವಾಯಿತು.

ಗೃಹ ಚೈತ್ಯಾಲಯ

ದಕ್ಷಿಣದಲ್ಲಿ ಇಂದು ಪ್ರತಿಯೊಂದು ಮನೆಯಲ್ಲಿಯು ಜಿನ - ಚೈತ್ಯಾಲಯಗಳು ಇವೆ. ಉತ್ತರ ಪ್ರಾಂತ್ಯದಲ್ಲಿ ಜಯಪುರ, ರಾಜಸ್ಥಾನದಲ್ಲಿಯು ಗೃಹಚೈತ್ಯಾಲಯಗಳಿವೆ. ಶಾಸ್ತ್ರಗಳಲ್ಲಿಯು ಗೃಹಚೈತ್ಯಾಲಯಗಳ ಪ್ರಮಾಣ ದೊರೆಯುತ್ತದೆ. ಮಥುರದಲ್ಲಿ ರಾಜ ಶತ್ರುಘ್ನನಿಗೆ ಸುರಮನ್ಯು ಮಹಾಮುನಿಗಳು ಉಪದೇಶ ಕೊಡುತ್ತಾ ಹೇಳುತ್ತಾರೆ.

ಸ್ಥಾಪ್ಯಂತಾಂ ಜಿನಬಿಂಬಾನಿ ಪೂಜಿತಾನಿ ಗೃಹೇ ಗೃಹೇ ।
ಅಭಿಷೇಕಾಃ ಪ್ರವರ್ತ್ಯಂತಾಂ ವಿಧಿನಾ ಪಾಲ್ಯಂತಾಂ ಪ್ರಜಾಃ[೧] ॥ 73 ॥

ಮನೆ ಮನೆಯಲ್ಲಿಯು ಜಿನ ಪ್ರತಿಮೆಗಳನ್ನು ಸ್ಥಾಪನೆ ಮಾಡಬೇಕು. ಪೂಜೆ, ಅಭಿಷೇಕಗಳು ನಡೆಯಬೇಕು. ವಿಧಿ ಪೂರ್ವಕವಾಗಿ ಪ್ರಜೆಗಳ ಪಾಲನೆ ಮಾಡಿರಿ. ರಾಜನ್ ಯಾವ ಮನೆಯಲ್ಲಿ ಅಂಗುಷ್ಠ ಪ್ರಮಾಣದ ಜಿನಪ್ರತಿಮೆ ಇದ್ದರು ಸಾಕು ಆ ಮನೆಗಳಿಗೆ ಮಾರಿ ಮುಂತಾದ ರೋಗಗಳು ಬರುವುದಿಲ್ಲ. ಸರ್ಪಕ್ಕೆ ಗರುಡ ಸಮಾನವಾಗಿ ರಕ್ಷಣೆ ಕೊಡುತ್ತದೆ.

ಹೈದರಾಬಾದಿನಲ್ಲಿ ಚಾತುರ್ಮಾಸ ಮಾಡುವಾಗ ನನ್ನ ಪ್ರೇರಣೆಯಿಂತೆ ಶ್ರೀ ನಂದಲಾಲ ಜೈನರು ತಮ್ಮ ಮನೆಯಲ್ಲಿಯ ಚೈತ್ಯಾಲಯವನ್ನು ಮಾಡಿಸಿದ್ದರು. ಅಲ್ಲಿಯ ಶ್ರಾವಕರಿಗೆ ಮನೆಯಿಂದ ದೇವಸ್ಥಾನವು ದೂರದಲ್ಲಿರುವುದರಿಂದ ಜಿನದರ್ಶನದಿಂದ ವಂಚಿತರಾಗಿದ್ದರು. ಒಂದು ಚೈತ್ಯಾಲಯ ಆಗುವುದರಿಂದ ಅನೇಕ ಪರಿವಾರದವರಿಗೆ ನಿತ್ಯ ದರ್ಶನ ಲಾಭವಾಗತೊಡಗಿತು. ಸನಾವದದಲ್ಲಿ ಚಾತುರ್ಮಾಸ ಮಾಡುವಾಗ ನನ್ನ ಪ್ರೇರಣೆಯಿಂದ ಋಷಭದಾಸ ಜೈನ, ಕಮಲಬಾಯಿ, ವಿಮಲಚಂದ ಜೈನ ಹಾಗೂ ಶ್ರೀ ಚಂದ್ ಜೈನರು ತಮ್ಮ ತಮ್ಮ ಮನೆಗಳಲ್ಲಿ ಜಿನಪ್ರತಿಮೆಗಳನ್ನು ಪ್ರತಿಷ್ಠಾಪಿಸಿ ಚೈತ್ಯಾಲಯಗಳನ್ನು ಮಾಡಿಸಿಕೊಂಡರು. ವಿಶೇಷವಾಗಿ ಅಭಿಷೆಕ ಪೂಜೆ ಮಾಡುವ ಉದ್ದೇಶದಿಂದಲೇ ಮಾಡಿಸಿಕೊಂಡರು ಮಂದಿರಗಳಲ್ಲಿ ಪಂಥಭೇದದಿಂದ ಪರಾಧೀನತೆ ಇರುತ್ತದೆ. ಇದೇ ರೀತಿ ದೆಹಲಿಯ ಕಮಲಚಂದ ಜೈನರು ತಂದೆಯವರಿಗೆ ಪ್ರತಿದಿನ ದೇವದರ್ಶನದ ಸಲುವಾಗಿ ಗೃಹಚೈತ್ಯಾಲಯ ಮಾಡಿಸಿದರು. ಹೀಗೆ ಹೋದ ಕಡೆ ಎಲ್ಲ ಮಂದಿರ ದೂರವಿದ್ದವರಿಗೆ ಮನೆಯಲ್ಲೇ ದೇವರ ದರ್ಶನದ ಅನುಕೂಲತೆ ಮಾಡಿಕೊಳ್ಳಲು ಪ್ರೇರೇಪಿಸುತ್ತಿದ್ದೆ.

---

೧. ಪದ್ಮಪುರಾಣ ಪರ್ವ ೯೨.

೯೮

ಮೋದಿ ನಗರಕ್ಕೆ ಪ್ರವೇಶ

ದೌಲಡೀ ನಿವಾಡೀ ಮಾರ್ಗವಾಗಿ 27 ರಂದು ಮೋದಿ ನಗರವನ್ನು ತಲುಪಿದೆವು. ನಾನು ಹಲವಾರು ಬಾರಿ ಇಲ್ಲಿಗೆ ಬಂದಿದ್ದರು. ಈ ಸಲ ಬಹಳ ಶ್ರದ್ಧೆಯಿಂದ ಜನರು 1½ ಮೈಲಿ ದೂರದಿಂದಲೇ ಮಂಗಳ ವಾದ್ಯಗಳೊಡನೆ ಸ್ವಾಗತಿಸಿ ಮೆರವಣಿಗೆಯಲ್ಲಿ ಕರೆದೊಯ್ದರು. ದಾರಿ ಉದ್ದಕ್ಕೂ ಕಾಲು ತೊಳೆದು ಆರತಿ ಮಾಡುತ್ತಿದ್ದರು. ಜನಗಳ ಈ ಭಾವನೆಗೆ ಪ್ರಮುಖ ಕಾರಣ ಸುಶೀಲಕುಮಾರ ಜೈನರು.

ಇಂದ್ರಧ್ವಜ ಆರಾಧನೆ

ಇಂದ್ರಧ್ವಜ ಆರಾಧನೆಯನ್ನು ರಚನೆ ಮಾಡಿ 14 ವರ್ಷಗಳಾಗಿತ್ತು. ಆದರೆ ನನ್ನ ಸಾನಿಧ್ಯದಲ್ಲಿಯೇ ಆಚರಣೆಯನ್ನು ಮಾಡಿಸಲು ಇಷ್ಟು ದೂರ ಬಂದಿರಲಿಲ್ಲ. ದೆಹಲಿ, ಹಸ್ತಿನಾಪುರದಲ್ಲಿ ಸಮಾರು 25 ಬಾರಿ ನನ್ನ ಸಾನಿಧ್ಯದಲ್ಲಿ ನಡೆದಿತ್ತು. ಈಗ ಮೋದಿನಗರದವರಿಗೆ ನನ್ನ ಸಾನಿಧ್ಯದಲ್ಲಿಯೇ ತಮ್ಮ ನಗರದಲ್ಲೇ ಮಾಡುವುದು ಭಾಗ್ಯವೆಂದು ತಿಳಿದಿದ್ದರು. 1990 ರ ಜನವರಿ 15 ರಂದು ರವೀಂದ್ರಕುಮಾರನು ಪಂ. ಪ್ರವೀಣ ಚಂದ್ ಶಾಸ್ತ್ರಿಗಳನ್ನು ಕರೆಸಿ ಧ್ವಜಾರೋಹಣ ಮಾಡಿಸಿದರು.

ಜನವರಿ 17ರಂದು ಪ್ರಾತಃ ಕಾಲ ಆರಾಧನೆ ಪ್ರಾರಂಭವಾಯಿತು. ಅನೇಕ ಜನಗಳು ಭಾಗವಹಿಸಿದ್ದರು. ಸುಶೀಲ ಕುಮಾರರು ಆರಾಧನೆಗೆ ಕುಳಿತಿದ್ದರು. ಆರಾಧನೆ ಸಂಗೀತದೊಡನೆ ಬಹಳ ಅದ್ಭುತವಾಗಿ ನಡೆಯಿತು. ರಸ್ತೆಗಳಲ್ಲಿ ತೋರಣ ಕಟ್ಟಿ ಸಿಂಗರಿಸಿದ್ದರು. ಜೈನ ಜೈನೇತರರಲ್ಲಿಯು ಧರ್ಮಮಯ ವಾತಾವರಣ ಉಂಟು ಮಾಡಿತ್ತು. ಬೆಳಗ್ಗೆ ನನ್ನ ಪ್ರವಚನ ರಾತ್ರಿ ವಿದ್ವಾಂಸರ ಕ್ಷುಲ್ಲಕ ಮೋತಿಸಾಗರರ ಪ್ರವಚನ ನಡೆಯುತ್ತಿತ್ತು.

ಆರ್ಯಿಕೆ ರತ್ನಮತಿ ಮಾತಾಜೀಯವರ ಪುಣ್ಯತಿಥಿ

ರತ್ನಮತೀ ಮಾತಾಜೀಯವರ 5ನೇಯ ಪುಣ್ಯತಿಥಿಯ ಸ್ಮರಣಾರ್ಥ ಸಭೆಯಲ್ಲಿ ವಿದ್ವಾಂಸರು ಅವರ ಗುಣಗಳನ್ನು ಸ್ಮರಿಸುತ್ತಾ ತಮ್ಮ - ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಪುನಃ ಕುಂದ ಕುಂದರ ದ್ವಿ ಸಹಸ್ರಾಬ್ಧಿಯ ಉಪಲಕ್ಷದಲ್ಲಿ ಗೋಷ್ಠಿಯ ಆಯೋಜನೆ ಆಗಿತ್ತು. ದೆಹಲಿಯಿಂದ ಟೀಕಮಚಂದ ಪ್ರೊ. ಶ್ರೇಯಾಂಸಕುಮಾರ ಹಾಗೂ ರವೀಂದ್ರಕುಮಾರ ಆಚಾರ್ಯರ ಕೃತಿಗಳು ಮತ್ತು ಸಮಯಸಾರದ ಗ್ರಂಥಗಳ ಮೇಲೆ ಪ್ರಕಾಶ ಬೀರಿದರು. ನಾನು ಉಪದೇಶದಲ್ಲಿ ವ್ರತಗಳ ಬಗ್ಗೆ ಹೇಳಿದ್ದರಿಂದ ಪ್ರಭಾವಿತರಾದ ಮಹಿಳೆಯರು ರೋಹಿಣೆ ವ್ರತ, ಣಮೋಕಾರ ವ್ರತಗಳನ್ನು ಗ್ರಹಣೆ ಮಾಡಿದರು.

ಕನ್ಯಾ ಇಂಟರ್ ಕಾಲೇಜಿನಲ್ಲಿ ಉಪದೇಶ

ಕಾಲೇಜಿನಲ್ಲಿ ಉಪದೇಶ ಕಾರ್ಯಕ್ರಮ ಆಯೋಜಿಸಲಾಗಿತ್ತು. ಅಲ್ಲಿ ಚಂದನಮತಿ, ಮೋತಿಸಾಗರರಿಂದ ಪ್ರವಚನ ಆದ ಮೇಲೆ ನಾನು ಆಶೀರ್ವಚನ ಮಾಡಿದೆ. ಇದರಿಂದ ವಿದ್ಯಾರ್ಥಿನಿಯರು ಅಧ್ಯಾಪಕರು ಬಹಳ ಪ್ರಭಾವಿತರಾದರು. ಅಲ್ಲಿಂದ ಬರುವಾಗ ಜನಗಳ ಆದರ, ಶ್ರದ್ಧೆಯಿಂದ ಬಿಡುಗಡೆಯಾಗಿ ಬರುವಲ್ಲಿ ನಾನು ಬಹಳ ಆಯಾಸಗೊಂಡಿದ್ದೆ.

ಮಹಾ ಮಹೋತ್ಸವದ ಮೀಟಿಂಗ್

ಜನವರಿ 26 ರಂದು ಜಂಬೂದ್ವೀಪ ಮಹೋತ್ಸವದ ಮೀಟಿಂಗ್ ಇತ್ತು. ಬಡೌತ, ಮೇರಠ ಅಮಿನಗರಸರಾಯ, ಮೋದಿನಗರದಿಂದ ಶ್ರಾವಕರು ಬಂದಿದ್ದರು. ಉತ್ಸಾಹಿತರಾಗಿ ಎಲ್ಲರೂ ತಮ್ಮ ತಮ್ಮ ಕೆಲಸವನ್ನು ವಹಿಸಿಕೊಂಡರು. ದೆಹಲಿಯವರು ತಮ್ಮಲ್ಲಿಗೆ ಬರುವಂತೆ ಆದರದಿಂದ ಪ್ರಾರ್ಥಿಸಿದರು. ನನ್ನ ಆರೋಗ್ಯ ಪ್ರಯಾಣಕ್ಕೆ ಸ್ಪಂದಿಸಲಾರದಾಗಿತ್ತು. ಇದರಿಂದ ನಿರಾಕರಿಸಲೇಬೇಕಾಯಿತು.

27ರಂದು ಪೂರ್ಣಾಹುತಿಯಿಂದ ಹವನವಾಯಿತು. ಮಳೆ ಬರುವ ವಾತಾವರಣ ಇದ್ದರೂ ಮಳೆಬರದೆ ಕಾರ್ಯ ಚೆನ್ನಾಗಿ ನಡೆಯಿತು. ನಂತರ ರಥಯಾತ್ರೆ ನಡೆದು ಆರಾಧನೆ ಸಮಾಪ್ತವಾಯಿತು. ಇಂದ್ರಧ್ವಜ ಆರಾಧನೆಗೆ ತನ್ನದೇ ಆದ ವಿಲಕ್ಷಣವಾದ ವಿಶೇಷತೆ ಇದೆ. ಆರಾಧನೆಯಲ್ಲಿ ಭಾಗವಹಿಸಿದ ಹಲವರು ನನ್ನಲ್ಲಿ ಬಂದು ಮಾತಾಜೀ ನನಗಂತೂ ಈ ಆರಾಧನೆಯಿಂದ ಬಯಸಿದ್ದಕ್ಕಿಂತ ಹೆಚ್ಚಿನ ಫಲ ದೊರಕಿದೆ ಎಂದು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಮೇರಠನ ಪ್ರೇಮಚಂದ ಜೈನರಂತು ಯಾವಾಗಲೂ ಇದರ ಬಗ್ಗೆ ಹೇಳುತ್ತಲೇ ಇರುತ್ತಾರೆ. 1988 ರಲ್ಲಿ ಏಪ್ರಿಲ್ 17 ರಂದು ಪಂ. ಪನ್ನಾಲಾಲ ಲಷ್ಕರರವರು ಪತ್ರ ಬರೆದಿದ್ದರು. ನಾನು ಇಂದ್ರಧ್ವಜ ಆರಾಧನೆಯನ್ನು ಹನ್ನೊಂದು ಬಾರಿ ಮಾಡಿಸಿದ್ದೇನೆ. ಇನ್ನೂ ಮಾಡಿಸಬೇಕೆಂದಿದ್ದೇನೆ ಎಂದು ಇವರು ಕಾನಜೀ ಪಂಥದವರು. ನಾನು ನೋಡಿದಂತೆ ಬೀಸಪಂಥಿ, ತೇರಹ ಪಂಥಿ, ಕಾನಜೀಪಂಥಿ ಎಲ್ಲಾ ವಿದ್ವಾಂಸರು ಈ ವಿಧಾನವನ್ನು ಮಾಡಿಸುತ್ತಿದ್ದರು. ಇದರ ಪೂಜೆಯಲ್ಲಿ ಬರುವ ಜಯಮಾಲೆಗಳನ್ನು ಮುಕ್ತಕಂಠದಿಂದ ಹೊಗಳುತ್ತಾರೆ. ಅನೇಕ ಪ್ರಶಂಸಾಪತ್ರಗಳು ಬರುತ್ತಲೇ ಇರುತ್ತವೆ. ನನ್ನ ಮನದಲ್ಲಿ ಇದರಲ್ಲಿ ನಾನು ಬರೆದಿರುವ ವಾಕ್ಯಗಳೇ ಕಾರಣವಲ್ಲ ಇದು ಜಿನೇಂದ್ರ ಭಗವಂತ ಹಾಗೇ ಅವರ ಅಕೃತ್ರಿಮ ಜಿನಬಿಂಬಗಳ ಭಕ್ತಿಯ ಅತಿಶಯವೇ ಕಾರಣವಾಗಿದೆ. ಇದರಿಂದ ಭಕ್ತಗಣವು ಅತ್ಯಂತ ಪ್ರಭಾವಿತರಾಗುತ್ತಿರುವುದು ಸಾಕ್ಷಿಯಾಗಿದೆ ಎಂದುಕೊಳ್ಳುತ್ತಿದ್ದೆ.

ಮೇರಠನ ಕಡೆಗೆ ವಿಹಾರ

ಮೋದಿನಗರದಿಂದ ವಿಹಾರ ಹೊರಟು ದಾರಿ ಮಧ್ಯದಲ್ಲಿಯ ಅಲ್ಲಿಯ ಮಹಿಳಾ ಕಾಲೇಜಿನವರ ಪ್ರಾರ್ಥನೆಯ ಮೇರೆಗೆ ಅರ್ಧಗಂಟೆ ಉಪದೇಶವನ್ನು ಕೊಟ್ಟು, ಮುಂದೆ ವಿಹಾರ ಬೆಳೆಸಿದೆವು.

ಕಲ್ಪದ್ರುಮ ಆರಾಧನೆಯ ನಿರ್ಣಯ

ಪ್ರೇಮಚಂದ್ರ ಮತ್ತು ಅವರ ಮಗ ಮುಕೇಶ ಕುಮಾರ ಜೈನರು ಹಸ್ತಿನಾಪುರಕ್ಕೆ ಹಲವಾರು ಬಾರಿಬಂದು ಪ್ರಾರ್ಥಿಸುತ್ತಲೇ ಇದ್ದರು. ಮಾತಾಜೀ ತಾವು ಒಂದೊಂದು ಕಿಲೋಮೀಟರ ನಡೆದುಕೊಂಡು ಬಂದರು ಸಾಕು ತಮ್ಮ ಸಾನಿಧ್ಯದಲ್ಲಿಯೇ ನಾನು ಕಮಲನಗರದ ಮಂದಿರದಲ್ಲಿ ಕಲ್ಪದ್ರುಮ ಆರಾಧನೆಯನ್ನು ಮಾಡಬೇಕೆಂದು ಹೇಳುತ್ತಲೇ ಇದ್ದರು.

ನಾನು ನಗುತ್ತಲೇ ತಳ್ಳಿ ಹಾಕುತ್ತಿದ್ದೆ. ಸಂಘದ ಜನರು ಹೇಳುತ್ತಿದ್ದರು. "ನ ನೌ ಮನ ತೇಲ ಹೋಗ ನ ರಾಧಾ ನಾಚೇಗಿ" ಆದರೂ ಅವರು ನಿರಾಶರಾಗದೆ ಪ್ರಯತ್ನವನ್ನು ಪಡುತ್ತಲೇ ಇರುತ್ತಿದ್ದರು. ನಾನು ಸರಧನಗೆ ಬಂದಾಗ ಮೇರಠನಿಂದ ಅಮರಚಂದ ಅರವಿಂದಕುಮಾರ ಬಂದು ವಿಶೇಷವಾಗಿ ಆಗ್ರಹ ಮಾಡತೊಡಗಿದಾಗ ನನ್ನ ಬಾಯಿಂದ ಬಡೌತದಿಂದ ಬರುವಾಗ ಮೇರಠಕ್ಕೆ ಬಂದೆ, ಹಸ್ತಿನಾಪುರಕ್ಕೆ ಬರುತ್ತೇನೆ ಎನ್ನುವ ಮಾತು

ಹೊರಬಿದ್ದಿತು. ಅಂದಿನಿಂದ ಅವರು ನಾನು ಹೋದ ಕಡೆಗೆಲ್ಲ ಬಂದು ಪ್ರಾರ್ಥಿಸುತ್ತಲೇ ಇರುತ್ತಿದ್ದರು. ಆಮೀನಗರ ಸರಾಯದಲ್ಲಿ ನಾನು ಪ್ರೇಮಚಂದಜೈನರಿಗೆ ಕಲ್ಪದ್ರುಮ ಆರಾಧನೆಗೆ ಒಪ್ಪಿಗೆ ಕೊಟ್ಟಿದ್ದೆ. ಆದ್ದರಿಂದ ಶ್ರೀ ಮೋದಿನಗರದಿಂದಲೇ ಅಮರಚಂದ ಜೈನ ಮತ್ತು ಪ್ರೇಮಚಂದ ಜೈನರು ಸಪರಿವಾರವಾಗಿ ಬಂದು ದಾರಿಯ ವ್ಯವಸ್ಥೆಯನ್ನು ಮಾಡುತ್ತಾ ನಮ್ಮ ಜೊತೆಯೇ ಕಾಲುನಡಿಗೆಯಲ್ಲೇ ಬರುತ್ತಿದ್ದರು.

ಮೋದಿ ನಗರದಿಂದ ವಿಹಾರ ಮಾಡುತ್ತಾ ಜನವರಿ 30 ರಂದು ಸುರೇಂದ್ರಕುಮಾರರವರ ಆಗ್ರಹದಿಂದ ಮಾಲಾ ಫ್ಲೋರ್ ಮಿಲ್ಲಿನ ಮಂದಿರ ದರ್ಶನ ಮಾಡಿದೆವು. ಮಂದಿರದ ರಚನೆ ಬಹಳ ಸುಂದರವಾಗಿದೆ. ಪ್ರದಕ್ಷಿಣೆಯಲ್ಲಿ ಅಷ್ಟ ಕಮಲದ ದಳಗಳ ರಚನೆ ಬಹಳ ಚೆನ್ನಾಗಿದೆ.

ಮೇರಠಿನ ಕಮಲ ನಗರಕ್ಕೆ ಪ್ರವೇಶ

ಪರತಪುರದಿಂದ ಬರುವಾಗ ರಿಠಾನೀಯ ಹೊಸ ಮಂದಿರವನ್ನು ನೋಡಿಕೊಂಡು ಜನವರಿ 31ರಂದು ಮೆರವಣಿಗೆಯೊಂದಿಗೆ ಕಮಲನಗರದ ಮಂದಿರವನ್ನು ತಲುಪಿದೆವು. ಇಲ್ಲಿ ಮಂಗಳ ಪ್ರವಚನವಾದ ಮೇಲೆ ಬಂದು ಹೊಸ ಕಟ್ಟಡದಲ್ಲಿ ಉಳಿದೆವು. ಇಲ್ಲಿ ಸಾಧುಗಳಿಗೆ ಇಳಿದುಕೊಳ್ಳಲುವ್ಯವಸ್ಥೆ ಇರಲಿಲ್ಲ. 2 ದಿನಗಳ ನಂತರ ಅರವಿಂದಕುಮಾರರ ವಿಶೇಷ ಆಗ್ರಹದಿಂದ ಅವರ ಮನೆಯಲ್ಲೇ 10 ದಿನಗಳು ತಂಗಬೇಕಾಯಿತು. ಪ್ರೇಮಚಂದ ಜೈನರು ತಮ್ಮ ಸಂತೋಷವನ್ನು ಹಲವಾರು ಬಾರಿ ಸಾಧುಗಳ ಮುಂದೆ ಹೇಳಿಕೊಳ್ಳುತ್ತಿದ್ದರು. ನೋಡಿರಿ ಒಂಬತ್ತು ಮಣ ಎಣ್ಣೆಯು ಬಂದಿತು. ಈಗ ರಾಧಾಳು ಕುಣಿಯುತ್ತಾಳೆ ಎಂದು ನಮ್ಮಲ್ಲಿಗೆ ಪೂಜ್ಯ ಮಾತಾಜೀಯವರ ಆಗಮನ ಆಗಿಯೇ ಬಿಟ್ಟಿತು ಎಂದು.

ಕಲ್ಪದ್ರುಮ ಆರಾಧನೆ ಪ್ರಾರಂಭ

1990 ರ ಫೆಬ್ರವರಿ ಒಂದರಂದು ಬೆಳಗ್ಗೆ 7.15 ಕ್ಕೆ ಕಲ್ಪದ್ರುಮ ಆರಾಧನೆಗಾಗಿ ಶ್ರೀ ಸುಕುಮಾರಚಂದ ಜೈನರು ಧ್ವಜಾರೋಹಣೆ ಮಾಡಿದರು. ಈ ಸಮಯದಲ್ಲಿಯೇ ಕಲ್ಯಾಣಸಾಗರ ಮಹಾರಾಜರ ಸಂಘವು ಆಗಮಿಸಿತು. ಎಲ್ಲಾ ಸಾಧುಗಳು ಕಲ್ಪದ್ರುವ ಆರಾಧನೆಯ ಮಹಿಮೆಯ ಬಗ್ಗೆ ಪ್ರವಚನ ಮಾಡಿದರು. ಈ ಆರಾಧನೆಗಳನ್ನು ಚತುರ್ಥಕಾಲದಲ್ಲಿ ಬಯಸಿದ್ದೆಲ್ಲವನ್ನು ದಾನ ಮಾಡುತ್ತಾ ಮಾಡುತ್ತಿದ್ದರು. ಇಂದು ಸ್ಥಾಪನಾ ನಿಕ್ಷೇಪದಿಂದ ಚಕ್ರವರ್ತಿ ಆಗುವ ಶ್ರಾವಕನು ಈ ಆರಾಧನೆ ಮಾಡುತ್ತಾರೆ. ಇಲ್ಲಿ ಶ್ರೀ ಪ್ರೇಮಚಂದರು ಚಕ್ರವರ್ತಿಗಳಾಗಿ ತುಂಬಿದ ಮನಸ್ಸಿನಿಂದ ಆರಾಧನೆಯನ್ನು ಕೈಕೊಂಡಿದ್ದರು. ಘಟಯಾತ್ರಾ, ಅಂಕುರಾರೋಹಣ ಕ್ರಿಯೆಯು ಮುಗಿಯಿತು. ಫೆಬ್ರವರಿ 2 ರಿಂದ ಆರಾಧನೆ ಪ್ರಾರಂಭವಾಯಿತು. 70 ಕ್ಕಿಂತಲು ಅಧಿಕವಾಗಿ ಶ್ರಾವಕರು ಸಮವಸರಣದ ನಾಲ್ಕು ಕಡೆ ಕುಳಿತಿದ್ದರು. ಮಂದಿರದ ಹತ್ತಿರ ವಿಶಾಲವಾದ ಪೆಂಡಾಲ ಹಾಕಿ ಆರಾಧನೆಯನ್ನು ಮಾಡಲಾಯಿತು. ಆರಾಧನೆಯು ಸಂಗೀತದೊಡನೆ ಪ್ರಾರಂಭವಾಗಿ ಮೈಕಿನಲ್ಲಿ ಮಧುರವಾಗಿ ಪೂಜೆಯ ಜಯಮಾಲೆಗಳು ಬಹಳ ದೂರದವರೆಗೂ ಕೇಳಿಸಿ ಎಲ್ಲರನ್ನು ತಮ್ಮತ್ತ ಸೆಳೆಯುತ್ತಿತ್ತು. ಪೂಜೆಯ ಪಾಠಗಳನ್ನು ಶ್ರೀ ಸುಕುಮಾರ ಜೈನರು ಮುಂತಾದ ಭಕ್ತ ಗಣವು ಬಹಳ ಆಸಕ್ತಿಯಿಂದ ಓದುತ್ತಿದ್ದರು. ರತನಲಾಲ ಮುಂತಾದವರು 3-4 ಗಂಟೆಗಳ ವರೆಗೂ ಕುಳಿತು ಪಾಠಗಳನ್ನು ಓದುತ್ತಿದ್ದರು.

ಪ್ರತಿದಿನ ನಾನು ಬೆಳಗಿನ 7 ಗಂಟೆಗೆ ಜಿನ ಭಕ್ತಿ, ಗುರು ಭಕ್ತಿಯ ಬಗ್ಗೆ ಪ್ರವಚನ ಮಾಡುತ್ತಿದ್ದೆ. ಒಂದು ದಿನ ಮಹಾಭಾರತದ ಬಗ್ಗೆ ಪ್ರಕಾಶ ಬೀರುತ್ತಾ ಹೇಳಿದೆ ದ್ರೌಪದಿ ಕೇವಲ ಅರ್ಜುನನಿಗೆ ಮಾತ್ರ ಪತ್ನಿಯಾಗಿದ್ದಳು.

ನಿಜವಾಗಿಯು ಸತಿ ಮತ್ತು ಪಂಚಭರ್ತಾರಿಯಲ್ಲಿ ವಿರೋಧವಿದೆ ಎಂದು ಹೇಳಿದೆ. ಮಧ್ಯಾಹ್ನ ಒಬ್ಬ ಮಹಿಳೆ ಬಂದು ಕೇಳಿದಳು. ನಮಗೆ ಈಗ ಗೊತ್ತಾಯಿತು ದ್ರೌಪದಿ ಐವರ ಹೆಂಡತಿ ಅಲ್ಲವೆಂದು ನಮಗೆ ಈ ವಿಷಯದಲ್ಲಿ ಗೊಂದಲವಿತ್ತು. ಈಗ ನಮಗೆ ಸರಿಯಾದ ವಿಷಯ ಮನದಟ್ಟಾಯಿತು. ಅಲ್ಲದೆ ಅದು ಕಲ್ಪನೆ ನಿರಾಧಾರ ಮತ್ತು ಸತಿಗೆ ಅಪವಾದವೆಂದು ನಿಶ್ಚಯವಾಯಿತು ಎಂದು. ಆಗ ನಾನು ಯೋಚಿಸತೊಡಗಿದೆ. ನಿಜವಾಗಿಯು ಇಂದು ಪ್ರಥಮಾನುಯೋಗದ ಸ್ವಾಧ್ಯಾಯಕ್ಕೆ ಮಾನ್ಯತೆ ಕೊಡುತ್ತಿಲ್ಲ ಅಲ್ಲದೆ ದೂರದರ್ಶನದಲ್ಲಿ ರಾಮಾಯಣ, ಮಹಾಭಾರತದ ಕಥೆಗಳನ್ನು ತೋರಿಸುತ್ತಿರುವುದರಿಂದ ಜೈನೇತರರು ಬಿಡಿ ಜೈನರು ಕೂಡ ಅದೇ ನಿಜವೆಂದು ಆಸಕ್ತಿಯಿಂದ ನೋಡುವುದು ಒಂದು ಚಿಂತೆಯ ವಿಷಯವೇ ಆಗಿದೆ. ನಮ್ಮ ಜೈನ ಮಹಾಭಾರತ ಮತ್ತು ರಾಮಾಯಣಗಳನ್ನು ದೂರದರ್ಶನದಲ್ಲಿ ಪ್ರದರ್ಶಿಸುವಂತಹ ಪ್ರಯತ್ನಕ್ಕೆ ಜೈನ ಸಮಾಜ ಯತ್ನಿಸುತ್ತಿಲ್ಲ ಇದು ವಿರೋಧ ಧರ್ಮದವರ ಪ್ರಭಾವವೆಂದು ಕಲಿಕಾಲದ ದೋಷವೆಂದು ತಿಳಿದು ಸಮಾಧಾನ ಪಡಬೇಕಾಗಿದೆ.

ಆರಾಧನೆಯ ವಿಷಯ

ಈ ಆರಾಧನೆಯಲ್ಲಿ ಭಗವಂತರ ಸಮವಶರಣದ ವೈಭವ ವಿಶೇಷದ ಮುಖ್ಯ ಉದ್ದೇಶ ಭಗವಂತರ ಪಂಚ ಕಲ್ಯಾಣಗಳು, ಅವರ ತಂದೆ - ತಾಯಿಗಳಿಗೆ ಅವರ ಪುಣ್ಯಮಯ ವರ್ಣ ಮುಂತಾದವುಗಳ ಪೂಜೆ ನಡೆಯುತ್ತದೆ. ಹೀಗೇ ಬ್ರಾಹ್ಮಿ - ಸುಂದರಿ ಮೊದಲಾದ ಆರ್ಯಿಕೆಯರಿಗೆ ಪೂಜೆ, ಕೊನೆಗೆ ಭಗವಂತರ 1008 ಹೆಸರುಗಳ ಪೂಜೆ ಇದೆ. ಪೂಜೆಯನ್ನು ಓದುತ್ತಿದ್ದ ಸುಕುಮಾರ ಜೈನರು ಗದ್ಗದಿತರಾಗಿ ಮಾತಾಜಿ ಹಸ್ತಿನಾಪುರದ ಸಮವಶರಣದ ಕೆಲಸವೆಲ್ಲವು ಮುಗಿದ ಮೇಲೆ ನಾನು ಅಲ್ಲಿಗೆ ಬಂದು ಈ ಆರಾಧನೆಯನ್ನು ಮತ್ತೊಮ್ಮೆ ಖಂಡಿತ ಮಾಡುತ್ತೇನೆ ಎಂದರು. ನಾನು ಅಂದುಕೊಂಡೆ ಭಾವನೆಯು ಮುಖ್ಯ ಆರಾಧನೆ ಯಾವಾಗ ಆಗುತ್ತದೆ ಆಗ ಮಾಡಬಹುದು.

ಚತುರ್ವಿಧದಾನ

ಶ್ರೀ ಪ್ರೇಮಚಂದ ಜೈನರು ಪ್ರತಿದಿನ 100-200 ಜನ ಬಡವರಿಗೆ ಊಟವನ್ನು ನೀಡುತ್ತಿದ್ದರು. ಒಂದು ದಿನ ಬಟ್ಟೆ ಒಂದು ದಿನ ಪಾತ್ರೆ ಮುಂತಾದವುಗಳನ್ನು ಮುಕ್ತ ಮನಸ್ಸಿನಿಂದ ದಾನ ಮಾಡುತ್ತಿದ್ದರು. ಒಂದು ದಿನ ಔಷಧದ ದಾನ ಮತ್ತು ಶಾಸ್ತ್ರದ ದಾನಕ್ಕಾಗಿ ಪುಸ್ತಕಗಳನ್ನು ಅಚ್ಚು ಹಾಕಿಸಿದ್ದರು. ಅಲ್ಲದೇ ಅವರು ಪ್ರತಿ ತಿಂಗಳು ಈ ವಿಧಾನದ ದಿನ 11ನೇ ತಾರೀಕು ಬಡವರಿಗೆ ಭೋಜನ ಕೊಡುವ ತೀರ್ಮಾನವನ್ನು ಘೋಷಿಸಿದರು. ಫೆಬ್ರವರಿ 11 ಕ್ಕೆ ಪೂರ್ಣಾಹುತಿಯೊಡನೆ ಹವನ ನಡೆಯಿತು.

ರಥಯಾತ್ರೆ

ಫೆಬ್ರವರಿ 12ನೆಯ ತಾರೀಕು ರಥಯಾತ್ರೆ ಹೊರಟಿತು. ವಾತಾವರಣ ತಂಪಾಗಿದ್ದರಿಂದ ನಾನು ತೇರಿನವರೆಗೂ ಹೋಗಿದ್ದೆ. ಮಹಾವೀರ ಭವನದಲ್ಲಿ ಸಾಮಾಯಿಕ ಮಾಡಿ ಬರುವಾಗ ಹರೀಶ ಜೈನರು ತಮ್ಮ ಮುದ್ರಣಾಲಯಕ್ಕೆ ಆಗಮಿಸುವಂತೆ ಪ್ರಾರ್ಥಿಸಿದರು. ಅಲ್ಲಿಗೆ ಹೋದಾಗ ಅವರ ಹೆಂಡತಿ, ಕೆಲಸಗಾರರು ಅತ್ಯಂತ ಭಕ್ತಿಯಿಂದ ನನಗೆ ಗೌರವ ತೋರಿಸಿದರು. ಪ್ರೆಸ್ಸಿನಲ್ಲಿ ಪ್ರಕಾಶಿತಗೊಳ್ಳುತ್ತಿದ್ದ ಗ್ರಂಥಗಳನ್ನು ತೋರಿಸಿದರು. ರಥಯಾತ್ರೆಯಿಂದ ವಾಪಸ್ಸು ಬಂದ ಮೇಲೆ ಮಹಿಳೆಯರು ಹರ್ಷದಿಂದ ಪೆಂಡಾಲಿನಲ್ಲಿ ಹಾಡುತ್ತಾ ಬಣ್ಣಗಳನ್ನು ಎರಚುತ್ತಾ ಭಕ್ತಿಯ

ಭಾವಾವೇಶದಿಂದ ನೃತ್ಯ ಮಾಡತೊಡಗಿದ ದೃಶ್ಯ ಎಲ್ಲರನ್ನು ಭಾವಾವೇಶಗೊಳಿಸಿತು. ನಂತರ ಎಲ್ಲರು ತಮ್ಮ ತಮ್ಮ ನಿವಾಸಗಳಿಗೆ ತೆರಳಿದ ನಂತರ ಇದಕ್ಕಾಗಿ ಮಳೆರಾಯ ಕಾಯುತ್ತಿದ್ದನೋ ಎನ್ನುವಂತೆ ಮಳೆ ಸುರಿಸಲು ಪ್ರಾರಂಭಿಸಿದ್ದು ಇಂದ್ರನು ರತ್ನದ ಮಳೆ ಸುರಿಸಿದ ಅನುಭವವಾಯಿತು.

ಮಾರನೆಯದಿನ ಎಲ್ಲರು ಕೊನೆಯ ಕಾರ್ಯಕ್ರಮದಂತೆ ತೀರ್ಥಯಾತ್ರೆಗಾಗಿ ಹಸ್ತಿನಾಪುರಕ್ಕೆ ತೆರಳಿದರು. ಪ್ರೇಮಚಂದರು ಕಾರ್ಯಕರ್ತರಿಗೆಲ್ಲ ವಸ್ತ್ರಗಳನ್ನು ಹಂಚಿದರು. ಮೇರಠನಲ್ಲಿ ಇದ್ದಾಗಲೇ ಇನ್ನೊಂದು ಸಂತೋಷದ ವಿಷಯವೆಂದರೆ ಅಷ್ಟಸಹಸ್ರಿ ಗ್ರಂಥದ ಮೂರನೆಯ ಭಾಗವನ್ನು ಸುಮನ ಪ್ರಿಂಟ್ರರ್ಸನವರು ಅಂತಿಮ ಪ್ರೂಫ್ ನೋಡಲು ತಂದುಕೊಟ್ಟರು. ಹಗಲು ರಾತ್ರಿ ಪರಿಶ್ರಮದಿಂದ ಬರೆದ ಗ್ರಂಥ ಬೇಗನೆ ಅಚ್ಚಾಯಿತು.

ಜಿನ ಚೈತ್ಯಾಲಯ ಸ್ಥಾಪನೆ

ಸುಮನ ಪ್ರಿಂಟ್ರರ್ಸನ ಹರೀಶ ಜೈನರು ನನ್ನ ಪ್ರೇರಣೆಯಿಂದ ಮನೆಯಲ್ಲೇ ಜಿನ ಚೈತ್ಯಾಲಯವನ್ನು ಮಾಡಿಸಿ ಮಲ್ಲಿನಾಥರ ಪ್ರತಿಮೆಯನ್ನು ಹಸ್ತಿನಾಪುರದಿಂದ ತರಿಸಿದ್ದರು. ಕಮಲೇಶಚಂದ ಶಾಸ್ತ್ರಿಗಳು ವೇದಿ ಶುದ್ಧಿ ಮಾಡಿದರು. ಫೆಬ್ರವರಿ 12 ರಂದು ಚಂದನಮತಿ, ಮೋತಿಸಾಗರರನ್ನು ಕರೆದುಕೊಂಡು ಹೋಗಿ ವಿಧಿವತ್ತಾಗಿ ಪ್ರಶಸ್ತವಾದ ಮುಹೂರ್ತದಲ್ಲಿ ಜಿನಪ್ರತಿಮೆಯ ಸ್ಥಾಪನೆಯನ್ನು ಮಾಡಿಸಿದರು. ಎಲ್ಲರಿಗೂ ಬಹಳ ಸಂತೋಷವಾಯಿತು. ಮೂರುಲೋಕದ ಒಡೆಯನಾದ ಭಗವಂತನನ್ನ ತಂದು ಮನೆಯಲ್ಲಿ ವಿರಾಜಮಾನಗೊಳಿಸುವಂತಹ ದೊಡ್ಡ ಸೌಭಾಗ್ಯ ಅವರದಾಗಿತ್ತು.

ಹರೀಶ ಜೈನರು 1987 ರಿಂದ ಹಿಡಿದು ಇಲ್ಲಿಯವರೆಗೂ ವೀರಜ್ಞಾನೋದಯ ಗ್ರಂಥಮಾಲೆಯ ಸರ್ವತೋಭದ್ರ ವಿಧಾನ ಮುಂತಾದ 7, 8 ಆರಾಧನೆಗಳು ಜಂಬೂದ್ವೀಪ ಪೂಜಾಂಜಲಿ, ಅಷ್ಟಸಹಸ್ರಿ ಭಾಗ 1-2-3 ಸಮಯಸಾರದ ಪೂರ್ವಾರ್ಧ "ನನ್ನ ನೆನಪು" ಗಳು ಸತೀ ಅಂಜನಾ ಮೊದಲಾದ ನನ್ನಿಂದ ರಚಿತವಾದ ಎಲ್ಲಾ ಕೃತಿಗಳನ್ನು ಸಂತೋಷದಿಂದ ಶ್ರದ್ಧೆಯಿಂದ ಮಾಡುತ್ತಾ ಬಂದಿದ್ದಾರೆ. ಈಗ ವೀರಸಾಗರ ಸ್ಮೃತಿ ಗ್ರಂಥ ಅಚ್ಚಾಗುತ್ತಿದೆ. ದೇವರ ದರ್ಶನಕ್ಕೆ ಒಬ್ಬರೇ ಬರುತ್ತಿದ್ದರು. ಈಗ ಮನೆಯವರಿಗಾಗಿಯೇ ಮನೆಯಲ್ಲಿ ಚೈತ್ಯಾಲಯ ಮಾಡಿಸಿ ಆ ಕೊರತೆಯನ್ನು ದೂರ ಮಾಡಿಕೊಂಡಿದ್ದಾರೆ.

ಸಮ್ಮೇಳನದಲ್ಲಿ ಣಮೋಕಾರ ಮಂತ್ರದ ಉಪದೇಶ

ಆಚಾರ್ಯ ಶ್ರೀ ಕಲ್ಯಾಣ ಸಾಗರರ ಪ್ರೇರಣೆಯಿಂದ ಜೈನ ಬೋರ್ಡಿಂಗ್‌ನಲ್ಲಿ ಣಮೋಕಾರ ಮಂತ್ರದ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ಣಮೋಕಾರ ಮಂತ್ರವನ್ನು ದೊಡ್ಡದಾಗಿ ಪ್ರದರ್ಶಿಸಲಾಗಿತ್ತು. ಫೆಬ್ರವರಿ 10 ರಂದು ನನಗೆ ಉಪವಾಸವಿತ್ತು. ಆದರೂ ಮುನಿಗಳ ವಿಶೇಷ ಆಗ್ರಹದಿಂದ ನಾನು ಹೋಗಲೇಬೇಕಾಯಿತು. ಸ್ಥಾನಕವಾಸಿ ಮುನಿ ಶ್ರೀ ಸುಶೀಲಕುಮಾರ ಮೊದಲಾದವರ ಮಾತು ಮುಗಿದ ಮೇಲೆ ನಾನು ನನ್ನ ಪ್ರವಚನದಲ್ಲಿ ಮಹಾಮಂತ್ರದ 35 ಅಕ್ಷರಗಳಲ್ಲಿ 64 ವರ್ಣಗಳಲ್ಲಿ ಹೇಗೆ ಇಡೀ ದ್ವಾದಶಾಂಗವು ಅಡಗಿದೆ ಎನ್ನವ ಬಗ್ಗೆ ವಿಶ್ಲೇಷಣೆ ಮಾಡುತ್ತಾ

ಅಪವಿತ್ರಃ ಪವಿತ್ರೋ ವಾ ಸುಸ್ಥಿತೋ ದುಃಸ್ಥಿತೋಪಿ ವಾ ।
ಧ್ಯಾಯೇತ್ ಪಂಚ ನಮಸ್ಕಾರಂ ಸರ್ವಪಾಪೈಃ ಪ್ರಮುಚ್ಯತೇ ॥

ಈ ಶ್ಲೋಕದ ಅನುಸಾರ ಅಪವಿತ್ರ ಹಾಗೂ ಪವಿತ್ರವಾದ ಯಾವುದೇ ಸ್ಥಿತಿಯಲ್ಲಿಯು ನಮಸ್ಕಾರ ಮಂತ್ರವನ್ನು ಮನದಲ್ಲಿ ಧ್ಯಾನಿಸುವುದೇ ಚಿಂತನೆಯ ಉಪದೇಶವಾಗಿದೆ. ಸ್ತ್ರೀಯರು ಮಾಸಿಕ ಕಾಲದಲ್ಲೂ ಮನದಲ್ಲಿ ಮಂತ್ರವನ್ನು ಜಪಿಸಬಹುದು. ಬಾಯಿಯಿಂದ ಹೇಳಬಾರದಷ್ಟೆ.

ಅಗ್ನಿಯು ಉಪಕಾರಿಯಾದುದು ಇದಿಲ್ಲದೆ ನಾವು ಆಹಾರವನ್ನು ತಿನ್ನಲು ಸಾಧ್ಯವಿಲ್ಲ. ಆದರೆ ಯಾರು ಇದನ್ನು ತಲೆಯಮೇಲೆ ಅಥವಾ ಜೋಬಿನಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಡಾಕ್ಟರ ರೋಗಿಗೆ ಆಪರೇಷನ್ ಮಾಡುವಾಗ ಮುಖಕ್ಕೆ ರಕ್ಷಣಾ ಕವಚ ಹಾಕಿಕೊಂಡಿರುತ್ತಾರೆ. ಆಪರೇಷನ್ ಆದ ಮೇಲೆ ಸಾಬೂನಿನಿಂದ ಮೂರು ಸಲ ಕೈತೊಳೆದುಕೊಳ್ಳುತ್ತಾರೆ. ಇದರಿಂದ ರೋಗಿಯಿಂದ ಗ್ಲಾನಿ ಇರದಿದ್ದರೂ ರೋಗದ ಕೀಟಾಣುವಿನಿಂದ ಪಾರಾಗುವುದು ಅವಶ್ಯಕವಾಗಿದೆ. ಹಾಗೇ ಣಮೋಕಾರ ಮಂತ್ರ ಒಳ್ಳೆಯದು. ಇದನ್ನು ಸದುಪಯೋಗ ಪಡಿಸಿಕೊಳ್ಳ ಬೇಕು. ಇದನ್ನು ದುರುಪಯೋಗ ಪಡಿಸಿಕೊಂಡರೆ, ಅವಿನಯ ತೋರಿದರೆ ಸುಭೌಮ ಚಕ್ರವರ್ತಿಯಂತೆ ನರಕಕ್ಕೆ ಹೋಗುತ್ತಾರೆ. ಆದ್ದರಿಂದ ಮುನಿಶ್ರೀಗಳೇ ಣಮೋಕಾರ ಮಂತ್ರದ ಪ್ರಚಾರ ಪ್ರಸಾರದ ಜೊತೆಗೆ ಆಗಮದ ಮರ್ಯಾದೆಯನ್ನು ಅವಶ್ಯಕವಾಗಿ ಗಮನದಲ್ಲಿಟ್ಟುಕೊಳ್ಳಿರಿ ಎಂದೆ.

ಮವಾನದಲ್ಲಿ ಮುನಿಶ್ರೀಗಳ ಜೊತೆ ಚರ್ಚೆ ಮಾಡುವಾಗಲೂ ಇದನ್ನು ಹೇಳಿದ್ದೆ. ತಾವು ಜೈನ ಆಗಮದ ಅನುಸಾರ ಅಸ್ಪೃಶ್ಯದ ಸ್ಪರ್ಶನೆಯನ್ನು ಮಾಡಬೇಡಿ. ಮರ್ಯಾದೆಯನ್ನು ಮೀರಬಾರದು. ಆಗಲೇ ಆರ್ಷ ಪರಂಪರೆಯ ಸಾಧುಗಳಿಗೆ ಸಮರ್ಥನೆಯು ಸಿಗುವುದು. ಪಂಚ ನಮಸ್ಕಾರದ ಅನೇಕ ಚಿತ್ರಗಳನ್ನು ನೋಡಿದೆವು. ನಾನು ಅಲ್ಲಿ ಇರುವವರೆಗೂ ಹಲವಾರು ಬಾರಿ ಸುಕುಮಾರರು ಬಂದು ಭೇಟಿಯಾಗಿದ್ದರು.

ವರ್ತಮಾನ ಶತಾಬ್ಧಿಯ ದಿಗಂಬರ ಜೈನಾಚಾರ್ಯರ ಸಂಘಗಳು

ಈ ಶತಮಾನದ ಆಚಾರ್ಯರುಗಳಲ್ಲಿ ಮೊದಲು ಶಾಂತಿ ಸಾಗರರು. ಇವರಿಂದ ದೀಕ್ಷಿತರಾದವರಲ್ಲಿ ದೇವೇಂದ್ರ ಕೀರ್ತಿ ಮುನಿರಾಜರು. ಒಬ್ಬರು ಇವರ ಪಟ್ಟ ಶಿಷ್ಯ ಆಚಾರ್ಯ ವೀರಸಾಗರಜೀ, ನಂತರ ಇವರ ಶಿಷ್ಯರಾದವರು ಆಚಾರ್ಯ ಶಿವಸಾಗರಜೀ, ನಂತರ ಇವರ ಶಿಷ್ಯ ಪಟ್ಟಾಚಾರ್ಯ ಧರ್ಮಸಾಗರರು. ಈಗ ಇವರ ಸ್ಥಾನದಲ್ಲಿ ಅಜಿತಸಾಗರರು ಇದ್ದಾರೆ.

ಪರಂಪರೆಯ ಮುನಿಗಳನ್ನು ಕಂಡಾಗ ನವಧಾ ಭಕ್ತಿಯಿಂದ ತಡೆದು ಪ್ರದಕ್ಷಿಣೆ ಬಂದು ಉಚ್ಚಾಸನವನ್ನು ಕೊಟ್ಟು ಪಾದಪ್ರಕ್ಷಾಲನೆ ಮಾಡಿ ಅಷ್ಟ ದ್ರವ್ಯಗಳಿಂದ ಪೂಜಿಸಿ ಆಹಾರ ಕೊಡಬೇಕು. ಇದೇ ಪರಂಪರೆಯು ಆರ್ಯಿಕೆಯರಿಗೂ ಅನ್ವಯಿಸುತ್ತದೆ.

ಕ್ಷುಲ್ಲಕರಿಗೆ ಸ್ವಲ್ಪ ಪರಿಗ್ರಹ ಇರುತ್ತದೆ. ಇವರಿಗೆ ಕರಪಾತ್ರದ ಬದಲು ಚಿಕ್ಕ ತಟ್ಟೆ ಹಾಗೂ ಬಟ್ಟಲಿನಲ್ಲಿ ಆಹಾರ ಕೊಡಬೇಕು. ಆಚಾರ್ಯ ಶಾಂತಿಸಾಗರರಿಂದ ದೀಕ್ಷಿತರಾಗಿದ್ದ ಕ್ಷುಲ್ಲಿಕೆ ಅಜಿತಮತಿ ಆಹಾರದ ಸ್ಥಳದಿಂದಲೇ ಬಟ್ಟಲು ಪಡೆದು ಆಹಾರ ಮಾಡುತ್ತಿದ್ದರು.

ಪರಂಪರೆಯಲ್ಲಿ ಸಜ್ಜಾತಿಗೆ ವಿಶೇಷವಾದ ಮಹತ್ವವನ್ನು ಕೊಡಲಾಗಿದೆ. ಇದರಲ್ಲಿ ಅಂತರ್ಜಾತೀಯ ವಿಜಾತಿಯ ಮತ್ತು ವಿಧವಾ ವಿವಾಹ ವರ್ಜಿತವಾಗಿದೆ. ಇಂತಹವರಿಗೆ ಅಭಿಷೇಕ, ಹವನ, ಆರಾಧನೆ, ಆಹಾರದಾನದ ಅಧಿಕಾರವಿಲ್ಲ ಆಗಮಕ್ಕೆ ಅನುಸಾರವಾಗಿ ಶ್ರಾವಕರು ಫಲ ಪುಷ್ಪಗಳಿಂದ ಪೂಜೆ ಮಾಡಬಹುದು. ಇವರೇ ಬೀಸ ಪಂಥಿಗಳು. ಇದಕ್ಕೆ ಸಮರ್ಥನೆಗಳು ಇವೆ. ಸ್ತ್ರೀಯರಿಂದ ಜಿನೇಂದ್ರ ಪೂಜೆಮಾಡುವ ಆಚರಣೆ ಬರುತ್ತಿದೆ.

ಇದಕ್ಕೆ ಕಾನಜೀ ಪಂಥದ ವಿರೋಧವಿದೆ. ಶಾಂತಿರಸಾಗರರ ಪರಂಪೆಯವರು ಆಗಮದಂತೆ ನಡೆಯುತ್ತಾರೆ. ಕೇವಲ ಕ್ಷುಲ್ಲಕ ಮತ್ತು ಕ್ಷುಲ್ಲಿಕೆಯರಿಗೆ ಮಾತ್ರ ವಾಹನ ಪ್ರಯಾಣಕ್ಕೆ ಅನುಮತಿ ಇದೆ. ಕ್ಷುಲ್ಲಿಕೆ ಅಜಿತಮತಿಯವರು ನಿಯಮವನ್ನು ತಮಗೆ ತಕ್ಕಂತೆ ಬದಲಾಯಿಸಿದ ಉದಾಹರಣೆಯು ದೊರೆಯುತ್ತದೆ.

ಚಾರಿತ್ರ ಚಕ್ರವರ್ತಿ ಆಚಾರ್ಯರ ಶಿಷ್ಯರಾದ ಚಂದ್ರಸಾಗರ ಮಹರಾಜರು ಕ್ಷುಲ್ಲಕ ದೀಕ್ಷೆಯನ್ನು ಕೊಟ್ಟು ಶ್ವೇತ ವಸ್ತ್ರವನ್ನು 11 ನೇಯ ಪ್ರತಿಮೆಯ ಸೂಚಕವಾಗಿ 11 ಎಳೆ ಜನಿವಾರವನ್ನು ಕೊಟ್ಟಿದ್ದರು. ಕ್ಷುಲ್ಲಕ, ಕ್ಷುಲ್ಲಿಕೆಯು ಪಾತ್ರೆಹಿಡಿದು 7 ಮನೆಯಿಂದ ಭಿಕ್ಷೆ ತಂದು ಊಟ ಮಾಡುವ ಪದ್ಧತಿಯನ್ನು ಸಮರ್ಥಿಸಿದರು. ಚಂದ್ರಸಾಗರರ ಶಿಷ್ಯರಿಂದ ಕ್ಷುಲ್ಲಕ ಭದ್ರಸಾಗರರು ತಮ್ಮ ಗುರುಗಳ ಸಮಾಧಿ ಆದಮೆಲೆ ಆಚಾರ್ಯ ವೀರಸಾಗರರ ಸಂಘಕ್ಕೆ ಬಂದರು. ಮುನಿಗಳಾದ ಮೇಲೆ ಇವರ ಹೆಸರು ಧರ್ಮಸಾಗರರೆಂದಾಯಿತು. ಅವರು ಈ ಪರಂಪರೆಯ ಮೂನೆಯ ಪಟ್ಟಾಧೀಶರಾದರು. ಇವರು ಕ್ಷುಲ್ಲಕರಿಗೆ ಬಿಳಿವಸ್ತ್ರವನ್ನು ಮುಂದುವರಿಸಿದರು. ಈ ಪರಂಪರೆಯವರು ಜನಿವಾರಧಾರಿಗಳಲ್ಲಿ ಮಾತ್ರ ಆಹಾರ ತೆಗೆದುಕೊಳ್ಳುತ್ತಾರೆ.

ಆಚಾರ್ಯ ವೀರಸಾಗರರ ಶಿಷ್ಯರಾದ ಒಬ್ಬ ಶಿಷ್ಯರು ಸಂಘದಿಂದ ಬೇರೆಯಾಗಿ ದಕ್ಷಿಣದ ಕಡೆಗೆ ಹೋದರು. ಅಲ್ಲಿ ಅಂಕಲೀಕರ ಶ್ರೀ ಆದಿಸಾಗರಜೀ ಮಹಾರಾಜರಿಂದ ದೀಕ್ಷೆಯನ್ನು ಪಡೆದು ಆಚಾರ್ಯ ಶ್ರೀ ಮಹಾವೀರಕೀರ್ತಿ ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದಾರೆ. ಆಗಿದಾಗ್ಯೂ ದಕ್ಷಿಣದಲ್ಲಿ ಕ್ಷುಲ್ಲಕರಿಗೆ ಬಿಳಿವಸ್ತ್ರ ಕೊಡುವ ಪರಂಪೆರಯು ಇತ್ತು. ಇಂದು ಇದೇ ಪರಂಪರೆಯಲ್ಲಿ ಮುಖ್ಯವಾಗಿ ಆಚಾರ್ಯ ಶ್ರೀ ವಿಮಲಸಾಗರಜೀ, ಆಚಾರ್ಯ ಶ್ರೀ ಸನ್ಮತಿಸಾಗರಜೀ, ಆಚಾರ್ಯ ಕುಂಥು ಸಾಗರಜೀ ಮೊದಲಾದವರು ಸಂಘ ಸಹಿತವಾಗಿ ವಿರಾಜಮಾನರಾಗಿದ್ದಾರೆ. ಆ ಗಣಿನೀ ಆರ್ಯಿಕೆ ವಿಜಯಮತೀ ಮಾತಾಜೀ ಸಹ ಧರ್ಮಪ್ರಭಾವನೆಯನ್ನು ಮಾಡುತ್ತಿದ್ದಾರೆ.

ಈ ಪರಂಪರೆಯಲ್ಲಿ ಸಹ ಸಜ್ಜಾತಿಯ ಬಗ್ಗೆ ವಿಶೇಷವಾಗಿ ಮಹತ್ವವಿದೆ. ಆಗಮ ಪಂಥದ ಸಮರ್ಥನೆ ಇದೆ. ಕಾನಜೀ ಪಂಥದ ಬಗ್ಗೆ ವಿರೋಧವಿದೆ. ಕ್ಷುಲ್ಲಕರಲ್ಲಿ ಕಾವಿ ವಸ್ತ್ರ ಮತ್ತು ಬಿಳಿ ವಸ್ತ್ರದಲ್ಲಿ ಮಂತ್ರ ವ್ಯತ್ಯಾಸದ ಹೊರತು ಚಾರಿತ್ರ ಚಕ್ರವರ್ತಿ ಮತ್ತು ಮಹಾವೀರ ಕೀರ್ತಿಗಳ ಪರಂಪರೆಯಲ್ಲಿ ವಿಶೇಷ ವ್ಯತ್ಯಾಸವಿರಲಿಲ್ಲ.

ಎರಡು ಪರಂಪೆಯಲ್ಲಿ ಕ್ಷುಲ್ಲಕ ಕ್ಷುಲ್ಲಿಕೆಯರಿಗೆ ಆಹಾರದ ಸಮಯದಲ್ಲಿ ಅರ್ಘ್ಯವೆತ್ತುತ್ತಾರೆ. ವೀರಸಾಗರರ ಪರಂಪರೆಯಲ್ಲಿ ಪಾದ ಪ್ರಕ್ಷಾಲನೆ ಮಾಡಿ ನವಧಾ ಭಕ್ತಿಯನ್ನು ಮಾಡುತ್ತಾರೆ. ಎರಡು ಪರಂಪರೆಯಲ್ಲು ಜಿನ ಪ್ರತಿಮೆಯನ್ನು ಇಟ್ಟುಕೊಳ್ಳುತ್ತಾರೆ. ಜಿನಪೂಜೆಯನ್ನು ಬ್ರಹ್ಮಚಾರಿ - ಬ್ರಹ್ಮಚಾರಿಣಿಯವರು ಮಾಡುತ್ತಾರೆ.

ಆಚಾರ್ಯ ಶಾಂತಿ ಸಾಗರರ ಛಾಣಿ

ಆಚಾರ್ಯ ಶಾಂತಿಸಾಗರರೆಂಬ ಒಬ್ಬ ಮುನಿಗಳಿದ್ದರು. ಅವರನ್ನು ಅವರ ಊರಿನ ಹೆಸರಾದ ಛಾಣಿಯಿಂದ ಗುರುತಿಸುತ್ತಿದ್ದರು. 1933 ರಲ್ಲಿ ಅವರೊಡನೆ ಚಾತುರ್ಮಾಸ ನಡೆಯಿತು. ಅವರು ಶ್ರಾವಕರಿಗೆ ತೇರಹ ಪಂಥದ ಉಪದೇಶ ಕೊಡುತ್ತಿದ್ದರು. ಹಣ್ಣು ಹೂಗಳನ್ನು ಬಳಸಲು ಹೇಳುತ್ತಿದ್ದರು. ಸ್ತ್ರೀಯರಿಂದ ಪೂಜೆಯನ್ನು ಮಾನ್ಯ ಮಾಡುತ್ತಿರಲಿಲ್ಲ. ಇದೇ ಪದ್ಧತಿಯನ್ನು ವಿಮಲಸಾಗರರು ಅವರಿಂದ ದೀಕ್ಷಿತರಾದವರು ಪಾಲಿಸಿಕೊಂಡು ಬಂದರು.

ಇದೇ ಪರಂಪರೆಯ ಆಚಾರ್ಯ ನಿರ್ಮಲಸಾಗರ ಶಿಷ್ಯರಾದ ಶಾಂತಿಸಾಗರರು ಕೆಲವು ವರ್ಷಗಳು ಕಾನಜೀ ಪಂಥದ ಸಮರ್ಥಕರಾಗಿದ್ದಾರೆ. ಇವರು ಕ್ಷುಲ್ಲಕ ಕುಲಭೂಷಣ ಹಾಗೂ ಮುನಿ ಚಂದ್ರಸಾಗರರಿಗೆ ದೀಕ್ಷೆ ಕೊಟ್ಟಿದ್ದರು. ಆಚಾರ್ಯ ದೇಶಭೂಷಣರ ನಂತರ ಉಪಾಧ್ಯಾಯ ಮುನಿ ವಿದ್ಯಾನಂದರು ಬಾಹುಬಲಿ ಮುನಿಗಳು

ಆಚಾರ್ಯರಾದರು. ವಿದ್ಯಾನಂದರು "ದಿಗಂಬರ ಜೈನ ಸಾಹಿತ್ಯದಲ್ಲಿ ವಿಕಾರ" ಎಂಬ ಪುಸ್ತಕದಲ್ಲಿ ಕಾನಜೀ ಪಂಥವನ್ನು ಚೆನ್ನಾಗಿ ವಿರೋಧಿಸಿದ್ದಾರೆ.

ವೀರಸಾಗರರ ಶಿಷ್ಯ ಶಿವಸಾಗರರಿಂದ ಜ್ಞಾನಸಾಗರರು ಮುನಿದೀಕ್ಷೆ ಪಡೆದರು. ಅವರ ಶಿಷ್ಯ ವಿದ್ಯಾಸಾಗರರು ಇಂದು ಪ್ರಸಿದ್ಧರಾಗಿದ್ದಾರೆ. ಇವರ ಪರಂಪರೆಯಲ್ಲಿ ಕ್ಷುಲ್ಲಕ - ಕ್ಷುಲ್ಲಿಕೆಯರಿಗೆ ಬಿಳಿವಸ್ತ್ರ ಇದೆ. ಆರ್ಯಿಕೆಯರಿಗೆ ನವಧಾ ಭಕ್ತಿಯನ್ನು ಹೇಳುವುದಿಲ್ಲ. ಮೂಲಾಚಾರದಲ್ಲಿ ದಿಗಂಬರ ಮುನಿ ಮತ್ತು ಆರ್ಯಿಕೆಯರಿಗೆ ಸಮಾನವಾದ ಆಚರಣೆ ಇದೆ. ಹೀಗೆ ಸುಮಾರು 100-150 ವರ್ಷಗಳಿಂದ ಎಲ್ಲಾ ಸಂಘಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳು ನಡೆದು ಬರುತ್ತಿದೆ.

ಮೇರಠನಿಂದ ವಿಹಾರ

ಫೆಬ್ರವರಿ 14 ರಂದು ಮೇರಠನಿಂದ ವಿಹಾರ ಮಾಡಿದೆವು. ದಾರಿಯಲ್ಲಿ ಅಮರಚಂದ ಜೈನರ ಗೃಹದಲ್ಲಿ ಶಾಂತಿ ವಿಧಾನದಲ್ಲಿ ಭಾಗವಹಿಸಿ ಆಶೀರ್ವಾದ ಮಾಡಿದೆ. ಇವರು ಸಂಘದ ಸೇವೆಯಲ್ಲಿ ತಮ್ಮ ಫ್ಯಾಕ್ಟರಿ ಕೆಲಸದ ಕಡೆ ಗಮನವನ್ನು ಕೊಟ್ಟಿರಲಿಲ್ಲ. ಹಾಗೇ ಪ್ರೇಮಚಂದ ಜೈನರು ಗುರುಭಕ್ತಿಯಲ್ಲೇ ತೊಡಗಿಕೊಂಡಿದ್ದರು. ಅಶೋಕ ಕುಮಾರ ಜೈನರು ತ್ರಿಲೋಕಸಾರ ಗ್ರಂಥದ ಆಧಾರದಿಂದ ಮಾಡಿದ್ದ ಒಂದು ಚಾರ್ಟ್ ತೋರಿಸಿದರು. ಬಹಳ ಮೆಚ್ಚುಗೆಯಾಯಿತು. ಇದೇ ರೀತಿ ಅಷ್ಟ ಮೂಲಗುಣದ ಚಿತ್ರವನ್ನು ತರಲು ಪ್ರೇರಣೆ ಕೊಟ್ಟೆ. ಅದೇ ರಾತ್ರಿ ಕರ್ನಾಟಕದಿಂದ ಒಬ್ಬ ಶ್ರಾವಕರು ದರ್ಶನಾರ್ಥವಾಗಿ ಬಂದಿದ್ದವರು ಕ್ಷುಲ್ಲಕರೊಡನೆ ವಿದೇಶದಲ್ಲಿ ಜೈನಧರ್ಮ ಪ್ರಚಾರ ಮಾಡುವ ಬಗ್ಗೆ ಚರ್ಚೆ ಮಾಡಿದರು. ಅವರು ಈಗ ವಿದೇಶದಲ್ಲಿಯೇ ಇದ್ದಾರೆ. ದಾರಿಯಲ್ಲಿ ಹಲವಾರು ಕಡೆ ಉಪದೇಶ ಕೊಡುತ್ತಾ 18 ರಂದು ಮವಾನಕ್ಕೆ ಬಂದೆವು.

ಮವಾನದಲ್ಲಿ ವಿಧಾನ

ಲಖಿಮಿಚಂದ ಜೈನರು ಸಂಘದ ಚೈತ್ಯಾಲಯವನ್ನೇ ಮನೆಗೆ ತೆಗೆದುಕೊಂಡು ಹೋಗಿ ಶಾಂತಿವಿಧಾನವನ್ನು ಮಾಡಿದರು. ಶ್ರೀಪಾಲ ಜೈನರು ಪಂಚಮೇಷ್ಠಿ ಆರಾಧನೆ ಮಾಡಿದರು. ಇಲ್ಲೆಲ್ಲ ಆಶೀರ್ವಾದ ಮಾಡಿ 21 ರಂದು ಹಸ್ತಿನಾಪುರದ ಜಂಬೂದ್ವೀಪ ಸ್ಥಳಕ್ಕೆ ಬಂದೆವು. ದೊಡ್ಡ ಬಸದಿಯ ಹತ್ತಿರ ಬರುತ್ತಲೇ ಅಲ್ಲಿದ್ದ ಗುರುಕುಲದ ವಿದ್ಯಾರ್ಥಿಗಳೆಲ್ಲ ಮೆರವಣಿಗೆಯಲ್ಲಿ ಜಂಬೂದ್ವೀಪದ ಸ್ಥಳದವರೆಗೂ ಬಂದರು. ದ್ವಾರದಲ್ಲಿ ಆತ್ಮೀಯವಾದ ಸ್ವಾಗತವಾಗಿ ಮೊದಲು ಕಲ್ಪವೃಕ್ಷ ಮಹಾವೀರಸ್ವಾಮಿಯ ದರ್ಶನ ಮಾಡಿ ಹತ್ತು ನಿಮಿಷ ಶ್ರಾವಕರಿಗೆ ಆಶೀರ್ವಾದ ಮಾಡಿ ಆಹಾರಕ್ಕೆ ಹೊರಟೆವು. ಹೀಗೆ ಕಾರ್ತಿಕದಿಂದ ಫಾಲ್ಗುಣದವರೆಗಿನ ಯಾತ್ರೆ ಸುಖಕರವಾಗಿ ನಡೆಯಿತು. ಬಡೌತ ಮೇರಠನಲ್ಲಿ ಇನ್ನು ಕೆಲವು ದಿನ ಅಲ್ಲೇ ತಡೆಯುವ ಉದ್ದೇಶ ಇದ್ದರೂ ಮಹೋತ್ಸವ ಉದ್ದೇಶದಿಂದ ಎಲ್ಲೂ ನಿಲ್ಲದೇ ಹಸ್ತಿನಾಪುರಕ್ಕೆ ಬಂದಾಯಿತು.

೯೯

ಜಂಬೂ ದ್ವೀಪ ಮಹೋತ್ಸವದ ತಯಾರಿ

ಜಂಬೂದ್ವೀಪದ ಮಂದಿರಗಳನ್ನು ದರ್ಶನ ಮಾಡಿ ಮನಸ್ಸಿಗೆ ಖುಷಿ ಆಯಿತು. 23 ರಂದು ಸಿದ್ಧಾಂತಸಾರ ದೀಪಕದ ಸ್ವಾಧ್ಯಾಯ ಪ್ರಾರಂಭ ಮಾಡಿದೆ. ಕ್ಷೇತ್ರದಲ್ಲಿ ದಿನಚರ್ಯೆ ಸುವ್ಯವಸ್ಥಿತವಾಗಿ ನಡೆಯುತ್ತಿತ್ತು. 'ಹ್ರೀಂ' ಮಂದಿರ, ಕಮಲಮಂದಿರದ ಕೆಲಸ ನಡೆಯುತ್ತಿತ್ತು. ಸುಮೇರು ಮಂದಿರದ ಗೋಡೆಗಳ ಮೇಲೆ ದರ್ಶನಾರ್ಥಿಗಳು ಹೆಸರು ಬರೆದು ಗೋಡೆಗಳ ಅಂದ ಕೆಡಿಸಿದ್ದು ನೋಡಿ ಬಹಳ ಮನಸ್ಸಿಗೆ ವೇದನೆಯಾಯಿತು. ಜನಗಳಲ್ಲಿ ತಮ್ಮದೆ ಯಾತ್ರೆ ಸ್ಥಳಗಳನ್ನು ಜೋಪಾನವಾಗಿ ನೋಡಿಕೊಳ್ಳುವ ಬುದ್ಧಿ ಬರಬೇಕು.

ಅಷ್ಟಾಹ್ನಿಕ

ಮಾರ್ಚ 8 ರಂದು ಅಷ್ಟಾಹ್ನಿಕ ಪರ್ವ ಪ್ರಾರಂಭವಾಯಿತು. ಭಗವಾನ ಚಂದ್ರ ಪ್ರಭಸ್ವಾಮಿಗೆ ನಿರ್ವಾಣ ಲಾಡು ಅರ್ಪಿಸಲಾಯಿತು. ಬೆಳಗ್ಗೆ 10.10 ಕ್ಕೆ ಧ್ವಜಾರೋಹಣೆ, ಅಂಕುರಾರೋಪಣ ಸಕಲೀಕರಣ ಕಾರ್ಯಗಳು ನಡೆದವು. ಅದೇ ದಿನ ಪ್ರತಿಷ್ಠಾ ಮಹೋತ್ಸವದ ಮೀಟಿಂಗ್ ಇತ್ತು. ಎಲ್ಲ ಕಡೆಯಿಂದ ಆಗಮಿಸಿದ್ದ ಭಕ್ತರು ತಮ್ಮ ತಮ್ಮ ಕೆಲಸಗಳನ್ನು ವಹಿಸಿಕೊಂಡರು. ಮಾರ್ಚ 11 ರಂದು ಆರಾಧನೆ ಸಮಾಪ್ತವಾಯಿತು. ಈ ಆರಾಧನೆಯಲ್ಲಿ ತೀಸಚೌಬೀಸ ಪೂಜೆಗಳು ಇವೆ. ಜಂಬೂದ್ವೀಪದಲ್ಲಿ ಒಂದು ಭಾರತ, ಒಂದು ಐರಾವತವಿದೆ ಹಾಗೇ ಧಾತಕೀ ಖಂಡದಲ್ಲಿ ಎರಡು ಭಾರತ, ಎರಡು ಐರಾವತ, ಹಾಗೇ ಪುಷ್ಕರಾರ್ಧ ದ್ವೀಪದಲ್ಲಿ ಎರಡು ಭಾರತ, ಎರಡು ಐರಾವತ ಹೀಗೆ ಐದು ಭಾರತ, ಐದು ಐರಾವತ ಕ್ಷೇತ್ರವಿದೆ. ಪ್ರತ್ಯೇಕ ಚತುರ್ಥಕಾಲದಲ್ಲಿ ಇವುಗಳಲ್ಲಿ 24-24 ತೀರ್ಥಂಕರರು ಇರುತ್ತಾರೆ. ಭೂತ, ವರ್ತಮಾನ, ಭವಿಷ್ಯತ್ತಿನ ಒಟ್ಟು "ತೀಸಚೌಬೀಸ" ತೀರ್ಥಂಕರರಾಗುತ್ತಾರೆ. ಇದರದೇ ಮಹೋತ್ಸವ ಆರ್ಯಿಕೆ ಪದ್ಮಾವತಿಯವರು ಏಳುನೂರ ಇಪ್ಪತ್ತು ಉಪವಾಸ ಮಾಡಿದ್ದರು. ಈ ಆರಾಧನೆಯ 3-4 ಜಯಮಾಲೆಗಳನ್ನು ಮಾಧುರಿ ಟೇಪರೆರ್ಕಾಡ್ ಮಾಡಿದ್ದಳು. ದಿನ ಅದನ್ನೇ ಕೇಳುತ್ತಾ ಮಲಗುತ್ತಿದ್ದೆ. ನನಗೆ ಸೋಲಹ ಕಾರಣದ ಪ್ರಥಮ ಉಪವಾಸ ಇದೆ. ಶ್ರೀಪಾಲ ಜೈನರು ವೈಶಾಖದಲ್ಲಿ ಇಂದ್ರಧ್ವಜ ಆರಾಧನೆ ಮಾಡಲು ಅನುಮತಿ ಪಡೆದು ಹೋದರು. ಸಮಸ್ಯೆಗಳ ಬಿಡುಗಡೆಗೆ ಆರಾಧನೆಯೇ ಬಹಳ ದೊಡ್ಡ ಆಸರೆಯಾಗಿದೆ.

ಗಂಟಲ ನೋವಿನಿಂದ ತೊಂದರೆ

ಮಾರ್ಚ 11 ರಂದು ವಾತಾವರಣ ತಂಪಾಗಿದ್ದರಿಂದ ಜ್ವರ, ಗಂಟಲು ನೋವು ಬಾಧಿಸತೊಡಗಿತು. ಮೇರಠನಿಂದ ವೈದ್ಯ ಬರಬೇಕಾಯಿತು. ರಾತ್ರಿ ಒಣಕೆಮ್ಮು ಬಾಧಿಸುತ್ತಿತ್ತು. ಮತ್ತೇ ಡಾಕ್ಟರುಗಳು ಸೇರಿ ರೋಗಕ್ಕೆ ಮದ್ದು ಯೋಚಿಸತೊಡಗಿದರು. ಕೊನೆಗೆ ಗಂಟಲು ರೋಗದ ವಿಶೇಷಜ್ಞರನ್ನು ಕರೆಸಿ ಪರೀಕ್ಷಿಸಲಾಗಿ ಹಲ್ಲುಗಳು ಅಲ್ಲಾಡುತ್ತಿರುವುದರಿಂದ ಅಂಗಳದಲ್ಲಿ ಗುಳ್ಳೆಯಾಗಿದೆ. ಎಂದು ಅದಕ್ಕಾಗಿ ಮೊಸರಿನಿಂದ ಬಾಯಿ ಮುಕ್ಕಳಿಸಬೇಕೆಂದು ಸಲಹೆ ಇತ್ತರು. ಮತ್ತೇ ಸೆಪುದ್ವೀನರು ಬಂದರು. ಅವರು ಯಾವುದೇ ಕೆಲಸವಿದ್ದರು ಕರೆಯಹೋದ ತಕ್ಷಣ ಬಂದು ಚಿಕಿತ್ಸೆ ಹೇಳುತ್ತಿದ್ದರು. ಯಾವ ಸಂಭಾವನೆಯನ್ನು ತೆಗೆದುಕೊಳ್ಳುತ್ತಿರಲಿಲ್ಲ.

ಆಚಾರ್ಯ ಪದವಿಯ ಚರ್ಚೆ

ನಾಲ್ಕನೆಯ ಪಟ್ಟಾಧೀಶರಾದ ಅಜಿತಸಾಗರರಿಗೆ ಕ್ಷಯರೋಗ ಪೀಡಿಸುತ್ತಿದ್ದ ಸಮಾಚಾರ ತಿಳಿಯಿತು. ರವೀಂದ್ರ ಹೋಗಿ ದರ್ಶನ ಮಾಡಿ ಅವೆಲ್ಲವನ್ನು ವಿಡೀಯೋ ಮಾಡಿ ನನಗೆ ತೋರಿಸಿದ. ಬಹಳ ದುಃಖವಾಯಿತು. ಅಲ್ಲಿಂದ ಅವರ ಆರೋಗ್ಯದ ಬಗ್ಗೆ ಸಮಾಚಾರ ತರಿಸಿಕೊಳ್ಳುತ್ತಲೇ ಇದ್ದೆವು. ನಮ್ಮ ಮುಂದೆ ಮುಂದಿನ ಪಟ್ಟಾಧೀಶರು ಯಾರು ಎಂಬುವ ಯೋಚನೆ ಬಂದಿತು. ಕೊನೆಗೆ ಆಚಾರ್ಯಕಲ್ಪ ಶ್ರೇಯಾಂಸಸಾಗರರು ಮುನಿದೀಕ್ಷೆಯಲ್ಲಿ ಚಾರಿತ್ರ ತಪ ಜ್ಞಾನದಲ್ಲಿ ಪ್ರೌಢರಾಗಿರುವುದರಿಂದ ಅವರೇ ಸ್ಥಾನವನ್ನು ಅಲಂಕರಿಸಬೇಕೆಂದು ಕೊಂಡೆವು. ಉಪಾಧ್ಯಾಯ ಅಭಿನಂದನ ಸಾಗರರು ಅವರನ್ನು ಅನುಮೋದಿಸಿದರು. ಬ್ರ. ಸೂರಜಮಲ್ಲರು ಚಿಂತನಾರ್ಹರು ಅವರು ಇದೇ ನಿರ್ಣಯ ಹೇಳಿದರು. ರವೀಂದ್ರನು ಅಜಿತಸಾಗರರನ್ನು ದರ್ಶನ ಮಾಡಿ ಅಲ್ಲಿಯ ವಿದ್ಯಮಾನ ತಿಳಿದು ಎಲ್ಲರು ಒಮ್ಮತದಿಂದ ಶ್ರೇಯಾಂಸಸಾಗರರಿಗೆ ಪಟ್ಟ ಒಪ್ಪಿಸಲು ನಿರ್ಣಯಿಸಿರುವ ಸಮಾಚಾರ ತಂದರು. ಇದನ್ನು ಕೇಳಿದ ನಾನು ಭಗವಂತನೇ ಆಚಾರ್ಯ ಅಜಿತಸಾಗರರಿಗೆ ಸ್ವಾಸ್ಥ್ಯ ಲಾಭ ಉಂಟಾಗಿ ದೀರ್ಘಕಾಲದವರೆಗೆ ಧರ್ಮಪ್ರಭಾವನೆ, ಆಚಾರ್ಯ ಪರಂಪರೆ ಮುಂದುವರಿಯಲಿ ಎಂದು ಪ್ರಾರ್ಥಿಸಿದೆ.

ವ್ರತಸಾಧನೆ

ಹದಿನಾರು ಭಾವನೆಯ ಕಾರಣ ಮೊದಲ ಮತ್ತು ಕಡೆಯ ದಿನ ಮಾತ್ರ ಉಪವಾಸ ಮಾಡುವ ಸಾಮರ್ಥ್ಯ ನನ್ನಲ್ಲಿತ್ತು. ಉಳಿದ ದಿನಗಳು ಯಥಾಶಕ್ತಿ ರಸಗಳ ಪರಿತ್ಯಾಗ ಮಾಡುತ್ತಾ ಬಂದೆ. ಇದು ವರ್ಷಕ್ಕೆ ಮೂರು ಬಾರಿ ಆಚರಿಸಲಾಗುತ್ತದೆ. ನನ್ನ ಆರೋಗ್ಯದ ಸ್ಥಿತಿ ಅರಿತಿದ್ದ ಚಂದನಮತಿ ಉಪವಾಸ ಮಾಡುವುದು ಬೇಡವೆಂದು ಆಗ್ರಹ ಪಡಿಸುತ್ತಿದ್ದರು. 1956 ರಲ್ಲಿ ನಾನು ಗುರುದೇವ ವೀರಸಾಗರರಲ್ಲಿ ಕರ್ಮದಹನ ವ್ರತದ ಸಲುವಾಗಿ ಉಪವಾಸ ಬೇಡಿದಾಗ ಅವರು ಜ್ಞಾನಮತೀ ನಾವು ಕೊಟ್ಟಿರುವ ಹೆಸರಿನಂತೆ ನೀನು ಯಾವಾಗಲೂ ಜ್ಞಾನಾರಾಧನೆಯಲ್ಲಿ ತೊಡಗು ನಿನ್ನ ಶರೀರ ಉಪವಾಸವನ್ನು ತಡೆಯುವುದಿಲ್ಲ ಆದ್ದರಿಂದ ಇದರ ಬಗ್ಗೆ ಚಿಂತಿಸಬೇಡ ಎಂದರು. ನಾನು ಮತ್ತೆ ಮತ್ತೆ ಅನುನಯದಿಂದ ಪ್ರಾರ್ಥಿಸಿದೆ. ಮಹಾರಾಜರೇ ತಿಂಗಳಲ್ಲಿ ಒಂದು ಉಪವಾಸದ ಅಭ್ಯಾಸ ಮಾಡುತ್ತೇನೆ ಎಂದು ಗುರುದೇವರಿಂದ ಚಿಕ್ಕದಾದ ಜ್ಞಾನಪಚೀಸಿ ಹಾಗೂ 11 ಅಂಗ, 14 ಪೂರ್ವಗಳ 25 ಉಪವಾಸ ತೆಗೆದುಕೊಂಡೆ. 1958 ರಲ್ಲಿ ಗಿರಿನಾರ ಕ್ಷೇತ್ರಗಳಲ್ಲಿ ಆಚಾರ್ಯರಿಂದ ಕರ್ಮದಹನ ವ್ರತ ಕೈಕೊಂಡು 148 ಕರ್ಮ ಪ್ರಕೃತಿಗಳ ನಾಶಕ್ಕಾಗಿ ಸಿದ್ಧ ಪರಮೇಷ್ಠಿಗಳ ಒಂದೊಂದು ಜಪಮಾಲೆಯನ್ನು ಮಾಡಿದೆ. ಆಚಾರ್ಯರು ತಿಂಗಳಿಗೆ ಒಂದು ಉಪವಾಸ ಆಗದಿದ್ದರೂ ಚಿಂತೆ ಮಾಡಬೇಡವೆಂದರು.

ಇದಾದ ನಂತರ ನಾನು ಚಕ್ರವಾಲ ವ್ರತವನ್ನು ಕೈಕೊಂಡೆ. ಈ ವ್ರತ ಪ್ರತಿತಿಂಗಳು ಆ ತಿಂಗಳ ನಕ್ಷತ್ರ ದಂದು ಮಾಡಬೇಕು. ಮೂರು ವರ್ಷಗಳಲ್ಲಿ ಮುಗಿಸಿದೆ. ನಾನು ಪಂಚಮೇರುವಿನ 80 ಉಪವಾಸಗಳನ್ನು ಮಾಡಿದೆ. ನಂದೀಶ್ವರ ದ್ವೀಪದ 52 ಚೈತ್ಯಾಲಯಗಳ 52 ಉಪವಾಸಗಳು ಇವೆ. ಬೇಲೆಯಲ್ಲಿ ಉಪವಾಸ ಇನ್ನೊಂದು ದಿನ ರಸ ಪರಿತ್ಯಾಗ ಮಾಡುತ್ತಿದ್ದೆ. 1982 ರಲ್ಲಿ ತೀನಚೌಬೀಸಿನ 72 ಉಪವಾಸವಾಯಿತು. 1985-86 ರಲ್ಲಿ ಆರೋಗ್ಯ ಹದಕೆಟ್ಟಿದ್ದರಿಂದ ಏನನ್ನು ಮಾಡಲಾಗಲಿಲ್ಲ. ಉಪವಾಸ ಸಾಧ್ಯವಾಗದ ದಿನ ಬರೇ ಮಜ್ಜಿಗೆ ತೆಗೆದುಕೊಳ್ಳುತ್ತಿದ್ದೆ.

ಭಾದ್ರಪದ ಮಾಸದಲ್ಲಿ ಶ್ರವಣ ಬೆಳಗೊಳಲ್ಲಿ ಒಟ್ಟಿಗೆ ಮೂರು ಉಪವಾಸವನ್ನು ಕೈಕೊಂಡಾಗ ಮಾರನೆಯ ದಿನಕ್ಕೆ ದೇಹದಲ್ಲಿ ಅತೀವ ಅಸ್ವಸ್ಥತೆ ಕಾಣಿಸತೊಡಗಿತು. ಆಗ ಶಿಷ್ಯರು ಅಮ್ಮಾ ನಿಮ್ಮ ಶರೀರದ ಬಗ್ಗೆ ಇಷ್ಟೊಂದು ಅನ್ಯಾಯ ಮಾಡಬೇಡಿ ನೀವು "ಆಮಶಂಕೆ" ರೋಗದಿಂದ ಬಳಲಿದ್ದೀರಿ ಎಂದರು.

ರತ್ನತ್ರಯ ವ್ರತದಲ್ಲಿ ಹುಣ್ಣಿಮೆಯ ದಿನ ಆಹಾರ ಚತುರ್ದಶಿಯ ದಿನ ಉಪವಾಸ ಮಾಡುತ್ತಿದ್ದೆ. 1968 ರಲ್ಲಿ ಭಾದ್ರಪದದಲ್ಲಿ ಪಂಚಮಿ, ನವಮಿಯ ಮಧ್ಯೆ ಉಪವಾಸ ಮೂರು ದಿನ ಆಹಾರ ಹೀಗೆ 5 ವರ್ಷಗಳು ಮಾಡಿದೆ. 1973 ರಿಂದ ಸುಗಂಧ ದಶಮಿಯ ದಿನ 10 ವರ್ಷಗಳವರೆಗೆ ಉಪವಾಸ ಮಾಡಿ ಮುಗಿಸಿದೆ. ಈಗಲೂ 16 ಭಾವನೆಗಳ ವ್ರತ ಮಾಡುತ್ತೀದ್ದೇನೆ. ನನಗೆ ವ್ರತ - ನಿಯಮಗಳನ್ನು ಮಾಡಬೇಕೆಂದು ಆಶೆ ಇದ್ದರೂ ದೇಹ ತಡೆಯುವುದಿಲ್ಲ. ಇದರಿಂದಾಗಿ ಹರಿವಂಶ ಪುರಾಣದ ಮರಾಠಿ ವ್ರತ ಕಥೆಯ ಸಂಗ್ರಹವನ್ನು ಓದಿ ಸಂತೋಷ ಪಡುತ್ತಿದ್ದೆ. ಇಂದು ಕೂಡ ಅನೇಕರು 8-8, 10-10 ಉಪವಾಸ ಮಾಡಿಯೂ ಧೃಡವಾಗಿ ಇರುವುದನ್ನು ಕಂಡಿದ್ದೆನೆ. ಸಿದ್ಧಾಂತಕ್ಕೆ ಅನುಸಾರ ಅವರಲ್ಲಿ ಸ್ಥಿರವಾದ ನಾಮಕರ್ಮ ಉದಯವಾಗಿದೆ ಎಂದು ತಿಳಿಯಬೇಕು. ಪೂರ್ವ ಪುಣ್ಯವು ಇರಬೇಕು. ಅಂತಹವರು ಮಾತ್ರ ತಪಶ್ಚರಣದಲ್ಲಿ ತೊಡಗಬಹುದು.

ಈ ಪಂಚಮಕಾಲದಲ್ಲಿ ಇಂತಹ ಹೀನ ಸಂಹನನದ ಶರೀರವನ್ನು ಪಡೆದು ಸಂಯಮ ಸಾಧನೆಯಲ್ಲಿ ತೊಡಗಿರುವುದೇ ಹೆಚ್ಚಿನ ವಿಷಯವೆಂದು ತ್ರೈಲೋಕ್ಯ ಪೂಜ್ಯವಾದ ಆ ಜನ್ಮ ಬ್ರಹ್ಮಚರ್ಯೆ ವ್ರತವನ್ನು ಪಡೆದು ಸ್ತ್ರೀ ಪರ್ಯಾಯದಲ್ಲಿ ಸರ್ವೋತ್ಕೃಷ್ಟವಾದ ಆರ್ಯಿಕೆ ದೀಕ್ಷೆ ಪಡೆದಿರುವುದೇ ನನ್ನ ಅಹೋಭಾಗ್ಯ. ಸಮ್ಯಗ್ ಜ್ಞಾನದಲ್ಲಿ ಶುದ್ಧ ಅಭೀಕ್ಷ್ಣ ಜ್ಞಾನೋಪಯೋಗ ಭಾನೆಯಲ್ಲಿ ಇರುತ್ತೇನೆ ಉಪವಾಸ ನಾಮಮಾತ್ರದಲ್ಲಿ ಇದ್ದರು ಭಾವ ಆತ್ಮದಕಡೆಗೆ ತಿರುಗಿಸುತ್ತೇನೆ. ಅದೇ ಭಾವ ನನಗೆ ತಪಶ್ಚರಣೆಗೆ ಶಕ್ತಿಯನ್ನು ಕೊಡಲಿ ಎಂದು ಯೋಚಿಸಿಕೊಂಡು ಸಂತೋಷ ಪಡುತ್ತೇನೆ.

ರಸಪರಿತ್ಯಾಗದ ಅನುಭವ

ನನ್ನಿಂದ ಉಪವಾಸ ಸಾಧ್ಯವಿಲ್ಲವಾದ್ದರಿಂದ ತ್ಯಾಗಭಾವನೆಯಿಂದ ರಸಪರಿತ್ಯಾಗ ಮತ್ತು ಅನ್ನದ ತ್ಯಾಗವನ್ನು ಕೈಕೊಳ್ಳುತ್ತಿರುತ್ತೇನೆ. ಆಹಾರದಲ್ಲಿ ಕೇವಲ ಗೋಧಿಯ ಅನ್ನವನ್ನು ಮಾತ್ರ, ಕೆಲವು ವರ್ಷಗಳವರೆಗೆ ಅನ್ನವನ್ನು ಮಾತ್ರ, ಹೀಗೆ ವ್ರತ ಮಾಡುವುದರಿಂದ ಸಂಘದಲ್ಲಿ ಕೆಲವು ಸಲ ಬರೆ ಚಪಾತಿ, ರೊಟ್ಟಿ ಮಾತ್ರ ತೆಗೆದುಕೊಳ್ಳ ಬೇಕಾಗುತ್ತಿತ್ತು. ಆದರೆ ಇದನ್ನು ಮೊದಲೇ ಯಾರಿಗೂ ಹೇಳುತ್ತಿರಲಿಲ್ಲ. ರಸತ್ಯಾಗ ಮಾಡಿದ ಮೇಲೆ ನಾನು ಸಿಹಿಯನ್ನು ಕಡಿಮೆ ಮಾಡಿದ್ದೆ. 1957 ರಲ್ಲಿ ಗುರುದೇವ ವೀರಸಾಗರರ ಸಮಾಧಿ ಆದಮೆಲೆ ಜೀವನ ಪೂರ್ತಿ ಬೆಲ್ಲ ಸಕ್ಕರೆಯ ತ್ಯಾಗ ಮಾಡಿದ್ದೆ. ಮೊಸರು ಮತ್ತು ಎಣ್ಣೆಯನ್ನು ಬಿಟ್ಟಿದ್ದೆ. ಆಚಾರ್ಯ ಮಹಾವೀರ ಕೀರ್ತಿಗಳು ಹಲವಾರು ಬಾರಿ ತ್ಯಾಗದ ವಸ್ತುಗಳನ್ನು ಆರೋಗ್ಯ ಸರಿಇಲ್ಲದಾಗ ವ್ರತ ಬಿಟ್ಟು ತೆಗೆದುಕೊಳ್ಳಬಹುದು ಎಂದು ಹೇಳುತ್ತಿದ್ದರು.

1963ರಲ್ಲಿ ಸಮ್ಮೇದ ಗಿರಿಯಾತ್ರೆಯ ಸಮಯದಲ್ಲಿ ಉಪ್ಪನ್ನು ತ್ಯಾಗ ಮಾಡಿದ್ದೆ. ಇದಕ್ಕೆ ಮೊದಲು ವರ್ಷಕ್ಕೆ 3-4 ತಿಂಗಳು ಉಪ್ಪನ್ನು ತ್ಯಾಗ ಮಾಡಿರುತ್ತಿದ್ದೆ. ಹಣ್ಣು ಮತ್ತು ತರಕಾರಿಗಳಲ್ಲಿ ಸೇಬು, ದಾಳಿಂಬೆ, ಬಾಳೆಹಣ್ಣನ್ನು ತರಕಾರಿಗಳಲ್ಲಿ ಪಡವಲ ಮತ್ತು ಬಾಳೆಕಾಯಿ ಮಾತ್ರ ತೆಗೆದುಕೊಳ್ಳುತ್ತಿದ್ದೆ. ಕಳೆದ 10 ವರ್ಷಗಳಿಂದ ತುಪ್ಪವನ್ನು ತ್ಯಾಗ ಮಾಡಿದ್ದೇನೆ. ಎರಡು ತಿಂಗಳಿಗೊಮ್ಮೆ ಮಾತ್ರ ತುಪ್ಪವನ್ನು ತೆಗೆದುಕೊಳ್ಳುತ್ತೇನೆ.

1985-86ರ ದೀರ್ಘಕಾಲದ ಖಾಯಿಲೆಯ ಸಮಯದಲ್ಲಿ ವೈದ್ಯರು ಹಕೀಮರು ದೂರುತ್ತಿದ್ದರು. ಮಾತಾಜೀ ತುಪ್ಪ, ಉಪ್ಪು , ಸಿಹಿ ಎಲ್ಲವನ್ನು ತ್ಯಾಗ ಮಾಡಿ ಜೊತೆಗ ನೀರಸವಾದ ಭೋಜನ ಅರೆಹೊಟ್ಟೆ ಭೋಜನದಿಂದ ತಮ್ಮ ಶರೀರಕ್ಕೆ ಬಹಳ ಅನ್ಯಾಯ ಮಾಡುತ್ತಿದ್ದೀರಿ. ಇದರಿಂದಲೇ ಅವರಿಗೆ ಜೀವಸತ್ವಗಳ ಕೊರತೆ ಆಗುತ್ತಿದೆ ಎಂದು. ಇದನ್ನು ಕೇಳಿದ ಶಿಷ್ಯರು ನಿಮಗೆ ಇದಕ್ಕಿಂತ ಹೆಚ್ಚು ಕಾಯಿಲೆ ಏನಾಗಬೇಕು. ಉಪ್ಪಿನ ತ್ಯಾಗವನ್ನು ಬಿಡಲೇ ಬೇಕೆಂದು ಶಾಸ್ತ್ರದ ಆಧಾರವನ್ನು ಇಟ್ಟುಕೊಂಡು ತ್ಯಾಗವನ್ನು ಹಿಂದೆ ತೆಗದುಕೊಳ್ಳುವವರೆಗೂ ಬಿಡಲೇ ಇಲ್ಲ. ಇಂದು ಉಪ್ಪು ತ್ಯಾಗ ಮಾಡಿದ ದಿನ ನೆಗಡಿ ತಕ್ಷಣ ಕಾಣಿಸಿಕೊಳ್ಳುತ್ತದೆ. ಇದನ್ನು ಅರಿತ ವೈದ್ಯರು, ಶಿಷ್ಯರು ಉಪ್ಪನ್ನು ತ್ಯಾಗಮಾಡಲು ಬಿಡುವುದೇ ಇಲ್ಲ. ನನಗೆ ನನ್ನ ದೇಹದ ಮೇಲೆ ಇರುವುದಕ್ಕಿಂತ ಶಿಷ್ಯರಿಗೆ ನನ್ನ ಮೇಲೆ ಇರುವ ಅಧಿಕಾರವೇ ಜಾಸ್ತಿಯಾಗಿದೆ.

ಅನಗಾರ ಧರ್ಮಾಮೃತದಲ್ಲಿ ಶಕ್ತಿತಃತ್ಯಾಗ, ಶಕ್ತಿ ತಸ್ತಪ, ಮಾಡಬೇಕೆಂದು ಉಲ್ಲೇಖವಿದೆ. ಆದರೆ "ಸರ್ವ ಶಕ್ತ್ಯಾ ವೈಯಾವೃತ್ಯಂ" ನಲ್ಲಿ ಸಾಧುಗಳು ತಮ್ಮ ಎಲ್ಲಾ ಶಕ್ತಿಯನ್ನು ತೊಡಗಿಸಬೇಕು ಎಂದಿದೆ. ಆದ್ದರಿಂದಲೇ ನಾನು ನನ್ನ ಶಿಷ್ಯರಿಗೆ ಹೆಚ್ಚು ರಸಪರಿತ್ಯಾಗವನ್ನಾಗಲೀ ಹೆಚ್ಚು ಉಪವಾಸವನ್ನಾಗಲೀ ಕೊಡುವುದಿಲ್ಲ. ಅದಕ್ಕೆ ಬದಲು ನೀವು ಹೆಚ್ಚು ಪರಿಗ್ರಹಗಳನ್ನು ತ್ಯಾಗ ಮಾಡಿ ಇದೇ ದೊಡ್ಡ ತ್ಯಾಗವೆಂದು ಹೇಳುತ್ತಿರುತ್ತೇನೆ ಸಾಧುಗಳಿಗೆ 24 ಗಂಟೆಗೊಮ್ಮೆ ಆಹಾರ ಅದು ಅಂತರಾಯವಾಗದಂತೆ ಆದರೆ ಸರಿ ವ್ರತಗಳನ್ನು ತಮಗೆ ತಾವೇ ತೆಗೆದುಕೊಳ್ಳಬಾರದು. ರಸಾದಿಗಳನ್ನು ತ್ಯಾಗ ಮಾಡುವುದರಿಂದ ಆತ್ಮಿಕ ಶಕ್ತಿಯು ಖಂಡಿತಾ ಹೆಚ್ಚುತ್ತದೆ. ಆದಿ ಪುರಾಣದಲ್ಲಿ ಒಂದು ಶ್ಲೋಕವಿದೆ.

ರಸತ್ಯಾಗ ಪ್ರತಿಜ್ಞಾಸ್ಯ ರಸಋದ್ಧಿರಭೂನ್ಮುನೇಃ ರಸತ್ಯಾಗ ಮಾಡುವ ಮುನಿಗೆ ರಸದ ವೃದ್ಧಿಗಳು ಪ್ರಕಟವಾಗುತ್ತದೆ. ಈಗಲೂ ಚಂದನಮತಿ ಆಹಾರದಲ್ಲಿ ಒತ್ತಾಯ ಮಾಡಿದರು. ಹಲ್ಲ, ಕೀರ್ ತೆಗೆದುಕೊಳ್ಳುವುದಿಲ್ಲ. ಆಹಾರವಾದ ಮೇಲೆ ಬಂದು ನನ್ನಲ್ಲಿ ಹೇಳುತ್ತಿರುತ್ತಾರೆ. ಮಾತಾಜೀ ನನಗೆ ನೀರಸವಾದ ಆಹಾರದಲ್ಲೇ ತೃಪ್ತಿಯಾಗುತ್ತದೆ. ಜನರು ಹಾಲು, ತುಪ್ಪವನ್ನು ನೀಡಿ ಸಂದಿಗ್ಧಗೊಳಿಸುತ್ತಾರೆ. ಅದಕ್ಕೆ ನಾನು ನಿನಗೆ ಯಾವುದು ಹಿತವೆನ್ನಿಸುತ್ತದೆ ಎನ್ನುವ ಕಡೆ ಗಮನ ಕೊಡು. ನೋಡು ನಾನು ನೀರಸವಾದ ಆಹಾರವನ್ನು ತೆಗೆದುಕೊಂಡು 28 ವರ್ಷಗಳಲ್ಲಿ ಸಾವಿರಾರು ಮೈಲಿ ಪಾದಯಾತ್ರೆ ಮಾಡಿದ್ದೇನೆ ಪಠನ, ಪಾಠನ, ಲೇಖನಗಳನ್ನು ನಿರಾತಂಕವಾಗಿ ಮಾಡುತ್ತಾ ಬರುತ್ತಿದ್ದೇನೆ. ಹೀಗಾಗಿ ನೀನು ಆಹಾರದಲ್ಲಿ ನಿನಗೆ ಹಿತವೆನ್ನಿಸುವುದನ್ನು ಮಾತ್ರ ತೆಗೆದುಕೋ ಒತ್ತಾಯಕ್ಕೆ ಮಣಿಯಬೇಡ ಎಂದು ಹೇಳಿದೆ.

ಮೇಯರ್ ಮತ್ತು ಸಭೆ ಸದಸ್ಯರಿಗಾಗಿ

ಏಪ್ರಿಲ್ 5ರಂದು ಉತ್ತರ ಪ್ರದೇಶದ ಮೇರಠನ ನಗರಪಾಲಿಕೆಯ ಅಧ್ಯಕ್ಷ ಮತ್ತು ಸದಸ್ಯ ಸ್ಥಾನಕ್ಕೆ ನಿಂತಿದ್ದ ಮಹನೀಯರು ನನ್ನ ದರ್ಶನಕ್ಕಾಗಿ ಬಂದಿದ್ದರು. ಅವರಿಗೆಲ್ಲ ಮೋತಿಸಾಗರರು ಈ ಜಂಬೂದ್ವೀಪ ಎಂದರೇನು? ಜೈನ ಸಾಧು-ಸಾಧ್ವಿಯರ ಚರ್ಯೆ ಏನು ಮನುಷ್ಯರ ಕರ್ತವ್ಯ ಏನು ಎನ್ನುವುದರ ಬಗ್ಗೆ ಒಳ್ಳೆ ಬೋಧನೆಯನ್ನು ಕೊಟ್ಟರು. ನಂತರ ನಾನು ತಾವುಗಳ ಸದಾಚಾರದಿಂದ ನಿಮ್ಮ ಜೀವನವನ್ನು ಆದರ್ಶಗೊಳಿಸಿ ಕೊಳ್ಳಿ ಧರ್ಮದ ಬಲದಿಂದ ಪರಲೋಕದಲ್ಲಿಯು ಸಿದ್ಧಿಯನ್ನು ಪಡೆಯಿರಿ. "ಓಂ ನಮಃ" ಮಂತ್ರದ ಮಹಿಮೆಯನ್ನು ತಿಳಿಸಿ ಅವರಿಗೆ ಒಂದು ಅತಿಶಯ ಮಂತ್ರವನ್ನು ಪ್ರಧಾನ ಮಾಡಿದೆ.

ತಿಂಗಳಲ್ಲಿ ಹಲವಾರು ಬಾರಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ, ಎನ್.ಸಿ.ಸಿ. ಯವರಿಗೆ ಪೋಲಿಸ್ ವಿಭಾಗದವರಿಗೆ, ಮಿಲಿಟ್ರಿಯವರಿಗೆ ಉಪದೇಶ ಮಾಡುವ ಅವಕಾಶವಿರುತ್ತದೆ. ಹಾಗೇ ರಾಜಕೀಯ ಹಾಗೇ ಪ್ರಬುದ್ಧ ಪರಿವಾರದವರು ದರ್ಶನಕ್ಕಾಗಿ ಬರುತ್ತಿರುತ್ತಾರೆ. ಅವರಿಗೆಲ್ಲ ಅಹಿಂಸೆ ಪ್ರಧಾನವಾದ ಉಪದೇಶ ಕೊಡುತ್ತಾ ಹೆಚ್ಚಿನ ಜನರಿಗೆ ಮಾಂಸ, ಮೊಟ್ಟೆಯ ಮದ್ಯದ ತ್ಯಾಗ ಮಾಡಿಸುತ್ತಿರುತ್ತೇನೆ. ಕೆಲವರು ಉಪದೇಶ ಕೇಳಿಯೆ ತಾವಾಗಿಯೇ ತ್ಯಾಗ ಮಾಡಿದ ಉದಾಹರಣೆಗಳು ಇವೆ. ಕೆಲವರು ಈ ವಸ್ತುಗಳನ್ನು ತ್ಯಾಗ ಮಾಡಲು ಕಷ್ಟ ಪಡುತ್ತಾರೆ. ಆದರೂ ತ್ಯಾಗ ಮಾಡಿದ ಮೇಲೆ ಒಂದು ರೀತಿಯ ಸಂತೃಪ್ತಿಯ ಭಾವವನ್ನು ಹೊಂದುತ್ತಿದ್ದಾರೆ. ಈ ಕ್ಷೇತ್ರ ಮತ್ತು ಗುರುಗಳ ದರ್ಶನದಿಂದ ಅವರ ಜೀವನದಲ್ಲಿ ಸುಖ, ಶಾಂತಿ, ಸಮೃದ್ಧಿಗಳನ್ನು ಖಂಡಿತಾ ಪಡೆಯುತ್ತಿದ್ದಾರೆ ಎಂಬುದು ನಿತ್ಯ ಸತ್ಯ.

ಮೃತ್ಯುಂಜಯ ಆರಾಧನೆ

ಆಯುಧಗಳಿಂದ ವಾಹನಗಳಿಂದ ಅಕಾಲ ಮೃತ್ಯು ಹಾಗೇ ಅಸಾಧ್ಯ ರೋಗವನ್ನು ದೂರಗೊಳಿಸುವ ಸಲುವಾಗಿ ಅನೇಕ ಧರ್ಮಾನುಷ್ಠಾನಗಳನ್ನು ಹೇಳಲಾಗಿದೆ. ಪೌದನಪುರದ ರಾಜಾ ವಿಜಯನು ತನ್ನ ಮೃತ್ಯು ಯೋಗದ ಬಗ್ಗೆ ತಿಳಿದು ರಾಜ್ಯ ತ್ಯಾಗ ಮಾಡಿ ಮಂದಿರದಲ್ಲಿ ಆರಾಧನೆಯಲ್ಲಿ ತಲ್ಲೀನನಾದನು. ಅವನ ಅಕಾಲ ಮೃತ್ಯು ಕಳೆದು ಹೋಯಿತು. ಈ ಕಥೆ ಉತ್ತರ ಪುರಾಣದಲ್ಲಿ ಇದೆ ಮೈನಾಸುಂದರಿ ತನ್ನ ಪತಿಯೊಂದಿಗೆ 700 ಕುಷ್ಟರೋಗಿಗಳ ರೋಗ ನಿವಾರಣೆಗಾಗಿ "ಸಿದ್ಧ ಚಕ್ರ" ಆರಾಧನೆಯನ್ನು ಮಾಡಿದಳು.

ನನ್ನ ಬಳಿ ಹೀಗೆ ಜ್ಯೋತಿಷ್ಯದಲ್ಲಿ ಕಂಡು ಬರುವ ಅಕಾಲ ಮೃತ್ಯು ಯೋಗದ ನಿವಾರಣೆಗಾಗಿ ಬರುತ್ತಿರುತ್ತಾರೆ. ಅವರೆಲ್ಲರಿಗಾಗಿ ಮೃತ್ಯುಂಜಯ ಯಂತ್ರ - ಮಂತ್ರಗಳನ್ನು ಹೇಳಿರುತ್ತೇನೆ. ಶ್ರದ್ಧೆಯಿಂದ ಮಾಡುವವರಿಗೆ ಔಷಧ ಫಲಕೊಡುತ್ತವೆ. ಇಲ್ಲ ಎಂದರೆ ಚಿಕಿತ್ಸೆ ಶಾಸ್ತ್ರ ಔಷಧಾಲಯ ಎಲ್ಲವು ವ್ಯರ್ಥ.

ಶ್ಲೋಕ ವಾರ್ತಿಕಾಲಂಕಾರ ಮುಂತಾದ ಮಹಾಗ್ರಂಥದಲ್ಲಿ ಉಲ್ಲೇಖಿಸಿರುವಂತೆ ಅಂತರಂಗದಲ್ಲಿ ಅಸಾತಾವೇದನೀಯದ ಉದಯವಾಗುವುದರಿಂದ ಬಹಿರಂಗವಾಗಿ ರೋಗಗಳು ಕಾಣಿಸಿಕೊಳ್ಳುವುದರಿಂದ ದುಃಖ ಉಂಟಾಗುತ್ತದೆ. ಆ ಸಮಯದಲ್ಲಿ ರೋಗಾದಿಗಳಿಗೆ ಔಷಧ ಉಪಚಾರದಿಂದ ರೋಗಗಳು ಉಪಶಮನವಾಗುವುವಂತೆ ಧರ್ಮವು ಅದಕ್ಕೆ ಕಾರಣವಾಗಿದೆ.

೧೦೦

ಸಮಯಸಾರ ಗ್ರಂಥದ ಪೂರ್ವಾರ್ಧ

ಸಮಯಸಾರದ ಪೂರ್ವಾರ್ಧ ಅಚ್ಚಾಗಿ ಬಂದಿತು. ಇದರಲ್ಲಿ ಸಂವರ ಅಧಿಕಾರದವರೆಗೆ 201 ಗಾಥೆಗಳಿವೆ. ಗಾಥೆಗಳ ಪದ್ಯಾನುವಾದವನ್ನು ಚಂದನಮತಿ ಮಾಡಿದ್ದಾರೆ. ಅಮೃತಚಂದಸೂರಿಯವರ ಕಳಸ ಕಾವ್ಯದ ಪದ್ಯಾನುವಾದವನ್ನು ಆರ್ಯಿಕೆ ಅಭಯಮತೀಯು ಮಾಡಿದ್ದಾರೆ. ಅದನ್ನು ಇದರಲ್ಲಿ ಸೇರಿಸಲಾಗಿದೆ. ಪ್ರತಿಯೊಂದು ಅಧಿಕಾರದ ನಂತರ ಇಡೀ ಪ್ರಕರಣವನ್ನು ಸಂಕ್ಷಿಪ್ತಗೊಳಿಸಿ ಅದರಲ್ಲಿ ಮಹತ್ವಪೂರ್ಣ ವಿಷಯದ ಸಾರಾಂಶ ಕೊಡಲಾಗಿದೆ. ಅಲ್ಲಲ್ಲಿ ಭಾವಾರ್ಥ ವಿಶೇಷಾರ್ಥದಲ್ಲಿ ಗುಣಸ್ಥಾನ ವ್ಯವಸ್ಥೆ ಹಾಗೂ ನವವ್ಯವಸ್ಥೆಯನ್ನು ಸ್ಪಷ್ಟ

ಪಡಿಸಲಾಗಿದೆ ಆದ್ದರಿಂದಲೇ ಈ ಗ್ರಂಥದ ವಾಚನವು ಸಾಧುಗಳಿಗೂ ವಿದ್ವಾಂಸರಿಗೂ ಬಹಳ ಮೆಚ್ಚುಗೆಯಾಗಿದೆ. ಸಮಯಸಾರ ಗ್ರಂಥ ಮೊದಲೇ ಸುಂದರವಾಗಿದೆ. ಇದರ ಮುಖ್ಯ ಅಂಶವೇ ಶುದ್ಧಾತ್ಮನಾಗಿದೆ "ಸಮಓಸವ್ವತ್ಥ ಸುಂದರೋಲೋಗೆ" ಇದರ ಗ್ರಂಥಕರ್ತರಾದ ಕುಂದಕುಂದರೇ ಮಹಾನ್ ಆಚಾರ್ಯರು. ಇಲ್ಲಿನ ಮಹಾಮಹೋತ್ಸವದಲ್ಲಿ ಕುಂದಕಂದ ಗೋಷ್ಠಿಯಲ್ಲಿ ಬಿಡುಗಡೆ ಮಾಡುವ ಉದ್ದೇಶದಿಂದ ಮೋತಿಸಾಗರ, ರವೀಂದ್ರರು ಶ್ರಮಪಟ್ಟು ಪ್ರೂಫ ನೋಡುತ್ತಿದ್ದರು.

ಅಷ್ಟಸಹಸ್ರಿಯ ಪ್ರಕಾಶನ

1969 ರಲ್ಲಿ ಚಾತುರ್ಮಾಸದಲ್ಲಿ ಧರ್ಮಸಾಗರರ ಸಂಘದಲ್ಲಿ ಬ್ರಹ್ಮಚಾರಿಗಳಿಗೆ ಆರ್ಯಿಕೆಯರಿಗೆ ಕೆಲವು ಮುನಿಗಳಿಗೂ ಅಷ್ಟ ಸಹಸ್ರಿಯ ಪಾಠ ಮಾಡುತ್ತಿದ್ದೆ. ಮೋತಿಚಂದನ ಪ್ರೇರಣೆಯಿಂದ ಹಿಂದಿ ಅನುವಾದವನ್ನು ಬರೆಯಲು ತೊಡಗಿದ್ದೆ. ಹಾಗೇ ಇದಕ್ಕಾಗಿ ವಿದ್ವಾನ ನ್ಯಾಯತೀರ್ಥ ಭಂವರಲಾಲಜೀ ಇಂದ್ರಲಾಲ ಜೀ ಶಾಸ್ತ್ರಿಯವರು ವಿಶೇಷ ಪ್ರೇರಣೆ ಕೊಡುತ್ತಿದ್ದರು. 1970 ರಲ್ಲಿ ರಾಜಸ್ಥಾನದ ಟೋಂಕದ ಪಾರ್ಶ್ವನಾಥ ಮಂದಿರದಲ್ಲಿ ಕುಳಿತು ಮಹಾನ್ ಗ್ರಂಥದ ಹಿಂದಿ ಅನುವಾದವನ್ನು ಪೂರ್ಣಗೊಳಿಸಿದ್ದೆ. ಆಗ ಶ್ರಾವಕರು ಭಕ್ತಿಯಿಂದ ಮೂಲಗ್ರಂಥ ಮತ್ತು ಅನುವಾದಿತ ಗ್ರಂಥಗಳನ್ನು ಇಟ್ಟು ಶ್ರುತಸ್ಕಂಧ ಆರಾಧನೆಯನ್ನು ಮಾಡಿದ್ದರು. 1974 ರಲ್ಲಿ ಈ ಗ್ರಂಥದ ಪ್ರಥಮ ಭಾಗವು ಪ್ರಕಾಶಗೊಂಡು ದೆಹಲಿಯಲ್ಲಿ ದೇಶಭೂಷಣ ಮಹಾರಾಜರು ಮತ್ತು ಧರ್ಮಸಾಗರರ ಸಾನಿಧ್ಯದಲ್ಲಿ ಮತ್ತು ವಿದ್ಯಾನಂದ ಮಹಾರಾಜರ ಸಾನಿಧ್ಯದಲ್ಲಿಯು ಬಿಡುಗಡೆಗೊಂಡಿತ್ತು.

ಉಳಿದ ಭಾಗಗಳ ಪ್ರಕಾಶನ

1987ರಲ್ಲಿ ದ್ವಿತೀಯ ಭಾಗವು ಪ್ರಕಟಗೊಂಡಿತು. ಆಗ ಮೊದಲ ಭಾಗದ ಕಾಪಿಗಳು ಮುಗಿದಿತ್ತು. ಅಷ್ಟರಲ್ಲಿ ಮೂರನೆಯ ಭಾಗವು ಸಿದ್ಧಗೊಂಡಿತ್ತು. ಹೀಗಾಗಿ 1990 ರಲ್ಲಿ ಮೂರು ಭಾಗಗಳು ಮತ್ತೆ ಅಚ್ಚಾದವು. ಇದಕ್ಕಾಗಿ ಗುರುಗಳ ವಿದ್ವಾಂಸರ ಒತ್ತಾಸೆಯು ಇದ್ದುದ್ದರಿಂದ ಬೇಗನೆ ಪ್ರಕಾಶನ ಕಾರ್ಯವು ಮುಗಿಯಿತು. ಒಟ್ಟಿನಲ್ಲಿ 20 ವರ್ಷಗಳಲ್ಲಿ ಮೂರೂ ಭಾಗವು ಪ್ರಕಟಗೊಂಡಿತು. ಈ ಗ್ರಂಥದ ಅನುವಾದದಲ್ಲಿ ಶಬ್ದಶಃ ಅರ್ಥವನ್ನು ಕೊಟ್ಟು ಯಥಾ ಸ್ಥಾನದಲ್ಲಿ ಭಾವಾರ್ಥ ಮತ್ತು ವಿಶೇಷಾರ್ಥಗಳನ್ನು ಕೊಟ್ಟು ಪ್ರತಿಯೊಂದು ಪ್ರಕರಣವಾದ ಮೇಲೆ ಸಾರಾಂಶವನ್ನು ಕೊಡಲಾಗಿದೆ. ಈ ಟೀಕೆಗೆ "ಸ್ಯಾದ್ವಾದ ಚಿಂತಾಮಣಿ" ಎಂದು ಹೆಸರು ಕೊಡಲಾಗಿದೆ.

ಗ್ರಂಥದ ಕಠಿಣತೆ

ಗ್ರಂಥ ಬರೆಯುವುದೇ ದುಸ್ತರವಾದುದು. ಅದರ ವಿಷಯ ಇನ್ನೂ ಜಟಿಲ ಅದಕ್ಕಾಗಿಯೇ ಗ್ರಂಥದಲ್ಲಿ

ಕಷ್ಟ ಸಹಸ್ರೀ ಸಿದ್ಧಾ ಸಾಷ್ಟ ಸಹಸ್ರೀಯ ಮತ್ರ ಮೇ ಪುಷ್ಯಾತ್ I
ಶಶ್ವದ ಭೀಷ್ಟ ಸಹಸ್ರೀಂ ಕುಮಾರ ಸೇನೋಕ್ತಿ ವರ್ದ್ಧಮಾನಾರ್ಥ II

ಅಂದರೆ ಅಷ್ಟ ಸಹಸ್ರೀಯನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ ಸಹಸ್ರವಾದುದೇ ಕಷ್ಟದಿಂದ ಅರ್ಥವಾಯಿತೆಂದರೆ ನಿಮ್ಮೆಲ್ಲ ಮನೋರಥಗಳು ಸಫಲವಾದಂತೆಯೇ. ಪೀಠಾಧೀಶ ಕ್ಷುಲ್ಲಕ ಮೋತೀಸಾಗರರು

ಮೂರು ಭಾಗಗಳ ಮೂಲಸಂಸ್ಕೃತ ಟಿಪ್ಪಣಿಯ ಪ್ರೂಫನ್ನು ಬಹಳ ಶ್ರಮದಿಂದ ಸಂಶೋಧಿಸುತ್ತಾ ಇದ್ದರು. ದಾರ್ಶನಿಕ ಗ್ರಂಥದ ಸಂಶೋಧನೆ ಎಲ್ಲರು ಮಾಡಲು ಸಾಧ್ಯವಿಲ್ಲ. ಕ್ಷುಲ್ಲಕಜೀ ಸರಸ್ವತಿಯ ಭಕ್ತರಾಗಿದ್ದಾರೆ. ಟಿಪ್ಪಣಿಗಳ ಪ್ರೂಫನ್ನು ವ್ಯಾಕರಣದ ದೃಷ್ಟಿಯಿಂದ ನಾನೇ ನೋಡಬೇಕಾಗಿತ್ತು. ಬ್ರ. ರವೀಂದ್ರನು ಬಹಳ ಆಸಕ್ತಿಯಿಂದ ಗ್ರಂಥದ ಪ್ರಕಾಶನ ಕಾರ್ಯ ಕೈಕೊಂಡಿದ್ದನು. "ಜಂಬೂದ್ವೀಪ ಮಹಾ ಮಹೋತ್ಸವ" ದಲ್ಲಿ ಗ್ರಂಥ ಬಿಡುಗಡೆ ಹೊಂದಲು ಸಿದ್ಧತೆ ನಡೆದಿತ್ತು.

ಆತ್ಮಾನುಶಾಸನ

ಅಭಯಮತೀ ಮಾತಜೀಯವರು ಆತ್ಮಾನುಶಾಸನದ ಪದ್ಯಾನುವಾದ ಮಾಡಿದ್ದರು. ಆದರೆ ಅಚ್ಚಾಗಿರಲಿಲ್ಲ. ಕೊನೆಗೆ ಅವರಿಂದ ಪಡೆದು ಅಚ್ಚಿಗೆ ಕಳುಹಿಸಲಾಯಿತು. ಆರೋಗ್ಯದಲ್ಲಿ ನಿಶ್ಯಕ್ತರಾಗಿದ್ದರು. ಆದರೆ ಜ್ಞಾನಾರಾಧನೆಯಲ್ಲಿ ತಮ್ಮನ್ನು ಯಾವಾಗಲು ತೊಡಗಿಸಿಕೊಳ್ಳುತ್ತಿದ್ದರು. ಆತ್ಮಸಿದ್ಧಿ ಹಾಗೂ ಆತ್ಮಶುದ್ಧಿ ಎರಡಕ್ಕೂ ಜಿನಗಾಮದ ಸ್ವಾಧ್ಯಾಯವೇ ಉಪಾಯ. ಇವರು ಹೀಗೆ ತಮ್ಮ ಕಾರ್ಯವನ್ನು ಮುಂದುವರಿಸಲಿ ಎಂಬುದೇ ನನ್ನ ಆಶಯ.

ಅಷ್ಟ ಮೂಲ ಗುಣ ಪ್ರದರ್ಶಿನಿ

ಅಷ್ಟ ಮೂಲ ಗುಣಗಳೆಂದರೆ ಅಮೃತ ಚಂದಸೂರಿಯವರು ಪ್ರಕಾರ ಮೂರು ಮಕಾರತ್ರಯ ಮತ್ತು ಐದು ಔದುಂಬರ ಫಲ ತ್ಯಾಗ. ಇವುಗಳ ಜೊತೆಗೆ ರಾತ್ರಿ ಭೋಜನತ್ಯಾಗ. 6 ಜೀವದಯ 7 ನೀರನ್ನು ಶೋಧಿಸಿ ಕುಡಿಯುವುದು. 8 ದೇವದರ್ಶನ ಇವೇ 8 ಮೂಲಗುಣಗಳು ಸಾಗಾರ ಧರ್ಮಾಮೃತದಲ್ಲಿ ಇವೆ. 8 ಮೂಲಗುಣಗಳು ಸಾಗಾರ ಧರ್ಮಾಮೃತದಲ್ಲಿ ಪಂ ಆಶಾಧರ ಸೂರಿಗಳ ಅನುಸಾರ ಪಂಚ ಅಣುವ್ರತಗಳು ಮತ್ತು ಮಕಾರ ತ್ರಯಗಳೇ ಎಂಟು ಮೂಲಗುಣಗಳು. ಇದನ್ನೇ ಸಮಂತ ಭದ್ರ ಸೂರಿಗಳು ಹೇಳಿದ್ದಾರೆ.

ಮಹೋತ್ಸವದಲ್ಲಿ ಅಷ್ಟಮೂಲಗುಣಗಳ ಬಗ್ಗೆ ಪ್ರತಿಯೋಗಿತೆಯನ್ನು ಇಡಲು ಚಂದನಮತಿ ಮಾತಾಜೀ ಅದಕ್ಕಾಗಿ ಅರ್ಜಿಗಳನ್ನು ಮುದ್ರಿಸಲು ಯೋಚಿಸಿ, ಸ್ಪರ್ಧೆಯಲ್ಲಿ ಜಯಶೀಲರಾದವರಿಗೆ ಪುರಸ್ಕಾರದ ಯೋಜನೆಯನ್ನು ನನ್ನಲ್ಲಿ ಪ್ರಸ್ಥಾಪಿಸಿದರು. ಈ ಯೋಜನೆ ನನಗೂ ಬಹಳ ಹಿಡಿಸಿತು. ಅದಕ್ಕಾಗಿ ಅವರನ್ನು ಪ್ರೋತ್ಸಾಹಿಸಿದೆ. ಈ ಯೋಜನೆಗೆ ಚಿಕ್ಕ ಮಕ್ಕಳು ಆಕರ್ಷಿತರಾಗುತ್ತಾರೆ. ಅವರ ಚಿತ್ರಕಲೆಯ ಪ್ರದರ್ಶನವು ಆಗುತ್ತದೆ. ಹಾಗೂ ದೊಡ್ಡವರು ಇದರಲ್ಲಿ ಭಾಗವಹಿಸಲು ಆಸಕ್ತಿ ವಹಿಸುತ್ತಾರೆ. ಜನರ ಅಭಿರುಚಿಗೆ ತಕ್ಕಂತೆ ಧರ್ಮವನ್ನು ಅಳವಡಿಸಬೇಕಾದ ಅವಶ್ಯಕತೆ ಇಂದು ಇದೆ. ಇದು ನನ್ನ ಸದಾಶಯವು ಆಗಿದೆ.

ಆಚಾರ್ಯ ಶ್ರೀ ವೀರಸಾಗರರ ಸ್ಮೃತಿ ಗ್ರಂಥ

ನನ್ನ ದೀಕ್ಷಾ ಗುರುಗಳಾದ ವೀರಸಾಗರರ ಬಗ್ಗೆ ಸ್ಮೃತಿ ಗ್ರಂಥವನ್ನು ಹೊರತರಬೇಕೆಂದು ಇಚ್ಛೆಯಿಂದ ವರ್ತಮಾನ ಪತ್ರಿಕೆಯಲ್ಲಿ ಜಾಹೀರಾತನ್ನು ಕೊಡಿಸಿದೆ. ಆದರೆ ಅಷ್ಟರಲ್ಲಿ ಸುಪಾರ್ಶ್ವಮತಿ ಆ ನಿಟ್ಟಿನಲ್ಲಿ

ಕಾರ್ಯಪ್ರವೃತ್ತರಾಗಿರುವ ವಿಷಯ ತಿಳಿದು ಸುಮ್ಮನಾದೆ. ಆದರೆ ಅವರಿಂದ ಕೆಲಸ ಆಗದೆ ಇದ್ದುದ್ದರಿಂದ ಪುನಃ 1985 ರಲ್ಲಿ ಮತ್ತೇ ನಾನೇ ಕೈಗೆತ್ತಿಕೊಂಡೆ. ಆದರೆ ನಮ್ಮ ಮೇಲೆ ಇನ್ನು ಮಹತ್ತರವಾದ ಜವಾಬ್ದಾರಿ ಇದ್ದುದ್ದರಿಂದ ರವೀಂದ್ರಕುಮಾರನು ಮಾತಾಜೀ ಈ ಕಾರ್ಯವನ್ನು ವಿದ್ವಾಂಸರಿಗೆ ವಹಿಸಿ ಲೇಖನಗಳ ಸಂಕಲನವಾದ ನಂತರ ಮುದ್ರಣಕ್ಕೆ ಕೊಡೋಣ ಎಂದನು.

ನಾನು ಕೆಲವು ವಿದ್ವಾಂಸರಿಗೆ ವಿಷಯ ತಿಳಿಸಿದೆ. ಆದರೆ ಯಾರಿಗೂ ಇದರ ಬಗ್ಗೆ ಕೆಲಸ ಮಾಡಲು ಸಮಯವಿರಲಿಲ್ಲ. ಕೊನೆಗೆ ನಾನು ರವೀಂದ್ರಕುಮಾರ, ಚಂದನಮತಿ, ಮೋತಿಸಾಗರರನ್ನು ಕರೆದು ನೀವೆಲ್ಲ ಪರಿಶ್ರಮ ಪಟ್ಟು ವಿಷಯಗಳನ್ನು ಕೂಡಿಸಬೇಕು. ಆಚಾರ್ಯರ ಸ್ಮೃತಿ ಗ್ರಂಥವನ್ನು ನಾವು ಹೊರತರಲೇ ಬೇಕೆಂಬ ಆದೇಶವನ್ನು ಅವರ ಮುಂದಿಟ್ಟೆ.

ನನ್ನ ಆದೇಶವನ್ನು ಶಿರಸಾವಹಿಸಿದ ಮೂವರು ಗ್ರಂಥಕ್ಕಾಗಿ ಶ್ರದ್ಧಾಂಜಲಿ, ಲೇಖನಗಳು, ಸಂಸ್ಮರಣ, ಚಿತ್ರಗಳನ್ನು ಕಲೆ ಹಾಕತೊಡಗಿದರು. ಆ ಸಮಯದಲ್ಲಿ ರವೀಂದ್ರಕುಮಾರನು ಸಂಸ್ಥಾನದ ನಿರ್ಮಾಣದಲ್ಲಿ ಪೂರ್ತಿ ತೊಡಗಿಕೊಂಡಿದ್ದನು. ನನಗೆ ಸಂತೋಷದ ವಿಷಯವೆಂದರೆ ಚಂದನಮತಿಯೇ ಈ ಎಲ್ಲಾ ಭಾರವನ್ನು ವಹಿಸಿಕೊಂಡು ಆಸಕ್ತಿಯಿಂದ ವಿಷಯಗಳನ್ನು ಸಂಗ್ರಹಿಸಿ ಕ್ರಮವಾಗಿ ಅಳವಡಿಸಿಕೊಂಡು, ಪರೀಕ್ಷಿಸಿ, ಟೈಪಿಗೂ ಕೊಟ್ಟರು. ಅದರ ಪರಿಶೀಲನೆಯ ಕೆಲಸವನ್ನು ಅವರೇ ಹೊತ್ತರು. ಇಂದು ಕಷ್ಟದ ಕೆಲಸವೆಂದರೆ ಪ್ರೂಫ ನೋಡುವುದು. ಮೋತಿಸಾಗರರು ಸಂಸ್ಮರಣೆಯ ಲೇಖನಗಳ ಹಸ್ತಪ್ರತಿಗಳನ್ನು ನೋಡುತ್ತಿದ್ದರು. ಇವರಿಬ್ಬರ ಅಚಲವಾದ ಶ್ರದ್ಧೆಯಿಂದ ಮಹೋತ್ಸವ ವೇಳೆಗೆ ಗ್ರಂಥ ಬಿಡುಗಡೆಯಾಗುವ ಭರವಸೆ ಬಂದಿತು. ಆದರೆ ಇದರ ಬಗ್ಗೆ ಅನೇಕ ನಿರಾಶದಾಯಕವಾದ ಪತ್ರಗಳು ಬರತೊಡಗಿತು. ಆಚಾರ್ಯರ ಕಾಲವಾಗಿ 30 ವರ್ಷಗಳು ಕಳೆದಿವೆ. ಅವರ ಕಾಲದ ಬಹಳಷ್ಟು ಜನ ಈಗ ಇಲ್ಲ ಇದನ್ನು ನೋಡಿ ಪ್ರತಿಕ್ರಿಯಿಸುವವರು ಇಲ್ಲವಾದ್ದರಿಂದ ಈ ಕೆಲಸ ಫಲದಾಯಕವಲ್ಲವೆಂದು. ಆದರೆ ಇದೆಲ್ಲಕ್ಕೂ ನನ್ನ ದಿಟ್ಟ ಉತ್ತರ ಏನಾದರೂ ಆಗಲಿ ನನ್ನ ಗುರುಗಳ ಗುಣಗಳನ್ನು ಧರ್ಮನಿಷ್ಠ ಸಮಾಜದ ಮುಂದೆ ತರಲೇ ಬೇಕೆಂಬುದು ಗುರುದೇವರ ಆದರ್ಶ ಜೀವನದ ಹಾಗೂ ಶಿಕ್ಷಾಸ್ಪದ ವಚನಗಳೇ ಭವ್ಯ ಜೀವಿಗಳಿಗೆ ಯುಗ ಯುಗದವರೆಗೂ ಪ್ರೇರಣೆಯನ್ನು ಕೊಡಬಲ್ಲದು. ಗುರುದೇವರ ಭಕ್ತಿಯಿಂದ ಪುಣ್ಯ ಸಂಚಯವು ಆಗುತ್ತದೆ. ಇದೇ ಭಾವನೆಯಿಂದ ಈ ಗ್ರಂಥದ ಪ್ರಕಾಶನಕ್ಕೆ ಪ್ರೇರಣೆಯನ್ನು ಕೊಟ್ಟು ಗುರುದೇವರ ಶ್ರೀಚರಣಕ್ಕೆ ಪರೋಕ್ಷವಾಗಿ ಭಕ್ತಿ ಕುಸುಮಾಂಜಲಿಯನ್ನು ಅರ್ಪಿಸಿದೆ.

ಜಂಬೂದ್ವೀಪದಲ್ಲಿ ಭವ್ಯವಾದ ಕಮಲ ಮಂದಿರ

1975 ರಲ್ಲಿ ಜಂಬೂದ್ವೀಪ ಸ್ಥಳದಲ್ಲಿ ಸ್ವಲ್ಪಜಾಗವನ್ನು ಖರೀದಿಸಿ ಸಣ್ಣ ಗರ್ಭಗೃಹದಲ್ಲಿ 9½ ಅಡಿ ಮಹಾವೀರ ಸ್ವಾಮಿಯನ್ನು ಸ್ಥಾಪಿಸಿ ಸಂಕ್ಷೇಪವಾಗಿ ಪಂಚಕಲ್ಯಾಣವನ್ನು ಮಾಡಿಸಿದ್ದೆವು. ಆ ಸ್ವಾಮಿಯ ಅನುಗ್ರಹದಿಂದಲೇ ಈ ಸ್ಥಳದ ಸುತ್ತ ಮುತ್ತಲಿನ ಜಾಗವನ್ನು ಅವರಾಗೆ ಕೊಟ್ಟರು. ಜಂಬೂದ್ವೀಪದ ರಚನೆ ತ್ರಿಮೂರ್ತಿ ಮಂದಿರ ರತ್ನತ್ರಯ ನಿಲಯ ಅನೇಕ ಧರ್ಮಶಾಲೆಗಳ ರಚನೆಯಾಗಿ ಒಂದು ಅದ್ಭುತವಾದ ತೀರ್ಥಕ್ಷೇತ್ರವಾಗಿ ಭಕ್ತರನ್ನು ಸದಾ ತನ್ನತ್ತ ಆಕರ್ಷಿಸುತ್ತದೆ. ನನ್ನ ಎಲ್ಲಾ ಆಶೆಗಳು ಕಾರ್ಯಗತವಾಗಲು ಮಹಾವೀರ ಸ್ವಾಮಿಯೇ ಕಲ್ಪವೃಕ್ಷವಾಗಿ ನಿಂತಿದ್ದಾರೆ.

ನನ್ನ ಮನಸ್ಸಿನಲ್ಲಿ ಕಮಲದ ಆಕಾರದ ಮಂದಿರವನ್ನು ನಿರ್ಮಾಣ ಮಾಡಿಸಬೇಕೆಂಬ ಆಶೆಯು ಕೊರೆಯುತ್ತಿತ್ತು. ಅಸ್ಸಾಂನಿಂದ ವಾಸು ಎಂಬ ಶಿಲ್ಪಿಯನ್ನು ಕರೆಸಿ ನನ್ನ ಮನದ ರೂಪರೇಖೆಯನ್ನು ಹೇಳಲಾಗಿ ಅವರು ಮಾದರಿಯನ್ನು ಮಾಡಿ ತೋರಿಸಿದರು. ಇಂದು ಇದೇ ಭವ್ಯವಾದ ಕಮಲ ಮಂದಿರ ಕಣ್ಣಮುಂದೆ ನಿಂತಿದೆ. ಅದರ ಕೆಲಸವು ತ್ವರಿತಗತಿಯಲ್ಲಿ ಮುಗಿಯುತ್ತಿದೆ. ಈ ಮಂದಿರದ ವಿಶೇಷವೆಂದರೆ ಕಮಲದ ಮೇಲೆಯು ಸ್ವಾಮಿ ನಿಂತಿದ್ದಾರೆ. ಕಮಲದ ಒಳಗೂ ಸ್ವಾಮಿ ನಿಂತಿದ್ದಾರೆ. ವಾಸುದೇವ ಕಲಾಕಾರರು ಈ ಕಮಲವನ್ನು ನಿರ್ಮಿಸಿದ್ದಾರೆ. ಇಲ್ಲಿ ಪಾರ್ಶ್ವನಾಥ ನೇಮಿನಾಥ ಭಗವಂತವರಿಗೆ ಕಮಲ, ತ್ರಿಮೂರ್ತಿಗಳಿಗೆ ತೋರಣ ಜ್ಞಾನಮತೀ ಕಲಾಮಂದಿರದ ಕಿಡಕಿಗಳನ್ನು ಅವರೇ ನಿರ್ಮಿಸಿದ್ದಾರೆ. ಇವರ ಕೈಗಳಿಂದ ಕಲೆಯು ಅರಳಿ ನಿಂತಿದೆ.

ಅನ್ಯ ನಿರ್ಮಾಣ ಕೆಲಸ

ಸುಮೇರು ಪರ್ವತದ ಕೆಲಸಗಳಲ್ಲಿ ರವೀಂದ್ರನು ಬೆಳಗ್ಗೆ ರಾತ್ರಿ 10-11 ಗಂಟೆಯವರೆಗೂ ತೊಡಗಿಕೊಂಡಿರುತ್ತಿದ್ದನು. ಅದರ ಜೊತೆಗೆ ದಾನಿಗಳ ಹೆಸರನ್ನು ಅಂಕಿತಗೊಳಿಸುವ ಹಾಗೂ ಮಹೋತ್ಸವದ ಕೆಲಸ ಹೀಗೆ ಊಟ ಮಾಡುವುದು ನಿದ್ರೆ ಮಾಡುವುದನ್ನು ಮರೆತಿದ್ದೆ. ಇಂಜಿನಿಯರ್ ಶ್ರೀ. ಕೆ. ಸಿ. ಜೈನ 7-8 ವರ್ಷಗಳಿಂದ ನಿಸ್ವಾರ್ಥವಾಗಿ ದುಡಿಯುತ್ತಿದ್ದಾರೆ. ಈಗ ಅವರಿಗೆ 82 ವರ್ಷವಾಗಿದೆ. ಸೊಂಟ ನೋವುಗಳಿಂದ ಬಳಲುತ್ತಿದ್ದರು. ಪ್ರತಿಯೊಂದು ಕೆಲಸದ ಮೇಲ್ವಿಚಾರಣೆ ಅವರದೇ ಆಗಿದೆ. ಅವರ ಧರ್ಮಪತ್ನಿ ಕೈಲಾಸವತಿಯು ನನ್ನ ವೈಯಾವೃತ್ತಿಯನ್ನು ಆಸಕ್ತಿ, ಶ್ರದ್ಧೆಯಿಂದ ಮಾಡುತ್ತಿದ್ದರು. ಮ್ಯಾನೇಜರ ಗುಮಾಸ್ತ ಮೊದಲಾದವರು ಪತ್ನಿಯರಿಗೂ ವೈಯಾವೃತ್ಯದ ಮಹತ್ವದ ಬಗ್ಗೆ ಹೇಳುತ್ತಿದ್ದರು. ನನ್ನಿಂದ 5-6 ವರ್ಷ ಹಿಂದೆಯೇ ಬ್ರಹ್ಮಚರ್ಯ ವ್ರತ ಪಡೆದಿದ್ದರು.

ನಾಲ್ಕು ಪ್ರತಿಷ್ಠೆಗಳು

ಜಂಬೂದ್ವೀಪದಲ್ಲಿ 1975 ರಲ್ಲಿ ಭ. ಮಹಾವೀರರಿಗೆ ಪಂಚಕಲ್ಯಾಣದ ಪ್ರತಿಷ್ಠೆ ನಡೆದಿತ್ತು. 1979 ರಲ್ಲಿ ಸುದರ್ಶನ ಮೇರುವಿನ 16 ಜಿನ ಬಿಂಬಗಳ ಪ್ರತಿಷ್ಠೆ ನಡೆದಿತ್ತು. ಆಗಲೇ ಪಾಂಡುಕ ಶಿಲೆಯ ಮೇಲೆ ಅಭಿಷೇಕಕ್ಕಾಗಿ ಶಾಂತಿನಾಥ, ಕುಂಥುನಾಥ, ಅರನಾಥ ಮತ್ತು ಬಾಹುಬಲಿಯ 5 ಅಡಿ ಎತ್ತರದ ಪ್ರತಿಮೆಗಳನ್ನು ಪ್ರತಿಷ್ಠಾಪಿಸಲಾಗಿತ್ತು. 1985 ರಲ್ಲಿ ಜಂಬೂದ್ವೀಪದಲ್ಲಿ 185 ಸಿದ್ಧ ಪ್ರತಿಮೆಗಳನ್ನು ಜಿನಮಂದಿರ ಹಾಗೂ ದೇವ ಭವನದ ಗೃಹ ಚೈತ್ಯಾಲಯಗಳಲ್ಲಿ ಸ್ಥಾಪಿಸಲಾಗಿದೆ. ಆದಿ ತೀರ್ಥಂಕರರ ಭರತೇಶರ ಬಿಂಬಗಳನ್ನು ಸ್ಥಾಪಿಸಲಾಗಿದೆ. ಹೀಗೆ ನಾಲ್ಕು ಪಂಚಕಲ್ಯಾಣಗಳು ನಡೆದವು.

ಐದನೆಯ ಪ್ರತಿಷ್ಠೆ

ಜಂಬೂದ್ವೀಪದಲ್ಲಿ ನಿರಂತರವಾಗಿ ನಿಶ್ಚಿತ ಸಮಯದಲ್ಲಿ ಮಹೋತ್ಸವ ನಡೆಯಬೇಕೆಂಬ ಚಿಂತೆ ಇತ್ತು. ಇದಕ್ಕಾಗಿ "ಜಂಬೂದ್ವೀಪ ಜಿನಬಿಂಬ ಪ್ರತಿಷ್ಠಾಪನಾ ಮಹೋತ್ಸವವನ್ನು" ಪ್ರತಿ 5 ವರ್ಷಕ್ಕೊಮ್ಮೆ ಮಾಡಬೇಕೆಂದು ನಿರ್ಧಾರವಾಯಿತು. ಅದರಂತೆ 1985 ರ ನಂತರ 1990 ರಲ್ಲಿ ಪ್ರಥಮ "ಜಂಬೂದ್ವೀಪ

ಮಹೋತ್ಸವ" ನಡೆಸಲಾಯಿತು. ಇದರ ಜೊತೆಗೆ ಪಂಚಕಲ್ಯಾಣ ಪ್ರತಿಷ್ಠೆ, ಇಂದ್ರಧ್ವಜ ಮಧ್ಯಮಲೋಕದ 458 ಅಕೃತ್ರಿಮ ಜಿನಮಂದಿರಗಳಲ್ಲಿ 458 ಜಿನಪ್ರತಿಮೆಗಳ ಜೊತೆಗೆ "ಹ್ರೀಂ' ಮೂರ್ತಿ ಜೊತೆಗೆ 24 ತೀರ್ಥಂಕರರ ಪಂಚಕಲ್ಯಾಣದ ಪ್ರತಿಷ್ಠೆ ಈ ಎಲ್ಲ ಪ್ರತಿಷ್ಠೆಯ ವಿಧಿನಾಯಕ ಮಹಾವೀರಸ್ವಾಮಿ.

1990ನೇ ಮೇ 3 ರಿಂದ 7 ರವರೆಗೆ ಎರಡನೆಯ ಪಂಚಕಲ್ಯಾಣದ ಪ್ರತಿಷ್ಠೆ ನಡೆಯಿತು. ಕಮಲಮಂದಿರದ ಕಳಸಾರೋಹಣ, ಮೇ 6 ರಂದು 91 ಅಡಿ ಎತ್ತರದ ಸಮೇರು ಪರ್ವತದ ಪಾಂಡುಕ ಶಿಲೆಯ ಮೇಲೆ 1008 ಕಳಸಗಳಿಂದ ಜಿನೇಂದ್ರ ದೇವರಿಗೆ ಮಹಾಭಿಷೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಜೈನ ಮಹಾಭಾರತ ಮತ್ತು ರಾಮಾಯಣದ ದೃಶ್ಯಗಳ ಪ್ರದರ್ಶನ. ಏಪ್ರಿಲ್ 28 ರಿಂದ ಮೇ 2 ವರೆಗೆ ಶಿಕ್ಷಣ ಶಿಬಿರಗಳ ಆಯೋಜನೆ ಮಾಡಲಾಗಿತ್ತು.

ಈಗ ಮೋತಿಚಂದ್ರರು ಮತ್ತು ಮಾಧುರಿ ಇಬ್ಬರು ದೀಕ್ಷೆ ತೆಗೆದುಕೊಂಡಿದ್ದರಿಂದ ರವೀಂದ್ರ ಒಬ್ಬಂಟಿಗನಾಗಿದ್ದ. ಮಾರ್ಗದರ್ಶನಕ್ಕಾಗಿ ನನ್ನ ಹತ್ತಿರ ಬಂದಾಗಲೆಲ್ಲಾ ಈಗ ನೀನು ಚಂದನಮತಿ, ಮೋತಿಸಾಗರರ ಮಾರ್ಗದರ್ಶನದಲ್ಲೇ ಮಾಡು ಎಂದು ಸಲಹೆ ಕೊಡುತ್ತಿದ್ದೆ. ಚಂದನಮತಿ ಗ್ರಂಥಗಳ ಪ್ರಕಾಶನ ಕಾರ್ಯದಲ್ಲಿ ಪೂರ್ತಿ ತೊಡಗಿಕೊಂಡಿದ್ದರು. ಈ ಮೂವರು 18-20 ವರ್ಷಗಳಿಂದ ಜಂಬೂದ್ವೀಪ ನಿರ್ಮಾಣ ಜ್ಞಾನಜ್ಯೋತಿ ಪ್ರವರ್ತನೆ ಎಲ್ಲ ಕೆಲಸವನ್ನು ಸುವ್ಯವಸ್ಥಿತವಾಗಿ ಮಾಡಿ ಒಳ್ಳೆಯ ಅನುಭವ ಪಡೆದಿದ್ದರು. ಇದರಿಂದ ಇನ್ನು ಮುಂದೆ ನೀವುಗಳೇ ವಿಚಾರ ವಿಮರ್ಶೆ ಮಾಡಿ ಕಾರ್ಯ ನಿರ್ವಹಿಸಿರೆಂದು ಅವರಲ್ಲಿ ಧೈರ್ಯ ತುಂಬುತ್ತಿದ್ದೆ. ನನಗೆ ಈ ಮೂವರು ಸೇರಿ ಎಲ್ಲಾ ಕೆಲಸಗಳನ್ನು ಮುಂದುವರಿಸುತ್ತಾ ಜೈನಧರ್ಮದ ಕೀರ್ತಿ ಪತಾಕೆಗಳನ್ನು ಎಲ್ಲೆಡೆ ಹರಡುವರೆಂಬ ದೃಢ ವಿಶ್ವಾಸ ನನಗಿದೆ. ಇವರೊಡನೆ ಹೆಗಲಿಗೆ ಹೆಗಲು ಕೊಡುವ ಕಾರ್ಯಕರ್ತರಾದ ಗಣೇಶಲಾಲ ರಾನಿವಾಲ ಕೈಲಾಸಚಂದ ಅಮರಚಂದ ಜೈನ ಮೊದಲಾದವರು ಇದ್ದಾರೆ. ಇಂದು ಕೂಡ ಅವರು ಅದೇ ಭಾವನೆ ಇಟ್ಟುಕೊಂಡಿದ್ದಾರೆ. ಈ ಎಲ್ಲಾ ಗುರುಭಕ್ತ ಶ್ರಾವಕರು "ಆಗಮ ಪ್ರತ್ಯಯ" ದಂತೆ ಸೇರಿಹೋಗಿದ್ದಾರೆ. ಜೈನ ಸಮಾಜ, ರಾಜನೈತಿಕ ರಾಷ್ಟ್ರೀಯ ನೇತಾರರು. ಮೊದಲಾದವರಿಂದ ಜಂಬೂದ್ವೀಪ ನಿರ್ಮಾಣವಾಗಿದೆ. ಮುಂದೆ ಇನ್ನೂ ಬೆಳೆದು ಸರ್ವಾಂಗೀಣ ಜನಗಳಿಗೆ ನೈತಿಕ ಬಲವನ್ನು ಧಾರ್ಮಿಕ ಆಸರೆಯನ್ನು ಕೊಡುವ ದಿವ್ಯಕ್ಷೇತ್ರವಾಗಿ ಬೆಳೆಯಲಿ ಎಂಬುದೇ ನನ್ನ ಮನದಾಸೆ. ಈ ಎಲ್ಲರಿಗೂ ನನ್ನಿಂದ "ಧರ್ಮವೃದ್ಧಿ ರಸ್ತು" ಎಂಬ ಆಶೀರ್ವಾದದೊಂದಿಗೆ ಆದರ್ಶ ಜೀವನವನ್ನು ನಡೆಸುವ ಪ್ರೇರಣೆ ಸಿಗಲಿ.

ವರ್ತಮಾನದಲ್ಲಿ ನನ್ನ ಸಂಘದ ವ್ಯವಸ್ಥೆ

ನನ್ನ ಸಂಘದ ಆರ್ಯಿಕೆ ಶಿವಮತಿ ಇಲ್ಲಿ ಸದಾ ಗುರುವಿನ ವೈಯ್ಯಾವೃತ್ತಿಯನ್ನು ಮಾಡುತ್ತಾ ಜೊತೆಗೆ ಸ್ವಾಧ್ಯಾಯದಲ್ಲಿ ತೊಡಗುತ್ತಾರೆ. ಆರ್ಯಿಕೆ ಚಂದನಮತಿಯು ನನ್ನ ಆದೇಶದಂತೆ ಸಮ್ಯಗ್ ಜ್ಞಾನ ಪತ್ರಿಕೆಯ ಲೇಖನದ ಭಾರವನ್ನೆಲ್ಲಾ ಹೊತ್ತು ನನ್ನ ಕೆಲಸ ಹಗುರಗೊಳಿಸುವುದರ ಜೊತೆಗೆ ಬೇರೆ ಗ್ರಂಥಗಳ ಪ್ರಕಾಶನ, ಬರುವ ಅತಿಥಿಗಳ ಯೋಗಕ್ಷೇಮವನ್ನು ಅವರೇ ವಹಿಸಿಕೊಂಡಿದ್ದಾರೆ. ಕ್ಷುಲ್ಲಕ ಮೋತಿಸಾಗರರಂತು ಗುರುಪುತ್ರ ಭಕ್ತಿಯಲ್ಲಿ ತಾಯಿಯನ್ನು ನೋಡುವಂತೆ ನನ್ನ ಎಲ್ಲ ಭಾರವನ್ನು ತಾವೇ ಹೊತ್ತಿದ್ದಾರೆ. ಕ್ಷುಲ್ಲಿಕೆ ಶ್ರದ್ಧಾಮತಿಯು

ನನ್ನ ಆಜ್ಞೆಗಳನ್ನು ಪಾಲಿಸುವಲ್ಲಿ ಸ್ವಲ್ಪವೂ ಲೋಪ ಬಾರದಂತೆ ನಡೆಯುತ್ತಿದ್ದಾರೆ. ಕು. ಆಸ್ಥಾ, ಬೀನ ಸಂಘದಲ್ಲಿ ಚೌಕ, ಮಾಡುವುದು ಜೌಷಧೋಪಚಾರ ಸೇವೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ.

ಈ ನನ್ನ ಚಿಕ್ಕ ಸಂಘವು ಇಲ್ಲಿಯವರೆಗೆ ಸುವ್ಯವಸ್ಥಿತವಾಗಿ ನಡೆದು ಬಂದಿದೆ. ಎಲ್ಲರು ಜ್ಞಾನಾರಾಧನೆಯಲ್ಲಿ ತತ್ಪರರಾಗಿ ಧರ್ಮಪ್ರಭಾವನೆಯ ಕಾರ್ಯದಲ್ಲಿ ಆಸಕ್ತಿ ತಳೆದು ನನಗೆ ಶಾಂತಿ ಸಂತೋಷವನ್ನು ಉಂಟುಮಾಡಿದ್ದಾರೆ. ನಾನು ನನ್ನ ಅವಶ್ಯಕ ಕ್ರಿಯೆಗಳನ್ನು ಮಾಡುತ್ತಾ ಈ ಎಲ್ಲರಿಗೂ ನನ್ನ ಜೀವನದ ಅನುಭವಗಳನ್ನು ಹೇಳಿ ಹೇಳಿ ಉಚಿತವಾದ ಮಾರ್ಗದರ್ಶನವನ್ನು ಕೊಡುತ್ತಿದ್ದೇನೆ.

ಯಾತ್ರಿಗಳ ಆವಾಗಮನ

ಈಗ ಪ್ರತಿದಿನ ಜಂಬೂದ್ವೀಪದಲ್ಲಿ ಜನಗಳ ಜಾತ್ರೆ ಇರುತ್ತದೆ. ಜೈನಯಾತ್ರಿಗಳು ಬಸ್ಸುಗಳಲ್ಲಿ ಬರುತ್ತಲೇ ಇರುತ್ತಾರೆ. ಅವರಿಗೆ ಉಪದೇಶಗಳನ್ನು ಮಾಡಿ ಜೊತೆಗೆ ಯಂತ್ರ - ಮಂತ್ರಗಳೊಡನೆ ಯಥೋಚಿತವಾದ ವ್ರತಗಳನ್ನು ಕೊಡುತ್ತಾ ಇರುತ್ತೇನೆ. ಮಹಿಳೆಯರಂತು ದರ್ಶನ ಪಡೆದು ಸಂತುಷ್ಟರಾಗಿ ಹೋಗುತ್ತಾರೆ. ಪ್ರತಿದಿನ ಹೊಸ - ಹೊಸ ಯಾತ್ರಿಗಳನ್ನು ನೋಡುವಾಗ ಶಾಂತಿಸಾಗರ ಮಹಾರಾಜರು ಕಂಭೋಜದಲ್ಲಿ ಮುನಿಶ್ರೀ ಸಮಂತ ಭದ್ರರಿಗೆ ಹೇಳುತ್ತಿದ್ದ ಮಾತುಗಳು ನೆನಪಿಗೆ ಬರುತ್ತಿದೆ.

ವಿಹಾರದಿಂದ ನೀನು ಮಾಡುವ ಕೆಲಸವನ್ನು ಈ ಕ್ಷೇತ್ರದಲ್ಲಿದ್ದು ಕೊಂಡೇ ಮಾಡು. ನೀನು ಇಲ್ಲಿ ಇರುವುದಕ್ಕೆ ವಿಕಲ್ಪ ಮಾಡಬೇಡ. ಭ. ಬಾಹುಬಲಿಯ ದೊಡ್ಡ ಪ್ರತಿಮೆಯನ್ನು ಮಾಡಿಸಿ ಪ್ರತಿಷ್ಠಾಪಿಸು ಎಂದು. ಹೀಗೆ ನಾನು ವಿಹಾರ ಮಾಡಿ ಜನರಿಗೆ ಧರ್ಮಲಾಭವನ್ನು ಮಾಡುವ ಕೆಲಸ ಜನರೇ ಇಲ್ಲಿಗೆ ಬಂದು ನನ್ನಿಂದ ಪಡೆದು ಹೋಗುತ್ತಿದ್ದಾರೆ. ನನ್ನಲ್ಲಿ ಈಗ ನಡೆಯುವ ಶಕ್ತಿ ಇಲ್ಲ. ಆದ್ದರಿಂದ ಗುರುಗಳ ಮಾತುಗಳನ್ನು ನೆನಪಿಸಿಕೊಂಡು ಸಂತೋಷ ಪಡಬೇಕು.

ಯಾವುದಾದರು ವಿಶೇಷ ರೋಗದಿಂದ ಪೀಡಿತರಾದವರಿಗೆ ಡಾಕ್ಟರ 6 ತಿಂಗಳು ಚಿಕಿತ್ಸೆ ನೀಡಬೇಕಾಗುತ್ತದೆ. ಎಂದರೆ ಮನೆಯವರು ಒಪ್ಪಿಕೊಳ್ಳಬೇಕಾಗುತ್ತದೆ. ಪಥ್ಯದಲ್ಲಿ ಏನೆಲ್ಲವನ್ನು ತ್ಯಾಗಮಾಡಿಸಿ ನೀರಸ ಆಹಾರವನ್ನು ಸೇವನೆ ಮಾಡಬೇಕು. ಅದೇ ನೀವು ಒಬ್ಬ ಗುರುಗಳ ಬಳಿ ಬಂದರೆ ಅವರು ಕೊಡುವ ನಿಯಮಗಳನ್ನು ಶ್ರದ್ಧಾ ಭಕ್ತಿಯಿಂದ ಮಾಡಿ ಅಸಾತಾ ಕರ್ಮವು ಸಾತಾ ಕರ್ಮವಾಗಿ ರೋಗಿ ಗುಣಮುಖನಾಗುತ್ತಾನೆ. ಔಷಧ ನಿಮಿತ್ತ ಮಾತ್ರ ಒಂದು ಹುಷಾರಾಗಿ ಮೊದಲಿನಂತೆ ಆಗಲಿ ಇಲ್ಲ ಧರ್ಮಧ್ಯಾನದಲ್ಲಿ ಸತ್ತು ಮುಂದಿನ ಭವದಲ್ಲಿ ದೇವಗತಿಯನ್ನು ಪಡೆಯಲಿ. ಅಲ್ಲಿ ಅಣಿಮಾ, ಮಹಿಮಾ ಮೊದಲಾದ ಲೋಕೋತ್ತರ ವೈಭವ ಪಡೆದು ಪಲ್ಯೋಪಮ ಆಯಸ್ಸು ಪಡೆಯಲಿ.

ಹೀಗೆ ಯಾವುದೇ ವ್ಯಾಪಾರದ ಸಿದ್ಧಿಗಾಗಿ ಅಥವಾ ಮೊಕದ್ದಮೆಯ ವಿಚಾರವಾಗಿ ಗೊತ್ತಿಲ್ಲದ ಜನರಿಗೆ ಸಾವಿರ, ಲಕ್ಷಾಂತರ ಹಣ ಕೊಟ್ಟಿದ್ದರೂ. ಕಾರ್ಯ ಆಗುತ್ತದೆ ಎಂಬ ವಿಶ್ವಾಸ ನಮಗಿರುವುದಿಲ್ಲ. ಆದರೆ ಅದೇ ಮುಕ್ತ ಮನಸ್ಸಿನಿಂದ ಭಗವಂತನ ಪೂಜೆ, ಆರಾಧನೆ ಮಾಡಿ ನೀನು ಇದಕ್ಕಾಗಿ ಹಣ ಖರ್ಚು ಮಾಡಿದರು ನಿನಗೆ ಕಾರ್ಯಸಿದ್ಧಿ ಗ್ಯಾರಂಟಿ. ಪೂಜೆಯಿಂದ ವಿಶೇಷ ಪುಣ್ಯ ಸಂಚಯವಾಗುವುದರಿಂದ ಅನಿಷ್ಟ, ಅಶುಭ ಗ್ರಹಗಳು ಉಚ್ಚಾಟನೆಯಾಗಿ ಮನೋಕಾಮನೆ ನಿಯಮದಿಂದ ಆಗೇ ಆಗುತ್ತದೆ. ಇದರಲ್ಲಿ ಸಂದೇಹ ಬೇಡವೇ ಬೇಡ.

ಆದರೂ ಗುರುಗಳ ಮೇಲೆ ಯಾರು ನಂಬಿಕೆ ಇಡುತ್ತಾರೆ. ಸುಶೀಲಕುಮಾರನಂತಹ ಪುಣ್ಯಜೀವಿಗಳು ವಿರಳ. ಅವರು ನಮ್ಮ ಮಾತಿನ ಮೇಲೆ ನಂಬಿಕೆ ಇಟ್ಟುಕೊಂಡು ಇಂದು ತಮ್ಮಮನೋರಥದಲ್ಲಿ ಸಿದ್ಧಿ ಪಡೆಯುತ್ತಿದ್ದಾರೆ. ಅದರ ಅನೇಕ ಉದಾಹರಣೆಗಳು ಪ್ರತ್ಯಕ್ಷ ಇವೆ.

ಒಮ್ಮೆ ಸೀತಾಪುರ ಜಿಲ್ಲೆಯ ಬೆಲಹರಾ ಜಿಲ್ಲೆಯ ವೀರಕುಮಾರ ಜೈನರ ಪುತ್ರ ದಿಲೀಪನು 16-17 ವರ್ಷದವನು ರೈಲಿನಿಂದ ಇಳಿಯುವಾಗ ಆಕಸ್ಮಾತ್ ಇವರಿಂದ ಬೇರೆಯಾದ. ಅವನಿಗೆ ಬುದ್ಧಿಯು ಸ್ಲಲ್ಪ ಕಡಿಮೆ. ಹೀಗಾಗಿ ಅವರ ತಂದೆ ತಾಯಿ ನನ್ನಲ್ಲಿ ಬಂದು ಅಳಲು ತೋಡಿಕೊಂಡರು. ನಾನೊಂದು ಮಂತ್ರವನ್ನು ಕೊಟ್ಟು ಭಕ್ತಿಯಿಂದ ಜಪಿಸಿ ಅವನು ತಾನಾಗಿಯೇ ಬರುವನು ಎಂದು ಸಾಂತ್ವನ ಹೇಳಿ ಕಳುಹಿಸಿದೆ. ನನ್ನಲ್ಲಿ ಅವರು ಮತ್ತೆ ಮತ್ತೆ ಇದೇ ವಿಚಾರವಾಗಿ ನನ್ನ ಬಳಿ ಬಂದಾಗಲೆಲ್ಲ ನಾನು ಅದೇ ಜಪವನ್ನೆ ಜಪಿಸಿರಿ ಎಂದು ಹೇಳಿ ಕಳುಹಿಸಿದೆ. 6 ತಿಂಗಳು ಕಳೆಯಿತು. ಒಂದು ಕಾಲು ಲಕ್ಷ ಜಪ ಮುಗಿಯಿತು. ಅಂದು ಮಂದಿರದಿಂದ ಬರುವಾಗ ಆ ದಿನ ಅವರಿಗೆ ಮಗ ಬರುವನೆಂದು ಅನ್ನಿಸುತ್ತಾ ಮನೆಗೆ ಹೋದರು. ಮಧ್ಯಾಹ್ನ ನೋಡಿದರೆ ಮಗ ಯಾರೊಡನೆಯೋ ಬಂದೇಬಿಟ್ಟ. ಮಗನನ್ನು ಆಲಂಗಿಸಿದ ಅವರಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಜೊತೆಗೆ ಅವರ ಮಗ ಮಾನಸಿಕವಾಗಿ ಸಂಪೂರ್ಣ ಚೆನ್ನಾಗಿದ್ದ. ಅವನನ್ನು ಕರೆದುಕೊಂಡು ಹಸ್ತಿನಾಪುರಕ್ಕೆ ಬಂದರು. ಮಾತಾಜೀ ಇವನ ತಲೆ ಸರಿಯಾಗಿದೆ. ಇದೆಲ್ಲ ನಿಮ್ಮ ಆಶೀರ್ವಾದದ ಫಲ ಎಂದರು. ಅದಕ್ಕೆ ನಾನು ತಮ್ಮ ಇದು ನನ್ನದಲ್ಲ ಇದು ಮಂತ್ರದ ಪ್ರಭಾವ ಎಂದೆ. ಇದು 1984 ರ ಘಟನೆ ಈ ಮಂತ್ರದಿಂದ ಹಲವಾರು ಇಂತಹ ಘಟನೆ ನಡೆದಿದೆ.

ಮಂತ್ರ ಗೋಪ್ಯವಾದುದು

"ಮತ್ರಿಗುಪ್ತ ಭಾಷಿಣೇ" ಎಂದು ಆಚಾರ್ಯ ಶ್ರೀ ವೀರಸಾಗರರು ಹೇಳುತ್ತಿದ್ದರು. ಈ ಧಾತುವಿನಿಂದಲೇ ಮಂತ್ರ, ಮಂತ್ರಣ ಮತ್ತು ಮಂತ್ರೀ ಶಬ್ದವಾಗಿದೆ. ಮಂತ್ರವನ್ನು ಗುರುವಿನಿಂದಲೇ ಪಡೆಯಬೇಕು. ಇದನ್ನು ಗುಪ್ತವಾಗಿಯೇ ಇಡಬೇಕು. ಇದರಿಂದ ಮಂತ್ರಗಳನ್ನು ಅಚ್ಚು ಹಾಕಿಸಬಾರದು ಎಂದು ಹೇಳಿದೆ. ಗುರುಮುಖದಿಂದ ನಾನು ಹಲವಾರು ಮಂತ್ರಗಳನ್ನು ಕಲಿತಿದ್ದೇನೆ. ಅದನ್ನು ನಾನು ಸ್ವಾಸ್ಥ್ಯಲಾಭಕ್ಕಾಗಿ ಬರುವವರಿಗೆ ಮನೆಯಲ್ಲಿ ಶಾಂತಿ, ವ್ಯಾಪಾರದಲ್ಲಿ ಲಾಭ ಹೀಗೆ ಹಲವಾರು ತೊಂದರೆಗೊಳಗಾದವರಿಗೆ ಉಪದೇಶಿಸುತ್ತೇನೆ. ಮಹಾಮಂತ್ರ ಣಮೋಕಾರವು ಮಾತೃಕಾ ಮಂತ್ರವಾಗಿದೆ. ಇದನ್ನು ಯಾವ ಸ್ಥಿತಿಯಲ್ಲು ಜಪಿಸಬಹುದು. ಅದು ಫಲವನ್ನು ಕೊಟ್ಟೇ ಕೊಡುತ್ತದೆ. ಮಾತೃವಿಗೆ ಸಮಾನವಾಗಿ ಸುಖ ಕೊಡುವಂತಹುದು ಹಾನಿಯನ್ನು ಎಂದೂ ಉಂಟುಮಾಡುವುದಿಲ್ಲ. ಎರಡನೆಯದು ಬೀಜಾಕ್ಷರ ಸಹಿತವಾದ ಮಂತ್ರವನ್ನು ಗುರುಗಳಿಂದಲೇ ಪಡೆಯಬೇಕು. ಮಂತ್ರವನ್ನು ಗೋಪ್ಯವಾಗಿ ಇಡಬೇಕು. ಒಂದು ವೇಳೆ ಈ ಮಂತ್ರವನ್ನು ಅಶುದ್ಧವಾಗಿ ಉಚ್ಚರಿಸಿದ್ದೇ ಆದರೆ ಲಾಭಕ್ಕಿಂತ ಹಾನಿಯೇ ಆಗುವ ಸಂಭವ ಇರುತ್ತದೆ ಆದ್ದರಿಂದ ಎಚ್ಚರವಾಗಿರಬೇಕು.

ಇಂದ್ರಧ್ವಜ ಆರಾಧನೆಯ ಧ್ವಜಾರೋಹಣ

1990 ಇಸವಿ ಏಪ್ರಿಲ್ 12 ರಂದು ಹವನ ಪ್ರಾರಂಭವಾಯಿತು. ಆ ಕಡೆ ತ್ರಿಮೂರ್ತಿ ಮಂದಿರದಲ್ಲಿ

ಇಂದ್ರಧ್ವಜ ಆರಾಧನೆಗಾಗಿ ಧ್ವಜಾರೋಹಣೆಯನ್ನು 9.45 ಕ್ಕೆ ಶ್ರೀಪಾಲಜೈನ ಮತ್ತು ಮಗ ಜ್ಞಾನಚಂದ ಜೈನರು ಧ್ವಜಾರೋಹಣೆ ಮಾಡಿದರು. ಈ ಆರಾಧನೆ ಏಪ್ರಿಲ್ 12 ರಿಂದ 22 ರ ವರೆಗೆ ನಡೆಯಿತು. ನಿಜವಾಗಿಯು ಈ ಆರಾಧನೆಯ ಅನುಷ್ಠಾನದಿಂದ ಬರುವ ತೊಂದರೆಗಳನ್ನು ದೂರಮಾಡುವಂತಹುದು. ಎಲ್ಲ ರೀತಿಯ ಮನೋಕಾಮನೆಗಳನ್ನು ಸಿದ್ಧಿಗೊಳಿಸುತ್ತದೆ ಎಂಬುದು ನಿಶ್ಚಿತ.

ಆರ್ಯಿಕಾ ದೀಕ್ಷಾ ದಿವಸ

1956 ರಂದು ಮಾಧೋರಾಜಪುರದಲ್ಲಿ ಆಚಾರ್ಯ ವೀರಸಾಗರರಿಂದ ನಾನು ಆರ್ಯಿಕೆ ದೀಕ್ಷೆ ಪಡೆದೆ. 1990 ಕ್ಕೆ 34 ವರ್ಷವಾಯಿತು. ದೀಕ್ಷೆಯ ದಿನ ಗುರುಗಳು ಆಡಿದ ಮಾತು ಇಂದು ನೆನಪಿಸಿಕೊಳ್ಳುತ್ತೇನೆ. ನಿನ್ನ ದೀಕ್ಷೆಯ ದಿನವನ್ನು ಮರೆಯಬೇಡ ಅಂದಿನ ನಿನ್ನ ಮನಸ್ಸಿನ ಭಾವನೆಯನ್ನು ನೆನಪಿಗೆ ತಂದುಕೊಳ್ಳುತ್ತಲೇ ಇರು. ಇದರಿಂದ ಸಂಸಾರದಿಂದ ಬಿಡುಗಡೆ ಹೊಂದಲು ತಡವಾಗಲಾರದು.

ನನ್ನ ವಿಶೇಷವಾದ ಪುಣ್ಯದ ಯೋಗ

ಪ್ರತಿವರ್ಷ ನನ್ನ ದೀಕ್ಷೆಯ ದಿನ ನನ್ನ ಸಂಯಮ ಜೀವನದ ಸಿಂಹಾವಲೋಕನವನ್ನು ಅವಶ್ಯವಾಗಿ ಮಾಡಿಕೊಳ್ಳುತ್ತೇನೆ. ಪ್ರತಿದಿನ ನನ್ನಲ್ಲಿ ಬರುವ ಜನರು ಜಂಬೂದ್ವೀಪವನ್ನು ನೋಡಿ ಭಾವಾತಿರೇಕದಿಂದ ನನ್ನ ಮುಂದೆಯೇ ಅದನ್ನು ವ್ಯಕ್ತಗೊಳಿಸುತ್ತಾರೆ. ಆಗೆಲ್ಲ ನಾನು ಸಹೋದರನೆ ಈ ಸುಂದರ ಭವ್ಯ ಜಂಬೂದ್ವೀಪದ ರಚನೆಯು ಶ್ರೇಯಸ್ಸೆಲ್ಲಾ ಮೋತಿಸಾಗರರಿಗೆ , ರವೀಂದ್ರಕುಮಾರರಿಗೆ ಸೇರಬೇಕು. ಅಥವಾ ಧನಸಹಾಯ ಮಾಡಿದ ದಿಗಂಬರ ಜೈನ ಸಮಾಜಕ್ಕೆ ಸೇರಬೇಕು. ನಾನು ಕೇವಲ ತಿಲೋಯಪಣ್ಣತ್ತಿ ಗ್ರಂಥದ ಆಧಾರದಿಂದ ನಕ್ಷೆಯನ್ನು ಮಾತ್ರ ಕೊಟ್ಟೆ. ಕಾರ್ಯಕರ್ತರಿಗೆ ಪ್ರೇರಣೆ ಕೊಟ್ಟೆ. ಇದಲ್ಲದೆ ನನ್ನ ಕೆಲಸವೇನಿಲ್ಲ. ಕಮಲ ಮಂದಿರದ ರಚನೆಯಲ್ಲು ಮಾತ್ರ ಸ್ವಲ್ಪ ತಲೆ ಉಪಯೋಗಿಸಬೇಕಾಗಿ ಬಂದಿತ್ತು.

ನಿಜವಾಗಿಯೂ ನಿರ್ಮಾಣ ಕೆಲಸದಲ್ಲಿ ನಾನು ಎಷ್ಟು ಅಲಿಪ್ತಳಾಗಿದ್ದೆ ಎಂದರೆ ಬಹುಶಃ ಯಾರೂ ಯೋಚಿಸಲಾರರು. 1952 ರಲ್ಲಿ ನಾನು ಮನೆಬಿಟ್ಟು ಬರುವಾಗಲೂ ಹಣ ತೆಗೆದುಕೊಂಡು ಬಂದವಳಲ್ಲ. ಹಣವನ್ನು ಇಂದಿಗೂ ಕೈಯಿಂದ ಮುಟ್ಟುವುದಿಲ್ಲ. ನನಗೆ ಇಂದು ಚೆಕ್ ಎಂದರೆ ಏನು ಡಿ.ಡಿ ಎಂದರೆ ಏನು ಗೊತ್ತಿಲ್ಲ. ನನ್ನ ಪೂರ್ವಜನ್ಮದ್ದಲ್ಲ ಅನೇಕ ಜನ್ಮದ ಪುಣ್ಯ ವಿಶೇಷವಿರಬೇಕು ನನಗೆ ಇಂತಹ ಇಬ್ಬರು ಶಿಷ್ಯ ರತ್ನಗಳು ಸಿಕ್ಕಿದ್ದು. ನನ್ನ ಸಂಯಮಕ್ಕೆ ಧಕ್ಕೆ ಬರುವ ಒಂದು ಕೆಲಸವನ್ನು ಆಗಲು ಬಿಟ್ಟಿಲ್ಲ. ನಿರ್ಮಾಣದ ಸಕಲ ಕೆಲಸವು ಅವರದೇ ಇನ್ನು ಮೂರನೆಯ ರತ್ನವೆಂದರೆ ಕು. ಮಾಧುರಿ ನನ್ನ ಆಹಾರ-ವಿಹಾರ ವೈಯ್ಯಾವೃತ್ತಿಯಲ್ಲದೆ ಸಂಸ್ಥಾನದ ಕೆಲಸಗಳಲ್ಲೂ ನನಗೆ ಏನೂ ಚಿಂತೆ ಬರದಂತೆ ನೋಡಿಕೊಳ್ಳುತ್ತಿದ್ದಾರೆ. ನನ್ನ ಲೇಖನದ ಕೆಲಸದಲ್ಲು ಪೂರ್ಣ ಸಹಯೋಗ ಅವಳದ್ದೇ ಈಗ ಆರ್ಯಿಕೆ ಆದ ಮೇಲೂ ತನ್ನ ಸ್ಥಾನದ ಗೌರವಕ್ಕೆ ಚ್ಯುತಿ ಬರದಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ. ನಾನು ನಿರಾತಂಕವಾಗಿ ಗ್ರಂಥಗಳ ರಚನೆ ಮಾಡಲು ಈ ಮೂವರು ಕಾರಣ. ಲೇಖನ ಕಾರ್ಯ ಬೇರೆ ಯಾವುದೇ ಸ್ಥಳದಲ್ಲಿ ಮಾಡಲು ಸಾಧ್ಯವಿಲ್ಲ. ಆಚಾರ್ಯರು ಕುಂದ ಕುಂದಾರ್ದ್ರಿಯಲ್ಲಿ ರಚಿಸಿದಂತೆ, ಶ್ರವಣಬೆಳಗೊಳ ಕ್ಷೇತ್ರದಲ್ಲಿ ಮಹಾನ್ ಗ್ರಂಥಗಳ ರಚನೆ ಆದಂತೆ ನನಗೆ ಈ ತೀರ್ಥಕ್ಷೇತ್ರದಲ್ಲಿ ಗ್ರಂಥ ರಚನೆ ಆಗಿದೆ.

ಪೂರ್ವ ಪುಣ್ಯದಿಂದಲೇ ನಿರಾತಂಕವಾಗಿ ಸಂಯಮದ ಸಾಧನೆ, ಜ್ಞಾನಾರಾಧನೆ, ಸರಸ್ವತಿಯ ಉಪಾಸನೆ ನಡೆದಿದೆ. ಇಂದು ಭಗವಂತನಲ್ಲಿ ಹೇ. ಭಗವಾನ್ ತಮ್ಮ ಕೃಪೆಯಿಂದ ನನ್ನ ಸಂಯಮದ ಜೀವನ ಹೀಗೆಯೇ ನಡೆಯಲಿ ಆತ್ಮ ಶುದ್ಧಿಯಲ್ಲಿ ತೊಡಗಿಕೊಳ್ಳುವ ಶಕ್ತಿ ಹೆಚ್ಚಾಗಲಿ. ಶರೀರದ ಬಗ್ಗೆ ಉಳಿದ ಕೆಲಸಗಳ ಬಗ್ಗೆ ನಿರಾಸಕ್ತಿ ಉಂಟಾಗಲಿ. ಇದೇ ನನ್ನ ದೀಕ್ಷಾ ದಿವಸದ ಬೇಡಿಕೆ, ಭಾವನೆ.

□

ವಿಳನೇ ಖಂಡ



ಏಳನೇ ಖಂಡ

೧೦೧

ದೀರ್ಘವಾದ 14 ವರ್ಷಗಳ ಅಂತರಂಗದ ಭಾವನೆ

1990 ಏಪ್ರಿಲ್‌ವರೆಗಿನ 'ನನ್ನ ನೆನಪುಗಳು' ಗಳಲ್ಲಿ ಸಿಹಿ ಕಹಿ ಅನುಭವವನ್ನು ಬರೆದಿದ್ದೆ. ಇದರಿಂದ ಸಾವಿರಾರು ಓದುಗರು ತಮ್ಮ ದೈನಿಕ ಜೀವನದಲ್ಲಿ ಲಾಭ ಪಡೆದಿದ್ದಾರೆ. ಸಾಮಾಜಿಕ, ಧಾರ್ಮಿಕ ಕಾರ್ಯಕಲಾಪಗಳಿಗೆ ಜನರಿಗೆ ಪ್ರೇರಣೆ ದೊರೆತಿದೆ. ಅನೇಕ ಯುವಕ ಯುವತಿಯರಿಗೆ ಧರ್ಮಪ್ರಭಾವನೆ ಉಂಟಾಗಿದೆ. ಅನೇಕ ಮುನಿ ಆರ್ಯಿಕೆಯರು ಇದನ್ನು ತಮ್ಮ ಜೀವನಕ್ಕೆ ಆಧಾರವೆಂದು ಮನ್ನಿಸಿದ್ದಾರೆ. ಎಂಬ ವಿಷಯ ಅವರ ಪತ್ರಗಳಿಂದ ದೊರೆಯುತ್ತಿದೆ. ಇಂತಹ ಪರಿಣಾಮಗಳನ್ನು ಓದಿ ಇಚ್ಛೆ ಇಲ್ಲದೆ ಬರೆದರೂ ಪರಿಶ್ರಮ ಸಾರ್ಥಕ ಎನ್ನಿಸುತ್ತಿದೆ. ಮೊದಮೊದಲು ಸಂಘದಲ್ಲಿದ್ದವರಿಗೆ, ನನ್ನ ಸಂಪರ್ಕದಲ್ಲಿ ಇರುತ್ತಿದ್ದ ವಿದ್ವಾಂಸರ ಒತ್ತಾಯಕ್ಕಾಗಿ ಬರೆಯಬೇಕಾಗಿ ಬಂದಿತು. 34-40 ವರ್ಷಗಳ ಅನುಭವ ಬರೆದೆ. ಈಗ ಜ್ಞಾನೋದಯ ಗ್ರಂಥಮಾಲೆಯವರು ಇದರ ಎರಡನೆಯ ಆವೃತ್ತಿ ತರುವ ಸಂದರ್ಭದಲ್ಲಿ ಆರ್ಯಿಕೆ ಚಂದನಮತಿಯು ನನ್ನ ಮುಂದಿನ ಜೀವನದ ಅನುಭವವನ್ನು ಸೇರಿಸಲು ಪ್ರಾರ್ಥಿಸುತ್ತಲೇ ಇದ್ದರು. ಹಲವಾರು ಸಲ ಡಾ. ಶೇಖರಚಂದ್ ಜೈನರು ಕೇಳಿಕೊಂಡರು. ಆದರೆ ನನಗೆ ಏಕೋ ಮನಸ್ಸು ಬರುತ್ತಿಲ್ಲ. ಇದಕ್ಕಿಂತ "ಷಟ್ ಖಂಡಾಗಮ" ದ ಸಂಸ್ಕೃತ ಟೀಕೆ ಬರೆಯುವುದರಲ್ಲಿ ಆನಂದ ಸಿಗುತ್ತದೆ. ಆತ್ಮೀಕ ತೃಪ್ತಿ ದೊರೆಯುತ್ತದೆ. 2004 ಮೇ 28 ರಲ್ಲಿ ಕುಂಡಲಪುರದಲ್ಲಿ ನನ್ನ ದರ್ಶನಕ್ಕೆ ಬಂದ. ಪ್ರಾಚಾರ್ಯ ನರೇಂದ್ರ ಪ್ರಕಾಶರವರು ಆಗ್ರಹ ಪೂರ್ವಕವಾಗಿ ಮುಂದಿನ ನೆನಪುಗಳನ್ನು ತಾವು ಬರೆಯಲೇ ಬೇಕೆಂದಾಗ ನಾನು ನಿರುಪಾಯಳಾದೆ. ನನಗೆ ಈಗ 70 ವರ್ಷ ಇನ್ನೂ ಎಷ್ಟು ದಿನ ಬರೆಯುವ ಶಕ್ತಿ ಇರಬಲ್ಲದು ಇನ್ನು ನಾನು ಬರೆಯಬೇಕಾದ ಅಮೂಲ್ಯ ಗ್ರಂಥವಿದೆ ಆದ್ದರಿಂದ ಇದಕ್ಕಾಗಿ ಸಮಯ ಖರ್ಚು ಮಾಡುವುದು ವ್ಯರ್ಥ ಎಂದು ನನ್ನ ಭಾವನೆ.

ಇನ್ನೊಂದು ಕಾರಣ ಇದರಲ್ಲಿ ನನ್ನ ಆತ್ಮ ಪ್ರಶಂಸೆ ಬರಬಹುದು ಎಂದು. ನಾನು ನನ್ನ ಧೃಡತೆ ಮತ್ತು ಸಫಲತೆ ಅಥವಾ ಬೇರೆಯವರಿಂದ ಆಗಿರುವ ಭಕ್ತಿಪೂರ್ವಕ ಕೆಲಸದ ಬಗ್ಗೆ ಬರೆಯಬಲ್ಲೆ ಆದರೆ ನನ್ನ ಕೆಲಸಗಳಲ್ಲಿ ಬೇರೆಯವರು ತೋರಿಸಿದ ಅಸೂಯೆಯನ್ನಾಗಲೀ ಮಾಡಿದ ಅಪಕಾರವನ್ನಾಗಿ ಬರೆಯುವುದು ನನಗೆ ಕಠಿಣ ಎನ್ನಿಸುತ್ತದೆ. ಇದನ್ನು ನೆನೆದಾಗ ಮನಕ್ಕೆ ಕ್ಷೋಭೆ ದ್ವೇಷ ಬರಬಹುದೆಂಬ ಯೋಚನೆಯನ್ನು ನಾನು ಮಾಡಬೇಕಾಗಿದೆ.

ಆಚಾರ್ಯ ಪರಂಪರೆಯ ವಿವಾದ

ನಾನು ಆಚಾರ್ಯ ಪರಂಪರೆಯ ಬಗ್ಗೆ ತಿಳಿಸಿದ್ದೆ. 1990 ಮೇ 9 ರಂದು ಅಜಿತಸಾಗರರು ರಾಜಸ್ಥಾನದ ಸಾಬಲಾದಲ್ಲಿ ಸಮಾಧಿಯಾದರು. ಅದಕ್ಕಿಂತ ಮೊದಲೇ ಐದನೆಯ ಪಟ್ಟಾಚಾರ್ಯರಾಗಿ ಶ್ರೇಯಾಂಸ ಸಾಗರರೇ

ಸಮರ್ಥರೆಂದು ಇಡೀ ಮುನಿವರ್ಗವೇ ನಿರ್ಧರಿಸಿತ್ತು. ಅದರಂತೇ ಜೂನ 10 ರಂದು ರಾಜಾಸ್ಥಾನದ ಲೋಹಾರಿಆಯದಲ್ಲಿ ಆಚಾರ್ಯಕಲ್ಪ ಶ್ರೇಯಾಂಸ ಸಾಗರ ಮಹಾರಾಜರಿಗೆ ಪದವಿಯನ್ನು ಪ್ರದಾನ ಮಾಡಲಾಯಿತು. ಇದಕ್ಕೆ ಬದಲಾಗಿ 1990 ಜೂನ 14 ರಂದು. ಮಹಾಸಭೆಯ ಅಧ್ಯಕ್ಷರಾದ ನಿರ್ಮಲಕುಮಾರ ಸೇಠಿಯವರಿಂದ ಪ್ರಸ್ತುತ ಪಡಿಸಿದ ಗೋಪನೀಯ ಪತ್ರದ ಆಧಾರದ ಮೇಲೆ ಕೆಲವು ಶ್ರೇಷ್ಠಿಗಳು ಹಾಗೂ ಸಾಧುಗಳೇ ಸೇರಿಕೊಂಡು ಸಂಘಸ್ಥ ಮುನಿ ಶ್ರೀ ವರ್ಧಮಾನ ಸಾಗರರನ್ನು ಪಂಚಮ ಪಟ್ಟಾಧೀಶರನ್ನಾಗಿ ಮಾಡಿಕೊಂಡರು. 1924 ರಿಂದ ನಡೆದು ಬಂದಿದ್ದ ಆಚಾರ್ಯ ಚಕ್ರವರ್ತಿಗಳ ಅಖಿಂಡ ಪರಂಪರೆಯು 1990 ರಲ್ಲಿ ಖಂಡಿತವಾಯಿತು. 5 ನೆಯ ಪಟ್ಟಾಧೀಶ ಪದವಿಯು ಇಬ್ಬರಲ್ಲಿ ಹಂಚಿದಂತಾಯಿತು. ಇದರ ವಿವರಣೆ ಸಮ್ಯಗ್ ಜ್ಞಾನ ಪತ್ರಿಕೆಯಲ್ಲಿ ಪ್ರಸಾರವಾಯಿತು. ನಾನು ಹೆಚ್ಚೇನು ಹೇಳದೆ ಇಷ್ಟು ಮಾತ್ರ ಹೇಳಬಲ್ಲೆ. ಪರಂಪರೆಯ ಪಟ್ಟಾವಲಿಯಲ್ಲಿ ಶ್ರಾವಕನು ಪ್ರವೇಶಿಸುವವರೆಗೆ ಪೂರ್ಣನಮ್ರತೆ ಮತ್ತು ಗೌರವವನ್ನು ಉಳಿಸಿಕೊಂಡಿತು. ಹಠಾಗ್ರಹಿಯಾದ ಶ್ರಾವಕನಿಂದ ಸಂಘ ವಿಭಜನೆಗೊಂಡಿದ್ದು ಅನೇಕ ವರಿಷ್ಠ ಸಾಧು - ಸಾಧ್ವಿಯರ ಹೃದಯಕ್ಕೆ ಅತ್ಯಂತ ಆಘಾತವನ್ನು ಉಂಟುಮಾಡಿತು. ಶ್ರಾವಕರಿಗೆ ನಾನು ಪ್ರೇರಣೆ ಕೊಡುವುದೇನೆಂದರೆ ಸಾಧು ಸಂಘಕ್ಕೆ ಬಂದು ಭಕ್ತಿಯಿಂದ ವೈಯ್ಯಾವೃತ್ತಿ ಮೊದಲಾದವುಗಳನ್ನು ಚೆನ್ನಾಗಿ ಮಾಡಿ, ಆದರೆ ಅವರನ್ನು ಪದವಿಯ ಅಥವಾ ಧನದ ಅಮಿಷದಲ್ಲಿ ಬೀಳಿಸಬೇಡಿ ಸಂಘವನ್ನು ಒಡೆಯುವ ಪ್ರಯತ್ನ ಮಾಡದೇ ನಂತರ ಕೃಪಾದೃಷ್ಟಿಗೆ ಪಾತ್ರರಾಗಿ ನಿಮ್ಮ ಜೀವನವನ್ನು ಸುಖಮಯಗೊಳಿಸಿಕೊಳ್ಳಿ. ವರ್ತಮಾನದಲ್ಲಿ ಐದನೆಯವರು ಸ್ವರ್ಗಸ್ಥರಾದ್ದರಿಂದ 6 ನೆಯ ಪಟ್ಟಾಧೀಶರಾಗಿ ಪೂಜ್ಯ ಅಭಿನಂದಸಾಗರರು ಚತುರ್ವಿಧ ಸಂಘವನ್ನು ಸಂರಕ್ಷಿಸುತ್ತಿದ್ದಾರೆ. ಹಾಗೇ ಐದನೆಯವರಾಗಿ ವರ್ಧಮಾನ ಸಾಗರರು ಪರಂಪರೆಯ ಸಂಚಾಲಕರಾಗಿದ್ದಾರೆ.

ವಿವಾದದ ಪರಿಹಾರ

ಕೊನೆಗೂ 1997 ರ ಮಾರ್ಚ 14 ಪುಣ್ಯ ದಿನವಾಯಿತು. ಅಭಿನಂದನ ಸಾಗರರ ಸಂಘ ಮತ್ತು ವರ್ಧಮಾನಸಾಗರರ ಸಂಘ "ಅಣಿಂದಾ ಪಾರ್ಶ್ವನಾಥ" ತೀರ್ಥದಲ್ಲಿ ಒಟ್ಟಾಗಿ ಸೇರಿದ್ದ ಸಂದರ್ಭದಲ್ಲಿ ತಮ್ಮೊಳಗೆ ಮಾತನಾಡಿಕೊಂಡು ಜನರ ಮುಂದೆ ಇಬ್ಬರು ಆಚಾರ್ಯರಿಗೆ ಪಟ್ಟಾಧೀಶ ಪದವಿ ಬೇಡವೆಂದು ಇನ್ನು ಮುಂದೆ 5 ನೆಯ 6 ನೆಯ ಪಟ್ಟಾಚಾರ್ಯರೆಂಬ ಪ್ರಯೋಗ ಮಾಡಬಾರದೆಂದು ನಿರ್ಣಯ ಕೈಕೊಂಡರು. ಈ ರೀತಿ ಮನಸ್ಸಿನಲ್ಲಿದ್ದ ಕ್ಲೇಶ ಸಮಾಪ್ತಗೊಳಿಸಿ ಮುನಿಗಳು ಮನಸ್ಸನ್ನು ಶಾಂತಗೊಳಿಸಿಕೊಂಡರು. ಈ ನಿರ್ಣಯವನ್ನು ರವೀಂದ್ರನಿಂದ ಕೇಳಿ ಬಹಳ ಆನಂದವಾಯಿತು. ನಾನು ಇದನ್ನೇ ಬಯಸುತ್ತಿದ್ದೆ. ಇವರಿಬ್ಬರು ನನ್ನಲ್ಲಿ ಅಭ್ಯಾಸ ಮಾಡಿದವರೆ ನನ್ನಲ್ಲಿ ಮಾತೃಭಕ್ತಿ ಇಟ್ಟುಕೊಂಡಿದ್ದಾರೆ. ನನಗೆ ಅಭಿನಂದನ ಸಾಗರರಲ್ಲಿ ರಾಗವಾಗಲಿ, ವರ್ಧಮಾನ ಸಾಗರರಲ್ಲಿ ದ್ವೇಷವಾಗಲೀ ಇಲ್ಲ. ಒಟ್ಟಿನಲ್ಲಿ ಚಾರಿತ್ರ ಚಕ್ರವರ್ತಿಗಳ ಪರಂಪರೆಯನ್ನು ನಿರ್ದೋಶವಾಗಿ, ಸಂಯಮಧಾರಿಗಳಾಗಿ ಮುನ್ನಡೆಸಲು ತಮ್ಮ ಯೋಗದಾನವನ್ನು ನೀಡಬೇಕು. ಹಾಗೂ ಪರಸ್ಪರ ವಾತ್ಸಲ್ಯವನ್ನು ತೋರಿಸುತ್ತಾ ಸಮಾಜವನ್ನು ಒಂದುಗೂಡಿಸುವ ಪ್ರಯತ್ನ ಮುನಿಗಳದಾಗಬೇಕೆಂದೇ ನನ್ನ ಆಶಯವಾಗಿದೆ.

ಮುನಿಗಳ ಆಚಾರ ಗ್ರಂಥವನ್ನು ಬರೆಯುವ ಅವಶ್ಯಕತೆ ಏತಕ್ಕೆ

1991 ರಲ್ಲಿ ಉತ್ತರ ಪ್ರದೇಶದ ಸರಧನದಲ್ಲಿ ಚಾತುರ್ಮಾಸ ಮಾಡುವಾಗ ಮುನಿ ಮತ್ತು ಆರ್ಯಕೆಯರ ಚರ್ಯೆಗೆ ಸಂಬಂಧಿಸಿದ ಪ್ರತಿಕ್ರಮಣ ಸೂತ್ರದ ಹಿಂದಿ ಅನುವಾದವನ್ನು ಮಾಡುತ್ತಿದ್ದೆ. ಬೇರೆ ಭಕ್ತಿ ಪಾಠಗಳನ್ನು

ನೋಡಿದಾಗ ಆರ್ಷ ಮಾರ್ಗದಲ್ಲಿ ಮಾಡಿರುವ ಸಂಶೋಧನೆಯಲ್ಲಿ ಅತ್ಯಂತ ಘಾತಕವಾದ ವಿಷಯಗಳು ಕಂಡು ಬಂದವು. ಸಂಶೋಧನೆ ನಡೆಸಿರುವ ಮಾರ್ಗವೇ ಮುಂದುವರಿದರೆ ನಮ್ಮ ಪೂರ್ವಾಚಾರ್ಯರ ನಿಜವಾದ ವಾಣಿಗಳೇ ಸಮಾಪ್ತವಾದರೆ ನಮಗೆ ಅಧ್ಯಯನದಿಂದ ಪುಣ್ಯವೆಲ್ಲಿಂದ ಬರುತ್ತದೆ. ಹೀಗಾಗಿ ನಿಮಗೆ ನಿಜವಾದ ಸ್ಥಿತಿ ತಿಳಿಸಲು ಕೆಲವು ಪಾಠಗಳನ್ನು ತೋರಿಸುತ್ತೇನೆ.

ಸಾಮಾಯಿಕ ದಂಡಕ ಮತ್ತು ಥೋಸ್ಸಾಮಿಸ್ತವ

ಕೃತಿಕರ್ಮದ ವಿಧಿಯನ್ನು ಮೂಲಾಚಾರ ಗ್ರಂಥದ ಆಧಾರದಿಂದ ಮುನಿಚರ್ಯೆಯಲ್ಲಿ ಕೊಡಲಾಗಿದೆ. ಇದರಲ್ಲಿ ಸಾಮಾಯಿಕ ದಂಡಕ ಮತ್ತು ಥೋಸ್ಸಾಮಿಸ್ತವವನ್ನೇ ಓದಲಾಗುತ್ತದೆ. ಮುನಿಚರ್ಯೆ ಗ್ರಂಥದಲ್ಲಿ ಪುಟ 7, 100, 196 ರಲ್ಲಿ ಹೀಗೆ ಮೂರು ಬಾರಿ ಸಾಮಾಯಿಕ ದಂಡಕದ ಪಾಠ ಬಂದಿದೆ. ಮತ್ತು ಪುಟ 10, 102, 300 ನೇ ಪುಟದಲ್ಲಿ ಮೂರು ಬಾರಿ ಥೋಸ್ಸಾಮಿಸ್ತವದ ಪಾಠ ಬಂದಿದೆ. ಸಾಮಾಯಿಕ ದಂಡಕದ ಪಾಠ ಭೇದವನ್ನು ಗಮನದಲ್ಲಿ ಇಟ್ಟುಕೊಳ್ಳಿ.

ಮುನಿಚರ್ಯೆ

ಪಚ್ಚಕ್ಖಾಮಿ ಣಿಂದಾಮಿ ಗರಹಾಮಿ ಅಪ್ಪಾಣಂ ಪುಟ - 9
ಪಚ್ಚಕ್ಖಾಮಿ ಣಿಂದಾಮಿ ಗರಹಾಮಿ ಅಪ್ಪಾಣಂ ಪುಟ 276
ಪಡಿಕ್ಕಮಾಮಿ ಣಿಂದಾಮಿ ಗರಹಾಮಿ ಅಪ್ಪಾಣಂ ಪುಟ 102

ಕ್ರಿಯಾ ಕಲಾಪ

ಪಚ್ಚಕ್ಖಾಮಿ ಣಿಂದಾಮಿ ಗರಹಾಮಿ ಅಪ್ಪಾಣಂ ಪುಟ ೧೫
ಪಚ್ಚಕ್ಖಾಮಿ ಣಿಂದಾಮಿ ಗರಹಾಮಿ ಅಪ್ಪಾಣಂ ಪುಟ ೯೦
ಪಡಿಕ್ಕಮಾಮಿ ಣಿಂದಾಮಿ ಗರಹಾಮಿ ಅಪ್ಪಾಣಂ ಪುಟ ೧೪೬
ಪಡಿಕ್ಕಮಾಮಿ ಣಿಂದಾಮಿ ಗರಹಾಮಿ ಅಪ್ಪಾಣಂ ಪುಟ ೧೨೬

ಕ್ರಿಯಾ ಕಲಾಪದಲ್ಲಿ ತೃತೀಯ ಪಾಠದ ಟೀಕೆಯು ಇದೆ. ಆದ್ದರಿಂದ ಈ ಎಲ್ಲಾ ಪಾಠವು ಪ್ರಾಮಾಣಿಕವಾಗಿದೆ. ಇವುಗಳನ್ನು ತಪ್ಪೆಂದು ತಿಳಿಯಬಾರದು.

ಜೀವಿಯ ಮರಣೇ ಲಾಹಾ ಲಾಹೇ ಇದು ಟೀಕಾಕಾರನ ಶ್ಲೋಕವಾಗಿದೆ. ಆದ್ದರಿಂದ ಇದನ್ನು ಸಾಮಾಯಿಕ ದಂಡಕದ ಮೂಲ ಪಾಠದಲ್ಲಿ ಜೋಡಿಸಬಾರದು.

ಥೋಸ್ಸಾಮಿಸ್ತವದಲ್ಲಿ 'ವಂದಾಮಿರಿಟ್ಠಣೇಮಿ' ಪಾಠ ತಪ್ಪಾಗಿಲ್ಲ ರಿಟ್ಠಣೇಮಿಂ ಅರಿಷ್ಟನೇಮಿ ಅರ್ಥವನ್ನು ಕೊಡುತ್ತದೆ.

ಲಘು ಕೃತಿ ಕರ್ಮ ವಿಧಿ

ಪ್ರತ್ಯೇಕ ಭಕ್ತಿ ಪಾಠದ ಪ್ರತಿಜ್ಞೆಯಲ್ಲಿ ಸಾಮಾಯಿಕ ದಂಡಕ ಹಾಗೂ ಥೋಸ್ಸಾಮಿಯನ್ನು ಓದುವುದು ಅವಶ್ಯಕವಾಗಿದೆ. ಲಘು ಭಕ್ತಿ ಪಾಠದಲ್ಲಿ ಅಥವಾ ಯಾವಾಗಲಾದರೂ ಸಮಯಾಭಾವದಲ್ಲಿ ಇದನ್ನು ಓದಿದರೆ

ಪ್ರಮಾದವಾಗುತ್ತದೆ. ಆದ್ದರಿಂದ ವಿಧಿಯ ಪೂರ್ತಿಗಾಗಿ ಮುನಿಚರ್ಯೆ ಪುಸ್ತಕದಲ್ಲಿ ಲಘು ಸಾಮಾಯಿಕ ದಂಡಕದ ಮತ್ತು ಲಘು ಥೋಸ್ಸಾಮಿ ಪಾಠದಲ್ಲಿ ಪುಟ 12-13 ರಲ್ಲಿ ಕೊಟ್ಟಿದೆ. ಈ ಲಘು ಪಾಠವನ್ನು ನಾನು ಪ್ರತಿಷ್ಠಾತಿಲಕ ಗ್ರಂಥದಿಂದ[1] ತೆಗೆದುಕೊಂಡಿದ್ದೇನೆ. ಆದ್ದರಿಂದ ಪ್ರಾಮಾಣಿಕವಾಗಿದೆ.

ಕರೋಮ್ಯಹಂ

ಇಂದು ಕೆಲವು ಸಾಧು ಸಾಧ್ವಿಯರು "ಕುರ್ವೇಹಂ" ಕ್ರಿಯಾವನ್ನು ಓದತೊಡಗಿದ್ದಾರೆ. ಆದರೆ ನನಗೆ ಇದನ್ನು ಪರೀಕ್ಷಿಸಲು ಆಗಲಿಲ್ಲವಾಗಿ ನಾನು ಪ್ರಾಚೀನ ಪಾಠವಾದ ಕರೋಮ್ಯಹಂ ನ್ನ ಎಲ್ಲ ಕಡೆ ಬಳಸಿದ್ದೇನೆ. ಸಿದ್ಧಾಂತ ಚಕ್ರವರ್ತಿ ಶ್ರೀ ವೀರನಂದಿ ಆಚಾರ್ಯರು ಆಚಾರಸಾರ ಗ್ರಂಥದಲ್ಲಿ "ಕರೋಮ್ಯಹಂ"[2] ಪಾಠವನ್ನು ತೆಗೆದುಕೊಂಡಿದ್ದಾರೆ.

ಕ್ರಿಯಾಯಾ ಮಸ್ಯಾಂ ವ್ಯುತ್ಸರ್ಗೇ ಭಕ್ತೇರಸ್ಯಾಃ ಕರೋಮ್ಯಹಂ ।

ಅನಗಾರ ಧರ್ಮಾಮೃತದಲ್ಲಿ ಪಾಕ್ಷಿಕ ಪ್ರತಿಕ್ರಮಣದ ಲಕ್ಷಣದಲ್ಲಿ ಸ್ವೋಪಜ್ಞ ಟೀಕೆಯಲ್ಲಿ "ಕರೋಮ್ಯಹಂ" ಕ್ರಿಯೆಯ ಪ್ರಯೋಗ 15 ಬಾರಿ ಬಂದಿದೆ. ಉದಾಹರಣೆ ನೋಡಿ

ಸರ್ವಾತಿ ಚಾರವಿಶುದ್ಯರ್ಥಂ ಪಾಕ್ಷಿಕ ಪ್ರತಿಕ್ರಮಣ ಕ್ರಿಯಾಯಾಂ "ಸಿದ್ಧ ಭಕ್ತಿ ಕಾಯೋತ್ಸರ್ಗಂ ಕರೋಮ್ಯಹಂ"[3] ಮುಂತಾಗಿ ಕ್ರಿಯಾಕಲಾಪದಲ್ಲಿ ದೇವ ವಂದನೆ ದೈವಸಿಕ, ಪ್ರತಿಕ್ರಮಣ ಪಾಕ್ಷಿಕ ಪ್ರತಿಕ್ರಮಣ ಹಾಗೂ ಅನ್ಯ ಕ್ರಿಯೆಗಳನ್ನು ಪ್ರಯೋಗ ವಿಧಿಯಲ್ಲಿ ಕರೋಮ್ಯಹಂ ದ ಪಾಠವೇ ಉಪಲಭ್ಯವಿದೆ.

ಚಾರಿತ್ರಸಾರ ಗ್ರಂಥದಲ್ಲಿ ಸಹ ಚೈತ್ಯಭಕ್ತಿ ಕಾಯೋತ್ಸರ್ಗ ಕರೋಮಿ ವಿಜ್ಞಾಪ್ಯ ಮುಂತಾದ ಪಾಠದಲ್ಲಿ ಕರೋಮಿ ಕ್ರಿಯೆಯೇ ಇದೆ. ಹೀಗೆ ಸಾಮಾಯಿಕ ಭಾಷ್ಯ ಗ್ರಂಥ ಹಾಗೂ ಪ್ರತಿಷ್ಠಾತಿಲಕ ಗ್ರಂಥದಲ್ಲಿ ಸಹ ಕರೋಮಿ ಕರೋಮ್ಯಹಂ ಪಾಠವೇ ಸಿಗುತ್ತಾ ಇದೆ. ಒಟ್ಟಿಗೆ ಸೇರಿಸಿ ಎಲ್ಲಾ ಗ್ರಂಥದಲ್ಲಿಯು ಈ "ಪರಸ್ಮೈಪದೀ ಕರೋಮಿ" ಕ್ರಿಯೆಯು ದೊರೆಯುತ್ತಿದೆ. ಇದನ್ನು ಬದಲಾಯಿಸಿ "ಕುರ್ವೇಹಂ" ಪಾಠವನ್ನು ಏಕೆ ಇಟ್ಟಿದ್ದಾರೆ. ಇದು ವಿಚಾರ ಮಾಡುವ ವಿಷಯವಾಗಿದೆ.

ಭಕ್ತಿಗಳು ಹಾಗೂ ಪ್ರತಿಕ್ರಮಣ ಸೂತ್ರಗಳ ಕರ್ತ

ಚೈತ್ಯ ಭಕ್ತಿ, ವೀರಭಕ್ತಿ ಹಾಗೂ ದೈವಸಿಕ - ರಾತ್ರಿಕ ಪ್ರತಿಕ್ರಮಣ ಹಾಗೂ ಪಾಕ್ಷಿಕಾದಿ ಪ್ರತಿಕ್ರಮಣ ಈ ಎರಡು ಪ್ರತಿಕ್ರಮಣಗಳಲ್ಲಿ ಪ್ರತಿಕ್ರಮಣ ಭಕ್ತಿ ಮತ್ತು ಪ್ರತಿಕ್ರಮಣ ದಂಡಕ ಸೂತ್ರ ಇವುಗಳ ರಚಯಿತ ಶ್ರೀ ಗೌತಮಗಣಧರ ದೇವರಾಗಿದ್ದಾರೆ. ಇದರ ಟೀಕಾಕಾರ ಶ್ರೀ ಪ್ರಭಾಚಂದ್ರಾಚಾರ್ಯರೆಂದು ಮನ್ನಿಸಲಾಗಿದೆ.

ಶ್ರೀ ಗೌತಮ ಸ್ವಾಮಿ ಮುನೀನಾಂದುಷ್ಪಮಕಾಲೇ ದುಷ್ಪಪರಿಣಾಮಾದಿಭಿಃ

---

೧. **ಪ್ರತಿಷ್ಠಾತಿಲಕ ಪು. 40-41**

೨. **ಆಚಾರ ಸಾರ ಪುಟ 191**

೩. **ಅನಾಗಾರ ಧರ್ಮಾಮೃತ ಮೂಲಸಂಸ್ಕೃತ ಅ-9, ಪುಟ -657**

ಪ್ರತಿದಿನ ಮುಪಾರ್ಜಿತಸ್ಯಕರ್ಮಣೋ ವಿಶುದ್ಧ್ಯರ್ಥಂ ಪ್ರತಿಕ್ರಮಣ ಲಕ್ಷಣ ಮುಪಾಯಂ ವಿದಧಾನಸ್ತದಾದೌ ಮಂಗಲಾರ್ಥ ಮಿಷ್ಟ ದೇವತಾವಿಶೇಷಂ ನಮಸ್ಕರೋತಿ ಶ್ರೀಮತೇ ವರ್ಧಮಾನಾಯ ನಮೋ ನಮಿತ ವಿದ್ವಿಷೇ.[೧]

ಸಹಸ್ರನಾಮದ ಟೀಕಾಕಾರ ಶ್ರೀ ಅಮರ ಮುನಿರಾಜರು ವೀರಭಕ್ತಿಯನ್ನು ಶ್ರೀ ಗೌತಮಸ್ವಾಮಿ ಕೃತವೆಂದು ಹೇಳಿದ್ದಾರೆ. ಸಿದ್ಧ ಭಕ್ತಿ ಮೊದಲಾದ ಎಲ್ಲ ಸಂಸ್ಕೃತ ಮತ್ತು ಪ್ರಾಕೃತ ಭಕ್ತಿಗಳನ್ನು ಟೀಕಾಕಾರ ಶ್ರೀ ಪ್ರಭಾಚಂದ್ರಚಾರ್ಯರು ಬರೆದಿದ್ದಾರೆ.

"ಸಂಸ್ಕೃತಾಃ ಸರ್ವಾ ಭಕ್ತಯಃ ಪಾದ ಪೂಜ್ಯ ಸ್ವಾಮಿ ಕೃತಾಃ ಪ್ರಾಕೃತಾಸ್ತು ಕುಂದ ಕುಂದಾಚಾರ್ಯ ಕೃತಾಃ[೨]"

ಸಂಸ್ಕೃತದ 1) ಸಿದ್ಧಭಕ್ತಿ 2) ಶ್ರುತಭಕ್ತಿ 3) ಚಾರಿತ್ರಭಕ್ತಿ 4) ಯೋಗಭಕ್ತಿ 5) ಆಚಾರ್ಯಭಕ್ತಿ 6) ನಿರ್ವಾಣ ಭಕ್ತಿ 7) ನಂದೀಶ್ವರ ಭಕ್ತಿ 8) ಶಾಂತಿ ಭಕ್ತಿ. ಈ ಎರಡು ಭಕ್ತಿಗಳನ್ನು ಪೂಜ್ಯ ಪಾದ ಸ್ವಾಮಿಗಳು ರಚಿಸಿದ್ದಾರೆ. ಶಾಂತಿಭಕ್ತಿಯ 8 ಶ್ಲೋಕ ಆದಮೇಲೆ "ಶಾಂತಿ ಜಿನಂ ಶಶಿ ನಿರ್ಮಲ ವಕ್ತ್ರಂ" ಮುಂತಾದ ಶ್ಲೋಕ ಶ್ರೀ ಪೂಜ್ಯಪಾದ ಸ್ವಾಮಿಯವರದಲ್ಲ ಎಂದು ಪಂ. ಪನ್ನಾಲಾಲ ಸೋನಿಯವರು ಬರೆದಿದ್ದಾರೆ.

ಸಂಸ್ಕೃತದ ಚತುರ್ವಿಶಂತಿ ತೀರ್ಥಂಕರ ಭಕ್ತಿ ಹಾಗೂ ಸಮಾಧಿ ಭಕ್ತಿಯನ್ನು ಶ್ರೀ ಪೂಜ್ಯ ಪಾದ ಸ್ವಾಮಿ ಕೃತ ಹಾಗೂ ನಿಃ ಸಂಗೋಹಂ ಜಿನಾನಾಂ ಮುಂತಾದ ಈರ್ಯಾಪಥ ಶುದ್ಧಿಯನ್ನು ಕೆಲವು ವಿದ್ವಾಂಸರು ಶ್ರೀ ಪೂಜ್ಯ ಪಾದ ಕೃತವೆಂದು ಒಪ್ಪುತ್ತಾರೆ.

1) ಪ್ರಾಕೃತ ಸಿದ್ಧ ಭಕ್ತಿ 2) ಶ್ರುತಭಕ್ತಿ 3) ಚಾರಿತ್ರ ಭಕ್ತಿ 4) ಯೋಗಿ ಭಕ್ತಿ 5) ಆಚಾರ್ಯ ಭಕ್ತಿಗಳನ್ನು ಶ್ರೀ ಕುಂದಕುಂದ ದೇವರ ರಚನೆಯೆಂದು ಪನ್ನಾಲಾಲ ಸೋನಿಯವರು ಬರೆದಿದ್ದಾರೆ. ಅವರಿಗೂ ಪ್ರಾಕೃತ ನಿರ್ವಾಣ ಭಕ್ತಿಯ ಬಗ್ಗೆ ಸಂದಿಗ್ಧತೆ ಇದೆ. ಆದರೆ ಕುಂದ ಕುಂದ ಭಾರತಿ ಗ್ರಂಥದಲ್ಲಿ ಪಂ. ಪನ್ನಾಲಾಲ ಸಾಹಿತ್ಯಾಚಾರ್ಯರು 5 ಭಕ್ತಿಗಳ ಜೊತೆಗೆ 6) ಪ್ರಾಕೃತ ನಿರ್ವಾಣ ಭಕ್ತಿ 7) ಪಂಚ ಮಹಾಗುರುಭಕ್ತಿ 8) ಪ್ರಾಕೃತ ಚತುರ್ವಿಶಂತಿ ತೀರ್ಥಂಕರ ಭಕ್ತಿ 9) ನಂದೀಶ್ವರ ಭಕ್ತಿ 10) ಶಾಂತಿ ಭಕ್ತಿ ಹೀಗೆ ಹತ್ತು ಭಕ್ತಿಗಳನ್ನು ಶ್ರೀ ಕುಂದಕುಂದದೇವರ ಕೃತಿ ಆಗಿದೆ ಎಂದು ಹೇಳಿದ್ದಾರೆ. ಈ ಭಕ್ತಿಗಳ ಪದ್ಯಾನುವಾದ - ಭಾವಾನುವಾದವನ್ನು ನಾನೇ ಮಾಡಿದ್ದೇನೆ.

ಲಘು ಭಕ್ತಿಗಳು

ಬೃಹತ್ ಭಕ್ತಿಗಳ ಯಾವುದಾದರೂ ವಿಶೇಷ ಶ್ಲೋಕಗಳನ್ನು ತೆಗೆದುಕೊಂಡು ಅಂಚಲಿಕ ಕೊಡುವುದರಿಂದ ಲಘು ಭಕ್ತಿಗಳಾಗುತ್ತವೆ.

ವ್ರತ ಸಮುದಯಮೂಲಃ ಸಂಯಮಸ್ಕಂಧಬಂಧೋ ಅಥವಾ ತಿಸ್ರಃ ಸತ್ತಮಗುಪ್ತಯಸ್ತನುಮನೋ[೪] ಮೊದಲಾದ ಒಂದು ಶ್ಲೋಕ ಓದಿ ಅಂಚಲಿಕ ಹೇಳಿ ಲಘು ಚಾರಿತ್ರ ಭಕ್ತಿ ಆಗುತ್ತದೆ. ಶ್ರುತ ಭಕ್ತಿಯಲ್ಲಿಯು ಸಹ ಶ್ರುತಮಪಿ ಜಿನವರ ವಿಹಿತಂ[೫] ಶ್ಲೋಕವನ್ನು ಬೃಹದ್ ಭಕ್ತಿಯಿಂದ ತೆಗೆದುಕೊಂಡು ಅಂಚಲಿಕ ಜೋಡಿಸಿ

---

೧. ಪ್ರತಿಕ್ರಮಣ ಗ್ರಂಥತ್ರಯೀ

೨. ಕ್ರಿಯಾಕಲಾಪ ಪ್ರಸ್ತಾವನೆ ಪು. ೧೦

೩. ಕ್ರಿಯಾಕಲಾಪ ಪು. ೩೦೨

೪+೫. ಪ್ರತಿಷ್ಠಾ ತಿಲಕ

ಲಘು ಶ್ರುತ ಭಕ್ತಿ ಆಗುತ್ತದೆ. ಬೇರೆ ಎಲ್ಲಾ ಲಘು ಭಕ್ತಿಗಳನ್ನು ಪ್ರಾಯಶಃ ಕ್ಷೇಪಕ ಶ್ಲೋಕಗಳನ್ನು ಓದಿ ಅಂಚಲಿಕಾ ಓದುವುದರಿಂದ ಪ್ರಾವೃಟ್ ಕಾಲೇ ಮುಂತಾದ ಲಘು ಯೋಗಭಕ್ತಿ ಆಗುತ್ತದೆ.

ಮುನಿಚರ್ಯೆ ಗ್ರಂಥದಲ್ಲಿ ಕ್ರಿಯಾಕಲಾಪ ಮತ್ತು ಪ್ರತಿಷ್ಠಾತಿಲಕದ ಆಧಾರದಿಂದ ಲಘು ಭಕ್ತಿಗಳನ್ನು ಕೊಡಲಾಗಿದೆ. ನಿರ್ವಾಣ ಭಕ್ತಿ ನಂದೀಶ್ವರ ಭಕ್ತಿ, ಚೈತ್ಯ ಭಕ್ತಿ, ಆಚಾರ್ಯ ಭಕ್ತಿ ಮತ್ತು ಸಮಾಧಿ ಭಕ್ತಿ ಮತ್ತು ಶಾಂತಿ ಭಕ್ತಿಯ ಕ್ಷೇಪಕ ಶ್ಲೋಕ 'ಭಕ್ತ್ಯಾಯಾದಿಕ್ರಿಯಾ ಸಂಗ್ರಹ' ಪುಸ್ತಕದಿಂದ ತೆಗೆದುಕೊಳ್ಳಲಾಗಿದೆ. ಶ್ರುತಭಕ್ತಿಯ ಕ್ಷೇಪಕ ಶ್ಲೋಕ ನನ್ನಿಂದ ಸಂಕಲಿತವಾಗಿದೆ.

ವರ್ಷಾಯೋಗ ಪ್ರತಿಷ್ಠಾಪನ ಕ್ರಿಯೆಯಲ್ಲಿ ಸ್ವಯಂಭುವಾ ಭೂತಹಿತೇನ ಮುಂತಾದ ರೂಪದಿಂದ ಶ್ರೀ ಋಷಭದೇವರಿಂದ ಹಿಡಿದು ಶ್ರೀ ಚಂದ್ರ ಪ್ರಭ ಭಗವಾನರವರೆಗೆ 8 ಸ್ತುತಿಗಳಿವೆ. ಇವು ಶ್ರೀ ಸಮಂತ ಭದ್ರ ಸ್ವಾಮಿ ವಿರಚಿತವಾಗಿದೆ.

ಆಹಾರ ಪ್ರತ್ಯಾಖ್ಯಾನ ಯಾವಾಗ ಮಾಡುವುದು

ಆಹಾರಕ್ಕೆ ಹೊರಡುವಾಗ ಸಿದ್ಧ ಭಕ್ತಿ, ಯೋಗಭಕ್ತಿಯನ್ನು ಓದಿ ಹೊರಡಬೇಕೆಂಬ ನಿಯಮ ಯಾವ ಗ್ರಂಥದಲ್ಲೂ ಇಲ್ಲ ಮತ್ತು ನನ್ನ ಅನುಭವದಂತೆ ಆಚಾರ್ಯ ಪರಂಪರೆಯಲ್ಲೂ ನಡೆದು ಬಂದಿಲ್ಲ. ಆದರೂ ಈ ಪರಂಪರೆ ಹೇಗೆ ನಡೆದು ಬಂದಿತು. ಶ್ರಮಣಚರ್ಯೆಯಲ್ಲಿ ಹೇಗೆ ಬರೆಯಿತು. ಯಾರು ಬಲ್ಲರು? ಮುನಿಚರ್ಯೆಯ ಪುಟ 147 ರಿಂದ 154 ರವರೆಗೆ ಆಗಮದ ಆಧಾರದಿಂದ ಈ ಪ್ರತ್ಯಾಖ್ಯಾನ ವಿಧಿ ಸ್ಪಷ್ಟವಾಗಿದೆ.

ದೈವಸಿಕ ಪ್ರತಿಕ್ರಮಣ

ದೈವಸಿಕ - ರಾತ್ರಿಕ ಪ್ರತಿಕ್ರಮಣ ಕ್ರಿಯಾಕಲಾಪದಿಂದ ತೆಗೆದುಕೊಳ್ಳಲಾಗಿದೆ. ಸಂಸ್ಕೃತ ಛಾಯೆಯನ್ನು ಕ್ರಿಯಾಕಲಾಪದಿಂದಲೇ ತೆಗೆದುಕೊಳ್ಳಲಾಗಿದೆ. ಭಾವರೂಪದ ಪದ್ಯಾನುವಾದ ನನ್ನಿಂದ ರಚಿತವಾಗಿದೆ. ನಾನು ಎಲ್ಲಿಯು ಪರಿವರ್ತನೆಯನ್ನಾಗಲೀ ಸಂಶೋಧನೆಯನ್ನಾಗಲೀ ಮಾಡಿಲ್ಲ.

ಇಚ್ಛಾಮಿ ಭಂತೇ ಚರಿತ್ತಾಯಾರೋ ಐದು ದಂಡಕಗಳಲ್ಲಿ ನಾಲ್ಕು ದಂಡಕದಲ್ಲಿ "ತೇಸಿಂ ಉದ್ದಾವಣಂ" ಪಾಠವಿದೆ. ತೇಸಿಂ ನ ಅರ್ಥ ತೇಷಾಂ ಮತ್ತು ಏದೇಸಿಂ ನ ಅರ್ಥ ಏತೇಷಾಂ ಆಗಿದೆ. ಎರಡರಲ್ಲೂ ಅರ್ಥಭೇದವಿಲ್ಲ. ಆದರೂ ಸಹ ಪ್ರತಿಕ್ರಮಣ ಗ್ರಂಥ ತ್ರಯೀಯಲ್ಲಿ ಈ ಎರಡು ಪಾಠಗಳ ಅರ್ಥವನ್ನು ಕೊಡಲಾಗಿದೆ.[೧] ಆದ್ದರಿಂದ ನಾನು ಕೆಲವು ಸಾಧುಗಳು ಹೇಳಿದರೂ ಪಾಠವು ಒಂದೇ ರೀತಿ ಇಡುವುದಕ್ಕಾಗಿ ಪಾಠವನ್ನು ಬದಲಾಯಿಸಲಿಲ್ಲ ಯಥಾಸ್ಥಿತಿಯಲ್ಲಿ ಎರಡು ಪಾಠವು ಇದೆ.

ಇಂದು "ಶ್ರವಣಚರ್ಯಾ" ಮುಂತಾದ ಆಧುನಿಕವಾದ ಕೆಲವು ಪುಸ್ತಕಗಳಲ್ಲಿ ಬಹಳಷ್ಟು ಪಾಠಗಳು ಬದಲಾಗಿವೆ. ವೀರಭಕ್ತಿಯ ಅಂತಿಮ ಶ್ಲೋಕದ ತೃತೀಯ ಚರಣ ಬದಲಾಗಿದೆ. ಹೇಗೆಂದರೆ : ಕ್ರಿಯಾಕಲಾಪ ದೇವಾ ವಿ ತಸ್ಸ ಪಣಮಂತಿ ಶ್ರವಣಚರ್ಯಾ ಪು 66 ದೇವಾ ವಿ ತಂ ಣಮಂಸಂತಿ. ೪೦ ಪ್ರತಿಕ್ರಮಣ ಗ್ರಂಥತ್ರಯಿಯಲ್ಲಿ ಟೀಕಾಕಾರರು ಇದೇ ಕ್ರಿಯಾಕಲಾಪ ಪಾಠಕ್ಕೆ ಟೀಕೆ ಮಾಡಿದ್ದಾರೆ.

"ದೇವಾ ವಿ ತಸ್ಸ ಪಣಮಂತಿ ದೇವಾ ಅಪಿ ತಸ್ಯ ಪ್ರಣಮಂತಿ"[೨]

---

೧. ಪ್ರತಿಕ್ರಮಣ ಗ್ರಂಥತ್ರಯೀ ಪು. ೧೬೬ ರಿಂದ ೧೭೦.

೨. ಪ್ರತಿಕ್ರಮಣ ಗ್ರಂಥತ್ರಯೀ ಪು. ೭೦

ಹೀಗೆ ಅನೇಕ ಸಂಶೋಧನೆಯನ್ನು ಈಗ ಮಾಡಲಾಗುತ್ತಿದೆ. ಟೀಕಾಕಾರರು ಪ್ರಾಕೃತ - ಸಂಸ್ಕೃತ ವ್ಯಾಕರಣ ಛಂದ ಶಾಸ್ತ್ರಗಳನ್ನು ಚೆನ್ನಾಗಿ ತಿಳಿದಿದ್ದರೂ ಪಾಠಗಳನ್ನು ಬದಲಾಯಿಸಿಲ್ಲ ಅಂತಹುದರಲ್ಲಿ ಈಗಿನವರು ಬದಲಾಯಿಸಿರುವುದು ನನಗೆ ಸರಿ ಎನ್ನಿಸುವುದಿಲ್ಲ.

ಪೂರ್ವಾಚಾರ್ಯರು ಎಲ್ಲಿಯಾದರು ಪಾಠ ಭೇದವನ್ನು ಗಮನಿಸಿದರೂ ಹಾಗೇ ಯಾವುದೇ ವಿಷಯದಲ್ಲಿ ಮತಭೇದ ನೋಡಿದರೂ ಇದರಲ್ಲಿ ಒಂದನ್ನು ತೆಗೆದುಹಾಕಿ ಇನ್ನೊಂದನ್ನು ಪ್ರಮಾಣವೆಂದು ಹೇಳುವ ಸಾಹಸ ಮಾಡಿಲ್ಲ. ಇವೆರಡನ್ನೂ ಪರಿಗಣಿಸಬೇಕೆಂದು ಉಪದೇಶಿಸಿದ್ದಾರೆ. ಷಟ್ ಖಂಡಾಗಮದ ಧವಲಾಟೀಕೆಯಲ್ಲಿ ಶ್ರೀ ವೀರಸೇನಾಚಾರ್ಯರು ಒಂದು ಕಡೆ ಶ್ರೀ ಏಲಾಚಾರ್ಯರ ವತ್ಸ ಹಾಗೂ ಶಿಷ್ಯರಿಗೂ ಈ ವಿಷಯದಲ್ಲಿ ಇದು ಪ್ರಮಾಣಿತ ಮತ್ತು ಇದು ಅಪ್ರಮಾಣಿತವೆಂದು ಹೇಳಬಾರದೆಂದು ಹೇಳಿದ್ದಾರೆ. ಇಂದು ಕೂಡ ಯಾವ ವಿದ್ವಾಂಸರೇ ಆಗಲಿ ಸಾಧು ವರ್ಗದವರೇ ಆಗಲಿ ಪಾಠ ಪರಿವರ್ತನೆ ಮಾಡುವ ಸಾಹಸ ಮಾಡಬಾರದು. ಪಾಪ ಭೀತಿಯಿಂದ ಪ್ರಾಚೀನ ಪಾಠಗಳೇ ಪ್ರಮಾಣವೆಂದು ಮನ್ನಿಸಬೇಕು.

ಕ್ರಿಯಾಕಲಾಪ

ಮುನಿಚರ್ಯೆಯ ಗ್ರಂಥಗಳ ಸಂಪಾದನೆ ಮತ್ತು ಪ್ರಕಾಶನದ ಕೆಲಸವನ್ನು ಪಂ. ಪನ್ನಾಲಾಲ ಸೋನಿಯವರು ಶಾಂತಿಸಾಗರ ಮುನಿಗಳ ಪ್ರೇರಣೆಯಿಂದ ವೀರ ನಿ. 246 ರಲ್ಲಿ ಪ್ರಾರಂಭಿಸಿದರು. ಅವರು ಹಸ್ತಲಿಖಿತ ಸಣ್ಣ ಪುಸ್ತಕದ ಮತ್ತು ಅನಗಾರ ಧರ್ಮಾಮೃತದ ಆಧಾರದಿಂದಲೇ ಇದನ್ನು ಸಂಕಲಿತಗೊಳಿಸಿದರು. ಇದೊಂದು ಪ್ರಾಮಾಣಿಕ ಗ್ರಂಥವಾಗಿದೆ. ಇದರ ಪ್ರತಿಗಳು ಸಿಗುತ್ತಿಲ್ಲ. ಈ ಪ್ರತಿಯನ್ನು ಹುಡುಕಿಸಿ ಪ್ರಕಾಶನಗೊಳಿಸಬೇಕಾಗಿದೆ.

ಪ್ರತಿಕ್ರಮಣ ಗ್ರಂಥ ತ್ರಯೀ

ಇದರಲ್ಲಿ ದೈವಸಿಕ, ರಾತ್ರಿಕ, ಪಾಕ್ಷಿಕ ಈ ಮೂರು ಪ್ರತಿಕ್ರಮಣ ಸೂತ್ರದ ಮೇಲೆ ಶ್ರೀ ಪ್ರಭಾಚಂದ್ರಾಚಾರ್ಯರು ಟೀಕೆಯನ್ನು ರಚಿಸಿದ್ದಾರೆ. ಆದ್ದರಿಂದಲೇ ಇದಕ್ಕೆ ಪ್ರತಿಕ್ರಮಣ ಗ್ರಂಥತ್ರಯೀ ಎಂದು ಕರೆಯಲಾಗಿದೆ. ಇದನ್ನು ಶ್ರೀ ಜಿನಸೇನ ಭಟ್ಟಾರಕರು ವಿ. ನಿ. 2473 ರಲ್ಲಿ ಪ್ರಕಾಶಗೊಳಿಸಿದ್ದಾರೆ. ಇದರ ಸಂಪಾದಕರು ಗೌತಮ ಚಂದ ಕೋಠಾರಿ ಮತ್ತು ಎಮ್. ಎ. ಫಲಟನರು. ವಿದ್ವಾನ ಸಾಧುಗಳು ಇದನ್ನು ಅವಶ್ಯವಾಗಿ ಸ್ವಾಧ್ಯಾಯ ಮಾಡಬೇಕು. ಈ ಕೃತಿಯನ್ನು ಪುನರ್ಮುದ್ರಣ ಮಾಡಿಸಬೇಕು.

ಅಷ್ಟಮಿಯ ಪ್ರತಿಕ್ರಮಣ

ಈ ಪಾಠವನ್ನು ಪಾಕ್ಷಿಕ ಪ್ರತಿಕ್ರಮಣದಿಂದ ತೆಗೆದುಕೊಳ್ಳಲಾಗಿದೆ. ಅನಗಾರ ಧರ್ಮಾಮೃತದಲ್ಲಿ ಸಾಲೋಚನಾ ಚಾರಿತ್ರ ಭಕ್ತಿ ಚಾರಿತ್ರಾ ಲೋಚನ ಸಹಿತ ಚಾರಿತ್ರ ಭಕ್ತಿಯನ್ನು ಓದುವ ವಿಧಾನವಿದೆ. ಪ್ರತಿಕ್ರಮಣ ಗ್ರಂಥ ತ್ರಯೀಯಲ್ಲಿಯು ಅಷ್ಟಮಿಯ ಪ್ರತಿಕ್ರಮಣವನ್ನು ಬೇರೆ ಮಾಡಲಾಗಿದೆ. ಇದರ ಆಧಾರದಿಂದಲೇ ಅಷ್ಟಮಿಯ ಕ್ರಿಯೆಯಲ್ಲಿ ಈ ಪ್ರತಿಕ್ರಮಣವನ್ನು ಜೋಡಿಸಲಾಗಿದೆ. ಇದರ ಅರ್ಥವನ್ನು ಭಕ್ತ್ಯಾದಿ ಕ್ರಿಯಾ ಸಂಗ್ರಹ ಪುಸ್ತಕದಿಂದ ತೆಗೆದುಕೊಳ್ಳಲಾಗಿದೆ. ಅದರ ಪದ್ಯಾನುವಾದವನ್ನು ನಾನೇ ಮಾಡಿದ್ದೇನೆ. ಅಷ್ಟಮಿ ಮತ್ತು ಪಾಕ್ಷಿಕ ಪ್ರತಿಕ್ರಮಣದಲ್ಲಿ ಚಾರಿತ್ರ ಭಕ್ತಿಯ ನಂತರ ಚಾರಿತ್ರಾಲೋಚನದ ಕೊನೆಯಲ್ಲಿ ದಂಡಕ ಸೂತ್ರವಿದೆ.

ಣವಸು ಬಂಭಚೇರಗುತ್ತೀಸು ಚಳುಸು ಸಣ್ಣಾಸು ಚಳುಸು ಪಚ್ಚಖಸು ದೋಸು ಅಟ್ಟರುದ್ಧ ಸಂಕಿಲೇ ಸಪರಿಣಾ ಮೇಸು

ತೀಸು ಅಪ್ಪಸತ್ಥಸಂಕಿಲೇಸ ಪರಿಣಾಮೇಸು, ಮಿಚ್ಛಾ ಣಾಣಮಿಚ್ಛಾದಂಸಣ ಮಿಚ್ಛಾಚರಿತ್ತೇಸು, ಚಳುಸು ಉವಸಗ್ಗೇಸು, ಪಂಚಸುಚರಿತ್ತೇಸು, ಛಸುಜೀವಣಿಕಾಖಸು, ಛಸು ಆವಾಸಖಸು, ಸತ್ತಸು ಭಖಸು, ಅಟ್ಟಸು ಸುದ್ಧೀಸು (ಣವಸು ಬಂಭಚೇರ ಗುತ್ತೀಸು) ದಸಸು ಸಮಣಧಮ್ಮೇಸು ದಸಸು ಧಮ್ಮು ಝಾಣೇಸು, ದಸಸು ಮುಂಡೇಸು, ಭಾರಸೇಸು ಸಂಜ ಮೇಸು, ಬಾವೀಸಾಖ ಪರೀಸಹೇಸು, ಪಣವೀಸಾಖ ಭಾವಣಾಸು, ಪಣವೀಸಾಖ ಕಿರಿಯಾಸು, ಅಟ್ಠಾರ ಸಸೀಲ ಸಹಸ್ಸೇಸು, ಚಳುರಾ ಸೀದಿ ಗುಣ ಸಯಸಹ ಸ್ಸೇಸು, ಮೂಲಗುಣೇಸು, ಉತ್ತರ ಗುಣೇಸು, ಅಟ್ಠಮಯಮ್ಮಿ ಪಕ್ಖಿಯಮ್ಮಿ (ಚಳುಮಾಸಿಯಮ್ಮಿ ಸಂವಚ್ಛರಿಯಮ್ಮಿ) ಅಞಕ್ಕಮೋ ವದಿಕ್ಕಮೋ ಅಞಚಾರೋ ಅಣಾಚಾರೋ ಆಭೋಗೋ ಅಣಾ ಭೋಗೋ ಜೋ ತಂ ಪಡಿಕ್ಕಮಾಮಿ ಮಖ ಪಡಿಕ್ಕಂತಂ ತಸ್ಸಮೇ ಸಮ್ಮತ್ತ ಮರಣಂ ಸಮಾಹಿ ಮರಣಂ ಪಂಡಿಯ ಮರಣಂ ವೀರಿಯ ಮರಣಂ ದುಕ್ಖಕ್ಖಓ ಕಮ್ಮಕ್ಖಓ ಬೋಹಿಲಾಹೋ ಸುಗಞಗಮಣಂ ಸಮಾಹಿ ಮರಣಂ ಜಿಣಗುಣ ಸಂಪತ್ತೀ ಹೋಳು ಮಜ್ಝಂ ॥ ೧೪ ॥

ಶ್ರಮಣಚರ್ಯ ಮೊದಲಾದ ಹೊಸ ಪುಸ್ತಕಗಳಲ್ಲಿ ೞವುಗಳನ್ನು ಬದಲಾಯಿಸಿದ್ದಾರೆ. ದೋಸು ಅಟ್ಟ - ರುದ್ಧ - ಸಂಕಿಲೇಸ - ಪರಿಣಾಮೇಸು, ತೀಸು ಅಪ್ಪಸತ್ಥ -ಸಂಕಿಲೇಸ, ಪರಿಣಾಮೇಸು, ಮಿಚ್ಛಾಣಾಣ - ಮಿಚ್ಛಾದಂಸಣ ಮಿಚ್ಛಾಚಾರಿತ್ತೇಸು ಚಳುಸು ಉವಸಗ್ಗೇಸು, ಚಳುಸು ಸಣ್ಣಾಸು. ಚಳುಸು ಪಚ್ಚಖಸು, ಪಂಚಸು ಚರಿತ್ತೇಸು ಛಸುಜೀವ ಣಿಕಾಖಸು ಛಸು ಆವಾಸಖಸು, ಸತ್ತಸು ಭಯೇಸು, ಅಟ್ಠಸು ಸುದ್ಧೀಸು ಣವಸು ಬಂಭಚೇರ ಗುತ್ತೀಸು, ದಸಸು ಸಮಣ -ದಮ್ಮೇಸು. ದಸಸು ಧಮ್ಮಚ್ಛಾ ಣೇಸು ದಸಸು ಮುಂಡೇಸು ಬಾರಸೇಸು ಸಂಜಮೇಸು ಬಾವೀಸಾಖ ಪರೀಸಹೇಸು, ಪಣವೀಸಾಖ ಭಾವಣಾಸು, ಪಣವೀಸಾಖ ಕಿರಿಯಾಸು - ಅಟ್ಠಾರಸಸೀಲ ಸಹಸ್ಸೇಸು, ಚಳುರಾಸೀ - ಗುಣ -ಸಯ - ಸಹಸ್ಸೇಸು, ಮೂಲಗುಣೇಸು, ಉತ್ತರ ಗುಣೇಸು (ಅಟ್ಠಮಿಯಮ್ಮಿ) (ಪಕ್ಖಿಯಮ್ಮಿ) (ಚಳುಮಾಸಿಯಮ್ಮಿ) (ಸಂವಚ್ಛರಿಯಮ್ಮಿ) ಅದಿಕ್ಕಮೋವದಿಕ್ಕಮೋ, ಅಞಚಾರೋ, ಅಣಾಚಾರೋ, ಆಭೋಗೋಅಣಾಭೋಗೋ ಜೋ ತಂ ಪಡಿಕ್ಕಮಾಮಿ ಮಖ ಪಡಿಕ್ಕಂತಂ ತಸ್ಸ ಮೇ ಸಮ್ಮತ್ತ - ಮರಣಂ ಪಂಡಿಯ ಮರಣಂ ವೀರಿಯ - ಮರಣಂ, ದುಕ್ಖಕ್ಖಓ, ಕಮ್ಮಕ್ಖಓ, ಬೋಹಿಲಾಓ, ಸುಗಞಗಮಣಂ, ಸಮಾಹಿ ಮರಣಂ ಜಿಣಗುಣ ಸಂಪತ್ತಿ ಹೋಳು ಮಜ್ಝಂ॥ ಕ್ರಿಯಾಕಲಾಪದಲ್ಲಿ 'ಣವಸು' ಯಿಂದಲೇ ಪ್ರಾರಂಭವಾಗುವುದು ಪ್ರಾಮಾಣಿಕವಾಗಿದೆ.

ಪಾಕ್ಷಿಕ ಪ್ರತಿಕ್ರಮಣ

ಪಾಕ್ಷಿಕ ಪ್ರತಿಕ್ರಮಣದಲ್ಲಿಯು ಸುಮಾರು 25 ಕಡೆ ಪಾಠ ಬದಲಾಗಿದೆ. ಟೀಕಾಗ್ರಂಥದಲ್ಲಿಯು ವಿಷಯ ಸರಿಯಾಗಿಲ್ಲ. ಕೆಲವು ಪ್ರಕರಣಗಳೇ ಟೀಕಾಗ್ರಂಥದಲ್ಲಿ ೞಲ್ಲ. ಕ್ರಿಯಾಕಲಾಪದ ಆಧಾರದಿಂದ ಹೇಗೆ ಹೇಗೋ ಓದುವುದು ನನಗೆ ಉಚಿತವೆನ್ನಿಸುವುದಿಲ್ಲ. ಪಾಠವನ್ನು ಬದಲಾಯಿಸುವುದರಿಂದ ಮೂಲರೂಪವೇ ಹೊರಟು ಹೋಗುತ್ತದೆ.

ವಿಚಾರಣೀಯವಾದ ಪಾಠ ಪರಿವರ್ತನೆ

ಈ ಪ್ರತಿಕ್ರಮಣದಲ್ಲಿ ವೀರ ಭಕ್ತಿಗಿಂತ ಮೊದಲು ಶ್ರಾವಕರ ವ್ರತಗಳ ವರ್ಣನೆ ಮಾಡಿ ಅವುಗಳ ಫಲವನ್ನು ಹೇಳುತ್ತಾ ದಂಡಕ ಸೂತ್ರದಲ್ಲಿ

ಜೋ ಏದಾಣಂ ವದಾಣಂ ಧರೇಣ ಸಾವಯಾ ಸಾವಿಯಾಓ ವಾ ಖಡ್ಡಯಾ ಖಡ್ಡಿಯಾಓ ವಾ ಅಟ್ಠದಹ ಭವಣವಾಸಿಯ ವಾಣವಿಂತರ ಚೋಣಸಿಯಸೋಹಮ್ಮೀಸಾಣದೇವಿ ಓ ವದಿಕ್ಕಮಿತ್ತ ಉವರಿಮ ಅಣ್ಣ ದರಮಹಡ್ಡಿಯಾಸು ದೇವೇಸು ಉವವಜ್ಜಂತಿ ॥

ಯಾವ ಶ್ರಾವಕನಾಗಲೀ ಶ್ರಾವಿಕೆಯರಾಗಲಿ ಅಥವಾ ಕ್ಷುಲ್ಲಕರಾಗಲಿ, ಕ್ಷುಲ್ಲಿಕೆಯರಾಗಲಿ 12 ವ್ರತ ಮತ್ತು 11 ಪ್ರತಿಮೆಗಳನ್ನು ಧಾರಣೆ ಮಾಡಿದರೆ ಅಂತಹವರು 18 ನೇಯ ಭವನವಾಸೀ ವಾನ, ವ್ಯಂತರ ಜ್ಯೋತಿಷಿ ಮತ್ತು ಸೌಧರ್ಮ - ಈಶಾನ - ಸ್ವರ್ಗದ ದೇವತೆಗಳನ್ನು ಬಿಟ್ಟು ಮೇಲಿನ ಯಾವುದಾದರು ಸ್ವರ್ಗದಲ್ಲಿ ಮಹರ್ದ್ಧಿಕ ದೇವರಾಗಿ ಉತ್ಪನ್ನರಾಗುತ್ತಾರೆ.

1958 ರಲ್ಲಿ ಬ್ಯಾವರದಲ್ಲಿ ಒಮ್ಮೆ ಬ್ರ. ಶ್ರೀಲಾಲಜೀಯವರು 'ಅಟ್ಠದಹ' ಶಬ್ದವನ್ನು ಣಟ್ಠದೇಹ ಎಂದು ಕೆಲವು ಪುಸ್ತಕಗಳಲ್ಲಿ ಪರಿವರ್ತನೆ ಮಾಡಿದ್ದರು. ಆಗ ನಾನು ಪಂಡಿತಜೀ ಶ್ರಾವಕ - ಶ್ರಾವಿಕೆ ಮತ್ತು ಕ್ಷುಲ್ಲಕ - ಕ್ಷುಲ್ಲಿಕೆ ನಷ್ಟದೇಹಾಃ ಎಂದರೆ ದೇಹ ಇಲ್ಲದವರು ಎಂದಾಗುತ್ತದೆ, ಈ ಅರ್ಥ ಸರಿಯಲ್ಲ ಎಂದೆ.

ದೇವತೆಗಳು ಹೋಗಲಾಗದ 18 ಸ್ಥಾನಗಳನ್ನು ಹುಡುಕಬೇಕು. ಅಲ್ಲಿಗೆ ಭವನತ್ರಿಕ ಮತ್ತು ಧರ್ಮ - ಈಶಾನದ ದೇವತೆಗಳು ಹೋಗಲಾರರು. ಇವುಗಳನ್ನು ಬೇರೆ ಮಾಡಿರಿ.

ಉಮಾಸ್ವಾಮಿ ಶ್ರಾವಕಾಚಾರದ ೩ ಶ್ಲೋಕಗಳು

ಸಮ್ಯಕ್ತ್ವ ಸಂಯತಃ ಪ್ರಾಣೀ, ಮಿಥ್ಯಾವಾಸೇನ ಜಾಯತೇ ।
ದ್ವಾದಶೇಷು ಚ ತಿರ್ಯಕ್ಷು, ನಾರಕೇಷು ನಪುಂಸಕೇ ॥ 88 ॥
ಸ್ತ್ರೀತ್ವೇ ಚ ದುಷ್ಕೃತಾ ಲ್ಪಾಯು ರ್ದಾರಿದ್ರ್ಯಾದಿಕ ವರ್ಜಿತಃ
ಭವನತ್ರಿಷು ಷಟ್ ಭೂಷು, ತದ್ದೇವೀಷು ನ ಜಾಯತೇ ॥ 89 ॥

ಸಮ್ಯಕ್ತ್ವ ಜೀವಗಳು ಮಿಥ್ಯಾತ್ವದ ಸ್ಥಾನದಲ್ಲಿ ಹೋಗುವುದಿಲ್ಲ.

1. ಪೃಥ್ವಿ 2 ಜಲ, ಅಗ್ನಿ, ವಾಯು, ವನಸ್ಪತೀ, ದ್ವಿತೀಯ, ತೃತೀಯ, ಇಂದ್ರಿಯಗಳು ನಿಗೂಢ. ಅಸಂಜ್ಞಿ ಪಂಚೇಂದ್ರಿಯ ಕುಭೋಗ ಭೂಮಿ ಮ್ಲೇಚ್ಛಖಂಡ ಮಿಥ್ಯಾತ್ವದ ಈ 12 ಸ್ಥಾನಗಳಲ್ಲಿ ಹುಟ್ಟುವುದಿಲ್ಲ. ಹಾಗೇ ತಿರ್ಯಂಚಗಳಲ್ಲಿ ನರಕದಲ್ಲಿ ನಪುಂಸಕರಾಗಿ ಮತ್ತು ಸ್ತ್ರೀವೇದದಲ್ಲಿ ಹುಟ್ಟುವುದಿಲ್ಲ. ಹಾಗೇ ಪಾಪಿಯು ಅಲ್ಪಾಯು ಬಡತನವು ಬರುವುದಿಲ್ಲ ಈ ಸಮ್ಯಗ್‌ದೃಷ್ಟಿ ಭವನತ್ರಿಕದಲ್ಲಿ ಮೊದಲನೆಯ ನರಕವಲ್ಲದೆ ಉಳಿದ ನರಕಗಳಲ್ಲಿ ಸ್ವರ್ಗದ ದೇವತೆಗಳಾಗಿಯು ಹುಟ್ಟುವುದಿಲ್ಲ. ವ್ರತ ಮಾಡುವವರು ಸುಭೋಗ ಭೂಮಿ ಮತ್ತು ಮನುಷ್ಯ ಪರ್ಯಾಯಕ್ಕೆ ಹೋಗುವುದಿಲ್ಲ.

ಅಣುವದ ಮಹವ್ವದಾಣಂ ಣ ಲಹಣ ದೇವಾಉಗಂ ಮೋತ್ತುಂ । (ಗೊಮ್ಮಟಸಾರ ಕರ್ಮಕಾಂಡ)

ಅಣುವ್ರತಗಳು ಮತ್ತು ಮಹಾವ್ರತಗಳು ದೇವಗತಿಯಲ್ಲದೆ ಬೇರೆ ಗತಿಗೆ ಹೋಗುವುದಿಲ್ಲ. ಈ 18 ಸ್ಥಾನಗಳ ಬಗ್ಗೆ ಆಚಾರ್ಯ ಶಿವಸಾಗರರಿಗೆ ಬಹಳ ಬಾಂಧವ್ಯವಿತ್ತು. ಹೀಗಾಗಿ ಪಂ. ಶ್ರೀಲಾಲರ ಮೂಲಕ ಸಂಶೋಧಿಸಿದ "ಣಟ್ಠದೇಹಾ" ಪಾಠವನ್ನು ತೆಗೆದು ಹಾಕಲಾಯಿತು. ಅಲ್ಲಿಗೆ ಚರ್ಚೆ ಮುಗಿಯಿತು.

ಕೆಲವು ದಿನಗಳಾದ ಮೇಲೆ "ಅಟ್ಠದಹ" ಶಬ್ದವನ್ನು ದಹಅಟ್ಠ ಎಂದು ಬಳಸಲಾಗುತ್ತಿತ್ತು. ಇದರ ಅರ್ಥ ಹತ್ತು ಪ್ರಕಾರದ ಭವನವಾಸಿ ಮತ್ತು 8 ಪ್ರಕಾರದ ವಾನ, ವ್ಯಂತರ ಎಂದು ಅಚ್ಚಾಗಿತ್ತು. ಆದರೆ ದಹ -ಅಟ್ಠ - ಪಂಚ ಎಂದರೆ ಭವನವಾಸಿ - ವ್ಯಂತರ ಮತ್ತು ಜ್ಯೋತಿಷಿ ದೇವತೆಗಳ ಭೇದರೂಪವೆಂದು ತಿಳಿಯಬೇಕು.

ಪಾಠವನ್ನು ಸಂಶೋಧಿಸಿದಾಗ ಹಳೆಯ ರೂಪವನ್ನು ಜೊತೆಯಲ್ಲಿ ಕೊಟ್ಟರೆ, ಗೊಂದಲವಾಗುವುದಿಲ್ಲ ಎಂಬುದು ನನ್ನ ಅಭಿಪ್ರಾಯ. ಅಟ್ಠದಹ (ದಹ - ಅಟ್ಠ - ಪಂಚ) ಇದೇ ರೀತಿ ಇನ್ನೊಂದು ಉದಾಹರಣೆ ನೋಡಿ.

ಮೂಲಪಾಠದಲ್ಲಿ ಜೀವ, ಅಜೀವ, ಪುಣ್ಯ, ಪಾಪ, ಆಸ್ರವ, ಸಂವರ, ನಿರ್ಜರ, ಬಂಧ ಮತ್ತು ಮೋಕ್ಷ ಎಂದಿದೆ ಅದನ್ನು ಪರಿವರ್ತಿಸಿ ಜೀವ, ಅಜೀವ, ಪುಣ್ಯ, ಪಾಪ, ಆಸ್ರವ, ಬಂಧ, ಸಂವರ, ನಿರ್ಜರ ಮತ್ತು ಮೋಕ್ಷ. ಮೂಲ ಪಾಠಕ್ಕೆ ಅನುಸಾರವಾಗಿಯೇ ಶ್ರೀ ಕುಂದ ಕುಂದರು ಸಮಯಸಾರದಲ್ಲಿ ಗಾಥೆಯನ್ನು ಬರೆದಿದ್ದಾರೆ.

ಭೂಯತ್ಥೇಣಾ ಭಿಗದಾಜೀವಾಜೀವಾ ಯ ಪುಣ್ಣ ಪಾವಂ ಚ ।
ಆಸವಸಂವರಣಿಜ್ಜರಬಂಧೋ ಮೋಕ್ಖೋಯ ಸಮ್ಮತ್ತಂ ॥೧೩॥

ಈ ಗಾಥೆಗಳಿಗೆ ಅನುಸಾರವಾಗಿಯೇ ಕುಂದಕುಂದರು ಸಮಯಸಾರದ ಅಧಿಕಾರಗಳನ್ನು ಮಾಡಿದ್ದಾರೆ. ಜೀವಾಜೀವಾಧಿಕಾರದ ನಂತರ ಪುಣ್ಯ - ಪಾಪಾಧಿಕಾರ ಪುನಃ ಆಸ್ರವ ಅಧಿಕಾರ, ಸಂವರ ಅಧಿಕಾರ, ನಿರ್ಜರ ಅಧಿಕಾರ ನಂತರ ಬಂಧ ಅಧಿಕಾರ ಕೊನೆಗೆ ಮೋಕ್ಷದ ಅಧಿಕಾರ.

ಸಮಯಸಾರದ ಅಧಿಕಾರಗಳ ಕ್ರಮವನ್ನು ಬದಲಾಯಿಸಲು ಸಾಧ್ಯವೇ ಇಲ್ಲ. ಶ್ರೀ ಗೌತಮಸ್ವಾಮಿಗಳ ಮುಖಕಮಲದಿಂದ ಹೊರಟ ದಂಡಕ ಸೂತ್ರವನ್ನು ಬದಲಾಯಿಸುವುದು ಸರಿಯಲ್ಲ. ಹೀಗೆ ಎರಡನ್ನು ತುಲನೆ ಮಾಡುತ್ತಾ ಹೋಗುವಾಗ ಇನ್ನೊಂದು ಪಾಠ ಬರುತ್ತದೆ.

ತವಾಯಾರೋ ವಾರಸವಿಹೋನಲ್ಲಿ ಬಹಿರಂಗ ತಪದಲ್ಲಿ "ಸರೀರಪರಿಚ್ಚಾಓ ವಿವಿತ್ತ ಸಯಣಾಸಣಂ ಚೇದಿ" ಅಭ್ಯಂತರ ತಪದಲ್ಲಿ ಸಹ "ಝಾಣಂ ವಿಉಸಗ್ಗೋ ಚೇದಿ" ಪಾಠವಿದೆ. ಮೂಲಚಾರದಲ್ಲಿಯು "ಕಾಯಸ್ಸ ವಿಪರಿತಾವೋ ವಿವಿತ್ತ ಸಯಣಾಸಣಂ ಛಟ್ಟಂ[೧] ॥ ೩೪೬ ॥ ಮುಂದೆ ಇದೇ ಕ್ರಮದಿಂದ ಇದರ ಸ್ವರೂಪದ ವರ್ಣನೆ ಮಾಡಿದೆ. ಹಾಗೆ ಅಭ್ಯಂತರ ತಪದಲ್ಲಿ ಝಾಣಂ ಚ ವಿಉಸಗ್ಗೋ ಅಬ್ಭಂತರಓ ತವೋ ಏಸೋ[೨]॥ ೩೬೦ ॥

ಇದೇ ಕ್ರಮದಲ್ಲಿ ಐದನೆಯ ತಪದಲ್ಲಿ ಧ್ಯಾನದ ವರ್ಣನೆ ಮಾಡಿ 6 ನೇಯ ತಪದಲ್ಲಿ ವ್ಯುತ್ಸರ್ಗದ ವರ್ಣನೆ ಮಾಡಲಾಗಿದೆ.[೩] "ಶ್ರಮಣ ಚರ್ಯೆ" ಯಲ್ಲಿ ಪಾಠವನ್ನು ಬದಲಾಯಿಸಿ "ವಿಉಸ್ಸಗ್ಗೋ ಝಾಣಂ ಚೇದಿ" ಎಂಬ ಪಾಠವನ್ನು ಇಟ್ಟರೆ ಅದು ಹೇಗೆ ಸರಿಯಾಗುತ್ತದೆ.

ಹೀಗೆ ಪಾಕ್ಷಿಕ ಪ್ರತಿಕ್ರಮಣದಲ್ಲಿ ಶ್ರಾವಕರಿಗೆ ಹನ್ನೆರಡು ವ್ರತಗಳಲ್ಲಿ ಶಿಕ್ಷಾವ್ರತಗಳಲ್ಲಿ ಹೀಗಿವೆ.

"ತತ್ಥ ಪಢಮೇ ಸಾಮಾಇಯಂ ವಿಧಿಯೇಪೋಸ ಹೋವಾಸಯಂ ತದಿಏ ಅತಿಥಿ ಸಂವಿಭಾಗೋ ಚಉತ್ಥೇ ಸಿಕ್ಖಾವದೆ ಪಚ್ಛಿಮ ಸಲ್ಲೇಹಣಾ ಮರಣಂ"

---

೧. ಗಾಥೆ ೩೪೬ ರಿಂದ ೩೫೭

೨. ಗಾಥೆ ೩೬೦

೩. ಗಾಥೆ ೩೬೦ ರಿಂದ ೪೦೮

ಚಾರಿತ್ರ ಪಾಹುಡ ಗ್ರಂಥದಲ್ಲಿಯು ಶ್ರೀ ಕುಂದ ಕುಂದರು ಇದೇ ಕ್ರಮದಲ್ಲಿ ಶಿಕ್ಷಾವ್ರತವನ್ನು ಹೇಳಿದ್ದಾರೆ. ಪಂಚ ಅಣುವ್ರತ, ಮೂರು ಗುಣ ವ್ರತ - ದಿಶಿ ವಿದಿಶಿ ಪರಿಮಾಣ, ಅನರ್ಥ ದಂಡತ್ಯಾಗ, ಭೋಗೋ ಪಭೋಗ ಪರಿಮಾಣ ನಾಲ್ಕು ಶಿಕ್ಷಾವ್ರತ, ಸಾಮಾಯಿಕ ಪ್ರೋಪಧೋಪವಾಸ, ಅತಿಥಿ ಪೂಜಾ ಮತ್ತು ಸಲ್ಲೇಖಿನ ಮರಣ, ಇವೇ ಹನ್ನೆರಡು ವ್ರತಗಳು ಪಂಚ ಅಣುವ್ರತಗಳು ಎಲ್ಲ ಕಡೆ ಸಮಾನವಾಗಿದೆ. ಗುಣವ್ರತ ಮತ್ತು ಶಿಕ್ಷಾ ವ್ರತಗಳಲ್ಲಿ ಅಂತರವಿದೆ. ಪ್ರತಿಕ್ರಮಣದಲ್ಲಿ ಮತ್ತು ಚಾರಿತ್ರ ಪಾಹುಡ ಗ್ರಂಥದಲ್ಲಿ ಸಲ್ಲೇಖಿನ ಮರಣವನ್ನು ಅಂತಿಮ ಶಿಕ್ಷಾವ್ರತವೆಂದು ಹೇಳಿದ್ದಾರೆ.

ದಿಸವಿದಿಸಪಮಾಣಂ ಪಢಮಂ ಅಣತ್ಥ ದಂಡಸ್ಸ ವಜ್ಜಣಂ ವಿದಿಯಂ ।
ಭೋಗೋಪಭೋಗ ಪರಿಮಾಣಂ, ಇಯಮೇವ ಗುಣವ್ವಯಾ ತಿಣ್ಣಿ ॥ ೨೫ ॥
ಸಾಮಾಇಯಂ ಚ ಪಢಮಂ ವಿದಿಯಂ ಚ ತಹೇವ ಪೋಸಹಂ ಭಣಿಯಂ ।
ತಇಯಂ ಅತಿಹಿ ಪುಜ್ಜಂ ಚಉತ್ಥ ಸಲ್ಲೇಹಣಾ ಅಂತೇ ॥೨೬॥

ಪದ್ಯಾನುವಾದ

ಸಂಸ್ಕೃತ ಭಕ್ತಿಗಳ ಹಾಗೂ ಪ್ರಾಕೃತ ಭಕ್ತಿಗಳ ಅನುವಾದವನ್ನು ನಾನು ಆರ್ಯಿಕೆ ರತ್ನಮತಿ ಮಾತಾಜೀಯವರ ವಿಶೇಷ ಪ್ರೇರಣೆಯಿಂದಾಗಿ ಮಾಡಿದೆ. ಅವರು ಯಾವಾಗಲು ಮಾತಾಜೀ ನಿಮಗೆ ಸಂಸ್ಕೃತ ಗೊತ್ತಿರುವುದರಿಂದ ಭಕ್ತಿಗಳನ್ನು ಓದಿದಾಗ ಅರ್ಥವಾಗುತ್ತದೆ. ಆದರೆ ನಮಗೆ ವ್ಯಾಕರಣದ ಜ್ಞಾನವು ಇಲ್ಲದೇ ಇರುವುದರಿಂದ ಭಾವ ಅರ್ಥವಾಗುವುದಿಲ್ಲ. ಆದ್ದರಿಂದ ಇದನ್ನು ಹಿಂದಿಗೆ ಭಾಷಾಂತರಿಸಿ ಎಂದು ಹೇಳುತ್ತಲೇ ಇದ್ದರು. ಹೀಗಾಗಿ 1972 ರಲ್ಲಿ ಸಂಸ್ಕೃತ 1979 ಪ್ರಾಕೃತ ಭಕ್ತಿಗಳನ್ನು ಅನುವಾದ ಮಾಡಿದೆ.

"ಕುಂದ ಕುಂದರ ಭಕ್ತಿರಾಗ" ಎಂಬ ಪುಸ್ತಕದಲ್ಲಿ ಈ ಅನುವಾದವೆಲ್ಲ ಅಚ್ಚಾಯಿತು. ಆದರೆ ಅವರು ಬದುಕಿರುವಾಗ ಆಗಲಿಲ್ಲ. ಅವರು ಪ್ರತಿಕ್ರಮಣದ ಪದ್ಯಾನುವಾದವನ್ನು ಮಾಡಲು ಬಹಳ ಪ್ರೇರೇಪಿಸುತ್ತಿದ್ದರು. ನನಗೂ ಮಾಡಬೇಕೆಂದು ಇಚ್ಛೆ ಇದ್ದರೂ ಯೋಗ ಕೂಡಿ ಬಂದಿರಲಿಲ್ಲ. ಕ್ಷುಲ್ಲಕ ಚಿತಸಾಗರರು ಇದರ ಬಗ್ಗೆ ಕೇಳುತ್ತಲೇ ಇದ್ದರು. ಗದ್ಯಸೂತ್ರಗಳನ್ನು ಪದ್ಯಗಳಲ್ಲಿ ಸಂಗ್ರಹಿಸುವುದು ಸುಲಭದ ಕೆಲಸವಲ್ಲ. ಮುನಿಚರ್ಯೆಯ ಪುಸ್ತಕ ಮುದ್ರಣವಾಗುತ್ತಿದ್ದಂತೆ ಇದು ಮುದ್ರಣವಾಯಿತು ಜಿಜ್ಞಾಸುಗಳಿಗೆ ಅನುವಾದ ಹಿಡಿಸುತ್ತದೆ ಎಂದು ನನ್ನ ಭಾವನೆ.

ಜಿನಾನ್ ಜಿತಾರಾತಿಗಣಾನ್ ಗರಿಷ್ಠಾನ್ ಶ್ರೀ ಸಿದ್ಧಿದಾಃ ಸದೃಷೀಂದ್ರಾನ್ ॥೧೦॥

ಇದೇ ಪುಟದಲ್ಲಿ ಟಿಪ್ಪಣಿ ಕೊಡಲಾಗಿದೆ.

---

೧. **ಚಾರಿತ್ರಪಾಹುಡ.**

೨. **ಸಂಸೂಚಿತೋ ಗಣದರವಲಯಪಾಠ ಪ್ರತಿಕ್ರಮಣ ಪುಸ್ತಕೇ ನೋಪಲಬ್ಧೋತಃ ಸಕಲ ಕೀರ್ತಿಕೃತ ಗಣಧರ ವಲಯ ಪೂಜಾತೋ. ನಿಷ್ಕಾಸ್ಯ ಸಂಯೋಜಿತಃ**
ಸೂಚಿಸಿರುವ ಗಣಧರ ಪಾಠವು ಪ್ರತಿಕ್ರಮಣ ಪುಸ್ತಕದಲ್ಲಿ ಇಲ್ಲ ಆದ್ದರಿಂದ ನಾನು ಇದನ್ನು ಸಕಲ ಕೀರ್ತಿಗಳಿಂದ ಗಣಧರ ಸೂತ್ರದಿಂದ ತೆಗೆದುಕೊಂಡಿದ್ದೇನೆ.

ನಾನು ಪ್ರತಿಕ್ರಮಣ ಗ್ರಂಥತ್ರಯೀ ಪುಸ್ತಕವನ್ನು ಓದಿದ್ದೇನೆ. ಅದರಲ್ಲಿ ಪಾಕ್ಷಿಕ ಪ್ರತಿಕ್ರಮಣದ ದಂಡಕ ಸೂತ್ರಗಳ ಸಂಸ್ಕೃತ ಟೀಕೆಯಲ್ಲಿ ಇದೇ ಪ್ರತಿಕ್ರಮಣವನ್ನು ಹೇಳಲಾಗಿದೆ. "ಣಮೋಜಿಣಾಣಂ" ಮುಂತಾದ 48 ಗಣಧರವಲಯ ಮಂತ್ರಗಳ ಟೀಕೆ ಇದೆ. ಈ ಟೀಕೆಯ ನಂತರ ಪುಟ 96 ಇಲ್ಲಿ ಇತಿ ಗಣಧರವಲಯಾಖ್ಯಿ ಪ್ರತಿಕ್ರಮಣಾ ಮಂಗಲ ದಂಡಕಃ ಪಾಠ ಬಂದಿದೆ.

ಬ್ಯಾವರದಲ್ಲಿ 1958 ರಲ್ಲಿ ಚಾತುರ್ಮಾಸ ಮಾಡುವಾಗ "ಕ್ರಿಯಾಕಲಾಪ" ಗ್ರಂಥದ ಸಂಪಾದಕರಾದ ಪಂ. ಪನ್ನಾಲಾಲಸೋನಿಯವರಿಗೆ ಈ ಸಾಲುಗಳನ್ನು ತೋರಿಸಿದ್ದೆ. ಅದಕ್ಕ ಅವರು "ಣಮೋ ಜಿಣಾಣಂ" ಮುಂತಾದ 48 ಮಂತ್ರಗಳ ಗಣಧರವಲಯ ಪಾಠವು ನನಗೆ ಅರ್ಥವಾಗಿರಲಿಲ್ಲ. ಆದ್ದರಿಂದ ನಾನು ಸಕಲಕೀರ್ತಿಯವರಿಂದ ರಚಿಸಿದ್ದ "ಗಣಧರವಲಯ ಪೂಜಾ ವಿಧಾನ" ಪುಸ್ತಕದಿಂದ ಗಣಧರವಲಯ ಸ್ತೋತ್ರಗಳನ್ನು ತೆಗೆದು ಸೇರಿಸಿದ್ದೇನೆ. ಇದು ನನ್ನ ತಪ್ಪು. ಈ ಸ್ತೋತ್ರ ಅನಗತ್ಯ ಆದ್ದರಿಂದ ಮುಂದಿನ ಸಂಸ್ಕರಣದಲ್ಲಿ ಇದನ್ನು ತೆಗೆಯುತ್ತೇನೆ ಎಂದಿದ್ದರು. ಇದು ಅವರ ಪಾಪ ಭೀರುತನವನ್ನು ತೋರಿಸುತ್ತದೆ. ಇಂದಿನ ವಿದ್ವಾಂಸರಲ್ಲು ಈ ಗುಣ ಬರಬೇಕು.

1962 ರಲ್ಲಿ ಶ್ರೀ ಲಾಲಜೀ ಕಾವ್ಯತೀರ್ಥರು "ಶಾಂತಿಸಾಗರ ಜೈನ ಸಿದ್ಧಾಂತ ಪ್ರಕಾಶಿನಿ ಸಂಸ್ಥೆ" ಯಿಂದ ನಾನು ರಚಿಸಿದ "ಯತಿ ಕ್ರಿಯಾ ಮಂಜರೀ" ಪುಸ್ತಕವನ್ನು ಮುದ್ರಿಸಿದರು. ಅವರಿಂದ ಸಲಹೆ ಪಡೆದೆ. ನಾನು "ಜಿನಾನ್ ಜಿತಾರಾತಿಗಣಾನ್"[೧] ಎಂಬ ಸ್ತೋತ್ರವನ್ನು ತೆಗೆದು ಹಾಕಿದ್ದೆ. ಈಗಲೂ ನಾನು "ಮುನಿಚರ್ಯೆ" ಯಲ್ಲಿ ಪಾಕ್ಷಿಕ ಪ್ರತಿಕ್ರಮಣದಲ್ಲಿ ಈ ಸ್ತೋತ್ರವನ್ನು ಮೂಲ ಪಾಠದಲ್ಲಿ ಇಟ್ಟಿಲ್ಲ. ಆದರೆ ಪ್ರತಿಕ್ರಮಣದ ಸಂಸ್ಕೃತ ಛಾಯೆಯಲ್ಲಿ ಈ 48 ಗುಣಧರವಲಯ ಮಂತ್ರಗಳನ್ನು ಛಾಯೆಯಂತೆಯೇ ಪುಟ 302 ರಲ್ಲಿ ಕೊಟ್ಟಿದೆ.

ಪಾಠಾಂತರ ಮತ್ತು ಹೆಚ್ಚಿನ ಪಾಠ

ಕ್ರಿಯಾಕಲಾಪದಲ್ಲಿ ಮತ್ತು "ಪ್ರತಿಕ್ರಮಣ ಗ್ರಂಥ" ದಲ್ಲಿಪಾಠಾಂತರ ಪಾಠಭೇದವಿದೆ. ಕೆಲವು ಪಾಠಾಂತರಗಳನ್ನು ಮುನಿಚರ್ಯೆಯಲ್ಲಿ ತೆಗೆದುಕೊಳ್ಳಲಾಗಿದೆ. ಕೆಲವಕ್ಕೆ ಟಿಪ್ಪಣಿ ಕೊಟ್ಟಿದೆ. ಕೆಲವೊಂದಕ್ಕೆ ಮೂಲದಲ್ಲಿಯೆ ಕೋಷ್ಟಕದಲ್ಲಿ ಕೊಡಲಾಗಿದೆ. ಮುನಿಚರ್ಯೆಯಲ್ಲಿ ಪುಟ 48 ರ ಮೂಲದಲ್ಲಿ "ವೀರ" ಪಾಠವಿದೆ. ಪ್ರತಿಕ್ರಮಣ ಗ್ರಂಥತ್ರಯಿಯ ಆಧಾರದಲ್ಲಿ "ಘೋರಂ" ಇದೆ. ಇದನ್ನು ಪಾಠಾಂತರ ಟಿಪ್ಪಣಿಯಲ್ಲಿ ಕೊಡಲಾಗಿದೆ. ಹೀಗೆ ಅಷ್ಟಮಿಯ ಪ್ರತಿಕ್ರಮಣದಲ್ಲಿ ಪು. 208 ರಲ್ಲಿ "ಆಹಾವರೇ" ಮತ್ತು ದುವ್ವೇ ಪಾಠವಿದೆ. ಅದಕ್ಕೆ ಕೋಷ್ಮಕದಲ್ಲಿ (ಅಹಾವರೇ) ಪಾಠ ಕೊಡಲಾಗಿದೆ ಮತ್ತು ದುವ್ವೇ ಯ ಪಾಠಭೇದ "ದೋಚ್ಚೆ" ಟಿಪ್ಪಣಿಯಲ್ಲಿ ಕೊಟ್ಟಿದೆ. ಇದೇ ರೀತಿ ಇದೇ ಪುಟದ 208 ರಲ್ಲಿ "ಭಂಸೇಣ ವಾ" ಪಾಠದ ಮುಂದೆ "ಪದೋಸೇಣ ವಾ" ಪಾಠವು ಪ್ರತಿಕ್ರಮಣ ಗ್ರಂಥ ತ್ರಯೀಯಲ್ಲಿ ಹೆಚ್ಚಾಗಿ ಸಿಗುತ್ತದೆ. ಇಲ್ಲಿಇದನ್ನು ಕೋಷ್ಟಕದಲ್ಲಿ ಕೊಡಲಾಗಿದೆ. ಮುನಿಚರ್ಯೆ ಪುಸ್ತಕದಲ್ಲಿ ಎಲ್ಲ ಕಡೆಯಲ್ಲಿಯು ಇದನ್ನು ಅನುಸರಿಸಿರುವುದರಿಂದ ಗ್ರಂಥ ಪ್ರಮಾಣಿತವಾಗಿದೆ.

ಯತಿ ಕ್ರಿಯಾ ಮಂಜರಿ

1958 ರಲ್ಲಿ ಬ್ಯಾವರದ ಚಾತುರ್ಮಾಸದಲ್ಲಿರುವಾಗ ರಾತ್ರಿಯ ಸಾಮಾಯಿಕವಾದ ಮೇಲೆ ಸರಸ್ವತಿ ಭವನದ

---

೧. ಯತಿಕ್ರಿಯಾಮಂಜರೀ. ಪು. ೧೪೩

ಅನೇಕ ಹಸ್ತ ಲಿಖಿತ ಗ್ರಂಥಗಳನ್ನು ಅವಲೋಕನ ಮಾಡಿ "ಯತಿ ಕ್ರಿಯಾಮಂಜರಿ" ಎಂಬ ಹೆಸರಿನ ಮುನಿ-ಆರ್ಯಿಕೆಯರ ನಿತ್ಯ-ನೈಮಿತ್ತಿಕ ಕ್ರಿಯಾಗಳ ಲೇಖನಗಳ ಸಂಕಲನ ಮಾಡುತ್ತಿದ್ದೆ.

ಮುನಿಗಳಿಗೆ ತ್ರಿಕಾಲ ಸಾಮಾಯಿಕ ಹಾಗೂ ತ್ರಿಕಾಲ ದೇವವಂದನೆಯ ಕ್ರಿಯೆಯು ಇದೆ ಅದರ ವಿಧಿಗಳು ಕ್ರಿಯಾಕಲಾಪ, ಅನಗಾರ ಧರ್ಮಾಮೃತ, ಚಾರಿತ್ರಸಾರ, ಆಚಾರಸಾರ, ಭಾವಸಂಗ್ರಹ ಮೊದಲಾದ ಗ್ರಂಥಗಳಲ್ಲಿ ವರ್ಣಿಸಲಾಗಿದೆ. ಕೆಲವು ಕಡೆ ಸಂಗ್ರಹವಾಗಿದೆ. ಹಸ್ತಲಿಖಿತ ಒಂದು ಸಂಧೀ ಸಂಹಿತ ಇಂದ್ರನಂದಿ ಸಂಹಿತೆ ಮೊದಲಾದವು ಮತ್ತು ಅಕಲಂಕ ಪ್ರತಿಷ್ಠಾ ಪಾಠ ಮೊದಲಾದ ಅನೇಕ ಗ್ರಂಥಗಳನ್ನು ಅವಲೋಕಿಸಿ ಅವುಗಳಿಂದ ದೇವವಂದನೆಯ ಸಾಮಾಯಿಕಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ತೆಗೆದುಕೊಳ್ಳಲಾಗಿದೆ. ಈ ರೀತಿ ಮುನಿಗಳು ಮತ್ತು ಆರ್ಯಿಕೆಯರು ರಾತ್ರಿಯ ಪ್ರತಿಕ್ರಮಣ, ಮಧ್ಯಾಹ್ನದ ಸಾಮಾಯಿಕದ ಮೊದಲೇ ಮಾಡಬೇಕು. ಇದಕ್ಕೆ ಪ್ರಮಾಣವಿದೆ.

ಈ ಕೆಲಸವನ್ನು ಪಂ. ಪನ್ನಾಲಾಲರು ಆಸಕ್ತಿಯಿಂದ ಮಾಡುತ್ತಾ ಪ್ರಮಾಣಗಳನ್ನು ಹುಡುಕಿಸುತ್ತಿದ್ದರು. ನಾನು ಅನೇಕ ಗ್ರಂಥಗಳಿಂದ ಸಂಪೂರ್ಣ ನಿತ್ಯ-ನೈಮಿತ್ತಿಕ ಕ್ರಿಯೆಗಳಿಗೆ ಪ್ರಮಾಣಗಳನ್ನು ಕಲೆ ಹಾಕಿ ಪ್ರತ್ಯೇಕ ಕ್ರಿಯೆಗಳನ್ನು ಪ್ರಮಾಣ ಸಹಿತವಾಗಿ ವಿಧಿವತ್ತಾಗಿ ಆಯಾ ಭಕ್ತಿಗಳ ಪಾಠವನ್ನು ಸಹ ಯಥಾ ಸ್ಥಾನದಲ್ಲಿ ಕೊಟ್ಟು "ಯತಿ ಕ್ರಿಯಾ ಮಂಜರಿ" ಎಂದು ಹೆಸರು ಕೊಟ್ಟಿದ್ದೇನಿ.

ಈ ಪುಸ್ತಕವನ್ನು ಅಚ್ಚಿಗೆ ಕೊಟ್ಟಾಗ ಪಂ. ಶ್ರೀಲಾಲಜೀಯವರು. ಕ್ರಿಯಾಗಳ ಜೊತೆ ಪ್ರಮಾಣಗಳನ್ನು ಮಾತ್ರ ಸೇರಿಸಿ ವಿಸ್ತೃತವಾದ ವಿವರಣೆಯನ್ನು ಅದರಿಂದ ತೆಗೆದರು. ಮಾತಾಜೀ ಈ ಕ್ರಿಯಾ ಪುಸ್ತಕಗಳಲ್ಲಿ ಹೆಚ್ಚಿನ ವಿಷಯ ಬೇಡ. ಅದನ್ನು ಬೇರೆಯಾಗಿ ಮುದ್ರಿಸೋಣ ಎಂದರು. ಹೀಗಾಗಿ "ಯತಿಕ್ರಿಯಾಮಂಜರೀ" ಯ ಪ್ರಾರಂಭದ ಸ್ತೋತ್ರ ಪಾಠಗಳನ್ನು ಸೇರಿಸಿ ಪುಸ್ತಕವನ್ನು ಅಚ್ಚಿಗೆ ಕೊಡಲಾಯಿತು. ಇದರಲ್ಲಿ ಒತ್ತಾಯ ಮಾಡಿದರು. ನನ್ನ ಹೆಸರನ್ನು ಹಾಕಲಿಲ್ಲ. ಈ ಪುಸ್ತಕ 1962 ರಲ್ಲಿ ಮುದ್ರಣವಾಯಿತು. ಈ ಪುಸ್ತಕ್ಕಾಗಿ ನಾನು ಪರಿಶ್ರಮಪಟ್ಟು ಸಂಗ್ರಹಿಸಿದ್ದ ಎಲ್ಲಾ ಪ್ರಮಾಣಗಳನ್ನು ನಾನು ಸಮ್ಮೇದ ಗಿರಿಯ ಯಾತ್ರೆ ಹೋಗುವಾಗ ಬ್ಯಾಗನ್ನು ಕುಚಾಮನಿನ ಒಬ್ಬ ಶ್ರಾವಕನಿಗೆ ಜೋಪಾನವಾಗಿ ರಕ್ಷಿಸಲು ಹೇಳಿಕೊಟ್ಟೆ. ವಿಷಾದದ ವಿಷಯವೆಂದರೆ ಇಲ್ಲಿಯವರೆಗೂ ನನಗೆ ಆ ಬ್ಯಾಗ ಸಿಕ್ಕಿಲ್ಲ. ಇದೇ ರೀತಿ 1959 ರಲ್ಲಿ " ಶ್ರಾವಕ ಕ್ರಿಯಾ ಮಂಜರಿ" ಗಾಗಿಯು ನಾನು ಅನೇಕ ಪ್ರತಿಕ್ರಮಣವನ್ನು ಪ್ರಮಾಣ ಸಹಿತವಾಗಿ ಸಂಗ್ರಹಿಸಿದ್ದೆ. ಶ್ರಾವಕರು ದೇವಪೂಜೆ ಮುಂತಾದ ಕ್ರಿಯೆಗಳನ್ನು ವಿಧಿವತ್ತಾಗಿ ಮಾಡಿದರೆ ಅದೇ ಅವರಿಗೆ ಸಾಮಾಯಿಕ ಈ ವಿಷಯಗಳ ಮೇಲೆಯು ಪ್ರಮಾಣಗಳನ್ನು ಸಂಕಲಿತಗೊಳಿಸಿದ್ದು ಈ ಸಂಕಲನದ ಪುಸ್ತಕದ ಬ್ಯಾಗನ್ನು 1966 ರಲ್ಲಿ ಅಕಲೂಜದ ಒಬ್ಬ ಪ್ರಸಿದ್ಧ ಶ್ರಾವಕರಿಗೆ ಅಚ್ಚು ಹಾಕಿಸುವ ಸಲುವಾಗಿ ಕೊಟ್ಟೆ. ಇಲ್ಲಿಯವರೆಗೂ ಅದರ ಸುದ್ದಿ ಇಲ್ಲ. ಇಂತಹ ಕಹಿ ಅನುಭವಗಳು ಮನಸ್ಸಿಗೆ ಬಹಳ ನೋವನ್ನುಂಟು ಮಾಡುತ್ತವೆ. ಇದನ್ನು ಅರಿತ ಮೋತಿಚಂದನು ನನ್ನಿಂದ ಯಾವುದೇ ರಚನೆಯಾಗಲಿ ಮೊದಲು ಅದನ್ನು ಪ್ರತಿ ಮಾಡಿಸಿ ಇಟ್ಟು ಬಿಡುತ್ತಾರೆ. ಇಂದು ಸೌಲಭ್ಯಗಳು ಚೆನ್ನಾಗಿದೆ.

ಗ್ರಂಥಗಳ ರಚನೆಯಲ್ಲಿ ಹೆಸರು ಹಾಕುವುದು ಬೇಡ ಎನ್ನುವುದಕ್ಕೆ ಮೂಲ ಕಾರಣ ನನ್ನ ನಿಃಸ್ಪೃಹತೆಯೇ. 1955 ರಲ್ಲಿ ಶ್ರೀ ವಿಶಾಲಮತಿಯವರು ನನ್ನ ಮೊದಲ ರಚನೆಯಾದ "ಸಹಸ್ರನಾಮದ ಮಂತ್ರ" ಶ್ರೀ ಜಿನಸಹಸ್ರನಾಮ ವ್ರತವಿಧಿಯ ಪೂಜೆ ಎಂಬ ಪುಸ್ತಕಗಳನ್ನು ನನ್ನ ವೀರಮತಿ ಹೆಸರಿನಲ್ಲಿ ಅಚ್ಚು ಹಾಕಿಸಿದ್ದರು.

1961 ರಲ್ಲಿ ಪುಸ್ತಕ ಪ್ರಕಟವಾಗುವಾಗ ಹೆಸರು ಹಾಕಬಾರದೆಂದು ನಿರ್ಬಂಧಿಸಿದ್ದೆ. ಪುನಃ 1960 ರಲ್ಲಿ ನನ್ನಿಂದ ರಚಿತವಾದ ಶ್ರೀ ಬಾಹುಬಲಿ ಚರಿತ ಭಕ್ತಿ, ಸುಮನಾವಲೀ, ವ್ರತ ವಿಧಿ ಸುಮನಾವಲೀ, ಮುಂತಾದ ಪುಸ್ತಕಗಳನ್ನು ಪ್ರಕಟಿಸುವಾಗ ಬ್ರ. ಸುಮತೀ ಬಾಯಿಯ ಜೊತೆ ಕೆಲವು ವಿದ್ವಜ್ಜನರು ಬಂದು ಮಾತಾಜೀ ಪುಸ್ತಕದಲ್ಲಿ ತಮ್ಮ ಹೆಸರಿದ್ದರೆ ಜನ ಅದು ಮೌಲಿಕ ಗ್ರಂಥವೆಂದು ಗೌರವಿಸುತ್ತಾರೆ. ಇಲ್ಲದಿದ್ದರೆ ಮುಂದೆ ಯಾರಾದರು ಮಾಯಾಚಾರೀ ವಿದ್ವಾಂಸ ತನ್ನ ಹೆಸರನ್ನು ಹಾಕಿಕೊಂಡು ಪ್ರಕಟಿಸಬಹುದು. ಆದ್ದರಿಂದ ನಿಮ್ಮ ಕೃತಿಗಳಲ್ಲಿ ಹೆಸರನ್ನು ಹಾಕಲು ಅನುಮತಿ ಕೊಡಿರೆಂದು ವಿಷಯವನ್ನು ಅರ್ಥೈಸಿದ್ದರಿಂದ ಹೆಸರು ಹಾಕಲು ಅನುಮತಿಸಿದೆ.

೧೦೨

1992 ಅಕ್ಟೋಬರ 23 ರಂದು ಧನತೇರಸ ತಿಥಿಯಲ್ಲಿ ಬೆಳಗಿನ ಜಾವ 4 ಗಂಟೆಯಲ್ಲಿ ಸಾಮಾಯಿಕವಾದ ಮೇಲೆ ಪಿಂಡಸ್ಥ ಧ್ಯಾನದಲ್ಲಿ ನಿರತಳಾಗಿದ್ದೆ. ಆಗ ನನ್ನ ಮನಃ ಪಟಲದಲ್ಲಿ ವಿಶಾಲಕಾಯದ ಖಡ್ಗಾಸನದಲ್ಲಿದ್ದ ವೃಷಭ ತೀರ್ಥಂಕರರ ದರ್ಶನವಾಯಿತು. ನನಗಂತೂ ಸ್ವಾಮಿ ಅಯೋಧ್ಯೆಯಲ್ಲಿಯೇ ನೆಲಸಿರುವಂತೆ ಭಾಸವಾಗತೊಡಗಿತು. ಭಗವಂತನನ್ನು ದರ್ಶನ ಮಾಡುತ್ತಾ ಮಾಡುತ್ತಾ ನನಗೆ ಪ್ರಥಮ ತೀರ್ಥಂಕರ ವೃಷಭ ದೇವನಿಗೆ ಮಸ್ತಕಾಭಿಷೇಕ ಮಾಡಿಸಬೇಕೆಂಬ ಪ್ರೇರಣೆ ದೊರೆಯಿತು. ಹಾಗೇ ಆ ತೀರ್ಥಕ್ಷೇತ್ರವನ್ನು ಜೀರ್ಣೋದ್ಧಾರ ಮಾಡಿಸಬೇಕೆಂದು ಮನಕ್ಕೆ ಅರಿವಾಗತೊಡಗಿತು. ಧ್ಯಾನದಿಂದ ಎದ್ದವಳೇ ಮೊದಲು ಚಂದನಮತಿಗೆ ಹೇಳಿದೆ. ನಂತರ ರವೀಂದ್ರ ಮತ್ತು ಮೋತಿಸಾಗರರನ್ನು ಕೂರಿಸಿಕೊಂಡು ಇದರ ಬಗ್ಗೆ ಮಾತಾಡಿದಾಗ ಚಂದನಮತಿಯು ಅಲ್ಲಿಯೇ ಇದ್ದವರು ಅಯೋಧ್ಯೆಯ ಕಡೆಗೆ ವಿಹಾರದ ವಿಷಯ ಕೇಳಿ ಮಾತಾಜೀ. ಈಗ ನಿಮ್ಮ ಆರೋಗ್ಯ ಅಷ್ಟು ದೂರ ವಿಹಾರ ಮಾಡಲು ಯೋಗ್ಯವಾಗಿಲ್ಲ ಆದ್ದರಿಂದ ಇಂತಹ ಯೋಚನೆಗಳನ್ನೇ ಮಾಡಬೇಡಿರೆಂದರು.

ಅವರೆಲ್ಲ ಹಾಗೇ ಅಂದಿದ್ದರಿಂದ ನಾನು ಸ್ವಲ್ಪ ದಿನ ಸುಮ್ಮನೆ ಆಗಬೇಕಾಯಿತು. ಆದರೆ ಮನದಲ್ಲಿ ಈ ಕಾರ್ಯ ಆಗಲೇ ಬೇಕೆಂಬ ಭಾವನೆ ಮೊಳೆಯುತ್ತಲೇ ಇತ್ತು. ಒಂದು ದಿನ ಸುಯೋಗದಿಂದ ಕೆಲವು ಪ್ರತಿಷ್ಠಿತರು ದರ್ಶನಕ್ಕಾಗಿ ಬಂದರು. ಅವರಲ್ಲಿ ಫತೇಹಪುರದ ಅಧ್ಯಕ್ಷರಾದ ಸರೋಜಕುಮಾರ ಜೈನರೊಡನೆ ಚರ್ಚೆ ಮಾಡುತ್ತಾ ಅಯೋಧ್ಯೆಯ ದಾರಿಯನ್ನು ನನ್ನ ಡೈರಿಯಲ್ಲಿ ಗುರುತು ಹಾಕಿಕೊಳ್ಳುತ್ತಿದ್ದುನ್ನು ಕಂಡು ಮಾತಾಜೀ ಹೊರಡುವವರೇ ಎಂದು ಸಂಘದವರಿಗೆ ತಿಳಿಯಿತು.

1992ರ ಡಿಸೆಂಬರ 6 ರಂದು ರಾಮಜನ್ಮ ಭೂಮಿಯಲ್ಲಿ ಬಾಬರಿ ಮಸೀದಿಯನ್ನು ಒಡೆದು ಹಾಕಿದ್ದರಿಂದ ಇಡೀ ದೇಶದಲ್ಲೆಲ್ಲಾ ಹಿಂದೂ - ಮುಸ್ಲಿಂಗಳಲ್ಲಿ ಸಂಘರ್ಷ ಬೆಂಕಿ ಉರಿಯತೊಡಗಿತ್ತು. ಈ ಸಮಯದಲ್ಲಿ ಮಾತಾಜೀ ಅಲ್ಲಿಗೆ ಹೊರಡುವುದು ಯಾರಿಗೂ ಸಮ್ಮತಿ ಇರಲಿಲ್ಲ. ಇವರ ಮಾತುಗಳನ್ನು ಕೇಳಿದ ನನಗೆ ಅಲ್ಲಿಗೆ ಹೋಗಲೇ ಬೇಕೆಂಬ ನಿರ್ಧಾರ ಧೃಡವಾಗ ತೊಡಗಿತು. ಆದರೆ ನಾನು ಅಹಿಂಸೆಯ ಅವತಾರವಾದ ಭಗವಂತನಲ್ಲಿಗೆ ಹೋಗಲೇ ಬೇಕಾಗಿದೆ. ನನ್ನನ್ನು ಯಾರು ಏನು ಮಾಡಲಾರರು. ಇಲ್ಲಿಯವರೆಗೂ ಅಯೋಧ್ಯೆ ರಾಮನ ಜನ್ಮ ಭೂಮಿ ಎಂದು ಬಾಬರಿ ಮಸೀದಿ ಇದೆ ಎಂದು ಮಾತ್ರ ಜನರಿಗೆ ಗೊತ್ತು. ಅದಕ್ಕಿಂತ ಮೊದಲು ವೃಷಭ ದೇವರ ಜನ್ಮ ಭೂಮಿಯು ಆಗಿತ್ತು ಎಂಬುದನ್ನು ಜನ ಏಕೆ ತಿಳಿದಿಲ್ಲ ಎಂಬುದೇ ನನ್ನ ಮನದ ಕೊರಗಾಗಿತ್ತು.

ಕೊನೆಗೆ 1993 ರ ಫೆಬ್ರುವರಿ 11 ರಂದು ಸಂಘ ಸಹಿತವಾಗಿ ಅಯೋಧ್ಯೆ ಕಡೆ ಸಂಗವು ಹೊರಟಿತು. ಮೂರು ತಿಂಗಳ ವಿಹಾರ ಮಾಡಿ ಜೂನ 16 ರಂದು ಅಯೋಧ್ಯೆ ತಲುಪಿ ಸಾಕ್ಷಾತ್ ಭಗವಂತನನ್ನು ದರ್ಶನ ಮಾಡಿದಾಗ ಉಂಟಾದ ಸುಖದ ಅನುಭವ. ಹಾಗೇ ಕನಸಿನಲ್ಲಿ ಮೊದಲೇ ಮೂರ್ತಿಯನ್ನು ಕಂಡ ಆಶ್ಚರ್ಯ ಎರಡು ಉಂಟಾಯಿತು. ನಾನು ಎಂದೂ ಈ ಮೂರ್ತಿಯನ್ನು ನೋಡಿರಲಿಲ್ಲ. ಇದು ಭಗವಂತನದೇ ಚಮತ್ಕಾರವೆಂದುಕೊಂಡೆ. ಕೊನೆಗೆ ಚಾತುರ್ಮಾಸವನ್ನು ಅಲ್ಲಿಯೇ ಮಾಡಿ ಸುಮಾರು 10 ತಿಂಗಳು ಅಲ್ಲೇ ಇರುವ ಭಾಗ್ಯ ದೊರೆಯಿತು. ಈ ಕಾಲದಲ್ಲೇ ಅನೇಕ ನವ ನಿರ್ಮಾಣಗಳು ಹಳೆಯ ಟೊಂಕಗಳ ಜೀರ್ಣೋದ್ಧಾರ, ಜನ ಕಲ್ಯಾಣದ ಅನೇಕ ಕಾರ್ಯಗಳು ನಡೆದವು. ತೀರ್ಥಂಕರ ವೃಷಭದೇವರಿಗೆ ರಾಷ್ಟ್ರೀಯ ಮಟ್ಟದಲ್ಲಿ ಮಹಾಮಸ್ತಕಾಭಿಷೇಕವು ನಡೆಯಿತು. ಟಿಕೈತನಗರದ ಪ್ರದ್ಯುಮ್ನಕುಮಾರ ಜೈನರ ಕುಟುಂಬವು ಈ ಯಾತ್ರೆಯನ್ನು ಮಾಡಿಸಿದ್ದರು. ನಿಜವಾಗಿಯು ಇವರ ಗುರುಭಕ್ತಿಯು ಅನುಕರಣೀಯವಾದುದು. ಚಂದನಮತಿಯು ಅಯೋಧ್ಯಾ ಯಾತ್ರಪ್ರವಾಸ ಎಂಬ ಲೇಖನವನ್ನು ಬರೆದಿದ್ದಾರೆ. ಜೈನಸಮಾಜದಲ್ಲಿ ಭ. ವೃಷಭ ತೀರ್ಥಂಕರರಿಗೆ ಮಸ್ತಾಕಾಭಿಷೇಕ ಮಾಡಿಸುವ ಆಚರಣೆ ಬರಬೇಕೆಂಬುದೇ ನನ್ನ ಮಹದಾಶೆ. ನಮ್ಮ ಸಂಸ್ಕೃತಿಯ ಪ್ರತೀಕವೇ 24 ತೀರ್ಥಂಕರರ ಜನ್ಮ ಭೂಮಿ. ಇವುಗಳ ರಕ್ಷಣೆ ಸಮಾಜದ್ದು. ಎಲ್ಲಾ ತೀರ್ಥಗಳಲ್ಲೂ ಪ್ರಮುಖವಾದುದು ಸಮ್ಮೇದ ಶಿಖರ ಮತ್ತು ಅಯೋಧ್ಯೆಯ ರಕ್ಷಣೆ ಮಾಡುವುದು ಪ್ರತಿಯೊಬ್ಬ ಜೈನರ ಕರ್ತವ್ಯವಾಗಬೇಕು. ಹಾಗೇ ಸಾಧುಗಳ ಸಂಘವನ್ನು ಯಾತ್ರೆ ಮಾಡಿಸುವಂತಹ ಪುಣ್ಯವಂತನಾದ ಶ್ರಾವಕನು ಯಾವಾಗಲೂ ಕೀರ್ತಿಯನ್ನು ಪಡೆದು, ಸುಖ ಜೀವನ ನಡೆಸುತ್ತಾನೆ.

ವರ್ತಮಾನ ಕಾಲದಲ್ಲಿ ಹುಂಡಾವ ಸರ್ಪಿಣೀ ಕಾಲ ದೋಷದಿಂದ ಶಾಶ್ವತವಾದ ಜನ್ಮಭೂಮಿ ಅಯೋಧ್ಯೆಯಲ್ಲಿ 5 ಜನ ತೀರ್ಥಂಕರರ ಜನ್ಮವಾಗಿದೆ. ಉಳಿದ 19 ತೀರ್ಥಂಕರರ ಜನ್ಮ ಬೇರೆ ಸ್ಥಳಗಳಲ್ಲಾಗಿದೆ. ಹಾಗೇ 20 ತೀರ್ಥಂಕರರ ಮೋಕ್ಷ ಸಮ್ಮೇದ ಶಿಖರದಲ್ಲಾಗಿದೆ. ಉಳಿದ 4 ಜನ ತೀರ್ಥಂಕರರ ಮೋಕ್ಷ ಬೇರೆಯೇ ಕ್ಷೇತ್ರದಲ್ಲಾಗಿದೆ. ಹೀಗಾಗಿ 5 ನಿರ್ವಾಣ ಭೂಮಿಗಳು ಪವಿತ್ರವಾಗಿವೆ. ಇವೆಲ್ಲಕ್ಕೂ ನನ್ನ ಶತ - ಶತ ನಮಸ್ಕಾರಗಳು.

ಅಯೋಧ್ಯೆಯ ತೀರ್ಥಕ್ಷೇತ್ರ ಕಮಿಟಿಗೆ ಹೊಸ ಆಯ್ಕೆ

1994 ರಲ್ಲಿ ನನ್ನ ಸಂಘದಲ್ಲಿ ವೃಷಭದೇವರ ಜನ್ಮ ಜಯಂತಿಯ ಸಮಾರಂಭವು ನಡೆಯಿತು. ಅದಕ್ಕಾಗಿ ಹಲವಾರು ಊರುಗಳಿಂದ ಸನ್ಮಾನ್ಯ ಶ್ರಾವಕರು ಬಂದಿದ್ದರು. ಅಯೋಧ್ಯೆಯಲ್ಲಿ ಅಲ್ಪ ಕಾಲದಲ್ಲಿ ಆದ ಉನ್ನತಿಯ ಕೆಲಸಗಳನ್ನು ನೋಡಿ ಜನರೆಲ್ಲ ಪ್ರಭಾವಿತರಾಗಿ ರವೀಂದ್ರಕುಮಾರನನ್ನು ಅಲ್ಲಿಯ ಅಧ್ಯಕ್ಷನನ್ನಾಗಿಯು ಫತೇಹಪುರದ ಸರೋಜಕುಮಾರರನ್ನು ಮಹಾಮಂತ್ರಿಯನ್ನಾಗಿ ಮಾಡಬೇಕೆಂದು ಒಮ್ಮತದಿಂದ ತೀರ್ಮಾನ ಕೈಕೊಂಡಿದ್ದರು. ಆದರೆ ನಾನೇ ಹಸ್ತಿನಾಪುರಕ್ಕೆ ರವೀಂದ್ರನ ಸೇವೆ ಬೇಕಾಗಿರುವುದಿಂದ ಮೊದಲು ಸಮ್ಮತಿಸಲಿಲ್ಲ. ಆದರೆ ಕೆಲವು ಮಹನೀಯರು ನನ್ನ ಮುಂದೆ ದೀನರಾಗಿಯೇ ಪ್ರಾರ್ಥಿಸ ತೊಡಗಿದರು. ಮಾತಾಜೀ ನಮ್ಮ ಬೇಡಿಕೆಯನ್ನು ಮನ್ನಿಸಿ ಸ್ವಲ್ಪ ದಿನಗಳವರೆಗಾದರೂ ರವೀಂದ್ರರನ್ನು ಆ ಕೆಲಸ ನಿರ್ವಹಿಸಲು ಅನುಮತಿ ಕೊಡಿ ಎಂದು ಅಶ್ರು ಪೂರಿತ ಕಣ್ಣುಗಳನ್ನು ನೋಡಿದ ನಾನು ಮೌನವಾದೆ. ಅವರಿಗೆ ಮೌನವೇ ಸಮ್ಮತಿಯಾಯಿತು. ಅವರ ತೀರ್ಮಾನದಂತೆ ಆಯ್ಕೆ ನಿಶ್ಚಿತವಾಯಿತು. ಸರೋಜಕುಮಾರರು ರವೀಂದ್ರ ಬೈಯಾ ಅಧ್ಯಕ್ಷರಾದ್ದರಿಂದಲೇ

ನಾನು ಧೈರ್ಯವಾಗಿ ಮಹಾಮಂತ್ರಿಯ ಪದವಿಯನ್ನು ತೆಗೆದುಕೊಂಡೆ ಎಂದರು. ಟಿಕೈತನಗರದ ಛೋಟೆಶಾಹ ಕೋಶಾಧ್ಯಕ್ಷರಾಗಿ ಎಲ್ಲರು ಸಮರ್ಪಣಾ ಭಾವದಿಂದ ಕಾರ್ಯನಿರತರಾದರು. ಕಳೆದ 10 ವರ್ಷಗಳಿಂದಲು ಕ್ಷೇತ್ರವು ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕಂಡಿದೆ. ಸರೋಜಕುಮಾರ ಜೈನರು ಒಬ್ಬ ನಿಷ್ಠಾವಂತ ಕಾರ್ಯಕರ್ತರು.

ರಾಜಧಾನಿ ಲಖನೌ ಕಡೆ ಲಘು ಪ್ರವಾಸ

1994ರಲ್ಲಿ ಅಯೋಧ್ಯೆಯ ವೃಷಭ ದೇವರ ಜನ್ಮಜಯಂತಿಯ ನಂತರ ನಾನು ಲಖನೌ ಕಡೆ ವಿಹಾರ ಹೊರಟೆ. ನನ್ನ ಸಾನಿಧ್ಯದಲ್ಲಿಯೇ ಮಹಾವೀರ ಜಯಂತಿಯನ್ನು ವೈಭವದಿಂದ ನೆರವೇರಿಸಿದರು. ಲಖನೌ ನಗರವಾಸಿಗಳು ರವೀಂದ್ರಾಲಯವೆಂಬ ಅಡಿಟೋರಿಯಂನಲ್ಲಿ ನನ್ನ ದೀಕ್ಷಾ ಜಯಂತಿಯನ್ನು ಆಚರಿಸಿ ಆ ದಿನ ಎಲ್ಲರು ಅಣುವ್ರತವನ್ನು ತೆಗೆದುಕೊಂಡು ನನ್ನ ಸಂಯಮ ದಿವಸವನ್ನು ಸಾರ್ಥಕಗೊಳಿಸಿದರು.

ಮೇ ನಲ್ಲಿ ಲಖನೌನ ಡಾಲೀಗಂಜಿನಲ್ಲಿ ಲಘು ಪಂಚಕಲ್ಯಾಣ ಪ್ರತಿಷ್ಠೆ ಹಾಗೂ ಅಕ್ಷಯ ತೃತೀಯ ಕಾರ್ಯಕ್ರಮಗಳು ನಡೆದವು. ಲಕನೌನ ಚಾರಬಾಗ, ಡಾಲೀಗಂಜ ಚೌಕ, ಸಾದತಗಂಜ ಅಹಿಯಾಗಂಜ, ಅಮೀನಬಾದಗಳಲ್ಲಿ ಶಿಕ್ಷಣ ಶಿಬಿರಗಳು ಆರಾಧನೆಗಳು ಮೊದಲಾದ ಧಾರ್ಮಿಕ ಆಯೋಜನೆಗಳು ನಡೆದವು. 1994 ರ ಜೂನ 11 ರಂದು ಇಂದ್ರನಗರ ಕಾಲೋನಿಯಲ್ಲಿ 14 ರಿಂದ 18 ಜೂನರವರೆಗೆ ಧಾರ್ಮಿಕ ಸಂಗೋಷ್ಠಿಗಳು ನಡೆದವು. ಜೂನ 19 ರಂದು ಅವಧ ಪ್ರಾಂತೀಯ ದಿಗಂಬರ ಜೈನ ಶ್ರಾವಕ ಸಮ್ಮೇಳನವನ್ನು ಆಯೋಜಿಸಲಾಗಿತ್ತು. ಈ ಸಮ್ಮೇಳನದಲ್ಲಿ ಶ್ರಾವಕರಿಗೆ ಅಷ್ಟ ಮೂಲಗುಣ ಹಾಗೂ ಪಂಚ ಅಣು ವ್ರತಗಳನ್ನು ಧಾರಣೆ ಮಾಡಿ ಸದ್‌ಗೃಹಸ್ಥರಾಗಲು ಪ್ರೇರಣೆ ಕೊಟ್ಟೆ. ಇಂದ್ರನಗರದಲ್ಲಿನಿರ್ಮಿತವಾಗುತ್ತಿದ್ದ ಜಿನಮಂದಿರಕ್ಕೆ ಜನರು ವಿಶಾಲ ಹೃದಯದಿಂದ ಧನ ಸಹಾಯ ಮಾಡಿದರು.

ಜನ್ಮ ಭೂಮಿ ಟಿಕೈತನಗರದಲ್ಲಿ ಚಾತುರ್ಮಾಸ

ಟಿಕೈತ ನಗರವಾಸಿಗಳು ಆಗಾಗ್ಗೆ ಬಂದು ಚಾತುರ್ಮಾಸಕ್ಕೆ ನಿಲ್ಲಲು ಶ್ರೀ ಫಲವನ್ನಿಟ್ಟು ಪ್ರಾರ್ಥಿಸುತ್ತಲೇ ಇದ್ದರು. 1993 ರ ಚಾತುರ್ಮಾಸ ಅಲ್ಲೇ ಕೈಕೊಳ್ಳಲು ನಿರ್ಧರಿಸಲಾಗಿತ್ತು. ಆದರೆ ಅಯೋಧ್ಯೆಯಲ್ಲಿ 1993 ರ ಚಾತುರ್ಮಾಸ ಕೈಕೊಳ್ಳಬೇಕಾಗಿ ಬಂದಿದ್ದರಿಂದ ಟಿಕೈತ ನಗರವಾಸಿಗಳು ದುಃಖಿಗಳಾಗಿದ್ದರು. ಹೀಗಾಗಿ 1994 ರಲ್ಲಿ ಅವರಲ್ಲಿಗೆ ಹೋಗಲು ನಿರ್ಧಾರವಾಗಿತ್ತು. ಟಿಕೈತ ನಗರವನ್ನು ಪ್ರವೇಶಿಸುತ್ತಲೇ ಜನರ ಕಣ್ಣಲ್ಲಿ ಕಂಡು ಬಂದ ಹರ್ಷಮಿಶ್ರಿತ ಕಣ್ಣೀರು ಎಂತಹ ಕಠಿಣ ಹೃದಯದವರನ್ನು ಕರಗಿಸಿ ಬಿಡುತ್ತಿತ್ತು. ಅವರ ಭಕ್ತಿಯ ಕಣ್ಣೀರನ್ನು ನಾನು ತಡೆಯಲಾರದಾದೆ. ಆರ್ಯಿಕೆ ಚಂದನಮತಿ ತನ್ನ ಅಯೋಧ್ಯ ಯಾತ್ರೆಯ ಲೇಖನದಲ್ಲಿ ನನ್ನ ಲೇಖನಿ ಜನ್ಮ ಭೂಮಿಯ ಕಣ್ಣೀರನ್ನು ಬರೆಯಲಾರದು ಎಂದು ಉಲ್ಲೇಖಿಸಿದ್ದಾಳೆ. ನಿಜವಾಗಿಯು ಜನ್ಮ ಭೂಮಿಯ ಸೆಳವು ವಾತ್ಸಲ್ಯ ಅವಿಸ್ಮರಣೀಯವಾದುದು. ಇದರಿಂದಲೇ ನೀತಿಕಾರರು "ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರಿಯಸೀ" ಎಂದಿರುವುದು. ಜನ್ಮಭೂಮಿಯು ಸ್ವರ್ಗಕ್ಕಿಂತ ಹಿರಿದಾದುದು.

1952 ರಲ್ಲಿ ಮನೆಯನ್ನು ಬಿಟ್ಟು ಹೋದ ಮೇಲೆ 1953 ರಲ್ಲಿ ನನ್ನ ಮೊದಲ ಚಾತುರ್ಮಾಸವನ್ನು ದೇಶಭೂಷಣ ಮಹಾರಾಜರ ಜೊತೆಯಲ್ಲಿ ಅಲ್ಲೇ ಕಳೆದಿದ್ದು ಆಗ ನನ್ನ ಗಮನವೆಲ್ಲ ಅಧ್ಯಯನ, ಸ್ವಾಧ್ಯಾಯದ

ಕಡೆಗೆ ಇರುತ್ತಿತ್ತು. ಅದಾದನಂತರ ಈಗ 40 ವರ್ಷಗಳ ನಂತರ ಎರಡನೆಯ ಚಾತುರ್ಮಾಸಕ್ಕಾಗಿ ಬಂದಿದ್ದೇನೆ. ಇಲ್ಲಿ ನನ್ನ ಮರೆಯಲಾರದ ನೆನಪುಗಳು ತುಂಬಿವೆ.

ಸಂಯೋಗದಂತೆ ನನ್ನ 60 ನೇ ವರ್ಷದ ಜನ್ಮ ಜಯಂತಿಯು ಶರದ ಪೂರ್ಣಿಮೆಯಂದು ಇಲ್ಲಿಯೇ ನಡೆಯಿತು. ಉತ್ತರ ಪ್ರದೇಶದ ಆಗಿನ ರಾಜ್ಯಪಾಲರಾದ ಶ್ರೀ ಮೋತಿಲಾಲಜೀ ವೋರಾ ಕಾರಾಗೃಹದ ಮಂತ್ರಿಯಾದ ಅವಧೇಶ ಪ್ರಸಾದ, ಫೈಜಾಬಾ ದಿನ, ಶ್ರೀ ಜಯಶಂಕರ ಪಾಂಡೆ ಮೊದಲಾದ ರಾಜಕೀಯ ವ್ಯಕ್ತಿಗಳು ಬಂದಿದ್ದರು. ಕಾರಾಗೃಹ ಮಂತ್ರಿಗಳು 61 ಜನ ಕೈದಿಗಳನ್ನು ಬಿಡುಗಡೆ ಮಾಡುವ ಘೋಷಣೆ ಮಾಡುತ್ತಾ ಸ್ವತಃ ಮಾನವ ಕಲ್ಯಾಣದ ಹಾದಿಯಲ್ಲಿ ನಡೆಯುವ ಸಂಕಲ್ಪ ಮಾಡಿದರು. ಅದೇ ಸಮಾರಂಭದಲ್ಲಿ ಆರಿಸಿದ 61 ಜನ ಶ್ರೇಷ್ಠಿಗಳಿಗೆ ಸ್ಮರಣ ಫಲಕಗಳನ್ನು ನೀಡಲಾಯಿತು. 61 ಹೊಲಿಗೆ ಯಂತ್ರಗಳನ್ನು ಊರಿನ ಬಡ ಮಹಿಳೆಯರಿಗೆ ನೀಡಲಾಯಿತು. ಅನೇಕ ಮಹಾನುಭಾವರು ಸೀರೆಗಳನ್ನು ಕಂಬಳಿಗಳನ್ನು ಸ್ಫಟಿಕದ ಜಪಮಾಲೆಯನ್ನು ತಾವೇ ಪ್ರೇರಿತರಾಗಿ ಹಂಚಿದ್ದು ವಿಶೇಷ ಮಹತ್ವ ಪಡೆಯಿತು. ಬಂದಿದ್ದ ಅತಿಥಿಗಳಿಗೆ ಬಾಲಿಕಾ ಮಂಡಲಿಯವರಿಂದ "ಜ್ಞಾನಮತಿ ಟ್ರೆ" ಎಂಬ ಹೆಸರಿನ ಹೂ ಕುಂಡಗಳನ್ನು ಉಡುಗೊರೆಯಾಗಿ ಕೊಡಲಾಯಿತು. ಲಖನೌನ ಹಂಸರಾಜ್‌ರವರು ಟಿಕೈತನಗರದ ಜೈನ ಸಮಾಜಕ್ಕೆ ಅಷ್ಟೇ ಅಲ್ಲ ಇಡೀ ಟಿಕೈತನಗರದ ಆಸುಪಾಸಿನ ಹಳ್ಳಿಯವರಿಗೂ ಪ್ರಸಾದದ ರೂಪದಲ್ಲಿ ಔತಣವನ್ನು ಏರ್ಪಡಿಸಿದ್ದರು. ಸಾವಿರಾರು ಜನರು ಬಂದು ಪ್ರಸಾದ ಸ್ವೀಕರಿಸಿ ನನ್ನ ಬಗ್ಗೆ ಭಕ್ತಿಯಿಂದ ನಮನವನ್ನು ಸಲ್ಲಿಸಿದರು. ಹೀಗೆ ನನ್ನ 60 ನೇಯ ಜಯಂತಿಯನ್ನು ಜನಗಳ ಮನದಲ್ಲಿ ಚಿರಸ್ಥಾಯಿಯಾಯಿತು.

ಚಾತುರ್ಮಾಸ ಮುಗಿದ ಮೇಲೆ ಮತ್ತೊಮ್ಮೆ ಅಯೋಧ್ಯೆಗೆ ಹೋಗಿ 1995 ರಲ್ಲಿ ನವನಿರ್ಮಿತ ಸಮವಸರಣ ಮಂದಿರದ ಪಂಚಕಲ್ಯಾಣವನ್ನು ಮಾಡಿಸಿ ಎರಡು ಮಂದಿರಕ್ಕೆ ಕಳಸಾರೋಹಣ ಮಾಡಿಸಿ, ರಾಜಕೀಯ ಉದ್ಯಾನವನದಲ್ಲಿ ಸಿಮೆಂಟಿನಿಂದ ಭಗವಾನ ವೃಷಭದೇವರ ಪ್ರತಿಮೆಯನ್ನು ಮಾಡಿಸಿ ಸ್ಥಾಪಿಸಲಾಗಿದೆ. ಭಗವಾನ ಜನ್ಮ ಜಯಂತಿಯನ್ನು ಆಚರಿಸಿದ ಮೇಲೆ ಅವಧ ಪ್ರಾಂತ್ಯದಿಂದ ಹಸ್ತಿನಾಪುರಕ್ಕೆ ಬಂದು 1995 ರ ಚಾತುರ್ಮಾಸ ಹಸ್ತಿನಾಪುರದಲ್ಲಾಯಿತು. ಈ ವರ್ಷ ಪಂಚವರ್ಷೀಯ ಮಹೋತ್ಸವ ಮತ್ತು ಅದೇ ಸಮಯದಲ್ಲಿ ಧ್ಯಾನಮಂದಿರ ಹಾಗೂ ಶಾಂತಿನಾಥ ಮಂದಿರಗಳ ಮೇಲೆ ಕಳಸಾರೋಹಣವು ಆಯಿತು.

ವಿಶ್ವವಿದ್ಯಾಲಯದಿಂದ ಡಿಲಿಟ್ ಪದವಿ ಪ್ರದಾನ

ಒಂದು ಚಿಕ್ಕ ಹಳ್ಳಿಯಲ್ಲಿ ಪ್ರಾಥಮಿಕ ಶಾಲೆಯಿಂದಲೇ ಧರ್ಮದ ಶಿಕ್ಷಣ ಪಡೆಯುತ್ತಾ ಜ್ಞಾನದ ಮೆಟ್ಟಿಲನ್ನು ಏರುತ್ತಾ ಬಂದವಳಿಗೆ ಲೌಕಿಕ ಜ್ಞಾನ ಏನೂ ಗೊತ್ತಿಲ್ಲದೆ ನನಗೆ ವಿಶ್ವವಿದ್ಯಾನಿಲಯದ ಡಿಲಿಟ್ ಪದವಿ ದೊರೆಯುತ್ತದೆ ಎಂದು ಯಾರಿಗೆ ತಿಳಿದಿತ್ತು. ನಾನು ತಿಳಿದಂತೆ ಸುಮಾರು ಹದಿನೈದು ವರ್ಷಗಳ ನಂತರ ಎರಡು ವರ್ಷದ ಸ್ನಾತಕ ಪದವಿಯಲ್ಲಿ ವಿಶೇಷ ವಿಷಯವನ್ನು ಕುರಿತು ಅಭ್ಯಾಸ ಮಾಡಿ ನಂತರ ಅದರ ಮೇಲೆ ಸುಮಾರು ಎರಡರಿಂದ ಐದು ವರ್ಷಗಳವರೆಗೆ ಸಂಶೋಧನೆ ಮಾಡಿ ಆ ವಿಷಯ ತಜ್ಞರಿಂದ ಪರಿಶೀಲಿಸಿ ಅವರ ಒಪ್ಪಿಗೆಯ ಮೇಲೆ ವಿಶ್ವವಿದ್ಯಾಲಯವು ಪದವಿಯನ್ನು ಪ್ರಧಾನ ಮಾಡುತ್ತದೆ. ಅನಂತರ ಅವರ ಹೆಸರೊಡನೆ IIಡಾII ಪದವಿ ಸೇರಿಸಿಕೊಳ್ಳಬಹುದು.

ಒಂದು ದಿನ 1994 ರಲ್ಲಿ ಅವಧ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಕೆ. ಪಿ. ನೌಟಿಯಾಲರು ಸಂಘದ ದರ್ಶನಾರ್ಥವಾಗಿ ರಾಯಗಂಜ ಮಂದಿರಕ್ಕೆ ಬಂದಿದ್ದರು. ಸ್ವಲ್ಪ ಪರಿಚಯವಾದ ಮೇಲೆ ಅವರಿಗೆ

ನಾನು ಮಾಡಿರುವ ರಚನೆಗಳ ಪರಿಚಯವಾಯಿತು. ಇದನ್ನು ಅವಲೋಕಿಸಿದ ಅವರಿಗೆ ಬಹಳ ಆಶ್ಚರ್ಯವಾಯಿತು. ನಮ್ಮದೇ ಪ್ರಾಂತ್ಯದ ಜ್ಞಾನಮತಿಯವರು ಮಾಡಿರುವ ಕೆಲಸ ಅಪಾರವಾದುದು. ಇದು ನಮ್ಮ ಪ್ರಾಂತ್ಯಕ್ಕೆ ಮಹಾನ್ ಗೌರವವನ್ನು ತಂದುಕೊಟ್ಟಿದೆ ಇವರಿಗೆ ವಿಶ್ವವಿದ್ಯಾನಿಲಯದ ಪದವಿಯಿಂದ ಸನ್ಮಾನಿಸಿದರೆ ವಿಶ್ವವಿದ್ಯಾನಿಯದ ಗೌರವ ಇನ್ನೂ ಹೆಚ್ಚುತ್ತದೆ ಎಂದಾಗ ನನಗೆ ಆಶ್ಚರ್ಯವಾಯಿತು.

ಇದನ್ನು ಕೇಳಿದ ನಾನು ನನ್ನ ಹತ್ತಿರದ ಗುರುಗಳಿಂದ ದೊರೆತಿರುವ ಆರ್ಯಿಕೆ ಮತ್ತು ಗಣಿನಿ ಪದವಿಯೇ ಅತ್ಯಂತ ಮಹತ್ವವಾದುದು ಅದಕ್ಕಿಂತ ಮಿಗಿಲಾದ ಪದವಿ ಬೇರೊಂದಿಲ್ಲವೆಂದು ಈ ಪದವಿಯನ್ನು ನಿರಾಕರಿಸಿದೆ ಅವರು ನಂತರ ಸಂಘದ ಸದಸ್ಯರೊಡನೆಯು ಮಾತನಾಡಿದರು. ಆದರೆ ಫಲದಾಯಕವಾಗದೇ ನಿರಾಶೆಯಿಂದ ತೆರಳಿದರು.

ಕುಲಪತಿಗಳ ಉಪಾಯ ಫಲಿಸಿತು

ಗಣ್ಯ ವ್ಯಕ್ತಿಗಳ ಮನಸ್ಸಿಗೆ ಯಾವುದಾದರು ವಿಚಾರ ಹೊಳೆಯಿತೆಂದರೆ ಅದಕ್ಕೆ ಒಂದು ಮೂರ್ತ ರೂಪ ಬಂದಂತೆಯೇ. ಇದು ನೌಟಿಯಾಲರಿಂದ ಸಾಬೀತಾಯಿತು. ಅವರು ನಮ್ಮಿಂದ ನಿರುತ್ಸಾಹಿತರಾಗಿ ಹೋದ ಮೇಲೆ ನಾವು ವಿಷಯವನ್ನು ಮರೆತೆಬಿಟ್ಟಿದ್ದೆವು. 1995 ರ ಜನವರಿಯ ಕೊನೆಯ ವಾರದಂದು ವಿಶ್ವವಿದ್ಯಾನಿಯದಿಂದ ಒಂದು ಪತ್ರ ಬಂದಿತು. ವೃಷಭದೇವರ ಮಸ್ತಕಾಭಿಷೇಕ ಮಹೋತ್ಸವದ ವೇದಿಕೆಯ ಮೇಲೆ ಮುಖ್ಯಮಂತ್ರಿ ಮುಲಾಯಂಸಿಂಗ್‌ರವರು ಭರವಸೆ ಕೊಟ್ಟಂತೆ "ವೃಷಭದೇವ ಜೈನ ಚೇರ್" ಭವನಕ್ಕಾಗಿ ಸರ್ಕಾರದಿಂದ ಧನ ಸಹಾಯವನ್ನು ಮಂಜೂರು ಮಾಡಲಾಗಿದೆ ಪೂಜ್ಯ ಮಾತಾಜೀಯವರು ಇದಕ್ಕಾಗಿ ದಿನವನ್ನು ಗೊತ್ತು ಮಾಡಿ ಶಿಲಾನ್ಯಾಸಕ್ಕಾಗಿ ತಮ್ಮ ಸಾನಿಧ್ಯವನ್ನು ಕರುಣಿಸಬೇಕೆಂದು ಕೋರಲಾಗಿತ್ತು.

ನನಗೆ ಸಹಜವಾಗಿ ಹರ್ಷವಾಯಿತು. ಮುಖ್ಯಮಂತ್ರಿಗಳ ಭರವಸೆ ಹುಸಿಯಾಗದೆ ಇಷ್ಟು ಬೇಗ ಫಲವನ್ನು ಕೊಟ್ಟಿದ್ದು ಅದಕ್ಕಾಗಿ ಜನವರಿ 5 ನೇ ತಾರೀಕನ್ನು ನಿಶ್ಚಯಗೊಳಿಸಿ ಭಾಗವಹಿಸುವ ಸ್ವೀಕೃತಿಯನ್ನು ತಿಳಿಸಲಾಯಿತು. ಶುಭ ಕಾರ್ಯಕ್ಕಾಗಿ ವಿಳಂಬ ಮಾಡಬಾರದೆಂದು ಸ್ವೀಕೃತಿಗೆ ಅನುಸಾರ ಜನವರಿ 5 ರಂದು ಫೌಜಾಬಾದ್ ತಲುಪಿದೆವು. ಅಲ್ಲಿ ವಿಧಿವತ್ತಾಗಿ ಶಿಲಾನ್ಯಾಸ ಕಾರ್ಯಕ್ರಮ ಆಯಿತು. ನಂತರ ನನ್ನನ್ನು ಒಂದು ವಿಶಾಲವಾದ ಸಭಾಂಗಣಕ್ಕೆ ಕರೆದುಕೊಂಡು ಹೋಗಿ ಕೂರಿಸಿದರು. ಸ್ವಲ್ಪ ಹೊತ್ತಿಗಾಗಲೇ ಇದು ವಿಶೇಷ ದೀಕ್ಷಾಂತ ಸಮಾರಂಭದ ಸಲುವಾಗಿ ಏರ್ಪಾಡಾಗಿರುವ ವಿಶ್ವವಿದ್ಯಾನಿಲಯದ ಸಭಾಂಗಣವೆಂದು ಮುಂದಿನ ಸಾಲುಗಳಲ್ಲಿ ಕ್ರಮವಾಗಿ ಸ್ನಾತಕ ವಿದ್ಯಾರ್ಥಿ ವಿದ್ಯಾರ್ಥಿನಿಗಳು ಕುಳಿತಿದ್ದಾರೆ. ಅವರ ಮುಖಗಳಲ್ಲಿ ಸಂತರ ಸಮಾಗಮದಿಂದ ಉಂಟಾಗುವ ಜ್ಞಾನವನ್ನು ಹೀರುವ ಆತುರತೆ ಕಂಡು ಬರತೊಡಗಿತು. ಇದು ಕುಲಪತಿಗಳು ನನ್ನನ್ನು ಕರೆಸಿಕೊಳ್ಳಲು ಮಾಡಿರುವ ಉಪಾಯವೆಂದು ತಿಳಿಯಲಾಯಿತು. ಸಭೆಯು ಪ್ರಾರಂಭವಾಯಿತು ಕುಲಪತಿಯು ಮಾತನಾಡುತ್ತಾ ಮಾತಾಜೀಯ ಹತ್ತಿರ ಈಗಾಗಲೇ ಬಹಳಷ್ಟು ಪದವಿಗಳಿವೆ ಅವರಿಗೆ ಈ ಪದವಿಯಿಂದ ಏನೂ ಆಗಬೇಕಾಗಿಲ್ಲ. ಆದರೆ ನಮಗೆ ಅವರಿಗೆ ಪದವಿ ಕೊಡುವುದರಿಂದ ನಮ್ಮ ಘನತೆಯನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಹೀಗೆ ಆತ್ಮೀಯವಾದ ಮಾತುಗಳನ್ನು ಹೇಳಿದರು, ಕೊನೆಗೆ ವಿಶ್ವವಿದ್ಯಾನಿಲಯದ ವಿಶಿಷ್ಟ ಅಧಿಕಾರಗಳು ನನ್ನಲ್ಲಿಗೆ ಬಂದು ಪದವಿಯ ಪತ್ರ ಮತ್ತು ಪಾರಿತೋಷಕವನ್ನು ನೀಡಿ ನಮಸ್ಕರಿಸಿದರು. ನಂತರ ಘೋಷಣೆಯು ಕೇಳಿ ಬರತೊಡಗಿತು. ಇಂದು ವಿಶ್ವವಿದ್ಯಾಲಯದ 11 ನೇ ದೀಕ್ಷಾ ಜಯಂತಿ ಸಮಾರಂಭದ ಸಮಯದಲ್ಲಿ ಪೂಜ್ಯ ಗಣಿನಿ ಆರ್ಯಿಕೆ ಜ್ಞಾನಮತಿ ಮಾತಾಜೀಯವರಿಗೆ ಅವರು ಜೈನ ಧರ್ಮ, ದರ್ಶನ ಮತ್ತು ಸಾಹಿತ್ಯದ ಮೂಲಕ ನೀಡಿರುವ ವಿಶಿಷ್ಟವಾದ

ಯೋಗದಾನಕ್ಕೆ ಪ್ರತಿಯಾಗಿ ಸಮ್ಮಾನ ಪೂರಕವಾಗಿ ಡಿ. ಲಿಟ್ ನ ಪದವಿಯೊಂದಿಗೆ ವಿಭೂಷಿತಗೊಳಿಸಲು ನಮಗೆ ಹೆಮ್ಮೆ ಎನ್ನಿಸುತ್ತದೆ ಎಂದು. ಕೊನೆಗೆ ನಾನು ಆಶೀರ್ವಾದ ಪೂರ್ವಕವಾಗಿ ಮಾತನಾಡುತ್ತಾ

'ದೀಕ್ಷಾಂತ' ಎಂಬ ಶಬ್ದವು ಗುರುಕುಲ ಪ್ರಣಾಲಿಯಲ್ಲಿ ಬರುತ್ತದೆ. ಶಿಷ್ಯ ತನ್ನ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿ ತಾನು ಪಾಲಿಸುತ್ತಿದ್ದ ನಿಯಮಗಳನ್ನು ಪೂರ್ಣಗೊಳಿಸುವುದೇ ದೀಕ್ಷಾಂತವಾಗಿದೆ. ದೀಕ್ಷೆ ಎಂಬ ಶಬ್ದಕ್ಕೆ ನಮ್ಮ ಋಷಿಗಳು

ದೀಯತೇ ಜ್ಞಾನಸದ್ ಭಾವಂ, ಕ್ಷೀಯತೆ ಪಶುಭಾವನಾ ।
ದಾನಕ್ಷಪಣ ಯು ಕ್ತೇನ, ದೀಕ್ಷಾ ತೇನೈವ ಕಥ್ಯತೇ ॥

ಎಲ್ಲಿ ಜ್ಞಾನವು ಸಿಗುತ್ತದೆಯೋ ಅದರಿಂದ ಪಶುತ್ವ ಭಾವನೆಯು ಕ್ಷಯವಾಗುತ್ತದೆ. ಈ ದಾನ ಮತ್ತು ಕ್ಷಯದ ಭಾವನೆಗೆ ದೀಕ್ಷೆ ಎಂದು ಕರೆಯಲಾಗುತ್ತದೆ. ಜೈನಧರ್ಮದ ದೀಕ್ಷೆಯನ್ನು ಕೈಕೊಂಡ ಮೇಲೆ ನನ್ನ ಹತ್ತಿರ ಬರೇ ಪಿಂಛಿ ಕಮಂಡಲು ಮತ್ತು ಉಟ್ಟಿರುವ ಸೀರೆಯನ್ನು ಬಿಟ್ಟು ಇನ್ನಾವುದೇ ಪರಿಗ್ರಹಗಳಿಲ್ಲ. ಆದ್ದರಿಂದ ಈ ಪದವಿಯನ್ನು ಎಲ್ಲಿ ಇಡಲಿ ಆದರೆ ನಿಮ್ಮಿಂದ ಸಮ್ಮಾನಿಸಿರುವುದರಿಂದ ಇದನ್ನು ಸರಸ್ವತಿಯ ಅನುಗ್ರಹವೆಂದು ತಿಳಿಯುತ್ತೇನೆ. ನಿಮ್ಮ ಈ ಭಾವನೆಯ ಬಗ್ಗೆ ನನಗೆ ಆದರವಿದೆ ನನ್ನ ಮಂಗಳ ಆಶೀರ್ವಾದವೆಂದೆ.

ನಿಮ್ಮ ಈ ಭಾವನೆ ಹೀಗೆ ಮುಂದುವರಿಯುತ್ತಾ ಸರಸ್ವತಿಯ ಸಮ್ಮಾನದ ಜೊತೆಗೆ ಅಹಿಂಸೆ ಮೊದಲಾದ ಸಿದ್ಧಾಂತಗಳನ್ನು ಪ್ರಚಾರ ಮಾಡುತ್ತಾ ಅಧ್ಯಯನ ಸಂಶೋಧನೆ ಕಾರ್ಯಗಳಲ್ಲಿ ನಿರಂತರವಾಗಿ ನಡೆಯುತ್ತಾ ಪೀಠವು ಉನ್ನತ ಸ್ಥಾನವನ್ನು ಪಡೆಯಲಿ ಎಂಬುದೇ ಶುಭಕಾಮನೆಯಾಗಿದೆ.

ಅಲ್ಲಿಯ ಭೋದಕ ವರ್ಗವು ಜ್ಞಾನಮತಿ ಮಾತಾಜೀ ಇನ್ನು ಮುಂದೆ ಡಾಕ್ಟರ ಜ್ಞಾನಮತಿ ಆಗುವರು ಎಂದು ನೆನಸಿದ್ದರು. ಆದರೆ ನಾನು ಈ ಪದವಿಯನ್ನು ನನ್ನ ಹೆಸರಿನೊಂದಿಗೆ ಸೇರಿಸಿಕೊಳ್ಳಲು ಸಮ್ಮತಿಸಲಿಲ್ಲ. ಮೋಕ್ಷದ ಹೊರತಾಗಿ ಬೇರಾವುದೇ ಪದವಿ ಬೇಡ. ಸಂಸಾರದ ದುಃಖೀಜೀವಗಳನ್ನು ತಮ್ಮ ಜ್ಞಾನಾಮೃತ ಎಂಬ ಔಷಧದಿಂದ ನಿಜವಾದ ಧರ್ಮಮಾರ್ಗದಲ್ಲಿತರುವ ಸಾಧು ಸಾಧ್ವಿಯರೇ ನಿಜಕ್ಕೂ ಡಾಕ್ಟರ್ ಎಂದು ತಿಳಿಯಬೇಕು.

೧೦೩

ಮಾಂಗೀ ತುಂಗೀ ಸಿದ್ಧ ಕ್ಷೇತ್ರದ ಯಾತ್ರೆ

ಸುಮಾರು ಎರಡು ವರ್ಷಗಳಿಂದ ಶ್ರೇಯಾಂಸ ಸಾಗರರ ಸಂಘದ ಶ್ರೇಯಾಂಸಮತೀ ಮತ್ತು ಮಾಂಗೀ ತುಂಗೀ ತೀರ್ಥಕ್ಷೇತ್ರದ ಕಮಿಟಿಯವರು ಕ್ಷೇತ್ರಕ್ಕೆ ಬರಲು ನನಗೆ ಆಹ್ವಾನಿಸುತ್ತಲೇ ಇದ್ದರು. ದಿವ್ಯ ಶಕ್ತಿಯುಳ್ಳ ತಾವು ದಯಮಾಡಿಸಿ ಪಂಚಕಲ್ಯಾಣದ ಪ್ರತಿಷ್ಠೆಯನ್ನು ಸಂಪನ್ನಗೊಳಿಸಬೇಕೆಂಬುದೇ ಅವರ ಪ್ರಾರ್ಥನೆಯಾಗಿತ್ತು. ಆದರೆ ನಕ್ಷೆಯಲ್ಲಿ ಮಾರ್ಗದ ದೂರವನ್ನು ನೋಡಿದಾಗ, ಹಾಗೇ ನಮ್ಮಿಬ್ಬರ ದೇಹ ಸ್ಥಿತಿಯನ್ನು ಗಮನಿಸಿದರೆ ಕಷ್ಟ ಸಾಧ್ಯ ಎನ್ನಿಸುತ್ತಿತ್ತು.

1995ರ ನವಂಬರ 15 ರಂದು ಬೆಳಗ್ಗೆ ನಾನು ಮಾಂಗೀ ತುಂಗಿಗೆ ಹೋಗಬೇಕೆಂಬ ನಿರ್ಣಯ ತೆಗೆದುಕೊಂಡು ಸಂಘದಲ್ಲಿ ಪ್ರಕಟಿಸಿದಾಗ ಎಲ್ಲರಿಗೂ ಆಶ್ಚರ್ಯ. ನಾನು ಯಾರ ಅನುಮತಿಗೂ ಕಾಯುತ್ತಿರಲಿಲ್ಲ.

ವ್ಯವಸ್ಥೆಯ ಬಗ್ಗೆಯು ಯೋಚಿಸುತ್ತಾ ಇರಲಿಲ್ಲ. ಜಂಬೂದ್ವೀಪದ ಸಮಸ್ತ ಸಿದ್ಧ ಭಗವಂತರಿಗೂ, ಕಲ್ಪವೃಕ್ಷ ಮಹಾವೀರ ಸ್ವಾಮಿಗೂ ವಂದಿಸಿ ನವಂಬರ 27 ರಂದು ಸಂಘ ಸಮೇತ ಹೊರಟೆ ಬಿಟ್ಟೆವು. ನನಗೆ ಕ್ಷೇತ್ರ ದರ್ಶನವೊಂದೇ ಗುರಿಯಾಗಿತ್ತು. ಡಿಸೆಂಬರ 11 ರಂದು ದೆಹಲಿಯ ದರಿಯಾಗಂಜಿಯಲ್ಲಿ ನಡೆದ ಮೀಟಿಂಗನಲ್ಲಿ ನನ್ನ ಯಾತ್ರೆಯ ವಿಷಯ ಕೇಳಿ ದೆಹಲಿಯ ನಿವಾಸಿ ಮಹಾವೀರ ಪ್ರಸಾದ ಜೈನರು 'ಸಂಘಪತಿ' ಯ ಜವಾಬ್ದಾರಿಯನ್ನು ವಹಿಸಿಕೊಂಡು, ತನ್ನ ಪರಿವಾರದೊಡನೆ ನಮ್ಮ ಸಂಘಕ್ಕೆ ಬಂದು ಯಾತ್ರೆ ಮುಗಿಯುವವರೆಗೂ ಸೇವೆಯನ್ನು ಮಾಡಿದರು. ಅವರ ಹೆಂಡತಿ, ಸೊಸೆಯಂದಿರು ನಮ್ಮೊಡನೆ ಪಾದಯಾತ್ರೆ ಆಹಾರದಾನ ಮಾಡುತ್ತಾ ವೈಯ್ಯಾವೃತ್ತಿ ಮಾಡುತ್ತಾ ಪುಣ್ಯ ಸಂಪಾದನೆ ಮಾಡಿದರು.

ದಾರಿಯಲ್ಲಿ ಹರಿಯಾಣ ರಾಜಸ್ಥಾನ ತಿಜಾರ, ಮಹಾವೀರಜೀ ಚಾಂದಖೇಡಿ ತೀರ್ಥಕ್ಷೇತ್ರಗಳ ದರ್ಶನ ಮಾಡುತ್ತಾ ಇಂದೂರು ತಲುಪಿದೆವು. 1996 ರ ಮಾರ್ಚ 13 ರಂದು ಭಗವಾನ ವೃಷಭದೇವರ ಜನ್ಮ ಜಯಂತಿಯಂದು ನನ್ನ ಪ್ರೇರಣೆಯಿಂದ "ಅಖಿಲ ಭಾರತೀಯ ದಿಗಂಬರ ಜೈನ ಮಹಿಳಾ ಸಂಘಟನೆ" ಎಂಬ ಸ್ವತಂತ್ರ ಸಂಸ್ಥೆಯನ್ನು ಪ್ರಾರಂಭ ಮಾಡಿಸಿದೆ. ಇದರ ಅಧ್ಯಕ್ಷಿಣಿಯಾಗಿ ಇಂದೂರಿನ ಶ್ರೀಮತಿ ಪ್ರಭಾದೇವಿಯವರು ಮಹಾಮಂತ್ರಿಯಾಗಿ ಇಂದೂರಿನ ಶ್ರೀಮತಿ ಸುಮನರವರನ್ನು ನೇಮಕ ಮಾಡಲಾಯಿತು. ಇಂದು ಈ ಮಹಿಳಾ ಸಂಘಟನೆಯು 250 ಶಾಖೆಗಳಾಗಿ ಇಂದು ಸಕ್ರಿಯವಾಗಿ ಧಾರ್ಮಿಕ ಮತ್ತು ಶೈಕ್ಷಣಿಕ ಕಾರ್ಯಗಳನ್ನು ನಡೆಸುತ್ತಾ ಬರುತ್ತಿವೆ. ಹಾಗೇ ಮುಖ್ಯಮಂತ್ರಿ ಆಗಿರುವ ಸುಮನಜೈನರ ಪ್ರಧಾನ ಸಂಪಾದಕತ್ವದಲ್ಲಿ 'ಋಷಭದೇಶನಾ' ಎಂಬ ಹೆಸರಿನಲ್ಲಿ ಮಾಸಿಕ ಪತ್ರಿಕೆಯು ಹೊರಡುತ್ತಿದೆ. 5 ತಿಂಗಳವರೆಗೆ ವಿಹಾರ ಮಾಡುತ್ತಾ ಏಪ್ರಿಲ್ 27 ರಂದು ಅಲ್ಲಿಗೆ ತಲುಪಿದೆವು. ಮೇನಲ್ಲಿ ಅಭೂತ ಪೂರ್ವ ಸಫಲತೆಯೊಂದಿಗೆ ಪಂಚಕಲ್ಯಾಣ ಕಾರ್ಯವು ನೆರವೇರಿ ಅಲ್ಲಿಯೇ ಚಾತುರ್ಮಾಸಕ್ಕೆ ನಿಂತೆವು

ಸಂಘಪತಿಯು ವಿನಮ್ರತೆ

ವಿಹಾರದ ಮಧ್ಯೆ ಅನೇಕ ಕಡೆ ಜೈನ ಸಮಾಜವು ಸಂಘವನ್ನು ಸ್ವಾಗತಿಸುತ್ತಾ ಸಂಘಪತಿಗಳನ್ನು ಗೌರವವಾಗಿ ಅಭಿನಂದಿಸುತ್ತಿತ್ತು. ಆದರೆ ಗೌರವವನ್ನು ಕುಸುಮಲತ ಬೇಡವೆನ್ನುತ್ತಿದ್ದರು. ಇದು ನಮ್ಮ ಕರ್ತವ್ಯವಾಗಿದೆ. ಇದಕ್ಕೆ ಸನ್ಮಾನಿಸುವ ಅವಶ್ಯಕತೆ ಇಲ್ಲವೆಂದು ನಿರಾಕರಿಸುತ್ತಿದ್ದರು. ಮಹಾವೀರ ಪ್ರಸಾದರವರು ಯೋಗಿಲಾಲ ಪ್ರೇಮಚಂದರವರ ಆದರಕ್ಕೆ ತಮ್ಮ ಕೃತಜ್ಞತೆಯನ್ನು ಸೂಚಿಸುತ್ತಾ ವಿನಯವಾಗಿ ನಾನು ಸಂಘಪತಿಯಲ್ಲಿ ಕೇವಲ ಪೂಜ್ಯ ಮಾತಾಜೀ ಅವರ ಸಂಘದ ಸೇವಕ. ಮಾತಾಜೀಯವರೇ ನನಗೆ ಮಾಂಗೀ ತುಂಗೀಯ ಯಾತ್ರೆ ಮಾಡಿಸುತ್ತಿದ್ದಾರೆ. ಮುಂದೆ ಮಾತಾಜೀಯವರು ನನ್ನನ್ನು ಸಿದ್ಧ ಶಿಲೆಯ ಯಾತ್ರೆಗೂ ಜೊತೆಯಲ್ಲಿ ಕರೆದೊಯ್ಯಲಿ ಎಂಬುದೇ ನನ್ನ ಮಹಾದಾಶೆ ಎಂದು ತಮ್ಮ ಭಕ್ತಿ ಹಾಗೂ ತನ್ನನ್ನು ಚಿಕ್ಕವನೆಂದು ಭಾವಿಸುತ್ತಿದ್ದ ದೃಶ್ಯ ಇಡೀ ಶ್ರಾವಕರಿಗೆ ಅನುಕರಣೀಯವಾಗಿತ್ತು.

ನವನಿರ್ಮಾಣಗಳಿಗೆ ಪ್ರೇರಣೆ

ಮೇರಠನಿಂದ ಮಾಂಗಿ ತುಂಗಿಯವರೆಗೆ ಹೋಗುವವರೆಗೂ ಮಧ್ಯದಲ್ಲಿ ಬರುವ ಹಲವಾರು ಕ್ಷೇತ್ರಗಳು ನವನಿರ್ಮಾಣಕ್ಕೆ ಕಾಯುತ್ತಿದ್ದವು ಎಂದು ಭಕ್ತರು ನನ್ನ ಪ್ರೇರಣೆಯಿಂದ ಈ ನಿರ್ಮಾಣ ಕಾರ್ಯಗಳನ್ನು ಕೈಕೊಂಡಿದ್ದಾರೆ.

1 ಮೇರಠನ ಕಮಲನಗರದಲ್ಲಿ ಮೊದಲಿದ್ದ 20 ತೀರ್ಥಂಕರರ ಹಾಗೂ ವರ್ತಮಾನಕಾಲೀನ 24 ತೀರ್ಥಂಕರರಿಗೆ ಕಮಲ ಪೀಠದ ರಚನೆ.

2. ದೆಹಲಿಯ ಪ್ರೀತಿ ವಿಹಾರದಲ್ಲಿ ಭ. ವೃಷಭದೇವರಿಗೆ ಕಮಲಮಂದಿರ.

3. ವೃಷಭದೇವರ ಕೇಶರಿಯಾದ ಬೆಟ್ಟದ ಮೇಲೆ ಅಯೋಧ್ಯೆಯ ತೀರ್ಥರಚನೆ

4. ರಾಜಸ್ಥಾನದ ಖೇರವಾಡದಲ್ಲಿ ಕೈಲಾಸಪರ್ವತದ ರಚನೆ.

5. ಸನಾವದದಲ್ಲಿ ಣಮೋಕಾರ ಧಾಮ ತೀರ್ಥದ ಸ್ಥಾಪನೆ.

6. ಸಿದ್ಧವರ ಕೂಟ ಸಿದ್ಧ ಕ್ಷೇತ್ರದಲ್ಲಿ ತೇರಹ ದ್ವೀಪ ರಚನಾ ಮಂದಿರ

7. ರಾಜಸ್ಥಾನದ ಝಾಲರಾಪಾಟನದಲ್ಲಿ ಸಿದ್ಧಾಚಲಂ ತೀರ್ಥದ ಘೋಷಣೆ

8. ಮಾಂಗಿ ತುಂಗಿಯಲ್ಲಿ ಸಹಸ್ರಕೂಟದ ಕಮಲಮಂದಿರ

9. ರಾಜಸ್ಥಾನದ ಕೇಕಡಿಯಲ್ಲಿ ಸಮ್ಮೇದ ಶಿಖಿರ ಪರ್ವತದ ರಚನೆ.

10. ರಾಜಸ್ಥಾನದ ಮಾಧೋರಾಜಪುರದಲ್ಲಿ ನೂತನವಾದ ತೀರ್ಥಸ್ಥಾಪನೆ.

ಹೀಗೆ ಹಲವಾರು ಸ್ಥಾನಗಳಲ್ಲಿ ನಿರ್ಮಾಣಕಾರ್ಯಗಳು ಪೂರ್ಣಗೊಂಡು ಜೈನಧರ್ಮದ ಸಂದೇಶಗಳು ಸಾರುತ್ತಿವೆ.

ಭಗವಾನ ವೃಷಭದೇವರ 108 ಅಡಿ ಉತ್ತುಂಗ ಪ್ರತಿಮೆಯ ನಿರ್ಮಾಣಕ್ಕಾಗಿ ಪ್ರೇರಣೆ

ಮಾಂಗೀತುಂಗೀಯಲ್ಲಿ ಚಾತುರ್ಮಾಸ ಮುಗಿಯುತ್ತಾ ಬಂದಿತು. ಒಂದು ದಿನ ಪರ್ವತದ ಸುಧ, ಬುಧ ಗುಹೆಯಲ್ಲಿ ನಾನು ಪಿಂಡಸ್ಥ ಧ್ಯಾನದಲ್ಲಿ ಕುಳಿತಿದ್ದೆ. ಈ ಪರ್ವತದ ಮಧ್ಯದ ಪೂರ್ವಾಭಿಮುಖವಾಗಿ ಬಂಡೆಯ ಮೇಲೆ ವಿಶಾಲಕಾಯದ ಭಗವಾನ ಋಷಭದೇವರ 108 ಅಡಿ ಎತ್ತರದ ಖಡ್ಗಾಸನದ ಮೂರ್ತಿಯನ್ನು ಕೆತ್ತಿಸಬೇಕೆಂಬ ಭಾವವು ಜಾಗೃತವಾಯಿತು. ಹತ್ತಿರದಲ್ಲೇ ಇದ್ದ ಚಂದನಮತಿಗೆ ನಾನು ಬೆಟ್ಟದ ಮೇಲೆ 108 ಅಡಿ ವೃಷಭದೇವರ ರೂಪವನ್ನು ಪ್ರಕಟಗೊಳಿಸಬೇಕೆಂದು ಹೇಳಿದೆ.

ಆರ್ಯಿಕೆ ಚಂದನಮತಿ ಹರ್ಷಾತಿರೇಕದಿಂದ ಮಾತಾಜೀ ನೀವಂತೂ ನಮಗೆ ಮನೆಯಲ್ಲಿಯು ದೇವತೆಯಂತಿದ್ದೀರಿ. ಈಗ ಇಡೀ ಭೂಮಿಗೆ ಪರೋಪಕಾರ ಹಾಗೂ ಸಂಸ್ಕೃತಿಯ ಸಂರಕ್ಷಣಾಕಾರರಾಗಿದ್ದೀರಿ. ಆಹಾ ತಮ್ಮ ಇಚ್ಛೆಯಂತೆ ಇಲ್ಲಿ ಮೂರ್ತಿ ಸ್ಥಾಪಿತವಾದರೆ ಇಡೀ ವಿಶ್ವಕ್ಕೆ ಮತ್ತೊಮ್ಮೆ ಜೈನಧರ್ಮದ ಡಂಗುರ ಬಾರಿಸಿದಂತಾಗುತ್ತದೆ. ಹಾಗೇ ಅವಳಿಗೆ ಮತ್ತೊಂದು ಯೋಚನೆಯು ಬಂದಿತು ಮಾತಾಜೀ ತಾವು ಇಲ್ಲಿಂದ ವಿಹಾರ ಮಾಡಿದ ಮೇಲೆ, ಇಷ್ಟು ಮಹತ್ತರವಾದ ಕೆಲಸ ಹೇಗೆ ಕಾರ್ಯಗತವಾಗುತ್ತದೆ. ಹೇಗೆ ಮೂರ್ತರೂಪ ಪಡೆಯುತ್ತದೆ. ಆದ್ದರಿಂದ ನೀವೇನಾದರು ಈ ಬೃಹತ್‌ಕಾಯ ಪ್ರತಿಮೆಯ ಬಗ್ಗೆ ತಿಳಿಸಿದರೆಂದರೆ ಜನರು ನಿಮ್ಮನ್ನು ಇಲ್ಲಿಂದ ಹೊರಡಲು ಬಿಡುವುದಿಲ್ಲ ಎಂದರು.

ಮೊದಲಿನಿಂದಲೂ ನನ್ನ ಮನಸ್ಸಿಗೆ ಏನಾದರು ಯೋಚನೆ ಬಂದಿತೆಂದರೆ ಅದನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಯೋಚಿಸುತ್ತಿದ್ದೇನೆ ಹೊರತು ಬೇರೆ ಯಾರಾದರು ಏನಾದರೂ ನಿರುತ್ಸಾಹದ ಮಾತು ಹೇಳಿದರು ಕಿವಿಗೊಡುತ್ತಿರಲಿಲ್ಲ. ಭಗವಂತನ ಮೇಲೆ ಹಾಗೂ ನನ್ನ ಆತ್ಮಶಕ್ತಿಯ ಮೇಲೆ ವಿಶ್ವಾಸವಿಟ್ಟು ಅದನ್ನು ಕಾರ್ಯಗತಗೊಳಿಸದೆ ಬಿಡುತ್ತಿರಲಿಲ್ಲ. ಅದರಂತೆ ನನ್ನ ಶಿಷ್ಯಗಣ ಹಾಗೂ ಭಕ್ತರು ತಮ್ಮ ಕರ್ತವ್ಯವೆಂದು

ತಿಳಿದು ನನ್ನ ಭಾವನೆಗೆ ಸಹಕಾರವನ್ನು ಒದಗಿಸುತ್ತಾ ಬಂದಿದ್ದಾರೆ. ಇದೇ ವಿಶ್ವಾಸದಿಂದ ನಾನು 1996 ರ ಅಕ್ಟೋಬರ 25 ಶರದಪೂರ್ಣಿಮೆಯಂದು ಸೇರಿದ ಭಕ್ತಗಣದ ಮುಂದೆ 108 ಅಡಿ ಮೂರ್ತಿಯನ್ನು ನಿರ್ಮಾಣ ಮಾಡಿಸಬೇಕೆಂದು ನಿರ್ಣಯವನ್ನು ಹೇಳುತ್ತಲೇ ಅಲ್ಲಿ ಸೇರಿದ್ದ ಜನ ಚಪ್ಪಾಳೆ ತಟ್ಟಿ, ಜಯಕಾರವನ್ನು ಮಾಡುತ್ತಾ ನಿರ್ಣಯವನ್ನು ಅಂಗೀಕರಿಸಿ ಅಲ್ಲಿಯೇ ತಮ್ಮ ಧನದ ಸಹಯೋಗವನ್ನು ಘೋಷಿಸತೊಡಗಿದರು. ಈ ಕಾರ್ಯದ ಕಠಿಣತೆ, ದುಸಾಧ್ಯತೆಯನ್ನು ಮನವರಿಕೆ ಮಾಡಿಕೊಂಡ ಜನರು ಇದಕ್ಕಾಗಿ ಹೊಸದಾದ ಸಮಿತಿಯನ್ನು ರಚಿಸಲು ನಿರ್ಧರಿಸಿ ಅದಕ್ಕೆ ಅಧ್ಯಕ್ಷರಾಗಿ ಬ್ರ. ರವೀಂದ್ರರನ್ನೇ ನೇಮಿಸಬೇಕೆಂದು ಒಮ್ಮತದಿಂದ ನಿರ್ಣಯಿಸಿದರು. ಅವರ ಕಾರ್ಯಕ್ಷಮತೆಯ ಬಗ್ಗೆ ನನಗೂ ಗೌರವಿದ್ದುದ್ದರಿಂದ ಹಿಂದೆ ಮುಂದೆ ಯೋಚಿಸದೆ ಒಪ್ಪಿಗೆ ಕೊಟ್ಟೆ. ಅಧ್ಯಕ್ಷರಾಗಿ ರವೀಂದ್ರನನ್ನ ಮಹಾಮಂತ್ರಿಯಾಗಿ ಪಾಪಡಿಯವರಾದ ಡಾ II ಪನ್ನಾಲಾಲ ಜೈನರನ್ನು ಘೋಷಿಸಲಾಯಿತು. ಮೂರ್ತಿ ನಿರ್ಮಾಣಕ್ಕಾಗಿ ನೋಂದಾಯಿತ ಸಂಸ್ಥೆಯನ್ನು ರಚಿಸಲಾಯಿತು. ಈ ವರ್ಷ ಕೆಲಸವನ್ನು ಪ್ರಾರಂಭಿಸಬೇಕೆಂದು ತೀರ್ಮಾನಮಾಡಿ ಸಕಲ ಸಿದ್ಧತೆಗಳನ್ನು ಮಾಡತೊಡಗಿದರು. 2002 ರ ಮಾರ್ಚ 3 ರಂದು ದೆಹಲಿಯ ಸಂಘಪತಿ ಮಹಾವೀರ ಪ್ರಸಾದರಿಂದ ಶಿಲಾಪೂಜೆಯನ್ನು ಮಾಡಿಸಿ ಕೆಲಸ ಪ್ರಾರಂಭ ಮಾಡಲಾಯಿತು. ದೇಶದ ಇಡೀ ಜೈನ ಸಮಾಜದ ಗಮನವೆಲ್ಲಾ ಈ ಕಡೆ ಹರಿದಿದೆ. ಕುಶಲ ಇಂಜಿನಿಯರ್, ಆರ್ಕಿಟೆಕ್ಟ ಹಾಗೂ ಶಿಲ್ಪಕಾರರ ಸಹಯೋಗದಿಂದ ಶೀಘ್ರವಾಗಿ ಪರ್ವತದ ಮೇಲೆ ಜಿನೇಂದ್ರ ಭಗವಂತರ ಮೂರ್ತಿ ಸ್ಥಾಪಿತವಾಗೇ ಆಗುತ್ತದೆ ಎಂಬ ಭರವಸೆಯೊಂದಿಗೆ ಮಾಂಗೀ ತುಂಗಿ ಸಿದ್ಧಕ್ಷೇತ್ರಕ್ಕೆ ನನ್ನ ಶತ ಶತ ವಂದನೆಗಳು.

ದೆಹಲಿಯಲ್ಲಿ ಇಪ್ಪತ್ತನಾಲ್ಕು ಕಲ್ಪದ್ರುಮ ಆರಾಧನೆಗಳು ಇಪ್ಪತ್ತನಾಲ್ಕು ಸಮವಸರಣಗಳು ಒಟ್ಟಿಗೆ ನಡೆದವು

ಮಾಂಗೀ ಮತ್ತು ತುಂಗೀಯಲ್ಲಿ ನಾನು ಮತ್ತು ಚಂದನಮತಿಯರು ನಮ್ಮೊಳಗೆ ವಿಚಾರ ಮಾಡಿಕೊಂಡು ಈ ಸಲ ದೆಹಲಿಯಲ್ಲಿ ಇಪ್ಪತ್ತನಾಲ್ಕು ಕಲ್ಪದ್ರುಮ ಆರಾಧನೆಯನ್ನು ಮಾಡಿಸಬೇಕೆಂದು ತೀರ್ಮಾನಿಸಿ ಅದಕ್ಕಾಗಿ ರೂಪರೇಖೆಯನ್ನು ಸಿದ್ಧಗೊಳಿಸುತ್ತಿದ್ದೆವು. ಹೀಗೆ ಯೋಚಿಸುತ್ತಲೇ ಪ್ರಭಾವನಾ ಪೂರ್ವಕವಾಗಿ ವಿಹಾರ ಮಾಡುತ್ತಾ ಮಹಾರಾಷ್ಟ್ರ., ಗುಜರಾತ, ಹರಿಯಾಣ ಮಾರ್ಗವಾಗಿ 1997 ರ ಮಾರ್ಚದಲ್ಲಿ ದೆಹಲಿಗೆ ಬಂದೆವು. ದೆಹಲಿಯ ಮುಖ್ಯಮಂತ್ರಿಗಳಾದ ಸಾಹಿಬಸಿಂಹವರ್ಮರು ನಮ್ಮನ್ನು ಕೆಂಪುಕೋಟೆಯ ಮೈದಾನದಲ್ಲಿ ಸ್ವಾಗತಿಸಿದರು. ಇದೇ ಸಭೆಯಲ್ಲಿ ಭ. ವೃಷಭದೇವರ ಜನ್ಮ ಜಯಂತಿಯ ಮಹೋತ್ಸವದ ದೀಪವನ್ನು ಪ್ರಜ್ವಲನಾಪೂರ್ವಕವಾಗಿ ಉದ್ಘಾಟಿಸುವ ಘೋಷಣೆಯನ್ನು ಮಾಡಲಾಯಿತು. ಇಡೀ ದೇಶದಲ್ಲೆಲ್ಲ ಪ್ರಥಮ ತೀರ್ಥಂಕರರ ಜನ್ಮ ಜಯಂತಿಯನ್ನು ರಾಷ್ಟ್ರೀಯ ಮಟ್ಟದಲ್ಲಿ ಆಚರಿಸಲು ಪ್ರೇರಣೆ ಕೊಡಲಾಯಿತು. ಕೇಂದ್ರಿಯ ಸಮಿತಿಯು ನನ್ನ ಪ್ರೇರಣೆಯಂತೇ ಆಗಾಗ್ಗೆ ಜನ್ಮಜಯಂತಿ, ಅಕ್ಷಯತೃತೀಯ, ವೃಷಭದೇವರ ನಿರ್ವಾಣ ಜಯಂತಿಯನ್ನು ಎಲ್ಲೆಡೆ ಆಚರಿಸಲು ಜಾಹೀರಾತುಗಳನ್ನು ಕಳುಹಿಸತೊಡಗಿದರು. ಎಲ್ಲಾ ಜಾಗಗಳಲ್ಲೂ ಭಗವಾನರ ಬಗ್ಗೆ ಪ್ರಚಾರ ಅಧಿಕವಾದ್ದರಿಂದ ಬೇರೆ ಜನಗಳಿಗೂ ಜೈನಧರ್ಮದ ಸ್ಥಾಪಕ ಮಹಾವೀರರಲ್ಲ ವೃಷಭ ತೀರ್ಥಂಕರ ಎನ್ನುವ ವಾಸ್ತವ ಅರಿವಾಗತೊಡಗಿತು.

ಸಾಹು ಅಶೋಕ ಜೈನರ ಉತ್ಕಟ ಭಾವನೆ

1997 ರ ಅಕ್ಟೋಬರ 4 ರಿಂದ 13 ನೇ ತಾರಿಕಿನವರೆಗೆ ರಿಂಗರೋಡ ದೆಹಲಿಯಲ್ಲಿ 24 ಕಲ್ಪದ್ರುಮ ಆರಾಧನೆಗಳಿಗಾಗಿ ವಿಸಾಲವಾದ ಪೆಂಡಾಲ ಹಾಕಲಾಗಿತ್ತು. ಸುಮಾರು 3000 ಜನ ಸ್ತ್ರೀ - ಪುರುಷರು ಈ

ಆರಾಧನೆಯಲ್ಲಿ ಭಾಗವಹಿಸಿದ್ದರು. 24 ತೀರ್ಥಂಕರರಿಗೂ 24 ಸಮವಸರಣವನ್ನು ರಚನೆ ಮಾಡಿ ಅವುಗಳ ಎದುರಿಗೆ ಬೇರೆ ಬೇರೆ ಚಕ್ರವರ್ತಿಗಳ ಪರಿವಾರದ ಭಕ್ತಿಯನ್ನು ನೋಡಿದರೆ ಚತುರ್ಥಕಾಲವೇ ಎದುರಿಗೆ ಬಂದಂತೆ ಎನ್ನಿಸುತ್ತಿತ್ತು. ಈ ದೃಶ್ಯದ ವರ್ಣನೆಯನ್ನು ನಿಜವಾಗಿಯು ಶಬ್ದಗಳಲ್ಲಿ ವರ್ಣಿಸಲು ನನಗೆ ಸಾಧ್ಯವಿಲ್ಲ. ಯಾರು ಇದನ್ನು ನೋಡಿದ್ದಾರೆ, ಯಾರು ಆರಾಧನೆಯಲ್ಲಿ ಕುಳಿತಿದ್ದರು ಅವರೇ ಈ ಮಹಿಮೆಯನ್ನು ಅರಿಯಲು ಶಕ್ತರು. ಈ ಆರಾಧನೆಯ ಉದ್ಘಾಟನೆಗೆ ಆಗಿನ ರಾಷ್ಟ್ರಪತಿಗಳಾದ ಶಂಕರದಾಯಳ್ ಶರ್ಮರು ಬಂದಿದ್ದರು. ಹಾಗೇ ದೆಹಲಿಯ ಮುಖ್ಯಮಂತ್ರಿ, ಅನ್ಯ ಮಂತ್ರಿಗಳು ಸಂಸತ್ ಸದಸ್ಯರೆಲ್ಲರು ದರ್ಶನ ಮಾಡಿ ತಮ್ಮ ಭಾಗ್ಯವನ್ನು ಹೊಗಳತೊಡಗಿದರು. ಜೈನ ಸಮಾಜದ ಪ್ರಮುಖ ನೇತಾರರಾದ ಸಾಹೂ ಅಶೋಕಜೀಯವರು ವೇದಿಕೆಯ ಮೇಲೆ ಬರುತ್ತಲೇ ಭಾವ ವಿಹ್ವಲರಾದರು. ಜೀವನದಲ್ಲಿ ಮೊದಲ ಬಾರಿಗೆ ಇಷ್ಟು ದೊಡ್ಡ ಆರಾಧೆಯನ್ನು ಸಮೂಹ ಪೂಜೆಯನ್ನು 24 ಸುಸಜ್ಜಿತ ಸಮವಸರಣಗಳನ್ನು ನೋಡಿ ಉಂಟಾದ ಸಂತೋಷದಿಂದ ಕಣ್ಣೀರು ತುಂಬಿ ಬಂದಿತು. ಅವರು ವೇದಿಕೆಯಲ್ಲಿ ತಮ್ಮ ವಿಚಾರವನ್ನು ವ್ಯಕ್ತಗೊಳಿಸುತ್ತಾ ನನ್ನಲ್ಲಿ ಆಗ್ರಹ ಪೂರ್ವಕವಾಗಿ ನಿವೇದಿಸುತ್ತಾ ಪೂಜ್ಯ ಮಾತಾಜೀಯವರು ಇಂದು ಈ ರಾಜಧಾನಿ ದೆಹಲಿಯಲ್ಲಿ ಚತುರ್ಥ ಕಾಲದ ದೃಶ್ಯವನ್ನು ನಮಗೆ ತೋರಿಸುತ್ತಿದ್ದಾರೆ. ಇದು ನನ್ನ ಜೀವನದಲ್ಲಿ ಬಂದಿರುವ ಅಪೂರ್ವ ಅವಕಾಶ ಈ ಆರಾಧನೆಯನ್ನು ಒಂದು ಬಾರಿ ಸಮ್ಮೇದ ಶಿಖರದಲ್ಲಿ ತಮ್ಮ ಸಾನಿಧ್ಯದಲ್ಲಿಯೇ ಮಾಡಿದ್ದಾದರೆ ಅಲ್ಲಿಯ ವಿವಾದವೇ ಸಮಾಪ್ತವಾಗಿ ಸಮ್ಮೇದ ಶಿಖರದ ಅತಿಶಯವು ಮತ್ತೆ ಬೆಳಗುತ್ತದೆ ಎಂದರು.

ಸಾಹು ಅಶೋಕ ಕುಮಾರರು ಸಮ್ಮೇದ ಶಿಖರದ ಅನನ್ಯ ಭಕ್ತರು ಅವರು ಇನ್ನು ಬದುಕಿದ್ದರೆ ಖಂಡಿತ ಅವರ ಭಾವನೆ ಸಫಲವಾಗಿರುತ್ತಿತ್ತು. ಆದರೆ ಕಾಲನ ಕೈವಶವಾದರು. ನಾನು 2003 ರಲ್ಲಿ ಸಮ್ಮೇದ ಗಿರಿಗೆ ಹೋದಾಗ ಪಾರ್ಶ್ವನಾಥರ ಪಾದಕಮಲಗಳಲ್ಲಿ ತೀರ್ಥಕ್ಷೇತ್ರದ ಸಮಸ್ಯೆ ಬೇಗ ಬಗೆಹರಿಯಲೆಂದು ಕೇಳಿಕೊಂಡೆ.

ಪಿ. ಎಸ್. ಮೋಟಾರ್ಸ್ ನ ರಮೇಶಚಂದ್ ಜೈನರ ಆತ್ಮೀಯ ಭಾವನೆ

ರಮೇಶಚಂದ್ ಜೈನರ ಪರಿವಾರದವರು ಕಳೆದ 25-30 ವರ್ಷಗಳಿಂದಲೂ ನನ್ನಲ್ಲಿ ಭಕ್ತಿ ಮತ್ತು ಸ್ನೇಹ ಭಾವನೆಯನ್ನು ಇಟ್ಟುಕೊಂಡಿದ್ದಾರೆ. ಅವರ ಹೆಂಡತಿ ಸುಶೀಲ ನನ್ನ ಖಾಸಾ ಭಕ್ತರು. ನನ್ನಲ್ಲಿ ಮಾತಾಡುವುದೆಂದರೆ ಅವರಿಗೆ ಸಂತೃಪ್ತಿ. ರಮೇಶಚಂದ್ರರು ಈ ಕಲ್ಪದ್ರುಮ ಆರಾಧನೆಯು ಈ ದೊಡ್ಡ ಯೋಜನೆಗೆ ಕಾರ್ಯಾಧ್ಯಕ್ಷರಾಗಿ ಸಕ್ರಿಯವಾಗಿ ಭಾಗವಹಿಸಿದ್ದರು. ಆರ್ಯಿಕೆ ಚಂದನಮತಿ ಕ್ಷು. ಮೋತಿಸಾಗರರು ಅಧ್ಯಕ್ಷ ರವೀಂದ್ರಕುಮಾರರೊಡನೆ ಸಮಾಲೋಚಿಸಿ ಎಲ್ಲಾ ಕಾರ್ಯವನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ ಶ್ರೇಯಸ್ಸು ಅವರಿಗೆ ಸಲ್ಲಬೇಕು. ಇವರ ಈ ಕಾರ್ಯಕ್ಷಮತೆ ನನಗೆ ಬಹಳ ಹರ್ಷವನ್ನು ಉಂಟುಮಾಡಿತು.

ಪ್ರಮುಖ ಚಕ್ರವರ್ತಿ ಭರತ ಸಾಮ್ರಾಟನ ಪದವಿಯಲ್ಲಿ ವೀರಾ ಬಿಲ್ಡರ್ಸ್‌ನ ರಾಜಕುಮಾರ ಜೈನ

ಈ ಆರಾಧನೆಯ ಪ್ರಮುಖ ಚಕ್ರವರ್ತಿಯ ಸ್ಥಾನವನ್ನು ದೆಹಲಿಯ ರಾಜಕುಮಾರ ಜೈನರು ವಹಿಸಿಕೊಂಡಿದ್ದರು. ಅವರ ಹೆಂಡತಿ ಆಶಾಜೈನ ಇವರ ಇಡೀ ಕುಟುಂಬ ಎಲ್ಲಾ ಚಕ್ರವರ್ತಿ ಸ್ಥಾನವನ್ನು ಅಲಂಕರಿಸಿದವರೊಡನೆ ಬಂದ ದೃಶ್ಯ ಅವಿಸ್ಮರಣೀಯ. ಕಲ್ಪದ್ರುಮ ಸ್ಮರಣ ಸಂಚಿಕೆಯಲ್ಲಿ ಈ ಎಲ್ಲಾ ದೃಶ್ಯಗಳನ್ನು ನೋಡಬಹುದು. ಈ ಪಂಚಮ ಕಾಲದಲ್ಲಿ ಸಾಧು ಮತ್ತು ಶ್ರಾವಕರಿಗೆ ಜಿನೇಂದ್ರರ ಭಕ್ತಿಯ ಹೊರತಾಗಿ ಬೇರೆ

ಯಾವುದರಿಂದಲೂ ಕರ್ಮನಿರ್ಜರೆ ಆಗಲಾರದು. ಆದ್ದರಿಂದ ನಿಮ್ಮ ಪೂರ್ತಿ ಶಕ್ತಿ ಮತ್ತು ಭಕ್ತಿಯ ಜೊತೆ ಧರ್ಮಧ್ಯಾನದ ಆಶ್ರಯದಿಂದ ಸಾಂಸಾರಿಕ ಆರ್ತ, ಧ್ಯಾನಗಳಿಂದ ಬಿಡುಗಡೆ ಹೊಂದುವ ಪುರುಷಾರ್ಥವನ್ನು ಮಾಡಿರಿ.

ಸಮವಸರಣದ ಪ್ರವರ್ತನೆಯೊಂದಿಗೆ ಜನ್ಮ ಜಯಂತಿಯು ಸಮಾರೋಪಗೊಂಡಿತು

ಭಗವಾನ ವೃಷಭದೇವರ ಅಸ್ತಿತ್ವವನ್ನು ಜನಗಳವರೆಗೆ ತಲುಪಿಸುವಂತಹ ಒಂದು ಪರಿಣಾಮಕಾರಿಯಾದ ಯೋಜನೆಯೊಂದು ನನ್ನ ಮನದಲ್ಲಿ ಯಾವಾಗಲೂ ಜಾಗೃತವಾಗಿರುತಿತ್ತು. ಇದರ ಫಲ ಸ್ವರೂಪವಾಗಿಯೇ ನಾನು ದಿಗಂಬರ ಜೈನ ತ್ರಿಲೋಕ ಶೋಧ ಸ್ವರೂಪವಾಗಿಯೇ ನಾನು ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದ ಕಾರ್ಯಕರ್ತರಿಗೆ "ಭಗವಾನ ಋಷಭದೇವ ಸಮವಸರಣ ಶ್ರೀವಿಹಾರ" ಎಂಬ ಹೆಸರಿನಲ್ಲಿ ಒಂದು ರಥಯಾತ್ರೆ ಹೊರಡಿಸಲು ಪ್ರೇರೇಪಿಸಿದೆ. ಈ ರಥಯಾತ್ರೆಯ ಜೊತೆಯಲ್ಲಿಜನ್ಮ ಕಲ್ಯಾಣದ ಪ್ರತೀಕವಾಗಿ ಒಂದು ವಿಶಾಲಕಾಯದ ಆನೆಯನ್ನು ಬೇರೊಂದು ರಥದಲ್ಲಿಹೊರಡಿಸಲಾಯಿತು. 1998 ರ ಮಾರ್ಚ 22 ರಂದು ಋಷಭದೇವರ ಜನ್ಮ ಜಯಂತಿಯಂದು ಈ ಎರಡು ರಥಗಳ ಉದ್ಘಾಟನೆಯು ಆಗಿನ ಕೇಂದ್ರಿಯ ವಿತ್ತ ರಾಜ್ಯಮಂತ್ರಿಯಾಗಿದ್ದ ಧನಂಜಯಕುಮಾರರಿಂದ ಆಯಿತು. 1998 ರ ಏಪ್ರಿಲ್ 9 ರಂದು ಭ. ಮಹಾವೀರರ ಜನ್ಮ ಜಯಂತಿಯಂದು ಆಗಿನ ಪ್ರಧಾನಮಂತ್ರಿಗಳಾದ ಅಟಲಬಿಹಾರಿ ವಾಜಪೇಯಿಯವರಿಂದ ಇಡೀ ಭಾರತ ದೇಶದಲ್ಲಿ ಸಂಚಾರಕ್ಕಾಗಿ ರಥಗಳನ್ನು ಪ್ರವರ್ತನೆಗೊಳಿಸಲಾಯಿತು. ನಿರಂತರವಾಗಿ ಮೂರು ವರ್ಷಗಳವರೆಗೆ ಇಡೀ ದೇಶದಲ್ಲಿ ಈ ಸಮವಸರಣ ಶ್ರೀ ವಿಹಾರವು ಸಂಚರಿಸುತ್ತಾ ವೃಷಭದೇವರ ಸಿದ್ಧಾಂತಗಳನ್ನು, ವ್ಯಸನ-ಮುಕ್ತಿ, ಸದಾಚಾರ, ಶಾಕಾಹಾರಗಳ ವ್ಯಾಪಕ ಪ್ರಚಾರ - ಪ್ರಸಾರವನ್ನು ಮಾಡಿಸಿದ್ದು ಅವಿಸ್ಮರಣೀಯ 2002 ರ ಅಕ್ಟೋಬರ 21 ರಂದು ಈ ಸಮವಸರಣವು ಪ್ರಯಾಗ- ಅಲಾಹಾಬಾದ ನಲ್ಲಿ ನವನಿರ್ಮಿತ ತೀರ್ಥ "ತೀರ್ಥಂಕರ ವೃಷಭ ದೇವ ತಪಸ್ಥಳ" ಪರಿಸರದ ಸಮವಸರಣ ಮಂದಿರದಲ್ಲಿ ಸ್ಥಿರವಾಗಿ ಸ್ಥಾಪಿಸಲಾಯಿತು.

ಈ ಪ್ರವರ್ತನೆಯ ಮೇಲ್ವಿಚಾರಣೆಯನ್ನು ಕಾನಪುರದ ಚಿರಂಜೀವಿ ವಿಜಯಕುಮಾರನು ವಹಿಸಿದ್ದನು. ಅವನ ನಿರಂತರ ಪರಿಶ್ರಮ ಅದಮ್ಯ ಉತ್ಸಾಹ ಇಂದಿನ ಯುವ ಪೀಳಿಗೆಯವರಿಗೆ ಅನುಕರಣೀಯವಾಗಿದೆ. ಅವನ ಯೋಗ್ಯತೆಯು ಇನ್ನು ವೃದ್ಧಿಸಲಿ ಎಂದು ಹೊಗಳಿ ಆಶೀರ್ವದಿಸಿದೆ. ಈ ಕಲಿಯುಗದಲ್ಲಿ ಹೊಸಪೀಳಿಗೆಯವರಿಂದ ಧರ್ಮ ಮಾರ್ಗವು ವೃದ್ಧಿಯಾಗುತ್ತದೆ ಎಂಬ ಸಾಮ್ಯಾಟ ಚಂದ್ರಗುಪ್ತನ ಕನಸು ಸಾರ್ಥಕವಾಗಲಿ. ಹೀಗೆ ರಥ ಪ್ರವರ್ತನೆಯಲ್ಲಿ ತೊಡಗಿಕೊಂಡಿದ್ದ ಪಂಡಿತ, ಸುಧರ್ಮಚಂದ್ರ ಶಾಸ್ತ್ರಿಗಳು ಅಭಿನಂದನಾರ್ಹರು.

ಕುಲಪತಿಗಳ ಸಮ್ಮೇಳನದ ಮೂಲಕ ಭ. ವೃಷಭದೇವರ ಅಸ್ತಿತ್ವದ ಪ್ರಕಟನೆ

ದೆಹಲಿಯಿಂದ ಸಮವಸರಣದ ಶ್ರೀ ವಿಹಾರ ಮುಗಿದ ಮೇಲೆ ನಾನು ಸಂಘ ಸಹಿತವಾಗಿ ಹಸ್ತಿನಾಪುರಕ್ಕೆ ಹಿಂದಿರುಗಿದೆ. 1998 ರ ವರ್ಷಾಯೋಗವು ಹಸ್ತಿನಾಪುರದಲ್ಲಾಯಿತು. ಈಗ ಸಂಘದಲ್ಲಿ ಆರ್ಯಿಕೆ ಅಭಯಮತೀ, ಚಂದನಮತೀ, ಕ್ಷುಲ್ಲಕ ಮೋತಿಸಾಗರ, ಕ್ಷುಲ್ಲಿಕೆ ಶಾಂತಿಮತಿ, ಶ್ರದ್ಧಾಮತಿಯರಿದ್ದರು. ನನ್ನ ಪ್ರೇರಣೆಯಿಂದ ಸಂಸ್ಥಾನದಲ್ಲಿ ಅಕ್ಟೋಬರ 4 ರಿಂದ 6 ರವರೆಗೆ ಭಗವಾನ ವೃಷಭದೇವರ ರಾಷ್ಟ್ರೀಯ ಕುಲಪತಿಗಳ

ಸಮ್ಮೇಳನವನ್ನು ಆಯೋಜಿಸಲಾಗಿತ್ತು. ಇದು ಜೈನ ಸಮಾಜದಿಂದ ಮೊದಲ ಬಾರಿಗೆ ಆಯೋಜಿಸಲಾಗಿತ್ತು. ಸುಮಾರು 30 ಕುಲಪತಿಗಳು ಕೆಲವು ಪೂರ್ವ ಕುಲಪತಿಗಳು ನೂರಕ್ಕೂ ಹೆಚ್ಚು ಪ್ರೋಫೆಸರುಗಳ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅವರೆಲ್ಲರಿಗೂ ಜೈನ ಧರ್ಮದ ಸಂಸ್ಥಾಪಕ ಮಹಾವೀರರಲ್ಲಿ ವೃಷಭನಾಥರು ಎನ್ನುವ ಸತ್ಯದ ಅರಿವಾಯಿತು. ಜೈನ ಧರ್ಮವೆಂಬುದು ನಿರಂತರವಾದುದು. ಈ ವರ್ತಮಾನ ಯುಗದಲ್ಲಿ ಆದಿನಾಥರಿಂದ ಹಿಡಿದು ಮಹಾವೀರರವರೆಗೆ 24 ತೀರ್ಥಂಕರರು ಇದ್ದಾರೆ ಎಂಬ ವಿಷಯ ತಿಳಿಯಿತು. ಜಂಬೂದ್ವೀಪದ ಸುರಮ್ಯ ವಾತಾವರಣ ರವೀಂದ್ರಕುಮಾರನ ಅತಿಥ್ಯ ಉತ್ತಮ ವಸತಿ ಸೌಲಭ್ಯ ಇವುಗಳಿಂದ ಅವರೆಲ್ಲರಿಗೂ ಸ್ವರ್ಗದ ಅನುಭವವನ್ನು ಕೊಟ್ಟಿತೆಂದರೆ ಅತಿಶಯೋಕ್ತಿಯಾಗಲಾರದು. ಅವರೆಲ್ಲ ಮನಃ ಪೂರ್ವಕವಾಗಿ ಹೊಗಳಿದರು. ಸಮ್ಮೇಳನದ ಮಧ್ಯದಲ್ಲಿಯೇ ಅಕ್ಟೋಬರ 6 ರಂದು "ತೀರ್ಥಂಕರ ವೃಷಭದೇವ ವಿದ್ವಾನ್ ಮಹಾಸಂಘ" ಸ್ಥಾಪನೆ ಆಯಿತು. ಇದರ ಅಧ್ಯಕ್ಷರಾಗಿ ಅಹಮದಾಬಾದಿನ ಡಾ. ಶೇಖರಚಂದ ಜೈನರು ಹಾಗೂ ಮಹಾಮಂತ್ರಿಯಾಗಿ ಡಾ. ಅನುಪಮ ಜೈನರು ನಿಯುಕ್ತರಾದರು ಇಂದು ಸಕ್ರಿಯ ಕಾರ್ಯಕಲಾಪಗಳಿಂದ ವಿದ್ವಾಂಸರ ಒಂದು ಪ್ರತಿಷ್ಠಿತ ಸಂಸ್ಥೆಯಾಗಿದೆ.

ಷಟ್ ಖಂಡಾಗಮ ಸಿದ್ಧಾಂತ ಚಿಂತಾಮಣಿ ಟೀಕೆಯ ಮೊದಲ ಖಂಡದ ಬಿಡುಗಡೆ

ಷಟ್‌ಖಂಡಾಗಮ ಸೂತ್ರದ ಧವಲ ಗ್ರಂಥವನ್ನು ನಾನು ಅನೇಕ ಬಾರಿ ಸ್ವಾಧ್ಯಾಯ ಮಾಡಿದ್ದೇನೆ. ಇದರಲ್ಲಿ ಸೈದ್ಧಾಂತಿಕ ಮತ್ತು ಗಣಿತದ ಪ್ರಕರಣಗಳಿಂದ ವಿಷಯವು ಕ್ಲಿಷ್ಟವಾಗಿದೆ. ಇದರಿಂದ ನಾನು ಅಲ್ಪಜ್ಞಾನಿ ಸಾಧು - ಸಾಧ್ವಿಯರಿಗೆ ಹಾಗೆ ಪ್ರಬುದ್ಧ ಶ್ರಾವಕರಿಗೂ ಷಟ್ ಖಂಡಾಗಮದ ಜ್ಞಾನವನ್ನು ಉಂಟುಮಾಡುವುದರಿಂದ ನನ್ನ ಜ್ಞಾನದ ಕ್ಷಯೋಪಕ್ಷಮವನ್ನು ಮಾಡಿಕೊಳ್ಳಬೇಕೆಂಬ ಭಾವನೆ ವರ್ಷಗಳಿಂದ ಮನದಲ್ಲಿತ್ತು. ಆಗಾಗ್ಗೆ ಚಂದನಮತಿಯು ನನ್ನಲ್ಲಿ ಮಾತಾಜೀ ಈಗ ಷಟ್‌ಖಂಡಾಗಮದ ಕೆಲಸವನ್ನು ಪ್ರಾರಂಭ ಮಾಡಿರಿ ಎಂದು ಪ್ರಾರ್ಥಿಸುತ್ತಲೇ ಇದ್ದರು. ಇವರ ಒತ್ತಾಯದಿಂದಲೇ ನನಗೂ ಮಾಡಬೇಕೆಂದು ಮನಸ್ಸು ಧೃಡವಾಗತೊಡಗಿತು.

ಜಂಬೂದ್ವೀಪದ ಎರಡನೆಯ ಪಂಚವರ್ಷೀಯ ಮಹೋತ್ಸವದಂದು ಸುಮೇರು ಪರ್ವತದ ಪಾಂಡುಕ ಶಿಲೆಯ ಮೇಲೆ 1008 ಕಳಸಗಳಿಂದ ಮಹಾಮಸ್ತಕಾಭಿಷೇಕ ನಡೆಯುತ್ತಿರುವಾಗ ನನಗೆ ಪ್ರಥಮಖಂಡದ ಟೀಕೆ ಬರೆಯಲು ಮನಸ್ಸು ತವಕಿಸತೊಡಗಿತ್ತು. ಅದೇ ದಿನ ಅಂದರೆ 8-10-1995 ರಂದು ಬೆಳಗ್ಗೆ 11.25 ಕ್ಕೆ ಮಂಗಳಾಚರಣ ಬರೆದು ಟೀಕೆ ಬರೆಯಲು ಕುಳಿತೆ.

ಓಂ ನಮಃ ಸಿದ್ಧೇಭ್ಯಃ
ಷಟ್ ಖಂಡಾಗಮ
ಅಸ್ಯಾಂತರ್ಗತಃ

ಜೀವಸ್ಥಾನ ನಾಮ ಪ್ರಥಮ ಖಂಡಾಗಮಃ
ಅಸ್ಯಾಪಿ ಪ್ರಥಮ ಪ್ರಕರಣ - ಸತ್ ಪ್ರರೂಪಣಾಯಾಃ ।
ಸಿದ್ಧಾಂತ ಚಿಂತಾಮಣಿ ನಾಮಧೇಯಾ ಟೀಕಾ ।
ಮಂಗಳ ಚರಣಂ
ಸಿದ್ಧಾನ್ ಸಿದ್ಧ್ಯರ್ಥಮಾನಮ್ಯ ಸರ್ವಾಂಸ್ತ್ರೈಲೋಕ್ಯಮೂರ್ಧಗಾನ್ ॥
ಇಷ್ಯಃ ಸರ್ವಕ್ರಿಯಾಂತೇಸೌ ಶಾಂತೀಶೋ ಹೃದಿ ಧಾರ್ಯತೆ ॥೧॥

ಮುನಿಗಳು ಅಷ್ಟಮಿ ಪರ್ವ ನಂದೀಶ್ವರ ಪರ್ವ ಮೊದಲಾದ ಕ್ರಿಯಾಗಳ ಕೊನೆಯಲ್ಲಿ ಶಾಂತಿ ಭಕ್ತಿ ಪಾಠಗಳನ್ನು ಓದುತ್ತಾರೆ.

ಹಾಗೇ ಶ್ರಾವಕರು ಸಹ ನಿತ್ಯ ನೈಮಿತ್ತಿಕ ಪೂಜೆಗಳ ಕೊನೆಯಲ್ಲಿ ಶಾಂತಿ ಪಾಠವನ್ನು ಓದಲಾಗುತ್ತದೆ. ಈ ಪ್ರಕಾರ ಶಾಂತಿನಾಥ ಭಗವಾನರ ಭಕ್ತಿಯನ್ನು ಮುನಿ ಮತ್ತು ಶ್ರಾವಕರಿಂದ ಪೂಜೆ ಕ್ರಿಯಾಗಳ ಕೊನೆಯಲ್ಲಿ ಓದಲಾಗುತ್ತದೆ. ಹಾಗೆಯೇ ಶಾಂತಿನಾಥ ಭಗವಂತನನ್ನು ಇಲ್ಲಿ ಟೀಕೆಯ ಪ್ರಾರಂಭದಲ್ಲಿ ಹೃದಯದಲ್ಲಿ ವಿರಾಜಮಾನಗೊಳಿಸಲಾಗಿದೆ.

ಮೂರು ಕಾಲದ ಅನಂತ ಅರ್ಹಂತರನ್ನು 24 ತೀರ್ಥಂಕರರನ್ನು ಮತ್ತು ಸೀಮಂಧರ ಸ್ವಾಮಿಯಾದಿಯಾಗಿ 20 ತೀರ್ಥಂಕರರಿಗೆ ನಮಸ್ಕರಿಸಿ ಭಗವಾನ ಶಾಂತಿನಾಥ, ಕುಂಥುನಾಥ, ಅರನಾಥರ 4 ಕಲ್ಯಾಣಗಳಿಂದ ಪವಿತ್ರವಾಗಿರುವ ಹಸ್ತಿನಾಪುರ ತೀರ್ಥಕ್ಕೆ ನಮಸ್ಕರಿಸಿ ಪುನಃ 18 ಮಹಾಭಾಷೆ 700 ಲಘು ಭಾಷೆಗಳಿಂದ ಕೂಡಿರುವ ದ್ವಾದಶಾಂಗಮಯೀ ಶ್ರುತದೇವಿಯನ್ನು ಹೃದಯದಲ್ಲಿ ಧರಿಸಿದೆ. ವೃಷಭಸೇನ ಗಣಧರರಿಂದ ಹಿಡಿದು ಪಂಚಮಕಾಲದ ಕೊನೆಯ ಶ್ರೀ ವೀರಾಂಗಜ ಮುನಿಗಳಿಗೆ ನಮಸ್ಕರಿಸಿದೆ. ಇವರಿಂದಲೇ ನಮ್ಮವರೆಗೂ ಸಿದ್ಧಾಂತ ಜ್ಞಾನವು ಬಂದಿದೆ. ಗ್ರಂಥಕರ್ತೃಗಳಾದ ಶ್ರೀ ಪುಷ್ಪದಂತಾಚಾರ್ಯ ಮತ್ತು ಭೂತಬಲಿಗಳಿಗೆ ನಮಸ್ಕರಿಸಿದೆ. ಧವಲ ಟೀಕೆಯನ್ನು ಬರೆದಿರುವ ಶ್ರೀ ವೀರಸೇನ ಮುನಿಗಳಿಗೆ ವಂದಿಸಿದೆ. ಧವಲಾ ಟೀಕೆಯಿಂದಲೇ ಭವ್ಯ ಜೀವಿಗಳ ಅಂತಃಕರಣವು ಉಜ್ವಲವಾಗಿದೆ.

20 ನೇಯ ಶತಮಾನದ ಪ್ರಥಮ ಆಚಾರ್ಯರಾದ ಶಾಂತಿಸಾಗರರು, ಪರಂಪರೆಯ ವೀರಸಾಗರರು, ಪ್ರಥಮಾ ಗಣನೀ ಬ್ರಾಹ್ಮಿ ಆರ್ಯಿಕೆಗೆ ಪಂಚಮ ಕಾಲದ ಕೊನೆಯ 11 ಅಂಗಗಳ ಪಾಠಿ ಸುಲೋಚನ ಸಂಯತಿಕೆ ಆರ್ಯಿಕೆಗೆ ವಂದಿಸಿದೆ. ಷಟ್ ಖಂಡಾಗಮ ಸಿದ್ಧಾಂತ ಗ್ರಂಥಕ್ಕೆ ವಂದಿಸಿ ಪ್ರಥಮ ಖಂಡದ ಸತ್ಪ್ರರೂಪಣೆಯನ್ನು ಬರೆಯಲು ಪ್ರಾರಂಭಿಸಿದೆ.

ಶಾರದೇತಿಷ್ಟ ಮಚ್ಚಿತ್ತೇ, ಯಾವನ್ನ ಪೂರ್ಣಮಾಯುಯಾತ್ ।
ಪ್ರಾರಬ್ಧಕಾರ್ಯ ಮೇತದ್ಧಿ, ತಾವಚ್ಛಕ್ತಿಂ ಚ ದೇಹಿ ಮೇ ॥

ಹೇ ಶಾರದಮಾತೆ ಎಲ್ಲಿಯವರೆಗೆ ನನ್ನ ಹೃದಯದಲ್ಲಿ ವಿರಾಜಮಾನಳಾಗಿರುತ್ತೀಯಾ ಅಲ್ಲಿಯವರೆಗೂ ಅಂದರೆ ಪ್ರಾರಂಭಿಸಿದ ಈ ಲೇಖನ ಕಾರ್ಯವು ಮುಗಿಯುವವರೆಗೂ ನನಗೆ ಶಕ್ತಿ ಕೊಡು. ಅನಂತರ 16 ನೇಯ ಕಾವ್ಯವನ್ನು ಬರೆದಿದ್ದೇನೆ.

ಇಂದ್ರವಜ್ರಾ ಛಂದ

ಸಿದ್ಧಾಂತ ಚಿಂತಾಮಣಿನಾಮ ಧೇಯಾ ಸಿದ್ಧಾಂತ ಭೋದಾಮೃತ ದಾನದಕ್ಷಾ ।
ಟೀಕಾ ಭವೇತ್ ಸ್ವಾತ್ಮಪರಾತ್ಮನೋ ಹಿ ಕೈವಲ್ಯ ಲಬ್ಧ್ಯೈ ಖಲು ಬೀಜಭೂತಾ ॥ ೧೬ ॥

ಸಿದ್ಧಾಂತ ಚಿಂತಾಮಣಿ ಎಂಬ ಟೀಕೆಯು ಸಿದ್ಧಾಂತ ಜ್ಞಾನರೂಪಿ ಅಮೃತವನ್ನು ಕೊಡುವುದರಲ್ಲಿ ಕುಶಲವು. ಈ ಟೀಕೆಯು ತಮ್ಮ ಆತ್ಮನಲ್ಲಿಯು ಬೇರೆ ಪಾಠಕರ ಆತ್ಮನಲ್ಲಿಯೂ ಕೇವಲ ಜ್ಞಾನವನ್ನು ಉತ್ಪನ್ನ ಮಾಡುವುದಕ್ಕಾಗಿ ಬೀಜಭೂತವಾಗಿದೆ ಎಂಬುದೇ ಪ್ರಾರ್ಥನೆ ಇಲ್ಲಿಯವರೆಗೆ 17 ಕಾವ್ಯಗಳ ಟೀಕೆಯ ಮಂಗಳಾಚರಣವನ್ನು ಮಾಡಲಾಗಿದೆ. ನಂತರ ಟೀಕೆಯನ್ನು ಬರೆಯಲು ಪೀಠಿಕೆ ಬರೆದೆ.

ಅಥಸರ್ವೇಷಾಂ ಅಂಗ - ಪೂರ್ವಾಣಾಮೇ ಕದೇಶ ಜ್ಞಾನವತಃ ಶ್ರುತಜ್ಞಾನ ಸ್ಯಾವಿಚ್ಛಿನ್ನತಾಂ ಚಿಕೀರ್ಷೋಃ ಮಹಾಕಾರುಣಿ ಕಸ್ಯ ಭಗವತಃ ಶ್ರೀಧರಸೇನಾಚಾರ್ಯಸ್ಯ ಮುಖಕಮಲಾದಿಧೀತ್ಯ ಸಿದ್ಧಾಂತಜ್ಞೌ ಶ್ರೀ ಪುಷ್ಪದಂತ ಭೂತದಲಿ ಆಚಾರ್ಯೋ

ಅವರ ಮುಖಕಮಲದಿಂದ ಸಿದ್ಧಾಂತ ಜ್ಞಾನವನ್ನು ಕಲಿತು ಸಿದ್ಧಾಂತ ಜ್ಞಾನಿಗಳು ಶ್ರೀ ಪುಷ್ಪದಂತ ಮತ್ತು ಶ್ರೀ ಭೂತ ಬಲಿ ಆಚಾರ್ಯರಾಗಿದ್ದಾರೆ. ಅವರು "ಅಗ್ರಾಯಣೀಯ ಪೂರ್ವ"ದ ಎರಡನೆಯ ಪೂರ್ವದ "ಚಯನ ಲಬ್ಧಿ" ಎಂಬ 5ನೆಯ ವಸ್ತುವಿನ "ಕರ್ಮಪ್ರಕೃತಿ ಪ್ರಾಭೃತ" ವೆಂಬ ನಾಲ್ಕನೆಯ ಅಧಿಕಾರದಿಂದ ತೆಗೆದಿರುವ ಜಿನಾಗಮವೆಂಬ ಆರನೆಯ ಖಂಡವನ್ನು ವಿಭಜಿಸಿ ಷಟ್‌ಖಂಡಾಗಮವೆಂದು ಸಾರ್ಥಕವಾದ ಹೆಸರಿನಿಂದ ಸಿದ್ಧಾಂತ ಸೂತ್ರಗಳನ್ನು ಲಿಪಿ ಬದ್ಧಗೊಳಿಸಿದ್ದಾರೆ.

ಆರು ಖಂಡಗಳ ಹೆಸರು

೧. ಜೀವಸ್ಥಾನ	೨. ಕ್ಷುದ್ರಕ ಬಂಧ	೩. ಬಂಧಸ್ವಾಮಿತ್ವವಿಚಯ
೪. ವೇದನಾ ಖಂಡ	೫. ವರ್ಗಣಾ ಖಂಡ	೬. ಮಹಾಬಂಧ.

ಮೊದಲ 5 ಖಂಡಗಳಲ್ಲಿ 6000 ಸೂತ್ರಗಳಿವೆ ಮತ್ತು 6 ನೇಯ ಖಂಡದಲ್ಲಿ 3000 ಸೂತ್ರಗಳಿವೆ. ಹೀಗೆಂದು ಶ್ರುತಾವತಾರದಲ್ಲಿ ಉಲ್ಲೇಖಿಸಿದ್ದಾರೆ.

ವರ್ತಮಾನದಲ್ಲಿ ಮುದ್ರಣ

ಮುದ್ರಣವಾಗಿರುವ 16 ಪುಸ್ತಕಗಳನ್ನು ಐದು ಖಂಡಗಳನ್ನಾಗಿ ಮಾಡಲಾಗಿದೆ. ಅವುಗಳಲ್ಲಿ ಆರು ಸಾವಿರದ ಎಂಟುನೂರ ಮೂವತ್ತು ಸೂತ್ರಗಳಿವೆ.

ಐದು ಖಂಡಗಳಲ್ಲಿ ವಿಭಾಗ ಮಾಡಿರುವ ಸೂತ್ರ ಸಂಖ್ಯೆ

1.	ಮೊದಲನೆಯ ಖಂಡದಲ್ಲಿ	2375	ಸೂತ್ರಗಳಿವೆ.
2.	ಎರಡನೆಯ ಖಂಡದಲ್ಲಿ	1594	ಸೂತ್ರಗಳಿವೆ.
3.	ಮೂರನೆಯ ಖಂಡದಲ್ಲಿ	324	ಸೂತ್ರಗಳಿವೆ.
4.	ನಾಲ್ಕನೆಯ ಖಂಡದಲ್ಲಿ	1514	ಸೂತ್ರಗಳಿವೆ.
5	ಐದನೇಯ ಖಂಡದಲ್ಲಿ	1023	ಸೂತ್ರಗಳಿವೆ.

ಈಗ ಮುದ್ರಿತವಾಗಿರುವ 6 ಪುಸ್ತಕಗಳಲ್ಲಿ ಪ್ರಥಮ ಖಂಡವಿದೆ. 7 ನೇಯ ಪುಸ್ತಕದಲ್ಲಿ ಎರಡು ಖಂಡಗಳಿವೆ. 8 ನೇಯ ಪುಸ್ತಕದಲ್ಲಿ ತೃತೀಯ ಖಂಡವಿದೆ. 9 ರಿಂದ 12 ನೇಯ ಪುಸ್ತಕದವರೆಗೆ 4 ನೇಯ ಖಂಡವಿದೆ. 13 ರಿಂದ 16 ನೆಯ ಪುಸ್ತಕದಲ್ಲಿ 5ನೇಯ ಖಂಡವಿದೆ.

ಮೊದಲ ಖಂಡದ ವಿಷಯ

ಪ್ರಥಮ ಖಂಡದಲ್ಲಿ 8 ಅನುಯೋಗ ದ್ವಾರಗಳಿವೆ ಹಾಗೂ ಕೊನೆಯದರಲ್ಲಿ ಒಂದು ಚೂಲಿಕೆಯ ಅಧಿಕಾರವಿದೆ. ಈ ಚೂಲಿಕೆಯಲ್ಲಿ 9 ಭೇದಗಳಿವೆ.

ಅನುಯೋಗಗಳ ಹೆಸರು

೧. ಸತ್ಪ್ರರೂಪಣೆ ೨. ದ್ರವ್ಯ ಪ್ರಮಾಣಾನುಗಮ ೩. ಕ್ಷೇತ್ರಾನುಗಮ ೪. ಸ್ಪರ್ಶನಾಗಮ ೫. ಕಾಲಾನುಗಮ ೬. ಅಂತರಾನುಗಮ ೭. ಭಾವಾನುಗಮ ೮. ಅಲ್ಪಬಹುತ್ವಾನುಗಮ.

ಚೂಲಿಕೆಯ ಹೆಸರು ಮತ್ತು ಭೇದ

ಪ್ರಕೃತಿ ಸಮುತ್ ಕೀರ್ತನ ಚೂಲಿಕಾ. ೨ ಸ್ಥಾನಸಮುತ್ಂ ಕೀರ್ತನ ಚೂಲಿಕಾ ೩. ಪ್ರಥಮ ಮಹಾದಂಡಕ ೪. ದ್ವಿತೀಯ ಮಹಾದಂಡಕ ೫. ತೃತೀಯ ಮಹಾದಂಡಕ ೬. ಉತ್ಕೃಷ್ಟ ಸ್ಥಿತಿ ಬಂಧ ೭. ಜಘನ್ಯ ಸ್ಥಿತಿ ಬಂಧ ೮. ಸಮ್ಯಕ್ತ್ವೋತ್ಪತ್ತಿ ಚೂಲಿಕೆ ಮತ್ತು ಗತ್ಯಾಗತಿ ಚೂಲಿಕಾ

ಪ್ರಥಮ ಖಂಡದ ಆರು ಪುಸ್ತಕಗಳು

ಮೊದಲನೆಯ ಪುಸ್ತಕದಲ್ಲಿ ಸತ್ಪಪ್ರಿರೂಪಣೆ ಇದೆ. ಎರಡನೆಯದರಲ್ಲಿ ಆಲಾಪ ಅಧಿಕಾರವೆಂಬ ಹೆಸರಿನಲ್ಲಿ ಸತ್ಪ್ರರೂಪಣೆಯು ವಿಸ್ತಾರವಾಗಿದೆ. 3ನೇಯದರಲ್ಲಿ ದ್ರವ್ಯ ಪ್ರಮಾಣಾನುಗಮವಿದೆ. 4 ನೇಯ ಪುಸ್ತಕದಲ್ಲಿ ಕ್ಷೇತ್ರಾನುಗಮ, ಸ್ಪರ್ಶಾನುಗಮ ಮತ್ತು ಕಾಲಾನುಗಮದ ವರ್ಣನೆ ಇದೆ. 5 ನೇಯ ಪುಸ್ತಕದಲ್ಲಿ ಅಂತರಾನುಗಮ, ಭಾವಾನುಗಮ ಮತ್ತು ಅಲ್ಪಬಹುತ್ವಾನುಗಮವಿದೆ 6 ನೇಯ ಪುಸ್ತಕದಲ್ಲಿ 9 ಚೂಲಿಕೆಗಳಿವೆ.

ಸಿದ್ಧಾಂತ ಚಿಂತಾಮಣಿ ಟೀಕಾ ಗ್ರಂಥ

1995ರ ಅಕ್ಟೋಬರ 8 ರಲ್ಲಿ ಮಂಗಳಾಚರಣೆಯನ್ನು ಬರೆದು ಗ್ರಂಥದ ಮೊದಲನೆಯ ಖಂಡದ ಪ್ರಥಮ ಅವಯವ ಭೂತ ಸತ್ಪ್ರರೂಪಣೆಯ ಟೀಕೆಯನ್ನು ಬರೆಯುವ ಸಂಕಲ್ಪ ಮಾಡಿದೆ. ಈ ಟೀಕೆಯಲ್ಲಿ ನಾಲ್ಕು ಪುಟಗಳವರೆಗೆ ಭೂಮಿಕೆಯಲ್ಲಿ ಗ್ರಂಥದಲ್ಲಿ ಪ್ರತಿಪಾದಿತವಾದ ವಿಷಯ ಮತ್ತು ಸಂಖ್ಯೆ ಇದೆ. ಅದಾದ ಮೇಲೆ ಮಹಾಮಂತ್ರವಾದ ಅಪಾರಾಜಿತ ಣಮೋಕಾರ ಮಂತ್ರವಿದೆ. ಮಂಗಳಾಚರಣ ಮುಗಿಸಿ ವ್ಯಾಖ್ಯಾನ ಬರೆಯಲು ಪ್ರಾರಂಭಿಸಿದೆ.

ವೀರಸೇನಾಚಾರ್ಯರ ಧವಲ ಟೀಕೆಯ ಆಧಾರದಿಂದ ಸರಳವಾದ ಅಂಶಗಳನ್ನು ನನ್ನ ಭಾಷೆಯಲ್ಲಿ ಇನ್ನು ಸರಳಗೊಳಿಸುವ ಪ್ರಯತ್ನ ಮಾಡಿದ್ದೇನೆ. ಬೇರೆ ಗ್ರಂಥಗಳ ಉದಾಹರಣೆಯನ್ನು ಕೊಡಲಾಗಿದೆ. ಇದರಲ್ಲಿ ಣಮೋಕಾರ ಮಂತ್ರದ ಅಕ್ಷರಪದ, ಮಾತ್ರದ ವರ್ಣನೆ ಮಾಡಿದೆ. ಇದು ದ್ವಾದಶಾಂಗದ ಸಾರಭೂತವಾಗಿದೆ. ಇದನ್ನು ಬೇರೆ ಗ್ರಂಥಗಳ ಮೂಲಕವು ಸಿದ್ಧಗೊಳಿಸಿದ್ದೇನೆ. ಈ ಮಂಗಳಾಚರಣೆಯಲ್ಲಿ ನಾಮ ಸ್ಥಾಪನೆ ಮುಂತಾದ ನಿಕ್ಷೇಪಗಳು ಒಳಗೊಂಡಿವೆ. ಈ ಮಂತ್ರ ಅನಾದಿನಿಧನವಾದುದು ಎಂಬುದನ್ನು ನಿರೂಪಿಸಿದ್ದೇನೆ.

ಗ್ರಂಥದ ನಿಮಿತ್ತ, ಹೇತು, ಕರ್ತ ಮುಂತಾದ ಸುಂದರ ವಿವೇಚನೆ ಇದೆ. ಭಗವಾನ ಮಹಾವೀರರನ್ನು ಅರ್ಥಕರ್ತರೆಂದು ಸಿದ್ಧಗೊಳಿಸಿ ಅವರ ದಿವ್ಯಧ್ವನಿಯಿಂದಲೇ 11 ಅಂಗಗಳು 14 ಪೂರ್ವಗಳು ಆಗಿವೆ ಎಂಬ ಸಂಕ್ಷಿಪ್ತ ಲಕ್ಷಣಗಳನ್ನು ಕೊಡಲಾಗಿದೆ. ಗ್ರಂಥಕರ್ತ ಪ್ರಥಮ ಗಣಧರ ಇಂದ್ರಭೂತಿ ಗೌತಮ ಗಣಧರರ ವರ್ಣನೆ ಇದೆ.

ಪ್ರತಿಷ್ಠಾ ಗ್ರಂಥದ ಆಧಾರದಿಂದ ಶ್ರುತದೇವಿಯ ವರ್ಣನೆ, ನಂತರ ಶ್ರುತಾವತಾರದ ಕಥೆಯನ್ನು ಸಂಕ್ಷೇಪವಾಗಿ ಕೊಡಲಾಗಿದೆ. ಸೌರಾಷ್ಟ್ರ ದೇಶದ ಉಜ್ಜಂತಗಿರಿಯಲ್ಲಿ ಚಂದ್ರಗಿರಿಯಲ್ಲಿ ಧ್ಯಾನಮಗ್ನರಾಗಿದ್ದ ಅಷ್ಟಾಂಗ

ಮಹಾನಿಮಿತ್ತ ಪಾರಂಗತರಾದ ಶ್ರೀ ಧರಸೇನರಿಗೆ ಒಮ್ಮೆ ಮನಸ್ಸಿಗೆ ಅಂಗಶ್ರುತಜ್ಞಾನವು ವಿಚ್ಛೇದವಾಗಬಾರದು ಇದನ್ನು ರಕ್ಷಣೆ ಮಾಡುವ ಪ್ರಯತ್ನ ಮಾಡಬೇಕೆಂದು ಅನ್ನಿಸತೊಡಗಿತು. ಅದೇ ಸಮಯದಲ್ಲಿ ಪಂಚವರ್ಷೀಯ ಸಾಧು ಸಮ್ಮೇಳನದಲ್ಲಿದ್ದ ಆಚಾರ್ಯರುಗಳಿಗೆ ಒಂದು ಪತ್ರವನ್ನು ಕಳುಹಿಸಲಾಯಿತು. ಆ ಪತ್ರವನ್ನು ಓದಿದ ಆಚಾರ್ಯರು ಇಬ್ಬರು ಅತ್ಯಂತ ಪಟುಮತಿಗಳಾಗಿದ್ದ ಮುನಿಗಳನ್ನು ಸೌರಾಷ್ಟ್ರಕ್ಕೆ ಕಳುಹಿಸಿದರು. ಧರಸೇನಾಚಾರ್ಯರಿಗೆ ಆಗ್ರಾಯಿಣಿ ಪೂರ್ವದ 5ನೇ ವಸ್ತುವಿನ ನಾಲ್ಕನೇಯ ಮಹಾಕರ್ಮ ಪ್ರಕೃತಿ ಪ್ರಾಭೃತದ ಜ್ಞಾನವಿತ್ತು. ಧರಸೇನರಿಗೆ ತಮ್ಮ ಅಲ್ಪ ಆಯಸ್ಸನ್ನು ತಿಳಿದರು.

ಇಲ್ಲಿಂದ ಇಬ್ಬರು ಮುನಿಗಳು ಹೊರಟರು. ಅವರು ತಲುಪುವ ಹಿಂದಿನ ರಾತ್ರಿಯೇ ಆಚಾರ್ಯರಿಗೆ ಎರಡು ಬಿಳಿ ಎತ್ತುಗಳು ತಮಗೆ ಪ್ರದಕ್ಷಿಣೆ ಬಂದು ಕಾಲುಗಳಿಗೆ ನಮಸ್ಕರಿಸಿದಂತೆ ಕನಸನ್ನು ಕಂಡಿದ್ದರು. ಅವರು ಬೆಳಗ್ಗೆ ಮುನಿಗಳನ್ನು ನೋಡುತ್ತಿದ್ದಂತೆ ಹರ್ಷಚಿತ್ತರಾದರು. ಆದರೂ ಅವರನ್ನು ಪರೀಕ್ಷಿಸಲು ಎರಡು ಮಂತ್ರಗಳನ್ನು ಉಪದೇಶಿಸಿ ಸಿದ್ಧಿಸಿಕೊಂಡು ಬರಲು ಆದೇಶಿಸಿದರು. ಉಪವಾಸವಿದ್ದು ಮಂತ್ರದ ಸಿದ್ಧಿಯನ್ನು ಪಡೆದಾಗ ಇಬ್ಬರು ದೇವತೆಗಳಲ್ಲಿ ಒಬ್ಬಳಿಗೆ ಒಕ್ಕಣ್ಣು, ಇನ್ನೊಂದು ದೇವತೆಗೆ ಉಬ್ಬುಹಲ್ಲು ಇದ್ದುದ್ದು ಕಂಡು ಇದು ವ್ಯಾಕರಣ ದೋಷವಿರಬೇಕೆಂದು ಮತ್ತೆ ಮಂತ್ರವನ್ನು ಸರಿಪಡಿಸಿಕೊಂಡು ಸಿದ್ಧ ಮಾಡಿದಾಗ, ಸುಂದರವಾದ ದೇವತೆಗಳು ಪ್ರತ್ಯಕ್ಷರಾದರು. ಈ ವಿಷಯವನ್ನು ಗುರುಗಳಲ್ಲಿ ಅರುಹಿದಾಗ ಅವರು ಸಂತುಷ್ಟರಾಗಿ ಬೋಧಿಸಲು ಸಮ್ಮತಿಸಿದರು.

ಶುಭ ಮೂಹೂರ್ತದಲ್ಲಿ ಶ್ರುತಜ್ಞಾನದ ಅಧ್ಯಯನ ಪ್ರಾರಂಭವಾಯಿತು. ಪಟುಮತಿಗಳಾದ ಅವರು ವಿನಯ ಪೂರ್ವಕವಾಗಿ ಗುರುಗಳಿಂದ ಶ್ರುತಜ್ಞಾನವನ್ನು ಪಡೆದುಕೊಂಡರು. ತಮ್ಮ ಆಯಸ್ಸು ಅಲ್ಪವೆಂದು ತಿಳಿದಿದ್ದರಿಂದ ಶಿಷ್ಯರನ್ನು ವಿಹಾರಕ್ಕಾಗಿ ಅಲ್ಲಿಂದ ಕಳುಹಿಸಿದರು. ಶ್ರುತಜ್ಞಾನವು ಪೂರ್ಣಗೊಂಡ ದಿನ ಭೂತಗಳಿಂದ ಪೂಜಿಸಲ್ಪಟ್ಟ ಅವರಲ್ಲಿ ಒಬ್ಬರನ್ನು ಭೂತಬಲಿ ಎಂದು. ಇನ್ನೊಬ್ಬರ ದಂತ ಪಂಕ್ತಿಗಳು ವಕ್ರವಾಗಿದ್ದವು. ಅದನ್ನು ಭೂತಗಳೇ ಸರಿಪಡಿಸಿದ್ದರಿಂದ ಇವರನ್ನು ಪುಷ್ಪದಂತರೆಂದು ಕರೆದರು. ಅಲ್ಲಿಂದ ಹೊರಟ ಇಬ್ಬರು "ಅಂಕುಲೇಶ್ವರ" ಗ್ರಾಮದಲ್ಲಿ ಚಾತುರ್ಮಾಸ ಕೈಕೊಂಡರು.

ಪುಷ್ಪದಂತಾಚಾರ್ಯರು ತನ್ನ ಸೋದರಳಿಯ ಜಿನಪಾಲಿತರಿಗೆ ದೀಕ್ಷೆಯನ್ನು ಕೊಟ್ಟು ಬನವಾಸಿ ದೇಶಕ್ಕೆ ಹೊರಟರು. ಭೂತಬಲಿಗಳು ತಮಿಳು ದೇಶಕ್ಕೆ ಹೋದರು. ಪುಷ್ಪದಂತರು ಸತ್ಪ್ರರೂಪಣೆಯ 177 ಸೂತ್ರಗಳನ್ನು ಬರೆದು ಜಿನಪಾಲಿತನ ಕೈಯಲ್ಲಿ ಭೂತಬಲಿಗಳ ಬಳಿಗೆ ಅಭಿಪ್ರಾಯಕ್ಕಾಗಿ ಕಳುಹಿಸಿದರು. ಆಗ ಅವರು ಪುಷ್ಪದಂತರ ಅಲ್ಪಆಯಸ್ಸನ್ನು ತಿಳಿದು ಮಹಾಕರ್ಮ ಪ್ರಕೃತಿ ಪ್ರಾಭೃತ ಶ್ರುತದ ಪರಂಪರೆಯು ಕೊನೆಯಾಗಬಾರದೆಂದು ದ್ರವ್ಯ ಪ್ರಮಾಣಾನುಗಮವನ್ನು ತೆಗೆದುಕೊಂಡು ಉಳಿದ 5 ಭಾಗಗಳನ್ನು ಬರೆಸಿದರು. ಅಂದು ಜೇಷ್ಠ ಶುಕ್ಲ ಪಂಚಮಿ. ಆ ದಿನ ಈ ಗ್ರಂಥವನ್ನು ಚತುರ್ವಿಧ ಸಂಘದ ಸಮ್ಮುಖದಲ್ಲಿ ಪೂಜಿಸಲಾಯಿತು. ಅಂದಿನಿಂದ ಪ್ರತಿವರ್ಷ ಶ್ರುತಪಂಚಮಿಯ ಆಚರಣೆ ನಡೆದು ಬರುತ್ತಿದೆ. ಹೀಗಾಗಿ ಇದರ ಗ್ರಂಥ ಕರ್ತರು ಭೂತಬಲಿ ಮತ್ತು ಪುಷ್ಪದಂತಾಚಾರ್ಯರು.

ಪುಷ್ಪದಂತರ ಸತ್ಪ್ರರೂಪಣೆಯ 171 ಸೂತ್ರಗಳು ಮೊದಲನೆಯ ಗ್ರಂಥದಲ್ಲಿದೆ. ಮೂರನೆಯ ಪುಸ್ತಕವು ಭೂತಬಲಿಗಳಿಂದ ವಿರಚಿತವಾಗಿದೆ. ಪುಸ್ತಕಗಳಲ್ಲಿ ಸೂತ್ರಗಳಿಲ್ಲ. ಕೇವಲ ಸಂದರ್ಭಿತ ಆಲಾಪದ ಅಧಿಕಾರವಿದೆ. ಇದರ ಟೀಕಾಗ್ರಂಥ ಶ್ರೀ ವೀರಸೇನಾಚಾರ್ಯರಿಂದ ರಚಿತವಾಗಿದೆ.

ಷಟ್ ಖಂಡಾಗಮನದ ಟೀಕೆಗಳು

ಈ ಗ್ರಂಥದ ಮೇಲೆ 6 ಟೀಕೆಗಳು ರಚಿತವಾಗಿದೆ. ಶ್ರೀ ಕುಂದಕುಂದ ದೇವರು ಮೂರು ಖಂಡಗಳ ಮೇಲೆ "ಪರಿಕರ್ಮ" ವೆಂಬ 12000 ಶ್ಲೋಕ ಪ್ರಮಾಣದ ಟೀಕೆ ರಚಿಸಿದ್ದಾರೆ. ಶ್ರೀ ಶ್ಯಾಮಕುಂದಾಚಾರ್ಯರು "ಪದ್ಧತಿ" ಎಂಬ ಹೆಸರಿನಲ್ಲಿ ಸಂಸ್ಕೃತ, ಪ್ರಾಕೃತ, ಕನ್ನಡ ಮಿಶ್ರಿತವಾಗಿದೆ. 5 ಖಂಡಗಳಿಗೆ 12000 ಶ್ಲೋಕ ಪ್ರಮಾಣದ ಟೀಕೆ ರಚಿಸಿದ್ದಾರೆ. ಶ್ರೀ ತುಂಬೂಲೂರ ಆಚಾರ್ಯರು ಚೂಡಾಮಣಿ ಎಂಬ ಹೆಸರಿನಲ್ಲಿ ಟೀಕೆ ಬರೆದಿದ್ದಾರೆ. 6 ನೇ ಖಂಡವನ್ನು ಬಿಟ್ಟು, ಷಟ್‌ಖಂಡಾಗಮ ಮತ್ತು ಕಷಾಯ ಪ್ರಾಭೃತ ಎರಡು ಸಿದ್ಧಾಂತ ಗ್ರಂಥಗಳ ಮೇಲೆ 84000 ಸಾವಿರ ಶ್ಲೋಕ ಪ್ರಮಾಣದ ಟೀಕೆ ಇದೆ. ಶ್ರೀ ಸಮಂತ ಭದ್ರರು ಸಂಸ್ಕೃತದಲ್ಲಿ 5 ಖಂಡಗಳ ಮೇಲೆ 48,000 ಶ್ಲೋಕ ಪ್ರಮಾಣದ ಟೀಕೆ ಬರೆದಿದ್ದಾರೆ. ಶ್ರೀ ಬಪ್ಪದೇವ ಸೂರಿಗಳು "ವ್ಯಾಖ್ಯಾ ಪ್ರಜ್ಞಪ್ತಿ" ಎಂಬ ಹೆಸರಿನಿಂದ 5 ಖಂಡಗಳ ಮತ್ತು ಕಷಾಯ ಪ್ರಾಭೃತದ ಮೇಲೆ 84,000 ಶ್ಲೋಕ ಪ್ರಮಾಣದ ಟೀಕೆ ಬರೆದಿದ್ದಾರೆ. ಅದು ಪ್ರಾಕೃತದಲ್ಲಿದೆ. ಪುನಃ ಶ್ರೀ ವೀರಸೇನ ಆಚಾರ್ಯರು 6 ಖಂಡಗಳ ಮೇಲೆ ಪ್ರಾಕೃತ - ಸಂಸ್ಕೃತ ಮಿಶ್ರಿತವಾದ "ಧವಲಾ" ಎಂಬ ಹೆಸರಿನಲ್ಲಿ ಟೀಕೆಯನ್ನು ಬರೆದಿದ್ದಾರೆ. ಇದು 72,000 ಶ್ಲೋಕ ಪ್ರಮಾಣವನ್ನು ಹೊಂದಿದೆ.

ಈಗ ಮೇಲೆ ಹೇಳಿರುವ 5 ಟೀಕೆಗಳು ಉಪಲಬ್ಧವಿಲ್ಲ. ಈಗ ವೀರಸೇನ ಕೃತ "ಧವಲಾ" ಟೀಕೆ ಮಾಂತ್ರ ಉಪಲಬ್ಧವಿದೆ. ಇದರ ಹಿಂದಿ ಅನುವಾದವಾಗಿದೆ. ಈ ಗ್ರಂಥವನ್ನು ತಾಡಪತ್ರಗಳಿಂದ ಪ್ರತಿ ಮಾಡಿಸಿ ಹಿಂದಿ ಅನುವಾದವನ್ನು ಮಾಡಿ ಮುದ್ರಣ ಮಾಡಿಸಿದ ಶ್ರೇಯಸ್ಸು ಆಚಾರ್ಯ ಶಾಂತಿ ಸಾಗರರಿಗೆ ಸಲ್ಲಬೇಕು. ಇವರ ಅನುಗ್ರಹದಿಂದಲೇ ಇಂದು ನಾವೆಲ್ಲರು ಈ ಗ್ರಂಥವನ್ನು ತಿಳಿಯಬಹುದಾಗಿದೆ. ಜೀವಸ್ಥಾನವೆಂಬ ಪ್ರಥಮ ಖಂಡದಲ್ಲಿ 8 ಅನುಯೋಗದ್ವಾರ ಮತ್ತು ಒಂಬತ್ತು ಚೂಲಿಕೆಗಳಿವೆ.

ಜೀವಸ್ಥಾನದ ವಿಷಯದ ಉಪಸಂಹಾರ

ದ್ವಾದಶಾಂಗದಲ್ಲಿ ಹನ್ನೆರಡೆನೆಯ ಅಂಗದ ಹೆಸರು "ದೃಷ್ಟಿವಾದಾಂಗ" ಇದರಲ್ಲಿ 5ಭೇದಗಳಿವೆ. ಅದರ ಎರಡನೆಯ ಪೂರ್ವವೇ ಅಗ್ರಾಯಣೀಯವೆಂಬ ಪೂರ್ವ ಇದರಲ್ಲಿ 14 ಅರ್ಥಾಧಿಕಾರವಿದೆ. ಅದರಿಂದ 5ನೇಯ ವಸ್ತುವೇ ಚಯನಲಬ್ಧಿ, ಈ ಚಯನಲಬ್ಧೀಯಲ್ಲಿ 20 ಅಧಿಕಾರವಿದೆ. ಇವುಗಳನ್ನು "ಪ್ರಾಭೃತ" ವೆಂದು ಕರೆಯಲಾಗುತ್ತದೆ. ಇದರ 4 ನೆಯ ಬೇಧವೇ "ಕರ್ಮ ಪ್ರಕೃತಿ ಪ್ರಾಭೃತ" ಈ ಪ್ರಾಭೃತದ 24 ಅರ್ಥಾಧಿಕಾರಗಳಲ್ಲಿ 'ಬಂಧನ' ಎಂಬುದು 6 ನೇಯ ಅಧಿಕಾರ. ಈ 'ಬಂಧನ' ಅಧಿಕಾರದ ನಾಲ್ಕು ಭೇದಗಳಲ್ಲಿ ಇಲ್ಲಿ ಬಂಧಕ, ಮತ್ತು ಬಂಧವಿಧಾನವೆಂಬ ಅಧಿಕಾರಗಳನ್ನು ಗ್ರಹಣೆ ಮಾಡಲಾಗಿದೆ. ಈ ಬಂಧದ 11ನೇಯ ಅನಿಯೋಗದ್ವಾರಗಳಿಂದ "ದ್ರವ್ಯಪ್ರಮಾಣಾನುಗಮ" ಎಂಬ ಹೆಸರಿನ 5ನೇಯ ಅನಿಯೋಗದ್ವಾರವನ್ನು ಇಲ್ಲಿ ತೆಗೆದುಕೊಳ್ಳಲಾಗಿದೆ. ಮುಂದೆ ಬಂಧ ವಿಧಾನಗಳ ಭೇದ ಪ್ರಭೇದಗಳಿಂದ ಭಾವಾನುಗಮ ಮುಂತಾದ ಅನುಯೋಗದ್ವಾರವನ್ನು ತೆಗೆದುಕೊಳ್ಳಲಾಗಿದೆ.

ಹೀಗೆ 'ಜೀವಸ್ಥಾನ"ವೆಂಬ ಪ್ರಥಮಖಂಡದಲ್ಲಿ ಸತ್ಪರೂಪಣಾ ದ್ರವ್ಯಪ್ರಮಾಣಾನುಗಮ, ಕ್ಷೇತ್ರಾನುಗಮ ಸ್ಪರ್ಶನಾನುಗಮ, ಕಾಲಾನುಗಮ, ಅಂತರಾನುಗಮ, ಭಾವಾನುಗಮ ಮತ್ತು ಅಲ್ಪ ಬಹುತ್ವಾನುಗಮ. ಇವು ಎಂಟು ಅನುಯೋಗದ್ವಾರವಾಗಿದೆ ಮತ್ತು ಒಂಬತ್ತು ಚೊಲಿಕೆಗಳು ಇವೆ.

ಪ್ರಥಮ ಖಂಡದ ಗ್ರಂಥದ ಪ್ರಾರಂಭ ಮತ್ತು ಮುಕ್ತಾಯದ ದಿನಾಂಕಗಳು

ಪ್ರಥಮ ಖಂಡದಲ್ಲಿರುವ ವಿಷಯಗಳು		ಪ್ರಾರಂಭಿಸಿದ ದಿನ	ಸೂತ್ರಗಳ ಸಂಖ್ಯೆ	ಸ್ಥಳ
1	ಸತ್ಪ್ರರೂಪಣೆ	8-10-19945	177	ಹಸ್ತಿನಪುರ
	ಪೂರ್ಣಗೊಂಡಿದ್ದು	25-2-1996		ಪಿಡಾವಾ (ರಾಜಸ್ಥಾನ)
	ಅಲಾಪನಾಧಿಕಾ ಪ್ರಾರಂಭ	6-3-1996		ಉಜ್ಜೈನಿ (ಮ.ಪ)
	ಪೂರ್ಣಗೊಂಡಿದ್ದು	19-4-1996		ಮಾಂಗೀತುಂಗಿ (ಮಹಾರಾಷ್ಟ್ರ)
2	ದ್ರವ್ಯ ಪ್ರಮಾಣಾನುಗಮದ ಪ್ರಾರಂಭ	30-4-1996	192	ಮಾಂಗಿತುಂಗಿ
	ಪೂರ್ಣಗೊಂಡಿದ್ದು	18-7-1996		ಚಾಂದವಡ
3	ಕ್ಷೇತ್ರಾಗಮದ ಪ್ರಾರಂಭ	8-8-1996	92	
	ಪೂರ್ಣಗೊಂಡಿದ್ದು	8-8-1996		ಚಾಂದವಡ, ಮಾಂಗಿತುಂಗಿತೀರ್ಥ
4	ಸ್ಪರ್ಶಾನಾನುಗಮದ ಪ್ರಾರಂಭ	8-8-1996	185	ಮಾಂಗಿತುಂಗಿ
	ಪೂರ್ಣಗೊಂಡಿದ್ದು	25-81996	195	ಮಾಂಗಿತುಂಗಿ
5	ಕಾಲಾನುಗಮ ಪ್ರಾರಂಭ	29-8-1996	342	ಮಾಂಗಿತುಂಗಿ
	ಪೂರ್ಣಗೊಂಡಿದ್ದು	15-9-1996	342	ಮಾಂಗಿತುಂಗಿ
6	ಅಂತರಾನುಗಮ ಪ್ರಾರಂಭ	15-9-1996	397	ಮಾಂಗಿತುಂಗಿ
	ಪೂರ್ಣಗೊಂಡಿದ್ದು	18-10-1996	397	ಮಾಂಗಿತುಂಗಿ
7	ಬಾವಾನುಗಮದ ಪ್ರಾರಂಭ	18-9-96	93	ಮಾಂಗಿತುಂಗಿ
	ಪೂರ್ಣಗೊಂಡಿದ್ದು	2-12-96	93	ಮಾಂಗಿತುಂಗಿ
8	ಅಲ್ಪಬಹ್ವತ್ವಾನುಗಮ	6-11-1996	382	ಮಾಂಗಿತುಂಗಿ
	ಪೂರ್ಣಗೊಂಡಿದ್ದು	2-12-96	382	ಅಂಕಲೇಶ್ವರ
9	ನವಚೂಲಿಕಾಧಿಕಾರದ ಪ್ರಾರಂಭ	2-12-96	512	ಅಂಕಲೇಶ್ವರ
	ಪೂರ್ಣಗೊಂಡಿದ್ದು	7-3-97	512	ಮಾಧೋರಾಜಪುರ (ರಾಜಸ್ಥಾನ)

ನಾನು ಸರಳವಾದ ಭಾಷೆಯಲ್ಲಿ ಈ "ಸಿದ್ಧಾಂತ ಚಿಂತಾಮಣಿ" ಎಂಬ ಟೀಕೆಯನ್ನು ಬರೆದಿದ್ದೇನೆ. ಬರೇ 48 ಪೇಜಿನವರೆಗೆ ಮಾತ್ರ ಹಸ್ತಿನಾಪುರದಲ್ಲಿ ಬರೆಯಲಾಯಿತು. ಆಕಸ್ಮಾತ್ತಾಗಿ ಮಾಂಗೀತುಂಗಿಗೆ ವಿಹಾರ ಹೊರಡುವ ನಿರ್ಣಯ ಕೈಕೊಂಡು ಮನಸ್ಸಿಗೆ ಜ್ಞಾನವರ್ಧನೆಯ ಕೆಲಸದಲ್ಲಿ ತಡವಾಗುತ್ತಿರುವ ನೋವು ಇದ್ದೇ ಇತ್ತು.

ಇಂದು ನನಗೆ ಆಶ್ಚರ್ಯವಾಗುತ್ತಿದೆ. 27-11-1995 ರಂದು ಹಸ್ತಿನಾಪುರಕ್ಕೆ ಬಂದು ಮಾರನೇಯ ದಿನದಿಂದಲೇ ಟೀಕೆಯ ಕೆಲಸವನ್ನು ಪ್ರಾರಂಭಿಸಿದೆ. ಮೊದಲನೆಯ ಸತ್ಪ್ರರೂಪಣೆ ಅಧಿಕಾರವನ್ನು ರಾಜಸ್ಥಾನದ ವಿಢಾವಾನಲ್ಲಿಯೇ ಮುಗಿಸಿದ್ದೆ.

ನಾನು ಟೀಕೆಯ ಪ್ರಾರಂಭವನ್ನು ನನ್ನ ಕರ್ಮಭೂಮಿ ಹಸ್ತಿನಾಪುರದಲ್ಲಿ ಪ್ರಾರಂಭಿಸಿ ಯಾತ್ರೆ ಮಾಡುತ್ತಲೇ ಸುಮಾರು 16 ತಿಂಗಳಲ್ಲಿ ನನ್ನ ದೀಕ್ಷಾ ಭೂಮಿಯಾದ ಮಾಧೋರಾಜಪುರದಲ್ಲಿ ಪೂರ್ಣಗೊಳಿಸಿದೆ. ಸುಮಾರು 900 ಪುಟದ ಟೀಕೆಯು ಹೇಗೆ ನನ್ನಿಂದ ರಚಿತವಾಯಿತೋ ಅದೇ ನನಗೆ ಆಶ್ಚರ್ಯವನ್ನು ಉಂಟು ಮಾಡುತ್ತದೆ. ಇದೆಲ್ಲವು ನನ್ನ ಮೇಲಿರುವ ಸರಸ್ವತಿಯ ಅನುಗ್ರಹವೇ ಸರಿ.

ದ್ವಿತೀಯ ಖಂಡ ಟೀಕೆಯ ಪ್ರಾರಂಭ

10-3-1997 ರಂದು ಪದ್ಮಪುರಿ ಅತಿಶಯ ಕ್ಷೇತ್ರದಲ್ಲಿ ಭಗವಂತನ ಮುಂದೆ ಕುಳಿತು ಅತ್ಯಂತ ಶ್ರದ್ಧೆಯಿಂದ ಭ. ಶ್ರೀ ಪದ್ಮಪ್ರಭ ತೀರ್ಥಂಕರರಿಗೆ ನಮಸ್ಕರಿಸಿ ಒಂದು ಶ್ಲೋಕ ಬರೆದು 7 ನೇ ಪುಸ್ತಕ ಅಂದರೆ ದ್ವಿತೀಯ ಖಂಡವಾದ "ಕ್ಷುದ್ರಕ ಬಂಧ" ಎಂಬ ಹೆಸರಿನ "ಸಿದ್ಧಾಂತ ಚಿಂತಾಮಣಿ" ಯ ಟೀಕೆಯನ್ನು ಪ್ರಾರಂಭಿಸಿದೆ.

ವಿಹಾರ ಮಾಡುವಾಗಲು ನನ್ನ ಲೇಖನ ಕಾರ್ಯವು ನಿರಂತರವಾಗಿ ನಡೆದೇ ಇತ್ತು. ಯಾವುದೇ ಊರನ್ನು ಪ್ರವೇಶಿಸುತ್ತಲೇ ಸಭಾಕಾರ್ಯಕ್ರಮ ಸಿದ್ಧವಾಗಿರುತ್ತಿತ್ತು. ಸಭೆಯು ಮಂಗಳಾ ಚರಣದೊಂದಿಗೆ ಪ್ರಾರಂಭವಾಗುತ್ತಲೇ ನಾನು ಆ ಊರಿಗಾಗಿ ಏನಾದರು ಹೊಸ ಯೋಜನೆಗಳನ್ನು ಹೇಳಿರುತ್ತಿದ್ದೆ. ಆರ್ಯಿಕೆ ಚಂದನಮತಿ ಅದನ್ನು ಮನದಟ್ಟಾಗುವಂತೆ ತಿಳಿಸುತ್ತಿದ್ದರು. ಮೋತಿಸಾಗರರು ಅದರ ರೂಪರೇಖೆ ಖರ್ಚಿನ ಅಂದಾಜನ್ನು ಪ್ರಕಟಗೊಳಿಸುತ್ತಲೇ ತಕ್ಷಣವೇ ಮಹನೀಯರು ತಮ್ಮಲ್ಲೇ ಪರಾಮರ್ಶೆ ಮಾಡಿ ಕೊಡುಗೆಯ ದ್ರವ್ಯವನ್ನು ಅಲ್ಲೇ ಘೋಷಿಸುತ್ತಿದ್ದರು. ಇನ್ನೇಕೆ ತಡ ಮಾರನೆಯ ದಿನವೇ ಶಿಲಾನ್ಯಾಸ ಮಾಡಿಸಿ ನಮ್ಮ ಯಾತ್ರೆ ಮುಂದುವರೆಯುತ್ತಿತ್ತು. ಇದರ ಮಧ್ಯೆ ನನ್ನ ಲೇಖನ ಕಾರ್ಯವು ಸಾಂಗವಾಗಿ ನೇರವೇರುತ್ತಿತ್ತು.

ಸಂಘದ ಬ್ರಹ್ಮಚಾರಿಣಿಯವರು ನನ್ನ ಮನಸ್ಸನ್ನು ಚೆನ್ನಾಗಿ ಅರಿತಿದ್ದರು. ನಾನು ಹೋಗಿ ಸುಧಾರಿಸಿಕೊಳ್ಳುತ್ತಲೇ ನನಗೆ ಬರವಣಿಗೆಗೆ ಅಣಿಮಾಡಿ ನನ್ನ ಬ್ಯಾಗನ್ನು ನನ್ನ ಮುಂದೆ ಭಕ್ತಿಯಿಂದ ತಂದಿಡುತ್ತಿದ್ದರು. ಸಮಯ ವ್ಯರ್ಥವಾಗದಂತೆ ಅವರು ಎಚ್ಚರ ವಹಿಸುತ್ತಿದ್ದರು. ಅದಕ್ಕಾಗಿ ನನ್ನ ಸಂಘದ ಬ್ರಹ್ಮಚಾರಿ ಶ್ರೀ ಚಂದನಿಗೂ ಕು. ಬೀನಾಳಿಗೂ ನಾನು ಮನ ತುಂಬ ಆಶೀರ್ವದಿಸುತ್ತೇನೆ.

ದ್ವಿತೀಯ ಖಂಡವು 12-12-1997 ರಂದು ಹಸ್ತಿನಾಪುರದಲ್ಲಿ ಪೂರ್ಣಗೊಂಡಿತು. ಅದೇ ದಿನ ತೃತೀಯ ಖಂಡವನ್ನು ಬರೆಯಲು ಪ್ರಾರಂಭಿಸಿದೆ.

1.	8ನೇಯ ಪುಸ್ತಕದ ಪ್ರಾರಂಭ	ಹಸ್ತಿನಾಪುರ	12-12-1997
	ಸಮಾಪನ	ಕಮಲ ಮಂದಿರ ಪ್ರೀತಿ ವಿಹಾರ ದೆಹಲಿ	18-6-1999
2.	9ನೇ ಪುಸ್ತಕದ ಪ್ರಾರಂಭ	ಜೈಸಿಂಹಪುರ, ನವದೆಹಲಿ	14-10-1999
	ಸಮಾಪನ	ಕಮಲ ಮಂದಿರ ಪ್ರೀತಿ ವಿಹಾರ ದೆಹಲಿ	13-10-2000
3.	10ನೇ ಪುಸ್ತಕದ ಪ್ರಾರಂಭ	ಕಮಲ ಮಂದಿರ ಪ್ರೀತಿ ವಿಹಾರ ದೆಹಲಿ	13-10-2000
	ಸಮಾಪನ	ರಾಜಾಜಿ ಬಾಜಾರ, ಕನಾಟ ಪ್ಲೇಸ್ ದೆಹಲಿ	17-2-2002
4.	11ನೇಯ ಪುಸ್ತಕದ ಪ್ರಾರಂಭ	ಬೇಲನಗಂಜಿ, ಆಗ್ರಾ	19-3-2009
	ಸಮಾಪನ	ಪ್ರಯಾಗ ಇಲಾಹಬಾದ್	21-10-2009
5.	12ನೇಯ ಪುಸ್ತಕದ ಪ್ರಾರಂಭ	ಪ್ರಯಾಗ ಇಲಾಹಬಾದ್	21-10-2002
	ಸಮಾಪನ	ಮಹಾವೀರರ ಜನ್ಮಭೂಮಿ ಕುಂಡಲಪುರ	19-12-2003

ಈಗ ನಾನು 13 ನೇಯ ಪುಸ್ತಕದ ಟೀಕೆಯನ್ನು ಬರೆಯುತ್ತಿದ್ದೇನೆ. ನನಗೆ ಸರಸ್ವತಿಯ ದಯೆಯಿಂದ 16 ಪುಸ್ತಕಗಳನ್ನು ಬರೆಯುವ ಶಕ್ತಿ ಬರಲಿ. ನನ್ನ ಪ್ರೇರಣೆಯಿಂದ ಆರ್ಯಿಕೆ ಚಂದನಮತಿಯು ಈ ಸಂಸ್ಕೃತ ಟೀಕೆಯ ಹಿಂದಿ ಅನುವಾದವನ್ನು ಮಾಡಿ 1997 ರಲ್ಲಿ ನನ್ನನ್ನು ಕೈಯಲ್ಲಿತ್ತರು. ಆ ಗ್ರಂಥ ಪ್ರಕಾಶನಗೊಂಡ ದಿನ ಅಕ್ಟೋಬರನಲ್ಲಿ ಬಿಡುಗಡೆಯಾದ ದಿನ ನನ್ನ ಮನಸ್ಸಿಗೆ ಬಹಳ ಆನಂದವಾಯಿತು.

ಮೇರಠನ ಕಮಲ ಮಂದಿರದಲ್ಲಿ ಪಂಚಕಲ್ಯಾಣ

1995 ರಲ್ಲಿ ನನ್ನಿಂದ ಪ್ರೇರಣೆಗೊಂಡಿದ್ದ ಶ್ರೀ ಪ್ರೇಮಚಂದ ಜೈನರು ಸೀಮಂಧರಯುಗಮಂಧರರಾದಿಯಾಗಿ 20 ತೀರ್ಥಂಕರರು ಹಾಗೂ ವರ್ತಮಾನ ಕಾಲದ 24 ತೀರ್ಥಂಕರರ ಪ್ರತಿಮೆಯನ್ನು ಕಮಲದ ಪೀಠದ ಮೇಲೆ ನಿರ್ಮಾಣ ಮಾಡಿಸಿದ್ದರು. ಈ ಮೂರ್ತಿಗಳ ಪ್ರತಿಷ್ಠಾಪನೆ ಮತ್ತು ಪಂಚಕಲ್ಯಾಣ ಮಹೋತ್ಸವಕ್ಕಾಗಿ ನಾನು ಮೇರಠಗೆ ಸಂಘ ಸಹಿತವಾಗಿ ಭಾಗವಹಿಸಿದ್ದೆ. ಆ ಸಮಯದಲ್ಲಿ ಸಿವಿಲ್‌ಲೈನ್ಸ್, ಸದರಶಹರ, ಶಾಂತಿನಗರ, ಪ್ರೇಮಪುರಿ, ಶಾಸ್ತ್ರೀನಗರ, ಪಲ್ಲವಪುರ ಮೊದಲಾದ ಕಾಲೋನಿಗಳಲ್ಲಿ ವಿಶೇಷವಾದ ಧರ್ಮಪ್ರಭಾವನೆಯು ಆಯಿತು. ಭಗವಾನ ಋಷಭದೇವರನ್ನು ಕುರಿತು ಸಂಗೋಷ್ಠಿಗಳಾದವು. ಹಾಗೇ ಕಮಲನಗರದ ಜೈನ ಸಮಾಜವು ಕೈಕೊಂಡಿದ್ದ ಪಂಚಕಲ್ಯಾಣ ಪ್ರತಿಷ್ಠೆಯು ಅತ್ಯಂತ ವೈಭವದಿಂದ ನಡೆಯಿತು. ಜನ್ಮ ಕಲ್ಯಾಣದ ದಿನ ಸೇರಿದ್ದ ವಿಶಾಲ ಜನಸಮೂಹವನ್ನು ನೋಡಿದೆ. ಎಲ್ಲರ ಬಾಯಲ್ಲೂ ಇಂತಹ ಕಾರ್ಯಕ್ರಮವು ಮೇರಠದ ಇತಿಹಾಸದಲ್ಲಿ ಇದೇ ಮೊದಲೆಂದು ಹೇಳಿಕೊಳ್ಳತೊಡಗಿದ್ದರು.

೧೦೪

ಭಗವಾನ ವೃಷಭದೇವರ ಅಂತರಾಷ್ಟ್ರೀಯ ನಿರ್ವಾಣ ಮಹೋತ್ಸವ

ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನ ಮತ್ತು ಜಂಬೂದ್ವೀಪ ಹಸ್ತಿನಾಪುರದ ಕಾರ್ಯಕಲಾಪಗಳು ಪ್ರಾರಂಭದಿಂದಲೇ ಸರ್ವೋತೋಮುಖ, ಸರ್ವೋದಯಿ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿಯೆ ನಡೆಯುತ್ತಿತ್ತು. ಇದರಿಂದ ವಿವಿಧ ಸಂಸ್ಥೆಗಳ ಕಾರ್ಯಕರ್ತರು ಈ ಸಂಸ್ಥೆಗಳನ್ನು ಜೈನಧರ್ಮದ ಪವರ್‌ಹೌಸ್, ಕಾರ್ಯಕರ್ತರ ತರಬೇತಿ ಕೇಂದ್ರ ಹಾಗೂ ಆರ್ಷಮಾರ್ಗ ರಕ್ಷಕವೆಂದು ಕರೆಯುತ್ತಿದ್ದರು. ಜಂಬೂದ್ವೀಪದ ರಚನೆಯ ಜೊತೆಗೆ ವಿಭಿನ್ನ ಮಂದಿರಗಳ ನಿರಾರಣೆಗೆ ಆಗಾಗ್ಗೆ ಸ್ಥಾನೀಯ, ಜಿಲ್ಲಾರಾಜ್ಯ ರಾಷ್ಟ್ರೀಯ ಹಾಗೇ ಅಂತರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ ಪ್ರಶಿಕ್ಷಣ ಶಿಬಿರಗಳು ಸಂಗೋಷ್ಠಿಗಳು ಆಯೋಜಿಸಲ್ಪಡುತ್ತಿದ್ದುದ್ದರಿಂದ ಇಡೀ ದೇಶದಲ್ಲಿಯ ತನ್ನ ಕೀರ್ತಿಯನ್ನು ಹೆಚ್ಚಿಸಿಕೊಂಡಿದೆ. ಇದರ ಫಲವಾಗಿಯು 20 ನೇ ಶತಮಾನದ ಅಂತಿಮ ದಶಕದಲ್ಲಿ ಭ. ವೃಷಭದೇವರ ನಿರ್ವಾಣ ಮಹೋತ್ಸವವು ನಡೆಯಿತು.

ಜನ್ಮ ಜಯಂತಿ ಸಮವಸರಣ ಶ್ರೀ ವಿಹಾರದ ನಂತರ ನನ್ನ ಮನದಲ್ಲಿ ಭಗವಾನ ಋಷಭದೇವರ ನಿರ್ವಾಣ ಮಹೋತ್ಸವವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಆಚರಿಸಬೇಕೆಂಬ ಯೋಚನೆಯು ಬಂದಿದ್ದರಿಂದ ಸಂಸ್ಥೆಯ ಕಾರ್ಯಕರ್ತರಿಗೆ ಪ್ರೇರಣೆ ಕೊಟ್ಟೆ. ಅದಕ್ಕಾಗಿ "ಭಗವಾನ ವೃಷಭದೇವರ ಅಂತರಾಷ್ಟ್ರೀಯ ನಿರ್ವಾಣ ಮಹೋತ್ಸವ" ಸಮಿತಿಯ ರಚನೆಯಾಯಿತು. ರವೀಂದ್ರನ ಅನ್ಯಮನಸ್ಕತೆಯನ್ನು ಗಮನಿಸದೇ ಅವನನ್ನು ಅಧ್ಯಕ್ಷರನ್ನಾಗಿ ಘೋಷಿಸಲಾಯಿತು. ಮಹಾಮಂತ್ರಿಗಳಾಗಿ ಇಂದೂರಿನ ದಿಗಂಬರ ಜೈನ ಮಹಾಸಮಿತಿಯ ಅಧ್ಯಕ್ಷರಾದ ಶ್ರೀ ಪ್ರದೀಪ ಜೈನರು ಮತ್ತು ಮೇರಠನ ರಿತುಪುರದ ಜೈನಮಿಲನದ ಮಹಾಮಂತ್ರಿಯಾಗಿದ್ದ ಎಂ. ಸುರೇಶಜೈನರು ನಿಯುಕ್ತರಾದರು. 4-2-2004 ರಂದು ನಿರ್ವಾಣ ಮಹೋತ್ಸವದ ಉದ್ಘಾಟನೆಯು ದೆಹಲಿಯಲ್ಲಿ ಆಗಬೇಕೆಂದು ನಿಶ್ಚಯವಾಯಿತು. ನಂತರ ಇದಕ್ಕಾಗಿ ದೊಡ್ಡ ಸಮಿತಿಯ ರಚನೆಯಾಯಿತು.

ಜಿನೇಂದ್ರರ ಭಕ್ತಿಯೇ ಕಾರ್ಯಸಫಲತೆಗೆ ಕಾರಣ

ಕಾರ್ಯಕಾರಿಣಿ ಸಮಿತಿ ಮತ್ತು ಮಹೋತ್ಸವದ ಉದ್ಘಾಟನೆಯ ತಾರೀಕು ನಿರ್ಣಯವಾಗುತ್ತಲೇ ನನಗೆ ಕಾರ್ಯಗಳು ಶೀಘ್ರಗತಿಯಿಂದ ಆಗಬೇಕೆಂಬ ಅಕುಲತೆಯಾಗತೊಡಗಿತು. ಆದರೆ ಕಾರ್ಯಕರ್ತರು ನನಗೆ ಯಾವ ಆತಂಕವು ಆಗದಂತೆ ಕಾರ್ಯನಿರ್ವಹಿಸುತ್ತಿದ್ದರು. ನಿರ್ವಾಣ ಮಹೋತ್ಸವದ ಮುಖ್ಯ ಪದಾಧಿಕಾರಿಗಳ ನಿಧಾನಗತಿ ನನಗೆ ಮುಜುಗರವೆನ್ನಿಸುತ್ತಿತ್ತು. ಹಾಗೆಲ್ಲ ನಾನು ಕಾರ್ಯಾಧ್ಯಕ್ಷ ಬ್ರ. ರವೀಂದ್ರಕುಮಾರನಿಗೆ ಬೇಗನೆ ಕಾರ್ಯಗಳನ್ನು ಮಾಡಲು ಜೋರು ಮಾಡುತ್ತಿದ್ದೆ. ನನ್ನ ಮನದ ಇಚ್ಛೆಯಂತೆ ಕೆಂಪುಕೋಟೆಯ ಮೈದಾನದಲ್ಲಿ 4-2-2009 ರಂದು ವಿಶಾಲವಾದ ಕೈಲಾಸಪರ್ವತವು 72 ರತ್ನಪ್ರತಿಮೆಗಳನ್ನು ಒಳಗೊಂಡಿತು. ಅದರ ಎದುರಿಗೆ ಅಂದಿನ ಪ್ರಧಾನಮಂತ್ರಿಗಳಾದ ಅಟಲಬಿಹಾರಿ ವಾಜಪೇಯಿಯವರು ಮಹೋತ್ಸವದ ಉದ್ಘಾಟನೆ ಮಾಡಿ ಪ್ರಥಮ ನಿರ್ವಾಣ ಲಾಡುವನ್ನು ಅರ್ಪಿಸಿದರು. ದ್ವಿತೀಯ ಲಾಡುವನ್ನು ಸಭಾಧ್ಯಕ್ಷರಾದ ಕೇಂದ್ರಿಯ ರಾಜ್ಯ ವಿತ್ತ ಮಂತ್ರಿಗಳಾದ ಶ್ರೀ ವಿ. ಧನಂಜಯ ಕುಮಾರರು ಅರ್ಪಿಸಿದರು. ಪುನಃ 1008 ಲಾಡುಗಳನ್ನು ಅರ್ಪಿಸಲು ಜನರು ಉದ್ದವಾದ ಸಾಲುಗಳಲ್ಲಿ ಕೈಲಾಸ ಪರ್ವತದ ಕಡೆಗೆ ಬರುತ್ತಿದ್ದರು. ಭಕ್ತಿಯ ಈ ಮಹಾಕುಂಭದ ದೃಶ್ಯ ನೋಡುತ್ತಲೇ ಇರಬೇಕೆನಿಸುತ್ತಿತ್ತು. ಎಲ್ಲರ ಕೈಯಲ್ಲು ವಿವಿಧ ರೀತಿಯ ಲಾಡುಗಳು ಸಿದ್ಧಿ ಲಾಡುಗಳು,

ರತ್ನಲಾಡುಗಳು ಹೀಗೆ ಅವರ ಭಕ್ತಿಗೆ ಅನುಸಾರವಾಗಿ ಭಕ್ತಿಯಿಂದ ಸಮರ್ಪಿಸುತ್ತಿದ್ದರು. ವಿದ್ಯುತ್ ದೀಪಗಳಂತು ಜಗಮಗಿಸುತ್ತಿತ್ತು. ಈ ಎಲ್ಲಾ ದೃಶ್ಯಗಳು ಕಣ್ಣ ಮುಂದೆ ಬರಲು ಕಾರ್ಯಕರ್ತರೇ ಕಾರಣವಾಗಿದ್ದರು. ಭಕ್ತಿಯ ಈ ಎರಡನೆಯ ಮಹಾಕುಂಭವು ಅದ್ವಿತೀಯವಾಗಿತ್ತು.

ಫೆಬ್ರವರಿ 4 ರಿಂದ 10 ರವರೆಗೆ ಭಗವಾನ ವೃಷಭದೇವರ ಜೈನಮೇಳ ಹಾಗು ಪಂಚಕಲ್ಯಾಣದ ಕಾರ್ಯಕ್ರಮಗಳು ನಡೆದವು. 9-4-1998ರಲ್ಲಿ ಹಾಗೂ ಈ ಸಂದರ್ಭದಲ್ಲಿ ಪ್ರಧಾನಮಂತ್ರಿಗಳನ್ನು ಕರೆತರುವಲ್ಲಿ ಕಮಿಟಿಯ ಜೊತೆ ಶ್ರೀ ಧನಂಜಯರ ಕಾರ್ಯಕ್ಷಮತೆಯನ್ನು ಎಷ್ಟು ಹೊಗಳಿದರೂ ಸಾಲದು. ಇಂತಹ ಧರ್ಮನಿಷ್ಠ ಕಾರ್ಯಕರ್ತರಾದ ಧನಂಜಯಕುಮಾರರನ್ನು ಸಂಸ್ಥಾನವು ನನ್ನ ಪ್ರೇರಣೆಯಿಂದ "ಭಗವಾನ ವೃಷಭದೇವರ ರಾಷ್ಟ್ರೀಯ ಪದವಿ" ಯೊಂದಿಗೆ ಸನ್ಮಾನಿಸಲು ತೀರ್ಮಾನಿಸಿತು.

2000ದಲ್ಲಿ ಜಂಬೂದ್ವೀಪ ಮಹೋತ್ಸವ

ಜಂಬೂದ್ವೀಪ ನಿರ್ಮಾಣದಲ್ಲಿಯ ಕಾರ್ಯಕರ್ತರಿಗೆ ಪ್ರತಿ ಐದು ವರ್ಷಕ್ಕೆ ಮಹೋತ್ಸವವನ್ನು ಆಚರಿಸಬೇಕೆಂಬ ಪ್ರೇರಣೆಯನ್ನು ನೀಡಿದ್ದೆ. ಅದರಂತೆ 1990 ರಲ್ಲಿ ಎರಡನೆಯದು 1995 ರಲ್ಲಿ ನಡೆದಿತ್ತು. ಈಗ 2000 ದಲ್ಲಿ ಮೂರನೆಯ ಮಹೋತ್ಸವ ನಡೆಯಬೇಕಾಗಿತ್ತು ರವೀಂದ್ರ ಆ ವಿಷಯವನ್ನು ಜ್ಞಾಪಿಸುತ್ತಾ ಮಾತಾಜೀ ಈಗ ಹಸ್ತಿನಾಪುರದ ಕಡೆ ತಾವು ವಿಹಾರ ಮಾಡಬೇಕು ಎಂದಿದ್ದೆ ತಡ ನಾನು ವಿಹಾರ ಹೊರಟೆ. ಮೂರನೆಯ ಮಹೋತ್ಸವ 16-4-2000 ದಂದು ನಡೆಯಿತು.

15 ವರ್ಷಗಳ ನಂತರ ತ್ರಿಮೂರ್ತಿ ಮಂದಿರಕ್ಕೆ ಶಿಖರದ ನಿರ್ಮಾಣ

1985 ರಲ್ಲಿ ಜಂಬೂದ್ವೀಪ ಜಿನಬಿಂಬ ಪ್ರತಿಷ್ಠಾಪನೆಯ ಸಮಯದಲ್ಲಿ ತ್ರಿಮೂರ್ತಿಭವನದಲ್ಲಿ ವೃಷಭದೇವ, ಭರತ, ಬಾಹುಬಲಿ ಪ್ರತಿಮೆಯ ಪ್ರತಿಷ್ಠೆಯಾಗಿತ್ತು. 1987 ರ ಮಾರ್ಚನಲ್ಲಿ ಸಹಸ್ರಫಣಿ ಪಾರ್ಶ್ವನಾಥ ಹಾಗೂ ಭ. ನೇಮಿನಾಥರ 5¼ ಅಡಿ ಎತ್ತರದ ಶ್ಯಾಮವರ್ಣದ ಪದ್ಮಾಸನ ಪ್ರತಿಮೆಗಳನ್ನು ಮಂದಿರದ ಆ ಕಡೆ ಈ ಕಡೆಯ ವೇದಿಕೆಯ ಮೇಲೆ ವಿರಾಜಮಾನಗೊಳಿಸಲಾಗಿತ್ತು. ಆದರೆ ಶಿಖರವನ್ನು ಪೂರ್ತಿಗೊಳಿಸುವಂತಹ ಯೋಗ 2000 ವರೆಗೂ ಬಂದಿರಲಿಲ್ಲ. ರವೀಂದ್ರ ತ್ವರಿತಗತಿಯಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಿದ. ಹಾಗೇ ನನ್ನ ಸಲಹೆಯಂತೆ ಒಂದು ಚಿಕ್ಕ ಮಂದಿರದಲ್ಲಿ ಆದಿನಾಥರ ಖಡ್ಗಾಸನ ಪ್ರತಿಮೆಯನ್ನು ಅದರ ಕೆಳಗೆ ಶ್ವೇತವರ್ಣದ ಮತ್ತೊಂದು ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ಪಂಚಕಲ್ಯಾಣ ಹಾಗೂ ಶಿಖರ ನಿರ್ಮಾಣಕ್ಕೆ ಕಳಸಾರೋಹಣೆಯು ನಡೆಯಿತು. ಮಾನವ ನಿರ್ಮಿತ ಮಂದಿರದ ಮೇಲೆ ಸದಾಚಾರದ ಕಳಸವನ್ನು ಹಾಕಬೇಕು. ಈ ಸಂದರ್ಭದಲ್ಲಿ ಆಚಾರ್ಯ ಶ್ರೀ ಪೂಜ್ಯ ಪಾದಸ್ವಾಮಿಯವರ ಈ ಪಂಕ್ತಿಗಳು ಸಾರ್ಥಕವೆನಿಸುತ್ತದೆ.

ದೃಷ್ಟಂ ಜಿನೇಂದ್ರ ಭವನಂ ಭವತಾಪಹಾರಿ, ಭವ್ಯಾತ್ಮನಾಂ ವಿಭವ ಸಂಭವ ಭೂರಿ ಹೇತುಃ ।
ದುಗ್ಧಾಬ್ಧಿ ಫೇನ ಧವಲೋಜ್ವಲ ಕೂಟ ಕೋಟಿ, ನನ್ದ್ಧ್ವಜ ಪ್ರಕರ ರಾಜಿ ವಿರಾಜಮಾನ ॥

ಇತಿಹಾಸಕಾರರ ಸಮ್ಮೇಳನ

ಹಸ್ತಿನಾಪುರದಲ್ಲಿ 11-6-2000 ದಂದು "ಜೈನಧರ್ಮದ ಪ್ರಾಚೀನತೆ" ಯ ಬಗ್ಗೆ ಒಂದು ದಿನದ ರಾಷ್ಟ್ರೀಯ ಸಂಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ಉನ್ನತಮಟ್ಟದ ಇತಿಹಾಸಕಾರರು, ವಿದ್ವಾಂಸರು ಭಾಗವಹಿಸಿದ್ದರು. ಈ ಸಮಯದಲ್ಲಿ (ಎನ್.ಸಿ.ಆರ್.ಟಿ.ಸಿ) ರಾಷ್ಟ್ರೀಯ ಶೈಕ್ಷಣಿಕ ಅನುಸಂಧಾನ ಹಾಗೂ ಪ್ರಶಿಕ್ಷಣ ಪರಿಷದ್ ನ ಪರವಾಗಿ ಇತಿಹಾಸ ವಿಭಾಗದ ಮುಖ್ಯಸ್ಥರಾದ ಪ್ರೀತೀಶ ಆಚಾರ್ಯರು ಭಾಗವಹಿಸಿದ್ದರು. ಅಲ್ಲಿ ಮಂಡಿತವಾದ ಎಲ್ಲಾ ಶೋಧ ಲೇಖನಗಳನ್ನು ಕೇಳಿ ವರದಿಯನ್ನು ಶಿಕ್ಷಣ ವಿಭಾಗಕ್ಕೆ ಕಳುಹಿಸುವ ಭರವಸೆ ಕೊಟ್ಟರು. ಪಠ್ಯಪುಸ್ತಕದಲ್ಲಿ ಕೊಡಲಾಗುವ ಸತ್ಯವಲ್ಲದ ವಿಚಾರವನ್ನು ತೆಗೆಯಬೇಕೆಂಬ ಮನವಿಯನ್ನು ನಾನು ನನ್ನ ಶಿಷ್ಯರ ಮೂಲಕ ಆಗಿಂದಾಗ್ಗೆ ಮಾಡಿಸುತ್ತಲೇ ಇದ್ದೆ. ಒಮ್ಮೆ ಪ್ರೋಫೆಸರ್ ರಾಜಪೂತರು ಬಂದಾಗಲು ನಾನು ಪಠ್ಯಪುಸ್ತಕವನ್ನು ಪರಿಶೀಲಿಸಲು ಹೇಳಿದ್ದೆ. ಇದಕ್ಕಾಗಿ ಅವರು ಜೈನಧರ್ಮದ ಬಗ್ಗೆ ಲೇಖನವೊಂದನ್ನು ಬರೆದುಕೊಡಲು ನನ್ನನ್ನು ಕೇಳಿಕೊಂಡರು. ಕೆಲವು ದಿನಗಳಲ್ಲೆ ಲೇಖನವನ್ನು ಕಳುಹಿಸಿದ್ದೆ. ಮಾನವ ವಿಕಾಸ ಮಂತ್ರಿಯಾಗಿದ್ದ ಡಾ. ಮುರಳೀಮನೋಹರ ಜೋಶಿ ಎರಡು ಬಾರಿ ನನ್ನಲ್ಲಿ ಬಂದಾಗಲು ಪಠ್ಯಪುಸ್ತಕಗಳ ಪರಿಶೀಲನೆಯ ಬಗ್ಗೆ ಗಮನಹರಿಸಲು ಸಲಹೆ ಕೊಟ್ಟಿದ್ದೆ. ಇದರಿಂದ ಅವರು ಯಾವುದೇ ಧರ್ಮದ ಬಗ್ಗೆ ಪಠ್ಯ ಪುಸ್ತಕದಲ್ಲಿ ಕೊಡುವಾಗ ಆಯಾಧರ್ಮದ ವಿದ್ವಾಂಸರ ಗಮನಕ್ಕೆ ತರುವಂತೆ ಸಲಹೆಯನ್ನು ಅಂಗೀಕರಿಸಿದ್ದರು. 20 ನೇಯ ಶತಮಾನದಲ್ಲಿ ಉಲ್ಲೇಖವಾದ ಈ ಸತ್ಯವಲ್ಲದ ವಿಷಯವನ್ನು ಹಿಂದೆ ಪಡೆಯುವಂತಹ ಕೆಲಸವನ್ನು ಜೈನ ವಿದ್ವಾಂಸರು ಮಾಡುತ್ತಿಲ್ಲವಲ್ಲವೆಂದು ಖೇದವಾಯಿತು. 2003 ರಲ್ಲಿ ಈ ನಿಟ್ಟಿನಲ್ಲಿ ಸಂಶೋಧನೆ ಮಾಡುವಂತೆ ವಿಸ್ತೃತವಾದ ಚರ್ಚೆ ನಡೆಯಿತು. ಹೀಗೆ ನಾವು ಪುರುಷಾರ್ಥವನ್ನು ಮಾಡುತ್ತಿದ್ದರೆ ತಪ್ಪು ಕಲ್ಪನೆಗಳನ್ನು ಸರಿಪಡಿಸಬಹುದು.

ದೆಹಲಿಯ ಕಮಲ ಮಂದಿರದಲ್ಲಿ ಹೊಸ ಸಹಸ್ರಾಬ್ಧಿಯ ಐತಿಹಾಸಿಕ ಚಾತುರ್ಮಾಸ

1992ರಲ್ಲಿ ಒಂದು ಲಘು ಪಂಚಕಲ್ಯಾಣದ ಸಂದರ್ಭದಲ್ಲಿ ಅನಿಲಕುಮಾರನು ಹಸ್ತಿನಾಪುರದಲ್ಲಿ ನನ್ನನ್ನು ಭೇಟಿ ಮಾಡಿದ್ದರು. ಅಂದಿನಿಂದಲೇ ಅವರು ನನ್ನ ಅನನ್ಯ ಭಕ್ತರಾದರು. 1994ರಲ್ಲಿ ಅಯೋಧ್ಯೆಯಲ್ಲಿ ನಡೆದ ಪಂಚಕಲ್ಯಾಣ ಮಹೋತ್ಸವದಲ್ಲಿ ಧರ್ಮಪತ್ನಿಯ ಜೊತೆ ಇಂದ್ರ ಇಂದ್ರಾಣಿಯರ ಸ್ಥಾನವನ್ನು ವಹಿಸಿದ್ದರು. 1995 ರಲ್ಲಿ ದೆಹಲಿಗೆ ಪ್ರೀತಿವಿಹಾರಕ್ಕೆ ಆಗಮಿಸಿದ ಸಂದರ್ಭದಲ್ಲಿ ಅವರ ಇಚ್ಛೆಯಂತೆ ಮನೆಯ ಮುಂದಿನ ಜಾಗದಲ್ಲಿ ಜಿನ ಚೈತ್ಯಾಲಯಕ್ಕಾಗಿ ನಾನು ಭೂಮಿಯಲ್ಲಿ ಯಂತ್ರ ಸ್ಥಾಪನೆ ಮಾಡಿಕೊಟ್ಟಿದ್ದೆ.

ಮಾಂಗೀತುಂಗಿಯಿಂದ ನಾವು ವಾಪಸ್ಸು ಬರುವಷ್ಟರಲ್ಲಿ ಒಂದು ಸುಂದರವಾದ ಕಮಲಮಂದಿರವು ನಿರ್ಮಾಣವಾಗಿತ್ತು. 15-8-1997 ರಲ್ಲಿ ಪಂಚಕಲ್ಯಾಣ ಪ್ರತಿಷ್ಠೆ ಯನ್ನು ನನ್ನ ಸಾನಿಧ್ಯದಲ್ಲಿಯೇ ಮಾಡಿಸಿದರು. 1998 ರ ಮೇನಲ್ಲಿ ಈ ಮಂದಿರಕ್ಕೆ ಕಳಸಾರೋಹಣೆಯು ಆಗಿತ್ತು. "ಭಗವಾನ ವೃಷಭದೇವ ಕಮಲಮಂದಿರ" ದಲ್ಲಿ 22½ ಅಡಿಯ ಧಾತುವಿನ ಅತಿಶಯದಿಂದ ಪದ್ಮಾಸನದ ಬಿಂಬವು ವಿರಾಜಮಾನವಾಗಿದೆ. ಈ ಸುಂದರವಾದ ಗೃಹ ಮಂದಿರವು ಗಾಜಿನ ಚಿತ್ರಕಲೆಯಿಂದ ಸುಂದರವಾಗಿದೆ. ಇದನ್ನು ದರ್ಶನ ಮಾಡಿದ ಜನ ಮಂತ್ರ ಮುಗ್ಧರಾಗುತ್ತಾರೆ.

ಮಂದಿರ ನಿರ್ಮಾಣವಾದಾಗಿನಿಂದ ಅನಿಲ್‌ಕುಮಾರ ಯಾವಾಗಲು ಹೇಳುತ್ತಲೇ ಇದ್ದರು. ಮಾತಾಜೀ ದೆಹಲಿಗೆ ಬಂದಾಗ ಒಂದು ಚಾತುರ್ಮಾಸವನ್ನಾದರು ತಾವು ನಮ್ಮಲ್ಲಿ ಕಳೆಯಬೇಕೆಂದರು. ಇವರ ಈ ಅನನ್ಯ

ಭಕ್ತಿ ಅಪರಿಮಿತ ಶ್ರದ್ಧೆಯಿಂದಾಗಿ ನಾನು ದೆಹಲಿಗೆ ಹೋದಾಗೆಲ್ಲಾ ಕಮಲಮಂದಿರದ ದರ್ಶನ ಮಾಡಿಯೇ ಬರುತ್ತಿದ್ದೆ. 1999 ರಲ್ಲಿ ಲಘು ಪಂಚಕಲ್ಯಾಣ ಮತ್ತು ಶ್ರುತಪಂಚಮಿಯ ಕಾರ್ಯಕ್ರಮಗಳನ್ನು ಮಾಡಿ ನಾನು ಭಾಗವಹಿಸುವಂತೆ ಮಾಡಿದ್ದರು. ಈಗ 2000 ದಲ್ಲಿ ಅತ್ಯಂತ ಆಗ್ರಹದಿಂದ ನನ್ನ ಸಂಘದ ವರ್ಷಾಯೋಗವನ್ನು ಅಲ್ಲಿಗೆ ಕರೆಸಿಕೊಂಡು ತಮ್ಮ ಇಡೀ ಮನೆಯನ್ನು ಸಂಘಕ್ಕಾಗಿ ಬಿಟ್ಟುಕೊಟ್ಟು ತಮ್ಮ ಸಂಸಾರವನ್ನು ಬೇರೊಂದು ಫ್ಲಾಟನ್ನು ಕೊಂಡು ಸ್ಥಳಾಂತರಿಸಿದ್ದರು. ಚಾತುರ್ಮಾಸದಲ್ಲಿ ಬರುವ ಎಲ್ಲಾ ಭಕ್ತಾದಿಗಳ ಊಟ ಉಪಚಾರಗಳ ಹೊಣೆಯನ್ನು ಅತ್ಯಂತ ಸಂತೋಷದಿಂದ 4 ತಿಂಗಳವರೆಗೂ ನಿರ್ವಹಿಸಿದ್ದರು. ಇವರ ಪತ್ನಿಯಂತು ಸತಿ ಸೀತಾಮಣಿ ಧರ್ಮವಂತ ಮಹಿಳೆಯಾಗಿದ್ದಾರೆ. ಮಕ್ಕಳಾದ ಕುಮಾರಿ ಅನು, ಅಂತಿಮ ಮಗ ಅತಿಶಯ. ಮಕ್ಕಳು ಕೂಡ ತಂದೆ ತಾಯಿಯವರ ಧಾರ್ಮಿಕ ಸಂಸ್ಕಾರದಲ್ಲೇ ಮಿಂದವರು. ಇಡೀ ಕುಟುಂಬ ಸಂಘವನ್ನು ಕುಲಗುರುವಿನಂತೆ ಅತ್ಯಂತ ಶ್ರದ್ಧಾ ಭಕ್ತಿಯಿಂದ ಸೇವೆ ಮಾಡಿದ್ದಾರೆ. ನನ್ನ ಜೀವನದಲ್ಲಿ ಇದೊಂದು ಒಬ್ಬ ಶ್ರಾವಕರ ಮನೆಯಲ್ಲಿ ಚಾತುರ್ಮಾಸವನ್ನು ಕಳೆದ ಅತ್ಯಂತ ಮಧುರವಾದ ನೆನಪು. ಈ ಚಾತುರ್ಮಾಸದಲ್ಲಿದ್ದಾಗಲೇ ಪ್ರಯಾಗದಲ್ಲಿ ಭಗವಾನ ವೃಷಭದೇವರ ನಿರ್ವಾಣ ಮಹೋತ್ಸವದ ನಿರ್ಣಯ ಕೈಗೊಂಡಿದ್ದು.

ದೆಹಲಿಯಲ್ಲಿ ಕೈಲಾಸ ಮಾನಸ ಸರೋವರ ಯಾತ್ರೆಯ ಪ್ರೇರಣೆ

ಈ ಚಾತುರ್ಮಾಸದಲ್ಲಿಯೇ ನನ್ನ ಮಾರ್ಗದರ್ಶನದಲ್ಲಿ ಕಾರ್ಯಕರ್ತರು 2000 ದ ಅಕ್ಟೋಬರನಲ್ಲಿ ವಿಕಾಸಮಾರ್ಗದ ವಿಶಾಲ ಮೈದಾನದಲ್ಲಿ ಭಗವಾನ ವೃಷಭದೇವರ ನಿರ್ವಾಣ ಮಹೋತ್ಸವದ ಸಲುವಾಗಿ ಕೈಲಾಸ ಪರ್ವತದ ನಿರ್ವಾಣ ಭೂಮಿಯ ಪ್ರತಿಕೃತಿಯ ರಚನೆಯನ್ನು ಮಾಡಿಸಿದ್ದರು. ಇಡೀ ಜನಸಮೂಹಕ್ಕೆ ದೆಹಲಿಯಲ್ಲಿಯೇ ಕೈಲಾಸಪರ್ವತಕ್ಕೆ ಸದೃಶ್ಯ ಯಾತ್ರೆಯ ಅನುಭವವನ್ನು ತಂದುಕೊಟ್ಟು ಕಾರ್ಯಕರ್ತರು ಕೃತಾರ್ಥರಾಗಿದ್ದಾರೆ. ತುಂಬಿದ ಜನಸಂದಣಿಯನ್ನು ಬೇರಿಕೊಟಿಂಗ್ ವ್ಯವಸ್ಥೆಯಲ್ಲಿ ಕಳುಹಿಸುತ್ತಿದ್ದ ದೃಶ್ಯ ನೋಡಿದಾಗ ರೋಮ ರೋಮವು ನಿಮಿರೇಳುತ್ತಿತ್ತು. ಶ್ರದ್ಧೆಯಿಂದ ಕೃತ್ರಿಮ ಕೈಲಾಸಪರ್ವತದಲ್ಲಿ ಗುಹೆಗಳು ಝರಿಗಳು ಕಾಡುಗಳ ಪ್ರಾಕೃತಿಕ ದೃಶ್ಯ ಕೈಲಾಸಪರ್ವತವನ್ನು ಪ್ರತಿನಿಧಿಸುತ್ತಿತ್ತು. 72 ಮಂದಿರಗಳಲ್ಲಿ ತ್ರಿಕಾಲದ 72 ಪ್ರತಿಮೆಗಳನ್ನು ವಿರಾಜಮಾನಗೊಳಿಲಾಗಿತ್ತು. ಮೇಲಿನ ಅಷ್ಟಾಪದದ ಮೇಲೆ ಭ. ವೃಷಭದೇವರ ಮಂದಿರದಿಂದ ನಿರಂತರವಾಗಿ ಮಂತ್ರಧ್ವನಿಯು ಹೊರಡುತ್ತಿತ್ತು. ಇವೆಲ್ಲವು ಜನರಿಗೆ ಕೈಲಾಸಪರ್ವತದ ಯಾತ್ರೆಯನ್ನೇ ವಾಸ್ತವವಾಗಿ ಮಾಡಿಸಿದ ಅನುಭವವನ್ನು ತಂದುಕೊಟ್ಟಿತ್ತು. ಈ ಅದ್ಭುತ ರಚನೆಯ ಭಾರವನ್ನು ಪ್ರೀತಿವಿಹಾರ ಜೈನ ಸಾಮಾಜದ ಅಧ್ಯಕ್ಷ ಶ್ರೀ ಸಾಗರಚಂದ ಜೈನ, ಮಹಾಮಂತ್ರಿ ಶ್ರೀ ಅನಿಲಕುಮಾರಜೈನ ಹಾಗೂ ಸುರೇಶಚಂದ್, ಸುಭಾಸ ಜೀ, ಸುನೀಲ ಜೀ, ಪದಮಚಂದ ಜೀ, ಹಾಗೂ ಚೇತನ ಲಾಲರ ಸಹಾಯದಿಂದ ಕುಶಲ ಕಾರ್ಯಕರ್ತರ ಕೈಚಳಕದಿಂದ ನಿರ್ಮಿತವಾಗಿತ್ತು.

ಒಂದೇ ವೇದಿಕೆಯಲ್ಲಿ ಒಟ್ಟಿಗೆ 48 ಭಕ್ತಾಮರದ ಆರಾಧನೆ

ಈ ಮಾನಸ ಸರೋವರದ ಯಾತ್ರೆಯ ಸಮಯದಲ್ಲೇ ಬೇರೆ ಬೇರೆ ಭಕ್ತರ ತಂಡವು ಒಂದು ದಿನ ನನ್ನ ಮಾರ್ಗದರ್ಶನದಲ್ಲಿ ಭಕ್ತಾಮರದ 48 ಸ್ತೋತ್ರಗಳ ಆರಾಧನೆಯನ್ನು ನೆರವೇರಿಸಿ ತಮ್ಮ ಭಕ್ತಿಯನ್ನು ಪ್ರದರ್ಶಿಸಿದ್ದರು. ಇದು ನನ್ನ 48 ನೇಯ ಚಾತುರ್ಮಾಸವಾಗಿತ್ತು. ಇದರ ಸಲುವಾಗಿಯೇ 48 ಸ್ತೋತ್ರಗಳಿಗೆ 48 ಆರಾಧನೆಗಳನ್ನು ಮಾಡಿ ಪ್ರೀತಿವಿಹಾರ ಜೈನಸಮಾಜವು ನನಗೆ ಅತ್ಯಂತ ಆನಂದವನ್ನು ತಂದೊದಗಿಸಿತು.

ಇಂದಿಗೂ ಈ ಜೈನ ಸಮಾಜವು ನಮಗೆ ಅವಶ್ಯಕತೆ ಇದ್ದಾಗೆಲ್ಲ ಬಂದು ಪ್ರತಿಯೊಂದು ಕೆಲಸಗಳಲ್ಲಿಯು ತಮ್ಮ ಸಹಕಾರವನ್ನು ಕೊಡುತ್ತಲೇ ಬಂದಿದ್ದಾರೆ. ಪ್ರಯಾಗ ತೀರ್ಥದಲ್ಲಿ ಕೋಟಿ ವರ್ಷಗಳ ಹಿಂದೆ ಮೊದಲ ತೀರ್ಥಂಕರರಾದ ಆದಿನಾಥರು ಪ್ರಯಾಗದಲ್ಲಿಯೇ ದೀಕ್ಷೆ ಧಾರಣೆ ಮಾಡಿದ ಉಲ್ಲೇಖ ನಮಗೆ ಪದ್ಮಪುರಾಣದಲ್ಲಿ ಸಿಗುತ್ತದೆ.

"ಪ್ರಕೃಷ್ಟೇ ವಾ ಕೃತಸ್ಯಾಗಃ ಪ್ರಯಾಗಸ್ತೇನ ಕೀರ್ತಿತಃ"

ಯುಗ ಯುಗಗಳಿಂದ ಪರಿವರ್ತಿತವಾಗಿ ಬಂದ ಈ ಸ್ಥಳ ಇಂದು "ಇಲಾಹಾಬಾದ್" ಎಂಬ ಹೆಸರನ್ನು ಪಡೆದಿದೆ. ಗಂಗಾ, ಸಿಂಧೂ, ಸರಸ್ವತೀ ನದಿಗಳ ಸಂಗಮ ಸ್ಥಳವಾಗಿರುವ ಈ ಸ್ಥಳ ಇಡೀ ವಿಶ್ವದಲ್ಲೇ ಪ್ರಸಿದ್ಧಿಯನ್ನು ಪಡೆದಿದೆ. ಇಲ್ಲಿ ಹಿಂದುಗಳು "ಮಹಾಕುಂಭ" ಜಾತ್ರೆಯನ್ನು ಆಯೋಜಿಸುತ್ತಿರುತ್ತಾರೆ. ದೇಶದ ಕೋಟ್ಯಾಂತರ ಜನರು ಸಂಗಮದಲ್ಲಿ ಮಿಂದು ಕೃತಾರ್ಥರಾಗುತ್ತಿದ್ದಾರೆ.

ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಮಹಾಕುಂಭಾಭಿಷೇಕವು ಈ ಶತಮಾನದ 2001ರಲ್ಲಿ ನಡೆಯಿತು. ಈ ಸಂದರ್ಭದಲ್ಲಿ ನಾನು ದೆಹಲಿಯಿಂದ ಇಲ್ಲಿಗೆ ಪ್ರಯಾಣ ಬೆಳೆಸಿದೆ. ಕೋಟ್ಯಾಂತರ ವರ್ಷಗಳ ಹಿಂದೆ ಇಲ್ಲಿ ಭಗವಾನ ವೃಷಭ ದೇವರ ದೀಕ್ಷಾ ಕಲ್ಯಾಣವಾದ ಇತಿಹಾಸವನ್ನು ನೆನಪಿಸುವಂತಹ ಒಂದು ನೂತನ ತೀರ್ಥಕ್ಷೇತ್ರದ ಕಲ್ಪನೆಯನ್ನು ಸಾಕಾರಗೊಳಿಸುವ ಕಾರ್ಯವನ್ನು ಜಂಬೂದ್ವೀಪ- ಹಸ್ತಿನಾಪುರದ ಕಮಿಟಿಯು ಕೈಗೆತ್ತಿಕೊಂಡು ಇಲಾಹಾಬಾದ- ಬನಾರಸ ಹೆದ್ದಾರಿಯಲ್ಲಿ ಒಂದು ಜಾಗವನ್ನು ಖರೀದಿಸಿ ಕಾರ್ಯವನ್ನು ನಿರ್ಮಾಣ ಮಾಡಲು ಪ್ರಾರಂಭಿಸಿತು. 4-2-2000 ದಲ್ಲಿ ಪ್ರಾರಂಭವಾದ ಕಾರ್ಯವು 8-2-2001ಕ್ಕೆ ಪೂರ್ಣಗೊಂಡಿತು.

4-2-2000 ದ ಭಗವಾನ ವೃಷಭದೇವ ಅಂತರಾಷ್ಟ್ರೀಯ ನಿರ್ವಾಣ ಮಹೋತ್ಸವ ವರ್ಷದ ಸಂಪನ್ನ ಸಮಾರಂಭವನ್ನು 4-2-2001 ರಿಂದ 4-2-2001 ರವರೆಗೆ ಪಂಚಕಲ್ಯಾಣ ಪ್ರತಿಷ್ಠೆ ಮತ್ತು ಮಹಾಕುಂಭ ಮಸ್ತಕಾಭಿಷೇಕದ ಮಹೋತ್ಸವವನ್ನಾಗಿ ಆಚರಿಸಲಾಯಿತು. ಈ ನವ ನಿರ್ಮಿತ ತೀರ್ಥವನ್ನು "ತೀರ್ಥಂಕರ ವೃಷಭದೇವ ತಪಸ್ಥಳ ಪ್ರಯಾಗ ದಿಗಂಬರ ಜೈನ ತೀರ್ಥ" ವನ್ನು ಲೋಕಾರ್ಪಣೆ ಮಾಡಲಾಯಿತು. ಇದಕ್ಕಿಂತ ಮೊದಲು ಜನವರಿ 18 ರಿಂದ 21 ರವರೆಗೆ ವಿಶ್ವಹಿಂದು ಪರಿಷತ್‌ನ ಪ್ರಮುಖ ಕಾರ್ಯಕರ್ತರಾದ ಶ್ರೀ ಅಶೋಕ ಸಿಂಘಲ, ಉದಯಪುರದ ಶ್ರೀ ಕೆ. ಎಲ್. ಜೈನಗೋಧಾ (ಉಪಾಧ್ಯಕ್ಷ ಗೋವಂಶ ರಕ್ಷಣೆ ಹಾಗೂ ಮಾಂಸ ನಿರ್ಯಾತ ನಿರೋಧ ಪರಿಷದ್) ಸಾಜಲ ಇಂದೂರಿನ ಶ್ರೀ ಹುಕುಮಚಂದ ಜೈನರ ವಿಶೇಷ ಪ್ರಾರ್ಥನೆಯಿಂದಾಗಿ ನಾನು ಸಂಘ ಸಹಿತವಾಗಿ ಮಹಾಕುಂಭಮೇಳದ ಪರಿಸರದಲ್ಲಿ ಆಯೋಜಿಸಿದ್ದ "ನವಮಧರ್ಮಸಂಸದ" ದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ. ಇಡೀ ಹಿಂದೂ ಸಂತ-ಮಹಾತ್ಮರು ಸೇರಿದ್ದ ಈ ಸಭೆಯಲ್ಲಿ ವೇದಿಕೆಯ ಮೇಲೆ ನಮಗೆ ಉನ್ನತ ಆಸನವನ್ನು ಕೊಟ್ಟು ಪುರಸ್ಕರಿಸಿದ್ದರು. ಮಹಾಕುಂಭದ ಸಮ್ಮೇಳನದಲ್ಲಿ ಪ್ರಥಮ ಬಾರಿಗೆ ಜೈನಧರ್ಮದ ಪ್ರತಿನಿಧಿತ್ವವನ್ನು ವಹಿಸಲಾಗಿತ್ತು. ಆರ್ಯಿಕೆ ಚಂದನಮತಿ ಮತ್ತು ನನ್ನಿಂದ ಸಾಮಾಯಿಕದ ಭೋಧನೆಯು ಎಲ್ಲರಿಗೂ ಪ್ರಾಪ್ತವಾಯಿತು. ಇದರ ಪ್ರತಿಫಲವಾಗಿ ಮಾರನೇಯ ದಿನವೇ ಭಗವಾನ ರಾಮನ ಪೂರ್ವಜರ ರೂಪದಲ್ಲಿ ತೀರ್ಥಂಕರ ವೃಷಭ ದೇವರ ವಿಸ್ತೃತ ಚರ್ಚೆ ನಡೆಯಿತು. ಅಲ್ಲಿ ಆಯೋಜಿಸಲಾಗಿದ್ದ ಜೈನ ಸಮಾರಂಭದಲ್ಲಿ "ಭಗವಾನ ವೃಷಭದೇವ ಸನಾತನ ಸಂಸ್ಕೃತಿ ಸಂಗಮ" ದಲ್ಲಿ ಪ್ರತಿದಿನ ಅನೇಕ ಧಾರ್ಮಿಕ ವಿಷಯಗಳನ್ನು ಆಯೋಜಿಸಲಾಗುತ್ತಿತ್ತು. ಇದನ್ನು ಮಹಾವೀರ ಪ್ರಸಾದ ಧ್ವಜಾರೋಹಣೆ ಮಾಡಿ ಉದ್ಘಾಟಿಸಿದ್ದರು. ಅವರು ಸಮಾರಂಭದಲ್ಲಿ ಕಳಸ ಯಾತ್ರೆಗಾಗಿ 108 ಮಹಿಳೆಯರಿಗೆ 108 ಸೀರೆಗಳು ಕಳಸ

ತೆಂಗಿನಕಾಯಿ ಸಮೇತವಾಗಿ ಶೋಭಾಯಾತ್ರೆಗೆ ಪ್ರೋತ್ಸಾಹಿಸಿದ್ದರು. ಹಾಗೇ ಜನವರಿ 21 ರ ಹಿಂದಿನ ಸಂಜೆಯ ಭಗವಾನ ವೃಷಭದೇವರಿಗೆ ನಿರ್ವಾಣ ಲಾಡುವನ್ನು ಅರ್ಪಿಸುವ ಸಲುವಾಗಿ 1008 ತಟ್ಟೆಗಳನ್ನು ಅರ್ಪಿಸಿದ್ದರು.

ಈ ನಿರ್ವಾಣ ಮಹೋತ್ಸವದ ಸಭೆಯಲ್ಲಿ ಜೈನ ವರಿಷ್ಠ ಕಾರ್ಯಕರ್ತರ ಜೊತೆ ಭಾರತೀಯ ಜೀವಜಂತು ಕಲ್ಯಾಣ ಬೋರ್ಡಿನ ರಾಷ್ಟ್ರೀಯ ಅಧ್ಯಕ್ಷರಾದ ನ್ಯಾಯಮೂರ್ತಿ ಶ್ರೀ ಗುಮಾನಮಲ್‌ಜೀ ಲೋಢ, ಆಚಾರ್ಯ ಶ್ರೀ ಧರ್ಮೇಂದ್ರ ಜೀ ಮೊದಲಾದವರು ಸಭೆಯಲ್ಲಿ ಭಗವಾನ ವೃಷಭದೇವ ಹಾಗೂ ರಾಮನ ಸಿದ್ಧಾಂತಗಳ ಉಪಯೋಗವನ್ನು ತಿಳಿಸುತ್ತಾ ಮಹಾಕುಂಭದಲ್ಲಿ ಜೈನಧರ್ಮದ ಪ್ರತಿನಿಧಿತ್ವವನ್ನು ಕರೆತರುವ ಸಂಘಪತಿಯ ಕಾರ್ಯವನ್ನು ಮೇರಠನ ನಿವಾಸಿಯಾದ ಪವನಕುಮಾರ ಆನಂದಕುಮಾರ ಹಾಗೂ ಅವರ ತಾಯಿಯವರು ವಹಿಸಿಕೊಂಡಿದ್ದರು.

೧೦೫

ಭಗವಾನ ಮಹಾವೀರರ 2600ನೇ ಜನ್ಮ ಕಲ್ಯಾಣ ಮಹೋತ್ಸವ

ರಾಜಧಾನಿ ದೆಹಲಿಯಲ್ಲಿ ರಾಷ್ಟ್ರೀಯ ಮಟ್ಟದ ಭ. ಮಹಾವೀರರ 2600 ನೇ ವರ್ಷದ ಜನ್ಮದ ಜಯಂತಿ ಮಹೋತ್ಸವದ ಉದ್ಘಾಟನೆಯನ್ನು ಪ್ರಧಾನಮಂತ್ರಿ ಅಟಲಬಿಹಾರಿ ವಾಜಪೇಯಿಯವರು ನಿರ್ವಹಿಸಿದರು. ಆ ಸಮಯದಲ್ಲಿ ನಾನು ಪ್ರಯಾಗದ ಇಲಾಹಬಾದನಲ್ಲಿ ಇದ್ದೆ. ಭಗವಾನ ಮಹಾವೀರ 2600 ನೇ ಜನ್ಮ ಜಯಂತಿಯಂದು ಅವರ 2600 ಗುಣಗಳಿಗೆ 2600 ಅರ್ಘ್ಯವನ್ನು ಅರ್ಪಿಸುವ ಒಂದು ಆರಾಧನೆಯನ್ನು ಮಾಡಿಸಬೇಕೆಂದು ಮನದಲ್ಲಿ ಆಲೋಚನೆ ಬಂದಿತು. ಆ ಆರಾಧನೆಯ ವಿಧಿಯನ್ನು ಕುರಿತ ಒಂದು ಕೃತಿಯನ್ನು ರಚಿಸಿ ಅದನ್ನು ಅಚ್ಚುಹಾಕಿಸಲಾಯಿತು. ಇದನ್ನು ಮೊದಲಬಾರಿಗೆ ಇಲಾಹಾಬಾದ್ ನಗರದಲ್ಲಿ ಸಮಾಜದವರು ಸುಮೇರು ಪರ್ವತದ ಮಂಡಲ ರಚನೆ ಮಾಡಿಸಿ 2600 ರತ್ನ ಹಾಗೂ ಫಲಗಳಿಂದ ಆರಾಧನೆಯನ್ನು ಅತ್ಯಂತ ಭಕ್ತಿಯಿಂದ ಮಾಡಿ ಕೃತಾರ್ಥರಾದರು.

ಇಲ್ಲಿ ಆರಾಧನೆ ನಡೆಯುತ್ತಿರುವಾಗಲೇ ದೆಹಲಿಯಿಂದ ದೂರವಾಣಿಯ ಮೂಲಕ ಆಚಾರ್ಯ ವಿದ್ಯಾನಂದರು ಸಮಾರಂಭದ ಸ್ಥಳದಿಂದ ವಾಪಸ್ಸು ಹೋಗಿದ್ದರಿಂದ ಕಾರ್ಯಕ್ರಮವು ಉತ್ಸಾಹ ಕಳೆದುಕೊಂಡ ಸಮಾಚಾರ ಕೇಳಿ ಮನಸ್ಸಿಗೆ ಬೇಸರವಾಯಿತು. ಭಾಗವಹಿಸಿದ್ದ ರಾಜಕೀಯ ನೇತಾರರು ಕೂಡ ಇದರಿಂದ ಬೇಸರಗೊಂಡಿದ್ದರು. ಜೈನ ಶಾಸನದಲ್ಲಿ ಇಂತಹ ಅವಮಾನದ ಸುದ್ದಿ ಕೇಳಿ ಮನಸ್ಸಿಗೆ ಬಹಳ ಆಘಾತವಾಯಿತು. ಇದಕ್ಕೆ ಕಾರಣವನ್ನು ತಿಳಿಯಲು ಮನಸ್ಸು ತವಕಗೊಂಡಿತು. ಯಾರೋ ಮಹಾನುಭಾರು ಅಲ್ಲಿಂದ ಆಸ್ಥಾ ಚಾನೆಲ್ಲಿನ ಟಿ. ವಿ ರೆಕಾರ್ಡ್ ತಂದು ತೋರಿಸಿದರು. ಆಚಾರ್ಯರು ಸಭೆಯಲ್ಲಿ ಶಾಂತಿ - ಸೌಹಾರ್ದದಿಂದ ನಡೆದುಕೊಳ್ಳಲು ಆದೇಶಿಸಿದರು. ಆದರೂ ಸಹ ದಿಗಂಬರ - ಶ್ವೇತಾಂಬರರ ನಡುವೆ ಮಾತಿನ ಚಕಮಕಿ ನಡೆದಿದ್ದೇ ಈ ಘಟನೆಗೆ ಕಾರಣವಾಗಿತ್ತು.

ಸಂಘದ ಶಿಷ್ಯರ ಭಾವನೆಯಂತೆ ನಾನು ಈ ಸಲದ ಚಾತುರ್ಮಾಸವನ್ನು ಇಲ್ಲಿಯೇ ಮಾಡಬೇಕೆಂದು ಬಯಸಿದ್ದೆ. ಆದರೆ ದೆಹಲಿಯವರ ವಿಶೇಷ ಆಗ್ರಹದಿಂದಾಗಿ ಪ್ರಭಾಸಗಿರಿಯ ಕೌಶಂಬಿಯಲ್ಲಿ ಪಂಚಕಲ್ಯಾಣ ಮಹೋತ್ಸವವನ್ನು ಮುಗಿಸಿ ಸಂಘವು ದೆಹಲಿಯ ಕಡೆಗೆ ವಿಹಾರ ಹೊರಟಿತು. ಕೌಶಂಬಿಯಲ್ಲಿ ಪ್ರಾಚೀನ ಇತಿಹಾಸವನ್ನು ಸಾಕಾರ ಮಾಡುವ ಅದಮ್ಯ ಅಭಿಲಾಶೆ ನನ್ನಲ್ಲಿ ಉಂಟಾಯಿತು. ಮಹಾವೀರರಿಗೆ ಮಹಾಸತಿ

ಚಂದನೆಯು ಆಹಾರ ದಾನ ಮಾಡಿದ ಸ್ಥಳ ಇದಾಗಿದ್ದರಿಂದ ನಾನು ಚಂದನೆಯು ಆಹಾರ ದಾನ ಮಾಡುತ್ತಿರುವಂತೆ ಭಗವಂತರು ಸ್ವೀಕರಿಸುವಂತೆ ಚಿತ್ರಣವನ್ನು ಶಿಲ್ಪದಲ್ಲಿ ಮಾಡಿಸಲು ಹೇಳಿದ್ದೇ ತಡ ಪ್ರಭಾಸಗಿರಿ ತೀರ್ಥಕ್ಷೇತ್ರದ ಅಧ್ಯಕ್ಷ ಡಾ|| ಪ್ರೇಮಚಂದ್ ಜೈನರು ಅತ್ಯಂತ ಶ್ರದ್ಧಾಪೂರ್ವಕವಾಗಿ ಅದನ್ನು ಮಾಡಿಸಿಯೇ ಬಿಟ್ಟರು. ಆಯಾಕ್ಷೇತ್ರದಲ್ಲಿ ನಡೆದ ಘಟನೆಗಳು ಚಿತ್ರಿತವಾಗಿದ್ದರೆ ಜನರ ಮನಸ್ಸಿನಲ್ಲಿ ಇತಿಹಾಸ ಉಳಿಯುತ್ತದೆ.

ಅಶೋಕವಿಹಾರ ದಿಗಂಬರ ಜೈನ ಸಮಾಜದ ಆದರಪೂರ್ವಕ ಆಹ್ವಾನವನ್ನು ಮನ್ನಿಸಿ ನಾನು ಒಪ್ಪಿಗೆ ಕೊಟ್ಟು ದೆಹಲಿಗೆ ವಿಹಾರ ಮಾಡಿದ್ದೆ. ಮಾರ್ಗದಲ್ಲಿ ಕಂಪಿಲ ಕಾನಪುರ, ಅಲೀಗಢ, ನೋಯಡಾ ಮೊದಲಾದ ಜಾಗಗಳಲ್ಲಿ ತಂಗುತ್ತಾ ಜುಲೈ 3 ರಂದು ದೆಹಲಿಯ ಅಶೋಕವಿಹಾರವನ್ನು ತಲುಪಿದೆವು. 4-7-2009 ರ ಚತುರ್ದಶಿಯಂದು ಚಾತುರ್ಮಾಸ ಸ್ಥಾಪನಾ ಸಭೆಯು ಏರ್ಪಾಡಾಗಿತ್ತು. ಸಭೆಗೆ ಭೂತ ಪೂರ್ವ ಮುಖ್ಯಮಂತ್ರಿ ಸಾಹಿಬ ಸಿಂಹವರ್ಮ ಅತಿಥಿಗಳಾಗಿಯು ವಿಶೇಷ ಅತಿಥಿಯಾಗಿ ಶ್ರೀ ದೀಪಚಂದ್ ಬಂಧು, ಮತ್ತು ಅಧ್ಯಕ್ಷರಾಗಿ ಭಾರತೀಯ ಜ್ಞಾನಪೀಠದ ನಿರ್ದೇಶಕ ರಮೇಶಚಂದರು ಭಾಗವಹಿಸಿದ್ದರು. ಎಲ್ಲರು ತಮ್ಮ ಭಾಷಣದಲ್ಲಿ ದೆಹಲಿಯಲ್ಲಿ ನಡೆಯುವ ಎಲ್ಲಾ ಕಾರ್ಯಗಳಿಗೂ ಮಾರ್ಗದರ್ಶನದ ಅವಶ್ಯಕತೆಗಳನ್ನು ಒತ್ತಿ ಹೇಳುತ್ತಾ 2600 ಜನ್ಮ ಕಲ್ಯಾಣವನ್ನು ಅತ್ಯಂತ ಪ್ರಭಾವನಾ ಪೂರ್ವಕವಾಗಿ ನಡೆಸಲು ನನ್ನಲ್ಲಿ ಪ್ರಾರ್ಥಿಸಿದರು.

ವಿಶ್ವಶಾಂತಿ ಮಹಾವೀರರ ವಿಧಾನದ 26 ಮಂಡಲಗಳ ಆಯೋಜನೆ ದೆಹಲಿಯ ಜನರ ಧಾರ್ಮಿಕ ಭಾವನೆಯಂತೆ ಆರಾಧನೆಯ ಆಯೋಜನೆಯನ್ನು ಹಮ್ಮಿಕೊಳ್ಳಲಾಯಿತು. ರವೀಂದ್ರನು ವಿಶ್ವಶಾಂತಿಗಾಗಿ ಮಹಾವೀರ ಆರಾಧನೆಯ 26 ವಿಧಾನಗಳನ್ನು ಒಟ್ಟಿಗೆ ಮಾಡಲು ಸಲಹೆಯನ್ನು ಕೊಟ್ಟನು. ಇದಕ್ಕೆ ನನ್ನ ಸಮ್ಮತಿಯು ಸಿಗುತ್ತಲೇ ಸಮಿತಿಯ ರಚನೆಯಾಗಿ ಕೆಲಸ ಪ್ರಾರಂಭವಾಯಿತು. ದರಿಯಾಗಂಜಿನ ಫಿರೋಜಶಾಹ ಕೋಟ್ಲಾ ಮೈದಾನದಲ್ಲಿ ವಿಶಾಲವಾದ ಪೆಂಡಾಲ ಹಾಕಲಾಗಿತ್ತು. ಅದರಲ್ಲಿ ಸುಮೇರು ಪರ್ವತದ ರಚನೆಗಳು ರೂಪುಗೊಂಡಿದ್ದವು. 21-10-2001 ರಲ್ಲಿ ಆರಾಧನೆಯು ಪ್ರಾರಂಭವಾಯಿತು. ಭಕ್ತರ ಮೂಲಕ ಸುಮೇರು ಪರ್ವತವು 2600 ರತ್ನಗಳಿಂದ ಕಂಗೊಳಿಸತೊಡಗಿತು. ಬಣ್ಣ ಬಣ್ಣದ ಕಲ್ಪವೃಕ್ಷಗಳೇ ಮೈದಳೆದಂತೆ ತೋರುತ್ತಿದ್ದವು.

ಆರಾಧನೆಯಲ್ಲಿ ಭಾಗವಹಿಸಿದವರಲ್ಲದೆ ಸಾವಿರಾರು ಜನ ದಿಗಂಬರ, ಶ್ವೇತಾಂಬರ, ಸ್ಥಾನಕವಾಸಿ ಧರ್ಮಬಂಧುಗಳು ಬಂದು ದರ್ಶನ ಮಾಡಿ ಆನಂದ ಪಡೆದರು. ಜನ್ಮ ಕಲ್ಯಾಣದ ಈ ರೀತಿಯ ಮಹೋತ್ಸವವನ್ನು ಇಲ್ಲಿಯವರೆಗೆ ಆಚರಿಸಿದ ಉದಾಹರಣೆ ಇರಲಿಲ್ಲ.

ಪಂಡಿತ ಶ್ರೀ ಶಿವಚರಣಲಾಲ ಜೈನರಿಗೆ ಪುರಸ್ಕಾರ

ದಿಗಂಬರ ಜೈನ ತ್ರಿಲೋಕ ಶೋಧ ಸಂಸ್ಥಾನದಲ್ಲಿ 1995ರಲ್ಲಿ ಅನಿಲಕುಮಾರ ಜೈನರಿಂದ ನನ್ನಹೆಸರಿನಲ್ಲಿ "ಗಣಿನಿ ಜ್ಞಾನಮತಿ ಪುರಸ್ಕಾರ" ವೆಂಬ ಪುರಸ್ಕಾರವನ್ನು ಕೊಡಲು ಪುದವಟ್ಟನ್ನು ಇಡಲಾಗಿದೆ. ಪ್ರಥಮ ಪುರಸ್ಕಾರವು IIಡಾII ಅನುಪಮ ಜೈನರಿಗೆ ಹಸ್ತಿನಾಪುರದಲ್ಲಿ ಕೊಟ್ಟು ಸನ್ಮಾನಿಸಲಾಗಿತ್ತು. ಪುನಃ 2000 ದಲ್ಲಿ ಮೈನಾಪುರದ ಪಂ. ಶಿವಚರಣಲಾಲ ಜೈನರಿಗೆ 2001 ರಲ್ಲಿ ನೀಡಲಾಯಿತು. ಸಂಸ್ಥಾನದ ವತಿಯಿಂದ ಪ್ರತಿವರ್ಷ ನಿರ್ಮಾಣದ ಕೆಲಸ, ಸಾಹಿತ್ಯ ಪ್ರಕಾಶನ, ಮುಂತಾದ ಸರ್ವತೋಮುಖವಾದ ಕಾರ್ಯಗಳಲ್ಲದೆ ನನ್ನ ಪ್ರೇರಣೆಯಂತೆ ಪ್ರತಿವರ್ಷ

ಯಾವುದಾದರು ವಿದ್ವಾಂಸರನ್ನಾಗಲೀ, ಕಾರ್ಯಕರ್ತರನ್ನಾಗಲೀ, ಜಂಬೂದ್ವೀಪ ಪುರಸ್ಕಾರ, ಆರ್ಯಿಕೆ ರತ್ನಮತಿ ಪುರಸ್ಕಾರ ಛೋಟೆಲಾಲ ಜೈನ ಸ್ಮೃತಿ ಮೊದಲಾದ ಪುರಸ್ಕಾರಗಳಿಂದ ಸನ್ಮಾನಿಸಲಾಗುತ್ತಿರುತ್ತದೆ.

ಭಗವಾನ ಮಹಾವೀರರ ದೀಕ್ಷಾ ಕಲ್ಯಾಣ

ಜೈನ ಸಂಪ್ರದಾಯದ ಪ್ರಮುಖವಾದ ನಾಲ್ಕು ಪಂಗಡಗಳನ್ನು ಒಳಗೊಂಡಂತೆ ಜೈನ ಮಹಾಸಭೆಯು ರೂಪುಗೊಂಡಿದೆ. ತಾಲಕಟೋರ ಡಂಡೋರ ಸ್ಟೇಡಿಯಂನಲ್ಲಿ 10-12-2001 ರಲ್ಲಿ ಜೈನ ಮಹಾಸಭೆಯ ಮೂಲಕ ಭಗವಾನ ಮಹಾವೀರರ ದೀಕ್ಷಾ ಕಲ್ಯಾಣದ ಸಮಾರಂಭವು ಏರ್ಪಾಟಾಗಿತ್ತು. ಸಮಿತಿಯ ಆಹ್ವಾನದ ಮೇರೆಗೆ ನಾನು ನನ್ನ ಸಂಘದೊಡನೆ ದಿಗಂಬರ ಜೈನ ಸಮಾಜವನ್ನು ಪ್ರತಿನಿಧಿಸಿದ್ದೆ. ಅಲ್ಲಿ ಸುಮಾರು 150 ಕ್ಕೂ ಅಧಿಕ ಸಂಖ್ಯೆಯಲ್ಲಿ ಉಪಸ್ಥಿತರಿದ್ದ ಸಾಧು-ಸಾಧ್ವಿಯರ ಸಾನಿಧ್ಯವು ದೀಕ್ಷಾ ಕಲ್ಯಾಣ ಕಾರ್ಯಕ್ರಮಕ್ಕೆ ಅತ್ಯಂತ ಗೌರವವನ್ನು ತಂದುಕೊಟ್ಟಿತು.

ವರಿಷ್ಠ ಕಾರ್ಯಕರ್ತರಿಗೆ ಒಂದು ಪ್ರೇರಣೆ

10-12-2001 ರಂದು ದೀಕ್ಷಾ ಕಲ್ಯಾಣದಲ್ಲಿ ಭಾಗವಹಿಸಿದ ಮೇಲೆ ಕೆಲವು ವರಿಷ್ಠ ಕಾರ್ಯಕರ್ತರಾದ ಶ್ವೇತಾಂಬರ ಜೈನಮೂರ್ತಿ ಪೂಜಕ ಹಾಗೂ ಜನ್ಮಕಲ್ಯಾಣ ಮಹೋತ್ಸವ ಸಮಿತಿಯ ಅಧ್ಯಕ್ಷರಾದ ಶ್ರೀ ದೀಪಚಂದ್ರ ಜೈನ ಗಾರ್ಡಿಯವರು ದೆಹಲಿಯ ಶ್ರೀ ಮಹಾವೀರ ಮೆಮೋರಿಯಲ್ ನ ಮಹಾಮಂತ್ರಿ ಎಲ್. ಎಲ್. ಆಚ್ಛಾ, ಭಾರತವರ್ಷೀಯ ದಿಗಂಬರ ಜೈನ ಮಹಾಸಭೆಯ ಅಧ್ಯಕ್ಷರಾದ ನಿರ್ಮಲಕುಮಾರ ಜೈನಸೇಠಿ, ಮೊದಲಾದವರು ನನ್ನ ದರ್ಶನಕ್ಕಾಗಿ ಬಂದಿದ್ದರು. ಅವರಿಗೆ 2600 ನೇ ಜನ್ಮ ಕಲ್ಯಾಣ ಮಹೋತ್ಸವದ ಸಂದರ್ಭದಲ್ಲಿ ಕೆಲವು ಪ್ರೇರಣೆಯನ್ನು ಕೊಡಲಾಯಿತು.

1. ಭಾರತ ಸರ್ಕಾರದ ಪರವಾಗಿ 6-4-2001ರ ಜನ್ಮಕಲ್ಯಾಣ ಮಹೋತ್ಸವ ಸಂದರ್ಭದಲ್ಲಿ ಪ್ರಧಾನಮಂತ್ರಿಯವರು ನೂರಾರು ಕೋಟಿಗಳ ಧನರಾಶಿಯನ್ನು ಕೊಡುಗೆಯಾಗಿ ಘೋಷಿಸಿದ್ದರು. ಆ ಹಣದ ವಿನಿಯೋಗವನ್ನು ಜೈನ ತೀರ್ಥಕ್ಷೇತ್ರಗಳಿಗಾಗಿ ಉಪಯೋಗಿಸಬಾರದು. ಏತಕ್ಕೆಂದರೆ ತೀರ್ಥ ಕ್ಷೇತ್ರಗಳ ಅಭಿವೃದ್ಧಿಗಾಗಿ ಹಣವನ್ನು ಕೊಡಲು ನಮ್ಮ ಜೈನ ಬಂಧುಗಳು ಹಿಂಜರಿಯುವುದಿಲ್ಲ. ನಾವು ಇಡೀ ದೇಶವನ್ನೆಲ್ಲಾ ಈ ಉದ್ದೇಶಕ್ಕಾಗಿ ಓಡಾಡಿದ್ದೆ ಆದರೆ ಬರೇ ಒಂದು ವರ್ಷದಲ್ಲಿ ಈ ರಾಶಿಯನ್ನು ಸಂಗ್ರಹಿಸಬಹುದು. ಈ ದಿನ ದೇಶಕ್ಕೆ ಹೆಚ್ಚಿನ ತೆರಿಗೆಯನ್ನು ಸಲ್ಲಿಸುತ್ತಿರುವವರು ಬರೇ ಜೈನರಾಗಿದ್ದಾರೆ.

2. ಈ ಧನರಾಶಿಯನ್ನು ಭಗವಾನ ಮಹಾವೀರರ ಬಗ್ಗೆ ಪ್ರಚಾರ ಮತ್ತು ಪ್ರಸಾರವನ್ನು ದೂರದರ್ಶನ, ರೇಡಿಯೋ ಇಂಟರನೆಟ್ ಗಳಲ್ಲಿ ಮಾಡಲು ಉಪಯೋಗ ಮಾಡಿರಿ.

3. ಭಗವಾನ ಮಹಾವೀರರ ಹೆಸರಿನಲ್ಲಿ ಅಣುವ್ರತಗಳ ಜಾಹಿರಾತನ್ನು ಸಾರ್ವಜನಿಕ ಸ್ಥಳದಲ್ಲಿ ಮಾಡಿರಿ. ಅಂದರೆ ವಿಮಾನ ನಿಲ್ದಾಣ, ರೈಲ್ವೆ ನಿಲ್ದಾಣ, ಬಸ್‌ನಿಲ್ದಾಣಗಳಲ್ಲಿ ಹಾಕುವುದರಿಂದ ಜನ್ಮ ಕಲ್ಯಾಣ ಮಹೋತ್ಸವವು ಸಾರ್ಥಕತೆಯನ್ನು ಪಡೆಯುತ್ತದೆ.

4. ಭಗವಾನ ಮಹಾವೀರರ ಹೆಸರಿನಲ್ಲಿ 2600 ಹಳ್ಳಿಗಳನ್ನು ದತ್ತು ತೆಗೆದುಕೊಂಡು ಸರಕಾರದ ವಿಕಾಸ ಕಾರ್ಯಗಳನ್ನು ಜಾರಿಗೆ ತನ್ನಿ ಕೊನೆಯ ಪಕ್ಷ 108 ಹಳ್ಳಿಗಳಾಲ್ಲಾದರೂ ಈ ವಿಕಾಸ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ. ಮಹಾವೀರರ ಪ್ರತಿಮೆಯನ್ನು ಸ್ಥಾಪಿಸಿರಿ.

5. ಜನ್ಮಕಲ್ಯಾಣದ ವರ್ಷದಲ್ಲಿ ಜನಕಲ್ಯಾಣಕ್ಕಾಗಿ ಈ ಧನರಾಶಿಯು ಉಪಯೋಗವಾಗಬೇಕು.

ನನ್ನ ಈ ಉದ್ದೇಶವನ್ನು ಚಂದನಮತಿಯವರು ವಿವರಿಸಿದಾಗ ವಿಶೇಷವಾಗಿ ಗಾರ್ಡಿಜೀಯವರಿಗೆ ಬಹಳ ಹರ್ಷವಾಯಿತು. ಇವನ್ನು ಅನುಷ್ಠಾನಗೊಳಿಸಲು ತಮ್ಮೊಳಗೆ ವಿಚಾರ - ವಿಮರ್ಶೆ ಮಾಡತೊಡಗಿದರು.

ಜನ್ಮ ಕಲ್ಯಾಣ ಮಹೋತ್ಸವದ ಪ್ರಸಂಗದಲ್ಲಿ ಒಂದು ಕಟುಸತ್ಯದ ಅರಿವಾಯಿತು. ಮಹೋತ್ಸವವನ್ನು ಸಫಲಗೊಳಿಸುವ ಸಲುವಾಗಿ ನೇತೃತ್ವ ವಹಿಸಿಕೊಂಡಿದ್ದ ಶ್ರಾವಕರು ಯಾರೇ ಮುಖ್ಯ ಸಾಧು-ಸಾಧ್ವಿಯರ ಸಲಹೆಯನ್ನು ಪಡೆಯದೇ ಇದ್ದುದ್ದು. ಸಾಧುಗಳನ್ನು ಸಂಘಟಿಸುವ ಕೆಲಸವನ್ನು ಯಾರೂ ಮಾಡದೇ ಇದ್ದದ್ದು ಈ ಕಾರಣಗಳಿಂದಲೇ ಜನ್ಮಕಲ್ಯಾಣ ಮಹೋತ್ಸವವು ಎಲ್ಲಾ ಕಡೆಯಲ್ಲಿಯು ಲೋಕೋಪಯೋಗಿ ಆಗಲೇ ಇಲ್ಲ. ಇದೇ 1974 ರಲ್ಲಿ ಭಗವಾನ ಮಹಾವೀರರ 2500 ನೇ ನಿರ್ವಾಣೋತ್ಸವದ ಸಮಯದಲ್ಲಿ ಆಚಾರ್ಯ ಶ್ರೀ ಧರ್ಮಸಾಗರ ಮಹಾರಾಜರು, ದೇಶಭೂಷಣರು, ಮುನಿಶ್ರೀ ವಿದ್ಯಾನಂದ ಮಹಾರಾಜರು, ಆಚಾರ್ಯ ತುಲಸಿಜೀ, ಮುನಿಶ್ರೀ ಸುನೀಲಕುಮಾರ ಜೀ ಮುಂತಾದ ಸಾಧುಗಳೊಡನೆ ಸಾಧ್ವಿ ಮೃಗಾವತೀ ಜೀ, ವಿಚಕ್ಷಣಾ ಜೀ, ಮುಂತಾದ ಸಾಧ್ವಿಗಳು ತಮ್ಮ ಗಾಂಭೀರ್ಯ ಗುಣಗಳಿಂದ ಮಹೋತ್ಸವವನ್ನು ಪ್ರತಿನಿಧಿಸಿದ್ದರು. ಇದರಿಂದಾಗಿ ಇದರ ಪ್ರಭಾವವು ದೇಶ-ವಿದೇಶಗಳಲ್ಲೂ ತನ್ನ ಶಾಶ್ವತವಾದ ಛಾಪನ್ನು ಮೂಡಿಸಿತ್ತು. ಹಾಗೇ ಸರಕಾರದಿಂದ ಸಹ ಜೈನ ಶಾಸನ ಅದ್ವಿತೀಯವಾದ ಪ್ರಭಾವವನ್ನು ಪಡೆದಿತ್ತು.

ಭಗವಾನ ಮಹಾವೀರರ ಜನ್ಮಭೂಮಿಯನ್ನು ಅಭಿವೃದ್ಧಿಗೊಳಿಸುವ ಭಾವನೆ

2000 ದ ಇಸವಿಯಲ್ಲಿ ಭಗವಾನ ವೃಷಭದೇವರ ಅಂತರರಾಷ್ಟ್ರೀಯ ನಿರ್ವಾಣ ಮಹೋತ್ಸವ ನೆರವೇರಿದ ನಂತರ ನನಗೆ ಮಹಾವೀರರ ಜನ್ಮಭೂಮಿ ಕುಂಡಲಪುರದ ಅಭಿವೃದ್ಧಿ ಮಾಡಬೇಕೆಂಬ ಭಾವನೆ ಬಲವಾಗ ತೊಡಗಿತು. ಇದನ್ನು ಆಗಾಗ್ಗೆ ಚಂದನಮತಿಯ ಮುಂದೆ ವ್ಯಕ್ತಪಡಿಸುತ್ತಲೇ ಇದ್ದೆ. ಇದನ್ನು ಕೇಳುತ್ತಲೇ ಇದ್ದ ಚಂದನಮತಿಯು 2001ರಲ್ಲಿ ಪ್ರಯಾಗದಿಂದ ದೆಹಲಿಗೆ ವಿಹಾರ ಹೊರಡುವ ಬದಲು ಕುಂಡಲಪುರದ ಕಡೆಗೆ ಹೊರಡಲು ಸಲಹೆ ಕೊಟ್ಟರು. ಆದರೆ ನಾನು ಜನ್ಮ ಕಲ್ಯಾಣದ ಕಾರಣದಿಂದ ಹಲವಾರು ಜನೋಪಯೋಗಿ ಕಾರ್ಯಗಳನ್ನು ಮಾಡಬಹುದೆಂಬ ಆಕಾಂಕ್ಷೆಯಿಂದ ಕುಂಡಲಪುರ ಪ್ರವಾಸವನ್ನು ಮುಂದೂಡಿದೆ.

ನಾನು ಅನೇಕ ಸಲ ಸಮಾಜದ ಮಾನ್ಯ ಸದಸ್ಯರಲ್ಲಿ ಕುಂಡಲಪುರದ ಅಭಿವೃದ್ಧಿಯ ಬಗ್ಗೆ ಗಮನವನ್ನು ಸೆಳೆಯುತ್ತಲೇ ಇದ್ದೆ. ಆದರೆ ಕೆಲವು ಇತಿಹಾಸಕಾರರು ಹಾಗೆ ಸಂಶೋಧಕರ ವಿಚಾರಧಾರೆಯಿಂದಾಗಿ ಜೈನಸಮಾಜದ ಕೆಲವು ಸುಧಾರಕ ಜನರೇ ವೈಶಾಲಿಯ ಕುಂಡ ಗ್ರಾಮವೇ ಮಹಾವೀರರ ಜನ್ಮಭೂಮಿ ಎಂದು ಮಾನ್ಯತೆ ಕೊಡಲಾರಂಭಿಸಿದ್ದರು. ಇದರಿಂದಾಗಿ ನಿಜವಾದ ಜನ್ಮಭೂಮಿ ಉಪೇಕ್ಷೆಗೆ ಒಳಗಾಯಿತು. ಬಿಹಾರ ರಾಜ್ಯದ ದಿಗಂಬರ ಜೈನ ತೀರ್ಥಕ್ಷೇತ್ರ ಕಮಿಟಿಯ ಮಂತ್ರಿಗಳಾದ ಅಜಯಕುಮಾರರು ಅಧಿಕೃತ ಸೂಚನೆ ನೀಡಿದಂತೆ ಇಂದಿಗೂ 99% ಜನರು ಕುಂಡಲಪುರಕ್ಕೆ ದರ್ಶನಕ್ಕೆ ಬರುತ್ತಾರೆ ಎಂದು. ಇದರಿಂದಾಗಿ ನಾನು ಮಹಾವೀರರ

ಜನ್ಮಭೂಮಿಗೆ ಮನದಲ್ಲೇ ವಂದಿಸಿದೆ. ನನಗೆ ಕುಂಡಲಪುರದ ಅಭಿವೃದ್ಧಿಯನ್ನು ಮಾಡಲೇ ಬೇಕೆಂಬ ಮಹದಾಸೆಯು ಬಲವಾಗ ತೊಡಗಿತು. ನಾನು ಜಂಬೂದ್ವೀಪದ-ಹಸ್ತಿನಾಪುರದ ಕಾರ್ಯಕರ್ತರಲ್ಲಿ ಮೊದಲು ಕೀರ್ತಿಸ್ತಂಭವನ್ನಾದರೂ ಸ್ಥಾಪಿಸಿರೆಂದು ಪ್ರೇರಣೆ ಕೊಡುತ್ತಲೇ ಇದ್ದೆ.

ಬಹಳ ಹಿಂದಿನ ಭಕ್ತರಾದ ಕಮಲಚಂದ ಜೈನರ ಗುರುಭಕ್ತಿ

ನನ್ನ ಬಾಯಿಂದ ಕೀರ್ತಿಸ್ತಂಭದ ನಿರ್ಮಾಣವಾಗಬೇಕೆಂಬ ಶಬ್ದ ಹೊರಬೀಳುತ್ತಲೇ ನನ್ನ ಬಹಳ ಹಿಂದಿನ ಭಕ್ತರಾದ ಕಮಲಚಂದ ಕೈಲಾಸಚಂದ ಜೈನರು ಬಹಳ ಸಂತೋಷದಿಂದ ಒಪ್ಪಿಗೆಯನ್ನಿತ್ತರು. 24-3-2002 ರಂದು ತನ್ನ ಪರಿವಾರ ಮತ್ತು ಬಂಧುಗಳಿಗಾಗಿ ಒಂದು ಬೋಗಿಯನ್ನೇ ಮಾಡಿಕೊಂಡು ಕುಂಡಲಪುರಕ್ಕೆ ಹೊರಟರು. ಅಲ್ಲಿ ರವೀಂದ್ರಕುಮಾರ, ಬ್ರಹ್ಮಚಾರಿಣಿ ಸಹೋದರಿಯರು, ಕ್ಷೇತ್ರದ ಮಂತ್ರಿಗಳಾದ ಅಜಯಕುಮಾರ ಜೈನ ಹಾಗೂ ಶ್ರೀ ರಾಮಗೋಪಾಲ ಜೈನರು ಇವರು ಬಿಹಾರದ ದಿಗಂಬರ ಜೈನ ತೀರ್ಥನ್ಯಾಸ ಬೋರ್ಡಿನ ಅಧ್ಯಕ್ಷರು. ಪೂರ್ವ ಶಿಕ್ಷಣ ಮಂತ್ರಿಗಳಾದ ಶ್ರೀ ಸುರೇಂದ್ರಪ್ರಸಾದ ಮುಂತಾದ ಮಹಾನುಭಾವರು ಅಲ್ಲಿ ಉಪಸ್ಥಿತರಿದ್ದು ಧರ್ಮಪ್ರಭಾವನಾ ಪೂರ್ವಕವಾದ ಕೀರ್ತಿಸ್ಥಂಭಕ್ಕಾಗಿ ಶಿಲಾನ್ಯಾಸವನ್ನು ಪ್ರಾಚೀನ ಮಂದಿರದ ಪರಿಸರದಲ್ಲಿ ನೆರವೇರಿಸಿದರು. ಇವರು ಬಹಳ ಹಿಂದಿನಿಂದಲೂ ನನ್ನ ಭಕ್ತರಾಗಿದ್ದಾರೆ. ತ್ರಿಲೋಕ ಶೋಧ ಸಂಸ್ಥಾನ ಬಗ್ಗೆ ತಮ್ಮನ್ನೇ ಸಮರ್ಪಿಸಿಕೊಂಡಿದ್ದಾರೆ. ನಮ್ಮ ಸಂಘದ ಬಗ್ಗೆ ಅವರಿಗೆ ಅಪರಿಮಿತವಾದ ಭಕ್ತಿ. ಇಂದು ಕೂಡ ಅವರ ಭಕ್ತಿ ಹಾಗೇ ಇದೆ. ಪ್ರತಿಕ್ಷಣವು ಯಾವುದಾದರು ಸೇವೆ ಮಾಡುವುದೇ ತಮ್ಮ ಅಹೋಭಾಗ್ಯವೆಂದು ತಿಳಿಯುತ್ತಿದ್ದಾರೆ. ಇವರ ಹೃದಯದಲ್ಲಿ ಗುರುಭಕ್ತಿ ಇದೇ ರೀತಿ ಇರಲಿ. ಇವರ ಪರಿವಾರದ ಮುಂದಿನ ಪೀಳಿಗೆಯವರಿಗೂ ಇದೇ ಗುಣ ಮುಂದುವರಿಯಲಿ ಎಂಬುದೇ ನಮ್ಮ ಶುಭ ಕಾಮನೆಗಳು.

ಕುಂಡಲಪುರದ ಕಡೆಗೆ ಸಂಘದ ಮಂಗಳ ವಿಹಾರ

ದೆಹಲಿಗೆ ನಾನು ಬಂದ ದಿನವೇ ಪ್ರಭಾವನಾ ಪೂರ್ಣ ಕಾರ್ಯಕ್ರಮ ನನ್ನ ಮುಂದೆ ನಡೆಯುತ್ತಿದ್ದರೂ ನನ್ನೊಳಗೆ ಕುಂಡಲಪುರದ ಅಭಿವೃದ್ಧಿಯ ರೂಪರೇಖೆಗಳು ಮನದಲ್ಲಿ ಸುಳಿಯುತ್ತಿತ್ತು. 2002 ರ ಜನವರಿ 2 ರಂದು ಪಿಕ್ಕಿ ಅಡಿಟೋರಿಯಂನಲ್ಲಿನನ್ನ ಸಂಘದ ಸಾನಿಧ್ಯದಲ್ಲಿ "ಅಖಿಲ ಭಾರತೀಯ ದಿಗಂಬರ ಜೈನ ಯುವ ಪರಿಷತ್" ನ ಸ್ಥಾಪನೆಯ ಸಮಾರಂಭದ ಸಾರ್ವಜನಿಕ ಸಭೆಯಲ್ಲಿ ಮಹಾವೀರರ ಜನ್ಮ ಭೂಮಿ ಕುಂಡಲಪುರದ ಅಭಿವೃದ್ಧಿಯ ಬಗ್ಗೆ ಘೋಷಣೆ ಮಾಡುತ್ತಾ ಪ್ರಾಚೀನ ಆಗಮ ಗ್ರಂಥದಲ್ಲಿನ ಪ್ರಮಾಣಗಳನ್ನು ಮುಂದಿಟ್ಟೆ. ಈ ಸಭೆಯಲ್ಲಿ ಮಹನೀಯರಾದ ಡಾ. ಸಿಂಘವೀ, ಸಾಹೂ ರಮೇಶಚಂದ ಜೈನ, ಪ್ರೊ. ವಾಚಸ್ಪತಿ ಜೀ ಉಪಾಧ್ಯಾಯರು, ನಿರ್ಮಲಕುಮಾರ ಸೇಠಿ, ಚಕ್ರೇಶಜೈನ, ಪ್ರಾಚಾರ್ಯ ಶ್ರೀ ನರೇಂದ್ರ ಪ್ರಕಾಶಜೈನ ಪಂ. ಶಿವಚರಣಲಾಲ ಮುಂತಾದವರು ಇದ್ದರು. ನನ್ನ ಆಹ್ವಾನಕ್ಕೆ ಪೂರ್ಣ ಸಹಕಾರವನ್ನು ಕಾರ್ಯಕರ್ತರು ಘೋಷಣೆ ಮಾಡಿದರು.

ಧರ್ಮ ಚರ್ಚೆ, ತೀರ್ಥಕ್ಷೇತ್ರಗಳ ಅಭಿವೃದ್ಧಿಯ ಬಗ್ಗೆ ಯೋಚಿಸುವುದರಲ್ಲೆ ದಿನ ಕಳೆಯುತ್ತಿತ್ತು. 13-2-2002 ರ ಬೆಳಗ್ಗೆ ನನ್ನ ಶಿಷ್ಯೆ ಆರ್ಯಿಕೆ ಚಂದನಮತಿಯು ಕೈ ಮುಗಿದು ಮಾತಾಜೀ ಒಮ್ಮೆ ಹಸ್ತಿನಾಪುರಕ್ಕೆ ಹೋಗಿ ದರ್ಶನ ಮಾಡಿ ತಾವು ಕುಂಡಲಪುರಕ್ಕೆ ಮಂಗಳ ವಿಹಾರ ಹೊರಡಿ ತಮ್ಮ ದಿವ್ಯಶಕ್ತಿ ಇಲ್ಲದೆ ಅಲ್ಲಿ ಅಭಿವೃದ್ಧಿಯ ಕೆಲಸವಾಗಲಾರದು. ಇಲ್ಲದಿದ್ದರೆ ಅದು ಇತಿಹಾಸದಲ್ಲಿ ಸೇರಿಹೋಗುತ್ತದೆ ಎಂದರು. ನನಗೂ

ಸರಿ ಎನ್ನಿಸಿ ಮೋತಿಚಂದ ಮತ್ತು ರವೀಂದ್ರರನ್ನು ಕರೆಸಿ ವಿಚಾರ ವಿಮರ್ಶೆ ಮಾಡಿದಾಗ ಅವರಿಗೂ ಹೊರಡುವುದು ಸರಿ ಎನ್ನಿಸಿದರೂ ತೀರ್ಮಾನವನ್ನು ನನ್ನ ಮೇಲೆ ಬಿಟ್ಟರು. ಕೊನೆಗೆ ಮಹಾವೀರರ ಜನ್ಮ ಭೂಮಿಯೇ ನನ್ನನ್ನು ಕೈ ಬೀಸಿ ಕರೆಯತೊಡಗಿದಂತೆ ಭಾಸವಾಗತೊಡಗಿತು. ಅಲ್ಲಿ ಅಭಿವೃದ್ಧಿ ಮಾಡುವಷ್ಟು ಸಮಯ ವರ್ಧಮಾನರ ಚರಣ ಸಾನಿಧ್ಯದಲ್ಲಿ ಕಳೆಯಬಹುದೆಂಬ ಸಂತೋಷವು ಉಂಟಾಗತೊಡಗಿತು.

ಕೊನೆಗೆ ವಿಹಾರ ಹೊರಡುವುದನ್ನು ಘೋಷಣೆ ಮಾಡಿಯೇ ಬಿಟ್ಟೆ. ವಿಹಾರ 20-2-2002 ಎಂದು ನಿರ್ಧಾರವಾಯಿತು. ನನ್ನ ಈ ನಿರ್ಧಾರ ಕೇಳಿ ಮೊದಲು ದೆಹಲಿ ನಿವಾಸಿಗಳು ಆಶ್ಚರ್ಯ ಚಕಿತರಾದರು. ಕುಂಡಲಪುರದ ಅಭಿವೃದ್ಧಿಯ ವಿಷಯ ತಿಳಿದು ನೆಮ್ಮದಿಗೊಂಡರು. ನಿಶ್ಚಿತ ಗಳಿಗೆಯಂದು ಜಿನೇಂದ್ರ ಭಗವಂತರ ದರ್ಶನ ಮಾಡಿ ಹೊರೆಟೆವು. ಮಹಾವೀರ ಪ್ರಸಾದರು ಸಂಘಪತಿಯಾಗಿದ್ದರು. ನಿರ್ಮಲ ಕುಮಾರ ಸೇಠಿಯವರೊಡನೆ ನೂರಾರು ಜನರು ಬೀಳ್ಕೊಡಲು ಕೈಗಳಲ್ಲಿ ಬಾವುಟ ಹಿಡಿದು ಇಂಡಿಯಾಗೇಟಿನವರೆಗೂ ಮೆರವಣಿಗೆಯಲ್ಲಿ ಬಂದಿದ್ದರು. "ಜನ್ಮಭೂಮಿ ವಿಕಾಸ ಸಂದೇಶ" ವನ್ನು ಪ್ರಚಾರ ಮಾಡುತ್ತಾ ನಮ್ಮ ಸಂಘವು ವೀರಜನ್ಮ ಭೂಮಿ ಕುಂಡಲಪುರದ ಕಡೆಗೆ ಹೊರಟಿತು.

ಮಾರ್ಗದಲ್ಲಿ ಮಥುರಾ, ಆಗ್ರಾ, ಫಿರೋಜಾಬಾದ್, ಇಟಾವ ಮೊದಲಾದ ನಗರಗಳಲ್ಲಿ ಧರ್ಮ ಪ್ರಭಾವನೆ ಮಾಡುತ್ತಾ ಮುನ್ನೆಡೆದೆವು. ಅವುಗಳನ್ನೆಲ್ಲ ಇಲ್ಲಿ ವಿವರಿಸಲು ಸಮಯಾಭಾವವಿದೆ. ಸಮಯ ಬಂದಾಗ ನನ್ನ ಭಕ್ತಪಾಠಕರಿಗೆ ವಿಹಾರದ ಅನುಭವಗಳನ್ನು ವಿಸ್ತಾರವಾಗಿ ಹೇಳುತ್ತೇನೆ. ಸುಮಾರು 3 ತಿಂಗಳು 22 ದಿನಗಳ ವಿಹಾರಮಾಡಿ ಅರ್ಧ ದಾರಿಯನ್ನು ದಾಟಿದಂತೆ ಆಯಿತು. 12-6-2002 ರಂದು ಪ್ರಯಾಗವನ್ನು ತಲುಪಿದೆವು. ಅಲ್ಲಿ ದೆಹಲಿಯ ಚೇತನಲಾಲ ಸತ್ಯೇಂದ್ರ ಕುಮಾರ ಜೈನ ಪರಿವಾರದವರ ಸೌಜನ್ಯದಿಂದ ಇಲ್ಲಿ ನವನಿರ್ಮಿತ ಕೈಲಾಸಪರ್ವತದಲ್ಲಿ 72 ಜಿನಮಂದಿರಗಳಲ್ಲಿ ವೇದಿ ಪ್ರತಿಷ್ಠಾಪೂರ್ವಕವಾಗಿ ಮೂರುಕಾಲದ 72 ಪ್ರತಿಮೆಗಳನ್ನು ವಿರಾಜಮಾನಗೊಳಿಸಲಾಯಿತು. ಇಲ್ಲಿಯ ಚಾತುರ್ಮಾಸದ ಸ್ಥಾಪನೆಯು ಆಯಿತು. 15-8-2002 ರಂದು ರವೀಂದ್ರನು ಬಂದು ಹಸ್ತಿನಾಪುರದ ಜಂಬೂದ್ವೀಪದ ಕಡೆಯಿಂದಲೇ ಕುಂಡಲಪುರದಲ್ಲಿ ಎರಡು ಎಕರೆ ಭೂಮಿಯನ್ನು ಕೊಂಡು ರಿಜಿಸ್ಟರ್ ಮಾಡಿಸಿದ ವಿಷಯವನ್ನು ತಿಳಿಸಿದೆ. ಈಗ ವಿಶ್ವದ ದೃಷ್ಟಿಗೆ ಕುಂಡಲಪುರ ಕೇಂದ್ರ ಬಿಂದು ಆಗತೊಡಗಿತು.

ನ್ಯಾಯಾಧೀಶರ ಸಮ್ಮೇಳನ

ಚಾತುರ್ಮಾಸದಲ್ಲಿ ಹಲವಾರು ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ. ಕುಂಡಲಪುರ ರಾಷ್ಟ್ರೀಯ ಮಹಾಸಮ್ಮೇಳನವು ನಡೆಯಿತು. ನನ್ನ ಪ್ರೇರಣೆಯಿಂದ ಉತ್ತರ ಪ್ರದೇಶದ ಹೈಕೋರ್ಟಿನ ನ್ಯಾಯಧೀಶರುಗಳನ್ನು ಆಹ್ವಾನಿಸಿ 3-11-2002 ರಂದು ಅಹಿಂಸೆ, ಹಾಗೂ ನ್ಯಾಯ ವಿಷಯದ ಮೇಲೆ "ನ್ಯಾಯಾಧೀಶ ಸಮ್ಮೇಳನ" ವನ್ನು ಆಯೋಜಿಸಲಾಗಿತ್ತು. ಅಂದಿನ ಸಮ್ಮೇಳನದಲ್ಲಿ ನ್ಯಾಯಮೂರ್ತಿ ಶ್ರೀ ಸುಧೀರ ನಾರಾಯಣ ಅಗ್ರವಾಲ ಹಾಗೂ ನ್ಯಾಯಮೂರ್ತಿಗಳಾದ ಎಮ್. ಸಿ . ಜೈನರ ಹಿನ್ನಲೆಯು ನಿಜವಾಗಿಯು ಅತ್ಯಂತ ಅರ್ಥಪೂರ್ಣವಾಗಿತ್ತು.

ಇದಕ್ಕಿಂತ ಮೊದಲು 3-9-2002 ರಂದು ಇಲಾಹಾಬಾದ್ ವಿಶ್ವವಿದ್ಯಾನಿಲಯಕ್ಕೂ ಸಂಘದೊಡನೆ ಹೋಗಿ "ಧರ್ಮ ಮತ್ತು ಸಂಸ್ಕೃತಿ" ಯ ವಿಷಯದ ಮೇಲಿನ ಸಂಗೋಷ್ಠಿಯಲ್ಲಿ ಭಾಗವಹಿಸಿ ಪ್ರವಚನವನ್ನು ನೀಡಿದಾಗ ಅಲ್ಲಿ ಸೇರಿದ್ದ ಎಲ್ಲಾ ಇತಿಹಾಸತಜ್ಞರು ಬಹಳ ಸಂತೋಷಗೊಂಡರು. ಪುನಃ 15-9-2002 ರಂದು ಇತಿಹಾಸಕಾರರದೆ

ಒಂದು ಸಮ್ಮೇಳನವನ್ನು ಮಾಡಿಸಿ ಅವರಿಗೆ ಜೈನಧರ್ಮದ ವಿಷಯದಲ್ಲಿದ್ದ ಎಲ್ಲಾ ಭ್ರಾಂತಿಗಳನ್ನು ಸಂಶೋಧನೆ ನಡೆಸಿ ಪಠ್ಯಪುಸ್ತಕಗಳನ್ನು ಸರಿಪಡಿಸಲು ಉತ್ತೇಜಿಸಿದೆ. ಹೀಗೆ ಹಲವಾರು ಶೈಕ್ಷಣಿಕ ಸಾಮಾಜಿಕ ಆಯೋಜನೆಯೊಂದಿಗೆ ಚಾತುರ್ಮಾಸವು 4-11-2002 ರಂದು ಸಮಾರೋಪಗೊಂಡಿತು. ಕೈಲಾಸಪರ್ವತದ ಎದುರಿಗೆ ಪಾವಾಪುರಿಯ ಜಲಮಂದಿರದ ದೃಶ್ಯವನ್ನು ಉಪಸ್ಥಿತಗೊಳಿಸಿ ಭ. ಮಹಾವೀರರ ಚರಣಗಳಿಗೆ ನಿರ್ವಾಣ ಲಾಡುವನ್ನು ಅರ್ಪಿಸಲಾಯಿತು.

ಪ್ರಯಾಗದಿಂದ ಕುಂಡಲಪುರದ ಕಡೆಗೆ ವಿಹಾರ

10-11-2002 ರಂದು ಕುಂಡಲಪುರದ ಕಡೆಗೆ ಹೊರಟೆವು. ಹೊರಡುವ ಮೊದಲು ವೃಷಭದೇವರ ಮುಂದೆ ನಿಂತು ಪ್ರಾರ್ಥಿಸುತ್ತಾ ಹೇ ಭಗವಾನ ನಾನು ಏನೂ ಅಲ್ಲ ನಾನೀಗ ನಿನ್ನ ಮೊಮ್ಮಗನ ಕಾರ್ಯಗಳಿಗೆ ಹೊರಡುತ್ತಿದ್ದೇನೆ. ಈಗ ನನ್ನ ಗೌರವ ನಿನ್ನ ಕೈಗಳಲ್ಲಿದೆ ಎಂದು ವಿನಂತಿಸುತ್ತಿದ್ದೇನೆ. ಫೆಬ್ರವರಿ 3 ನೇಯ ತಾರೀಕು ಕುಂಡಲಪುರದಲ್ಲಿ ಪಂಚಕಲ್ಯಾಣ ಮಸ್ತಕಾಭಿಷೇಕ ಘೋಷಣೆ ಮಾಡಿ ಆಗಿದೆ. ಆದರೆ ಅಲ್ಲಿ ಇನ್ನು ಏನು ಕೆಲಸವಾಗಿಲ್ಲ. ಇನ್ನು ಎರಡು ತಿಂಗಳಲ್ಲಿ ಏನಾಗಬಹುದು. ಹಾಗಾಗಿ ತಾರೀಕನ್ನು ಮುಂದೆ ಹಾಕುವಂತೆ ರವೀಂದ್ರನು ಪ್ರಾರ್ಥಿಸಿದರು. ನಾನು ಒಮ್ಮೆ ಘೋಷಿಸಿದ ಮೇಲೆ ಮುಂದೆ ಹಾಕುವ ಪ್ರಶ್ನೆ ಇಲ್ಲವೆಂದು ನಾನು ಮೇಲ್ನೋಟಕ್ಕೆ ಹೇಳಿದರೂ ಮನದೊಳಗೆ ನನಗೂ ಆತಂಕ ಮನೆ ಮಾಡಿತ್ತು.

ಆದರೆ ಈ ಪ್ರಸಂಗದಲ್ಲಿ ನಾನು ವೃಷಭ ತೀರ್ಥಂಕರರ ಅತಿಶಯವನ್ನು ಮನಸಾರೆ ಹೊಗಳುತ್ತೇನೆ. ಶ್ರೀ ವೃಷಭದಾಸರು ಇವರು ದಿಗಂಬರ ಜೈನ ಸಮಾಜದ ಅಧ್ಯಕ್ಷರಾಗಿದ್ದರು. ಇವರ ಮೊಮ್ಮಗ ಶ್ರೀ ದೀಪಕಜೈನರು ಕುಂಡಲಪುರದ ಮಹೋತ್ಸವಕ್ಕೆ ಸೌಧರ್ಮ ಇಂದ್ರನ ಜವಾಬ್ದಾರಿ ವಹಿಸಿಕೊಳ್ಳುತ್ತಲೇ ಸಂಘವು ಮುನ್ನೆಡೆಯ ತೊಡಗಿತು. ಮುಂದೆ ಅರಾ, ಪಟ್ನಾ ಹೀಗೆ ಎಲ್ಲಾ ಸ್ಥಳದ ಜನರು ಮಹೋತ್ಸವದಲ್ಲಿ ಭಾಗವಹಿಸಲು ಸಿದ್ಧರಾದರು. ಹೀಗೆ ಭಕ್ತರ ಗುಂಪಿನೊಡನೆ 29-10-20023 ರಂದು ಕುಂಡಲಾಪುರವನ್ನು ತಲುಪಿ ಆಯಿತು.

೧೦೬

ಕುಂಡಲಪುರ ವಿಕಾಸದಲ್ಲಿ ಪ್ರಾರಂಭಿಕ ಹಂತ

ಕ್ಷೇತ್ರ ತಲುಪುತ್ತಲೇ ಉತ್ತರ ಮುಖವಾಗಿ ಹೊಸದಾದ ಜಾಗದಲ್ಲಿ ನನ್ನ ಸಂಘದ ಸಾನಿಧ್ಯದಲ್ಲಿ ದೀಪಕ ಜೈನನಿಂದ ಶಿಲಾನ್ಯಾಸ ಮಾಡಿಸುತ್ತಿದ್ದಂತೆ ಸಂಘ ಮುನ್ನೆಡೆಯಲು ಆಜ್ಞೆಗಾಗಿ ಕಾದು ನಿಂತಿತ್ತು. 31-12-2002 ತಾರೀಕಿನಂದು ಕೆಲಸಗಳು ಪ್ರಾರಂಭವಾಯಿತು. ಶಿಲಾನ್ಯಾಸ ಮುಗಿಸಿ ಬರುತ್ತಲೇ ಎದುರಿಗೆ ಸುಸಜ್ಜಿತ ಆನೆ ಕಂಡು ಬಂದಿತು. ಈ ಶುಭ ಶಕುನದಿಂದ ಎಲ್ಲರ ಮನಸ್ಸು ಹಗುರವಾಯಿತು. ಕೊನೆಗೆ ಭಕ್ತರು ವಹಿಸಿಕೊಂಡ ಕೆಲಸಗಳನ್ನು ಪ್ರಾರಂಭಿಸಿದರು. ನಾವು ಹಳೆಯ ಮಂದಿರದಲ್ಲಿ ತಂಗಿದ್ದೆವು. ಇಲ್ಲಿಯ ಜನರು ಆಹಾರಕ್ಕಾಗಿ ಮನೆಗಳಿಗೆ ಆಹ್ವಾನ ಕೊಡ ತೊಡಗಿದ್ದರು. 30-12-2002 ಕ್ಕೆ ಎಲ್ಲಾ ಕೆಲಸಗಳು ಪ್ರಾರಂಭವಾಯಿತು. ಪ್ರತಿದಿನ ಕೆಲಸ ನಡೆಯುತ್ತಿದ್ದ ಜಾಗದಲ್ಲಿ ಮೈದಾನದಲ್ಲೇ ಬ್ರಹ್ಮಚಾರಿಣಿ ಹಾಗೇ ಬ್ರಹ್ಮಚಾರಿಗಳಿಂದ ಪೂಜೆ ವಿಧಾನ ಜಪವೇ ಶ್ರೀ ರಕ್ಷೆ ನಮಗೆ ಚಳಿಯನ್ನು ಲೆಕ್ಕಿಸದೇ ನಮ್ಮ ಪೂಜಾವಿಧಾನಗಳಲ್ಲಿ ತೊಡಗಿರುತ್ತಿದ್ದೆವು.

ಜನವರಿ ಒಂದರಂದು ಕ್ರಿ. ಶಕದ ನೂತನ ವರ್ಷದಂದು ನಾನು ಮಂಗಳ ಆಶೀರ್ವಾದ ಮಾಡಿದೆ. 108 ದೀಪಗಳಿಂದ ಬ್ರ. ರವೀಂದ್ರ ಮತ್ತು ಉಳಿದ ಬ್ರಹ್ಮಚಾರಿಗಳು ಆರತಿ ಮಾಡಿ ಶುಭಕಾಮನೆಗೈದರು. ಫೆಬ್ರವರಿ 7 ರಿಂದ 12 ರವರೆಗೆ ನಡೆಯುವ ಮಹೋತ್ಸವಕ್ಕಾಗಿ ಆಗಾಗ್ಗೆ ಮೀಟಿಂಗಗಳು ನಡೆಯುತ್ತಿದ್ದು ಬೇರೆ ಊರಿನ ಜನರು ತಾವು ವಹಿಸಿಕೊಂಡಿದ್ದ ಕೆಲಸಗಳಿಗೆ ಕಟಿಬದ್ಧರಾಗಿದ್ದರು.

ನವನಿರ್ಮಿತ ಕಟ್ಟಡಕ್ಕೆ "ನಂದ್ಯಾವರ್ತ ಮಹಲ್" ಎಂದು ಹೆಸರಿಟ್ಟೆವು. ಏಕೆಂದರೆ ಮಹಾವೀರರ ಜನ್ಮ ಈ ಅರಮನೆಯಲ್ಲಿ ಆದ ಸಂಕೇತ ಇದು. ಮಹೋತ್ಸವದ ಸಲುವಾಗಿ ಮಾಡಿಸಿದ್ದ ಬೋರ್ಡ್, ಭಿತ್ತಿಪತ್ರಗಳು ದೇಶದ ವಿವಿಧ ಕಡೆ ಪ್ರಚಾರಕ್ಕಾಗಿ ಕಳುಹಿಸಲಾಯಿತು. ಜನವರಿ 14 ರಂದು ನಂದ್ಯಾವರ್ತ ಮಹಲಿನ ಪರಿಸರಕ್ಕೆ ಮೊದಲು 11¼ ಅಡಿಯ ಕೆಂಪುಮಿಶ್ರಿತ ಪದ್ಮಾಸನದಲ್ಲಿರುವ ಆದಿನಾಥರ ಬಿಂಬವು ಬಂದಿತು. ಜನವರಿ 5 ರಂದೆ ವೇದಿಕೆ ಸಿದ್ಧವಾಗಿತ್ತು. ಮಹಾವೀರ ಭವನದ ಬಲಗಡೆ ಭ. ವೃಷಭದೇವರ ಮಂದಿರ ನಿರ್ಮಾಣವಾಯಿತು. ಎಡಗಡೆಗೆ ನವಗ್ರಹ ಶಾಂತಿ ಜಿನಮಂದಿರದ ಶಿಲಾನ್ಯಾಸ ಫೆಬ್ರವರಿ 9-2-2003 ರಂದು ಶ್ರೀ ಜ್ಞಾನಚಂದ್ ಜೈನರು ಮಾಡಿದರು. ಈ ಪರಿಸರದಲ್ಲಿ ಈ ಮೂರು ಮಂದಿರಗಳಲ್ಲದೇ ಮೂರು ಕಾಲದ ತೀರ್ಥಂಕರರ ಮಂದಿರವು ನಿರ್ಮಾಣವಾಗತೊಡಗಿತು. ಸಾಧುವರ್ಗದ ವಸತಿಯನ್ನು ಬೇಗನೆ ಪೂರೈಸಿ ನಾವೆಲ್ಲ ಅಲ್ಲಿಗೆ ವಸತಿಯನ್ನು ಬದಲಾಯಿಸಿದೆವು. ನನ್ನ ಆರೋಗ್ಯದ ರಕ್ಷಣೆಯು ಉತ್ಸವಕ್ಕೆ ಅತಿಮುಖ್ಯವಾಗಿತ್ತು. ಹಸ್ತಿನಾಪುರಕ್ಕೆ ಬರುತ್ತಿದ್ದ ಭಕ್ತರೆಲ್ಲ ಇಲ್ಲಿಗೆ ಬರತೊಡಗಿದರು. ಬಂದವರು ನಡೆಯುತ್ತಿರುವ ಅಗಾಧ ಕೆಲಸ ನೋಡಿ ಅಚ್ಚರಿಗೊಳ್ಳುತ್ತಿದ್ದರು. ಇದೆಲ್ಲವು ಕಲಿಯುಗದಲ್ಲಿ ಯಾರು ಭಗವಂತನಲ್ಲಿ ಅನನ್ಯ ಭಕ್ತಿ ಇಡುತ್ತಾರೋ ಅವರಿಗೆ ಮಾತ್ರ ಅನುಭವವಾಗುತ್ತದೆ.

ಪಂಚ ಕಲ್ಯಾಣದ ಪ್ರತಿಷ್ಠೆ ಹಾಗೂ ಮಸ್ತಕಾಭಿಷೇಕ

ಮಹೋತ್ಸವಕ್ಕಾಗಿ ಆಗಮಿಸುವ ಭಕ್ತರ ವಸತಿಗಾಗಿ ನಿರ್ಮಾಣವಾಗಿದ್ದ ಕಟ್ಟಡಗಳೇ ದೇವ ನಿರ್ಮಿತ ಅತಿಶಯದಂತೆ ಕಂಗೊಳಿಸತೊಡಗಿತ್ತು. ಜನಗಳು ಮಹೋತ್ಸವಕ್ಕಾಗಿ ಆಗಮಿಸತೊಡಗಿದರು. ಆದರೆ ಮಹಾವೀರ ಸ್ವಾಮಿಯ ಬಿಂಬ ಇನ್ನೂ ಬಂದಿರಲಿಲ್ಲ. ಇದರ ಚಿಂತೆ ನನ್ನನ್ನು ಬಾಧಿಸತೊಡಗಿತು. ಪ್ರತಿಮೆ ಫೆ. 5ರ (ಮಾಘ ಶು. ಚೌತಿ) ರಾತ್ರಿ ಜಯಪುರದಿಂದ ಕುಂಡಲಪುರಕ್ಕೆ ಆಗಮಿಸಿತು.ಫೆಬ್ರವರಿ 6 ರಂದು ಕ್ರೇನ ಸಹಾಯದಿಂದ ಮಹಾವೀರರ ವಿಗ್ರಹವನ್ನು 25 ಅಡಿ ಎತ್ತರದ ಮಹಾವೀರ ಮಂದಿರದ ವೇದಿಕೆಯ ಮೇಲೆ ಕೂರಿಸಿದರು. 7 ನೇಯ ತಾರೀಕು ಪ್ಯಾಕಿಂಗ್ ಬಿಚ್ಚಿ ಪೀಠದ ಮೇಲೆ ಸರಿಯಾಗಿ ಕೂರಿಸುವವರೆಗೂ ನಾವೆಲ್ಲ ಜಪಮಾಡುತ್ತಾ ಅಲ್ಲಿಯೇ ಕುಳಿತಿದ್ದೆವು. ಸ್ವಾಮಿ ತನ್ನ ಸ್ಥಾನದಲ್ಲಿ ಕುಳಿತ ಮೇಲೆ ನನಗೆ ನೆಮ್ಮದಿ ಆಯಿತು. ಮೊದಲು ಕ್ರೇನನಿಂದ ಆಗದ ಕೆಲಸ ನಂತರ ಚೈನಪುಲಿಯಿಂದ ಆಯಿತು. ಬನರಾಸಿನ ವೃಷಭದಾಸರು ಉಪಸ್ಥಿತರಿದ್ದರು. ಸ್ವಾಮಿ ಪೀಠಾರೋಹಣವಾದಾಗ ಸಂಜೆ 7.40 ನಂತರ ರತ್ನವೃಷ್ಟಿ ಆರತಿ ಜಯ ಜಯಕಾರವಾದಾಗ ನಾನು ಇಲ್ಲಿಗೆ ಬಂದ ಕೆಲಸ ಸಾರ್ಥಕವಾಯಿತೆನ್ನಿಸಿತು.

ಎತ್ತರದಲ್ಲಿ ಮೂರ್ತಿಯನ್ನು ಕೂರಿಸುವ ಕೆಲಸದಲ್ಲಿ ಮೊದಲು ಇಂಜಿನಿಯರು ಕೂಡ ಭಯಭೀತರಾಗಿದ್ದರು. ಆದರೆ ಜಂಬೂದ್ವೀಪ ಹಸ್ತಿನಾಪುರದ ಕುಶಲ ಮೇಲ್ವಿಚಾರಕರಾಗಿದ್ದ ಶರೀಫ ಅಹಮದ ಹಾಗೂ ಜಯಪುರದ ಮಿಶ್ರೀ ಆತ್ಮಾರಾಮರವರು ತುಂಬ ಧೈರ್ಯದಿಂದ ಈ ಕೆಲಸವನ್ನು ಸಮರ್ಪಕವಾಗಿ ತಮ್ಮ ಕೆಲಸವನ್ನು

ನಿಭಾಯಿಸಿದರು. ನಾನು ಈ ಇಬ್ಬರು ಪುಣ್ಯಾತ್ಮರಿಗೆ ಮನತುಂಬಿ ಆಶೀರ್ವದಿಸಿದೆ. ಆ ಭಕ್ತರಿಗೆ ಸನ್ಮಾನ ಮಾಡಿಸಿದೆ.

ನನಗೆ ಅಭಿಮಾನವೆನ್ನಿಸಿದ್ದು ಶರೀಫ ಅಹಮದ್ ಜಾತಿಯಿಂದ ಮುಸಲ್ಮಾನ್ ಆಗಿದ್ದರು, ಜಂಬೂದ್ವೀಪದಲ್ಲಿ ಕಳೆದ 25-30 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಆಗಿನಿಂದಲೂ ಇವರ ಪರಿವಾರ ಶುದ್ಧ ಶಾಖಾಹಾರಿಗಳಾಗಿದ್ದಾರೆ. ಇದೇ ಪುಣ್ಯದ ಫಲಸ್ವರೂಪವಿರಬೇಕು ನನ್ನ ಸಲಹೆಯಿಂದ ಆಗುವ ಎಲ್ಲಾ ಜಾಗದಲ್ಲಿ ನಿರ್ಮಾಣದ ಕೆಲಸದಲ್ಲೂ ಇವರ ಸೇವೆ ಇದ್ದೇ ಇರುತ್ತದೆ. ಎಷ್ಟೆಂದರೆ ಇವರಿಲ್ಲದ ಕೆಲಸವು ನನಗೆ ಸಮಾಧಾನವನ್ನೇ ಕೊಡುವುದಿಲ್ಲ. ಇಂದು ಕೂಡ ಅವರಿಗೆ ನನ್ನ ಮೇಲೆ ಅಗಾಧವಾದ ಭಕ್ತಿ ತನ್ನ ಪರಿವಾರದ ಮೇಲಿನ ಮೋಹವನ್ನು ಬಿಟ್ಟು ತಿಂಗಳುಗಟ್ಟಲೇ ಕುಂಡಲಪುರದಲ್ಲೇ ಇದ್ದು ನಿರ್ಮಾಣ ಕೆಲಸದಲ್ಲಿ ತೊಡಗಿಕೊಂಡು ಪುಣ್ಯ ಸಂಪಾದಿಸಿದ್ದಾರೆ. ಇವರಂತೆಯೇ ಹಸ್ತಿನಾಪುರ - ಜಂಬೂದ್ವೀಪದ ಎಲ್ಲಾ ಕೆಲಸಗಾರರಲ್ಲಿ ಗುಜರಾತಿನ ಸತವೀರಸಿಂಹರು ಒಬ್ಬರು ಜೈನರಾಗಲಿ ಅಜೈನರಾಗಲಿ ಮನಸ್ಸಿನಿಂದ ತಮ್ಮದೇ ಕೆಲಸವೆಂಬಂತೆ ಕೆಲಸ ಮಾಡಿ ಪುಣ್ಯ ಭಾಗಿಗಳಾಗಿದ್ದಾರೆ.

ಓದುಗರಿಗೆ ಈ ಪ್ರಕರಣವನ್ನು ಓದಿ ಸ್ವಯಂ ಸಂತುಷ್ಟಿಯನ್ನು ತಂದುಕೊಟ್ಟಿರುತ್ತದೆ. ನಮ್ಮ ಜ್ಞಾನಮತೀ ಮಾತಾಜೀಯವರು ತಮ್ಮ ಚಾರಿತ್ರದಲ್ಲಿ ಯಾವುದೇ ಲೋಪವಾಗದಂತೆ ನಡೆದುಕೊಳ್ಳುವುದರಿಂದಲೇ ತೀರ್ಥಕ್ಷೇತ್ರದ ಅಭಿವೃದ್ಧಿಯಂತಹ ಮಹಾನ ಕೆಲಸಗಳು ಸರಿಯಾಗಿ ಆಗುತ್ತಿರುವುದೆಂದು ಈ ಕೆಲಸಗಳಲ್ಲಿನನ್ನ ಭಕ್ತಗಣದೊಂದಿಗೆ ನನ್ನ ಸಂಘದ ಪ್ರತಿಯೊಬ್ಬರು ಮನಪೂರ್ವಕವಾಗಿ ತಮ್ಮ ಯೋಗದಾನ ನೀಡುತ್ತಿದ್ದಾರೆ. ಹೀಗಾಗಿ ಯಾವುದೇ ದೊಡ್ಡ ಯೋಜನೆಗೆ ಪ್ರೇರಣೆಕೊಟ್ಟು ನಾನು ನೆಮ್ಮದಿಯಾಗಿ ಇರುತ್ತೇನೆ. ನನ್ನ ಲೇಖನದ ಕೆಲಸಗಳಲ್ಲಿ ತೊಡಗಿಕೊಳ್ಳುತ್ತೇನೆ. ಎಂದು ನನಗೆ ಸಂಯೋಗ ದೊರೆಯುವುದಿಲ್ಲ ಎನ್ನುವ ಭಾವನೆ ಬರುತ್ತದೋ ಅಂದು ಪ್ರೇರಣೆ ಕೊಡುವುದನ್ನು ನಿಲ್ಲಿಸಿ ನನ್ನ ಆತ್ಮಸಾಧನೆಯಲ್ಲಿ ತೊಡಗಿಕೊಳ್ಳುತ್ತೇನೆ. ಆರ್ಯಿಕೆಯರ ಚರ್ಯೆಯಲ್ಲಿ ನಮ್ಮ ಸಂಯಮದ ಸಾಧನೆಯೇ ಪ್ರಮುಖ ಗುರಿಯಾಗಿದೆ.

ಭಗವಾನ ಮಹಾವೀರರ 10¼ ಅಡಿಯ ಶ್ವೇತ ವರ್ಣದ ಪ್ರತಿಮೆಯು ಪೀಠದಲ್ಲಿ ಆಸೀನವಾದ ಮೇಲೆ ಪಂಚಕಲ್ಯಾಣದ ಮಹೋತ್ಸವ ಪ್ರಾರಂಭವಾಯಿತು. ಈ ಮೂರ್ತಿಯನ್ನು ವಿರಾಜಮಾನಗೊಳಿಸಿದ ಶ್ರೇಯಸ್ಸು ನಮ್ಮ ಸಂಘಪತಿಯಾಗಿದ್ದ ಲಾಲಮಹಾವೀರ ಪ್ರಸಾದರ ಪರಿವಾರಕ್ಕೆ ಸೇರುತ್ತದೆ. ಪಂಚಕಲ್ಯಾಣ ಮಹೋತ್ಸವದಲ್ಲಿ ಭ. ಮಹಾವೀರರ ತಂದೆ ಸಿದ್ಧಾರ್ಥ ತಾಯಿ ತ್ರಿಶಲಾರಾಗುವ ಪುಣ್ಯವು ಇವರದೇ ಆಗಿತ್ತು. ಸೌಧರ್ಮ ಇಂದ್ರ ಇಂದ್ರಾಣಿಯರಾಗುವ ಭಾಗ್ಯ ದೆಹಲಿಯ ಅನಿಲಕುಮಾರ್ ಮತ್ತು ಅವರ ಪತ್ನಿ ಸುಭಾಷಿಣಿಯವರು ಪಡೆದುಕೊಂಡರು. ಧನಕುಬೇರನ ಸ್ಥಾನವನ್ನು ಆರಾ ನಿವಾಸಿ ಕಮಲಕುಮಾರ ಜೈನ ಮತ್ತು ಪತ್ನಿ ಅನುಪಮ ಜೈನರಿಗೆ ದೊರಕಿತು. ಸೌಧರ್ಮ ಇಂದ್ರನು ತನ್ನ ಸಮಸ್ತ ಪರಿವಾರದೊಂದಿಗೆ ಪ್ರತಿಷ್ಠಾಚಾರ್ಯರಾದ ನರೇಶಕುಮಾರ ಜೈನ ಸಂಹಿತಾಸೂರಿ ಹಾಗೂ ಅಕಲಂಕ ಜೈನರೊಡನೆ ವಿಧಿ ವಿಧಾನಪೂರ್ವಕವಾಗಿ ಎಲ್ಲಾ ಪ್ರತಿಮೆಗಳನ್ನು ಪ್ರತಿಷ್ಠಾಪಿಸಲಾಯಿತು. 12-2-2003 ರಲ್ಲಿ ನಿರ್ವಾಣ ಕಲ್ಯಾಣವಾದ ಮೇಲೆ ನೆರೆದಿದ್ದ ವಿಶಾಲ ಸಮೂಹದ ಉಪಸ್ಥಿತಿಯಲ್ಲಿ ಖಡ್ಗಾಸನದ ಭಗವಾನ ಮಹಾವೀರ ಸ್ವಾಮಿಗೆ 1008 ಕಳಸಗಳಿಂದ ಮಹಾಕುಂಭಾಭಿಷೇಕವಾಯಿತು. ನನ್ನ ಜೀವನದಲ್ಲಿ ನಡೆದಿರುವ ಅವಿಸ್ಮರಣೀಯ ಘಟನೆಗಳಲ್ಲಿ ಇದು ಒಂದಾಗಿದೆ. ಭಗವಾನ ಮಹಾವೀರರ ಚರಣಗಳಲ್ಲಿ ಜೈನಧರ್ಮವು ಇಡೀ ವಿಶ್ವದಲ್ಲಿ ಹರಡಲಿ ಎಂಬ ಭಾವನೆಯೊಂದಿಗೆ ತಲೆ ಬಾಗಿಸಿ ವಂದಿಸಿದೆ.

ಪಂಚಕಲ್ಯಾಣ ಪ್ರತಿಷ್ಠೆಯಲ್ಲಿ ಸೂರಿ ಮಂತ್ರ

ವರ್ತಮಾನ ಕಾಲದಲ್ಲಿ ಕೆಲವು ವರ್ಷಗಳಿಂದ ಪಂಚಕಲ್ಯಾಣಕ ಪ್ರತಿಷ್ಠೆಗಳಲ್ಲಿ ಮುನಿಗಳಿಂದ "ಸೂರಿಮಂತ್ರ" ಕೊಡುವಂತಹ ವಿಷಯ ಕೇಳಿ ಬರುತ್ತಿದೆ. ಕಾನಜೀ ಪಂಥಿಗಳ ಮೂಲಕ ನಡೆಯುವ ಪ್ರತಿಷ್ಠೆಗಳನ್ನು ವಿರೋಧಿಸುವ ವಿಷಯಗಳಲ್ಲಿ ಇದು ಒಂದು ವಿಷಯವಾಗಿದೆ. ನಾನು 1952 ಇಸವಿಯಿಂದ ನೋಡುತ್ತಿದ್ದೇನೆ ಆಚಾರ್ಯ ದೇಶಭೂಷಣರ ಅಥವಾ ಶಾಂತಿಸಾಗರರ ಪರಂಪರೆಯ ಯಾವ ಆಚಾರ್ಯರಲ್ಲಿಯು ಈ ಬಗ್ಗೆ ಚರ್ಚೆ ನಡೆದಿರಲಿಲ್ಲ. ಆಚಾರ್ಯ ವೀರಸಾಗರ ಮಹಾರಾಜರ ಶಿಷ್ಯ ಪ್ರತಿಷ್ಠಾಚಾರ್ಯ ಸಂಹಿತಾಸೂರಿ ಬ್ರ. ಸೂರಜಮಲ್ಲರು ಸಾಧು-ಸಂಘಗಳಿಲ್ಲದೆ ಕೆಲವು ಪ್ರತಿಷ್ಠೆಗಳನ್ನು ಮಾಡಿಸಿದ್ದಾರೆ. ಅವರು ಕೂಡ ಈ ವಿಷಯ ನೇಮಿಚಂದ್ರ ಪ್ರತಿಷ್ಠಾತಿಲಕದಲ್ಲಾಗಲೀ ಆಶಾಧರಕೃತ ಪ್ರತಿಷ್ಠಾ ಸಾರೋದ್ಧಾರದಲ್ಲಿಯಾಗಲಿ ಈ ಉಲ್ಲೇಖವಿಲ್ಲವೆಂದೇ ಹೇಳುತ್ತಿದ್ದರು. "ಸೂರಿಮಂತ್ರ" ವನ್ನು ದಿಗಂಬರ ಆಚಾರ್ಯರು ಹೇಳಬೇಕು. ಹೀಗಾಗಿ ಆಚಾರ್ಯರಿಂದ ಹೇಳಲ್ಪಡುವ ಮಂತ್ರವೇ "ಸೂರಿಮಂತ್ರ". ಹೀಗಾಗಿ ಉಪಾಧ್ಯಾಯ ಮುನಿಗಳಾಗಲಿ ಸಾಮಾನ್ಯ ಮುನಿಗಳಾಗಲಿ ಈ ಮಂತ್ರವನ್ನು ಉಪದೇಶಿಸಬಾರದು. ವಾಸ್ತವವಾಗಿ ಪಂಚಕಲ್ಯಾಣ ಪ್ರತಿಷ್ಠೆಯ ಎಲ್ಲಾ ಕ್ರಿಯೆಗಳನ್ನು ಯೋಗ್ಯ ಪ್ರತಿಷ್ಠಾಚಾರ್ಯರಿಂದಲೇ ಮಾಡಿಸಬೇಕು. ಪಂಚಕಲ್ಯಾಣ ಪ್ರತಿಷ್ಠೆಯನ್ನು ಆಚಾರ್ಯಸಂಘ, ಮುನಿ ಸಂಘ ಅಥವಾ ಆರ್ಯಿಕೆ ಸಂಘ ಮೊದಲಾದುವುಗಳ ಸಾನಿಧ್ಯದಲ್ಲಿಯೇ ಮಾಡಿದರೆ ಶ್ರಾವಕರಿಗೆ ಉತ್ತಮವಾಗುವುದು. ಆದರೆ ಒಂದು ವೇಳೆ ಸಂಘಗಳ ಸಾನಿಧ್ಯ ಸಿಗದಿದ್ದರೆ ಪ್ರತಿಷ್ಠೆ ಮಾಡುವಂತಿಲ್ಲ ಎಂಬುವ ಮಾತು ಇಲ್ಲ. ಇಂದು ಕೆಲವು ಕಾನಜಿ ಪಂಥದ ವಿರೋಧಿ ವಿದ್ವಾಂಸರು ಈ ಏಕಾಂತೀ ಮುನಿ ವಿರೋಧಿಗಳನ್ನು ವಿರೋಧಿಸುತ್ತಾ ಭೂತ-ಭವಿಷ್ಯತ್ ಕಾಲೀನ ತೀರ್ಥಂಕರರ ಪ್ರತಿಮೆಗಳು ಹೆಡೆಸಹಿತವಾದ ಪಾರ್ಶ್ವನಾಥರ ಪ್ರತಿಮೆ ಮತ್ತು ಭಗವಾನ ಬಾಹುಬಲಿಯ ಪ್ರತಿಮೆಗಳ ಪ್ರತಿಷ್ಠೆಯನ್ನು ವಿರೋಧಿಸುತ್ತಿದ್ದಾರೆ. ಇದು ಬಹಳ ತಪ್ಪು.

ಸಮ್ಮೇದ ಶಿಖರ ಯಾತ್ರೆ

ಆರ್ಯಿಕೆ ದೀಕ್ಷೆಯನ್ನು ತೆಗೆದುಕೊಂಡ ಮೇಲೆ 1962-63 ರಲ್ಲಿ ಸಂಘದೊಡನೆ ಸಮ್ಮೇದ ಶಿಖರದ ಯಾತ್ರೆಯನ್ನು ಮಾಡಿದ್ದೆ ಈಗ ಪುನಃ 40 ವರ್ಷಗಳ ನಂತರ ಎರಡನೆಯ ಸಲ ಮಹಾವೀರ ಸ್ವಾಮಿಯ ಕೃಪೆಯಿಂದ ಕುಂಡಲಪುರದಲ್ಲಿ ಪಂಚಕಲ್ಯಾಣ ಮಹೋತ್ಸವವನ್ನು ಮುಗಿಸಿಕೊಂಡು 19-2-2003 ರಂದು ಸಂಘವು ಸಮ್ಮೇದ ಶಿಖರದ ಕಡೆ ಹೊರಟಿತು. ರಾಜಗೃಹದ ಜವಾಹರ ನವೋದಯ ವಿದ್ಯಾಲಯದಲ್ಲಿ ಮಹಾವೀರ ಸ್ವಾಮಿಯ ಪದ್ಮಾಸನ ಪ್ರತಿಮೆಗೆ ಹಾಗೂ ಜೈನ ತೀರ್ಥ ಪರಿಸರದಲ್ಲಿ ಭ. ಮುನಿಸುವ್ರತ ಪ್ರತಿಮೆಗೆ ಪಾವಾಪುರದ ಸಿದ್ಧಕ್ಷೇತ್ರದಲ್ಲಿ ಭ. ಮಹಾವೀರರ ಒಂದು ದೊಡ್ಡ ಪ್ರತಿಮೆಗೆ ಪ್ರೇರಣೆಯನ್ನು ಕೊಡುತ್ತಾ 13-3-2003 ರಂದು ಶಾಶ್ವತ ಸಮ್ಮೇದ ಶಿಖರಕ್ಕೆ ಪಾದಾರ್ಪಣೆ ಮಾಡಿದೆ. ಈ 40 ವರ್ಷಗಳಲ್ಲಿ ಅನೇಕ ಸಂಸ್ಥೆಯವರು ಹಲವಾರು ಬೃಹದಾಕಾರದ ನಿರ್ಮಾಣಗಳನ್ನು ಮಾಡಿರುವುದನ್ನು ನೋಡಿ ಮನಸ್ಸಿಗೆ ಆಹ್ಲಾದವೆನ್ನಿಸಿತು. ನಾನು ಎರಡನೆಯ ಬಾರಿ ಕ್ಷೇತ್ರವನ್ನು ದರ್ಶನ ಮಾಡಿದ್ದೇ ನನ್ನ ಭಾಗ್ಯವೆಂದುಕೊಂಡೆ.

ಮಾರ್ಚ 13ರಂದು ಬೀಸಪಂಥಿ ಸಂಸ್ಥೆಯಲ್ಲಿಬೆಳಗ್ಗೆ ಕೇಶಲೋಚವನ್ನು ಮಾಡಿಕೊಂಡು ಆದಿನ ಉಪವಾಸವಾದರು ದರ್ಶನ ಮಾಡಬೇಕೆಂಬ ಉತ್ಕಟ ಇಚ್ಛೆಯಿಂದ ಮಧ್ಯಾಹ್ನ 2 ಗಂಟೆಗೆ ಸಂಘದೊಡನೆ ಪರ್ವತ ಏರತೊಡಗಿದೆ. ಚೋಪಡಾ ಕುಂಡದಲ್ಲಿ ನಿರ್ಮಿತವಾಗಿರುವ ಜಿನಮಂದಿದ ಧರ್ಮಶಾಲೆಯಲ್ಲಿ ತಂಗಿದ್ದು

ಪರ್ವತಕ್ಕೆ ಮೂರು ವಂದನೆಗಳನ್ನು ಸಲ್ಲಿಸಿದೆ. ಮಾರ್ಚ 14 ರಂದು ಹಸ್ತಿನಾಪುರದಿಂದ ರವೀಂದ್ರ, ಬನಾರಸಿನಿಂದ ದೀಪಕ, ಸುಭಾಷಿಣಿ, ಆರಾದಿಂದ ಕಮಲ -ಅನುಪಮ ಬಂದರು. ಅವರೆಲ್ಲರು ಮತ್ತು ಅಲ್ಲಿಂದ ಜನರು ಕೂಡ ನನ್ನೊಡನೆ ಪರ್ವತದ ದರ್ಶನ ಮಾಡಿ ತಮ್ಮ ಜೀವನ ಧನ್ಯವೆಂದು ತಿಳಿದರು. ವಂದನೆ ಮಾಡುತ್ತಾ ಪ್ರತಿಯೊಂದು ಕೂಟಕ್ಕೂ ಜಲ, ಹಾಲು, ಚಂದನದ ಅಭಿಷೇಕವನ್ನು ತೀರ್ಥಂಕರ ಚರಣಗಳಿಗೆ ಮಾಡುತ್ತಾ ಅರ್ಘ್ಯವನ್ನು ಎತ್ತಿ ಶಕ್ತ್ಯಾನುಸಾರ ಚಿನ್ನ ಬೆಳ್ಳಿ ರತ್ನದ ಹೂಗಳನ್ನು ಅರ್ಪಿಸುತ್ತಾ ನಿರ್ವಾಣ ಲಾಡುವನ್ನು ಅರ್ಪಿಸಿ ತಮ್ಮ ಭಕ್ತಿಯನ್ನು ಪ್ರದರ್ಶಿಸುತ್ತಿದ್ದರು. ಭ. ಪಾರ್ಶ್ವನಾಥರ ಕೂಟವನ್ನು ತಲುಪುತ್ತಲೇ ನಾನು ಪಿಂಡಸ್ಥ ಧ್ಯಾನದಲ್ಲಿ ಮಗ್ನಳಾಗಿ ಭಗವಂತನ ಮುಕ್ತಿ ಗಮನದ ಕ್ಷಣಗಳನ್ನು ಪಾವನ ಅನುಭೂತಿಯನ್ನು ಪಡೆದೆ. ನಂತರ ಭಗವಂತನ ಚರಣಗಳಿಗೆ ಅಭಿಷೇಕ, ಪೂಜೆ ಮಾಡಿಸಿ ನಿರ್ವಾಣ ಲಾಡುವನ್ನು ಅರ್ಪಿಸಿ ಪರ್ವತದಿಂದ ಕೆಳಗಿಳಿದು ಧರ್ಮಶಾಲೆಗೆ ಬಂದೆವು. ಮಾರ್ಚ 21 ರಂದು ಎರಡನೇ ಬಾರಿಗೆ ಶಿಖರವನ್ನು ಹತ್ತಿ ಚೋಪಡ ಕುಂಡದಲ್ಲಿದ್ದುಕೊಂಡು 4 ವಂದನೆಗಳನ್ನು ಮಾಡಿ ಒಟ್ಟು ಈ ಸಲದ ಯಾತ್ರೆಯಲ್ಲಿ 7 ವಂದನೆಗಳಿಂದ ಸಮ್ಮೇದ ಶಿಖರಯಾತ್ರೆ ನಮ್ಮ ಮನದಲ್ಲಿ ಅದ್ಭುತವಾದ ಶಾಂತಿಯ ಅನುಭವವನ್ನು ಕೊಟ್ಟಿತು. ಚೋಪಡ ಕುಂಡದಲ್ಲಿ ದಿಗಂಬರ ಜೈನಮಂದಿರವನ್ನು ನೋಡಿ ನನ್ನ ಹೃದಯ ಹೂವಿನಂತೆ ಅರಳಿತು. ಈ ಕೆಲಸವನ್ನು ಸಾಧಿಸಿರುವ ಎಲ್ಲಾ ಕಾರ್ಯಕರ್ತರಿಗೂ ಲಕ್ಷ - ಲಕ್ಷ ಆಶೀರ್ವಾದಗಳನ್ನು ಕೊಡುತ್ತಾ ಜಿನಧರ್ಮದ ಪ್ರಭಾವನೆಯಲ್ಲಿ ಇವರು ಯಾವಾಗಲು ಹೀಗೆ ಇರಲಿ ಎಂದು ಆಶಿಸಿದೆ.

ಸಮ್ಮೇದ ಶಿಖರದಲ್ಲಿ ಶ್ರಾವಕರ ಮಹಾಸಮ್ಮೇಳನ

ಹೋಳಿ ಹಬ್ಬದ ದಿನ ಸಮ್ಮೇದಶಿಖರದಲ್ಲಿ ಜಾತ್ರೆಯು ಬಹಳ ಕಾಲದಿಂದಲೂ ನಡೆದು ಬರುತ್ತಿದೆ. ದೇಶದಿಂದ ಜನರು ಫಾಲ್ಗುಣ ಮಾಸದ ಅಷ್ಟಾಹ್ನಿಕದಲ್ಲಿ ಸಿದ್ಧ ಚಕ್ರ, ಇಂದ್ರ ಧ್ವಜ ಮುಂತಾದ ಆರಾಧನೆಗಳನ್ನು ಮಾಡಿಸಲು ಜನರು ಇಲ್ಲಿಗೆ ಯಾತ್ರೆ ಬರುತ್ತಾರೆ. ಹೋಳಿಯ ಬಣ್ಣದಿಂದ ತಪ್ಪಿಸಿಕೊಂಡು ಬಂದು ಭ. ಪಾರ್ಶ್ವನಾಥರ ಭಕ್ತಿಯ ಬಣ್ಣದಲ್ಲಿ ಮಿಂದು ಒಬ್ಬರು ಇನ್ನೊಬ್ಬರಿಗೆ ಕೇಸರಿಯ ಬಣ್ಣದ ಹೋಳಿ ಎರಚುತ್ತಾರೆ. ಇದೇ ಹೋಳಿಯ ದಿನ ಚೈತ್ರ ಕೃಷ್ಣಪಕ್ಷದ ಪಾಡ್ಯದ ದಿನ ನಾನು 52 ವರ್ಷಗಳ ಹಿಂದೆ ಮಹಾವೀರಜೀಯ ಅತಿಶಯ ಕ್ಷೇತ್ರದಲ್ಲಿ ಆಚಾರ್ಯ ಶ್ರೀ ದೇಶಭೂಷಣ ಮಹಾರಾಜರಿಂದ ಕ್ಷುಲ್ಲಿಕ ದೀಕ್ಷೆಯನ್ನು ಪಡೆದು ವೀರಮತಿಯಾಗಿದ್ದೆ. ಸಮ್ಮೇದಶಿಖರದಲ್ಲಿ ಇಂದು ನಾನು ಆರ್ಯಿಕೆಯ ದೀಕ್ಷೆಯನ್ನು ಪಡೆದು 50 ವರ್ಷಗಳನ್ನು ಪೂರ್ಣಗೊಳಿಸಿದ್ದೇನೆ. ಈ ಸಂದರ್ಭದಲ್ಲಿ ಅಲ್ಲಿ ಸೇರಿದ್ದವರೆಲ್ಲ ತಮ್ಮ ಭಕ್ತಿ ಭಾವನೆಗಳನ್ನು ವ್ಯಕ್ತಗೊಳಿಸಿದರು. ದೀಪಕ ಜೈನರು 50 ಮಂದಿರಗಳಿಗೂ ಸ್ವಾಧ್ಯಾಯಕ್ಕಾಗಿ ಗ್ರಂಥಗಳನ್ನು ವಿತರಿಸಿ ಕೆಲವು ಅವಶ್ಯಕ ವಸ್ತುಗಳನ್ನು ದಾನವಾಗಿಯು ಹಂಚಿದರು. ನನ್ನ ಪ್ರೇರಣೆಯಿಂದ ಮಾರ್ಚ 19 ರಂದು ಶ್ರಾವಕ ಸಮ್ಮೇಳನವನ್ನು ಆಯೋಜನೆ ಮಾಡಲಾಯಿತು. ಆಗ ನಾನು ಶ್ರಾವಕರ ಕರ್ತವ್ಯಗಳ ಬಗ್ಗೆ ಬೆಳಕು ಬೀರುತ್ತಾ ಸಮ್ಮೇದಶಿಖರದ ತೀರ್ಥಕ್ಷೇತ್ರದ ರಕ್ಷಣೆಗಾಗಿ ಎಲ್ಲರಿಗೂ ವಿಶೇಷ ಪ್ರೇರಣೆಯನ್ನು ಕೊಟ್ಟೆ. ತೀರ್ಥಕ್ಷೇತ್ರಕ್ಕಾಗಿ ಮುನಿ ಆರ್ಯನಂದಿಗಳ ಮಾಡಿರುವ ಉಪಕಾರಗಳನ್ನು ಸ್ಮರಿಸುತ್ತಾ ತೀರ್ಥಕ್ಷೇತ್ರ ಕಮಿಟಿಯವರಿಗೆ ಕ್ಷೇತ್ರದಲ್ಲಿಅವರ ಸ್ಮಾರಕವನ್ನು ಮಾಡಿಸಲು ಸಲಹೆಯನ್ನಿತ್ತು ಎಲ್ಲರಿಗೂ ಅಷ್ಟಮೂಲಗುಣ, ಪಂಚಅಣುವ್ರತ ಮೊದಲಾದುವುಗಳನ್ನು ಧಾರಣೆ ಮಾಡಿ ಗುರುಭಕ್ತಿ ತೀರ್ಥಭಕ್ತಿಯನ್ನು ಹೆಚ್ಚಿಸಿಕೊಳ್ಳಲು ಹೇಳಿದೆ.

ವೃಷಭ ಜಯಂತಿಯ ದಿನ ವೃಷಭ ಮಂದಿರದ ಶಿಲಾನ್ಯಾಸ

ನಾವು ಶಿಖರದ ಕೆಳಗಿನ ಮಂದಿರಗಳನ್ನು ದರ್ಶನ ಮಾಡಿದ ಮೇಲೆ ನಮ್ಮೊಳಗೆ ವಿಚಾರ ವಿಮರ್ಶೆ ಮಾಡುತ್ತಾ ಪಾರ್ಶ್ವನಾಥರ ಈ ಭೂಮಿಯಲ್ಲಿ ಪ್ರಥಮ ತೀರ್ಥಂಕರರ ಅಸ್ತಿತ್ವವು ಬಹಳ ಅವಶ್ಯಕವೆಂಬ ಅಂಶವನ್ನು ಮನಗಂಡೆವು. ಇದರಿಂದ ಪ್ರತಿಯೊಬ್ಬ ಯಾತ್ರಿಗೂ ಜೈನಧರ್ಮದ ಪ್ರಾಚೀನತೆಯ ಅರಿವು ಉಂಟಾಗುತ್ತದೆ. ನನ್ನ ಸಲಹೆಯನ್ನು ಸ್ವೀಕರಿಸಿದ ಬೀಸಪಂಥಿ ಕೋಠಿಯ ಪದಾಧಿಕಾರಿಗಳು ಆಸಕ್ತಿ ತಳೆದು 24 ತೀರ್ಥಂಕರರ ಬಾಹುಬಲಿ ಮಂದಿರದ ಪ್ರವೇಶ ಮಾಡುವ ಜಾಗವು ಖಾಲಿ ಇದ್ದುದ್ದರಿಂದ ಅಲ್ಲಿ ಮಾರ್ಚ 26 ರಂದು ವೃಷಭ ತೀರ್ಥಂಕರರ ಜನ್ಮ ಜಯಂತಿಯಂದು ಮಂದಿರಕ್ಕಾಗಿ ಶಿಲಾನ್ಯಾಸವನ್ನು ಡಾ. ಶ್ರೀ ಪನ್ನಾಲಾಲರ ಪರಿವಾರವು ಕೈಕೊಂಡಿತು. ಇವರ ಸೌಜನ್ಯದಿಂದ ಮಂದಿರ ನಿರ್ಮಾಣವಾಗಿ 9 ಅಡಿಯ ಉತ್ತುಂಗ ಪದ್ಮಾಸನ ಮೂರ್ತಿಯು ಸ್ಥಾಪಿತವಾಯಿತು. ಮಾಂಗೀ ತುಂಗಿಯ 108 ಅಡಿಯ ಆದಿನಾಥರ ಬಿಂಬ ನಿರ್ಮಾಣ ಕಾರ್ಯದಲ್ಲಿ ಇವರು ಮಹಾಮಂತ್ರಿಗಳಾಗಿದ್ದಾರೆ. ಶಾಶ್ವತ ತೀರ್ಥದಲ್ಲಿ ಪುಣ್ಯ ಸಂಪಾದನೆ ಮಾಡುವ ಅವಕಾಶ ಅವರಿಗೆ ಒದಗಿ ಬಂದಿತು. ಇದಕ್ಕಾಗಿ ಅವರು ನನಗೂ ನನ್ನ ಸಂಘದವರಿಗೂ ನಮ್ರತೆಯಿಂದ ಕೃತಜ್ಞತೆಗಳನ್ನು ಹೇಳಿದರು ಆದರೆ ಇದು ಅವರ ಜನ್ಮ - ಜನ್ಮಾಂತರದಿಂದ ಸಂಚಿತವಾದ ಸಾತಿಶಯ ಪುಣ್ಯವೆಂದು ತಿಳಿಯಬೇಕು.

೧೦೭

ಕುಂಡಲಪುದಲ್ಲಿ ಮಹಾವೀರ ಜಯಂತಿ

ಸಂಘದಲ್ಲಿದ್ದ ಸದಸ್ಯರ ಅಭಿಪ್ರಾಯದಂತೆ ಈ ವರ್ಷ ಕುಂಡಲಪುರದಲ್ಲಿ ವಿಜೃಂಭಣೆಯಿಂದ ಮಹಾವೀರ ಜಯಂತಿಯನ್ನು ಆಚರಿಸಬೇಕೆಂದು ನಿರ್ಣಯಿಸಲಾಗಿತ್ತು. ಇದಕ್ಕಾಗಿ ಭಿತ್ತಿ ಚಿತ್ರಗಳನ್ನು ಸಮಿತಿಯಿಂದ ಮುದ್ರಿಸಿ ದೇಶದ ಎಲ್ಲಾ ಕಡೆಗೂ ಕಳುಹಿಸಲಾಗಿತ್ತು. ಹೀಗಾಗಿ ಸಮ್ಮೇದ ಶಿಖರದಲ್ಲಿ ನಿಲ್ಲದೆ ಮತ್ತೇ ವಿಹಾರಮಾಡಿ 10-4-2003 ರಂದು ಕುಂಡಲಪುರ ತಲುಪಿದೆವು. 15-4-2009 ರಂದು ಒಳ್ಳೆಯ ಪ್ರಭಾವನ ಪೂರ್ವಕವಾಗಿ ಮಹಾವೀರ ಜಯಂತಿಯ ಕಾರ್ಯಕ್ರಮ ನಡೆದು ನಾಲಂದದವರೆಗೂ ರಥಯಾತ್ರೆ ಹೊರಟಿತು. ದಾರಿ ಉದ್ದಕ್ಕೂ ಪುಷ್ಪವೃಷ್ಟಿ ಮತ್ತು ರತ್ನಗಳ ವೃಷ್ಟಿ ಆಯಿತು. ನಿರ್ವಾಣ ಲಾಡುಗಳನ್ನು ಹಂಚಲಾಯಿತು.

ರಾಷ್ಟ್ರಪತಿ ಅಬ್ದುಲ ಕಲಾಂ

3-5-2003 ರಂದು ಮಹಾವೀರರ ನಿರ್ವಾಣ ಭೂಮಿ ಪಾವಾಪುರಿಗೆ ಭಾರತದ ರಾಷ್ಟ್ರಪತಿ ಶ್ರೀ ಎ. ಪಿ. ಜೆ ಅಬ್ದುಲ್‌ಕಲಂರವರ ಆಗಮನವಾಯಿತು. ನನ್ನ ಸಂಘ ಅಲ್ಲಿಯೇ ಇದ್ದುದ್ದರಿಂದ ಅವರು ಜಲಮಂದಿರದ ದರ್ಶನದ ನಂತರ ನನ್ನಲ್ಲಿಗೆ ಬಂದು ಆಶೀರ್ವಾದವನ್ನು ಪಡೆದರು. ಅವರು ಸಂತಸದಿಂದ ತಮ್ಮ ಭಾಷಣದಲ್ಲಿ ಕೆಸರಿನಲ್ಲಿ ಇಳಿದು ಕಮಲವನ್ನು ಕೀಳುವ ಕೆಲಸ ಪ್ರತಿಯೊಬ್ಬ ಮಾನವನ ಜೀವನದಲ್ಲಿ ನಡೆಯಬೇಕಾದರೆ ಸಾಧು ಸತ್ಸಂಗದಿಂದ ಲಾಭವನ್ನು ಪಡೆಯಲು ಉತ್ತೇಜಿಸಿದರು. ನನಗೆ ಅವರು ಶುದ್ಧ ಶಾಖಾಹಾರಿ ಎಂದು ತಿಳಿದು ದೇಶದ ಉನ್ನತಿಗೆ ಶ್ರಮಿಸಿದರೆಂದು ಆಶೀರ್ವದಿಸಿದೆ.

ನವಗ್ರಹ ಶಾಂತಿ ಮಂದಿರದ ಪ್ರತಿಮೆಗಳ ಪಂಚಕಲ್ಯಾಣ

5-7-2003 ರಂದು ಆರಾ ನಿವಾಸಿಗಳಾದ ಶ್ರೀ ಜ್ಞಾನಚಂದ ಜೈನ ಅವರ ಪತ್ನಿ ಶಶಿಲತ ಜೈನರೊಡನೆ ಕುಂಡಲಪುರದಲ್ಲಿ ನವಗ್ರಹದ ಒಂಬತ್ತು ತೀರ್ಥಂಕರರ ಪ್ರತಿಮೆಗಳಿಗೆ ಪಂಚಕಲ್ಯಾಣವನ್ನು ಸಂಕ್ಷಿಪ್ತವಾಗಿ ಮಾಡಿಸಿದರು.

ನೂರಾರು ವರ್ಷದ ಇತಿಹಾಸದಲ್ಲಿ ನನ್ನ ಮೊದಲ ಚಾತುರ್ಮಾಸ

ಅಭಿವೃದ್ಧಿ ಹೊಂದುತ್ತಿರುವ ಕ್ಷೇತ್ರದಲ್ಲಿಯೇ ಇದ್ದುಕೊಂಡು ಚಾತುರ್ಮಾಸ ಮಾಡುವ ಭಾವನೆ ಮನಸ್ಸಿಗೆ ಬಂದಿದ್ದರಿಂದ 2003 ರ ಚಾತುರ್ಮಾಸ ಕುಂಡಲಪುರದಲ್ಲೇ ಆಯಿತು. ಇದೊಂದು ತ್ರಿವೇಣಿ ಸಂಗಮವು ಆಗಿದೆ. ಕುಂಡಲಪುರ, ರಾಜಗೃಹ, ಪಾವಾಪುರಿ. ಈ ಮೂರು ಮಹಾವೀರರ ಜೀವನಕ್ಕೆ ಸಂಬಂಧ ಪಟ್ಟವೇ ಆಗಿವೆ. ಬಿಹಾರದ ಜನರು ಇದನ್ನು ಕಂಡು ನಾವು ತಿಳಿದಂತೆ ಕಳೆದ ನೂರಾರು ವರ್ಷಗಳಿಂದ ಇಲ್ಲಿ ಸಾಧು ವರ್ಗವು ಚಾತುರ್ಮಾಸ ಮಾಡಿದ್ದನ್ನು ನಾವು ಕಂಡಿರಲಿಲ್ಲವೆಂದು ಹರ್ಷ ವ್ಯಕ್ತಪಡಿಸಿದರು. ನಮ್ಮ ಚಾತುರ್ಮಾಸದಲ್ಲಿ ಹಲವಾರು ಜನ ಕ್ಷೇತ್ರವನ್ನು ಸಂದರ್ಶಿಸಿದ್ದಾರೆ. ಅಭಿವೃದ್ಧಿ ಕೆಲಸಗಳನ್ನು ಕಂಡು ಹರ್ಷದಿಂದಲೇ ಧನಸಹಾಯವನ್ನು ಒದಗಿಸಿದ್ದರಿಂದ ಎಲ್ಲಾ ಕಾರ್ಯಗಳು ಬೇಗನೆ ಆಗಿದ್ದನ್ನು ಸ್ಮರಿಸಬೇಕು.

ಚಾತುರ್ಮಾಸದಲ್ಲಿ ಮಂಗಳ ಕಳಸದ ಸ್ಥಾಪನೆ ಯಾವಾಗಿನಿಂದ ಪ್ರಾರಂಭವಾಯಿತು

20 ನೇಯ ಶತಮಾನದ ಪ್ರಥಮ ಆಚಾರ್ಯರಾದ ಶಾಂತಿಸಾಗರರು ನಂತರ ವೀರಸಾಗರರು, ಶಿವಸಾಗರರು, ಧರ್ಮಸಾಗರರ ಸಂಘಗಳಲ್ಲಿ ನಾನು ಚಾತುರ್ಮಾಸ ಸ್ಥಾಪನೆಯನ್ನು ಕೈಕೊಂಡಿದ್ದೇನೆ. ಆದರೆ ಇವರಾರು ಈ ಸಂದರ್ಭದಲ್ಲಿ ಕಳಸ ಸ್ಥಾಪನೆಯನ್ನು ಕೈಕೊಂಡಿದ್ದನ್ನು ಕಂಡಿಲ್ಲ ಕೇಳಿಲ್ಲ. ಈ ಪರಂಪರೆ ಇತ್ತೀಚಿನ 8-10 ವರ್ಷದಿಂದ ನಡೆದು ಬರುತ್ತಿದೆ. ಕೆಲವು ಶ್ರಾವಕರು 1996 ರ ಚಾತುರ್ಮಾಸದಲ್ಲಿ ಒತ್ತಾಯ ಮಾಡಿದ್ದರಿಂದ ನಾನು ಸುಮ್ಮನಾಗಬೇಕಾಯಿತು. ಆದರೂ ಈ ಆಚರಣೆಯ ಬಗ್ಗೆ ಸರಿಯಾಗಿ ತಿಳಿಯದೇ ಇದ್ದುದ್ದರಿಂದ 3-4 ವರ್ಷಗಳ ನಂತರ ಈ ಪದ್ಧತಿಯನ್ನು ನಿಲ್ಲಿಸಿದೆ.

ನನಗೆ ಆಶ್ಚರ್ಯವಾಗುತ್ತಿರುವುದು ಕೆಲವು ಸಾಧುಗಳು 3, 7, 9, 21 ಹೀಗೆ 108 ಕಳಸಗಳವರೆಗೂ ಹರಾಜಿನ ಮೂಲಕವು ಸ್ಥಾಪನೆ ಮಾಡುತ್ತಿರುವ ಸುದ್ದಿಗಳು ಬರುತ್ತಲೇ ಇವೆ. ಹೆಚ್ಚು ಹೆಚ್ಚು ಹರಾಜು ಕೂಗುವುದು ಸಾಧುಗಳ ಮಹತ್ವವನ್ನು ಹೆಚ್ಚಿಸುತ್ತದೆ ಎಂಬುದು ಸುದ್ದಿಯಾಗಿದೆ. ಇನ್ನೊಂದು ಆಶ್ಚರ್ಯವೆಂದರೆ ಒಂದು ದೇವಸ್ಥಾನದಲ್ಲಿ ಈ ಕಳಸವನ್ನು ಹಾಗೆಯೇ ಸ್ಥಾಪಿಸಿ ಬಿಟ್ಟಿದ್ದಾರೆ. ಜನರು ದೇವರ ದರ್ಶನವಾದ ಮೇಲೆ ಅದರ ಮುಂದೆಯು ಅಕ್ಕಿಯ ಪುಂಜವನ್ನು ಇಟ್ಟು ನಮಸ್ಕರಿಸುತ್ತಿದ್ದುದ್ದನ್ನು ನೋಡಿ ಕೇಳಲಾಗಿ ಇದು ನಮ್ಮ ಗುರುದೇವರ ಆಜ್ಞೆಯಾಗಿದೆ ಎಂದು.

ಜಾಹೀರಾತು ಮತ್ತು ಧಾರ್ಮಿಕ ಪತ್ರಿಕೆಗಳಲ್ಲೂ "ಚಾತುರ್ಮಾಸ ಸ್ಥಾಪನೆ" ಅಥವಾ "ವರ್ಷಾಯೋಗ ಸ್ಥಾಪನೆ ಸಮಾರಂಭ" ದ ಬದಲಾಗಿ "ಮಂಗಳ ಕಳಸ ಸ್ಥಾಪನೆಯ ಸಮಾರಂಭ ಎಂದೇ ಮುದ್ರಿಸುತ್ತಿದ್ದಾರೆ.

ಈ ಮಂಗಳ ಕಳಸದ ವಿಷಯವನ್ನು ನಾನು ಎಲ್ಲಿಯು ಆಚಾರಸಾರ, ಮೂಲಾಚಾರ, ಭಗವತಿ ಆರಾಧನೆ ಮೊದಲಾದ ಮುನಿ ಆಚಾರದ ಗ್ರಂಥಗಳಲ್ಲಿ ನೋಡಿಲ್ಲ. ಇಲ್ಲ ಉಮಾಸ್ವಾಮಿಗಳ ಶ್ರಾವಕಾಚಾರ, ರತ್ನಕರಂಡಕ

ಶ್ರಾವಕಾಚಾರ, ವಸುನಂದಿ ಶ್ರಾವಕಾಚಾರ, ಸಾಗಾರ ಧರ್ಮಾಮೃತ ಮೊದಲಾದ ಶ್ರಾವಕಾಚಾರ ಗ್ರಂಥಗಳಲ್ಲಿ ಇಲ್ಲ. ಹೀಗಾಗಿ ನನಗೆ ಚಾತುರ್ಮಾಸ ಸ್ಥಾಪನೆಯಲ್ಲಿ ಕಳಸಗಳ ಸ್ಥಾಪನೆ ಸರಿ ಅಲ್ಲ ಎನ್ನಿಸಿತು. ಆದ್ದರಿಂದ ನನಗೆ ಈ ಪದ್ಧತಿ ಯಾರಿಂದ ಪ್ರಾರಂಭವಾಯಿತು ಮುನಿಗಳು ಏಕೆ ಅನುಸರಿಸುತ್ತಿದ್ದಾರೆ ಎಂದು ಗೊತ್ತಾಗುತ್ತಿಲ್ಲ.

ಮಹಾರಾಷ್ಟ್ರದ ಭಕ್ತ ಮಂಡಲಿಯ ಸಮರ್ಪಣಾ ಭಾವ

ಚೌರಂಗಾಬಾದಿನ ಪ್ರಮುಖ ಶ್ರೇಷ್ಠಿಗಳಾದ ಸ್ವರ್ಗೀಯ ಜಮನಲಾಲರು ನನ್ನ ಹೆಸರಿನಲ್ಲಿ ಒಂದು "ಗಣನೀ ಜ್ಞಾನಮತೀ ಭಕ್ತ ಮಂಡಲ" ವೆಂಬ ಸಂಸ್ಥೆ ಪ್ರಾರಂಭಿಸಿದ್ದರು. ಇದರಲ್ಲಿ ಇರುವ ಸದಸ್ಯರೆಲ್ಲರು ಸೇರಿ ಫೆಬ್ರುವರಿ 2003ರಲ್ಲಿ ಕುಂಡಲಪುರಕ್ಕೆ ಆಗಮಿಸಿದ್ದ ಎಲ್ಲರಿಗೂ ಔತಣವನ್ನು ಏರ್ಪಡಿಸಿದ್ದರು. ಪುನಃ ಚಾತುರ್ಮಾಸ ಸ್ಥಾಪನೆಯ ಸಮಯದಲ್ಲಿ ಎಲ್ಲರು ಆಗಮಿಸಿ ತಮ್ಮ ಭಕ್ತಿಯನ್ನು ತೋರ್ಪಡಿಸಿದ್ದರು. ಚಾತುರ್ಮಾಸದಲ್ಲೇ ಬರುವ ದಶಲಕ್ಷಣ ಪರ್ವದಲ್ಲಿ ಎಲ್ಲರು ಕುಂಡಲಪುರಕ್ಕೆ ಬಂದು 1-9-2003 ರಿಂದ 10-9-2003 ರ ವರೆಗೆ ಕಲ್ಪದ್ರುಮ ಆರಾಧನೆಯನ್ನು ಆಯೋಜಿಸಿದ್ದರು. ಅದರ ನಂತರ ಅಕ್ಟೋಬರನಲ್ಲಿ ನನ್ನ ಜನ್ಮ ಜಯಂತಿಯ ಮಹೋತ್ಸವದಲ್ಲಿ ಸಹ ಐದು ದಿನಗಳ ಕಾರ್ಯಕ್ರಮವನ್ನು ಇದೇ ಭಕ್ತ ಮಂಡಲದಿಂದಲೇ ಆಯೋಜಿತವಾಗಿತ್ತು. ಆರ್ಥಿಕ ಭಾರದೊಂದಿಗೆ ಈ ಎಲ್ಲರ ಗುರುಭಕ್ತಿ ನಿಜವಾಗಿಯು ಅನುಕರಣೀಯವಾಗಿದೆ.

ಕುಂಡಲಪುರ ಮಹೋತ್ಸವದಲ್ಲಿ ಬಿಹಾರ ಸರ್ಕಾರದ ಪರ್ಯಟನ ವಿಭಾಗದ ಸಹಭಾಗಿತ್ವ

ಕುಂಡಲಪುರದಲ್ಲಿ ನಡೆಯುತ್ತಿದ್ದ ಅಭಿವೃದ್ಧಿ ಕೆಲಸಗಳತ್ತ ರಾಜ್ಯ ಸರ್ಕಾರದ ದೃಷ್ಟಿಯು ಹರಿಯಿತು. ಸಂಚಾರ ವಿಭಾಗದ ಅಧಿಕಾರಿಗಳು ಕುಂಡಲಪುರದ ದರ್ಶನಾರ್ಥ ಬಂದವರಿಗೆ ಅದರ ನೈಜವಾದ ವಿಷಯಗಳ ಮನವರಿಕೆ ಆಯಿತು. ಅವರು ಬಂದ ಸಮಯದಲ್ಲಿ ನಾನು ಅಕ್ಟೋಬರನಲ್ಲಿ ಕುಂಡಲಪುರದ ಮಹೋತ್ಸವವನ್ನು ನಡೆಸಬೇಕೆಂದು ರೂಪರೇಖೆಗಳನ್ನು ಸಿದ್ಧಪಡಿಸುವುದರಲ್ಲಿ ತೊಡಗಿದ್ದೆವು. ನಮ್ಮ ಯೋಜನೆಗಳನ್ನು ತಿಳಿದುಕೊಂಡ ಅವರು ಮಹೋತ್ಸವಕ್ಕೆ ಪೂರ್ಣ ಸಹಕಾರವನ್ನು ಸರ್ಕಾರದ ವತಿಯಿಂದ ಒದಗಿಸಿಕೊಡಲು ಭರವಸೆಯನ್ನು ಕೊಟ್ಟರು. ನಮ್ಮ ಅಲ್ಪ ಪ್ರಯಾಸವು ಅವರ ಸಹಕಾರದಿಂದ ಅದ್ಭುತವಾದ ಯಶಸ್ಸನ್ನು ಕಂಡಿತು. ದೆಹಲಿ ಬಿಹಾರದ ಪ್ರಾಂತ್ಯಗಳಲ್ಲಿ ಹೆಚ್ಚಿನ ಪ್ರಚಾರವನ್ನು ಪಡೆದು ಸಾವಿರಾರು ಸಂಖ್ಯೆಯ ಜನರು ಕುಂಡಲಪುರದ ದರ್ಶನಕ್ಕೆ ಬಂದು ಇಲ್ಲಿನ ಅಭಿವೃದ್ಧಿಯನ್ನು ಕಂಡು ಮನಸಾರೆ ನನಗೆ ಕೃತಜ್ಞತೆಯನ್ನು ಹೇಳತೊಡಗಿದರು. ಅದಕ್ಕೆ ನಾನು ಈ ಕೃತಜ್ಞತೆಗಳೆಲ್ಲವೂ ನಿಮ್ಮಂತಹ ಶ್ರಾವಕರಿಗೆ ಸಲ್ಲಬೇಕು. ಇದರಲ್ಲಿ ನನ್ನದೇನೂ ಇಲ್ಲ. ಈ ಕಾರಣದಿಂದಾಗಿ ನನಗೆ ಮಹಾವೀರರ ಪಾದಧೂಳಿಯನ್ನು ಸ್ಪರ್ಶಿಸುವ ಭಾಗ್ಯ ದೊರೆಯಿತು ಎಂದು ಅವರಿಗೆ ಆಶೀರ್ವಾದ ಮಾಡಿ ಕಳುಹಿಸಿದೆ.

ಧನಂಜಯರಿಗೆ ಭಗವಾನ ವೃಷಭದೇವರ ರಾಷ್ಟ್ರೀಯ ಪುರಸ್ಕಾರ

ದೆಹಲಿಯ ಪ್ರೀತಿ ವಿಹಾರಿನ ಅನಿಲ ಜೈನ, ಕಮಲ ಮಂದಿರ ಹಾಗೂ ಸಂಸ್ಥಾನದ ಕಡೆಯಿಂದ ಘೋಷಿತವಾದ ಪುರಸ್ಕಾರವನ್ನು ಈ ಬಾರಿ ಧನಂಜಯ ಕುಮಾರರಿಗೆ ಕೊಡಬೇಕೆಂದು ನಿರ್ಧರಿಸಲಾಗಿತ್ತು. 10-10-2003 ರಂದು ಶರದ ಪೂರ್ಣಿಮೆಯಂದು ಆಯೋಜಿಸಲಾಗಿದ್ದ ಸಮಾರಂಭಕ್ಕೆ ಬಿಹಾರದ ರಾಜ್ಯಪಾಲರಾದ ಎಮ್. ರಾಮಾ ಜೋಯಿಸ ಆಗಮಿಸಿದ್ದರು. ತುಂಬಿದ ಸಭೆಯಲ್ಲಿ ಭಗವಾನ ವೃಷಭದೇವರ ಪ್ರಚಾರ ಪ್ರಸಾರದಲ್ಲಿ ತನ್ನ

ಅಮೂಲ್ಯವಾದ ಸಹಯೋಗವನ್ನು ಮಾಡಿದ್ದ ನನ್ನ ಅನನ್ಯ ಭಕ್ತನಾದ ಧನಂಜಯಕುಮಾರರನ್ನು ಸಂಸ್ಥಾನದ ಹಾಗೂ ಜೈನ ಸಮಾಜದ ಸರ್ವೋಚ್ಚ ಪುರಸ್ಕಾರದಿಂದ ಪುರಸ್ಕರಿಸಲಾಯಿತು. ಸಭೆಯು ಚಪ್ಪಾಳೆಯ ಸದ್ದು ಇಡೀ ಪರಿಸರದಲ್ಲೆಲ್ಲ ಪ್ರತಿಧ್ವನಿಸಿತು. ಎಲ್ಲರಿಗೂ ಪುರಸ್ಕಾರದ ಮಹತ್ವ ಧನಂಜಯರ ಕಾರ್ಯದಕ್ಷತೆ ಎರಡರ ಪರಿಚಯವು ಆಯಿತು.

ತೀರ್ಥಂಕರರ ಜನ್ಮ ಭೂಮಿಯ ಅಭಿವೃದ್ಧಿಯ ಸಮಿತಿಯ ಘೋಷಣೆ

ಕುಂಡಲಪುರದ ಮಹೋತ್ಸವದಲ್ಲಿ ನಾನು ಭಾರತದ ಎಲ್ಲ ಜೈನ ಸಮಾಜಗಳಿಗೂ 24 ತೀರ್ಥಂಕರರ 16 ಜನ್ಮಭೂಮಿಗಳ ಜೀರ್ಣೋದ್ಧಾರ ಹಾಗೂ ಅಭಿವೃದ್ಧಿ ಮಾಡಿ ಸಂಸ್ಕೃತಿಯ ಸಂರಕ್ಷಣೆ ಮಾಡಲು ಪ್ರೇರಣೆ ಕೊಟ್ಟಿದ್ದೆ. ಒಂದು ವಿಕಾಸ ಸಮಿತಿಯು ಅಲ್ಲಿಯೇ ಮೊದಲನೆಯದಾಗಿ ಕುಂಡಲಪುರದ ಮೇಲ್ವಿಚಾರಣೆಯನ್ನು ನಂತರ ಬನಾರಸ, ಚಂದ್ರಪುರಿ, ಕೌಶಾಂಬಿ ಮೊದಲಾದ ತೀರ್ಥಗಳ ಸರ್ವೆ ಮಾಡಿ ವಿಕಾಸ ಕಾರ್ಯವನ್ನು ಆರಂಭಿಸಲು ಘೋಷಣೆ ಮಾಡಿತು.

ನಾನು ಶ್ರದ್ಧಾಳು ಭಕ್ತರಲ್ಲಿ ಹೇಳುವುದಿಷ್ಟೇ ನಾನು ಸಂಕ್ಷೇಪವಾಗಿ ನನ್ನ ಜೀವನಕ್ಕೆ ಸಂಬಂಧಿಸಿದ ಕೆಲವು ಘಟನೆಗಳನ್ನು ವಿವರಿಸಿದ್ದೇನೆ. ನನ್ನ ಎಲ್ಲಾ ಕೆಲಸಗಳಲ್ಲೂ ನನಗೆ ಬಹಳಷ್ಟು ಸಿಹಿ ಕಹಿ ಅನುಭವವಾಗಿದೆ. ನಾನು ಘಟನೆಗಳನ್ನು ನಡೆದಂತೆಯೇ ವಿವರಿಸಿದ್ದಾದರೆ ಕೆಲವರ ಮನಸ್ಸಿಗೆ ಕಹಿ ಎನ್ನಿಸಬಹುದು. ಆದ್ದರಿಂದ ಅವುಗಳನ್ನು ವಿವರಿಸುವುದು ಅನಾವಶ್ಯಕ. ಈ ನಿಂದೆ ಪ್ರಶಂಸೆಗಳು ಎಂತಹವರನ್ನು ವಿಚಲಿತರನ್ನಾಗಿ ಮಾಡಿ ಕೆಲಸದಿಂದ ವಿಮುಖರನ್ನಾಗಿ ಮಾಡುತ್ತವೆ. ನನಗೆ ಸುದೈವದಿಂದ ನನ್ನ ಈ ಅಲ್ಪ ಜೀವಿತ ಅವಧಿಯಲ್ಲಿ ವರ್ತಮಾನದಲ್ಲಿ ಪರಿಣಾಮ ಶುದ್ಧಿ, ಜಿನಧರ್ಮ ಪ್ರಭಾವನೆ, ತೀರ್ಥ ನಿರ್ಮಾಣ, ಅಭಿವೃದ್ಧಿ ಸಾಹಿತ್ಯ ರಚನೆ ಮೊದಲಾದ ಕಾರ್ಯಗಳಿಂದ ಮುಂದಿನ ಭವದವರೆಗೂ ಪುಣ್ಯ ಬಂಧ ಮಾಡಿಕೊಳ್ಳಬೇಕಾಗಿರುವುದರಿಂದ ಸ್ವಲ್ಪ ನಿಂದೆಗೆ ಹೆದರಿ, ಅಧಿಕ ಪುಣ್ಯ ಬಂಧದ ಕಾರ್ಯಗಳಿಂದ ಹಿಂದೆ ಸರಿಯುವ ಮನಸ್ಸಿಲ್ಲ. ಒಂದು ವೇಳೆ ನಿಷ್ಪಕ್ಷಪಾತ ಭಾವದಿಂದ ಯಾರು ಕಾರ್ಯಕಲಾಪಗಳನ್ನು ಸಮೀಕ್ಷಿಸುತ್ತಾರೋ ಅವರಿಗೆ ಈ ನನ್ನ ಕಾರ್ಯಗಳ ಹಿಂದೆ ಕೇವಲ ನನ್ನ ಭಕ್ತಿ ಮತ್ತು ಆತ್ಮಶುದ್ಧಿಯೇ ಕಾರಣವೆಂದು ತಿಳಿಯುತ್ತದೆ ನನಗೆ ಕೀರ್ತಿ, ಲಾಭದ ಇಚ್ಛೆ ಎಂದಿಗೂ ಇಲ್ಲ.

ನವಂಬರ ಮತ್ತು ಡಿಸೆಂಬರನಲ್ಲಿ ಪಾವಾಪುರಿ ಹಾಗೂ ರಾಜಗೃಹಗಳಲ್ಲಿ ಪೂರ್ವ ನಿರ್ಧಾರಿತವಾದಂತೆ ಪಂಚಕಲ್ಯಾಣಗಳು ನನ್ನ ಸಾನಿಧ್ಯದಲ್ಲಿ ಜರುಗಿತು. ಪಾವಾಪುರಿಯಲ್ಲಿ ನವ ನಿರ್ಮಾಣವು ದೆಹಲಿಯ ವಿಜಯಕುಮಾರ್ ಸುಭಾಷ್‌ಚಂದ್‌ರವರ ಸೌಜನ್ಯದಿಂದ ನಡೆಯಿತು. ಹಾಗೇ ರಾಜಗೃಹದಲ್ಲಿ ಅನಿಲಜೈನ ಮತ್ತು ಕಮಲಮಂದಿರದವರಿಂದ ನಿರ್ಮಾಣವಾಗಿತ್ತು. ಎರಡು ಸ್ಥಳಗಳಲ್ಲು ಪಂಚಕಲ್ಯಾಣಗಳು ಮಂದಿರ ನಿರ್ಮಾತೃಗಳಿಂದಲೇ ಆಗಿವೆ. ಅದು ಅವರ ತೀರ್ಥಭಕ್ತಿಯ ಪ್ರತೀಕ.

20ನೇಯ ಶತಮಾನದಲ್ಲಿ ಮೊದಲ ಆಚಾರ್ಯರು ಯಾರು?

1988 ರ ನಂತರ ಮೊದಲ ಆಚಾರ್ಯರ ವಿಷಯದಲ್ಲಿ ಆದಿಸಾಗರಜೀ "ಅಂಕಲಿಕರ" ರ ವಿಷಯದಲ್ಲಿ ಬಹಳ ಚರ್ಚೆ ಆಗತೊಡಗಿದೆ. ಇದಕ್ಕಿಂತ ಮೊದಲು ನಾನು ಮಹಾವೀರ ಕೀರ್ತಿ ಮಹಾರಾಜರ ಬಾಯಿಯಲ್ಲಾಗಲೀ ವಿಮಲಸಾಗರರ ಬಾಯಿಯಲ್ಲಾಗಲೀ ಈ ವಿಷಯ ಬಂದಿರಲಿಲ್ಲ. ಹೀಗಾಗಿ ಪರಮ ಪೂಜ್ಯ ಚಾರಿತ್ರ ಚಕ್ರವರ್ತಿ

ಆಚಾರ್ಯ ಶ್ರೀ ಶಾಂತಿಸಾಗರರೇ ಮೊದಲ ಆಚಾರ್ಯರೆಂದು ತಿಳಿದಿದ್ದ ಮುನಿಗಳನ್ನು ಹುಡುಕಲು ಪ್ರಾರಂಭಿಸಿದೆ. ಆಗ ನೂರಾರು ಪ್ರಮಾಣಗಳು ದೊರಕಿದವು. ಈ ವಿಷಯವನ್ನು ಸಂಕ್ಷೇಪವಾಗಿ ಕೊಡುತ್ತಿದ್ದೇನೆ. ಜೈನ ಗಜಟ್‌ನ ಮೂಲಕ ಹಳೆಯ ಜೈನಮಿತ್ರದ ಒಂದು ಒಳ್ಳೆಯ ಪ್ರಮಾಣ ಸಿಕ್ಕಿತು.

ಜೈನ ಮಿತ್ರ

ಬೊಂಬಾಯಿ ದಿಗಂಬರ ಜೈನ ಪ್ರಾಂತೀಯ ಸಭೆಯ ಸಾಪ್ತಾಹಿಕ ಪತ್ರ ವರ್ಷ 26 ಸೂರತ ಗುರುವಾರ ಆಷಾಢ ಸುದೀ II ವೀರ ಸಂ. 2451, 3-7-1925 [ಅಂಕ -33]

ಜೈನ ಸಮಾಚಾರಾವಲಿ.

ಮುನಿ ಮತ್ತು ತ್ಯಾಗಿಗಳ ಚಾತುರ್ಮಾಸ

ಆಚಾರ್ಯ ಶ್ರೀ ಶಾಂತಿಸಾಗರಜೀ ಹಾಗೂ ಅವರ ಸಂಘದ ಚಾತುರ್ಮಾಸವು ಕುಂಭೋಜ (ಕೊಲ್ಹಾಪುರ) ದಲ್ಲಿ ನಡೆದಿದೆ. ಹಾತಕಲಂಗಡ ಸ್ಟೇಷನಿಂದ 6 ಮೈಲಿ ದೂರದಲ್ಲಿದೆ. ಮೋಟಾರಗಾಡಿ ಮುಂತಾದವು ಸಿಗುತ್ತವೆ. ಇಲ್ಲಿ 290-300 ಜೈನರ ಮನೆಗಳಿವೆ. ಒಳ್ಳೆಯ ಸೌಕರ್ಯಗಳಿವೆ ಆಚಾರ್ಯರ ಜೊತೆಯಲ್ಲಿರುವ ಸಂಘ.

೧.	ಮುನಿ ಆದಿಸಾಗರ ಜೀ ಮಹಾರಾಜರು	(ಅಂಕಲೀಕಾರ)
೨.	ಮುನಿ ನೇಮಿಸಾಗರ ಜೀ ಮಹಾರಾಜರು	(ಕುಥಚೀಕರ)
೩.	ಮುನಿ ವೀರಸಾಗರ ಜೀ ಮಹಾರಾಜರು	(ನಾಂದಗಾಂವ)
೪.	ಮುನಿ ನೇಮಿಸಾಗರ ಜೀ ಮಹಾರಾಜ	(ಪುನ್ನೂರ ಮದ್ರಾಸ)

ಎರಡನೇಯ ಕಾಲಂ

೧.	ಕ್ಷುಲ್ಲಕ ಪಾಯಸಾಗರ ಮಹಾರಾಜ	(ಐನಾಪುರ)
೨.	ಆರ್ಯಿಕೆ ತಾರಾಬಾಯಿ ವ ರತ್ನಬಾಯಿ	(ನಾಂದಣಿ)
೩.	ಮುನಿಶ್ರೀ ಶಾಂತಿಸಾಗರಜೀ	(ಫಾಣಿ) (ಲಲಿತಪುರ)
೪.	ಮುನಿಶ್ರೀ ಆನಂದಸಾಗರಜೀ	(ಲಲಿತಪುರ)
೫.	ಮುನಿ ಸೂರ್ಯಸಾಗರಜೀ	(ಲಲಿತಪುರ)
೬.	ಮುನಿ ಜ್ಞಾನಸಾಗರಜೀ	(ಗ್ವಾಲಿಯರ್)

ಈ ಪ್ರಮಾಣಗಳಿಂದ 1925 ರಲ್ಲಿ ಆಚಾರ್ಯ ಶಾಂತಿಸಾಗರಜೀ ಏಕಮಾತ್ರ ಆಚಾರ್ಯರಾಗಿದ್ದರು. ಆದಿಸಾಗರರು ಮತ್ತು ಫಾಣೀ ಶಾಂತಿಸಾಗರರು ಮುನಿಗಳಾಗಿದ್ದರು. ಈ ರೀತಿಯ ಹಲವಾರು ಆಧಾರಗಳು ದೊರೆತು ಪ್ರಕಟನೆಯನ್ನು ಕೊಟ್ಟಿರುವುದರಿಂದ ಈ ವಿಷಯವನ್ನು ಇಲ್ಲಿಗೆ ಮುಗಿಸುತ್ತೇನೆ.

ನವಗ್ರಹ ಶಾಂತಿ ಮಂದಿರದಲ್ಲಿ ಜಿನಬಿಂಬಗಳ ಸ್ಥಾಪನೆ ಮತ್ತು ಕಲಾತ್ಮಕ ಶಿಖರಗಳಿಗೆ ಕಳಸಾರೋಹಣ

ಕುಂಡಲಪುರದಲ್ಲಿ ನಿರ್ಮಿತವಾಗಿದ್ದ ಮೂರು ಮಂದಿರಗಳಿಗೆ ದಕ್ಷಿಣಭಾರತದ ಕಲಾತ್ಮಕತೆಯನ್ನು ಹೊಂದಿದ್ದ ಶಿಖರಗಳು ಆಕರ್ಷಕವಾಗಿ ಕಾಣಿಸುತ್ತಿದ್ದವು. 11-2-2004 ರಿಂದ 13-2-2004 ರವರೆಗೆ ಲಘು ಪಂಚಕಲ್ಯಾಣ, ವೇದಿ ಪ್ರತಿಷ್ಠೆ ಹಾಗೂ ಕಳಸಾರೋಹಣೆ ಸಮಾರಂಭಗಳನ್ನು ಆಯೋಜಿಸಲಾಗಿತ್ತು. ಮಹಾವೀರ ಮಂದಿರದ ಮೇಲೆ 4 ಪ್ರತಿಮೆಗಳು 5½ ಅಡಿ ಎತ್ತರದ ಪಿಂಛಿ ಮತ್ತು ಕಮಂಡಲುಗಳಿಂದ ಒಳಗೊಂಡಿರುವ ಮುದ್ರೆಯಿಂದ ಕೂಡಿರುವ ಶ್ವೇತ ವರ್ಣದ ಮಹಾವೀರರ ಬಿಂಬಗಳು ಪ್ರತಿಷ್ಠೆ ಆಯಿತು. ನವಗ್ರಹ ಶಾಂತಿ ಮಂದಿರದಲ್ಲಿ ಹೊಸ ಮಾದರಿಯಿಂದ ರಚಿತವಾಗಿರುವ ಒಂಬತ್ತು ಕಮಲಗಳ ಪೀಠಶುದ್ಧಿಯನ್ನು ಫೆಬ್ರುವರಿ 22 ರಂದು ಸೌಭಾಗ್ಯಶಾಲಿ ಮಹಿಳೆಯ 81 ಕಳಸಗಳಿಂದ ಶುದ್ಧಿ ಮಾಡಿಕೊಂಡರು. ಫೆಬ್ರುವರಿ 23 ರಂದು ಪ್ರಾತಃ ಕಾಲ ಮೋಕ್ಷ ಕಲ್ಯಾಣದ ನಂತರ ಒಂಬತ್ತು ಕಮಲವೇದಿಕೆಯ ಮೇಲೆ ನವಗ್ರಹ ಶಾಂತಿಕಾರಕ 9 ತೀರ್ಥಂಕರ ಭಾಗವಾನ್‌ರನ್ನು ಶ್ರೀ ಜ್ಞಾನಚಂದ ಜೈನರು ಮಂಗಳವಾದ್ಯಗಳೊಂದಿಗೆ ಭಕ್ತ ಸಮೂಹದ ಸಮ್ಮುಖದಲ್ಲಿ ಪ್ರತಿಷ್ಠೆ ಮಾಡಿಸಿದಳು. ಶಿಖರದ ನಾಲ್ಕು ದಿಕ್ಕಿನಲ್ಲೂ ಶ್ರೀ ವೃಷಭದಾಸ ದೀಪಕ ಕುಮಾರ್ ಜೈನರ ಪರಿವಾರದವರು ಪ್ರತಿಷ್ಠಾಪಿಸಿದರು. ಇದರ ನಂತರ ಪ್ರವಚನ ಸಭೆಯನ್ನು ಆಯೋಜಿಸಲಾಗಿತ್ತು. ಇದರಲ್ಲಿ ನಾಳಂದದ ಡಿ. ಎಮ್. ಶ್ರೀ ಆನಂದ ಕಿಶೋರ ಜೀ ಹಾಗೂ ವಿಧಾಯಕ ಶ್ರೀ ಶ್ರವಣಕುಮಾರಜೀ ಯವರು ಸಭೆಯನ್ನು ಸಂಭೋಧಿಸಿ ಮಾತನಾಡಿದರು. ಮತ್ತು ಕಳಸಾರೋಹಣೆ ಮಾಡಿದ ಬನಾರಸ ಹಾಗೂ ಆರಾ ಪರಿವಾರವನ್ನು ಕುಂಡಲಪುರದ ಸಮಿತಿಯ ಕಡೆಯಿಂದ ಸನ್ಮಾನಿಸಲಾಯಿತು. ಪುನಃ ಶುಭ ಮೂಹೂರ್ತದಲ್ಲಿ ಭಗವಾನ ಮಹಾವೀರರ ಮೂಲ ಮಂದಿರ ಹಾಗೂ ವೃಷಭ ದೇವ ಮಂದಿರದ ಶಿಖರದ ಮೇಲೆ ದೀಪಕ ಕುಮಾರ್ ಪರಿವಾರದವರು ಕಳಸಾರೋಹಣೆ ಮಾಡಿ ಧ್ವಜಾರೋಹಣೆ ಮಾಡಿದರು. ಹೀಗೆ ನವಗ್ರಹ ಶಾಂತಿ ಮಂದಿರದ ಶಿಖರದ ಮೇಲೆ ಜ್ಞಾನಚಂದ್ ಜೈನ ಪರಿವಾರದವರು ಕಳಸಾರೋಹಣೆ ಹಾಗೂ ಧ್ವಜ ಸ್ಥಾಪನೆಯನ್ನು ಮಾಡಿ ಸಾತಿಶಯ ಪುಣ್ಯ ಸಂಪಾದನೆ ಮಾಡಿದರು. ಮೂರು ಮಂದಿರದ ಮೇಲೆಯೂ ಒಂದೇ ಸಲ ಕಳಸಾರೋಹಣೆ ಆಯಿತು. ಇದೊಂದು ಸುಖದ ಅನುಭವ, ಚಿರಸ್ಮರಣೀಯವಾದದು.

೧೦೮

ಜೈನ ಶಬ್ದ ಕೋಶ ಒಂದು ವಿಶೇಷ ಕೊಡುಗೆ

ಭ. ಮಹಾವೀರರ 2600 ನೇ ಜನ್ಮೋತ್ಸವದ ಸಂದರ್ಭದಲ್ಲಿಯೇ ಚಂದನಮತಿಯು ಮುಂದಿನ ಪೀಳಿಗೆಯ ಅವಶ್ಯಕತೆಗಾಗಿ ಹಿಂದಿ-ಇಂಗ್ಲೀಷ್ ಜೈನ ಧರ್ಮದ ಶಬ್ದಕೋಶವನ್ನು ರಚಿಸಬೇಕೆಂದು ಹೇಳುತ್ತಲೇ ಇದ್ದುದ್ದರಿಂದ, ಆ ಕೆಲಸವನ್ನು ಚಂದನಮತಿ, ಡಾII ಅನುಪಮ ಜೈನ, ಜೀವನ ಪ್ರಕಾಶ, ಸಂಘದ ಸ್ವಾತಿ ಮೊದಲಾದವರು 3 ವರ್ಷಗಳಿಂದ ಶ್ರಮಪಟ್ಟು 15000 ಶಬ್ದಗಳನ್ನು ಒಳಗೊಂಡ ಶಬ್ದಕೋಶವನ್ನು ತಯಾರಿಸಿದರು. ನನ್ನಲ್ಲಿ ಶಾಸ್ತ್ರೀಯ ವಿವೇಚನೆ ಮಾಡಿ ಪೂರ್ಣ ಪ್ರಮಾಣಿಕ ಶಬ್ದಗಳನ್ನು ಕೊಟ್ಟಿದ್ದಾರೆ. ನನ್ನ ಶಿಷ್ಯರಿಂದ ಇಂತಹ ಸರಸ್ವತಿ ಉಪಾಸನೆಯಾಗಿದ್ದು ನನಗೆ ಅತ್ಯಂತ ಹರ್ಷವನ್ನು ಉಂಟು ಮಾಡುವ ವಿಷಯವೇ ಆಗಿದೆ. ಇದಕ್ಕಾಗಿ ನನ್ನ ಆಶೀರ್ವಾದ ಯಾವಾಗಲೂ ಇದ್ದೇ ಇರುತ್ತದೆ.

ಭಗವಾನ ಪಾರ್ಶ್ವನಾಥರ ಮೂರನೆಯ ಸಹಸ್ರಾಬ್ದಿ ಮಹೋತ್ಸವದ ಘೋಷಣೆ

ಉತ್ಸವ ಮತ್ತು ಮಹೋತ್ಸವಗಳನ್ನು ಆಚರಿಸುವ ಪರಂಪರೆಯು ಪ್ರಾಚೀನ ಕಾಲದಿಂದಲೂ ನಡೆದು ಬರುತ್ತಿದೆ. ಇದರಿಂದಾಗಿಯೇ 1974 ರಲ್ಲಿ ಭಗವಾನ್ ಮಹಾವೀರರ 2500 ನೇ ನಿರ್ವಾಮ ಮಹೋತ್ಸವ 2000 ನೇ ಇಸವಿಯಲ್ಲಿ ಭಗವಾನ ವೃಷಭದೇವರ ಅಂತರರಾಷ್ಟ್ರೀಯ ನಿರ್ವಾಣ ಮಹೋತ್ಸವ ಮತ್ತು 2001 ರಲ್ಲಿ ಭ. ಮಹಾವೀರರ 2600 ನೇ ಯ ಜನ್ಮಕಲ್ಯಾಣ ಮಹೋತ್ಸವವನ್ನು ಆಚರಿಸಿದೆ. ಇದೇ ರೀತಿ 23 ನೇ ತೀರ್ಥಂಕರ ರಾದ ಪಾರ್ಶ್ವನಾಥರ ಮೂಲಕ ಜೈನಧರ್ಮದ ಪ್ರಾಚೀನ ಇತಿಹಾಸವನ್ನು ಪ್ರಪಂಚದ ಮೂಲೆ ಮೂಲೆಯವರೆಗು ತಲುಪಿಸುವ ಸಲುವಾಗಿ ಡಿಸಂಬರ 5-2003 ರಲ್ಲಿ ರಾಜಗೃಹದಲ್ಲಿ ಭ. ಮುನಿಸುವ್ರತ ಜಿನಬಿಂಬ ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವದಲ್ಲಿಯ "ಭಗವಾನ ಪಾರ್ಶ್ವನಾಥರ ಜನ್ಮ ಕಲ್ಯಾಣ" ದ ತೃತೀಯ ಸಹಸ್ರಾಬ್ದಿ ಮಹೋತ್ಸವವನ್ನು ಆಚರಿಸುವ ಘೋಷಣೆಯನ್ನು ಮಾಡಲಾಯಿತು. ಅದರ ನಂತರ 19-12-2003 ರಂದು ಪಾರ್ಶ್ವನಾಥರ ಜನ್ಮ ಭೂಮಿ ವಾರಾಣಾಸಿಯಲ್ಲಿಯು ಮಹೋತ್ಸವವನ್ನು ಆಚರಿಸಲು ಸಂಕಲ್ಪದೀಪವನ್ನು ಪ್ರಜ್ವಲಿಸಲಾಯಿತು.

ಜನ್ಮಭೂಮಿಯಲ್ಲಿ ದ್ವಿತೀಯ ಜನ್ಮ ಜಯಂತಿ ಮಹೋತ್ಸವ

ಕುಂಡಲಪುರದಲ್ಲಿ ನನ್ನ ಸಂಘದ ಸಾನಿಧ್ಯದಲ್ಲಿಯೇ 30-10-2004 ರಂದು ಎರಡನೆಯ ಜನ್ಮಜಯಂತಿ ಮಹೋತ್ಸವವು ವಿಶೇಷ ಪ್ರಭಾವನೆಯೊಂದಿಗೆ ಆಚರಿಸಲಾಯಿತು. ಬಿಹಾರದ ದಿಗಂಬರ ಜೈನ ಸಮಾಜದ ವಿಶೇಷ ಸಹಯೋಗ ದೊರೆತಿತ್ತು. ಹಾಗೇ ಮಧ್ಯಪ್ರದೇಶದ ಇಂದೂರಿನಿಂದ ಶ್ರೀ ಮಾಣಿಕಚಂದ ಜೈನರು 150 ಜನ ಪ್ರತಿನಿಧಿಗಳನ್ನು ಕರೆತಂದು ಮಹೋತ್ಸವವನ್ನು ಅದ್ವೀತಿಯವನ್ನಾಗಿ ಮಾಡಿದರು. ಬಿಹಾರದವರೇ ಊಟದ ವ್ಯವಸ್ಥೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿದರು. ಇದೇ ರೀತಿ ಪ್ರತಿವರ್ಷವು ಕುಂಡಲಪುರದಲ್ಲಿ ಜನ್ಮಕಲ್ಯಾಣ ನಡೆಯಲಿ ಎಂಬುದೇ ನನ್ನ ಮನದಾಶೆಯಾಗಿದೆ.

ಕುಂಡಲಪುರದಲ್ಲಿಯೇ ಎರಡನೆಯ ಚಾತುರ್ಮಾಸ

ಭಗವಾನ ಮಹಾವೀರರ ಜನ್ಮ ಭೂಮಿಯಲ್ಲಿ ಸಂಕಲ್ಪಿಸಿದ ಕೆಲಸಗಳು ತ್ವರಿತಗತಿಯಲ್ಲಿ ನಡೆಯುತ್ತಿದ್ದರೂ ಪೂರ್ಣಗೊಳ್ಳಲಿಲ್ಲ. ನಂದ್ಯಾವರ್ತ ಪರಿಸರದಲ್ಲಿ ಪ್ರಮುಖ ನೂರು ಕಟ್ಟಡಗಳ ನಿರ್ಮಾಣ ಮುಗಿಯುತ್ತಾ ಬಂದಿದ್ದವು. ತ್ರಿಕಾಲ ಚೌಬೀಸೀಯ ಮೂರು ಅಂತಸ್ತಿನ ಕೆಲಸ, ಹಾಗೇ ವಿಶಿಷ್ಟ ಶೈಲಿಯಲ್ಲಿ ರೂಪುಗೊಳ್ಳುತ್ತಿರುವ ನಂದ್ಯಾವರ್ತ ಮಹಲ್‌ನ ಪೂರ್ಣರೂಪವನ್ನು ಪ್ರತ್ಯಕ್ಷ ನಾನೇ ನೋಡಬೇಕೆಂಬ ಆಶೆಯು ಮನದೊಳಗಿತ್ತು ತಕ್ಕಂತೆ ಬಿಹಾರದ ಭಕ್ತರು ಕೆಲಸ ಪೂರ್ಣಗೊಳ್ಳುವವರೆಗೂ ನನ್ನ ಸಾನಿಧ್ಯ ಬೇಕೆಂಬ ಆಗ್ರಹದೊಂದಿಗೆ 1-7-2004 ರಲ್ಲಿ ಚಾತುರ್ಮಾಸ ಸ್ಥಾಪನೆ ಅಲ್ಲಿಯೇ ಕೈಕೊಂಡೆ.

ಹಿಂದಿನ ವರ್ಷದಂತೆಯೇ ಈ ವರ್ಷವು ಚಾತುರ್ಮಾಸದಲ್ಲಿ ಹಲವಾರು ಕಾರ್ಯಗಳು ನಡೆದವು. ಡಾ॥ ಪನ್ನಾಲಾಲ ಜೈನ ಪರಿವಾರದವರು ಆಗಷ್ಟನಲ್ಲಿ ಇಂದ್ರಧ್ವಜ ಆರಾಧನೆಯನ್ನು ಮಂಡಿಸಿದರು. ಮಹಾರಾಷ್ಟ್ರದ ಗಣಿನೀ ಜ್ಞಾನಮತಿ ಭಕ್ತ ಮಂಡಲದವರಿಂದ ವಿಶ್ವಶಾಂತಿ ಮಹಾವೀರರ ಆರಾಧನೆಯು ನಡೆಯಿತು. ಅಕ್ಟೋಬರನಲ್ಲಿ ಚಿತ್ತೋಡಿನ ಶ್ರೀ ಭಾಗಮಲ್ ಗುಣಸಾಗರ ಜೈನರವರಿಂದ ಸರ್ವತೋಭದ್ರ ಆರಾಧನೆ ಹಾಗೂ

ಕುಂಡಲಪುರದ ಸಮಿತಿಯವರಿಂದ ಕುಂಡಪುರದ ಮಹೋತ್ಸವ ಮುಂತಾದ ಕಾರ್ಯಕ್ರಮಗಳು ನಡೆದವು. ಇದರ ಜೊತೆಗೆ ನನ್ನ ಷಟ್ ಖಂಡಾಗಮ ಟೀಕೆಯ ಲೇಖನ ಕಾರ್ಯವು ನಡೆಯುತ್ತಿತ್ತು. ಚಂದನಮತಿಯು ಅಧ್ಯಯನ, ಲೇಖನ ಹಾಗೇ ಸಂಘದ ಶಿಷ್ಯರ ಅಧ್ಯಯನ, ಪಠನ ಮುಂತಾದವೆಲ್ಲವು ನಿಯಮದಂತೆಯೇ ನಡೆಯುತ್ತಿದ್ದವು. 12-11-2004 ಕ್ಕೆ ನನ್ನ ಚಾತುರ್ಮಾಸವು ಮುಗಿಯಿತು. ನವಂಬರ 14ರಂದು ಕುಂಡಲಪುರದಿಂದ ನನ್ನ ಸಂಘವು ವಿಹಾರ ಮಾಡುತ್ತಾ ಬನಾರಸ, ಅಯೋಧ್ಯೆ, ಅಹಿಚ್ಚತ್ರ ಮುಂತಾದ ತೀರ್ಥವಂದನೆ ಮಾಡುತ್ತಾ ದೆಹಲಿ - ಹಸ್ತಿನಾಪುರದ ಕಡೆಗೆ ಮಂಗಳ ವಿಹಾರ ಮಾಡಿತು. ನನ್ನ ಕುಂಡನಪುರದ ಯಾತ್ರೆ ನನ್ನ ಸಂಘಕ್ಕೂ ಸಮಸ್ತ ದೇಶವಾಸಿಗಳಿಗೂ ಕ್ಷೇಮ, ಸುಭಿಕ್ಷಾಕಾರಿಯಾಗಲಿ ಎಂಬುದೇ ಮಹಾವೀರರಲ್ಲಿ ನನ್ನ ಪ್ರಾರ್ಥನೆ.

ತ್ರಿವೇಣಿ ತೀರ್ಥಗಳ ಅಪೂರ್ವ ಸಂಗಮ

ನನ್ನ ಜೀವನದಲ್ಲಿ ಮೊದಲ ಬಾರಿಗೆ ಒಂದು ಸಲ ಮೂರು ತೀರ್ಥಗಳನ್ನು ದರ್ಶನ ಮಾಡುವ ಭಾಗ್ಯವು ದೊರೆತಿತ್ತು. ಮನಸ್ಸಿಗೆ ಬಹಳ ಆಹ್ಲಾದವೆನಿಸುತ್ತಿತ್ತು. ಕುಂಡಲಪುರದ ಪ್ರವಾಸದಲ್ಲಿಯ ಪ್ರತಿ ತಿಂಗಳು ಒಮ್ಮೆ ರಾಜಗೃಹ, ಒಮ್ಮೆ ಪಾವಪುರಿಗೆ ಹೋಗಿ ಪರ್ವತ ವಂದನೆ, ಜಲಮಂದಿರದಲ್ಲಿ ಧ್ಯಾನ ಮುಂತಾದವುಗಳನ್ನು ಮಾಡುವುದು ನನ್ನ ಜನ್ಮದ ಸಂಚಿತ ಪುಣ್ಯವೆಂದು ತಿಳಿದೆನು.

ಕುಂಡಲಪುರದ ಅಭಿನಂದನ ಗ್ರಂಥ ಪ್ರಕಟನೆ

ಕುಂಡಲಪುರ ಹಾಗೂ ಅಲ್ಲಿಯ ಪ್ರಾಚೀನ ಸಂಸ್ಕೃತಿ ನಗರದ ಐತಿಹಾಸಕತೆ, ಭಗವಂತರ ರಾಜವಂಶದ ಮಹತ್ವ, ತೀರ್ಥಂಕರರ ಪದವಿಯ ಸಾರ್ಥಕತೆ ಮುಂತಾದವುಗಳನ್ನು ಜನರಿಗೆ ಪರಿಚಯ ಮಾಡುವ ಸಲುವಾಗಿ ಕುಂಡಲಪುರ ಸಮಿತಿಯು ಒಂದು ಅಭಿನಂದನಾ ಗ್ರಂಥವನ್ನು ಹೊರತಂದಿತು. ಇದರ ಪ್ರಧಾನ ಸಂಪಾದಕತ್ವವನ್ನು ಆಚಾರ್ಯ ಶ್ರೀ ನರೇಂದ್ರ ಪ್ರಕಾಶ ಜೈನರು ವಹಿಸಿದ್ದರು. ಸಹ ಸಂಪಾದಕರ ಸಹಕಾರದಿಂದ ಸಂಚಿಕೆಯು ಭಗವಾನ ಮಹಾವೀರರ ಹಿರಿಮೆಯನ್ನು ಪ್ರಕಾಶಗೊಳಿಸುವಲ್ಲಿ ಅತ್ಯಂತ ಯಶಸ್ವಿ ಹೊಂದಲಿ ಎಂಬುದೇ ನನ್ನ ಆಶೆಯಾಗಿತ್ತು. ದೆಹಲಿಯ ದಾನವೀರ ಸಮಾಜ ರತ್ನ ಶ್ರೀ ಕಮಲಚಂದ್ ಜೈನ ಖಾರೀಬಾವಲಿಯವರು ಪ್ರಕಾಶನದ ಹೊಣೆ ಹೊತ್ತರು. ಅಭಿನಂದನ ಗ್ರಂಥವು ಕುಂಡಲಪುರ ಮಹೋತ್ಸವದಲ್ಲಿ ಬಿಡುಗಡೆಯನ್ನು ಹೊಂದಿತು. ನನ್ನ ಸಂಘದ ಶಿಷ್ಯರು ದಿನ ರಾತ್ರಿ ಎನ್ನದೆ ಪರಿಶ್ರಮ ವಹಿಸಿ, ವಿದ್ವಾಂಸರ ಸಲಹೆ ಸೂಚನೆಯಂತೆ ನಿಕಟವರ್ತಿ ಶ್ರಾವಕರ ಆರ್ಥಿಕ ಸಹಾಯದಿಂದ ತೀರ್ಥ ನಿರ್ಮಾಣದ ಜೊತೆಗೆ ಹಲವಾರು ಗ್ರಂಥಗಳು ಕೆಲವು ಚಿಕ್ಕ ಪುಸ್ತಕಗಳು ಪ್ರಕಾಶನಗೊಂಡಿದ್ದು ನನಗೆ ಅತ್ಯಂತ ಸಂತೋಷದ ವಿಷಯವೆನ್ನಿಸಿತು. ಜನರಲ್ಲಿ ಯಾವಾಗಲು ದೇವಶಾಸ್ತ್ರ, ಗುರವಿನಲ್ಲಿ ಭಕ್ತಿ ಇರಲಿ ಎಂಬುದೇ ನನ್ನ ಮಹದಾಶೆ.

ಕುಂಡಲಪುರ ಪುರಸ್ಕಾರದ ಪ್ರಾರಂಭೋತ್ಸವ

ನನ್ನ ಪ್ರೇರಣೆ ಹಾಗೂ ಚಂದನಮತಿಯ ನಿರ್ದೇಶನದಂತೆ ಕುಂಡಲಪುರದ ಭ. ಮಹಾವೀರರ ಸ್ಮೃತಿಯನ್ನು ಚಿರಸ್ಥಾಯಿಗೊಳಿಸಲು ಜುಲೈ ಒಂದು 2004 ರಲ್ಲಿ ದೆಹಲಿಯ ಕಮಲಚಂದ್ ನವರಿಂದ "ಕುಂಡಲಪುರ ಪುರಸ್ಕಾರ"

ದ ಘೋಷಣೆಯಾಯಿತು. ಪ್ರತಿವರ್ಷವು ಕುಂಡಲಪುರದ ಮಹೋತ್ಸವದಂದು ಯೋಗ್ಯ ವ್ಯಕ್ತಿಗಳನ್ನು ಆರಿಸಿಕೊಡಲು ತೀರ್ಮಾನಿಸಲಾಯಿತು.

ಕುಂಡಲಪುರದ ಪವಿತ್ರ ಭೂಮಿಯಲ್ಲಿ ಕುಳಿತು ನಾನು "ನನ್ನ ನೆನಪುಗಳು" ಗ್ರಂಥದ ಎರಡನೆಯ ಆವೃತ್ತಿಗಾಗಿ ನನ್ನ ನೆನಪುಗಳನ್ನು ಜೋಡಿಸತೊಡಗಿದೆ. ಭಗವಂತನ ಕೃಪೆಯಿಂದ ನನ್ನ ಎಲ್ಲ ಕೆಲಸವು ಉಪಯುಕ್ತತೆಯನ್ನು ಪಡೆಯಲಿ ಧರ್ಮಧ್ಯಾನ ಮತ್ತು ತೀರ್ಥ ಭಕ್ತಿಯಲ್ಲಿಯೇ ತೊಡಗಲಿ ಎಂಬುದೇ ನನ್ನ ಮನದಾಶೆ. ಭ. ಪಾರ್ಶ್ವನಾಥರ ತೃತೀಯ ಸಹಸ್ರಾಬ್ದಿ ಮಹೋತ್ಸವವನ್ನು ಇಡೀ ದೇಶದಲ್ಲೆಲ್ಲಾ ಆಚರಿಸಲು ಪ್ರೇರಣೆ ಕೊಟ್ಟಿದ್ದೇನೆ. ಹಾಗೇ ತೀರ್ಥಕ್ಷೇತ್ರ ರಕ್ಷಣೆಗೂ ಜೀರ್ಣೋದ್ಧಾರಕ್ಕೂ ಶ್ರಾವಕರು ಮುನ್ನೆಡಯಲಿ, 1-7-2004 ರಲ್ಲಿ ನನ್ನ ಸಾನಿಧ್ಯದಲ್ಲಿಯೇ ಪಾರ್ಶ್ವನಾಥರ ಸಹಸ್ರಾಬ್ದಿಮಹೋತ್ಸವದ ಸಭೆ ನಡೆಯಿತು. ಇದಕ್ಕಾಗಿ ದೇಶದ ಮೂಲೆ ಮೂಲೆಗಳಿಂದ ಕಾರ್ಯಕರ್ತರು ಬಂದು ಸೇರಿದ್ದರು. ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸುವುದಾಗಿ ಭರವಸೆ ಇತ್ತರು. 4-7-2004 ರಲ್ಲಿ ವಾರಾಣಾಸಿಯಲ್ಲಿ ನಡೆಯುವ ಮಹೋತ್ಸವಕ್ಕೂ ಸಭೆ ನಡೆಯಿತು. ಇದಕ್ಕಾಗಿ ಮಹನೀಯ ವ್ಯಕ್ತಿಗಳೆಲ್ಲ ನೆರೆದಿದ್ದರು. ಭಗವಾನ ಪಾರ್ಶ್ವನಾಥರ ಮಹೋತ್ಸವದ ಕಾರಣದಿಂದ ವಾರಣಾಸಿಯ ಕೀರ್ತಿ ಜೈನ ತೀರ್ಥಂಕರರ ಜನ್ಮ ಭೂಮಿ ಎಂಬ ಕಾರಣದಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಹರಡಲಿ. ಕೊನೆಗೆ ಸಭೆಯಲ್ಲಿ 6-1-2005 ರಲ್ಲಿ ಮಹೋತ್ಸವ ನಡೆಯಬೇಕೆಂದು ತೀರ್ಮಾನಿಸಲಾಯಿತು. ಈ ಸಭೆಯ ವಿಷಯ ಕೇಳಿ ನನಗೂ ಬಹಳ ಸಂತೋಷವಾಯಿತು.

64 ಸಿದ್ಧಿಗಳ ಆರಾಧನೆ

"ನನ್ನ ನೆನಪು" ಗಳು ಗ್ರಂಥವನ್ನ ಬರೆಯಲು ಉದಾಸೀನವಾಗತೊಡಗಿತು. ಇದರಿಂದ ಚಂದನಮತಿಗೆ ಆಗಾಗ್ಗೆ ನಾನು ಹೇಳುವ ನೆನಪುಗಳನ್ನು ಟೇಪ ಮಾಡಿಕೊಂಡು ನೀವೇ ಬರೆದುಕೊಳ್ಳಿರೆಂದು ಹೇಳುತ್ತಿದ್ದೆ. ಅದೇ ದಿನ 28 ರಂದು ಅಶೋಕವಿಹಾರ-ದೆಹಲಿಯಿಂದ ಸುಶೀಲಕುಮಾರರು ತಮ್ಮೊಡನೆ 18 ಜನರನ್ನು ಕರೆದುಕೊಂಡು ಕುಂಡಲಪುರಕ್ಕೆ ಬಂದರು. ಪೂರ್ವಯೋಜಿತ ಕಾರ್ಯಕ್ರಮದಂತೆ 64 ಋದ್ಧಿಗಳ ಆರಾಧನೆಯು ಪ್ರಾರಂಭವಾಯಿತು.

1993 ರಲ್ಲಿ ನಾನು ಈ ಆರಾಧನೆಯನ್ನು ರಚನೆ ಮಾಡಿದ್ದೆ. ಇದರಲ್ಲಿ ಒಂದೊಂದು ಋದ್ಧಿಗಳ ಶಕ್ತಿ ಮತ್ತು ಅವುಗಳ ಧಾರಕ ಗಣಧರ ಮೊದಲಾದವರಿಗೆ ಅರ್ಘ್ಯವನ್ನು ಇತ್ತು ಲೌಕಿಕ ಮತ್ತು ಆಧ್ಯಾತ್ಮಿಕ ಎರಡು ಉಪಲಬ್ಧಿಯನ್ನು ಪಡೆಯಬಹುದು. ಈ ಪಂಚಮಕಾಲದಲ್ಲಿ ಸಂತರಿಗೂ ಸಹ ಋದ್ಧಿಗಳು ಪ್ರಾಪ್ತವಾಗುವುದಿಲ್ಲ. ಆದರೂ ಕೂಡ ವಿಶೇಷವಾದ ತಪಸ್ಸು ಮಾಡುವಂತಹ ಹಾಗೂ ನಿರ್ದೋಷ, ಅಖಂಡ ಬ್ರಹ್ಮಚರ್ಯೆ ಪಾಲನೆ ಮಾಡುವಂತಹ ಸಾಧುಗಳ ಮಹಿಮೆಯು ಋದ್ಧಿಗೆ ಸಮಾನವಾದುದು. 20 ನೇಯ ಶತಮಾನದ ಮೊದಲ ಆಚಾರ್ಯರಾದ ಶಾಂತಿಸಾಗರರ ಚರಣಗಳಿಗೆ ಅಭಿಷೇಕ ಮಾಡಿದ ಗಂಧೋದಕದಿಂದಲೇ ಒಬ್ಬ ಬ್ರಹ್ಮಚಾರಿಯ ಕುಷ್ಟರೋಗ ದೂರವಾದ ಉದಾಹರಣೆ ಇದೆ. ಹೀಗೆ ಅನೇಕರು ಅವರ ದರ್ಶನದಿಂದಲೇ ಶಾರೀರಿಕ ರೋಗಗಳನ್ನು ದೂರಮಾಡಿಕೊಂಡು ಮಾನಸಿಕ ಶಾಂತಿಯನ್ನು ಪಡೆದಿದ್ದಾರೆ. ನನಗೆ ಅನುಭವವಾದಂತೆ ನನ್ನ ದೀಕ್ಷಾ ಗುರುಗಳಾದ ವೀರಸಾಗರರು ಒಂದೆರಡು ದಿನ ಮೊದಲು ಕೂಡ ಗಟ್ಟಿಯಾಗಿ ಕುಳಿತು ಧವಲ ಗ್ರಂಥವನ್ನು ಸ್ವಾಧ್ಯಾಯ ಮಾಡುತ್ತಿದ್ದರು. ಇದರಲ್ಲಿ ಅವರ ಮನೋಬಲ ಮತ್ತು ಕಾಯಬಲದ ಪ್ರಭಾವವೇ ಕಾರಣ.

64 ಋದ್ಧಿ ವಿಧಾನಗಳಲ್ಲಿ ವರ್ಣಿತವಾಗಿರುವ ಋದ್ಧಿಗಳ ವರ್ಣನೆಯನ್ನು ಓದುತ್ತಾ - ಓದುತ್ತಾ ನಿಜವಾಗಿಯು ಋದ್ಧಿಧಾರಿ ಮುನಿಗಳ ಬಗ್ಗೆ ಅಚಲವಾದ ಶ್ರದ್ಧೆ ಉಂಟಾಗುತ್ತದೆ. ಶ್ರಾವಕರಿಗೆ ಈ ಕಾರಣದಿಂದಲೇ ಈ ವಿಧಾನವನ್ನು ಮಾಡಲು ಪ್ರೇರೇಪಿಸುತ್ತೇನೆ. ಋದ್ಧಿಗಳ ಅರ್ಚನೆಯಿಂದ ಅವರ ಮನೆಯಲ್ಲಿ ಧನ ಧಾನ್ಯಗಳ ವೃದ್ಧಿಯಾಗುತ್ತದೆ. ರೋಗಗಳು ಉಪಶಮನವಾಗುತ್ತವೆ. ಪರಿವಾರದಲ್ಲಿ ಸುಖ ಶಾಂತಿ ಸಮೃದ್ಧಿಗಳು ನೆಲಸುತ್ತವೆ. ಇದರಿಂದ ಸಂಸಾರದ ಜನರು ಜೈನ ಧರ್ಮದಂತಹ ಒಳ್ಳೆಯ ಧರ್ಮವನ್ನು ಬಿಟ್ಟು ಅಂತಿಂಥಹ ಮಿಥ್ಯಾ ದೇವ ದೇವತೆಗಳನ್ನು ಪೂಜಿಸುವುದನ್ನು ಬಿಡುತ್ತಾರೆ.

ಹೀಗೆ ನೀವೆಲ್ಲರು ಜಿನೇಂದ್ರ ಭಗವಂತನ ಧೃಡವಾದ ಶ್ರದ್ಧೆಯನ್ನು ಇಟ್ಟು ಭಕ್ತಿಯಿಂದ ನಿಮ್ಮ ಕರ್ಮಗಳನ್ನು ನಿರ್ಜರೆ ಮಾಡಿಕೊಳ್ಳುವ ಪುರುಷಾರ್ಥದಲ್ಲಿ ಸಫಲರಾಗಿ ಎಂಬುದೇ ನನ್ನ ಮಹದಾಶೆ ಆಗಿದೆ.

ಈ "ನನ್ನ ನೆನಪು" ಎಂಬ ಹೊತ್ತಿಗೆಯನ್ನು ನನ್ನ ಶಿಷ್ಯರ ಒತ್ತಾಯದಿಂದಲೂ ವಿದ್ವಾಂಸರ ವಿಶೇಷ ಆಗ್ರಹದಿಂದಲೂ ಒಂದು ರೀತಿಯ ಉದಾಸೀನ ಭಾವದಿಂದಲೇ ಬರೆದಿದ್ದೇನೆ. ನನ್ನನ್ನು ಹೊಗಳಿಕೊಳ್ಳಲು ಅಲ್ಲ. ಇದರ ಅನುಭವ ನನಗೂ ಇದೆ. ಇದಕ್ಕೆ ಹೊರತಾಗಿ ಈ ಪುಸ್ತಕದಿಂದ ಯಾರಿಗಾದರು ಒಳ್ಳೆಯದಾದರೆ ಯಾವುದಾದರೂ ಪ್ರೇರಣೆ ದೊರೆಯುವುದಾದರೆ ದೊರೆಯಲಿ ಎಂದು ವಿಶೇಷ ಆಸಕ್ತಿಯಿಂದ ಆತ್ಮನ ಶುದ್ಧಿ ಮತ್ತು ಪರೋಪಕಾರ ಭಾವನೆಯಿಂದಲೇ ಬರೆದಿದ್ದೇನೆ ಇದರಲ್ಲಿ ಯಾವುದೇ ಸಂದೇಹ ಬೇಡ.

ಈ "ನನ್ನ ನೆನಪುಗಳು" ಗಳ ಪುಸ್ತಕದ ವಾಚನದಿಂದ ಯಾರಿಗಾದರೂ ಏನಾದರೂ ಪ್ರೇರಣೆ ದೊರೆಯಿತೆಂದರೆ ಆಗ ನನ್ನ ಪ್ರಯತ್ನಕ್ಕೆ ಸಫಲತೆ ದೊರೆಯುತ್ತದೆ.

* * * * *